

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಂಕೇತಿ : ಇತಿವೃತ್ತಗಳು

ಸಂಪಾದಕರು

ಎನ್.ಎಸ್. ಶಾರದಾ ಪ್ರಸಾದ್

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ
ಗೋಕುಲಂ, ಮೈಸೂರು - ೫೭೦ ೦೦೨

sanketi E-lib-5

Web : 6-6-2018

ಸಂಕೇತಿ ಅಧ್ಯಯನ

ಸಂಪುಟ - ೫

SANKETI : ITHIVRUTTAGALU

Editor
N.S. Sharada Prasad
Asst. Translator (Rtd.)
123, 'SRIMATHA' 7th Cross, Navilu Road
Mysore - 570 023

Published by
Samudaya Adhyayana Kendra Charitable Trust (R.)
3059, 4th 'A' Cross, Gokulam Park Road, Gokulam,
Mysore - 570 002

Pages : xxiv + 412

First Edition : 2008

ಸಂಕೇತಿ : ಇತಿವೃತ್ತಗಳು

ಸಂಪಾದಕರು
ಎನ್.ಎಸ್. ಶಾರದಾ ಪ್ರಸಾದ್
ಸಹಾಯಕ ಭಾಷಾಂತರಕಾರರು (ನಿವೃತ್ತ)
ನಂ. ೧೨೩, 'ಶ್ರೀಮಾತಾ', ೭ನೇ ಕ್ರಾಸ್, ನವಿಲು ರಸ್ತೆ,
ಕುವೆಂಪುನಗರ, ಮೈಸೂರು - ೫೭೦ ೦೨೩

ಪ್ರಕಾಶಕರು
ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ
ಮೈಸೂರು - ೫೭೦ ೦೦೨

ಪುಟಗಳು : xxiv + 412

ಮುದ್ರಣ : ೨೦೦೮

ಡಿಟಿಪಿ :
ಫ್ರೆಂಡ್ಸ್ ಕಾಮ್-ಟೆಕ್
೧೫(೧೪೬), ೨ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮
ದೂರವಾಣಿ : ೨೨೪೨೮೪೫೪

ಮುದ್ರಕರು :
ಟೆಕ್ ಪ್ರಿಂಟ್ಸ್
ಚಾಮರಾಜಪುರಂ, ಮೈಸೂರು - ೫೭೦ ೦೦೫
ದೂ. : ೨೩೩೦೩೮೦, e-mail : techprints@rediffmail.com

ಅರ್ಪಣೆ

ಶ್ರೀಮತಿ ಪಾರ್ವತಮ್ಮ

ಹಾಗೂ

ವ್ಯಾಕರಣ ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯ ಶಾಸ್ತ್ರೀ
ಅವರ ದಿವ್ಯಸ್ಮರಣೆಗೆ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಪ್ರಕೃತ ಸಂಪುಟದ ಸಂಪುಟಾಧ್ಯಕ್ಷರಾಗಿ (ಶ್ರೀಮತಿ ಪಾರ್ವತಮ್ಮ ಹಾಗೂ ವ್ಯಾಕರಣ ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರಿ ಅವರ ಪರವಾಗಿ) ಡಾ|| ಬಿ.ಎಸ್. ಪ್ರಣತಾರ್ತಿಹರನ್ ಅವರು ಮುನ್ನಡೆಸಿದ್ದಾರೆ. ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ, ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು. ನಾವು ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

☆☆☆

ಈಗ ಓದುಗರ ಕೈಲಿರುವುದು ಸಂಕೇತಿ ಅಧ್ಯಯನ ಮಾಲೆಯ ಐದನೆಯ ಸಂಪುಟ. ಇದನ್ನು 'ಸಂಕೇತಿ : ಇತಿವೃತ್ತಗಳು' ಎಂದು ಕರೆಯಲಾಗಿದೆ. ಇದು ನಾಲ್ಕು ವರ್ಷಗಳಷ್ಟು ದೀರ್ಘಾವಧಿಯಲ್ಲಿ ರೂಪುತಳೆದು, ಎಂಟು ಕೃತಿಗಳ ಸಂಕಲನವಾಗಿ ಹೊರಹೊಮ್ಮಿದೆ. ಹೀಗೆ ಸೇರಿರುವ ಎಂಟು ಕೃತಿಗಳಲ್ಲಿ 'ಸಂಕೇತಿ ಸಂಪದ' ಎಂಬುದೂ ಒಂದು. ವಾಸ್ತವವಾಗಿ ಈ ಕೃತಿಯ ಆಶಯದ ವಿಸ್ತರಣವೇ 'ಸಂಕೇತಿ : ಇತಿವೃತ್ತಗಳು'.

'ಸಂಕೇತಿ ಸಂಪದ' ಪ್ರಕಟವಾದುದು ೧೯೯೪ರಲ್ಲಿ. 'ಸಂಕೇತಿಗಳ ಬದುಕಿನ ವೈಭವ ಅಥವಾ ಶ್ರೀಮಂತಿಕೆ' ಎಂಬ ಅರ್ಥ ಅದರದು. ಆ ಶ್ರೀಮಂತಿಕೆಯು ಆರ್ಥಿಕವಾದುದಲ್ಲ, ಬಡತನದ ನಡುವೆಯೇ ಮೂಡಿಬಂದ ಜೀವನೋತ್ಸಾಹದ್ದು.

ಸಂಶಯವಿಲ್ಲದೆ, ಭಾರತದ ಎಲ್ಲ ಸಮುದಾಯಗಳ ಆರ್ಥಿಕಸ್ಥಿತಿಯೂ ಜೀವನಮಟ್ಟವೂ ಸಾರ್ವತ್ರಿಕವಾಗಿ ಈಗ ಸುಧಾರಿಸಿದೆ. ಸಂಕೇತಿ ಸಮುದಾಯದಲ್ಲಿಯೂ ಆ ಲಕ್ಷಣವು ಕಂಡಿದೆ. ಸುಮಾರು ಅರ್ಧ-ಮುಕ್ಕಾಲು ಶತಮಾನದ ಹಿಂದಿನ ಬದುಕನ್ನು ಕಂಡವರಿಗೆ ಈಗ ಆಗಿರುವ ಅಗಾಧ ವ್ಯತ್ಯಾಸವು ನಿಚ್ಚಳವಾಗಿ ಗೋಚರಿಸುತ್ತದೆ, ವಿಸ್ಮಯವೂ ಉಂಟಾಗುತ್ತದೆ. ಜತೆಗೆ ಆ ಹಳೆಯ ಜೀವನವಿವರವೂ, ಅದು ಒಟ್ಟಾರೆಯಾಗಿ ಹೊಂದಿದ್ದ ಹದವೂ, ಬಾಳಿನ ಪಾತಳಿಯೂ ರಮ್ಯವಾಗಿಯೇ ಕಾಣುತ್ತದೆ. ಅದನ್ನು ತಿಳಿಯುವ ಕುತೂಹಲವು ಹೊಸ ತಲೆಮಾರಿನವರಿಗೆ ಹುಟ್ಟಿದರೆ ಅದನ್ನು ತಣಿಸುವಂತೆ ಈ ಪುಸ್ತಕ ಬಂದಿದೆ. ಲೇಖಕರೇ ಹೇಳುವಂತೆ, "ಇಲ್ಲಿಯ ಚಿತ್ರಗಳು ಸಂಕೇತಿಗಳ ಬದುಕಿನ ಹಲವು ಬಣ್ಣದ ಬಣ್ಣನೆಗಳ ಚಿತ್ರವಾಗಿದೆ." ಆ ಚಿತ್ರವಾದರೂ ಹಲವು ಶತಮಾನಗಳ ಬದುಕಿನ ರೀತಿಯ ಕೊನೆಯ ಹಂತದ್ದು. ಕೊನೆಯ ಪಕ್ಷ ಸಂಕೇತಿಗಳ ಒಂದು ಸಹಸ್ರ ವರ್ಷದ ಜೀವನದ ಸ್ವಭಾವ ಮತ್ತು ಸ್ವರೂಪದ ಯಥಾವತ್ತಾದ ಒಳನೋಟ ಇಲ್ಲಿ ದೊರೆಯುತ್ತದೆ.

ಈ ಕೃತಿಯಲ್ಲಿ ಕಾಣುವ ವಿಶಿಷ್ಟ ಲಕ್ಷಣಗಳಲ್ಲಿ ಒಂದು, ಒಕ್ಕಣೆಯಾಗಿ ನಿರೂಪಿಸುವ ಗುಣ. ಆದ್ದರಿಂದಲೇ ಸಂಕೇತಿಗಳ ಬದುಕಿನ, ಕಣ್ಣಿಗೆ ಕಟ್ಟಿದಂಥ ಚಿತ್ರ ಇಲ್ಲಿ ಸಿಗುತ್ತದೆ.

ಇಲ್ಲಿನ ಲೇಖನಗಳೆಲ್ಲವೂ ಸಂಕೇತಿಗಳ ಬದುಕಿನ ಜೀವನಾಡಿಗಳೆನಿಸಬಹುದಾದ ವಿಷಯಗಳಿಗೆ ಸಂಬಂಧಪಟ್ಟವು. ಆ ವಿಷಯಗಳ ವಾಸ್ತವತೆಯ ಮರ್ಯಾದೆ ಕುಗ್ಗದಂತೆ ಬರೆಯುವುದು ಸುಲಭವಲ್ಲ. ಅದಕ್ಕೆ ನೇರ ಅನುಭವ ಬೇಕು, ಕೇವಲ ನೋಡುವುದಲ್ಲ, ಗಮನಿಸುವ ಮತ್ತು ಒಳಮರ್ಮಗಳನ್ನು ಗ್ರಹಿಸುವ ಶಕ್ತಿ ಬೇಕು, ಅದನ್ನು ದಾಖಲಿಸಬೇಕೆಂಬ ಅದಮ್ಯ ಶ್ರದ್ಧೆ ಬೇಕು, ಪ್ರತಿ ವಿವರವನ್ನೂ ಹೆಣೆದು ಪ್ರಬಂಧಧ್ವನಿಗೆ ಅದನ್ನು ಅಧೀನವಾಗಿಸುವ ಪ್ರತಿಭೆ ಬೇಕು, ತಾಳ್ಮೆ ಬೇಕು. ಇವೆಲ್ಲವೂ ಎಲ್ಲ ಲೇಖಕರಿಗೂ ಬೇಕಾದ ಗುಣಗಳೇ. ಆದರೆ ಸೃಜನೇತರವೆಂದೂ, ಕಾಲಗುಣಕ್ಕೂ ಮಾರುಕಟ್ಟೆಯ ವಿದ್ಯಮಾನಕ್ಕೂ ಅನುಗುಣವಾದುದಲ್ಲವೆಂದೂ ಸುಲಭ-ತಿರಸ್ಕಾರಕ್ಕೆ ಈಡಾಗುವ ಅಪಾಯದ ಪರಿಸರದಲ್ಲಿದ್ದುಕೊಂಡು ಇಂಥ ಲೇಖನಗಳನ್ನು ಬರೆಯುವುದಕ್ಕೆ ಈ ಧೃತಿ ದೊಡ್ಡದಾಗಿಯೇ ಇರಬೇಕು. ಅದನ್ನು ಪ್ರೊ. ಕೆ.ಎಸ್. ಕೃಷ್ಣಮೂರ್ತಿಯವರು ಸಮರ್ಥವಾಗಿ ಪ್ರದರ್ಶಿಸಿದ್ದಾರೆ. ಅವರ 'ಸಂಕೇತಿ ಸಂಪದ' ಎಂಬ ಈ ಕೃತಿಯನ್ನು ಪ್ರಸ್ತುತ ಸಂಪುಟದಲ್ಲಿ 'ಜೀವನೋಲ್ಲಾಸ' ಎಂಬ ಹೆಸರಿನಿಂದ ಸೇರಿಸಿಕೊಳ್ಳಲಾಗಿದೆ.

'ಸಂಕೇತಿ ಅಧ್ಯಯನ' ಮಾಲೆಯಲ್ಲಿ ಆತ್ಮಕಥೆಗಳ ಸಂಪುಟವೇ ಪ್ರತ್ಯೇಕವಾಗಿ ಹೊರಬರಲಿದೆ. ಪ್ರಕೃತ ಸಂಪುಟದಲ್ಲಿ ಸಂಕೇತಿ ಸಮುದಾಯದ ಒಟ್ಟು ಬದುಕಿನ ಒಳ ವಿವರಗಳು ಅನೇಕ ಗಣ್ಯರ ಇತಿವೃತ್ತಗಳ ಮೂಲಕ ಕ್ರೋಡೀಕರಣವಾಗಲೆಂದು ಇಲ್ಲಿ ಆಶಿಸಲಾಗಿದೆ. ಈಗಾಗಲೇ ಪ್ರಕಟವಾಗಿದ್ದ ಕೃತಿಗಳನ್ನೂ ಒಂದು ಉದ್ದೇಶಕ್ಕಾಗಿ ಇಲ್ಲಿ ಸೇರಿಸಲಾಗಿದೆ ಎಂಬುದು ಇದರಿಂದ ಅರಿವಾದೀತು.

☆☆☆

ಪ್ರಸ್ತುತ ಸಂಪುಟಕ್ಕಾಗಿ, 'ಸಂಕೇತಿ ಸಂಪದ'ದ ಜೀವನಚಿತ್ರಣವನ್ನು ಮನಸ್ಸಿನಲ್ಲಿಟ್ಟುಕೊಂಡು, ತಮ್ಮ ಜೀವನವೃತ್ತಾಂತವನ್ನು ಬರೆದುಕೊಡಬೇಕೆಂದು ಹಲವು ಹಿರಿಯರನ್ನು ಕೇಳಿಕೊಳ್ಳಲಾಯಿತು ; ಪತ್ರಿಕೆಗಳ ಮೂಲಕವೂ ಪ್ರಾರ್ಥಿಸಲಾಯಿತು. ನಮಗೆ ದೊರಕಿದ ಪ್ರಾತಿನಿಧಿಕ ಪ್ರತಿಕ್ರಿಯೆ ಇದು : ಅವರೊಬ್ಬ ವಯೋವೃದ್ಧರು, ಜ್ಞಾನವೃದ್ಧರು ; ಕನ್ನಡ ಮತ್ತು ಸಂಸ್ಕೃತಭಾಷಾ ವಾಙ್ಮಯದಲ್ಲಿ ಉದ್ದಾಮ ಪಂಡಿತರು ; ಅಧ್ಯಾಪನ ಮಾಡಿದವರು ; ದೀರ್ಘವಾದ ಅನುಭವ ಉಳ್ಳವರು ; ಸಂಕೇತಿಗಳ ಪಾರಂಪರಿಕ ಬದುಕಿನ ಪರಿಸರದಲ್ಲಿಯೇ ಹಳ್ಳಿಗಳಲ್ಲಿ ಬೆಳೆದವರು. ಅವರೊಡನೆ ನಮ್ಮ ಸಂಭಾಷಣೆ ಹೀಗಿತ್ತು :

"ಮಾವಯ್ಯನವರೆ, ದಯಮಾಡಿ ನಿಮ್ಮ ಆತ್ಮಚರಿತ್ರೆಯನ್ನು ಬರೆದುಕೊಡಬೇಕೆಂದು ನಮ್ಮ ಪ್ರಾರ್ಥನೆ."

"ಅಂದೆ ಪ್ರವೃತ್ತಿ ಇಲ್ಲ." (ಆ ಪ್ರವೃತ್ತಿ ಇಲ್ಲ)

"ಇದು ಸಂಕೇತಿ ಸಮುದಾಯದ ಪಾರಂಪರಿಕ ಜೀವನಚಿತ್ರವೊಂದನ್ನು ಕಟ್ಟಿಕೊಡುವುದಕ್ಕಾಗಿ ಹಿರಿಯರಲ್ಲಿ ಪ್ರಾರ್ಥನೆ ಮಾಡಿ ಬರೆಸುತ್ತಿರುವಂಥದು. ಶ್ರೀನಾಚಾರಮ್ಮನವರು ಸಂದುಹೋದ ಒಂಬತ್ತು ಶತಮಾನಗಳ ಸ್ಮರಣೆಗಾಗಿ ಈ ಯೋಜನೆ."

"ಅಂದೆ ಪ್ರವೃತ್ತಿ ಇಲ್ಲ."

"ನಿಮಗಾಗಿ ಅಲ್ಲ, ಸಮುದಾಯಕ್ಕಾಗಿ. ಇದರಲ್ಲಿ ನಿಮ್ಮನ್ನು ಮೆರೆಸಿಕೊಳ್ಳುತ್ತಿದ್ದೀರೆಂಬ ಪ್ರಶ್ನೆಯೇ ಬರುವುದಿಲ್ಲ."

"ಅಂದೆ ಪ್ರವೃತ್ತಿ ಇಲ್ಲ."

ಆ ಮಹನೀಯರು ನಿರ್ವಿಕಾರವಾಗಿ ಅದನ್ನೇ ಹೇಳುತ್ತಿದ್ದರು. ಎಲ್ಲವನ್ನೂ ಸಮಾಧಾನವಾಗಿ ಕೇಳಿಸಿಕೊಳ್ಳುತ್ತಿದ್ದರು, ಆದರೆ ಅದೇ ಸಮಚಿತ್ತದಿಂದಲೂ ದೃಢತೆಯಿಂದಲೂ ಅದದೇ ಉತ್ತರವನ್ನೇ ಕೊಡುತ್ತಿದ್ದರು. ವೀತರಾಗಿಗಳಾದ ಅವರನ್ನು ಮತ್ತೂ ಒತ್ತಾಯಿಸುವುದು ಸಾಧ್ಯವಿಲ್ಲವಾಯಿತು.

ಎಲ್ಲೆಡೆಯೂ ಇದು ಹೀಗೆಯೇ ನಡೆಯಿತು. ಕೊನೆಗೂ ನಮಗೆ ಸಾಧ್ಯವಾದುದು ಐವರು ಮಹನೀಯರಿಂದ ಬರೆಸುವುದಕ್ಕೆ ಮಾತ್ರ. ನಮ್ಮ ಉದ್ದೇಶವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಂಡು ತಮ್ಮ ಮುಜುಗರಗಳ ನಡುವೆಯೂ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಬರೆದುಕೊಟ್ಟ ಈ ಐವರೂ ನುರಿತ ಲೇಖಕರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು, ಏಳು-ಎಂಟು-ಒಂಬತ್ತು ದಶಕಗಳನ್ನು ದಾಟಿದವರು.

☆☆☆

ಪ್ರೊ. ಕೆ.ಎಸ್. ಕೃಷ್ಣಮೂರ್ತಿಯವರು ಈ ಸಂಪುಟಕ್ಕಾಗಿಯೇ ಬರೆದುಕೊಟ್ಟ 'ಆಡಿದ ಹೊಲ, ಕಂಡ ವಿಚಾರ' ಅವುಗಳಲ್ಲಿ ಒಂದು. 'ಸಂಕೇತಿಗಳ ಜೀವನ ವಿವರಕ್ಕಾಗಿ ಅವರ ಆತ್ಮಕಥೆ' ಎಂಬ ಚೌಕಟ್ಟಿಗೆ ಸಮ್ಮತಿಸಿ ಅವರು ಸಹಕರಿಸಿದ್ದಾರೆ. ಒಂದು ಶತಮಾನಕ್ಕೂ ಮೀರಿದ ಕಾಲದ ಹರಹಿನ ಜೀವನ ವಿವರಗಳು ಇಲ್ಲಿವೆ. ಅವರೇ ಈಗ ತೊಂಬತ್ತರ ವೃದ್ಧರು. ಅತಿ ಸಾಮಾನ್ಯ ಪರಿಸರದಲ್ಲಿ ಹುಟ್ಟಿ ಬೆಳೆದು, ವಿದ್ಯಾವಂತರಾಗಿ, ಕಾಲೇಜು ಅಧ್ಯಾಪಕರಾಗಿ, ಲೇಖಕರಾಗಿ ಮುನ್ನಡೆದ ಅವರ ವಿಕಾಸದ ಕಥೆ ಇಲ್ಲಿದೆ. ಜತೆಜತೆಗೇ ಇಲ್ಲಿ ರೋಚಕ ಸಂಗತಿಗಳಿವೆ, ಆಶ್ರಯದಾತರಾದ ಉದಾರಿಗಳ ಸ್ಮರಣೆಯಿದೆ, ವಿದ್ವಾಂಸರ ಬಗೆಗಿನ ಉಲ್ಲೇಖಗಳಿವೆ, ಸ್ವಾತಂತ್ರ್ಯ ಚಳವಳಿಯಲ್ಲಿನ ಪಾತ್ರವಿದೆ, ತೊಡಗಿಸಿಕೊಂಡ ಉದ್ಯೋಗದಲ್ಲಿ ಮಾಡಿದ ಸಮರ್ಪಣಭಾವದ ಕಾಯಕದ ದರ್ಶನವಿದೆ, ಸರಳವೂ ಸಹಜವೂ ಆದ ನೇರ ನಿರೂಪಣೆಯಿದೆ.

'ಕಲೆಯ ಸನ್ನಿಧಿಯಲ್ಲಿ' ಎಂಬುದು ಸಾ.ನಾ. ಶ್ರೀಕಂಠಯ್ಯನವರ ಕೃತಿ. ಈ ಐವರಲ್ಲಿ ಎಪ್ಪತ್ನಾಲ್ಕು ವರ್ಷದ ಈ ಕಲಾವಿದರೇ ಕಿರಿಯರು. ೧೫೦ ನಾಟಕಗಳನ್ನೂ, ೧೨೦೦ (ನಾಟಕದ) ಹಾಡುಗಳನ್ನೂ ರಚಿಸಿದ ಮಹಾನುಭಾವರು ; ಆದರೆ ಅವನ್ನೆಲ್ಲ ರಚಿಸಿ, ಕೇಳಿದವರಿಗೆ ಸೀರುಂಡೆ ಮಾಡಿಬಿಟ್ಟ ನಿರ್ಲಿಪ್ತರು. ಸಮುದಾಯ ಅಧ್ಯಯನ ಕೇಂದ್ರದ ಪ್ರಾರ್ಥನೆಯನ್ನು ಮನ್ನಿಸಿ ಅಳಿದುಳಿದ ನಾಟಕಗಳನ್ನು ಜೋಪಾನ ಮಾಡಿಕೊಟ್ಟರು. ಇದೀಗ ತಮ್ಮ ಆತ್ಮಕಥೆಯನ್ನೂ ಬರೆದುಕೊಟ್ಟು ಉಪಕರಿಸಿದ್ದಾರೆ. ಎಳೆಯ ವಯಸ್ಸಿನಲ್ಲಿಯೇ (೧೬) ಜೀವನಾಧಾರಕ್ಕೆ ಜೀವವಿಮಾ ನಿಗಮವನ್ನು ಸೇರಿದ ಶ್ರೀಕಂಠಯ್ಯನವರು ತಮ್ಮ ಸರ್ವಸ್ವವನ್ನೂ ಕಲಾತಪಸ್ಸಿಗಾಗಿ ಅರ್ಪಣೆ ಮಾಡಿದ ವಿವರ ಇಲ್ಲಿದೆ.

ಸಾನಾಶ್ರೀ ಅವರು ನುರಿತ ಲೇಖಕರು ; ಅವರ ಬರಹದಲ್ಲಿ ಒಂದು ಜೀವಂತಿಕೆ ಇದೆ, ಅಲ್ಲೊಂದು ಮುಂಸೆಳೆತವಿದೆ. ಅಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಸಾವಧಾನವೂ ಇದೆ, ಹಾಸ್ಯವೂ ಇದೆ, ಉದಾತ್ತದೃಷ್ಟಿಯೂ ಇದೆ, ಕೊನೆ ಮುಟ್ಟುವವರೆಗೆ ಕೇವಲ ಓದಿಸಿಕೊಂಡಲ್ಲ ಓಡಿಸಿಕೊಂಡೂ ಹೋಗಬಲ್ಲ ಕಾವು ಕೂಡ ಇದೆ. ಮುಖ್ಯವಾಗಿ, ನಾಟಕಕ್ಷೇತ್ರವು ಅವರನ್ನು ಹೇಗೆ ಆವರಿಸಿಕೊಂಡಿದೆ ಎಂಬುದರ ಚಿತ್ರ ಇಲ್ಲಿದೆ.

ಅವರು ಬಹು ವೃದ್ಧರೇನೂ ಅಲ್ಲ. ಆದರೆ ಸಾಂಸಾರಿಕ ಜಂಜಡಗಳಿಂದ ನಲುಗಿದ್ದಾರೆ. ಅವರ ಜ್ಞಾಪಕಶಕ್ತಿ ಕುಸಿದಿದೆ, ಹಾಗಾಗಿ ಅವರ ಅತ್ಯುತ್ತಮ ಅಭಿವ್ಯಕ್ತಿ ಇಲ್ಲಿ ಕಾಣುವುದಿಲ್ಲ ಎಂಬ ನೋವು ಅವರಿಗಿದೆ. ಆದರೆ ಈ 'ದೌರ್ಬಲ್ಯ'ದ ಹೊತ್ತಿನಲ್ಲಿ ಅವರು ಬರೆದಿರುವ ಲೇಖನ ಕೂಡ ಇಷ್ಟು ಸೊಗಸಾಗಿದೆ !

'ಶ್ರೀ ಸೀತಾರಾಮ ಜನನಮೂಲ' ಎಂಬ ಷಟ್ಪದೀ ಕಾವ್ಯದ ಕರ್ತೃ ಶ್ರೀ ಆರ್.ವಿ. ಶ್ರೀನಿವಾಸಯ್ಯನವರು ; ಎಳವೆಯಿಂದಲೇ ಕಾವ್ಯವಾಚನದ ಪರಿಸರದಲ್ಲಿ ಬೆಳೆದವರು, ಅರುವತ್ತೈದು ವರ್ಷಗಳಷ್ಟು ದೀರ್ಘಕಾಲ ಕಾವ್ಯವಾಚನ ಮಾಡಿದವರು. ಅನೇಕ ಕಾವ್ಯಗಳನ್ನು ಬಾಲ್ಯದಲ್ಲಿಯೇ ರಚಿಸಿದ್ದವರು ಶ್ರೀನಿವಾಸಯ್ಯನವರು ; ಅವುಗಳ ಪೈಕಿ ಉಳಿದುಕೊಂಡುದು 'ಶ್ರೀ ಸೀತಾರಾಮ ಜನನಮೂಲ' ಮಾತ್ರ. ಪ್ಲೇಗು ಅವರನ್ನು ತೀವ್ರವಾಗಿ ಕಾಡಿತು, ಬಡತನ ಮತ್ತು ಸಂಕಷ್ಟಗಳು ಬಲೆ ಬೀಸಿದವು, ಪತ್ನೀವಿಯೋಗಗಳು ನಡುಗಿಸಿದುವು ; ಅವುಗಳ ನಡುವೆ ಹೀಗಾದುದು ಆಶ್ಚರ್ಯವಲ್ಲ. ಅವರು ತಮ್ಮ ಕಷ್ಟಗಳ ನೋವಿನಿಂದ ಬಿಡುಗಡೆ ಹೊಂದಲೆಂದೇ ಕಾವ್ಯವಾಚನವನ್ನು ರೂಢಿಸಿಕೊಂಡು ಬೆಳೆಸಿದರು ; ವಿಷಮ ಪರಿಸ್ಥಿತಿಗಳ ನಡುವೆಯೇ ಕಾವ್ಯರಚನೆ ಮಾಡಿದರು. ಹೀಗೆ ಹದಗೊಂಡಿದ್ದರಿಂದಲೇ ಇರಬೇಕು, ತೊಂಬತ್ತೆಂಟರ ಇಳಿವಯಸ್ಸಿನಲ್ಲಿಯೂ ಅವರ ಛಲದ ಗುಣ ಹಾಗೆಯೇ ಉಳಿದಿದೆ, ಜೀವನೋತ್ಸಾಹ ಆರಿಲ್ಲ, ಸ್ಮರಣಶಕ್ತಿಯೂ ಕುಂದಿಲ್ಲ ; ಜತೆಗೆ ಧನಾತ್ಮಕ ದೃಷ್ಟಿಕೋನವು ಗಟ್ಟಿಗೊಂಡಿದೆ.

ಶ್ರೀನಿವಾಸಯ್ಯನವರು ತಮ್ಮ ಆತ್ಮಕಥೆಯನ್ನು 'ಬೆಂದ ಬದುಕು' ಎಂದು ಕರೆದಿದ್ದರು. ಅದು ಬೆಂದಿತ್ತು, ಆದರೆ ಕರಕಲಾಗಿರಲಿಲ್ಲ, ಬೂದಿಯಾಗಿರಲಿಲ್ಲ ; ಬದಲಿಗೆ ಮಾಗಿತ್ತು. ಹಾಗಲ್ಲದಿದ್ದರೆ ಎಪ್ಪತ್ತೈದರ ಹರಯದಲ್ಲಿ ಕಾವ್ಯರಚನೆಯು ಅವರಿಗೆ ಸಾಧ್ಯವಾಗದೇ ಹೋಗುತ್ತಿತ್ತು, ತೊಂಬತ್ತೆಂಟರ ಹರಯದಲ್ಲಿ ನಗುಮೊಗ ಇರುತ್ತಿರಲಿಲ್ಲ, ಅವರ ತಲೆದಿಂಬಿನ ಪಕ್ಕಕ್ಕೆ ಪುಸ್ತಕರಾಶಿ ಇರುತ್ತಿರಲಿಲ್ಲ. ಆದ್ದರಿಂದ ಅದನ್ನು 'ಮಾಗಿದ ಬದುಕು' ಎಂದು ಬದಲಾಯಿಸಲಾಗಿದೆ.

'ಎಲ್ಲ ಸಮಸ್ಯೆಯೂ ಒಂದೊಂದು ಸದವಕಾಶ' ಎಂಬುದಕ್ಕೆ 'ಜೀವನಗಾಥ' ಒಳ್ಳೆಯ ನಿದರ್ಶನ. ಹುಟ್ಟಿನಿಂದ ತೊಡಗಿ ವೃದ್ಧಾಪ್ಯದವರೆಗೆ ಬಡತನದ ಮೂಸೆಯಲ್ಲಿಯೇ ಏಗಿದವರು ಕೆ.ಎಸ್. ವೆಂಕಟರಾಮಯ್ಯನವರು; ಒಮ್ಮೊಮ್ಮೆ ಪುಟಕ್ಕಿಟ್ಟಾಗಲೂ ಕಾಂತಿಯುಕ್ತವಾಗಿ ಹೊರಬಂದವರು. ಗಾಂಧೀಜಿಯ ಪ್ರಭಾವಲಯಕ್ಕೆ ತಮ್ಮನ್ನು ಒಪ್ಪಿಸಿಕೊಂಡು ಒಬ್ಬ 'ಗಾಂಧಿ ಮಾಸ್ಟರಾಗಿ', 'ಅಜಾತಶತ್ರು'ವಾಗಿ ಸಮಾಜಸೇವಕರಾಗಿ, ರಾಷ್ಟ್ರಸೇವಕರಾಗಿ ಬೆಳೆದವರು. ದೊಡ್ಡ ದೊಡ್ಡ ವಿಷಯಗಳಿರಲಿ, ತಾವೇ ಬಡತನದಲ್ಲಿ ಬೇಯುತ್ತಿರುವಾಗ ಇದ್ದಬದ್ದವರನ್ನೆಲ್ಲಾ, ಕೊನೆಗೆ 'ಊರವರನ್ನೆಲ್ಲಾ' ಕರೆದು ತಮ್ಮ ಪುಟ್ಟ ಗೂಡಿನಲ್ಲಿ ಅವರಿಗೂ ಜಾಗ ಕೊಟ್ಟು ತಮ್ಮ ತುತ್ತು ಹಂಚಿಕೊಳ್ಳುವವರು ಎಷ್ಟು ಮಂದಿ ಇದ್ದಾರು ! ತಮ್ಮ ಪುಸ್ತಕವು ಇನ್ನೊಬ್ಬರ ಹೆಸರಿನಲ್ಲಿ ಬರಲು ಒಪ್ಪುವುದು ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಬಲಿಕೊಡುವಷ್ಟು ಸಂಕಟಕರವೇ ಸರಿ. ಅದನ್ನೆಲ್ಲ ಗೆದ್ದು ಬಂದವರು ವೆಂಕಟರಾಮಯ್ಯನವರು. ಕೊನೆಗೂ ಅವರು 'ಸರ್ವತ್ರ ಸನ್ಮಂಗಳಾನಿ ಭವಂತು' ಎಂದೇ ಹರಸುತ್ತಾರೆ!

ಗಾಂಧೀಜಿಯು ತಮ್ಮ ಜೀವನವು ಸತ್ಯದ ಪ್ರಯೋಗಶಾಲೆ ಎಂದರು. ವೆಂಕಟರಾಮಯ್ಯನವರಿಗೆ ತಮ್ಮ ಜೀವನವು ಗಾಂಧೀತತ್ತ್ವಗಳ ಅನುಸಂಧಾನ ಶಾಲೆಯಾಗಿದೆ. ಅದರಲ್ಲಿ ಅವರು ಯಶಸ್ಸನ್ನೂ ಕಂಡಿದ್ದಾರೆ. ದೇಶವು ಭ್ರಷ್ಟಾಚಾರದಲ್ಲಿ ಬೇಯುತ್ತಿರುವುದನ್ನು ಕಂಡು ನೋಯುವುದು ಸ್ವಾತಂತ್ರ್ಯ ಹೋರಾಟಗಾರರಿಗೆ ಹೆಚ್ಚು ಸಹಜ, ವೆಂಕಟರಾಮಯ್ಯನವರೂ ನೊಂದಿದ್ದಾರೆ, ಆದರೆ ಆಶಾವಾದಿಯಾಗಿಯೇ ಉಳಿದಿದ್ದಾರೆ.

ಆರೋಗ್ಯವು ಕುಸಿದು, ಕಣ್ಣು ಮಂಜಾಗಿ, ಬೆರಳುಗಳು ದುರ್ಬಲವಾದ ಹೊತ್ತಿನಲ್ಲಿಯೂ ಅವರು ನಮ್ಮ ಕೋರಿಕೆಗೆ ಸ್ಪಂದಿಸಿದ್ದಾರೆ.

ಸಾಂಪ್ರದಾಯಿಕ ವಿದ್ಯೆಯನ್ನು ಕಲಿತು ಸಾಂಪ್ರದಾಯಿಕ ವೇಷಭೂಷಣಗಳನ್ನು ತೊಟ್ಟವರನ್ನು ಕೀಳಾಗಿ ನೋಡುತ್ತಿದ್ದ ಧೋರಣೆಯನ್ನು ಸವಾಲಾಗಿ ಸ್ವೀಕರಿಸಿದವರು ವೇ॥ ಬ್ರ॥ ಶ್ರೀ॥ ರಾಮೇಶ್ವರ ಅವಧಾನಿಗಳು.

ಎಂ.ಎ. ವಿದ್ಯಾಭ್ಯಾಸ ಮಾಡಿದ್ದು 'ತಮ್ಮ' ಹೆಗ್ಗಳಿಕೆಗಲ್ಲ, ಸಾಂಪ್ರದಾಯಿಕ ವಿದ್ಯೆ ಕಲಿತವರು ಉಪೇಕ್ಷಣೀಯರಲ್ಲ ಎಂದು ತೋರಿಸುವುದಕ್ಕೆ. ಅವರು ಗಳಿಸಿದ ಸಾಂಪ್ರದಾಯಿಕ ವಿದ್ಯೆಯ ವ್ಯಾಪ್ತಿ ಮತ್ತು ವೈವಿಧ್ಯವೂ ಅವರ ಛಲವನ್ನೇ ಎತ್ತಿಹಿಡಿಯುವಂಥದು. ಆದರೆ ಅವಧಾನಿಗಳು ಪರಮ ಸಾತ್ತ್ವಿಕರು, ಗಟ್ಟಿಯಾಗಿ ಮಾತನಾಡಿದವರೂ ಅಲ್ಲ. ಇಷ್ಟೆಲ್ಲ ವಿದ್ಯೆ ಕಲಿತಮೇಲೂ ಹಳ್ಳಿಗೆ ಹೋಗಿ ಜೀವನಾಧಾರಕ್ಕಾಗಿ ವ್ಯವಸಾಯವನ್ನೇ ಆಧರಿಸುವತ್ತಲೇ ಒಲವು ಹೊಂದಿದ್ದವರು. ವಿಧಿಯ ಆಣತಿಯಂತೆ ನಗರವನ್ನು ಸೇರಿದರು, ಆದರೂ ಹಳ್ಳಿಯಲ್ಲಿ ಒಂದಷ್ಟು ಜಮೀನು ಕೊಂಡರು; ಸಂಕೇತಿಗಳಿಗೆ ಪಾರಂಪರಿಕವಾಗಿ ಒಗ್ಗಿ ಬಂದ ಕೃಷಿಯ ನಂಟಿನಿಂದ ತಪ್ಪಿಸಿಕೊಳ್ಳಲಾಗದ ಅವರ ತಹತಹಕ್ಕೆ ಆ ಮೂಲಕ ಅಭಿವ್ಯಕ್ತಿಕೊಟ್ಟರು. ಅವರ ಅಧ್ಯಾಪನ ಮತ್ತು ಕೃತಿರಚನೆಯ ಹರಹು ಬಹು ಗಂಭೀರವೂ ವಿಶಾಲವೂ ಅಪೂರ್ವವೂ ಆದದ್ದು. ಅದಕ್ಕೆ ಅವಕಾಶ ಕಲ್ಪಿಸಿದವರ ಬಗೆಗೂ ಸಾರ್ವಜನಿಕರಲ್ಲಿ ಕೃತಜ್ಞತಾಭಾವನೆಯನ್ನು ಮೂಡಿಸುವಂಥದು. ಆದ್ದರಿಂದಲೇ ಇರಬೇಕು, ಇಷ್ಟು ಹಿರಿಯ ವಿದ್ವಾಂಸರಾದರೂ ಅವಧಾನಿಗಳು ಬರೆದ ಆತ್ಮವೃತ್ತಾಂತವು ವಂದನಾರ್ಪಣೆಯ ದೊಡ್ಡದೊಂದು ಪಟ್ಟಿಯಾಗಿತ್ತು. ತಾವು ಸಾಧಿಸಿದ್ದಕ್ಕೆಲ್ಲ, ತಮಗೆ ಅವಕಾಶ ಕಲ್ಪಿಸಿದ ಪುಣ್ಯಾತ್ಮರೇ ಕಾರಣಕರ್ತರು ಎಂಬುದು ಅವರ ಭಾವ; ಪರಮಾತ್ಮನು ತನ್ನ ಇಚ್ಛೆಯನ್ನು ಪೂರೈಸಿಕೊಂಡಿದ್ದಾನೆ ಎಂಬ ವಿನೀತಿ ಅವರ ಗುಣ. ಅವರ ಆತ್ಮಕಥೆಯ ಹೆಸರು ಕೂಡ 'ತೇನ ವಿನಾ'.

ಇನ್ನೊಂದು ವಿಶೇಷವೆಂದರೆ, ಕೇಶಿರಾಜನಿಗಿದ್ದಂತೆ ಅವಧಾನಿಗಳ ಬಂಧುಗಳದೂ ಉದ್ದಾಮಪಂಡಿತರ ಜಾಲವೇ (network) ಆಗಿದೆ. ಅವರು ಮೊದಲು ರಚಿಸಿದ್ದು ಕನ್ನಡವ್ಯಾಕರಣಗ್ರಂಥವನ್ನು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು; ಅವರು ವೃತ್ತಿನಿರತ ಅಧ್ಯಾಪಕರಾಗಿ ಬೋಧಿಸಿದ್ದೂ ಕನ್ನಡವನ್ನೇ. ಅದಕ್ಕೆ ಹೊರತಾಗಿಯೇ ಅವರು ಸಂಸ್ಕೃತ ಮತ್ತು ವೇದವಾಙ್ಮಯದ ಸೇವೆ ಮಾಡಿದ್ದು. ಭಾರತೀಯ ಸಂಸ್ಕೃತಿಯ ಬಗೆಗೆ ಅವರಿಗೆ ಅಪಾರವಾದ ಪ್ರೀತಿ ಇದೆ, ಅದು ಅವರ ವಿದ್ಯೆ ಮತ್ತು ಬಾಳಿನ ಪ್ರಯೋಗಾಲಯದಲ್ಲಿ ಸಹಜವಾಗಿ ವ್ಯಕ್ತವಾದದ್ದು, ಕೇವಲ ಅಭಿಮಾನದಿಂದಲ್ಲ.

☆☆☆

ಈ ಐವರು ಗಣ್ಯರ ಇತಿವೃತ್ತಗಳೊಂದಿಗೆ 'ಸಂಕೇತಿ: ಇತಿವೃತ್ತಗಳು' ಎಂಬ ಸಂಪುಟವು ಪ್ರಕಟಣೆಗೆ ಸಿದ್ಧವಾಯಿತು. ಆ ಹೊತ್ತಿಗೆ, ಅವಶ್ಯವಾಗಿ ಈ ಸಂಪುಟದಲ್ಲಿ ಸೇರಿಸಿಕೊಳ್ಳಬೇಕಾದಂಥ ಎರಡು ಪುಸ್ತಕಗಳು ಬೇರೆಡೆ ಪ್ರಕಟಗೊಂಡವು. ಅವುಗಳಲ್ಲಿ ಒಂದು 'ತುಂಗೆಯ ಮಡಿಲಲ್ಲಿ' ಎಂಬುದು. ಅದು ಮತ್ತೂರು ಮಾರ್ಕಂಡೇಯ ಅವಧಾನಿಗಳ ಇತಿವೃತ್ತ. ಅದು ೨೦೦೫ರಲ್ಲಿ ಎಂ.ಪಿ. ಬಿರ್ಲಾ ಪ್ರತಿಷ್ಠಾನದಿಂದ ಪ್ರಕಟಗೊಂಡಿತ್ತು. ಹೀಗೆ ಪ್ರಕಟವಾಗಿದ್ದ ಇನ್ನೊಂದು ಗ್ರಂಥವು ಗಮಕ ಕಲಾವಿದರಾದ ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ಸಪ್ತತಿಶಾಂತಿಯಲ್ಲಿ ಸಮರ್ಪಿತವಾದ ಸಂಭಾವನಾಗ್ರಂಥವಾಗಿತ್ತು. 'ಗಮಕಗಂಧರ್ವ' ಎಂಬ ಹೆಸರಿನ ಆ ಗ್ರಂಥದಲ್ಲಿದ್ದ (೨೦೦೬) ಎಚ್.ಆರ್.ಕೆ. ಅವರ ಸಂದರ್ಶನ ಭಾಗವನ್ನು ನಾವು ಅಳವಡಿಸಿಕೊಳ್ಳುವುದು ಸಾಧ್ಯವಿತ್ತು. ಈ ಸಂದರ್ಶನವನ್ನೂ ತುಂಗೆಯ ಮಡಿಲಲ್ಲಿ ಎಂಬ ಗ್ರಂಥವನ್ನೂ ನಿರೂಪಿಸಿದ್ದವರು ಶ್ರೀಮತಿ ಸುಮನಾ ವಿಶ್ವನಾಥ್ ಅವರು. ಎಚ್.ಆರ್.ಕೆ. ಅವರ ಸಂದರ್ಶನವನ್ನು ಶ್ರೀಮತಿ ಸುಮನಾ ಅವರ ಸಹಕಾರದಿಂದ ನೇರ ನಿರೂಪಣೆಯಾಗಿ ಮಾಡಿಕೊಳ್ಳಲಾಯಿತು.

'ಗಮಕಗಂಧರ್ವ' ಎಂಬುದು ಹೊಸಹಳ್ಳಿ ಕೇಶವಮೂರ್ತಿಯವರಿಗೆ ಎರಡನೆಯ ಬಾರಿ ಅರ್ಪಿತವಾದ ಸಂಭಾವನಾಗ್ರಂಥ. ಕೇಶವಮೂರ್ತಿಯವರಿಗೆ ಅನೇಕವಾದ ಯುಕ್ತಬಿರುದುಗಳು ದತ್ತವಾಗಿವೆ. 'ಗಮಕಗಂಧರ್ವ' ಎಂಬ ಪ್ರಶಸ್ತಿಯಲ್ಲಿ ಅವೆಲ್ಲ ಅಡಕಗೊಳ್ಳುವುದು ಸಾಧ್ಯ. ಇಷ್ಟು ಅಚ್ಚುಕಟ್ಟಾಗಿ ಹೊಂದುವ ಹೆಸರನ್ನು ನಾವು ಬದಲಿಸುವ ಅಗತ್ಯ ಇರಲಿಲ್ಲ. ನಾವು ಅಳವಡಿಸಿಕೊಂಡಿರುವ ಭಾಗವು ಆತ್ಮಕಥೆಯ ಸ್ವರೂಪದಲ್ಲಿರುವುದರಿಂದ 'ಗಮಕ ಕಲಾರಾಧನೆ' ಎಂದು ಇಟ್ಟುಕೊಂಡೆವು. ಅವರ ಕಲಾರಾಧನೆಯು ಆವರಣವೇ ಈ ನಿರೂಪಣೆಯಲ್ಲಿರುವಂಥದು.

ಕೇಶವಮೂರ್ತಿಯವರ ಪೂರ್ವಿಕರಲ್ಲಿ ವೇದ-ಸಂಗೀತ-ಸಾಹಿತ್ಯದ ಸಂಸ್ಕಾರವು ಚೆನ್ನಾಗಿಯೇ ಇದೆ. ಆ ಪುಣ್ಯದ (ವಂಶವಾಹಿನಿಯ) ಬಲವೂ ಸೇರಿ ಕೇಶವಮೂರ್ತಿಯವರು ಸಹಜಕಲಾವಿದರಾಗಿ ಹೊಮ್ಮಿದ್ದಾರೆ. ಅವರೊಬ್ಬ ವರ-ಗಮಕಿ. ಕಲಾರಾಧನೆಯು ಅವರ ಸಂತಾನದಲ್ಲಿ ಶ್ಲಾಘ್ಯವಾಗಿ ಮುಂದುವರಿದಿದೆ.

ತಾನು ಒಲಿದಂತೆ ಹಾಡಿದವರು ಕೇಶವಮೂರ್ತಿಯವರು. ಅವಕಾಶಗಳಿಗಾಗಿ ಅವರು ಅರಸಲಿಲ್ಲ, ಪ್ರಶಸ್ತಿಗಳನ್ನು ನಿರೀಕ್ಷಿಸಲಿಲ್ಲ, ಕೀರ್ತಿಶನಿಯಿಂದ ಬಲುದೂರದಲ್ಲಿ ಹೊಸಹಳ್ಳಿಯಲ್ಲಿ ಗಮಕಾರಾಮದಲ್ಲಿ ವಿಹರಿಸುವಷ್ಟರಲ್ಲಿ ಸಂತೃಪ್ತಿ ಕಂಡರು. ಆದರೆ ಎಲ್ಲವೂ ಅವರನ್ನು ಅರಸಿಕೊಂಡು ಬಂದವು.

"ಏ... ಹುಡುಗಾ... ನೀನೇ ಅಲ್ಲವೇ ಈ ದಿನ ಪದ್ಯಗಳನ್ನು ಓದಿದವನು. ಬಹಳ ಚೆನ್ನಾಗಿ ಓದುತ್ತೀ ಕಣೋ ನೀನು... ಚೆನ್ನಾಗಿ ಅಭ್ಯಾಸ ಮಾಡು, ಬಿಟ್ಟುಬಿಡಬೇಡಾ" - ಅದು ಅತಿಥಿ ಆಗಂತುಕರ ಅಮೃತವಾಕ್ಯವಾಗಿತ್ತು. ಕೇಶವಮೂರ್ತಿಯವರ ಸಾಧನಾಶಿಖರ ಮತ್ತು ಕೀರ್ತಿಶಿಖರದ ಬೀಜ ಅದು. ಅಂಥ ಹೊಗಳಿಕೆಗೆ ಪಾತ್ರವಾಗುವಂತೆ ಅವರು ಹಾಡಿದ್ದರು, ನಿಜ. ಆದರೆ ಆಗಂತುಕ ಅತಿಥಿಗೆ ವಚನದಾರಿದ್ರ್ಯವಿರಲಿಲ್ಲ ಎಂಬುದೂ ನಿಜವೇ. ಸಾಧಕರಿಗೆ ಧನಕನಕ ಬೇಡ, ಎದೆ ತುಂಬಿದ ಒಂದು ಮಾತು ಸಾಕು; 'ಗಮಕ ಕಲಾರಾಧನೆ'ಯ ಸಂದೇಶ ಅದು.

ವೇ|| ಬ್ರ|| ಶ್ರೀ ಮಾರ್ಕಂಡೇಯ ಅವಧಾನಿಯವರ 'ತುಂಗೆಯ ಮಡಿಲಲ್ಲಿ' ಅವರ ವೈಯಕ್ತಿಕ ಜೀವನವು ತುಂಗೆಯ ಮಡಿಲಲ್ಲಿ ಪಡೆದ ಬಹು ಆಯಾಮಕ್ಕೆ ಹಿಡಿದ ಕನ್ನಡಿಯಾಗಿದೆ. 'ಜೀವನೋಲ್ಲಾಸ'ವು ಸಂಕೇತಿ ಸಮುದಾಯದ ಬದುಕಿನ ಜೀವಂತಿಕೆಯನ್ನು ನೇರವಾಗಿ ಮುಟ್ಟಿದೆ, 'ತುಂಗೆಯ ಮಡಿಲಲ್ಲಿ' ಎಂಬುದು ಅದನ್ನು ಆತ್ಮಚರಿತ್ರೆಯೊಂದಿಗೆ ತಳಕು ಹಾಕಿದೆ. ಈ ಸಂಪುಟದ ಎಲ್ಲ ಆತ್ಮವೃತ್ತಾಂತಗಳಲ್ಲೂ ಅದು ನಡೆದಿದೆ, ಆದರೆ 'ತುಂಗೆಯ ಮಡಿಲಲ್ಲಿ' ಕೃತಿಯಲ್ಲಿ ಅದರ ಬೀಸು ಹೆಚ್ಚು ಢಾಳಾಗಿದೆ.

ಈ ಸಂಪುಟದ ಉಳಿದ ಎಲ್ಲ ಲೇಖಕರಿಗಿಂತ ಮಾರ್ಕಂಡೇಯ ಅವಧಾನಿಗಳ ಅಭಿವ್ಯಕ್ತಿಗೆ ಒಂದು ವಿಶಿಷ್ಟ ಪಾತಳಿ ಇದೆ. ಅವರು ವೇದೋಪನಿಷತ್ತುಗಳು, ಪುರಾಣಗಳು, ಇತಿಹಾಸ ಮಹಾಕಾವ್ಯಗಳು ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಪಂಡಿತರು. ಕನ್ನಡದ ಕೆಲವು ಪ್ರಾಚೀನ ಕಾವ್ಯಗಳನ್ನು ನೂರಾರು ಬಾರಿ ಪ್ರವಚನಕ್ಕಾಗಿ ಮೆಲುಕು ಹಾಕಿದವರು, ಪ್ರವಚನದ ಮೂಲಕ ಅವನ್ನು ಮತ್ತಷ್ಟು ಆವಾಹಿಸಿಕೊಂಡವರು. ಪುರೋಹಿತರೂ ಋತ್ವಿಕರೂ ಆದುದರಿಂದ ಜನರ ಒಡನಾಟ ಇರುವವರು, ಮತ್ತು ಲೋಕಲಕ್ಷಣವನ್ನು ಅರಿತವರು.

ಅವರ ಇತಿವೃತ್ತವು ತನ್ನ ಪರಿಸರವನ್ನು ಬಹುವಾಗಿ ತನ್ನಲ್ಲಿ ಅಡಕ ಮಾಡಿಕೊಂಡಿದೆ. ಅವರ ಅಭಿವ್ಯಕ್ತಿಯಲ್ಲಿ ಗಮಕ ವ್ಯಾಖ್ಯಾನದ ಸುರಿಕೆ ಇದೆ, ಅವರ ಕಥನಕಲೆಯನ್ನು ಅದು ಪ್ರಭಾವಿಸಿದೆ. ಅದ್ವೈತ ಸಿದ್ಧಿಯ ವಿಶ್ವಕುಟುಂಬದ ಕಣ್ಣು ಮಾಡಿರುವ ಲೋಕಾರಾಧನೆ ಇಲ್ಲಿನ ವಿಶಾಲ ವೇದಿಕೆಯಲ್ಲಿ ರಿಂಗಣಿಸಿದೆ.

ಶ್ರೀಮತಿ ಸುಮನಾ ವಿಶ್ವನಾಥ್ ಅವರು ಮತ್ತೂರ್‌ಜೀ ಅವರ ಆತ್ಮವೃತ್ತಾಂತವನ್ನು ನಿರೂಪಿಸುತ್ತಲೇ ತಮ್ಮ ಸಿದ್ಧಲೇಖನಿಗೆ ಸಾರ್ಥಕತೆಯನ್ನು ಆವಾಹಿಸಿಕೊಂಡಿದ್ದರು. 'ಗಮಕ ಕಲಾರಾಧನೆ' ಮತ್ತು 'ತುಂಗೆಯ ಮಡಿಲಲ್ಲಿ' ಆ ನೈಪುಣ್ಯದ ಮುಂದುವರಿದ ಮಜಲುಗಳಾಗಿವೆ.

☆☆☆

ಈ ಎಲ್ಲಾ ಇತಿವೃತ್ತಗಳಲ್ಲೂ ವ್ಯಕ್ತಿಜೀವನದ ಹಂದರಕ್ಕೆ ಸಮುದಾಯ ಜೀವನದ ವಿವರಗಳ ಬಳ್ಳಿ ಹಬ್ಬಿಕೊಂಡಿದೆ. ಪ್ರತಿಯೊಂದು ಸಣ್ಣವಿವರದಲ್ಲೂ ಅದು ಕಾಣುತ್ತದೆ. ಇಲ್ಲಿನ ಲೇಖಕರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರೇ ಆಗಿದ್ದಾರೆ. ಆದರೆ ಅವರ ಆತ್ಮವೃತ್ತಾಂತದ ಜತೆಗೆ ಬೆಸೆದಿರುವ ಸಮುದಾಯ ಜೀವನದ ವಿವರಬಾಹುಳ್ಯದ ಕಾರಣಕ್ಕಾಗಿಯೇ ಇವನ್ನೆಲ್ಲ 'ಸಂಕೇತಿ: ಇತಿವೃತ್ತಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಸೇರಿಸಲಾಗಿದೆ. ಆದ್ದರಿಂದಲೇ ಅಮೀನ್ ವೆಂಕಟಕೃಷ್ಣಯ್ಯನವರ ಹೊರಚ್ಚಾದ

ಜೀವನಚಿತ್ರಣವು ಇಂಥ ಬರಹಗಳಲ್ಲಿ (ಆಡಿದ ಹೊಲ, ಕಂಡ ವಿಚಾರ) ಬಾಹ್ಯವೆನಿಸುವುದಿಲ್ಲ; ತಿಳಿಮನಸ್ಸಿನ ಸುಲ್ತಾನನ ಒಡನಾಟವು ಗೌಣವಾಗುವುದಿಲ್ಲ (ಕಲೆಯ ಸನ್ನಿಧಿಯಲ್ಲಿ); ನಾಲ್ಕು ವಿವಾಹಗಳ ಕಥನದ ಎಳೆಯು ಭಾರವೆನಿಸುವುದಿಲ್ಲ (ಮಾಗಿದ ಬದುಕು); 'ಆಗಿನ ಸಮಾಜ'ದ ವಿಸ್ತಾರವಾದ ಚಿತ್ರಣವು (ಜೀವನಗಾಥ) 'ಅತಿ' ಎನಿಸುವುದಿಲ್ಲ. ಇನ್ನೊಂದೇ ನಿದರ್ಶನ, ಲಿಂಗದಹಳ್ಳಿಯ ಆ ಅತಿ ಸಾಮಾನ್ಯ ಮಹಿಳೆಯ ಕಾಶೀಯಾತ್ರೆಯದು (ತುಂಗೆಯ ಮಡಿಲಲ್ಲಿ). ಆ ಮಹಾ ಮಹಿಳೆಯು ಕಾಶೀಯಾತ್ರೆ ಮಾಡುವ ತನ್ನ ವೈಯಕ್ತಿಕ ಆಕಾಂಕ್ಷೆಯನ್ನು ಅದುಮಿಟ್ಟಳು, ಪಕ್ಕದ ಮನೆಯ ಬಡಕುಟುಂಬದ ಅಳಿವು ಉಳಿವಿನ ಚಿಂತೆ ಮಾಡಿದಳು, ಆ ಬಡಗರ್ಭಿಣಿ ಹುಡುಗಿಯ ಜೀವದಾಳದ ಕನಸಿಗೆ ಸ್ಪಂದಿಸಿದಳು, ಆ ಕುಟುಂಬದ ಸೇವೆಗಾಗಿ ಹಳ್ಳಿಯಲ್ಲೇ ಉಳಿದುಕೊಂಡಳು, 'ಇದೇ ನನ್ನ ಕಾಶೀಯಾತ್ರೆ, ಇಲ್ಲೇ ನನಗೆ ವಿಶ್ವನಾಥನ ದರ್ಶನ' ಎಂದು ತಿಳಿಯುವ ಎತ್ತರಕ್ಕೆ ಏರಿದಳು, ವೇದಾಂತಿಯಾದಳು, ಮಾನವತಾವಾದಿಯಾದಳು. ಇತಿವೃತ್ತವು ನಿರಾಯಾಸವಾಗಿ ಇಂಥ ಉಪಕಥನಗಳನ್ನು ತನ್ನ ಉದ್ದೇಶದ ತೆಕ್ಕೆಗೆ ಸೇರಿಸಿಕೊಂಡುಬಿಡಬಲ್ಲದು.

ಇಲ್ಲಿನ ಇತಿವೃತ್ತಗಳ ಅವಲೋಕನದ ದೃಷ್ಟಿಯಿಂದ ಓದುಗರ ಸೌಲಭ್ಯಕ್ಕಾಗಿ ಕೆಲವು ವಿವರಗಳನ್ನು ಇಲ್ಲಿ ನೀಡಬಹುದಾಗಿದೆ :

೧. ಪ್ರೊ. ಕೆ.ಎಸ್. ಕೃಷ್ಣಮೂರ್ತಿ	-	ಕೇರಳಾಪುರ, ಅರಕಲಗೂಡ ತಾಲ್ಲೂಕು, ಹಾಸನ ಜಿಲ್ಲೆ, ಮಧ್ಯದೇಶ, ಅಧ್ಯಾಪಕ, ಲೇಖಕ, ಕೌಶಿಕ ಸಂಕೇತಿ - ಜನನ : ೧೯೧೭
೨. ಸಾ. ನಾ. ಶ್ರೀಕಂಠಯ್ಯ	-	ಸಾಲಿಗ್ರಾಮ, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ, ಬೆಟ್ಟದಪುರ ಅಷ್ಟಗ್ರಾಮ, ಎಲ್.ಐ.ಸಿ. ಅಧಿಕಾರಿ, ನಾಟಕ ಕಲಾವಿದ, ಲೇಖಕ, ಬೆಟ್ಟದಪುರ ಸಂಕೇತಿ - ಜನನ : ೧೯೩೩
೩. ಆರ್.ವಿ. ಶ್ರೀನಿವಾಸಯ್ಯ	-	ರುದ್ರಪಟ್ಟಣ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಮಧ್ಯದೇಶ, ಕೃಷಿಕ, ವಿಮಾ ಪ್ರತಿನಿಧಿ, ಕವಿ, ಕೌಶಿಕ ಸಂಕೇತಿ - ಜನನ : ೧೯೧೦
೪. ಕೆ.ಎಸ್. ವೆಂಕಟರಾಮಯ್ಯ	-	ಕೊಂಡಗುಳ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ, ಹಾಸನ ಸೀಮೆ, ಅಧ್ಯಾಪಕ, ಕವಿ, ಕೌಶಿಕ ಸಂಕೇತಿ - ಜನನ : ೧೯೧೮
೫. ವೇ॥ ಬ್ರ॥ ಶ್ರೀ ರಾಮೇಶ್ವರ ಅವಧಾನಿ	-	ಪೂಮಗಾಮೆ, ಹಾಸನ ತಾಲ್ಲೂಕು. ಹಾಸನ ಜಿಲ್ಲೆ, ಹಾಸನ ಸೀಮೆ, ಅಧ್ಯಾಪಕ, ಋತ್ವಿಕ, ಪುರೋಹಿತ, ಲೇಖಕ, ಕೌಶಿಕ ಸಂಕೇತಿ - ಜನನ : ೧೯೧೯
೬. ಹೊಸಹಳ್ಳಿ ಕೇಶವಮೂರ್ತಿ	-	ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಮತ್ತೂರು ಸೀಮೆ, ಗಮಕ ಕಲಾವಿದ, ಕೃಷಿಕ, ಕೌಶಿಕ ಸಂಕೇತಿ - ಜನನ : ೧೯೩೪

೭. ವೇ|| ಬ್ರ|| ಶ್ರೀ ಮಾರ್ಕಂಡೇಯ ಅವಧಾನಿ - ಮತ್ತೂರು, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಮತ್ತೂರು ಸೀಮೆ, ಋತ್ವಿಕ, ಪುರೋಹಿತ, ಕೃಷಿಕ, ಪ್ರವಚನಕಾರ, ಗಮಕ ವ್ಯಾಖ್ಯಾನಕಾರ, ಕೌಶಿಕ ಸಂಕೇತಿ - ಜನನ : ೧೯೩೩.

ಇಲ್ಲಿನ ಲೇಖಕರಲ್ಲಿ ಮಧ್ಯದೇಶದ ಇಬ್ಬರು, ಹಾಸನ ಸೀಮೆಯ ಇಬ್ಬರು, ಮತ್ತೂರು ಸೀಮೆಯ ಇಬ್ಬರು ಮತ್ತು ಬೆಟ್ಟದಪುರ ಅಷ್ಟಗ್ರಾಮದ ಒಬ್ಬರು ಸೇರಿದ್ದಾರೆ. ಸಂಕೇತಿಗಳ ಪ್ರಾದೇಶಿಕ ವೈಶಿಷ್ಟ್ಯಗಳ ದೃಷ್ಟಿಯಿಂದ ಲಿಂಗದಹಳ್ಳಿ ಸಮುದಾಯದ ಪ್ರಾತಿನಿಧ್ಯವು ಇಲ್ಲಿ ತಪ್ಪಿಹೋಗಿದೆ. ಕೇರಳ ಮತ್ತು ತಮಿಳುನಾಡಿನ ಸಂಕೇತಿಗಳ ಇತಿವೃತ್ತಗಳನ್ನೊಳಗೊಂಡ ಪ್ರತ್ಯೇಕ ಸಂಪುಟವು ಸಂಕೇತಿ ಅಧ್ಯಯನ ಮಾಲೆಯಲ್ಲಿ ಯೋಜಿತವಾಗಿದೆ. ಈ ಮಾಲೆಯಲ್ಲಿ ಬರಲಿರುವ ಆತ್ಮಕಥಾ ಸಂಪುಟದಲ್ಲಿ ಲಿಂಗದಹಳ್ಳಿಯ ಪ್ರಖ್ಯಾತ ವಿದ್ವಾಂಸರಾದ ವೇ|| ಬ್ರ|| ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಆತ್ಮಕಥೆಯನ್ನು ಸೇರಿಸಲಾಗಿದೆ. ಇಷ್ಟಾದರೂ, ಜೀವನವಿವರಗಳ ವಿಸ್ತಾರವಾದ ಅವಲೋಕನಕ್ಕಾಗಿ ಬೇಕಾದ ಲಿಂಗದಹಳ್ಳಿಯ ಪರವಾದ ಇತಿವೃತ್ತವೊಂದರ ಕೊರತೆ ಹಾಗೆಯೇ ಉಳಿದಂತಾಗಿದೆ. ಇತರ ಪ್ರಾದೇಶಿಕ ಇತಿವೃತ್ತಗಳನ್ನು ನೋಡಿದವರಿಗೆ ಲಿಂಗದಹಳ್ಳಿಯ ಬಗೆಗಿನ ಕುತೂಹಲವು ಹೆಚ್ಚುವುದರಲ್ಲಿ ಸಂದೇಹವಿಲ್ಲ.

☆☆☆

ಒಟ್ಟಿನಲ್ಲಿ, ಇಲ್ಲಿ ಸೇರಿರುವ ಎಂಟು ಕೃತಿಗಳು ಒಟ್ಟಾಗಿ ಕಟ್ಟಿಕೊಟ್ಟಿರುವ ಜೀವನಸ್ವರೂಪವೊಂದರ ಚಿತ್ರಣವು ಈ ಸಂಪುಟದ ಸಾಧನೆಯಾಗಿದೆ. ಇದರ ಸಂಪಾದಕರಾಗಲು ದಯಮಾಡಿ ಒಪ್ಪಿ ಇದು ಅಚ್ಚುಕಟ್ಟಾಗಿ ಹೊರಬರಲು ಶ್ರಮಿಸಿರುವ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೆ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರು ಸಮುದಾಯ ಅಧ್ಯಯನ ಕೇಂದ್ರವು ಪ್ರಾರಂಭವಾದಾಗಲಿಂದಲೂ ಅದರ ಜತೆಗಿದ್ದಾರೆ; ಪುಸ್ತಕ ಸಲಹಾ ಸಮಿತಿಯ ಗಣ್ಯ ವಿದ್ವಾಂಸರಲ್ಲಿ ಅವರೂ ಒಬ್ಬರಾಗಿದ್ದಾರೆ. ಅವರ ಜ್ಞಾಪಕಶಕ್ತಿ ಅಸಾಧಾರಣವಾದುದು, ಪುಸ್ತಕ ಪರಿಷ್ಕಾರಕ್ಕೆ ಬೇಕಾದ ನೈಪುಣ್ಯವೂ ದೊಡ್ಡದು, ಆ ಕ್ಷೇತ್ರದ ಅವರ ಅನುಭವವೂ ದೀರ್ಘವಾದುದು. ಕೇಂದ್ರವು ಸಿದ್ಧಪಡಿಸುವ ಹಸ್ತಪ್ರತಿಗಳ ಕರಡು ಮೊದಲ ಅವಗಾಹನೆಗೆ ಹೋಗುವುದು ಶಾರದಾ ಪ್ರಸಾದರಲ್ಲಿಗೆ. ತಮ್ಮ ವೈಯಕ್ತಿಕ ಕೆಲಸ ಎನ್ನುವಂತೆ ಪ್ರೀತಿ ಮತ್ತು ತಾದಾತ್ಮ್ಯಭಾವದಿಂದ ಈ ಕೆಲಸಗಳಲ್ಲಿ ಅವರು ತೊಡಗಿಕೊಳ್ಳುವುದು ಸಮುದಾಯ ಅಧ್ಯಯನ ಕೇಂದ್ರಕ್ಕೆ ಅಪಾರವಾದ ಆತ್ಮವಿಶ್ವಾಸವನ್ನು ತಂದುಕೊಟ್ಟಿದೆ.

ವಿದ್ವಾಂಸರಾದ ಪ್ರೊ. ಎಲ್.ಎಂ.ಎಲ್. ಶಾಸ್ತ್ರೀ ಅವರು ಸಂಕೇತಿ ಅಧ್ಯಯನದಲ್ಲಿ ವಿಶೇಷವಾದ ಆಸಕ್ತಿ ಹೊಂದಿರುವಂಥವರು. ಸಮುದಾಯ ಅಧ್ಯಯನ ಕೇಂದ್ರದ ಪ್ರಕಟಣೆಗಳನ್ನು ಅವಲೋಕಿಸಿ ಮೆಚ್ಚಿ ಸಲಹೆ ನೀಡುತ್ತಿರುವ ಹಿತೈಷಿಗಳು. ಅವರು ಪ್ರಕೃತ ಸಂಪುಟವನ್ನು ಅವಲೋಕಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿ ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟು ಹರಸಿದ್ದಾರೆ. ಆ ಹಿರಿಯರಿಗೆ ಕೇಂದ್ರವು ಆಭಾರಿಯಾಗಿದೆ.

ಈ ಸಂಪುಟವು ತಳೆದಿರುವ ಈ ಸ್ವರೂಪಕ್ಕೆ ಕಾರಣರಾದ ಎಲ್ಲ ಮಿತ್ರರಿಗೆ ಪೂಜ್ಯರಿಗೆ ಹಿತೈಷಿಗಳಿಗೆ ಸಮುದಾಯ ಅಧ್ಯಯನ ಕೇಂದ್ರದ ಪರವಾದ ಅನಂತ ಪ್ರಣಾಮಗಳು.

ಡಾ|| ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಮೈಸೂರು
೬ನೇ ಜೂನ್ ೨೦೦೭

ಮುನ್ನುಡಿ

'ಸಂಕೇತಿ' ಐದನೆಯ ಸಂಪುಟ 'ಇತಿವೃತ್ತಗಳು' ನಿಮ್ಮ ಕೈಯಲ್ಲಿದೆ. ಇತಿವೃತ್ತ ಎಂದರೆ ಆಖ್ಯಾಯಿಕೆ, ಘಟನೆಗಳು, ಹಿಂದೆ ಘಟಿಸಿದ ಕಥೆ. ನಮ್ಮ ಜನಾಂಗದ, ಸುಮಾರು ನೂರು ವರ್ಷಗಳಷ್ಟು ಹಳೆಯ ಬದುಕಿನ ಸಂಗತಿಗಳ ಮೂಲಕ ಆಗಿನ ಸಂಕೇತಿ ಜನಾಂಗವನ್ನು ದೃಶ್ಯವತ್ತಾಗಿ ಮಾಡಿಕೊಳ್ಳುವ ಪ್ರಯತ್ನ ಇದಾಗಿದೆ. ತನ್ಮೂಲಕ ನಮ್ಮಲ್ಲಿ ಆನುವಂಶೀಯವಾಗಿ ಬಂದಿರಬಹುದಾದ ವಿಶಿಷ್ಟ ಗುಣಲಕ್ಷಣಗಳ ಬಗೆಗೂ ಬೆಳಕು ಚೆಲ್ಲಬಹುದಾಗಿದೆ. ಇಲ್ಲಿ, ಏಳು ಜನ ಹಿರಿಯರು ತಮ್ಮ ಬದುಕಿನ ಸಂಗತಿಗಳನ್ನು ನಮ್ಮ ಮುಂದಿಡುತ್ತಿದ್ದಾರೆ. ಈ ಹಿರಿಯರ ಸರಾಸರಿ ವಯಸ್ಸು ೭೮ ವರ್ಷ ! ಅಂದರೆ ಸುಮಾರು ನಾಲ್ಕು ತಲೆಮಾರುಗಳಷ್ಟು ಹಿಂದಿನ ನಮ್ಮ ಜನಾಂಗದ ಬದುಕಿನ ಚಿತ್ರಗಳನ್ನು ನಾವಿಲ್ಲಿ ಕಾಣುತ್ತಿದ್ದೇವೆ.

ಈ ಲೇಖನಗಳೆಲ್ಲವೂ ಆತ್ಮಚರಿತ್ರೆಗಳಾದರೂ ಆತ್ಮಕಥಾನಕಗಳಲ್ಲ ! ಸಂಪರ್ಕಕ್ಕೆ ಬಂದ ಒಡನಾಡಿಗಳ, ಊರಿನ, ಸಮಾಜದ, ಪರಿಸರದ ಇತಿವೃತ್ತ ಇಲ್ಲಿ ಪ್ರಮುಖವಾಗಿ ನಮಗೆ ಲಕ್ಷ್ಯ. ಈ ಚಿತ್ರಗಳ ಹಿನ್ನೆಲೆಯಲ್ಲಿ ಸಂಕೇತಿ ಜೀವನದ ವಿವರಗಳು ಪ್ರಧಾನವಾಗಿವೆ. ಈ ಇತಿವೃತ್ತಗಳಿಗೆ ಪೂರಕವಾಗಿ ಈ ಎಲ್ಲ ಏಳು ಮಹನೀಯರ ಆತ್ಮಚರಿತ್ರೆಯೂ ಕಾಲಾಂತರದಲ್ಲಿ ಪ್ರಕಟವಾಗಲೆಂದು ಆಶಿಸುತ್ತೇನೆ. ಹಿರಿದಾಗಿ ಬಾಳಿದ ಈ ಎಲ್ಲ ಮಹನೀಯರೂ ನಮಗೆ ಪ್ರಾತಃಸ್ಮರಣೀಯರು. ನಮ್ಮ ಜನಾಂಗ ಹೆಮ್ಮೆ ಪಡುವಂತಹ ಪರಿಶುದ್ಧ ಜೀವಿಗಳು, ನಿರ್ಮಲ ಗುಣಕ್ಕೆ ಮತ್ತೊಂದು ಹೆಸರಾದವರು. ಈ ಹಿರಿಮೆಯು ಅವರ ಕಾಲದ ಬದುಕಿನ ಪ್ರತಿಬಿಂಬವಾಗಿದೆ ಎಂದು ಕಲ್ಪಿಸಿಕೊಳ್ಳುವುದೇ ರೋಮಾಂಚನದ ಸಂಗತಿ. ನೀವು ಕೃತಿಯನ್ನು ಕೆಳಗಿಡದೆ ಓದಿ ಮುಗಿಸುತ್ತೀರಿ ಮತ್ತು ಕಡೆಯಲ್ಲಿ ನಿಮಗನ್ನಿಸುವ ಮಾತು: "ನಮ್ಮವರು ಎಂದು ಹೆಮ್ಮೆಪಡಬೇಕಾಗಿಲ್ಲ, ಇಡೀ ಕರ್ನಾಟಕವೇ ಹೆಮ್ಮೆಪಡುವಂತಹ ಆದರ್ಶ ವ್ಯಕ್ತಿತ್ವವುಳ್ಳ ಜನ."

ಕೆ.ಎಸ್. ಕೃಷ್ಣಮೂರ್ತಿ : ಮೈಸೂರಿನಲ್ಲಿ ಕಾಲೇಜು ಅಧ್ಯಾಪಕರಾಗಿದ್ದು ವಿಶ್ರಾಂತರಾಗಿಯೇ ಮುವ್ವತ್ತೊಂದು ವರ್ಷವಾಯಿತು. ಹುಟ್ಟೂರು ಕೇರಳಾಪುರ. ತಮ್ಮ ಬಾಲ್ಯದ, ಕಾವೇರಿ ತೀರದ ಸಂಕೇತಿ ಗ್ರಾಮದ ಬದುಕಿನ ಚಿತ್ರಗಳನ್ನು ನೆನಪಿನಂಗಳದಿಂದ ಹೊರಗಿಟ್ಟಿದ್ದಾರೆ. ಆದ್ದರಿಂದಲೇ "ಆಡಿದ ಹೊಲ, ಕಂಡ ವಿಚಾರ" ಎಂಬುದು (ಜನ್ನ ಕವಿಯ ಯಶೋಧರ ಚರಿತೆಯಲ್ಲಿ ಬರುವ ಒಂದು ವಾಕ್ಯ) ಲೇಖನಕ್ಕೆ ಅರ್ಥಗರ್ಭಿತವಾದ ಶೀರ್ಷಿಕೆ. ಕಂಡ, ಅನುಭವಿಸಿದ, ಸುಪ್ತಮನಸ್ಸಿನ ಅನುಭವಗಳು ಹೊರಹೊಮ್ಮಿದಾಗ ಕಾವ್ಯವಾಗುತ್ತದೆ. ಅಂತೆಯೇ ಕಾವ್ಯಮಯ ಮಧುರ ಗದ್ಯ ಇಲ್ಲಿದೆ. ಕುವೆಂಪು ಅವರ ತುಂಗಾನದಿಯ ಸ್ಮರಣೆಯ ಚಿತ್ರಗಳು ನೆನಪಿಗೆ ಬರುತ್ತವೆ. ಆದರೆ ಅಲ್ಲಿಗಿಂತ ಇಲ್ಲಿ ಹೆಚ್ಚು ಆತ್ಮೀಯವೂ ಭಾವನಾತ್ಮಕವೂ ಆಗಿದೆ ಮತ್ತು ನಮಗೆ ಹತ್ತಿರವಾಗಿದೆ! ಈ ಚಿತ್ರಗಳು ನದೀ ದಂಡೆಯ ಯಾವುದೇ ಸಂಕೇತಿ ಗ್ರಾಮಕ್ಕೂ ಅನ್ವಿತ. ನದಿಯು ಇಡೀ ಊರಿನ ಸಾಂಸ್ಕೃತಿಕ ಕೇಂದ್ರವಾಗಿದ್ದು ಊರಿನ ಎಲ್ಲ ಬದುಕಿನೊಡನೆ ಹಾಸುಹೊಕ್ಕಾದ ಚಿತ್ರಣ ಇಲ್ಲಿದೆ. ಸ್ವಲ್ಪಮಾತ್ರ ಪ್ರಯತ್ನದಿಂದ ಬೃಹತ್-ಭವ್ಯ ಕಾದಂಬರಿಯನ್ನಾಗಿಸಬಹುದಾದ ಬರೆಹ ಇದಾಗಿದೆ. ೧೯೪೨ರ ಸರಿಸುಮಾರು, ಹೊಟ್ಟೆಪಾಡಿಗಾಗಿ ದೂರದೂರಿನಲ್ಲಿ ಸೈನ್ಯದಲ್ಲಿ ಕರಣಿಕ ವೃತ್ತಿ ಮಾಡುತ್ತಿದ್ದ ಕೆ.ಎಸ್.ಕೆ. ಅವರು ಆ ಸ್ವಾತಂತ್ರ್ಯ ಹೋರಾಟ ಕಾಲದ ಜನಗಳ/ಬದುಕಿನ ಮನೋಜ್ಞ ಚಿತ್ರಣ ನೀಡಿದ್ದಾರೆ.

ಸಾ.ನಾ. ಶ್ರೀಕಂಠಯ್ಯ : ನಾವು ಈ ಸಂಚಿಕೆಯಲ್ಲಿ ಕಾಣುವ ಹಿರಿಯರೆಲ್ಲ ತಮ್ಮ ತಮ್ಮ ಕ್ಷೇತ್ರದಲ್ಲಿ ಬಹುಶಃ ನಾಸ್ತಿದ್ವಿತೀಯರು. ನೂರಕ್ಕೂ ಹೆಚ್ಚು ನಾಟಕಗಳನ್ನು ಬರೆದ, ಆಡಿಸಿದ ಶ್ರೀಕಂಠಯ್ಯ ಅವರು ನಾಟಕ ಕ್ಷೇತ್ರದಲ್ಲಿ ಕರ್ನಾಟಕದ ಬಹು ದೊಡ್ಡ ಕಲಾವಿದರು, ಸಂಕೇತಿ ಸಮಾಜಕ್ಕೆ ಕಿರೀಟಪ್ರಾಯರು. ಅವರ ಭಾಷೆಯೇ ಕಾವ್ಯಮಯ. ಹುಟ್ಟಾ ಕವಿ, ಕಲಾವಿದ. ನಾಟಕ ಬರೆದ, ಆಡಿಸಿದ ವಿವರದ ಜೊತೆಯಲ್ಲಿಯೇ ಆ ಕಾಲದ ತಮ್ಮ ಮತ್ತು ಪರಿಸರದ ಬದುಕಿನ ಚಿತ್ರವನ್ನು ಕೊಟ್ಟಿದ್ದಾರೆ. ವಾರದ ಸಂತೆಯ ಬೆಣ್ಣೆ ವ್ಯಾಪಾರ, ಸುತ್ತ ಹತ್ತು ಹಳ್ಳಿಯವರು ಒಂದೆಡೆ ಸೇರುವುದು, ಇತ್ಯಾದಿ. ಆ ಸಮಯ ಹಳ್ಳಿಗರ ಪಾಲಿಗೆ "ಸುದ್ದಿಯ, ಪ್ರೀತಿಯ

ವಿನಿಮಯದ'' ಹೊತ್ತಂತೆ! ಈ ವಿವರ ನೀಡುವಾಗ: ''ಅಯ್ಯೋ, ಏತಕ್ಕಾಗಿ ಬೆಳೆದೆವೋ. ಎಲ್ಲಾ ಹೋಯಿತಲ್ಲಾ!'' ಎಂದು ಉದ್ಗಾರ ಎತ್ತಿದ್ದಾರೆ. ಮನೆಗೆ ಭೇಟಿ ನೀಡುವ ದಾಸಯ್ಯನ ಬಗ್ಗೆ ಹೇಳುವಾಗ 'ಆತ ಭಿಕ್ಷುಕನಲ್ಲ' ಎಂದು ಅಭಿಮಾನದಿಂದ ಆತನ ವರ್ಣನೆ ಮಾಡುತ್ತಾರೆ. ಹಾಗೆಯೇ ತಂದೆಯ ಬಗೆಗೆ ಹೇಳುವಾಗ 'ಅವರು ಸಾಕ್ಷಾತ್ ದೇವರು' ಎನ್ನುತ್ತಾರೆ. ಇಂಥದೇ ಮಾತು ಅವಧಾನಿಗಳ ಲೇಖನದಲ್ಲೂ ಇದೆ. ಹೀಗೆ ದೈವತ್ವ ಕಾಣುವ ಈ ಮಕ್ಕಳ ಸಹೃದಯತೆ, ಸಂಸ್ಕಾರ ಕುರಿತು ಯೋಚಿಸುತ್ತೇನೆ. ದೈವತ್ವ ಹಿರಿಯರಲ್ಲಿ ಇದೆಯೋ ಅಥವಾ ಕಾಣುವ ಈ ಮಕ್ಕಳಲ್ಲಿ ಇದೆಯೋ ? ಅದ್ಭುತ ಕಾದಂಬರಿ ಶೈಲಿ. ವಿವಾಹಮಂಗಳದ ನವುರಾದ ಹಾಸ್ಯ ಚಿತ್ರಗಳು. ಈಗ ಮರೆಯಾಗುತ್ತಿರುವ ಉರುಟಣೆ ಚೆಂಡಾಟದ ವಿವರಗಳು ಇಲ್ಲಿವೆ. ಅವರ ಭಾಷೆ ಗಮನಿಸಿ: ಕಾಶೀಯಾತ್ರೆಯ ಛತ್ರಿಕಡ್ಡಿ ಚುಚ್ಚಿದಾಗ: ''ಗಂಗಾ ಭಾಗೀರಥಿಗಳ್ ಮೇಳೈಸಿ ಧರೆಗಿಳಿದರ್ ಕಣ್ಣ ಕಾಲುವೆಯೊಳೊತ್ತಿ''. ಗಂಡು ಮಗ ಹುಟ್ಟಿದಾಗ '.... ಪುನ್ನಾಮ ನರಕದಿಂದೀಚೆಗಿಡುವ ಅಣುಗನ ಆವಿರ್ಭಾವವಾದದ್ದು ಸಪ್ತಮ ಗರ್ಭದಲ್ಲಿ.' ಈ ವಾಕ್ಯ ನೋಡಿ: ''ನನ್ನ ನೊಸಲ ನೇತ್ರಂ ಅಣಕಮಾತ್ರಮಾದುದು. ಇಲ್ಲದಿರೆ ಧರೆಯೋಳ್ ಬೂದಿತಿಲಕಮಾಗಿ ಬಿದ್ದಿರ್ಪನ್ ಅವನ್''. ಕಾಳಿದಾಸ ಕವಿಯು ಕಾಮದಹನದ ಪರಿಣಾಮ ಹೇಳುವಾಗ 'ಭಸ್ಮಕೇಲಮ್' ಎಂದ ಮಾತಿನ ನವುರಾದ ಹಾಸ್ಯ ರೂಪ! ಸಾನಾ ಅವರು ಬರೆದ ನಾಟಕಗಳಲ್ಲಿ ಪ್ರಕಟಿತ ಕಡಿಮೆ, ಅಪ್ರಕಟಿತವೇ ಹೆಚ್ಚು. ಸಾಕಷ್ಟು ಪ್ರಶಸ್ತಿ, ಗೌರವಗಳು ದೊರೆತಿವೆ. ಆದರೆ ಈ ರಂಗಕಲಾವಿದನ ಬದುಕು ಸ್ವಂತಕ್ಕೆ ಪೂರ್ಣ (ಆತ್ಮ) ತೃಪ್ತಿ ತಂದಿದೆ. ಅಷ್ಟು ಸಾಕು. ಅದಕ್ಕಿಂತ ಹೆಚ್ಚಿನ ಸುಖ ಹೊರಗಣ ಪ್ರಶಸ್ತಿಗಳಿಂದಿಲ್ಲ.

ಆರ್.ವಿ. ಶ್ರೀನಿವಾಸಯ್ಯ : ಸಾನಾಶ್ರೀ ಅವರಂತೆ ಆಶುಕವಿತ್ವ ಪ್ರತಿಭೆಯ ಮಹಾನ್ ಚೇತನ ಆರ್.ವಿ. ಶ್ರೀ ಅವರು. ೧೨-೧೩ರ ಚಿಕ್ಕ ವಯಸ್ಸಿನಲ್ಲಿಯೇ ಆದಿಪ್ರಾಸ ಸಹಿತ ಭಾಮಿನಿಷಟ್ಪದಿಯ ರಚನೆ ಮಾಡಿರುವುದು ಅದ್ಭುತ. ಉದಾಹರಣೆ:

ಎತ್ತ ನೋಡಿದರತ್ತಲೈರ್ಲೆಂಡ್ ।
ಎತ್ತ ನೋಡಿದರತ್ತ ವೇಲಸು ।
ಎತ್ತಲುಂ ಪೊತ್ತಿಹಳು ಭೂಮಾತೆಯೀ ಜಗವ ॥

ಭಾಷೆ ಸರಳ, ಸುಭಗ, ಸುರಸ. ಆಳಿದ ಲಾರ್ಡ್‌ಗಳ ಹೆಸರುಗಳನ್ನು ನೆನಪಿಟ್ಟುಕೊಳ್ಳಲು ಶ್ಲೋಕರಚನೆ:

ಕ್ಯಾನಿಂಗಃ ಪ್ರಥಮಃ ಪ್ರೋಕ್ತೋ
ಎಲ್ಜಿನ್ನಸ್ತು ದ್ವಿತೀಯಕಃ ।
ಲಾರೆನ್ಸಸ್ತೃತೀಯಸ್ತು
ಲಾರ್ಡ್ ಮೇಯೋಶ್ಚ ಚತುರ್ಥಕಃ ॥

ತಮ್ಮ ೧೯ನೆಯ ವಯಸ್ಸಿನಲ್ಲಿ ಪತ್ತೇದಾರಿ ಕಥೆಯೊಂದನ್ನು ಭಾಮಿನಿಷಟ್ಪದಿಯಲ್ಲಿ ಬರೆದವರು ! ಇದೇ ದಾರಿಯಲ್ಲಿ ನಡೆದಿದ್ದರೆ ಮಹಾಕವಿಯಾಗುವ ಸಾಧ್ಯತೆಯಿತ್ತು. ಪ್ರತಿಭೆಯ ಪೂರ್ಣಪ್ರಯೋಜನ ಪಡೆಯಲಿಲ್ಲ. ರೈತನ ಬಡತನದ ಬವಣೆಯು ಬಹಳಷ್ಟು ಪ್ರತಿಭೆಗಳನ್ನು ಕಮರಿಸುತ್ತದೆ? ಹೋರಾಟದ ಬದುಕಿನ ವಿವರಗಳ ಹಿನ್ನೆಲೆಯಲ್ಲಿ, ಮಾವ ಅಳಿಯಂದಿರ ಸಂಬಂಧ, ಗಂಡಸರು ಒಂದಕ್ಕಿಂತ ಹೆಚ್ಚು ಮದುವೆಯಾಗುತ್ತಿದ್ದುದು, ಪ್ಲೇಗ್ ಹಾವಳಿ, ಇತ್ಯಾದಿ ಆ ಕಾಲದ ಸಾಮಾಜಿಕ ಸ್ಥಿತ್ಯಂತರಗಳನ್ನು ಬಿಡಿಸಿಟ್ಟಿದ್ದಾರೆ. ಹಿರಿಯ ಮಗಳು ಶ್ರೀವಾಣಿ ಹುಟ್ಟುವಾಗ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಮ್.ಎನ್. ಜೋಯಿಸರ ಪತ್ನಿಯಿಂದ ಹೆರಿಗೆ ಮಾಡಿಸಿಕೊಳ್ಳಬೇಕಾಗಿ ಬಂದ ಪ್ರಸಂಗ ಗಮನಾರ್ಹವಾಗಿದೆ. ಆರ್.ವಿ.ಶ್ರೀ ಅವರು 'ಗಣಪತಿ ಜನನ', 'ಸಂಸಾರ ಪಾಶ' ಇತ್ಯಾದಿ ನಾಲ್ಕಾರು ಕಿರುಕಾವ್ಯಗಳನ್ನು ರಚಿಸಿದ್ದು ಸತ್ವಯುತವಾಗಿವೆ.

ಕೆ.ಎಸ್. ವೆಂಕಟರಾಮಯ್ಯ : ರಾಷ್ಟ್ರಭಾಷಾ ಪ್ರಚಾರಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಹಿರಿಯ ಜೀವಿ. ಕೆ.ಎಸ್.ವಿ. ಅವರ ಹೋರಾಟದ ಬದುಕಿನ ಸಾಹಸಗಾಥೆ ಈ ಜೀವನ ಗಾಥೆ. ಅವರ ಪ್ರೈಮರಿಶಾಲೆಯ ಅನುಭವಗಳು: ೧. ಬಗಲಲ್ಲಿ ಒಂದು ಚಿಕ್ಕ ಚಾಪೆ, ಜೊತೆಯಲ್ಲಿ ಹರಕು ಪಂಚೆ ಚೂರಿನಲ್ಲಿ

ಸುತ್ತಿಟ್ಟುಕೊಂಡ ಪುಸ್ತಕಗಳ ಗಂಟನ್ನು ಶಾಲೆಗೆ ಒಯ್ಯುತ್ತಿದ್ದ ನೆನಪುಗಳು. ಈಗಿನಂತೆ ಬ್ಯಾಗುಗಳಿಲ್ಲದ ದಿನಗಳು. ಇದ್ದರೂ ಕೊಳ್ಳಲು ಹಣ ? ೨. ಅಧ್ಯಾಪಕರು ಕೊಡುತ್ತಿದ್ದ ಶಿಕ್ಷಾಕ್ರಮ ೩. ಪ್ರಾರ್ಥನಾ ಗೀತೆಗಳು ೪. ಡ್ರೆಸ್ (ಹರಕು ಕೋಟು, ಟೋಪಿ, ವಾಷ್ ಅಂಡ್ ವೇರ್ ಲುಂಗಿ ಇತ್ಯಾದಿ.) ಸ್ವಾತಂತ್ರ್ಯ ಹೋರಾಟದ ವಿವರಗಳು, ಗಾಂಧೀಜಿಯವರ ಪ್ರಭಾವ ಲೇಖಕರ ಮೇಲಾದದ್ದು, 'ನಿನ್ನ ದಾರಿಗೆ ಮುಳ್ಳು ಹಾಕುವವರ ದಾರಿಗೆ ಹೂವು ಹಾಕು' ಎಂಬ ತತ್ತ್ವ ಕಲಿತದ್ದು ಇತ್ಯಾದಿ.

ಹಿಂದಿ ಭಾಷೆಯಲ್ಲಿ ಸಾಕಷ್ಟು ಕಥೆಗಳನ್ನು ಪ್ರಕಟಿಸಿದ್ದಾರೆ. ನೂರರಿಂದ ನೂರಿಪ್ಪತ್ತೈದು ಕವನಗಳನ್ನು ರಚಿಸಿದ್ದಾರೆ. ಪ್ರಕಟಿತ ಮೊದಲ ಕವನ ಸಂಕಲನ 'ದಕ್ಷಿಣ ಗಂಗಾ', ತುಂಬಾ ಹೆಸರು ಪಡೆದ ಸಂಕಲನ; ಎರಡನೆಯದು 'ಕವಿತಾ ಕುಸುಮಾಂಜಲಿ'; ಮೂರನೆಯದು ಗದ್ಯ ಗ್ರಂಥ. ಹಲವು ನಾಟಕಗಳನ್ನೂ ರಚಿಸಿದ್ದಾರೆ. ಬಡತನವನ್ನು ಗಣಿಸದೆ ಜೀವಿಸಿದ ಹೋರಾಟದ ಬದುಕು.

ರಾಮೇಶ್ವರಾವಧಾನಿಗಳು : ಲಿಂಗದಹಳ್ಳಿಯ ವಿದ್ವಾನ್ ನರಸಿಂಹಮೂರ್ತಿಯಂತಹ ವಿದ್ವಾಂಸರ ಸಹಾಧ್ಯಾಯಿ ಆಗಿದ್ದು ಅವರಿಂದ ತುಂಬುಹೃದಯದ ಮೆಚ್ಚುಗೆಯ ಮಾತುಗಳನ್ನು ಪಡೆದಿರುವ ಪೂಜ್ಯ ಅವಧಾನಿಯವರು ಮೊದಲ ವರ್ಗದ ಸಂಸ ತ ವಿದ್ವಾಂಸರು. ದೇವರನ್ನು ನಂಬಿ, ನಮಮ ಭಾವದಿಂದ ಬದುಕುತ್ತಿರುವುದರಿಂದಲೇ ಇತಿವೃತ್ತಕ್ಕೆ 'ತೇನ ವಿನಾ' ಎಂದೇ ಅರ್ಥವತ್ತಾದ ನಾಮಕರಣ. ಅವರ ಕಾಲಕ್ಕೆ ಸಂಕೇತಿಗಳಲ್ಲಿ ವೇದವಿದ್ಯಾಭ್ಯಾಸ ಮಾಡದಿರುವವರ ಸಂಖ್ಯೆ ಶೂನ್ಯವಂತೆ ! ಉದ್ಯೋಗ ನೂರಕ್ಕೆ ನೂರರಷ್ಟು - ಕೃಷಿ ! ನಮ್ಮವರ ವ್ಯಸನಗಳಲ್ಲಿ ಮುಖ್ಯವಾದವುಗಳು : ಇಸ್ಪೇಟ್, ತಂಬಾಕು ಮತ್ತು ಕವಳ. 'ಅಹಂ' ಸ್ವಲ್ಪ ಜಾಸ್ತಿ ಇರುವ ಸಂಕೇತಿಗಳಿಗೆ ಕೋಪವೂ ಹೆಚ್ಚು. ಜಗಳಾಡುವುದು, ಪಾರ್ಟಿ ಮಾಡಿಕೊಳ್ಳುವುದು ಸರ್ವೇ ಸಾಮಾನ್ಯ. ಸಮುದ್ರಯಾನಕ್ಕೆ ಬಹಿಷ್ಕಾರ, ಯಾನ ಮಾಡಿದವರ ಲಂಡನ್ ಪಾರ್ಟಿ - ಶುದ್ಧಪಾರ್ಟಿಗಳು, 'ಬ್ರಾಹ್ಮಣಾನಾಮಸಂಘಾತಃ' ಇತ್ಯಾದಿ ವಿವರಗಳು. ಅವಧಾನಿಗಳು ಶಿಕ್ಷಕ ವೃತ್ತಿಯನ್ನೂ ಮಾಡಿದರು. ಆಗ್ಗೆ ಪಂಡಿತರನ್ನು ಪದವೀಧರರಿಗಿಂತ ಕೀಳಾಗಿ ಕಾಣುತ್ತಿದ್ದರಂತೆ, ಅದಕ್ಕಾಗಿ ಲೇಖಕರು ಸ್ವಪ್ರಯತ್ನದಿಂದ ಎಮ್.ಎ. ಪದವಿ ಪಡೆಯಬೇಕಾಯಿತಂತೆ ! ಮಹಾಭಾರತ, ರಾಮಾಯಣ ಮತ್ತು ವೇದಭಾಷ್ಯಾನುವಾದಗಳ ಪ್ರಕಟಣೆಯ ಕೆಲಸವನ್ನು ಮಾಡಿರುವ ಶ್ರೀಯುತರು ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ.

ಹೆಚ್.ಆರ್. ಕೇಶವಮೂರ್ತಿ : ಗಮಕ ಕಲಾ ಕ್ಷೇತ್ರದಲ್ಲಿ ಹೆಚ್.ಆರ್.ಕೆ. ಅವರಿಗೆ ಸರಿದೂಗುವ ಇನ್ನೊಂದು ಹೆಸರು ಕರ್ನಾಟಕ ರಾಜ್ಯದಲ್ಲಿಲ್ಲ. ಶಾಸ್ತ್ರೀಯ ಸಂಗೀತ ಕಲಿಯದೆ ನೂರಾರು ರಾಗಗಳನ್ನು ಕರಗತ ಮಾಡಿಕೊಂಡಿರುವುದು ಅವರ ಒಂದು ಅದ್ಭುತ ಸಾಧನೆಯಾಗಿದೆ. ಅವರ ಜೊತೆ ಕುಳಿತು ಗಮಕ ವ್ಯಾಖ್ಯಾನ ಮಾಡುವ ಅಪೂರ್ವ ಸುಖಾನುಭವವನ್ನು ನಾನು ಪಡೆದಿದ್ದೇನೆ. ಗಮಕ ಕ್ಷೇತ್ರದಲ್ಲಿ ನೂರಾರು ಶಿಷ್ಯರನ್ನು ತಯಾರು ಮಾಡಿದ್ದಾರೆ. ಯಾರಲ್ಲಿಯೂ ಎಂದೂ ಗಂಟು ಮುಖ ಹಾಕಿದ್ದನ್ನು ನಾನು ಕಾಣೆ. ಎಷ್ಟೇ ತಪ್ಪು ಮಾಡಿದರೂ ಕೋಪ ಬಂದದ್ದಿಲ್ಲ, ಮಂದಹಾಸ ಅಳಿದದ್ದಿಲ್ಲ. ಸಹನೆಗೆ ಇನ್ನೊಂದು ಹೆಸರು ಹೆಚ್.ಆರ್.ಕೆ. ಹಲವಾರು ಊರುಗಳಲ್ಲಿ ಸಾವಿರಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಆ ಊರುಗಳ, ಜನರ ವಿಚಾರ ವಿವರ ನೀಡಿದ್ದಾರೆ. ಒಂದು ಉದಾಹರಣೆ : ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿಗೂ ಹೊಸಹಳ್ಳಿಗೂ ಸುಮಾರು ೪೦ ವರ್ಷಗಳ ಗಮಕ ಬಾಂಧವ್ಯ. ಪ್ರತಿವರ್ಷ ಗಮಕ ಕಾರ್ಯಕ್ರಮಕ್ಕಾಗಿ ಹೊಸಹಳ್ಳಿಯಿಂದ ಅಲ್ಲಿಗೆ ಹೋಗುವ ರೂಢಿ. ತೊರವೆ ರಾಮಾಯಣ ಅವರಿಗೆ ಪ್ರಿಯವಾದ ಕಾವ್ಯ. ವ್ಯವಸ್ಥೆ ಮಾಡುವ ಆತಿಥೇಯರು ಸಜ್ಜನರು, ವಿದ್ಯಾವಂತರು. ದುರದೃಷ್ಟವಶಾತ್ ಅವರ ಮನೆಯಲ್ಲಿ ಸೋದರಕಲಹ ಮೂಡಿತು. ವಿಪರೀತಕ್ಕೆ ಹೋಯಿತು. ಪರಸ್ಪರ ತಲೆ ಕಡಿಯುವಷ್ಟು ವೈರ ಬೆಳೆಯಿತು. ಹೆಚ್.ಆರ್.ಕೆ. ಅವರಿಗೆ ಚಿಂತೆ - ನಾವು ಪ್ರತಿ ವರ್ಷ ಹೋಗಿ ಪುರಾಣ ಹೇಳಿದ್ದಕ್ಕೆ ಸಾರ್ಥಕತೆ ಏನು ? ಗಾದೆ ಇರುವುದು 'ಪುರಾಣ ಹೇಳೋಕೆ, ಬದನೆಕಾಯಿ ತಿನ್ನೋಕೆ' ಅಂತ. ಆದರೆ ಇಲ್ಲಿ - 'ಪುರಾಣ ಕೇಳೋಕೆ .... ?' ನಾ ಕಂಡಂತೆ ಮೊದಲ ಬಾರಿಗೆ (ಕಡೆ ಕೂಡ) ಹೆಚ್.ಆರ್.ಕೆ. ಅವರಿಗೆ ಕೋಪ ಬಂತು. ಅಲ್ಲಿಗೆ ಹೋಗುವುದನ್ನು ಬಿಟ್ಟರು ! ನಾವು ನಂಬಿದ ಕಾರ್ಯದಲ್ಲಿ ನಮಗೆ ಇರಬೇಕಾದ ಶ್ರದ್ಧೆಯ ಗುಣವನ್ನು ನಾವಿಲ್ಲಿ ಕಲಿಯಬೇಕಾಗಿದೆ.

ಮಾರ್ಕಂಡೇಯ ಅವಧಾನಿ : ಮತ್ತೂರಿನ ಪುರೋಹಿತರು. ಪಡೆದ ದಕ್ಷಿಣೆಯ ಪೂರ್ಣ ಭಾಗವನ್ನು ಸಮಾಜಕ್ಕೇ ಅರ್ಪಿಸುವವರು. ಒಟ್ಟು ಕುಟುಂಬ. ಸೋದರರೈವರೂ ವಿದ್ವಾಂಸರೇ. ಈ ಹಿರಿಯಣ್ಣನ ಮಾತಿಗೆ ಎದುರಿಲ್ಲ. ಏಕೆಂದರೆ ಅವರ ಹೆಜ್ಜೆ ಅಷ್ಟು ಶುದ್ಧ. ತಮ್ಮ ಮನೆಯ ಯಾವುದೇ ಚಿಕ್ಕ, ದೊಡ್ಡ ಮಂಗಳ ಕಾರ್ಯ ನಡೆಯುವಾಗ ಊರಿನ ಬಡವರ ಮನೆಯ ಅಂಥದೇ ಕಾರ್ಯವನ್ನು ಜೊತೆಗೂಡಿಸಿಕೊಳ್ಳುವರು! ಸರಿಸಮವಾಗಿ ಖರ್ಚು ಮಾಡುವರು! ಆದಾಯದ ಒಂದು ಭಾಗ ದಾನಕ್ಕೆ.

‘ತುಂಗೆಯ ಮಡಿಲಲ್ಲಿ’ - ಈ ಸಂಪುಟದ ಸುದೀರ್ಘ ಬರಹ. ಪ್ರತಿ ಪ್ಯಾರಾವೂ, ಸಾಲೂ ಗ್ರಾಹ್ಯವೇ. ಮತ್ತೂರು ಗ್ರಾಮವು ನಡೆದು ಬಂದ ಸುಸಂಸ್ಕೃತ ದಾರಿಯನ್ನು ಇಲ್ಲಿ ಗುರ್ತಿಸುತ್ತೇವೆ. ನೂರಕ್ಕೂ ಮಿಕ್ಕಿ ಇರುವ ಪುಟಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅವಧಾನಿಗಳ ತಂದೆ ನಾರಾಯಣ ಅವರನ್ನು ಮತ್ತು ಅವರ ಕಾಲದ ವಿವರಗಳನ್ನು ಕುರಿತದ್ದು. ಈ ಬರಹ ಪೂರ್ತ ಓದಿದ ನನ್ನ ಮೇಲೆ ಈ ಇಬ್ಬರ (ತಂದೆ-ಮಗ) ಬದುಕಿನ ಸಂಗತಿಗಳು ಎಷ್ಟು ಪ್ರಭಾವ ಬೀರಿದವೆಂದರೆ, ತಕ್ಷಣವೇ ಭೇಟಿ ಮಾಡಿ ಆಶೀರ್ವಾದ ಪಡೆಯಲೇಬೇಕೆಂಬ ಉಮೇದು ಮೂಡಿತು. ಮರುದಿನ ಮತ್ತೂರಿಗೆ ಹೋಗಿ ಇಡೀದಿನ ಅವರ ಅತಿಥಿಯಾಗಿ ಕಳೆದೆ.

ನಂಜನಗೂಡಿನ ಪಾಠಶಾಲೆಗೆ ಸೇರುವಾಗಿನ ಸಂದರ್ಭ. ಅವರು ಕೇಳಿದ ಕಷ್ಟದ ಪ್ರಶ್ನೆಗಳಿಗೆಲ್ಲ ಲೀಲಾಜಾಲವಾಗಿ ಚೆನ್ನಾಗಿ ಉತ್ತರಿಸಿದರಂತೆ. ಹೀಗೆ ಹೇಳಿ ಜೊತೆಗೆ ಸೇರಿಸುತ್ತಾರೆ ‘ಬಹುಶಃ ಅವರು ಉತ್ತರ ಹೇಳಲೆಂದೇ ಸರಳ ಪ್ರಶ್ನೆ ಕೇಳಿದ್ದಿರಬೇಕು.’ ಈ ಚಿಕ್ಕ ಟಿಪ್ಪಣಿಯಲ್ಲಿ ಸಂಸ್ಕೃತಿಯ ಹಿರಿಮೆ ಅಡಗಿದೆ. ವೇದ ಮಂತ್ರ ಹೇಳುವವರೆಲ್ಲ ಅರ್ಥದ ಕಡೆ ಗಮನ ಕೊಡುವರೆಂದಿಲ್ಲ. ಅವಧಾನಿಗಳು ಅಪವಾದ (ನೋಡಿ - ಪುಟ ೨೧೫). ಒಮ್ಮೆ ಕತ್ತಲೆಯಲ್ಲಿ ಅವಧಾನಿಗಳನ್ನು ಗುರುತಿಸಿದ ಅವರ ಗುರುಗಳು ‘ಯಾರಪ್ಪ ನೀನು?’ ಎಂದು ಕೇಳಿದರಂತೆ. ಇವರ ಧೋರಣೆಯ ಉತ್ತರ: ‘ನಾನು ಮನುಷ್ಯ’. ಧ್ವನಿಯಿಂದ ಗುರುತಿಸಿದ ಗುರುಗಳು ಹೇಳಿದ್ದು ‘ಹೌದಪ್ಪ, ಮನುಷ್ಯನೇ ಆಗು, ಮೃಗವಾಗಬೇಡ’. ಈ ಒಂದು ಮಾತೇ ಅವಧಾನಿಗಳನ್ನು ಇಡೀ ಬದುಕಿನುದ್ದಕ್ಕೆ ರಕ್ಷಿಸಿಕೊಂಡು ಬಂದ ಶ್ರೀಕವಚ! ಒಮ್ಮೆ ಗೆಳೆಯನೊಂದಿಗೆ ಪ್ರವಾಹದಲ್ಲಿ ಈಜುವಾಗ ಗೆಳೆಯನ ಪ್ರಶ್ನೆ ‘ನಾನು ಮುಳುಗಿ ಸತ್ತರೆ ನೀನೇನು ಮಾಡುವೆ?’ ಒಬ್ಬನೇ ಸಜೀವ ಹಿಂದಿರುಗುವ ಪ್ರಶ್ನೆ ಇಲ್ಲ ಎಂಬುದೇ ಉತ್ತರ. ಈ ಶೌಚವೇ ನಮ್ಮ ಬದುಕಿನುದ್ದಕ್ಕೆ ಬರಬೇಕಾದ ನಡವಳಿ. ಇಂಥ ನಡವಳಿಗೆ ಮತ್ತೊಂದು ಉದಾ: ನಂಜಪ್ಪನವರ ಬದುಕು. ಅವರು ಊರಿನ ಕೇಶವ ದೇವಾಲಯದ ಅರ್ಚಕರು. ತಮ್ಮ ಸಮಸ್ತ ಆಸ್ತಿಯನ್ನು ಮಕ್ಕಳಿಗೆ ಕೊಡದೆ ದತ್ತು ಪುತ್ರನಿಗೆ ಕೊಟ್ಟು ಸದ್ಧರ್ಮ ಮೆರೆದವರು. ಒಮ್ಮೆ ಆತ್ಮೀಯರೊಬ್ಬರು ತಮ್ಮ ಮನೆಯ ಮದುವೆ ಊಟಕ್ಕೆ ಬರಲು ಒತ್ತಾಯಿಸಿದಾಗ ಅಂದದ್ದು ‘ಮನೆಯಲ್ಲಿ ಕೇಶವನಿಗೆ ಕದನ್ನ. ನಾನಲ್ಲಿ ಮೃಷ್ಟಾನ್ನ ಸವಿಯಲೆ?’ ಇದೇ ಧರ್ಮ. ನಾವಾಚರಿಸುವ ಈ ಧರ್ಮವೇ ನಮ್ಮನ್ನು ರಕ್ಷಿಸುವುದು. ಊರವರು ನಂಜಪ್ಪನವರ ಅಶನಾರ್ಥ ಸ್ವಲ್ಪ ಜಮೀನನ್ನು ದಾನ ಕೊಟ್ಟಾಗ ನಂಜಪ್ಪ ಅದನ್ನು ದೇವಾಲಯದ ಹೆಸರಿಗೆ ಬರೆದರಂತೆ!.

ಈ ಸಂಪುಟವನ್ನು ಸಂಪಾದಿಸಿಕೊಟ್ಟಿರುವ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೆ ಅಭಿನಂದನೆಗಳು, ಅವರ ಅಚ್ಚುಕಟ್ಟುತನಕ್ಕೆ ವಂದನೆಗಳು.

ಇಂಥ ಹಿರಿಯ ಜೀವಿಗಳ ಕಥಾನಕಗಳನ್ನು ದಾಖಲಿಸುತ್ತಿರುವ ಸಮುದಾಯ ಅಧ್ಯಯನ ಕೇಂದ್ರಕ್ಕೆ ಅನಂತ ನಮನಗಳು. ಈ ಎಲ್ಲ ಪ್ರಕಟಣೆಗಳ ರೂವಾರಿ ಪ್ರಣತಾರ್ತಿಹರನ್ ಅವರ ದೈತ್ಯ ಸಾಹಸಕ್ಕೆ ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಕಡಿಮೆಯೇ. ನಮ್ಮ ಜನಾಂಗದ ಹಿರಿಮೆಯನ್ನು ಗುರುತಿಸಿ ಉಳಿಸುವ ಈ ಮಹತ್ ಸಾಧನೆಗಾಗಿ ಸಂಕೇತಿ ಜನಾಂಗವು ಹರನ್ ಅವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಈಗಿನ ಯೋಜನೆಯಂತೆ ಎಲ್ಲ ಸಂಪುಟಗಳೂ ನಿರ್ವಿಘ್ನವಾಗಿ ಹೊರಬರಲೆಂದು ಹಾರೈಸುತ್ತೇನೆ.

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಎಲ್.ಎಮ್.ಎಲ್.ಶಾಸ್ತ್ರಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕೃತಜ್ಞತೆಗಳು

ಇಲ್ಲಿ ಸಂಗ್ರಹವಾಗಿರುವ ಆತ್ಮಕತೆಗಳು ಎಲ್ಲವೂ ಸ್ವಾರಸ್ಯಕರವಾದಂಥವೇ ಆಗಿವೆ. ಆತ್ಮಕತೆಯ ಎಳೆ ಇಲ್ಲಿ ಗೌಣ, ಸಂಕೇತಿ ಸಮುದಾಯದ ಗುಣಲಕ್ಷಣ, ಏಳು ಬೀಳು, ನೋವು ನಲಿವುಗಳ ವ್ಯಾಪಕ ಚಿತ್ರಣವೇ ಪ್ರಮುಖ. ವಾಸ್ತವವಾಗಿ ಇಡೀ ಸಮುದಾಯವು ಜೀವಿಸಿದ ಸನ್ನಿವೇಶ, ಎದುರಿಸಿದ ಸವಾಲು, ಕಂಡುಕೊಂಡ ಪರಿಹಾರ, ಈ ಹೋರಾಟದಲ್ಲಿ ಅದು ಪ್ರದರ್ಶಿಸಿದ ಶಕ್ತಿ ದೌರ್ಬಲ್ಯಗಳ ವಿಹಂಗಮನೋಟಕ್ಕಾಗಿಯೇ ಈ ಸಂಕಲನವನ್ನು ರೂಪಿಸಲಾಗಿದೆ. ಒಂದು ಸಮುದಾಯವನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಇಂಥ ಸಂಪುಟವನ್ನು ರೂಪಿಸಿರುವುದು ಕನ್ನಡದಲ್ಲಿ ಒಂದು ಹೊಸ ಹೆಜ್ಜೆ ಎಂದು ತಿಳಿದಿದ್ದೇನೆ. ಇಂಥ ಅಪೂರ್ವ ಸಂಪುಟದ ಸಂಪಾದನಕಾರ್ಯದ ಅವಕಾಶ ಕಲ್ಪಿಸಿಕೊಟ್ಟ ಸಮುದಾಯ ಅಧ್ಯಯನ ಕೇಂದ್ರಕ್ಕೆ ನಾನು ಋಣಿಯಾಗಿದ್ದೇನೆ.

ಈ ಸಂಪುಟವನ್ನು ಸಿದ್ಧಪಡಿಸುವಲ್ಲಿ ಹಲವು ರೀತಿಯಲ್ಲಿ ನೆರವಾಗಿ ಸಹಕರಿಸಿದ ಈ ಕೆಳಗಿನ ಎಲ್ಲಾ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ :

ಮುನ್ನುಡಿಯನ್ನು ಬರೆದುಕೊಟ್ಟು ಹರಸಿರುವ ವಿದ್ವಾಂಸರಾದ ಪ್ರೊ. ಎಲ್.ಎಂ.ಎಲ್. ಶಾಸ್ತ್ರೀ ಅವರಿಗೆ; ಪುಸ್ತಕವನ್ನು ಅವಲೋಕಿಸಿ ಮಾರ್ಗದರ್ಶನ ನೀಡಿ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟ ವಿದ್ವಾಂಸರೂ ಲೇಖಕರೂ ಆದ ಡಾ. ಕೆ. ಅನಂತರಾಮು ಅವರಿಗೆ; ಡಾ. ಎಂ.ಎಸ್. ವಿಜಯಾ ಹರನ್ ಅವರಿಗೆ.

ಹಿರಿದಾಗಿ ಬಾಳಿ ಕೃತಿರಚನೆ ಮಾಡಿ ಪ್ರಕಟಣೆಗೆ ಅನುಮತಿಸಿ ಆಶೀರ್ವದಿಸಿದ ಹಿರಿಯರಾದ ವೇ।। ಬ್ರ।। ಶ್ರೀ ರಾಮೇಶ್ವರ ಅವಧಾನಿ, ವೇ।। ಬ್ರ।। ಶ್ರೀ।। ಮಾರ್ಕಂಡೇಯ ಅವಧಾನಿ, ಶ್ರೀ ಆರ್.ವಿ. ಶ್ರೀನಿವಾಸಯ್ಯ, ಶ್ರೀ ಕೆ.ಎಸ್. ವೆಂಕಟರಾಮಯ್ಯ, ನನ್ನ ವಿದ್ಯಾಗುರುಗಳಾದ ಪ್ರೊ. ಕೆ.ಎಸ್. ಕೃಷ್ಣಮೂರ್ತಿ (ಪ್ರೊ. ಕೆ.ಎಸ್. ಕೃಷ್ಣಮೂರ್ತಿಗಳ ತೀ।। ಶಾಮಣ್ಣನವರು ನನಗೆ ಮಾಧ್ಯಮಿಕ ಶಾಲೆಯಲ್ಲಿ ಗುರುಗಳಾಗಿದ್ದರು. ತಂದೆ-ಮಗ ಇಬ್ಬರ ಶಿಷ್ಯತ್ವ ಪಡೆದುದು ನನ್ನ ಪುಣ್ಯ), ಶ್ರೀ ಎಚ್.ಆರ್. ಕೇಶವಮೂರ್ತಿ ಹಾಗೂ ಸಾ.ನಾ.ಶ್ರೀಕಂಠಯ್ಯ ಅವರಿಗೆ.

ಇಲ್ಲಿ ಬಳಕೆಯಾದ ಪ್ರಕಟಿತ ಗ್ರಂಥಗಳ ಮೂಲಪ್ರಕಾಶಕರಾದ ಎಂ.ಪಿ. ಬಿರ್ಲಾ ಪ್ರತಿಷ್ಠಾನದ ಶ್ರೀ ಮತ್ತೂರು ಕೃಷ್ಣಮೂರ್ತಿ ಅವರಿಗೆ, ಸಂಕೇತ ಪ್ರಕಾಶನದ ಶ್ರೀ ಸ. ನಾಗರಾಜ್ ಅವರಿಗೆ.

ಗಮಕ ಕಲಾರಾಧನೆ ಮತ್ತು ತುಂಗೆಯ ಮಡಿಲಲ್ಲಿ ಕೃತಿಗಳ ಪ್ರಧಾನ ಸಂಪಾದಕರಾದ ಶ್ರೀ ರಾಜಾರಾಮ ಮೂರ್ತಿ ಅವರಿಗೆ, ಗಮಕ ಕಲಾರಾಧನೆ ಮತ್ತು ತುಂಗೆಯ ಮಡಿಲಲ್ಲಿ ಕೃತಿಗಳ ನಿರೂಪಣೆ ಮಾಡಿರುವ ಮತ್ತು ಅವುಗಳನ್ನು ಬಳಸಿಕೊಳ್ಳಲು ಅನುಮತಿ ಇತ್ತಿರುವ ಲೇಖಕಿ ಶ್ರೀಮತಿ ಸುಮನಾ ವಿಶ್ವನಾಥ್ ಅವರಿಗೆ.

ಕರಡು ತಿದ್ದಿ ಸಲಹೆ ಸೂಚನೆಗಳನ್ನಿತ್ತು ಸಹಕರಿಸಿದ ಹಿತೈಷಿಗಳಾದ ಡಾ. ಟಿ.ವಿ. ಸತ್ಯನಾರಾಯಣ, ಶ್ರೀ ಎಂ.ವಿ. ಕೃಷ್ಣ, ಪ್ರೊ. ಕೆ.ಎಸ್. ನರಸಿಂಗರಾವ್, ಶ್ರೀ ಎಸ್. ನಾಗೇಶ್ (ಪೂಮಗಾಮೆ ಗೋಪಿ), ಡಾ. ಬಿ.ಎಸ್. ನರಹರಿ, ಶ್ರೀಮತಿ ಸುಮನಾ ವಿಶ್ವನಾಥ್ ಅವರಿಗೆ.

ಉದಾರವಾಗಿ ಧನಸಹಾಯ ಮಾಡಿ ಪುಸ್ತಕ ಬೆಳಕು ಕಾಣಲು ನೆರವಾದ ಡಾ॥ ಎಂ.ಎಸ್. ವಿಜಯಾ ಹರನ್-ಡಾ॥ ಬಿ.ಎಸ್. ಪ್ರಣತಾರ್ತಿಹರನ್ ಅವರಿಗೆ, ಶ್ರೀಮತಿ ಆರ್. ಶಾರದಮ್ಮ-ಶ್ರೀ ರು.ಗೋ. ರಾಮಸ್ವಾಮಿ, ಶ್ರೀಮತಿ ಶಾರದಾಬಾಯಿ-ಶ್ರೀ ಹರಿ ಆಚಾರ್ಯ, ಶ್ರೀಮತಿ ಕೆ. ಶಾಂತಾ-ಶ್ರೀ ಕೇಶವ, ಶ್ರೀಮತಿ ಎನ್. ಜಯಲಕ್ಷ್ಮಿ-ಶ್ರೀ ಪಿ.ಎನ್. ನರಸಿಂಹಮೂರ್ತಿ, ಶ್ರೀಮತಿ ಪಿ.ಕೆ. ವಸಂತಲಕ್ಷ್ಮಿ-ಶ್ರೀ ಬಿ.ಎನ್. ರಘುನಾಥ, ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ-ಶ್ರೀ ಎಂ.ಎಸ್. ರಾಮರಾವ್, ಮತ್ತು ಶ್ರೀಮತಿ ಹೆಚ್.ಕೆ. ನಾಗಲಕ್ಷ್ಮಿ ಅವರಿಗೆ.

ಸಹಕಾರವಿತ್ತ ಪ್ರೊ. ಕೆ. ಶ್ರೀಹರಿ, ಪ್ರೊ. ಟಿ.ಎನ್. ಪ್ರಭಾಕರ ಹಾಗೂ ಪ್ರೊ. ಎಚ್. ಜಗದಾಂಬಾ ಅವರಿಗೆ.

ಈ ಕಾರ್ಯದಲ್ಲಿ ನೆರವಾದ ನನ್ನ ಮಡದಿ ಶ್ರೀಮತಿ ಸವಿತಾ ಪ್ರಸಾದ್‌ಗೆ.

ಸಮುದಾಯ ಅಧ್ಯಯನ ಕೇಂದ್ರದ ಲೇಖಕ, ಸಂಶೋಧಕರ ಬಳಗಕ್ಕೆ ಮತ್ತು ಪದಾಧಿಕಾರಿಗಳಿಗೆ.

ಅಂದವಾಗಿ ಅಕ್ಷರವಿನ್ಯಾಸ ಮಾಡಿಕೊಟ್ಟ ಬೆಂಗಳೂರಿನ ಫ್ರೆಂಡ್ಸ್ ಕಾಂ-ಟೆಕ್‌ನ ಶ್ರೀ ಸುರೇಶ್‌ಬಾಬು, ಶ್ರೀ ಸಿ.ಆರ್. ಲೋಕೇಶ, ಹಾಗೂ ಶ್ರೀ ಮಂಜುನಾಥ ಜಿ. ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಟೆಕ್ ಪ್ರಿಂಟ್ಸ್, ಮೈಸೂರು ಅವರಿಗೆ.

ಮೈಸೂರು **ಎನ್.ಎಸ್. ಶಾರದಾ ಪ್ರಸಾದ್**
೦೬-೦೬-೨೦೦೭

ಪರಿವಿಡಿ

ಸಂಕೇತಿ : ಇತಿವೃತ್ತಗಳು

ಸಂಕೇತಿ : ಇತಿವೃತ್ತಗಳು

ಆಡಿದ ಹೊಲ, ಕಂಡ ವಿಚಾರ

ಪ್ರೊ॥ ಕೆ.ಎಸ್. ಕೃಷ್ಣಮೂರ್ತಿ

ಆಡಿದ ಹೊಲ, ಕಂಡ ವಿಚಾರ*

ನಾನು ಆತ್ಮಚರಿತ್ರೆ ಬರೆಯುವಂಥ ಮಹತ್ವದ ವ್ಯಕ್ತಿಯಾಗಲಿ, ಸಾಹಿತಿಯಾಗಲಿ ಅಲ್ಲವೆಂಬುದು ನನ್ನ ನಮ್ರ ಅಭಿಪ್ರಾಯ. ಪ್ರತಿಯೊಬ್ಬರ ಜೀವನವೂ, ಅನುಭವಗಳೂ, ವಿಚಾರಗಳೂ ವಿಶಿಷ್ಟವಾಗಿರುತ್ತವೆ ಎಂಬುದರಲ್ಲಿ ಸಂದೇಹವಿಲ್ಲ - ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ನನ್ನ ಜೀವನದ ವಿಚಾರವಾಹಿನಿಯನ್ನು ಹರಿಯಬಿಡುತ್ತಿದ್ದೇನೆ. ಈ ಲೇಖಕನು ತಾನು ಬೆಳೆದ ಪರಿಸರವನ್ನೂ, ಸುತ್ತಮುತ್ತಲಿನ ಜನವನ್ನೂ, ತನ್ನ ದೃಷ್ಟಿಯಲ್ಲಿ ನೋಡುತ್ತ ನಡೆದಿದ್ದಾನೆ. ತನ್ನ ಸುತ್ತಮುತ್ತಲಿನ ಜೀವನದೊಡನೆ ಈ ಲೇಖಕನು ಬೆಳೆದಿದ್ದಾನೆ ಎಂಬುದನ್ನು ಪ್ರಧಾನವಾಗಿ ಇಟ್ಟುಕೊಳ್ಳಲಾಗಿದೆ.

೧. ಕೇರಳಾಪುರ

ಮೊದಲು, ಹುಟ್ಟಿದ ಊರಿನಿಂದಲೇ ಇತಿವೃತ್ತವನ್ನು ಪ್ರಾರಂಭಿಸಿದ್ದೇನೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬಂತೆ ತನ್ನ ಹುಟ್ಟೂರನ್ನು ಪ್ರತಿಯೊಬ್ಬನೂ ಪವಿತ್ರಕ್ಷೇತ್ರವೆಂದು ಭಾವಿಸುವುದು ಸಹಜವಾಗಿದೆ. ನಾನು ಹುಟ್ಟಿ , ಹಲವು ವರ್ಷಗಳು ಅಲ್ಲಿಯ ನೀರನ್ನು ಕುಡಿದು, ಅನ್ನವನ್ನುಂಡು, ಹಲವು ವರ್ಷಗಳ ಕಾಲ ಆ ನೆಲದಲ್ಲಿ ನಡೆದಾಡಿದ್ದೇನೆ, ಬಾಲ್ಯದ ಅನುಭವಗಳನ್ನು ಪಡೆದು ಭವಿಷ್ಯದ ಹಲವು ಕನಸುಗಳನ್ನು ಕಂಡಿದ್ದೇನೆ. ಅದರ ಹೆಸರು ಕೇರಳಾಪುರ. ಆ ಊರಿಗೆ ಕೇರಳಾಪುರ ಎಂಬ ಹೆಸರು ಹೇಗೆ ಬಂದಿತೆಂಬುದು ತಿಳಿಯದು. ನೂರಾರು ಅಥವಾ ಸಾವಿರಾರು ವರ್ಷಗಳ ಹಿಂದೆ ಯಾವನೋ ಒಬ್ಬ ಕೇರಳದ ರಾಜನೋ ಅಥವಾ ದಳಪತಿಯೋ ದಂಡೆತ್ತಿ ಆ ಊರಿಗೆ ಬಂದಿದ್ದಿರಬಹುದು; ಅನಂತರ ಹಿಂದಿರುಗಿ ಹೋಗಿದ್ದಿರಬಹುದು. ಈ ಕಾರಣದಿಂದ ಅದನ್ನು ಕೇರಳಾಪುರ ಎಂದು ಕರೆದಿದ್ದಿರಬಹುದು ಎಂಬುದು ಒಂದು ಊಹೆ. ನನ್ನ ಬಾಲ್ಯದಲ್ಲಿ ಜನಗಳು ಆ ಊರನ್ನು ಕೇರ್ಲಾಪುರ ಎಂದು ಕರೆಯುತ್ತಿದ್ದರು. ಒಂದು ದಿನ ಕಲ್ಲಿನ ಚಪ್ಪಡಿಯಲ್ಲಿ ಕೇರಳಾಪುರ ಎಂಬ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಕೊರೆಯಿಸಿ, ಊರ ಮುಂದೆ ಬಸ್ಸುಗಳು ಓಡಾಡುವ ರಸ್ತೆಯ ಪಕ್ಕದಲ್ಲಿ ಪ್ರತಿಷ್ಠಾಪಿಸಿದ ಮೇಲೆ ಕೇರಳಾಪುರವೆಂಬ ಹೆಸರು ಪ್ರಸಿದ್ಧವಾಯಿತು. ಗ್ರಾಮಪಂಚಾಯಿತಿಯವರೋ, ಸರಕಾರದವರೋ, ಈ ಹೆಸರಿನ ಹಲಗೆಯನ್ನು ಹಾಕಿಸಿದ್ದಿರಬಹುದು. ಅವರು ಈ ಹೆಸರನ್ನು ಸರಕಾರಿ ಕಡತದಿಂದ ತೆಗೆದುಕೊಂಡರೋ ಹೇಗೋ ತಿಳಿಯದು. ಕೇರಳಾಪುರವು ಹಾಸನಜಿಲ್ಲೆಯ ಗಡಿಗ್ರಾಮ. ಹಾಸನಜಿಲ್ಲೆಯ ಬಸವಾಪಟ್ಟಣ ಅತ್ತ ಐದು ಮೈಲಿಯಲ್ಲಿರುವ ಗ್ರಾಮ. ಇತ್ತ ಏಳು ಮೈಲಿಯಲ್ಲಿ ಮೈಸೂರುಜಿಲ್ಲೆಯ ಸಾಲಿಗ್ರಾಮವಿದೆ. ಕೇರಳಾಪುರದಿಂದ ಒಂದೂವರೆ ಮೈಲಿಯಲ್ಲಿ ಒಂದು ಗಡಿ ಕಲ್ಲಿದೆ. ಆ ಕಲ್ಲಿನಿಂದ ಆಚೆಗೆ ಸಾಲಿಗ್ರಾಮದ ಕಡೆಗೆ ಮೈಸೂರು ಜಿಲ್ಲೆ.

ಕೇರಳಾಪುರದ ಜೀವ ಊರಿನ ಒಂದು ಅಂಚಿನಲ್ಲಿ ಹರಿಯುವ ಕಾವೇರಿ ನದಿ; ಉಳಿದ ದಿಕ್ಕುಗಳಲ್ಲಿ ಹೊಲಗದ್ದೆಗಳು, ಊರ ಮುಂದೆ ಹರಿಯುವ ಕಾಲುವೆಯ ನೀರಿನಿಂದ ಹಚ್ಚಹಸುರಾಗಿ ಬೆಳೆದು ನಿಂತಿರುವ ವಿಶಾಲವಾದ ಗದ್ದೆ ಬಯಲು, ಅದರ ನಡುವೆ ತಲೆ ಎತ್ತಿ ನಿಂತ ತೆಂಗು, ಅಡಕೆ ಮರಗಳ ತೋಟ. ಮೈಸೂರಿನಿಂದ ಬರುವ ಬಸ್ಸುಗಳು ಊರ ಮುಂದಿನ ರಸ್ತೆಯಲ್ಲಿ ನಿಂತು ಅಲ್ಲಿಂದ ಬಸವಾಪಟ್ಟಣ, ರಾಮನಾಥಪುರ ಮಾರ್ಗವಾಗಿ ಹಾಸನಕ್ಕೆ ಸಂಚರಿಸುತ್ತವೆ. ಒಂದು ಕಾಲದಲ್ಲಿ ಹೊರಜಗತ್ತಿನ ಆಗುಹೋಗುಗಳ

* ರಚನೆ : ೨೦೦೩-೦೪

ಹರಿಕಾರರಾಗಿದ್ದುವು ಈ ಬಸ್ಸುಗಳೇ. ಬಾಲಕರು ಆಶ್ಚರ್ಯದಿಂದ ಬಾಯಲ್ಲಿ ಬೆರಳಿಟ್ಟುಕೊಂಡು ಬಸ್ಸನ್ನೂ, ಬಸ್ಸಿನ ಸಾರಥಿಯನ್ನೂ ಕುತೂಹಲದಿಂದ ನೋಡುತ್ತಿದ್ದರು. ಯಾವ ಬಸ್ಸು ಎಷ್ಟು ಹೊತ್ತಿಗೆ ಕೇರಳಾಪುರಕ್ಕೆ ಬರುತ್ತದೆ ಎಂಬುದು ಆಬಾಲವೃದ್ಧರಿಗೂ ದಿನನಿತ್ಯ ಜಪಿಸುವ ಮಂತ್ರವಾಗಿತ್ತು. ಹೂವು ಮಾರುವ ಗಂಗಣ್ಣ ಪ್ರತಿದಿನ ಬಸ್ಸಿನ ಬಳಿಗೆ ಬಂದು ಬಸ್ಸಿನ ಸಾರಥಿಗೆ ಒಂದು ಮೊಳ ಮಲ್ಲಿಗೆ ಹೂವನ್ನು ಕೊಟ್ಟು ಅನಂತರವೇ ಇತರರಿಗೆ ಮಾರುತ್ತಿದ್ದ. ಇದು ಫೋರ್ಡೋ, ಶವರ್ಲೆಯೋ, ರಿಯೋವೊ ಎಂದು ಅದರ ಶಬ್ದದಿಂದಲೇ ಹುಡುಗರು ಕಂಡುಹಿಡಿದುಬಿಡುತ್ತಿದ್ದರು. ಒಂದು ಮೈಲಿ ದೂರದಲ್ಲಿ ಬರುತ್ತಿದ್ದಾಗಲೇ ಬರುತ್ತಿರುವ ಬಸ್ಸು ಕೋಹಿನೂರೋ, ನಂಜುಂಡೇಶ್ವರನೋ, ಶ್ರೀಕಂಠೇಶ್ವರನೋ ಎಂದು ದೊಡ್ಡವರೇನು, ಹುಡುಗರೂ ಘೋಷಿಸಿಬಿಡುತ್ತಿದ್ದರು. ನಾನು ಕೂಡಾ ಎಷ್ಟೋ ಸಲ ಬಸ್ಸಿನ ಬಳಿ ಹೋಗಿ ಬಾಕಿ ಹುಡುಗರ ಜತೆಯಲ್ಲಿ ಕುಣಿದು ಕುಪ್ಪಳಿಸಿ ಮನೆಯಲ್ಲಿ ಏಟು ತಿಂದದ್ದುಂಟು.

a a a

ನನ್ನ ಹುಟ್ಟೂರು ಕೇರಳಾಪುರದ ಚಿತ್ರ ನನ್ನ ಮನಸ್ಸಿನಲ್ಲಿ ಮೂಡುತ್ತಿರುವಂತೆಯೇ ಕಣ್ಣೆದುರಿಗೆ ಮೊದಲು ಬಂದು ನಿಲ್ಲುವುದು ಕೇರಳಾಪುರಕ್ಕೆ ಜೀವನಾಡಿಯಾದ ಕಾವೇರಿನದಿ. ಒಂದು ಊರಿನ ಜನಕ್ಕೆ ನದಿಯು ಜೀವನಾಡಿಯೇ ಸರಿ. ವರ್ಷದುದ್ದಕ್ಕೂ ನೀರನ್ನು ಕೊಡುವ ನದಿ ಕಾವೇರಿ. ಬೇಸಿಗೆಯಲ್ಲಿ ಬಡವಾದರೂ, ಬತ್ತುವುದಿಲ್ಲ. ಮಳೆಗಾಲದಲ್ಲಿ ಭೋರ್ಗರೆದು ಹರಿಯುತ್ತ ತನ್ನ ರೌದ್ರರೂಪವನ್ನು ತೋರಿಸುವುದು.

ಕಾವೇರಿಯನ್ನು ಗಂಗಾಮಾತೆ ಎಂದು ಪೂಜಿಸುವರು. 'ಗಂಗಾ ಪೂಜೆ'ಯನ್ನು ಕೇರಳಾಪುರದ ಮುತ್ತೈದೆಯರು ಪ್ರತಿವರ್ಷವೂ ತಪ್ಪದೆ ಮಾಡುತ್ತಾರೆ. ಯಾರು ತಪ್ಪಿದರೂ ಸಂಕೇತಿ ಮುತ್ತೈದೆಯರು, 'ಎತ್ತಿದ ಪರ್ವದಿನಗಳಲ್ಲಿ' ಗಂಗಾಪೂಜೆ ಮಾಡುವರು.

ಕಾವೇರಿನದಿಗೂ ನನಗೂ ಒಂದು ಆತ್ಮೀಯ ಸಂಬಂಧ. ಆದುದರಿಂದ ಎಲ್ಲಕ್ಕಿಂತ ಮೊದಲು ಅದರೊಡನೆಯ ನನ್ನ ನಂಟನ್ನು ಸ್ಮರಿಸಿಕೊಳ್ಳುತ್ತಿದ್ದೇನೆ. ಕಾವೇರಿಯ ಸನ್ನಿಧಿಯಲ್ಲಿ ನಾನು ತಾಯಿಯನ್ನು ಕಂಡು ಆನಂದಿಸಿದ್ದೇನೆ, ಹರ್ಷಿಸಿದ್ದೇನೆ, ನದಿಯ ನೀರಿನಲ್ಲಿ ಕುಣಿದು ಕುಪ್ಪಳಿಸಿದ್ದೇನೆ, ನೀರನ್ನು ಎರಚಿದ್ದೇನೆ, ಈಜಲು ಹೋಗಿ ನೀರು ಕುಡಿದಿದ್ದೇನೆ. ಹೊಳೆಹೊಳೆಯುವ ಕಣ್ಣುಗಳಿಂದ ಮತ್ತು ಸ್ವಚ್ಛವಾದ ನೀಳ ಕೇಶರಾಶಿಯಿಂದ ಕಾವೇರಿ ಬೆಳಗುತ್ತಾಳೆ. ಅವಳ ವಯ್ಯಾರ, ಬಂಡೆಗಳ ಸಂದಿಯಲ್ಲಿ ನುಸುಳುತ್ತ ಬರುವಾಗಿನ ಆ ಮಂಜುಳ ನಿನಾದ, ಇವುಗಳಿಂದ ಪುಳಕಿತರಾಗದೆ ಇರಲು ಯಾರಿಗೂ ಸಾಧ್ಯವೇ ಇಲ್ಲ. ಸೂರ್ಯನು ನಡುನೆತ್ತಿಯಲ್ಲಿ ಬಂದಾಗ, ಸೂರ್ಯಬಿಂಬವು ನೀರಿನಲ್ಲಿ ಪ್ರತಿಫಲಿಸಿ ಹೊಳೆಯುತ್ತಿದ್ದರೆ, ಅದು ಕಾವೇರಿಯ ಹಣೆ ಎಂದು ಭಾಸವಾಗುತ್ತದೆ. ಸೂರ್ಯನು ಉದಯಿಸುವಾಗ ಅರುಣ ಕಿರಣಗಳನ್ನು ಹೊರಸೂಸುತ್ತಿದ್ದರೆ ಕಾವೇರಿನದಿಯು ನಿದ್ರಿಸುತ್ತಿರುವವಳು ಎಚ್ಚೆತ್ತು, ಕೇಸರಿ ವರ್ಣದ ಸೀರೆಯುಟ್ಟು, ಹಣೆಗೆ ಕುಂಕುಮ ಇಟ್ಟುಕೊಂಡಿರುವಂತೆ ಕಾಣುತ್ತಾಳೆ. ಅದೇ ಸಂಜೆ ಮುಳುಗುತ್ತಿರುವ ಸೂರ್ಯನ ಬಿಂಬವನ್ನು ನೋಡುತ್ತಿದ್ದರೆ ಚಂಚಲವಾಗಿ ನರ್ತಿಸುವ ನೀರಿನ ಅಲೆಗಳ ಮೇಲೆ ಸೂರ್ಯನು ತಾನೂ ನರ್ತಿಸುತ್ತಿದ್ದಾನೆ ಎಂಬ ಭಾವನೆ ಉದಯಿಸುತ್ತದೆ.

ಬೆಳಗಿನ ಹೊತ್ತು ಜನರು ತಮ್ಮ ಜಾನುವಾರುಗಳಿಗೆ ನೀರು ಕುಡಿಸಲು ನದಿಗೆ ಬರುವರು. ಸುಮಾರು ಹತ್ತು-ಹನ್ನೊಂದು ಗಂಟೆಯವರೆಗೆ ನದಿಯ ತೀರದ ಸೋಪಾನದಲ್ಲಿ ಜನಸಂದಣಿ ಹೆಚ್ಚು. ನೀರಿನಲ್ಲಿ ಸ್ನಾನ ಮಾಡಿ ಮೇಲಕ್ಕೆ ಬಂದು ಸೋಪಾನದ ಕಲ್ಲುಚಪ್ಪಡಿಯ ಮೇಲೆ ಕುಳಿತು ಜಪ ಮಾಡುವ ಬ್ರಾಹ್ಮಣರು, ಪಾತ್ರೆಗಳನ್ನು ತೊಳೆದು, ಬಟ್ಟೆ ಒಗೆಯುತ್ತ, ಸಂಸಾರದ ಮಾತುಗಳನ್ನಾಡುತ್ತ ಜಗತ್ತನ್ನು ಮರೆತು ತಮ್ಮದೇ ಒಂದು ಪ್ರಪಂಚದಲ್ಲಿ ವಿಹರಿಸುವ ಸ್ತ್ರೀಯರು - ಎಲ್ಲಾ ಚಟುವಟಿಕೆಗಳೂ ಬೆಳಗಿನ ಹೊತ್ತೇ ನಡೆಯುತ್ತಿದ್ದುವು. ಮಧ್ಯಾಹ್ನ ಜನ ಬರುವುದು ಕಡಮೆ. ಸಂಜೆಯಂತೂ ನದಿ ದಾಟುವ ಜನರನ್ನು ಬಿಟ್ಟರೆ ಸುತ್ತಲೂ ಮೌನ ತಾಂಡವವಾಡುತ್ತಿರುತ್ತದೆ.

ಕಾವೇರಿನದಿಗೂ ಊರಿನ ಜನರಿಗೂ ಗರಿಷ್ಠ ಸಂಬಂಧವಿದ್ದಂತೆ, ಕಾವೇರಿನದಿಯು ಹಲವು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿದ್ದಿತು. ದೇವರುಗಳನ್ನು ಕಾವೇರಿ ನದಿಗೆ ತಂದು, ತೊಳೆದು ಅನಂತರ ಉತ್ಸವದಲ್ಲಿ ಕರೆದೊಯ್ಯುವುದು ವಾಡಿಕೆಯಾಗಿತ್ತು. ವಿಶೇಷವಾಗಿ ಯುಗಾದಿಯ ಸಂದರ್ಭದಲ್ಲಿ ಸುತ್ತಲ ಹಲವು ಹಳ್ಳಿಗಳಿಂದ ಉತ್ಸವದಲ್ಲಿ ದೇವರನ್ನು ಕರೆದುಕೊಂಡು ಬಂದು ಕಾವೇರಿಯ ನೀರಿನಲ್ಲಿ ತೊಳೆದು ಅನಂತರ ದೇವರನ್ನು ಉತ್ಸವದಲ್ಲಿ ತಮ್ಮ ಹಳ್ಳಿಗಳಿಗೆ ಕರೆದೊಯ್ಯುತ್ತಿದ್ದರು. ಇದು ವರ್ಷಕ್ಕೊಮ್ಮೆ ನಡೆಯುವ ಕಾರ್ಯ. ಉತ್ಸವದಲ್ಲಿ ದೇವರನ್ನು ಕರೆದು ಕೊಂಡೊಯ್ಯುವಾಗ ಕೊಂಬು, ತಮಟೆ ಮೊದಲಾದ ವಾದ್ಯಗಳನ್ನು ಬಾರಿಸುತ್ತ ವೈಭವದೊಡನೆ ಹೋಗುತ್ತಿದ್ದುದು ನನಗೆ ಉಲ್ಲಾಸವನ್ನುಂಟುಮಾಡುತ್ತಿತ್ತು. ಓಲಗ, ತಮಟೆ ಮೊದಲಾದ ಹಳ್ಳಿಯ ವಾದ್ಯಮೇಳದ ಆ ಸಂಗೀತವೇ ಒಂದು ವಿಶಿಷ್ಟ ರೀತಿಯದು. ಅಲೆಅಲೆಯಾಗಿ ಗಾಳಿಯಲ್ಲಿ ತೇಲಿಬರುವ ಆ ನಾದಪ್ರವಾಹವು ನಮ್ಮ ಇರುವಿಕೆಯನ್ನೇ ಮರೆಸಿಬಿಡುತ್ತಿದ್ದಿತು.

ಆ ಹಳ್ಳಿಯ ವಾದ್ಯಮೇಳದ ನಾದಪ್ರವಾಹದ ನೆನಪು ಮರುಕಳಿಸಿದಾಗ ಅದು ನನ್ನನ್ನು ಕಾಲದ ಲೋಕದಲ್ಲಿ ಕರೆದುಕೊಂಡು ಹೋಗಿ ಯಾವುದೋ ಒಂದು ಅನೂಹ್ಯ ಲೋಕದಲ್ಲಿ ಮುಳುಗಿಸಿಬಿಡುತ್ತದೆ.

a a a

ಕಾವೇರಿನದಿಗೆ ಬರುತ್ತಿದ್ದ ದೇವರುಗಳನ್ನು ಸ್ಮರಿಸಿಕೊಂಡಾಗ ಮರೆಯಲಾಗದ ಒಂದು ಹಳೆಯ ಅನುಭವ ನನ್ನನ್ನು ಆಗಾಗ ಕಾಡುತ್ತ, ಹಲವು ಜಟಿಲ ವಿಚಾರಗಳನ್ನು ಕೆರಳಿಸುತ್ತದೆ. ನಮ್ಮ ಊರಿನ ಬಾಗಿಲಲ್ಲಿ ಕನ್ನಂಬಾಡಿಯಮ್ಮನ ದೇವಸ್ಥಾನವಿದೆ. ದೈವಭಕ್ತರೊಬ್ಬರು ಕನ್ನಂಬಾಡಿಯಿಂದ ದೇವರನ್ನು ಕೇರಳಾಪುರಕ್ಕೆ ಕರೆತಂದು ಪ್ರತಿಷ್ಠಾಪಿಸಿದರೆಂದು ಪ್ರತೀತಿ. ಇದು ಹಿಂದೆ ನಾಡ ಹೆಂಚನ್ನು ಹೊದಿಸಿದ್ದ ಸಾಧಾರಣ ದೇವಾಲಯವಾಗಿತ್ತು. ಮುಂದೆ ಭಕ್ತರು ಇದಕ್ಕೆ ಮಂಗಳೂರು ಹೆಂಚಿನ ಮಾಡನ್ನು ಹೊದಿಸಿದರು. ಕನ್ನಂಬಾಡಿಯಮ್ಮನ ದೇವಾಲಯದ ಗರ್ಭಗೃಹದಲ್ಲಿ ಒಂದು ಹುತ್ತವಿದ್ದಿತು. ಅದು ಎಷ್ಟು ವರ್ಷಗಳಿಂದ ಆ ರೂಪದಲ್ಲಿತ್ತೋ ತಿಳಿಯದು. ನಾನು ನೋಡಿದಷ್ಟು ಕಾಲವೂ ಆ ಹುತ್ತ ಒಂದೇ ರೀತಿಯಾಗಿತ್ತು. ಜೀವಂತ ನಾಗರಾಜನು ಆಗಾಗ್ಗೆ ಹುತ್ತದಿಂದ ಹೊರಗೆ ಬರುತಿದ್ದುದನ್ನು ಅಲ್ಲಿಯ ಅರ್ಚಕರು ನೋಡುತ್ತಿದ್ದರಂತೆ. ಒಂದೆರಡು ಸಲ ಇತರರಿಗೂ ನಾಗರಾಜ ಕಾಣಿಸಿದ್ದನಂತೆ. ಹುತ್ತದ ಮುಂದುಗಡೆ ಹುತ್ತಕ್ಕೆ ಸೇರಿದಂತೆ ಒಂದು ಕಲಶವಿದ್ದಿತು. ಹುತ್ತದ ಬಳಿ ಒಂದು ಉದ್ದವಾದ ಖಡ್ಗವನ್ನು ಇಟ್ಟಿರುತ್ತಿದ್ದರು. ಅಮ್ಮನವರ ಉತ್ಸವಮೂರ್ತಿಯನ್ನು ಗರ್ಭಗೃಹದ ಹೊರಗೆ ಗೋಡೆಯ ಪಕ್ಕದಲ್ಲಿ ಕೂರಿಸಿ ಅಲ್ಲಿ ಪೂಜೆ, ಮಂಗಳಾರತಿ ಮೊದಲಾದ ಸೇವೆಗಳನ್ನು ಸಲ್ಲಿಸುತ್ತಿದ್ದರು. ಯುಗಾದಿಯ ಹಬ್ಬದ ಸಮಯದಲ್ಲಿ ಅಲ್ಲದೇ ಬೇರೆ ಕೆಲವು ಉದ್ದಿಷ್ಟ ಸಮಯದಲ್ಲಿಯೂ, ಕಾವೇರಿನದಿಗೆ ಬಿಜಯಮಾಡಿಸಿಕೊಂಡು ಬಂದು ಉತ್ಸವಮೂರ್ತಿಯನ್ನು ತೊಳೆದು ಮಿರಮಿರನೆ ಮಿಂಚುವಂತೆ ಮಾಡಿ ಉತ್ಸವಪೀಠದ ಮೇಲೆ ಕೂರಿಸಿ ಅಲಂಕರಿಸುತ್ತಿದ್ದರು. ಈ ಹೊತ್ತಿಗೆ ಸಾಲೆಯವರ ಸೀತಾರಾಮು ಎಂಬುವನು ಎಲ್ಲಿಂದಲೋ ಬಂದು, ನೀರಿನಲ್ಲಿ ಮುಳುಗಿ ಎದ್ದು ಬಂದು, ಕೈಗೆ ಕತ್ತಿಯನ್ನು ತೆಗೆದುಕೊಂಡು ದೇವರ ಎದುರಿಗೆ ಪೂಜೆ ಸಲ್ಲಿಸುವಂತೆ ಕತ್ತಿಯನ್ನು ಎದೆಗೆ ಹೊಡೆದುಕೊಳ್ಳುತ್ತಿದ್ದನು. ಇವನ ಮೇಲೆ ಅಮ್ಮ ಬಂದಿದ್ದಾಳೆಂದು ಇವನನ್ನು ದೇವರ ಕುಂಕುಮದಿಂದ ಅರ್ಚಿಸುತ್ತಿದ್ದರು. ಕತ್ತಿಯನ್ನು ಎದೆಗೆ ಹೊಡೆದುಕೊಳ್ಳುವ ಈ ಪದ್ಧತಿಗೆ ಅಮ್ಮನವರಿಗೆ ಸಲ್ಲಿಸುವ 'ಅಲಗು ಸೇವೆ' ಎನ್ನುತ್ತಿದ್ದರು. ದೇವರನ್ನು ಗುಡಿಗೆ ಕರೆದುಕೊಂಡು ಬಂದ ಮೇಲೆ ಅವನು ದೇವರಿಗೆ ಅಡ್ಡಬೀಳುತ್ತಿದ್ದನು. ಆಗ ಅರ್ಚಕರು ದೇವರತೀರ್ಥವನ್ನು ಅವನ ಮೇಲೆ ಪ್ರೋಕ್ಷಣೆ ಮಾಡುತ್ತಿದ್ದರು. ಅನಂತರ ಸೀತಾರಾಮು ನಿದ್ದೆಯಿಂದ ಎಚ್ಚೆತ್ತವನಂತೆ ಮೇಲೆದ್ದು , ಏನೂ ಆಗಲಿಲ್ಲವೆನ್ನುವಂತೆ ಹೊರಟುಹೋಗುತ್ತಿದ್ದನು.

ಊರಿಗೆ ಏನಾದರೂ ತೊಂದರೆ, ಅಶುಭ ಬಂದರೆ ಕನ್ನಂಬಾಡಿಯಮ್ಮನ ಉತ್ಸವವನ್ನು ಹೊರಡಿಸುತ್ತಿದ್ದರು, 'ಅಮ್ಮನು ಮೇಲೆ ಬಂದ' ಸೀತಾರಾಮುವಿಗೆ ಮನವಿ ಸಲ್ಲಿಸುತ್ತಿದ್ದರು; "ನಮ್ಮ ತೊಂದರೆ ನಿವಾರಿಸು, ಊರಿಗೆ ಬಂದಿರುವ ಕಷ್ಟವನ್ನು ಪರಿಹರಿಸು" ಎಂದು ಬೇಡಿಕೊಳ್ಳುತ್ತಿದ್ದರು. ಒಂದೊಂದೇ ಮಾತಿನ ಉತ್ತರವನ್ನು, 'ಹೌದು' ಅಥವಾ 'ಇಲ್ಲ' ಎಂದು ಕೊಡುತ್ತಿದ್ದನು ಸೀತಾರಾಮು, ದೇವರು ಮೈಮೇಲೆ ಬಂದಾಗ.

ಒಂದು ಸಲ ಕೇರಳಾಪುರಕ್ಕೆ ಪ್ಲೇಗು ಬಂದಿತು. ಆಗ ನಾನಿನ್ನೂ ಹತ್ತುವರ್ಷದ ಹುಡುಗ, ಶಾಲೆಯಲ್ಲಿ ಓದುತ್ತಿದ್ದೆ. ಪ್ಲೇಗನ್ನು ಅಮ್ಮ ನಿವಾರಿಸಲಿ ಎಂದು ದೇವರನ್ನು ಹೊರಡಿಸಿ, ಕಾವೇರಿ ನದಿಗೆ ಕರೆದುಕೊಂಡು ಹೋಗಿ, ದೇವರನ್ನು ಶುದ್ಧೀಕರಿಸಿ ಉತ್ಸವವನ್ನು ಹೊರಡಿಸಿದರು. ಯಾವತ್ತೂ ನಡೆಯುವಂತೆ ಸೀತಾರಾಮು ಬಂದು ಕತ್ತಿಯನ್ನು ತೆಗೆದುಕೊಂಡು ಎದೆಗೆ ಹೊಡೆದುಕೊಳ್ಳಲಾರಂಭಿಸಿದ. ನನ್ನನ್ನು ಏತಕ್ಕೆ ಈಗ ಕರೆಸಿದ್ದು ಎಂದು ಹೂಂಕರಿಸಿದ. ಅಲ್ಲಿದ್ದ ಹಿರಿಯರು, "ಅಮ್ಮ, ಊರಿಗೆ ಪ್ಲೇಗು ಬಂದಿದೆ. ನೀನೇ ಕಾಪಾಡಬೇಕು, ಜನ ಸಾಯುತ್ತಿದ್ದಾರೆ. ನೀನು ನೋಡುತ್ತ ಸುಮ್ಮನೆ ಇರುವುದೇ?" ಎಂದು ಪ್ರಾರ್ಥಿಸಿದರು. "ನೀವು ಕರೆಯಲಿ ಎಂದು ಸುಮ್ಮನಿದ್ದೆ. ಇನ್ನು ಆ ಪ್ಲೇಗು ಮಾರಿಯನ್ನು ಓಡಿಸಿಯೇ ತೀರುತ್ತೇನೆ" ಎಂದು ಹೇಳಿದ್ದೇ ಸೀತಾರಾಮು ಬೆತ್ತವನ್ನು ಕೈಗೆ ತೆಗೆದುಕೊಂಡು, ಅಮ್ಮನ ದೇವಸ್ಥಾನಕ್ಕೆ ಬಂದು, ಗುಡಿಯ ಮುಂದಿದ್ದ ದೊಡ್ಡ ಬೇವಿನ ಮರವನ್ನು ಹತ್ತಿ ಬೇವಿನ ಸೊಪ್ಪನ್ನು ಕಿತ್ತುಕೊಂಡು, ಮರದಿಂದ ಧುಮುಕಿ ಪ್ಲೇಗು ಮಾರಿಯನ್ನು ಅಟ್ಟಿಸಿಕೊಂಡು ಓಡಿದ. ಊರಲ್ಲೆಲ್ಲ ಓಡಾಡುತ್ತ ನಾಲ್ಕಾರು ಮೈಲಿಗಳ ದೂರದವರೆಗೆ ಓಡಿಹೋಗಿ ಬರುತ್ತ, "ಪ್ಲೇಗು ಮಾರಿಯನ್ನು ಓಡಿಸಿಬಿಟ್ಟೆ" ಎನ್ನುತ್ತಿದ್ದ. ಒಂದೇ ದಿನದಲ್ಲಿ ಮೂರು ನಾಲ್ಕು ಗಂಟೆಗಳಲ್ಲಿ ಅದೆಷ್ಟು ದೂರವನ್ನು ಓಡುತ್ತಿದ್ದನೋ! 'ಇದಾವ ದೈವಶಕ್ತಿ ಇದು, ಇದು ಹೇಗೆ ? ಮನುಷ್ಯನ ಮೈಮೇಲೆ ದೇವರು ಬರುವುದೆಂದರೇನು?' ಎಂಬ ಪ್ರಶ್ನೆ ಬಾಲಕನಾದ ನನ್ನನ್ನು ಕಾಡುತ್ತಿತ್ತು. ಈ ಸೀತಾರಾಮು ನೋಡಲು ನಸುಗೆಂಪಗೆ ಸುಂದರವಾಗಿದ್ದನು. ದುಂಡು ಮುಖದ ಹಣೆಯ ಮೇಲಿನ ಕೆಂಪು ತಿಲಕವು ಇವನಿಗೆ ಒಂದು ದೈವಿಕ ವರ್ಚಸ್ಸನ್ನು ಕೊಟ್ಟಂತೆ ಭಾಸವಾಗುತ್ತಿತ್ತು. ಈಗಲೂ, ಈತ 'ದೇವರು ಬಂದು' ಕತ್ತಿಯನ್ನು ಎದೆಗೆ ಹೊಡೆದುಕೊಳ್ಳುತ್ತಿದ್ದ ಚಿತ್ರ ನನ್ನ ಕಣ್ಣ ಮುಂದೆ ಬರುತ್ತದೆ. ಉಳಿದ ಸಮಯದಲ್ಲಿ ಈತ

ಮುಗ್ಧವ್ಯಕ್ತಿಯಾಗಿ ಕಾಣುತ್ತಿದ್ದ. "ದೇವರು ಬಂದಾಗ ನೀನು ಏನಾಗಿರುತ್ತಿ ?" ಎಂದು ಯಾರಾದರೂ ಕೇಳಿದರೆ, "ನನಗೇನೂ ಗೊತ್ತಿಲ್ಲ" ಎನ್ನುತ್ತಿದ್ದ. ಸೀತಾರಾಮುವಿನ ಮೇಲೆಯೇ ಯಾಕೆ ಅಮ್ಮ ಬರುತ್ತಾಳೆ, ಬೇರೆ ಯಾರ ಮೇಲೂ ಏಕೆ ಬರುವುದಿಲ್ಲ, ಎಂಬ ಪ್ರಶ್ನೆಗೆ ನನಗೆ ಉತ್ತರ ದೊರೆಯಲಿಲ್ಲ.

ಹಿಂದಿನ ಕಾಲದಲ್ಲಿ ಹಲವಾರು ರೂಪಗಳಲ್ಲಿ ಅಲೌಕಿಕ ಶಕ್ತಿಗಳು ಕಾಣಿಸಿಕೊಳ್ಳುತ್ತಿದ್ದವು. ಮೈಮೇಲೆ ದೇವರು ಬರುವಂತೆ, ದೆವ್ವಗಳು ಕೂಡ ಜನರನ್ನು ಮೆಟ್ಟಿಕೊಳ್ಳುತ್ತಿದ್ದವು ಎಂಬ ವಿಷಯ ಬಹಳ ವ್ಯಾಪಕವಾಗಿತ್ತು. ಇದಕ್ಕೆ ನಮ್ಮ ತಂದೆಯವರ ಪ್ರತ್ಯಕ್ಷ ಅನುಭವವು ನಿದರ್ಶನವಾಗಿದೆ. ಅವರು ಒಮ್ಮೆ ಎಲೆಚಾಗಳ್ಳಿಗೆ ತಮ್ಮ ಬಂಧುಗಳಾದ ಸುಬ್ಬಯ್ಯನವರ ಮನೆಗೆ ಹೋಗಿದ್ದರು. ರಾತ್ರಿ ಎಲ್ಲರೂ ಊಟಮಾಡಿದರು. ಊಟವಾದ ಮೇಲೆ ಕೈ ತೊಳೆದುಕೊಳ್ಳಲು ಹಿತ್ತಲಿನ ಬಾಗಿಲಲ್ಲಿ ಒಂದು ದೊಡ್ಡ ಕೊಳಗದಲ್ಲಿ ನೀರಿಟ್ಟಿದ್ದರು. ಎಲ್ಲರೂ ಹೋಗಿ ಕೈ ತೊಳೆದುಕೊಂಡು ಬಂದರು. ಸುಬ್ಬಯ್ಯನವರ ಭಾವಮೈದುನ (ಹೆಂಡತಿಯ ತಮ್ಮ) ಕೈತೊಳೆದುಕೊಂಡು ಒಳಕ್ಕೆ ಬಂದು ದೊಪ್ಪನೆ ಬಿದ್ದುಬಿಟ್ಟ. ಸೋಕಾಗಿರಬಹುದೆಂಬ ಅನುಮಾನದ ಮೇಲೆ ಹಳ್ಳಿಯ ಒಬ್ಬನನ್ನು ಕರೆಸಿ ಅವನಿಂದ ಕೋಳಿ ನಿವಾಳಿಸಿ ಬಲಿ ಕೊಡಿಸಿದರು. ಸುಮಾರು ಹದಿನೆಂಟು ವರ್ಷದವನು ಸುಬ್ಬಯ್ಯನವರ ಭಾವಮೈದುನ. ಅನಂತರ ಆತ ಸುಖವಾಗಿ ಮಲಗಿಬಿಟ್ಟ. ಬೆಳಗ್ಗೆ ಎದ್ದಮೇಲೆ ನೋಡಿದರೆ ಅವನ ಬೆನ್ನಿನ ಮೇಲೆ ಐದು ಬೆರಳುಗಳು ಕೆಂಪಗೆ ಮೂಡಿದ್ದವು. ಹುಡುಗ ಮೊದಲೇ ಕೆಂಪು. ಕೈ ಬೆರಳುಗಳ ನಕ್ಷೆ ಬೆನ್ನಿನ ಮೇಲೆ ಚೆನ್ನಾಗಿ ಊರಿದ್ದಿತು. ನಮ್ಮ ತಂದೆಯವರ ನೈಜ ಅನುಭವವಾದುದರಿಂದ ಇದನ್ನು ನಂಬದೇ ವಿಧಿಯಿಲ್ಲ.

ಹಿಂದೆ ನನ್ನ ಬಾಲ್ಯದಲ್ಲಿ ಹಲವು ದೆವ್ವಗಳ ಕಥೆಗಳನ್ನು ಕೇಳಿ ರೋಮಾಂಚನಗೊಂಡಿದ್ದೇನೆ, ಆದರೆ ಇಂದು ಆ ದೆವ್ವಗಳೆಲ್ಲ ಎಲ್ಲಿ ಹೋದವು!

a a a

ಕೇರಳಾಪುರವು ಹಲವು ಜಾತಿಯ ಜನಗಳ ಸಹಬಾಳ್ವೆಯ ಪ್ರತೀಕವಾಗಿತ್ತು. ಆದರೆ ಎಲ್ಲ ಜಾತಿಯ ಜನರೂ ಪರಸ್ಪರ ವ್ಯವಹಾರದಲ್ಲಿ ಭಾಗಿಯಾಗುತ್ತಿದ್ದರೇ ಹೊರತು, ಬೇರೆ ಬೇರೆ ಕೇರಿಗಳಲ್ಲಿ, ತಮ್ಮದೇ ಜಾತಿಯ ಆಚಾರವಿಚಾರಗಳನ್ನು ಮೈಗೂಡಿಸಿಕೊಂಡು ಜೀವಿಸುತ್ತಿದ್ದರು. ಮುಖ್ಯವಾಗಿ ನಾಲ್ಕು ರಸ್ತೆಗಳು ಚೌಕಾಕಾರವಾಗಿದ್ದುವು. ಈ ನಾಲ್ಕು ಬೀದಿಗಳಲ್ಲಿ ಊರನ್ನು ಪ್ರವೇಶಿಸಿದೊಡನೆ ಕಾವೇರಿನದಿಯ ಕಡೆಗೆ ಹೋಗುವ ದಕ್ಷಿಣೋತ್ತರ ಮಾರ್ಗ ಸಂಕೇತಿಗಳದ್ದಾಗಿತ್ತು. ಆ ರಸ್ತೆ ಕಾವೇರಿ ನದಿಯ ದಡದವರೆಗೂ ಹೋಗುತ್ತಿತ್ತು. ಗಣೇಶನಗುಡಿಯ ಹತ್ತಿರ ನಾರಣಮಜ್ಜಿ ಎಂಬುವರ ಮನೆ ಇತ್ತು. ಅಜ್ಜಿ ಮತ್ತು ಅವರ ಸಹೋದರ ಅನಂತನಾರಾಯಣ ಇಬ್ಬರೇ ಮನೆಯಲ್ಲಿ. ಇವರ ಮನೆಯ ಹಿತ್ತಲಿನಲ್ಲಿ ಸೀಬೆಕಾಯಿ ಮರ ಇದ್ದಿತು. ನಾರಣಮಜ್ಜಿಯವರ ಕಣ್ಣುತಪ್ಪಿಸಿ ಸೀಬೆಕಾಯಿ ಕೀಳಲು, ನಾವು ನಾಲ್ಕೈದು ಬಾಲಕರು ಹೋಗುತ್ತಿದ್ದೆವು. ನಾವು ಸೀಬೆಮರ ಹತ್ತಿದುದನ್ನು ಕಂಡರೆ ಕೋಲು ತೆಗೆದುಕೊಂಡು ಅಟ್ಟಿಸಿಕೊಂಡು ಬರುತ್ತಿದ್ದರು ನಾರಣಮಜ್ಜಿ. 'ಸೀಬೆ ಕಾಯಿ ಹೋದರೆ ಹೋಯಿತು, ಹುಡುಗರು ಮರದಿಂದ ಬಿದ್ದು ಕೈಯೋ, ಕಾಲೋ ಮುರಿದುಕೊಂಡರೆ ಏನು ಗತಿ' ಎಂಬುದು ಅವರ ಆತಂಕ.

ಅನಂತರ ಇದ್ದುದೇ ಗೂಟಕಲ್ ನಾರಣಾವಧಾನಿಗಳ ಮನೆ ಎಂದು ಪ್ರಸಿದ್ಧವಾದ ನಮ್ಮ ತಾಯಿಯ ಸ್ವಂತ ಅಕ್ಕ, 'ದೊಡ್ಡಮ್ಮ'ನವರ ಮನೆ. ಅವರ ಮಗ ನನಗೆ ಅಣ್ಣನಾಗಬೇಕು. ಅವರನ್ನು 'ಚಿನ್ನಣ್ಣ' ಎಂದು ಕರೆಯುತ್ತಿದ್ದೆವು. ಅವರ ಹೆಸರು 'ಸುಬ್ಬಾವಧಾನಿ' ಎಂದು. ಅವರು 'ದೊಡ್ಡ ಉಪಾಧ್ಯರು' ಎಂದು ಪ್ರಸಿದ್ಧರಾದ ವೇದವಿದರನ್ನು ಅವರ ಇಳಿವಯಸ್ಸಿನಲ್ಲಿ ಮನೆಗೆ ಕರೆದುಕೊಂಡು ಬಂದು ಇಟ್ಟುಕೊಂಡು, ಅವರಿಂದ ವೇದವನ್ನು ಪೂರ್ಣವಾಗಿ ಅಧ್ಯಯನ ಮಾಡಿದರು. ಗುರುಗಳ ಜೀವಿತ ಕಾಲದವರೆಗೂ ಅವರನ್ನು ಉಪಚರಿಸಿ ಅವರ ಸೇವೆ ಮಾಡಿದರು. ಚಿನ್ನಣ್ಣನವರು ಮನೆಯ ಮತ್ತು ತೋಟದ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಬೆಳಗ್ಗೆ ಒಂದು ಸಲ ತೋಟದ ಕಡೆಗೆ ಹೋಗಿ ಬಂದು, ನದಿಗೆ ಹೋಗಿ ಸ್ನಾನ ಮಾಡಿಕೊಂಡು ಬಂದು ಮನೆಯಲ್ಲಿ ಜಪವನ್ನು ಮಾಡುತ್ತಿದ್ದರು. ಅನಂತರ ವಿಸ್ತಾರವಾಗಿ ದೇವರ ಪೂಜೆಯನ್ನು ಮಾಡುತ್ತಿದ್ದರು. ದೇವರ ಪೂಜೆ ಮಾಡಿ ಊಟಕ್ಕೆ ಕೂರಬೇಕಾದರೆ ಸಂಜೆ ನಾಲ್ಕು ಗಂಟೆ ಮೀರುತ್ತಿತ್ತು. ಅವರು ಊಟ ಮಾಡುವುದಕ್ಕೂ, ಮೈಸೂರಿನಿಂದ ಕೋಹಿನೂರು ಬಸ್ಸು ಬರುವುದಕ್ಕೂ ಸರಿಹೋಗುತ್ತಿತ್ತು. ಅವರ ಪತ್ನಿ ಪುಟ್ಟಕ್ಕನವರು ನದಿಗೆ ಹೋಗಿ ಬಂದು ಅಡುಗೆ ಮಾಡಿ ಎಲ್ಲರಿಗೂ ಬಡಿಸಿ ಮಡಿಯಲ್ಲಿರುವರು. ಪತಿಯು ದೇವರ ಪೂಜೆ ಮಾಡಿದ ಮೇಲೆ ಮಂಗಳಾರತಿ ಮತ್ತು ತೀರ್ಥ ತೆಗೆದುಕೊಳ್ಳುವರು. ಪತಿಗೆ ಬಡಿಸಿದ ಮೇಲೆ ತಾವು ಊಟ ಮಾಡುತ್ತಿದ್ದರು. ಇದೇ ನಿಯಮವನ್ನು ಪತಿ ಇರುವವರೆಗೂ ಪಾಲಿಸಿದರು. ಹಿಂದಿನ ಕಾಲದ ಸಾತ್ವಿಕ ಪತಿವ್ರತಾಸಾಧ್ವಿಯನ್ನು ಕಾಣಬೇಕಾದರೆ ಪುಟ್ಟಕ್ಕನವರಲ್ಲಿ ಕಾಣಬೇಕಾಗಿತ್ತು. ಅವರು- ಮೈದುನರೂ, ತಮ್ಮ ಹಾಗೂ ಅವರ ಮಕ್ಕಳೂ ತುಂಬಿದ ಮನೆಯಲ್ಲಿ ಅತ್ಯಂತ ಪ್ರಸನ್ನರಾಗಿರುತ್ತ ನಗುನಗುತ್ತಲೇ, ಎಲ್ಲರ ಸೇವೆ ಮಾಡುತ್ತಿದ್ದರು. ನನಗೆ ಅವರ

ಮನೆಯು ನಮ್ಮ 'ನಡುಮನೆ' 'ಅಡುಗೆಮನೆ'ಯಂತೆ ಆಗಿದ್ದಿತು. ನಾನು ಅವರ ಮನೆಗೆ ಹೋಗಿ ಊಟ ಮಾಡುವುದೋ, ಹಾಲು ಕುಡಿಯುವುದೋ ಯಾವುದಕ್ಕೂ ಲೆಕ್ಕವಿಲ್ಲ. ಅಭ್ಯಂಗಸ್ನಾನ ಮಾಡಲು ಅವರ ಬಚ್ಚಲು ಮನೆಯೇ ಬೇಕು. ದೊಡ್ಡಹಂಡೆಗೆ ನೀರು ತುಂಬಿ, ಸೋಗೆ ಉರಿಸಿ, ನೀರು ಕಾಯಿಸಿದರೆಂದರೆ ನಾಲ್ಕಾರು ಜನಕ್ಕೆ ಸ್ನಾನಕ್ಕೆ ಆಗುತ್ತಿದ್ದಿತು.

ಕೇರಳಾಪುರದ ಸಂಕೇತಿಗಳು ವಾಧೂಲಸಗೋತ್ರದವರು. ಊರಿನಲ್ಲಿ ಮಡಿ, ಸಡಿ, ಸೂತಕಾದಿಗಳ ಸಮಯದಲ್ಲಿ ಒಂದೇ ಗೋತ್ರದವರಿದ್ದರೆ ಬಹಳ ಕಷ್ಟವನ್ನು ಅನುಭವಿಸಬೇಕಾಗುವುದು. ಅಂಥ ಸಂದರ್ಭಗಳಲ್ಲಿ ಪರ ಊರಿನವರನ್ನು ಸಹಾಯಕ್ಕೆ ಕರೆಸಬೇಕಾಗುತ್ತದೆ. ಈ ತೊಂದರೆಯನ್ನು ಪರಿಹರಿಸಿಕೊಳ್ಳಲು ಊರಿನ ಜನರು ಬೇರೆ ಊರಿನಿಂದ ಅನ್ಯಗೋತ್ರದವರನ್ನು ಕರೆದುಕೊಂಡು ಬಂದು ಅವರಿಗೆ ಮನೆ ಜಮೀನನ್ನು ಕೊಟ್ಟು, ಅವರು ತಮ್ಮ ಊರಿನಲ್ಲಿ ಖಾಯಂ ಆಗಿ ನೆಲಸುವಂತೆ ಮಾಡುತ್ತಿದ್ದರು. ಆ ರೀತಿ ಕೇರಳಾಪುರದಲ್ಲಿ ನೆಲಸಿದ್ದವರು ಎರಡು ಕುಟುಂಬದವರು. ಅವರಲ್ಲಿ ತಮ್ಮಪ್ಪನವರು ಮುಖ್ಯರು.

ತಮ್ಮಪ್ಪನವರು ಕಷ್ಟಜೀವಿ. ಹೊಸ ಊರಿಗೆ ಬಂದು ತನಗೆ ದೊರಕಿದ ಅಲ್ಪ ಜಮೀನಿನಲ್ಲಿ ಶ್ರಮವಹಿಸಿ ದುಡಿದು ಕ್ರಮೇಣ ಏಳಿಗೆಯನ್ನು ಹೊಂದಿದರು. ಸ್ವಲ್ಪಸ್ವಲ್ಪ ಗದ್ದೆ, ಹೊಲ, ತೋಟಗಳನ್ನು ಕೊಂಡುಕೊಂಡು ಚೆನ್ನಾಗಿ ಆಬಾದು ಮಾಡಿ ಉತ್ತಮ ವರಮಾನವನ್ನು ಪಡೆದರು. ಜತೆಗೆ ಲೇವಾದೇವಿಯನ್ನು ಸಹ ಸಂಪಾದನೆಗಾಗಿ ಕೈಗೊಂಡರು. ಸಾಲ ತೆಗೆದುಕೊಂಡ ರೈತರು ವಾಯಿದೆಗೆ ಸರಿಯಾಗಿ ಬಡ್ಡಿ ಅಥವಾ ಅಸಲು ಪಾವತಿಸುವುದರಲ್ಲಿ ತಪ್ಪುತ್ತಿರಲಿಲ್ಲ. 'ಬಡ್ಡಿಕಡಮೆ ಮಾಡಿಕೊಳ್ಳಿ ಅಥವಾ ಸ್ವಲ್ಪ ಬಡ್ಡಿ ಬಿಡಿ' ಎಂದು ಅಂಗಲಾಚುತ್ತಿದ್ದರೇ ಹೊರತು ಮೋಸ ಮಾಡುತ್ತಿರಲಿಲ್ಲ. ತಮ್ಮಪ್ಪನವರು ಹೀಗೆ ದುಡಿಮೆ ಮತ್ತು ಲೇವಾದೇವಿಯಿಂದ ಊರಿಗೇ ದೊಡ್ಡ ಕುಳವಾಗಿ ಸಾಹುಕಾರರು ಎನ್ನಿಸಿಕೊಂಡರು. ಕೆಲಸ ಮಾಡದೆ ಕಾಲಕಳೆಯುವವರನ್ನು ಕಂಡರೆ ಅವರಿಗೆ ಕೋಪ. ಮೈಮುರಿದು ದುಡಿಯುವವರನ್ನು ಕಂಡರೆ ಮೆಚ್ಚುಗೆಯೇನೋ ಹೌದು. ಆದರೆ ಅದಕ್ಕಾಗಿ ಒಂದು ಬಿಡಿಗಾಸೂ ಹೆಚ್ಚಾಗಿ ಕೊಡುತ್ತಿರಲಿಲ್ಲ.

ಅದು ಅಡಕೆ ರೇಖೆಯ ಕಾಲ. ಅಡಕೆಯನ್ನು ರಾತ್ರಿ ಬೇಯಿಸಿದ್ದರು. ಬೆಳಗ್ಗೆ ಎದುರುಗಡೆ ಮೈದಾನದಲ್ಲಿ ಅದನ್ನು ಹರವಬೇಕು. ಆಗ ಏತಕ್ಕೋ ನಾನು ಅವರ ಮನೆಯ ಬಳಿ ಹೋದೆ. ತಮ್ಮಪ್ಪನವರು ತಲೆಗೆ ಒಂದು ಚೌಕವನ್ನು ಸುತ್ತಿ ಅಡಕೆಯನ್ನು ಕುಕ್ಕೆಗೆ ತುಂಬುತ್ತಿದ್ದರು. ನನ್ನನ್ನು ಕಂಡ ಅವರು, "ಶಾಮಜ್ಜಯ್ಯನ ಮಗನೇ, ಏನು ಮಾಡುತ್ತಿದ್ದೀಯೋ?" ಎಂದು ಕೇಳಿದರು. "ಏನೂ ಇಲ್ಲ" ಎಂದೆ ನಾನು. "ಸರಿ, ಬಾ ಇಲ್ಲಿ" ಎಂದು ಹೇಳಿ ಒಂದೆರಡು ಗಂಟೆಗಳ ಕಾಲ ನನ್ನ ಕೈಯಿಂದ ಅಡಕೆ ತುಂಬಿದ ಕುಕ್ಕೆಯನ್ನು ಹೊರಿಸಿ, ಮೈದಾನದಲ್ಲಿ ಹರಡಿದ್ದ ಈಚಲು ಚಾಪೆಯಮೇಲೆ ಹಾಕಿಸಿದರು. ದೊಡ್ಡವರಿಗೆ ಪ್ರತಿ ಹೇಳಲಾರದೆ ಅವರು ಹೇಳಿದಂತೆ ಕೆಲಸ ಮಾಡಿದೆ. ಹೀಗೆ ಅವರು ಕಂಡವರಿಂದ ಕೆಲಸ ಮಾಡಿಸಿಕೊಂಡುಬಿಡುವರು. ತಾನು ಅವರಿಗೆ ಕೆಲಸ ಮಾಡುವುದನ್ನು ಕಲಿಸುತ್ತಿದ್ದೇನೆ ಎಂಬುದು ಅವರ ನಂಬಿಕೆ.

ತಮ್ಮಪ್ಪನವರ ಮನೆಯ ಪಕ್ಕದಲ್ಲಿ ಸೋಮರಾಯ ಎಂದು ಕರೆಯುತ್ತಿದ್ದ ಗಮಕಿ ಸುಬ್ಬರಾಯರು ಹಾಗೂ ಅವರ ತಮ್ಮ ವಾಸಿಸುತ್ತಿದ್ದರು. ಸುಬ್ಬರಾಯರು ಕಪ್ಪಗಿದ್ದರು. ಅವರದು ದೃಢಕಾಯ. ಅವರ ಕಂಠಸಿರಿ ಸಿಂಹವಾಣಿಯಂತೆ. ಕರ್ನಾಟಕದಲ್ಲಿ ಸುಬ್ಬರಾಯರು ಪ್ರಸಿದ್ಧ ಗಮಕಿಗಳಾಗಿ ಕಾವ್ಯಗಳ ಸುಧಾರಸವನ್ನು ಉಣಿಸಿ ತಣಿಸಿದ್ದಾರೆ.

ನಮ್ಮ ತಂದೆ ಉಪಾಧ್ಯಾಯರಾಗಿ ಊರಿನ ಹೊರಗಡೆ ಕೆಲಸ ಮಾಡುತ್ತಿದ್ದು, ತಮ್ಮ ಮನೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿರಲಿಲ್ಲ. ಕೇರಳಾಪುರಕ್ಕೆ ಸಂಸಾರ ಬಂದ ಮೇಲೆ ನಮ್ಮ ದೊಡ್ಡಪ್ಪ ಪೋಸ್ಟ್‌ಮಾಸ್ಟರ್ ಶ್ರೀನಿವಾಸಯ್ಯನವರೊಡನೆ ಊರಿನ ಹತ್ತುಜನರೆದುರು ಸಂಧಾನಮಾಡಿ ಅವರ ತೊಟ್ಟಿಮನೆಯ ಒಂದು ಭಾಗವನ್ನು ಪಡೆದುಕೊಂಡರು. ತೊಟ್ಟಿಮನೆಯ ಉತ್ತರಭಾಗಕ್ಕೆ ಗೋಡೆಯನ್ನು ಹಾಕಿ ಮನೆ ಮಾಡಿಕೊಳ್ಳಬೇಕಾಯಿತು. ಒಂದಂಕಣ ಅಗಲದ ಮನೆಯು ಉದ್ದಕ್ಕೆ ಹಿತ್ತಲಿನವರೆಗೂ ಹೋಗಿತ್ತು. ಅದರಲ್ಲಿ ವರಾಂಡ, ಹಜಾರ, ಅಡುಗೆಮನೆ, ಬಚ್ಚಲುಮನೆ ಮಾಡಿಕೊಂಡಿದ್ದಾಗಿತ್ತು.

ಸುಬ್ಬಯ್ಯ ಎಂಬ ಒಬ್ಬ ಗೃಹಸ್ಥರಿದ್ದರು, ಅವರು ಆಜಾನುಬಾಹು. ಅವರ ಇಳಿವಯಸ್ಸಿನಲ್ಲಿ ಕೂಡ ಹಿಂದಿನ ದೈಹಿಕ ಸಾಮರ್ಥ್ಯದ ಕುರುಹು ಅವರ ಮೈಕೈಗಳಲ್ಲಿ ಎದ್ದು ಕಾಣುತ್ತಿದ್ದಿತು. ಅವರು ತಮ್ಮ ಇಳಿವಯಸ್ಸಿನಲ್ಲಿ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಯಿತು. ತಮ್ಮ ಪತ್ನಿಯೊಡನೆ ವಾಸಿಸುತ್ತಿದ್ದ ಅವರು ತೋಟದಲ್ಲಿ ಕೆಲಸ ಮಾಡಲು ಸಾಮರ್ಥ್ಯ ಹೊಂದಿರಲಿಲ್ಲ. ಮಗನಿಗೂ ತಂದೆಗೂ ಭಿನ್ನಾಭಿಪ್ರಾಯ ಬಂದು ಮಗ ತಂದೆಯನ್ನು ನಿರಾಕರಿಸಿದ. ಪತಿಪತ್ನಿಯರಿಗೆ ಈಗ ಊಟಕ್ಕೂ ತತ್ವಾರವಾಯಿತು. ಈ ಸಂದರ್ಭದಲ್ಲಿ ಕೇರಳಾಪುರದ ಮಹಾಜನಗಳು ತಮ್ಮ ಊರಿನ ಒಬ್ಬರಿಗೆ ಆದ ಕಷ್ಟವನ್ನು ಕಂಡು ಅವರ ನೆರವಿಗೆ ಬಂದರು. ಪತಿಪತ್ನಿಯರು ಪ್ರತಿದಿವಸ ಊರಿನ ಒಬ್ಬರ ಮನೆಯಲ್ಲಿ ಭೋಜನ

ಮಾಡುವಂತೆ ಏರ್ಪಡಿಸಿದರು. ವೃದ್ಧದಂಪತಿಗಳು ನದಿಗೆ ಹೋಗಿ ತಮ್ಮ ಬಟ್ಟೆಗಳನ್ನು ತಾವು ಒಗೆದುಕೊಳ್ಳಲು ಬಹಳ ಪ್ರಯಾಸಪಡುತ್ತಿದ್ದರು. ಆಗ ನನ್ನ ಅಣ್ಣನವರಾದ ಚಿನ್ನಣ್ಣ (ಸುಬ್ಬಾವಧಾನಿಗಳು) ಅವರ ಪತ್ನಿ ಪುಟ್ಟಕ್ಕನವರು ಸುಬ್ಬಯ್ಯನವರ ಹೆಂಡತಿಯ ಸೀರೆಗಳನ್ನು ಒಗೆದುಕೊಡುತ್ತಿದ್ದರು. ಚಿನ್ನಣ್ಣನವರ ಮಗ ಕೇಶವಮೂರ್ತಿ ಸುಬ್ಬಯ್ಯನವರ ಪಂಚೆಗಳನ್ನು ಒಗೆದುಕೊಟ್ಟು ಮನೆಯಲ್ಲಿ ಅವರಿಗೆ ಕುಡಿಯಲು ನದಿಯಿಂದ ನೀರನ್ನು ಪ್ರತಿದಿನ ತಂದು ಕೊಡುತ್ತಿದ್ದರು.

ಗಮಕಿ ಸುಬ್ಬರಾಯರ ಮನೆಯ ಹಿಂದುಗಡೆಯ ಮನೆಯಲ್ಲಿ ಚಿನ್ನಪ್ಪನವರು ವಾಸಿಸುತ್ತಿದ್ದರು. ಚಿನ್ನಪ್ಪನವರು ಒಳ್ಳೆಯ ಗಟ್ಟಿಮುಟ್ಟಿನ ವ್ಯಕ್ತಿ. ಅವರು ಕಪ್ಪಗಿದ್ದುದರಿಂದ 'ಕರಿಚಿನ್ನಪ್ಪ' ಎಂದು ಎಲ್ಲರೂ ಕರೆಯುತ್ತಿದ್ದರು. ಚಿನ್ನಪ್ಪನವರು ಬಡವರಾದರೂ ದುಡಿಮೆಯಲ್ಲಿ ಶ್ರೀಮಂತರು. ಇವರ ಮಕ್ಕಳು ವಿದ್ಯಾಭ್ಯಾಸ ಮಾಡಿ ಬಹಳ ಮುಂದೆ ಬಂದಿದ್ದಾರೆ.

ಈಗ ಎದುರು ಸಾಲಿಗೆ ಬರೋಣ. ಕಾವೇರಿ ನದಿಯ ಕಡೆಯಿಂದ ತೆಗೆದುಕೊಂಡಾಗ ಮೊದಲನೆಯ ಮನೆ ಜೋಯಿಸ್ ರಾಮಾಶಾಸ್ತ್ರಿಗಳದು, ಬಹಳ ದೊಡ್ಡ ಮನೆ. ಸುಮಾರು ಇನ್ನೂರು ಅಡಿ ಉದ್ದ, ನೂರ ಐವತ್ತು ಅಡಿ ಅಗಲದ ವಿಸ್ತಾರವಾದ ಮನೆ. ಇದಕ್ಕೆ ಹಿಂದೆ ಅತ್ಯಂತ ವಿಸ್ತಾರವಾದ ಹಿತ್ತಿಲು ಮತ್ತು ಹಸುಗಳ ಕೊಟ್ಟಿಗೆ. ಮನೆಯ ಮುಂದುಗಡೆ ವಿಸ್ತಾರವಾದ ಜಗಲಿ. ಬೀದಿ ಬಾಗಿಲು ಮನೆಯ ಮಧ್ಯಕ್ಕಿದೆ. ಇಲ್ಲಿಂದ ಒಳಗಡೆ ಹೋದರೆ ದೊಡ್ಡ ಹಾಲು, ಮಧ್ಯದಲ್ಲಿ ಉದ್ದಕ್ಕೂ ಅಂಕಣವನ್ನು ಬೇರ್ಪಡಿಸುವ ಕಂಬಸಾಲು. ಕೆಳಗಡೆ ಅಂಕಣಗಳು ಇದ್ದಷ್ಟೇ ಮೇಲಿನ ಅಂಕಣಗಳು. ನಾನು ರಾಮಾಶಾಸ್ತ್ರಿಗಳನ್ನು ಅವರ ಜೀವಿತಕಾಲದಲ್ಲಿ ಹೆಚ್ಚಾಗಿ ನೋಡಲಿಲ್ಲ. ನನಗೆ ಚೆನ್ನಾಗಿ ನೆನಪಿರುವುದೆಂದರೆ ಒಂದು ಗಣಪತಿ ಹಬ್ಬದ ದಿವಸ ಬೆಳಿಗ್ಗೆ ಇವರು ನಿಧನರಾದುದು. ಇವರ ಮರಣವನ್ನು ಸಂಜೆಯವರೆಗೆ ಮುಚ್ಚಿಟ್ಟರು. ಊರಿನವರೆಲ್ಲ ಬೇಗ ಬೇಗ ಗಣಪತಿ ಪೂಜೆ ಮಾಡಿ ಮುಗಿಸಿ ಊಟ ಮಾಡಿಬಿಟ್ಟರು. ಇಲ್ಲದಿದ್ದರೆ ಅಂದು ಬಹುಮಟ್ಟಿನ ಊರಿನ ಎಲ್ಲರಿಗೂ ಉಪವಾಸ. ಇವರ ಹಿರಿಯ ಮಗನನ್ನು ತಂದೆ 'ವತ್ಸ' ಎಂದು ಕರೆಯುತ್ತಿದ್ದರು. ಇವರ ನಿಜನಾಮ ಶ್ರೀನಿವಾಸ. ತಂದೆ ರಾಮಾಶಾಸ್ತ್ರಿಯವರಷ್ಟು ಸಂಸ್ಕೃತದಲ್ಲಿ ವಿದ್ಯಾವಂತರಲ್ಲದೇ ಹೋದರೂ ಮಾಘಮಾಸ ಮೊದಲಾದ ದಿನಗಳಲ್ಲಿ ಕಾವೇರಿ ಮಹಾತ್ಮೆಯ ಪುರಾಣ ಮಾಡುವಷ್ಟು ಸಂಸ್ಕೃತ ತಿಳಿದಿದ್ದಿತು. ಜೋಯಿಸರ ಮಕ್ಕಳಲ್ಲಿ ಶಂಕರ ನನ್ನ ಬಾಲ್ಯ ಗೆಳೆಯ, ನನ್ನ ವಯಸ್ಸಿನವರು, ದೃಢಕಾಯ. ಇವರು ಸುಬ್ಬಾವಧಾನಿಗಳಲ್ಲಿ (ಚಿನ್ನಣ್ಣನವರಲ್ಲಿ) ವೇದಾಭ್ಯಾಸ ಮಾಡಿ ಮಂತ್ರವಿದರಾದರು. ಇವರ ಜೀವನದಲ್ಲಿ ಏರಿಳಿತಗಳು ಸಂಭವಿಸಿದುವು. ಮೊದಲು ಅಂಗಡಿ ಇಟ್ಟು ಬೇಕಾದ ಹಾಗೆ ಸಂಪಾದಿಸಿದರು. ಸ್ವಲ್ಪ ಕಾಲ ಕುಪ್ಪಹಳ್ಳಿಯ ಕೆ.ಕೆ. ಮೂರ್ತಿಯವರ ನಾಟಕಗಳಲ್ಲಿ ಪಾರ್ಟು ಮಾಡಿ ಭೇಷ್ ಎನಿಸಿಕೊಂಡಿದ್ದರು. ಅನಂತರದಲ್ಲಿ ವೇದಾಧ್ಯಯನ ಮಾಡಿಸುತ್ತ ವೈದಿಕರಾಗಿ ನಾಲ್ಕಾರು ಜನಕ್ಕೆ ಉಪಕಾರಿಯಾಗಿ ಜೀವನ ಸಾಗಿಸಿದರು. ಅನಂತರ ಕೃಷ್ಣ ; ಈಗ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಅನೇಕ ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ಕೊನೆಯವರು ರಾಮಯ್ಯ. ಪ್ರೌಢಶಾಲೆ ಮುಖ್ಯೋಪಾಧ್ಯಾಯರಾಗಿದ್ದರು.

ಜೋಯಿಸ ರಾಮಾಶಾಸ್ತ್ರಿಗಳ ಪಕ್ಕದ ತೊಟ್ಟಿಮನೆ ರಾಮಾಶಾಸ್ತ್ರಿಗಳ ತಮ್ಮಂದಿರಾದ ಕೇಶವಯ್ಯನವರದು. ಇವರು ಬಹಳ ವರ್ಷ ಊರಿನಿಂದ ಹೊರಗಿದ್ದು ಸೇವೆಯಿಂದ ನಿವೃತ್ತರಾದ ಮೇಲೆ ಸ್ವಂತ ಊರಿಗೆ ಬಂದು ನೆಲೆಸಿದರು. ಇವರ ಹಿರಿಯ ಪುತ್ರ 'ಪರಾಶರ ಸುಬ್ಬರಾಯರು' ಎಂದು ಪ್ರಸಿದ್ಧರಾದವರು. ಇವರು ಪ್ರಸಿದ್ಧ ಜ್ಯೌತಿಷಿಗಳಾಗಿ ಹಾಸನದಲ್ಲಿ ನೆಲೆಸಿದರು. ಇವರು ಸಂಕೇತಿ ಸಂಘದ ಚಟುವಟಿಕೆಗಳಲ್ಲಿ ಮುಖ್ಯಪಾತ್ರವನ್ನು ವಹಿಸುತ್ತ ಸೇವೆಸಲ್ಲಿಸುತ್ತಿದ್ದರು. ಕೇಶವಯ್ಯನವರ ಕಿರಿಯ ಮಗ ರಾಮಚಂದ್ರ. ಇವರ ಮನೆಗೆ ಸೇರಿದಂತೆ ಇರುವ ಪಕ್ಕದ ಮನೆ ಜೋಯಿಸ ಸುಬ್ಬಯ್ಯನವರದು. ಈಗ ಜೋಯಿಸರ ಅಯ್ಯು ಅವರು ಈ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇವರು ಭಾರಿ ಆಳು ಮತ್ತು ಇವರ ಗಂಟಲು ಗುಡುಗು ಸಿಡಿಲಿನಂತೆ.

ಜೋಯಿಸರ ಅಯ್ಯು ಅವರ ಮನೆಯ ಪಕ್ಕದಲ್ಲಿ ಹಿಂದೆ ಖಾಲಿ ಮಂದಳ ಇತ್ತು. ಚಿನ್ನಸೋಮಿ (ಸೂರ್ಯನಾರಾಯಣ) ಇವರ ಮಗ ನಂಜುಂಡಯ್ಯ ಅಲ್ಲಿ ಮನೆ ಕಟ್ಟಿದನು. ಈಗ ಅವನ ಮಕ್ಕಳು ಅಲ್ಲಿ ವಾಸಿಸುತ್ತಿದ್ದಾರೆ. ಇದರ ಪಕ್ಕದಲ್ಲಿ ಇರುವ ಮನೆ ಜಟಾಪಾಠಿ ಅವರದು. ಇವರ ಹೆಸರು ಜಟಾಪಾಠಿ ಎಂದು ಇರಬೇಕಾಗಿತ್ತೇನೋ, ಆದರೆ ಜನರು 'ಜಟಾಪಟಿ' ಎಂದೇ ಕರೆಯುತ್ತಿದ್ದರು. ಇವರ ವಂಶಜರು ವೇದದಲ್ಲಿ ಜಟೆಯಲ್ಲಿ ನಿಷ್ಣಾತರಾಗಿದ್ದರು. ಆದ್ದರಿಂದ ಹಿರಿಯರ ಜಟಾಪಾಠಿ ಎಂಬ ಹೆಸರು ಮಗನಿಗೂ ಬಂದಿತು. ಜಟಾಪಾಠಿಯವರ ಮಗನೂ ತಂದೆಯಂತೆಯೇ ಬಲಶಾಲಿಯಾಗಿದ್ದನು.

ಜಟಾಪಾಠಿಯವರ ಪಕ್ಕದ ಸಣ್ಣಮನೆ ನನ್ನ ಗೆಳೆಯರಾದ ಸಂಸ್ಕೃತ ವಿದ್ವಾಂಸ ಕೆ. ಕೃಷ್ಣಮೂರ್ತಿಯ ತಂದೆ ವೆಂಕಟ

ಸುಬ್ಬಯ್ಯನವರದು. ಈಗ ಅವರು ಆ ಮನೆಯನ್ನು ಇರಿಸಿಕೊಂಡಿಲ್ಲ. ವೆಂಕಟಸುಬ್ಬಯ್ಯನವರ ಪಕ್ಕದ ತೊಟ್ಟಿಮನೆ ನಾನು 'ದೊಡ್ಡಪ್ಪ' ಎಂದು ಕರೆಯುತ್ತಿದ್ದ ಪೋಸ್ಟ್ ಮಾಸ್ಟರ್ ಶ್ರೀನಿವಾಸಯ್ಯನವರದು. ಇವರು ಕೆಲವು ಕಾಲ ಉಪಾಧ್ಯಾಯರಾಗಿದ್ದು ಕೆಲಸಬಿಟ್ಟು ಊರಿಗೆ ಬಂದು ನೆಲಸಿದರು. ಇವರಿಗೆ ಪಿತ್ರಾರ್ಜಿತ ಆಸ್ತಿ, ಮನೆ, ತೋಟ, ಗದ್ದೆ ಎಲ್ಲವೂ ಇತ್ತು. ಇವರು ಊರಿನ ಗಣಪತಿ ಪೂಜೆ ಮಾಡುತ್ತಿದ್ದುದರಿಂದ ದೇವಸ್ಥಾನಕ್ಕೆ ದತ್ತಿ ಬಿಟ್ಟ ಗದ್ದೆಯ ವರಮಾನವೂ ಇವರಿಗೇ ಸಲ್ಲುತ್ತಿತ್ತು.ಇವರು ಸಂಸ್ಕೃತ ಬಲ್ಲವರಾಗಿದ್ದರು. ಇವರು ಕೆಲವು ಕಾಲ ಸಂಸ್ಕೃತ ಪುರಾಣಗಳನ್ನು ಪರ್ವದಿನಗಳಲ್ಲಿ ಓದುತ್ತಿದ್ದರು. ಕೊಣನೂರಿನ ಪೋಸ್ಟ್‌ಮಾಸ್ಟರ್‌ರವರೂ ಇವರೂ ಜತೆ ಸೇರಿದಾಗ ಸಂಸ್ಕೃತದಲ್ಲಿ ಸಂಭಾಷಣೆ ನಡೆಸುತ್ತಿದ್ದುದು ಗಮನಾರ್ಹವಾಗಿತ್ತು.

ಶ್ರೀನಿವಾಸಯ್ಯನವರ ಮಕ್ಕಳಲ್ಲಿ ಮೊದಲನೆಯ ಹೆಂಡತಿಯ ಮಗ ವಂಕಟರಾಮಯ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಕೇರಳಾಪುರದಲ್ಲಿ ಸೇವೆ ಸಲ್ಲಿಸಿದರು. ಶ್ರೀನಿವಾಸಯ್ಯನವರ ಎರಡನೆಯ ಹೆಂಡತಿಯ ಮಕ್ಕಳಾದ ಮಂಜುನಾಥ, ರಾಮನಾಥ, ವಿಜಯಲಕ್ಷ್ಮಿ - ಎಲ್ಲರೂ ಉತ್ತಮ ವಿದ್ಯಾಭ್ಯಾಸ ಮಾಡಿ ಇಂಜಿನಿಯರ್, ಸಾಹಿತಿಗಳಾಗಿ ಪ್ರಸಿದ್ಧರಾಗಿದ್ದಾರೆ.

ಶ್ರೀನಿವಾಸಯ್ಯನವರ ಮನೆಯ ತೊಟ್ಟಿಯ ಉತ್ತರ ಭಾಗದ ಒಂದಂಕಣದ ಮನೆಯೇ ನಮ್ಮ ತಂದೆಯವರದು.

ನಮ್ಮ ಮನೆಯ ಪಕ್ಕಕ್ಕೆ ಈಗ ರಾಮಮಂದಿರವಾಗಿರುವುದು ಹಿಂದೆ ಊರಿನ ಯಜಮಾನರಾಗಿದ್ದ ವೆಂಕಟಸುಬ್ಬಯ್ಯನವರ ಮನೆಯಾಗಿತ್ತು. ಅನಂತರ ಮಗ ಕೃಷ್ಣಪ್ಪ ಈ ಮನೆಯಲ್ಲಿ ವಾಸಿಸುತ್ತಿದ್ದರು. ಕೃಷ್ಣಪ್ಪನವರು ಕುಪ್ಪಹಳ್ಳಿಗೆ ವಲಸೆ ಹೋದಾಗ ಇದನ್ನು ರಾಮಮಂದಿರ ಮಾಡಲು ಕೊಟ್ಟರು. ಊರಿನ ಯಜಮಾನರಾದ ವೆಂಕಟಸುಬ್ಬಯ್ಯನವರ ಮಕ್ಕಳಲ್ಲಿ ಹಿರಿಯರಾದ ಸೋಮರಾಯರು ಕುಪ್ಪಹಳ್ಳಿಯಲ್ಲಿ ನೆಲೆಸಿದರು. ಎರಡನೆಯವರಾದ ರಾಮಕೃಷ್ಣಯ್ಯನವರ ಮಕ್ಕಳಾದ ಕೆ.ಆರ್. ಶ್ರೀಕಂಠಯ್ಯನವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗಣಿತದ ಪ್ರೊಫೆಸರಾಗಿದ್ದು ನಿವೃತ್ತ ಹೊಂದಿ ಬೆಂಗಳೂರಿನಲ್ಲಿದ್ದಾರೆ. ಇವರು ಸಂಕೇತಿ ಸಂಘದ ಕಾರ್ಯದರ್ಶಿ, ಉಪಾಧ್ಯಕ್ಷ ಮೊದಲಾದ ಸ್ಥಾನಗಳನ್ನಲಂಕರಿಸಿದ್ದು ಸಂಕೇತಿ ಸಂಘದ ಸೇವೆಯನ್ನು ಇಂದಿಗೂ ಸಲ್ಲಿಸುತ್ತಿದ್ದಾರೆ. ವೆಂಕಟಸುಬ್ಬಯ್ಯನವರ ಕೊನೆಯ ಮಗ ಸರಕಾರಿ ಸೇವೆಯಲ್ಲಿದ್ದು ನಿವೃತ್ತನಾಗಿದ್ದಾನೆ.

ರಾಮಮಂದಿರದ ಪಕ್ಕದಮನೆ 'ಅಣ್ಣಯ್ಯ ಚಿಕ್ಕಯ್ಯ' ಎಂಬುವರದು. ಇವರ ನಿಜನಾಮ ಏನಿತ್ತೋ ತಿಳಿಯದು. ಎಲ್ಲರೂ ಅಣ್ಣಯ್ಯ ಚಿಕ್ಕಯ್ಯ ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ವೆಂಕಟಸುಬ್ಬಯ್ಯನವರ ಅನಂತರ ಅಣ್ಣಯ್ಯ ಚಿಕ್ಕಯ್ಯನವರು ಊರಿನ ಯಜಮಾನರಾದರು. ಇವರಿಗೆ ಸ್ವಲ್ಪವೂ ಬಿಂಕವಿರಲಿಲ್ಲ. ಸರಳ ವ್ಯಕ್ತಿತ್ವ ಇವರದು, ಬಹಳ ಸಾಧುಗಳು, ಇವರದು ಮೊದಲು ತೊಟ್ಟಿ ಮನೆಯಾಗಿತ್ತು. ಅನಂತರ ಮಕ್ಕಳು ದೊಡ್ಡವರಾದ ಮೇಲೆ ಮನೆಯನ್ನು ಭಾಗಮಾಡಿ ಹಂಚಿಕೊಟ್ಟರು.

ಅನಂತರ ಮರಿಯಣ್ಣಯ್ಯನವರ ಮನೆ. ಅವರ ಪಕ್ಕದ ಮನೆ ವೆಂಕಟರಾಮು ಎಂಬುವವರದು. ಇವರನ್ನು ನಾನು ನೋಡಿದ್ದೆ. ಇವರು ಕೆಲಸ ಕಾರ್ಯಗಳಲ್ಲಿ ಬಹಳ ಗಟ್ಟಿಗರಾಗಿದ್ದರು. ಒಳ್ಳೆಯ ಯೌವನದಲ್ಲಿ ನಿಧನರಾದರು. ಇವರಿಗೆ ಮದುವೆಯಾಗಿ ಸ್ವಲ್ಪ ಕಾಲ ಕಳೆದಿತ್ತು. ಅನಂತರ ಇವರ ಹೆಂಡತಿ ಆ ಮನೆಯಲ್ಲಿದ್ದರು. ಅಲ್ಲದೆ ಆ ಮನೆಯಲ್ಲಿ ಅಮ್ಮಣ್ಣ ಎನ್ನುವವರು ಇದ್ದರು. ಇವರು ಅಡುಗೆ ಮಾಡುವುದರಲ್ಲಿ ಹೆಸರಾಂತವರಾಗಿದ್ದರು. ಯಾರ ಮನೆಯಲ್ಲಿ ಯಾವುದೇ ಸಮಾರಂಭವಾಗಲಿ ಇವರು ಅಡುಗೆ ಮಾಡುವರು. ಜನರು 'ಇವರ ಕೈಯಿನ ಅಡುಗೆ ನಳಪಾಕ' ಎನ್ನುತ್ತಿದ್ದರು. ಸಣ್ಣವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡ ಇವರು ತಮ್ಮ ಜೀವಿತಕಾಲವನ್ನೆಲ್ಲ ಊರಿನ ಸೇವೆಯಲ್ಲಿಯೇ ಕಳೆದ ಪುಣ್ಯಾತ್‌ಗಿತ್ತಿ ಎಂದು ಹೇಳಬಹುದು.

'ಮರಿಯಣ್ಣಯ್ಯ' ಎನ್ನುವವರು ಸ್ವಲ್ಪ ಮಟ್ಟಿಗೆ ಮಂತ್ರ-ತಂತ್ರ ತಿಳಿದಿದ್ದರು. ಜನರಿಗೆ ಯಂತ್ರ ಕಟ್ಟಿ ಕೊಡುವುದು, ಕೆಲವು ಕಾಯಿಲೆಗಳಿಗೆ ಔಷಧಿ ಕೊಡುವುದು, ಶಾಸ್ತ್ರ ಹೇಳುವುದು ಇವರ ವೃತ್ತಿಯಾಗಿತ್ತು. ಮಕ್ಕಳ ಕಣ್ಣಿಗೆ ಅರಿಬಂದಾಗ ಅದನ್ನು ಇವರು ತೆಗೆಯುತ್ತಿದ್ದುದು ಒಂದು ರೀತಿಯ ಶಸ್ತ್ರಚಿಕಿತ್ಸೆಯಂತೆಯೇ ಇರುತ್ತಿತ್ತು.

ಇಂಥ ಹಲವು ವಿಶಿಷ್ಟ ವ್ಯಕ್ತಿಗಳು ಕೇರಳಾಪುರದಲ್ಲಿದ್ದರು. ಈ ಎಲ್ಲ ಹಿರಿಯರನ್ನೂ ನಾನು ನೋಡಿ ಅವರ ವ್ಯಕ್ತಿತ್ವದಿಂದ ಸ್ವಲ್ಪಮಟ್ಟಿಗೆ ಪ್ರಭಾವಿತನಾಗಿದ್ದೇನೆನ್ನಬಹುದು. ಎಲ್ಲರಲ್ಲೂ ಸೌಜನ್ಯದಿಂದ ವರ್ತಿಸಿದ ನನಗೆ ಇವರೆಲ್ಲರ ಪ್ರೀತಿ ಆಶೀರ್ವಾದಗಳು ದೊರಕಿದವು ಎಂಬುದು ಸತ್ಯ.

a a a

ಕೇರಳಾಪುರದ ಸಂಕೇತಿ ಜನಗಳ ಒಂದು ಮುಖ್ಯ ಸಾಂಸ್ಕೃತಿಕ ಕೇಂದ್ರವಾಗಿದ್ದುದು ಗಣಪತಿ ಗುಡಿ. ಸಂಕೇತಿಗಳ ಬೀದಿಯ ಎದುರು ಮುಖ ಮಾಡಿಕೊಂಡಿದ್ದ ಗಣಪತಿ ಗುಡಿಯು ಒಂದು ಸಾಧಾರಣ ಹೆಂಚಿನ ಮನೆಯಾಗಿತ್ತು. ಇದಕ್ಕೆ ಗೋಪುರ ಇತ್ಯಾದಿ ದೇವಸ್ಥಾನದ

ಲಕ್ಷಣಗಳಾದ ಅಲಂಕಾರಗಳು ಇರಲಿಲ್ಲ. ಮಣ್ಣಿನ ಗೋಡೆ ಮತ್ತು ನಾಡ ಹೆಂಚು ಇದ್ದುದು ಕಾಲಕ್ರಮೇಣ ಇಟ್ಟಿಗೆ ಗೋಡೆ ಮತ್ತು ಮಂಗಳೂರು ಹೆಂಚಿನಿಂದ ಶೋಭಾಯಮಾನವಾಯಿತು. ಕೇರಳಾಪುರದ ಗೃಹಸ್ಥರ ಮನೆಯ ಯಾವುದೇ ಶುಭಕಾರ್ಯಕ್ರಮಕ್ಕೆ ಗಣಪತಿ ಗುಡಿಯಲ್ಲಿ ಮೊದಲು ಪೂಜೆ, ಮಂಗಳಾರತಿ ಗಳಾಗಬೇಕು. ತಮ್ಮ ಅಭ್ಯುದಯಕ್ಕಾಗಿ ಮಂಗಳಾರತಿ ಮಾಡಿಸುವವರು ಕೆಲವರಾಗಿದ್ದರೆ ಯಾವುದೋ ಉದ್ದೇಶಕ್ಕಾಗಿ ಹರಸಿಕೊಂಡು ಮಂಗಳಾರತಿ ಮಾಡಿಸುವವರು ಕೆಲವರಿದ್ದರು. ಮಂಗಳಾರತಿಯ ಸಮಯದಲ್ಲಿ ಜೋರಾಗಿ ಎಲ್ಲರೂ ಕೂಡಿ ಮಂತ್ರವನ್ನು ಅತ್ಯುತ್ಸಾಹದಿಂದ ಉಚ್ಚರಿಸುತ್ತಿದ್ದರು. ಅನಂತರ ಕೊನೆಯಲ್ಲಿ ದೊರಕುವ ಚರಪಿನ ರುಚಿಯೇ ರುಚಿ. ಕೊಬ್ಬರಿ ಸಕ್ಕರೆಯೋ, ಕಡಲೆ ಉಸುಳಿಯೋ, ಹುಳಿಯವಲಕ್ಕಿಯೋ, ಕೋಸುಂಬರಿಯೋ, ಬಾಳೆ ಹಣ್ಣಿನ ರಸಾಯನವೋ- ಪ್ರಸಾದದ ಸವಿಯನ್ನುಂಡವರೇ ಬಲ್ಲರು. ಈ ಪ್ರಸಾದಕ್ಕಾಗಿ ಬಾಲಕರಾದ ನಾವು ಎಷ್ಟು ಹೊತ್ತಾದರೂ ಕಾಯುತ್ತಿದ್ದೆವು.

ಗಣಪತಿ ಗುಡಿಯಲ್ಲಿ ನಡೆಯುತ್ತಿದ್ದ ಇನ್ನೊಂದು ಮುಖ್ಯ ಸಮಾರಂಭವೆಂದರೆ ಉಪಾಕರ್ಮ. ಊರಿನ ಎಲ್ಲ ದೊಡ್ಡವರು, ಯುವಕರು, ಮದುವೆಯಾದವರು, ಬ್ರಹ್ಮಚಾರಿಗಳು ಎಲ್ಲರಿಗೂ ವರ್ಷದಲ್ಲಿ ಒಂದು ದಿವಸ ಹೊಸ ಯಜ್ಞೋಪವೀತವನ್ನು ಧರಿಸುವ ಪವಿತ್ರ ದಿನ ಉಪಾಕರ್ಮ. ಹೊಸದಾಗಿ ಆ ವರ್ಷ ಉಪನಯನವಾದ ವಟುಗಳಿಗೆ ಪ್ರಥಮೋಪಾಕರ್ಮವೆಂದು ವಿಸ್ತಾರವಾದ ಕಲಾಪ ನಡೆಯುತ್ತಿತ್ತು. ಅಂದು ವಟುವಿನ ಮನೆಯಲ್ಲಿ ಸಡಗರ, ಸಂಭ್ರಮ. ಮಂತ್ರೋಚ್ಚಾರಣೆಯೊಡನೆ ಯಜ್ಞೋಪವೀತ ಧಾರಣೆಯಾಗುತ್ತದೆ. ಅನಂತರ ವೇದ ಉಪನಿಷತ್ತು ಪುರಾಣಗಳ ಒಂದೊಂದು ಭಾಗವನ್ನು ಪಠಿಸಬೇಕು. ಪ್ರಥಮೋಪಾಕರ್ಮಿಗಳಿಗೆ ಇದು ಅಧ್ಯಯನದ ಆರಂಭಕ್ಕೆ ಪೀಠಿಕೆ. ಉಪಾಕರ್ಮದಲ್ಲಿ ನಮಗೆ ಎಂದರೆ ಬಾಲಕರಿಗೆ ಅತ್ಯಂತ ಮುಖ್ಯವಾದುದು ಉಪಾಕರ್ಮದ ಪ್ರಸಾದ. ಈ ಪ್ರಸಾದ ಉಪಾಕರ್ಮದಲ್ಲಿ ಮಾತ್ರ ದೊರೆಯುವಂಥದು. ಹಸಿ ಅಕ್ಕಿ ಹಿಟ್ಟು, ತೆಂಗಿನ ಕಾಯಿ ತುರಿ, ಬೆಲ್ಲ , ಬಾಳೆ ಹಣ್ಣು ಎಲ್ಲವನ್ನೂ ಸೇರಿಸಿ ಕಲಸಿದ ಉಂಡೆಯೇ ಈ ಪ್ರಸಾದ. ಬಾಯಿ ಚಪ್ಪರಿಸಿಕೊಂಡು ತಿಂದೇ ಅದರ ಸವಿಯನ್ನು ಅನುಭವಿಸಬೇಕು. ಪುನಃ ಇಂಥ ಪ್ರಸಾದಕ್ಕೆ ಮುಂದಿನ ವರ್ಷದವರೆಗೂ ಕಾಯಬೇಕು.

೨. ಅಜ್ಜ ಕೃಷ್ಣಾವಧಾನಿಗಳು

ನಮ್ಮಲ್ಲಿ ಪೂರ್ವಜರು ಬರೆದಿಟ್ಟ ವಂಶವೃಕ್ಷವಾಗಲಿ, ದಾಖಲೆಯಾಗಲಿ ನನಗೆ ತಿಳಿದಂತೆ ಯಾವುದೂ ಇಲ್ಲ. ನನ್ನ ಅಜ್ಜನಿಗಿಂತ ಹಿಂದಿನವರ ವಿಷಯ ನನಗೆ ಏನೇನೂ ತಿಳಿಯದು. ನಮ್ಮ ಅಜ್ಜ ಕೃಷ್ಣಾವಧಾನಿಗಳು. ಇವರ ಬಗ್ಗೆ ನಮ್ಮ ತಂದೆಯವರು ತಿಳಿಸಿದ ಒಂದೆರಡು ಅಂಶಗಳನ್ನು ಇಲ್ಲಿ ನಿರೂಪಿಸುತ್ತಿದ್ದೇನೆ. ನಮ್ಮ ಅಜ್ಜನ ತಂದೆ ನರಸಿಂಹಾವಧಾನಿಗಳು. ಅವರ ತಂದೆ ಶ್ರೀನಿವಾಸಾವಧಾನಿಗಳು. ನಮ್ಮ ಅಜ್ಜ ಕೃಷ್ಣಾವಧಾನಿಗಳು ಎತ್ತರವಾದ ಆಳು. ಎತ್ತರಕ್ಕೆ ತಕ್ಕಂಥ ಹರವಾದ ಎದೆ ಮತ್ತು ಗಟ್ಟಿಮುಟ್ಟಾದ ಕೈಕಾಲುಗಳು. ಬಣ್ಣ ಕಪ್ಪಾದರೂ ಆಕರ್ಷಕ ವ್ಯಕ್ತಿತ್ವ, ನೋಡಿದರೆ ಯಾರಿಗಾದರೂ ಗೌರವ ಹುಟ್ಟುವಂಥ ತೇಜಸ್ಸು. ನಾನು ನಮ್ಮ ಅಜ್ಜನನ್ನು ನೋಡುವ ಸಂಭವವೇ ಇರಲಿಲ್ಲ. ನನಗೆ ಒಬ್ಬ ತಮ್ಮ ಹುಟ್ಟಿದ್ದ. ಅವನು ಅನಂತನ ವ್ರತದ ದಿವಸ ಹುಟ್ಟಿದ್ದರಿಂದ ಅವನಿಗೆ 'ಅನಂತ' ಎಂದು ಹೆಸರಿಟ್ಟಿದ್ದರು. ಅವನು ಕೈಕಾಲು ತುಂಬಿಕೊಂಡು ತುಂಡಾಂಡಿಯಾಗಿದ್ದು ಕಪ್ಪಗಿದ್ದ. ನನ್ನ ಅಣ್ಣ ಎಂದರೆ ನನ್ನ ದೊಡ್ಡಮ್ಮನವರ ಮಗ ಚಿನ್ನಣ್ಣನವರು ಇವನನ್ನು 'ಬೊಡ್ಡ' ಎಂದು ಕರೆಯುತ್ತಿದ್ದರು. ಇವನು ಬೀದಿಯಲ್ಲಿ ಹುಡುಗರ ಜತೆ ಮಣ್ಣಿನಲ್ಲಿ ಆಟವಾಡುತ್ತ ಎಲ್ಲ ಹುಡುಗರಿಗಿಂತ ಬಲಶಾಲಿಯಾಗಿದ್ದ. ಇವನನ್ನು ನೋಡಿದ ಹಿರಿಯರು, "ನಿಮ್ಮ ಅಜ್ಜನೇ ಈ ಹುಡುಗ ಅನಂತನ ರೂಪದಲ್ಲಿ ಹುಟ್ಟಿದ್ದಾರೆ" ಎನ್ನುತ್ತಿದ್ದರು. ನನ್ನ ತಮ್ಮ ಅನಂತನನ್ನು ನೋಡಿ ನಾನು ಅಜ್ಜ ಕೃಷ್ಣಾವಧಾನಿಗಳ ಒಂದು ಚಿತ್ರವನ್ನು ಕಲ್ಪಿಸಿಕೊಂಡಿದ್ದೇನೆ.

ಕೃಷ್ಣಾವಧಾನಿಗಳ ಶಕ್ತಿ ಸಾಮರ್ಥ್ಯದ ಬಗ್ಗೆ ನಮ್ಮ ತಂದೆಯವರೂ ಊರಿನ ಹಿರಿಯರೂ ಒಂದು ಘಟನೆಯನ್ನು ಪ್ರಸ್ತಾಪಿಸಿ ಅವರ ಪ್ರಶಂಸೆಯನ್ನು ಮಾಡುತ್ತಿದ್ದರು. ಕೃಷ್ಣಾವಧಾನಿಗಳ ತೋಟವು ಕೇರಳಾಪುರದಿಂದ ಮೂರು ಮೈಲಿ ದೂರದ ಶೀಗುವಾಳು ಆಗ್ರದಲ್ಲಿ (ತೋಟಗಳ ಶ್ರೇಣಿಯನ್ನು 'ಆಗ್ರ' ಎನ್ನುವರು) ಇದ್ದಿತು. ಅಲ್ಲಿ ಕೇರಳಾಪುರದ ಇತರ ಕೆಲವು ಸಂಕೇತಿಗಳ ತೋಟಗಳೂ ಇದ್ದವು. ರಸ್ತೆಯ ಮೂಲಕ ಈ ತೋಟಗಳಿಗೆ ಮೂರು ಮೈಲಿ; ಒಳದಾರಿಯಲ್ಲಿ ಹೋದರೆ ಎರಡು ಮೈಲಿ ಆಗುತ್ತಿತ್ತು. ಶೀಗುವಾಳು ಗ್ರಾಮಕ್ಕೆ ಸಮೀಪವಾಗಿದ್ದುದರಿಂದ ಈ

ತೋಟಗಳಿಗೆ 'ಶೀಗುವಾಳು ಆಗ್ರ' ಎಂದು ಕರೆಯುತ್ತಿದ್ದರು. ಬಾಲ್ಯದಲ್ಲಿ ಅನೇಕ ಬಾರಿ ನಾನು ಈ ತೋಟಗಳಿಗೆ ಹೋಗಿ ಎಳನೀರು ಕುಡಿದಿದ್ದೇನೆ.

ನಮ್ಮ ಅಜ್ಜನವರ ತೋಟ ಈಗ ನಮ್ಮವರ ವಶದಲ್ಲಿಲ್ಲ. ನಮ್ಮ ಅಜ್ಜ ಸತ್ತ ಅಲ್ಪಕಾಲದಲ್ಲಿಯೇ ತೋಟವನ್ನು ಮಾರಬೇಕಾಗಿ ಬಂದಿತು. ನಾನು ಇತ್ತೀಚೆಗೆ, ಶೀಗುವಾಳು ತೋಟಕ್ಕೆ ಹೋದಾಗ, "ಇದೇ ನಿನ್ನ ಅಜ್ಜ ಕೃಷ್ಣಾವಧಾನಿಗಳ ತೋಟವಾಗಿದ್ದುದು" ಎಂದು ತೋರಿಸಿದರು. ಅಜ್ಜನನ್ನು ನೋಡುವ ಸೌಭಾಗ್ಯವಿಲ್ಲದೆ ಇದ್ದರೂ ನನ್ನ ಅಜ್ಜ ಅವರ ಜೀವಿತ ಕಾಲದಲ್ಲಿ ವ್ಯವಸಾಯ ಮಾಡಿದ ತೋಟವನ್ನು ನೋಡುವ ಅದೃಷ್ಟ ದೊರಕಿತು ನನಗೆ. ಅವರು ನೆಟ್ಟು ನೀರುಣಿಸಿ ಗೊಬ್ಬರ ಹಾಕಿ ಬೆಳಸಿದ ತೆಂಗಿನ ಮರಗಳೂ, ಅಡಕೆ ಮರಗಳೂ ಅವರ ಪ್ರತಿನಿಧಿಗಳೇ ಎಂಬಂತೆ ಕಾಣಿಸಿದುವು. ಅವುಗಳೊಡನೆ ನನ್ನ ಮೌನಸಂವಾದ ನಡೆಯಿತು ಎಂದು ಹೇಳಿದರೆ ನೀವು ನಂಬುತ್ತೀರಾ! ಅವರು ಹಾಕಿದ ವೀಳೆಯದೆಲೆ ಹಂಬು ಇದು ಇರಬಹುದು ಎಂದು ಒಂದೆರಡು ಚಿಗುರು ವೀಳೆಯದೆಲೆ ಕಿತ್ತು ಬಾಯಿಗೆ ಹಾಕಿಕೊಂಡು ಸವಿನೋಡಿದೆ.

ಅಜ್ಜನವರು ಬೆಳಗ್ಗೆ ಅಷ್ಟು ಹೊತ್ತಿಗೇ ಎದ್ದು ಕೇರಳಾಪುರದ ಮನೆಯಿಂದ ಹೊರಟು ಕೈಯಲ್ಲಿ ಒಂದು ಕುಡುಗೋಲನ್ನು ಹಿಡಿದುಕೊಂಡು ತಲೆಗೆ ಲಪ್ಪಟ್ಟೆ ಸುತ್ತಿ ಶೀಗುವಾಳು ತೋಟಕ್ಕೆ ನಡೆದುಕೊಂಡು ಹೋಗುತ್ತಿದ್ದರು. ಈಗಿನವರಂತೆ ತಿಂಡಿ ಕಾಫಿ ಇತ್ಯಾದಿಗಳ ಪದ್ಧತಿ ಆಗ ಇರಲಿಲ್ಲ. ಏನಿದ್ದರೂ ಕೆಲಸ ಮುಗಿಸಿಕೊಂಡು ಬಂದು ಸ್ನಾನ, ಸಂಧ್ಯಾವಂದನೆ ಜಪ ಮಾಡಿದ ಅನಂತರವೇ ಊಟ. ಕೃಷ್ಣಾವಧಾನಿಗಳು ತೋಟದಲ್ಲಿನ ಕೆಲಸಗಳನ್ನು ಮುಗಿಸಿ ಮಧ್ಯಾಹ್ನ ಹನ್ನೊಂದು ಹನ್ನೆರಡು ಗಂಟೆ ಹೊತ್ತಿಗೆ, ಮನೆಗೆ ಬೇಕಾದ ಸೋಗೆ, ಗೊದಮಟ್ಟೆ , ತೆಂಗಿನಕಾಯಿ, ಬಾಳೆಗೊನೆ ಕುಯ್ದಿದ್ದರೆ ಬಾಳೆಕಾಯಿ, ಪೂಜೆಗೆ ಹೂವು, ತುಳಸಿ ಎಲ್ಲವನ್ನೂ ಸಂಗ್ರಹಿಸಿಕೊಂಡು ದೊಡ್ಡಹೊರೆಮಾಡಿ, ಪಂಚೆ-ಕಚ್ಚೆಯನ್ನು ಮೇಲೆತ್ತಿ ಕಟ್ಟಿಕೊಂಡು, ತಲೆಯ ಮೇಲೆ ಹೊರೆ ಹೊತ್ತುಕೊಂಡು ಮನೆಗೆ ಬರುತ್ತಿದ್ದರು. ಬಂದ ಮೇಲೆ ನದಿ ಸ್ನಾನ ಇತ್ಯಾದಿ.

ಶೀಗುವಾಳು ಒಂದು ಕುಗ್ರಾಮ. ಅಲ್ಲಿ ಕೆಲವು ಜನ ರೈತರು, ಒಕ್ಕಲಿಗರು ಗೌರವದಿಂದ ವ್ಯವಸಾಯ ಮಾಡಿಕೊಂಡು ಜೀವಿಸುತ್ತಿದ್ದರು. ಕೆಲವು ಪುಂಡರೂ ಇದ್ದರು. ಅವರಲ್ಲಿ ಕೆಲವರು ಆಗಾಗ್ಗೆ ಈ ಐನೋರ ತೋಟಗಳಿಗೆ ಬಂದು ತೆಂಗಿನಕಾಯಿ, ವೀಳೆಯದೆಲೆ, ಬಾಳೆಗೊನೆ ಕದಿಯುತ್ತಿದ್ದರು. ಇಪ್ಪತ್ತು ಇಪ್ಪತ್ತುನಾಲ್ಕು ಗಂಟೆ ಕಾವಲಿರುವುದಕ್ಕಾಗುತ್ತದೆಯೇ ! ತೋಟದಿಂದ ಮನೆ ತುಂಬ ದೂರ. ಇದು ಕಳ್ಳರಿಗೆ ವರವಾಗಿ ಪರಿಣಮಿಸಿತ್ತು. ಇದಕ್ಕೆ ಏನು ಮಾಡುವುದು ಎಂದು ಅಜ್ಜ ಚಿಂತಿಸುತ್ತಿದ್ದರು. 'ಕೋತಿಗಳು ಬಂದು ಹಾವಳಿ ಮಾಡಿದರೆ ಹೋಗುತ್ತದಲ್ಲ, ಹಾಗೆಯೇ ಅಂದುಕೊಂಡರಾಯಿತು. ಋಣ ತೀರಿಸಬೇಕಲ್ಲ' ಎಂದುಕೊಂಡು ಸುಮ್ಮನಾಗುತ್ತಿದ್ದರು.

ಹೀಗಿರುವಾಗ ಒಂದು ದಿವಸ ತೋಟದಿಂದ ಹೊರೆ ಹೊತ್ತುಕೊಂಡು ಬರುತ್ತಿದ್ದಾರೆ. ಸುಮಾರು ಕಾಲುದೂರ ಬಂದಿದ್ದಾರೆ. ಆಗ ಒಬ್ಬ ಆಳು ಓಡಿ ಬಂದು, "ಅಯ್ನೋರೇ, ಬಡ್ಡೀಮಕ್ಳು- ಅದೇ ಕಳ್ಳರು- ತೋಟಕ್ಕೆ ನುಗ್ಗಿ ತೆಂಗಿನಕಾಯಿ ಕೆಡವುತ್ತಿದ್ದಾರೆ" ಎಂದು ಹೇಳಿದ. ಇವತ್ತು ಸಿಕ್ಕಿ ಬೀಳ್ತಾರೆ ಎಂದು ಹೇಳುತ್ತ ತಲೆ ಮೇಲೆ ಹೊರೆ ಇರುವ ಹಾಗೆಯೇ ಅಜ್ಜ ತೋಟದ ಕಡೆಗೆ ಧಾವಿಸಿದರು. ತೋಟದಲ್ಲಿ ಮರದ ಮೇಲೆ ಹತ್ತಿ ಕಾಯಿ ಕೀಳುತ್ತಿದ್ದ ಕಳ್ಳರು "ಅಯ್ನೋರು ಬಂದು ಬಿಟ್ರಲ್ಲೋ" ಎಂದು ಕೂಗುತ್ತ ಕೆಳಗಿಳಿಯ ತೊಡಗಿದರು. ಕಳ್ಳರು ಕೆಳಗಿಳಿಯುವ ಹೊತ್ತಿಗೆ ಅಜ್ಜ ಮರದ ಹತ್ತಿರಕ್ಕೆ ಬಂದುಬಿಟ್ಟಿದ್ದರು. ಅನಾಮತ್ತು ಆ ಕಳ್ಳರನ್ನು ಕಂಕುಳಲ್ಲಿ ಅಮುಕಿ ಹಿಡಿದುಕೊಂಡು ಊರಕಡೆ ಧಾವಿಸಿದರು. ಕಳ್ಳರು ಅಜ್ಜನ ಹಿಡಿತದಲ್ಲಿ ವಿಲಿವಿಲಿ ಒದ್ದಾಡುತ್ತ, "ಬುಟ್ಟುಬುಡಿ, ಇನ್ನು ತೋಟದತಾಕೆ ಬರಾಕಿಲ್ಲ" ಎಂದು ಅಂಗಲಾಚುತ್ತಿದ್ದರು. ಮೂರುಜನ ಕಳ್ಳರನ್ನೂ ಕಂಕುಳಲ್ಲಿ ಇರುಕಿಕೊಂಡೇ ಕೇರಳಾಪುರಕ್ಕೆ ಬಂದು, ಕೇರಳಾಪುರದ ಪಟೇಲನ ಮನೆಯ ಮುಂದುಗಡೆ ಎತ್ತಿಹಾಕಿದರು. ಅನಂತರ ಪಟೇಲನನ್ನು ಕರೆದು, ಕಳ್ಳರನ್ನು ಅವನಿಗೆ ಒಪ್ಪಿಸಿದರು. ಪಟೇಲ ಕಳ್ಳರನ್ನು, "ಕಳ್ಳಮುಂಡೇ ಮಕ್ಳ ! ಅಯ್ನೋರ ತೋಟದಲ್ಲಿ ಯಾಕೋ ಕದಿಯೋಕೆ ಹೋದ್ರಿ, ಇವತ್ತು ನಿಮ್ಮ ಪ್ರಾಣ ತೆಗೀದೆ ಕರಕಂಡು ಬಂದವ್ರೆ" ಎಂದು ಗದರಿಸಿದರು. ಕಳ್ಳರು, "ಇದೊಂದು ಸಲಕ್ಕೆ ಬುಟ್ಟುಬುಡಿ, ಇನ್ನುಮ್ಯಾಗೆ ಕಳ್ಳತನ ಮಾಡಾಕಿಲ್ಲ" ಎಂದು ಪಟೇಲರ ಕಾಲಿಗೆ ಬಿದ್ದರು. ಅಜ್ಜನವರು, "ಆ ಹುಳುಗಳನ್ನು ಬಿಟ್ಟುಬಿಡಿ, ಪಾಪ ಬದುಕಿಕೊಳ್ಳಲಿ" ಎಂದರು. ಬದುಕಿದೆಯಾ ಬಡಜೀವವೇ ಎಂದು ಅಲ್ಲಿಂದ ಕಳ್ಳರು ಕಂಬಿಕಿತ್ತರು.

ಕೃಷ್ಣಾವಧಾನಿಗಳು ಮತ್ತು ಅವರ ಪತ್ನಿ, ತಮ್ಮ ಮಕ್ಕಳು ಇನ್ನೂ ಚಿಕ್ಕವರಾಗಿದ್ದಾಗಲೇ ಇಹಲೋಕ ಯಾತ್ರೆಯನ್ನು ಮುಗಿಸಿದ ದುರಂತ ನಡೆದುಹೋಯಿತು. ಕೇರಳಾಪುರದ ಕೆಲವು ಕುಟುಂಬಗಳವರು ಹಾಗೂ ನೆರೆ ಊರಿನ ಅವರ ನಂಟರೇ ಮೊದಲಾದ ನಾಲ್ಕಾರು ಮನೆಗಳವರು ರಾಮೇಶ್ವರಕ್ಕೆ ಯಾತ್ರೆ

ಹೋಗಿದ್ದರು. ಯಾತ್ರೆ ಮುಗಿಸಿಕೊಂಡು ರೈಲಿನಲ್ಲಿ ವಾಪಸ್ಸು ಬರುತ್ತಿರುವಾಗ ಕೆಲವರಿಗೆ ಕಾಲರಾ ಮುತ್ತಿಗೆ ಹಾಕಿತು. ಬೆಂಗಳೂರಿಗೆ ಬಂದು ಸೇರುವುದಕ್ಕೆ ಮೊದಲೇ ತಮಿಳುನಾಡಿನ ಪ್ರದೇಶದಲ್ಲಿ ರೈಲಿನಲ್ಲಿಯೇ ನಾಲ್ಕೈದು ಜನ ಕೊನೆಯುಸಿರೆಳೆದರು. ಅವರಲ್ಲಿ ಕೃಷ್ಣಾವಧಾನಿಗಳು ಹಾಗೂ ಅವರ ಪತ್ನಿಯೂ ಸೇರಿದ್ದರು. ಇಂದು ನಮ್ಮ ಅಜ್ಜ ಸತ್ತರೆ, ಎರಡು ದಿನಗಳ ಅನಂತರ ಅಜ್ಜಿ ಸತ್ತರು. ಅಳಿದುಳಿದವರು ಪೆಚ್ಚು ಮುಖ ಹಾಕಿಕೊಂಡು ಹೆಣವನ್ನು ಸಾಗಿಸಿಕೊಂಡು ಊರ ಮುಂದೆ ನಿಂತರು. ಬಂಧುಗಳು ಅಪಾರ ಶೋಕದಿಂದ ಶವಸಂಸ್ಕಾರಗಳನ್ನು ನೆರವೇರಿಸಿದರು. ನಮ್ಮ ತಂದೆ ತಿಥಿ ಮಾಡುವಾಗ ಪ್ರತಿವರ್ಷ ಇಂದು ಅಜ್ಜನ ಶ್ರಾದ್ಧವನ್ನು ಮಾಡಿದರೆ ಎರಡು ದಿನಗಳಲ್ಲಿ ಅಜ್ಜಿಯ ತಿಥಿ ಮಾಡುತ್ತಿದ್ದರು. ಈ ವಿಷಯವನ್ನು ಕಂಡು 'ಏತಕ್ಕೆ ಹೀಗೆ ?' ಎಂದಾಗ ಈ ಸಂಗತಿಗಳನ್ನು ತಿಳಿಸಿದರು.

ಅಜ್ಜ ಅಜ್ಜಿ ಸತ್ತಾಗ ಮಕ್ಕಳು ಇನ್ನೂ ಪ್ರಾಪ್ತ ವಯಸ್ಕರಾಗಿರಲಿಲ್ಲ. ಕೃಷ್ಣಾವಧಾನಿಗಳಿಗೆ ಮೂರುಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ಮೊದಲನೆಯವರು ನಮ್ಮ ದೊಡ್ಡಪ್ಪ ವೆಂಕಟಕೃಷ್ಣಯ್ಯನವರು. ಅವರಿಗೆ ಆಗ ಹದಿನೈದು ಹದಿನಾರು ವರ್ಷವಾಗಿತ್ತು ; ಮದುವೆಯಾಗಿತ್ತು. ಎರಡನೆಯವರು ನಮ್ಮ ತಂದೆ ಶಾಮಣ್ಣನವರು. ಮೂರನೆಯವರು ಸಣ್ಣಮ್ಮ, ನಾಲ್ಕನೆಯವರು ನಮ್ಮ ಚಿಕ್ಕಪ್ಪ ಶ್ರೀನಿವಾಸಯ್ಯ, ಐದನೆಯವಳು ಮಗಳು ಅಮ್ಮಣ್ಣಿ. ಅಜ್ಜ ಅಜ್ಜಿಯವರು ಸತ್ತವರ್ಷ ಕನ್ಯಾದಾನ ಮಾಡಬೇಕೆಂದು ಹಿರಿಯರು ಹೇಳಿದುದರಿಂದ, ಸಣ್ಣಮ್ಮನನ್ನು ಸೋಮನಹಳ್ಳಿ ಕೃಷ್ಣಪ್ಪ ಎಂಬುವವರಿಗೆ ಕೊಟ್ಟು ಮದುವೆ ಮಾಡಿದರು. ಅಜ್ಜ ಅಜ್ಜಿಯರ ಅಂತಿಮ ಸಂಸ್ಕಾರಗಳು ಮತ್ತು ಅನಂತರದ ತಂಗಿಯ ಮದುವೆ ಖರ್ಚು ಎಲ್ಲ ಸೇರಿ ಹಣಕ್ಕಾಗಿ ತೋಟವನ್ನು ಮಾರಿಬಿಟ್ಟರು. ಇದಾದ ಕೆಲವು ವರ್ಷಗಳಲ್ಲಿ ಕೊನೆಯ ತಂಗಿಯ ಮದುವೆಯನ್ನೂ ಮಾಡಿದರು. ವರಾಹನಾಥನ ಕಲ್ಲಹಳ್ಳಿಯ ಪುಟ್ಟಯ್ಯ ಎಂಬುವರೊಡನೆ ಅಮ್ಮಣ್ಣಿನ ಮದುವೆ ನೆರವೇರಿಸಲಾಯಿತು. ಪುಟ್ಟಯ್ಯನವರು ಮುಂದೆ ಹೊಳೆನರಸೀಪುರದ ಬಳಿಯ ಎಲೆಚಾಗಳ್ಳಿಯಲ್ಲಿ ನೆಲಸಿದರು. ಅವರು ಯಕ್ಷಗಾನಕ್ಕೆ ಮದ್ದಳೆ ನುಡಿಸುತ್ತಿದ್ದರು. ಆದರೆ ನಾನು ನೋಡುವ ಕಾಲಕ್ಕೆ ಮದ್ದಳೆ ನುಡಿಸುವುದನ್ನು ಬಿಟ್ಟುಬಿಟ್ಟಿದ್ದರು.

ಆರ್ಥಿಕ ತೊಂದರೆಯಿಂದಾಗಿ ತೋಟ ಹೋಯಿತು. ಕೇರಳಾಪುರದಲ್ಲಿ ಕೃಷ್ಣಾವಧಾನಿಗಳ ಮಕ್ಕಳಿಗೆ ಜೀವಿಸಲು ಏನೂ ರಹ ಇರಲಿಲ್ಲ. ಆದುದರಿಂದ ಒಬ್ಬೊಬ್ಬರು ಒಂದೊಂದು ದಾರಿ ಹಿಡಿಯಬೇಕಾಯಿತು. ನನ್ನ ದೊಡ್ಡಪ್ಪನವರ ವಿಚಾರವನ್ನು ಮುಂದೆ ಹೇಳುತ್ತೇನೆ. ನಮ್ಮ ಚಿಕ್ಕಪ್ಪನವರಿಗೆ ಬಸವಾಪಟ್ಟಣದ 'ಕಾಲುವೆ ಬೀದಿ' ಕೇಶವಾವಧಾನಿಗಳ ಮಗಳನ್ನು ಕೊಟ್ಟು ಮದುವೆಯಾಯಿತು. ಕೇಶವಾವಧಾನಿಗಳು ಬಸವಾಪಟ್ಟಣಕ್ಕೆ ಅಳಿಯನನ್ನು ಕರೆಸಿಕೊಂಡು, ಮನೆ ಮಾಡಿಕೊಟ್ಟು, ಅಲ್ಲಿಯೇ ಜೀವಿಕೆಗೆ ಸೌಕರ್ಯ ಕಲ್ಪಿಸಿಕೊಟ್ಟರು.

೩. ನಮ್ಮ ತಂದೆ

ನಮ್ಮ ತಂದೆಯವರಿಗೆ ಲೋಯರ್ ಸೆಕೆಂಡರಿ ಪರೀಕ್ಷೆ ಯಾಗಿದ್ದಿತು. ಅವರು ಒಂದು ಗ್ರಾಂಟ್ ಇನ್ ಎಯ್ಡ್ (ಸರಕಾರದ ಸಹಾಯಧನದಿಂದ ನಡೆಯುತ್ತಿದ್ದ) ಶಾಲೆಯಲ್ಲಿ ತಿಂಗಳಿಗೆ ಏಳು ರೂಪಾಯಿ ಸಂಬಳಕ್ಕೆ ಸೇರಿಕೊಂಡರು. ಅನಂತರ ಸರಕಾರೀ ಶಾಲಾ ಉಪಾಧ್ಯಾಯರಾಗಿ ನೇಮಕಗೊಂಡು ಭೇರ್ಯದ ಶಾಲೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಈ ಸಮಯದಲ್ಲಿ ಇವರಿಗೆ ಅಗ್ರಹಾರದ ಜೋಯಿಸರ ಮನೆತನದಿಂದ ಹೆಣ್ಣನ್ನು ತಂದು ಮದುವೆ ನೆರವೇರಿಸಲಾಯಿತು. ನಮ್ಮ ತಾಯಿ ಕಾವೇರಿ, ತಂದೆ ತಾಯಿಯರನ್ನು ಕಳೆದುಕೊಂಡಿದ್ದರಂತೆ. ಆಗಿನ ಕಾಲದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ತಂದುಕೊಳ್ಳಲು, ಹೆಣ್ಣಿನ ಮನೆಯವರಿಗೆ ತೆರವನ್ನು ಸಲ್ಲಿಸಬೇಕಾಗಿತ್ತು. ಆದರೆ ತಂದೆತಾಯಿಯವರನ್ನು ಕಳೆದುಕೊಂಡಿದ್ದ ಕಾರಣದಿಂದ ತೆರವನ್ನು ತೆಗೆದುಕೊಳ್ಳದೆ ಮದುವೆಯನ್ನು ಮಾಡಿಕೊಟ್ಟರಂತೆ.

ಅಗ್ರಹಾರವು ರಾಮನಾಥಪುರದಿಂದ ಮೂರ್ನಾಲ್ಕು ಮೈಲಿಗಳ ದೂರದಲ್ಲಿದೆ. ರಾಮನಾಥಪುರದಿಂದ ಅರಕಲಗೂಡಿನ ರಸ್ತೆಯಲ್ಲಿ ಒಂದೂವರೆ ಮೈಲಿ ಹೋಗಿ ಮುಗಳಿ ಎಂಬಲ್ಲಿ ಬಲಕ್ಕೆ ತಿರುಗಿ ಪುನಃ ಒಂದೂವರೆ ಮೈಲಿ ಹೋದರೆ ಈ ಊರು ಸಿಕ್ಕುತ್ತದೆ. ಇಲ್ಲಿ ಎಂಟು ಹತ್ತು ಸಂಕೇತಿ ಮನೆಗಳಿವೆ. ಊರ ಬಾಗಿಲಲ್ಲಿ ಜೋಯಿಸರ ಮನೆ ಇದೆ. ಅಲ್ಲಿದ್ದ ಸುಬ್ಬಯ್ಯನವರು ಜ್ಯೋತಿಶ್ಶಾಸ್ತ್ರವನ್ನು ತಿಳಿದಿದ್ದರು. ಇವರ ಜ್ಯೌತಿಷದ ನಿಖರತೆ ನನಗೆ ಒಂದು ಸಲ ಪ್ರತ್ಯಕ್ಷ ಅನುಭವವಾಯಿತು. ನಾನು ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಇದ್ದಾಗ ಸುಮಾರು ೧೯೬೭ ರ

ಸಮಯ. ಆಗ ನಮ್ಮ ತಂದೆ ನಿಧನರಾಗಿದ್ದು ಅವರ ಕರ್ಮಗಳು ನಡೆಯುತ್ತಿದ್ದುವು. ಕರ್ಮಗಳೆಲ್ಲ ಮುಗಿದ ಮೇಲೆ ಊಟವಾದ ಬಳಿಕ ಕುಳಿತುಕೊಂಡು ಮಾತನಾಡುತ್ತಿದ್ದೆವು. ಆಗ ಇದ್ದಕ್ಕಿದ್ದ ಹಾಗೆ "ನಿನ್ನ ಜಾತಕ ಕೊಡು" ಎಂದರು. ಏತಕ್ಕೆ ಹೀಗೆ ಕೇಳುತ್ತಿದ್ದಾರೋ ನೋಡೋಣ ಎಂದು ಜಾತಕ ತಂದುಕೊಟ್ಟೆ; ನೋಡಿ ಲೆಕ್ಕ ಹಾಕುತ್ತ "ನಿನಗೆ ಐವತ್ತೆಂಟನೆಯ ವರ್ಷಕ್ಕೆ ನಿವೃತ್ತಿಯಾಗುತ್ತದೆ" ಎಂದು ಹೇಳಿದರು. ನಾನು ಆ ಹೊತ್ತಿಗೆ ಪ್ರಿನ್ಸಿಪಾಲರಾದ ಫಾದರ್ ಆಡಿಯೋ ಅವರನ್ನು ಕಂಡು ನನ್ನನ್ನು ಐವತ್ತೆಂಟಕ್ಕೆ ನಿವೃತ್ತಿಗೊಳಿಸುತ್ತೀರಾ, ಇಲ್ಲ ವಿಶ್ವವಿದ್ಯಾಲಯಕ್ಕೆ ಬರೆದು ಅರುವತ್ತು ಆಗುವವರೆಗೂ ಸೇವೆಯನ್ನು ವಿಸ್ತರಿಸುತ್ತೀರಾ ಎಂದು ಕೇಳಿದ್ದೆ. ಅದಕ್ಕೆ ಅವರು, "ನೀನು ಕಾಲೇಜಿನ ಆರಂಭದ ದಿವಸದಿಂದಲೂ ಇರುವವನು. ನಿನ್ನ ಸೇವೆಯನ್ನು ಮುಂದುವರೆಸುತ್ತೇವೆ" ಎಂದಿದ್ದರು. ಈ ವಿಚಾರವನ್ನು ತಿಳಿಸಿದಾಗ ಸುಬ್ಬಯ್ಯನವರು, "ಈಗ ಏನನ್ನೂ ಹೇಳಲು ಬರುವುದಿಲ್ಲ. ಸಂದರ್ಭ ಹಾಗೆ ಬರುತ್ತದೆ" ಎಂದಿದ್ದರು. ಹೇಗೋ ಏನೋ ಎಂದು ನಾನು ಸುಮ್ಮನಾಗಿದ್ದೆ. ನನ್ನ ಐವತ್ತೆಂಟನೆಯ ವರ್ಷ ತುಂಬುವುದಕ್ಕೆ ಇನ್ನೂ ಮೂರು ನಾಲ್ಕು ತಿಂಗಳಿತ್ತು. ಏಪ್ರಿಲ್ ಅಥವಾ ಮೇ ತಿಂಗಳಿರಬಹುದು. "ಐವತ್ತೆಂಟು ವರ್ಷ ಸೇವೆಸಲ್ಲಿಸಿದವರನ್ನೆಲ್ಲಾ ನಿವೃತ್ತಿಗೊಳಿಸತಕ್ಕದ್ದು" ಎಂದು ಸರಕಾರದಿಂದ ಆಜ್ಞೆ ಬಂದಿತು. ಹೀಗೆ ಸುಬ್ಬಯ್ಯನವರು ಹೇಳಿದ ಭವಿಷ್ಯ ಸತ್ಯವಾಗಿ ಪರಿಣಮಿಸಿತ್ತು.

ನಮ್ಮ ತಂದೆಯವರಿಗೆ ಎಡತೊರೆಗೆ ವರ್ಗವಾಯಿತು. ಆಗ ನಾನು ಪ್ರಾಯಃ ಮೂರು ನಾಲ್ಕು ವರ್ಷದವನಿರಬಹುದು. ಊರಿನ ಕೊನೆಯ ರಸ್ತೆಯಲ್ಲಿ ನಮ್ಮ ಮನೆ ಇದ್ದಿತು. ಅನಂತರ ಎಡತೊರೆಯಿಂದ ವರ್ಗವಾಗಿ ಕಾವೇರಿ ನದಿಯ ದಡದಲ್ಲಿರುವ ಹನಸೋಗೆಗೆ ಬಂದರು. ಅಲ್ಲಿಂದ ಅವರಿಗೆ ಹೆಗ್ಗಡದೇವನಕೋಟೆಗೆ ವರ್ಗವಾದ ಪ್ರಯುಕ್ತ, ಕೇರಳಾಪುರದ ತಮ್ಮ ಸ್ವಂತಮನೆಯಲ್ಲಿ ನಮ್ಮನ್ನು ಬಿಟ್ಟು ತಾವೊಬ್ಬರೇ ವರ್ಗವಾದ ಸ್ಥಳಕ್ಕೆ ಹೋದರು.

ಆಗಿನ ಕಾಲದಲ್ಲಿ ಶಾಲಾ ಉಪಾಧ್ಯಾಯರ ಜೀವನ ಅಷ್ಟೇನೂ ಸುಖಕರವಾಗಿರಲಿಲ್ಲ ಎನ್ನಬಹುದು. ಅವರಿಗೆ ತಿಂಗಳು ತಿಂಗಳಿಗೆ ಸಂಬಳ ಬರುತ್ತಿತ್ತು ಎನ್ನುವ ಸಮಾಧಾನವೊಂದೇ ಹೊರತು ಜೀವನಕ್ಕೆ ಆ ಸಂಬಳ ಎಷ್ಟರಮಟ್ಟಿಗೆ ಸಾಲುತ್ತಿತ್ತು ಎಂದು ಹೇಳುವುದು ಕಷ್ಟ. ಎಲ್ಲಿಗೆ ವರ್ಗ ಮಾಡಿದರೆ ಅಲ್ಲಿಗೆ ನಮ್ಮ ತಂದೆ ಎರಡು ಮಾತಿಲ್ಲದೆ ಹೋಗುತ್ತಿದ್ದರು. ಜಿಲ್ಲೆಯ ಶಿಕ್ಷಣಾಧಿಕಾರಿಗಳ ಬಳಿ ಹೋಗಿ 'ಅಲ್ಲಿಗೆ ನನ್ನನ್ನು ಹಾಕಿಕೊಡಿ, ಇಲ್ಲಿಗೆ ಹಾಕಿ ಕೊಡಿ' ಎಂದು ಕೇಳುತ್ತಿರಲಿಲ್ಲ. ಶಿಕ್ಷಣಾಧಿಕಾರಿಗಳ ಕಛೇರಿ ಹಾಸನದಲ್ಲಿತ್ತು. ಅಲ್ಲಿಯುವರೆಗೆ ದುಡ್ಡು ಖರ್ಚುಮಾಡಿಕೊಂಡು ಹೋಗಬೇಕಲ್ಲ ಎಂಬ ಯೋಚನೆ.

ಹೆಗ್ಗಡದೇವನಕೋಟೆಯಿಂದ ನಮ್ಮ ತಂದೆಯವರನ್ನು ಸಕಲೇಶಪುರ ತಾಲ್ಲೂಕಿನ ಎಸಳೂರು ಪೇಟೆಗೆ, ಅಲ್ಲಿಂದ ಕೆಂಚಮ್ಮನ ಹೊಸಕೋಟೆ ಹತ್ತಿರದ ಒಂದು ಹಳ್ಳಿಗೆ ವರ್ಗ ಮಾಡಿದರು. ಎಸಳೂರುಪೇಟೆ ಹಾಸನ ಜಿಲ್ಲೆಯಲ್ಲಿದೆ. ಈ ಊರುಗಳಲ್ಲಿ ನಮ್ಮ ತಂದೆ ಒಬ್ಬರೇ ಇದ್ದರು; ನಾವುಗಳು ಕೇರಳಾಪುರದಲ್ಲಿಯೇ ಇದ್ದೆವು. ನಮ್ಮ ತಂದೆ ರಜಾದಿನಗಳಲ್ಲಿ ಊರಿಗೆ ಬರುತ್ತಿದ್ದರು. ಮಲೆನಾಡಿನ ಹಳ್ಳಿಯಿಂದ ಬರಬೇಕಾದರೆ ಒಂದು ಹಳ್ಳವನ್ನು ದಾಟಿಕೊಂಡು ಬರಬೇಕಾಗುತ್ತಿತ್ತು. ಬೇಸಿಗೆಯ ಕಾಲದಲ್ಲಿ ಹಳ್ಳವನ್ನು ದಾಟುವುದು ಸುಲಭವಾಗಿತ್ತು. ಮಳೆಗಾಲದಲ್ಲಿ ಹಳ್ಳ ತುಂಬಿ ಹರಿಯುತ್ತಿರುವಾಗ ದಾಟಲು ಹಳ್ಳದ ದಂಡೆಯಲ್ಲಿರುವ ಉದ್ದವಾದ ಮರವನ್ನು ಬುಡದಲ್ಲಿ ಕಡಿದು ಉರುಳಿಸುತ್ತಿದ್ದರು. ಮರದ ಇನ್ನೊಂದು ತುದಿ ಆಚೆಯ ದಡವನ್ನು ದಾಟಿ ಮುಂದಕ್ಕೂ ಇರುತ್ತಿತ್ತು. ಸಾಮಾನ್ಯವಾಗಿ ದೊಡ್ಡ ಮರವನ್ನೇ ಹಾಗೆ ಉರುಳಿಸುತ್ತಿದ್ದುದು. ಇದೇ ಅಲ್ಲಿಯ ಜನಗಳಿಗೆ ಸೇತುವೆ. ಮಲೆನಾಡಿನ ಜನರು ಅಭ್ಯಾಸಬಲದಿಂದ ಮರದ ಮೇಲೆ ಅನಾಯಾಸವಾಗಿ ನಡೆದುಕೊಂಡು ಹೋಗಿಬಿಡುತ್ತಿದ್ದರು. ಮಲೆನಾಡಿಗೆ ಹೊಸಬರಾದ ನಮ್ಮ ತಂದೆಯವರಿಗೆ ಮೊದಮೊದಲು ಹೆದರಿಕೆಯೇ ಆಗುತ್ತಿತ್ತು. ಸ್ವಲ್ಪ ಕಾಲು ನಡುಗಿ ಜಾರಿದರೂ ಹಳ್ಳದಲ್ಲಿ ಹರಿಯುವ ನೀರಿಗೆ ಬಿದ್ದು ಪ್ರವಾಹದ ಸುಳಿಗೆ ಸಿಕ್ಕಬೇಕಾಗುತ್ತಿತ್ತು. ಹೇಗೋ ನಮ್ಮ ತಂದೆ ಅಂಥ ಮರಗಳ ಮೇಲೆ ಹಳ್ಳಗಳನ್ನು ದಾಟುವುದನ್ನು ಅಭ್ಯಾಸ ಮಾಡಿಕೊಂಡರು.

ಕೇರಳಾಪುರಕ್ಕೆ ನಮ್ಮ ತಂದೆ ಬರುತ್ತಾರೆ ಎಂದರೆ ಬಾಲಕನಾದ ನನಗೆ ಖುಷಿ, ಬೆಳಗ್ಗೆ ಕಾಫಿ ತಿಂಡಿ ದೊರಕುತ್ತದೆ ಎಂದು. ನಮ್ಮ ತಂದೆ ಇಲ್ಲದಿದ್ದಾಗ- ಹಿಂದಿನ ರಾತ್ರಿ ಮಾಡಿದ ಅನ್ನ, ಸಾರು, ಮೊಸರನ್ನು ಬೆಳಗ್ಗೆ ಕೊಡುತ್ತಿದ್ದರು. ಕೇರಳಾಪುರದ ಸಂಕೇತಿಗಳ ಎಲ್ಲ ಮನೆಗಳಲ್ಲೂ ಇದೇ ಅಭ್ಯಾಸ. ಕೆಲಸ ಮಾಡುವ ಯುವಕರು ಮತ್ತು ಮದುವೆಯಾಗಿ ಇನ್ನೂ ಹೆಚ್ಚು ವರ್ಷಗಳಾಗದಿರುವವರು -ಇವರೆಲ್ಲ ಹಿಂದಿನ ದಿನದ ಸಾರು-ಅನ್ನ, ಮೊಸರನ್ನ ತಿಂದುಕೊಂಡು ಕೆಲಸಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ಮಡಕೆಯಲ್ಲಿ ಹೆಪ್ಪು ಹಾಕಿದ ಮೊಸರನ್ನು ಪಟ್ಟಣಗಳಲ್ಲಿ ಕನಸಿನಲ್ಲಿಯೂ ಕಾಣುವಂತಿಲ್ಲ. ನಮ್ಮ ತಂದೆಯವರನ್ನು ಅನಂತರ ಮೈಸೂರಿಗೆ ಅಪ್ಪರ್ ಸೆಕೆಂಡರಿ ಟ್ರೈನಿಂಗಿಗೆ ಹಾಕಿದರು. ಆ ಮೇಲೆ ಇವರು ಶ್ರವಣಬೆಳಗೊಳ, ಶಾಂತಿಗ್ರಾಮ, ಹಾರನಹಳ್ಳಿ, ಅರಕಲಗೂಡು,

ಗೊರೂರು, ಹೊಳೆನರಸೀಪುರಗಳಲ್ಲಿ ಸರಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಇವರಿಗೆ ನಿವೃತ್ತರಾದಾಗ ಐವತ್ತು ರೂಪಾಯಿ ಸಂಬಳ ದೊರೆಯುತ್ತಿತ್ತು. ನಿವೃತ್ತಿಯಾದುದು ೧೯೪೭ನೆಯ ಇಸವಿ ಇರಬಹುದು. ಆಗ ನಾನು ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಅಧ್ಯಾಪಕನಾಗಿ ಮೈಸೂರಿನಲ್ಲಿದ್ದೆ. ಅಲ್ಲಿಂದ ಕೊನೆಯವರೆಗೂ ಅವರು ನನ್ನಲ್ಲಿಯೇ ಇದ್ದರು. ನಮ್ಮ ತಾಯಿ ಮಾತ್ರ ಕಿರಿಯ ಮಗನಾದ ಕೇಶವಮೂರ್ತಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದರೂ, ಕೊನೆಯವರೆಗೂ ನನ್ನಲ್ಲಿಯೇ ಇದ್ದರು.

ಆ ದಿನಗಳಲ್ಲಿ ಪ್ರೈಮರಿ ಹಾಗೂ ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರ ಜೀವನ ಅತಿಕಷ್ಟಕರವಾದುದಾಗಿತ್ತು. ಎಂ.ಆರ್. ಶ್ರೀನಿವಾಸಮೂರ್ತಿಯವರು ರಚಿಸಿರುವ **ರಂಗಣ್ಣನ ಕನಸಿನ ದಿನಗಳು** ಎಂಬ ಕೃತಿಯಲ್ಲಿ ಶಾಲಾ ಉಪಾಧ್ಯಾಯರ ಆಗಿನ ಸ್ಥಿತಿಗತಿಗಳ ವಿನೋದ ಹಾಗೂ ಗಂಭೀರ ಸ್ವರೂಪಗಳೆರಡನ್ನೂ ಕಾಣಬಹುದು.

ಬರುವ ಸಂಬಳದಲ್ಲಿ ತಿಂಗಳಿನ ಜೀವನ ಸಾಗಿಸಬೇಕು. ಏನೇ ಹೆಚ್ಚು ಖರ್ಚು ಆದರೂ, ನೆಂಟರು ಯಾರಾದರೂ ಬಂದು ನಾಲ್ಕು ದಿನಗಳಿದ್ದರೂ, ಖರ್ಚನ್ನು ಹೊಂದಿಸಲು ಕಷ್ಟಪಡಬೇಕಾಗುತ್ತಿತ್ತು. ನನಗೆ ತಿಳಿದ ಒಬ್ಬರು ಉಪಾಧ್ಯಾಯರು ತಿಂಗಳ ಸಂಬಳ ಬಂದೊಡನೆ ಆ ತಿಂಗಳಿನಲ್ಲಿ ಅಕ್ಕಿಗೆಷ್ಟು, ಹಾಲಿಗೆಷ್ಟು, ಬೇಳೆಗೆಷ್ಟು ಎಂದೆಲ್ಲ ವಿಂಗಡಿಸಿ, ಅದೇ ಹೆಸರಿನ ಚೀಟಿಯನ್ನು ಅಂಟಿಸಿದ ಚೀಲಗಳಿಗೆ ಹಂಚಿಬಿಡುತ್ತಿದ್ದರು. ಏನಾದರೂ ಹೆಚ್ಚು ಖರ್ಚಾದರೆ ಒಂದುಬಾರಿ ಉಪವಾಸದ ಮೂಲಕವೋ, ಅಥವಾ ಯಾವುದಾದರೂ ಪದಾರ್ಥವನ್ನು ತ್ಯಜಿಸುವುದರ ಮೂಲಕವೋ ಕೊರತೆಯನ್ನು ತುಂಬುತ್ತಿದ್ದರು.

ನಮ್ಮ ತಂದೆಯವರು ಕಷ್ಟವಾಣಿ. ಹಣಕೊಟ್ಟೇ ಎಲ್ಲವನ್ನೂ ಕೊಂಡುಕೊಳ್ಳಲು ಕಷ್ಟವಾಗುತ್ತಿತ್ತು. ಸ್ವಂತಶ್ರಮದಿಂದ ಕೆಲವು ವಸ್ತುಗಳನ್ನು ಹೊಂದಿಸಿಕೊಳ್ಳುತ್ತಿದ್ದರು. ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು. ಮನೆಗೆ ಸೌದೆಯನ್ನು ಕೊಂಡುಕೊಂಡರೆ ಹೆಚ್ಚು ವೆಚ್ಚವಾಗುತ್ತದೆ. ಆದ್ದರಿಂದ ಯಾರದಾದರೂ ಮರ ಇದ್ದರೆ ಅವರು ಮರವನ್ನು ಮಾರುತ್ತಾರೆಯೇ ವಿಚಾರಿಸಿ ಆ ಮರವನ್ನು ಕೊಂಡುಕೊಳ್ಳುತ್ತಿದ್ದರು. ಆಳುಗಳ ಸಹಾಯವಿಲ್ಲದೆ ತಾವೇ ಮರವನ್ನು ಸ್ವಲ್ಪಸ್ವಲ್ಪವಾಗಿ ಕತ್ತರಿಸಿ ಮನೆಗೆ ತಂದು ಹಾಕುತ್ತಿದ್ದರು. ದೊಡ್ಡದೊಡ್ಡ ಕೊರಡುಗಳನ್ನು ಅಥವಾ ಕತ್ತರಿಸಿದ ದಿಮ್ಮಿಗಳನ್ನು ಯಾರದಾದರೂ ಕೃಪೆಯಿಂದ ಗಾಡಿಯಲ್ಲಿ ಹಾಕಿಕೊಂಡು ಬಂದು ಮನೆ ಬಾಗಿಲಿನಲ್ಲಿ ಇಳಿಸುತ್ತಿದ್ದರು. ಬೆಳಗ್ಗೆ ಕೊಡಲಿ ತೆಗೆದುಕೊಂಡು ಮರದ ಸ್ವಲ್ಪ ಭಾಗವನ್ನು ಒಡೆದು ಸೌದೆಯನ್ನು ತಂದು ಮನೆಯಲ್ಲಿಡುತ್ತಿದ್ದರು. ಆರು ತಿಂಗಳು ಅಥವಾ ಒಂದು ವರ್ಷಕ್ಕಾಗುವಷ್ಟು ಸೌದೆಯ ಏರ್ಪಾಡು ಹಾಗೆ ಆಗುತ್ತಿತ್ತು. ಒಂದು ಸಲ ಒಬ್ಬರು ಮಹನೀಯರು ಒಂದು ದೊಡ್ಡಕೊಂಟನ್ನು (ಮರದ ಒಣಗಿದ ದಿಮ್ಮಿ) ತೋರಿಸಿ 'ಮೇಷ್ಟ್ರೇ, ಇದನ್ನು ಒಡೆಸಿಕೊಂಡು ಸೌದೆ ಮಾಡಿಕೊಳ್ಳಿ, ನೀವು ಏನೂ ಕೊಡಬೇಡಿ' ಎಂದರು. ನಮ್ಮ ತಂದೆ ಆ ಕಗ್ಗಂಟಾದ ಕೊರಡನ್ನು ದಿನಾ ಒಂದಷ್ಟು ಸೀಳಿ ಆ ದಿನಕ್ಕಾಗುವಷ್ಟು ಸೌದೆ ತರುತ್ತಿದ್ದರು. ಹೀಗೆ ತಿಂಗಳುಗಟ್ಟಲೆ ಸ್ವಲ್ಪಸ್ವಲ್ಪವಾಗಿ ಚಕ್ಕೆ ತೆಗೆಯುತ್ತಿದ್ದರು.

ಅವರು ಶಾಲೆಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದರು. ಬಹಳ ಪ್ರಾಮಾಣಿಕವಾಗಿ ಪಾಠ ಹೇಳಿಕೊಡುತ್ತಿದ್ದರು. ಆಗ 'ಮನೆ ಪಾಠ' ಎಂಬ ಹೆಸರು ಇರಲಿಲ್ಲ. ಯಾವನಾದರೂ ಹುಡುಗ "ಮೇಷ್ಟ್ರೇ, ಗಣಿತ ಅರ್ಥವಾಗಲಿಲ್ಲ, ಈ ಪದ್ಯ ಅರ್ಥವಾಗಲಿಲ್ಲ" ಎಂದು ಬಂದು ಕೇಳಿದರೆ ಅದನ್ನು ತಾಳ್ಮೆಯಿಂದ ಹೇಳಿಕೊಟ್ಟು ಕಳುಹಿಸುತ್ತಿದ್ದರು.

ಅವರು ನಿವೃತ್ತಿಹೊಂದಿ ಮೈಸೂರಿಗೆ ಬಂದ ಮೇಲೆ ನರಸಿಂಹಾಚಾರ್ ಎನ್ನುವ ನನ್ನ ಗೆಳೆಯ ಪ್ರಾರಂಭಿಸಿದ 'ಮಾದರಿ ಶಾಲೆ' ಎಂಬ ಸ್ಕೂಲಿನಲ್ಲಿ ಹತ್ತಾರು ವರ್ಷಗಳ ಕಾಲ ಪಾಠ ಹೇಳಿದರು. ಹಳ್ಳಿಯಂತೆ ಪಟ್ಟಣದಲ್ಲೂ ಒಳ್ಳೆಯ ಹೆಸರನ್ನು ಗಳಿಸಿದರು.

ನಮ್ಮ ತಂದೆ ರಾಮಾಯಣ, ಮಹಾಭಾರತ ಮೊದಲಾದ ಕಾವ್ಯಗಳನ್ನು ವಾಚನ ಮಾಡುವುದರಲ್ಲಿ ಅಭಿರುಚಿಯನ್ನು ಇಟ್ಟುಕೊಂಡಿದ್ದರು. ಆಗಾಗ್ಗೆ ಶಾಲೆಯಲ್ಲಾಗಲಿ, ಯಾವುದಾದರೂ ಮನೆಯಲ್ಲಾಗಲಿ ಕಾವ್ಯವಾಚನ ವ್ಯಾಖ್ಯಾನ ಮಾಡುತ್ತಿದ್ದರು. ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಕವಿತೆಗಳನ್ನು ರಚನೆ ಮಾಡಿ ಓದುತ್ತಿದ್ದರು. ಶ್ರವಣಬೆಳಗೊಳದಲ್ಲಿದ್ದಾಗ ಅಲ್ಲಿನ ಮಠದ ಸ್ವಾಮಿಗಳ ಎದುರಿಗೆ ಕೆಲವು ದಿವಸಗಳ ಕಾಲ ಕಾವ್ಯವಾಚನ ಮಾಡಿದರು ಮತ್ತು ಕೊನೆಯ ದಿವಸ ಸ್ವಾಮಿಗಳ ಬಗ್ಗೆ ಕವಿತೆಯನ್ನು ಕಟ್ಟಿ ವಾಚಿಸಿ ಅವರಿಂದ ಬಹುಮಾನಿತರಾಗಿದ್ದರು. ಇಡೀ ಜೀವಮಾನ ದುಡಿಯುತ್ತಲೇ ಇದ್ದು, ಹಲವು ರೀತಿಯಲ್ಲಿ ನಮಗೆ ಮಾರ್ಗದರ್ಶಕರಾಗಿ, ಎಪ್ಪತ್ತೆಂಟು ವರ್ಷಗಳ ಕಾಲ ಆರೋಗ್ಯವಾಗಿ ದೃಢಕಾಯರಾಗಿ ಬಾಳಿ ಬದುಕಿದರು ನಮ್ಮ ತಂದೆ.

೪. ಚಿಕ್ಕಪ್ಪನವರ ಮೇಲೆ ದೆವ್ವ*

ನಮ್ಮ ಅಜ್ಜ ಕೃಷ್ಣಾವಧಾನಿಗಳು ಬದುಕಿದ್ದಾಗ ನಮ್ಮ ಮನೆಯಲ್ಲಿ ನಡೆದ ಒಂದು ಅಲೌಕಿಕ ಘಟನೆಯನ್ನು ನಮ್ಮ ತಂದೆ ನನಗೆ ಹೇಳಿದ್ದರು. ಅವರಿಗೆ ಆದ ವಿಶಿಷ್ಟ ಅನುಭವ ಅದು. ಮಾನವಾತೀತ ರೂಪ ಹೊಂದಿದ ದೆವ್ವಗಳು ಮನುಷ್ಯರ ಮೇಲೆ ಬರುತ್ತವೆಂಬ ನಂಬಿಕೆ ಹಲವರಲ್ಲಿದೆ. ಆದರೆ ವೈಜ್ಞಾನಿಕವಾಗಿ ಇದನ್ನು ನಂಬುವುದಿಲ್ಲ. ಆದರೂ ಕೆಲವೊಂದು ಘಟನೆಗಳಿಂದಲೂ ಹಲವರ ಅನುಭವಗಳಿಂದಲೂ ಮಾನವರೂಪಿಗಳಲ್ಲದ ಶಕ್ತಿಗಳು ಇವೆಯೆಂಬುದರಲ್ಲಿ ಮತ್ತು ಅವುಗಳನ್ನು ದೆವ್ವಗಳೆಂದು ಕರೆಯುತ್ತಾರೆಂಬುದರಲ್ಲಿ ಸತ್ಯವಿದೆ ಎಂದು ನಂಬಬೇಕಾಗುತ್ತದೆ. ಇದಕ್ಕೆ ನಮ್ಮ ಕುಟುಂಬದಲ್ಲಿಯೇ ನಡೆದ ಒಂದು ಘಟನೆಗೆ ನಮ್ಮ ತಂದೆಯವರು ಪ್ರತ್ಯಕ್ಷ ಸಾಕ್ಷಿಯಾಗಿದ್ದರು ಎಂಬುದು ಗಮನಾರ್ಹ.

ತಲೆತಲಾಂತರದಿಂದ ವೇದಶಾಸ್ತ್ರಾದಿಗಳ ಅಧ್ಯಯನ, ಅಧ್ಯಾಪನ, ಜಪತಪಾದಿಗಳ ಆಚರಣೆಯಲ್ಲಿ ಪೂರ್ಣನಂಬಿಕೆಯಿಂದ ಜೀವನ ನಡೆಸುತ್ತಿದ್ದ ಶುದ್ಧ ಜೀವಿಗಳ ಜೀವನದಲ್ಲಿ ಭೂತಪ್ರೇತಾದಿ ಪಿಶಾಚಿಗಳಿಗೆ ಸ್ಥಾನವಿಲ್ಲೆಂಬುದು ನಂಬಿಕೆಯಾಗಿತ್ತು. ಆದರೆ ನಮ್ಮ ಅಜ್ಜ ಕೃಷ್ಣಾವಧಾನಿಗಳ ಮನೆಯಲ್ಲಿ ದೆವ್ವ ಕಾಣಿಸಿಕೊಂಡಿತೆಂದರೆ ಇದು ಆಶ್ಚರ್ಯಕರ ಸಂಗತಿಯಾಗದೆ ಮತ್ತೇನಾದೀತು?

ಮನೆಯಲ್ಲಿ ನಮ್ಮ ಅಜ್ಜ, ಅಜ್ಜಿ, ಮಕ್ಕಳು ಮತ್ತು ಒಂದಿಬ್ಬರು ಸಂಬಂಧಿಗಳು ಇದ್ದರು. ಬಾಲಕರಾಗಿದ್ದ ನನ್ನ ಖಾಸಾ ಚಿಕ್ಕಪ್ಪ ಶ್ರೀನಿವಾಸಯ್ಯ ಒಂದು ದಿನ ಇದ್ದಕ್ಕಿದ್ದ ಹಾಗೆ ಮಂಕಾಗಿ ಕುಳಿತುಬಿಟ್ಟರಂತೆ. ತನ್ನ ದೈನಂದಿನ ಚಟುವಟಿಕೆಗಳಲ್ಲಿ ತೊಡಗಲಿಲ್ಲ. ತನ್ನ ಕೆಲಸಕಾರ್ಯಗಳಿಗೂ ಹೋಗಲಿಲ್ಲ. ಏನೋ ಆಲಸ್ಯವಿರಬಹುದು ಎಂದು ಭಾವಿಸಿದ ಮನೆಯವರು ಇದಕ್ಕೆ ಗಮನ ಕೊಡಲಿಲ್ಲ. ಇವನ ಮಂಕುತನ ಮುಂದುವರೆಯುತ್ತ ಹೋದಾಗ ಮನೆಯ ಹೆಂಗಸರಿಗೆ ಚಿಂತೆಯಾಯಿತು. 'ಇವನಿಗೆ ದೇಹಾಲಸ್ಯವಾಗಿರಬೇಕು' ಎಂದು ಪಂಡಿತರನ್ನು ಕರೆದು ತೋರಿಸಿದರು. ಪಂಡಿತರ ಮುಖವನ್ನು ದುರುಗುಟ್ಟಿಕೊಂಡು ನೋಡುತ್ತ ಚಿಕ್ಕಪ್ಪ, "ನನಗೇನೂ ಆಗಿಲ್ಲ, ನನಗೆ ಯಾವ ಔಷಧಿಯೂ ಬೇಕಾಗಿಲ್ಲ" ಎಂದರು. ಅವರ ಧ್ವನಿ ಎಂದಿನಂತಿರಲಿಲ್ಲ. ಪಂಡಿತರು ಅವನ ನಾಡಿ ಪರೀಕ್ಷಿಸಿದರು. ರೆಪ್ಪೆ ಬಿಡಿಸಿನೋಡಿದರು. ಒಂದು ನಿಮಿಷ ಹುಡುಗನನ್ನು ದೃಷ್ಟಿಸಿ ನೋಡಿದರು. ಅನಂತರ ಪಂಡಿತರು ಹೊರಕ್ಕೆ ಬಂದು, "ಇವನ ಮುಖಚರ್ಯೆಯನ್ನು ನೋಡಿದರೆ ಮೈಮೇಲೆ ಯಾವುದೋ ಭೂತ ಅಥವಾ ಗಾಳಿ ಬಂದಂತೆ ಕಾಣುತ್ತದೆ. ಶಾಸ್ತ್ರಿಗಳನ್ನು ಕಂಡು ಪ್ರಶ್ನೆ ಮಾಡಿ" ಎಂದರು.

ಪಂಡಿತರ ಮಾತನ್ನು ಕೇಳಿದ ಮನೆ ಹೆಂಗಸರಿಗೆ ಚಿಂತೆಯಾಯಿತು. ವೇದಾಧ್ಯಯನಸಂಪನ್ನರಾದ, ನಿಷ್ಠರಾದ, ಸಾತ್ವಿಕರಿಗೆ ಇವೆಂಥ ಪರೀಕ್ಷೆ ಎಂದುಕೊಂಡು ಶಾಸ್ತ್ರಿಗಳ ಮನೆಗೆ ಹೋಗಿ ಅವರನ್ನು ಕಂಡು, "ಶಾಸ್ತ್ರಿಗಳೇ, ನಮ್ಮದೊಂದು ಪ್ರಶ್ನೆ" ಎಂದರು. ಶಾಸ್ತ್ರಿಗಳು ಸಮಯವನ್ನು ನೋಡಿ ಲೆಕ್ಕಾಚಾರ ಹಾಕಿದರು. "ನಿಮ್ಮ ಮನೆಯಲ್ಲಿ ಒಬ್ಬರ ಬಗ್ಗೆ ನಿಮಗೆ ಆತಂಕವಾಗಿದೆ. ಭೂತಶಂಕೆ ಕಾಡುತ್ತಿದೆ" ಎಂದರು. "ಯಾರೋ ನಿಮ್ಮ ಸಮೀಪದ ಬಂಧುಗಳಿಗೆ ಅಪಮೃತ್ಯು ಸಂಭವಿಸಿ ಅವರು ನಿಮ್ಮ ಹುಡುಗನ ಮೇಲೆ ಬಂದಿರಬಹುದು" ಎಂದು ಶಾಸ್ತ್ರಿಗಳು ಅಭಿಪ್ರಾಯಪಟ್ಟರು. ಇವರು, ತಮ್ಮ ಬಂಧುಗಳಲ್ಲಿ ಈಚೆಗೆ ಯಾರೂ ಸತ್ತಿಲ್ಲವಲ್ಲ ಎಂದು ಹಾಗೇ ಯೋಚಿಸಿದರು. ಈಗ್ಯೆ ಕೆಲವು ತಿಂಗಳಲ್ಲಿ ಕಟ್ಟೇಪುರದಲ್ಲಿ ದೊರೆ ಎಂಬುವವರು ಹೊಳೆ ಹಾರಿ ಸತ್ತ ವಿಷಯ ನೆನಪಿಸಿಕೊಂಡು 'ನಮಗೂ ಅವರಿಗೂ ಯಾವ ವ್ಯವಹಾರವೂ ಇಲ್ಲ, ವಿವಾದವೂ ಇಲ್ಲ; ಅವರು ಯಾತಕ್ಕೆ ದೆವ್ವವಾಗುತ್ತಾರೆ?' ಎಂದು ಯೋಚಿಸಿದರು. ಅವರು ಮನೆಯಲ್ಲಿ ಏನೋ ಜಗಳವಾಗಿ ರಾಮನಾಥಪುರಕ್ಕೆ ಬಂದು ಹೊಳೆಹಾರಿ ಸತ್ತಿದ್ದರು.

ಹೆದರಿಕೊಂಡೇ ಮನೆಗೆ ಬಂದ ಹೆಂಗಸರು ಹುಡುಗನ ಸುತ್ತ ಕುಳಿತು, "ನೀನು ಯಾರು? ನಮ್ಮ ಚಿನ್ನನ ಮೇಲೆ ಏತಕ್ಕೆ ಬಂದೆ? ನಿನಗೇನು ಬೇಕು ಹೇಳು?" ಎಂದು ಒಬ್ಬೊಬ್ಬರೂ ಪ್ರಶ್ನೆ ಹಾಕಲಾರಂಭಿಸಿದರು. ಹೆಂಗಸರು ಏನು ಕೇಳಿದರೂ ಹುಡುಗ ತುಟಿಪಿಟಕ್ಕೆನ್ನಲಿಲ್ಲ. ಮಟಮಟ ಮಧ್ಯಾಹ್ನ. ಕೃಷ್ಣಾವಧಾನಿಗಳು ತೋಟದಿಂದ ಹೊರೆಯನ್ನು ಹೊತ್ತುಕೊಂಡು ಉಸ್ಸಪ್ಪ ಎಂದು ಮನೆಗೆ ಬಂದರು. ಅವರು ಹೊರೆಯನ್ನು ಇಳಿಸಿ ಮುಖ

* ಸಂಕೇತಿ ಭಾಷೆಯಲ್ಲಿ ದೆವ್ವಕ್ಕೆ 'ದೈವ' ಎಂದೂ ಪ್ರಯೋಗ ಉಂಟು. ಲೇಖಕರು ಅದನ್ನೇ ಬಳಸಿದ್ದರು. ಕನ್ನಡ ಓದುಗರಿಗೆ ಗೊಂದಲ ಆಗದಿರಲೆಂದು 'ದೆವ್ವ' ಎಂಬ ಪದವನ್ನೇ ಇಲ್ಲಿ ಇಟ್ಟುಕೊಳ್ಳಲಾಗಿದೆ.

ಒರೆಸಿಕೊಳ್ಳುತ್ತ ಒಳಕ್ಕೆ ಬಂದರು. ಆಗ ಹೆಂಗಸರು, ನಡೆದ ವಿಷಯವನ್ನು ತಿಳಿಸಿದರು.

ಭೋಜನವಾದ ಮೇಲೆ ಶಾಸ್ತ್ರಿಗಳನ್ನು ಕರೆಸಿ ಕೃಷ್ಣಾವಧಾನಿಗಳು ಅವರೊಡನೆ ಸಮಾಲೋಚನೆ ನಡೆಸಿದರು. ಇಬ್ಬರೂ ಕಂಬ ಒರಗಿ ಕುಳಿತಿದ್ದ ಹುಡುಗನ ಬಳಿಗೆ ಹೋದರು. "ನೀನು ಯಾರು, ಚಿನ್ನನ ಮೇಲೆ ಏಕೆ ಬಂದಿದ್ದೀಯಾ?" ಎಂದು ಪ್ರಶ್ನಿಸಿದರು. ಹುಡುಗ ಮಾತನಾಡಲಿಲ್ಲ. ಆಗ ಕೃಷ್ಣಾವಧಾನಿಗಳು, "ಏನು ಮಾಡುವುದು?" ಎಂದು ಶಾಸ್ತ್ರಿಗಳನ್ನು ಕೇಳಿದಾಗ, "ಪಕ್ಕದ ಮನೆ ರಾಮು ಚಿನ್ನನ ಪರಮಾಪ್ತ ಸ್ನೇಹಿತ, ಅವನಿಗೆ ಹೇಳದೆ ಇರುವುದಿಲ್ಲ" ಎಂದರು. ಶಾಸ್ತ್ರಿಗಳು ರಾಮುವನ್ನು ಕರೆದುಕೊಂಡು ಬಂದರು. ರಾಮು ತಾನೊಬ್ಬನೇ ಹೋಗಿ ಪ್ರೀತಿಯಿಂದ ಕೇಳಿದಾಗ ಹುಡುಗ ಕಣ್ಣೀರು ಹಾಕುತ್ತ ಕುಳಿತ. "ನಾನು ಕಟ್ವೇಪುರದ ದೊರೆ. ನನಗೆ ಏನಾಯಿತು, ನನ್ನ ಸ್ಥಿತಿಗೆ ಕಾರಣವೇನು ಎಂದು ಕೇಳಬೇಡ. ನನ್ನ ಹಣೆಯ ಬರಹ" ಎಂದಿತು ಚಿನ್ನನ ಮೇಲೇರಿದ್ದ ದೆವ್ವ. "ಏನು ಮಾಡಿದರೆ ನೀನು ಹೋಗುತ್ತೀಯೆ? ನಿನ್ನ ಕಷ್ಟ ಏನು ಹೇಳು" ಎಂದು ರಾಮು ಕೇಳಿದ. ಅದಕ್ಕೆ ಚಿನ್ನನ ಮೇಲಿನ ದೆವ್ವ, "ಆತ್ಮಹತ್ಯೆ ಮಾಡಿಕೊಂಡು ತಪ್ಪು ಮಾಡಿದೆ. ಈಗ ನನಗೆ ಈ ದೆವ್ವದ ಜನ್ಮ ಬಂದಿದೆ. ಇದರಿಂದ ಮುಕ್ತಿ ಬೇಕು ನನಗೆ" ಎಂದಿತು. ರಾಮು "ಏನು ಮಾಡಬೇಕು?" ಎಂದು ಕೇಳಿದ. ದೆವ್ವ, "ನನ್ನ ವಿಮೋಚನೆ ಆಗಬೇಕಾದರೆ ಇಪ್ಪತ್ತೊಂದು ದಿವಸ ಸೂರ್ಯ ನಮಸ್ಕಾರ ಮಾಡಿಸಿ, ಕೊನೆಯ ದಿವಸ ಬ್ರಾಹ್ಮಣಸಂತರ್ಪಣೆ ಮಾಡಿಸಲಿ; ನಾನು ಹೊರಟುಹೋಗುತ್ತೇನೆ" ಎಂದಿತು.

ರಾಮು ಕೃಷ್ಣಾವಧಾನಿಗಳಿಗೂ, ಶಾಸ್ತ್ರಿಗಳಿಗೂ ವಿಷಯವನ್ನು ತಿಳಿಸಿದ. "ಇದನ್ನು ನಮ್ಮ ಕೈಲಿ ಹೇಳಿದ್ದರೆ ಆಗುತ್ತಿರಲಿಲ್ಲವೆ! ಒಳ್ಳೆಯ ಕೆಲಸ ಮಾಡಿಸುವುದಕ್ಕೆ ನಮಗೆ ಕಷ್ಟವೇ? ಎಷ್ಟೊಂದು ಪೂಜೆ ಪುನಸ್ಕಾರ ವ್ರತ ನಮ್ಮ ಮನೆಯಲ್ಲಿ ಜರುಗಿಲ್ಲ?" ಎಂದರು ಅವರು. ಕೃಷ್ಣಾವಧಾನಿಗಳು ಮಗನ ಬಳಿಗೆ ಬಂದು, "ದೇವತಾಕಾರ್ಯವನ್ನು ಮಾಡಿಸಿದ ಮೇಲೆ ಹೋಗುತ್ತೀಯಾ ಎನ್ನುವುದಕ್ಕೆ ಸಾಕ್ಷಿ ಏನು?" ಎಂದು ಕೇಳಿದರು. ದೆವ್ವಕ್ಕೆ ಕೋಪ ಬಂದಿತು. "ನಿಮಗೆ ನಂಬಿಕೆಯಿಲ್ಲವೇ? ಕೆಂಡವನ್ನು ತರಿಸಿ, ತೋರಿಸುತ್ತೇನೆ" ಎಂದು ಗುಡುಗಿತು. ಕೆಂಡವನ್ನು ಕೈ ಮೇಲೆ ಇಟ್ಟುಕೊಂಡು, "ಎಲ್ಲರೂ ನೋಡಿ, ಸೂರ್ಯನಮಸ್ಕಾರ ಮುಗಿದು ಸಂತರ್ಪಣೆ ಆದ ಮೇಲೆ ನಾನು ಹೊರಟುಹೋಗುತ್ತೇನೆ" ಎಂದು ಪ್ರಮಾಣ ಮಾಡಿತು. ಆಮೇಲೆ ಹುಡುಗನ ಕೈಯನ್ನು ನೋಡಿದರೆ ಕೈಯಲ್ಲಿ ಬೊಬ್ಬೆ ಆಗಿರಲಿಲ್ಲ. ಈ ಎಲ್ಲ ವ್ಯಾಪಾರವನ್ನೂ ನಮ್ಮ ತಂದೆ ನೋಡುತ್ತಿದ್ದರು. ಇದೆಲ್ಲ ತಮಾಷೆಯಾಗಿ ಕಾಣುತ್ತಿತ್ತು ಅವರಿಗೆ. ಜಗತ್ತಿನಲ್ಲಿ ಹೀಗೂ ಇದೆಯೆ, ದೆವ್ವ ಎಂದರೇನು, ಸತ್ತವರು ಏತಕ್ಕೆ ದೆವ್ವವಾಗುತ್ತಾರೆ - ಎಂದೆಲ್ಲ ಯೋಚನೆ ಮಾಡಿದರು.

ಒಂದು ದಿವಸ ಮೌನವಾಗಿ ಕುಳಿತಿದ್ದ ತಮ್ಮನ ಎದುರು ನಮ್ಮ ತಂದೆ ಹೋಗಿ, "ನಾನು ಯಾರು ಗೊತ್ತೋ?" ಎಂದು ದೆವ್ವವನ್ನು ಪ್ರಶ್ನಿಸಿದರು. "ಹೋಗೋ ಹುಡುಗ, ತಮಾಷೆ ಮಾಡಬೇಡ. ನೀನು ನನಗೆ ಗೊತ್ತಿಲ್ಲವೇ, ಅವಧಾನಿಗಳ ಎರಡನೆ ಮಗ" ಎಂದಿತು ದೆವ್ವ. ನಮ್ಮ ತಂದೆ, "ನನ್ನನ್ನು ಕೆಲವು ಅನುಮಾನಗಳು ಕಾಡುತ್ತಿವೆ. ನಾನು ನಿನ್ನನ್ನು ಕೇಳಿದರೆ ಉತ್ತರ ಕೊಡುತ್ತೀಯಾ?" ಎಂದು ಕೇಳಿದರು. ತಮ್ಮನ ಧ್ವನಿಗೂ, ಮಾತಿನ ರೀತಿಗೂ ವಿಭಿನ್ನವಾಗಿ ದೆವ್ವದ ಮಾತೂ ಧ್ವನಿಯೂ ಇರುವುದನ್ನು ನಮ್ಮ ತಂದೆ ಗುರುತಿಸಿದ್ದರು. ದೆವ್ವವು ತಮ್ಮ ಅನುಮಾನವನ್ನು ಪರಿಹರಿಸಬಹುದೆಂಬ ಆಸೆಯಿಂದ ಧೈರ್ಯವಾಗಿ ಅದನ್ನು ಪ್ರಶ್ನಿಸಿದರು.

ತಂದೆ : ನೀನು ನನ್ನ ತಮ್ಮನ ಮೇಲೆ ಬಂದಾಗ ನಿನ್ನ ಮಾತು ನನ್ನ ತಮ್ಮನ ಧ್ವನಿಯಂತಿರದೆ ಬೇರೆ ತರಹ ಇರುತ್ತದೆ. ಇದು ಹೇಗೆ?

ದೆವ್ವ : ನಾವು ಯಾರನ್ನು ಆಶ್ರಯಿಸುತ್ತೇವೆಯೋ ಅವರ ಇಂದ್ರಿಯಗಳನ್ನು ನಮ್ಮ ಸಾಧನವಾಗಿ ಮಾಡಿಕೊಳ್ಳುತ್ತೇವೆ. ನಾವು ಯಾರ ಮೇಲೇರುತ್ತೇವೆಯೋ ಅವರ ಮೂಲವ್ಯಕ್ತಿತ್ವ, ಮಾತು, ನಡತೆ ಎಲ್ಲವನ್ನೂ ಹಿಂದುಮಾಡಿ ನಮ್ಮ ವ್ಯಕ್ತಿತ್ವವನ್ನು ಮುಂದುಮಾಡಿ ನೋಡುವುದು, ಕೇಳುವುದು, ಮಾತನಾಡುವುದು ಮೊದಲಾದ ಕ್ರಿಯೆಗಳನ್ನು ಮಾಡುತ್ತೇವೆ.

ತಂದೆ : ಪರಕಾಯಪ್ರವೇಶ ಕೇಳಿದ್ದೀಯಲ್ಲ. ಅಲ್ಲಿ ವ್ಯಕ್ತಿಯ ಆತ್ಮವಿರದೆ ದೇಹವಿರುತ್ತದೆ. ಆ ದೇಹದೊಳಗೆ ಒಂದು ಆತ್ಮ ಪ್ರವೇಶಮಾಡಿ ತನ್ನ ಮಾತು ನಡತೆ ಎಲ್ಲವನ್ನೂ ಉಳಿಸಿಕೊಳ್ಳುತ್ತದೆ ಎಂದು ಕೇಳಿದ್ದೇನೆ. ಇಲ್ಲಿ ದೇಹಿಯು ಜೀವಂತವಾಗಿರುವುದರಿಂದ ದೆವ್ವಗಳು ಹೇಗೆ ತಮ್ಮ ವ್ಯಕ್ತಿತ್ವವನ್ನು ಪ್ರಕಟಿಸಲು ಸಾಧ್ಯ?

ದೆವ್ವ : ನೀನು ಹೇಳುವುದು ಸರಿ. ಇಲ್ಲಿ ವ್ಯಕ್ತಿ ಎಲ್ಲ ರೀತಿಯಲ್ಲೂ ಬದುಕಿರುತ್ತಾನೆ. ಅವನ ಆತ್ಮ ಅವನ ದೇಹದಲ್ಲಿ ಪ್ರತಿಷ್ಠಿತವಾಗಿರುತ್ತದೆ. ನಾವು ದೇಹದ ಕೆಲವು ಬಾಹ್ಯಕ್ರಿಯೆಗಳ ಮೇಲೆ ಮಾತ್ರ

ಹತೋಟಿಯನ್ನು ಪಡೆಯುತ್ತೇವೆ. ವ್ಯಕ್ತಿಯ ಭೌತಿಕ ಕ್ರಿಯೆಗಾಗಲಿ, ಆತ್ಮಕ್ಕಾಗಲಿ ಯಾವ ಚ್ಯುತಿಯನ್ನೂ ಉಂಟು ಮಾಡುವುದಿಲ್ಲ. ನಾವು ಮನುಷ್ಯರ ಮೇಲೇರಿ ಬಂದಾಗ ಸ್ವಲ್ಪ ಕಾಲ ಅವರನ್ನು ಮೈಮರೆತಂತೆ ಮಾಡಿ ನಮ್ಮ ಶಕ್ತಿಯನ್ನು ಪ್ರಯೋಗಿಸಿ ನಮ್ಮ ಕೆಲಸ ಸಾಧಿಸಿಕೊಳ್ಳುತ್ತೇವೆ.

ತಂದೆ : ಸತ್ತ ಮೇಲೆ ಆತ್ಮವು ದೆವ್ವದ ರೂಪದಲ್ಲಿ ಮನುಷ್ಯರ ಮೇಲೆ ಬರಲು ಕಾರಣವೇನು ?

ದೆವ್ವ : ಸತ್ತ ಮೇಲೆ ನಮ್ಮ ಆತ್ಮವು ಮುಕ್ತಿಯನ್ನು ಪಡೆಯಲಾರದೆ ಗಾಳಿಯ ರೂಪದಲ್ಲಿರುತ್ತದೆ. ನಾವು ಅನೇಕ ವೇಳೆ ನಮ್ಮ ಮುಕ್ತಿಯನ್ನು ಬಯಸಿ ನಮಗೆ ಬೇಕಾದವರ ಮೇಲೆ ಬಂದು ಹೆದರಿಸಿಯೋ ಗದರಿಸಿಯೋ ಶುಭಕರ್ಮಗಳನ್ನು ಮಾಡುವಂತೆಯಾಗಲಿ, ಕಾಶಿ-ರಾಮೇಶ್ವರ ಮೊದಲಾದ ತೀರ್ಥಯಾತ್ರೆಗೆ ಕರೆದುಕೊಂಡು ಹೋಗುವಂತೆಯಾಗಲಿ ಕೇಳುತ್ತೇವೆ. ಶುಭಕರ್ಮಗಳ ಮೂಲಕ ನಮ್ಮ ಕರ್ಮ ಸವೆದು ನಮಗೆ ಮುಕ್ತಿ ಸಿಗುತ್ತದೆ.

ತಂದೆ : ಕೆಲವು ದೆವ್ವಗಳು ಜನರ ಜೀವವನ್ನು ತೆಗೆದುಕೊಳ್ಳುತ್ತವೆ ಎಂದು ಕೇಳಿದ್ದೇನೆ.

ದೆವ್ವ : ಕ್ಷುದ್ರ ದೆವ್ವಗಳು ತಾವು ಮಾನವರಾಗಿದ್ದಾಗ ತಮಗೆ ಮೋಸಮಾಡಿದವರ ಹಾಗೂ ತೊಂದರೆ ಕೊಟ್ಟವರ ಇಲ್ಲವೇ ತಮ್ಮನ್ನು ಕೊಂದವರ ಮೇಲೆ ಸೇಡು ತೀರಿಸಿಕೊಳ್ಳುತ್ತವೆ. ಆದರೆ ಸಾಧುಗಳಾಗಿದ್ದವರು ಹಾಗೆ ಮಾಡುವುದಿಲ್ಲ.

ತಂದೆ : ಇಲ್ಲಿಂದ ಎಂದರೆ ದೆವ್ವದ ಸ್ಥಿತಿಯಿಂದ ಬಿಡುಗಡೆಯಾದ ಮೇಲೆ ನೀವು ಏನಾಗುತ್ತೀರಿ, ಯಾವ ಸ್ಥಿತಿಯಲ್ಲಿರುತ್ತೀರಿ, ಮುಕ್ತಿ ಎಂದರೆ ಏನು? ಪುನರ್ಜನ್ಮ ಹೇಗೆ ಆಗುತ್ತದೆ?

ದೆವ್ವ : ನಿನ್ನ ತಲೆಹರಟೆ ಜಾಸ್ತಿಯಾಯಿತು. ಏನೋ ಕೇಳುತ್ತಾನಲ್ಲ ಎಂದು ಉತ್ತರ ಕೊಟ್ಟೆ. ಇಂಥ ವಿಷಯಗಳನ್ನು ನೀನು ಕೇಳಲೂಬಾರದು, ನಾವು ಹೇಳಲೂಬಾರದು. ಇವೆಲ್ಲ ಸೃಷ್ಟಿಯ ರಹಸ್ಯಗಳು. ದೈವನಿಯಾಮಕ ಹೇಗಿರುತ್ತದೆಯೋ ಹಾಗೆ ಎಲ್ಲವೂ ನಡೆಯುತ್ತದೆ. ಮಾನವನು ಕರ್ಮಕ್ಕೆ ವಶ. ಅವನ ಕರ್ಮದಂತೆ ಅವನು ಆಗುವನು. ಸೃಷ್ಟಿಯ ರಹಸ್ಯ ಬಯಲಾದರೆ ಮಾನವ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ.

“ಇಂಥ ವಿಷಯಗಳು ತಿಳಿದರೆ ಮನುಷ್ಯನ ಜ್ಞಾನ ಹೆಚ್ಚುತ್ತದೆ. ಮತ್ತು ಅವನು ಮೋಕ್ಷವನ್ನು ಸಾಧಿಸಲು ಅನುಕೂಲ ವಾಗುತ್ತದೆಯಲ್ಲವೆ” ಎಂದು ತಂದೆ ಹೇಳಿದಾಗ, “ಸಾಕು ಸಾಕು, ಅಧಿಕ ಪ್ರಸಂಗ ಹೆಚ್ಚಾಯಿತು. ಇನ್ನೊಂದು ನಿಮಿಷ ಇಲ್ಲಿದ್ದರೆ ನಿನ್ನ ಜೀವ ತೆಗೆದುಬಿಡುತ್ತೇನೆ” ಎಂದು ದೆವ್ವ ಗದರಿಸಿ ಮೌನ ತಾಳಿತು. ಪುನಃ ಅದು ತುಟಿ ಬಿಚ್ಚಲಿಲ್ಲ.

ಕೃಷ್ಣಾವಧಾನಿಗಳು ದೆವ್ವಕ್ಕೆ ಮಾತು ಕೊಟ್ಟಂತೆ, ವಿಧಿಪೂರ್ವಕ ಸೂರ್ಯನಮಸ್ಕಾರ ಮಾಡಿಸಿದರು. ಕೊನೆಯಲ್ಲಿ ಸಮಾರಾಧನೆಯ ಹಿಂದಿನದಿನದ ರಾತ್ರಿ ಬ್ರಾಹ್ಮಣರನ್ನು ಕರೆಸಿ, ಶಿವಕವಚವನ್ನು ಹೇಳಿಸಿ ದಕ್ಷಿಣೆಯನ್ನು ಕೊಟ್ಟರು. ಸಮಾರಾಧನೆಯ ದಿವಸ ಬೆಳಗ್ಗೆ ಮನೆಯ ದೇವರಿಗೆ ರುದ್ರಾಭಿಷೇಕ ಮತ್ತು ದೇವರಪೂಜೆ ಮಾಡಿದರು ಕೃಷ್ಣಾವಧಾನಿಗಳು. ಹುಡುಗ ಶ್ರೀನಿವಾಸ, ಕಾವೇರಿ ನದಿಯಲ್ಲಿ ಸ್ನಾನಮಾಡಿ ಒದ್ದೆಬಟ್ಟೆಯಲ್ಲೇ ಮನೆಗೆ ಬಂದು ಪೂಜೆ ಆದಮೇಲೆ ತೀರ್ಥಪ್ರಸಾದ ಸ್ವೀಕರಿಸಿದನು. ಅನಂತರ ಶ್ರೋತ್ರಿಯರಿಗೆಲ್ಲ ಅಗ್ರಬಾಳೆ ಎಲೆ ಹಾಕಿ ಭೋಜನಕ್ಕೆ ಕೂರಿಸಿದರು. ಭೋಜನಾನಂತರ ವೇದಮಂತ್ರಗಳ ಆಶೀರ್ವಾದ, ಬ್ರಾಹ್ಮಣ ನಮಸ್ಕಾರಗಳು ನಡೆದವು. “ನಾನು ಇನ್ನು ಹೋಗಿ ಬರುತ್ತೇನೆ. ತುಂಬ ಆಯಾಸವಾಗಿದೆ. ಒಂದು ಲೋಟ ಹಾಲು ಕೊಡಿ” ಎಂದು ಕೇಳಿತು ದೆವ್ವ. ಆಗ ಅಲ್ಲಿದ್ದ ವೇದ ಪಾರಂಗತರೊಬ್ಬರು, “ನೀನು ಕಟ್ಟೇಪುರದ ದೊರೆಯೇ ಆಗಿದ್ದ ಪಕ್ಷದಲ್ಲಿ ನಿನಗೆ ವೇದಾಧ್ಯಯನವಾಗಿತ್ತಲ್ಲ , ಒಂದು ಪಂಚಾರಿ ಹೇಳು” ಎಂದು ಕೇಳಿದರು. ಕೂಡಲೇ ಸೊಗಸಾಗಿ ವೇದಮಂತ್ರವನ್ನು ಶ್ರೀನಿವಾಸನ ಬಾಯಲ್ಲಿ ದೆವ್ವ ಹೇಳಿತು. ಎಲ್ಲರಿಗೂ ಪರಮಾಶ್ಚರ್ಯವಾಯಿತು. ಕಟ್ಟೇಪುರದ ದೊರೆಯ ವೇದಮಂತ್ರಗಳನ್ನು ಕೇಳಿದ್ದ ಒಬ್ಬರು, “ಖಂಡಿತ ಅದೇ ಧ್ವನಿ, ಅದೇ ಕಂಠ. ಆ ದೊರೆಯೇ, ಅನುಮಾನವಿಲ್ಲ” ಎಂದರು. ಶ್ರೀನಿವಾಸನಿಗೆ ವೇದಾಧ್ಯಯನ ವಾಗಿರಲಿಲ್ಲ. ಕೃಷ್ಣಾವಧಾನಿಗಳು ಹುಡುಗನಿಗೆ ತೀರ್ಥಕೊಟ್ಟರು. “ಶ್ರೀನಿವಾಸಾಯ ನಮಃ” ಎಂದು ತೀರ್ಥ ತೆಗೆದುಕೊಂಡು ಹಾಲನ್ನು ಕುಡಿದ ಹುಡುಗ, “ಇನ್ನು ನಾನು ಪ್ರಸನ್ನನಾದೆ. ನನ್ನ ಕರ್ಮ ತೀರಿತು, ಹೋಗಿಬರುತ್ತೇನೆ” ಎಂದಿತು. ಶಾಸ್ತ್ರಿಗಳು ಆಶೀರ್ವಾದ ಮಾಡಿ ಹುಡುಗನ ತಲೆಯ ಮೇಲೆ ಮಂತ್ರಾಕ್ಷತೆ ಹಾಕಿದರು. ಹುಡುಗ ಮೊದಲಿನಂತೆ ಆದ.

ಈ ಅನುಭವ ನಮ್ಮ ತಂದೆಯ ಮನಸ್ಸಿನಲ್ಲಿ ಆಳವಾದ ಪ್ರಭಾವ ಬೀರಿತು. “ದೆವ್ವ ಇಲ್ಲ ಎಂಬ ಮಾತು ಸತ್ಯವಲ್ಲ. ಆದರೆ ದೆವ್ವಗಳೆಲ್ಲ ಕೆಟ್ಟವು ಎಂದು ಹೇಳಲಾಗದು. ಅವುಗಳ ಕರ್ಮವನ್ನು ಅವು ಅನುಭವಿಸಲೇಬೇಕು, ಅದು ತಪ್ಪಿದ್ದಲ್ಲ” ಎಂದು ಅರ್ಥಮಾಡಿಕೊಂಡರು.

೫. ಎಸ್.ಎಸ್.ಎಲ್.ಸಿ. ಆಯಿತು

ಕೇರಳಾಪುರದಲ್ಲಿ ಸರಕಾರಿಶಾಲೆಗೆ ಸೇರಿಕೊಂಡೆ. ಆದರೆ ಒಂದನೆಯ ತರಗತಿಗೆ ಸೇರಲಿಲ್ಲ. ನಾನಾಗಲೇ ನನ್ನ ತಂದೆಯ ಜತೆಯಲ್ಲಿ ಹನಸೋಗೆಯಲ್ಲಿ ಸ್ಕೂಲಿಗೆ ಹೋಗುತ್ತಿದ್ದುದರಿಂದ ತಕ್ಕ ಮಟ್ಟಿಗೆ ಮೂರನೆಯ ತರಗತಿಯವರೆಗಿನ ಪಾಠಗಳೆಲ್ಲ ಮನನವಾಗಿದ್ದುವು. ಆದುದರಿಂದ ನನ್ನನ್ನು ಮೂರನೆಯ ತರಗತಿಗೆ ಸೇರಿಸಿಕೊಂಡರು. ಆಗಿನ ಕಾಲದಲ್ಲಿ ಈಗಿನಂತೆ ಶಾಲೆಗೆ ಸೇರಿಸಿಕೊಳ್ಳಲು ಕಟ್ಟುನಿಟ್ಟಾದ ನಿಯಮಗಳಿರಲಿಲ್ಲ. ಮುಖ್ಯೋಪಾಧ್ಯಾಯರು ಹುಡುಗನ ಮಟ್ಟವನ್ನು ನೋಡಿ ಯಾವ ತರಗತಿಗೆ ಅರ್ಹನೆಂದು ತಿಳಿಯುವರೋ ಆ ತರಗತಿಗೆ ಸೇರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದರು.

ಅಂದಿನ ಸ್ಥಿತಿಯಲ್ಲಿ ಬಡ ಹಳ್ಳಿಮಕ್ಕಳಿಗೆ ಸ್ಲೇಟು-ಬಳಪ ಸಿಕ್ಕಿದರೆ ಅದೇ ಅದೃಷ್ಟ. ಇಂಥ ಒಂದು ಪರಿಸ್ಥಿತಿಯಲ್ಲಿ ನಾನು ಈ ಕೇರಳಾಪುರದ ಶಾಲೆಯಲ್ಲಿ ಓದಿದೆ. ಜೀವನಕ್ಕೆ ಆಧಾರವಾಗಿ ಜಮೀನು, ಹೊಲ ಏನೂ ಇಲ್ಲದ ನಮ್ಮಂಥವರು ಓದಿ ಮುಂದೆ ಬರಲೇಬೇಕಾದ ಆವಶ್ಯಕತೆ ಇದ್ದಿತೆಂದು ಬೇರೆ ಹೇಳಬೇಕಾಗಿಲ್ಲ.

ಅಂದಿನ ಕಾಲದಲ್ಲಿ ಉಪಾಧ್ಯಾಯರು ಶಾಲೆಯಲ್ಲಿ ಪಠ್ಯ ಪುಸ್ತಕದಿಂದ ಪಾಠವನ್ನು ಓದಿ ಹೇಳುತ್ತಿದ್ದರಲ್ಲದೆ ಹುಡುಗರ ಕೈಗೆ ಕೊಟ್ಟು ಓದಿಸುತ್ತಿದ್ದರು. ಲೆಕ್ಕಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಸ್ಲೇಟುಗಳಲ್ಲಿ ಬರೆಯುವಂತೆ ಹುಡುಗರಿಗೆ ಹೇಳಿ, ಬರೆದಿದ್ದಾರೋ ಇಲ್ಲವೋ ಪರೀಕ್ಷಿಸುತ್ತಿದ್ದರು. ಮಗ್ಗಿಯನ್ನು ಉರುಹೊಡೆಸುತ್ತಿದ್ದರು. ಪದ್ಯವನ್ನು ಬಾಯಲ್ಲಿ ಹೇಳಿಸಿ ಗಟ್ಟಿ ಮಾಡಿಸುತ್ತಿದ್ದರು. ಮಧ್ಯೆಮಧ್ಯೆ ಮಕ್ಕಳಿಗೆ ಬೇಜಾರಾಗದಂತೆ ಕಥೆಗಳನ್ನು ಹೇಳುತ್ತಿದ್ದರು.

ಇಷ್ಟಲ್ಲದೆ, ಆ ತರಗತಿಗಳಲ್ಲಿ ಪಾಠ ಒಪ್ಪಿಸದೆ ಇರುವ ಮಕ್ಕಳಿಗೆ ಬೆತ್ತದ ರುಚಿ ತೋರಿಸುತ್ತಿದ್ದರು. "ಇಲ್ಲ ಸಾ, ಹೊಡಿಬೇಡಿ ಸಾ, ಹೇಳ್ತೀನಿ ಸಾ," ಎಂದು ಹುಡುಗರು ಕೇಳಿಕೊಂಡು ಹಸ್ತವನ್ನು ನೀಡುತ್ತಿದ್ದರು; ಬೆತ್ತದ ಏಟು ಬಿದ್ದ ಹಸ್ತವನ್ನು, ಕಂಕುಳಿನಲ್ಲಿ ಇಟ್ಟುಕೊಂಡು ನೋವು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಕೆಲವು ಉಪಾಧ್ಯಾಯರು ಬೆರಳಿನ ಮಧ್ಯೆ ಪೆನ್ಸಿಲ್ಲನ್ನು ಇಟ್ಟು ಅಮುಕುವ ಅಭ್ಯಾಸವನ್ನಿಟ್ಟುಕೊಂಡಿದ್ದರು. ಇದರಿಂದ ಎಷ್ಟು ನೋವಾಗುತ್ತದೆ ಎಂಬುದನ್ನು ಅನುಭವಿಸಿದವರೇ ಬಲ್ಲರು. ಕಿವಿ ಹಿಂಡುವುದಂತೂ ಸರ್ವೇಸಾಮಾನ್ಯವಾಗಿತ್ತು.

ಹಿಂದಿನ ಕಾಲದಲ್ಲಿ ಸರಕಾರಿ ಶಾಲೆಗಳು ಬರುವುದಕ್ಕೆ ಮೊದಲು ಕೂಲಿಮಠಗಳಿರುತ್ತಿದ್ದುವು. ಕೂಲಿಮಠದಲ್ಲಿ ಘೋರ ಶಿಕ್ಷೆಗಳನ್ನು ಕೊಡುತ್ತಿದ್ದರು ಎಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಕುರ್ಚಿ ಕೂರಿಸುವುದು, ಕೋದಂಡಕ್ಕೇರಿಸುವುದು ಮೊದಲಾದ ಕ್ರೂರ ಶಿಕ್ಷೆಗಳಿದ್ದವು. ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ ಇಂಥ ವರ್ಣನೆಗಳನ್ನು ನೋಡಬಹುದು. ಎತ್ತರದಲ್ಲಿ ಬಿಗಿಯಾಗಿ ಕೋಲನ್ನು ಕಟ್ಟಿ ಹುಡುಗ ಅದನ್ನು ಹಿಡಿದುಕೊಳ್ಳುವಂತೆ ಮಾಡಿ ಅವನು ನೇತಾಡುತ್ತಿರುವಂತೆ ಮಾಡಿ ಕೆಳಗಿನಿಂದ ಮೆಣಸಿನಕಾಯಿ ಹೊಗೆ ಹಾಕುವುದು 'ಕೋದಂಡಕ್ಕೆ ಎತ್ತುವುದು' ಎಂಬ ಶಿಕ್ಷೆ. ಇಂಥ ಕ್ರೂರಶಿಕ್ಷೆಗಳು ನಾನು ಓದುವ ಕಾಲಕ್ಕೆ ಇರಲಿಲ್ಲ. ಆದರೂ ಒಬ್ಬೊಬ್ಬ ಉಪಾಧ್ಯಾಯರು ಮಕ್ಕಳಿಗೆ ಶಿಕ್ಷೆ ಕೊಡುವುದರಲ್ಲಿ ಆನಂದ ಪಡೆಯುತ್ತಿದ್ದರೆಂದು ನನ್ನ ಭಾವನೆ. ಮೇಷ್ಟ್ರಿಗೆ ಶಿಕ್ಷೆ ಕೊಟ್ಟತೃಪ್ತಿ, ಶಿಷ್ಯನಿಗೆ ನರಕದ ಅನುಭವ. ಇಂಥ ಸ್ಥಿತಿಯಲ್ಲಿ ಮಕ್ಕಳು ಶಾಲೆಗೆ ಚಕ್ಕರ್ ಹೊಡೆಯುವ ನಿದರ್ಶನಗಳು ಅನೇಕ ಇರುತ್ತಿದ್ದವು.

ನಾನು ಐದನೇ ತರಗತಿಗೆ ಬರುವ ಹೊತ್ತಿಗೆ ವೆಂಕಟಸುಬ್ಬಯ್ಯ ಎಂಬುವವರು ಕೇರಳಾಪುರದ ಸರಕಾರಿಶಾಲೆಯ ಮುಖ್ಯೋಪಾಧ್ಯಾಯರಾಗಿ ಬಂದರು. ಇವರು ನಮಗೆ ಹತ್ತಿರದ ಸಂಬಂಧಿಗಳು. ಇವರ ಮಗ ಕೆ. ಕೃಷ್ಣಮೂರ್ತಿಯವರ ಪರಿಚಯ ನನಗೆ ಆದುದು ಇದೇ ಸಮಯದಲ್ಲಿಯೇ. ಈ ಗೆಳೆತನ ಕೊನೆಯವರೆಗೂ ಶಾಶ್ವತವಾಗಿದ್ದಿತು. ಕೆ. ಕೃಷ್ಣಮೂರ್ತಿಯವರನ್ನು ಎಲ್ಲರೂ ಮನೆಯಲ್ಲಿ ಗುಂಡಣ್ಣ ಎಂದು ಕರೆಯುತ್ತಿದ್ದರು. ಇವರು ಬಹಳ ಬುದ್ಧಿವಂತರಾಗಿ ಚುರುಕಾಗಿದ್ದರು.

ಹೆಡ್ಮಾಸ್ಟರ್ ವೆಂಕಟಸುಬ್ಬಯ್ಯನವರು ಬಹಳ ಶಿಸ್ತಿನ ಉಪಾಧ್ಯಾಯರು. ತಪ್ಪು ಮಾಡಿದರೆ ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು. ಮಲೆನಾಡಿನಿಂದ ವರ್ಗವಾಗಿ ಬಂದಿದ್ದರು. ತರಗತಿಯಲ್ಲಿ ಮಲೆನಾಡಿನ ರೋಮಾಂಚಕ ಕಥೆಗಳನ್ನು ಹೇಳಿ ಹುಡುಗರನ್ನು ರಂಜಿಸುತ್ತಿದ್ದರು.

ಆಗೆಲ್ಲಾ, ಶಾಲೆಯ ಪಾಠದ ಜತೆಯಲ್ಲಿ ಅಮರಕೋಶವನ್ನು ಬಾಯಿಪಾಠ ಮಾಡಿಸುತ್ತಿದ್ದರು. 'ರಾಮಃ ರಾಮೌ ರಾಮಾಃ' ಅಥವಾ 'ಗೌರೀ ಗೌರ್ಯೌ ಗೌರ್ಯಃ' ಎಂದು ನಾಮರೂಪಗಳನ್ನು ಗಟ್ಟಿ ಮಾಡಿಸುತ್ತಿದ್ದರು. ಕಥಾಶತಕ ಹೇಳಿಸುತ್ತಿದ್ದರು. ಭಂಡಾರ್‌ಕರ್ ಎಂಬುವರು ರಚಿಸಿದ, ಸ್ವಂತ ಅಧ್ಯಯನ ಮಾಡಬಲ್ಲ ಸಂಸ್ಕೃತ ಪುಸ್ತಕವನ್ನು ಓದಿಸುತ್ತಿದ್ದರು. ಶಾಲೆಯಲ್ಲಿ ಕನ್ನಡ, ಇಂಗ್ಲಿಷ್, ಗಣಿತ, ಭೂಗೋಳ, ಚರಿತ್ರೆ, ಮತ್ತು ಆರೋಗ್ಯ ಪಾಠದ ವಿಷಯಗಳನ್ನು ಕಲಿಯಬೇಕಾಗಿತ್ತು.

a a a

ಆಗ ಕೇರಳಾಪುರದಲ್ಲಿ ಇದ್ದುದು ಸರಕಾರಿ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲು. ಇಲ್ಲಿ ಪ್ರಾಥಮಿಕ ನಾಲ್ಕು ತರಗತಿಗಳು ಮತ್ತು ಮಾಧ್ಯಮಿಕ ಎರಡು ತರಗತಿಗಳು ಇದ್ದುವು. ಆರನೆಯ ತರಗತಿಯ ಕೊನೆಯಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕೂರಿಸುತ್ತಿದ್ದರು. ಇದಕ್ಕೆ ಹಳ್ಳಿಗಳಲ್ಲಿ 'ಐದು ರೂಪಾಯಿನ ಪರೀಕ್ಷೆ' ಎಂದು ಹೇಳುತ್ತಿದ್ದರು. ಪರೀಕ್ಷಾಶುಲ್ಕವು ಐದು ರೂಪಾಯಿಗಳಾಗಿದ್ದುದೇ ಈ ಹೆಸರು ಬರಲು ಕಾರಣ. ಲೋಯರ್ ಸೆಕೆಂಡರಿಯ ಗಣಿತ, ಭೂಗೋಳ ಮೊದಲಾದ ನಾಲ್ಕು ವರ್ಷಗಳ ಪಾಠವನ್ನು ಇಲ್ಲಿ ಎರಡು ವರ್ಷಗಳಲ್ಲಿ ಮುಗಿಸಬೇಕಾಗಿತ್ತು. ಮಿಡಲ್ ಸ್ಕೂಲಿನ ಏಳು ಮತ್ತು ಎಂಟನೆಯ ತರಗತಿಗಳಿಗೆ ಹಾಜರಾಗಿ, ಇಂಗ್ಲಿಷ್ ವಿಷಯದಲ್ಲಿ ಉತ್ತೀರ್ಣರಾದರೆ ಮಾತ್ರ ಪ್ರೌಢಶಾಲೆಗೆ ಸೇರಬಹುದಾಗಿತ್ತು.

ಕೇರಳಾಪುರದ ಸ್ಕೂಲಿನಿಂದ ನಾವು ನಾಲ್ಕೈದು ಜನ ಮಾತ್ರ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದೆವು. ಆಗ ಪರೀಕ್ಷಾ ಕೇಂದ್ರವು ತಾಲ್ಲೂಕು ಕೇಂದ್ರವಾದ ಅರಕಲಗೂಡಿನಲ್ಲಿ ಇತ್ತು. ಆಗಿನ ಕಾಲದಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಎಂದರೆ ಅದೊಂದು ದೊಡ್ಡ ಪರೀಕ್ಷೆ ಎಂದು ಹಳ್ಳಿಯ ಜನ ಭಾವಿಸುತ್ತಿದ್ದರು. ಒಂದು ಹಳ್ಳಿಯಲ್ಲಿ ಲೋಯರ್ ಸೆಕೆಂಡರಿಯಲ್ಲಿ ಉತ್ತೀರ್ಣರಾದವರು ನಾಲ್ಕೈದು ಜನ ಇದ್ದುಬಿಟ್ಟರೆ ಅದೇ ಹೆಚ್ಚು.

ಅರಕಲಗೂಡಿನ ಸಾಹುಕಾರರು ಪರೀಕ್ಷೆಗೆ ಬರುವ ಮಕ್ಕಳಿಗೆ ಮಧ್ಯಾಹ್ನ ಪರೀಕ್ಷೆ ನಡೆಯುವ ಸ್ಥಳಕ್ಕೆ ಹುಳಿಯಲ್ಲಿ ಕಲಸಿದ ಅನ್ನ ಮತ್ತು ಮೊಸರನ್ನ ತಂದು ಕೊಡುವ ಏರ್ಪಾಡನ್ನು ಮಾಡಿದ್ದರು. ರಾತ್ರಿ ಬಿಸಿಯೂಟ. ಪರೀಕ್ಷೆಯಲ್ಲಿ ದಣಿದಿದ್ದಾರೆಂದು ಮಕ್ಕಳಿಗೆ ಪರೀಕ್ಷೆ ಮುಗಿದ ಕೊನೆಯದಿನ ಅರಕಲಗೂಡಿನ ಕೆರೆಯ ಪಕ್ಕದಲ್ಲಿ ಇದ್ದ ಮನೆಯಲ್ಲಿ ಹಂಡೆಯನ್ನಿಟ್ಟು ನೀರು ಕಾಯಿಸಿ, ಎಣ್ಣೆಸೀಗೇಕಾಯಿ ಕೊಟ್ಟು ಎರೆದುಕೊಂಡು ಹೋಗುವ ಏರ್ಪಾಡು ಮಾಡಿದ್ದರು. ನನ್ನನ್ನು ಹಳ್ಳಿಯ ಜನ ಬಹಳ ಹೆದರಿಸಿದ್ದರು, ಪರೀಕ್ಷೆ ಎಂದರೆ ಏನೋ ಒಂದು ದೊಡ್ಡ ಗುಮ್ಮ ಎಂಬಂತೆ. ಶಾಲೆಯಲ್ಲಿ ಚೆನ್ನಾಗಿ ಪಾಠ ಮಾಡಿದ್ದು , ನಾನು ಎಲ್ಲವನ್ನೂ ಚೆನ್ನಾಗಿ ಓದಿಕೊಂಡಿದ್ದೆ. ಪರೀಕ್ಷೆಯನ್ನು ಎದುರಿಸುವ ಬಗ್ಗೆ ಅಂಜಿಕೆ ಇಲ್ಲದಿದ್ದರೂ ಜನರು ಹೇಳುವುದನ್ನು ಕೇಳಿ ಹೆದರಿದ್ದೆ. ಮೊದಲೇ ಯಾರೋ "ಅಲ್ಲಿ ಒಳ್ಳೆ ಊಟ ಕೊಡುತ್ತಾರಂತೆ, ಸ್ನಾನಕ್ಕೆ ಬಿಸಿ ನೀರು ಒದಗಿಸುತ್ತಾರೆ, ಕೊನೆಯದಿನ ಅಭ್ಯಂಜನಸ್ನಾನ ಮಾಡಿಸುತ್ತಾರೆ" ಎಂದೆಲ್ಲ ಹೇಳಿದ್ದನ್ನು ಕೇಳಿದ ನಾನು ಕೆಲವರಲ್ಲಿ ಅಲ್ಲಿ ಹೀಗಂತೆ ಎಂದು ಸ್ವಲ್ಪ ಹೆಚ್ಚಾಗಿಯೇ ವರ್ಣಿಸಿ ಹೇಳಿದ್ದೆ. ಇದನ್ನು ಕೇಳಿದ ಕೆಲವರು, "ಇವನು ಪರೀಕ್ಷೆಗೆ ಅಲ್ಲ ಹೋಗುವುದು, ಊಟಕ್ಕೆ" ಎಂದು ಹಂಗಿಸಿಯೂ ಬಿಟ್ಟರು.

ನಮ್ಮ ಮೇಷ್ಟ್ರ ಜತೆ ಎಲ್ಲ ಮಕ್ಕಳೊಡನೆ ಅರಕಲಗೂಡಿಗೆ ಹೋಗದೆ, ಬಸ್‌ಛಾರ್ಜು ಉಳಿಯುತ್ತದೆ ಎಂಬ ಕಾರಣದಿಂದ ನನ್ನ ಗೆಳೆಯ ಶೆಲ್ವಪಿಳ್ಳೈ ಅಯ್ಯಂಗಾರಿ ಜತೆ ಎತ್ತಿನ ಗಾಡಿಯಲ್ಲಿ ಹೋದೆ. ನಮ್ಮ ಉಪಾಧ್ಯಾಯರು ಅರಕಲಗೂಡಿನಲ್ಲಿ ಒಂದು ಮನೆಯಲ್ಲಿ ನಮಗೆ ಉಳಿದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದರು. ಅಲ್ಲದೆ ಮಕ್ಕಳು ಅದೂ ಇದೂ ಊಟಮಾಡಿ ಆರೋಗ್ಯ ಕೆಡಿಸಿಕೊಳ್ಳುವುದು ಬೇಡ ಎಂದು ನಮಗೆ ಬೇರೆಯೇ ಊಟ ತಿಂಡಿಗಳಿಗೆ ಏರ್ಪಾಡು ಮಾಡಿದ್ದರು.

ನಮ್ಮ ಉಪಾಧ್ಯಾಯರು ಅಂದಂದಿನ ಪರೀಕ್ಷಾ ವಿಷಯಗಳ ಬಗ್ಗೆ ತಿಳುವಳಿಕೆಯನ್ನು ಕೊಡುತ್ತಿದ್ದರಲ್ಲದೆ ಪ್ರಶ್ನೆಗಳು ಹೇಗೆ ಬರುತ್ತವೆ, ಅವುಗಳಿಗೆ ಎಷ್ಟು ಉತ್ತರ ಬರೆಯಬೇಕು ಎಂಬುದನ್ನೂ ತಿಳಿಸುತ್ತಿದ್ದರು. ಪರೀಕ್ಷೆಯು ಸುಗಮವಾಗಿ ಮುಗಿಯಿತು. ತೃಪ್ತಿಯಿಂದ ನಾನು ಎಲ್ಲರೊಡನೆ ಕೇರಳಾಪುರಕ್ಕೆ ಬಂದೆ. ಊರಿಗೆ ಬಂದ ಮೇಲೆ ನೀನು ಹೇಗೆ ಮಾಡಿದ್ದೀಯಾ ಎಂದು ಕೇಳಿದ್ದಕ್ಕೆ "ತುಂಬಾ ಚೆನ್ನಾಗಿ ಮಾಡಿದ್ದೇನೆ, ಸುಲಭವಾಗಿತ್ತು" ಎಂದೆ. ಆದರೆ ಎಲ್ಲರೂ, "ನೀನು ಪಾಸಾಗುವುದಿಲ್ಲ ಬಿಡು. ನೀನು ಫೇಲೇ" ಎನ್ನುತ್ತಿದ್ದರು. ಇವರೆಲ್ಲ ಏಕೆ ಹಾಗೆ ಹೇಳುತ್ತಾರೆ ಎಂದು ನಾನು ಆಶ್ಚರ್ಯಪಡುತ್ತಿದ್ದೆ.

ನನ್ನ ಲೋಯರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶ ಬಂದ ಅಂದಿನ ಸನ್ನಿವೇಶ ಇಂದಿಗೂ ಅಚ್ಚಳಿಯದೆ ನನ್ನ ಮನಸ್ಸಿನಲ್ಲಿ ನಿಂತಿದೆ. ನಮ್ಮ ಊರಿಗೆ ಅಂಚೆ ಬರುವುದು ರಾತ್ರಿ. ಅಂದು ರಾತ್ರಿ ಊಟವಾದ ಮೇಲೆ ನಾನು ಮಲಗಿದ್ದೆ. ಅಂಚೆಯ ಕಛೇರಿಯನ್ನು ಪಕ್ಕದ ಮನೆಯಲ್ಲಿದ್ದ ನಮ್ಮ ದೊಡ್ಡಪ್ಪನವರು ನೋಡಿಕೊಳ್ಳುತ್ತಿದ್ದರು. ಪಕ್ಕದ ಮನೆಯಲ್ಲಿ ಮಾತನಾಡಿದುದು ನಮ್ಮ ಮನೆಗೆ ಕೇಳಿಸುತ್ತಿತ್ತು. ಅಂದು ರಾತ್ರಿ ನಮ್ಮ ತಂದೆ, ಶಾಲೆಯ ಉಪಾಧ್ಯಾಯರು ಮತ್ತು ಇತರರು 'ಅವನು ಪಾಸು, ಇವನು ಫೇಲು' ಎಂದು ಹೇಳುತ್ತಿದ್ದುದು ನನಗೆ ಕೇಳಿಸುತ್ತಿತ್ತು. ನಾನು ಕಂಬಳಿಯನ್ನು ಹೊದ್ದು ಮಲಗಿದ್ದೆ. ಅಂದು ಎಲ್ಲಿಂದಲೋ ತಿಗಣೆಗಳು ಬಂದು ನನ್ನನ್ನು ಮುತ್ತಿ ಕಚ್ಚುತ್ತಿದ್ದವು. ನಾಡ ಹೆಂಚಿನ ಹಳೆಯ ಮನೆಗಳಲ್ಲಿ ತಿಗಣೆ, ಚೇಳು, ಇಲಿ ಇವುಗಳಿಗೆ ಬರವೇ? ಫಲಿತಾಂಶ ಬಂದಿದೆ ಎಂದು ಗೊತ್ತಾದರೂ ಪಕ್ಕದ ಮನೆಗೆ ಹೋಗಿ ಕೇಳುವ ಧೈರ್ಯವಿರಲಿಲ್ಲ.

ನಮ್ಮ ತಂದೆಯವರು ಮನೆಗೆ ಬಂದು ಮಲಗಿದರು. ಆಗ ಏನನ್ನೂ ಹೇಳಲಿಲ್ಲ. ನಾನು ಫೇಲಾಗಿದ್ದರೆ 'ನೀನು ಹುಟ್ಟಿದ್ದು ವ್ಯರ್ಥ, ಹಿಟ್ಟಿಗೆ ದಂಡ' ಎಂದು ಬಯ್ಯುವರೆಂದು ಭಾವಿಸಿದ್ದೆ. ಅನಿಶ್ಚಿತತೆಯ ತೊಳಲಾಟದಲ್ಲಿ ರಾತ್ರಿಯನ್ನು ಕಳೆದೆ.

ಮಾರನೆಯ ದಿನ ಕೊಣನೂರಿನಲ್ಲಿ ನಮ್ಮ ಹತ್ತಿರದ ನೆಂಟರ ಮನೆಯಲ್ಲಿ ಮದುವೆಯೋ, ಮುಂಜಿಯೋ ಏನೋ ಇತ್ತು. ನಮ್ಮ ಊರಿನವರನ್ನೆಲ್ಲ ಕರೆದಿದ್ದರು. ಮಧ್ಯದೇಶದ ಸಂಕೇತಿ ಗ್ರಾಮಗಳಲ್ಲಿ ಏನೊಂದು ಶುಭಕಾರ್ಯವಾದರೂ ಸುತ್ತಮುತ್ತಲಿನ ಹಳ್ಳಿಯವರನ್ನೆಲ್ಲ ಆಹ್ವಾನಿಸುವುದು ವಾಡಿಕೆ. ಕೇರಳಾಪುರದಿಂದ ಕೊಣನೂರು ಹತ್ತು ಮೈಲಿ. ಎಂಟು ಹತ್ತು ಜನ ಗಂಡಸರು ಬೆಳಗ್ಗೆ ನಡೆದುಕೊಂಡು ಕೊಣನೂರಿಗೆ ಹೊರಟರು. ನಮ್ಮ ತಂದೆ ನನ್ನನ್ನೂ "ಜತೆಯಲ್ಲಿ ಬಾ" ಎಂದು ಹೇಳಿ ಕರೆದೊಯ್ದರು. ಸಂತೋಷದಿಂದ ನನ್ನನ್ನು ಕರೆದುಕೊಂಡು ಹೋಗಬೇಕಾದರೆ ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಎಂದು ಧೈರ್ಯ ತಂದುಕೊಂಡೆ. ಎಲ್ಲರೂ ದಾರಿಯುದ್ದಕ್ಕೂ ತಮಾಷೆ ಮಾಡಿಕೊಂಡು ಗೇಲಿ ಮಾಡಿಕೊಂಡು ಹೋಗುತ್ತಿದ್ದರೆ, ನಾನು ಅರ್ಥವಾಗಿಯೋ, ಅರ್ಥವಾಗದೆಯೋ ಅವರ ಜತೆಯಲ್ಲಿ ನಗುತ್ತ ಹೆಜ್ಜೆ ಹಾಕಿದೆ. ಚುರುಕಾಗಿಯೇ ನಡೆಯುತ್ತಿದ್ದ ಅವರ ಹೆಜ್ಜೆಯ ಜತೆಗೆ ನಾನು ಸ್ವಲ್ಪ ಓಡುತ್ತ ಒಂದಷ್ಟು ದೂರ ಹೋಗಿ ಅವರ ಜತೆಯನ್ನು ಕಾಪಾಡಿಕೊಳ್ಳಬೇಕಾಗಿತ್ತು. ಕೊಣನೂರಿನಲ್ಲಿ ನಮ್ಮ ತಂದೆ ನನಗೆ ಒಂದು ಟೋಪಿ ಮತ್ತು ಒಂದು ಬೆಲ್ಟು ಕೊಡಿಸಿದರು. ನನಗೆ ಧೈರ್ಯ ಬಂದಿತು. ನಾನು ಪರೀಕ್ಷೆಯಲ್ಲಿ ಉತ್ತೀರ್ಣ ನಾಗಿದ್ದೇನೆ ಎಂಬ ನನ್ನ ನಿರೀಕ್ಷೆ ಸುಳ್ಳಾಗಿರಲಿಲ್ಲ.

a a a

ಮುಂದಕ್ಕೆ ಬಸವಾಪಟ್ಟಣದ ಮಿಡಲ್ ಸ್ಕೂಲಿಗೆ ನನ್ನನ್ನು ಸೇರಿಸಿದರು. ಅಲ್ಲಿ ನಾನು ಆ ಊರಿನ ಗಣ್ಯರಾದ ಅಚ್ಚಣ್ಣನ ಚೆನ್ನಪ್ಪನವರ ಮನೆಯಲ್ಲಿ ಇದ್ದುಕೊಂಡು ವಾರಾನ್ನ ಮಾಡಿಕೊಂಡು ಓದಲಾರಂಭಿಸಿದೆ. ನನ್ನ ಹಾಗೆ ಕನ್ನಡ ಲೋಯರ್ ಸೆಕೆಂಡರಿ ಮುಗಿಸಿ ಇಂಗ್ಲಿಷ್ ಓದಲು ಇನ್ನಿಬ್ಬರು ಬಂದಿದ್ದರು. ಒಬ್ಬ ಮಲ್ಲರಾಜಪಟ್ಟಣದ ಅನಂತರಾಮಯ್ಯ ಮತ್ತು ಇನ್ನೊಬ್ಬ ಹಳ್ಳಿ ಮೈಸೂರಿನ ಸುಬ್ಬಣ್ಣ.

ನಾವು ಮೂರು ಜನವೂ ಶಾಲೆಗೆ ಬಂದ ಮೇಲೆ ಒಟ್ಟಿಗೇ ಇರುತ್ತಿದ್ದೆವು. ದಿನದಲ್ಲಿ ಒಂದು ಅಥವಾ ಎರಡು ತರಗತಿ ಇಂಗ್ಲಿಷ್ ಇರುತ್ತಿತ್ತು. ಉಳಿದ ಸಮಯವನ್ನು ಹೇಗೆ ಕಳೆಯುವುದು ಎಂಬುದು ಪ್ರಶ್ನೆ. ಬಸವಾಪಟ್ಟಣದಲ್ಲಿ ಶಾಲೆಯ ಎದುರಿಗೆ ಹತ್ತು ಮಾರು ದೂರದಲ್ಲಿ ನಾಲೆ ಹರಿಯುತ್ತಿತ್ತು. ನಾಲೆಯಲ್ಲಿ ನೀರಿದ್ದಾಗಲೆಲ್ಲ ನಾಲೆಗೆ ಹೋಗಿ ಈಜಾಡುತ್ತಾ, ಹರಟೆ ಹೊಡೆಯುತ್ತಾ ಕಾಲ ಕಳೆಯುತ್ತಿದ್ದೆವು. ನಾವು ಈಜಾಡುವಾಗ ಹಣೆಯ ಸಾದಿನ ಬೊಟ್ಟು ಕರಗಿ ಹೋಗುತ್ತಿತ್ತು. ಬರಿಹಣೆಯಲ್ಲಿ ಮನೆಗೆ ಹೋದರೆ 'ನೀರಿನಲ್ಲಿ ಈಜಾಡಿದೆಯಾ' ಎಂದು ನಾಲ್ಕು ಬೀಳುವುದು. ಅದಕ್ಕೆ ಒಂದು ಉಪಾಯವನ್ನು ಕಂಡುಕೊಂಡೆವು. ಉಣ್ಣೆಯ (ಲಾಂಟಾನಾ) ಹಣ್ಣನ್ನು ಕಿವಿಚಿದರೆ ಕಪ್ಪು ರಸ ಬರುತ್ತದೆ. ಆ ರಸದಿಂದ ಸಾದಿನ ಬೊಟ್ಟನ್ನು ಇಟ್ಟುಕೊಂಡು ಸಂಜೆ ಮನೆಗೆ ಹೋಗುತ್ತಿದ್ದೆವು.

ಬಸವಾಪಟ್ಟಣದ ಹುಡುಗರು ಬಹಳ ಉತ್ಸಾಹಭರಿತರೂ ತುಂಟರೂ ಆಗಿದ್ದರು. ನಾನು ಬಸವಾಪಟ್ಟಣಕ್ಕೆ ಶಾಲೆಗೆ ಬಂದು ಸೇರಿದ ದಿನವೇ "ಹೊಸ ಹುಡುಗಾಸ್" ಎಂದು ಕೂಗಿದರು.

ಊರಿಂದ ಊರಿಗೆ ಒಬ್ಬೊಬ್ಬನೇ ನಡೆದುಕೊಂಡು ಹೋಗುವ ಅಭ್ಯಾಸ ನನಗೆ ಅವರೆಗೆ ಆಗಿರಲಿಲ್ಲ. ಪ್ರತಿ ಶನಿವಾರ ಮಧ್ಯಾಹ್ನ ಬಸವಾಪಟ್ಟಣದಿಂದ ಹೊರಟು, ಐದು ಮೈಲಿ ದೂರದ ಕೇರಳಾಪುರಕ್ಕೆ ನಡೆದುಕೊಂಡು ಬರುತ್ತಿದ್ದೆ. ಸೋಮವಾರ ಬೆಳಗ್ಗೆ ಬೇಗ ಹೊರಟು ಬಸವಾಪಟ್ಟಣಕ್ಕೆ ಶಾಲೆಯ ಸಮಯಕ್ಕೆ ಹೋಗಿ ಸೇರುತ್ತಿದ್ದೆ. ಕ್ರಮೇಣ ನಾನೊಬ್ಬನೇ ನಡೆದುಕೊಂಡು ಬರುವ ಧೈರ್ಯ ಬಂದಿತು.

ಒಂದು ಸಲ ಒಬ್ಬರು 'ಒಳದಾರಿಯಲ್ಲಿ ಹೋದರೆ ನಾಲ್ಕೇ ಮೈಲಿ ಆಗುವುದು ನೋಡು' ಎಂದು ಕರೆದುಕೊಂಡು ಹೋದರು. ಅಂದಿನಿಂದ ಈ ಒಳಮಾರ್ಗದಲ್ಲಿ ಬರುತ್ತಿದ್ದೆ. ಹಿರೀಕೆರೆಯ ಬಳಿಯಿಂದ ಸಾಗುವಾಗ ಕೆರೆಯಲ್ಲಿ ಈಜಾಡುವ ಮತ್ತು ಕೆರೆಯ ಮೇಲೆ ಹಾರಾಡುವ ಹಕ್ಕಿಗಳ ಅಂದವನ್ನು ನೋಡಿ ನಲಿಯುವ ಅವಕಾಶ ಸಿಕ್ಕುತ್ತಿತ್ತು. ಹೊಲಗದ್ದೆ , ಮರಗಿಡಗಳ ನಡುವೆ ಸಾಗುವ ದಾರಿ ಪ್ರಕೃತಿಸೌಂದರ್ಯದಿಂದ ನನ್ನ ಮನಸ್ಸನ್ನು ಮುದಗೊಳಿಸುತ್ತಿತ್ತು. ನನ್ನನ್ನು ಒಂಟಿತನವಾಗಲಿ ಹೆದರಿಕೆಯಾಗಲಿ ಕಾಡುತ್ತಿರಲಿಲ್ಲ.

a a a

ಈ ಮಧ್ಯೆ ನಮ್ಮ ತಂದೆಯವರನ್ನು ಅಪ್ಪರ್ ಸೆಕೆಂಡರಿ ಟ್ರೈನಿಂಗ್‌ಗಾಗಿ ಮೈಸೂರಿಗೆ ಕಳುಹಿಸಿತು ಸರ್ಕಾರ. 'ಇದುವರೆಗೂ ಸಂಸಾರವನ್ನು ಕೇರಳಾಪುರದಲ್ಲಿ ಬಿಟ್ಟು ದೂರದೂರದ ಊರುಗಳ ಸರಕಾರಿ ಶಾಲೆಗಳಿಗೆ ವರ್ಗವಾಗುತ್ತ, ಒಂದು ರೀತಿಯ ಅಲೆಮಾರಿತನವನ್ನು ಅನುಭವಿಸಿದುದು ಸಾಕು. ಮೈಸೂರಿನಲ್ಲಿ ಎಲ್ಲರೂ ಒಟ್ಟಿಗೆ ಇರಬಹುದು' ಎಂದು ನಮ್ಮ ತಂದೆಯವರು ಮೈಸೂರಿನಲ್ಲಿ ಮನೆ ಮಾಡಲು ಆಲೋಚಿಸಿದರು. ಅಲ್ಲದೆ ನಾನು

ಎಂಟನೆಯ ತರಗತಿಯನ್ನು ಮೈಸೂರಿನಲ್ಲಿ ಮುಗಿಸಬಹುದೆಂಬ ಅಭಿಪ್ರಾಯವೂ ಇದ್ದಿತು. ಆದುದರಿಂದ ಮೈಸೂರಿನ ದಳವಾಯಿ ಹೈಸ್ಕೂಲಿನ ಎದುರಿನಲ್ಲಿದ್ದ ವೀಣೆಶೇಷಣ್ಣನವರ ಮನೆಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡರು. ಅಲಿದ್ದಶೇಷಣ್ಣನವರ ಮೊಮ್ಮಗ ಸ್ವರಮೂರ್ತಿ ತುಂಬ ಚಟುವಟಿಕೆಯಿಂದ ಕೂಡಿದ್ದ. ಒಂದೊಂದು ಸಲ ನನ್ನನ್ನು ಮಹಡಿಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಪಿಯಾನೋ ನುಡಿಸಿ ತೋರಿಸುತ್ತಿದ್ದ. ಸಂಗೀತದ ಗಂಧವಿಲ್ಲದ, ಸಂಗೀತದ್ದಲ್ಲದ ಪರಿಸರದಲ್ಲಿ ಬೆಳೆದ ನಾನು ಸ್ವರಮೂರ್ತಿಯ ಪಿಯಾನೋ ಸಂಗೀತ ಕೇಳಿ ಆಶ್ಚರ್ಯ ಆನಂದಗಳಲ್ಲಿ ಮುಳುಗುತ್ತಿದ್ದೆ. ತಮ್ಮ ತಾತನವರ ಸಂಗೀತ -ಪುಸ್ತಕಗಳನ್ನು ನನಗೆ ತೋರಿಸುತ್ತಿದ್ದ. ಸಂಗೀತದ ಬಗ್ಗೆ ಅಷ್ಟಾಗಿ ಅರಿವಿಲ್ಲದ ನಾನು ಆ ಪುಸ್ತಕಗಳನ್ನು ಕಂಡು ಬೆರಗಾಗುತ್ತಿದ್ದೆ. ಆ ದಪ್ಪ ಪುಸ್ತಕದಲ್ಲಿ ಇರುವ ಅಗಾಧ ಜ್ಞಾನದ ಬಗ್ಗೆ ಚಿಂತಿಸುತ್ತಿದ್ದೆ. ಸ್ವರಮೂರ್ತಿನಾರಾಯಣರಾವ್ ಮುಂದೆ ಬೆಂಗಳೂರಿನಲ್ಲಿ ನೆಲಸಿ ಪ್ರಸಿದ್ಧ ಸಂಗೀತಗಾರರಾದರು.

ಆಗಲೇ ಮೈಸೂರಿನಲ್ಲಿ ವಿದ್ಯುಚ್ಛಕ್ತಿ ಇದ್ದುದರಿಂದ ವಿದ್ಯುದ್ದೀಪದ ಕೆಳಗೆ ಕುಳಿತು ಓದುವ ಆನಂದ ನನಗೆ ದೊರೆಯಿತು.

ನವರಾತ್ರಿಯ ಉತ್ಸವಗಳನ್ನು ನಾನು ಮೊದಲನೆಯ ಸಲಕ್ಕೆ ಆ ವರ್ಷ ಮೈಸೂರಿನಲ್ಲಿ ಇದ್ದುದರಿಂದ ನೋಡಿದೆ.

a a a

ಮುಂದೆ ನಮ್ಮ ತಂದೆಯವರಿಗೆ ಶ್ರವಣಬೆಳಗೊಳದ ಮಿಡಲ್ ಸ್ಕೂಲಿಗೆ ವರ್ಗವಾಯಿತು. ಆಗ ಶ್ರವಣಬೆಳಗೊಳದಲ್ಲಿ ಮನೆ ಮಾಡಿ ನಮ್ಮ ತಾಯಿ ಮತ್ತು ನನ್ನನ್ನು ಅಲ್ಲಿಗೆ ಕರೆಸಿಕೊಂಡರು. ಅಲ್ಲಿನ ಮಿಡಲ್ ಸ್ಕೂಲಿನಲ್ಲಿ ನಾನು ಎಂಟನೆಯ ತರಗತಿಗೆ ಸೇರಿದೆ. ಅಲ್ಲಿಯ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು; ಮುತುವರ್ಜಿಯಿಂದ ಪಾಠ ಹೇಳಿಕೊಡುತ್ತಿದ್ದರು. ನಮ್ಮ ತಂದೆಯವರು ಅದೇ ಶಾಲೆಯಲ್ಲಿ ಕನ್ನಡ, ಗಣಿತ, ಮೊದಲಾದ ಪಾಠಗಳನ್ನು ಬೋಧಿಸುತ್ತಿದ್ದರು.

ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದೆ.

ನನ್ನ ಹದಿಮೂರು-ಹದಿನಾಲ್ಕನೆಯ ವಯಸ್ಸುಗಳಲ್ಲಿ ಶ್ರವಣಬೆಳಗೊಳದಲ್ಲಿ ಇದ್ದ ಕಾಲವು ನನ್ನ ಮನಸ್ಸಿನಲ್ಲಿ ಎಂದೆಂದಿಗೂ ಹಸಿರಾಗಿ ಉಳಿದಿದೆ. ಆಗ ಅದೆಷ್ಟು ಸಲ ಬೆಟ್ಟವನ್ನು ಹತ್ತಿ ಬಾಹುಬಲಿಯನ್ನು ನೋಡಿ, ಆ ದೃಶ್ಯವನ್ನು ಹೃದಯದಲ್ಲಿ ಸೆರೆ ಹಿಡಿದಿಟ್ಟುಕೊಂಡಿದ್ದೆನೋ ಇಂದಿಗೂ ಈ ನನ್ನ ಮನಸ್ಸಿನಲ್ಲಿ ಆ ರೂಪ ಅಚ್ಚೊತ್ತಿದೆ.

ಲೋಯರ್ ಸೆಕೆಂಡರಿಯಲ್ಲಿ ಉತ್ತೀರ್ಣನಾದ ಮೇಲೆ ನಾನು ಮುಂದೇನು ಮಾಡಬೇಕೆಂದು ನಮ್ಮ ತಂದೆ ಆಲೋಚಿಸತೊಡಗಿದರು; ಮೈಸೂರಿನಲ್ಲಿದ್ದ ನಮ್ಮ ದೊಡ್ಡಪ್ಪನವರನ್ನು ಕಂಡು ಮಾತನಾಡಿದರು. ಎಸ್.ಎಸ್.ಎಲ್.ಸಿ. ವರೆಗೆ ತಮ್ಮ ಮನೆಯಲ್ಲಿಟ್ಟುಕೊಳ್ಳಲು ಅವರು ಉದಾರ ಮನಸ್ಸಿನಿಂದ ಒಪ್ಪಿದ್ದು ನನ್ನ ಅದೃಷ್ಟದ ಬಾಗಿಲನ್ನು ತೆರೆದಂತಾಯಿತು. ಹೈಸ್ಕೂಲು ಬಾಗಿಲು ತೆಗೆಯುವ ಹೊತ್ತಿಗೆ ನಾನು ಮೈಸೂರಿಗೆ ಹೋಗುವುದು ನಿಶ್ಚಯವಾಯಿತು. ಇಲ್ಲಿಂದ ನನ್ನ ಜೀವನದ ಹೊಸ ಯುಗ ಆರಂಭವಾಯಿತು.

a a a

೧೯೩೩ನೆಯ ಇಸವಿಯ ಜೂನ್ ತಿಂಗಳಲ್ಲಿ ನನ್ನನ್ನು ನಮ್ಮ ತಂದೆ ಮೈಸೂರಿಗೆ ಕರೆದುಕೊಂಡು ಬಂದು ನನ್ನ ದೊಡ್ಡಪ್ಪನವರಾದ ಕೆ. ವೆಂಕಟಕೃಷ್ಣಯ್ಯನವರ ಮನೆಯಲ್ಲಿ ಬಿಟ್ಟರು. ಆಗ ನಮ್ಮ ದೊಡ್ಡಪ್ಪನವರು ವಾಸ ಇದ್ದುದು ದೇವಾಂಬಾ ಅಗ್ರಹಾರದಲ್ಲಿ - ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ದೇವಶಿಖಾಮಣಿ ಅಳಸಿಂಗರಾಚಾರ್ಯ ಎಂಬವರ ಮನೆಯಲ್ಲಿ.

ನಮ್ಮ ತಂದೆ ನನ್ನನ್ನು ಮನೆಗೆ ಸಮೀಪದಲ್ಲಿದ್ದ ಬನುಮಯ್ಯ ಪ್ರೌಢಶಾಲೆಗೆ ಫೋರ್ತ್ ಫಾರಂ ತರಗತಿಗೆ ಸೇರಿಸಿದರು. ಕನ್ನಡ ವಿದ್ವಾನ್ ಗಂಗಾಧರಶಾಸ್ತ್ರಿಗಳು ಅಲ್ಲಿ ಇದ್ದರು. ಅವರು ಮಹಾರಾಜರ ಅರಮನೆಯ ಜ್ಯೋತಿಷಿಯಾಗಿ, ಮಹಾಸ್ವಾಮಿಯವರಿಗೆ ಬಹಳ ಆಪ್ತರಾಗಿದ್ದರು. ಶಾಸ್ತ್ರಿಗಳ ಸಲಹೆ ಇಲ್ಲದೆ ಮಹಾಸ್ವಾಮಿಗಳು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ನಾಲ್ವಡಿ ಕೃಷ್ಣರಾಜಒಡೆಯರು ಮತ್ತು ವಿಶೇಷವಾಗಿ ಜಯಚಾಮರಾಜ ಒಡೆಯರು ಗಂಗಾಧರಶಾಸ್ತ್ರಿಗಳ ಪೋಷಕರಾಗಿದ್ದರು. ಅರಮನೆಯಿಂದ ಪ್ರಕಟವಾಗುತ್ತಿದ್ದ ಹಲವು ಪ್ರಾಚೀನ ಪುರಾಣ ಗ್ರಂಥಗಳನ್ನು ಅವರು ಅರ್ಥ - ತಾತ್ಪರ್ಯಸಹಿತ ಕನ್ನಡಕ್ಕೆ ಅನುವಾದಿಸಿದ್ದಾರೆ. ಅಲ್ಲದೆ ಹಲವು ಸ್ವತಂತ್ರ ಗ್ರಂಥಗಳನ್ನೂ ರಚಿಸಿದ್ದಾರೆ. ಇಂಥ ವಿದ್ವಾಂಸರನ್ನು ಗುರುವಾಗಿ ಪಡೆದ ನಾನು ನನ್ನನ್ನು ಧನ್ಯನೆಂದು ಭಾವಿಸುತ್ತೇನೆ. ಮುಂದೆ ನಾನು ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕನಾಗಿ ಬಂದ ಮೇಲೆ, ಗುರು ಗಂಗಾಧರಶಾಸ್ತ್ರಿಗಳ ಬಳಿ ಹೋಗಿ ಅನೇಕ ಬಾರಿ ಅವರ ಸಲಹೆ, ಆಶೀರ್ವಾದಗಳನ್ನು ಪಡೆದುಕೊಂಡೆ.

ಅಲ್ಲಿ ಸಂಸ್ಕೃತಕ್ಕೆ ಈಶ್ವರಶಾಸ್ತ್ರಿಗಳಿದ್ದರು. ತುಂಬಾ ಸರಳರು. ಹುಡುಗರನ್ನು ಯಾತಕ್ಕಾದರೂ ಬಯ್ಯಲೇಬೇಕಾದರೆ 'ಕತ್ತೆಗಳಾ' ಎನ್ನುತ್ತಿದ್ದರು. ಸ್ವಲ್ಪ ಕೋಪಬಂದಿತೆಂದರೆ 'ಹತ್ತು ಸಾರಿ ಕತ್ತೆಗಳಾ' 'ನೂರು ಸಾರಿ ಕತ್ತೆಗಳಾ' ಎಂದು ಬಯ್ಯುತ್ತಿದ್ದರು.

ಅವರ ಶಬ್ದ ಕೋಶದಲ್ಲಿ ಇನ್ನಾವ ಬೈಗುಳ ಅಥವಾ ಕಟುಟೀಕೆಯ ಮಾತುಗಳಿರಲಿಲ್ಲ. ಶ್ರೋತ್ರಿಯರಂತೆ ಕಚ್ಚೆ ಪಂಚೆಯನ್ನುಟ್ಟು ಒಂದು ಪಂಚೆಯನ್ನು ಹೊದೆದು ತರಗತಿಗೆ ಬರುತ್ತಿದ್ದರು.

ನಮಗೆ ಭೂಗೋಳವನ್ನು ತೆಗೆದುಕೊಳ್ಳುತ್ತಿದ್ದ ಎ. ವೆಂಕಟಸುಬ್ಬಯ್ಯನವರು ಶಿಸ್ತಿಗೆ ಹೆಸರಾದವರು. ಅವರು ರಂಗಾಚಾರ್ಲು ಪುರಭವನದ ಮುಂದುಗಡೆಯ ಕೊಠಡಿಯಲ್ಲಿ ಒಂದು ವ್ಯಾಯಾಮಶಾಲೆಯನ್ನು ನಡೆಸುತ್ತಿದ್ದರು. ವೆಂಕಟಸುಬ್ಬಯ್ಯ ನವರಿಂದ ಆಕರ್ಷಿತನಾಗಿ ನಾನು ಹಲವು ವರ್ಷ ಅವರ ವ್ಯಾಯಾಮಶಾಲೆಯಲ್ಲಿ ವ್ಯಾಯಾಮ ಮಾಡಿದ್ದೇನೆ, ಕಸರತ್ತು ಮಾಡಿದ್ದೇನೆ. ಆದರೆ ನಾನೆಂದೂ ಜಟ್ಟಿಯಾಗಲೇ ಇಲ್ಲ. ಆದರೆ ನನ್ನ ಆರೋಗ್ಯ ಅನೇಕ ವರ್ಷಗಳ ಕಾಲ ತಕ್ಕಮಟ್ಟಿಗೆ ಉತ್ತಮವಾಗಿದ್ದುದಕ್ಕೆ ಈ ವ್ಯಾಯಾಮ ಏನಾದರೂ ಸ್ವಲ್ಪ ಸಹಾಯಮಾಡಿರಬಹುದು ಎಂದು ಎಣಿಸುತ್ತೇನೆ.

ಆಗಿನ ಕಾಲದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಅಷ್ಟಾಗಿ ಮನೆ ಪಾಠಕ್ಕೆ ಹೋಗುತ್ತಿರಲಿಲ್ಲ. ವಿದ್ಯಾವಂತ ತಂದೆ ತಾಯಿಗಳು ಮನೆಯಲ್ಲಿ ಇದ್ದರೆ ಅವರೇ ತಮ್ಮ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ನನಗೆ ಈ ರೀತಿಯ ಮಾರ್ಗದರ್ಶಕರಾರೂ ಇರಲಿಲ್ಲ. ಹೀಗಾಗಿ ತರಗತಿಯಲ್ಲಿ ಕೇಳಿದುದನ್ನು, ಪಠ್ಯ ಪುಸ್ತಕಗಳನ್ನು ಓದುವುದರ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಪುಸ್ತಕಭಂಡಾರಕ್ಕೆ ಹೋಗಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಸ್ವಲ್ಪಸ್ವಲ್ಪವಾಗಿ ಬೆಳೆಸಿಕೊಳ್ಳತೊಡಗಿದೆ. ಒಂದು ವಸ್ತುವಿನ ಉದ್ದವನ್ನು ಹೇಗೆ ಅಳೆಯಬೇಕು ಎಂಬುದು ಭೌತಶಾಸ್ತ್ರದಲ್ಲಿ ಒಂದು ಪಾಠ. ಪುಸ್ತಕಭಂಡಾರದಲ್ಲಿ ನಮಗೆ ಗೊತ್ತುಪಡಿಸದೆ ಇರುವ ಒಂದು ಪಠ್ಯಪುಸ್ತಕವನ್ನು ಓದಿ ಅಲ್ಲಿ ಕೊಟ್ಟಿದ್ದ ಬೇರೊಂದು ವಿಧಾನವನ್ನು ತರಗತಿ ಉಪಾಧ್ಯಾಯರು ಕೊಟ್ಟಿದ್ದ ಟೆಸ್ಟ್‌ನಲ್ಲಿ ಬರೆದೆ. ಈ ಉತ್ತರವನ್ನು ನೋಡಿ ತರಗತಿಯಲ್ಲಿ ನನ್ನ ಉತ್ತರವನ್ನು ತೋರಿಸಿ ನನ್ನ ಬೆನ್ನು ತಟ್ಟಿದ್ದರು ಶೇಷಗಿರಿರಾಯರು. ಹೀಗೆ ನನ್ನ ಹೈಸ್ಕೂಲು ವಿದ್ಯಾಭ್ಯಾಸ ಸರಾಗವಾಗಿ ನಡೆದುಕೊಂಡು ಹೋಯಿತು. ನಾನು ತರಗತಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿ ಎಂದೇನೂ ಎನ್ನಿಸಿಕೊಂಡಿರಲಿಲ್ಲ. ಹಳ್ಳಿಯಿಂದ ಪಟ್ಟಣಕ್ಕೆ ಬಂದು ಸ್ವಂತ ವ್ಯವಸಾಯದಿಂದ ಆದಷ್ಟು ಉತ್ತಮವಾಗಿ ಅಭ್ಯಾಸ ಮಾಡುತ್ತಿದ್ದೆ. ತರಗತಿಗೆ ಬರುತ್ತಿದ್ದ ನನ್ನ ಸಹಾಧ್ಯಾಯಿಗಳಲ್ಲಿ ಕೆಲವರು ನನಗಿಂತ ಚಟುವಟಿಕೆಯುಳ್ಳವರೂ, ಬುದ್ಧಿವಂತರೂ ಆಗಿದ್ದರು ಎಂದು ಹೇಳಲು ನನಗೆ ಸಂಕೋಚವೇನೂ ಇಲ್ಲ. ಉಳ್ಳವರ ಮನೆಯ ಹುಡುಗರು ಉತ್ತಮವಾದ ಬಟ್ಟೆಗಳನ್ನು ಧರಿಸಿರುತ್ತಿದ್ದರು. ಅವರಿಗೆ ತಂದೆ ತಾಯಿಗಳು ಪಾಕೆಟ್ಮನಿ ಕೊಡುತ್ತಿದ್ದುದರಿಂದ ತಮಗೆ ಬೇಕಾದ ಪೆಪ್ಪರಮೆಂಟು, ಹಣ್ಣು ಮೊದಲಾದವುಗಳನ್ನು ಕೊಂಡು ಸುಖಿಸುತ್ತಿದ್ದರು. ನನಗೆ ಇದ್ದದ್ದು ಎರಡು ಜತೆ ಉಡುಪು. ಪಂಚೆಉಟ್ಟು, ಶರಟು ಹಾಕಿ, ಮೇಲೆ ಕೋಟನ್ನು ಧರಿಸುತ್ತಿದ್ದೆ. ಇದ್ದದ್ದು ಒಂದೇ ಕೋಟು. ಮೈಸೂರಿಗೆ ಬಂದ ಮೇಲೆಯೇ ನಮ್ಮ ದೊಡ್ಡಪ್ಪನವರ ನಿರ್ದೇಶನದಂತೆ ಬನಿಯನ್ನು, ಒಳಚಡ್ಡಿ ಧರಿಸುವುದನ್ನು ಕಲಿತೆ. ಕಾಲಿಗೆ ಚಪ್ಪಲಿ ಬಂದದ್ದು ನಾನು ಫಿಫ್ತ್ ಫಾರಂಗೆ ಬಂದಾಗ.

ಪಠ್ಯೇತರಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಒಂದೆರಡು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿದ್ದೆ. ಒಂದು ನಾಟಕದಲ್ಲಿ ಒಂದು ಸಣ್ಣ ಪಾತ್ರ ಮಾಡಿದ್ದೆ. ಸ್ಕೂಲಿನಲ್ಲಿ ನಡೆಯುವ ಕಂಠಪಾಠಸ್ಪರ್ಧೆ ಮೊದಲಾದವುಗಳಲ್ಲಿ ಭಾಗವಹಿಸುತ್ತಿದ್ದೆ. ಕ್ರೀಡೆಗಳಲ್ಲಿ ಭಾಗವಹಿಸಲು ಅಷ್ಟೇನೂ ಅನುಕೂಲವಿರಲಿಲ್ಲ. ದೇಶಪ್ರೇಮದಿಂದ ಪ್ರೇರಿತನಾಗಿ ಲಾಠಿ-ಲೆಜ್ಜಿಂಗಳನ್ನು ಕಲಿತಿದ್ದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಯಿತು. ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣನಾದ ಮೇಲೆ ಮುಂದಕ್ಕೆ ಓದನ್ನು ಮುಂದುವರೆಸಬೇಕೆಂಬ ಆಕಾಂಕ್ಷೆ ನನಗೆ. ಸರಕಾರಿ ಶಾಲಾ ಉಪಾಧ್ಯಾಯರಾದ ನಮ್ಮ ತಂದೆಯವರಿಗೆ ಬರುತ್ತಿದ್ದುದು ತಿಂಗಳಿಗೆ ಮೂವತ್ತೋ-ಮೂವತ್ತೈದೋ ರೂಪಾಯಿ. ಹೀಗಿರುವಾಗ 'ಮೊದಲು ಸೇರಿಕೊಳ್ಳುವಾಗಿನ' ಫೀಸನ್ನೇ ಕೊಡುವುದು ಕಷ್ಟವಾಗಿದ್ದಿತು. ಆಗ ನಮ್ಮ ತಂದೆ ಹಾಗೂ ದೊಡ್ಡಪ್ಪನವರಲ್ಲಿ ಸಮಾಲೋಚನೆ ನಡೆಯಿತು. ಕೊನೆಗೆ ನಮ್ಮ ದೊಡ್ಡಪ್ಪನವರು, "ಇನ್ನೂ ಎರಡುವರ್ಷ ಇಂಟರ್ ಮೀಡಿಯೆಟ್ ಮುಗಿಯುವವರೆಗೆ, ನಮ್ಮ ಮನೆಯಲ್ಲೇ ಹಿಂದಿನಂತೆ ಇರಲಿ. ಆದರೆ ಕಾಲೇಜುಫೀಸು ಮೊದಲಾದವುಗಳನ್ನು ನೀನು ನೋಡಿಕೊಳ್ಳಬೇಕು" ಎಂದರು. ಆಗ ನಮ್ಮ ತಂದೆಯವರು ಎಲ್ಲಿಯೋ ಸಾಲ ಮಾಡಿ ಒಂದು ನೂರು ರೂಪಾಯಿಗಳನ್ನು ತಂದುಕೊಟ್ಟರು. ೧೯೩೬ನೆಯ ಇಸವಿಯಷ್ಟು ಹಿಂದಿನ ಕಾಲದಲ್ಲಿ ನೂರುರೂಪಾಯಿಗೆ ಇಂದಿನ ಸಾವಿರರೂಪಾಯಿಗಿಂತ ಹೆಚ್ಚು ಬೆಲೆ ಇದ್ದಿತು. ನನ್ನ ಪರಿಸ್ಥಿತಿಯನ್ನು ವಿವರಿಸಿ ಆಗ ಇಂಟರ್ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟ್ ಆಗಿದ್ದ ಬಿ. ನಾಗೇಶರಾಯರನ್ನು ಪ್ರಾರ್ಥಿಸಲಾಗಿ, "ಫ್ರೀಷಿಪ್‌ಗೆ ಅರ್ಜಿ ಕರೆಯುತ್ತೇವೆ. ಆಗ ಅರ್ಜಿಹಾಕು, ನೋಡೋಣ" ಎಂದರು. ಕೊನೆಗೆ ಅರ್ಧಫ್ರೀಷಿಪ್ ಮಾಡಿಕೊಟ್ಟರು. ಹೀಗೆ ಇಂಟರ್‌ಮೀಡಿಯೆಟ್ ಕಾಲೇಜಿಗೆ ಸೇರಿದೆ.

೬. ಇಂಟರ್‌ಮೀಡಿಯೆಟ್ ಕಾಲೇಜು

ನನಗೆ ಸೈನ್ಸ್ ತೆಗೆದುಕೊಳ್ಳುವ ಬಯಕೆ ಇದ್ದರೂ, ಮುಂದೆ ಬಿ.ಎಸ್‌ಸಿ. ಓದಲು ಆ ಕಾಲದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹೋಗಬೇಕಾಗಿದ್ದುದರಿಂದ ಮಾನವಿಕ ವಿಭಾಗವನ್ನೇ ಆರಿಸಿಕೊಂಡೆ. ಆಗ ಮಾನವಿಕ ಸ್ನಾತಕೋತ್ತರ ವಿಭಾಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೂ, ವಿಜ್ಞಾನ ಸ್ನಾತಕೋತ್ತರ ವಿಭಾಗ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೂ ಇದ್ದುವು. ಇತಿಹಾಸ, ತರ್ಕಶಾಸ್ತ್ರ ಹಾಗೂ ಸಂಸ್ಕೃತವನ್ನು ಐಚ್ಛಿಕ ವಿಷಯಗಳಾಗಿ ಆರಿಸಿಕೊಂಡೆ. ಇಂಗ್ಲಿಷ್ ಪ್ರಥಮಭಾಷೆ, ಕನ್ನಡ ದ್ವಿತೀಯ ಭಾಷೆಯಾಗಿತ್ತು. ಕನ್ನಡ, ಸಂಸ್ಕೃತಗಳೆರಡನ್ನೂ ಅಧ್ಯಯನ ಮಾಡಿದ್ದು , ಮುಂದೆ ನಾನು ಮಹಾರಾಜ ಕಾಲೇಜಿನಲ್ಲಿ ಕನ್ನಡ ಆನರ್ಸ್ ತೆಗೆದುಕೊಂಡಾಗ ತುಂಬ ಉಪಯೋಗಕ್ಕೆ ಬಂದಿತು.

ಶ್ರೀಯುತರುಗಳಾದ ಎಸ್. ಕೃಷ್ಣಮೂರ್ತಿ, ವಿ.ಎನ್. ತ್ಯಾಗರಾಜನ್, ಶ್ರೀನಿವಾಸಮೂರ್ತಿ ಇವರು ನಮಗೆ ಇಂಗ್ಲಿಷ್ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಎಸ್. ಕೃಷ್ಣಮೂರ್ತಿಯವರಿಗೆ ವಿದ್ಯಾಥಿಗಳು 'ಜಾನ್ಸನ್' ಎಂದು ಹೆಸರು ಕಟ್ಟಿದ್ದರು. ಬಾಸ್ವೆಲ್ ಎಂಬಾತ ಬರೆದ ಜಾನ್ಸನ್ನನ ಜೀವನದ ಚರಿತ್ರೆಯನ್ನು ಬಹಳ ಉತ್ಸಾಹದಿಂದ ಕೃಷ್ಣಮೂರ್ತಿಯವರು ವರ್ಣಿಸುತ್ತಿದ್ದರು. ಅಲ್ಲದೆ ಸುಪ್ರಸಿದ್ಧವಾದ ಜಾನ್ಸನ್ನನ ಇಂಗ್ಲಿಷ್ ಕೋಶದ ಕೆಲವು ಸ್ವಾರಸ್ಯಕರ ಸಂಗತಿಗಳನ್ನು ಅವರು ನಿರೂಪಿಸುತ್ತಿದ್ದರು. ಜಾನ್ಸನ್ನನ ಕಲ್ಪನೆಯನ್ನು ಇವರಲ್ಲಿ ಕಂಡ ವಿದ್ಯಾರ್ಥಿಗಳು, ಕೃಷ್ಣಮೂರ್ತಿಗಳನ್ನು ಜಾನ್ಸನ್ ಎಂದು ಕರೆದುದು ಸಹಜವಾಗಿತ್ತು. ನಿಧಾನಗತಿಯಲ್ಲಿ ಇವರು ಒಂದೊಂದು ವಾಕ್ಯವನ್ನೂ ಉಚ್ಚರಿಸುತ್ತ ಪಾಠ ಮಾಡುತ್ತಿದ್ದರೆ ಎಷ್ಟು ಬೇಗ ತರಗತಿ ಮುಗಿದುಹೋಗುತ್ತದೆ ಎನ್ನಿಸುತ್ತಿತ್ತು. ಅಬ್ಬರವಿಲ್ಲದ ಮಂದಗತಿಯ ತುಂಬುಪ್ರವಾಹದ ನಡೆಯಂತೆ ಇವರ ಮಾತಿನ ಶೈಲಿ. ತ್ಯಾಗರಾಜನ್‌ರವರಾದರೋ ಗಂಭೀರ ಪ್ರಕೃತಿಯವರು; ಪಾಠವೂ ಹಾಗೆಯೇ ಗಂಭೀರ. ಕೇಳಿದ ಪ್ರಶ್ನೆಗೆ ಯಾವನಾದರೂ ವಿದ್ಯಾರ್ಥಿ ಸರಿಯಾದ ಉತ್ತರ ಕೊಡದಿದ್ದರೆ ಅಥವಾ ಏನಾದರೂ ಅಡ್ಡ ಮಾತನಾಡಿದರೆ ಆಗ ತುಂಬ ಗಂಭೀರವಾಗಿ ಟೀಕಿಸುತ್ತಿದ್ದರು, ಇಲ್ಲವೆ ಬಯ್ಯುತ್ತಿದ್ದರು ಎನ್ನೋಣವೇ? ಬಯ್ಯುವುದು ಎಂದರೆ ಬೈಗುಳವಲ್ಲ. "ಏನಯ್ಯ ದಡ್ಡ ಶಿಖಾಮಣಿ, ನೀನು ಓದುವುದಕ್ಕೆ ಲಾಯಕ್ಕಿಲ್ಲ. ಹೋಗಿ ಹೋಟಲಿನಲ್ಲಿ ಮಾಣಿಯಾಗು. ನಾನು ಬಂದು ನಿನ್ನಿಂದ ಕಾಫಿ ತೆಗೆದುಕೊಳ್ಳುವ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತೇನೆ" ಎನ್ನುತ್ತಿದ್ದರು. ಇದು ಅವರ ಟೀಕೆಯ ಒಂದು ಉದಾಹರಣೆ. ನನಗಿಂತ ಹಿಂದೆ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಕೆಲವರು "ತ್ಯಾಗರಾಜನ್‌ರವರು ಬಯ್ಯುವುದನ್ನು ಈಚೆಗೆ ಸುಧಾರಿಸಿಕೊಂಡಿದ್ದಾರೆ" ಎಂದು ಹೇಳುತ್ತಿದ್ದರು. ಹೋಟೆಲು ಎಂಬುದಕ್ಕೆ ಬದಲಾಗಿ ಕ್ಷೌರಿಕನ ಸೆಲೂನ್ ಎನ್ನುತ್ತಿದ್ದರು. "ನಾನು ಮೊದಲ ಕ್ಷೌರಕ್ಕೆ ನಿನಗೆ ಗಿರಾಕಿಯಾಗುತ್ತೇನೆ'' ಎಂದು ಹೇಳುತ್ತಿದ್ದರೆಂದು ಪ್ರತೀತಿ. ಈ ರೀತಿಯ ಟೀಕೆ, ಬೈಗುಳಗಳು ಕೇವಲ ತಮಾಷೆಗಾಗಿ ಬರುತ್ತಿದ್ದವು ಎಂಬುದು ಸ್ಪಷ್ಟ.

ಕನ್ನಡ ತರಗತಿಗಳ ವಿಷಯಕ್ಕೆ ಬಂದಾಗ ನನಗೆ ಶ್ರೀ ಕೆ. ವಿ. ಪುಟ್ಟಪ್ಪನವರ ನೆನಪು ಮೇಲಿಂದ ಮೇಲೆ ಬರುತ್ತಿರುತ್ತದೆ. ಶ್ರೀ ಸಿ.ಕೆ. ವೆಂಕಟರಾಮಯ್ಯನವರ 'ಬುದ್ಧ' ನಮಗೆ ಪಠ್ಯಪುಸ್ತಕವಾಗಿತ್ತು. ಪುಟ್ಟಪ್ಪನವರು ಬುದ್ಧನ ಜೀವನ, ಅವನ ಸಾಧನೆ, ತತ್ತ್ವ, ಸಾಕ್ಷಾತ್ಕಾರ ಮೊದಲಾದ ವಿಷಯಗಳನ್ನು ವಿವರವಾಗಿ ಮನಮುಟ್ಟುವಂತೆ ನಿರೂಪಿಸಿದುದನ್ನು ನಾನು ಎಂದೂ ಮರೆಯಲಾರೆ. ಒಂದೊಂದು ಪದವನ್ನೂ ತೂಗಿತೂಗಿ ಬೆಲೆಕಟ್ಟಿ ವಿಷಯನಿರೂಪಣೆ ಮಾಡುತ್ತಿದ್ದರು.

ಕೆ.ವಿ. ಪುಟ್ಟಪ್ಪನವರು ಒಂದು ಸಲ ಸುಂದರ ಪ್ರಕೃತಿ ದೃಶ್ಯವೊಂದರ ಬಗ್ಗೆ ಲೇಖನ ಬರೆಯಲು ಕೊಟ್ಟರು. ನಾನು ಶ್ರವಣಬೆಳಗೊಳದ ಪ್ರಕೃತಿಸೌಂದರ್ಯದ ವರ್ಣನೆಯನ್ನು ಮಾಡಿ ಪ್ರಬಂಧ ಬರೆದಿದ್ದೆ. ಇದನ್ನು ಅವರು ತರಗತಿಯಲ್ಲಿ ಶ್ಲಾಘಿಸಿದರು. ಇಂಥ ಪ್ರೋತ್ಸಾಹಗಳನೇಕವು ನಾನು ಕನ್ನಡ ಬಿ.ಎ., ಆನರ್ಸ್‌ಗೆ ಸೇರಲು ಧೈರ್ಯ ಕೊಟ್ಟವು.

ಪಂಪರಾಮಾಯಣ ನಮ್ಮ ಇನ್ನೊಂದು ಪಠ್ಯವಿಷಯ. ಪ್ರೊಫೆಸರ್ ಡಿ.ಎಲ್. ನರಸಿಂಹಾಚಾರ್ಯರು ಈ ಪಾಠ ಮಾಡುತ್ತಿದ್ದರು. ಅಭಿನವಪಂಪನೆಂದು ಹೆಸರಾಂತ ನಾಗಚಂದ್ರಕವಿಯ ಕಾವ್ಯ ಎಷ್ಟು ಮಧುರವೋ, ರಸಸ್ಯಂದಿಯೋ ಅಷ್ಟೇ ಮಧುರವಾಗಿ, ರಸವತ್ತಾಗಿ, ಮುಗುಳುನಗೆಯಿಂದಲೇ ಪಾಠ ಮಾಡುತ್ತ ನಮ್ಮ ತಲೆದೂಗಿಸಿದರು ಶ್ರೀ ಡಿ.ಎಲ್.ಎನ್. ಅವರು. ಪಂಪನ ದುರಂತರಾವಣನ ಪಾತ್ರವು ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ಅಚ್ಚೊತ್ತಿ ನಿಂತಿರುವುದಕ್ಕೆ ಡಿ.ಎಲ್.ಎನ್. ಅವರ ಪಾಠವೇ ಕಾರಣ.

ಸಂಸ್ಕೃತದ ತರಗತಿಗೆ ಹೋಗುವುದೆಂದರೆ ಖುಷಿ ನನಗೆ. ಶ್ರೀ ಎಸ್. ರಾಮಚಂದ್ರರಾಯರು (ಮುಂದೆ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾದರು) ನಮಗೆ ಸಂಸ್ಕೃತ

ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಇವರ ಇಂಗ್ಲಿಷ್ ವಾಗ್ವೈಭವ ಹಾಗೂ ಸಂಸ್ಕೃತ ಪಾಂಡಿತ್ಯ ನನ್ನನ್ನು ಬೆರಗುಗೊಳಿಸಿತು. ಆಗಿನ ಕಾಲದಲ್ಲಿ ಸಂಸ್ಕೃತದ ಪಾಠ ಇಂಗ್ಲಿಷಿನಲ್ಲಿ ನಡೆಯುತ್ತಿತ್ತು ಮತ್ತು ಪರೀಕ್ಷೆಯಲ್ಲಿ ಕೂಡಾ ಇಂಗ್ಲಿಷಿನಲ್ಲಿಯೇ ಉತ್ತರಿಸಬೇಕಾಗಿತ್ತು. ಕಾಳಿದಾಸನ ನಾಟಕವಾಗಲಿ, ಕಾವ್ಯವಾಗಲಿ, ವ್ಯಾಕರಣವಾಗಲಿ ಯಾವುದೇ ಆದರೂ ಅವರು ರಸವತ್ತಾಗಿ ಪಾಠ ಮಾಡುತ್ತಿದ್ದರು. ಯಾವಾಗಲೂ ನಗುನಗುತ್ತ ವಿದ್ಯಾರ್ಥಿಗಳನ್ನು ಸಂಬೋಧಿಸುತ್ತಿದ್ದುದರಿಂದ, ಅವರ ಶಿಷ್ಯರೆಲ್ಲರೂ ರಾಮಚಂದ್ರರಾಯರಲ್ಲಿ ಪ್ರೀತಿ ಹಾಗೂ ಗೌರವ ಭಾವನೆಯನ್ನು ಹೊಂದಿರುತ್ತಿದ್ದರು.

ಪ್ರೊ. ಪಿ.ಜಿ. ಸತ್ಯಗಿರಿನಾಥನ್‌ರವರು ಮತ್ತು ಡಾ. ಎಂ.ವಿ. ಕೃಷ್ಣರಾಯರು ನಮ್ಮ ಚರಿತ್ರೆಯ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಪಿ.ಜಿ.ಸತ್ಯಗಿರಿನಾಥನ್‌ರವರ ಪಾಠ ಎಂದರೆ ಅರ್ಧಗಂಟೆ ಸಾಮಯಿಕವಿಷಯಗಳ ಪರಿಶೀಲನೆ ಹಾಗೂ ಅರ್ಧಗಂಟೆ ಚರಿತ್ರೆಯ ಪಾಠ. ಬೆಳಗಿನ ಬಿ.ಬಿ.ಸಿ.ಯ ಸುದ್ದಿ ಸಮಾಚಾರ ಮತ್ತು ಪ್ರಪಂಚದ ಆಗುಹೋಗುಗಳನ್ನು ಮೊದಲು ವಿವರಿಸುತ್ತಿದ್ದರು. ಇದರಿಂದ ನಮ್ಮ ಸಾಮಾನ್ಯಜ್ಞಾನ ಮತ್ತು ಪ್ರಪಂಚದ ಆಗುಹೋಗುಗಳ ಬಗೆಗಿನ ತಿಳುವಳಿಕೆ ಹೆಚ್ಚುತ್ತಿತ್ತು. ಸರಳವಾಗಿ, ಅಷ್ಟೇ ಸರಸವಾಗಿ, ನಿಧಾನವಾಗಿ ಸಾಗುತ್ತಿದ್ದುದು ಅವರ ಪಾಠದ ವೈಶಿಷ್ಟ್ಯ. ಡಾ.ಎಂ.ವಿ.ಕೃಷ್ಣರಾಯರದು ಗಂಭೀರ ವ್ಯಕ್ತಿತ್ವ. ಅವರ ಅಸ್ಖಲಿತವಾಣಿ ಹಾಗೂ ಅವರ ಭವ್ಯ ವಾಗ್ಧೋರಣೆ ನಮ್ಮನ್ನು ಚಕಿತಗೊಳಿಸುತ್ತಿತ್ತು. ಬಿಟ್ಟ ಕಣ್ಣು , ಬಿಟ್ಟ ಮನಸ್ಸುಗಳಿಂದ ಅವರನ್ನೇ ನೋಡುತ್ತ ಅವರ ಪಾಠವನ್ನು ಕೇಳುತ್ತ ಕುಳಿತುಬಿಡುತ್ತಿದ್ದೆವು.

ತರ್ಕಶಾಸ್ತ್ರದ ಪಾಠ ತೆಗೆದುಕೊಳ್ಳುತ್ತಿದ್ದವರು ಡಾ.ಎನ್. ಎಸ್. ನಾರಾಯಣಶಾಸ್ತ್ರಿಗಳು. ಇಂಟರ್‌ಮೀಡಿಯೆಟ್ ತರಗತಿಯವರಾದ ನಮಗೆ ಇಷ್ಟು ದೊಡ್ಡ ಪರಿಣತರ ಬೋಧನೆ ದೊರೆಯುತ್ತಿದೆಯಲ್ಲ ಎಂಬ ಹೆಮ್ಮೆ. ಜತೆಗೆ ನಾರಾಯಣಶಾಸ್ತ್ರಿಗಳು ಒಳ್ಳೆಯ ರಸಿಕರು, ನಟರು ಮತ್ತು ಸಾಹಿತ್ಯಪ್ರಿಯರು ಎಂದೆಲ್ಲ ಹೆಸರುಗಳಿಸಿದ್ದುದರಿಂದ ಅವರ ತರಗತಿಗಳಿಗೆ ಹೋಗುವ ನಮಗೆ ತಲೆಯಲ್ಲಿ ಕೋಡು ಮೂಡಿರುವಂತೆಯೇ ಭಾಸವಾಗುತ್ತಿತ್ತು. ಆದರೆ ನಾಟಕದಲ್ಲಿ ಅವರು ಪಾತ್ರ ವಹಿಸಿದುದನ್ನು ನೋಡುವ ಭಾಗ್ಯ ನನಗೆ ದೊರೆಯಲಿಲ್ಲ ಎಂಬುದೊಂದು ಕೊರತೆ ಈಗಲೂ ಉಳಿದುಬಿಟ್ಟಿದೆ.

ಶ್ರೀ ಜಿ. ಹನುಮಂತರಾಯರು ಹಾಗೂ ಶಿಕ್ಷಣಶಾಸ್ತ್ರದ ತಜ್ಞರಾದ ಶ್ರೀ ಸಿ. ರಂಗಾಚಾರ್‌ರವರುಗಳು ರೋವರ್ ತಂಡದ ಮುಖ್ಯಸ್ಥರಾಗಿದ್ದರು. ಸ್ಕೌಟ್‌ನ ಉದ್ದೇಶವೋ ಅಥವಾ ಅದರ ಪೋಷಾಕೋ ಅಥವಾ ಇವೆರಡೂ ನನ್ನನ್ನು ಆಕರ್ಷಿಸಿದ್ದಿರಬಹುದು ಎನ್ನಿಸುತ್ತದೆ. ಸ್ಕೌಟ್ ಯೂನಿಫಾರಂ ಧರಿಸಿಕೊಂಡು, ಸ್ಕೌಟ್ ಪೇಟ ತಲೆಗೆ ಅಲಂಕರಿಸಿಕೊಂಡು, ಕಾಲುಚೀಲ ಷೂ ಹಾಕಿ ನಿಲ್ಲುವುದು ! ಆಹ, ಏನು ಠೀವಿ! 'ಸ್ಕೌಟ್ ಕಾರ್ಯಕ್ರಮದಲ್ಲಿ ಶಿಬಿರಗಳನ್ನು ನಡೆಸುತ್ತಾರೆ ಮತ್ತು ಹಲವು ವಿಷಯಗಳನ್ನು ತಿಳಿಸಿ ಕಲಿಸಿಕೊಡುತ್ತಾರೆ; ಶಿಸ್ತಿನ ಸಿಪಾಯಿಯಾಗುವುದನ್ನು ಕಲಿಯಬಹುದು' ಎಂಬೆಲ್ಲ ಆಶೋತ್ತರಗಳು ನನ್ನನ್ನು ಸ್ಕೌಟ್ ಆಗಲು ಪ್ರೇರೇಪಿಸಿದುವು ಎಂದು ಹೇಳಬಹುದು.

ನನ್ನ ಜತೆ ಕಾಲೇಜಿನಲ್ಲಿ ಒಡನಾಡಿಗಳಾಗಿದ್ದ (ಸಂಸ್ಕೃತದ ಉದ್ದಾಮ ಪಂಡಿತರಾದ) ಡಾ|| ಕೆ. ಕೃಷ್ಣಮೂರ್ತಿ, (ಪ್ರಸಿದ್ಧ ಕವಿಗಳೂ ಲೇಖಕರೂ ಆದ) ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ಮತ್ತು (ಸಂಸ್ಕೃತ ವಿದ್ವಾಂಸರಾಗಿ ಮುಂದೆ ಒಂದು ಕಾಲೇಜಿನ ಪ್ರಾಂಶುಪಾಲರಾದ) ಶ್ರೀ ಬಿ.ಎಚ್. ಶ್ರೀಧರ ಇವರುಗಳೊಡನೆ ಆಗ ಕಳೆದ ರಸನಿಮಿಷಗಳೆಷ್ಟೋ!

೭. ಸ್ವಾತಂತ್ರ್ಯ ಚಳವಳಿಯ ಪ್ರಭಾವಲಯ

ನಾನು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ (೧೯೩೬-೩೮) ಸ್ವಾತಂತ್ರ್ಯ ಹೋರಾಟಕ್ಕಾಗಿ ರಾಜಕೀಯ ಚಳವಳಿ ನಡೆಯುತ್ತಿತ್ತು. ೧೯೪೨ ರ ಚಲೇಜಾವ್ ಚಳವಳಿಗೆ ಸಿದ್ಧತೆಯ ರೂಪದಲ್ಲಿದ್ದಿತು ಆಗಿನ ಚಳವಳಿ ಎನ್ನಬಹುದು. ನಮಗೆಲ್ಲ ಮಹಾತ್ಮ ಗಾಂಧೀಜಿಯವರ ಉಪದೇಶಗಳು ಮತ್ತು ಭಾಷಣಗಳು ವೇದವಾಕ್ಯಗಳಾಗಿರುತ್ತಿದ್ದವು. ಪರದೇಶಿ ವಸ್ತ್ರಗಳನ್ನು ಸುಟ್ಟು ಹಾಕಿ ಎಂದು ಹೇಳಿದರು - ಗಾಂಧೀಜಿ. ನನ್ನ ಹತ್ತಿರ ಇದ್ದದ್ದು ಒಂದು ಹಳೆಯ ಟೋಪಿ. ಇದು ವಿದೇಶಿ ಸರಕಿನಿಂದ ಮಾಡಿದ್ದು. ಮಡಿಸುವ ಟೋಪಿ. ಒಳಗಡೆ ಮಖಮಲ್ ಕೊಟ್ಟು ಅಂಚಿಗೆ ಚರ್ಮದ ಲೈನಿಂಗ್ ಇದ್ದಿತು. ಬನುಮಯ್ಯ ಚೌಕದಲ್ಲಿ ವಿದೇಶೀ ಬಟ್ಟೆಗಳನ್ನು ಒಂದು ದಿವಸ ಎಲ್ಲರೂ ಸೇರಿಕೊಂಡು ಸುಟ್ಟೆವು. ನಾನೂ ನನ್ನ ಟೋಪಿಯನ್ನು ಬೆಂಕಿಗೆ ಆಹುತಿಯಾಗಿ

ಅರ್ಪಿಸಿ, ಧನ್ಯನಾದೆ ಎಂದುಕೊಂಡೆ. ಆ ವಿದೇಶೀ ಟೋಪಿಯ ಬದಲಿಗೆ ಒಂದು ಶುಭ್ರವಾದ ಬಿಳಿ ಗಾಂಧೀ ಟೋಪಿಯನ್ನು ಕೊಟ್ಟರು. ನಾನು ಆ ಟೋಪಿಯನ್ನು ಹಾಕುವುದು ಅನಿವಾರ್ಯವಾಗಿತ್ತು ; ಹಳ್ಳಿಯ ಸಂಪ್ರದಾಯಸ್ಥ ಸಮಾಜದಲ್ಲಿ ಬೆಳೆದು ಸರಿಯಾದ ಕಾಲದಲ್ಲಿ ಉಪನಯನ ಮಾಡಿಸಿಕೊಂಡವನು ಜುಟ್ಟು-ಜನಿವಾರ ಇಟ್ಟಿರಲೇಬೇಕಲ್ಲವೆ?

ನನ್ನ ಸ್ನೇಹಿತನೊಬ್ಬನಿಗೆ ಕೇರಳಾಪುರದಲ್ಲಿ ಉಪನಯನವಾಯಿತು. ನನಗೆ ಉಪನಯನ ಮಾಡಲಿಲ್ಲ ಎಂದು ದುಃಖದಿಂದ ನಮ್ಮ ತಂದೆಯ ಬಳಿಗೆ ಬಂದು 'ನನಗೆ ಯಾವಾಗ ಉಪನಯನವನ್ನು ಮಾಡುತ್ತೀರಿ' ಎಂದು ಕೇಳಿ ಹಟ ಮಾಡಿದ್ದೆ. ಉಪನಯನ ಎಂದರೆ ಏನು, ಅದರ ಅರ್ಥವೇನು, ಅದರಿಂದ ತಂದೆಗೆ ಎಂಥ ಖರ್ಚಿನ ಹೊರೆಯಾಗುತ್ತದೆ ಎಂಬುದನ್ನು ಅರಿಯದ ಮುಗ್ಧನಾದ ನನ್ನ ಪ್ರಶ್ನೆಯನ್ನು ಕೇಳಿ ನಮ್ಮ ತಂದೆಯವರಿಗೆ ಏನೆನ್ನಿಸಿತೋ. 'ಸಂಪ್ರದಾಯಾನುಸಾರಿಯಾಗಿ ಬಾಳುವ ಪವಿತ್ರ ಉದ್ದೇಶದಿಂದ ತನ್ನ ಮುಂಜಿ ಮಾಡೆಂದು ಕೇಳಿದನೇ ?' ಎಂದು ಆಶ್ಚರ್ಯಪಟ್ಟಿರಲೂಬಹುದು, ಮೆಚ್ಚಿಕೊಂಡಿರಲೂಬಹುದು. ಮಗನ ಕೋರಿಕೆಗಿಂತಲೂ, ತಾವಿದ್ದ ಸಂಕೇತಿಸಮಾಜದಲ್ಲಿ ಎಂಟು ವರ್ಷಕ್ಕೆ ಉಪನಯನವನ್ನು ಮಾಡಬೇಕೆಂಬ ಧರ್ಮಶ್ರದ್ಧೆ ಅವರನ್ನು ಕಾಡುತ್ತಿತ್ತೋ, ಇಲ್ಲ , ಉಪನಯನದ ಖರ್ಚಿಗೆ ಎಲ್ಲಿಂದ ದುಡ್ಡು ಹೊಂದಿಸೋಣ ಎಂಬ ಪೇಚಾಟಕ್ಕೆ ಸಿಲುಕಿದರೋ? ಹೇಗಾದರೂ ಇರಲಿ, ಕೇರಳಾಪುರದ ಶ್ರೋತ್ರಿಯರ ಆ ಸಂಕೇತಿ ಸಮಾಜದಲ್ಲಿ ಮಾರನೆಯ ವರ್ಷವೇ ನನ್ನ ಉಪನಯನವಾಯಿತು. ಉಪನಯನದನಂತರ ನಡೆಯಬೇಕಾದ ಬ್ರಹ್ಮಚಾರಿಯ ಜೀವನಕ್ಕೂ, ಕರ್ಮಕ್ಕೂ ನಾನು ಚ್ಯುತಿ ತರಲಿಲ್ಲವಾದುದರಿಂದ ಉಪನಯನದ ಉದ್ದೇಶವನ್ನು ಸಾರ್ಥಕಪಡಿಸಿದೆನೆಂದು ಭಾವಿಸಬಹುದು. ಹದಿನೈದು ವರ್ಷಗಳ ಕಾಲ ತ್ರಿಕಾಲ ಸಂಧ್ಯಾವಂದನೆಯನ್ನೂ, ಕೇರಳಾಪುರದಲ್ಲಿ ಇದ್ದಷ್ಟು ಕಾಲ ಬೆಳಗ್ಗೆ-ಸಂಜೆ ಸಮಿತ್ತೆಂಬ ಅಗ್ನಿಕಾರ್ಯವನ್ನೂ ನಿಷ್ಠೆಯಿಂದ ನಡೆಸಿದೆ.

ಹರಿಜನ ಪತ್ರಿಕೆಯನ್ನು ತಪ್ಪದೆ ಓದಿ ಗಾಂಧೀಜಿಯವರ ತತ್ವಗಳನ್ನು ಅರ್ಥಮಾಡಿಕೊಂಡು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಾನು ಸಹಜವಾಗಿ ನಿರ್ಧರಿಸಿದೆ. ರಾಷ್ಟ್ರೈಕ್ಯತೆಗೆ ಕಾರಣವಾಗುವ ಹಿಂದಿಯನ್ನು ಕಲಿಯಬೇಕು ಮತ್ತು ಕಲಿಸಬೇಕು ಎಂದು ಗಾಂಧೀಜಿಯವರು ಭಾರತೀಯರಿಗೆ ಹೇಳುತ್ತಿದ್ದರು. ಅದರಂತೆ ಮೈಸೂರು ಹಿಂದಿ ಪ್ರಚಾರಸಭೆಯವರು ಶಿವರಾಮಪೇಟೆಯಲ್ಲಿ ನಡೆಸುತ್ತಿದ್ದ ಹಿಂದಿ ತರಗತಿಗಳಿಗೆ ಸೇರಿಕೊಂಡೆ. ಪಂಡಿತ್ ಹಿರಣ್ಮಯಜೀ ಎಂಬುವರು ಮದರಾಸಿನ ದಕ್ಷಿಣಭಾರತ ಹಿಂದಿ ಪ್ರಚಾರಸಭೆಯಿಂದ ನಿಯುಕ್ತರಾದ ಹಿಂದಿ ಪ್ರಚಾರಕರಾಗಿದ್ದರು. ಟಿ. ಕೃಷ್ಣಮೂರ್ತಿ ಮತ್ತು ಕೆ.ವಿ. ಶ್ರೀನಿವಾಸಮೂರ್ತಿ ಇವರುಗಳು ಹಿಂದಿ ಪ್ರಚಾರದ ಮೇಲ್ವಿಚಾರಣೆಯನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದರು.

ಹಿಂದಿ ಕಲಿಯಲು ಆರಂಭಿಸಿದ ನಾನು ಪ್ರಾಥಮಿಕ್, ಮಾಧ್ಯಮಿಕ್ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳನ್ನು ಪಾಸು ಮಾಡಿದೆ. ನನಗಿದ್ದ ಉದ್ದೇಶವೆಂದರೆ 'ಹಿಂದಿ ರಾಷ್ಟ್ರಭಾಷೆ, ಅದನ್ನು ಎಲ್ಲರೂ ಕಲಿಯಬೇಕು' ಎಂಬುದು. ಗಾಂಧೀಜಿಯವರ ಆಶೀರ್ವಾದ ಬೇರೆ ಇದೆ ಎಂದಮೇಲೆ ಕೇಳಬೇಕೆ? ಹಿಂದಿ ಕಲಿಯುವುದು ಒಂದು ಪವಿತ್ರ ಕಾಯಕ. ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಓದುತ್ತ ಜತೆಜತೆಗೆ 'ರಾಷ್ಟ್ರಭಾಷಾ ವಿಶಾರದ್' ಎಂಬ ಹಿಂದಿ ಪರೀಕ್ಷೆಗೆ ಕುಳಿತು ಉತ್ತೀರ್ಣನಾದೆ. ಈ ಪರೀಕ್ಷೆಯಲ್ಲಿ ಮೈಸೂರು ನಗರಕ್ಕೆ ಎರಡನೆಯವನಾಗಿ ಉತ್ತೀರ್ಣನಾಗಿದ್ದೆ. ನಾನು ವಿಶಾರದ್ ಪರೀಕ್ಷೆ ಪದವಿಯನ್ನು ಪಡೆದುದು ೧೯೩೮ನೆಯ ಇಸವಿಯ ಜನವರಿಯಲ್ಲಿ ನಡೆದ ಪರೀಕ್ಷೆಯಲ್ಲಿ. ಉತ್ಸಾಹದಿಂದ ಹಿಂದಿ ಪ್ರಚಾರದಲ್ಲಿ ಭಾಗವಹಿಸುತ್ತಿದ್ದೆ. ನನ್ನ ಸ್ನೇಹಿತ ವರದಾಚಾರ್ ಎಂಬುವನ ಜತೆಯಲ್ಲಿ ಹಿಂದಿ ತರಗತಿಗಳನ್ನು ನಡೆಸಿ ಹಿಂದಿ ಪ್ರಥಮ, ಮಾಧ್ಯಮ ಹಾಗೂ ರಾಷ್ಟ್ರಭಾಷಾ ತರಗತಿಗಳಿಗೆ ಪಾಠ ಹೇಳುತ್ತಿದ್ದೆ. ಮೈಸೂರಿನ ದೊಡ್ಡ ಗಡಿಯಾರದ ಚೌಕದಲ್ಲಿರುವ ಕಾವೇರಿಪಟ್ಟಣಂಸುಬ್ರಾಯಶೆಟ್ಟರ ಛತ್ರದಲ್ಲಿ ನಮಗೆ ಹಿಂದಿ ತರಗತಿಗಳನ್ನು ನಡೆಸಲು ಒಂದು ಕೊಠಡಿಯನ್ನು ಉಚಿತವಾಗಿ ಬಿಟ್ಟುಕೊಟ್ಟಿದ್ದರು. 'ಜಿಂಗಾರಿ' (ಕಿಡಿ) ಎಂಬ ಹೆಸರಿನಲ್ಲಿ ಹಿಂದಿಯಲ್ಲಿ ಲೇಖನಗಳನ್ನು ಹಿಂದಿ ಪ್ರಚಾರ ಸಮಿತಿ ಹೊರ ತರುತ್ತಿದ್ದ ಕೈ ಬರಹದ ಪತ್ರಿಕೆಗೆ ಬರೆದು ಕೊಡುತ್ತಿದ್ದೆ.

ಗಾಂಧೀಜಿಯವರು ಜನರಿಗೆ ಕೊಟ್ಟ ಇನ್ನೊಂದು ಬಹು ಮುಖ್ಯ ಕರೆ ಎಂದರೆ ಎಲ್ಲರೂ ಚರಕದಲ್ಲಿ ನೂಲಬೇಕು ಮತ್ತು ನೂಲನ್ನು ಕೊಟ್ಟು ಬಟ್ಟೆಯನ್ನು ನೇಯಿಸಿಕೊಂಡು, ಆ ಬಟ್ಟೆಯಿಂದ ಉಡುಪನ್ನು ತಯಾರಿಸಿ ಧರಿಸಬೇಕು ಎಂಬುದು. ಚರಕದಲ್ಲಿ ನೂಲುವುದನ್ನು ಗಾಂಧೀಜಿ ಒಂದು ಯಜ್ಞವೆಂದೇ ಕರೆದರು. ಭಾರತದೇಶದ ಸ್ವಾತಂತ್ರ್ಯ ಸಂಪಾದನೆಗೆ ಇದು ಪರಮಸಾಧನ ಎಂದರು ಗಾಂಧೀಜಿ. ಮೈಸೂರಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿದ್ದ ಬದನವಾಳು ಖಾದಿ ಭಂಡಾರದಿಂದ ನೂಲಲು ಯೋಗ್ಯವಾದ ಹತ್ತಿ ಪಿಂಜಿಯನ್ನು ಕೊಂಡುಕೊಂಡು ಬಂದೆ. ನನ್ನ ಆತ್ಮೀಯ ಗೆಳೆಯ ಸೋಮಸುಂದರ ಶರ್ಮ ಅವರ ಮನೆಯಲ್ಲಿ ಅಟ್ಟದ ಮೇಲಿಟ್ಟಿದ್ದ ಚರಕವನ್ನು ಕಾಡಿ ಬೇಡಿ ತಂದೆ. ರಾಟೆ ತಿರುಗಿಸಿದ್ದಾಯಿತು, ನೂಲು ತೆಗೆದದ್ದೂ ಆಯಿತು.

ಹಿಂದಿ ಪ್ರಚಾರ ಸಭೆಯು ಪ್ರತಿವರ್ಷ ಡಿಸೆಂಬರ್ ಅಥವಾ ಜನವರಿ ತಿಂಗಳಿನಲ್ಲಿ ವಾರ್ಷಿಕೋತ್ಸವವನ್ನು ಆಚರಿಸುವುದು ವಾಡಿಕೆಯಾಗಿದ್ದಿತು. ಅಲ್ಲದೆ, ಆ ಸಂದರ್ಭದಲ್ಲಿ 'ಮೇವಾಡ್ ಪತನ್', 'ದುರ್ಗಾದಾಸ್', 'ಮಹಾರಾಣಾ ಪ್ರತಾಪ್' ಮೊದಲಾದ ಹಿಂದಿ ಐತಿಹಾಸಿಕ ನಾಟಕಗಳಲ್ಲಿ ಒಂದನ್ನು ಪ್ರದರ್ಶಿಸುವುದು ವಾಡಿಕೆಯಾಗಿದ್ದಿತು. ಮೈಸೂರು ಪುರಭವನದಲ್ಲಿ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದ್ದಿತು. ಈ ನಾಟಕದಲ್ಲಿ ನನಗಿಂತ ಹಿರಿಯರಾದ ನಾರಾಯಣರಾವ್ ಮೊದಲಾದವರು ಪ್ರಧಾನ ಪಾತ್ರಗಳಲ್ಲಿ ವಿಜೃಂಭಿಸುತ್ತಿದ್ದರು. ಅಲ್ಲಿ ನನಗೂ ಒಂದು ಸಣ್ಣ ಪಾತ್ರವನ್ನು ಕೊಡುತ್ತಿದ್ದರು. ನಾಟಕ ಪ್ರದರ್ಶನದಲ್ಲಿ ನಾನು ನೇರ ಭಾಗಿಯಾದುದು ನಾಟಕಗಳ ಪ್ರದರ್ಶನದ ಬಗ್ಗೆ ಒಳ್ಳೆಯ ಅನುಭವವನ್ನು ನೀಡಿತು. ಒಂದು ತಿಂಗಳು ಮೊದಲಿನಿಂದ ರಿಹರ್ಸಲ್ ನಡೆಯುತ್ತಿದ್ದಿತು. ಸಂಭಾಷಣೆಗಳನ್ನು ಗಟ್ಟಿಮಾಡಿಕೊಂಡು ಸಂದರ್ಭಕ್ಕೆ ಸರಿಯಾಗಿ ಹೇಗೆ ಹೇಳಬೇಕು ಎಂಬುದಲ್ಲದೆ ರಂಗಸಜ್ಜಿಕೆ, ಪರಿಕರ, ವೇಷಭೂಷಣಗಳು ಇವುಗಳ ಬಗ್ಗೆ ಸ್ವಲ್ಪಮಟ್ಟಿನ ಅನುಭವ ದೊರೆಯಿತು. ಮುಂದೆ ಸೆ॥ ಫಿಲೋಮಿನಾ ಕಾಲೇಜಿನಲ್ಲಿ ಪ್ರತಿವರ್ಷವೂ ವಿದ್ಯಾರ್ಥಿಗಳಿಂದ ನಾಟಕಗಳನ್ನು ಆಡಿಸುವಲ್ಲಿ , ಈ ಮೊದಲಿನ ಅನುಭವ ನನಗೆ ಸಹಾಯಕ್ಕೆ ಬಂದಿತು. ಅಲ್ಲದೆ ವಿದ್ಯಾರ್ಥಿಗಳು ನಟಿಸಿದ ಹಾಗೂ ಅಧ್ಯಾಪಕವರ್ಗ ನಟಿಸಿದ ನಾಟಕಗಳಲ್ಲಿ ಪಾತ್ರವಹಿಸುವುದೂ ನನಗೆ ಸುಲಭವಾಯಿತು.

೮. ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಉತ್ತೀರ್ಣ

ವಿದ್ಯಾಭ್ಯಾಸವನ್ನು ಸ್ವತಂತ್ರವಾಗಿ ಮುಂದುವರೆಸಲು ನಮ್ಮ ತಂದೆಯವರಿಂದ ಪೂರ್ಣ ಆರ್ಥಿಕ ಸಹಾಯವನ್ನು ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಆದುದರಿಂದ ಕೆಲವರ ಮನೆಗಳಿಗೆ ಹೋಗಿ ಮಕ್ಕಳಿಗೆ ಪಾಠ ಹೇಳಿಕೊಡುವ ಪರಿಪಾಠವನ್ನಿಟ್ಟುಕೊಂಡೆ. ಅಲ್ಲದೆ ಒಂದಿಬ್ಬರು ದೊಡ್ಡವರಿಗೆ ಹಿಂದಿ ಪಾಠವನ್ನು ಹೇಳಿಕೊಡುತ್ತಿದ್ದೆ. ಮೈಸೂರಿನ ಹಿರಿಯ ಶ್ರೇಷ್ಠ ವಕೀಲರೂ, ಕನ್ಯಕಾಪರಮೇಶ್ವರಿ ಸಹಕಾರ ಸಂಘಕ್ಕೆ ಬೆನ್ನೆಲುಬಾಗಿ ನಿಂತಿದ್ದವರೂ, ಮೈಸೂರಿನ ಸಾಮಾಜಿಕ ಜೀವನದ ಗಣ್ಯರೂ ಆಗಿದ್ದ ಪಿ. ಗೋಪಾಲಕೃಷ್ಣ ಶ್ರೇಷ್ಠಿಯವರಿಗೆ ಸ್ವಲ್ಪ ಕಾಲ ಹಿಂದಿ ಹೇಳಿಕೊಟ್ಟೆ. ಇದೇ ಸಮಯದಲ್ಲಿ ಜಯನಗರದಲ್ಲಿ ವನಿತಾಸದನವನ್ನು ನಡೆಸುತ್ತಿದ್ದ ದೇಶಭಕ್ತರೂ ಸ್ವಾತಂತ್ರ್ಯ ಹೋರಾಟಗಾರರೂ ಆದ ಪಿ. ಸುಶೀಲಾ ಬಾಯಿ ಮತ್ತು ಸ್ಫೂರ್ತಿಯಸೆಲೆಯಾಗಿದ್ದ ಅವರ ಪತಿ ಎನ್. ನಾಗೇಶರಾಯರ ಪರಿಚಯವಾಯಿತು. ವನಿತಾಸದನದಲ್ಲಿ ಸಂಜೆಯುಹೊತ್ತು ಮಹಿಳೆಯರಿಗೆ ಇಂಗ್ಲಿಷ್ ಪಾಠ ಹೇಳಿಕೊಡುವಂತೆ ಹೇಳಿದರು. ಇದಕ್ಕಾಗಿ ಕೊಡುತ್ತಿದ್ದ ಸಂಭಾವನೆಯು ಅವರ ದೃಷ್ಟಿಯಿಂದ ಅಲ್ಪವಾಗಿದ್ದರೂ, ನನ್ನ ದೃಷ್ಟಿಯಲ್ಲಿ ಅದು ಅಮೂಲ್ಯ ನಿಧಿಯೇ ಆಗಿದ್ದಿತು. ವಿದ್ಯಾಭ್ಯಾಸದ ಸಮಯದಲ್ಲಿ ನನಗೆ ಈ ಹಣವು ತುಂಬಾ ಉಪಯೋಗವಾಯಿತು. ಶ್ರೀಮತಿ ಸುಶೀಲಾಬಾಯಿ ಮತ್ತು ಶ್ರೀ ಎನ್. ನಾಗೇಶರಾಯರು ನನ್ನನ್ನು ತಮ್ಮ ಮಗನೋಪಾದಿಯಲ್ಲಿ ನೋಡಿಕೊಂಡರು. ಅವರಾಗಲೀ ಅವರ ಮಕ್ಕಳಾದ ಚಂದ್ರ, ಇಂದಿರ, ಅನಸೂಯ ಮೊದಲಾದವರೇ ಆಗಲೀ ನನ್ನನ್ನು ಪರಕೀಯನೆಂದು ಕಾಣಲಿಲ್ಲ. ಅವರ ಮನೆಯಲ್ಲಿ ಪ್ರೈವೇಟ್ ಎಂಬ ಭಾಗವೇ ಇರಲಿಲ್ಲ ಎಂದು ಹೇಳಬಹುದು. ಮನೆಯ ಕೊಠಡಿಗಳಲ್ಲಿ ಸಂಜೆ-ತರಗತಿಗಳು ನಡೆಯುತ್ತಿದ್ದುವು. ವನಿತಾಸದನದ ವಿದ್ಯಾರ್ಥಿನಿಯರೇ ಆಗಲಿ, ಅಡುಗೆ ಮನೆಯಿಂದ ಬಚ್ಚಲು ಮನೆಯವರೆಗೂ ಸರ್ವತಂತ್ರ ಸ್ವತಂತ್ರರು ಎನ್ನುವಂತೆ ನಿಸ್ಸಂಕೋಚವಾಗಿ ವ್ಯವಹರಿಸುತ್ತಿದ್ದರು. ನಾನು ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆಸುವ ಆ ಪ್ರಪಂಚವೇ ಬೇರೆಯಾಗಿತ್ತು, ಈ ಪ್ರಪಂಚವೇ ಬೇರೆಯಾಗಿತ್ತು.

ನನ್ನ ಜೀವನದ ಪ್ರಧಾನ ಸ್ಫೂರ್ತಿಯ ಸೆಲೆಯು ವನಿತಾಸದನ ಮತ್ತು ಅದರ ಉಸಿರಾಗಿದ್ದ ಶ್ರೀಮತಿ ಸುಶೀಲಾಬಾಯಿ ಮತ್ತು ಶ್ರೀ ನಾಗೇಶರಾಯರೇ ಆಗಿದ್ದರು.

a a a

ವನಿತಾಸದನದ ಸಂಜೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪ್ರಪಂಚವೇ ಬೇರೆ. ಕಾಲೇಜಿನಲ್ಲಿರುವಾಗ ಅಲ್ಲಿಯ ಪಾಠಪ್ರವಚನಗಳ ಬಗ್ಗೆಯೇ ಚಿಂತನೆ; ಗೆಳೆಯರೊಡನೆ ಮಾತನಾಡಿದರೂ ಅದೇ. ಕಾಲೇಜಿನಲ್ಲಿ ತರಗತಿಗಳಿಗೆ ಬಿಡುವಿದ್ದಾಗ ಮತ್ತು ತರಗತಿಗಳ ನಡುವೆ ಬಿಡುವಿದ್ದಾಗ ಪುಸ್ತಕ ಭಂಡಾರ ನನಗೆ ಆಶ್ರಯ. ಹಾಗೆಂದು ಹೇಳಿದ ಮಾತ್ರಕ್ಕೆ ನಾನು ಪುಸ್ತಕಭಂಡಾರದಲ್ಲಿ ಪುಸ್ತಕದ ಹುಳುವಾಗಿ ಕುಳಿತಿರುತ್ತಿದ್ದೆನೆಂದೇನೂ ಅರ್ಥವಲ್ಲ. ನಾನು ಪ್ರಚಂಡ ಪುಸ್ತಕಾಧ್ಯಾಯಿಯೂ ಆಗಿರಲಿಲ್ಲ. ನನಗೆ ಪ್ರಿಯವೆನಿಸಿದ ಪುಸ್ತಕಗಳನ್ನು ತೆಗೆದುಕೊಂಡು ಅಲ್ಲಿಯೇ ಕುಳಿತು ಓದುತ್ತಿದ್ದುದು ನನ್ನ ಅಭ್ಯಾಸ. ಹೀಗೆ ಓದಿದ ಹಲವು

ಗ್ರಂಥಗಳಲ್ಲಿ ಒಂದು ಇನ್ನೂ ನನ್ನ ನೆನಪಿನಿಂದ ಮಾಸಿಲ್ಲ. ಅದು ಇಂಗ್ಲಿಷ್ ಭಾಷೆಯಲ್ಲಿದ್ದ ರ‍್ಹೈಸ್ ಡೇವಿಡ್ ಎಂಬುವರ **ಡಯಲಾಗ್ಸ್ ಆಫ್ ಬುದ್ಧ** (ಬುದ್ಧನ ಸಂವಾದಗಳು) ಎಂಬ ಗ್ರಂಥ. ಬುದ್ಧನ ಜೀವನದ ಹಲವು ಅಂಶಗಳು ನನ್ನ ಮೇಲೆ ಪ್ರಭಾವ ಬೀರಿದವು ಮತ್ತು ಹಲವು ಸಂದೇಹಗಳಿಗೆ ಪರಿಹಾರವನ್ನು ದೊರಕಿಸಿಕೊಟ್ಟವು. ನಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕಾದ ಬೆಟ್ಟದಷ್ಟು ಕೆಲಸ ಇರುವಾಗ ದೇವರಿದ್ದಾನೆಯೇ, ಇಲ್ಲವೇ, ಎಂಬುದನ್ನು ಚರ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂಬ ಸತ್ಯ ಬುದ್ಧನ ಮಾತಿನಲ್ಲಿ ಅಡಗಿದೆ. ಅದೇ ಸಮಯದಲ್ಲಿ ಹೀಗೆಯೇ ಎಂ.ಆರ್. ಶ್ರೀನಿವಾಸ ಮೂರ್ತಿಯವರು ಬರೆದ **ನಾಗರಿಕ, ಧರ್ಮದುರಂತ** ಮೊದಲಾದ ನಾಟಕಗಳು ಜನರ ದೇಶಭಕ್ತಿಯನ್ನು ಎಚ್ಚರಿಸಿ ಸಮಾಜದ ಮೇಲೆ ಬಹು ದೊಡ್ಡ ಪ್ರಭಾವವನ್ನು ಬೀರಿದುವು.

ಕಾಲೇಜಿನ ಜಗತ್ತಿನಿಂದ ಮೈಸೂರಿನ ಜಯನಗರದ ರೈಲ್ವೆಗೇಟಿನ ಎದುರಿಗೆ ಇದ್ದ ವನಿತಾಸದನದ ಜಗತ್ತಿಗೆ ನಾನು ಸಂಜೆಯಹೊತ್ತು ಕಾಲಿರಿಸುತ್ತಿದ್ದೆ. ದೇಶಪ್ರೇಮಿಗಳಾದ ರಂಗನಾಥ ರಾಮಚಂದ್ರ ದಿವಾಕರರ ಸ್ಫೂರ್ತಿಯಿಂದ ಕಟ್ಟಿಸಿದ ಮನೆ ಅದು; ನಾಡುನುಡಿಯ ಪ್ರೇಮದಿಂದ ಸ್ಫೂರ್ತಿಗೊಂಡ ಸುಂದರಧಾಮ. ಸಂಜೆ ಹುಡುಗಿಯರಿಂದ, ಮೊಹಲ್ಲದ ಮಹಿಳೆಯರಿಂದ ವನಿತಾಸದನವು ಗಿಜಿಗುಡುತ್ತಿತ್ತು. ಒಂದು ಕೊಠಡಿಯಲ್ಲಿ ಹಿಂದಿ ತರಗತಿ, ಇನ್ನೊಂದು ತರಗತಿಯಲ್ಲಿ ಇಂಗ್ಲಿಷ್ ತರಗತಿ, ಮತ್ತೊಂದರಲ್ಲಿ ಕಲಾಕುಶಲ ತರಗತಿ. ಹೀಗೆ ತರಗತಿಗಳು ನಡೆಯುತ್ತಿದ್ದರೆ ಇನ್ನೊಂದೆಡೆ ಸುಶೀಲಾಬಾಯಿಯವರು ಸಮಾಜದ ಕಾರ್ಯಸಮಿತಿಯ ಸದಸ್ಯೆಯರೊಡನೆ ಸದನದ ಕಾರ್ಯಕ್ರಮಗಳ ಬಗ್ಗೆ ಮತ್ತು ಸದನದ ಅಭಿವೃದ್ಧಿಯ ಬಗ್ಗೆ ಚರ್ಚಿಸುತ್ತಿದ್ದರು. ಶ್ರೀಯುತ ನಾಗೇಶರಾಯರು ಕಾಲೇಜಿನ ಕೆಲಸ ಮುಗಿಸಿಕೊಂಡು ಬಂದ ಮೇಲೆ, ಅಲ್ಲಿ ಚಟುವಟಿಕೆಯ ಕೇಂದ್ರಬಿಂದು ಆಗಿರುತ್ತಿದ್ದರು. ವನಿತಾಸದನದಲ್ಲಿ ನನಗೆ ಹಲವರ ಪರಿಚಯವಾಯಿತು. ಮೊದಲನೆಯದಾಗಿ ನನ್ನ ಗೆಳೆಯ ರಾಮಾಚಾರ್. ಇನ್ನೊಬ್ಬ ಗೆಳೆಯ ನನಗೆ ಕೇರಳಾಪುರದಲ್ಲಿ ಪರಿಚಿತನಾದ ಕೆ.ಕೃಷ್ಣಮೂರ್ತಿ.

a a a

ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ನನಗೆ ಇಂಗ್ಲಿಷ್‌ನಲ್ಲಿ ಉತ್ತೀರ್ಣನಾಗಲು ಸಹಾಯ ಮಾಡಿ, ದಾರಿ ತೋರಿಸಿದವರು ಎನ್. ನಾಗೇಶರಾಯರು. ಪರೀಕ್ಷೆಗೆ ಮೂರು ನಾಲ್ಕು ತಿಂಗಳುಗಳ ಮೊದಲಿನಿಂದ ನಾಗೇಶರಾಯರು ಕೆಲವು ವಿದ್ಯಾರ್ಥಿಗಳಿಗೆ ಮನೆಯಲ್ಲಿ ಪಾಠ ಹೇಳಿಕೊಟ್ಟು ತರಬೇತಿ ನೀಡುತ್ತಿದ್ದರು. ಅವರು, ಯಾವ ರೀತಿ ಪ್ರಶ್ನೆಗಳು ಬರುತ್ತವೆ, ಹೇಗೆ ಉತ್ತರಿಸಬೇಕು ಎಂದು ತಿಳಿಸುತ್ತಿದ್ದರು. ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಮಾದರಿಯಾಗಿಟ್ಟುಕೊಂಡು ಉತ್ತರಗಳನ್ನು ಹೇಳಿಕೊಡುತ್ತಿದ್ದರು. ನಾನು ಸಂಜೆ ವನಿತಾಸದನದಲ್ಲಿ ಪಾಠವನ್ನು ಮುಗಿಸಿ, ಅನಂತರ ನಾಗೇಶರಾಯರ ಪಾಠವನ್ನು ಮುಗಿಸಿಕೊಂಡು, ರಾತ್ರಿ ಮನೆಗೆ ಹೋಗುತ್ತಿದ್ದುದನ್ನು ನೋಡಿದ ಸುಶೀಲಾಬಾಯಿಯವರು, “ನೀನು ಕಷ್ಟಪಡುವುದನ್ನು ನಾನು ನೋಡಲಾರೆ. ಪರೀಕ್ಷೆ ಮುಗಿಯುವವರೆಗೂ ನಮ್ಮ ಮನೆಯಲ್ಲಿ ಇದ್ದುಬಿಡು. ರಾಮಾಚಾರ್ ಕೂಡ ನಿನ್ನ ಜತೆಯಲ್ಲಿಯೇ ಇರುತ್ತಾನೆ” ಎಂದರು. ನನಗೆ ನೆಮ್ಮದಿಯಾಯಿತು. ಮೂರು-ನಾಲ್ಕು ತಿಂಗಳು ಅವರ ಮನೆಯಲ್ಲಿಯೇ ಉಳಿದುಕೊಂಡೆ. ಸುಶೀಲಾಬಾಯಿಯವರ ಕೈನ ಊಟ-ತಿಂಡಿ, ಉಪಚಾರವನ್ನು ನನ್ನ ಜನ್ಮದಲ್ಲಿಯೇ ಮರೆಯಲಾರೆ. ಮನೆಯಲ್ಲಿಟ್ಟುಕೊಂಡು ಈ ರೀತಿ ನೋಡಿಕೊಳ್ಳುವವರು ದೊರೆಯುವುದು ನಮ್ಮ ಪೂರ್ವಜನ್ಮದ ಪುಣ್ಯ. ಇಂಗ್ಲಿಷಿನ ಬಗ್ಗೆ ಇನ್ನು ಯಾವ ಯೋಚನೆಯೂ ಉಳಿಯಲಿಲ್ಲ. ಕನ್ನಡ ಮತ್ತು ಸಂಸ್ಕೃತದಲ್ಲಿ ನಾನು ಎಂದೂ ಕಷ್ಟ ಕಂಡಿದ್ದಿಲ್ಲ. ಏತಕ್ಕೆಂದರೆ ಮೊದಲಿನಿಂದಲೂ ಈ ವಿಷಯಗಳಲ್ಲಿ ನನಗೆ ಪ್ರೀತಿ. ಅವುಗಳನ್ನು ಚೆನ್ನಾಗಿ ಮನನ ಮಾಡಿದ್ದೆ. ಇನ್ನು ಚರಿತ್ರೆ, ಲಾಜಿಕ್(ತರ್ಕಶಾಸ್ತ್ರ)ಗಳನ್ನು ಗೆಳೆಯ ರಾಮಾಚಾರ್ ಜತೆ ಓದುತ್ತಿದ್ದೆ. ಅಲ್ಲದೆ ನನ್ನ ಗೆಳೆಯ ನನಗೆ ಕೇರಳಾಪುರದಲ್ಲಿ ಪರಿಚಯವಿದ್ದ ಕೆ. ಕೃಷ್ಣಮೂರ್ತಿ, ಓದಿನಲ್ಲಿ ಪ್ರಚಂಡ. ಉದ್ದಕ್ಕೂ ಎಲ್ಲ ಪರೀಕ್ಷೆಗಳಲ್ಲೂ ರ‍್ಯಾಂಕ್ ಗಿಟ್ಟಿಸಿದವನು. ನಾನು, ರಾಮಾಚಾರ್, ಕೃಷ್ಣಮೂರ್ತಿ ಮೂರು ಜನವೂ ಸೇರಿ ಪರೀಕ್ಷಾ ವಿಷಯಗಳನ್ನು ಚರ್ಚಿಸುತ್ತಿದ್ದೆವು. ನಾನು ಮತ್ತು ರಾಮಾಚಾರ್ ಸೇರಿಕೊಂಡು ತರ್ಕಶಾಸ್ತ್ರದ ಹಲವು ಸಿಲೋಜಿಸಂಗಳನ್ನು ಮುಂದಿಟ್ಟುಕೊಂಡು ಚರ್ಚೆ ಮಾಡುತ್ತ ಅದೆಷ್ಟು ವಿನೋದ ಪಟ್ಟಿದ್ದೇವೆಯೋ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಪರೀಕ್ಷೆಯಲ್ಲಿ ಲಾಜಿಕ್ ಪ್ರಶ್ನೆಗಳು ಅನಿರೀಕ್ಷಿತವಾಗೇನೂ ಇಲ್ಲದೆ ಹೋದುದರಿಂದ ಸುಲಿದ ಬಾಳೆಯ ಹಣ್ಣಿನಂತೆ ಪ್ರಶ್ನೆಗಳನ್ನೆಲ್ಲ ನುಂಗಿ ನೀರು ಕುಡಿದು ಉತ್ತರ ಪತ್ರಿಕೆಯ ಹಾಳೆಗಳನ್ನೆಲ್ಲಾ ಬರೆದು ಮುಗಿಸಿಬಿಟ್ಟೆವು.

ಇನ್ನು ಮುಂದೆ ಪರೀಕ್ಷೆಯ ಫಲಿತಾಂಶದ ನಿರೀಕ್ಷಣೆ. ಕೆ. ಕೃಷ್ಣಮೂರ್ತಿ ಇಡೀ ಇಂಟರ್‌ಮೀಡಿಯೆಟ್‌ಗೆ ಒಬ್ಬನೇ ಮೊದಲನೆ ದರ್ಜೆ; ನಾನು ಮತ್ತು ರಾಮಾಚಾರ್ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದೆವು. ಅನಂತರ ನಮ್ಮ ಅಂಕಪಟ್ಟಿಗಳನ್ನು ಪಡೆದಾಗ ಕೆ. ಕೃಷ್ಣಮೂರ್ತಿ ಮೊದಲನೆಯ ರ‍್ಯಾಂಕ್ ಪಡೆದಿದ್ದನು. ರಾಮಾಚಾರ್‌ಗೆ ಏಳನೆಯ ರ‍್ಯಾಂಕ್ ಮತ್ತು ನನಗೆ ಹನ್ನೊಂದನೆಯ ರ‍್ಯಾಂಕ್ ಲಭ್ಯವಾಗಿದ್ದಿತು.

೯. ದೊಡ್ಡಪ್ಪ ವೆಂಕಟಕೃಷ್ಣಯ್ಯನವರು

ನಮ್ಮ ದೊಡ್ಡಪ್ಪನವರು ಮಾತು ಕೊಟ್ಟಿದ್ದಂತೆ ಆರು ವರ್ಷಗಳ ಕಾಲ ನನ್ನನ್ನು ಮನೆಯಲ್ಲಿಟ್ಟುಕೊಂಡು ಪ್ರೋತ್ಸಾಹ ಕೊಟ್ಟಿದ್ದರು. ಇಂಟರ್‌ಮೀಡಿಯೆಟ್ ಪರೀಕ್ಷೆ ಅಯಿತು, ಮುಂದಕ್ಕೆ ಏನು ಎಂಬ ಪ್ರಶ್ನೆ ಮುಂದೆ ನಿಂತಿತು. ಈ ಸಂದರ್ಭದಲ್ಲಿ ಅವರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದು ಉಚಿತವಾಗಿ ಕಾಣುತ್ತದೆ. ಅದು ಅತ್ಯಂತ ಕ್ಲಿಷ್ಟವಾದ ಕಾಲ. ಮೊಟ್ಟಮೊದಲ ಪ್ರಪಂಚದ ಮಹಾಯುದ್ಧಕ್ಕೆ ಎರಡು ವರ್ಷದ ಹಿಂದಿನ ಘಟನೆ. ೧೯೧೨-೧೩ನೆಯ ಇಸವಿ ಎಂದು ತೋರುತ್ತದೆ. ನಮ್ಮ ದೊಡ್ಡಪ್ಪನವರು ಕೈಯಲ್ಲಿ ಉದ್ಯೋಗವೂ ಇಲ್ಲದೆ, ಸಂಪಾದನೆಯ ಮಾರ್ಗವೂ ಇಲ್ಲದೆ, ಚಡಪಡಿಸುತಿದ್ದರು. ಅವರಿಗೆ ಪೂರ್ವಜನ್ಮದ ವಾಸನೆಯೋ ಏನೋ ಸಂಗೀತದಲ್ಲಿ ಅಭಿರುಚಿ ಆಕಾಂಕ್ಷೆಗಳಿದ್ದುವು. ಇಂಥ ಸ್ಥಿತಿಯಲ್ಲಿರುವಾಗ ಕೇರಳಾಪುರಕ್ಕೆ ವೆಂಕಟರಮಣಯ್ಯ ಎಂಬುವರೋ ಏನೋ, ಬಂದಿದ್ದರು; ಅವರು ವೀಣಾವಾದಕರು.

ಈ ರೀತಿಯಾಗಿ ಬಂದ ವೀಣಾವಿದ್ವಾಂಸರನ್ನು ನಮ್ಮ ದೊಡ್ಡಪ್ಪನವರು ಕೇರಳಾಪುರದಲ್ಲಿ ಉತ್ಸಾಹದಿಂದ ಉಪಚರಿಸಿ ಅವರ ಸೇವೆಯನ್ನು ಮಾಡಿದರು. ವೀಣಾವಿದ್ವಾಂಸರೂ, ನಮ್ಮ ದೊಡ್ಡಪ್ಪನವರೂ ಏನು ಮಾತನಾಡಿಕೊಂಡರೋ ತಿಳಿಯದು. ಅವರ ಜತೆ ಹೊರಟುಬಿಟ್ಟರು. ನಮ್ಮ ವಂಶ, ನಮ್ಮ ಹಿರಿಯರು ಮೊದಲಾದವರ ಬಗ್ಗೆ ನಮಗೆಲ್ಲ ತಿಳಿದಿರಬೇಕು; ಬಲ್ಲವರಿಂದ ಕೇಳಿ ತಿಳಿದುಕೊಳ್ಳಬೇಕು ಎಂಬ ಆಲೋಚನೆ ನನಗೆ ಆಗ ಇರಲಿಲ್ಲ. ಹೀಗಾಗಿ ನನ್ನ ಕಿವಿಯ ಮೇಲೆ ಬಿದ್ದಷ್ಟನ್ನು ಮಾತ್ರ ಬರೆಯಬೇಕಾಗಿದೆ.

ಅಂತೂ ನಮ್ಮ ದೊಡ್ಡಪ್ಪನವರು ವೀಣಾವಿದ್ವಾಂಸರ ವೀಣೆಯನ್ನು ಹೊತ್ತುಕೊಂಡು ಅವರ ಶಿಷ್ಯರಂತೆ ಅವರ ಜತೆಯಲ್ಲಿ ಹೊರಟುಬಿಟ್ಟರು. ಆ ಸಮಯಕ್ಕೆ ಅವರಿಗೆ ಒಂದು ಹೆಣ್ಣುಮಗು ಆಗಿತ್ತು. ಅವಳಿಗೆ ಪುಟ್ಟಮ್ಮ ಎಂದು ಹೆಸರಿಟ್ಟಿದ್ದರು. ನಮ್ಮ ದೊಡ್ಡಪ್ಪನವರು, ಹೀಗೆ ಊರುಬಿಟ್ಟು ಹೋದವರು ಕೆಲವು ವರ್ಷಗಳವರೆಗೆ ಹಿಂದಕ್ಕೆ ಬರಲೇ ಇಲ್ಲ. ನಮ್ಮ ದೊಡ್ಡಮ್ಮನವರು ಪತಿಗಾಗಿ ಕಾದು ಎಷ್ಟು ದಿನ ಕೇರಳಾಪುರದಲ್ಲಿರುತ್ತಾರೆ! ಅವರನ್ನು ನೋಡಿಕೊಳ್ಳುವವರು ಯಾರು? ಆಗ ಅವರ ಅಣ್ಣ ಚಿನ್ನಪ್ಪನವರು ಬಂದು ತಂಗಿಯನ್ನೂ, ತಂಗಿಯ ಮಗುವನ್ನೂ ಬಸವಾಪಟ್ಟಣಕ್ಕೆ ತಮ್ಮ ಮನೆಗೆ ಕರೆದುಕೊಂಡು ಹೋದರು.

ಬಸವಾಪಟ್ಟಣದಲ್ಲಿ ನಮ್ಮ ದೊಡ್ಡಮ್ಮ ಸುಬ್ಬಮ್ಮನವರು ಅದೂ ಇದೂ ಕೆಲಸ ಮಾಡಿಕೊಂಡು ಹೇಗೋ ಕಾಲ ತಳ್ಳಲಾರಂಭಿಸಿದರು. ಗೇರುಬೀಜವನ್ನು ಅರೆದು ಅದರ ಅಂಟನ್ನು ಮಾಡಿಕೊಂಡು ಅದಕ್ಕೆ ಬಳಪದ ಪುಡಿಯನ್ನು ಸೇರಿಸಿ, ಬಿದಿರಿನ ಕುಕ್ಕೆಗೆ ಬಳಿದು ಅದನ್ನು ಪಳಗಿಸಿ, ಅಡುಗೆಮನೆಯಲ್ಲಿ ನೀರು ಶೇಖರಿಸಲು, ಮಜ್ಜಿಗೆ ಮೊಸರು ಮೊದಲಾದವುಗಳನ್ನು ಇಡಲು, ಉಪಯೋಗಿಸುತ್ತಿದ್ದರು. ಆ ಗೇರುಗೂಡೆ ಕಪ್ಪಗೆ ಮಿಂಚುತ್ತಿತ್ತು. ಅನೇಕ ಆಕಾರದ ಗೂಡೆ, ಬುಟ್ಟಿ ಮೊದಲಾದವುಗಳನ್ನು ಹೀಗೆ ತಯಾರಿಸುವ ಕಲೆ ಬಸವಾಪಟ್ಟಣದ ಸಂಕೇತಿ ಸ್ತ್ರೀಯರಿಗೆ ಕರಗತವಾಗಿತ್ತು. ನಮ್ಮ ದೊಡ್ಡಮ್ಮ ಮತ್ತು ಅವರ ಅಕ್ಕ ಮರುಗಮ್ಮ ಎನ್ನುವವರು ಸೇರಿ ಈ ಕಷ್ಟದ ಕೆಲಸ ಮಾಡಿ ಮೂರು ಕಾಸು ಸಂಪಾದಿಸುತ್ತಿದ್ದರು. ಅಡಕೆ ರೇಖೆಯ ಕಾಲದಲ್ಲಿ ಅಡಕೆ ಸುಲಿಯುವುದು, ಬೇಯಿಸಿದ ಅಡಕೆಯನ್ನು ಕತ್ತಿಯಲ್ಲಿ ಕತ್ತರಿಸುವುದು, ಈ ಕೆಲಸಗಳಲ್ಲಿ ಸಂಕೇತಿ ಸ್ತ್ರೀಯರು ನಿಷ್ಣಾತರು. ನಮ್ಮ ದೊಡ್ಡಮ್ಮ ಅಡಕೆ ರೇಖೆಯ ಕಾಲದಲ್ಲಿ ಕಷ್ಟಪಟ್ಟು ಕೆಲಸ ಮಾಡಿ ಆಗಲೂ ನಾಲ್ಕು ಕಾಸು ಕೂಡಿಹಾಕಿಕೊಳ್ಳುತ್ತಿದ್ದರು. ಹೀಗೆ ಮಗಳನ್ನು ಅವರು ಬಸವಾಪಟ್ಟಣದಲ್ಲಿ ಬೆಳೆಸಿದರು.

ಅಣ್ಣ ಚಿನ್ನಪ್ಪನವರು ವಯಸ್ಸಿಗೆ ಬಂದ ಹುಡುಗಿಗೆ ಹಾನಗಲ್ಲಿನ ಶ್ರೀನಿವಾಸಯ್ಯ ಎಂಬುವವರ ಜತೆ ಮದುವೆ ಗೊತ್ತುಮಾಡಿದರು. ತಂದೆಯಿಲ್ಲದೆ ಧಾರೆ ಎರೆಯುವುದು ಹೇಗೆ ಎಂಬ ಪ್ರಶ್ನೆ ಹುಟ್ಟಿತು. ನಮ್ಮ ದೊಡ್ಡಪ್ಪನವರು ಮೈಸೂರಿನಲ್ಲಿ ಇದ್ದಾರೆ ಎಂದು ತಿಳಿದಿತ್ತು. ಬಸವಾಪಟ್ಟಣದಿಂದ ಮೈಸೂರಿಗೆ ಹೋಗಿ, ನಮ್ಮ ದೊಡ್ಡಪ್ಪನವರನ್ನು ಒಪ್ಪಿಸಿ ಕರೆದುಕೊಂಡು ಬಂದು ಧಾರೆ ಎರೆಸಿದರು. ದೊಡ್ಡಪ್ಪನವರ ಮಗಳು ಮೂರು ನಾಲ್ಕು ಮಕ್ಕಳನ್ನು ಹೆತ್ತರು. ಅವರೆಲ್ಲ ಸುಖವಾಗಿ ಸಂಸಾರ ಮಾಡಿಕೊಂಡಿದ್ದಾರೆ.

ನಮ್ಮ ದೊಡ್ಡಪ್ಪನವರು ವೀಣೆವೆಂಕಟರಮಣಯ್ಯನವರ ವೀಣೆಯನ್ನು ಹೊತ್ತುಕೊಂಡು, ಅವರು ಹೋದಕಡೆಗೆಲ್ಲ ಹೋಗುತ್ತಾ ಬಂದರು. ಹೀಗೆ ಅವರೊಡನೆ ಸಂಚರಿಸುತ್ತ ಮೈಸೂರನ್ನು ಮುಟ್ಟಿದರು. ಆ ವೀಣೆ-ವಿದ್ವಾಂಸರ ಜತೆಯಲ್ಲಿ ಬಂದ ದೊಡ್ಡಪ್ಪನವರಿಗೆ ಅದು ಹೇಗೋ ವೀಣೆ ಸುಬ್ಬಣ್ಣನವರ ಪರಿಚಯವಾಯಿತು. ವೀಣೆ ಸುಬ್ಬಣ್ಣನವರು ಬಹಳ ದೊಡ್ಡ ವೀಣಾ ವಿದ್ವಾಂಸರು; ಮಹಾರಾಜರ ಆಸ್ಥಾನ ಸಂಗೀತ ವಿದ್ವಾಂಸರಾಗಿದ್ದರು.

ಅವರ ಖ್ಯಾತಿ ಸಂಗೀತದ ಜಗತ್ತಿನ ಎಲ್ಲೆಡೆಗೂ ಹರಡಿದ್ದಿತು. ಮಹಾಸ್ವಾಮಿಯವರಿಗೆ ಅಚ್ಚುಮೆಚ್ಚಿನವರಾಗಿದ್ದರು ಅವರು. ಅವರು ಅಷ್ಟು ಎತ್ತರವಲ್ಲದ ಮೈಕಟ್ಟುಳ್ಳವರು. ನಾನು ನೋಡುವ ಹೊತ್ತಿಗೆ ಅವರಿಗೆ ವಯಸ್ಸಾಗಿತ್ತು. ಆದರೂ ಕಚ್ಚೆಪಂಚೆ ಉಟ್ಟು ಜರಿಪೇಟ ಕೋಟು ಧರಿಸಿ, ಕೈಯಲ್ಲಿ ಅಂದವಾದ ವಾಕಿಂಗ್ ಸ್ಟಿಕ್ ಹಿಡಿದು ಬರುತ್ತಿದ್ದರೆ ಮಹಾರಾಜರೇ ಬರುತ್ತಿದ್ದಾರೆ ಎನ್ನಿಸುತ್ತಿತ್ತು. ಹೊಳೆಯುವ ಬಿಳಿಯ ಅವರ ದುಂಡು ಮುಖ ರಾಜತೇಜಸ್ಸಿನಿಂದ ಕೂಡಿರುತ್ತಿತ್ತು. ಒಂದು ಫರ್ಲಾಂಗ್ ದೂರದಿಂದಲೇ ಸುಬ್ಬಣ್ಣನವರು ಬರುತ್ತಿದ್ದಾರೆ ಎಂಬುದಾಗಿ ಹೇಳಬಹುದಾಗಿತ್ತು. ಅವರು ಉಪಯೋಗಿಸುವ ಸುಗಂಧ ಪರಿಮಳವನ್ನು ಗಾಳಿಯು ಹೊತ್ತು ಮುಂದೆ ಬರುತ್ತ, ಸುಬ್ಬಣ್ಣನವರು ಬರುತ್ತಿದ್ದಾರೆ ಎಂದು ಸಾರಿ ಹೇಳುತ್ತಿತ್ತು. ಮಹಾರಾಜರು ಸುಬ್ಬಣ್ಣನವರನ್ನು ಭಾರಿ ಮರ್ಯಾದೆಯಿಂದ ಕಾಣುತ್ತಿದ್ದರಲ್ಲದೆ ಅವರಿಗೆ ಬೇಕುಬೇಕಾದ ಉಡುಪು ಮೊದಲಾದುವುಗಳನ್ನು ಕೊಟ್ಟು ತೃಪ್ತಿಪಡಿಸುತ್ತಿದ್ದರು.

ಸುಬ್ಬಣ್ಣನವರು ಅರಮನೆಗೆ ಹೋಗಬೇಕಾದರೆ ಅರಮನೆಯ ಬಿರುದು-ಬಾವಲಿಗಳೊಡನೆ ಮೇನಾದಲ್ಲಿ ತೆರಳುತ್ತಿದ್ದರು. ಈಗ ಅವರ ಮುಪ್ಪಿನ ಸಮಯ. ಮೊದಲಿನ ವೈಭವಗಳು ಕಡಮೆಯಾಗಿದ್ದರೂ ಅವರ ಶಿಸ್ತುಗಾರತನ, ರಸಿಕತೆ ಕಡಮೆಯಾಗಿರಲಿಲ್ಲ.

ಇಂಥ ಒಂದು ಸಮಯದಲ್ಲಿ ನಮ್ಮ ದೊಡ್ಡಪ್ಪನವರು ವೀಣೆ ಸುಬ್ಬಣ್ಣನವರ ಮನೆಯನ್ನು ಸೇರಿಕೊಂಡರು. ಸುಬ್ಬಣ್ಣನವರ ಪೂಜೆಗೆ ಗಂಧ ತೇಯುವುದು, ಪರಿಕರಗಳನ್ನು ಸಿದ್ಧ ಪಡಿಸಿಕೊಡುವುದು, ನೈವೇದ್ಯ ತಂದಿಡುವುದು ಮೊದಲಾದ ಕೆಲಸಗಳು ದೊಡ್ಡಪ್ಪನವರ ಪಾಲಿಗೆ. ಸುಬ್ಬಣ್ಣನವರು ಮಾಧ್ವರು. ಮಹಾಮಡಿ. ಅವರ ಕೆಲಸ ಮಾಡಿಕೊಡಬೇಕಾದರೆ ದೊಡ್ಡಪ್ಪನವರು ಬೆಳಗ್ಗೆ ಎದ್ದು ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲಿ ಮಹಾಮಡಿಯಲ್ಲಿ ಎಲ್ಲ ಕೆಲಸಗಳನ್ನೂ ಮಾಡಬೇಕು. ಪೂಜೆ ಇತ್ಯಾದಿಗಳೆಲ್ಲ ಮುಗಿದ ಮೇಲೆ ಸುಬ್ಬಣ್ಣನವರ ಭೋಜನ. ಭೋಜನದಲ್ಲಿ ಒಳ್ಳೆಯ ರಸಿಕರು ಅವರು. ಅಡುಗೆಯವರು ಮಡಿಯಲ್ಲಿ ಚೊಕ್ಕವಾಗಿ ಅಡುಗೆಮಾಡಿ ಬಡಿಸುತ್ತಿದ್ದರು. ಊಟವಾದ ಮೇಲೆ ಸುಬ್ಬಣ್ಣನವರು ಶ್ರೀಗಂಧವನ್ನು ಮೈಗೆಲ್ಲ ಸವರಿಕೊಂಡು ಮಲಗುತ್ತಿದ್ದರು. ಘಮಘಮಿಸುವ ಶ್ರೀಗಂಧ ಮೈಯನ್ನು ತಂಪಾಗಿಸುತ್ತದಂತೆ. ಹಾಗೇ ಸ್ವಲ್ಪ ಹೊತ್ತು ಮಲಗುವರು. ಸುಬ್ಬಣ್ಣನವರಿಗೆ ಈ ಶ್ರೀಗಂಧವನ್ನು ತಯಾರಿಸಿ ಕೊಡುವುದು ಸಾಮಾನ್ಯವಲ್ಲ. ಶ್ರೀಗಂಧವನ್ನು ತೇಯುವಾಗ ಅದಕ್ಕೆ ಕೇಸರಿ, ಕಸ್ತೂರಿ, ಪಚ್ಚಕರ್ಪೂರಗಳನ್ನು ಹದವಾಗಿ ಸೇರಿಸಿ ಅರೆಯಬೇಕು.

ಸುಬ್ಬಣ್ಣನವರು ಸಂಜೆಯಾಯಿತೆಂದರೆ ಸಿಂಗರಿಸಿಕೊಂಡು ಪ್ರೇಯಸಿಯ ಮನೆಗೆ ಹೋಗುತ್ತಿದ್ದರು. ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಉಪಪತ್ನಿಯರನ್ನು ಹೊಂದುವುದು ಸಾಮಾನ್ಯವಾಗಿತ್ತು. ಆದರೆ ಇದು ಜನಸಾಮಾನ್ಯರ ವಿಚಾರವಲ್ಲ. ಪ್ರತಿಷ್ಠಿತರು, ದೊಡ್ಡ ಶ್ರೀಮಂತರು, ದೊಡ್ಡ ಸಂಗೀತಗಾರರು - ವೇಶ್ಯೆಯರ ಸಹವಾಸ ಮಾಡುವುದು ತಮ್ಮ ಪ್ರತಿಷ್ಠೆಯೆಂದು ತಿಳಿಯುತ್ತಿದ್ದ ಕಾಲ ಅದು. ರಾಜಧಾನಿಯಾದ ಮೈಸೂರಿನಲ್ಲಿ ಹೆಚ್ಚು ಹೆಚ್ಚು ಪ್ರೇಯಸಿಯರನ್ನು ಹೊಂದಿದ್ದರೆ ಅವರ ಪ್ರತಿಷ್ಠೆ ಅಷ್ಟು ದೊಡ್ಡದು ಎಂದು ಸಮಾಜದಲ್ಲಿ ಅವರಿಗೆ ಗೌರವವಿತ್ತು. ಇಲ್ಲಿನ ವೇಶ್ಯೆಯರು ಸಾಮಾನ್ಯವಾಗಿ ನರ್ತನದಲ್ಲಿ ನಿಪುಣೆಯರಾಗಿರುತ್ತಿದ್ದರು; ನಾಟ್ಯ ಮತ್ತು ಸಂಗೀತಕಲೆಯ ಪೋಷಕರಾಗಿರುತ್ತಿದ್ದರು. ಇಲ್ಲಿ ನಾನು ವರ್ಣಿಸುತ್ತಿರುವ ಕಾಲದ ಈ ಕಲಾವಿದ-ವೇಶ್ಯೆಯರು ನಿಜವಾಗಿ ಕಾಮದ ಗೊಂಬೆಗಳಾಗಿರಲಿಲ್ಲ. ಹಣ ಕೊಟ್ಟವರನ್ನೆಲ್ಲ ಆದರಿಸಿ ರಮಿಸುತ್ತಿರಲಿಲ್ಲ. ದಿನಕ್ಕೊಬ್ಬರಂತೆ ಬರಮಾಡಿಕೊಳ್ಳುತ್ತಿದ್ದವರೂ ಅಲ್ಲ. ಇವರು ಒಬ್ಬರನ್ನು ನೆಚ್ಚಿ ಅವರನ್ನು ಕೂಡಿದರೆಂದರೆ, ನೆಚ್ಚಿದವರು ಕೈ ಬಿಡುವವರೆಗೂ ಇನ್ನೊಬ್ಬರ ಕಡೆಗೆ ಕಣ್ಣು ಹಾಯಿಸುತ್ತಿರಲಿಲ್ಲ. ಅಷ್ಟು ಕಟ್ಟುನಿಟ್ಟಿನ ನಿಯಮ. ಅನೇಕ ವೇಳೆ ಒಬ್ಬರನ್ನು ಹೊಂದಿದರೆಂದರೆ ಜೀವಿತಾವಧಿಯಲ್ಲಿ ಅವರ ಕೈ ಬಿಡುತ್ತಿರಲಿಲ್ಲ. ಇವರಲ್ಲಿ ದೈವಭಕ್ತಿ, ಮಡಿ ಮತ್ತು ಆಚಾರಗಳನ್ನು ನಾನು ಕಂಡಿದ್ದುಂಟು.

ವೀಣೆ ಸುಬ್ಬಣ್ಣನವರ ಪ್ರೇಯಸಿ ಭವಾನಿ ಅಥವಾ ಭವಾನಮ್ಮ ಎಂದು. ಅವರ ಕೊನೆಗಾಲದಲ್ಲಿ ಅವರನ್ನು ನಾನು ನೋಡಿದ್ದೆ. ಎತ್ತರವಾಗಿ ಸ್ತ್ರೀಸಹಜವಾದ ಮೈಮಾಟದಿಂದ ಕೂಡಿದ್ದರು ಭವಾನಿ. ಅತಿ ಬಿಳುಪೂ ಅಲ್ಲದ, ಕೆಂಪೂ ಅಲ್ಲದ ಮೈಬಣ್ಣ. ಮುಖದಲ್ಲಿ ಸಾತ್ವಿಕ ಸೌಂದರ್ಯ ಹೊರಸೂಸುತ್ತಿದ್ದಿತು. ಮಾತಿನಲ್ಲಿ ಮೃದುತ್ವ, ಪ್ರೀತಿ ಎದ್ದು ಕಾಣುತ್ತಿದ್ದಿತು. ಸಂಜೆ ಭವಾನಿಯವರ ಮನೆಗೆ ಸುಬ್ಬಣ್ಣನವರು ಸವಾರಿ ಹೊರಟರೆ ಅವರ ಜತೆಯಲ್ಲಿ ತಾವೂ ಸಿಂಗರಿಸಿಕೊಂಡು ದೊಡ್ಡಪ್ಪನವರು ಹೋಗುತ್ತಿದ್ದರು; ಅಲ್ಲಿ ಸುಬ್ಬಣ್ಣನವರ ಉಪಚಾರದಲ್ಲಿ ತೊಡಗಿ ಭವಾನಿ ಮತ್ತು ಅವರ ಪರಿವಾರದ ಎಲ್ಲರಿಗೂ ಅಚ್ಚುಮೆಚ್ಚಿನವರಾದರು. ಸುಬ್ಬಣ್ಣನವರೂ, ನಮ್ಮ ದೊಡ್ಡಪ್ಪನವರೂ ಒಂದೇ ಎತ್ತರ ಮತ್ತು ಸರಿಸುಮಾರಾಗಿ

ಒಂದೇ ಆಕಾರ. ಆದುದರಿಂದ ಸುಬ್ಬಣ್ಣನವರ ಉಡುಪುಗಳೆಲ್ಲ ನಮ್ಮ ದೊಡ್ಡಪ್ಪನವರಿಗೆ ಹೇಳಿ ಹೊಲಿಸಿದಂತಿರುತ್ತಿದ್ದುವು. ಅವರು ತಾವು ಉಟ್ಟ ಬಟ್ಟೆ, ದಿರಿಸುಗಳನ್ನು ನಮ್ಮ ದೊಡ್ಡಪ್ಪನವರಿಗೆ ಕೊಟ್ಟುಬಿಡುತ್ತಿದ್ದರು. ಹೀಗೆ ಸುಬ್ಬಣ್ಣನವರ ಪ್ರೇಯಸಿ ಭವಾನಿಯವರ ಮನೆಯಲ್ಲಿ ದೊಡ್ಡಪ್ಪನವರು ಮನೆಯವರಂತಾದರು.

ಭವಾನಿಯವರು ಈ ಯೌವನಭರಿತ ಹುಡುಗನನ್ನು ನೋಡಿ ಇವನನ್ನು ಹೀಗೆಯೇ ಬಿಟ್ಟರೆ ಈ ವಯಸ್ಸಿನಲ್ಲಿ ಅಡ್ಡ ದಾರಿಹಿಡಿದರೆ ಕಷ್ಟ ಎಂದು ಭಾವಿಸಿ ತಮ್ಮ ಪರಿವಾರದಲ್ಲಿದ್ದ ಸಣ್ಣಮ್ಮ ಎಂಬ ಹುಡುಗಿಯನ್ನು ದೊಡ್ಡಪ್ಪನವರಿಗೆ ಮದುವೆ ಮಾಡಿಕೊಡ ಲಿಲ್ಲವಾದರೂ ಅದೇ ಸಂಸ್ಕಾರವಿರುವಂತೆ ಹೆಂಡತಿಯಾಗಿ ಮಾಡಿದರು. ಸಣ್ಣಮ್ಮನ ಜತೆಯಲ್ಲಿ ದೊಡ್ಡಪ್ಪನವರಿಗೆ ಅತೀವ ಪ್ರೇಮ. ಅಗ್ನಿಸಾಕ್ಷಿಯಾಗಿ ಮದುವೆಯಾದ ಗಂಡ ಹೆಂಡಿರಿಗಿಂತಲೂ ಶಾಶ್ವತವಾದ ಪ್ರೇಮ ಇವರಲ್ಲಿ ಮನೆಮಾಡಿತ್ತು. ದೊಡ್ಡಪ್ಪನವರು ಸಣ್ಣಮ್ಮನೊಡನೆ ಸುಖಸಂಸಾರ ಮಾಡಿದರು. ಅವರಿಗೆ ಒಂದು ಹೆಣ್ಣು ಮಗು ಜನಿಸಿದಳು. ಅವಳಿಗೆ ಸುಬ್ಬರತ್ನ ಎಂದು ಹೆಸರಿಟ್ಟರು. ತಂದೆ ತಾಯಿಗಳ ಗುಣವೇ ಅವಳದೂ. ಅವಳು ಮದುವೆಯಾಗಿ ಅವಳ ಸಂಸಾರ ಮುಂದುವರೆಯಿತು. ಈಗ ಅವಳ ಮಗಳು ಸುಖವಾಗಿ ಸಂಸಾರ ಮಾಡಿಕೊಂಡು ಮಕ್ಕಳನ್ನು ನೋಡಿಕೊಂಡು ಇದ್ದಾಳೆ.

'ನೀನು ಸ್ವತಂತ್ರವಾಗಿ ಜೀವನ ಮಾಡು, ನಿನಗೆ ತಕ್ಕ ಹೆಂಡತಿ ದೊರೆತಿದ್ದಾಳೆ' ಎಂದು ಆಶೀರ್ವದಿಸಿ ಕಳುಹಿಸಿದರು ಸುಬ್ಬಣ್ಣನವರು. ದೊಡ್ಡಪ್ಪನವರು ಬೇರೆ ಮನೆ ಮಾಡಿದರು. ನಾನು ನನ್ನ ಬಾಲ್ಯದಲ್ಲಿ ಮೈಸೂರಿಗೆ ಬಂದಿದ್ದಾಗ ಬೆಂಕಿನವಾಬರ ಬೀದಿಯಲ್ಲಿ ಇವರು ವಾಸಿಸುತ್ತಿದ್ದರು. ಸಂಗೀತದ ಗಂಧವಿದ್ದ ದೊಡ್ಡಪ್ಪನವರು ರಾಮಾಯಣ ಭಾರತಗಳ ವಾಚನ ವ್ಯಾಖ್ಯಾನಗಳನ್ನು ಮೈಗೂಡಿಸಿಕೊಂಡರು. ಗೌರಿದೇವುಡು ನರಸಿಂಹಶಾಸ್ತ್ರಿಗಳು ಆ ಕಾಲದಲ್ಲಿ ಪ್ರಸಿದ್ಧ ವಿದ್ವಾಂಸರೂ ಗಮಕಿಗಳೂ ಆಗಿದ್ದರು. ಮೈಸೂರಿನಲ್ಲಿ ಕೆಂಪನಂಜಾಂಬಾ ಅಗ್ರಹಾರದಲ್ಲಿ ಅವರ ಮನೆ ಇದ್ದಿತು. ಅವರ ಜತೆ ಸೇರಿ ದೊಡ್ಡಪ್ಪನವರು ಗಮಕ ಮತ್ತು ವ್ಯಾಖ್ಯಾನಗಳಲ್ಲಿ ನುರಿತರು.

ಅವರಂತೆ ದೊಡ್ಡಪ್ಪನವರೂ ಪುರಾಣ ಹೇಳುವುದನ್ನು ಅಭ್ಯಾಸ ಮಾಡಿಕೊಂಡರು. ಪುರಾಣದಲ್ಲಿ ಒಂದೆರಡು ಬಾಳೆಹಣ್ಣು, ಒಂದೆರಡು ತೆಂಗಿನ ಹೋಳು, ಹೂವು, ಸ್ವಲ್ಪ ದಕ್ಷಿಣೆ ದಿನವೂ ದೊರೆಯುತ್ತಿದ್ದುವು. ಇದು ಜೀವನಕ್ಕೆ ಸಾಕಾಗುತ್ತಿರಲಿಲ್ಲ. ಆಗ ಜಿಲ್ಲಾ ನ್ಯಾಯಾಲಯದಲ್ಲಿ ಜಸ್ಟಿಸ್ ಶಂಕರನಾರಾಯಣರಾವ್ ಎಂಬ ನ್ಯಾಯಾಧಿಪತಿಗಳು ಒಳ್ಳೆ ಹೆಸರನ್ನು ಗಳಿಸಿದ್ದರು. ಅವರು ಜನಾನುರಾಗಿಗಳಾಗಿದ್ದರು. ದೊಡ್ಡಪ್ಪನವರು ಅವರ ಮನೆಯಲ್ಲಿ ಕೆಲವು ವರ್ಷಗಳ ಕಾಲ ಅಡುಗೆ ಕೆಲಸವನ್ನು ಮಾಡಿಕೊಂಡಿದ್ದರು. ಹಗಲು ಹೊತ್ತು ಅವರ ಮನೆಯಲ್ಲಿ ಅಡುಗೆ ಮಾಡಿ ಎಲ್ಲರಿಗೂ ಬಡಿಸಿ, ಸಂಜೆ ಮನೆಗೆ ಬಂದು ಅಲ್ಲಿಂದ ಪುರಾಣಪ್ರವಚನಕ್ಕೆ ಹೋಗುತ್ತಿದ್ದರು. ಜಸ್ಟಿಸ್ ಶಂಕರನಾರಾಯಣರಾಯರು ಮೈಸೂರನ್ನು ಬಿಡುವುದಕ್ಕೆ ಮೊದಲು ದೊಡ್ಡಪ್ಪನವರಿಗೆ ಕೋರ್ಟಿನಲ್ಲಿ ಅಮೀನರ ಕೆಲಸವನ್ನು ಕೊಡಿಸಿ ಖಾಯಂ ಮಾಡಿಸಿಕೊಟ್ಟರು. ಈಗ ಸ್ವಲ್ಪ ಮಟ್ಟಿನ ಸಂಬಳ ಕೈಗೆ ಬರುವಂತಾಯಿತು. ನೆಮ್ಮದಿಯ ಜೀವನವಾಯಿತು. ಸಂಜೆ ಪುರಾಣಪ್ರವಚನದಲ್ಲಿ ಸಾತ್ವಿಕ ರೀತಿಯಲ್ಲಿ ಕಾಲ ಕಳೆಯುವಂತಾಯಿತು.

ಹೀಗಿರುವಾಗ, "ಹೆಂಡತಿಯನ್ನು ಬಿಟ್ಟು ಉಪಪತ್ನಿಯನ್ನು ಕಟ್ಟಿಕೊಂಡ ಇವರ ಪುರಾಣಪ್ರವಚನ ಎಷ್ಟು ಪವಿತ್ರವೋ? ಮನೆಯ ಮುಂದೆ ಬೃಂದಾವನ, ಮನೆಯಲ್ಲಿ ಅನಾಚಾರ" ಎಂದು ಕೆಲವರು ಆಡಿಕೊಳ್ಳತೊಡಗಿದರು.ಇದು ಸಣ್ಣಮ್ಮನ ಕಿವಿಗೆ ಬಿದ್ದಿತು. ಆಗ ಆಕೆ ದೊಡ್ಡಪ್ಪನವರನ್ನು ಕೂರಿಸಿಕೊಂಡು, "ಇನ್ನು ನಿಮ್ಮ ಪತ್ನಿಗೆ ವನವಾಸ ಸಾಕು. ಅವರನ್ನು ಕರೆದುಕೊಂಡು ಬನ್ನಿ. ಬೇರೊಂದು ಮನೆ ಮಾಡಿ ಇಟ್ಟುಕೊಳ್ಳಿ. ಜನರ ಬಾಯನ್ನು ಕಟ್ಟುವುದಕ್ಕಾಗುವುದಿಲ್ಲ. ಅಲ್ಲದೆ ನೀವು ಮಾಡುತ್ತಿರುವುದು ಸರಿಯೂ ಅಲ್ಲ, ನ್ಯಾಯವೂ ಅಲ್ಲ. ಇದುವರೆಗೆ ಆದದ್ದು ಆಗಿಹೋಯಿತು" ಎಂದು ಹೇಳಿ ಒಪ್ಪಿಸಿ, ಬಸವಾಪಟ್ಟಣದಿಂದ ಹೆಂಡತಿ ಸುಬ್ಬಮ್ಮನನ್ನು ಮೈಸೂರಿಗೆ ಕರೆಸುವಂತೆ ಮಾಡಿದಳು. ತನ್ನ ಮನೆಗೆ ದೂರವಲ್ಲದ ಸ್ಥಳದಲ್ಲಿ ಒಂದು ಸಣ್ಣ ಮನೆಯನ್ನು ಮಾಡಿ, ಗಂಡಹೆಂಡತಿಯರನ್ನು ಒಂದು ಮಾಡಿದಳು ಸಾಧ್ವಿ ಸಣ್ಣಮ್ಮ. ದೊಡ್ಡಪ್ಪನವರು ತಮ್ಮ ಹೆಂಡತಿಯನ್ನು ಮೈಸೂರಿಗೆ ಕರೆದುಕೊಂಡು ಬಂದು ಸಂಸಾರ ಹೂಡಿದ ಮೇಲೆ ಒಬ್ಬ ಗಂಡು ಮಗ ಹುಟ್ಟಿದ. ಇವನೇ ಕೆ.ವಿ. ರಾಮಕೃಷ್ಣ. ಇವನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಲ್ಲಿ ವಿದ್ಯಾಭ್ಯಾಸ ಮಾಡಿ ಬಿ.ಇ., ಪದವಿ ಪಡೆದನು. ಅನಂತರ ಗುಜರಾತ್ ರಾಜ್ಯ ಸರಕಾರದ ಇಂಜಿನಿಯರಿಂಗ್ ಇಲಾಖೆಯಲ್ಲಿ ಸೇರಿ ಕೊನೆಯಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ನಿವೃತ್ತನಾಗಿ ಈಗ ಮೈಸೂರಿನಲ್ಲಿದ್ದಾನೆ.

ತಮ್ಮನಾದ ಕೆ.ವಿ. ರಾಮಕೃಷ್ಣನು ಅಹಮದಾಬಾದಿನಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿದ್ದಾಗ ನಾನು, ನನ್ನ ಪತ್ನಿ ಮತ್ತು ತಂಗಿ ನಾಗಲಕ್ಷ್ಮಿ ಅಹಮದಾಬಾಗಿದೆ ಹೋಗಿದ್ದೆವು. ರಾಮಕೃಷ್ಣನು ನಮ್ಮನ್ನು ಕರೆದುಕೊಂಡು ಗುಜರಾತಿನ ಪ್ರಸಿದ್ಧ ಸ್ಥಳಗಳಾದ ಜುನಾಗಢ್, ಪೋರ್‌ಬಂದರ್, ದ್ವಾರಕಾ, ಪ್ರಭಾಸಕ್ಷೇತ್ರ ಮತ್ತು ಸೋಮನಾಥಗಳನ್ನು ತೋರಿಸಿಕೊಂಡು ಬಂದನು. ಗುಜರಾತಿನ ಈ ಪ್ರವಾಸ ನಮಗೆ ತುಂಬ ಸಂತೋಷವನ್ನುಂಟುಮಾಡಿತು. ದೊಡ್ಡಪ್ಪನವರು ದೇವಾಂಬಾ ಅಗ್ರಹಾರದಲ್ಲಿ ವಾಸಿಸುತ್ತಿದ್ದಾಗ ನಾನು ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಅವರ ಮನೆಗೆ ಬಂದು ಸೇರಿಕೊಂಡೆ. ಒಂದು ಕಡೆಯಲ್ಲಿ ದೊಡ್ಡಮ್ಮ ಸುಬ್ಬಮ್ಮನವರ ಪ್ರೀತಿ, ಇನ್ನೊಂದು ಕಡೆ ಸಣ್ಣಮ್ಮನ ಆದರ ಇವುಗಳನ್ನು ಅನುಭವಿಸುತ್ತ ಈ ಕುಟುಂಬಕ್ಕೆ ಬಂದೆ. ಆಗ ಸಣ್ಣಮ್ಮನ ಮನೆ ಗೊಲ್ಲಗೇರಿಯಲ್ಲಿತ್ತು. ನಾನು ಎಸ್.ಎಸ್.ಎಲ್.ಸಿ. ತರಗತಿಗೆ ಬಂದಾಗ ಸಣ್ಣಮ್ಮ, "ನಿನಗೆ ಅಲ್ಲಿ ಓದಲು ಗಲಾಟೆಯಿರುತ್ತದೆ. ನಮ್ಮ ಮನೆಯ ಮಹಡಿಯಲ್ಲಿ ಜಾಗ ಇದೆ, ರಾತ್ರಿ ಅಲ್ಲಿ ಬಂದು ಓದಿಕೋ. ರಾತ್ರಿ ಮಲಗಿದ್ದು ಬೆಳಗ್ಗೆ ಮನೆಗೆ ಹೋಗು" ಎಂದು ನನ್ನ ಓದಿಗೆ ಅನುಕೂಲ ಮಾಡಿಕೊಟ್ಟರು. ಹೀಗೆ ನಾನು ಆ ಮನೆಯಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿ ಅಲ್ಲಿಯೇ ಇದ್ದುಕೊಂಡು ಬಿ.ಎ., ಆನರ್ಸ್ ಮುಗಿಸಿದೆ.

ನನ್ನ ದೊಡ್ಡಪ್ಪನವರು ಒಳ್ಳೆಯ ವಾಚಾಳಿ. ಕೆಲಸದಲ್ಲಿ ಚುರುಕು, ವ್ಯವಹಾರದಲ್ಲಿ ಚತುರರು. ಇವರು ಕೋರ್ಟಿನ ಆಜ್ಞೆಗಳನ್ನು ಸಂಬಂಧಪಟ್ಟವರಿಗೆ ತಲಪಿಸುವ ಕೆಲಸವಲ್ಲದೆ ಹಲವು ಕಷ್ಟಕರವಾದ ಕೋರ್ಟಿನ ಆಜ್ಞೆಗಳನ್ನು ಜಾರಿಗೊಳಿಸಬೇಕಾಗುತ್ತಿತ್ತು. ಕೆಲವು ಸಲ ಕೋರ್ಟಿನ ಅಪ್ಪಣೆಯ ಪ್ರಕಾರ ಬಾಡಿಗೆದಾರನನ್ನು ಮನೆಯಿಂದ ಬಿಡಿಸಿ, ಮನೆಯ ಯಜಮಾನನಿಗೆ ಮನೆಯ ಸುಫರ್ದನ್ನು ಕೊಡಿಸಬೇಕಾಗುತ್ತಿತ್ತು. ಒಂದೊಂದು ಸಲ ಜಮೀನನ್ನು ಆಕ್ರಮಿಸಿಕೊಂಡವರಿಂದ ಯಜಮಾನನ ಸುಫರ್ದಿಗೆ ಕೊಡಿಸ ಬೇಕಾಗುತ್ತಿತ್ತು. ಇದು ಅಪಾಯದ ಕೆಲಸವಾಗಿತ್ತು. ಮನೆ ಅಥವಾ ಜಮೀನನ್ನು ಆಕ್ರಮಿಸಿಕೊಂಡು ಇದುವರೆಗೆ ಅನುಭವಿಸಿದವರು ಸುಲಭವಾಗಿ ಅವನ್ನು ಬಿಟ್ಟುಕೊಡುತ್ತಿರಲಿಲ್ಲ. ಕೆಲವು ಸಮಯ ಕೋರ್ಟಿನ ಆಜ್ಞೆ ಜಾರಿಮಾಡಲು ಬಂದ ಸರಕಾರಿ ಅಧಿಕಾರಿಗಳನ್ನು ಗೂಂಡಾಗಳಿಂದ ಹೆದರಿಸುತ್ತಿದ್ದುದೂ ಉಂಟು. ಸಂದರ್ಭಗಳಿದ್ದಲ್ಲಿ ಕೋರ್ಟಿನಿಂದ ಅಪ್ಪಣೆ ಪಡೆದು ಪೊಲೀಸರನ್ನು ಕರೆದುಕೊಂಡು ಬಂದು ಕೆಲಸವನ್ನು ಸಾಧಿಸಬೇಕಾಗುತ್ತಿತ್ತು. ಆಗ ದೊಡ್ಡಪ್ಪನವರು ಧೈರ್ಯ, ಚಾಕಚಕ್ಯತೆ ಮತ್ತು ದಕ್ಷತೆಯಿಂದ ಕೆಲಸ ನಿರ್ವಹಿಸುತ್ತಿದ್ದರು. 'ಧೈರ್ಯಶಾಲಿ ಅಮೀನರು ವೆಂಕಟಕೃಷ್ಣಯ್ಯನವರು' ಎಂದೇ ಹೆಸರಾಗಿದ್ದರು. ಆಗಿನ ಕಾಲದಲ್ಲಿ ಈಗಿನ ಕಾಲದಂತೆ ಏಕಾಏಕಿ ಮೇಲೆ ಬೀಳುವುದು, ಹೊಡೆಸುವುದು, ಕೊಲೆ ಮಾಡುವುದು ಇರಲಿಲ್ಲ. ಎಷ್ಟೇ ದುಷ್ಟರಾದರೂ ಜನ ಸತ್ಯಧರ್ಮಗಳಿಗೆ ಹೆದರುತ್ತಿದ್ದರು. ಅಮೀನ್ ದೊಡ್ಡಪ್ಪನವರಿಂದ ಕೆಲಸ ಸಮರ್ಪಕವಾಗಿ ಆದಾಗ ಕೆಲಸ ಮಾಡಿಸಿಕೊಂಡವರು ಅಲ್ಪ ಸ್ವಲ್ಪ ಸಂಭಾವನೆ ಇತ್ಯಾದಿ ಕೊಡುತ್ತಿದ್ದರು. ತಮಗೆ ಬರುವ ಸಂಬಳವಲ್ಲದೆ ಈ ಮೇಲಿನ ಸಣ್ಣ ಸಂಪಾದನೆಯ ಜತೆಗೆ ಪುರಾಣಪ್ರವಚನದಲ್ಲಿ ಬರುತ್ತಿದ್ದ ನಾಲ್ಕು ಕಾಸು ಇವರು ಎರಡು ಸಂಸಾರವನ್ನು ಸರಿದೂಗಿಸಿಕೊಂಡು ಹೋಗಲು ಸಹಾಯ ಮಾಡುತ್ತಿತ್ತು. ದೊಡ್ಡಪ್ಪನವರು ಮಾತಿನಲ್ಲಿ ಖಡಾಖಂಡಿತ ಎನ್ನುವಂತೆ ಕಂಡರೂ ರಸಿಕರು. ಮನೆಯವರಿಗೆ ಒಳ್ಳೆ ಬಟ್ಟೆಗಳನ್ನೂ, ಸೀರೆಗಳನ್ನೂ ತಂದು ಕೊಡುತ್ತಿದ್ದರು. ಯಾವ ಯಾವ ಋತುವಿನಲ್ಲಿ ಯಾವ ಯಾವ ಹಣ್ಣು ಸಿಗುತ್ತಿದ್ದಿತೋ ಅದನ್ನು ನೋಡಿ ಉತ್ತಮವಾದುದನ್ನು ತರುತ್ತಿದ್ದರು. ಮಾವಿನಹಣ್ಣು ಎಂದರೆ ಅವರಿಗೆ ಬಹಳ ಇಷ್ಟ. ಶಾಕ್ ಹಣ್ಣು ಎಂದು ಉತ್ತಮವಾದುದನ್ನೇ ತರುತ್ತಿದ್ದರು. ಹಾಲಿಗೆ ಕೇಸರಿ, ಏಲಕ್ಕಿ ಹಾಕಿ ಮಾಡಿದ ಮಾವಿನ ಹಣ್ಣಿನ ಸೀಕರಣೆ ಅವರಿಗೆ ತುಂಬ ಮೆಚ್ಚುಗೆಯಾದುದಾಗಿತ್ತು. ಮಾವಿನಹಣ್ಣಿನ ಕಾಲದಲ್ಲಿ ಎಲ್ಲರೊಡನೆ ಸೀಕರಣೆಯ ಆಸ್ವಾದದ ಸುಖವನ್ನು ಹಂಚಿಕೊಳ್ಳುವುದು ಅವರಿಗೆ ತುಂಬಾ ಪ್ರಿಯವಾಗಿತ್ತು. ಇಂಥ ನಮ್ಮ ದೊಡ್ಡಪ್ಪನವರ ಕುಟುಂಬದ ಒಬ್ಬ ಸದಸ್ಯನಾಗಿ ಎಲ್ಲ ಅನುಕೂಲಗಳನ್ನೂ ಪಡೆದುಕೊಂಡ ಅದೃಷ್ಟಶಾಲಿ ನಾನಾದೆ. ನನ್ನ ವಿದ್ಯಾಭ್ಯಾಸಕ್ಕೆ ನಮ್ಮ ದೊಡ್ಡಪ್ಪನವರು ಕೊಟ್ಟ ಪ್ರೋತ್ಸಾಹ, ಅವರ ಮತ್ತು ನಮ್ಮ ದೊಡ್ಡಮ್ಮನವರ ಅಕ್ಕರೆಯ ಪೋಷಣೆ, ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ತಳಹದಿಯಾಯಿತು.

ನಾನು ಇಂಟರ್‌ಮೀಡಿಯೆಟ್ ಮುಗಿಸುವ ಹೊತ್ತಿಗೆ ನಮ್ಮ ದೊಡ್ಡಪ್ಪನವರಿಗೆ ಸ್ವಲ್ಪ ವಯಸ್ಸೂ ಆಗಿತ್ತು. ಅಲ್ಲದೆ ಅವರ ಸಂಸಾರಗಳ ಖರ್ಚೂ ಹೆಚ್ಚಾಯಿತು. ಎರಡು ಸಂಸಾರವನ್ನೂ ತೂಗಿಸಿಕೊಂಡು, ಮಗನ ವಿದ್ಯಾಭ್ಯಾಸದ ಖರ್ಚನ್ನೂ ವಹಿಸ ಬೇಕಾಯಿತು. ಅವರು ತಾವು ಮಾತುಕೊಟ್ಟಿದ್ದಂತೆ ಇಂಟರ್‌ಮೀಡಿಯೆಟ್ ಮುಗಿಯುವವರೆಗೂ ನನ್ನನ್ನು ಕಾಪಾಡಿದ್ದರು. ಇನ್ನು ಮುಂದಕ್ಕೆ ನನ್ನ ಭಾರವನ್ನು ವಹಿಸುವುದು ಅವರಿಗೆ ಕಷ್ಟವಾಯಿತು. ಆದರೂ ಅವರ ಔದಾರ್ಯಕ್ಕೆ ಎಲ್ಲೆ ಇರಲಿಲ್ಲ. ನನ್ನ ಊಟ ಇತ್ಯಾದಿ ಖರ್ಚುಗಳನ್ನು ನಾನು ಸ್ವಂತವಾಗಿ ನಿರ್ವಹಿಸಬಲ್ಲೆನಾದರೆ ತಮ್ಮ ಮನೆಯಲ್ಲೇ ಇದ್ದುಕೊಂಡು ಮುಂದಿನ ವಿದ್ಯಾಭ್ಯಾಸ ಮಾಡಲು ಅಡ್ಡಿಯಿಲ್ಲ ಎಂದರು.

೧೦. ಬಿ.ಎ., ಆನರ್ಸ್ (ಕನ್ನಡ)

ಈಗ ನಾನು ನನ್ನ ಮುಂದಿನ ಮಾರ್ಗವನ್ನು ಕಂಡುಕೊಳ್ಳಬೇಕಾಗಿದ್ದಿತು. ಶ್ರೀಯುತ ನಾಗೇಶರಾವ್ ಮತ್ತು ಶ್ರೀಮತಿ ಸುಶೀಲಾಬಾಯಿ ಇವರ ಸಲಹೆ ಕೇಳಿದೆ. ಮುಂದಕ್ಕೆ ಓದಬೇಕೆಂದೂ ಇಲ್ಲಿಗೆ ಬಿಡಬಾರದೆಂದೂ ಒತ್ತಾಯಪೂರ್ವಕವಾಗಿ ಹೇಳಿದರು. ಮುಂದೆ ಮಹಾರಾಜಕಾಲೇಜಿಗೆ ಸೇರುವುದಲ್ಲದೆ ಇನ್ನಾವ ಮಾರ್ಗವೂ ಇರಲಿಲ್ಲ. ಕನ್ನಡ ಆನರ್ಸ್‌ಗೆ ಸೇರುವುದೇ ಸರಿ ಎಂದು ನಿಶ್ಚಯಿಸಿದೆ. ಮಹಾರಾಜಕಾಲೇಜಿನಲ್ಲಿ ವಿಚಾರಿಸಲಾಗಿ 'ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ ಒಂದು ವಿದ್ಯಾರ್ಥಿವೇತನ ಇದೆ. ಅದು ನನಗೆ ದೊರೆಯಬಹುದು' ಎಂಬುದು ತಿಳಿಯಿತು. ಇದೇ ಸರಿ ಎಂಬ ತೀರ್ಮಾನಕ್ಕೆ ಬಂದೆ. ನನ್ನ ಹಿತಚಿಂತಕರಾದ ಶ್ರೀ ನಾಗೇಶರಾಯರು ಮತ್ತು ಸುಶೀಲಾಬಾಯಿಯವರು ನನ್ನ ಅಭಿಪ್ರಾಯವನ್ನು ಒಪ್ಪಿದರು. ಕಾಲೇಜು ಸೇರಿಕೊಳ್ಳುವಾಗ ಕೊಡಬೇಕಾದ ಶುಲ್ಕದ ಬಗ್ಗೆ ಯೋಚನೆಯಾಯಿತು. ಶ್ರೀಮತಿ ಸುಶೀಲಾಬಾಯಿಯವರು ತಾವು ಅದಕ್ಕೆ ಏರ್ಪಾಡು ಮಾಡುವುದಾಗಿಯೂ, ಸಾಲರೂಪದಲ್ಲಿ ಆ ಹಣವನ್ನು ಯಾರಿಂದಲಾದರೂ ಕೊಡಿಸುವುದಾಗಿಯೂ, ಅದನ್ನು ಮುಂದೆ ನಿಧಾನವಾಗಿ ಹಿಂದಿರುಗಿಸಿದರಾಯಿತು ಎಂದೂ ಭರವಸೆ ಕೊಟ್ಟರು. ಹೀಗೆ ಹಿತೈಷಿಗಳ ಪ್ರೋತ್ಸಾಹದಿಂದ ಕನ್ನಡ ಬಿ.ಎ., ಆನರ್ಸ್ ತರಗತಿಗೆ ಪ್ರವೇಶ ಪಡೆದೆ.

ನಾನು ಕನ್ನಡ ಆನರ್ಸ್‌ಗೆ ಸೇರಿದ್ದರಿಂದ ಒಂದು ರೀತಿಯ ತೃಪ್ತಿಯುಂಟಾಗಿ ಮನಸ್ಸಿಗೆ ನೆಮ್ಮದಿಯೆನಿಸಿತು. ಕನ್ನಡಸಾಹಿತ್ಯದ ಬಗೆಗೆ ಒಲವಿನ ಒಂದು ಎಳೆ ನನ್ನಲ್ಲಿ ಬಚ್ಚಿಟ್ಟುಕೊಂಡಿತ್ತು; ನಾನು ಹಳ್ಳಿಯಲ್ಲಿದ್ದಾಗ ನಮ್ಮ ತಂದೆಯವರು ಆಗಾಗ್ಗೆ ಯಾವುದಾದರೂ ಹಿಂದಿನ ಕನ್ನಡ ಕವಿಗಳ ಕಾವ್ಯವನ್ನು ಓದುತ್ತಿದ್ದರು. ಆ ಸಮಯಗಳಲ್ಲೆಲ್ಲ ನಾನು ಅವರ ಬಳಿ ಹೋಗಿ ಕುಳಿತುಕೊಳ್ಳುತ್ತಿದ್ದೆ. ಒಂದೊಂದು ಪದ್ಯವನ್ನೂ ಓದಿ ಅದರ ಸ್ವಾರಸ್ಯವನ್ನು ವಿವರಿಸಿ ತಾವೂ ಸಂತೋಷಪಡುತ್ತಿದ್ದರು. ಆಗ ನನಗೆ ಎಷ್ಟು ಅರ್ಥವಾಗುತ್ತಿತ್ತೋ ! ಆದರೆ ಅವರು ಪದ್ಯಗಳನ್ನು ರಾಗವಾಗಿ ಓದುತ್ತಿದ್ದಾಗ ನಾನು ಅದರಲ್ಲಿ ಮಗ್ನನಾಗುತ್ತಿದ್ದೆ. ಮನಸ್ಸಿಗೆ ಒಂದು ರೀತಿಯ ಸಂತೋಷ ಉಂಟಾಗುತ್ತಿತ್ತು. ಲೋಯರ್ ಸೆಕೆಂಡರಿ ಕನ್ನಡ ಪಠ್ಯಪುಸ್ತಕದಲ್ಲಿ ತೊರವೆ ರಾಮಾಯಣದಿಂದಲೋ, ಕುಮಾರವ್ಯಾಸ ಭಾರತದಿಂದಲೋ ಒಂದು ಭಾಗವಿರುತ್ತಿತ್ತು. ಗೋವಿನ ಹಾಡು, ನಳದಮಯಂತಿ, ತಿರುಕನ ಕನಸು ಇಂಥ ಪದ್ಯಗಳು ನನಗೆ ಇಷ್ಟವಾಗಿದ್ದುವು. ಒಬ್ಬರು ಉಪಾಧ್ಯಾಯರು ನೆರೆಯ ಊರಿನಿಂದಲೋ ಅಥವಾ ಬೇರೆಯವರ ಬಳಿಯಿಂದಲೋ ಬಿ.ವೆಂಕಟಾಚಾರ್ ಅವರ **ಆನಂದಮಠ, ದುರ್ಗೇಶನಂದಿನಿ,** ಗಳಗನಾಥರ **ಈಶ್ವರೀಸೂತ್ರ** - ಮೊದಲಾದ ಕಾದಂಬರಿಗಳನ್ನು ತಂದು ಬಿಡುವಿನ ವೇಳೆಯಲ್ಲಿ ಯಾರದಾದರೂ ಮನೆಯ ಜಗಲಿಯ ಮೇಲೆ ಕುಳಿತು ಓದುತ್ತಿದ್ದರು. ನಾವು ನಾಲ್ಕೈದು ಜನ ಹುಡುಗರೂ, ಕೆಲವರು ದೊಡ್ಡವರೂ ಅವರ ಸುತ್ತ ಕುಳಿತು ಆ ಕಥೆಗಳನ್ನು ಅವರ ಬಾಯಿಂದ ಕೇಳುತ್ತ ಆ ಕಥಾ ಪ್ರಪಂಚದಲ್ಲಿ ಮುಳುಗಿಹೋಗುತ್ತಿದ್ದೆವು. ಈ ಎಲ್ಲ ಬಾಲ್ಯದ ಘಟನೆಗಳೂ ನನ್ನ ಮನಸ್ಸಿನಲ್ಲಿ ಮನೆ ಮಾಡಿದ್ದುವು. ಇವೆಲ್ಲ ನನಗೆ ಕನ್ನಡ ಆನರ್ಸ್‌ಗೆ ಸೇರಲು ಪ್ರೇರೇಪಿಸಿದವು ಎನ್ನಬಹುದು.

ಅಲ್ಲಿ ನನ್ನ ಇಬ್ಬರು ಒಡನೋದಿಗಳು ಕನ್ನಡ ಆನರ್ಸ್ ತರಗತಿಗೆ ಸೇರಿದವರು ಎಂದರೆ- ಒಬ್ಬರು ಆರ್.ಎಸ್. ರಾಮರಾವ್ ಮತ್ತು ಇನ್ನೊಬ್ಬರು ಜಿ. ವರದರಾಜರಾವ್. ಇಬ್ಬರೂ ಬೆಂಗಳೂರಿನಿಂದ ಬಂದಿದ್ದರು.

ಅದೇ ಸಮಯಕ್ಕೆ ಟಿ.ಎಸ್. ವೆಂಕಣ್ಣಯ್ಯನವರು ವಿಧಿವಶರಾದುದು ದುರ್ದೈವ. ಆಗ ವೆಂಕಣ್ಣಯ್ಯನವರ ಬಗ್ಗೆ ಒಂದು ಲೇಖನ ಬರೆದೆ. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದ ಉಪಪ್ರಾಧ್ಯಾಪಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳವರು ಕನ್ನಡ ಪ್ರೊಫೆಸರರಾಗಿ ಮಹಾರಾಜಕಾಲೇಜಿನಲ್ಲಿ ನಿಯುಕ್ತಿಗೊಂಡರು. ಕನ್ನಡ ಆನರ್ಸ್‌ನ ಮೂರುವರ್ಷಗಳ ಕಾಲ ಎ. ಆರ್. ಕೃಷ್ಣ ಶಾಸ್ತ್ರಿಗಳ ಪದತಲದಲ್ಲಿ ಅಧ್ಯಯನ ಮಾಡಿದೆವು. ಆನರ್ಸ್ ಪರೀಕ್ಷೆಯನ್ನು ಮುಗಿಸಿದವರು ಒಂದು ವರ್ಷದಲ್ಲಿ ಎಂ.ಎ., ಮುಗಿಸಲು ಅವಕಾಶವಿತ್ತು.

ಕನ್ನಡ ಆನರ್ಸ್‌ನಲ್ಲಿ ಕನ್ನಡಸಾಹಿತ್ಯವು ಪ್ರಧಾನ ಅಧ್ಯಯನ ವಿಷಯ. ಕನ್ನಡಕ್ಕೆ ಸಹಾಯವಾಗುವ ಕರ್ನಾಟಕದ ಚರಿತ್ರೆ, ಕರ್ನಾಟಕದ ವಾಸ್ತುಶಿಲ್ಪ, ಶಿಲಾಲೇಖ, ಮೂರ್ತಿಶಿಲ್ಪಗಳನ್ನೂ ಗೊತ್ತುಪಡಿಸಲಾಗಿತ್ತು. ಈ ವಿಷಯವನ್ನು ನಮಗೆ ಆಗ ಪ್ರಸಿದ್ಧ ರಾಗಿದ್ದ ಇತಿಹಾಸತಜ್ಞ ಡಾ. ಎಂ.ಎಚ್ ಕೃಷ್ಣ ಅವರು ಬೋಧಿಸಿದರು. ಕೆಲವು ವಿಷಯಗಳನ್ನು ಇನ್ನೊಬ್ಬ ಇತಿಹಾಸತಜ್ಞರಾದ ಡಾ.ಎಸ್. ಶ್ರೀಕಂಠಶಾಸ್ತ್ರಿಗಳು ಬೋಧಿಸಿದರು. ಭಾರತ ಹಾಗೂ ಕರ್ನಾಟಕದ ಪೂರ್ವೇತಿಹಾಸದಲ್ಲಿ ಮಹಾವಿದ್ವಾಂಸರಾಗಿದ್ದರು ಶ್ರೀಕಂಠಶಾಸ್ತ್ರಿಗಳು. ಯಾರಿಗಾದರೂ ಯಾವುದಾದರೂ ಅನುಮಾನವನ್ನು ಪರಿಹರಿಸಿಕೊಳ್ಳಬೇಕಾದರೆ ಶಾಸ್ತ್ರಿಗಳ ಮೊರೆ ಹೋಗಬೇಕಾಗಿತ್ತು.

ಕನ್ನಡ ಅಧ್ಯಯನಕ್ಕೆ ಯಾವುದಾದರೂ ಒಂದು ದ್ರಾವಿಡ ಭಾಷೆಯ ಅಧ್ಯಯನ ಮತ್ತು ಸಂಸ್ಕೃತದ ಅಧ್ಯಯನ ಅಗತ್ಯವಾಗಿತ್ತು. ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಗಳು ನನ್ನನ್ನು ಕರೆದು ತಮಿಳನ್ನೇ ತೆಗೆದುಕೋ ಎಂದು ಹೇಳಿದರು. ತಮಿಳುಭಾಷೆಯನ್ನು ತಕ್ಕಮಟ್ಟಿಗೆ ಕಲಿತೆ. ಆದರೆ ಮುಂದೆ ಆ ಭಾಷೆಯನ್ನು ಎಷ್ಟು ಉಪಯೋಗಿಸಿಕೊಳ್ಳಬಹುದಿತ್ತೋ ಅಷ್ಟು ಉಪಯೋಗಿಸಿ ಕೊಳ್ಳಲಿಲ್ಲ.

ಪ್ರೊ॥ ಎ. ಅರ್. ಕೃಷ್ಣಶಾಸ್ತ್ರಿಗಳು ಭಾಷಾಶಾಸ್ತ್ರ , ವ್ಯಾಕರಣ ಶಾಸ್ತ್ರಗಳನ್ನು ತೆಗೆದುಕೊಳ್ಳುತ್ತಿದ್ದರು. ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ಕನ್ನಡಸಾಹಿತ್ಯಚರಿತ್ರೆಯನ್ನು ಬೋಧಿಸುತ್ತಿದ್ದರು. ಪ್ರೊ॥ ತೀ.ನಂ. ಶ್ರೀಕಂಠಯ್ಯನವರು ಅಲಂಕಾರ ಶಾಸ್ತ್ರ ಮತ್ತು ಕಾವ್ಯಗಳನ್ನು ಪಾಠ ಹೇಳುತ್ತಿದ್ದರು. ವರದಾಚಾರ್ ಎಂಬ ಪಂಡಿತರು ಒಂದು ಕಾವ್ಯವನ್ನು ಹೇಳಿಕೊಡುತ್ತಿದ್ದರು.

ಡಿ.ಎಲ್. ನರಸಿಂಹಾಚಾರ್ಯರು ಸಾಹಿತ್ಯಚರಿತ್ರೆಯನ್ನು ನಿಷ್ಕೃಷ್ಟವಾಗಿ, ಸ್ಪಷ್ಟವಾಗಿ ತಿಳಿಯುವಂತೆ ಹೇಳುತ್ತಿದ್ದರು. ಅವರ ನೆನಪು ಅಮೋಘವಾದುದು. ನಾವು ಯಾವುದಾದರೂ ಒಂದು ಪದ್ಯ ಅಥವಾ ಪದ ಅರ್ಥವಾಗಲಿಲ್ಲವೆಂದು ಅವರನ್ನು ಕೇಳಿದರೆ ತಕ್ಷಣ, "ಇರಯ್ಯ ಹೇಳ್ತೀನಿ" ಎಂದು ಬೇರೆ ಬೇರೆ ಗ್ರಂಥಗಳಲ್ಲಿ ಬರುವ ಸಂದರ್ಭಗಳನ್ನು ಉದಾಹರಿಸಿ ಅರ್ಥವನ್ನು ಸ್ಪಷ್ಟಪಡಿಸುತ್ತಿದ್ದರು. ಪ್ರೊ॥ ತೀ.ನಂ.ಶ್ರೀಕಂಠಯ್ಯನವರ ಪಾಠವೆಂದರೆ ಅದೊಂದು ಹಬ್ಬವಿದ್ದಂತೆ. ಅಸ್ಖಲಿತ ವಾಣಿಯಲ್ಲಿ ಅವರ ಮಾತನ್ನು ಕೇಳುತ್ತಿದ್ದರೆ ಸಮಯ ಹೋದುದೇ ಗೊತ್ತಾಗುತ್ತಿರಲಿಲ್ಲ. ವಿದ್ವತ್ಪೂರ್ಣವಾದ ಅವರ ಭಾಷಣವು ವಿಷಯಬಾಹುಳ್ಯದಿಂದ, ಗಹನವಾದ ವಿಚಾರಗಳಿಂದ ತುಂಬಿ ತುಳುಕುತ್ತಿತ್ತು. ಪ್ರೊ॥ ಕೆ. ವೆಂಕಟರಾಮಪ್ಪನವರ ತರಗತಿಗಳು ಉಲ್ಲಾಸಭರಿತವಾಗಿರುತ್ತಿದ್ದುವು. ನಡುನಡುವೆ ಅವರು ಹಾರಿಸುತ್ತಿದ್ದ ನವುರಾದ ಹಾಸ್ಯ ನಮಗೆ ಕಚಗುಳಿ ಇಡುತ್ತಿತ್ತು. ತರಗತಿಯಲ್ಲಿ ಯಾರಾದರೂ ಹುಡುಗರು ಸ್ವಲ್ಪ ಚೇಷ್ಟೆ ಮಾಡಿದರೆ ಹಾಸ್ಯದಿಂದಲೇ ಅವರ ಮುಖದ ನೀರಿಳಿಸಿಬಿಡುತ್ತಿದ್ದರು. ಜಿ.ಪಿ.ರಾಜರತ್ನಂರವರು ತಮ್ಮ ಕಂಚಿನಕಂಠದಿಂದ ಹೊರಡಿಸುತ್ತಿದ್ದ ಮಾತಿನ ವೈಖರಿ ನಮ್ಮನ್ನು ಬೆರಗುಗೊಳಿಸುತ್ತಿತ್ತು.

ನಮಗೆ ಮುಖ್ಯವಾಗಿ ಇಂಗ್ಲಿಷ್ ಪಾಠವನ್ನು ತೆಗೆದು ಕೊಳ್ಳುತಿದ್ದವರು ಪ್ರಾಂಶುಪಾಲ ಜೆ.ಸಿ. ರಾಲೋ ಮತ್ತು ಬಿ.ಎನ್. ಶಾಮರಾವ್ ಅವರು. ಜೆ.ಸಿ. ರಾಲೋರವರು ಷೇಕ್ಸ್‌ಪಿಯರನ ನಾಟಕಗಳನ್ನು ಅದ್ಭುತವಾಗಿ ಪಾಠಹೇಳುತ್ತಿದ್ದರು. ನಮಗೆ ಆ ವರ್ಷ ಷೇಕ್ಸ್‌ಪಿಯರನ ಯಾವ ನಾಟಕವೂ ಇರಲಿಲ್ಲ. ಆದರೆ ಬೇರೆ ಕೆಲವು ಒಂದಂಕದ ನಾಟಕಗಳು ಪಠ್ಯವಾಗಿ ನಿಯಮಿತವಾಗಿದ್ದವು. ಅದರಲ್ಲಿ ಎವ್ವೆರಿಮ್ಯಾನ್ (Every man) ಎಂಬ ನಾಟಕವೂ ಇದ್ದಿತು. I will be thy guide whenever thy need be ಎಂಬುದು ಈ ನಾಟಕದ ಪ್ರಧಾನವಾಕ್ಯವಾಗಿದ್ದಿತು. ಬಿ. ಎನ್. ಶಾಮರಾಯರು ಪಾಠ ಹೇಳಲು ನಿಂತರೆ ಶೆಲ್ಲಿ, ಕೋಲ್‌ರಿಡ್ಜ್, ವರ್ಡ್ಸ್‌ವರ್ತ್- ಮೊದಲಾದ ಕವಿಗಳ ಕವನಗಳನ್ನು ಧಾರಾಳವಾಗಿ ಉದ್ಧರಿಸುತ್ತಿದ್ದರು. ಕವಿಗಳ ಬಗೆಗಿನ ಅವರ ಜ್ಞಾನ ನಮ್ಮನ್ನು ದಂಗು ಬಡಿಸುತ್ತಿತ್ತು.

ನಮಗೆ ಸಂಸ್ಕೃತವು ಪ್ರಧಾನ ವಿಷಯ (Major subject) ಆಗಿದ್ದಿತು. ಆದುದರಿಂದ ಕನ್ನಡ ಆನರ್ಸ್‌ನ ಕೊನೆಯ ಪರೀಕ್ಷೆಯ ಜತೆಗೇ ಸಂಸ್ಕೃತದ ಪರೀಕ್ಷೆಯೂ ಆಗುತ್ತಿತ್ತು. ಸಂಸ್ಕೃತವನ್ನು ಆ ಮೊದಲು ಕಲಿಯದವರು ಮೊದಲನೆಯ ಆನರ್ಸ್ ತರಗತಿಯಲ್ಲಿ ಅಕ್ಷರಾಭ್ಯಾಸದಿಂದ ಕಲಿಯಬೇಕಾಗಿತ್ತು. ನನಗೆ ಆಗಲೇ ತಕ್ಕಮಟ್ಟಿಗೆ ಸಂಸ್ಕೃತ ವಿದ್ಯಾಭ್ಯಾಸವಾಗಿದ್ದುದರಿಂದ ಮೊದಲನೆಯ ವರ್ಷ ಸಂಸ್ಕೃತದ ತರಗತಿಗೆ ಹೋಗುವ ಆವಶ್ಯಕತೆ ಇರಲಿಲ್ಲ. ನಮ್ಮವರೇ ಆದ ಸೋಮನಹಳ್ಳಿಯ ಎಸ್. ಸುಬ್ರಾಯಶಾಸ್ತ್ರಿಗಳು ಮೊದಲನೆಯ ವರ್ಷ ಸಂಸ್ಕೃತ ಕಲಿಸುತ್ತಿದ್ದರು. ಅವರು ನನಗೆ ಸಂಸ್ಕೃತ ತರಗತಿಗೆ ವಿನಾಯಿತಿ ಕೊಟ್ಟಿದ್ದರು. ಮೂರನೆಯ ವರ್ಷದಲ್ಲಿ ಸಂಸ್ಕೃತದ ಪ್ರೊಫೆಸರ್ ಆದ ಸಿ.ಆರ್. ನರಸಿಂಹಶಾಸ್ತ್ರಿಗಳು ಸಂಸ್ಕೃತದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಸಿ.ಆರ್. ನರಸಿಂಹಶಾಸ್ತ್ರಿಗಳು ಒಳ್ಳೆಯ ರಸಿಕರೆಂದು ಪ್ರಸಿದ್ಧರಾಗಿದ್ದರು. ಅವರ ಭಾಷಣಗಳೆಂದರೆ ಹೊಟ್ಟೆ ಹುಣ್ಣಾಗುವಂತೆ ನಕ್ಕು ಸುಸ್ತಾಗುವಂತಾಗುತ್ತಿತ್ತು. ಒಂದಾದ ಮೇಲೆ ಒಂದರಂತೆ ಹಾಸ್ಯಗಳನ್ನು ಉರುಳಿಸುತ್ತಿದ್ದರು. ಅವರು ನಮಗೆ ಶಾಕುಂತಲ ನಾಟಕವನ್ನು ಸ್ವಾರಸ್ಯವಾಗಿ ಪಾಠ ಮಾಡಿದರು. ಇನ್ನೊಬ್ಬರು ಸಂಸ್ಕೃತ ಅಧ್ಯಾಪಕರು ಪ್ರೊ॥ ಎಂ. ಲಕ್ಷ್ಮೀ ನರಸಿಂಹಯ್ಯನವರು. ಇವರು ಬಹಳ ಗಂಭೀರವಾಗಿ ವಿವರಿಸುತ್ತ ಪಾಠ ಮಾಡುತ್ತಿದ್ದರು.

a a a

ಆ ದಿನಗಳಲ್ಲಿ ಪ್ರಸಿದ್ಧ ಗಮಕಿಗಳಾಗಿದ್ದ ಕೃಷ್ಣಗಿರಿಕೃಷ್ಣರಾಯರು ಪುಸ್ತಕ ಭಂಡಾರದ ಪಾಲಕರಾಗಿದ್ದರು. ಅವರಿಗೆ ಪುಸ್ತಕ ಭಂಡಾರಕ್ಕೆ ಬರುವವರಲ್ಲಿ ಅಪಾರ ಪ್ರೀತಿ. ಅವರು ನಮಗೆ ಉತ್ತಮ ಮಾರ್ಗದರ್ಶಕರಾಗಿದ್ದರು. ನಾನು ಷೇಕ್ಸ್‌ಪಿಯರ್ ನಾಟಕಗಳನ್ನೆಲ್ಲ ಅಲ್ಲಿ ಓದಿದುದಲ್ಲದೆ ಅವನ ನಾಟಕಗಳ ವಿಮರ್ಶೆಯನ್ನೂ ಅಧ್ಯಯನ ಮಾಡಿದೆ. ವೆರಿಟಿ, ಬ್ರಾಡ್ಲೇ ಮೊದಲಾದವರ ಪುಸ್ತಕಗಳು

ನನಗೆ ಅಚ್ಚುಮೆಚ್ಚಿನವಾಗಿದ್ದುವು. ಪಠ್ಯಪುಸ್ತಕವಾಗಿರುವ ಕನ್ನಡದ ಪ್ರಾಚೀನ ಕಾವ್ಯಗಳನ್ನಲ್ಲದೆ, ಪ್ರಾಚೀನ ಕನ್ನಡ ಸಾಹಿತ್ಯದ ಮುಖ್ಯಕವಿಗಳ ಕಾವ್ಯಗಳನ್ನೆಲ್ಲ ಅಧ್ಯಯನ ಮಾಡಿದೆ. ಸಂಸ್ಕೃತದಲ್ಲಿ ಭಾಸ, ಕಾಳಿದಾಸ, ಭಟ್ಟ ನಾರಾಯಣ, ಶೂದ್ರಕ, ಭವಭೂತಿ ಮೊದಲಾದವರ ನಾಟಕಗಳನ್ನೂ, ಕಾಳಿದಾಸನ ಕಾವ್ಯಗಳನ್ನೂ ಓದಿ ಆನಂದಿಸಿದೆ. ಇಂಗ್ಲಿಷಿನಲ್ಲಿ ಸಾಹಿತ್ಯವಿಮರ್ಶೆಯ ಗ್ರಂಥಗಳು ನಮ್ಮ ಅಧ್ಯಯನಕ್ಕೆ ಆವಶ್ಯಕವಾಗಿದ್ದುವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮಹಾರಾಜಕಾಲೇಜು, ವಿಶ್ವವಿದ್ಯಾಲಯ, ಪ್ರಾಚ್ಯ ಸಂಶೋಧನಾಸಂಸ್ಥೆ - ಈ ಪುಸ್ತಕ ಭಂಡಾರಗಳು ನಾನು ವಾಸಿಸುವ ಮನೆಯ ಬೇರೆ ಬೇರೆ ಕೋಣೆಗಳಂತಾದುವು.

ನನ್ನ ಮೂರು ವರ್ಷಗಳ ಈ ವಿದ್ಯಾಭ್ಯಾಸ ಕಾಲದಲ್ಲಿ ಹಲವು ಜನ ನನಗೆ ಆತ್ಮೀಯಸ್ನೇಹಿತರಾಗಿದ್ದರು. (ಸಂಸ್ಕೃತ ವಿದ್ವಾಂಸ ಹಾಗೂ ಕನ್ನಡ ಕವಿ) ಬಿ.ಎಚ್. ಶ್ರೀಧರ, (ನವ್ಯಕಾವ್ಯದ ಜನಕರೆಂದು ಪ್ರಸಿದ್ಧಿ ಪಡೆದ) ಮೊಗೇರಿ ಗೋಪಾಲಕೃಷ್ಣ ಅಡಿಗ, (ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾದ) ಡಾ. ಕೆ. ಕೃಷ್ಣಮೂರ್ತಿ, (ಚರಿತ್ರೆಯ ಆನರ್ಸ್‌ನ ವಿದ್ಯಾರ್ಥಿ ಗೆಳೆಯ) ರಾಮಾಚಾರ್, (ಅರ್ಥಶಾಸ್ತ್ರದ ಆನರ್ಸ್‌ನ ವಿದ್ಯಾರ್ಥಿಯಾಗಿದ್ದು, ವನಿತಾಸದನದಲ್ಲಿ ನಮ್ಮ ಜತೆ ಸೇರಿ ಸೇವೆ ಸಲ್ಲಿಸುತ್ತಿದ್ದ) ಬಿ.ಎನ್. ಕೃಷ್ಣಮೂರ್ತಿ - ಇವರ ಸಹವಾಸ, ಸಹಪಾಠಿತನ ನನ್ನ ವ್ಯಕ್ತಿತ್ವವನ್ನು ವೃದ್ಧಿಗೊಳಿಸುವುದರಲ್ಲಿ ಸಹಾಯ ಮಾಡಿದವು. ಮಹಾರಾಜಕಾಲೇಜಿನ ಎಲ್ಲ ವಿದ್ವಾಂಸರೂ ನನ್ನ ಮೇಲೆ ಪ್ರಭಾವ ಬೀರಿದರೆಂಬುದರಲ್ಲಿ ಸಂದೇಹವಿಲ್ಲ. ಡಾ. ಎಂ.ಎಚ್. ಕೃಷ್ಣ, ಮನಃಶಾಸ್ತ್ರದ ಪ್ರಾಧ್ಯಾಪಕ ಡಾ. ಎಂ.ವಿ. ಗೋಪಾಲಸ್ವಾಮಿ, ಅರ್ಥಶಾಸ್ತ್ರದ ಪ್ರಾಧ್ಯಾಪಕ ವಿ.ಎಲ್.ಡಿಸೌಜಾ- ಇವರ ವ್ಯಕ್ತಿತ್ವದ ಕಾಂತಿಯು ಜ್ಞಾನ, ವಿವೇಕ, ಸನ್ನಡತೆಗಳನ್ನು ರೂಪಿಸುವಲ್ಲಿ ಸಹಾಯಕವಾಯಿತು.

ಒಬ್ಬ ಮಹನೀಯರ ಹೆಸರನ್ನು ವಿಶೇಷವಾಗಿ ಪ್ರಸ್ತಾಪಿಸಬೇಕು. ಕನ್ನಡ ನಾಡಿನ ಏಕೀಕರಣಕ್ಕಾಗಿ ಶ್ರಮಿಸಿದ ಮಹಾ ವೀರ, ವಿದ್ಯಾನಿಧಿ, ಮಹಾನ್ ಪ್ರತಿಭಾಶಾಲಿ ಬಿ.ಎಂ. ಶ್ರೀಕಂಠಯ್ಯನವರೇ ಆ ಮಹಾನ್ ವ್ಯಕ್ತಿ. ಅವರ ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ, ಅಷ್ಟೇ ಕನ್ನಡ ವಿದ್ವತ್ತು ಎಲ್ಲರ ಮೆಚ್ಚುಗೆಯನ್ನೂ ಗಳಿಸಿತ್ತು. ನಾವು ಷೇಕ್ಸ್‌ಪಿಯರ್‌ನ ದುರಂತ ನಾಟಕಗಳು- ಅದರಲ್ಲೂ ಜೂಲಿಯಸ್ ಸೀಸರ್, ಹ್ಯಾಮ್‌ಲೆಟ್, ಒಥೆಲೋ ನಾಟಕಗಳ ಮೇಲಿನ ಓತಪ್ರೋತವಾಗಿ ಭೋರ್ಗರೆವ ಅವರ ಭಾಷಣಗಳ ಜಲಧಾರೆಯಲ್ಲಿ ಮುಳುಗಿಬಿಡುತ್ತಿದ್ದೆವು. ಅವರ ಒಂದೊಂದು ವಾಕ್ಯವೂ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ಅವರ ವಿಚಾರಧಾರೆಯ ಗಾಢತೆ ನಮ್ಮ ಮನಸ್ಸಿನಲ್ಲಿ ಶಾಶ್ವತವಾದ ಸ್ಥಾನವನ್ನು ಗಿಟ್ಟಿಸಿಬಿಡುತ್ತಿತ್ತು. ಅವರ ಭಾಷಣಗಳನ್ನು ಕೇಳಿದೆವಲ್ಲಾ ಎಂಬ ಧನ್ಯತೆಯ ಭಾವ ಮೂಡಿಬರುತ್ತಿತ್ತು.

ಬಿ.ಎಂ. ಶ್ರೀಕಂಠಯ್ಯನವರಿಂದ ಪ್ರಭಾವಿತನಾಗಿ ಅವರ ಅಪಾರ ಪಾಂಡಿತ್ಯದ, ಕನ್ನಡಭಾಷಾಪ್ರೇಮದ ಸವಿಯನ್ನು ಅನುಭವಿಸುವ ಅಪೂರ್ವ ಸಂದರ್ಭವು ನಮ್ಮ ಆನರ್ಸ್ ತರಗತಿಯವರಿಗೆ ದೊರಕಿದುದು ನಮ್ಮ ಅದೃಷ್ಟ ವಿಶೇಷ. ಬೆಂಗಳೂರಿನಲ್ಲಿದ್ದ ಬಿ.ಎಂ.ಶ್ರೀಯವರು ವರ್ಷಕ್ಕೆ ಒಮ್ಮೆ ಮೈಸೂರಿಗೆ ಬಂದು ಮೂರು ದಿನಗಳ ಕಾಲ ಕನ್ನಡ ಆನರ್ಸ್ ಮತ್ತು ಕನ್ನಡ ಎಂ.ಎ., ತರಗತಿಯ ಎಲ್ಲಾ ವಿದ್ಯಾರ್ಥಿಗಳ ತರಗತಿಯಲ್ಲಿ ಯಾವುದಾದರೂ ಒಂದು ಗಹನವಾದ ವಿಷಯದ ಮೇಲೆ ಭಾಷಣ ಮಾಡುತ್ತಿದ್ದರು. ಬೆಳಗ್ಗೆ ಹತ್ತು ಗಂಟೆಗೆ ಆರಂಭವಾಗುತ್ತಿದ್ದ ಅವರ ತರಗತಿ, ಮಧ್ಯೆ ಒಂದು ಗಂಟೆಯ ವಿರಾಮವನ್ನುಳಿದು ಸಂಜೆ ಐದು ಗಂಟೆಯವರೆಗೂ ನಡೆಯುತ್ತಿತ್ತು. ಮೂರು ದಿನಗಳ ಕಾಲದ ಒಂದು ಜ್ಞಾನಸತ್ರವಾಗುತ್ತಿತ್ತು ಇದು. ಆ ಬಾರಿ ಅವರು ಆರಿಸಿಕೊಂಡ ವಿಷಯ 'A case for Kannada grammar'. ಕನ್ನಡದಲ್ಲಿ ಬರೆದ ಶಬ್ದಸ್ಮೃತಿ, ಕೇಶಿರಾಜನ ಶಬ್ದಮಣಿ ದರ್ಪಣ, ಸಂಸ್ಕೃತದಲ್ಲಿ ಭಟ್ಟಾಕಳಂಕನು ರಚಿಸಿದ ಕನ್ನಡದ ವ್ಯಾಕರಣ ಶಬ್ದಾನುಶಾಸನ - ಈ ವ್ಯಾಕರಣಗಳು ಸಂಸ್ಕೃತವ್ಯಾಕರಣವನ್ನು ಅನುಸರಿಸಿದು ವಾಗಿದ್ದವು. ಕೇಶಿರಾಜನೊಬ್ಬನೇ ಕನ್ನಡದೃಷ್ಟಿಯನ್ನು ವ್ಯಾಕರಣಶಾಸ್ತ್ರದ ನಿರೂಪಣೆಯಲ್ಲಿ ಸ್ವಲ್ಪಮಟ್ಟಿಗೆ ಅಳವಡಿಸಿಕೊಂಡವನು. ಬಿ.ಎಂ.ಶ್ರೀ. ಯವರು ತಮಿಳು ವ್ಯಾಕರಣವನ್ನೂ ಅಭ್ಯಾಸಮಾಡಿ, ತಮಿಳು ವ್ಯಾಕರಣಶಾಸ್ತ್ರಜ್ಞರು ಹೇಗೆ ತಮ್ಮ ಭಾಷೆಯ ರಚನೆಯಲ್ಲಿ ತಮಿಳಿನ ಭಾಷಾ ಮರ್ಯಾದೆಯನ್ನು ಕಾಪಾಡಿಕೊಂಡರು ಎಂಬುದನ್ನು ಮನಗಂಡಿದ್ದರು. ಆದುದರಿಂದ ಕನ್ನಡ ಭಾಷೆಯ ದೇಸಿಗೆ ಅನುಸಾರವಾಗಿ ಕನ್ನಡಭಾಷೆಯ ರಚನೆ, ಶೈಲಿ ಕನ್ನಡ ಭಾಷೆಯಲ್ಲಡಗಿರುವ ತನ್ನ ಸ್ವಂತಿಕೆಯ ಸೊಗಸು - ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ವ್ಯಾಕರಣವನ್ನು ರಚಿಸಬೇಕೆಂದು ಬಿ.ಎಂ.ಶ್ರೀ.ಯವರು ಪ್ರತಿಪಾದಿಸಿದುದು ಅವರ ಅಪಾರ ವಿದ್ವತ್ತಿನ ಮತ್ತು ಸಂಶೋಧನೆಯ ಸೂಚಕವಾಗಿತ್ತು. ಕನ್ನಡದಲ್ಲಿ ಪ್ರಾಚೀನ ತ್ರಿಪದಿ, ಸಾಂಗತ್ಯ, ಪಿರಿಯಕ್ಕರ, ಅಕ್ಕರ ಮೊದಲಾದುವುಗಳ ಛಂದಸ್ಸು ಮಾತ್ರಾಗಣವಲ್ಲ ಎಂಬುದು ವಿದ್ವಾಂಸರಿಗೆ ವೇದ್ಯವಾಗಿತ್ತು. ಈ ಸಮಸ್ಯೆಯನ್ನು ತಮಿಳುಛಂದಸ್ಸಿನ

ಅಧ್ಯಯನದಿಂದ ಅವರು ಪರಿಹರಿಸಿದರು. ಈ ಛಂದಸ್ಸು ಅಂಶಗಣದ ಲೆಕ್ಕಕ್ಕೆ ಬರುವುದು ಎಂಬುದನ್ನು ವಿಶದಪಡಿಸಿದರು. ಬಿ.ಎಂ.ಶ್ರೀ. ಯವರು ಬರೆದುವೆಲ್ಲ ಬಹುಕಾಲ ನಿಲ್ಲಬಲ್ಲ ಗಟ್ಟಿ ಕೃತಿಗಳಾಗಿದ್ದುವು. ಅಶ್ವತ್ಥಾಮನ್ ಅಂಥ ದುರಂತ ನಾಟಕವಾಗಲಿ, ಅವರು ಛಂದಃಶಾಸ್ತ್ರದ ಬಗ್ಗೆ ಬರೆದ ಪ್ರೌಢ ಪ್ರಬಂಧವಾಗಲಿ, ಇಂಗ್ಲಿಷ್ ಗೀತಗಳಾಗಲಿ ಕನ್ನಡದ ಮೇರು ಕೃತಿಗಳೇ. ಇಂಥ ಘನವಿದ್ವಾಂಸರ ಪಾಠವನ್ನು ಕೇಳುವ ಅದೃಷ್ಟಶಾಲಿಯಾದೆನೆಂಬ ಸಂತೋಷ ನನಗೆ.

ಒಟ್ಟಿನಲ್ಲಿ ಮಹಾರಾಜಕಾಲೇಜಿನ ನನ್ನ ಅಧ್ಯಯನ ಕಾಲವು ಪೂರ್ಣ ಫಲಕಾರಿಯಾದುದರಲ್ಲಿ ಸಂದೇಹವಿಲ್ಲ.

೧೧. ಉದ್ಯೋಗ

ನಾನು ಎಂ.ಎ., ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಮುಖ್ಯವಾದ ಕಾರಣ ಆರ್ಥಿಕ ಸಮಸ್ಯೆ. ಎಲ್ಲಾದರೂ ಒಂದು ಕೆಲಸವನ್ನು ಹುಡುಕಿಕೊಳ್ಳಬೇಕೆಂದು ನಿರ್ಧರಿಸಿದೆ. ಇತರರಿಗೆ ಹೊರೆಯಾಗಿ ಸುಮ್ಮನೆ ಕೂರುವುದು ಸರಿಯಲ್ಲ ಎನಿಸಿತು. ಪ್ರಯತ್ನಿಸಿ, ಎರಡು, ಮೂರು ಮನೆಪಾಠಗಳನ್ನು ಗೊತ್ತುಮಾಡಿಕೊಂಡು ಕೆಲಸವನ್ನು ಹುಡುಕುತ್ತಿದ್ದೆ.

ಹೀಗಿರುವಾಗ ಪೂನಾದಲ್ಲಿ ಕೇಂದ್ರ ಕಛೇರಿ ಇದ್ದ Controller of Military Accounts ನ (ಸೈನ್ಯದ ಲೆಕ್ಕಪತ್ರದ ಮುಖ್ಯಾಧಿಕಾರಿ) ಜಾಹಿರಾತು ಕಣ್ಣಿಗೆ ಬಿದ್ದಿತು. ಪೂನಾಕ್ಕೆ ರೈಲು ಹತ್ತಿದೆ. ಹೊಳೆನರಸೀಪುರದಲ್ಲಿ ನಮ್ಮ ತಂದೆ ತಾಯಿ ರೈಲುನಿಲ್ದಾಣಕ್ಕೆ ಬಂದಿದ್ದರು. ನಾನು ಸೈನ್ಯಕ್ಕೆ ಭರ್ತಿಯಾಗಲು ಹೋಗುತ್ತಿರುವುದಾಗಿ ಅವರು ಹೆದರಿದ್ದರು. "ಸೈನ್ಯದ ಅಕೌಂಟ್ಸ್ ವಿಭಾಗದಲ್ಲಿನ ಸರಕಾರಿ ಕೆಲಸ ; ಇದರಲ್ಲಿ ಸೈನ್ಯಕ್ಕೆ ಸೇರುವ ಪ್ರಶ್ನೆಯೇ ಇಲ್ಲ" ಎಂದು ಅವರಿಗೆ ವಿವರಿಸಿದೆ. ಆದರೂ ಅವರಿಗೆ ಪೂರ್ತಿ ಸಮಾಧಾನವಾದಂತೆ ಕಾಣಲಿಲ್ಲ . ಕ್ರಮೇಣ ವಿಷಯವು ಅವರಿಗೆ ಸ್ಪಷ್ಟವಾಗಿ ತಿಳಿದು, ಒಪ್ಪಿಕೊಳ್ಳುತ್ತಾರೆ ಎಂದು ಮನಸ್ಸಿನಲ್ಲಿ ಭಾವಿಸಿಕೊಂಡೆ. ಮೈಸೂರಿನಿಂದ ಹೊರಟ ಎರಡನೆಯ ದಿನ ಮಧ್ಯಾಹ್ನಕ್ಕೆ ಪೂನಾ ತಲುಪಿದೆ.

ರೈಲುನಿಲ್ದಾಣದಿಂದ ಹೊರಟು ನೇರವಾಗಿ ಕಂಟೋನ್ಮೆಂಟಿನಲ್ಲಿದ್ದ ಕಛೇರಿಗೆ ಹೋದೆ. ಸಂದರ್ಶನವು ನೆಪಮಾತ್ರ. ತಕ್ಷಣ ಕೆಲಸಕ್ಕೆ ನೇಮಕವಾದೆ. ನನ್ನ ಅತ್ಯಂತ ಆಪ್ತ ಸ್ನೇಹಿತನಾದ ಬಿ.ಎಚ್. ಶ್ರೀಧರ ಅಂದೇ ಬಂದು ನಮ್ಮದೇ ಇಲಾಖೆಗೆ ಕೆಲಸಕ್ಕೆ ಸೇರಿದ್ದ.

ನಾನು ಪುಣೆಯಲ್ಲಿ ಇದ್ದಕಾಲ, ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅತ್ಯಂತ ಪ್ರಕ್ಷುಬ್ಧ ಹಾಗೂ ಬಿರುಸಿನ ಹೋರಾಟದ ಕಾಲ. ೧೯೪೨ರ ಪ್ರಚಂಡ ಸ್ವಾತಂತ್ರ್ಯಹೋರಾಟದ ಸಮಯದಲ್ಲಿ ಪುಣೆಗೆ ಬಂದು ಸೈನಿಕ-ವ್ಯವಸ್ಥೆಗೆ ಸೇರಿದ ಕಛೇರಿಯಲ್ಲಿ ನಾನು ಕೆಲಸಕ್ಕೆ ಸೇರಿದುದು ವಿಧಿಯ ವಿಡಂಬನವೆಂದೇ ಹೇಳಬೇಕು. ೧೯೪೨ನೆಯ ಆಗಸ್ಟ್‌ನಲ್ಲಿ ಮುಂಬಯಿಯಲ್ಲಿ ನಡೆದ ಚಾರಿತ್ರಿಕ ಕಾಂಗ್ರೆಸ್ ಮಹಾಸಭೆಯ ಅಧಿವೇಶನದಲ್ಲಿಯೇ Quit India ('ಚಲೇಜಾವ್' ; 'ಬ್ರಿಟಿಷರೇ ತೊಲಗಿ') ಎಂಬ ಠರಾವನ್ನು ಪಾಸು ಮಾಡಿದುದು. ಅದೇ ದಿನ ಅರ್ಧರಾತ್ರಿ ಮತ್ತು ಮಾರನೆಯ ಬೆಳಗಿನ ಜಾವದಲ್ಲಿ ಮಹಾತ್ಮಾಗಾಂಧಿ, ನೆಹರು, ಪಟೇಲ್ ಮೊದಲಾದ ಮುಖಂಡರೆಲ್ಲ ದಸ್ತಗಿರಿಯಾದರು. ಪ್ರಾಯಃ ಈ ಪ್ರಕ್ಷುಬ್ಧ ವಾತಾವರಣ ಮೊದಲೇ ಉಂಟಾಗಿದ್ದರೆ ನಾನು ಪುಣೆಗೆ ಬರುತ್ತಿದ್ದೆನೋ ಇಲ್ಲವೋ. ಅದಕ್ಕೆ ಮೊದಲು ಇನ್ನೂ ಅಂಥ ಪರಿಸ್ಥಿತಿಯಿರಲಿಲ್ಲ. ಮುಂಬಯಿಯಲ್ಲಿ ಅಂದೇ ಭಾರೀ ಜನಾಂದೋಲನ, ಮೆರವಣಿಗೆ, ಪ್ರದರ್ಶನ, ಲಾಠಿಛಾರ್ಜು, ಗುಂಡಿನ ಸುರಿಮಳೆ. ಮುಂಬಯಿಯ ಹತ್ತಿರವೇ ಇದ್ದ ಪುಣೆಯಲ್ಲಿ ಅದರ ಪ್ರತಿಕ್ರಿಯೆ ಆದುದು ಸಹಜವಾಗಿಯೇ ಇದ್ದಿತು. ಅಂದು ಹೋಗಿ ಕಾಂಗ್ರೆಸ್ ಅಧಿವೇಶನವನ್ನು ನೋಡಿಕೊಂಡು, ಒಂದಿಷ್ಟು ದೇಶಪ್ರೇಮವನ್ನು ತುಂಬಿಕೊಂಡು ಬರಲು ಅವಕಾಶವಿದ್ದಿತು.

ನಮ್ಮ ಕಛೇರಿಯಲ್ಲಿ ನನಗೆ ಕೆಲವು ಗೆಳೆಯರ ಪರಿಚಯ ವಾಯಿತು. ನಾಡಕರ್ಣಿ, ತುಳಪುಳೆ ಎಂಬುವರು ಆಗಾಗ್ಗೆ ನನ್ನೊಡನೆ ರಾಜಕೀಯವನ್ನು ಕುರಿತು ಚರ್ಚಿಸುತ್ತಿದ್ದರು. ಈ ಪರಿಸ್ಥಿತಿಯಲ್ಲಿ ನಾವು ಏನಾದರೂ ಮಾಡಬಹುದೇ ಎಂದು ಆಲೋಚಿಸಲು ಒಂದೆರಡು ಬಾರಿ ಅವರ ಮನೆಯಲ್ಲಿ ಭಾನುವಾರ ಬೆಳಗಿನ ಹೊತ್ತು ಸೇರಿದೆವು. ಚಳವಳಿ ಉಲ್ಬಣಗೊಂಡಿತು.

ಎರಡು ಮೂರು ತಿಂಗಳುಗಳು ಕಳೆದವು. ಅಧಿಕಾರಿಗಳು ನನ್ನನ್ನು ಬೆಂಗಳೂರಿಗೆ ವರ್ಗ ಮಾಡಿದರು.

a a a

ನಾನು ವರ್ಗವಾಗಿ ಬಂದುದು ಮದ್ರಾಸ್ ಸ್ಯಾಪರ್ಸ್ ಎಂಡ್ ಮೈನರ್ಸ್ ಎಂಬ ಸೈನಿಕ ಕೇಂದ್ರಕ್ಕೆ. ಇವರನ್ನು ಇಂಡಿಯನ್ ಇಂಜಿನಿಯರ್ಸ್ ಎಂದೂ ಕರೆಯುತ್ತಾರೆ. ಸ್ಯಾಪರ್ಸ್ ಅಂಡ್ ಮೈನರ್ಸ್ ಎಂದರೆ ಸೇತುವೆ, ಸುರಂಗ ಮೊದಲಾದುವುಗಳನ್ನು ಯುದ್ಧ

ಸಮಯದಲ್ಲಿ ಸೈನ್ಯಕ್ಕಾಗಿ ನಿರ್ಮಿಸುವವರು, ನೆಲಬಾಂಬನ್ನು ಸಿಡಿಸುವವರು ಮತ್ತು ನೆಲದಲ್ಲಿ ಹುದುಗಿದ ನೆಲಬಾಂಬನ್ನು ಪತ್ತೆ ಹಚ್ಚುವವರು ಎಂದರ್ಥ.

ಯುದ್ಧವು ವಿಸ್ತಾರವಾದಂತೆ ಯುದ್ಧಕ್ಕೆ ಜನಗಳನ್ನು ಸೇರಿಸಿಕೊಳ್ಳುವುದು ಹೆಚ್ಚಾದಂತೆ, ಅವರ ಲೆಕ್ಕಗಳನ್ನಿಡುವ ಕೆಲಸವೂ ಜಾಸ್ತಿಯಾಯಿತು. ಆದುದರಿಂದ ಹೆಚ್ಚುಹೆಚ್ಚು ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಯಿತು. ಈ ಕಛೇರಿಯಲ್ಲಿ ನಾನು ಸೇರಿದಾಗ ಇಪ್ಪತ್ತು ಮೂವತ್ತು ಜನ ಇದ್ದುದು, ಅನಂತರ ಎಪ್ಪತ್ತು ಎಂಬತ್ತಕ್ಕೆ ಏರಿತು. ಯುವಕ ಕಾರ್ಯಕರ್ತರೇ ಹೆಚ್ಚಾಗಿದ್ದುದರಿಂದ ಬಹಳ ಉತ್ಸಾಹದಿಂದಲೂ, ಹೊಂದಾಣಿಕೆಯಿಂದಲೂ ಕೆಲಸ ಮಾಡುತ್ತಿದ್ದೆವು. ಔದ್ಯೋಗಿಕ ಅಸೂಯೆಯಾಗಲಿ, ನಾನು ಹೆಚ್ಚು, ಇನ್ನೊಬ್ಬ ಕಡಮೆ ಎಂಬ ಭಾವನೆಯಾಗಲಿ ಇರಲಿಲ್ಲ. ಇಂಥ ಸನ್ನಿವೇಶದಲ್ಲಿ ನಾನು ಸಂತೋಷ ಸಮಾಧಾನಗಳಿಂದ ಸುಮಾರು ನಾಲ್ಕು ವರ್ಷಗಳ ಕಾಲ ಕೆಲಸ ನಿರ್ವಹಿಸಿದೆ.

ನಾವು ಸೈನಿಕರ ಲೆಕ್ಕಗಳನ್ನು ಇಡುತ್ತಿದ್ದೆವು. ದೊಡ್ಡ ದೊಡ್ಡ ಹಾಳೆಗಳನ್ನು ಸೇರಿಸಿದ ದೊಡ್ಡ ಲೆಡ್ಜರ್‌ಗಳೇ ನಮ್ಮ ಪ್ರತಿದಿನದ ಕೆಲಸದ ವಸ್ತುಗಳಾಗಿರುತ್ತಿದ್ದುವು. ಸೈನಿಕರ ಹೆಸರು, ಅವರಿಗೆ ಸೈನ್ಯದಲ್ಲಿ ಗುರುತಿಸುವುದಕ್ಕಾಗಿ ಕೊಟ್ಟಿರುವ ಸಂಖ್ಯೆ, ಮದುವೆಯಾಗಿದೆಯೇ, ಇದ್ದರೆ ಹೆಂಡತಿಯ ಹೆಸರು, ಅವರ ದರ್ಜೆ (Rank) ಇತ್ಯಾದಿ ದಾಖಲೆಗಳು ಲೆಡ್ಜರ್‌ಗಳಲ್ಲಿ ನಮೂದಿಸಲ್ಪಟ್ಟಿರುತ್ತಿದ್ದುವು. ಅವರು ಯುದ್ಧರಂಗದಲ್ಲಿ ಇದ್ದರೆ ಅಲ್ಲಿ ಅವರು ಖರ್ಚಿಗೆ ಎಷ್ಟು ಹಣ ತೆಗೆದುಕೊಂಡರು, ಪ್ರತಿ ತಿಂಗಳೂ ಸೈನಿಕನ ಹೆಂಡತಿಗೆ ಕಳುಹಿಸುವ ಹಣವೆಷ್ಟು ಎಲ್ಲವನ್ನೂ ಲೆಕ್ಕಹಾಕಲಾಗುತ್ತಿತ್ತು. ಅವರ ಖಾತೆಯಲ್ಲಿ ಎಷ್ಟು ಹಣ ಉಳಿದಿದೆ ಎಂಬುದು ಗೊತ್ತಾಗಬೇಕಾಗಿತ್ತು. ಹೀಗೆಯೇ ಕೆಲಸ ಮಾಡುವಲ್ಲಿ ಯುದ್ಧರಂಗದಲ್ಲಿ ಹೋರಾಟದಲ್ಲಿ ತೊಡಗಿದ ಸೈನಿಕರ ಲೆಕ್ಕವನ್ನಿಡುವುದನ್ನು ನಾನು ಹೆಚ್ಚು ತಿಳಿದುಕೊಂಡೆ. ಮೇಲಿನಿಂದ ಆಗಿಂದಾಗ್ಗೆ ಬರುವ ಆರ್ಮಿ ಆರ್ಡರುಗಳು, ಬಡ್ತಿ ಆಜ್ಞೆಗಳು ಎಲ್ಲವನ್ನೂ ಒಪ್ಪವಾಗಿ ಜೋಡಿಸಿಟ್ಟಿರುತ್ತಿದ್ದೆ. ಹೀಗಾಗಿ ಏನೇ ಸಂದೇಹ, ತೊಡಕು ಬಂದರೂ ಎಲ್ಲರೂ ನನ್ನ ಸಲಹೆಯನ್ನು ಪಡೆಯುತ್ತಿದ್ದರು. ಎಷ್ಟೋ ಸಲ ಸೈನಿಕರು ಯುದ್ಧರಂಗದಿಂದ ಕಾಣೆಯಾಗಿರುತ್ತಿದ್ದರು. ಯುದ್ಧರಂಗದಲ್ಲಿ ಸಾವು ಸಂಭವಿಸಿದರೆ ಅದು ಆರ್ಮಿಆರ್ಡರ್‌ನಲ್ಲಿ ಬಂದು ಬಿಡುವುದು. ಕಾಣೆಯಾದವರ ಬಗ್ಗೆ ಹೇಗೆ ಲೆಕ್ಕ ಇಡಬೇಕು, ಎಷ್ಟು ಕಾಲ ಇಡಬೇಕು ಇವುಗಳಿಗೆಲ್ಲ ನಿಯಮಗಳಿರುತ್ತಿದ್ದುವು. ಸಿಂಗಪುರ, ಬರ್ಮಾಗಳಲ್ಲಿ ಯುದ್ಧಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದವರು ಬಹಳಷ್ಟು ಜನ ಕಾಣೆಯಾದವರ ಪಟ್ಟಿಯಲ್ಲಿರುತ್ತಿದ್ದರು. ಇಂತಿಷ್ಟು ಅವಧಿ ಮೀರಿದ ಮೇಲೂ ಅವರು ವಾಪಸು ಬರದೆ ಹೋದರೆ ಅವರನ್ನು ಮೃತರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿತ್ತು. ಜಪಾನೀಯರ ಕೈಯಿಂದ ತಪ್ಪಿಸಿಕೊಂಡ ಎಷ್ಟೋ ಸೈನಿಕರು ಆರೆಂಟು ತಿಂಗಳ ಅನಂತರ ಅಥವಾ ಒಂದು ವರ್ಷದ ಅನಂತರ ಬಂದು ಹಾಜರಾಗುತ್ತಿದ್ದರು. ಆಗ ಅವರನ್ನು ಗುರುತಿಸಿ ತಕ್ಕ ಆಜ್ಞೆಗಳನ್ನು ಹೊರಡಿಸಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಕನ್ನಡ ಆನರ್ಸ್ ಓದಿದ ನಾನು ನನ್ನ ಈ ಕೆಲಸವನ್ನು ಪರಿಷ್ಕಾರವಾಗಿಯೇ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಂಡದ್ದನ್ನು ನೋಡಿ, ಕನ್ನಡ ಓದಿದವರು ಲೆಕ್ಕ ಪತ್ರವನ್ನು ಇಷ್ಟು ಚೊಕ್ಕವಾಗಿ ಇಡಬಲ್ಲರೇ ಎಂದು ಸಂಶಯ ಅಥವಾ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಯಾವುದೇ ಕೆಲಸವನ್ನು ಕೊಟ್ಟರೂ ಅದರ ಒಳ ಹೊಕ್ಕು ಸಮರ್ಪಕವಾಗಿ ಕೆಲಸ ಮಾಡಬೇಕಾದುದು ಪ್ರತಿಯೊಬ್ಬನ ಧರ್ಮ ಹಾಗೂ ಕರ್ತವ್ಯ.

a a a

ಬೆಂಗಳೂರಿನಲ್ಲಿ ನಾನು ಆಗ ವಾಸಿಸುತ್ತಿದ್ದ ಕ್ಲಾರ್ಕ್ಸ್‌ಪೇಟ್ ಮತ್ತು ಅದರ ಸುತ್ತಮುತ್ತ ಹಲವರು ಸದ್ಗೃಹಸ್ಥರೂ, ದೈವಭಕ್ತರೂ ಇದ್ದರು. ಇವರಲ್ಲಿ ಸುಮಾರು ಐವತ್ತೈದು ಅರುವತ್ತು ದಾಟಿದ ಸುಬ್ಬರಾಯರೂ ಒಬ್ಬರು. ಇವರು ಬಹಳ ಸಾತ್ವಿಕರು. ಈ ಪ್ರದೇಶದಲ್ಲಿ ಅನೇಕ ಬ್ರಾಹ್ಮಣ ಕುಟುಂಬಗಳಿದ್ದುವು. ಈ ಬ್ರಾಹ್ಮಣರಲ್ಲಿ ಅಂಥ ಮಂತ್ರಜ್ಞರು ಯಾರೂ ಇರಲಿಲ್ಲ. ತಮ್ಮ ಆಸುಪಾಸಿನಲ್ಲಿರುವ ಯುವಕರು, ಸದ್ಗೃಹಸ್ಥರು ಎಲ್ಲರನ್ನೂ ಸೇರಿಸಿ ಅವರಿಗೆ ಬೇಕಾದ ಸಂಧ್ಯಾವಂದನೆ, ದೇವತಾರ್ಚನೆ ಮೊದಲಾದ ಮಂತ್ರಗಳನ್ನಲ್ಲದೆ ಮಂಗಳಾರತಿ ಮಂತ್ರಗಳು, ಶಾಂತಿಮಂತ್ರಗಳು - ಮೊದಲಾದುವನ್ನು ಹೇಳಿಕೊಟ್ಟರೆ ಒಳಿತಾದೀತು ಎಂದು ಯೋಚಿಸಿದರು ಸುಬ್ಬರಾಯರು. ಗೃಹಸ್ಥರು ಯಾರ ಕೈಯನ್ನೂ ಕಾಯದೆ ತಮ್ಮ ಮಂತ್ರದ ಕೆಲಸಗಳನ್ನು ತಾವು ಮಾಡಿಕೊಳ್ಳಬಹುದು ಎಂಬುದು ಅವರ ಉದ್ದೇಶವಾಗಿದ್ದಿತು. ಒಂದು ಭಾನುವಾರ ಆದಷ್ಟು ಜನರನ್ನು ಕಲೆಹಾಕಿ ತಮ್ಮ ಉದ್ದೇಶವನ್ನು ವಿವರಿಸಿದರು. ಅಂಥ ಒಳ್ಳೆಯ ಕೆಲಸವನ್ನು ಯಾರು ಬೇಡವೆನ್ನುತ್ತಾರೆ? ಸುಬ್ಬರಾಯರು ತಾವು ಸ್ವತಃ ಮಂತ್ರಗಳನ್ನು ಕಲಿತುಕೊಂಡು ಬಂದು ಎಲ್ಲರನ್ನೂ ಸೇರಿಸಿ ಭಾನುವಾರದ ರಜಾದಿನಗಳಲ್ಲಿ ಹೇಳಿಕೊಡುತ್ತಿದ್ದರು. ನಾನೂ ಆ ಆಸ್ತಿಕ ಮಂಡಲಿಯ ಸದಸ್ಯನಾದೆ.

ಮೊದಲು ತೈತ್ತಿರೀಯ ಉಪನಿಷತ್ತಿನ ಪಾಠವಾಯಿತು. ಅನಂತರ ದಶಶಾಂತಿ, ಮಂಗಳಾರತಿ ಮಂತ್ರಗಳ ಪಾಠವಾಯಿತು. ಅನಂತರ ದೇವರಪೂಜೆ ಮಂತ್ರಗಳ ಪಾಠ ನೆರವೇರಿತು. ಮುಂದೆ ನಮುಕಚಮುಕದ ಪಾಠವಾಯಿತು. ಇದಾದನಂತರ ಮಹಾನ್ಯಾಸಪೂರ್ವಕ ರುದ್ರಾಭಿಷೇಕದ ಕ್ರಮವನ್ನು ತಿಳಿಸಿ

ಪೂಜಾವಿಧಿಯನ್ನು ಅಭ್ಯಾಸ ಮಾಡಿಸಿದರು. ನಮ್ಮಂಥ ಮಂತ್ರ ಹೇಳುವ ಶ್ರೋತ್ರಿಯರನ್ನು ಒಬ್ಬೊಬ್ಬರು ಸದ್ಗೃಹಸ್ಥರು ತಮ್ಮ ಮನೆಯ ಯಾವುದಾದರೂ ಶುಭಸಮಾರಂಭಕ್ಕೆ ಆಹ್ವಾನಿಸುತ್ತಿದ್ದರು. ಅಲ್ಲಿ ಪೂಜೆ, ಅನಂತರ ಭೋಜನ. ಭೋಜನಕ್ಕೆ ಮೊದಲು ತೈತ್ತಿರೀಯ ಉಪನಿಷತ್ತಿನ ಸಾಮೂಹಿಕ ಪಠಣ. ಜತೆಗೆ ದಕ್ಷಿಣೆ. ಅದು ಎಷ್ಟೇ ಸಣ್ಣ ಮೊತ್ತವಾದರೂ ದಕ್ಷಿಣೆ ದಕ್ಷಿಣೆಯೇ. ನಾನೂ ಒಬ್ಬ ಶ್ರೋತ್ರಿಯ, ಸದ್ಗೃಹಸ್ಥರ ಆದರಕ್ಕೆ ಪಾತ್ರನಾದವನು ಎಂಬ ಕೋಡು ಮೂಡಿ ತಲೆ ತಿರುಗದೆ ಹೋದುದು ನನ್ನ ಪುಣ್ಯ.

ಮಹಾನ್ಯಾಸ ಪೂರ್ವಕ ರುದ್ರಾಭಿಷೇಕದ ಕ್ರಮವನ್ನು ಚೆನ್ನಾಗಿ ಪರಿಚಯ ಮಾಡಿಕೊಂಡಾಯಿತು. ಆದರೆ ಕೇವಲ ಮಂತ್ರವನ್ನು ಕಲಿತರೆ ಆಯಿತೆ, ಅದನ್ನು ಪ್ರಯೋಗದಲ್ಲಿ ತಂದಾಗ ಮಾತ್ರ ಪ್ರಯೋಜನ. ಆದುದರಿಂದ ಸುಬ್ಬರಾಯರು ಕ್ಯಾವಲ್ರಿರೋಡಿನಲ್ಲಿ ಸ್ವಲ್ಪ ಮೇಲುಗಡೆಗಿದ್ದ ಒಂದು ದೇವಸ್ಥಾನವನ್ನು ತಮ್ಮ ಕಾರ್ಯಾಚರಣೆಯ ಕ್ಷೇತ್ರವನ್ನಾಗಿಸಿಕೊಂಡರು. ಅಲ್ಲಿ ಸರಿಯಾಗಿ ಪೂಜೆ ಇತ್ಯಾದಿ ನಡೆಯದೆ ಯಾರೂ ಕೇಳುವವರಿಲ್ಲದ ಸ್ಥಿತಿಯಿತ್ತು. ಪ್ರತಿ ಭಾನುವಾರ ಬೆಳಗ್ಗೆ ಒಂಬತ್ತು ಗಂಟೆಗೆ ಮಹಾನ್ಯಾಸಪೂರ್ವಕ ರುದ್ರಾಭಿಷೇಕವನ್ನು ಪ್ರಾರಂಭಿಸುತ್ತಿದ್ದೆವು. ಎಲ್ಲರೂ ಮಡಿಯಲ್ಲಿ ಬಂದು ಕುಳಿತು ಮಂತ್ರಗಳನ್ನು ಪಠಿಸಬೇಕು. ಮಹಾನ್ಯಾಸಪೂರ್ವಕ ರುದ್ರಾಭಿಷೇಕ ಎಂದರೆ ಸುಮ್ಮನೆ ಆದೀತೆ ! ಅಭಿಷೇಕಕ್ಕೆ ಹಾಲು, ಮೊಸರು, ತುಪ್ಪ, ಸಕ್ಕರೆ, ಜೇನುತುಪ್ಪ, ಎಳನೀರು ಬೇಕು. ಪೂಜಾದ್ರವ್ಯಗಳು ಬೇಕು. ಪೂಜೆಗೆ ಮತ್ತು ಅಲಂಕಾರಕ್ಕೆ ದಂಡಿಯಾಗಿ ಹೂವು ಬೇಕು. ಇವುಗಳಿಗೆಲ್ಲ ಹೇಗೆ ಎಂಬ ಪ್ರಶ್ನೆ ಬಂದಿತು. ಒಬ್ಬೊಬ್ಬರು ಒಂದೊಂದು ದಿವಸದ ಖರ್ಚನ್ನು ವಹಿಸಿಕೊಳ್ಳುವುದು ಎಂದು ತೀರ್ಮಾನವಾಯಿತು. ಸರದಿಯಿಂದ ಇಬ್ಬಿಬ್ಬರು ಗರ್ಭಗುಡಿಯಲ್ಲಿ ಅಭಿಷೇಕ, ಅರ್ಚನೆ, ಅಲಂಕಾರ, ನೈವೇದ್ಯ, ಮಂಗಳಾರತಿ ಮಾಡುವುದು ಎಂದಾಯಿತು. ಹೀಗೆ ಕೆಲವು ಭಾನುವಾರ ನಡೆದ ಮೇಲೆ ಕಾರ್ತಿಕ ಮಾಸ ಬಂದಿತು.

ಕಾರ್ತಿಕ ಮಾಸದಲ್ಲಿ ಸಂಜೆ-ಪೂಜೆ, ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಬೇಕೆಂದು ತೀರ್ಮಾನವಾಯಿತು. ಈ ಪೂಜಾ ಕೈಂಕರ್ಯಗಳನ್ನು ನಾನು ಮಾಡಿಸುತ್ತೇನೆ, ನಾನು ಮಾಡಿಸುತ್ತೇನೆ ಎಂಬ ಪೈಪೋಟಿ ಆರಂಭವಾಯಿತು. ಯಾವ ಪ್ರಸಾದವನ್ನು ಮಾಡಿಸಬೇಕು ಎಂಬಲ್ಲಿ ಸ್ಪರ್ಧೆ ಉಂಟಾಯಿತು. ಉಸಳಿ, ಕೋಸಂಬರಿ, ಬಾಳೆಹಣ್ಣು ರಸಾಯನ, ಹುಳಿಯವಲಕ್ಕಿ, ವಡೆ ಇತ್ಯಾದಿ ಪ್ರತಿದಿನ ಒಂದೊಂದು ಪ್ರಸಾದ ವಿನಿಯೋಗವಾಯಿತು. ಒಂದು ದಿನ ನನ್ನ ಸರದಿ ಬಂದಿತು. ಏನು ಪ್ರಸಾದವನ್ನು ಮಾಡಿಸಲಿ ಎಂಬ ಪ್ರಶ್ನೆ ಬಂದಿತು.ನಾನಿದ್ದ ಮನೆಯ ನರಸಿಂಹಮೂರ್ತಿಗಳ ಸೋದರತ್ತೆ, ಪ್ರಸಾದವನ್ನು ತಾವು ಮಾಡಿಕೊಡುವುದಾಗಿಯೂ ಬೇಕಾದ ಸಾಮಾನುಗಳನ್ನು ತಂದುಕೊಡುವಂತೆಯೂ ಹೇಳಿದರು. “ಇದುವರೆಗೆ ಯಾರೂ ಪಂಚಕಜ್ಜಾಯ ಮಾಡಿಸಿಲ್ಲ, ನೀನು ಮಾಡಿಸು, ನಾನು ಮಾಡಿಕೊಡುತ್ತೇನೆ, ಎಲ್ಲರಿಗಿಂತಲೂ ನಿನ್ನದು ಮೇಲಾಗುತ್ತದೆ” ಎಂದು ಹುರಿದುಂಬಿಸಿದರು. ಅಂದ ಹಾಗೆ ನರಸಿಂಹಮೂರ್ತಿ ನನ್ನ ಬಂಧು, ದೈವಭಕ್ತಿಯ ಸರಳ ವ್ಯಕ್ತಿ. ಇವರಿಗೆ ವೇದಾಂತ, ಧರ್ಮ ಮೊದಲಾದ ವಿಷಯಗಳಲ್ಲಿ ವಿಶೇಷ ಆಸಕ್ತಿ. ಹಲವಾರು ವೇದಾಂತ ಮತ್ತು ಧರ್ಮಗ್ರಂಥಗಳನ್ನು ತಂದು ಓದುತ್ತಿದ್ದರು. ಇವರ ತಂದೆಯವರಿಗೆ, ಮಗ ಸುಮ್ಮನೆ ಪುಸ್ತಕಗಳ ಮೇಲೆ ಖರ್ಚುಮಾಡುತ್ತಾನಲ್ಲ ಎಂದು ಅಸಮಾಧಾನ. ಅವರಿಗೆ ತಿಳಿಯದಂತೆ ಇವರು ಆಗಾಗ ಪುಸ್ತಕಗಳನ್ನು ಕೊಂಡುತಂದು ಓದುತ್ತಿದ್ದರು. ಅವರ ತಂದೆಯ ನಿಧನಾನಂತರ ತಮ್ಮ ಮನೆಯ ಹಾಲಿನಲ್ಲಿ ಪ್ರವಚನಗಳನ್ನು ನಡೆಸುವುದು, ಭಜನೆಗಳನ್ನು ನಡೆಸುವುದು ಮೊದಲಾದ ಕಾರ್ಯಕ್ರಮಗಳನ್ನು ಅವರು ಇಟ್ಟುಕೊಳ್ಳುತ್ತಿದ್ದರೆಂದು ಅನಂತರ ನನಗೆ ತಿಳಿಯಿತು. ಎಲ್ಲರೂ ಅಂದಿನ ಪ್ರಸಾದಕ್ಕೆ ಶಹಭಾಸ್‌ಗಿರಿ ಹೇಳುವವರೇ. ಹೊಗಳಿಕೆಯಿಂದ ನಾನು ಹರ್ಷಿತನಾದುದು ಸರಿಯೇ. ಭಕ್ಷ್ಯವನ್ನು ತಯಾರು ಮಾಡಿದವರೂ ಪ್ರಶಂಸೆಗಳಿಂದ ಉಬ್ಬಿ ಹೋದರು.

a a a

ಹೀಗೆ ಸೈನಿಕ ಲೆಕ್ಕಪತ್ರದ ಬೆಂಗಳೂರಿನ ಸ್ಯಾಪರ್ಸ್ ಮತ್ತು ಮೈನರ್ಸ್ ಕಛೇರಿಯಲ್ಲಿ ಕೆಲಸಮಾಡುತ್ತಿರುವ ಸಮಯದಲ್ಲಿ ಒಂದು ವಿಷಮ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತು. ಸರಳವಾದ ಒಂದು ವಿಷಯಕ್ಕೆ ಕಛೇರಿಯ ಅಧಿಕಾರಿಯೊಡನೆ ಬಿಕ್ಕಟ್ಟು ಸಂಭವಿಸಿತು. ನನ್ನ ತಂದೆಯವರ ಜತೆಯಲ್ಲಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯರಿಂದ ಒಂದು ಕಾಗದ ಬಂದಿತು. ನಮ್ಮ ತಂದೆ ಕಾಯಿಲೆಯಿಂದ ಮಲಗಿಬಿಟ್ಟಿದ್ದಾರೆಂದೂ ಒಂದು ಸಲ ಬಂದು ನೋಡಿಕೊಂಡು ಹೋಗಬೇಕೆಂದೂ ಬರೆದಿದ್ದರು. ತುರ್ತಾಗಿ ಬರಬೇಕೆಂದು ಟೆಲಿಗ್ರಾಮು ಕೊಡುವುದು ಆಗಿನ ಕಾಲದಲ್ಲಿ ಅಪರೂಪವಾಗಿತ್ತು ; ಅಷ್ಟೊಂದು ಹಣವನ್ನು ತೆರಬೇಕಲ್ಲ! ಪತ್ರದ ಧಾಟಿಯು ನಮ್ಮ ತಂದೆಯವರ ಸ್ಥಿತಿ ಸ್ವಲ್ಪ ಗಂಭೀರವಾಗಿರಬೇಕೆಂಬುದನ್ನು ಸೂಚಿಸುತ್ತಿತ್ತು. ಆದುದರಿಂದ ಎರಡು ಮೂರು ದಿವಸ ರಜಾಹಾಕಿ ಹೊಳೆನರಸೀಪುರಕ್ಕೆ ಹೋಗಿ ನೋಡಿಕೊಂಡು ಬರೋಣ ಎಂದು ನಿಶ್ಚಯಿಸಿದೆ. ಮೇಲಧಿಕಾರಿ ಮುರುಗೇಶನ್ ಅವರು ಕೋಪದಿಂದ, “ಹೋಗಬೇಕಾದರೆ ರಾಜಿನಾಮೆ ಕೊಟ್ಟು ಹೋಗು, ರಜ ಕೊಡುವುದಿಲ್ಲ” ಎಂದರು. ಇದೇಕೆ ಹೀಗಾಯಿತು ಎಂದು ಎಷ್ಟು ಯೋಚಿಸಿದರೂ

ಬಗೆಹರಿಯಲಿಲ್ಲ. ತಂದೆಯವರು ಏನು ಸ್ಥಿತಿಯಲ್ಲಿದ್ದಾರೋ ಎಂದು ಗಟ್ಟಿ ಮನಸ್ಸು ಮಾಡಿ, "ನಮ್ಮ ತಂದೆಯವರು ಕಾಯಿಲೆಯಿಂದ ಮಲಗಿದ್ದಾರೆಂದು ತಿಳಿದು ಆತಂಕವಾಗಿ ಅವರನ್ನು ನೋಡಿಕೊಂಡು ಬರಲು ಮೂರು ದಿನ ರಜೆ ಕೊಡಿ ಎಂದು ಕೇಳಿದಾಗ, 'ರಜೆ ಕೊಡಲಾಗುವುದಿಲ್ಲ , ಬೇಕಾದರೆ ರಾಜಿನಾಮೆ ಕೊಟ್ಟು ಹೋಗು' ಎಂದು ಡೆಪ್ಯೂಟಿ ಕಂಟ್ರೋಲರ್ ಆಫ್ ಮಿಲಿಟರಿ ಅಂಕೌಟ್ಸ್ ಮತ್ತು ಮದರಾಸ್ ಸ್ಯಾಪರ್ಸ್ ಅಂಡ್ ಮೈನರ್ಸ್ ಅಕೌಂಟ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀ ಮುರುಗೇಶನ್‌ರವರು ಹೇಳಿದುದರಿಂದ ನಾನು ಈ ರಾಜಿನಾಮೆಯನ್ನು ಸಲ್ಲಿಸಿದ್ದೇನೆ" ಎಂದು ಬರೆದು ಅಧಿಕಾರಿಗೆ ಕೊಟ್ಟೆ. ರಾಜಿನಾಮೆ ಪತ್ರ ಕೊಟ್ಟುದನ್ನು ನೋಡಿ ಅವರು ದಂಗಾದರು. ಇದುವರೆಗೆ ಯಾರೂ ಈ ರೀತಿ ಮಾಡಿರಲಿಲ್ಲ. ಯುದ್ಧದ ಕಾಲದ ತುರ್ತು ಪರಿಸ್ಥಿತಿಯಾಗಿದ್ದುದರಿಂದ ರಜ ಕೊಡುವುದು ಅಧಿಕಾರಿಗಳಿಗೆ ಕಷ್ಟವಾಗುತ್ತಿತ್ತು. ಇಂಥ ಸಮಯದಲ್ಲಿ ರಜ ಬೇಕು ಎನ್ನುವವರು ಊರಿಗೆ ಕಾಗದ ಬರೆದು "ಯಾರೋ ಅಜ್ಜ ಅಜ್ಜಿ ಇಲ್ಲವೇ ನಂಟರು ಮೃತರಾದರು. ತುರ್ತಾಗಿ ಹೊರಟು ಬರುವುದು" ಎಂದು ತಂತಿ ಕಳಿಸುವಂತೆ ಹೇಳುತ್ತಿದ್ದರು; ಊರಿನಿಂದ ಯಾರಾದರೂ ತಂತಿ ಕಳುಹಿಸುತ್ತಿದ್ದರು; ಟೆಲಿಗ್ರಾಮನ್ನು ಅಧಿಕಾರಿಗಳಿಗೆ ತೋರಿಸಿ ರಜ ತೆಗೆದುಕೊಂಡು ಹೋಗುತ್ತಿದ್ದರು. ಊರಿಗೆ ಹೋದ ಮೇಲೆ ಏನೋ ಸಬೂಬು ಹೇಳಿ ಒಂದು ತಿಂಗಳು ರಜೆಯನ್ನು ವಿಸ್ತರಿಸಲು ವಿನಂತಿಸಿಕೊಂಡು ಟೆಲಿಗ್ರಾಂ ಕೊಡುತ್ತಿದ್ದರು ಮತ್ತು ಅದರ ಹಿಂದೆ ಪತ್ರವನ್ನು ಅಧಿಕಾರಿಗೆ ಬರೆಯುತ್ತಿದ್ದರು. ಮುರುಗೇಶನ್‌ರವರಿಗೆ ಈ ತಂತ್ರದ ಅರಿವಾಗಿತ್ತು. ಅವರಿಗೆ ಯಾವುದು ನ್ಯಾಯವಾದುದು, ಯಾವುದು ಕೃತಕ ಎಂಬುದು ತಿಳಿಯುವಂತಿರಲಿಲ್ಲ. ಆದುದರಿಂದ ಯಾರಾದರೂ ರಜ ಕೇಳಿದರೆ ಅವರ ಮನಸ್ಸು ವ್ಯಗ್ರವಾಗುತ್ತಿತ್ತು. ಈಗ ನನ್ನ ವಿಷಯದಲ್ಲೂ ಹಾಗೇ ಆಯಿತು.

ಆದರೆ ತಕ್ಷಣ ನಾನು ರಾಜೀನಾಮೆ ಬರೆದುಕೊಟ್ಟಿದ್ದು ಅವರ ಗೌರವಕ್ಕೆ ಮತ್ತು ಸ್ಥಾನಕ್ಕೆ ಚ್ಯುತಿ ತಂದಿತೆಂದು ಭಾವಿಸಲು ಕಾರಣವಾಯಿತು. ಮೂರು ದಿನಗಳ ಕಾಲ ಅವರು ಬೆಳಗ್ಗೆ ಮಧ್ಯಾಹ್ನ ತಮ್ಮ ಕೊಠಡಿಗೆ ನನ್ನನ್ನು ಕರೆಸಿಕೊಂಡು ಎಲ್ಲರಿಗೂ ಕಾಣುವಂತೆ ನನ್ನ ಮೇಲೆ ಇಲ್ಲ ಸಲ್ಲದ ಅಪವಾದ ಹೊರಿಸಿ, ಹೆದರಿಸಲು ಪ್ರಯತ್ನಿಸಿದರು. ಆ ಸಂದರ್ಭಗಳಲ್ಲಿ ನಾನು ಅವರ ಅಪವಾದಗಳನ್ನು ಪ್ರತಿಭಟಿಸಿ ಕೋಪಗೊಳ್ಳುತ್ತೇನೆ ಮತ್ತು ಏನಾದರೂ ಕಟುವಾಗಿ ಮಾತನಾಡುತ್ತೇನೆ ಇಲ್ಲವೇ ಕೆರಳುತ್ತೇನೆ; ಇದನ್ನು ಎಲ್ಲರೂ ಕಛೇರಿಯಲ್ಲಿ ನೋಡುತ್ತಿರುತ್ತಾರೆ; ಆಗ ಅವಿನಯದ ಅಪರಾಧ ಮೊದಲಾದುವನ್ನು ನನ್ನ ಮೇಲೆ ಹೊರಿಸಿ, ಕೆಲಸದಿಂದ ತೆಗೆದುಹಾಕಬಹುದು ಎಂದು ಯೋಚಿಸಿದರು. ಅಧಿಕಾರದ ದರ್ಪವನ್ನು ತೋರಿಸಿದರು. ಆದರೆ ನಾನು ಮಾತ್ರ ಕೋಪಗೊಳ್ಳದೆ ಕೆರಳದೆ ಅತ್ಯಂತ ಸಂಯಮದಿಂದ ವರ್ತಿಸಿದೆ. ಆ ಸಮಯದಲ್ಲಿ ದೇವರು ನನಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟ. ಅಲ್ಲದೆ ಸಹನೆಯ ಬೆಲೆ ಏನು ಎಂಬುದರ ಅರಿವಿತ್ತು ನನಗೆ. ಈಗ ಮುರುಗೇಶನ್‌ರವರಿಗೆ 'ಇವನ ಬೇಡಿಕೆ ನ್ಯಾಯವಾದುದು, ನಾನು ಇವನನ್ನು ಸುಮ್ಮನೆ ಹೆದರಿಸಿದೆ' ಎಂಬ ಅರಿವುಂಟಾಯಿತೆಂದು ತೋರುತ್ತದೆ. ಮೂರು ದಿನಗಳು ಕಳೆದಮೇಲೆ ಭಾನುವಾರ ತಮ್ಮ ಮಗನನ್ನು ನಮ್ಮ ಮನೆಗೆ ಕಳುಹಿಸಿ ನನ್ನನ್ನು ತಮ್ಮ ಮನೆಗೆ ಕರೆಸಿಕೊಂಡರು. ಪ್ರಸನ್ನಚಿತ್ತರಾಗಿ, "ಹದಿನೈದು ದಿವಸಗಳ ರಜೆ ತೆಗೆದುಕೊಂಡು ನಿನ್ನ ಊರಿಗೆ ಹೋಗಿ ನಿಮ್ಮ ತಂದೆಯವರ ಸೇವೆ ಮಾಡಿ ಬಾ" ಎಂದು ಹೇಳಿದರು. ನನ್ನ ತಾಳ್ಮೆ ಮತ್ತು ಸಂಯಮದ ವರ್ತನೆ ಫಲಕೊಟ್ಟಿತ್ತು.

a a a

ನನ್ನ ತಮ್ಮ ಕೆ.ಎಸ್. ಕೇಶವಮೂರ್ತಿ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣನಾಗಿ ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಕಾಮರ್ಸ್ ತರಗತಿಗೆ ಸೇರಿಕೊಳ್ಳಲು ಬೆಂಗಳೂರಿಗೆ ಬಂದ.

ನಾನು ಬೆಂಗಳೂರಿಗೆ ಬಂದ ಮರು ವರ್ಷ ಮೈಸೂರು ಸರಕಾರದವರು ತಮ್ಮ ಬೇರೆ ಬೇರೆ ಇಲಾಖೆಗಳಲ್ಲಿ ಗುಮಾಸ್ತರುಗಳನ್ನು ನೇಮಿಸಿಕೊಳ್ಳುವ ಉದ್ದೇಶದಿಂದ ಒಂದು ಪರೀಕ್ಷೆಯನ್ನು ಏರ್ಪಡಿಸಿದ್ದರು. ಆ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾಗಿದ್ದೆ. ಆದರೆ ಕೇಂದ್ರ ಸರ್ಕಾರದ ನನ್ನ ಸಂಬಳದ ಅರ್ಧದಷ್ಟು ಮಾತ್ರ ರಾಜ್ಯ ಸರ್ಕಾರದಲ್ಲಿ ಲಭ್ಯವಾಗುತ್ತಿತ್ತು. ನಾನು ಈಗ ಹಲವು ವಿಷಯಗಳನ್ನು ಕುರಿತು ಆಲೋಚಿಸತೊಡಗಿದೆ. ನನಗೆ, ನಾನು ಕೆಲಸ ಮಾಡುತ್ತಿದ್ದ ಸೇನಾ ಅಕೌಂಟ್ಸ್ ಇಲಾಖೆಯ ನೌಕರರ ಪರಿಸ್ಥಿತಿಯ ಪೂರ್ಣ ಪರಿಚಯವಾಗಿತ್ತು. ಅವರನ್ನು ಭಾರತ ದೇಶದಲ್ಲಿ ಎಲ್ಲಿಗೆ ಬೇಕಾದರೂ ವರ್ಗ ಮಾಡಬಹುದಾಗಿತ್ತು. ಅವರ ಒಂದು ಸಮಸ್ಯೆ ಮಕ್ಕಳ ವಿದ್ಯಾಭ್ಯಾಸದ್ದು. ಒಂದು ಕಡೆಯಲ್ಲಿ ಮರಾಠಿ ಇದ್ದರೆ ಇನ್ನೊಂದು ಕಡೆ ಹಿಂದಿ, ಮತ್ತೊಂದು ಕಡೆ ಬಂಗಾಳಿ ಇತ್ಯಾದಿ ಭಾಷೆಗಳನ್ನು ಮಕ್ಕಳು ಕಲಿಯುವುದು ತ್ರಾಸದಾಯಕವಾದುದು. ಊರಿನಲ್ಲಿ ಯಾರದಾದರೂ ಆಶ್ರಯದಲ್ಲಿ ಮಕ್ಕಳನ್ನು ಬಿಟ್ಟು ಓದಿಸಬೇಕು. ಮತ್ತೊಂದು ಮುಖ್ಯವಾದ ಸಮಸ್ಯೆ ಎಂದರೆ ಆರ್ಥಿಕವಾದುದು.

ಎಲ್ಲ ವಿಷಯಗಳನ್ನೂ ತೂಗಿನೋಡಿ ಈ ಸೈನಿಕ ಕಛೇರಿಯ ಕೆಲಸವನ್ನು ಬಿಡುವುದೆಂದು ನಿರ್ಧರಿಸಿದೆ. ಈ ಸಮಯಕ್ಕೆ

ಬೆಂಗಳೂರಿನಲ್ಲಿ ಕಬ್ಬನ್‌ಪಾರ್ಕ್‌ನಲ್ಲಿದ್ದ ಸರಕಾರದ ಇನ್‌ಷ್ಯೂರೆನ್ಸ್ ಇಲಾಖೆಗೆ ಕೆಲಸದ ಆಜ್ಞೆ ಬಂದಿತು, ಸೇರಿದೆ. ಅಲ್ಲಿ ಒಂದು ವರ್ಷಕಾಲದಲ್ಲಿ ನನ್ನ ಕಾಲೇಜಿನ ಪರಿಚಿತರು ಅನೇಕರು ದೊರಕಿದರು. ಭಾಷಾಂತರ ವಿಭಾಗದಲ್ಲಿದ್ದ ಜಿ. ವರದರಾಜರಾವ್, ಸೆಕ್ರೆಟೇರಿಯಟ್ಟಿನಲ್ಲಿದ್ದ ಪ್ರೊ. ದೇ. ಜವರೇಗೌಡ, ಮುಂದೆ ಕನ್ನಡ ಪ್ರಾಧ್ಯಾಪಕರಾದ ಎಲ್. ಬಸವರಾಜು ಮತ್ತು ಮೈಸೂರು ಸರಕಾರದ ಅಕೌಂಟೆಂಟ್ ಜನರಲ್‌ರ ಕಛೇರಿಯಲ್ಲಿದ್ದ ಕೆಲವರು ಆಗಾಗ್ಗೆ ಸಂಧಿಸಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆವು.

ನನಗೆ ಕಛೇರಿಗಳ ಕಾರಕೂನರ ಕೆಲಸದ ಬಗ್ಗೆ ಉತ್ಸಾಹ ಕಡಮೆಯಾಗುತ್ತಿತ್ತು. ಯಾವುದಾದರೂ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ದೊರೆತರೆ ಪಾಠ ಹೇಳಿಕೊಂಡು, ನಾನೂ ನಿರಂತರ ಅಧ್ಯಯನದಲ್ಲಿ ತೊಡಗುತ್ತ ವಿದ್ಯಾರ್ಥಿಗಳ ಜತೆಯಲ್ಲಿ ಸಾರ್ಥಕವಾಗಿ ಕಾಲ ಕಳೆಯಬಹುದೆಂಬ ಆಸೆ ನನ್ನ ಮನಸ್ಸಿನಾಳದಲ್ಲಿ ಹುದುಗಿತ್ತು. ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದರೂ ಕಬ್ಬನ್‌ಪಾರ್ಕ್‌ನಲ್ಲಿರುವ ಕೇಂದ್ರಗ್ರಂಥಾಲಯದ ಸದಸ್ಯನಾಗಿ ಪುಸ್ತಕಗಳನ್ನು ಓದುವ ಹವ್ಯಾಸವನ್ನಿಟ್ಟುಕೊಂಡಿದ್ದೆ. ಹೀಗಿರುವಲ್ಲಿ ನನ್ನ ಮಿತ್ರರೊಬ್ಬರು "ಮೈಸೂರಿನಲ್ಲಿ ಸೆಯಿಂಟ್ ಫಿಲೋಮಿನಾ ಕಾಲೇಜ್ ಎಂಬ ಹೆಸರಿನಲ್ಲಿ ಪ್ರಥಮ ದರ್ಜೆ ಕಾಲೇಜು ಆಗುವುದಿದೆ. ಮೈಸೂರಿನ ಬಿಷಪ್‌ರವರು ಅದರ ಪೋಷಕರು. ಅದರ ಪ್ರಾಂಶುಪಾಲರಾಗಿ ರೆ.ಫಾ.ಸಿ.ಬ್ರೌನ್ ಎಂಬವರು ನಿಯಕ್ತರಾಗಿದ್ದಾರೆ. ಅವರು ಸದ್ಯದಲ್ಲಿ ಕಂಟೋನ್ಮೆಂಟಿನಲ್ಲಿ ಇರುವ ಸೆಯಿಂಟ್ ಜಾನ್ಸ್ ಹಿಲ್ಸ್ ಎಂಬಲ್ಲಿದ್ದಾರೆ. ಇಷ್ಟವಿದ್ದರೆ ಅವರನ್ನು ಭೇಟಿಮಾಡು, ನಿನ್ನ ಅದೃಷ್ಟ ಹೇಗಿದೆಯೋ" ಎಂಬ ಸಮಾಚಾರವನ್ನು ಕೊಟ್ಟರು. ಒಂದು ದಿವಸ ಬೆಳಗ್ಗೆ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು, ಪ್ರಿನ್ಸಿಪಾಲ್ ಜೆ.ಸಿ. ರಾಲೋ, ಡಾ. ಎಂ.ಎಚ್.ಕೃಷ್ಣ, ಪ್ರೊ. ಸಿ.ಆರ್. ನರಸಿಂಹಶಾಸ್ತ್ರಿ ಇವರುಗಳು ಕೊಟ್ಟಿದ್ದ ಶಿಫಾರಸ್ಸು ಪತ್ರಗಳೊಂದಿಗೆ ಹೋಗಿ ಫಾ॥ ಬ್ರೌನ್‌ರನ್ನು ಕಂಡು ನನ್ನ ಅಪೇಕ್ಷೆಯನ್ನು ಅವರ ಮುಂದಿಟ್ಟೆ. ನನ್ನ ಬಳಿಯ ಶಿಫಾರಸ್ಸು ಪತ್ರಗಳನ್ನು ನೋಡಿದರು. ನನ್ನ ನಡವಳಿಕೆ ಬಗ್ಗೆ ಅವರಿಗೆ ಒಪ್ಪಿಗೆಯಾಗಿರಬೇಕು. "ಆಯಿತು, ನಿನ್ನನ್ನು ನಿಯಮಿಸಿಕೊಳ್ಳುತ್ತೇನೆ, ಮುಂದಿನವಾರ ಬಂದು ಆರ್ಡರ್ ತೆಗೆದುಕೊಂಡು ಹೋಗು" ಎಂದರು. ಅವರ ಮಾತಿನಂತೆ ಮರುವಾರ ಹೋದಾಗ ಕನ್ನಡ ಅಧ್ಯಾಪಕನಾಗಿ ನಿಯಮಿಸಿದ ಪತ್ರವನ್ನು ಕೊಟ್ಟರು. ಸಂಬಳ ೭೫-೫-೧೫೦ ಎಂದೂ ಬರೆದಿದ್ದಿತು. ಆಗಿನ ಜೀವವಿಮಾ ಇಲಾಖೆಯ ಸಂಬಳಕ್ಕಿಂತಲೂ ಈ ಸಂಬಳ ಉತ್ತಮವಾಗಿತ್ತು. ನನ್ನ ಹಿಂದಿನ ಸೈನಿಕ ಕಛೇರಿಯ ಸಂಬಳದಷ್ಟಾಯಿತು ಎಂದು ಸಂತೋಷ ಪಟ್ಟೆ. ಇದು ನಡೆದುದು ೧೯೪೬ರ ಮಾರ್ಚ್ ತಿಂಗಳಿನಲ್ಲಿ. ೧೯೪೬ರ ಜೂನ್ ಒಂದನೆಯ ತಾರೀಖು ಕಾಲೇಜಿನಲ್ಲಿ ಕೆಲಸಕ್ಕೆ ಹಾಜರಾಗಬೇಕು ಎಂದು ದಾಖಲಿಸಿದ್ದರು. ಮೇ ತಿಂಗಳ ಕೊನೆಯ ದಿನ ಜೀವ ವಿಮಾ ಇಲಾಖೆಗೆ ರಾಜಿನಾಮೆ ಕೊಟ್ಟು ಮೈಸೂರಿಗೆ ಬಂದೆ.

೧೨. ಮದುವೆ

ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ನೇಮಕ ಹೊಂದುವ ಸಮಯದಲ್ಲಿ ನನ್ನ ಜೀವನದ ಮತ್ತೊಂದು ಮಹತ್ತ್ವದ ಘಟನೆಗೆ ಪೀಠಿಕಾರೂಪವಾದ ಸಂಗತಿಗಳು ನಡೆದುವು. ನಮ್ಮ ತಂದೆಯವರು ನನಗೆ ಮದುವೆ ಮಾಡುವ ಉದ್ದೇಶದಿಂದ ಯೋಗ್ಯ ವಧುವನ್ನು ಹುಡುಕುವ ಪ್ರಯತ್ನದಲ್ಲಿದ್ದರು. ಕೇರಳಾಪುರದ ಹಿರಿಯರಾದ ವೆಂಕಟಸುಬ್ಬಯ್ಯನವರು, ಕುಪ್ಪಹಳ್ಳಿಯಲ್ಲಿ ತಮ್ಮ ಬಂಧು ಶಾನುಭೋಗ ಕೆ.ವಿ. ವೆಂಕಟ ಸುಬ್ಬಯ್ಯನವರು ಇರುವುದಾಗಿಯೂ ಅವರ ಮನೆತನ ಬಹಳ ಯೋಗ್ಯವಾದುದೆಂದೂ ನಮ್ಮ ತಂದೆಯವರಿಗೆ ತಿಳಿಸಿದರು. ಕುಪ್ಪಹಳ್ಳಿಯ ಶಾನುಭೋಗರು ನಮ್ಮ ಜನರಲ್ಲಿ ಗಣ್ಯರು ಎಂದು ಪ್ರಸಿದ್ಧರಾಗಿದ್ದರು. ಅವರಿಗೆ ಒಬ್ಬ ಮಗಳಿರುವುದಾಗಿಯೂ, ಯೋಗ್ಯ ವರ ಸಿಕ್ಕಿದರೆ ಮದುವೆ ಮಾಡಬಹುದೆಂದೂ, ಹೋಗಿ ವಿಚಾರಿಸಬೇಕೆಂದೂ ಹೇಳಿದರು.

ನಮ್ಮ ತಂದೆಯವರು ಕುಪ್ಪಹಳ್ಳಿಗೆ ಹೋಗಿ ಶಾನುಭೋಗ ವೆಂಕಟಸುಬ್ಬಯ್ಯನವರನ್ನು ಕಂಡರು. ವೆಂಕಟಸುಬ್ಬಯ್ಯನವರ ಘನವಾದ ನಡತೆ, ಅವರ ಪತ್ನಿಯ ಸೌಜನ್ಯಯುತವಾದ ವ್ಯವಹಾರ, ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವ ಅವರ ಉತ್ತಮ ಅಭಿರುಚಿ ಮೊದಲಾದುವುಗಳಿಂದ ಪ್ರಭಾವಿತರಾದರು. ಇಂಥ ಸುಸಂಸ್ಕೃತರ ಮನೆಯ ಕನ್ಯೆಯನ್ನು ವಧುವಾಗಿ ಸ್ವೀಕರಿಸುವಲ್ಲಿ ನಮ್ಮ ತಂದೆಯವರಿಗೆ ತೃಪ್ತಿಯಾಯಿತು. ಅಲ್ಲಿ ಶಾನುಭೋಗ ರೊಡನೆ ಮಾತನಾಡಿ ಮದುವೆಗೆ ಒಪ್ಪಿಕೊಂಡು ಬಂದುಬಿಟ್ಟರು. ಎಲ್ಲ ವಿಷಯವನ್ನೂ ವಿವರಿಸಿ ಪತ್ರ ಬರೆದು ತಾವು ಮದುವೆಗೆ

ಒಪ್ಪಿಗೆ ಕೊಟ್ಟು ಬಂದಿರುವುದಾಗಿ, ನನಗೆ ಪತ್ರ ಬರೆದರು. ಒಂದು ಭಾನುವಾರ ಹಾಸನಕ್ಕೆ ಬರಬೇಕೆಂದೂ, ಅಲ್ಲಿ ಕನ್ಯೆಯನ್ನು ನೋಡಬಹುದೆಂದೂ ಬರೆದರು. ಹೀಗೆ ದಿಢೀರನೆ ತಾವೇ ಎಲ್ಲ ನಿಶ್ಚಯಿಸಿದರಲ್ಲ, ಒಪ್ಪಿಗೆ ಕೊಡುವ ಪೂರ್ವ ನನ್ನೊಡನೆ ಸಮಾಲೋಚನೆ ನಡೆಸಲಿಲ್ಲವಲ್ಲ ಎಂದು ನನಗೆ ಸ್ವಲ್ಪ ಅಸಮಾಧಾನವಾಯಿತು. ಆದರೆ ತಂದೆಯವರು ಒಪ್ಪಿಗೆ ಸೂಚಿಸಿರಬೇಕಾದರೆ ಎಲ್ಲ ವಿಷಯವನ್ನೂ ಕೂಲಂಕಷವಾಗಿ ಪರಿಶೀಲಿಸಿರಬೇಕೆಂದು ಭಾವಿಸಿದೆ.

ಅವರು ಸೂಚಿಸಿದ್ದಂತೆ ಒಂದು ಗೊತ್ತಾದ ಭಾನುವಾರ ಹಾಸನಕ್ಕೆ ಹೋದೆ. ನಮ್ಮ ತಂದೆಯವರೂ ಬಂದರು. ಕನ್ಯೆಯು ಹಾಸನದಲ್ಲಿ ತನ್ನ ತಂದೆಯ ತಂಗಿಯ ಮನೆಯಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದಳು. ಮುಂದೆ ನನ್ನ ಜೀವನ ಸಂಗಾತಿಯಾಗುವವಳನ್ನು ನೋಡಿದೆ. "ವಯಸ್ಸಿನ ಅಂತರ ಸ್ವಲ್ಪ ಹೆಚ್ಚಾಗಿದೆಯಲ್ಲ, ಹುಡುಗಿಗೆ ಇನ್ನೂ ಸ್ವಲ್ಪ ಸಣ್ಣ ವಯಸ್ಸಲ್ಲವೇ? ಇವಳನ್ನು ಒಪ್ಪಿಕೊಳ್ಳುವುದು ಸಾಧ್ಯವೇ?" ಎಂದು ನನ್ನ ತಂದೆಯವರನ್ನು ಪ್ರಶ್ನಿಸಿದೆ. "ಏನೋಪ್ಪ, ಒಳ್ಳೆಯ ಮನೆತನ, ಸದ್ಗೃಹಸ್ಥರು, ಸುಸಂಸ್ಕೃತರು ಎಂಬುದು ನನ್ನ ಮನಸ್ಸಿಗೆ ಬಂದು ಪೂರ್ಣ ಸಮಾಧಾನವಾದುದರಿಂದ ಒಪ್ಪಿಗೆ ಕೊಟ್ಟುಬಿಟ್ಟಿದ್ದೇನೆ. ಇದರಲ್ಲಿ ಅಪಸ್ವರ ತೆಗೆಯಬೇಡ, ನಾನು ಕೊಟ್ಟ ಮಾತನ್ನು ಮುರಿಯಲಾರೆ. ನೀನು ಈ ಸಂಬಂಧ ಬೇಡ ಎಂದು ಹೇಳಿದರೆ ನಾನು ಮಾತಿಗೆ ತಪ್ಪಿ ನಡೆದಂತಾಗುತ್ತದೆ. ನಾನು ನಮ್ಮ ಜನರ ನಡುವೆ ತಲೆ ಎತ್ತಿಕೊಂಡು ನಡೆಯಲಾರೆ. ನನ್ನ ಮಾತನ್ನು ನಡೆಸಿಕೊಡುವುದರಲ್ಲಿಯೇ ನಿನ್ನ ಶ್ರೇಯಸ್ಸು" ಎಂದು ಸ್ಪಷ್ಟವಾಗಿ ನುಡಿದರು. ನಮ್ಮ ತಂದೆಯವರು ಸಣ್ಣಸಂಬಳದ ಶಾಲಾ ಉಪಾಧ್ಯಾಯರಾಗಿ ಅತ್ಯಂತ ಬಡತನದಲ್ಲಿ ಜೀವನ ಸಾಗಿಸುತ್ತ ಬಂದರೂ, ತಮ್ಮ ಋಜು ನಡವಳಿಕೆಯಿಂದ, ಪ್ರಾಮಾಣಿಕತೆಯಿಂದ ಮತ್ತು ನಿಃಸ್ವಾರ್ಥಸೇವೆಯಿಂದ ಜತೆಯ ಉಪಾಧ್ಯಾಯರು, ಊರಿನ ಜನರು ಮತ್ತು ವಿದ್ಯಾರ್ಥಿಗಳು ಮೊದಲಾದವರಿಂದ ಪ್ರೀತಿಗೌರವಗಳನ್ನು ಸಂಪಾದಿಸಿದ್ದರು. ಇಂಥವರನ್ನು ತಂದೆಯಾಗಿ ಪಡೆದ ನನ್ನನ್ನು ಧನ್ಯನೆಂದು ಭಾವಿಸುತ್ತಿದ್ದೆ. ತಂದೆಯವರ ಮಾತನ್ನು ತೆಗೆದು ಹಾಕುವುದು ನ್ಯಾಯವಲ್ಲವೆಂದು ಅವರ ಮಾತಿಗೆ ನನ್ನ ಸಮ್ಮತಿಯನ್ನು ಕೊಟ್ಟೆ.

ಏಪ್ರಿಲ್ ಹದಿನಾರನೆಯ ತಾರೀಖು ಮದುವೆ ನಿಶ್ಚಯ ವಾಯಿತು. ಈ ಮದುವೆಯಲ್ಲಿ ಕೊಟ್ಟು ತೆಗೆದುಕೊಳ್ಳುವಂಥ ಯಾವ ವ್ಯವಹಾರವೂ ಇಲ್ಲದ್ದರಿಂದ ಎಲ್ಲವೂ ಮುಚ್ಚುಮರೆಯಿಲ್ಲದೆ ಸರಳವಾದುದಾಗಿತ್ತು. ಮದುವೆಯನ್ನು ಪಶ್ಚಿಮವಾಹಿನಿಯಲ್ಲಿ ನಡೆಸುವಂತೆ ಏರ್ಪಡಿಸಿದರು ಮಾವನವರು.

೧೩. ಕುಪ್ಪಹಳ್ಳಿ ಮಾವನವರು

(ಕೆ.ವಿ. ವೆಂಕಟಸುಬ್ಬಯ್ಯನವರು)

ನಮ್ಮ ಮಾವನವರ ಊರು ಕುಪ್ಪಹಳ್ಳಿ. ಮಂಡ್ಯಜಿಲ್ಲೆ ಕೃಷ್ಣರಾಜಪೇಟೆಯಿಂದ ಐದು ಮೈಲಿ ದೂರದಲ್ಲಿ ಕುಪ್ಪಹಳ್ಳಿ ಇದೆ. ಕರ್ನಾಟಕದಲ್ಲಿ ಅನೇಕ ಕುಪ್ಪಹಳ್ಳಿಗಳು. ಹೇಮಗಿರಿಯ ಪಕ್ಕದಲ್ಲಿ ಈ ಹಳ್ಳಿ ಇರುವುದರಿಂದ ಇದಕ್ಕೆ ಹೇಮಗಿರಿ ಕುಪ್ಪಹಳ್ಳಿ ಎಂಬ ಹೆಸರು ಬಂದಿದೆ. ಹೇಮಗಿರಿ ದೊಡ್ಡ ಬೆಟ್ಟವೇನಲ್ಲ. ಒಂದು ಸಣ್ಣ ಬೆಟ್ಟ. ಈ ಬೆಟ್ಟದ ಮೇಲೆ ರಂಗನಾಥಸ್ವಾಮಿ ನೆಲಸಿದ್ದಾನೆ. ಅರ್ಚಕ ವೆಂಕಟೇಶ ಎಂಬುವರು ಇಲ್ಲಿ ಹಿಂದೆ ಅರ್ಚಕರಾಗಿದ್ದರು. ಈಗ ಅವರ ವಂಶಸ್ಥರಿದ್ದಾರೆ. ವೆಂಕಟೇಶ ಅವರು ಸುತ್ತಮುತ್ತಲ ಹಳ್ಳಿಯ ದೇವತೆಗಳ ಬಗ್ಗೆ ಪ್ರಚಲಿತವಿದ್ದ ಜನಪದ ಹಾಡುಗಳನ್ನು ಸಂಗ್ರಹಿಸಿ ಅಚ್ಚು ಮಾಡಿಸಿದ್ದರು.

ಪ್ರಕೃತಿಯ ಒಡಲಲ್ಲಿ ನೆಲಸಿರುವ ಕುಪ್ಪಹಳ್ಳಿಗೆ ನಾನು, ನನ್ನ ಪತ್ನಿ ಮತ್ತು ಮಕ್ಕಳು ಬೇಸಿಗೆಯ ರಜದಲ್ಲಿ ಹೋಗಿ ಮಾವನ ಮನೆಯ ಆತಿಥ್ಯ, ಪ್ರಕೃತಿಯ ಕಣ್ತಣಿಸುವ ಸವಿಯೂಟ ಎರಡನ್ನೂ ಅನುಭವಿಸಿ ಹೊಸಮನುಷ್ಯರಾಗಿ ಕಾಯಕಲ್ಪ ಪಡೆದವರಾಗಿ ಮೈಸೂರಿಗೆ ವಾಪಸು ಬರುತ್ತಿದ್ದೆವು. ಒಂದೊಂದು ಸಲ ನನ್ನ ಪತ್ನಿಯ ತಂಗಿ ಮತ್ತು ತಂಗಿಯ ಗಂಡ, ಮಕ್ಕಳು ಕೂಡ ಜತೆ ಸೇರುತ್ತಿದ್ದರು.

ಕುಪ್ಪಹಳ್ಳಿಯ ಆಸುಪಾಸಿನ ಹೊಲಗದ್ದೆಗಳಲ್ಲಿ ಓಡಾಡಿ, ತೋಟಗಳಲ್ಲಿ ಎಳನೀರನ್ನು ಹೊಟ್ಟೆಗೆ ಸೇರಿಸಿ, ಮಕ್ಕಳೊಡನೆ ನದಿ ದಡದಲ್ಲಿ ಸಂಜೆ ಆಟವಾಡುವುದು ಆಹ್ಲಾದಕರವಾಗಿರುತ್ತಿತ್ತು.

ಹೇಮಾವತಿ ನದಿಯ ದಡದಲ್ಲಿ ಹಲವು ಸುಂದರ ತಾಣಗಳಿದ್ದುವು. ಅವುಗಳಲ್ಲಿ ಇಬ್ಬಣಗಟ್ಟ ಎಂಬುದು ನಮಗೆ ಅಚ್ಚುಮೆಚ್ಚಿನದಾಗಿತ್ತು. ನದಿಯ ಈ ದಡದಲ್ಲಿ ಮರಳು ರಾಶಿ, ನದಿಯ ಮಧ್ಯೆ ಬಂಡೆಗಳು, ಬಂಡೆಗಳ ಮಧ್ಯೆ ಹರಿಯುವ ಜುಳುಜುಳು ನೀರು, ನದಿಯ ಹಿನ್ನೆಲೆಗೆ ಅಲಂಕಾರಪ್ರಾಯವಾಗಿ ಗುಡ್ಡ , ಗುಡ್ಡಕ್ಕೆ ಅಂಚು ಕಟ್ಟಿದಂತೆ ಮರಗಳ ಸಾಲು, ಸಂಜೆ ಗುಡ್ಡದ ಹಿಂದಕ್ಕೆ ಸರಿಯುವ ಸೂರ್ಯನು ಮುಳುಗುವ ದೃಶ್ಯ- ಒಂದೇ ಎರಡೇ ಮನಸೂರೆಗೊಳ್ಳಲು!

ಕುಪ್ಪಹಳ್ಳಿ ಗ್ರಾಮವು ಸುಮಾರು ಹದಿನೈದು ಸಂಕೇತಿ ಕುಟುಂಬಗಳ ಗ್ರಾಮ. ಅದು ನಾಗರಿಕಸಂಸ್ಕೃತಿಯಿಂದ ಎಚ್ಚೆತ್ತ ಊರು ಮತ್ತು ರಾಜಕೀಯವಾಗಿ ಜಾಗೃತವಾದ ಗ್ರಾಮ ಎಂದು ಪ್ರಸಿದ್ಧಿ ಪಡೆದಿತ್ತು. ಗಾಂಧೀಜೀಯವರ ಕರೆಯ ಮೇರೆಗೆ ಚರಕವನ್ನು ತಂದು ಹಳ್ಳಿಯ ಸಂಕೇತಿ ಹೆಂಗಸರು ನೂಲು ತೆಗೆದು ಖಾದಿವಸ್ತ್ರವನ್ನು ನೇಯಿಸಿಕೊಳ್ಳುತ್ತಿದ್ದರೆಂದು ಕೇಳಿದ್ದೇನೆ. ಎಲ್ಲರ ಮನೆಯಲ್ಲಿಯೂ ಹೆಂಗಸರು ಕಸೂತಿ ಹಾಕಿದ ಬಾಗಿಲ ಪರದೆಗಳು, ಕೊಳವೆಗಳ ತೋರಣಗಳು, ಮಣಿಗಳನ್ನು ಪೋಣಿಸಿ ಚಿತ್ರವನ್ನು ಬಿಡಿಸಿದ ತಟ್ಟೆಗಳು - ಬಾಗಿಲು, ಗೋಡೆ ಮೊದಲಾದುವನ್ನು ಅಲಂಕರಿಸಿರುತ್ತಿದ್ದುದನ್ನು ನಾನೇ ನೋಡಿದ್ದೇನೆ. ಕುಪ್ಪಹಳ್ಳಿ ಗ್ರಾಮವೇ ಸುಸಂಸ್ಕೃತ ಗ್ರಾಮವಾಗಿತ್ತು. ಮಾವನವರಾದ ಶಾನುಭೋಗ ವೆಂಕಟಸುಬ್ಬಯ್ಯನವರ ಮನೆ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿತ್ತು. ಅತಿಥಿ ಸತ್ಕಾರಕ್ಕೆ ಹೆಸರಾಂತ ಮನೆ ಇವರದು. ಊರಿಗೆ ಯಾವುದೇ ಅಧಿಕಾರಿಗಳು, ಅತಿಥಿಗಳು ಮತ್ತು ಆಗಂತುಕರು ಬಂದರೂ ಶಾನುಭೋಗರ ಮನೆಯಲ್ಲಿಯೇ ಆತಿಥ್ಯ. ಅತಿಥಿಗಳಿಗೆ ಅತಿ ಪ್ರಿಯವಾದ ಭೋಜ್ಯವೆಂದರೆ ಒತ್ತುಶಾವಿಗೆ ಮತ್ತು ಕಾಯಿಹಾಲು. ಒತ್ತು ಶಾವಿಗೆಯನ್ನು ತಯಾರಿಸಲು ಹಳೆಯ ಕಾಲದ ಗಟ್ಟಿ ಮರದಿಂದ ತಯಾರಿಸಿದ ದೊಡ್ಡ ಶಾವಿಗೆಒರಳು ಇತ್ತು. ಗೋಡೆಯ ಪಕ್ಕದಲ್ಲಿ ಒರಳನ್ನು ಇಟ್ಟು ಕೊಂತವನ್ನು ತೆಗೆದು, ಹದ ಮಾಡಿದ ಹಿಟ್ಟನ್ನು ಹಾಕಿ ಕೊಂತವನ್ನು ಇಟ್ಟು ಗೋಡೆಯಲ್ಲಿ ಮಾಡಿದ ಗೂಡಿಗೆ ಒನಕೆಯ ಒಂದು ತುದಿಯನ್ನು ಸೇರಿಸಿ, ಒನಕೆಯನ್ನು ಶಾವಿಗೆ ಒರಳಿನ ಕೊಂತದ ಮೇಲಿಟ್ಟು, ಒನಕೆಯ ಇನ್ನೊಂದು ತುದಿಯನ್ನು ಬಲವಾಗಿ ಅಮುಕುತ್ತ ಹೋದಂತೆ ಚರಚರ ಶಬ್ದ ಮಾಡುತ್ತ ಶಾವಿಗೆ ಕೆಳಗೆ ಬೀಳುತ್ತದೆ. ಒನಕೆಯನ್ನು ಅಮುಕಲು ಗಂಡಸರೇ ಬೇಕು. ಹಿಟ್ಟು ಗಟ್ಟಿಯಾದರೆ ಅದನ್ನು ಜಗ್ಗಿಸಿ ಅಮುಕ ಬೇಕಾಗುತ್ತದೆ.

ಸ್ವತಃ ಹಸುಕರುಗಳನ್ನು ಎಲ್ಲ ಸಂಕೇತಿಗಳೂ ಸಾಕುತ್ತಿದ್ದುದರಿಂದ ದಂಡಿಯಾಗಿ ಮೊಸರು-ಹಾಲು ದೊರಕುತ್ತಿದ್ದಿತು. ಬೆಟ್ಟದ ಸುತ್ತಮುತ್ತಲಿನ ಕಾವಲಿನ ಹಸುರನ್ನು ಮೇದ ಹಸುಗಳು ಕೊಡುತ್ತಿದ್ದ ಹಾಲು ಗಟ್ಟಿಯಾಗಿಯೂ, ಸಿಹಿಯಾಗಿಯೂ ಇರುತ್ತಿತ್ತು. ಪಟ್ಟಣಗಳಲ್ಲಿನ ನಮಗೆ ಈಗ ಅದು ಕನಸು.

ಕುಪ್ಪಹಳ್ಳಿ ಯಾವುದರಲ್ಲೂ ಕಡಮೆಯಿರಲಿಲ್ಲ. ನಾಟಕವನ್ನು ರಚಿಸಿ ನಾಟಕದ ಕಂಪೆನಿಯನ್ನು ಕಟ್ಟಿ ಊರೂರುಗಳಲ್ಲಿ ನಾಟಕ ಆಡಿಸಿದ ಕೆ.ಕೆ. ಮೂರ್ತಿ ಅಥವಾ ಶಾಮಣ್ಣ ಕುಪ್ಪಹಳ್ಳಿಯವರು. ಇವರು ಪ್ರದರ್ಶಿಸುತ್ತಿದ್ದ ಕಂಪೆನಿ ನಾಟಕ **ಜಗಜ್ಯೋತಿ ಬಸವೇಶ್ವರ** ಜನಪ್ರಿಯವಾಗಿತ್ತು. 'ಕೊಳಲು ಮೂರ್ತಿ'ಯವರು ಶ್ರೇಷ್ಠ ಸಂಗೀತವಾದಕರಾಗಿದ್ದರು. ಹೇಮಗಿರಿ ಜಾತ್ರೆಯಲ್ಲಿ ಊರಿನವರು ಸೇರಿ ಟೆಂಟ್‌ಹಾಕಿ 'ಶಾಕುಂತಳ' ನಾಟಕವನ್ನು ಆಡಿಸಿದಾಗ ಶಕುಂತಳೆಯ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ ಅಂಗಡಿ ಮುತ್ತು, ವ್ಯವಹಾರಚತುರರೂ ಉತ್ತಮ ತೋಟಗಾರರೂ ಆದ ವೆಂಕಟಗಿರಿ ರಾಮು, ಹಳ್ಳಿಗೆ ಮೊಟ್ಟ ಮೊದಲು ರೇಡಿಯೋ ಪರಿಚಯಿಸಿದ 'ರೇಡಿಯೋ ರಾಮಣ್ಣ', ಇಸ್ಪೀಟು ಆಟದಲ್ಲಿ ಪ್ರಸಿದ್ಧರಾದ ಸೋಮರಾಯರು - ಇವರೆಲ್ಲ ಕುಪ್ಪಹಳ್ಳಿಯ ಖ್ಯಾತಿಯನ್ನು ಎತ್ತಿಹಿಡಿದ ಸಂಕೇತಿಗಳಾಗಿದ್ದರು.

ಶಾನುಭೋಗ ವೆಂಕಟಸುಬ್ಬಯ್ಯನವರು ಸುತ್ತಮುತ್ತಲ ನಾಲ್ಕೈದು ಹಳ್ಳಿಗಳಿಗೆ ಪಾರಂಪರಿಕವಾಗಿ ಬಂದ ಶಾನುಭೋಗರಾಗಿದ್ದರು. ನ್ಯಾಯವಾದ, ನೇರವಾದ ಮಾರ್ಗಗಳಲ್ಲಿ ಅವರು ನಡೆಯುತ್ತಿದ್ದರು. ತಮ್ಮ ಧಣಿ ಎಂಬಂತೆ ರೈತರು ಅವರನ್ನು ನೋಡುತ್ತಿದ್ದರು. ತಮಗೆ ಏನು ಬೇಕಾದರೂ ಶಾನುಭೋಗರ ಬಳಿ ಬಂದು ಕೇಳುತ್ತಿದ್ದರು. ಏನಾದರೂ ವೈಷಮ್ಯಗಳು, ವಿರಸಗಳು ರೈತರಲ್ಲಿ ಉಂಟಾದರೆ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ವಿವಾದವನ್ನು ಬಗೆಹರಿಸುತ್ತಿದ್ದರು. ತಮ್ಮ ಶಾನುಭೋಗಿಕೆ ಕೆಲಸಕ್ಕೆ ಸರಕಾರದಿಂದ ಬರುತ್ತಿದ್ದ ಸಂಭಾವನೆ (ಪೋಟಿಗೆ) ಬಿಟ್ಟು ರೈತರಿಂದ ಏನನ್ನೂ ನಿರೀಕ್ಷಿಸುತ್ತಿರಲಿಲ್ಲ. ಪಿತ್ರಾರ್ಜಿತವಾಗಿ ಬಂದ ಆಸ್ತಿ, ಅವರು ಜೀವನವನ್ನು ರಾಜನಂತೆ ಬದುಕಲು ಅನುವು ಮಾಡಿಕೊಟ್ಟಿತ್ತು. ಇಂಥ ಸಂಭಾವಿತರ ಮಗಳು ನನ್ನ ಜೀವನ ಸಂಗಾತಿಯಾದುದು ಪೂರ್ವಜನ್ಮದ ಪುಣ್ಯವೆಂದೇ ಭಾವಿಸುವೆನು.

೧೪. ಸೆಯಿಂಟ್ ಫಿಲೋಮಿನಾ ಕಾಲೇಜು

೧೯೪೬ನೆಯ ಜೂನ್ ಒಂದನೆಯ ತಾರೀಖು ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ನನ್ನ ಕೆಲಸಕ್ಕೆ ವರದಿ ಮಾಡಿಕೊಂಡೆ. ತರಗತಿಗಳು ಆರಂಭವಾದುದು ಜುಲೈ ಒಂದರಿಂದ.

ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಸೇರಿದ ಕೂಡಲೆ ಕೈಗೊಂಡ ಕೆಲಸವೆಂದರೆ ನಾನು ಎಂ.ಎ., ಮುಗಿಸಲು ಮಾಡಿದ ಪ್ರಯತ್ನ. ಪ್ರೊ|| ಎ.ಆರ್. ಕೃಷ್ಣಶಾಸ್ತ್ರಿಗಳನ್ನು ಕಂಡು ಈ ಬಗ್ಗೆ ಅವರ ಸಲಹೆ ಪಡೆದೆ. “ನೀನು ಕಾಲೇಜಿನಲ್ಲಿ ಅಧ್ಯಾಪಕನ ವೃತ್ತಿಯನ್ನು ನಡೆಸುತ್ತಿರುವುದರಿಂದ, ಕಾಲೇಜಿನಲ್ಲಿ ನಡೆಯುವ ಕ್ರಮಬದ್ಧವಾದ ತರಗತಿಗಳಿಗೆ ಹಾಜರಾಗುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಮಹಾಪ್ರಬಂಧ (Thesis) ವನ್ನು ಒಪ್ಪಿಸಿ ಎಂ.ಎ., ಪಡೆಯಬಹುದು, ಅರ್ಜಿ ಹಾಕಿಕೊ, ನಾನು ಶಿಫಾರಸ್ಸು ಮಾಡುವೆನು” ಎಂದು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳಿದರು. ಅವರ ಮಾತನ್ನು ಒಪ್ಪಿ ಕಾಲೇಜಿಗೆ ಅರ್ಜಿ ಹಾಕಿ ಅಪ್ಪಣೆ ಪಡೆದುಕೊಂಡೆ. ಪ್ರೊ|| ಎ.ಆರ್. ಕೃಷ್ಣಶಾಸ್ತ್ರಿಗಳು ಒಂದು ತಿಂಗಳಲ್ಲಿ ನಿವೃತ್ತರಾಗುವವರಿದ್ದರು. ಅವರ ಸ್ಥಾನಕ್ಕೆ ಸೆಂಟ್ರಲ್ ಕಾಲೇಜಿನಲ್ಲಿ ಉಪಪ್ರಾಧ್ಯಾಪಕರಾಗಿದ್ದ ಕೆ.ವಿ. ಪುಟ್ಟಪ್ಪನವರನ್ನು ನೇಮಕ ಮಾಡಿದ್ದರು. ಆದುದರಿಂದ “ಪ್ರೊ || ಕೆ.ವಿ ಪುಟ್ಟಪ್ಪನವರು ನಿನಗೆ ಮಾರ್ಗದರ್ಶನ ಮಾಡುತ್ತಾರೆ. ಅವರು ಬಂದ ಮೇಲೆ ಅವರ ಸಲಹೆಯಂತೆ ಮಹಾಪ್ರಬಂಧದ ವಿಷಯವನ್ನು ಆರಿಸಿಕೋ” ಎಂದು ಪ್ರೊ|| ಕೃಷ್ಣಶಾಸ್ತ್ರಿಗಳು ಹೇಳಿದರು. ಅದರಂತೆ ಪ್ರೊ|| ಕೆ.ವಿ. ಪುಟ್ಟಪ್ಪನವರು ಮಹಾರಾಜಕಾಲೇಜಿನ ಪ್ರಾಧ್ಯಾಪಕ ಪದವಿಯನ್ನು ವಹಿಸಿಕೊಂಡ ಬಳಿಕ ಅವರಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ‘ಕಾದಂಬರಿ ಸಾಹಿತ್ಯ ಮತ್ತು ಕಲೆ’ ಎಂಬ ವಿಷಯವನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ತರಗತಿಗೆ ಸೇರಿಕೊಂಡಿದ್ದರೆ ಒಂದು ವರ್ಷದಲ್ಲಿ ಎಂ.ಎ., ಪದವಿ ಪಡೆಯಬಹುದಾಗಿದ್ದಿತು. ಮಹಾಪ್ರಬಂಧದ ಮೂಲಕ ಎಂ.ಎ., ಪದವಿ ಪಡೆಯಲು ಎರಡು ವರ್ಷಗಳ ಅವಧಿ. ತರಗತಿಗಳಿಗೆ ಹಾಜರಾಗಿ ಓದುವುದೂ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ ಮಹಾಪ್ರಬಂಧದ ಮೂಲಕ ಎಂ.ಎ., ಮಾಡುವಷ್ಟು ಕಷ್ಟವಲ್ಲ. ಮಹಾಪ್ರಬಂಧಕ್ಕಾಗಿ ಬಹಳ ವ್ಯಾಪಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಕನ್ನಡ ಎಂ.ಎ.,ಗಾಗಿ ಮಹಾಪ್ರಬಂಧವನ್ನು ಸಲ್ಲಿಸಿದವರಲ್ಲಿ ನಾನೇ ಮೊದಲಿಗ. ನನ್ನ ಅನಂತರ ತ.ಸು. ಶಾಮರಾಯರು ಕನ್ನಡ ನಾಟಕಗಳ ಬಗ್ಗೆ ಬರೆದ ಮಹಾಪ್ರಬಂಧದ ಮೂಲಕ ಎಂ.ಎ., ಪದವಿ ಪಡೆದರು.

ಪ್ರಬಂಧದ ವಿಷಯ ವಿಸ್ತಾರವಾದುದು. ವಾರದಲ್ಲಿ ಒಂದು ಬಾರಿ ಅಥವಾ ಎರಡು ಬಾರಿ ಪುಟ್ಟಪ್ಪನವರನ್ನು ಕಾಲೇಜಿನ ಅವರ ಕೊಠಡಿಯಲ್ಲಿಯೋ, ಮನೆಯಲ್ಲಿ ಅವರ ವಿರಾಮದ ಸಮಯದಲ್ಲಿಯೋ ಕಂಡು, ನನ್ನ ಅಧ್ಯಯನದ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೆ. ಮೊದಲು ಅವರು ನನಗೆ ಎರಡು ಕೆಲಸಗಳನ್ನು ಹೇಳಿದರು. ಒಂದು: ಕಾದಂಬರಿ ಕಲೆಯ ಬಗ್ಗೆ ಸಂಬಂಧಪಟ್ಟ ಕೆಲವು ಗ್ರಂಥಗಳನ್ನು ಅಧ್ಯಯನ ಮಾಡಿ ಅದರ ಟಿಪ್ಪಣಿ ಮಾಡಿಕೊಳ್ಳುವುದು. ಮೊದಲಿಗೆ ‘ಆಂಗ್ಲಸಾಹಿತ್ಯಕ್ಕೆ ಪೀಠಿಕೆ’ *(Introduction to English Literature- by Johnson)* ಎಂಬ ಗ್ರಂಥದಲ್ಲಿ ಕಾದಂಬರಿ ಸಾಹಿತ್ಯಕ್ಕೆ ಸಂಬಂಧಪಟ್ಟ ಭಾಗವನ್ನು ಟಿಪ್ಪಣಿ ಮಾಡಿಕೊಂಡೆ. ಅನಂತರ ಕಾದಂಬರಿ ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಆಂಗ್ಲ ಪುಸ್ತಕಗಳನ್ನು ಅಧ್ಯಯನ ಮಾಡಲು ಸಲಹೆ ಮಾಡಿದರು. ಇದು ಮೊದನೆಯ ಕೆಲಸವಾದರೆ ಪ್ರಪಂಚ ಸಾಹಿತ್ಯದ ಹಲವು ಕಾದಂಬರಿಕಾರರ ಕಾದಂಬರಿಗಳನ್ನು ಓದುವಂತೆ ಒಂದು ಪಟ್ಟಿಯನ್ನು ಕೊಟ್ಟರು. ಇದು ಎರಡನೆಯದು. ಸರ್ ವಾಲ್ಟರ್ ಸ್ಕಾಟ್, ಛಾರ್ಲ್ಸ್ ಡಿಕನ್ಸ್, ಥಾಮಸ್ ಹಾರ್ಡಿ, ಜಾನ್ ಗ್ಯಾಲ್ಸ್‌ವರ್ದಿ, ಪರ್ಲ್‌ಬಕ್, ಜೇನ್ ಆಸ್ಟಿನ್ ಮೊದಲಾದವರ ಇಂಗ್ಲಿಷ್ ಕಾದಂಬರಿಗಳನ್ನು ಒಂದೊಂದಾಗಿ ಓದಿ ಅವುಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡೆ. ಫ್ರೆಂಚ್ ಭಾಷೆಯ ಅಲೆಗ್ಸಾಂಡರ್ ಡ್ಯೂಮಾಸನ ತ್ರೀಮಸ್ಕಟಿಯೆರ್ಸ್, ಗೈಡಿಮಪಸಾಂಟನ ಕಥೆಗಳು, ಬಾಲ್‌ಜಾಕ್ ಕೃತಿಗಳು, ವಿಕ್ಟರ್ ಹ್ಯೂಗೋನ ‘ಹಂಚ್ ಬ್ಯಾಕ್ ಆಫ್ ನಾಟರ್ ಡೇಮ್’ ಮೊದಲಾದ ಕಾದಂಬರಿಗಳನ್ನು ಓದಿದೆ. ಅನಂತರ ರಷ್ಯನ್ ಭಾಷೆಯ ದಸ್ತಾವಸ್ಕಿಯ ಕಾದಂಬರಿಗಳು ಮತ್ತು ಮುಖ್ಯವಾಗಿ ಟಾಲ್‌ಸ್ಟಾಯನ ಜಗತ್ ಪ್ರಸಿದ್ಧವಾದ ಯುದ್ಧ ಮತ್ತು ಶಾಂತಿ (ವಾರ್ ಅಂಡ್ ಪೀಸ್), ರಿಸರೆಕ್ಷನ್, ಅನ್ನಾಕರೆನಿನಾ ಕಾದಂಬರಿಗಳನ್ನು ಅಗತ್ಯವಾಗಿ ಅಧ್ಯಯನ ಮಾಡಿದೆ. ಕಾದಂಬರಿಗಳ ಅಧ್ಯಯನದ ಜತೆಜತೆಯಲ್ಲಿ, ಕಾದಂಬರಿಗಳ ವಿಮರ್ಶೆ ನಿರಂತರವಾಗಿ ಸಾಗಿತ್ತು. ಮೊದಲನೆಯ ವರ್ಷದಲ್ಲಿ ನನ್ನ ಪೂರ್ಣ ಸಮಯವನ್ನು ಈ ಅಧ್ಯಯನ ತೆಗೆದುಕೊಂಡಿತು. ಇದರ ಜತೆಗೆ ಅದುವರೆಗೆ ಪ್ರಕಟವಾದ ಕನ್ನಡ ಕಾದಂಬರಿಗಳ ಪಟ್ಟಿಯನ್ನು

ತಯಾರಿಸಿಕೊಂಡೆ. ಅವುಗಳ ಅಧ್ಯಯನ ನಡೆಯುತ್ತಿತ್ತು. ನನ್ನ ಅಧ್ಯಯನದ ಪ್ರಗತಿಯನ್ನು ಪ್ರತಿವಾರ ಪ್ರೊ॥ ಪುಟ್ಟಪ್ಪನವರಿಗೆ ಒಪ್ಪಿಸುತ್ತ ಬಂದೆ. ಹೆಜ್ಜೆಹೆಜ್ಜೆಗೂ ನಾನು ಅಧ್ಯಯನ ಮಾಡಿದ ಕಾದಂಬರಿಗಳ ವಿಶ್ಲೇಷಣೆ, ಅವುಗಳನ್ನು ಯಾವ ದೃಷ್ಟಿಕೋನದಿಂದ ನೋಡಬಹುದು ಇದನ್ನು ವಿವರಿಸಿ ಹೇಳುತ್ತಿದ್ದರು.

ಎರಡನೆಯ ವರ್ಷದ ಮಧ್ಯಭಾಗದ ಹೊತ್ತಿಗೆ ನನ್ನ ಅಧ್ಯಯನವು ಒಂದು ಹಂತವನ್ನು ತಲುಪಿತು. ಈಗ ನಾನು ತಯಾರಿಸಿದ ಟಿಪ್ಪಣಿಗಳನ್ನು ಅಳವಡಿಸಿಕೊಂಡು ಪ್ರಬಂಧವನ್ನು ಬರೆಯಲು ಆರಂಭಿಸಿದೆ. ವಾರಕ್ಕೊಮ್ಮೆ ಪ್ರೊ॥ ಪುಟ್ಟಪ್ಪನವರ ಬಳಿ ಹೋಗಿ ನಾನು ಬರೆದ ಭಾಗವನ್ನು ಓದಿ ಹೇಳುತ್ತಿದ್ದೆ. ಲೋಪದೋಷಗಳನ್ನು ತೋರಿಸುತ್ತಿದ್ದುದಲ್ಲದೆ ಅವರು ಹೊಸ ಅಂಶಗಳನ್ನು ನನ್ನ ಗಮನಕ್ಕೆ ತರುತ್ತಿದ್ದರು. ನಾನು ಪ್ರಬಂಧವನ್ನು ಬರೆಯುವ ವೇಳೆಗೆ ಕನ್ನಡದಲ್ಲಿ ಆರಂಭದ ದಿನಗಳ ಕಾದಂಬರಿಕಾರರ ಕಾಲ ಕಳೆದು ಹೊಸಯುಗದ ಕಾದಂಬರಿಕಾರರು ಕಾದಂಬರಿಗಳನ್ನು ಬರೆಯಲಾರಂಭಿಸಿದ್ದರು. ಬಿ. ವೆಂಕಟಾಚಾರ್ಯರ ಬಂಗಾಳಿ ಕಾದಂಬರಿಗಳ ಅನುವಾದವಾಗಲೀ, ಮರಾಠಿ ಕಾದಂಬರಿಕಾರರ ಕಾದಂಬರಿಗಳಾಗಲೀ ಇನ್ನೂ ಜನ ಓದುತ್ತಿದ್ದರು. ಬೋಳಾರ ಬಾಬು, ಎಚ್. ವಾಸುದೇವಯ್ಯ, ಎಂ.ಎಸ್. ಪುಟ್ಟಣ್ಣನವರ ಕಾದಂಬರಿಗಳ ಯುಗ ಕಳೆದು ಅ.ನ. ಕೃಷ್ಣರಾವ್, ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತರಂಥವರು ಹೊಸಯುಗದ ಕಾದಂಬರಿಕಾರರಾಗಿ ಬರೆಯುತ್ತಿದ್ದರು. ಇಂಥ ಸಮಯದಲ್ಲಿ ಪ್ರೊ॥ ಪುಟ್ಟಪ್ಪನವರ ಕಾದಂಬರಿ 'ಕಾನೂರು ಹೆಗ್ಗಡತಿ' ಒಂದು ಕ್ರಾಂತಿಯನ್ನೇ ಮಾಡಿತು ಎಂದು ಹೇಳಬಹುದು. ಹಿಂದುಳಿದ ವರ್ಗದವರ ಹಾಗೂ ಮಲೆನಾಡಿನ ಹಳ್ಳಿಯ ಜನರ ಜೀವನವನ್ನು ಚಿತ್ರವತ್ತಾಗಿ ಪ್ರಕೃತಿಯ ಹಿನ್ನೆಲೆಯಲ್ಲಿ ಹಿಡಿದಿಟ್ಟಿದ್ದು ಹೊಸ ಅಲೆಯನ್ನು ಉಂಟುಮಾಡಿತು. ಕಾದಂಬರಿಗಳ ಬಗ್ಗೆ ಹೊಸ ಚಿಂತನೆ ಹೊಸ ದೃಷ್ಟಿಯನ್ನು ಬೀರಿತು. ಅನಂತರದಲ್ಲಿ ಕಾದಂಬರಿಗಳ ಮಹಾಪೂರವೇ ಬಂದಿತು. ಕಾರಂತರ ವಿಶಿಷ್ಟದೃಷ್ಟಿಯ ಕಾದಂಬರಿಗಳೂ, ಗ್ರಾಮಾಯಣದಂಥ ವಿಸ್ತಾರವಾದ ಕಾದಂಬರಿಗಳೂ ಬಂದುವು. ಇವೆಲ್ಲವುಗಳ ವಿಮರ್ಶೆಯನ್ನು ಮಾಡಿ ನನ್ನ ಮಹಾಪ್ರಬಂಧವನ್ನು ಬರೆದೆ. ಕಾದಂಬರಿಗಳ ಆಕಾರದ (Form) ಬಗ್ಗೆ ತಿಳಿಸಿ, ಪ್ರೊ॥ ಪುಟ್ಟಪ್ಪನವರು ಕೆಲವು ಗ್ರಂಥಗಳನ್ನು ಅಧ್ಯಯನ ಮಾಡುವಂತೆ ಹೇಳಿದರು. ಆ ಬಗ್ಗೆ ಅಧ್ಯಯನ ಮಾಡಿ ಕೆಲವು ಕಾದಂಬರಿಗಳ ಕಟ್ಟಣದ ಮಾದರಿಯ (Form) ರೇಖಾ ಚಿತ್ರಗಳನ್ನು ನನ್ನ ಪ್ರಬಂಧದಲ್ಲಿ ಕೊಟ್ಟೆ. ಇಂಗ್ಲಿಷಿನ Form ಎಂಬ ಪದಕ್ಕೆ ಆಕಾರ ಎಂಬ ಪದ ಸಮರ್ಪಕವಾಗಿಲ್ಲ ಎಂದು ಪುಟ್ಟಪ್ಪನವರು 'ಕಟ್ಟಣ' ಎಂಬ ಪದವನ್ನು ತಾವೇ ನನಗೆ ಕೊಟ್ಟರು. ನನ್ನ ಮಹಾಪ್ರಬಂಧ ಸುಮಾರು ಮುನ್ನೂರು ಪುಟಗಳಷ್ಟು ಆಯಿತು. ಮೊದಲ ಭಾಗ ಕಾದಂಬರಿ ಕಲೆಗೆ, ಎರಡನೆ ಭಾಗ ಕಾದಂಬರಿ ಸಾಹಿತ್ಯದ ಇತಿಹಾಸ ಹಾಗೂ ವಿಮರ್ಶೆಗೆ ಒಳಪಟ್ಟಿತು. ಸಾಹಿತ್ಯದ ಅಧ್ಯಯನ ಹಾಗೂ ವಿಮರ್ಶೆಯನ್ನು ಹೇಗೆ ಮಾಡಬೇಕೆಂಬುದರ ಜ್ಞಾನ ನನಗೆ ಪ್ರೊ॥ ಪುಟ್ಟಪ್ಪನವರಿಂದ ದೊರೆಯಿತು. ಅವರ ಸಾನ್ನಿಧ್ಯದಲ್ಲಿ ಅಧ್ಯಯನ ಮಾಡುವ ಅವಕಾಶ ದೊರೆತದ್ದು ನನ್ನ ಪುಣ್ಯವೇ ಸರಿ. ಅದು ಅವರ ಕಾವ್ಯ ಮತ್ತು ಕೃತಿಗಳನ್ನು ಅರ್ಥಮಾಡಿಕೊಳ್ಳಲು ನನಗೆ ತುಂಬ ಸಹಾಯಮಾಡಿತು. ಅವರ ಪ್ರತಿಭೆ ಮತ್ತು ಕವಿಹೃದಯದ ಪರಿಚಯ ನನಗಾದುದರಿಂದ, ನನ್ನ ದೃಷ್ಟಿ ವಿಸ್ತಾರವಾಯಿತು. ವಿಮರ್ಶೆಯ ಆಳ ಅಗಲಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನನ್ನ ಪ್ರಯತ್ನಕ್ಕೆ ಅವರು ತಳಹದಿ ಹಾಕಿಕೊಟ್ಟರು. ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಕನ್ನಡಸಾಹಿತ್ಯದ ಬಗ್ಗೆ ಪಾಠ ಹೇಳಲು ನನಗೆ ಪೂರ್ಣ ಅರ್ಹತೆ ಮತ್ತು ಧೈರ್ಯ ಎರಡೂ ಉಂಟಾದುವು. ಹಾಗೆಯೇ ಯಾವ ವಿಷಯದ ಮೇಲಾದರೂ ಸಾರ್ವಜನಿಕ ಸಮಾರಂಭಗಳಲ್ಲಿ ಮಾತನಾಡಲು ಸಾಧ್ಯವಾಯಿತು.

ಆನರ್ಸ್ ತರಗತಿಯಲ್ಲಿ ಅಧ್ಯಯನ ನಡೆಸುತ್ತಿದ್ದಾಗಲೇ ನಡೆದ ಸಂಗತಿ ಇದು: ೧೯೪೧ನೆಯ ಇಸವಿ. ಪಂಪ ಮಹಾಕವಿಯ ಸಹಸ್ರಮಾನೋತ್ಸವವನ್ನು ಮಹಾರಾಜಕಾಲೇಜಿನಲ್ಲಿ ಆಚರಿಸಲಾಯಿತು. ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿಗಳು, ಪ್ರೊ॥ ತೀ.ನಂ. ಶ್ರೀಕಂಠಯ್ಯನವರು, ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರು ಮಾತನಾಡುವವರಿದ್ದರು. ಪಂಪ ಮಹಾಕವಿಯ ವಂಶ, ಜನನ ಮತ್ತು ಅವನ ವ್ಯಕ್ತಿತ್ವದ ಬಗೆಗೆ ಮಾತನಾಡುವಂತೆ ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿಗಳು ನನಗೆ ಆದೇಶಿಸಿದರು. ಹಲವು ಜನ ವಿದ್ವಾಂಸರೂ, ಸಾಹಿತಿಗಳೂ, ವಿದ್ಯಾರ್ಥಿಗಳೂ ಇದ್ದ ಸಭೆಯಲ್ಲಿ ಸುಮಾರು ಅರ್ಧಗಂಟೆ ಕಾಲ ಪಂಪನ ವಿಚಾರವಾಗಿ ಸಭೆಯ ಆರಂಭದಲ್ಲಿ ಮಾತನಾಡಿದೆ. ಅಂಥ ಸಭೆಯಲ್ಲಿ ನಾನು ಮಾತನಾಡಿದುದು ಅದೇ ಮೊದಲು. ಚರ್ಚಾಸ್ಪರ್ಧೆಗಳಲ್ಲಿ ಮಾತನಾಡಿದ್ದೆನಾದರೂ ಇನ್ನೂ ವಿದ್ಯಾರ್ಥಿಯಾದವನು ವಿದ್ವತ್ ಸಭೆಯಲ್ಲಿ ಮಾತನಾಡುವುದು ವಿಶೇಷ ಅನುಭವ. ಅಂದು ಸಭೆ ಮುಕ್ತಾಯವಾದ ಬಳಿಕ, ಇಂಗ್ಲೆಂಡಿನಲ್ಲಿ ಹಲವು ವರ್ಷಗಳ ಕಾಲ ಇದ್ದು ಮಹಾರಾಜ ಕಾಲೇಜಿಗೆ ಇಂಗ್ಲಿಷ್ ಪ್ರೊಫೆಸರಾಗಿ ಬಂದಿದ್ದ ಬಿ.ಎಸ್. ಕೇಶವನ್

ಅವರು ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿಗಳೊಡನೆ ಮಾತನಾಡುತ್ತ 'ಈ ಹುಡುಗ ಒಳ್ಳೆಯ ಅಧ್ಯಾಪಕನಾಗುತ್ತಾನೆ' ಎಂಬುದಾಗಿ ಹೇಳಿದ್ದರು. ರಕ್ಷಣಾ ಶಾಖೆಯ ಕಛೇರಿಯಲ್ಲಿದ್ದ ನಾನು ಕಾಲೇಜು ಅಧ್ಯಾಪಕನಾಗಿ ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಬರುವುದನ್ನು ಈ ಮೇಲಿನ ಘಟನೆಯ ಮೂಲಕ ವಿಧಿ ನೆರವೇರಿಸಿರಬೇಕೆಂದು ಭಾವಿಸುತ್ತೇನೆ.

ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಬಂದ ಮೊದಲನೆಯ ವರ್ಷ ನಾನು ಮಾಡಿದ ಇನ್ನೊಂದು ಕೆಲಸವೆಂದರೆ ಕಾಲೇಜಿನಲ್ಲಿ ಕರ್ಣಾಟಕ ಸಂಘವನ್ನು ಆರಂಭಿಸಿದುದು.

ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿಗಳ ಅಮೃತಹಸ್ತದಿಂದ ಸೆಯಿಂಟ್ ಫಿಲೋಮಿನಾ ಕಾಲೇಜಿನ ಕರ್ಣಾಟಕಸಂಘದ ಶುಭಾರಂಭವು ನೆರವೇರಿತು. ಕನ್ನಡದ ಎಲ್ಲ ವಿದ್ಯಾರ್ಥಿಗಳೂ ಸಂಘದ ಸದಸ್ಯರಾಗಿ ಸಂಘದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ವಿದ್ಯಾರ್ಥಿಗಳೇ ಎಲ್ಲ ಕಾರ್ಯಕ್ರಮಗಳ ಯೋಜನೆ ಹಾಕಿಕೊಂಡು, ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಡುತ್ತಿದ್ದರು. ನಾನು ಮಾರ್ಗದರ್ಶಕನಾಗಿ ಅವರನ್ನು ಹುರಿದುಂಬಿಸುತ್ತಿದ್ದೆ.

ಪ್ರತಿವರ್ಷ ವಾರ್ಷಿಕೋತ್ಸವಕ್ಕೆ ಒಬ್ಬರು ಘನವಿದ್ವಾಂಸರನ್ನು ಕರೆಸಲಾಗುತ್ತಿತ್ತು. ಉದ್ದಾಮ ಸಾಹಿತಿಗಳಾದ ಡಿ.ವಿ.ಜಿ., ಪ್ರೊ. ಎಸ್.ವಿ. ರಂಗಣ್ಣ , ತ.ರಾ. ಸುಬ್ಬರಾವ್, ಶಿವರಾಮ ಕಾರಂತ, ಪ್ರೊ॥ ದೇ. ಜವರೇಗೌಡ, ಸರ್. ಸಿ.ವಿ. ರಾಮನ್, ವಿ.ಕೃ. ಗೋಕಾಕ್, ಪು.ತಿ. ನರಸಿಂಹಾಚಾರ್-ಮೊದಲಾದ ಖ್ಯಾತನಾಮರು ನಮ್ಮ ಕಾಲೇಜಿಗೆ ಭೇಟಿಕೊಟ್ಟು ವಿದ್ಯಾರ್ಥಿಗಳಿಗೆ ಬೋಧಪ್ರದವಾದ ಭಾಷಣಗಳನ್ನು ಮಾಡಿದರು.

ಕರ್ಣಾಟಕಸಂಘದ ಆಶ್ರಯದಲ್ಲಿ ಟಿ.ಪಿ. ಕೈಲಾಸಂ ಸ್ಮಾರಕ ಅಂತರ ಕಾಲೇಜು ಚರ್ಚಾಸ್ಪರ್ಧೆಯನ್ನು ಹಲವು ವರ್ಷಗಳ ಕಾಲ ನಡೆಸಲಾಯಿತು. ಮೈಸೂರು ನಗರದ ಎಲ್ಲ ಕಾಲೇಜುಗಳ ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸುವ ನಿಯಮದಂತೆ ಚರ್ಚಾಸ್ಪರ್ಧೆಗಳು ನಡೆಯುತ್ತಿದ್ದುವು. ವರ್ಷ ವರ್ಷ ಗೆದ್ದವರ ಬಳಿ ಗೌರವಾರ್ಥವಾಗಿ ಇರುತ್ತಿದ್ದ ರಜತ ಗುರಾಣಿ (ರೋಲಿಂಗ್ ಶೀಲ್ಡ್) ಇದ್ದುದಲ್ಲದೆ ಹಲವು ಬಹುಮಾನಗಳನ್ನು ಅತಿಥಿಗಳ ಕೈಯಿಂದ ಕೊಡಿಸಲಾಗುತ್ತಿತ್ತು. ಈ ಕಾರ್ಯಕ್ರಮವು ಕಾಲೇಜಿನ ಪ್ರತಿಷ್ಠೆಯ ಕಾರ್ಯಕ್ರಮವಾಗಿತ್ತು. ಇದರಿಂದ ನಗರದ ಕಾಲೇಜುಗಳಲ್ಲಿ ಸೆಯಿಂಟ್ ಫಿಲೋಮಿನಾಕಾಲೇಜಿಗೆ ಒಳ್ಳೆಯ ಹೆಸರು ಬಂದಿತು.

ವರ್ಷದಲ್ಲಿ ಹಲವಾರು ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಪ್ರತಿಭೆಗೆ ಉತ್ತೇಜನ ಕೊಡುವ ದೃಷ್ಟಿಯಿಂದ ನಡೆಯುತ್ತಿದ್ದುವು. ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿಭಾಪ್ರಕಾಶನದ ಹಲವು ಸ್ಪರ್ಧೆಗಳನ್ನು ಏರ್ಪಡಿಸಿ ಅವರಿಗೆ ಬಹುಮಾನಗಳನ್ನೂ, ಪ್ರಶಸ್ತಿ ಪತ್ರಗಳನ್ನೂ ನೀಡಲಾಗುತ್ತಿತ್ತು.

ಪ್ರತಿವರ್ಷ ಸಂಘದ ಸದಸ್ಯರು ಮತ್ತು ಉಪಾಧ್ಯಾಯರು ಸೇರಿ ನಾಟಕಗಳನ್ನು ಅಭಿನಯಿಸುತ್ತಿದ್ದೆವು. ಇಲ್ಲಿ ಟೇಬಲ್‌ಗಳನ್ನು ಜೋಡಿಸಿ ರಂಗಸ್ಥಳವನ್ನು ಮಾಡಿಕೊಳ್ಳಬೇಕಾಗಿತ್ತು. ಪರದೆಗಳು, ಉಡುಪುಗಳು, ಬೆಳಕಿನ ವ್ಯವಸ್ಥೆ ಎಷ್ಟು ಜಟಿಲವಾದುದು ಎಂಬುದು ಎಲ್ಲರಿಗೂ ಗೊತ್ತು. ವಿದ್ಯಾರ್ಥಿಗಳ ಜತೆ ಸುತ್ತಾಡಿ ಬೇಕಾದುದನ್ನೆಲ್ಲ ಹುಡುಕಿ ಸಂಗ್ರಹಿಸುತ್ತಿದ್ದುದಲ್ಲದೆ, ಧ್ವನಿವರ್ಧಕ ಮೊದಲಾದ ಏರ್ಪಾಡುಗಳನ್ನೂ ಮಾಡುತ್ತಿದ್ದೆ. ಕೆಲವು ಪ್ರಸಿದ್ಧ ನಾಟಕಗಳನ್ನು ಆಡಿಸುತ್ತಿದ್ದುದಲ್ಲದೆ ನಾನೇ ಒಂದೆರಡು ನಾಟಕಗಳನ್ನೂ ಬರೆದು ನಿರ್ದೇಶಿಸಿದ್ದೆ. ಕೆಲವು ನಾಟಕಗಳಲ್ಲಿ ನಾನೂ ನನ್ನ ಕೆಲವು ಉಪಾಧ್ಯಾಯಮಿತ್ರರೂ ಭಾಗವಹಿಸುತ್ತಿದ್ದೆವು. ಸುಮಾರು ಮೂವತ್ತು ವರ್ಷಗಳ ಕಾಲ ಇದು ನಡೆಯಿತು.

ಫ್ರೆಂಚ್ ನಾಟಕಕಾರ ಮೋಲಿಯರನ ಎರಡು ನಾಟಕಗಳನ್ನು ಕನ್ನಡಕ್ಕೆ ಅಳವಡಿಸಿ ರಂಗದ ಮೇಲೆ ಪ್ರದರ್ಶಿಸಿದೆ. 'ಮರುಳು ಮದುವೆ' ಮತ್ತು 'ಠಕ್ಕೂರಾಯನ ಠೀವಿ' - ಎಂಬವೇ ಆ ನಾಟಕಗಳು. ಠಕ್ಕೂರಾಯನ ಠೀವಿ ಎಂಬ ವಿನೋದ ನಾಟಕದಲ್ಲಿ ನಾನು, ಕನ್ನಡ ಅಧ್ಯಾಪಕ ಎಚ್. ಕೃಷ್ಣಪ್ಪ, ಹಿಂದಿ ಅಧ್ಯಾಪಕ ಎಂ.ಕೆ. ರಾಜಗೋಪಾಲ್, ಸಸ್ಯಶಾಸ್ತ್ರದ ಪ್ರಾಧ್ಯಾಪಕ ಬಿ.ಎನ್. ನಾರಾಯಣರಾವ್ ಪಾತ್ರವಹಿಸಿದ್ದೆವು. ಉಳಿದ ಪಾತ್ರಗಳನ್ನು ವಿದ್ಯಾರ್ಥಿಗಳು ವಹಿಸಿದ್ದರು. ಸುಮಾರು ಎರಡು ಗಂಟೆಗಳ ನಾಟಕ ಎಲ್ಲರನ್ನೂ ನಗಿಸಿ ಕುಣಿಸಿತು.

ಇನ್ನೊಂದು ಬಹು ಮುಖ್ಯ ಪ್ರಯೋಗ ಹೆಚ್. ದೇವೀರಪ್ಪ ಅವರು ರಚಿಸಿದ 'ತುಂಗಭದ್ರ'. ಇದು ಬಿ.ಎ., ತರಗತಿಗೆ ಪಠ್ಯವಾಗಿತ್ತು. ನಟರಾಜ ಮೊದಲಾದ ವಿದ್ಯಾರ್ಥಿಗಳು "ಈ ನಾಟಕವನ್ನು ಆಡೋಣ" ಎಂದು ವಿನಂತಿಸಿಕೊಂಡರು. "ಈ ನಾಟಕದಲ್ಲಿ ಬಿಜ್ಜಳ, ಹರಿಹರ, ರಾಘವಾಂಕ, ಮಾಯಾದೇವಿ ಮೊದಲಾದ ಪಾತ್ರಗಳು ಬರುತ್ತವೆ. ಇದು ಚಾರಿತ್ರಿಕ ಹಾಗೂ ಧಾರ್ಮಿಕ ನಾಟಕ, ಇದಕ್ಕೆ ವಿಶೇಷ ಪರದೆಗಳೂ, ಉಡುಪುಗಳೂ ಬೇಕು; ಸುಮಾರು ಎರಡು ತಿಂಗಳ ಕಾಲ ಎರಡೆರಡು ಗಂಟೆ ನಾಟಕದ ಪೂರ್ವಾಭ್ಯಾಸ ಮಾಡಬೇಕು. ನಿಮ್ಮ ಓದಿಗೆ

ಭಂಗಬರುತ್ತದೆ. ಇದರ ಮೇಲೆ ಇದಕ್ಕೆ ತುಂಬ ಖರ್ಚು ಬರುತ್ತದೆ" ಎಂದೆಲ್ಲ ಹೇಳಿದೆ. ತಾವು ಎಲ್ಲಕ್ಕೂ ಸಿದ್ಧರಾಗಿರುವುದಾಗಿ ಹೇಳಿ "ನಿಮ್ಮ ಸಹಾಯ, ನಿರ್ದೇಶನ ಮಾತ್ರ ಬೇಕು" ಎಂದರು. ನಾನೂ ನನ್ನ ಸಹೋದ್ಯೋಗಿಗಳೂ ಒಪ್ಪಲೇಬೇಕಾಯಿತು. ಸುಮಾರು ಎರಡು ತಿಂಗಳ ಕಾಲ ನಾಟಕದ ಪೂರ್ವಾಭ್ಯಾಸ ನಡೆಯಿತು. ಬೆಳಗ್ಗೆ ಹತ್ತು ಗಂಟೆಗೆ ಕಾಲೇಜಿಗೆ ಬಂದವರು ರಾತ್ರಿ ಎಂಟು, ಒಂಬತ್ತು ಗಂಟೆಗೆ ಮನೆಗೆ ಹೋಗುತ್ತಿದ್ದೆವು. ಒಂದೊಂದು ದಿವಸ ಹತ್ತು ಗಂಟೆಯೂ ಆಗುತ್ತಿತ್ತು. ಆದರೆ ಯಾವುದಕ್ಕೂ ನಮ್ಮ ವಿದ್ಯಾರ್ಥಿಗಳೂ ಸಹಾಧ್ಯಾಪಕರೂ ಅಂಜಲಿಲ್ಲ. ದೊಡ್ಡಪೇಟೆಯಲ್ಲಿ ನನ್ನ ವಿದ್ಯಾರ್ಥಿಯೊಬ್ಬ ನಾಟಕದ ಸಕಲ ಪರಿಕರಗಳನ್ನೂ ಇಟ್ಟುಕೊಂಡಿದ್ದ. ನಾಟಕಗಳಿಗೆ ಬೇಕಾದುದನ್ನೆಲ್ಲ ಬಾಡಿಗೆಗೆ ಕೊಡುವುದೇ ಅವನ ವೃತ್ತಿ. ಅವನಿಂದ ಬೇಕಾದುದನ್ನೆಲ್ಲ ಬಾಡಿಗೆಗೆ ಪಡೆದೆವು. ಉಳಿದುವುಗಳನ್ನು ಹಣಕೊಟ್ಟು ಕೊಂಡುಕೊಂಡೆವು. ನಾಟಕಕ್ಕೆ ಖರ್ಚು ಹೆಚ್ಚಾದುದರಿಂದ "ಟಿಕೇಟು ಹಾಕೋಣ, ನಾವು ಮಾರುತ್ತೇವೆ" ಎಂದು ಸಂಘದ ಸಮಿತಿಯ ಸದಸ್ಯರು ವಿಶ್ವಾಸಕೊಟ್ಟರು.

ಈ ನಾಟಕದಲ್ಲಿ ನಾನು ಹರಿಹರನ ಪಾತ್ರವನ್ನೂ, ಎಚ್. ಕೃಷ್ಣಪ್ಪನವರು ರಾಘವಾಂಕನ ಪಾತ್ರವನ್ನೂ ವಹಿಸಿದೆವು. ಬಿಜ್ಜಳನ ಪಾತ್ರವನ್ನು ಹಿಂದಿ ಪ್ರಾಧ್ಯಾಪಕ ಎಂ.ಕೆ. ರಾಜಗೋಪಾಲರವರೂ, ಮಾಯಾದೇವಿ ಪಾತ್ರವನ್ನು ಕನ್ನಡ ಅಧ್ಯಾಪಕ ಎಚ್.ವಿ. ಶ್ರೀನಿವಾಸಶರ್ಮ ಅವರೂ ವಹಿಸಿದರು. ಉಳಿದ ಪಾತ್ರಗಳನ್ನು ನಟರಾಜ ಮತ್ತು ಅವನ ಗೆಳೆಯರು ವಹಿಸಿದ್ದರು.

ನಾಟಕದ ದಿನ ಸೆಯಿಂಟ್ ಫಿಲೋಮಿನಾ ಕಾಲೇಜಿನ ಸಭಾಗೃಹವು ಕೆಳಗೆ ಮತ್ತು ಮಹಡಿಯ ಮೇಲೆ ಭರ್ತಿಯಾಗಿದ್ದಿತು. ವಿದ್ಯಾರ್ಥಿಗಳು ಟಿಕೆಟುಗಳನ್ನೆಲ್ಲ ಮಾರಿದ್ದರು. ಸಭಾಮಂಟಪವು ಗಿಜಿಗುಡುತ್ತಿತ್ತು. ಬಾಗಿಲುಗಳಲ್ಲಿ ಟಿಕೇಟು ತೆಗೆದುಕೊಂಡು ಒಳಗೆ ಬಿಡಲು ಒಬ್ಬರು ಕಾಲೇಜು ಅಧ್ಯಾಪಕರು ಮತ್ತು ಒಬ್ಬ ವಿದ್ಯಾರ್ಥಿ ನಿಂತು ತಮ್ಮ ಕಾರ್ಯ ನಿರ್ವಹಿಸಿದರು. ಪ್ರೊ ॥ ಕೆ. ನಾರಾಯಣ ರಾವ್, ಟಿ.ಆರ್. ಬಾಲಕೃಷ್ಣ , ಕೃಷ್ಣರಾವ್, ಇ.ಎನ್.ಕೆ. ವಿಶ್ವನಾಥನ್, ಶ್ರೀನಿವಾಸರಾವ್ ಮೊದಲಾದ ಎಲ್ಲರೂ ಸಭಾಭವನದ ನಿರ್ವಹಣೆ, ಶಿಸ್ತನ್ನು ನೋಡಿಕೊಂಡರು. ಇಂಥ ಒಂದು ಸಹಯೋಗ, ಸಹಕಾರ, ಒಂದು ಕಾಲೇಜಿನ ಅಧ್ಯಾಪಕ ವೃಂದದವರಿಂದ ದೊರೆಯುವುದು ಎಂದರೆ ಕಾಲೇಜಿನಲ್ಲಿ ಎಂಥ ಸೌಹಾರ್ದ ವಾತಾವರಣವಿದ್ದಿತು ಎಂಬುದು ಸ್ಪಷ್ಟವಾಗುತ್ತದೆ.

ನಾಟಕ ಬಹಳ ಯಶಸ್ವಿಯಾಯಿತು. ಮೈಸೂರು ನಗರದಲ್ಲಿ ಈ ನಾಟಕದ ಪ್ರಶಂಸೆ ಮತ್ತು ಚರ್ಚೆ ನಡೆದುದು ಈ ನಾಟಕದ ಜನಪ್ರಿಯತೆಯನ್ನೂ, ಸದ್ಭಾವವನ್ನೂ ಪ್ರಕಟಿಸಿತು. ವಿದ್ಯಾರ್ಥಿ ವೃಂದ, ಅಧ್ಯಾಪಕರು ಎಲ್ಲರೂ ಸಮಭಾವದಿಂದ ಸಹಕರಿಸಿದರೆ ಎಂಥ ಅದ್ಭುತ ಕಾರ್ಯವೂ ಯಶಸ್ವಿಯಾಗುತ್ತದೆ ಎಂಬುದಕ್ಕೆ ನಾವು ಪ್ರದರ್ಶಿಸಿದ **ತುಂಗಭದ್ರ** ನಾಟಕವೇ ನಿದರ್ಶನ.

ವಿದ್ಯಾರ್ಥಿಗಳ ಸಹಯೋಗದಿಂದ ಕೈಗೊಂಡ ಇನ್ನೊಂದು ಮಹತ್ತರ ಕಾರ್ಯವೆಂದರೆ **ಪಾರಿಜಾತ** ಎಂಬ ಕನ್ನಡ ಪತ್ರಿಕೆಯನ್ನು ಹಲವು ವರ್ಷಗಳ ಕಾಲ ಪ್ರಕಾಶಿಸಿದುದು. ಆರ್ಥಿಕ ಹೊರೆಯನ್ನು ವಿದ್ಯಾರ್ಥಿಗಳು ಹೊತ್ತರು; ನಾನು ಲೇಖನಗಳ ಸಂಗ್ರಹ, ಪರಾಮರ್ಶೆ, ಅಚ್ಚು ಮೊದಲಾದ ಕೆಲಸಗಳನ್ನು ನಿರ್ವಹಿಸಿದೆ. ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ-ಲೇಖಕರ ಪ್ರತಿಭೆಯನ್ನು ಹೊರತರುವ ಯಶಸ್ವೀ ಕಾರ್ಯ ನೆರವೇರಿತು.

ಸೆಯಿಂಟ್ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳ ಮನೋರಂಜನೆ ಹಾಗೂ ಶೈಕ್ಷಣಿಕ ಉದ್ದೇಶದಿಂದ 'ಒಂದು ದಿನ ಪ್ರವಾಸ' ಹಾಗೂ ಮೂರು ದಿನಗಳಿಂದ ಹಿಡಿದು ಎಂಟು ಹತ್ತು ದಿನಗಳವರೆಗಿನ ಐತಿಹಾಸಿಕ ಸ್ಥಳಗಳ 'ಶೈಕ್ಷಣಿಕ ಪ್ರವಾಸ'ವನ್ನು ಏರ್ಪಡಿಸಲಾಗುತ್ತಿತ್ತು. ಊಟಿ, ಬಂಡಿಪುರ, ಬಿಳಿಗಿರಿರಂಗನ ಬೆಟ್ಟ, ಹಿಮವದ್‌ಗೋಪಾಲಸ್ವಾಮಿಬೆಟ್ಟ - ಮೊದಲಾದ ಪರ್ವತ ಮತ್ತು ವನ ಪ್ರದೇಶಗಳ ವಿಹಾರದಿಂದ ದಿನನಿತ್ಯದ ಪಾಠಗಳ, ತರಗತಿಗಳ ಜಂಜಡದಿಂದ ದೂರಹೋಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ನಗು, ಹರಟೆ ಮಾತು, ಕುಣಿದು ಕುಪ್ಪಳಿಸುವಿಕೆ ಮೊದಲಾದುವುಗಳಿಂದ ಮನಸ್ಸಿನ ಭಾರವನ್ನು ಇಳಿಸಿಕೊಳ್ಳುತ್ತಿದ್ದರು.

ದೀರ್ಘಪ್ರವಾಸಗಳು ಇತಿಹಾಸ, ಕಲೆ, ವಾಸ್ತುಶಿಲ್ಪ - ಮೊದಲಾದುವುಗಳನ್ನು ಅಭ್ಯಾಸ ಮಾಡುವ ಸಾಧನಗಳು. ಮನೋರಂಜನೆಯ ಜತೆಜತೆಗೆ ಐತಿಹಾಸಿಕ ವಿಷಯಗಳ ಗ್ರಹಣವೂ ನಡೆಯುವುದು. ಅಲ್ಲದೆ ಯಾವ ತಾರತಮ್ಯವೂ ಇಲ್ಲದೆ ಒಗ್ಗಟ್ಟಿನಿಂದ ಬಾಳುವುದನ್ನು ಕಲಿಯುವುದು ಒಂದು ಮುಖ್ಯಪಾಠವಾಗಿತ್ತು. ಕೆಳಗಿನ ತರಗತಿಯವರು, ಮೇಲಿನ ತರಗತಿಯವರು ಎಂಬ ಪಕ್ಷಪಾತವಿಲ್ಲದೆ, ಜಾತಿಭೇದವಿಲ್ಲದೆ ಒಟ್ಟಿಗೆ ಓಡಾಡುವ, ಭೋಜನ ಮಾಡುವ, ಮಲಗುವ, ಸಾಂಘಿಕ ಏಕತೆಯ ಜೀವನದ ಪಾಠ ಅವರಿಗೆ ಪ್ರವಾಸದಲ್ಲಿ ದೊರೆಯುತ್ತಿತ್ತು. ಈ ದೀರ್ಘ ಪ್ರವಾಸದಲ್ಲಿ ಹಂಪೆ, ಚಿತ್ರದುರ್ಗ, ಬೊಂಬಾಯಿ, ಅಜಂತ ಎಲ್ಲೋರಾ, ಹೈದರಾಬಾದ್ ಮೊದಲಾದವು ಗಮನಾರ್ಹ ವಾಗಿದ್ದುವು.

೧೫. ಅಧ್ಯಾಪನ

ಮೊದಲು ಇಂಟರ್‌ಮೀಡಿಯೆಟ್, ಅನಂತರ ಪ್ರೀಯೂನಿವರ್ಸಿಟಿ ತರಗತಿಗಳಿಗೂ, ಬಿ.ಎ., ಬಿ.ಎಸ್ಸಿ., ಕನ್ನಡ ತರಗತಿಗಳಿಗೂ ಪಾಠ ಹೇಳುತ್ತಿದ್ದೆ. 'ಒಂದು ವರ್ಷದ' ಪ್ರೀಯೂನಿವರ್ಸಿಟಿ ತರಗತಿಗಳು ಜಾರಿಗೆ ಬಂದಾಗ, ಪ್ರೌಢಶಾಲೆಯಿಂದ ಬಂದ ವಿದ್ಯಾರ್ಥಿಗಳಲ್ಲಿ ಹುಡುಗಾಟ ಹೆಚ್ಚಾಗಿರುತ್ತಿತ್ತು. ಅವರಿಗೆ ಕಾಲೇಜಿನ ಪಾಠಗಳನ್ನು ಅರ್ಥಮಾಡಿಕೊಳ್ಳುವ ಮಟ್ಟಕ್ಕೇರಲು ಕಷ್ಟವಾಗುತ್ತಿತ್ತು. ಆದುದರಿಂದ ಅವರಲ್ಲಿ ಸ್ವಲ್ಪ ಚಂಚಲ ಪ್ರವೃತ್ತಿ ವ್ಯಕ್ತವಾಗುತ್ತಿತ್ತು. ಆದರೆ ಬಿ.ಎ., ಬಿ.ಎಸ್ಸಿ., ತರಗತಿಯ ವಿದ್ಯಾರ್ಥಿಗಳು ಪ್ರೌಢರಾಗಿದ್ದುದರಿಂದ ಅವರಿಗೆ ಕನ್ನಡ ಸಾಹಿತ್ಯದ ಪಾಠಗಳು ಮೆಚ್ಚಿಕೆಯಾಗುತ್ತಿದ್ದುವು; ಆಸಕ್ತಿಯಿಂದ ಪಾಠಗಳನ್ನು ಕೇಳುತ್ತಿದ್ದರು. ಬೇಂದ್ರೆಯವರ **ಸಖೀಗೀತ**ವಾಗಲಿ, ವಿ.ಸೀ ಅವರ **ದ್ರಾಕ್ಷಿದಾಳಿಂಬೆ** ಆಗಲಿ, ಕುವೆಂಪುರವರ **ಪಕ್ಷಿಕಾಶಿ**ಯೇ ಆಗಲಿ ಮನಸ್ಸಿಟ್ಟು ಕೇಳುತ್ತಿದ್ದರು. **ಹಳಗನ್ನಡ** ಕಾವ್ಯಗಳನ್ನು ರಾಗವಾಗಿ ಓದಿ, ಸ್ವಾರಸ್ಯವನ್ನು ಬಿಡಿಸಿ ಹೇಳುತ್ತಿದ್ದುದನ್ನು ಮೆಚ್ಚಿಕೊಳ್ಳುತ್ತಿದ್ದರು. ಕಾಳಿದಾಸನ ಶಾಕುಂತಲ ನಾಟಕದ ಪಾಠವು ನನ್ನ ವಿದ್ಯಾರ್ಥಿಗಳಿಗೆ ರಸದೌತಣವಾದರೆ, ನನಗೆ ನಾಟಕದ ಸೌಂದರ್ಯವನ್ನು ವರ್ಣಿಸುವಾಗಿನ ಸಂತೋಷ ಕಡಮೆಯಾದುದಾಗಿರಲಿಲ್ಲ.ಹೀಗೆ ನನಗೂ ನನ್ನ ವಿದ್ಯಾರ್ಥಿಗಳಿಗೂ ಒಳ್ಳೆಯ ಸಂಬಂಧವೇರ್ಪಟ್ಟು ವಿದ್ಯಾರ್ಥಿಗಳಲ್ಲಿ ಗೆಳೆಯರಂತೆ ವ್ಯವಹರಿಸುತ್ತಿದ್ದೆ. ಒಂದು ಸಲ ಒಬ್ಬ ವಿದ್ಯಾರ್ಥಿಯು ಹೇಳಿದ ಮಾತು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ, "ಸಾರ್ ಶೇಕಡ ನಲವತ್ತು ಅಂಕಗಳನ್ನು ಕನ್ನಡದಲ್ಲಿ ನೀರುಕುಡಿದಂತೆ ತೆಗೆದುಕೊಳ್ಳಬಲ್ಲೆ; ಇದಕ್ಕಾಗಿ ನಿಮ್ಮ ತರಗತಿಗೆ ನಾನು ಬರಬೇಕಾಗಿಲ್ಲ, ಆದರೆ ನಿಮ್ಮ ಪಾಠವನ್ನು ಕೇಳುವ ಸಂತೋಷಕ್ಕಾಗಿ ನಿಮ್ಮ ತರಗತಿಗೆ ತಪ್ಪಿಸಿಕೊಳ್ಳುವುದಿಲ್ಲ." ಇನ್ನೊಂದು ಸಲ ಸಿಟಿ ಬಸ್ಸಿನಲ್ಲಿ ಇಬ್ಬರು ವಿದ್ಯಾರ್ಥಿಗಳು ಮಾತನಾಡಿಕೊಳ್ಳುತ್ತಿದ್ದರು, "ಲೋ ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಇರುವ ಕನ್ನಡ ಪ್ರೊಫೆಸರರು ಬಹಳ ಚೆನ್ನಾಗಿ ಪಾಠ ಮಾಡುತ್ತಾರಂತೆ. ನನ್ನ ಇಬ್ಬರು ಸ್ನೇಹಿತರು ಅಲ್ಲಿ ಓದುತ್ತಿದ್ದಾರೆ. ಅವರು ಹೇಳಿದರು" ಎಂದು ಒಬ್ಬ ಹೇಳಿದ. ಅದಕ್ಕೆ ಇನ್ನೊಬ್ಬ "ಹೌದೇನೋ, ನನಗೂ ಹಾಗೇ ಕೆಲವರು ಹೇಳಿದರು. ಅಲ್ಲಿ ಎಲ್ಲ ಲೆಕ್ಚರರುಗಳೂ ತುಂಬ ಚೆನ್ನಾಗಿ ಪಾಠ ಮಾಡುತ್ತಾರಂತೆ, ತುಂಬ ಬುದ್ಧಿವಂತರಾದ ಸೈನ್ಸ್ ಲೆಕ್ಚರರುಗಳಿದ್ದಾರಂತೆ" ಎಂದು ದನಿಗೂಡಿಸಿದ. ಹಿಂದಿನ ಸೀಟಿನಲ್ಲಿ ಕುಳಿತಿದ್ದ ನನ್ನನ್ನು ಅವರು ಅರಿತಿರಲಿಲ್ಲವಾದುದರಿಂದ ಆ ವಿದ್ಯಾರ್ಥಿಗಳು ಸಹಜವಾಗಿ ಮಾತಾಡಿಕೊಂಡರು. ಒಬ್ಬ ಅಧ್ಯಾಪಕನಿಗೆ ಬೇರೆ ಏನೂ ಇಲ್ಲದೇ ಇದ್ದರೂ, ಹೃದಯದಾಳದಿಂದ ಬಂದ ಇಂಥ ಮಾತುಗಳು ನಮಗೆ ತೃಪ್ತಿ ತರುವ ಪ್ರಮಾಣಪತ್ರಗಳು ಎನ್ನಬಹುದು. ನೀವು ದೇಶದ ಯಾವ ಭಾಗಕ್ಕೆ ಹೋದರೂ ಅಲ್ಲಿ ನಿಮ್ಮ ಕಾಲೇಜಿನಲ್ಲಿ ಅಧ್ಯಯನ ಮಾಡಿದ ಒಬ್ಬರು ಬಂದು 'ಸಾರ್, ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ' ಎಂದು ನಿಮಗೆ ಪರಿಚಯಿಸಿಕೊಂಡಾಗ ನಿಮಗೆ ಆಗುವುದು ಆನಂದವೋ, ಹೆಮ್ಮೆಯೋ?

ಮೂವತ್ತು ವರ್ಷಗಳ ಅಧ್ಯಾಪನವೃತ್ತಿಯಲ್ಲಿ ನಾನು ಉಂಡಿದ್ದು ಅಮೃತವೆಂದೇ ಹೇಳಬೇಕು. ಒಂದೆರಡು ಅಪ್ರಿಯ ಘಟನೆಗಳೂ ನಡೆದುದುಂಟು. ಒಂದು ಕನ್ನಡ ವಿಭಾಗದಲ್ಲಿದ್ದ ಅಧ್ಯಾಪಕರೊಬ್ಬರಿಗೆ ಸಂಬಂಧಿಸಿದುದು, ಇನ್ನೊಂದು ನನಗೆ ಅಧ್ಯಾಪಕರಾಗಿದ್ದು ನನ್ನ ಹಿತಚಿಂತಕರೆಂದು ನಾನು ತಿಳಿದಿದ್ದವರದು. ಮೊದಲು ನನ್ನ ಸಹೋದ್ಯೋಗಿಯೊಬ್ಬರ ವಿಚಾರ: ನಾನು ಮತ್ತು ಕೃಷ್ಣಪ್ಪ ಇಬ್ಬರೂ ಕಾಲೇಜಿನ ಕನ್ನಡ ತರಗತಿಗಳ ಕೆಲಸವನ್ನೆಲ್ಲ ಸರಿದೂಗಿಸಿಕೊಂಡು ಹೋಗುತ್ತಿದ್ದೆವು. ತರಗತಿಗಳು ಹೆಚ್ಚಾದಂತೆ ಕೆಲಸವೂ ಹೆಚ್ಚಾಯಿತು ಎಂದು ಇನ್ನೊಬ್ಬ ಕನ್ನಡ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳಲಾಯಿತು. ಹೊಸಬರಿಗೆ ಮೊದಲನೆಯ ವರ್ಷದ ಪ್ರೀ ಯೂನಿವರ್ಸಿಟಿ ತರಗತಿಗಳನ್ನು ಕೊಟ್ಟಿದ್ದೆವು. ಇವರು ಡಿಗ್ರಿ ತರಗತಿಗಳಲ್ಲಿಯೂ ಪಾಠ ಹೇಳಬೇಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದರು ಎಂದು ತೋರುತ್ತದೆ. ನಮ್ಮ ಕಾಲೇಜಿನಲ್ಲಿ ಒಂದು ಪದ್ಧತಿ ಇದ್ದಿತು. ಯಾರಾದರೂ ಸಾಂದರ್ಭಿಕರಜಾ ತೆಗೆದುಕೊಂಡರೆ ಅವರ ಅನುಪಸ್ಥಿತಿಯಲ್ಲಿ ಬೇರೆ ಯಾರಾದರೂ ಆ ವಿಭಾಗದವವರು, ಬಿಡುವಾಗಿದ್ದರೆ, ಆ ತರಗತಿಯನ್ನು ತೆಗೆದುಕೊಳ್ಳಬಹುದಾಗಿದ್ದಿತು. ಒಂದು ದಿವಸ ನಾನು ರಜ ತೆಗೆದುಕೊಂಡೆ. ಈ ಮೂರನೆಯ ಉಪಾಧ್ಯಾಯರು ಬಿಡುವಾಗಿದ್ದುದರಿಂದ "ಪದವಿ ತರಗತಿಯೊಂದನ್ನು ತೆಗೆದುಕೊಳ್ಳಿ" ಎಂದು ಹೇಳಿದ್ದೆ. ಅದರಂತೆ ಅವರು ಆ ತರಗತಿಯನ್ನು ತೆಗೆದುಕೊಂಡರು. ಆ ವರ್ಷ ಬಿ.ಎ., ತರಗತಿಗೆ ವರಕವಿ ಬೇಂದ್ರೆಯವರ 'ನಾದಲೀಲೆ' ಪಠ್ಯವಾಗಿದ್ದಿತು. ಅಂದು ಇವರು ಆ ಪದ್ಯಗಳನ್ನು ರಾಗವಾಗಿ ಹಾಡುತ್ತ ಅದಕ್ಕನುಗುಣವಾಗಿ ಸ್ಟೇಜಿನ ಮೇಲೆ ಕುಣಿದು ವಿದ್ಯಾರ್ಥಿಗಳನ್ನು ರಂಜಿಸಿದರು. ಪದ್ಯಗಳಿಗೆ ವಿವರಣೆಯನ್ನೇನೂ ಕೊಡಲಿಲ್ಲ. ಈ ರೀತಿ ಪದ್ಯಗಳ ಮೂಲಕ ಮನೋರಂಜನೆ ಮಾಡುತ್ತ, "ನನಗೆ ನಿಮ್ಮ ತರಗತಿಯನ್ನು ಪ್ರೊಫೆಸರು ಕೊಡುವುದಿಲ್ಲ. ಕೊಟ್ಟರೆ ಹೀಗೆ ತುಂಬ ಚೆನ್ನಾಗಿ ಪಾಠ ಮಾಡುತ್ತೇನೆ" ಎಂದು ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ಹೇಳಿದರು ಎಂಬ ವಿಷಯ ನನಗೆ ಒಬ್ಬ ವಿದ್ಯಾರ್ಥಿಯಿಂದ

ತಿಳಿಯಿತು. ಎರಡು ದಿನಗಳ ತರುವಾಯ ನಾನು ಆ ತರಗತಿಗೆ ಹೋದರೆ ವಿದ್ಯಾರ್ಥಿಗಳು ತರಗತಿಯ ಒಳಗೆ ಇರದೆ ಎಲ್ಲರೂ ಹೊರಗೆ ನಿಂತಿದ್ದರು. "ನಮಗೆ ಹೊಸ ಮೇಷ್ಟ್ರು ಬೇಕು, ಅವರು ಚೆನ್ನಾಗಿ ಪದ್ಯ ಹಾಡುತ್ತಾರೆ, ಅವರನ್ನು ಕೊಡಿ ಎಂದು ಹೇಳಲು ತರಗತಿಗೆ ಬಹಿಷ್ಕಾರ ಹಾಕಿ ಹೊರಗೆ ನಿಂತಿದ್ದೇವೆ" ಎಂದರು. ಎಂದೂ ಈ ಕಾಲೇಜಿನಲ್ಲಿ ನಡೆಯದಂಥ ಸಂದರ್ಭ ಇದು. ನಾನು ಕೋಪಗೊಂಡರೆ, ವಿದ್ಯಾರ್ಥಿಗಳನ್ನು ಬೈದರೆ, ಅವರ ಹಟ ಹೆಚ್ಚಾಗುತ್ತದೆ. ಅಲ್ಲದೆ ಕಾಲೇಜಿನಲ್ಲಿ ನನ್ನ ಗೌರವ ಕಡಮೆಯಾಗುತ್ತದೆ. 'ಹೊಸಬ ಚೆನ್ನಾಗಿ ಪಾಠ ಹೇಳಿ ಕೊಡುತ್ತಾನೆ, ಆದುದರಿಂದ ಹುಡುಗರು ಮುಷ್ಕರ ಹೂಡಿದ್ದಾರೆ' ಎಂದು ಪ್ರಾಂಶುಪಾಲರಿಗೆ ತಿಳಿದರೆ, ನನ್ನ ಮೇಲೆ ಇದುವರೆಗೆ ಅವರಿಗಿದ್ದ ನಂಬಿಕೆ ಕಡಮೆಯಾಗುವುದು. ಯೋಚನೆ ಮಾಡುತ್ತ ನಿಲ್ಲುವುದಕ್ಕೆ ಸಮಯವಿಲ್ಲ. ಬುದ್ಧಿವಂತಿಕೆಯಿಂದ ಸಂದರ್ಭವನ್ನು ನಿರ್ವಹಿಸಬೇಕು. ವಿದ್ಯಾರ್ಥಿಗಳನ್ನು ಕುರಿತು, ಅವರಿಗೆ, "ಬೇಂದ್ರೆಯವರ ಪದ್ಯಗಳನ್ನು ಹಾಡಿದರೆ ನಿಮಗೆ ತಕ್ಷಣ ಖುಷಿಯಾಗುತ್ತದೆ. ಆ ಪದ್ಯಗಳಿಗೆ ಅರ್ಥ ವಿವರಣೆ ಕೊಡುವುದು ಕಷ್ಟ. ಕವಿಯ ಮನೋಧರ್ಮವನ್ನು ಅರಿತು, ಯಾವ ಸಂದರ್ಭದಲ್ಲಿ ಕವನ ಹುಟ್ಟಿತು ಎಂಬುದನ್ನು ತಿಳಿದುಕೊಂಡಲ್ಲದೆ ಪದ್ಯದ ಭಾವ ಪೂರ್ಣವಾಗುವುದಿಲ್ಲ. ನಾನು ಕೂಡ ಅರ್ಥವಾಗದ ಕೆಲವು ಭಾಗಗಳನ್ನು ಕವಿ ಪರಮೇಶ್ವರಭಟ್ಟರೋ ಅಥವಾ ಇನ್ನೊಬ್ಬರ ಬಳಿಯೋ ಹೋಗಿ ಚರ್ಚಿಸುತ್ತೇನೆ. ಈ ವರ್ಷ ಸುಮ್ಮನಿರಿ. ಮುಂದಿನ ವರ್ಷ ಅವರಿಗೆ ಡಿಗ್ರಿ ತರಗತಿಗಳನ್ನು ಕೊಡೋಣ. ಅವರಿಗಿನ್ನೂ ಕಾಲೇಜಿನಲ್ಲಿನ ಅನುಭವವಿಲ್ಲ" ಎಂದು ಹೇಳಿದೆ. ಕೊನೆಗೆ "ನೀವು ಅವರು ಬೇಕೇಬೇಕು ಎಂದು ಹಟ ಮಾಡಿದರೆ ಅವರಿಗೆ ನಿಮ್ಮ ತರಗತಿಯನ್ನು ಕೊಡುತ್ತೇನೆ. ಈ ವಿಷಯ ಪ್ರಿನ್ಸಿಪಾಲರಿಗೆ ತಿಳಿದರೆ, ಇಂಥ ಅಧ್ಯಾಪಕರು ನಮ್ಮ ಕಾಲೇಜಿಗೆ ಬೇಡ ಎಂದು ತೀರ್ಮಾನಿಸಿದರೆ ಮುಂದಿನ ವರ್ಷ ಅವರನ್ನು ಕಾಲೇಜಿನಲ್ಲಿ ಇಟ್ಟುಕೊಳ್ಳುತ್ತಾರೆಯೇ? ನಿಮ್ಮ ನಡವಳಿಕೆಯಿಂದ ಅವರಿಗೆ ಅನ್ಯಾಯವಾಗುವಂತೆ ನಡೆದುಕೊಳ್ಳಬೇಡಿ" ಎಂದು ಎಚ್ಚರಿಕೆಯ ಮಾತನ್ನೂ ಹೇಳಬೇಕಾಯಿತು. ವಿಷಯವನ್ನು ಅರ್ಥಮಾಡಿಕೊಂಡ ವಿದ್ಯಾರ್ಥಿಗಳು ಸುಮ್ಮನಾದರು. ಮುಂದೆ ಇಂಥ ಸಂದರ್ಭಗಳು ಕಾಲೇಜಿನಲ್ಲಿ ಎಂದೂ ಬರಲಿಲ್ಲ.

ಇನ್ನೊಂದು ಮಹಾರಾಜ ಕಾಲೇಜಿನಲ್ಲಿ ನನ್ನ ತಮಿಳು ಅಧ್ಯಾಪಕರಾಗಿದ್ದವರಿಗೆ ಸಂಬಂಧಪಟ್ಟದ್ದು. ಇವರು ನನ್ನಲ್ಲಿ ತುಂಬ ಪ್ರೀತಿಯಿಂದಲೇ ಇದ್ದರು. ಮುಂದೆ ನಾನು ಬೆಂಗಳೂರಿನಲ್ಲಿದ್ದಾಗ ಇವರೂ ಬೆಂಗಳೂರಿನಲ್ಲಿದ್ದರು. ಆಗಾಗ್ಗೆ ನಾನು ಇವರನ್ನು ಭೇಟಿ ಮಾಡುತ್ತಿದ್ದೆ ; ಇವರ ಮನೆಯಲ್ಲಿ ಎಷ್ಟೋ ಸಲ ಕಾಫಿ ತಿಂಡಿ ಕೊಟ್ಟು ಉಪಚರಿಸುತ್ತಿದ್ದರು. ನಾನು ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಸೇರಿದ್ದನ್ನು ಇವರಿಗೆ ತಿಳಿಸಿದ್ದೆ. ಎಂಟು ಹತ್ತು ವರ್ಷವಾಗಿತ್ತು. ಒಂದು ದಿನ ಕಾಲೇಜಿಗೆ ಹೋಗುವಾಗ ದಾರಿಯಲ್ಲಿ ಸಿಕ್ಕಿದರು; ಎಂದಿನಂತೆ ಗೌರವದಿಂದ ಮಾತನಾಡಿಸಿದೆ; ಜತೆಯಲ್ಲಿ ಇನ್ನೊಬ್ಬರು ಸುಮಾರು ಐವತ್ತು ಅರುವತ್ತು ವರ್ಷದವರಿದ್ದರು. ನನ್ನ ತಮಿಳು ಮೇಷ್ಟ್ರು ಅವರಿಗೆ ನನ್ನನ್ನು ತೋರಿಸಿ, "ಇವರೇ ಅವರು" ಎಂದು ಹುಸಿನಕ್ಕರು. ಜತೆಯಲ್ಲಿದ್ದವರು ಕೂಡ ಒಂದು ರೀತಿಯಿಂದ ನನ್ನನ್ನು ನೋಡಿ ನಕ್ಕರು. ಇವರುಗಳ ಕಣ್ಣು ಸನ್ನೆ ಮತ್ತು ಮಾತಿನ ಧಾಟಿಯನ್ನು ನೋಡಿ ಏನೋ ನಡೆದಿರಬಹುದು ಎಂದುಕೊಂಡು ಕಾಲೇಜಿಗೆ ಹೋದೆ. ಮಧ್ಯಾಹ್ನದ ಅನಂತರ ಪ್ರಿನ್ಸಿಪಾಲ್ ಆಡಿಯೋರವರು ನನಗೆ ಹೇಳಿ ಕಳುಹಿಸಿದರು. ನಾನು ಅವರ ಕೊಠಡಿಗೆ ಹೋದಾಗ, "ಬೆಳಗ್ಗೆ ತಮಿಳು ಉಪಾಧ್ಯಾಯರು, ಮದರಾಸು ವಿಶ್ವವಿದ್ಯಾಲಯದಲ್ಲಿ ನಿವೃತ್ತರಾದ ಒಬ್ಬ ಕನ್ನಡ ಅಧ್ಯಾಪಕರನ್ನು ಕರೆದುಕೊಂಡು ಬಂದಿದ್ದರು. ಅವರನ್ನು ನಮ್ಮ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಿ ಎಂದು ಒತ್ತಾಯ ಮಾಡಿದರು. ಅವರ ಪಾಂಡಿತ್ಯವನ್ನು ಹೊಗಳಿದರು. ಮದರಾಸು ವಿಶ್ವವಿದ್ಯಾಲಯದಲ್ಲಿ ಇದ್ದರು ಎಂದರೆ ಅವರು ಎಂಥ ದೊಡ್ಡ ಸಾಹಿತಿಗಳು ಎಂದು ತಿಳಿಯಿರಿ ಎಂದು ಹೇಳಿದರು. I don`t want to spoil the career of the young man ಎಂದು ಅವರಿಗೆ ಹೇಳಿಕಳುಹಿಸಿದೆ" ಎಂದರು ಪ್ರಿನ್ಸಿಪಾಲರು. ಅವರು ನನ್ನ ಏಳಿಗೆಗೆ ಧಕ್ಕೆ ತರುವಂತೆ ಅವರನ್ನು ನನ್ನ ಮೇಲೆ ಪ್ರಾಧ್ಯಾಪಕ ಎಂದು ನೇಮಿಸಿಕೊಳ್ಳಲು ಬಯಸಲಿಲ್ಲ. ಪ್ರಿನ್ಸಿಪಾಲರಿಗೆ ನನ್ನ ಬಗ್ಗೆ ಇದ್ದ ನಂಬಿಕೆ ಕಂಡು ಹರ್ಷಿಸಿದೆ.

a a a

ಫಿಲೋಮಿನಾ ಕಾಲೇಜಿನಲ್ಲಿ ನನ್ನ ಜತೆಗಿದ್ದ ಅಧ್ಯಾಪಕರೆಲ್ಲ ದಕ್ಷರೂ, ಸಮರ್ಪಣ ಮನೋಭಾವದಿಂದ ಕೆಲಸ ಮಾಡುವವರೂ ಆಗಿದ್ದು, ಅಧ್ಯಾಪಕವೃಂದವೆಲ್ಲ ಒಂದು ಕುಟುಂಬದಂತೆ ಇದ್ದೆವು. ಹೀಗಿರಲು ಒಂದು ಸಲ ಕಾಲೇಜಿನ ಆಡಳಿತ ವರ್ಗಕ್ಕೂ, ಅಧ್ಯಾಪಕ ವೃಂದಕ್ಕೂ ಒಂದು ಭಿನ್ನಾಭಿಪ್ರಾಯ ಉಂಟಾಗಿ ಅಧ್ಯಾಪಕರು ಮುಷ್ಕರ ನಡೆಸಬೇಕಾಗಿ ಬಂದಿತು.

ಅದುವರೆಗೆ ಮೈಸೂರು ರಾಜ್ಯದಲ್ಲಿ ಎಲ್ಲೂ ಅಧ್ಯಾಪಕರ ಮುಷ್ಕರ ನಡೆದಿರಲಿಲ್ಲ. ಸೆಯಿಂಟ್ ಫಿಲೋಮಿನಾ ಕಾಲೇಜಿನ ಮುಷ್ಕರ ಒಂದು ಮೈಲಿಗಲ್ಲಾಯಿತು. ಈ ಮುಷ್ಕರದ ಬಹುದೊಡ್ಡ

ಪ್ರಯೋಜನವೆಂದರೆ ಮೈಸೂರು ವಿಶ್ವವಿದ್ಯಾನಿಲಯವು ಖಾಸಗಿ ಕಾಲೇಜುಗಳ ಅಧ್ಯಾಪಕರ ಸೇವೆ, ಸಂಬಳ, ಸಾರಿಗೆ, ಸಿಬ್ಬಂದಿ ಮತ್ತು ಅಧ್ಯಾಪಕರ ನೇಮಕಾತಿ ಮೊದಲಾದ ಹಲವು ವ್ಯಾಪಕ ವಿಷಯಗಳನ್ನು ಒಳಗೊಂಡಂತೆ ನಿಯಮಗಳನ್ನು ರೂಪಿಸಿ ಅವುಗಳನ್ನು ಖಾಸಗಿ ಕಾಲೇಜುಗಳು ಅನುಸರಿಸುವುದನ್ನು ಕಡ್ಡಾಯ ಮಾಡಿದ್ದು. ಇದರಿಂದ ಖಾಸಗಿ ಕಾಲೇಜುಗಳ ಆಡಳಿತ ನಿರ್ವಹಣೆಯೇ ಮೊದಲಾದ ವಿಷಯಗಳಲ್ಲಿ ಏಕರೂಪತೆ ಏರ್ಪಟ್ಟಿತು. ಸರಕಾರಿ ಕಾಲೇಜುಗಳಲ್ಲಿ ಕೊಡಮಾಡುವ ಸಂಬಳ ಸಾರಿಗೆಗಳು ಜಾರಿಗೆ ಬಂದುವು. ಮುಂದೆ ಸರಕಾರವು ಖಾಸಗಿ ಕಾಲೇಜು ಮತ್ತು ಶಾಲೆಗಳ ಅಧ್ಯಾಪಕರಿಗೂ ನಿವೃತ್ತಿ ವೇತನವನ್ನು ಮಂಜೂರು ಮಾಡಿತು.

೧೬. ಮೂವತ್ತು ವರ್ಷಗಳಲ್ಲಿ

ಸೆಯಿಂಟ್ ಫಿಲೋಮಿನಾ ಕಾಲೇಜಿನಲ್ಲಿ ಅಧ್ಯಾಪಕರು ಪರಸ್ಪರ ಪ್ರೀತಿಯಿಂದ, ಒಂದಾಗಿ ವ್ಯವಹರಿಸುತ್ತಿದ್ದರು ಎಂದು ಹಿಂದಿನ ನಿರೂಪಣೆಯಿಂದ ಸ್ಪಷ್ಟವಾಗುವುದು. ಅಲ್ಲಿ ನನಗೆ ಆಪ್ತರಾದ ಕೆಲವು ಅಧ್ಯಾಪಕರಿದ್ದರು. ಅವರಲ್ಲಿ ಸಂಸ್ಕೃತದ ಜಿ.ಎನ್. ಚಕ್ರವರ್ತಿ, ಹಿಂದಿ ವಿಭಾಗದ ಎಂ.ಕೆ. ರಾಜಗೋಪಾಲ, ಪ್ರಾಣಿಶಾಸ್ತ್ರ ವಿಭಾಗದ ಟಿ.ಆರ್. ಬಾಲಕೃಷ್ಣ ಮೊದಲಾದವರು ಪ್ರಮುಖರು. ಶ್ರೀ ಗೋಪಾಲಕೃಷ್ಣ ಅಡಿಗರು ಮಹಾರಾಜಕಾಲೇಜಿನಲ್ಲಿ ನನ್ನ ಒಡನಾಡಿಗಳಾಗಿದ್ದು, ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಂದರು. ಸುಮಾರು ಹತ್ತು ವರ್ಷಗಳ ಕಾಲ ನಮ್ಮ ಕಾಲೇಜಿನಲ್ಲಿ ಸೇವೆ ಸಲ್ಲಿಸಿದರು. ಗೋಪಾಲಕೃಷ್ಣ ಅಡಿಗರವರು ನನಗೆ ಆತ್ಮೀಯರಾಗಿದ್ದು ಎಲ್ಲ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು ಮತ್ತು ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಅವರ ಭಾಷಣಗಳನ್ನು ಕಾಲೇಜಿನಲ್ಲಿ ಏರ್ಪಡಿಸುತ್ತಿದ್ದೆ. ಅವರ ಸಾಹಿತ್ಯಸಂಬಂಧೀ ಸಭೆಗಳಲ್ಲಿ ಭಾಗವಹಿಸುತ್ತಿದ್ದೆ. ಇದರಿಂದ ಅವರ ಕಾವ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಯಿತು. ಕನ್ನಡಸಾಹಿತ್ಯದ ಇತಿಹಾಸದಲ್ಲಿ ಸಾಹಿತ್ಯಕ್ಕೆ ಅವರು ಇತ್ತ ಕೊಡುಗೆಯ ಮಹತ್ತ್ವವನ್ನು ಅರಿತೆ. ಕಾಲೇಜಿನ ವಿದ್ಯಾರ್ಥಿಗಳಿಗೂ ಅವರ ಮಹತ್ತಿನ ಪರಿಚಯವಾಗಲು ನೆರವಾದೆ. ಅಡಿಗರನ್ನು ನವ್ಯಕಾವ್ಯದ ಜನಕನೆಂದು ಕನ್ನಡನಾಡು ಪುರಸ್ಕರಿಸಿದೆ.

ಸೆಯಿಂಟ್ ಫಿಲೋಮಿನಾ ಕಾಲೇಜಿನ ಮೂವತ್ತು ವರ್ಷಗಳ ಸೇವಾವಧಿಯಲ್ಲಿ, ನಿರಂತರ ಅಧ್ಯಯನಶೀಲನಾಗಿ ನನ್ನ ವಿದ್ಯಾರ್ಥಿಗಳ ಜತೆ ನಾನೂ ಒಬ್ಬ ವಿದ್ಯಾರ್ಥಿಯಂತೆ ಇದ್ದೆ. ಅಧ್ಯಾಪಕನು ವಿದ್ಯಾರ್ಥಿಗಳ ಸಂಪರ್ಕದಲ್ಲಿ ಅವರ ಏಳ್ಗೆಯನ್ನೂ ಕಾಣುತ್ತಾನೆ ಮತ್ತು ತನ್ನ ಉನ್ನತಿಯನ್ನೂ ಸಾಧಿಸುತ್ತಾನೆ. ಈ ಅವಧಿಯಲ್ಲಿ ಹಲವು ಸಾಹಿತ್ಯಿಕ ಲೇಖನಗಳನ್ನೂ, ಕೆಲವು ಗ್ರಂಥಗಳನ್ನೂ ಬರೆದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಯಾದ 'ಪ್ರಬುದ್ಧ ಕರ್ಣಾಟಕ', ವಯಸ್ಕರ ಶಿಕ್ಷಣ ಸಮಿತಿಯ 'ಪುಸ್ತಕ ಪ್ರಪಂಚ', ಬೆಂಗಳೂರಿನಿಂದ ಮಾನ್ಯರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಪ್ರಕಟಿಸುತ್ತಿದ್ದ 'ಜೀವನ' ಮೊದಲಾದ ಪ್ರತಿಷ್ಠಿತ ಪತ್ರಿಕೆಗಳಿಗೆ ಲೇಖನ ಬರೆದುಕೊಡುತ್ತಿದ್ದೆ. ಈ ಪತ್ರಿಕೆಗಳಲ್ಲಿ ಪುಸ್ತಕಗಳ ವಿಮರ್ಶೆಗಳನ್ನು ಬೇಕಾದಷ್ಟು ಮಾಡಿದೆ. ಎ.ಆರ್. ಕೃಷ್ಣಶಾಸ್ತ್ರಿಗಳ ಸ್ಮಾರಕ ಗ್ರಂಥ, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ, ದೇ.ಜ.ಗೌ. ಸಂಭಾವನಾ ಗ್ರಂಥ ಮೊದಲಾದುವುಗಳಿಗೆ ಲೇಖನಗಳನ್ನು ಬರೆದುಕೊಟ್ಟಿದ್ದೇನೆ. ವಿಶ್ವವಿದ್ಯಾಲಯ ಪ್ರಕಟಿಸಿದ ವಿಶ್ವಕೋಶದಲ್ಲಿ ಕನ್ನಡ ಕಾದಂಬರಿಗಳ ಬಗ್ಗೆ ಬೃಹತ್ ಲೇಖನ ಪ್ರಕಟವಾಗಿದೆ. ಇದೇ ಸಮಯದಲ್ಲಿ ಇಂಗ್ಲಿಷಿನಿಂದ ಭಾಷಾಂತರ ಕೃತಿಗಳಾದ ಡಾ. ಶ್ರೀದೇವಿಯವರ 'ಭಾರತೀಯ ಮಹಿಳೆಯರ ಮುನ್ನಡೆ' (A Century of Indian Womanhood), ವ್ಯಾಲೆಂಟಿನ್ ಕಾತಯೇವ್‌ರವರ ಕಾದಂಬರಿ 'ಬಿಳಿಕಾಯಿ' (White sail gleams) ಮತ್ತು 'ತೋಟದ ಮನೆ' (Cottage on the steppe) ಪ್ರಕಟವಾದುವು. ಎರಡು ವರ್ಷಗಳ ಕಾಲ ಭಾರತೀಯ ಕೇಂದ್ರ ಅಡಕೆ ಸಮಿತಿ ಪ್ರಕಟಿಸುವ ವೈಜ್ಞಾನಿಕ ಪತ್ರಿಕೆ 'ಅಡಕೆ'ಗೆ ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರ ಕಾರ್ಯ ಮಾಡಿದೆ. ಚೌಂಡರಸ ಮತ್ತು ತೊರವೆಯ ನರಹರಿ ಎಂಬ ವಿಮರ್ಶಾ ಗ್ರಂಥಗಳು ಈ ಅವಧಿಯಲ್ಲಿ ಪ್ರಕಟವಾದುವು. 'ಮರುಳು ಮದುವೆ' 'ಠಕ್ಕೂರಾಯನ ಠೀವಿ' ಎಂಬ ನಾಟಕಗಳು ಪ್ರಕಟವಾದುವು. ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ನಗುವನಂದ, ವಾಣಿ, ವಾಹಿನಿ ಮೊದಲಾದ ಪತ್ರಿಕೆಗಳಿಗೆ ೧೯೪೨ ರಿಂದ ೧೯೪೬ರವರೆಗೆ ಕೆಲವು ಕಥೆಗಳು ಮತ್ತು ನಗೆಬರಹಗಳನ್ನು ಬರೆದೆ. ನನ್ನ ಲೇಖನವ್ಯವಸಾಯಕ್ಕೆ ಇದು ನಾಂದಿ ಎನ್ನಬಹುದು.

ಕನ್ನಡಸಾಹಿತ್ಯಪರಿಷತ್ತು ಪ್ರಕಟಿಸಲು ಯೋಜನೆ ಹಾಕಿಕೊಂಡಿದ್ದ ಕನ್ನಡಕೋಶಕ್ಕೆ ಪ್ರಾಚೀನ ಕಾವ್ಯಗಳಿಂದ ಪದಗಳನ್ನು ಸಂಗ್ರಹಿಸುವ ಕಾರ್ಯವನ್ನು ನಾಲ್ಕಾರು ವರ್ಷಗಳು ನಡೆಸಿಕೊಟ್ಟೆ. ಬೆಂಗಳೂರಿನಲ್ಲಿ

ಬಸವನಗುಡಿಯಲ್ಲಿ ಇದ್ದಾಗ ಪದಗಳ ಸಂಗ್ರಹ ಕೆಲಸವನ್ನು ಪ್ರಾರಂಭಿಸಿದೆ. ಬೆಳಗ್ಗೆ ಆರು ಗಂಟೆಗೆಲ್ಲ ಪರಿಷತ್ತಿಗೆ ಹೊರಡುತ್ತಿದ್ದೆ. ಏಳು ಗಂಟೆಯಿಂದ ಒಂಬತ್ತು ಗಂಟೆಯವರೆಗೆ ಪ್ರಾಚೀನ ಕಾವ್ಯವೊಂದನ್ನು ಓದಿ, ಅದರಿಂದ ನಿಯಮಾನುಸಾರ ಪದಗಳನ್ನು ಸಂಗ್ರಹಿಸಿ ಅದಕ್ಕೆ ಒದಗಿಸಿದ ಚೀಟಿಗಳಲ್ಲಿ- ಆರಿಸಿದ ಪದ, ಅದರ ಆಕರ ಮತ್ತು ಪದ ಬರುವ ಸಂದರ್ಭಗಳನ್ನು ಬರೆಯಬೇಕಾಗಿತ್ತು. ಆಮೇಲೆ ಕಛೇರಿಗೆ ಹೋಗುತ್ತಿದ್ದೆ.

ಸೇಯಿಂಟ್ ಫಿಲೋಮಿನಾ ಕಾಲೇಜಿನಲ್ಲಿರುವಾಗ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪರವಾಗಿ ಹಲವು ಊರುಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ಭಾಷಣಗಳನ್ನು ಮಾಡಿದೆ. ಇದರಿಂದ ಮೈಸೂರು ರಾಜ್ಯದ ಹಲವು ಹಳ್ಳಿಗಳು ಮತ್ತು ಪಟ್ಟಣಗಳನ್ನು ಕಾಣುವ ಮತ್ತು ಅಲ್ಲಿಯ ಜನಗಳೊಂದಿಗೆ ಬೆರೆಯುವ ಅವಕಾಶ ಲಭ್ಯವಾಯಿತು. ದಕ್ಷಿಣಕನ್ನಡಜಿಲ್ಲೆಯ ಮಂಗಳೂರು, ಮೂಡಬಿದ್ರೆ ಮೊದಲಾದ ಹಲವು ಸ್ಥಳಗಳನ್ನು ಮೊದಲಿಗೆ ನೋಡುವಂತಾಯಿತು.

ಮೆಚ್ಚಬೇಕಾದ ವಿಷಯವೆಂದರೆ ಇಲ್ಲಿನ ನಮ್ಮ ಕಾಲೇಜು ಪ್ರಿನ್ಸಿಪಾಲರಾಗಲೀ, ಬಿಷಪ್‌ರವರಾಗಲೀ, ಕ್ರಿಶ್ಚಿಯನ್‌ರ ಆಡಳಿತದ ಕಾಲೇಜಾದರೂ ಜಾತಿಮತದ ಭೇದಭಾವವನ್ನು ಎಂದೂ ತೋರ್ಪಡಿಸಲಿಲ್ಲ. ಎಲ್ಲ ವಿಷಯದಲ್ಲೂ ಪಾರದರ್ಶಕತೆ ಇತ್ತು. ಕ್ರಿಶ್ಚಿಯನ್ ಅಧ್ಯಾಪಕರು ಅಥವಾ ಸಿಬ್ಬಂದಿಯ ಬಗ್ಗೆ ಸಹಾನುಭೂತಿಯಿದ್ದರೂ, ಎಲ್ಲೂ ನಿಯಮವನ್ನು ಮೀರಿ ನಡೆಯಲಿಲ್ಲ ಎಂಬ ಹೆಗ್ಗಳಿಕೆ ಸೇಯಿಂಟ್ ಫಿಲೋಮಿನಾ ಕಾಲೇಜಿನದಾಗಿತ್ತು. ನನಗೆ ಕಾಲಕಾಲಕ್ಕೆ ಅಸಿಸ್ಟೆಂಟ್ ಪ್ರೊಫೆಸರ್, ರೀಡರ್, ಪ್ರೊಫೆಸರ್ ಹುದ್ದೆಗಳು ದೊರೆತುದರಿಂದ ಉದ್ಯೋಗದಲ್ಲಿ ಯಾವ ಕೊರತೆಯೂ ಆಗಲಿಲ್ಲ ಎಂಬುದು ತೃಪ್ತಿ ತಂದ ವಿಷಯ.

೧೭. ನನ್ನ ಕುಟುಂಬ

ನಮ್ಮ ತಂದೆಯವರ ಹೆಸರು ಕೆ. ಶಾಮಣ್ಣ, ತಾಯಿ ಕಾವೇರಮ್ಮ. ಉಪಾಧ್ಯಾಯರಾಗಿ ನಿವೃತ್ತರಾಗಿದ್ದ ನಮ್ಮ ತಂದೆ, ಮತ್ತು ನಮ್ಮ ತಾಯಿ ಮೈಸೂರಿನಲ್ಲಿ ನಾನು ನೆಲೆಸಿದ ಅನಂತರ ನನ್ನ ಮನೆಯಲ್ಲಿಯೇ ಇದ್ದು ತುಂಬುಬಾಳನ್ನು ಬಾಳಿದರು. ತಂದೆಯವರಿಗೆ ಕೆಲಕಾಲದ ಮೇಲೆ ಕಣ್ಣಿನಲ್ಲಿ ಪೊರೆ ಬೆಳೆಯಲಾರಂಭಿಸಿತು. ಕಣ್ಣಿನ ಆಪರೇಷನ್ ಆಯಿತು. ಆಸ್ಪತ್ರೆಯಲ್ಲಿರುವಂತೆಯೇ, ಶಸ್ತ್ರಚಿಕಿತ್ಸೆ ಆದ ಏಳನೆಯ ದಿವಸ ಪಾರ್ಶ್ವವಾಯು ಬಡಿಯಿತು. ಆಸ್ಪತ್ರೆಯಲ್ಲೇ ಇದ್ದುದರಿಂದ ತಕ್ಷಣ ಚಿಕಿತ್ಸೆ ದೊರೆತು ಗುಣಮುಖರಾದರು ; ಅವರ ಕಣ್ಣು ಮಾತ್ರ ಹಾಳಾಯಿತು. ಇದಾದ ಆರೇಳು ವರ್ಷಗಳ ಅನಂತರ ಎರಡನೆಯ ಬಾರಿ ಪಾರ್ಶ್ವವಾಯು ಬಂದು ಅದು ತೀವ್ರವಾದುದರಿಂದ ಚೇತರಿಸಿಕೊಳ್ಳಲಾಗದೆ ೧೯೬೭ನೆಯ ಇಸವಿಯಲ್ಲಿ ನಿಧನರಾದರು. ನಮ್ಮ ತಂದೆಯವರ ನಿಧನದ ಸುಮಾರು ಎರಡು ವರ್ಷಗಳ ಅನಂತರ ನಮ್ಮ ತಾಯಿ ಹೃದಯಾಘಾತದಿಂದ ನಿಧನ ಹೊಂದಿದರು : ಕಾರ್ತಿಕ ಸೋಮವಾರಕ್ಕೆ ನಂಜನಗೂಡಿಗೆ ಹೋಗಬೇಕೆಂದು ಭಾನುವಾರ ಮಧ್ಯಾಹ್ನ ಊಟಮಾಡಿ, ಸುಮಾರು ನಾಲ್ಕು ಗಂಟೆ ಸಮಯದಲ್ಲಿ ಮನೆಯಿಂದ ಹೊರಟರು. ಸುಮಾರು ಹದಿನೈದು ನಿಮಿಷಗಳು ಕಳೆದಿರಬಹುದು, ಆಗಾಗ್ಗೆ ನನ್ನ ಮನೆಗೆ ಬಂದು ಗಿಡಗಳಿಗೆ ಗೊಬ್ಬರ ಇತ್ಯಾದಿ ಕೊಡುತ್ತಿದ್ದವನು, ಮನೆಗೆ ಬಂದು, "ತಾಯಿಯವರು ರಾಮಕೃಷ್ಣಶಾಲೆಯ ಗೇಟಿನ ಬಳಿ ಮಲಗಿಬಿಟ್ಟಿದ್ದಾರೆ. ಅವರು ನಡೆದುಕೊಂಡು ಬರುತ್ತಿದ್ದವರು ಅಲ್ಲಿಯೇ ಕುಳಿತುಬಿಟ್ಟರು" ಎಂದು ವರದಿ ಮಾಡಿದ. ತಕ್ಷಣ ಹೋಗಿ ನೋಡಿದಾಗ ಆಗಲೇ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು. ಅತ್ಯಂತ ತೀವ್ರವಾದ ಹೃದಯಾಘಾತವಾಗಿ ಕೂಡಲೇ ಮೃತಪಟ್ಟಿದ್ದಾರೆ ಎಂದು ವೈದ್ಯರು ಹೇಳಿದರು. ಯಾವ ಕಾಯಿಲೆ-ಕಸಾಲೆ ಇಲ್ಲದೆ, ನರಳದೆ, ಸುಖಮೃತ್ಯು ಬಂದು ಬದುಕಿಗೆ ವಿರಾಮ ಹೇಳಿದುದರಿಂದ ನಿಜವಾಗಿ ಪುಣ್ಯ ಶಾಲಿಗಳೆಂದು ಹೇಳಬಹುದು.

ನಮ್ಮ ತಂದೆ-ತಾಯಿಯರಿಗೆ ಮೂರು ಜನ ಮಕ್ಕಳು. ನಾನು ಹಿರಿಯಮಗ, ಎರಡನೆಯವನು ನನ್ನ ತಮ್ಮ ಕೆ.ಎಸ್. ಕೇಶವಮೂರ್ತಿ ಮತ್ತು ಮೂರನೆಯವಳು ಕೆ.ಎಸ್. ನಾಗಲಕ್ಷ್ಮಿ.

ನನ್ನ ತಮ್ಮ ಕೆ.ಎಸ್. ಕೇಶವಮೂರ್ತಿ ಬೆಂಗಳೂರಿನಲ್ಲಿ ಓದಿ ೧೯೪೪ನೆಯ ಇಸವಿಯಲ್ಲಿ ಬಿ.ಕಾಂ., ಪದವಿ ಪಡೆದನು. ೧೯೪೭ನೆಯ ಇಸವಿಯಲ್ಲಿ ಹಳ್ಳಿಮೈಸೂರಿನ ವೆಂಕಟೇಶಾ ವಧಾನಿಗಳು ತಮ್ಮ ಮಗಳು ಚಿ।। ಸೌ।। ಸುಶೀಲಳನ್ನು ನನ್ನ ತಮ್ಮನಿಗೆ ತಂದುಕೊಳ್ಳಿ ಎಂದು ನಮ್ಮ ತಂದೆಯವರಲ್ಲಿ ಪ್ರಸ್ತಾಪಿಸಿದರು. ನನ್ನ ತಮ್ಮನು ಬಿ.ಕಾಂ., ಮುಗಿಸುವವರೆಗಿನ ವಿದ್ಯಾಭ್ಯಾಸದ ಖರ್ಚನ್ನು ವಹಿಸಿಕೊಳ್ಳುವುದಾಗಿಯೂ ಹೇಳಿದರು.

ಇದು ಒಪ್ಪಿಗೆ ಆಗಿ ೧೯೪೭ನೆಯ ಏಪ್ರಿಲ್‌ನಲ್ಲಿ ಮದುವೆ ವಧುವಿನ ಸ್ವಗೃಹದಲ್ಲಿ ಹಳ್ಳಿಮೈಸೂರಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಬಿ.ಕಾಂ., ಪದವಿ ಪಡೆದ ಕೇಶವಮೂರ್ತಿ ಕೆಲವು ಸಮಯ ಹುಣಸೂರಿನ ಪ್ರೌಢಶಾಲೆಯಲ್ಲಿ ಅಧ್ಯಾಪಕವೃತ್ತಿಯನ್ನು ಕೈಗೊಂಡ. ಸುಮಾರು ಒಂದು ವರ್ಷದಲ್ಲೇ ಮೈಸೂರು ಸರಕಾರದ ಇಲಾಖೆಯಲ್ಲಿ ಅವನಿಗೆ ಆಡಿಟರ್ (ಲೆಕ್ಕ ಪರಿಶೋಧಕನ) ಕೆಲಸ ದೊರಕಿತು. ಕೆಲವು ವರ್ಷಗಳು ಸಹಕಾರ ಇಲಾಖೆಯಲ್ಲಿ ಹುಣಸೂರು ಮೊದಲಾದ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದ. ಈ ಸಮಯದಲ್ಲಿ ಮೈಸೂರು ಸರಕಾರದವರು ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳ ಕೆಲಸಕ್ಕೆ ಒಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದರು. ಅದರಲ್ಲಿ ಎರಡನೆಯ ಸ್ಥಾನವನ್ನು ಪಡೆದು ಕ್ಷೇತ್ರ ಅಭಿವೃದ್ಧಿ ಅಧಿಕಾರಿಯಾಗಿ ನೇಮಕಗೊಂಡನು. ಕಿತ್ತೂರು, ಕಾರವಾರ, ಬಿಜಾಪುರ, ಚನ್ನರಾಯಪಟ್ಟಣ, ಮೈಸೂರು ಮೊದಲಾದ ಸ್ಥಳಗಳಲ್ಲಿ ಸೇವೆ ಸಲ್ಲಿಸಿ, ಕೊನೆಯಲ್ಲಿ ಮದ್ದೂರು ಜಿಲ್ಲಾಧಿಕಾರಿಗಳ ಸಹಾಯಕನಾಗಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಯಲ್ಲಿದ್ದು ನಿವೃತ್ತನಾದ.

ನನ್ನ ತಂಗಿ ನಾಗಲಕ್ಷ್ಮಿಯ ಪತಿಗೆ ಅಕಾಲಮರಣ ಸಂಭವಿಸಿತು. ಅನಂತರ ಅವಳಿಗೆ ಶಿಕ್ಷಕ ತರಬೇತಿ ಕೊಡಿಸಿದೆವು. ಸರಕಾರಿ ಶಾಲೆಯ ಅಧ್ಯಾಪಕಿಯಾಗಿ ದುಡಿದು ನಿವೃತ್ತಳಾಗಿ ಈಗ ಸಮಾಜಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದಾಳೆ.

ನನಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ನನ್ನ ಹಿರಿಯ ಮಗ ಚಿ|| ಕೆ.ಎಸ್. ಬಾಲಚಂದ್ರ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್‌ನಲ್ಲಿ ಬಿ.ಇ., ಪದವಿ ಪಡೆದು ಅನಂತರ ಭೂಪಾಲದ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಂ.ಟೆಕ್., ಪದವಿ ಪಡೆದನು. ಮೈಸೂರಿನಲ್ಲಿ ಶ್ರೀಮತಿ ನಿರಂಜನಿಯೊಂದಿಗೆ ಮದುವೆ ಆಗಿ, ಮೊದಲು ಎನ್.ಟಿ.ಪಿ.ಸಿ. ನಂತರ ನಾಗರ್ಜುನ ಪವರ್ ಕಾರ್ಪೊರೇಶನ್‌ನಲ್ಲಿ ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿ ಕೆಲಸ ನಿರ್ವಹಿಸಿ ಈಗ ಬೆಂಗಳೂರಿನ ಟಾಟಾ ಕನ್ಸಲ್ಟೆಂಟ್‌ನಲ್ಲಿದ್ದಾನೆ. ಅವನು ಆಂಧ್ರಪ್ರದೇಶದ ರಾಮಗುಂಡಂನಲ್ಲಿ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮದಲ್ಲಿ ಇಂಜನಿಯರಾಗಿ ಸೇವೆ ಸಲ್ಲಿಸುತ್ತಿದ್ದಾಗ ನಾವು ಅವನ ಜತೆ ಕೆಲವು ಕಾಲ ಇದ್ದೆವು. ಆ ಸಮಯದಲ್ಲಿ ಹೈದರಾಬಾದ್, ನಾಗಾರ್ಜುನ ಸಾಗರ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದೆವು. ಮುಂದೆ ಅವನು ಪಾಣಿಪತ್ ಸಮೀಪದ ಕರ್ನಾಲ್‌ನಲ್ಲಿದ್ದಾಗ ಕುರುಕ್ಷೇತ್ರ, ಹೃಷಿಕೇಶ, ಹರಿದ್ವಾರಗಳನ್ನು ಸಂದರ್ಶಿಸಿದೆವು.

ನನ್ನ ಕಿರಿಯ ಮಗ ಕೆ. ಶಾಮಸುಂದರ. ಇವನಿಗೆ ಇವನ ಅಜ್ಜ ಶಾಮಣ್ಣನವರ ನೆನಪು ಇರುವಂತೆ ಶಾಮ ಎಂಬ ಹೆಸರಿಗೆ ಸುಂದರ ಎಂಬ ಹೆಸರನ್ನು ಜೋಡಿಸಿ ಶಾಮಸುಂದರ ಎಂದು ನನ್ನ ಪತ್ನಿ ಒಳ್ಳೆಯ ಹೆಸರನ್ನು ಕೊಟ್ಟಿದ್ದು ಎಲ್ಲರಿಗೂ ಮೆಚ್ಚುಗೆಯಾಯಿತು. ಇವನು ಪ್ರೀಯೂನಿವರ್ಸಿಟಿ ಮುಗಿಸಿದಾಗ ಇಂಜಿನಿಯರಿಂಗ್ ಕಾಲೇಜು ಸೇರಲು ವಯಸ್ಸು ಕಡಮೆ ಇದ್ದುದರಿಂದ ಸೆಯಿಂಟ್ ಫಿಲೋಮಿನಾ ಕಾಲೇಜಿಗೆ ಸೇರಿ ಬಿ.ಎಸ್‌ಸಿ., ಮಾಡಿದ. ವಿಶೇಷವೆಂದರೆ ನಮ್ಮ ಕಾಲೇಜಿನಲ್ಲಿ ಕನ್ನಡ ತರಗತಿಗಳಲ್ಲಿ ನನ್ನ ಪಾಠವನ್ನು ಕೇಳುವಂತಾಯಿತು. ತನ್ನ ಬೋಧನಾಶಕ್ತಿಗೆ ತನ್ನ ಮಗನಿಂದಲೇ ಸರ್ಟಿಫಿಕೇಟು ಪಡೆಯುವ ಅವಕಾಶ ಎಷ್ಟು ಜನಕ್ಕೆ ಲಭ್ಯ? ಅನಂತರ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ಸೇರಿ ಬಿ.ಇ., ಮುಗಿಸಿದ. ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಬೊಂಬಾಯಿನ ಷವಾಯ್ ಸರೋವರದ ಬಳಿ ಇರುವ ನಿಟ್ಟಿ (National Institute for Training Industrial Engineers) ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿ ಪಡೆದನು. ಕಾಲೇಜಿಗೆ ಬಂದು ಭಾರತ ಸರಕಾರದ ಯೋಜನಾ ಇಲಾಖೆಯವರು ಇವನನ್ನು ಅಲ್ಲಿಯ ಉದ್ಯೋಗಕ್ಕೆ ಆರಿಸಿಕೊಂಡರು. ಅವನು ದೆಹಲಿಯಲ್ಲಿದ್ದ ಸಮಯದಲ್ಲಿ ಎರಡು ಬಾರಿ ನಾನು ನನ್ನ ಪತ್ನಿ ಅಲ್ಲಿಗೆ ಹೋಗಿದ್ದೆವು. ಮೊದಲನೆಯ ಸಲ ನಾಲ್ಕು ತಿಂಗಳೂ, ಎರಡನೆಯ ಸಲ ಹತ್ತು ತಿಂಗಳೂ ಅಲ್ಲಿ ಇದ್ದೆವು. ಆ ಸಮಯದಲ್ಲಿ ದೆಹಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದೆವು; ಬದರಿ, ಕಾಶ್ಮೀರ, ಕಾಶಿ, ಕಲ್ಕತ್ತ ದಕ್ಷಿಣೇಶ್ವರ, ಜಯಪುರ, ಮುಸ್ಸೋರಿ, ನೈನಿತಾಲ್ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದೆವು. ಮುಂದೆ ಅವನು ಯೋಜನಾ ಇಲಾಖೆಯ ಕೆಲಸವನ್ನು ಬಿಟ್ಟು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಸಂಸ್ಥೆ ಸೇರಿ ಅಲ್ಲಿಂದ ಆಸ್ಟ್ರೇಲಿಯಾಗೆ ಹೋದ. ಆಸ್ಟ್ರೇಲಿಯಾದಿಂದ ಅಮೇರಿಕಕ್ಕೆ ಹೋಗಿ ಪಿ.ಸಿ.ಎಸ್., ಎಚ್.ಬಿ.ಒ., ಬ್ಲೂಷೀಲ್ಡ್ ಮೊದಲಾದ ಕಂಪೆನಿಗಳಲ್ಲಿ ಕೆಲಸ ಮಾಡಿ ಈಗ SAKS ಎಂಬ ಡಿಪಾರ್ಟ್‌ಮೆಂಟ್ ಸ್ಟೋರ್‌ಗಳ ಸಮೂಹದ ಮುಖ್ಯ ಕಛೇರಿಯಲ್ಲಿ ಹಲವಾರು ಯೋಜನೆಗಳ ಉಸ್ತುವಾರಿ ಮಾಡುತ್ತಿದ್ದು, ಈಗ ಪೆನ್ಸಿಲ್ವೇನಿಯಾದಲ್ಲಿ ಬಾಂಟಿಂಗ್ ಎಂಬ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾನೆ. ಅಟ್ಲಾಂಟಾದಲ್ಲಿ ಹೇಮಾ ಎಂಬುವಳನ್ನು ಮದುವೆಯಾಗಿ ಇಬ್ಬರು ಮಕ್ಕಳೊಡನೆ ಸಂಸಾರ ಮಾಡುತ್ತಿದ್ದಾನೆ. ನಾನೂ ನನ್ನ ಪತ್ನಿಯೂ ಎರಡು ಸಲ ಅಮೇರಿಕಕ್ಕೆ ಹೋಗಿ

ಅಲ್ಲಿಯ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದೆವು. ಶಾಮಸುಂದರನು ಚುರುಕುಬುದ್ಧಿಯುಳ್ಳವನು. ಯಾವ ಕೆಲಸವನ್ನೂ ನಿಯಮಬದ್ಧವಾಗಿ ಮಾಡುವವನು. ಗಣಕಯಂತ್ರದ ತಂತ್ರಾಂಶ ಕಾರ್ಯದಲ್ಲಿ ಉತ್ತಮವಾದ ಹೆಸರನ್ನು ಸಂಪಾದಿಸಿದ್ದಾನೆ.

ನನ್ನ ಮಗಳು ಪುಷ್ಪಲತಾ ಬಿ.ಎಸ್‌ಸಿ., ಪರೀಕ್ಷೆಯನ್ನು ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಮುಗಿಸಿ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾರತೀಯ ತೌಲನಿಕ ಸಾಹಿತ್ಯ ಅಧ್ಯಯನದ ವಿಷಯದಲ್ಲಿ ಡಿಪ್ಲೋಮಾ ಪಡೆದಳು. ಬೊಂಬಾಯಿಯ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ ಎಂಬ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಡಾ। ರಾಜಾರಾಮರಾವ್ ಅವರ ಮಗ ಡಾ। ಚಂದ್ರಮೋಹನ್ ಅವರನ್ನು ವರಿಸಿ ಅವರು ಸ್ವತಂತ್ರವಾಗಿ ನಡೆಸುತ್ತಿದ್ದ ಕಾರ್ಖಾನೆಯಲ್ಲಿ ಜತೆಜತೆಯಾಗಿ ದುಡಿಯುತ್ತಿದ್ದಳು. ಅಪಘಾತದಲ್ಲಿ ದುರ್ದೈವದಿಂದ ಪತಿಯು ಮಡಿದಾಗ ಧೈರ್ಯಗೆಡದೆ ಪತಿಯು ನಡೆಸುತ್ತಿದ್ದ ಸಣ್ಣ ಕೈಗಾರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾಳೆ. ಅವಳಿಗೆ ಮೊದಲಿನಿಂದಲೂ ಸಂಗೀತವೆಂದರೆ ಮಹಾಪ್ರಾಣ. ಮೈಸೂರಿನಲ್ಲಿ ಮೊದಲು ಸಿಂಹ ಎಂಬುವರಿಂದಲೂ, ಅನಂತರ ಪ್ರೇಮಚಂದ್ ಎಂಬ ಸಿತಾರ್ ವಿದ್ವಾಂಸರಿಂದಲೂ ಸಿತಾರ್ ಕಲಿತಳು. ಆಸ್ಥಾನ ವಿದ್ವಾಂಸರಾದ ತಬಲ ವಿದ್ವಾನ್ ಡಿ. ಸೀನಪ್ಪನವರು ಸಿತಾರ್‌ಗೆ ತಬಲ ಸಾಥಿಯಾಗಿ ದೊರೆತುದರಿಂದ ಸಿತಾರ್ ವಾದನದಲ್ಲಿ ಒಳ್ಳೆಯ ನೈಪುಣ್ಯವನ್ನು ಪಡೆದುಕೊಂಡಳು. ಬೆಂಗಳೂರಿಗೆ ಬಂದ ಮೇಲೆ ಉಸ್ತಾದ್ ಬಾಲೇಖಾನ್ ಎಂಬ ಪ್ರಸಿದ್ಧ ವಿದ್ವಾಂಸರಲ್ಲಿ ಸಿತಾರ್ ಕಲಿತು, ಸಿತಾರ್‌ವಾದನದಲ್ಲಿ ಪ್ರಭುತ್ವವನ್ನು ಪಡೆದಿದ್ದಾಳೆ. ಬೆಂಗಳೂರಿನಲ್ಲಿ ಬಸವನಗುಡಿಗೆ ವಾಸ ಬಂದ ಮೇಲೆ ರುಕ್ಮಾ ನಾರಾಯಣ್ ಅವರ ಮನೆಯಲ್ಲಿ ನಡೆಯುವ ಸಂಗೀತದ ತರಗತಿಗಳು, ಭರತನಾಟ್ಯದ ತರಗತಿಗಳನ್ನು ಅವಲೋಕಿಸುತ್ತ ಕಲಾಕ್ಷಿತಿ ಎಂಬ ಸಂಸ್ಥೆಯಲ್ಲಿ ವಿಶೇಷ ಆಸಕ್ತಿ ವಹಿಸಿ ಅಲ್ಲಿಯ ವ್ಯವಸ್ಥೆಯಲ್ಲಿ ಭಾಗವಹಿಸುತ್ತಿದ್ದಾಳೆ. ಭರತನಾಟ್ಯದ ಪ್ರದರ್ಶನಕ್ಕೆ ನಾಟ್ಯದ ವಿವರಣೆ ಕೊಡುವುದರಲ್ಲಿ ನೈಪುಣ್ಯವನ್ನು ಸಂಪಾದಿಸಿದ್ದಾಳೆ. ಕಲೆ ಕೈಗಾರಿಕೆಗಳಲ್ಲಿ ಸಮನಾದ ಅರ್ಪಣಾ ಮನೋಭವವನ್ನು ಅವಳಲ್ಲಿ ಕಾಣಬಹುದು.

ಹೀಗೆ ಪ್ರತಿಭಾಶಾಲಿಗಳಾಗಿ ಉತ್ತಮ ಸಂಸ್ಕಾರಗಳನ್ನು ರೂಢಿಸಿಕೊಂಡು ಸುಸಂಸ್ಕೃತರಾದ ಮಕ್ಕಳ ಸ್ನೇಹಸಾಗರದಲ್ಲಿ ಮುಳುಗಿದ ನಮ್ಮ ಸಂಸಾರವು, ಸುಖಸಂತೋಷಗಳನ್ನು ಪಡೆದುಕೊಂಡುದರಿಂದ ಅತ್ಯಂತ ತೃಪ್ತರಾಗಿದ್ದೇವೆ. ಒಂದು ಸಂಸಾರವು ಅತ್ಯಂತ ಸುಗಮವಾಗಿ ನಡೆಯಬೇಕಾದರೆ ಗೃಹಿಣಿಯ ಪಾತ್ರವು ಮುಖ್ಯವಾದುದು. ನನ್ನ ಪತ್ನಿಯು ಅತ್ಯಂತ ಬುದ್ಧಿವಂತಿಕೆಯಿಂದ ಸಂಸಾರದ ವಹಿವಾಟನ್ನು ನಿರ್ವಹಿಸಿ ಮನೆಯ ಎಲ್ಲರೊಡನೆ ಪ್ರೀತಿಯಿಂದ ವ್ಯವಹರಿಸಿದುದೇ ಅನ್ಯೋನ್ಯತೆ ನೆಲೆಸಿ, ಸರ್ವರೂ ಸಂತೃಪ್ತಿಯಿಂದ ಬಾಳುವುದಕ್ಕೆ ಕಾರಣವಾಯಿತು. ನನ್ನ ಎಲ್ಲ ಕಾರ್ಯಗಳಿಗೂ ಪ್ರೋತ್ಸಾಹ ಕೊಟ್ಟು, ಮುಚ್ಚಟೆಯಿಂದ ಸೇರಿಕೊಂಡುದರಿಂದ ನಾನು ಈ ಮಟ್ಟಕ್ಕೆ ಬರಲು ಸಾಧ್ಯವಾಯಿತು. **'ಗೃಹಿಣೀ ಗೃಹಮುಚ್ಯತೇ'**; ಮನೆಯ ಗೃಹಲಕ್ಷ್ಮಿ ಎಂಬ ಮಾತು ನನ್ನ ಪತ್ನಿಗೆ ಸರ್ವಥಾ ಅನ್ವಯಿಸುತ್ತದೆ.

೧೮. ನಿವೃತ್ತ ಜೀವನ

ನನ್ನ ನಿವೃತ್ತ ಜೀವನವು ೧೯೭೬ರಲ್ಲಿ ಪ್ರಾರಂಭವಾದುದು ಸಾಹಿತ್ಯಕೃಷಿಯ ಮೂಲಕ. ಕನ್ನಡಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಅವರು ಪ್ರಾಚೀನ ಕನ್ನಡ ಕಾವ್ಯಗಳ ಗದ್ಯಾನುವಾದವನ್ನು ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಿದರೆ ಬಹು ಜನಕ್ಕೆ ಉಪಯೋಗವಾಗುವುದೆಂದು ಒಂದು ಯೋಜನೆಯನ್ನು ತಯಾರಿಸಿದರು. ಕನ್ನಡವಿದ್ವಾಂಸರ ಸಭೆಯನ್ನು ಕರೆದು ಅಲ್ಲಿ ಕೂಲಂಕಷವಾಗಿ ಚರ್ಚಿಸಿ ಯೋಜನೆಯನ್ನು ಕಾರ್ಯಗತ ಮಾಡಿದರು. ನಾನು ತೊರವೆರಾಮಾಯಣದ ಗದ್ಯಾನುವಾದ ಕಾರ್ಯವನ್ನು ಆರಿಸಿಕೊಂಡೆ. ಷಟ್ಪದಿ ಕಾವ್ಯವಾದ ತೊರವೆ ರಾಮಾಯಣವು ನಡುಗನ್ನಡದಲ್ಲಿದೆ. ಕುಮಾರವಾಲ್ಮೀಕಿ ಅಥವಾ ತೊರವೆಯ ನರಹರಿ ರಚಿಸಿದ ರಾಮಾಯಣ ಕಾವ್ಯವು ಸುಲಲಿತವೂ, ಸುಮಧುರ ಪದಬಂಧದಿಂದ ಕೂಡಿದುದೂ, ಆದ ರಸವತ್ಕಾವ್ಯವಾಗಿದೆ. ಕೆಲವು ಪದ್ಯಗಳಲ್ಲಿ ಅನುವಾದ ಕಾರ್ಯದಲ್ಲಿ ತೊಡಕುಂಟಾದಾಗ ಅವನ್ನು ಪರಿಹರಿಸಲು ದಕ್ಷರಾದ ಪ್ರೊ. ವೆಂಕಟರಾಮಪ್ಪನವರು ನೆರವು ನೀಡುತ್ತಿದ್ದರು. ತೊರವೆ ರಾಮಾಯಣದ ಗದ್ಯಾನುವಾದದ ಈ ಕೃತಿಗೆ ವಿಸ್ತಾರವಾದ ಪೀಠಿಕೆಯನ್ನೂ ರಚಿಸಿಕೊಟ್ಟೆ. ಅದು ೧೯೭೭ನೇ ಇಸವಿಯಲ್ಲಿ ಕನ್ನಡಸಾಹಿತ್ಯಪರಿಷತ್ತಿನಿಂದ ಪ್ರಕಟವಾಯಿತು.

ನನ್ನ ನಿವೃತ್ತ ಜೀವನವು ಜಡವಾಗದೇ ಉಪನಿಷತ್ತುಗಳು ಮತ್ತು ಭಗವದ್ಗಿತೆಯ ವ್ಯಾಪಕ ಅಧ್ಯಯನದಿಂದ ಉತ್ಸಾಹ ಪೂರ್ಣವಾದುದಾಯಿತು; ಅಧ್ಯಯನ, ಬರವಣಿಗೆ ಮತ್ತು ಪ್ರವಾಸಗಳಿಂದ ತುಂಬಿ ಚಟುವಟಿಕೆಗಳಿಂದ ಕೂಡಿತು. ತೊರವೆ ರಾಮಾಯಣಕ್ಕೆ ಬರೆದ ಪೀಠಿಕೆಯನ್ನು ಆಧರಿಸಿ ಬರೆದ 'ತೊರವೆಯ ನರಹರಿ' ಎಂಬ ಸಣ್ಣ ಹೊತ್ತಗೆಯನ್ನು ಡಿ.ವಿ.ಕೆ. ಮೂರ್ತಿಯವರು ಪ್ರಕಟಿಸಿದರು. 'ಚೌಂಡರಸ' ಎಂಬ ಇನ್ನೊಂದು ಕೃತಿಯನ್ನೂ ಅವರೇ ಪ್ರಕಟಿಸಿದರು. ಸಂಕೇತಿ ಸಂಘವು ೧೯೯೪ರಲ್ಲಿ ಆಚರಿಸಿದ ಸ್ವರ್ಣ ಜಯಂತಿ ಸಂದರ್ಭಕ್ಕೆ 'ಸಂಕೇತಿ ಸಂಪದ' ಪುಸ್ತಕವನ್ನು ಪ್ರಕಟಿಸಿದೆ. ಕಳೆದ ಶತಮಾನದ ಆರಂಭದ ವರ್ಷಗಳಲ್ಲಿ ನಾನು ಹಳ್ಳಿಗಳಲ್ಲಿ ನೋಡಿದ, ಕಂಡುಂಡ ಸಂಕೇತಿಗಳ ಜೀವನದ ರಸಮಯ ಸನ್ನಿವೇಶಗಳನ್ನು ಸಂಕೇತಿ ಸಂಪದದಲ್ಲಿ ನಿರೂಪಿಸಿದ್ದೇನೆ. ಸಂಕೇತಿ ಹಿರಿಯರಿಗೆ ಸಂಬಂಧಿಸಿದ ಹಲವು ಐತಿಹ್ಯಗಳನ್ನೂ ಕಥೆಗಳನ್ನೂ ಈ ಕೃತಿಯಲ್ಲಿ ಸೇರಿಸಲಾಗಿದೆ. ಈ ಹಿರಿಯರ ಕಥೆಯನ್ನು ನನಗೆ ಪರಿಚಯಿಸಿದವರು ಪಾಲಹಳ್ಳಿ ಸೋಮಿ ಎಂದು ಪ್ರಸಿದ್ಧರಾದ ಎ.ವೆಂಕಟಸುಬ್ಬಯ್ಯನವರು.

ಹಲವು ಅಭಿನಂದನಾ ಗ್ರಂಥಗಳಿಗೆ ಹಾಗೂ 'ಪ್ರಬುದ್ಧ ಕರ್ಣಾಟಕ', 'ಜೀವನ' ಮೊದಲಾದ ಪತ್ರಿಕೆಗಳಿಗೆ ಬರೆದಿದ್ದ ಹಲವು ಸಾಹಿತ್ಯಕ ಲೇಖನಗಳನ್ನು ಸಂಗ್ರಹಿಸಿ ಅವುಗಳ ಜತೆಗೆ ತಿರುಕ್ಕುರಳ್, ರನ್ನನ ಗದಾಯುದ್ಧ ಮೊದಲಾದವುಗಳ ಮೇಲೆ ಲೇಖನಗಳನ್ನು ಬರೆದು ಪ್ರಕಟಣೆಗೆ ಸಿದ್ಧಪಡಿಸಿದ್ದೇನೆ. ಕಾದಂಬರಿಗಳು ಮತ್ತು ಕಾದಂಬರಿ ಸಾಹಿತ್ಯದ ಮೇಲೆ ಬರೆದ ಲೇಖನಗಳನ್ನು ಸಂಗ್ರಹಿಸಿ ಪ್ರಕಟನೆಗೆ ಅನುಕೂಲವಾಗುವಂತೆ ಸಂಗ್ರಹಿಸಿದ್ದೇನೆ. ಆಕಾಶವಾಣಿಯಲ್ಲಿ ಸುಭಾಷಿತ ಅಥವಾ 'ಚಿನ್ನುಡಿ'ಯಲ್ಲಿ ಮಾಡಿದ ಭಾಷಣಗಳನ್ನು ಸಂಗ್ರಹಿಸಿದ್ದೇನೆ. ಆಲೋಚನಾ ಪ್ರಕ್ರಿಯೆ, ರನ್ನನ ಗದಾಯುದ್ಧದ ದುರ್ಯೋಧನ, ಹರಿಹರನ ರಗಳೆಗಳಲ್ಲಿ ಭಕ್ತಿ ಮೊದಲಾದ ವಿಷಯಗಳ ಮೇಲೆ ಕೃತಿಗಳನ್ನು ರಚಿಸಿದ್ದೇನೆ.

ಹಲವು ವರ್ಷಗಳ ಕಾಲ ಸಂಸ್ಕೃತಸಾಹಿತ್ಯ ಚರಿತ್ರೆ, ಉಪನಿಷತ್ತುಗಳು ಮತ್ತು ಭಗವದ್ಗೀತೆಗಳನ್ನು ಕುರಿತು ಮಾಡಿದ ಅಧ್ಯಯನದ ಫಲವಾಗಿ ಇಂಗ್ಲಿಷ್ ಭಾಷೆಯಲ್ಲಿ Essence of the Upanishads ಎಂಬ ಗ್ರಂಥವನ್ನು ಬರೆದೆ. ಈ ಪುಸ್ತಕದ ಬಿಡುಗಡೆಯನ್ನು ೨೦೦೧ನೆಯ ಇಸವಿಯಲ್ಲಿ ಬಿ.ಎಂ. ಶ್ರೀ. ಭವನದಲ್ಲಿ ಏರ್ಪಡಿಸಲಾಗಿತ್ತು. ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಬಿಡುಗಡೆ ಮಾಡಿದರು. ಮಲ್ಲೇಶ್ವರದ ಎಂ.ಇ.ಎಸ್. ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀನಿವಾಸಮೂರ್ತಿಗಳು ಪುಸ್ತಕದ ದೀರ್ಘವಾದ ಪರಿಚಯ ಮಾಡಿಕೊಟ್ಟರು. ಉತ್ತಮವಾದ ವಿಮರ್ಶೆಯಿಂದ ಅವರ ಭಾಷಣವು ವಿದ್ವತ್ಪೂರ್ಣವಾಗಿತ್ತು. ಈ ಇಂಗ್ಲಿಷ್ ಗ್ರಂಥಕ್ಕೆ ಡೆಕ್ಕನ್ ಹೆರಾಲ್ಡ್ ಮತ್ತು ಇತರ ಕೆಲವು ಪತ್ರಿಕೆಗಳಲ್ಲಿ ಉತ್ತಮವಾದ ವಿಮರ್ಶೆ ಬಂದಿರುವುದು ಸಮಾಧಾನವನ್ನೂ ತೃಪ್ತಿಯನ್ನೂ ತಂದುಕೊಟ್ಟಿತು.

ಇದೇ ಇಂಗ್ಲಿಷ್ ಗ್ರಂಥದ ಕನ್ನಡ ಅವತರಣಿಕೆಯಾದ 'ಉಪನಿಷತ್ತುಗಳ ಸಾರ' ಗ್ರಂಥವನ್ನು ಮೈಸೂರಿನ ಸುಪ್ರಸಿದ್ಧ ಪ್ರಕಟಣಾ ಸಂಸ್ಥೆಯಾದ ಕಾವ್ಯಾಲಯವು ಜನವರಿ, ೨೦೦೪ರಲ್ಲಿ ಹೊರತಂದಿದೆ.

ಉಪನಿಷತ್ತುಗಳ ವಿಷಯದಲ್ಲಿ ಹೆಚ್ಚಾದ ತಿಳುವಳಿಕೆ ಇಲ್ಲದ ಸಾಮಾನ್ಯರು ಈ ಇಂಗ್ಲಿಷ್ ಮತ್ತು ಕನ್ನಡ ಗ್ರಂಥಗಳಿಂದ ಉಪನಿಷತ್ತುಗಳು ಎಂದರೆ ಏನು, ಎಲ್ಲ ಉಪನಿಷತ್ತುಗಳ ಕೇಂದ್ರ ವಿಷಯವೇನು ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಇದರಲ್ಲಿ, ಜಟಿಲವಾದ ಅಥವಾ ಚರ್ಚಾಸ್ಪದವಾದ ವಿಷಯಗಳನ್ನು ಬಿಟ್ಟು ಪ್ರಧಾನವಾದ ಹನ್ನೆರಡು ಉಪನಿಷತ್ತುಗಳ ವಸ್ತುವನ್ನು ಆಯಾ ವಿಷಯಗಳ ಶೀರ್ಷಿಕೆಯಡಿಯಲ್ಲಿ ಸಂಬಂಧಪಟ್ಟ ಉಪನಿಷತ್ ಮಂತ್ರಗಳೊಡನೆ ಸರಳ ಭಾಷೆಯಲ್ಲಿ ವಿವರಿಸಲಾಗಿದೆ. ಉಪನಿಷತ್ ಮಂತ್ರಗಳಿಗೆ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಅನುವಾದವನ್ನು ಕೊಡಲಾಗಿದೆ.

a a a

ನಮ್ಮ ನಿವೃತ್ತ ಜೀವನದ ಬಹು ಮುಖ್ಯವಾದ ದಿವಸವು ನಾವು ಕೊಲಂಬಸ್ ಸಿಟಿಯಲ್ಲಿದ್ದಾಗ ಸಂಭವಿಸಿತು. ನಮ್ಮ ಮದುವೆಯಾದ ಐವತ್ತು ವರ್ಷಗಳು ತುಂಬಿ, ಮದುವೆಯ ಸ್ವರ್ಣ ಉತ್ಸವವನ್ನು ಆಚರಿಸಲಾಯಿತು. ನಾವು ಈ ಮದುವೆಯ ಚಿನ್ನದ ಹಬ್ಬಕ್ಕೆ ಅಷ್ಟೇನೂ ಪ್ರಾಮುಖ್ಯ ಕೊಡಬೇಕಾಗಿಲ್ಲ ಎಂದು ಮಗ ಶಾಮಸುಂದರನಿಗೆ ಹೇಳಿದೆವು. ಆದರೆ ಅವನೂ ಅವನ ಪತ್ನಿಯೂ ಸೇರಿ "ಈ ಮಹತ್ತ್ವದ ದಿನವನ್ನು ಅಟ್ಲಾಂಟಾದ ಶ್ರೀನಿವಾಸ ದೇವಾಲಯದಲ್ಲಿ ಆಚರಿಸೋಣ" ಎಂದರು. ದೇವರ ಸನ್ನಿಧಿಯಲ್ಲಿ ಅವನ ದರ್ಶನ ಪಡೆಯುವುದು ಪುಣ್ಯಕರವೆಂದು ನಾವು ಒಪ್ಪಿದೆವು. ೧೩ನೆಯ ಏಪ್ರಿಲ್ ೧೯೯೬ನೆಯ ದಿವಸ ಅಟ್ಲಾಂಟಾದ ವೆಂಕಟೇಶ್ವರ ದೇವಾಲಯಕ್ಕೆ ಬೆಳಗ್ಗೆ ಕೊಲಂಬಸ್ ಸಿಟಿಯಿಂದ ಹೊರಟು, ಹತ್ತು ಗಂಟೆಯ ಹೊತ್ತಿಗೆ ಹೋದೆವು. ಅಟ್ಲಾಂಟಾದಲ್ಲಿ ನಗರದ ಹೊರವಲಯದಲ್ಲಿ ಒಂದು ಸಣ್ಣ ಗುಡ್ಡದ ಮೇಲೆ,

ಕಲ್ಲಿನಲ್ಲಿ ಭಾರತೀಯ ದೇವಾಲಯದ ವಾಸ್ತುಶಾಸ್ತ್ರದ ಪ್ರಕಾರ ದೇವಸ್ಥಾನವನ್ನು ಕಟ್ಟಲಾಗಿದೆ. ಗರ್ಭಗೃಹದ ಮೇಲೆ ಸುಂದರವಾದ ಗೋಪುರವಿದೆ.

ಅಂದು ತಮಿಳು ಯುಗಾದಿಯಾಗಿತ್ತು. ಹಲವು ಜನ ತಮಿಳರು ಈ ಯುಗಾದಿಯ ದಿನ ದೇವಾಲಯಕ್ಕೆ ಬರುತ್ತಾರೆ . ಅರ್ಚಕರು ಬಹಳ ಭಕ್ತಿಯಿಂದ ಅಭಿಷೇಕ ಮಾಡಿ, ದೇವರಿಗೆ ಅಲಂಕಾರ ಮಾಡಿ ಅರ್ಚನೆ ಮಾಡಿ, ಮಂಗಳಾರತಿ ಮಾಡಿದರು. ಅಂತೂ ವಿವಾಹದ ಚಿನ್ನದ ವರ್ಷದ ಆಚರಣೆಯು ದೇವದರ್ಶನದಿಂದ, ಭಕ್ತಿಭಾವದಿಂದ ನಡೆದುದು, ಅದೂ ಅಮೆರಿಕಾದಲ್ಲಿ , ಒಂದು ವಿಶೇಷವೇ ಅಲ್ಲವೇ?

೧೯. ಉಪಸಂಹಾರ

ಈ ನನ್ನ ಇತಿವೃತ್ತವನ್ನು ಮುಗಿಸುವುದಕ್ಕೆ ಮೊದಲು ನಾನು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದ ವಿಷಯವನ್ನು ತಿಳಿಸುವುದು ಅಗತ್ಯ ಎಂದು ಭಾವಿಸುತ್ತೇನೆ. ಬೆಂಗಳೂರಿನಲ್ಲಿ ಒಂಟಿಯಾಗಿದ್ದ ಮಗಳ ಜತೆ ಇರುವುದು ಸೂಕ್ತ ಎಂಬ ಭಾವನೆ ಉಂಟಾಯಿತು. ನನ್ನ ಮಗಳು ಕೂಡ 'ನೀವಿಬ್ಬರೇ ಮೈಸೂರಿನಲ್ಲಿ ಇರುವುದು ಬೇಡ, ಬೆಂಗಳೂರಿಗೆ ಬಂದುಬಿಡಿ' ಎಂದಳು.

ಮೈಸೂರಿನ ಮನೆಯನ್ನು ಮಾರಿ ಮಗಳ ಮನೆಗೆ ಬಂದೆವು. ಬೆಂಗಳೂರಿಗೆ ಬಂದ ಮೇಲೆ ಕೋಣನಕುಂಟೆ ಅಡ್ಡರಸ್ತೆಯ, ವಸಂತಪುರ ಮುಖ್ಯರಸ್ತೆಯಲ್ಲಿ ದೇಸಾಯಿ ಗಾರ್ಡನ್‌ನಲ್ಲಿ ಒಂದು ನಿವೇಶನವನ್ನು ಕೊಂಡುಕೊಂಡು ಅಲ್ಲಿ ನಾನು, ನನ್ನ ಮಗ ಬಾಲಚಂದ್ರ ಮತ್ತು ಮಗಳು ಪುಷ್ಪಮೋಹನ ಸೇರಿ ಹೊಸ ಮನೆಯನ್ನು ಕಟ್ಟಿಸಿ 'ಸುಕೃತ' ಎಂದು ಮೈಸೂರಿನ ಮನೆಯ ಹೆಸರನ್ನೇ ಇಟ್ಟೆವು. ಈಗ ನಮ್ಮ ಜೀವನವು ಈ ಮನೆಯಲ್ಲಿ ಸುಖಶಾಂತಿಗಳಿಂದ ಕೂಡಿ ನಡೆದಿದೆ.

ಈ ಆತ್ಮಕಥನದಲ್ಲಿ ನನ್ನ ಜೀವನದ ಎಲ್ಲ ಘಟನೆಗಳನ್ನೂ ಎಲ್ಲ ಅನುಭವಗಳನ್ನೂ ಹಾಗೂ ವಿಚಾರಗಳನ್ನೂ ದಾಖಲಿಸಿಲ್ಲ. ನಾನು ಒಂದು ಸಂಕೇತಿ ಹಳ್ಳಿಯಲ್ಲಿ ಜನಿಸಿ ಸಂಕೇತಿ ಸಮಾಜದಲ್ಲಿ ಕಂಡುಂಡ ವಿಚಾರ ಮತ್ತು ಅಲ್ಲಿ ನನ್ನ ವ್ಯಕ್ತಿತ್ವವನ್ನು ರೂಢಿಸಿಕೊಂಡ ಬಗೆ- ಇವುಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಈ ಸ್ವಚರಿತ್ರೆಯನ್ನು ಬರೆದಿರುವುದೇ ಇದಕ್ಕೆ ಕಾರಣ. ವಿದ್ಯಾಭ್ಯಾಸಕ್ಕಾಗಿ ಹಳ್ಳಿಯಿಂದ ಪಟ್ಟಣವನ್ನು ಸೇರಿ ವಿದ್ಯೆಗಾಗಿ ಪಟ್ಟಶ್ರಮಕ್ಕೆ ಹೆಚ್ಚು ಒತ್ತುಕೊಟ್ಟಿದ್ದೇನೆ. ಕಳೆದ ಶತಮಾನದ ಆದಿ ಭಾಗದಲ್ಲಿ ವಿದ್ಯೆಗಾಗಿ ಪಟ್ಟಣವನ್ನು ಸೇರಿದ ಸಂಕೇತಿ ಹುಡುಗರೆಲ್ಲರ ಕಥೆಯೂ ಇದೇ ಆಗಿದೆ. ಕಳೆದ ಶತಮಾನದ ಮೊದಲಿನಲ್ಲಿ ಸಂಕೇತಿ ವಿದ್ಯಾರ್ಥಿಗಳು ಪಟ್ಟಣಕ್ಕೆ ಹೋಗಿ ಹೇಗೆ ವಿದ್ಯಾಭ್ಯಾಸಮಾಡಿದರು ಮತ್ತು ಅವರ ಸಮಸ್ಯೆಗಳೇನು ಎಂಬವುಗಳ ಸ್ಪಷ್ಟ ಚಿತ್ರವು ಸಂಕೇತಿವಿದ್ಯಾರ್ಥಿಗಳು ತಮ್ಮ ಮನೆಯವರಿಗೆ ಬರೆದ ಪತ್ರಗಳಿಂದ ಸ್ಪಷ್ಟ ಪಟ್ಟಿರುವುದನ್ನು ಡಾ. ಪ್ರಣತಾರ್ತಿ ಹರನ್ ಅವರು ಸಂಪಾದಿಸಿರುವ 'ಸಂಕೇತಿ ಅಧ್ಯಯನ' ಕೃತಿಯ ಎರಡನೆಯ ಸಂಪುಟದಲ್ಲಿ ಕಾಣಬಹುದು.

ತಾನು, ತನ್ನ ವಂಶ, ತನ್ನ ಸಮಾಜ- ಇವುಗಳ ಬಗ್ಗೆ ಪ್ರತಿಯೊಬ್ಬರಿಗೂ ಅಭಿಮಾನವಿರಬೇಕೆಂಬ ಸತ್ಯವನ್ನು ನಾನು ಮನಗಂಡಿದ್ದೇನೆ. ಕಷ್ಟಸಹಿಷ್ಣುತೆ, ಧೈರ್ಯ, ಶಿಸ್ತು, ದಕ್ಷತೆ, ಋಜುಮಾರ್ಗ, ಮತ್ತು ಸತ್ವಯುತವಾದ ಪ್ರಾಮಾಣಿಕ ನಡೆವಳಿಕೆ ಹಾಗೂ ಸಂಕೇತಿ ಸಂಸ್ಕೃತಿ, ಆಚಾರ ವಿಚಾರಗಳಲ್ಲಿ ನಿಶ್ಚಲವಾದ ನಂಬಿಕೆ- ಈ ಗುಣಗಳು ಪ್ರಪಂಚದ ಎಲ್ಲೆಡೆಯ ಸಂಕೇತಿಗಳ ಪ್ರತಿಭೆಗೂ ಉನ್ನತಿಗೂ ಕಾರಣಗಳಾಗಿವೆ. ಇವೇ ಗುಣಗಳು ನನ್ನ ಜೀವನವನ್ನೂ ನಡೆಸಿಕೊಂಡು ಬಂದಿವೆ.

ಕಲೆಯ ಸನ್ನಿಧಿಯಲ್ಲಿ

ಸಾ.ನಾ. ಶ್ರೀಕಂಠಯ್ಯ

ಕಲೆಯ ಸನ್ನಿಧಿಯಲ್ಲಿ*

ಜೀವನವನ್ನೆಲ್ಲ ನಾಟಕರಂಗಕ್ಕೆ ಮೀಸಲಿಟ್ಟೆ. ನೂರಾರು ನಾಟಕಗಳನ್ನು ಬರೆದೆ, ಸಾವಿರಾರು ಹಾಡುಗಳನ್ನೂ ಬರೆದೆ. ಆದರೆ ಅವನ್ನು ಉಳಿಸಿಕೊಳ್ಳಬೇಕಾಗಿತ್ತೆಂದು ಅನ್ನಿಸಿದ್ದು ಸಮುದಾಯ ಅಧ್ಯಯನ ಕೇಂದ್ರದವರು ಕೇಳಿದಾಗ. ಈಗ ಉಳಿದುಕೊಂಡಿರುವ ಅಷ್ಟಿಷ್ಟು ಅವರ ಉತ್ತೇಜನದ ಫಲವಾಗಿ ಉಳಿದಿದೆ; ಹಾಗೆಯೇ ಈ ನನ್ನ ಆತ್ಮವಿವರ. ಸಂಕೇತಿ ಸಮುದಾಯದಲ್ಲಿ ನಾಟಕಕಲೆಯ ಸಂಬಂಧದ ಚಳವಳಿಯೇ ನಡೆದ ಕಾಲ ಒಂದಿತ್ತು. ಅದರ ಒಂದು ನಿದರ್ಶನವಾಗಿ ನನ್ನ ವಿವರ ಇಲ್ಲಿ ಸೇರಬೇಕೆಂದು ಅಧ್ಯಯನ ಕೇಂದ್ರದವರು ನನ್ನನ್ನು ಬರೆಯಲು ಕೇಳಿದ್ದಾರೆಂದು ನಾನು ತಿಳಿಯುತ್ತೇನೆ.

ನನ್ನೂರು ಸಾಲಿಗ್ರಾಮ

ಸಾಲಿಗ್ರಾಮ ನಮ್ಮ ಊರು. ಬೆಟ್ಟದಪುರದ ಶ್ರೀ ಭ್ರಮರಾಂಬಾ ಸಮೇತ ಶ್ರೀಶಿಡ್ಲುಮಲ್ಲಿಕಾರ್ಜುನಸ್ವಾಮಿ ಮನೆದೇವರು. ಸಾಲಿಗ್ರಾಮ ಎಂದೊಡನೆ ಮನಸ್ಸು ಅರುವತ್ತು ವರ್ಷಗಳಷ್ಟು ಹಿಂದಕ್ಕೆ ಪುಟಿದು ಅನಿರ್ವಚನೀಯವಾದ ಪ್ರಸನ್ನ ಸ್ಥಿತಿಯನ್ನು ಮುಟ್ಟುತ್ತದೆ. ಬಾಲ್ಯದಲ್ಲಿ ನೊಸಲಿಗಿಟ್ಟಿದ್ದು , ಬಾಯಿ ಚಪ್ಪರಿಸಿದ್ದು , ಮೈಗೆಲ್ಲ ಮೆತ್ತಿದ್ದು ಇಲ್ಲಿಯ ಮಣ್ಣು.

ಆಗ ಇದೊಂದು ಪುಟ್ಟ ಗ್ರಾಮ....ಬಹು ರಮಣೀಯ.... ತರಳನ ಕರೆಗೆ ಓಗೊಟ್ಟು ಕ್ಷಣಾರ್ಧದಲ್ಲಿ ಬಂದೊದಗಿದ ನರಹರಿ - ಸುಂದರ ಸಿಂಹ ಶ್ರೀನೃಸಿಂಹ - ಯೋಗಮುದ್ರೆಯಲ್ಲಿ ಇಲ್ಲಿ ರಾರಾಜಿಸುತ್ತಿದ್ದಾನೆ ಭಕ್ತರ ಕಲ್ಪತರುವಾಗಿ. ಯೋಗಾನರಸಿಂಹನ ದೇವಳ ದೊಡ್ಡ ಗೋಪುರಗಳನ್ನು ಹೊತ್ತು ಶಿಲ್ಪಗಳಿಂದ ಶೃಂಗರಿಸಲ್ಪಟ್ಟ ಬೃಹತ್ ಗುಡಿ ಏನಲ್ಲ. ಆದರೆ ಭಾವುಕರ ಮನಸೆಳೆದು ಅವನಲ್ಲಿ ನೆಲೆಸುವ ತೆರದಿ ಮಾಡಬಲ್ಲ ಪ್ರಬಲ ಶಕ್ತಿ ಇಲ್ಲಿ ಅಡಗಿದೆ. ಪಕ್ಕದಲ್ಲೇ ಭಾಷ್ಯಕಾರರ ಗುಡಿ....ಎದುರಿಗೆ ಎಂದೂ ಬತ್ತದ ತೀರ್ಥಕೊಳ. ಇಲ್ಲಿಂದಲೇ ಶ್ರೀ ಸ್ವಾಮಿಗೆ ಅಭಿಷೇಕಕ್ಕಾಗಿ ಅಗ್ರೋದಕವನ್ನು ಒಯ್ಯುವುದು.

ನಸುಕಿನಲ್ಲಿ ಇನ್ನೇನು ಸಹಸ್ರಾಂಶುವಿನ ಉದಯವಾಗಬೇಕು ಎನ್ನುವಾಗ ಆಗಸದಲ್ಲಿ ಮೂಡಿಬರುವ ಓಕುಳಿಯಾಟ ಅವರ್ಣನೀಯ. ಸುತ್ತಲೂ ನೆಲ್ಲಿನಗದ್ದೆ. ಹಸಿರೋ ಹಸಿರು. ಹಿಮಮಣಿಗಳ ಕುಸುರಿ. ಗುಡಿಯಂಗಳದಲ್ಲಿ ಬೆಳೆಸಿದ ಬಗೆಬಗೆಯ ಪುಷ್ಪರಾಜಿ.

ತೀಡಿ ತಿದ್ದಿದ ತ್ರಿಪುಂಡ್ರ ಧರಿಸಿ, ಕೊಕ್ಕರೆ ಗರಿಯಂತಿರುವ ಮೇಲುಕೋಟೆ ವಸ್ತ್ರಗಳನ್ನು ಬಿಗಿದುಟ್ಟು, ಚದುರಶಿಖೆಯನ್ನು ಎತ್ತಿ ಕಟ್ಟಿ ನಿರ್ಮಾಲ್ಯವನ್ನದರ ತುದಿಗೆ ಸಿಕ್ಕಿಸಿ, ಋಜುಜೀವನದ ಕಳೆ ಉಕ್ಕಿಸುತ್ತ ಅರ್ಚಕರು ನಡೆವ ಆ ಪರಿ; ವೈದಿಕವೃಂದದಿಂದ ವೇದಘೋಷ, ಭಕ್ತಿಯ ಕಡಲಲ್ಲಿ ಮುಳುಗಿ ತನ್ನ ಅಲ್ಪಸೇವೆ ನಿನಗಿದೆ ಕೊಳ್ ಎನ್ನುವ ವಾದ್ಯಮೇಳ; ಪುಣ್ಯಾರ್ಜನೆಯಲ್ಲಿ ತಮಗೂ ಸಹಭಾಗಿತ್ವವಿದೆ ಎಂಬುದನ್ನು ಸ್ಥಾಪಿಸಲೆಂದೇ ಬಂದಂತೆ ತೋರುತ್ತ, ಆ ಮುಂಬೆಳಗಿನಲ್ಲಿ ಬೆಳಗುತ್ತ, ಹೊಂಬಣ್ಣದಿ ಮೆರೆಯುತ್ತ, ಮನ ಸೆರೆಹಿಡಿದರೂ ನೋಡುಗರಲ್ಲಿ ಕೊಂಚವಾದರೂ ಬೆವರು ಮೂಡಿಸುವ ಸರ್ಪಗಳ ನಿರ್ಭಯ ಹರಿದಾಟ. ಅದೇ ಬೇರೊಂದು ಲೋಕ.

ಅನತಿ ದೂರದಲ್ಲಿ ಜ್ಯೋತಿರ್ಮಹೇಶ್ವರನ ಗುಡಿ. ಬಹುಪಾಲು ಮುಚ್ಚಿಹೋಗಿದ್ದ ಈ ಗುಡಿಯಲ್ಲಿ ಲಿಂಗವೊಂದನ್ನು ಕಂಡ

---

* ರಚನೆ : ೨೦೦೩

ಹಳ್ಳಿಗನೊಬ್ಬ ಪ್ರತಿದಿನ ದೀಪ ಹತ್ತಿಸಿ ಹೋಗುತ್ತಿದ್ದ. ಇದನ್ನು ಗಮನಿಸಿದ ಶ್ರೀ ಕಂದಾಚಾರ್ ವೆಂಕಟರಾಮಯ್ಯನವರು ಹಲ ಕೆಲವು ಬಾಂಧವರನ್ನು ಕೂಡಿಕೊಂಡು ಈ ಗುಡಿಯ ಜೀರ್ಣೋದ್ಧಾರ ಮಾಡಿ ಪೂಜೆಗೆ ವ್ಯವಸ್ಥೆಗೈದರು. ಶಿವರಾತ್ರಿಯಲ್ಲಿ ಇಲ್ಲಿ ಜಾತ್ರೆ. ಮಧ್ಯದಲ್ಲಿ ಕಾಲುವೆ; ಸಹಜ ಮಾರ್ಗದಲ್ಲಿ ಕಲ್ಲುಬಂಡೆ ಕೊರಕಲುಗಳಲ್ಲಿ ಭೋರ್ಗರೆದು ಸಾಗುವ ಕಾವೇರಿಯನ್ನು ಕೊಳವೆಯಲ್ಲಿಟ್ಟಂತೆ- 'ಆಹ್' ಅಲ್ಲದಿದ್ದರೂ 'ಓಹ್' ಎನ್ನಬಹುದು. ಊರ ನಾರೀನಿವಹಪಾರಾವಾರ ತಮ್ಮ ಪಾತ್ರೆಗಳನ್ನು ಬೆಳಗಿ, ಬಟ್ಟೆ ಒಗೆದು, ಮಿಂದು, ಕುಡಿಯುವ ನೀರನ್ನು ಕೊಂಡೊಯ್ಯುತ್ತಿದ್ದುದು ಇಲ್ಲಿಂದಲೇ. ಮಾತೃವರ್ಗದೊಂದಿಗೆ ಬಂದ ಕಿಷ್ಕಿಂಧಾಪಟ್ಟಣಿಗರ ಹೀಚು ತುಕಡಿ ತಮ್ಮ ಚಡ್ಡಿ, ಷರ್ಟುಗಳನ್ನು ಬಿಸಾಡಿ ಪಂಚತಾರಾ ಈಜುಕೊಳ ಏನ್ಮಹಾ ಇದರ ಮುಂದೆ ಎಂಬಂತೆ ನೀರಿನೊಳಕ್ಕೆ ಹಾರಿ ಕೈಕಾಲು ಬಡಿಯುತ್ತ ಈಜುವರು. ಹಿಂದಿರುಗುವಾಗ ಪಕ್ಕದ ತೋಟಕ್ಕೆ ದಾಳಿಯಿಟ್ಟು, ಬೆಟ್ಟದ ಹುಣಿಸೆ, ಸೀಬೇಕಾಯಿ, ಅಮಟೇಕಾಯಿ, ಪಗಡೆಹಣ್ಣು, ನೇರಳೆ, ಉಪ್ಪುನೇರಳೆ, ಪನ್ನೇರಳೆ, ಕೊನೆಗೆ ಪುಳ್ಳಂ ಪರಚಿಸೊಪ್ಪನ್ನೂ ಬಿಡದೆ ಧ್ವಂಸ ಮಾಡುವರು. ಇದೆಲ್ಲ appetisers ಇದ್ದ ಹಾಗೆ.

ಅವರೇಕಾಯಿ ಕಾಲದಲ್ಲಿ ಪುರುಲೆ ಸೇರಿಸಿ ಬೆಂಕಿ ಮಾಡಿ ಕಾಯಿಗಳನ್ನು ತಂತಿಗೆ ಸಿಕ್ಕಿಸಿ ಬೇಯಿಸಿ ಘಂ ಎನ್ನುತ್ತಿರುವಾಗ ತಿನ್ನುವುದು ಇದೆಯಲ್ಲಾ ಅದೇ ಒಂದು ಮಜ. ಹಾಗೆಯೇ ಹುಣಿಸೇಹಣ್ಣು ಬಡಿಯುವಾಗ ಉಪ್ಪು ಖಾರ ಹುಣಿಸೇಹಣ್ಣು ಸೇರಿಸಿ, ಚೆನ್ನಾಗಿ ಕುಟ್ಟಿ, ಕಡ್ಡಿ ತುದಿಗೆ ಸಿಕ್ಕಿಸಿ ಚೀಪುತ್ತ ನಡೆವುದಲ್ತೆ ಸ್ವರ್ಗಂ !

ಇದು ಹಾಗಿರಲಿ. ಊರಿನ ಅತ್ತ ಕಡೆ ವಿಶಾಲವಾದ ಕೆರೆ. ಮುತ್ತಿನಂಥ ನೀರು. ಹೊಸಅಗ್ರಹಾರದ ಕಡೆಯ ರಸ್ತೆ ಬಳಿ ಸತ್ಯಕಲ್ ಹನುಮಂತರಾಯನ ಬಿಡದಿ ! ಪೂಜೆ ಕೈಗೊಳ್ಳುತ್ತ ಭಕ್ತರ ಇಷ್ಟಾರ್ಥ ಸಲ್ಲಿಸುತ್ತ ನೆಲೆಸಿದ್ದಾನೆ ವಾಯುಸುತ.

ಜೈನಧರ್ಮೀಯರು ಬಹುಮಂದಿ ಇದ್ದಾರೆ ಸಾಲಿಗ್ರಾಮದಲ್ಲಿ. ಜೈನಮಂದಿರಗಳಿಗೂ ಕೊರತೆ ಇಲ್ಲ. ಅವರ ಗುರು ತಪಸ್ಸು ಮಾಡಿದ್ದರೆನ್ನಲಾದ ಬಂಡೆಯೊಂದು ಮಿರ್ಲೆ ರಸ್ತೆಯಲ್ಲಿ ಸತ್ಯಕಲ್ ಹನುಮಂತರಾಯನ ಸಮೀಪದಲ್ಲಿಯೇ ಇದೆ. ಗುರುಗಳ ಅರೆ ಎಂದಿದರ ಹೆಸರು. ಗ್ರಾಮೀಣ ಜನರ ಬಾಯಲ್ಲಿ 'ಗುಡ್ಡಾರೆ' ಆಗಿದೆ.

ವಾರದ ಸಂತೆ ಬಹುಪ್ರಸಿದ್ಧ. ಅಲ್ಲಿ ಸೊಗಸಾದ ಬೆಣ್ಣೆ ಮಾರಾಟವಾಗುತ್ತಿತ್ತು. ಸುತ್ತಮುತ್ತಲ ಹಳ್ಳಿಯವರೆಲ್ಲ ಆಗ ಬಂದು ಸೇರುವರು. ಸುದ್ದಿ ಪ್ರೀತಿಗಳ ವಿನಿಮಯದ ಹೊತ್ತು ಅದು. ನಮ್ಮ ಈಗಿನ tensionಭರಿತ ಜೀವನಕ್ಕೂ ಆಗಿನ ನಿರಾಳ ಬದುಕಿಗೂ ಹೋಲಿಸಿದಾಗ, "ಅಯ್ಯೋ, ಎಲ್ಲ ಹೋಯಿತಲ್ಲ , ಏತಕ್ಕಾಗಿ ಬೆಳೆದೆವೋ" ಎಂದೆನ್ನಿಸದಿರದು.

ಸಾಲಿಗ್ರಾಮ ಇಷ್ಟೆಲ್ಲ ಅಲ್ಲದೆ ಪವಿತ್ರ ಕ್ಷೇತ್ರವೂ ಹೌದು. ತಮಿಳುನಾಡಿನಲ್ಲಿ ಕರಿಕಾಲ ಚೋಳನೆಂಬ ಅರಸು ಆಳುತ್ತಿದ್ದ ಕಾಲ ಅದು. ಅವನ ಉಪಟಳ, ಕ್ರೌರ್ಯ ಸಹಿಸಲಸಾಧ್ಯವಾಗಿತ್ತು. ಅದರಲ್ಲಿಯೂ ವೈಷ್ಣವರಲ್ಲಿ ಅವನ ದ್ವೇಷ ಅತಿಯಾಗಿ, ಶ್ರೀವೈಷ್ಣವ ಧರ್ಮಪ್ರವರ್ತಕರಾದ ಶ್ರೀಮದ್ರಾಮಾನುಜಾಚಾರ್ಯರ ಜೀವಕ್ಕೇ ವಿಪತ್ತು ಬರುವ ಸನ್ನಿವೇಶ ಒದಗಿ, ಶಿಷ್ಯರೆಲ್ಲ ಸೇರಿ ಬಲವಂತದಿಂದ ಶ್ರೀಮದಾಚಾರ್ಯರನ್ನು ತಮಿಳುನಾಡಿನಿಂದೀಚೆಗೆ ಕರೆದು ತಂದರು. ಮೇಲುಕೋಟೆಗೆ ತೆರಳುವ ಮೊದಲು ಕರ್ನಾಟಕದ ನೆಲದಲ್ಲಿ ಶ್ರೀಮದಾಚಾರ್ಯರು ನಿಂತಂಥ ಪುಣ್ಯಭೂಮಿ ಇದು.

ಹತ್ತಿರದ ಚುಂಚನಕಟ್ಟೆಯು ಶ್ರೀಸೀತಾಲಕ್ಷ್ಮಣಸಮೇತರಾಗಿ ಬಂದ ಶ್ರೀರಾಮದೇವರ ಪಾದಧೂಳಿಯಿಂದ ಪರಮ ಪುನೀತವಾದ ತಾಣ. ಎತ್ತರದಿಂದ ಧುಮ್ಮಿಕ್ಕುವ ಕಾವೇರಿಯ ಭೋರ್ಗರೆತದ ಸದ್ದು ಇನಿತೂ ಕೇಳಿಸದು ಇಲ್ಲಿಯ ಶ್ರೀರಾಮದೇವರ ಗುಡಿ ಹೊಕ್ಕಾಗ. ಸೀತಾದೇವಿಯವರು ಅಭ್ಯಂಜನಕ್ಕಿಳಿದಿದ್ದು ಇಲ್ಲಿ ಎಂದು ಆ ಸ್ಥಳವನ್ನು ನಿರ್ದೇಶಿಸುತ್ತಾರೆ ಅಲ್ಲಿಯ ಜನ. ಅರಿಶಿನದ ನೀರಿನ ಬಣ್ಣ ಇಂದಿಗೂ ಮಾಸಿಲ್ಲ ಅಲ್ಲಿ. ಪಕ್ಕದ ಬಳ್ಳೂರು ಕಟ್ಟೆ ಪ್ರೇಕ್ಷಣೀಯ ಸ್ಥಳ. ದಿನವೆಲ್ಲ ಅಲ್ಲಿ ಕಳೆದರೂ ಬೇಸರದ ಸುಳಿವೇ ಕಾಣಿಸದು. ಬಹು ಮಂದಿ ಆಹಾರ ಪದಾರ್ಥಗಳನ್ನು ತಂದು, ಅಲ್ಲಿಯೇ ಊಟ ಉಪಚಾರಗಳನ್ನು ಮುಗಿಸಿ ವಿಶ್ರಮಿಸಿ, ಹಾರಾಡಿ, ಕುಣಿದಾಡಿ, ನೀರಲ್ಲಿ ಆಟವಾಡಿ ತೆರಳುತ್ತಾರೆ.

ಪೂರ್ವಕ್ಕೆ ತೆರಳಿದರೆ ಕಾವೇರಿ ತೀರದ ಎಡತೊರೆ; ಶ್ರೀ ಅರ್ಕೇಶ್ವರನ ಸನ್ನಿಧಿ. ರಥಸಪ್ತಮಿಯಂದು ಸೂರ್ಯ-ನಾರಾಯಣ ದೇವರು ತನ್ನ ಕಿರಣಗಳ ಮೂಲಕ ಶ್ರೀ ಸ್ವಾಮಿಯವರ ಪಾದಸ್ಪರ್ಶಗೈಯುವರೆಂದು ಪ್ರತೀತಿ.

ಕರ್ನಾಟಕದ ಬಹುಪಾಲು ನೆಲವು ದೇವದೇವತೆಗಳ ಸಾನ್ನಿಧ್ಯದಿಂದ, ಸಾಧುಸಂತರ ಶ್ರೀಗುರು ಭಕ್ತಜನರ ಪಾದಸ್ಪರ್ಶದಿಂದ, ಅತಿಶಯವಾದ ಪಾವಿತ್ರ್ಯದಿಂದ ಕೂಡಿದೆ. ನಮ್ಮ ಪುಣ್ಯ ಬಹುದೊಡ್ಡದು.

ಸೋದರತ್ತೆ

ನಮ್ಮ ಪ್ರಾಚೀನರು ವೇದಾಧ್ಯಯನಸಂಪನ್ನರಾಗಿ ತತ್ಸಂಬಂಧಿತ ಶಾಖೋಪಶಾಖೆಗಳಲ್ಲಿ ಪ್ರಭುತ್ವ ಹೊಂದಿದ್ದರೆ, ಅರ್ವಾಚೀನರು

ಲೌಕಿಕ ವಿದ್ಯೆಗಳಲ್ಲಿ ಪ್ರೌಢಿಮೆ ಮೆರೆದಿದ್ದಾರೆ. ನಾವು ಬಾಲ್ಯದಲ್ಲಿದ್ದಾಗಲೇ ನಮ್ಮ ಹಿರೀಕರು ವಿದ್ಯಾರ್ಜನೆ ಮತ್ತು ಕೌಟುಂಬಿಕ ನಿರ್ವಹಣೆಗಾಗಿ ಸಾಲಿಗ್ರಾಮವನ್ನು ಬಿಟ್ಟು ಬಂದಿದ್ದರು. ಆದರೂ ಅಲ್ಲಿಯ ನಂಟು ಉಳಿದು ಮುಂದುವರೆದಿದ್ದು ನಮ್ಮ ಸೋದರತ್ತೆ ಶ್ರೀಮತಿ ಅಮ್ಮಯ್ಯಮ್ಮನವರಿಂದ. ನಮ್ಮ ಅಜ್ಜನವರ ಪ್ರಥಮ ಸಂತಾನ ಅವರು. ಅನಂತರ ನಮ್ಮ ದೊಡ್ಡಪ್ಪನವರು ಶ್ರೀಯುತ ಎಸ್.ಆರ್. ಸುಬ್ಬರಾಯರು. ಆಮೇಲೆ ನನ್ನ ಪೂಜ್ಯ ತಂದೆಯವರು ಶ್ರೀ ಎಸ್.ಆರ್. ನಾರಾಯಣಸ್ವಾಮಿಯವರು. ಅತ್ತೆ ಸಾಲಿಗ್ರಾಮದ ಶ್ರೀ ಕಂದಾಚಾರ್ ವೆಂಕಟರಾಮಯ್ಯನವರ ಕೈ ಹಿಡಿದು ಹನ್ನೊಂದು ಮಕ್ಕಳನ್ನು ಪಡೆದು ಸಂಸಾರ ಸಾಗಿಸಿದ್ದು ಸಾಲಿಗ್ರಾಮದಲ್ಲಿಯೇ. ಅವರ ಮಕ್ಕಳು ಎಸ್.ವಿ. ಸೂರ್ಯನಾರಾಯಣ (ಗೋವಿಂದು), ಎಸ್.ವಿ. ರಾಮಸ್ವಾಮಿ (ಶಣ್ಣ), ಎಸ್.ವಿ. ಸುಬ್ಬರಾಯ (ಸುಬ್ಬಣ್ಣ), ಎಂಟು ಹೆಣ್ಣು ಮಕ್ಕಳು : ಸಾವಿತ್ರಿ, ಶಕುಂತಳ, ಕೌಸಲ್ಯ, ಸರಸ್ವತಿ, ಯಶೋದ, ತುಳಸಿ, ವಿಜಯಲಕ್ಷ್ಮಿ, ನಾಗಲಕ್ಷ್ಮಿ. ಸ್ತ್ರೀಯರಿರಲಿ, ಪುರುಷರೇ ಆಂಗ್ಲ ವಿದ್ಯಾಭ್ಯಾಸಕ್ಕೆ ಮನಗೊಡದೆ ಎಡಗೈ ಹೆಬ್ಬೆಟ್ಟಿನ ಗೆರೆಗಳನ್ನು ಮುದ್ರಿಸುವ ದಿನಗಳಲ್ಲಿ , ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಂಗ್ಲಿಷ್, ಹಿಂದಿ, ತೆಲುಗು ಭಾಷೆಗಳನ್ನು ಬಲ್ಲವರಾಗಿದ್ದರು ಅಮ್ಮಯ್ಯಮ್ಮನವರು. ಅಂತೆಯೇ ಪಾಕಶಾಸ್ತ್ರ ಪ್ರವೀಣೆ. ಜಿಲೇಬಿ, ಧರ್ಮ್ರೋಟುಗಳನ್ನು ಮಾಡುವಾಗ ಅದರ ಪರಿಮಳ ಇಡೀ ಬೀದಿಯಲ್ಲಿ ಪಸರಿಸುತ್ತಿತ್ತು. ಒತ್ತುಶ್ಯಾವಿಗೆ, ಬಗೆ ಬಗೆಯ ಅರಳುಹಿಟ್ಟು, ಅವಲಕ್ಕಿ, ರಾಗಿದೋಸೆ, ಅಕ್ಕಿರೊಟ್ಟಿಗೆ ಹಿಡಿ ಬೆಣ್ಣೆ , ಕೃಷ್ಣತೆನೆಯ ಹುಳಿಯನ್ನ, ತೊಗರಿ ನುಚ್ಚಿನ ಉಂಡೆ, ಮರಳು ಮರಳು ತುಪ್ಪ, ಕೆನೆಮೊಸರು - ಒಂದೇ ಎರಡೇ? ಇನ್ನು ಉಪ್ಪಿನಕಾಯಿಗಳ ಶ್ರೇಣಿ: ಮಾವಿನಮಿಡಿ (ಜೀರಿಗೆಕಾಯಿ), ಹೆರಳೆ, ನೆಲ್ಲಿ , ನಿಂಬೆ, ಮಾಕಳಿ ಬೇರು, ಮಾಶುಂಠಿ, ಕಳಲೆ, ಅರೆಮಾದಲ, ಅಗಸೆ, ಹಾಗಲ, ಅಮಟೆ, ಎಳೆಮೆಣಸು. ಜೊತೆಗೆ ಮೆಂತ್ಯದ ಹಿಟ್ಟು, ನೆಲ್ಲಿಹಿಂಡಿ, ಕೊಳ್ಳುಡಿ (ಹುರುಳಿ), ಚಟ್ನಿಪುಡಿ. ಇನ್ನು ಕೋಡುಬಳೆ, ನಿಪ್ಪಟ್ಟು, ಚಕ್ಕುಲಿ, ತೇಂಗೊಳಲು, ಮುಚ್ಚೋರೆ, ಹುರಿಗಾಳು, ಹುರುಕಲು, ರವೆಉಂಡೆ, ಪುಳ್ಳಂಗಾಯಿ-ಉಂಡೆ, ಅರಳು ಮತ್ತು ಪುರಿ ಉಂಡೆಗಳು ಬಾಯಾಡಿಸಲು.

ಇದು ಕೆಲವರಲ್ಲಿ ವಿಶೇಷವಾಗಿ ಜನ್ಮತಃ ಬರುತ್ತದೆಯೋ ಏನೋ. ಜತೆಗೆ ಯಮಸಾಧನೆ. ನನ್ನ ಪತ್ನಿ ನಾಗರತ್ನನಿಗೂ ಈ ಕಲೆ ಕರಗತವಾಗಿದೆ. ಯಾರ ಸಹಾಯವನ್ನೂ ಕೇಳದೇ ತಾನೇ ತಾನಾಗಿ ಅಭ್ಯಸಿಸಿ ಈ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಐದಾರು ವರ್ಷವಾದರೂ ಅವರು ಹಾಕಿದ ಉಪ್ಪಿನಕಾಯಿಗಳು ಕೆಟ್ಟಿದ್ದೇ ಕಾಣೆ. ಇನ್ನು ತಿಂಡಿತೀರ್ಥಗಳ ಬಗ್ಗೆ ಮುಂದೆ ತಿಳಿಸುತ್ತೇನೆ.

ಆಗ ಮಡಿ ಬಹು ಪ್ರಬಲವಾಗಿದ್ದಂಥ ಕಾಲ. ಅತ್ತೆಯವರೂ ಕಾಲುವೆಗೆ ತೆರಳಿ ಮಿಂದು ತಲೆಯ ಮೇಲೆ ಒಗೆದ ವಸ್ತ್ರಗಳು, ಬೆಳಗಿದ ಪಾತ್ರೆಗಳ ಬುಟ್ಟಿ ಹೊತ್ತು, ಎಡಸೊಂಟದಲ್ಲಿ ಕೊಡದಲ್ಲಿ ಅಡುಗೆಗೆ ನೀರು, ಅದರ ಮೇಲೊಂದು ಪುಟ್ಟ ಬಿಂದಿಗೆಯಲ್ಲಿ ಕುಡಿಯುವ ಜಲ, ಬಲಗೈಯಲ್ಲಿ ಚೊಂಬಿನಲ್ಲಿ ಮತ್ತೆ ಕಾವೇರಿ ! -ಎಲ್ಲ ಪೇರಿಸಿ ಮನೆ ಸೇರುವರು. ತುಂಬಿದ ಮನೆ. ತಿಂಡಿ ತೀರ್ಥ ಊಟೋಪಚಾರಗಳಿಗೆ ಕೊನೆಯಿಲ್ಲ...ಮಡಿಯ ಅಗತ್ಯವಾದಾಗ ಇಂಚೂ ದಾಟದೆ ಮಡಿ; ಮಕ್ಕಳ ಹೊಟ್ಟೆಯ ಹೊತ್ತು ಬಂದಾಗ ಅವರ ಯೋಗಕ್ಷೇಮ.

ಮಡಿ ಎಂದಾಗ ಸರ್ಪಗಳ ನೆನಪು ಬರುವುದು ಸಹಜ. ಅತ್ತೆಯವರ ಮನೆಯಲ್ಲಿ ಪ್ರತಿ ಸುಬ್ರಹ್ಮಣ್ಯಷಷ್ಠಿಗೆ ತಪ್ಪದೆ ನಾಗರು ಕಾಣಿಸಿಕೊಳ್ಳುತ್ತಿತ್ತು. ಹಾಗೆಯೇ ಕ್ಷೀರನೈವೇದ್ಯವನ್ನು ಒಪ್ಪಿಸಿಕೊಂಡು ಮರೆಯಾಗುತ್ತಿತ್ತು. ಒಮ್ಮೆ ತೋಟದ ಬಾಗಿಲ ಬಳಿ ಕೊಡವಿಟ್ಟು ಅತ್ತೆ ಒಳಕ್ಕೆ ಹೋಗಿ ಬರುವಾಗ ಸರ್ಪವೊಂದು ಕೊಡದೊಳಗೆ ವಿಶ್ರಮಿಸುತ್ತಿತ್ತು. ಅವರು ಬರುತ್ತಲೇ ಹೊರಬಂದು ಮರೆಯಾಯಿತು. ಮತ್ತೊಮ್ಮೆ ಕಾಲಿಗೆ ಸುತ್ತಿಕೊಂಡಾಗ ಗರ್ಭಸ್ಥ ಮಗುವಿಗೆ ಶ್ರೀಯವರ ಹೆಸರಿಡುವುದಾಗಿ ಹರಸಿಕೊಂಡಾಗ ಬಿಟ್ಟುಹೋಯಿತು. ಹಾಗಾಗಿ ಆ ಮಗುವಿಗೆ ನಾಗಲಕ್ಷ್ಮಿ ಎಂದು ನಾಮಕರಣವಾಯಿತು.

ಅತ್ತೆ ಕಸೂತಿ ಕೆಲಸದಲ್ಲಿ ನಿಷ್ಣಾತರು. ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿಯೂ ಹರೆಯದವರನ್ನು ಹಿಂದೆ ಸರಿಸಿ ಸೂಜಿಗೆ ದಾರ ಪೋಣಿಸಬಲ್ಲವರಾಗಿದ್ದರು. ಕಥೆಗಳನ್ನು ಬರೆಯುತ್ತಿದ್ದರು. ಹಲವಿಧ ಅಡುಗೆಗಳ ಬಗ್ಗೆ ಬರೆಯುವುದು, ನೆಂಟಸ್ತನದ ಪದಗಳನ್ನು ಸಂಕೇತಿ ಭಾಷೆಗೆ ತರ್ಜುಮೆ ಮಾಡುವುದು ಇವರ ಹವ್ಯಾಸವಾಗಿತ್ತು. ಕಡೆಯವರೆಗೂ ಸಂಕೇತಿಗಳ ವೈಶಿಷ್ಟ್ಯವಾದ 'ಗಂಡಿಚೀರೆ'ಯನ್ನೇ ಧರಿಸುತ್ತಿದ್ದರು.

ಶ್ರೀ ವೆಂಕಟರಾಮಯ್ಯನವರೂ ಬಹುವಿಧ ಪ್ರಥಮರು. ಮಾರುಕಟ್ಟೆಗೆ ಬಂದ ತಕ್ಷಣ ಮೊಟ್ಟ ಮೊದಲಿಗೆ ಕೊಡ್ಯಾಕ್ ಕ್ಯಾಮರ, ಹೊಲಿಗೆ ಯಂತ್ರ (ಸಿಂಗರ್), ರ್‍ಯಾಲಿ ಸೈಕಲ್ ಮುಂತಾದವನ್ನು ಖರೀದಿಸುವರು. ಬುಡ್ಡಿದೀಪ ಅಥವಾ ಲ್ಯಾಂಟ್ರನ್ ಬೆಳಕಿನಲ್ಲಿ ಫೋಟೋ developing & printing ಮಾಡುತ್ತಿದ್ದರು. ಯೋಗಾನರಸಿಂಹ ದೇವರ ರಥೋತ್ಸವದಂದು ತೇರು ಊರೆಲ್ಲ ಸುತ್ತಿ ಕಡೆಗೆ ಇವರ ಮನೆಯ ಮುಂದೆ ವಿಶ್ರಮಿಸುವುದು. ಪಾನಕಪೂಜೆ ಇವರ ಸೇವೆ.

ಪೂರ್ವಿಕರು

ನಾವು ಆತ್ರೇಯ ಗೋತ್ರಜರು; ಸಾಲಿಗ್ರಾಮದ ಕೋಟೆ ವಂಶಸ್ಥರು. ಶ್ರೀ ರಾಮಶರ್ಮ ಮತ್ತು ಶ್ರೀಮತಿ ಅಚ್ಚಮ್ಮನವರಿಗೆ ಶ್ರೀ ಸುಬ್ರಹ್ಮಣ್ಯಶರ್ಮರು ಮಗ ; ಸುಬ್ರಹ್ಮಣ್ಯಶರ್ಮ ಅವರ ಹೆಂಡತಿ ಅಮ್ಮಯ್ಯಮ್ಮ. ಅವರ ಮೊದಲ ಮಗ ಕೋಟೆ ಮಲ್ಲಪ್ಪನವರು. ಅವರು ಕೃಷಿಯನ್ನು ನಂಬಿದವರು. ಅವರಿಗೆ ನಾಲ್ಕು ಗಂಡು, ಮೂರು ಹೆಣ್ಣು ; ಎರಡನೆಯ ಮಗಳು ತಂಗಚ್ಚಮ್ಮನವರೇ ನನ್ನ ಅತ್ತೆಯವರು ; ಅವರ ಒಬ್ಬಳೇ ಮಗಳು ನಾಗರತ್ನ ನನ್ನ ಪತ್ನಿ.

ಸುಬ್ರಹ್ಮಣ್ಯಶರ್ಮರ ಎರಡನೆಯ ಮಗ 'ಕೋಟೆ ನಾರಾಯಣಸ್ವಾಮಿಶಾಸ್ತ್ರಿ'ಗಳು. ಮೂರನೆಯ ಮಗ 'ಕೋಟೆ ರಾಮಸ್ವಾಮಿ'ಯವರು. ಅವರೇ ನಮ್ಮ ಅಜ್ಜಂದಿರು. ಸಂಕೃತಿ ಗೋತ್ರದ ಮಾ॥ ಸಣ್ಣಮ್ಮನವರು ನಮ್ಮ ಅಜ್ಜಿ. ಜ್ಯೇಷ್ಠಪುತ್ರ ಮಲ್ಲಪ್ಪನವರು ಕೃಷಿಗೆ ಒತ್ತು ಕೊಟ್ಟರೇ ವಿನಃ ವಿದ್ಯಾಭ್ಯಾಸಕ್ಕೆ ಹೆಚ್ಚು ಮನಗೊಡಲಿಲ್ಲ. ಮಧ್ಯದವರಾದ ನಾರಾಯಣಸ್ವಾಮಿ ಶಾಸ್ತ್ರಿಗಳು ಮೈಸೂರಿನಲ್ಲಿ ಪ್ಲೀಡರ್ ಆಗಿದ್ದರು. ಕಡೆಯವರಾದ ನಮ್ಮ ಅಜ್ಜನವರು ಬಿ.ಎ., ಪದವೀಧರರಾಗಿ ಸಹಕಾರಿ ಸಂಸ್ಥೆಗಳ ತನಿಖಾಧಿಕಾರಿಯಾಗಿದ್ದರು.

ಅಜ್ಜನವರದು ಒಳ್ಳೆಯ ಮೈಕಟ್ಟು; ಅಪ್ರತಿಮ ರೂಪಸಂಪನ್ನರು. ಚಾಮರಾಜ ಒಡೆಯರ ಮೀಸೆ, ಯುವರಾಜ ರಣಧೀರರ ಪೇಟ, ಕೊಳವೆ ಷರಾಯಿ, ಲಾಂಗ್ ಕೋಟು, ಗಿರ್ಕಿ ಚಡಾವು, ಕೈಯಲ್ಲಿ ಬೆತ್ತ ; ಸೂಟ್ ಧರಿಸಿದಾಗ Bow-Tie ಕಟ್ಟುವರು. ಉದಾತ್ತ ಹೃದಯರು, ಸ್ನೇಹಶೀಲರು. ಡಿವಿಜಿ, ನಾಟಕ ಶಿರೋಮಣಿ ವರದಾಚಾರ್ಯರು ಇಂಥವರ ಒಡನಾಟದಲ್ಲಿ ಇದ್ದವರು. ಡಿವಿಜಿ ಅವರು ತಮ್ಮದೊಂದು ಲೇಖನದಲ್ಲಿ ಅಜ್ಜನವರ ಠಾಕುಠೀಕಿನ ಪೋಷಾಕುಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಪದವೀಧರರಾದರೂ ನಮ್ಮ ಸಂಸ್ಕೃತಿ, ಪುರಾಣ, ಇತಿಹಾಸಗಳ ಬಗ್ಗೆ ಅಪಾರ ಗೌರವ ; ಸೇವೆ ಸಲ್ಲಿಸುವ ಕಾಳಜಿ. ಅಂತೆಯೇ ಕೀರ್ತನಕಾರರೂ ಆಗಿದ್ದರು. ಎಂತಹ ಛಳಿಯೇ ಆಗಲಿ, ಕೀರ್ತನ ಕಾಲದಲ್ಲಿ ಕಚ್ಚೆಪಂಚೆ, ಉತ್ತರೀಯ ಬಿಟ್ಟು ಬೇರೆ ಧರಿಸುತ್ತಿರಲಿಲ್ಲ. ಸ್ವತಃ ಕವಿಗಳಾಗಿದ್ದು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಜಾನಪದ ಶೈಲಿಯನ್ನು ಬಳಸಿ ಗ್ರಾಮೀಣ ಜನಕ್ಕೆ ಪ್ರಿಯವಾಗುವಂತಹವನ್ನೂ ಹೆಣೆದಿದ್ದಾರೆ.

ಆಗಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜರನ್ನು ಕುರಿತು ಬರೆದ, **'ನಾಲ್ವಡಿ ಕೃಷ್ಣರಾಜ ಗುಣ ಶತಕ'** ಎಂಬ ನೂರು ನುಡಿಗಳ ರಾಜಭಕ್ತಿ ಪ್ರೇರಿತ ಗುಣಗಾನವನ್ನು ಮೆಚ್ಚಿ ಮಹಾರಾಜರು ಶಾಲು ಜೋಡಿ ಹೊದಿಸಿ, ನೂರು ವರಹ ಬೆಳ್ಳಿ ನಾಣ್ಯಗಳ ಪಾರಿತೋಷಿಕವನ್ನಿತ್ತು ಗೌರವಿಸಿದ್ದರು.

ಮೈಸೂರಿನ ನಾಗರಿಕ ಸಮಿತಿ ಅಜ್ಜನವರನ್ನು ಸನ್ಮಾನಿಸಿ 'ಕೀರ್ತನ ಕವಿ' ಎಂಬ ಬಿರುದನ್ನು ಇತ್ತು ಬಂಗಾರದ ತೋಡಾ ಸಮರ್ಪಿಸಿತ್ತು.

ಇಷ್ಟಕ್ಕೇ ಎಲ್ಲ ಮುಗಿದಂತಾಗಲಿಲ್ಲ. ಅಜ್ಜ ಸೊಗಸಾಗಿ ಪಿಟೀಲು ನುಡಿಸಬಲ್ಲವರಾಗಿದ್ದರು. ಬೇಸರವಾದಾಗಲೆಲ್ಲ ವರದಾಚಾರ್ಯರು "ವೆಂಕಟರಾಮಯ್ಯನವರೆ, ಕೊಂಚ ಪಿಟೀಲು ನುಡಿಸುತ್ತೀರ ?" ಎಂದು ಪ್ರಾರ್ಥಿಸುವರು. ಆ 'ಕೊಂಚ', ಗಂಟೆಗಟ್ಟಲೆ ಆಗಿ ಇಬ್ಬರೂ ಸಂಗೀತಸಾಗರದಲ್ಲಿ ತನ್ಮಯರಾಗಿ ಬಿಡುವರು. ಅದ್ಭುತ ಪ್ರೌಢಿಮೆ, ಪ್ರಭುತ್ವ ಇದ್ದರೂ ಸರ್ಕಾರಿ ಸೇವೆಯ ಕಾರಣದಿಂದ ಆ ನಿಟ್ಟಿನಲ್ಲಿ ಹೆಚ್ಚಿನ ವೇಳೆ ದೊರಕಲಿಲ್ಲ. ಎಲ್ಲ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಬೇಕಾಗಿದ್ದುದರಿಂದ ಒಂದೆಡೆ ದೃಢವಾಗಿ ನಿಂತು ಏನನ್ನೂ ರೂಢಿಸಿಕೊಳ್ಳಲಾಗಲಿಲ್ಲ. ಊರಿಂದೂರಿಗೆ ತಿರುಗಿದರೂ ಶಿಸ್ತಿನ ಜೀವನ; Camp cot, ಅಡುಗೆಯ ಪದಾರ್ಥಗಳು, ಅಡುಗೆಯವ-ಎಲ್ಲ ಅಣಿ ಮಾಡಿಕೊಂಡೇ ಸುತ್ತುತ್ತಿದ್ದರು. ಮಧ್ಯೆ ಮಧ್ಯೆ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ. ಈ ಎಲ್ಲದರ ಮಧ್ಯೆ ಅಜ್ಜನ ಸಾಧನೆ ಹೆಚ್ಚಿನದೆಂದೇ ಹೇಳಬೇಕು.

ಅಜ್ಜನವರು ಸಹಕಾರಿ ಸಂಘಗಳ ತನಿಖಾಧಿಕಾರಿಯಾಗಿದ್ದಾಗಿನ ಕಾಲ. ಎಲ್ಲೆಲ್ಲಿಯೂ ಮಲೇರಿಯಾ, ಪ್ಲೇಗ್, ಕಾಲರಾ ಇತ್ಯಾದಿ ಸಾಂಕ್ರಾಮಿಕ ರೋಗಗಳ ಪಿಡುಗು ಅತಿಯಾಗಿತ್ತು. ಅಜ್ಜ ತಮ್ಮ ಸರ್ಕಾರಿ ಕಾರ್ಯಭಾರದಲ್ಲಿ ಆಗಾಗ್ಗೆ ಪ್ರವಾಸ ಹೋಗಬೇಕಾಗುತ್ತಿತ್ತು. ಅಂಥ ಸಂದರ್ಭಗಳಲ್ಲಿ ಅವರು ತಮ್ಮನ್ನು ಸಾರ್ವಜನಿಕ ಸೇವೆಗೂ ತೊಡಗಿಸಿಕೊಳ್ಳುತ್ತಿದ್ದರು. ಹಳ್ಳಿಯ ಜನಕ್ಕೆ ತಿಳಿವಳಿಕೆ ಕೊಡುವ ಬಗೆಬಗೆಯ ಕಾರ್ಯಕ್ರಮಗಳನ್ನು ನಿಯೋಜಿಸಿಕೊಳ್ಳುತ್ತಿದ್ದರು. ಸೊಳ್ಳೆಗಳು ವೃದ್ಧಿಯಾಗದಂತೆ ಏನು ಮಾಡಬೇಕು, ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು, ಪರಿಸರ ಮಾಲಿನ್ಯವನ್ನು ತಪ್ಪಿಸುವುದು ಹೇಗೆ, ಮದುವೆ ಮುಂಜಿಗಳಲ್ಲಿ ದುಂದುವೆಚ್ಚ ಮಾಡಬಾರದು ಏಕೆ ಮತ್ತು ಹೇಗೆ, ಜನಸಂಖ್ಯಾ ನಿಯಂತ್ರಣ ಏಕೆ ಅಗತ್ಯ - ಇವನ್ನೆಲ್ಲ ಜನರಿಗೆ ಮನಮುಟ್ಟುವಂತೆ ವಿವರಿಸುತ್ತಿದ್ದರು; ಈ ಸಂಬಂಧದ ಪದಗಳನ್ನೂ ಕಟ್ಟಿ ಜನರಿಂದ ಹಾಡಿಸುತ್ತಿದ್ದರು.

ಕಡೆಗಾಲದಲ್ಲಿ ಮೈಸೂರಿನ ಹೊಸಕೇರಿ ಏಳನೇ ಕ್ರಾಸ್‌ನಲ್ಲಿ ಮಾದೇಶ್ವರನ ಗುಡಿಯ ಪಕ್ಕದಲ್ಲಿ ಸ್ವಂತ ಮನೆ ಮಾಡಿದ್ದರು. ಆರೋಗ್ಯ ಅಷ್ಟು ಸರಿಯಾಗಿರಲಿಲ್ಲ. ಅವರು ಕೊನೆಯುಸಿರು

ಎಳೆದಿದ್ದು ಇಲ್ಲೇ. ಅಜ್ಜಿ....ಅವರೊಬ್ಬ ದೇವತೆ. ಮನುಷ್ಯರಲ್ಲಿ ಮನೆ ಮಾಡಬಹುದಾದ ಯಾವುದೊಂದು 'ಬೇಡದ್ದನ್ನೂ' ನಾನು ಅವರಲ್ಲಿ ಕಾಣಲಿಲ್ಲ. ನಿರ್ಮಲವಾದ ಮನಸ್ಸು, ಯಾವುದೇ ಕಾರಣಕ್ಕೂ ಯಾರಿಗೂ ಕಿಂಚಿತ್ತಾದರೂ ಕೇಡನ್ನು ಅರೆನಿಮಿಷವೂ ಬಯಸಿದ್ದಿಲ್ಲ. ಸಾಕ್ಷಾತ್ ಅನ್ನಪೂರ್ಣೇಶ್ವರಿ. ಅವರು ಮಾಡುತ್ತಿದ್ದ 'ಇಡ್ಲಿಗೆ' (ತಟ್ಟೆ ಇಡ್ಲಿ) ಮರೆಯುವ ಹಾಗೆಯೇ ಇಲ್ಲ. ಆಗತಾನೇ ಬಂದಿದ್ದ ಅನ್ನಪೂರ್ಣ ಕುಕ್ಕರ್ ಬಳಸಿ ಅಡುಗೆ ಮಾಡುತ್ತಿದ್ದರು. ಸುಮ್ಮನೆ ಕಣ್ಣಳತೆಯಲ್ಲೇ ಎಲ್ಲವೂ. ಒಂದೊಂದು ಪದಾರ್ಥವೂ ಅಮೃತ. ಭಿಕ್ಷೆಗೆ ಬರುತ್ತಿದ್ದ ದಾಸಯ್ಯರೂ 'ಅಮ್ಮ'ನವರಿಗೆ ನಮಸ್ಕರಿಸಿ ಆಶೀರ್ವಾದ ಬೇಡಿ, ಆರೋಗ್ಯ ವಿಚಾರಿಸಿ, ಭಿಕ್ಷೆ ಪಡೆಯುತ್ತಿದ್ದರು. ಅಜ್ಜಿಯೂ ಅವರ ಕುಟುಂಬದ ಒಬ್ಬೊಬ್ಬರ ಬಗ್ಗೆಯೂ ಅಕ್ಕರೆಯಿಂದ ಯೋಗಕ್ಷೇಮ ವಿಚಾರಿಸುವರು.

ಅಂದಹಾಗೆ, ದಾಸಯ್ಯ ಎಂದರೆ ಕೇವಲ ಕೈ ನೀಡುವವರೆಂದಲ್ಲ. ಅವನೂ ಒಬ್ಬ ಗೌರವಾನ್ವಿತ ವ್ಯಕ್ತಿ. ತನ್ನದೇ ಆದ ಶಿಸ್ತಿಗೊಳಪಟ್ಟವನು. ಶ್ವೇತವರ್ಣದ ಕಚ್ಚೆಪಂಚೆ, ಕಸೆ ಅಂಗಿ, ಅಂಗ ವಸ್ತ್ರ, ಜರೀಪೇಟ, ಚಿನ್ನದಂತೆ ಹೊಳೆಯುವ ಭವನಾಸಿ, ಸೂರ್ಯಕಿರಣಗಳನ್ನು ಪ್ರತಿಫಲಿಸುವ ಜಾಗಟೆ, ಬೆಳ್ಳಗೆ ಬೆಳಗುವ ಶಂಖ, ಇದು ಅವನ ದುಸ್ತು. ಎಲ್ಲಕ್ಕಿಂತ ಮಿಗಿಲಾಗಿ ನಿರ್ವಂಚನೆಯಿಂದ ತನ್ನ ಭೇಟಿಯ ಕುಟುಂಬಗಳವರಲ್ಲಿ ಒಬ್ಬನಾಗಿ ಬೆರೆತು, ಅವರ ಸುಖದುಃಖಗಳಿಗೆ ಸ್ಪಂದಿಸುವ ಗುಣವನ್ನು ಕಂಡರೆ ಯಾರಾದರೂ ಕೈ ಮುಗಿದಾರು.

ಅಜ್ಜಿ ಅಡಕೆಗೆ ಬಣ್ಣ ಕಟ್ಟುವುದನ್ನು ನೋಡಬೇಕು. ಹದವಾಗಿ ಕತ್ತರಿಸಿದ ಬೆಟ್ಟದಪುರದ ಅಡಕೆ, ಘಂ ಎನ್ನುವ ಹಸುವಿನ ತುಪ್ಪ, ಕೇಸರಿ, ಪಚ್ಚಕರ್ಪೂರ, ಡೈಮಂಡ್ ಸಕ್ಕರೆ, ಏಲಕ್ಕಿ, ಲವಂಗ, ಜಾಯಿಕಾಯಿ, ಜಾಪತ್ರೆ...ಓಹ್...ಅದರ ರುಚಿಯೇ ರುಚಿ. ಜತೆಗೆ ಆಗ ತಾನೆ ಕಿತ್ತು ತರುತ್ತಿದ್ದ ಬುತ್ತಿಚಿಗುರು ವೀಳೆಯದೆಲೆ. ಚನ್ನಪಟ್ಟಣದ ಕೆನೆಸುಣ್ಣ ! ಆಗಿನ ಕಾಲವೇ ಒಂದು ರೀತಿಯದಾಗಿತ್ತು. ನಂಜನಗೂಡಿನ ರಸಬಾಳೆ, ಬಾರ್ಸಿ ಬೇಳೆ, ಈರನಗೆರೆ ಬದನೆಕಾಯಿ, ಚಿಕ್ಕಮಗಳೂರಿನ ಕಾಫಿಪುಡಿ. ಮನೆ ಮುಂದೆ ಕರೆದು ಕೊಡುವ ಎಮ್ಮೆ ಮತ್ತು ಹಸು ಹಾಲು, ಪರಿಶುದ್ಧವಾದ ಮತ್ತು 'ಕಲಬೆರಕೆ' ಎಂಬ ಪದವೇ ತಿಳಿಯದ ಮಂಡ್ಯದ ಬೆಣ್ಣೆ, ವಿಹಿತವಾಗಿ ಎಲ್ಲವನ್ನೂ ಉಪಯೋಗಿಸಿಕೊಳ್ಳುವ ಅಜ್ಜಿ.

ಇವರ ಮಕ್ಕಳೇ ಅಮ್ಮಯ್ಯಮ್ಮನವರು (ನಮ್ಮ ಸೋದರತ್ತೆ). ಅನಂತರ ನಮ್ಮ ದೊಡ್ಡಪ್ಪನವರು ಶ್ರೀ|| ಎಸ್.ಆರ್. ಸುಬ್ಬರಾಯರು. ಅವರ ಅನಂತರದವರು ನನ್ನ ತಂದೆಯವರು ಶ್ರೀ|| ಎಸ್.ಆರ್. ನಾರಾಯಣಸ್ವಾಮಿಯವರು. ನನ್ನ ದೊಡ್ಡಪ್ಪನವರ ಮಕ್ಕಳಲ್ಲಿ ವೆಂಕಟರಾಂ ಜ್ಯೇಷ್ಠ. ಕಾವೇರ ಎನ್ನುವ ಮಗು ಬಲುಬೇಗ ಜೀವನ ಮುಗಿಸಿಕೊಂಡಿತು. ಅಹಲ್ಯೆ ಅನಂತರದವಳು, ಶ್ರೀ ವೆಂಕಟರಾಮಯ್ಯನವರ (ಇವರು ಹೈಸ್ಕೂಲ್‌ನಲ್ಲಿ ಹೆಡ್‌ಮಾಸ್ತರರಾಗಿದ್ದರು) ಕೈಹಿಡಿದು ದಾನಧರ್ಮಗಳಲ್ಲಿ ಸಾಟಿಯಿಲ್ಲದೆ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಾಳೆ. ರಮೇಶ ಅನಂತರದವನು, ಅಮೆರಿಕದಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿ ಅಲ್ಲಿಯೇ ನೆಲೆಸಿದ್ದಾನೆ. ದೊಡ್ಡಪ್ಪನವರು ಬಲು ಶಿಸ್ತಿನವರು. ಒಂದು ಸಣ್ಣ ಕಾರಣಕ್ಕೇ ಆಗಲಿ, ಸುಳ್ಳು ಹೇಳಿದವರಲ್ಲ. ಬಿ.ಎ., ಪದವೀಧರರಾಗಿ ಆದಾಯ ತೆರಿಗೆ ಇಲಾಖೆಯಲ್ಲಿ manager ಆಗಿದ್ದರು. ಗರಿಗರಿಯಾಗಿ ಇಸ್ತ್ರಿ ಮಾಡಿದ ಸೂಟು, ಟೈ, ಷರಟಿಗೆ Crementz gold studs, cuff links, ಸೊಗಸಾದ neck-tie, ಜರಿ ಅಂಚಿನ ಮೈಸೂರು ಪೇಟ, ಫಳಫಳನೆ ಹೊಳೆಯುವಂತೆ Polish ಮಾಡಿದ Shoes, ಕೊಂಚವೂ ವಾಸನೆ ಬರದ ಕಾಲುಚೀಲ, Gold tiepin, Pocket-watch ಇವು ಅವರ ದಿನನಿತ್ಯದ ಉಡುಪು. ಇಷ್ಟಾಗಿ ತಲೆಯಲ್ಲಿ ಅಜ್ಜನವರಂತೆ ಶಿಖೆ ! ಸೈಕಲ್ ಏರುವಾಗ ಷರಾಯಿ ಕೊಳೆಯಾಗದಂತೆ clips, ಒಟ್ಟಿನಲ್ಲಿ A-one connoisseur. ಹೊರಗೆ, ಒಳಗೆ ಬಹುಪರಿಶುದ್ಧ.

ಅವರ ಪತ್ನಿ ಮಾ|| ಪುಟ್ಟಲಕ್ಷ್ಮಮ್ಮನವರು ಅಸಿಸ್ಟೆಂಟ್ ಕಮೀಷನರ್ ಶ್ರೀ ವೆಂಕಟಕೃಷ್ಣಪ್ಪನವರ ಪುತ್ರಿ. ವೆಂಕಟಕೃಷ್ಣಪ್ಪನವರು ದೊಡ್ಡ ಸಂಗೀತ ವಿದ್ವಾಂಸರು. ಅನೇಕ ಶಾಸ್ತ್ರಗ್ರಂಥಗಳ ಕರ್ತೃ. ಅವರು ರಚಿಸಿದ ಗ್ರಂಥಗಳಲ್ಲಿ ಅನೇಕವು ಪಠ್ಯಪುಸ್ತಕಗಳಾಗಿವೆ. ದೊಡ್ಡಮ್ಮನವರಿಗೆ ದೊಡ್ಡಪ್ಪನವರಂತೆಯೇ ಗುಣ. ಮಡಿ ಮೈಲಿಗೆಯಲ್ಲಿ ಒಂದು ಕೈ ಮುಂದು. ಇಂದಿಗೂ ತಮ್ಮ ಇಳಿವಯಸ್ಸಿನಲ್ಲೂ ಅಡುಗೆ ಕೆಲಸ ತಾವೇ ಮಾಡುತ್ತಾರೆ. ಅದೇ ಮಡಿ. ಸ್ವಂತವನ್ನೆಂದಿಗೂ ಎಣಿಸಿದವರಲ್ಲ. ಅವರ ಇಡೀ ಜೀವನ ಮನೆ ಹಾಗೂ ಮಕ್ಕಳ ಯೋಗಕ್ಷೇಮ, ಅತಿಥಿ ಸತ್ಕಾರ, ಬಿಡುವಿಲ್ಲದ ಮನೆಗೆಲಸ ಇವುಗಳಲ್ಲಿ ತೇದುಹೋಗಿದೆ.

ಅನಂತರದವರು ನನ್ನ ತಂದೆಯವರಾದ ಶ್ರೀ|| ಎಸ್.ಆರ್. ನಾರಾಯಣಸ್ವಾಮಿ. ಬಿ.ಎ, ಎಲ್.ಎಲ್.ಬಿ., ಪದವಿ ಪಡೆದು Lawyer ಆಗಿ ಮೈಸೂರಿನಲ್ಲಿದ್ದು ಅನಂತರ ಬೆಂಗಳೂರಿನ Land Development Bank ನಲ್ಲಿ ಕೇಸ್ ವರ್ಕರ್ ಆಗಿದ್ದರು.

ಅಣ್ಣ ತಮ್ಮಂದಿರೀರ್ವರೂ ಸಾಕ್ಷಾತ್ ರಾಮಲಕ್ಷ್ಮಣರಂತೆ. ತಮ್ಮನಲ್ಲಿ ಅತಿಶಯವಾದ ಪ್ರೀತಿ, ಮಮತೆ ದೊಡ್ಡಪ್ಪನವರಿಗೆ.

ನಮ್ಮ ತಂದೆಯವರಿಗಂತೂ ಅಣ್ಣನಲ್ಲಿ ಅಪಾರವಾದ ಭಕ್ತಿ. ದೊಡ್ಡಪ್ಪನವರಿಗೆ transfer ಆದ ಸಮಯ ಬಿಟ್ಟರೆ ಉಳಿದಂತೆ ಯಾವಾಗಲೂ ಇಬ್ಬರದೂ ಒಟ್ಟುಕುಟುಂಬ. ನಿರ್ವಹಣೆಯ ಭಾರ ದೊಡ್ಡಪ್ಪನವರದ್ದು. ನನ್ನ ಹಣ, ನನ್ನ ಮಕ್ಕಳ ಖರ್ಚು ಎಂದು ಎಂದಿಗೂ ಇರಲೇ ಇಲ್ಲ. ಮನೆಯಲ್ಲಿ ಎಲ್ಲ Selected items. Rowentries cocoa, Fry's Breakfast, Salted cocoa, Ovaltine, Nestle chocolates, Huntley Palmers Biscuits, Cars nice Biscuits (ಈ ಬಿಸ್ಕತ್ತಿನ ಟಿನ್ ಒಳಗೆ ಅಲ್ಯೂಮಿನಿಯಂ Foilನ seal ಇರುತ್ತಿತ್ತು. open ಮಾಡುತ್ತಿದ್ದಂತೆಯೇ ಪರಿಮಳ ಮನೆಯೆಲ್ಲ ವ್ಯಾಪಿಸುತ್ತಿತ್ತು) Parker gold cap pen, Waterman's sheaffers ಹೀಗೆ ಅನೇಕ ಬಗೆಯ ಉತ್ಕೃಷ್ಟ penಗಳು; Piageot, ವೆಸ್ಟ್‌ಎಂಡ್, ರೋಲೆಕ್ಸ್, ಒಮೇಗ ಮುಂತಾದ ಗಡಿಯಾರಗಳು. ರಾಜಭೋಗದ ದಿನಗಳು.

ತಂದೆ-ತಾಯಿ

ತಂದೆಯವರದು ಬಹುಮುಖ ಪ್ರತಿಭೆ. ವೃತ್ತಿಯಲ್ಲಿ ಅಸಮಾನರು. ಅವರು ಕೋರ್ಟಿನಲ್ಲಿ file ಮಾಡುವ Plaints ಇತ್ಯಾದಿಗಳನ್ನು ಅವರ ಸ್ನೇಹಿತರು ಸರದಿ ಮೇಲೆ ಕಿತ್ತುಕೊಂಡು ಓದಿ ಆನಂದಿಸುತ್ತಿದ್ದರು. ಆ ಭಾಷೆ, ವಸ್ತು, ವಿಚಾರಗಳನ್ನು ಮಂಡಿಸುವ ಕ್ರಮ ಅದ್ಭುತ.

ಹಾಗೇ ಸಂಗೀತ ವಿದ್ವಾಂಸರು ಸಹ. ಅವರು ಬರೆದ ಉರುಟಣೆ, ಹಸೆಗೆ ಕರೆವ ಹಾಡುಗಳು ಇತ್ಯಾದಿ ಅನೇಕ ರಚನೆಗಳನ್ನು ಇಂದಿಗೂ ನಮ್ಮ ಬಂಧು ಭಗಿನಿಯರು ಜೋಪಾನ ಮಾಡಿದ್ದಾರೆ. ಎಲ್ಲ ವಿಧದ ವಾದ್ಯಗಳನ್ನೂ ನುಡಿಸಬಲ್ಲವರಾಗಿದ್ದರು. ಇಂಗ್ಲಿಷ್‌ನಲ್ಲಿ ಅಸಾಮಾನ್ಯ ಪಾಂಡಿತ್ಯ. ಯಾವುದಾದರೂ ಪದಕ್ಕೆ ಅರ್ಥ ಬೇಕಾದರೆ, "Dictionary ಅಂತ ಯಾಕೆ ಕಷ್ಟಪಡ್ತೀರಿ. ನಾರಾಯಣಸ್ವಾಮೀನ ಕೇಳಿ" ಎನ್ನುವ ಮಟ್ಟ ಮುಟ್ಟಿದ್ದರು. ಅವರು ಲೇಖನಗಳನ್ನು ಬರೆದರೆ ಆಂಗ್ಲೇಯರೇ ಮೂಗಿನ ಮೇಲೆ ಬೆರಳಿಡಬೇಕು, ಹಾಗಿರುತ್ತಿತ್ತು. ಮಾತುಗಾರಿಕೆಯೊ, ಸುತ್ತಲವರಿಗೆ ಹೊತ್ತು ಹೋಗುವುದೇ ಗೊತ್ತಾಗುತ್ತಿರಲಿಲ್ಲ. ಜ್ಯೋತಿಶ್ಶಾಸ್ತ್ರವನ್ನು ಬಲ್ಲವರಾಗಿದ್ದರು. ರತ್ನಗಳ ಪರೀಕ್ಷೆಯಲ್ಲಿ ಅದ್ವಿತೀಯರು. ತೀರ ಅಪರೂಪದ ವ್ಯಕ್ತಿತ್ವ. ಅಷ್ಟೇ ನಿಗರ್ವಿ. ಅಹಂಕಾರದ ಎಳೆ ಇನಿತೂ ಸುಳಿಯಲಿಲ್ಲ. ಮೃದುಭಾಷಿ. ಒಂದು ಕೆಟ್ಟ ಪದವೂ ಅವರಿಂದ ಬಂದದ್ದು ಕಾಣೆ. ಒಂದೇ ಒಂದು ದಿನವಾಗಲಿ, ಎಂತಹುದೇ ಅಪರಾಧವಾಗಲಿ, ರೇಗಿದ್ದು ನನ್ನ ಅನುಭವದಲ್ಲೇ ಇಲ್ಲ. ಸಾಕ್ಷಾತ್ ದೇವರು.

ಬೆಟ್ಟದಪುರದ ಶ್ರೀ ಜೋಯಿಸರು - ಕಾಡಮ್ಮ ನಮ್ಮ ತಂದೆಯವರ parents in-law. ಜೋಯಿಸರು uncrowned king ಇದ್ದಾಗೆ. ಅತ್ಯಂತ ಗೌರವಾನ್ವಿತರು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು. ಮೊದಲನೆಯವರು ಸಾತಮ್ಮ. ಲಾಯರ್ ಶ್ರೀನಿವಾಸಯ್ಯನವರ ಪತ್ನಿ. ಎರಡನೆಯವರೇ ಸುಭದ್ರಮ್ಮ- ನನ್ನ ತಾಯಿಯವರು.

ನಮ್ಮ ದೊಡ್ಡಮ್ಮ ಸಾತಮ್ಮನವರಿಗೆ ಒಬ್ಬನೇ ಗಂಡು ಮಗ ಆನಂದರಾಮು (Hindusthan Aeronautics ನಲ್ಲಿ Assistant General Manager ಆಗಿದ್ದು ನಿವೃತ್ತರಾಗಿದ್ದಾರೆ). ಇವರ ಕೈಹಿಡಿದ ಪತ್ನಿ ರಾಜಾರಾಯರ ಪುತ್ರಿ ಸುಜಯ. ದೊಡ್ಡಮ್ಮನವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು: ಅರವಿಂದ, ಸುಕನ್ಯ, ಪರಿಮಳ, ಸುವೇಣಿ.

ನನ್ನ ತಾಯಿಯ ವರ್ಣ ಬಿಳುಪಲ್ಲದಿದ್ದರೂ ತಿದ್ದಿದ ಬೊಂಬೆ. ನಂಬಲಾರದಷ್ಟು ಉದ್ದ ಅವರ ಜಡೆ. ಪಾದದವರೆಗೂ ಇದ್ದಿತು. ಎಲ್ಲ ಸರಿ. ಅಲ್ಪಾಯು. ನನಗೆ ಜನ್ಮ ನೀಡಲೆಂದೇ ಭೂಮಿಗೆ ಬಂದರೇನೋ. ಕರ್ತವ್ಯ ಮುಗಿಯಿತು. ಕಾಲನ ಅತಿಥಿಯಾದರು. ದೀರ್ಘ ಕಾಲದ ಅನಾರೋಗ್ಯದಲ್ಲಿ ಬಳಲಿ, ಪ್ರಥಮ ಸಂತಾನ ಗಂಡಾಯಿತು ಎಂಬ ಸಂತೋಷ ಸಂಭ್ರಮಗಳನ್ನೂ ಅನುಭವಿಸದೆ ಉಸಿರೆಳೆದರು. ಅವರ ಅನಾರೋಗ್ಯ ಕಾರಣದಿಂದ ನನ್ನನ್ನು ಎತ್ತಿಕೊಳ್ಳುವುದಿರಲಿ ಅವರ ಸಮೀಪಕ್ಕೂ ಕಳುಹಿಸುತ್ತಿರಲಿಲ್ಲ. ದೂರದಿಂದಲೇ ನೋಡಿ ಕಣ್ಣುಗಳಲ್ಲೇ ತಮ್ಮ ಸಂತಸ, ನೋವು ತೋಡಿಕೊಳ್ಳುತ್ತಿದ್ದರು. ನಾನು ಭೂಸ್ಪರ್ಶ ಮಾಡಿದ್ದಾದರೂ ಬೆಟ್ಟದ ಪುರದಲ್ಲಿ- ಮುಗಿಯುತ್ತ ಬಂದ ಸಾವಿರದ ಒಂಬೈನೂರ ಮೂವತ್ಮೂರನೇ ಇಸವಿ, ಡಿಸೆಂಬರ್ ಮೂವತ್ತನೆ ದಿನ.

ಭಾರಕ್ಕೆ ಎಲ್ಲಿಯಾದರೂ ಮಗುವನ್ನು ಎತ್ತಿ ಹಾಕಿಬಿಟ್ಟಾರು ಎಂದು ಬೆದರಿ ನನ್ನನ್ನು ಎತ್ತಿಕೊಳ್ಳಲು ಯಾರಿಗೂ permission ಕೊಡುತ್ತಿರಲಿಲ್ಲ ನನ್ನ ಅಜ್ಜ-ಅಜ್ಜಿ. ಹೆಜ್ಜೆ ಕಾವಲಿನಂತೆ ಕಾಯುತ್ತಿದ್ದರು ಎಂದರೆ ನನ್ನ size ಊಹಿಸಿಕೊಳ್ಳಬಹುದು. ಅಜ್ಜಿ ಮರುಗ, ಪಚ್ಚೆತೆನೆ ಎಲ್ಲ ಸೇರಿಸಿ ಹೂ ಕಟ್ಟಿ ಸುಗಂಧದೆಣ್ಣೆ ಹಚ್ಚಿ ಲಕ್ಷಣವಾಗಿ ಬಾಚಿ ಜಡೆ ಹೆಣೆಯುತ್ತಿದ್ದರು. ಮಕ್ಮಲ್ ಚಡ್ಡಿ, ಮಕ್ಮಲ್ ಕೋಟು, gold standard ಷರಟು, pure ಜರಿ ಕೆಲಸ ಮಾಡಿದ ಮಕ್ಮಲ್ ಟೋಪಿ ಇವುಗಳಲ್ಲಿ ಅಲಂಕರಿಸಿ perambulator ನಲ್ಲಿ ಕುಳ್ಳಿರಿಸಿ ಅಪ್ಪ ನನ್ನನ್ನು ಸಂಜೆ ಹೊತ್ತು ಕರೆದೊಯ್ಯುತ್ತಿದ್ದರೆ ಯಾರಾದರೂ ಒಮ್ಮೆ ತಿರುಗಿ ನೋಡಬೇಕು. ಆದರೆ ನನ್ನ 'ವೇಣೀ ಸಂಹಾರ' ಬಹು ಬೇಗ ಆಯಿತು. ತಮ್ಮಂತೆಯೇ ತಂದೆಯವರು ನನಗೆ ಕ್ರಾಪ್ ಮಾಡಿಸಿದರು.

ಮನೆಯಲ್ಲಿ ನಾನು ನೆಲದ ಮೇಲೂ ಕಾಲಿಡುವಂತಿಲ್ಲ. ಅಪ್ಪನ ತೋಳು, ಅಜ್ಜನ ತೋಳು. ಕಣ್ಣಿನಲ್ಲಿ ಒಂದು ಹನಿಯಾಡಿತೋ ಮುಗಿಯಿತು, ಪ್ರಳಯವೇ ಆದ ಹಾಗೆ. ಪಾರಿಜಾತ, ಕಲ್ಪವೃಕ್ಷ, ಕಾಮಧೇನುಗಳ ಅಂಶವೆಲ್ಲ ಕೇಂದ್ರೀಕರಿಸಿ ಇಂಥದ್ದು ಬೇಕೆಂದರೆ ತೀರಿತು. ಹಾಜರ್. ಯಶೋದೆ ಒಬ್ಬಳೇ ಇದ್ದಳು ಗೋಪಾಲನಿಗೆ. ನನಗೆ ಮನೆಯವರೆಲ್ಲ ಯಶೋದೆಯರು.

ತೀರ್ಥರೂಪರಿಗೆ ಪತ್ನೀವಿಯೋಗವಾದಾಗ ನನಗೆ ಮೂರು ವರ್ಷ. ಅವರಿಗೂ ಸಣ್ಣ ವಯಸ್ಸು. ಎಲ್ಲರ ಬಲವಂತಕ್ಕೆ ಕಟ್ಟುಬಿದ್ದು ಎರಡನೆಯ ಮದುವೆ ಆಗಬೇಕಾಯಿತು. ಚಿಕ್ಕಮಗಳೂರಿನ Coffee Curing Works ನಲ್ಲಿ manager ಆಗಿದ್ದ ಶ್ರೀ ರಾಮಸ್ವಾಮಿ (ದೊರೆಸ್ವಾಮಿ ಎಂದು ಕರೆಯುವುದು ವಾಡಿಕೆ)ಯವರ ಸಹೋದರಿ ಮಾ॥ ಜಯಲಕ್ಷ್ಮಮ್ಮನವರು ನನ್ನ ತಾಯಿಯವರು ತೆರವು ಮಾಡಿದ ಸ್ಥಾನವನ್ನು ತುಂಬಿದರು. ಅವರಿಗೂ ಮೂರು ಮಕ್ಕಳು: ದಾಕ್ಷಾಯಿಣಿ, ಅನಂತು ಮತ್ತು ಶ್ರೀದೇವಿ. ದಾಕ್ಷಾಯಿಣಿ ಬಿಸಿನೆಸ್ Magnate ಅನಂತರಾವ್ ಅವರನ್ನು ಮದುವೆಯಾಗಿ ನರೇಂದ್ರನೆಂಬ ಮಗನನ್ನು ಪಡೆದಿದ್ದಾಳೆ. ನರೇಂದ್ರನಿಗೂ ಒಂದು ಹೆಣ್ಣು ಮಗು. ಅನಂತರಾಂ ಅಡ್ವೋಕೇಟ್ ಆಗಿದ್ದಾರೆ. ಪತ್ನಿ ಶ್ರೀ ಗೋಪಾಲಕೃಷ್ಣ ಅವರ ಮಗಳು ಗಾಯತ್ರಿ. ಅವರಿಗೂ ಒಬ್ಬ ಮಗ ಸಂತೋಷ್. ಶ್ರೀದೇವಿಯ ಪತಿ ಜಯಪ್ರಕಾಶ್ - ಆದಾಯತೆರಿಗೆ ಆಫೀಸರ್. ಶ್ರೀದೇವಿ Canara Bankನಲ್ಲಿ ಆಫೀಸರ್ ಆಗಿದ್ದಾಳೆ. ಇವರಿಗೆ ಇಬ್ಬರು ಹೆಣ್ಣುಮಕ್ಕಳು.

ನನಗೆ ಮೊದಲೇ ಮಿತಿಯಿಲ್ಲದ ಮುದ್ದು ತೋರಿಸುತ್ತಿದ್ದ ಅಜ್ಜನವರ ಅಕ್ಕರೆಗೆ ಈಗ ಮೇರೆಯೇ ಇರಲಿಲ್ಲ. ಬೇರೆಯವರಿಗೆ ಮುಜುಗರವಾಗುವ ಮಟ್ಟಿಗೂ ಅದು ಬೆಳೆಯಿತು. ಯಾವುದೇ ಕಾರಣಕ್ಕೂ ನನ್ನ ಕಣ್ಣಲ್ಲಿ ಹನಿ ನೀರು ಜಿನುಗಬಾರದು. ನಡೆದರೆ ಕಾಲು ಸವೆದುಹೋಗುವುದೆಂಬ ಭಾವ.

ತಾಯಿಯವರ ಶ್ರಾದ್ಧ ಬಂದಾಗ ಕರೆದು, “ಇವತ್ತು ಏನು ಗೊತ್ತಾಪ್ಪಾ” ಎಂದು ಕೇಳಿ ತಾವೇ ಬಿಕ್ಕಿ ಅಳುವರು. ಜೀವನದಲ್ಲಿ ನಾನಾ ರೂಪದ ಬಂಧನಗಳೇ ಹೆಚ್ಚೋ ಕಾಣೆ. ಏಕೆ ಹೀಗೆ ಎಂದು ಒಮ್ಮೊಮ್ಮೆ ಅನ್ನಿಸುವುದು ಉಂಟು. ನನಗೆ ಮಕ್ಕಳಾದಾಗ ಅಜ್ಜನವರು ನನಗೆ ತೋರಿಸಿದ ಮುದ್ದಿನಲ್ಲಿ ಒಂದು ಭಾಗದಷ್ಟೂ ಅವರ ಪಾಲಿಗೆ ನೀಡಿದ್ದಿಲ್ಲ. ನಾಟಕವಾಯಿತು ನಾನಾಯಿತು. ಹೀಗೊಂದು ಜೀವನಕ್ರಮ.

ಇನ್ನು ಅಜ್ಜಿ...ಆಗ ನಾವು ಬೆಂಗಳೂರಿನ Bull Temple Road ನಲ್ಲಿದ್ದೆವು. ಅಜ್ಜನವರು ಮೈಸೂರಿನಲ್ಲಿಯೇ ಇಹಲೋಕದ ಯಾತ್ರೆ ಮುಗಿಸಿಯಾಗಿತ್ತು. ಅಜ್ಜಿ ‘ಮಡಿ’ ಆಗಿದ್ದರು. ರಾತ್ರಿ ವೇಳೆ ಊಟವಿಲ್ಲವಾಗಿ ನಮ್ಮ ದೊಡ್ಡಪ್ಪನವರು ಅವರಿಗೆ ಫಲಾಹಾರಕ್ಕೆಂದು ಹಣ್ಣು ಹಂಪಲು ತರುತ್ತಿದ್ದರು. ಅವರು ಅದನ್ನು ತಾವು ತಿನ್ನದೆ ಸೆರಗಿನಲ್ಲಿ ಮುಚ್ಚಿಟ್ಟುಕೊಂಡು ಗೇಟ್ ಬಳಿ ನಾನು ಆಟ ಮುಗಿಸಿ ಬರುವುದನ್ನೇ ಕಾಯುತ್ತಿದ್ದು, ನನಗೆ ತಿನ್ನಿಸಿ ತೃಪ್ತಿಪಡುತ್ತಿದ್ದರು. ಒಮ್ಮೊಮ್ಮೆ ಗಲಾಟೆ ಮಾಡುತ್ತಿದ್ದೆ. “ನೀವು ಉಪವಾಸವಿದ್ದು ಹೀಗೆ ಮಾಡುವುದು ಸರಿಯಲ್ಲ. ನನಗೆಂದೇ ಬೇರೆ ಕೊಡುವುದಿಲ್ಲವೆ” ಎಂದು ಕೂಗಾಡುತ್ತಿದ್ದೆ. ಅಂಥ ಹೊತ್ತಿನಲ್ಲಿ ಬಲವಂತವಾಗಿ ಕೈಯಲ್ಲಿಟ್ಟು ಒಳಕ್ಕೆ ಓಡಿಬಿಡುತ್ತಿದ್ದರು. ಇಲ್ಲದಿದ್ದರೆ “ನಿನ್ನನ್ನು ಮುಟ್ಟಿದ್ದಾಯಿತು; ಮಡಿ ಕೆಲಸ ಮುಗಿಯಿತಲ್ಲ. ಇನ್ನು ಹೇಗೆ ತಾನೆ ತಿನ್ನುವುದು ಸಾಧ್ಯ” ಎಂದು ಮಡಿ ಮೈಲಿಗೆ ತರ್ಕ ಮುಂದಿಡುವರು ! ಮುಂದೆ ಮದುವೆಯಾದ ಮೇಲೆ ಶಬರಿಯ ಹಾಗೆ ತಪಸ್ಸು ಮಾಡುತ್ತ ಕಾಯುತ್ತ ಕುಳಿತಿರುತ್ತಿದ್ದ ನನ್ನಾಕೆಗೆ ಪ್ರೇಮದಿಂದ ಕೊಂಚವಾದರೂ ತಿನ್ನಿಸಲು ‘ಪುರಸತ್ತು’ ಇರುತ್ತಿರಲಿಲ್ಲ ನನಗೆ ! ತಲೆ ತುಂಬ, ಮುಂದಿನ ನಾಟಕ ಹೀಗೆ ಮಾಡಬೇಕು, ಇಂಥ ಸಂಗೀತ, ಇಂಥ ರಂಗಸಜ್ಜಿಕೆ, ಇಂಥ ಪ್ರಸಾಧನ, ಇಂಥ ಸಾಹಿತ್ಯ, ಹೀಗೆ ಹತ್ತು ಹಲವು ಬಗೆಯ ಯೋಚನೆಗಳು. ‘ಅದರ’ ಅಗತ್ಯ ಕಂಡಿತೇ ಹೊರತು, ‘ಇದರ’ ಅಗತ್ಯ ತೋರಲಿಲ್ಲವಲ್ಲ ಎಂಬ ವಿಷಾದದ ಎಳೆ ಕಾಣಿಸಿಕೊಳ್ಳುವುದರಲ್ಲಿ ‘ಪಶ್ಚಿಮ ಘಟ್ಟ’ಗಳನ್ನು ಮುಟ್ಟಿಯಾಯಿತು !

ವಿದ್ಯಾಭ್ಯಾಸ

ನನ್ನ ವಿದ್ಯಾಭ್ಯಾಸವೆಲ್ಲ ಮೈಸೂರು, ಬೆಂಗಳೂರಿನಲ್ಲಾಯಿತು. ಮೈಸೂರಿನ Government Primary School (Gadi chowka), Govt. Middle School, Lakshmipuram ಮತ್ತು ಬೆಂಗಳೂರಿನ Basavanagudi Middle School ವಿದ್ಯಾರ್ಥಿಯಾಗಿದ್ದೆ. ಮೊದಲಿನಿಂದ ನನಗೆ ಶಾಲೆ ವಿದ್ಯಾಭ್ಯಾಸ ಎಂದರೆ allergy. ಶಾಲೆಯಿಂದಾಚೆ ಬಂದನಂತರ ಒಮ್ಮೆಯೂ ಪಠ್ಯಪುಸ್ತಕಗಳನ್ನು ಮುಟ್ಟುತ್ತಿರಲಿಲ್ಲ. ನಮ್ಮ ದೊಡ್ಡಪ್ಪನವರ ಮಗ ವೆಂಕಟರಾಂ ಅಷ್ಟೂ ಅಷ್ಟೂ ಓದಿಗೆ ಅಂಟಿಕೊಂಡವರು. ಗಣಿತದಲ್ಲಿ ನೂರಕ್ಕೆ ನೂರು. ನನಗೆ ಈ distinction or rank ಇದೆಲ್ಲ ಗಳಿಸಬೇಕೆಂದು ಅನ್ನಿಸಲೇ ಇಲ್ಲ. ಆಸಕ್ತಿ ಮೂಡಲೇ ಇಲ್ಲ. ಹಾಗೆಂದ ಮಾತ್ರಕ್ಕೆ ಡಮಡ್ಡನೆಂದೇನೂ ಅಲ್ಲ. ಓದಲಿಲ್ಲವೆಂಬ ಕಾರಣದಿಂದಾಗಿ ಯಾವುದೇ ತರಗತಿಯಲ್ಲೂ ಅನುತ್ತೀರ್ಣನಾದದ್ದೇ ಇಲ್ಲ. ಪ್ರೈಮರಿ ಶಾಲೆಗೆ ಹೋಗಬೇಕಾದರೆ ಮನೆಯಲ್ಲಿನ ಹಿರಿಯರಿಗೆ ಎರಡು ಗಂಟೆಗಳ ಕಾಲದ ಕಸರತ್ತು. ನನ್ನ ಬಣ್ಣ : ಬಣ್ಣದ ಬಗ್ಗೆ ಬರೆಯುವುದು ಬೇಡವೆಂದುಕೊಂಡಿದ್ದೆ. ಆದರೆ ಲೋಕವಿದಿತ

ವಾದದ್ದು. ಆದ್ದರಿಂದ ಮುಚ್ಚಿಡುವ ಹಾಗೇ ಇಲ್ಲ. ಸ್ವಲ್ಪ ಗಟ್ಟಿ ಎಂದೇ ಹೇಳಬೇಕು. ಆಫ್ರಿಕದ ಕಪ್ಪಲ್ಲದಿದ್ದರೂ, Indian standards ನಲ್ಲಿ ಕೊಂಚ high level ಏ. ಕಪ್ಪು ಕಸ್ತೂರಿ. ಸ್ಕೂಲಿಗೆ ಕಳುಹಿಸುವುದರ ಅಂಗವಾಗಿ ಮೊದಲು ಸ್ನಾನ. ಸೋಪು ಉಜ್ಜಿದ್ದೂ ಉಜ್ಜಿದ್ದೆ. ಒಂದು ಪದರ ಚರ್ಮವೇ ಕಿತ್ತು ಬರಬೇಕು. ಹಾಗಾದರೂ ನನ್ನ ಬಣ್ಣವೇನೂ ಸೋಲುತ್ತಿರಲಿಲ್ಲ. ಅನಂತರ 'ಶ್ಯಾಮಸುಂದರ'ನಿಗೆ ಅಲಂಕಾರ. ಆಗಿನ ಕಾಲದಲ್ಲಿ Face powder ಅಷ್ಟಾಗಿ ಉಪಯೋಗಿಸುತ್ತಿದ್ದುದು ನೆನಪಿಲ್ಲ. Snow ಹೆಚ್ಚಾಗಿ ಬಳಕೆಯಲ್ಲಿತ್ತು. ಅದನ್ನು ಆದಷ್ಟು ಮೆತ್ತುತ್ತಿದ್ದರು. 'Colourful' ಆಗಿ ಕಾಣುತ್ತಿದ್ದೆ. ಆಮೇಲೆ ಜಡೆ. ಭೃಂಗಾಮಲಕವೋ ಯಾವುದೋ ಎಣ್ಣೆ ತಿಕ್ಕಿ, ಮೂರೂ ಕಾಲು ಜಡೆ ಹೆಣೆದು ಪಚ್ಚೆತನೆ, ಮರುಗ, ಮಲ್ಲಿಗೆ ಕಟ್ಟಿದ ಹೂವನ್ನು ಮುಡಿಸಿ, ಚಡ್ಡಿ ಷರಟುಗಳನ್ನು ತೊಡಿಸಿ, ಮಕಮಲ್ಲಿನ ಕೋಟು, ಟೋಪಿ, ಟೋಪಿಯ ಪಾರ್ಶ್ವದಲ್ಲಿ ಒಂದು ಕೃಷ್ಣನ ಚಿತ್ರ ಹಾಕಿ, ಮೂಗು clean ಆಗಿರಬೇಕೆಂದು 'ಹ್ಞೂ' ಅನ್ನೂಂತ ಹತ್ಸಾರಿ ಅನ್ನಿಸಿ ಮೂಗೇ ಕಿತ್ತು ಬರುವಂತೆ ಉಜ್ಜಬೇಕು; ಅದಾದ ಮೇಲೆ ಚೀಲ ನೇತುಹಾಕಿ ಒಂದು ಸಾರಿ ಎಲ್ಲರೂ ನೋಡಿ OK ಎನ್ನಬೇಕು. ಈ ಸ್ಟೇಜಿನಲ್ಲಿ ನನ್ನ ಪ್ರತಿಕ್ರಿಯೆ ಆರಂಭ. ಕುದುರೆಗಳು 'ರಾಂಗ್' ಮಾಡುವುದನ್ನು ಕಂಡಿರಬೇಕಲ್ಲ ಹಾಗೆ-ಧರಣಿ. ಕೈಕಾಲು ಬಡಿಯುತ್ತ siren ಕೂಗಿದ ಹಾಗೆ ಕೂಗುತ್ತ ರಂಪ ಶುರು ಮಾಡಿದೆನೆಂದರೆ ಮುಗಿಯಿತು. ತಾಯಿ ಇಲ್ಲದ ತಬ್ಬಲಿ. ಹೊಡೆಯುವ ಹಾಗಿಲ್ಲ. ಬಯ್ಯುವ ಹಾಗೂ ಇಲ್ಲ. ನಮ್ಮ ತಂದೆ ಅನೇಕ ಪ್ರಲೋಭನೆಗಳಿಗೆ ನನ್ನನ್ನು ಒಳಪಡಿಸಿ ಬಹು ಕಷ್ಟದಿಂದ ಶಾಲೆಗೆ ಬಿಡುವ ಹೊತ್ತಿಗೆ ಸಾಕುಸಾಕಾಗುತ್ತಿತ್ತು. Middle School ನಲ್ಲಿ ವೇದಾಂತ ಐಯ್ಯಂಗಾರ್ ಎಂಬ ನಮ್ಮ ಉಪಾಧ್ಯಾಯರನ್ನು English 'ಮನೆ ಪಾಠ'ಕ್ಕೆ ಗೊತ್ತು ಮಾಡಿದ್ದರು. ಪಾಪ ಅವರಿಗೆ ಒಂದು ಕಾಲು ಪೂರ್ಣ ಸ್ವಾಧೀನದಲ್ಲಿ ಇರಲಿಲ್ಲ. ಬೆತ್ತ ಹಿಡಿದು ಕಾಲೆಳೆದುಕೊಂಡು ಕಷ್ಟಪಟ್ಟು ಮನೆಗೆ ಬಂದರೆ ಯಾರಿಗೆ ಪಾಠ ಹೇಳುವುದು ? ಅಟ್ಟವನ್ನೋ, ಮರವನ್ನೋ ಹತ್ತಿ ಕೂತಿರುತ್ತಿದ್ದೆ ನಾನು. ಬಲವಂತವಾಗಿ ಹಿಡಿದು ತಂದರೆ ಮತ್ತೆ ಅಶ್ವಾನುಕರಣ. ಬೇಸರವಾಗಿ ಬರುವುದನ್ನೇ ನಿಲ್ಲಿಸಿಬಿಟ್ಟರು. High School ವಿದ್ಯಾಭ್ಯಾಸ ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಾಯಿತು. ಅಷ್ಟು ಹೊತ್ತಿಗೆ ನನ್ನಲ್ಲಿ ಬಹಳಷ್ಟು ಬದಲಾವಣೆಯಾಗಿತ್ತು. Essay writing, Debate ಇತ್ಯಾದಿ literary activities ನಲ್ಲಿ ಮುಂದಾಗಿರುತ್ತಿದ್ದೆ. Inter school debate ನಲ್ಲಿ ನಾನು ಮತ್ತು ನನ್ನ ಸಹಪಾಠಿ ಮೋಹನ್ ಎಂಬುವರು ನಮ್ಮ ಶಾಲೆಗೆ shield ಸಂಪಾದಿಸಿಕೊಟ್ಟೆವು. ಉಪಾಧ್ಯಾಯರುಗಳಿಗೆಲ್ಲ ನನ್ನ ಬಗ್ಗೆ ಅತಿಯಾದ ಅಕ್ಕರೆ. ಆಟಗಳಲ್ಲಿ ಖೊಖೊ inter-school ಸ್ಪರ್ಧೆಯಲ್ಲಿ ನನಗೇ ಆಶ್ಚರ್ಯವಾಗುವ ರೀತಿಯಲ್ಲಿ ಆಡಿ ಶಾಲೆಗೆ ಜಯ ತಂದುಕೊಟ್ಟೆ. ಇಲ್ಲಿಯೇ ಪ್ರಪ್ರಥಮವಾಗಿ ನನ್ನ ರಂಗ ಪ್ರವೇಶವಾದದ್ದು - 'ಅರಂಗೇಟ್ರಂ'. ಗಣಿತದ ಉಪಾಧ್ಯಾಯರು ಎಸ್. ಯೋಗಾನರಸಿಂಹಾಚಾರ್ (S.Y.N.) ಅವರು ಒಂದು English ನಾಟಕ 'Desire' ರಚಿಸಿ School Day ನಲ್ಲಿ ಆಡಿಸಿದರು. ಮಹಾಭಾರತದಲ್ಲಿನ ಒಂದು ಸನ್ನಿವೇಶವನ್ನು ಆಧರಿಸಿ ಬರೆದಿದ್ದರು. ಅದರಲ್ಲಿ ನಾನು ಕೃಷ್ಣ. ನಾಟಕ ಮುಗಿದ ಮೇಲೆ S.Y.N. ಓಡಿಬಂದು ಅನಾಮತ್ತಾಗಿ ಎತ್ತಿಕೊಂಡೇ ಬಿಟ್ಟರು.

ರಾಮಾಚಾರ್ಯರು, ಯೋಗಾನರಸಿಂಹರು, ಪಿ.ಎಸ್. ನಾರಾಯಣರಾಯರು, ರಾಜಗೋಪಾಲ್ ಈ ಮುಂತಾದ ಮಹನೀಯರು ನಮ್ಮನ್ನು ಸ್ವಂತ ಮಕ್ಕಳಂತೆ ಕಂಡುಕೊಂಡು ನಿರ್ವಂಚನೆಯಿಂದ ವಿದ್ಯೆಯನ್ನು ಧಾರೆಯೆರೆದರು.

ಇಂಟರ್‌ಮೀಡಿಯೆಟ್ ಓದಿದ್ದು Ramanarayan Chellaram College of Commerce (R.C. College of Commerce) ನಲ್ಲಿ. ದಿವಾನ್ ಪೂರ್ಣಯ್ಯನವರ ಬಂಗಲೆ (ರೇಸ್‌ಕೋರ್ಸ್ ಬಳಿ)ಯಲ್ಲಿ ಕಾಲೇಜು ಸ್ಥಾಪಿತವಾಗಿತ್ತು. ಇಲ್ಲಿಯು ಸಹ Essay competition, debate ಇವೆಲ್ಲದರಲ್ಲಿ ಬಹುಮಾನಗಳನ್ನು ಗೆದ್ದುಕೊಂಡೆ. ಅಷ್ಟೇ ಅಲ್ಲದೆ chess ನಲ್ಲಿ championship ನನ್ನದಾಯಿತು. ಕುಟ್ನೀಕರ್ ಎಂಬ Professor ಅತ್ಯಾಶ್ಚರ್ಯಪಟ್ಟರು. ಮಾಂಡ್ರೆ ಎಂಬ ಯುವಕ (ಸೀನಿಯರ್ ಸ್ಟೂಡೆಂಟ್) ಚೆಸ್ championship ಯಾರಿಗೂ ಬಿಟ್ಟುಕೊಟ್ಟಿರಲಿಲ್ಲವಂತೆ. ಉಳಿದವರು 'ಇದು ನಂಬಲಸಾಧ್ಯ' ಎಂದೇ ಉದ್ಗಾರ ತೆಗೆದರು.

ಕಾರಾಗೃಹದಲ್ಲಿ ಮುಗ್ಧಮಾನವ

ನಮ್ಮ ತಂದೆಯವರು ಮೈಸೂರಿನಲ್ಲಿ Advocate ಆಗಿ Practise ಮಾಡುತ್ತಿದ್ದಾಗ civil ಅಲ್ಲದೆ ಕ್ರಿಮಿನಲ್ cases ಅನ್ನೂ handle ಮಾಡುತ್ತಿದ್ದರು.

ಒಮ್ಮೆ ಹಳ್ಳಿ ವ್ಯಾಜ್ಯವೊಂದರಲ್ಲಿ ಎದುರಾಳಿಗಳನ್ನು ಹಿಗ್ಗಾಮುಗ್ಗಾ ಥಳಿಸಿದನೆಂಬ ಆರೋಪದ ಮೇಲೆ ದಸ್ತಗಿರಿಯಾಗಿದ್ದ ವ್ಯಕ್ತಿಯೊಬ್ಬನನ್ನು defend ಮಾಡುವ ಹೊಣೆ ನಮ್ಮ ತಂದೆಯವರ ಪಾಲಿಗೆ ಬಂತು. ಆತನನ್ನು (ಹೆಸರು ಕಾಣೆ) ಕಂಡು ವಿಷಯ ಸಂಗ್ರಹಿಸಲು ಕಾರಾಗೃಹಕ್ಕೆ ಭೇಟಿ ಮಾಡಬೇಕಿತ್ತು. ಹಠ ಹಿಡಿದು ಬಿಡದೆ ನಾನೂ ಅವರೊಂದಿಗೆ ಹೋಗಿದ್ದೆ (ಆಗ್ಗೆ ನನಗೆ ನಾಲ್ಕು

ವರ್ಷಗಳಿರಬಹುದು). ಭೇಟಿಗಳಿಗೆ ಮೀಸಲಾದ ಕೋಣೆಯಲ್ಲಿ ಕಾದು ಕುಳಿತೆವು. ಇಬ್ಬರು ಪಹರೆಯವರು ಅವನನ್ನು ಕರೆತಂದರು. ಅವನನ್ನು ನೋಡುತ್ತಲೂ ಕಿಟಾರೆಂದು ಕಿರುಚಿದೆ. ಹಾಗಿತ್ತು ಅವನ ಚಹರೆ. ದೊಡ್ಡಗಾತ್ರದ ಮುಖ, ಒರಟು ಮೀಸೆ, ದಪ್ಪ ಮೂಗು, ಕೆನ್ನೆಯ ಮೇಲೆ ಚಲನಚಿತ್ರಗಳಲ್ಲಿ ರೌಡಿಗಳನ್ನು ಕಾಣಿಸುವ ಹಾಗೆ ಒಂದು ಪೊದೆಯಂತೆ Scar-with discoloration, ಪೊದೆಯಂತೆ ತಲೆಗೂದಲು, ಕೆಂಗಣ್ಣು, ಆನೆ ಕಿವಿ. ಒಟ್ಟಿನಲ್ಲಿ ಅವನನ್ನು ನೋಡಿದರೆ ಸಾಕು. ವಿಚಾರಣೆಯೇ ಬೇಕಿಲ್ಲ. Unhesitatingly decide ಮಾಡಿಬಿಡಬಹುದು -ಈತ ಖಂಡಿತ ರಾಕ್ಷಸ ಕೃತ್ಯ ಮಾಡಿದ್ದಾನೆಂದು ! ಆಸಾಮಿ ನೋಡಲು ಹೀಗಿದ್ದರೂ, ಆತ ಮಾತನಾಡಿದಾಗ ಅತ್ಯಂತ ಮಧುರ ಧ್ವನಿ, ಆ ವಿನಯ ತುಂಬಿದ ಮಾತು ಯಾರೂ ನಿರೀಕ್ಷಿಸಲಾರರು.

"ಮೊಗ ಎದರ್ಕಂಡಂಗೈತೆ"...

"ನಿನ್ನನ್ನ ನೋಡಿದ್ರೆ ನಂಗೇ ಹೆದರ್ಕೆ ಆಗುತ್ತೆ" ನಗುತ್ತ ಕಾರಾಗೃಹದ ಅಧಿಕಾರಿ ನುಡಿದರು. "ಅದಕ್ಕೇ ಮಕ್ಕಳನ್ನು ಇಲ್ಲೆಲ್ಲ allow ಮಾಡೊಲ್ಲ ಕಣಯ್ಯ ! ನಾರಾಯಣಸ್ವಾಮಿ (ಅವರು ತಂದೆಯವರ ಸ್ನೇಹಿತರು), ವಾತಾವರಣವೇ ಚೆನ್ನಲ್ಲ, ನೋಡು!"

"ಬುದ್ಧಿ , ನನ್ಗೆಕ್ದಾಗ ಮಗೀಗೆ ಬಿಸ್ಕೂಟ್ತರಿಸ್ಕೊಡ್ತೀರಾ ನಿಂಪಾದ."

"ಆಯ್ತಪ್ಪ" ಎಂದು ಎರಡು ಬಿಸ್ಕತ್ Packets ತರಿಸಿದರು ಅಧಿಕಾರಿ.

"ತಾವೇ ಕೊಟ್ಬಿಡಿ ನನ್ನೊಡ್ಯ...ನಾನ್ಕೊಟ್ರೆ ಎದ್ರೀತ್ಮಗ ಮತ್ತೆ."

ಅಪ್ಪ ಅಂದ್ರು..."ಹಾಗೇನಿಲ್ಲ , ನೀನೇ ಕೊಡು"...

ಒಂದುಕಡೆ ತನಗಿಂಥ ಅವಕಾಶ ದೊರಕಿತಲ್ಲ ಎಂಬ ಸಂತಸ. ಹಾಗೇ ಜೊತೆಯಲ್ಲೇ ನಾನೆಲ್ಲಿ ಹೆದರುತ್ತೇನೋ ಎಂಬ ಚಿಂತೆ. ತಡೆದು...ತಡೆದು ಕೈ ಚಾಚಿದ ಆತ. ಅವನ ಧ್ವನಿ, ಪ್ರೀತಿ ತುಂಬಿದ ಕಣ್ಣುಗಳು ನನ್ನ ಭಯವನ್ನು ದೂರ ಮಾಡಿದ್ದವು. ಸಂತೋಷದಿಂದಲೇ ತೆಗೆದುಕೊಂಡೆ. ಬಿಕ್ಕಿ ಬಿಕ್ಕಿ ಚಿಕ್ಕ ಮಕ್ಕಳಂತೆ ಅತ್ತ.

ಮುಂದೆ ಕೇಸ್ ನಡೆದಾಗ, ಆರೋಪಗಳೆಲ್ಲ ಸುಳ್ಳು; ಆತನ ಗಾತ್ರ ಮತ್ತು ವಿಕಾರ ಮುಖ ಇವುಗಳ advantage ತೆಗೆದುಕೊಂಡು ನಿಜವಾದ ಅಪರಾಧಿಗಳು ತಪ್ಪಿಸಿಗಿದ್ದಾರೆಂದು ಸಾಬೀತಾಯಿತು. ಅವನ ಖುಲಾಸೆಗಾಗಿ ಪ್ರವಾಹಕ್ಕೆದುರಾಗಿ ಈಜಿ ನಮ್ಮ ತಂದೆಯವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಒಂದು ಪತ್ತೇದಾರಿ ಕಾದಂಬರಿಗೆ ಆಗುವಷ್ಟು ಸಾಮಗ್ರಿ ತುಂಬಿತ್ತು. ಇಷ್ಟಾಗಿ, ಆತ ಬಡವನಾದ್ದರಿಂದ ತಂದೆಯವರು ಒಂದು ಬಿಡಿಗಾಸೂ fee ಮುಟ್ಟಲಿಲ್ಲ. ಅಷ್ಟೇ ಅಲ್ಲ , ಎಲ್ಲ ಹಂತಗಳಲ್ಲಿ ಆದ ಖರ್ಚುಗಳನ್ನೂ ತಾವೇ ಭರಿಸಿದರು.

ಬ್ರಹ್ಮೋಪದೇಶ

ಎಂಟಕ್ಕೆ ಆಗಬೇಕಾಗಿದ್ದ ಬ್ರಹ್ಮೋಪದೇಶ ನನಗೆ ಹದಿನಾರಕ್ಕಾಯಿತು. ಗಾಯತ್ರೀ ಮಂತ್ರ ಸ್ವೀಕಾರದ ಫಲವೋ ಏನೋ, ನನಗೆ ಸಂಧ್ಯೆ - ಜಪ ಇವುಗಳಲ್ಲಿ ಅತ್ಯಂತ ಶ್ರದ್ಧೆ ಭಕ್ತಿ ಉಂಟಾದವು.

ನಮ್ಮ ತಂದೆಯವರು ಸಹ ಗಾಯತ್ರೀ ಜಪಕ್ಕೆ ಕೂತರೆ ಗಂಟೆಗಟ್ಟಲೆ ಆಗುತ್ತಿತ್ತು. ಕ್ರಮೇಣ ಅನಾರೋಗ್ಯದ ಕಾರಣದಿಂದಾಗಿ ಕಡಮೆಯಾಗುತ್ತ ಬಂದಿತು. ಮುಂಜಿಯಾದ ಸುಮಾರು ಹತ್ತಿರ ಹತ್ತಿರ ಎರಡು ವರ್ಷಗಳವರೆಗೆ ಆಹಾರ ವಿಹಾರಾದಿಗಳಲ್ಲಿ ಕಠಿಣ ನಿಯಮಗಳನ್ನು ಪಾಲಿಸುತ್ತಲಿದ್ದೆ. ಹೊರಗಡೆ ಯಾವುದೊಂದು ಆಹಾರವನ್ನೂ ಸ್ವೀಕರಿಸುತ್ತಲಿರಲಿಲ್ಲ. ನೀರನ್ನು ಕುಡಿಯಬೇಕಾದರು ಸಹ ಲೋಟದಲ್ಲಿ ತೆಗೆದುಕೊಳ್ಳುತ್ತಲಿರಲಿಲ್ಲ. ನಲ್ಲಿ ಪತ್ತೆ ಹಚ್ಚಿ ಬೊಗಸೆಯಲ್ಲಿಯೇ ಪಾನ ಮಾಡಬೇಕು. Lunch hourನಲ್ಲಿ (ಹದಿನೇಳರ ಹರೆಯದಲ್ಲಿ Insurance Office ಸೇರಿದ್ದೆ)....ಸಹೋದ್ಯೋಗಿಗಳೊಂದಿಗೆ ಹರಟೆ ಹೊಡೆಯುತ್ತ ಅವರೊಂದಿಗೆ Hotelಗೆ ಹೋಗುತ್ತಿದ್ದೆ. ಅವರೆಲ್ಲ ತಿಂಡಿ ತಿನ್ನುತ್ತಿರುವಾಗಲೂ ನನಗೆ ಚಪಲವಾಗುತ್ತಿರಲಿಲ್ಲ , ಸುಮ್ಮನೆ ಕೂತಿರುತ್ತಿದ್ದೆ. ಒಮ್ಮೊಮ್ಮೆ ಹಸಿವು ಅತಿಯಾದರೆ ಬಾಳೆಹಣ್ಣು ಕೊಂಡು ತಿನ್ನುತ್ತಿದ್ದೆ.

ದಿನ ಕಳೆದ ಹಾಗೆಲ್ಲ ಮನಸ್ಸಿನ ಭಾವನೆಗಳಲ್ಲಿ ಬದಲಾವಣೆಗಳಾಗುತ್ತ ಬಂದವು. ಮೈ ಹಗುರವಾಗಿ, ಮನಸ್ಸು ಪ್ರಫುಲ್ಲವಾಗಿರುವಂತೆ ಅನ್ನಿಸುತ್ತ ಇದ್ದದ್ದು , ಏನೋ ಒಂದು ಬಗೆಯ ಬಂಧನಕ್ಕೆ ಒಳಗಾಗಿದ್ದೇನೆಯೋ ಏನೋ ಎಂದು ಅನ್ನಿಸುವುದಕ್ಕೆ ಆರಂಭವಾಯಿತು. ಬೇಲಿಯೊಳಗೆ ಅಡಗಿ ಕುಳಿತಿದ್ದ ನಾಲಗೆ ಬೇಲಿ ಹಾರಿ ಚಾಪಲ್ಯದತ್ತ ದಾಪುಗಾಲು ಹಾಕಿತು.

ಒಂದೆರಡು ದಿನ ಹೋಟಲಿನ ತಟ್ಟೆ ಲೋಟಗಳನ್ನು ಉಪಯೋಗಿಸದೆ ಕಾಗದದ ಮೇಲೆ ಇಟ್ಟು ತಿನ್ನುವಂತಹ ತಿಂಡಿಗಳನ್ನು ತಿನ್ನುತ್ತಿದ್ದೆ. ಮಂಗನ ಉಪವಾಸದಂತೆ ಆಯಿತು ನನ್ನ 'ವ್ರತ'. ಪುನರಾಯಾನ್ ಮಹಾಕಪಿಃ ಆದೆ. ಕಟ್ಟುಪಾಡಿನ ಅಂತ್ಯವಾದ ಹೊಸದರಲ್ಲಿ ಏನೋ ಒಂದು ರೀತಿ ಸ್ವಾತಂತ್ರ್ಯ ಸಿಕ್ಕ ಹಾಗೆ ಮನಸ್ಸು ಹಗುರಾಯಿತು. ಕೆಲ ಸಮಯಾನಂತರ ಏನೋ ಬಹಳ ದೊಡ್ಡ ತಪ್ಪು ಮಾಡಿಬಿಟ್ಟೆನೆಂಬ (guilty conscience) ಕಲ್ಪನೆ ಕಾಡತೊಡಗಿತು. ಒಳ್ಳೊಳ್ಳೆ ರುಚಿಕಟ್ಟಾದ

ತಿಂಡಿಗಳನ್ನು ತಿನ್ನುವಾಗಲೂ enjoy ಮಾಡಲಾಗುತ್ತಿರಲಿಲ್ಲ. ಕಳ್ಳನಂತೆ ಅನ್ನಿಸುತ್ತಿತ್ತು. ಹಿಂಸೆಯೇ ಆಗುತ್ತಿತ್ತು. ಭಗವನ್ನಾಮ ಸ್ಮರಣೆಗೆ ಶರಣು ಹೋಗಿ ಕ್ರಮೇಣ ಎಲ್ಲವನ್ನೂ ಹತೋಟಿಗೆ ತಂದದ್ದಾಯಿತು.

ಮುಂದೆ LIC Audit ಸೇರಿದಾಗ ಒಂದು ಮಟ್ಟಿಗೆ ಪುನರಾವರ್ತನೆ ಆಯಿತು. ಊರೂರು ಸುತ್ತಬೇಕಾದ ಕೆಲಸ. ಕೇರಳ, ತಮಿಳುನಾಡು ಎರಡೂ ರಾಜ್ಯಗಳಲ್ಲಿ tour ಮಾಡಬೇಕಿತ್ತು. ತತ್ರಾಪಿ ಕೇರಳದ ಕೆಲವು ಪ್ರದೇಶಗಳಲ್ಲಿ Vegetarian Combined ಹೋಟೆಲ್‌ಗಳೇ ಇದ್ದು Vegetarian Hotels ಇರುತ್ತಲೇ ಇರಲಿಲ್ಲ. ಕೆಲವೊಮ್ಮೆ Branch Managers ನಮ್ಮ ಸ್ಥಿತಿ ನೋಡಲಾರದೆ ಅಡುಗೆಯವರನ್ನು ಗೊತ್ತು ಮಾಡುತ್ತಿದ್ದರು. ಇದೂ ಸಾಧ್ಯವಾಗದ ಕಡೆ Bakery ಗಳಲ್ಲಿ ಬ್ರೆಡ್, ಬನ್, ಬಿಸ್ಕತ್ತು , ಹಾಲು, ಹಣ್ಣು ಇವುಗಳಲ್ಲಿ ಕಾಲ ಕಳೆಯಬೇಕಿತ್ತು. ಶ್ರೀ ವಿಜಯರಾಘವನ್ ಎಂಬೊಬ್ಬ ಸ್ನೇಹಿತರು ಬಲು ಆಚಾರವಂತರು. ಅವರನ್ನು ನಮ್ಮ departmentಗೆ post ಮಾಡಿದರು. ಅವರು ಸ್ವಯಂಪಾಕಕ್ಕೆ ಕಟ್ಟುಬಿದ್ದವರು. ಹೋಗುವಲ್ಲಿ ಸ್ಟೌವ್‌ನಿಂದ ಹಿಡಿದು ಎಲ್ಲವನ್ನೂ ಒಯ್ಯುತ್ತಿದ್ದರು. ಹದಿನೈದು ದಿನ ಕಳೆಯುವುದೂ ಅವರಿಂದ ಆಗಲಿಲ್ಲ. Reversion ಕೇಳಿ ತಮ್ಮ ಹಿಂದಿನ ಸ್ಥಾನಕ್ಕೆ ಮರಳಿಬಿಟ್ಟರು.

ಎಲ್.ಐ.ಸಿ.

ಕಾಲೇಜ್ ಸೇರುವ ಮೊದಲೇ Ranganatha Institute ಮೂಲಕ Diploma-in-Commerce ಪಾಸ್ಮಾಡಿದ್ದೆ. Senior Typewriting ನಲ್ಲಿ ಎಲ್ಲರಿಗಿಂತ ಹೆಚ್ಚಿನ speed ಗಳಿಸಿ ವಿಶೇಷ ಬಹುಮಾನ ಪಡೆದಿದ್ದೆ.

ಕಾಲೇಜ್ ವಿದ್ಯಾಭ್ಯಾಸದ ನಡುವೆಯೇ ಯಾವುದಾದರೂ ಕೆಲಸಕ್ಕೆ ಸೇರಬೇಕೆಂಬ ಬಯಕೆ ಅದು ಹೇಗೋ ಮೂಡಿತು. Typewriting Institute ಗೆ ಬರುತ್ತಿದ್ದ ಸಹಪಾಠಿ ಒಬ್ಬರು "National Insurance Company, Calcutta ದವರು ಇಲ್ಲಿ Branch open ಮಾಡ್ತಾರಂತೆ, apply ಮಾಡಿ" ಎಂದರು. ಬರೆದು ಹಾಕಿದೆ. ಹಾಗೆಯೇ ITI, HAL ಇವುಗಳಿಗೂ ಅರ್ಜಿ ಹಾಕಿದೆ. ಎಲ್ಲ ಕಡೆಗಳಿಂದಲೂ ಕರೆ ಬಂದಿತು. ಉದ್ಯೋಗ ಸಂಪಾದನೆಯಲ್ಲಿ ಈಗಿನಷ್ಟು ಕಷ್ಟ ಆಗ ಇರಲಿಲ್ಲ. Factory life ಬೇಡ ಎಂದು National Insurance Company ಹಿಡಿದೆ. ಆಗ ನನಗೆ ಹದಿನೇಳು ವರ್ಷ ವಯಸ್ಸು. Majorityಗೆ ಬಂದ ಮೇಲೆಯೇ ಅವರು Provident Fund ಗೆ ಸೇರಿಸಿಕೊಂಡದ್ದು. B.S. Bhatia ಎಂಬ ಪಂಜಾಬಿಯೊಬ್ಬರು Manager ಆಗಿ ಬಂದಿದ್ದರು. ನನ್ನ ಇಂಗ್ಲಿಷ್ ಭಾಷೆ, Typewriter ಮೇಲಿನ ಪ್ರಭುತ್ವ ಇವುಗಳನ್ನು ಮೆಚ್ಚಿ Head Office ಗೆ strong recommendations ಕಳುಹಿಸಿ minor ಆಗಿದ್ದರೂ ನನ್ನನ್ನು Assistant ಆಗಿ appoint ಮಾಡಿಕೊಳ್ಳಲು ತಾಕೀತು ಮಾಡಿದರು. Public Limited Company ಆದರೂ General Manager ಗೆ ವಿಶೇಷ powers ಇದ್ದು ಅವರು ಒಪ್ಪಿಗೆ ಕೊಟ್ಟರು. ಸೇರಿದ ಒಂದು ವರ್ಷಕ್ಕೇ ನನ್ನ service ಗೆ ಮೆಚ್ಚಿ Bhatia ಅವರು ನನಗೆ ಒಂದು special increment ಕೊಡಿಸಿದರು. ಮುಂದಿನ round ನಲ್ಲಿ promotion ಕೊಡಿಸುವ ಆಶ್ವಾಸನೆ ನೀಡಿದರು. ಆದರೆ ಅಷ್ಟರಲ್ಲಿ nationalisation of insurance sector ಬಂದು ನಾನು LIC ಯಲ್ಲಿ absorb ಆಗಿಬಿಟ್ಟೆ. ಮುಂದೆ ನನ್ನ ಆತ್ಮಸಂತೋಷಕ್ಕಾಗಿ M.A., in English ಓದಿ ಮಾಸ್ಟರ್ಸ್ ಡಿಗ್ರಿ ಪಡೆದುಕೊಂಡೆ.

Trade Union activities ನಲ್ಲಿ ಪಾಲ್ಗೊಂಡು All India Insurance Employees Association ನ ಬೆಂಗಳೂರು ವಿಭಾಗದ General Secretary ಆಗಿಯೂ ಸೇವೆ ಸಲ್ಲಿಸಿದೆ.

LIC cultural activities ಅಂಗವಾಗಿ ಸಹೋದ್ಯೋಗಿಗಳನ್ನು ಸೇರಿಸಿ stage ಮಾಡಿದ ನಾಟಕಗಳಿಗೆ ಲೆಕ್ಕವಿಲ್ಲ. ಎಲ್ಲರೂ ವಿದ್ಯಾವಂತರು, ಬೌದ್ಧಿಕವಾಗಿ ಎತ್ತರದವರು, highly talented ಆಗಿದ್ದು ಬೆಂಗಳೂರಿನಲ್ಲಿ ಸಾಕಷ್ಟು ಪ್ರಸಿದ್ಧಿ ಬರುವಂತೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟೆವು. T.N.S. Shastry, D.L. Narasimhamurthy, Shashikantha, Thyagaraja, Albert, Shenoy, Govindaraj, Jayarao, Anantharam, Ranganath ಇನ್ನೂ ಅನೇಕ ಪ್ರತಿಭಾವಂತ ತರುಣರು ಶ್ರೇಷ್ಠ ಕಲಾವಿದರಾಗಿ ಮೆರೆದರು. Acting, direction, Stage management ಕ್ಷೇತ್ರಗಳಲ್ಲಿ ನನ್ನ ಕೈಲಾದಷ್ಟು ದುಡಿದೆ.

ಆಪದ್ಬಾಂಧವ

ಬೆಂಗಳೂರಿನ ಹವ ತಂದೆಯವರಿಗೆ ಒಗ್ಗಲಿಲ್ಲವೋ ತಿಳಿಯದು. ಒಟ್ಟಿನಲ್ಲಿ ದಿನದಿನಕ್ಕೆ ಅವರ ಉಬ್ಬಸರೋಗ ಉಲ್ಬಣವಾಗುತ್ತ ನಡೆಯಿತು. ಇಲ್ಲಿ ನಮ್ಮವರೇ ಆದ ಡಾ. ಎಸ್. ಧ್ರುವನಾರಾಯಣ್ ಅವರನ್ನು ಸಾಷ್ಟಾಂಗ ನಮಸ್ಕಾರಗಳೊಂದಿಗೆ ಸ್ಮರಿಸಬೇಕು. ನಾವು ಇದ್ದದ್ದು ಬುಲ್‌ಟೆಂಪಲ್ ರಸ್ತೆಯಲ್ಲಿ. ಅವರು ಕೃಷ್ಣರಾವ್ ರಸ್ತೆಯಲ್ಲಿದ್ದರು. ಒಮ್ಮೊಮ್ಮೆ ರಾತ್ರಿ ಹನ್ನೆರಡು, ಒಂದು, ಎರಡು ಗಂಟೆ ಹೀಗೆಲ್ಲ ಸಮರಾತ್ರಿಯಲ್ಲಿ ತಂದೆಯವರ

ಸ್ಥಿತಿಯು 'ಉಸಿರಾಟ ಇನ್ನು ಸಾಧ್ಯವಿಲ್ಲ' ಎನ್ನುವ ಮಟ್ಟ ಮುಟ್ಟುತ್ತಿತ್ತು. ಡಾಕ್ಟರನ್ನು ಕರೆಯಲು ಓಡುತ್ತಿದ್ದೆ. ಆ ದಿನಗಳಲ್ಲಿ ಬಹಳ ಅಂಜುಬುರುಕ ನಾನು. ಗಲ್ಲಿಗಳು ಬಂದವೆಂದರೆ ಒಂದೋ ಎರಡೋ ದೆವ್ವಗಳು minimum ಇರಬೇಕು. ಅದರಲ್ಲಿ ಒಂದಾದರೂ ಜಡೆ ಮುನಿಯಾದರೆ ತೀರಿತು. ತುಂಬ ಅಪಾಯಕಾರಿ. ಶ್ವೇತವಸನಧಾರಿಯಾದರೆ ಅದು ಮೋಹಿನಿ ಎಂಬುದರಲ್ಲಿ ಸಂದೇಹವೇ ಇಲ್ಲ. ಕಣ್ಣು ಮುಚ್ಚಿ ಓಡುತ್ತಿದ್ದೆ. ಯಾವುದೇ ಹೊತ್ತಾಗಿರಲಿ, ಮಳೆ ಧಾರಾಕಾರವಾಗಿ ಸುರಿಯುತ್ತಿರಲಿ, ನನ್ನ ಕಂಡೊಡನೆ ಪ್ರೀತಿಯಿಂದ ಮಾತನಾಡಿ ಔಷಧಿ ಪೆಟ್ಟಿಗೆಯೊಡನೆ ಕೂಡಲೇ ಹೊರಡುತ್ತಿದ್ದರು ಧ್ರುವನಾರಾಯಣ್‌ರವರು. ಒಂದೇ ಒಂದು ಸಲವಾಗಲಿ, 'ಈಗ ಮಳೆ, ಈಗ ಅವೇಳೆ, ಬೆಳಗ್ಗೆ ಬಂದು ಕಾಣುತ್ತೇನೆ' ಎಂದು ಹೇಳಿದ್ದೇ ಇಲ್ಲ. Adrenaline Injection ಕೊಟ್ಟನಂತರವೇ ಪ್ರಾಣ ಮರಳುತ್ತಿತ್ತು. ಸಣ್ಣದಾಗಿ ಕೆಮ್ಮಿದರೂ ಮತ್ತೆ attack ಆಯಿತೇನೊ ಎಂಬ ಭಯದಿಂದ ಎದ್ದು ಕೂಡುತ್ತಿದ್ದೆ.

ತಮ್ಮ ಅನಾರೋಗ್ಯ, ಕೆಲಸದ ಒತ್ತಡ, ಸಾಂಸಾರಿಕ ಭಾರಗಳು ಇವೆಲ್ಲದರ ನಡುವೆಯೂ ನಮ್ಮ ತಂದೆ Land Development Bankನ Housing scheme ಅಡಿಯಲ್ಲಿ ಬೆಂಗಳೂರಿನ ಜಯನಗರ ಏಳನೆಯ ಬ್ಲಾಕ್‌ನಲ್ಲಿ ಒಂದು ವಿಶಾಲವಾದ ಮನೆ ಕಟ್ಟಿದರು. Bull Temple Road ಮನೆಯನ್ನು ಬಿಟ್ಟು, ನಮ್ಮ ಸ್ವಂತ ಗೃಹಕ್ಕೆ ಪ್ರವೇಶಿಸಿದ್ದೂ ಆಯಿತು. ಒಂದು ವರ್ಷ ಸಹ ಕಳೆದಿರಲಿಲ್ಲ. ತೀರ್ಥರೂಪರು ಪರಂಧಾಮವನ್ನೈದಿದರು.

ರಾಮಸ್ವಾಮಿಯವರ ಸಾವು

ಶಠಮರ್ಷಣಗೋತ್ರದವರೂ, ಶತಾವಧಾನಿಗಳ ವಂಶದವರೂ, ವೀಣಾವಿದ್ವಾಂಸರಾದ ಚನ್ನಕೇಶವಯ್ಯನವರ ಪುತ್ರರೂ ಆದ ನನ್ನ ಮಾವನವರು- ಮೈಸೂರಿನಲ್ಲಿ Advocate ಆಗಿದ್ದ ಶ್ರೀ ಆರ್. ರಾಮಸ್ವಾಮಿಯವರು. ಅವರ ಪತ್ನಿ ಲಕ್ಷ್ಮೀದೇವಮ್ಮ (ತಂಗಚ್ಚಮ್ಮ) ನವರು ಕೋಟೆ ಮಲ್ಲಪ್ಪನವರ ಪುತ್ರಿ, ನನ್ನ ಸೋದರತ್ತೆ. ಮಾವನವರು ಸಂಪ್ರದಾಯಗಳ ಕಟ್ಟಾಶ್ರದ್ಧಾಳು. ಹೊತ್ತುಗೊತ್ತಿಗೆ ಆಹ್ನಿಕ, ವಿಹಿತ ದೇವತಾರ್ಚನೆಗೆ ಲೋಪ ಬಾರದ ಹಾಗೆ ನಡೆಸಿಕೊಂಡು ಬಂದವರು. ಪ್ರತಿ ಶುಕ್ರವಾರ ಕಾಲು ನಡಿಗೆಯಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ ಅಮ್ಮನವರ ದರ್ಶನ ಪಡೆಯುವುದು ಒಮ್ಮೆಯಾದರೂ ತಪ್ಪಿದ್ದಿಲ್ಲ. ಶ್ರೀಮಂತರು, ಆಢ್ಯರು, ತಮ್ಮ ವೃತ್ತಿಯಲ್ಲಿ ಹೆಸರಾಂತವರು. ಕಕ್ಷಿಗಾರರು ಪರವೂರಿಂದ ಬಂದಾಗ ತಾವು ಅವರಿಗೆ ಸ್ವಯಂ ಪಾಕವನ್ನು ನೀಡುತ್ತಿದ್ದರೇ ವಿನಾ ಅವರು ತರುತ್ತಿದ್ದ ಬೆಣ್ಣೆ, ತರಕಾರಿಗಳನ್ನು ಸಹ ಮುಟ್ಟದೆ ಹಿಂದಿರುಗಿಸುತ್ತಿದ್ದರು. ಮಾವನವರು ಆಜಾನುಬಾಹು. ಗರಡಿ ಸಾಮು ಮಾಡಿದವರು. ಉಕ್ಕಿನಂಥ ಶರೀರ, ಸುಂದರ ಪುರುಷರು. ಕಚ್ಚೆಪಂಚೆ, closed collar coat, ಹಾಸನದ ಟೋಪಿ ಇವಿಷ್ಟು ಅವರ ಶೃಂಗಾರ. ಕೈಯಲ್ಲಿ ಛತ್ರಿ inevitable ಉ. ಕೆಲವರಿಗೆ ಮೂಗಿನ ತುದಿಯಲ್ಲಿ ಕೋಪ ಎಂದರೆ ಇವರಿಗೆ ಮೂಗೆಲ್ಲ ಕೋಪ. ಸಾಕ್ಷಾತ್ ದುರ್ವಾಸಮುನಿ.

ರಾಜಒಡೆಯರ ಶಿಸ್ತು, ಸತ್ಯವನ್ನೇ ವ್ರತವಾಗಿ ಉಳ್ಳವರು. ದಾನಧರ್ಮಗಳಲ್ಲಿ ಷೋಡಶ ಭುಜರಾಗಿ ನೀಡುವ ಧಾರಾಳತ್ವ.

ಎಲ್ಲ ದೇವದೇವಿಯರ ಕೃಪಾಕಟಾಕ್ಷದ ಮಹಾಪೂರವೇ ಹರಿದುಬರುತ್ತಿದ್ದರೂ ಸಂತಾನಲಕ್ಷ್ಮೀಗದೇಕೋ ಮುನಿಸು. ಮುನಿಸೋ ಅಥವ ನನ್ನ ವಯಸ್ಸಿಗೆ ಹೊಂದಬೇಕೆಂಬ ಸಂಕಲ್ಪವೋ ಕಾಣೆ. ಮದುವೆಯಾದ ಹದಿನಾಲ್ಕು ವರ್ಷಗಳವರೆಗೆ ನೋಂಪಿ, ವ್ರತ, ತೀರ್ಥಯಾತ್ರೆ, ನಾಗರಪ್ರತಿಷ್ಠೆ ಯಾವುದಕ್ಕೂ ಜಗ್ಗದ ಈ ಜಡಭರತಿ ಧರೆಗಿಳಿಯಲಿಲ್ಲ.

ಕೊನೆಗೂಮ್ಮೆ Junior ಜೆಟ್ಟಿಣಿ ಸ್ವರ್ಣಪುತ್ಥಳಿಯಂತೆ ಕಬ್ಬಿಣದ ತೊಟ್ಟಿಲನ್ನು ತುಂಬಿ ಬೆಳುದಿಂಗಳ ಹೊನಲನ್ನೇ ಹರಿಸಿದಳು. ಚಿಮಣಿ ದೀಪಕ್ಕೆ retirement ದೊರೆತು ಸೋಡಿಯಂ ವೇಪರ್ ಲ್ಯಾಂಪ್ ಬೆಳಗಿತು.

ತನ್ನ ಆರಾಧ್ಯಮೂರ್ತಿ ಚಾಮುಂಡೇಶ್ವರಿಯೇ ಈ ರೂಪದಲ್ಲಿ ಅನುಗ್ರಹ ಮಾಡಿದಳೆಂದೇ ಮಾವನವರ ದೃಢನಂಬಿಕೆ.

ಮರ್ತ್ಯರ ಅತಿಶಯದ ಪುಣ್ಯ ಸಂಚಯನ, ಅತಿಯಾದ ಆನಂದ ಕಂಡರೆ ದೇವತೆಗಳೂ ಅಸೂಯೆಪಡುವರಂತೆ. ಕೆನ್ನೆಯ ಹಾಲು ಆರುವ ಮೊದಲೇ, ಈ ಚಿಲ್ಟೇರಿ ಅಪ್ಪನನ್ನು ಅಪ್ಪನೆಂದು ಗುರುತಿಸುವ ಮೊದಲೇ, ಅವರ ಆನಂದದ ನಗುವಿನ ಸದ್ದು ಅಡಗುವ ಮೊದಲೇ, ಮಾವನವರು ಪಿತೃಲೋಕ ಸೇರಿದರು.

ಮಾವನವರು ಬಂಧುಮಿತ್ರರ ಗೌರವ, ಪ್ರೀತ್ಯಾದರಗಳನ್ನು ಎಷ್ಟು ಸಂಪಾದಿಸಿದ್ದರು- ಹೇಗೆ, ಯಾವ ಎತ್ತರದಲ್ಲಿ ಸಂಸಾರ ನಡೆಸಿಕೊಂಡು ಬಂದರು - ಅವರ ನಡವಳಿಕೆ ಎಷ್ಟು ಗಾಂಭೀರ್ಯಾದಿ ಗುಣಗಳಿಂದ ಕೂಡಿತ್ತು - ಎನ್ನುವುದಕ್ಕೆ ಸಾಕ್ಷಿ ಅವರ ಅಂತಿಮ ಯಾತ್ರೆಯಲ್ಲಿ ಎಲ್ಲರಿಂದ ಬಂದ ಉದ್ಗಾರ. ಅವತ್ತಿನ ದಿನವೇ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಂತ್ಯಕ್ರಿಯೆಯೂ ನಡೆಯುವುದಿತ್ತು. ಇಬ್ಬರನ್ನೂ ಹೋಲಿಸಿದ ಜನ "ರಾಜರು ಆಗಿ ಹೋದರು. ರಾಜರ ಹಾಗೇ

ಬದುಕಿದ ರಾಮಸ್ವಾಮಿಯವರೂ ನಮ್ಮನ್ನಗಲಿದರು. ಅತಿ ದೊಡ್ಡ, ತುಂಬಲಾರದ ನಷ್ಟ ಇವರಿಬ್ಬರೂ ಕಾಲಗತಿಯನ್ನೈದಿದ್ದು" ಎಂದು ಹಲುಬಿದರು.

ತಂಗಚ್ಚಮ್ಮ ಈ ಬೊಮ್ಮಟೆಯನ್ನು ಉಡಿಯಲ್ಲಿಟ್ಟು ಸಹೋದರರ ಮನೆ ಸೇರಿದರು. ಬೊಮ್ಮಟೆ ಬೆಳೆದೇ ಬೆಳೆಯಿತು. ನನ್ನವಳಾಗಿ ಮನೆ ಬೆಳಗಿತು.

ಇದು 'ಅವಳಿಗೆ' ಅಂಕಿತ. ವಿಜಯದಾಸರನ್ನು ಸ್ಮರಿಸಿ ವಂದಿಸುತ್ತ 'ಅವಳಿಗೆ' ಋಣ ಸಲ್ಲಿಕೆ, ಸಾಧ್ಯವಾದ ಸಾರಸ್ವತ ರೂಪದಲ್ಲಿ.

ಎಸ್.ಕೆ. ಸುಬ್ಬಯ್ಯ

ನನ್ನ ದೊಡ್ಡಜ್ಜ ಕೋಟೆಮಲ್ಲಪ್ಪಯ್ಯನವರು. ಅವರ ಮಗಳು ಲಕ್ಷ್ಮೀದೇವಮ್ಮ (ತಂಗಚ್ಚಮ್ಮ)ನವರ ಮಗಳು ನಾಗರತ್ನ ನನ್ನ ಪತ್ನಿಯಾದಳು ಎಂದು ಹೇಳಿದೆ. ಆ ವಿವರವನ್ನು ಹೇಳುವ ಮೊದಲು ಕೋಟೆ ಮಲ್ಲಪ್ಪಯ್ಯನವರ ಹಿರಿಯ ಮಗ ಎಸ್.ಕೆ. ಸುಬ್ಬಯ್ಯನವರ ಬಗೆಗೆ ಒಂದು ಮಾತು ಹೇಳಬಹುದು.

ಎಸ್.ಕೆ. ಸುಬ್ಬಯ್ಯನವರು (೧೮೯೯-೧೯೮೬) ರೇಂಜ್ ಫಾರೆಸ್ಟ್ ಆಫೀಸರಾಗಿ ಸೇವೆಸಲ್ಲಿಸಿದವರು. ಅವರ ಸಮಕಾಲೀನರೂ ಸಹಪಾಠಿಯೂ ಆದ ವೇ|| ಬ್ರ|| ಶ್ರೀ ಹರವೆ ಶ್ರೀನಿವಾಸಯ್ಯನವರು ದೇವರ ದಯೆಯಿಂದ ತಮ್ಮ ನೂರೈದನೆಯ ವಯಸ್ಸಿನಲ್ಲೂ ಈಗಲೂ ನಮ್ಮೊಡನಿದ್ದಾರೆ.*

ಸುಬ್ಬಯ್ಯನವರಿಗೆ ಬಾಲ್ಯದಿಂದಲೂ ಬಹಳ ಧೈರ್ಯ; ಅವರು ಬಹು ಬುದ್ಧಿವಂತರು, ಅವರದು ಅಸಾಧಾರಣ ಜ್ಞಾಪಕಶಕ್ತಿ. ಮೆಟ್ರಿಕ್ ಮುಗಿಸಿ ಅರಣ್ಯ ಇಲಾಖೆಯ ಡಿಪ್ಲೋಮಾ ಮಾಡಿ ಅದೇ ಇಲಾಖೆಯಲ್ಲಿ ಫಾರೆಸ್ಟ್ ರೇಂಜರ್ ಆಗಿ ಕೆಲಸಕ್ಕೆ ಸೇರಿದರು. ಅವರಿಗೆ, ಆ ಕಾಲಕ್ಕೆ ಹೊಸದಾಗಿದ್ದ ಮೋಟಾರ್ ಬೈಕ್ ಮೇಲೆ ಬಹಳ ಮೋಹ. ಜೇಮ್ಸ್ ಮೋಟಾರ್ ಬೈಕ್ ಒಂದನ್ನು ಕೊಂಡಿದ್ದರು. ಆಗಿನ ದಿನಗಳಲ್ಲಿ ಬಸ್ಸುಗಳ ಓಡಾಟ ಕಡಮೆ; ಹಾಗಾಗಿ ಅರಣ್ಯ ಪ್ರದೇಶಗಳಲ್ಲೇ ಓಡಾಡಬೇಕಾದ ಅವರಿಗೆ ಬೈಕ್ ತುಂಬಾ ಸಹಾಯಕವಾಗಿತ್ತು. ಅವರ ಸೇವೆ ಪ್ರಾರಂಭವಾದದ್ದೇ ಗುಂಡ್ಲುಪೇಟೆ, ಚಾಮರಾಜನಗರ ಅರಣ್ಯ ಪ್ರದೇಶದಲ್ಲಿ. ಅವರ ನಿಷ್ಠೆಯ ಸೇವೆ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು.

* ಏಪ್ರಿಲ್ ೧೩, ೧೮೯೭ - ಮಾರ್ಚ್ ೧೩, ೨೦೦೬

ಹೀಗಿರುವಲ್ಲಿ, ರುದ್ರಪಟ್ಟಣದ ಯಜ್ಞನಾರಾಯಣ ಸ್ವಾಮಿ ದೀಕ್ಷಿತರ ಮೊದಲ ಮಗಳು ಸಾವಿತ್ರಮ್ಮನವರೊಂದಿಗೆ ಅವರ ವಿವಾಹವೂ ನೆರವೇರಿತು.

ಸುಬ್ಬಯ್ಯನವರನ್ನು ಹೊಸ ಪ್ರವೃತ್ತಿಗಳು ಆಕರ್ಷಿಸುತ್ತಿದ್ದವು. ಅವರ ಮೇಲಧಿಕಾರಿಗಳು ಕುದುರೆಗಳ ಮೇಲೆ ಓಡಾಡುತ್ತಿದ್ದರು. ತಾವೂ ಕುದುರೆ ಕೊಳ್ಳುವ ಬಯಕೆ ಉಂಟಾಯಿತು. ಬೆಳ್ಳಗೆ ಚೆನ್ನಾಗಿದ್ದ ಒಂದು ಕುದುರೆ ಕೊಂಡರು, ಅದಕ್ಕೆ 'ಚಂದ್ರು' ಎಂದು ಹೆಸರಿಟ್ಟರು. ಕೆಲ ವರ್ಷಗಳಲ್ಲಿ ಅವರ ತಮ್ಮ ಎಸ್.ಕೆ. ವೆಂಕಟರಾಮಯ್ಯನವರ ವಿವಾಹ ನಡೆಯಿತು. ವರಪೂಜೆಯ ದಿನ ಸಂಜೆ, ಸುಬ್ಬಯ್ಯನವರು ತಮ್ಮ ತಮ್ಮನನ್ನು ಕುದುರೆಯ ಮೇಲೆ ಕೂರಿಸಿಕೊಂಡು ಊರಿನಲ್ಲೆಲ್ಲ ಮೆರವಣಿಗೆ ಮಾಡಿಸಿದರು. ವೆಂಕಟರಾಮಯ್ಯನವರೂ ಬೆಳ್ಳಗೆ ಬಹಳ ಲಕ್ಷಣವಾಗಿದ್ದರು. "ನನ್ನ ಲಕ್ಷಣವಾದ ತಮ್ಮ, ನನ್ನ ಮುದ್ದಾದ 'ಚಂದ್ರು'ವಿನ ಮೇಲೆ ಕೂತು ಮೆರವಣಿಗೆ ಹೋದಾಗ ದೃಷ್ಟಿಯಾಗುತ್ತದೆ" ಎಂದು ಹೇಳಿ ಸುಬ್ಬಯ್ಯನವರು, ಮೆರವಣಿಗೆ ಹೊರಟಾಗ ಒಮ್ಮೆ ಮತ್ತು ಮುಗಿದಾಗ ಒಮ್ಮೆ ತಮ್ಮನಿಗೆ ಆರತಿ ಮಾಡಿಸಿದರು.

ಕೆಲವು ಕಾಲದಲ್ಲಿ ಅವರನ್ನು ಪಶ್ಚಿಮಘಟ್ಟಗಳ ಅರಣ್ಯಪ್ರದೇಶಕ್ಕೆ ವರ್ಗ ಮಾಡಿದರು. ಶಿವಮೊಗ್ಗ, ಭದ್ರಾವತಿ, ಉಂಬ್ಳೇಬೈಲು, ಸಾಗರ ಈ ಸುತ್ತಣ ಅರಣ್ಯಗಳು ಇವರ ಜವಾಬ್ದಾರಿಗೆ ಬಂದವು. ಒಂದು ಸಲ, ದಟ್ಟವಾದ ಕಾಡಿನಲ್ಲಿ ಇವರೂ, ಇವರ ಮೇಲಧಿಕಾರಿಯೂ ನಡೆದು ಹೋಗುತ್ತಿದ್ದರು. ಇದ್ದಕ್ಕಿದ್ದ ಹಾಗೆ ಒಂದು ಒಂಟಿಸಲಗ ಅಟ್ಟಿಸಿಕೊಂಡು ಬಂತು. ಇಬ್ಬರೂ ಓಡಿದರು. ಸುಬ್ಬಯ್ಯನವರು ಒಂದು ಪೊದೆಯ ಹಿಂದೆ ಅವಿತು ಕೂತರು. ಎಷ್ಟು ಹೊತ್ತಾದರೂ ಮೇಲಧಿಕಾರಿ ಮಾತ್ರ ಬರಲಿಲ್ಲ. ನೋಡಿದರೆ, ಅವರನ್ನು ಸಲಗ ಹಿಂಬಾಲಿಸುತ್ತಿತ್ತು, ಆ ಅಧಿಕಾರಿ ಹೆದರಿ ಚೀರಿ ಕಂಗಾಲಾಗಿ ಓಡುತ್ತಿದ್ದರು. ಹೇಗೆ ತಪ್ಪಿಸಿಕೊಳ್ಳಬೇಕು ಎಂಬುದು ಅವರಿಗೆ ತಿಳಿಯಲಿಲ್ಲ. ಸುಬ್ಬಯ್ಯನವರು ಆನೆಯದಿಕ್ಕಿಗೇ ಓಡಿದರು, ಆ ಅಧಿಕಾರಿಯ ಕೈ ಹಿಡಿದುಕೊಂಡು ಗಿಡಮರ ಪೊದೆಗಳ ಮಧ್ಯೆ ಓಡಿಸಿಕೊಂಡು ಹೋದರು. ಸಲಗಕ್ಕೆ ಗೊತ್ತಾಗದಂತೆ ಒಂದು ಕಡೆ ಅವಿತುಕೂತರು. ಸಲಗ ಮುಂದೆ ಹೋಯಿತು. ಕಾಡಿನಲ್ಲಿ ಕಾಲುದಾರಿಗಳಿರುವುದಿಲ್ಲ, ದಿಕ್ಕೂ ತಿಳಿಯುವುದಿಲ್ಲ. ದುಷ್ಟಪ್ರಾಣಿಗಳ ಕಾಟ ಬೇರೆ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಇಬ್ಬರೂ ಅಲೆದು ಸಂಜೆಯ ಹೊತ್ತಿಗೆ ವಾಹನಗಳು ಓಡಾಡುವ ಒಂದು ರಸ್ತೆಗೆ ಬಂದರು. ಅಧಿಕಾರಿ ಈಗಲೇ 'ಬದುಕಿದೆ' ಎಂದು ಭರವಸೆ ಹೊಂದಿದ್ದು. "ಸುಬ್ಬಯ್ಯನವರೇ, ನೀವು ನನ್ನ ಪ್ರಾಣ

ಉಳಿಸಿದಿರಿ. ನಿಮ್ಮ ಜಾಗದಲ್ಲಿ ಇನ್ನು ಯಾರು ಇದ್ದರೂ ಆಗುತ್ತಿರಲಿಲ್ಲ. ನೀವು ಬಹಳ ಬುದ್ಧಿವಂತರು, ಧೈರ್ಯಶಾಲಿಗಳು, ನನ್ನನ್ನು ಉಳಿಸಿದ್ದಕ್ಕೆ ನಿಮಗೆ ಏನುಬೇಕಾದರೂ ಕೊಡುತ್ತೇನೆ, ಕೇಳಿ" ಎಂದರು. "ನನಗೆ ಏನೂ ಬೇಡ, ನನ್ನ ಕರ್ತವ್ಯ ನಾನು ಮಾಡಿದೆ" ಎಂದರು ಸುಬ್ಬಯ್ಯನವರು. "ಇಲ್ಲ , ಏನಾದರೂ ನೀವು ತೆಗೆದುಕೊಳ್ಳಲೇಬೇಕು" ಎಂದು ಅಧಿಕಾರಿ ಬಿಡದೆ ಹಠ ಮಾಡಿದರು. ಅವರಿಗೆ ಹಾಗೆ ಭಾವನೆ ತುಂಬಿ ಬಂದಿತ್ತು. ಸುಬ್ಬಯ್ಯನವರು ಮಾತ್ರ ನಿರಾಕರಿಸುತ್ತಲೇ ಇದ್ದರು. ಕೊನೆಗೆ ಆತ "ಸುಬ್ಬಯ್ಯನವರೇ, ನಿಮ್ಮ ಮೋಟಾರ್ ಬೈಕ್ ಹಳೆಯದಾಗಿದೆ. ಈಗ ನಾನು ಉಪಯೋಗಿಸುತ್ತಿರುವುದು ಹೊಸ ಮೋಟಾರ್ ಬೈಕು. ಅದನ್ನು ನಿಮಗೆ ಅತಿ ಸಂತೋಷದಿಂದ ಕೊಡುತ್ತಿದ್ದೇನೆ, ನೀವು ಖಂಡಿತಾ ಬೇಡ ಎನ್ನಬಾರದು" ಎಂದುಬಿಟ್ಟರು. ಅಲ್ಲದೆ, ಸುಬ್ಬಯ್ಯನವರ ಈ ಸಾಹಸವು ಪ್ರಚಾರವಾಯಿತು; ಇಲಾಖೆಯಿಂದ ಸನ್ಮಾನವೂ ನಡೆಯಿತು. ಆ ಕಾಲದಲ್ಲಿ ಮೋಟಾರ್ ಬೈಕ್ ಎಷ್ಟು ಅಪರೂಪವಾಗಿತ್ತೆಂದರೆ, ಅದರ ಶಬ್ದ ಕೇಳುತ್ತಲೇ ಜನರು "ಓ! ಸುಬ್ಬಯ್ಯನವರು ಬರುತ್ತಿದ್ದಾರೆ" ಎನ್ನುತ್ತಿದ್ದರು.

ಒಮ್ಮೆ ಇಲಾಖೆಯ ಹಣವನ್ನು ಶಿವಮೊಗ್ಗಾದ ಖಜಾನೆಗೆ ಕಟ್ಟಲು ತಾವೇ ಒಯ್ಯುತ್ತಿದ್ದರು. ಉಂಬ್ಳೇಬೈಲಿನಿಂದ ಮೋಟಾರ್‌ಬೈಕ್‌ನಲ್ಲೇ ಹೋಗುತ್ತಿದ್ದರು. ಇನ್ನೂ ಹೊರಟು ಹದಿನೈದು ನಿಮಿಷವೂ ಆಗಿರಲಿಲ್ಲ. ಹರಿತವಾದ ಮಚ್ಚುಗಳನ್ನು ಹಿಡಿದು ಇಬ್ಬರು ಅಡ್ಡಗಟ್ಟಿದರು. ಹಣ ಒಯ್ಯುತ್ತಿದ್ದ ವಿಚಾರ ಅವರಿಗೆ ಹೇಗೆ ತಿಳಿಯಿತೋ? ತಕ್ಷಣ ಬ್ರೇಕ್ ಹಾಕಿದ್ದರಿಂದ ಸುಬ್ಬಯ್ಯನವರು ಮುಗ್ಗರಿಸಿ ಬಿದ್ದರು. ಆದರೂ ಎದ್ದು ಹೋರಾಡಿದರು. ಆದರೆ ಒಬ್ಬನ ಏಟು ಬೆನ್ನಿಗೆ ಬಿತ್ತು, ರಕ್ತ ಸುರಿಯಿತು. ಕಳ್ಳರು ಹಣ ಎತ್ತಿಕೊಂಡು ಕಾಡಿನೊಳಕ್ಕೆ ಓಡಿದರು. ಅಷ್ಟು ಹೊತ್ತಿಗೆ ಒಂದು ಲಾರಿ ಆ ದಾರಿಯಲ್ಲಿ ಬಂತು. ಅವರನ್ನು ಶಿವಮೊಗ್ಗದ ಮೆಗಾನ್ ಆಸ್ಪತ್ರೆಗೆ ಸೇರಿಸಿದರು. ಮಾರನೆಯ ದಿವಸ ನ್ಯೂಸ್‌ಪೇಪರ್‌ಗಳಲ್ಲಿ ಅದೇ ಸುದ್ದಿ- ದಪ್ಪ ಅಕ್ಷರಗಳಲ್ಲಿ. ಆ ಸುದ್ದಿಗೆ ಅನೇಕ ದೃಷ್ಟಿಯಿಂದ ಪ್ರಾಮುಖ್ಯ ಸಿಕ್ಕಿತ್ತು.

ಸುಬ್ಬಯ್ಯನವರು ಗಟ್ಟಿಮುಟ್ಟಾದ ಆಸಾಮಿ, ಧೈರ್ಯಸ್ಥರು. ಅವರ ಮನೆಯ ಮುಂದೆ ನಾಲ್ಕಾರು ಆನೆಗಳನ್ನು ಕಟ್ಟಿರುತ್ತಿದ್ದರು. ಮಕ್ಕಳು ಸ್ಕೂಲಿಗೆ ಹೋಗಿಬರುತ್ತಿದ್ದುದು ಈ ಗಜವಾಹನದಲ್ಲಿ. ನಿವೃತ್ತರಾದ ಮೇಲೆ ಅಧ್ಯಾತ್ಮದಲ್ಲಿ ಆಸಕ್ತಿ ತಳೆದರು, ಗುರುವಿನಿಂದ ಉಪನಿಷತ್ತುಗಳನ್ನು ಕಲಿತರು, ಅನೇಕ ಪುಸ್ತಕಗಳನ್ನೂ ರಚಿಸಿದರು. ತುಂಬು ಬಾಳು ಬಾಳಿ ಇತ್ತೀಚೆಗೆ ಸ್ವರ್ಗಸ್ಥರಾದರು.

ನನ್ನ ವಿವಾಹ

Major matters ನಲ್ಲಿ Minors decision ತಗೋಬಾರ್ದು ಅನ್ನೋದಕ್ಕೆ ಪ್ರಬಲ ಉದಾಹರಣೆ ಇವಳು.

Love at short sight ಇವಳದು. Sorry, ಲವ್ವು ಅಂತ ಅನ್ನಾಲ್ರೇನ್ನಿ. ಯಾಕೇಂದರೆ ಅವಳಿಗೆ ಆಗ ಇನ್ನೂ ಹದಿನಾಲ್ಕರ ವಯಸ್ಸು. ಈಗಿನ ಕಾಲದ ಚುರುಕುತನ ಆ ಕಾಲದ ಮಕ್ಕಳಿಗೆ ಇದ್ದಿದ್ದಿಲ್ಲ. ಅನುರಾಗ ಇತ್ಯಾದಿಗಳ ಕಲ್ಪನೆಯೂ ಇದ್ದದ್ದು ಕಾಣೆ. ಆದರೂ ಯಾವುದೋ ಜನ್ಮಜನ್ಮಾಂತರದ ಬಾಂಧವ್ಯ ನಮ್ಮಿಬ್ಬರ ಮದುವೆಗೆ ಕಾರಣವಾಗಿರಬೇಕು. ನಮ್ಮ ವಿವಾಹ ಆದಾಗ ಅವಳಿಗೆ ವಯಸ್ಸು ಹದಿನೈದು. ನನಗೆ ಇಪ್ಪತ್ತೊಂದು. ಆ ವೇಳೆಗೆ ನನಗೆ ಪಿತೃವಿಯೋಗವಾಗಿತ್ತು. ನಮ್ಮ ದೊಡ್ಡಪ್ಪನವರು ಕೋಲಾರ ದಲ್ಲಿದ್ದರು. ಹಾಗಾಗಿ ನಮ್ಮ ಕಲ್ಯಾಣೋತ್ಸವ ಅಲ್ಲಿಯೇ ಜರುಗಿತು.

ನಾನೇನೂ ಬುಧ, ಪ್ರದ್ಯುಮ್ನರ ಸಾಲಿಗೆ ಸೇರುವಂತಹವನು ಅಲ್ಲ. Imported from Notredame ಆಗ್ಲಿ , ಅಥವ ಕಾರ್ಕೋಟಕ ಕಚ್ಚಿದ ನಳನೂ ಅಲ್ಲ.

ಬುರುಡೆ ಮೇಲೆ ಕಿರೀಟವಿದ್ದರೂ ಕೋತಿ ಕೋತಿಯೆ, ರಂಗನಾಣೆ. 'ನಾನು' - ಒಂದು ಕಡೆ; ಕುಂಟೋ ಬಿಲ್ಲೆ ಆಟದಲ್ಲಿ 'ಅಂಬಾಲ್' ಹೇಳಿ ನೇರ ಹಸೆಗೆ ಬಂದ ಕನ್ಯಾಮಣಿ 'ಇವಳು' ಇನ್ನೊಂದು ಕಡೆ. ಏನು ಭಾಗ್ಯವೋ ಎಂಥ ಜೋಡಿಯೋ ! An outrage on women folk ಅಂತ ಈಗನ್ನುತ್ತೆ ವೃದ್ಧಾಪ್ಯದಲ್ಲಿ !

ನನ್ನ ತಂಗಿ ಮದುವೆಯಲ್ಲಿ ಈ ಸಾಮಜಮದಗಮನೆ ಬಂದು ನಿಂತಾಗ, ನಿಂತು ನಕ್ಕಾಗ out for a duck ನಾನು. ಸೋದರತ್ತೆ ಮಗಳೇ ಆದರೂ ನಾನು ಈ ಕ್ಷೀರವರ್ಣೆಯನ್ನ, ಕೃಷ್ಣವೇಣಿಯನ್ನ, ಲಲಿತಲತಾಂಗಿಯನ್ನ ಮುಂಚೆ ನೋಡಿದ್ದಿಲ್ಲ. ಅಂತೂ-

ಜಗದ ನೋವೆಲ್ಲ ನನಗಿರಲಿ ।
ಸುಖ ಸಂತಸದ ಸಿರಿ ನಿನ್ನದಾಗಲಿ॥

ಎಂದಂದು ನನ್ನನ್ನಾವರಿಸಿದಳು. ಎಳೆ ವಯಸ್ಸಿನ ಮುಗ್ಧತೆ ಅವಳಲ್ಲಿ ಗರಿಗೆದರಿ ಬೆಟ್ಟದಷ್ಟಾಗಿತ್ತು, ಗಟ್ಟಿಮೇಳದ ಹೊತ್ತಿಗೆ, ಹೊಸತೊಂದು ಸಂಸಾರದ ಯಜಮಾನಿಯಾಗುತ್ತಿದ್ದೇನೆಂಬ ಹೆಮ್ಮೆ. ಮುಂದೆ ತಾಯಾಗಿ ಮಕ್ಕಳನ್ನು ಪಾಲಿಸುವ ಬಯಕೆ. ಸಮಾಜದಲ್ಲಿ ಗಣ್ಯಸ್ಥಾನ ಪಡೆಯುವ ಹಂಬಲ. ಸಂಪೂರ್ಣವಾಗಿ ತನ್ನವನೇ ಆದ ಏಕೈಕ ವ್ಯಕ್ತಿ ತನ್ನ ಪತಿಗೆ ಸಹಾಯಕಳಾಗಿದ್ದು , ತಾನು ಓದಿ ತಿಳಿದ, ಕೇಳಿ ತಿಳಿದ ಪತಿವ್ರತೆಯರ ಹಾದಿಯಲ್ಲಿ ನಡೆದು ಎಲ್ಲರಿಗೆ

ಶುಭ ತರಬೇಕು ಎಂಬ ಕಾತರ. ಒಂದೇ? ಎರಡೇ ? ಆಸೆಗಳು ನೂರು. ವಿಘ್ನಗಳು ನೂರೆಂಟು.

ವರಪೂಜೆ

ಅಂದು ವರಪೂಜೆ. ನಾನೇ ವರ. ಅದಕ್ಕಾಗಿ ದೇವಸ್ಥಾನಕ್ಕೆ ತೆರಳಲು Vintage ಕಾರೊಂದು ಸಿದ್ಧವಾಯಿತು.

ಸುಲ್ತಾನ್ ಮಹಮದ್ ಬದ್ರುದ್ದೀನ್ ನಾಲ್ಕು 'ಕುದುರೆ ಗಾಡಿ'ಗಳು ಮತ್ತು ಒಂದು ಕಾರಿನ ಮಾಲೀಕ. ನಮ್ಮ ಚಿಕ್ಕಪ್ಪನವರು ಸಂಜೆ ಆರು ಗಂಟೆಗೆ ಕಾರನ್ನು ಛತ್ರದ ಬಳಿಗೆ ತರುವುದೆಂದು ಹೇಳುತ್ತ, ಹಾಗೇ ಸಾಧ್ಯವಾದರೆ ಸ್ನಾನ ಮಾಡಿ ಒಗೆದ ವಸ್ತ್ರಗಳನ್ನು ಧರಿಸಿ ಬಂದರೆ ಉತ್ತಮ ಎಂದು ತಾಕೀತು ಮಾಡಿದ್ದರು.

ಸಂಜೆ ಐದೂಮುಕ್ಕಾಲು ಗಂಟೆಗೆ ಸುಲ್ತಾನ ಹಾಜರು. ಸ್ನಾನವನ್ನೇ ಮಾಡಿದ್ದನೋ ಅತ್ತರ್‌ನಲ್ಲಿ ಮುಳುಗಿ ಎದ್ದಿದ್ದನೋ ತಿಳಿಯದು. ಆದರೂ ಮೂಗು ಬಿರಿಯುವಂತಿತ್ತು ಆತ ಬಂದಾಗ. ಸೀಟಿನ Upholstery ರಿಪೇರಿಗೆ ಹೋಗಿತ್ತಂತೆ. ಅದಕ್ಕಾಗಿ ಬೆಡ್‌ಸ್ಪ್ರೆಡ್ ಒಂದನ್ನು ಹಾಸಿದ್ದ. ಅದನ್ನ ನೋಡಿಯೇ ಚಿಕ್ಕಪ್ಪ ಹೌಹಾರಿದರು. ಅತ್ತರಿನ ಕಂಪನ್ನೂ ಮೀರಿಸಿದ ಕಮಟು, ಅಂಟು. Most used ಅಂತ Folklore museum ಸೇರಬೇಕಾದ ಪದಾರ್ಥ. ಅವನ ಅಬ್ಬಾಜಾನ್ Personal Property ಅಂತೆ. ಅವರನಂತರ ರಿಟೈರ್ ಆಗಿ ರಾತ್ರಿ ಹೊತ್ತು ಕುದುರೆಗೆ ಹೊದೆಸಲು preserve ಆಗಿತ್ತು. ಮೊದಲು ಅದನ್ನು ತೆಗೆಸಿ ಬೇರೆ ವಸ್ತ್ರವನ್ನು ಹಾಸಿದ್ದಾಯ್ತು.

ವರನಿಗೆ ಅಲಂಕಾರ ಮಾಡಿ, ಹಾರ ಹಾಕಿ, ಕೈಯಲ್ಲಿ ತುರಾಯಿ ಕೊಟ್ಟು ಆಚೆ ಈಚೆ ಇಬ್ಬರು ಭುಜ ಹಿಡಿದು (ಗೌರವಾರ್ಥವಾಗಿ) ರಾಜಗಾಂಭೀರ್ಯ ಪಸರಿಸುತ್ತ ಕರೆತಂದರು. ನೋಡಿದರೆ ಕಾರು ತುಂಬ ಸಾಸಿವೆ ಹಾಕುವುದಕ್ಕೂ ಸ್ಥಳವಿಲ್ಲದಂತೆ ಚಿಣ್ಣಾರಿಗಳು ತುಂಬಿದ್ದರು. ನಾವು ಬಿಜಯಂಗೈಯುತ್ತಿದ್ದ ಹಾಗೇ ಸುಲ್ತಾನ್ ಓಡಿ ಬಂದು, 'ಥೋಡೋ ಥೋಡೋ! cheap (chief) ಗೆ ಜಾಗ ಕೊಡಿ' ಅಂತ ಆರ್ಭಟಿಸಿ ಹಾಗೂ ಹೀಗೂ ಕಸರತ್ಮಾಡಿ ಅರ್ಧ ಅಂಗುಲ ಜಾಗ ಸಂಪಾದಿಸಿದ. ನನ್ನತ್ತ ವಿಜಯದ ನಗೆ ಬೀರಿ "ಕ್ಯಾಕರ್ನಾ ಸಾಬ್...ಬಾಲ್ಬಚ್ಚೋಂ..." ಅಂತ ಅನ್ನುತ್ತ ನನ್ನನ್ನ ಅನಾಮತ್ತಾಗಿ ಎತ್ತಿ..."ಸಾರೂ, ಆ ಜಾಗ್ದಾಗೆ ಕಾಲ್ಮಡ್ಗಿ , ಮುಂದಿಂದು ಸೀಟ್ಗೆ ಪಕ್ಡೊ..." ಅಂತ ಹೆಲಿಕಾಪ್ಟರ್ ಇಳ್ಸೋ ಹಾಗೆ ಜೋಪಾನ್ವಾಗಿ ಇಳಿಸ್ದ. ಹಿಮ್ದೀನ ಅಲ್ಲಿಟ್ಟು ಮುಂದಿನ ಸೀಟ್ನ ಉಡದ್ವಾಗ್ಗೆ ಹಿಡ್ಕೊಂಡು ಕುಕ್ಕರಗಾಲಿನಲ್ಲಿ ಕೂತೆ. ಅಮ್ಮಾಮಿ ಒಬ್ರು ತನ್ನ ಅರ್ಭಕನ್ನ ಎತ್ತಿಕೊಂಡು ಬಂದು "ಚಿನ್ನೂ, ನಿಂಗೆ ಜಾಗಾ ಇಲ್ವಾಪ್ಪ ! ಸುಮ್ನಿರು, ರಾಜಾ ಸೀಟ್ನೆ ಕೊಡಿಸ್ತೀನಿ," ಅಂತ ನನ್ನ ತೊಡೆಯ ಮೇಲೆ ಕೂಡಿಸಿ, "ಶ್ರೀಕಂಠು, ಮಗು ಜೋಪಾನಾಪ್ಪ" ಎಂದಂದು, ಕುಂಭಾಭಿಷೇಕ ಮಾಡಿದ ಸಂತೃಪ್ತಿಯಿಂದ ಆಚೆ ನಡೆದರು. ಕಾಂಗರೂವಿನ ಚಿತ್ರಣ ಸಂಪೂರ್ಣವಾದಂತಾಯ್ತು. ಉಸಿರು ಹತ್ತಿ ಬಂತು. ಕಾಲು ಜೋಮು ಹಿಡಿಯಿತು. ಕೈಬೆರಳುಗಳು ನಿಸ್ತ್ರಾಣವಾದವು. ಸುಲ್ತಾನ ಹ್ಯಾಂಡಲ್ ಹಿಡಿದು ಕಾರ್ ಸ್ಟಾರ್ಟ್ ಮಾಡಲು ಹೊರಟ. "ಕೈಸೆ ಹೈ ಮಾರಾಜ್ ? ಆರಾಮ್ಸೆ ಬೈಟ್ನೇಸು ?" ಅಂತ ನನ್ನತ್ತ ವಾಗ್ಬಾಣ ಎಸೆದು ಎದೆಯ ಕುದಿತ ಏರಿಸಿದ. ಅವನು ಹ್ಯಾಂಡ್ಲ್ ಹೊಡೆದ ಹಾಗೆಲ್ಲ ನನ್ನ ಕಾಂಗರೂ ಪೀಚು ಉದ್ರೇಕಗೊಂಡು ತನ್ನ ಕೈಯಲ್ಲಿದ್ದ ಪೆಪ್ಪರ್ಮಿಂಟ್ ಚೀಪುತ್ತ ತನ್ನ ಅಂಟು ಕೈಗಳಲ್ಲಿ ನನ್ನ ಮೂಗನ್ನು ಬಲವಾಗಿ ಹಿಡಿಯುತ್ತಿತ್ತು. ಮೊದ್ಲೆ ನನ್ಗೆ ಅಂಟೂಂದ್ರೆ allergy. ಮೂಗನ್ನು ಕಿತ್ತು ಬಿಸಾಡೋಣವೇ ಎನ್ನಿಸುತ್ತಿತ್ತು. ಒಂದು ಕಡೆ ಬೆವರು, ಇನ್ನೊಂದು ಕಡೆ ಅಂಟುಪುರಲೆ. ಮತ್ತೊಂದು ಪಾರ್ಶ್ವದಲ್ಲಿ ಒಂದು Oil Painting. ಅದ್ರ ತಲೆಯಿಂದ ಹಣೇ ವರ್ಗೂ ಸೋರ್ತಿದ್ದ ಎಣ್ಣೆ. ಒಂದೊಂದು ಸರ್ತಿ ಕಾರ್ ಅಳ್ಳಾಡಿದ ಹಾಗೆಲ್ಲಾ 'ಹಾ' ಎಂದು ecstatic ಆಗಿ ತಲೆಯಿಂದ ನನ್ನ ಪಕ್ಕೆಗಳನ್ನು ಗುದ್ದುತ್ತಿತ್ತು. ಷರಟು ತುಂಬ ಸಾಸಿರ ಚಿತ್ತಾರ. ಅಲಂಕಾರಕ್ಕೆ ಕೂರಿಸಿದಾಗ 'ಕತ್ತು ಹೊತ್ತು ಸ್ವಲ್ಪ ಸರಿಯಾಗಿ ಕಾಣಿಸಲಿ' ಎಂದು ಒಂದು ಪಟ್ಟು ಜಾಸ್ತಿಯೇ ಹಾಕಿದ್ದರು Face Powder ನ. ಎಲ್ಲಾ ವ್ಯರ್ಥವಾಗಿ ಕಳರಿದ ಶ್ಯಾವಿಗೆ ಹಿಟ್ಟಾಗಿತ್ತು ಮುಖ. ಒಟ್ಟಿನಲ್ಲಿ ಅಮಾವಾಸ್ಯೆಯೇ ಮೆರವಣಿಗೆ ಹೊರಟಂತಾಗಿತ್ತು. Vintage ಕಾರು ಅಂದ್ಮೇಲೆ ಅದಕ್ಕೂ ತನ್ನದೇ ಆದ ಮಾನ, ಮರ್ಯಾದೆ, ಘನತೆ, ಗೌರವ ಇರೋಲ್ವೆ? ಹ್ಯಾಂಡಲ್ ಬಡಿತಕ್ಕೆ ಬಗ್ಗಲಿಲ್ಲ. ಕೊನೆಗೆ 'ಜರ್ರ ಡಕ್ಲೊ ಸಾಬ್'... ಅಂತ ಅವ್ರಿವ್ರನ್ನ ಹಿಡಿದು, ತಳ್ಳಿಸಿ ಕೊನೆಗೂ start ಮಾಡಿದ ಸುಲ್ತಾನ. ಪಿರಮಿಡ್ ಹೊತ್ತು ಉತ್ಸವ ಹೊರಟಿತು. ನಾಗಸ್ವರದವರು ಪೀ ಪೀ ಡಬ್ ಡಬ್ ಅಂತ ತಮ್ಮ ಕರ್ತವ್ಯ ಆರಂಭಿಸಿದರು. ಡೋಲು ಬಡಿದ ಹಾಗೆಲ್ಲ ಅನುಕರಿಸಿ ಬಾಲಸೈನ್ಯ ನನ್ನನ್ನು ಕುಟ್ಟುತ್ತಿತ್ತು.

ಬಂಧುವರ್ಗದವರೆಲ್ಲಾ ಶಿಸ್ತಾಗಿ ಹಿಂಬಾಲಿಸಿದರು. ಊರ ಜನವೆಲ್ಲ ಎತ್ತರದ ಜಗುಲಿಗಳನ್ನೇರಿ ನೋಡಿದ್ದೂ ನೋಡಿದ್ದೇ. ಒಬ್ಬಿಬ್ಬರು "ವರನ್ನ ಸ್ವಲ್ಪ ತೋರಿಸ್ರೀ" ಅಂದಾಗ ಚಿಕ್ಕಪ್ಪ ಓಡಿಬಂದು ಚಿಳ್ಳೆಗಳನ್ನು ಆಚೀಚೆ ಸ್ವಲ್ಪ ಸರಿಸಿ ನನ್ನ ಮುಖಚಂದ್ರನ ದರ್ಶನಕ್ಕೆ ಅವಕಾಶ ಮಾಡಿಕೊಡುತ್ತಿದ್ದರು. ಆದರೂ ಅಷ್ಟು ಸುಲಭವಾಗಿ ಆಗುವ ದರ್ಶನ ಅಲ್ಲವಲ್ಲ. ಆಗ ಚಿಕ್ಕಪ್ಪ ಆರ್ಭಟಿಸಿ "ಲೋ ! Petromax ಎಲ್ಹೋದ್ರೋ? ವರನ ಹತ್ರ ಇರೀಂದ್ರೆ

ಡ್ರೈವರ್ ಮುಖಕ್ಕೇನೋ ಹಿಡಿಯೋದು ದೀಪ ! ಬನ್ನಿ ಹಿಂದಕ್ಕೆ" ಅಂತ ಅಂದಾಗ ಮುಂಚೂಣಿಯಲ್ಲಿನ ತಮ್ಮ ಸ್ಥಾನ ಬಿಟ್ಟುಕೊಡಲು ಇಚ್ಛೆ ಇಲ್ಲದೆ ಬೇಸರದಿಂದ ಹಿಂದೆ ಬಂದು ಅದರ ಕಾವೆಲ್ಲ ನನ್ನನ್ನೇ ಕಾಡುವಂತೆ ನಿಲ್ಲುತ್ತಿದ್ದರು.

ನಾಗಸ್ವರದವರಿಗೂ ನನ್ನಲ್ಲಿ ಏನು ದ್ವೇಷವೋ, ಹತ್ತು ಹೆಜ್ಜೆ ಹೋಗುವುದಕ್ಕಿಲ್ಲ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡುತ್ತ ನಿಲ್ಲುತ್ತಿದ್ದರು. ಈ ಮೆರವಣಿಗೆ ಇವತ್ತಿಗೆ ಮುಗಿಯುವುದಿಲ್ಲವೆಂದೇ ಅನ್ನಿಸುತ್ತಿತ್ತು. ಬೆನ್ನು ಬಾತಿತ್ತು. ಕಾಂಗರೂ ಕಿಶೋರನ ಭಾರಕ್ಕೆ ಹೊಟ್ಟೆ ಹಿಂಡಿದಂತಾಗುತ್ತಿತ್ತು. ಅದರ ತಾಡನದಿಂದ ಮೂಗು ಸುರಿಯುತ್ತಿತ್ತು. ಒರೆಸಿಕೊಳ್ಳಲು ಉತ್ತರೀಯವಿರಲಿ ಕೈಗಳನ್ನು ಬಿಡಿಸಿಕೊಳ್ಳುವುದೂ ಆಗದ ಮಾತಾಗಿತ್ತು. ಮಧ್ಯೆ ಮಧ್ಯೆ ಧರ್ಮದರ್ಶನಕ್ಕಾಗಿ ಕತ್ತು ಚಾಚಬೇಕಾಗಿ ಬಂದಾಗ ತಮ್ಮತಮ್ಮ ಸ್ಥಾನಗಳನ್ನು ಮತ್ತೆ ಪಡೆಯಲು ಹೊಡೆದಾಟ. "ನಿಮ್ಮ ನಿಮ್ಮ ಜುಟ್ಟು ಹಿಡಿದು ಹೋರಾಡಿ, ನನ್ನ ಜುಟ್ಟು ಬಿಟ್ಟು ಬಿಡಿ" ಎಂದು ಬುದ್ಧಿಮಾತು ಹೇಳಲು ಬಾಯಿ ಆಡಿಸುವ liberty ನನಗಿರಲಿಲ್ಲ. ಮುಂದೆ ಸಂಸಾರದಲ್ಲಿ ಸರಿಯಾಗಿ ನಡೆದುಕೊಳ್ಳಲು Practical training ವರಪೂಜೆ ಎನ್ನಿಸಿತು. ಅಷ್ಟೇ ಅಲ್ಲ. ಒಳಗೆ ಕೂತಂಥ ಬಾಲಸೈನ್ಯ ಜಗುಲಿಯ ಮೇಲಣ ಸಹನಕ್ಷತ್ರಿಕರಿಗೆ invitation ನೀಡುವುದೂ ಆರಂಭವಾಯಿತು, "ನೀನೂ ಬಾ, ಕೂತ್ಕೋ" ಅಂತ. ಸುಲ್ತಾನನ ಮೆಹರ್ಬಾನಿ ಬೇರೆ. "ಕಳ್ಸಿ ತಾಯಿ, ಕಳ್ಸಿ ಕುಂತ್ಕಳ್ಲಿ. ಭಾದ್ದುರಿ ಬೇಟೆ ನಮ್ದು ಕಾರು. ಹಜಾರ್ಜನ ಆದ್ರೂ ಅಲ್ಲಾಡಾಕಿಲ್ಲ" ಎಂದು ನನ್ನತ್ತ ತಿರುಗಿ "ಕ್ಯಾ ಸಾಬ್ ನಮ್ದು ಹೇಳೋದು ಸತ್ಯ ಐತೆ ? ಆರಾಮ್ಸೆ ಬೈಟೊ ಸಾಬ್" ಒಗ್ಗರಣೆ. ಪಾರ್ಥನ ಅಕ್ಷಯ ತೂಣೀರದ ಹಾಗೆ, ಕೃಷ್ಣ ಮೆರೆದ ವಿಶ್ವರೂಪದ ಹಾಗೆ ಕಂಗೊಳಿಸುತ್ತಿದ್ದೆ. ಅಲ್ಪ ಸ್ವಲ್ಪ ವ್ಯತ್ಯಾಸವೂ ಆಗಿತ್ತೂನ್ನಿ... ಹಾರದಲ್ಲಿನ ಹೂಗಳೆಲ್ಲ ನಾಪತ್ತೆಯಾಗಿ ಎರಡೆಳೆ ದಾರ ಮಾತ್ರ ಉಳಿದಿತ್ತು. ತುರಾಯಿ ಎಲ್ಲಿ ಹೋಯಿತೋ, ದೇವರೇ ಬಲ್ಲ.

ಏನೇ ಆದರೂ ಆಗಿನ ಸೀಮೆಎಣ್ಣೆ ದೀಪದ ಕತ್ತಲು ಬೆಳಕಿನಾಟದಲ್ಲಿ, ಈ ಪೆಟ್ರೋಮ್ಯಾಕ್ಸ್, ಈ ಸಾಲಂಕೃತ ಕಾರು, ಎಳೆಯರ ಉತ್ಸಾಹ, ಕೂಡಿ ಬಾಳುವ ಮನೋವೈಶಾಲ್ಯ ಹೊಂದಿದ ಊರ ಜನರ ಸಂಭ್ರಮ, ದೈವಚಿಂತನ, ಕೇವಲ ಬಾಡಿಗೆಗೆ ಕಾರು ಓಡಿಸದೆ ಕುಟುಂಬದ ಸದಸ್ಯನಂತೆ ವರ್ತಿಸುವ ತಿಳಿಮನಸ್ಸಿನ ಸುಲ್ತಾನ, ಯಾವುದಾದರೂ ಪದಾರ್ಥಗಳು ಸಾಲದಾದರೆ ತಮ್ಮ ಮನೆಯಿಂದಲೇ ತರಿಸಿ ಕೆಲಸ ಸಾಗಿಸುವ ಪುರೋಹಿತರು, ಅರ್ಚಕರು, ವಧೂವರರ ಜೀವನ ಹಸನಾಗಿರಲೆಂದು ಪರಿಶುದ್ಧ ಮನಸ್ಸಿನಿಂದ ಬೇಡುವ ಹಿರಿಯರು, ಆ ದೇವಾಲಯದ ಪರಿಸರ - ಎಲ್ಲ ಸೇರಿ ಎಲ್ಲ ಶಾರೀರಿಕ ನೋವುಗಳನ್ನೂ ಕ್ಷಣಾರ್ಧದಲ್ಲಿ ಮರೆಸುವ ಅಲೌಕಿಕ ಶಕ್ತಿಯನ್ನು ಹೊಂದಿತ್ತು. ಮರೆಯಲಾಗದ ಅನುಭವ ಅದು.

ನನ್ನ ಕಾಂಗರೂ ಮರಿ ಅತಿ ಉತ್ಸಾಹದಿಂದ ಮೂಗು ಹಿಡಿದಾಗಲೆಲ್ಲ ಮೂಕವೇದನೆ ಅನುಭವಿಸುತ್ತ ಬವಣೆ ಪಟ್ಟ ನಾನು ಅದರ ಕುಣಿತಕ್ಕೆ ಕಡಿವಾಣ ಹಾಕಲು ಒಮ್ಮೆ ಚಿಗುಟಿ ಬಿಡಲೆ ಎಂದೂ ಅನ್ನಿಸಿದ್ದು ಸ್ಮರಿಸಿ ನಗು ಬಂತು - ಆಲಯ ಸೇರಿದಾಗ.

ಎಲ್ಲ ಆದನಂತರ ಚಿಕ್ಕಪ್ಪ ಸುಲ್ತಾನನ ಬಿಲ್ settle ಮಾಡಿದರು. ಮಾತನಾಡಿದ್ದ ಮೊಬಲಗಿಗಿಂತ ಹತ್ತು ರೂಪಾಯಿ ಹೆಚ್ಚಿಗೆಯೇ ಕೊಟ್ಟರು.

ಹೊರಡುವಾಗ ಸುಲ್ತಾನ ಚಿಕ್ಕಪ್ಪನವರನ್ನು ಕರೆದು, "ಸಾರೂ, ನಿಕಾ ಟೇಂಗೆ ನಾನಿರಾಕಿಲ್ಲ ಊರ್ನಾಗೆ. ಬೇಟೀಗೆ ನನ್ದು ನಜರ್ ಕಾಣ್ಕೆ ಒಪ್ಪಿಸ್ಬುಡಿ. ಅಲ್ಲಾ ಭಲಾಕರೆ" ಎಂದಂದು ಅವರ ಕೈಯಲ್ಲಿಟ್ಟ ಹಣ ಅವನ ಬಾಡಿಗೆಗಿಂತ ಬಹುಪಾಲು ಹೆಚ್ಚಿಗೆಯೇ ಆಗಿತ್ತು. ಅಷ್ಟೇ ಅಲ್ಲ , ತನ್ನ ಬೇಟಿಯನ್ನೇ ಗಂಡನ ಮನೆಗೆ ಕಳುಹಿಸುವ ಹಾಗೆ ತನ್ನ ರೇಷ್ಮೆ ಜುಬ್ಬದ ಕೊನೆಯಿಂದ ಕಣ್ಣೊರೆಸುತ್ತ ಹ್ಯಾಂಡಲ್ ಹಿಡಿದ.

ಕಾಶೀಯಾತ್ರೆ

ಕಾಶೀಯಾತ್ರೆಯ ಸಿದ್ಧತೆ ನಡೆದಿತ್ತು. ಎಲ್ಲರೂ ಪಾಗಿಗಾಗಿ ಹುಡುಕುತ್ತಿದ್ದರು. ಪೇಟ ಕಟ್ಟುವುದರಲ್ಲಿ ನಮ್ಮ ತಂದೆಯವರ ಹಾಗೆ ನಾನೂ ಪ್ರಸಿದ್ಧ. ರಾತ್ರಿ ನಾನೇ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದೆ. ಈ ಪರಿಕರಗಳು ಇರುವ Roomನಲ್ಲೇ ನಮ್ಮ ಪುರೋಹಿತರು (ಬಂಧುವೂ ಹೌದು) ಶ್ರೀ ಸುಬ್ರಹ್ಮಣ್ಯದೀಕ್ಷಿತರು ಮಲಗಿದ್ದರು. ರಾತ್ರಿ ಒಂದು ಹೊತ್ತಿನಲ್ಲಿ ಸೊಳ್ಳೆಯ ಕಾಟ ಅತಿಯಾಯಿತು. ಮೊದಲೇ freshly shaven head. ಕೇಳಬೇಕೆ? Priaries ನಲ್ಲಿ ಹಯಸೇನೆ ಬಿಟ್ಟಂತಾಗಿತ್ತು. ಸಹಿಸಲಾರದೆ ನಿದ್ದೆ ಕಣ್ಣಲ್ಲೇ ಪೇಟ ಎಳೆದುಕೊಂಡು ಮೂಗಿನಷ್ಟು ಭಾಗ ಬಿಟ್ಟು ತಲೆ ಮುಖಗಳಿಗೆ ಬಿಗಿದು ಸುಖನಿದ್ರೆಗೊಳಗಾದರು. ಕೊನೆಗೊಮ್ಮೆ ತನ್ನ shape ಕಳಕೊಂಡಿದ್ದ ಪಾಗು ಲಭ್ಯವಾಯಿತು. ದೀಕ್ಷಿತರ ಶಿರವನ್ನಾಚ್ಛಾದಿಸಿ ಪಾವಿತ್ರ್ಯ ಪಡೆದಿದ್ದ ಪಾಗು ಗುರುಗಳ ಶೇಷವಸ್ತ್ರದಂತೆ ಮತ್ತೆ ನನ್ನ ತಲೆಯನ್ನು ಸೇರಿತು.

ಒಂದ್ನಾಕ್ದಿವ್ಸ ಉಪ್ಯೋಗ್ನೋಹಾಗಿರ್ಬೇಕು ಪದಾರ್ಥ ಎಂಬ principle ನಮ್ಮ ಚಿಕ್ಕಪ್ಪನವರದ್ದು. ಹಾಗಾಗಿ ಬರೀ ಕಣ್ಣಳತೆಯ ಜತೆಗೆ ಸ್ವಲ್ಪ extra ಸೇರಿಸಿಯೇ ಪಾದರಕ್ಷೆಗಳನ್ನು ತಂದಿದ್ದರು. ಗಂಡ ಹೆಂಡ್ತಿ Foot in Foot ಆಗಿರ್ಲೀಂತ್ಲೋ ಏನೋ. "ಯಾಕೆ, ಹುಡುಗ ಕಾಲನ್ನು ಎಳ್ಡೂ ಎಳ್ಡೂ ಹಾಕ್ತಿರೋ ಹಾಗಿದೆಯಲ್ಲ" ಎಂದು ಒಬ್ಬ ಹಿರಿಯರು ಉದ್ಗಾರ ತೆಗೆದರು. ವರ - ಗಾಂಭೀರ್ಯ ಬಿಟ್ಟು boot wear size ನ ಬಗ್ಗೆ ಹೇಳಿ ಸಮಜಾಯಿಷಿ ಕೊಡುವುದೇ ? ಸುಮ್ಮನಾದೆ.

ಛತ್ರಿ ಬಿಡಿಸಿದರೆ ಮಿನಿ ಟೆಂಟು. ಅದರ ವೈಶಾಲ್ಯದಲ್ಲಿ ಅಡಗಿ ಹೋದೆ. 'ವರ ಎಲ್ಲಿ , ವರ ಎಲ್ಲಿ' ಎಂದು photographer ಪರದಾಡಿದರೆ ಅದು ನನ್ನ ತಪ್ಪಲ್ಲ. "ಛತ್ರೀದೇ ಫೋಟೋ ತೆಗೀಲೋ, ವರಂದೋ" ಅಂತ ಅವ್ನು ಕೂಗಾಡಿದಾಗ ಛತ್ರಿ ತಟಕ್ಕನೆ ಎರಡಡಿ ಮೇಲೆ ಹೋಯಿತು. ಈ process ನಲ್ಲಿ ಛತ್ರಿಯ ಕಡ್ಡಿ ಚುಚ್ಚಿ , ಗಂಗಾ ಭಾಗೀರಥಿಗಳ್ ಮೇಳೈಸಿ ಧರೆಗಿಳಿದರ್ ಕಣ್ಣ ಕಾಲುವೆಯೊಳೊತ್ತಿ...ಕಂಡವರೊಬ್ಬರು ಗೇಲಿ ಮಾಡಿದರು, "ನಿಜ್ವಾಗಿ ಕಾಶೀಯಾತ್ರೇಗೇ ಅಟ್ಟಿಡ್ತಾರೇಂತ ರೋದಿಸ್ತಿರ್ಬೇಕು. ಭಯ ಬೇಡ, ಹೆಣ್ಕೊಟ್ಟು ಇರಿಸ್ಕೋತ್ತೀವೀಂತ ಹೇಳಿ."

ಕೈಗೊಂದು walking stick ಬಂತು. ನನ್ನ ಕಾವಲ್ಗೆ ಇವ್ಳನ್ನೇ ಕೊಡ್ತಿರೋವಾಗ ಈ ವ್ಯವಸ್ಥೆಯ ಅಗತ್ಯವಿರಲಿಲ್ಲ ; ಅಥವಾ ಮುಂದಿನ ನನ್ನ nocturnal peragrinations ತಿಳಿದೇ ಕೊಟ್ಟರೋ ಕಾಣೆ.

ದೀಕ್ಷಿತರು ಸೂಕ್ಮವಾಗಿ ಇವೆಲ್ಲದರ ಉದ್ದೇಶ ಇತ್ಯಾದಿಗಳ ಬಗ್ಗೆ ಹೇಳಿದ್ದೂ ಹೇಳಿದ್ದೆ. ದಿಕ್ಕುಗಳು ಪ್ರಸನ್ನವಾದವು. ಸುರರು ಪುಷ್ಪವೃಷ್ಟಿಗೈದರ್. ಕಂಪ ಸೂಸುತ್ತ ತಂಬೆಲರ್ ಸುಳಿದುದು. ಪಶುಪಕ್ಷಿಗಳ್ ವೈರವಂ ಮರೆತು ನಲಿದಾಡಿದವು. ಇಷ್ಟೆಲ್ಲಾ ಆಯ್ತೋ ಇಲ್ಲವೋ ನಾ ಕಾಣೆ. ಅಂತೂ ಇಂತೂ ಗಂಭೀರವಾದ ಚರ್ಚೆಗಳಲ್ಲಿ ಮುಳುಗಿ ಮುಂದಿನ ಸಾಲುಗಳಲ್ಲಿ ಆಸೀನರಾಗಿದ್ದವರು ತಂತಮ್ಮ ತಲೆಗಳಿಂದ ಅಕ್ಷತೆಯನ್ನು ಕೊಡವಿಕೊಳ್ಳುತ್ತಿರಲಾಗಿ, ಸರ್ವ ವಾದ್ಯ ಮೇಳೈಸಿರಲಾಗಿ ಅರುಂಧತಿಯನ್ನು ನೋಡಿಯೇಬಿಟ್ಟಳು ಇವಳು. ಅರುಂಧತಿಯನ್ನೋ ತ್ರಿಶಂಕುವನ್ನೋ ಇನ್ನೂ ನಿರ್ಧಾರವಾಗಿಲ್ಲ. ಅವಂತಿ ರಾಜಕುವರನನ್ನೋ, ವಿದರ್ಭದ ಯುವರಾಜನನ್ನೋ ಕೈಹಿಡಿಯಬೇಕಾಗಿದ್ದವಳು ನನ್ನ ಜುಟ್ಟು ಹಿಡಿದಳು. ಕೋಗಿಲೆ ಮಾಮರವನ್ನು ಸೇರಿತು.

ಅಂದು ಲಾಜಾಹೋಮದಲ್ಲಿ 'ತಾನು' ಎಂಬುದನ್ನು 'ನಮಮ' ಎಂದು ನನ್ನ ಮೂಲಕ ಹೋಮ ಮಾಡಿಬಿಟ್ಟಳೋ ಏನೋ ? ಅಂದಿನಿಂದ ಇಂದಿನವರೆಗೆ ನಮಗಾಗಿಯೇ ಅವಳು ಹೊರತು ತನಗಾಗಿ ಅಲ್ಲ ಅವಳ ಯಾವುದೊಂದು activity.

ಭೋಜನ

ಇನ್ನು ಭೋಜನ. ಆಗಿನದಕ್ಕೂ ಈಗಿನದಕ್ಕೂ ಅಜಗಜಾಂತರ. ತಮಾಷೆ ಮಾಡುತ್ತ, ಶ್ಲೋಕಗಳನ್ನು ಹೇಳುತ್ತ ಸಾವಧಾನವಾಗಿ ಊಟ ಸಾಗಿಸುವುದು ಆಗಿನ ಪರಿ. ಭೂಮದಲ್ಲಿ ನಾನು ಬಾಯಿ ಬಿಟ್ಟಾಗ ದೀಕ್ಷಿತರು ತಮಾಷೆ ಮಾಡಿದರು, "ಅಯ್ಯೋ, ಅಯ್ಯೋ, ಅದ್ಯಾಕಪ್ಪ ಅಷ್ಟು ದೊಡ್ಡದಾಗಿ ಬಾಯ್ಬಿಡ್ತಿ , ನೀರಾನೆ ಹಾಗೆ ! ಎಲೇಲಿರೋದೆಲ್ಲ ಒಟ್ಗೆ ಕೊಡೋಲ್ಲಾ , ಅಡಕ್ವಾಗಿಟ್ಕೊ ಸಾಕು. ಪುಟ್ಟುಡ್ಗಿ. ಹೆದರ್ಬಿಟ್ಟಾಳು !"

Hosts ಬಂದು ವಿನಯಪೂರ್ವಕವಾಗಿ ಎಲ್ಲರನ್ನೂ ಬೇಡಿಕೊಂಡರು, "ಭೋಜನ ನಿಧಾನವಾಗಿ ಸಾಗಲಿ" ಎಂದು. "ನಿಧಾನ್ವಾಗಿ ಕೂರಿಸ್ಬೇಡಿ ದೇವ್ರು. ಆ ನರಸಿಂಹ ಆಗ್ಲೇ ಒಂದ್ಮೊರ ಅಂಬೊಡೆ ಮುಗ್ಸಿದಾನೆ. ಇನ್ನು ಎರಡ್ನೇ ಮೊರ್ದೂ ಖಾಲಿ ಮಾಡ್ತಾನೆ ಅಷ್ಟೆ !"

"ಮಾಡ್ಲಿ ಬಿಡಿ ! ಯಾರಿಗೋಸ್ಕ್ರ ಮಾಡಿರೋದು ! ನರಸಿಂಹ, ಹಾಗೇ ಆ ಜಿಲೇಬೀನ್ನೂ ಮುಗ್ಸು. ಎಲೇಲಿ ಊಟ ಮಾಡಿದ್ದುಗ್ರೂ ಇರ್ಬಾರ್ದು ನೋಡು !" ಅದು ಆ ಕಾಲದ ಮಾತು.

ಈಗ ಊಟಕ್ಕೆ first come first served ಉ. ಇನ್ಮೇಲೆ token system ಬರುತ್ತೋ ನಾಕಾಣೆ. ನೂಕುನುಗ್ಗಲ್ಲಿ ಮೂಳೆ ಮುರ್ಯೋದಾದ್ರೂ ತಪ್ಪುತ್ತೆ. House full ಆಗುತ್ಲೆ ಧಡಾರ್ ಅಂತ dining hall ಬಾಗ್ಲನ್ನ ಹಾಕ್ಬಿಡ್ತಾರೆ. ಹಾಲಲ್ಹೋಗಿ ಕೂತ್ರೆ ಮುಂದ್ಲ ಪಂಜ್ತೇಗೂ ಸೊನ್ನೆ. ಒಳಗಿರೋವ್ರದ್ದು ಊಟ ಮುಗ್ಯೋವರ್ಗೂ ಒಂಟಿ ಕಾಲಲ್ಲೇ ನಿಂತಿರ್ಬೇಕು ಅಲ್ವೇ. ಆಮೇಲೆ ಬಾಗಿಲು ತೆರೆಯುತ್ಲೂ dam burst ಆದ್ಹಾಗೆ ! survival of the strongest ಉ !

'ಮಾಂಗಲ್ಯಧಾರಣೆ' 'ಸಭಾಪೂಜೆ' ಅಂತ ಕೂತ್ಕೊಳ್ದೆ ಒಂದೂವರೆ ಕಣ್ಣು ಊಟದ ಮನೆ ಕಡೆ ಇಟ್ಟು ತಳಾಯಿಸ್ತಾ ಇದ್ದು, ಮೊದಲ್ನೇ ಪಂಜ್ತೆ ಎಲೆ ಹಾಕೂತ್ಲು ನುಗ್ಗಿ seats ಹಿಡಿದಿರಬೇಕು. ಸಂಕೋಚಪಟ್ರೋ ಐದ್ನೆ ಪಂಜ್ತೇನೇ ಗತಿ.

Stiff competition ಇದ್ರೆ ಎರಡ್ನೇದಾದ್ರೂ ಸರಿ. ಅದಕ್ಕೆ ಕೊಂಚ ಮಾನಸ ಸ್ಥೈರ್ಯ ಬೇಕು. ಧರ್ಮರಾಯನ ರಾಜಸೂಯಯಾಗ ಜ್ಞಾಪಿಸ್ಕೊಳ್ತಾ ಎಂಜಲೆಲೆ ತಗುಲಿದರೆ ಪುಣ್ಯ ಅಂದ್ಕೊಂಡು ಸಾಕಷ್ಟು ಪ್ರಮಾಣದಲ್ಲಿ ಪುಣ್ಯ ಸಂಪಾದಿಸ್ತಾ ನುಸುಳಿ,

ಸೀಟ್ ಹಿಡಿಯಬೇಕು. ಅಡುಗೇವ್ರು, ಬಡಿಸೋರು ಇಂತಿಷ್ಟು hours ಅಂತ time contract ಮಾಡ್ಕೊಂಡಿರ್ತಾರೆ. ಢಣ್ ಅನ್ನೋದೆ ತಡ ಧಡಾರ್ ಅಂತ ಶಸ್ತ್ರ ಸಂನ್ಯಾಸ ಮಾಡಿ ಮುಂದ್ಲ campಗೆ ಧಾವಿಸ್ಬೇಕು ಅವ್ರು. 'ಶ್ರೀ ರಾಘವಂ' ಹಾಡ್ತಾ, 'ಅಗಿಯೋದು ನಿಧಾನ್ವಾಗಿ' ಅಂತ ಕೂತ್ರೆ ಒಂದು ಹಪ್ಪಾನೂ ತಿನ್ಲಿಕ್ಕಿಲ್ಲ ನೀವು. Speed! speed is essential. ಅದೂ ಅಲ್ದೆ ಮಜ್ಜಿಗೆ ಸ್ಟೇಜ್ ಬರೋದೇ ತಡ tables clean ಮಾಡೋವ್ರು ಬುಟ್ಟಿ ಬರ್‍ಲು ಹಿಡ್ದು ನುಗ್ತಾರೆ. ಆದ್ರಿಂದ ಅದೇ as it started so it ended. ಅದೇ ಧರ್ಮರಾಯ, ಅದೇ ರಾಜಸೂಯ, ಅದೇ ಎಂಜ್ಲು , ಅದೇ ಪುಣ್ಯ- ಕೈ ತೊಳ್ಯೋಕ್ಕೆ ಹೋಗೋವಾಗ.

ಉರುಟಣೆ, ಚೆಂಡಾಟ ಎಲ್ಲ ಸಮಗ್ರವಾಗಿ, ಚಾಚೂ ತಪ್ದೆ ಸಾಗಿದವು. "ಮನೋಹರ ಶ್ರೀ ನೀ ಮಾನಿನಿಯರಸ"... "ಕಂಬುಕಂಠವ ತೋರೈ...ಅರಿಶಿನ ಹಚ್ಚುವೆನು" "ಉರುಟಾಣೆಯ ವಿರಚೀಪೆನಾ..." "ಚೆಂಡನಾಡು ಕಾಂತ ಲೇಸಾಗಿ ನೀ" ಹಾಡಿದ್ದೂ ಹಾಡಿದ್ದೆ. ಮನೋಹರಾಂತ ಜೀವನದಲ್ಲಿ ಕರೆಸಿಕೊಂಡದ್ದು ಅದೊಂದೇ ಸಾರಿ. ಶ್ರುತಿ ಎಲ್ಲೀಂತ ಹುಡುಕ್ತಾ ಇದ್ದೆ ನಾನು. ಸಂಗೀತ ಶ್ರುತಿ ತಪ್ಪಿದ್ರೆ ಮತ್ತೆ ಕೂಗಿಸ್ಬೋದು. ಕಿವಿ ಮುಚ್ಕೋಬಹುದು. ಗೃಹಕೃತ್ಯ 'ಗತಿ', 'ಶ್ರುತಿ' ತಪ್ಪಿದ್ರೆ ? ಚೆಂಡಾಟಕ್ಕೆ ಯಾರ ಕೀಟಲೆಯೋ ಏನೋ. ಕ್ರಿಕೆಟ್ ಬಾಲ್ಗೆ ಅಲಂಕಾರ ಮಾಡಿದ್ದರು. ಮೊದಲೇ ಜಟ್ಟಿ ಮಗ್ಳು 'ಚೆಂಡನಾಡು ಕಾಂತ' ಅಂತ ನನ್ನ ಮೈ ಮರ್‍ಲಿ ಬೀಸಿದ್ಳು ಪುಣ್ಯಾತ್ಗಿತ್ತಿ ballನ. ಮೂಳೆ ಮುರಿಯದೇ ಇದ್ದದ್ದು ನನ್ಪುಣ್ಯ.

ಸಂಸಾರ

ನನ್ನಲ್ಲಿಗೆ ನನ್ನಾಕೆ ಬಲಗಾಲಿಟ್ಟು ಬಂದದ್ದು , ಈ ಸಂಸಾರದ ಏಕಚಕ್ರರಥಕ್ಕೆ ಸಾರಥಿಯಾದದ್ದು ಗವಿಪುರಂ ಗುಟ್ಟಹಳ್ಳಿಯಲ್ಲಿ ಮಾಡಿದ್ದ ಮನೆಗೆ. ಕೊಂಚ ಕಾಲ ಅಲ್ಲಿದ್ದು, ನನ್ನ ಸ್ನೇಹಿತ ಪೊಲೀಸ್ ಇಲಾಖೆಯಲ್ಲಿ superintendent ಆಗಿ ನಿವೃತ್ತನಾದ ಎನ್. ವಿ. ರಘುನಾಥನ ಬಸವನಗುಡಿ ಪುಟ್ಟಣ್ಣರಸ್ತೆಯಲ್ಲಿನ ಮನೆಗೆ ಬದಲಾಯಿಸಿಕೊಂಡೆವು.

ಅಲ್ಲಿಯೇ ನನ್ನವಳಿಂದ ಅಲಂಕೃತವಾದ ತೊಟ್ಟಿಲು ಮೊದಲನೇ ಬಾರಿಗೆ ಮರು ಉಪಯೋಗಕ್ಕೆ ಬಂದದ್ದು.

ಒಂದು Feeding bottle ತಗೊಂಡ್ರೆ ಇನ್ನೊಂದು ಫ್ರೀ ! ಜಾಹೀರಾತು ನೋಡಿ olympicsನಲ್ಲಿ ಓಡಿದ್ವಾಗೆ ಓಡಿದ್ಳು ಇವ್ಳು. ಮೊದ್ಲೇ ರಾಹುಕಾಲ, ಜತೆಗೆ ಈ ಎಣ್ಣೆ ಪಣ್ಣೆ , ಹಾಗೆ ಕೆಲವು ಪದಾರ್ಥಗಳನ್ನು large quantityನಲ್ಲಿ stock ಮಾಡ್ಬಾರ್‍ದೂಂತ ಶುಕ್ರಾಚಾರ್ಯರು ಬಲಿಚಕ್ರವರ್ತಿಗೂ ಅಷ್ಟಾಗಿ ಬೋಧಿಸಿರಲಾರರು ಹಾಗೆ ತಿಳಿಯ ಹೇಳಿದರೂ ಕೇಳಲಿಲ್ಲ. ಶ್ರೀ ವೆಂಕಟಕೃಷ್ಣಾವಧಾನಿಗಳು ಕನ್ಯಾದಾನಕ್ಕೆ ಮತ್ತೆರಡು ಎಂದು ದರ್ಭಾಗ್ರವನ್ನು ನೋಡುತ್ತ declare ಮಾಡುವ ಸನ್ನಿವೇಶ ಸನ್ನಿಹಿತವಾಗಿಯೇ ಬಿಟ್ಟಿತು. ಈ ಬಾರಿ ಅವಳಿ-ಜವಳಿ! ಸೇಡು ತೀರಿಸುವಂತೆ ನಾರೀಮಣಿಗಳ ಸಂಖ್ಯೆ ಅದ್ದೂರಿಯಾಗಿ ವೃದ್ಧಿಸುತ್ತ ನಡೆಯಿತು.

ಕೊನೆಗೊಮ್ಮೆ ಕ್ರಾಪು ತೀಡುವ, ಪುನ್ನಾಮ ನರಕದಿಂದ ಈಚೆಗಿಡುವ ಅಣುಗನ ಆವಿರ್ಭಾವವಾದದ್ದು ಸಪ್ತಮ ಗರ್ಭದಲ್ಲಿ. ಪಿತೃದೇವತೆಗಳೆಲ್ಲ ಸಾಲುಗಟ್ಟಿ ನಿಂತು ಚೆಂದದ cakeಗಳಿಗೆ ಆಜ್ಞೆ ಇತ್ತರು. ಅಲ್ಲಿಗೆ ration cardಗೆ ಬಾಲಂಗೋಚಿ ಸೇರಿಸುವ routineಗೆ 'ಜನಗಣಮನ' ಆಯಿತು.

ಮುಂದೊಂದು ದಿನ district office ನ quill driver ಸಿಕ್ಕಿ, "ಏನ್ಸಾರ್, ಎರಡು ವರ್ಷ ಆಯ್ತು ಮತ್ತೆ ಬರಲೇ ಇಲ್ಲ office ನ ಕಡೆ" ಅಂದಾಗ, ಕಲಿಯುಗಮಾಗಿರಲ್ಕೆ ನನ್ನ ನೊಸಲ ನೇತ್ರಂ ಅಣಕಮಾತ್ರಮಾದುದು. ಇಲ್ಲದಿರೆ ಧರೆಯೊಳ್ ಬೂದಿ ತಿಲಕ ಮಾಗಿ ಬಿದ್ದಿರ್ಪನ್ ಅವನ್. ಸಪ್ತಸ್ವರಗಳನ್ನ ಬಟ್ಟೆ ಹಿಂಡೋ ಹಾಗೆ ಹಿಂಡಿ 'ನಂದು, ನಂದು' ಅಂತ ಪ್ರಭುತ್ವ ಸ್ಥಾಪ್ನೋಕ್ಕೆ ಹೊಡ್ದಾಡ್ತಿರೋ twinsನ ಸುಧಾರ್‍ಸೋದೂಂದ್ರೆ ಪಂಚಾಗ್ನಿ ನಡುವೆ ನಿಂತು ತಪಸ್ಸು ಮಾಡಿದ ಹಾಗೆ. ಹೆತ್ತವ್ರಿಗೆ ಮಾತ್ರ ಗೊತ್ತು ಈ ಸುಖ.

ವಾಲಖಿಲ್ಯರು ತಲೆಕೆಳಗಾಗಿ ವೃಕ್ಷಗಳಲ್ಲಿ ನಿಂತು ತಪಸ್ಸು ಮಾಡುತ್ತಿದ್ದರೆಂದು ಕೇಳಿದ್ದೆ. ಅದು ಹ್ಯಾಗೇನ್ನೋದು ನನ್ನಾಕೆ ಈ ಸುಂದೋಪಸುಂದ್ರ ನಾರಿ version ಬೆಳೆಸೋದ್ರ ಬಗೇಲಿ ಕಂಡೆ.

ಏತನ್ಮಧ್ಯೆ ಕ್ಯೂನಲ್ಲಿ ನಿಂತು toiletಗೆ ಹೋಗ್ಬರೋ ವಯಸ್ಸಲ್ಲ , ಸಂತಾನ ಶ್ರೀಗಳದ್ದು. wind shield wiperಊ ಇವ್ಳೇನೆ. ಚಕ್ರವ್ಯೂಹ, ಅಭಿಮನ್ಯು ಎಲ್ಲ ನೆನಪಿನ ತೆರೆಯ ಮೇಲೆ ಓಡಿಸುವ ಪರಿ.

ಒಟ್ನಲ್ಲಿ ಈ ನರ್ಸರಿ ಬೆಳೆಸೋದ್ರಲ್ಲಿ ನನ್ನಾಕೆ ಸವೆದು ಹೋದಳು. ಸಂಸಾರದ deputy chief ಆಗಿ, ಆ ಮಕ್ಕಳ ತಾಯಿಯಾಗಿ ತನ್ನ ಹೊಣೆಯನ್ನು ಬಹು ಸಮರ್ಥವಾಗಿ ನಿರ್ವಹಿಸಿದಳು.

ಬೆಳಗಾದರೆ ಒಂದಲ್ಲ ಒಂದಕ್ಕೆ ಬೇನೆ; ಡಾಕ್ಟರ್ ಬಳಿಗೆ ಓಡು. ಒಂದಕ್ಕೆ ಊಟ. ಇನ್ನೊಂದಕ್ಕೆ ಹಾಲು. ಎಲ್ಲರ ಸ್ನಾನ. ವೈವಿಧ್ಯಮಯ ಕಸರತ್ತು. ಪುರಸೊತ್ತಿಗೆ retirement ಕೊಟ್ಟುಬಿಟ್ಟಿದ್ದಳು.

ತೆಗೆ ತೆಗೆ ! ಇನ್ನೆತ್ತಣದು ನರಕ
ಬೆಸಸುವೊಡೆ ಇವನಿರುವೆಡೆಯೆ ಆದರಪ್ಪ
ಕಾದ ಕಬ್ಬಿಣವು, ಕೊಯ್ವ ಅಲುಗು
ಶ್ರೀಗಂಧ, ಕುಸುಮ ರಾಜಿಯಲಾ।।

ಏಳು ಮಕ್ಕಳನ್ನು ಸಾಕುವುದೂ ಒಂದೇ, ಅಶ್ವಮೇಧಯಾಗ ಮಾಡುವುದೂ ಒಂದೇ ಎಂದು ಈಗ in retrospect ಅರ್ಥವಾಗುತ್ತಿದೆ. ಹೇಗೋ ಒಟ್ಟಿನಲ್ಲಿ ನನ್ನ non-cooperation ಮಧ್ಯೆ ಎಲ್ಲರನ್ನೂ ಬೆಳೆಸಿ, ದೊಡ್ಡವರನ್ನಾಗಿ ಮಾಡಿ ಮದುವೆಗಳನ್ನು ನೆರವೇರಿಸಿ ಮೊಮ್ಮಕ್ಕಳನ್ನು ಕಂಡಾಯ್ತು. ಮೊಮ್ಮಕ್ಕಳ ಯೋಗಕ್ಷೇಮದಲ್ಲೂ ತನ್ನ ಸ್ವಕ್ಷೇಮ ಮರೆತು ಸ್ಪಂದಿಸಿ ಅವರ ಅನಾರೋಗ್ಯ ನಿವಾರಣೆಗೆ ಶ್ರಮಿಸಿದ್ದಾಳೆ.

ನಮಗೆ ಆರು ಹೆಣ್ಣು, ಒಂದು ಗಂಡು.

ನಮ್ಮನ್ನು ಕಾಯಿಸಿ, ಸತಾಯಿಸಿ ಕೊನೆಗೊಮ್ಮೆ ನನ್ನವಳಿಂದ ಲಾಲಿ ಹೇಳಿಸಿಕೊಂಡ ಏಕಮಾತ್ರ ಕುಮಾರ ಕಂಠೀರವ M.A., (English), Diploma in Pharmacy, Advanced Diploma in Software Management (NIIT) ಮಾಡಿಕೊಂಡು ಸದ್ಯಕ್ಕೆ Comatನಲ್ಲಿ medical transcriptionist ಆಗಿ management ಇಂದ professional excellency ಗಾಗಿ ಶಹಭಾಸ್ಗಿರಿ ಪಡೆಯುತ್ತ ನಡೆಯುತ್ತಿದ್ದಾನೆ.

ಸುಭದ್ರ - ಬಾನಿನಂಗಳದ ಮೊದಲ ಚುಕ್ಕಿ, ಇಂಟರ್ ಮೀಡಿಯೆಟ್ ; ಲಕ್ಷ್ಮಿ ; ಸರಸ್ವತಿ ಎಸ್ಸೆಸ್ಸೆಲ್ಸಿ ; ರುಕ್ಮಿಣಿ ಬಿ.ಎ., ಡಿಪ್ಲೋಮಾ ಇನ್ ಕನ್ನಡ, ಎಂ.ಎ., ಬಿ.ಎಡ್. ; ಶೈಲಜ ಬಿ.ಎ; ಮೀರ ಎಂ.ಕಾಂ.

ಇವಳು ಇಂಥದ್ದು ಬೇಕು ನನಗೆಂದು ಒಮ್ಮೆಯಾದರೂ ಕೇಳಿದ ನೆನಪಿಲ್ಲ. ಪರರ ಛಿದ್ರವನ್ನು ಅರಸುವುದು, ಅವರಿವರ ಬಗ್ಗೆ ಸಣ್ಣ ಮಾತುಗಳನ್ನು ಆಡುವುದು ಆಕೆಯ ಜನ್ಮದಲ್ಲಿ ಬಂದಿಲ್ಲ. ತನ್ನ ಕಷ್ಟ ನಿಷ್ಠುರಗಳನ್ನು, ನೋವು ಸಂಕಟಗಳನ್ನು, ಬಂಧು ಮಿತ್ರರು ಇರಲಿ ಸ್ವಂತ ತಾಯಿಯಲ್ಲಿಯೇ ಆಗಲಿ ಹೇಳಿಕೊಂಡಿದ್ದರೆ ನನ್ನಾಣೆ, ನಾ ಕಾಣೆ.

ಹೂ, ಹಣ್ಣುಗಳನ್ನು, ತಿಂಡಿ ತೀರ್ಥಗಳನ್ನು, ತಾರದೆ ಇಲ್ಲ. ಆದರೆ ಅದು ಆಗೊಮ್ಮೆ ಈಗೊಮ್ಮೆ ಬಿಡುವು ದೊರೆತಾಗ. ಮಾಂಗಲ್ಯ ಧಾರಣೆಯಾಗುವಾಗ 'ಮಾಂಗಲ್ಯಂ ತಂತುನಾನೇನ' ಅಂದ್ರೋ ಪುರೋಹಿತ್ರು ಇಲ್ಲ 'ಮಾಂಗಲ್ಯಂ ಕಂತುನಾನೇನಾ' ಅಂತ್ಲೋ doubtfulಉ. ಕಂತುಗ್ಳಲ್ಲೂ defaultsಉ. ಅಂದಿನಿಂದ ಇಂದಿನವರೆಗೆ ಇವಳು ಯಾವುದೇ ಹೊತ್ತಿನಲ್ಲಾಗಲೀ ಒಬ್ಬಳೇ ಮನೆ ಬಿಟ್ಟು ಹೋದವಳಲ್ಲ ; ಅಕ್ಕಪಕ್ಕದ ಮನೆಗಳಿಗೆ ಹೋಗುವುದಾಗಲಿ, ಹರಟೆ ಹೊಡೆಯುವುದಾಗಲಿ ಜಾಯಮಾನದಲ್ಲಿಯೇ ಇಲ್ಲ.

ಎಂಥ ಸಂದರ್ಭದಲ್ಲಿಯೇ ಆಗಲಿ ಏನನ್ನಾದರೂ ಎರವಲು ಪಡೆಯುವುದಾಗಲೀ, ಸಾಲ ಮಾಡುವುದಾಗಲೀ ಅವಳ ಮನಸ್ಸಿನಲ್ಲಿಯೂ ಸುಳಿಯದು. ಯಾರ ಕೈಯಲ್ಲಿಯೂ ಜಗಳವಾಡಿದವಳೇ ಅಲ್ಲ.

ಕೆ.ಆರ್. ನಗರ, ಮೈಸೂರುಗಳಲ್ಲಿರುವಾಗ ಆಗಾಗ್ಗೆ ಸ್ಕೂಟರ್ ಮೇಲೆ ಬೆಂಗಳೂರು, ಶಿವನಸಮುದ್ರ, ಕೆ.ಆರ್.ಎಸ್., ಮೇಲುಕೋಟೆ, ತಲಕಾಡು, ಸೋಮನಾಥಪುರ ಮುಂತಾದ ಪ್ರೇಕ್ಷಣೀಯಸ್ಥಳಗಳಿಗೆ ಕರೆದುಕೊಂಡು ಹೋಗುತ್ತಿದ್ದೆ. ಎಷ್ಟೇ ಹಸಿವಾಗಲಿ ಇದು ಬೇಕು ಅದು ಬೇಕು ಎನ್ನುತ್ತಿರಲಿಲ್ಲ. ಬಾಯಿ ಚಪಲವಂತೂ ಸೊನ್ನೆ. ಕೊಂಚಮಟ್ಟಿಗೆ ಆಚಾರವನ್ನು ಉಳಿಸಿಕೊಂಡು ಬಂದದ್ದರಿಂದ, ಸಿಕ್ಕಿದ ಹೋಟಲುಗಳಿಗೆ ನುಗ್ಗುತ್ತಿರಲಿಲ್ಲ. ಎರಡು ಬಾಳೆಹಣ್ಣೋ, ಎಳನೀರೋ ಅಷ್ಟೆ.

ಅಲಂಕಾರ minimum. ಪೌಡರ್ ಹಚ್ಚಿದರೂ ಆಯಿತು, ಇಲ್ಲದಿದ್ದರೆ ಇಲ್ಲ. ಸೀರೆ ನೆರಿಗೆ ಹಾಗಿರಬೇಕು ಹೀಗಿರಬೇಕು ಎಂದು ಕೋಯುತ್ತ ನಿಂತಿದ್ದಿಲ್ಲ.

ಬೆಂಗಳೂರಿನಲ್ಲಿದ್ದಾಗ ಗಾಂಧಿಬಜಾರಿನಲ್ಲಿ ಹೂ ಮಾರುವ ಹುಡುಗನೊಬ್ಬನಿದ್ದ. ವಿಶ್ವಾಸದಿಂದ special ಆಗಿ ಸೊಗಸಾದ ಮಲ್ಲಿಗೆ ಹೂ ಕೊಡುತ್ತಿದ್ದ. ಅದು ನನ್ನವಳಿಗೆ ಬಲು ಪ್ರಿಯ. ನಗರ್ತರ ಪೇಟೆಯಲ್ಲಿ ಗುಂಡಪ್ಪನ ಹೋಟೆಲ್ ಬಹು ಪ್ರಸಿದ್ಧಿ. ಚೌಚೌ ಮಾಡಿದರೆ ತುತ್ತಿಗೆರಡು ಗೋಡಂಬಿ ಸಿಕ್ಕುತ್ತಿತ್ತು. ಬಾದಾಮಿ ಹಲ್ವ ಅಂತೂ ಬಲು ರುಚಿ. ಇವುಗಳನ್ನು ಆಗಾಗ್ಗೆ ಒಯ್ಯುತ್ತಿದ್ದೆ.

ಗಾಂಧಿಬಜಾರಿನಲ್ಲಿ ಹಣ್ಣುಗಳಿಗಾಗಿಯೇ ಒಂದು ಅಂಗಡಿ ಗೊತ್ತುಮಾಡಿದ್ದೆ. ಆತ ಕೊಡುತ್ತಿದ್ದ ಬಾದಾಮಿ ಮಾವಿನ ಹಣ್ಣನ್ನು ಸವಿಯಬೇಕು; ಅಮೃತ. ಹಾಗೇ ಗುಲ್ಕನ್ ಬೆಣ್ಣೆಗಳನ್ನು ಕಲಸಿ ಕೊಡುತ್ತಿದ್ದ ಒಬ್ಬಾತ ವಿಶ್ವೇಶ್ವರಪುರದಲ್ಲಿ. ಆ ಪರಿಮಳ ಇನ್ನೂ ಬಾಯಲ್ಲಿದೆಯೋ ಎನ್ನಿಸುತ್ತದೆ.

ಇವೆಲ್ಲ ಅಪರೂಪದ break. ಗ್ರಹಗಳ ಗತಿಯನ್ನು ಅನುಸರಿಸಿ ಇವಳು ಅಡುಗೆ ಕಲಿತ ಮೇಲೂ ಸುಮಾರುಕಾಲ ಯಾರಾದರೂ ಊಟಕ್ಕೆ ಬಂದರೆ ತಾಂಬೂಲದೊಂದಿಗೆ Eno ಬಾಟ್ಲ್ ಇಟ್ಟುಕೊಡಬೇಕಾಗಿತ್ತು. ಈಗ ನೋಡಿ, ಅವಳಿಗೆ ಬಾರದ

ಅಡುಗೆಯೇ ಇಲ್ಲ- **ಭಕ್ಷ್ಯಂ, ಭೋಜ್ಯಂ, ಪಾನೀಯಮೇವ ಚ.** ಒಂದು ನೂರು ಜನಕ್ಕೆ ಸಂತರ್ಪಣೆಯಾಗಲಿ, ತಾನೊಬ್ಬಳೇ ನಿಂತು ನಿಭಾಯಿಸಬಲ್ಲಳು. ಅವಳ ಕೈ ಅಡುಗೆ ಅಮೃತ. ನಮ್ಮ ಮಕ್ಕಳ ಸ್ನೇಹಿತರು ಆಗಾಗ ಹಾಸ್ಯ ಮಾಡುತ್ತಾರೆ, "ಅಮ್ಮ ಹೋಟಲಿಟ್ರೆ ಊರಲ್ಲಿರೋ ಹೋಟ್ಲೆಲ್ಲಾ close ಏ" ಅಂತ !

ಸಮೋಸ, ಕಟ್ಲೆಟ್, ಬೇಲ್‌ಪೂರಿ, ಪಾನಿಪೂರಿ, ಕ್ಯಾರೆಟ್ ಹಲ್ವ, ಬಾದಾಮಿ ಹಲ್ವ, ಬಗೆ ಬಗೆಯ ಬರ್ಫಿ, ಪಾಯಸಗಳು, ಕೋಡುಬಳೆ, ಚಕ್ಲಿ ಇತ್ಯಾದಿ routine preparationsಉ, ಬಿಸ್ಕತ್ತು, ಚಾಕಲೇಟ್, ಪೆಪ್ಪರ್‌ಮಿಂಟ್, ಜುಜುಪ್ಸ್, ವಿಧವಿಧ ice creams, custard - ಒಟ್ಟಿನಲ್ಲಿ ಇಂಥದ್ದು ಬರೋಲ್ಲ ಅನ್ನೋದೇ ಇಲ್ಲ.

ಟೈಲರಿಂಗ್‌ನಲ್ಲಿ ಕೈಉದ್ದ ಆಯ್ತು ಕಟ್ಮಾಡು, ಇಲ್ಲಿ ಸಡಿಲ ಕೊಂಚ ಹಿಡಿಯಬೇಕು, ಉಹುಂ, ಇಲ್ಲವೇ ಇಲ್ಲ. ಒಮ್ಮೆ ಅಳತೆ ತೆಗೆದುಕೊಂಡು cut ಮಾಡಿದರೆ ತೀರಿತು. perfect fitting ಉ.

ಇನ್ನು soft toys, ಗಾಜಿನ ಅಲಂಕರಣ ವಸ್ತುಗಳು, painting, ಮಣಿ ಸಾಮಾನು ಎಲ್ಲದರಲ್ಲೂ ಸಿದ್ಧಹಸ್ತೆ.

Commercial venture ಮಾಡಿದ್ದರೆ ಮೂರಂತಸ್ತಿನ ಮನೆ ಕಟ್ಟಿಸಬಹುದಾಗಿತ್ತು. ನನಗದು ಇಷ್ಟವಿಲ್ಲವೆಂದರಿತು ಅವಳು ಆ ಮಾತನ್ನೇ ಆಡುವುದಿಲ್ಲ.

ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ ಅಂದ ಹಾಗೆ ಮಕ್ಕಳಿಗೆಲ್ಲ ಮನೆ ವೈದ್ಯದ ಸಲಹೆ. ಆಫೀಸಿನ ದಿನಗಳಲ್ಲಿ ನನ್ನ ಸ್ನೇಹಿತರು ಖಾರಾಸೇವೆ ಮಾಡಿಸಿಕೊಂಡು ಬನ್ನಿ, ವಾಂಗೀಭಾತ್ ತನ್ನಿ, ಮಸಾಲ್ವಡೆ ಆಸೆ ಆಗ್ತಿದೆ, ಗೊಜ್ಜವಲಕ್ಕಿ ತರ್ಬೋದಲ್ಲ, ಹೀಗೆ ತಂತಮ್ಮ ಅಪೇಕ್ಷೆಗಳನ್ನು ಮಂಡಿಸಿದಾಗಲೆಲ್ಲ ಅವುಗಳನ್ನು ಮಾಡಿಸಿಕೊಂಡು ಹೋಗುತ್ತಿದ್ದೆ.

ಧನುರ್ಮಾಸ್ದಲ್ಲಿ ಸ್ವತಃ ಸೂರ್ಯನಾರಾಯಣ ದೇವರೇ ಎದ್ದು ಬರೋಕ್ಕೆ hesitate ಮಾಡೋ ಹೊತ್ನಲ್ಲಿ, after all ಹುಲುಮಾನವರು ನಾವು, ಅಜ್ಜನ ಕಾಶ್ಮೀರಿ ಶಾಲು, woollen blanket ಉ ಸೇರ್ಸಿ ಮುಖ ತೂರ್ಸಿ, ತಲೆವರ್ಗೂ ಎಳ್ದು ಆ ಕುಳಿರ್ಗಾಳಿ ಬೀಸೋಕ್ಕೂ - ಅದೂ ಬೆಳಗಿನ ಝಾವದಲ್ಲಿ - ಬೆಚ್ಚನೆ ಹೊದ್ದು - ಸ್ವರ್ಗ ಸುಖ ಕಾಣ್ತಾ ಗಂಟೆ ಏಳಾದ್ರೂ ಶಯನೋತ್ಸವವನ್ನೇ ಒಪ್ಪಿಸಿಕೊಳ್ಳುತ್ತ ಇರೋದ್ರಲ್ಲಿ ಆಶ್ಚರ್ಯವೇನು! ಇಂಥ ಟೈಮ್ನಲ್ಲಿ ಯಾವ್ದೇ ಹೆಣ್ಣಾಗ್ಲಿ ಬ್ರಹ್ಮನ slateನ ಕೈಯಲ್ಲಿ ಉಜ್ತ , ಮೋಹಿನಿ ಆಟ್ಟಂ ಅಭಿನಯಿಸ್ತ , ಹಾಯ್ ಅಂತ ಕಿರ್‍ಲಿ , ಗಂಡನ್ನ ಎಬ್ಸಿ ತಲೆ ಸಿಡೀತಿದೇಂತ ನಂಬ್ಸಿ ಸೌಟನ್ನ ವರ್ಗಾಯ್ಸಿ, Blanketನ ಮತ್ತಷ್ಟು ಭದ್ರವಾಗಿ ಎಳೆದುಕೊಳ್ಳೋದು Quite understandable ಉ. ತದ್ವಿರುದ್ಧವಾಗಿ ಅರ್ಧ ಲೀಟರ್ ಹಾಲ್ನ ಮೈ ಮೇಲಿಟ್ರೆ ನಿಶ್ಚಿಂತ್ಯಾಗಿ ಕಾಯಿಸ್ಕೊಳ್ಬಹುದಾದಷ್ಟು ಜ್ವರ ಸುಡ್ತಾ ಇದ್ರೂ an occasion to put you on probation ಅಂತ Hitlerini ಹಾಗೆ ಅರ್ಧಿ ಅಡ್ಗೆ ಮನೇಗೆ ಅಟ್ಟಿ "ಏನೂ ಪರ್ವಾಗಿಲ್ಲ, ಒಂದಷ್ಟು ಅನ್ನ ಸಾರು, ಪಲ್ಯ ಮಾತ್ರ ಮಾಡ್ಬಿಡ್ತೇನೆ" ಅಂತ, ಹಲ್ಲುಜ್ಜೋ ಇವ್ಳನ್ನ ಏನೂಂತ ಅನ್ನೋಣ ? ಮದುವೆ ಅಂದಾಗ ಉರುಟಣೆ-ಚಂಡಾಟ -ಕೊಂಡಾಟ; ಬಾಳೆಲ್ಲ ಹೀಗೇ, ಆನಂದದ ಹಂದರ ಎಂದೆಂದುಕೊಂಡಿರಬೇಕು. ಕಲ್ಪನೆಯ ಕನಸುಗಳ ಕಟ್ಟುತ್ತ, ಸ್ವರ್ಗಸುಖದ ಬೆಂಬತ್ತಿ ಪುಷ್ಪಕವನ್ನೇರಿ ಹಾರಾಟ ನಡೆಸಿರಬೇಕು ಅವಳ ಮನಸ್ಸು. ಆದರೆ ಅಸುರತ್ರಯೀಪರ್ವವೇ ಆರಂಭಮಾದುದು. ನಾಟಕ, ಹರಿಕಥೆ ಅಂತ ಓಡಾಡುವ ಗಂಡ ಮಾತ್ರ ಖಂಡಿತ ಬೇಡಪ್ಪ ಅಂತ ಭದ್ರಾವತಿಯ ಶ್ರೀರಾಮದೇವರ ದೇವಸ್ಥಾನದಲ್ಲಿ ಕುಳಿತಾಗಲೆಲ್ಲ ಬೇಡಿಕೊಂಡಿದ್ದಳಂತೆ. ನಾನು ನಾಟಕದಲ್ಲಿ ಮುಳುಗಿದವನು. ಬೆಂಗಳೂರಿನ ಚಾಮರಾಜಪೇಟೆ ಶ್ರೀರಾಮಮಂದಿರದಲ್ಲಿ ಹರಿಕಥೆಗಳನ್ನು organise ಮಾಡುವವರಲ್ಲಿ ಒಬ್ಬನಾಗಿ ವರ್ಷದಲ್ಲಿ ಮುನ್ನೂರ ಅರವತ್ತು ದಿನ ಅದೇ ಕೈಂಕರ್ಯದಲ್ಲಿ ತೊಡಗಿಸಿಕೊಂಡವನು. "ಹುಡುಗ ಗಂಡ್ಸಲ್ಲ, ಗುಡ್ಡು ಮನೆಯಲ್ಲ" "ಆಡೋ ಮಕ್ಕಳಿಗೆ ಕಾಡೋ ಕೂಸು"- ಪರಸ್ಪರವಾಗಿ ನಮ್ಮಿಬ್ಬರಿಗೆ ಹೇಳಿ ಮಾಡಿಸಿದ ಮಾತುಗಳು. ಕೈ ಕೈ ಹಿಡ್ಕೊಂಡು ಮರಗಿಡ ಸುತ್ಲಿಲ್ಲ. ಮಸಾಲ್ದೋಸೆ ಮೂಸ್ಲಿಲ್ಲ. ಹನಿಮೂನ್ ಎಂದು ಊರುಕೇರಿ ತಿರಗ್ಲಿಲ್ಲ.

ಜಗದಳಲ ಗೊಡವೆ ನಿನಗೇಕೆ
ice cream, Expresso ಗಳನರ್ಥಿಸದಿರುವುದೇಕೆ,
ನೀನುಂಟು, ನಿನ್ನ ಮೂಗು ಹಿಡಿದವಳುಂಟು,
ಬೈತಿಟ್ಟು ನಡೆವುದನು ಮಿಗೆ ಕಲಿಯೋ ಮಂಕು ಕಂಠ ॥

ಎಂದು ಹಲವಾರು ಬಾರಿ ಅಂದುಕೊಂಡಿದ್ದೇನೆ. ಆದರೂ ನಡವಳಿಕೆಯಲ್ಲಿ ತರಲು ಆಗಿಲ್ಲ.

ರಂಗಪ್ರವೇಶ

ನನ್ಹೆಂಡ್ತಿ , ನನ್ಮಕ್ಳು, ನನ್ಸಂಸಾರ ಇತ್ಯಾದಿಗಳಲ್ಲಿ ನನಗ್ತಾನೆ ಅಭಿನ್ನ ಆಸಕ್ತಿ, ಅಭಿಮಾನ, ಅಭಿನಿವೇಶ ಇಲ್ವೆ ? ಆದ್ರೆ ಕರ್ತವ್ಯಾಂದಾಗ ಕಿಂಚಿತ್ backward ಉ. incoming

forwardಉ. but, then, "ಬದುಕೆಂಬ ನೆಲದಲ್ಲಿ ನೆಡದ ಗಿಡವಾಗಿ, ಫಲಕೊಡದ ಒಳ್ಳೆತನ ಚೀಲದಲ್ಲಿ ಕಟ್ಟಿ ಅಟ್ಟದ ಮೇಲೆ ಮೂಲೆಯಲ್ಲಿಟ್ಟು ಮರೆತ ಬೀಜದಂತೆ" ಎಂಬ ಎಸ್ವಿ ರಂಗಣ್ಣೋರ ಮಾತು ನನ್ನ ಮಂಡೆ ಒಳ್ಗೆ ಸೌಟು ಹಿಡಿದು ಅಲ್ಲಾಡ್ಸಿದ್ದು ವದನಾರವಿಂದ municipal road junction ಆದ್ಮೇಲೇನೆ.

ಸತ್ಸಂಕಲ್ಪದ ಅಮೃತಸೃಷ್ಟಿ ಬದುಕಿನ ಆರಂಭದಲ್ಲಿ ಆಗ್ಬೇಕು. ಎಳೆಎಳೆ ಸೇರಿದ್ರೆ ವಸ್ತ್ರ. ಗಂಟೆನೆಳೆಯಾದ್ರೂ ಪರ್ವಾಗಿಲ್ಲ. Seconds ಆದ್ರೂ ಚಿಂತಿಲ್ಲ. ಬೇಕು, ಸಂಸಾರ್ದಲ್ಲಿ. ಅಂತರಾತ್ಮ ಒಳಗ್ಕೂತು ಬೇರೆ ಬೇರೆ ಸ್ಥಾಯಿಗಳನ್ನ ಹಿಡ್ದು ಚುಚ್ಚಿ ತನ್ನ ಶಬ್ದಭಂಡಾರವನ್ನೇ empty ಮಾಡಿದ್ರೂ ಫಲ ಸಿಕ್ಕಿದ್ದು ಕನ್ನಡಿ ಮುಂದೆ ನಿಲ್ಲೋಕ್ಕೆ hesitate ಮಾಡೋ stageನಲ್ಲಿ ನನಗೆ.

ನನ್ನ ರಂಗಪ್ರವೇಶವಾದದ್ದು ನಾನು ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಿ IV Form ಓದುತ್ತಿರುವಾಗ, ಸುಮಾರು ಹದಿಮೂರರ ವಯಸ್ಸಿನಲ್ಲಿ. ನಮ್ಮ ಉಪಾಧ್ಯಾಯರೊಬ್ಬರು ಒಂದು ನಾಟಕ ಬರೆದಿದ್ದರು- ಇಂಗ್ಲಿಷ್‌ನಲ್ಲಿ- Desire ಅಂತ. ಮಹಾಭಾರತದ ಒಂದು ಬಿಂದು. ನಾನು debateಗಳಲ್ಲಿ participate ಮಾಡಿ, inter-high school level ನಲ್ಲೂ ಬಹುಮಾನಗಳನ್ನು ಪಡೆದಿದ್ದೆನಾಗಿ, ಪಾತ್ರ ಒಂದು ನನ್ನ ಪಾಲಿಗೆ ಬಂತು- ಕೃಷ್ಣನ ಪಾತ್ರ. ಎಲ್ಲರ ಮೆಚ್ಚುಗೆ ದೊರೆಯಿತು. ನಾನೂ ಆ ಹೊತ್ತಿಗೆ ಸಣ್ಣಕಥೆಗಳನ್ನು ಬರೆದು ಆನಂದಜ್ಯೋತಿಯೇ ಮುಂತಾದ magazinesಗೆ ಕಳುಹಿಸುತ್ತಿದ್ದೆ. ಅವೆಲ್ಲ ಪ್ರಕಟವಾಗುತ್ತಿದ್ದವು. ಮುಂದೆ ನನ್ನ ಸ್ನೇಹಿತ ಖ್ಯಾತ ಚಿತ್ರಕಥಾ ಲೇಖಕ ಉದಯಶಂಕರ ಬಂದು ನನ್ನನ್ನ ಚಿತ್ರನಿರ್ಮಾಪಕ ಬಿ.ಆರ್. ಪಂತುಲು ಅವರ ಬಳಿ ಕರೆದೊಯ್ದ. ನನ್ನ ಪಾತ್ರನಿರ್ವಹಣಾ ಸಾಮರ್ಥ್ಯವನ್ನು ಕಂಡು ಸಂತೋಷಿಸಿದ ಪಂತುಲು ಅವರು, "ಕನ್ನಡ ಚಿತ್ರಗಳನ್ನು ನೆಚ್ಚಿ ಓದು ಬಿಟ್ಟು ಬಣ್ಣ ಬಳಿದರೆ ಅದೂ ಇಲ್ಲ , ಇದೂ ಇಲ್ಲ" ಎಂದರು. ಹಿರಿಯರಿಗೆ ದುಃಖವಾಗಬಹುದೆಂದೂ, ಚೆನ್ನಾಗಿ ಓದಿ ಮುಂದೆ ಬರಬೇಕೆಂದೂ, ಉದರಂಭರಣಕ್ಕೆ ಚಲನಚಿತ್ರಗಳನ್ನೇ ನಂಬಬೇಕಾದ ಸ್ಥಿತಿ ಇಲ್ಲದಿರುವಾಗ ಕೇವಲ ಹವ್ಯಾಸವಾಗಿ ತೆಗೆದುಕೊಳ್ಳುವುದು ಉತ್ತಮವೆಂದೂ ಸಲಹೆ ನೀಡಿದರು. ಅನಂತರದಲ್ಲಿ ಶಂಕರನ ತಂದೆ ಚಿ. ಸದಾಶಿವಯ್ಯನವರು ಮದರಾಸನ್ನು ಸೇರಿ ಚಲನಚಿತ್ರಗಳಿಗೆ ಕಥೆ, ಸಂಭಾಷಣೆ ಬರೆಯಲಾರಂಭಿಸಿದರು. ಶಂಕರನೂ ಕಾಲಕ್ರಮೇಣ ಅದೇ ಜಾಡು ಹಿಡಿದ. ನಾನು ಮಾತ್ರ ವಿದ್ಯಾಭ್ಯಾಸ ಮುಂದುವರಿಸಿದೆ. ನನ್ನ ಹದಿನೇಳನೇ ವಯಸ್ಸಿನಲ್ಲಿ National Insurance Company ಎಂಬ ಸಂಸ್ಥೆಯಲ್ಲಿ Assistant ಆಗಿ ಕೆಲಸಕ್ಕೆ ಸೇರಿದೆ. ಸ್ನಾತಕೋತ್ತರ ಪದವಿ ಇತ್ಯಾದಿ ದಕ್ಕಿದ್ದು ತದನಂತರದಲ್ಲಿ....೧೯೫೬ ನೇ ಇಸವಿಯಲ್ಲಿ life insurance Nationalise ಆಗಿ ನಾನು LIC of India ದ Employee ಆದೆ. ಐವತ್ತೈದರಲ್ಲಿ ಸಂಸಾರ ಪ್ರವೇಶ.

ಆಗ ಚಾಮರಾಜಪೇಟೆ ರಾಘವೇಂದ್ರ ಕಾಲೋನಿಯಲ್ಲಿ ನನ್ನ ಸ್ನೇಹಿತರಾದ H.M.T. ರಾಮರಾಯರ ಮನೆಯನ್ನ ಬಾಡಿಗೆಗೆ ಪಡೆದು ಸಂಸಾರ ಹೂಡಿದ್ದೆ. ಅಷ್ಟು ಹೊತ್ತಿಗಾಗಲೆ ನಾಟಕಕಾರನಾಗಿ, ನಿರ್ದೇಶಕನಾಗಿ, ವರ್ಣಾಲಂಕಾರಪಟುವಾಗಿ, ರಂಗಸಜ್ಜಿಕೆ ನಿರ್ವಾಹಕನಾಗಿ- ಒಟ್ಟಿನಲ್ಲಿ ರಂಗದ ಸರ್ವ ಪ್ರಕಾರಗಳಲ್ಲೂ ಸಾಕಷ್ಟು ದುಡಿದಿದ್ದೆ. ಏತನ್ಮಧ್ಯೆ ನನ್ನ ಸ್ನೇಹಿತರು ಕೃಷ್ಣಮೂರ್ತಿ ಎಂಬುವರು ನನ್ನನ್ನು ಮದ್ರಾಸಿಗೆ ಕರೆದೊಯ್ದು 'ಸಂಧ್ಯಾರಾಗ' ಚಿತ್ರವನ್ನು ನಿರ್ಮಿಸುತ್ತಿದ್ದ ಎ.ಸಿ. ನರಸಿಂಹಮೂರ್ತಿಯವರಲ್ಲಿಗೆ ತೆರಳಿ ನನಗೊಂದು ಪಾತ್ರವನ್ನು ಕೊಡುವಂತೆ ಪ್ರಾರ್ಥಿಸಿದರು. ಅವರು ಅದಕ್ಕೊಪ್ಪಿದರಾದರೂ ಚಿತ್ರರಂಗದ ಪರಿಸ್ಥಿತಿಯನ್ನು ಸಮೀಪಗತಿಯಿಂದ ನೋಡಿದ ನನಗೆ, ಇರುವ ಒಳ್ಳೆಯ ಕೆಲಸ ಬಿಟ್ಟು ಸಂಸಾರವನ್ನು ಕಷ್ಟಕ್ಕೆ ಗುರಿ ಮಾಡುವುದು ಸರಿ ಎನ್ನಿಸಲಿಲ್ಲವಾಗಿ ನಾನೇ ಹಿಂಜರಿದೆ. ಮಗದೊಮ್ಮೆ ತಮ್ಮ ಛಲವನ್ನು ಬಿಡದ ನನ್ನ ಸ್ನೇಹಿತರು ದ್ವಾರಕೀಶ್‌ರವರ ಬಳಿಗೂ ನನ್ನನ್ನು ಎಳೆದೊಯ್ದರು. Hero ಪಾತ್ರ ಬಿ.ಎಂ. ವೆಂಕಟೇಶರಿಗೆ ಮೀಸಲಾಗಿದ್ದುದರಿಂದ ಬೇರೆ ಪಾತ್ರಕ್ಕೊಪ್ಪದೆ ಬಂದುಬಿಟ್ಟೆ. ಅಲ್ಲಿಗೆ ನಮ್ಮ ಸ್ನೇಹಿತರೂ ತಮ್ಮ ಬಲವಂತ ಬಿಟ್ಟುಕೊಟ್ಟರು.

ಚಾಮರಾಜಪೇಟೆ ಐದನೆ ರಸ್ತೆಯಲ್ಲಿ ಬೆಂಗಳೂರು ಕೃಷ್ಣಭಾಗವತರು ಶ್ರೀರಾಮಮಂದಿರ ಕಟ್ಟಿದರು. ವರ್ಷವಿಡೀ ಹರಿಕಥೆ ನಡೆಸುವ ಏರ್ಪಾಡಾಯಿತು. ಸಂಜೆ ಆಫೀಸಿನಿಂದ ಬರುವುದೇ ತಡ ರಾಮಮಂದಿರಕ್ಕೆ ಓಡುತ್ತಿದ್ದೆ. ಕಾರ್ಯಕ್ರಮ ಮುಗಿದನಂತರ ನಾನೇ ಸ್ನೇಹಿತರ ಸಹಕಾರದೊಂದಿಗೆ ಆರಂಭಿಸಿದ 'ಶ್ರೀರಾಮ ಕಲಾವಿದರು' ಎಂಬ ಸಂಸ್ಥೆಯಡಿ ನಾಟಕಗಳನ್ನು stage ಮಾಡುವ ಸಲುವಾಗಿ rehearsal etc. ಮಾಡಿ ರಾತ್ರಿ ಮನೆಗೆ ಬರಲು ಇಷ್ಟು ಹೊತ್ತೆಂಬ ಗೊತ್ತು ಇರಲಿಲ್ಲ.

ನಾವು ವಾಸಿಸುತ್ತಿದ್ದದ್ದು ಮಹಡಿಯ ಮೇಲೆ. ಕಬ್ಬಿಣದ winding staircase ಕೆಳಗಿನವರ verandah ದಲ್ಲಿದ್ದುದರಿಂದ ಆ ಬಾಗಿಲನ್ನೂ ತೆರೆಯಬೇಕಾಗಿತ್ತು. ಅವರ ಮನೆಯವರಿಗೆ ತೊಂದರೆ ಆಗಬಾರದೆಂದೂ ತಾನೇ ಬಂದು ಕದ ತೆರೆಯಬೇಕೆಂದೂ ನನ್ನವಳಿಗೆ ಹೇಳಿದ್ದೆ. ನಾನು ಬರುವುದಕ್ಕೆ ನಿರ್ದಿಷ್ಟ ವೇಳೆ ಇರಲಿಲ್ಲವಾದ್ದರಿಂದ ಈಕೆ ರೆಪ್ಪೆ ಹಾಕದೆ ಕಾದು ಕೂತು ನನ್ನ ಕಾಲಸಪ್ಪಳ ಕೇಳಿಯೇ ಓಡಿ ಬಂದಿಳಿದು ಬಾಗಿಲು ತೆಗೆಯುತ್ತಿದ್ದಳು.

ಈ ಕೆಟ್ಟ ಹೊಟ್ಟೆ ಯಾಕೆ ಕೊಟ್ಟ ದೇವ್ರೂಂತ ಎಷ್ಟೋ ಬಾರಿ ಅಂದುಕೊಂಡಿದ್ದು ಉಂಟು. ಅದ್ರ ಕೂಗು ಇದ್ಯಲ್ಲ ಯೋಜನಗಳಾಚೆ ತಲಪುವ ವಿಶೇಷ contraptionಉ. ಹೊರ್ಗಡೆ ನಾಟಕ ಸಂಗೀತಾಂತ ಕಂಡಕಂಡವ್ರ ಜೊತೆ duet ಹಾಡ್ತ, ತನ್ನ ವೈಶ್ವಾನರನಿಗೆ ಮಾತ್ರ ನೈವೇದ್ಯವನ್ನು ಅಷ್ಟಭುಜಗಳಲ್ಲಿ ಸೇರಿಸ್ತಾ, ಅಪರವೇಳೆಯಲ್ಲಿ ಮನೆ ಸೇರಿ, ನೀನು ಊಟ ಮಾಡಿದ್ಯಾಂತ ಕೇಳೋ ಸಭ್ಯತೆಯೂ ಇಲ್ದೆ ಸುಸ್ತೂಂತ ಹಾಸ್ಗೆ ಸೇರಿ, ತನಗಾಗಿ ಶಬರಿಯ ಮೊಮ್ಮಗಳ ಹಾಗೆ ಕಾದು ಕೂತು, ಹೊಟ್ಟೆ siren off ಮಾಡಿ, ನಿಮಗಿಲ್ಲದ್ದು ನನಗ್ಯಾಕೇಂತ ಹಾಸಿಗೆ ಸೇರಿ ಆಕೆ ಸಂಕಟಪಡುವ ದಿನಗಳೇ ತುಂಬಿರುವ ವರ್ಷಗಳಲ್ಲಿ ತುಟಿ ಎರಡ್ಮಾಡ್ದೆ ಪರಶುರಾಮನ ನಿದ್ದೆಗೆ ಊರು ಕೊಟ್ಟು ಕೂತ ಕರ್ಣನ ತೆರದಿ ಇರುವುದು ಇವಳಿಗೆ ಇವಳೇ ಸಾಟಿ ಎಂದು ಸಾರುತ್ತೆ.

ನಾನು ಬರೆದು stage ಮಾಡಿದ 'ಶ್ರೀ ಪುರಂದರದಾಸರು' ನಾಟಕದಿಂದ ಆಕರ್ಷಿತರಾದ ಶ್ರೀ ಭದ್ರಗಿರಿ ಕೇಶವದಾಸರು ಆ subject ನೇ ಇಟ್ಟುಕೊಂಡು ತಮ್ಮದೇ ಆದ ನಾಟಕ ರಚಿಸಬೇಕೆಂಬ ಆಶಯ ವ್ಯಕ್ತಪಡಿಸಿದರು. ನಾಟಕ ರಚನೆಯಲ್ಲಿ ಅನುಭವ ಇಲ್ಲದ್ದರಿಂದ ನನ್ನ ಸಹಕಾರ ಅಪೇಕ್ಷಿಸಿದರು. ಒಪ್ಪಿದ ನಾನು ನಮ್ಮ ಸ್ವಂತ ನಾಟಕಾದಿಗಳ ರಿಹರ್ಸಲ್ ಇತ್ಯಾದಿ ಮುಗಿಸಿ ರಾತ್ರಿ ಹತ್ತರ ಮೇಲೆ ಅವರ ಮನೆಯಿದ್ದ ರಾಜಾಜಿನಗರಕ್ಕೆ ಹೋಗುತ್ತಿದ್ದೆ. ಅಲ್ಲಿ ಚರ್ಚೆ, ಸಂದೇಹ, ಪರಿಹಾರ, ಬರೆವಣಿಗೆ ಎಲ್ಲ ಮುಗಿಸಿ ಹಿಂದಿರುಗುವಾಗ ಬೆಳಗಿನ ಝಾವವೇ ಆಗುತ್ತಿತ್ತು. ಇಡೀ ರಾತ್ರಿ ಬರಿಯ ನಿದ್ರೆ ಕೆಟ್ಟು ಕೂರುವುದಲ್ಲ, ಒಬ್ಬರ ನಿರೀಕ್ಷೆಯಲ್ಲಿರುವ ಹಿಂಸೆ ಯಾರಿಗೂ ಬೇಡ. ಅದೂ ಅಲ್ಲದೆ ಬರುತ್ತಿದ್ದ ಹಾಗೇ ಬಾಗಿಲು ತೆರೆಯದಿದ್ದರೆ ನನಗೆ ಕೋಪ ಬರುತ್ತದೆಯೆಂಬ ಭೀತಿ ! ಇವಳಿಗೆ !

ನನ್ನದು "ಕಠಿಣ ವಚನವೆ ಸಕಲ ಜಪಂಗಳಯ್ಯ"।। "ಕೂಡಿದ ಮಂಗಯ್ಯ ನಡೆವ ಪರಿ" ।।

೧೯೬೨ರಲ್ಲಿ ಚಾಮರಾಜಪೇಟೆ ಮನೆಯಲ್ಲಿದ್ದಾಗ ಅವತ್ತು ಆಫೀಸಿನಿಂದ ಮನೆಗೆ ಬಂದಾಗ ನನ್ನವಳು ಅಳುತ್ತ ಕುಳಿತಿದ್ದನ್ನು ನೋಡಿಯೇ ಏನೋ ದುಃಖದ ಸಮಾಚಾರ ಎಂದರಿತೆ. ಬಿಕ್ಕುತ್ತಲೇ ಹೇಳಿದಳು, 'ಅಜ್ಜಿ ಇನ್ನಿಲ್ಲ'.

ನಮ್ಮ ದೊಡ್ಡಪ್ಪನವರು ಆಗ ಬಸವನಗುಡಿ Model House ನಲ್ಲಿ ವಾಸವಾಗಿದ್ದರು. ಒಂದು ಕ್ಷಣ ನಿಲ್ಲದೆ ಓಡಿದೆ. Bull Temple Road ನಲ್ಲಿ ಸಾಗುತ್ತಿದ್ದಂತೆ ಎದುರಿಗೇ ಪ್ರತ್ಯಕ್ಷವಾಯಿತು ಅಜ್ಜಿಯ ಅಂತಿಮಯಾತ್ರೆ. ಪತಿಯನ್ನ, ಸೊಸೆಯನ್ನ, ಮಗನನ್ನ ಕಳೆದುಕೊಂಡಿದ್ದರೂ ತಮ್ಮ ಮನದಾಳದ ನೋವಿನ ಕಾವು ನಮಗೆ ತಟ್ಟಬಾರದೆಂದು ಎಲ್ಲ ಒತ್ತಿ ಹಿಡಿದ ಅಜ್ಜಿ ಮೈಗೊತ್ತುವ ಬಿದಿರಿನ ಮೇಲೆ ಮಲಗಿದ್ದರು. ನಾನೂ ಭುಜ ಕೊಟ್ಟೆ. ಆಕೆಯ ಪಾರ್ಥಿವ ಶರೀರದ ವಾಹಕನಾಗಿದ್ದೊಂದೇ ನಾನು ನನ್ನ ಅಜ್ಜಿಗೆ ಸಲ್ಲಿಸಿದ ಸೇವೆ. ಕಣ್ಕಂಡ ದೈವ ನಮ್ಮಿಂದ ಮರೆಯಾಗಿಯೇ ಹೋಯ್ತು.

ಹಲವಾರು ಸಮಾನ ಮನಸ್ಕರಾದ ಮಿತ್ರರೊಡಗೂಡಿ ಸ್ಥಾಪಿಸಿದ 'ಶ್ರೀರಾಮ ಕಲಾವಿದರು' ಎಂಬ ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸಿ, ತದನಂತರದಲ್ಲಿ ಸಂಗೀತ ನಾಟಕ ಅಕಾಡಮಿಯಿಂದ ಮಾನ್ಯತೆ ಪಡೆಯುವುದರಲ್ಲಿ ಸಫಲನಾದೆ. ಸಂಸ್ಥೆ ಬಹಳ ಶಿಸ್ತಿನದಾಗಿತ್ತು. ಸದಸ್ಯರೆಲ್ಲ ಸುಸಂಸ್ಕೃತರು, ವಿದ್ಯಾವಂತರು, ಪರಸ್ಪರ ಪ್ರೀತಿ, ವಾತ್ಸಲ್ಯ ಉಳ್ಳವರು. ಪ್ರತಿಯೊಬ್ಬರೂ ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ನಿಷ್ಣಾತರಾಗಬೇಕೆಂಬುದು ನನ್ನ ಬಯಕೆಯಾಗಿತ್ತು. ಆದರೆ ಬಹುಜನ ಅಭಿನಯ ಬಿಟ್ಟು ಉಳಿದವುಗಳಲ್ಲಿ ಆಸಕ್ತಿ ತೋರಲಿಲ್ಲ.

ಮಿತ್ರಸಂಸ್ಥೆಗಳಲ್ಲಿ ವರ್ಣಾಲಂಕಾರ, ರಂಗಸಜ್ಜಿಕೆ, ಪಾತ್ರ ವಹಿಸುವಿಕೆ, ಈ ಎಲ್ಲವುಗಳಿಗಾಗಿ ದುಡಿಯುತ್ತಿದ್ದೆ. makeup ಗಾಗಿ ಅಗತ್ಯವಿದ್ದ ಎಲ್ಲ ಪದಾರ್ಥಗಳನ್ನೂ ನನ್ನ ಸ್ವಂತ ಖರ್ಚಿನಿಂದ ಕೊಳ್ಳುತ್ತಿದ್ದೆ. ಒಂದು ಬಿಡಿಗಾಸೂ ಮುಟ್ಟುತ್ತಿರಲಿಲ್ಲ. ಉಚಿತವಾಗಿ ನನ್ನ ಸೇವೆ ಪಡೆಯುವುದು ಅವರಿಗೂ ಮುಜುಗರ ಆಗುತ್ತಿತ್ತು. HMT Auditorium ನಂಥ ದೂರ ಪ್ರದೇಶಗಳಿಂದ ನಾಟಕ ಮುಗಿದನಂತರ ರಾತ್ರಿ ಹತ್ತು , ಹನ್ನೊಂದರ ವೇಳೆಯಲ್ಲಿ ಒಂಟಿಯಾಗಿ ಸೈಕಲ್ ಏರಿ ಜಯನಗರ ಈಸ್ಟ್ ಮನೆಗೆ ತೆರಳುತ್ತಿದ್ದೆ. ಚಾಮರಾಜಪೇಟೆ ಬಿಟ್ಟು ಅಲ್ಲಿ ಮನೆ ಮಾಡಿದ್ದೆ. ಬೆಂಗಳೂರಿನಲ್ಲಿ ಆಗಿನ್ನೂ ಭಯದ ವಾತಾವರಣ ಸುಳಿದಿರಲಿಲ್ಲ.

BEMLನಲ್ಲಿದ್ದ ಶ್ರೀ ರಾಮಣ್ಣ ಎಂಬುವರು ಯಾವ ರೂಪದಲ್ಲಿಯಾದರೂ ನನಗೆ ಸಂಭಾವನೆ ಸಲ್ಲಿಸಬೇಕೆಂದು, insurance agency ತೆಗೆದುಕೊಳ್ಳುವಂತೆಯೂ ತಾವೆಲ್ಲ ನನ್ನ ಮೂಲಕ insurance ಮಾಡಿಸುವುದಾಗಿಯೂ ಸಲಹೆ ನೀಡಿದರು. ನಾನದಕ್ಕೆ ಒಪ್ಪಲಿಲ್ಲ. ಶ್ರೀ ಗುರುರಾಜುಲುನಾಯ್ಡು (ಅರುಣ ಕುಮಾರ್) ಅವರು ತಮ್ಮ ನಾಟಕಗಳಲ್ಲಿ ನನ್ನನ್ನು ಬಳಸಿಕೊಳ್ಳುತ್ತಿದ್ದರು. ಕೆ.ಆರ್. ನಗರಕ್ಕೆ ಟ್ರಾನ್ಸ್‌ಫರ್ ಆಗಿ ಅಲ್ಲಿದ್ದಾಗ ಒಮ್ಮೆ ರಂಗಸಜ್ಜಿಕೆಗಾಗಿ ಬೆಂಗಳೂರಿಗೆ ಕರೆಸಿಕೊಂಡರು. ನಾಟಕ ಮುಗಿದನಂತರ Ramakrishna Lodgeನಲ್ಲಿ ನನಗಾಗಿ room ಮಾಡಿರುವುದನ್ನು ತಿಳಿಸಿ ವಿಶ್ರಾಂತಿ ಪಡೆಯಲು ಕೋರಿದರು. ನಾಟಕಕ್ಕೆ ಸಂಬಂಧಿಸಿದ ಹಾಗೆ ನನಗಾಗಿ ಯಾವ ಖರ್ಚೂ

ಬೇರೆಯವರಿಗೆ ಆಗಬಾರದೆಂಬ ಸಂಕಲ್ಪ ಹೊಂದಿದ್ದ ನಾನು ನಿರಾಕರಿಸಿ ನಟರೊಬ್ಬರ ಮನೆಯಲ್ಲಿ ತಂಗಿ ಊರಿಗೆ ಹಿಂದಿರುಗಿದೆ. ಇದರಿಂದಾಗಿ ಬೇಸರಪಟ್ಟ ಗುರುರಾಜರು ಮುಂದೆ ಯಾವುದಕ್ಕೂ ನನ್ನ ಸಹಕಾರ ಕೋರಲಿಲ್ಲ. ಸ್ನೇಹ ಮಾತ್ರ ಕ್ಷೀಣಿಸಲಿಲ್ಲ.

ಶ್ರೀ ಕೃಷ್ಣಮೂರ್ತಿ Sukanya Textiles ಮಾಲೀಕರು. ನಾಟಕದಲ್ಲಿ direct ಆಗಿ ಯಾವುದರಲ್ಲೂ ಭಾಗವಹಿಸದಿದ್ದರೂ ನಮ್ಮ ಸಂಸ್ಥೆಯಲ್ಲಿ ಅಭಿಮಾನ ಉಳ್ಳವರು. ಒಮ್ಮೆ ನಾಟಕ ಮುಗಿದು costumes ನವರೇ ಮುಂತಾದವರಿಗೆಲ್ಲ ಅವರ ಪಾಲಿನ ಸಂಭಾವನೆ ಸಲ್ಲಿಸುವಾಗ ಸ್ವಲ್ಪ short ಆಯಿತು. ಆಗ ಕೊಡದೆ, ಆಮೇಲೆ ಎಂದರೆ ಸಂಸ್ಥೆಯ ಗೌರವಕ್ಕೆ ಚ್ಯುತಿಯಾಗುತ್ತಿತ್ತು. ಆ ಅವೇಳೆಯಲ್ಲಿಯು ಸಹ ಯಾರನ್ನೋ ಹಿಡಿದು ತಮ್ಮ ಚಿನ್ನದುಂಗುರವನ್ನು ಮಾರಿ ಹಣ ಪೂರೈಸಿದವರು ಈ ಪುಣ್ಯಾತ್ಮ.

ಯಾವುದೇ ನಾಟಕಾಭಿನಯ ಹತ್ತಿರ ಬಂದ ಹಾಗೆಲ್ಲ ನನ್ನ ಮನಸ್ಸು ಸಂಪೂರ್ಣವಾಗಿ arrangements ಹ್ಯಾಗಿರಬೇಕು ಏನು ಎತ್ತ ಇತ್ಯಾದಿ ವಿಷಯಗಳಲ್ಲಿ ಮುಳುಗಿರುತ್ತಿತ್ತು. ಬೇರೆ ಯಾವುದೂ ತಲೆಗೆ ಹೋಗುತ್ತಿರಲಿಲ್ಲ. (ಆಫೀಸಿನಲ್ಲಿರುವಾಗ ಆಫೀಸ್ ಕೆಲಸ ಬಿಟ್ಟು ಬೇರಿನ್ನೊಂದನ್ನು ಸ್ಮರಿಸುತ್ತಲೂ ಇರಲಿಲ್ಲ. ಏತನ್ಮಧ್ಯೆ casualty ಬಂದದ್ದು ಸಂಸಾರದ ಪಾಲಿಗೆ ಮಾತ್ರ) ಹೊತ್ತುಗೊತ್ತಿಗೆ ಆಹಾರವಿಲ್ಲ , ನಿದ್ರೆಯಿಲ್ಲ , ವಿಶ್ರಾಂತಿ ಇಲ್ಲ. ಎಲ್ಲ faculties ಕೇಂದ್ರೀಕೃತವಾಗುತ್ತಿದ್ದದ್ದು stage ಮೇಲೆ.

ನಮ್ಮ ನಾಲ್ಕನೆಯ ಮಗಳು ರುಕ್ಮಿಣಿ ಗರ್ಭದಲ್ಲಿರುವಾಗ ನನ್ನಾಕೆಗೆ ದಿನ ತುಂಬಿದ ಸಂದರ್ಭ. ನೋವು ಆರಂಭವಾಗಿದೆ. ನಾನು ಯಥಾಪ್ರಕಾರ C/o histrionic centresನಲ್ಲಿ. ಅವತ್ತಂತೂ ಅತಿ ಬಿಸಿ. ಮಹಡಿಯ ಮೇಲೆ ಮನೆ. ಪುಣ್ಯಕ್ಕೆ ನನ್ನ ಸಹೋದ್ಯೋಗಿ ರಘುನಾಥರಾವ್ ಎಂಬುವರು ನನ್ನನ್ನು ಕಾಣಲು ಬಂದವರು ನನ್ನವಳ ಪರಿಸ್ಥಿತಿ ನೋಡಿ ತಕ್ಷಣ taxi ತಂದು hospital ಗೆ ಸೇರಿಸಿದರು. ಸೇರಿದ ಅರ್ಧ ಗಂಟೆಯೊಳಗೆ ಪುತ್ರಿಕಾರತ್ನದ ಸುಶ್ರಾವ್ಯ ಅಳು ಮೊಳಗಿ ಮಾರ್ಮೊಳಗಿತ್ತು.

ನಾನು hospitalಗೆ ಹೋಗುವ ಹೊತ್ತಿಗೆ ನನ್ನಾಕೆ wardಗೆ ಬಂದಾಗಿತ್ತು. ಕೋಣೆಯ ಗೋಡೆಗಳ ಮೇಲೆ ದೃಷ್ಟಿಯಿಟ್ಟು, ಓರೆಗಣ್ಣಿನಿಂದ ಮಗುವನ್ನು ನೋಡಿ, ಕಳ್ಳನೋಟದಿಂದ ಅವಳನ್ನು ಕಂಡು 'ಬ್ಬೆ ಬ್ಬೆ ಬ್ಬೆ' ಅಂದು ಬೆವರೊರೆಸಿಕೊಳ್ಳುತ್ತ ಹೊರಕ್ಕೆ ಜಾರಿದೆ.

ಯಾಕೆ ಹೀಗೆ ? ಎಂದು ಯಾರಾದರೂ ಕೇಳಿದರೆ ಸಮಂಜಸ ಉತ್ತರ ನೀಡುವುದು ಕಷ್ಟವಾದೀತು. ಒಟ್ಟಿನಲ್ಲಿ ನಮ್ಮ ನಾಟಕ ಅಭಿನಯಸಲ್ಪಡುವ ದಿನದಂದು ಬೆಳಗ್ಗೆ ಎಂಟರೊಳಗೆ ಮನೆ ಬಿಟ್ಟು ನೇರ ರಂಗಮಂದಿರಕ್ಕೆ ತೆರಳುತ್ತಿದ್ದೆ. ಆಗ ಆರಂಭಿಸಿ ನಾಟಕ ಮುಗಿಯುವವರೆಗೂ ಬಿಡುವಿಲ್ಲದ ಕೆಲಸ. ಕೆಲವೊಮ್ಮೆ ಪಾತ್ರ ವಹಿಸುವುದೂ ಇರುತ್ತಿತ್ತು. ಇಷ್ಟಾದರು ಸಹ ಇಡೀ ದಿನ ಆಹಾರವನ್ನು ಮುಟ್ಟುತ್ತಿರಲಿಲ್ಲ. ತೀರ ಆಯಾಸವಾದಾಗ ನಲ್ಲಿಗೆ ಬಾಯೊಡ್ಡುತ್ತಿದ್ದೆ. ದೀಕ್ಷೆ ತೊಟ್ಟು ವ್ರತ ಮಾಡುವ ಹಾಗೆ ಮಾಡುತ್ತಿದ್ದೆ. ಕಡೆಯಲ್ಲಿ ಎಲ್ಲರನ್ನೂ ಬೀಳ್ಕೊಟ್ಟು ಪದಾರ್ಥಗಳನ್ನೆಲ್ಲ ಜೋಪಾನ ಮಾಡಿಟ್ಟು ಮನೆಗೆ ಮರಳುತ್ತಿದ್ದೆ.

'ಇವಳು' ನನ್ನ ಜತೆ ಇಲ್ಲದೆ ಎಲ್ಲಿಗೂ ಕಾಲಿಡುತ್ತಿರಲಿಲ್ಲ. ನನಗೆ ಪುರಸತ್ತು ಇರುತ್ತಿರಲಿಲ್ಲ. ಹಾಗಾಗಿ ನನ್ನ ನಾಟಕಗಳನ್ನು ನೋಡುತ್ತಿದ್ದುದು ಅಪರೂಪ. ಯಾವಾಗಾದರೊಮ್ಮೆ ಹೊರಗಡೆ ಕೆಲಸವಿದ್ದು ಆ ದಿಕ್ಕಿನಲ್ಲಿ ಹೋಗಬೇಕಾಗಿ ಬಂದರೆ ಮನೆಯಿಂದ ಅವಳನ್ನು ಕರೆತರುತ್ತಲಿದ್ದೆ. ಉಳಿದಂತೆ ನನ್ನಂತೆಯೇ ಉಪವಾಸವಿದ್ದು ತಪಸ್ಸು ಮಾಡುತ್ತ ಮನೆಯಲ್ಲಿ ಮಕ್ಕಳ ಲಾಲನೆ ಪಾಲನೆಯಲ್ಲಿ ಮುಳುಗಿರುತ್ತಿದ್ದಳು. ಶ್ರೀರಾಮ ಮಂದಿರದಲ್ಲಿ ವಿದ್ಯಾಸಂಸ್ಥೆ ಯೊಂದನ್ನು ಆರಂಭಿಸಲಾಗಿದ್ದು ಕೆಲವೊಂದು ಅಭಿವೃದ್ಧಿ ಕಾರ್ಯಗಳಾಗಬೇಕಿತ್ತು. ಶ್ರೀರಾಮ ಕಲಾವಿದರ ಸಂಸ್ಥೆಯಿಂದ ಹಲವಾರು ಸಹಾಯಾರ್ಥ ಪ್ರದರ್ಶನಗಳನ್ನು ನೀಡಿ ಒಳ್ಳೆಯ ಮೊತ್ತದ ಹಣ ಸಂಗ್ರಹಿಸಿ ಕೊಟ್ಟೆವು. HMTಯ ನೌಕರರಾಗಿದ್ದ ರಾಮರಾವ್ ಎಂಬುವರು ಸಂಸ್ಥೆಯ ಸದಸ್ಯರು. Final ಆಗಿ ವಾದ್ಯಗೋಷ್ಠಿಯೊಂದಿಗೆ rehearsal ಮಾಡುವ ದಿನ ಅಗತ್ಯವಾದ ತಿಂಡಿತೀರ್ಥಗಳ ಖರ್ಚನ್ನು ಸಾಧಾರಣವಾಗಿ ಇವರೇ ಭರಿಸುತ್ತಿದ್ದರು. ಕೊಡುಗೈ ಭಂಟ. ಆದರೆ ಅಲ್ಪಾಯುವಾಗಿ ಯೌವನದ ದಿನಗಳಲ್ಲೇ ಕಣ್ಮರೆಯಾಗಿಬಿಟ್ಟರು. ಶ್ರೀರಾಮ ಕಲಾವಿದರ ಸಂಸ್ಥೆಗೆ ಅನೇಕ ವಿಧದಲ್ಲಿ ಸಹಾಯ ಮಾಡಿದವರು.

ಹೃದಯಸಂಪನ್ನರು

ಶ್ರೀ ಕೃಷ್ಣಮೂರ್ತಿಗಳು ನನ್ನ ಆಪ್ತಮಿತ್ರರು. ಸುಕನ್ಯಾ ಟೆಕ್ಸ್‌ಟೈಲ್ಸ್ ಕಾರ್ಖಾನೆ ಮಾಲೀಕರು. ಬಗೆ ಬಗೆಯ ಯಂತ್ರಗಳ inventionನಲ್ಲಿ , ಆವಿಷ್ಕಾರದಲ್ಲಿ ನಿಪುಣರು. ಸುಲಭವಾಗಿ ಚಾಲನೆ ಮಾಡಬಹುದಾದ ವಿದ್ಯುತ್ ಚಾಲಿತ ಮಗ್ಗಗಳನ್ನು ಕಂಡುಹಿಡಿದಿದ್ದರು. ಹಾಗೆಯೇ Hotelಗಳಿಗೆ ಅನುಕೂಲ ವಾಗುವಂತೆ ಆಲೂಗಡ್ಡೆ ಸಿಪ್ಪೆ ತೆಗೆಯುವ ಯಂತ್ರ- Potato peeler ಕೂಡ ಅವರ ಕೊಡುಗೆ. ಮದರಾಸಿನ ದಾಸಪ್ರಕಾಶ ಹೋಟೆಲ್‌ನವರಿಗೆ ಕೆಲವೊಂದು ಯಂತ್ರಗಳನ್ನು ಮಾರುವುದಿತ್ತು. ಹಾಗೆಯೇ ನನ್ನನ್ನೂ ಚಿತ್ರಜಗತ್ತಿಗೆ ಪರಿಚಯಿಸುವ ಆಸೆ ಹೊತ್ತು,

ಬೇಡವೆಂದು ಎಷ್ಟು ಹೇಳಿದರೂ ಕೇಳದೆ "ಶ್ರೀಕಂಠು, ನಿಮ್ಮ talents ಹೊರ ಜಗತ್ತಿಗೆ ಪರಿಚಯವಾದರೆ ನನಗೂ ಹೆಮ್ಮೆಯಲ್ಲವೆ, ಕಾರಣಕರ್ತ ನಾನು ಎಂದು ! ಸುಮ್ಮನೆ ನಡೆಯಿರಿ" ಎಂದು ಎಳೆದೊಯ್ದರು. ದಾಸಪ್ರಕಾಶದಲ್ಲೇ ತಂಗಿದ್ದೆವು. ತಮ್ಮ ವ್ಯವಹಾರ ಮುಗಿದನಂತರ ಅವರಿಗೆ ಪರಿಚಯವಿದ್ದ ಪ್ರಸಿದ್ಧ ಚಿತ್ರನಿರ್ಮಾಪಕ ಎ.ಸಿ. ನರಸಿಂಹಮೂರ್ತಿಯವರಲ್ಲಿಗೆ ಕರೆದೊಯ್ದರು.

ನಾವು studio ತಲಪಿದಾಗ ಮಧ್ಯಾಹ್ನ ಒಂದಿರಬಹುದು. 'ಸಂಧ್ಯಾರಾಗ' shooting ನಡೆದಿತ್ತು. ಉದಯಕುಮಾರ್ ಮತ್ತು ನರಸಿಂಹರಾಜು ಅವರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ನಾವು disturb ಮಾಡುವುದು ಬೇಡವೆಂದು ಚಿತ್ರೀಕರಣ ನೋಡುತ್ತ ನಿಂತಿದ್ದೆವು. ಬೆಂಗಳೂರಿನ ಸೊಗಸಾದ ಹವೆಗೆ ಒಗ್ಗಿ ಹೋಗಿದ್ದ ನಮಗೆ ಮದರಾಸಿನ ಬಿಸಿಲು, ಸೆಖೆ, ತಡೆಯಲಾರದ್ದಾಗಿತ್ತು. ಎರಡು giant ಫ್ಯಾನುಗಳನ್ನು stage ಕಡೆ ಮುಖ ಮಾಡಿಟ್ಟಿದ್ದರು. ಇತ್ತ ಕಡೆಗೆ ಗಾಳಿ ಬರುತ್ತಿರಲಿಲ್ಲ. ಕುರ್ಚಿಗಳೂ stageನ ಹಿಂಬದಿಯಲ್ಲಿ ಇದ್ದವು. ಬೆವರು ಸುರಿಸುತ್ತ ಉಶ್‌ಪುಶ್ ಎಂದು ನರಳುತ್ತ ನಿಂತಿದ್ದೆವು.

ನಮ್ಮ ಕಷ್ಟ ಗಮನಿಸಿದ್ದು ನರಸಿಂಹರಾಜುರವರು, "ಮದರಾಸಿನ ಧಗೆ ಅಭ್ಯಾಸವಿಲ್ಲವೆಂದು ತೋರುತ್ತದೆ. ಹೀಗೆ ಬನ್ನಿ" ಎಂದಂದು ನಮ್ಮ ಕೈ ಹಿಡಿದು ಗಾಳಿ ಬರುವ ಜಾಗದಲ್ಲಿ stageನ ಒಂದು ಬದಿಗೆ ಕರೆದೊಯ್ದು, ತಾವೇ ಎರಡು ಕುರ್ಚಿಗಳನ್ನು ತಂದು ಹಾಕಿ ಕೂರಿಸಿ 'ಸುಧಾರಿಸಿಕೊಳ್ಳಿ' ಎಂದವರೇ - ನಮ್ಮ ಯೋಗಕ್ಷೇಮ, ಬಂದ ಕಾರಣ ಇತ್ಯಾದಿ ಎಲ್ಲ ವಿವರಗಳನ್ನೂ ಕೇಳುತ್ತ ಅತ್ಯಂತ ಆತ್ಮೀಯತೆಯಿಂದ ನಡೆದುಕೊಂಡು ಚಿತ್ರೀಕರಣವನ್ನೇ ಸ್ಥಗಿತಗೊಳಿಸಿ ತಮ್ಮ ಹೃದಯ ವೈಶಾಲ್ಯತೆಯನ್ನು ಮೆರೆದರು. ಅದೊಂದು ಮರೆಯಲಾಗದ ಅನುಭವ ನಮಗೆ.

ಹೊತ್ತು ಗೊತ್ತಿಗೆ ಊಟವಿಲ್ಲ, ತಿಂಡಿಯಿಲ್ಲ. ಪರದೇಶ, ಪರಭಾಷೆ. ಜತೆಗೆ ಇರುವ ಅಲ್ಪಸ್ವಲ್ಪ ಚೈತನ್ಯವನ್ನೂ ಕುಗ್ಗಿಸುವಂತಹ ಹವೆ. ಕಷ್ಟಗಳ ಹೊರೆ ಹೊತ್ತ ಸಂಸಾರ. ಈ ಎಲ್ಲದರ ಬಗ್ಗೆ ಎಳ್ಳನಿತಾದರೂ ಕುಗ್ಗದೆ, ನಗುನಗುತ್ತ, ಪರಿಚಯವೇ ಇಲ್ಲದವರ ಬಗ್ಗೆ ಯೋಗಕ್ಷೇಮಕ್ಕೆ ಮುಂದಾದ ಮಹಾಸುಸಂಸ್ಕೃತ ವ್ಯಕ್ತಿ ನರಸಿಂಹರಾಜು ಅವರು. ಸ್ಪರ್ಧಾತ್ಮಕ ಜಗತ್ತು ಚಿತ್ರರಂಗ. ಅಂತಹುದರಲ್ಲಿ ನರಸಿಂಹರಾಜು ಅವರು ಅಲ್ಲಿಯೇ ಇದ್ದ ನಿರ್ದೇಶಕರು ದೊರೈ, ಭಗವಾನ್, ಇವರಿಗೆ ನನ್ನನ್ನು ಪರಿಚಯಿಸಿ ತಮ್ಮ ಚಿತ್ರಗಳಲ್ಲಿ ನನಗೆ ಒಳ್ಳೆಯ ಪಾತ್ರಗಳನ್ನಿತ್ತು ಪ್ರವರ್ಧಮಾನಕ್ಕೆ ತರಬೇಕೆಂದು ಬಿನ್ನವಿಸಿಕೊಂಡರು. ಅಸೂಯೆಯೇ ತುಂಬಿರುವ ಸಮಾಜದಲ್ಲಿ ಈ ಬಗೆಯ ದೈವಿಕ ಮನೋಭಾವ ವಿರಳ. ಇಷ್ಟೆಲ್ಲದರ ನಡುವೆ ನನಗೇ ಏಕೋ ಚಿತ್ರನಟನಾಗುವ ಇಚ್ಛೆ ಮೂಡಲೇ ಇಲ್ಲ. ಹೊರಗಡೆಯೇ ಉಳಿದೆ.

"ಕೃಷ್ಣಮೂರ್ತಿ, ವಿಕ್ರಮಾದಿತ್ಯನ ಭೇತಾಳಕ್ಕಿಂತ ಒಂದು ತೂಕ ಹೆಚ್ಚೇ ನೀವು", ಎಂದು ಹಾಸ್ಯ ಮಾಡುತ್ತಿದ್ದೆ. ಆದರೂ ಛಲ ಬಿಡದೆ ಜೀವ ಇರುವವರೆಗೆ ತಮ್ಮ ಪ್ರಯತ್ನವನ್ನು ಮುಂದುವರೆಸಿದರಾದರೂ ಅವರ ಅಪೇಕ್ಷೆ ಮಾತ್ರ ಈಡೇರಲಿಲ್ಲ.

ತಾನೊಂದು ಬಗೆದರೆ ದೈವೇಚ್ಛೆ ಮತ್ತೊಂದಾಗಿತ್ತು.

ಅ.ನ. ಕೃಷ್ಣರಾಯರದು ಬಹು ದೊಡ್ಡ ಗುಣ. ಅವರೆಲ್ಲಿ, ಅವರ ಭಾಷಾಜ್ಞಾನವೆಲ್ಲಿ, ಅವರ ಸಾಧನೆ, ಸ್ಥಾನಮಾನಗಳೆಲ್ಲಿ, ಅವರ ಉಪಸ್ಥಿತಿಯಲ್ಲಿ ಕೂಡಲಿಕ್ಕೂ ಅರ್ಹನಲ್ಲದ ನಾನೆಲ್ಲಿ ! ಅದಾವುದೂ ಅವರ ಗಣನೆಗೆ ಬರುತ್ತಿದ್ದಿಲ್ಲ. ಸಾಧಾರಣವಾಗಿ ನಾನು ಅವರ ಮನೆಗೆ ಹೋಗುತ್ತಿದ್ದುದು ನಾಟಕಗಳ ಓಡಿಯಾಟ ಮುಗಿಸಿ ರಾತ್ರಿ ಹತ್ತರ ಅನಂತರ. ಅವರು ಸ್ವಲ್ಪವೂ ಬೇಸರಪಡುತ್ತಿದ್ದಿಲ್ಲ. ತಮ್ಮ ಬರವಣಿಗೆಯನ್ನು ನಿಲ್ಲಿಸಿ ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಕನ್ನಡ ಇರಲಿ, ಅವರ ಇಂಗ್ಲಿಷ್ ಭಾಷೆ ಕೇಳಬೇಕು ! ಓಹ್ ! ಮೈಮರೆತು ಕೂಡುತ್ತಿದ್ದೆ. ನನ್ನ ಹೆಂಡತಿ ನನಗಾಗಿ ಕಾಯುತ್ತಿದ್ದಾಳೆ, ಗಂಟೆ ಒಂದು ದಾಟಿದೆ, ರಾಯರೋ ಅಷ್ಟು ಆರೋಗ್ಯ ಸ್ಥಿತಿಯುಲ್ಲಿಲ್ಲದವರು. ಇವು ಯಾವುದೊಂದೂ ಅಡ್ಡಿಯಾಗುತ್ತಿರಲಿಲ್ಲ. ಅವರ ಅಪಾರ ಜ್ಞಾನಸಂಪತ್ತನ್ನು ಕಂಡು ನಿಬ್ಬೆರಗಾಗುತ್ತಿದ್ದೆ.

ವಿಜಯ-ವಿದ್ಯಾರಣ್ಯ ನಾಟಕ ಬರೆದು ಸ್ಟೇಜ್ ಮೇಲೆ ತರುವವನಿದ್ದೆ. ಅವರ ಮನೆಗೆ ಹೋಗಿ 'ತಾವು ಬಂದೇ ತೀರಬೇಕು' ಎಂದು ಒತ್ತಾಯಪೂರ್ವಕ ಆಹ್ವಾನ ನೀಡಿದೆ. ಎಲ್ಲ ಕೆಲಸ ಬಿಟ್ಟು ಬಂದು ನಾಟಕ ಮುಗಿಯುವವರೆಗೂ ಕುಳಿತೇ ಇದ್ದರು. ಎಲ್ಲ ಆದನಂತರ ಸಂಕೋಚದಿಂದ ಅವರ ಬಳಿ ನಿಂತೆ. ಅವರ ಅಭಿಪ್ರಾಯ ಕೇಳುವುದೂ ಧಾರ್ಷ್ಟ್ಯ ಎಂದು ಭಾವಿಸಿ ಕೈಹೊಸೆಯುತ್ತ 'ಬ್ಬೆ ಬ್ಬೆ ಬ್ಬೆ' ಅನ್ನುವುದು ಮಾತ್ರವಾಯಿತು. ಆದರೆ ಬೆನ್ನು ತಟ್ಟಿ, "ಏನು ಶ್ರೀಕಂಠಯ್ಯ, ಸೊಗಸಾದ ನಾಟಕ ನೋಡುವ ಅವಕಾಶ ಮಾಡಿಕೊಟ್ಟಿರಿ. ಇಂಥ ನಾಟಕಗಳು ನೂರು ಬರಬೇಕ್ರೀ" ಎಂದರು. ವಿದ್ಯಾರಣ್ಯರ ಪಾತ್ರ ವಹಿಸಿದ ಟಿ.ಎನ್. ಶಂಕರನಾರಾಯಣಶಾಸ್ತ್ರಿಗಳ ಅಭಿನಯವನ್ನು ಮನಸಾರೆ ಮೆಚ್ಚಿ ಬಾಯ್ತುಂಬ ಹೊಗಳಿದರು.

ಅವರಿಗಾಗಿ ವಾಹನ ಸೌಕರ್ಯಕ್ಕೆ ಏರ್ಪಾಡು ಮಾಡಿದ್ದೆ. ನಿರಾಕರಿಸಿ, "ಅದೆಲ್ಲಾ ಯಾಕ್ರೀ, ಮನೆ ಏನು ದೂರ್ವೆ ? ನಾಲಕ್ಹೆಜ್ಜೆ , ನಡ್ದೇಹೋಗ್ತೀನಿ" ಅಂತ್ಹೇಳಿ ಹೆಜ್ಜೆ ಹಾಕೇಬಿಟ್ರು. ಅವರ ಅಂತ್ಯವಾದಾಗ ಮೂರು ದಿನ ನನಗಾದ ಅಳಲು, ಸಂಕಟ ದೇವರಿಗೇ ಗೊತ್ತು.

ನಾವು ಆಡಿದ ಒಂದೊಂದು ನಾಟಕವನ್ನೂ ಸ್ಮರಿಸಿದಾಗ - ಅದರ ಹಿಂದೆ ಒತ್ತಾಸೆಯಾಗಿ ನಿಂತು ಅನೇಕ ವಿಧದಲ್ಲಿ ಅನೇಕರು ಸಹಕಾರ ಸಹಾಯ ನೀಡದೇ ಇದ್ದರೆ ಯಾವುದೂ ಆ ಸೊಗಸಿನಿಂದ ಆಗುತ್ತಿರಲಿಲ್ಲ ಎಂಬುದು ಗೋಚರವಾದೀತು. 'ಪರಮೇಶ್ವರ ಪುಲಿಕೇಶಿ' ನಾಟಕ ಬರೆದಿದ್ದೆ. ಅದನ್ನ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸುವುದೆಂದು ಸ್ನೇಹಿತರೆಲ್ಲ ಸೇರಿ ನಿರ್ಧರಿಸಿದರು. ಉಪಾಸನಾ ಸೀತಾರಾಂ ಮತ್ತು ಲೋಕೇಶ್ ಇವರುಗಳು ಮುಖ್ಯ ಪಾತ್ರಗಳನ್ನು ನಿರ್ವಹಿಸಲು ಪ್ರೀತಿಯಿಂದ ಒಪ್ಪಿದ್ದರು.

ಆಗಿನ ಕಾಲದ ಉಡುಗೆ ತೊಡುಗೆಗಳು ಹೇಗಿರಬೇಕೆಂಬುದರ ಬಗ್ಗೆ ಅನೇಕ ಚಿತ್ರಗಳನ್ನು ಅರಸುತ್ತ ಅಧ್ಯಯನವನ್ನೇ ಕೈಗೊಂಡೆ. ಅನಂತರ ಪ್ರಭಾತ್ ಶಿಶುವಿಹಾರದ ನಮ್ಮ ಶ್ರೇಯೋಕಾಂಕ್ಷಿಗಳನ್ನು ಕಂಡು ನಮ್ಮ ಅಗತ್ಯಗಳನ್ನು ವಿವರಿಸಿದೆ. ಮಿತ್ರ ದ್ವಾರಕಿಯವರು ಒಂದೇ ಮಾತಿನಲ್ಲಿ, "ಶ್ರೀಕಂಠಯ್ಯನವರು ಇಂಥದ್ದು ಬೇಕು ಎಂದರೆ ಮುಗಿಯಿತು. ಎಲ್ಲ ಸಿದ್ಧ. ನೀವು ಆ ಜವಾಬ್ದಾರಿ ನನಗೆ ಬಿಡಿ" ಎಂದರು. ಅಷ್ಟೇ ಅಲ್ಲ, ಅಂದೇ ನೂತನ ವಸ್ತ್ರಗಳನ್ನು ತರಿಸಿ ಎಲ್ಲ ಉಡುಪುಗಳನ್ನೂ ನನಗೆ ಬೇಕಾದ ರೀತಿಯಲ್ಲಿ ಅಣಿ ಮಾಡಿಬಿಟ್ಟರು. ದುಡ್ಡು ಕಾಸಿನ ಪ್ರಶ್ನೆಯೇ ಬರಲಿಲ್ಲ. ಇಮ್ಮಡಿ ಪುಲಿಕೇಶಿ ಚಲನಚಿತ್ರ ನಿರ್ಮಾಪಕರು ತಾವೇ ನಿಂತು ಓಡಿಯಾಡಿ ತಾವು ಮಾಡಿಸಿದ್ದ ಕಿರೀಟಗಳು, ಒಡವೆ ವಸ್ತುಗಳನ್ನೆಲ್ಲಾ ಕೊಟ್ಟು ಸಹಕರಿಸಿದರು. Routine ತುಳಿಯಬಾರದೆಂದು ನಿರ್ಧರಿಸಿದ್ದ ನಾನು ನಾಟಕಕ್ಕೆ ಯಾವ ಬಗೆಯ painted curtains, wigs etc. ವನ್ನೂ ಉಪಯೋಗಿಸಬಾರದೆಂದು ವಿಚಾರ ಮಾಡಿದೆ. ಕೇವಲ plain curtains ನ ವಿನ್ಯಾಸಗಳಲ್ಲಿ ಮತ್ತು ಕತ್ತಲು ಬೆಳಕಿನಲ್ಲೇ ದೃಶ್ಯ ಪರಿವರ್ತನೆ ಆಗಬೇಕೆಂದು ಸಂಕಲ್ಪಿಸಿ, ರಂಗಸಜ್ಜಿಕೆ ಸಹಾಯಕ್ಕಾಗಿ ರವಿ ಕಲಾವಿದರನ್ನು ಯಾಚಿಸಿದೆ. ಅವರಾದರೋ ಸಂತೋಷ ದಿಂದ, "ನಾವು ನಾಲ್ಕೈದು ಜನ ಬರುತ್ತೇವೆ. ಹೇಗೂ plain curtains ನಮ್ಮಲ್ಲೇ ಇವೆ. ಅವುಗಳನ್ನೂ ತರುತ್ತೇವೆ, ಹೇಗೆ ಬೇಕೆಂಬುದನ್ನು ಹೇಳಿಬಿಡಿ. ನಾವೆಲ್ಲ ನಿಭಾಯಿಸುತ್ತೇವೆ" ಎಂದಂದು ಹಾಗೆಯೇ ನಡೆದುಕೊಂಡರು. ಅಲ್ಲದೆ, ಗುಬ್ಬಿವೀರಣ್ಣನವರಿಂದ ಸ್ಫೂರ್ತಿ ಪಡೆದಿದ್ದ ನಾನು ರಂಗಸ್ಥಳವನ್ನು ಮೂರು ಭಾಗವಾಗಿ ವಿಭಜಿಸಿ ಮೂರು ಪ್ರತ್ಯೇಕ performing areas ಆಗಿ ರಚಿಸಿದೆ. ಯಾವುದೊಂದು ಭಾಗದಲ್ಲಿ ನಟರು ಅಭಿನಯಿಸುತ್ತಾರೋ ಆ area illuminate ಆಗಿ ಉಳಿದೆಲ್ಲ ಭಾಗ ಕತ್ತಲಲ್ಲಿ. ಈ ದೃಶ್ಯ ಮುಗಿಯುವ ಮೊದಲೇ ಮತ್ತೊಂದು ಭಾಗದಲ್ಲಿ ಮುಂದಿನ ದೃಶ್ಯ! ಪರದೆ ಇಳಿ ಬಿಡುವುದು, ಎತ್ತುವುದು - ಈ ಹವ್ಯಾಸವಿಲ್ಲ. ಅಲ್ಲಿ ಬೆಳಕು ಚೆಲ್ಲಿದರಾಯಿತು. ಹಾಗೆಯೇ plain curtains ಆದ್ದರಿಂದ artists ಮತ್ತು ಉಡುಗೆ ತೊಡುಗೆಗಳು ಎದ್ದು ಕಾಣುವುದು ಸಾಧ್ಯ.

ನಾಟಕಕ್ಕೆ ಕೆಲವು ಶಬ್ದ ಮುದ್ರಿಕೆಗಳು ಬೇಕಾಗಿದ್ದವು- ಮಾರ್ದನಿ, ಪ್ರವಾಹದ ಭೋರ್ಗರೆತ, ಹಕ್ಕಿಗಳ ಇಂಚರ, ಸಿಡಿಲು, ಗುಡುಗು ಇತ್ಯಾದಿ. A.I.R. ನವರು ಈ ಎಲ್ಲ ಧ್ವನಿಮುದ್ರಿಕೆಗಳನ್ನೂ ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ಆದರೆ ನಾನೆಷ್ಟು ಬಾರಿ ಅಲೆದರೂ "ಅವುಗಳನ್ನು ಹೊರಗಿನವರಿಗೆ ಕೊಡುವುದು ಕಾನೂನುಬಾಹಿರ" ಎಂದಂದುಬಿಟ್ಟರು. ಮತ್ತೆ ಪ್ರಭಾತ್ ಕಲಾವಿದರಲ್ಲಿಗೆ ಓಡಿದೆ. ಗಂಟೆಗಟ್ಟಲೆ ಚರ್ಚಿಸಿ ಕೊನೆಗೆ ನಾವುಗಳೇ ಆ effects ಅನ್ನ create ಮಾಡಿ ಮುದ್ರಿಸಿಕೊಂಡೆವು. ಮತ್ತೆ ಮುತ್ತುವಿನ makeup. ತಮಿಳರ ಹುಡುಗ ಮುತ್ತು. ಅವರ ತಂದೆ ಧನಪಾಲನ್ ಅವರು ನಾಟಕಕ್ಕೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನೂ ಬಾಡಿಗೆಗೆ ನೀಡುತ್ತಿದ್ದರು, ಮುತ್ತು ವಿನಯಶಾಲಿ. ಅನಗತ್ಯದ ಒಂದೇ ಒಂದು ಮಾತನ್ನೂ ಆಡುತ್ತಿರಲಿಲ್ಲ. ಗಂಭೀರವಾದ ನಡವಳಿಕೆ. ತನ್ನ ವೃತ್ತಿಯಲ್ಲಿ ಏಕಮೇವಾದ್ವಿತೀಯಂ ! ಆದರೆ ಅಕಾಲ ಮರಣಕ್ಕೆ ತುತ್ತಾಗಿ field of histrionic arts ಗೇ ದೊಡ್ಡ ನಷ್ಟ ಉಂಟು ಮಾಡಿಬಿಟ್ಟರು. ಚಲನಚಿತ್ರವೊಂದರ ಹೊರಾಂಗಣ ದೃಶ್ಯ ಚಿತ್ರೀಕರಣದ ಸಮಯ, makeup ಗಾಗಿ ಅವರೊಡನಿದ್ದ ಮುತ್ತು ನದಿಯ ಮಧ್ಯೆ ದೋಣಿ ತಲೆ ಕೆಳಗಾಗಲು ನೀರಿನಲ್ಲಿ ಮುಳುಗಿ ಮರೆಯಾದ. ಕೈಗೆ ಬಂದ ಮಗನನ್ನು ಅಗಲಿರಲಾರದೆ ಅನತಿ ಕಾಲದಲ್ಲೇ ಧನಪಾಲನ್ ಸಹ ಇಹಲೋಕ ತ್ಯಜಿಸಿದರು. ಆ ಮುತ್ತು ಅಂದು ವಿಷ್ಣುವರ್ಧನನ ಬೆನ್ನುಗೂನನ್ನು ಎಷ್ಟು ಸಹಜವಾಗಿ ಮಾಡಿದ್ದರೋ ಹೇಳತೀರದು! ಎಲ್ಲರ ಬಾಯಲ್ಲಿಯೂ ಅದೇ ! ಕಲಾವಿದರೊಬ್ಬೊಬ್ಬರೂ ತಮ್ಮ ಶಕ್ತಿ ಮೀರಿ ಕಲಾರಸದಲ್ಲಿ ಮುಳುಗಿ ಅಭಿನಯಿಸಿದರು. ಚಲನಚಿತ್ರ ನಿರ್ಮಾಪಕರಂತೂ ತಮ್ಮ ಚಿತ್ರಕ್ಕಿಂತ ಹೆಚ್ಚಾಗಿ ನಾಟಕವನ್ನು ಮೆಚ್ಚಿದರು.

ನನ್ನ ನಾಟಕಗಳು

ನಿರೀಕ್ಷೆ , ನೆನಪಿರಲಿ ಬಾಪು ಎರಡೂ ಇಂಗ್ಲಿಷ್ ನಾಟಕಗಳ ಅನುವಾದ. ದಾಕ್ಷಿಣ್ಯಪ್ರಕೃತಿಯವರು ದೂರವಾಣಿ ಸಂಪರ್ಕ ಪಡೆದುಕೊಂಡಾಗ ಅನುಭವಿಸಬೇಕಾಗಿ ಬರುವ ಕಷ್ಟ,

ನಿಷ್ಠೂರಗಳನ್ನು ಚಿತ್ರಿಸಿದ್ದೇನೆ, **ದೂರವಾಣಿಯಲ್ಲಿ. ಎಲ್ಲಾ ಎಡವಟ್ಟು** Woodehouse ನಿಂದ ಪಡೆದ ಸ್ಫೂರ್ತಿಯ ಛಾಯೆ. **ಅಲಂಕಾರ** ಕೆಲವೊಂದು ಕುಟುಂಬಗಳನ್ನು deep ಆಗಿ observe ಮಾಡಿದ್ದರ ಫಲ. ಯಾವುದೇ ಪೂಜೆಗೆ ಹೋದರೂ ನನ್ನ ಕಣ್ಣಿಗೆ ಗೋಚರವಾಗುತ್ತ ಬಂದಿರುವುದು lack of devotion. ಬೆಳ್ಳಿ ದೀಪದ ಕಂಭ, ಬೆಳ್ಳಿ ಹೂಬುಟ್ಟಿ, ಬೆಳ್ಳಿ ತಟ್ಟೆಯಲ್ಲಿ ವಿವಿಧ ನೈವೇದ್ಯ, ಬೆಳ್ಳಿ ಏಕಾರತಿ ಎಲ್ಲ ಸರಿ. ಆದರೆ ಮಂತ್ರಗಳ ಯಾಂತ್ರಿಕತೆ, ಅತಿಥಿಗಳನ್ನು ಸ್ವಾಗತಿಸುತ್ತ, ಮಧ್ಯೆ ಮಧ್ಯೆ ಲೌಕಿಕ ಮಾತುಕಥೆಗಳಾಡುತ್ತ, ಎಲ್ಲೆಂದರಲ್ಲಿ ಮನಸ್ಸನ್ನು ಅಲೆಯಗೊಟ್ಟು ಹೂವೆರಚುವ ಪರಿ ಕಂಡು ವ್ಯಥೆ ಪಟ್ಟಿದ್ದೇನೆ. ಅದರಲ್ಲಿ ಒಂದಂಶ **ದೇವರು** ನಾಟಕದ ವಸ್ತು. **ಅಂತೂ ಮನೆ ಸಿಕ್ಕಿತು** ಬಾಡಿಗೆ ಮನೆ ಹಿಡಿಯುವವರ ಪರದಾಟಕ್ಕೆ ಕನ್ನಡಿ.

ಬೆಂಗಳೂರು ಕೃಷ್ಣಭಾಗವತರು ಹರಿಕಥಾ ವಿದ್ವಾಂಸರು. ಮೂಲತಃ ತಮಿಳರಾದ ಇವರು ತಮಿಳು, ಕನ್ನಡ ಭಾಷೆಗಳಲ್ಲಿ ಹರಿಕಥೆ ಮಾಡುತ್ತಿದ್ದರು. 'ದ್ರೌಪದಿ ಮಾಂಗಲ್ಯ ಪ್ರದಾನ' ಅವರಿಗೆ ಪ್ರಿಯವಾದ ಕಥಾನಕ. "ಶ್ರೀಕಂಠು, ನನ್ನ ಕಥೆಯನ್ನು ಯಥಾವತ್ತಾಗಿ ನಾಟಕ ಮಾಡ್ತೀಯೇನೊ" ಎಂದು ಕೇಳಿದರು. "ನಾಟಕಕ್ಕೆ ಹೊಂದಿಕೊಳ್ಳುವ ಹಾಗೆ ಕೊಂಚ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕು" ಎಂದೆ. "ಅದೆಲ್ಲ ಕೂಡದು, ನನ್ನ ಕಥೆಗೂ ಅದಕ್ಕೂ ಎಳ್ಳಷ್ಟೂ ವ್ಯತ್ಯಾಸ ಇರಬಾರದು" ಎಂದು ಹುಕುಂ ಮಾಡಿದರು. ಗತ್ಯಂತರವಿಲ್ಲದೆ ಕೈಲಾದಷ್ಟು ರೂಪಾಂತರ ಮಾಡಿದೆ. ಮಹಾಭಾರತ ಯುದ್ಧದಲ್ಲಿ ದುರ್ಯೋಧನನಿಂದ ಪಾಂಡವ ಪಕ್ಷಪಾತಿ ಎಂದು ಜರೆಯಲ್ಪಟ್ಟು ಭೀಷ್ಮರು ಕೋಪಾವಿಷ್ಟರಾಗಿ ಮರುದಿನದ ಯುದ್ಧದಲ್ಲಿ ಪಾಂಡವರ ತಲೆ ತೆಗೆಯುವುದಾಗಿ ಪ್ರತಿಜ್ಞೆ ಮಾಡುತ್ತಾರೆ. ಶ್ರೀಕೃಷ್ಣ ಇದಕ್ಕೆ ಪ್ರತ್ಯುಪಾಯ ಮಾಡಿ ಭೀಷ್ಮರೇ ದ್ರೌಪದಿಗೆ ದೀರ್ಘ ಸೌಮಾಂಗಲ್ಯದ ಆಶೀರ್ವಚನ ನೀಡುವಂತೆ ಮಾಡುತ್ತಾನೆ. ಮುಂದೆ ಭೀಷ್ಮರಿಗೆ ತಮ್ಮ ಸಂದಿಗ್ಧ ಪರಿಸ್ಥಿತಿಯ ಅರಿವಾಗಿ ತಮ್ಮ ಅಂತ್ಯವನ್ನೇ ನಿರ್ಧರಿಸಿ ಅದನ್ನು ಕಾರ್ಯಗತ ಮಾಡುವ ಬಗೆಯನ್ನು ತಾವೇ ಸೂಚಿಸುತ್ತಾರೆ. ಇದು ಕಥಾವಸ್ತು. ನಾನು ಕೃಷ್ಣಭಾಗವತರನ್ನು ಬಲವಂತ ಮಾಡಿ ಭೀಷ್ಮರ ಪಾತ್ರವನ್ನು ವಹಿಸಲು ಒಪ್ಪಿಸಿದೆ. ರಿಹರ್ಸಲ್ ಮಾಡಿಯೇ ತೀರಬೇಕು; ನೀವಾದರೇನು, ಯಾರಾದರೇನು ಅಂದು ಗೋಳು ಹುಯ್ದುಕೊಂಡು ಸೇಡು ತೀರಿಸಿಕೊಂಡೆ. ನಾನು ಕೃಷ್ಣ. MLA ಆಗಿದ್ದ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಸಂಸ್ಥೆಯ ಅಧ್ಯಕ್ಷಿಣಿ (ರಾಮಮಂದಿರ). ಕರ್ನಾಟಕದ MLA ಗಳೆಲ್ಲ sessionಗೆ ಬಂದಿದ್ದರು. ನಾಟಕ ನೋಡಲು ಲಕ್ಷ್ಮೀದೇವಿಯವರು ಇಡೀ ತಂಡವನ್ನೇ ಕರೆತಂದರು. ಅಂದು ಮೊದಲ್ಗೊಂಡು ಉಳಿದ MLAಗಳೂ, ಲಕ್ಷ್ಮೀದೇವಿಯವರೂ, ನನ್ನನ್ನು 'ಕೃಷ್ಣ ಪರಮಾತ್ಮ' ಎಂದೇ ಸಂಬೋಧಿಸಲು ಆರಂಭಿಸಿದರು ! ಆ ಪಾತ್ರ ಅವರೆಲ್ಲರ ಮನಸ್ಸನ್ನೂ ಅಷ್ಟರ ಮಟ್ಟಿಗೆ ಸೆರೆಹಿಡಿದಿತ್ತು. ಹರಿಕಥೆಯ ಹಂದರದ ನಾಟಕವಾದ್ದರಿಂದ ಒಂದು ದೃಶ್ಯಕ್ಕೂ ಇನ್ನೊಂದಕ್ಕೂ ಸಾಕಷ್ಟು ವೇಳೆಯಾಗುತ್ತಿತ್ತು. ವಾದ್ಯಗೋಷ್ಠಿಯವರು "ಏನ್ಸಾರ್, sceneಗಳು ತಯಾರಾಗೋ ಹೊತ್ಗೆ ಒಂದೊಂದು ಕೀರ್ತನೆಯೇ ಮುಗೀತಿತ್ತಲ್ಲ ಸಾರ್" ಎಂದು ಹಾಸ್ಯ ಮಾಡುತ್ತಿದ್ದರು. ಆದರೆ ನಾಟಕವೆಂಬ ದೃಷ್ಟಿಗಿಂತ ಭಕ್ತಿಭಾವವೇ ಮಿಗಿಲಾದ್ದರಿಂದ ಯಾರೂ ಬೇಸರಪಟ್ಟುಕೊಳ್ಳಲಿಲ್ಲ. ಸಾವಂದಾಚಾರ್ ಎನ್ನುವವರು ಉಡುಗೆ-ತೊಡುಗೆಗಳು, ಕಿರೀಟಗಳು, ಆಭರಣ, ಟೋಫನ್ ಎಲ್ಲವನ್ನೂ ಹೊಸದಾಗಿ ಮಾಡಿಸಿದ್ದರು- ಬಾಡಿಗೆಗೆ ಕೊಡುವ ಸಲುವಾಗಿ. ನಾವೇ ಅವರ ಮೊದಲ ಗಿರಾಕಿಗಳು. ಎಲ್ಲ ಭರ್ಜರಿಯಾಗಿತ್ತು. ಜತೆಗೆ ಮುತ್ತುವಿನ ಅನುಪಮ ವರ್ಣಾಲಂಕಾರದ ಸೊಗಸೇ ಸೊಗಸು.

ಶ್ರೀ ಪುರಂದರದಾಸರು ನಾಟಕವನ್ನು ರಚಿಸಿದಾಗ ಚಲನಚಿತ್ರನಟರೂ, ಹರಿಕಥಾ ವಿದ್ವಾಂಸರೂ, ಪ್ರಿಯಮಿತ್ರರೂ ಆದ ಅರುಣ್‌ಕುಮಾರ್ (ಗುರುರಾಜುಲುನಾಯ್ಡು) ಬಹಳವಾಗಿ ಸಂತೋಷಪಟ್ಟರು. ಅವರೇ ಪ್ರಧಾನಪಾತ್ರ ವಹಿಸಲೂ ಒಪ್ಪಿದರು. ಸಂಗೀತಕ್ಕಾಗಿ ಜೀವ ತೇಯ್ದವರೊಬ್ಬರನ್ನು ಹೇಗಾದರೂ ಮಾಡಿ ಕರೆತಂದು ಈ ನಾಟಕದಲ್ಲಿ ಪಾತ್ರ ಮಾಡಿಸಬೇಕೆಂಬ ಹಂಬಲ ನನ್ನದು. ವಾದ್ಯಗೋಷ್ಠಿಯಲ್ಲಿ ಸೇರಿದ್ದ 'ಚಿನ್ನ ಕಣ್ಣ' ಕಣ್ಣಿಗೆ ಬಿದ್ದರು. ಅವರ ತಂದೆ ಶ್ರೀ ಬಿ. ಎಸ್. ರಾಜಯ್ಯಂಗಾರ್ಯರು ತಮ್ಮ 'ಜಗದೋದ್ಧಾರನಾ...ಆಡಿಸಿದಳೆಶೋದಾ' ಹಾಡಿನಿಂದ ಬಹು ಪ್ರಸಿದ್ಧರಾಗಿದ್ದರು. ಅವರಿಗೆ ಆಗ ತೊಂಬತ್ತು ವಯಸ್ಸಿನ ಆಚೆ ಈಚೆ ಇದ್ದಿರಬೇಕು ಎಂಬುದು ನೆನಪು. ದಪ್ಪ ಕನ್ನಡಕ ತೆಗೆದುಬಿಟ್ಟರೆ ತೀರಿತು, ಒಂದು ಹೆಜ್ಜೆ ಎತ್ತಿಡುವುದೂ ಸಾಧ್ಯವಿರಲಿಲ್ಲ. ಅಂಥವರು stage lights ನ ಎದುರಿಸಿ ಅಭಿನಯಿಸುವುದಾದರೂ ಹೇಗೆ ? ಹಠ ಹಿಡಿದು ಅವರಿಗೆ ನಾರದರ ವೇಷ ತೊಡಿಸಿ, ಸತತ ಅಭ್ಯಾಸ ಮಾಡಿಸಿ stage ಮೇಲೆ ತಂದೇ ತಂದೆವು. ಅದೊಂದು ವಿಶಿಷ್ಟ ಅನುಭವ.

ನಮ್ಮ ಪುಣ್ಯವೋ ಎಂಬಂತೆ ಆ ನಾಟಕಕ್ಕೆ ಅಗತ್ಯವಿದ್ದ ಆಳೆತ್ತರದ ಪಾಂಡುರಂಗ ವಿಠಲನ ಮೂರ್ತಿ ಎಲ್ಲಿಯೋ ಕಣ್ಣಿಗೆ ಬಿತ್ತು. ಜಗನ್ನಾಟಕ ಸೂತ್ರಧಾರಿ ನಮ್ಮಲ್ಲಿ ಪಾತ್ರಧಾರಿ ! ಕೆಲವು special effectsಗೆ ಜನ ಬೇಕಾಗಿತ್ತು. ಅದೃಷ್ಟವಿದ್ದರೆ ಅರಸುತ್ತ ಇದ್ದ ಬಳ್ಳಿ ಕಾಲಿಗೆ ತೊಡರುವುದಿಲ್ಲವೇ? ಗುಬ್ಬಿವೀರಣ್ಣನವರಲ್ಲಿ ಕೆಲಸ

ಮಾಡಿ ಪಳಗಿದ್ದವರನ್ನು ಕಂಡುಹಿಡಿದೆವು. ವ್ಯಾಸಪೀಠದಿಂದ ದಾಸರಾಯರ ಹೊತ್ತಗೆಗಳನ್ನು ಕುಹಕಿಗಳು ರಾತ್ರಿ ಹೊತ್ತಿನಲ್ಲಿ ಬಂದು ಆಚೆಗೆ ಎಸೆಯುತ್ತಾರೆ. ಅವುಗಳು ಹಾಗೆಯೇ ಮತ್ತೆ ಹಿಂದಿರುಗಿ ವ್ಯಾಸಪೀಠವನ್ನು ಅಲಂಕರಿಸುತ್ತವೆ. ಇದು ಮೊದಲಾದ ಅನೇಕ effect ಗಳನ್ನು ಲೀಲಾಜಾಲವಾಗಿ ನೆರವೇರಿಸಿಕೊಟ್ಟರು.

ಸಂಗೀತ ನಿರ್ದೇಶಕರಾಗಿ ಶ್ರೀ ಆನೂರು ಸೂರ್ಯ ನಾರಾಯಣ್ ಅವರು ಆತ್ಮೀಯತೆಯಿಂದ ಕೆಲಸ ಮಾಡಿದರು. ಇನ್ನು ಯಾರಾದರೂ ಆಗಿದ್ದರೆ ನನ್ನ ಕಾಟಕ್ಕೆ ಹಾರ್ಮೋನಿಯಂ ಬಿಸಾಡಿ ಓಡಿಹೋಗುತ್ತಿದ್ದರು. ಇದೇ ರಾಗ ಆಗಬೇಕು, ಹೀಗೇ ಇರಬೇಕು. ಸಂಗೀತ ವಿದ್ವಾಂಸರು ಅವರು; ಅದರ ಗಂಧವೇ ಇಲ್ಲದ ವೃಷಭಾಸುರ ನಾನು. ನಾನು ಗೋಳು ಹುಯ್ದುಕೊಳ್ಳುವುದು! ಬೇಸರಿಸದೆ ನೂರು ಬಾರಿಯೇ ಆಗಲಿ ಹಾಡುತ್ತಿದ್ದರು. ತಮ್ಮ ಸೊಗಸಾದ ಕಂಠ, ರಾಗ ಭಾವಗಳಿಂದ ಜನಮನ ಗೆದ್ದ ಗುರುರಾಜರು ಮತ್ತೆ ಮತ್ತೆ ಅಭ್ಯಾಸ ಮಾಡುತ್ತಿದ್ದರು! ವಿದ್ಯಾ ದದಾತಿ ವಿನಯಂ !

ಆ ವರ್ಷದ ಕನ್ನಡ ರಾಜ್ಯೋತ್ಸವದಲ್ಲಿ ಬಷೀರ್ ಎಂಬ ನನ್ನ ಗೆಳೆಯ ನಾಟಕಕಾರರು, ಅವರೇ ಬರೆದ 'ನೃಪತುಂಗ' ನಾಟಕಾಭಿನಯಕ್ಕೆ ಏರ್ಪಾಡು ಮಾಡಿದ್ದರು. ಕಾವೇರಿ ಭವನದ ಪಕ್ಕ ದೊಡ್ಡ ಚಪ್ಪರ. ಜನಸಂದಣಿ ಹೇಳತೀರದು. ಸಂಜೆ ಆರಕ್ಕೆ ನಾಟಕ. ಐದು ಗಂಟೆ ಆದರೂ ನೃಪತುಂಗನ ಪಾತ್ರವಹಿಸಬೇಕಿದ್ದ ಚಿತ್ರನಟ ವಿಜಯಕುಮಾರ್ ಸುಳಿವೇ ಇಲ್ಲ ! ಐದೂಕಾಲಿಗೆ ಯಾರೋ ಸುದ್ದಿ ತಂದರು- ಅಂದು ಚಿತ್ರೀಕರಣವಿರುವುದರಿಂದ ಕುಮಾರ್ ಬರಲಾಗುವುದಿಲ್ಲ ಎಂದು. ಬಷೀರ್ ಮೂರ್ಛೆ ಹೋದರು. ಸಣ್ಣ ಪಾತ್ರವಾದರೆ ಕಿತ್ತುಹಾಕಬಹುದು. ಪ್ರಧಾನ ಪಾತ್ರ ? ಯಾರಿಗೂ ದಿಕ್ಕೇ ತೋಚಲಿಲ್ಲ. ತಂಡದಲ್ಲಿದ್ದ ಒಬ್ಬರು ನನ್ನ 'ನಾಟಕಗಳ ಓಡಿಯಾಟ'ದ ಬಗ್ಗೆ ಹತ್ತಿರದಿಂದ ನೋಡಿದ್ದವರು ಬಷೀರ್‌ಗೆ ಹೇಳಿದರು, "ಶ್ರೀಕಂಠಯ್ಯನವರು ಮನಸ್ಸು ಮಾಡಿದರೆ ಆ ಪಾತ್ರ ನಿರ್ವಹಿಸಬಹುದು." ಬಷೀರ್‌ಗೆ ತುಂಬ ಕೋಪ ಬಂದಿತು. "ನಿಮ್ಮ ತಲೆ ! ಪಾತ್ರದ lines ಗೊತ್ತಿಲ್ಲ , ರಿಹರ್ಸಲ್ ನೋಡಿಲ್ಲ , ಏನ್ಮಾಡೋದು ? ಇದು ಇಡ್ಲಿ ಸಾಂಬಾರ್ ಏನ್ರೀ" ಅಂತ ರೇಗಿದರು. ನಾಟಕ ನಿಂತುಹೋದರೆ ಆ ಜನಜಾತ್ರೆಯಲ್ಲಿ ಏನೆಲ್ಲ ಅನಾಹುತ ಆಗಬಹುದೆಂದು ತಿಳಿದಿದ್ದ ನಾನು, ಅವರನ್ನು ಒಪ್ಪಿಸಿ ಜವಾಬ್ದಾರಿಯನ್ನು ಹೊತ್ತೆ.

Makeup ಆಗುವಾಗ ಮೊದಲೆರಡು ದೃಶ್ಯಗಳ ಸಾಲುಗಳನ್ನು ಕಂಠಪಾಠ ಮಾಡಿದೆ. ಹಾಗೇ ನಾಟಕವನ್ನೊಮ್ಮೆ ಪೂರ್ತ ಓದಿದೆ. ಪಾರ್ಥನ ಹಾಗೆ ನನ್ನ ಸುತ್ತ ಮುತ್ತಲಿನದೆಲ್ಲವನ್ನೂ ಮನಸ್ಸಿನಿಂದ ದೂರವಿಟ್ಟೆ. ಕೇವಲ ಪಾತ್ರ, ಮಾತು, ಅಭಿನಯ ಇವುಗಳತ್ತಲೇ ಸಂಪೂರ್ಣವಾಗಿ ಗಮನವಿಟ್ಟೆ. ತೆರೆಯು ಮೇಲೆದ್ದಾಗ ನಾನು ಯಾವುದೋ ಲೋಕದಲ್ಲಿ ಇದ್ದಂತೆ ಭಾಸವಾಗುತ್ತಿತ್ತು. ನನ್ನ ಮೈ ಮನಸ್ಸುಗಳನ್ನೆಲ್ಲ ಕೇಂದ್ರೀಕರಿಸಿ ಅಭಿನಯಿಸಿದೆ. ಭಕ್ತಿಗೆ ಒಲಿಯದ ದೇವರಿಲ್ಲ. ಪ್ರಥಮ ದೃಶ್ಯದಲ್ಲಿಯೇ ಕಿವಿಗಡಚಿಕ್ಕುವ ಚಪ್ಪಾಳೆ ಗಿಟ್ಟಿಸಿದೆ. ಬಷೀರ್ ಪಕ್ಕದ wingsನಲ್ಲಿ ನಿಂತು ಅಳುತ್ತಿದ್ದರು. ನಾಟಕ ಮುಂದುವರೆಯಿತು. ಪ್ರತಿಯೊಂದು ದೃಶ್ಯದಲ್ಲೂ ಮುಂಭಾವಿಯಾಗಿ ಕಂಠಪಾಠ ಮಾಡುತ್ತಿದ್ದೆ. ಒಳ್ಳೆಯ prompt ಮಾಡುವವರೂ ಸಿಕ್ಕಿದ್ದರು. ಹಾಗಾಗಿ ಎಳ್ಳನಿತೂ ತೊಂದರೆ ಆಗದೆ ನಾಟಕ ಮುಗಿಯಿತು. ಬಣ್ಣ ಅಳಿಸುತ್ತಿದ್ದಾಗ ಹಿರಿಯರೊಬ್ಬರು, "where is our Nripatunga ?" ಅಂತ ಹುಡುಕಿಕೊಂಡು ಬಂದು "Beautifully done, young man, keep it up" ಅಂತ ಶಹಭಾಸ್ಗಿರಿ ಕೊಟ್ಟುಹೋದರು. ಅಭಿನಂದನೆಗಳ ಸುರಿಮಳೆಯೇ ಆಯಿತು.

ಮುಂದೊಮ್ಮೆ ಇದೇ ನಾಟಕ ಆಡಿದಾಗ ರಾಜಗುರುವಿನ ಬಹು ಸಣ್ಣದಾದ ಪಾತ್ರ ಮಾಡಿದೆ. ಗುಬ್ಬಿ ವೀರಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಭಾಷಣದುದ್ದಕ್ಕೂ ಆ ಅತಿಚಿಕ್ಕ ಪಾತ್ರವನ್ನು ನಿರ್ವಹಿಸಿದ ಬಗೆಯ ಕುರಿತೇ ಮಾತನಾಡಿದ್ದಲ್ಲದೆ, ನನ್ನನ್ನು ಕಂಡು ಬಾಯಿ ತುಂಬ ಹೊಗಳಿ ನನ್ನ ವಿವರಗಳನ್ನೆಲ್ಲಾ ಕೇಳಿ ತಿಳಿದುಕೊಂಡರು.

"ಸಂಸಾರಿಯಾಗಿದ್ದೀರಿ, ಒಳ್ಳೆಯ ಕೆಲಸವೂ ಇದೆ. ಇಲ್ಲದಿದ್ದರೆ ನಾನು ನಿಮ್ಮನ್ನು ಬಿಡುತ್ತಿರಲಿಲ್ಲ" ಎಂದರು.

ಕಂಠೀರಾಯರು ಹಿರಿಯ ವೃತ್ತಿಪರ ರಂಗಕಲಾವಿದರು. ಮಕ್ಮಲ್‌ಟೋಪಿ ನಾಟಕದ ನಾಣಿಯ ಪಾತ್ರ ವಹಿಸಿ ಹೆಸರು ಗಳಿಸಿದ್ದವರು. ಕೊನೆಕೊನೆಯಲ್ಲಿ ಅನಾರೋಗ್ಯದಿಂದ ಬಳಲಿ ಪಾತ್ರಗಳನ್ನು ನಿರ್ವಹಿಸಿ ಸಂಪಾದನೆ ಮಾಡಲು ಸಾಧ್ಯವಾಗದೆ ಬಳಲುತ್ತಿದ್ದರು. ಸಂಸಾರ ಸಾಗಿಸುವುದೇ ಬೆಟ್ಟ ಹತ್ತಿದಂತೆ. ಇನ್ನು ಔಷಧೋಪಚಾರಕ್ಕೆ ಅನುಕೂಲವೆಲ್ಲಿ? ಇಡೀ ಬಾಳನ್ನೇ ರಂಗಭೂಮಿಯಲ್ಲಿ ತೇದರೂ ಕಡೆಗಾಲದಲ್ಲಿ ಕಿತ್ತುತಿನ್ನುವ ಬಡತನ. ಕೈ ಸಾಗುವಾಗ ಮುಂದಿನ ಜೀವನದ ಬಗ್ಗೆ ಯೋಚಿಸಿ ಏನಾದರೊಂದು ಏರ್ಪಾಡು ಮಾಡಿಕೊಳ್ಳುವ ಬುದ್ಧಿ ಇಲ್ಲದೆಯೋ ಅಥವಾ ಭವಿಷ್ಯತ್ತಿನ ಚಿಂತನೆಯಿದ್ದೂ ಅನುಕೂಲ್ಯವಿಲ್ಲದೇ ಇಂಥ ಸ್ಥಿತಿಯೋ. ಒಟ್ಟಾರೆ ಬಹುಮಂದಿ ಕಲಾವಿದರು ಹೀಗೆ ಬಳಲುವುದನ್ನು ಕಂಡಿದ್ದೇನೆ.

ಕಂಠೀರಾಯರಿಗೆ ಅಗತ್ಯವಾದ ವೈದ್ಯಕೀಯ ಶುಶ್ರೂಷೆ ಒದಗಿಸಲು ಏನಾದರೂ ಕೈಲಾದ್ದು ಮಾಡುವ ಹಂಬಲದಿಂದ ಸ್ನೇಹಿತರೊಡನೆ ಚರ್ಚಿಸಿ, ಸಹಾಯಾರ್ಥ ನಾಟಕ stage ಮಾಡುವುದು ಆದೀತೇ ಎಂದು ಪರಿಶೀಲಿಸಿ, ಎಲ್ಲರ ಸಹಕಾರದಿಂದ ಆದೀತೆಂಬ ನಿರ್ಧಾರಕ್ಕೆ ಬಂದೆ. ಎಲ್ಲ ಏರ್ಪಾಡೂ ಆಯಿತು. ಶ್ರೀರಾಮ ಕಲಾವಿದರು ಕಂಕಣ ಕಟ್ಟಿ ನಿಂತರು.

ಉತ್ಸಾಹದಿಂದ ಟಿಕೆಟ್‌ಗಳನ್ನು ಮುದ್ರಿಸಿ, influential ಎಂದೆನ್ನಿಸುವ ಸುಮಾರಷ್ಟು ಜನರನ್ನು ಸಂಪರ್ಕಿಸಿ ticket books ಹಂಚಿ ಸಹಕಾರ ಕೋರಿದೆವು. ಈ ರೀತಿ ಹಂಚಿಕೆಯಾದ ticketಗಳನ್ನು ಲೆಕ್ಕ ಹಾಕಿ ನೋಡಿದಾಗ, ನಮ್ಮ ಶ್ರಮವು ಫಲ ಕಂಡು ಕೈತುಂಬ ಸಹಾಯಧನ ನೀಡಬಹುದೆಂಬ ನಿರೀಕ್ಷೆಯಿಂದ ನಮ್ಮಲ್ಲಿ ಸಮಾಧಾನ ಮೂಡಿತು.

ನಾಟಕದ ದಿನ Theatre ತುಂಬಿ ತುಳುಕುತ್ತಿತ್ತು. ಆಸನಗಳೆಲ್ಲ ಭರ್ತಿಯಾಗಿ ಎಷ್ಟೋ ಮಂದಿ ನಿಲ್ಲಬೇಕಾಗಿ ಬಂತು. ಉದ್ದೇಶವನ್ನು ತಿಳಿದಿದ್ದರಿಂದ ಅವರಲ್ಲಿ ಯಾರೂ ಅಭ್ಯಂತರವೆತ್ತದೆ ತಮ್ಮ ಸಂಸ್ಕೃತಿಯನ್ನು ಮೆರೆದರು.

ಎಲ್ಲ ಆದನಂತರ ಹಂಚಿಕೆಯಾಗಿದ್ದ ticket books ಅನ್ನು collect ಮಾಡಿ ಲೆಕ್ಕ ತೆಗೆದುಕೊಳ್ಳುವ ಕೆಲಸ ಆರಂಭವಾಯಿತು. ಕೆಲವರು counterfoils ಹಿಂದಿರುಗಿಸಿ cash ಬಂದನಂತರ ಹಣ ಪಾವತಿ ಮಾಡುವುದಾಗಿ ತಿಳಿಸಿದರೆ, ಇನ್ನು ಕೆಲವರು counter foils ಕೂಡ ಕೊಡಲಿಲ್ಲ. ಖರ್ಚು ಕಳೆದು ಕೈಯಲ್ಲಿ ಉಳಿದ ಹಣ ಅತ್ಯಲ್ಪ. ಹಾಗೂ ಹೀಗೂ ಮಾಡಿ ವಂತಿಗೆ ಎತ್ತಿ ಅಷ್ಟಿಷ್ಟು ಸೇರಿಸಿ ಕುಬ್ಜರಾಗಿ ಕಂಠೀರಾಯರ ಮುಂದೆ ನಿಂತು ಕೂಡಿದಷ್ಟನ್ನು ನೀಡಿದೆವು. "ಒಂದೇ ರೂಪಾಯಿಯೇ ಆಗಲಿ, ಪ್ರೇಮದಿಂದ ನೀಡಿದಾಗ ಅಪಾರವಾಗುತ್ತದೆ. ನಮ್ಮ ಸ್ಥಿತಿಗೆ ಮರುಗಿ ಸಹಾಯ ಮಾಡುವ ಜನ ಇದ್ದಾರಲ್ಲ ಎಂಬುದೇ ದೊಡ್ಡ ವಿಷಯ" ಎಂದೆಂದು ತಮ್ಮ ಔನ್ನತ್ಯ ಮೆರೆದರು, ರಾಯರು.

ಕನ್ನಡ ರಾಜ್ಯೋತ್ಸವಕ್ಕೆಂದೇ ವಿಶೇಷವಾಗಿ ರಚಿಸಲ್ಪಟ್ಟ ನಾಟಕ **ಆತ್ಮಾರ್ಪಣೆ.** ಕೃಷ್ಣರಾಜನಗರದ ಶ್ರೀ ಯೋಗಾನಂದೇಶ್ವರ ಮಠದಲ್ಲಿ ಆಗಿನ ಕಾಲಕ್ಕೆ ಪೀಠಾಧಿಪತಿಗಳಾಗಿದ್ದವರು, ಕನ್ನಡ ದೇಶ-ಭಾಷೆಗಳಿಗಾಗಿ ಬಹಳ ದುಡಿದವರು, ಶ್ರೀ ಅ.ನ. ಕೃಷ್ಣರಾಯರ ಜೊತೆಯಲ್ಲಿ ಬಹಳಷ್ಟು ಕೆಲಸ ಮಾಡಿದವರು, ಕೊನೆಗೆ ಅನಾರೋಗ್ಯದಿಂದ ಬಳಲಿ ಸಣ್ಣ ವಯಸ್ಸಿನಲ್ಲಿಯೇ ಬ್ರಹ್ಮೀಭೂತರಾದವರು- ಅವರ ಸ್ಮರಣಾರ್ಥವಾಗಿ ಬರೆದದ್ದು. 'ಕನ್ನಡ ಸಾಹಿತ್ಯ ಸಭಾಂಗಣ'ದಲ್ಲಿ ಅಭಿನಯಿಸಲ್ಪಟ್ಟಾಗ ನೆರೆದಿದ್ದ ಜನ ನೋಡಿ ಆನಂದಿಸಿದರು. ಕೆಲವು ಕಾರ್ಯಕರ್ತರು ನನ್ನನ್ನು ಭೇಟಿ ಮಾಡಿ ಅಂತಹ ನಾಟಕಗಳನ್ನು ಹೆಚ್ಚು ಹೆಚ್ಚಾಗಿ ಬರೆಯುವಂತೆ ಪ್ರೋತ್ಸಾಹಿಸಿದರು.

ಸುಮಾರು ಎಪ್ಪತ್ತರ ದಶಕವೆಂದು ತೋರುತ್ತದೆ. ಬಾಡಿಗೆದಾರರನ್ನು ಮನೆ ಬಿಡಿಸುವುದು ಕಠಿಣ ಕಾರ್ಯವಾಗಿತ್ತು. ಹಾಗೆಯೇ ಬಾಡಿಗೆಗೆ ಮನೆ ದೊರಕುವುದೂ ಕಷ್ಟವಾಗಿತ್ತು. ಈ subject ಇಟ್ಟುಕೊಂಡು **ಮನೆ ಬಿಡಿ** ನಾಟಕ ರಚಿಸಿದೆ. ಇದನ್ನು ಅಭಿನಯಿಸುವಾಗ ನಾವೀನ್ಯ ಇರಲೆಂದು ಅಕ್ಕಪಕ್ಕದ ಮನೆಯವರು ಏಕಕಾಲದಲ್ಲಿ ಪ್ರೇಕ್ಷಕರಿಗೆ ಕಾಣಿಸುವಂತೆ stageಅನ್ನು ಎರಡು ಭಾಗವಾಗಿ ವಿಭಜಿಸಿ Land lord ನ ಮನೆ ಮತ್ತು Tenantನ ಮನೆಯ ಪ್ರಸಂಗಗಳನ್ನು present ಮಾಡಿದೆ.

Rural health development programme ಅನ್ನು ಗಮನಿಸಿ **ಚುಚ್ಚೊ-ಕಚ್ಚೊ** ನಾಟಕ ಆಯಿತು. ಹಳ್ಳಿಗಳಲ್ಲಿನ ಆಸ್ಪತ್ರೆಗಳ ಸ್ಥಿತಿ, ವೈದ್ಯರ ಸಹಕಾರ, ಹಳ್ಳಿಯವರ responses ಈ ಎಲ್ಲವನ್ನೂ ಪ್ರತಿಬಿಂಬಿಸುವ ನಾಟಕ. ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ನನ್ನನ್ನು ಕಂಡು ಆ ನಾಟಕವನ್ನು ತಮ್ಮ ಇಲಾಖೆಗೆ ಕೊಟ್ಟರೆ ಹಲವಾರು ಹಳ್ಳಿಗಳಲ್ಲಿ ಪ್ರದರ್ಶನಕ್ಕೆ ಏರ್ಪಾಡು ಮಾಡಬಹುದೆಂದು ಹೇಳಿ ಒಯ್ದರು. ಮುಂದೇನಾಯಿತೋ ತಿಳಿಯದು.

ಕೂತರೆ ನಿಂತರೆ ಶಕುನಗಳನ್ನು ನೋಡುತ್ತ superstition ನೆರಳಲ್ಲಿ tension build up ಮಾಡಿಕೊಂಡು ಬವಣೆ ಪಡುವುದು ಕೆಲವರ ಜಾಯಮಾನ. ಇದನ್ನು ಸೂಕ್ಷ್ಮವಾಗಿ ಎತ್ತಿ ತೋರಿಸಲೆಂದು ಸಿದ್ಧವಾದದ್ದು **ಅನುಮಾನ-ಆಶ್ಚರ್ಯ.**

ವಿಜಯ ಮಾಲೆ ನಾಟಕದ ಅಭ್ಯಾಸ ನಡೆದಿತ್ತು. Sword fight ದೃಶ್ಯದಲ್ಲಿ ನೈಜತೆಯನ್ನು ಮೂಡಿಸಲು ಧನಪಾಲನ್ ಅವರ ಅಂಗಡಿಯಿಂದ fencing swords ಅನ್ನೇ ತರಿಸಿದ್ದೆ. ನಾನು, ಮತ್ತು ಇನ್ನೊಬ್ಬ ಪಾತ್ರಧಾರಿ ಶ್ರೀ ರಂಗನಾಥ್ (ಆಫೀಸಿನಲ್ಲಿ ಸಹೋದ್ಯೋಗಿ) ಅಭ್ಯಾಸ ಮಾಡಬೇಕಾಗಿದ್ದು ಹೊಡೆದಾಟ ಸಾಕಷ್ಟು ಗಂಭೀರ ಮಟ್ಟದಲ್ಲೇ ನಡೆದಿತ್ತು. ಒಮ್ಮೆ ರಂಗನಾಥ್ ಕತ್ತಿಯನ್ನು ಬಲವಾಗಿ ಬೀಸಿದಾಗ ನನ್ನ ಕತ್ತಿಯನ್ನು ಅಡ್ಡ ಹಿಡಿದೆ. ಅದೋ ಬಳಕುವ ಆಯುಧ. ರಂಗನಾಥ್ ಬೀಸಿದ್ದ ರಭಸಕ್ಕೆ ಬಾಗಿ ಅದರ ಕೊನೆ ನನ್ನ ಕಣ್ಣಿನ ತುದಿಯನ್ನೇ ಕತ್ತರಿಸಿತು, ರಕ್ತದ ಧಾರೆಯೇ ಆರಂಭವಾಯಿತು. ಎಲ್ಲರೂ ಬೆಚ್ಚಿ ಕಲ್ಲಿನಂತಾದರು. ನನ್ನ ಮಿತ್ರರು ಕಣ್ಣು ಹೋಯಿತೆಂದೇ ತಿಳಿದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ನನಗೂ ಕಣ್ಣು ಮಂಜಾದಂತಾಗಿ, ಜರಾಸಂಧನಿಂದ ಶುಕ್ರಾಚಾರ್ಯ

ರಿಗೆ promotion ದೊರಕಿತೆಂದೇ ತಿಳಿದು ಏನು ಧನ್ಯಳೋ ನನ್ನ ಪತ್ನಿ ಎಂದು ಸಂಕಟಪಟ್ಟೆ. ಬೆಟ್ಟದಪುರದ ಶ್ರೀ ಕೃಷ್ಣಾವಧಾನಿಗಳಿಗೆ ಬಳುವಳಿ ಕೊಟ್ಟ ಚಿಣ್ಣಿಕೋಲಿನ ನೆನಪೂ ಆಯಿತು. ಹತ್ತಿರದಲ್ಲಿದ್ದ ಕೃಷ್ಣಮೂರ್ತಿ ತಮ್ಮ hand kerchief ನಿಂದ ಗಾಯವನ್ನು ಒತ್ತಿ ಹಿಡಿದು ರಕ್ತಸ್ರಾವ ನಿಲ್ಲಿಸಿದರು. ನಮ್ಮ ತಂಡ ನನ್ನನ್ನು ಕರೆದುಕೊಂಡು ಡಾಕ್ಟರ್ ಬಳಿಗೆ ಧಾವಿಸಿತು. Stretcher ಕೇಳುವ ಹಂತದಲ್ಲಿದ್ದ 'gifter of ಗಾಯ' ರಂಗನಾಥ್ ಭುಗ್, ಭುಸ್ ಎಂದು ೧೯೩೩ರ ರೈಲ್ವೆ ಎಂಜಿನ್ ಹಾಗೆ ಬಿಸಿಯುಸಿರನೆರಚುತ್ತ ಅಷ್ಟಾವಕ್ರರ ನಡಿಗೆಯಲ್ಲಿ ಹಿಂಬಾಲಿಸಿದರು.

ಉಪಮನ್ಯು ಅಶ್ವಿನಿ ದೇವತೆಗಳಿಗೆ ಮೊರೆಯಿಟ್ಟಂತೆ ಮೊರೆಯಿಡುತ್ತ ವೈದ್ಯರ ಮುಂದೆ ಕುಕ್ಕರಿಸಿದೆ. ಹತ್ತು ಕಡೆ ಒತ್ತುತ್ತ ತಮ್ಮ ಕಣ್ಣಾಲಿಗಳನ್ನು ತಿರುಗಿಸುತ್ತ 'I see, I see' ಎನ್ನುತ್ತ ಆ ಮಹಾಶಯರು ಪರೀಕ್ಷಿಸುತ್ತಿದ್ದಂತೆ "can I see" ಎಂದು ಒಳದನಿಯಲ್ಲೇ ಕಿರುಚುತ್ತಿದ್ದೆ. ಅನಂತರ ಬೆರಳುಗಳನ್ನು ಎತ್ತಿ ಹಿಡಿಯುತ್ತ ನನ್ನ numerical prowessನ depthಅನ್ನು ನೋಡಿದ್ದಾಯಿತು. ಕೊನೆಗೊಮ್ಮೆ ಪುಣ್ಯಾತ್ಮ, "Lucky ! incredibly lucky, dashedly fortunate" ಎಂದಂದು ಇನ್ನು ಸ್ವಲ್ಪವೇ ಸ್ವಲ್ಪ ಎಡಗಡೆಗೆ ಪೆಟ್ಟು ಬಿದ್ದಿದ್ದರೆ "ಕೆಟ್ಟದೊಂದ ನೋಡದಂತೆ" ವರಪ್ರದಾನವಾಗುತ್ತಿತ್ತು ಎಂದರು.

ಮನುಷ್ಯನ ಬುದ್ಧಿ ನೋಡಿ. ಮೂರು ಮೂರು ಲೀಟರ್ ಬೆವರು ಸುರಿಸಿ, ಗಂಟಲಲ್ಲಿ safety pin ಸಿಕ್ಕಿಹಾಕಿಕೊಂಡ ಹಾಗೆ ಒದ್ದಾಡಿ, Parkinson ನ ಅಜ್ಜನ ಹಾಗೆ ನಡುಗ್ತಾ ನಿಂತ ನಾವು ಮರುದಿನ ಯಥಾಪ್ರಕಾರ rehearsal ಮಾಡಿದೆವು - ಸ್ವಲ್ಪ ಹುಷಾರಾಗಿ - with a difference. ಅಂದು ರಾಮರಾಯರಿಂದ ಸಕಲ ದೇವತಾ ಪ್ರೀತ್ಯರ್ಥಂ ಒಂದು treat ಎಲ್ಲರಿಗೆ.

ನನ್ನುಣ್ಯ, ನನ್ನವಳಿಗೆ ಒಸಗೆ ತಲಪಿರಲಿಲ್ಲ.

ಆಗಿನ್ನೂ ದೂರದರ್ಶನಕೇಂದ್ರ ಬೆಂಗಳೂರಿಗೆ ಬಂದಿರಲಿಲ್ಲ. MICO ಕಲಾವಿದರೆಂದು ಕಾಣುತ್ತದೆ. ನೆನಪಿಲ್ಲ. ಅವರು ಮದರಾಸಿನ ಕೇಂದ್ರದ ಮೂಲಕ ನನ್ನ ನಾಟಕ **ದಾಕ್ಷಿಣ್ಯ**ವನ್ನು ಕಿರುಪರದೆಯ ಮೇಲೆ ತಂದರು. ಹಲವಾರು ವೀಕ್ಷಕರು ಮೆಚ್ಚಿ ಪತ್ರ ಬರೆದರು.

ಈಚೀಚೆಗೆ ನಮ್ಮವರೇ ಆದ ಶ್ರೀ ಎಂ.ಡಿ. ಕೌಶಿಕ್ ಅವರು ನನ್ನ ಹಲವಾರು ರಚನೆಗಳನ್ನು ಸುಮಾರು ಹದಿನೇಳು ಹದಿನೆಂಟು Episodeಗಳಲ್ಲಿ ಬೆಂಗಳೂರು ದೂರದರ್ಶನದ ಮೂಲಕ **ಹೀಗೂ ಉಂಟೆ** ಎಂಬ ಶೀರ್ಷಿಕೆಯಡಿಯಲ್ಲಿ ಪ್ರದರ್ಶಿಸಿದರು.

Singaporeಗೆ ತೆರಳಿದ ಕನ್ನಡನಾಡಿನ ಸಂಸ್ಥೆಯೊಂದು (ಹೆಸರು ನೆನಪಿಲ್ಲ) 'ದಾಕ್ಷಿಣ್ಯ' ನಾಟಕದ ಹಲವಾರು ಪ್ರದರ್ಶನಗಳನ್ನು ಅಲ್ಲಿ ನೀಡಿತು.

ಲೆಕ್ಕವಿಲ್ಲದಷ್ಟು ಸ್ಪರ್ಧೆಗಳಲ್ಲಿ **ದಾಕ್ಷಿಣ್ಯ** ನಾಟಕ ಅಭಿನಯಿಸಲ್ಪಟ್ಟಿದೆ. ದ್ವಿತೀಯ ಮುದ್ರಣಕ್ಕೆ ಒತ್ತಡ ಬಂದು ಬಹಳ ಕಾಲವಾಯಿತಾದರೂ ನನಗೆ ಯಾಕೋ ಕಾಣೆ ಆಸಕ್ತಿ ಬೆಳೆದಿಲ್ಲ. (ಹೀಗೆಯೇ, **ಸಮಾಜ ಹುಂಜ** ನಾಟಕವು ಸ್ವರ್ಣ ಪದಕಗಳೂ ಸೇರಿ ಹಲವಾರು ಪಾರಿತೋಷಿಕಗಳನ್ನು ಪಡೆದಿದೆ. ಅದರ ಪ್ರತಿಗಳೂ ಮುಗಿದಿವೆ. ಆದರೆ ಆಗ್ಗೆ ಈಗ್ಗೆ ನಮ್ಮ ಜೀವನ ಕ್ರಮದಲ್ಲಿ , ಉಡುಗೆ ತೊಡುಗೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಪ್ರಸ್ತುತಕ್ಕೆ relevant ಆಗಿ ಕಾಣಿಸದು ಎಂಬ ಕಾರಣದಿಂದ ಇದನ್ನು ಮುದ್ರಿಸಲು ಒಡಂಬಡಲಾಗಲಿಲ್ಲ.)

ಬಹುತೇಕ ನಾಟಕಗಳು ಏಕಪ್ರತಿಯವುಗಳಾಗಿದ್ದು ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ , ವ್ಯಕ್ತಿಗಳಲ್ಲಿ ಉಳಿದುಹೋಗಿ ಅವುಗಳ ಜಾಡು ಸಿಕ್ಕುವ ಹಾಗಿಲ್ಲ. ಕೆಲವನ್ನು ನನ್ನಾಕೆ ಪ್ರತಿ ಮಾಡಿ ಇಟ್ಟಿದ್ದಳು. ಅವುಗಳೂ ಈಗ ಕಣ್ಣಿಗೆ ಬೀಳುತ್ತಿಲ್ಲ. ನನ್ನ ಎಲ್ಲ ನಾಟಕಗಳಿಗೂ ಗೀತರಚನೆ ನಾನೇ ಮಾಡುತ್ತಿದ್ದೆ. ಆ ಹಾಡುಗಳೆಲ್ಲದರ ಸಂಕಲನವನ್ನು ನನ್ನ ಮಿತ್ರರೊಬ್ಬರು ಜೋಪಾನ ಮಾಡಿದ್ದಾರೆ. ನನ್ನ ಕೈಯಲ್ಲಿ ಯಾವುದೂ ಉಳಿಯಲಾರದು ಎಂಬುದಕ್ಕಾಗಿ ಈ ಕ್ರಮ. ಈಗ ಆ ಮಿತ್ರರು ಎಲ್ಲಿದ್ದಾರೆ ಎಂಬುದನ್ನು ಕಂಡುಹಿಡಿಯುವ ಪ್ರಯತ್ನ ಸಾಗಿದೆ !

ಶ್ರೀ ಬಾಲಕೃಷ್ಣ ಎಂಬ ಸಂಗೀತ ನಿರ್ದೇಶಕರು ತಮ್ಮ ಆರ್ಕೆಸ್ಟ್ರಾ ಕಾರ್ಯಕ್ರಮಗಳಿಗಾಗಿ ಕೆಲವೊಂದು ಗೀತೆಗಳನ್ನು ಬರೆಸಿಕೊಂಡರು. ಅವರನ್ನೂ ಭೇಟಿ ಮಾಡಿ ಬಹುಕಾಲವಾಯಿತು.

ಅನುಭವಾಮೃತ

ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ನಾರಾಯಣ್, ಶ್ರೀ ಮಾಧು ಮುಂತಾದವರು ಒಂದು ವಾದ್ಯವೃಂದ ಕಟ್ಟಿದ್ದರು. ಹೆಸರು ನೆನಪಿಲ್ಲ. ನಮ್ಮ ಎಲ್ಲ ನಾಟಕಗಳಿಗೂ ಅವರದೇ ಸಹಕಾರ. ರಾತ್ರಿ ಮೂರಾಗಲಿ ಬೇಸರ ಪಡದೆ ನಾನು ಒಪ್ಪುವ ತನಕ ಇದ್ದು ರಾಗ ಸಂಯೋಜನೆ ಮಾಡಿಯೇ ಮುಗಿಸುತ್ತಿದ್ದರು.

ಬೃಹತ್ ಆಲದಮರ ನೋಡಲು ಮದ್ರಾಸಿನ Adyarಗೋ ಬೆಂಗಳೂರು ಸಮೀಪದ ರಾಮೋಹಳ್ಳಿಗೋ ಹೋಗಬೇಕಾಗಿಲ್ಲ. ಬೆಂಗಳೂರಿನ ಪ್ರಭಾತ್ ಶಿಶುವಿಹಾರವನ್ನು ಹೊಕ್ಕರೆ ಸಾಕು. ಒಟ್ಟು ಕುಟುಂಬದ ಹಿರಿಮೆ, ಸೌಖ್ಯ ಏನೆಲ್ಲ ಇಲ್ಲಿ ಕಾಣುತ್ತೇವೆ.

ಶ್ರೀ ಕರಿಗಿರಿಯಾಚಾರ್ಯರು, ಶ್ರೀ ಗೋಪೀನಾಥದಾಸರು, ಶ್ರೀ ಜಯಸಿಂಹದಾಸರು, ಶ್ರೀ ದ್ವಾರಕಿ ಈ ಸಹೋದರರಲ್ಲಿ ರಾಮ ಲಕ್ಷ್ಮಣ ಭರತ ಶತ್ರುಘ್ನರ ಛಾಯೆಯನ್ನು ಕಾಣುತ್ತೇವೆ. ವಾತ್ಸಲ್ಯಪೂರಿತ ಅತಿಥಿ ಅಭ್ಯಾಗತರ ಸತ್ಕಾರವನ್ನು ಸವಿಯಬೇಕಾದರೆ ಇಲ್ಲಿಯೇ. ಒಟ್ಟು ಕುಟುಂಬದಲ್ಲಿ ಸುಮಾರು ಅರುವತ್ತಕ್ಕೂ ಮೀರಿ ಸದಸ್ಯರಿರಬಹುದು. ಒಬ್ಬೊಬ್ಬರಲ್ಲಿಯೂ ಶಿಸ್ತು , ಸಂಯಮ, ಪ್ರೇಮ, ಪರಸ್ಪರ ಗೌರವಾದರಗಳು ಎದ್ದು ಕಾಣುತ್ತವೆ. ಪ್ರತಿಯೊಬ್ಬರೂ ಶಕ್ತಿ ಮೀರಿ ದುಡಿಯುವವರು. ಸಂಸಾರದ ಒಳಿತಿಗಾಗಿ ಎಂತಹ ತ್ಯಾಗಕ್ಕೂ ಸಿದ್ಧರು. ಗೋಪಣ್ಣ (ಗೋಪೀನಾಥದಾಸರು) ಹರಿದಾಸ ಕೈಂಕರ್ಯವನ್ನು ಹಿಡಿದರಾದರೂ ಅವರದು ರಂಗಕಲೆಯಲ್ಲಿ ಅಪ್ರತಿಮ ಪ್ರತಿಭೆ, ಸಾಮರ್ಥ್ಯ. ಮುಟ್ಟಿದ್ದೆಲ್ಲ ಚಿನ್ನ. ಎಂತಹ ಸಣ್ಣ ಪುಟ್ಟ ಕಲಾವಿದರೇ ಆಗಲಿ ಒಮ್ಮೆ ಅವರಲ್ಲಿ ಕಲಿತರೆ ಸಾಕು, outstanding ಆಗುತ್ತಾರೆ.

ಅವರ ಸಿಂಡರೆಲಾ ಇತ್ಯಾದಿ productions, international levelನಲ್ಲಿದ್ದು ಅನ್ಯ ದೇಶದವರು ಬಂದು ಇವರಲ್ಲಿ ಕಲಿತು ಹೋಗಬೇಕು. ಆ ಮಟ್ಟದಲ್ಲಿವೆ. ಹೀಗಿರಬೇಕು ನಾಟಕ ಎಂದು ಅವರ ಮನಸ್ಸಿನಲ್ಲಿ ಬಂದರೆ ತೀರಿತು. ವೆಚ್ಚ, ಕಷ್ಟ ಯಾವುದೂ ಅಡ್ಡಿ ಬರುವ ಹಾಗಿಲ್ಲ.

ನಾಟಕವೊಂದರಲ್ಲಿ ಪಾತ್ರ ವಹಿಸುವ ಸಲುವಾಗಿ ಅಲ್ಲಿಗೆ ಕಾಲಿಟ್ಟ ನಾನು ಸಹಜವಾಗಿ ಅವರ ಕುಟುಂಬದ ಸದಸ್ಯನೇ ಆಗಿಬಿಟ್ಟೆ. ಗುರುರಾಜುಲುನಾಯ್ಡು , ಗಂಗಾಧರ್ ಮುಂತಾದ ಚಿತ್ರನಟರೆಲ್ಲ ಇಲ್ಲಿ ಪಳಗಿದವರೇ.

ಪ್ರದರ್ಶನದ ಸಲುವಾಗಿ ಬೇರೆ ಊರುಗಳಿಗೆ ಹೋಗಬೇಕಾಗಿ ಬಂದಾಗ ಗೋಪಣ್ಣ ತಾಯಿಯಂತೆ ಸ್ವತಃ ತಾವೇ ನಿಂತು ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಒಮ್ಮೆ ದಪ್ಪ ಮೆಣಸಿನಕಾಯಿ ಉಪ್ಪಿಟ್ಟು ಮಾಡಿದ್ದಾಗ, ನನಗದು ಇಷ್ಟ ಎಂದು ತಿಳಿದು ನನ್ನ ಮುಂದೆ ಕೂತು ಹೋಳುಗಳನ್ನು ಆರಿಸಿ ಆರಿಸಿ ಬಡಿಸುತ್ತಿದ್ದುದನ್ನು ನಾನೆಂದಿಗೂ ಮರೆಯಲಾರೆ. ನನ್ನ ಕೈಯಲ್ಲಿ ರಾಮನ ಪಾತ್ರ ಮಾಡಿಸಬೇಕೆಂಬ ಹಂಬಲ ಅವರಲ್ಲಿ ಬಹಳವಾಗಿತ್ತು. Makeup ನಾರಾಯಣರಾಯರು “ಶ್ರೀಕಂಠಯ್ಯನವರು ಆ ಪಾತ್ರಕ್ಕೆ ಸ್ವಲ್ಪ ಸಣಕಲಾಗಿ ಕಾಣುತ್ತಾರೆ” ಎಂದರೆ, “ನಿಮಗೆ ಗೊತ್ತಿಲ್ಲ, ಮೇಕಪ್ ಮಾಡಿ ನೋಡಿ” ಎನ್ನುತ್ತಿದ್ದರು. ಅಷ್ಟರಲ್ಲಿ ನನಗೆ ವರ್ಗವಾಗಿ ಅದು ಕಾರ್ಯಗತವಾಗಲಿಲ್ಲ.

ಒಂದು ಸಾರಿ ಬೃಹನ್ನಳೆಯ ಪಾತ್ರ ಮಾಡಬೇಕಾಗಿದ್ದ ಗಂಗಾಧರ್ ತಮ್ಮ ಚಿತ್ರದ shooting ಕಾರಣ ಬರುವುದು ಅನುಮಾನವಾಗಿತ್ತು. ಗೋಪಣ್ಣ ನನ್ನನ್ನು ಕರೆದು ಆ ಪಾತ್ರಕ್ಕೆ ಸಿದ್ಧವಾಗುವಂತೆ ಸೂಚಿಸಿ ಹಾಡುಗಳ ಅಭ್ಯಾಸ ಮಾಡಿಸಲು ನಿಂತರು. ನನ್ನ ಜನ್ಮದಲ್ಲಿ ನಾನು Bathroom ನಲ್ಲಿ ಸಹ ಹಾಡಿದ್ದಿಲ್ಲ (ಸಾಹಿತ್ಯ ರಚಿಸುತ್ತಿದ್ದೆನೇ ವಿನಃ ಹಾಡುಗಾರಿಕೆ ಬಂದಿರಲಿಲ್ಲ). ಕೂಗಿಸಿದ್ದೂ, ಕೂಗಿಸಿದ್ದೆ. ಸ್ವಲ್ಪವೂ ಬೇಸರಿಸದೆ ಗಂಟೆಗಟ್ಟಲೆ ಕೂತು, ಬಿಡದೆ ನನ್ನ ಕೈಯಲ್ಲಿ ಹಾಡುಗಳನ್ನು ಶುದ್ಧವಾಗಿ ಹಾಡಿಸಿಯೇ ಹಾಡಿಸಿದರು. ಬೇರೆ ಯಾರಾದರೂ ಆಗಿದ್ದರೆ ‘ಎಮ್ಮೆಯಾದರೂ ಹಾಡೀತು. ಈ ಪ್ರಾಣಿಗದು ಸಾಧ್ಯವಿಲ್ಲ’ ಎಂದು ಕೈ ಬಿಡುತ್ತಿದ್ದರು. ಗೋಪಣ್ಣ ಹಾಗಲ್ಲ.

ಒಮ್ಮೆ ಉಡುಪಿಯಲ್ಲಿ ಪ್ರದರ್ಶನ ಇಟ್ಟುಕೊಂಡಾಗ ನಾನು ದ್ರೋಣ, makeup ನಾಣಿ ಅಶ್ವತ್ಥಾಮ. Dialogues ನಾಣಿಯನ್ನು ಪ್ರವೇಶ ಮಾಡಲೇ ಇಲ್ಲ. Stage ಮೇಲೆ ಅವರು ಬಾಯಿ ತೆರೆಯಲೇ ಇಲ್ಲ. ಅದೃಷ್ಟವಶಾತ್ ಆ ಸಾಲುಗಳೆಲ್ಲದರ ಪರಿಚಯ ನನಗಾಗಿತ್ತು. ಹಾಗಾಗಿ ಅವರ ಮಾತುಗಳನ್ನು ನನ್ನದಕ್ಕೆ ಹೊಸೆದು ಹಾಗೂ ಹೀಗೂ ನಮ್ಮ ತಾಪತ್ರಯ ಬೇರೆಯವರಿಗೆ ಗೋಚರಿಸದಂತೆ ದೃಶ್ಯವನ್ನು ಪೂರ್ಣಗೈದೆ. ನಾಟಕ ಮುಗಿದ ಅನಂತರ ಗೋಪಣ್ಣ ಬಂದು “ಭೇಷ್ ನಿಭಾಯಿಸಿಬಿಟ್ಟಿರಿ” ಎಂದು ಸಂತೋಷ ವ್ಯಕ್ತಪಡಿಸಿದರು.

ನಾನು ಆಗತಾನೇ makeup ಕಲಿಯುತ್ತಿದ್ದೆ. ಮೈಸೂರಿನಲ್ಲಿ ನಾಟಕ. ಪಾತ್ರಧಾರರೊಬ್ಬರಿಗೆ ನಾನೇ ಬಣ್ಣ ಹಚ್ಚಿದೆ. ಆನೂರು ಸೂರಿಯವರೂ ಪಾತ್ರ ವಹಿಸುತ್ತಿದ್ದರು. ಅವರು ಈ ಮೇಕಪ್ ನೋಡಿ, yellow ಸ್ವಲ್ಪ ಹೆಚ್ಚಾಯಿತಲ್ಲ ಎಂದರು. ಶ್ರೀ ನಾರಾಯಣ್ ಮತ್ತೊಬ್ಬ ಮೇಕಪ್ ಆರ್ಟಿಸ್ಟ್. ಅವರು ತಮ್ಮ ಕಾರ್ಯ ನಿಲ್ಲಿಸಿ ಬಂದು ನನಗೆ ಈ ಕಲೆಯನ್ನು ಮನವರಿಕೆ ಮಾಡಿಕೊಟ್ಟರು. ಆ ಪಾತ್ರಧಾರಿಗೂ ಬಣ್ಣದ ವ್ಯತ್ಯಾಸ ತಿಳಿದಿತ್ತಾದರೂ, ಹೇಳಿದರೆ ನನಗೆ ನೋವು ಆದೀತೇನೋ ಎಂದು ನನ್ನಲ್ಲಿ ಪ್ರೇಮದಿಂದ ಹಾಗೆಯೇ stage ಮೇಲೆ ಹೋಗುವವರಿದ್ದರು.

ನನ್ನ ರಾಮಕಲಾವಿದರು ನಾಟಕಗಳನ್ನು ಆಡುವಾಗ ಇಂಥದ್ದು ಬೇಕು ಎಂದರೆ ಹಿಂದೆ ಮುಂದೆ ನೋಡದೆ ಒದಗಿಸಿಕೊಡುತ್ತಿದ್ದರು. ಹಣದ ವಿಚಾರ ಒಮ್ಮೆಯಾದರೂ ಎತ್ತಿದ್ದಿಲ್ಲ. ದ್ವಾರಕಿಯವರು “ಸಾರ್, ಶ್ರೀಕಂಠಯ್ಯನವರೆ, ಇದೇ ತಾನೇ ನಿಮಗೆ ಬೇಕಾಗಿದ್ದು? ಸರಿಯಾಗಿದೆಯೇ ಮತ್ತೇನಾದರೂ ಮಾಡಬೇಕೆ ? ನೋಡಿ” ಎಂದು ಮಾತ್ರ ಹೇಳುತ್ತಿದ್ದರು. ದುಡ್ಡಿನ ವಿಷಯ ಎತ್ತಿದರೆ

"ನಿಮಗ್ಯಾಕಪ್ಪ ಅದೆಲ್ಲ. ನಿಮಗೆ ಪದಾರ್ಥ ಒಪ್ಪಿಗೆಯೋ ಹೇಗೆ, ಅಷ್ಟು ಮಾತ್ರ ನೋಡಿ" ಎಂದುಬಿಡುತ್ತಿದ್ದರು.

ಹಾರ್ಮೋನಿಯಂ ವಾದಕರಾದ ಶ್ರೀ ಸೀತಾರಾಂರವರು ಪರವೂರಿನಲ್ಲಿ 'ದಶಾವತಾರ' ನಾಟಕದ ಅಭಿನಯಕ್ಕೆ ಏರ್ಪಾಡು ಮಾಡಿದರು. 'Mr. Mysore' ಪ್ರಶಸ್ತಿ ಪಡೆದ ಶ್ರೀ ನಾಗರಾಜ್ ಪ್ರಧಾನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದರು.

ದಶಾವತಾರ ನಾಟಕದಲ್ಲಿ ನರಸಿಂಹಾವತಾರದ ದೃಶ್ಯ. ನರಸಿಂಹ ದೇವರಿಗೆ ಅಗತ್ಯವಾದ ಮುಖವಾಡ ತೊಡಿಸಿ, ಪಾತ್ರಧಾರಿಯನ್ನು, ಆರಿಸಿದ ಕಂಬದ ಹಿಂದೆ ಕೂರಿಸಲಾಗಿತ್ತು. ಸೆಖೆಯ ಕಾಲ. ಸೊಳ್ಳೆ ಕಾಟ ಹೇಳತೀರದು. ರಾತ್ರಿ ತಡವಾಗಿ ನಾಟಕದ ಅಭಿನಯ. ಪದ್ಮಾಸನದಲ್ಲಿ ಕುಳಿತು ನರಹರಿ ಪಾತ್ರಧಾರಿಗೆ ಕಾಲು ಕಟ್ಟಿತ್ತು. ಸೆಖೆ. ಬೇಸತ್ತು, ತಾನು ಕೂತಿದ್ದ ಸ್ಟೂಲ್ ಪಕ್ಕದಲ್ಲಿ ಕಾಲು ಇಳಿಬಿಟ್ಟು, ಮುಖವಾಡವನ್ನು ತೆಗೆದು ತೊಡೆಯ ಮೇಲಿಟ್ಟುಕೊಂಡು ಸಾಧು ಬೀಡಿಯೋ, ಗಣೇಶ ಬೀಡಿಯೋ ಯಾವುದೋ ಒಂದು ಧೂಮ್ರಪತ್ರ ಹಚ್ಚಿ ಆನಂದವಾಗಿ ದಂ ಎಳೆಯುತ್ತ ಮಧ್ಯೆ ಮಧ್ಯೆ ತೂಕಡಿಸುತ್ತ ಕುಳಿತರು. "ಎಲ್ಲಿರುವನು ಆ ನಿನ್ನ ಹರಿ ?" "ಎಲ್ಲೆಲ್ಲಿಯೂ ಇರುವನು ತಂದೆಯೆ", ಇತ್ಯಾದಿ ಡೈಲಾಗ್ಸ್‌ಗಳೆಲ್ಲ ಆಯಿತು. "ಎಲ್ಲಿಹ ತನುಜಾತ...." "ಎಲ್ಲೆಲ್ಲಿಯೂ ಇಹನಾತ, ತಾತ" ಹಾಡನ್ನು ರಾಗ ರಾಗವಾಗಿ ಹಾಡಿದ್ದೂ ಮುಗಿಯಿತು. ಒಂದೇ ರಾಗ...ಲಾಲಿ ಹಾಡಿದಂತಿತ್ತು. ಪಯೋನಿಧಿ ನಿಕೇತನರು ಸುಖಾಸೀನರಾಗಿದ್ದರು. ಹಿರಣ್ಯಕಶಿಪು ಕಂಭಕ್ಕೆ ಬಾರಿಸಿದಾಗ ಅಷ್ಟೇ ಎಚ್ಚರ ! ಎಲ್ಲಿದ್ದೇನೆ, ಏನು ಮಾಡು ತ್ತಿದ್ದೇನೆಂಬುದು ನಟನಿಗೆ ತೋಚುವ ಹೊತ್ತಿಗೆ ವಿಶಿಷ್ಟ ರೀತಿಯ ನರಸಿಂಹ ದೇವರ ದರ್ಶನ ಆಗಿ ಹೋಗಿತ್ತು ! ದೀಪ ಆರಿಸಿ ಕತ್ತಲಲ್ಲಿ ಮಿಣ ಮಿಣನೆ ಬೆಳಗುತ್ತಿದ್ದ ಬೀಡಿಯನ್ನು ಆರಿಸಿ, ಅವನಿಗೆ ಒಂದು ಒದೆತ ಕೊಟ್ಟು original ಸಿಂಹರನ್ನಾಗಿ ಮಾಡಿ ಮತ್ತೆ ಕಂಭ ತೋರಿಸಿ, ಹೋಳು ಮಾಡಿ ಪರಮಾತ್ಮನಿಂದ ಹಿರಣ್ಯಕಶಿಪುವಿನ ವಧೆಯನ್ನು ಯಥಾವತ್ತಾಗಿ ನಡೆಸಲಾಯಿತು.

ಇದೇ ನಾಟಕದಲ್ಲಿ "stage properties ಸ್ವಲ್ಪ ನೋಡ್ಕೋಳಿ ಶ್ರೀಕಂಠಯ್ಯನವರೆ" ಎಂದು ಒಪ್ಪಿಸಿದರು. ವಾಮನಾವತಾರ. ಬಲಿಚಕ್ರವರ್ತಿ ದಾನ ಕೊಡುವ ಸಂದರ್ಭಕ್ಕೆಂದೇ ಒಂದು ಕಮಂಡಲುವನ್ನು ತಂದು ಉದಕವನ್ನು ತುಂಬಿ ಇಟ್ಟಿದ್ದೆ. ನಾಟಕ ನೋಡಲು ಬಂದಿದ್ದ VIP ಒಬ್ಬರಿಗೆ ಬಾಯಾರಿಕೆಯಾಯಿತಂತೆ. ಚಿಲ್ಲೇರಿಯೊಬ್ಬ ಕಮಂಡಲವನ್ನೇ ಒಯ್ದ. ಅವರೂ ತಮ್ಮ ದಾಹವನ್ನು ಉಪಶಮನಗೈದರು.ಕಮಂಡಲುವನ್ನು ಬೆಂಚಿನ ಸಂದಿಯಲ್ಲಿ ಕಾಲಡಿ ಇಟ್ಟು ಕೂತರು. ಇನ್ನೂ ಎರಡು ದೃಶ್ಯಗಳು ಇರುವಂತೆಯೇ ಎಲ್ಲ properties‌ನೂ check ಮಾಡಿಕೊಳ್ಳುವುದು ನನ್ನ ಪದ್ಧತಿ. ನೋಡುತ್ತೇನೆ, ಕಮಂಡಲ ನಾಪತ್ತೆ ! ಕೂಗಾಡಿದೆ. ಒಬ್ಬ ಸ್ಟೀಲ್ ಲೋಟ ತಂದು ಇದಾಗುತ್ತೆ ಸಾರ್ ಎಂದ ! ಇನ್ನೊಬ್ಬ coffee kettle ತಂದ! ಹಾರಾಡಿ, ಪತ್ತೆ ಹಚ್ಚಿ ಪದಾರ್ಥವನ್ನು ಯಥಾ ಸ್ಥಾನ ಸೇರಿಸಲು ನಾನು ಪಟ್ಟ ಬವಣೆ ದೇವರಿಗೇ ಪ್ರೀತಿ !

'ರುಕ್ಮಿಣಿಕಲ್ಯಾಣ' ನಾಟಕ. ರುಕ್ಮಿಣಿಯ ಪಾತ್ರಕ್ಕೆ ವೃತ್ತಿ ಕಲಾವಿದರೊಬ್ಬರನ್ನು ಕರೆತಂದರು - mini ಜಾರುಬಂಡೆ ಮುಂದಿನ ಎರಡು ಹಲ್ಲುಗಳು- more appropriate for ಮಹಿಷ ಬಂಧ. ಕರೆತಂದವರ ಘನವಾದ ಪ್ರಶ್ನೆ - direct ವೇದವ್ಯಾಸರಿಗೆ- "ರುಕ್ಮಿಣಿಗೆ ಹಲ್ಲುಬ್ಬು - ಅದೂ ಏನೂ ಅಷ್ಟೇನೂ ಕಾಣೆ- ಅಲಂಕಾರದ ಉಬ್ಬು ಇರಬಾರದೆಂದು ಶಾಸ್ತ್ರ ಹೇಳುತ್ತದೆಯೆ ?" "Atleast ನಾಲ್ಕು ಹಲ್ಲಾದರೂ ತುಟಿಗಳನ್ನು ಧಿಕ್ಕರಿಸಿ ನಿಂತಿರುವ ಹಾಗೆ ಕೃಷ್ಣನ ಪಾತ್ರಕ್ಕೆ ಸಿಕ್ಕಿದಾಗ ಹೇಳಿಕಳುಹಿಸುತ್ತೇನೆ" ಎಂದೆ. "ಅದಕ್ಯಾಕೆ ಚಿಂತೆ, ನನ್ತಮ್ಮಾನೇ ಇದಾನೆ" ಅಂದ್ರು senior propagator of ಹಲ್ಲುಬ್ಸ್...ಅವರ family ವೈಶಿಷ್ಟ್ಯದ ಬಗ್ಗೆ appreciate ಮಾಡ್ತ ಒಂದ್ಲೋಟ ನೀರ್ಕುಡ್ದೆ.

ಅದೊಂದು ನಾಟಕದಲ್ಲಿ ನನ್ನದು ಬಲರಾಮನ ಪಾತ್ರ. ವರನಾಗಿ ನಿಂತ ನನಗೆ ವಧು ಹಾರ ಹಾಕುವ ದೃಶ್ಯ. ನಾನು ಸಾಕಷ್ಟು ಎತ್ತರದವನು. ನನ್ನ ತಲೆ ಮೇಲೆ heightಗೆ add ಮಾಡಲು ದೊಡ್ಡದೊಂದು ಕಿರೀಟ. ಸ್ತ್ರೀ ಪಾತ್ರಧಾರಿ ಅತ್ಯಂತ ಕುಳ್ಳು. ವೃತ್ತಿಪರ ನಟಿ. 'ಧನ್ಯಳಾದೆ ಪ್ರಿಯಾ' ಎಂದಂದು ಮಾಲೆ ಹಾಕಬೇಕು. ಡೈಲಾಗ್ ಆಯಿತು. ಹಾರ ಹಾಕುವುದಕ್ಕೆ ಆಕೆಗೆ ಎಟುಕದು. ನಾನು 'ಬಲರಾಮ' ತಲೆ ತಗ್ಗಿಸಲಾಗದು. ಮತ್ತೊಮ್ಮೆ 'ಧನ್ಯಳಾದೆ ಪ್ರಿಯಾ' ಆಯಿತು. ಮತ್ತೊಮ್ಮೆಯೂ ನನ್ನ ಕುತ್ತಿಗೆ ಆಕಾಶದಲ್ಲಿ. ಮರಳಿ 'ಪ್ರಿಯಾ'. ಒಂದೂವರೆ ಕಣ್ಣಲ್ಲಿ ನನ್ನವಳು ಕುಳಿತ ಕಡೆ ನೋಡಿದೆ. Front row... ಸ್ವೇದ ಪ್ರವಾಹದಲ್ಲಿ ಕೊಚ್ಚಿ ಹೋದೆ.

ಇನ್ನೆಲ್ಲಿ ಕಂಜದಳಾಯತಾಕ್ಷಿ !
ಇನ್ನೆಲ್ಲಿ ಕಮಲಾಕ್ಷಿ ಚಪಲಾಕ್ಷಿ !
ಇನ್ನೆಲ್ಲಿ ಆ ಚಂದಿರವದನೆ !
ಅಗ್ನಿಯಂತೆಸೆವಳ್ ಇವಳ್ !
ವಿಸೂವೆಯಸ್ಸಿನ ಬಾಯ್ದಂಬುಲದವೊಲ್ !

ಒಮ್ಮೆ ಅಂಟಾರ್ಟಿಕದಲ್ಲಿ , ಒಮ್ಮೆ ರವಿಯ ವೃತ್ತದಲ್ಲಿ ಅದ್ದಿ ತೆಗೆದಂತಾಯ್ತು. ನನಗೆ ಅರಿವಿಲ್ಲದೆಲೆ ನವಿರಾಗಿ ಕೈಕಾಲುಗಳು

ಬ್ರೇಕ್ ಡ್ಯಾನ್ಸ್ ಆರಂಭಿಸಿದ್ದವು. ಪುಣ್ಯಾತ್ಗಿತ್ತಿ 'ಪ್ರಿಯಾ' ಎಂಬುದನ್ನಾದರೂ cut ಮಾಡಬಾರದೆ-ಉಹ್ಞುಂ-ಆಕೆಯದೂ ಹಠ. ಕೊನೆಗೊಮ್ಮೆ ನನ್ನ ಪೂರ್ವಜರ ಕೃಪೆಯಾಯಿತು. ಆಕೆ ಬಳಿಯಲ್ಲಿದ್ದ ಸಿಂಹಾಸನಕ್ಕೆ ಭಂಗನೆ ಜಿಗಿದು ನಿಂತು ಹೆಮ್ಮೆಯಿಂದ ಬೀಗುತ್ತ, ಧ್ವನಿಯನ್ನು ಆನಂದದಿಂದ ಇನ್ನೂ ಎತ್ತರಿಸಿ final ಆಗಿ ಪ್ರಿಯಾ ಎಂದು ಅರಚಿ, ಇವಳ ಎಳೆದಾಟದಲ್ಲಿ ಅರ್ಧ ಉಳಿದಿದ್ದ ಹಾರವನ್ನು ತೊಡಿಸಿಯೇ ಬಿಟ್ಟಳು. ಅದೇನೋ ಆಯಿತು. ಇನ್ನು ನನ್ನ ಕಥೆ ! ನಾಟಕ ಮುಗಿದನಂತರ ತಗ್ಗಿಸಿದ ತಲೆ ಎತ್ತಿದ್ದು ನಾಲ್ಕು ತಿಂಗಳ ಅನಂತರವೇ ! 'ಅವಳ' ಮುಖವನ್ನು ನೋಡಬೇಕಾದರೆ ಸಹಸ್ರ ಸಂಖ್ಯೆಯಲ್ಲಿ ಗಾಯತ್ರೀ ಜಪ ಮಾಡಿ ಧೈರ್ಯ ತಂದುಕೊಳ್ಳಬೇಕಾಯಿತು.

'ವಿಜಯಮಾಲೆ' ನಾಟಕದಲ್ಲಿನ ನನ್ನ ಮಯೂರ ಪಾತ್ರವನ್ನು ವೀಕ್ಷಿಸಿದ ಶ್ರೀ ಪರ್ವತವಾಣಿಯವರು ತಮ್ಮ ನಾಟಕದಲ್ಲಿ ಪಾತ್ರ ಮಾಡಲು ಆಹ್ವಾನಿಸಿದರು. ಅಂತಹ ಹಿರಿಯರ ಸಾನ್ನಿಧ್ಯ ದೊರಕಿದ್ದು ನನಗೆ ಅಮಿತಾನಂದವಾಯಿತು.

ಆ ನಾಟಕದಲ್ಲಿ ನಾನು ಬಾಬರ್ (ಮೊಘಲ್ ಸಾರ್ವಭೌಮ), ಚಿತ್ರನಟ ಶ್ರೀ ಶ್ರೀನಾಥ್ ತೆನಾಲಿರಾಮಕೃಷ್ಣ. ರಾತ್ರಿಯ ವೇಳೆ ವೇಷ ಮರೆಸಿಕೊಂಡು ಗಸ್ತು ತಿರುಗುತ್ತಿದ್ದ ಬಾಬರನನ್ನು, ರಾಮಕೃಷ್ಣ ತನ್ನ ಬುದ್ಧಿ ಕುಶಲತೆಯಿಂದ ಸನ್ನಿವೇಶವೊಂದನ್ನು ಸೃಷ್ಟಿಸಿ ಭೇಟಿ ಮಾಡುವ ದೃಶ್ಯ. ದೃಶ್ಯಾಂತ್ಯದಲ್ಲಿ ಬಾಬರ್ ತನ್ನ ಮಾರುವೇಷ ಕಳಚಿ ಸಾರ್ವಭೌಮನಾಗಿ ಪ್ರಕಟಗೊಂಡು, ರಾಮಕೃಷ್ಣ ತನ್ನನ್ನು ಅರಮನೆಯಲ್ಲಿ ಭೇಟಿ ಮಾಡಲು ತಿಳಿಸಿ ನಿರ್ಗಮಿಸುತ್ತಾನೆ. ಹಾಗೆ ವೇಷ ಕಳಚುವ, ನಿರ್ಗಮಿಸುವ ಧಾಟಿ ಪ್ರೇಕ್ಷಕರ ಮನಸೆಳೆದು ಸುಮಾರು ಹೊತ್ತು ಚಪ್ಪಾಳೆಯ ಸುರಿಮಳೆಯಾಯಿತು. ಪರ್ವತವಾಣಿಯವರು ಮನಸಾರ ಹರಸಿದರು.

ಚಿತ್ರನಟ ರಂಗ ಅವರೊಡನೆ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಒಮ್ಮೊಮ್ಮೆ ನಮ್ಮ ಭೇಟಿಯಾದಾಗಲೂ ಅವರು ತೋರಿಸುತ್ತಿದ್ದ ಗೌರವ, ಸ್ನೇಹಭಾವ ಮರೆಯಲಾರೆ. ಒಮ್ಮೆ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಸುದರ್ಶನ್, ಶೈಲಶ್ರೀಯವರೊಂದಿಗೆ Shooting ನಲ್ಲಿ ತೊಡಗಿದ್ದಾಗ ರಾತ್ರಿ ಅವರನ್ನು ಕಾಣಲು ಹೋದೆ. ಪಾತ್ರದಲ್ಲಿದ್ದ ಅವರು ಆಸ್ಪತ್ರೆಯೊಂದರ ಮಂಚದ ಮೇಲೆ ಪೇಶೆಂಟ್ ಆಗಿ ಮಲಗಿದ್ದಾರೆ. ಶೈಲಶ್ರೀ ಪ್ರವೇಶಿಸುತ್ತಾರೆ. ಹೀಗೆ ನಡೆದಿತ್ತು ದೃಶ್ಯ. ನನ್ನನ್ನು ನೋಡಿದ ಕೂಡಲೆ ರಂಗ ಅವರು ಕ್ಯಾಮರಾ ಚಾಲನೆಯಲ್ಲಿದೆ ಎಂಬುದನ್ನೂ ಮರೆತು ನನ್ನತ್ತ ಧಾವಿಸಿದರು. ಸಂಭ್ರಮದಿಂದ ಮಾತನಾಡಿ ಉಳಿದ ಕಲಾವಿದರೆಲ್ಲರಿಗೆ ನನ್ನ ಪರಿಚಯ ಮಾಡಿಕೊಟ್ಟರು. ನಾನಾಗ ಕೃಷ್ಣರಾಜನಗರದಲ್ಲಿದ್ದು ಕಡೆಯ ಬಸ್ ಹಿಡಿಯಲು ಇಪ್ಪತ್ತು ನಿಮಿಷಗಳು ಮಾತ್ರವಿದ್ದುವು. ಅದಕ್ಕಾಗಿ ಎಲ್ಲರೂ ಶೂಟಿಂಗ್ ನಿಲ್ಲಿಸಿ ಕಾರು ಹತ್ತಿ ನನ್ನೊಡನೆ ಬಸ್‌ಸ್ಟ್ಯಾಂಡ್‌ವರೆಗೆ ಬಂದು ಬೀಳ್ಕೊಟ್ಟರು. ಅನತಿ ಕಾಲದಲ್ಲೇ ಈ ಪ್ರತಿಭಾವಂತ ನಟ ಅಸ್ತಂಗತನಾದ.

ಚಿತ್ರನಟ ಗಂಗಾಧರ್ ಒಂದು ಬಗೆಯ free lancing type. ಒಂದು ಸಂಸ್ಥೆ ಅಂತ ಇಲ್ಲದೆ ಅನೇಕ ತಂಡಗಳ ಜತೆ ಅಭಿನಯಿಸುತ್ತಿದ್ದರು. ನನಗೆ ನನ್ನದೇ ಒಂದು ಸಂಸ್ಥೆ ಇದ್ದರೂ ಸ್ನೇಹಕ್ಕೆ ಕಟ್ಟುಬಿದ್ದು ಬೇರೆ ಬೇರೆ troupes ಅನ್ನು ಕೂಡಿಕೊಳ್ಳುತ್ತಿದ್ದೆ.

ನಾಟಕವೊಂದರಲ್ಲಿ ನನ್ನದು ನಾರದನ ಪಾತ್ರ. ಗಂಗಾಧರ್ ದಾನವರ ಅರಸ. ಪುಣ್ಯಾತ್ಮ ಡೈಲಾಗ್ಸ್ ಕಂಠಪಾಠ ಮಾಡುವುದರ ಬಗ್ಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಪ್ರಥಮ ದೃಶ್ಯದಲ್ಲೇ ಒಂದು ಮಾತೂ ಹೊರಡಲಿಲ್ಲ. ಪರಿಸ್ಥಿತಿಯನ್ನು ಅರಿತ ನಾನು ನನ್ನ ಮಾತುಗಳನ್ನಾಡಿ audienceಗೆ ಬೆನ್ನು ಮಾಡಿ ಅವರ ಸಾಲುಗಳನ್ನು prompt ಮಾಡುತ್ತಿದ್ದೆ.

ದೃಶ್ಯ ಮುಗಿದ ಕೂಡಲೆ ನಾಟಕದ ನಿರ್ದೇಶಕ ಬಷೀರ್, ಗಂಗಾಧರ್, ಉಳಿದ ತಂಡದವರೆಲ್ಲ ಓಡಿ ಬಂದು ಕೈಕುಲುಕಿದ್ದೇ ಕುಲುಕಿದ್ದು. ಗಂಗಾಧರ್ ಅಂತೂ "ಸಾರ್, ನನ್ನ ಮಾನ ಉಳಿಸಿ ಬಿಟ್ಟಿರಿ" ಎಂದು ತುಂಬು ಸಂತೋಷದಿಂದ ನುಡಿದರು.

ಎಂದರೋ ಮಹಾನುಭಾವುಲು

ಶ್ರೀ ರಾಮಣ್ಣನವರು BEMLನಲ್ಲಿ employee. ಒಳ್ಳೆಯ ಕಲಾವಿದರು. ಸಿನಿಮಾ ನಟನಾಗಬೇಕೆಂಬ ಆಸೆಯಿಂದ ಇದ್ದಬದ್ದದ್ದೆಲ್ಲ ಕಳೆದುಕೊಂಡು ಸಂಕಟಕ್ಕೆ ಈಡಾದುದೂ ಉಂಟು. ನಾಟಕಗಳಲ್ಲಿ ಅಭಿನಯಿಸುವುದು, ಪ್ರದರ್ಶನಗಳಿಗೆ ಏರ್ಪಾಡು ಮಾಡುವುದು ಇದರಲ್ಲೇ ಸದಾ ಮುಳುಗಿರುವವರು. ನನ್ನ ನಾಟಕ **ಸಮಾಜ ಹುಂಜ** ಅಭ್ಯಸಿಸಿ State Level competitionನಲ್ಲಿ ಭಾಗವಹಿಸಿ ಮೂರು ಚಿನ್ನದ ಪದಕಗಳನ್ನು ಗೆದ್ದುಕೊಂಡವರು. ಹೇಗಾದರೂ ಮಾಡಿ ನನ್ನ servicesಗೆ ಯಾವುದಾದರೂ ರೂಪದಲ್ಲಿ ಸಂಭಾವನೆ ತಲಪಿಸಬೇಕೆಂಬ ಉತ್ಕಟೇಚ್ಛೆ ಇದ್ದವರು.

ಶ್ರೀ ಗವಾಯಿ ರಂಗಸ್ವಾಮಿಯವರು ಒಳ್ಳೆಯ ವೃತ್ತಿಪರ ಕಲಾವಿದರು. ಗುಬ್ಬಿ ಕಂಪೆನಿಯೇ ಆದಿಯಾಗಿ ಹಲವಾರು ಸಂಸ್ಥೆಗಳಲ್ಲಿ ನಟರಾಗಿದ್ದವರು. ಸೊಗಸಾಗಿ ಹಾಡಬಲ್ಲಾತ. ವಿಶ್ವಾಸಿ. ಯಾವುದೇ ಪಾತ್ರವನ್ನಾಗಲಿ ಲೀಲಾಜಾಲವಾಗಿ ಅಭಿನಯಿಸಬಲ್ಲ

ಚತುರ. ನಮ್ಮ ಸ್ನೇಹವಾಗುವ ವೇಳೆಗೆ ಅವರು ನಿವೃತ್ತರಾಗಿದ್ದರು. ಆದರೂ ನಮ್ಮ ಒಡನಾಟದಿಂದಾಗಿ ಯಾವ ಅಪೇಕ್ಷೆಯೂ ಇಲ್ಲದೆ ನಮ್ಮ ಸಂಸ್ಥೆಯಲ್ಲಿ ಹವ್ಯಾಸಿ ಕಲಾವಿದರಾಗಿ ಅನೇಕ ನಾಟಕಗಳಲ್ಲಿ ಪಾತ್ರವಹಿಸಿದರು. ತಾನು ಸೀನಿಯರ್ ಆರ್ಟಿಸ್ಟ್ ಎಂಬ ಅಹಂ ಎಳ್ಳನಿತೂ ಅವರಲ್ಲಿ ಇರಲಿಲ್ಲ. ನಮ್ಮೊಂದಿಗೆಲ್ಲ ಎಳೆಯನಾಗಿ ಬೆರೆತು ಜೀವನದ ಅರ್ಥವನ್ನು ಸಾರಿದರು. ಹೊತ್ತು ಬಂದಾಗ ಈ ಜಗತ್ತಿನ ರಂಗದಿಂದಲೇ ಸರಿದುಹೋದರು.

ಶ್ರೀ ಗುರುಮೂರ್ತಿಯವರು ಜೀವವಿಮಾ ನಿಗಮದಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸರ್. ಹಲವಾರು ಉನ್ನತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಒಳ್ಳೆಯ service record ಉಳ್ಳವರು. ಹಾಗೆಯೇ ಒಳ್ಳೆಯ ಕಲಾವಿದರು.

A.I.R. ನವರು ನಮಗೊಂದು ಅವಕಾಶ ಕೊಟ್ಟಾಗ ಮೈಸೂರಿನ CFTRI ಸಭಾಂಗಣದಲ್ಲಿ LIC ವತಿಯಿಂದ ನನ್ನ ನಾಟಕ **ಮನೆ ಬಿಡಿ** ಅಭಿನಯಿಸುವುದಿತ್ತು. ಎಲ್ಲರೂ ಗೊತ್ತಾದ ವೇಳೆಗೆ ಸೇರುವುದೆಂದು ತೀರ್ಮಾನವಾಗಿತ್ತು. ಯಾವುದೋ ಕಾರಣಗಳಿಂದ ಗುರುಮೂರ್ತಿ ಬರುವುದು ಬಹಳ ತಡವಾಯಿತು. Punctuality ಅಂದರೆ ನನಗೆ ಒಂದು ರೀತಿಯ obsession. ತಪ್ಪಾದಾಗ ನನ್ನ ಬುದ್ಧಿಯ ಸ್ವಾಧೀನವೇ ತಪ್ಪುತ್ತದೆ. ಹಾಗಾಗಿ ಹೆಬ್ಬುಲಿಯಂತೆ ಅವರ ಮೇಲೆ ಹರಿಹಾಯ್ದೆ. ನಾನು ಬಯ್ಯುವುದು ಕೇಳಿ ಸಹ - ಕಲಾವಿದರೆಲ್ಲ ವಿಚಲಿತರಾದರು. “ನಾಟಕ ಇದೆ. mood ಹೋದರೆ ಚೆನ್ನಲ್ಲ. ಏನೋ ಆಗಿಹೋಯಿತು ಬಿಡಿ” ಎಂದು ಒಬ್ಬಿಬ್ಬರು ಹೇಳಿದ್ದೂ ಆಯಿತು. ಆದರೂ ಅಸಮಾಧಾನಗೊಳ್ಳುವುದು ಇರಲಿ, ಅವರು ನನ್ನಲ್ಲಿಗೆ ಬಂದು ಕ್ಷಮೆ ಕೋರಿದರು ! ನಾನು shrink ಆಗಿ ನಿಂತೆ.

ಶ್ರೀ ಎಂ.ಸಿ. ಶಶಿಕಾಂತ ಜೀವವಿಮಾ ನಿಗಮದಲ್ಲಿ ದೊಡ್ಡ ಪದವಿಯಲ್ಲಿದ್ದವರು (Assistant Divisional Manager). ವೇದಾಧ್ಯಯನ ಸಂಪನ್ನರು. ಆಚಾರಶೀಲರು. Academically ತುಂಬಾ ಎತ್ತರದವರು. Physically ಸಣ್ಣ middle school student ಹಾಗೆ ತೋರುವರು. ಹಲವಾರು ನಾಟಕಗಳಲ್ಲಿ ನಮ್ಮೊಡನೆ ಪಾತ್ರವಹಿಸಿ ಒಳ್ಳೆಯ ಖ್ಯಾತಿ ಹೊಂದಿದವರು. ಅದರಲ್ಲೂ ಕೈಲಾಸಂರ ‘ಬಂಡ್ವಾಳ್ವಿಲ್ಲದ ಬಡಾಯಿ’ ನಾಟಕದಲ್ಲಿನ ಅವರ ಮುದ್ಮಣಿ ಪಾತ್ರ ಅವಿಸ್ಮರಣೀಯ.

ಡಾ। ರಾಮಶೇಷನ್ ಎಲ್ಐಸಿಯಲ್ಲಿ Administrative officer. ಕನ್ನಡ ಎಂ.ಎ., ಮುಗಿಸಿ ಹರಿದಾಸ ಸಾಹಿತ್ಯದ ಬಗ್ಗೆಯೆಂದು ತೋರುತ್ತದೆ-ನೆನಪಿಲ್ಲ-Thesis ಬರೆದು Ph.D., ಪದವಿ ಪಡೆದವರು. ಅನೇಕ ಸ್ವಂತ ಕೃತಿಗಳನ್ನು ರಚಿಸುವುದೇ ಅಲ್ಲದೆ ಸಾಕಷ್ಟು ಭಾಷಾಂತರದ ಕೆಲಸವನ್ನೂ (English to Kannada) ಮಾಡಿದ್ದಾರೆ. ಅತ್ಯಂತ ಪ್ರತಿಭಾವಂತ. ಹಲವಾರು ಸಂಸ್ಥೆಗಳಿಂದ teaching profession ಗೆ ಸೇರುವಂತೆ ಆಹ್ವಾನಗಳು ಬರುತ್ತಲೇ ಇವೆ.

ನಾವು ನಮ್ಮ ಶ್ರೀರಾಮ ಕಲಾವಿದರ activitiesನೆಲ್ಲ ಚಾಮರಾಜಪೇಟೆ ಐದನೆಯ ಮುಖ್ಯರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ನಡೆಸುತ್ತಿದ್ದೆವು. ‘ಶ್ರೀರಾಮ ಶಿಶುವಿಹಾರ’ ಎಂಬ ಶಾಲೆಯೂ ನಡೆಸಲ್ಪಡುತ್ತಿತ್ತು. ಬೆಂಗಳೂರು ಕೃಷ್ಣಭಾಗವತರು ಹರಿಕಥಾ ವಿದ್ವಾಂಸರು. ಮೂಲತಃ ತಮಿಳರು. ಕನ್ನಡ ತಮಿಳು ಎರಡು ಭಾಷೆಗಳಲ್ಲಿಯೂ ಕಥಾ ಪ್ರವಚನ ಮಾಡುತ್ತಿದ್ದರು. ಲಕ್ಷ್ಮೀಪತಿ ಎಂಬುವವರು ಇವರ ಸ್ನೇಹಿತರು. ‘ಶ್ರೀರಾಮ ಶಾಲೆ’ಗಳಿರುವ ಸ್ಥಳದ ಹಿಂಭಾಗದಲ್ಲಿ ಅವರ ಮನೆ. ತಮ್ಮ ಮನೆಗೆ ಸೇರಿದ ಬಹುದೊಡ್ಡ ಖಾಲಿ ನಿವೇಶನ (corner site) ವನ್ನು ಉಚಿತವಾಗಿ ಕೊಡುವುದಾಗಿಯೂ, ಅಲ್ಲಿ ಒಂದು ರಾಮಮಂದಿರ ಕಟ್ಟಿಸಬೇಕೆಂತಲೂ, ಅಪೇಕ್ಷಿಪಟ್ಟರು. ಒಪ್ಪಿದ ಭಾಗವತರು ನಿವೇಶನವನ್ನು ಪಡೆದು public donations ಸಂಗ್ರಹಿಸಿ ರಾಮಮಂದಿರ ಕಟ್ಟಿದರು. ಇಲ್ಲಿನ ನಮ್ಮ ಕಲಾವಿದರ ಸಂಸ್ಥೆ , ಶಾಲೆಗಳು, ಒಂದು ದಿನವೂ ತಪ್ಪದೆ ವರ್ಷವಿಡೀ ಸಂಜೆ ಹೊತ್ತು ಹರಿಕಥೆ ಇತ್ಯಾದಿಗಳ ಒಕ್ಕೂಟವಾಗಿದ್ದುವು.

ಒಂದು ಸಂದರ್ಭದಲ್ಲಿ ಭಾಗವತರು ರಾಮಮಂದಿರವನ್ನು ಕೂಡಲಿ ಶೃಂಗೇರಿ ಮಠಕ್ಕೆ ದಾನಮಾಡಿಬಿಟ್ಟರು. ಶ್ರೀಮಠದ ಸ್ವಾಮಿಗಳು ಬಂದು ಮಂದಿರವನ್ನು ವಶಕ್ಕೆ ತೆಗೆದುಕೊಂಡರು. ಅಲ್ಲಿಂದ ಸಾರ್ವಜನಿಕರಿಗೂ ಶ್ರೀಮಠಕ್ಕೂ ವ್ಯಾಜ್ಯ ಶುರುವಾಗಿ ಕೋರ್ಟು- ಕಛೇರಿಗಳ ವ್ಯವಹಾರ ಆರಂಭವಾಯಿತು. ತಾತ್ಕಾಲಿಕವಾಗಿಯಾದರೂ ಎಲ್ಲ ಚಟುವಟಿಕೆಗಳಿಗೂ ಧಕ್ಕೆ ಒದಗಿತು. ಆದರೂ ಸಮಿತಿಯವರೆಲ್ಲ ಸೇರಿ ಆದಷ್ಟು normalcy ಒದಗಿಸಿ ಸಂಸ್ಥೆಗೆ ತೊಂದರೆಯಾಗದಂತೆ ನೋಡಿಕೊಂಡರು. ಮುಂದೆ ಕೋರ್ಟಿನಲ್ಲಿ ವ್ಯಾಜ್ಯ ಇತ್ಯರ್ಥವಾಗಿ ಇದು ಸಾರ್ವಜನಿಕ property ಎಂದು ಘೋಷಿಸಲ್ಪಟ್ಟಿತು. ಈಗ ಇದೊಂದು ಬೃಹತ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಹೊನ್ನಪ್ಪಭಾಗವತರ ಮಕ್ಕಳಾದ ಭರತ್ ಭಾಗವತರ್ ಮತ್ತು ಸ್ನೇಹಿತರು ಕೂಡಿಕೊಂಡು ಶ್ರೀರಾಮ ಕಲಾವಿದರ ಸಂಘವನ್ನು ಕೊಂಚ ಕಾಲ ಮುಂದುವರೆಸಿಕೊಂಡು ಬಂದರು. ಮಂದಿರ ಮತ್ತು ಶಾಲೆಗಳ ಕಾರ್ಯದರ್ಶಿ ಶ್ರೀ ಎಂ. ಬಿಂದುಮಾಧವರಾಯರ

ಅವಿರತ, ನಿರಪೇಕ್ಷ ಸೇವೆಯಿಂದಾಗಿ ಶಾಲೆಗಳು ಮತ್ತು ಉಳಿದೆಲ್ಲ ಕಾರ್ಯಭಾಗ ಚುರುಕಿನಿಂದ ನಡೆಯುತ್ತಿದ್ದರೂ ಕಲಾವಿದರ wing ನೇಪಥ್ಯಕ್ಕೆ ಸರಿದಿದೆ. ಪೋಷಣೆಯಿಲ್ಲದೆ ಸೊರಗಿದೆ. ಈಚೀಚೆಗೆ ಕೆಲ ಯುವ ಕಲಾವಿದರು ಸಂಘದ ಬಗ್ಗೆ ಆಸಕ್ತಿ ವ್ಯಕ್ತಪಡಿಸುತ್ತಿದ್ದಾರೆಂದು ಕೇಳಿದ್ದೇನೆ. ಹಾಗಾದರೆ ಮತ್ತೆ ಮೊದಲಿಗಿಂತ ಹೆಚ್ಚು ಶಕ್ತಿ ಕೂಡಿಸಿಕೊಂಡು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬಹುದೆಂಬ ಆಶಾಕಿರಣ ಮೂಡುತ್ತಿದೆ.

ನಮ್ಮ ಕಲಾವಿದರು

ನಮ್ಮ ತಂಡದಲ್ಲಿ ಎ.ಕೆ. ರಾಮರಾವ್ ಎಂಬುವವರು ಒಬ್ಬರು. ಮೂರು ನಿಮಿಷ ಮೋಟುಬೀಡಿ ಎಳೆಯದಿದ್ದರೆ ಅವರಿಗೆ ಹುಚ್ಚು ಹಿಡಿಯುತ್ತಿತ್ತು. ರಾಮಮಂದಿರದ conservancy ಗೆ ನುಗ್ಗಿ ಎರಡು 'ದಂ' ಎಳೆದು ಮರಳುವರು. ಹಾಗೆಯೇ ಅವರ ಜಿಹ್ವಾ ಚಾಪಲ್ಯ. ಮೂರು ಬಾರಿ peptic ulcerನ ಆಪರೇಶನ್ ಆಗಿದ್ದರು ಸಹ ಬೋಂಡ, ಬಜ್ಜಿ , ವಡೆ ಕಂಡದ್ದು ಕಬಳಿಸುವರು. 'ಕೋ' ಎಂದು ನಾಲಗೆ ತಳ್ಳುವುದು, 'ಬೇಡ' ಎಂದು ಹೊಟ್ಟೆ ಕೂಗುವುದು. ಸೊಂಟಕ್ಕೆ ಒಂದು ಪಟ್ಟಿ ಬೇರೆ. ಹೊಟ್ಟೆಯ ಬಂಧನ. ನಾಲ್ಕು ಮಾತನಾಡುವುದು, ಐದು ಸಾರಿ ಕೆಮ್ಮುವುದು; ಆದರೆ ಒಂದು ಬಾರಿಯೂ stage ಮೇಲೆ ಮಾತ್ರ ಅದೆಲ್ಲ ಇರಲಿಲ್ಲ. ಒಳ್ಳೆ ಕಲಾವಿದ. ಈಗ ಕಾಷಾಯ ವಸ್ತ್ರಧಾರಿಯಾಗಿ 'ರಾಮದಾಸ'ನಾಗಿ ಬೆಂಗಳೂರಿನ ಬಳಿಯ ಒಂದು ಹಳ್ಳಿಯ (ಹೆಸರು ನೆನಪಿಲ್ಲ) ದೇವಾಲಯದಲ್ಲಿ ವಾಸ; ಬೀಡಿ ಬೋಂಡ ಎಲ್ಲ ವರ್ಜ್ಯ.

HMT ರಾಮರಾಯರು ಧಡೂತಿ ಆಸಾಮಿ. ಸಾಕಷ್ಟು ಸುತ್ತಳತೆಯುಳ್ಳವರು. ತಿಂಡಿ ತಿನ್ನಿಸುವುದು, ತಿನ್ನುವುದು ಎಂದರೆ ಪರಮಾನಂದ. ಪಾತ್ರವಹಿಸುವಾಗ ಕತ್ತನ್ನು ಬಗ್ಗಿಸಿ, ಸಂಗೀತಗಾರರಂತೆ ತಲೆಯನ್ನು ಕುಣಿಸುತ್ತ ಕೈ ಮುಂದೆ ತರುವುದು ಇವರ ಅಭ್ಯಾಸ. ಇದನ್ನು ಬಿಡಿಸಲು ನಾನು ಪಟ್ಟ ಶ್ರಮ ದೇವರಿಗೇ ಗೊತ್ತು. ತಲೆಯನ್ನು ಭದ್ರವಾಗಿ ಒಬ್ಬರು ಒತ್ತಿ ಹಿಡಿಯುವುದು, ಕೈಯನ್ನು ಇನ್ನೊಬ್ಬರು ಬಿಗಿಯಾಗಿ ಹಿಡಿದು ಹಿಂದೆ ತಿರಿಚುವುದು, ಮಾತನಾಡಿಸುವುದು. ಹೀಗೆಲ್ಲ ಮಾಡಿದ್ದಾಯಿತು. ಸ್ನೇಹಪರ, ಮೃದುಭಾಷಿ, ಮಗುವಿನಂತಹ ಮನಸ್ಸು. ಈಗ ಅವರಿಲ್ಲ. ಅವರ ನೆನಪು ನಿಂತಿದೆ.

ಮದ್ವೇಶ್ ಮೂಲತಃ ಆಂಧ್ರ ಪ್ರದೇಶದವರು. "ಸಾರ್, ಶ್ರೀಕಂಠುಗಾರು, ಎಂತ ಸೊಗಸುಗಾ ಕನ್ನಡ ಭಾಷಾಲೋ ಮಾಟಲಾಡುತು ಮಿಮ್ಮನಿ ಆಶ್ಚರ್ಯಮುತೊ ನಿಲಪೆಟ್ಟಾನು ಚೂಡಂಡಿ" ಎನ್ನುವರು. ಕಿರಿಯ ವಯಸ್ಸು. ಅವರ ತೆಲುಗುಲೋ ಕನ್ನಡಮು ರಿಪೇರಿ ಮಾಡಲು ದಿನಕ್ಕೆ ಹತ್ತು ಬಾರಿ ಶಾರದಾಸ್ತುತಿ ಮಾಡಬೇಕಿತ್ತು. ಹಾಗೂ ಹೀಗೂ ಒಂದು ಘಟ್ಟ ಮುಟ್ಟಿದರು. ಈಗ ಅವರು ಚಿರನಿದ್ರೆಯಲ್ಲಿ ಲೀನವಾಗಿ ಹೋಗಿದ್ದಾರೆ. ಚಿರ ಮೌನ.

ಸುಬ್ಬರಾಯರು Nimhans ನಲ್ಲಿ (ಆಗ Mental hospital) Photographer. ನಾಟಕ ಎಂದರೆ ಪಂಚಪ್ರಾಣ. Office duties ನಿಂದಾಗಿ ಕೆಲವೊಮ್ಮೆ ನಮ್ಮ rehearsals schedule ಅವರಿಗೆ ಹೊಂದುತ್ತಿರಲಿಲ್ಲ. "ಸಾರ್, ಶ್ರೀಕಂಠು, ನಂಗೋಸ್ಕ್ರ ಸ್ವಲ್ಪ wait ಮಾಡಿದ್ರೆ ನಿಮ್ಮ ಮುಂದೆ ಪಾಠ ಒಪ್ಪಿಸ್ಬಿಡ್ತೀನಿ" ಎನ್ನುವರು. ಉಳಿದವರೆಲ್ಲರ rehearsal ಮುಗಿಸಿ, ಇವರ lines ನಾನೇ ಕೊಟ್ಟು ಕಾಯುತ್ತಿದ್ದೆ. ಅವರೊಬ್ಬರಿಗೇ special classes! ಆಗ ಮೊಪೆಡ್, ಸ್ಕೂಟರ್ ಹಾವಳಿ ಅಷ್ಟಾಗಿ ಇರಲಿಲ್ಲ. ಸೈಕಲ್‌ನಲ್ಲೇ ಓಡಿಯಾಟ. ಪಾಪ, ತಮ್ಮ duties ಮುಗಿಸಿ ಏದುಸಿರು ಬಿಡುತ್ತ ಬೇಗ ಬೇಗ pedal ತುಳಿದು ಆಯಾಸದಿಂದಲೇ ಬಂದು ಅಭ್ಯಾಸ ಮಾಡುವರು. "ಸುಬ್ಬರಾವ್, ಈ special effects ಆಗ್ಬೇಕಿತ್ತಲ್ಲ" ಅಂದ್ರೆ ಸಾಕು- "ಬನ್ನಿ ಸಾರ್, ನಾನು ಕರ್‍ಕೊಂಡ್ಹೋಗ್ತೀನಿ" ಅಂತ ಸೈಕಲ್ ಏರುವರು. ಯಾವಾಗಲೂ ಹಸನ್ಮುಖಿ. ಹುಬ್ಬುಗಂಟಿಕ್ಕಿದ್ದೇ ಕಾಣೆ. ಒಳ್ಳೆ dialogues delivery. ತುಂಬ obedient. ಈ ಸ್ನೇಹಿತರು ನಮ್ಮನ್ನಗಲಿ ಬಹಳ ಕಾಲವಾಯಿತು.

ಟಿ.ಎನ್. ಶಂಕರನಾರಾಯಣಶಾಸ್ತ್ರಿಗಳು ಅಪ್ರತಿಮ ವಿದ್ವತ್ಸಂಪನ್ನರು. ಏಕಸಂಧಿಗ್ರಾಹಿ. ಮಾತು, ನಡವಳಿಕೆ, ಶಿಸ್ತು, ಎಲ್ಲ ತಮ್ಮ ಸತ್ಕುಲಕ್ಕೆ ತಕ್ಕ ಹಾಗೆ. ಒಳ್ಳೆಯ ಕಲಾವಿದರು. ಎಲ್ಲ ಸರಿ. ಆದರೊಂದು ವಿಷಯದಲ್ಲಿ ಕೆಲ ಕಾಲ ಸೋತಿದ್ದವರು. ಧೂಮಪಾನಾಸಕ್ತರು. ಒಮ್ಮೆ ವೇದಾಭ್ಯಾಸ ಮಾಡಬೇಕೆನಿಸಿತು. ತಡ ಮಾಡದೆ ಯೋಗ್ಯ ಗುರುಗಳಲ್ಲಿಗೆ ಧಾವಿಸಿದರು. ಧೂಮಪಾನ 'ಬಂದ್' ಆಯಿತು. ವೇದ, ಉಪನಿಷತ್ತು, ಪುರಾಣ, ಇತಿಹಾಸ ಎಲ್ಲದರ ಪ್ರಗಲ್ಭ ಪಾಂಡಿತ್ಯ ಸಂಪಾದಿಸಿದರು. ಅಸ್ಖಲಿತ ಮಾತುಗಾರ. ಅಗಣಿತ ಭಾಷಾಸಂಪತ್ತು, ಪದಪುಂಜ. LICಯಲ್ಲಿ ಕೆಲಸ. ಬರವಣಿಗೆಗೆ ಯಾಕೋ ಏನೋ, ಮನಸ್ಸು ಕೊಡಲಿಲ್ಲ. ಕನ್ನಡ ಭಾಷೆ ಇವರ ಕೊಡುಗೆಯಿಂದ ವಂಚಿತವಾಯಿತು.

ವಿ.ವಿ. ಶ್ರೀನಿವಾಸರಾಯರು ವಿದ್ಯುಚ್ಛಕ್ತಿ ಇಲಾಖೆಯವರು. ಸಂಜೆ ಹೊತ್ತು ಪಾಠ ಹೇಳುವರು. ಯೋಗ್ಯ ರೀತಿಯಲ್ಲಿ ಸಂಪಾದಿಸಿ, ಖರ್ಚನ್ನು ಹಿಡಿತದಲ್ಲಿಟ್ಟು ಸಾಕಷ್ಟು ಹಣ ಕೂಡಿಸಿಟ್ಟಿದ್ದರು. ಜಿಗಟು ಆಸಾಮಿ. ಆದರೆ ದಯಾರ್ದ್ರಹೃದಯಿ. ಯಾರಾದರೂ ಕಷ್ಟದಲ್ಲಿದ್ದಾಗ ಕೇಳಿದರೆ ಇಲ್ಲ ಎಂದುದೇ ಇಲ್ಲ.

ರಸಿಕ. ಯಾವಾಗಲೂ ನಕ್ಕು ನಗಿಸುತ್ತಲೇ ಇರುವವರು. ನಾಟಕವನ್ನು ಹಿಡಿದು ಸಂಸಾರವನ್ನು neglect ಮಾಡುವುದೋ ನಾಟಕ ಸೇರಿ casual ಆಗಿ ಇರುವುದೋ ಮಾಡಿದ್ದಿಲ್ಲ.

ITI ರಾಮರಾಯರು ಬಲು ಚುರುಕಿನವರು. ಹನುಮಂತ-ನಗರದಿಂದ ರಾಮಮಂದಿರಕ್ಕೆ ನಡೆದು ಬಂದು ಮತ್ತೆ rehearsal ಮುಗಿಸಿ ನಡೆಯುತ್ತಲೇ ಮರಳುವರು. ಹಾಸ್ಯಪಾತ್ರಗಳಿಗೆ ಹೇಳಿ ಮಾಡಿಸಿದ ವ್ಯಕ್ತಿ. ಸಂಕೋಚ ಪ್ರಕೃತಿ. ಕಾಲನ ಕರೆ ಕೊಂಚ ತ್ವರಿತವಾಗಿಯೇ ಬಂದಿತೆನ್ನಬೇಕು.

ಮೂರ್ತಿ ಇದ್ದಲ್ಲಿ ಹಾಸ್ಯದ ಚಟಾಕಿಗಳು. Transport operator. ತಮಿಳಲ್ಲಿ ಒಳ್ಳೆ ಪರಿಜ್ಞಾನ. ವೃತ್ತಿಯಿಂದಾಗಿ ರಿಹರ್ಸಲ್‌ಗೆ irregularಉ. ತುಂಬಿದ್ದ ಕಲೆಯ ಬಲದಿಂದ ಯಾವುದೇ ಪಾತ್ರವನ್ನಾಗಲಿ ಸೊಗಸಾಗಿ ನಿರ್ವಹಿಸುವರು. ಚನ್ನಬಸವಯ್ಯ, ಸೀತಾರಾಂ, MICOದ ಸೇವೆಯವರು. ಬಲು ನಾಜೂಕು. ಬಲು ವಿನಯ. ಒಳ್ಳೆಯ ಕಲಾವಿದರು. ಸೀತಾರಾಂ ಚಲನಚಿತ್ರಗಳಲ್ಲಿಯೂ ನಟಿಸಿದ್ದರು ಎಂದು ನೆನಪು. ಎಂ.ಎಸ್. ರಂಗನಾಥ್ ಜೀವವಿಮಾನಿಗಮದವರು. ಬಹಳ ಗಂಭೀರ ಪ್ರವೃತ್ತಿ. ಸ್ನೇಹಮಯಿ. ಆರಕ್ಕೇರುವುದು, ಮೂರಕ್ಕಿಳಿಯುವುದು ಇವರ ಸ್ವಭಾವದಲ್ಲಿಲ್ಲ. ಶಿಸ್ತಿನ ವ್ಯಕ್ತಿ.

ಕೆ.ಆರ್. ನಗರದಲ್ಲಿ

೧೯೬೯ ಆಗಸ್ಟ್‌ನಲ್ಲಿ ನನಗೆ promotion ದೊರಕಿ ಕೆ.ಆರ್. ನಗರಕ್ಕೆ ವರ್ಗವಾಯಿತು. Office ನಲ್ಲಿ ಶಾಖಾಧಿಕಾರಿಗಳನ್ನು ಬಿಟ್ಟರೆ Supervisory officer ನಾನೊಬ್ಬನೇ ಆದ್ದರಿಂದ ಅತ್ಯಧಿಕ ಹೊಣೆ ತಲೆಯ ಮೇಲೆ ಬಿತ್ತು. ಆದರೂ ಸಿಬ್ಬಂದಿ ವರ್ಗದವರೆಲ್ಲ ಯುವಕರಾಗಿದ್ದು ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ನಡೆದುಕೊಳ್ಳುತ್ತಿದ್ದರು. ಎಲ್ಲರೂ ಒಳ್ಳೆ ವಿದ್ಯಾವಂತರು, ಬುದ್ಧಿಶಕ್ತಿಯಲ್ಲಿ ನನಗಿಂತ ಉತ್ತಮರು, ಕೆಲಸದಲ್ಲಿ ಸಂಪೂರ್ಣ ಶ್ರದ್ಧೆಯುಳ್ಳವರು. ಹಾಗಾಗಿ ಕೆಲಸ ಒಂದು ಹೊರೆ ಎಂದು ಅನ್ನಿಸಲೇ ಇಲ್ಲ. ವೇಳೆ ಸಾಲದು (ದಿನಕ್ಕೆ ಕೇವಲ ೨೪ ತಾಸುಗಳು ಮಾತ್ರವೇ ಆಗಿದ್ದರಿಂದ) ಎಂಬುದೊಂದು ಬಿಟ್ಟರೆ ಯಾವ ಆಯಾಸವೂ ಇಲ್ಲದೆ ಸಂತೋಷದಿಂದ ಕಾರ್ಯನಿರ್ವಹಣೆಯಾಗುತ್ತಿತ್ತು. ಶಾಖಾಧಿಕಾರಿಗಳಂತೂ, ನನ್ನ ಪುಣ್ಯಕ್ಕೆ ದೇವರಂತಹವರು. ಎಳ್ಳಷ್ಟೂ ಸ್ಥಾನಗರ್ವಿತರಾಗದೆ ಸಹೋದರನಂತೆ ವರ್ತಿಸುತ್ತಿದ್ದರು. ಮುಂದೆ ಬಂದ ಒಬ್ಬ ಅಧಿಕಾರಿಯಂತೂ ನನ್ನ ಸಹಪಾಠಿಯಾಗಿದ್ದವರು - ಶ್ರೀಧರ್ ಎಂದು. Field staff ಸಹ office ನ ಪ್ರಧಾನ ಅಂಗವಾಗಿತ್ತು. ಭಾಸ್ಕರರಾಯರು, ಬೆಳ್ಳಿಗೌಡರು, ಕೃಷ್ಣಭಟ್ಟರು (ಚಿತ್ರನಟ ವಿನಯಾಪ್ರಸಾದ್ ಅವರ ತಂದೆ) ಇವರುಗಳ ಕಾಲ ಸ್ವರ್ಣಯುಗವಾಗಿತ್ತು. ಕಛೇರಿಯಲ್ಲಿ ಒಂದು ಕುಟುಂಬದ ಸದಸ್ಯರಂತೆ ಎಲ್ಲ ನಡೆದುಕೊಳ್ಳುತ್ತಿದ್ದರು. ಈಗ ಅವರೆಲ್ಲ promotion ತೆಗೆದುಕೊಂಡು ದೊಡ್ಡ ದೊಡ್ಡ ಪದವಿಗಳನ್ನು ಪಡೆದು ಬೇರೆ ಬೇರೆ ಊರುಗಳಲ್ಲಿದ್ದರು ಸಹ ಭೇಟಿಯಾದಾಗ ತೋರುವ ಪ್ರೇಮವು ದೇವತೆಗಳನ್ನೂ ಹಿಂದೆ ಹಾಕತಕ್ಕಂಥದು. ಆಫೀಸರ್ಸ್ ಮತ್ತು ಸ್ಟಾಫ್ ಇರಲಿ, ಏಜಂಟ್ಸ್ ಕೂಡ ಒಡಹುಟ್ಟಿದವರಂತೆ ಬೆರೆಯುತ್ತಿದ್ದರು. ಪರಸ್ಪರ ಸುಖದುಃಖಗಳಲ್ಲಿ ಮನಃಪೂರ್ವಕ ಪಾಲುಗೊಳ್ಳುತ್ತಿದ್ದರು. ಒಂದಲ್ಲ, ಹಲವಾರು ಜನ್ಮಗಳ ಪುಣ್ಯಬಲದಿಂದ ಇದೆಲ್ಲ ಲಭ್ಯವಾಗಿರಬೇಕು.

ಶನಿವಾರ, ಭಾನುವಾರದ ಸಂಜೆಗಳಲ್ಲಿ ಶ್ರೀ ಯೋಗಾ ನಂದೇಶ್ವರ ಮಠ, ಕನ್ನಿಕಾಪರಮೇಶ್ವರಿ ದೇವಸ್ಥಾನ, ನಾರಾಯಣದೇವರ ಗುಡಿಯಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದೆ. ಧರ್ಮಶ್ರದ್ಧೆ ಉಳ್ಳ ಹಿರಿಯರು, ಕಿರಿಯರು ಸಾಕಷ್ಟು ಸಂಖ್ಯೆಯಲ್ಲಿ ಸೇರುತ್ತಿದ್ದರು. ಅದೊಂದು ಅಭೂತಪೂರ್ವ, ಅವರ್ಣನೀಯ ಅನುಭವ.

ಇಲ್ಲಿದ್ದಾಗಲೂ ಬೆಂಗಳೂರಿನಿಂದ ಬರುವ ಕರೆಗಳಿಗೆ ಓಗೊಟ್ಟು ಓಡಿಹೋಗಿ ನಾಟಕಗಳಲ್ಲಿ ಭಾಗವಹಿಸುತ್ತಿದ್ದೆ. ಕ್ರಮೇಣ ಇದೂ ಕಡಮೆಯಾಗುತ್ತ ಬಂತು. ಬರವಣಿಗೆ ಮಾತ್ರ ಸಾಗಿತ್ತು. ಅನಂತರ ಅದೂ ಇಳಿಮುಖವಾಯಿತು. ಎಲ್ಲಿಯಾದರೂ drama competitions ಆದರೆ ತೀರ್ಪುಗಾರನಾಗಿ ಕರೆಯುತ್ತಿದ್ದರು.

ಸುತ್ತಮುತ್ತಲಿನ ಶಾಲಾಕಾಲೇಜುಗಳಲ್ಲಿ ಯಾವುದಾದರೂ ಸಮಾರಂಭಗಳಾದರೆ ಭಾಷಣ ಮಾಡಲು ಆಹ್ವಾನವಿರುತ್ತಿತ್ತು. ಊರಿನ ಸಮಸ್ತ ಜನರ ಪರಿಚಯ ಒಂದಲ್ಲ ಒಂದು ವಿಧವಾಗಿ ಇದ್ದುದರಿಂದ ಜೀವನಕ್ಕೆ ಒಂದು ವಿಶಾಲ ಅರ್ಥ ದೊರಕಿತು. ಚಟುವಟಿಕೆಗಳ ಬಗೆ ಬೇರೆಯಾಯಿತು. ನಾನು ಊರು ಬಿಟ್ಟು ಹಲವಾರು ವರ್ಷಗಳೇ ಕಳೆದಿದ್ದರೂ ಅಲ್ಲಿಯ ನಂಟು ಇನ್ನೂ ಹೋಗಿಲ್ಲ. ಕುಟುಂಬ ಮಾತ್ರ ಯಥಾವತ್ತಾಗಿ ನನ್ನವಳ ಸೇವೆಯಿಂದ ಮುನ್ನಿನಂತೆಯೇ ನಡೆಯುತ್ತಿದೆ.

ಕಾಲಕ್ರಮೇಣ ನಾಟಕರಚನೆಯತ್ತ ಹೆಚ್ಚುಹೆಚ್ಚಾಗಿ ಮನಸ್ಸು ವಾಲುತ್ತ ಹೋಯಿತು. ಸಾಧಾರಣವಾಗಿ ಹಾಸ್ಯಪ್ರಧಾನ ನಾಟಕಗಳಲ್ಲಿ ನನ್ನ ಒಲವು. Perhaps **ಪರಮೇಶ್ವರ ಪುಲಿಕೇಶಿ** (**ಸಂಚು**-ಇದನ್ನು ದುಃಖಾಂತ ನಾಟಕವೆಂದು ಕರೆಯಬಹುದಾದರೆ) ಬಿಟ್ಟರೆ ದುಃಖಾಂತ ನಾಟಕ ಯಾವುದೂ ಬರೆಯಲಿಲ್ಲ. ಬರೆದ

ನಾಟಕಗಳನ್ನು ಅಚ್ಚುಕಟ್ಟಾಗಿ ಜೋಪಾನ ಮಾಡುವ ಬುದ್ಧಿ ನನಗಿರಲಿಲ್ಲ. ಎಷ್ಟೋ ಬಾರಿ ಇಡೀ ರಾತ್ರಿ ಕುಳಿತು ಬರೆದದ್ದು ಉಂಟು. ಕೆಲ ಕಾಲಾನಂತರ ಈ ಹಾಳೆಗಳಿಗಾಗಿ ಹುಡುಕಾಡಿದ್ದೂ ಉಂಟು. ಕೆ.ಆರ್. ನಗರಕ್ಕೆ ವರ್ಗವಾಗಿ ಹೋದಮೇಲೆ ಏಳೆಂಟು ವರ್ಷಗಳಲ್ಲಿ ಸುಮಾರು ಆರೆಂಟು ನಾಟಕಗಳನ್ನು ಬರೆದಿರಬಹುದು. ಅಷ್ಟೆ.

ಬಗೆಬಗೆಯ functionಗಳಲ್ಲಿ ಭಾಷಣ ಮಾಡುವುದು, ದೇವಸ್ಥಾನದಲ್ಲಿ ಉಪನ್ಯಾಸ ಮಾಡುವುದು, ಇದು ಬೆಳೆಯಿತು. ಬೆಂಗಳೂರಿನಿಂದ ಹಲವಾರು ಸ್ನೇಹಿತರು ಕರೆ ನೀಡಿ ತಮ್ಮ ನಾಟಕಗಳಲ್ಲಿ ಪಾತ್ರವಹಿಸುವಂತೆ ಕೋರುತ್ತಿದ್ದರು. ಯಾಕೋ ಮನಸ್ಸು ಅದರಿಂದ ವಿಮುಖವಾಗಿ ನಿರಾಕರಿಸುತ್ತಿದ್ದೆ. ಕ್ರಮೇಣ ಕರೆಗಳೂ ನಿಂತುಹೋದವು.

ಆಗ ಈಗ make up ಮಾಡುವಂತೆ ಯಾರಾದರೂ ಅಪೇಕ್ಷಿಸಿದರೆ ಮಾಡುತ್ತಿದ್ದೆ. Competitions ನಲ್ಲಿ Judge ಆಗಿ ಕೂರುತ್ತಿದ್ದೆ.

ಸನ್ಮಾನಗಳು

ಅ.ನ. ಕೃಷ್ಣರಾಯರು ಒಮ್ಮೆ K.R. Nagarಕ್ಕೆ ಭೇಟಿಯಿತ್ತಾಗ ಅವರನ್ನು ಕಂಡು ನನ್ನ ಗೌರವ ಸಲ್ಲಿಸಿದೆ. ಅವರಿಗೆ ಆಶ್ಚರ್ಯವೋ ಆಶ್ಚರ್ಯ. "ಏನ್ರೀ ಶ್ರೀಕಂಠಯ್ಯ ಯಾವ್ದೂ ಓಡಿಯಾಟವೇ ಕಾಣೆ" ಎಂದು ಆತ್ಮೀಯತೆಯಿಂದ ಪ್ರಶ್ನಿಸಿದರು. ಹಾಗೆಯೇ ಭದ್ರಗಿರಿ ಕೇಶವದಾಸರು ಪ್ರವಚನಕ್ಕಾಗಿ ಬಂದಿದ್ದು , ಅದು ಮುಗಿದ ನಂತರ ನನ್ನನ್ನು ಕಂಡು ಓಡಿಬಂದರು. ಕೈಗಳನ್ನು ಹಿಡಿದು ಅತ್ಯಂತ ಪ್ರೀತಿಯಿಂದ ಮಾತನಾಡಿದರು. "ಬೆಂಗಳೂರನ್ನು ಬಿಡಬಾರದಿತ್ತು ನೀವು. ಎಂಥ ನಷ್ಟವಾಯಿತು" ಎಂದು ಹಲುಬಿದರು.

ಒಂದು ಸಾರಿ ಬೆಂಗಳೂರಿಗೆ ನಾನೂ, ನನ್ನ ಪತ್ನಿಯೂ ಹೋಗಿದ್ದಾಗ, ಹೋಟೆಲೊಂದರಲ್ಲಿ ಕಾಫಿ ಕುಡಿಯುತ್ತಿದ್ದೆವು. ಮತ್ತೊಂದು ಸಾಲಿನಲ್ಲಿ ಕುಳಿತ ಮೂರು ನಾಕು ಜನ ಬಿಡದೆ ನಮ್ಮನ್ನೇ ನೋಡುತ್ತಿದ್ದುದು ಕಂಡು ನನ್ನಾಕೆ ಮುಜುಗರ ಪಟ್ಟುಕೊಂಡಳು. "ಅವರನ್ನು ಕಟ್ಟಿಕೊಂಡು ನಿನಗೇನು, ನಿನ್ನ ಪಾಡಿಗೆ ನೀನು ಕಾಫಿ ಕುಡಿಯಬಾರದೆ ?" ಎಂದೆ. ಸ್ವಲ್ಪ ಹೊತ್ತಾಗುತ್ತಲೇ ಅವರೆಲ್ಲ ಎದ್ದು ನಮ್ಮ ಬಳಿಗೇ ಬಂದು "ನಮಸ್ಕಾರ ಸಾರ್" ಎಂದರು ! "I am sorry, ಯಾರೋ ತಿಳಿಯಲಿಲ್ಲ" ಎಂದೆ. "ನೀವು ಮರೆತರೂ, ನಮಗೆ ಅನ್ನ ಕೊಟ್ಟ ನಿಮ್ಮನ್ನು ನಾವು ಮರೆಯುವುದು ಹೇಗೆ? ನಾವು ಧನಪಾಲನ ಹತ್ತಿರ ಕೆಲಸ ಮಾಡುತ್ತಿದ್ದವರು'' ಎಂದು ಒಬ್ಬೊಬ್ಬರೂ ಪರಿಚಯ ಮಾಡಿಕೊಂಡರು. ಇವರೆಲ್ಲ ನಮ್ಮ ಹಲವಾರು ನಾಟಕಗಳಿಗೆ ಉಡುಗೆ-ತೊಡುಗೆ ಇತ್ಯಾದಿಗಳನ್ನು ತಂದು ಪ್ರಸಾಧನದಲ್ಲಿ ಸಹಕರಿಸುತ್ತಿದ್ದರು.

ಒಂದು ಸಾರಿ ಮೈಸೂರಿನ ಕಾರ್ಪೊರೇಶನ್ ಬ್ಯಾಂಕ್‌ನಲ್ಲಿ ಯಾವುದೋ ಚೆಕ್ ಮುರಿಸಲು ಹೋಗಿ ಕಾಯುತ್ತ ಕೂತಿದ್ದೆ. ಅಲ್ಲಿಯ ಕ್ಯಾಷಿಯರ್ ನನ್ನನ್ನು ಕರೆದು "ಎಷ್ಟು ಸಾರ್ amountಉ? ಕೊಡುತ್ತೇನೆ ಹೇಳಿ" ಎಂದಾಗ ಅಚ್ಚರಿಯಿಂದ ಕಣ್ಣಣ್ಣು ಬಿಟ್ಟೆ. "ನಿಮಗೆ ನನ್ನ ಗುರುತು ಹಿಡಿಯುವುದು ಸಾಧ್ಯವಿಲ್ಲ. ಆದರೆ ನಾನು ಮರೆತಿಲ್ಲ. ನಾನು ಓದಿದ್ದು K.R. Nagara ದಲ್ಲಿ. ಬೇಕಾದಷ್ಟು ಸಾರ್ತಿ ನಿಮ್ಮ ಭಾಷಣಗಳನ್ನು ಕೇಳಿದ್ದೇನೆ. LIC ಶ್ರೀಕಂಠಯ್ಯನವರಲ್ಲವೆ, ನೀವು ?" ಎಂದ ಆ ಯುವಕನು ಚೆಕ್ ಪಾಸಾಗಿ ಬರುವ ಮುನ್ನವೇ ಹಣ ಸಲ್ಲಿಸಿ ಮನತುಂಬಿದ. ಪರವಾಗಿಲ್ಲ, ಒಂದು ರೀತಿ ಉಪಾಧ್ಯಾಯರುಗಳ ಪಂಜ್ತೆಗೇ ಸೇರುತ್ತಿದ್ದೇನೆ ಎಂದುಕೊಂಡೆ.

ಕೆ.ಆರ್. ನಗರದಿಂದ ನನಗೆ ಮೈಸೂರಿಗೆ ವರ್ಗವಾಯಿತು. Railway Station ಹಿಂಭಾಗದಲ್ಲಿ ನಮ್ಮ ಕಛೇರಿ. ಕೇರಳದಿಂದ ಬಂದಿದ್ದ ಕೆಲವರು ನಮ್ಮ office ನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಕನ್ನಡ ಬಾರದು. ಸಂಜೆಹೊತ್ತು ತರಗತಿಗಳನ್ನು ನಡೆಸಿ ಕನ್ನಡ ಕಲಿಸಬಾರದೇಕೆ ಎಂದು ಅನ್ನಿಸಿತು. ಹಾಗೆಯೇ ಒಂದು ಕನ್ನಡ ಸಂಘವನ್ನು ಸ್ಥಾಪಿಸುವ ಇಚ್ಛೆಯೂ ಮೂಡಿಬಂತು. ಡಾ॥ ರಾಮಶೇಷನ್, ಟಿ.ಎನ್.ಎಸ್. ಶಾಸ್ತ್ರಿಗಳು, ಗುರುರಾಜ್, ಗುರುಮೂರ್ತಿ, ಕುಮಾರಸ್ವಾಮಿ ಮುಂತಾದ ಸ್ನೇಹಿತರೆಲ್ಲ ಉತ್ಸಾಹದಿಂದ ಒಪ್ಪಿಗೆ ಕೊಟ್ಟರು. ಸಂಘದ ಸ್ಥಾಪನೆಯೂ ಆಯಿತು. ಪ್ರತಿ ತಿಂಗಳೂ ಒಂದಲ್ಲ ಒಂದು ಕಾರ್ಯಕ್ರಮ ಏರ್ಪಡಿಸುತ್ತಿದ್ದೆವು. ಡಾ॥ ಸಿ.ಕೆ.ಎನ್. ರಾಜ, ಪ್ರೊ॥ ಟಿ.ವಿ ವೆಂಕಟಾಚಲಶಾಸ್ತ್ರಿಗಳೇ ಮೊದಲಾದ ವಿದ್ವನ್ಮಣಿಗಳಿಂದ ಭಾಷಣ ನಡೆಯಿತು. Magic show, debate, Essay writing ಹೀಗೆಲ್ಲ ನಡೆಯಿತು. ಸಂಜೆ ಹೊತ್ತು ಮಲೆಯಾಳಿಗಳಿಗೆ ಕನ್ನಡ ಕಲಿಸುವುದು ಒಳ್ಳೆಯ ಪ್ರತಿಕ್ರಿಯೆ ಪಡೆಯಿತು.

ಮುಂದೆ ಒಂದು Library ಮಾಡಬೇಕೆಂಬ ಬಯಕೆಯಾಯಿತು. 'ದಾಕ್ಷಿಣ್ಯ' ನಾಟಕವನ್ನು LIC staff ನಿಂದ ಆಡಿಸಿ, ಬಂದ ಹಣದಿಂದ ಸುಮಾರು ನಾಲ್ಕು ಸಾವಿರ ರೂಪಾಯಿ ಮೌಲ್ಯದ ಕನ್ನಡ ಪುಸ್ತಕಗಳನ್ನು ಕೊಂಡೆವು. ಮೈಸೂರು ಆಕಾಶವಾಣಿಯವರ ಕೃಪೆಯಿಂದ ಕೆಲವಾರು ರೇಡಿಯೋ ಕಾರ್ಯಕ್ರಮಗಳನ್ನು ಕೊಟ್ಟೆವು.

ಅವರ ವತಿಯಿಂದಲೇ ನನ್ನ 'ಮನೆ ಬಿಡಿ' ನಾಟಕ CFTRI Auditorium ನಲ್ಲಿ ಅಭಿನಯಿಸಲ್ಪಟ್ಟಿತು.

ಅನಂತರ ನನಗೆ ವಿಭಾಗ ಕಛೇರಿಗೆ ವರ್ಗವಾಯಿತು. ಅಲ್ಲಿಂದ Promotion ದೊರಕಿ Agents Branch ನಲ್ಲಿ ಕೆಲಕಾಲ ಕೆಲಸ ಮಾಡಿದೆ.

ಅಷ್ಟು ಹೊತ್ತಿಗೆ ಈ ಎಲ್ಲ ಓಡಿಯಾಟಗಳೂ ಕಡಮೆಯಾಗುತ್ತ ಬಂದಿದ್ದವು. ಪೂರ್ತಿ ನಿಂತಿರಲಿಲ್ಲ.

ಚಿಕ್ಕದೇವರಾಜ ನಾಟಕ ಬರೆಯಬೇಕಾದರೆ ವಿಷಯ ಸಂಗ್ರಹಣೆಗೆ ಆರು ತಿಂಗಳಿಗೂ ಮೇಲ್ಪಟ್ಟು ಬೇಕಾಯಿತು. ಮೈಸೂರು ಅರಮನೆಯ ಪತ್ರಾಗಾರ /ಗ್ರಂಥ ಭಂಡಾರದವರು ಈ ನಿಟ್ಟಿನಲ್ಲಿ ನೀಡಿದ ಸಹಕಾರ ಅವಿಸ್ಮರಣೀಯ. ಅಲ್ಲಿಯ ಮುಖ್ಯಸ್ಥರು ತಾವೇ ಸ್ವತಃ ಹಲವಾರು ಗ್ರಂಥಗಳನ್ನು ಒದಗಿಸಿಕೊಟ್ಟುದೇ ಅಲ್ಲದೆ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದರು. University Library ಯವರೂ ಬಹಳಷ್ಟು ಸಹಾಯವೆಸಗಿದರು. ಎಲ್ಲ materials collect ಮಾಡಿ, silt ಮಾಡಿ, dramatic element introduce ಮಾಡಬಹುದಂಥಾದ್ದನ್ನೆಲ್ಲ ಸೇರಿಸಿ ಈ ನಾಟಕ ಬರೆದೆ. Stage ಮಾಡುವುದು ಆಗಲಿಲ್ಲ. ಕಾರಣ ಇಷ್ಟೆ. ವೇಷ ಭೂಷಣಗಳಾಗಲಿ, ಹಿನ್ನೆಲೆಯಾಗಲಿ, ಸಂಗೀತವಾಗಲಿ, ಹೀಗೆಯೇ ಇರಬೇಕೆಂದು ಮನಸ್ಸಿನಲ್ಲಿ ಅದಕ್ಕೊಂದು ರೂಪ ಕೊಟ್ಟಿದ್ದೆ. ಹೀಗಾಗಬೇಕಾದರೆ ಸುಮಾರಷ್ಟು costly production ಏ ಆಗಬೇಕಿತ್ತು.

ಹೋಗಲಿ, ಇಷ್ಟೆಲ್ಲ ಕಷ್ಟಪಟ್ಟಿದ್ದಕ್ಕೆ ನಾಟಕದ ಪ್ರತಿಯಾದರೂ ನನ್ನಲ್ಲಿ ಉಳಿದಿದ್ದರೆ ಸಮಾಧಾನವಾಗುತ್ತಿತ್ತು. ಇವತ್ತಿನವರೆಗೂ ಅದು ಕಣ್ಣಿಗೆ ಬಿದ್ದಿಲ್ಲ. ಮೈಸೂರು ಅರಸರೆಲ್ಲರ ಬಗ್ಗೆ ನಾಟಕಗಳನ್ನು ಬರೆಯಬೇಕೆಂಬ ಆಶಯ ನನ್ನಲ್ಲಿ ಇತ್ತು. ಸಾಕಷ್ಟು material ಅನ್ನೂ ಸಂಗ್ರಹಿಸಿದ್ದೆ. ಅದನ್ನು ನೋಡಿಯೇ ಶ್ರೀ ಸುಧೀಂದ್ರ (Karnataka Film Development Corportation-managing director) ಅವರು "ಇವುಗಳನ್ನು ಸಾಧಾರಣ ನಾಟಕಗಳ ರೂಪದಲ್ಲಿ ಇಡುವುದು ಬೇಡ. Light and shadow ರೀತಿಯಲ್ಲಿಯೇ ಇನ್ನೂ effective ಆಗಿ present ಮಾಡೋಣ", ಎಂದರು. Preliminaries ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೆವು. ಅವರದು ಅದ್ಭುತವಾದ ಕಲ್ಪನೆ. ಅದು ಸಾಕಾರಗೊಂಡಿದ್ದರೆ stage play ನಲ್ಲಿ ದೊಡ್ಡ ಕ್ರಾಂತಿಯೇ ಆಗುತ್ತಿತ್ತು. ವಿಧಿ. ಇನ್ನೂ ಸಣ್ಣ ವಯಸ್ಸಿನಲ್ಲಿಯೇ ಭಗವಂತನ ಪಾದಾರವಿಂದ ಸೇರಿಬಿಟ್ಟರು. ನನ್ನ ಹಲವಾರು ತಿಂಗಳುಗಳ ಪರಿಶ್ರಮ ನೆಲ ಕಚ್ಚಿತು. ಕಲಾಪ್ರಪಂಚ ಒಬ್ಬ ಬಹು ದೊಡ್ಡ ಕಲಾವಿದನನ್ನು ಕಳೆದುಕೊಂಡಿತು. ನನ್ನ ನಾಟಕಗಳನ್ನು ಬರೆಯುವ ಅಭಿಪ್ರಾಯವೂ ಕಮರಿಹೋಯಿತು. 'ವಿದ್ಯಾ ದದಾತಿ ವಿನಯಂ' ಎಂಬುದು ಇವರಲ್ಲಿಯೂ ಅಕ್ಷರಶಃ ಸತ್ಯ. ತಮ್ಮ ವಿದ್ವದ್ಸಂಪನ್ನತೆಯನ್ನು ಇವರು ಎಂದೂ ಅಹಂಕಾರದಿಂದ ಮೆರೆದದ್ದಿಲ್ಲ.

ನಮ್ಮ ಕಾಲದಲ್ಲಿ ಹವ್ಯಾಸಿ ಕಲಾವಿದರಾಗಿ ಸ್ತ್ರೀಯರು ಈಗಿನ ಸಂಖ್ಯೆಯಲ್ಲಿ ಬರುತ್ತಿರಲಿಲ್ಲ. ಬಹುಪಾಲು ವೃತ್ತಿಕಲಾವಿದರನ್ನೇ ಅವಲಂಬಿಸಬೇಕಾಗಿತ್ತು. ಹಾಗಾಗಿ ಅನೇಕ ನಟನಟಿಯರ ಪರಿಚಯವಾಗಿ ಅವರ ಜೀವನವನ್ನು ಹತ್ತಿರದಿಂದ ನೋಡುವಂತೆ ಆಯಿತು. ಕೆ.ಆರ್. ನಗರದಲ್ಲಿದ್ದಾಗ ನಾಟಕ ಕಂಪೆನಿ ಒಂದು ಅಲ್ಲಿ camp ಮಾಡಿತ್ತು. ಪ್ರದರ್ಶನದ ಉದ್ಘಾಟನೆಗೆ ನನ್ನನ್ನು ಆಹ್ವಾನಿಸಿದ್ದರು. ನನ್ನ ಭಾಷಣದಲ್ಲಿ ವೃತ್ತಿಕಲಾವಿದರ ಸ್ಥಿತಿಗತಿ, ಅವರಿಗಿದ್ದ ನೆರವಿನ ಅಗತ್ಯ ಇತ್ಯಾದಿ ಕುರಿತು ಪ್ರಸ್ತಾಪ ಮಾಡಿದೆ. ಆ ಕಂಪನಿಯಲ್ಲಿದ್ದ ಹಿರಿಯ ಕಲಾವಿದರು (ಅವರಿಗೆ ಸಾಕಷ್ಟು ವಯಸ್ಸಾಗಿತ್ತು) ಒಬ್ಬರು ನಾಟಕ ಮುಗಿದನಂತರ ನಮ್ಮ ಮನೆಗೆ ಬಂದು ತಮ್ಮ ದುಃಖ ತೋಡಿಕೊಂಡರು. "ನಾಟಕಗಳು ಚೆನ್ನಾಗಿ ನಡೆದರೆ ಪರವಾಗಿಲ್ಲ ಸಾರ್. ಕೆಲವು ಕ್ಯಾಂಪ್‌ಗಳಲ್ಲಿ ಸಾಕಷ್ಟು ಕಲೆಕ್ಷನ್ ಇಲ್ಲದೆ ಇದ್ದಾಗ ನಮ್ಮ ಪಾಡು ಯಾರಿಗೂ ಬೇಡ. ಒಮ್ಮೆ ಯಾವ ಮಟ್ಟಕ್ಕೆ ಬಂದಿತ್ತೆಂದರೆ ನನ್ನ ಮಗನಿಗೆ ನೂರು ಪೇಜಿನ ನೋಟ್‌ಬುಕ್, ಪೆನ್ಸಿಲ್ ಕೊಡಿಸಲಾರದೆ ಹೋದೆ" ಎಂದು ಕಣ್ಣೀರು ಸುರಿಸಿದರು.

"ಸಾರ್, ಸರ್ಕಾರದಲ್ಲಿ ನಮ್ಮಂಥವರಿಗೆ ಪೆನ್ಷನ್ ಕೊಡ್ತಾರಂತೆ, ಸ್ವಲ್ಪ ಸಹಾಯ ಮಾಡ್ತೀರ ?" ಎಂದು ದೈನ್ಯದಿಂದ ಬೇಡಿಕೊಂಡರು. ನನ್ನ ಕೈಲಾದ ಪ್ರಯತ್ನ ಮಾಡುತ್ತೇನೆಂದು ಭರವಸೆ ಕೊಟ್ಟು ಬೆಂಗಳೂರಿಗೆ ಹೋಗಿ 'ಸಂಗೀತ ನಾಟಕ ಅಕಾಡಮಿ'ಯ ಸದಸ್ಯರಾಗಿದ್ದ ಶ್ರೀ ಎಂ.ಎಸ್. ನಟರಾಜನ್ ಅವರನ್ನು ಕಂಡು ಈ ಬಗ್ಗೆ ಏನಾದರೂ ಮಾಡಬೇಕೆಂದು ಕೇಳಿಕೊಂಡೆ. ಅವರನ್ನು ಕಳುಹಿಸಿಕೊಡಿ, ಅವರಿಂದ ಒಂದು appeal ತೆಗೆದುಕೊಂಡು ಖಂಡಿತ ಸಹಾಯ ಮಾಡುತ್ತೇನೆಂದು ಆಶ್ವಾಸನೆ ಇತ್ತರು. ಆ ಕಲಾವಿದರಿಗೆ ವಿಷಯವೆಲ್ಲ ತಿಳಿಸಿ ಬೆಂಗಳೂರಿಗೆ ಕಳುಹಿಸಿಕೊಟ್ಟೆ. ಮುಂದೆ ನಾಟಕ ಕಂಪೆನಿಯ camp ಬದಲಾಯ್ತು. ಅನಂತರ ಏನಾಯ್ತೋ ತಿಳಿಯದು.

ಒಮ್ಮೆ ವೃತ್ತಿಪರ ಕಲಾವಿದೆಯೊಬ್ಬರನ್ನು ನಮ್ಮ ನಾಟಕಕ್ಕೆ ಗೊತ್ತುಮಾಡಲು ನನ್ನ ಮಿತ್ರರೊಬ್ಬರು ಅವರ ಮನೆಗೆ ಕರೆದೊಯ್ದರು. ನಗರ್ತರಪೇಟೆಯ ಒಂದು ಸಂದಿಯಲ್ಲಿ ಅವರ

ಮನೆ. ಮನೆ ಎಂದರೆ ಸೀಮೆಎಣ್ಣೆ ಡಬ್ಬದ ತಗಡುಗಳನ್ನು ಕಟ್ಟಿ ಮಾಡಿದ್ದ ಗೂಡು. Drainage ಇಲ್ಲದ ಕಾರಣ ಹೊಲಸು ನೀರೆಲ್ಲ ಅಲ್ಲಲ್ಲೇ ಕಟ್ಟಿ ನಿಂತಿತ್ತು. ದುರ್ನಾತ. ಹೆಜ್ಜೆ ಊರಲೂ ಸರಿಯಾದ ಸ್ಥಳವಿಲ್ಲ. ಭರತನಾಟ್ಯ ಮಾಡುತ್ತ ಹಾಗೂ ಹೀಗೂ ಒಳಸೇರಿದೆವು. ಮೇಲೆ ಕಲ್ನಾರಿನ sheet. ಒಳಗೆಲ್ಲ ಹೊಗೆ ತುಂಬಿತ್ತು. ಕೂಡಲು ಸ್ಥಳವಿಲ್ಲ. ಅಲ್ಲಿಯೇ ಒಂದು ಬದಿಯಲ್ಲಿ ಪುರಳೆಗಳನ್ನು ಹಚ್ಚಿಕೊಂಡು ಹೊಗೆಯಲ್ಲಿ ಉಸಿರು ಕಟ್ಟುತ್ತ, ಊದುತ್ತ ಅಡುಗೆ ತಯಾರಿ ನಡೆದಿತ್ತು. ಮತ್ತೊಂದು ಬದಿಯಲ್ಲಿ ಚಾವಣಿಯಿಂದ ಇಳಿಬಿಟ್ಟ ಜೋಲಿಯಲ್ಲಿ ಎಳೆಕೂಸು. ಜೀರ್ಣವಸ್ತ್ರಗಳನ್ನು ಧರಿಸಿ ಬಂದ ಕಲಾವಿದೆ. ವಿಧವಿಧ ಅಲಂಕಾರಗಳಲ್ಲಿ stage ಮೇಲೆ ಬಂದು ನಗುತ್ತ, ಹಾಡುತ್ತ, ನರ್ತಿಸುತ್ತ, ಹಾವಭಾವ ವಿಲಾಸಗಳಿಂದ ಮೆರೆಯುತ್ತ ಕುಣಿಯುವ ನಟಿಯೆಲ್ಲಿ ? ನೋವೇ ಮೂರ್ತಿವೆತ್ತಂತೆ ಇದ್ದ ಈಕೆಯೆಲ್ಲಿ? ಎಂದು ಸಖೇದಾಶ್ಚರ್ಯವಾಯ್ತು. “ಅಣ್ಣಯ್ಯ, ನಿಮ್ಮನ್ನ ಕೂತ್ಕೋಳಿ ಅಂತ ಹೇಳೋ ಸ್ಥಿತೀಲಿ ನಾನಿಲ್ಲ. ನಿಮಗೂ ಈ ಹೊಗೆ, ಕಮಟು ತೊಂದರೆ ಆದೀತು. ಹೊರಗಡೆಯೇ ಹೋಗೋಣ” ಎಂದರು ಆಕೆ. ಅನಂತರ ಬೀದಿಯಲ್ಲಿ ನಿಂತು ನಮ್ಮ ನಾಟಕದ ಬಗ್ಗೆ ತಿಳಿಸಿ ಸಂಭಾವನೆ ಗೊತ್ತು ಮಾಡಿದೆವು. ನಮ್ಮ ಸಮಿತಿಯವರನ್ನು ಒಪ್ಪಿಸಿ ಒಪ್ಪಂದಕ್ಕಿಂತ ಹೆಚ್ಚಿನ ಸಂಭಾವನೆಯನ್ನು ಕೊಡಿಸಿದೆ.

ಅದೃಷ್ಟ ಚೆನ್ನಾಗಿದ್ದು , ಕಂಪೆನಿ ಚೆನ್ನಾಗಿ ನಡೆದು, ಕೈಯಲ್ಲಿ ಅಷ್ಟು ಹಣ ಕೂಡಿದರೆ ಅಹಂಕಾರದಲ್ಲಿ ಮೆರೆಯುವ ಕಲಾವಿದರೂ ಇಲ್ಲದಿಲ್ಲ.

ಹಾಗೆಯೇ ತನ್ನ ಪಾತ್ರ ಚೆನ್ನಾಗಿದ್ದು ನಾಟಕಕ್ಕೆ ಕಳೆ ಕಟ್ಟುವುದು ತನ್ನ ಅಭಿನಯ, ಸಂಗೀತಗಳಿಂದ ಎಂದು ಗೊತ್ತಾದರೆ ಮಾಲೀಕರನ್ನು ಗೋಳುಗುಟ್ಟಿಸುವವರೂ ಉಂಟು. ಇದ್ದಕ್ಕಿದ್ದ ಹಾಗೇ “ಊರಿನಿಂದ ತಂತಿ ಬಂದಿದೆ, ಅಮ್ಮನಿಗೆ ಹುಷಾರಿಲ್ಲ. ತಕ್ಷಣ ಊರಿಗೆ ಹೋಗಬೇಕು. ಸಂಜೆ ನಾಟಕದಲ್ಲಿ ಪಾತ್ರ ಮಾಡಲು ಸಾಧ್ಯವಿಲ್ಲ” ಎಂದು ಮಧ್ಯಾಹ್ನ ಹೇಳಿದರೆ ಮಾಲೀಕನ ಗತಿಯೇನು? ಅವನು ಕೇಳಿದಷ್ಟು ಹಣ ಹ್ಯಾಗಾದರೂ ಜತೆ ಮಾಡಿ ಕೊಟ್ಟಕೂಡಲೆ ಅಮ್ಮನ ಮೈ ಸುಧಾರಿಸುತ್ತಿತ್ತು. ನನ್ನ ಪರಿಚಯಸ್ಥ ಮಾಲೀಕರೊಬ್ಬರು ಒಮ್ಮೆ ಪೇಚಾಡಿಕೊಂಡರು. “ಸಾರ್, ನಾನು ಈ ನಾಟಕದ ಕಂಪನಿ ಕಟ್ಟೋ ಬದ್ಲು ಒಂದು ಸರ್ಕಸ್ಸನ್ನಾದ್ರೂ ಕಟ್ಟಬಹುದಾಗಿತ್ತು. ನಂಗೇ ಕೂಳಿಗೆ ಕಷ್ಟ ಆಗಿದೆ” ಎಂದು ಹಲುಬಿದರು. ಏನು ಮಾಡುವುದು? ಜಾಯಮಾನ. ಇದು ಬಿಟ್ಟು ಬೇರೆಯದನ್ನ ಹಿಡಿಯುವುದೂ ಕಷ್ಟ.

ಒಂದು ಸಾರಿ ಸುಬ್ಬಯ್ಯನಾಯ್ಡು ಅವರನ್ನು ಕಾಣಲು ಹೋಗಿದ್ದೆ. ಆಗತಾನೆ ಅವರು Revolving platform ಅಳವಡಿಸಿಕೊಂಡು ಪ್ರದರ್ಶನ ನೀಡುತ್ತಿದ್ದರು. ಅಂದರೆ stage ಮೇಲೆ ಒಂದು ಗುಂಡಗಿನ platform. ಹಿಂಬದಿಯಲ್ಲಿ ಒಂದು ದೃಶ್ಯ, ಮುಂಬದಿಯಲ್ಲಿ ಇನ್ನೊಂದು. ಏಕಕಾಲದಲ್ಲಿ ಎರಡು ದೃಶ್ಯಗಳ ಜೋಡಣೆ. ಮುಂದಿನ ದೃಶ್ಯ ಮುಗಿದು ದೀಪ ಆರುತ್ತಲೇ platform ತಿರುಗಿ ಹಿಂದಿನ ದೃಶ್ಯ ಮುಂಬರುವುದು. ಹೀಗೆ. ಯಾವುದೋ ನಾಟಕದ ರಿಹರ್ಸಲ್ ನಡೆಯುತ್ತಿತ್ತು. ಬ್ರಹ್ಮನ ಪಾತ್ರಧಾರಿ ಡೈಲಾಗ್ಸ್‌ಅನ್ನು ತಪ್ಪು ತಪ್ಪಾಗಿ ಉಚ್ಚರಿಸುತ್ತಿದ್ದರು. ಬೇಸತ್ತ ನಾಯ್ಡು ಅವರು, “ಏನಪ್ಪಾ ಇದು. ಬ್ರಹ್ಮನ ಬಾಯಲ್ಲಿ ಅಪಶಬ್ದವೆ ? ಹೀಗೆ ಹೇಳು” ಎಂದು ತಿದ್ದಿದರು. ನನ್ನತ್ತ ತಿರುಗಿ, “ನೋಡಿ ನಮ್ಮ ಸ್ಥಿತಿ. ಯಾವುದನ್ನಾಂತ ಗಮನಿಸುವುದು ? ಇರೋದು ನಾಲ್ಕು ಪಂಜ್ತಿ. ಅದನ್ನ ಸರಿಯಾಗಿ ಹೇಳಲಿಕ್ಕೂ ಆಗದು ನಮ್ಮ ನಟರಿಂದ. ವಿದ್ಯೆಯನ್ನಂತೂ ಕಲಿಯಲಿಲ್ಲ. ತನ್ನ ವೃತ್ತಿಯಲ್ಲಾದರೂ ಸಾಧನೆ ಮಾಡಬೇಕೆಂಬ ಆಸೆಯಾದರೂ ಬೇಡವೆ ?” ಎಂದು ಪೇಚಾಡಿಕೊಂಡರು.

ದೇವುಡು ನರಸಿಂಹಶಾಸ್ತ್ರಿಗಳು ಜ್ಞಾನವೃದ್ಧರು, ವಯೋವೃದ್ಧರು, ಪ್ರಾತಃಸ್ಮರಣೀಯರು. ಅವರ ಕಾದಂಬರಿ ಆಧರಿಸಿ **ವಿಜಯ ಮಾಲೆ** ನಾಟಕ ರಚಿಸಿದ್ದೆ. ಆಗ ಅವರನ್ನು ಕಾಣಲು ಅಡಿಗಡಿಗೆ ಹೋಗುತ್ತಿದ್ದೆ (ಆಗ ಅವರು ಬೆಂಗಳೂರಿನ ಶಂಕರಪುರದಲ್ಲಿದ್ದರು ಎಂದು ನೆನಪು). ಪುರಾಣ ಪುಣ್ಯಕಥೆಗಳ ಬಗ್ಗೆ ತಾಸುಗಟ್ಟಲೆ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅಪೂರ್ವ ಜ್ಞಾನಭಂಡಾರ ಅವರದು. ಹೊತ್ತು ಹೋಗುವುದೇ ತಿಳಿಯುತ್ತಿರಲಿಲ್ಲ. ದೇವುಡು ಅವರಿಗೆ ಅನ್ಯಾಯ ಕಂಡರಾಗದು. ಸಿಡಿದು ಬೀಳುವರು. ರೇಷನ್ ಯುಗ ಅದು. ಬಟ್ಟೆಗೂ ರೇಷನ್! “ಒಂದೂವರೆ ಮೊಳ ಕೊಟ್ಟು ಪಂಚೆ ಉಟ್ಟುಕೊ ಎಂದರೆ ಹೇಗೆ? ನನ್ನ ಮೈಗದು ಕೌಪೀನ ತಾನೆ ಆಗಬಹುದು? (ಅವರು ಸ್ವಲ್ಪ ಧಡೂತಿ ಆಸಾಮಿ) ಏನು ರಾಜ್ಯವೋ...ಆಡಳಿತವೋ ! ನೀವೆಲ್ಲ ಹುಡುಗರು ಹೋರಾಡಿ ಇವೆಲ್ಲ ಸರಿಪಡಿಸಬೇಕು. ನಿಮ್ಮ ನಾಟಕಗಳಲ್ಲಿ ಇವೆಲ್ಲ ತನ್ನಿ” ಎಂದು ಆಜ್ಞಾಪಿಸಿದರು. ಆಗ ಸೃಷ್ಟಿಯಾಗಿದ್ದು **ನಮ್ಮೂರ ಅಸೆಂಬ್ಲಿ** ನಾಟಕ.

ಇನ್ನೊಬ್ಬ ಮಹನೀಯರು ಪ್ರೊ॥ ಎಸ್.ಕೆ. ರಾಮಚಂದ್ರ ರಾಯರು. ನಾನು **ಪುರಂದರದಾಸರು** ನಾಟಕದ ರಚನೆಗೆ ತೊಡಗಿದಾಗ ಸಾಕಷ್ಟು ವಿವರಗಳನ್ನು ಹರಿಕಥಾರತ್ನ ವೇಣುಗೋಪಾಲದಾಸರು, ಗೋಪಾಲದಾಸರು, ವೆಂಕೋಬಾ ಚಾರ್ಯರು ಅವರೆಲ್ಲರಿಂದ ಪಡೆದು ಹೆಚ್ಚಿನ ಮಾಹಿತಿಗಾಗಿ

ರಾಯರಲ್ಲಿಗೆ ಹೋಗುತ್ತಿದ್ದೆ. ಅವರು ಆಡಿದ ಮಾತುಗಳಷ್ಟನ್ನೇ ನೆನಪಿಟ್ಟುಕೊಂಡರೆ ಸಾಕು, ನೂರು ನಾಟಕಗಳನ್ನು ರಚಿಸಬಹುದು ಎಂದೆನ್ನಿಸುತ್ತಿತ್ತು. Authentic ಆದದ್ದು ಮಾತ್ರ ಹೇಳುವರು. ಸಪ್ರೇಮದಿಂದ ಬರಮಾಡಿಕೊಂಡು ಎಲ್ಲ ಸಂದೇಹಗಳನ್ನೂ ನಿವಾರಿಸುತ್ತಿದ್ದರು.

ಕೃಷ್ಣದೇವರಾಯ ನಾಟಕ ಬರೆಯುವಾಗ ಪ್ರೊ|| ಚಿದಾನಂದ ಮೂರ್ತಿಯವರು ನೀಡಿದ ಸಲಹೆ-ಸಹಕಾರ ಅವಿಸ್ಮರಣೀಯ. University Libraryಗೆ ಕರೆದುಕೊಂಡು ಹೋಗಿ ತಾವೇ ನಿಂತು ಬೇಕಾದ ಪುಸ್ತಕಗಳನ್ನು ತೆಗೆದುಕೊಡುತ್ತಿದ್ದರು. ಪುರಸತ್ತೆಂಬ ಸೊಲ್ಲೇ ಇಲ್ಲವಾದರೂ ಸ್ವಲ್ಪವಾದರೂ ಬಿಡುವು ಮಾಡಿಕೊಂಡು ಸಹಾಯವೆಸಗುತ್ತಿದ್ದರು. "ನಿಮ್ಮ ಸೇವೆಯಿಂದ ನಾಟಕ ಕಲೆ ಶ್ರೀಮಂತವಾಗುವುದಾದರೆ ನಾನು ಇಷ್ಟಾದರೂ ಮಾಡಬೇಡವೆ" ಎಂದು ಬೆನ್ನು ಚಪ್ಪರಿಸುತ್ತಿದ್ದರು.

ಅಜ್ಜಂಪುರದಲ್ಲಿ ಪ್ರತಿವರ್ಷ ಅಖಿಲ ಕರ್ನಾಟಕ ನಾಟಕ ಸ್ಪರ್ಧೆ ಏರ್ಪಾಡಾಗುತ್ತಿತ್ತು. ಹಿಂದಿನ ಮಾತು. ಒಮ್ಮೆ ಶ್ರೀರಾಮ ಕಲಾವಿದರೂ ಭಾಗವಹಿಸಿಬರಬಾರದೇಕೆ ಎಂದೆನಿಸಿ entry ಕಳುಹಿಸಿಕೊಟ್ಟೆವು. ನಾವು ಊರು ತಲಪುತ್ತಲೇ ಅಲ್ಲಿಯ ಯುವಕರು ಅತ್ಯಂತ ಪ್ರೇಮದಿಂದ ನಮ್ಮನ್ನು ಬರಮಾಡಿಕೊಂಡು ನಾವು ಸುಖವಾಗಿ ತಂಗಲು ಬೇಕಾದ ಸೌಲಭ್ಯವನ್ನೆಲ್ಲ ಕಲ್ಪಿಸಿಕೊಟ್ಟರು. ಬಹಳ ಶಿಸ್ತಿನ ವ್ಯವಸ್ಥೆ ಅಲ್ಲಿಯವರದು.

ನಾಟಕದಲ್ಲಿ ಹಾಸ್ಯಪ್ರಧಾನ ಪಾತ್ರ ನನ್ನದು. State levelನಲ್ಲಿ ಅಭಿನಯಕ್ಕೆ ನನಗೆ ಪ್ರಥಮ ಬಹುಮಾನ ಬಂದಿತು. ನಮ್ಮವರೆಲ್ಲ ಅತ್ಯಂತ ಸಂತಸಪಟ್ಟರು

ಅಲ್ಲಿಯ ವ್ಯವಸ್ಥಾಪಕರು ಬಂದು ನನ್ನನ್ನು ಅಭಿನಂದಿಸುತ್ತ "ಏನ್ನಾರ್, ನೀವು ? ಹೆಚ್ಚು ಮಾತು ಕೂಡ ಆಡದ ಬಹು ಗಂಭೀರ ಪ್ರವೃತ್ತಿಯವರು. ಹಾಸ್ಯಪಾತ್ರ ವಹಿಸಿ ಪ್ರಥಮಸ್ಥಾನವನ್ನೇ ಗೆದ್ದುಕೊಂಡಿರಿ. ನಿಮ್ಮನ್ನು ನೋಡಿದರೆ ಹಾಗೆ ಅನ್ನಿಸುವುದೇ ಇಲ್ಲ!" ಎಂದರು. ಹಾಗೆಯೇ, "ಹಿಂದೆಲ್ಲ ಚಿನ್ನ, ಬೆಳ್ಳಿಯ ಒಳ್ಳೊಳ್ಳೆ ಹೆಚ್ಚು ಬೆಲೆ ಬಾಳುವ ಬಹುಮಾನಗಳನ್ನೇ ನೀಡುತ್ತಿದ್ದೆವು. ಈಗ ಸ್ವಲ್ಪ ಬಡತನ ಬಂದಿದೆ. ಏನು ಮಾಡುವುದು" ಎಂದು ಪೇಚಾಡಿ ಕೊಂಡರು.

ಕೆ.ಆರ್. ನಗರದಲ್ಲಿ ಸಹ ಇದೇ ರೀತಿ ಸ್ಪರ್ಧೆಗಳನ್ನು ನಡೆಸುತ್ತಿದ್ದರು. ಒಂದು ಸಾರಿ ಎಲ್‌ಐಸಿಯವರು 'ದಾಕ್ಷಿಣ್ಯ' ನಾಟಕವನ್ನು ಆಡಿದರು. ಆಡುವ ಮುನ್ನ ಬಂದು ನಾಟಕ ಚೆನ್ನಾಗಿ ಬರಲು ಸಲಹೆ ನೀಡಬೇಕೆಂದು ಕೋರಿದರು. ತೀರ್ಪುಗಾರರಲ್ಲಿ ನಾನೂ ಒಬ್ಬನಾದ್ದರಿಂದ ಅದರ ಬಗ್ಗೆ ಮಾತನಾಡಲೂ ನಿರಾಕರಿಸಿದೆ. ನನ್ನ ನಿಲುವಿಗಾಗಿ ಅವರು ಸಂತೋಷಪಟ್ಟರೇ ವಿನಃ ಆಗ್ರಹಗೊಳ್ಳಲಿಲ್ಲ.

ಇನ್ನೊಂದು ವರ್ಷ ಬೆಂಗಳೂರಿನ ಬಿಇಎಂಎಲ್‌ನವರು 'ಸಮಾಜಹುಂಜ' ನಾಟಕವನ್ನು ಅಭಿನಯಿಸಲು entry ಕಳುಹಿಸಿದ್ದರು. ನಾಟಕದ ದಿನ ಮಳೆಯೋ ಮಳೆ. Audience ಇಲ್ಲ. Stage ಕಷ್ಟಸಾಧ್ಯ. ಹೀಗೆಲ್ಲ ಇದ್ದುದರಿಂದ ಮತ್ತೊಂದು ದಿನ ಇಟ್ಟುಕೊಳ್ಳೋಣವೆಂದರೆ ಅವರಿಗೆ ನಾನಾ ರೀತಿ ಅನಾನುಕೂಲ. ಹಾಗೂ ಹೀಗೂ ನಾಟಕದ ಹೊತ್ತಿಗೆ ಕೊಂಚ ತಿಳಿಯಾಯಿತು. ಜನರೂ ಅಲ್ಲಲ್ಲಿ ಕಾಣಿಸಿಕೊಂಡರು. ನಾಟಕ ಪ್ರದರ್ಶನ ನಿಲ್ಲಲಿಲ್ಲ. ಇಲ್ಲಿಯೂ ನನ್ನದೇ ನಾಟಕವಾದ್ದರಿಂದ ತೀರ್ಪಿನಲ್ಲಿ ಭಾಗವಹಿಸುವುದಿಲ್ಲ ಎಂದು ಸಹ-ತೀರ್ಪುಗಾರರ ನಿರ್ಧಾರಕ್ಕೆ ಬಿಟ್ಟುಕೊಟ್ಟು ಯಾವ ರೀತಿಯ ದಾಕ್ಷಿಣ್ಯವೂ ಇಲ್ಲದಂತೆ ನೋಡಿಕೊಂಡೆ. ಅಂದು ಆ ನಾಟಕಕ್ಕೆ ಹಲವು ಬಹುಮಾನಗಳು ಬಂದವು. ಸುವರ್ಣಪದಕವೂ ಅವರದಾಯಿತು.

ಹಾಸನದ ದನಗಳಜಾತ್ರೆಯ ಸಮಯದಲ್ಲಿ ನಮ್ಮ ಸ್ನೇಹಿತರು 'ಎಚ್ಚಮನಾಯಕ' ನಾಟಕ ಪ್ರದರ್ಶನವೇರ್ಪಡಿಸಿದ್ದರು. ನನ್ನದು ನವಾಬನ ಪಾತ್ರ. ಹಾಸನದ ಚಳಿ ನಾನು ಕಂಡಿರಲಿಲ್ಲ. ಅಸಾಧ್ಯ! ಹಿಮಾಲಯ ಪರ್ವತದ ಮೇಲೆ ಚಳಿಗಾಲದಲ್ಲಿ ಇರುವಂಥ ಅನುಭವ. ಬೇಡ ನನ್ನ ಪಾಡು. ನನಗೆ ಕೊಂಚವೂ ಚಳಿ ತಡೆಯದು. ಗಡಗಡ ನಡುಗುತ್ತಿದ್ದೆ. ನೆಗಡಿ ಆರಂಭವಾಗಿ ಧ್ವನಿ ಕುಸಿಯಿತು. ಯಾರೋ Strepsils recommend ಮಾಡಿ ತರಿಸಿಕೊಟ್ಟರು. ಅದನ್ನು ಚೀಪಿದ ಮೇಲೆ ಧ್ವನಿ ಹೊರಡಲೇ ಇಲ್ಲ. ಗತಿ ಏನು ಎಂದು ಬೆದರಿದೆ. ಎಲ್ಲ ದೇವರಿಗೂ ಹರಕೆ ಹೊತ್ತಿದ್ದಾಯಿತು. (ಹರಕೆ ಅಷ್ಟೆ. ಅದನ್ನು ಪೂರೈಸುವ ಗೋಜಿಗೆ ಹೋಗುವ ಹಾಗಿಲ್ಲ.) ದೈವಕೃಪೆ. stageನ ಮೇಲೆ ಹೋಗುತ್ತಲೆ ಗಂಟಲು ಬಿಟ್ಟು ಲಕ್ಷಣವಾಗಿ ಮಾತನಾಡುವುದಾಯಿತು ! ಜತೆಗೆ ರಾಜನ ಪಾತ್ರ. ಸ್ವಲ್ಪ ಬೆಚ್ಚಗೆ ಇರುವ ಹಾಗೆ ಬಟ್ಟೆಗಳನ್ನು ಧರಿಸಿದ್ದೆ ಅನ್ನಿ.

ಮಕ್ಮಲ್ ಟೋಪಿ ನಾಟಕವನ್ನು ಆಡಲು (ಸಂಸ್ಥೆಯ ಹೆಸರು ಜ್ಞಾಪಕವಿಲ್ಲ) ಏರ್ಪಡಿಸಿದ್ದರು. ನನ್ನದು ಪ್ರಧಾನ ಪಾತ್ರ -ಭೂಪಾಲರಾಯ. ಚೀಫ್‌ಗೆಸ್ಟ್ ಆಗಿದ್ದವರು ನನ್ನ ಅಭಿನಯವನ್ನು ಬಹುವಾಗಿ ಮೆಚ್ಚಿ ನನಗಾಗಿ ದೊಡ್ಡ ಹಾರ ಒಂದನ್ನು ತರಿಸಿ ಹಾಕಿ ಸನ್ಮಾನಿಸಿದರು. ವ್ಯವಸ್ಥಾಪಕರಿಗೆ ಏನೆನಿಸಿತ್ತೊ , ನಾನು sidewings ಸೇರುತ್ತಲೆ, "ಶ್ರೀಕಂಠಯ್ಯನವರೇ, ನಿಮ್ಮ ಹಾರ ಕೊಡಿ" ಎಂದು ತೆಗೆದುಕೊಂಡು ಎಲ್ಲ ಕಲಾವಿದರನ್ನೂ ಸೇರಿಸಿ

ಒಬ್ಬೊಬ್ಬರನ್ನೇ stage ಮೇಲಕ್ಕೆ ಕರೆಯುವುದು, ಅದೇ ಹಾರವನ್ನೇ ಹಾಕುವುದು. ಅವರು ಹಿಂದಿರುಗಿದಾಗ ಹಾರ ತೆಗೆದುಕೊಂಡು ಮುಂದಿನವರಿಗೆ ಹಾಕುವುದು. ಹೀಗೆ ಆ ಒಂದು ಹಾರವನ್ನು ಐದಾರು ಕಲಾವಿದರಿಗೆ ಸಮರ್ಪಿಸಿದರು. ಆರನೆಯವರು stage ಮುಂದಿನಿಂದ ಇಳಿದು ಪತ್ನಿಯ ಕೈಲಿ ಹಾರವನ್ನಿಟ್ಟು ಮರಳಿದರು. ಇವರ ಅನಂತರದವರು ಮುಂದೆ ಕರೆಯಲ್ಪಟ್ಟು ಇದಕ್ಕಾಗಿ ಕಾದಿದ್ದೇ ಕಾದಿದ್ದು ! Audience 'ಹೋ' ! ಎಂದಾಗ ಎಲ್ಲರೂ ಮಾಯ!

ದ್ರೌಪದಿ ಮಾಂಗಲ್ಯಪ್ರದಾನ ನಾಟಕ ಆಡಿದಾಗ ಹಲವಾರು ಕಾರಣಗಳಿಂದಾಗಿ ಸ್ತ್ರೀ-ಪಾತ್ರವನ್ನು ಪುರುಷರೇ ವಹಿಸುವುದೆಂದಾಯ್ತು. ರಾಮಮಂದಿರದಲ್ಲಿ ನಿತ್ಯ ನಡೆಯುವ ಹರಿಕಥೆಗೆ ಹಾರ್ಮೋನಿಯಂ ನುಡಿಸುತ್ತಿದ್ದ ಶ್ರೀ ಕೇಶವಮೂರ್ತಿಯವರನ್ನೇ ಆರಿಸಿದೆವು. ಅವರೂ ಒಪ್ಪಿದರು. ಎಲ್ಲ ಸಿದ್ಧತೆಗಳೂ ನಡೆದವು. ಕೇಶವಮೂರ್ತಿಗಳಿಗೆ ಒಂದು ಬಿಡಲಾರದ ಅಭ್ಯಾಸ. ಪಂಚೆ ಎತ್ತಿ ಮಡಿಸಿ ಕಟ್ಟುವುದು. ಮಡಿಸುವುದು, ಬಿಡಿಸುವುದು, ಮತ್ತೆ ಮಡಿಸುವುದು. ಹೀಗೆ ಐದೈದು ನಿಮಿಷಕ್ಕೊಂದು ಬಾರಿ ಮಾಡದಿದ್ದರೆ ಆಗುವುದೇ ಇಲ್ಲ . ಅವರ ಕೈಗಳನ್ನು ಹಿಡಿದುಕೊಂಡು ಸುತ್ತಿಸುವುದು, ಕೂರಿಸುವುದು, ಎಬ್ಬಿಸುವುದು ಇತ್ಯಾದಿ ಬಗೆಬಗೆಯ Exercises ಮಾಡಿಸಿ, ಮಾಡಿಸಿ ಸಾಕಾಗಿ ಹೋಯಿತು. ಮತ್ತೆ ಸೀರೆಯುಡಿಸಿ ಅಭ್ಯಾಸ ಮಾಡಿಸಿದ್ದೂ ಆಯಿತು. ನಾಟಕದ ಹೊತ್ತಿಗೆ ಇದು ಒಂದು ಮಟ್ಟಕ್ಕೆ ಬಂದಿತ್ತು. ಆದರೂ ಏನೋ ಕಳವಳ. stageಗೆ ಹೋಗುವಾಗಲೆಲ್ಲ ಎಚ್ಚರಿಕೆ ಕೊಟ್ಟು ಕಳುಹಿಸುತ್ತಿದ್ದೆವು. ತೀರ conscious ಆಗಿ ಮನಸ್ಸು ಕೊಟ್ಟು dialogues ಎಲ್ಲಿ ಮರೆತ್ಬಿಡ್ತಾರೋ ಅಂತ ಬೇರೆ anxiety. ಪುಣ್ಯವಶಾತ್ ಏನೊಂದು ಆಭಾಸವೂ ಆಗಲಿಲ್ಲ.

ನನ್ನ ಹವ್ಯಾಸಿ ರಂಗ ಚಟುವಟಿಕೆಗಳನ್ನು ಗುರುತಿಸಿ ಬೆಂಗಳೂರು ರೌಂಡ್ ಟೇಬಲ್‌ನವರು ರವೀಂದ್ರ ಕಲಾಕ್ಷೇತ್ರದಲ್ಲಿ ಸನ್ಮಾನಿಸಿದರು.

ಮತ್ತೊಂದು ಸನ್ಮಾನ-ಸಮಾರಂಭವನ್ನು ಬೆಂಗಳೂರಿನ ಜಯಂತಿ ಕಲಾಮಂಡಳಿಯವರು ಸುಭಾಷ್ ನಗರದ ಹಿರಣ್ಣಯ್ಯ ಮಿತ್ರ ಮಂಡಳಿ ರಂಗಮಂದಿರದಲ್ಲಿ ಏರ್ಪಡಿಸಿದ್ದರು.

ಕೆ.ಆರ್. ನಗರದಲ್ಲಿದ್ದಾಗ Lions Club ನ Charter Joint Secretary ಆಗಿ ಸೇವೆ ಸಲ್ಲಿಸಿದೆ.

ಮೈಸೂರಿಗೆ ಬಂದನಂತರ ಶ್ರೀ ಎಂ.ಎಸ್. ಸಿದ್ಧವೀರಶೆಟ್ಟರು ಮೈಸೂರು ಜಯಲಕ್ಷ್ಮಿಪುರಂ Clubನಲ್ಲಿ ನಂಟು ಬೆಳೆಯುವಂತೆ ಮಾಡಿದರು. ಇಲ್ಲಿ Tail Twister ಆಗಿದ್ದೆ. ಶ್ರೀ ಸಿದ್ಧವೀರಶೆಟ್ಟರು ಅಂತಃಕರಣಸಂಪನ್ನರು. ಕಷ್ಟದಲ್ಲಿರುವವರನ್ನು ಕಂಡರೆ ಕೈಮೀರಿ ಉಪಕರಿಸುವವರು. ಮೈಮೇಲಿದ್ದ ವಸ್ತ್ರಗಳನ್ನೇ ದಾನ ಮಾಡಿ ವಿಶಿಷ್ಟ ವ್ಯಕ್ತಿತ್ವ ಮೆರೆದವರು. ಜೀವವಿಮಾನಿಗಮದ ಪ್ರತಿನಿಧಿಯಾಗಿ ಅಗ್ರಸ್ಥಾನ ಅಲಂಕರಿಸಿದವರು. ನಿಗಮದ ಬಗ್ಗೆ ಬಲು ಗೌರವ, ಭಕ್ತಿ. ನನ್ನ ಪರಮಾಪ್ತರು.

ಶ್ರೀ ಎಸ್.ಆರ್. ಸುಬ್ಬರಾಯರು (PWD ನಲ್ಲಿ Superintending Engineer ಆಗಿ ನಿವೃತ್ತರಾಗಿದ್ದಾರೆ) ಆಗ ಕೆ.ಆರ್. ನಗರದಲ್ಲಿ Executive Engineer ಆಗಿದ್ದರು. ಅತಿ ಶಿಸ್ತಿನವರು. ಸರ್ಕಾರದ ವಾಹನವನ್ನು ಸ್ವಂತ ಕಾರ್ಯಗಳಿಗೆ ಬಳಸಿಕೊಳ್ಳದಷ್ಟು ಪರಿಶುದ್ಧರು. ಕರುಣಾಂತರಂಗದವರು. ಕಡು ಬಡವರೇ ಆದರೂ ನೇರವಾಗಿ ಅವರನ್ನು ಭೇಟಿ ಮಾಡಿ ಅತಿ ಸುಲಭದಲ್ಲಿ ತಮ್ಮ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳಬಹುದಿತ್ತು. ಕಾವೇರಿ ನದಿ ಸಮೀಪದಲ್ಲಿಯೇ ಇದ್ದರೂ ನೀರು ಸರಬರಾಜಿನ ವ್ಯವಸ್ಥೆ ಕೆಟ್ಟದಾಗಿತ್ತು. ಆಗ ತಾವೇ ಸ್ವತಃ ಮುಂದೆ ನಿಂತು ಎಲ್ಲ ಮೆಚ್ಚುವ ರೀತಿಯಲ್ಲಿ ಸುಧಾರಣೆಗಳನ್ನು ಜಾರಿಗೆ ತಂದು ಉಪಕರಿಸಿದರು.

ಸುತ್ತಮುತ್ತಲಿನ ಊರುಗಳಲ್ಲಿ ಸಭೆ ಸಮಾರಂಭಗಳಾದಾಗ ನನ್ನನ್ನು ಭಾಷಣ ಮಾಡಲು ಆಹ್ವಾನಿಸಿದಾಗಲೆಲ್ಲ ಬಹುಪಾಲು ಇವರು ಅಧ್ಯಕ್ಷಸ್ಥಾನದಲ್ಲಿರುತ್ತಿದ್ದರು. ನನ್ನ ಬಗ್ಗೆ ಅಪಾರವಾದ ಪ್ರೇಮ. ರೋಟರಿ ಸಂಸ್ಥೆಯಲ್ಲಿ ಮುಂದಾಳು. ಗಣ್ಯರು (ಕನ್ನಡ ತಿಳಿಯದವರು) ಆಂಗ್ಲಭಾಷೆಯಲ್ಲಿ ಮಾಡಿದ ಭಾಷಣಗಳನ್ನು ತರ್ಜುಮೆ ಮಾಡಲು, ಚರ್ಚಾಸ್ಪರ್ಧೆಗಳಲ್ಲಿ ತೀರ್ಪುಗಾರನಾಗಲು, ವಿಶೇಷ ಸಮಾರಂಭಗಳಲ್ಲಿ ಭಾಷಣ ಮಾಡಲು, ನನಗೆ ಸುಯೋಗ ಕಲ್ಪಿಸಿಕೊಟ್ಟವರು.

ಶ್ರೀ ತೋಂಟದಾರ್ಯರು (ಈಗ ಭಾಜಪ ಮುಂದಾಳು) ಹೀಗೆಯೇ ಒಡನಾಡಿದ ಮತ್ತೊಬ್ಬ ಜನಪ್ರಿಯ ನಾಯಕರು. ಆಗ ಅಲ್ಲಿ ಅಡ್ವೋಕೇಟ್ ಆಗಿ Practice ಮಾಡುತ್ತಿದ್ದರು.

ಶ್ರೀ ಬಿ.ಎನ್. ತಿಮ್ಮಪ್ಪಯ್ಯನವರು (ಅಡ್ವೋಕೇಟ್) ಪರಮ ದೈವಭಕ್ತರು. ಲೌಕಿಕದಲ್ಲಿದ್ದುಕೊಂಡೇ ಪರಮಾರ್ಥವನ್ನು ಮೈಗೂಡಿಸಿಕೊಂಡವರು. ವೈರಾಗ್ಯವೇ ಮೈವೆತ್ತವರು. ಪವಾಡಗಳನ್ನು ಮೆರೆಯುವ ಸಾಮರ್ಥ್ಯ ಹೊಂದಿದ್ದರೂ ಮೆರೆಯದೆ ಎಲೆ ಮರೆಯಲ್ಲೇ ನಿಂತವರು. ನನ್ನ ಬಂಧುಗಳು. ಹಿರಿಯ ಜೀವ. ನನ್ನ ಉಪನ್ಯಾಸಗಳು ಎಲ್ಲೇ ಆಗಲಿ ಬಂದು ಕೇಳಿ ಸಂತೋಷ ಪಟ್ಟು ನಾನೇ ಹಿರಿಯ, ತಾವೇ ಕಿರಿಯರು ಎಂಬಂತೆ ನಡೆದುಕೊಳ್ಳುವರು. ಶ್ರೀಮತಿ ಪಾರ್ವತಮ್ಮನವರು ಅವರ ನೆರಳು.

ಅಪರೂಪದ ದಾಂಪತ್ಯ. ಅಹಂಕಾರವನ್ನು ಅಳಿಸಿ ವಿನಯ, ಹೃದಯವಂತಿಕೆ ಪಡೆಯಲು ನನಗೆ ಮಾರ್ಗದರ್ಶಿಯಾದವರು.

ಡಾ. ಮೋಹನದಾಸ ಭಟ್ಟರು, ಶ್ರೀ ಗೋವಿಂದರಾಜಶೆಟ್ಟರು, ಶ್ರೀ ಫನಿಭಟ್ಟರು, ಶ್ರೀ ಶ್ರೀನಿವಾಸಯ್ಯನವರು, ಶ್ರೀ ನಂಜಪ್ಪನವರು (ಸಚಿವರಾಗಿದ್ದವರು), ಡಾ. ಗೌಡಯ್ಯನವರು, ಶ್ರೀ ಸುಬ್ರಹ್ಮಣ್ಯಂ, ಶ್ರೀ ಸೋಮಯಾಜಿಗಳು, ಮೊದಲಾದ ಊರಿನ ಹಿರಿಯರೆಲ್ಲ ಜನತೆಯ ಒಳಿತಿಗಾಗಿ ಶ್ರಮಿಸುತ್ತ ದೈವಕೈಂಕರ್ಯದಲ್ಲಿ ಮುಂಚೂಣಿಯಲ್ಲಿದ್ದು ನನ್ನಲ್ಲಿನ ವಿಕಸನ ಕ್ರಿಯೆಯಲ್ಲಿ ಸಹಕರಿಸಿದವರು, ಕೆ.ಆರ್. ನಗರದಲ್ಲಿನ ನಮ್ಮ ವಾಸ್ತವ್ಯ ಅರ್ಥಪೂರ್ಣವಾಗುವಂತೆ ಮಾಡಿದವರು.

ಶ್ರೀ ಸುಬ್ರಹ್ಮಣ್ಯಂ ನನ್ನ ಉಪನ್ಯಾಸಗಳನ್ನು ಏರ್ಪಡಿಸಿ, ಮೆಚ್ಚುಗೆ ಸೂಚಿಸಿ ಸಮೀಪದ ಊರುಗಳು - ಗಾವಡಗೆರೆಯೇ ಮುಂತಾದುವು ನನ್ನ ಸೇವೆ ಪಡೆಯಲು ಕಾರಣಕರ್ತರಾದರು. ನಗರದ ಸೇಂಟ್ ಜೋಸೆಫ್ಸ್ ಕಾನ್ವೆಂಟಿನವರು ಡೋರ್ನಹಳ್ಳಿಯ ಪ್ರಸಿದ್ಧ ಸೇಂಟ್ ಆ್ಯಂಟೋನಿ ಚರ್ಚ್‌ನಲ್ಲಿ ಸಭೆ ಏರ್ಪಡಿಸಿ ಮಾನವಧರ್ಮದ ಬಗ್ಗೆ ಉಪನ್ಯಾಸ ನೀಡಲು ಅನುವಾದರು.

ಅಕ್ಕಮಹಾದೇವಿ ಮಹಿಳಾ ಸಂಸ್ಥೆಯವರು ಸ್ಥಳದ ಅಕ್ಕಮಹಾದೇವಿ ದೇವಸ್ಥಾನದಲ್ಲಿ ಹಲವೊಂದು ಬಾರಿ ಕಾರ್ಯಕ್ರಮಗಳಲ್ಲಿ ಮಾತನಾಡಲು ಏರ್ಪಾಡು ಮಾಡಿ ನನಗೆ ಪುಣ್ಯ ದೊರಕಿಸಿಕೊಟ್ಟರು.

ನಾವು ಕೆ.ಆರ್. ನಗರ ಬಿಡುವಾಗ ಶ್ರೀ ವಾಸವಿ ಸಂಸ್ಥೆಯವರು ತೋರಿದ ಪ್ರೇಮ ಅನನ್ಯ, ಅಸಾಧಾರಣ. ಶ್ರೀ ಸೂರ್ಯ ನಾರಾಯಣ ಶೆಟ್ಟರು, ಶ್ರೀ ಹನುಮಂತಯ್ಯ ಶೆಟ್ಟರು ಇವರೇ ಮುಂತಾದ ವೃದ್ಧರು, ಊರ ಹಿರಿಯರು, ಉಪನ್ಯಾಸಗಳಿಗೆ ತಪ್ಪದೆ ಬಂದು ಹರಸುತ್ತಿದ್ದರು.

ಎಲ್ಲ, ಎಲ್ಲ, ಮಹಾನುಭಾವರಿಗೆ ಮತ್ತೆ ಮತ್ತೆ ನಮಸ್ಕಾರ.

□ □ □

ಮರೆಗುಳಿತನದ ಖಾಯಿಲೆ ಈ ಲೇಖನದಲ್ಲಿ ಕಾಣಿಸಲೇಬೇಕಾದ ವಿಷಯಗಳನ್ನು ಕೂಡ ಪೆಡಂಭೂತದಂತೆ ನುಂಗಿ ನೊಣೆದಿದೆ. ಕ್ಷಮೆ ಕೇಳುವುದು ಹೊರತಾಗಿ ಮತ್ತೇನನ್ನೂ ಮಾಡಲಾರದೆ ಅಸಹಾಯಕ ಸ್ಥಿತಿಯಲ್ಲಿದ್ದೇನೆ.

ಒಂದು ಮೂಲೆಯಲ್ಲಿ ಕುಳಿತು ಕುಟ್ಟಿಕುಟ್ಟಿ "ನನ್ನನ್ನು ಮರೆತೆ, ನನ್ನ ಬಗ್ಗೆ ನೀ ಬರೆಯಲಿಲ್ಲ" ಎಂದು ತಿವಿದು ತಿವಿದು ಎಚ್ಚರಿಸಿದರೂ ಪರದೆಯ ಮೇಲೆ ಮೂಡಿ ಜಾರಿ ಹೋಗುತ್ತವೆ.

"ಅದು ಯಾಕೆ ಹಾಗೆ, ಹೀಗಾಗಬಹುದಲ್ಲ" ಎಂಬ ವಾದಕ್ಕೆ ಅವಕಾಶವೇ ಇಲ್ಲ. ಪರಶುರಾಮರ ಪ್ರವೇಶ ನೋಡಿ.

ಮಾಗಿದ ಬದುಕು

ಆರ್.ವಿ. ಶ್ರೀನಿವಾಸಯ್ಯ

ಮಾಗಿದ ಬದುಕು*

೧೯೮೬ರಲ್ಲಿ ಕೆ.ಜಿ.ಎಫ್. ನಲ್ಲಿ ವಾಸವಾಗಿದ್ದ ಕಾಲ. ನಾನು ಬರೆದ 'ಶ್ರೀ ಸೀತಾರಾಮಜನನಮೂಲ' ಎಂಬ ಶ್ರೀಮದ್ರಾಮಾಯಣದ ಪುಸ್ತಕವನ್ನು ಅಲ್ಲಿನ ಗೆಳೆಯರು ಮೆಚ್ಚಿಕೊಂಡಿದ್ದರು. ಅಲ್ಲಿನ ಕಾಲೇಜುಗಳ ಉಪನ್ಯಾಸಕರೂ, ಆಸ್ಪತ್ರೆಗಳ ವೈದ್ಯರೂ, ಬ್ಯಾಂಕುಗಳ ಅಧಿಕಾರಿಗಳೂ ಆ ಕಾವ್ಯದ ಬಗೆಗೆ ನನ್ನನ್ನು ಉಬ್ಬಿಸಿ, "ನೀವು ನಿಮ್ಮ ಆತ್ಮಚರಿತ್ರೆಯನ್ನು ಬರೆಯಲೇಬೇಕು" ಎನ್ನುತ್ತಿದ್ದರು. ಅದೆಲ್ಲ ಅವರ ಅಭಿಮಾನದ ಮಾತು ಎನ್ನುವುದು ಸ್ಪಷ್ಟ. ಹಾಗೆ ಒತ್ತಾಯಿಸಿದವರಲ್ಲಿ ನನ್ನ ಹತ್ತಿರದ ಮಿತ್ರರಾದ ಡಾ. ರಂಗಾಚಾರ್ಲು ಅವರೂ, ಡಾ. ರಾಜಗೋಪಾಲ್ ಅವರೂ ಸೇರಿದ್ದರು. ಆದರೆ ನನ್ನ ಮಿತಿಯನ್ನು ತಿಳಿದಿದ್ದ ನಾನು ಸಂಯಮ ವಹಿಸಿದ್ದೆ. ಆತ್ಮಚರಿತ್ರೆ ಬರೆಯುವಂಥ ವಿವರ ನನ್ನ ಬದುಕಿನಲ್ಲಿ ಇಲ್ಲ ಎಂಬುದನ್ನು ನಾನು ಮರೆತಿರಲಿಲ್ಲ. ಮೈಸೂರಿಗೆ ಬಂದು ನೆಲೆಸಿದಮೇಲೆ ಇಲ್ಲಿಯೂ ಪುಸ್ತಕವನ್ನೋದಿದ ಅಭಿಮಾನಿಗಳು ಹೀಗೆಯೇ ಒತ್ತಾಯಿಸಿದರು. ಇಲ್ಲಿನ ಸ್ಟೇಟ್‌ಬ್ಯಾಂಕ್‌ನ ಶಾಖೆಯೊಂದರ ಮಿತ್ರರು ಹತ್ತು ದಸ್ತು ಕಾಗದವನ್ನು ತಂದು ಮುಂದೆ ಇಟ್ಟು 'ಬರೆಯಿರಿ' ಎಂದರು. ಆಗೆಲ್ಲಾ ನಾನು ಎಚ್ಚರದಿಂದಲೇ ಇದ್ದೆ. ಆದರೆ ಸಮುದಾಯ ಅಧ್ಯಯನ ಕೇಂದ್ರದವರು, "ನಮ್ಮ ಸಂಸ್ಕೃತಿಯನ್ನು ಕಟ್ಟಿಕೊಡಲು ಒಂದಷ್ಟು ಸಾಮಗ್ರಿ ನಮಗೆ ಬೇಕು. ಕವಿಯಾದ ನೀವು ಅದನ್ನು ದಯಮಾಡಿ ಕೊಡಿ" ಎಂದರು. ಅವರ ಮಾತು ಅರ್ಥವಾಗದೆ ಭ್ರಮೆಗೆ ಒಳಗಾಗಿ ಬರೆಯುತ್ತಿದ್ದೇನೆ.

ಪೂರ್ವಿಕರು

ನಮ್ಮದು ವತ್ಸಗೋತ್ರ, ಯಜುರ್ವೇದ, ಆಪಸ್ತಂಬಸೂತ್ರ. ತಿರುಪತಿ ವೆಂಕಟರಮಣಸ್ವಾಮಿ ನಮ್ಮ ಮನೆದೇವರು. ನಾವು ಮಾನ್ಯದ ಒಕ್ಕಲು, ಅಂದರೆ 'ಕಳ್ಳೊಕ್ಕಲು', ಭಕ್ತರ ಗಂಟು ಹೊತ್ತುಕೊಂಡೇ ತಿರುಪತಿಯಾತ್ರೆಗೆ ಹೋಗಬೇಕು ಎಂಬುದು ಒಂದು ಸಂಪ್ರದಾಯ. ನಮ್ಮ ಅಜ್ಜ ಒಂದು ಸಾರಿ ಈ ನಿಯಮ ಪಾಲಿಸದೆ ಯಾತ್ರೆ ಹೊರಟುಬಿಟ್ಟರು. ನಡುದಾರಿಯಲ್ಲಿ ವಾಂತಿಭೇದಿ ಶುರುವಾಯಿತು. 'ತಪ್ಪಾಯಿತು' ಅಂತ ಕ್ಷಮೆಕೇಳಿ ವಾಪಸು ಬಂದರು. ಕಾಲಿಗೆ ಬೆಳ್ಳಿ ಕಪ್ಪ ಕಟ್ಟಿಸಿಕೊಂಡಿದ್ದರು.

ನಮ್ಮ ಅಜ್ಜನ ತಂದೆಯವರ ಹೆಸರು ಗೊತ್ತಿಲ್ಲ , 'ಸುಬ್ರಹ್ಮಣ್ಯ' ಎಂದು ಕರೆದಿದ್ದೇನೆ. ಹೆಸರು ಗೊತ್ತಿಲ್ಲದಾಗ ಹೀಗೆ ಕರೆಯುವುದು ನಮ್ಮ ಮನೆತನದ ರೂಢಿ. ನಮ್ಮ ಮನೆತನದವರು ಕೃಷಿಕರು. ಹಿಂದೆ ವೇದಾಧ್ಯಯನಸಂಪನ್ನರಾಗಿರುತ್ತಿದ್ದ ಮನೆಗಳೆಲ್ಲಾ ಲೌಕಿಕವಾಗಿ ಪರಿವರ್ತನೆ ಹೊಂದಿದ್ದು ಇಪ್ಪತ್ತನೆಯ ಶತಮಾನದ ವಿದ್ಯಮಾನ. ಕೆಲವು ಮನೆತನಗಳಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲೇ ಈ ಕೆಲಸ ಆಗಿತ್ತು. ಆದರೂ ಕಳೆದ ತಲೆಮಾರಿನವರೆಗೆ ಎಲ್ಲರಿಗೂ 'ಉಪಯುಕ್ತ' ಮಂತ್ರಗಳು ಬಂದೇ ಬರುತ್ತಿದ್ದವು. ಇಂದ್ರಾಕ್ಷೀ ಮಂತ್ರ ಜಪಿಸಿ ಹೊಟ್ಟೆನೋವು ವಾಸಿ ಮಾಡುತ್ತಿದ್ದರಂತೆ ನನ್ನ ಮುತ್ತಜ್ಜ ; ನಾಡಿ ಪರೀಕ್ಷೆಯಲ್ಲೂ ಅವರು ನಿಪುಣರಾಗಿದ್ದರಂತೆ.

ಹಾಸನ ಜಿಲ್ಲೆ , ಅರಕಲಗೂಡು ತಾಲೂಕಿನ ಕಾತ್ಯಾಳಿನಲ್ಲಿ ಆಗ ಇದ್ದುದು ಬರೀ ಸಂಕೇತಿಗಳು. ನಮ್ಮ ಮುತ್ತಜ್ಜನಿಗೆ ಒಬ್ಬರಿಗೇ ೧೦೦೦ ಎಕರೆ ಜಮೀನಿತ್ತಂತೆ. ಕಲ್ಲು ಜಾಡಿ ಇಟ್ಟು ಅದರ ತುಂಬ ಮಜ್ಜಿಗೆ ತುಂಬಿರುತ್ತಿದ್ದರಂತೆ. ಅದು ಊರಿನ ಎಲ್ಲರಿಗೂ ಆಗುತ್ತಿತ್ತು.

ಸುಬ್ರಹ್ಮಣ್ಯ ಅವರಿಗಿಂತಲೂ ಹಿಂದೆ ಆ ಭಾರಿ ಮನೆಯಲ್ಲಿ ಒಂದು ಸಾಹಸದ ಘಟನೆ ನಡೆದಿತ್ತು. ಅವರ ಮನೆಯಲ್ಲಿ ಚಂಡಿ, ಚಾಮುಂಡಿ ಎಂಬ ಇಬ್ಬರು ಆಳುಗಳಿದ್ದರು. ಯಜಮಾನರಿಗೆ ಮಕ್ಕಳಿರಲಿಲ್ಲ. ಯಜಮಾನರು, "ನಾನು ಮೈಸೂರಿಗೆ ಹೋಗಿ ಬರುತ್ತೇನೆ" ಅಂತ ಹೇಳಿ ಹೊರಟರು. ಅದನ್ನು ಈ ಘಾತಕ ಆಳುಗಳು ಕೇಳಿಸಿಕೊಂಡು ರಾತ್ರಿ ಹತ್ತು ಗಂಟೆಗೆ ಮನೆ ದೋಚಲು

---
* ರಚನೆ : ೨೦೦೩ - ೦೪

ಬಂದರು. ಮನೆಯಲ್ಲಿ ಒಡತಿ ಒಬ್ಬರೇ ಇದ್ದರು. ಕಳ್ಳರು ಕಂದೀಲು ಹಿಡಿದಿದ್ದರು, ಬಾಗಿಲು ಇಡಿಯುತ್ತಿದ್ದರು. ಈಕೆಗೆ ಇದು ಚಂಡಿ ಚಾಮುಂಡಿಯರದೇ ಕೆಲಸ, ಅಂತ ಅನುಮಾನ ಬಂತು. ಕೆಲವು ರಾಗಿಮೂಟೆಗಳನ್ನು ಎಳೆದು ತಂದು ಬಾಗಿಲ ಹಿಂದೆ ಒಂದರ ಮೇಲೆ ಒಂದರಂತೆ ಪೇರಿಸಿದರು. ಇನ್ನು ಕೆಲವು ಮೂಟೆ ರಾಗಿಯನ್ನು ಇಡೀ ತೊಟ್ಟಿ ಮನೆಗೆ ಹರಡಿದರು. ಎಣ್ಣೆ ಕುದಿಸಿ ತಂದು ಬಾಗಿಲ ಪಕ್ಕ ಇಟ್ಟುಕೊಂಡರು. ಮೆಲುದನಿಯಲ್ಲಿ "ಯಾರಪ್ಪ?" ಎಂದು ಆ ಕಳ್ಳರನ್ನು ಮಾತಾಡಿಸುವುದು, ಅವರು ಉತ್ತರ ಕೊಟ್ಟ ತಕ್ಷಣ ಆ ಕಡೆಗೆ ಕುದಿಯುವ ಎಣ್ಣೆ ಎರಚುವುದು - ಹೀಗೆ ಮಾಡಿ ಇಬ್ಬರನ್ನೂ 'ಮಲಗಿಸಿದರು'. ಆ ಆಳುಗಳು ರಾತ್ರಿಯೆಲ್ಲಾ ಅಲ್ಲೇ ಬಿದ್ದಿದ್ದರು.

ಯಜಮಾನರು ಬೆಳಗ್ಗೆ ಒಂಟೆ ಮೇಲೆ ಬಂದರು. ಇಬ್ಬರು ಆಳುಗಳೂ ಪೆಟ್ಟುತಿಂದು ಜ್ಞಾನವಿಲ್ಲದೆ ಮಲಗಿದ್ದರು. ಹೆಂಡತಿಯನ್ನು ಕೂಗಿದರು. ಒಂಟಿಯಾಗಿ ಆತಂಕದಲ್ಲಿದ್ದ ಆಕೆಯೂ ಭ್ರಮೆಗೆ ಒಳಗಾಗಿದ್ದರು. ಮೂಟೆಗಳನ್ನು ಪಕ್ಕಕ್ಕೆ ಎಳೆದು, ಬಾಗಿಲು ತೆಗೆದರು. ಯಜಮಾನರು ತಕ್ಷಣ ಅರಕಲಗೂಡಿನ ಅಮಲ್ದಾರರಿಗೆ ಈ ವಿಷಯ ತಿಳಿಸಿದರು. "ಅವರಿಗೆ ಏನು ಮಾಡೋಣ ?" ಎಂದರು ಅಮಲ್ದಾರರು; "ಸರ್ಕಾರದ ಕಾಯ್ದೆಯಂತೆ ಆಗಲಿ" ಎಂದರು ಇವರು. ಅವರಿಬ್ಬರಿಗೂ ಗಲ್‌ಶಿಕ್ಷೆ ಆಯಿತು. ಇತ್ತೀಚಿನವರೆಗೂ ಆ ಗಲ್‌ಕಟ್ಟೆ ಇತ್ತು. ಅದು ಹನ್ಯಾಳಿನಿಂದ ಒಂದು ಕಿ.ಮೀ. ದೂರದಲ್ಲಿತ್ತು.

ತಂದೆ–ತಾಯಿ

ನಾನು ಹುಟ್ಟಿದ್ದು ರುದ್ರಪಟ್ಟಣದಲ್ಲಿ (೧೯೧೦). ನನ್ನ ತಂದೆಯ ತಂದೆ ಪೂಜ್ಯರಾದ ಕಾತ್ಯಾಳ್ ಶ್ರೀನಿವಾಸಯ್ಯನವರು. ನನ್ನ ತಂದೆ ಪೂಜ್ಯರಾದ ಕಾತ್ಯಾಳ್ ವೆಂಕಟನಾರಾಯಣಪ್ಪನವರು. ನಮ್ಮ ಪೂರ್ವಿಕರು ಕಾತ್ಯಾಳಿನವರು; ಹಾಗಾಗಿ ಅವರ ಹೆಸರಿಗೆ 'ಕಾತ್ಯಾಳ್' ಎಂಬುದು ಹೊಂದಿಕೊಂಡಿತ್ತು.

ನಮ್ಮ ಅಜ್ಜನವರಿಗೆ ಐವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ಅದು ದೊಡ್ಡ ಸಂಸಾರ, ಬಡತನವೂ ದೊಡ್ಡದು. ನಮ್ಮ ತಂದೆಯವರೇ ಹಿರಿಯ ಮಗ.

ನಮ್ಮ ತಂದೆಯವರಿಗೆ ಹುಟ್ಟಿದ ಮೊದಲ ಮೂರು ಮಕ್ಕಳೂ ಅಕಾಲದಲ್ಲೇ ಮೃತ್ಯುವಶರಾಗಿದ್ದರು. ನಾನೇ ನಾಲ್ಕನೆಯವನು.

ನಮ್ಮ ತಂದೆಯವರ ಮೊದಲನೆಯ ತಂಗಿಯನ್ನು ಬಸವಾಪಟ್ಟಣದ ಸಣ್ಣಪ್ಪಮೇಷ್ಟರಿಗೆ (ಶ್ರೀನಿವಾಸಯ್ಯ) ಕೊಟ್ಟು ವಿವಾಹ ಮಾಡಿದ್ದರು. ಸಣ್ಣಪ್ಪಮೇಷ್ಟರ ದೊಡ್ಡಪ್ಪನವರ (ನಾಣಿ) ಮಗಳೇ ನಮ್ಮ ತಾಯಿ. ಅವರ ಹೆಸರು ಮಹಾಲಕ್ಷ್ಮಮ್ಮ. ನಮ್ಮ ತಾಯಿಯ ತಂದೆಯ ಹೆಸರು 'ನಾರಾಯಣ'; ಎಲ್ಲರೂ ಅವರನ್ನು 'ನಾಣಿ' ಎಂದೇ ಕರೆಯುತ್ತಿದ್ದರು.

ನಾಣಿ ಅಜ್ಜ

ನಮ್ಮ ತಾಯಿಯವರು 'ನಾಣಿ ಅಜ್ಜ'ನ ಏಕೈಕ ಪುತ್ರಿ. ಅವರಿಗೆ ಬೇರೆ ಸಂತಾನ ಇಲ್ಲದಿದ್ದರಿಂದ ಒಂಟಿಯಾಗಿರಲು ಸಾಧ್ಯವಾಗದೆ ರುದ್ರಪಟ್ಟಣಕ್ಕೇ ಬಂದು ಮಗಳೊಂದಿಗೆ ಇದ್ದರು. ವಾಸ್ತವವಾಗಿ, ಹಾಗಲ್ಲ. ನಾಣಿ ಅಜ್ಜ ತಮ್ಮ ಆಸ್ತಿಯನ್ನೆಲ್ಲಾ ಮಾರಿ ರುದ್ರಪಟ್ಟಣಕ್ಕೆ ಬಂದು ೨೭೫ ರೂಪಾಯಿಗೆ ಅಲ್ಲೊಂದು ಮನೆ ಕೊಂಡು ಅದರಲ್ಲಿರುತ್ತಿದ್ದರು. ಅದರಲ್ಲಿ ಅವರ ಚರಾಸ್ತಿಯನ್ನೆಲ್ಲಾ ಇರಿಸಿಕೊಂಡಿದ್ದರು. ಮಗಳೂ ಅಳಿಯನೂ ತಮ್ಮೊಡನೆಯೇ ಇರುವಂತೆ ಓಲೈಸಿ ತಮ್ಮಲ್ಲಿಯೇ ಇಟ್ಟುಕೊಂಡು ಸಲಹಿದರು.

ನನ್ನ ತಂದೆಯಕಡೆಯ ಅಜ್ಜನಿಂದ ಯಾವ ನೆರವೂ ಇರಲಿಲ್ಲ. ನಾಣಿ ಅಜ್ಜನೇ ನಮಗೆ ಕಾವಲು. ಒಬ್ಬ 'ಅಲ್ಲಿ' ಸಾಹೇಬರು ಎಂಬುವವರಿಂದ ನಮ್ಮ ತಂದೆ, ನಾಣಿ ಅಜ್ಜನ ಬೆಂಬಲದಿಂದ ನಾಲ್ಕು ಎಕರೆ ಕಾಡುಜಮೀನನ್ನು ಕೊಂಡರು. ಅದರಲ್ಲಿ ಒಂದು ಭಾಗವನ್ನು ಬಾಗಾಯ್ತು ಮಾಡಿದರು. ಅದು ಸಂಕೇತಿಗಳ ಕುಲಕಸುಬು; ಅಲ್ಲೊಂದು ಅಡಕೆ ತೋಟ ಎಬ್ಬಿಸಿದರು. ಇನ್ನೊಂದು ಭಾಗದಲ್ಲಿ ತರಕಾರಿ ಬೆಳೆದರು; ಮಾರಿದರು; ಅದರಿಂದಲೇ ತಾತ್ಕಾಲಿಕವಾದ ಜೀವನ ಸಾಗುತ್ತಿತ್ತು. ಹೀಗೆ ತರಕಾರಿ ಬೆಳೆದು ಮಾರಿದ್ದು ಮಾತ್ರ ಪರಂಪರೆಗೆ ಹೊರತಾದ ಕಸುಬಾಗಿತ್ತು. ನನ್ನ ಪ್ರೀತಿಯ ನಾಣಿ ಅಜ್ಜನೇ ಮನೆಯ ಜಗುಲಿಯಮೇಲೆ ತರಕಾರಿಯನ್ನು ಇಟ್ಟುಕೊಂಡು ಮಾರುತ್ತಿದ್ದರು. ನಾನೂ ಅವರ ಜತೆಯಲ್ಲೇ ಕೂತಿರುತ್ತಿದ್ದೆ. ನಾಣಿ ಅಜ್ಜನಿಗೆ ವಯಸ್ಸಾಗಿತ್ತು, ಕೊನೆಗೆ ಖಾಯಿಲೆ ಬಿದ್ದು ಸ್ವರ್ಗಸ್ಥರಾದರು. ಆಗ ನನಗೆ ಮೂರು ವರ್ಷ. ಅಂದಿನಿಂದ, ನಡೆದ ವಿಚಾರವೆಲ್ಲಾ ನನಗೆ ಚೆನ್ನಾಗಿ ನೆನಪಿದೆ.

ಗೌರಮ್ಮ ತಾಯಿ

ನನ್ನ ತಂದೆ-ತಾಯಿ ನನ್ನನ್ನು ಉದಾಸೀನವಾಗಿಯೇ ಕಾಣುತ್ತಿದ್ದರು. ಏಕೆಂದರೆ ಅವರು ಮೂವರು ಮಕ್ಕಳನ್ನು ಅಕಾಲದಲ್ಲಿ ಕಳೆದುಕೊಂಡಿದ್ದರು. ಅದರಿಂದಾಗಿ ಅವರಿಗೆ ಒಂದು ವಿಧವಾದ ಜುಗುಪ್ಸೆ ಉಂಟಾಗಿತ್ತು. ಇದೆಲ್ಲಾ ಅಕ್ಕಪಕ್ಕದವರಿಗೂ ಗೊತ್ತಿತ್ತು. ಅಲ್ಲದೆ ಬಾಗಾಯ್ತಿನಲ್ಲಿ ಇನ್ನೂ ಉತ್ಪತ್ತಿ ಪ್ರಾರಂಭವಾಗಿರಲಿಲ್ಲ. ನಮ್ಮ ಮನೆಯ ಪಕ್ಕ ಗೌರಮ್ಮ ಎಂಬ ಹುಡುಗಿ ಇದ್ದಳು. ಆಕೆಯೇ ನನ್ನನ್ನು ಎತ್ತಿಕೊಂಡು ಆಡಿಸುತ್ತಿದ್ದಳು, ಅವಳೇ ಲಾಲನೆಪಾಲನೆ ಮಾಡುತ್ತಿದ್ದಳು. ತನ್ನ ಸ್ವಂತ ಮಗುವಿನಂತೆ ನನ್ನನ್ನು ಮೂರು

ವರ್ಷ ಪ್ರೀತಿಯಿಂದ ನೋಡಿಕೊಂಡಳು. ಹೀಗಾಗಿ ನನಗೆ ಅವರೇ ನನ್ನ ತಾಯಿ ಎಂಬಂತೆ ಪ್ರೀತಿ, ಭಕ್ತಿ, ಗೌರವ ಮೂಡಿತ್ತು. ಅಷ್ಟರಲ್ಲಿ ಆಕೆಯ ವಿವಾಹವಾಯಿತು. ಹುಣಸೂರು ತಾಲ್ಲೂಕು ಚಿಲ್ಕುಂದ ಗ್ರಾಮದ ವೇ॥ ಬ್ರ॥ ಶ್ರೀ ನಾರಾಯಣಾವಧಾನಿಗಳೇ ಆಕೆಯ ಪತಿ. ವಿವಾಹವಾದಾಗ ಆಕೆಗೆ ಹನ್ನೆರಡು ವರ್ಷ ವಯಸ್ಸು. ಹದಿನೈದು ವರ್ಷವಾದಾಗ ಗಂಡನ ಮನೆಗೆ ಹೋದರು. ಆ ವೇಳೆಗೆ ನನಗೆ ನಾಲ್ಕೂವರೆ ವರ್ಷ.

ಕಾವ್ಯವಾಚನ

ಬಡತನವಿದ್ದರೂ ನಮ್ಮ ತಂದೆಗೆ ಪುಸ್ತಕಪ್ರೀತಿ ಹೆಚ್ಚಾಗಿಯೇ ಇತ್ತು. ಪ್ರಾಚೀನಕಾವ್ಯಗಳಲ್ಲಿ ಅವರಿಗೆ ಪರಿಶ್ರಮವಿತ್ತು. ನಿತ್ಯವೂ ಭಾರತವಾಚನ ನಡೆಸುತ್ತಿದ್ದರು. ರಾತ್ರಿಯ ವೇಳೆ ಊರಿನ ಬಂಧುಗಳು ಪುರಸತ್ತಾಗಿ ಒಂದೆಡೆ ಸೇರುತ್ತಿದ್ದರು. ಅವರಿಗಿದ್ದ ಶಿಕ್ಷಣ, ಮನೋರಂಜನೆ ಎಲ್ಲವೂ ಅದಾಗಿತ್ತು. ಈ ಸತ್ಕಾಲಕ್ಷೇಪದಲ್ಲಿ ನಾನೂ ನನ್ನ ತಂದೆಯವರ ಪಕ್ಕ ಕೂತಿರುತ್ತಿದ್ದೆ.

ಆ ದಿನಗಳಲ್ಲಿ ನಮ್ಮ ತಂದೆಯವರು ಹೇಳುತ್ತಿದ್ದ ಒಂದು ಪದ್ಯ ಇದು. ನನ್ನ ಆ ಶೈಶವದಲ್ಲಿ ನನಗೇನೂ ಆ ಪದ್ಯದ ಅರ್ಥ ಆಗಿರಲಿಲ್ಲ. ಆದರೆ ನನ್ನ ಆಗಿನ ತಿಳುವಳಿಕೆಗೆ ತಕ್ಕಂತೆ ಅದನ್ನು ಹೀಗೆ ಬಾಯಿಪಾಠ ಮಾಡಿಕೊಂಡಿದ್ದೆ :

ಕಂಚಿನಕೀ ಲಂಕಾ
ಕಾಂಸನೇರೀ ಕೈಲಾಹಲಾಟೀ
ಯಾಲಂಗ ಮೇಸ್ತ್ರೀ ಚಿೊ
ರುದ್ರಪನೇರೀ
ಮಡೆಯಲಾಲ್‌ಸೀ
ಜುಗುಜುಗು ತಾರೀ
ತಾಲಂಗಾರೀ
ಸಪೀತಸಾರೀ
ಚಂದ್ರ ವಿಚಾರೀ
ಚಂದ್ರಸೂರಭೀ
ಧೂಂ ಧಾಂ ಧಿಂ ಡ್ಯಾಂ ಬಂಕೋ
ಗಡಗಡ ಮಜಲೀ
ಘಟಾವಾತೇನ್
ಘಟಾರ್ಝೂದಕರ್
ಸಿಂಘಸೇ ಭಡೀಪಂಸೇ
ಪಕ್‌ವಾನವರ್
ತೈಕತೈಕ ತತ್ತೈಕ
ಆಗಡ್‌ದಾಧ್ವಂಸ ನವಪತ್
ಬಜಾರಯಾ ದೇತೋ
ಲಂಕಕೋ ರಾವಣರಾಜಾ

ಹೊಸ ತೋಟ

ಕಾಲಕ್ರಮದಲ್ಲಿ ನಮ್ಮ ತಂದೆಯ ತಂದೆಯವರು ಹನ್ನೊಂದು ಗುಂಟೆ ತರೀ ಜಮೀನನ್ನು ನಮ್ಮ ತಂದೆಯವರಿಗೆ ಬಿಟ್ಟುಕೊಟ್ಟರು. ಆ ವೇಳೆಗೆ ನಮ್ಮ ತೋಟದಲ್ಲಿ ಅಡಕೆ, ತೆಂಗು ಮತ್ತಿತರ ವೃಕ್ಷಗಳು ಫಲಕೊಡಲಾರಂಭಿಸಿದ್ದವು. ಬೇರೆಯವರಿಗೆ ಅದು ಆಕರ್ಷಕವಾಗಿ ಕಾಣತೊಡಗಿತ್ತು. ಎಲ್ಲರೂ ಮೇಲೆಬಿದ್ದು ಖರೀದಿಗೆ ಕೇಳ ತೊಡಗಿದ್ದರು. ನಮ್ಮ ತಂದೆಯವರಿಗೂ, ತರೀ ಜಮೀನಿನ ಹತ್ತಿರವೇ ತಮ್ಮ ತೋಟ ಇದ್ದರೆ ಚೆನ್ನು ಎನಿಸಿತ್ತು. ಈ ನಮ್ಮ ತೋಟವನ್ನು ಖರೀದಿಗೆ ಕೊಟ್ಟು ನಾಲೆ ಕೆಳಗೆ ಅರ್ಧ ಎಕರೆ ತೋಟವನ್ನು ಖರೀದಿಸಿದರು. ಅದರಲ್ಲಿ ವೀಳೆದೆಲೆ ಪೈರು, ತೆಂಗು, ಅಡಕೆ, ಬಾಳೆ ಎಲ್ಲಾ ಇತ್ತು. ಜೀವಕ್ಕೆ ಸ್ವಲ್ಪ ಸಮಾಧಾನ ಆಯಿತು.

ನನ್ನ ಶಾಲೆ

ರುದ್ರಪಟ್ಟಣದಲ್ಲಿ ಲೋಯರ್ ಸೆಕೆಂಡರಿಯವರೆಗೆ ಇರುವ ಶಾಲೆ ಇತ್ತು. ಹೆಚ್ಚು ಹುಡುಗರು ಸ್ಕೂಲಿಗೆ ಸೇರುತ್ತಿರಲಿಲ್ಲ. ನನ್ನನ್ನೂ ನನ್ನ ಮೊದಲ ತಮ್ಮ ನಾರಾಯಣನನ್ನೂ ಐದನೇ ವಯಸ್ಸಿನಲ್ಲಿ ಸ್ಕೂಲಿಗೆ ಸೇರಿಸಿದರು. ಪ್ರಾಥಮಿಕ ಶಾಲೆಯಲ್ಲಿ ನಮಗೆ ಹನಸೋಗೆ ಸುಬ್ರಾಯರು ಮತ್ತು ಸೋಮನಹಳ್ಳಿ ಸುಬ್ರಾಯ ಮೇಷ್ಟ್ರು ಉಪಾಧ್ಯಾಯರಾಗಿದ್ದರು. ಇಬ್ಬರೂ ಚೆನ್ನಾಗಿ ಪಾಠ ಹೇಳಿಕೊಡುತ್ತಿದ್ದರು. 'ಎ' 'ಬಿ' ಕ್ಲಾಸು ಮತ್ತು ಒಂದು, ಎರಡನೇ ತರಗತಿಯವರೆಗೂ ಅವರೇ ಇದ್ದರು. ಮೂರನೇ ತರಗತಿಗೆ ಹನಸೋಗೆಯ ಎಚ್. ನಾರಾಯಣಾಚಾರ್ಯರು, ರಾಮನಾಥಪುರದ ಎಸ್.ಪಿ. ಶ್ರೀನಿವಾಸಮೂರ್ತಿ ಎಂಬುವರು ಬಂದರು. ನಾಲ್ಕನೇ ತರಗತಿಯವರೆಗೂ ಅವರಿದ್ದರು. ನಾಲ್ಕನೇ ತರಗತಿಯಲ್ಲಿದ್ದಾಗ ಲೋಯರ್ ಸೆಕೆಂಡರಿ ಕ್ಲಾಸಿಗೆ ನಮ್ಮೂರಿನವರೇ ಆದ ಶ್ರೀ ಶಾಮಶಾಸ್ತ್ರಿಗಳು ಹೆಡ್ಮಾಸ್ಟರಾಗಿ ಬಂದರು.

ನನ್ನ ಒಂಬತ್ತನೆಯ ವಯಸ್ಸಿನಲ್ಲಿ ಸಿಡುಬೆದ್ದಿತು; ಆರು ತಿಂಗಳು ಸ್ಕೂಲು ತಪ್ಪಿತು. ಹನ್ನೆರಡನೇ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಗೆ ಹೋಗಬೇಕಾಗಿತ್ತು. ನಮ್ಮ ತರಗತಿಯಲ್ಲಿ ಹದಿಮೂರು ಜನರಿದ್ದೆವು. ಆಗ ಅದು ರೂರಲ್ ಎ.ವಿ. ಸ್ಕೂಲ್ ಎಂದೂ, ಎಲ್ಲರೂ ಇಂಗ್ಲಿಷ್ ಕಲಿತು ಪರೀಕ್ಷೆಗೆ ಕಟ್ಟಬೇಕೆಂದೂ ತಿಳಿಸಿದರು.

ಶುಲ್ಕ ಒಂದನೇ ತರಗತಿಗೆ ನಾಲ್ಕು ಆಣೆ, ಎರಡನೇ ತರಗತಿಗೆ ಎಂಟು ಆಣೆ, ಮೂರನೇ ತರಗತಿಗೆ ಹನ್ನೆರಡು ಆಣೆ ಎಂದು ನಿಗದಿ ಮಾಡಿದ್ದರು. ನಾನೂ ನನ್ನ ಮೊದಲ ತಮ್ಮ ನಾರಾಯಣನೂ ಒಂದೂವರೆ ವರ್ಷ ಅಂತರದವರು. ಒಂದೇ ಕ್ಲಾಸಿನಲ್ಲಿದ್ದೆವು. ಇಬ್ಬರಿಗೂ ಫೀಸು ಕೊಡಬೇಕು. ಅಷ್ಟು ಕೊಡಲೂ ನಮಗೆ ಶಕ್ತಿ ಇರಲಿಲ್ಲ. "ಸ್ಕೂಲ್ ಸ್ಟಾಂಡರ್ಡ್ ಕಡಮೆಯಾಗಿ ಸ್ಕೂಲೇ ಇಲ್ಲದಂತಾಗುತ್ತದೆ" ಎಂದು ಹೇಳಿ ಪರೀಕ್ಷೆಗೆ ಕೂರಲು ನಮಗೆ ಅವಕಾಶ ಕೊಡಲಿಲ್ಲ.

ಆ ವೇಳೆಗೆ ನಾಲ್ಕು ಜನ ಸಹೋದರರಾಗಿದ್ದೆವು. ಸಂಸಾರ ಸಾಗಿಸುವುದೇ ಕಷ್ಟ. ಎಲ್ಲರ ವಿದ್ಯಾಭ್ಯಾಸ ಆಗಬೇಕು. ನಮ್ಮ ಕಾಲದಲ್ಲಿ ಹಳ್ಳಿಗಳಲ್ಲಿ ಸ್ಕೂಲಿಗೆ ಹೋಗುವಾಗ ಇಂಥದೇ ಬಟ್ಟೆಯಾಗಬೇಕು ಎಂಬ ಕಟ್ಟಳೆಗಳಿರಲಿಲ್ಲ. ಶರಟು ಕೂಡಾ ಹಾಕಿಕೊಳ್ಳುತ್ತಿರಲಿಲ್ಲ. ಒಂದು ಕೋಟು, ತಲೆಗೆ ಟೋಪಿ ಹಾಕಿಕೊಂಡು ಕೌಪೀನ ಹಾಕಿಕೊಂಡೇ ಹೋಗುತ್ತಿದ್ದೆವು. ಅದರಲ್ಲಿ ಯಾವ ವೆಗ್ಗೂ ಇರುತ್ತಿರಲಿಲ್ಲ.

ಪ್ಲೇಗು

ಹೀಗಿರುವಾಗ ನನಗೂ, ನನ್ನ ತಮ್ಮ ನಾರಾಯಣನಿಗೂ, ಇನ್ನೊಬ್ಬ ತಮ್ಮ ವೆಂಕಟಸುಬ್ಬಯ್ಯನಿಗೂ ಪ್ಲೇಗು ತಗುಲಿತು. ಇಪ್ಪತ್ತೆರಡು ದಿವಸ ಕಾಲ ಜ್ಞಾನವಿಲ್ಲದೆ ಮಲಗಿದ್ದೆ. ಆಗಿನ ಕಾಲದಲ್ಲಿ ಆಸ್ಪತ್ರೆಯೂ ಇರಲಿಲ್ಲ. ಕಿವಿಯ ಹಿಂದುಗಡೆ ಗಡ್ಡೆಯಾಗಿತ್ತು. ಆಹಾರ ಕೊಡುತ್ತಿರಲಿಲ್ಲ. ಬೇವಿನ ಸೊಪ್ಪಿನ ಕಷಾಯ ಮಾಡಿ ಕೊಡುತ್ತಿದ್ದರಂತೆ, ಬಿಸಿನೀರು ಕೊಡುತ್ತಿದ್ದರು; ಅದೇ ಆಹಾರ. ಅಂತೂ ಇಪ್ಪತ್ತೆರಡನೆಯ ದಿನ ಗಡ್ಡೆಯು ಹಣ್ಣಾಗಿ ಒಡೆಯಿತು, ಸುಮಾರು ಅರ್ಧ ಸೇರು ಕೀವು ಹರಿದು ಹಾಸಿಗೆಯೆಲ್ಲಾ ಒದ್ದೆಯಾಯಿತು. "ಅಣ್ಣ, ಬೆಕ್ಕು ಉಚ್ಚೆ ಹುಯ್ದಿದೆಯೋ ಏನೋ, ಹಾಸಿಗೆಯೆಲ್ಲಾ ತೇವವಾಗಿದೆ" ಎಂದು ಕೂಗಿಬಿಟ್ಟೆ. ಆ ದಿನವೇ ನಾನು ಮಾತಾಡಿದ್ದು. ನನ್ನ ತಂದೆತಾಯಿಯರಿಗೆ ಎಲ್ಲಿಲ್ಲದ ಸಂತೋಷ. ನನ್ನ ತಮ್ಮ ನಾರಾಯಣನಿಗಂತೂ ತುಂಬಾ ಕುತೂಹಲ. ಅವನು ಹೆಚ್ಚು ತೊಂದರೆಯಿಲ್ಲದೆ ಹುಷಾರಾಗಿದ್ದ. ಆ ಕಾಲದಲ್ಲಿ ರಾತ್ರಿ ಉಪಯೋಗಿಸುತ್ತಿದ್ದ ಬುಡ್ಡಿಯ ಬೆಳಕಿನಲ್ಲಿ ಎಲ್ಲರೂ ನೋಡಿ ಗಡ್ಡೆ ಒಡೆದದ್ದಕ್ಕೂ, ನಾನು ಮಾತಾಡಿದ್ದಕ್ಕೂ, ಊರಿನವರೆಲ್ಲಾ ಬಹಳ ಸಂತೋಷಪಟ್ಟರು. ಆ ಹಾಸಿಗೆ ತೆಗೆದು ಬೇರೆ ಹಾಸಿಗೆ ಹಾಕುವ ಹೊತ್ತಿಗೆ ಚೆನ್ನಾಗಿ ಬೆಳಗಾಯಿತು.

ಇನ್ನು ಆಹಾರ : ಗಂಜಿ ಮಾಡಿ ತಂದು ಚಮಚದಿಂದ ಬಾಯಿಗೆ ಬಿಟ್ಟರೆ, ಕಿವಿಯ ಹಿಂದುಗಡೆಯಿಂದ ನೆಲಕ್ಕೆ ಬೀಳುವಂತಾಯಿತು. ನೀರು ಹಾಕಿದರೆ ಅರ್ಧ ನೆಲಕ್ಕೆ, ಅರ್ಧ ಹೊಟ್ಟೆಗೆ. ಹೀಗಾಗಿ ಹಿಟ್ಟು ಮಾಡಿ ಸಣ್ಣ ಸಣ್ಣ ಗುಳಿಗೆ ಮಾಡಿಕೊಡಲು ಶುರು ಮಾಡಿದರು. ಇದರಿಂದ ಉತ್ತೇಜಿತರಾಗಿ ಒಂದು ದಿನ ಅನ್ನವನ್ನು ಚೆನ್ನಾಗಿ ಕಲಸಿ ಬಾಯಿಗೆ ಹಾಕಿದರು. ಹಾಕಿದ ಒಂದೆರಡು ಅಗುಳು ಕೂಡ ಕಿವಿಯ ಹಿಂದುಗಡೆಯಿಂದಲೇ ಬಂದಿತ್ತು. ನಿರ್ವಾಹವಿಲ್ಲದೆ, ಹಿಟ್ಟನ್ನೇ ಮಾಡಿ ನಮ್ಮ ತಂದೆಯವರೇ ಸ್ವಲ್ಪ ಸ್ವಲ್ಪ ತಿನ್ನಿಸಿ ಪಾಠಮಾಡುತ್ತಿದ್ದರು. ಆಗ ನನ್ನ ವಯಸ್ಸು ಹದಿಮೂರು.

ಮತ್ತೆ ಪ್ಲೇಗು

ಒಂದು ವರ್ಷ ಪೂರ್ತಿ ಸ್ಕೂಲಿಗೆ ಹೋಗಲಿಲ್ಲ. ಹದಿನೈದನೇ ವಯಸ್ಸಿನಲ್ಲಿ ಪರೀಕ್ಷೆಗೆ ಕಟ್ಟಬೇಕು ; ಸ್ಕೂಲಿಗೆ ಸೇರಿದೆ. ಆ ವೇಳೆಗೆ ಮತ್ತೆ ಪ್ಲೇಗಿನ ಸೋಂಕು ಶುರುವಾಯಿತು.

ನಮ್ಮ ತಂದೆಯವರಿಗೆ ಪ್ಲೇಗು ಬಂದು ನಾಲ್ಕೇ ದಿವಸದಲ್ಲಿ ಸ್ವರ್ಗಸ್ಥರಾದರು. ಆಗ ಅವರಿಗೆ ೪೮ ವರ್ಷ ವಯಸ್ಸು. ನನ್ನ ವಯಸ್ಸು ಹದಿನಾರೂವರೆ ವರ್ಷ. ಅವರ ಕರ್ಮಾಂತರಗಳೆಲ್ಲಾ ಮುಗಿದವು. ನನ್ನ ಮೊದಲ ತಮ್ಮ ನಾರಾಯಣನಿಗೆ ಜ್ವರ ಶುರುವಾಯಿತು. ಅದೂ ಪ್ಲೇಗಿನ ಜ್ವರವೇ. ಅವನಿಗೆ ಗಂಟಲಲ್ಲಿ ಗಡ್ಡೆಯಾಗಿ ನಾಲ್ಕೇದಿವಸದಲ್ಲಿ ಮೃತ್ಯುವಶನಾದ.

ನಾನು ಕಂಗಾಲಾಗಿ ದಿಕ್ಕು ತೋಚದೆ ಇರುವಾಗ ನಮ್ಮ ತಾಯಿಯವರು ಜ್ವರ ಬಂದು ಮಲಗಿದರು. ನಮಗೆ ಪಾಲಕರೇ ಇಲ್ಲ. ಎಲ್ಲರಿಗೂ ನಮ್ಮ ಮನೆಗೆ ಬರಲು ಹೆದರಿಕೆ. ನಮಗೆ ಹಸಿವಾದರೂ ನೋಡುವವರಿರಲಿಲ್ಲ. ಎರಡನೇ ತಮ್ಮನಿಗೆ ಆಗ ಹತ್ತು ವರ್ಷ. ಹಿತ್ತಲಲ್ಲಿ ಸೀಗುಂಬಳ ಬಿಟ್ಟಿರುತ್ತಿತ್ತು. ಅದನ್ನೇ ತಂದು ಬೇಯಿಸಿ, ಉಪ್ಪು ಬೆರಸಿ ಮಜ್ಜಿಗೆ ಹಾಕಿಕೊಂಡು ತಿನ್ನುತ್ತಿದ್ದೆವು. ಹೀಗೆ ಹದಿನೈದು ದಿವಸ ಕಳೆಯಿತು.

ತಾಯಿಯವರು ಸ್ವಲ್ಪ ಚೇತರಿಸಿಕೊಂಡು ಸಾರು ಅನ್ನ ಮಾಡಲು ಹೇಳಿಕೊಟ್ಟರು. ಅದರಂತೆ ನಾಲ್ಕುದಿನ ಮಾಡಿದೆ. ಅವು ಆತಂಕದ ದಿನಗಳು; ಸುಮ್ಮನೆ ಒಂದು ಕಡೆ ಕೂರಲೂ ಹೆದರಿಕೆ, ತೋಟಕ್ಕೆ ಹೋಗಲೂ ಹೆದರಿಕೆ. ಕಾಲಕ್ರಮದಲ್ಲಿ ಒಬ್ಬ ಗೆಳೆಯನ ಜತೆ ಕೂಡಿಕೊಂಡು ತೋಟಕ್ಕೆ ಹೋಗಲು ಶುರು ಮಾಡಿದೆ.

ಪದ್ಯಗಳ ರಚನೆ

ನನ್ನ ಎಳೆಯ ವಯಸ್ಸಿನಿಂದಲೇ ಕಾವ್ಯವಾಚನದ ಅಭಿರುಚಿ ಬೆಳೆದಿತ್ತು. ಕುಮಾರವ್ಯಾಸನ ಪದ್ಯಗಳನ್ನು ರಾಗವಾಗಿ ವಾಚನ ಮಾಡುತ್ತಿದ್ದೆ.

ಬರೆಯಲು ತೊಡಗಿದ್ದು ಮಾತ್ರ ನನ್ನ ಹದಿಮೂರನೆಯ ವಯಸ್ಸಿನಲ್ಲಿ - ಮಾಧ್ಯಮಿಕ ಶಾಲೆಯ ಮೂರನೆಯ ವರ್ಷದ ತರಗತಿಯಲ್ಲಿ ಕಲಿಯುತ್ತಿದ್ದಾಗ. ಮೊದಲಿನಿಂದಲೂ ಹೇಗೋ

'ಭಾಮಿನಿ'ಯಲ್ಲೇ ನನಗೆ ಆಕರ್ಷಣೆ. ಶರ, ವಾರ್ಧಕ, ಭಾಮಿನಿ, ಪರಿವರ್ಧಿನಿ - ಎಲ್ಲಾ ರೀತಿಯ ಪದ್ಯಗಳೂ ನಮಗೆ ಇದ್ದವು. 'ಭಾಮಿನಿಷಟ್ಪದಿ' ರಚಿಸುವುದು ಮಾತ್ರ ಕಷ್ಟ ; ಸಣ್ಣ ಸಣ್ಣ ಪದಗಳನ್ನೇ ಅದಕ್ಕೆ ಜೋಡಿಸಬೇಕು, 'ವಾರ್ಧಕ'ದಲ್ಲಿ ಹಾಗಲ್ಲ. ಒಟ್ಟಿನಲ್ಲಿ ಕುಮಾರವ್ಯಾಸನ ಶೈಲಿ ನನಗೆ ತುಂಬಾ ಪ್ರಿಯವಾಯಿತು. ಏಕೆಂದರೆ ರಾಗವಾಗಿ ಓದುವುದಕ್ಕೆಲ್ಲಾ ಅದು ಸ್ವಾರಸ್ಯವಾಗಿರುತ್ತದೆ. ವಾಚನ ಸುಲಭ ಎಂದಲ್ಲ ; ಶ್ರಾವ್ಯವಾಗಿ ಓದಲು ಅವಕಾಶವಿದೆ, ಬೇರೆಯದಕ್ಕಿಂತ ಇದು ಚೆನ್ನಾಗಿರುತ್ತದೆ.

ನಮ್ಮ ತಂದೆಯವರಿಗೆ ಪ್ಲೇಗು ತಗಲುವ ಮೊದಲು, ಸ್ಕೂಲಿನಲ್ಲಿ ಓದುತ್ತಿದ್ದಾಗ, ಚರಿತ್ರೆಯ ಪಾಠಗಳು ನನ್ನನ್ನು ಬಹಳವಾಗಿ ಆಕರ್ಷಿಸುತ್ತಿದ್ದವು. ಬ್ರಿಟಿಷ್ ಚಕ್ರಾಧಿಪತ್ಯ ಬಹಳ ವಿಸ್ತಾರವಾಗಿರುವುದನ್ನು ತಿಳಿದು ಆಗ ಬೆರಗುಪಡುತ್ತಿದ್ದೆ. ಚರಿತ್ರೆ ಭೂಗೋಳದ ಮೇಲೆ ಪದ್ಯಗಳನ್ನು ಬರೆದೆ - ಶಾಲೆಯಲ್ಲಿ ಏನು ಪಾಠ ಮಾಡುತ್ತಿದ್ದರೋ ಅದನ್ನೇ ಪದ್ಯವಾಗಿ ಬರೆಯುತ್ತಿದ್ದೆ - ಎಲ್ಲಾ ಭಾಮಿನಿ ಷಟ್ಪದಿಯಲ್ಲೇ. ಇದನ್ನೆಲ್ಲ ಮಾಡಿದ್ದು ತಮಾಷೆಗಾಗಿ. ಅದು ಒಂದು ದಿನ ನಮ್ಮ ಉಪಾಧ್ಯಾಯರ ಗಮನಕ್ಕೆ ಬಂತು. "ಪಾಠದ ಮಧ್ಯೆ ಏನು ಮಾಡುತ್ತಿದ್ದೀಯೆ ?" ಎಂದು ಗದರಿಸಿದರು; ಹತ್ತಿರ ಬಂದು ಆ ಹಾಳೆಯನ್ನು ನನ್ನ ಕೈಯಿಂದ ಕಿತ್ತುಕೊಂಡರು.

ಎತ್ತ ನೋಡಿದರತ್ತಲೈರ್ಲೆಂಡ್
ಎತ್ತ ನೋಡಿದರತ್ತ ವೇಲಸು
ಎತ್ತಲುಂ ಪೊತ್ತಿಹಳು ಭೂಮಾತೆಯೀ ಜಗವ
ಎತ್ತೆಡೆಯೊಳುಂ ನದೀಮುಖವಿಹು
ದೆತ್ತಲುಂ ಸಾಗರಶಿರ ಭೂಮಿ
ಎತ್ತಲುಂ ದ್ವೀಪಂಗಳೊಳಗೀ ದೇಶಮೊಪ್ಪಿರ್ಪುದು ॥

(ಎಲ್ಲಿ ನೋಡಿದರೆ ಆ ಕಡೆ ಐರ್ಲೆಂಡ್ ವಿರಾಜಿಸುತ್ತಿದೆ, ಇನ್ನೊಂದು ಕಡೆ ನೋಡಿದರೆ ವೇಲಸು. ಹೀಗೆ ಭೂಮಾತೆ ಈ ಜಗತ್ತನ್ನು ಎಲ್ಲ ಕಡೆಯೂ ಹೊತ್ತಿದ್ದಾಳೆ. ಎಲ್ಲಿ ನೋಡಿ, ಅಲ್ಲಿ ನದೀಮುಖವಿದೆ, ಸಾಗರಶಿರವಿದೆ, ದ್ವೀಪಗಳಿವೆ. ಇಲ್ಲಿ ಈ ದೇಶ ಶೋಭಿಸುತ್ತಿದೆ) ಹೀಗೇ ಅದು ಮುಂದುವರಿದಿತ್ತು.

'ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸೂರ್ಯನು ಕಾಣಿಸದ ಕಾಲವಿಲ್ಲ' ಎಂಬುದು ಆ ಆಧಿಪತ್ಯದ ಕೀರ್ತಿಯಾಗಿತ್ತು. ಅದರದು ಅಂಥ ವಿಸ್ತಾರ. ಅದನ್ನು ಹೀಗೆ ಪದ್ಯದಲ್ಲಿ ಬರೆದಿದ್ದೆ.

ನಮ್ಮ ಕಾಲದಲ್ಲಿ 'ಚರಿತ್ರೆ'ಯಲ್ಲಿ ಲಾರ್ಡ್‌ಗಳ ಹೆಸರುಗಳನ್ನು ಓದಬೇಕಾಗಿತ್ತು. ಈಗ ಅವನ್ನು ಯಾರೂ ಓದುವುದಿಲ್ಲ. ನನಗೂ ಈಗ ಅವು ಮರೆತಿವೆ. ಆ ಕಾಲಕ್ಕೆ ಆ ಹೆಸರುಗಳನ್ನೇ ಪೋಣಿಸಿ ಸಂಸ್ಕೃತದಲ್ಲಿ ಶ್ಲೋಕಗಳನ್ನು ಕಟ್ಟಿದ್ದೆ. ಉದಾಹರಣೆಗೆ,

ಕ್ಯಾನಿಂಗಃ ಪ್ರಥಮಃ ಪ್ರೋಕ್ತೋ
ಎಲ್ಜಿನ್ನಸ್ತು ದ್ವಿತೀಯಕಃ ।
ಲಾರೆನ್ಸಸ್ತೃತೀಯಸ್ತು
ಲಾರ್ಡ್ ಮೇಯೋಶ್ಚ ಚತುರ್ಥಕಃ ॥
ಪಂಚಮೋ ನಾರ್ತ್‌ಬ್ರೂಕಸ್ತು...
ತ್ರಯೋದಶಸ್ತು ಹಾರ್ಡಿಂಜಃ
ಲಾರ್ಡ್ ಮಿಂಟೋ ದ್ವಾದಶ ಉಚ್ಯತೇ ॥

(ನಮ್ಮನ್ನಾಳಿದ ಲಾರ್ಡುಗಳಲ್ಲಿ ಮೊದಲನೆಯವನು ಕ್ಯಾನಿಂಗ್, ಎರಡನೆಯಾತ ಎಲ್ಜಿನ್, ಮೂರನೆಯವ ಲಾರೆನ್ಸ್, ಲಾರ್ಡ್‌ಮೇಯೋನೇ ನಾಲ್ಕನೆಯವನು. ಐದನೆಯವನು ನಾರ್ತ್‌ಬ್ರೂಕ್... ಲಾರ್ಡ್ ಮಿಂಟೋ ಹನ್ನೆರಡನೆಯವನು, ಹದಿಮೂರನೆಯವನೇ ಹಾರ್ಡಿಂಜ್ ಆಗಿದ್ದಾನೆ.)

ಅದೇನೋ ಸಂಸ್ಕೃತದಲ್ಲಿ ಬರೆಯಬೇಕೆಂಬ ಚಪಲ ಬಂದಿತ್ತು. ಸಂಸ್ಕೃತವನ್ನೂ ಸರಾಗವಾಗಿ ಓದುತ್ತಿದ್ದುದೇ ಅದಕ್ಕೆ ಕಾರಣವಾಗಿರಬೇಕು. ಡಿಕ್ಟೇಷನ್ನುಗಳನ್ನು ಒಂದೂ ತಪ್ಪಿಲ್ಲದೆ ಬರೆಯುತ್ತಿದ್ದೆ. ನಮ್ಮಲ್ಲಿ ಅನೇಕ ಹುಡುಗರು ಸಂಸ್ಕೃತದಲ್ಲೇ ಮಾತಾಡುವ ಮಟ್ಟಕ್ಕೆ ಬಂದಿದ್ದೆವು. ನಿಘಂಟುಗಳನ್ನೂ ನೋಡುತ್ತಿದ್ದೆವು. 'ರಘುವಂಶ' ಮೊದಲಾದ ಕಾವ್ಯಗಳು ಕಂಠಸ್ಥವಾಗಿದ್ದವು. ಕನ್ನಡದಲ್ಲಿ ಕಾವ್ಯಗಳನ್ನು ರಚಿಸುವ ಹೊತ್ತಿನಲ್ಲಿ ನನಗೆ ಸಂಸ್ಕೃತ ಶಬ್ದಸಂಪತ್ತು ನೆರವಿಗೆ ಬರುತ್ತಿತ್ತು. ಒಬ್ಬೊಬ್ಬ ಲಾರ್ಡೂ ಐದೈದು ವರ್ಷ ಆಳಿದ; ಅಂಥ ಹದಿನಾರು ಲಾರ್ಡುಗಳು ಎಂಬತ್ತು ವರ್ಷ ರಾಜ್ಯಭಾರ ಮಾಡಿದರು. ಆ ಲಾರ್ಡ್‌ಗಳ ಹೆಸರು ಮತ್ತು ಅವರು ಆಳಿದ ಇಸವಿ ಜೋಡಿಸಿ ಪದ್ಯಗಳನ್ನು ಕಟ್ಟಿದ್ದೆ. ಮೇಷ್ಟರಿಗೆ ನಿಜಕ್ಕೂ ಆಶ್ಚರ್ಯವಾಗಿತ್ತು. "ಇದೆಲ್ಲಿತ್ತು ? ಇದನ್ನು ನೀನೇ ಬರೆದೆಯಾ ?" ಎಂದು ಕೇಳಿದರು. "ಹೌದು" ಎಂಬ ನನ್ನ ಉತ್ತರದಲ್ಲಿ ಅವರಿಗೆ ನಂಬಿಕೆ ಬಂದಿತೋ ಇಲ್ಲವೋ ತಿಳಿಯದು. ಸೀದಾ ಆ ಹಾಳೆ ಹಿಡಿದುಕೊಂಡು ಹೆಡ್‌ಮಾಸ್ಟರ್ ಶಾಮಶಾಸ್ತ್ರಿಗಳ ಬಳಿಗೆ ಹೋದರು. ಜತೆಗೆ ನನ್ನನ್ನೂ ಎಳೆದುಕೊಂಡು ಹೋಗಿದ್ದರು. ಹೆಡ್ಮಾಸ್ಟರೂ ಆಶ್ಚರ್ಯಗೊಂಡರು, ಸಂತೋಷವೂ ಪಟ್ಟರು. "ನೀನು ಲೋಯರ್ ಸೆಕೆಂಡರಿ ಆದ ಮೇಲೆ ಇಂಗ್ಲಿಷ್ ಬಿಟ್ಟು ಅಪ್ಪರ್ ಸೆಕೆಂಡರಿ ಮಾಡಿಕೋ; ಪಂಡಿತ ಪರೀಕ್ಷೆಯನ್ನೂ ಮಾಡಿಕೊ. ಆಗ ನಿನಗೆ ಕಾವ್ಯಜ್ಞಾನ ಉಂಟಾಗುತ್ತದೆ. ಮುಂದೆ ನೀನು ದೊಡ್ಡ ಕವಿಯಾಗುತ್ತಿ" ಎಂದು ಪ್ರೋತ್ಸಾಹಿಸಿದರು.

ಶಾಲೆಯಲ್ಲಿ ರಾಮಾಯಣದ ಕೆಲವು ಭಾಗಗಳು ಪಠ್ಯವಾಗಿದ್ದವು. ಕುಮಾರವ್ಯಾಸ ಭಾರತವಾಗಲೀ, ಜೈಮಿನಿ ಭಾರತವಾಗಲೀ,

ಪಠ್ಯವಾಗಿರಲಿಲ್ಲ. ಇವನ್ನೆಲ್ಲ ಮನೆಯಲ್ಲೇ ಕಲಿಸಿದವರು ಶಾಮ ಶಾಸ್ತ್ರಿಗಳು. ಅವರಾದರೋ ಕನ್ನಡದಲ್ಲಿ ಪೂರ್ಣವಾಗಿ 'ಅದ್ಭುತ ರಾಮಾಯಣ' ವನ್ನು ಭಾಮಿನಿಯಲ್ಲಿ ರಚಿಸಿದ್ದವರು; ಖ್ಯಾತ ಸಂಗೀತ ವಿದ್ವಾಂಸ ಶ್ರೀ ಆರ್.ಕೆ. ಶ್ರೀಕಂಠನ್ ಅವರ ದೊಡ್ಡಪ್ಪ. ಅವರು ಪುರಾಣ ಪ್ರವಚನವನ್ನೂ ಮಾಡುತ್ತಿದ್ದರು. ಅದರ ಪ್ರಯೋಜನವೂ ನನಗಾಯಿತು. ನನ್ನನ್ನು ಬಹಳ ಅಚ್ಚುಮೆಚ್ಚಾಗಿ ನೋಡಿಕೊಂಡಿದ್ದರು. ನನ್ನ ಬೇರೆ ಕೆಲವು ಪದ್ಯಗಳನ್ನೂ ನೋಡಿದ್ದರು. ಅವರು ನಮಗೆ ಕನ್ನಡ ಮತ್ತು ಸಂಸ್ಕೃತ ಎರಡನ್ನೂ ಬೋಧಿಸುತ್ತಿದ್ದರು. ಸೀತಾರಾಮಶಾಸ್ತ್ರಿಗಳೂ ಪರಿಣಾಮಕಾರಿಯಾಗಿ ಪಾಠ ಹೇಳಿಕೊಡುತ್ತಿದ್ದರು. ಅವರು ಕಲಿಸಿದ 'ಕೃಷ್ಣ ಕರ್ಣಾಮೃತ' ನಮ್ಮ ಪಾಲಿಗೆ ಅಮೃತವೇ ಆಗಿತ್ತು.

ಇದೇ ಮುಂದುವರಿದು ನನ್ನ ಹತ್ತೊಂಬತ್ತನೆಯ ವಯಸ್ಸಿಗೆ ಒಂದು ಪೊಲೀಸ್ ಪತ್ತೇದಾರಿ ಕಥೆಯನ್ನು ಪದ್ಯದಲ್ಲೇ ಬರೆದಿದ್ದೆ.

ಅದರ ಕೆಲವು ಪದ್ಯಗಳು :

ಕೇಳಿರೈ ವರಮಿತ್ರರಿರ ಬಹು
ಕಾಲದಲ್ಲದ ಕಥೆಯ ಸೊಗಸನು
ಬಾಲಮತಿ ನಾಂ ರಚಿಸಿ ಪೇಳುವೆ ಪದ್ಯರೂಪದಲಿ
ಶೀಲ ನಡವಳಿ ಕಳ್ಳತನಗಳ
ಜಾರವಿದ್ಯದ ವ್ಯಾವಹಾರವ
ಪೇಳುವೆನು ನಾ ಎಸ್‍ಜಿಮೂರ್ತಿಯ ಗದ್ಯರಚನೆಯನು

ಶ್ರೀರಂಗಗಿರಿ ತಪ್ಪಲಲಿ ವರ
ಸಾರಂಗ ನಿಕರ ಬನಗಳಲಿ
ಘೋರಂಗವಹ ಮದದಾನೆಗಳು ಮರಿಗಳೊಡಗೂಡಿ
ಲೀಲೆಯಿಂದಲಿ ಕೂಡಿ ನಲಿಯುತ
ಜಾಲಜಾಲದಿ ಬರಬರುತ ಮಿಗೆ
ಪಾಲರಿಲ್ಲದ ವನದ ಮಧ್ಯದಿ ಕರಿಣಿಯೊಡಗೊಂಡು

ಸಾಲ ಬಿಲ್ವ ಕಪಿತ್ಥ ಜಂಬು ತ
ಮಾಲ ದಾಡಿಮ ವಕುಳ ವಟ ಹಿಂ
ತಾಲ ಕ್ರಮುಕ ಕದಂಬ ಕುರವಕ ಕದಲಿ ಖರ್ಜೂರ
ತಾಲ ಚಂದನ ಕುಟಜ ಘನ ತ
ಕ್ಕೋಲ ವರ ಕರವೀರ ತರುಗಳ
ಸಾಲು ಸಾಲಲಿ ಮೆರೆವ ಘನವುದ್ಯಾನ ರಂಜಿಸಿತು

ಆಲ ಸಲ್ಲದು ನೋಡೆ ವಿಪಿನವು
ಸೋಲುವುದು ತಲೆ ಮೇಲೆ ನೋಡಲು
ಹೋಲದಿಹ ಆ ಬನದಿ ಬಂದರು ಕಳ್ಳರನು ಹುಡುಕೆ

(ನಲ್ಮೆಯ ಗೆಳೆಯರೆ, ಬಾಲಕನಾದ ನಾನು ಪದ್ಯರೂಪದಲ್ಲಿ ನಿಮಗೊಂದು ಕಥೆ ಹೇಳುತ್ತೇನೆ. ಕಥೆಯಾದರೂ ಇತ್ತೀಚೆಗೆ ನಡೆದುದು, ಸೊಗಸಾಗಿದೆ. ಶೀಲ, ನಡೆವಳಿಕೆ, ಕಳ್ಳತನ, ಜಾರತನ ಇತ್ಯಾದಿ ಲೋಕವಾರ್ತೆಗಳನ್ನೊಳಗೊಂಡ ಕಥೆಯೊಂದನ್ನು ಎಸ್.ಜಿ. ಮೂರ್ತಿಯವರು ಗದ್ಯದಲ್ಲಿ ರಚಿಸಿದ್ದಾರೆ. ಅದೇ ನನ್ನ ಕಾವ್ಯಕ್ಕೆ ಆಧಾರ.

ಅದು ಶ್ರೀರಂಗಗಿರಿಯ ತಪ್ಪಲು, ಅಲ್ಲಿನ ಕಾಡಿನಲ್ಲಿ ಸಾರಂಗಗಳ ಸಮೂಹವಿತ್ತು, ಘೋರವಾದ ಮದದಾನೆಗಳು ಮರಿಗಳ ಜತೆಗೂಡಿ ಓಡಾಡುತ್ತಿದ್ದವು. ಅದಾದರೂ ಹೇಳಿಕೇಳುವವರಿಲ್ಲದ ಕಾಡು, ಅದರ ಮಧ್ಯದಲ್ಲಿ ಹೆಣ್ಣಾನೆಗಳ ಜತೆಗೂಡಿ ಆನೆಗಳ ಹಿಂಡು ಆನಂದವಾಗಿ ಓಡಾಡಿಕೊಂಡಿತ್ತು.

ಆ ಕಾಡಿನಲ್ಲಾದರೂ ಬಿಲ್ವ, ಬೇಲ, ನೇರಳೆ ಹೊಂಗೆ, ದಾಡಿಂಬೆ, ವಕುಳ, ವಟ, ಹಿಂತಾಲ, ಕ್ರಮುಕ, ಕದಂಬ, ಕುರವಕ, ಬಾಳೆ, ಖರ್ಜೂರ, ತಾಲ, ಗಂಧ, ಕುಟಜ, ತಕ್ಕೋಲ, ಕಣಿಗಲೆ ಮೊದಲಾದ ಮರಗಳು ಬೆಳೆದು ಶೋಭಾಯಮಾನವಾಗಿತ್ತು.

ಆ ಕಾಡಿನ ನಡುವೆ ಆಲವೇ ಗೌಣ. ಎಷ್ಟು ಎತ್ತರದ ಮರಗಳೆಂದರೆ ತಲೆ ಎತ್ತಿ ಎತ್ತಿ ನೋಡಬೇಕಿತ್ತು; ಕತ್ತು ನೋಯುತ್ತಿತ್ತು. ಅಂಥ ಅನುಪಮ ಅರಣ್ಯದಲ್ಲಿ ಕಳ್ಳರು ಅಡಗಿದ್ದರು. ಪೊಲೀಸರು ಅವರನ್ನು ಹುಡುಕಲು ತೊಡಗಿದ್ದರು.)

ಇನ್ನೊಂದು .....

ಅದು ಯಾವ ಕಾವ್ಯ-ನಾನು ಬರೆದದ್ದು ? ಅದೇ ಈಗ ಮರೆತಿದೆ.

ಹೌದು. ಅದು 'ಸಂಪತ್ತು' (ನನ್ನ ಸ್ನೇಹಿತ ಸಂಪತ್ತೈಯಂಗಾರ್) ಅವರ ಯಾವುದೋ ಗದ್ಯಕೃತಿಯನ್ನು ಆಧರಿಸಿದ್ದು.

ಸುರಲೋಕ ಧರೆಗಿಳಿದ ಕಥನದ
ವರಪುರದ ವರ ಚನ್ನಿಗರಾಯ
ನರಸನಂಕಿತಮಾಗಿ ಪೇಳುವೆನೀ ಮಹಾಕಥೆಯ .....

ಎಂದು ಪ್ರಾರಂಭವಾಗುತ್ತಿತ್ತು.

(ಪವಿತ್ರ ವೇಲಾಪುರಿಯ ಶ್ರೀ ಚನ್ನಕೇಶವ ಸ್ವಾಮಿಯನ್ನು ಅಂಕಿತಮಾಡಿಕೊಂಡು ಈ ಮಹಾಕಥೆಯನ್ನು ಹೇಳುವೆನು)

'ಆಂಜನೇಯನ ಲಂಕಾಪ್ರವೇಶ' ಎಂಬ ಒಂದು ಪುಸ್ತಕ ಬರೆದಿದ್ದೆ. ಆ ಹಸ್ತಪ್ರತಿ ಹಾಳಾಗಿಯೇ ಎಪ್ಪತ್ತು ವರ್ಷ ಕಳೆದಿದೆ. ಅದರ ಮೊದಲ ಪದ್ಯ 'ಗಣಪತಿ ಜನನ'. ನಲವತ್ತೈದು ಪದ್ಯಗಳ ಪುಸ್ತಕ ಅದು.

ಅದರ ಒಂದು ಪದ್ಯ ಜ್ಞಾಪಕವಿದೆ :

ಮುಕ್ತಗಜದಂತೆ ಮುಕ್ಕಣ್ಣನ
ಮುಕ್ತಾಫಲದಂತೆ ಭಟನಂತೆ
ಭಕ್ತನಂತೆ ದೇವತಾಸ್ವರೂಪಿನವತಾರದಂತೆ

ಮೌಕ್ತಿಕದ ಹೊಳಹಂತೆ ವಿಲೋಮ
ವಾಗುತಂತೆಯೆ ಸಾಕ್ಷಕನಂತೆ
ರಕ್ಷಕನಂತೆ ಪೊಕ್ಕನಾ ದಶಮುಖನಶೋಕವನವ

(ಮುಕ್ತವಾಗಿ ವಿಹರಿಸುವ ಮತ್ತಗಜದ ಹಾಗೆ, ಮೂರು ಕಣ್ಣುಳ್ಳ ರುದ್ರನ ಮುಕ್ತಾಫಲದ ಹಾಗೆ, ಭಟನ ಹಾಗೆ, ಭಕ್ತನ ಹಾಗೆ, ಅವತಾರ ಪುರುಷನಂತೆ, ಮುತ್ತಿನಂತೆ, ಅಣುವೂ ಮಹತ್ತೂ ಆಗುವ ಯೋಗಿಯಂತೆ, ಸಾಕ್ಷಿಯಂತೆ, ರಕ್ಷಕನಂತೆ ಆಂಜನೇಯನು ಸಮುದ್ರವನ್ನು ಹಾರಿ ರಾವಣನ ಅಶೋಕವನವನ್ನು ಪ್ರವೇಶಿಸಿದನು)

ಬಾಗೂರಿನ ಶ್ರೀಕಂಠಶಾಸ್ತ್ರಿಗಳು ನಾನು ಎಲ್.ಎಸ್. ಓದುವ ಕಾಲದಲ್ಲಿ ನಮ್ಮ ಮುಖ್ಯೋಪಾಧ್ಯಾಯರಾಗಿದ್ದರು. 'ಪ್ರಾತಃ ಸ್ತೋತ್ರ'ವನ್ನು ನನ್ನಿಂದ ಬರೆಸಿದ್ದರು. ಅದೂ ನನಗೆ ಸಿಕ್ಕಿದ ಇನ್ನೊಂದು ತರಪೇತಿಯಾಗಿತ್ತು.

ಅದರ ಒಂದು ಪದ್ಯ :

ಧರೆಯರಸ ಚಿರಮೀರುನೀಂ
ಸುರುಚಿರಗಾತ್ರ
ಅರಿಶಿರಗಳನಿರಿದು ಬಾಳಿದ ಭುಜದ ...

ಶಕ್ತಿಯು... ಎಂದು ನಮಗೆ ತಿಳಿಯದು...

ಸ್ಕೂಲೇ ಹೋಯಿತು

ಆದರೆ ವಿಧಿಯ ನಿರ್ಣಯ ಬೇರೆಯೇ ಇತ್ತು. ತಂದೆ 'ಹೋದರು', ತಮ್ಮನೂ 'ಹೋದ'. ತಾಯಿಗೂ, ಉಳಿದ ತಮ್ಮಂದಿರಿಗೂ ನೆರವಾಗಬೇಕಾದ ಜವಾಬ್ದಾರಿ ನನ್ನ ಮೇಲೆ ಬಂದಿತ್ತು. ಸ್ಕೂಲಿಗೆ ಹೋಗದ ಹಾಗೇ ಆಯಿತು.

ನಾನೂ ಕಾಯಿಲೆಯಿಂದ ನಿತ್ರಾಣಗೊಂಡಿದ್ದೆ. ತೋಟದಲ್ಲಿ ದೇಹಶ್ರಮದ ಕೆಲಸ ಮಾಡಲು ನನಗೆ ಆಗುತ್ತಿರಲಿಲ್ಲ. ಕೂಲಿ ಕೊಟ್ಟು ಕೆಲಸ ಮಾಡಿಸುವ ಸ್ಥಿತಿಯೂ ನಮ್ಮದಾಗಿರಲಿಲ್ಲ. ಅದಾಗಲೇ ಖಾಯಿಲೆ ಕಸಾಲೆಗೆಂದು ಸಾವಿರಾರು ರೂಪಾಯಿಗಳ ಸಾಲ ಆಗಿತ್ತು. ಸಾಲದ ಬಡ್ಡಿ ತೆತ್ತರೆ, ಕಂದಾಯ ಕಟ್ಟಲು ಹಣವಿರುತ್ತಿರಲಿಲ್ಲ.

ಪೂಜ್ಯ ಶಾಮಶಾಸ್ತ್ರಿಗಳೇನೋ ಅವರ ಮನೆಯಲ್ಲೇ ನನ್ನನ್ನು ಇಟ್ಟುಕೊಂಡರು, ವ್ಯಾಸಂಗ ಮಾಡಲು ನೆರವಾದರು, ಪರೀಕ್ಷೆಗೆ ಕಟ್ಟಲು ಅವಕಾಶ ಮಾಡಿಕೊಟ್ಟರು. ಆದರೆ ದೈವ ಆಗಲೂ ನನಗೆ ಕೈಕೊಟ್ಟಿತು. ಕಲ್ಲಹತ್ತಿಗೆಯಾಗಿ ಕೀಲೆಲ್ಲಾ ಹಿಡಿಯಿತು; ಅಲ್ಲಾಡಲೂ ಆಗದೆ ಹೋಯಿತು. ಪರೀಕ್ಷೆಯೂ ಇಲ್ಲವಾಯಿತು.

ಷೆಡ್ಡಿಗೆ

ಹೇಗೋ ಹುಷಾರಾಗಿ ಓಡಾಡತೊಡಗಿದೆ. ಆಗ ನನಗೆ ಹದಿನೇಳು ವರ್ಷ. ಆದರೂ ನಿಶ್ಶಕ್ತಿ ; ಸಾಲ ಸೋಲ; ಮನೆಯ ಹೊಣೆ. ಭಿಕ್ಷಾನ್ನ ಮಾಡದೆ ವಿಧಿಯೇ ಇರಲಿಲ್ಲ. ಆದರೆ ನನಗದು ಇಷ್ಟವಾಗದ ವಿಷಯವಾಗಿತ್ತು. ನಮ್ಮ ತಾಯಿಯವರು ಮಾತ್ರ, ಉಳಿದಿರುವ ಅದೊಂದೇ ದಾರಿಯ ಕಡೆಗೆ ಬೆರಳು ಮಾಡಿ ತೋರಿಸುತ್ತಿದ್ದರು. ನಿರ್ವಾಹವಿಲ್ಲದೆ ಭಿಕ್ಷಾನ್ನ ಮಾಡತೊಡಗಿದೆ. ಮನೆಯವರೆಲ್ಲರಿಗೂ ತುಸು ಆಧಾರವಾಯಿತು. ಆರು ತಿಂಗಳು ಹೀಗೆ ಕಳೆಯಿತು.

ಊರಿನವರೆಲ್ಲಾ ಷೆಡ್ ಹಾಕಿಕೊಂಡು ದೂರ ಇರುವ ಪದ್ಧತಿ ನಮ್ಮ ತಂದೆಯವರೂ, ತಮ್ಮನೂ ಪ್ಲೇಗಿನಿಂದ ಸತ್ತಾಗ ಇತ್ತು. ಸರ್ಕಾರದವರೂ ಅದನ್ನೇ ಹೇಳುತ್ತಿದ್ದರು. ಊರಿನವರು ನಮ್ಮ ತಾಯಿಯವರನ್ನು ಆಕ್ಷೇಪಿಸುತ್ತಿದ್ದರು; ಪದೇ ಪದೇ "ಊರು ಬಿಡಿ" ಎಂದು ಆಗ್ರಹಿಸುತ್ತಿದ್ದರು. ಆ ಸಮಯದಲ್ಲಿ ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಸಾಹೇಬರಾದ ಶ್ರೀ ಅಬ್ದುಲ್ ವಾಲಿದ್ ಎಂಬವರು ನಮ್ಮೂರಿಗೆ ಪರೀಕ್ಷಾರ್ಥವಾಗಿ ಬಂದಿದ್ದರು; ನಮ್ಮ ಮನೆಯ ಮುಂದೆ ನಿಂತು, "ಯಾಕಪ್ಪಾ, ಊರು ಬಿಡುವುದಿಲ್ಲವೇ?" ಎಂದು ಕೇಳಿದರು. ನನ್ನ ಕಷ್ಟಗಳನ್ನು ಅವರಲ್ಲಿ ಹೇಳಿಕೊಂಡೆ. ಆಗ ಸಾಹೇಬರು, ಪಕ್ಕದಲ್ಲೇ ನಿಂತಿದ್ದ ಶಾನುಭೋಗರನ್ನು ನೋಡಿ "ನಾರಣಪ್ಪನವರೇ, ಇಂಥವರಿಗೆ ನೀವೆಲ್ಲಾ ಸಹಾಯ ಮಾಡಬಾರದೇ ?" ಎಂದರು. ಆಗ ಊರಿನವರು ಸೇರಿ ಸಾಯಂಕಾಲದೊಳಗೆ ಅವರ ಹೊಲದಲ್ಲಿ ಒಂದು ಷೆಡ್ ಕಟ್ಟಿಕೊಟ್ಟರು, ಮನೆಯ ಸಾಮಾನುಗಳನ್ನು ಷೆಡ್ಡಿಗೆ ಸಾಗಿಸಿಕೊಟ್ಟು ಸಹಾಯ ಮಾಡಿದರು. ಅಲ್ಲಿ ಒಂದು ತಿಂಗಳ ವಾಸವಾಯಿತು. ಆಮೇಲೆ ಊರಿನವರೆಲ್ಲಾ ಅವರವರ ಷೆಡ್ಡಿನಿಂದ ಊರಿಗೆ ವಾಪಸಾದೆವು.

ವಿವಾಹದ ಪ್ರಸ್ತಾಪ

ಭಿಕ್ಷಾನ್ನ ಮುಂದುವರಿಯಿತು. ತೋಟದಲ್ಲಿ ಕೆಲಸ ಮಾಡುವಷ್ಟು ಸುಧಾರಿಸಿಕೊಂಡಿದ್ದೆ. ಒಂದು ದಿನ ಗೌರಮ್ಮನವರು ಚಿಲ್ಕುಂದದಿಂದ ತಮ್ಮ ತವರಿಗೆ ಬಂದರು. ಅವರು ನನ್ನನ್ನು ಎತ್ತಿ ಆಡಿಸಿದವರು. ಹಾಗಾಗಿ ಅವರಲ್ಲಿ ನನಗೆ ಗೌರವ. ಅವರು ಒಂದು ದಿನ ನಮ್ಮ ಮನೆಗೆ ಬಂದು ನಮ್ಮ ತಾಯಿಯವರೊಡನೆ ನನ್ನ ಮದುವೆಯ ಪ್ರಸ್ತಾಪ ಮಾಡುತ್ತಿದ್ದರು. ಹೆಚ್ಚಿನ ವ್ಯಾಸಂಗಕ್ಕಾಗಿ ಶಾಸ್ತ್ರಿಗಳ ಮನೆಗೆ ಹೋಗುತ್ತಲೇ ಇದ್ದ ನಾನು, "ನನಗೆ ಈ ಸಣ್ಣ ವಯಸ್ಸಿನಲ್ಲಿ ಮದುವೆಯೇ ?" ಎಂದು ಕೇಳಿದೆ. ಅದಕ್ಕೆ ಗೌರಮ್ಮನವರು, "ನೀನೇನೂ ಖರ್ಚು ಮಾಡಬೇಕಾಗಿಲ್ಲ. ಎಲ್ಲಾ ಅವರಿಂದಲೇ ನಡೆಯುತ್ತೆ. ಅವರಿಗೆ ಗಂಡುಮಕ್ಕಳಿಲ್ಲ, ಇಬ್ಬರು ಹೆಣ್ಣು

ಮಕ್ಕಳಿದ್ದಾರೆ. ಹಿರಿಯ ಮಗಳಿಗೆ ಮದುವೆಯಾಗಿದೆ. ಇದೇ ಬಸವಾಪಟ್ಟಣದ ಸುಬ್ರಹ್ಮಣ್ಯಾವಧಾನಿಗಳ ಮಗ ವೆಂಕಟೇಶನಿಗೆ ಕೊಟ್ಟಿದೆ. ಆ ಅಳಿಯ ಚಿಲ್ಕುಂದದಲ್ಲೇ ವಾಸವಾಗಿದ್ದಾನೆ. ನೀನೂ ಅಲ್ಲೇ ಇರಬೇಕು. ಅವರು ಅನುಕೂಲಸ್ಥರು. ಅವರಿಗೆ ಹೆಂಡತಿ ಇಲ್ಲ" ಎಂದು ವಿವರಿಸಿದರು.

ನನ್ನ ಆ ವಿಚಿತ್ರ ಪರಿಸ್ಥಿತಿಯಲ್ಲೂ ಅಲ್ಲಿ ನನಗೊಂದು ಆಶಾಕಿರಣ ಕಂಡಿತು. ಅದರಿಂದ ನನ್ನ ಭಿಕ್ಷಾವೃತ್ತಿ ತಪ್ಪಬಹುದಿತ್ತು. ಅವರು ಐಶ್ವರ್ಯವಂತರು ಎಂದ ಮೇಲೆ ನಾನು ವಿದ್ಯಾಭ್ಯಾಸವನ್ನು ಮುಂದುವರಿಸಬಹುದಿತ್ತು. ಇಂಥ ಆಶಾಭಾವನೆ ಹುಟ್ಟಿತ್ತು.

ಗೌರಮ್ಮನವರು ಸೂಚಿಸಿದ ದಿನ ನಾನು ನನ್ನ ಸ್ನೇಹಿತನೊಬ್ಬನ ಜತೆ ಚಿಲ್ಕುಂದಕ್ಕೆ ಹೋದೆ. ಗೌರಮ್ಮನವರ ಪತಿ ನಾರಾಯಣಾವಧಾನಿಗಳು ಆಗ ದೇವತಾರ್ಚನೆ ಮಾಡಿ ಮಂಗಳಾರತಿ ಮಾಡುತ್ತಿದ್ದರು. ಗೌರಮ್ಮನವರಿಗಂತೂ ಅದು ಶುಭಶಕುನವೆಂದು ತುಂಬಾ ಸಂತೋಷವಾಯಿತು.

ಭೋಜನವಾದ ಮೇಲೆ ಅವಧಾನಿಗಳು 'ಹುಡುಗಿ'ಯ ತಂದೆ ಕೃಷ್ಣಪ್ಪನವರ ಅನುಕೂಲಗಳನ್ನು ವರ್ಣಿಸಿದರು. "ಹುಡುಗಿಗೆ ಸಿಡುಬಾಗಿ ಈಗ ನೋಡಲು ಸ್ವಲ್ಪ ಬೇಜಾರಾಗಬಹುದು. ಅದು ನಿಧಾನವಾಗಿ ನಿವಾರಣೆಯಾಗುತ್ತೆ. ಮದುವೆಯಾಗುವವರು ಬರೀ ಲಕ್ಷಣವನ್ನೇ ನೋಡುವುದಲ್ಲ. **ಭಾರ್ಯಾ ರೂಪವತೀ ಶತ್ರುಃ** ಎಂದು ಶ್ರುತಿವಚನವಿದೆ. ಕೃಷ್ಣಪ್ಪನವರು ಸಾತ್ವಿಕರು. ಅವರಿಗೆ ದಾಂಪತ್ಯವಿಲ್ಲ. ಅವರಿಗೆ ನೆರವಾಗಿ ಒಬ್ಬ ಅಳಿಯ ಇಲ್ಲೇ ಇದ್ದಾನೆ. ಅದರಂತೆ ನೀನೂ ಇದ್ದರೆ ಮುಂದೆ ಎಲ್ಲಾ ಅನುಕೂಲವಾಗುತ್ತೆ" ಎಂದು ಹೇಳಿ ಕೃಷ್ಣಪ್ಪನವರ ಮನೆಗೆ ತಾವೇ ಕರೆದುಕೊಂಡು ಹೋದರು. ಒಂದು ಒಳ್ಳೆಯ ದಿನ ಯಾರಾದರೂ ನಮ್ಮ ಹಿರಿಯರನ್ನು ಕರೆದುಕೊಂಡು ಬರಬೇಕೆಂದು ನಿಶ್ಚಯವಾಯಿತು.

ವಿವಾಹ

ಆ ದಿನಗಳಲ್ಲಿ ಚಿಲ್ಕುಂದದಲ್ಲಿ ಪ್ಲೇಗಿನ ಸೋಂಕಿತ್ತು. ಎಲ್ಲರೂ ತಮ್ಮತಮ್ಮ ಜಮೀನಿನ ಹತ್ತಿರ ಷೆಡ್ ಹಾಕಿಕೊಂಡು ವಾಸ ಮಾಡುತ್ತಿದ್ದರು. ಇನ್ನು ಊರು ಸೇರಿದ ಮೇಲೇ ವಿವಾಹದ ಯೋಚನೆ.

ನಾನು ಊರಿಗೆ ಬಂದು ನಮ್ಮ ಚಿಕ್ಕ ಅಜ್ಜನವರಿಗೆ ತಿಳಿಸಿದೆ. ಕಾಲಕ್ರಮದಲ್ಲಿ ಚಿಲ್ಕುಂದದ ಜನರು ಷೆಡ್ಡಿನಿಂದ ಊರಿಗೆ ವಾಪಸಾಗ ತೊಡಗಿದರು. ಆದರೆ ಕೃಷ್ಣಪ್ಪನವರು ಇನ್ನೂ ಷೆಡ್ಡಿನಲ್ಲೇ ಇದ್ದರು. ಅವರು ತಿಳಿಸಿದ ದಿನ ನಾನೂ ಚಿಕ್ಕಜ್ಜನೂ ಹತ್ತು ಮೈಲಿ ನಡೆದು ಹೋಗಿ ಬೆಟ್ಟದಪುರದಿಂದ ಬಸ್ಸು ಹತ್ತಿದೆವು.

ಕೃಷ್ಣಪ್ಪನವರ ಷೆಡ್ಡಿನ ಮುಂಭಾಗದಲ್ಲಿ ಹದಿಮೂರು ವರ್ಷದ ಬಾಲೆಯೊಬ್ಬರು ದೋಸೆಗೆ ರುಬ್ಬುತ್ತ ಕೂತಿದ್ದರು. ಆಕೆಯೇ ಮುಂದೆ ನನಗೆ ಅತ್ತಿಗೆಯಾಗಲಿದ್ದ ನಾಗಮ್ಮ. ಒಂದು ಪೋಸ್ಟ್ ಪೆಟ್ಟಿಗೆಯೂ ಷೆಡ್ಡಿನ ಮುಂದೆ ನೇತಾಡುತ್ತಿತ್ತು. ಕೃಷ್ಣಪ್ಪನವರು ಪೋಸ್ಟ್ ಮಾಸ್ತರಾಗಿಯೂ ಕೆಲಸ ಮಾಡುತ್ತಿದ್ದರು. ಅಜ್ಜನವರೂ ಕೃಷ್ಣಪ್ಪನವರೂ ತಮ್ಮ ತಮ್ಮ ಸಂಸಾರಗಳ ವಿಷಯವಾಗಿ ವಿಸ್ತಾರವಾಗಿ ಮಾತಾಡಿಕೊಂಡರು. ಅಜ್ಜನವರು ನನ್ನ ಬಗೆಗೂ ಒಳ್ಳೆಯ ಮಾತಾಡುತ್ತಿದ್ದರು. ಪುಟ್ಟಣ್ಣ ಉಪಾಧ್ಯಾಯರು ಬಂದು ಜಾತಕಗಳನ್ನು ನೋಡಿ ಮುಹೂರ್ತವನ್ನು ನಿಶ್ಚಯಿಸಿದರು.

ಒಂದು ತಿಂಗಳಾದ ಮೇಲೆ ಕೈಬರಹದ ಒಂದು ಲಗ್ನಪತ್ರಿಕೆ ಅಜ್ಜನವರಿಗೆ ಬಂತು. ಅದರಂತೆ ಎರಡು ಗಾಡಿ ಕಟ್ಟಿಸಿಕೊಂಡು ಲಗ್ನಕ್ಕೆ ಹೊರಟೆವು. ನಮ್ಮ ತೋಟದಲ್ಲೇ ಬೆಳೆದ ಸೊಗಸಾದ ಬಾಳೆಗೊನೆಗಳನ್ನೂ ಜತೆಗೆ ಒಯ್ದಿದ್ದೆವು.

ಮರುದಿನ ವರಪೂಜೆ. ಆದರೆ ಯಾವುದೋ ಆಶೌಚ ಒದಗಿ ನಿಂತು ಹೋಯಿತು. ಆಶೌಚ ಕಳೆಯಲು ಒಂದು ವಾರ ಬೇಕಾಯಿತು. ನಾರಾಯಣಾವಧಾನಿಗಳಲ್ಲೇ ಅಷ್ಟೂದಿನ ನಮ್ಮ ಬಿಡಾರ.

ಮುಂದಿನ ಲಗ್ನಪತ್ರಿಕೆಯನ್ನೂ ಮಾಡಿಸಿ ಮತ್ತೆ ಎಲ್ಲರಿಗೂ ಕಳಿಸಿದ್ದಾಯಿತು. ಮೈಸೂರಿನ ಅರಮನೆಯ ಪುರೋಹಿತರಾದ ವೇ|| ಶ್ರೀ|| ಶ್ರೀ ತಿಪ್ಪಯ್ಯಾವಧಾನಿಗಳೇ ಲಗ್ನ ಮಾಡಿಸಲು ಬಂದಿದ್ದರು. ಎಂಟು ದಿನದ ಮದುವೆ; ಸಾಂಗವಾಗಿ ನಡೆಯಿತು. ಕೊನೆಗೆ ಯಥೋಪಚಾರ ಮಾಡಿ, ನಮ್ಮನ್ನೆಲ್ಲಾ ರುದ್ರಪಟ್ಟಣಕ್ಕೆ ಕಳಿಸಿಕೊಟ್ಟರು. ಊರಿಗೆ ಬಂದ ಮೇಲೆ ನನ್ನ ಸಂಸ್ಕೃತ ಗುರುಗಳಾದ ಸೀತಾರಾಮಶಾಸ್ತ್ರಿಗಳ ಮನೆಯಲ್ಲಿ ದೇವರ ಪೂಜೆ, ಜತೆಗೆ ಅನ್ನ ಸಂತರ್ಪಣೆ ನಡೆದವು.

ವೆಂಕಟರಮಣನ ಸರದಿ

ಹದಿನೈದು ದಿನ ಕಳೆಯಿತು. ಕಾಗದ ಬಂತು. ಚಿಲ್ಕುಂದಕ್ಕೆ ಹೋಗಿ ಒಂದು ತಿಂಗಳಿದ್ದು ರುದ್ರಪಟ್ಟಣಕ್ಕೆ ವಾಪಸ್ಸು ಬಂದೆ. ಮತ್ತೆ ಹದಿನೈದು ದಿನ ಕಳೆದು ಇನ್ನೊಂದು ಕಾಗದ; ನಿಧಾನವಾಗಿ ಹೋದೆ. "ಮೊದಲೇ ಹೇಳಿದ್ದೆನಲ್ಲ ಇಲ್ಲೇ ಇರಲು ? ಮತ್ತೆ ಮತ್ತೆ ಏಕೆ ಊರಿಗೆ ಹೋಗಲು ಆತುರ ಪಡುತ್ತಿ ?" ಎಂದರು, ಮಾವ. ಊರಲ್ಲಿ ಅಡಕೆ ಸುಗ್ಗಿ ಪ್ರಾರಂಭವಾಗಿತ್ತು. ಅಲ್ಲಿನ ಕಷ್ಟಸುಖಗಳನ್ನು ತಿಳಿಸಿ ತಾಯಿ ಕಾಗದ ಬರೆದರು. ಊರಿಗೆ ಹೋದೆ. ಅಡಕೆ ಕೊಯ್ಲು ಮಾಡಿದೆ. ಏಳೆಂಟು ತಿಂಗಳಿಗಾಗುವಷ್ಟು ಸೌಕರ್ಯ ಮಾಡಿಸಿ ಮತ್ತೆ ಚಿಲ್ಕುಂದಕ್ಕೆ ಹೋದೆ.

ಆಗ ರುದ್ರಪಟ್ಟಣದಲ್ಲಿ ಪ್ಲೇಗ್ ಮತ್ತೆ ಕಾಣಿಸಿಕೊಂಡಿತು. ನನ್ನ ಇನ್ನೊಬ್ಬ ತಮ್ಮ ವೆಂಕಟರಮಣ ಜ್ವರದಿಂದ ಮಲಗಿದ. ಊರಿಗೆ ಹೋದೆ. ಮನೆಯ ಬಾಗಿಲಿಗೆ ಹೋಗುತ್ತಲೇ ನನ್ನ ತಮ್ಮ, "ಅಣ್ಣಯ್ಯನ ತೊಡೆಯ ಮೇಲೆ ಮಲಗಬೇಕು" ಎಂದು ನರಳತೊಡಗಿದ. ನನ್ನ ತೊಡೆಯ ಮೇಲೆ ಅವನ ತಲೆ ಇರಿಸಿ ನೇವರಿಸಿದೆ. ಹಾಗೇ ಕಣ್ಣುಮುಚ್ಚಿದ. ಮತ್ತೆ ಕಣ್ಣುಬಿಡಲೇ ಇಲ್ಲ.

ಮತ್ತೆ ಅಡರಿದ ಪ್ಲೇಗು

ಪಿರಿಯಾಪಟ್ಟಣದಲ್ಲಿ ನನ್ನ ಇನ್ನೊಬ್ಬರು ಷಡ್ಡಕ ಪಿ.ಸಿ. ಸುಬ್ಬಣ್ಣನವರು ಉಪಾಧ್ಯಾಯರಾಗಿದ್ದರು. ನನ್ನ ಹಿರಿಯ ತಮ್ಮನಿಗೆ ಅವರಲ್ಲಿ ಆಶ್ರಯ ಸಿಕ್ಕಿತು. ನಾನೂ ಚಿಲ್ಕುಂದದಲ್ಲಿ ತುಸು ಹೆಚ್ಚು ಕಾಲ ಕಳೆದೆ. ಸುಗ್ಗಿ ಹತ್ತಿರವಾಗುತ್ತಲೇ ಊರಿಗೆ ಹೊರಟೆ. ಬೆಟ್ಟದ ಪುರದಿಂದ ಹತ್ತು ಮೈಲಿ ನಡೆದೇ ರುದ್ರಪಟ್ಟಣ ಸೇರಬೇಕು. ಒಂದೆರಡು ಮೈಲಿ ನಡೆದಿರಬಹುದು, ಇದ್ದಕ್ಕಿದ್ದ ಹಾಗೆ ಜ್ವರ ಬಂತು. ನಿಶ್ಶಕ್ತಿ ಅತಿಯಾಯಿತು. ಕಾಲು ಎಳೆದೆಳೆದು ನಡೆಯುತ್ತಿದ್ದೆ. ಊರು ಇನ್ನೂ ನಾಲ್ಕು ಮೈಲಿ ಇತ್ತು. ಇನ್ನು ಸಾಧ್ಯವಿಲ್ಲದೆ ಕುಸಿದು ಹೋದೆ. ಕಾಡು ಬೇರೆ. ನಮ್ಮೂರಿನ ಶೆಟ್ಟಿಕಾಳನ ಗಾಡಿ ದೇವರ ದಯದಿಂದ ಅದೇ ದಾರಿಯಲ್ಲಿ ಬಂತು. ಶೆಟ್ಟಿಕಾಳ ನನ್ನನ್ನು ಎತ್ತಿ ಗಾಡಿಯಲ್ಲಿ ಕೂರಿಸಿಕೊಂಡು ಮನೆಗೆ ತಂದು ಬಿಟ್ಟ. ನನಗೆ ಮಾತಾಡಲೂ ಆಗುತ್ತಿರಲಿಲ್ಲ. ನಮ್ಮ ತಾಯಿ ಗಂಜಿ ಕುಡಿಸಲು ಬಂದರು. ಅದೊಂದೂ ಬೇಡವಾಗಿತ್ತು.

ಮರುದಿನ ಎಡ ತೊಡೆಯ ಸಂದಿಯಲ್ಲಿ ನೋವು ಕಾಣಿಸಿತು. ಇನ್ನೆರಡು ದಿನದಲ್ಲಿ ಅದು ಪ್ಲೇಗು ಗಡ್ಡೆ ಎಂಬುದು ನಿಖರವಾಯಿತು. ಅದು ಒಡೆಯದೆ ಹಾಗೇ ಬಾಧೆ ಕೊಡುತ್ತ ತಿಂಗಳು ಉರುಳಿತು. ಹಾಗೇ ಕೊನೆಗೆ ಇಮರಿ ಹೋಯಿತು. ಆದರೂ ನಡೆದಾಡುವುದು ಸಾಧ್ಯವೇ ಇರಲಿಲ್ಲ. ಮಾವನವರೇನೋ ಒಂದು ಸಲ ಬಂದು ನೋಡಿಕೊಂಡು ಹೋದರು. ನಾನು ರೋದಿಸುತ್ತಿದ್ದರೂ ಮಗಳನ್ನು ಮಾತ್ರ ಒಂದು ಸಲವೂ ಕರೆದುಕೊಂಡು ಬರಲಿಲ್ಲ.

ರಟ್ಟೆ ಮುರಿಯಿತು

ಹೀಗೇ ನಾಲ್ಕು ತಿಂಗಳು ಕಳೆಯಿತು. ಸ್ವಲ್ಪ ಸುಧಾರಿಸಿಕೊಂಡೆ. ಅಡಕೆ ತುಡಿಕೆಯ ಕಾಲ ಬಂತು. ಯಾವಾಗಲೂ ಅಡಕೆ ಕೊಯ್ಲು ಇತ್ಯಾದಿಯನ್ನೆಲ್ಲ ನಾನೇ ಮಾಡುತ್ತಿದ್ದೆ. ಈ ಸಲವೂ ರುದ್ರಪಟ್ಟಣದ ನಮ್ಮ ತೋಟದಲ್ಲಿ ಅಡಕೆ ಕೊಯ್ಲಿಗೆ ಪ್ರಾರಂಭಿಸಿದೆ. ಒಂದು ಮರ ಹತ್ತಿದರೆ ಮತ್ತೆ ಸಂಜೆಯೇ ಇಳಿಯುತ್ತಿದ್ದುದು. ಇಡೀ ದಿನ ಮರದಿಂದ ಮರಕ್ಕೆ ಹಾರಿ ಕುಯ್ಲು ಮಾಡುತ್ತಿದ್ದೆ. ಒಂದು ದಿನ ಎತ್ತರದ ಮರದ ತುದಿಯಲ್ಲಿದ್ದೆ. ಭಾರಿ ಬಿರುಗಾಳಿ ಬೀಸಿತು. ಮರ ಮುರಿಯಿತು. ಕೆಳಕ್ಕೆ ಬಿದ್ದೆ, ಎಡರಟ್ಟೆ ಮುರಿಯಿತು. ನನ್ನನ್ನು ನೋಡಿಕೊಳ್ಳಲು ರುದ್ರಪಟ್ಟಣದ ನಮ್ಮ ಮನೆಯಲ್ಲಾಗಲಿ, ಚಿಲ್ಕುಂದದ ಮಾವನವರ ಮನೆಯಲ್ಲಾಗಲಿ ಯಾರೂ ಇರಲಿಲ್ಲ. ರುದ್ರಪಟ್ಟಣದ ದೀಕ್ಷಿತರ ಅಪ್ಪಣ್ಣಯ್ಯನವರು ಮೈಸೂರಿಗೆ ಕರೆದುಕೊಂಡು ಹೋಗಿ ಕೆ.ಆರ್. ಆಸ್ಪತ್ರೆಗೆ ಸೇರಿಸಿ ಹಣದ ನೆರವೂ ಕೊಟ್ಟರು. ಮರಳಿನ ಚೀಲ ಇಳಿಬಿಟ್ಟು ಅದೇ ಅವಸ್ಥೆಯಲ್ಲಿ ಹದಿನೆಂಟು ದಿನ ಇರಿಸಿದ್ದರು. ಮಿತ್ರರೆಲ್ಲಾ ಬಂದು ನೋಡಿಕೊಂಡು ಹೋಗುತ್ತಿದ್ದರು. ನಮ್ಮ ಶ್ರೀಮಂತ ಮಾವನವರೂ ಬಂದರು, ಐದು ರೂಪಾಯಿ ಮತ್ತು ಆರು ಪೋಸ್ಟ್ ಕಾರ್ಡ್ ಕೊಟ್ಟು ವಾರಕ್ಕೊಂದು ಕಾಗದ ಬರೆಯುವಂತೆ ಹೇಳಿ ಕೈಬೀಸಿಕೊಂಡು ಹೊರಟುಹೋದರು !

ಹದಿನೆಂಟು ದಿನ ಕಳೆದ ಮೇಲೆ ಆಪರೇಷನ್ನೂ ಆಯಿತು. ಕ್ಲೋರೋಫಾರಂ ಕೊಟ್ಟಿದ್ದರು. ಜ್ಞಾನ ಬರುವುದು ಬಹಳ ತಡವಾದಾಗ ವೈದ್ಯರೂ ಆತಂಕಗೊಂಡಿದ್ದರಂತೆ. ನನಗೆ ಪ್ರಜ್ಞೆ ಬಂದ ಮೇಲೆ ವೈದ್ಯರು ಬಂದು ಗಾಬರಿಯಿಂದ ಕೇಳಿದರು, "ನಿಮ್ಮನ್ನು ನೋಡಿಕೊಳ್ಳಲು ಇಲ್ಲಿ ಯಾರಿದ್ದಾರೆ ?" ಎಂದು. ತಕ್ಷಣ ಮುಂದೆ ಬಂದ ಚುಂಚೇಗೌಡರು ಹೇಳಿದರು, "ನಾನಿದ್ದೇನೆ ಸ್ವಾಮಿ !" ನನಗೂ ಅವರಿಗೂ ಪರಿಚಯವೇ ಇರಲಿಲ್ಲ. ನಾನು ಮೂರು ತಿಂಗಳು ಆಸ್ಪತ್ರೆಯಲ್ಲಿದ್ದೆ. ಚುಂಚೇಗೌಡರೂ ಇದ್ದರು. ಅವರು ಕೌಶಿಕದ ಸಮೀಪದ ಚಿಕ್ಕಬಸವನಹಳ್ಳಿಯವರು. ಅವರ ಮಗಳಿಗೂ ರಟ್ಟೆ ಮುರಿದಿತ್ತು. ಆಕೆಯನ್ನು ನೋಡಿಕೊಳ್ಳಲೆಂದು ಅವರೂ ಅಲ್ಲಿದ್ದರು. ನನಗೂ ಆಪದ್ಬಾಂಧವರಾದರು !

ನರ್ಸ್ ಮಿಸ್ಸಿ

ಅಲ್ಲಿದ್ದ ನರ್ಸ್ ಮಿಸ್ಸಿ ನನ್ನ ಬಗೆಗೆ ವಿಶೇಷ ಆಸ್ಥೆ ವಹಿಸಿದ್ದಳು. ಗಾಲಿ ಕುರ್ಚಿಯಲ್ಲಿ ತಳ್ಳಿಕೊಂಡು ವರಾಂಡದುದ್ದಕ್ಕೂ ತಿರುಗಿಸುತ್ತಿದ್ದಳು. ನನ್ನ ನೋವು ಮರೆಯುವಂತೆ ಏನೇನಾದರೂ ಮಾತಾಡಿಸುತ್ತಿದ್ದಳು. ಪ್ರತಿಭಾನುವಾರ ಚರ್ಚಿನ ತಿಂಡಿಯನ್ನೂ, ಪೆಪ್ಪರ್‌ಮೆಂಟ್ ಡಬ್ಬವನ್ನೂ ತಂದುಕೊಡುತ್ತಿದ್ದಳು. ಒಂದು ದಿನ, "ನೀವು ಬ್ರಾಹ್ಮಣರಲ್ಲವೇ ! ನಿಮಕ್ ಸಾದ್ ಪೋಟ್ಟ್‌ಕುಡುಕರೆ" ಎಂದು ಅಕ್ಷತೆಯ ಹಾಗೆ ಹಣೆಗೆ ಇಂಕಿನಿಂದ ಗುರುತು ಹಾಕಿದಳು.

ಒಂದು ಭಾನುವಾರ ಸಿಹಿ ಕೊಡುತ್ತಾ ಕೇಳಿದಳು, "ನಿಮಗೆಷ್ಟು ವರ್ಷ?" ನಾನೆಂದೆ, "ಹತ್ತೊಂಬತ್ತು". "ನನಗೆ ಹದಿನೆಂಟು ವರ್ಷ !" ಎಂದು ಹೇಳಿ ನಕ್ಕಳು. ಮಾರನೇ ದಿನ ರಾತ್ರಿ ಹತ್ತು ಗಂಟೆಯ ವೇಳೆಗೆ ಬಂದು ಮತ್ತೆ ಸಾದು ಹಾಕಿ ಚುಂಚೇಗೌಡರ ಕಡೆ ನೋಡಿದಳು. "ಈಗ ತುಂಬಾ ಚೆನ್ನಾಗಿದೆ !" ಎಂದರು ಚುಂಚೇಗೌಡರು ! ಇನ್ನೊಂದು ದಿನ ಸಾಯಂಕಾಲ ಗಾಡಿಯ

ಮೇಲೆ ಕೂರಿಸಿಕೊಂಡು ತಿರುಗಾಡಿಸುವಾಗ ''ನಿಮಗೆ ಮದುವೆಯಾಗಿದೆಯೆ ?'' ಎಂದಳು, ಮಿಸ್ಸಿ. "ಮದುವೆಯಾಗಿದೆ" ಎಂದ ಮೇಲೂ ಅವಳು ಬಿಡಲಿಲ್ಲ. "ನಿಮ್ಮ ಕೈ ವಾಸಿಯಾಗದಿದ್ದರೆ ಅವರು ನಿಮ್ಮನ್ನು ಉದಾಸೀನ ಮಾಡುವುದಿಲ್ಲವೆ?'' ಎಂದಳು. ನಾನು ಏನು ಹೇಳಿದರೂ ಅದನ್ನು ಮರುಪರೀಕ್ಷೆಗೆ ಒಳಪಡಿಸುತ್ತಿದ್ದಳು.

ನನಗೆ ವಯಸ್ಸು ಹತ್ತೊಂಬತ್ತು ! ಸರಿಯಾಗಿ ಆರೂ ಕಾಲು ಅಡಿ ಇದ್ದೆ, ಕೆಂಪಗಿದ್ದೆ. ಮೇಲಾಗಿ ಅಲ್ಲಿ ನನ್ನ ಹಿಂದು ಮುಂದೆ ಯಾರೂ ಇರಲಿಲ್ಲ. ಮಿಸ್ಸಿ, ಹಾಗೆ ಆಸೆ ಪಟ್ಟುದರಲ್ಲಿ ಆಶ್ಚರ್ಯವಿಲ್ಲ. ಆ ಸಮಯದಲ್ಲಿ ನನ್ನ ಹೆಂಡತಿಯೂ ಮಾವನೂ ಚಿಲ್ಕುಂದದಲ್ಲಿ ನಿರುಮ್ಮಳವಾಗಿ ಇದ್ದುಬಿಟ್ಟಿದ್ದರು !

ನನಗೆ ಮದುವೆಯಾಗಿರುವುದೂ, ನಮ್ಮ ದಾಂಪತ್ಯ ದೃಢವಾಗಿರುವುದೂ ಮಿಸ್ಸಿಗೆ ತಿಳಿದ ಮೇಲೂ ಶ್ರದ್ಧೆಯಿಂದಲೇ ಔಷಧೋಪಚಾರ ಮಾಡುತ್ತಿದ್ದಳು. ನಗುನಗುತ್ತಲೇ ಇರುತ್ತಿದ್ದಳು. ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೂ ಬಸ್ಸಿನಲ್ಲಿ ಸುರಕ್ಷಿತವಾಗಿ ಕೂರಿಸಿ ಬಸ್‌ಛಾರ್ಜುಕೂಡ ಕೊಟ್ಟು ಕಳಿಸಿಕೊಟ್ಟಳು. ಅದು ಅವಳ ಪ್ರೀತಿ.

ಚಿಲ್ಕುಂದದಲ್ಲಿ , ನನ್ನ ನೋವು ಕಂಡು ನನ್ನ ಪತ್ನಿಯೂ ಮಾವನೂ ಮರುಕಪಟ್ಟರು. ಪತ್ನಿ ವಿಶೇಷವಾಗಿ ಉಪಚರಿಸಿದರು. ಮತ್ತೆ ಚಕಪ್‌ಗೆಂದು ಮೈಸೂರಿಗೆ ಹೊರಟೆ. ಕೈಯಲ್ಲಿ ಹಣವಿರಲಿಲ್ಲ. ನನ್ನ ಪತ್ನಿ ತಾನು ಜೋಪಾನಗೊಳಿಸಿ ಕೂಡಿಟ್ಟುಕೊಂಡ ಹಣವನ್ನು ನನ್ನ ಕೈಯಲ್ಲಿಟ್ಟು ''ಜೋಪಾನವಾಗಿ ಹೋಗಿ ಬನ್ನಿ'' ಎಂದು ಕೈಹಿಡಿದು ಕೇಳಿಕೊಂಡಳು. ನಾನು ಹೊರಟಾಗ ಸೆರಗಿನಿಂದ ಕಣ್ಣು ಒರೆಸಿಕೊಳ್ಳುತ್ತಿದ್ದಳು - ನಿಸ್ಸಹಾಯಕಳಾಗಿ.

ನಿಶ್ಚಿತ ದಿನ ಮೈಸೂರಿನ ಆಸ್ಪತ್ರೆ ತಲುಪಿದಾಗ ಬಾಗಿಲಲ್ಲೇ ಮಿಸ್ಸಿ ನಿಂತಿದ್ದಳು. ನನ್ನ ನೋವು ಕಡಮೆಯಾಗಿಲ್ಲ ಎಂಬುದನ್ನು ಕಂಡು ನೊಂದುಕೊಂಡಳು. ಸಂಬಂಧಿಸಿದ ವೈದ್ಯರ ಬಳಿಗೆ ತಾನೇ ಕರೆದುಕೊಂಡು ಹೋದಳು. ಎಲ್ಲಾ ಪರೀಕ್ಷೆಗಳನ್ನೂ ಬೇಗ ಬೇಗ ಮಾಡಿಸಿದಳು. ಒಂದು ಜಾಗದಲ್ಲಿ ಕೀತಿತ್ತು ; ಹೊಸದಾಗಿ ಡ್ರೆಸ್ ಮಾಡಿದಳು. ಮಿಸ್ಸಿಯೇ ಮಾತ್ರೆಗಳನ್ನು ತಂದುಕೊಟ್ಟಳು. ಜತೆಗೆ ಒಂದು ಸೀಸೆ ಲೋಷನ್, ಮುಲಾಮಿನ ಸೀಸೆ ಮತ್ತು ಹತ್ತಿಯ ಬ್ಯಾಂಡೇಜುಬಟ್ಟೆಯನ್ನೂ ಕೊಟ್ಟಳು. ಮನೆಗೆ ಕರೆದುಕೊಂಡು ಹೋಗಿ ತಂದೆ-ತಾಯಿಗಳಿಗೆ ಪರಿಚಯ ಮಾಡಿಕೊಟ್ಟಳು. ಹಣ್ಣು ಮತ್ತು ಬಿಸ್ಕತ್ ಇಟ್ಟ ತಟ್ಟೆ ಮುಂದೆ ಹಿಡಿದಳು. ಕೊನೆಗೆ ಟಾಂಗಾದಲ್ಲಿ ಕೂರಿಸಿ ಕಳಿಸಿಕೊಟ್ಟಳು. ಅವಳು ಅಂದು ನಕ್ಕ ಆ ಕಿರುನಗೆಗೆ ಅರ್ಥವೇನು !

ಗಣಪತಿಯ ವಿಗ್ರಹ

ನಾನು ಆಸ್ಪತ್ರೆಯಲ್ಲಿದ್ದ ದಿನಗಳಲ್ಲೇ ನಮ್ಮ ತಂದೆಯವರ ವೈದಿಕವು ಕಳೆದುಹೋಗಿತ್ತು. ಇನ್ನೊಂದು ಸರಿಯಾದ ದಿನ ಪಂಚಗವ್ಯ ಪ್ರಾಯಶ್ಚಿತ್ತ ಮಾಡಿಕೊಂಡು ಅದನ್ನು ನಡೆಸಿದೆ. ವಾಸ್ತವವಾಗಿ ಅದು ಮಾಘಮಾಸದ ಸಪ್ತಮಿಯ (ರಥಸಪ್ತಮಿ) ದಿನ ನಡೆಯಬೇಕಾಗಿತ್ತು. ಅಂತೂ ಕಾಲಾತೀತವಾಗಿ ಮಾಡಿ ಒಂದು ಘಟ್ಟ ಮುಟ್ಟಿ ಕೃತಾರ್ಥನಾದೆ.

ನನಗೆ ಬಾಲ್ಯದಿಂದಲೂ ಗಣಪತಿಯ ವಿಗ್ರಹ ಮಾಡಿ ಅಭ್ಯಾಸವಾಗಿತ್ತು. ಆ ದಿನಗಳಲ್ಲಿ ಗಣಪತಿ ಹಬ್ಬಕ್ಕೆ ವಿಗ್ರಹಗಳನ್ನು ಕೊಂಡು ತರುವ ಅಭ್ಯಾಸವಿರಲಿಲ್ಲ. ಬಣ್ಣದ ಬಳಕೆಯಂತೂ ಇರಲೇ ಇಲ್ಲ. ನಾವೇ ಜೇಡಿಮಣ್ಣಿನಲ್ಲಿ ಮಾಡಿಕೊಳ್ಳುತ್ತಿದ್ದೆವು.

ಚಿಲ್ಕುಂದದಲ್ಲಿದ್ದಾಗ ಒಂದು ದಿನ ನಮ್ಮ ಭಾವ ತಿಮ್ಮಪ್ಪಯ್ಯ ನವರ ಜತೆ ಅವರ ತೋಟಕ್ಕೆ ಹೋದೆ. ಜೇಡಿಮಣ್ಣು ಹದ ಮಾಡಿಕೊಂಡೆ. ಒಂದು ಅಡಿ ಎತ್ತರದ ಮುದ್ದಾದ ವಿಗ್ರಹ ತಯಾರಿಸಿದೆ. ತಿಮ್ಮಪ್ಪಯ್ಯನವರೂ ಆ ಕಲೆಯನ್ನು ಕರಗತಮಾಡಿ ಕೊಂಡರು.

ಈ ನಡುವೆ ರುದ್ರಪಟ್ಟಣಕ್ಕೆ ಹೋಗುವಾಗ ನೂರು ಗುಣಿ ವೀಳೆದೆಲೆ ಹುಂಬು ತೆಗೆದುಕೊಂಡು ಹೋಗಿದ್ದೆ. ಮಾರನೆಯ ದಿನವೇ ಗುಣಿಗಳನ್ನು ಸಿದ್ಧಪಡಿಸಿ ಗಿಡನೆಟ್ಟು ನೀರು ಹಾಯಿಸಿದೆ. ಮಳೆಗಾಲವಾದ್ದರಿಂದ ಅಷ್ಟು ಕಷ್ಟವಾಗಲಿಲ್ಲ. ಬಾಳೆಗೊನೆಗಳೂ ಚೆನ್ನಾಗಿ ಬರುತ್ತಿದ್ದವು.

ಗಿಡಗಳಿಗೆ ನೀರು ಹಾಕಬೇಕಾದ ಕಾಲ ಬಂತು. ನೋಡೋಣ ಎಂದು ಒಂದೇ ಕೈಯಲ್ಲಿ ಹರವಿಯಲ್ಲಿ ನೀರು ತುಂಬಿ ತಂದು ಹುಯ್ಯತೊಡಗಿದೆ. ಕಾಲ ಕಳೆದಂತೆ ಮುರಿದಕೈಯಲ್ಲೂ ನೀರು ಹಾಕಬಹುದು ಎಂಬ ಧೈರ್ಯ ಮೂಡಿತು.

ಗಣಪತಿ ಹಬ್ಬ ಹತ್ತಿರವಾಯಿತು. ನಮ್ಮ ರುದ್ರಪಟ್ಟಣದ ತೋಟದ ಫಸಲನ್ನು ಮಾರಬಹುದಾದ ಹಂತವನ್ನು ತಲಪಿದ್ದೆವು. ಸ್ವಲ್ಪ ಬಾಳೆಕಾಯಿ, ವೀಳೆದೆಲೆ ಮಾರಿ ಒಂದು ಜತೆ ಪಂಚೆ, ಶರಟು, ಟವಲ್ಲು ಕೊಂಡುಕೊಂಡೆ. ಮೊದಲ ಬಾರಿಗೆ, 'ದುಡಿಯುವ' ಅಳಿಯನಾಗಿ ಠಾಕೋಠೀಕಾಗಿ ಮಾವನ ಮನೆಗೆ ಚಿಲ್ಕುಂದಕ್ಕೆ ಹೋದೆ. ಗೌರಮ್ಮನ ಡೋಲಿ ಮನೆಯ ಹತ್ತಿರ ಬರುವ ವೇಳೆಗೆ ಸರಿಯಾಗಿ ಅಲ್ಲಿಗೆ ತಲುಪಿದ್ದೆ. ಮಾವನವರು ಗ್ರಾಮದ ಯಜಮಾನರಾಗಿದ್ದರು. ಗೌರಮ್ಮನ ಡೋಲಿ ಬರುವ ವೇಳೆಗೆ ಸರಿಯಾಗಿ ಈಡುಗಾಯಿ ಒಡೆಯಲು ಐದು ತೆಂಗಿನ ಕಾಯಿ ಇಟ್ಟುಕೊಂಡು ಜಗುಲಿಯ ಮೇಲೆ ನಿಂತಿದ್ದೆ. ಮೊದಲ

ಬಾರಿಗೆ ಮಾವನವರು ನನ್ನನ್ನು ಗೌರವದಿಂದ ಕಂಡರು. ಅಂದು, ನಾನು ಮಾಡಿದ ಗಣಪತಿಗೆ, ಪೂಜೆಯೂ ಆಯಿತು. ಪುರೋಹಿತ ಪುಟ್ಟಣ್ಣನವರಂತೂ "ಇದು ಗಚ್ಚಿ ಗಣಪತಿ. ಬಹಳ ಚೆನ್ನಾಗಿದೆ" ಎಂದು ಹೇಳಿ ಸಾಂಗವಾಗಿ ಪೂಜೆ ಸಲ್ಲಿಸಿದರು. ನನ್ನ ಪ್ರತಿಷ್ಠೆ ಇನ್ನೂ ಹೆಚ್ಚಿತು. ಸರಳವಾಗಿ ಮಾತೇ ಆಡದಿದ್ದ ಮಾವನವರು ಗೌರವವಾಗಿ ಮಾತಾಡಿಸತೊಡಗಿದರು. ಮಂಗಳಾರತಿಯ ದಿನ ಊರವರೆಲ್ಲ ಸೇರಿದ್ದರು; ಎಲ್ಲರೂ ಗಣಪತಿಯ ಮೂರ್ತಿಯನ್ನು ಹೊಗಳುವವರೇ. ಗಣಪತಿಯನ್ನು ಬಿಡುವ ದಿನ ಚಿಕ್ಕಕೊಳದ ಗಣಪತಿ ದೇವಸ್ಥಾನದಲ್ಲಿ ಇಡುವಂತೆ ಸರ್ವಾನುಮತದಿಂದ ತೀರ್ಮಾನಿಸಿದರು. ಆ ವೇಳೆಗೆ ನನ್ನ ಕೈ ಪೂರ್ತಿ ಗುಣವಾಗಿತ್ತು. ನನಗೆ ಅದು ಸಂಭ್ರಮದ ದಿನವಾಯಿತು.

ದನ ಕಾಯುವ ಕೆಲಸ

ಆದರೆ ಆ ಸಂಭ್ರಮ ಬಹಳ ದಿನ ಉಳಿಯಲಿಲ್ಲ. ಅದು ೧೯೩೦ನೇ ಇಸವಿ. ಮಾವನವರ ಮನೆಯಲ್ಲಿ ಹತ್ತು ಹನ್ನೆರಡು ದನಗಳಿದ್ದವು. ಅವುಗಳನ್ನು ಕಾಯಲು ಆಳುಗಳಿಲ್ಲದೆ ಹೋಗಿದ್ದರು. ಮಾವನವರು ನನ್ನನ್ನು ಕರೆದು, "ಹೇಗಿದ್ದರೂ ನಿನ್ನ ಕೈಲಿ ಇನ್ನು ಏನೂ ಮಾಡಲು ಆಗುವುದಿಲ್ಲ. ನಮ್ಮ ಹೊಲ ಹತ್ತಿರವಾಗೂ ಇದೆ. ಅಲ್ಲೇ ದನ ಬಿಟ್ಟುಕೊಂಡು ಒಂದು ಕಡೆ ಕೂರು. ನಾಲ್ಕು ಗಂಟೆ ಹೊತ್ತಿಗೆ ಉಪಾಹಾರಕ್ಕೆ ಏನಾದರೂ ತಂದುಕೊಡುತ್ತೇವೆ. ಐದುಗಂಟೆಗೆ ಮನೆಗೆ ಬಾ" ಎಂದರು. ಅದೊಂದು ಖಾಯಂ ಕೆಲಸವಾಗಿ ನನಗೆ ನೇಮಕವಾಯಿತು. ದನ ಕಾಯುವುದು ಅಪಮಾನದ ಕೆಲಸವಲ್ಲ. ರುದ್ರಪಟ್ಟಣದಲ್ಲೂ ವ್ಯವಸಾಯವನ್ನು ಸ್ವತಃ ಮಾಡುತ್ತಿದ್ದೆ, ದನಗಳನ್ನೂ ಸಾಕುತ್ತಿದ್ದೆ. ಆದರೆ ಮನೆ ಅಳಿಯುನಾದುದರಿಂದಲೋ ಏನೋ ಅಭಿಮಾನ ಭಂಗವಾದಂತೆನಿಸಿತು. ಗೌರಮ್ಮನವರಿಗೂ ನಾರಾಯಣಾವಧಾನಿ ಗಳಿಗೂ ಹೇಳಿ ಊರಿಗೆ ವಾಪಸು ಬಂದುಬಿಟ್ಟೆ. ಆಗ ನನಗೆ ಹತ್ತೊಂಬತ್ತೂವರೆ ವರ್ಷವಾಗಿತ್ತು.

ಈ ಪ್ರಯಾಣವೂ ನೆನಪಿಟ್ಟುಕೊಳ್ಳುವಂತೆಯೇ ಇತ್ತು. ಮಧ್ಯಾಹ್ನ ಎರಡುಗಂಟೆ ಬಸ್ಸಿನಲ್ಲಿ ಕೂತು ಬೆಟ್ಟದಪುರಕ್ಕೆ ಬಂದೆ. ಆ ಕಾಲದಲ್ಲಿ ಬಸ್ಸುಗಳು ಅಲ್ಲಲ್ಲಿ ನಿಂತು ನಿಧಾನವಾಗಿ ಹೋಗುತ್ತಿದ್ದವು. ಅಲ್ಲದೆ ಬೆಟ್ಟದಪುರದಿಂದ ರುದ್ರಪಟ್ಟಣಕ್ಕೆ ಹತ್ತು ಮೈಲಿ ನಡೆಯಬೇಕು. ಒಳದಾರಿಗಳಲ್ಲಿ ದಟ್ಟ ಕಾಡಿನಲ್ಲಿ ಅಥವ ಕುರುಚಲು ಗಿಡಗಳ ಕಾಡಿನಲ್ಲಿ ದಾರಿ ಸಾಗುತ್ತಿತ್ತು. ಹತ್ತಿರದ ಹಳ್ಳಿ ಕೆರೆಗೋಡಿಗಾದರೂ ಬೇಗ ತಲುಪಬೇಕೆಂದು ಚುರುಕಾಗಿ ನಡೆದೆ. ತುಂತುರು ಮಳೆಯೂ ಬರುತ್ತಿತ್ತು. ನಾಲ್ಕು ಮೈಲಿ ನಡೆಯುವಷ್ಟರಲ್ಲಿ ಕತ್ತಲಾಗತೊಡಗಿತು. ಆಗ ಆ ಕಾಡೇ ಪ್ರತಿಧ್ವನಿಸುವ ಹಾಗೆ ಭಯಂಕರವಾಗಿ ಒಂದು ಚಿರತೆ ಮೊಳಗಿತು. ಎದೆ ಒಡೆಯುವಂಥ ಭೀತಿಯಾಯಿತು. ನಿರ್ಜನವಾದ ಕಾಡು. ಮಳೆ ಜೋರಾಯಿತು. ಮೋಡಮುಸು ಕಿದ್ದರಿಂದ ಮೊಬ್ಬು. ಚಂದ್ರೋದಯವಾಗಲು ಇನ್ನೂ ಸ್ವಲ್ಪ ಸಮಯವಿತ್ತು. ರಾತ್ರಿ ಹತ್ತುಗಂಟೆಯ ಹೊತ್ತಿಗೆ ಕೆರೆಗೋಡು ತಲುಪಿದೆ. "ಕಾಡಿನಲ್ಲಿ ಯಾವ ಧೈರ್ಯದಿಂದ ಬಂದಿರಿ ? ಮೊನ್ನೆ ತಾನೆ ಒಂದು ಹಸುವನ್ನು ಚಿರತೆ ತಿಂದು ನಾವೆಲ್ಲಾ ಭಯದಲ್ಲಿದ್ದೇವೆ" ಎಂದರು, ಹಳ್ಳಿಯವರು. "ಚಿರತೆ, ಮರಿ ಹಾಕಿದೆ. ಅದಕ್ಕೇ ಆಗಾಗ ಭೋರ್ಗರೆಯುವ ಹಾಗೆ ಮೊಳಗುತ್ತಿರುತ್ತೆ" ಎಂದರು, ಇನ್ನು ಕೆಲವರು. ಆ ರಾತ್ರಿ ಆ ಊರಿನ ಶಾಲೆಯಲ್ಲಿ ತಂಗಿ ಬೆಳಗ್ಗೆ ರುದ್ರಪಟ್ಟಣ ಸೇರಿದೆ.

ಇಂಗ್ಲಿಷ್ ಕಲಿಕೆ

ಸ್ವಲ್ಪವಾದರೂ ವ್ಯವಹಾರ ನಡೆಸಲು ಶಕ್ತಿ ಬರುವಂತೆ ಇಂಗ್ಲಿಷ್ ಕಲಿಯದಿದ್ದರೆ ಪ್ರಯೋಜನ ಇಲ್ಲ ಎನಿಸಿತು. ನನ್ನ ಸ್ನೇಹಿತ ಶಂಕರನಾರಾಯಣನ ಜತೆ ಪೇಚಾಡಿದೆ. ಅವರು, "ಅದೇನೂ ನಿನಗೆ ಕಷ್ಟವಾಗುವುದಿಲ್ಲ, ಕರೆಸ್ಪಾಂಡೆನ್ಸ್ ಮಾಡುವಷ್ಟು ತರಪೇತಿ ಕೊಡುತ್ತೇನೆ" ಎಂದರು. ಮನೆಗೇ ಬಂದು ದಿನವೂ ಒಂದೆರಡು ಗಂಟೆ ಪಾಠ ಹೇಳತೊಡಗಿದರು. ಅವರು ನಮ್ಮೂರಿನ ಸ್ಕೂಲ್ ಮಾಸ್ತರಾಗಿದ್ದರು.

ಅದೇ ಸಮಯಕ್ಕೆ ಇನ್ನೊಂದು ಸಂಧಿಯೂ ಕೂಡಿ ಬಂತು. ಊರಿನಲ್ಲಿ ದೀಕ್ಷಿತರ ಅಪ್ಪಣ್ಣಯ್ಯನವರು ಒಂದು ಚಿಲ್ಲರೆ ಅಂಗಡಿ ಇಟ್ಟಿದ್ದರು. ಲೆಕ್ಕ ಬರೆದು ಕೊಡುವಂತೆ ನನ್ನನ್ನು ಕೋರಿದರು. ತಿಂಗಳಿಗೆ ಹತ್ತು ರೂಪಾಯಿ ಸಂಬಳ ಕೊಡುವುದಾಗಿಯೂ ಹೇಳಿದರು. ಅದರಿಂದ ಎಷ್ಟೋ ಸೌಕರ್ಯವಾಯಿತು. ಆಗ ಒಂದು ಆಳಿನ ದಿನಗೂಲಿ ನಾಲ್ಕಾಣೆ ಇತ್ತು. ತೋಟದ ಕೆಲಸಕ್ಕೆ ಖಾಯಂ ಆಗಿ ಆಳಿಟ್ಟುಕೊಳ್ಳಲು ಅನುಕೂಲವಾಯಿತು. ಸಂಸಾರಕ್ಕೂ ಎರಡೂವರೆ ರೂಪಾಯಿ ಮಿಗುವಂತಾಯಿತು.

ಮಾವನವರಿಗೆ ಪದ್ಯ-ಪತ್ರ

ಅತ್ತ ತೋಟವು ಅಭಿವೃದ್ಧಿಯಾಗುತ್ತ ಬಂತು. ಮನೆಯಲ್ಲಿ ತುಸು ನೆಮ್ಮದಿಯೂ ಲಭಿಸಿತು. ನನ್ನ ಪತ್ನಿ ಗರ್ಭಿಣಿಯಾದಳು, ಸೀಮಂತಪ್ರಸ್ತವೂ ನಡೆಯಿತು. ಅವಳು ಗಂಡು ಮಗುವಿಗೆ ಜನ್ಮವಿತ್ತಳು. ಮಗುವು ಮೂಲಾನಕ್ಷತ್ರದ ಮೂರನೆಯ ಪಾದದಲ್ಲಿ ಜನಿಸಿತ್ತು. ಶಾಂತಿವಗೈರೆ ನಡೆಯಿತು.

ಮಾವನವರಿಗೆ, ನಾವಿಬ್ಬರು ಅಳಿಯಂದಿರೂ ತಮ್ಮ ಮನೆಯಲ್ಲಿ ಇರಬೇಕೆಂಬ ಆಸೆ ಇತ್ತು. ಆದರೆ ನಮಗೆ ಯಾವ ಸ್ವಾತಂತ್ರ್ಯವನ್ನೂ ಕೊಡುತ್ತಿರಲಿಲ್ಲ. ಅಳಿಯಂದಿರು ದಾರಿ ತಪ್ಪಿ ಎಲ್ಲವನ್ನೂ ಕಳೆದುಬಿಡುತ್ತಾರೆಂಬ ಹೆದರಿಕೆ ಇತ್ತೋ ಏನೋ

ತಿಳಿಯದು. ವಯಸ್ಸಾದ ನಮಗೆ ಅಭಿಮಾನ ತೀವ್ರವಾಗಿದ್ದ ಕಾಲ. ಒಂದು ಪಂಚೆ ಕೊಳ್ಳಲೂ ಅವರನ್ನೇ ಕೇಳಬೇಕಿತ್ತು. ಮೊದಲ ಅಳಿಯ ಬಸವಾಪಟ್ಟಣಕ್ಕೆ ವಾಪಸಾದರು, ನಾನು ರುದ್ರಪಟ್ಟಣದಲ್ಲೇ ಉಳಿದೆ. ನನ್ನ ಮಗುವಿಗೆ ಹತ್ತು ತಿಂಗಳಾಗಿತ್ತು. ಮಾವನವರಿಗೆ ಪದ್ಯರೂಪದಲ್ಲೇ ಒಂದು ಪತ್ರ ಬರೆದು ಹಾಕಿದೆ.

ಮಮತೆಯಿಲ್ಲದೆ ಯಿರಲು ಕರೆವವ
ನಮಿತವಹ ಧನದೀ ಜಾಲದಲಿ
ದಮಿತಮನನಾಗುತಲಿ ನವೆಯುತಿರಲಿನಿತು ಅಗ್ಗದಲಿ
ಗಮನಿಸದೆ ನಾ ತೆಗಳ ನಿಮ್ಮಯ
ಶಮನಿಕೆಯಲಿರುತಿರ್ದೆನಾದರದ
ಸಮವೋ ಅಲಭ್ಯವೋ ಮೇಣೆನಗೆ ವಿಷಮವೋಕಾಣೆ
ಅಪಗತ ಮನವ ವಿಪರೀತದಲಿ
ಜಪಿಸಲಾಗದು ಕರಕರಿಸುತಲಿ
ತಪಿಸುತಿರೆ ನಿಜವಹ ಸುಖವು ಮೇಣ್ ದೊರಕುವುದೆ
ನಿಮಗೆ
ಅಪಯಶವಳಿಯಲಿಕೆ ನಿಮ್ಮ ವಚನಕೆ
ನೆಪವನೊಡ್ಡದೆ ಪರಿಹರಿಸಲದು
ಸಫಲವಹುದಲ್ಲದಿರೆ ಅನುಭವಿಸುವಿರಿ ಕಷ್ಟಗಳ
ಚಾರುಚಿಂತಾರತ್ನವಿದೆಂದೆನೆ
ಸಾರುತಿರೆ ನಿಜ ಕೂರಂಬುಗಳ
ನಾರು ಸ್ಯೆರಿಸಿ ನೀಚ ನೆಲೆಯನು ಸೇರುವರೊ ಕಾಣೆ
ಜಾರುತಿರೆ ಪಥವೆಮಗೆ ಕೇಳಿ ಸಂ
ಸಾರ ಮಾಡುವದೇನು ಚಾರು ಸಂ
ಸಾರಕೇತಕೆಡೆಗೊಡದೆ ಇನಿತು ಕರ್ಕಶವೆಮ್ಮೊಳ್
ಮತ್ತೆ ಬಹುದದು ಕಿತ್ತುವೊದರುತ
ಮತ್ತೆ ಬೆಳೆವುದು ಬಿತ್ತವಾಗುತ
ಮೊತ್ತವಾಗುತಲೆದ್ದು ಬರುವುದು ನೀತಿಧರ್ಮದಲಿ
ಕತ್ತಲಾಗಿಹನಿತ್ತದೇಹದಿ
ಒತ್ತರಿಸಿ ಬಾರೆಂದು ಕರೆದರ
ದೆತ್ತಣದು ರಾಗಿಯಾ ಬಿತ್ತಿ ಗೋಧಿತೆನೆಯಾಗೆನಲು

ನಾವು ಮಾಡಿರುವುದು ಪಾಪಕರ್ಮ, 'ಪುಣ್ಯಬರಲಿ' ಎಂದರೆ ಹೇಗೆ ? ಎಂಬ ಅರ್ಥದಲ್ಲಿ ಬರೆದದ್ದು. ಹರಿಕಥೆ, ಪುರಾಣ ಎಲ್ಲವನ್ನೂ ಕೇಳುತ್ತೇವೆ. ಆದರೆ 'ಮತ್ತೆ ಬಹುದದು ಕಿತ್ತು ಒದರುತ' - ಒಳ್ಳೆಯದೂ ಬರುತ್ತೆ, ಕೆಟ್ಟದ್ದೂ ಬರುತ್ತೆ - ಅವರವರ ಕರ್ಮಾನುಸಾರ.

'ಮೊತ್ತವಾಗುತ ಎದ್ದು ಬರುವುದು
ನೀತಿಧರ್ಮದಲಿ
ಕತ್ತಲಾಗಿಹನಿತ್ತದೇಹದಿ
ಒತ್ತರಿಸಿ ಬಾರೆಂದು ಕರೆದರದೆತ್ತಣದು'

ಒಂದೆರಡು ದಿನ ಸರಿಯಾಗಿರುತ್ತೆ, ಮತ್ತೆ ಯಥಾಸ್ಥಿತಿ ಆಗುತ್ತೆ. ಉರ್‌ಸಿಂಗಿ ಹಾಗೆ ಆಡುತ್ತಿದ್ದರು; ಅದಕ್ಕೇ ಹಾಗೆ ಬರೆದೆ. ಇನ್ನೂ ಕೆಲವು ಪದ್ಯಗಳನ್ನು ಪಂಚತಂತ್ರದಿಂದಲೂ ಸೇರಿಸಿ ಬರೆದಿದ್ದೆ.

ದನವ ಕಾದುದು ಸಾಲದೇ ನಿಮಗೆ
ಮನನ ಮಾಡಲು ಉಡಲು ಪಂಚೆಗೆ
ನಮಿಸಿ ನಿಮ್ಮನು ಕೇಳಿ ನಿಮಗದು ವಿಹಿತವೇ ನೋಡೆ
ವಿನಯವಿಲ್ಲದ ಸಿರಿಯ ನೋಡುತ
ಕನಡಿಯಲ್ಲದ ಸುತಂತ್ರವಹ
ಬನದ ಸಿರಿ ಕರೆಯುತಿರೆ ಗಮಿಸುವೆವು ನಾವ್ ನಿಜದ
ನೆಲೆಗೆ

(ನಿಮಗೆ ನಮ್ಮ ಮೇಲೆ ಅಕ್ಕರೆಯಿಲ್ಲ. ಆದರೂ ನಿಮ್ಮೊಡನೆ ಇರಲು ಕರೆಯುತ್ತೀರಿ. ನಿಮ್ಮ ಬಳಿ ಅಪಾರವಾದ ಸಂಪತ್ತೇನೋ ಇದೆ. ಆದರೆ ಅದರ ಜಾಲದಲ್ಲಿ ಸಿಲುಕಿ ನಮ್ಮ ಮನಸ್ಸು ಜಜ್ಜಿಹೋಗಿ ನವೆಯುತ್ತಿದ್ದೇವೆ. ನಮ್ಮ ಬದುಕು ಇಷ್ಟು ಅಗ್ಗವಾಗಿ ಹೋಗಿದೆ. ನಿಮ್ಮ ಈ ತೆಗಳಿಕೆಯನ್ನು ಗಣಿಸದೆ ನಿಮ್ಮೊಡನೆ ಇರುವುದೆಂದರೆ ಅದೇನು ಎಂಥ ಪ್ರಮಾದವೋ ಅಶುಭ ಸೂಚಕವೋ ಇಲ್ಲ ನಮ್ಮ ದುರವಸ್ಥೆಯೋ ಅರ್ಥವಾಗುತ್ತಿಲ್ಲ.

ನಿಮ್ಮ ನೀಚಬುದ್ಧಿಯು ಅತಿರೇಕಕ್ಕೆ ಹೋಗಿದೆ. ಅದರಿಂದಾಗಿ ನಮಗೆ ಕಿರಿಕಿರಿ. ಹೀಗೆ ಬೇಗುದಿಯಲ್ಲಿರುವ ನಿಮಗಾದರೂ ನಿಜವಾದ ಸಂತೋಷ ದೊರಕುತ್ತದೆಯೇ ? ನಿಮಗೆ ಅಪಕೀರ್ತಿ ತಪ್ಪಬೇಕಾದರೆ ಒಂದೇ ದಾರಿ ಇದೆ. ನಮಗೆ ಕೊಟ್ಟ ಮಾತಿಗೆ ತಪ್ಪಬೇಡಿ, ನೆಪಗಳನ್ನು ಹಿಡಿಯಬೇಡಿ. ಇಲ್ಲದಿದ್ದರೆ ತುಂಬ ಕಷ್ಟ ಅನುಭವಿಸುತ್ತೀರಿ.

ನಿಮ್ಮ ಆಶ್ರಯವು ಚಿಂತಾರತ್ನದಂತೆ ಎಂದು ನೀವು ಹೇಳಿಕೊಳ್ಳಬಹುದು. ಆದರೆ ನಿಮ್ಮದು ಕದನದ ಮಾರ್ಗ. ಅದನ್ನು ಸೈರಿಸಿಕೊಂಡು ಯಾರು ನಿಮ್ಮಲ್ಲಿ ನೈಜ್ಯಾನುಸಂಧಾನ ಮಾಡುತ್ತಾರೋ ಕಾಣೆ. ನಾವು ನಿಂತ ನೆಲವೇ ಜಾರಿ ಪಾತಾಳಕ್ಕೊಯ್ಯುತ್ತಿದೆ. ಎಲ್ಲದಕ್ಕೂ ನಿಮ್ಮನ್ನು ಕೇಳಿಕೊಂಡು ನಾವು ಸಂಸಾರ ನಡೆಸಬೇಕಾಗಿ ಬಂದಿದೆ. ನಮ್ಮಪಾಡಿಗೆ ನಾವು ಸುಖಸಂತೋಷದಿಂದ ಸಂಸಾರ ಮಾಡಿಕೊಳ್ಳಲು ಬಿಡದೆ ವಿಪರೀತ ಕರ್ಕಶವಾಗಿ ವರ್ತಿಸುತ್ತಿದ್ದೀರಿ.

ತಿಳಿದುಕೊಳ್ಳಿ : ನಾವು ಮಾಡಿದ ಕರ್ಮಗಳು ಬೆಂಬಿಡದೆ ಕಾಡುತ್ತವೆ. ಅದು ಬೀಜಕ್ಕೆ ಬೀಜವಾಗಿ ಬೆಳೆಯುತ್ತ ಹೋಗುತ್ತದೆ. ಜನ್ಮದಿಂದ ಜನ್ಮಕ್ಕೆ ಈ ಕರ್ಮಫಲ ಸಂಚಯವಾಗುತ್ತ ಹೋಗುತ್ತದೆ. ನಿಮ್ಮನ್ನು ಕತ್ತಲು ಆವರಿಸಿದೆ. ಈ ದೇಹ ಶಾಶ್ವತ ಎಂದು ತಿಳಿದಿದ್ದೀರಿ. ಅಲ್ಲದೆ ನಾವು ಇಲ್ಲಿರಬೇಕೆಂದು ಒತ್ತಡ ಹಾಕುತ್ತೀರಿ. ಇದು, ರಾಗಿಯನ್ನು ಬಿತ್ತಿ ಗೋಧಿಯ ಫಸಲನ್ನು ಅಪೇಕ್ಷಿಸಿದಂತೆಯೇ ಸರಿ.

ನಾವು ನಿಮ್ಮ ಮನೆಯ ದನಗಳನ್ನು ಕಾದೆವು. ಅದರಿಂದ ನಿಮಗೆ ತೃಪ್ತಿಯಿಲ್ಲ. ನಾವು ಉಡುವ ಪಂಚೆಗೂ ನಾವು ಸಾಷ್ಟಾಂಗ ನಮಸ್ಕಾರ ಮಾಡಿ

ನಿಮ್ಮಲ್ಲಿ ಬೇತುಕೊಳ್ಳಬೇಕು. ಅದು ನಿಮಗೆ ಮರ್ಯಾದೆ ತರುವ ವಿಷಯವೇ ಎಂದು ಯೋಚಿಸಿ ನೋಡಿ. ನಿಮ್ಮಲ್ಲಿ ಸಂಪತ್ತು ಇದೆ, ಅದರ ಜತೆಗೆ ಆದರವಿಲ್ಲ. ನಮ್ಮ ಮನೆಗಳಲ್ಲಿರುವುದು ಬಡತನವಾದರೂ ಅಲ್ಲಿ ಸ್ವಾತಂತ್ರ್ಯವಿದೆ; ಅದು ನಿಮ್ಮ ಸಂಪತ್ತಿನಂತೆ ಕನ್ನಡಿಯ ಗಂಟಲ್ಲ. ನಮಗೆ ಆ ಸ್ವಾತಂತ್ರ್ಯದ ಕರೆ ಕೇಳುತ್ತಿದೆ. ನಾವಿನ್ನು ಹೊರಟೆವು.)

ಮಾವನವರಿಂದ ಉತ್ತರ ಬರಲಿಲ್ಲ. ಪತ್ನಿಯನ್ನೂ ಮಗುವನ್ನೂ ರುದ್ರಪಟ್ಟಣಕ್ಕೇ ಕರೆದುಕೊಂಡುಬಂದೆ. ಬರುವಾಗ ಮಾವನವರು 'ಈ ನಗಗಳನ್ನು ಮಾರಿ ಜೀವನ ಮಾಡಿಕೊಳ್ಳುತ್ತೀಯೋ ?' ಎಂದು ಕೇಳಿದರು. ನಗನಾಣ್ಯಗಳನ್ನೆಲ್ಲಾ ಬಿಚ್ಚಿಟ್ಟು ಉಟ್ಟಸೀರೆಯಲ್ಲಿ ಬರುವಂತೆ ಪತ್ನಿಗೆ ತಿಳಿಸಿದೆ. ಅವಳು ಹಾಗೆಯೇ ಮಾಡಿದಳು.

ಇನ್ನೂ ಒಮ್ಮೆ ಪ್ಲೇಗು

ಗೋಕುಲಾಷ್ಟಮಿ ಹಬ್ಬವನ್ನು ಆಚರಿಸಿ ಎಲ್ಲರೂ ಆ ದಿನವನ್ನು ಆನಂದದಿಂದ ಕಳೆದೆವು. ಹೀಗೇ ನಾಲ್ಕು ದಿನ ಕಳೆಯಿತು. ಇದ್ದಕ್ಕಿದ್ದ ಹಾಗೆ ಒಂದು ರಾತ್ರಿ ಹಿತ್ತಲಲ್ಲಿ ಹಕ್ಕಿಗಳು ಪುರ್ರೆಂದು ಹಾರಿದ್ದೇ ನೆಪವಾಯಿತು. ಆ ಮಧ್ಯರಾತ್ರಿ 'ಅವಳಿಗೆ' ಜ್ವರ ಬಂತು. ರಾತ್ರಿಯೆಲ್ಲಾ ನರಳಿದಳು. ಬೆಳಗಿನ ಹೊತ್ತಿಗೆ ಕಣ್ಣೆಲ್ಲಾ ಕೆಂಪಾಗಿ ನೋಡಲೇ ಆಗುತ್ತಿರಲಿಲ್ಲ. ವೈದ್ಯರು, "ಅದು ಪ್ಲೇಗು ಜ್ವರ. ಮಗುವನ್ನು ಹತ್ತಿರ ಬಿಡಬೇಡಿ" ಎಂದರು. ಅವಳಿಗೆ ಜ್ಞಾನವೂ ಇರಲಿಲ್ಲ. ಮಾತ್ರೆ ನುಂಗಲೂ ಆಗುತ್ತಿರಲಿಲ್ಲ. ಎರಡು ದಿನ ಕಳೆಯಿತು. ವೈದ್ಯರು, "ಉಳಿಯುವುದು ಕಷ್ಟ. ಮಗುವನ್ನು ಒಮ್ಮೆ ತೋರಿಸಿಬಿಡಿ" ಎಂದರು. ಮೂರು ನಿಮಿಷ ಜ್ಞಾನ ಬರುವಂತೆ ಮಾತ್ರೆ ಕೊಟ್ಟರು. ಅವಳು ಮಗುವನ್ನು ಕಣ್ತುಂಬ ನೋಡಿ ಅಪ್ಪಿ ಮುದ್ದಿಸಿದಳು. ಮೂರೇ ನಿಮಿಷ. ಶಾಶ್ವತವಾಗಿ ಕಣ್ಣುಮುಚ್ಚಿಬಿಟ್ಟಳು. ಕಳೆದ ಗುರುವಾರ ಎಷ್ಟು ಹೊತ್ತಿಗೆ ಬಂದಿದ್ದೆವೋ ಅಷ್ಟೇ ಹೊತ್ತಿಗೆ ಅವಳ ಪ್ರಾಣಪಕ್ಷಿ ಹಾರಿಹೋಗಿತ್ತು. ಊರಿನವರೆಲ್ಲ ಸೇರಿ ಕರ್ಮಗಳನ್ನು ನಡೆಸಿಕೊಟ್ಟರು.

ಊರಿನಿಂದ ಮೂರು ಮೈಲು ದೂರದಲ್ಲಿ ನಮ್ಮ ದರಖಾಸ್ತು ಜಮೀನೊಂದು ಇತ್ತು. ನಿತ್ಯ ಅಲ್ಲಿಗೆ ಹೋಗಿ ಕೂತು ಕಾಡಿನ ಮಧ್ಯೆ ಏಕಾಂತದಲ್ಲಿ ತೃಪ್ತಿಯಾಗುವಂತೆ ಅತ್ತು, ಸಂಜೆ ಊರಿಗೆ ಬರತೊಡಗಿದೆ. ದಾರಿಯಲ್ಲಿ ದುರ್ಗಿಗುಡಿ ಒಂದಿತ್ತು. ಅಲ್ಲಿ ಮೌನವಾಗಿ ನಿಂತು ಸ್ತೋತ್ರಮಾಡಲು ಮರೆಯುತ್ತಿರಲಿಲ್ಲ.

ಮಾವನವರ ಮರಣ

ಅಂಗಡಿ ಲೆಕ್ಕ ಬರೆಯಲು ಮೂರು ದಿನಕ್ಕೊಮ್ಮೆ ಹೋಗುತ್ತಿದ್ದೆ. ಶಂಕರನಾರಾಯಣರಾಯರು ಪ್ರತಿನಿತ್ಯ ಸಾಯಂಕಾಲ ಮನೆಗೇ ಬಂದು ಟ್ಯೂಷನ್ ಕೊಡುತ್ತಿದ್ದರು. ತೋಟದಲ್ಲಿ , ಮುರಿದ ಕೈಯಲ್ಲಿ ಸಣ್ಣ ಗಡಿಗೆ, ಇನ್ನೊಂದರಲ್ಲಿ ದೊಡ್ಡಗಡಿಗೆ ಹಿಡಿದು ತೂಕ ಹಾಕುತ್ತಿದ್ದೆ. ಆ ಸಮಯದಲ್ಲಿ ಚಿಲಕುಂದದಲ್ಲಿದ್ದ ಮಾವನವರು ಹಾಸಿಗೆ ಹಿಡಿದರು. ನನ್ನನ್ನೂ, ಬಸವಾಪಟ್ಟಣದಲ್ಲಿ ವಾಸಿಸುತ್ತಿದ್ದ ನನ್ನ ಷಡ್ಡಕ ವೆಂಕಟೇಶನನ್ನೂ ಕರೆದುಕೊಂಡು ಹೋಗಲು ಗಾಡಿ ಕಳಿಸಿದ್ದರು. ಆದರೆ ನಮ್ಮ ತಂದೆಯವರ ವೈದಿಕ ನಡೆಯಬೇಕಿತ್ತು. ಅನಿವಾರ್ಯವನ್ನು ತಿಳಿಸಿ 'ಬ್ರಾಹ್ಮಣ'ರಿಗೂ ಪುರೋಹಿತರಿಗೂ ಹೇಳಿಬರಲು ಪಕ್ಕದ ಹಳ್ಳಿಗೆ ಹೋದೆ. ವೈದಿಕ ಮುಗಿಸಿಕೊಂಡು ಒಂದು ದಿನ ಬಿಟ್ಟು ನಾನೊಬ್ಬನೇ ಚಿಲಕುಂದಕ್ಕೆ ಹೋದೆ. ಆದಿನಗಳಲ್ಲಿ ಬೆಟ್ಟದಪುರದವರೆಗೆ ಹತ್ತು ಮೈಲಿ ನಡೆದುಕೊಂಡು ಹೋಗಿ ಅಲ್ಲಿಂದ ಚಿಲ್ಕುಂದಕ್ಕೆ ಬಸ್ಸು ಹಿಡಿಯಬೇಕಾಗಿತ್ತು. ಅದೂ ಸೇರಿ ತಡವಾಯಿತು. ಮಾವನವರು ಸ್ವರ್ಗಸ್ಥರಾಗಿ ಒಂದು ದಿನ ಕಳೆದಿತ್ತು.

ಆಗ ನನ್ನ ಮಗುವಿಗೆ ಒಂದೂವರೆ ವರ್ಷ. ಅದರ ಹೆಸರಲ್ಲೇ ಕರ್ಮಗಳು ನಡೆಯುತ್ತಿದ್ದವು. ಮಾವನವರ ಕೊನೆಯ ದಿನಗಳಲ್ಲಿ, ಆ ಮಗುವನ್ನು ನೋಡಿಕೊಳ್ಳಲು ಯಾರಿಗೂ ವ್ಯವಧಾನವಿರಲಿಲ್ಲ, ಅದಕ್ಕೆ ಸಮಾಧಾನಪಡಿಸಲು ಹಿತ್ತಾಳೆ ಕಪ್ಪಿನಲ್ಲಿ ಪರಂಗಿ ಹಣ್ಣು ಕಿವಿಚಿ ಕೊಡುತ್ತಿದ್ದರಂತೆ. ಅದರಿಂದಾಗಿ ಅದರ ಆರೋಗ್ಯವೂ ಕೆಟ್ಟಿತ್ತು. ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿದ್ದ ಮಗು; ಖಾಯಿಲೆಯಿಂದ ಸೊಪ್ಪಾಗಿ ಹೋಗಿದ್ದ ಮಗು; ಮಾವನವರ 'ಕರ್ಮ'ದ ಕರ್ತೃವಾಗಿದ್ದ ಮಗು. ನನ್ನ ತೊಡೆಯ ಮೇಲೆ ಮಲಗಿಸಿಕೊಂಡಿದ್ದ ಆ ಅದೃಷ್ಟಹೀನ ಕೂಸನ್ನು ನೋಡಿ ನೋಡಿ ನನ್ನ ಕಣ್ಣು ಕರಗಿ ಹೋಗುವಷ್ಟು ಕಣ್ಣೀರು ಹರಿಸಿದೆ. ಅದನ್ನು ಕಂಡ ನನ್ನ ಅತ್ತಿಗೆಯವರು, "ಹೀಗೆ ಅತ್ತು ಪ್ರಯೋಜನವೇನು ? ನೀವೇನು ಕುರುಡರೋ ಕುಂಟರೋ ? ಬೇರೆ ಮದುವೆ ಮಾಡಿಕೊಂಡು ಬೇರೆ ಮನೆಯಲ್ಲಿ ವಾಸವಿರಲು ನಿಮಗೆ ಅನುಕೂಲವಾಗುವಂತೆ ನಮ್ಮ ತಂದೆಯವರು ವಿಲ್ ಬರೆದಿಟ್ಟಿದ್ದಾರೆ, ಅಳಬೇಡಿ" ಎಂದು ಸಮಾಧಾನಪಡಿಸಿದರು.

'ವೈಕುಂಠ' ಮುಗಿದು ಹಬ್ಬದ ಶಾಸ್ತ್ರವಾಯಿತು. ಅತ್ತಿಗೆಯವರು 'ವಿಲ್'ನ ಮಾತು ತೆಗೆದರು. ಅಲ್ಲಿದ್ದ ಬಂಧುವೊಬ್ಬರು, "ಇವನು ಎರಡನೇ ಮದುವೆ ಮಾಡಿಕೊಂಡು ಮಜ ಮಾಡುವುದಕ್ಕಲ್ಲ ಈ ಆಸ್ತಿ ಇರುವುದು" ಎಂದು ಹೌಹಾರಿದರು. ಅವರೂ ಎರಡನೇ ಮದುವೆ ಮಾಡಿಕೊಂಡಿದ್ದವರೇ. ಆ ದಿನಗಳಲ್ಲಿ ಅದೇನೂ ವಿಶೇಷವಾಗಿರಲಿಲ್ಲ. "ಹಾಗಾದರೆ ನಾಗಮ್ಮನವರೂ, ಪಂಚಗವ್ಯಕ್ಕೆ ಸೇರಿದ ಮಹನೀಯರೂ ಹೇಳಿದ ಮಾತೆಲ್ಲಾ ಸುಳ್ಳಾಯಿತೆ ? ಚಿಂತೆಯಿಲ್ಲ" ಎಂದು ಹೇಳಿ ಮಗುವನ್ನೆತ್ತಿಕೊಂಡು ರುದ್ರಪಟ್ಟಣಕ್ಕೆ ಹೊರಟೆ.

ಪಿರಿಯಾಪಟ್ಟಣದ ಬಸ್ಸಿನಲ್ಲಿ ನನ್ನ ವಿಶ್ವಾಸಿಗಳಾದ ಗೌಸ್‌ಷರೀಫ್ ಮತ್ತು ಆದಂಷರೀಫರೂ ಕೂತಿದ್ದರು. ಅವರಿಗೂ ವಿಲ್ ವಿಚಾರವೆಲ್ಲಾ ತಿಳಿದಿತ್ತು. ತಾವು ಬಂದು ಅದನ್ನು ಸರಿಪಡಿಸಿಕೊಡುವುದಾಗಿ ಇನ್ನಿಲ್ಲದಂತೆ ಒತ್ತಾಯ ಮಾಡಿದರು. ಮುಖ್ಯವಾಗಿ ಆ ಕೂಸನ್ನು ಕಂಡು ಅವರು ದುಃಖದಿಂದ ಕುದಿಯುತ್ತಿದ್ದರು. ಆದರೆ ಆಸ್ತಿಗಾಗಿ ಹೋರಾಟಕ್ಕಿಳಿಯುವುದು ತುಚ್ಛವೆನಿಸಿತು. ಪಿರಿಯಾಪಟ್ಟಣದಲ್ಲಿಳಿದು ಬೆಟ್ಟದಪುರಕ್ಕೆ ಬಂದೆ. ಅಲ್ಲಿ ವೇ|| ಬ್ರ|| ಶ್ರೀ ಚಂದ್ರಶೇಖರ ವಾದ್ಯಾರ ಮನೆಗೆ ಹೋದೆ. ಅವರು ಸಮುದಾಯದ ಒಬ್ಬ 'ಶಾಸಕ'ರೂ ಆಗಿದ್ದರು. ವಿಷಯ ತಿಳಿದು ಬಹು ಸಂಕಟಪಟ್ಟರು. ಅಲ್ಲಿ ಮಗುವಿಗೂ ಊಟಮಾಡಿಸಿ, ನಾನೂ ಒಂದಷ್ಟು ಹೊಟ್ಟೆಗೆ ಹಾಕಿಕೊಂಡೆ. ಅಲ್ಲೇ ಒಂದು ಗಟ್ಟಿ ಬಿದಿರಿನ ಕೋಲು ಸಿಕ್ಕಿತು. ಟವಲನ್ನು ಜೋಳಿಗೆಯಂತೆ ಕಟ್ಟಿದೆ. ಅದರಲ್ಲಿ ಮಗುವನ್ನು ಮಲಗಿಸಿ ಆ ಕೋಲಿಗೆ ಜೋಳಿಗೆ ನೇತುಹಾಕಿಕೊಂಡೆ. ಕೋಲನ್ನು ಹೆಗಲಮೇಲೆ ಇಟ್ಟುಕೊಂಡು ಊರಿನ ಕಡೆಗೆ ನಡೆದೆ. ನನಗೆ ಕೂಡ ತ್ರಾಣ ಇರಲಿಲ್ಲ, ಮಗುವಿಗೆ ಅಳಲೂ ಶಕ್ತಿ ಇರಲಿಲ್ಲ.

ದಾರಿಯಲ್ಲಿ ರಾಗಿಮರೂರು ಸಿಕ್ಕಿತು. ನಮ್ಮೂರಿನ ವೆಂಕಟರಮಣಯ್ಯ ಎಂಬುವರು ತೋಟದಲ್ಲಿ ಮನೆಕಟ್ಟಿಕೊಂಡು ಅಲ್ಲೇ ವಾಸವಾಗಿದ್ದರು. ನಾನು ಅವರ ಶಿಷ್ಯನೂ ಆಗಿದ್ದೆ , ೨೨ ವರ್ಷದ ಯುವಕ. ಅವರು ದೂರದಿಂದಲೇ ನನ್ನ ವಿಚಿತ್ರ ಅವಸ್ಥೆಯನ್ನು ಕಂಡು ಕವಲುದಾರಿಗೆ ಓಡಿಬಂದರು. ನನ್ನನ್ನು ಮನೆಗೆ ಕರೆದೊಯ್ದರು. ಅವರ ಹೆಂಡತಿ ಮಗುವನ್ನೆತ್ತಿಕೊಂಡು ಮೊದಲು ಹಾಲು ಕುಡಿಸಿದರು, ತೊಡೆಯ ಮೇಲೆ ಮಲಗಿಸಿಕೊಂಡು ಆಟವಾಡಿಸಿದರು, ಆ ಮಗುವಿಗೆ ಮೊದಲ ಬಾರಿಗೆ ಅಂಥ ಅಕ್ಕರೆ ಕಂಡಿರಬೇಕು. ಮಗು ಸ್ವಲ್ಪ ಸುಧಾರಿಸಿದ ಮೇಲೆ ಸಜ್ಜಿಗೆ ಮಾಡಿಕೊಟ್ಟರು, ಬಾಳೆ ಮತ್ತು ಕಿತ್ತಲೆಹಣ್ಣನ್ನು ದಾರಿಗಾಗಿ ಕಟ್ಟಿಕೊಟ್ಟರು.

ನನಗೂ ಕೊಂಚ ಉಸಿರು ಬಂತು. ರುದ್ರಪಟ್ಟಣಕ್ಕೆ ಇನ್ನು ನಾಲ್ಕು ಮೈಲಿ ಉಳಿದಿತ್ತು. ಮೂರು ಮೈಲಿ ಕಳೆಯಿತು. ಅಲ್ಲೇ ತೊಟ್ಟಿ ಸೋಮಯ್ಯನವರ ತೋಟ. ಅಲ್ಲಿ ಎಳನೀರು ಕುಡಿದದ್ದಾಯಿತು. ಜೋಳಿಗೆಯನ್ನು ಬಿದಿರು ಕೋಲಿಗೆ ಸಿಕ್ಕಿಸಿ ಹೆಗಲಮೇಲಿಟ್ಟುಕೊಂಡ ಆ ಅವತಾರದಲ್ಲಿ ಸಂಜೆ ಏಳು ಗಂಟೆಗೆ ರುದ್ರಪಟ್ಟಣದ ನಮ್ಮ ಮನೆಯೊಳಕ್ಕೆ ಕಾಲಿಟ್ಟೆ ; ಚಿಲಕುಂದ ಹೊಸಿಲ ಹೊರಗೆ ಉಳಿಯಿತು.

ಎರಡನೆಯ ಮದುವೆ

ನಮ್ಮ ತಾಯಿಯವರಿಗೆ ಈಗ ಹಗಲಿರುಳೂ ಮಗುವಿನ ಆರೈಕೆಯೇ ಆಯಿತು. ಹದಿನೈದು ದಿನದಲ್ಲಿ ಮಗು ಚೇತರಿಸಿಕೊಂಡಿತು, ಎಲ್ಲರೊಡನೆ ಮಾತಾಡತೊಡಗಿತು. ಊರಿನ ಹಿರಿಯರೆಲ್ಲಾ ಮನೆಗೆ ಬಂದು ಸಮಾಧಾನಹೇಳಿ, ಮಗುವನ್ನು ಮುದ್ದಿಸಿ, ಅನುಕಂಪದ ಮಾತು ಹೇಳಿ, ಭಾರವಾದ ಹೆಜ್ಜೆಗಳನ್ನಿಡುತ್ತಾ ಹಿಂದಿರುಗುತ್ತಿದ್ದರು.

ಕೆಲವು ದಿನಗಳು ಹೀಗೇ ಕಳೆದವು. ಮಗುವಿನ ಆರೈಕೆಯಲ್ಲೇ ಮಗ್ನರಾಗಿದ್ದ ನನ್ನ ತಾಯಿ 'ಒಂದು ಎಮ್ಮೆ ತಾ' ಎಂದರು, ಒಂದು ದಿನ. ಕರೆಯುವ ಎಮ್ಮೆಗಾಗಿ ಹುಡುಕಿಕೊಂಡು ಸ್ನೇಹಿತರ ಜತೆ ಹಳ್ಳಿಯಿಂದ ಹಳ್ಳಿಗೆ ಅಲೆದೆ; ಕೊನೆಗೆ ಸೋಮನಹಳ್ಳಿಗೆ ಬಂದೆ. ನನಗೆ ಪ್ರಾಥಮಿಕ ಶಾಲೆಯಲ್ಲಿ ಗುರುಗಳಾಗಿದ್ದ ಸುಬ್ರಾಯ ಮೇಷ್ಟ್ರು ಇದ್ದುದು ಅದೇ ಹಳ್ಳಿಯಲ್ಲಿ. ಅವರ ಮನೆಗೇ ಹೋದೆವು. ಎಮ್ಮೆ ಅಲ್ಲಾದರೂ ಸಿಕ್ಕೀತೋ ಎಂಬ ಆಸೆ.

ಮೇಷ್ಟರು ತಮ್ಮ ಮಗಳೊಬ್ಬಳನ್ನು ತೋರಿಸಿ, "ಇವಳನ್ನು ಮದುವೆಯಾಗು" ಎಂದರು. "ನೀವು ನನ್ನ ಗುರುಗಳು; ಗುರುಪುತ್ರಿಯನ್ನು ಒಪ್ಪಲಾರೆ" ಎಂದೆ. "ನಿನ್ನ ತಮ್ಮನಾದರೂ ಮಾಡಿಕೊಳ್ಳಲಿ" ಎಂದರು. "ತಾಯಿಯವರಲ್ಲಿ ಹೇಳಿ, ನಿಮಗೆ ತಿಳಿಸುತ್ತೇನೆ" ಎಂದು ಹೇಳಿ, ಎಮ್ಮೆಯೊಂದನ್ನು ಖರೀದಿಸಿ ಊರಿಗೆ ಬಂದೆ.

ನಾಲ್ಕೇ ದಿನ; ಸುಬ್ರಾಯ ಮೇಷ್ಟರು ರುದ್ರಪಟ್ಟಣಕ್ಕೆ ಬಂದೇ ಬಿಟ್ಟರು. ನಮ್ಮ ತಾಯಿಗೂ ಅದೇ ಬೇಕಿತ್ತು. "ನೀನೂ ಮಾಡಿಕೋ, ಜತೆಯಲ್ಲಿ ಎರಡೂ ಮುಗಿಯಲಿ" ಎಂದರು. ಅಗ್ರಹಾರದಲ್ಲಿದ್ದ ಒಂದು ಹುಡುಗಿಯನ್ನು ನೋಡಿಕೊಂಡು ಬರುವಂತೆ ಹೇಳಿ ನನ್ನನ್ನು ಓಡಿಸಿಯೇ ಬಿಟ್ಟರು. "ದೈವಾನುಕೂಲವಾದರೆ ನಾವೇ ತಿಳಿಸುತ್ತೇವೆ" ಎಂದು ಹೇಳಿ ಮೇಷ್ಟರನ್ನು ಅವರ ಊರಿಗೆ ಕಳಿಸಿಕೊಟ್ಟರು.

ನಾನು ಅಗ್ರಹಾರಕ್ಕೆ ಹೋಗಿ, ಅಲ್ಲಿದ್ದ ನಮ್ಮ ಸೋದರ ಮಾವನವರಲ್ಲಿ ಎಲ್ಲವನ್ನೂ ಹೇಳಿಕೊಂಡೆ. ಅವರು ಅಗ್ರಹಾರದ ಮಾತು ಬಿಟ್ಟರು, "ಚಾಹಳ್ಳಿಯಲ್ಲಿ ಒಂದು ಹುಡುಗಿ ಇದೆ" ಎಂದರು. ಅದರಂತೆ ಹೆಣ್ಣು ನೋಡಲು ನನ್ನನ್ನು ಅಲ್ಲಿಗೆ ಕರೆದುಕೊಂಡೂ ಹೋದರು. ಹುಡುಗಿ ಒಪ್ಪಿಗೆಯಾಯಿತು. ಲಗ್ನಕಟ್ಟಿಸುವ ದಿನ ಬಂತು. ನಾನು ಒಬ್ಬರು ಸ್ನೇಹಿತರನ್ನು ಜತೆಯಲ್ಲಿ ಕರೆದುಕೊಂಡು ಹೋಗಿ ನಮ್ಮ ಆಚಾರದಂತೆ ಕೆಲವು ಮಂಗಳದ್ರವ್ಯಗಳನ್ನೂ ಒಂದು ಕಣವನ್ನೂ ಕೊಟ್ಟೆ ; ಲಗ್ನಪತ್ರಿಕೆಯೂ ಆಯಿತು.

ಇದಾದ ಮೇಲೆ, ನನ್ನ ತಮ್ಮನು ಸೋಮನಹಳ್ಳಿಗೆ 'ಹುಡುಗಿಯನ್ನು ನೋಡಲು' ಬರಬೇಕೆಂದು ಆಹ್ವಾನ ಬಂತು. ಅಲ್ಲಿ ನನ್ನ ಮತ್ತು ನನ್ನ ತಮ್ಮನ ಲಗ್ನ ಒಂದೇ ದಿನ ಆಗುವಂತೆ ಪತ್ರಿಕೆ ಬರೆಸಿಕೊಟ್ಟು ಕಳಿಸಿದರು. ಚಾಹಳ್ಳಿಯಲ್ಲೂ ಸೋಮನ ಹಳ್ಳಿಯಲ್ಲೂ ಮದುವೆಗಾಗಿ ಸಕಲ ಸಂಭಾರಗಳೂ ನಡೆಯುತ್ತಿದ್ದವು.

ಆದರೆ ಇದ್ದಕ್ಕಿದ್ದಂತೆ ಚಾಹಳ್ಳಿಯ ಸಂಬಂಧಕ್ಕೆ ಅಕಸ್ಮಾತ್ ವಿಘ್ನ ಬಂತು. ಇತ್ತ ಸೋಮನಹಳ್ಳಿಯಿಂದ ಸುಬ್ರಾಯ ಮೇಷ್ಟರು ಓಡಿಬಂದರು; ಗಾಬರಿಯಿಂದ ತಮ್ಮ ಕಷ್ಟ ಹೇಳಿಕೊಳ್ಳತೊಡಗಿದರು. "ಇದರಿಂದ ತಮ್ಮನ ಮದುವೆ ನಿಲ್ಲುವುದಿಲ್ಲ" ಎಂದು ಧೈರ್ಯ ಹೇಳಿದೆವು. ಆದರೆ ಅವರಿಗೆ ನಿರಾಳವಿರಲಿಲ್ಲ, ಅಮ್ಮನಿಗೂ ಬೇಸರ. ಇಬ್ಬರೂ, "ಅದೇ ಲಗ್ನದಲ್ಲಿ ನಿನ್ನ ಮದುವೆ ಆಗಲೇಬೇಕು" ಎಂದು ತಂತಮ್ಮ ಕಾರಣಕ್ಕಾಗಿ ಒತ್ತಾಯ ಮಾಡತೊಡಗಿದರು. ಇನ್ನೊಂದು ಹುಡುಗಿಗಾಗಿ ಹುಡುಕುವಷ್ಟರಲ್ಲಿ ಲಗ್ನ ಸಮೀಪಿಸಿತು; ತಮ್ಮನ ವರಪೂಜೆಗೆ ಎಲ್ಲರೂ ಹೊರಟು ನಿಂತಾಗಿತ್ತು. ಆಗ ನನ್ನ ಸ್ನೇಹಿತರೊಬ್ಬರು ನನ್ನನ್ನು ಹಿರಳ್ಳಿಕೊಪ್ಪಲಿಗೆ ಹೆಣ್ಣು ನೋಡಲು ಓಡಿಸಿದರು.

"ನಾಳಿದ್ದೇ ನನ್ನ ಮದುವೆ; ನನಗೆ ಹೆಣ್ಣುಕೊಡಿ" ಎಂದು ಕೇಳಲು ಹೊರಟಿದ್ದೆ. ಬಸವಾಪಟ್ಟಣದಲ್ಲಿ ಬಸ್ಸು ಹಿಡಿಯಬೇಕಾಗಿತ್ತು. ದಾರಿಯಲ್ಲಿ ಕಾವೇರೀಸ್ನಾನ ಜಪ ಎಲ್ಲ ಮುಗಿಸಿಕೊಂಡೆ. ಬೆಳಗ್ಗೆ ೭.೩೦ ಆಯಿತು. ಬಸ್ಸು ಇದ್ದಿದ್ದು ಏಳು ಗಂಟೆಗೆ. ಆ ದಿನಗಳಲ್ಲಿ ಇದ್ದುದು ದಿನಕ್ಕೆ ಒಂದೇ ಬಸ್ಸು. ಹೇಗಾದರಾಗಲೆಂದು ಬಸವಾಪಟ್ಟಣಕ್ಕೆ ಹೋದೆ. ಬಸ್ಸು ಕೆಟ್ಟಿತ್ತು, ರಿಪೇರಿ ಮಾಡಿಕೊಂಡು ಎಂಟು ಗಂಟೆಗೆ ಹೊರಟ. ಅಲ್ಲಿದ್ದವರು ಅದನ್ನು 'ಶುಭ ಶಕುನ' ಎಂದು ಕರೆದರು.

ಹಿರಳ್ಳಿಕೊಪ್ಪಲಿಗೇನೋ ಹೋದೆ. ಹುಡುಗಿ ಯಾವುದೋ ಮದುವೆಗೆ ಹೊಳೆನರಸೀಪುರಕ್ಕೆ ಹೋಗಿದ್ದಳು. ಅಲ್ಲಿಗೇ ಹೋದೆ. ಕಲ್ಯಾಣ ಮಂಟಪದಲ್ಲಿ ಸುಂದರ ಕನ್ಯೆಯೊಬ್ಬಳು 'ಮದುವೆ ಹಾಡು' ಹೇಳುತ್ತಾ ಕೂತಿದ್ದಳು. 'ಇವಳೇ ಆ ಹುಡುಗಿ ಆಗಿದ್ದರೆ ?' ಎನಿಸಿತು. ನಿಜಕ್ಕೂ ಅವಳೇ ಆ ಹುಡುಗಿಯಾಗಿದ್ದಳು.

ಅಲ್ಲಿ ವಿವಾಹ ಮಾಡಿಸಲು ಬಂದಿದ್ದ ಪುರೋಹಿತರು ವೇ॥ ಬ್ರ॥ ಶ್ರೀ ಅನಂತಾವಧಾನಿಗಳು. ಅವರು ನಮ್ಮೂರಿನವರೇ. ನಮ್ಮೂರಲ್ಲಿ ಅವರು ಅನೇಕರಿಗೆ ವೇದಾಧ್ಯಯನ ಮಾಡಿಸುತ್ತಿದ್ದರು. ಅವರು ಆಪ್ತರೆಂದು ತಿಳಿದು, ಅವರೊಡನೆ, ನಾನು ಬಂದ ಸಮಾಚಾರ ತಿಳಿಸಿದೆ. ಅವರು ಕೂಡಲೆ, "ನಿನಗೆ ಇಂಥಾ ಲಕ್ಷಣವಾದ ಹುಡುಗಿಯನ್ನು ಕೊಡಲು ಒಪ್ಪುತ್ತಾರೆಯೆ -ಅದೂ ಅಲ್ಲದೆ ಎರಡನೆಯ ಸಂಬಂಧಕ್ಕೆ ? ಅಲ್ಲದೆ, ನಾಡಿದ್ದೇ ಮದುವೆ ಎಂದರೆ ಯಾರಾದರೂ ನಗುತ್ತಾರೆ; ಸುಮ್ಮನೆ ಗಂಭೀರವಾಗಿ ಊರಿಗೆ ಹೋಗು" ಎಂದು ಹೇಳಿ ನನ್ನನ್ನು ನಿರುತ್ತೇಜನಗೊಳಿಸಿದರು.

ಆದರೆ ನಾನು ಒಂದು ಕುದುರೆಗಾಡಿ ಕಟ್ಟಿಸಿಕೊಂಡು ಹಿರಳ್ಳಿ ಕೊಪ್ಪಲಿಗೆ ಹೋದೆ. ಅಲ್ಲಿದ್ದ ಆ ಹುಡುಗಿಯ ಮಲತಾಯಿಗೆ - ಅವರು ಮೊದಲೇ ಸೂಚಿಸಿದ್ದಂತೆ - ನನ್ನ ಒಪ್ಪಿಗೆ ತಿಳಿಸಿದೆ. ಅವರು ಇನ್ನೂ ಕೆಲ ಆಪ್ತರಲ್ಲಿ ಸಮಾಲೋಚಿಸಿದರು. 'ನಾಡಿದ್ದೇ ಮದುವೆ' ಎಂಬುದು ಮುಖ್ಯ ಸಮಸ್ಯೆಯಾಗಿತ್ತು.

ಆ ವೇಳೆಗೆ ಶುಭೋದಯವಾಯಿತು. ಆಕೆಯ ಅಕ್ಕನ ಗಂಡ ಶ್ರೀನಿವಾಸಶಾಸ್ತ್ರಿಗಳು ಹಂದನಹಾಳು ಗ್ರಾಮದಿಂದ ಆ ಹೊತ್ತು ಬಂದರು. ಮತ್ತೆ ಅದೇ ಸಮಸ್ಯೆ, ಚರ್ಚೆ, ಸಮಾಲೋಚನೆ. ನಾನು ಮಾತ್ರ ಅಂತಿಮವೆಂಬಂತೆ "ನಿಮಗೆ ನಿರಾಳವಾದರೆ, ನನ್ನ ಮಾತು ಪಥ್ಯವಾದರೆ ತಕ್ಕ ಏರ್ಪಾಟು ಮಾಡಿ" ಎಂದವನೇ ಒಂದು ಶ್ಲೋಕವನ್ನು ಹೇಳಿಬಿಟ್ಟೆ.

ಯಸ್ಮಾಚ್ಚ ಯೇನ ಚ ಯದಾ ಚ ಯಥಾ ಚ ಯಚ್ಚ
ಯಾವಚ್ಚ ಯತ್ರ ಚ ಶುಭಾಶುಭಮಾತ್ಮಕರ್ಮ ।
ತಸ್ಮಾಚ್ಚ ತೇನ ಚ ತದಾ ಚ ತಥಾ ಚ ತಚ್ಚ
ತಾವಚ್ಚ ತತ್ರ ಚ ಕೃತಾಂತವಶಾದುಪೈತಿ ॥

ಯಾವುದರ ದೆಸೆಯಿಂದ, ಯಾವುದರಿಂದ, ಯಾವಾಗ, ಹೇಗೆ, ಯಾವ ಕಾರಣದಿಂದ, ಎಷ್ಟು ಮತ್ತು ಎಲ್ಲಿ ಶುಭ ಮತ್ತು ಅಶುಭವಾದಂಥ ಕರ್ಮಗಳುಂಟಾದವೋ ಅದರ ದೆಸೆಯಿಂದಲೇ, ಅದರಿಂದಲೇ, ಆಗಲೇ, ಹಾಗೆಯೇ, ಅದೇ ಕಾರಣದಿಂದಲೇ, ಅಷ್ಟೇ ಮತ್ತು ಅಲ್ಲಿಯ ಆ ಕರ್ಮಗಳು ವಿಧಿಯ ಅಧೀನಕ್ಕೆ ಒಳಗಾಗುತ್ತವೆ.

ಎಂದು ಹೇಳಿಬಿಟ್ಟೆ. ಶಾಸ್ತ್ರಿಗಳು ಮುಗುಳ್ನಗುತ್ತಾ "ಲಕ್ಷ್ಮೀನಾರಾಯಣಸ್ವರೂಪಿಯಾಗಿ ಬಂದಿರುವ ಈ ಹುಡುಗನ ವಿಚಾರವಾಗಿ ಯಾವ ಯೋಚನೆಯೂ ಮಾಡದೆ ನಿರಾಳವಾಗಿ ಮುಂದಿನ ಕಾರ್ಯ ಮಾಡಿ" ಎಂದು ಫಲತಾಂಬೂಲ ಕೊಡಿಸಿದರು. "ಇದನ್ನು ನೀನು ದೇವರ ಗೂಡಿನ ಬಳಿ ಇಟ್ಟು ನಮಸ್ಕರಿಸು" ಎಂದು ನನಗೂ ಹೇಳಿದರು. ಆಗ ಗಾಡಿಕಟ್ಟಿಸಿಕೊಂಡು ಹೊಳೆನರಸೀಪುರಕ್ಕೆ ಹೋಗಿ ಅಂಗಡಿ ಬಾಗಿಲು ತೆಗೆಸಿ ಚಿನ್ನ ಬೆಳ್ಳಿ ಸಾಮಾನು, ಜವಳಿ ಮತ್ತು ಕೆಲವು ಶುಭವಸ್ತುಗಳನ್ನು ತರಲು ಹೊರಟರು. ಹಿಂದಿರುಗುವಾಗ ರಾತ್ರಿ ಒಂದು ಗಂಟೆಯ ಮೇಲಾಗಿತ್ತು. ಬಂದ ಮೇಲೆ ಸಿಹಿಯೂಟ ಮಾಡಿಸಿದರು.

ಶಾಸ್ತ್ರಿಗಳ ಆಜ್ಞೆಯಂತೆ ಬೆಳಗ್ಗೆ ಐದು ಗಂಟೆಯೊಳಗೆ ಎದ್ದು ಸ್ನಾನ ಮಾಡಿ ಸಿದ್ಧವಾದೆ. "ಫಲತಾಂಬೂಲವನ್ನು ದೇವರ ಕೋಣೆಯಿಂದ ತಾ. ನೆಲದಮೇಲೆ ಇಡಬೇಡ. ಇದನ್ನು ಊರಿಗೆ ತೆಗೆದುಕೊಂಡು ಹೋಗು. ಅಲ್ಲಿ ಸಿದ್ಧಮಾಡಿಕೊಳ್ಳಬೇಕಾದ್ದೆಲ್ಲಾ ಮಾಡಿಕೊಳ್ಳಿ" ಎಂದರು. ನನ್ನ ಭಾವಿ ಚಿಕ್ಕತ್ತೆಯವರು, ದಾರಿಯಲ್ಲಿ ತಿನ್ನಲೆಂದು ನನಗೆ ಸಜ್ಜಿಗೆ ಬಾಳೆಹಣ್ಣು ಕಟ್ಟಿಕೊಟ್ಟರು.

ಶಾಸ್ತ್ರಿಗಳು ಯಾರೋ ಎಂದು ತಿಳಿದಿದ್ದೆ. ಉಭಯ ಸಂಕೇತಿಗಳ ಲಂಡನ್‌ಪಾರ್ಟಿಗಳಿಗೆ ಶಾಸ್ತ್ರೋಕ್ತವಾಗಿ ಪ್ರಾಯಶ್ಚಿತ್ತ ಮಾಡಿಸಿ, ಕೂಡಿಸಿದ್ದವರೆಂದು ತಿಳಿಯಿತು. ಮೊದಲೇ ಅವರು ಯಾರೆಂದು ತಿಳಿದಿದ್ದರೆ ಶ್ಲೋಕ ಹೇಳಲು ಭಯಪಡುತ್ತಿದ್ದೇನೊ!

ಯಥಾಪ್ರಕಾರ ಬಸವಾಪಟ್ಟಣದಿಂದ ನಡೆದು ಬರುವಾಗ ಕಾವೇರಿ ದಡದಲ್ಲಿ ಸಜ್ಜಿಗೆ, ಬಾಳೆಹಣ್ಣು ಮುಗಿಸಿದೆ. ಊರು ಸೇರಿದೆ. ಸುಬ್ರಾಯಮೇಷ್ಟರಿಗೂ ನನ್ನ ತಾಯಿಗೂ ಎಲ್ಲಿಲ್ಲದ ಕಾತರ. ಶುಭಸಮಾಚಾರ ಎಲ್ಲರಿಗೂ ಮುಟ್ಟಿತು. ಆದರೆ "ಇಷ್ಟು ಅವಸರದಲ್ಲಿ ಎರಡನೆ ಬಾರಿಯ ವರನಿಗೆ, ವರನ ಊರಿಗೇ ಬಂದು ಮದುವೆ ಮಾಡಿಕೊಡಲು ನಿಜವಾಗಿಯೂ ಬರುತ್ತಾರೆಯೇ" ಎಂದು ಊರತುಂಬ ಗುಸುಗುಸು ನಡೆದಿತ್ತು.

ಬೆಳಗಾಯಿತು. ಆರು ಗಂಟೆ ಆಯಿತು, ಏಳೂ ಆಯಿತು. ಹುಡುಗಿಯ ಸದ್ದಿಲ್ಲ . ಅವರು ಬಂದು ವರಪೂಜೆಯೂ ಆಗಬೇಕು. ಎಲ್ಲರಿಗೂ ನನ್ನ ಮಾತಿನಲ್ಲಿ ಅನುಮಾನ ಹೆಚ್ಚಿತು. ಗಾಡಿಯ ಒಂದು ಎತ್ತು ಸರಿಯಾಗಿ ನಡೆಯದೆ ಇದ್ದ ವಿಚಾರ ತಿಳಿಸಲು ಒಬ್ಬರು ಬೈಸಿಕಲ್ಲಿನಲ್ಲಿ ಬಂದರು; ನಮಗೆ ಧೈರ್ಯ ಕೊಟ್ಟರು; ಇನ್ನೊಂದು ಗಂಟೆಯಲ್ಲಿ ಎಲ್ಲರೂ ಬಂದು ಸೇರುವುದು ನಿಶ್ಚಯವಾಯಿತು. ನನ್ನ ಸಂಸ್ಕೃತದ ಗುರುಗಳಾದ ಸೀತಾರಾಮ ಶಾಸ್ತ್ರಿಗಳ ಮನೆಯಲ್ಲೇ ನೆಂಟರನ್ನಿಳಿಸಲು ಏರ್ಪಾಡಾಯಿತು. ಶಾಸ್ತ್ರಿಗಳೇ ನಿಂತು ಚಪ್ಪರ ಹಾಕಿಸಿ ಎಲ್ಲಾ ಸಿದ್ಧಪಡಿಸಿದರು. ವರಪೂಜೆ - ಉಪಾಹಾರ - ಲಗ್ನ ಎಲ್ಲ ಮುಗಿಯಿತು.

ಸಭಾಪೂಜೆಯ ಸಮಯ. ಪುರೋಹಿತ ಅನಂತಾವಧಾನಿಗಳು ಎಲ್ಲಿಯೋ ಹೋಗಿದ್ದವರು ಆ ಸಮಯಕ್ಕೆ ಬಂದರು. ನನ್ನ ತಮ್ಮನ ಮದುವೆ ಎಂದೇ ಅವರು ತಿಳಿದಿದ್ದರು. ನಾನೇ ಹಸೆಯ ಮೇಲೆ ಅದೇ ಹಿರಳ್ಳಿಕೊಪ್ಪಲಿನ ಸುಂದರ ಕನ್ಯೆಯ ಜತೆ ಕುಳಿತದ್ದು ಕಂಡು ಪೆಚ್ಚಾಗಿಬಿಟ್ಟರು. ಸಭಾಪೂಜೆಯಾಗಿ ಬ್ರಾಹ್ಮಣಸಂತರ್ಪಣೆಯ ವೇಳೆ ಅರ್ಚನೆ ಮಾಡಲು ನಮ್ಮ ಪುರೋಹಿತರು ಅನಂತಾವಧಾನಿಗಳನ್ನೇ ನೇಮಿಸಿದರು. ಅವರು ನಮ್ಮಿಂದ ಅರ್ಚನೆ ಮಾಡಿಸಿ ಮುಗುಳ್ನಗುತ್ತಾ ನಮಗೆ ಪ್ರಸಾದ ಕೊಟ್ಟರು ಮತ್ತು ಊಟಕ್ಕೆ ಕೂರಿಸಿದರು. ಊಟವಾಗಿ ತಾಂಬೂಲವಾಗುತ್ತಿರುವಾಗ ಅವಧಾನಿಗಳು ಅಲ್ಲಿದ್ದ ವೈದಿಕರೊಡನೆ ತಾವು ನಿರುತ್ತೇಜನಗೊಳಿಸಿದ ಕಥೆ ಎಲ್ಲವನ್ನೂ ಹೇಳಿದರು. "ಇದೆಲ್ಲಾ ದೈವಲೀಲೆಯೇ ವಿನಾ ಮತ್ತೇನೂ ಅಲ್ಲ. ನಾನು ಅಂದು ಹೇಳಿದ ಮಾತಿನಿಂದ ನೀನು ಬೇಜಾರು ಮಾಡಿಕೊಳ್ಳಬೇಡ" ಎಂದು ನನಗೆ ಸಮಾಧಾನವನ್ನೂ ಹೇಳಿದರು.

ನನ್ನ ಅತ್ತೆ ಮಾವನವರು ಊರಿಗೆ ಹೊರಡುವ ಮೊದಲು ಅವರ ಮಗಳನ್ನು ಹತ್ತಿರ ಕರೆದು, "ಈ ಮಗುವನ್ನು ನಿನ್ನ ಮಗುವೆಂದೇ ಸರಿಯಾಗಿ ನೋಡಿಕೋ, ಅದಕ್ಕೆ ಚೆನ್ನಾಗಿ ಹುಷಾರಾಗುವವರೆಗೂ ನೀನು ಎಚ್ಚರಿಕೆಯಿಂದಿರಬೇಕು" ಎಂದು ಕಿವಿಮಾತು ಹೇಳಿದರು. ಅವಳೂ ಮಗುವನ್ನು ಅಕ್ಕರೆಯಿಂದ ಮುದ್ದಾಡಿದಳು. ಆಗ ಅವಳಿಗೆ ಹದಿಮೂರು ವರ್ಷ. ಅವಳು ಇನ್ನು ನಮ್ಮ ಮನೆಗೆ ಬರುವುದು ಋತುವಾದ ಮೇಲಷ್ಟೆ. ನಮ್ಮ ಆಚಾರದಂತೆ, ಮದುವೆಯಾಗಿ ಹದಿನೈದು ದಿನ ಕಳೆದ ಮೇಲೆ, ನಾವಿಬ್ಬರೂ ಅಣ್ಣ ತಮ್ಮಂದಿರು ನಮ್ಮ ನಮ್ಮ ಮಾವಂದಿರ ಮನೆಗೆ ಹೋಗಿ ಅಲ್ಲಿ ಅವರಿಷ್ಟದಂತೆ ಇದ್ದು ಊರಿಗೆ ಬಂದೆವು.

ಇನ್ಶೂರೆನ್ಸ್ ಕೆಲಸ

ಅಂಗಡಿಯಲ್ಲಿ ಲೆಕ್ಕ ಬರೆಯುವುದು ಮುಂದುವರಿದಿತ್ತು. ಒಂದು ಶುಭಮುಹೂರ್ತ ಆ ದಾರಿಯಲ್ಲೇ ಎದುರಾಯಿತು. ಒಮ್ಮೆ ಅಂಗಡಿಗೆ ಸಾಮಾನು ಹಾಕಿಸಲು ಮೈಸೂರಿಗೆ ಹೋದೆ (ಹೊಸ ಅಗ್ರಹಾರದವರೆಗೆ ರೈಲಿನಲ್ಲಿ ಬರಬಹುದಾಗಿತ್ತು). ಲಾರಿಗೆ ಸಾಮಾನು ಹಾಕಿಸಿ ಊರಿಗೆ ಬರಲು ರೈಲು ಹತ್ತಿದೆ. ಅಷ್ಟರಲ್ಲಿ ಎಂಪೈರ್ ಆಫ್ ಇಂಡಿಯಾ ಇನ್‌ಷ್ಯೂರೆನ್ಸ್ ಕಂಪನಿಯ ಇನ್‌ಸ್ಪೆಕ್ಟರೊಬ್ಬರು -ಅದು ಆಗ ನನಗೆ ತಿಳಿದಿರಲಿಲ್ಲ - ಸುಮ್ಮಸುಮ್ಮನೆ ನನ್ನನ್ನು ಮಾತಾಡಿಸಿದರು. ನನ್ನ ಸ್ಥಳ, ಉದ್ಯೋಗ ಎಲ್ಲಾ ಕೇಳಿ ತಿಳಿದುಕೊಂಡರು. ತಮ್ಮ ಕಂಪನಿಯ ಬಗೆಗೆ ತಾವೂ ಹೇಳಿದರು. ಕಂಪನಿಯ ಏಜನ್ಸಿ ಪಡೆದು ಕೆಲಸ ಮಾಡಲು ಹೇಳಿದರು. ರೈಲು ಹತ್ತಲು ಬಿಡದೆ ತಮ್ಮ ಮನೆಗೆ ಕರೆದುಕೊಂಡು ಹೋಗಿ ಕಂಪನಿಯ ಪ್ರಾಸ್ಪೆಕ್ಟಸ್ಸು, ಫಾರಂಗಳು ಎಲ್ಲವನ್ನೂ ಕೊಟ್ಟರು. "ಊರಿಗೆ ಹೋಗಿ ಅಪ್ಲಿಕೇಷನ್ ಭರ್ತಿ ಮಾಡಿ ಕಳಿಸಿ" ಎಂದು ಹೇಳಿ ಅಡ್ರೆಸ್‌ಕೊಟ್ಟು ಕಳಿಸಿದರು. ಮೂರು ದಿನಗಳ ಕಾಲ ಊರಿನಲ್ಲಿ ಅಪ್ಪಣ್ಣಯ್ಯನವರು, ವೆಂಕಟಾಚಾರ್ ಅವರು - ಹೀಗೆ ಎಲ್ಲ ಹಿರಿಯರು, ಗೆಳೆಯರ ಒಡನೆ ಚರ್ಚಿಸಿದೆ. ಕೊನೆಗೆ ಇಂಡಿಯಾಕ್ಕೆಲ್ಲ ದೊಡ್ಡ ಕಂಪನಿಯಾಗಿದ್ದ ಆ ಓರಿಯಂಟಲ್ ಕಂಪನಿಗೆ ಸೇರಲು ನಿರ್ಧರಿಸಿದೆ.

ಮೈಸೂರಿಗೆ ಬಸ್ಸು ಹತ್ತುವ ಮೊದಲು ಆಂಜನೇಯನ ದೇವಸ್ಥಾನಕ್ಕೆ ಹೋಗಿ ಕೈಮುಗಿದೆ. ಆ ವಿಶೇಷ ಸಂದರ್ಭಕ್ಕಾಗಿ, ನಾನು ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಹಾಕಿಕೊಳ್ಳುತ್ತಿದ್ದ ಕೋಟು, ಟೋಪಿ ಹಾಕಿಕೊಂಡಿದ್ದೆ. ಎಲ್ಲರಿಗೂ ಇದೊಂದು ವಿಚಿತ್ರ ದೃಶ್ಯ. ಅಲ್ಲಿಂದ ಕೆರೆ ಏರಿಯ ಮೇಲೆ ನಡೆದು ಹನ್ಯಾಳ್ ಹತ್ತಿರ ಇರುವ ದುರ್ಗಿ ದೇವಸ್ಥಾನಕ್ಕೆ ಬಂದೆ. ಅಲ್ಲಿ ಸ್ತೋತ್ರ ಹೇಳಿ ನಮಸ್ಕರಿಸಿ ಕೂಡುರಸ್ತೆಗೆ ಹೋಗಿ ಬಸ್ಸು ಹತ್ತಿದೆ. ಕೆ.ಆರ್. ನಗರದಿಂದ ಮುಂದಕ್ಕೆ

ರೈಲು; ಆ ರಾತ್ರಿ ಅನಾಥಾಲಯದಲ್ಲಿ ವಾಸ್ತವ್ಯ. ಮರುದಿನ ಇನ್‌ಸ್ಪೆಕ್ಟರ್ ಎಂ.ಎಚ್. ಕೃಷ್ಣಮೂರ್ತಿಯವರ ಮುಂದೆ ಅರ್ಜಿ ಹಿಡಿದು ನಿಂತೆ. ಅವರು ಒಂದೇ ಮಾತಿನಲ್ಲಿ, "ನಿಮ್ಮಂಥ ವಾಚಾಳಿಗಳಿಗಲ್ಲದೆ ಇನ್ನಾರಿಗೆ ಕೊಡಬೇಕು ?" ಎಂದರು. ಶಂಕರನಾರಾಯಣ ಅವರು ಕಲಿಸಿದ್ದ ಇಂಗ್ಲಿಷ್ ನನ್ನ ನೆರವಿಗೆ ಬಂದಿತ್ತು. ಆರ್ಡರ್ ಹಿಡಿದು ಊರು ತಲುಪಿದ್ದು ದಿಗ್ವಿಜಯದ ಉರುಬಿನಲ್ಲಿ.

ಆ ಯುಗಾದಿಯಿಂದಲೇ ನನ್ನ ಕೆಲಸ ಪ್ರಾರಂಭವಾಯಿತು. ಎರಡು ಪ್ರಪೋಸಲ್‌ಗಳು ಸಿಕ್ಕಿದವು. ಅದು ೧೯೩೫ನೇ ಇಸವಿ ಏಪ್ರಿಲ್ ತಿಂಗಳು. ಸೈಕಲ್ ಕಲಿತೆ; ಒಬ್ಬರು ಡಾಕ್ಟರು ಇಟ್ಟುಕೊಂಡಿದ್ದ ಸೈಕಲ್ ಎರವಲು ಪಡೆದು ಹಳ್ಳಿ ಹಳ್ಳಿ ಸುತ್ತತೊಡಗಿದೆ. ಒಮ್ಮೆ ಪಿರಿಯಾಪಟ್ಟಣಕ್ಕೆ ಸೈಕಲ್ ಸವಾರಿ ಮಾಡುತ್ತಿದ್ದೆ. ಅಲ್ಲೇ ಎಂ.ಎಚ್. ಕೃಷ್ಣಮೂರ್ತಿಯವರು ತಮ್ಮ ಕಾರಿನಲ್ಲಿ ಎದುರಾದರು. ನನ್ನ ಉತ್ಸಾಹ ಕಂಡು ಅವರಿಗೆ ಖುಶಿಯೋ ಖುಶಿ. ಮೈಸೂರಿಗೆ ಬರುವಂತೆ ಹೇಳಿ ಮುಂದೆ ಹೋದರು. ನಾನು ಹಿಂದಿನಿಂದ ಮೈಸೂರು ತಲುಪಿದೆ. ಕಂಪನಿಯಿಂದ ನೂರು ರೂಪಾಯಿ ಸಾಲ ಕೊಡಿಸಿ ಒಂದು ರ್‍ಯಾಲಿ ಸೈಕಲ್ ತೆಗೆಸಿಕೊಟ್ಟರು. ಅದರಲ್ಲೇ ಸವಾರಿ ಮಾಡಿಕೊಂಡು ಐವತ್ತು ಮೈಲಿ ದೂರದ ಊರು ಸೇರಿದೆ. ಒಂದು ದಿನ ಜರ್ಬಾಗಿ, ಮಾವನ ಮನೆಯವರು ಮದುವೆಯ ಸಮಯದಲ್ಲಿ ಕೊಟ್ಟಿದ್ದ ರುಮಾಲು ಸುತ್ತಿಕೊಂಡು ಕೋಟು ಹಾಕಿಕೊಂಡು 'ಸೈಕಲ್ ಕಚ್ಚೆ ಪಂಚೆ'ಯುಟ್ಟು ಹಿರಳ್ಳಿಕೊಪ್ಪಲಿಗೆ ಹೋದೆ. ಆ ದಿನಗಳಲ್ಲಿ ಇನ್ನೂ ನನ್ನ ಹೆಂಡತಿ ಅಲ್ಲೇ ಇದ್ದಳು, ಕನ್ಯೆ.

ವಾಚನದ ಮುಂದುವರಿಕೆ

ಬಾಲ್ಯದಲ್ಲಿ ಕಾವ್ಯರಚನೆಯ ಅಷ್ಟು ಪ್ರಯತ್ನಗಳು ನಡೆದರೂ ಮುಂದೆ ನನ್ನ ಬರವಣಿಗೆಯೇ ನಿಂತುಹೋಯಿತು. ಹಿಂದೆ ಬರೆದಿದ್ದ ಕಾವ್ಯಗಳ ಪ್ರತಿಗಳನ್ನೂ ಉಳಿಸಿಕೊಳ್ಳಲಿಲ್ಲ. ಹಳ್ಳಿಯ ಜೀವನದ ಆಗಿನ ಪರಿಸರವೇ ಹಾಗಿತ್ತು. ಜೀವನಕ್ಕಾಗಿ ಮಾಡಬೇಕಾಗಿದ್ದ ಹೋರಾಟದ ನಡುವೆ ಕಾವ್ಯವು ಗೌಣ ಸಂಗತಿಯಾಗಿದ್ದು ಆಶ್ಚರ್ಯವಲ್ಲ.

ಇನ್ಷ್ಯೂರೆನ್ಸ್ ಬಿಸಿನೆಸ್ ಪ್ರಾರಂಭವಾದ ಮೇಲಂತೂ ಏನಾದರೂ ಬರೆಯುವುದು ಸಾಧ್ಯವೇ ಇರಲಿಲ್ಲ. ಆದರೆ ಕಾವ್ಯದ ಬಗೆಗಿನ ನನ್ನ ನಂಟು ಉಳಿದುಕೊಂಡಿತು. ಎಲ್ಲಿಗೆ ಪ್ರಯಾಣ ಹೊರಟರೂ ಯಾವಾಗಲೂ ಗದುಗಿನ ಭಾರತ ನನ್ನ ಚೀಲದಲ್ಲಿ ಇದ್ದೇ ಇರುತ್ತಿತ್ತು. ಎಲ್ಲಿ ಹೋದರೆ ಅಲ್ಲಿ, ಎಲ್ಲಿ ತಂಗಿದರೆ ಅಲ್ಲಿ - ಜನರು ಒಂದು ಕಾವ್ಯವಾಚನ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಅದರಿಂದಾಗಿ ನೂರಾರು ಕಡೆ ಕಾವ್ಯವಾಚನ ಮಾಡಿ ನನ್ನ ಕಾವ್ಯಸಂಸ್ಕಾರವನ್ನು ರೂಢಿಸಿಕೊಳ್ಳುವುದು ಸಾಧ್ಯವಾಯಿತು. ಈ ಕಾರ್ಯಕ್ರಮಗಳು ಹೆಚ್ಚಾಗಿ ಹಾಸನ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ನಡೆದವು.

ನನ್ನ ೭೮ನೆಯ ವಯಸ್ಸಿನವರೆಗೂ ಕಾವ್ಯವಾಚನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟೆ. ರುದ್ರಪಟ್ಟಣದವನೇ ಆದರೂ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಲು ನನಗೆ ಅವಕಾಶವಾಗಲಿಲ್ಲ. 'ಪ್ಲೇಗು' ಹಿಡಿದಿತ್ತು. ನನ್ನ ಓದಿನಲ್ಲಿ ಸಾಹಿತ್ಯಕ್ಕೆ ಹೆಚ್ಚು ಒತ್ತು ಇರುತ್ತಿತ್ತು. ಸ್ಫುಟವಾಗಿ ಓದುತ್ತಿದ್ದೆ. ಸ್ವರಜ್ಞಾನವೂ ನನಗಿರಲಿಲ್ಲ , ಓದಿನಲ್ಲಿ ರಾಗಕ್ಕೆ ಪ್ರಾಧಾನ್ಯವೂ ಇರಲಿಲ್ಲ. ಕೇಳುವವರಿಗೆ ಅದು ಅರ್ಥವಾಗಬೇಕು ಎಂಬುದರ ಕಡೆಗೇ ನನ್ನ ಗಮನವಿರುತ್ತಿತ್ತು. ಲಯ, ಭಾವ, ರಸ ಪ್ರಕಟವಾಗಬೇಕೆಂದು ಶ್ರಮಪಡುತ್ತಿದ್ದೆ. ಕುಮಾರವ್ಯಾಸನ ಭಾರತಕ್ಕೆ ನನ್ನ ಮೊದಲ ಪ್ರೀತಿಯಾದರೂ ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ, ಪಂಪರಾಮಾಯಣ ಮೊದಲಾದ ಕಾವ್ಯಗಳನ್ನೂ ಓದುತ್ತಿದ್ದೆ.

ಆ ಕಾಲಕ್ಕೆ ರೇಡಿಯೋ, ಟಿ.ವಿ.ಗಳ ಭರಾಟೆ ಇರಲಿಲ್ಲ. ಕಾವ್ಯವಾಚನವೇ ಮನೋರಂಜನೆಯ ಮಾಧ್ಯಮ ಆಗಿರುತ್ತಿತ್ತು. ಆಗಾಗ ಸ್ಪರ್ಧೆಗಳೂ ನಡೆಯುತ್ತಿದ್ದವು. ನೂರಾರು ಜನ ವಾಚನವನ್ನು ಕೇಳಲು ಸೇರಿರುತ್ತಿದ್ದರು.

ಒಮ್ಮೆ ನಾನೂ ಮರೂರು ಕೇಶವಯ್ಯನವರೂ ಒಂದು ಸ್ಪರ್ಧೆಗೆ ನಮ್ಮೂರು ರುದ್ರಪಟ್ಟಣದ ಪ್ರತಿನಿಧಿಗಳಾಗಿ ಚನ್ನರಾಯಪಟ್ಟಣಕ್ಕೆ ಹೋಗಿದ್ದೆವು. ನಾವು ಇಳಿದುಕೊಂಡಿದ್ದ ಮನೆಯವರು ಸ್ನಾನ ಮಾಡಲು ನಮಗೆ ಆಮಲಕ ತೈಲ ಕೊಟ್ಟಿದ್ದರು, ಸ್ಪರ್ಧೆಗೆ ಹೊರಡುವ ಮೊದಲು ಟೀ ಕೊಟ್ಟಿದ್ದರು. ನಮಗಿಬ್ಬರಿಗೂ ಗಂಟಲು ಕಟ್ಟಿ ಹಾಸ್ಯದ ವಸ್ತುಗಳಾಗಿದ್ದೆವು. ನಮ್ಮ ವಾಚನವನ್ನು ಆ ಹಿಂದೆ ಕೇಳಿದ್ದ ಬಾಗೂರು ಶ್ರೀನಿವಾಸ ಅಯ್ಯಂಗಾರ್ ಅವರಿಗೆ ನಮ್ಮ ಮೇಲೆ ಬಹಳ ಅನುಕಂಪ ಉಂಟಾಯಿತು. ತಮ್ಮೂರಿಗೆ ಕರೆಸಿಕೊಂಡು ಕಷಾಯ ಕೊಟ್ಟು ಗಂಟಲು ಸರಿಮಾಡಿಸಿಕೊಟ್ಟರು. ಮೂರು ದಿನ ನಮ್ಮ ಕಾರ್ಯಕ್ರಮ ಇಡಿಸಿದರು. ಕೈತುಂಬ ಸಂಭಾವನೆ ಕೊಟ್ಟು ಕಳಿಸಿಕೊಟ್ಟರು. ನಾವು ಸ್ಪರ್ಧೆಯಲ್ಲಿ ಸೋತಿದ್ದರೂ ಊರಿಗೆ ಬರಿಗೈಲಿ ಹೋಗಲಿಲ್ಲ !

ಕಜ್ಜಿ ವಾಸಿಯಾಯಿತು

ಇಷ್ಟರಲ್ಲಿ ಮಗುವಿಗೆ ಮೈಯೆಲ್ಲಾ ಕಜ್ಜಿ ಏಳಲು ಶುರುವಾಗಿತ್ತು. ಒಂದು ದಿನ ದಾರಿಯಲ್ಲಿ ಬರುವಾಗ ದೊಡ್ಡತೊಟ್ಟಿ ಜಗುಲಿಯ

ಮೇಲೆ ಕೂತಿದ್ದ ಸೋಮಯ್ಯನವರು 'ಬಾರಯ್ಯ' ಎಂದು ಕರೆದರು. ಅವರು ರಿಟೈರ್ಡ್ ಸ್ಕೂಲ್ ಮಾಸ್ಟರು. ಅವರಿಗೆ ಆಗಾಗ ನಶ್ಯ ಮಾಡಿಕೊಡುತ್ತಿದ್ದೆ. ಅವತ್ತೂ ಆ ಎಪ್ಪತ್ತೈದರ ಮುದುಕರು ನಶ್ಯ ಮಾಡಿಕೊಡಲು ಕರೆದರು. ಮೂಲೆಯಲ್ಲಿದ್ದ ಕಲ್ಲಿನ ಮೇಲೆ ನಶ್ಯ ಇಡಿಯುತ್ತಿದ್ದೆ. ದಾರಿಯಲ್ಲಿ ಯಾವುದೋ ಮಗು ಮೈತುಂಬ ದುಬಟಿ ಹೊದ್ದುಕೊಂಡು ಬರುತ್ತಿತ್ತು. ರಾತ್ರಿ ಏಳು ದಾಟಿತ್ತು. ಮೊಬ್ಬಿನ ಸಮಯ. ಮೂರು - ನಾಲ್ಕು ನಾಯಿಗಳು ಆ ಮಗುವಿಗೆ ಮುತ್ತಿಕೊಂಡವು. ಇನ್ನೇನು ಬಾಯಿ ಹಾಕಬೇಕು. ಸೋಮಯ್ಯನವರಿಗೆ ವಯಸ್ಸಿನಿಂದಾಗಿ ಏಳಲಾಗದ ಜಡತ್ವ ಬಂದಿತ್ತು. ಅಂಥವರು ಧಿಗ್ಗನೆ ಎದ್ದವರೇ ತಮ್ಮ ಬಳಿ ಇದ್ದ ಕೋಲು ಎತ್ತಿಕೊಂಡು ಓಡಿದರು, ಒಂದು ನಾಯಿಗೆ ಬಲವಾಗಿ ಮಟುಕಿದರು. ಎಲ್ಲ ನಾಯಿಗಳೂ ಓಟಕಿತ್ತವು.

ಆ ಮಗುವನ್ನು ಕೈ ಹಿಡಿದು ಜಗುಲಿಗೆ ಕರೆದುಕೊಂಡು ಬಂದರು. ನನ್ನ ಪಾಡಿಗೆ ನಾನು ನಶ್ಯ ಇಡಿಯುತ್ತಿದ್ದೆ. ಆ ಮಗು 'ಅಣ್ಣಾ !' ಎಂದು ಅಳುತ್ತಾ ಬಂದು ನನ್ನ ಬೆನ್ನಿಗೆ ಆತು ನಿಂತಿತು. ಆಗಲೇ, ಆವರೆಗಿನ ವಿವರವೆಲ್ಲ ತಿಳಿದದ್ದು.

ಇದನ್ನು ಕಂಡು, ಜಹಗೀರಿ ವೆಂಕಟರಮಣಯ್ಯನವರೇನೋ "ಕಜ್ಜಿ ಹಿಡಿದು ನರಳುತ್ತಿರುವ ಮಗುವನ್ನು ನೋಡಿಕೊಳ್ಳಲು ನಿನ್ನ ಹೆಂಡತಿಯನ್ನು ಕರೆಸಿಕೊಳ್ಳುವುದು ಯುಕ್ತ" ಎಂದು ಸಲಹೆ ಮಾಡಿದರು. ನನಗೆ ನಾಚಿಕೆ. ಅಲ್ಲದೆ 'ಋತುಮತಿಯಾಗದ ಹೆಂಡತಿಯನ್ನು ಕಳಿಸಿಕೊಡಿ'ರೆಂದು ಕೇಳುವುದು ಪದ್ಧತಿಯಲ್ಲ. ಆದರೂ ಅನಿವಾರ್ಯ. ಹಿರಳ್ಳಿಕೊಪ್ಪಲಿನ ಮಾವನವರ ಮನೆಗೆ ಹೋದೆ. "ಮಗುವಿಗೆ ಕಜ್ಜಿ ; ನನಗೆ ಇನ್‌ಷ್ಯೂರೆನ್ಸ್ ಬಾಬ್ತು ವಿಪರೀತ ಕೆಲಸ ; ನಿಮ್ಮ ಮಗಳನ್ನು ಕಳಿಸಿಕೊಟ್ಟರೆ ಅನುಕೂಲ" ಎಂದು ನಿವೇದಿಸಿಕೊಂಡೆ. ಅವರಿಗೂ, ಈ ಅನಿವಾರ್ಯ ಸ್ಥಿತಿಯಲ್ಲಿ ಇದು ಅನೀತಿಯಾಗಿ ಕಾಣುವುದಿಲ್ಲ ಎನಿಸಿರಬೇಕು. ಎರಡೇ ದಿನಗಳಲ್ಲಿ ಮಗಳನ್ನು ರುದ್ರಪಟ್ಟಣಕ್ಕೆ ಕರೆದುಕೊಂಡು ಬಂದರು, "ಮಗುವನ್ನು ಪ್ರೀತಿಯಿಂದ ನೋಡಿಕೊ" ಎಂದು ಕಿವಿಮಾತು ಹೇಳಿ, ಹೋಗಿಬಂದರು. ನಾನು ನೆಮ್ಮದಿಯಿಂದ ಕಂಪನಿಯ ಕೆಲಸದಲ್ಲಿ ತೊಡಗಿಕೊಳ್ಳುವುದು ಸಾಧ್ಯವಾಯಿತು.

ನನ್ನ ಹೆಂಡತಿ ೧೩-೧೪ರ ಪುಟ್ಟ ಹುಡುಗಿ. ಅವಳಿಗೆ ವೈದ್ಯವೊಂದು ಹೊಳೆಯಿತು. ಮಗುವಿನ ಅಂಡಿನಲ್ಲಿ ಆಗಿದ್ದ ಕಜ್ಜಿಗೆ ಒಂದು ದಿನ ಉಪ್ಪಿನಕಾಯಿ ರಸ ಬಳಿದಳು. ಎಂಥ ಕಜ್ಜಿಯಾದರೂ ಹೊರಟು ಹೋಗಬೇಕು ಎಂಬುದು ಅವಳ ಆಸೆ. ಆದರೆ ಉರಿ, ವಿಪರೀತ ಉರಿ ಆಗಿ ಮಗು ಯಮರೋದನ ಮಾಡಲು ಶುರುಮಾಡಿತು. ಇವಳಿಗೆ ಕಕ್ಕಾಬಿಕ್ಕಿ. ಏನೂ ತೋಚದೆ ತಾನೂ ಅಳುತ್ತ ನಿಂತಳು. ಆ ಸಮಯಕ್ಕೆ ನಾನು ಮನೆಗೆ ಬಂದೆ. ಒಂದು ದೊಡ್ಡ ತಟ್ಟೆಯಲ್ಲಿ ಕೈಯೆಣ್ಣೆ ಹಾಕಿ, ಅಂಡಿಗೂ ಸವರಿ, ಮಗುವನ್ನು ಅದರಲ್ಲಿ ಕೂರಿಸಿದೆ. ತುಸುಹೊತ್ತಿನಲ್ಲಿ ಸಮಾಧಾನಗೊಂಡು ಮಗು ಅಳುವುದನ್ನು ನಿಲ್ಲಿಸಿತು. ಆಮೇಲೆ ಅದನ್ನೆಲ್ಲ ತೊಳೆದು ಮುಲಾಮು ಹಚ್ಚಿ ಮಲಗಿಸಿದೆ.

ನನ್ನ ಹೆಂಡತಿಗೆ ತಾನು ಮಾಡಿದ ಪೆದ್ದು ಕೆಲಸ ಹೀನಾಯವಾಗಿ ಕಾಣಿಸಿರಬೇಕು. ಸುಬ್ರಹ್ಮಣ್ಯಸ್ವಾಮಿಗೆ ಹರಕೆ ಹೊತ್ತಳು. ಇನ್ನೊಂದು ತಿಂಗಳಿಗೆ ರಾಮನಾಥಪುರದ ಜಾತ್ರೆ ನಡೆಯುವುದಿತ್ತು. "ದೇವರಿಗೆ ಸೇವೆ ಮಾಡಿ ಆ ಸಾಯಂಕಾಲ ಎಂಜಲೆಲೆ ಮಡೆ ಹೊರಳುತ್ತೇನೆ" ಎಂದು ಹೇಳಿಕೊಂಡಳು. ಅರಿಸಿನ ಬಟ್ಟೆಯಲ್ಲಿ ಬೆಳ್ಳಿ ನಾಣ್ಯವಿಟ್ಟು ದೇವರ ಗೂಡಿನ ಹತ್ತಿರ ಕಟ್ಟಿ ಇಟ್ಟಳು. ಜಾತ್ರೆಯಲ್ಲಿ ನೇಮದಿಂದ ಮಡೆ ಹೊರಳಿದಳು. ಹತ್ತು ದಿನದಲ್ಲಿ ಕಜ್ಜಿ ವಾಸಿಯಾಯಿತು.

ಸ್ಥಿತ್ಯಂತರಗಳು

ಇನ್ನೂ ಒಂದೂವರೆ ವರ್ಷ ಕಳೆಯಿತು. ನನ್ನ ಹೆಂಡತಿಯು ದೊಡ್ಡವಳಾದಳು ; ಅವಳ ತವರಿನವರಿಗೂ ಸಂಭ್ರಮ.

ಈ ನಡುವೆ, ಪಿರಿಯಾಪಟ್ಟಣದಲ್ಲಿದ್ದ ನನ್ನ ಷಡ್ಡಕರಾದ ಪಿ.ಸಿ. ಸುಬ್ಬಣ್ಣನವರು ರುದ್ರಪಟ್ಟಣದ ಶಾಲೆಗೆ ವರ್ಗವಾಗಿ ಬಂದರು. ರುದ್ರಪಟ್ಟಣದಲ್ಲಿಯೇ ಇದ್ದ , ಪಕ್ಕದ ಮನೆಯ 'ಮರೂರು ಕೇಶವಯ್ಯ' ನವರಿಗೆ ಭಾರತವಾಚನ ಮಾಡುವ ಅಪೇಕ್ಷೆ ಇತ್ತು. ಬಾಲ್ಯದಿಂದಲೂ ನನಗೆ ಭಾರತವಾಚನದ ಪರಿಶ್ರಮವಿತ್ತು. ಈಗಲೂ ನಡೆಸತೊಡಗಿದೆ. ಸುಬ್ಬಣ್ಣನವರು ಹಾರ್ಮೋನಿಯಂ ಬಾರಿಸುತ್ತಿದ್ದರು. ಮಾಸ್ತರಾಗಿದ್ದ ಪಿ.ವಿ. ಶ್ರೀಕಂಠಯ್ಯನವರು ನಮ್ಮೂರಿನ ಸ್ಕೂಲಿಗೆ ವರ್ಗವಾಗಿ ಬಂದರು. ಊರಿನ ಗಂಡಸರೂ ಹೆಂಗಸರೂ ಐವತ್ತು-ಅರುವತ್ತು ಜನ ಸೇರುತ್ತಿದ್ದರು. ವಾಚನವನ್ನು ನಮ್ಮ ಮನೆಯಲ್ಲೇ ಮಾಡುತ್ತಿದ್ದೆ. ಸಂಜೆ ಏಳು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೂ ವಾಚನ ನಡೆಯುತ್ತಿತ್ತು. ಊರಿನಲ್ಲಿ ಕಾವ್ಯವಾಚನದ ಪರಿಸರ ನಿರ್ಮಾಣವಾಯಿತು.

ಆ ಕಾಲದಲ್ಲಿ ಕಾವ್ಯವಾಚನದ ಪರಂಪರೆ ಅನೇಕ ಕಡೆಗಳಲ್ಲಿ ಇನ್ನೂ ಜೀವಂತವಾಗಿತ್ತು. ಪಕ್ಕದ ಬಸವಾಪಟ್ಟಣದಲ್ಲಿದ್ದ ಶಾಲಾ ಮಾಸ್ಟರು ಶ್ರೀನಿವಾಸಯ್ಯನವರು (ಸಣ್ಣಪ್ಪ ಮೇಷ್ಟರು) ಅದನ್ನು ಒಂದು ತಪಸ್ಸಿನಂತೆ ನಡೆಸಿಕೊಂಡು ಬರುತ್ತಿದ್ದರು. ಅವರ ಶಾರೀರ ಚನ್ನಾಗಿತ್ತು. ಆಲಾಪನೆ ಮಾಡಿಕೊಂಡು ಗಟ್ಟಿಯಾಗಿ ಓದುತ್ತಿದ್ದರು. ಅವರಿಗೆ ಸಂಗೀತಾಭ್ಯಾಸವೂ ಆಗಿತ್ತು. ಶ್ಲೋಕಗಳನ್ನೂ ಚೆನ್ನಾಗಿ ಹೇಳುತ್ತಿದ್ದರು; ಮುಖ್ಯವಾಗಿ ಗದುಗಿನ ಭಾರತದ ವಾಚನಕ್ಕೆ ಎತ್ತಿದ ಕೈ. ನನಗೂ ಅವರು ರುದ್ರಪಟ್ಟಣದ ಶಾಲೆಯಲ್ಲಿ ಕೆಲಕಾಲ ಮೇಷ್ಟರಾಗಿದ್ದರು.

ಇಂಥ ವೇಳೆ ಎಂ.ಎಸ್. ಹಿರಣ್ಣಯ್ಯ ಎಂಬುವವರು ರೈಲ್ವೆ ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಅದಕ್ಕೂ ಹಿಂದೆ ಅವರು ಹಾಸನಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು. ಆಗ National War Front ಎಂಬುದೊಂದು ಸಂಸ್ಥೆ ಇತ್ತು. ಅದಕ್ಕೆ ಉಪನ್ಯಾಸಕರ ಅಗತ್ಯವಿತ್ತು. ಯಾರೋ ನನ್ನ ಬಗೆಗೆ ಅವರಿಗೆ ಹೇಳಿದರು. ಆಗ ರೈತರನ್ನು ಶೋಷಣೆ ಮಾಡುವುದರ ವಿರುದ್ಧ ಒಂದು ಜಾಗೃತಿ ಆಂದೋಳನ ನಡೆಯುತ್ತಿತ್ತು. ಹಾಗೆ ಜಾಗೃತಿ ಉಪನ್ಯಾಸ ಮಾಡಲು ನನ್ನನ್ನು ನೇಮಿಸಿದರು. ನಾನು ಸ್ವತಃ ರೈತನಾದುದರಿಂದ ಅವರಿಗೆ ನಾನು ಈ ಕೆಲಸಕ್ಕೆ ಹೆಚ್ಚು ಸೂಕ್ತ ಎನಿಸಿತ್ತು. ಸಭೆಗಳಲ್ಲಿ ಸಹಸ್ರಾರು ಜನ ಸೇರಿರುತ್ತಿದ್ದರು. ಎಲ್ಲ ಇಲಾಖೆಗಳ ಮುಖ್ಯಸ್ಥರೂ ಅದರಲ್ಲಿ ಹಾಜರಿರುತ್ತಿದ್ದರು. ಇಡೀ ಜಿಲ್ಲೆಯ ನೂರಾರು ಹಳ್ಳಿಗಳಲ್ಲಿ ಇದು ನಡೆಯಿತು.

ಒಮ್ಮೆ ಅಂಥ ಒಂದು ಸಭೆಯಲ್ಲಿ ವಿಜಯಗೀತೆ ಹಾಡುವಂತೆ ಜಿಲ್ಲಾಧಿಕಾರಿಗಳಿಂದಲೇ ಸೂಚನೆ ಬಂದಿತ್ತು. ಸಣ್ಣಪ್ಪ ಮೇಷ್ಟರು ಅದಕ್ಕಾಗಿ ಸಂಸ್ಕೃತದಲ್ಲಿ ಒಂದು ಗೀತೆಯನ್ನು ರಚನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಟ್ಟಿದ್ದರು. ಅದನ್ನೇ ಎಲ್ಲ ಕಡೆ ಹಾಡುತ್ತಿದ್ದೆ. ಆಗ ನರಸಿಂಹಮೂರ್ತಿ ಎಂಬ ಒಬ್ಬ ಶೇಖದಾರರು ಇದ್ದರು. ಅವರು ಒಂದು ಸಭೆಯಲ್ಲಿ "ನೀವು ಇಂಥದೇ ಒಂದು ಗೀತೆಯನ್ನು ಕನ್ನಡದಲ್ಲಿ ರಚಿಸಿ, ಓದಿ" ಎಂದರು. ಭಾಮಿನಿಯಲ್ಲಿ ನಾಲ್ಕು ಪದ್ಯ ಬರೆದು 'ವಿಜಯಗೀತೆ'ಯನ್ನು ವಾಚಿಸಿದೆ. ಹಿರಣ್ಣಯ್ಯ ಎಂದರೆ 'ಗುರು'. ಆ ಅರ್ಥವೇ ಬರುವ ಹಾಗೆ ಬರೆದು, ಸಮಾರಂಭದ ಬಗೆಗೂ ಬರೆದಿದ್ದೆ. ಸಣ್ಣಪ್ಪಮೇಷ್ಟರ ಸಂಸ್ಕೃತ ಗೀತೆಯಾದ ಅನಂತರ ಇದನ್ನು ಓದಿದೆ. ಅದು ದೇಶದ ವಿಜಯದ ಬಗೆಗೆ ಬರೆದಿದ್ದು. ಅದೇ ಹದಿನೈದು ನಿಮಿಷದ ಕಾರ್ಯಕ್ರಮವಾಯಿತು.

ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು ಮದಾಲಸೋಪಾಖ್ಯಾನ ವನ್ನು ವಾರ್ಧಕಷಟ್ಪದಿಯಲ್ಲಿ ಬರೆದಿದ್ದರು. ಭಾಮಿನಿಯಲ್ಲೂ ಕೆಲವು ರಚನೆ ಮಾಡಿದ್ದರು. ನಾವು ಅವರ ಕೃತಿಗಳನ್ನು 'ಕಾವ್ಯವಾಚನ'ದ ಭಾಗವಾಗಿಸಿಕೊಂಡಿದ್ದೆವು. ಮುಂದೆ ೧೯೮೦ರಲ್ಲಿ ಸಾಲಿಗ್ರಾಮದಲ್ಲಿ ನನಗೆ ಸನ್ಮಾನ ಮಾಡುವ ಕಾರ್ಯಕ್ರಮವೊಂದನ್ನು ಊರವರು ಹಮ್ಮಿಕೊಂಡಿದ್ದರು. ಆಗ ಹಾರ ಹಾಕಿ ಸನ್ಮಾನ ಮಾಡಿದವರು ಶ್ರೀಕಂಠಶಾಸ್ತ್ರಿಗಳ ವಂಶಸ್ಥರು ಎಂಬುದು ಕಾಕತಾಳೀಯ.

ರುದ್ರಪಟ್ಟಣದಲ್ಲಿಯೇ ಹಲವು ಸಂಗೀತ ವಿದ್ವಾಂಸರಿದ್ದರು. ತೊಟ್ಟಿ ಮನೆಯಲ್ಲಿದ್ದ ಎಲ್ಲರೂ ಸಂಗೀತ ವಿದ್ವಾಂಸರೇ. ತೊಟ್ಟಿ ತಮ್ಮಪ್ಪನವರಂತೂ ಕಣಿವೆಕೆಳಗೆ ಹೋಗಿ ತಮ್ಮ ವಿದ್ವತ್ತಿಗಾಗಿ ಜಂಗ್‌ಕಟ್ಟಿಸಿಕೊಂಡು ಬಂದಿದ್ದರು. ಆಗಾಗ ಊರಿನಲ್ಲಿ ಮೇಳ ಕಟ್ಟಿಸಿ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ವೀಣೆ ವೆಂಕಟರಮಣಯ್ಯನವರೂ ಆಸ್ಥಾನ ವಿದ್ವಾಂಸರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದಲೂ ನಮಗೆ ತಿಳಿದಂತೆಯೇ ಹಲವು ಆಸ್ಥಾನವಿದ್ವಾಂಸರು ರುದ್ರಪಟ್ಟಣದವರಿದ್ದರು.

ರುದ್ರಪಟ್ಟಣದ ಕರಿಕಾಂತಯ್ಯನವರ ನಾದಿನಿ ಪಾರ್ವತಮ್ಮ ಎಂಬುವವರು ಬಲು ಸೊಗಸಾಗಿ ಸಂಪ್ರದಾಯದ ಗೀತೆಗಳನ್ನು ಹಾಡುತ್ತಿದ್ದರು. ಅವರೇನೂ ಶಾಸ್ತ್ರೀಯ ಸಂಗೀತ ಕಲಿತಿರಲಿಲ್ಲ, ಆದರೆ ಅಚ್ಚುಕಟ್ಟಾಗಿ ಹಾಡುಹೇಳುತ್ತಿದ್ದರು. ಅರಮನೆಯಲ್ಲಿ ಹಾಡು ಹೇಳಲು ಆಗಾಗ ಅವರನ್ನು ಆಹ್ವಾನಿಸುತ್ತಿದ್ದರು. ಅವರ ಮಗ ಅನಂತ ಶ್ರೀನಿವಾಸಶಾಸ್ತ್ರಿಗಳು ತಮ್ಮ ಸಂಸ್ಕೃತ ಪಾಂಡಿತ್ಯಕ್ಕಾಗಿ ಅರಮನೆಯಿಂದ ಸನ್ಮಾನಿತರಾಗಿದ್ದರು. ಅವರ ಮನೆಯವರೆಲ್ಲ ಸ್ಫುರದ್ರೂಪಿಗಳು, ಹೃದಯವಂತರು. ಪಾರ್ವತಮ್ಮನವರ ಪತಿ 'ಶೇಕ್‌ಜಿ' ಆದ್ದರಿಂದ ಅವರನ್ನೂ 'ಶೇಕ್‌ಜಿ ಪಾರ್ವತಮ್ಮನವರು' ಎಂದೇ ಕರೆಯುತ್ತಿದ್ದರು. ದಿನಗಟ್ಟಲೆ ಸಂಪ್ರದಾಯದ ಹಾಡು ಹೇಳಬಲ್ಲ ಸ್ತ್ರೀಯರು ಊರಲ್ಲಿ ಮನೆಗೊಬ್ಬರಂತೆ ಇದ್ದರು.

ಮೇಷ್ಟರು ನಾರಣಪ್ಪನವರೂ, ಗುಂಡೂರಾಮಯ್ಯನವರೂ ಹರಿಕಥೆ ಮಾಡುತ್ತಿದ್ದರು. ಗುಂಡೂರಾಮಯ್ಯನವರು ಹರಿಕಥೆ ಮಾಡುವಾಗಲಂತೂ 'ದೇವರು ಮೈಮೇಲೆ ಬರುತ್ತಿತ್ತು'. 'ದೇವರು ಮೈ ಮೇಲೆ ಬರುವುದು' ಎನ್ನುವುದು ಯಾರಿಗಾದರೂ ಅಪಥ್ಯದ ಮಾತಾಗಬಹುದು, ಆದರೆ ಆ ಅಲಂಕಾರವು ಸೂಚಿಸುವ ತನ್ಮಯತೆ ಮೆಚ್ಚುಗೆಗೆ ಪಾತ್ರವಾಗುತ್ತದೆ. ಭಕ್ತಿ ಇದ್ದಲ್ಲಿ ಆವೇಶ. ಎಲ್ಲಿ ಕಲಿತರೋ ತಿಳಿಯದು. ಅಂತೂ ಮಾತುಗಾರಿಕೆ, ಸಂಗೀತಕಲೆ ಇಷ್ಟರಿಂದಲೇ ಹರಿಕಥೆಯು ಹೃದಯವನ್ನು ಮುಟ್ಟುವುದಿಲ್ಲ, ಅದಕ್ಕೆ ಆವೇಶ ತರುವ ತನ್ಮಯತೆಯೂ ಬೇಕು. ಹಾಗೆ ಆವೇಶ ಬಂದಾಗಲೆಲ್ಲಾ ಭಕ್ತರು ತೆಂಗಿನಕಾಯಿ ಒಡೆಯುತ್ತಿದ್ದರು.

ಜಮೀನು ಆಬಾದು ಮಾಡಲೂ ಆಗ ನನಗೆ ಹುಮ್ಮಸ್ಸು. ಒಂದು ಎಕರೆಗೆ ಉದ್ದು, ಒಂದು ಎಕರೆಗೆ ಹೆಸರು, ಇನ್ನೊಂದು ಎಕರೆಗೆ ಹುರುಳಿ ಹಾಕಿದೆ. ಮಳೆಯೂ ಚೆನ್ನಾಗಿ ಆಯಿತು. ಬೆಳೆ ಚೆನ್ನಾಗಿ ಬಂತು, ಕಾಯಿ ಕಚ್ಚಿತು. ಕೀಳಿಸುವ ಹೊತ್ತಿಗೆ ಕಾಡಿನಲ್ಲಿದ್ದ ಇಲಿಗಳು ತಿಂದು ಮುಗಿಸಿದವು. ಸುತ್ತ ಕಾಡಿರುವಾಗ ಇಲಿಗಳನ್ನು ನಿಯಂತ್ರಿಸುವುದು ಸಾಧ್ಯವಿರಲಿಲ್ಲ.

ಮಗುವಿಗೆ ಐದು ವರ್ಷ ತುಂಬಿತು, ಶಾಲೆಗೂ ಸೇರಿಸಿದೆವು, ನನ್ನ ಹೆಂಡತಿ ಮಗುವಿಗೆ ಅಕ್ಷರಜ್ಞಾನ ಆಗುವಂತೆ ಮಾಡಿದಳು. ಅವನು ಲೋಯರ್ ಸೆಕೆಂಡರಿ ಪರೀಕ್ಷೆಗೆ ಕೂರುವ ಸಮಯ ಬಂತು. ನನ್ನ ಹೆಂಡತಿ ಗರ್ಭಿಣಿಯಾಗಿದ್ದಳು. ಹೊಟ್ಟೆಯಲ್ಲಿ ಮಗುವು

ಅಡ್ಡಲಾಗಿ ಸಿಕ್ಕಿಕೊಂಡಿತು. ಡಾಕ್ಟರುಗಳ ನೆರವು ಸಿಕ್ಕುವ ಕಾಲವೂ ಅದಾಗಿರಲಿಲ್ಲ. ೧೯೪೧ನೆಯ ಇಸವಿಯ ಯುಗಾದಿಯಂದು ಅವಳ ಅಂತ್ಯವಾಗಿ ಹೋಯಿತು.

ಆಗ ಮಗನಿಗೆ ಹನ್ನೊಂದೂವರೆ ವರ್ಷ. ನನಗೆ ಭಯ ಮುತ್ತಿತ್ತು. ಲೋಯರ್ ಸೆಕೆಂಡರಿ ಮುಗಿದ ಮೇಲೆ ಮಗನನ್ನು ಮೈಸೂರಿನ ಶಾರದಾವಿಲಾಸ ಹೈಸ್ಕೂಲಿಗೆ ಸೇರಿಸಿದೆ. ನಮ್ಮೂರಿನವರೇ ಆದ ನಾಲೆ ಶ್ರೀನಿವಾಸಯ್ಯನವರೇ ಆಗ ಹೆಡ್ ಮಾಸ್ತರಾಗಿದ್ದರು. ವಾರಾನ್ನವೂ ಸಿಕ್ಕಿತು.

ಹಿಟ್ಲರನ ಯುದ್ಧ ಶುರುವಾಯಿತು. ಬಿಸಿನೆಸ್ ಮಾಡಲು ಕಷ್ಟವಾಯಿತು, ಜನರೆಲ್ಲಾ ಹಣಕಟ್ಟಲು ಭಯಪಟ್ಟರು. ಇಂಡಿಯನ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್‌ನಲ್ಲಿ ಇನ್‌ಸ್ಪೆಕ್ಟರಾಗಿ ಸೇರಿದೆ. ಮೈಸೂರಿನ ಡಾ. ಪಾರ್ಥನಾರಾಯಣ ಪಂಡಿತರ ಔಷಧಿಗಳಿಗೆ ಪ್ರಚಾರಕನಾದೆ, ಮೈಸೂರಿನದೇ ಆದ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಲಿಮಿಟೆಡ್ ಎಂಬ ಇನ್ನೊಂದು ಸಂಸ್ಥೆಗೂ ಪ್ರಚಾರಕನಾದೆ. ಆ ಕಾಲಕ್ಕೆ ಆಯುರ್ವೇದದ ಔಷಧಿಗಳಿಗೆ ದೊರೆತ ಪ್ರಚಾರ ಮತ್ತು ಜನರಿಗೆ ಅದರತ್ತ ಒಲವು ಮೂಡಿದುದರಲ್ಲಿ ನನ್ನ ಪಾತ್ರ ದೊಡ್ಡದಾಗಿಯೇ ಇತ್ತು. ಅದನ್ನು ಹೊಳೆ ನರಸೀಪುರದಲ್ಲಿ ನಡೆದ ಆಯುರ್ವೇದ ವೈದ್ಯರ ಸಮ್ಮೇಳನದಲ್ಲಿ ಎಲ್ಲ ಭಾಷಣಕಾರರೂ ಮುಕ್ತವಾಗಿ ಸ್ಮರಿಸಿದರು.

ಈ ಮಧ್ಯೆ ರುದ್ರಪಟ್ಟಣದ ಕರ್ನಾಟಕ ಸಂಘದವರು ಒಂದು ಈಜುವ ಸ್ಪರ್ಧೆಯನ್ನಿಟ್ಟಿದ್ದರು. ನನಗೆ ಪ್ರಥಮ ಬಹುಮಾನ ಬಂತು. ಆ ಸ್ಪರ್ಧೆಯಲ್ಲಿ ಡಿವೈಎಸ್‌ಪಿ ಸುಬ್ರಾಯರೇ ಮೊದಲಾದವರು ಭಾಗವಹಿಸಿದ್ದರು. ಮೈಸೂರಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಈಗಲ್‌ಟನ್‌ರು ಸ್ಪರ್ಧೆಯ ವೀಕ್ಷಕರಾಗಿ ಬಂದಿದ್ದರು. ನನಗೆ ಬಹುಮಾನವಾಗಿ ಬಂದದ್ದು ಜೈಮಿನಿಭಾರತದ ಪುಸ್ತಕ.

ನನಗೆ ಪುಸ್ತಕ-ಬಹುಮಾನ ಬಂದಾಗ, "ಕೊಡಲಿ ಕುಡುಗೋಲು ಹಿಡಿದು ಹೋಗುವವರಿಗೆ (ಕೃಷಿಕರಿಗೆ) ಜೈಮಿನಿ ಭಾರತದಿಂದೇನು ಉಪಯೋಗ ?" ಎಂದು ನಮ್ಮೂರಿನ ಡಾಕ್ಟರು ಶ್ರೀನಿವಾಸಯ್ಯಂಗಾರರು ಉದ್ಗರಿಸಿದರು. ನಾನು ಕಾವ್ಯವಾಚನ ಮಾಡುತ್ತಿದ್ದುದಾಗಲಿ, ಕಾವ್ಯರಚನೆ ಮಾಡುತ್ತಿದ್ದುದಾಗಲಿ ಅವರಿಗೆ ತಿಳಿದಿರಲಿಲ್ಲ ; ಊರಿಗೆ ಹೊಸಬರು. ಆ ಘಟನೆ ನಡೆದ ಕಾಲಕ್ಕೆ ನಾನು ಒಂದು ಪೊಲೀಸ್ ಪತ್ತೇದಾರಿ ಕತೆಯನ್ನು ಪದ್ಯರೂಪದಲ್ಲಿ ಬರೆಯುತ್ತಿದ್ದೆ. ನನ್ನ ಹಿತೈಷಿಗಳಾಗಿದ್ದ ಕನ್ನಂಬಾಡಿ ರಾಮಸ್ವಾಮಿ ಅವರ ಮೂಲಕ ಆ ಪುಸ್ತಕದ ಬಗ್ಗೆ ಡಾಕ್ಟರಿಗೆ ತಿಳಿಯಿತು, ತರಿಸಿಕೊಂಡು ಓದಿದರು. ಅಲ್ಲಿಂದ ಮುಂದೆ ನನ್ನ ಬಗೆಗೆ ಅಭಿಮಾನ ಬೆಳೆಸಿಕೊಂಡರು.

ಈ ವೇಳೆಗೆ ಇನ್‌ವೆಸ್ಟ್‌ಮೆಂಟ್ ಕಂಪನಿ ನನಗೆ ಹಾಸನದ ಬ್ರ್ಯಾಂಚ್ ಮ್ಯಾನೇಜರಾಗಿ ಬಡ್ತಿ ಕೊಟ್ಟಿತು. ಆಗ ನನಗೆ ೪೦೦ ರೂಪಾಯಿ ವೇತನ. ಈಗ ಅದೆಲ್ಲ ಸಣ್ಣ ವಿಷಯ, ಆದರೆ ಆಗ ಪ್ರತಿ ಊರಿನಲ್ಲೂ ಪೆಂಡಾಲ್ ಹಾಕಿ ಸ್ವಾಗತಿಸುವಷ್ಟು ದೊಡ್ಡ ವಿಷಯ. ಆರೇ ತಿಂಗಳಲ್ಲಿ ಮೂವತ್ತು ಏಜನ್ಸಿಗಳನ್ನು ಏರ್ಪಾಟು ಮಾಡಿದ ಸಾಧನೆಗಾಗಿ ಕಂಪನಿಯಲ್ಲೂ ಮರ್ಯಾದೆ ಪಡೆದೆ. ಒಂದು ದಿನ ಹೊಳೆನರಸೀಪುರದ ಆರ್ಯವೈಶ್ಯಸೊಸೈಟಿಯಲ್ಲಿ ಅತಿ ಉತ್ಸಾಹದಿಂದ ಶೇರುಹಣ ಜಮಾ ಆಗುತ್ತಿದ್ದ ಒಂದು ಸಮಾರಂಭದಲ್ಲಿ ತೊಡಗಿಕೊಂಡಿದ್ದೆ. ಆಗಲೇ ರಂಗೂನಿಗೆ ಬಾಂಬು ಬಿತ್ತು. ನಮ್ಮ ಕೇಂದ್ರ ಕಛೇರಿ ಇದ್ದುದು ಅಲ್ಲಿ. ಆ ದಿನದ ಪೇಪರಿನಲ್ಲಿ ಅದೇ ದೊಡ್ಡ ಅಕ್ಷರಗಳಲ್ಲಿ ಕಾಣಿಸಿಕೊಂಡಿತ್ತು. ವ್ಯವಹಾರ ತಣ್ಣಗಾಯಿತು. ಅಲ್ಲಿಂದ ಮುಂದೆ ಕರ್ನಾಟಕಸಂಘ ನಮ್ಮೂರಿನಲ್ಲಿ ಏರ್ಪಡಿಸುತ್ತಿದ್ದ ಕಾವ್ಯವಾಚನ-ವ್ಯಾಖ್ಯಾನ, ಜತೆಗೆ ನನ್ನ ಹೊಲ ತೋಟದ ವ್ಯವಸಾಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡೆ.

ಆನೆಗೊಂದಿ ಸಂಸ್ಥಾನದಲ್ಲಿ ದಿವಾನರಾಗಿದ್ದ ಬೆಟ್ಟದಪುರ ಸಂಕೇತಿಗಳಾದ ಶ್ರೀ ಕೃಷ್ಣರಾಯರು, ಅಡ್ವೋಕೇಟ್ ಶ್ರೀ ತೊಟ್ಟಿ ರಾಮಚಂದ್ರ ಅವರು, ಹುಣಸೂರು ಶ್ರೀ ನಾರಾಯಣಸ್ವಾಮಿ ಶಾಸ್ತ್ರಿಗಳು, ಖ್ಯಾತ ಸಾಹಿತಿ ಪಿ.ಎಸ್. ರಾಮಾನುಜಂ ಅವರ ತಂದೆ ಶ್ರೀ ಸಂಪತ್ಕುಮಾರಾಚಾರ್ಯ ಅವರು ತೀರ್ಪುಗಾರರಾಗಿದ್ದ ಸಭೆಯಲ್ಲಿ ಒಂದು ಕಾವ್ಯವಾಚನ ಕಾರ್ಯಕ್ರಮ ನಡೆಸಿಕೊಟ್ಟಿದ್ದು ಮರೆಯಲಾಗದ ಅನುಭವ. ಸ್ಪರ್ಧೆಯಲ್ಲಿ ನನಗೆ ಮೊದಲ ಬಹುಮಾನ ಬಂದಿತ್ತು. ಅದಕ್ಕಾಗಿ ನನಗೆ ಗದುಗಿನ ಭಾರತ, ಹರಿಶ್ಚಂದ್ರ ಕಾವ್ಯ, ಭಾಗವತದ ಪುಸ್ತಕಗಳನ್ನು ಕೊಟ್ಟು ಆ ಸಭೆಯಲ್ಲಿ ಸನ್ಮಾನಿಸಿದ್ದರು. ಆಗ ನನಗೆ ಇಪ್ಪತ್ತುಮೂರು ವಯಸ್ಸು. ಹಿಂದೆ ನನಗೆ ಜೈಮಿನಿಭಾರತದ ಬಹುಮಾನ ಬಂದಾಗ ಕಟಕಿಯಾಡಿದ್ದ ಶ್ರೀ ಶ್ರೀನಿವಾಸಯ್ಯಂಗಾರರು, ನಂಜನಗೂಡಿನ ತಮ್ಮ ಮನೆಯಲ್ಲಿದ್ದ ನೂರು ಪ್ರಾಚೀನ ಗ್ರಂಥಗಳನ್ನು ಕೊಟ್ಟು ಉಪಚಾರದ ಮಾತು ಹೇಳಿದರು. ಆ ಗ್ರಂಥಗಳು ನನ್ನ ಚಿರ ಆಸ್ತಿಗಳಾಗಿ ನನ್ನ ಬಳಿ ಇಂದಿಗೂ ಇವೆ.

ದಿವಾನ್ ಕೃಷ್ಣರಾಯರ ಬಗೆಗೆ ನನಗೆ ತಿಳಿದ ಒಂದೆರಡು ಗೌಣ ಸಂಗತಿಗಳನ್ನು ಇಲ್ಲಿ ಹೇಳಬಹುದು. ಅವರು ನಿವೃತ್ತರಾದ ಮೇಲೆ ಬೆಟ್ಟದಪುರಕ್ಕೆ ಬಂದು ನೆಲೆಸಿದ್ದರು. ಅವರಿಗೆ ಅಲ್ಲೇ ಜಮೀನಿತ್ತು. ಅವರಿಗೆ ಸಂತಾನವಿರಲಿಲ್ಲ. ಪುಟ್ಟಯ್ಯನವರ ನರಸಿಂಹಯ್ಯನವರ ಮಗನನ್ನು ದತ್ತು ಪುತ್ರನಾಗಿ ಸ್ವೀಕರಿಸಿದ್ದರು; ಆತ ಕಾಂಟ್ರಾಕ್ಟ್ ಕೆಲಸಗಳಲ್ಲಿ ತೊಡಗಿರುತ್ತಾ ಮಿಲ್‌ಸುಬ್ಬು ಎಂಬುವವರ ಮಗಳನ್ನು ವರಿಸಿದ್ದರು.

ಮೂರನೆಯ ಮದುವೆ

ಇನ್ಸೂರೆನ್ಸ್ ಬಿಸಿನೆಸ್ ನಿಂತಿತು. ಇನ್‌ಸ್ಪೆಕ್ಟರಾಗಿ ಸೇರಿದ್ದ ಸಂಸ್ಥೆಯೂ ಇಲ್ಲವಾಯಿತು. ಆರ್ಯವೈಶ್ಯ ಸೊಸೈಟಿಯಲ್ಲಿ ತೆಗೆದುಕೊಂಡಿದ್ದ ಹಣವನ್ನೆಲ್ಲ ಹದಿನೈದು ದಿವಸಗಳಲ್ಲಿ ಹಿಂದಿರುಗಿಸಬೇಕಾಯಿತು. ಹಿರಳ್ಳಿಕೊಪ್ಪಲಿಗೆ ಹೋಗುವ ದಾರಿ ನನ್ನ ಹೆಂಡತಿಯ ಸಾವಿನೊಂದಿಗೆ ತಾನೂ ಸತ್ತಿತ್ತು. ಮಗನು ಮೈಸೂರಿನಲ್ಲಿ ಓದುತ್ತಿದ್ದ. ಹೊಲದ ವ್ಯವಸಾಯಕ್ಕೆ ಕಾಡಿನ ಹೆಗ್ಗಣಗಳ ಕಾಟವಿತ್ತು. ನನ್ನ ಕೌಟುಂಬಿಕ ದುಃಖ ಹಾಸಿಹೊದೆಯುವಷ್ಟಾಗಿತ್ತು. ಹಾಲು, ಕಾಫಿ, ಹಣ್ಣು ಬಳಸುತ್ತಾ ಮೂರು ದಿನ ಕಳೆದೆ. ರಾತ್ರಿಯ ಹೊತ್ತಂತೂ ಚಿಂತೆಗಳು, ದುಃಖಗಳು ಒಟ್ಟಿಗೆ ಮುತ್ತಿಕೊಳ್ಳುತ್ತಿದ್ದವು.

ಇಂಥ ಅವಸ್ಥೆಯಲ್ಲಿ, ಮನಶ್ಶಾಂತಿಗಾಗಿ ಗದುಗಿನ ಭಾರತದ ವಾಚನಕಾರ್ಯಕ್ರಮ ನಡೆಸಲು ನಿರ್ಧರಿಸಿದೆ. ಅಗ್ರಹಾರದ ಸೂರ್ಯನಾರಾಯಣ ಎಂಬ ಹಳೆಯ ಸಹಪಾಠಿ ವ್ಯಾಖ್ಯಾನ ಮಾಡಲು ಒಪ್ಪಿದರು. ಅವರೇ ಅದಕ್ಕೆ ಬೇಕಾದ ಸಿದ್ಧತೆಗಳನ್ನೂ ಮಾಡಿದರು, ಎಲ್ಲರಿಗೂ ಆಹ್ವಾನವನ್ನೂ ಕೊಟ್ಟರು. ಈ ಕಾರ್ಯಕ್ರಮ ನಡೆಯುವುದು ನನ್ನ ಮಿತ್ರ 'ಬೊಂಬಾಯಿ ಮುತ್ತು' ಅವರ ಮನೆಯಲ್ಲಿ ಎಂದು ಮೊದಲೇ ಗೊತ್ತಾಗಿತ್ತು. ಆದರೆ ಕಾರ್ಯಕ್ರಮ ಪ್ರಾರಂಭವಾಗುವ ಹೊತ್ತಿನಲ್ಲಿ ವೇ|| ಬ್ರ|| ಶ್ರೀ ಅಪ್ಪಣ್ಣಾವಧಾನಿಗಳು, ಅದು ತಮ್ಮ ಮನೆಯಲ್ಲೇ ನಡೆಯುವಂತೆ ಎಲ್ಲರಿಗೂ ಆಹ್ವಾನ ಕೊಟ್ಟರು. ಅವರದು ವಿಶಾಲವಾದ ತೊಟ್ಟಿಮನೆ. ಅವಧಾನಿಗಳೇ ಗ್ರಂಥಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರು. ಮೂರು ಗಂಟೆಗಳ ಕಾಲ ಕಾವ್ಯವಾಚನ-ವ್ಯಾಖ್ಯಾನ ನಡೆಯಿತು; ಕೊನೆಗೆ ಮಂಗಳಾರತಿ, ಪ್ರಸಾದ.

ಪ್ರತಿನಿತ್ಯವೂ ಸಂಜೆ ಏಳರಿಂದ ರಾತ್ರಿ ಹತ್ತರವರೆಗೆ ಕಾರ್ಯಕ್ರಮ ನಡೆಯತೊಡಗಿತು. ಪ್ರತಿಸಂಧಿಗೂ ಮಂಗಳಾರತಿ, ಪ್ರತಿ ಪರ್ವಕ್ಕೂ ಸಮಾರಾಧನೆ ಆಗುತ್ತಿತ್ತು. ಹೀಗೇ ಎರಡು ತಿಂಗಳು ನಡೆಯಿತು. ಗೀತಾಭಾಗದ ವಾಚನ ಪ್ರಾರಂಭವಾಯಿತು. ಆ ಸಮಯಕ್ಕೆ ಸರಿಯಾಗಿ ಚಿಲ್ಕುಂದದಿಂದ ನಾಲ್ಕೈದು ಗೃಹಸ್ಥರು ಬಂದು ಸಭೆಯಲ್ಲಿ ಕೂತರು. ಕಾರ್ಯಕ್ರಮದ ಕೊನೆಯಲ್ಲಿ ಮಂಗಳಾರತಿ; ತಟ್ಟೆಗೆ ಅವರ ಕಾಣಿಕೆಯೂ ಬಿತ್ತು.

ಅದನ್ನನುಸರಿಸಿ ಆ ಗೃಹಸ್ಥರು ನನ್ನ ಮದುವೆಯ ಪ್ರಸ್ತಾಪ ಪ್ರಾರಂಭಿಸಿದರು. "ಅವರು ಶುಭ ಮುಹೂರ್ತದಲ್ಲಿ ಬಂದಿದ್ದಾರೆ, ನಿನ್ನ ಅಭಿಪ್ರಾಯವೇನು ಹೇಳು" ಎಂದರು ಅವಧಾನಿಗಳು. "ದುಃಖದ ಮೇಲೆ ದುಃಖ ಅನುಭವಿಸುತ್ತಿರುವ ನನಗೆ ಮದುವೆ ಇಷ್ಟವಿಲ್ಲ. ಕಂಪನಿ ಕೆಲಸ ನಿಂತಿದೆ, ಹೊಲದ ಫಸಲು ಕೈ ಹತ್ತುತ್ತಿಲ್ಲ. ಅರ್ಧ ಎಕರೆ ಗದ್ದೆಯಲ್ಲಿ ಜೀವನ ಸಾಗಬೇಕಾಗಿದೆ. ಖಂಡಿತಾ ಬೇಡ" ಎಂದೆ. "ಕಾಲ ಹೀಗೇ ಇರುವುದಿಲ್ಲ , ಒಳ್ಳೇ ದಿವಸಗಳು ಬರುತ್ತವೆ" ಎಂದು ಹಿರಿಯರು ಬದ್ಧಿವಾದ ಹೇಳಿದರು. ಮದುವೆಯ ಸಮಸ್ತ ಖರ್ಚನ್ನೂ ತಾವೇ ವಹಿಸಿಕೊಳ್ಳುವುದಾಗಿ ಅಲ್ಲಿದ್ದ ಬಂಧುಗಳೂ ಮಿತ್ರರೂ ಘೋಷಿಸಿಯೇ ಬಿಟ್ಟರು. ಅವಧಾನಿಗಳು ಇಪ್ಪತ್ತು ದಿನಗಳಲ್ಲಿ ಒಂದು ಲಗ್ನವನ್ನೂ ಇಟ್ಟು, ಹೆಣ್ಣಿನವರಿಗೆ ಸಮಾಧಾನವನ್ನೂ ಹೇಳಿ ಕಳಿಸಿಬಿಟ್ಟರು.

ಅವರೆಲ್ಲ ಅತ್ತ ಹೋದ ಮೇಲೆ ಅವಧಾನಿಗಳಲ್ಲಿ ನನ್ನ ದಿಗಿಲು ತೋಡಿಕೊಂಡೆ. ಮೂರು ತಿಂಗಳ ಹಿಂದೆ ಒಂದು ಅಪಶಕುನವಾಗಿತ್ತು. ಅದನ್ನು ಯಾರಿಗೂ ಹೇಳಿರಲಿಲ್ಲ. ಒಂದು ಸಾಯಂಕಾಲ, ಆರು ಗಂಟೆಯ ಸಮಯ. ಸುಮ್ಮನೆ ಬಾಗಿಲು ಹತ್ತಿರ ನಿಂತಿದ್ದೆ. ನನ್ನ ತಲೆಯ ಮೇಲೆ ಒಂದು ಕಾಗೆ ಕುಳಿತು ಕೂಡಲೇ ಹಾರಿ ಹೋಗಿತ್ತು. ಅದನ್ನು ಕೇಳಿ ಅವಧಾನಿಗಳು, "ಬಹುಕಾಲ ಕಳೆದಾಗಿದೆ. ಚಿಂತೆಯಿಲ್ಲ. ನಾಳೆ ಅದಕ್ಕೆ ಶಾಂತಿ ಮಾಡೋಣ" ಎಂದು ಸಮಾಧಾನ ಹೇಳಿ ಕಳಿಸಿದರು.

ಮದುವೆಯ ಎಲ್ಲ ಸಿದ್ಧತೆಗಳನ್ನೂ ಊರವರೇ ಮಾಡಿಬಿಟ್ಟರು; ಮದುವೆಗೆ ಮೂರೇ ದಿನ ಉಳಿದಿತ್ತು. ಬಸವಾಪಟ್ಟಣದಿಂದ ನನ್ನ ಸೋದರಭಾವ ವ್ಯಾಕರಣ ವಿದ್ವಾನ್ ಸುಬ್ರಾಯಶಾಸ್ತ್ರಿಗಳು ಪುರೋಹಿತರನ್ನೂ, ಕೆಲ ಋತ್ವಿಕರನ್ನೂ ಕರೆದುಕೊಂಡು, ಸಕುಟುಂಬರಾಗಿ ಹಿಂದಿನ ಸಾಯಂಕಾಲವೇ ಬಂದರು. ರಾತ್ರಿ ವರಪೂಜೆ ಮುಗಿಯಿತು; ಊರವರ ಸಹಕಾರ ಕಂಡು ಎಲ್ಲರಿಗೂ ಸಂತೋಷ, ಬೆರಗು. ನಮ್ಮ ಮಾವನವರು 'ಮೈಸೂರು ಮನೆ'ಯವರು; ಬಕ್ಷಿ ತಿಪ್ಪಯ್ಯನವರ ವಂಶಸ್ಥರು. ರಾಮನಾಥಪುರದ ಬಳಿಯ ಬಿಳಿಗೂಲಿ ಎಂಬ ಹಳ್ಳಿ ಅವರಿಗೆ ಜಹಗೀರಿಯಾಗಿ ಬಂದಿತ್ತು. ಈಗ ಗಂಧದ ಮರದ ಹಕ್ಕು ಮಾತ್ರ ಉಳಿದುಕೊಂಡಿತ್ತು , ಕಂದಾಯ ಬಿಟ್ಟು ಹೋಗಿತ್ತು. ಆ ಕಥೆಯೆಲ್ಲಾ ಎಲ್ಲರಿಗೂ ಒಂದು ಕುತೂಹಲದ ಸಂಗತಿಯಾಗಿತ್ತು.

ಮಾವನವರು ಹಣದಿಂದಲಷ್ಟೇ ಶ್ರೀಮಂತರಾಗಿರಲಿಲ್ಲ. ನನ್ನ ಮೇಲೆ ಅವರಿಗೆ ಅಪಾರವಾದ ಪ್ರೀತಿ, ಅಭಿಮಾನ ಇತ್ತು. "ನೀನು ಇಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದೀಯೆ. ನಿನ್ನ ಮಗನಿಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಾಟು ಮಾಡೋಣ. ಬೆಂಗಳೂರಿನ ನನ್ನ ವಿಶಾಲವಾದ ಒಂದು ಮನೆಯನ್ನು ನಿನಗೇ ಬಿಟ್ಟು ಕೊಡುತ್ತೇನೆ. ನಿನ್ನ ಕೆಲಸವನ್ನು ಎಲ್ಲಿದ್ದರೂ ಮಾಡಬಹುದು. ಹಿಂದಿನ ಎಲ್ಲಾ ದುಃಖವನ್ನೂ ಮರೆತುಬಿಡು. ಇನ್ನು ಹದಿನೈದು ದಿನದಲ್ಲಿ ಕಾಗದ ಬರೆಯುತ್ತೇನೆ" ಎಂದು ಹಿತವಚನ ಹೇಳಿ ಹೊರಟುಹೋದರು. ಇದರಿಂದ ನನಗಿಂತ ಹೆಚ್ಚಾಗಿ ಊರಿನ

ಎಲ್ಲರಿಗೂ ಸಂತೋಷವಾಯಿತು. ಇಪ್ಪತ್ತು ದಿನ ಕಳೆದ ಮೇಲೆ ಒಂದು ಕವರು ಪೋಸ್ಟ್‌ನಿಂದ ನನಗೆ ಬಂತು. ಮೇಲುಗಡೆ 'ಕ್ಷೇಮ' ಎಂದು ಬರೆದಿರಲಿಲ್ಲ. ಒಡೆದು ಪತ್ರ ಓದಿದೆ. "ನೆನ್ನೆಯ ದಿನ ಕೂತಿದ್ದ ಹಾಗೇ ಪರಲೋಕ ಹೊಂದಿದಳು" ಎಂದಿತ್ತು.

ಈ ಸುದ್ದಿ ಊರಿಗೆಲ್ಲಾ ಬಹುಬೇಗ ತಿಳಿಯಿತು. ಎಲ್ಲರಿಗೂ ದುಃಖ; ಜತೆಗೆ ನಾನೆಲ್ಲಿ ಆತ್ಮಹತ್ಯೆ ಮಾಡಿಕೊಂಡುಬಿಡುತ್ತೇನೋ ಎಂಬ ದಿಗಿಲು. ಜಹಗೀರಿ ವೆಂಕಟರಮಣಯ್ಯನವರೂ, ವೇ|| ಬ್ರ|| ಶ್ರೀ ಅಪ್ಪಣ್ಣಾವಧಾನಿಗಳೂ ಸಮಾಧಾನ ಮಾಡಿ, ಮನಶ್ಶಾಂತಿಗಾಗಿ ಈಗ ನಡೆಯುತ್ತಿರುವ ಗೀತಾಭಾಗವನ್ನು ಮುಂದುವರಿಸುವಂತೆ ಒತ್ತಾಯ ಮಾಡಿದರು. ಆಶೌಚ ಮುಗಿದ ಕೂಡಲೆ ಪ್ರಾರಂಭವೂ ಆಯಿತು. "ಮುಂದೆ ಅನುಕೂಲವಾಗುತ್ತದೆ" ಎಂದು ಎಲ್ಲರೂ ಆಸೆ ಇಟ್ಟುಕೊಂಡೆವು.

ಇಲ್ಲಿಗೆ ಮೂರನೆಯ ಘಟ್ಟವೂ ಮುಗಿಯಿತು.

ಒಳ್ಳೆಯ ಕಾಲ

ಅದರಂತೆ ಗಟ್ಟಿಮನಸ್ಸು ಮಾಡಿಕೊಂಡು ವಾಚನ ಮುಂದುವರಿಸಿದೆ. ಗ್ರಂಥವಾಚನದ ಅವಭೃಥವಾಯಿತು. ಗ್ರಂಥಕ್ಕೆ ಸಾಂಗವಾಗಿ ಪೂಜೆ ಆಗಿ, ಮಂಗಳಾರತಿಯೂ ಬಹು ವಿಜೃಂಭಣೆಯಿಂದ ನಡೆಯಿತು. ಮಾರನೆಯದಿನ ಸಮಾರಾಧನೆ. ನನಗೂ ಪುಣ್ಯಶ್ರವಣವಾಗಿತ್ತು, ಭಕ್ತಾದಿಗಳ ಶುಭಾಶಯವೂ ಜತೆಗೂಡಿತ್ತು ; ದುಃಖ ಪರಿಹಾರವಾಯಿತು.

ಆ ವೇಳೆಗೆ 'ಹನ್ಯಾಳು ಮುತ್ತು' ಎಂಬುವರು ಕಾರಣಾಂತರದಿಂದ ಅವರ ಊರು ಬಿಟ್ಟು ರುದ್ರಪಟ್ಟಣಕ್ಕೆ ಬಂದು ನೆಲೆಸಲು ಅಪೇಕ್ಷಿಸಿದರು. ಅವರಿಗೆ ನನ್ನ ಮನೆ ಮತ್ತು ಜಮೀನಿನ ಸ್ವಲ್ಪ ಭಾಗ ಮಾರಿದೆ, ಕೈಗೆ ಸ್ವಲ್ಪ ಹಣ ಬಂತು.

ಹಿಟ್ಲರನ ಯುದ್ಧ ಮುಗಿದು ಸಮಾಧಾನಸ್ಥಿತಿಗೆ ಬಂದಿತ್ತು. ಒಂದು ಹೊಸ ಸೈಕಲು ಕೊಂಡುಕೊಂಡೆ. ಹೊಳೆನರಸೀಪುರ, ಚನ್ನರಾಯಪಟ್ಟಣ, ಶ್ರವಣಬೆಳಗೊಳ ಮತ್ತು ಅರಕಲಗೂಡು ತಾಲೂಕಿನ ಹಳ್ಳಿಹಳ್ಳಿಗೂ ತಿರುಗಿದೆ. ಬಿಸಿನೆಸ್ ಪುನರಾರಂಭ ಆಯಿತು.

ಮೈಸೂರಿಗೆ ಹೋದರೆ ಅಲ್ಲಿ ಅಭಯಾ ಫಾರ್ಮಸಿಯ ಪಾರ್ಥನಾರಾಯಣ ಪಂಡಿತರು, ರುದ್ರಪಟ್ಟಣಕ್ಕೆ ಹೋದರೆ ನಾಲೆ ಜಯಣ್ಣನವರು, ಇನ್ನೆಲ್ಲೋ ಹೋದರೆ ಪಿ.ಸಿ. ಸುಬ್ಬಣ್ಣನವರು, ಪಿ.ವಿ. ಶ್ರೀಕಂಠಯ್ಯನವರು - ಹೀಗೆ ನನ್ನ ಬಿಸಿನೆಸ್‌ಗಿಂತ ಹೆಚ್ಚಾಗಿ ಮರುಮದುವೆಗೆ ಒತ್ತಡಗಳು ಬರತೊಡಗಿದವು. ಅರಕಲಗೂಡಿನಲ್ಲಿ ಕೌಶಿಕದ ಕೇಶವಯ್ಯನವರು ಸ್ಕೂಲ್ ಹೆಡ್‌ಮಾಸ್ಟರಾಗಿದ್ದರು. ಅವರದೂ ಅದೇ ಮಾತು, ಒತ್ತಾಯ.

ಈಗ ನನ್ನ ಮಗನೂ ಬೆಳೆದಿದ್ದ. ಇನ್ನೊಂದು ಮದುವೆ ಯಾವ ಕಾರಣಕ್ಕೂ ಸಮರ್ಥನೀಯವಾಗಿರಲಿಲ್ಲ. ನನಗೆ ಯೌವನ ಮುಗಿದಿರಲಿಲ್ಲ ಎನ್ನುವ ನನ್ನ ವೈಯಕ್ತಿಕ ಸಮಸ್ಯೆಯನ್ನು ನಾನು ಹದ್ದುಬಸ್ತಿನಲ್ಲಿಡಬಹುದಾಗಿತ್ತು. ಆದರೆ ಎಲ್ಲರೂ ಆತಂಕಗೊಂಡಿದ್ದುದು ಯೌವನಸ್ಥನೊಬ್ಬ ಬಸವನಂತೆ ಓಡಾಡಿಕೊಂಡಿದ್ದರೆ ಸಮಾಜದ ಸ್ವಾಸ್ಥ್ಯ ಕೆಡುತ್ತದೆಂದು. ಕೊನೆಗೆ ಒಂದೇ ನಿಬಂಧನೆ ಹಾಕಿದೆ, ನಾನು ವಿವಾಹವಾಗುವ ಹುಡುಗಿ ನನ್ನ ಮಗನಿಗಿಂತ ವಯಸ್ಸಿನಲ್ಲಿ ದೊಡ್ಡವಳಿರಬೇಕು ಎಂದೆ. ಅಂಥದೇ ಹುಡುಗಿಯನ್ನೇ ಗೊತ್ತುಮಾಡಿದರು. ಲಗ್ನವನ್ನೂ ಇಟ್ಟರು. ಅದು ನಲವತ್ತೈದನೇ ಇಸವಿ ಜೂನ್ ತಿಂಗಳು. ಆ ವರ್ಷದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಆ ಹುಡುಗಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಳು.

ಲಗ್ನಕ್ಕೆ ಮತ್ತೆ ಬಂಧುಮಿತ್ರರೇ ಸಿದ್ಧತೆ ಮಾಡಿಕೊಟ್ಟರು. ಈ ಬಾರಿ ನಾನೇ ಹಣ ಖರ್ಚುಮಾಡುವ ಸುಸ್ಥಿತಿಯಲ್ಲಿದ್ದೆ. ಗತಿಸಿದ ನನ್ನ ಎರಡನೇ ಹೆಂಡತಿಯ ಸಾಕುತಾಯಿಯೂ ಲಗ್ನಕ್ಕೆ ಬಂದರು. ಒಂದೇ ದಿನದಲ್ಲಿ ಲಗ್ನ ಮುಗಿಯಿತು.

ಜಿಲ್ಲೆ ಮತ್ತು ವಲಯಮಟ್ಟದ ಬಹಳ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಇನ್ಶ್ಯೂರೆನ್ಸ್ ಮಾಡಿಸಿದ ಹೆಮ್ಮೆಯ ಜತೆಗೆ ಕಂಪನಿಯಿಂದ ಮೆಚ್ಚುಗೆಯ ಧನಸಹಾಯವೂ ಒದಗಿಬಂತು. ಮಗನ ಮುಂಜಿ ಮಾಡಿ ಮುಗಿಸಿದೆ.

ನನ್ನ ಮನೆಯಲ್ಲಿ ಸಂಸಾರವೆಂಬುದೇ ನಡೆದಿರಲಿಲ್ಲವಾಗಿ ಸಾಮಾನುಗಳನ್ನೆಲ್ಲ ಹೊಸದಾಗಿ ಹೊಂದಿಸಿಕೊಳ್ಳಬೇಕಾಯಿತು. ಒಂದು ದಿನ ಸ್ನಾನ ಮಾಡುತ್ತಿದ್ದಾಗಲೇ, ನೀರು ಕಾಯಿಸಲು ಇಟ್ಟುಕೊಂಡಿದ್ದ ಮಣ್ಣಿನ ಮಡಕೆ ಒಡೆದುಹೋಯಿತು. ಅಂಥ ಹೀನ ಸಜ್ಜಿಕೆ. ಅಭಿಮಾನಿಗಳಾದ ನಮ್ಮೂರ ವೈದ್ಯ ಎಸ್.ಎಲ್. ಭೈರಪ್ಪನವರಿಗೆ ಆಗಲೇ ವರ್ಗವೂ ಆಯಿತು. ಊರು ಬಿಡುವ ಮುನ್ನ ತಮ್ಮ ಮನೆಯ ಕೆಲವು ಸಾಮಾನುಗಳನ್ನು ನನ್ನ ಮನೆಗೆ ತಂದಿಟ್ಟು ಜೋಡಿಸಿಕೊಟ್ಟು "ಸುಖವಾಗಿ ಸಂಸಾರ ಮಾಡಿ" ಎಂದು ಹರಸಿಹೋದರು. ಅಲ್ಲಿಂದ ಮುಂದೆ ಅಗತ್ಯವಾದ ಸಾಮಾನುಗಳನ್ನು ಒಂದೊಂದಾಗಿ ಜೋಡಿಸುತ್ತ ಹೋದೆವು. ಕಾಡು ಕಡಮೆಯಾಗಿದ್ದರಿಂದ ಹೊಲದ ವ್ಯವಸಾಯವನ್ನೂ ಮತ್ತೆ ಪ್ರಾರಂಭಿಸಿದೆ. ಪ್ರಾರಂಭಕ್ಕೆ ರಾಗಿ ಮತ್ತು ಸಾಸಿವೆ ಬೆಳೆದೆ. ಸಾಸಿವೆ ಇಳಿವರಿ ಚೆನ್ನಾಗಿತ್ತು. ಮಗನ ಎಸ್‌ಎಸ್‌ಎಲ್‌ಸಿ ಮುಗಿದಿತ್ತು, ಡಿಪ್ಲೋಮಾಗೆ ಸೇರಿಸಿದೆ. ಒಂದು ಪಾಳುತೋಟವನ್ನು ಖರೀದಿಸಿ ಸ್ವಂತವಾಗಿ ದುಡಿದು ಅದಕ್ಕೆ ಬಾಳೆ- ವೀಳೆದೆಲೆ ಪೈರು ಮಾಡಿದೆ.

ಸಂಸಾರದಲ್ಲಿ ಸಮಾಧಾನವಿದ್ದರೆ ಹುಮ್ಮಸ್ಸು ತಾನಾಗಿಯೇ ಬರುತ್ತದೆ ಎನ್ನುವುದಕ್ಕಾಗಿ ನನ್ನ ಪ್ರತಾಪವೊಂದನ್ನು ಇಲ್ಲಿ ಹೇಳಿಕೊಳ್ಳಬಹುದು. ತೋಟದಲ್ಲಿ ಒಂದು ಕಡೆ ಬಾವಿ ಇರಲಿಲ್ಲ . ಅದು ಬಂಡೆಗಳ ಜಾಗ. ಕೇವಲ ಒಂದೂವರೆ ಅಡಿ ಕೆಳಗಿನಿಂದಲೇ ಗಟ್ಟಿ ಬಂಡೆ ಪ್ರಾರಂಭವಾಗಿತ್ತು. ನೀರಿನ ಸಮವಾದ ವಿತರಣೆಗಾಗಿ ಉಳಿದ ಬಾವಿಗಳ ಅಂತರಕ್ಕೆ ಸರಿಯಾಗಿ ಅಲ್ಲೇ ಬಾವಿ ತೋಡಬೇಕಾಗಿತ್ತು. ಒಡ್ಡರನ್ನು ಕರೆಸಿದೆ. ಅವರು ಉಳಿಯನ್ನೆಲ್ಲಾ ಮುರಿದುಕೊಂಡರು. ಈ ಕರೀಕಲ್ಲು ಒಡೆಯಲು ಆಗುವುದಿಲ್ಲವೆಂದು ಹೇಳಿ ಹೊರಟು ಹೋದರು. ನಾನೇ ಕೆಲಸಕ್ಕಿಳಿದೆ. ಕಲ್ಲಿನ ಮೇಲೆ ಬೆಂಕಿ ಹಾಕಿ ಕಾಯಿಸುವುದು; ಬೂಟ್ಸು ಹಾಕಿಕೊಂಡು ನಿಂತು ಚಮ್ಮಟಿಗೆಯಿಂದ ಕಲ್ಲನ್ನು ಚೂರುಚೂರು ಮಾಡುವುದು - ಹೀಗೆ ಒಡೆಯಲು ಶುರು ಮಾಡಿದೆ. ಈ ತಮಾಷೆ ನೋಡಲು ಬಂದ ನನ್ನ ಅನೇಕ ಬಂಧು ಮಿತ್ರರೂ ಒಂದೊಂದು ಕೈ ಸೇರಿಸಿದರು. ನನ್ನ ಪತ್ನಿ ಎಲ್ಲರಿಗಾಗಿ ಅಡುಗೆ ಮಾಡಿ ತರುತ್ತಿದ್ದಳು. ಬೇಸಗೆಯಲ್ಲೂ ನೀರು ಇಂಗದಂಥ ಬಾವಿ ತೋಡಿದೆವು. ಅಡಕೆ ಸಸಿಗಳನ್ನು ಮಾರಲು ಒಗ್ಗುಹಾಕಿದೆ. ಮನೆಯನ್ನು ನಾನೇ ರಿಪೇರಿ ಮಾಡಿದೆ.

ಇಷ್ಟಾದರೂ ಫಲ ಬರಲು ಕಾಲ ಬೇಕಿತ್ತು. ನನ್ನ ಮಗ ಡಿಪ್ಲೋಮಾ ಪರೀಕ್ಷೆಗೆ ಹಣಕಟ್ಟಬೇಕಾಗಿತ್ತು. ಅದನ್ನು ಒದಗಿಸಲು ಆ ಕ್ಷಣಕ್ಕೆ ನನ್ನಿಂದ ಆಗಲೇ ಇಲ್ಲ . ನಾವು ದಿನವೆಲ್ಲಾ ಅಳೆದು ಸುರಿದು ಏನೇನೋ ಮಾಡಿದೆವು. ದಡಹತ್ತಲಿಲ್ಲ. ರಾತ್ರಿಯೂ ನಮ್ಮ ಜಿಜ್ಞಾಸೆ ನಡೆದೇ ಇತ್ತು. ಬೆಳಗಾದರೂ ಬಗೆಹರಿಯಲಿಲ್ಲ. ಮೈಸೂರಿನಲ್ಲೇ ಯಾರಾದರೂ ಸ್ನೇಹಿತರು ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ ಎಂದುಕೊಂಡು ಮಗನು ಬೆಳಗಿನ ಬಸ್ಸಿಗೆ ನಿಸ್ತೇಜನಾಗಿ ಹೊರಟ. ಈ ಸಂಗತಿ ನಮ್ಮೂರಲ್ಲಿ ಅಂಗಡಿ ಇಟ್ಟಿದ್ದ 'ಶೇಕ್‌ಜಿ' ಶ್ರೀನಿವಾಸಯ್ಯ ಎಂಬ ನಮ್ಮ ಬಂಧುವೊಬ್ಬರಿಗೆ ಹೇಗೆ ತಿಳಿಯಿತೋ ಗೊತ್ತಿಲ್ಲ. ಅವರು ಉಟ್ಟಬಟ್ಟೆಯಲ್ಲೇ ಬಸ್ಸಿನ ಬಳಿ ಹೋಗಿ ಫೀಸಿನ ಹಣವನ್ನು ಅವನ ಕೈಗಿಟ್ಟು ಬಂದಿದ್ದರು. ಮಗನ ಪರೀಕ್ಷೆ ಮುಗಿಯಿತು - ಉದ್ಯೋಗ ಸಿಕ್ಕಿತು - ವಿವಾಹವಾಯಿತು. ನಮ್ಮ ತಾಯಿಯವರನ್ನೂ ಜತೆಗೆ ಕರೆದುಕೊಂಡು ಹೋದ. ಅವರಿಗೆ ಕನಕಾಭಿಷೇಕವನ್ನೂ ನೆರವೇರಿಸಿದ. ಒಳ್ಳೆಯ ಕಾಲ. ಹೀಗೆ ಎಷ್ಟೋ ಕಾಲ ಕಳೆಯಿತು.

ಒಂದು ದಿನ ನಾನು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆ ಕಡೆಗೆ ಒಂದು ಜೀಪು ಬಂತು. "ಹನ್ಯಾಳಿಗೆ ದಾರಿ ಯಾವುದಪ್ಪಾ ?" ಎಂದರು, ಅದರಲ್ಲಿದ್ದ ಸಾಹೇಬರು. ಅವರು ನಮ್ಮ ಕಂಪನಿಯ ಡೆಪ್ಯುಟಿ ಜನರಲ್ ಮ್ಯಾನೇಜರಾಗಿದ್ದರು. ಅವರು ನನ್ನನ್ನು ಚೆನ್ನಾಗಿ ಬಲ್ಲರು. ಆದರೆ ಮೈತುಂಬ ಕೆಸರು ಮೆತ್ತಿಕೊಂಡಿದ್ದ ನನ್ನ ಪತ್ತೆಯೇ ಅವರಿಗೆ ಆಗಲಿಲ್ಲ. ಆ ಮೇಲೆ ಅವರನ್ನು ನನ್ನ ತೋಟಕ್ಕೆ ಕರೆದುಕೊಂಡು ಹೋದೆ. ನನ್ನ ತೋಟದಲ್ಲಿ ಹದಿನೈದು ಹೇರು ವೀಳೆದೆಲೆ ಫೈರಿತ್ತು. ಮೂವತ್ತು ಮಣ ಅಡಕೆ ಆಗುತ್ತಿತ್ತು. ಹುಣಸೆ, ಬಾಳೆ ಎಲ್ಲಾ ಇತ್ತು. ಮನೆಯಲ್ಲಿ ದನಕರುಗಳಿದ್ದವು. ಅದೆಲ್ಲಾ ಕಂಡು ನಮ್ಮ ಸಾಹೇಬರು "ಎಳೆಗರುಂ ಎತ್ತಾಗದೇ!" ಎಂದು ಉದ್ಗರಿಸಿದರು.

ವ್ಯವಸಾಯದ ಸಂದರ್ಭದ ಒಂದು ಪುಟ್ಟ ಸ್ವಾರಸ್ಯವನ್ನೂ ಇಲ್ಲಿ ಹೇಳಬಹುದು. ಒಮ್ಮೆ ಮೈಯೆಲ್ಲಾ ಕಡಿತ, ಉರಿ ಶುರುವಾಯಿತು. ಆಸ್ಪತ್ರೆಗೆ ಹೋಗಲೂ ಆಗುತ್ತಿರಲಿಲ್ಲ. ಆಸ್ಪತ್ರೆಯ ಡಾಕ್ಟರು ಮನೆಗೇ ಬಂದು ಪರೀಕ್ಷಿಸಿದರು; ಜವಾನನೊಡನೆ ಔಷಧ ಕಳಿಸಿಕೊಟ್ಟರು. ಆ ಸಮಯ ನನಗೆ ಹೊಕ್ಕಳಲ್ಲಿ ಏನೋ ನೋವು ಕಾಣಿಸಿತು, ತಡೆಯಲಾಗದಷ್ಟು ನೋವು. ನಮ್ಮೂರಿನ ಹೆಲ್ತ್ ಇನ್‌ಸ್ಪೆಕ್ಟರಾಗಿದ್ದ ರಾಮ ಅಯ್ಯಂಗಾರ್ ಎಂಬುವವರು ಮನೆಗೆ ಬಂದಿದ್ದರು. ಅವರಿಗೂ ಆ ಕ್ಷಣಕ್ಕೆ ಏನು ಮಾಡಲೂ ತಿಳಿಯಲಿಲ್ಲ. ಒಂದೆರಡು ದಿನ ಕಳೆದ ಮೇಲೆ ಕೀವೂ ಶುರುವಾಯಿತು. ಆಗ ಅವರು ಬ್ಯಾಟರಿ ಬಿಟ್ಟು ನೋಡಿ ಇಕ್ಕಳದಿಂದ ಒಂದು ವಸ್ತುವನ್ನು ಹೊಕ್ಕಳಿಂದ ಹೊರಗೆ ತೆಗೆದರು; ಅದು ಭತ್ತದ ಕಾಳು. ಭತ್ತ ಬಡಿಯುವ ಕಾಲದಲ್ಲಿ ಅಕಸ್ಮಾತ್ತಾಗಿ ಒಂದು ಕಾಳು ಹೇಗೋ ಹೊಕ್ಕಳಲ್ಲಿ ಸೇರಿ ಇಷ್ಟು ಕಥೆ ಮಾಡಿತ್ತು.

ಅಭಿಚಾರ

ಈ ಸಂದರ್ಭದಲ್ಲಿ ಓರಿಯಂಟಲ್ ಕಂಪನಿಯಲ್ಲಿ ಬಿ.ಎ. ಮುತ್ತಣ್ಣ ಎಂಬ ಒಬ್ಬ ಕೊಡವ ಮಹನೀಯರು ಇನ್‌ಸ್ಪೆಕ್ಟರಾಗಿದ್ದರು. ಅವರ ಮಗಳ ಮದುವೆ ನಡೆಯುವುದಿತ್ತು. "ನೀವು ನನ್ನ ಮಗಳ ಮದುವೆಗೆ ಬರಲೇಬೇಕು. ನಮ್ಮವರ ಮದುವೆ ಆಚಾರವನ್ನೆಲ್ಲಾ ನೀವು ನೋಡಬೇಕೆಂಬ ಆಸೆ ನನಗಿದೆ" ಎಂದು ಪ್ರೀತಿಯಿಂದ ಒತ್ತಾಯಿಸಿದರು. ಕಂಪನಿಯ ಎಲ್ಲ ಸಿಬ್ಬಂದಿಯೊಂದಿಗೆ ನಾನೂ ಹೊರಡಲು ತಯಾರಾಗಿದ್ದೆ.

ಲಗ್ನಪತ್ರಿಕೆಯೂ ಬಂತು. ಬೆಳಗ್ಗೆ ಹೊರಡಬೇಕು. ಆ ರಾತ್ರಿ ನನ್ನ ಎರಡು ಮುಂಗಾಲುಗಳಲ್ಲೂ ಕಡಿತ ಶುರುವಾಯಿತು. ಸ್ವಲ್ಪ ಹೊತ್ತಾದ ಮೇಲೆ ನೋವು ಕಾಣಿಸಿತು. ಮುಂಗಾಲುಗಳ ಭರ್ತಿ ಬಿಳಿಯಬಣ್ಣದ ಸಣ್ಣಸಣ್ಣ ಬೊಕ್ಕೆಗಳಾಗಿದ್ದುವು. ಕಾಲು ಊದಲೂ ಶುರುವಾಯಿತು. ಕಾಲುಚೀಲ, ಬೂಟ್ಸುಕೂಡ ಹಾಕಲು ಆಗುತ್ತಿರಲಿಲ್ಲ . ಮೂರು ದಿನ ಒದ್ದಾಡಿದೆ. ಹತ್ತಿರ ನೊಣ ಜೊಯ್ ಎಂದರೂ ಏನೋ ಭೀತಿಯಾಗುತ್ತಿತ್ತು. ನಮ್ಮ ಊರಿನವರೇ ಆದ ಚನ್ನಕೇಶವ ಎಂಬ ಜ್ಯೋತಿಷಿ, "ನಿಮಗೆ ಅಭಿಚಾರ ಪ್ರಯೋಗವಾಗಿದೆ" ಎಂದರು.

ಹತ್ತಿರದ ರಾಮನಾಥಪುರಕ್ಕೆ ಹೋದೆ. ಅಲ್ಲಿನ ಜ್ಯೋತಿಷಿಗಳೂ ಹಾಗೇ ಹೇಳಿದರು. "ನಿಮಗೆ ಬೇಗ ಗುಣವಾಗಬೇಕಾದರೆ ಅದಕ್ಕೆ 'ಬಲಿ' ಮೊದಲುಗೊಂಡು ಮಾಡಬೇಕು; ನಿಧಾನವಾದರಾಗಲಿ ಎಂದರೆ ಸಾತ್ವಿಕ ಚಿಕಿತ್ಸೆಯನ್ನೇ ಮಾಡೋಣ" ಎಂದರು. ಅದರಂತೆ ಮೃತ್ಯುಂಜಯ ಜಪ, ಸೂರ್ಯನಮಸ್ಕಾರ, ಏಕಾದಶವಾರ ರುದ್ರಾಭಿಷೇಕ, ತಿಲಹೋಮ ಎಲ್ಲವನ್ನೂ ಮಾಡಿಸಿದೆ. ಕೊನೆಗೆ ಗಣಪತಿ ಹೋಮವೂ ಆಯಿತು. ಅವಭೃಥದ ದಿನ ತಕ್ಕ ಮಟ್ಟಿಗೆ ಓಡಾಡುವಷ್ಟಾಯಿತು. ಬೇಗ ಹುಷಾರಾಗುತ್ತಾ ಬಂತು.

ಆ ಸಮಯದಲ್ಲಿ ಮುತ್ತಣ್ಣನವರು ನೋಡಲು ಬಂದಿದ್ದರು. "ಇದು ನಿಮಗೆ ನಿಲ್ಲದಿದ್ದರೆ ಕೊಡಗಿಗೆ ಬನ್ನಿ. ನಮ್ಮ 'ಕೋಲ' ಅಲ್ಲಿದೆ" ಎಂದು ಸಲಹೆ ಮಾಡಿದರು. ಅಷ್ಟೇ ಅಲ್ಲ. ಅಲ್ಲಿಂದ ಮುಂದೆ, ನಾನು ಸೈಕಲ್‌ನಲ್ಲಿ ಹಳ್ಳಿಗಳಿಗೆ ಸುತ್ತಬಾರದು ಎಂದು ತಾಕೀತು ಮಾಡಿದರು. ಬಿಸಿನೆಸ್ ಇದ್ದಾಗ ತಾವೇ ಬಂದು ಕಾರಿನಲ್ಲಿ ಸುತ್ತಿಸುತ್ತಿದ್ದರು. ಪೂರ್ಣವಾಗಿ ನನಗೆ ಗುಣವಾಗುವವರೆಗೂ ಹೀಗೇ ಮಾಡಿದರು.

೧೯೫೬ರಲ್ಲಿ ನಮ್ಮ ಕಂಪನಿಯು ಕಾರ್ಪೋರೇಷನ್ ಆಯಿತು. ಹಾಸನಡಿಸ್ಟ್ರಿಕ್ಟ್ ಬ್ರಾಂಚಿಗೆ ಎಚ್.ಎನ್. ರಾವ್ ಎಂಬುವವರು ಮ್ಯಾನೇಜರ್ ಆಗಿ ಬಂದರು. ಮುತ್ತಣ್ಣನವರಿಂದ ಅವರಿಗೆ ನನ್ನ ವಿಷಯವೆಲ್ಲಾ ತಿಳಿದಿತ್ತು. ಅವರು ಚುಂಚನಕಟ್ಟೆಯಲ್ಲಿ ಅವರ ಮನೆದೇವರಾದ ರಾಮದೇವರಿಗೆ ಪ್ರತಿತಿಂಗಳೂ ಶಾಲ್ಯಾನ್ನ ಮಾಡಿಸುವ ಪದ್ಧತಿ ಇಟ್ಟುಕೊಂಡಿದ್ದರು. ಪ್ರತಿಬಾರಿಯೂ ಅವರು ಕಾರಿನಲ್ಲಿ ಮುತ್ತಣ್ಣನವರನ್ನೂ, ನನ್ನನ್ನೂ ಜತೆಗೆ ಕರೆದುಕೊಂಡೇ ಹೋಗುತ್ತಿದ್ದರು. ನಾಲ್ಕು ವರ್ಷ ಇದು ಸತತವಾಗಿ ನಡೆಯಿತು. ನಾನು ನಡೆಸುತ್ತಿದ್ದ ಬಿಸಿನೆಸ್ ಉಳಿದವರದಕ್ಕಿಂತ ಬಹಳ ಹೆಚ್ಚಾಗಿದ್ದುದರಿಂದ ಅವರಿಬ್ಬರೂ ನನ್ನಲ್ಲಿ ವಿಶೇಷವಾದ ಪ್ರೀತಿಯನ್ನು ಕೊನೆಯವರೆಗೂ ಇಟ್ಟುಕೊಂಡಿದ್ದರು. ಅದಕ್ಕಿಂತ ಹೆಚ್ಚಾಗಿ ಕಸ್ಟಮರ್‌ಗಳಿಗೆ ಮೆಡಿಕಲ್ ಪರೀಕ್ಷೆ ಮಾಡಿಸುವ ನೆಪದಲ್ಲಿ ವೈದ್ಯರನ್ನು ಹಳ್ಳಿಹಳ್ಳಿಗೆ ಕರೆದುಕೊಂಡು ಹೋಗುತ್ತಿದ್ದೆ. ಆ ಸಂದರ್ಭದಲ್ಲಿ ದೀರ್ಘಕಾಲ ಖಾಯಿಲೆಯಿಂದ ನರಳುತ್ತಿದ್ದ ಅಮಾಯಕರಾದ ಅನೇಕ ಬಡವರಿಗೆ ಸಹಾಯವಾಗುತ್ತಿತ್ತು. ಅದರಿಂದಾಗಿ ಹಳ್ಳಿಗರು ನನ್ನಲ್ಲಿ ಇಟ್ಟಿದ್ದ ಪ್ರೀತಿ ಅವರಿಗೆ ಅತಿಶಯವಾಗಿ ಕಾಣುತ್ತಿತ್ತು.

ಬಾವಿಗೊಂದು ಕಟ್ಟಡ

ನಮ್ಮ 'ಮನೆ'ಯ ಕಥೆಯನ್ನೂ ಇಲ್ಲಿ ಸ್ವಲ್ಪ ಹೇಳಬಹುದು: ಸಣ್ಣಸ್ವಾಮಿಬಾಧ್ಯಾರ ಅಜ್ಜ ಫೆರೀಬಾಧ್ಯ ಅಂತ ಇದ್ದರು. ಅವರು ಕಟ್ಟಿಸಿದ್ದು ಈ ಮನೆ. ಫೆರೀಬಾಧ್ಯಾರು ಪೌರೋಹಿತ್ಯದ ಕೆಲಸಗಳಿಗಾಗಿ ಆಗಾಗ ಪಿರಿಯಾಪಟ್ಟಣಕ್ಕೆ ಹೋಗುತ್ತಿದ್ದರು. ಅಲ್ಲಿ ಅವರು ಇಳಿದುಕೊಳ್ಳುತ್ತಿದ್ದುದು ನನ್ನ ಷಡ್ಡಕ ಸುಬ್ಬಣ್ಣಮೇಷ್ಟರ ಪೂರ್ವಿಕರ ಮನೆಯಲ್ಲಿ. ಸುಬ್ಬಣ್ಣಮೇಷ್ಟರ ಪೂರ್ವಿಕರು ಪಿರಿಯಾಪಟ್ಟಣದ ಪಾಳೇಗಾರನಿಗೆ ಮಂತ್ರಿಗಳಾಗಿದ್ದರು. ಅವರದೇ ಒಂದು ಭಾರಿಯಾದ ತೊಟ್ಟಿ ಮನೆ- ಅರಮನೆಯಂತೆ ಇತ್ತು, ವಿಸ್ತಾರವಾದ ಹಿತ್ತಿಲೂ ಇತ್ತು; ಊರಿಗೇ ಶ್ರೀಮಂತರು. ಐನೂರು ಮಣ ಅಡಕೆ ಆಗುತ್ತಿತ್ತು. ಅವರ ಮನೆ ನೂರಾರು ಕಂಬಗಳದ್ದಲ್ಲ, ನೂರಾರು ಕೋಣೆಗಳುಳ್ಳದ್ದಾಗಿತ್ತು. ಅದೆಷ್ಟರಲ್ಲೋ ಭತ್ತ, ಅದೆಷ್ಟರಲ್ಲೋ ರಾಗಿ, ಅದೆಷ್ಟರಲ್ಲೋ ತೆಂಗು, ಅಡಕೆ ತುಂಬಿರುತ್ತಿತ್ತು. ಮನೆಯ ಮುಂದಿನ ಲಾಯದಲ್ಲಿ ಕುದುರೆಗಳು ಕಟ್ಟಿರುತ್ತಿದ್ದವು, ಆನೆಗಳೂ ಇದ್ದವು. ಇಷ್ಟು ವೈಭವದಲ್ಲಿದ್ದರೂ ಆಗಾಗ ದೇವರ ಕೆಲಸಗಳನ್ನು ಮಾಡಿಸುವುದನ್ನು ಅವರು ಮರೆಯುತ್ತಿರಲಿಲ್ಲ. ಅದಕ್ಕಾಗಿ ಆಗಾಗ ಫೆರೀಬಾಧ್ಯಾರು ಅವರ ಮನೆಗೆ ಹೋಗುತ್ತಿದ್ದರು.

ಫೆರೀಬಾಧ್ಯಾರು ಜಪತಪ ಅನುಷ್ಠಾನಗಳನ್ನು ಬಹಳ ಕಟ್ಟುನಿಟ್ಟಾಗಿ ಇಟ್ಟುಕೊಂಡಿದ್ದರು. ಅವರದು ಯಜ್ಞಯಾಗ ಮಾಡಿದವರ ವಂಶ. ಅವರ ಕೀರ್ತಿ ಬಹಳ ದೂರದವರೆಗೆ ಹಬ್ಬಿತ್ತು. ಒಂದು ಸಲ ಪಿರಿಯಾಪಟ್ಟಣದ ಪಾಳೆಗಾರನ ಮಗಳಿಗೆ ಪಿಶಾಚಿ ಹಿಡಿಯಿತು. ಅವನು ಫೆರೀಬಾಧ್ಯಾರನ್ನು ಗೌರವದಿಂದ ಕರೆಸಿಕೊಂಡ. ಫೆರೀಬಾಧ್ಯಾರು ಹೇಳಿದಂತೆ ಎಲ್ಲ ಅಣಿಯನ್ನೂ ಮಾಡಿಕೊಟ್ಟ. ಬಾಧ್ಯಾರು ತಾಮ್ರದ ಚೊಂಬಿನಲ್ಲಿ ನೀರು ತುಂಬಿ ಮಂತ್ರಿಸಿ ಅದನ್ನು ತಮ್ಮ ರಕ್ಷಣೆಗಾಗಿ ಒಂದೆಡೆ ಇಟ್ಟರು. ಪಿಶಾಚಿಗೂ ಒಂದು ಜಾಗ ಕಲ್ಪಿಸಿದರು. ಪಾಳೆಗಾರನ ಮಗಳನ್ನು ಕರೆಸಿದರು. ಆದರೆ ಆ ಪಿಶಾಚವು ಹತ್ತಿರ ಬರಲೂ ಹೆದರಿತು. ಅವಳು ಬಾಗಿಲಲ್ಲೇ ನಿಂತು ಕೈಮುಗಿದಳು. ಬಾಧ್ಯಾರು ಅಭಯ ಕೊಟ್ಟರು. ಆಗ ಪಿಶಾಚವು ತನ್ನ ವೃತ್ತಾಂತವನ್ನೆಲ್ಲ ಹೇಳಿಕೊಂಡಿತು. ತಾನು ಹೊರಟುಹೋಗುವುದಾಗಿ ಮಾತುಕೊಟ್ಟಿತು. ಬಾಧ್ಯಾರೂ ಅದರ ಮುಕ್ತಿಗಾಗಿ ಜಪಮಾಡಿದರು. ಮರುದಿನ ಹಗಲು ಹನ್ನೆರಡು ಗಂಟೆಗೆ ಕನ್ನಂಬಾಡಿ ಅಮ್ಮನ ದೇವಸ್ಥಾನದ ಮುಂದಿದ್ದ ಅರಳಿ ಮರ ಬುಡಸಹಿತ ಮಗುಚಿಕೊಂಡಿತು; ಮಾತುಕೊಟ್ಟಂತೆ ಭೂತವು ಮರ ಉರುಳಿಸಿ ಅಲ್ಲಿಂದ ಪರಾರಿಯಾಗಿತ್ತು. ಆಮೇಲೆ ಪಾಳೇಗಾರನ ಮಗಳಿಗೆ ಮದುವೆ ಆಯಿತು.

ಇದರ ಕೃತಜ್ಞತೆಗಾಗಿ ಪಾಳೇಗಾರನು ಬಾಧ್ಯಾರಿಗೆ ಈ ಮನೆಯನ್ನು ಕಟ್ಟಿಸಿಕೊಟ್ಟ, ಜೀವನೋಪಾಯಕ್ಕಾಗಿ ಆರು ಎಕರೆ ಜಮೀನೂ ಬಿಟ್ಟುಕೊಟ್ಟ. ಅದು ಟಿಪ್ಪುವಿನ ಕಾಲ. ಪಾಳೇಗಾರ ಮನೆಕಟ್ಟುವ ಸಾಮಾನುಗಳನ್ನು ಆನೆಯ ಮೇಲೆ ಹೇರಿ ಕಳಿಸಿಕೊಟ್ಟ. ಈ ಮನೆಯನ್ನು ಕಟ್ಟಲು ನಲವತ್ತಾರು ಡಬಲ್ ತೊಲೆಗಳನ್ನು

ಬಳಸಿದ್ದಾರೆ. ದಿಮ್ಮಿಯಂಥ ಹದಿನಾರು ಬೀಟೆ ಕಂಬಗಳು, ತೇಗದ ಪಟ್ಟಿಗಳು, ನುಣುಪಾದ ಕಲ್ಲುಗಳನ್ನು ಬಳಸಿದ್ದಾರೆ. ಈ ಮನೆಗೆ ಹಿಂದೆ ಒಂದು ಕಿಟಕಿಯೂ ಇರಲಿಲ್ಲ . ಮನೆ ಕಟ್ಟಿಸುವುದಕ್ಕಾಗಿಯೇ ಬಾಧ್ಯಾರು ಆ ಕಾಲದಲ್ಲಿಯೇ ಮೂರೂವರೆ ಸಾವಿರ ರೂಪಾಯಿ ಖರ್ಚುಮಾಡಿದರಂತೆ. ಆದರೆ ಮನೆ ಕಟ್ಟಿ ಮುಗಿಯುವ ಹೊತ್ತಿಗೆ ಉತ್ತರಕ್ಕೆ ಓಸರು ಬಂತು. ಆಗ ಮತ್ತೆ ಪಿರಿಯಾಪಟ್ಟಣದಿಂದ ಆನೆ ತರಿಸಿ ಮನೆಯ ಹಂದರವನ್ನು ಅದರಿಂದ ದಕ್ಷಿಣಕ್ಕೆ ತುಸು ಎಳೆಸಿ ಬೆಣೆ ಹೊಡೆದು ನಿಲ್ಲಿಸಿದರು. ಆ ಓರೆ ಈಗಲೂ ತುಸು ಕಾಣುತ್ತದೆ.

ಆದರೆ ನಾಲ್ಕೈದು ತಲೆ ಕಳೆಯುವ ಹೊತ್ತಿಗೆ 'ಈ ಮನೆಯಲ್ಲಿ ದೆವ್ವ ಕುಣಿಯುತ್ತದೆ' ಎಂಬ ಪ್ರತೀತಿ ಹುಟ್ಟಿತು. ಜನರು ಆ ಕಡೆಗೇ ಬರಲು ಹೆದರುತ್ತಿದ್ದರು. ನಿಜವಾಗಿ ಆ ಓಣಿಗೇ ಯಾರೂ ಬರುತ್ತಿರಲಿಲ್ಲ. ಆಗ ನಾನು ಅದನ್ನು ಕೊಂಡೆ. ಗೋಡೆಗಳೆಲ್ಲ ಬಿದ್ದು ಹೋಗಿದ್ದವು. ಅಟ್ಟ ಮಾತ್ರ ಗಟ್ಟಿಯಾಗಿತ್ತು. ಎಂಬತ್ತು ಹಲಗೆ ಹಾಸಿತ್ತು. ನಾನು - ನನ್ನ ಹೆಂಡತಿ ಮತ್ತು ಎರಡು ಪುಟ್ಟ ಮಕ್ಕಳೊಂದಿಗೆ ಆ ಮನೆಗೆ ಬಂದೆ. ಕೆಳಗೆ ಗೋಡೆಕಟ್ಟುವ, ನೆಲ ಸಾರಿಸುವ ಕೆಲಸ ನಡೆಯುತ್ತಲೇ ಇತ್ತು. ನಾವು ಅಟ್ಟದ ಮೇಲೆ ಅಡುಗೆ ಇತ್ಯಾದಿ ಮಾಡಿಕೊಂಡು ವಾಸಮಾಡುತ್ತಿದ್ದೆವು. ಅಟ್ಟದಲ್ಲಿ ವಿಪರೀತ ಕಪಟದ ಹಕ್ಕಿಗಳು ಇರುತ್ತಿದ್ದವು. ದೀಪ ಹಚ್ಚಿದ್ದು ಒಂದು ನಿಮಿಷವೂ ಇರದಂತೆ ಆರಿಸಿಬಿಡುತ್ತಿದ್ದವು. ವಿಚಿತ್ರವಾಗಿ ಕೂಗುತ್ತಿದ್ದವು. ನಾವು ಅಲ್ಲಿ ಸಂಸಾರ ಹೂಡಿದ ಪ್ರಾರಂಭದಲ್ಲಿ , ಊರಿನ ಜನರು ನಿತ್ಯ ಬೆಳಗ್ಗೆ ಅಷ್ಟುಹೊತ್ತಿಗೇ ಬಂದು ನಮ್ಮನ್ನು ಕೂಗುತ್ತಿದ್ದರು. ದೆವ್ವದ ಕಾಟದಿಂದ ನಾವು ಸತ್ತಿದ್ದೇವೋ ಎಂದು ಆತಂಕಗೊಂಡಿರುತ್ತಿದ್ದರು. ನಾವು ಅಚ್ಚುಕಟ್ಟಾಗಿ ನಿದ್ದೆ ಮಾಡಿ ಬೆಳಗ್ಗೆ ಎದ್ದು ಬರುತ್ತಿದ್ದೆವು. 'ಅರಗಿನ ಮನೆ' ಎಂದೇ ಅದು ಮನೆಮಾತಾಗಿ ಹೋಗಿತ್ತು.

ನಾವು ವಾಸಿಸುತ್ತಿದ್ದ ಈ ಮನೆಗೆ ಬಂದದ್ದು ೧೯೫೩ರಲ್ಲಿ . ಅದರ ಹಿತ್ತಲಿನ ಮೂಲೆಯಲ್ಲಿ ಕೊಳದಂತಿದ್ದ ಒಂದು ಗುಂಡಿ ಇತ್ತು. ಅದಕ್ಕೆ ೨೦೦ ಗಾಡಿ ಮಣ್ಣು ಹೇರಿ ಮುಚ್ಚಿದೆ; ಮೇಲೆ ಬಾಳೆ ಹಾಕಿದೆ.

ಇನ್ನೊಂದು ಮೂಲೆಯಲ್ಲಿ ಒಂದು ನೆಲಬಾವಿ ಇತ್ತು. ಜನರು ನಡೆದಾಡುವ ದಾರಿಯ ಅಂಚಿನಲ್ಲೇ ಅದು ಇತ್ತು. ಅದು ಅಪಾಯದ ಜಾಗ ಎಂದು ಎಲ್ಲರೂ ದಿಗಿಲು ಬೀಳುತ್ತಿದ್ದರು. ಅದಕ್ಕೆ ಕಟ್ಟಡ ಕಟ್ಟಿಸಿ ರಾಟೆಬಾವಿ ಮಾಡಿಸಲು ನಿರ್ಧರಿಸಿದೆ. ಜಾರ್ಜ್ ಎಂಬ ಒಬ್ಬಾತ ಅದರ ಕೆಲಸ ವಹಿಸಿಕೊಂಡ. ಸೈಜುಗಲ್ಲು, ಕಂಬಗಲ್ಲು ಎಲ್ಲವನ್ನೂ ಲಾರಿಯಲ್ಲಿ ತಂದು ಪಕ್ಕದಲ್ಲಿ ರಾಶಿ ಹಾಕಿಸಿದ. ಬಾವಿಯ ಬಾಯಿ ಅಗಲಮಾಡಿ ಗುಂಡಿ ತೆಗೆಸಿದ. ಕೆಲಸ ಶುರುಮಾಡುವ ಜಾಗಕ್ಕೆ ನಾಲ್ಕು ಚಪ್ಪಡಿಗಳನ್ನೂ ಇಳಿಸಿದ. ಕೆಲಸದ ಆಯುಧಗಳನ್ನೂ ತಂದಿಟ್ಟು ಅಡ್ವಾನ್ಸಾಗಿ ೨೫೦ ರೂಪಾಯಿ ಪಡೆದು ಹೊರಟುಹೋದ. ನಾಡಿದ್ದು ಬರುತ್ತೇನೆಂದವನು ಹದಿನೈದು ದಿನ ಆದರೂ ಬರಲಿಲ್ಲ.

ಜನರು ಆಕ್ಷೇಪಣೆ ಮಾಡಲು ಶುರುಮಾಡಿದರು. ತಿರುಗಾಡುವ ಜಾಗ ಈಗ ಮೊದಲಿಗಿಂತಲೂ ಹೆಚ್ಚು ಅಪಾಯಕಾರಿಯಾಗಿತ್ತು. ಬೇರೆಯವರಿಂದ ಮಾಡಿಸೋಣವೆಂದರೆ ಯಾರೂ ಬರುವಂತಿಲ್ಲ. ನಾನೇ, ಅವನು ಇಟ್ಟಿದ್ದ ಉಳಿ, ಆಪು, ಸುತ್ತಿಗೆ, ಮೂಲೆಮಟ್ಟ ಇವುಗಳನ್ನು ಉಪಯೋಗಿಸಿಕೊಂಡು ಕಟ್ಟಡ ಕಟ್ಟಲು ಶುರುಮಾಡಿದೆ. ಅದಕ್ಕೂ ಜಾರ್ಜ್ ಬಿಡಲಿಲ್ಲ. "ಬೇರೆ ಕಡೆ ಕೆಲಸಕ್ಕೆ ಆ ಸಾಮಾನುಗಳು ಬೇಕು. ಅದು ಮೂರು ದಿನದಲ್ಲಿ ಮುಗಿಯುತ್ತೆ. ಆ ಮೇಲೆ ಈ ಕೆಲಸ ಮುಗಿಯುವವರೆಗೆ ಎಲ್ಲೂ ಹೋಗುವುದಿಲ್ಲ" ಎಂದು ಹೇಳಿ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋದ ; ಮತ್ತೆ ಬರಲೇ ಇಲ್ಲ.

ನಾನೇ ಮತ್ತೆ ಕೆಲಸ ಮುಂದುವರಿಸಿದೆ. ಹೊಸದಾಗಿ ಸಾಮಾನುಗಳನ್ನು ಹೊಂದಿಸಿಕೊಂಡೆ. ಸೈಜುಗಲ್ಲುಗಳನ್ನಿಟ್ಟು ಮೂಲೆಮಟ್ಟ ನೋಡುತ್ತಿದ್ದೆ. ನನಗೆ ತುಂಬ ಆಪ್ತರಾದ ಜಹಗಿರಿ ವೆಂಕಟರಮಣಯ್ಯನವರ ಮಗಳು ಓಡಿ ಬಂದು "ಚಿನ್ನು ಮಾವ, ಅಣ್ಣ ನಮ್ಮ ಮನೆಯ ಬಾವಿಗೆ ಬಿದ್ದು ಬಿಟ್ಟ, ಕೂಡಲೇ ಬನ್ನಿ" ಎಂದು ಕೂಗಿಕೊಂಡಳು. ತಕ್ಷಣ ಬಾವಿಯಿಂದ ಮೇಲಕ್ಕೆ ಜಿಗಿದು ಓಡಿದೆ.

ಮೂರು ಹಗ್ಗ ತರಿಸಿ ಬಾವಿಯ ಕಲ್ಲು ತೊಲೆಗಳಿಗೆ ಕಟ್ಟಿದೆ; ಹಗ್ಗದ ಮೇಲೆ ಬಾವಿಯೊಳಕ್ಕೆ ಜಾರಿದೆ. ಮುಳುಗುತ್ತಿದ್ದ ಹುಡುಗನನ್ನು ಹಿಡಿದೆ. ಬಾವಿಯಲ್ಲಿ ನೀರು ಮುಳುಗುವಷ್ಟಿರಲಿಲ್ಲ , ಆದರೆ ಕೆಸರು ಹೂತುಕೊಳ್ಳುತ್ತಿತ್ತು. ಅವನನ್ನು ಎತ್ತುವ ಭಾರಕ್ಕೆ ನಾನೇ ಹೂತು ಹೋಗುತ್ತಿದ್ದೆ. ಕೊನೆಗೆ ಅವನ ಸೊಂಟಕ್ಕೆ ಹಗ್ಗ ಬಿಗಿದು ಮತ್ತೊಂದು ಹಗ್ಗದ ಮೇಲೆ ಭಾರಬಿಟ್ಟು ನಿಂತೆ. ನನ್ನ ತಮ್ಮನನ್ನು ಬಿಟ್ಟರೆ ಮತ್ತೆ ಯಾರೂ ಧೈರ್ಯವಾಗಿ ನೆರವಿಗೆ ಬರುವವರು ಇರಲಿಲ್ಲ. ಅವನಿಗೆ ವಿಷಯ ತಿಳಿದ ತಕ್ಷಣ ಓಡಿ ಬಂದು ಬಾವಿಗಿಳಿದ. ಇಬ್ಬರೂ ಸೇರಿ ಒಂದು ತೊಟ್ಟಿಲು ಇಳಿಸಿಕೊಂಡು ಅದರಲ್ಲಿ ಅವನನ್ನು ಕೂರಿಸಿದೆವು. ಎಲ್ಲಾ ಹಗ್ಗವನ್ನೂ ಒಂದೇ ಮಟ್ಟದಲ್ಲಿ ಎಳೆಯುವಂತೆ ಮೇಲಿದ್ದವರಿಗೆ ಹೇಳಿದೆವು.

ಅವನನ್ನು ಮೇಲೆತ್ತುವ ಹೊತ್ತಿಗೆ ವೈದ್ಯರು ಬಂದು ಸಿದ್ಧವಾಗಿದ್ದರು. ಅವನು ಬಹಳ 'ಬದಿನೀರು' ಕುಡಿದಿದ್ದ. ಅದನ್ನೆಲ್ಲಾ

ಕಡೆಸಿದರು. ಎಷ್ಟೋ ಹೊತ್ತಿನ ಮೇಲೆ ಅವನಿಗೆ ಜ್ಞಾನ ಬಂತು. ಆದರೆ ಆ ಹುಡುಗ ಉಳಿಯಲಿಲ್ಲ , ಮರುದಿನವೇ ನೀಗಿ ಹೋದ. ಅವನ ತಂದೆ ವೆಂಕಟರಮಣಯ್ಯನವರೂ ಸತ್ತು ಎರಡು ವರ್ಷ ಕಳೆದಿತ್ತು. ಇತರ ಮಕ್ಕಳನ್ನು ಮೇಲೆ ತರುವ ಜವಾಬ್ದಾರಿ ಆ ವಿಧವೆಯ ಮೇಲಿತ್ತು. ಆ ಹುಡುಗರೆಲ್ಲ ದೊಡ್ಡವರಾಗಿ ಕೆಲಸಕ್ಕೆ ಸೇರುವವರೆಗೆ ಅವರ ಗದ್ದೆಯನ್ನು ನಾನೇ ಸಾಗುವಳಿ ಮಾಡಿದೆ.

ಬಾವಿಯ ಕಟ್ಟಡದ ಕೆಲಸವನ್ನೇನೋ ಮುಂದುವರಿಸಿದೆ. ಕಲ್ಲುಗಳನ್ನು ಆಪಿನಿಂದ ಟಾಪ್ ಮಾಡಿಕೊಂಡು ಚೆನ್ನಾಗಿಯೇ ಕಟ್ಟೆಕಟ್ಟಿದೆ. ನೆಲಮಟ್ಟಕ್ಕೆ ತರುವಹೊತ್ತಿಗೆ ಕಟ್ಟಡ ಹತ್ತು ಅಡಿ ಎದ್ದಿತ್ತು. ಕಂಬದಕಲ್ಲನ್ನೂ ಸಿದ್ಧಪಡಿಸಿದೆ. ಆದರೆ ಕೆಲವರು 'ತೊಲೆಗಲ್ಲೇ ಇರಲಿ' ಎಂದು ಸಲಹೆ ಮಾಡಿದರು. ಮತ್ತೆ ಕಟ್ಟಡ ಎಬ್ಬಿಸಿ ತೊಲೆ ಎತ್ತಿ ಕೂರಿಸಿದ್ದಾಯಿತು. ರಾಟೆಯೂ ಸಿದ್ಧವಾಯಿತು. ಕಂಟ್ರಾಕ್ಟರ್ ಜಾರ್ಜ್ ಮಾತ್ರ ೨೫೦ ರೂಪಾಯಿಗಳ ಜತೆ ಮಾಯವಾಗಿಬಿಟ್ಟಿದ್ದ.

ಅತಿರುದ್ರ ಮಹಾಯಾಗ

ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಮ್ಮೂರು ರುದ್ರಪಟ್ಟಣದಲ್ಲಿ ೧೯೬೨ರಲ್ಲಿ ಅತಿರುದ್ರ ಮಹಾಯಾಗ ನಡೆಯಿತು. ಅದು ಆದದ್ದು ನಮ್ಮೂರಿನವರೇ ಆದ ಖ್ಯಾತ ವಯಲಿನ್ ವಿದ್ವಾಂಸ ಶ್ರೀ ಆರ್.ಕೆ. ವೆಂಕಟರಾಮಾಶಾಸ್ತ್ರಿಗಳ ಸಮರ್ಥ ನೇತೃತ್ವದಲ್ಲಿ. ಆ ಕಾಲದಲ್ಲಿ ನಮ್ಮೂರಿನಲ್ಲಿ ಕೆಲವು ಬೆಳವಣಿಗೆಗಳಾದವು. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಆಗ ನಡೆದುದಷ್ಟೇ ಹೇಳುತ್ತಿದ್ದೇನೆ.

ಆ ಮಹಾಯಾಗದ ನೆಪದಿಂದ ನಮ್ಮೂರಿಗೆ ವಿದ್ಯುಚ್ಛಕ್ತಿ ಬಂತು. ನಮ್ಮದು ಓಣಿ ಮನೆ; ಬೆಳಕಿನ ಅಗತ್ಯ ಹೆಚ್ಚಾಗಿತ್ತು. ಸ್ನೇಹಿತರಾದ ಲಕ್ಷ್ಮೀಕಾಂತಯ್ಯನವರು ಅಡಕೆಗೆ ಮುಂಗಡವನ್ನು ಆಗತಾನೆ ಕೊಟ್ಟಿದ್ದರು. ಮನೆಗೆ ಕರೆಂಟ್ ತರಿಸಿದೆ. ನಮ್ಮ ಮನೆಗೆ ಕನೆಕ್ಷನ್ ಕೊಡುವಾಗ ಊರಿನ ಹಿರಿಯರೆಲ್ಲಾ ಬಂದಿದ್ದರು. ಎಲ್ಲರಿಗೂ ಹಂಚಲು ಸಿಹಿಪದಾರ್ಥ ಮಾಡಿಸಿದ್ದೆ. ಎಲೆಕ್ಟ್ರಿಕಲ್ ಇಂಜಿನಿಯರ್ ಹಂಸರಾಜ್ ಅವರೇ ಕನೆಕ್ಷನ್ ಕೊಡಿಸಲು ಬಂದಿದ್ದರು. ಅವರಿಗೂ, ನಮಗೆ ಮನೆಕೊಟ್ಟಿದ್ದ ಅಣ್ಣಪ್ಪಮೇಷ್ಟರಿಗೂ ಹಾರ ಹಾಕಿ ಸನ್ಮಾನಿಸಿದೆ. ಶ್ರೀ ಚನ್ನಬಸವಯ್ಯನವರು ಆಗ ಆ ಬಾಬಿನ ಮಂತ್ರಿಯಾಗಿದ್ದರು. ಕಾವೇರಿ ಹೊಳೆಗೆ ಕೆಲವೆಡೆ ಒಳ್ಳೆಯ ಸೋಪಾನಗಳೂ ಆಗಲೇ ಆದವು.

ಆ ದಿನಗಳಲ್ಲಿ ಬಂಧುಮಿತ್ರರು ನೂರಾರು ಜನ ಊರಿನ ಎಲ್ಲರ ಮನೆಗಳಲ್ಲೂ ತಂಗಿರುತ್ತಿದ್ದರು. ನಮ್ಮ ಮನೆಯು ವಿಶಾಲವಾಗಿತ್ತು. ಇನ್ಸ್ಯೂರೆನ್ಸ್ ಕಂಪನಿ ಡಿವಿಜನಲ್ ಮ್ಯಾನೇಜರಾಗಿದ್ದ ಶ್ರೀ ಎಂ.ಎನ್. ಜೋಯಿಸರೂ ಸಂಸಾರ ಸಮೇತ ಬಂದು ನಮ್ಮ ಮನೆಯಲ್ಲೇ ತಂಗಿದ್ದರು. ಅವರು ಆ ಸಮಯದಲ್ಲಿ ನಮ್ಮೂರಿನಲ್ಲಿ ಒಂದು ಇನ್ಸ್ಯೂರೆನ್ಸ್ ಸ್ಟಾಲ್ ಕೂಡ ಏರ್ಪಡಿಸಿದ್ದರು. ನನ್ನ ಹಿರಿಯ ಮಗಳು ಶ್ರೀವಾಣಿ ಹುಟ್ಟಿದ್ದು ಆಗ. ಪ್ರಸೂತಿಗೃಹಕ್ಕೆ ನೆರವಿಗೆ ಡಾಕ್ಟರುಗಳೂ ನರ್ಸುಗಳೂ ಊರಿಗೆ ಬಂದಿದ್ದರು. ಆದರೆ ಅವರು ನಮ್ಮ ಮನೆಗೂ ಬರುವ ವೇಳೆಗೆ ಹೆರಿಗೆ ಯಶಸ್ವಿಯಾಗಿ ಮುಗಿದಿತ್ತು. ಹೆರಿಗೆ ಮಾಡಿಸಿದವರು ಯಾರೆಂದರೆ ಎಂ.ಎನ್. ಜೋಯಿಸರ ಧರ್ಮಪತ್ನಿ. ಎಂ.ಎನ್. ಜೋಯಿಸರು ನಾಡಿನ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ರಾಗಿದ್ದವರು; ಆ ಮಹಾ ಹೋರಾಟದಲ್ಲಿ ಸಹಭಾಗಿಯಾಗಿದ್ದವರು ಅವರ ಪತ್ನಿ.

ಆ ದಿನಗಳಲ್ಲಿ ಕಾವೇರಿ ತೀರದ ತೋಪಿನಲ್ಲಿ ಯಾಗಕ್ಕಾಗಿ ಬಂದ ಸಹಸ್ರಾರು ಜನರಿಗೆ ಊಟ ಉಪಾಹಾರಗಳ ಸಾಮೂಹಿಕ ಏರ್ಪಾಟಾಗಿತ್ತು. ಅದರ ಅರಿವಿಲ್ಲದೆ ನಾನು ನಮ್ಮ ಅತಿಥಿಗಳಿಗೆ ಮನೆಯಲ್ಲೇ ಊಟ ಉಪಚಾರ ಏರ್ಪಡಿಸಿದ್ದೆ. ಹಾಗೆ ಎರಡು ದಿನ ನಡೆದಿತ್ತು. ಇದು ಶ್ರೀ ಆರ್.ಕೆ. ವೆಂಕಟರಾಮಾಶಾಸ್ತ್ರಿಗಳಿಗೆ ತಿಳಿಯಿತು. ಅವರು ಮನೆಗೆ ಬಂದು ಆಕ್ಷೇಪಣೆ ಮಾಡಿ "ಹೊಳೆದಡದಲ್ಲಿ ತೋಪಿನಲ್ಲಿ ಎಲ್ಲರಿಗೂ ಏರ್ಪಡಿಸಿರುವಾಗ ನೀವು ಈ ರೀತಿ ಮಾಡಬಾರದು" ಎಂದು ಹೇಳಿ ನನ್ನನ್ನೂ ಸೇರಿಸಿದಂತೆ ಎಲ್ಲರನ್ನೂ ಹೊರಡಿಸಿಕೊಂಡು ಹೋದರು. ಹತ್ತೂ ದಿನ ಲಕ್ಷಗಟ್ಟಲೆ ಜನ ಸೇರುತ್ತಿದ್ದ ಎಡೆಯಲ್ಲಿ ಇಂಥ ಮುತುವರ್ಜಿ ಅಸಾಧಾರಣವಾದುದು. ಅದರಲ್ಲಿ ಧರ್ಮಸೂಕ್ಷ್ಮವೂ ಸೇರಿತ್ತು.

ಯಾಗಕ್ಕೆ ಋತ್ವಿಕರಾಗಿ ಆಗಮಿಸಿದ್ದವರು ಮಹಾ ವಿದ್ಯಾವಂತರೂ ನಿಷ್ಠಾವಂತರೂ ಆಗಿದ್ದ ಸಂಭಾವಿತರು. ಅವರಿಗೆ ನಾನು ಮಾಡಬಹುದಾದ ಸೇವೆ ಎಂಥದೂ ಇರಲಿಲ್ಲ. ಆ ದಿನಗಳಲ್ಲಿ ನಮ್ಮ ತೋಟದಲ್ಲಿ ವೀಳೆದೆಲೆ ಹಂಬು ಚೆನ್ನಾಗಿತ್ತು. ಚೆನ್ನಾಗಿದ್ದ ಚಿಗುರೆಲೆಯನ್ನು ಅವರಿಗಾಗಿ ತಾಂಬೂಲಕ್ಕೆ ತಂದುಕೊಡುತ್ತಿದ್ದೆ. ತೋಟವನ್ನು ಚೆನ್ನಾಗಿ ಮಾಡಿದ್ದಕ್ಕೆ ಪ್ರತಿಫಲವು, ನನಗೆ ದೊರಕಿದ ಈ ಸದವಕಾಶವಾಗಿತ್ತು. ಶ್ರೀಮತ್ ಜಗದ್ಗುರುಗಳಿಗೆ ಪಾದಪೂಜೆ ಮಾಡಿ ಕೃತಾರ್ಥರಾದೆವು.

ಕಾವ್ಯ ರಚನೆ

ನನ್ನ ಸಂಸಾರ ಬೆಳೆಯಿತು. ಗಂಡು ಮಕ್ಕಳೆಲ್ಲ ವಿದ್ಯಾಭ್ಯಾಸ ಮಾಡಿ ನೌಕರಿಗೆ ಸೇರಿದರು, ವಿವಾಹವಾದರು. ಒಂದಿಬ್ಬರು ಮಕ್ಕಳು ವಿವಾಹವಾಗದೇ ಉಳಿದರು. ಹೆಣ್ಣು ಮಕ್ಕಳಿಗೆಲ್ಲಾ ವಿವಾಹವಾಯಿತು.

೧೯೮೬ನೇ ಇಸವಿ ಬಂತು. ಮಕ್ಕಳು, ಮರಿಮಕ್ಕಳ ಜತೆ ಮುತ್ತಾತನಾಗಿ ಕಾಲಕಳೆಯುವ ವಿಶ್ರಾಂತಿಯ ಸಮಯ. ಆದರೆ ಸದಾ ದುಡಿಯುತ್ತ ಬಂದ ಶರೀರಕ್ಕೆ ವಿಶ್ರಾಂತಿ ಒಗ್ಗಲಿಲ್ಲ . ಕಾಲ ಕಳೆಯುವುದು ಕಷ್ಟವಾಯಿತು. ನನಗೆ ಬಾಲ್ಯದಿಂದಲೂ ಪದ್ಯ ಬರೆಯುವ ಹವ್ಯಾಸವಿತ್ತು. ಅಂತೂ ಈಗ ಇನ್ನೊಂದು ಕಾವ್ಯವನ್ನೇ ಬರೆಯಬೇಕೆನಿಸಿತು.

ಅದೊಂದು ವಿಷಾದಯೋಗದಲ್ಲಿ 'ಸಂಸಾರಪಾಶ' ಎಂಬ ಕಿರು ಕಾವ್ಯವನ್ನು ಬರೆದೆ. ಅದರ ಒಂದೆರಡು ಪದ್ಯಗಳು ಇಲ್ಲಿವೆ.

ಪ್ರೇಮ ಭಂಡಾರಮಿದು ನೀರಿನಲಿ ಮುಳುಗುತಿದೆ
ಶ್ರೀಮದಾಗಮದಿರವ ಭಾವಿಸುವ ನನ್ನಲ್ಲಿ
ಪ್ರೇಮಕಿರಣವ ಬೀರಿ ನೀ ರಕ್ಷಣೆಯ ನೀಡಿ
ಧೀಮಣಿಯ ಮಾಡೆನಗೆಂದು ನೆರೆ ಬೇಡಿಕೊಳುವೆ

ಭಾವುಕನು ನಾನಾಗಿ ವಿಲೋಮವಿದೇಕಾಯ್ತೊ
ಜೀವಿಸುವುದತಿ ಕಷ್ಟ ಶತ್ರುಮಿತ್ರರು ಎಲ್ಲ
ಓವುದಕೆ ಬಂದಂತೆ ಆದರವ ನಟನಟಿಸಿ
ಸೀವುತಿದೆ ಬಡದೇಹ ಕಾವಿರದ ಬಾಳಿನಲ್ಲಿ

ದಿವ್ಯ ಭಂಡಾರಮಿದು ಸೇವ್ಯ ಭಂಡಾರಮಿದು
ನವ್ಯ ಭಂಡಾರಮಿದೆಂದು ನೆರೆನಂಬಿ ಕಹಿಯ
ಅವ್ಯಕ್ತ ಭಂಡರಾಗರವಾಯ್ತು ಸೂಳ್ದಾನವೆನ
ಗಾಯ್ತು ಸಂದುದೇ ಕುಸುಮ ಬಾಳ ದೇವತೆಗೆ

(ಪ್ರೇಮದ ಸಂಪತ್ತು ಹೊತ್ತ ಹಡಗು ಮುಳುಗುತ್ತಿದೆ. ನಾನಾದರೂ ಆಸ್ತಿಕನಾದವನು, ವೇದಋಷಿಗಳಲ್ಲಿ ಭಕ್ತಿಯಿಂದಿರುವವನು. ನಿನ್ನ ಪ್ರೇಮದ ಅಮೃತವನ್ನು ಸಿಂಚಿಸಿ ರಕ್ಷಣೆ ಕೊಟ್ಟು ನನಗೆ ಧೈರ್ಯ ನೀಡು ತಾಯೆ. ನಾನಾದರೂ ಭಾವಜೀವಿ. ನನ್ನ ಜೀವನ ಏಕೆ ವಿಷಮಿಸಿತು ? ಬದುಕೇ ಕಷ್ಟವಾಗಿದೆ. ನನಗೆ ಅಂತರಾಳದ ಪ್ರೀತಿ ಬೇಕಾಗಿದೆ. ಅದರ ಆಭಾಸಗಳು ನನ್ನನ್ನು ಸುಡುತ್ತಿವೆ. ಈ ಬದುಕು ದಿವ್ಯ, ಸೇವ್ಯ, ನವ್ಯ ಎಂದೆಲ್ಲ ನಂಬಿದ್ದೆ, ಆದರೆ ಇದು ಕಹಿಯ ಆಗರವಾಗಿದೆ. ಇದೊಂದು ದುರ್ದಾನವೆಂಬಂತಾಗಿದೆ. ನನ್ನ ಬದುಕೆಂಬ ಕುಸುಮವು ಸಾರ್ಥಕವಾದೀತು ಹೇಗೆ ?)

ಗಣಪತಿಜನನ, ಆಂಜನೇಯನ ಲಂಕಾಪ್ರವೇಶ, ಒಂದು ಪೊಲೀಸ್ ಪತ್ತೇದಾರಿ ಕತೆ, ಬ್ರಿಟಿಷ್ ಸರ್ಕಾರದ ಕೆಲವು ವೈಖರಿಗಳು, ಸಂಸಾರಪಾಶ - ಈ ಕಿರುಕಾವ್ಯಗಳನ್ನು ಅದಾಗಲೇ ಬರೆದಿದ್ದೆ. ಹಸ್ತಪ್ರತಿ ರೂಪದಲ್ಲೇ ಅವೆಲ್ಲ ಉಳಿದಿದ್ದವು, ಇಲ್ಲವೆ ನಾಶವಾಗಿದ್ದವು. ಹಳ್ಳಿಯ ವಾಸ, ಆರ್ಥಿಕ ದುಃಸ್ಥಿತಿಯಿಂದಾಗಿ ಅವು ಬೆಳಕು ಕಾಣಲಿಲ್ಲ.

ಈ ಸಮಯಕ್ಕೆ ಸರಿಯಾಗಿ ನನ್ನ ತಮ್ಮನೊಬ್ಬ ಒಂದು ಹಳಗನ್ನಡದ ಗದ್ಯಕಾವ್ಯವನ್ನು ಕೊಟ್ಟು, "ಇದನ್ನು ಪದ್ಯರೂಪದಲ್ಲಿ ಬರೆದರೆ ಬಹಳ ಚೆನ್ನಾಗಿರುತ್ತದೆ" ಎಂದ. ಅದು ಮುದ್ದಣನ ಕೃತಿ. ಒಂದೂವರೆ ವರ್ಷಕಾಲ ಅದನ್ನು ಚೆನ್ನಾಗಿ ಅಭ್ಯಾಸ ಮಾಡಿದೆ. ಕುಮಾರವ್ಯಾಸನ ಶೈಲಿಯಲ್ಲಿ ಕಾವ್ಯವಾಗಿ ರೂಪಿಸುವ ಮನಸ್ಸಾಯಿತು. ಆ ದಿನಗಳಲ್ಲಿ ಹಳ್ಳಿಯಲ್ಲಿ ಒಬ್ಬನೇ ಇದ್ದೆ , ಮನೆಯವರೆಲ್ಲ ದೂರದೂರದ ಊರುಗಳಲ್ಲಿ ತಮ್ಮತಮ್ಮ ಉದ್ಯೋಗದ ಮೇಲೆ ಇರುತ್ತಿದ್ದರು. ನಿತ್ಯವೂ ಕಾವೇರಿಯಲ್ಲಿ ಸ್ನಾನಮಾಡಿ ಸರಸ್ವತಿಯ ಪ್ರಾರ್ಥನೆ ಮಾಡುವುದು, ಬರೆಯುವುದು, ಒಪ್ಪತ್ತು ಊಟ - ಈ ಕ್ರಮದಲ್ಲಿ ಬರವಣಿಗೆ ಮುಂದುವರಿಸಿದೆ. ರಾತ್ರಿ ಮಲಗಿದಾಗಲೂ ಕೆಲವು ಸ್ಫುರಣಗಳಾಗುತ್ತಿದ್ದವು. ಹಾಗೇ ಗುರುತು ಹಾಕಿಟ್ಟು ಬೆಳಗ್ಗೆ ಸರಿಪಡಿಸುತ್ತಿದ್ದೆ. ಇದು ಮಕ್ಕೀಕಾಮಕ್ಕಿ ಅನುವಾದವಲ್ಲ, ಸಮಗ್ರವಾಗಿ ಓದಿ ನೆನಪಿಟ್ಟು ಪುನರ್ ರೂಪಿಸಿದ್ದು. ಸಹಜವಾಗಿಯೇ ಹಲವೆಡೆ ಸ್ವಾತಂತ್ರ್ಯವಹಿಸಿದ್ದೇನೆ. ಅಂತೂ ಆರು ತಿಂಗಳಲ್ಲಿ ಭಾಮಿನಿ ಷಟ್ಪದಿಯ ಈ ಕಾವ್ಯರಚನೆ ಮುಗಿಯಿತು. ನನ್ನ ಬಂಧುವರ್ಗಕ್ಕೆ ಸೇರಿದವರೂ, ಕೇರಳಾಪುರದ ಪ್ರೌಢಶಾಲಾಮುಖ್ಯೋಪಾಧ್ಯಾಯರೂ ಆಗಿದ್ದ ಬಿ.ಎಸ್. ಶೇಷಕೃಷ್ಣ ಅವರು ಕೃತಿಯ ಮುದ್ದಾದ ಹಸ್ತಪ್ರತಿಯನ್ನು ಸಿದ್ಧಮಾಡಿಕೊಟ್ಟರು. ಅನೇಕರು, 'ಗದ್ಯಾನುವಾದವನ್ನೂ ಕೊಡಿ, ಸುಲಭವಾಗಿ ಅರ್ಥಮಾಡಿಕೊಳ್ಳಲು ಅದರಿಂದ ಸಹಾಯವಾಗುತ್ತದೆ' ಎಂದು ಹೇಳಿದರು. ಆ ಮೇಲೆ ಎರಡೇ ದಿನದಲ್ಲಿ ಅದನ್ನು ಮಾಡಿ ಮುಗಿಸಿದೆ. ನಿತ್ಯವೂ ಅದನ್ನು ಶ್ರೀ ಪಿ.ಎಸ್. ರಾಮಾನುಜಂ ಅವರು ನೋಡಿ ಉತ್ತೇಜಿಸುತ್ತಿದ್ದರು. ನ್ಯಾಷನಲ್ ಕಾಲೇಜಿನ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಶ್ರೀಮತ್ ವರದದೇಶಿಕಾಚಾರ್ಯ ರಂಗಪ್ರಿಯ ಸ್ವಾಮಿಗಳು, ನಿತ್ಯ ಬಂದು ಕಾವ್ಯವನ್ನು ವಾಚನ ಮಾಡುವಂತೆ ಸೂಚಿಸಿದರು. ಅದರಂತೆ ಮೂರು ದಿನ ಅವರ ಮುಂದೆ ಕಾವ್ಯವನ್ನು ಪೂರ್ತಿ ವಾಚಿಸಿದೆ. ಸಂತೋಷಪಟ್ಟು ಆಶೀರ್ವದಿಸಿದರು. ಅನೇಕ ವಿದ್ವಾಂಸರು ನೋಡಿ ಮೆಚ್ಚಿದ ಮೇಲೆ ಅದನ್ನು ಅಕಾಡಮಿಗೆ ಕಳಿಸಿಕೊಟ್ಟೆ. ೧೯೮೭ರಲ್ಲಿ ಆಗಿನ ಶಿಕ್ಷಣ ಸಚಿವರು ಮಾಹೆಯಾನ ೫೦೦ ರೂ. ಗೌರವಧನ ಮಂಜೂರು ಮಾಡುವಂತೆ ಅಕಾಡಮಿಗೆ ಸೂಚಿಸಿದರು; ಅವರು ೧೯೯೭ರಲ್ಲಿ ೨೫೦ ರೂ. ಮಾಸಾಶನ ಮಂಜೂರು ಮಾಡಿದರು.

ಈ ಕೃತಿಯನ್ನು ಪ್ರಕಟಿಸಲು ಆರ್ಥಿಕ ಸಹಾಯ ಬೇಕಾಗಿತ್ತು. ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಕಾವ್ಯವನ್ನು ನೋಡಿ ಸಂತೋಷಪಟ್ಟು, "ಪ್ರಕಟಿಸಿ. ನಾನು ನಿಮ್ಮ ನೆರವಿಗೆ ಇದ್ದೇ ಇದ್ದೇನೆ " ಎಂದು ಹುರಿದುಂಬಿಸಿದರು. ಆದರೆ ಪ್ರಕೃತಕ್ಕೆ ಐದು ಸಾವಿರ ರೂ. ಸಾಕಾಗಿತ್ತು. ಅದು ಪಡೆದೆ. ಅದರ ಕರಡು ತಿದ್ದಲು ಖ್ಯಾತ ಸಾಹಿತಿ ಶ್ರೀ ಆರ್.ಎಲ್. ಅನಂತರಾಮಯ್ಯ ಅವರ

ನೆರವು ಪಡೆದೆ. ೧೯೮೮ರ ಫೆಬ್ರವರಿಯಲ್ಲಿ ಪ್ರಣತಾರ್ತಿಹರನ್ ಅವರ ಸಹಾಯದಿಂದ ಮತ್ತೆ ಒಂದು ಸಾವಿರ ಪಡೆದು ೨೦೦ ಪುಸ್ತಕಗಳನ್ನು ತಕ್ಷಣಕ್ಕೆ ಬೆಂಗಳೂರಿಗೆ ಒಯ್ದು ಬಿ.ಎನ್.ವಿ. ಅವರಿಗೆ ತೋರಿಸಿದೆ. ಅವರ ಅನುಗ್ರಹದಿಂದ ಅದೇ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನಲ್ಲೇ ನಡೆದ ದೊಡ್ಡ ಸಮಾರಂಭದಲ್ಲಿ ಶೃಂಗೇರಿಯ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳು ಪುಸ್ತಕವನ್ನು ಲೋಕಾರ್ಪಣ ಮಾಡಿ ಶಾಲು ಇತ್ತು ಹರಸಿದರು. ಅವರ ಮತ್ತು ಬಿ.ಎನ್.ವಿ. ಅವರ ಪವಿತ್ರ ಮನಸ್ಸು ಆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿತು.

ಇದು ಪ್ರಕಟವಾದಮೇಲೆ, ಖ್ಯಾತಸಾಹಿತಿ ಹಂಪನಾ ಅವರ ಸಲಹೆಯಂತೆ ವಿದ್ವಾಂಸರಾದ ಪ್ರೊ. ಕೆ.ಪಿ. ಭಟ್ ಅವರು ಇದನ್ನು ಪರಿಷ್ಕಾರ ಮಾಡಲು ದಯೆಯಿಟ್ಟು ಒಪ್ಪಿದರು, ಆರು ಅಧ್ಯಾಯಕ್ಕೆ ತಿದ್ದುಪಡಿ ಮಾಡಿಕೊಟ್ಟರು, ಉಳಿದುದನ್ನು ನಾನೇ ಮಾಡಿದೆ. ಸಮುದಾಯ ಅಧ್ಯಯನ ಕೇಂದ್ರದವರೂ ಅರ್ಥಸೂಚಿಯನ್ನು ಸೇರಿಸಿದ್ದಲ್ಲದೆ ಪುಸ್ತಕವನ್ನು ಇನ್ನಷ್ಟು ಕ್ರಮಬದ್ಧಗೊಳಿಸಿದರು.

ಇದೀಗ 'ಶ್ರೀ ಸೀತಾರಾಮ ಜನನಮೂಲ' ಎಂಬ ನನ್ನ ಈ ಕೃತಿಯು ನಾಲ್ಕನೆಯ ಮುದ್ರಣವನ್ನೂ ಕಾಣುತ್ತಿರುವುದು ಅಂಥದೇ ಯೋಗ. ನನ್ನ ಕೊನೆಗಾಲದಲ್ಲಿ ಸಾಹಿತ್ಯರಚನೆಗೆ ಪ್ರೇರಣೆ ನೀಡಿದ್ದು ಆ ದೈವವೇ. ಪೂಜ್ಯರಾದ ಶ್ರೀ ಶ್ರೀ ವರದದೇಶಿಕಾಚಾರ್ಯ ರಂಗಪ್ರಿಯ ಸ್ವಾಮಿಗಳು, "ಮೋಕ್ಷಮಾರ್ಗ ಮಾಡಿಯಾಗಿದೆ. ಬೇರೆ ಯಾವುದಕ್ಕೂ ಕೈ ಹಾಕಬೇಡಿ. ಇದನ್ನು ಪರಿಪೂರ್ಣ ಮಾಡಿ" ಎಂದು ಆದೇಶಿಸಿದ್ದಾರೆ. ಆ ಯತಿವರ್ಯರ ಆಜ್ಞೆ ಮಹಾಪ್ರಸಾದವೆಂದು ತಿಳಿದು ಧನ್ಯನಾಗಿದ್ದೇನೆ.

ಒಟ್ಟಿನಲ್ಲಿ ಈ ಪ್ರಪಂಚದಲ್ಲಿ ಜೀವಿಗಳಿಗೆ ಆಗುವ ಕಷ್ಟನಷ್ಟಗಳಿಗೂ, ಸುಖದುಃಖಗಳಿಗೂ ಯಾರೂ ಹೊಣೆಯಲ್ಲ , ಅವರವರ ಪೂರ್ವಾರ್ಜಿತ ಕರ್ಮಗಳ ಫಲ ಅದು. ಇನ್ನೊಬ್ಬರಿಂದ ನನಗೆ ತೊಂದರೆಯಾಯಿತು, ಇನ್ನೊಬ್ಬರಿಂದ ನನಗೆ ಐಶ್ವರ್ಯಸಿಕ್ಕಿತು ಅನ್ನುವುದೆಲ್ಲಾ ತಪ್ಪು ಭಾವನೆಗಳು. ಸಮತಾಭಾವನೆಯಿಂದ ಇದ್ದರೆ ಶಾಂತಿ; ನಮಗೂ ಹಿತ, ಇತರರಿಗೂ ಹಿತ. ನಾನೀಗ ನೂರರ ಅಂಚಿನಲ್ಲಿದ್ದೇನೆ. ಈಗಲೂ ವಯೋಧರ್ಮಕ್ಕೆ ತಕ್ಕಂತೆ ಕಷ್ಟಸುಖಗಳನ್ನು ಅನುಭವಿಸುತ್ತಾ ಕಾಲಕಳೆಯುತ್ತಿದ್ದೇನೆ.

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ಎಂಬ ಶ್ರೀಮದ್ಭಗವದ್ಗೀತೆಯ ಅಮೃತವಾಣಿಯಂತೆ, ಆದಷ್ಟೂ ಪರಮಾತ್ಮನ ಧ್ಯಾನದಲ್ಲಿದ್ದು ಕರ್ತವ್ಯಗಳನ್ನು ಮಾಡುತ್ತಾ ಮುಂದಿನ ಮೋಕ್ಷಮಾರ್ಗಕ್ಕಾಗಿ ಹಾತೊರೆಯುತ್ತಿದ್ದೇನೆ.

ಜೀವನಗಾಥ

ಕೆ.ಎಸ್. ವೆಂಕಟರಾಮಯ್ಯ

ಜೀವನಗಾಥ*

ಸಂಕೇತಿ ಸಮುದಾಯವು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ರೀತಿ ಮತ್ತು ಪ್ರಮಾಣವು ಹೆಮ್ಮೆಪಡುವ ರೀತಿಯಲ್ಲಿದೆ. ಹಿಂದೀ ಪ್ರಚಾರವೂ ಅವುಗಳಲ್ಲೊಂದು. ಅದರಲ್ಲಿ ತೊಡಗಿಸಿಕೊಂಡ ಬಗ್ಗೆ ನನಗೆ ಹೆಮ್ಮೆ ಇದೆ. ಒಂದು ಸಮುದಾಯದ ಅಧ್ಯಯನದ ಉದ್ದೇಶಕ್ಕಾಗಿ ನನ್ನ ವಿವರಗಳನ್ನು ಸಂತೋಷದಿಂದ ಬರೆದುಕೊಟ್ಟಿದ್ದೇನೆ. ಬಡತನದ ನಡುವೆಯೂ ನಾನು ಬೆಳೆದ ರೀತಿಯು ಈ ದೃಷ್ಟಿಯಿಂದ ದಾಖಲಾರ್ಹವೆಂದೇ ತಿಳಿಯುತ್ತೇನೆ. ಆದರೆ ಈ ಬರಹ ನನ್ನ ನಮ್ರ ಕಾಣಿಕೆಯಾಗಿದೆ ಎಂದು ನಿವೇದಿಸಿಕೊಳ್ಳುತ್ತೇನೆ.

ಹಿನ್ನೆಲೆ

ನಮ್ಮ ಊರು ಹಾಸನದ ಹತ್ತಿರ ಇರುವ ಕೊಂಡಗುಳ. ತಂದೆಯ ಹೆಸರು ಸುಬ್ಬರಾಯ. ತಾಯಿಯ ಹೆಸರು ಸುಬ್ಬಲಕ್ಷ್ಮಮ್ಮ. ತಾಯಿಯ ಕಡೆಯ ನಮ್ಮ ತಾತ ನರಸಿಂಹಯ್ಯ ಮತ್ತು ಅಜ್ಜಿ ನಂಜಮ್ಮನವರು ಆಗ ಮೈಸೂರಿನಲ್ಲಿ ಇದ್ದುದ್ದರಿಂದ ನಮ್ಮ ತಾಯಿ ಹೆರಿಗೆಗೆ ಮೈಸೂರಿಗೆ ಬಂದಿದ್ದರು. ಹೀಗಾಗಿ ನಾನು ಹುಟ್ಟಿದ್ದು ಸುಮಾರು ಎಂಬತ್ನಾಲ್ಕು ವರ್ಷಗಳ ಹಿಂದೆ ಮೈಸೂರು ಪಟ್ಟಣದಲ್ಲಿ. ನಮ್ಮ ತಾಯಿ ಬಾಣಂತನ ಮುಗಿದ ಮೇಲೆ ನಮ್ಮ ಊರಿಗೆ ಹೋದರು. ತಂದೆಯ ಕಡೆಯ ಅಜ್ಜನ ಹೆಸರು ಕೃಷ್ಣಪ್ಪ ಮತ್ತು ಅಜ್ಜಿ ಹೆಸರು ಸುಬ್ಬಮ್ಮ. ಇವರಿಬ್ಬರೂ ನಾನು ಚಿಕ್ಕವನಾಗಿದ್ದಾಗಲೇ ತೀರಿಕೊಂಡರು. ನನ್ನ ಬಾಲ್ಯದ ಕೆಲವು ವರ್ಷಗಳು ನಮ್ಮ ಊರಿನಲ್ಲಿಯೇ ಕಳೆದವು.

ನಾನು ನಮ್ಮ ಊರಿನ ಪಾಠಶಾಲೆಯಲ್ಲಿಯೇ ಅಭ್ಯಾಸ ಮಾಡಿದ್ದು. ನನ್ನ ಮೊದಲ ಗುರು ಒಬ್ಬ ಮುಸಲ್ಮಾನರು. ನಮ್ಮ ಊರಿನ ಪಾಠಶಾಲೆ ಸರ್ಕಾರಿ ಆದ್ದರಿಂದ ಅವರು ಅಲ್ಲಿಗೆ ವರ್ಗವಾಗಿ ಬಂದಿದ್ದರು. ಇಷ್ಟು ಮಾತ್ರ ನನಗೆ ನೆನಪಿದೆ. ಅನಂತರ ಮುಂದಿನ ಕೆಲವು ವರ್ಷಗಳು ನನ್ನ ವಿದ್ಯಾಭ್ಯಾಸ ನಮ್ಮ ಸೋದರಮಾವನ ಮನೆಯಲ್ಲಿ. ಅವರು ಶೇಕದಾರರಾಗಿದ್ದರು (ಈಗಿನ ರೆವಿನ್ಯೂ ಇನ್‌ಸ್ಪೆಕ್ಟರ್). ಅವರಿಗೆ ಆಗಾಗ ವರ್ಗವಾಗುತ್ತಿತ್ತು. ಬೆಳಗೋಡು, ಬಿಕ್ಕೋಡು, ಸಕಲೇಶಪುರ, ಹಿರೇಸಾವೆ, ಅರಸೀಕೆರೆ, ಪಾಳ್ಯ ಹೀಗೆ ಅನೇಕ ಊರುಗಳಲ್ಲಿ ನನ್ನ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು.

ಪಾಳ್ಯದಲ್ಲಿದ್ದಾಗ ನನಗೆ ಮಲೇರಿಯಾ ಜ್ವರ ಶುರುವಾಯಿತು. ನನ್ನನ್ನು ನಮ್ಮ ತಂದೆ ಊರಿಗೆ ಕರೆತಂದರು. ಸುಮಾರು ವರ್ಷ ಕಾಲ ಈ ರೋಗದಿಂದ ನರಳಿದೆ. ಅದೇ ಸಮಯಕ್ಕೆ ನಮ್ಮ ಊರಿಗೆ ಒಬ್ಬರು ಅಧ್ಯಾಪಕರು ವರ್ಗವಾಗಿ ಬಂದರು. ಅವರು ಹೇಳಿದ ಒಂದು ಗಿಡಮೂಲಿಕೆಯ ಔಷಧಿಯಿಂದ ನನ್ನ ಮಲೇರಿಯಾ ರೋಗ ಹೋಯಿತು.

ನನ್ನ ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾಭ್ಯಾಸಗಳು ಹಾಸನದಲ್ಲಿ ನಡೆದವು. ಎರಡು ವರ್ಷಗಳ ಕಾಲ ಊರಿನಿಂದ ಸುತ್ತುತ್ತಿದ್ದೆ. ನಮ್ಮ ಊರಿಗೂ ಹಾಸನಕ್ಕೂ ಸುಮಾರು ಮೂರು ಮೈಲಿ. ಬೆಳಗ್ಗೆ ಒಂಬತ್ತು ಗಂಟೆಗೆ ನಡೆದುಕೊಂಡು ಹೊರಟರೆ ೧೦.೩೦ರ ಹೊತ್ತಿಗೆ ಸ್ಕೂಲಿಗೆ ತಲುಪುತ್ತಿದ್ದೆ. ನಮ್ಮ ಸೋದರತ್ತೆ ಮಗ ಹೊಸದಾಗಿ ಹಾಸನದಲ್ಲಿಯೇ ಒಂದು ಮನೆ ಕಟ್ಟಿಸಿದ್ದರು. ಹೈಸ್ಕೂಲಿಗೆ ಸೇರಿದ ಮೇಲೆ ಅಲ್ಲೇ ಒಂದು ರೂಮಿನಲ್ಲಿ ನಾನು ಇದ್ದೆ. 'ವಾರ'

---

* ರಚನೆ : ೨೦೦೩

ಮಾಡಿಕೊಂಡಿದ್ದೆ. ಮೂರು 'ವಾರ'ಗಳಿರಲಿಲ್ಲ. ಆ ದಿನಗಳಿಗೆ ಒಂದು ವ್ಯವಸ್ಥೆ ಮಾಡಿಕೊಂಡೆ. ಹಾಸನದಲ್ಲಿ ಮಂಗಳವಾರ ಸಂತೆ. ಆ ದಿನ ನಮ್ಮ ತಾಯಿ ಸಾರು ಮತ್ತು ಮಜ್ಜಿಗೆ ಅನ್ನವನ್ನು ಕಲಸಿ ಅಡಕೆ ಪಟ್ಟೆಯಲ್ಲಿ ಕಟ್ಟಿ ನಮ್ಮ ತಂದೆಯ ಸಂಗಡ ಕಳುಹಿಸುತ್ತಿದ್ದರು. ಇನ್ನೆರಡು ದಿವಸ ನನ್ನ ತಮ್ಮ (ರಾಮಸ್ವಾಮಿ ಘನಪಾಠಿ) ಊರಿನಿಂದ ಎಂಟು ಗಂಟೆಗೆ ಅನ್ನದ ಬುತ್ತಿಯನ್ನು ತೆಗೆದುಕೊಂಡು ಹಾಸನದ ಕಡೆಗೆ ಬರುತ್ತಿದ್ದ. ನಾನು ರೂಮಿನಿಂದ ಹೊರಟು ಊರಿನ ಕಡೆಗೆ ಹೋಗುತ್ತಿದ್ದೆ. ಇಬ್ಬರೂ ಮಧ್ಯ ಮಾರ್ಗದಲ್ಲಿ ಒಂದು ಬೋರೆಯ ಮೇಲೆ ಸಂಧಿಸುತ್ತಿದ್ದೆವು. ನಾನು ಆ ಊಟದ ಗಂಟನ್ನು ಅವನಿಂದ ತೆಗೆದುಕೊಂಡು ಈ ಕಡೆಗೆ ಬರುತ್ತಿದ್ದೆ. ಅವನು ಊರಿನ ಕಡೆಗೆ ಹೋಗುತ್ತಿದ್ದ. ಹೀಗೆಯೇ ಹೈಸ್ಕೂಲಿನ ಮೂರು ವರ್ಷಗಳನ್ನು ಕಳೆದು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಮಾಡಿದ್ದಾಯಿತು.

ಬಡತನ

ನನಗೆ ಹೈಸ್ಕೂಲಿಗೆ ಬರುವವರೆಗೂ ಮನೆಯ ಸ್ಥಿತಿಯ ಅರಿವಾಗಿರಲಿಲ್ಲ. ಆಮೇಲೆ ನಮ್ಮ ಮನೆಯ ವಿಷಯಗಳು ಸ್ವಲ್ಪ ಸ್ವಲ್ಪವಾಗಿ ಅರಿವಾಗತೊಡಗಿದವು. ಬಡತನ ಅಂದರೆ ಹೇಳತೀರದು. ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಬರುತ್ತಿದ್ದ ದವಸ ಐದಾರು ತಿಂಗಳಿಗಿಂತ ಹೆಚ್ಚು ಬರುತ್ತಿರಲಿಲ್ಲ. ಉಳಿದ ತಿಂಗಳುಗಳಲ್ಲಿ ಜೀವನ ಮಾಡುವುದು ಬಹಳ ಕಷ್ಟವಾಗಿತ್ತು. ಅದಕ್ಕೆ ಕಾಲಕಾಲಕ್ಕೆ ಮಳೆಯಾಗದಿರುವುದೂ ಒಂದು ಕಾರಣ.

ಇದರಿಂದ ಮನೆಯವರೆಲ್ಲಾ ಎಷ್ಟೋ ದಿವಸ ಉಪವಾಸ ಮಾಡಬೇಕಾಗುತ್ತಿತ್ತು. ನಾನು ಹಾಸನದಲ್ಲಿದ್ದರು ಕೂಡ ಎಷ್ಟೋ ದಿನ ಉಪವಾಸ ಮಾಡಿದ್ದೇನೆ. ಉಪವಾಸ ನಮಗೆಲ್ಲಾ ಅಭ್ಯಾಸವಾಗಿ ಹೋಗಿಬಿಟ್ಟಿತ್ತು ; ಎಷ್ಟೋ ಸಲ ಬರೀ ನೀರಿನಲ್ಲಿ ದಿನಗಳನ್ನು ಕಳೆದದ್ದುಂಟು.

ನಮ್ಮ ತಂದೆ-ತಾಯಿಗಳಿಗೆ ನಾನೇ ಹಿರಿಯ ಮಗ. ನನಗೆ ಮೂರು ಜನ ತಮ್ಮಂದಿರು, ಮೂವರು ತಂಗಿಯರು. ಆಗಿನ ಕಾಲದಲ್ಲಿ ಇಷ್ಟು ಜನರನ್ನೂ ಸಾಕುವುದು ಬಹಳ ಕಷ್ಟವಾಗಿತ್ತು. ಹೊಟ್ಟೆಗಾದರೆ ಬಟ್ಟೆಗಿಲ್ಲ , ಬಟ್ಟೆಗಾದರೆ ಹೊಟ್ಟೆಗಿಲ್ಲ ಎಂದು ಹೇಳುವ ವಾಡಿಕೆ. ಆದರೆ ನಮಗೆ ಹೊಟ್ಟೆಗೂ ಇಲ್ಲ , ಬಟ್ಟೆಗೂ ಇಲ್ಲ. ಅಷ್ಟು ಬಡತನ. ಎಲ್ಲರೂ ಹರಕು ಬಟ್ಟೆಗಳನ್ನೇ ಹಾಕಿಕೊಂಡು ಓಡಾಡುತ್ತಿದ್ದೆವು.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಿನ ಒಂದು ಘಟನೆ: ಅವತ್ತು ಮಂಗಳವಾರ. ನಾನು, ನಮ್ಮ ತಂದೆ ಊರಿನಿಂದ ಅನ್ನ ತರುವರೆಂದು ಮಧ್ಯಾಹ್ನದ ವಿರಾಮದ ವೇಳೆಯಲ್ಲಿ ರೂಮಿಗೆ ಬಂದೆ. ಆದರೆ ಅವರು ಬಂದಿರಲಿಲ್ಲ. ಅನಂತರ ರಾತ್ರಿ ಸುಮಾರು ಏಳು ಗಂಟೆಗೆ ಬಂದರು. ಬಹಳ ಬಳಲಿದ್ದರು. "ಮನೆಯಲ್ಲಿ ಏನೂ ಇರಲಿಲ್ಲ. ಅಡುಗೆ ಮಾಡಿರಲಿಲ್ಲ. ನಮ್ಮೂರಿನವರು ಹಾಸನದ ಸಂತೆಯಲ್ಲಿ ವ್ಯಾಪಾರ ಮಾಡಲು ಬರುತ್ತಿದ್ದರು. ಯಾರಿಂದಲಾದರೂ ಸ್ವಲ್ಪ ಸಾಲ ತೆಗೆದುಕೊಂಡು ಅಕ್ಕಿ ಕೊಂಡು ಹೋಗೋಣವೆಂದು ಬಂದೆ. ಸಾಲ ಸಿಕ್ಕಲಿಲ್ಲ. ನಿನ್ನ ನೋಡಿಕೊಂಡು ಊರಿಗೆ ಹೋಗೋಣವೆಂದು ಬಂದೆ" ಎಂದು ಬಹಳ ದುಃಖದಿಂದ ಹೇಳಿದರು. ಆ ವೇಳೆಗಾಗಲೇ ತುಂಬಾ ಹೊತ್ತಾಗಿತ್ತು. ರಾತ್ರಿ ಒಬ್ಬರೇ ಊರಿಗೆ ಹೋಗುವುದು ಈ ಹೊತ್ತಿನಲ್ಲಿ ಬೇಡವೆಂದು ಹೇಳಿದೆ. ಇಬ್ಬರೂ ನೀರು ಕುಡಿದು ಮಲಗಿಕೊಂಡೆವು. ನಮ್ಮ ತಂದೆ ಬೆಳಗಿನ ಜಾವ ಎದ್ದು ಊರಿಗೆ ಹೋದರು. ನನಗೂ ದುಃಖವಾಯಿತು.

ಅಂದು ರಾತ್ರಿ ಊರಿನ ಸ್ಥಿತಿ ಇನ್ನೂ ದುಃಖದಾಯಕ. ನಮ್ಮ ತಾಯಿ, 'ನಮ್ಮ ತಂದೆ ಸಂತೆಯಿಂದ ಅಕ್ಕಿಯನ್ನು ತರುತ್ತಾರೆ, ಬಂದ ತಕ್ಷಣ ಅಕ್ಕಿಯನ್ನು ಹಾಕಿ ಅನ್ನ ಮಾಡಿ ಮಕ್ಕಳಿಗೆಲ್ಲಾ ಮಜ್ಜಿಗೆಯಲ್ಲಿ ಕಲಸಿ ಹಾಕುವುದು' ಎಂದು ಯೋಚಿಸಿ ಒಲೆ ಮೇಲೆ ತಪ್ಪಲೆಯಲ್ಲಿ ನೀರನ್ನು ಇಟ್ಟು ಸುಮಾರು ಹನ್ನೆರಡು ಗಂಟೆಯವರೆಗೂ ಕಾಯಿಸುತ್ತಿದ್ದರಂತೆ. ಆ ವೇಳೆಗೆ ಆಗಲೇ ಮಕ್ಕಳೆಲ್ಲಾ ಹೊಟ್ಟೆಗೆ ಏನೂ ಇಲ್ಲದೆ ಸೊರಗಿ ಮಲಗಿಬಿಟ್ಟಿದ್ದರು. ನಮ್ಮ ತಾಯಿಯೂ ಒಲೆಯನ್ನು ಆರಿಸಿ ಮಲಗಿದರಂತೆ. ಈ ವಿಷಯವನ್ನು ನಾನು ಭಾನುವಾರ ಊರಿಗೆ ಹೋದಾಗ ನಮ್ಮ ತಾಯಿ ಹೇಳಿದರು.

ಇದರ ಹಾಗೇ ಅದೇ ದಿನಗಳಲ್ಲಿ ಇನ್ನೊಂದು ಘಟನೆ ನಡೆಯಿತು. ಕೃಷ್ಣಾಪುರ ನಮ್ಮ ಊರಿಗೆ ನಾಲ್ಕು ಮೈಲಿ ದೂರದಲ್ಲಿದೆ. ಒಂದು ಸಲ ನಮ್ಮ ತಂದೆಯವರು ಒಬ್ಬರ ಮನೆಗೆ ಬ್ರಾಹ್ಮಣಾರ್ಥಕ್ಕೆ ಒಪ್ಪಿಕೊಂಡಿದ್ದರು. ಅವರ ಹತ್ತಿರ ಒಂದೇ ಒಂದು ಪಂಚೆ ಇತ್ತು, ಅದೂ ಸ್ವಲ್ಪ ಹರಿದಿತ್ತು. ನಮ್ಮ ತಾಯಿ ಅದನ್ನು ಒಗೆದು ಹಿತ್ತಿಲಲ್ಲಿ ಒಣಹಾಕಿದ್ದರು.

ನಮ್ಮ ತಂದೆ ಸ್ನಾನ ಮಾಡಿಕೊಂಡು ಬಂದು ಹಿತ್ತಲಿಗೆ ಪಂಚೆಯನ್ನು ತರಲು ಹೋದರೆ ಪಂಚೆಯೇ ಇರಲಿಲ್ಲ. ಯಾರೋ ಕಳ್ಳ ಎತ್ತಿಕೊಂಡು ಹೊರಟು ಹೋಗಿದ್ದ. ಈಗ ಏನು ಮಾಡುವುದು! ಬೇರೆ ಪಂಚೆಯಿಲ್ಲ , ಒಂದು ಹರಕು ಟವಲ್ಲನ್ನು ಸುತ್ತಿಕೊಂಡು ಮಂಕು ಬಡಿದವರಂತೆ ಸುಮ್ಮನೆ ನಿಂತುಕೊಂಡುಬಿಟ್ಟರು. ಆಗ ನಮ್ಮ ತಾಯಿ ಹಾಸಿಕೊಳ್ಳುತ್ತಿದ್ದ ಅವರ ಒಂದು ಹಳೆಯ ಹರಕು ಪಂಚೆಯನ್ನು ತೆಗೆದು ಅದನ್ನು ಒಗೆದುಹಾಕಿದರು. ಆ ವೇಳೆಗೆ ಇವರು ಸಂಧ್ಯಾವಂದನೆ ಮಾಡಿ ಅರ್ಧ ಒಣಗಿದ್ದ ಆ ಹರಕು ಪಂಚೆ ಉಟ್ಟು ಒಂದು ಹರಕು ಸಣ್ಣ ಪಂಚೆಯನ್ನು ಹೊದೆದುಕೊಂಡು

ಎರಡು

ಕೃಷ್ಣಾಪುರಕ್ಕೆ ಹೋದರಂತೆ. ಇಂತಹ ಘಟನೆಗಳು ನಮ್ಮ ಬಾಲ್ಯಕಾಲದಲ್ಲಿ ಎಷ್ಟೋ ನಡೆದವು.

ಒಂದೊಂದು ರಾತ್ರಿ ನಮ್ಮ ತಾಯಿ ಅನ್ನವನ್ನು ಮಕ್ಕಳಿಗೆಲ್ಲಾ ಕಲಸಿ ಕೈತುತ್ತು ಹಾಕುತ್ತಿದ್ದರು. ಏನಾದರೂ ಸ್ವಲ್ಪ ಉಳಿದರೆ ನಮ್ಮ ತಂದೆಗೆ ಬಡಿಸುತ್ತಿದ್ದರು. ತಾವು ನೀರು ಕುಡಿದು ಬಾಯಿ ತುಂಬ ಎಲೆ- ಅಡಕೆ ಹಾಕಿಕೊಂಡುಬಿಡುತ್ತಿದ್ದರು. ಇದರಿಂದ ಅವರು ಊಟ ಮಾಡದಿರುವುದು ಯಾರಿಗೂ ತಿಳಿಯುತ್ತಿರಲಿಲ್ಲ. ಒಂದೊಂದು ದಿವಸ ಮನೆಯಲ್ಲಿ ಏನೂ ಇರುತ್ತಿರಲಿಲ್ಲ. ಹಿತ್ತಲಿನಲ್ಲಿ ಕುಂಬಳಕಾಯಿ ಬಿಟ್ಟಿರುತ್ತಿತ್ತು. ಅದನ್ನೇ ತಂದು ಪಲ್ಯ ಮಾಡಿ ಎಲ್ಲರಿಗೂ ಕೊಡುತ್ತಿದ್ದರು. ಹೀಗೆ ಹಾಳು ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದೆವು.

ಬಡತನ ನಮ್ಮ ಒಬ್ಬರ ಮನೆಯದಲ್ಲ. ನಮ್ಮ ಹಳ್ಳಿಯಲ್ಲಿ ಬ್ರಾಹ್ಮಣರದು ಆರು ಮನೆಗಳು; ಉಳಿದದ್ದೆಲ್ಲಾ ಸುಮಾರು ೨೦೦ ಮನೆಗಳು ರೈತರದ್ದು. ಕೇವಲ ಹತ್ತಿಪ್ಪತ್ತು ಮನೆಗಳನ್ನು ಬಿಟ್ಟರೆ ಉಳಿದ ಎಲ್ಲರ ಪರಿಸ್ಥಿತಿಯೂ ನಮ್ಮ ಮನೆಯ ಹಾಗೆಯೇ ಎಂದು ಹೇಳಬಹುದು. ಆಗಿನ ದೇಶದ ಆರ್ಥಿಕ ಪರಿಸ್ಥಿತಿಯೇ ಹಾಗಿತ್ತು. ಸಾಮಾನುಗಳು ಬಹಳ ಅಗ್ಗ. ಒಂದು ರೂಪಾಯಿಗೆ ಹತ್ತು-ಹನ್ನೆರಡು ಸೇರು ಅಕ್ಕಿ, ಮುವತ್ತೆರಡು ಸೇರು ರಾಗಿ, ಬೇಳೆಗಳೆಲ್ಲಾ ಎರಡು ಆಣೆಯಿಂದ ನಾಲ್ಕು ಆಣೆವರೆಗೆ. ಅದು ರೂಪಾಯಿ, ಆಣೆ ಕಾಸಿನ ಕಾಲ. ಒಂದು ರೂಪಾಯಿಗೆ ಹದಿನಾರು ಆಣೆ, ಒಂದು ಆಣೆಗೆ ಹನ್ನೆರಡು ಕಾಸು. ಈಗ ಒಂದು ರೂಪಾಯಿಗೆ ಸಿಕ್ಕುವಷ್ಟು ಪದಾರ್ಥಕ್ಕಿಂತ ಹೆಚ್ಚು ಪದಾರ್ಥ ಆಗ ಒಂದು ಕಾಸಿಗೆ ಸಿಕ್ಕುತ್ತಿತ್ತು. ಹಾಸನ ಪಟ್ಟಣದಲ್ಲಿ ಒಂದು ಗಾಡಿ ಸೌದೆಗೆ ಒಂದೂಕಾಲರಿಂದ ಒಂದೂವರೆ ರೂಪಾಯಿ. ಮನೆಗಳು ಬಾಡಿಗೆಗೆ ಒಂದು ಅಥವಾ ಎರಡು ರೂಪಾಯಿಗೆಲ್ಲಾ ಸಿಗುತ್ತಿದ್ದವು. ನಾಲ್ಕು ಆಣೆ ತರಕಾರಿ ಒಂದು ವಾರಕ್ಕೆ ಆಗುತ್ತಿತ್ತು. ಹಾಗೆಯೇ ಬಟ್ಟೆ ಬೆಲೆ ಕೂಡ. ಸುಮಾರಾದ ಬಟ್ಟೆಗಳು ಒಂದು ಗಜಕ್ಕೆ ಮೂರು ಅಥವಾ ನಾಲ್ಕಾಣೆ. ಹೊಲೆಯುವುದಕ್ಕೆ ಕೂಡ ಒಂದು ಶರಟಿಗೆ ಮೂರು ಅಥವಾ ನಾಲ್ಕು ಆಣೆ. ಒಂದು ಕೋಟು ಹೊಲೆದರೆ ಒಂದು ರೂಪಾಯಿ. ಅದೇ ಹೆಚ್ಚು. ಹೀಗೆ ಯಾರಲ್ಲಾದರೂ ಎರಡು ಸಾವಿರ ರೂಪಾಯಿಗಳಿದ್ದರೆ ಅವರು ಸಾಹುಕಾರರು ಎಂದು ಕರೆಸಿಕೊಳ್ಳುತ್ತಿದ್ದರು. ದಿನವೆಲ್ಲಾ ಕೂಲಿ ಮಾಡಿದರೂ ನಾಲ್ಕು ಆಣೆ ಗಂಡಾಳಿಗೆ, ಎರಡು ಆಣೆ ಹೆಣ್ಣಾಳಿಗೆ. ಈಗಿನ ದರವನ್ನು, ಆಗಿನ ದರಕ್ಕೆ ಹೋಲಿಸಿದರೆ (ಹೆಣ್ಣಾಳಿಗೆ ನಲವತ್ತರಿಂದ ಐವತ್ತು ರೂ. ಗಂಡಾಳಿಗೆ ಅರುವತ್ತರಿಂದ ಎಪ್ಪತ್ತು ರೂ. ಕೆಲವು ವೇಳೆ ನೂರು ರೂಪಾಯಿ) ಆಗಿನ ಪರಿಸ್ಥಿತಿಯು ಅರ್ಥವಾಗುವುದು. ಸಂತೆಗಳಲ್ಲಿ ತರಕಾರಿ, ಅಕ್ಕಿ, ರಾಗಿ, ಬೆಣ್ಣೆ , ತೆಂಗಿನಕಾಯಿ ಎಲ್ಲಾ ಬಹಳ ಅಗ್ಗವಾಗಿ ಸಿಕ್ಕುತ್ತಿದ್ದವು. ಆದುದರಿಂದ ಹತ್ತು ಹದಿನೈದು ರೂಪಾಯಿ ಸಂಬಳ ಬರುವವರು ಕೂಡ ಆರಾಮ ಜೀವನ ಮಾಡಬಹುದಾಗಿತ್ತು. ಆದರೆ ಬೆಳೆದು ಮಾರುವವರಿಗೆ ಅವರು ಖರ್ಚು ಮಾಡಿದ್ದಕ್ಕೆ ತಕ್ಕ ಪ್ರತಿಫಲ ದೊರಕುತ್ತಿರಲಿಲ್ಲ.

ಆಗಿನ ಕಾಲದಲ್ಲಿ ಬ್ರಾಹ್ಮಣರಲ್ಲಿ ಎಂಟು ದಿವಸದ ಮದುವೆಗೆ ಮುನ್ನೂರರಿಂದ ನಾನೂರು ರೂಪಾಯಿಗಳಾದರೆ ಸಾಕಾಗುತ್ತಿತ್ತು. ಆದರೆ ಅಷ್ಟು ಹಣ ಅವರಿಗೆ ಎಲ್ಲಿಂದ ಬರಬೇಕು ? ಸಾಲ ಸೋಲ ಮಾಡಿ ಹೇಗೋ ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಕಾಗಿತ್ತು. ನನ್ನ ತಂಗಿಗೆ ಮದುವೆ ಮಾಡಲು ನಮ್ಮ ತಂದೆ ಒಂದು ಜಮೀನನ್ನು ಇನ್ನೂರು ರೂ. ಗಳಿಗೆ ಭೋಗ್ಯ ಮಾಡಿದ್ದರು. ಅದನ್ನು ಸುಮಾರು ಹನ್ನೆರಡು ವರ್ಷಗಳ ಮೇಲೆ ಹಣ ಕೊಟ್ಟು ಬಿಡಿಸಿಕೊಂಡರು. ನನಗೆ ಹೈಸ್ಕೂಲಿನಲ್ಲಿ ಅರ್ಧ ಫೀಜು ಮಾಫ್ ಆಗಿತ್ತು (Half freeship). ಮೊದಲನೇ ವರ್ಷ ತಿಂಗಳಿಗೆ ಒಂದೂವರೆ ರೂ., ಎರಡನೇ ವರ್ಷ ಒಂದೂಮುಕ್ಕಾಲು ರೂ., ಮೂರನೇ ವರ್ಷ ಎರಡು ರೂ. ಕಟ್ಟಬೇಕಾಗಿತ್ತು. ತಿಂಗಳ ಕಡೆಯಲ್ಲಿ ಅದನ್ನು ಪಾವತಿ ಮಾಡದಿದ್ದರೆ ಮುಂದಿನ ತಿಂಗಳು ಒಂದನೇ ತಾರೀಖು ನನ್ನ ಹೆಸರು ಅಡ್ಮಿಷನ್ ರಿಜಿಸ್ಟರಿನಲ್ಲಿ ಇರುತ್ತಿರಲಿಲ್ಲ. ಪುನಃ ಒಂದು ರೂ. ಅಡ್ಮಿಷನ್ ಮತ್ತು ಹಿಂದಿನ ತಿಂಗಳಿನ ಶುಲ್ಕವನ್ನು ಕೊಟ್ಟು ತರಗತಿಗೆ ಹೋಗುತ್ತಿದ್ದೆ. ಹೀಗೆ ಹೈಸ್ಕೂಲಿನ ಮೂರು ವರ್ಷಗಳಲ್ಲಿ ಏಳೆಂಟು ಸಲವಾದರೂ ನಾನು ಕಷ್ಟವನ್ನು ಅನುಭವಿಸಬೇಕಾಯಿತು. ನಮ್ಮ ತಂದೆಯವರಿಗೆ ಒಂದೊಂದು ತಿಂಗಳು ಅಷ್ಟು ಅಲ್ಪ ಹಣವನ್ನೂ ನನಗೆ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಒಂದು ಅರ್ಧ ಎಕರೆ ತೋಟ ಇತ್ತು. ಅದರಿಂದ ಏನೂ ಪ್ರಯೋಜನವಾಗುತ್ತಿರಲಿಲ್ಲ. ಹೆಸರಿಗೆ ಅಡಕೆ, ತೆಂಗು, ಬಾಳೆ, ವೀಳೆಯದೆಲೆ ಎಲ್ಲವೂ ಇದ್ದವು. ನೂರು ಬಾಳೆಹಣ್ಣಿಗೆ ಒಂದು ರೂ. ಸಿಕ್ಕಿದರೆ ಅದು ಒಳ್ಳೆ ಬೆಲೆ. ಮೂರು ಕಾಸಿಗೆ ಒಂದು ಕಟ್ಟು ವೀಳೆಯದೆಲೆ, ನಾಲ್ಕು ಆಣೆಗೆ ಒಂದು ಸೇರು ಅಡಕೆ. ಎಲ್ಲವೂ ಬಹಳ ಅಗ್ಗ. ಆದುದರಿಂದ ಬೆಳೆಯುವವನು ತಲೆ ಎತ್ತಲು ಸಾಧ್ಯವಾಗುತ್ತಿರಲಿಲ್ಲ. ಆಗಿನ ಕಾಲದ ಬಡವರ ಜೀವನ ನರಕತುಲ್ಯವಾಗಿತ್ತು. ಬಡತನಕ್ಕೆ ಜಾತಿಭೇದವಿರಲಿಲ್ಲ. ಊರಿನ ಅನೇಕ ಗೌಡರ ಮನೆಗಳಲ್ಲೂ ಇದೇ ಸ್ಥಿತಿ.

ನಮಗೆ ಒಂದು ಎಕರೆ ಹೊಲ, ಒಂದೂವರೆ ಎಕರೆ ಗದ್ದೆಯೇನೋ ಇತ್ತು. ಆದರೆ ಕಾಲಕಾಲಕ್ಕೆ ಮಳೆಯಾಗದೇ ಬೆಳೆ ಸರಿಯಾಗಿ ಬರುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಜೀವನ ಕಡುಬಡತನದಲ್ಲಿಯೇ ನಡೆಯಿತು. ಈ ಬಡತನದಲ್ಲಿಯೇ ನಮ್ಮ ತಂದೆಯವರು ಮೂರು ಮಕ್ಕಳಿಗೆ ಹೇಗೋ ಮದುವೆಯನ್ನೂ ಮಾಡಿದರು.

ಪೂರ್ವಿಕರು

ನಮ್ಮ ತಂದೆಯ ಕಡೆಯ ಮುತ್ತಜ್ಜನ ಹೆಸರು ನಾರಾಯಣ ಮತ್ತು ಮುತ್ತಜ್ಜಿಯ ಹೆಸರು ನಾರಣಮ್ಮ. ಅವರ ವಿಷಯ ನನಗೆ ಏನೂ ತಿಳಿಯದು. ನಮ್ಮ ಅಜ್ಜನ ಹೆಸರು ಕೃಷ್ಣಪ್ಪ. ಅಜ್ಜಿಯ ಹೆಸರು ಸುಬ್ಬಮ್ಮ. ನಾನು ನಮ್ಮ ಅಜ್ಜ ಅಜ್ಜಿ ಇಬ್ಬರನ್ನೂ ನೋಡಿದ್ದೆ. ಅಜ್ಜ ತೀರಿಕೊಂಡಾಗ ನನಗೆ ಏಳೆಂಟು ವರ್ಷ ಇದ್ದಿರಬಹುದು. ಕೆಲವು ವರ್ಷಗಳ ಅನಂತರ ಅಜ್ಜಿಯೂ ತೀರಿಕೊಂಡರು. ಅವರಿಗೆ ಐದು ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ನಮ್ಮ ದೊಡ್ಡಪ್ಪನವರು ನಾನು ಹುಟ್ಟುವುದಕ್ಕೆ ಮುಂಚೆಯೇ ತೀರಿಕೊಂಡಿದ್ದರು. ಅವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ತಾಲ್ಲೋಕು ಆಫೀಸಿನಲ್ಲಿ ಗುಮಾಸ್ತರಾಗಿದ್ದರಂತೆ. ಅವರನ್ನು ಐಯ್ಯಪ್ಪ ಎಂದು ಕರೆಯುತ್ತಿದ್ದರಂತೆ. ಅವರ ಮೂಲ ಹೆಸರು ನನಗೆ ತಿಳಿಯದು. ಎರಡನೆಯವರೇ ನಮ್ಮ ತಂದೆ. ಹೆಸರು ಸುಬ್ಬರಾಯ. ಅವರಿಗೆ ನಾಲ್ಕು ಗಂಡು, ಮೂರು ಹೆಣ್ಣುಮಕ್ಕಳು. ನಾನೇ ಹಿರಿಯ ಮಗ.

ನಮ್ಮ ತಾಯಿಯ ತಂದೆ ನರಸಿಂಹಯ್ಯನವರು ಒಡ್ಡರಹಳ್ಳಿ ಯವರಂತೆ. ಆದರೆ ಅವರು ತಮ್ಮ ಊರನ್ನು ಚಿಕ್ಕ ವಯಸ್ಸಿನಲ್ಲಿಯೇ ಬಿಟ್ಟಿದ್ದರಂತೆ. ಕೆಲವು ವರ್ಷ ಪೊಲೀಸು ಇಲಾಖೆಯಲ್ಲಿ ಕೆಲಸ ಮಾಡಿ ರಾಜೀನಾಮೆ ಕೊಟ್ಟು ತಮ್ಮ ಒಬ್ಬನೇ ಮಗನ ಹತ್ತಿರ ಇದ್ದರು. ನಮ್ಮ ಅಜ್ಜಿ (ತಾಯಿಯ ತಾಯಿ) ನಂಜಮ್ಮನವರು ಪೂಮಗಾಮೆಯವರು.

ನಮ್ಮ ಸೋದರಮಾವ ಸುಬ್ಬರಾಯರು ಅರಕಲಗೂಡಿನಲ್ಲಿದ್ದಾಗ ತೀರಿಕೊಂಡರು. ಆಗ ಅವರಿಗೆ ಮೂವತ್ತೆಂಟು ವರ್ಷ.

ನಮ್ಮ ತಂದೆಯ ಕಡೆಯ ಅಜ್ಜ ಮತ್ತು ಅಜ್ಜಿ ನನ್ನ ಬಾಲ್ಯದಲ್ಲಿಯೇ ತೀರಿಕೊಂಡಿದ್ದರು. ಮೇಲಾಗಿ ಆಗ ನಾನು ನಮ್ಮ ಸೋದರಮಾವನ ಮನೆಯಲ್ಲೇ ಇರುತ್ತಿದ್ದೆ. ಹೀಗಾಗಿ ಅವರ ಬಗ್ಗೆ ಹೆಚ್ಚು ತಿಳಿಯಲಿಲ್ಲ. ಆದರೆ ನಾನು ಸ್ವಲ್ಪ ದೊಡ್ಡವನಾದ ಮೇಲೆ ಹಳ್ಳಿಯ ಜನಗಳು ಒಂದೊಂದು ವೇಳೆ ಮಾತನಾಡುತ್ತಿದ್ದಾಗ ಅವರು ಹಳ್ಳಿಯವರಿಗೆ ಸಹಾಯ ಮಾಡುತ್ತಿದ್ದ ವಿಚಾರ ಸ್ವಲ್ಪ ತಿಳಿಯುತ್ತಿತ್ತು. ಒಂದು ಸಲ ಹರಿಜನರ ಗುಡಿಸಲುಗಳಿಗೆ ಬೆಂಕಿ ಬಿದ್ದಾಗ ಅದನ್ನು ಆರಿಸಲು ಇವರು ಮುಂದಾಳಾಗಿ ಹೋಗಿದ್ದರಂತೆ. ಯಾರದಾದರೂ ರಾಗಿ ಹುಲ್ಲಿನ ಮೆದೆಗೆ ಬೆಂಕಿ ಬಿದ್ದರೆ ಆರಿಸುವುದಕ್ಕೆ ಕೂಡ ಇವರೇ ಮುಂದಾಳು. ಊರಿನಲ್ಲಿ ಏನಾದರೂ ಜಗಳವಾದರೆ ಅದರ ತೀರ್ಮಾನಕ್ಕೆ ಹೋಗುವುದು- ಹೀಗೆ ಇವರ ಸಾಮಾಜಿಕ ಸೇವೆ ನಡೆಯುತ್ತಿತ್ತು. ನಮ್ಮ ಅಜ್ಜಿ ಏನೂ ತಿಳಿಯದ ಮುಗ್ಧರು. ಬಹಳ ದೈವಭಕ್ತರು. ಪೂಜೆ ಪುನಸ್ಕಾರ ಅಡುಗೆ ಪಡಿಗೆಗಳಲ್ಲೇ ಅವರ ದಿವಸಗಳು ಕಳೆಯುತ್ತಿದ್ದುವು. ಕೃಷ್ಣಾಪುರ ಅವರ ತವರೂರು.

ತಂದೆ-ತಾಯಿ

ನಮ್ಮ ತಂದೆ ಹೆಸರು ಸುಬ್ಬರಾಯ ಎಂದು. ಆದರೆ ಅವರನ್ನು ಎಲ್ಲರೂ ಪುಡಸೋಮಿ ಎಂದು ಕರೆಯುತ್ತಿದ್ದರು. ಅವರ ಹೆಸರು ಬಹಳ ಜನಕ್ಕೆ ಗೊತ್ತಿರಲಿಲ್ಲ. ಆದರೆ 'ಪುಡಸೋಮಿ', 'ಪುಡಸೋಮಯ್ಯನಾರು' ಎಲ್ಲರಿಗೂ ಗೊತ್ತು. ನಮ್ಮ ತಂದೆ ಕೇವಲ ಪ್ರೈಮರಿಸ್ಕೂಲು ವಿದ್ಯಾಭ್ಯಾಸ ಮುಗಿಸಿದ್ದರು. ಆದರೆ ಅವರಿಗೆ ವ್ಯವಹಾರಜ್ಞಾನ ತುಂಬಾ ಚೆನ್ನಾಗಿತ್ತು. ಊರಿನಲ್ಲಿ ಕಾಗದ ಪತ್ರಗಳನ್ನು ಬರೆಸುವುದು, ಜಗಳ ತೀರ್ಮಾನ, ಕೋರ್ಟಿನ ವ್ಯವಹಾರಗಳು ಎಲ್ಲಾದಕ್ಕೂ ಊರಿನವರು ನಮ್ಮ ತಂದೆಯವರ ಸಹಾಯವನ್ನು ಪಡೆಯುತ್ತಿದ್ದರು. ಒಂದು ಪತ್ರ ಬರೆದರೆ ನಾಲ್ಕು ಆಣೆ ಕೊಡುತ್ತಿದ್ದರು. ಕೆಲವರು ಅದನ್ನೂ ಕೊಡುತ್ತಿರಲಿಲ್ಲ. ಆದರೆ ಇವರು ಯಾರನ್ನೂ ಕೇಳುತ್ತಿರಲಿಲ್ಲ. ಕೊಟ್ಟರೆ ತೆಗೆದುಕೊಳ್ಳುವುದು, ಇಲ್ಲದಿದ್ದರೆ ಇಲ್ಲ. ಆದರೆ ಅವರ ಹತ್ತಿರ ಯಾರು ಬಂದರೂ ಅವರು 'ಇಲ್ಲ , ನನಗೆ ಆಗುವುದಿಲ್ಲ' ಎಂದು ಹೇಳುತ್ತಿರಲಿಲ್ಲ . ಆದುದರಿಂದ ಅವರು ನಮ್ಮ ಹಳ್ಳಿಯವರೆಲ್ಲರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದರು.

ಒಂದು ಸಲ ನಮ್ಮ ಊರಿನ ಕೆಲವು ಯುವಕರು 'ಸದಾರಮೆ' ನಾಟಕವನ್ನು ಅಭ್ಯಾಸ ಮಾಡಿ ಹಾಸನದ ಜಾತ್ರೆಯಲ್ಲಿ ಆಡಿದರಂತೆ. ಆಗ ನಮ್ಮ ತಂದೆಯವರಿಗೆ ಟಿಕೆಟ್ ಮಾರುವ ಜವಾಬುದಾರಿಯನ್ನು ವಹಿಸಿದ್ದರಂತೆ. ಅವರು ಟಿಕೆಟ್ಟು ಮಾರಿ ಬಂದ ಹಣದಲ್ಲಿ ಒಂದು ಕಾಸೂ ಪಡೆಯದೆ ಎಲ್ಲವನ್ನೂ ಅವರಿಗೆ ಕೊಟ್ಟುಬಿಟ್ಟರಂತೆ. ಅವರು ಸ್ವಲ್ಪ ಹಣ ಕೊಡಲು ಬಂದಾಗ ಬೇಡವೆಂದು ಹೇಳಿ ಅದನ್ನು ಅವರಿಗೆ ಹಿಂದಿರುಗಿಸಿದರಂತೆ. ಕಾರಣ ಸಂಗ್ರಹ ಬಹಳ ಕಡಮೆಯಾಗಿತ್ತು. ಖರ್ಚು ಕೂಡಾ ಬಂದಿರಲಾರದು.

ನಮ್ಮ ತಂದೆ ಬಡವರಾದರೂ ನಿಃಸ್ವಾರ್ಥವಾಗಿ ಮತ್ತು ಪ್ರಾಮಾಣಿಕತೆ ವಹಿಸಿ ಹಳ್ಳಿಯ ಸೇವೆ ಮಾಡುತ್ತಿದ್ದರು. ಆದರೆ ನಾನು ಹಳ್ಳಿಯವರ ಸೇವೆ ಮಾಡುತ್ತಿದ್ದೇನೆ ಎಂಬ ಭಾವನೆ ಅವರಿಗೆ ಯಾವಾಗಲೂ ಬರುತ್ತಿರಲಿಲ್ಲ. ಇದು ನನ್ನ ಕರ್ತವ್ಯ ಎಂದು ತಿಳಿದು ಮಾಡುತ್ತಿದ್ದರು. ಯಾವ ಕೆಲಸಕ್ಕೂ ಪ್ರತಿಫಲವನ್ನು ಅಪೇಕ್ಷಿಸುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಹಳ್ಳಿಯಲ್ಲಿ ಅನೇಕರಿಗೆ ಏನು ಕೊಡಲೂ ಸಾಧ್ಯವಿರಲಿಲ್ಲ. ಅಷ್ಟು ಬಡತನ. ತಾವೂ ಬಡವರು. ಸಾಮಾನ್ಯವಾಗಿ ಹಳ್ಳಿಯಲ್ಲಿ ಇಪ್ಪತ್ತೈದು, ಐವತ್ತು ಅಥವಾ ನೂರು ರೂಪಾಯಿ ಸಾಲ ತೆಗೆದುಕೊಳ್ಳುವ ರೈತರು

ಬಂದು ನಮ್ಮ ತಂದೆಯವರ ಹತ್ತಿರ ಸಾಲ-ಪತ್ರ ಬರೆಸುತ್ತಿದ್ದರು. ಒಟ್ಟಿನಲ್ಲಿ ಅವರದ್ದು ಸಾಧು ಸ್ವಭಾವ. ಯಾರಿಗೂ ಕೇಡು ಬಯಸುತ್ತಿರಲಿಲ್ಲ. ಆದರೆ ಯಾರಾದರೂ ಅವರಿಗೆ ವಿನಾಕಾರಣ ಕೇಡು ಮಾಡಿದರೆ ಪ್ರತಿರೋಧಿಸುತ್ತಿದ್ದರು. ಇದರಿಂದ ಕೆಲವು ಸಲ ಜಗಳಗಳೂ ಆಗುತ್ತಿದ್ದವು.

ಸಂಕೇತಿಗಳು ನಮ್ಮ ಊರಿನಲ್ಲಿ ಇದ್ದದ್ದು ಕೇವಲ ಆರು ಒಕ್ಕಲು. ಎಲ್ಲರೂ ಅಣ್ಣ ತಮ್ಮಂದಿರೇ - ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು. ಆದರೂ ಅವರಲ್ಲಿ ಸೌಹಾರ್ದತೆ, ಸಹಕಾರಭಾವನೆ ಇರಲಿಲ್ಲ. ಸಣ್ಣಪುಟ್ಟ ವಿಷಯಗಳಿಗೆಲ್ಲಾ ಜಗಳ. ಇದರಲ್ಲಿ ಹೆಂಗಸರ ಪಾಲೇ ಹೆಚ್ಚು. ಮಕ್ಕಳ ವಿಷಯಕ್ಕಾಗಿ ಜಗಳವಾಗುತ್ತಿದ್ದುದೇ ಹೆಚ್ಚು. ಇದರಿಂದ ಮಾತು ಬಿಡುವುದು, ಒಬ್ಬರ ಮನೆಗೆ ಇನ್ನೊಬ್ಬರು ಹೋಗದಿರುವುದು ಆಗಾಗ ನಡೆಯುತ್ತಲೇ ಇತ್ತು. ಆದರೆ ಕೆಲ ಕಾಲದನಂತರ ಪುನಃ ಒಟ್ಟಾಗಿ ಸೇರುತ್ತಿದ್ದರು. ಆದರೆ ಪುನಃ ಯಾವುದಾದರೂ ಕಾರಣದಿಂದ ಜಗಳ, ಪುನಃ ಮಾತು ಬಿಡುವುದು. ಇದು ಆಗಾಗ್ಗೆ ನಡೆಯುತ್ತಲೇ ಇತ್ತು.

ನಮ್ಮ ತಾಯಿಯವರು ಸಾಧು ಸ್ವಭಾವದವರು. ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ. ಆದರೂ ಒಂದೊಂದು ವೇಳೆ ಸಹನೆ ಮೀರಿದಾಗ ಅವರೂ ಜಗಳವಾಡುತ್ತಿದ್ದರು. ಈ ಜಗಳ, ಕೋಪ ತಾಪಗಳಿಗೆಲ್ಲಾ ಮುಖ್ಯ ಕಾರಣ ಬಡತನ. ಎಲ್ಲರ ಪರಿಸ್ಥಿತಿಯೂ ಒಂದೇ ಆಗಿತ್ತು. ಒಬ್ಬರೂ ಒಂದು ಕಾಸಿಗೂ ಸೋಲುತ್ತಿರಲಿಲ್ಲ.

ನಮ್ಮ ತಾಯಿಯವರು ಮದುವೆಯಾದ ಕೆಲವು ವರ್ಷಗಳ ಅನಂತರ ಗಂಡಿಗೆ ಸೀರೆಯನ್ನು ಉಡಲು ಶುರು ಮಾಡಿದ್ದರಂತೆ. ಈ ಸೀರೆ ಉಡುವುದು ಸಂಕೇತಿ ಹೆಂಗಸರು ಮಾತ್ರ.

ಆಗಿನ ಸಮಾಜ

ಸಂಕೇತಿಗಳು ಮೂಲತಃ ಈಗಿನ ತಿರುನೆಲ್‌ವೇಲಿ ಜಿಲ್ಲೆಯ ಶೆಂಕೋಟ್ಟೈಎಂಬ ಊರಿನಿಂದ ಸತಿ ಸಾಧ್ವಿಯಾದ ನಾಚಾರಮ್ಮ ಎಂಬುವವರ ನೇತೃತ್ವದಲ್ಲಿ ಬಂದು ಕರ್ನಾಟಕದ ಕಾವೇರಿ ನದಿಯ ದಡದಲ್ಲಿರುವ ಊರುಗಳಲ್ಲಿ ನೆಲಸಿದರು ಎಂದು ಹೇಳುತ್ತಾರೆ. ನಾಚಾರಮ್ಮನವರು ಕೆಲವು ದುಷ್ಟರ ಉಪಟಳವನ್ನು ಸಹಿಸಲಾರದೆ ತಮ್ಮ ಸೀರೆಯನ್ನು ಭದ್ರವಾಗಿಯೂ ಬಿಗಿಯಾಗಿಯೂ ಉಟ್ಟು, ಆ ದುಷ್ಟರಿಂದ ಪಾರಾಗಿ ಕರ್ನಾಟಕದ ಕಡೆಗೆ ನೂರಾರು ಸಂಕೇತಿ ಕುಟುಂಬಗಳೊಡನೆ ಬಂದರಂತೆ. ಅವರ ಜತೆಯಲ್ಲಿ ಬಂದ ಹೆಂಗಸರೂ ಅವರ ಹಾಗೆಯೇ ಸೀರೆಯನ್ನು ಉಟ್ಟು ಬಂದಿರಬಹುದು. ಆ ರೀತಿ ಸೀರೆ ಉಡುಗೆಗೆ 'ಗುಂಡಿಗೆ' ಅಥವಾ 'ಗಂಡಿಗೆ ಸೀರೆ' ಎಂದು ಹೆಸರಾಯಿತು. ಆ ಕಾಲದಲ್ಲಿ ಹಳ್ಳಿಯಲ್ಲಾಗಲೀ, ಪಟ್ಟಣದಲ್ಲಾಗಲೀ ಸಂಕೇತಿ ಹೆಂಗಸರು ಮದುವೆಯಾದ ಮೇಲೆ ಗಂಡಿಗೆ ಸೀರೆ ಉಡುವುದು ಒಂದು ಸಾಮಾಜಿಕ ನಿಯಮವಾಗಿತ್ತು. ಗೌರೀ ಉಪದೇಶ ಮತ್ತು ಗಂಡಿಗೇ ಸೀರೆ ಎರಡೂ ಸಂಕೇತಿ ಸ್ತ್ರೀ ಸಮಾಜದ ಎರಡು ಮುಖ್ಯವಾದ ನಿಯಮಗಳಾಗಿದ್ದವು. ಬರಬರತ್ತಾ ಈ ನಿಯಮಗಳು ಸಡಿಲವಾಗತೊಡಗಿದವು. ಈಗಂತೂ ಇದನ್ನು ಯಾರೂ ಪಾಲಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಈಗಿನ ವಿದ್ಯಾಭ್ಯಾಸ ಪದ್ಧತಿ. ಈಗಿನ ಸಭ್ಯತೆಯು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಬಹಳ ಬದಲಾಯಿಸಿದೆ.

ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಪುರುಷರು ವೇದಾಧ್ಯಯನ ಮಾಡುತ್ತಿದ್ದರು ; ಪೂರ್ಣವಾಗಿಲ್ಲದಿದ್ದರೆ ಸ್ವಲ್ಪವನ್ನಾದರೂ ಕಲಿಯುತ್ತಿದ್ದರು. ಸಂಧ್ಯಾವಂದನೆ ಮತ್ತು ದೇವರ ಪೂಜೆ ಮಂತ್ರಗಳನ್ನು ತಪ್ಪದೆ ಎಲ್ಲರೂ ಕಲಿಯುತ್ತಿದ್ದರು. ಎಂಟರಿಂದ ಹನ್ನೆರಡು ವರ್ಷದ ಒಳಗೆ ಬಾಲಕರಿಗೆ ಉಪನಯನವಾಗುತ್ತಿತ್ತು. ಅನಂತರ ವೇದಾಧ್ಯಯನ. ಆದರೆ ಈಗ ಉಪನಯನವಾದರೂ ಯಾರೂ ವೇದ ಕಲಿಯುವುದಿಲ್ಲ. ಸಂಧ್ಯಾವಂದನೆ, ದೇವರಪೂಜೆ ಮಾಡುವುದಿಲ್ಲ. (ಕೆಲವು ಅಪವಾದಗಳಿರಬಹುದು.) ಎಲ್ಲರೂ ಡಾಕ್ಟರು ಇಂಜಿನಿಯರುಗಳಾಗಲು ಪ್ರಯತ್ನಿಸುತ್ತಾರೆ. ಇದರಲ್ಲಿ ಹೆಣ್ಣು ಗಂಡುಗಳೆಂಬ ಭೇದವಿಲ್ಲ. ಹೆಣ್ಣುಮಕ್ಕಳು ಕೂಡ ತಾವೂ ಪುರುಷರಂತೆ ಡಾಕ್ಟರ್ ಅಥವಾ ಇಂಜಿನಿಯರಾಗಬೇಕೆಂದು ಬಯಸಿ ಅದನ್ನೇ ಓದುತ್ತಾರೆ. ಅವರ ಈಗಿನ ಕಾಲದ ಉಡುಗೆ ತೊಡುಗೆಗಳಲ್ಲೂ ಬಹಳ ಬದಲಾವಣೆಯಾಗಿದೆ. ಐವತ್ತು ವರ್ಷಗಳ ಹಿಂದಿನ ಸೀರೆಗಳು ಈಗ ಬಹಳ ಕಡಮೆ. ಗಂಡು ಹುಡುಗರಂತೆ ಶರಟು, ಪ್ಯಾಂಟ್ ಧರಿಸುವುದು, ತಲೆಕೂದಲನ್ನು ಕತ್ತರಿಸಿಕೊಳ್ಳುವುದು ಸರ್ವೇಸಾಧಾರಣವಾಗಿಬಿಟ್ಟಿದೆ. ಈಗ ಎಷ್ಟೋ ಸಲ ರಸ್ತೆಯಲ್ಲಿ ಬರುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಗುಂಪಿನಲ್ಲಿ ಗಂಡಸರು ಯಾರು ? ಹೆಂಗಸರು ಯಾರು ? ಎಂದು ತಿಳಿಯುವುದೂ ಕಷ್ಟವಾಗುತ್ತದೆ. ಏಕೆಂದರೆ ಎಲ್ಲರ ಉಡುಗೆ, ತೊಡುಗೆಯೂ ಒಂದೇ ತೆರನಾಗಿರುತ್ತದೆ.

ಮಡಿ ಮೈಲಿಗೆ ವಿಷಯದಲ್ಲೂ ಆಗಿನ ಕಾಲದ ಆಚಾರವೇ ಬೇರೆಯಾಗಿತ್ತು. ನಮ್ಮ ತಾಯಿ ಪ್ರಾತಃಕಾಲ ಬೇಗ ಎದ್ದು, ಮುಖ ತೊಳೆದುಕೊಂಡು ಉದಯರಾಗ ಹಾಡುತ್ತಾ ಬಾಗಿಲು ಸಾರಿಸಿ ರಂಗವಲ್ಲಿ ಹಾಕುತ್ತಿದ್ದರು. ಈ ಹಾಡನ್ನು ಕೇಳುವಾಗ ನಮಗೆ ಬಹಳ ಆನಂದವಾಗುತ್ತಿತ್ತು. ಆಗ ನಾವೂ ಹಾಸಿಗೆಯಿಂದ

ಎದ್ದುಬಿಡುತ್ತಿದ್ದೆವು. ಅನಂತರ ಮುಸುರೆ ಪಾತ್ರೆ ತೊಳೆದು, ಸ್ನಾನ ಮಾಡಿ ಮಡಿ ಸೀರೆಯನ್ನು (ಗಂಡಿಗೆ) ಉಟ್ಟು ತಿಂಡಿ, ಅಡುಗೆ, ನಿತ್ಯಗೌರೀಪೂಜೆ, ತುಳಸೀಪೂಜೆ ಮಾಡುತ್ತಿದ್ದರು. ಅಡುಗೆ ಮಾಡುವಾಗ ನಮ್ಮ ತಾಯಿ ಯಾವುದಾದರೂ ಹಾಡುಗಳನ್ನು ಹೇಳುತ್ತಿರುತ್ತಿದ್ದರು. ಅವರು ತುಂಬಾ ಚೆನ್ನಾಗಿ ಹಾಡು ಹೇಳುತ್ತಿದ್ದರು. ಅವರ ಕಂಠಸಿರಿ ಬಹಳ ಚೆನ್ನಾಗಿತ್ತು. ಸಾಮಾನ್ಯವಾಗಿ ನಮ್ಮ ಊರಿನಲ್ಲಿದ್ದ ನಮ್ಮ ದೊಡ್ಡಮ್ಮ, ಚಿಕ್ಕಮ್ಮ ಎಲ್ಲರೂ ಹಾಡುಗಳನ್ನು ಚೆನ್ನಾಗಿ ಹೇಳುತ್ತಿದ್ದರು. ಹೆಣ್ಣುಮಕ್ಕಳು ನಮ್ಮ ತಾಯಿ ಹತ್ತಿರ ಬಂದು ಪ್ರತಿನಿತ್ಯ ಹಾಡುಗಳನ್ನು ಹೇಳಿಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ಮದುವೆಯಾಗುವ ಹೆಣ್ಣುಮಕ್ಕಳು ಕೆಲವು ಹಾಡುಗಳನ್ನು ಕಲಿತುಕೊಳ್ಳುವುದು ಅನಿವಾರ್ಯವಾಗಿತ್ತು. ಕೆಲವು ಹಸೆಯ ಹಾಡುಗಳು ಮತ್ತು ದೇವರನಾಮಗಳನ್ನು ನಮ್ಮ ತಾಯಿ ಅವರಿಗೆ ಹೇಳಿಕೊಡುತ್ತಿದ್ದರು. ನಮ್ಮ ಸೋದರತ್ತೆ ಸೊಸೆ ಕಾಡಮ್ಮನವರು ಹಾಡು ಹೇಳುವುದರಲ್ಲಿ ಬಹಳ ಪ್ರಸಿದ್ಧರಾಗಿದ್ದರು. ಅವರು ಮದುವೆಗಳಲ್ಲಿ ಹಾಡುಗಳನ್ನು ಹೇಳುತ್ತಿದ್ದರು. ಕೆಲವು ಸಲ ನಮ್ಮ ತಾಯಿ ಮತ್ತು ಕಾಡಮ್ಮ ಇಬ್ಬರೂ ಒಟ್ಟಿಗೆ ಹಾಡುತ್ತಿದ್ದರು.

ನಮ್ಮ ತಾಯಿ ಪ್ರಾತಃಕಾಲ ಸ್ನಾನ ಮಾಡಿ ಮಡಿ ಸೀರೆ ಉಟ್ಟುಕೊಂಡ ಮೇಲೆ, ಪುನಃ ರಾತ್ರಿ ಊಟ ಮುಗಿಸಿ ಮಲಗುವವರೆಗೂ ಮಡಿಯಲ್ಲೇ ಇರುತ್ತಿದ್ದರು. ಆಗ ಮಕ್ಕಳು ಯಾರೂ ಮುಟ್ಟುವ ಹಾಗಿರಲಿಲ್ಲ. ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳಬೇಕಾದರೆ ಅವರ ಬಟ್ಟೆ ಬಿಚ್ಚಿಸಿ ಎತ್ತಿಕೊಳ್ಳುತ್ತಿದ್ದರು. ಅಕಸ್ಮಾತ್ ಯಾರಾದರೂ ಮೈಲಿಗೆಯಲ್ಲಿ ಮುಟ್ಟಿದರೆ, ಬಟ್ಟೆ ತಗುಲಿದರೆ, ಉಟ್ಟ ಸೀರೆಯನ್ನು ತೆಗೆದು ಮಡಿ-ಸೀರೆ ಉಟ್ಟುಕೊಳ್ಳುತ್ತಿದ್ದರು. ಇದು ಕೇವಲ ನಮ್ಮ ತಾಯಿಯ ನಿಯಮವಾಗಿರಲಿಲ್ಲ. ಹಳ್ಳಿಗಾಡಿನ ಇಡೀ ಸಂಕೇತಿ ಜನಾಂಗದ ಮಹಿಳೆಯರ ನೀತಿ ನಿಯಮವಾಗಿತ್ತು. ಕೆಲವು ಗಂಡಸರು ಕೂಡ ಮಡಿಯ ನಿಯಮವನ್ನು ಅನುಸರಿಸುತ್ತಿದ್ದರು. ಪೇಟೆಗೆ ಹೋಗಿ ಬಂದರೆ ಮನೆಗೆ ಬಂದು ಸ್ನಾನ ಮಾಡಿ, ಮಡಿ ಬಟ್ಟೆ ಹಾಕಿಕೊಳ್ಳುವುದು, ಮಕ್ಕಳು ಸ್ಕೂಲಿನಿಂದ ಬಂದ ಮೇಲೆ ಆ ಬಟ್ಟೆಗಳನ್ನು ಬಿಚ್ಚಿ, ಬೇರೆ ಬಟ್ಟೆ ಹಾಕುವುದು ಸಾಮಾನ್ಯವಾಗಿ ಸಂಕೇತಿ ಕುಟುಂಬಗಳಲ್ಲಿ ವಾಡಿಕೆಯಾಗಿತ್ತು. ಇದಲ್ಲದೆ ಪತಿ ಊಟ ಮಾಡಿದ ಎಂಜಲು ಎಲೆಯಲ್ಲಿ ಪತ್ನಿ ಊಟ ಮಾಡುವುದು ಆಗಿನ ಕಾಲದ ಪತಿವ್ರತಾಧರ್ಮದ ಒಂದು ನಿಯಮವಾಗಿತ್ತು.

ಆಗಿನ ಕಾಲದಲ್ಲಿ ಸಂಕೇತಿಗಳಲ್ಲಿ ಬಾಲ್ಯವಿವಾಹ ಪದ್ಧತಿ ಇತ್ತು. ಹೆಣ್ಣು ಮಕ್ಕಳಿಗೆ ಹತ್ತು ಹನ್ನೆರಡು ವರ್ಷದೊಳಗೆ ವಿವಾಹ ಮಾಡಿಬಿಡುತ್ತಿದ್ದರು. ವರನು ಹೇಗಿದ್ದರೂ ಸರಿಯೆ. ಅವನು ಅವಿದ್ಯಾವಂತನಿರಬಹುದು, ಕುರೂಪಿಯಾಗಿರಬಹುದು, ಬಡವನಾಗಿರಬಹುದು, ವಧುವಿಗಿಂತ ವಯಸ್ಸಿನಲ್ಲಿ ತುಂಬಾ ದೊಡ್ಡವನಾಗಿರಬಹುದು. ಆದರೂ ತಂದೆ-ತಾಯಿಗಳು ಇದು ಯಾವುದನ್ನೂ ಪರಿಗಣಿಸುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಬಡತನ. ತಮ್ಮ ಮಗಳಿಗೆ ಹೇಗೋ ಲಗ್ನ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡರಾಯಿತು - ಇದು ಅವರ ಧೋರಣೆಯಾಗಿತ್ತು. ಒಂದು ಹೆಣ್ಣಿಗೆ ಒಂದು ಗಂಡು ಎಂಬುದು ಅವರ ಧೋರಣೆ. ಆದರೆ ಶ್ರೀಮಂತರು ಹಾಗೆ ಮಾಡುತ್ತಿರಲಿಲ್ಲ. ಕೆಲವರು ತಮ್ಮ ಮಗಳಿಗೆ ಯೋಗ್ಯನಾದ ವರನನ್ನು ಹುಡುಕಿ ಮಾಡುತ್ತಿದ್ದರು. ಆದರೆ ಇಂತಹ ಮದುವೆಗಳು ವಿರಳ. ಪಟ್ಟಣದವರಾಗಲೀ, ಹಳ್ಳಿಯವರಾಗಲೀ, ಬಡವರಾದರೆ ಒಂದು ಗಂಡು ಸಿಕ್ಕಿದರೆ ಸಾಕು, ಲಗ್ನ ಮಾಡಿಬಿಡುವುದು. ಇದರಲ್ಲಿ ವಧುವಿನ ಪಾತ್ರ ಏನೂ ಇಲ್ಲ. ಚಿಕ್ಕ ವಯಸ್ಸಿನವಳಾದ್ದರಿಂದ ಅವಳಿಗೆ ಏನೂ ತಿಳಿಯುತ್ತಿರಲಿಲ್ಲ. ಲಗ್ನಕಾಲಕ್ಕೆ ಕೆಲವರಿಗೆ ಪ್ರಾಥಮಿಕ ವಿದ್ಯಾಭ್ಯಾಸ ಕೂಡ ಆಗಿರುತ್ತಿರಲಿಲ್ಲ. ಆದುದರಿಂದ ಅವಳ ಇಷ್ಟ ಅಥವಾ ಅನಿಷ್ಟಗಳು ಏನೂ ಇರಲಿಲ್ಲ. ತಂದೆ ತಾಯಿಗಳ ತೀರ್ಮಾನವೇ ಕಡೆಯದಾಗಿತ್ತು.

ಆಗಿನ ಕಾಲದಲ್ಲಿ ಲಗ್ನಗಳು ಸರಳವಾಗಿ ನಡೆಯುತ್ತಿದ್ದವು. ಆಗ ಆರು ದಿನಗಳ ಲಗ್ನ. ವಧುವಿನ ಮನೆಯಲ್ಲೇ ಧಾರೆ ಎರೆಯುವುದು ಒಂದು ವಾಡಿಕೆ. ಈಗಿನ ಕಾಲದಂತೆ ವರದಕ್ಷಿಣೆ, ವರೋಪಚಾರಕ್ಕೆ ಖರ್ಚು ಮಾಡಬೇಕಾಗಿರಲಿಲ್ಲ. ಅವು ಬಹಳ ಸರಳವಾಗಿ ನಡೆಯುತ್ತಿದ್ದವು -ಆದರೆ ಶಾಸ್ತ್ರೋಕ್ತವಾಗಿ, ಹಿಂದಿನ ಪದ್ಧತಿಯಂತೆ. ಉಪನಯನವೂ ಅಷ್ಟೆ, ಒಂಬತ್ತರಿಂದ ಹನ್ನೆರಡು - ಹದಿಮೂರು (೧೨-೧೩) ವರ್ಷದೊಳಗೆ ಆಗುತ್ತಿತ್ತು. ಅದೂ ನಾಲ್ಕು ದಿವಸದ ಸಂಭ್ರಮ- ಆದರೆ ಬಹಳ ಸರಳ ರೀತಿಯಲ್ಲಿ, ಶಾಸ್ತ್ರೋಕ್ತವಾಗಿ. ಆಗಿನ ಕಾಲದಲ್ಲಿ ಲಗ್ನಗಳು ಮನೆಗಳಲ್ಲೇ, ಅದರಲ್ಲೂ ಹೆಚ್ಚಾಗಿ ಹಳ್ಳಿಗಳಲ್ಲಿ ನಡೆಯುತ್ತಿದ್ದವು. ಪಟ್ಟಣದವರು ಕೂಡಾ ಹಳ್ಳಿಗಳಿಗೆ ಬಂದು ಲಗ್ನ ಮಾಡುತ್ತಿದ್ದರು. ಇದಕ್ಕೆ ಕಾರಣವೇನೆಂದರೆ ಅಲ್ಲಿ ಎಲ್ಲರ ಸಹಕಾರವಿತ್ತು. ಅಡುಗೆ ಮಾಡುವುದು, ಬಾವಿ ಅಥವಾ ಕೆರೆಯಿಂದ ಗಾಡಿಗಳಲ್ಲಿ ನೀರು ತುಂಬಿಕೊಂಡು ಬರುವುದು, ತಾವು ಬೆಳೆದ ತರಕಾರಿಗಳನ್ನು ತಂದುಕೊಡುವುದು, ಹಾಲು ಮೊಸರು ಕೊಡುವುದು, ಬೀಗರಿಗೆ ಇಳಿದುಕೊಳ್ಳಲು ಮನೆಗಳನ್ನು ಬಿಟ್ಟುಕೊಡುವುದು, ತರಕಾರಿ ಹಚ್ಚುವುದು, ಊಟಕ್ಕೆ ಎಲೆ ಹಾಕುವುದು ಹೀಗೆ ಅನೇಕ ರೀತಿಯಲ್ಲಿ ಸಹಾಯ ದೊರೆಯುತ್ತಿತ್ತು. ಅಡುಗೆ ಮಾಡುವುದು ಹೆಂಗಸರ ಕೆಲಸ- ಅದರಲ್ಲೂ ವಿಧವೆಯರದಾಗಿತ್ತು. ಊಟಕ್ಕೆ ಬಡಿಸುವ

ಕೆಲಸ ಊರಿನ ಯುವಕರ ಮತ್ತು ಬಂದ ನೆಂಟರಿಷ್ಟರ ಪಾಲಿನದು. ಆಗಿನ ಕಾಲದಲ್ಲಿ ಮದುವೆ ಮುಂಜಿಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿದ್ದ ತರಕಾರಿಗಳೆಂದರೆ ತಮ್ಮತಮ್ಮ ಹಿತ್ತಲಿನಲ್ಲಿ ಬೆಳೆದ ಕುಂಬಳಕಾಯಿ, ಪರಂಗಿಕಾಯಿ, ಹಲಸಿನಕಾಯಿ, ಬಾಳೇಕಾಯಿ, ಕೆಸವಿನದಂಟು, ತೆಂಗಿನಕಾಯಿ, ನಿಂಬೆಹಣ್ಣು ಮೊದಲಾದವು. ಅವಕ್ಕೆ ದುಡ್ಡು ಕೊಡಬೇಕಾಗಿರಲಿಲ್ಲ. ಹೀಗೆ ಹಳ್ಳಿಯವರ ಮತ್ತು ನೆಂಟರಿಷ್ಟರ ಸಹಕಾರ ಮತ್ತು ಸಹಾಯದಿಂದ ಕಡುಬಡವರು ಕೂಡ ತಮ್ಮ ಹೆಣ್ಣುಮಕ್ಕಳ ಲಗ್ನವನ್ನು ಕಮ್ಮಿ ಖರ್ಚಿನಲ್ಲಿ ಮಾಡಲು ಸಾಧ್ಯವಾಗುತ್ತಿತ್ತು.

ಮದುವೆಗಳು ಆರೇಳು ದಿವಸ ನಡೆಯುತ್ತಿದ್ದುದರಿಂದ ನಿತ್ಯವೂ ಔಪಾಸನೆಯ ಜತೆಗೆ, ಬಂದವರ ಮನೋರಂಜನೆಗಾಗಿ ಉರುಟಣೆ ಉಯ್ಯಾಲೆ ಹಾಡುಗಳು, ಬಾಗಿಲು ತಡೆಯುವುದು, ವಧುವಿನಿಂದ ವರನನ್ನು ಬಾಗಿಲ ಹೊರಗೆ ನಿಲ್ಲಿಸಿ ತಡೆಯುವುದು, ಹಾಡುಗಳನ್ನು ಹೇಳಿಸುವುದು, ಗುಬ್ಬಿ ತಟ್ಟಿಸುವುದು ನಡೆಯುತ್ತಿದ್ದವು. ಇವೆಲ್ಲ ಯುವಕ ಯುವತಿಯರು ಸೇರಿಕೊಂಡು ವಧುವರರನ್ನು ಕೇಂದ್ರವಾಗಿಟ್ಟುಕೊಂಡು ಮಾಡುತ್ತಿದ್ದ ವಿನೋದ ಕಾರ್ಯಕ್ರಮಗಳಾಗಿದ್ದವು. ಹೀಗೆ ಅನೇಕ ಕಾರ್ಯಕ್ರಮಗಳು ಮಧ್ಯದ ನಾಲ್ಕು ದಿವಸಗಳಲ್ಲಿ ನಡೆಯುತ್ತಿದ್ದವು.

ನಮ್ಮ ಮನೆಯಲ್ಲಿಯೂ ಇದೇ ರೀತಿ ನಮ್ಮೆಲ್ಲರ ಲಗ್ನಗಳೂ ನಡೆದವು. ನಮ್ಮ ಊರಿನಲ್ಲೂ ನಡೆದವು. ಆಗಿನ ಕಾಲದಲ್ಲಿ ಬಸ್ಸು, ಕಾರುಗಳ ಅನುಕೂಲವಿರಲಿಲ್ಲ. ಬೇರೆ ಹಳ್ಳಿಗಳಿಂದ ಬರುವ ನೆಂಟರಿಷ್ಟರು ಸಾಮಾನ್ಯವಾಗಿ ಎಂಟು-ಹತ್ತು ಮೈಲಿಗಳನ್ನು ನಡೆದು ಕೊಂಡೋ ಅಥವಾ ಎತ್ತಿನ ಗಾಡಿಯಲ್ಲೋ ಬರುತ್ತಿದ್ದರು. ವರ ಮತ್ತು ಅವನ ನೆಂಟರಿಷ್ಟರು ಕೂಡ ವಧುವಿನ ಊರು ಎಷ್ಟೇ ದೂರವಿರಲಿ, ಎತ್ತಿನಗಾಡಿಯಲ್ಲೇ ಪ್ರಯಾಣ ಮಾಡುತ್ತಿದ್ದರು. ಆದುದರಿಂದ ಕೆಲವು ಲಗ್ನಗಳಲ್ಲಿ ಗಂಡಿನವರು ಹೆಣ್ಣಿನ ಊರಿಗೆ ತಲುಪಬೇಕಾದರೆ ಸಮರಾತ್ರಿಯಾಗುತ್ತಿತ್ತು (ಸುಮಾರು ಹನ್ನೆರಡು ಅಥವಾ ಒಂದು ಗಂಟೆ ರಾತ್ರಿ). ಬಂದ ಮೇಲೆ ವರಪೂಜೆ ಶಾಸ್ತ್ರವಾಗಿ ಎಲ್ಲರೂ ಊಟ ಮಾಡುವ ವೇಳೆಗೆ ಮೂರು ಗಂಟೆ ಆಗಿದ್ದೂ ಉಂಟು. ಇದಕ್ಕೆ **ಬಿಸಲಡಿಗೆ ಊಟ** ಎನ್ನುತ್ತಿದ್ದರು. ಇದರ ಅರ್ಥ ವರನ ಕಡೆಯವರು ಹಗಲೆಲ್ಲಾ ಬಿಸಿಲಿನಲ್ಲಿ ಪ್ರಯಾಣ ಮಾಡಿ ಬಂದಿದ್ದರಿಂದ ಅವರಿಗೆ ರಾತ್ರಿ (ತಂಪು ಹೊತ್ತಿನಲ್ಲಿ) ಊಟ ಮಾಡಿಸುವುದೆಂದಿರಬೇಕು. ಆದರೆ ಊಟ ಹೊತ್ತಾಗಿ ಸಮರಾತ್ರಿಯಾಗಿದ್ದರೆ, 'ಬಿಸಲಡಿಗೆ ಊಟ, ಇನ್ನೇನು ಸೂರ್ಯೋದಯವಾಗುತ್ತದೆ' ಎಂದು ಹಾಸ್ಯಕ್ಕಾಗಿ ಹೇಳುತ್ತಿದ್ದುದೂ ಉಂಟು. ನಮ್ಮ ಸಂಕೇತಿ ಲಗ್ನಗಳ ಇನ್ನೊಂದು ವಿಶೇಷವೆಂದರೆ ಒಂದು ಕಡೆ ಲಗ್ನದ ಕಾರ್ಯಗಳು, ಹವನ ಹೋಮಗಳು ನಡೆಯುತ್ತಿದ್ದರೆ, ಇನ್ನೊಂದು ಕಡೆ ಇಸ್ಪೀಟಿನ ಕಚೇರಿಗಳು ನಡೆಯುತ್ತಿದ್ದವು. ಇದು ಆಗಿನ ಕಾಲದಲ್ಲೂ ಇತ್ತು, ಈಗಿನ ಕಾಲದಲ್ಲೂ ಉಂಟು.

ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ಸಂಕೇತಿಗಳ ಉದ್ಯೋಗವೆಂದರೆ ಅಡಕೆ ಮತ್ತು ಎಲೆ ಹಂಬಿನ ತೋಟದ ವ್ಯವಸಾಯ, ವಿದ್ಯಾಭ್ಯಾಸವೆಂದರೆ ವೇದಾಧ್ಯಯನ; ತೋಟದಲ್ಲಿ ಅಗತೆ, ಹಂಬಿಗೆ ನೀರು ಹಾಕುವುದು, ಸಂಧ್ಯಾಕಾಲದಲ್ಲಿ ವೇದಾಧ್ಯಯನ ಮತ್ತು ಅಧ್ಯಾಪನ. ಕೆಲವರು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗಲೂ ತಮ್ಮ ಮಕ್ಕಳಿಗೆ ವೇದ ಪಾಠ ಹೇಳುತ್ತಿದ್ದರು. ನಮ್ಮ ಹಳ್ಳಿಯಲ್ಲಿ ಆಗಿನ ಕಾಲದಲ್ಲಿ ವೇದ ಹೇಳಿಕೊಡುವವರು ಯಾರೂ ಇರಲಿಲ್ಲ. ಆದುದರಿಂದ ನಮ್ಮ ತಂದೆಯವರಿಗಾಗಲೀ, ನಮ್ಮ ದೊಡ್ಡಪ್ಪ, ಚಿಕ್ಕಪ್ಪನವರಿಗಾಗಲೀ ವೇದ ಪಾಠ ಆಗಿರಲಿಲ್ಲ. ಆದರೆ ಸಂಧ್ಯಾವಂದನೆ ಮಂತ್ರ ಮತ್ತು ದೇವರಪೂಜೆ ಮಂತ್ರಗಳನ್ನು ಅವರು ಕಲಿತಿದ್ದರು. **ಪ್ರತಿನಿತ್ಯ ಸಂಧ್ಯಾವಂದನೆ, ಹಬ್ಬ ಹರಿದಿನಗಳಲ್ಲಿ ದೇವರಪೂಜೆ ಮಾಡುವುದು ವಾಡಿಕೆಯಾಗಿತ್ತು.**

ರಜಾ ದಿನಗಳಲ್ಲಿ ನಾನು ಊರಿಗೆ ಹೋದಾಗ ನಮ್ಮ ತಂದೆಯವರ ಜತೆಯಲ್ಲಿ ತೋಟಕ್ಕೆ ಹೋಗಿ ಅಗೆಯುವುದು, ಹಂಬಿಗೆ ನೀರು ಹಾಕುವುದು ಮೊದಲಾದ ಕೆಲಸಗಳಲ್ಲಿ ಅವರಿಗೆ ನೆರವಾಗುತ್ತಿದ್ದೆ. ಕೆಲವು ಸಲ ದನಗಳನ್ನು ಮೇಯಿಸಲೂ ಹೋಗುತ್ತಿದ್ದೆ.

ನಮ್ಮ ತಾಯಿಯವರು ಪ್ರತಿನಿತ್ಯ ಗೌರೀಪೂಜೆ ಮತ್ತು ತುಳಸೀ ಪೂಜೆಯನ್ನು ಮಾಡಿ, ಎಲ್ಲರಿಗೂ ಬಡಿಸಿ ಅನಂತರ ತಾವು ಊಟ ಮಾಡುತ್ತಿದ್ದರು. ನಮ್ಮ ತಂದೆ ಎಲ್ಲಾದರೂ ಹೊರಗಡೆ ಹೋಗಿದ್ದು ಬರುವುದು ಹೊತ್ತಾದರೆ, ಅವರು ಬರುವವರೆಗೂ ಕಾದಿದ್ದು ಬಂದಮೇಲೆ ಅವರಿಗೂ ಬಡಿಸಿ ಅನಂತರ ತಾವು ಊಟ ಮಾಡುತ್ತಿದ್ದರು. ತಂದೆಯವರು ಊಟ ಮಾಡುವುದಕ್ಕೆ ಮುಂಚೆ ಯಾವಾಗಲೂ ಇವರು ಮಾಡುತ್ತಿರಲಿಲ್ಲ.

ನಾಗರಪಂಚಮಿ, ಸುಬ್ಬರಾಯನ ಷಷ್ಠಿ ಮೊದಲಾದ ಹಬ್ಬಗಳಲ್ಲಿ ತರಕಾರಿಗಳನ್ನು ಎಲ್ಲರ ಮನೆಗೂ (ಸ್ವಲ್ಪ ಸ್ವಲ್ಪ) ಕೊಡುವುದು, ತೆಗೆದುಕೊಳ್ಳುವುದು, ಹಾಗೆಯೇ ಗೋಕುಲಾಷ್ಟಮಿ ಹಬ್ಬದಲ್ಲಿ ತಿಂಡಿಗಳನ್ನು ಕೊಟ್ಟು ತೆಗೆದುಕೊಳ್ಳುವುದು ಆಗಿನ ಕಾಲದ ಪದ್ಧತಿಯಾಗಿತ್ತು.

ಹೀಗೆ ಅನೇಕ ಪದ್ಧತಿಗಳು ಸಂಕೇತಿ ಸಮಾಜದಲ್ಲಿ ಇದ್ದು ಸಮಾಜವಾದಿ ಸ್ವರೂಪದ ದ್ಯೋತಕವಾಗಿದ್ದವು. ಒಬ್ಬರಿಗೊಬ್ಬರಿಗೆ ಎಷ್ಟೇ ವೈಮನಸ್ಯಗಳಿದ್ದರೂ ಲಗ್ನ , ಉಪನಯನ, ಸಾವು

ನೋವುಗಳ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಕೆಲಸವನ್ನು ಮಾಡುತ್ತಿದ್ದರು. ಇದು ಆಗಿನ ಸಂಕೇತಿಗಳ ಒಂದು ವಿಶೇಷ ಗುಣವಾಗಿತ್ತು. ಸಾಮಾನ್ಯವಾಗಿ ಎಲ್ಲರೂ ಬಡವರಾಗಿದ್ದುದರಿಂದ ಹೀಗೆ ಪರಸ್ಪರ ಸಹಾಯ ಮಾಡುವ ಗುಣಗಳು ಅವರಲ್ಲಿ ತಾನಾಗಿಯೇ ಬರುತ್ತಿದ್ದಂತೆ ಕಾಣುತ್ತದೆ. ಏಕೆಂದರೆ ದುಡ್ಡು ಕೊಟ್ಟು ಕೆಲಸ ಮಾಡಿಸುವ ಶಕ್ತಿ ಇರಲಿಲ್ಲ.

ಊರಿನಲ್ಲಿ ಯಾರ ಮನೆಯಲ್ಲಾದರೂ ಮದುವೆ, ಮುಂಜಿ ಅಥವಾ ಇನ್ನೇನಾದರೂ ವಿಶೇಷವಿದ್ದರೆ ಮನೆಯ ಹೆಂಗಸರು ಕಡೆಯ ಪಕ್ಷ ಮನೆಗೆ ಒಬ್ಬರಂತೆ ಹೋಗಿ ತರಕಾರಿ ಹಚ್ಚುವುದು, ತಿಂಡಿ ಮಾಡುವುದು, ಅಡುಗೆ ಮಾಡುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಊರಿನ ಯುವಕರು ನದಿ ಅಥವಾ ಕೆರೆಯಿಂದ ಗಾಡಿಯಲ್ಲಿ ನೀರು ತುಂಬಿಕೊಂಡು ಬರುವುದು, ಹಾಕುವುದು, ಮೊದಲಾದ ಕೆಲಸಗಳನ್ನು ಬಹಳ ಉತ್ಸಾಹದಿಂದಲೂ ಸಂತೋಷದಿಂದಲೂ ಮಾಡುತ್ತಿದ್ದರು. ಚಿಕ್ಕವಯಸ್ಸಿನ ಹೆಣ್ಣು ಮಕ್ಕಳು ಎಲ್ಲರ ಊಟವಾದ ಮೇಲೆ ಎಲೆಗಳನ್ನು ತೆಗೆದು ಗೋಮೆ ಹಾಕುತ್ತಿದ್ದರು. ಪುರುಷರು ಊಟದ ನಡುವೆ ಶ್ಲೋಕಗಳನ್ನು ಹಾಡುತ್ತಿದ್ದರು. ಎಲ್ಲರ ಊಟವಾದ ಮೇಲೆ ತಾಂಬೂಲ ಕೊಡುವಾಗ ವೇದವೇತ್ತರೆಲ್ಲಾ ವೇದಘೋಷ ಮಾಡುವುದು, ಜಟೆ ಹೇಳುವುದು, ಅನಂತರ ಆಶೀರ್ವಾದ ಇದೆಲ್ಲಾ ಬಹಳ ಚೆನ್ನಾಗಿ ಕರ್ಣಮಧುರವಾಗಿರುತ್ತಿತ್ತು. ಈಗಲೂ ಈ ಪದ್ಧತಿಗಳು ಹಳ್ಳಿಗಳಲ್ಲಿ ಮತ್ತು ಕೆಲವು ಸಲ ಪಟ್ಟಣಗಳಲ್ಲಿಯೂ ನಡೆಯುತ್ತವೆ. ಹಿಂದಿನ ಕಾಲದಲ್ಲಿ ಸಂಕೇತಿಗಳು ವೇದ ಮತ್ತು ಸಂಗೀತಕ್ಕೆ ಸುಪ್ರಸಿದ್ಧ ರಾಗಿದ್ದರು.

ಹಬ್ಬ ಹರಿದಿನಗಳು : ಗೌರೀಗಣೇಶ, ನವರಾತ್ರೆ, ದೀಪಾವಳಿ, ಯುಗಾದಿಗಳನ್ನು ಸರಳವಾಗಿ ಆಚರಿಸುತ್ತಿದ್ದರು. ಆದರೂ ನಮಗೆ ಬಹಳ ಉತ್ಸಾಹ. ಅನೇಕ ಸಲ ನಮಗೆ ಯುಗಾದಿಗೆ ಹೊಸ ಬಟ್ಟೆಗಳಾಗಲಿ, ಗೌರೀಗಣೇಶನ ಹಬ್ಬಕ್ಕೆ ಪಟಾಕಿ ಮತಾಪಾಗಲಿ ಇಲ್ಲ. ಕಾರಣ ನಾನು ಮೊದಲೇ ಬರೆದಿರುವಂತೆ ಬಡತನ. ಆದರೂ ನಮ್ಮ ಉತ್ಸಾಹಕ್ಕೆ ಬಡತನವಿರಲಿಲ್ಲ. ತೋಟಕ್ಕೆ ನಮ್ಮ ತಂದೆ ಜತೆ ಹೋಗಿ ಬಾಳೆಕಂದು, ಮಾವಿನಸೊಪ್ಪು, ಅಲ್ಲಿ ಸಿಕ್ಕುವ ದಾಸವಾಳ, ಕರ್ಣಕುಂಡಲ ಮತ್ತು ನಾನಾ ಪತ್ರೆಗಳನ್ನು ಕುಯ್ದುಕೊಂಡು ಬರುತ್ತಿದ್ದೆವು. ಗಣೇಶನ ಹಬ್ಬ ಬಂದರೆ ಪಟಾಕಿಗೆ ಬದಲಾಗಿ ನಮ್ಮ ತೋಟದಲ್ಲೇ ಬೆಳೆದಿದ್ದ ಬಿದರಿನಿಂದ ಪೆಟ್ಲು ಮಾಡಿಕೊಡುತ್ತಿದ್ದರು. ಇದಕ್ಕೆ ಗಂಧದಕಾಯಿ ಅಥವಾ ಇನ್ನು ಯಾವುದಾದರೂ ಕಾಯಿಯನ್ನು ಹಾಕಿ ಹೊಡೆದು ಅದರ ಸದ್ದಿನಿಂದ ಆನಂದಪಡುತ್ತಿದ್ದೆವು. ಇದೆಲ್ಲಾ ನಾವು ತುಂಬಾ ಸಣ್ಣ ಹುಡುಗರಾಗಿದ್ದ ಕಾಲದ ವಿಷಯ.

ನಮ್ಮ ಸಂಕೇತಿಗಳ ಇನ್ನೊಂದು ವಿಶೇಷ ಎಂದರೆ ಅವರ ತಿಂಡಿಗಳು ಮತ್ತು ಅಡುಗೆ. ಪ್ರತಿ ದೊಡ್ಡಹಬ್ಬಗಳಲ್ಲಿಯೂ ನಮ್ಮ ತಾಯಿ ಕೊಳಕಟ್ಟೆ (ಸಿಹಿ ಮತ್ತು ಉದ್ದಿನ ಕಡಬು) ಮತ್ತು ಇಡ್ಲಿ ಮಾಡುತ್ತಿದ್ದರು. ನಮ್ಮ ಊರಿನಲ್ಲಿ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇದೇ ಅಡುಗೆ. ನಮಗೆ ಇದೇ ಮುಖ್ಯವಾದ ಭಕ್ಷ್ಯಭೋಜ್ಯವಾಗಿತ್ತು. ಇದು ಬಿಟ್ಟರೆ ಒಬ್ಬಟ್ಟು. ಇನ್ನು ಯಾವ ತಿಂಡಿಗಳನ್ನೂ ಹಬ್ಬಗಳಲ್ಲಿ ಮಾಡುತ್ತಿರಲಿಲ್ಲ. ಆದರೆ ಗೋಕುಲಾಷ್ಟಮಿಯಲ್ಲಿ ಮಾತ್ರ ಇದಕ್ಕೆ ಅಪವಾದ. ಆಗ ಚಕ್ಕುಲಿ, ಕೋಡುಬಳೆ, ಮುತ್ತಿನಸರ, ತೇನಗೊಳಲು, ಪುಳ್ಳಂಗಾ ಉಂಡೆ ಮತ್ತು ಇನ್ನೂ ಕೆಲವಾರು ತಿಂಡಿಗಳನ್ನು ಮಾಡುತ್ತಿದ್ದರು. ಎಷ್ಟೇ ಬಡತನವಾದರೂ ನಮ್ಮ ತಾಯಿ ಹೇಗೋ ಮಕ್ಕಳಿಗೆ ಸ್ವಲ್ಪವಾದರೂ ಮಾಡುತ್ತಿದ್ದರು. ನಮಗೆಲ್ಲಾ ಅದು ಬಹಳ ಮುಖ್ಯವಾದ ಹಬ್ಬ. ಕಾರಣ, ಕೆಲವು ದಿವಸಗಳಾದರೂ ಈ ತಿಂಡಿಗಳು ನಮಗೆ ಸಿಗುತ್ತಿದ್ದವು. ನಮ್ಮ ಜೀವನಯಾನವು ದಾರಿದ್ರ್ಯದ ಭಯಂಕರ ಅರಣ್ಯದಲ್ಲೂ ಹೇಗೋ ತನ್ನ ಮಾರ್ಗವನ್ನು ಮಾಡಿಕೊಂಡು, ಸಾಲ-ಸೋಲ, ರೋಗರುಜಿನ, ಉಪವಾಸ ಮೊದಲಾದವುಗಳನ್ನು ದಾಟಿಕೊಂಡು, ತನ್ನದೇ ಆದ ರೀತಿಯಲ್ಲಿ ನದಿಯಲ್ಲಿ ಬಿದ್ದ ತೃಣವು ಮುಂದೆ ಮುಂದೆ ಸಾಗುವಂತೆ, ಎಲ್ಲ ಕಷ್ಟಗಳನ್ನೂ ಸಹಿಸಿ, ಅನುಭವಿಸಿ, ಮುಂದೆ ಸಾಗುತ್ತಿತ್ತು.

ಜೀವನದಲ್ಲಿ ಸುಖವಿರಲಿ, ದುಃಖವಿರಲಿ ಕಾಲಚಕ್ರ ಮಾತ್ರ ಒಂದೇ ಗತಿಯಲ್ಲಿ ಉರುಳುತ್ತಿರುತ್ತದೆ. ಆದರೆ ದುಃಖದಲ್ಲಿ ಕಾಲವು ನಿಧಾನವಾಗಿಯೂ, ಸುಖದಲ್ಲಿ ವೇಗವಾಗಿಯೂ ಚಲಿಸುತ್ತದೆ ಎಂದು ಭಾವಿಸುತ್ತೇವೆ. ಏಕೆಂದರೆ ದುಃಖದಲ್ಲಿ ಕಾಲ ಕಳೆಯುವುದೇ ಕಷ್ಟ. ಆದರೆ ಸುಖದಲ್ಲಿ ಇದ್ದಾಗ ಅದು ಬೇಗ ಕಳೆದುಹೋದಂತೆ ಕಾಣುವುದು.

ಆಗಿನ ಕಾಲದಲ್ಲಿ ಮದುವೆಗಳಿಗಾಗಲೀ ಅಥವಾ ಇನ್ನು ಯಾವುದೇ ಶುಭ ಅಶುಭದ ಸಂದರ್ಭಗಳಿಗಾಗಲೀ ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ 'ಕರೆಯುವ' ಪದ್ಧತಿ ಬಹಳ ಕಡಮೆಯಾಗಿತ್ತು. ಆಯಾ ಹಳ್ಳಿಯ ಯಾರಾದರೂ ಒಬ್ಬರ ಮುಖಾಂತರ- ಅವರು ಸಂತೆಯಲ್ಲಿ ಸಿಕ್ಕಿದರೂ ಸರಿಯೆ- ಆ ಊರಿಗೆ ಅಕ್ಷತೆ ಕೊಡುವಂತೆ (ಊಟಕ್ಕೆ ಬರುವಂತೆ) ಹೇಳಿಕಳುಹಿಸುತ್ತಿದ್ದರು. ಹಾಗೆ ಹೇಳಿಕಳುಹಿಸಿದರೂ ಎಲ್ಲರೂ ಬರುತ್ತಿದ್ದರು.

ಆ ಕಾಲದ ನಮ್ಮ ವಿದ್ಯಾಭ್ಯಾಸದ ವಿಚಾರವಾಗಿ ಎರಡು ಮಾತು. ನಮ್ಮ ಊರಿನಲ್ಲಿ ಸರಕಾರಿ ಪಾಠಶಾಲೆ ಇತ್ತು ಎಂದು

ಈಗಾಗಲೇ ಹೇಳಿದ್ದೇನೆ. ಅದರಲ್ಲಿ ಇದ್ದದ್ದು ಒಂದೇ ಒಂದು ಹಾಲು. ಇನ್ನು ಬೇರೆ ರೂಮುಗಳು ಇರಲಿಲ್ಲ. ಒಬ್ಬರೇ ಅಧ್ಯಾಪಕರು. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಆ ಒಂದೇ ಹಾಲಿನಲ್ಲಿ ಪಾಠಪ್ರವಚನಗಳು; ಒಂದು ತರಗತಿಯ ಅನಂತರ ಇನ್ನೊಂದು ತರಗತಿಗೆ ಪಾಠ. ಸ್ಕೂಲಿನಲ್ಲಿ ಗಡಿಯಾರವಿರಲಿಲ್ಲ. ಮನೆಯಲ್ಲಂತೂ ಸೂರ್ಯನ ಸಂಚಾರ ಮತ್ತು ಮನೆಯ ಸೂರಿನ ನೆರಳನ್ನು ನೋಡಿಕೊಂಡು ನಾವು ಸ್ಕೂಲಿಗೆ ಹೋಗುತ್ತಿದ್ದೆವು. ಸ್ಕೂಲಿನಲ್ಲಿ ಬೆಂಚುಗಳಿರಲಿಲ್ಲ. ನೆಲದ ಮೇಲೇ ಕುಳಿತುಕೊಳ್ಳ ಬೇಕಾಗಿತ್ತು. ಕೆಲವು ಹುಡುಗರು ಒಂದೊಂದು ಸಣ್ಣ ಚಾಪೆಯನ್ನು ಸುತ್ತಿಕೊಂಡು (ಊಟದ ಚಾಪೆ) ಕೈಯಲ್ಲಿ ತರುತ್ತಿದ್ದರು. ಪುಸ್ತಕಗಳನ್ನು ಒಂದು ಹಳೆ ಪಂಚೆಯ ಚೂರಿನಲ್ಲಿ ಸುತ್ತಿಕೊಂಡು ಹೋಗುತ್ತಿದ್ದೆವು. ಈಗಿನ ಕಾಲದ ಹಾಗೆ ಬ್ಯಾಗುಗಳಿರಲಿಲ್ಲ.

ಪ್ರತಿ ಶುಕ್ರವಾರವೂ ಸ್ಕೂಲಿನಲ್ಲಿ ಸಾಯಂಕಾಲ ಪೂಜೆ ನಡೆಯುತ್ತಿತ್ತು. ಶಾಲೆಯ ಹುಡುಗರು ಸರದಿಯ ಮೇರೆಗೆ ಮನೆಯಿಂದ ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಿದ್ದರು. ಅದನ್ನು ದೇವರಿಗೆ ಒಡೆದು ಸಣ್ಣ ಸಣ್ಣ ಚೂರುಗಳನ್ನು ಮಾಡಿ ಎಲ್ಲರಿಗೂ ಚರಪು ಹಂಚುತ್ತಿದ್ದರು. ಪೂಜೆಗಿಂತಲೂ ನಮಗೆ ಚರಪಿನದು ಬಹಳ ಮುಖ್ಯವಾಗಿತ್ತು. ನಮ್ಮ ಅಧ್ಯಾಪಕರು ಮುಸಲ್ಮಾನರಾದರೂ ಅವರೇ ನಿಂತು ಪೂಜೆ ಮಾಡಿಸುತ್ತಿದ್ದರು. ಸ್ಕೂಲಿನಲ್ಲಿ ಯಾವ ದೇವರ ಪಟ ಅಥವಾ ವಿಗ್ರಹವು ಇದ್ದದ್ದೂ ಜ್ಞಾಪಕವಿಲ್ಲ. ಪೂಜೆಗೆ ಹೂವು ಕೂಡ ಇಲ್ಲ. ಕೇವಲ ಎರಡು ಊದುಗಡ್ಡಿ ಹತ್ತಿಸಿ ಒಂದು ಕಡೆ ಇಡುವುದು. ತೆಂಗಿನಕಾಯಿ ಒಡೆದು ಅದನ್ನು ಚಾಕುವಿನಲ್ಲಿ ಸಣ್ಣ ಚೂರು ಮಾಡಿ ಎಲ್ಲರಿಗೂ ಹಂಚುವುದು. ಇದೇ ಪೂಜೆ.

ಆಗಿನ ಕಾಲದಲ್ಲಿ ಸ್ಕೂಲಿನಲ್ಲಿ ಕೆಲವು ಅಧ್ಯಾಪಕರು ವಿದ್ಯಾರ್ಥಿಗಳು ತಪ್ಪು ಮಾಡಿದರೆ, ಪಾಠ ಸರಿಯಾಗಿ ಒಪ್ಪಿಸದಿದ್ದರೆ- ಕುರ್ಚಿ ಕೂರಿಸುವುದು, ಕೋದಂಡ ಹಾಕುವುದು, ಬೆತ್ತದಲ್ಲಿ ಚೆನ್ನಾಗಿ ಹೊಡೆಯುವುದು ಮೊದಲಾದ ಕಠಿಣ ಶಿಕ್ಷೆಗಳನ್ನು ಕೊಡುತ್ತಿದ್ದರು. ಇದರಿಂದ ನಮಗೆಲ್ಲ ಅಧ್ಯಾಪಕರನ್ನು ಕಂಡರೆ ಬಹಳ ಹೆದರಿಕೆ. ಶಾಲೆ ಪ್ರಾತಃಕಾಲ 'ಕಾಯೌ ಶ್ರೀಗೌರಿ' ಪ್ರಾರ್ಥನೆಯಿಂದ ಪ್ರಾರಂಭವಾಗಿ ಸಂಜೆ ಹೊತ್ತು 'ಪಶ್ಚಿಮ ದಿಕ್ಕಿನೋಳ್' ಪ್ರಾರ್ಥನೆಯೊಡನೆ ಮುಗಿಯುತ್ತಿತ್ತು. ಇದನ್ನು ಬಿಟ್ಟರೆ ಇನ್ನು ಯಾವ ವಿಚಾರಗಳೂ ನನಗೆ ಜ್ಞಾಪಕವಿಲ್ಲ. ಇದೆಲ್ಲಾ ಎಪ್ಪತ್ತು - ಎಪ್ಪತ್ತೈದು ವರ್ಷಗಳ ಹಿಂದಿನ ಮಾತು.

ಶಾಲೆಯ ಆಟಪಾಠಗಳು

ಆಗಿನ ಕಾಲದಲ್ಲಿ ಈಗಿನ ಪ್ರೈಮರಿ ಒಂದನೇ ತರಗತಿಯನ್ನು 'ಎ' ಕ್ಲಾಸು, ಎರಡನೇ ತರಗತಿಯನ್ನು 'ಬಿ' ಕ್ಲಾಸು ಎಂದು ಕರೆಯುತ್ತಿದ್ದರು. ಮೂರನೇ ತರಗತಿಯನ್ನು ಒಂದನೇ ಕ್ಲಾಸು ಎನ್ನುತ್ತಿದ್ದರು; ಅನಂತರ ಎರಡನೇ ತರಗತಿ, ಮೂರನೇ ತರಗತಿ. ಇದೇ ಪ್ರೈಮರಿ ಸ್ಕೂಲಿನ ಕಡೆಯ ತರಗತಿ. ನಾನು ನಮ್ಮ ಊರಿನಲ್ಲಿ 'ಎ' ಕ್ಲಾಸು ಮತ್ತು 'ಬಿ' ಕ್ಲಾಸು ಓದಿದ ಜ್ಞಾಪಕ. ಉಳಿದ ಮೂರು ತರಗತಿಗಳನ್ನು ಸಕಲೇಶಪುರ, ಅರಸೀಕೆರೆ, ಪಾಳ್ಯ ಮೊದಲಾದ ಊರುಗಳಲ್ಲಿ ಓದಿದೆ. ಮಿಡಲ್ ಮೊದಲನೇ ತರಗತಿಗೆ ಹಾಸನದಲ್ಲಿ ಸೇರಿಕೊಂಡೆ. ಆಗ ನನಗೆ ಸುಮಾರು ಹನ್ನೊಂದು ವರ್ಷ. ಖಾಯಿಲೆಯಿಂದ ಒಂದು ವರ್ಷ ವಿದ್ಯಾಭ್ಯಾಸ ನಿಂತುಹೋಯಿತು.

ಒಟ್ಟಿನಲ್ಲಿ ನಾಲ್ಕು ವರ್ಷಗಳ ಮಾಧ್ಯಮಿಕ ವಿದ್ಯಾಭ್ಯಾಸ ಕಳೆದು ಮೊದಲನೆಯ ದೊಡ್ಡ ಪರೀಕ್ಷೆ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಮಾಡಿದೆ. ಆಗಿನ ಕಾಲದಲ್ಲಿ ಅಷ್ಟಕ್ಕೇ ಸರಕಾರಿ ಕೆಲಸ ಸಿಕ್ಕುತ್ತಿತ್ತು. ಆದರೆ ನನಗೆ ಇನ್ನೂ ಮುಂದಕ್ಕೆ ಓದಬೇಕೆಂಬ ಆಸೆ ಇತ್ತು. ಬಡತನ ಆದ್ದರಿಂದ ಮೈಸೂರಿನಲ್ಲಿ ಮಹಾರಾಜ ಸಂಸ್ಕೃತ ಪಾಠಶಾಲೆಗೆ ಸೇರಿಕೊಳ್ಳಲಿ ಎಂದು ನಮ್ಮ ಅಜ್ಜ (ತಾಯಿಯ ತಂದೆ) ಪತ್ರ ಬರೆದರು. ಅದರಂತೆ ಪಾಠಶಾಲೆಗೆ ಸೇರಿಕೊಳ್ಳಲು ಮೈಸೂರಿಗೆ ಹೋದೆ. ಅಲ್ಲಿ ನಮ್ಮ ಸೋದರಮಾವನ ಮಗ ಹೈಸ್ಕೂಲಿಗೆ ಸೇರಿಕೊಂಡ. ಆಗ ನನಗೂ ಹೈಸ್ಕೂಲಿಗೆ ಸೇರಿಕೊಂಡು ಮುಂದಕ್ಕೆ ಓದಬೇಕೆನಿಸಿತು. ಆದುದರಿಂದ ಊರಿಗೆ ವಾಪಸ್ ಬಂದೆ. ಅನಂತರ ಹೇಗೋ ಕಷ್ಟಪಟ್ಟು ಹೈಸ್ಕೂಲಿಗೆ ಸೇರಿಕೊಂಡೆ. ಆ ವೇಳೆಗಾಗಲೇ ಸ್ಕೂಲು ಶುರುವಾಗಿ ಒಂದು ತಿಂಗಳಾಗಿತ್ತು. ಆಗಿನ ಮುಖ್ಯೋಪಾಧ್ಯಾಯರು ದಯಾಳು ಗಳಾದ್ದರಿಂದ ವಿಳಂಬವಾದರೂ ನನ್ನನ್ನು ಸ್ಕೂಲಿಗೆ ಸೇರಿಸಿ ಕೊಂಡರು.

ಸ್ಕೂಲಿಗೆ ಸೇರುವಾಗ ಒಂದು ಹಳೇ ಕೋಟನ್ನು ಹಾಕಿಕೊಂಡು ಹೋಗುತ್ತಿದ್ದೆ. ಅದೂ ಹರಿದು ಹೋಗಿತ್ತು. ಆಗಿನ ಕಾಲದಲ್ಲಿ ಕೋಟು ಟೋಪಿ ಹಾಕಿಕೊಂಡು ಸ್ಕೂಲಿಗೆ ಹೋಗುವ ನಿಯಮವಿತ್ತು. ಎಲ್ಲಾ ಹಳೆಯವೇ- ನಾನು ಮಿಡಲ್ ಸ್ಕೂಲಿಗೆ ಹೋಗುವಾಗ ಹೊಲೆಸಿಕೊಂಡ ಬಟ್ಟೆಗಳು. ಹೈಸ್ಕೂಲಿಗೆ ಬಂದ ಮೇಲೆ ಮೂರನೇ ತರಗತಿಗೆ ಬಂದಾಗ ಒಂದು ಶರಟು ಮತ್ತು ಒಂದು ಕೋಟು ಹೊಲೆಸಿಕೊಂಡ ಜ್ಞಾಪಕ. ಒಂದು ಪಂಚೆಯನ್ನು ನಮ್ಮ ತಂದೆ ತೆಗೆದುಕೊಟ್ಟಿದ್ದರು. ಇನ್ನೊಂದನ್ನು ಯಾರೋ ಪುಣ್ಯಾತ್ಮರು ನಾನು ಬ್ರಹ್ಮಚಾರಿಯಾದ್ದರಿಂದ ಸುಬ್ಬರಾಯನ ಷಷ್ಠಿಯಲ್ಲಿ ಊಟಕ್ಕೆ ಕರೆದು ಕೊಟ್ಟಿದ್ದರು. ಇನ್ನು ಒಂದು ಹಳೆಯದು. ಮೂರು ವರ್ಷ ಕಳೆದದ್ದಾಯಿತು.

ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಕ್ರಿಕೆಟ್ ಆಡುತ್ತಿದ್ದೆ. ಬರಬರುತ್ತಾ ಅದರ ಹುಚ್ಚು ಹೆಚ್ಚಾಗುತ್ತಾ ಬಂತು. ಹೈಸ್ಕೂಲಿನಲ್ಲಿ ಜೂನಿಯರ್ ಮತ್ತು ಸೀನಿಯರ್ ಟೀಮುಗಳಿದ್ದವು. ಜೂನಿಯರ್ ಟೀಮಿನಲ್ಲಿ ಆಡಲು ಶುರು ಮಾಡಿದೆ. ಮಿಡಲ್‌ಸ್ಕೂಲಿನಲ್ಲಿದ್ದಾಗ್ಗೆ ಈ ಆಟವನ್ನು ಸ್ವಲ್ಪ ಕಲಿತಿದ್ದರಿಂದ ಹೈಸ್ಕೂಲಿನಲ್ಲಿ ಆಡಲು ಸುಲಭವಾಯಿತು. ನನಗೆ ಬ್ಯಾಟಿಂಗ್‌ಗಿಂತ ಬೌಲಿಂಗ್‌ನಲ್ಲಿ ಹೆಚ್ಚು ಉತ್ಸಾಹ. ಹೈಸ್ಕೂಲಿನ ಮೊದಲನೇ ತರಗತಿಯಲ್ಲಿರುವಾಗ ಬೇರೆ ತರಗತಿಗಳ ಟೀಮಿನೊಡನೆ ಮ್ಯಾಚ್ ಆಡುತ್ತಿದ್ದೆವು. ಆಗ ಹೆಚ್ಚು ಉತ್ಸಾಹ ತೋರಿಸಿದ್ದರಿಂದ ನಮ್ಮ ಆಟದ ಅಧ್ಯಾಪಕರು (Sports Secretary) ನನ್ನನ್ನೇ ಜೂನಿಯರ್ ಟೀಮಿನ ಕ್ಯಾಪ್ಟನ್ನಾಗಿ ಮಾಡಿದರು. ಬರಬರುತ್ತಾ ವೇಗದ ಬೌಲರ್ ಆದೆ. ಮ್ಯಾಚ್‌ಗಳಲ್ಲಿ ಮೂರರಿಂದ ಆರು ವಿಕೆಟ್ ತೆಗೆದುಕೊಳ್ಳುತ್ತಿದ್ದೆ. ಆದರೆ ಎಸ್.ಎಸ್.ಎಲ್.ಸಿ. ತರಗತಿಗೆ ಬರುವ ವೇಳೆಗೆ ನಮ್ಮ ಆರ್ಥಿಕಸ್ಥಿತಿ ಬಹಳ ಕೆಟ್ಟಿತು. ಆದುದರಿಂದ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ ಅನ್ನುವ ಹಾಗೆ ಇತ್ತು. ನನ್ನ ಹತ್ತಿರ ಪ್ಯಾಂಟ್ ಅಥವಾ ಪಾಯಜಾಮ ಇರಲಿಲ್ಲ. ಒಂದೆರಡು ಸಲ ಪಂಚೆಯಲ್ಲಿ ಪಂದ್ಯವಾಡಿದೆ. ನನಗೆ ಬಹು ಮುಜುಗುರವಾಗುತ್ತಿತ್ತು. ಹನ್ನೊಂದು ಜನ ಆಟಗಾರರಲ್ಲಿ ನಾನೊಬ್ಬನೇ ಪಂಚೆಧಾರಿ. ಒಂದೊಂದು ಸಲ ಚೆಂಡು ಎಸೆಯುವಾಗ ಅಥವಾ ಕ್ಷೇತ್ರರಕ್ಷಣೆ ಮಾಡುವಾಗ ಪಂಚೆ ಬಿಚ್ಚಿ ಹೋಗುತ್ತಿತ್ತು. ಆದುದರಿಂದ ಒಂದೆರಡು ಪಂದ್ಯಗಳಿಗೆ ನಾನು ತಪ್ಪಿಸಿಕೊಂಡೆ. ಮುಂದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ. ಹೈಸ್ಕೂಲಿನ ಅನಂತರ ನನ್ನ ಕ್ರಿಕೆಟ್ ಆಟವೂ ನಿಂತುಹೋಯಿತು. ಹೀಗೆ ಬಡತನ ನನ್ನ ಊಟದ ಮೇಲೆಯೇ ಅಲ್ಲ , ಆಟದ ಮೇಲೆಯೂ ಪ್ರಭಾವ ಬೀರಿ ಅಟ್ಟಹಾಸ ಮಾಡಿತು.

ಹಾಸನದಲ್ಲಿ 'ಹಾಸನ ಜಮಖಾನ' ಎಂಬ ಒಂದು ಸಂಸ್ಥೆ ಇತ್ತು. ಇದು ಆಗಾಗ್ಗೆ ಬೇರೆ ಊರಿನ ಟೀಮುಗಳೊಡನೆ ಪಂದ್ಯವಾಡುತ್ತಿತ್ತು. ದೊಡ್ಡವರು ಆಟವಾಡುತ್ತಿದ್ದರು. ಬೇರೆ ಊರಿನವರ ಪಂಗಡಗಳು (ಟೀಮುಗಳು) ಆಡಲು ಬರುತ್ತಿದ್ದವು. ಈ ಪಂದ್ಯಗಳು ಸಾಮಾನ್ಯವಾಗಿ ಶನಿವಾರ ಭಾನುವಾರಗಳಲ್ಲಿ ನಡೆಯುತ್ತಿದ್ದವು. ನನಗೆ ಭಾನುವಾರ 'ವಾರ'ವಿರಲಿಲ್ಲ , ಊರಿಗೆ ಹೋಗುತ್ತಿದ್ದೆ. ಆದರೆ ಮ್ಯಾಚು ಇರುವ ದಿವಸ ಅದನ್ನು ನೋಡಲು ಅಲ್ಲೇ ಉಳಿದುಬಿಡುತ್ತಿದ್ದೆ. ಕೈನಲ್ಲಿ ಆರು ಕಾಸೋ ಒಂದಾಣೆಯೋ ಇದ್ದರೆ ಅದಕ್ಕೆ ಕಡಲೇಕಾಯಿ, ಕಡಲೇಪುರಿ ತೆಗೆದುಕೊಂಡು ತಿನ್ನುತ್ತಿದ್ದೆ. ದುಡ್ಡಿಲ್ಲದಿದ್ದರೆ ಅದೂ ಇಲ್ಲ. ಬರೀ ನೀರೇ ಗತಿ. ಆದರೆ ಮ್ಯಾಚನ್ನು ನೋಡಲು ತಪ್ಪುತ್ತಿರಲಿಲ್ಲ. ಆಗ ಹಸಿವು ಕಾಣುತ್ತಲೇ ಇರಲಿಲ್ಲ. ಕ್ರಿಕೆಟ್‌ನಲ್ಲಿ ನನಗೆ ಅಷ್ಟು ಹುಚ್ಚು. ಅದು ಈಗಲೂ ಇದೆ.

ಮೈಸೂರಿನಲ್ಲಿ ನೆಲೆ

ಎಸ್.ಎಸ್.ಎಲ್.ಸಿ. ಮುಗಿದ ಮೇಲೆ ೧೯೩೫ನೆಯ ಇಸವಿ ಜುಲೈ ತಿಂಗಳಲ್ಲಿ ನಾನು ಮತ್ತು ನನ್ನ ಸಹೋದರ ರಾಮಸ್ವಾಮಿ ಮೈಸೂರಿಗೆ ಬಂದೆವು. ಇಲ್ಲಿ ನಮ್ಮ ಅಜ್ಜ ಅಜ್ಜಿ (ನಮ್ಮ ತಾಯಿಯ ತಂದೆ ತಾಯಿ) ಮನೆಯಲ್ಲಿ ನಮಗೆ ಆಶ್ರಯ ಸಿಕ್ಕಿತು. ಅವರೂ ಬಹಳ ಬಡವರು, ಇಬ್ಬರಿಗೂ ವಯಸ್ಸಾಗಿತ್ತು. ಹಪ್ಪಳ, ಸಂಡಿಗೆ ಮೊದಲಾದವನ್ನು ಮಾಡಿ ಜೀವನ ನಡೆಸುತ್ತಿದ್ದರು. ನನ್ನ ತಮ್ಮ ಕೆಲವು ಕಾಲ ಭಿಕ್ಷಾನ್ನ ಮಾಡುತ್ತಿದ್ದ. ಇಬ್ಬರೂ ಅದನ್ನು ಊಟ ಮಾಡುತ್ತಿದ್ದೆವು. ಹೀಗೆ ಕೆಲವು ಕಾಲ ಕಳೆಯಿತು. ನನ್ನ ತಮ್ಮ ಮಹಾರಾಜರ ಸಂಸ್ಕೃತ ಪಾಠಶಾಲೆಗೆ ಸೇರಿಕೊಂಡ. ಮೈಸೂರು ಮಹಾರಾಜರ ಕಡೆಯಿಂದ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಭೋಜನದ ಏರ್ಪಾಡಾಗುತ್ತಿತ್ತು. ಛತ್ರದಲ್ಲಿ ಊಟಕ್ಕೆ ಏರ್ಪಾಡಾದ ಮೇಲೆ ಪಾಠಶಾಲೆಯ ಕೊಠಡಿಯಲ್ಲಿ ಇರುವ ಅವಕಾಶವೂ ದೊರಕಿತು ಮತ್ತು ವಿದ್ಯಾರ್ಥಿವೇತನವೂ ದೊರಕಿತು. ಅವನ ವಿದ್ಯಾರ್ಥಿಜೀವನವು ಸುಗಮವಾಗಿ ನಡೆಯಿತು, ಅನುಕೂಲವಾಯಿತು.

ನಾನು ಕೆಲಸ ಹುಡುಕಲು ಶುರು ಮಾಡಿದೆ. ಆದರೆ ಎಲ್ಲಿಯೂ ಸಿಕ್ಕಲಿಲ್ಲ. ನಮ್ಮ ಅಜ್ಜ ತಮಗೆ ಗುರುತಿರುವ ದೊಡ್ಡಮನುಷ್ಯರ ಹತ್ತಿರ ನನಗೆ ಎಲ್ಲಿಯಾದರೂ ಒಂದು ಕೆಲಸ ಕೊಡಿಸುವಂತೆ ಬೇಡುತ್ತಿದ್ದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಒಬ್ಬ ಲಾಯರ ಹತ್ತಿರ ಕೆಲಸಕ್ಕೆ ಸೇರಿಸಿದರು. ಎರಡು ತಿಂಗಳು ಅಲ್ಲಿ ಇದ್ದೆ. ಅವರು ನನಗೆ ಒಂದು ಕಾಸೂ ಕೊಡಲಿಲ್ಲ. ಗುಮಾಸ್ತನಾಗಿ ಹೆಚ್ಚು ಕೆಲಸ ಇಲ್ಲದ್ದರಿಂದ ಆಗಾಗ್ಗೆ ಅಂಗಡಿಗೆ ಹೋಗುವುದು, ಕರೆಂಟ್ ಬಿಲ್ ಪಾವತಿ ಮಾಡುವುದು ಮೊದಲಾದ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಿಸುತ್ತಿದ್ದರು. ಅನಂತರ ಅವರೇ ನನಗೆ ಒಂದು ಮನೆಯ ಪಾಠವನ್ನು ಕೊಡಿಸಿದರು.

ಪಾಠ ಹೇಳುವುದು ನನಗೆ ಬಹಳ ಇಷ್ಟವಾದ ಕೆಲಸ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಲಿಂಗಶಾಸ್ತ್ರಿ ಎಂಬ ಒಬ್ಬ ಅಧ್ಯಾಪಕರು ಇದ್ದರು. ಅವರು ಆದರ್ಶ ಅಧ್ಯಾಪಕರಾಗಿದ್ದರು. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಯಾವಾಗಲೂ ಖಾದಿ ಬಟ್ಟೆಯನ್ನೇ ಹಾಕಿಕೊಳ್ಳುತ್ತಿದ್ದರು. ಸಮಯಪಾಲನೆ, ಶಿಸ್ತು , ಗಾಂಭೀರ್ಯ, ಎಲ್ಲದರಲ್ಲೂ ಅವರು ನನಗೆ ಆದರ್ಶಪ್ರಾಯರಾಗಿದ್ದರು. ಅವರು ಹೇಳುತ್ತಿದ್ದ ವಿಷಯ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ (Biology). ಅವರು ಪಾಠ ಹೇಳುತ್ತಿದ್ದ ರೀತಿ ಎಲ್ಲವೂ ನನ್ನನ್ನು ಮುಗ್ಧನನ್ನಾಗಿ ಮಾಡಿದ್ದವು. ಆದುದರಿಂದ ಅವರು ಹೇಳುತ್ತಿದ್ದ ಪಾಠದ ವಿಷಯದಲ್ಲೂ ನನಗೆ ಪ್ರೀತಿ ಹೆಚ್ಚಿತು. ಶ್ರದ್ಧೆಯಿಂದ ಕಲಿತೆ.

ಇದರಿಂದ ಬಯಾಲಜಿಯಲ್ಲಿ ನನಗೆ ಹೆಚ್ಚು ಅಂಕಗಳೂ ಬರುತ್ತಿದ್ದವು. ಅವರು ತೀರಿಕೊಂಡು ಎಷ್ಟೋ ವರ್ಷಗಳು ಕಳೆದು ಹೋಗಿವೆ. ಆದರೂ ಅವರು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಮುಂದೆ ನಾನೂ ಅವರಂತೆ ಒಬ್ಬ ಆದರ್ಶ ಅಧ್ಯಾಪಕನಾಗಲು ಪ್ರಯತ್ನಪಟ್ಟೆ. ಅದರಲ್ಲಿ ನಾನು ಎಷ್ಟು ಸಫಲನಾದೆ ಎಂದು ಹೇಳಲು ಸಾಧ್ಯವಿಲ್ಲ. ಅದರ ವಿಚಾರವಾಗಿ ಮುಂದೆ ಬರೆಯುತ್ತೇನೆ.

ನಾನು ಪಾಠ ಹೇಳುತ್ತಿದ್ದುದು ಒಬ್ಬ ಲಾಯರ ಮನೆಯಲ್ಲಿ. ಸುಮಾರು ಹತ್ತು ಮಕ್ಕಳು. ಅಕ್ಷರಾಭ್ಯಾಸದಿಂದ ಹಿಡಿದು ಐದನೇ ತರಗತಿಯವರೆಗೂ ಅವರಿಗೆಲ್ಲಾ ಪಾಠ ಹೇಳಿಕೊಡಬೇಕಾಗಿತ್ತು. ಅವರು ಕೊಡುತ್ತಿದ್ದುದು ಎಂಟು ರೂಪಾಯಿ. ಮೊದಲನೇ ತಿಂಗಳು ನನ್ನ ಕೈಗೆ ದುಡ್ಡು ಬಂದಾಗ ನನಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಏಕೆಂದರೆ ಅದು ಮೈಸೂರಿನಲ್ಲಿ ನನ್ನ ಪ್ರಥಮ ಸಂಪಾದನೆ. ಅದು ನಾನು ಕಷ್ಟಪಟ್ಟು ಸಂಪಾದಿಸಿದ ದುಡ್ಡು. ಅದರಲ್ಲಿ ಮೂರು ರೂ.ಗಳನ್ನು ನಮ್ಮ ಅಜ್ಜಿ ಕೈಗೆ ಕೊಟ್ಟು ಉಳಿದ ಐದು ರೂ.ಗಳಲ್ಲಿ ಎರಡು ರೂ.ಗಳಿಗೆ ಒಂದು ಜತೆ ಪಂಚೆ (ಮಿಲ್ಲಿಂದು) ಒಂದು ಜತೆ ಶರಟು (ಖಾದಿ) ಹೊಲಿಸಿಕೊಂಡೆ. ಇನ್ನು ಒಂದು ರೂಪಾಯಿ ಖರ್ಚಿಗೆ ಇಟ್ಟುಕೊಂಡೆ.

ಇದಾದ ಮೇಲೆ ನನಗೆ ಇನ್ನೂ ಎರಡು ಮನೆಪಾಠಗಳು ಸಿಕ್ಕಿದವು. ನನಗೆ ಮೊದಲು ಪಾಠ ಕೊಡಿಸಿದ ಲಾಯರ ಮಗಳಿಗೆ ಮಿಡಲ್ ನಾಲ್ಕನೇ ತರಗತಿ (ಎಲ್.ಎಸ್.) ಗೆ ಕಲಿಸಬೇಕಾಗಿತ್ತು. ಈಗ ನನ್ನ ತಿಂಗಳಿನ ಒಟ್ಟು ಆದಾಯ ಹದಿನಾಲ್ಕು ರೂ.ಗಳಾದವು. ಉಳಿದೆರಡು ಮನೆಗಳಲ್ಲಿ ಮೂರು ಮೂರು ರೂಪಾಯಿ ಕೊಡುತ್ತಿದ್ದರು. ಹೀಗೆ ಕೆಲವು ಕಾಲ ಕಳೆಯಿತು. ಈ ನಡುವೆ ನಮ್ಮ ಅಜ್ಜ ಕೆಲಸ ಕೊಡಿಸುವ ಪ್ರಯತ್ನ ಮಾಡುತ್ತಲೇ ಇದ್ದರು. ನಾನು ಬಹಳ ಶ್ರದ್ಧೆಯಿಂದ ಪಾಠ ಹೇಳುತ್ತಿದ್ದೆ. ಪ್ರಾರಂಭದಲ್ಲಿ ಪ್ರೈಮರಿ ಸ್ಕೂಲಿಗೆ ಶುರು ಮಾಡಿ ಬರಬರುತ್ತಾ ಮಿಡಲ್ ನಾಲ್ಕನೇ ತರಗತಿ (ಎಲ್.ಎಸ್.)ವರೆಗೂ ಹೇಳತೊಡಗಿದೆ. ನಾನು ಪಾಠ ಹೇಳಿದ ವಿದ್ಯಾರ್ಥಿಗಳೆಲ್ಲರೂ ಎಲ್.ಎಸ್. ನಲ್ಲಿ ತೇರ್ಗಡೆಯಾಗುತ್ತಿದ್ದರು. ಇದರಿಂದ ನನಗೆ ಸ್ವಲ್ಪ ಡಿಮಾಂಡು ಜಾಸ್ತಿಯಾಯಿತು. ನನ್ನ ಆದಾಯ ತಿಂಗಳಿಗೆ ಇಪ್ಪತ್ತು ರೂ. ವರೆಗೂ ಹೋಯಿತು. ಇದರಲ್ಲಿ ಸ್ವಲ್ಪವನ್ನು ನಮ್ಮ ಅಜ್ಜಿಗೆ ಕೊಟ್ಟು ಸ್ವಲ್ಪ ಭಾಗವನ್ನು ಊರಿಗೂ ಕಳುಹಿಸುತ್ತಿದ್ದೆ. ಇನ್ನು ನಾಲ್ಕೈದು ರೂ.ಗಳನ್ನು ಖರ್ಚಿಗೆ ಇಟ್ಟುಕೊಳ್ಳುತ್ತಿದ್ದೆ.

ಹಿಂದಿ ಕ್ಷೇತ್ರಕ್ಕೆ

ಈ ಮಧ್ಯೆ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಕ್ಲಾಸಿಗೆ ಸೇರಿಕೊಂಡೆ. ಪಾಠ ಹೇಳಿ ಬರುತ್ತಿದ್ದ ದುಡ್ಡಿನಲ್ಲೇ ಶುಲ್ಕ ಕೊಡುತ್ತಿದ್ದೆ. ಒಂದು ದಿನ ಗೆಳೆಯನೊಬ್ಬನ ಒತ್ತಾಯಕ್ಕೆ ಮಣಿದು 'ದುರ್ಗೇಶ ನಂದಿನಿ' ಎಂಬ ಒಂದು ಹಿಂದಿ ಸಿನಿಮಾವನ್ನು ನೋಡಿದೆ. ಅದು ತುಂಬಾ ಚೆನ್ನಾಗಿತ್ತು. ಆದರೆ ನನಗೆ ಹಿಂದಿ ಒಂದುಸ್ವಲ್ಪವೂ ಅರ್ಥವಾಗುತ್ತಿರಲಿಲ್ಲ. ಆದುದರಿಂದ ಅದನ್ನು ಕಲಿಯಲೇಬೇಕೆಂದು ನಿಶ್ಚಯಿಸಿ ಹಿಂದಿ ಕ್ಲಾಸಿಗೆ ಹೋಗತೊಡಗಿದೆ. ಆಗ ಮೈಸೂರಿನ ಹಿಂದಿ ಪ್ರಚಾರ ಸಭೆಯು ಹಿಂದಿ ತರಗತಿಗಳನ್ನು ನಡೆಸುತ್ತಿತ್ತು. ಬೇಸಿಗೆ ರಜವಾದ್ದರಿಂದ ಬನುಮಯ್ಯ ಹೈಸ್ಕೂಲಿನಲ್ಲಿ ಹಿಂದಿ ತರಗತಿ ನಡೆಯುತ್ತಿತ್ತು. ಅಲ್ಲಿಗೆ ಸೇರಿಕೊಂಡೆ. ಅನಂತರ 'ಬಾಲ ಸೇವಾ ಸಮಾಜ'ವೆಂಬ ಒಂದು ಸಂಸ್ಥೆಗೆ ಸೇರಿಕೊಂಡು ಪ್ರಥಮಾ ಪರೀಕ್ಷೆಗೆ ಕುಳಿತೆ. ಆ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ (I Class) ಉತ್ತೀರ್ಣನಾದೆ. ಇದರಿಂದ ಮುಂದೆ ಓದಲು ಬಹಳ ಪ್ರೋತ್ಸಾಹ ಸಿಕ್ಕಿತು. ಅನಂತರ ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳನ್ನು ಪಾಸು ಮಾಡಿದೆ. ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಮೈಸೂರು ಕೇಂದ್ರಕ್ಕೆ ಎರಡನೇ ಸ್ಥಾನ ಪಡೆದು ಉತ್ತೀರ್ಣನಾದೆ. ಈ ಪರೀಕ್ಷೆಗಳಲ್ಲಿ ಎಲ್ಲಕ್ಕಿಂತಲೂ ದೊಡ್ಡ ಪರೀಕ್ಷೆ 'ರಾಷ್ಟ್ರ ಭಾಷಾ ವಿಶಾರದಾ' ಎಂದು ತಿಳಿಯಿತು. ಅದು ಆಗಿನ ಕಾಲಕ್ಕೆ B.A., ಗೆ ಸಮಾನವಾದ ಡಿಗ್ರಿ ಪರೀಕ್ಷೆಯಾಗಿತ್ತು. ಅದನ್ನು ಪಾಸು ಮಾಡಬೇಕೆಂಬ ಅಭಿಲಾಷೆ ಉಂಟಾಯಿತು.

ಆ ಕಾಲದಲ್ಲಿ ಪ್ರತಿ ವರ್ಷವೂ ಮೈಸೂರು ಕೇಂದ್ರವು, ಎಲ್ಲಾ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾದ ಮೊದಲ ಮೂರು ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ಕೊಡುತ್ತಿತ್ತು. ಆ ವರ್ಷ ನನಗೆ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ದ್ವಿತೀಯ ಪುರಸ್ಕಾರ ಸಿಕ್ಕಿತು. ಮೈಸೂರು ಹಿಂದಿ ಪ್ರಚಾರ ಸಭೆಯು ಪ್ರಮಾಣಪತ್ರಗಳ ವಿತರಣೆ ಮತ್ತು ಪುರಸ್ಕಾರಗಳನ್ನು ಕೊಡಲು ಒಂದು ಪುಟ್ಟ ಘಟಿಕೋತ್ಸವವನ್ನು ಟೌನ್‌ಹಾಲಿನಲ್ಲಿ ನಡೆಸುತ್ತಿತ್ತು. ಆ ಉತ್ಸವದಲ್ಲಿ ಯಾರಾದರೂ ಒಬ್ಬ ಗಣ್ಯವ್ಯಕ್ತಿಯನ್ನು ಕರೆಸಿ ಅವರಿಂದ ಪುರಸ್ಕಾರಗಳನ್ನು ಕೊಡಿಸುತ್ತಿದ್ದರು.

ಶ್ರೀ ಕೆ.ವಿ. ಶ್ರೀನಿವಾಸಮೂರ್ತಿಗಳು ಆಗಿನ ಹಿಂದಿ ಪ್ರಚಾರಸಭೆಯ ಗೌರವ ಕಾರ್ಯದರ್ಶಿಗಳಾಗಿದ್ದರು. ಅವರ ತಂದೆ ಮತ್ತು ನಮ್ಮ ತಂದೆಯವರು ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು. ಹೀಗಾಗಿ ಅವರು ನನಗೆ ಅಣ್ಣನಾಗಬೇಕಾಗಿತ್ತು. ಅವರ ತಂದೆ 'ರೈಲ್ವೆ ವೆಂಕಟರಾಮಯ್ಯನವರು' ಆಗಿನ ಕಾಲದ ಸಂಕೇತಿಗಳಲ್ಲಿ ಒಬ್ಬ ಗಣ್ಯ ವ್ಯಕ್ತಿಗಳಾಗಿದ್ದರು. ಅವರು ರೈಲ್ವೆ ವಿಭಾಗದಲ್ಲಿ ಇನ್‌ಸ್ಪೆಕ್ಟರರಾಗಿದ್ದರು. ಆದ್ದರಿಂದ ಅವರಿಗೆ 'ರೈಲ್ವೆ ವೆಂಕಟರಾಮಯ್ಯನವರು' ಎಂದು ಹೇಳುತ್ತಿದ್ದರು. ಪುರಸ್ಕಾರವನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ ಅವರು ಗಮನಿಸಿದರು. ಸಭೆ

ಮುಗಿದ ಮೇಲೆ ನನ್ನನ್ನು ಕರೆದು, “ನೀನು ಹಿಂದಿಯನ್ನು ಇನ್ನೂ ಚೆನ್ನಾಗಿ ಓದಿ ವಿಶಾರದಾ ಪರೀಕ್ಷೆ ಪಾಸು ಮಾಡು. ಇದರಿಂದ ನಿನಗೆ ಮುಂದೆ ತುಂಬಾ ಅನುಕೂಲವಾಗುತ್ತದೆ. ವಿಶಾರದಾ ಮಾಡಿದವರಿಗೆ ಹೈಸ್ಕೂಲಿನಲ್ಲಿ ಹಿಂದಿ ಅಧ್ಯಾಪಕರ ಕೆಲಸ ಸಿಕ್ಕುತ್ತದೆ” ಎಂದು ಹೇಳಿದರು ಮತ್ತು ಮಾರನೆ ದಿವಸ ಹಿಂದಿ ಪ್ರಚಾರ ಸಭೆಗೆ ಬರುವಂತೆ ಹೇಳಿದರು. ಅದರಂತೆ ನಾನು ಸಭೆಗೆ ಹೋದೆ. ಅವರು ನನ್ನನ್ನು ಹಿಂದಿ ಲೈಬ್ರರಿಯ ಸದಸ್ಯನನ್ನಾಗಿ ಮಾಡಿ ಹಿಂದಿ ಪ್ರಥಮಾ ಕ್ಲಾಸನ್ನು ತೆಗೆದುಕೊಳ್ಳುವಂತೆ ಹೇಳಿದರು. ಇದರಿಂದ ನನಗೆ ಬಹಳ ಸಂತೋಷವಾಯಿತು ಮತ್ತು ಮುಂದಿನ ಪರೀಕ್ಷೆಗಳಿಗೆ ‘ತುಳಸೀ ಪುಸ್ತಕಾಲಯ’ದಿಂದ (ಹಿಂದಿ ಲೈಬ್ರರಿಯ ಹೆಸರು) ಪುಸ್ತಕಗಳನ್ನು ತೆಗೆದುಕೊಂಡು ಓದಲು ಬಹಳ ಸಹಾಯವಾಯಿತು. ಅವರು ಮಾಡಿದ ಉಪಕಾರವನ್ನು ಎಂದಿಗೂ ಮರೆಯುವಂತಿಲ್ಲ.

ಇದಾದ ಮೇಲೆ ಪ್ರವೇಶಿಕಾ ಮತ್ತು ವಿಶಾರದಾ ಪರೀಕ್ಷೆಗಳನ್ನು ಮಾಡಿದೆ. ವಿಶಾರದಾ ತರಗತಿಯಲ್ಲಿ ಓದುತ್ತಿದ್ದಾಗ ನನಗೆ ಅಧ್ಯಾಪಕರಾಗಿದ್ದವರು ನನ್ನ ಅಣ್ಣಂದಿರಾದ ಕೆ.ವಿ. ಶ್ರೀನಿವಾಸಮೂರ್ತಿಗಳು, ನಾಗಪ್ಪನವರು, ಹಿರಣ್ಮಯಾಜಿ ಮತ್ತು ಸಚ್ಚಿದಾನಂದರವರು. ಅವರು ನಾಲ್ಕು ಜನವೂ ಆಗಿನ ಕಾಲದಲ್ಲಿ ಮೈಸೂರಿನಲ್ಲಿ ಹಿಂದಿಯಲ್ಲಿ ದೊಡ್ಡ ಪಂಡಿತರಾಗಿದ್ದರು. ಅವರೆಲ್ಲ ನನಗೆ ಹಿಂದಿಸಾಹಿತ್ಯವನ್ನು ಹೆಚ್ಚಾಗಿ ಓದಲು ಬಹಳ ಪ್ರೋತ್ಸಾಹಿಸುತ್ತಿದ್ದರು. ಶ್ರೀನಿವಾಸಮೂರ್ತಿಗಳು ನಾಟಕಗಳನ್ನು ಬಹಳ ಚೆನ್ನಾಗಿ ಬೋಧಿಸುತ್ತಿದ್ದರು. ಹಿರಣ್ಮಯಾಜಿ ಕಾವ್ಯವನ್ನು ಮತ್ತು ನಾಗಪ್ಪನವರು ಹಿಂದೀಕಾವ್ಯ ಮತ್ತು ಸಾಹಿತ್ಯಚರಿತ್ರೆಯನ್ನು ಬಹಳ ಚೆನ್ನಾಗಿ ಬೋಧಿಸುತ್ತಿದ್ದರು. ನಾನು ತರಗತಿಯಲ್ಲಿ ಒಬ್ಬ ಸಾಧಾರಣ ವಿದ್ಯಾರ್ಥಿ. ನಮ್ಮ ಗುರುಗಳು ಅದರಲ್ಲೂ ಹಿರಣ್ಮಯಾಜಿ ಮತ್ತು ನಾಗಪ್ಪನವರು ಯಾವಾಗಲೂ ಹಿಂದಿಯಲ್ಲೇ ಮಾತನಾಡಿಸುತ್ತಿದ್ದರು. ಆದರೆ ನನಗೆ ಅದು ಅಷ್ಟು ಚೆನ್ನಾಗಿ ಬರುತ್ತಿರಲಿಲ್ಲ. ನಾಗಪ್ಪನವರು ಆಗ ಕೆಲವು ಉತ್ತಮವಾದ ಹಿಂದಿ ಪುಸ್ತಕಗಳನ್ನು ಕೊಟ್ಟು ಅವುಗಳನ್ನು ಓದುವಂತೆ ಪ್ರೋತ್ಸಾಹಿಸುತ್ತಿದ್ದರು. ಸಚ್ಚಿದಾನಂದರು ಹೆಚ್ಚಾಗಿ ಗದ್ಯವನ್ನು ಮಾಡುತ್ತಿದ್ದರು. ಆ ವರ್ಷ ಮೈಸೂರು ಕೇಂದ್ರದಿಂದ ವಿಶಾರದಾದಲ್ಲಿ ಪ್ರಥಮ ಶ್ರೇಣಿಯಲ್ಲಿ ಯಾರೂ ಉತ್ತೀರ್ಣರಾಗಲಿಲ್ಲ. ಮೂರು ಜನ ಮಾತ್ರ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅದರಲ್ಲಿ ನಾನು ಮೊದಲನೆಯವನಾದೆ. ಆದ್ದರಿಂದ ನನಗೆ ಪ್ರಥಮ ಪುರಸ್ಕಾರ ಸಿಕ್ಕಿತು. ಹೀಗೆ ಹಿಂದೀಪರೀಕ್ಷೆಗಳನ್ನು ಒಂದಾದ ಮೇಲೊಂದರಂತೆ ಪಾಸು ಮಾಡುತ್ತಾ ಹೋದೆ. ಇದರಿಂದ ನನಗೆ ಹಿಂದೀ ಭಾಷೆ ಮತ್ತು ಅದರ ಸಾಹಿತ್ಯವನ್ನು ಇನ್ನೂ ಹೆಚ್ಚಾಗಿ ಅಭ್ಯಾಸ ಮಾಡಲು ಅಭಿಲಾಷೆ ಉಂಟಾಯಿತು. ಅಲಹಾಬಾದಿನ ಸಾಹಿತ್ಯ ವಿಶಾರದಾ ಪರೀಕ್ಷೆಯನ್ನೂ ಮಾಡಿದೆ.

ಕಾರ್ಯಕರ್ತನಾಗಿ

ಗಾಂಧೀಜಿಯವರು ಅನೇಕ ರಚನಾತ್ಮಕ ಕಾರ್ಯಗಳನ್ನು ದೇಶವಾಸಿಗಳ ಮುಂದೆಲ್ಲಾ ಇಟ್ಟಿದ್ದರು. ಅದರಲ್ಲಿ ಹಿಂದಿ ಪ್ರಚಾರ, ಖಾದಿ ಪ್ರಚಾರ, ಹರಿಜನಸೇವೆ ಮುಖ್ಯವಾದವುಗಳು. ಅವರು ನಮ್ಮ ಭಾರತದೇಶಕ್ಕೆ ಒಂದು ರಾಷ್ಟ್ರಭಾಷೆಯ ಆವಶ್ಯಕತೆ ಇದೆ ಎಂದು ಯೋಚಿಸಿ, ಮದ್ರಾಸಿನಲ್ಲಿ ಹಿಂದಿ ಪ್ರಚಾರಕ್ಕಾಗಿ ‘ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ’ಯನ್ನು ೧೯೧೮ನೇ ಇಸವಿಯಲ್ಲಿ ಸ್ಥಾಪಿಸಿದ್ದರು. ಅಂದಿನಿಂದ ಅದು ದಕ್ಷಿಣ ಭಾರತದಲ್ಲಿ ಹಿಂದಿ ಭಾಷೆಯ ಪ್ರಚಾರವನ್ನು ಮಾಡುತ್ತಿದೆ. ಸಾವಿರಾರು ಹಿಂದಿ ಅಧ್ಯಾಪಕರು ಈ ಕಾರ್ಯದಲ್ಲಿ ನಿರತರಾಗಿದ್ದಾರೆ.

ನಾನು ಪ್ರಾರಂಭದಲ್ಲಿ ಹಿಂದಿ ಮತ್ತು ಖಾದಿ ಪ್ರಚಾರ ಮಾಡಲು ತೊಡಗಿದೆ. ಆಗಿನ ಕಾಲದಲ್ಲಿ ಹಿಂದಿ ಪ್ರಚಾರಕರಿಗೆ (ಪೂರ್ಣಕಾಲಿಕವಾದವರಿಗೆ ಮಾತ್ರ) ಮೂವತ್ತು ರೂ. ವೇತನ ಕೊಡುತ್ತಿದ್ದರು. ಅಂತಹವರು ಮೈಸೂರಿನಲ್ಲಿ ಇಬ್ಬರು ಮಾತ್ರ ಇದ್ದರು. ಉಳಿದ ನಮ್ಮನ್ನು ‘ಗೌರವ ಕಾರ್ಯಕರ್ತರು’, ‘ಪ್ರಚಾರಕರು’ ಎಂದು ಕರೆಯುತ್ತಿದ್ದರು. ನಾನು ಪ್ರಾರಂಭದಲ್ಲಿ ಅಂಥ ಒಬ್ಬ ಕಾರ್ಯಕರ್ತನಾಗಿದ್ದೆ.

ಹಿಂದಿ ಕಲಿಯುವುದರ ಜೊತೆಗೆ ಖಾದಿ ಬಟ್ಟೆಯನ್ನು ಧರಿಸಲು ಪ್ರಾರಂಭ ಮಾಡಿದೆ. ಖಾದಿ ಸೊಸೈಟಿಯ ಸದಸ್ಯನಾದೆ. ಪ್ರತಿ ವರ್ಷವೂ ಸಭೆಯಲ್ಲಿ ಗಾಂಧೀಜಿಯ ಸಪ್ತಾಹವನ್ನು ಆಚರಿಸುತ್ತಿದ್ದೆವು. ನಗರದ ಗಣ್ಯವ್ಯಕ್ತಿಗಳನ್ನು ಕರೆಸಿ ಅಕ್ಟೋಬರ್ ಎರಡರಂದು ಗಾಂಧಿ ಜಯಂತಿಯನ್ನು ಬಹಳ ಉತ್ಸಾಹದಿಂದ ಆಚರಿಸುತ್ತಿದ್ದೆವು. ಆಗ ಒಂದು ವಾರ ಕಾಲ ಖಾದಿ ಪ್ರಚಾರವನ್ನೂ ಮಾಡುತ್ತಿದ್ದೆವು. ನಾನು ಮತ್ತು ಕೆಲವು ಸ್ನೇಹಿತರು ಖಾದಿ ಸೊಸೈಟಿಯಿಂದ ಬಟ್ಟೆಯ ಥಾನುಗಳನ್ನು ತೆಗೆದುಕೊಂಡು ಬಂದು, ಹೆಗಲಿನ ಮೇಲೆ ಹಾಕಿಕೊಂಡು ಐಶ್ವರ್ಯವಂತರಿರುವ ಮೊಹಲ್ಲಾಗಳಿಗೆ ಹೋಗಿ ಮಾರಿಕೊಂಡು ಬಂದು, ಸಂಧ್ಯಾಕಾಲದಲ್ಲಿ , ಬಂದ ಪೂರ್ತ ಹಣವನ್ನು ಸೊಸೈಟಿಗೆ ಕೊಡುತ್ತಿದ್ದೆವು. ಒಂದು ವಾರ ಕಾಲ ಹೀಗೆ ಕೆಲಸ ಮಾಡುತ್ತಿದ್ದೆವು. ಜನರು ಕೂಡ ಬಹಳ ಉತ್ಸಾಹದಿಂದ ನಮ್ಮಲ್ಲಿ ಬಟ್ಟೆಯನ್ನು ಕೊಂಡುಕೊಳ್ಳುತ್ತಿದ್ದರು. ಈ ಕಾಲದಲ್ಲೇ ನನಗೆ ಗಾಂಧೀಜಿಯವರ ಮೊಮ್ಮಗ ಕಾಂತಿಲಾಲಗಾಂಧಿಯವರ ಪರಿಚಯವಾದದ್ದು. ಇದಲ್ಲದೆ ನಗರದ ಇನ್ನೂ ಕೆಲವು ಗಣ್ಯರ ಮತ್ತು ದೇಶಭಕ್ತರ ಪರಿಚಯವಾಯಿತು. ನನಗೆ ನಿರ್ದಿಷ್ಟವಾದ ಕೆಲಸವಾಗಲೀ,

ಸಂಪಾದನೆಯಾಗಲೀ ಆ ಕಾಲದಲ್ಲಿ ಇರಲಿಲ್ಲ. ಆದರೂ ನಾನು ಯಾರ ಪರಿಚಯವನ್ನೂ ಉಪಯೋಗಿಸಿಕೊಳ್ಳಲಿಲ್ಲ. ಯಾರನ್ನೂ ಕೆಲಸ ಕೊಡಿಸಿ, ಅಥವಾ ಶಿಫಾರಸ್ಸನ್ನು ಮಾಡಿ ಎಂದು ಕೇಳಿಕೊಳ್ಳಲಿಲ್ಲ. ಪ್ರಚಾರಸಭೆಯ ಕೆಲಸವನ್ನು ತಾವಾಗಿಯೇ ಕರೆದುಕೊಟ್ಟರು. ಯಾರನ್ನೂ ಕೇಳದಿರುವುದು ಸ್ವಪ್ರತಿಷ್ಠೆಯಿಂದಲ್ಲ, ನನ್ನ ಸಂಕೋಚದ ಸ್ವಭಾವದಿಂದ.

ನನ್ನ ಈ ಸ್ವಭಾವವೇ ನನ್ನನ್ನು ಯಾವ ಕೆಲಸಕ್ಕೂ ಮುಂದೆ ಹೋಗಲು ಬಿಡುತ್ತಿರಲಿಲ್ಲ. ಆದರೆ ನನ್ನ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದೆ. ಹಿಂದಿ ಪ್ರಚಾರ, ಖಾದಿ ಪ್ರಚಾರ ಎಲ್ಲವೂ ದೇಶಸೇವೆಯ ಭಾಗಗಳು ಎಂಬುದು ನನ್ನ ಭಾವನೆಯಾಗಿತ್ತು. ಹಿಂದಿಯು ನಮ್ಮ ರಾಷ್ಟ್ರಭಾಷೆ. ಇದನ್ನು ಎಲ್ಲರೂ ಕಲಿತರೆ ದೇಶದಲ್ಲಿ ಏಕತೆ ಉಂಟಾಗುತ್ತದೆ. ನಾವೆಲ್ಲರೂ ಭಾರತೀಯರು ಎಂಬ ಭಾವನೆ ಉಂಟಾಗುತ್ತದೆ. ಖಾದಿಯನ್ನು ತೊಟ್ಟರೆ (ಅದನ್ನು ತಯಾರು ಮಾಡುವವರು) ನಮ್ಮ ದೇಶದ ಅಣ್ಣತಮ್ಮಂದಿರಿಗೆ ಅಕ್ಕ ತಂಗಿಯರಿಗೆ ಪರೋಕ್ಷ ಸಹಾಯ ಮಾಡಿದಂತಾಗುತ್ತದೆ. ಇದೂ ಒಂದು ರೀತಿಯ ದೇಶಸೇವೆ ಎಂದು ನಾನು ಭಾವಿಸಿದ್ದೆ. ರಾಜಕೀಯದಲ್ಲಿ ಪ್ರವೇಶಿಸಲು ನನಗೆ ಇಷ್ಟವಾಗಲಿಲ್ಲ. ಆದುದರಿಂದ ಬಾಪೂಜಿಯವರ ಈ ಎರಡು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದೆ. ಬರಬರುತ್ತಾ ಹಿಂದಿ ಪ್ರಚಾರದಲ್ಲಿ ನನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡೆ. ಖಾದಿ ಪ್ರಚಾರ ನಿಂತಿತು. ಆದರೆ ಅದನ್ನು ಇಂದಿನವರೆಗೂ ಹಾಕಿಕೊಳ್ಳುವುದನ್ನು ಬಿಟ್ಟಿಲ್ಲ. ಇಂದಿಗೂ ನಾನು ಶುದ್ಧ ಖಾದಿಧಾರಿ.

ತಾಯ ಹರಕೆ

ನಾನು ಮತ್ತು ನನ್ನ ತಮ್ಮ ಇಬ್ಬರೂ ನನ್ನ ಊರಿನಿಂದ ಮೈಸೂರಿಗೆ ಹೊರಟಾಗ ನಮ್ಮ ತಾಯಿ ಕಣ್ಣಿನಲ್ಲಿ ನೀರು ತುಂಬಿಕೊಂಡು ‘‘ಎಲ್ಲಾದರೂ ಎಲೆಮರೆಕಾಯಿಹಾಗೆ ಸುಖವಾಗಿರಿ’’ ಎಂದು ಹರಸಿದ್ದರು. ಈ ಪ್ರಪಂಚದಲ್ಲಿ ವಿದ್ಯೆ, ಧನ, ಕನಕ, ಐಶ್ವರ್ಯ ಯಾವುದಕ್ಕೂ ಕೊರತೆಯಿಲ್ಲ. ಆದರೆ ಇವೆಲ್ಲವೂ ಅವರವರ ಯೋಗ್ಯತೆಗೆ ಅನುಸಾರವಾಗಿ ಲಭಿಸುತ್ತವೆ.

ಮೊದಲಿನಿಂದಲೂ ನನಗೆ ಸಂಸ್ಕೃತಭಾಷೆಯು ಸ್ವಲ್ಪ ಬರುತ್ತಿತ್ತು. ‘ಸಾಹಿತ್ಯ ರತ್ನ’ ಮತ್ತು ‘ಸಾಹಿತ್ಯಾಲಂಕಾರ’ ಪರೀಕ್ಷೆಗಳಲ್ಲಿ ಸಂಸ್ಕೃತ ಐಚ್ಛಿಕ ಭಾಷೆಯಾಗಿತ್ತು. ಆದ್ದರಿಂದ ಸ್ವಲ್ಪ ಮಟ್ಟಿಗೆ ಆ ಭಾಷೆಯನ್ನೂ ಕಲಿಯುವ ಅವಕಾಶ ಸಿಕ್ಕಿತು. ಇದರ ಜೊತೆಗೆ ಸ್ವಲ್ಪ ಉರ್ದು ಮತ್ತು ಬಂಗಾಳಿ ಭಾಷೆಯನ್ನೂ ಅಭ್ಯಾಸ ಮಾಡಿದೆ. ಆದರೆ ಹಿಂದಿಯ ಹೊರತು ಇನ್ನು ಯಾವ ಭಾಷೆಯಲ್ಲಿಯೂ ಹೆಚ್ಚು ಜ್ಞಾನ ಸಂಪಾದನೆ ಆಗಲಿಲ್ಲ.

ಸುಮಾರು ೧೯೪೦ನೇ ಇಸವಿಯಲ್ಲಿ ರಾ.ಭಾ. ವಿಶಾರದಾ ಪರೀಕ್ಷೆಯನ್ನು ಪಾಸು ಮಾಡಿದೆ. ಅದೇ ವರ್ಷ ದೀಕ್ಷಾಂತ ಸಮಾರಂಭಕ್ಕೆ (Convocation) ಮದ್ರಾಸಿಗೆ ಹೋಗಿದ್ದೆ. ನಮಗೆ ದೀಕ್ಷಾಂತ ಭಾಷಣ ಮಾಡಿದವರು ವಿನೋಬಾಭಾವೆಯವರು. ಇವರು ಗಾಂಧೀಜಿಯವರಿಗೆ ಬಹಳ ನಿಕಟವರ್ತಿಗಳಾಗಿದ್ದರು ; ಭೂದಾನಯಜ್ಞದ ಪ್ರವರ್ತಕರು. ಸಂಪೂರ್ಣ ಭಾರತವನ್ನು ಪಾದಯಾತ್ರೆ ಮಾಡಿ, ಹೆಚ್ಚು ಭೂಮಿ ಇರುವವರಿಂದ ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಿಸಿ, ದೇಶದಲ್ಲೇ ಒಂದು ದೊಡ್ಡ ಶಾಂತಿಯುತ ಭೂ ಆಂದೋಲನವನ್ನು ಮಾಡಿದವರು.

ಮದ್ರಾಸಿಗೆ ಹೋಗಲು ನನ್ನಲ್ಲಿ ಸಾಕಷ್ಟು ದುಡ್ಡು ಇರಲಿಲ್ಲ. ಆದರೆ ಹೋಗಲೇಬೇಕೆಂಬ ಆಸೆ ಬಹಳ ಇತ್ತು. ಹೇಗೋ ಇಬ್ಬರು ಸ್ನೇಹಿತರಿಂದ ಐದೈದು ರೂಪಾಯಿಗಳನ್ನು ಸಾಲ ಮಾಡಿಕೊಂಡು ಮದ್ರಾಸಿಗೆ ಹೋದೆ. ನಮ್ಮ ಅಜ್ಜಿ ಐದು ರೂ. ಕೊಟ್ಟಿದ್ದರು. ಆಶ್ಚರ್ಯವಾಗಬಹುದು. ಆಗ ಬೆಂಗಳೂರಿನಿಂದ ಮದ್ರಾಸಿಗೆ ಕೇವಲ ಐದು ರೂಪಾಯಿ ಛಾರ್ಜು. ಬೆಂಗಳೂರಿಗೆ ಒಂದೂವರೆ ರೂಪಾಯಿ; ಅಲ್ಲಿಂದ ಮದ್ರಾಸಿಗೆ ಐದು ರೂಪಾಯಿ. ನನ್ನ ಹತ್ತಿರ ಕೇವಲ ಎರಡು ರೂ. ಹೆಚ್ಚಾಗಿತ್ತು. ಹೋಗಿ ಬರುವುದಕ್ಕೆ ಮೂರು ದಿವಸ ಆಯಿತು. ಎರಡು ರೂಪಾಯಿಗಳಲ್ಲಿ ಮೂರು ದಿವಸ ಕಳೆದದ್ದಾಯಿತು. ಆದರೆ ನನಗೆ ಉಪಾಧಿಪತ್ರ ಮತ್ತು ಶಾಲು (ಖಾದಿ ಶಾಲು) ಪಡೆದದ್ದು ಬಹಳ ಸಂತೋಷವನ್ನುಂಟು ಮಾಡಿತು. ಘಟಿಕೋತ್ಸವದ ಮಾರನೇ ಪ್ರಾತಃಕಾಲವೇ ಹೊರಟು ಮೈಸೂರಿಗೆ ವಾಪಸ್ ಬಂದೆ. ಹಣ ಇಲ್ಲದಿದ್ದರೂ ಈ ಯಾತ್ರೆಯಿಂದ ನನ್ನ ಮನಸ್ಸಿಗೆ ತುಂಬಾ ಸಂತೋಷವಾಯಿತು.

ನಾನು ವಿಶಾರದಾ ಪರೀಕ್ಷೆ ಮಾಡಿದ ಮೇಲೆ ಮೊದಲು ಬೆಂಗಳೂರು ಮತ್ತು ಅನಂತರ ಮದ್ರಾಸಿನ ಹಿಂದಿ ಪ್ರಚಾರ ಸಭೆಯಲ್ಲಿ ಕೆಲಸ ಸಿಕ್ಕಿತು. ಆದರೆ ನಮ್ಮ ಅಜ್ಜ ಅಜ್ಜಿಗೆ ತುಂಬಾ ವಯಸ್ಸಾದ್ದರಿಂದ ಅವರನ್ನು ಬಿಟ್ಟು ನಾನು ಹೋಗಲಿಲ್ಲ. ಅವರ ಮಗನ ಮಗನು ಆ ವೇಳೆಗೆ ಬಿ.ಎ., ಪಾಸು ಮಾಡಿದ್ದ. ಅವನಿಗೆ ಬೇರೆ ಊರಿನಲ್ಲಿ ಹೈಸ್ಕೂಲು ಅಧ್ಯಾಪಕನಾಗಿ ಕೆಲಸ ಸಿಕ್ಕಿತ್ತು. ಅವನು ಹೊರಟು ಹೋದ. ಆಗ ನಮ್ಮ ಅಜ್ಜ ಅಜ್ಜಿ ‘‘ನೀನೂ ಹೊರಟುಹೋದರೆ ನಮ್ಮ ಗತಿ ಏನಪ್ಪಾ’’ ಎಂದು ಕಣ್ಣಿನಲ್ಲಿ ನೀರು ಹಾಕಿಕೊಂಡರು. ಆದ್ದರಿಂದ ನಾನು ಹೋಗಲಿಲ್ಲ . ಇಲ್ಲೂ ಯಾವ ಕೆಲಸವೂ ಸಿಕ್ಕಿರಲಿಲ್ಲ. ಕೇವಲ ಮನೆಪಾಠದಲ್ಲಿ ಸಿಕ್ಕುವ ದುಡ್ಡಿನಲ್ಲಿ ಸ್ವಲ್ಪ ನಮ್ಮ ಅಜ್ಜಿಗೆ ಕೊಡುತ್ತಿದ್ದೆ. ಸ್ವಲ್ಪ ಊರಿಗೆ ಕಳುಹಿಸುತ್ತಿದ್ದೆ. ಇನ್ನು ಕೆಲವು ರೂಪಾಯಿಗಳನ್ನು ನನ್ನ ಖರ್ಚಿಗೆ ಇಟ್ಟುಕೊಳ್ಳುತ್ತಿದ್ದೆ. ಹೀಗೆ ಪ್ರಾರಂಭದ ಕೆಲವು ವರ್ಷಗಳು ಮೈಸೂರಿನಲ್ಲಿ ಕಳೆದವು.

'ರಾಷ್ಟ್ರಭಾಷಾ ವಿಶಾರದಾ' ಆಗಿನ ಕಾಲಕ್ಕೆ ಒಂದು ಉಪಾಧಿ ಪರೀಕ್ಷೆ (degree). ಆಗಿನ ಕಾಲದಲ್ಲಿ ಹಿಂದಿ ಅಧ್ಯಾಪಕರು ಬೇಕಾದರೆ, ಹೈಸ್ಕೂಲಿನವರು ಹಿಂದಿ ಪ್ರಚಾರ ಸಭೆಗೆ ಹೇಳಿಕಳುಹಿಸುತ್ತಿದ್ದರು. ಹಾಗೆ ಮಹಾಜನ ಹೈಸ್ಕೂಲಿನವರು ಹೇಳಿಕಳುಹಿಸಿದಾಗ ಸಭೆ ನನ್ನನ್ನು ಅಲ್ಲಿಗೆ ಕಳುಹಿಸಿತು. ಸುಮಾರು ಎಂಟು ತಿಂಗಳು ಅಲ್ಲಿ ಕೆಲಸ ಮಾಡಿದೆ. ಅನಂತರ ಮರಿಮಲ್ಲಪ್ಪ ಮಿಡಲ್‌ಸ್ಕೂಲು ಮತ್ತು ಮಹಾರಾಣಿ ಮಿಡಲ್‌ಸ್ಕೂಲು, ಬನುಮಯ್ಯ ಹೈಸ್ಕೂಲುಗಳಲ್ಲೂ ಕೆಲವು ತಿಂಗಳು ಹಿಂದಿ ಅಧ್ಯಾಪಕನಾಗಿ ಕೆಲಸ ಮಾಡಿದೆ. ಆದರೆ ಆರ್ಥಿಕವಾಗಿ ನನಗೆ ಏನೂ ಪ್ರಯೋಜನವಾಗಲಿಲ್ಲ. ಆಗ ನಮ್ಮನ್ನು 'ಹಿಂದೀ ಪ್ರಚಾರಕ' ಎಂದು ಕರೆಯುತ್ತಿದ್ದರು. ನನಗೆ ಅದೇ ಸಂತೋಷಕರವಾಗಿತ್ತು.

ಗಾಂಧೀಭಕ್ತನಾದೆ

ಇಷ್ಟಾದರೂ ನನ್ನ ಕೆಲಸ ಹುಡುಕುವ ಕೆಲಸ ನಡೆಯುತ್ತಲೇ ಇತ್ತು. ನಮ್ಮ ಅಣ್ಣ ಶ್ರೀನಿವಾಸಮೂರ್ತಿಯವರು ರೈಲ್ವೆ ಆಫೀಸಿನಲ್ಲಿ ಒಂದು ಕೆಲಸ ಕೊಡಿಸಿದರು. ಅಲ್ಲಿ ಎರಡು ವರ್ಷ ಇದ್ದೆ. ಆದರೆ ಮೊದಲಿನಿಂದಲೂ ನನಗೆ ಗುಮಾಸ್ತನ ಕೆಲಸ ಇಷ್ಟವಿಲ್ಲವಾದ್ದರಿಂದ ಅದನ್ನೂ ಬಿಟ್ಟು ಬಂದೆ. ಮೊದಲು ಹಿಂದಿ ಪ್ರಚಾರ ಸಭೆಯ ನಗರದ ಸಂಚಾಲಕನಾದೆ (ಅವೈತನಿಕ). ನಗರದ ವಿಭಿನ್ನ ಮೊಹಲ್ಲಾಗಳಲ್ಲಿ ಹಿಂದಿ ತರಗತಿಗಳನ್ನು ತೆರೆದು ಅಲ್ಲಿಗೆ ಅಧ್ಯಾಪಕರನ್ನು ನೇಮಿಸುವುದು, ಆ ತರಗತಿಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ನನ್ನ ಕೆಲಸವಾಗಿತ್ತು. ಹೀಗೆ ಕೆಲವು ಕಾಲ ಕಳೆಯಿತು. ಅನಂತರ ಹಿಂದೀ ಪ್ರಚಾರ ಸಭೆಯಲ್ಲಿ ಮ್ಯಾನೇಜರ್ ಕೆಲಸ ಖಾಲಿಯಾಯಿತು. ಆಗಿನ ಕಾರ್ಯದರ್ಶಿಗಳಾಗಿದ್ದ ಗೋಪಾಲಕೃಷ್ಣಶೆಟ್ಟರು ನನ್ನನ್ನು ಆ ಸ್ಥಾನಕ್ಕೆ ನೇಮಿಸಿಕೊಂಡರು. ಸಂಬಳ ತಿಂಗಳಿಗೆ ಇಪ್ಪತ್ತು ರೂಪಾಯಿ. ಇದರಿಂದ ನನಗೆ ಹಿಂದಿ ಅಧ್ಯಯನವನ್ನು ಮುಂದುವರೆಸಲು ತುಂಬಾ ಸಹಾಯವಾಯಿತು. ತುಳಸೀ ಪುಸ್ತಕಾಲಯವು ನನ್ನ ಅಧೀನದಲ್ಲಿದ್ದದ್ದರಿಂದ ಒಳ್ಳೆ ಪುಸ್ತಕಗಳನ್ನು ಓದುವ, ಅಧ್ಯಯನ ಮಾಡುವ ಸದವಕಾಶ ಸಿಕ್ಕಿತು. ಇದಲ್ಲದೆ ನಗರದ ಅನೇಕ ಗಣ್ಯರ ಪರಿಚಯವೂ ಆಯಿತು.

ಮಹಾಜನ ಹೈಸ್ಕೂಲಿಗೆ ಹೋಗುತ್ತಿದ್ದಾಗ ನನಗೆ ಗಾಂಧೀಜಿಯವರ ಮೊಮ್ಮಗ ಕಾಂತಿಲಾಲಗಾಂಧಿಯವರ ಪರಿಚಯವಾಯಿತು. ಅವರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಓದುತ್ತಿದ್ದರು. ಆಗಿನ ಮೈಸೂರಿನ ದಿವಾನರಾಗಿದ್ದ ಸರ್. ಎಂ. ಮಿರ್ಜಾ ಸಾಹೇಬರು ಸರಕಾರದ ವತಿಯಿಂದ ಅವರಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಸಿಕೊಟ್ಟಿದ್ದರು. ಕಾಂತಿಲಾಲಗಾಂಧಿಗೆ ಆ ವೇಳೆಗಾಗಲೇ ಮದುವೆ ಆಗಿತ್ತು. ಅವರು ಸಂಸಾರಸಮೇತ ಒಂಟಿಕೊಪ್ಪಲಿನಲ್ಲಿ ವಾಸವಾಗಿದ್ದರು. ಅವರು ಬಹಳ ಸಜ್ಜನರು.

ನಾನು ಸಭೆಯ ವ್ಯವಸ್ಥಾಪಕನಾದ ಮೇಲೆ ಪ್ರಥಮಾದಿಂದ ವಿಶಾರದಾವರೆಗೆ ತರಗತಿಗಳು ಸರಿಯಾಗಿ ನಡೆಯುವ ವ್ಯವಸ್ಥೆ ಮಾಡಿದೆ. ಇದರಿಂದ ಸಭೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ಸಭೆಯ ವ್ಯವಸ್ಥಾಪಕನಾಗಿ ಸುಮಾರು ಮೂರು ವರ್ಷ ಕಾಲ ಕೆಲಸ ಮಾಡಿದೆ. ಶ್ರೀಮಾನ್ ಶ್ರೀರಂಗಾಚಾರ್‌ರವರು ಕಾರ್ಯದರ್ಶಿಗಳಾಗಿದ್ದ ಕಾಲದಲ್ಲಿ ನಾನು ಅನೇಕ ವಿಷಯಗಳನ್ನು ಕಲಿತೆ. ಸಹನೆಯೇ ಮೂರ್ತಿವೆತ್ತ ಒಬ್ಬ ಉದಾರ ವ್ಯಕ್ತಿಗಳಾಗಿದ್ದರು ಶ್ರೀಮಾನ್ ಶ್ರೀರಂಗಾಚಾರ್ಯರು. ಅಂತಹವರ ಹತ್ತಿರ ಕೆಲಸ ಮಾಡಿದ್ದರಿಂದ ನಾನೂ ಗಾಂಧೀಭಕ್ತನಾದೆ. ಸಾಧ್ಯವಾದಷ್ಟೂ ಅವರ ತತ್ತ್ವಗಳನ್ನು ಪಾಲಿಸಲು ಪ್ರಯತ್ನಪಟ್ಟೆ.

ಗಾಂಧೀಜಿಯವರು ದೇಶದ ಜನತೆಯ ಮುಂದೆ ಹದಿನಾಲ್ಕು ರಚನಾತ್ಮಕ ಕಾರ್ಯಗಳನ್ನು ಇಟ್ಟರು. ಹಿಂದಿ ಪ್ರಚಾರ, ಖಾದೀ ಪ್ರಚಾರ, ಹರಿಜನೋದ್ಧಾರ, ಹಿಂದೂ-ಮುಸ್ಲಿಮ್ ಏಕತೆ, ಮೊದಲಾದವು ಅವುಗಳಲ್ಲಿ ಮುಖ್ಯವಾದವು. ಯಾರಿಗೆ ನೇರವಾಗಿ ರಾಜಕೀಯ ಆಂದೋಲನದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲವೋ ಅವರು ಈ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸಬಹುದಾಗಿತ್ತು. ನಾನು ಮೊದಲಿಗೆ ಖಾದಿ ಪ್ರಚಾರ ಮತ್ತು ಹಿಂದಿ ಪ್ರಚಾರದಲ್ಲಿ ಹೆಚ್ಚು ಆಸಕ್ತಿವಹಿಸಿದೆ. ಅನಂತರ ಸಂಪೂರ್ಣವಾಗಿ ಹಿಂದಿ ಭಾಷಾ ಪ್ರಚಾರದಲ್ಲಿ ತೊಡಗಿದೆ. ಹಿಂದಿ ಪಠ್ಯ ಪುಸ್ತಕಗಳಲ್ಲಿ ದೇಶಭಕ್ತಿ, ಗಾಂಧೀಜಿಯವರ ತತ್ತ್ವಗಳು, ದೇಶದ ದೊಡ್ಡ ದೊಡ್ಡ ನಾಯಕರ ವಿಚಾರಗಳು ಇರುತ್ತಿದ್ದವು. ಅವುಗಳನ್ನು ಓದಿ ಬಹಳ ಪ್ರಭಾವಿತನಾದೆ. ಅದರಲ್ಲೂ ಗಾಂಧೀಜಿಯವರ ಆತ್ಮಕಥೆಯ ಪ್ರಭಾವ ನನ್ನಲ್ಲಿ ಸ್ವಲ್ಪ ಬದಲಾವಣೆಯನ್ನು ತಂದಿತು. ಸತ್ಯ, ಅಹಿಂಸೆ, ಕೆಲಸದಲ್ಲಿ ಶ್ರದ್ಧೆ, ನುಡಿದಂತೆ ನಡೆಯುವುದು, ಖಾದಿ ವಸ್ತ್ರಧಾರಣೆ- ಹೀಗೆ ನನ್ನ ಜೀವನದಲ್ಲಿ ನಿಧಾನವಾಗಿ ಈ ಗುಣಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಪಟ್ಟೆ. ಬಹುಶಃ ವಿದ್ಯಾರ್ಥಿಗಳು 'ಗಾಂಧಿ ಮಾಸ್ಟರು' ಎಂದು ಕರೆಯುತ್ತಿದ್ದುದು ಈ ಪರಿವರ್ತನೆಯ ಕಾರಣದಿಂದ ಎನ್ನಬಹುದು. ಇದರಿಂದ ನನ್ನ ಗುರುಗಳಾದ ಪೂಜ್ಯ ನಾಗಪ್ಪಾಜಿಯವರು ನನ್ನನ್ನು 'ಅಜಾತಶತ್ರು' ಎಂದು ಹೇಳುತ್ತಿದ್ದರು. ನನ್ನ ವಿದ್ಯಾರ್ಥಿಗಳು ನನ್ನ ಮಾತಿಗೆ ಬೆಲೆ ಕೊಡುತ್ತಿದ್ದರು, ಗೌರವಿಸುತ್ತಿದ್ದರು. ಒಟ್ಟಿನಲ್ಲಿ ನನ್ನ ಮಾತೆಗೆ ಸಮಾನವಾಗಿದ್ದ ಹಿಂದಿ ಪ್ರಚಾರ ಸಭೆಗೆ ಸುಮಾರು ೪೦ ವರ್ಷಗಳ ಕಾಲ ನೀರೆರೆದು ಪೋಷಿಸಿ, ಸೇವೆ ಮಾಡಿದೆ.

ಧನ್ಯತಾಭಾವ

ಹಿಂದಿ ಪ್ರಚಾರ ಸಭೆಯಲ್ಲಿ ವ್ಯವಸ್ಥಾಪಕನಾಗಿದ್ದಾಗಿನ ಒಂದು ಸಂಗತಿ. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ ಒಬ್ಬ ಸಹೋದರಿಯನ್ನು ಭರತಪುರದ ಮಹಾರಾಜರಿಗೆ ಕೊಟ್ಟು ಲಗ್ನವಾಗಿತ್ತು. ಅವರು ಒಂದು ಸಲ ಮೈಸೂರಿಗೆ ಬಂದಾಗ ಅವರ ಸಂಗಡ ಅವರ ಕಾರ್ಯದರ್ಶಿ ಒಬ್ಬರು ಬಂದಿದ್ದರು. ಅವರ ಹೆಸರು ಕ್ಯಾಪ್ಟನ್ ಮೋಹನಸಿಂಗ್. ಅವರು ಹಿಂದಿ ಸಾಹಿತ್ಯಪ್ರೇಮಿಗಳು. ಅವರನ್ನು ಯಾರೋ ಹಿಂದಿ ಪ್ರಚಾರಸಭೆಗೆ ಕರೆದುಕೊಂಡು ಬಂದು ನನಗೆ ಪರಿಚಯ ಮಾಡಿಸಿಕೊಟ್ಟರು. ಅವರಿಗೆ ಓದುವುದಕ್ಕೆ ಹಿಂದಿ ಪುಸ್ತಕಗಳು ಬೇಕಾಗಿದ್ದವು. ಅವರು ತುಲಸೀ ಪುಸ್ತಕಾಲಯದ ಸದಸ್ಯರಾಗಿ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ರಾಜಕುಮಾರಿಯವರು ಮೈಸೂರಿನಲ್ಲಿ ಸುಮಾರು ಒಂದು ತಿಂಗಳು ಇದ್ದಿರಬಹುದು. ಅನಂತರ ಭರತಪುರಕ್ಕೆ ಹೊರಟು ಹೋದರು. ಆಗ ಮೋಹನಸಿಂಗರು ತಾವು ತೆಗೆದುಕೊಂಡು ಹೋಗಿದ್ದ ಪುಸ್ತಕಗಳನ್ನು ಹಿಂದಿರುಗಿಸಲು ಕಡೆಯ ದಿವಸ ಬಂದಿದ್ದರು. ಹೋಗುವಾಗ ನನ್ನನ್ನು ಹಿಂದಿಯಲ್ಲಿ **ಆಪ್‌ಕಿ ಕೌನ್‌ಸಿ ಬಸ್ತಿ ಹೈ?** ಎಂದು ಕೇಳಿದರು. ನಾನು ಅದಕ್ಕೆ 'ಮೈಸೂರು' ಎಂದು ಹೇಳಿದೆ. ಅವರಿಗೆ ಆಶ್ಚರ್ಯವಾಯಿತು. ಆಗ ಅವರು 'ಆಪ್ ಇತ್‌ನೀ ಅಚ್ಛೀ ಪ್ಯಾರೀ ಹಿಂದೀ ಬೋಲ್ತೇ ಹೈಂ ! ಮೈ ಸಮಝುತಾಥಾ ಕಿ ಆಪ್ ಉತ್ತರ ಪ್ರದೇಶಕೆ ಹೈಂ' (ನೀವು ಇಷ್ಟು ಉತ್ತಮವಾದ ಮತ್ತು ಸುಂದರವಾದ ಹಿಂದಿಯಲ್ಲಿ ಮಾತನಾಡುತ್ತೀರಿ. ನಾನು ನಿಮ್ಮನ್ನು ಉತ್ತರ ಭಾರತದವರು ಎಂದು ತಿಳಿದಿದ್ದೆ) ಎಂದು ಹೇಳಿದರು. ನನಗೆ ಧನ್ಯತಾಭಾವ ಮೂಡಿತು.

ಇದೇ ರೀತಿಯಲ್ಲಿ ಇನ್ನೊಂದು ಸಂಗತಿ. ನನಗೆ ಇಸವಿ ನೆನಪಿಲ್ಲ; ಅಂತು ಸುಮಾರು ಐವತ್ತು - ಐವತ್ತೈದು ವರ್ಷಗಳ ಹಿಂದಿನ ಮಾತು. ಆಗ ಸುಮಾರು ಎರಡು ವರ್ಷಗಳ ಕಾಲ ಮೈಸೂರು ಆಕಾಶವಾಣಿಗೆ ಹಲವಾರು ಹಿಂದೀ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟೆ. ಅವುಗಳಲ್ಲಿ ಸುಮಾರು ಹತ್ತು ಹನ್ನೆರಡು ಅಲ್ಲಿ ಬಿತ್ತರಿಸಲ್ಪಟ್ಟವು. ಒಂದು ಸಂಧ್ಯಾಕಾಲ ಹಿಂದೀ ಪ್ರಚಾರಸಭೆಗೆ ನಡೆದುಕೊಂಡು ಹೋಗುತ್ತಿದ್ದೆ. ಆಗ ನನ್ನ ಪಕ್ಕಕ್ಕೆ ಬಂದು ಒಬ್ಬರು ಸೈಕಲ್ಲಿನಿಂದ ಇಳಿದು, "ವೆಂಕಟರಾಮಯ್ಯ, ನಿಮಗೆ ಒಂದು ಒಳ್ಳೆಯ ಸಮಾಚಾರ ಹೇಳಲು ಬಂದೆ. ನಾವು ಆಕಾಶವಾಣಿಯಲ್ಲಿ ಪ್ರತಿ ತಿಂಗಳೂ ಹಿಂದಿನ ತಿಂಗಳಿನ ಪ್ರೋಗ್ರಾಮುಗಳ ವಿಚಾರವಾಗಿ ಚರ್ಚೆ ಮಾಡುತ್ತೇವೆ. ಹೋದ ತಿಂಗಳ ಪ್ರೋಗ್ರಾಮ್‌ಗಳಲ್ಲಿ ನೀವು ಅನುವಾದ ಮಾಡಿಕೊಟ್ಟ 'ಮಂತ್ರ', ನಾಟಕ ಎಲ್ಲದಕ್ಕಿಂತಲೂ ಶ್ರೇಷ್ಠವಾದುದು ಎಂದು ನಿರ್ಣಯವಾಯಿತು" ಎಂದು ಹೇಳಿದರು. ಅವರ ಹೆಸರು ಅಪ್ಪಣ್ಣ ಎಂದು. ನನಗೆ ಸಹಜವಾಗಿಯೇ ತುಂಬಾ ಸಂತೋಷವಾಯಿತು.

ಆಕಾಶವಾಣಿಯಲ್ಲಿ ನಾನು ಅನುವಾದ ಮಾಡಿದ ನಾಟಕಗಳನ್ನು ಬಿತ್ತರಿಸುವ ವಿಷಯ ಕೆಲವರಿಗೆ ಅಸಮಾಧಾನವನ್ನುಂಟು ಮಾಡಿತು. ಅವರು ಅಲ್ಲಿ ಹೋಗಿ, "ನಾವು ಹಿಂದಿ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದೇವೆ. ನಮಗೆ ಏಕೆ ಅನುವಾದ ಮಾಡಲು ನಾಟಕಗಳನ್ನು ಕೊಡಲಿಲ್ಲ ? ಅವನು ಇನ್ನೂ ಈ ಕ್ಷೇತ್ರಕ್ಕೆ ಬಂದು ಕೆಲವೇ ವರ್ಷಗಳಾಗಿವೆ (ನಾನು ಆ ವೇಳೆಗೆ ಹಿಂದಿ ಪ್ರಚಾರಸಭೆಗೆ ಸೇರಿ ಐದಾರು ವರ್ಷಗಳಾಗಿದ್ದಿರಬಹುದು). ನಮ್ಮಲ್ಲಿ ಅನೇಕ ದೊಡ್ಡ ದೊಡ್ಡ ಹಿಂದಿ ವಿದ್ವಾಂಸರಿದ್ದಾರೆ. ಅವರನ್ನು ಬಿಟ್ಟು ಅವನಿಗೆ ಅನುವಾದದ ಕೆಲಸ ಕೊಟ್ಟೀದ್ದೀರಲ್ಲಾ!" ಎಂದು ಆಕ್ಷೇಪಣೆ ಮಾಡಿದರಂತೆ. ಆಗ ಅವರಲ್ಲಿ ಒಬ್ಬರಿಗೆ ಒಂದೆರಡು ಹಿಂದಿ ನಾಟಕಗಳನ್ನು ಕೊಟ್ಟು ನನಗೆ ಕೊಡುವುದನ್ನು ನಿಲ್ಲಿಸಿದರು.

ಒಂದೆರಡು ತಿಂಗಳಾದ ಮೇಲೆ ಪಂಡಿತ ವೆಂಕಟಾಚಲಶರ್ಮ ಎಂಬುವವರು ಸಭೆಗೆ ಬಂದಾಗ ಆಕಾಶವಾಣಿಯ ವಿಚಾರ ಬಂತು. ಆಕಾಶವಾಣಿಯವರು ಅನುವಾದದ ಕೆಲಸವನ್ನು ಮೇಲೆ ಹೇಳಿದ ಅವರಿಗೂ ಕೊಡುವುದನ್ನು ನಿಲ್ಲಿಸಿಬಿಟ್ಟರಂತೆ. ಅವರ ಅನುವಾದ ಗಳು ಸಹಜವಾದುವಾಗಿರಲಿಲ್ಲ ಎಂಬುದೇ ಕಾರಣವೆಂದು ಅವರು ಹೇಳಿದರು. ಅವರು ಮುಂದುವರಿದು, "ಏನು ವೆಂಕಟರಾಮಯ್ಯ, ನೀನು ಆಕಾಶವಾಣಿಯಲ್ಲಿ ಏನು ಮೋಡಿ ಮಾಡಿಬಿಟ್ಟಿದ್ದೀಯ? ಎಲ್ಲರೂ ನಿನ್ನನ್ನು ಹೊಗಳುವವರೇ. ನೀನು ಮಾಡುವ ಅನುವಾದ ತುಂಬಾ ಚೆನ್ನಾಗಿರುತ್ತಿತ್ತು ಮತ್ತು ನೀನು ಸಕಾಲಕ್ಕೆ ಬರೆದು ಕೊಡುತ್ತಿದ್ದೆ. ಆದ್ದರಿಂದ ನಿನ್ನನ್ನು ಹೊಗಳುತ್ತಿದ್ದರು" ಎಂದರು.

ಕೆಲವು ಕಾಲದ ಮೇಲೆ ಆಕಾಶವಾಣಿಯು ಬೆಂಗಳೂರಿಗೆ ಹೊರಟುಹೋಯಿತು. ಪುನಃ ಎಷ್ಟೋ ವರ್ಷಗಳನಂತರ ಅದರ ಒಂದು ಶಾಖೆಯನ್ನು ಮೈಸೂರಿನಲ್ಲಿ ತೆರೆಯಲಾಯಿತು. ಆದರೆ ನನಗೆ ಅದರ ಸಂಪರ್ಕವೇ ಕಡಿದುಹೋಗಿತ್ತು. ಆಗ ಅನುವಾದ ಮಾಡಿಕೊಟ್ಟ ನಾಟಕಗಳ ಪ್ರತಿಯನ್ನೂ ನಾನು ಇಟ್ಟುಕೊಳ್ಳಲಿಲ್ಲ. ಇಟ್ಟುಕೊಂಡಿದ್ದರೆ ಅವರ ಅನುಮತಿಯನ್ನು ಪಡೆದು ಅಚ್ಚು ಹಾಕಿಸಬಹುದಾಗಿತ್ತು.

ಕಾನ್ವೆಂಟಿನಲ್ಲಿ ಹಿಂದಿ

ಗುಡ್‌ಶೆಪರ್ಡ್ ಕಾನ್ವೆಂಟು ಕ್ಯಾಥೊಲಿಕ್ ಈಸಾಯಿ ಸನ್ಯಾಸಿನಿಯರಿಂದ ನಡೆಸಲ್ಪಡುತ್ತಿದೆ. ಅಲ್ಲಿಗೆ ನಾನು ಸೇರಿಕೊಂಡಾಗ ಯೂರೋಪಿಯನ್ ಸಂನ್ಯಾಸಿಗಳೇ ಹೆಚ್ಚು ಇದ್ದರು; ನಮ್ಮ ಭಾರತದ

ಸಂನ್ಯಾಸಿನಿಯರೂ ಕೆಲವರು ಇದ್ದರು. ಅಲ್ಲಿ ನಾನು ಸುಮಾರು ೧೯೪೬ನೇ ಇಸವಿಯಿಂದ ೧೯೭೬ರವರೆಗೆ ಹಿಂದಿ ಅಧ್ಯಾಪಕನಾಗಿ ಕೆಲಸ ಮಾಡಿದೆ. ಅದು ನನಗೆ ಇಷ್ಟವಾದ ಕೆಲಸವಾಗಿತ್ತು. ನನ್ನ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದೆ- ಸ್ಕೂಲಿನ ಅಧಿಕಾರಿಗಳನ್ನು ಸಂತೋಷಪಡಿಸುವುದಕ್ಕಲ್ಲ, ಆತ್ಮಸಂತೋಷಕ್ಕಾಗಿ. ಆದುದರಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಿಂದಿಯಲ್ಲಿ ಹೆಚ್ಚಾಗಿ ಯಾರೂ ಅನುತ್ತೀರ್ಣರಾಗುತ್ತಿರಲಿಲ್ಲ. ಅನೇಕರು ಕನ್ನಡಕ್ಕೆ ಬದಲಾಗಿ ಹಿಂದಿಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುತ್ತಿದ್ದರು. ಆಂಗ್ಲೋ ಇಂಡಿಯನ್ನರು, ಯುರೋಪಿಯನ್ನರು ಮತ್ತು ಮುಸಲ್ಮಾನರ ಮಕ್ಕಳು ಕೂಡಾ ಹಿಂದಿಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾಗುತ್ತಿದ್ದರು. ಇದರಿಂದ ನನಗೂ ಸಂತೋಷ ಮತ್ತು ಸ್ಕೂಲಿನ ಆಡಳಿತಾಧಿಕಾರಿಗಳಿಗೂ ಸಂತೋಷವಾಗುತ್ತಿತ್ತು.

ನಮ್ಮ ಕಾನ್ವೆಂಟು ಒಂದು ವಸತಿಶಾಲೆ (Residential School). ಎರಡನೆ ಮಹಾಯುದ್ಧ ಕಾಲದಲ್ಲಿ ಬರ್ಮಾ, ಸಿಲೋನ್ ಮೊದಲಾದ ವಿದೇಶಗಳಿಂದಲೂ ವಿದ್ಯಾರ್ಥಿನಿಯರು ಇಲ್ಲಿಗೆ ಬಂದು ಕಾನ್ವೆಂಟಿಗೆ ಬೋರ್ಡಿಂಗ್‌ಗಾಗಿ ಸೇರಿಕೊಳ್ಳುತ್ತಿದ್ದರು. ಅವರು ಕೂಡ ಹಿಂದಿಯನ್ನು ಮಾತೃಭಾಷೆಯ ಸ್ಥಾನದಲ್ಲಿ ತೆಗೆದುಕೊಂಡು ಓದುತ್ತಿದ್ದರು. ಅಂತಹ ಮಕ್ಕಳಿಗೆ ಹಿಂದಿ ಹೇಳಿಕೊಡುವುದು ನನಗೆ ಸ್ವಲ್ಪ ಕಷ್ಟವಾಗುತ್ತಿತ್ತು. ಅವರ ಜತೆಗೆ ಆಂಗ್ಲೋಇಂಡಿಯನ್ ಮಕ್ಕಳಿಗೆ ಹೇಳುವುದು ಕೂಡಾ ಕಷ್ಟವಾಗುತ್ತಿತ್ತು. ನಮ್ಮ ಸ್ಕೂಲಿನ ಇನ್ನೊಂದು ವಿಶೇಷವೆಂದರೆ ಇಲ್ಲಿಗೆ ಸಾಮಾನ್ಯವಾಗಿ ಭಾರತದ ಅನೇಕ ಪ್ರಾಂತದ ಮಕ್ಕಳು ಬರುತ್ತಿದ್ದರು. ಹಿಂದಿ, ಗುಜರಾತಿ, ಮರಾಠಿ, ಬಂಗಾಲಿ, ಪಂಜಾಬಿ, ತೆಲುಗು, ತಮಿಳು, ಮಲಯಾಳಮ್ ಈ ಎಲ್ಲಾ ಭಾಷೆಯ ಮಕ್ಕಳೂ ಅಲ್ಲಿಗೆ ಬರುತ್ತಿದ್ದರು. ಅವರ ತಂದೆ ತಾಯಿ ವ್ಯಾಪಾರಿಗಳೋ ಅಥವಾ ಭಾರತ ಸರ್ಕಾರದ ಸೇವೆಯಲ್ಲಿ ಇರುವವರೋ ಆಗಿರುತ್ತಿದ್ದರು. ಇನ್ನು ಕೆಲವರು ನೂರಾರು ವರ್ಷಗಳಿಂದ ಮೈಸೂರಿನಲ್ಲಿ ನೆಲಸಿದ್ದವರು. ಕನ್ನಡದ ಮಕ್ಕಳು ಶೇಕಡ ಐವತ್ತು ಆದರೆ, ಉಳಿದ ಭಾಷೆಗಳನ್ನು ಆಡುವ ಮಕ್ಕಳು ಶೇಕಡ ಐವತ್ತು ಇರುತ್ತಿದ್ದರು. ಕನ್ನಡದವರು ಕನ್ನಡ ಭಾಷೆಯನ್ನು ಮಾತೃಭಾಷೆಯಾಗಿ ತೆಗೆದುಕೊಳ್ಳುತ್ತಿದ್ದರು. ಉಳಿದವರು ಹಿಂದಿಯನ್ನು ತೆಗೆದುಕೊಳ್ಳುತ್ತಿದ್ದರು. ಅವರಿಗೆಲ್ಲಾ ಅರ್ಥವಾಗುವಂತೆ ಪಾಠ ಮಾಡುವುದು ನಿಜವಾಗಲೂ ಕಷ್ಟದ ಕೆಲಸವಾಗಿತ್ತು. ಕಾನ್ವೆಂಟಿನ ಮಕ್ಕಳು ನರ್ಸರಿಯಿಂದ ಇಂಗ್ಲಿಷಿನಲ್ಲೇ ವಿದ್ಯಾಭ್ಯಾಸ ಮಾಡುವುದರಿಂದ ಹೈಸ್ಕೂಲಿಗೆ ಬರುವ ವೇಳೆಗೆ ಆ ಭಾಷೆಯನ್ನು ಚೆನ್ನಾಗಿ ಕಲಿತಿರುತ್ತಾರೆ. ಆದುದರಿಂದ ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮದಿಂದ ಅವರಿಗೆ ಪಾಠ ಮಾಡಿ ಅವರು ಹಿಂದಿಯಲ್ಲಿ ಉತ್ತೀರ್ಣರಾಗುವಂತೆ ಮಾಡಬೇಕಾಗಿತ್ತು. ನನಗೆ ಇಂಗ್ಲಿಷ್ ಭಾಷೆ ಅಷ್ಟು ಚೆನ್ನಾಗಿ ಬರುತ್ತಿರಲಿಲ್ಲ. ಆದರೆ ಕಾನ್ವೆಂಟಿನಲ್ಲಿ ಅಧ್ಯಾಪಕನಾದ ಮೇಲೆ ಮೊದಲು ನಾನು ಇಂಗ್ಲಿಷನ್ನು ಚೆನ್ನಾಗಿ ವ್ಯಾಕರಣಬದ್ಧವಾಗಿ ಕಲಿಯಲು ಶುರು ಮಾಡಿದೆ. ಎರಡು ವರ್ಷಗಳಲ್ಲಿ ಅದನ್ನು ಸುಮಾರಾಗಿ ಮಾತನಾಡಲು, ಪಾಠ ಮಾಡಲು ಕಲಿತುಕೊಂಡೆ. ವರ್ಷಗಳು ಕಳೆದಂತೆಲ್ಲಾ ಹಿಂದಿಯಂತೆಯೇ ಇಂಗ್ಲಿಷನ್ನು ಕೂಡ ಚೆನ್ನಾಗಿ ಕಲಿತೆ.

ಸ್ಕೂಲಿನಲ್ಲಿ ನಡೆದ ಒಂದೆರಡು ಘಟನೆಗಳನ್ನು ನಾನು ಎಂದಿಗೂ ಮರೆಯುವಂತಿಲ್ಲ. ನಮ್ಮ ಪಾಠಶಾಲೆಯ ಬೋರ್ಡಿಂಗ್‌ನಲ್ಲಿ ಕೊಡಗು, ಚಿಕ್ಕಮಗಳೂರು ಮೊದಲಾದ ಕಡೆಗಳಿಂದ ಬಂದ ವಿದ್ಯಾರ್ಥಿನಿಯರೇ ಹೆಚ್ಚು. ಅವರೆಲ್ಲಾ ಐಶ್ವರ್ಯವಂತರಾದ ಕಾಫೀ ಪ್ಲಾಂಟರ್‌ಗಳ ಮಕ್ಕಳು. ಅವರಲ್ಲಿ ಒಬ್ಬಳು ಹಿಂದಿಯನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳಲ್ಲಿಯೂ ತುಂಬಾ ಬುದ್ಧಿವಂತೆ. ಆದರೆ ಹಿಂದಿಯಲ್ಲಿ ಮಾತ್ರ ಹಿಂದೆ. ಮೊದಲನೆ ಎರಡು ವರ್ಷಗಳು ಹಿಂದಿಯಲ್ಲಿ ಉತ್ತೀರ್ಣಳಾಗದಿದ್ದರೂ ಅವಳಿಗೆ ಕೃಪಾಂಕಗಳನ್ನು ಕೊಟ್ಟು ಮೇಲಿನ ದರ್ಜೆಗೆ ಹಾಕುತ್ತಿದ್ದರು. ಆದರೆ ಎಸ್.ಎಸ್.ಎಲ್.ಸಿ.ಯಲ್ಲಿ ಹಾಗೆ ಮಾಡಲು ಸಾಧ್ಯವಿರಲಿಲ್ಲ. ಅವಳು ಯಥಾಪ್ರಕಾರ ಮೊದಲನೆ ಟರ್ಮ್ ಪರೀಕ್ಷೆಯಲ್ಲಿ ಶೇಕಡ ಇಪ್ಪತ್ತೆರಡು ಅಂಕಗಳನ್ನು ತೆಗೆದುಕೊಂಡಳು. ಉತ್ತರಪತ್ರಿಕೆಯನ್ನು ಅವಳಿಗೆ ಕೊಟ್ಟಾಗ ಕೋಪದಿಂದ ನನ್ನ ಕಡೆಗೆ ನೋಡಿದಳು. ಕಡಮೆ ಅಂಕಗಳು ಬಂದುದಕ್ಕೆ ಅವಳ ಮುಖದಲ್ಲಿ ಕೋಪ, ಅಸಮಾಧಾನಗಳ ತಾಂಡವ ಎದ್ದು ಕಾಣುತ್ತಿತ್ತು. ಅದನ್ನು ಕೈಲಿ ಮುದುಡಿ ತನ್ನ ಟೇಬಲ್ಲಿನ ಡ್ರಾ ಒಳಕ್ಕೆ ಬಿಸಾಡಿದಳು (ನಮ್ಮ ಸ್ಕೂಲಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತ್ಯೇಕ ಮೇಜು ಮತ್ತು ಕುರ್ಚಿ ಇರುತ್ತಿತ್ತು). ಇದನ್ನು ನೋಡಿ ನನಗೂ ಕೋಪ ಬಂದಿತು. ಆಗ ನಾನು, "ನಾಳೆಯಿಂದ ನೀನು ನನ್ನ ತರಗತಿಗೆ ಬರಬೇಡ. ನಿನಗೆ ಬಹಳ ದುರಹಂಕಾರ. ನಿನ್ನಂತಹ ವಿದ್ಯಾರ್ಥಿನಿಗೆ ಪಾಠ ಹೇಳಲು ನನಗೆ ಸ್ವಲ್ಪವೂ ಇಷ್ಟವಿಲ್ಲ" ಎಂದು ಹೇಳಿದೆ. ಹಿಂದಿ ತರಗತಿ, ಆದರೂ ಹೆಚ್ಚು ಪಾಠ ಇಂಗ್ಲಿಷಿನ ಮಾಧ್ಯಮದಲ್ಲೇ ನಡೆಯುತ್ತಿತ್ತು. ಆಗಿನ ಕಾಲದಲ್ಲಿ ಸ್ಕೂಲಿನ ವಾತಾವರಣ ಇಂಗ್ಲಿಷುಮಯ. ಅಧ್ಯಾಪಕ ಅಧ್ಯಾಪಕಿಯರೆಲ್ಲರೂ ಇಂಗ್ಲಿಷಿನಲ್ಲಿಯೇ ಮಾತುಕತೆ ನಡೆಸುತ್ತಿದ್ದರು. ನಾನೂ ಇಂಗ್ಲಿಷಿನಲ್ಲೇ ಅಬ್ಬರಿಸಿದ್ದೆ. ಆ ವಿದ್ಯಾರ್ಥಿನಿ ಸ್ವಲ್ಪ ಹೊತ್ತು ಕತ್ತು ಬಗ್ಗಿಸಿಕೊಂಡು ಸುಮ್ಮನೆ ನಿಂತಿದ್ದಳು. ಆ ವೇಳೆಗೆ ಗಂಟೆ ಹೊಡೆಯಿತು. ಎಲ್ಲರ ಜತೆ ಅವಳೂ ಹೊರಟುಹೋದಳು. ಸ್ವಲ್ಪ ಹೊತ್ತಾದ ಮೇಲೆ,

ಆ ಬಾಲಕಿಯ ಮೇಲೆ ನಾನು ಹಾಗೆ ಕೋಪಿಸಿಕೊಳ್ಳಬಾರದಾಗಿತ್ತು ಅನ್ನಿಸಿತು. ಆದರೆ ನಡೆದುಹೋದದ್ದಕ್ಕೆ ಏನು ಮಾಡಲೂ ಸಾಧ್ಯವಿರಲಿಲ್ಲ. ಮಾರನೆ ದಿವಸ ತರಗತಿಗೆ ಹೋದಾಗ ಅವಳು ತನ್ನ ಸ್ಥಾನದಲ್ಲಿ ಕುಳಿತಿದ್ದಳು. ನಾನು ನಿಧಾನವಾಗಿ, “ನಿನ್ನೆ ಬರಬೇಡವೆಂದು ಹೇಳಿದ್ದೆನಲ್ಲ , ಏಕೆ ಬಂದೆ?” ಎಂದು ಕೇಳಿದೆ. ಅವಳು ಆಗ ಎದ್ದು ನಿಂತುಕೊಂಡು, ತನ್ನ ಕೈಯನ್ನು ಮುಷ್ಟಿ ಹಿಡಿದು, ಮೇಜನ್ನು ಗುದ್ದಿ, “ಸರ್, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಾನು ಹಿಂದಿಯನ್ನು ಪಾಸು ಮಾಡುವೆ. ಖಂಡಿತವಾಗಿಯೂ ಮಾಡುವೆ. ನಾನು ಆಣೆ ಇಟ್ಟು ಹೇಳುತ್ತೇನೆ” ಎಂದು ಹೇಳಿದಳು. ಮುಖದಲ್ಲಿದ್ದ ದೃಢ ಸಂಕಲ್ಪ ಮತ್ತು ಗಾಂಭೀರ್ಯವನ್ನು ನೋಡಿ, 'I will pass, sir,' ಎಂಬ ಶಬ್ದ ಮತ್ತು ಮೇಜಿನ ಮೇಲೆ ಮುಷ್ಟಿಯಲ್ಲಿ ಗುದ್ದಿದ ಅವಳ ರೀತಿಯನ್ನು ನೋಡಿ, ಇವಳು ಖಂಡಿತ ಪಾಸು ಮಾಡುವಳೆಂದು ತಿಳಿದುಕೊಂಡೆ. ಸುಮ್ಮನಾದೆ.

ಗಂಟೆ ಹೊಡೆದ ಮೇಲೆ ಮಹಡಿಯಿಂದ ಇಳಿದು ಅಧ್ಯಾಪಕರ ಕೊಠಡಿಗೆ ಹೋಗುತ್ತಿದ್ದೆ. ಆ ಹುಡುಗಿ ನನ್ನ ಹಿಂದೆಯೇ ಬಂದು “ಸರ್, ನೀವು ನನಗೆ ದಯವಿಟ್ಟು ಪಾಠ ಹೇಳಿಕೊಡಿ, ದಯವಿಟ್ಟು” ಎಂದು ಹೇಳಿದಳು. ನಾನು ಮೊದಲು ಒಪ್ಪಲಿಲ್ಲ. ಕಡೆಗೆ ಅವಳು ಹಟ ಮಾಡಿದ್ದರಿಂದ ಒಪ್ಪಿಕೊಂಡೆ. ನಾಲ್ಕು ತಿಂಗಳು ಪಾಠ ಹೇಳಿದೆ. ಎಸ್.ಎಸ್.ಎಲ್.ಸಿ.ಯಲ್ಲಿ ಅವಳಿಗೆ ಶೇಕಡ ನಲವತ್ತೆರಡು ಅಂಕ ಬಂದಿತು. ಉಳಿದ ವಿಷಯಗಳಲ್ಲಿ ಎಲ್ಲದರಲ್ಲಿಯೂ ಶೇಕಡ ಎಂಬತ್ತರ ಮೇಲೆ ಬಂದದ್ದರಿಂದ ಬಹಳ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಳು. ಇದರಿಂದ ನನಗೂ ಸಂತೋಷವಾಯಿತು, ಅವಳಿಗಂತೂ ಅಪಾರವಾದ ಸಂತೋಷ. ವಿದ್ಯಾರ್ಥಿಗಳು ದೃಢಸಂಕಲ್ಪ ಮಾಡಿ ಅಧ್ಯಯನ ಮಾಡಿದರೆ ಅವರಿಗೆ ಯಾವ ವಿಷಯವೂ ಕಷ್ಟವಾಗುವುದಿಲ್ಲ ಎಂಬುದಕ್ಕೆ ಇದು ಒಂದು ಉದಾಹರಣೆ. ಅನಂತರದ ವರ್ಷಗಳಲ್ಲಿ ನಾನು ವಿದ್ಯಾರ್ಥಿನಿಯರಿಗೆ ಈ ಘಟನೆಯನ್ನು ಹೇಳಿ ಅವರು ದೃಢಚಿತ್ತರಾಗಿ ಅಧ್ಯಯನ ಮಾಡಬೇಕೆಂದು ಹೇಳುತ್ತಿದ್ದೆ.

ಹೀಗೆ ನನ್ನ ಮೂವತ್ತು ವರ್ಷಗಳ ಅಧ್ಯಾಪನದ ಅವಧಿಯಲ್ಲಿ ಚಿಕ್ಕ ಪುಟ್ಟ ಘಟನೆಗಳು ನಡೆದವು. ಅದರಿಂದ ನಾನು ಕೂಡ ಕಲಿತ ಪಾಠಗಳು ಕೆಲವು.

ನಮ್ಮ ಕಾನ್ವೆಂಟಿನಲ್ಲಿ ಶ್ರೀಮಂತರ ಮಕ್ಕಳೇ ಹೆಚ್ಚಾಗಿ ಬರುತ್ತಿದ್ದರು. ಆಗಿನ ಕಾಲದಲ್ಲಿ ಮೈಸೂರಿಗೆಲ್ಲಾ ನಮ್ಮ ಕಾನ್ವೆಂಟ್ ಒಂದೇ ಇದ್ದದ್ದು. ಅದಕ್ಕೆ ಸ್ವಲ್ಪ ಹೆಚ್ಚಿನ ಶುಲ್ಕ ಕೊಡಬೇಕಾಗಿತ್ತು. ಈಗಿನ ಕಾಲಕ್ಕೆ ಹೋಲಿಸಿದರೆ ಆ ಶುಲ್ಕ ಏನೇನೂ ಅಲ್ಲ. ಆದರೆ ಆಗ ಹಣದ ಮುಗ್ಗಟ್ಟು ಬಹಳವಾಗಿತ್ತು. ಬಡವರ ಮಕ್ಕಳಿಗೆ ಕಾನ್ವೆಂಟ್ ವಿದ್ಯಾಭ್ಯಾಸ ಸಾಧ್ಯವಾಗುತ್ತಿರಲಿಲ್ಲ.

ಒಮ್ಮೆ ಮೊದಲನೇ ಸತ್ರದ (first term) ಪರೀಕ್ಷೆಗಳು ನಡೆಯುತ್ತಿದ್ದವು. ಹಿಂದೆ ದಸರ ರಜ ಬರುವುದಕ್ಕೆ ಮುಂಚೆ ಈ ಪರೀಕ್ಷೆಗಳು ನಡೆಯುತ್ತಿದ್ದವು. ಅವತ್ತು ಹಿಂದಿ ಪ್ರಶ್ನಪತ್ರಿಕೆ ಇತ್ತು. ನಾನು ಒಂದು ರೂಮಿನಲ್ಲಿ ನಿರೀಕ್ಷಕನಾಗಿ ಕುಳಿತಿದ್ದೆ. ಘಂಟೆ ಹೊಡೆಯುವುದಕ್ಕೆ ಇನ್ನೂ ಹತ್ತು ನಿಮಿಷಗಳಿದ್ದವು. ಕೆಲವು ವಿದ್ಯಾರ್ಥಿನಿಯರು ತಾವು ಬರೆದ ಪೇಪರುಗಳನ್ನು ಕೊಟ್ಟು ಹೊರಗೆ ಹೋಗಿದ್ದರು. ಇನ್ನೂ ಕೆಲವರು ಬರೆಯುತ್ತಿದ್ದರು. ಒಬ್ಬಳು ತಾನು ಬರೆದು ಪೂರ್ತಿಯಾದ ಮೇಲೆ ಉತ್ತರ ಬರೆದ ತನ್ನ ಪೇಪರನ್ನು ಹಿಡಿದುಕೊಂಡು, ಪರೀಕ್ಷೆ ಬರೆಯುತ್ತಿದ್ದ ಇನ್ನೊಬ್ಬ ವಿದ್ಯಾರ್ಥಿನಿಯ ಹತ್ತಿರ ಹೋಗಿ ಮಾತನಾಡುತ್ತಿದ್ದಳು. ನಿಯಮದ ಪ್ರಕಾರ ಅವಳು ಹಾಗೆ ಮಾಡುವುದು ಸರಿಯಲ್ಲದ್ದರಿಂದ ಅವಳನ್ನು ಕರೆದು, “ನಿನ್ನ ಪೇಪರನ್ನು ಇಲ್ಲಿ ಮೇಜಿನ ಮೇಲಿಟ್ಟು ಹೊರಗೆ ಹೋಗು. ಬರೆಯುತ್ತಿರುವವರಿಗೆ ಯಾಕೆ ತೊಂದರೆ ಕೊಡುತ್ತೀಯ?” ಎಂದು ಹೇಳಿದೆ. ಅವಳು ಒಬ್ಬ ಶ್ರೀಮಂತನ ಮಗಳು. ಮೇಲಾಗಿ ಕ್ಯಾಥೊಲಿಕ್. ನನ್ನ ಮಾತನ್ನು ಕೇಳಿ ಅವಳಿಗೆ ಬಹಳ ಕೋಪ ಬಂತು. ಆ ಪೇಪರನ್ನು ಹಿಡಿಯಲ್ಲಿ ಮುದುಡಿ ನನ್ನ ಮೇಜಿನ ಮೇಲೆ ಎಸೆದು (ನನ್ನ ಮುಖದ ಮೇಲೆ ಎಸೆದ ಹಾಗೆ) ಬಹಳ ಗರ್ವದಿಂದ ಹೊರಟು ಹೋದಳು.

ಗಂಟೆ ಹೊಡೆದ ಮೇಲೆ ಎಲ್ಲಾ ಪೇಪರುಗಳನ್ನೂ ಜೋಡಿಸಿಕೊಂಡು ಒಂದು ದಾರದಿಂದ ಕಟ್ಟಿದೆ. ಆದರೆ ಆ ಮುದುಡಿದ ಪೇಪರನ್ನು ಹಾಗೆಯೇ ಹಿಡಿದುಕೊಂಡು ಮುಖ್ಯೋಪಾಧ್ಯಾಯಿನಿಗೆ ತೋರಿಸಲು ಹೋದೆ. ಅವಳ ಅಹಂಕಾರದ ವರ್ತನೆಯಿಂದ ನನಗೆ ಬಹಳ ಕೋಪವೂ ಅಸಮಾಧಾನವೂ ಆಗಿತ್ತು. ಆದರೆ ಅವರು ತಮ್ಮ ರೂಮಿನಲ್ಲಿ ಇರಲಿಲ್ಲ. Nun ಆಗಿದ್ದರಿಂದ ಅವರ ಡಾಮೆಟ್ರಿಗೆ ಹೊರಟುಹೋಗಿದ್ದರು. ಸ್ಕೂಲು ಮನೆಗೆ ದೂರವಾಗಿದ್ದದ್ದರಿಂದ ಮಧ್ಯಾಹ್ನದ ಊಟವನ್ನು ಅಲ್ಲಿಗೇ ತರಿಸಿಕೊಳ್ಳುತ್ತಿದ್ದೆ. ಕನ್ನಡ ಮತ್ತು ಗಣಿತದ ಅಧ್ಯಾಪಕರೂ ತರಿಸಿಕೊಳ್ಳುತ್ತಿದ್ದರು. ನಾವು ಮೂವರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದೆವು. ಅವರಿಬ್ಬರೂ ಏನೋ ಮಾತಾಡಿಕೊಳ್ಳುತ್ತಿದ್ದರು. ಆದರೆ ಅವತ್ತು ನನ್ನ ಮನಸ್ಸಿಗೆ ಶಾಂತಿ ಇರಲಿಲ್ಲ. ನಡೆದ ಘಟನೆಯನ್ನು ಜ್ಞಾಪಿಸಿಕೊಂಡು ‘ಏನು ಮಾಡುವುದು’ ಎಂದು ಯೋಚಿಸ ತೊಡಗಿದೆ. ಮದರ್ (ಮುಖ್ಯ ಅಧ್ಯಾಪಕಿ) ಬಂದ ಮೇಲೆ ಅವರಿಗೆ ತೋರಿಸುವುದು ಎಂದು ಯೋಚಿಸಿ ಊಟಕ್ಕೆ ಕುಳಿತೆ. ಅನಂತರ ಇನ್ನೊಂದು ಯೋಚನೆ ಬಂತು. ಒಂದು ವೇಳೆ

ನಾನು ಮದರ್‌ಗೆ ತೋರಿಸಿದರೂ ಅವರು ತಾನೇ ಏನು ಮಾಡಲು ಸಾಧ್ಯ? ಅವಳನ್ನು ಕರೆದು ಬೈದು ಮುಂದೆ ಹೀಗೆ ಮಾಡಬೇಡವೆಂದು ಹೇಳಿಕಳುಹಿಸಬಹುದು. ಅದರಿಂದ 'ನಾನು ಅವಳ ಮೇಲೆ ದೂರು ಹೇಳಿದೆ' ಎಂದು ಅವಳಿಗೆ ನನ್ನ ಮೇಲೆ ಒಂದು ತರಹ ದ್ವೇಷ ಉಂಟಾಗಬಹುದು. ಅನಂತರ ಯೋಚಿಸಿದೆ. ನಾನು ವಯಸ್ಸಾದವನು (ಆಗ ನನಗೆ ಸುಮಾರು ನಲವತ್ತೈದು ವರ್ಷವಾಗಿತ್ತು). ಅವಳು ಇನ್ನೂ ಚಿಕ್ಕ ಹುಡುಗಿ. ಆದ್ದರಿಂದ ಅವಳ ಮೇಲೆ ದೂರು ಹೇಳುವುದು ಉಚಿತವಲ್ಲ. ತಿಳುವಳಿಕೆ ಇಲ್ಲದವಳೆಂದು ಸುಮ್ಮನಿದ್ದುಬಿಡುವುದು ಎಂದು ನಿರ್ಧಾರ ಮಾಡಿಕೊಂಡೆ. ಈ ವಿಚಾರವಾಗಿ ಇತರೆ ಅಧ್ಯಾಪಕರ ಸಂಗಡವೂ ಮಾತಾಡಲಿಲ್ಲ. ಪರೀಕ್ಷೆ ಮುಗಿದ ಮೇಲೆ ದಸರಾರಜ ಬಂತು (ಹದಿನೈದು ದಿವಸಗಳು). ಎಲ್ಲರ ಉತ್ತರ ಪತ್ರಿಕೆಯಂತೆ, ಅವಳ ಉತ್ತರ ಪತ್ರಿಕೆಯನ್ನೂ ತಪಾಸಣೆ ಮಾಡಿದೆ. ಉತ್ತರ ಚೆನ್ನಾಗಿಯೇ ಬರೆದಿದ್ದಳು. ಅವಳು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡುವ ವಿದ್ಯಾರ್ಥಿನಿಯಾಗಿದ್ದಳು. ಅಂದಿನ ಘಟನೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ, ಯಾವ ಭೇದಭಾವವೂ ಇಲ್ಲದೆ, ಅವಳಿಗೆ ನ್ಯಾಯವಾಗಿ ದೊರಕಬೇಕಾದ ಅಂಕಗಳನ್ನು ಕೊಟ್ಟೆ. ನನಗೆ ಜ್ಞಾಪಕವಿರುವಂತೆ ಅವಳಿಗೆ ಪ್ರಥಮ ಭಾಷೆ ಹಿಂದಿಯಲ್ಲಿ ಶೇಕಡ ಅರುವತ್ತಾರು ಅಂಕ ಬಂದಿತ್ತು.

ದಸರಾ ರಜ ಮುಗಿದ ಮೇಲೆ ಮೊದಲನೇ ದಿವಸ ತರಗತಿಯಲ್ಲಿ ಎಲ್ಲರಿಗೂ ಅವರವರ ಪೇಪರನ್ನು ಕೊಟ್ಟೆ. ಆ ಹುಡುಗಿ ತನ್ನ ಪೇಪರ್ ಕೈಗೆ ಬರುವವರೆಗೂ ಬಹಳ ಸಪ್ಪಗೆ ಕುಳಿತಿದ್ದಳು. ಬಹುಶಃ ತಾನು ಆ ದಿನ ನಡೆದುಕೊಂಡ ರೀತಿಗೆ ನಾನು ಅವಳಿಗೆ ಕಮ್ಮಿ ಅಂಕಗಳನ್ನು ಕೊಡಬಹುದೆಂದು ಭಾವಿಸಿದ್ದಳೆಂದು ಕಾಣುತ್ತದೆ. ಆದರೆ ಹಾಗೆ ಆಗಲಿಲ್ಲ. ಅವಳು ನಿರೀಕ್ಷಿಸಿದಷ್ಟು ಅಂಕಗಳು ಬಂದಿರಬೇಕು, ಆದ್ದರಿಂದ ಅವಳ ಮುಖದಲ್ಲಿ ಸಂತೋಷ ಕಾಣಿಸುತ್ತಿತ್ತು. ಆದರೂ ನಾಲ್ಕಾರು ದಿವಸ ನನ್ನ ಕಡೆ ನೋಡುತ್ತಿರಲಿಲ್ಲ. ನನ್ನನ್ನು ಮಾತಾಡಿಸುತ್ತಿರಲಿಲ್ಲ. ಆದರೆ ನಾನು ಮಾತ್ರ ಯಾವ ಭೇದಭಾವವೂ ಇಲ್ಲದೆ ಎಲ್ಲಾ ಮಕ್ಕಳ ಹಾಗೇ ಅವಳನ್ನೂ ಕಾಣುತ್ತಿದ್ದೆ. ಅನಂತರ ಎಲ್ಲಾ ಮಕ್ಕಳ ಹಾಗೇ ಅವಳೂ ಇದ್ದಳು.

ಮಾರ್ಚಿ ಹತ್ತನೇ ತಾರೀಕಿನಿಂದಲೇ ಎಸ್.ಎಸ್.ಎಲ್.ಸಿ. ಯವರಿಗೆ ಪರೀಕ್ಷೆಗೆ ತಯಾರಿ ಮಾಡಿಕೊಳ್ಳಲು ರಜ. ಪರೀಕ್ಷೆ ಆ ತಿಂಗಳ ಕಡೇ ವಾರದಲ್ಲಿ ಪ್ರಾರಂಭವಾಗುತ್ತಿತ್ತು. ಹದಿನೈದು - ಹದಿನಾರನೇ ತಾರೀಕಿಗೆ ಎಲ್ಲರಿಗೂ ಪ್ರವೇಶಪತ್ರ (Admit Card) ಕೊಡುತ್ತಿದ್ದರು. ನಾನು ಅಧ್ಯಾಪಕರ ಕೊಠಡಿಯಲ್ಲಿ ಕುಳಿತು ಏನೋ ಬರೆಯುತ್ತಿದ್ದೆ. ಎದುರಿಗೆ ಯಾರೋ ನಿಂತ ಹಾಗಾಯಿತು. ಕತ್ತು ಎತ್ತಿ ನೋಡಿದೆ. ಅದೇ ಹುಡುಗಿ ನಿಂತಿತ್ತು. ನೀನಾಳ (ಅವಳ ಹೆಸರು) ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ನನಗೆ ಆಶ್ಚರ್ಯವಾಯಿತು. "ಏಕಮ್ಮಾ ಅಳ್ತಿದ್ದೀಯ? ನಿನಗೆ ಹಾಲ್ ಟಿಕೆಟ್ ಕೊಡಲಿಲ್ಲವೆ ?" ಎಂದು ಕೇಳಿದೆ. ಅದಕ್ಕೆ ಅವಳು ಏನೂ ಹೇಳದೆ ಎರಡು ಕೈಗಳಲ್ಲೂ ಕಣ್ಣನ್ನು ಮುಚ್ಚಿಕೊಂಡು ಇನ್ನೂ ಹೆಚ್ಚಾಗಿ ಅಳತೊಡಗಿದಳು. ಅವಳು ಏನೋ ಹೇಳಬೇಕೆಂದು ಬಯಸಿದ್ದಾಳೆ. ಆದರೆ ದುಃಖ ಉಕ್ಕಿ ಬರುತ್ತಿದೆ. ಗಂಟಲು ಕಟ್ಟಿದೆ. ಕಡೆಗೆ ಬಹಳ ಕಷ್ಟಪಟ್ಟು, "ಅವತ್ತಿನ ನನ್ನ ಕೆಟ್ಟ ನಡವಳಿಕೆಗೆ ನನ್ನನ್ನು ದಯವಿಟ್ಟು ಕ್ಷಮಿಸಿ ಸರ್" ಎಂದು ಹೇಳಿ ಪುನಃ ಅಳತೊಡಗಿದಳು. ಆಗ ನನಗೂ ಕಣ್ಣಿನಲ್ಲಿ ನೀರು ಬಂತು. "ನಾನು ಅದನ್ನು ಅಂದೇ ಮರೆತುಬಿಟ್ಟೆ. ನನಗೆ ನಿನ್ನ ಮೇಲೆ ಯಾವ ಅಸಮಾಧಾನವಾಗಲೀ, ಕೋಪವಾಗಲೀ ಇಲ್ಲಮ್ಮ. ನನಗೆ ಎಲ್ಲಾ ಮಕ್ಕಳೂ ಒಂದೇ. ಹೋಗು, ಚೆನ್ನಾಗಿ ಓದಿ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡು" ಎಂದು ಸಮಾಧಾನ ಮಾಡಿ ಹೇಳಿಕಳುಹಿಸಿದೆ. ಅವಳಿಗೆ, ತಾನು ಮಾಡಿದ್ದು ತಪ್ಪು ಆದರೂ ಮಾಸ್ಟರು ತನ್ನನ್ನು ಶಿಕ್ಷಿಸಲಿಲ್ಲ, ಮದರ್‌ಗೆ ಹೇಳಲೂ ಇಲ್ಲ ಎಂಬ ಭಾವನೆ ಮನಸ್ಸಿನಲ್ಲಿಯೇ ಇತ್ತು. ಇದರಿಂದಲೇ ಅವಳಿಗೆ ಸಮಾಧಾನವಿರಲಿಲ್ಲ. ಅವಳ ದುಗುಡ ಘನೀಭೂತವಾಗಿ ಹೃದಯದಲ್ಲೇ ಇತ್ತು. ಅವತ್ತು ಎಲ್ಲಾ ಕರಗಿ ಕಣ್ಣೀರ ಧಾರೆಯಾಗಿ ಹೊರಗೆ ಬಂದಿತು. ನಾನು ಹೇಳಿದ ಒಳ್ಳೆಯ ಮಾತಿನಿಂದ ಅವಳ ಮನಸ್ಸಿಗೆ ಸಮಾಧಾನವಾಯಿತು. ಅನಂತರ ಅವಳು ಕಾಲೇಜಿಗೆ ಸೇರಿಕೊಂಡ ಮೇಲೆ ಕೂಡ, ಕಾರಿನಲ್ಲಿ ಹೋಗುತ್ತಿದ್ದರೂ ಸರಿಯೆ, ದಾರಿಯಲ್ಲಿ ನೋಡಿದರೆ ನಮಸ್ಕಾರ ಮಾಡಿ ಮುಂದಕ್ಕೆ ಹೋಗುತ್ತಿದ್ದಳು. ನಾನು ಅವಳನ್ನು ಶಿಕ್ಷಿಸಿದ್ದರೆ ಅಥವಾ ಮುಖ್ಯ ಅಧ್ಯಾಪಕಿಗೆ ದೂರು ಹೇಳಿ ಅವಳಿಗೆ ಶಿಕ್ಷೆಯಾಗುವಂತೆ ಮಾಡಿದ್ದರೆ ಅವಳಿಗೆ ನನ್ನ ಮೇಲೆ ದ್ವೇಷ ಹೆಚ್ಚುತ್ತಿತ್ತೇ ವಿನಃ ಇನ್ನೇನೂ ಆಗುತ್ತಿರಲಿಲ್ಲ. ಈಗಲಾದರೆ ಅವಳ ಹೃದಯ ಪರಿವರ್ತನೆಯಾಗಿತ್ತು.

ಗಾಂಧಿ ಪ್ರಭಾವ

ಅಹಿಂಸೆಯಲ್ಲಿ ಎಷ್ಟು ಶಕ್ತಿ ಇದೆ ಎಂಬುದು ನನಗೆ ಅವತ್ತು ಚೆನ್ನಾಗಿ ಅರಿವಾಯಿತು. ಅಹಿಂಸೆಯು ಎಂತಹ ಕಠಿಣ ಹೃದಯವನ್ನಾದರೂ ಪರಿವರ್ತಿಸಿ ಸಹೃದಯರನ್ನಾಗಿ ಮಾಡುತ್ತದೆ ಎಂಬುದಕ್ಕೆ ಇದು ಒಂದು ನಿದರ್ಶನ. ಈ ವಿಚಾರವಾಗಿ ಇದು ನನಗೆ ಮೊದಲನೆಯ ಪ್ರಾಯೋಗಿಕ ಪಾಠವಾಯಿತು. ಇಂತಹ ಸಣ್ಣಪುಟ್ಟ ಘಟನೆಗಳು ಸ್ಕೂಲು ಮತ್ತು ಹಿಂದಿ ಪ್ರಚಾರಸಭೆಯಲ್ಲಿ ನಡೆಯುತ್ತಲೇ ಇದ್ದವು.

ಇದೇ ತರಹ ಹಿಂದೀ ಪ್ರಚಾರ ಸಭೆಯಲ್ಲೂ ಕೆಲವು ಘಟನೆಗಳು ನಡೆದವು. ಅದರಲ್ಲಿ ಒಂದನ್ನು ಇಲ್ಲಿ ಬರೆಯುವುದು ಸೂಕ್ತವೆಂದು ಕಾಣುತ್ತದೆ. ನಾನು ಹಿಂದಿ ಪ್ರಚಾರ ಸಭೆಯ 'ವಿಶಾರದ ಪ್ರವೀಣ' ವಿದ್ಯಾಲಯದ ಪ್ರಧಾನ ಅಧ್ಯಾಪಕನಾಗಿದ್ದೆ (Principal). ಪ್ರಾಥಮಿಕದಿಂದ ಪ್ರವೀಣ್‌ದವರೆಗೂ ತರಗತಿಗಳ ಜವಾಬ್ದಾರಿ ನನ್ನದಾಗಿತ್ತು. ಸುಮಾರು ಹತ್ತು - ಹನ್ನೆರಡು ಅಧ್ಯಾಪಕರು ಕೆಲಸ ಮಾಡುತ್ತಿದ್ದರು. ಆರು ತಿಂಗಳಿಗೆ ಒಂದು ಸಲ ಹಿಂದಿ ಪರೀಕ್ಷೆಗಳು ನಡೆಯುತ್ತವೆ. ಕೇವಲ ನಾಲ್ಕು ತಿಂಗಳು ತರಗತಿಗಳು ನಡೆಯುತ್ತಿದ್ದವು. ಅಧ್ಯಾಪಕರು ತಾವಾಗಿಯೇ ಬಿಟ್ಟರೆ ಹೊರತು ಇಲ್ಲದಿದ್ದರೆ ಮೊದಲಿನವರೇ ಮುಂದಿನ ಸತ್ರಗಳಲ್ಲೂ ಬಂದು ಪಾಠ ಹೇಳುವ ವಾಡಿಕೆ. ಅವರಿಗೆ ಕೊಡುತ್ತಿದ್ದದ್ದು ಕೇವಲ ಇಪ್ಪತ್ತೈದು ರೂ.ಗಳು.

ಒಂದು ಸಲ ಒಬ್ಬರು ಅಧ್ಯಾಪಕರು ಬಂದು, "ಸರ್, ನಾನು ಇನ್ನು ಮುಂದೆ ಹಿಂದಿ ಕ್ಲಾಸುಗಳನ್ನು ತೆಗೆದುಕೊಳ್ಳುವುದಿಲ್ಲ" ಎಂದು ಹೇಳಿದರು. ಯಾಕೆ ಎಂದು ಕೇಳಿದ್ದಕ್ಕೆ, "ನಾನು ಮತ್ತು ನನ್ನ ಹೆಂಡತಿ ಪ್ರೈಮರಿಯಿಂದ ಎಂ.ಎ.,ವರೆಗೆ ಮನೆಪಾಠಗಳನ್ನು ಹೇಳುತ್ತೇವೆ. ಸಂಧ್ಯಾಕಾಲದಲ್ಲಿ ತುಂಬಾ ಕೆಲಸಗಳಲ್ಲಿ ತೊಡಗಿರುತ್ತೇನೆ. ಆದ್ದರಿಂದ ಆ ಸಮಯದಲ್ಲಿ ಬರಲು ಸಾಧ್ಯವಾಗುವುದಿಲ್ಲ. ಆದರೆ ನನಗೆ ಹಿಂದಿ ಪ್ರಚಾರಸಭೆಯ ಸಂಬಂಧವನ್ನು ಬಿಡಲೂ ಇಷ್ಟವಿಲ್ಲ. ಆದ್ದರಿಂದ ವಾರಕ್ಕೆ ಒಂದು ಗಂಟೆ ಬಂದು ವಿಶಾರದಾ ಅಥವಾ ಪ್ರವೀಣ ತರಗತಿಯನ್ನು ತೆಗೆದುಕೊಳ್ಳುತ್ತೇನೆ" ಎಂದು ಹೇಳಿದರು. "ಆಗಲಿ, ಹಾಗೇ ಮಾಡಿ, ಹೋದ ತಿಂಗಳು ನಡೆದ ಪರೀಕ್ಷೆಗಳ ಫಲಿತಾಂಶ ಇನ್ನೂ ಬಂದಿಲ್ಲ. ಬಂದ ಮೇಲೆ ತಿಳಿಸುತ್ತೇನೆ. ಫಲಿತಾಂಶ ಬರುವುದೇ ಇನ್ನೂ ಹದಿನೈದು ದಿವಸಗಳಾಗಬಹುದು. ಅನಂತರ ಹುಡುಗರು ಎಲ್ಲಾ ಸೇರಿ ವರ್ಗಗಳು ಪ್ರಾರಂಭವಾಗಬೇಕಾದರೆ ಎರಡು - ಮೂರು ವಾರಗಳಾಗಬಹುದು. ನಾನು ಅನಂತರ ನಿಮಗೆ ಹೇಳಿಕಳುಹಿಸುತ್ತೇನೆ" ಎಂದು ಹೇಳಿದೆ. 'ಸರಿ' ಎಂದು ಹೇಳಿ ಹೊರಟುಹೋದರು. ಇಷ್ಟು ನಡೆದದ್ದು ನಮ್ಮ ಮನೆಯಲ್ಲಿ.

ಸುಮಾರು ಹತ್ತು - ಹನ್ನೆರಡು ದಿವಸಗಳಾದ ಮೇಲೆ ಒಂದು ದಿವಸ ಅವರು ಹಿಂದಿ ಪ್ರಚಾರಸಭೆಗೆ ಬಂದು, "ಗುರೂಜಿ, ಟೈಮ್‌ಟೈಬಲ್ ಮಾಡಿದಿರಾ?" ಎಂದು ಕೇಳಿದರು. ಅದಕ್ಕೆ, "ಇನ್ನೂ ಪರೀಕ್ಷೆ ಫಲಿತಾಂಶಗಳು ಬಂದು ಎರಡು ದಿವಸಗಳಾಗಿವೆ. ಎಲ್ಲಾ ತರಗತಿಗಳಿಗೆ ಹುಡುಗರು ಸೇರಿ ಅವು ಪ್ರಾರಂಭವಾಗಬೇಕಾದರೆ ಇನ್ನೂ ಎಂಟು - ಹತ್ತು ದಿವಸಗಳಾದರೂ ಬೇಕಾಗಬಹುದು. ವಾರಕ್ಕೆ ಒಂದು ದಿವಸ ಬರಲು ಸಾಧ್ಯ ಎಂದು ಹೇಳಿದಿರಲ್ಲಾ. ನೀವು ಯಾವ ವಾರ ಬರಲು ಅನುಕೂಲವಾಗುತ್ತದೆ ಮತ್ತು ಯಾವ ಕ್ಲಾಸನ್ನು ತೆಗೆದುಕೊಳ್ಳುತ್ತೀರಿ ಮತ್ತು ಯಾವ ಪುಸ್ತಕ ?" ಎಂದು ಕೇಳಿದೆ. ಅದಕ್ಕೆ ಆತ ಬಹಳ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ , "ನಾನು ಯಾವಾಗ ಹಾಗೆ ಹೇಳಿದೆ ? ನಾನು ವಾರಪೂರ್ತಿ ಬಂದು, ಹೋದಸಲದ ಹಾಗೆ ಎಲ್ಲಾ ತರಗತಿಗಳನ್ನೂ ತೆಗೆದುಕೊಳ್ಳುತ್ತೇನೆ" ಎಂದು ತುಂಬಾ ಆಶ್ಚರ್ಯ ನಟಿಸುತ್ತ ಹೇಳಿದರು. "ಇದೇನಪ್ಪಾ, ಹೋದ ವಾರ ನಮ್ಮ ಮನೆಗೆ ಬಂದು 'ನನಗೆ ತುಂಬಾ ಮನೆ ಪಾಠ ಇದೆ, ಆದ್ದರಿಂದ ಸಭೆಯಲ್ಲಿ ಕ್ಲಾಸು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ವಾರಕ್ಕೆ ಒಂದು ಗಂಟೆ ಕಾಲ ಮಾತ್ರ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದಿರಲ್ಲ" ಎಂದು ಹೇಳಿದೆ. "ಇಲ್ಲ! ನಾನು ಹಾಗೆ ಹೇಳಲೇ ಇಲ್ಲ. ನೀವು ಸುಳ್ಳು ಹೇಳುತ್ತಿದ್ದೀರಿ" ಎಂದು ಹೇಳಿದರು. ನನಗೆ ಬಹಳ ಬೇಸರವಾಯಿತು.

ಇಷ್ಟೆಲ್ಲಾ ನಡೆದದ್ದು ಸಭೆಯ ಆಫೀಸು ರೂಮಿನಲ್ಲಿ. ಮ್ಯಾನೇಜರು ಎಲ್ಲವನ್ನೂ ಕೇಳುತ್ತಾ ಸುಮ್ಮನೆ ಕುಳಿತಿದ್ದರು. ಅದಕ್ಕೆ ಅವರು, "ಅವನೊಬ್ಬ ಅಯೋಗ್ಯ! ಅವನನ್ನು ಈ ಸಲ ತೆಗೆದುಕೊಳ್ಳಬೇಡಿ", ಎಂದು ಹೇಳಿದರು. "**ಅಸಾಧೂ ಸಾಧುನಾಮ್ ಜಿನೆ**" (ಅಸಾಧುವು ಸಾಧುವಿನಿಂದ ಗೆಲ್ಲಲ್ಪಡುತ್ತಾನೆ). ಅವನನ್ನು ಪುನಃ ಸಭೆಯ ಅಧ್ಯಾಪಕನಾಗಿ ತೆಗೆದುಕೊಳ್ಳಲು ನಿಶ್ಚಯಿಸಿದೆ. ಮ್ಯಾನೇಜರು "ಹಾಗಾದರೆ ನೀವು ತುಂಬಾ ಆದರ್ಶವಾದಿ" ಎಂದು ಹೇಳಿ ಹೊರಟು ಹೋದರು.

ನಾಲ್ಕು ದಿನ ಕಳೆದಿರಬಹುದು. ಒಂದು ಸಂಧ್ಯಾಕಾಲ ಆತ ಪುನಃ ಬಂದ. ಬರುವನೆಂಬ ನಂಬಿಕೆ ಇರಲಿಲ್ಲ. ಬಂದವನೇ ನನ್ನ ಎರಡು ಕಾಲುಗಳನ್ನೂ ಹಿಡಿದುಕೊಂಡು, "ದಯವಿಟ್ಟು ನನ್ನನ್ನು ಕ್ಷಮಿಸಿ, ನೀವು ನನ್ನ ಗುರುಗಳು, ಅವತ್ತು ನಾನು ನಿಮ್ಮ ಮನಸ್ಸನ್ನು ನೋಯಿಸಿದೆ. ನನ್ನನ್ನು ದಯವಿಟ್ಟು ಕ್ಷಮಿಸಿ" ಎಂದು ಕೇಳಿಕೊಂಡ. ನಾನು ತಕ್ಷಣ ಆತನನ್ನು ಮೇಲಕ್ಕೆ ಎತ್ತಿ , "ನನ್ನ ಕಾಲಿಗೆ ಏಕಪ್ಪಾ ಬೀಳೋದು, ನಾನು ನಿಮ್ಮನ್ನು ತೆಗೆದುಕೊಳ್ಳುವುದಿಲ್ಲ ಎಂದು ಯಾವಾಗಲೂ ಹೇಳಲಿಲ್ಲ , ನೀವೇ ಇಷ್ಟೆಲ್ಲಾ ಹಗರಣ ಮಾಡಿದಿರಿ. ನಾಳೆಯಿಂದ ಬಂದು ಕ್ಲಾಸು ತೆಗೆದುಕೊಳ್ಳಿ" ಎಂದು ಹೇಳಿದೆ. ಮಾರನೇ ದಿವಸದಿಂದ ಆತ ತರಗತಿಗಳನ್ನು ತೆಗೆದುಕೊಳ್ಳಲಾರಂಭಿಸಿದ. ಹೀಗೆ ಜೀವನದಲ್ಲಿ ಸಣ್ಣ ಪುಟ್ಟ ಘಟನೆಗಳು ನಡೆಯುತ್ತಲೇ ಇದ್ದವು. ನಾನು ಸಾಮಾನ್ಯವಾಗಿ ನನ್ನ ನಿಯಮವನ್ನು ಪಾಲಿಸುತ್ತಿದ್ದೆ. ನಾನೇ ಸೋತುಬಿಡುತ್ತಿದ್ದೆ. ಇದರಿಂದ ನನಗೇ ಗೆಲುವಾಗುತ್ತಿತ್ತು. ಅವರು ತಾವಾಗಿಯೇ ಬಂದು ನನ್ನಲ್ಲಿ ಕ್ಷಮೆ ಬೇಡುತ್ತಿದ್ದರು. ನಾನು ಸೋತರೂ ನನಗೆ ಒಂದು ರೀತಿಯಲ್ಲಿ

ಸಂತೋಷವೇ ಆಗುತ್ತಿತ್ತು. ಕಬೀರದಾಸರ ಒಂದು 'ದೋಹ' ಇದೆ.

ಜೋ ತೋ ಕೋಕಾಂಟಾ ಬುವೈ ತಾಹಿ ಬೋಯೀ ತೂಫೂಲ್।
ತೋ ಕೊಫೂಲ್ ಕೆಫೂಲ್ ಹೈ ವಾ ಕೋ ಹೈ ತಿರಸೂಲ್ ॥
ಅರ್ಥಾತ್

(ನಿನ್ನ ದಾರಿಗೆ ಮುಳ್ಳು ಯಾರು ಹಾಕುತ್ತಾರೋ
ನೀನು ಅವರ ದಾರಿಗೆ ಹೂವು ಹಾಕು
ನಿನ್ನ ಹೂವಿಗೆ ಬದಲಾಗಿ ನಿನಗೆ ಹೂವು ಸಿಕ್ಕುವುದು
ಅವರ ಮುಳ್ಳಿಗೆ ಬದಲಾಗಿ ತ್ರಿಶೂಲ)

ನಿನಗೆ ಕೇಡು ಬಯಸುವವರಿಗೆ ನೀನು ಒಳ್ಳೆಯದನ್ನು ಮಾಡು. ನಿನಗೆ ಅದರಿಂದ ಒಳ್ಳೆಯದೇ ಆಗುತ್ತದೆ ಎಂಬುದು ಇದರ ಭಾವ. ಸಾಮಾನ್ಯವಾಗಿ ಇದುವರೆವಿಗೂ ಜೀವನದಲ್ಲಿ ಕಬೀರ್‌ದಾಸರ ಈ ನೀತಿಯನ್ನು ಪಾಲಿಸಿಕೊಂಡು ಬರುತ್ತಿದ್ದೇನೆ. ನನಗೆ ತೊಂದರೆಯಾದರೂ ಅದನ್ನು ಸಹಿಸುವ ಶಕ್ತಿಯನ್ನು ಭಗವಂತನು ನನಗೆ ಕೊಟ್ಟಿದ್ದಾನೆ. ನನಗೆ ತೊಂದರೆಯಾದರೂ ಚಿಂತೆಯಿಲ್ಲ, ಅದರಿಂದ ಬೇರೆಯವರಿಗೆ ಒಳ್ಳೆಯದಾದರೆ ತುಂಬಾ ಸಂತೋಷ. ಆಗಲೂ ಅಷ್ಟೇ ಈಗಲೂ ಅಷ್ಟೇ. ಇದನ್ನು ನಾನು ಮಹಾತ್ಯಾಗ ಎಂದು ಭಾವಿಸುವುದಿಲ್ಲ. ಇತರರಿಗೆ ಉಪಕಾರ ಮಾಡುವುದು ನಮ್ಮ ಕರ್ತವ್ಯ. ಕರ್ತವ್ಯ ನಿರ್ವಹಣೆಯಲ್ಲಿ ಸ್ವಲ್ಪ ತೊಂದರೆಯಾದರೆ ಅದನ್ನು ಸಹಿಸಬೇಕು ಎಂದು ಸಮಾಧಾನಪಟ್ಟುಕೊಳ್ಳುತ್ತೇನೆ. ಧರ್ಮಮಾರ್ಗದಲ್ಲಿ ನಡೆಯುವವನನ್ನು ಧರ್ಮವೇ ರಕ್ಷಿಸುತ್ತದೆ.

ಸಜ್ಜನರ ಸಹವಾಸ

ಕಾನ್ವೆಂಟಿಗೆ ಹೋಗಲು ಶುರು ಮಾಡಿದ ಮೊದಲ ದಿವಸ ನನ್ನ ಹತ್ತಿರ ಕೋಟು, ಟೋಪಿ ಏನೂ ಇರಲಿಲ್ಲ. ಆಗ ಅಧ್ಯಾಪಕರು ಕೋಟು, ಪ್ಯಾಂಟು ಹಾಕಿಕೊಳ್ಳುತ್ತಿದ್ದರು. ಯಾರದೋ ಕೋಟು ಹಾಕಿಕೊಂಡು ಹೋಗಿದ್ದೆ. ಅನಂತರ ನಾನೇ ಒಂದು ಕೋಟು ಹೊಲಿಸಿಕೊಂಡೆ. ಆ ದಿನಗಳಲ್ಲಿ ಸ್ಕೂಲಿಗೆ ನಡೆದುಕೊಂಡೇ ಹೋಗುತ್ತಿದ್ದೆ. ಮನೆಗೂ ಸ್ಕೂಲಿಗೂ ಸುಮಾರು ಎರಡು ಮೈಲಿ ಆಗುತ್ತಿತ್ತು. ಆ ಕಷ್ಟವನ್ನು ಕಂಡು ನನಗೊಂದು ಸೈಕಲು ದಯಪಾಲಿಸಿದವರು ಖದ್ದರ್ ಕೋ ಆಪರೇಟಿವ್ ಸೊಸೈಟಿಯ ಮ್ಯಾನೇಜರರಾಗಿದ್ದ ಶ್ರೀಕಂಠಯ್ಯನವರು. ಅವರು ಬಹಳ ಸಜ್ಜನರು, ಸಾಧು ಸ್ವಭಾವದವರು, ಪಕ್ಕಾ ಗಾಂಧಿ ಭಕ್ತರು. ನಮ್ಮದು ೫೦ ವರ್ಷಗಳ ಸ್ನೇಹ. ಅಂತಹ ಸಜ್ಜನರ ಸ್ನೇಹ ದೊರಕುವುದು ಅಪರೂಪ. ಸಜ್ಜನರ ಸ್ನೇಹ ಹೆಜ್ಜೇನ ಸವಿದಂತೆ.

ಹಾಗೆಯೇ ಇನ್ನೊಬ್ಬ ಸಜ್ಜನರ ಸಂಗಡ ಕೆಲಸ ಮಾಡುವ ಸೌಭಾಗ್ಯ ನನಗೆ ಲಭಿಸಿತು. ಅವರ ಹೆಸರು ಶ್ರೀರಂಗಾಚಾರ್. ಅವರು ಲಾಯರಾಗಿದ್ದರು. ಶುದ್ಧ ಖಾದಿಧಾರಿ. ಗಾಂಧೀಜಿಯವರ ಭಕ್ತರು. ಅವರು ನಮ್ಮ ಹಿಂದಿ ಪ್ರಚಾರ ಸಭೆಯ ಗೌರವ ಕಾರ್ಯದರ್ಶಿಗಳಾಗಿದ್ದರು. ಕಪ್ಪು ಬಣ್ಣ , ಆರು ಅಡಿಗೂ ಎತ್ತರವಾದ ನಿಲುವು. ಅವರು ಯೌವನದಲ್ಲಿ ಒಳ್ಳೆಯ ಕುಸ್ತಿಪಟುಗಳಾಗಿದ್ದರಂತೆ. ಅವರ ಬಾಹ್ಯ ರೂಪ ಹೀಗಿದ್ದರೂ ಅವರ ಹೃದಯ ಮಾತ್ರ ಬಹಳ ವಿಶಾಲವಾಗಿತ್ತು. ಅವರ ಮಾತು ಮೃದು, ಅವರು ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ. ನನ್ನನ್ನು ಅವರ ಸ್ವಂತ ಸಹೋದರನಂತೆ ಕಾಣುತ್ತಿದ್ದರು. ಅವರಲ್ಲಿ ನನಗೆ ಅಪಾರ ಗೌರವವಿತ್ತು. ಸುಮಾರು ಮೂರು ವರ್ಷ ಕಾಲ ಅವರ ಸಂಗಡ ಕೆಲಸ ಮಾಡುವ ಸೌಭಾಗ್ಯ ನನಗೆ ದೊರಕಿತು.

ಅವರ ಕಾಲದಲ್ಲಿ ಒಂದು ಘಟನೆ ನಡೆಯಿತು. ಒಬ್ಬ ಹಿಂದಿ ವಿದ್ಯಾರ್ಥಿ ಪ್ರಥಮಾ ಪರೀಕ್ಷೆಯ ಆವೇದನ ಪತ್ರವನ್ನು (ಅರ್ಜಿ) ಭರ್ತಿ ಮಾಡಿ ಪರೀಕ್ಷಾ ಶುಲ್ಕ ಒಂದು ರೂಪಾಯಿ ಸಹಿತ ನನ್ನ ಕೈಗೆ ಕೊಟ್ಟು ಹೋದ. ಆಗ ಹಿಂದಿ ಪ್ರಚಾರಸಭೆ ಲಕ್ಷ್ಮೀಪುರದಲ್ಲಿ ಇತ್ತು. ಇನ್ನೂ ಪರೀಕ್ಷಾ ಫಾರಮ್‌ಗಳನ್ನು ತೆಗೆದುಕೊಳ್ಳಲು ಮತ್ತು ಮದ್ರಾಸಿಗೆ ಕಳುಹಿಸಿಕೊಡಲು ಒಂದು ತಿಂಗಳ ಮೇಲೆ ಕಾಲವಿತ್ತು. ಅವನ ಆವೇದನಪತ್ರ ಮತ್ತು ಶುಲ್ಕ ಒಂದು ರೂಪಾಯಿಯನ್ನು ತೆಗೆದುಕೊಂಡೆ. ಅದನ್ನು ಅಲಮಾರಿನಲ್ಲಿ ಒಂದು ಕಡೆ ಇಟ್ಟುಬಿಟ್ಟೆ. ದುಡ್ಡು ಕ್ಯಾಶ್‌ಬಾಕ್ಸಿನಲ್ಲಿ ಹಾಕಿದೆ. ಕ್ಯಾಶ್‌ಬಾಕ್ಸ್ ಅಂದರೆ ಒಂದು ಡಬ್ಬಿ ಅಷ್ಟೆ. ಸುಮಾರು ಒಂದು ತಿಂಗಳಾದ ಮೇಲೆ ಪ್ರಥಮಾದಿಂದ ಪ್ರವೀಣವರೆಗೆ ಬಂದ ಆವೇದನ ಪತ್ರಗಳನ್ನೆಲ್ಲಾ ತೆಗೆದು ವಿಂಗಡಿಸಿ, ಅವುಗಳ ಶುಲ್ಕವನ್ನೆಲ್ಲಾ ಲೆಕ್ಕಾಚಾರ ಮಾಡಿ ಆ ಮೊತ್ತಕ್ಕೆ ಡಿ.ಡಿ. ತೆಗೆದು, ಆವೇದನಪತ್ರಗಳ ಜತೆ ಮದ್ರಾಸಿಗೆ ಕಳುಹಿಸಿಕೊಟ್ಟೆ. ಹಿಂದಿ ಪ್ರಚಾರ ಸಭೆಯ ಪರೀಕ್ಷೆಗಳನ್ನೆಲ್ಲಾ ಮದ್ರಾಸ್‌ನ 'ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ'ಯು ನಡೆಸುತ್ತದೆ. ಅದಕ್ಕೆ ಆಗ ಗಾಂಧೀಜಿಯವರು ಅಧ್ಯಕ್ಷರಾಗಿದ್ದರು. ಆ ಸಂಸ್ಥೆಯ ಶಾಖೆಗಳು ದಕ್ಷಿಣ ಭಾರತದ ಎಲ್ಲಾ ಕಡೆಗಳಲ್ಲೂ ಇವೆ.

ಪ್ರವೇಶಪತ್ರಗಳೆಲ್ಲಾ ಪರೀಕ್ಷೆ ಇನ್ನು ಒಂದು ವಾರ ಇರುವಾಗ ಬಂದವು. ಎಲ್ಲರೂ ಬಂದು ತಮ್ಮತಮ್ಮ ಪ್ರವೇಶಪತ್ರಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಸುಮಾರು ಒಂದು ತಿಂಗಳ ಹಿಂದೆ ಆವೇದನಪತ್ರವನ್ನು ಕೊಟ್ಟಿದ್ದ ಆ ಹುಡುಗನೂ ಬಂದ. ಅವನ ಪ್ರವೇಶಪತ್ರವನ್ನು ಹುಡುಕಿದೆ. ಮದ್ರಾಸಿನಿಂದ ಬಂದ ಕಟ್ಟಿನಲ್ಲಿ ಅದು ಇರಲಿಲ್ಲ. ಬಹಳ ಹುಡುಕಿದೆ. ಎಲ್ಲೂ ಸಿಕ್ಕಲಿಲ್ಲ. ಅನಂತರ ಫೈಲುಗಳನ್ನು ನೋಡಿದೆ. ಒಂದು ಫೈಲಿನಲ್ಲಿ ಅವನ ಆವೇದನಪತ್ರ ಇತ್ತು. ಅದನ್ನು ಮದ್ರಾಸಿಗೆ ಕಳುಹಿಸಲು ಮರೆತುಬಿಟ್ಟಿದ್ದೆ. ಆಗ ನನಗೆ ಬಹಳ ನೋವಾಯಿತು. ಅವನ

ಕ್ಷಮೆಯನ್ನು ಯಾಚಿಸಿದೆ. ಅವನು ಮಾತನಾಡದೆ ನೊಂದುಕೊಂಡು ಹೊರಟುಹೋದ.

ಎರಡು ದಿವಸಗಳನಂತರ ಶ್ರೀಮಾನ್ ಶ್ರೀರಂಗಾಚಾರರು ಸಭೆಗೆ ಬಂದರು. ಅವರು, "ಏನು ವೆಂಕಟರಾಮಯ್ಯ, ಒಬ್ಬ ಹುಡುಗನ ಆವೇದನಪತ್ರವನ್ನು ಕಳುಹಿಸಲಿಲ್ಲವಂತೆ. ಇನ್ನು ಮೇಲೆ ಸ್ವಲ್ಪ ಎಚ್ಚರಿಕೆಯಿಂದ ಕೆಲಸ ಮಾಡಿ. ಅವನು ಇನ್ನು ಯಾರೂ ಅಲ್ಲ. ನನ್ನ ತಂಗಿಯ ಮಗನೆ" ಎಂದು ಹೇಳಿದರು. ನನ್ನ ಮೇಲೆ ಸ್ವಲ್ಪವೂ ಕೋಪಿಸಿಕೊಳ್ಳಲಿಲ್ಲ. ನನಗೆ ಅವರ ಹೃದಯವೈಶಾಲ್ಯವನ್ನು ನೋಡಿ ಕಣ್ಣಿನಲ್ಲಿ ನೀರು ಬಂತು. ಅಂಥ ಮಹಾಪುರುಷರ ಹತ್ತಿರ ಕೆಲಸ ಮಾಡುವ ಸೌಭಾಗ್ಯ ದೊರಕಿದ್ದಕ್ಕೆ ದೇವರಿಗೆ ಮನಸ್ಸಿನಲ್ಲೇ ಧನ್ಯವಾದ ಅರ್ಪಿಸಿದೆ.

ಸಂಸಾರ

೧೯೪೮ನೇ ಇಸವಿಯಲ್ಲಿ ಹಂದನಹಾಲಿನ ಅನಂತರಾಮಯ್ಯನವರ ಹಿರೀಮಗಳು ಕಲಾವತಿಯನ್ನು ಕೊಟ್ಟು ನನಗೆ ಲಗ್ನವಾಯಿತು. ಆಗ ನನಗೆ ಸುಮಾರು ಇಪ್ಪತ್ತೆಂಟು ವರ್ಷ. ನನ್ನ ಮಾವ ಅನಂತರಾಮಯ್ಯ ಹಾಗೂ ನನ್ನ ಅತ್ತೆ ಗುಂಡಕ್ಕನವರಿಗೆ ನಾಲ್ಕು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು. ನನ್ನ ಪತ್ನಿ ಕಲಾವತಿಯೇ ಅವರ ಹಿರಿಯ ಮಗಳು; ಎರಡನೆಯವಳು ಭಾಗ್ಯ; ಮೂರನೆಯವಳು ಲಲಿತ, ಕಡೆಯವಳು ಕಾಂತಾಮಣಿ; ನನ್ನ ಹಿರಿಯ ಭಾವಮೈದುನ ಶೇಷಾದ್ರಿ, ಎರಡನೆಯವನು ನಾಗೇಂದ್ರ.

ಕಲಾವತಿಯು ಲಗ್ನವಾಗಿ ಮೈಸೂರಿಗೆ ಬಂದ ದಿವಸಗಳಲ್ಲಿ ನನಗೆ ಕಾನ್ವೆಂಟ್ ಹೈಸ್ಕೂಲಿನಲ್ಲಿ ಹಿಂದೀ ಅಧ್ಯಾಪಕನ ಕೆಲಸ ಸಿಕ್ಕಿತ್ತು. ಆ ತಿರುಪತಿ ತಿಮ್ಮಪ್ಪನ ಕೃಪೆಯಿಂದ ಜೀವನಕ್ಕೆ ಒಂದು ನೆಲೆ ಸಿಕ್ಕಿದಂತಾಗಿತ್ತು. ಅಲ್ಲಿಂದ ಮುಂದೆ ಯಾವ ದುರಂತವೂ ಆಗಲಿಲ್ಲ. ಜೀವನನೌಕೆ ಮೆಲ್ಲಮೆಲ್ಲನೆ ಮುಂದೆ ಸಾಗತೊಡಗಿತು. ಆದರೆ ಜೀವನದ ಪ್ರಾರಂಭದಿಂದ ವಿಧಿ ನನ್ನನ್ನು ಕಾಡುತ್ತಲೇ ಬಂದಿದೆ. ಈಗಲೂ ಅದು ನನ್ನನ್ನು ಬಿಟ್ಟುಹೋಗಲಿಲ್ಲ. ಹುಟ್ಟಿದ ಮೊದಲನೆಯ ಗಂಡು ಮಗು ಒಂದು ತಿಂಗಳಿದ್ದು ತೀರಿಕೊಂಡಿತು. ಅನಂತರ ಅವಳಿಗೆ ಚಿಕ್ಕಪುಟ್ಟ ತೊಂದರೆಗಳು ಆಗುತ್ತಲೇ ಇದ್ದವು. ಆರೋಗ್ಯವೇ ಇರಲಿಲ್ಲ. ಸುಮಾರು ಮೂರು ವರ್ಷಗಳಾದ ಮೇಲೆ ಒಂದು ಹೆಣ್ಣು ಮಗು ಹುಟ್ಟಿತು.

ನನ್ನ ಜೀವನದುದ್ದಕ್ಕೂ ನನ್ನ ನೆರಳಿನಂತೆ ಸಂಗಾತಿಯಾಗಿ ಬಂದದ್ದು ಬಡತನ. ಬರುವ ಹಣ ಜೀವನಕ್ಕೆ ಹೇಗೋ ಆಗುತ್ತಿತ್ತು. ಒಂದು ಕಾಸನ್ನೂ ಉಳಿಸಲು ಸಾಧ್ಯವಾಗುತ್ತಿರಲಿಲ್ಲ. ನನಗೆ ರಿಟೈರ್ ಆದ ಮೇಲೆ ನಾಲ್ಕು ಮಕ್ಕಳಿಗೂ ಲಗ್ನ ಮಾಡಿದೆ. ಎಲ್ಲವನ್ನೂ ಸಾಲ ಮಾಡಿಯೇ ಮಾಡಬೇಕಾಯಿತು. ಆದರೆ ಸಾಲ ಹೇಗೆ ಸಿಕ್ಕಿತು, ಮಕ್ಕಳಿಗೆ ಹೇಗೆ ಲಗ್ನ ಮಾಡಿದೆ ಎಂಬುದನ್ನು ಈಗ ನೆನಸಿಕೊಂಡರೆ ಆಶ್ಚರ್ಯವಾಗುತ್ತದೆ. ಎಲ್ಲದಕ್ಕೂ ಆ ವೆಂಕಟರಮಣನ ಕೃಪೆಯೇ ಕಾರಣ. ಕೇಳಿದವರಾರೂ 'ಇಲ್ಲ' ಎನ್ನಲಿಲ್ಲ. ಮೊದಲನೆಯ ಮಗಳು ಮಾಲತಿಗೆ ವಿವಾಹ ಮಾಡಿದಾಗ ಆಗತಾನೇ ರಿಟೈರಾಗಿದ್ದರಿಂದ ಕೈಯ್ಯಲ್ಲಿ ಸ್ವಲ್ಪ ದುಡ್ಡಿತ್ತು-ಒಂದು ಹತ್ತು ಸಾವಿರ; ಉಳಿದದ್ದನ್ನು ಸಾಲ ಮಾಡಿದೆ. ಸುಮಾರು ಇಪ್ಪತ್ತೆರಡು ಸಾವಿರ ರೂಪಾಯಿ ಖರ್ಚಾಯಿತು. ನಮ್ಮ ಬೀಗರು ರಾಜಪ್ಪನವರು ಬಹಳ ಉದಾರಿಗಳು. ವರದಕ್ಷಿಣೆ ವಿಚಾರವಂತೂ ಇಲ್ಲವೇ ಇಲ್ಲ. ಜತೆಗೆ ಕೇರಳಾಪುರದಿಂದಲೇ ಬಸ್ ಮಾಡಿಕೊಂಡು ಬಂದರು. ಅದಕ್ಕೆ ತಾವೇ ಬಾಡಿಗೆ ಕೊಟ್ಟರು. ಇಂಥ ಬೀಗರು ಸಿಕ್ಕಿದ್ದು ನಮ್ಮ ಸೌಭಾಗ್ಯ ಎನ್ನಬೇಕು.

ಮೊದಲನೆಯವಳ ಲಗ್ನದ ಐದು ವರ್ಷಗಳ ಅನಂತರ ಎರಡನೆ ಮಗಳು ಸ್ವರ್ಣಳಿಗೆ ಲಗ್ನ ಮಾಡಿದೆ. ಆಗ ಸುಮಾರು ನಲವತ್ತು ಸಾವಿರ ಖರ್ಚಾಯಿತು. ನಮ್ಮ ಊರಿನಲ್ಲಿದ್ದ ಜಮೀನನ್ನು ಮಾರಿದ್ದರಿಂದ ನನ್ನ ಪಾಲಿಗೆ ಬಂದ ದುಡ್ಡು ಸ್ವಲ್ಪವಿತ್ತು. ಉಳಿದದ್ದನ್ನು ಸಾಲ ಮಾಡಿ ಲಗ್ನ ಮಾಡಿದೆ. ಮೊದಲನೆಯವಳಿಗೆ ಮಾಡಿದ ಹಾಗೆ ಇವಳಿಗೂ ಮಾಡಿದೆ. ನಮ್ಮ ಬೀಗರು ಚಿಲಕುಂದದ ರಾಮಯ್ಯನವರು ಬಹಳ ಸಾತ್ವಿಕರು, ಸಾಧು ಸ್ವಭಾವದವರು. ನಮ್ಮಿಂದ ಏನನ್ನೂ ಅಪೇಕ್ಷಿಸಲಿಲ್ಲ. ಆದರೂ ಪದಾರ್ಥಗಳ ಬೆಲೆ ಹೆಚ್ಚಾಗಿದ್ದರಿಂದ ಮೊದಲ ಮಗಳ ಲಗ್ನಕ್ಕಿಂತ ಈ ಲಗ್ನಕ್ಕೆ ಸ್ವಲ್ಪ ಹೆಚ್ಚು ಖರ್ಚಾಯಿತು.

ನನ್ನ ಇಬ್ಬರು ಹೆಣ್ಣುಮಕ್ಕಳ ಮದುವೆ ಆದಮೇಲೆ, ನನ್ನ ಮಗ ನಾಗರಾಜನಿಗೆ ಲಗ್ನವಾಯಿತು. ಹಾನಗಲ್ಲಿನ ಶ್ರೀ ನಾಗಣ್ಣನವರ ಹಿರಿಯ ಮಗಳು ಸುಬ್ಬಲಕ್ಷ್ಮಿ ನನ್ನ ಸೊಸೆಯಾಗಿ, ಗೃಹಲಕ್ಷ್ಮಿಯಾಗಿ ಮನೆಗೆ ಬಂದಳು. ಅವಳು ಪ್ರಥಮ ಶ್ರೇಣಿಯಲ್ಲಿ ಬಿ.ಎಸ್ಸಿ, ಬಿ.ಎಡ್. ಮಾಡಿದ್ದರಿಂದ ತಕ್ಷಣ ಭಗಿನೀ ಸೇವಾ ಸಮಾಜ ಹೈಸ್ಕೂಲಿನಲ್ಲಿ ಕೆಲಸ ಸಿಕ್ಕಿತು. ಅಧ್ಯಾಪಿಕೆಯಾಗಿ ಒಳ್ಳೆಯ ಹೆಸರೂ ಗಳಿಸಿದ್ದಾಳೆ. ನಾಗಣ್ಣನವರು ಬಹಳ ಸಜ್ಜನರು. ಅವರ ಧರ್ಮಪತ್ನಿ ರುಕ್ಮಿಣಿಯವರು. ಅವರ ಮಗ ಅನಂತ ಶೇಷ ಮುಂಬಯಿಯಲ್ಲಿ ಒಂದು ದೊಡ್ಡ ಕೊರಿಯರ್ ಸಂಸ್ಥೆಯನ್ನು ನಡೆಸುತ್ತಿದ್ದಾನೆ.

ಕಡೆಯ ಮಗಳು ಹರಿಣಿಯ ವಿವಾಹವನ್ನು ಬೆಂಗಳೂರಿನಲ್ಲೇ ಮಾಡಿದೆವು. ನಮ್ಮ ಬೀಗರು ಅಡ್ವೋಕೇಟ್ ವೆಂಕಟೇಶರಾಯರು ಕೂಡ ನಮ್ಮಿಂದ ಏನನ್ನೂ ಅಪೇಕ್ಷಿಸಲಿಲ್ಲ. ಕೇವಲ, "ಬೆಂಗಳೂರಿನಲ್ಲಿ ಮಾಡಿಕೊಡಿ. ನಮಗೆ ಇಲ್ಲಿ ತುಂಬಾ ಬಂಧುಗಳಿದ್ದಾರೆ" ಎಂದು ಹೇಳಿದರು. ನಾವು ಬೆಂಗಳೂರಿಗೆ

ಹೋಗಿ ಸಂತೋಷವಾಗಿ ಲಗ್ನ ಮಾಡಿಕೊಟ್ಟೆವು. ವೆಂಕಟೇಶರಾಯರು ಬಹಳ ಸಾಧು ಸಜ್ಜನರು, ದೈವಭಕ್ತರು, ಒಳ್ಳೆಯ ವಿದ್ಯಾವಂತರು. ಇಂಗ್ಲಿಷು, ಕನ್ನಡ ಅಲ್ಲದೆ ಸಂಸ್ಕೃತ ಮತ್ತು ಹಿಂದಿ ಭಾಷೆಯ ಜ್ಞಾನವೂ ಅವರಿಗೆ ಇದೆ. ಒಳ್ಳೆಯ ಅನುಭವೀ ವಕೀಲರು.

ಗಾಂಧಿ ಆಧಾರ

ಬಾಲ್ಯದಲ್ಲಿ ನಾನು ಹಾಸನ ಮಿಡಲ್ ಸ್ಕೂಲಿನಲ್ಲಿ ಓದುತ್ತಿದ್ದೆ ಎಂದು ಹೇಳಿದೆ. ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯನ್ನು ೧೯೨೦ರಲ್ಲಿ ಪ್ರಾರಂಭಿಸಿದಾಗ ಉತ್ತರದಲ್ಲಿ ಹಿಮಾಲಯದಿಂದ ಹಿಡಿದು ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೆ ಈ ಚಳವಳಿಯು ಹಬ್ಬಿತು. ಹಾಸನದಲ್ಲಿಯೂ ಇದರ ಪ್ರಭಾವ ಇತ್ತು. ಅಲ್ಲಿಯೂ ಕಾಂಗ್ರೆಸ್ ಸಂಸ್ಥೆಯ ಶಾಖೆಯು, ಸ್ವಾತಂತ್ರ್ಯ ಚಳವಳಿಯನ್ನು ಪ್ರಾರಂಭಿಸಿತು. ಚಿಕ್ಕವಯಸ್ಸಿನ ಬಾಲಕನಾದ್ದರಿಂದ ನನಗೆ ಇದು ಒಂದೂ ಅರ್ಥವಾಗುತ್ತಿರಲಿಲ್ಲ. ಆದರೆ ಕಾಂಗ್ರೆಸ್ಸಿನ ಮೆರವಣಿಗೆ, ತಿರಂಗಾ ಝುಂಡಾ, ಬಿಳಿ ಖಾದಿ ಟೋಪಿಧಾರಿಗಳನ್ನು ನೋಡಿದಾಗ ನನ್ನ ಮನಸ್ಸಿನಲ್ಲಿ ಏನೋ ಒಂದು ರೀತಿಯ ಜಾಗೃತಿ ಆದ ಅನುಭವವಾಗುತ್ತಿತ್ತು. ಹೈಸ್ಕೂಲಿಗೆ ಹೋದ ಮೇಲೆ ಸ್ವಲ್ಪ ಸ್ವಲ್ಪ ಈ ಚಳವಳಿಯ ಬಗೆಗೆ ಅರ್ಥವಾಗುತ್ತಿತ್ತು. ಕಾಂಗ್ರೆಸ್ಸಿನವರು "ಭಾರತ ಮಾತಾ ಕೀ ಜೈ, ಗಾಂಧೀಜೀ ಕೀ ಜೈ, ಇಂಕ್ವಿಲಾಬ್ ಜಿಂದಾಬಾದ್" ಎಂದು ಘೋಷಣೆಗಳನ್ನು ಕೂಗುತ್ತ ರಸ್ತೆಯಲ್ಲಿ ಹೊರಟರೆ ನಾವು ಹುಡುಗರು ಅವರ ಹಿಂದೆ "ಜೈ ಜೈ" ಎಂದು ಕೂಗುತ್ತಾ ಹೋಗುತ್ತಿದ್ದೆವು. ಸ್ವಲ್ಪ ದೂರ ಹೋಗಿ ವಾಪಸ್ ಮನೆಗೆ ಹೋಗುತ್ತಿದ್ದೆವು. ಹಾಸನದಲ್ಲಿ ಆದೂ ಆಗಿನ ಕಾಲದಲ್ಲಿ ಯಾರು ಯಾರು ಮುಖಂಡರು ಎಂದು ಏನೂ ಗೊತ್ತಿರಲಿಲ್ಲ. ಒಬ್ಬರ ಹೆಸರು ಮಾತ್ರ ಗೊತ್ತಿತ್ತು. ಅವರು ಅ.ಗೋ. ರಾಮಚಂದ್ರರಾಯರು. ಹಾಸನದ ಕಾಂಗ್ರೆಸ್ ಸಂಸ್ಥೆಗೆ ಅವರು ಮುಖಂಡರಾಗಿದ್ದರು. ಸ್ವಾತಂತ್ರ್ಯ ಚಳವಳಿಯ ಮುಂದಾಳತ್ವ ವಹಿಸಿ ಅನೇಕ ಸಲ ಜೈಲಿಗೂ ಹೋಗಿದ್ದರು. ಮುಂದೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅವರು ಮೈಸೂರು ರಾಜ್ಯ ಶಿಕ್ಷಣ ಮಂತ್ರಿಗಳಾಗಿಯೂ ಸೇವೆ ಸಲ್ಲಿಸಿದರು.

ನನಗೂ ದೇಶಪ್ರೇಮ, ದೇಶಸೇವೆ, ಸ್ವಾತಂತ್ರ್ಯ ಮೊದಲಾದ ವಿಷಯಗಳ ಅರ್ಥವು ಸ್ವಲ್ಪ ಸ್ವಲ್ಪ ತಿಳಿಯುತ್ತಿತ್ತು. ಕೆಲವು ಐಶ್ವರ್ಯವಂತರಾದ ಮಕ್ಕಳು ಖಾದಿಬಟ್ಟೆ, ಖಾದಿ ಟೋಪಿ ಹಾಕಿಕೊಂಡು ಸ್ಕೂಲಿಗೆ ಬರುತ್ತಿದ್ದರು. ಜೇಬಿನಲ್ಲಿ ತಕಲಿ ಇಟ್ಟುಕೊಂಡು ಬಂದು ವಿರಾಮ ವೇಳೆಯಲ್ಲಿ ನೂಲು ತೆಗೆಯುತ್ತಿದ್ದರು. ಸುಮಾರು ಇವರೆಲ್ಲರ ತಂದೆ ತಾಯಿಗಳು ಕಾಂಗ್ರೆಸ್ಸಿನವರಿರಬೇಕು. ನನಗೂ ಖಾದಿ ಬಟ್ಟೆ ಹಾಕಿಕೊಳ್ಳಬೇಕೆಂಬ ಆಸೆ ಆಗುತ್ತಿತ್ತು. ಆದರೆ ಬಡತನದ ಕಾರಣದಿಂದ ಆಸೆ ಆಸೆಯಾಗಿಯೇ ಇರುತ್ತಿತ್ತು. ಮುಂದೆ ಮೈಸೂರಿಗೆ ಬಂದು ಹಿಂದಿ ಕಲಿಯಲು ಶುರು ಮಾಡಿದ ಮೇಲೆ ಮತ್ತು ಸ್ವತಃ ದುಡ್ಡು ಸಂಪಾದನೆ ಮಾಡತೊಡಗಿದ ಮೇಲೆ ಖಾದಿ ಬಟ್ಟೆಯನ್ನು ಹಾಕಲು ಶುರು ಮಾಡಿದೆ. ಸುಮಾರು ಆಗ ನನಗೆ ಹದಿನೆಂಟು-ಹತ್ತೊಂಬತ್ತು ವರ್ಷ ಇರಬಹುದು. ಇಂದಿನವರೆಗೂ ಅದನ್ನು ಹಾಕಿಕೊಳ್ಳುತ್ತಿದ್ದೇನೆ.

ಮೈಸೂರಿಗೆ ಬಂದ ಮೇಲೆ ಇಲ್ಲಿ ಕಾಂಗ್ರೆಸ್ಸಿನ ಸಭೆಗಳಿಗೆ ಹೋಗುತ್ತಿದ್ದೆ. ದೇಶದ ಎಲ್ಲೆಡೆಯಲ್ಲಿ ನಡೆದಂತೆಯೇ ಮೈಸೂರಿನಲ್ಲಿಯೂ ಸ್ವಾತಂತ್ರ್ಯ ಚಳವಳಿ ನಡೆಯಿತು. ಅನೇಕ ಮುಖಂಡರು ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಮಾಡಿದರು. ಆಗಿನ ಮುಖಂಡರಲ್ಲಿ ಪ್ರಮುಖರಾದವರು ಎಂ.ಎನ್. ಜೋಯಿಸರು, ರಂಗರಾಮಯ್ಯ, ಸಾಹುಕಾರ್ ಚನ್ನಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಎಚ್.ಸಿ. ದಾಸಪ್ಪ, ಗೋಪಾಲಕೃಷ್ಣಶೆಟ್ಟಿ ಮೊದಲಾದವರು. ಆಗಿನ ಕಾಲದಲ್ಲಿ ಸುಬ್ಬರಾಯನಕೆರೆ ಮೈದಾನದಲ್ಲಿ ಗಣ್ಯರಿಂದ ಭಾಷಣಗಳಾಗುತ್ತಿದ್ದವು. ಇದಲ್ಲದೆ ಪಟ್ಟಾಭಿ ಸೀತಾರಾಮಯ್ಯ, ಜಯಪ್ರಕಾಶನಾರಾಯಣ ಮೊದಲಾದ ರಾಷ್ಟ್ರ ನೇತಾರರೂ ಬಂದು ಭಾಷಣ ಮಾಡಿದ್ದರು. ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ ನಮ್ಮ ಪ್ರಥಮ ಪ್ರಧಾನಮಂತ್ರಿ ಪಂ. ಜವಾಹರಲಾಲನೆಹರು, ರಾಜಾಜಿ, ಸರದಾರ್ ಪಟೇಲ್ ಮೊದಲಾದ ರಾಷ್ಟ್ರನಾಯಕರು ಬಂದು ಟೌನ್‌ಹಾಲ್ ಮೈದಾನದಲ್ಲಿ ಬೃಹತ್ ಸಭೆಗಳಲ್ಲಿ ಭಾಷಣ ಮಾಡಿದ್ದರು. ಇದೆಲ್ಲಾ ನಡೆದು ಎಷ್ಟೋ ವರ್ಷಗಳಾಗಿ ಹೋದವು. ಈ ಭಾಷಣಗಳಿಗೆಲ್ಲಾ ನಾನು ಹೋಗುತ್ತಿದ್ದೆ. ಮುಖಂಡರ ಭಾಷಣಗಳನ್ನು ಕೇಳಿ ನಾನು ಸಹ ಆಂದೋಲನದಲ್ಲಿ ಧುಮುಕಬೇಕು, ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬೇಕು ಎಂದು ತುಂಬಾ ಮನಸ್ಸು ಕಾಡುತ್ತಿತ್ತು.

ನಾನು ಖಾದಿಯನ್ನೇ ತೊಡುತ್ತಿದ್ದರೂ ಮುಂದೆ, ನಮ್ಮ ಮನೆಯಲ್ಲಿನ ನನ್ನ ಹೆಂಡತಿಯಾಗಲೀ, ಮಕ್ಕಳಾಗಲೀ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಿರಲಿಲ್ಲ. ಕಾರಣ ಖಾದಿ ಒರಟು ಬಟ್ಟೆಯಾಗಿತ್ತು (ಈಗಿನಂತೆ ಆಗಿನ ಕಾಲದ ಖಾದಿಯಲ್ಲಿ ಬದಲಾವಣೆಗಳಾಗಿರಲಿಲ್ಲ). ಈಗ ಮಿಲ್ಲು ಬಟ್ಟೆಗಿಂತಲೂ ಉತ್ತಮವಾದ ಖಾದಿ ಬಟ್ಟೆ ಸಿಕ್ಕುತ್ತದೆ. ಆದರೆ ಆಗ ಖಾದಿ ಅಂದರೆ ಒರಟು ಬಟ್ಟೆ. ಆದ್ದರಿಂದ ಅದನ್ನು ಹಾಕಿಕೊಳ್ಳಲು ಹೆಚ್ಚು ಜನ ಇಷ್ಟಪಡುತ್ತಿರಲಿಲ್ಲ. ಒಂದೊಂದು ಸಲ ಮಕ್ಕಳಿಗೆ ಖಾದಿಯನ್ನು ತೆಗೆಯುತ್ತಿದ್ದೆ. ಆದರೆ ಇದು ಬಹಳ ಕಡಮೆ. ನಾನು ಅವರ

ಇಷ್ಟಕ್ಕೆ ವಿರುದ್ಧವಾಗಿ ಹೋಗಲು ಇಷ್ಟಪಡಲಿಲ್ಲ. ಆದುದರಿಂದಲೇ ಈಗ ನಮ್ಮ ಮನೆಯಲ್ಲಿ ನನ್ನೊಬ್ಬನನ್ನು ಬಿಟ್ಟರೆ, ಯಾರೂ ಖಾದಿಯನ್ನು ಹಾಕಿಕೊಳ್ಳುವುದಿಲ್ಲ. ಗಾಂಧೀ ಜಯಂತಿ ಸಂದರ್ಭದಲ್ಲಿ ಅದು ರಿಯಾಯಿತಿ ದರದಲ್ಲಿ ಮಾರಾಟವಾಗುವಾಗ ಮಗ್ಗುಲ ಹಾಸಿಗೆ, ಟವಲ್ಲುಗಳು, ಚೌಕಗಳನ್ನು ಮಕ್ಕಳು ಕೊಳ್ಳುತ್ತಾರೆ.

ಹಿಂದಿ ಭಾಷೆ ವಿಷಯದಲ್ಲೂ ಅಷ್ಟೆ. ನಾನು ಯಾರಿಗೂ ಬಲವಂತ ಮಾಡಲಿಲ್ಲ. ನನ್ನ ಹಿರಿಯ ಮಗಳು ಮಾಲತಿ ಸ್ವಇಚ್ಛೆಯಿಂದ ಹಿಂದಿಯಲ್ಲಿ ವಿಶಾರದಾ ಮತ್ತು ಗಂಗೋತ್ರಿಯಲ್ಲಿ ಎಂ.ಎ., ಮಾಡಿದಳು. ಇನ್ನುಳಿದ ಮಕ್ಕಳು ಒಂದೆರಡು ಪ್ರಾರಂಭಿಕ ಪರೀಕ್ಷೆಗಳನ್ನು ಮಾಡಿ ಬಿಟ್ಟುಬಿಟ್ಟರು.

ಕೇವಲ ಬಟ್ಟೆಯ ವಿಚಾರವಲ್ಲ. ಗಾಂಧಿಯವರ ಪ್ರಭಾವ ನನ್ನ ಮೇಲೆ ನಿರಂತರವಾಗಿ ಆಗಿದೆ. ನಾನು ಹಿಂದಿ ಪ್ರಚಾರ ಸಭೆಯ ವ್ಯವಸ್ಥಾಪಕನಾಗಿದ್ದಾಗ, ಸಭೆಯಲ್ಲಿ ಯಾವಾಗಲಾದರೂ ಮೀಟಿಂಗುಗಳು ಆದರೆ ತಿಂಡಿಯನ್ನು ಯಾರ ಮನೆಯಲ್ಲಾದರೂ ಮಾಡಿಸಿಕೊಂಡು ಬರುತ್ತಿದ್ದರು. ಎಲ್ಲರೂ ತಿಂಡಿ ತಿಂದು ಎಲೆಗಳನ್ನು ಅಲ್ಲೇ ಬಿಟ್ಟು ಬಾಯೊರಸಿಕೊಂಡು ಮೀಟಿಂಗ್ ಆಗುವ ಹಾಲಿಗೆ ಬಂದುಬಿಡುತ್ತಿದ್ದರು. ಆ ಎಲೆಗಳನ್ನೆಲ್ಲಾ ತೆಗೆದು ಹೊರಗೆ ಹಾಕಿ ಆ ಕೊಠಡಿಯನ್ನು ಸ್ವಚ್ಛ ಮಾಡಿ ಬರುತ್ತಿದ್ದೆ. ನಾನು ಸಭೆಯ ಮ್ಯಾನೇಜರಾಗಿ ಈ ಕೆಲಸ ಮಾಡುವುದನ್ನು ನೋಡಿ ಕೆಲವರು ಆಶ್ಚರ್ಯಪಡುತ್ತಿದ್ದರು. ನನಗೆ ಇದೂ ನನ್ನ ಕರ್ತವ್ಯವೆಂಬ ಭಾವನೆ. ಪ್ರತಿಯೊಂದಕ್ಕೂ ನನಗೆ ಗಾಂಧೀಜಿಯವರೇ ಆದರ್ಶವಾಗಿದ್ದರು. ಯಾವ ಕೆಲಸವನ್ನೂ ಹೀನಾಯವಾದ ಕೆಲಸವೆಂದು ಭಾವಿಸಿರಲಿಲ್ಲ. ನಾನು ಸ್ವಲ್ಪ ಮೃದು ಸ್ವಭಾವದವನು. ನನ್ನ ಮನಸ್ಸು ನೋಯಿಸಿದವರಿಗೆ ನಾನು ಏನೂ ಹೇಳುತ್ತಿರಲಿಲ್ಲ. ಸೇಡು ತೀರಿಸಿಕೊಳ್ಳುವ ಭಾವನೆ ನನ್ನಲ್ಲಿ ಇರಲಿಲ್ಲ. ಈಗಲೂ ಇಲ್ಲ.

೧೯೪೬ನೇ ಇಸವಿ ಜನವರಿಯಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ರಜತಮಹೋತ್ಸವವು ಮದ್ರಾಸಿನಲ್ಲಿ (ಚೆನ್ನೈ) ಒಂದು ವಾರ ಕಾಲ ನಡೆಯಿತು. ಮಹಾತ್ಮಾಗಾಂಧಿಯವರು ಈ ಸಂಸ್ಥೆಯ ಅಧ್ಯಕ್ಷರು. ೧೯೧೮ರಲ್ಲಿ ಈ ಸಭೆಯನ್ನು ಮದ್ರಾಸಿನಲ್ಲಿ ಸ್ಥಾಪಿಸಿದವರೂ ಅವರೇ. ಈ ರಜತ ಮಹೋತ್ಸವಕ್ಕೆ ಮೈಸೂರಿನಿಂದ ಹಿಂದಿ ಪ್ರಚಾರಕರ ಒಂದು ಸಣ್ಣ ಗುಂಪು ಹೋಗಿತ್ತು. ಅದರಲ್ಲಿ ನಾನೂ ಒಬ್ಬನಾಗಿದ್ದೆ.

ರಜತಮಹೋತ್ಸವವನ್ನು ದ.ಭಾ.ಹಿಂ.ಪ್ರ. ಸಭೆಯವರು ಬಹಳ ಚೆನ್ನಾಗಿ ಏರ್ಪಾಡು ಮಾಡಿದ್ದರು. ಸುಮಾರು ಐದು ಸಾವಿರ ಜನರು ಕೂಡುವ ಚಪ್ಪರ (pandal), ಎತ್ತರವಾದ ವೇದಿಕೆ. ರಜತ ಜಯಂತಿಯ ದಿನದ ದೃಶ್ಯ ನನಗೆ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಅಂದಿನ ಸಭೆಯು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ಬರುವುದಕ್ಕೆ ಮುಂಚೆ ಮಂಟಪದಲ್ಲಿ ಬಹಳ ಕೋಲಾಹಲವಾಗುತ್ತಿತ್ತು. ವೇದಿಕೆಯ ಮೇಲೆ ವ್ಯವಸ್ಥಾಪಕರು ಬಂದು, "ದಯವಿಟ್ಟು ಕೂಗಾಡಬೇಡಿ, ಇನ್ನೇನು ಬಾಪೂಜಿಯವರು ಬರುತ್ತಾರೆ! ನಿಶ್ಶಬ್ದವಾಗಿರಿ!" ಎಂದು ಹೇಳುತ್ತಿದ್ದರು. ಆದರೆ ಯಾರೂ ಕೇಳುತ್ತಿರಲಿಲ್ಲ. ಗಲಾಟೆ ನಡೆಯುತ್ತಲೇ ಇತ್ತು. ಸಂಜೆ ನಾಲ್ಕು ಗಂಟೆಗೆ ಸರಿಯಾಗಿ ಬಾಪೂಜಿಯವರು ಸಭಾಮಂಟಪವನ್ನು ಪ್ರವೇಶಿಸಿದರು. ಕೂಡಲೇ ಅಲ್ಲಿ ನೆರೆದಿದ್ದ ಜನಸ್ತೋಮ, "ಬಾಪೂಜೀ ಕೀ ಜೈ, ಮಹಾತ್ಮಾ ಗಾಂಧೀಕೀ ಜೈ, ಭಾರತ್ ಮಾತಾಕೀ ಜೈ" ಎಂದು ಆಕಾಶ ಕಳಚಿ ಬೀಳುವಂತೆ ಘೋಷಣೆ ಮಾಡತೊಡಗಿತು. ಅವರು ವೇಗವಾಗಿ ಕೋಲೂರಿಕೊಂಡು ನಡೆಯುತ್ತಾ, ವೇದಿಕೆಯ ಹತ್ತಿರ ಬಂದು ಮೆಟ್ಟಲುಗಳನ್ನು ಏರತೊಡಗಿದರು. ಆದರೂ ಜನರು ಜಯಕಾರ ಮಾಡುತ್ತಲೇ ಇದ್ದರು. ಆಗ ಅವರು ಕಡೇ ಮೆಟ್ಟಲಿನ ಮೇಲೆ ನಿಂತು ತಮ್ಮ ತೋರುಬೆರಳನ್ನು ನಾಲ್ಕೂ ಕಡೆ ತಿರುಗಿ ತೋರಿಸಿದರು. ಒಂದು ಕ್ಷಣಮಾತ್ರದಲ್ಲಿ ಇಡೀ ಸಭಾಮಂಟಪ ನಿಶ್ಶಬ್ದವಾಗಿಬಿಟ್ಟಿತು. ಆ ಕ್ಷಣ ನನಗೆ ಈಗಲೂ ಜ್ಞಾಪಕವಿದೆ. ನನಗೆ ರೋಮಾಂಚನವಾಯಿತು. ಆ ಮಹಾಪುರುಷನ ದಿವ್ಯಮುಖ ಮಂಡಲವನ್ನು ನೋಡಿ ನನ್ನ ಕಣ್ಣುಗಳಲ್ಲಿ ಆನಂದಬಾಷ್ಪ ಹರಿಯತೊಡಗಿತು. ಕ್ಷಣಕಾಲ ನನ್ನನ್ನು ನಾನು ಮರೆತೆ. ಆಗ ನನಗೆ ಅನಿಸಿತು, ಏಕೆ ಈತ ವಿಶ್ವವಂದ್ಯನಾಗಿದ್ದಾನೆ- ಪ್ರಪಂಚದ ಎಲ್ಲಾ ದೇಶದ ಜನರೂ ಇವರನ್ನು ಏಕೆ ಪೂಜಿಸುತ್ತಾರೆ, ಎಂದು. ಅವರಲ್ಲಿ ನಿಜವಾದ ಮಹಾತ್ಮೆ ಇತ್ತು. ಆದುದರಿಂದಲೇ ಅವರನ್ನು ಇಡೀ ವಿಶ್ವವೇ ಗೌರವಿಸುತ್ತಿತ್ತು. ಅವರು ಹೇಗೆ ಹೇಳಿದರೆ ಹಾಗೆ ದೇಶವಾಸಿಗಳು ಕೇಳುತ್ತಿದ್ದರು, ಅವರ ಸಿದ್ಧಾಂತಗಳನ್ನು ಆಲಿಸಿ ಪಾಲಿಸುತ್ತಿದ್ದರು. ಅನಂತರ ಸುಮಾರು ಎರಡು ಗಂಟೆಗಳ ಕಾಲ ಗಾಂಧೀಜಿಯವರ ನೇತೃತ್ವದಲ್ಲಿ ಸಭೆಯ ಕಲಾಪಗಳು ನಡೆದವು. ರಾಜಾಜಿಯೇ ಮೊದಲಾಗಿ ದೇಶದ ಪ್ರಮುಖ ಕಾಂಗ್ರೆಸ್ ನೇತಾರರು, ಹಿಂದೀ ದಿಗ್ಗಜರು, ಸಭೆಯಲ್ಲಿ ಉಪಸ್ಥಿತರಿದ್ದರು. ಅಂದು ನನಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ನನಗೆ ಒಂದು ದೊಡ್ಡ ನಿಧಿ ಸಿಕ್ಕಿದ ಅನುಭವವಾಯಿತು. ಅದೇ ಮೊದಲ ಬಾರಿ ನಾನು ಬಾಪುವನ್ನು ನೋಡಿದ್ದು. ಮೊದಲು ಅವರನ್ನು ಕೇವಲ ಚಿತ್ರಗಳಲ್ಲಿ ನೋಡಿದ್ದೆ ಹಾಗೂ ಅವರ ಕಥೆಯನ್ನು ಓದಿದ್ದೆ, ಕೇಳಿದ್ದೆ. ಅವರು ನೋಡುವುದಕ್ಕೆ ಯುರೋಪಿಯನ್ನರ ಹಾಗೆ

ಬೆಳ್ಳಗಿದ್ದರು. ಆದರೂ ಅವರನ್ನು 'ಕಪ್ಪು ಜನ' ಎಂದು ದಕ್ಷಿಣ ಆಫ್ರಿಕದ ಬಿಳಿಯರು ರೈಲು ಡಬ್ಬಿಯಿಂದ ಹೊರಗೆ ಹಾಕಿದ್ದನ್ನು ಯೋಚಿಸಿ ನನಗೆ ಬಹಳ ಆಶ್ಚರ್ಯವಾಯಿತು.

ರಜತ ಜಯಂತಿ ಮಹೋತ್ಸವ ಸುಮಾರು ಒಂದು ವಾರ ಕಾಲ ನಡೆಯಿತು. ಹಿಂದಿ ಪ್ರಚಾರ ಸಭೆಯ ಹತ್ತಿರದಲ್ಲೇ ಒಂದು ದೊಡ್ಡ ಮೈದಾನವಿತ್ತು. ಸುಮಾರು ಹತ್ತು ಸಾವಿರ ಜನರು ಸೇರಬಹುದಾದ ಮೈದಾನ. ಒಂದು ತುದಿಯಲ್ಲಿ ಒಂದು ಎತ್ತರವಾದ ವೇದಿಕೆ. ಅದರ ಮೇಲೆ ಬಾಪೂಜಿ ಮತ್ತು ಅವರ ಪ್ರಾರ್ಥನಾ ಮಂಡಲಿಯವರು ಕುಳಿತು ಸಂಧ್ಯಾಕಾಲದಲ್ಲಿ ಎಲ್ಲಾ ಭಾಷೆಗಳಲ್ಲೂ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಬಾಪೂಜಿಯವರು ಸುಮ್ಮನೆ ಕುಳಿತು ಕೇಳುತ್ತಿದ್ದರು. ಭಗವದ್‌ಗೀತೆ, ಕೊರಾನ್, ಬೈಬಲ್, ಅವೇಸ್ಥಾ ಮತ್ತು ಬೌದ್ಧರ ಧರ್ಮಗ್ರಂಥಗಳಿಂದ ಆಯ್ದ ಭಾಗಗಳನ್ನಲ್ಲದೆ ಕಬೀರ್, ಸೂರ್, ತುಲಸೀ, ಮೀರಾ, ರೈದಾಸ್ ಮೊದಲಾದ ಹಿಂದೀಸಂತರ ಪದಗಳನ್ನೂ ಬಹಳ ಭಕ್ತಿ ಭಾವದಿಂದ ಸುಶ್ರಾವ್ಯವಾಗಿ ವೇದಿಕೆಯ ಮೇಲಿದ್ದವರು ಹಾಡುತ್ತಿದ್ದರು. ಒಂದು ದಿವಸ ಒಂದು ಘಟನೆ ನಡೆಯಿತು. ಗಾಂಧೀಜಿಯವರು ಸಭೆಗೆ ಬರುತ್ತಿರುವಾಗ ಜನರು ಕೋಲಾಹಲ ಮಾಡುತ್ತಿದ್ದರು. ಅವರು ವೇದಿಕೆಯ ಮೇಲೆ ಕುಳಿತಮೇಲೂ ಕೆಲವರು ಕೂಗಾಡುತ್ತಲೇ ಇದ್ದರು. ಆ ಸಭೆಯ ವ್ಯವಸ್ಥಾಪಕರು ವೇದಿಕೆಯ ಮೇಲೆ ನಿಂತು ಹಿಂದಿ ಭಾಷೆಯಲ್ಲಿ "ದಯವಿಟ್ಟು ಕೂಗಾಡಬೇಡಿ. ಗಲಾಟೆ ಮಾಡಬೇಡಿ" ಎಂದು ನೆರೆದಿದ್ದ ಜನಸ್ತೋಮಕ್ಕೆ ಹೇಳುತ್ತಿದ್ದರು. ಆಗ ಹತ್ತಿರವೇ ನಿಂತಿದ್ದ ಕೆಲವರು, "ತೆಲಗೂಲ ಚೆಪ್ಪಂಡಿ, ತೆಲಗೂಲ ಚೆಪ್ಪಂಡಿ" ಎಂದು ಜೋರಾಗಿ ಹೇಳಿದರು. ಇದರಿಂದ ಗಾಂಧೀಜಿಯವರಿಗೆ ಬಹಳ ಕೋಪ ಬಂತು. ಅವರು, "ಇಲ್ಲ, ಹಿಂದಿಯನ್ನು ಬಿಟ್ಟು ಇನ್ನು ಯಾವ ಭಾಷೆಯಲ್ಲೂ ಹೇಳುವುದಿಲ್ಲ" ಎಂದು ಹೇಳಿ ಎಲ್ಲರನ್ನೂ ಸ್ತಬ್ಧಗೊಳಿಸಿದರು.

೧೯೪೭ನೇ ಆಗಸ್ಟ್ ೧೫ರಂದು ಭಾರತವು ಪರಕೀಯರ ಆಳ್ವಿಕೆಯಿಂದ ಮುಕ್ತವಾಯಿತು. ಆಂಗ್ಲರು ದೇಶವನ್ನು ಪಾಕಿಸ್ತಾನ್, ಹಿಂದೂಸ್ತಾನ್ ಎಂದು ಇಬ್ಭಾಗ ಮಾಡಿ ಹೊರಟು ಹೋದರು. ಇದರಿಂದ ಎರಡು ಭಾಗಗಳಲ್ಲೂ ರಕ್ತದ ಕೋಡಿಗಳೇ ಹರಿದವು. ಅದೊಂದು ಕಡೆ ಆದರೆ ಇನ್ನೊಂದು ಕಡೆ ದೇಶೀಯ ರಾಜರದ್ದು ಒಂದು ಕಥೆಯಾಗಿತ್ತು. ಆಗ ನಮ್ಮ ದೇಶದಲ್ಲಿ ರಾಜಮಹಾರಾಜರ ಆಡಳಿತದಲ್ಲಿದ್ದ ಸುಮಾರು ೬೦೦ ಸಂಸ್ಥಾನಗಳಿದ್ದವು. ಅದರಲ್ಲಿ ಕೆಲವು ಭಾರತದ ಒಕ್ಕೂಟಕ್ಕೆ ಸೇರಿಕೊಂಡವು. ಇನ್ನು ಕೆಲವು ಸೇರಿಕೊಳ್ಳಲಿಲ್ಲ. ಅವುಗಳಲ್ಲಿ ಪ್ರಮುಖವಾದವು ಮೈಸೂರು, ಹೈದರಾಬಾದು ಮೊದಲಾದವು. ಆಗ ಸಂಸ್ಥಾನಗಳ ಸ್ವತಂತ್ರತೆಗೆ ಸತ್ಯಾಗ್ರಹ ಆಂದೋಲನ ಶುರುವಾಯಿತು. ಅದರಂತೆ ಮೈಸೂರು ನಗರದಲ್ಲೂ ಪ್ರಾರಂಭವಾಯಿತು. ಮೈಸೂರಿನಲ್ಲಿ ಬೃಹತ್ ಮೆರವಣಿಗೆಗಳು, ಸತ್ಯಾಗ್ರಹಗಳು ಎಲ್ಲಾ ಕಡೆಗಳಲ್ಲೂ ಶುರುವಾದವು. ಮೈಸೂರಿನ ಅಂಥ ಒಂದು ಮೆರವಣಿಗೆ ಮೇಲೆ ರಾಮಸ್ವಾಮಿ ಸರ್ಕಲ್ಲಿನಲ್ಲಿ ಪೊಲೀಸರು ಗುಂಡು ಹಾರಿಸಿದರು. ಆಗ ರಾಮಸ್ವಾಮಿ ಎಂಬ ಒಬ್ಬ ಹುಡುಗನು ಎದೆಗೆ ಗುಂಡು ತಗಲಿ ಮೃತಪಟ್ಟನು (ಅದರಿಂದಲೇ ಆ ವೃತ್ತಕ್ಕೆ ರಾಮಸ್ವಾಮಿ ವೃತ್ತ ಎಂದು ಹೆಸರಿಡಲಾಗಿದೆ). ಇದು ನಮ್ಮ ಕಣ್ಣ ಎದುರಿಗೇ ನಡೆದ ಘಟನೆ. ಅನಂತರ ಮೈಸೂರಿನ ಮಹಾರಾಜರು ಅಧಿಕಾರವನ್ನು ಪ್ರಜಾಪ್ರತಿನಿಧಿಗಳಿಗೆ ಬಿಟ್ಟುಕೊಟ್ಟರು. ಅಂದಿನಿಂದ ಇಲ್ಲೂ ಪ್ರಜಾತಂತ್ರ ಸರಕಾರ ಪ್ರಾರಂಭವಾಯಿತು.

೧೯೪೮ ಜನವರಿ ೩೦ನೇ ತಾರೀಕು ಸಂಧ್ಯಾಕಾಲ ಸುಮಾರು ಏಳು ಗಂಟೆ ಇರಬಹುದು. ನಾನು ಹಿಂದಿ ಪ್ರಚಾರಸಭೆಯಲ್ಲಿ ವಿಶಾರದಾ ತರಗತಿಗೆ ಪಾಠ ಹೇಳುತ್ತಾ ಇದ್ದೆ. ಆಗ ನನ್ನ ಸ್ನೇಹಿತರೊಬ್ಬರು 'ಬಾಪೂಜಿಯವರು ದೆಹಲಿಯಲ್ಲಿ ಗುಂಡಿನೇಟಿಗೆ ಸಿಕ್ಕಿ ತಮ್ಮ ಅಸುವನ್ನು ನೀಗಿದರು' ಎಂಬ ಭಯಂಕರ ವಾರ್ತೆಯನ್ನು ತಿಳಿಸಿದರು. ನನಗೆ ಬಹಳ ಆಘಾತವಾಯಿತು. ನನ್ನ ಎದೆಗೇ ಗುಂಡು ಬಿದ್ದ ಹಾಗಾಯಿತು. ಬಾಯಿಂದ ಮಾತೇ ಹೊರಡಲಿಲ್ಲ. ಮನಸ್ಸಿಗೆ ಬಹಳ ನೋವಾಯಿತು. ನನಗೊಬ್ಬನಿಗೇ ಅಲ್ಲ ತರಗತಿಯಲ್ಲಿದ್ದ ಎಲ್ಲ ವಿದ್ಯಾರ್ಥಿಗಳಿಗೂ ಅದೇ ಅನುಭವ. ಪಾಠವನ್ನು ಅಲ್ಲಿಗೇ ನಿಲ್ಲಿಸಿ ಎಲ್ಲರೂ ಹೊರಗೆ ಬಂದೆವು. ಬಾಪೂಜಿಯವರ ಹತ್ಯೆಯಿಂದ ಇಡೀ ದೇಶವೇ ದುಃಖಸಾಗರದಲ್ಲಿ ಮುಳುಗಿತು. ಮಾರನೇ ದಿನ ಸಮಾಚಾರಪತ್ರಗಳಲ್ಲಿ ಗಾಂಧೀಜಿಯವರ ಹತ್ಯೆಯ ಸಮಾಚಾರವೇ ತುಂಬಿತ್ತು. ವಿದೇಶಗಳ ಪ್ರಮುಖರೂ ತಮ್ಮ ಸಂತಾಪವನ್ನು ಭಾರತದ ಮುಖಂಡರಿಗೆ ಕಳುಹಿಸಿದ್ದರು. ಪಂಡಿತ ಜವಾಹರಲಾಲರು ಆಗ ಮೊದಲ ಪ್ರಧಾನಮಂತ್ರಿಗಳು ಮತ್ತು ಡಾ. ರಾಜೇಂದ್ರಪ್ರಸಾದರು ಮೊದಲನೆಯ ರಾಷ್ಟ್ರಪತಿಗಳಾಗಿದ್ದರು. ಇನ್ನೂ ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ತಿಂಗಳಾಗಿರಲಿಲ್ಲ. ಈ ಭಯಂಕರ ಘಟನೆ ನಡೆದುಹೋಯಿತು. ಅನೇಕ ದಿವಸಗಳವರೆಗೆ ದೇಶವು ಶೋಕವನ್ನು ಆಚರಿಸಿತು.

ಈಗ ಕೆಲವು ವರ್ಷಗಳ ಹಿಂದೆ ಉತ್ತರ ಭಾರತದ ಯಾತ್ರೆಗೆ ಹೋಗಿದ್ದಾಗ ದಿಲ್ಲಿಯಲ್ಲಿ ಬಾಪೂಜಿಯವರ ಸಮಾಧಿಗೂ ಹೋಗಿ ನನ್ನ ನಮನವನ್ನು ಸಲ್ಲಿಸಿ ಬಂದೆ. ಈ ಘಟನೆ ನಡೆದು ಐವತ್ತು ವರ್ಷಗಳ ಮೇಲಾದರೂ ಸಮಾಧಿಯನ್ನು ನೋಡಿ ನನ್ನ ಮನಸ್ಸು ಬಹಳ ನೊಂದಿತು. ಅವರು, ಸಮಾಧಿಯ ಪಕ್ಕದಲ್ಲೇ ಇರುವ

ಬಿರ್ಲಾ ಭವನದಿಂದ ಎಷ್ಟು ಹೊತ್ತಿಗೆ ಪ್ರಾರ್ಥನಾಸಭೆ ನಡೆಯುವ ಮೈದಾನದ ಕಡೆಗೆ ಹೊರಟರು? ಎಷ್ಟು ಹೊತ್ತಿಗೆ ಅಲ್ಲಿಗೆ ತಲುಪಿದರು? ಯಾರು ಗುಂಡು ಹೊಡೆದ? ಎಲ್ಲಿ ನಿಂತು ಹೊಡೆದ? ಆಗ ಅವರ ಬಾಯಿಂದ 'ಹೇ ರಾಮ' ಎಂಬ ಶಬ್ದ ಹೊರಗೆ ಬಂದು ಅವರು ಹೇಗೆ ಕೆಳಗೆ ಬಿದ್ದರು? ಎಲ್ಲವನ್ನೂ ಅಲ್ಲಿದ್ದವರೊಬ್ಬರು ನಮಗೆಲ್ಲಾ ತಿಳಿಸಿದರು. ಬಹಳ ಭಾರವಾದ ಹೃದಯದಿಂದ ಹಿಂದಿರುಗಿದೆವು.

ಸಹಧರ್ಮಿಣಿ

ನಾನು ಜೀವನದುದ್ದಕ್ಕೂ ಬಡತನವನ್ನೇ ಅನುಭವಿಸಿದೆ. ಆದರೆ ಯಾವತ್ತೂ ಅದಕ್ಕಾಗಿ ಸಾಲ ಮಾಡಲಿಲ್ಲ. **ಋಣಂ ಕೃತ್ವಾ ಘೃತಂ ಪಿಬೇತ್** ಎಂಬ ಚಾರ್ವಾಕರ ನೀತಿಯನ್ನು ಅನುಸರಿಸಲಿಲ್ಲ. ಎಷ್ಟು ಹಾಸಿಗೆಯೋ ಅಷ್ಟೇ ಕಾಲು ಚಾಚುತ್ತಿದ್ದೆ. ಇದರಲ್ಲಿ ನನ್ನ ಹೆಂಡತಿಯ ಸಹಯೋಗವೂ ಬಹಳ. ಮಹಾತಾಯಿ! ಒಂದು ದಿವಸವೂ ಮನೆಯಲ್ಲಿ ಅದಿಲ್ಲ ಇದಿಲ್ಲ ಎಂದು ಜಗಳವಾಡಿಲ್ಲ , ಗೊಣಗುಟ್ಟಿಲ್ಲ . ಏನಿದ್ದರೆ ಅದನ್ನು ಉಪಯೋಗಿಸಿಕೊಂಡು ಅಡುಗೆ ಮಾಡುತ್ತಿದ್ದಳು. ನಾನು ಓದುವಾಗ ವಾರ ಮಾಡಿಕೊಂಡಿದ್ದೆ. ಆದ್ದರಿಂದ ಯಾರಾದರೂ ವಾರ ಕೇಳಿದರೆ ಇಲ್ಲ ಎಂದು ಹೇಳುತ್ತಿರಲಿಲ್ಲ. ನನಗಿಂತ ಮೊದಲೇ ಅವಳು ತನ್ನ ಒಪ್ಪಿಗೆಯನ್ನು ಕೊಡುತ್ತಿದ್ದಳು. ನನ್ನ ತಂಗಿಯರೂ, ತಮ್ಮಂದಿರೂ ಕೆಲವು ವರ್ಷಗಳು ನಮ್ಮಲ್ಲೇ ಇದ್ದರು. ಕೆಲ ನೆಂಟರಿಷ್ಟರ ಮಕ್ಕಳೂ ಇದ್ದರು. ವಾರದ ಹುಡುಗರೂ ಸೇರಿದಂತೆ ಎಲ್ಲರಿಗೂ ಬಹಳ ತಾಳ್ಮೆಯಿಂದ ಮಾಡಿ ಬಡಿಸುತ್ತಿದ್ದಳು.

ಒಬ್ಬ ಹುಡುಗ ಹಳ್ಳಿಯಿಂದ (ಸುಮಾರು ರುದ್ರಪಟ್ಟಣ ಇರಬಹುದು) ಇಲ್ಲಿಗೆ ಬಂದು ಕಾಲೇಜಿಗೆ ಸೇರಿಕೊಂಡ. ನಮ್ಮ ಮನೆಗೆ ಒಂದು 'ವಾರ'ಕ್ಕೆ ಬರುತ್ತಿದ್ದ. ಕೆಲವು ದಿನಗಳಾದ ಮೇಲೆ ಒಂದು ದಿವಸ ಊಟಕ್ಕೆ ಬಂದಾಗ, "ಅಮ್ಮಾಮೀ! ಮುಂದಿನ ವಾರದಿಂದ ನಾನು ಊಟಕ್ಕೆ ಬರುವುದಿಲ್ಲ" ಎಂದು ಹೇಳಿದನಂತೆ. ಅದಕ್ಕೆ ಇವಳು "ಯಾಕಪ್ಪ?" ಅಂತ ಕೇಳಿದ್ದಕ್ಕೆ "ನನಗೆ ಎಲ್ಲಾ ವಾರಗಳೂ ಸಿಕ್ಕಿಲ್ಲ. ಊಟಕ್ಕೆ ತುಂಬಾ ತೊಂದರೆ ಆಗಿದೆ. ಆದ್ದರಿಂದ ನಾನು ಊರಿಗೆ ವಾಪಸ್ ಹೊರಟು ಹೋಗುತ್ತೇನೆ" ಎಂದು ಹೇಳಿದನಂತೆ. ಆಗ ಇವಳು ಸಮಾಧಾನ ಹೇಳಿ, "ಹೋಗಬೇಡ, ಈಗ ಕಷ್ಟಪಟ್ಟರೆ ಮುಂದಕ್ಕೆ ಅನುಕೂಲವಾಗುತ್ತದಪ್ಪ", ಅಂತ ಹೇಳಿ "ನಿನಗೆ ಎಲ್ಲಾ ವಾರಗಳೂ ಸಿಕ್ಕುವವರೆಗೂ ಇಲ್ಲಿಗೇ ಬಂದು ಊಟ ಮಾಡಪ್ಪ" ಎಂದು ಸಮಾಧಾನ ಮಾಡಿ ಕಳುಹಿಸಿದಳಂತೆ. ಅವಳ ಮಾತಿಗೆ ಬೆಲೆ ಕೊಟ್ಟು ಆ ಹುಡುಗ ಊರಿಗೆ ಹೋಗದೆ ತನ್ನ ಓದನ್ನು ಮುಂದುವರಿಸಿದ. ಕೆಲ ಸಮಯದ ಮೇಲೆ ಅವನಿಗೆ ಎಲ್ಲಾ ವಾರಗಳೂ ಸಿಕ್ಕಿದವು. ಪರೀಕ್ಷೆಗಳನ್ನು ಪಾಸು ಮಾಡಿ ಮುಂದೆ ಒಳ್ಳೆಯ ಕೆಲಸವನ್ನೂ ಮಾಡಿಕೊಂಡ. ಈಗ ಬೆಂಗಳೂರಿನಲ್ಲಿ ಸುಖವಾಗಿ ತನ್ನ ಸಂಸಾರದೊಂದಿಗೆ ಇದ್ದಾನೆ.

ನನ್ನ ಹೆಂಡತಿ ಧರ್ಮಭೀರು. ಪೂಜೆ ಪುನಸ್ಕಾರಗಳಲ್ಲಿ ಬಹಳ ಶ್ರದ್ಧೆ. ನಿತ್ಯಗೌರೀ ಪೂಜೆ, ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ಮಾಡುವುದು, ಏಕಾದಶಿ, ಸೋಮವಾರ ಗುರುವಾರಗಳಲ್ಲಿ 'ಒಂದು ಹೊತ್ತು' ಊಟ ಮಾಡುವುದು ಮತ್ತು ಅತಿಥಿ ಸತ್ಕಾರ ಅವಳ ಬಹಳ ಪ್ರಿಯವಾದ ಕರ್ತವ್ಯಗಳು. ಆಗಲೂ ಅಷ್ಟೆ, ಈಗಲೂ ನಡೆಯುತ್ತಲೇ ಇದೆ. ಬಡತನವಾದರೂ ನಾನು ಯಾವಾಗಲೂ ಅವಳ ಈ ಸತ್ಕಾರ್ಯಕ್ಕೆ ಅಡ್ಡಿಪಡಿಸಿಲ್ಲ. ನನಗೂ ಇದರಿಂದ ಸಂತೋಷವೇ. ಅತಿಥಿದೇವೋ ಭವ ತಾನೆ ? ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದಾಗ ನಮಗೆ ಆಗುವ ಸಂತೋಷವನ್ನು ವರ್ಣಿಸಲು ಸಾಧ್ಯವಿಲ್ಲ. ಆದುದರಿಂದಲೇ ನಮ್ಮ ಹಿಂದೂಧರ್ಮದಲ್ಲಿ ಅತಿಥಿಸತ್ಕಾರ ಮತ್ತು ಪರೋಪಕಾರವನ್ನು ಮಾನವಧರ್ಮದ ಅತ್ಯಂತ ಶ್ರೇಷ್ಠವಾದ ಕೆಲಸವೆಂದು ಭಾವಿಸಿದ್ದಾರೆ. ಯಾರು ಬಂದರೂ ಸಂತೋಷವಾಗಿ ಅವರಿಗೆ ಊಟ ಬಡಿಸಿ ಅನಂತರ ತಾನು ಊಟ ಮಾಡುವುದು; ಇದೇ ಪದ್ಧತಿ. ವಾರದ ಹುಡುಗರು ಬಂದರೂ ಅಷ್ಟೆ. ಮೊದಲು ಅವರಿಗೆ ಬಡಿಸಿ, ಅವರ ಎಲೆಯನ್ನು ಎತ್ತಿ ಹಾಕಿ, ಗೋಮಯ ಹಾಕಿ ಅನಂತರ ತಾನು ಊಟ ಮಾಡುವುದು.

ಊರಿನಲ್ಲಿ ತುಂಬ ಬಡತನವಾದ್ದರಿಂದ ನನ್ನ ಒಬ್ಬ ತಂಗಿ ಸೀತುವನ್ನು ಮೈಸೂರಿಗೆ ಕರೆಸಿಕೊಂಡೆವು. ಅವಳಿಗೆ ಲಗ್ನವಾಗುವವರೆಗೂ ಸುಮಾರು ನಾಲ್ಕೈದು ವರ್ಷಗಳು ಇಲ್ಲಿ ಇದ್ದು ಮಿಡಲ್ ಸ್ಕೂಲ್‌ವರೆಗೂ ಓದಿದಳು. ಅವಳು ಗಂಡನ ಮನೆಗೆ ಹೋದ ಮೇಲೆ ನನ್ನ ಕಡೆಯ ತಮ್ಮ ಶ್ರೀನಿವಾಸಮೂರ್ತಿ (ಸೀನು) ಮತ್ತು ಕಡೆಯ ತಂಗಿ ಸುಬ್ಬಲಕ್ಷ್ಮಿ (ಅಮ್ಮಯ್ಯ) ಇಬ್ಬರನ್ನೂ ಕರಸಿಕೊಂಡೆ. ತಂಗಿ ಹೈಸ್ಕೂಲು ಮತ್ತು ಟಿ.ಸಿ.ಹೆಚ್.ಗಳನ್ನು ಓದಿದಳು. ಆ ವೇಳೆಗೆ ಅವಳಿಗೆ ಲಗ್ನವಾಯಿತು. ಅವಳು ಹೋಗಿ ಬಂದಳು. ನನ್ನ ತಮ್ಮನೂ ಹಿಂದಿಯಲ್ಲಿ 'ಸಾಹಿತ್ಯರತ್ನ' ಮಾಡಿದನು. ಅವನಿಗೆ ಬೆಂಗಳೂರು ಆಚಾರ್ಯಪಾಠಶಾಲೆ ಹೈಸ್ಕೂಲಿನಲ್ಲಿ ಕೆಲಸ ಸಿಕ್ಕಿತು.

ನನ್ನ ತಂಗಿ ಮತ್ತು ತಮ್ಮ ಹೋದ ಮೇಲೆ ನನ್ನ ಹಿರಿಯ ತಂಗಿಯ ಮಗಳು ನಾಗಲಕ್ಷ್ಮಿ ಎರಡು ಮೂರು ವರ್ಷ ನಮ್ಮ ಮನೆಯಲ್ಲೇ ಇದ್ದು ಎಸ್.ಎಸ್.ಎಲ್.ಸಿ. ಮಾಡಿದನಂತರ ಟಿ.ಸಿ.ಹೆಚ್. ಮಾಡಿ ಕೆಲಸ ಮಾಡಿಕೊಂಡು, ಮದುವೆ ಮಾಡಿಕೊಂಡು ಹೋಗಿಬಂದಳು.

ಇದಲ್ಲದೆ ನಮ್ಮ ನೆಂಟರಿಷ್ಟರ ಮಕ್ಕಳು ಮೈಸೂರಿಗೆ ಓದಲು ಬಂದಾಗ ನಮ್ಮ ಕೈಲಾದ ಅಲ್ಪ ಸ್ವಲ್ಪ ಸಹಾಯವನ್ನು ಮಾಡುತ್ತಿದ್ದೆವು. ಒಂದು ಸಲ ಸಣ್ಣ ಘಟನೆ ನಡೆಯಿತು. ನನ್ನ ತಮ್ಮ ರಾಮಸ್ವಾಮಿಯ ಮಗಳು ಗಾಯತ್ರಿಯನ್ನು ಪಿ & ಟಿ. ಟ್ರೈನಿಂಗಿಗೆ ಮೈಸೂರಿಗೆ ಹಾಕಿದ್ದರು. ನಾನು ಅವಳನ್ನು ಕರೆದುಕೊಂಡು ಆ ಟ್ರೈನಿಂಗ್ ಸ್ಕೂಲಿಗೆ ಹೋದೆ. ಅವಳನ್ನು ಅಲ್ಲಿ ಸೇರಿಸಿ ಆಯಿತು. ನಾನು ಮನೆ ಕಡೆಗೆ ಹೊರಟೆ. ಆಗ ಅಲ್ಲಿ ಒಬ್ಬರ ಪರಿಚಯ ಆಯಿತು. ಅವರು ಸಾಗರದಿಂದ ತಮ್ಮ ಮಗಳನ್ನು ಅದೇ ಸ್ಕೂಲಿಗೆ ಸೇರಿಸಲು ಬಂದಿದ್ದರು. ಎರಡು ದಿವಸ ಮುಂಚೆಯೇ ಬಂದಿದ್ದರಂತೆ. ಅನೇಕ ಕಡೆಗಳಲ್ಲಿ ಪ್ರಯತ್ನಪಟ್ಟರೂ ಅವರ ಮಗಳಿಗೆ ಇರಲು ಅನುಕೂಲವಾದ ಸ್ಥಳ ಸಿಕ್ಕಲಿಲ್ಲ. ಆಗ ಅವರು ಬಹಳ ಖಿನ್ನರಾಗಿ, "ನಿಮ್ಮ ಹುಡುಗಿಗೇನೋ ನಿಮ್ಮ ಮನೆ ಇದೆ, ಯೋಚನೆ ಇಲ್ಲ. ಆದರೆ ನನ್ನ ಮಗಳಿಗೆ ಎಲ್ಲೂ ಅವಕಾಶವಾಗಲಿಲ್ಲ. ಇಲ್ಲಿ ನನಗೆ ನೆಂಟರಾಗಲೀ, ಗುರುತು ಕಂಡವರಾಗಲೀ ಯಾರೂ ಇಲ್ಲ. ಇನ್ನೇನು ಮಾಡುವುದು, ವಾಪಸ್ ಊರಿಗೆ ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿದರು. ಆಗ ಅವರ ಕಣ್ಣಿನಲ್ಲಿ ನೀರು ಬಂದಿತು. ಆಗ ಆ ಹೆಣ್ಣುಮಗಳನ್ನೂ ನಮ್ಮ ಮನೆಯಲ್ಲೇ ಇಟ್ಟುಕೊಂಡರೆ ಹೇಗೆ ಎಂದು ಯೋಚಿಸಿದೆ. ನನ್ನ ಹೆಂಡತಿ ಏನು ಹೇಳುತ್ತಾಳೋ ಎಂಬ ಯೋಚನೆ ಬಂತು. ನನಗೆ ಮುಖ್ಯವಾಗಿ ಎರಡು ಸಮಸ್ಯೆಗಳಿದ್ದವು. ಒಂದು ಆರ್ಥಿಕ ಸಮಸ್ಯೆ. ನನಗೆ ರಿಟೈರ್ ಆಗಿತ್ತು, ಪೆನ್‌ಶನ್ ಬಹಳ ಕಮ್ಮಿ ಬರುತ್ತಿತ್ತು. ಎರಡನೆಯದು ಮನೆಯಲ್ಲಿ ಮೊದಲೇ ನಾವು (ನಾಲ್ಕು ಮಕ್ಕಳೂ ಸೇರಿ) ಆರು ಜನ ಇದ್ದೆವು. ಇವರಿಬ್ಬರೂ ಬಂದರೆ ಎಂಟು ಜನರಿಗೆ ಇರಲು ಕಷ್ಟ ; ಮನೆ ಚಿಕ್ಕದು. ಆದರೂ ಅವರನ್ನು ಮನೆಗೆ ಕರೆದುಕೊಂಡು ಬಂದು ನನ್ನ ಹೆಂಡತಿಗೆ ಅವರ ಪರಿಸ್ಥಿತಿಯನ್ನು ತಿಳಿಸಿದೆ. "ಅದಕ್ಕೇನಂತೆ, ನಮ್ಮ ಮಕ್ಕಳ ಜತೆ ಅವಳೂ ಒಬ್ಬಳು ಮಗಳು ಎಂದು ತಿಳಿದುಕೊಳ್ಳೋಣ, ನಾವು ಊಟ ಮಾಡುವುದನ್ನೇ ಅವಳಿಗೂ ಬಡಿಸಿದರಾಯಿತು. ಎಲ್ಲರೂ ಹಂಚಿಕೊಂಡು ಊಟ ಮಾಡೋಣ. ಮೂರು ತಿಂಗಳು ತಾನೇ (ಟ್ರೈನಿಂಗ್ ಅವಧಿ) ಹೇಗೋ ಕಳೆದು ಹೋಗುತ್ತದೆ. ಆ ಮಗುವಿಗೆ ಒಂದು ಜೀವನೋಪಾಯಕ್ಕೆ ನಾವು ಸ್ವಲ್ಪ ಸಹಾಯ ಮಾಡಿದಂತಾಗುತ್ತದೆ. ಇದಕ್ಕಿಂತಲೂ ಪುಣ್ಯದ ಕೆಲಸ ಬೇರೇನಿದೆ ?" ಎಂದು ಹೇಳಿ ಅನಂತರ ಆ ಹುಡುಗಿಯನ್ನು ಇಟ್ಟುಕೊಳ್ಳಲು ಸಂತೋಷದಿಂದ ಒಪ್ಪಿಕೊಂಡಳು. ಆಗ ಆ ತಂದೆ ಮಗಳ ಸಂತೋಷಕ್ಕೆ ಪಾರವೇ ಇಲ್ಲ. ಮೂರು ತಿಂಗಳಾದ ಮೇಲೆ ಅವಳಿಗೆ ಪರೀಕ್ಷೆಯೂ ಆಯಿತು. ಅನಂತರ ಪಿ & ಟಿನಲ್ಲಿ ಕೆಲಸವೂ ಸಿಕ್ಕಿತು. ಅನಂತರ ಮದುವೆಯೂ ಆಯಿತು. ಆ ಹುಡುಗಿ- ಅವಳ ಹೆಸರು ವಸುಮತಿ ಡೋಂಗ್ರೆ ಎಂದು; ನಮ್ಮನ್ನು ಮರೆತಿಲ್ಲ. ನನ್ನ ತಮ್ಮನ ಮಗಳ ಹಾಗೆ ಅವಳೂ ನಮ್ಮನ್ನು 'ದೊಡ್ಡಪ್ಪ' 'ದೊಡ್ಡಮ್ಮ' ಎಂದೇ ಕರೆಯುತ್ತಿದ್ದಳು. ಈಗಲೂ ಅದೇ ಅಭಿಮಾನ, ಪ್ರೀತಿ. ಈಗ ಎರಡು ಮಕ್ಕಳ ತಾಯಿಯಾಗಿದ್ದಾಳೆ. ಗಂಡ ಬ್ಯಾಂಕಿನಲ್ಲಿದ್ದಾರೆ. ಶಿವಮೊಗ್ಗದಲ್ಲಿ ಸ್ವಂತ ಮನೆ ಕಟ್ಟಿಸಿಕೊಂಡು ಸುಖವಾಗಿದ್ದಾರೆ. ನಾವೂ ಒಂದು ಸಲ ಅಲ್ಲಿಗೆ ಹೋಗಿದ್ದೆವು. ಆಗ ಅವಳ ಸಂತೋಷಕ್ಕೆ ಪಾರವೇ ಇಲ್ಲ. ಅಕ್ಕಪಕ್ಕದ ಮನೆಯವರಿಗೆಲ್ಲಾ "ನಮ್ಮ ದೊಡ್ಡಪ್ಪ ದೊಡ್ಡಮ್ಮ ಬಂದಿದ್ದಾರೆ" ಎಂದು ಎಲ್ಲರಿಗೂ ನಮ್ಮ ಪರಿಚಯ ಮಾಡಿಸಿದಳು. ಬರುವಾಗ ನನಗೆ ಪಂಚೆ ಜೊತೆ, ಅವಳ ದೊಡ್ಡಮ್ಮನಿಗೆ ಸೀರೆಯನ್ನು ಉಡುಗೊರೆಯಾಗಿ ಕೊಟ್ಟು ಕಳುಹಿಸಿದಳು. ಜೀವನದಲ್ಲಿ ಇದಕ್ಕಿಂತಲೂ ಅಧಿಕ ಸಂತೋಷದ ಕ್ಷಣಗಳು ಸಿಕ್ಕುವುದು ಅತಿ ವಿರಳ.

ಹೀಗೆ ಮನುಷ್ಯನ ಜೀವನದಲ್ಲಿ ಚಿಕ್ಕ ಪುಟ್ಟ ಘಟನೆಗಳು ನಡೆಯುತ್ತಲೇ ಇರುತ್ತವೆ. ಕೆಲವನ್ನು ಸ್ಮರಿಸಿಕೊಂಡರೆ ಸಂತೋಷವೂ ಕೆಲವನ್ನು ಸ್ಮರಿಸಿಕೊಂಡರೆ ದುಃಖವೂ ಆಗುತ್ತದೆ. ಆದರೆ **ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ** ಎಂದು ಪರಮಾತ್ಮನು ಹೇಳಿರುವ ಹಾಗೆ ಸುಖವಾಗಲೀ ದುಃಖವಾಗಲೀ ನಾವು ಎರಡನ್ನೂ ಸಮಭಾವದಿಂದ ಸ್ವೀಕರಿಸಬೇಕು. ಅದೇ ಜೀವನದ ಮಾರ್ಗ. ಜೀವನದ ಮಾರ್ಗ ಹೂವಿನ ಹಾಸಿಗೆಯಲ್ಲ , ಮುಳ್ಳು ಕೂಡ ಇರುತ್ತದೆ ಎಂಬುದನ್ನು ನಾವು ತಿಳಿಯಬೇಕು. ಸುಖಪ್ರಾಪ್ತಿಯಾದಾಗ ನಗುವುದು, ಸಂತೋಷ ಪಡುವುದು, ದುಃಖ ಬಂದಾಗ ಅಳುವುದು, ವ್ಯಸನ ಪಡುವುದು ಇದೇ ಜೀವನ ನದಿಯ ಎರಡು ಧಾರೆಗಳು. ಎರಡೂ ಬೆರತು ಹರಿಯುತ್ತಿರುತ್ತವೆ. **ಆಂಖೋಂಮೇ ಆಂಸೂ, ಹೊಂಟೋಂ ಪರ ಹಾಸ್, ಯಹೀ ಜೀವನ್ ಕ ಇತಿಹಾಸ್** ಇದು ನನ್ನ ಒಂದು ಹಿಂದೀ ಕವಿತೆಯ ಕಡೆಯ ಸಾಲುಗಳು. ಕಣ್ಣಿನಲ್ಲಿ ಅಶ್ರು, ತುಟಿಯ ಮೇಲೆ ಮುಗುಳು ನಗೆ, ಇದೇ ಜೀವನದ ಇತಿಹಾಸ.

ಆಘಾತಗಳು

ನನ್ನ ಜೀವನದ ಪ್ರಾರಂಭದಿಂದಲೂ ಆಘಾತದ ಮೇಲೆ ಆಘಾತವಾಯಿತು. ಒಂದು ದೀಪ ಹತ್ತಿಸಿದ ಮರು ಕ್ಷಣದಲ್ಲಿ ನಂದಿಹೋಯಿತು. ಇನ್ನೊಂದು ಸ್ವಲ್ಪ ಕಾಲ ತನ್ನ ಬೆಳಕನ್ನು ಚೆಲ್ಲಿ ಚಿರಶಾಂತಿಯನ್ನು ಪಡೆಯಿತು. ಅನಂತರ ನಮ್ಮ ತಂದೆಯವರು ಕೆಲವು ಕಾಲ ಹಾಸಿಗೆ ಹಿಡಿದು ಮಲಗಿದ್ದರು; ತಮ್ಮ ಇಹಲೋಕದ ವ್ಯವಹಾರವನ್ನು ಮುಗಿಸಿಕೊಂಡು ಹೊರಟು ಹೋದರು. ಆದರೆ ಅವರು ಹೋಗುವುದಕ್ಕೆ ಮುಂಚೆ ತಮ್ಮ ಜವಾಬ್ದಾರಿಯನ್ನೆಲ್ಲಾ

ಮುಗಿಸಿದ್ದರು. ಮೂರು ಹೆಣ್ಣು ಮತ್ತು ನಾಲ್ಕು ಗಂಡು ಮಕ್ಕಳಿಗೆ ಲಗ್ನ ಮಾಡಿದ್ದರು. ಎಲ್ಲಾ ಮಕ್ಕಳೂ ತಮ್ಮ ತಮ್ಮ ಸಂಸಾರಗಳನ್ನು ನಡೆಸಿಕೊಂಡು ಹೋಗುವ ಯೋಗ್ಯತೆಯನ್ನು ಪಡೆದಿದ್ದರು.

ನಮ್ಮ ತಂದೆಯವರು ತೀರಿಕೊಳ್ಳುವುದಕ್ಕಿಂತ ಮುಂಚೆಯೇ ನನ್ನ ದೊಡ್ಡ ತಂಗಿಯ ಯಜಮಾನರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು. ಆಗ ಅವಳಿಗೆ ಕೇವಲ ಎಂಟು ತಿಂಗಳ ಒಂದು ಹೆಣ್ಣು ಮಗುವಿತ್ತು. ಏನೋ ಇಲ್ಲದ ಸಲ್ಲದ ಕಾರಣಗಳನ್ನು ಕೊಟ್ಟು ಹೆಂಡತಿ ಮತ್ತು ಮಗುವನ್ನು ನಮ್ಮ ಮನೆಗೆ ತಂದು ಬಿಟ್ಟುಹೋದ ನಮ್ಮ ಭಾವ, ಅವರನ್ನು ಪುನಃ ಕರೆದುಕೊಂಡೇ ಹೋಗಲಿಲ್ಲ. ಅನಂತರ ಒಂದು ವರ್ಷದಲ್ಲೇ ತಾನೂ ತೀರಿಕೊಂಡ. ತಾಯಿ, ಮಗು ಇಬ್ಬರನ್ನೂ ನಮ್ಮ ತಂದೆತಾಯಿಗಳೇ ಸಾಕಿ ಮುಂದಕ್ಕೆ ತಂದರು. ತಂಗಿಯ ಮಗಳು ನಾಗಲಕ್ಷ್ಮಿ ದೊಡ್ಡವಳಾಗಿ ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಎಚ್. ಮಾಡಿಕೊಂಡು ಅಧ್ಯಾಪಕಿಯಾದಳು. ಒಬ್ಬ ಅಧ್ಯಾಪಕರನ್ನೇ ಮದುವೆ ಮಾಡಿಕೊಂಡಳು. ಎರಡು ಹೆಣ್ಣುಮಕ್ಕಳಾದವು. ಬನ್ನೂರಿನಲ್ಲಿ ಗಂಡ ಹೆಂಡಿರಿಬ್ಬರೂ ಒಂದೇ ಸ್ಕೂಲಿನಲ್ಲಿ ಕೆಲಸ ಮಾಡುತ್ತಿದ್ದರು. ಆ ವೇಳೆಗೆ ಅವಳ ತಾಯಿ ಅಂದರೆ ನನ್ನ ಹಿರಿಯ ತಂಗಿ ತೀರಿಹೋದಳು. ಈ ಆಘಾತವನ್ನು ಮರೆಯುತ್ತಿರುವಾಗಲೇ ನನ್ನ ತಂಗಿಯ ಮಗಳು ನಾಗಲಕ್ಷ್ಮಿಯೂ ಇಹಲೋಕದ ವ್ಯಾಪಾರವನ್ನು ಮುಗಿಸಿಕೊಂಡು ಹೊರಟುಹೋದಳು. ನನ್ನ ಮಕ್ಕಳು, ನನ್ನ ತಮ್ಮಂದಿರ ಮಕ್ಕಳು ಮತ್ತು ತಂಗಿಯರ ಮಕ್ಕಳಿಗೆಲ್ಲಾ ಅವಳು ದೊಡ್ಡವಳು. ಎಲ್ಲಾ ಮಕ್ಕಳೂ ಅವಳನ್ನು ಸ್ವಂತ ಅಕ್ಕನಂತೆ ಭಾವಿಸಿ ಪ್ರೀತಿಸುತ್ತಿದ್ದರು. ಆದ್ದರಿಂದ ಅವರಿಗೆ ಹೆಚ್ಚು ದುಃಖವಾಯಿತು.

ನಮ್ಮ ತಾಯಿ ಮೊದಲನೇ ಸಲ ಲಕ್ವಾ ಹೊಡೆದ ಮೇಲೆ ಸುಮಾರು ಎರಡು ವರ್ಷ ಇದ್ದರು. ಅನಂತರ ಇನ್ನೊಂದು ಸಲ ಹೊಡೆದಾಗ ಅವರು ಪೂರ್ತಿಯಾಗಿ ಮಲಗಿ ಕೆಲವು ದಿವಸಗಳಲ್ಲೇ ಸ್ವರ್ಗಲೋಕವನ್ನು ಸೇರಿದರು. ಹೀಗೆ ಒಂದಾದ ಮೇಲೊಂದು ದುಃಖದ ಘಟನೆಗಳು ನಡೆಯುತ್ತಲೇ ಬಂದಿವೆ. ಒಂದು ಸಮಾಧಾನದ ಸಂಗತಿಯೆಂದರೆ ಹೇಗೆ ಕಷ್ಟಗಳು ಜೀವನದಲ್ಲಿ ಪ್ರಾಪ್ತವಾಗುತ್ತವೋ ಹಾಗೆಯೇ ಅವುಗಳನ್ನು ಸಹಿಸುವ ಶಕ್ತಿಯೂ ಪ್ರಾಪ್ತವಾಗುತ್ತದೆ. ಸದ್ಯದ ಕಷ್ಟ ದೂರವಾದರೂ ಅದನ್ನು ಸಹಿಸುವ ಶಕ್ತಿ ಮತ್ತು ಅದರ ಅನುಭವ ನಮ್ಮಲ್ಲಿ ಉಳಿದೇ ಇರುತ್ತದೆ. ಇದರಿಂದ ಮುಂದೆ ಬರುವ ಕಷ್ಟಗಳನ್ನು ನಾವು ಎದುರಿಸಲು ಸಾಧ್ಯವಾಗುತ್ತದೆ. ನಾವು ಜೀವನದಲ್ಲಿ ಕಲಿಯಬೇಕಾದ ಬಹುಮುಖ್ಯವಾದ ಪಾಠ ಇದು.

ಕಾಲಚಕ್ರ ಉರುಳಿದ ಹಾಗೆ ಜೀವನಚಕ್ರವೂ ಉರುಳುತ್ತಾ ಹೋಗುತ್ತದೆ. ಹಳೆಯದು ಮರೆಯುತ್ತಾ , ಹೊಸ ಹೊಸ ಘಟನೆಗಳು ಆಗುತ್ತಾ ಇರುತ್ತವೆ. ಎಷ್ಟೋ ವೇಳೆ ನಾವು ಊಹಿಸಿರದ ಘಟನೆಗಳು ನಡೆದು ಜೀವನದಲ್ಲಿ ಹೊಸ ಹೊಸ ತಿರುವುಗಳು ಬರುವವು. ಅದಕ್ಕೆ ನಾವು ಸಿದ್ಧರಾಗಿರಬೇಕು. ನಮ್ಮ ತಾಯಿ ಹೇಳುತ್ತಿದ್ದ 'ಹಳೇ ಕಣ್ಣು , ಹೊಸ ನೋಟ' ಈ ಮಾತು ನೂರಕ್ಕೆ ನೂರು ಸತ್ಯ. ಕಣ್ಣು ಹಳೆಯದಾದರೂ ಮುಂದೆ ಬರುವ ದೃಶ್ಯಗಳು ಹೊಸವು ತಾನೇ!

ಬಾಡಿಗೆ ಮನೆ

ಮೈಸೂರಿನಲ್ಲಿ ನಮಗೆ ಸ್ವಂತ ಮನೆ ಇರಲಿಲ್ಲ. ಬಾಡಿಗೆ ಮನೆಯಲ್ಲಿ ಇರುತ್ತಿದ್ದೆವು. ಸುಮಾರು ಅರುವತ್ತು ವರ್ಷಗಳ ಕಾಲ ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲೇ ಕಾಲ ಕಳೆದದ್ದಾಯಿತು. ಬಹಳ ಹಿಂದೆ ಈ ಊರಿನಲ್ಲಿ ಮನೆಗಳು ಖಾಲಿ ಇದ್ದರೆ 'ಮನೆ ಬಾಡಿಗೆಗೆ ಇದೆ' 'House To Let' ಎಂಬ ಫಲಕಗಳನ್ನು ನೇತುಹಾಕಿರುತ್ತಿದ್ದರು. ಬಾಡಿಗೆ ಪಡೆಯುವುದೂ ಬಹಳ ಸುಲಭವಾಗಿತ್ತು. ಮುಂಗಡವನ್ನೂ ಕೊಡಬೇಕಾಗಿರಲಿಲ್ಲ. ಬಾಡಿಗೆ ಕೂಡ ಬಹಳ ಕಡಮೆ. ತಿಂಗಳಿಗೆ ಎರಡು-ಮೂರು ರೂ.ಗಳಿಗೆ ಕೂಡ ಬಾಡಿಗೆಗೆ ಮನೆಗಳು ಸಿಕ್ಕುತ್ತಿದ್ದವು. ಇಷ್ಟಾದರೂ ಮನೆಯವರು ಬಾಡಿಗೆದಾರರಿಗೆ ಈಗಿನಂತೆಯೇ ಆಗಲೂ ಕಿರುಕುಳ ಕೊಡುವುದು ತಪ್ಪಿರಲಿಲ್ಲ. ಕೆಲವು ಕಾಲದನಂತರ ಏನಾದರೂ ನೆವ ತೆಗೆದು ಜಗಳವಾಡುವುದು, ಇಲ್ಲವೇ ಬಾಡಿಗೆ ಹೆಚ್ಚು ಕೇಳುವುದು, "ಸಾಧ್ಯವಿಲ್ಲವೆಂದರೆ ಬಿಟ್ಟು ಹೋಗಿ" ಎನ್ನುವುದು, ಇವೆಲ್ಲಾ ಆಗಲೂ ಇತ್ತು. ಆಗ ಸಣ್ಣ ಪುಟ್ಟ ಜಗಳಗಳನ್ನು ಆಡಬೇಕಾಗುತ್ತಿತ್ತು. ಸಾಮಾನ್ಯವಾಗಿ ಹಿಂಭಾಗದ ಮನೆಗಳು (outhouse) ಅಥವಾ ವಠಾರಗಳು : ಒಂದು ಮನೆಯನ್ನು ಒಡೆದು ನಾಲ್ಕಾರು ಚಿಕ್ಕ ಮನೆಗಳನ್ನಾಗಿ ಮಾಡಿರುವ ಮನೆಗಳೇ ಬಾಡಿಗೆಗೆ ಹೆಚ್ಚಾಗಿ ದೊರಕುತ್ತಿದ್ದುದು. ಹಿಂಭಾಗದ ಮನೆಗಳಲ್ಲಿ ಬಾಡಿಗೆದಾರರು ಇದ್ದರೆ ಮುಂಭಾಗದಲ್ಲಿ ಮನೆಯವರು ಇರುತ್ತಿದ್ದರು. ಲೈಟು, ನಲ್ಲಿಗಳಿಗಾಗಿ ಆಗಾಗ್ಗೆ ಜಗಳವಾಗುವುದು ಸ್ವಾಭಾವಿಕವಾಗಿತ್ತು. ಇದು ಎಷ್ಟೋ ಸಲ ವಿಕೋಪಕ್ಕೆ ತಿರುಗಿ ಕೋರ್ಟುಕಛೇರಿಗಳನ್ನೂ ಹತ್ತಬೇಕಾಗುತ್ತಿತ್ತು. ಸುಮಾರು ೧೯೩೫ರಿಂದ ೪೫ರ ವರೆವಿಗೆ ಮನೆಗಳು ಸಾಮಾನ್ಯವಾಗಿ ಬಾಡಿಗೆಗೆ ಸಿಕ್ಕುತ್ತಿದ್ದವು. ಮಾಲೀಕರು 'ಮನೆ ಬಿಟ್ಟು ಹೋಗು' ಎಂದು ಹೇಳಿದರೆ ಒಂದೆರಡು ದಿಸಗಳಲ್ಲಿಯೇ ಬೇರೆ ಮನೆಯನ್ನು ಸುಲಭವಾಗಿ ಹುಡುಕಿಕೊಂಡು ಹೋಗಬಹುದಾಗಿತ್ತು. ಇದಲ್ಲದೆ ಆಗ ಈಗಿನಂತೆ ಮುಂಗಡ (advance) ಹಣದ ಹಾವಳಿ ಇರಲಿಲ್ಲ.

ಆದರೆ ಮಹಾಯುದ್ಧ ಪ್ರಾರಂಭವಾದ ಮೇಲೆ ನಮ್ಮ ದೇಶದ ಜನಜೀವನದ ಮೇಲೆ ಬಹಳ ಪ್ರಭಾವ ಬಿತ್ತು. ಒಂದು ಕಡೆ ಆರ್ಥಿಕ ಮುಗ್ಗಟ್ಟು, ಮತ್ತೊಂದು ಕಡೆ ಆಹಾರಧಾನ್ಯಗಳ ಅಭಾವ ಹೀಗಾಗಿ ಜನಗಳು ಕಷ್ಟವನ್ನು ಅನುಭವಿಸಬೇಕಾಯಿತು. ಮನೆ ಬಾಡಿಗೆಯ ಮೇಲೂ ಅದರ ಪ್ರಭಾವ ಬಿತ್ತು. ಆ ಕಾಲದಲ್ಲೇ ದವಸಧಾನ್ಯಗಳ ಮೇಲೆ ಸರಕಾರದ ಹಿಡಿತ ಬಂತು; ರೇಶನ್ ಡಿಪೋಗಳ ಪ್ರಾರಂಭವಾಯಿತು. ಬರಬರುತ್ತಾ ದೇಶದ ಜನಸಂಖ್ಯೆ ಹೆಚ್ಚುತ್ತಾ ಬಂದು ೧೯೩೦ರಲ್ಲಿ ಇದ್ದ ೩೩ ಕೋಟಿ ಮಕ್ಕಳು ಈಗ ೧೧೦ ಕೋಟಿ ಆಗಿದ್ದಾರೆ. ಒಂದು ಕಡೆ ಜನಸಂಖ್ಯೆ ಹೆಚ್ಚುತ್ತಾ ಬಂತು, ಇನ್ನೊಂದು ಕಡೆ ಹಳ್ಳಿಗಾಡಿನವರು ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ವಲಸೆ ಹೋಗುತ್ತಿದ್ದುದರಿಂದ, ಹಳ್ಳಿಗಳಲ್ಲಿ ಧಾನ್ಯವನ್ನು ಬೆಳೆಯುವವರ ಸಂಖ್ಯೆ ಕಡಮೆ ಆಗುತ್ತಾ ಹೋಯಿತು. ಮೂರನೆಯದಾಗಿ, ವರ್ತಕರು ಯುದ್ಧಕಾಲದಲ್ಲಿ ಅಧಿಕ ಲಾಭದ ಆಸೆಯಿಂದ ಆಹಾರಧಾನ್ಯಗಳನ್ನು ಮುಚ್ಚಿಟ್ಟು ಕೃತಕ ಅಭಾವವನ್ನು ಸೃಷ್ಟಿಸಿ ಅನಂತರ ಹೆಚ್ಚು ಹಣಕ್ಕೆ ಅವುಗಳನ್ನು ಮಾರುತ್ತಿದ್ದರು. ರೇಶನ್ ಡಿಪೋಗಳ ಧಾನ್ಯಗಳನ್ನು ಕಳ್ಳತನದಲ್ಲಿ ಮಾರಿಕೊಂಡು ಲಾಭ ಪಡೆಯುವುದು, ಲಂಚ ರುಷುವತ್ತುಗಳು ಇವೆಲ್ಲ ಎರಡನೇ ಮಹಾಯುದ್ಧ ಮತ್ತು ಸ್ವಾತಂತ್ರ್ಯೋತ್ತರದ ಬಳುವಳಿಗಳಾಗಿ ಬಂದವು. ಮೊದಮೊದಲು ಇವುಗಳ ಅವಾಂತರ ಹೆಚ್ಚಾಗಿರಲಿಲ್ಲ. ಆದರೆ ಬರಬರುತ್ತಾ ಇವುಗಳು ಬಹಳವಾಗಿ, ಮೊದಲು ಯಾವುದು ಅನೀತಿ, ಅಧರ್ಮವಾಗಿತ್ತೋ ಈಗ, ಅದೇ ನೀತಿ, ಧರ್ಮವಾಗಿದೆ. ಯಾರಾದರೂ ಧರ್ಮಾತ್ಮರು ಇದ್ದರೆ ಅವರನ್ನು ಹಾಸ್ಯ ಮಾಡುವುದು ಅಥವಾ ಅವರನ್ನು ತೊಂದರೆಗೆ ಸಿಲುಕಿಸುವುದು ಈಗಿನ ಕಾಲದ ಪರಿಪಾಠವಾಗಿದೆ. "ಧರ್ಮಕ್ಕೆ ಕಾಲವಿಲ್ಲವಯ್ಯ" ಎಂದು ದಾಸರು ಹಾಡಿದ ಹಾಗೆ ಈಗ ಧರ್ಮಕ್ಕಲ್ಲ, ಅಧರ್ಮಕ್ಕೆ ಕಾಲ.

ನಾನು ಸುಮಾರು ಅರುವತ್ತು ವರ್ಷಗಳು ಬಾಡಿಗೆ ಮನೆಗಳಲ್ಲಿ ವಾಸ ಮಾಡಿದೆ. ಆದರೆ ಒಂದು ತಿಂಗಳು ಕೂಡ ಬಾಡಿಗೆಯನ್ನು ನಿಲ್ಲಿಸಿಕೊಳ್ಳುತ್ತಿರಲಿಲ್ಲ. ಸಂಬಳ ಬಂದ ದಿವಸವೇ ಮೊದಲು ಬಾಡಿಗೆಯನ್ನು ಕೊಟ್ಟುಬಿಡುತ್ತಿದ್ದೆ. ಅಷ್ಟೇ ಅಲ್ಲ, ಹಾಲು ಮೊಸರಿನವರಿಗೂ ಮೊದಲು ಕೊಟ್ಟುಬಿಡುತ್ತಿದ್ದೆ. ಇವೆರಡನ್ನೂ ಕೊಡುವವರೆಗೂ ನನ್ನ ಮನಸ್ಸಿಗೆ ಸಮಾಧಾನವೇ ಇರುತ್ತಿರಲಿಲ್ಲ. ಪ್ರಾರಂಭದ ಕೆಲವು ವರ್ಷಗಳು ಪುಸ್ತಕದಲ್ಲಿ ಬರೆಸಿ ಸಾಮಾನು ತರುವ ಪದ್ಧತಿ ಮಾಡಿಕೊಂಡಿದ್ದೆ. ಆದರೆ ಮುಂದೆ ಅದನ್ನು ಬಿಟ್ಟುಬಿಟ್ಟೆ. ದುಡ್ಡಿದ್ದಷ್ಟು ವ್ಯಾಪಾರ ಮಾಡಿಕೊಂಡು ಬರುವ ಅಭ್ಯಾಸ ಮಾಡಿಕೊಂಡೆ. ಇದರಿಂದ, ಕಂಡಹಾಗೆ ಸ್ವಲ್ಪ ಹಣ ಉಳಿತಾಯವಾಗುತ್ತಿತ್ತು. ಅದನ್ನು ಬೇರೆ ಕಡೆಗೆ ಉಪಯೋಗಿಸಿಕೊಳ್ಳ ಬಹುದಾಗಿತ್ತು. ಆಗಿನ ಕಾಲದಲ್ಲಿ ಸಂಬಳ ತುಂಬಾ ಕಡಮೆ. ಆದ್ದರಿಂದ ಈ ತರಹ ಪ್ರಯೋಗಗಳನ್ನು ಮಾಡಿ, ಬರುವ ಸಂಬಳ ಮತ್ತು ಪಾಠ ಹೇಳಿ ಬಂದ ದುಡ್ಡಿನಿಂದ ಜೀವನ ಮಾಡುವುದನ್ನು ಕಲಿತದ್ದಾಯಿತು.

ಮನುಷ್ಯನಿಗೆ ತನ್ನ ಜೀವನವೇ ಒಂದು ಪ್ರಯೋಗಶಾಲೆ. ಇಲ್ಲಿ ಪ್ರಯೋಗಗಳು ಸರಿಯಾಗುವುದೂ ಉಂಟು, ತಪ್ಪಾಗುವುದೂ ಉಂಟು. ಈ ಪ್ರಯೋಗಶಾಲೆಯಲ್ಲಿ ನಾವು ಕಲಿಯಬೇಕಾದ ಮುಖ್ಯ ಪಾಠವೇನೆಂದರೆ, ಒಂದು ಸಲ ಮಾಡಿದ ತಪ್ಪನ್ನು ಪುನಃ ಮಾಡಬಾರದು. ಯಾರೊಬ್ಬರೂ ಪೂರ್ಣ ಪರಿಣತರಲ್ಲ. ಎಲ್ಲರೂ ಜೀವನದಲ್ಲಿ ತಪ್ಪುಗಳನ್ನು ಮಾಡುತ್ತಲೇ ಇರುತ್ತಾರೆ. ಇವುಗಳನ್ನು ಯಾರೂ ಕಲಿಸುವುದಿಲ್ಲ. ಜೀವನವೇ ಕಲಿಸುತ್ತಾ ಹೋಗುತ್ತದೆ. ನಮ್ಮ ತಾಯಿ ಹೇಳುತ್ತಿದ್ದರು, "ಹಿಂದಕ್ಕೆ ತಪ್ಪು, ಮುಂದಕ್ಕೆ ಬುದ್ಧಿ" ಎಂದು. ಅದು ಸತ್ಯವಾದ ಮಾತು. ಹಿಂದೆ ಮಾಡಿದ ತಪ್ಪಿನಿಂದ ನಾವು ಪಾಠ ಕಲಿಯಬೇಕು. ಅದನ್ನೇ ಮುಂದೆ ಮಾಡಬಾರದು.

ನಿವೃತ್ತಿಯ ಅನಂತರ

ನಾನು ರಿಟೈರ್ ಆದಮೇಲೆ ಪುನಃ ಆರ್ಥಿಕ ಮುಗ್ಗಟ್ಟು ಶುರುವಾಯಿತು. ನಮಗೆ ಪಿ.ಎಫ್. ಅಥವಾ ಗ್ರಾಚುಯಟಿ ಏನೂ ಸಿಗಲಿಲ್ಲ. ಕೊನೆಯ ದಿವಸ ಮನೆಗೆ ಬಂದಾಗ ಬರೀಕೈಯಲ್ಲಿ ಬಂದೆ. ದೈವಕೃಪೆಯಿಂದ ಒಂದು ಸ್ವಲ್ಪ ವಿರಾಮ ವೇತನ (೨೮೦ ರೂ.ಗಳು ತಿಂಗಳಿಗೆ) ಬರುವ ಹಾಗಾಯಿತು. ನನಗೆ ಬರುತ್ತಿದ್ದ ವೇತನ, ಮತ್ತು ಪಾಠ ಹೇಳಿದ್ದರಿಂದ ಬರುತ್ತಿದ್ದ ದುಡ್ಡು ಸಂಸಾರಕ್ಕೆ ಖರ್ಚಾಗುತ್ತಿತ್ತು. ಕೆಲವು ತಿಂಗಳು ಅದೂ ಸಾಕಾಗುತ್ತಿರಲಿಲ್ಲ. ಆದುದರಿಂದ ಬರುವ ಹಣದಲ್ಲಿ ಉಳಿತಾಯ ಮಾಡುವುದು ಸಾಧ್ಯವಾಗಲಿಲ್ಲ. ಜತೆಗೆ ನಾಲ್ಕು ಮಕ್ಕಳು ಇನ್ನೂ ಓದುತ್ತಿದ್ದರು. ಹಿರಿಯ ಮಗಳು ಮಾಲತಿ ಎಂ.ಎ. ತರಗತಿಯಲ್ಲಿ, ಎರಡನೆಯವನು ಮಗ ನಾಗರಾಜ ಬಿ.ಎಸ್ಸಿ.ಯಲ್ಲಿ, ಮೂರನೇ ಮಗಳು ಸ್ವರ್ಣಲತ ಪಿಯುಸಿ ಮತ್ತು ನಾಲ್ಕನೇ ಮಗಳು ಹರಿಣಿ ಹೈಸ್ಕೂಲಿನಲ್ಲಿ ಓದುತ್ತಿದ್ದರು. ಯಾರಿಗೂ ವಿದ್ಯಾಭ್ಯಾಸ ಮುಗಿದಿರಲಿಲ್ಲ. ವಿರಾಮ ವೇತನ ಬರುವುದೂ ತಡವಾಯಿತು. ಹೀಗಾಗಿ ರಿಟೈರಾದ ಮೇಲೆ ಎರಡು ಮೂರು ವರ್ಷಗಳು ಜೀವನ ನಡೆಸುವುದು ಬಹಳ ಕಷ್ಟವಾಯಿತು. ಆದರೆ ಭಗವಂತ ಹೇಗೋ ಕಾಪಾಡಿದ. ಕೇವಲ ಟ್ಯೂಶನ್ ಹೇಳಿ ಜೀವನ ನಡೆಸಬೇಕಾಯಿತು. ಒಂಟಿಕೊಪ್ಪಲು, ನರಸಿಂಹರಾಜ ಮೊಹಲ್ಲ, ನಜರ್‌ಬಾದ್ ಹೀಗೆ ದೂರದೂರದ ಮೊಹಲ್ಲಾಗಳಿಗೆ ಹೋಗಿ ಪಾಠಹೇಳಬೇಕಾಗಿತ್ತು. ಸೈಕಲ್ ಮೇಲೆ ದಿವಸಕ್ಕೆ ಸುಮಾರು

೧೫-೨೦ ಮೈಲಿಗಳನ್ನು ಸುತ್ತಿ ಬರುತ್ತಿದ್ದೆ. ಇಳಿವಯಸ್ಸಾದ್ದರಿಂದ ಮನೆಗೆ ಬರುವ ವೇಳೆಗೆ ಬಹಳ ಆಯಾಸವಾಗುತ್ತಿತ್ತು. ಆದರೆ ಬೇರೆ ಮಾರ್ಗವೇ ಇರಲಿಲ್ಲ.

ಹೀಗೆ ಕೆಲವು ವರ್ಷಗಳು ಕಳೆದವು. ಅನಂತರ ಮರಿಮಲ್ಲಪ್ಪ ಜೂನಿಯರ್ ಕಾಲೇಜಿನಲ್ಲಿ ಅರೆಕಾಲಿಕ ಅಧ್ಯಾಪಕನಾಗಿ ಕೆಲಸ ಸಿಕ್ಕಿತು. ಅಲ್ಲಿ ಸುಮಾರು ಹತ್ತು ವರ್ಷ ಕೆಲಸ ಮಾಡಿದೆ. ಇದರಿಂದ ನನ್ನ ಪರಿಸ್ಥಿತಿ ಸ್ವಲ್ಪ ಉತ್ತಮವಾಯಿತು. ಅಲ್ಲಿ ಆಗ ಪ್ರಿನ್ಸಿಪಾಲರಾಗಿದ್ದ ಡಾ॥ ಬೆಟ್ಟಲಿಂಗಯ್ಯನವರು ಮಾಡಿಕೊಟ್ಟ ಅನುಕೂಲ ಎಂದೆಂದೂ ಸ್ಮರಿಸುವಂಥದು. ಈ ಮಧ್ಯೆ ನನ್ನ ಮಗ ಬಿ.ಎಸ್ಸಿ. ಮಾಡಿದ. ಅವನಿಗೆ ಒಂದು ಕಾರ್ಖಾನೆಯಲ್ಲಿ 'ಕೆಮಿಸ್ಟ್' ಕೆಲಸ ಸಿಕ್ಕಿತು. ನನ್ನ ಎರಡನೆಯ ಮಗಳಿಗೊಂದು ಕಡೆ ಕೆಲಸ ಸಿಕ್ಕಿತು. ಒಟ್ಟಿನಲ್ಲಿ ನಮ್ಮ ಮನೆಯ ಆರ್ಥಿಕ ಸ್ಥಿತಿ ಉತ್ತಮವಾಯಿತು. ಜೀವನವು ಸುಗಮವಾಗಿ ಸಾಗತೊಡಗಿತು.

ನನಗೆ ರಿಟೈರ್ ಆದ ಮೂರು ವರ್ಷದ ಮೇಲೆ ಅಂದರೆ ೧೯೭೭ರಲ್ಲಿ ನನ್ನ ಹಿರಿಯ ಮಗಳು ಮಾಲತಿಗೆ ಲಗ್ನವಾಯಿತು. ವರ-ಕೇರಳಾಪುರದ ಸಾಹುಕಾರ್ ರಾಜಪ್ಪನವರ ಎರಡನೇ ಮಗ ಕೇಶವನಾರಾಯಣ. ಆತ ಆಗ ತಾನೆ ಬೆಂಗಳೂರಿನಲ್ಲಿ ಅಡ್ವೊಕೇಟಾಗಿ ಕೆಲಸ ಮಾಡುತ್ತಿದ್ದರು. ಅನಂತರ ನ್ಯಾಯಾಧೀಶರಾಗಿ ಕೆಲಸ ಸಿಕ್ಕಿತು (ಈಗ ಅವರು ಬೆಂಗಳೂರಿನಲ್ಲಿ ಮುಖ್ಯ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶರಾಗಿದ್ದಾರೆ). ಐದು ವರ್ಷಗಳಾದ ಮೇಲೆ ಎರಡನೇ ಮಗಳು ಸ್ವರ್ಣನನ್ನು ಚಿಲಕುಂದದ ರಾಮಯ್ಯನವರ ಮಗ ಶ್ರೀನಿವಾಸಮೂರ್ತಿಗೆ ಕೊಟ್ಟು ಮದುವೆ ಮಾಡಿದೆ. ಅವರು ಈಗ ಕೇಂದ್ರ ಸರಕಾರದ ಸುಂಕ ಮತ್ತು ಅಬಕಾರಿ ವಿಭಾಗದಲ್ಲಿ ಸೂಪರಿಂಟೆಂಡೆಂಟರಾಗಿ ಬೆಂಗಳೂರಿನಲ್ಲಿ ಇದ್ದಾರೆ. ಅನಂತರ ನನ್ನ ಮಗ ನಾಗರಾಜನಿಗೆ ಲಗ್ನವಾಯಿತು. ವಧು ಹಾನಗಲ್ಲಿನ ನಾಗಣ್ಣನವರ ಮಗಳು ಸುಬ್ಬಲಕ್ಷ್ಮಿ. ಅವಳು ಈಗ ಭಗಿನೀ ಸೇವಾ ಸಮಾಜ ಹೈಸ್ಕೂಲಿನಲ್ಲಿ (ಮೈಸೂರು) ಅಧ್ಯಾಪಕಿಯಾಗಿದ್ದಾಳೆ. ಕಡೆಯದಾಗಿ ನನ್ನ ಕಿರಿಯ ಮಗಳಿಗೆ ಬೆಂಗಳೂರಿನ ಅಡ್ವೊಕೇಟ್ ವೆಂಕಟೇಶರಾವ್ ಅವರ ಕಡೆಯ ಮಗ ಡಾ. ಗುರುಪ್ರಸನ್ನನಿಗೆ ಕೊಟ್ಟು ಲಗ್ನವಾಯಿತು. ಈತ ಬೆಂಗಳೂರಿನಲ್ಲಿ ಡೆಂಟಲ್ ಕ್ಲಿನಿಕ್ ಇಟ್ಟುಕೊಂಡಿದ್ದಾರೆ. ಎಲ್ಲಾ ಹೆಣ್ಣು ಮಕ್ಕಳೂ ಒಳ್ಳೆಯ ಕಡೆಗಳಿಗೆ ಸೇರಿ ಸುಖವಾಗಿದ್ದಾರೆ. ಮಗನಿಗೂ ಈಗ ಮೈಸೂರಿಗೆ ವರ್ಗವಾಗಿದೆ. ಎಲ್ಲರೂ ಅವರ ಮಕ್ಕಳು ಮರಿಗಳೊಡನೆ ಸುಖ ಸಂಸಾರಗಳನ್ನು ನಡೆಸಿಕೊಂಡು ಇದ್ದಾರೆ. ಈಗ ಏಳೆಂಟು ವರ್ಷಗಳ ಹಿಂದೆ ಉತ್ತರಭಾರತದ ಯಾತ್ರೆಗೆ ಹೋಗಿದ್ದೆವು. ಮಥುರಾ, ಬೃಂದಾವನ, ಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಕೇದಾರನಾಥ, ಬದರೀನಾಥ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ ದೇವತಾ ದರ್ಶನ ಮಾಡಿ ಪಿತೃಕಾರ್ಯ ನೆರವೇರಿಸಿ ಧನ್ಯರಾದೆವು.

ಒಡಹುಟ್ಟಿದವರು

ನಾನು ಕೊಂಡಗುಳದಲ್ಲಿ ಇದ್ದುದು ನನ್ನ ಹದಿನೇಳನೇ ವರ್ಷದವರೆಗೆ. ಅನಂತರ ನನ್ನ ತಮ್ಮ ರಾಮು (ರಾಮಸ್ವಾಮಿ ಘನಪಾಠಿ) ಮತ್ತು ನಾನು ಇಬ್ಬರೂ ಮೈಸೂರಿಗೆ ಬಂದೆವು. ಆಗ ಅವನಿಗೆ ಸುಮಾರು ೧೨ ವರ್ಷ. ಅವನು ಮಹಾರಾಜ ಸಂಸ್ಕೃತ ಪಾಠಶಾಲೆಗೆ ಸೇರಿ ಯಜುರ್ವೇದ ಅಧ್ಯಯನ ಮಾಡಲು ಪ್ರಾರಂಭಿಸಿದ. ಆಗ ಪಾಠಶಾಲೆಯಲ್ಲಿ ನಮ್ಮವರೇ ಆದ ತಿಪ್ಪಯ್ಯಾವಧಾನಿಗಳು ಯಜುರ್ವೇದ ವಿಭಾಗದ ಪ್ರಾಚಾರ್ಯರಾಗಿದ್ದರು. ಅವರು ಮಹಾವಿದ್ವಾಂಸರೂ ಮೇಧಾವಿಗಳೂ ಆಗಿದ್ದರು. ಕೌಶಿಕಸಂಕೇತಿ ಜನಾಂಗದಲ್ಲಿ ಅವರಿಗೆ ಬಹಳ ಗೌರವ ಇತ್ತು. ಅವರ ಹತ್ತಿರ ಅನೇಕ ಸಂಕೇತಿ ವಿದ್ಯಾರ್ಥಿಗಳೂ ವೇದಾಧ್ಯಯನ ಮಾಡಿ 'ಅವಧಾನಿ', 'ಘನಪಾಠಿ'ಗಳಾದರು. ಅವರಲ್ಲಿ ನನ್ನ ತಮ್ಮ ರಾಮಸ್ವಾಮಿ ಘನಪಾಠಿ, ಅಲ್ಲದೆ ಸುಂದರೇಶ ಘನಪಾಠಿ, ಕೇಶವಮೂರ್ತಿ ಘನಪಾಠಿ ಮೊದಲಾದವರು ಮುಖ್ಯರಾದವರು. ನನ್ನ ತಮ್ಮ ಸುಮಾರು ಹದಿನೆಂಟು ವರ್ಷಕಾಲ ವೇದಾಧ್ಯಯನ ಮಾಡಿ ವಿದ್ವತ್ತು ಮತ್ತು ಘನಾಂತ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆ ಮತ್ತು ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಇದಕ್ಕಾಗಿ ಮೈಸೂರು ಮಹಾರಾಜರಿಂದ ಶಾಲು ಜೋಡಿ, ರಜತ ಪಾತ್ರೆ ಮತ್ತು ಧನ ಪುರಸ್ಕಾರ ದೊರೆತವು. ಇದಾದನಂತರ ಅವನು ಊರಿಗೆ ಹೋಗಿ ವ್ಯವಸಾಯ ಮತ್ತು ಪೌರೋಹಿತ್ಯದಲ್ಲಿ ನಿರತನಾದನು. ಅವನು ಈಗ ಹಾಸನದಲ್ಲಿ ತನ್ನ ಹಿರಿಯ ಮಗ ವೆಂಕಟೇಶಮೂರ್ತಿಯ ಮನೆಯಲ್ಲಿ ಇದ್ದಾನೆ.

ನನ್ನ ಎರಡನೆ ತಮ್ಮ ನಾಗಪ್ಪ (ನರಸಿಂಹಮೂರ್ತಿ). ಅವನು ಊರಿನಲ್ಲಿದ್ದಾಗ ಇತರ ರೈತರಿಗಿಂತಲೂ ಚೆನ್ನಾಗಿ ವ್ಯವಸಾಯ ಮಾಡುತ್ತಿದ್ದ.

ನನ್ನ ಮೂರನೇ ತಮ್ಮ ಶ್ರೀನಿವಾಸಮೂರ್ತಿ (ಸೀನು). ನನಗೆ ಮೂವರು ಸಹೋದರಿಯರು : ಮೊದಲನೆಯವಳು ರುಕ್ಮಿಣಿ (ತಾಯಮ್ಮ), ನನ್ನ ಎರಡನೆಯ ತಂಗಿ ಸೀತಾಲಕ್ಷ್ಮಿ, ಮೂರನೇ ತಂಗಿ ಸುಬ್ಬಲಕ್ಷ್ಮಿ (ಅಮ್ಮಯ್ಯ).

ಸ್ನೇಹ ಸಂಪತ್ತು

ವಿದ್ವಾಂಸರೂ ಸಾತ್ತ್ವಿಕರೂ ಸಜ್ಜನರೂ ಆದ ಅಪಾರ ಸಂಖ್ಯೆಯ ಮಿತ್ರರು ನನಗಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ.

ಹಿಂದಿ ಪ್ರಚಾರ ಸಭೆಯ ಹಿರಿಯರೂ ಮಿತ್ರರೂ ಶಿಷ್ಯರೂ ಅದರಲ್ಲಿ ಸೇರಿದ್ದಾರೆ. ಸಹೋದ್ಯೋಗಿಗಳೂ ನೆರೆಹೊರೆಯವರೂ ಸದಾ ಪ್ರೀತಿ ಸಹಕಾರದಿಂದ ಇದ್ದವರಾಗಿದ್ದಾರೆ. ಇಂಥ ಆಪ್ತರ ನೆನಪೇ ನನಗೊಂದು ಸಂಪತ್ತಾಗಿದೆ.

ವಕೀಲರಾದ ಶ್ರೀ ಕೆ.ವಿ. ಶ್ರೀನಿವಾಸಮೂರ್ತಿ ಅವರು ಮೈಸೂರು ನಗರದಲ್ಲಿ ಹಿಂದೀ ಭಾಷೆಯ ಪ್ರಚಾರಕ್ಕಾಗಿ ಸುಮಾರು ೪೦-೪೫ ವರ್ಷಗಳ ಕಾಲ ಕೆಲಸ ಮಾಡಿದರು. ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ಅವರು ರಾಷ್ಟ್ರಭಾಷೆ ಹಿಂದಿಗೆ ಮಾಡಿದ ಈ ದೀರ್ಘಕಾಲದ ಸೇವೆಗಾಗಿ ಅವರ ದೇಹಾಂತದ ಅನಂತರ ಅವರ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಹಿಂದಿ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಒಂದು ಚಿನ್ನದ ಪದಕವನ್ನು ಘಟಿಕೋತ್ಸವದಲ್ಲಿ ಪ್ರದಾನ ಮಾಡುವಂತೆ ಏರ್ಪಾಡು ಮಾಡಿದೆ. ಇದಕ್ಕೆ ಹಿಂದಿ ಪ್ರಚಾರ ಸಭೆಯ ಹಳೆಯ ವಿದ್ಯಾರ್ಥಿಗಳು, ಹಿಂದಿ ಪ್ರೇಮಿಗಳು, ಸ್ನೇಹಿತರು ಮುಂತಾದವರಿಂದ ಸುಮಾರು ೧೬,೫೦೦ ರೂ.ಗಳನ್ನು ಸಂಗ್ರಹಿಸಿ ಇದನ್ನು ವಿಶ್ವವಿದ್ಯಾಲಯದಲ್ಲಿ ಜಮಾ ಮಾಡಿದ್ದೇನೆ. ಪ್ರತಿ ವರ್ಷವೂ ಇದರಿಂದ ಬರುವ ಬಡ್ಡಿಯಿಂದ ಚಿನ್ನದ ಪದಕ ಪ್ರದಾನವಾಗುತ್ತಿದೆ. ಈ ಕಾರ್ಯಕ್ಕೆ ಸಹಾಯ ಮತ್ತು ಸಹಕಾರವನ್ನು ಕೊಟ್ಟ ಎಲ್ಲರಿಗೂ ನನ್ನ ಧನ್ಯವಾದಗಳು.

ಪುಸ್ತಕ ರಚನೆ

ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ನನಗೆ ಗದ್ಯಕ್ಕಿಂತಲೂ, ಪದ್ಯದ ಕಡೆಗೆ ಹೆಚ್ಚು ಒಲವು ಇತ್ತು. ಇದಕ್ಕೆ ಕಾರಣ ನಮ್ಮ ಅಧ್ಯಾಪಕರು. ಅದರಲ್ಲಿ ಧರ್ಮರಾಯಾಚಾರ್ ಮತ್ತು ರಾಮಯ್ಯ ಅವರು ಪದ್ಯಗಳನ್ನು ರಾಗವಾಗಿ ಓದಿ, ಪಾಠ ಮಾಡುತ್ತಿದ್ದರು. ಆದ್ದರಿಂದ ನಾನೂ ಅವರ ಹಾಗೆಯೇ ಓದಲು ಪ್ರಯತ್ನಪಡುತ್ತಿದ್ದೆ. ಕೆಲವನ್ನು ಕಂಠಪಾಠ ಮಾಡುತ್ತಿದ್ದೆ. ಕನ್ನಡ ಪದ್ಯಗಳನ್ನು ರಾಗವಾಗಿ ಹೇಳುತ್ತಿದ್ದೆ. ಇದರಿಂದ ನನಗೆ ಬಹಳ ಆನಂದವಾಗುತ್ತಿತ್ತು. ಅನಂತರ ಕನ್ನಡದಲ್ಲಿ ಪುಟ್ಟ ಪುಟ್ಟ ಕವಿತೆಗಳನ್ನು ರಚಿಸುತ್ತಿದ್ದೆ. ಆದರೆ ಅತ್ತ ಕಡೆ ಹೆಚ್ಚು ಗಮನ ಕೊಡಲಿಲ್ಲ. ತೀರ ಬಡತನದಿಂದಾಗಿ ಯಾವ ಕಡೆಗೂ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತಿರಲಿಲ್ಲ.

ಸುಮಾರು ನಲವತ್ತು ವರ್ಷಗಳ ಕಾಲ ಮೈಸೂರು ಹಿಂದೀ ಪ್ರಚಾರಸಭೆಯಲ್ಲಿ ಸಂಚಾಲಕ, ವ್ಯವಸ್ಥಾಪಕ, ಪ್ರಚಾರಕ ಮತ್ತು ಅಧ್ಯಾಪಕನಾಗಿ ಕೆಲಸ ಮಾಡಿದೆ. ಹಿಂದಿಯಲ್ಲಿ ಉನ್ನತ ಪರೀಕ್ಷೆಗಳಾದ ಪ್ರಯಾಗದ ಸಾಹಿತ್ಯರತ್ನ, ದೇವಘರ್ ವಿದ್ಯಾಪೀಠದ ಸಾಹಿತ್ಯಾಲಂಕಾರ ಪರೀಕ್ಷೆಗಳನ್ನು ಮಾಡಿದೆ. ಇದಾದ ಮೇಲೆ ಹಿಂದಿಯಲ್ಲಿ ಸಣ್ಣ ಕಥೆಗಳನ್ನು ಬರೆದು ಉತ್ತರಭಾರತದ ಮಾಸಪತ್ರಿಕೆಗಳಿಗೆ ಕಳುಹಿಸತೊಡಗಿದೆ. ಸುಮಾರು ಐವತ್ತು ವರ್ಷಗಳ ಹಿಂದೆ ಕಲ್ಕತ್ತದ 'ಮಾಧುರಿ' ಎಂಬ ಮಾಸಪತ್ರಿಕೆ 'ಚಾಂದ್' ಪತ್ರಿಕೆ ಮತ್ತು 'ದಕ್ಖನೀ ಹಿಂದ್'ನಲ್ಲಿ 'ಪ್ರಾಯಶ್ಚಿತ್', 'ರಾಶನ್', 'ವಿಧಿವಿಲಾಸ್' ಮತ್ತು 'ಮುಕ್ತಿಮಾರ್ಗ್' ಎಂಬ ಕಥೆಗಳು ಪ್ರಕಟವಾದುವು.

ಹೀಗೆ ಕೆಲವು ಕಥೆಗಳು ಉತ್ತರ ಭಾರತದ ಮಾಸಪತ್ರಿಕೆಗಳಲ್ಲಿ ಮತ್ತು ಕೆಲವು ದಕ್ಷಿಣದ ಪತ್ರಿಕೆಗಳಲ್ಲಿ ಪ್ರಕಟವಾದವು. ಅನಂತರ ನನ್ನ ಒಲವು ಹಿಂದಿಯಲ್ಲಿ ಕವಿತೆಗಳ ಕಡೆಗೆ ಹೋಯಿತು. ಕವಿತೆಗಳನ್ನು ಬರೆಯತೊಡಗಿದೆ. ಆದರೆ ಅವುಗಳನ್ನು ಎಲ್ಲೂ ಪ್ರಕಾಶನಕ್ಕೆ ಕಳುಹಿಸುತ್ತಿರಲಿಲ್ಲ. ಎಲ್ಲೋ ಒಂದೆರಡು ಕವಿತೆಗಳು ಮಾಸಪತ್ರಿಕೆಗಳಲ್ಲಿ ಮತ್ತು ಕೆಲವು ವಾರಪತ್ರಿಕೆಗಳಲ್ಲಿ ಪ್ರಕಟವಾದವು. ಆದರೆ ಅದು ನಗಣ್ಯ. ನನಗೆ ಅರಿವಿಲ್ಲದೆಯೇ ನನ್ನಲ್ಲಿ ನಿಹಿತನಾಗಿದ್ದ ಕವಿ ಆಗಾಗ್ಗೆ ಬರೆಯಲು ಪ್ರೇರಣೆ ನೀಡುತ್ತಿದ್ದ.

ಒಟ್ಟಿನಲ್ಲಿ ಸುಮಾರು ೪೦ ವರ್ಷಗಳ ಕಾಲದಲ್ಲಿ ೧೨೦-೧೨೫ ಕವಿತೆಗಳನ್ನು ಬರೆದಿದ್ದೇನೆ. ಇದನ್ನು ಎರಡು ಸಂಗ್ರಹಗಳಲ್ಲಿ ಸಂಗ್ರಹಿಸಿದ್ದೇನೆ. ಇವುಗಳು ಭಿನ್ನ ಭಿನ್ನ ವಿಷಯಗಳ ಮೇಲೆ ರಚಿಸಿದವುಗಳು. ನನ್ನ ಒಂದು ಕವಿತೆ 'ಉಷಾಸುಂದರಿ'. ಸೂರ್ಯಕಾಂತ ತ್ರಿಪಾಠಿ ನಿರಾಲ ಅವರು ಆಧುನಿಕ ಹಿಂದಿಯ ಬಹಳ ಪ್ರಸಿದ್ಧರಾದ ಕವಿ. ಅವರ 'ಸಂಧ್ಯಾಸುಂದರಿ' ಹಿಂದಿ ಕಾವ್ಯಸಾಹಿತ್ಯದ ಒಂದು ಉತ್ತಮವಾದ ಮತ್ತು ಸುಂದರವಾದ ಕವಿತೆ. ಅದರಲ್ಲಿ ಕವಿ ಸಂಧ್ಯಾಸಮಯುವನ್ನು ಬಹಳ ಮನೋಹರವಾಗಿ ಚಿತ್ರಿಸಿದ್ದಾರೆ. ನಾನೂ ಅದರಂತೆ ಉಷಃಕಾಲದ ಮೇಲೆ ಒಂದು ಕವಿತೆಯನ್ನು ರಚಿಸಬೇಕೆಂದು ಯೋಚಿಸಿದ್ದೆ. ಆದರೆ ಸಾಧ್ಯವಾಗಿರಲಿಲ್ಲ. ಒಂದು ದಿನ ಸಮಾಚಾರಪತ್ರದಲ್ಲಿ ಅವರ ನಿಧನದ ವಾರ್ತೆಯನ್ನು ಓದಿದೆ. ನನಗೆ ತಕ್ಷಣ ಅವರ 'ಸಂಧ್ಯಾ ಸುಂದರಿ' ಜ್ಞಾಪಕಕ್ಕೆ ಬಂತು. ಅಂತೆಯೇ ನನ್ನ ಮನಸ್ಸಿನಲ್ಲಿ ಅಡಗಿ ಕುಳಿತಿದ್ದ ಉಷಾಸುಂದರಿಯು ಜಾಗೃತಳಾದಳು. ತಕ್ಷಣ ಅವಳ ರೂಪವನ್ನು ಶಬ್ದಗಳಲ್ಲಿ ಚಿತ್ರಿಸಿದೆ. ಈ ಘಟನೆ ನಡೆದು ನಲವತ್ತು ವರ್ಷಗಳ ಮೇಲಾಗಿರಬಹುದು. ಒಂದು ಸಲ ಉತ್ತರಭಾರತದ ಕೆಲವು ವಿದ್ವಾಂಸರು ಮೈಸೂರಿಗೆ ಬಂದಿದ್ದರು. ಅವರ ಮುಂದೆ ನನ್ನ ಕೆಲವು ಕವಿತೆಗಳನ್ನು ಓದಿದೆ. ಅವರು ಸಂತೋಷಪಟ್ಟು "ಉಷಾಸುಂದರಿ ಬಹಳ ಚೆನ್ನಾಗಿದೆ" ಎಂದು ಹೇಳಿದರು. ಒಬ್ಬರಂತೂ "ನಿಮ್ಮ ಕವಿತೆಗಳು ಉತ್ತರ ಭಾರತದ ಶ್ರೇಷ್ಠ ಕವಿಗಳ ಕವಿತೆಗಳಂತೆ ಬಹಳ ಸುಂದರವಾಗಿವೆ. ಒಬ್ಬ ಹಿಂದೀ ಭಾಷೆಯವನಲ್ಲದ ಕವಿ ಹಿಂದಿಯಲ್ಲಿ ಇಷ್ಟು ಉತ್ತಮವಾದ

ಕವಿತೆಗಳನ್ನು ರಚಿಸಿರುವುದು ನಿಜವಾಗಿಯೂ ಪ್ರಶಂಸನೀಯ" ಎಂದು ಹೇಳಿದರು. ಈ ಕವಿತೆಯಲ್ಲಿ ಉಷಃಕಾಲದಿಂದ ಹಿಡಿದು ಸೂರ್ಯೋದಯದವರೆಗೆ ಆಗುವ ಪ್ರಾಕೃತಿಕ ವ್ಯಾಪಾರವನ್ನು ಚಿತ್ರಿಸಿದ್ದೇನೆ. ಪೂರ್ವದಿಗಂತದಿಂದ ತನ್ನ ಸ್ವರ್ಣವರ್ಣದ ಸೆರಗನ್ನು ಹರಡುತ್ತಾ ಉಷಾ ಸುಂದರಿ ಮೆಲ್ಲ ಮೆಲ್ಲನೆ ಬರುತ್ತಿದ್ದಾಳೆ. ಅವಳನ್ನು ವೃಕ್ಷಗಳ ರೆಂಬೆಗಳ ಮೇಲೆ ಕುಳಿತಿರುವ ಪಕ್ಷಿಸಂಕುಲ ಮಧುರಗೀತೆಗಳನ್ನು ಹಾಡಿ ಸ್ವಾಗತಿಸುತ್ತಿದೆ. ಹೂಗಿಡಗಳಲ್ಲಿ ಮೊಗ್ಗುಗಳು ಅರಳುತ್ತಿವೆ. ಉಷೆಯು ತನ್ನ ಹೊಂಬಣ್ಣದ ಮೃದುಕಿರಣಗಳಿಂದ ಪ್ರಕೃತಿಯ ಪ್ರತಿಯೊಂದು ಜೀವವನ್ನೂ ಎಚ್ಚರಿಸಿ, ಕಡೆಗೆ ತನ್ನ ಪ್ರಿಯತಮ ಉದಯರವಿಯಲ್ಲಿ ಲೀನವಾಗುತ್ತಾಳೆ. ಅಪ್ರಸ್ತುತಳಾದ ಉಷೆ ಪ್ರತ್ಯಕ್ಷಳಾಗಿ ಮೆಲ್ಲ ಮೆಲ್ಲನೆ ಬರುತ್ತಿರುವಂತೆ ಭಾಸವಾಗುತ್ತದೆ. ಇದೇ ರೀತಿ "ದಕ್ಷಿಣ ಗಂಗಾ" ಕವಿತೆಯಲ್ಲಿ ಕಾವೇರಿಯನ್ನು (ಅವಳನ್ನು 'ದಕ್ಷಿಣ ಗಂಗೆ' ಎಂದು ಹೇಳುತ್ತಾರೆ) ತಲಕಾವೇರಿಯಲ್ಲಿ ಹುಟ್ಟಿ ಪೂರ್ವದಲ್ಲಿ ಸಮುದ್ರವನ್ನು ಸೇರುವವರೆಗಿನ ಅವಳ ಪ್ರವಾಹವನ್ನು ವರ್ಣಿಸಿದ್ದೇನೆ. ಮೇಲಿನ ಮೂರು ಕವಿತೆಗಳೂ ನನ್ನ 'ದಕ್ಷಿಣ ಗಂಗಾ' ಕವನ ಸಂಗ್ರಹದಲ್ಲಿವೆ.

ಎರಡನೆಯ ಸಂಗ್ರಹ 'ಕವಿತಾ ಕುಸುಮಮಂಜರಿ'ಯಲ್ಲಿನ 'ವಿನಾಯಕ ವಂದನೆ' 'ಶಿವಶಂಕರಸ್ತುತಿ' 'ಆದಿಶಕ್ತಿ' ಮೊದಲಾದವು ದೇವತಾ ಸ್ತೋತ್ರಗಳು. 'ಷೋಡಶಪೂಜ' ಕವಿತೆಯಲ್ಲಿ ಭೂದೇವಿಯು ತನ್ನಲ್ಲಿರುವ ಪೂಜಾವಸ್ತುಗಳನ್ನು ಅವು ಎಲ್ಲೆಲ್ಲಿವೆಯೋ ಅಲ್ಲಿಂದಲೇ ಭಗವಂತನಿಗೆ ಅರ್ಪಿಸಿ ಭಕ್ತಿಯಿಂದ ಷೋಡಶೋಪಚಾರಪೂಜೆಯನ್ನು ಸಲ್ಲಿಸುತ್ತಾಳೆ. 'ಅಮರ ಪ್ರೇಮ' ತಾಜಮಹಲಿನ ಮೇಲೆ ಬರೆದ ಕವಿತೆ. ನಾನು ಉತ್ತರ ಭಾರತದ ಯಾತ್ರೆಗೆ ಹೋಗಿದ್ದಾಗ ಆಗ್ರಾದಲ್ಲಿ ಅದ್ಭುತವೂ ರಮ್ಯವೂ ಆಗಿರುವ ತಾಜಮಹಲನ್ನು ನೋಡಿ, ಮೂಡಿ ಬಂದ ಭಾವನೆಗಳನ್ನು ಅದರಲ್ಲಿ ಚಿತ್ರಿಸಿದ್ದೇನೆ. 'ಕೃತಿ ಶಾಶ್ವತವಾಗಿ ನಿಂತಿದೆ. ಕರ್ತೃ ಅಶಾಶ್ವತ. ಇದೇನು ವಿಪರ್ಯಾಸ!' ಈ ಮಹಲನ್ನು ನೋಡಿ ನನ್ನ ಮನಸ್ಸಿನಿಂದ ಹೊರ ಬಂದ ಉದ್ಗಾರ.

ಈ ಎರಡು ಸಂಗ್ರಹಗಳಲ್ಲಿಯೂ ನೀತಿ, ಉಪದೇಶ, ಸೂಕ್ತಿ ಮೊದಲಾದ ವಿಷಯಗಳ ಮೇಲೆ ಚಿಕ್ಕ ಚಿಕ್ಕ ಕವಿತೆಗಳನ್ನು ಬರೆದಿದ್ದೇನೆ. ಎರಡು ಸಂಗ್ರಹಗಳಲ್ಲೂ ಪ್ರಕೃತಿಸೌಂದರ್ಯದ ವರ್ಣನೆಗಳಿರುವ ಕವಿತೆಗಳೂ ಇವೆ. ಅನೇಕ ಕವಿತೆಗಳಲ್ಲಿ **ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್** ಎಂಬ ಭಾವನೆ ಅಭಿವ್ಯಕ್ತವಾಗಿದೆ. ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣ ಭೂತನಾದ ಸರ್ವವ್ಯಾಪಿಯಾದ ಆ ಪರಬ್ರಹ್ಮನ ಸ್ವರೂಪ ಈ ವಿರಾಟ್‌ವಿಶ್ವದಲ್ಲಿ ಎಲ್ಲೆಲ್ಲೂ ಗೋಚರವಾಗುತ್ತದೆ. ವಾಯು, ಅಗ್ನಿ, ಜಲ, ಆಕಾಶ, ಭೂಮಿ, ವನ, ಪರ್ವತ, ಎಲ್ಲದರಲ್ಲಿಯೂ ಅವನು ಇದ್ದಾನೆ. **ತೇನ ವಿನಾ ತೃಣಮಪಿ ನ ಚಲತಿ** ಅವನ ಶಕ್ತಿಯೇ ಈ ವಿಶ್ವದಲ್ಲಿ ವ್ಯಾಪ್ತವಾಗಿ ಅವನಿಂದಲೇ ಚಾಲಿತವಾಗಿದೆ. ನನ್ನ ಅನೇಕ ಕವಿತೆಗಳಲ್ಲಿ ಇದೇ ಭಾವನೆ ಅಭಿವ್ಯಕ್ತವಾಗಿದೆ.

ಅವುಗಳನ್ನು ಒಂದು ಪುಸ್ತಕ ರೂಪದಲ್ಲಿ ಹೊರ ತರುವುದಕ್ಕೆ ಕೆಲವು ಸಲ ಪ್ರಯತ್ನಪಟ್ಟೆ. ಪ್ರಯತ್ನಪಡುತ್ತಿರುವಾಗಲೇ ನನಗೆ ರಿಟೈರ್ ಆಯಿತು.

ಹೀಗಿರುವಾಗ ನನ್ನ ಒಬ್ಬರು ಮಿತ್ರರು ಒಂದು ದಿನ ಮನೆಗೆ ಬಂದರು. ಅವರು ಮೊದಲು ಮೈಸೂರಿನಲ್ಲಿಯೇ ಸರಕಾರಿ ಕೆಲಸದಲ್ಲಿದ್ದರು; ಅನಂತರ ಅವರಿಗೆ ಬೆಂಗಳೂರಿಗೆ ವರ್ಗವಾಯಿತು. ಅವರಿಗೆ ಅನೇಕ ವರ್ಷಗಳ ಹಿಂದೆ ನಾಲ್ಕು ಅಕ್ಷರ ಹಿಂದಿ ಪಾಠ ಹೇಳಿದ್ದೆ. ಅವರು ಇಲ್ಲಿರುವಾಗಲೇ ನನ್ನ ಆಪ್ತಮಿತ್ರರಾಗಿದ್ದರು. ಅವರಿಗೆ ಕನ್ನಡ, ಇಂಗ್ಲಿಷ್ ಬೆರಳಚ್ಚುಗಳ ಜತೆಗೆ, ಹಿಂದಿ ಬೆರಳಚ್ಚು ಕೂಡ ತಿಳಿದಿತ್ತು. ಅವರು ಇಲ್ಲಿ ಇದ್ದಾಗ C.F.T.R.I. ನಲ್ಲಿ ಹಿಂದಿ ಬೆರಳಚ್ಚುಗಾರರಾಗಿದ್ದರು. ನನ್ನ ಸುಮಾರು ಮೂವತ್ತು-ಮೂವತ್ತೈದು ಹಿಂದಿ ಕವಿತೆಗಳನ್ನು ಬೆರಳಚ್ಚು ಮಾಡಿಕೊಟ್ಟಿದ್ದರು. ಇದಾಗಿ ಸುಮಾರು ಹದಿನೈದು ವರ್ಷಗಳು ಕಳೆದು ಹೋಗಿದ್ದವು. ಅವರ ಹೆಸರು ವೆಂಕಟರಾಮು ಎಂದು. ಅವರು ಬಂದವರೇ, "ಸರ್, ನಾನು ನಿಮಗೆ ಹಿಂದಿ ಕವಿತೆಗಳನ್ನು ಟೈಪು ಮಾಡಿಕೊಟ್ಟಿದ್ದೆನಲ್ಲಾ , ಅವುಗಳು ಇವೆಯೇ? ಏನಾದರೂ ಅಚ್ಚುಹಾಕಿಸಿದ್ದೀರ!" ಎಂದು ಕೇಳಿದರು. "ಕವಿತೆಗಳೇನೋ ಇವೆ. ಆದರೆ ಅವುಗಳನ್ನು ಅಚ್ಚು ಹಾಕಿಸಲು ಸಾಧ್ಯವಾಗಲಿಲ್ಲ" ಎಂದು ಉದಾಸೀನನಾಗಿ ಹೇಳಿದೆ. ಆಗ ಅವರು, "ಅವನ್ನು ಕೊಡಿ, ನಾನು ಮಾಡಿಕೊಡುತ್ತೇನೆ. ಈಗ ನಾನು ಸರಕಾರಿ ಕೆಲಸದಲ್ಲಿ ಇಲ್ಲ. ಒಂದು ಪ್ರೆಸ್ ಇಟ್ಟಿದ್ದೇನೆ. ಅದರಲ್ಲಿ ಕನ್ನಡ, ಹಿಂದಿ, ಇಂಗ್ಲಿಷು ಮೂರು ಭಾಷೆಗಳಲ್ಲೂ ಅಚ್ಚು ಹಾಕುತ್ತೇನೆ" ಎಂದು ಹೇಳಿದರು. ನನಗೆ ಬಹಳ ಸಂತೋಷವಾಯಿತು. ಆಯ್ದು ಸುಮಾರು ಐವತ್ತು ಕವಿತೆಗಳನ್ನು ಅವರಿಗೆ ಕೊಟ್ಟೆ. ಆ ಕವಿತೆಗಳನ್ನು ಪುಸ್ತಕದ ರೂಪದಲ್ಲಿ ಹೊರತರಲು ತುಂಬಾ ತಡವಾಯಿತು. ಕೆಲವು ವರ್ಷಗಳೇ ಉರುಳಿಹೋದವು. ಅದಕ್ಕೆ ಕಾರಣ ನನ್ನ ಮಿತ್ರರ ಅನಾರೋಗ್ಯ ಮತ್ತು ಇನ್ನೂ ಕೆಲವು ಅನಿವಾರ್ಯಗಳು. ಆದರೆ ಅನಂತರ ಅವರು ಅದನ್ನು ಬಹಳ ಸುಂದರವಾಗಿ ಮುದ್ರಿಸಿ ತಂದುಕೊಟ್ಟರು. ಅದಕ್ಕೆ 'ದಕ್ಷಿಣ ಗಂಗಾ' ಎಂದು ಹೆಸರಿಟ್ಟೆ. ನನ್ನ

ಹಿಂದಿ ಗುರುಗಳಾದ ಪ್ರೊ. ನಾಗಪ್ಪಾಜಿಯವರು ಅದಕ್ಕೆ 'ಆಶೀರ್ವಚನ' ಬರೆದುಕೊಟ್ಟರು. ಕವಿತೆಗಳ ಅವಲೋಕನ ಮಾಡಿ "ಕವಿತೆಗಳು ಬಹಳ ಉತ್ತಮವಾಗಿವೆ. ದಕ್ಷಿಣಭಾರತದ ಹಿಂದೀ ಕವಿತೆಗಳಲ್ಲಿ ಇವರಿಗೆ ಒಂದು ಉನ್ನತ ಸ್ಥಾನ ಇದೆ" ಎಂದು ಬರೆದಿದ್ದಾರೆ. ಈ ಸಂಗ್ರಹಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದಿಂದ 'ಮಹಾತ್ಮಾಗಾಂಧೀ ಹಿಂದೀ ಪುರಸ್ಕಾರ' ದೊರೆತಿದೆ.

ಇದಾದ ಕೆಲವು ವರ್ಷಗಳನಂತರ ಶ್ರೀ ವೆಂಕಟರಾಮುರವರು ನನ್ನ ಎರಡನೇ ಕವಿತಾ ಸಂಗ್ರಹವನ್ನು (ಕವಿತಾ ಕುಸುಮ ಮಂಜರಿ) ಅಚ್ಚು ಹಾಕಿಸಿಕೊಟ್ಟರು. ಈ ಪುಸ್ತಕವೂ ಬಹಳ ಚೆನ್ನಾಗಿ ಮುದ್ರಿತವಾಗಿದೆ. ಇದರ ಮುನ್ನುಡಿಯನ್ನು ಮಾನಸಗಂಗೋತ್ರಿಯ ವಿಶ್ರಾಂತ ಪ್ರೊಫೆಸರ್ ಆದ ಡಾ. ಕುಸುಮಗೀತ ಅವರು ಬರೆದಿದ್ದಾರೆ.

ನನ್ನ ಮೂರನೇ ಪುಸ್ತಕ ಹಿಂದೀ ಗದ್ಯಗ್ರಂಥ. ಇದು ವಿಜಯನಗರದ ಪ್ರಸಿದ್ಧ ಸಾಮ್ರಾಟನಾದ ಕೃಷ್ಣದೇವರಾಯನ ಜೀವನಚರಿತ್ರೆಯನ್ನು ಆಧರಿಸಿ ಬರೆದ ಒಂದು ಕಿರು ಕಾದಂಬರಿ. ಇದನ್ನು ಏಕೆ ಬರೆದೆ ಎಂಬುದಕ್ಕೆ ಒಂದು ಪುಟ್ಟ ಇತಿಹಾಸವಿದೆ. ಒಂದು ದಿವಸ ನನ್ನ ಒಬ್ಬ ಹಳೆಯ ಮಿತ್ರರು- ಅವರು ದೂರದ ಸಂಬಂಧಿಗಳು ಸಹ- ಮನೆಗೆ ಬಂದು "ನಾನು ಬೊಂಬಾಯಿನಿಂದ ಬಂದಿದ್ದೇನೆ. ಅಲ್ಲಿ ನನಗೆ ಸಿನಿಮಾಕ್ಷೇತ್ರದ ಒಬ್ಬರು ಮಿತ್ರರಾಗಿದ್ದಾರೆ. ಅವರು ಹಿಂದಿಯಲ್ಲಿ ಶ್ರೀ ಕೃಷ್ಣದೇವರಾಯನ ಒಂದು ಟಿ.ವಿ. ಸೀರಿಯಲ್ ತೆಗೆಯಬೇಕೆಂದಿದ್ದಾರೆ. ಆದುದರಿಂದ ನೀವು ಹಿಂದಿಯಲ್ಲಿ ಆ ಮಹಾಪುರುಷನ ಕಥೆಯನ್ನು ಬರೆದುಕೊಡಿ, ಅಥವಾ ಯಾರಿಂದಲಾದರೂ ಬರೆಸಿಕೊಡಿ. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ಹೇಳಿದರು. ಆಗ 'ಆಗಲಿ' ಎಂದು ಒಪ್ಪಿಕೊಂಡೆ.

ಒಂದು ತಿಂಗಳನಂತರ ಪುನಃ ಅವರು ಬಂದರು. ಆದರೆ ನಾನು ಇನ್ನೂ ಬರೆಯಲು ಶುರು ಮಾಡಿಯೇ ಇರಲಿಲ್ಲ. "ಸ್ವಲ್ಪ ಜಾಗ್ರತೆಯಾಗಿ ಬರೆದುಕೊಡಿ. ನೀವು ಬರೆದುಕೊಟ್ಟ ಕೂಡಲೆ ಅದನ್ನು ತೆಗೆದುಕೊಂಡು ನಾನೇ ಬೊಂಬಾಯಿಗೆ ಹೋಗಿಬರುತ್ತೇನೆ. ನಿಮಗೆ ಉಚಿತ ಸಂಭಾವನೆಯನ್ನೂ ಕೊಡಿಸುತ್ತೇನೆ" ಎಂದು ಹೇಳಿದರು.

ಇದಾದನಂತರ ಹಿಂದಿಯಲ್ಲಿ ಕೃಷ್ಣ ದೇವರಾಯನ ಚರಿತ್ರೆಯನ್ನು ಒಂದು ಕಾದಂಬರಿಯ ರೂಪದಲ್ಲಿ ಬರೆದೆ. ಅವರು ಹಸ್ತಪ್ರತಿ ತೆಗೆದುಕೊಂಡು, "ಇನ್ನೊಂದು ವಾರದಲ್ಲಿ ಬೊಂಬಾಯಿಗೆ ಹೋಗಿ ಬರುತ್ತೇನೆ, ಅನಂತರ ನಿಮ್ಮಲ್ಲಿಗೆ ಪುನಃ ಬರುತ್ತೇನೆ" ಎಂದು ಹೇಳಿ ಹೊರಟುಹೋದರು. ಆದರೆ ಮೂರು ನಾಲ್ಕು ತಿಂಗಳಾದರೂ ಬರಲೇ ಇಲ್ಲ. ಅವರ ಮನೆಯನ್ನು ಹುಡುಕಿಕೊಂಡು ಹೋದೆ. ನನ್ನ ಪುಸ್ತಕದ ಪ್ರಸ್ತಾಪ ಮಾಡಿದಾಗ ಬಹಳ ಉದಾಸೀನರಾಗಿ, "ಏನೂ ಪ್ರಯೋಜನವಾಗಲಿಲ್ಲ. ಅವರು ಏನೇನೋ ಸಬೂಬು ಹೇಳಿದರು. 'ಸ್ಕ್ರಿಪ್ಟನ್ನು ಕೊಟ್ಟು ಹೋಗಿ, ನೋಡೋಣ' ಎಂದು ಹೇಳಿದರು. ನಾನು ಅವರಿಗೆ ನಿಮ್ಮ ಪುಸ್ತಕದ ಜೆರಾಕ್ಸ್ ಕಾಪಿಯನ್ನು ಮಾಡಿಸಿಕೊಟ್ಟು ಬಂದಿದ್ದೇನೆ. ನೋಡೋಣ, ಮುಂದೆ ಏನಾಗುತ್ತದೆಯೋ" ಎಂದು ಹೇಳಿದರು.

ಸುಮಾರು ಒಂದು ವರ್ಷ ಕಳೆಯಿತು. 'ಕೃಷ್ಣದೇವರಾಯ' ಕಾದಂಬರಿಯನ್ನು ನಾನೇ ಅಚ್ಚು ಹಾಕಿಸುವ ಉದ್ದೇಶದಿಂದ ಹಸ್ತಪ್ರತಿಯನ್ನು ನನ್ನ ಮಿತ್ರರಿಂದ ತೆಗೆದುಕೊಂಡು ನನಗೆ ಕಳುಹಿಸುವಂತೆ ನನ್ನ ತಮ್ಮ ಶ್ರೀನಿವಾಸಮೂರ್ತಿಗೆ ಬರೆದೆ. ಅವನು ಹೋಗಿ ಕೇಳಿದ್ದಕ್ಕೆ, "ನಾನು ಆ ಪುಸ್ತಕವನ್ನು ಬೊಂಬಾಯಿನಲ್ಲಿ ನನ್ನ ಮಿತ್ರರಿಗೆ ಕೊಟ್ಟು ಬಂದೆ. ಅವರು ವಾಪಸ್ ಕೊಡಲೇ ಇಲ್ಲ. ಮೋಸ ಮಾಡಿದರು" ಎಂದು ಹೇಳಿದರಂತೆ. ಆಮೇಲೆ ಸಿಕ್ಕಿದ ಒಬ್ಬರು, "ಅವನು ನಂಬಲರ್ಹನಾದ ಮನುಷ್ಯನಲ್ಲ. ಅವನು ಹೇಳುವುದೆಲ್ಲಾ ಬರೀ ಸುಳ್ಳು. ಅವನು ಅದನ್ನು ಬೊಂಬಾಯಿಯಲ್ಲಿ ಮಾರಿಬಂದಿದ್ದಾನೆ. ದುಡ್ಡನ್ನು ತಾನೇ ಇಟ್ಟುಕೊಂಡಿದ್ದಾನೆ" ಎಂದು ಹೇಳಿದರು. "ಎಲ್ಲರಿಗೂ ಹೀಗೇ ಮಾಡುತ್ತಾನೆ" ಎಂದೂ ಹೇಳಿದರು. ಈ ಘಟನೆ ನಡೆದು ಸುಮಾರು ಏಳೆಂಟು ವರ್ಷಗಳು ಕಳೆದು ಹೋದವು.

ಒಂದು ಸಲ, ನನ್ನ ಹಿಂದಿ ಪುಸ್ತಕಗಳನ್ನು ಮುದ್ರಿಸಿ ಕೊಟ್ಟಿರುವ ಮಿತ್ರರಾದ ವೆಂಕಟರಾಮು ನಮ್ಮ ಮನೆಗೆ ಬಂದರು. ನಾನು ನನ್ನ ಪುಸ್ತಕದ ಒಂದು ಜೆರಾಕ್ಸ್ ಕಾಪಿಯನ್ನು ಮಾಡಿಸಿ ಇಟ್ಟುಕೊಂಡಿದ್ದೆ. ಅದನ್ನು ಅವರಿಗೆ ತೋರಿಸಿದೆ. ವೆಂಕಟರಾಮುರವರು, "ನಾನು ಮುದ್ರಿಸಿ ಕೊಡುತ್ತೇನೆ" ಎಂದು ಹೇಳಿ ತೆಗೆದುಕೊಂಡ ಹೋದರು. ಈಗ ಅದು ಅಚ್ಚಾಗಿದೆ. ಅಷ್ಟೇ ಅಲ್ಲ , ಅದು ಬೆಂಗಳೂರಿನ ಒಂದು ಹಿಂದಿ ಸಂಸ್ಥೆಯವರು ನಡೆಸುತ್ತಿರುವ ಪರೀಕ್ಷೆಗಳಲ್ಲಿ ಒಂದಾದ ಪ್ರವೇಶ ಪರೀಕ್ಷೆಗೆ ಪಠ್ಯ ಪುಸ್ತಕವಾಗಿದೆ. ನಾನು ಬರೆದದ್ದು ಸಾರ್ಥಕವಾಯಿತು ಎಂದು ನನಗೆ ಬಹಳ ಸಂತೋಷವಾಯಿತು. ವೆಂಕಟರಾಮು ಅವರಿಗೆ ನಾನು ಎಷ್ಟು ಧನ್ಯವಾದಗಳನ್ನು ಸಮರ್ಪಿಸಿದರೂ ಸಾಲದು.

ಸುಮಾರು ಅರುವತ್ತು ವರ್ಷಗಳ ಹಿಂದೆ ಮೈಸೂರು ಆಕಾಶವಾಣಿಗೋಸ್ಕರ ಕೆಲವು ಹಿಂದಿ ಏಕಾಂಕ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದೆ. ಸುಮಾರು ಹನ್ನೆರಡು ನಾಟಕಗಳಿರಬಹುದು. ಕೆಲವು ಏಕಾಂಕ ನಾಟಕಗಳನ್ನು ಕನ್ನಡದಲ್ಲಿ

ನಾನೇ ಬರೆದುಕೊಟ್ಟಿದ್ದೆ. ಹಿಂದೀ ಅನುವಾದಗಳಲ್ಲಿ 'ಭೊರ್‌ಕಾ ತಾರ', 'ಮಾಸಿ', 'ಮಂತ್ರ', ಮುಂತಾದವು ಪ್ರಸಿದ್ಧವಾದ ಏಕಾಂಕಗಳು.

ಐವತ್ತು ವರ್ಷಗಳ ಹಿಂದೆ ಇನ್ನೊಂದು ಪ್ರಸಂಗ ನಡೆಯಿತು. ಸುಮಾರು ೧೯೫೧-೫೨ನೇ ಇಸವಿ. ೧೯೫೦ನೇ ಇಸವಿಯಲ್ಲಿ ಹಿಂದೀ ಭಾಷೆಯನ್ನು ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಬೋಧಿಸುವ ಕ್ರಮ (Compulsory Hindi) ಪ್ರಾರಂಭವಾಯಿತು. ಆಗ ಆ ಭಾಷೆಯ ಪಠ್ಯಪುಸ್ತಕ ಇರಲಿಲ್ಲ. ಮೊದಲನೆ ವರ್ಷ ಎಂಟನೇ ತರಗತಿಗೆ, ಪಠ್ಯಪುಸ್ತಕವಿಲ್ಲದೆ ಪಾಠ ಮಾಡಿದ್ದಾಯಿತು. ನನ್ನ ಮಿತ್ರರೊಬ್ಬರು, "ನೀವು ಎಂಟನೇ ತರಗತಿಗೆ ಹಿಂದಿ ಪಠ್ಯಪುಸ್ತಕ ಬರೆಯಿರಿ. ನಾನು ಅಚ್ಚು ಹಾಕಿಸಿ ಅದನ್ನು ಪಠ್ಯಪುಸ್ತಕವಾಗಿ ಮಾಡಿಸಲು ಪ್ರಯತ್ನಪಡುತ್ತೇನೆ. ನನಗೆ ಕೆಲವು ಅಸೆಂಬ್ಲಿ ಸದಸ್ಯರ ಪರಿಚಯವಿದೆ. ಅವರ ಮುಖಾಂತರ ಪ್ರಯತ್ನಪಡುತ್ತೇನೆ" ಎಂದು ಹೇಳಿದರು.

ಆಗ ನಾನು ಸುಮಾರು ಎರಡು ತಿಂಗಳ ಕಾಲ ಪ್ರಯತ್ನಪಟ್ಟು ಪುಸ್ತಕವನ್ನು ಬರೆದೆ. ಪುನಃ ಅದರಲ್ಲಿ ದೋಷಗಳನ್ನು ತಿದ್ದಿ ಎರಡನೆ ಕಾಪಿಯನ್ನು ಸಿದ್ಧಪಡಿಸಿ ಆತನಿಗೆ ಕೊಟ್ಟೆ. ಅವನು ಮೊದಲನೇ ಕರಡು ಪ್ರತಿಯನ್ನೂ ನನ್ನ ಹತ್ತಿರ ಬಿಡದೆ ತೆಗೆದುಕೊಂಡು ಹೋದ. ಅನಂತರ ಅಚ್ಚು ಮಾಡಿಸುತ್ತಿದ್ದಾಗ ಪ್ರೂಫ್‌ಗಳನ್ನೂ ನನ್ನಿಂದಲೇ ನೋಡಿಸಿಕೊಂಡು ಹೋದ. ಪುಸ್ತಕ ಪ್ರಿಂಟಾಯಿತು. ಬಹಳ ಪ್ರಯತ್ನಪಟ್ಟು ಅದನ್ನು ಹೈಸ್ಕೂಲಿನ ಎಂಟನೇ ತರಗತಿಗೆ ಪಠ್ಯ ಪುಸ್ತಕವನ್ನಾಗಿ ಮಾಡಿಸಿದ. ಎಲ್ಲದಕ್ಕೂ ಆತನೇ ಹಣ ಖರ್ಚು ಮಾಡಿದ. ಅನಂತರ ನಮ್ಮ ಮನೆಗೆ ಮೂರು ತಿಂಗಳಾದರೂ ಬರಲೇ ಇಲ್ಲ. ಆತ ನನ್ನಿಂದ ಕರಡು ಪುಸ್ತಕವನ್ನು ತೆಗೆದುಕೊಂಡು ಹೋಗುವಾಗ, "ನಿಮಗೆ ಸ್ವಲ್ಪ ಹಣ ತಂದು ಕೊಡುತ್ತೇನೆ. ಪುಸ್ತಕದ ಮೇಲೆ ನಿಮ್ಮ ಹೆಸರು ಬೇಡ. ಏಕೆಂದರೆ ನೀವು ಬ್ರಾಹ್ಮಣರಾದ್ದರಿಂದ ಕಮಿಟಿಯವರು ಅದನ್ನು ಪಠ್ಯಪುಸ್ತಕವಾಗಿ ಇಡದೇ ಇರಬಹುದು. ಆದ್ದರಿಂದ ನನ್ನ ಹೆಸರನ್ನೇ ಹಾಕಿ ಅಚ್ಚು ಮಾಡಿಸುತ್ತೇನೆ" ಎಂದು ಹೇಳಿದ್ದ. ಅದಕ್ಕೂ ನಾನು ಒಪ್ಪಿದ್ದೆ. ಆದರೆ ಆ ಮನುಷ್ಯ ಬರಲೇ ಇಲ್ಲ. ನಾನು ಒಂದು ದಿವಸ ದೇವರಾಜ ಮಾರ್ಕೆಟ್ಟಿನಲ್ಲಿರುವ ಪುಸ್ತಕದ ಅಂಗಡಿಗೆ ನಮ್ಮ ಸ್ಕೂಲಿಗಾಗಿ ಹಿಂದಿ ಪಠ್ಯಪುಸ್ತಕಗಳನ್ನು ಖರೀದಿಸಲು ಹೋದೆ. ಆ ಅಂಗಡಿ ಮಾಲೀಕರು ನನಗೆ ಪರಿಚಿತರು. ಅವರು, "ಏನು ಮೇಷ್ಟ್ರೆ, ನಿಮ್ಮ 'ಸ್ನೇಹಿತನ ಪುಸ್ತಕ' ಹೈಸ್ಕೂಲಿನ ಪಠ್ಯಪುಸ್ತಕವಾಗಿದೆ! ಹೋಗಲಿ, ನಿಮಗೆ ಏನಾದರೂ ಸಂಭಾವನೆ ಕೊಟ್ಟನೆ!" ಎಂದು ಕೇಳಿದರು. "ಏನೂ ಕೊಟ್ಟಿಲ್ಲ. ಪುಸ್ತಕ ಪ್ರಿಂಟಾದ ಮೇಲೆ ಅವನು ಬರಲೇ ಇಲ್ಲ" ಎಂದು ಹೇಳಿದೆ. "ಸರಿ ಬಿಡಿ, ಅವನು ಏನೂ ಕೊಡುವುದಿಲ್ಲ. ನೀವು ಮೊದಲೇ ಹಣವನ್ನು ತೆಗೆದುಕೊಂಡು, ಕರಡು ಪ್ರತಿಯನ್ನು ಕೊಡಬೇಕಾಗಿತ್ತು. ಇದು ಒಳ್ಳೆಯವರಿಗೆ ಕಾಲವಲ್ಲ ಮೇಷ್ಟ್ರೆ!" ಎಂದು ಹೇಳಿದರು. ನಾನೇ ಬರೆದ ಪುಸ್ತಕದ ಒಂದು ಕಾಪಿಯನ್ನು ದುಡ್ಡು ಕೊಟ್ಟು ತೆಗೆದುಕೊಂಡು ಬಂದೆ.

ಒಂದು ದಿವಸ ಆತ ಬಿರುಗಾಳಿಯಂತೆ ನಮ್ಮ ಮನೆಗೆ ಬಂದ. ಬಂದವನೇ, "ಏನು, ನೀವು ಎಲ್ಲರ ಸಂಗಡವೂ 'ಪುಸ್ತಕವನ್ನು ನಾನು ಬರೆದದ್ದು , ನಾನು ಬರೆದದ್ದು' ಎಂದು ಹೇಳಿದ್ದೀರಂತೆ, ಅದು ನೀವು ಬರೆದದ್ದಾ? ನಾನು ನನ್ನ ಪುಸ್ತಕಕ್ಕೆ ಕೆಲವರ ಸಹಾಯ ಪಡೆದುಕೊಂಡೆ. ಹಾಗೇ ನೀವೂ ಸಹಾಯ ಮಾಡಿದಿರಿ. ಅದಕ್ಕೆ ಎಲ್ಲರೊಡನೆ 'ನಾನು ಬರೆದದ್ದು' ಎಂದು ಸಾರಿಕೊಂಡು ಬರುತ್ತಿದ್ದೀರ. ನಾನು ನಿಮಗೆ ಸ್ವಲ್ಪ ಹಣದ ಸಹಾಯ ಮಾಡೋಣವೆಂದು ಮಾಡಿಕೊಂಡಿದ್ದೆ. ನೀವು ಅದನ್ನೂ ಕಳೆದುಕೊಂಡಿರಿ. ನಿಮಗೂ ನನಗೂ ಇನ್ನು ಏನೂ ಸಂಬಂಧವಿಲ್ಲ" ಎಂದು ಹೇಳಿ ಕೋಪದಿಂದ ಹೊರಟುಹೋದ. ನನಗೆ ತಕ್ಷಣ ಏನು ಹೇಳಬೇಕೆಂದು ತಿಳಿಯದೆ ಮೂಕನಂತೆ ನಿಂತಿದ್ದೆ. ಅವನು ನಾನು ಏನಾದರೂ ಹೇಳುವುದಕ್ಕೆ ಮುಂಚೆಯೇ ಅಲ್ಲಿಂದ ಸರಸರನೆ ಹೊರಟುಹೋದ. ಅವನು ನಮ್ಮ ಮನೆಯಲ್ಲಿ ಒಂದು ನಿಮಿಷ ಕೂಡ ಇರಲಿಲ್ಲ.

ಇದು ಹಿಂದಿ ಸಾಹಿತ್ಯಕ್ಕಾಗಿ ನನ್ನ ಅಲ್ಪ ಸೇವೆ. ನಾನು ಹಿಂದಿ ಕ್ಷೇತ್ರದಲ್ಲೇ ಹೆಚ್ಚು ಕಾಲ ಅಧ್ಯಯನ ಮತ್ತು ಅಧ್ಯಾಪನ ಮಾಡಿದ್ದರಿಂದ ನನಗೆ ಆ ಭಾಷೆಯ ಮೇಲೆ ಹತೋಟಿ ಬಂದಿತು. ಆದುದರಿಂದ ಆ ಭಾಷೆಯಲ್ಲಿ ಬರೆಯಲು ಸಾಧ್ಯವಾಯಿತು. ಕನ್ನಡ ಮತ್ತು ಆಂಗ್ಲ ಸಾಹಿತ್ಯವನ್ನು ಕೂಡ ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿದೆ. ಕನ್ನಡದಲ್ಲಿ ಸಣ್ಣಕಥೆಗಳು ಮತ್ತು ಕವಿತೆಗಳನ್ನು ರಚಿಸಿದೆ. ಕಾಶೀಯಾತ್ರೆಗೆ ಹೋಗಿದ್ದಾಗ ಪತಿತಪಾವನೆ ಗಂಗೆಯ ಮೇಲೆ ಸುಮಾರು ೫೦ ಪಂಕ್ತಿಗಳ 'ಗಂಗಾವತರಣ' ಎಂಬ ಒಂದು ಕವನವನ್ನು ಅಲ್ಲೇ ಬರೆದು ನಮ್ಮ ಸಂಗಡ ಬಂದ ಯಾತ್ರಿಕರ ಮುಂದೆ ಓದಿದ್ದೆ. ಇದಲ್ಲದೆ ಇನ್ನೂ ಕೆಲವನ್ನು ರಚಿಸಿದ್ದೆ. ಇಷ್ಟೇ ನನ್ನ ಕನ್ನಡದ ರಚನೆಗಳು. ಈಗ ಬರೆಯುತ್ತಿರುವ ಆತ್ಮಕಥೆಯೇ ಕನ್ನಡದ ಪ್ರಥಮ ಪುಸ್ತಕ.

ನನ್ನ ಈ ಅಲ್ಪಸೇವೆಗಾಗಿ ಕೆಲವು ಸಂಘ ಸಂಸ್ಥೆಗಳು ಸನ್ಮಾನಿಸಿದ್ದೂ ಉಂಟು. ರಿಯಾಸತ್ ಹಿಂದಿ ಪ್ರಚಾರ ಸಮಿತಿ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ, ಬೆಂಗಳೂರಿನ ಹಿಂದಿ ಪ್ರಚಾರ ಪರಿಷತ್, ಮೈಸೂರಿನ ರೀಜನಲ್ ಕಾಲೇಜ್, ಕರ್ನಾಟಕ ಹಿಂದಿ ಪ್ರಚಾರ ಸಮಿತಿಯ ವಜ್ರ ಜಯಂತಿಯ ಉತ್ಸವ,

ಮೈಸೂರಿನ ಜ್ಞಾನಗಂಗಾ ವಿದ್ಯಾಪೀಠ- ಈ ಎಲ್ಲೆಡೆ ಪಂಡಿತರ ಮತ್ತು ಹಿತೈಷಿಗಳ ಪ್ರೀತಿಯ ಕಾಣಿಕೆ ಪಡೆದಿದ್ದೇನೆ.

ಉಪಸಂಹಾರ

೮೪ ವರ್ಷಗಳು ತುಂಬಿ ಈಗ ೮೫ಕ್ಕೆ ಕಾಲಿಟ್ಟಿದ್ದೇನೆ. ವಸಂತವೇ ಮೊದಲಾಗಿ ಶಿಶಿರದವರೆಗೆ ಎಲ್ಲಾ ಋತುಗಳನ್ನೂ ೮೪ ಸಲ ನೋಡಿದ್ದೇನೆ. ಪ್ರತಿಯೊಂದು ಋತುವಿನದೂ ಒಂದು ವಿಶೇಷ. ಒಂದರಂತೆ ಒಂದಿಲ್ಲ. ಒಂದು ಋತುವಿನಲ್ಲಿ ಪ್ರಕೃತಿ ಅಲಂಕರಿಸಿಕೊಂಡು ಸಂತೋಷದಿಂದ ತನ್ನ ಪ್ರಿಯತಮ ವಸಂತದೊಡನೆ ಲಾಸ್ಯವಾಡುತ್ತಾಳೆ ; ಇನ್ನೊಂದರಲ್ಲಿ ಸೂರ್ಯನ ತಾಪದಿಂದ ಬೆಂದು ಬಸವಳಿಯುತ್ತಾಳೆ ; ಮತ್ತೊಂದರಲ್ಲಿ ಮೇಘಗಳು ತಪ್ತ ಭೂಮಾತೆಯನ್ನು ತಮ್ಮ ಅಮೃತಧಾರೆಯಿಂದ ಸಿಂಚನ ಮಾಡಿ ಮುದವನ್ನು ಕೊಡುತ್ತವೆ ; ಇನ್ನೊಂದು ಋತುವಿನಲ್ಲಿ ವನರಾಜಿಯ ಪತ್ರಗಳೆಲ್ಲ ಉದುರಿ ಮರಗಿಡಗಳು ದುಃಖದಿಂದ ಇರುವುದು ಗೋಚರವಾಗುತ್ತದೆ. ಹೀಗೆ ಋತುಗಳ ಪರಿವರ್ತನ ಆವರ್ತನಗಳು ನಿರಂತರ ನಡೆಯುತ್ತಲೇ ಇರುತ್ತವೆ. ಮನುಷ್ಯ ಕೂಡ ಪ್ರಕೃತಿಯ ಒಂದು ಅಂಗ ತಾನೆ? ಅವನ ಜೀವನದಲ್ಲಿಯೂ ಇದೇ ಪರಿವರ್ತನ ಆವರ್ತನಗಳು ಸುಖದುಃಖಗಳ ರೂಪದಲ್ಲಿ ಒಂದರ ಹಿಂದೆ ಒಂದು ಬಂದು ಹೋಗುತ್ತವೆ. ದಿವಸ, ವಾರ, ತಿಂಗಳು ವರ್ಷಗಳಿಂದ ಅನಂತ ಕಾಲವು ಹಗಲು ರಾತ್ರಿಗಳ ಮಧ್ಯದಲ್ಲಿ ಅಬಾಧಗತಿಯಿಂದ ಹೇಗೆ ಮುಂದೆ ಮುಂದೆ ಸಾಗಿ ಹೋಗುತ್ತದೆ, ಅದೇ ರೀತಿಯಲ್ಲಿ ಮಾನವ ಜೀವನ ಕೂಡ ಸುಖ ದುಃಖಗಳೆಂಬ ಹಗಲು ರಾತ್ರಿಯ ನಡುವೆ ನಿಧಾನವಾಗಿ ಮುಂದೆ ಮುಂದೆ ಹೋಗುತ್ತಿರುತ್ತದೆ. ಹೀಗೆ ಚಲಿಸುವುದೇ ಜೀವನ. ಈ ಚಲನೆ ನಿಂತು ಹೋದರೆ ಅದೇ ಮೃತ್ಯು. ಮನುಷ್ಯನ ಜೀವನದಲ್ಲಿ ಹುಟ್ಟುಸಾವುಗಳು ಪ್ರಧಾನವಾದ ಎರಡು ಘಟನೆಗಳು. ಇವುಗಳ ಮಧ್ಯೆ ಸಹಸ್ರಾರು ಘಟನೆಗಳು ನಡೆಯುತ್ತವೆ. ಕಾಲವು ಹಗಲು ರಾತ್ರಿಗಳ ನಡುವೆ ನುಸುಳಿ ಹೋಗುವಂತೆ ಈ ಜೀವನದ ಘಟನೆಗಳು ಕೂಡ ಸುಖ ದುಃಖಗಳ ನಡುವೆ ಘಟಿಸುತ್ತ ಹೋಗುತ್ತವೆ. ಮನುಷ್ಯ ಈ ಘಟನೆಗಳಿಂದ ಪಾಠ ಕಲಿಯುತ್ತಾ ತನ್ನ ಜೀವನವನ್ನು ಮುಂದಕ್ಕೆ ಸಾಗಿಸುತ್ತಾನೆ. 'ಹಿಂದಿನ ತಪ್ಪು, ಮುಂದಕ್ಕೆ ಪಾಠ'. ಈ ಹಿಂದಿನ ತಪ್ಪುಗಳು ಮತ್ತು ಅವುಗಳಿಂದ ಕಲಿಯುವ ಪಾಠಗಳು ನಮ್ಮ ಜೀವನವನ್ನು ತಿದ್ದಿಕೊಂಡು ಮುಂದೆ ಮುಂದೆ ಸಾಗಲು ಸಹಕಾರಿಯಾಗುತ್ತವೆ.

ಯಾವ ಮನುಷ್ಯನೂ ಪೂರ್ಣವಾಗಿ ನಿರ್ದೋಷಿಯಲ್ಲ. ಪ್ರತಿಯೊಬ್ಬನಲ್ಲೂ ದೋಷಗಳು ಇದ್ದೇ ಇರುತ್ತವೆ. ಆದರೆ ಆ ದೋಷಗಳು ನಮ್ಮಲ್ಲಿ ಇವೆ ಎಂದು ತಿಳಿದ ಮೇಲೆ, ಅವುಗಳನ್ನು ಒಂದೊಂದಾಗಿ ಬಿಡುತ್ತಾ ಒಳ್ಳೆಯ ಗುಣಗಳನ್ನು ಗ್ರಹಿಸುತ್ತಾ ಜೀವನವನ್ನು ಮುಂದೆಮುಂದೆ ಸಾಗಿಸಿಕೊಂಡು ಹೋಗಬೇಕು. ಇದು ಪ್ರತಿಯೊಬ್ಬ ಮಾನವನ ಕರ್ತವ್ಯ. ನಾನು ಕೂಡ ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟಿದ್ದೇನೆ. ನನಗೆ ನೋವಾದಾಗ ನುಂಗಿಕೊಂಡಿದ್ದೇನೆ, ಇತರರಿಗೆ ನೋವು ಮಾಡದ ಪ್ರವೃತ್ತಿಯನ್ನು ಆವಾಹಿಸಿಕೊಂಡಿದ್ದೇನೆ. ಹಿಂದೊಂದು ಮುಂದೊಂದು ನುಡಿದಿಲ್ಲ, ಚಾಡಿ ಮಾತು ಹೇಳಿಲ್ಲ ; ಇತರರಿಗೆ ಅನ್ಯಾಯ ಮಾಡಿಲ್ಲ, ನನಗೇ ಅಪಕಾರವಾದಾಗಲೂ ಉಪಕಾರವನ್ನೇ ಮಾಡಿದ್ದೇನೆ.

ಕಬೀರನಲ್ಲಿ ನನಗೆ ಅಪಾರ ಶ್ರದ್ಧೆ ಉಂಟಾದ್ದರಿಂದ ಸಾಹಿತ್ಯ ರತ್ನ ಪರೀಕ್ಷೆಗೆ ಅವನನ್ನು ವಿಶೇಷಕವಿಯಾಗಿ ಅಧ್ಯಯನಕ್ಕೆ ತೆಗೆದುಕೊಂಡಿದ್ದೆ. ಇದರಿಂದ ಅವನ ಅನೇಕ ಗ್ರಂಥಗಳನ್ನು ಅಧ್ಯಯನ ಮಾಡುವ ಅವಕಾಶ ಲಭಿಸಿತು. ಒಂದು ದೋಹದಲ್ಲಿ ಆತ, "ನನ್ನದು ಎಂಬುದು ನನ್ನಲ್ಲಿ ಏನೂ ಇಲ್ಲ. ಎಲ್ಲವೂ ನಿನ್ನದೇ ಆಗಿದೆ. ನಿನ್ನದನ್ನು ನಿನಗೇ ಸಮರ್ಪಿಸಿದರೆ ನನಗೇನು ನಷ್ಟ" ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ. ಅಂದರೆ ಈ ಪ್ರಪಂಚದಲ್ಲಿ ನಮ್ಮದು ಎಂಬುದು ಏನೂ ಇಲ್ಲ. ಎಲ್ಲ ಆ ಪರಮಾತ್ಮನಿಗೆ ಸೇರಿದ್ದು. ನಾವು ಏನನ್ನು ಮಾಡಿದರೂ ಎಲ್ಲವೂ ಅವನ ಪ್ರೇರಣೆಯಿಂದ ಮಾಡಿದ್ದು. ಅದನ್ನು ಅವನಿಗೆ ಕೃಷ್ಣಾರ್ಪಣ ಮಾಡಬೇಕು. ಇದರಿಂದ ಮಾನವನು ಅಹಂಕಾರ, ಮಮಕಾರಗಳನ್ನು ತೊರೆದು **ತ್ವದೀಯಂ ವಸ್ತು ಗೋವಿಂದ, ತುಭ್ಯಮೇವ ಸಮರ್ಪ್ಯತೆ** ಎಂದು ಭಕ್ತಿಯಿಂದ ಅವನ ಸ್ಮರಣೆ ಮಾಡಬೇಕು. ಆಗ ನಮಗೆ ಮಾನಸಿಕ ಶಾಂತಿ ದೊರಕುವುದು. ಈ ನಿಯಮವನ್ನು ನಾನು ಸ್ವಲ್ಪ ಮಟ್ಟಿಗೆ ಅಳವಡಿಸಿಕೊಂಡಿದ್ದೇನೆ. ಈಗಲೂ ಅದೇ ರೀತಿ ನಡೆಯಲು ಪ್ರಯತ್ನಿಸುತ್ತಿದ್ದೇನೆ. ಆದರೆ ಈ ಮಾಯಾಪ್ರಪಂಚದಲ್ಲಿ ಚಂಚಲಮನಸ್ಸನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವುದು ಬಹಳ ಕಷ್ಟಸಾಧ್ಯವಾದದ್ದು. ನೂರಾರು ವರ್ಷಗಳು ತಪಸ್ಸು ಮಾಡಿದ ಋಷಿಮುನಿಗಳಿಗೂ ಅದು ಸುಲಭ ಸಾಧ್ಯವಾಗುತ್ತಿರಲಿಲ್ಲ. ಇನ್ನು ನಮ್ಮಂಥ ಹುಲುಮಾನವರಿಗೆ ಹೇಗೆ ಸಾಧ್ಯ? ಆದರೂ ಆ ದಿಶೆಯಲ್ಲಿ ಪ್ರಯತ್ನ ಮಾಡುವುದು ನಮಗೆ ಸೇರಿದ್ದು.

ಇನ್ನೊಬ್ಬ ಮಹಾನ್ ಸಂತಕವಿ ಭಕ್ತಚೂಡಾಮಣಿ ತುಲಸೀದಾಸ. ಕಬೀರದಾಸನು ನಿರ್ಗುಣಭಕ್ತಿಮಾರ್ಗದ ಸಂತನಾದರೆ, ತುಲಸೀದಾಸ ಸಗುಣಭಕ್ತಿಮಾರ್ಗದ ಸಂತ. ಅವನು ಶ್ರೀರಾಮಚಂದ್ರನ ಅನನ್ಯ ಭಕ್ತ. ಅವನು ರಾಮಭಕ್ತಿಯೇ ಜೀವನಮುಕ್ತಿಗೆ ಸಾಧನ ಎಂದು ತನ್ನ ಲೋಕಪ್ರಸಿದ್ಧವಾದ 'ರಾಮಚರಿತಮಾನಸ'ದಲ್ಲಿ (ತುಲಸೀ ರಾಮಾಯಣ) ಸಾರಿ

ಹೇಳಿದ್ದಾನೆ. ಇದಲ್ಲದೆ ತನ್ನ ಕಾವ್ಯಗಳಲ್ಲಿ ಭಕ್ತಿಯ ಜತೆಗೆ ಮಾನವನ ಜೀವನಾದರ್ಶಗಳನ್ನು ರಾಮ, ಲಕ್ಷ್ಮಣ, ಭರತ, ಸೀತಾದೇವಿ, ಆಂಜನೇಯ ಮೊದಲಾದ ಪಾತ್ರಗಳ ಮುಖೇನ ವ್ಯಕ್ತಪಡಿಸಿದ್ದಾನೆ. ಸಾಮಾನ್ಯ ಮನುಷ್ಯನಿಗೆ ತನ್ನ ಜೀವನವನ್ನು ಉತ್ತಮಗೊಳಿಸಲು ಇದಕ್ಕಿಂತ ಶ್ರೇಷ್ಠವಾದ ಗ್ರಂಥ ಇನ್ನೊಂದು ಇರಲಾರದು. ಕಬೀರ್‌ದಾಸ್, ತುಲಸೀದಾಸ್, ಸೂರದಾಸ್, ಮೀರಾಬಾಯಿ ಮೊದಲಾದ ಸಂತ ಶಿರೋಮಣಿಗಳ ವಾಣೀವಿಲಾಸ ಸಾಗರದಿಂದ ಒಂದು ಬಿಂದುವನ್ನು ತೆಗೆದುಕೊಳ್ಳಲು ನನಗೆ ಸಾಧ್ಯವಾಗಿದ್ದರೆ ನಾನೇ ಧನ್ಯ. ಅವರ ನೀತಿ ಮತ್ತು ತತ್ತ್ವಗಳನ್ನು ನನ್ನ ಜೀವನದಲ್ಲಿ ಹೆಚ್ಚಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗದಿದ್ದರೂ ಧರ್ಮ ಮತ್ತು ಸತ್ಯಮಾರ್ಗಗಳಲ್ಲಿ ಚಲಿಸಲು ಅದರಿಂದ ಪ್ರೇರಿತನಾದೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪುರುಷಾರ್ಥ ಸಾಧನೆಗೆ ಮೊದಲನೆಯ ಸೋಪಾನ ಧರ್ಮ, ಇದೇ ಜೀವನದ ಆಧಾರ ಶಿಲೆ. ಈ ಆಧಾರದ ಮೇಲೆ ಅರ್ಥ, ಕಾಮ, ಮತ್ತು ಮೋಕ್ಷ ಸಾಧನೆಯನ್ನು ಮಾಡಬೇಕು. ಧರ್ಮಮಾರ್ಗದಲ್ಲಿ ಕರ್ಮ ಮಾಡುತ್ತಾ ಸಾಗುವುದೇ ನಮ್ಮ ಭಾರತೀಯ ಜೀವನದ ಆದರ್ಶ. ಮತ್ತು ಆಧ್ಯಾತ್ಮಿಕ ಲೌಕಿಕ ಜೀವನದ ಸಮನ್ವಯವೇ ನಮ್ಮ ಭಾರತೀಯ ಜೀವನ ದರ್ಶನ.

ನಮ್ಮ ಪ್ರತಿನಿತ್ಯದ ಜೀವನದಲ್ಲಿ ಈ ಧರ್ಮಕರ್ಮಗಳ ಸಂಯೋಗವನ್ನು ನೋಡುತ್ತೇವೆ. ಅದರ ಕಡೆಗೆ ಹೆಚ್ಚು ಗಮನ ಕೊಡದೆ ಇರುವುದರಿಂದ ಅದರ ಅರಿವು ಆಗುವುದಿಲ್ಲ. ಸಾಮಾನ್ಯವಾಗಿ ಪ್ರತಿಯೊಬ್ಬ ಭಾರತೀಯನೂ- ಅದರಲ್ಲೂ ಹೆಚ್ಚಾಗಿ ಹಿಂದುಗಳು ಪ್ರಾತಃಕಾಲದಿಂದ ಪುನಃ ಮಲಗುವವರೆಗೆ, ದೇವಪ್ರಾರ್ಥನೆ, ಸಂಧ್ಯಾಪ್ರಾರ್ಥನೆ (ಸಂಧ್ಯಾವಂದನೆ), ದೇವ ಪೂಜೆ ಮಾಡಿ, ಅನಂತರ ನೈವೇದ್ಯ ಮಾಡಿದ ಅನ್ನ ಮೊದಲಾದುವನ್ನು ಊಟ ಮಾಡುತ್ತೇವೆ. ಹಬ್ಬ ಹರಿದಿನಗಳಂದು ಇದು ಇನ್ನೂ ವಿಶೇಷವಾಗಿರುತ್ತದೆ. ಮದುವೆ ಮುಂಜಿಗಳಲ್ಲಿಯೂ ಧಾರ್ಮಿಕ ಕಾರ್ಯಗಳಿಗೆ ಪ್ರಾಶಸ್ತ್ಯ. ಹೀಗೆ ಜೀವನದ ಪ್ರತಿಯೊಂದು ಹಂತದಲ್ಲಿಯೂ ನಮ್ಮ ಜೀವನದಲ್ಲಿ ಧಾರ್ಮಿಕತೆ ಸಮ್ಮಿಳಿತವಾಗಿರುತ್ತದೆ. ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹಿಂದೂಧರ್ಮದ ಎಲ್ಲಾ ಸಂಪ್ರದಾಯದ ಜನಜೀವನವೂ ಹೆಚ್ಚು ಕಡಮೆ ಹೀಗೆಯೇ ಇದೆ. ಇದು ಬಹಳ ಪುರಾತನವಾದ, ಪರಂಪರಾಗತವಾದ ಪದ್ಧತಿ. ಇದರಲ್ಲಿ ಆಧುನಿಕ ಪದ್ಧತಿಗಳು ಈಗ ಬೆರೆತಿವೆ. ಈಗ ಎಲ್ಲವನ್ನೂ ಆಧುನಿಕ ರೀತಿಯಲ್ಲಿ ಆಚರಿಸುವ ಸಂಪ್ರದಾಯ ನಮ್ಮ ಸಮಾಜದಲ್ಲಿ ಪ್ರಾರಂಭವಾಗಿದೆ. ನನ್ನ ದೀರ್ಘ ಜೀವನದಲ್ಲಿ ಅನೇಕ ಪರಿವರ್ತನೆಗಳನ್ನು ಕಂಡಿದ್ದೇನೆ. ನನ್ನ ಬಾಲ್ಯ ಕಾಲದಲ್ಲಿ ಇದ್ದ ಸಾಮಾಜಿಕ ಪರಿಸ್ಥಿತಿ ಯೌವನ ಕಾಲದಲ್ಲಿ ಸ್ವಲ್ಪ ಮಾರ್ಪಟ್ಟಿತು. ಈಗ ವೃದ್ಧಾಪ್ಯದಲ್ಲಿ ನಮ್ಮ ಸಾಮಾಜಿಕ ಜೀವನ ಬಹಳಷ್ಟು ಬದಲಾಗಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು: ೧. ಪಾಶ್ಚಾತ್ಯ ಸಂಸ್ಕೃತಿ ಮತ್ತು ಸಭ್ಯತೆಯ ಪ್ರಭಾವ, ೨. ವಿಜ್ಞಾನದ ವಿಕಾಸ. ಇವೆರಡು ನಮ್ಮ ದೇಶದ ಸಾಮಾಜಿಕ ಜೀವನವೇ ಅಲ್ಲ, ಇಡೀ ಪ್ರಪಂಚದ ಜೀವನದ ಮೇಲೆ ಪ್ರಭಾವ ಬೀರಿವೆ.

ಭಾರತ ೧೯೪೭ನೇ ಇಸವಿಯಲ್ಲಿ ಬ್ರಿಟಿಷರ ದಾಸ್ಯ ಶೃಂಖಲೆಯಿಂದ ಮುಕ್ತವಾಯಿತು. ಆಗ ದೇಶದಲ್ಲಿ ಶಾಂತಿ ಇತ್ತು. ಶ್ರೀಮನ್ ಮಹಾರಾಜರು, ಬುದ್ಧಿವಂತರೂ ದಕ್ಷರೂ ಆದ ತಮ್ಮ ದಿವಾನರ ಸಹಾಯದಿಂದ ದೇಶವನ್ನು ಆಳುತ್ತಿದ್ದರು. ಜನರು ಸಭ್ಯರೂ ಧಾರ್ಮಿಕರೂ ಆಗಿದ್ದರು. ಪಾಪಕಾರ್ಯವನ್ನು ಮಾಡಲು ಹೆದರುತ್ತಿದ್ದರು. ಆಗಿನ ಬಹಳ ಪ್ರಸಿದ್ಧರಾದ ಮೈಸೂರು ಪ್ರಾಂತದ ದಿವಾನರೆಂದರೆ ದಕ್ಷರೂ, ಮೇಧಾವಿಗಳೂ ಆದ ದಿವಾನ್ ವಿಶ್ವೇಶ್ವರಯ್ಯನವರು, ದಿವಾನ್ ಮಿರ್ಜಾ ಸಾಹೇಬರು ಮತ್ತು ದಿವಾನ್ ಮಾಧವರಾಯರು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನವು ಎಲ್ಲಾ ದಿಶೆಯಲ್ಲಿಯೂ ಉನ್ನತಿಯನ್ನು ಪಡೆಯಿತು. ಈಗಿನ ಹಾಗೆ ಯಾವ ಗೊಂದಲಗಳೂ ರಾಜ್ಯದಲ್ಲಿ ಇರಲಿಲ್ಲ. ಜನಜೀವನ ಶಾಂತಿಯುತವಾಗಿ ಸಾಗುತ್ತಿತ್ತು. ಇದು ಸ್ವಾತಂತ್ರ್ಯಪೂರ್ವದ ಪರಿಸ್ಥಿತಿ.

ಇತ್ತೀಚೆಗೆ ಬಂದ ಸರಕಾರಗಳು ದೇಶದ ಏಳಿಗೆಗಿಂತಲೂ ತಮ್ಮ ಏಳಿಗೆಗೆ ಹೆಚ್ಚು ಗಮನಕೊಟ್ಟವು. ದೇಶದಲ್ಲಿ ಅನ್ಯಾಯ, ಲಂಚಗುಳಿತನ, ಮೋಸ, ವಂಚನೆ ಶುರುವಾದವು. ಯಾರನ್ನು ಜನರು ತಮ್ಮ ಪ್ರತಿನಿಧಿಗಳನ್ನಾಗಿ ಚುನಾಯಿಸುತ್ತಿದ್ದರೋ ಅವರೇ ದೇಶಕ್ಕೆ, ಜನತೆಗೆ ದ್ರೋಹ ಮಾಡಲು ಪ್ರಾರಂಭಿಸಿದರು. ಬರಬರುತ್ತಾ ಚುನಾಯಿತ ಪ್ರತಿನಿಧಿಗಳ ಜತೆಗೆ, ಸರಕಾರದ ಅಧಿಕಾರಿಗಳೂ ಸೇರಿಕೊಂಡು ದೇಶವನ್ನು ಲೂಟಿ ಮಾಡಲು ಶುರುಮಾಡಿದರು. ಇದು ಪ್ರಾರಂಭದಲ್ಲಿ ಲಕ್ಷಾಂತರದ ಲೂಟಿ ಇದ್ದದ್ದು ಈಗ ಕೋಟ್ಯಂತರವಾಗಿದೆ. ಅವರನ್ನು ಹಿಡಿಯುವವರು ಯಾರೂ ಇಲ್ಲ; ಹಿಡಿದರೂ ತಮ್ಮ ರಾಜಕೀಯ ಪ್ರಭಾವ ಬಳಸಿ ಬಹಳ ಸುಲಭವಾಗಿ ತಪ್ಪಿಸಿಕೊಂಡುಬಿಡುತ್ತಾರೆ. ಕಾನೂನು ಕೇವಲ ಬಡ ಜನತೆಗೆ ಅನ್ವಯಿಸುತ್ತದೆ, ದೊಡ್ಡವರಿಗಲ್ಲ ಎಂಬ ಮಾತು ಸತ್ಯವಾಗಿದೆ. ಬಹುಶಃ ನಿಯಮಗಳ ನಿರ್ಮಾಪಕರೇ ಅವರಾದ್ದರಿಂದ ಅವರಿಗೆ ಯಾವ ನಿಯಮಗಳೂ ಅನ್ವಯಿಸುವುದಿಲ್ಲವೆಂದು ಕಾಣುತ್ತದೆ.

ದೇಶದ ವರ್ತಮಾನ ಪರಿಸ್ಥಿತಿಯನ್ನು ಬರೆಯುವ ಆವಶ್ಯಕತೆ ಇಲ್ಲ. ಏಕೆಂದರೆ ಪ್ರತಿನಿತ್ಯ ವರ್ತಮಾನಪತ್ರಿಕೆಗಳಲ್ಲಿ ದೇಶದ ಗಣ್ಯರು, ನೇತಾರರು, 'ದೇಶವನ್ನು ಉದ್ಧಾರ ಮಾಡುತ್ತೇವೆ. ಜನರಿಗೆ ಸ್ವರ್ಗಸುಖವು ಸಿಕ್ಕುವಂತೆ ಮಾಡುತ್ತೇವೆ' ಎಂಬ ನೂರೆಂಟು ಭರವಸೆಗಳನ್ನು ಕೊಟ್ಟು ಚುನಾಯಿತರಾಗಿ ಅಧಿಕಾರಪ್ರಾಪ್ತಿಯಾದನಂತರ ದೇಶ ಮತ್ತು ಜನತೆಯನ್ನು ಮರೆತು ತಮ್ಮ ಮತ್ತು ತಮ್ಮವರ 'ಅಭಿವೃದ್ಧಿ'ಗಾಗಿ ಕೆಲಸ ಮಾಡುವ ಸ್ವಾರ್ಥಿಗಳ ವಿಚಾರ, ಅವರು ಮಾಡಿರುವ ಅನ್ಯಾಯ, ಮೋಸ, ಮೊದಲಾದವುಗಳ ವಿಷಯಗಳನ್ನು ಓದುತ್ತಿರುತ್ತೇವೆ. ಒಟ್ಟಿನಲ್ಲಿ ನನ್ನ ೮೪ ವರ್ಷದ ದೀರ್ಘ ಜೀವನದಲ್ಲಿ ಈಗಿರುವ ದೇಶದ ದುಃಸ್ಥಿತಿ ಹಿಂದೆ ಯಾವಾಗಲೂ ಇರಲಿಲ್ಲವೆಂದು ಕಾಣುತ್ತದೆ. 'ಜನತಾ ಸರಕಾರ ಜನರಿಗಾಗಿ' ಎಂಬ ಮಾತು ಈಗ ಸುಳ್ಳಾಗಿದೆ. ವರ್ತಮಾನದ ಯುಗ ಬರೀ 'ಸ್ಕ್ಯಾಮ್' (ಹಗರಣಗಳು) ಯುಗ. ಇದು ನಮ್ಮ ದೌರ್ಭಾಗ್ಯ. ನಾನು ಆಶಾವಾದಿ. ಈ ಪರಿಸ್ಥಿತಿ ಹೀಗೆಯೇ ಇರುವುದಿಲ್ಲವೆಂದು ಭಾವಿಸುತ್ತೇನೆ. ನನ್ನ ಕಾಲ ಕಳೆದು ಹೋಯಿತು. ಆದರೆ ಭವಿಷ್ಯದಲ್ಲಿಯಾದರೂ ದೇಶ ಸುಭಿಕ್ಷವಾಗಿ ಎಲ್ಲರೂ ಸುಖವಾಗಿ ಜಾತಿ, ವರ್ಣ, ಬಡವ, ಬಲ್ಲಿದ, ಎಂಬ ಭೇದಭಾವವಿಲ್ಲದೆ ಸುಖವಾಗಿ ಬಾಳುವರು ಎಂದು ನಂಬಿದ್ದೇನೆ. ಭಾರತ ಮಾತೆಯ ಪ್ರತಿಯೊಬ್ಬ ಪುತ್ರನೂ ಇನ್ನು ಮುಂದಾದರೂ ಸುಖ-ಸಂತೋಷದಿಂದ ಬಾಳಲಿ ಎಂದು ಹಾರೈಸುತ್ತೇನೆ.

ಸರ್ವೇ ಜನಾಃ ಸುಖಿನೋ ಭವಂತು
ಸಮಸ್ತ ಸನ್ಮಂಗಳಾನಿ ಭವಂತು ॥

ತೇನ ವಿನಾ

ವೇ।। ಬ್ರ।। ಶ್ರೀ ರಾಮೇಶ್ವರ ಅವಧಾನಿ

ತೇನ ವಿನಾ*

ಸಮುದಾಯ ಅಧ್ಯಯನ ಕೇಂದ್ರದವರು ಇತಿವೃತ್ತಗಳ ಸಂಪುಟವನ್ನು ತರುತ್ತಿರುವದು ಶ್ಲಾಘ್ಯವಾದ ಕೆಲಸ. ಅವರ ಈ ಕೆಲಸಕ್ಕೆ ಪೂರಕವಾಗಿ ನನ್ನ ವಿಚಾರವೂ ಇರಲಿ ಎಂದಷ್ಟೇ ಇದನ್ನು ಬರೆದಿದ್ದೇನೆ. ಅದಕ್ಕೆ ಹೊರತಾಗಿ ನನ್ನ ಈ ಬರಹಕ್ಕೆ ಯಾವ ಪ್ರಾಮುಖ್ಯವೂ ಇಲ್ಲ ಎಂಬುದನ್ನು ಬಲ್ಲೆ. ಅಧ್ಯಯನೋದ್ದೇಶದ ಈ ಯೋಜನೆಗೆ ಇದು ನನ್ನ ಅಲ್ಪಕಾಣಿಕೆ. ಇದೂ ಭಗವಂತನ ಇಚ್ಛೆ.

ಜನನ

ಶ್ರೀ ರಾಮಾವಧಾನಿಗಳು ನನ್ನ ಮುತ್ತಜ್ಜನವರು; ಮುತ್ತಜ್ಜಿಯ ಹೆಸರು ಭಾಗೀರಥಮ್ಮ. ನನ್ನ ಅಜ್ಜ ಅನಂತನಾರಾಯಣಾವಧಾನಿಗಳು, ಅಜ್ಜಿ ನಾಚಾರಮ್ಮನವರು. ಅಜ್ಜಿಯನ್ನು ಬಾಲ್ಯದಲ್ಲಿ ನೋಡಿದ್ದರ ನೆನಪಿದೆ. ನನ್ನ ಅಜ್ಜನವರನ್ನು ನೋಡಿರಲಿಲ್ಲ. ಅವರು ಗುರುಕುಲವನ್ನು ನಡೆಸುತ್ತಿದ್ದರಂತೆ. ಬ್ರಹ್ಮಚಾರಿಗಳಾದ ವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ವೇದಾಭ್ಯಾಸ ಮಾಡಿಸುತ್ತಿದ್ದರಂತೆ. ಇವರೆಲ್ಲ ನನ್ನ ತಂದೆಯ ಕಡೆಯ ಪೂರ್ವಿಕರು.

ನನ್ನ ತಾಯಿಯ ಮುತ್ತಜ್ಜನವರು ಕೇಶವಶಾಸ್ತ್ರಿಗಳು, ಮುತ್ತಜ್ಜಿ ನಂಜಮ್ಮನವರು; ಅಜ್ಜನವರು ಸೂರ್ಯನಾರಾಯಣಶಾಸ್ತ್ರಿಗಳು, ಅಜ್ಜಿ ಅನ್ನಪೂರ್ಣಮ್ಮನವರು; ತಂದೆ ಕೇಶವಶಾಸ್ತ್ರಿಗಳು (ಇವರು ಕೊನೆಗೆ ಸಂನ್ಯಾಸವನ್ನು ಸ್ವೀಕರಿಸಿದ್ದರಂತೆ). ತಾಯಿ ಲಕ್ಷ್ಮೀದೇವಮ್ಮನವರು.

ನಮ್ಮ ಹಿಂದಿನವರು ವೇದನಿಪುಣರಾಗಿದ್ದರು, ಶ್ರೌತವನ್ನು ತಿಳಿದವರಾಗಿದ್ದರು. ನಮ್ಮ ತಾಯಿಯವರ ಚಿಕ್ಕಪ್ಪನವರು ನಂಜುಂಡ ಉಪಾಧ್ಯಾಯರು. ಶೀಘ್ರವಾಗಿ ವೇದದ ಅಧ್ಯಯನಮಾಡಬಲ್ಲ ಶಕ್ತಿ ಅವರಿಗಿತ್ತು. ನಮ್ಮ ಸೋದರಮಾವನವರು ಶ್ರೀನಿವಾಸಶಾಸ್ತ್ರಿಗಳು. ಅವರು ಆ ಕಾಲದಲ್ಲಿ ಸಂಕೇತಿ ಸಮುದಾಯದಲ್ಲಿಯೇ ಶ್ರೇಷ್ಠವಿದ್ವಾಂಸರೆನಿಸಿಕೊಂಡಿದ್ದರು; ವೇದ ಶಾಸ್ತ್ರ ಶ್ರೌತಗಳಲ್ಲಿ ನಿಪುಣರಾಗಿದ್ದರು; ಕಾಶಿಯಲ್ಲಿಯೂ ಅಧ್ಯಯನ ಮಾಡಿ ಬಂದವರಾಗಿದ್ದರು.

ನಮ್ಮ ತಂದೆಯವರು ಶ್ರೀನಿವಾಸಾವಧಾನಿಗಳು; ಹಾಸನ ಜಿಲ್ಲೆಯ ಜೋಡಿಪೂಮಗಾಮೆ ಎಂಬ ಗ್ರಾಮವು ಅವರ ಜನ್ಮಸ್ಥಳ. ನಮ್ಮ ದೊಡ್ಡಪ್ಪನವರು ರಾಮಾವಧಾನಿಗಳು; ಶಾಂತಮೂರ್ತಿಗಳು. ಅವರಿಬ್ಬರೂ ಅಧ್ಯಯನನಿಷ್ಣಾತರಾಗಿದ್ದರು, ಆದರ್ಶ ಸೋದರರಾಗಿದ್ದರು.

ನಮ್ಮ ತಾಯಿಯವರ ಹೆಸರು ಅನ್ನಪೂರ್ಣಮ್ಮ. ಅವರಿಗೆ ಹುಟ್ಟಿದ ಮೊದಲ ಗಂಡುಮಗು ಮೃತವಾಯಿತು. ಇದರಿಂದಾಗಿ ನಮ್ಮ ತಂದೆತಾಯಿಗಳು 'ರಾಮೇಶ್ವರ' ಯಾತ್ರೆ ಮಾಡಿಬಂದರು. ಅನಂತರ ನಾನು ಹುಟ್ಟಿದೆ, 'ರಾಮೇಶ್ವರ' ಎಂದೇ ನನಗೆ ಹೆಸರಿಟ್ಟರು. ಶ್ರೀ ರೌದ್ರನಾಮ ಸಂವತ್ಸರದ ಮಾಘ ಶುದ್ಧ ಬಿದಿಗೆಯಂದು ಶತತಾರಾನಕ್ಷತ್ರದಲ್ಲಿ ನನ್ನ ಜನನವಾಯಿತು (ಜ : ೧೯೨೦).

ನಮ್ಮವರ ಸ್ಥಿತಿಗತಿಗಳು

ಆಗಿನ ಕಾಲದಲ್ಲಿ ನಮ್ಮವರೆಲ್ಲರೂ ವೇದವಿದ್ಯಾಭ್ಯಾಸ ಮಾಡಿದವರೇ ಆಗಿರುತ್ತಿದ್ದರು; ಕೆಲವರು ಶಾಸ್ತ್ರಾಭ್ಯಾಸವನ್ನೂ ಮಾಡಿರುತ್ತಿದ್ದರು. ನಮ್ಮೂರಿನಲ್ಲಿ ಯಜ್ಞನಾರಾಯಣ (ಅಣ್ಣಯ್ಯಪ್ಪ)

* ರಚನೆ : ೨೦೦೩-೦೪

ದೀಕ್ಷಿತರು, ಐದೀಕ್ಷಿತರು, ಪುಟ್ಟಣ್ಣಾವಧಾನಿಗಳು, ನರಸಿಂಹಾವಧಾನಿಗಳು, ಸುಬ್ಬರಾಯಾವಧಾನಿಗಳು, ನಮ್ಮ ದೊಡ್ಡಪ್ಪ ರಾಮಾವಧಾನಿಗಳು, ನಮ್ಮ ತಂದೆ ಶ್ರೀನಿವಾಸಾವಧಾನಿಗಳು - ಹೀಗೆ ವೈದಿಕರ ಸಮೂಹವೇ ಇತ್ತು. ನಮ್ಮ ಊರಿನ ರಾಮಚಂದ್ರದೀಕ್ಷಿತರ ಹೆಸರು ಇಂತಹವರಲ್ಲಿ ಪ್ರಸಿದ್ಧವಾದುದು. ಅವರು ವೇದಶಾಸ್ತ್ರಗಳಲ್ಲಿ ನಿಪುಣರಾಗಿದ್ದರಲ್ಲದೆ ಆಹಿತಾಗ್ನಿಗಳೂ ಆಗಿದ್ದರು. ಆ ಕಾಲದಲ್ಲಿಯೇ ಬಹಳ ಕಷ್ಟಪಟ್ಟು ಎಲ್ಲಾ ಶಾಸ್ತ್ರಗಳ ಗ್ರಂಥಗಳನ್ನೂ ಸಂಗ್ರಹ ಮಾಡಿದ್ದರು.

ನಮ್ಮವರು ಕಷ್ಟಸಹಿಷ್ಣುಗಳು, ಎಲ್ಲರೂ ತೋಟಗಾರರು. ತೋಟಗಳಲ್ಲಿ ತಾವೇ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಹಾಗೆಯೇ ಅಡಕೆ-ಬಾಳೆ ಮೊದಲಾದವನ್ನು ತಾವೇ ಸ್ವತಃ ಸಂತೆಗಳಿಗೆ ಹೊತ್ತುಕೊಂಡು ಹೋಗಿ ಮಾರಾಟಮಾಡಿ ಬರುತ್ತಿದ್ದರು. ಹೊಲಗದ್ದೆಗಳನ್ನು ಮಾತ್ರ ರೈತರಿಗೆ ವಾರಗುತ್ತಿಗೆಗಳಿಗೆ ಕೊಟ್ಟಿರುತ್ತಿದ್ದರು.

ಆಗ ಕೆಲವು ಗ್ರಾಮಗಳನ್ನು ಒಂದು ಗುಂಪಾಗಿ ಭಾವಿಸಿ, ಸಮಾರಂಭಗಳಿಗೆ ಕರೆಯುವುದು ವಾಡಿಕೆಯಲ್ಲಿತ್ತು. ಆ ಸಂದರ್ಭಗಳಲ್ಲಿ ಚೆಂಡಾಟ ಚಿಣ್ಣೆಯಾಟಗಳನ್ನು ಊರೂರವರು ಆಡುತ್ತಿದ್ದರು. ನಮ್ಮವರ ವ್ಯಸನಗಳಲ್ಲಿ ಒಂದಾದ ಇಸ್ಪಿಟ್ ಆಟವೂ ಬಳಕೆಯಲ್ಲಿತ್ತು ; ಮತ್ತೊಂದು ವ್ಯಸನವು ನಶ್ಯ ಹೊಗೆಸೊಪ್ಪಿನ ಸೇವನೆಯದಾಗಿತ್ತು.

ಯಾವುದಾದರೂ ವಿಷಯಕ್ಕಾಗಿ ಜಗಳವಾಡುವುದು, ಪಾರ್ಟಿ ಮಾಡಿಕೊಳ್ಳುವುದು ನಮ್ಮವರಲ್ಲಿ ಆಗಲೂ ಇತ್ತು. ಬ್ರಾಹ್ಮಣ ಸಮಾಜದಲ್ಲಿ ಇದೊಂದು ಕೊರತೆ. ಸಮುದ್ರಯಾನ ಮಾಡಿದವರಿಗೆ ಬಹಿಷ್ಕಾರ ಹಾಕಿದ್ದರು. ಇದರಿಂದಾಗಿ ಸಂಪ್ರದಾಯಸ್ಥರು ಮತ್ತು, ವಿದೇಶಗಳಿಗೆ ಹೋದವರು ಹಾಗೂ ಅವರ ಪರವಾಗಿ ನಿಂತವರ ಪಾರ್ಟಿಗಳಾಗಿದ್ದವು. ವಿದೇಶಯಾನ ಮಾಡಿದವರು 'ಲಂಡನ್ ಪಾರ್ಟಿ'ಯವರು ಎಂದು ಕರೆಯಲ್ಪಡುತ್ತಿದ್ದರು. ಸಂಪ್ರದಾಯಸ್ಥರು 'ಶುದ್ಧ ಪಾರ್ಟಿ'ಯವರೆನಿಸಿದ್ದರು. ಹಲವು ವರ್ಷಗಳ ಕಾಲ ಈ ಎರಡು ದೊಡ್ಡ ಗುಂಪುಗಳು ಇದ್ದವು. ಈ ಜಗಳವನ್ನು ಹೋಗಲಾಡಿಸಲೆಂದು, ನನ್ನ ಸೋದರಮಾವನವರಾದ ಹಂದನ ಹಾಲು ಶ್ರೀನಿವಾಸಶಾಸ್ತ್ರಿಗಳು ಸಮುದ್ರಯಾನ ಪ್ರಾಯಶ್ಚಿತ್ತ ಮಾಡಿಸಿದ್ದರು. ನಮ್ಮ ಊರಿನಲ್ಲಿ ಜಮೀನಿನ ವ್ಯವಹಾರದ ಕಾರಣದಿಂದಲೇ ಎರಡು ಗುಂಪುಗಳಾಗಿದ್ದವು. ಇದರಿಂದ ಆಗುವ ಅನರ್ಥಗಳನ್ನು ಕುರಿತು ಹೇಳಲೇಬೇಕಾಗಿಲ್ಲ. 'ಬ್ರಾಹ್ಮಣಾನಾಮಸಂಘಾತಃ' ಎಂಬ ಒಂದು ಗಾದೆಯೇ ಇದೆ.

ಬಾಲ್ಯ, ವಿದ್ಯಾಭ್ಯಾಸ

ಹಳ್ಳಿಗಳಲ್ಲಿ ಆಗ ಪ್ರಾಥಮಿಕ ಶಾಲೆಗಳಿರುವುದೂ ಅಪರೂಪದ ಮಾತಾಗಿತ್ತು. ಮಾಧ್ಯಮಿಕ ಶಾಲೆಗಳಿಗಂತೂ ಹಲವಾರು ಮೈಲಿಗಳೇ ನಡೆದುಕೊಂಡು ಹೋಗಬೇಕಾಗಿತ್ತು. ಮಾಧ್ಯಮಿಕ - ಪ್ರೌಢಶಾಲೆಗಳಲ್ಲಿ ಓದಬೇಕಾದರೆ ದೂರದ ಪಟ್ಟಣಗಳಿಗೇ ಹೋಗಬೇಕಾಗಿತ್ತು. ಅಲ್ಲಿ ವಾರಾನ್ನವನ್ನೋ ಭಿಕ್ಷಾನ್ನವನ್ನೋ ಮಾಡಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದೆವು.

ಆಗೆಲ್ಲಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಆದವರಿಗೆ ಕೆಲಸವು ಸಿಕ್ಕುತ್ತಿತ್ತು. ಕೆಲವುವೇಳೆ, ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೂ ಉದ್ಯೋಗವು ದೊರೆಯುತ್ತಿತ್ತು. ನಮ್ಮವರು ಆರಿಸಿಕೊಂಡ ಮುಖ್ಯವಾದ ಉದ್ಯೋಗವು ಉಪಾಧ್ಯಾಯವೃತ್ತಿಯೇ ಆಗಿತ್ತು.

ಆಗ, ನಮ್ಮ ಊರಿನಿಂದ ಒಂದು ಮೈಲಿ ದೂರದಲ್ಲಿರುವ ಹೊನ್ನಾವರದಲ್ಲಿ ಒಂದು ಶಾಲೆಯಿತ್ತು. ನನ್ನ ಬಾಲ್ಯವಿದ್ಯಾಭ್ಯಾಸ ಅಲ್ಲಿಯೇ ನಡೆಯಿತು. ನಮ್ಮ ಊರಿನಿಂದ ನಾಲ್ವರು ವಿದ್ಯಾರ್ಥಿಗಳು ಆ ಶಾಲೆಗೆ ಹೋಗುತ್ತಿದ್ದೆವು. ಆಗ ಅಲ್ಲಿ ನಾಗಪ್ಪಮೇಷ್ಟರು ಎಂಬ ಅಧ್ಯಾಪಕರಿದ್ದರು, ಅವರು ನನ್ನ ಬಂಧುವೂ ಆಗಿದ್ದರು. ನನ್ನ ಬಾಲ್ಯವಿದ್ಯಾಭ್ಯಾಸಕಾಲದ ಮರೆಯಲಾಗದ ಮೇಷ್ಟರು ಅವರು. ನಾನು ಮಾಧ್ಯಮಿಕ ಶಾಲೆಯ ಮೆಟ್ಟಿಲು ಹತ್ತಲಿಲ್ಲ. ಆದರೆ ಗುರುಗಳು ಹಾಕಿಕೊಟ್ಟ ಅಡಿಪಾಯ ಭದ್ರವಾಗಿತ್ತು. ಅವರ ಪಾಠದ ಪ್ರಭಾವದಿಂದಾಗಿ, ಮುಂದೆ, ಮದರಾಸ್ ಮೆಟ್ರಿಕ್ ಪರೀಕ್ಷೆಯನ್ನು ಖಾಸಗಿಯಾಗಿ ಮಾಡಿಕೊಂಡೆ ; ಬಿ.ಎ., ಪರೀಕ್ಷೆಯನ್ನೂ ಮಾಡಿಕೊಂಡೆ. ಅದೆಲ್ಲಾ ಉತ್ತಮರಾದ ಉಪಾಧ್ಯಾಯರ ಮಾರ್ಗದರ್ಶನದ ಫಲವಾಗಿತ್ತು.

ಉಪನಯನ ಮತ್ತು ವೇದಾಧ್ಯಯನ

ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಮುಗಿಯುವ ಹೊತ್ತಿಗೆ ನನಗೆ ಹನ್ನೊಂದು ವರ್ಷ ವಯಸ್ಸಾಗಿತ್ತು. ಆಗ ಉಪನಯನವಾಯಿತು. ನಮ್ಮ ದೊಡ್ಡಪ್ಪನವರು ನನಗೆ ಉಪಯುಕ್ತ ಮಂತ್ರಗಳನ್ನೂ, ಪ್ರಯೋಗ, ಸೂತ್ರಗಳು ಮೊದಲಾದುವನ್ನೂ ಹೇಳಿಕೊಟ್ಟರು. ಹದಿಮೂರನೆಯ ವರ್ಷದ ಹೊತ್ತಿಗೆ ವೇದಪಾಠವನ್ನು ಪ್ರಾರಂಭಿಸಿದರು.

ವಿದ್ವಾನ್ ವೆಂಕಟಕೃಷ್ಣಾವಧಾನಿಗಳು ನನ್ನ ಭಾವನವರು. ಅವರು ಚಿಕ್ಕಮಗಳೂರು ಜಿಲ್ಲೆಯ ಕೂದವಳ್ಳಿ ಎಂಬಲ್ಲಿ ಗುರುಕುಲವನ್ನು ನಡೆಸುತ್ತಿದ್ದರು. ಅವರು ಒಮ್ಮೆ ಊರಿಗೆ ಬಂದಾಗ ನನ್ನ ವೇದಾಧ್ಯಯನದ ಪ್ರಗತಿಯನ್ನು ಗಮನಿಸಿದರು. ನನ್ನನ್ನೂ

ತಮ್ಮ ಜತೆ ಕರೆದುಕೊಂಡು ಕೂದವಳ್ಳಿಗೆ ಹೊರಟೇಬಿಟ್ಟರು. ಅಲ್ಲಿಯೇ ನನ್ನ ವೇದಾಧ್ಯಯನ ಮುಂದುವರಿಯಿತು.

ಕೆಲ ಕಾಲದಲ್ಲೇ, ಭಾವನವರಿಗೆ ಬೆಂಗಳೂರಿನ 'ಮಾಗಡಿ ಕರಣಿಕರ ಪಾಠಶಾಲೆ'ಯಲ್ಲಿ ಉದ್ಯೋಗ ಸಿಕ್ಕಿತು. ಅಲ್ಲಿ ಅವರು ಋಗ್ವೇದದ ಉಪಾಧ್ಯಾಯರಾಗಿ ಸೇರಿದರು.

ಆಗ ನನ್ನನ್ನೂ ಬೆಂಗಳೂರಿಗೆ ತಮ್ಮ ಜತೆ ಕರೆದೊಯ್ದರು, ಅದೇ ಪಾಠಶಾಲೆಗೆ ಸೇರಿಸಿಕೊಂಡರು. ನನಗಾಗಲೇ ಕೆಲ ಮಂತ್ರಗಳ ಪಾಠವಾಗಿದ್ದುದರಿಂದ ಮೂರನೆಯ ವರ್ಷದ ತರಗತಿಗೆ ನನ್ನನ್ನು ದಾಖಲಿಸಿದ್ದರು. ಇಲ್ಲಿಂದ ನನ್ನ ವಿದ್ಯಾರ್ಥಿ ಜೀವನದಲ್ಲಿ ಹೊಸ ಅಧ್ಯಾಯವು ಪ್ರಾರಂಭವಾಯಿತು. ನನ್ನ ಭಾವನವರು ಹಲವು ಪ್ರಯೋಗಗಳನ್ನು ಬಲ್ಲವರಾಗಿದ್ದರು, ಅದೇ ಪಾಠಶಾಲೆಯಲ್ಲಿ ಐವತ್ತು ವರ್ಷಗಳ ಕಾಲ ಉಪಾಧ್ಯಾಯರಾಗಿದ್ದರು, ಉದ್ದಾಮ ಪಂಡಿತರಾಗಿದ್ದರು; ಅವರ ಗರಡಿಯಲ್ಲಿ ನನಗೆ ಭದ್ರವಾದ ಆಧಾರ ದೊರೆತ ಹಾಗಾಗಿತ್ತು.

ಕರಣಿಕರಪಾಠಶಾಲೆಯಲ್ಲಿ ಎರಡು ವರ್ಷಗಳ ವಿದ್ಯಾಭ್ಯಾಸ ಮಾಡಿದೆ. ಭಾವನವರು ನನ್ನನ್ನು ಚಾಮರಾಜಪೇಟೆಯ ವೇದಪಾಠಶಾಲೆಗೆ ಸೇರಿಸಿದರು, ವಾರವನ್ನು ಮಾಡಿಕೊಂಡು ವ್ಯಾಸಂಗ ಮುಂದುವರಿಸುವುದಕ್ಕೆ ಅನುಕೂಲ ಮಾಡಿಕೊಟ್ಟರು. ನನ್ನನ್ನು ತಮ್ಮ ಮನೆಯಲ್ಲೇ ಇರಿಸಿಕೊಂಡರು, ಕಣ್ಗಾವಲಾಗಿ ನಿಂತರು.

ಚಾಮರಾಜಪೇಟೆಯ ಪಾಠಶಾಲೆಯಲ್ಲಿ ವೇದಕ್ಕಾಗಿಯೇ ಪ್ರತ್ಯೇಕವಾದ ಪಾಠಶಾಲೆ ಇತ್ತು. ಇದನ್ನು ಸರಕಾರದ ವಿದ್ಯಾಭ್ಯಾಸ ಇಲಾಖೆಯು ನೋಡಿಕೊಳ್ಳುತ್ತಿತ್ತು. ಪರೀಕ್ಷೆಗಳು ಮೈಸೂರಿನಲ್ಲಿಯೇ ನಡೆಯುತ್ತಿದ್ದವು. ಅದನ್ನು ನೋಡಿಕೊಳ್ಳುತ್ತಿದ್ದುದು ಅರಮನೆಯ ಅಧೀನದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ರಚಿತವಾಗಿದ್ದ ಸಮಿತಿ. ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಅರಮನೆಯಲ್ಲಿ ಮಹಾರಾಜರ ಸಮ್ಮುಖದಲ್ಲಿ ಕೊಡಲಾಗುತ್ತಿತ್ತು.

ಆ ಪಾಠಶಾಲೆಯಲ್ಲಿ ಹರಿಕೆ ಕೃಷ್ಣಭಟ್ಟರು ಉಪಾಧ್ಯಾಯರಾಗಿದ್ದರು. ಅವರ ಮನೆಗೂ ಪಾಠಕ್ಕೆ ಹೋಗುತ್ತಿದ್ದೆ. ಅವರ ಶಿಷ್ಯವಾತ್ಸಲ್ಯದಿಂದಾಗಿ ವೇದದ ಅಧ್ಯಯನವನ್ನು ಬೇಗ ಮುಗಿಸಿದೆ. ಅಂತಹ ಉಪಾಧ್ಯಾಯರನ್ನು ಪಡೆಯುವುದು ಅದೃಷ್ಟವೇ ಸರಿ. ಅಲ್ಲಿಯೇ ಇನ್ನೊಬ್ಬರು ಆಸ್ಥಾನ ವಿದ್ವಾನ್ ಮಧ್ವಾರಾಯಾಚಾರ್ಯರು ನನಗೆ ಗುರುವರ್ಯರಾಗಿದ್ದರು. ಅವರು ಯಜುರ್ವೇದವನ್ನು ಕಲಿಸುತ್ತಿದ್ದರು. ಅವರದು ಮಹಾ ಕಾಲನಿಷ್ಠೆ. ಅದನ್ನು ಅವರಿಂದ ಕಲಿತೆ. ಅಂತಹ ಗುರುವರ್ಯರ ಅನುಗ್ರಹದಿಂದಲೇ ನಾನು ಮುಂದೆಬಂದೆ.

ಆ ಸಮಯದಲ್ಲಿ ಚಿದಂಬರ ಘನಪಾಠಿಗಳು ಶುಕ್ಲಯಜುರ್ವೇದಕ್ಕೂ, ಕೇಶವ ಶಿವ ಘನಪಾಠಿಗಳು ಋಗ್ವೇದಕ್ಕೂ, ರಾಮಚಂದ್ರಶ್ರೌತಿಗಳು ಸಾಮವೇದಕ್ಕೂ ಅಧ್ಯಾಪಕರಾಗಿದ್ದರು. ಯಜುರ್ವೇದ ಪ್ರಯೋಗವನ್ನು ಕೊಳತ್ತೂರು ವಿಶ್ವೇಶ್ವರಶಾಸ್ತ್ರಿಗಳೂ, ಋಗ್ವೇದ ಪ್ರಯೋಗವನ್ನು ದಾಸಂಭಟ್ಟರೂ ಹೇಳಿಕೊಡುತ್ತಿದ್ದರು. ಅವರ ಅನಂತರ ಲಕ್ಷ್ಮೀನರಸಿಂಹಶಾಸ್ತ್ರಿಗಳೂ ದಾಳಿಭೀಮಭಟ್ಟರೂ ಅದನ್ನು ಮುಂದುವರಿಸಿದರು.

ಸಂಸ್ಕೃತ ವಿದ್ಯಾಭ್ಯಾಸ

ಪಾಠಶಾಲೆಯಲ್ಲಿರುವಾಗ ವೇದದ ಜೊತೆಗೆ ಸಂಸ್ಕೃತವನ್ನೂ ಅಭ್ಯಾಸ ಮಾಡಿದೆನು. ಕರಣಿಕರ ಪಾಠಶಾಲೆಯಲ್ಲಿದ್ದಾಗ ವಿದ್ವಾನ್ ಶಾಮಶಾಸ್ತ್ರಿಗಳೂ, ವೇದಪಾಠಶಾಲೆಯಲ್ಲಿದ್ದಾಗ ರಾಮಕೃಷ್ಣಾಚಾರ್ಯರೂ ಸಂಸ್ಕೃತವನ್ನು ಕಲಿಸಿದರು. ಪರೀಕ್ಷೆಗೆ ಗೊತ್ತುಪಡಿಸಿದ್ದ ಪಾಠಗಳ ಜೊತೆಗೆ ಸ್ತೋತ್ರ, ಶ್ಲೋಕಗಳು, ಚಾಟುಶ್ಲೋಕಗಳು ಮೊದಲಾದುವನ್ನೂ ಅವರು ಹೇಳಿಕೊಡುತ್ತಿದ್ದರು. ಇಬ್ಬರೂ ಹಾಸ್ಯಪ್ರಿಯರೂ ಶಿಷ್ಯವತ್ಸಲರೂ ಆಗಿದ್ದರು. ಇವರಲ್ಲದೆ ವಿದ್ವಾನ್ ಚಂದ್ರಶೇಖರಭಟ್ಟರು, ಕೃಷ್ಣ ಜೋಯಿಸರು (ವ್ಯಾಕರಣ), ವಿದ್ವಾನ್ ಲಕ್ಷ್ಮೀನರಸಿಂಹಶಾಸ್ತ್ರಿಗಳು (ತರ್ಕ), ವೇದಮೂರ್ತಿ ಸಾಲಗಾಮೆ ಕೇಶವಶಾಸ್ತ್ರಿಗಳು (ವ್ಯಾಕರಣ), ನನಗೆ ಅಲ್ಲಿ ಗುರುಗಳಾಗಿದ್ದರು. ಇವರೆಲ್ಲರ ಆಶೀರ್ವಾದದಿಂದ ಸಾಹಿತ್ಯಪರೀಕ್ಷೆಯನ್ನು ಮಾಡಿಕೊಂಡೆನು.

ಚಾಮರಾಜಪೇಟೆಯ ಪಾಠಶಾಲೆಯಲ್ಲಿ ಪ್ರಾಚಾರ್ಯರಾಗಿದ್ದವರು ಮಲ್ಲಿಕಾರ್ಜುನಶಾಸ್ತ್ರಿಗಳು. ವಿದ್ವತ್ತಿಗೂ ಆಡಳಿತ ಸಾಮರ್ಥ್ಯಕ್ಕೂ ಹೆಸರಾಗಿದ್ದವರು ಅವರು. ಅವರ ಮತ್ತು ಇತರ ಅಧ್ಯಾಪಕರ ಪಾಠಪ್ರವಚನಗಳಿಂದ ನನ್ನ ಪ್ರಗತಿಯಾಯಿತು. ೧೯೩೯ರಲ್ಲಿ ಕ್ರಮಾಂತ ಮತ್ತು ೧೯೪೨ರಲ್ಲಿ ಸಲಕ್ಷಣ ಘನಾಂತ ಪರೀಕ್ಷೆಗಳನ್ನು ಪ್ರಥಮದರ್ಜೆಯಲ್ಲಿ ಮಾಡಿಕೊಂಡೆನು. ಪ್ರಯೋಗದಲ್ಲೂ ವಿದ್ವತ್ ಪರೀಕ್ಷೆ ಮಾಡಿಕೊಂಡೆನು.

ಇಷ್ಟು ಹೊತ್ತಿಗೆ ನನ್ನ ವಿವಾಹವಾಗಿದ್ದಿತು. ನಮ್ಮ ಹಳ್ಳಿಗೆ ಹೋಗಲು ನಿಶ್ಚಯಿಸಿ ಊರಿಗೆ ಹೋದೆನು. ಅಲ್ಲಿ ತೋಟದಲ್ಲಿ ದುಡಿಯುತ್ತಾ, ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಾ ಜೀವನ ಸಾಗಿಸ ತೊಡಗಿದೆನು. ಹೀಗೆ ಎಂಟು ತಿಂಗಳು ಕಳೆದಿತ್ತು, ಅಷ್ಟರಲ್ಲಿ ನನ್ನ ಜೀವನದಲ್ಲಿ ಮತ್ತೊಂದು ಅಧ್ಯಾಯವು ಮೊದಲಾಯಿತು.

ಮೀಮಾಂಸಾಶಾಸ್ತ್ರದ ಅಭ್ಯಾಸ

ಆ ಸಮಯದಲ್ಲಿ ಬೆಂಗಳೂರಿನ ಶಂಕರಮಠದಲ್ಲಿ ಹೊಸ ಪರ್ಯಾಯವು ಪ್ರಾರಂಭವಾಗಲಿತ್ತು. ಅದನ್ನು ತಿಳಿಸಿದ ನಮ್ಮ

ಭಾವನವರು ಇನ್ನೂ ಹೆಚ್ಚಿನ ವಿದ್ಯಾಭ್ಯಾಸ ಮಾಡುವಂತೆ ಪ್ರೋತ್ಸಾಹಿಸಿದರು. ತಂದೆಯವರೂ ಅನುಮತಿ ಇತ್ತರು. ಮತ್ತೆ ಬೆಂಗಳೂರಿಗೆ ಹೋದೆನು. ತರಗತಿಗಳಿಗೆ ಸೇರಿದೆನು. ನಾನು ಪೂರ್ವಮೀಮಾಂಸಾಶಾಸ್ತ್ರದ ವಿದ್ಯಾರ್ಥಿಯಾಗಿ ಸೇರಿದ್ದು ೧೯೪೪ರಲ್ಲಿ. ನನ್ನ ಸಹಪಾಠಿಗಳಾಗಿ ವಾಸುದೇವಶಾಸ್ತ್ರಿಗಳೂ ಲಕ್ಷ್ಮೀನರಸಿಂಹಶಾಸ್ತ್ರಿಗಳೂ ಇದ್ದರು. ವೇದಾಂತ ವಿದ್ಯಾರ್ಥಿಗಳಾಗಿ ಆರಗ ಶಾಮಭಟ್ಟರು, ಲಿಂಗದಹಳ್ಳಿ ನರಸಿಂಹಮೂರ್ತಿಗಳು ಮತ್ತು ಕೃಷ್ಣಮೂರ್ತಿಗಳು ಇದ್ದರು. ನಮಗೆ ವಾಸಕ್ಕೆ ಮನೆಯನ್ನು ಕೊಟ್ಟಿದ್ದರು. ಜತೆಗೆ ವಿದ್ಯಾರ್ಥಿವೇತನವಾಗಿ ಇಪ್ಪತ್ತೊಂಬತ್ತು ರೂ.ಗಳನ್ನು ಕೊಡುತ್ತಿದ್ದರು. ವೇದಮೂರ್ತಿ ತೀರ್ಥಹಳ್ಳಿ ಸುಬ್ಬಾಶಾಸ್ತ್ರಿಗಳೂ, ಶ್ರೀರಾಮಭಟ್ಟರೂ ಮೀಮಾಂಸಾ ಪ್ರಾಧ್ಯಾಪಕರಾಗಿದ್ದರು. ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳೂ, ಅನಂತರ ರಾಮಚಂದ್ರಶಾಸ್ತ್ರಿಗಳೂ ವೇದಾಂತವನ್ನು ಹೇಳಿಕೊಟ್ಟರು. ೧೯೪೭ರಲ್ಲಿ ಪೂರ್ವ ಮೀಮಾಂಸಾ ವಿದ್ವತ್ಪೂರ್ವಭಾಗದಲ್ಲಿ ತೇರ್ಗಡೆಯಾದೆನು. ಐವತ್ತನೆಯ ಇಸವಿಯಲ್ಲಿ ಮೀಮಾಂಸಾ ವಿದ್ವದುತ್ತಮ ಪರೀಕ್ಷೆಯೊಡನೆ ನನ್ನ ಸಂಸ್ಕೃತ ವಿದ್ಯಾಭ್ಯಾಸವೂ ಮುಗಿಯಿತು. ಇದೇ ಕಾಲದಲ್ಲಿಯೇ ಸ್ಮಾರ್ತ ವಿದ್ವತ್ಪರೀಕ್ಷೆಯನ್ನೂ ಕನ್ನಡ ಪಂಡಿತ ಪರೀಕ್ಷೆ (೧೯೫೧)ಯನ್ನೂ ಮುಗಿಸಿದೆನು. ಮಠದ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 'ಪಂಡಿತಪ್ರವರ'ನಾದೆನು.

ಗುರುವರ್ಯರಾದ ತೀರ್ಥಹಳ್ಳಿ ಸುಬ್ಬಾಶಾಸ್ತ್ರಿಗಳು ಮೀಮಾಂಸಾಶಾಸ್ತ್ರದಲ್ಲಿ ಅದ್ವಿತೀಯರು. ಅವರಂತೆ ಪ್ರತಿಯೊಂದು ವಿಷಯದಲ್ಲಿಯೂ ಶಿಸ್ತಿನ ಜೀವನವನ್ನು ನಡೆಸುವವರನ್ನು ನಾನು ನೋಡಿಲ್ಲ. ಅವರು ಮೊದಲು ಪುಣೆಯಲ್ಲಿಯೂ ಅಧ್ಯಾಪಕರಾಗಿದ್ದರು.

ನಮ್ಮವರ ಕೆಲವು ವಿಷಯಗಳು

ನಮ್ಮವರಿಗೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಪ್ರಕೃತವಾಗಲಾರದು: ನಮ್ಮವರು ದೈವಭಕ್ತರು. ಸಾಮಾನ್ಯವಾಗಿ ರಾಮಮಂದಿರಗಳಲ್ಲಿ ಅಥವ ದೇವಸ್ಥಾನಗಳಲ್ಲಿ ಶನಿವಾರ ಭಜನೆಯನ್ನು ನಡೆಸುತ್ತಾರೆ. ನನಗೆ ತಿಳಿದಂತೆ ನಮ್ಮ ಊರು ಪೂಮಗಾಮೆಯಲ್ಲಿ ಎಪ್ಪತ್ತು ವರ್ಷಗಳಿಂದಲೂ ಭಜನೆ ನಡೆಯುತ್ತಿದೆ. ನಾವು ಮೂವರು ಸೋದರರೂ ಊರನ್ನು ಬಿಟ್ಟಮೇಲೆ ನಮ್ಮ ಮನೆಯೇ ರಾಮಮಂದಿರವಾಗಿದೆ. ಅಲ್ಲಿ ರಾಮನವಮಿ ಉತ್ಸವವು ಪ್ರತಿವರ್ಷವೂ ನಡೆಯುತ್ತಿದೆ, ಅದರ ಅಂಗವಾಗಿ ರಾಮ ಪಟ್ಟಾಭಿಷೇಕವೂ ನಡೆಯುತ್ತಿದೆ. ನಮ್ಮವರ ಹಳ್ಳಿಗಳಲ್ಲಿ ಇದು ಸಾಮಾನ್ಯವಾಗಿದೆ.

ನಮ್ಮವರು ಕಲಾಪ್ರೇಮಿಗಳು. ನಮ್ಮದು ಜೋಡಿಗ್ರಾಮವಾಗಿದ್ದಾಗ ಬಯಲುನಾಟಕ, ಕೋಲಾಟ ಮೊದಲಾದವುಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ನಮ್ಮ ಊರಿನ ಪಕ್ಕದಲ್ಲಿರುವ ಕೃಷ್ಣಾಪುರದಲ್ಲಿ ನಮ್ಮವರೇ 'ಕುರುಕ್ಷೇತ್ರ'ವನ್ನು ಅಭಿನಯಿಸಿದುದನ್ನು ನನ್ನ ಬಾಲ್ಯದಲ್ಲಿ ನೋಡಿದ್ದೆನು. ಇತ್ತೀಚೆಗೆ ಕುಪ್ಪಹಳ್ಳಿಯ ಬಂಧುಗಳೇ ಮೊದಲಾದವರು ನಾಟಕಗಳನ್ನು ಯಶಸ್ವಿಯಾಗಿ ಅಭಿನಯಿಸಿದ್ದನ್ನು ಕೇಳಿದ್ದೇನೆ.

ಗಮಕಕಲೆಯಲ್ಲಿ ನಮ್ಮವರು ಇಂದಿಗೂ ಪ್ರಸಿದ್ಧರು. ಕುಪ್ಪಹಳ್ಳಿಯ ಮಾನ್ಯ ವೆಂಕಟೇಶಯ್ಯನವರನ್ನು ಈ ಸಮಯದಲ್ಲಿ ಸ್ಮರಿಸಬೇಕು. ಮತ್ತೂರು-ಹೊಸಹಳ್ಳಿಗಳ ಗಮಕಿಗಳು ಈಗ ಪ್ರಸಿದ್ಧರಾಗಿದ್ದಾರೆ. ಔತಣ ಸಮಾರಂಭಗಳಲ್ಲಿ ದೇವಸ್ತೋತ್ರಗಳನ್ನು ಸ್ಪರ್ಧೆಯಿಂದ ಹೇಳುವುದು ಬ್ರಾಹ್ಮಣ ಸಮಾಜದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಬಳಕೆಯಲ್ಲಿದೆ.

ಹಲವು ಸಂಗೀತ ವಿದ್ವಾಂಸರು ಆಗಲೂ ಕೀರ್ತಿ ಶಾಲಿಗಳಾಗಿದ್ದರು, ಈಗಲೂ ಇದ್ದಾರೆ. ಇದು ಇನ್ನೊಂದು ವಿಶೇಷ. ವಿದ್ವಾನ್ ಕೊಳಲುಪುಟ್ಟಣ್ಣನವರು, ಆರ್.ಎಸ್. ಕೇಶವಮೂರ್ತಿ, ಆರ್.ಆರ್. ಕೇಶವಮೂರ್ತಿ ಇವರೆಲ್ಲ ಆಗಲೇ ದಂತಕಥೆಗಳಂತೆ ಪ್ರಸಿದ್ಧರಾಗಿದ್ದರು.

ಪ್ರಸಿದ್ಧ ವೇದವಿದ್ವಾಂಸರೂ ನಮ್ಮಲ್ಲಿ ಯಾವಾಗಲೂ ಇದ್ದರು. ಮೈಸೂರು ಪಾಠಶಾಲೆಯಲ್ಲಿ ಯಜುರ್ವೇದ ಪ್ರಾಧ್ಯಾಪಕರಾಗಿದ್ದ ತಿಪ್ಪಯ್ಯಾವಧಾನಿಗಳು 'ವೈದಿಕ ಸಾರ್ವಭೌಮ' ಎಂದೇ ಕೀರ್ತಿತರಾಗಿದ್ದರು. ನನಗೂ ಅವರು ಪರೀಕ್ಷಕರಾಗಿದ್ದರು, ಘನವಿದ್ವಾಂಸರು. ಆ ಕಾಲದಲ್ಲಿ ನಮ್ಮಲ್ಲಿ ನಡೆದ ದೊಡ್ಡ ವಿವಾದವೆಂದರೆ ತ್ರಿಪಿಂಡ-ಷಟ್ಪಿಂಡಗಳಲ್ಲಿ ಯಾವುದು ಶಾಸ್ತ್ರೀಯ ಎಂಬ ವಿಷಯವನ್ನು ಕುರಿತದ್ದು. ತಿಪ್ಪಯ್ಯಾವಧಾನಿಗಳು ಷಟ್ಪಿಂಡ ಪಕ್ಷದವರು, ರಾಮನಾಥಪುರ ದೀಕ್ಷಿತರು ತ್ರಿಪಿಂಡ ಪಕ್ಷದವರು. ನಮ್ಮವರಲ್ಲಿ ಹಲವರು ತ್ರಿಪಿಂಡ ಪದ್ಧತಿಯನ್ನೇ ಅನುಸರಿಸುತ್ತಿದ್ದುದರಿಂದ ಅದೇ ಸರಿ ಎಂದು ದೀಕ್ಷಿತರು ವಾದಿಸಿದ್ದರು. ಆ ವಿವಾದವು ಬಿರುಸಾಗಿಯೇ ನಡೆಯಿತು. ಆದರೆ ಯಾವ ತೀರ್ಮಾನವೂ ಆಗಲಿಲ್ಲ. ಸೋಮನಾಥ ಘನಪಾಠಿಗಳೆಂದು ಪ್ರಸಿದ್ಧರಾದ ವಿದ್ವಾನ್ ಕೇಶವಮೂರ್ತಿಗಳು ಹಳ್ಳಿಮೈಸೂರಿನವರು. ಅವರು ಹಲವು ಪಾಠಶಾಲೆಗಳಲ್ಲಿ ಅಧ್ಯಾಪಕರಾಗಿದ್ದರು, ಹಲವು ಮಠಗಳಲ್ಲಿ ಸನ್ಮಾನಿತರಾದರು. ಶಿವಮೊಗ್ಗೆಯಲ್ಲಿ ನೆಲೆಸಿದ್ದ ಅವರು ಸಹೃದಯರೂ ಹೌದು. ಯಾವ ಯಜ್ಞಕರ್ಮವೂ ಅವರ ನೇತೃತ್ವದಲ್ಲಿಯೇ ನಡೆಯಬೇಕೆನ್ನುವಷ್ಟು ಪ್ರಸಿದ್ಧರು, ನೈಪುಣ್ಯ ಹೊಂದಿದ್ದವರು. ಸುಂದರೇಶಘನಪಾಠಿಗಳು (ವೆಂಕಟಸುಬ್ಬ

ಅವಧಾನಿಗಳು) ಅವರ ಸೋದರರು ; ಮೈಸೂರು ಪಾಠಶಾಲೆಯಲ್ಲಿ ಯಜುರ್ವೇದ ಪ್ರಾಧ್ಯಾಪಕರಾಗಿದ್ದರು. ಅಲ್ಲಿಯೇ ಇದ್ದ ಇನ್ನೊಬ್ಬ ಪ್ರಾಧ್ಯಾಪಕರು ಚಾ. ಕೇಶವಶಾಸ್ತ್ರಿಗಳು (ಸಾಹಿತ್ಯ ಅಲಂಕಾರ) ಶಾಸ್ತ್ರದ ವಿದ್ವಾಂಸರಾಗಿದ್ದರು.

ನಮ್ಮವರು ಅಭಿಮಾನಿಗಳು. ಕೆಲವು ವೇಳೆ ಅಭಿಮಾನವು ದುರಭಿಮಾನಕ್ಕೆ ತಿರುಗುತ್ತಿದ್ದುದೂ ಉಂಟು.

ಪ್ರಭಾವ ಬೀರಿದ ಗ್ರಾಮಗಳು

ಹಂದನಹಾಲು ಗ್ರಾಮವು ಬೇಲೂರು ತಾಲೂಕಿನಲ್ಲಿದೆ. ಅಲ್ಲಿ ಶ್ರೀನಿವಾಸಶಾಸ್ತ್ರಿಗಳೆಂಬ ವಿದ್ವಾಂಸರಿದ್ದರು. ಅವರು ಬ್ರಾಹ್ಮಣ ಸಮಾಜದಲ್ಲಿಯೇ ಪ್ರಸಿದ್ಧರಾದ ವೈದಿಕರಾಗಿದ್ದರು. ಅವರು ಅನೇಕ ಶಿಷ್ಯರನ್ನು ತಯಾರು ಮಾಡಿದ್ದರು ; ಅವರಲ್ಲಿ ಹಲವರು ವಿಶಿಷ್ಟಾದ್ವೈತಿಗಳೂ ಇದ್ದರು. ಶ್ರೀನಿವಾಸಶಾಸ್ತ್ರಿಗಳು ನನ್ನ ಸೋದರಮಾವನವರೇ ಆದುದರಿಂದ ಅವರ ಪ್ರಭಾವ ನನ್ನ ಮೇಲೆ ಹೆಚ್ಚಾಗಿಯೇ ಆಯಿತು. ಶ್ರೀನಿವಾಸಶಾಸ್ತ್ರಿಗಳು ನನ್ನ ಸೋದರಮಾವನವರೆಂದು ಹೇಳಿದೆ. ಅವರಿಗೆ ನನ್ನ ಮೇಲೆ ಪ್ರೀತಿಯೂ ಇತ್ತು. ಒಂದು ಪ್ರಸಂಗವನ್ನು ದಾಖಲೆಗಾಗಿ ಹೇಳಬೇಕು. ನಾನು ಚಾಮರಾಜಪೇಟೆಯ ವೇದಪಾಠಶಾಲೆಯಲ್ಲಿ ಕಲಿಯುತ್ತಿದ್ದೆನಲ್ಲ? ಅಲ್ಲಿನ ಪ್ರಾಚಾರ್ಯರಾದ ಮಲ್ಲಿಕಾರ್ಜುನಶಾಸ್ತ್ರಿಗಳ ಮೆಚ್ಚಿನ ಶಿಷ್ಯನಾಗಿದ್ದೆ. ಅವರು ಶುದ್ಧ ಪಾರ್ಟಿಯವರಾಗಿದ್ದರು. ನನ್ನ ಸೋದರಮಾವನವರು ಪ್ರಾಯಶ್ಚಿತ್ತ ಪಾರ್ಟಿಯವರು. ಇದು ಮಲ್ಲಿಕಾರ್ಜುನ ಶಾಸ್ತ್ರಿಗಳಿಗೆ ತಿಳಿದಿತ್ತು. ಒಂದು ದಿನ ಅವರ ಮನೆಯ ಗಣಪತಿ ಮಂಗಳಾರತಿಗೆ ಇತರ ವಿದ್ಯಾರ್ಥಿಗಳೊಂದಿಗೆ ಹೋಗಿದ್ದೆ. ಆದರೆ ನನ್ನನ್ನು ಪ್ರಾಯಶ್ಚಿತ್ತ ಪಾರ್ಟಿ ಎಂಬ ಕಾರಣಕ್ಕೆ ಹೊರಗೆ ಕಳಿಸಿದರು. ಹೀಗಿದ್ದರೂ ಮುಂದೆ ತಮ್ಮ ಪಾಠಶಾಲೆಯಲ್ಲಿ ಅಧ್ಯಾಪಕನಾಗೆಂದು ಮನೆಗೇ ಬಂದು ಆಹ್ವಾನವಿತ್ತರು. 'ಸಂಪರ್ಕ' 'ಸಂಪರ್ಕಾತ್ ಸಂಪರ್ಕ' ಹೀಗೆ ನಿಷೇಧಗಳಿರುತ್ತಿದ್ದ ಕಾಲ ಅದು. ತಮ್ಮ ನೆಚ್ಚಿನ ಶಿಷ್ಯನಾದರೂ 'ಸಂಪರ್ಕ'ದ ಕಾರಣದಿಂದ ನಾನು ಪ್ರಾಯಶ್ಚಿತ್ತ ಪಾರ್ಟಿಯವನಾದ್ದರಿಂದ ಮಲ್ಲಿಕಾರ್ಜುನಶಾಸ್ತ್ರಿಗಳು ನನ್ನನ್ನು ಮನೆಗೆ ಸೇರಿಸಲಿಲ್ಲ. ಆದರೆ ಅಧ್ಯಾಪಕನಾಗೆಂದು ಆಹ್ವಾನಿಸುವಷ್ಟು ಪ್ರೀತಿ ಇಟ್ಟುಕೊಂಡಿದ್ದರು. ನಮ್ಮವರಲ್ಲಿ ಪ್ರಸಿದ್ಧ ನೇತ್ರತಜ್ಞರಾದ ಡಾ|| ಕೃಷ್ಣಮೂರ್ತಿಯವರು ಅದೇ ಊರಿನವರು.

ಹಂದನಹಾಲು ಗ್ರಾಮಕ್ಕೆ ಮೂರು-ನಾಲ್ಕು ಮೈಲಿ ದೂರದಲ್ಲಿ ಯಗಚಿನದಿ ಹರಿಯುತ್ತದೆ. ಹಿಂದೆ ಈ ಗ್ರಾಮದಲ್ಲಿ ೨೦-೨೫ ಸಂಕೇತಿ ಮನೆಗಳಿದ್ದುವು ; ಈಗ ೧೦-೧೫ ಇವೆ. ಹಿಂದಿನಂತೆ ವಿದ್ವಾಂಸರೂ ಇಗ ಇಲ್ಲ. ಒಮ್ಮೆ ಈ ಊರಿಗೆ ಹೋಗಿದ್ದಾಗ 'ಪೌಂಡ್ರಕ ವಿಜಯ' (ದ್ರೌಪದಿಯು ಪೌಂಡ್ರಕನೆಂಬ ರಾಜನನ್ನು ಜಯಿಸಿದುದು) ಎಂಬ ಬಯಲು ನಾಟಕವನ್ನು ನೋಡಿದ್ದೆನು. ಅದರ ಮೂಲವು ಎಲ್ಲಿದೆಯೋ ತಿಳಿಯದು. ಊರಿನ ನಡುವೆ ಒಂದು ವೈಷ್ಣವ ದೇವಾಲಯವಿದೆ, ಪೂಜಾದಿಗಳು ವೈಷ್ಣವ ಸಂಪ್ರದಾಯದಂತೆ ನಡೆಯುತ್ತವೆ.

ಪಾಳ್ಯ ಗ್ರಾಮವು ಹಾಸನ-ಸಕಲೇಶಪುರಗಳ ನಡುವೆ ಇದೆ. ಊರಿನ ಸಮೀಪದಲ್ಲಿ ಚಕ್ರತೀರ್ಥ ಎಂಬ ಹೊಳೆ ಇದೆ. ಅಲ್ಲಿ ಲಕ್ಷ್ಮೀಜನಾರ್ದನ ಸ್ವಾಮಿಯ ವಿಶಾಲವಾದ ದೇವಾಲಯವೂ ಇದೆ. ಬ್ರಾಹ್ಮಣರ ವಾಸಕ್ಕೆ ತಕ್ಕ ಸ್ಥಾನ. ಹಲವು ಪಂಗಡಗಳ ಬ್ರಾಹ್ಮಣರು ಅಲ್ಲಿ ವಾಸಿಸುತ್ತಿದ್ದರು. ನಮ್ಮ ಭಾವನವರಾದ ವೆಂಕಟಕೃಷ್ಣಾವಧಾನಿಗಳು ಅಲ್ಲಿಯವರು.

ಹಾಸನಕ್ಕೆ ನಾಲ್ಕು ಮೈಲಿ ದೂರದಲ್ಲಿ ಕೌಶಿಕ ಎಂಬ ಗ್ರಾಮವಿದೆ. ಇಲ್ಲಿ ಶ್ರೀ ಲಕ್ಷ್ಮೀಕೇಶವನ ದೇವಾಲಯವಿದೆ. ಈ ಊರಿನ ಹೆಸರಿನಿಂದಲೇ ನಮ್ಮ ಪಂಗಡಕ್ಕೆ 'ಕೌಶಿಕ ಸಂಕೇತಿ'ಗಳೆಂದು ಹೆಸರು ಬಂದಿದೆ. ನಮ್ಮ ದೊಡ್ಡ ಅಕ್ಕನನ್ನು ಈ ಊರಿಗೆ ಕೊಟ್ಟಿತ್ತು ; ಕೇಶವ ಉಪಾಧ್ಯಾಯರೇ ನಮ್ಮ ಭಾವನವರು. 'ಭಾರತ ದರ್ಶನ'ದ ಸಂಪಾದಕರಾದ ಕೇಶವ ಸುಬ್ರಹ್ಮಣ್ಯ ಕೌಶಿಕ ನನ್ನ ಸೋದರಳಿಯ. ಇತ್ತೀಚಿಗೆ ನಮ್ಮ ಸಮಾಜದ ಗಣ್ಯರ ಪ್ರಯತ್ನದ ಫಲವಾಗಿ ಇಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ನಡೆದಿವೆ.

ಕೂದವಳ್ಳಿಯು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಬ್ರಾಹ್ಮಣರ ಹಲವು ಪಂಗಡಗಳ ಜನರು ಇಲ್ಲಿ ವಾಸಿಸುತ್ತಾರೆ. ಕಾಫಿ ಪ್ಲಾಂಟರುಗಳ ಊರು. ನಮ್ಮ ಭಾವನವರಾದ ವೆಂಕಟಕೃಷ್ಣಾವಧಾನಿಗಳು ಇಲ್ಲೊಂದು ಗುರುಕುಲವನ್ನು ನಡೆಸುತ್ತಿದ್ದರು. ನಾನೂ ಅಲ್ಲಿ ವಿದ್ಯಾಭ್ಯಾಸ ಮಾಡಿದೆ. ಐಚನಹಳ್ಳಿಯು ಹೊಳೆನರಸೀಪುರದ ಸಮೀಪದಲ್ಲಿರುವ ಪುಟ್ಟ ಗ್ರಾಮ. ನಮ್ಮ ಮಾವನವರಾದ ಚನ್ನಪ್ಪಯ್ಯನವರು ಈ ಊರಿನವರು. ಈ ಗ್ರಾಮಗಳೆಲ್ಲ ನನ್ನ ಮೇಲೆ ಗಾಢವಾಗಿ ಪ್ರಭಾವ ಬೀರಿವೆ.

ಕನ್ನಡ ಪಂಡಿತನಾಗಿ ನೇಮಕ

ನನಗೆ ವೇದೋಪಾಧ್ಯಾಯನಾಗಬೇಕೆಂಬ ಆಸೆಯಿತ್ತು, ಆಗಲಿಲ್ಲ. ಸಂಸ್ಕೃತದ ಅಧ್ಯಾಪಕನಾಗಬೇಕೆಂದು ಬಯಸಿದೆ, ಅದೂ ಆಗಲಿಲ್ಲ. ಕನ್ನಡ ಪಂಡಿತನಾಗುವ ಯೋಗವಿತ್ತು, ಆದೆ.

ಬೆಂಗಳೂರಿನಲ್ಲಿ ಆಗ 'ಬೆಂಗಳೂರು ಹೈಸ್ಕೂಲು' ಪ್ರಸಿದ್ಧವಾಗಿತ್ತು. ಅಷ್ಟೇ ಖ್ಯಾತವಾಗಿದ್ದುದು ನ್ಯಾಷನಲ್ ಹೈಸ್ಕೂಲು. ಅವೆರಡಕ್ಕೂ ಸ್ಪರ್ಧೆಯಿತ್ತು. ಎರಡಕ್ಕೂ ಆಗಾಗ ರ್‍ಯಾಂಕುಗಳು ಲಭಿಸುತ್ತಿದ್ದವು. ಉಪಾಧ್ಯಾಯರೂ ಸಮರ್ಥರಾಗಿದ್ದರು.

ಉಪಾಧ್ಯಾಯರ ಆಯ್ಕೆಯ ವಿಧಾನವೇ ಒಳ್ಳೆಯದಾಗಿತ್ತು. ಮೊದಲು ಅಭ್ಯರ್ಥಿಗಳಿಂದ ಪಾಠ ಮಾಡಿಸುತ್ತಿದ್ದರು. ಅದು ಸಮರ್ಪಕವಾಗಿದ್ದರೆ ಮಾತ್ರ ಆರಿಸಿಕೊಳ್ಳುತ್ತಿದ್ದರು.

ಇದೇ ಸಮಯದಲ್ಲಿ ಬೆಂಗಳೂರು ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ಶ್ರೀಕಂಠಶಾಸ್ತ್ರಿಗಳು ನಿವೃತ್ತರಾದರು. ಓರಿಯಂಟಲ್ ಹೈಸ್ಕೂಲಿನಲ್ಲಿ ಅದಾಗಲೇ ಒಂದು ವರ್ಷ ಪಾಠ ಮಾಡಿದ ಅನುಭವ ನನಗಿತ್ತು. ಸಂದರ್ಶನಕ್ಕೆ ಹಾಜರಾದೆ. ಆಗ ಎಸ್.ಎಸ್.ಎಲ್.ಸಿ.ಗೆ ಹಳಗನ್ನಡದ ಕಾವ್ಯಭಾಗಗಳೂ ಪಠ್ಯವಾಗಿರುತ್ತಿದ್ದವು. ಕವಿ ಬಿ.ಸಿ. ರಾಮಚಂದ್ರಶರ್ಮರೂ ಕನ್ನಡ ಪಂಡಿತ ವರದಾಚಾರ್ಯರೂ ಪಾಠ ವಿಮರ್ಶಕರಾಗಿದ್ದರು.

ಪಂಪಭಾರತವನ್ನು ಪಾಠ ಮಾಡುವಂತೆ ಹೇಳಿದರು. ರಾಜಸೂಯ ಯಾಗದಲ್ಲಿ , ಭೀಷ್ಮರ ಮಾತಿನಂತೆ ಧರ್ಮರಾಜನು ಶ್ರೀಕೃಷ್ಣನಿಗೆ ಅಗ್ರಪೂಜೆ ಮಾಡಲು ತೊಡಗುತ್ತಾನೆ. ಆದರೆ ಶಿಶುಪಾಲನು ದ್ವೇಷದಿಂದ ಕೃಷ್ಣನನ್ನು ನಿಂದಿಸುತ್ತಾನೆ. ಆ ಭಾಗವನ್ನು ನಾನು ವಿವರಿಸಬೇಕಿತ್ತು.

ಮುಳಿದು ಶಿಶುಪಾಲನಾ ಸಭೆ ।
ಯೊಳಗೆ ಮಹಾಪ್ರಳಯ ಜಳಧಿನಾದದಿನಿರದು ।
ಜ್ವಳಿಸಿ ನುಡಿದಂತೆ ಕಳೆ ಕಳೆ ।
ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ ।

ಎಂಬ ಪದ್ಯಕ್ಕೆ ವ್ಯಾಖ್ಯಾನ ಮಾಡಿದೆನು. 'ಮಂಗಕ್ಕೆ ಮಾಣಿಕ್ಯವನ್ನು ಕೊಡುವಂತೆ ಈ ಹರಿಗೆ ಅಗ್ರಪೂಜೆ ಎಂಬ ರತ್ನವನ್ನು ಕೊಡುವುದು ಬೇಡ' ಎಂದು ವಿವರಿಸಿದೆನು. ಇಲ್ಲಿ ಪ್ರಾಸಕ್ಕೆ ತಕ್ಕಂತೆ 'ಬಳಗೆತ್ತಿದ' ಎಂದು ವಿವರಿಸಬೇಕಾಗಿತ್ತು ಎಂದು ವರದಾಚಾರ್ಯರು ಅಭಿಪ್ರಾಯಪಟ್ಟರು. ಅಂತೂ ನನಗೆ ಉದ್ಯೋಗವು ಸಿಕ್ಕಿತು. ನಮ್ಮವರಿಗೆ ಪ್ರಿಯವಾದ ಉಪಾಧ್ಯಾಯ ಪದವಿಯನ್ನು ನಾನೂ ಅನುಸರಿಸಿದೆನು.

ಇತರ ಉಪಾಧ್ಯಾಯರೆಲ್ಲರೂ ಪದವೀಧರರಾಗಿರುತ್ತಿದ್ದರು. ಕನ್ನಡ, ಹಿಂದಿ ಮತ್ತು ಸಂಸ್ಕೃತ ಪಂಡಿತರು ಬಿ.ಎ., ಇತ್ಯಾದಿ ಪದವಿಗಳಂಥವನ್ನು ಪಡೆದಿರುತ್ತಿರಲಿಲ್ಲ. ಅಲ್ಲದೆ ಈ ಪಂಡಿತರು ವೇಷಭೂಷಣಗಳಲ್ಲಿ ಹಳೆಯ ಕಾಲದವರಾಗಿಯೇ ಇರುತ್ತಿದ್ದರು. ಹೀಗಾಗಿ ಪದವೀಧರರಾದ ಉಪಾಧ್ಯಾಯರಿಗೆ ತಾವು ಮೇಲು ಎಂಬ ಧೋರಣೆ ಇರುತ್ತಿತ್ತು. ಇದರಿಂದ ವಾದವಿವಾದಗಳೂ ನಡೆಯುತ್ತಿದ್ದವು. ಇವರ ಮೇಲಿನ ಸ್ಪರ್ಧೆಯಿಂದಾಗಿ ಅಧ್ಯಾಪನದ ಜತೆ ಜತೆಗೇ ವಿದ್ಯಾಭ್ಯಾಸವನ್ನೂ ಮುಂದವರಿಸಿದೆ. ಮದ್ರಾಸ್ ಮೆಟ್ರಿಕ್ ಪರೀಕ್ಷೆಯನ್ನು ಖಾಸಗಿಯಾಗಿ ಮಾಡಿಕೊಂಡೆ.

ಆಗ ನನ್ನ ತಮ್ಮ ನರಸಿಂಹಮೂರ್ತಿಯು ಮದರಾಸ್ ಕಾರ್ಪೋರೇಷನ್ನಿನಲ್ಲಿ ನೌಕರಿ ಮಾಡುತ್ತಿದ್ದನು. ಅದು ನನಗೆ ಸಹಾಯಕವಾಯಿತು. ಅನಂತರ ಪಿಯುಸಿಯನ್ನೂ ಬಿ.ಎ., ಎಂ.ಎ. ಗಳನ್ನು ಓದಿದೆ. ಇದರಿಂದ ನನಗೆ ಬೇರೆ ವಿಧವಾದ ಯಾವ ಪ್ರಯೋಜನವೂ ಆಗಲಿಲ್ಲ. ಆದರೆ, ಪಂಡಿತರು ಕಡಿಮೆ ಇಲ್ಲವೆಂದು ಇತರರು ನಂಬುವಂತೆ ಆಯಿತು. ಇದು ನನ್ನ ಮಧ್ಯಕಾಲದ ವಿದ್ಯಾಭ್ಯಾಸದ ವಿಚಾರ.

ಉಪಾಧ್ಯಾಯರಲ್ಲಿ ಸಾಮರಸ್ಯವಿತ್ತು. ಅವರಲ್ಲಿ ಅನೇಕರು ಅನಂತರ ಬೇರೆಬೇರೆಯ ಕಡೆಗೂ ಹೋಗಿ ಕೀರ್ತಿಯನ್ನು ಗಳಿಸಿದರು. ಅವರಲ್ಲಿ ಕವಿ ರಾಮಚಂದ್ರಶರ್ಮರೂ, ಗೋಪಾಲರಾಯ ಶರ್ಮರೂ, ಎಸ್.ಎಸ್. ಅಯ್ಯಂಗಾರ್ಯರೂ ಪ್ರಮುಖರು. ಉಪಾಧ್ಯಾಯರಿಗೆ ಅನುಕೂಲಕರವಾಗಿ ಟುಟೋರಿಯಲ್ ತರಗತಿಗಳೂ ನಡೆಯುತ್ತಿದ್ದವು, ಪಿಯುಸಿ ತರಗತಿಗಳೂ ಪ್ರಾರಂಭವಾದವು. ಅಧ್ಯಾಪಕರಿಗೆ ನಗರ ಮಂಡಳಿಯಿಂದ ನಿವೇಶನಗಳೂ ಮಂಜೂರಾದವು. ४೦' × ೫೦' ಅಳತೆಯ ನಿವೇಶನದ ಬೆಲೆ ೧೭೫೦ ರೂ. ಆಗಿತ್ತು. ಪೌರೋಹಿತ್ಯವು ತಿಳಿದಿದ್ದುದರಿಂದ ಗೃಹಸ್ಥರು ಬಿಡುವಿನ ದಿನಗಳಲ್ಲಿ ನನ್ನನ್ನು ಆಹ್ವಾನಿಸುತ್ತಿದ್ದರು. ಸಾಲ ಮಾಡಿ ಮನೆಯನ್ನೂ ಕಟ್ಟಿಸಿದೆ. ೧೯೬೭ರ ಶ್ರೀ ಶಂಕರ ಜಯಂತಿಯ ದಿನ ಗೃಹಪ್ರವೇಶವೂ ಆಯಿತು. ಇಂದಿಗೂ ಅಲ್ಲಿಯೇ ವಾಸವಾಗಿದ್ದೇನೆ.*

ನಾನು ವಿದ್ಯಾರ್ಥಿಗಳನ್ನು ಶಿಕ್ಷಿಸುತ್ತಿರಲಿಲ್ಲ. ಅದು ನನ್ನ ಸ್ವಭಾವಕ್ಕೆ ಹೊಂದುತ್ತಿರಲಿಲ್ಲ. ಕೆಲವು ತುಂಟ ವಿದ್ಯಾರ್ಥಿಗಳು ಅದರ ದುರುಪಯೋಗ ಮಾಡಿಕೊಳ್ಳುತ್ತಿದ್ದುದೂ ಉಂಟು. ಆದರೆ ಬಹು ವಿದ್ಯಾರ್ಥಿಗಳು ಸಭ್ಯರಾದರು, ಮೇಲೆ ಬಂದರು ; ಇಂದಿಗೂ ಅವರು ತೋರುವ ಪ್ರೀತಿ ಗೌರವಗಳು ಅತಿಶಯವಾದವು. ಉಪಾಧ್ಯಾಯನಾದವನಿಗೆ ಇದಕ್ಕಿಂತ ಸಂತೋಷಕರವಾದುದು ಬೇರೊಂದಿಲ್ಲ.

ವಿದ್ವಾನ್ ರಂಗಸ್ವಾಮಿಶಾಸ್ತ್ರಿಗಳು

ಹಾಸನದಲ್ಲಿ ನರಸಿಂಹಶಾಸ್ತ್ರೀ ಎಂಬ ವಿದ್ವಾಂಸರಿದ್ದರು. ಅವರು ಮೈಸೂರು ಅರಮನೆಯ ವಿದ್ವಾಂಸರೂ, ಮೈಸೂರಿನ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರೂ ಆಗಿ ಸೇವೆಸಲ್ಲಿಸಿದವರು. ಅವರ ಮಗ ವಿದ್ವಾನ್ ರಂಗಸ್ವಾಮಿಶಾಸ್ತ್ರಿಗಳು.

---

* ಮರಣ : ೨-೦೫-೨೦೦೬

ರಂಗಸ್ವಾಮಿಶಾಸ್ತ್ರಿಗಳು ಬಾಲ್ಯದಲ್ಲಿ ಕಷ್ಟಗಳನ್ನು ಅನುಭವಿಸಿದವರು, ನನ್ನ ಮಿತ್ರರು. ಅವರ ತಮ್ಮಂದಿರಾದ ನಂಜುಂಡಯ್ಯನವರು ಆಧುನಿಕ ವಿದ್ಯೆಯಲ್ಲಿ ಪ್ರಗತಿ ಸಾಧಿಸಿದರು. ಅವರು ಸಂಕೇತಿಗಳ ಪೈಕಿ ಅಮೆರಿಕೆಗೆ ಹೋದ ಮೊದಲ ತಲೆಮಾರಿನವರು. ಅವರು ಅಲ್ಲಿ ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದರು ; ಕಟ್ಟುನಿಟ್ಟಿನ ಜೀವನಕ್ಕೂ ಹೆಸರಾಗಿದ್ದರು. ಅವರ ತಂಗಿಯನ್ನು ನನ್ನ ಸೋದರಮಾವ ಶ್ರೀನಿವಾಸಶಾಸ್ತ್ರಿಗಳ ಪುತ್ರನಿಗೆ ಕೊಟ್ಟಿದೆ.

ಬೆಂಗಳೂರಿನ ಪಾಠಶಾಲೆಯಲ್ಲಿ ಓದುತ್ತಿದ್ದಾಗ ಒಮ್ಮೆ ತಲಕಾಡಿನ ಪಂಚಲಿಂಗ ದರ್ಶನಕ್ಕೆ ಹೋಗಿದ್ದೆನು. ಹಿಂದಿರುಗುವಾಗ ನನ್ನ ಮಾವನವರ ಮಕ್ಕಳೊಡನೆ ಶಾಸ್ತ್ರಿಗಳ ಮನೆಯಲ್ಲೇ ತಂಗಿದ್ದೆನು. ಅದೇ ನನಗೆ ಅವರ ಪ್ರಥಮ ಪರಿಚಯ. ಅಂದಿನಿಂದಲೇ ನಮ್ಮಲ್ಲಿ ಗಾಢ ಮೈತ್ರಿ ಬೆಳೆಯಿತು. ಮುಂದೆ, ನಾನು ಶಂಕರಮಠದಲ್ಲಿ ಓದುತ್ತಿದ್ದೆ, ಆಗ ಶಾಸ್ತ್ರಿಗಳು ಗಾಂಧಿಬಜಾರಿನಲ್ಲಿ ಒಂದು ಅಂಗಡಿಯನ್ನು ಇಟ್ಟರು. ಆಗ ನಮ್ಮಿಬ್ಬರ ಮೈತ್ರಿ ಹೆಚ್ಚು ದೃಢವಾಯಿತು.

ವಿದ್ವಾನ್ ರಂಗಸ್ವಾಮಿಶಾಸ್ತ್ರಿಗಳು ಸಹೃದಯರು, ಯಾರು ಸಹಾಯವನ್ನು ಕೇಳಿದರೂ ನಿರಾಕರಿಸಿದವರಲ್ಲ. ನಮ್ಮ ಸಮಾಜದವರ ಏಳಿಗೆಗೂ ಹಲವು ಬಗೆಗಳಲ್ಲಿ ಸಹಾಯ ಮಾಡಿದ್ದರು. ಅವರ ಸಹಾಯವಿಲ್ಲದಿದ್ದರೆ ನಾನು ಮನೆಯನ್ನು ಕಟ್ಟಲಾಗುತ್ತಿರಲಿಲ್ಲ. 'ಭಾರತ ದರ್ಶನ'ವು ಸರ್ವತೋಮುಖವಾದ ಏಳಿಗೆಯನ್ನು ಹೊಂದಲು ಶಾಸ್ತ್ರಿಗಳೇ ಕಾರಣ. ಅವರು ಗ್ರಂಥದ ಪ್ರತಿಯೊಂದು ಸಾಲನ್ನೂ ಶೋಧಿಸುತ್ತಿದ್ದ ರೀತಿಯೇ ಅದ್ಭುತವಾಗಿತ್ತು. ಅಂತಹ ಮಹನೀಯರು ಅತಿ ವಿರಳವೇ ಸರಿ.

ಶ್ರೀ ವಿದ್ಯಾರಣ್ಯ ವಿದ್ಯಾಪೀಠದಲ್ಲಿ

ಪ್ರೌಢಶಾಲೆಯಿಂದ ನಿವೃತ್ತನಾದ ಮೇಲೆ ಮಿತ್ರರಾದ ರಂಗರತ್ನಂ ಅವರ ಮನೆಯಲ್ಲಿ ವೇದಮಂತ್ರಗಳನ್ನು ಹೇಳಿಕೊಡುತ್ತಿದ್ದೆನು. ರಾಗಿಗುಡ್ಡದಲ್ಲಿಯೂ ಮಂತ್ರಗಳನ್ನು ಹೇಳಿಕೊಡುತ್ತಿದ್ದೆನು. ಕರಣಿಕರಪಾಠಶಾಲೆಯಲ್ಲಿ ಸಂಸ್ಕೃತಭಾಷೆಯ ಅಧ್ಯಾಪಕನಾಗಿಯೂ ಕೆಲಸ ಮಾಡಿದೆನು. 'ಭಾರತ ದರ್ಶನ'ದ ಶೋಧಕ ಕಾರ್ಯವನ್ನೂ ಮುಂದುವರಿಸಿದೆನು.

ಆ ಸಮಯದಲ್ಲಿ ಶ್ರೀ ವಿದ್ಯಾರಣ್ಯ ವಿದ್ಯಾಪೀಠದಿಂದ ಕರೆ ಬಂತು. ಆಗ, ಕಾಂಚಿ ಜಗದ್ಗುರುಗಳು ನಡೆಸುತ್ತಿದ್ದ ಪಾಠಶಾಲೆಗಳನ್ನು ನೋಡಿಕೊಳ್ಳುತ್ತಿದ್ದವರು ಅಣ್ಣಾದೊರೈ ಅಯ್ಯಂಗಾರ್ಯರು. ಶ್ರೀ ವಿದ್ಯಾರಣ್ಯ ಪಾಠಶಾಲೆಯಲ್ಲಿ ಯಜುರ್ವೇದ ಅಧ್ಯಾಪಕರಾಗಿದ್ದ ಕೃಷ್ಣಶರ್ಮರ ಆರೋಗ್ಯ ಕೆಟ್ಟಿತ್ತು. ಆ ಜಾಗಕ್ಕೆ ಬರುವಂತೆ ಅಯ್ಯಂಗಾರ್ಯರು ನನ್ನನ್ನು ಆಹ್ವಾನಿಸಿದ್ದರು. ಅವರು ಅದಾಗಲೇ, ಕಾಂಚಿ ಪಾಠಶಾಲೆಯ ವಾರ್ಷಿಕ ಪರೀಕ್ಷೆಗಳಿಗೆ ಪರೀಕ್ಷಕನಾಗಿ ನನ್ನನ್ನು ಎರಡು-ಮೂರು ವರ್ಷ ಕರೆಸಿಕೊಂಡಿದ್ದರು. 'ಭಾರತ ದರ್ಶನ' ಕಾರ್ಯ ಮುಗಿಯುವವರೆಗೂ ಹಂಪೆಗೆ ಹೋಗುವುದು ನನಗೆ ಸಾಧ್ಯವಿರಲಿಲ್ಲ. ನನ್ನ ಅಸಹಾಯಕತೆಯನ್ನು ಅವರಿಗೆ ತಿಳಿಸಿದೆ. ಅದು ಮುಗಿದ ಮೇಲೆಯೇ ಬರುವಂತೆ ಅಯ್ಯಂಗಾರ್ಯರು ಉದಾರವಾಗಿ ಅನುಮತಿ ಇತ್ತರು. ನಾನು ವೇದವಿದ್ವಾಂಸ ಎಂಬುದರ ಜತೆಗೆ ಮೀಮಾಂಸಾ ಶಾಸ್ತ್ರದ ವಿದ್ವಾಂಸನಾದುದರಿಂದ ಅಲ್ಲಿಗೆ ಬರಲೇಬೇಕೆಂದು ಅವರು ಆಗ್ರಹಿಸಿದರು. ವೇದಭಾಷ್ಯಾಧ್ಯಾಪಕನಾಗಲು ಒಪ್ಪಬೇಕೆಂದು ತಿಳಿಸಿದರು. ವೇದದ ಅಧ್ಯಾಪಕನಾಗಬೇಕೆಂದು ಹಲವು ದಿನಗಳಿಂದ ನನಗಿದ್ದ ಹಂಬಲಕ್ಕೆ ಅದು ಅನುಗುಣವಾಗಿಯೇ ಇತ್ತು. ಹೆಂಡತಿ ಮಕ್ಕಳನ್ನು ಬೆಂಗಳೂರಿನಲ್ಲಿಯೇ ಬಿಟ್ಟು ೧೯೮೫ರಲ್ಲಿ ಶ್ರೀ ವಿದ್ಯಾರಣ್ಯ ವಿದ್ಯಾಪೀಠಕ್ಕೆ ಹೊರಟೆನು.

ಹಂಪೆಯಲ್ಲಿ ಶ್ರೀ ವಿರೂಪಾಕ್ಷಸ್ವಾಮಿಯ ದೇವಾಲಯದ ಹಿಂಭಾಗದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯಸ್ವಾಮಿಗಳ ದೇವಾಲಯವಿದೆ. ಪಕ್ಕದಲ್ಲಿಯೇ ತುಂಗಭದ್ರಾನದಿ ಇದೆ. ಆದರೆ ಆಧುನಿಕ ಸೌಲಭ್ಯಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಶ್ರೀ ವಿದ್ಯಾರಣ್ಯ ಪಾಠಶಾಲೆಯನ್ನು ಹೊಸಪೇಟೆಯಲ್ಲಿ ಸ್ಥಾಪಿಸಲಾಗಿದೆ. ಹಂಪೆಗೆ ಹತ್ತು ಮೈಲಿಗಳ ದೂರದಲ್ಲಿ ಹೊಸಪೇಟೆ ಇದೆ. ನಾನು ಹೋದುದು ಅಲ್ಲಿಗೆ.

ಆಗ ಆ ಪಾಠಶಾಲೆಯಲ್ಲಿ ಋಗ್ವೇದಭಾಷ್ಯದ ಅಧ್ಯಾಪಕರಾಗಿ ಸುಬ್ರಹ್ಮಣ್ಯ ಘನಪಾಠಿಗಳು, ಸಾಮವೇದ ಬ್ರಾಹ್ಮಣಭಾಷ್ಯಗಳ ಅಧ್ಯಾಪಕರಾಗಿ ಶಂಕರನಾರಾಯಣ ಶ್ರೌತಿಗಳು, ಯಜುರ್ವೇದಾಧ್ಯಾಪಕರಾಗಿ ಸುಬ್ರಹ್ಮಣ್ಯಂ ಅವರು ಇದ್ದರು.

ನಾಲ್ಕು ವರ್ಷಗಳ ಷಡಂಗ, ಎರಡು ವರ್ಷಗಳ ಭಾಷ್ಯಪ್ರವೇಶ, ನಾಲ್ಕು ವರ್ಷಗಳ ಭಾಷ್ಯ ಹೀಗೆ ಹತ್ತು ವರ್ಷಗಳ ಪಾಠಕ್ರಮವು ನಿಗದಿತವಾಗಿತ್ತು. ಬಳಿಕ ಘನಾಂತವನ್ನೂ ಇಡಲಾಯಿತು. ವೇದ ಮತ್ತು ಭಾಷ್ಯ ವಿದ್ಯಾರ್ಥಿಗಳೆಲ್ಲರಿಗೂ ಸಂಸ್ಕೃತವನ್ನು ಕಲಿಸುವ ಕೆಲಸ ನನಗೇ ಸೇರಿತು. ಘನವನ್ನೂ ಷಡಂಗವನ್ನೂ ಮುಗಿಸಿಕೊಟ್ಟೆ. ಅಲ್ಲಿ ತಯಾರಾದ ವಿದ್ಯಾರ್ಥಿಗಳು ಈಗ ಹಲವೆಡೆ ಸೇವೆಸಲ್ಲಿಸುತ್ತಿದ್ದಾರೆ, ಖ್ಯಾತರೂ ಆಗಿದ್ದಾರೆ.

ಕಾಂಚಿ ಕಾಮಕೋಟಿ ಪೀಠದ ಜಗದ್ಗುರುಗಳು ಪಾಠಶಾಲೆಯ ಕಾರ್ಯದಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಆಶಿಸಿದ್ದರು.

ಪ್ರತಿಯೊಬ್ಬರೂ ಮನೆಯಲ್ಲಿ ಅಡುಗೆ ಮಾಡಿಕೊಳ್ಳುವಾಗ ಒಂದು ಹಿಡಿ ಅಕ್ಕಿಯನ್ನು ಪಾಠಶಾಲೆಯ ಮಕ್ಕಳಿಗೆಂದು ತೆಗೆದಿಡುವುದು ಅವುಗಳಲ್ಲಿ ಒಂದು. ಹೀಗೆ ಸಂಗ್ರಹಿಸಿದ ಅಕ್ಕಿ ಹಲವು ಊರುಗಳಿಂದ ಬರುತ್ತಿತ್ತು. ವೈದಿಕರಾದ ನಾವುಗಳು ಪ್ರತಿ ಗುರುವಾರ ಹಂಪೆಗೆ ಹೋಗಿ ಶ್ರೀ ವಿದ್ಯಾರಣ್ಯ ದೇವಾಲಯದಲ್ಲಿ ವೇದಶಾಸ್ತ್ರ ಪಾರಾಯಣ ಮಾಡಿ ಮಂಗಳಾರತಿ ಸ್ವೀಕರಿಸಿ ಬರುತ್ತಿದ್ದೆವು.

ಈ ನಡುವೆ ಹೊಸಪೇಟೆಯಲ್ಲಿ ನಡೆದ ಸಂಸ್ಕೃತ ಸಮ್ಮೇಳನವು ಅವಿಸ್ಮರಣೀಯವಾದುದು. ಪಾಠಶಾಲೆಯ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಅದೊಂದು ಹಬ್ಬವಾಗಿತ್ತು. ಉತ್ತರ ಭಾರತದಿಂದ ಬಂದಿದ್ದ ವಿದ್ವಾಂಸರು ಹಂಪೆಯ ಬಳಿ ಭಾಗವತಸಪ್ತಾಹವನ್ನೂ ನಡೆಸಿಕೊಟ್ಟರು.

ಇಲ್ಲಿ ಶ್ರೀಪಾದದೀಕ್ಷಿತರ ವಿಷಯವನ್ನು ಹೇಳಬೇಕು. ಅವರಿಗೆ ಕಾಲುಗಳು ಸ್ವಾಧೀನದಲ್ಲಿರಲಿಲ್ಲ. ಆದರೂ ಧಾರವಾಡ, ಪುಣೆ, ಕಾಶಿಯಲ್ಲಿ ವ್ಯಾಸಂಗ ಮಾಡಿಕೊಂಡು ಬಂದಿದ್ದರು ; ಮಹಾಪಂಡಿತರಾಗಿದ್ದರು ; ಪ್ರವಚನ ನಿಪುಣರಾಗಿದ್ದರು. 'ಸರ್ವದರ್ಶನ ಸಂಗ್ರಹ'ವನ್ನು ವಿವರಿಸಲು ಮುಳುಗುಂದದಿಂದ ಬಂದಿದ್ದರು. ಪಾಠಶಾಲೆಯ ಸಮೀಪದಲ್ಲಿಯೇ ಅವರು ವಾಸಮಾಡುತ್ತಿದ್ದುದರಿಂದ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸಾರ್ವಜನಿಕರಿಗೂ ಬಹಳ ಪ್ರಯೋಜನವಾಗಿತ್ತು. ಇಂತಹ ವಿದ್ವಾಂಸರಿಗೆ ತಕ್ಕ ಗೌರವವು ಸಿಗಲಿಲ್ಲ ಎಂಬುದು ಒಂದು ವಿಷಾದದ ಸಂಗತಿಯಾಗಿದೆ.

ಹೊಸಪೇಟೆಯಲ್ಲಿ ಇರುವವರೆಗೂ ಪಾಠಶಾಲೆಯು ನನ್ನದೆಂದೇ ಭಾವಿಸಿ ವಿದ್ಯಾರ್ಥಿಗಳ ಊಟ ಉಪಚಾರವೇ ಮೊದಲಾದ ಸೌಲಭ್ಯಗಳನ್ನು ನಿರ್ವಹಿಸಿದೆನು. ಉಪಾಧ್ಯಾಯರ ಕೊರತೆ ಬಂದಾಗ ಯೋಗ್ಯರಾದ ಹೊಸ ಉಪಾಧ್ಯಾಯರನ್ನು ನೇಮಿಸಲು ನೆರವಾದೆನು. ಸಮಸ್ಯೆಗಳು ಎದುರಾದಾಗ ನ್ಯಾಯಮೂರ್ತಿಯಂತೆಯೂ ಕೆಲಸ ಮಾಡಿದೆನು. ಹತ್ತು ವರ್ಷಗಳ ಕಾಲ ಅಧ್ಯಾಪನ ಮಾಡಿ ನಿವೃತ್ತನಾದೆನು. ಆ ಸಂದರ್ಭವು ನನಗೂ ಸಹಾಯಕವಾಯಿತು, ಹಲವು ಗ್ರಂಥಗಳ ಪರಿಚಯಮಾಡಿಕೊಳ್ಳಲು ಅವಕಾಶವಾಯಿತು. ಇದಕ್ಕಾಗಿ ಕಾಂಚಿಮಠದ ಪೂಜ್ಯ ಜಗದ್ಗುರುಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಮರಳಿ ಬೆಂಗಳೂರಿನಲ್ಲಿ

ಬೆಂಗಳೂರಿಗೆ ಮರಳಿದ ಮೇಲೆ ಒಳ್ಳೆಯ ಚಿಕಿತ್ಸೆ ದೊರೆತು ಆರೋಗ್ಯ ಸುಧಾರಿಸಿದೆ. ಖ್ಯಾತ ಸಮಾಜಸೇವಕರಾದ ಬಿ.ಎನ್.ವಿ. ಸುಬ್ರಹ್ಮಣ್ಯಂ ಅವರು ಪ್ರಕಾಶಪಡಿಸುತ್ತಿರುವ ಕೃಷ್ಣಯಜುರ್ವೇದ ಭಾಷ್ಯದ ಅನುವಾದವನ್ನು ಮುಂದುವರಿಸುತ್ತಿದ್ದೇನೆ. ಜತೆಜತೆಗೇ ವೇದವನ್ನೂ ಸಂಸ್ಕೃತವನ್ನೂ ಕಲಿಸುವ ಕೆಲಸವನ್ನು ಮುಂದುವರಿಸಿದ್ದೇನೆ. ದೇವರ ಅನುಗ್ರಹದಿಂದ ಇತ್ತೀಚೆಗೆ ಹಲವು ಪ್ರಶಸ್ತಿಗಳಿಗೂ ಪಾತ್ರನಾಗಿದ್ದೇನೆ.

ನನ್ನ ಹವ್ಯಾಸಗಳು

ನಮ್ಮ ತಂದೆಯವರು ೧೯೫೮ರಲ್ಲಿ ದಿವಂಗತರಾದರು. ನಾವು ಮೂವರು ಅಣ್ಣತಮ್ಮಂದಿರೂ ಊರುಬಿಟ್ಟು ನಮ್ಮ ನಮ್ಮ ಉದ್ಯೋಗದಲ್ಲಿ ನಿರತರಾದೆವು. ನಾವು ಒಟ್ಟಿಗೆ ಇರುವಾಗಲಾಗಲಿ ಬೇರೆಯಾದಮೇಲೆಯಾಗಲಿ ಜಗಳವಾಡಿಲ್ಲ. ಎಲ್ಲರೂ ಅನ್ಯೋನ್ಯವಾಗಿದ್ದೇವೆ. ಎಲ್ಲರಿಗೂ ವ್ಯವಸಾಯದ ಹಿನ್ನೆಲೆ ಇದ್ದೇ ಇದೆ. ನಾನು ಬೆಂಗಳೂರಿಗೆ ಬಂದಮೇಲೂ ಆ ವ್ಯವಸಾಯದ ವಾಸನೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆದ್ದರಿಂದ ಹೊಳೆನರಸೀಪುರದ ಬಳಿಯ ಮಲ್ಲಸಮುದ್ರದಲ್ಲಿ ಸ್ವಲ್ಪ ಭೂಮಿಯನ್ನು ಕೊಂಡಿದ್ದೇನೆ. ಭೂಮಿಕಾಣಿಗೂ ಸಂಕೇತಿಗಳಿಗೂ ಬಿಡಿಸಿಕೊಳ್ಳಲಾಗದ ನಂಟು ಇದೆ.

ನಾಟಕಗಳಲ್ಲಿ ಭಾಗವಹಿಸಿದ ಅನುಭವವೂ ನನಗೆ ಇದೆ. ಕರಣೆಕರ ಪಾಠಶಾಲೆಯಲ್ಲಿದ್ದಾಗ ಚಾಣಕ್ಯನ ಬಗೆಗೆ ಒಂದು ನಾಟಕ ಆಡಿದ್ದೆವು. ಅದರಲ್ಲಿ ನಾನೇ ಚಾಣಕ್ಯನ ಪಾತ್ರವನ್ನು ವಹಿಸಿದ್ದೆನು. ಬೇರೆ ನಾಟಕಗಳನ್ನೂ ಆಡಿದ್ದೆವು. ನಾನು ದುಷ್ಯಂತನ ಪಾತ್ರವನ್ನೂ ನ್ಯಾಯಾಧೀಶನ ಪಾತ್ರವನ್ನೂ ನಿರ್ವಹಿಸಿದ್ದೆ. ಆಗ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಶಕಾರನಾಗಿದ್ದರು. ವೇದಪಾಠಶಾಲೆಯಲ್ಲಿದ್ದಾಗ ಆಡಿದ ನಾಟಕದಲ್ಲಿ ಸುಮಂತ್ರನಾಗಿ ಪಾತ್ರವಹಿಸಿದ್ದೆನು.

ವನಮಹೋತ್ಸವದ ಆಚರಣೆಯೂ ಪಾಠಶಾಲೆಯಲ್ಲಿ ನಡೆಯುತ್ತಿತ್ತು. ಅದರ ಅಂಗವಾಗಿ ನಡೆದ ಒಂದು ಸ್ಪರ್ಧೆಗಾಗಿ ನಲವತ್ತು ಪದ್ಯಗಳನ್ನು ಬರೆದು ಕಳುಹಿಸಿದ್ದೆನು, ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿಯೂ ಭಾಗವಹಿಸಿದ್ದೆನು.

ಹಲವು ವೇದ ಮತ್ತು ಸಾಂಸ್ಕೃತಿಕ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೇನೆ, ಹೋಮ ಹವನಗಳಲ್ಲೂ ಯಜ್ಞಯಾಗಗಳಲ್ಲೂ ಋತ್ವಿಕನಾಗಿ ಭಾಗಿಯಾಗಿದ್ದೇನೆ. ದೆಹಲಿ, ಜಯಪುರ, ಲಕ್ನೋ, ತಿರುಪತಿ ಮೊದಲಾದ ಕಡೆಗಳಲ್ಲಿ ನಡೆದ ವೈದಿಕ ಸಮ್ಮೇಳನಗಳು ಎಂದಿಗೂ ನೆನಪಿನಲ್ಲಿ ಉಳಿಯುವಂಥವು. ಶೃಂಗೇರಿಯ ಶ್ರೀ ಶ್ರೀ ಜಗದ್ಗುರುಗಳು ಕಾಶಿಯಲ್ಲಿ ಅನ್ನಪೂರ್ಣೇಶ್ವರಿಯ ಪ್ರತಿಷ್ಠೆಯ ಅಂಗವಾಗಿ ನಡೆಸಿದ ರುದ್ರಹೋಮದಲ್ಲಿಯೂ ಭಾಗವಹಿಸಿದ್ದೆನೆಂಬುದು ಅಭಿಮಾನಾಸ್ಪದವಾದ ಸಂಗತಿ. ನಾಸಿಕ್, ಅಹಮದಾಬಾದ್, ಜಾಮ್‌ನಗರ ಮೊದಲಾದ ಎಡೆಗಳಲ್ಲಿ

ಮಿತ್ರರೂ ಪೂಜ್ಯರೂ ಆದ ರಾಮಚಂದ್ರಶ್ರೌತಿಗಳು ವೇದಪಾರಾಯಣವನ್ನು ಏರ್ಪಡಿಸಿದ್ದರು. ಅದರಲ್ಲಿಯೂ ಭಾಗಿಯಾಗುವ ಪುಣ್ಯ ಸಿಕ್ಕಿತು. ಹೀಗೆಯೇ ಜಟಾ ಪಾರಾಯಣ ಘನ ಪಾರಾಯಣಗಳಲ್ಲಿಯೂ ಭಾಗಿಯಾಗಿದ್ದೇನೆ. ಮುಂಬಯಿ, ಸ್ವರ್ಣವಲ್ಲಿ, ಕೂಡ್ಲಿ, ಪಾಲ್‌ಘಾಟ್, ಬೆಂಗಳೂರು ಮೊದಲಾದ ಹಲವು ಕಡೆಗಳಲ್ಲಿ ನಡೆದ ಸಂಹಿತಾಹೋಮಗಳಲ್ಲಿ ಕೂಡ ಋತ್ವಿಜನಾಗಿ ಭಾಗಿಯಾಗಿದ್ದೇನೆ. ಸುಬ್ರಹ್ಮಣ್ಯಪುರದಲ್ಲಿ ಸುಬ್ರಹ್ಮಣ್ಯ ಪ್ರತಿಷ್ಠೆಯಲ್ಲಿ ಭಾಗವಹಿಸಿದ್ದು ಆ ಮಾದರಿಯ ಪುಣ್ಯಕಾರ್ಯಗಳಲ್ಲಿ ಒಂದು.

ನನ್ನ ಬಾಲ್ಯದಲ್ಲಿ , ನಿತ್ಯಕರ್ಮಗಳಾದ ಮೇಲೆ ನನ್ನ ಬಂಧು ಒಬ್ಬರ ಮನೆಯಲ್ಲಿ ಕುಳಿತು ಗದುಗಿನ ಭಾರತವನ್ನು ಓದುತ್ತಿದ್ದೆನು. ಅದೇ ನನ್ನ ಪುಸ್ತಕಪ್ರೇಮಕ್ಕೂ ಕಲಾಪ್ರೇಮಕ್ಕೂ ಮೂಲವೆಂದು ತಿಳಿದಿದ್ದೇನೆ. ಪಾಠಶಾಲೆಗೆ ಸೇರಿದ ಮೇಲೆ ಪುಸ್ತಕಗಳನ್ನು ಓದುವ ಹುಚ್ಚನ್ನು ಬೆಳೆಸಿದ್ದು ಅಲ್ಲಿಯ ಗ್ರಂಥಭಂಡಾರ. ಆಗಿನ ಕಾಲದಲ್ಲಿ ಯಾವ ಬಹುಮಾನವೇ ಆದರೂ ಪುಸ್ತಕಗಳ ರೂಪದಲ್ಲಿಯೇ ಕೊಡುವ ಪರಿಪಾಠವಿತ್ತು. 'ಆನಂದಾಶ್ರಮ' ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಕೊಡುತ್ತಿದ್ದರು. ಆಗಲೇ ಮುಖ್ಯವಾದ ಹಲವು ಸಂಸ್ಕೃತ ಗ್ರಂಥಗಳನ್ನೂ ವೇದ ಗ್ರಂಥಗಳನ್ನೂ ಕೊಂಡಿದ್ದೆನು. ಪುಸ್ತಕಗಳನ್ನು ಕೊಂಡು ಶೇಖರಿಸುವುದು, ಓದುವುದು ಒಂದು ಹಂತ ; ಮಕ್ಕಳಿಗೂ ಅದರಲ್ಲಿ ಆಸಕ್ತಿ ಬೆಳೆದರೆ ಅದಕ್ಕೆ ಹೆಚ್ಚಿನ ಸಾರ್ಥಕ್ಯ. ನನ್ನ ಮಗ ನಾಗೇಂದ್ರನಿಗೂ ಪುಸ್ತಕದ ಹುಚ್ಚು ಇರುವುದು ನನಗೆ ಸಮಾಧಾನದ ಸಂಗತಿ.

ಗ್ರಂಥರಚನೆ

ನಾನು ಮೊದಲು ರಚಿಸಿದ್ದು 'ಕನ್ನಡ ನುಡಿ' ಎಂಬ ವ್ಯಾಕರಣಗ್ರಂಥವನ್ನು. ಅದನ್ನು ಭೂಪಾಳಂ ಪ್ರಕಾಶನದವರು ಪ್ರಕಟಪಡಿಸಿದರು. ಅದೊಂದು ಸಣ್ಣಗ್ರಂಥ.

ಈ ವೇಳೆಗೆ ನನ್ನ ಸೋದರಳಿಯ ಕೆ.ಎಸ್. ಕೌಶಿಕ್ (ವಿಶ್ವಾಮಿತ್ರ) 'ಭಾರತ ದರ್ಶನ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ನಾನೂ, ವಿದ್ವಾನ್ ರಂಗಸ್ವಾಮಿಶಾಸ್ತ್ರಿಗಳೂ ಸಹಸಂಪಾದಕರಾಗಿ ಅದನ್ನು ಬೆಂಬಲಿಸಿದೆವು. ರಾಮಾಯಣ ಮಹಾಭಾರತಗಳ ಅನುವಾದವು ಪೂರ್ಣವಾಗುವವರೆಗೂ ಬೆಂಗಳೂರಿನಲ್ಲಿದ್ದು ನಾನೂ ಈ ಕಾರ್ಯವನ್ನು ನಿರ್ವಹಿಸಿದೆನು. ಇದೊಂದು ಮಹಾಕಾರ್ಯವಾಯಿತು. ಶ್ರೀ ರಂಗಪ್ರಿಯ ವರದ ದೇಶಿಕಾಚಾರ್ಯರು ಕಾಲೇಜಿನಲ್ಲಿ ಪ್ರಾಧ್ಯಾಪಕರು, ಹಲವು ಶಾಸ್ತ್ರಗಳಲ್ಲಿ ನಿಪುಣರು, ಯೋಗದಲ್ಲಿ ನಿಷ್ಣಾತರು, ಅವರು 'ಭಾರತ ದರ್ಶನ' ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ.

ಇನ್ನೂ ಒಂದು ದೊಡ್ಡ ಅವಕಾಶವನ್ನು ದೈವವು ಕಲ್ಪಿಸಿತು. ಅದು ವೇದಭಾಷ್ಯಾನುವಾದದ ಕಾರ್ಯ. ಅದರ ವಿಚಾರ ಪ್ರಾರಂಭವಾದದ್ದು ನನ್ನ ಮಿತ್ರರಾದ ಬಸವಾನಿ ರಾಮಶರ್ಮರಿಂದ, ಅವರು ಅದರ ಸಾಧನೆಗಾಗಿ ಬಿ.ಎನ್.ವಿ ಸುಬ್ರಹ್ಮಣ್ಯಂ ಅವರನ್ನು ಪ್ರೇರೇಪಿಸಿದರು. ಅದಕ್ಕಾಗಿ ಅವರು ನಾಲ್ಕಾರು ವಿದ್ವಾಂಸರನ್ನು ಆಹ್ವಾನಿಸಿದರು, ಎಲ್ಲರನ್ನೂ ಭಾಷ್ಯಾನುವಾದಕ್ಕೆ ಪ್ರೇರೇಪಿಸಿದರು. ಪ್ರತಿಯೊಬ್ಬರೂ ಒಂದೊಂದು ಭಾಗವನ್ನು ಅನುವಾದಿಸಬೇಕೆಂಬುದು ಮೊದಲ ಯೋಜನೆಯಾಗಿತ್ತು. ಒಬ್ಬೊಬ್ಬರೂ ವಿರುದ್ಧ ಭಾವನೆಗಳನ್ನು ಹೊಂದಿರಬಹುದಾದುದರಿಂದ ಒಬ್ಬರೇ ಬರೆದರೆ ಮೇಲೆಂದು ನನಗೆ ಈ ಮಹಾಕಾರ್ಯವನ್ನು ವಹಿಸಿದರು. ಇದನ್ನು ಸಂತೋಷದಿಂದ ಒಪ್ಪಿಕೊಂಡೆನು. ನನ್ನ ಮಿತ್ರರೂ ವ್ಯಾಕರಣ ವಿದ್ವಾಂಸರೂ ಆದ ತಿಪ್ಪಾಭಟ್ಟರ ಪುತ್ರರಾದ ಸೋ.ತಿ. ನಾಗರಾಜ್ ಅವರು ಈ ಕಾರ್ಯದಲ್ಲಿ ನನಗೆ ಸಹಾಯಕರಾದರು.

ಈ ಸಂಬಂಧದಲ್ಲಿ ಗೋಕರ್ಣದ ರಾಮಚಂದ್ರಶ್ರೌತಿಗಳನ್ನು ನೆನಪು ಮಾಡಿಕೊಳ್ಳಬೇಕು. ಅವರು ನಮ್ಮೆಲ್ಲರಿಗೂ ಹಿರಿಯರು, ವೇದ-ಶ್ರೌತಾದಿಗಳಲ್ಲಿ ನಿಪುಣರು. ಪ್ರಾರಂಭದಲ್ಲಿ ಶ್ರೌತ ವಿಷಯಗಳನ್ನು ಬರೆದವರು ಅವರೇ. ಅವರು ಬದುಕಿ ಉಳಿದಿದ್ದರೆ ಈ ಗ್ರಂಥವು ಇನ್ನೂ ಹೆಚ್ಚು ಸಮರ್ಪಕವಾಗುತ್ತಿತ್ತು.

ಬಿ.ಎನ್.ವಿ. ಸುಬ್ರಹ್ಮಣ್ಯಂ ಅವರು ಮನಸ್ಸು ಮಾಡಿದ್ದರಿಂದ ಈ ಕಾರ್ಯ ನಡೆಯುತ್ತಿದೆ. ಅವರು ಮಲ್ಲಿಕಾರ್ಜುನಶಾಸ್ತ್ರಿಗಳ ಅಳಿಯಂದಿರು. ಆ ಸಹಯೋಗದ ಸಂಸ್ಕಾರ ದೊಡ್ಡದು. ಅದರಿಂದಾಗಿಯೇ ಅವರು ಜ್ಯೋತಿ ವೇದಪಾಠಶಾಲೆಯನ್ನೂ, ಇನ್ನೂ ಕೆಲವು ಸಂಸ್ಥೆಗಳನ್ನೂ ಸ್ಥಾಪಿಸಿದ್ದಾರೆ ; ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾಗಿದ್ದಾರೆ. ಸಹಜವಾಗಿಯೇ, ಮಲ್ಲಿಕಾರ್ಜುನಶಾಸ್ತ್ರಿಗಳ ಪುತ್ರರಾದ ನರಸಿಂಹನ್ ಅವರು ಸುಬ್ರಹ್ಮಣ್ಯಂ ಅವರ ಎಲ್ಲ ಕೆಲಸಗಳಿಗೂ ನೆರವಾಗಿ ನಿಂತಿದ್ದಾರೆ. ವೇದಗ್ರಂಥಗಳಲ್ಲಿ ಕೆಲವು ಈಗಾಗಲೇ ಪ್ರಕಟವಾಗಿವೆ, ಮತ್ತೆ ಕೆಲವು ಪ್ರಕಟಣೆಗೆ ಸಿದ್ಧವಾಗಿವೆ. ಸಾಧ್ಯವಾದರೆ ಬ್ರಾಹ್ಮಣ, ಆರಣ್ಯಕಗಳನ್ನೂ ಅನುವಾದಿಸಬೇಕೆಂದಿರುತ್ತೇನೆ.

ಶಿಷ್ಯರು

ಅಧ್ಯಾಪಕನಾದವನ ಸಂಪತ್ತು ಎಂದರೆ ಅವನ ಶಿಷ್ಯರು, ಅವನ ಹೆಮ್ಮೆ ಎಂದರೆ ಗಣ್ಯರಾದ ಶಿಷ್ಯರು.

ಕನ್ನಡ, ಸಂಸ್ಕೃತ ಮತ್ತು ವೇದಮಂತ್ರಗಳನ್ನು ನನ್ನಿಂದ ಕಲಿತ ಸಾವಿರಾರು ವಿದ್ಯಾರ್ಥಿಗಳು ನನ್ನ ಸಂತೋಷವನ್ನು ಹೆಚ್ಚಿಸಿದ್ದಾರೆ. ಇದರಲ್ಲಿ ಒಂದಿಬ್ಬರನ್ನು ಪ್ರಾತಿನಿಧಿಕವಾಗಿ ಹೆಸರಿಸುವ ಇಚ್ಛೆಯಾಗುತ್ತಿದೆ.

ವಿದ್ವಾನ್ ಗೋಪಾಲಕೃಷ್ಣ ಶ್ರೌತಿಗಳು ಸಾಮವೇದ ಪ್ರಾಚಾರ್ಯರು, ಸಹೃದಯರು. ಸಂಶಯಗಳ ಪರಿಹಾರಕ್ಕಾಗಿ ಆಗಾಗ ನನ್ನ ಬಳಿ ಬರುತ್ತಿದ್ದರು. ಆ ನೆಪದಲ್ಲಿ ನನಗೆ ಸಾಮವೇದಗ್ರಂಥಗಳ ಪರಿಚಯವೂ ಆಯಿತು. ಅವರೂ ಹಲವು ಶಿಷ್ಯರನ್ನು ತಯಾರು ಮಾಡಿರುವಂಥವರೇ. ಅವರಲ್ಲಿ ನಾಗಪ್ಪಶ್ರೌತಿಗಳು ಮುಖ್ಯರು. ನಾಗಪ್ಪಶ್ರೌತಿಗಳು ಈಗ ಕರ್ನಾಟಕದ ಸಾಮವೇದಿಗಳಲ್ಲಿ ಅಗ್ರಗಣ್ಯರಾಗಿರುವಂಥವರು. ಅವರೂ ಎರಡು ವರ್ಷಗಳ ಕಾಲ ಹೊಸಪೇಟೆಯಲ್ಲಿಯೂ ಇದ್ದರು.

ಹೊಸಪೇಟೆಯಲ್ಲಿ ಯಾವ ಪ್ರೌಢಶಾಲೆಯಲ್ಲಿಯೂ ಸಂಸ್ಕೃತದ ಅಧ್ಯಾಪಕರಿರಲಿಲ್ಲ. ಆಸಕ್ತಿ ಉಳ್ಳ ವಿದ್ಯಾರ್ಥಿಗಳು ತಾವೇ ಅದರ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ಅಲ್ಲಿರುವ ಹತ್ತು ವರ್ಷಗಳೂ ಅಂಥ ಎಲ್ಲ ವಿದ್ಯಾರ್ಥಿಗಳಿಗೂ ನಾನೇ ಸಂಸ್ಕೃತವನ್ನು ಕಲಿಸಿದೆ.

ಮಂತ್ರ ಕಲಿಯಲು ಆಸೆಯಿಂದ ಬಂದವರಿಗೂ ಯಾರಿಗೂ ನಾನು ನಿರಾಸೆ ಮಾಡಲಿಲ್ಲ. ಎಲ್ಲ ವೇದಶಾಖೆಗಳ ವಿದ್ಯಾರ್ಥಿಗಳಿಗೂ ನಾನೇ ಸಂಸ್ಕೃತವನ್ನು ಬೋಧಿಸಿದೆನು. ಅವೆಲ್ಲಕ್ಕಿಂತ ಮುಖ್ಯವಾದುದು ವೇದಭಾಷ್ಯ ವಿದ್ಯಾರ್ಥಿಗಳಿಗೆ ಷಡಂಗವನ್ನೂ ಸಲಕ್ಷಣ ಘನಾಂತವನ್ನೂ ಕಲಿಸಿದ್ದು. ಹಾಗೆ ಕಲಿತ ಕೆಲ ವಿದ್ಯಾರ್ಥಿಗಳು ಉಲ್ಲೇಖಯೋಗ್ಯರಾಗಿದ್ದಾರೆ. ಜಂಬುನಾಥ ಘನಪಾಠಿಯವರು ಷಡಂಗ, ಭಾಷ್ಯ ಪ್ರವೇಶ, ಘನಾಂತ ಪರೀಕ್ಷೆ ಎಲ್ಲವನ್ನೂ ಮುಗಿಸಿಕೊಂಡರು. ತಾವೇ ಐವರನ್ನು ಘನಪಾಠಿಗಳಾಗಿ ಮಾಡಿದರು. ಹಲವು ಪಾಠಶಾಲೆಗಳಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಈಗ ಕೊಯಮತ್ತೂರಿನಲ್ಲಿ ತಾವೇ ಒಂದು ಪಾಠಶಾಲೆಯನ್ನು ಪ್ರಾರಂಭಿಸಿರುತ್ತಾರೆ. ಶ್ರೀನಿವಾಸಶರ್ಮರು ಕೂಡ ಷಡಂಗವನ್ನು ಮುಗಿಸಿ ಘನವನ್ನು ಅಭ್ಯಾಸ ಮಾಡಿದವರು. ಈಗ ಬೆಂಗಳೂರು ಮಲ್ಲೇಶ್ವರದಲ್ಲಿರುವ ಶ್ರೀ ಶ್ರೀ ಕಾಂಚಿ ಜಗದ್ಗುರುಗಳ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದಾರೆ. ತಿರುಪತಿ ದೇವಾಲಯದವರು ಷಡಂಗವನ್ನು ರೆಕಾರ್ಡ್ ಮಾಡಿಸಿಕೊಂಡಾಗ ಅವರೂ ನನ್ನ ಜತೆ ಇದ್ದರು. ಕಣ್ಣನ್ ಘನಪಾಠಿಗಳು ಷಡಂಗವನ್ನೂ ವೇದಪ್ರವೇಶವನ್ನೂ ಮುಗಿಸಿಕೊಂಡು ಚನ್ನೈಪಟ್ಟಣದಲ್ಲಿ ವೈದಿಕವೃತ್ತಿಯನ್ನು ಅವಲಂಬಿಸಿಕೊಂಡು ಇದ್ದಾರೆ. ವಾಸುದೇವ ಕೂಡ ಷಡಂಗವನ್ನು ಅಭ್ಯಾಸ ಮಾಡಿ ಈಗ ಅಧ್ಯಾಪಕರಾಗಿದ್ದಾರೆ. ಸುಬ್ರಹ್ಮಣ್ಯ, ರವೀಂದ್ರ, ರಮೇಶ, ಗೋಪಾಲಕೃಷ್ಣ, ಮೃತ್ಯುಂಜಯ, ಶ್ರೀಹರಿ...... ಹೀಗೆ ನೂರಾರು ವಿದ್ಯಾರ್ಥಿಗಳು ಪ್ರವರ್ಧಮಾನಕ್ಕೆ ಬಂದು ಬೆಂಗಳೂರು, ಮುಂಬಯಿ, ಚೆನ್ನೈ ಮೊದಲಾದ ಕಡೆ ಹರಡಿಹೋಗಿದ್ದಾರೆ. ನಾನಾದರೂ ಈಗಲೂ ಅಧ್ಯಾಪನ ಮಾಡುವ ಆಸೆ ಉಳ್ಳವನೇ, ಆದರೆ ಹೆಚ್ಚಾಗಿ ಬರವಣಿಗೆಗಾಗಿ ನನ್ನ ಸಮಯವನ್ನು ವಿನಿಯೋಗಿಸುತ್ತಿದ್ದೇನೆ.

ಸಂಸ್ಕೃತದ ಸ್ಥಿತಿಗತಿ

ಸಂಸ್ಕೃತದ ವಿದ್ಯಾಭ್ಯಾಸವು ೧೯೪೨ರವರೆಗೂ ಉನ್ನತಸ್ಥಿತಿಯಲ್ಲಿತ್ತು. ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಸುಮಾರು ೫೦೦ ವಿದ್ಯಾರ್ಥಿಗಳು ವೇದ-ಶಾಸ್ತ್ರಗಳ ಅಭ್ಯಾಸ ಮಾಡುತ್ತಿದ್ದರು. ಬೆಂಗಳೂರಿನ ಎರಡು ಪಾಠಶಾಲೆಗಳಲ್ಲಿ ೧೫೦ ವಿದ್ಯಾರ್ಥಿಗಳಿದ್ದರು.

೧೯೪೨ರ ಕ್ವಿಟ್ ಇಂಡಿಯಾ ಚಳವಳಿಗೂ ಮುನ್ನವೇ ಪಾಠಶಾಲೆಯ ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ಚಳವಳಿ ನಡೆಸುತ್ತಿದ್ದರು. ೧೯೪೨ರಲ್ಲಂತೂ ದೇಶದ ಎಲ್ಲೆಡೆ ಚಳವಳಿ ಬಿರುಸಾಯಿತು. ಮೈಸೂರು ಮತ್ತು ಬೆಂಗಳೂರಿನ ಪಾಠಶಾಲೆಯ ವಿದ್ಯಾರ್ಥಿಗಳೆಲ್ಲರೂ ತಮ್ಮ ಚಳವಳಿಯನ್ನು ತೀವ್ರಗೊಳಿಸಿದರು. ಬೆಂಗಳೂರಿನಲ್ಲಿ ಅದು ಇನ್ನೂ ವ್ಯಾಪಕವಾಗಿತ್ತು. ಆದರೆ ನಮ್ಮ ಪ್ರಾಚಾರ್ಯರು ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗದಂತೆ ಆ ಪರಿಸ್ಥಿತಿಯನ್ನು ನಿಭಾಯಿಸಿದರು. ಆದರೆ ಮೈಸೂರು ಪಾಠಶಾಲೆಯಲ್ಲಿ ಡಾ. ನರಸಿಂಹಯ್ಯನವರು ಪ್ರಾಚಾರ್ಯರಾಗಿದ್ದರು. ವಿದ್ಯಾರ್ಥಿಗಳನ್ನು ಬಂಧಿಸಲಾಯಿತು; ಸೆರೆಮನೆಗೆ ಸೇರಿದ ಅನೇಕರು ಹಿಂಸೆ ಅನುಭವಿಸಿದರು. ಹಳ್ಳಿಯ ಬಡಕುಟುಂಬಗಳಿಂದ ಬಂದಿದ್ದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನೇ ಕೈ ಬಿಡಬೇಕಾಯಿತು. 'ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ' ಎಂಬಂತೆ ಆಯಿತು. ಮೈಸೂರಿನ ಪಾಠಶಾಲೆಯು ಮೊದಲಿನ ವೈಭವವನ್ನು ಪಡೆಯದೆ ಹೋಯಿತು. ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಭೋಜನಾದಿ ಸೌಕರ್ಯಗಳು ತಪ್ಪಿಹೋದವು. ಇತ್ತ ಪ್ರೌಢಶಾಲೆಗಳಲ್ಲೂ ಸಂಸ್ಕೃತ ಭಾಷೆಯನ್ನು ದ್ವಿತೀಯ ಸ್ಥಾನದಿಂದ ಇಳಿಸಿ ಐಚ್ಛಿಕವಾಗಿ ಮಾಡಿದರು. ವಿದ್ಯಾರ್ಥಿಗಳ ಸಂಖ್ಯೆ ಸೊರಗಿತು, ವಿದ್ವಾಂಸರಿಗೆ ನೌಕರಿಯೂ ಇಲ್ಲವಾಯಿತು. ಮಾಧ್ಯಮಿಕ ಶಾಲೆಗಳಿಂದಲೂ ಸಂಸ್ಕೃತವನ್ನು ತೆಗೆಯಲಾಯಿತು. 'ನೆಗಡಿ' ಕಾಣಿಸಿಕೊಂಡದ್ದರಿಂದ ಸರ್ಕಾರವು ಇಂಥ ಚಿಕಿತ್ಸೆಗಳನ್ನು ಪ್ರಾರಂಭಿಸಿತು, ಮೂಗನ್ನೇ ಕೊಯ್ದು ಹಾಕಿತು. ದೇಶದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಇದೊಂದು

ದುರಂತ. ಆದರೆ ದೂರದೃಷ್ಟಿ ಉಳ್ಳ ಹಲವರು ಆಸಕ್ತರಿಗೆ ಅನುಕೂಲವಾಗುವಂತೆ ಪಾಠಶಾಲೆಗಳನ್ನು ತೆರೆದು ಪ್ರೋತ್ಸಾಹಿಸಿರುವುದು ಒಂದು ಒಳ್ಳೆಯ ಅಂಶ.

ತೇಲಿಹೋಗಬಾರದು

ಈಗ ವೇದಶಾಸ್ತ್ರಗಳನ್ನು ಕಲಿಯಲು ಬರುತ್ತಿರುವವರ ಸಂಖ್ಯೆ ಬಲು ಕಡಿಮೆ, ಸಂಕೇತಿಗಳಲ್ಲಿ ಇನ್ನೂ ಕಡಿಮೆ. ಮಂಗಳೂರು ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಮೇಲು. ಪೂರ್ಣವಾಗಿ ವ್ಯಾಸಂಗ ಮಾಡುವವರು ವಿರಳ. ಇತರ ವಿದ್ಯೆಗಳಿಂದ ಉದ್ಯೋಗವೂ ಹಣವೂ ದೊರೆಯುತ್ತಿದೆ. ಆದರೆ ಹಿಂದಿನಿಂದಲೂ ಬ್ರಾಹ್ಮಣರು ವಿದ್ಯೆಗಾಗಿ ವಿದ್ಯೆಯನ್ನು ಕಲಿಯುತ್ತಿದ್ದರು, ಹಣಕ್ಕಾಗಿ ಅಲ್ಲ. ಪರಂಪರೆಯನ್ನು ಉಳಿಸಿಕೊಂಡ ಸಂಕೇತಿಗಳಂತೂ ಇಂದಿಗೂ ತೋಟದಲ್ಲಿ ಸ್ವಂತ ದುಡಿಮೆ ಮಾಡಿ ಸಂಪಾದಿಸುತ್ತಾರೆ, ವಿದ್ಯೆಯನ್ನೂ ಜೀವನಾಧಾರವನ್ನೂ ತಳಕು ಹಾಕುವುದಿಲ್ಲ.

ಹಿಂದೆ ಹಳ್ಳಿಗಳಲ್ಲಿ, 'ಊರಿನವರೆಲ್ಲರೂ ಒಂದೇ' ಎಂಬ ಮನೋಭಾವವಿರುತ್ತಿತ್ತು. ಅವಿಭಕ್ತ ಕುಟುಂಬ ಪದ್ಧತಿ ಬಳಕೆಯಲ್ಲಿತ್ತು. ಈಚೆಗೆ ಪ್ರತ್ಯೇಕತಾ ಮನೋಭಾವವು ಹೆಚ್ಚಿದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ವಿವಾಹ ವಿಚ್ಛೇದನವೂ ಬಳಕೆಗೆ ಬರುತ್ತಿದೆ. ವರದಕ್ಷಿಣೆ ಮೊದಲಾದ ಅನಿಷ್ಟ ಪದ್ಧತಿಗಳೂ ತೊಲಗಿಲ್ಲ. ಸಮಾಜವು ಮುಂದೆ ಬರಬೇಕಾದರೆ ಇಂತಹ ಅನಿಷ್ಟಗಳು ತೊಲಗಿ ಪರಸ್ಪರ ಸಹಕಾರವು ಮೂಡಬೇಕು, ಐಕಮತ್ಯಬೇಕು. ನಮ್ಮ ಸಂಸ್ಕೃತಿಯನ್ನೂ ಕರ್ತವ್ಯಗಳನ್ನೂ ಮರೆಯಬಾರದು. ಧರ್ಮಕಾರ್ಯಗಳನ್ನು ಸಾಮೂಹಿಕವಾಗಿ ಆಚರಿಸಬೇಕು. 'ಆತ್ಮೈವ ಹ್ಯಾತ್ಮನೋ ಬಂಧುಃ' ಎಂಬಂತೆ ನಮ್ಮ ಹಿತವನ್ನು ನಾವೇ ಸಾಧಿಸಿಕೊಳ್ಳಬೇಕು. ಹಳ್ಳಿಗಳಲ್ಲಿ ಭೂಮಿಕಾಣಿ ನೋಡಿಕೊಂಡು ವೇದಶಾಸ್ತ್ರಗಳ ಅಧ್ಯಯನ ಮಾಡಿಕೊಂಡು ಸಮಾಧಾನವಾಗಿ ಬಾಳುವುದರ ಹಿರಿಮೆ, ಹಣದ ವ್ಯಾಮೋಹದಲ್ಲಿ ಕಾಣೆಯಾಗಿದೆ. ಅರ್ಥದ ಅನರ್ಥಗಳು ಅನುಭವಕ್ಕೆ ಬರುವ ಹೊತ್ತಿಗೆ ಪರಂಪರೆಯ ಬೇರು ಸತ್ತಿದ್ದರೆ ಅದೊಂದು ದೊಡ್ಡ ನಷ್ಟವೇ ಸರಿ.

ಒಂದೆರಡು ಕಿವಿಮಾತು

ಇಂದು ದೇಶವು ಸ್ವತಂತ್ರವಾಗಿದೆ. ಇದನ್ನು ಸಂಪಾದಿಸಲು ಹಲವರು ದುಡಿದಿರುತ್ತಾರೆ. ನಾನು ಚರಿತ್ರೆಯ ವಿದ್ಯಾರ್ಥಿ. ಆದುದರಿಂದ ದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಸ್ವಾತಂತ್ರ್ಯವು ಎಷ್ಟು ಮುಖ್ಯವೆಂದು ತಿಳಿದಿರುತ್ತೇನೆ. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣವು ಇಂದು ಅವ್ಯಾಹತವಾಗಿ ಸಾಗಿದೆ. ಇಂತಹ ಮಾನಸಿಕ ಪಾರತಂತ್ರ್ಯವನ್ನು ದೂರ ಮಾಡಬೇಕು. **ಸರ್ವೇ ಜನಾಃ ಸುಖಿನೋ ಭವಂತು** ಇದು ಭಾರತೀಯರ ಆದರ್ಶವಾಕ್ಯ. ಹಾಗೆಯೇ **ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್** ಎಂಬ ಮಾತನ್ನು ಮರೆಯಬಾರದು. 'ಕೊಟ್ಟದ್ದು ತನಗೆ, ಬೈಚಿಟ್ಟಿದ್ದು ಪರರಿಂಗೆ' ಎಂಬ ಗಾದೆ ಮಾರ್ಗದರ್ಶಿಯಾಗಬೇಕು. ಹಾಸಿಗೆ ಇದ್ದಷ್ಟು ಕಾಲುಚಾಚಬೇಕು. ಈಗ ಮಾನವನು ಆಶಾಪರವಶನಾಗಿರುತ್ತಾನೆ. ಇದರ ಫಲವಾಗಿ ಲಂಚ, ಅಕೃತ್ಯ, ಮೋಸಗಳಿಗೆ ಗುರಿಯಾಗಿದ್ದಾನೆ. ನಮ್ಮ ಪ್ರಾಚೀನ ಋಷಿಗಳು ಒಂದು ಕಡೆ ಚಿನ್ನವನ್ನು 'ಪಾಪ' ಎಂದು ಕರೆದಿದ್ದಾರೆ. ನಮ್ಮ ಕರ್ತವ್ಯಕ್ಕಾಗಿ ಸಂಬಳ ಕೊಡುತ್ತಾರೆ, ಅದಕ್ಕಾಗಿ ಲಂಚಕ್ಕೆ ಕೈಯೊಡ್ಡಬಾರದು. ಅಪರಾಧಗಳನ್ನು ಮಾಡಬಾರದು. **ಮೈತ್ರೋ ಬ್ರಾಹ್ಮಣ ಉಚ್ಯತೇ** ಬ್ರಾಹ್ಮಣನು ಎಲ್ಲರಿಗೂ ಮಿತ್ರನಾಗಿ ನಡೆದುಕೊಳ್ಳಬೇಕು. **ಧರ್ಮೋ ರಕ್ಷತಿ ರಕ್ಷಿತಃ** ಎಂಬ ಮಾತು ಎಲ್ಲಾ ಕಾಲಗಳಲ್ಲಿಯೂ ಸತ್ಯವಾದುದು. ಧರ್ಮವನ್ನೇ ಮಾನವನು ಅನುಸರಿಸಬೇಕು.

ಸರ್ವೇ ಚ ಸುಖಿನಸ್ಸಂತು
ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಗ್ಭವೇತ್ ॥

(ಸರ್ವರೂ ಸುಖವಾಗಿರಲಿ, ಎಲ್ಲರೂ ಭಯವಿಲ್ಲದವರಾಗಲಿ, ಎಲ್ಲರಿಗೂ ಮಂಗಳವಾಗಲಿ ಯಾರಿಗೂ ದುಃಖ ಒದಗದಿರಲಿ) ಎಂಬುದು ನಮ್ಮ ಮೂಲಮಂತ್ರ, ಅದನ್ನು ಕಾಯೋಣ.

ಮತ್ತೂ ತಿಳಿಯುವುದಿದೆ. **ಏಕಂ ಸತ್ ವಿಪ್ರಾಃ ಬಹುಧಾ ವದಂತಿ** ಎಂದು ನಮ್ಮ ಋಷಿಗಳು ಸಾರಿದ್ದಾರೆ. 'ದೇವರು ಒಬ್ಬನೇ, ನಾಮ ಹಲವು' ಎಂಬುದು ಸತ್ಯವಾದುದು. ದೇವರ ವಿಷಯದಲ್ಲೂ ಧರ್ಮದ ವಿಷಯದಲ್ಲೂ ನಮ್ಮಲ್ಲಿ ಕಲಹಗಳು ಸಂಭವಿಸಬಾರದು. ಆದಿಶಂಕರಾಚಾರ್ಯರು ಷಣ್ಮತ ಸ್ಥಾಪನಾಚಾರ್ಯರಾಗಿರುತ್ತಾರೆ, ಎಲ್ಲ ದೇವರ ಸ್ತುತಿಗಳನ್ನೂ ಬರೆದಿರುತ್ತಾರೆ. ಅದು ಸಮನ್ವಯದ ಆದರ್ಶ. ಸನಾತನಧರ್ಮದ ಆಶಯವೇ ಅದು. ಶಂಕರರು ಅದನ್ನೇ ಎತ್ತಿಹಿಡಿದಿದ್ದಾರೆ.

ಹಿಂದೆ 'ನೀತಿ ಚಿಂತಾಮಣಿ' ಮೊದಲಾದ ಗ್ರಂಥಗಳನ್ನು ಪ್ರಾಥಮಿಕ ಶಾಲೆಗಳಿಗೆ ನಿಗದಿ ಮಾಡಿದ್ದರು. ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ನೀತಿಪಾಠಕ್ಕೆ ಜಾಗವೇ ಇಲ್ಲವಾಗಿದೆ. ವಿದ್ಯಾಭ್ಯಾಸದ ಉದ್ದೇಶಗಳಲ್ಲಿ ಒಂದು ವಿದ್ಯಾರ್ಥಿಗಳನ್ನು ತಿದ್ದಿ ಸತ್ಪ್ರಜೆಗಳಾಗಿ ಬಾಳುವಂತೆ ಮಾಡುವುದು. ಸಮಾಜವು ಆ ಬಗೆಗೆ ಗಮನ ಕೊಡಬೇಕು.

ನಮ್ಮ ಕರ್ತವ್ಯ

ನಮ್ಮ ವಿದ್ಯಾರ್ಥಿನಿಲಯಗಳು ವಿದ್ಯಾರ್ಥಿಗಳಿಗೆ ವರವಾಗಿ ಬಂದಿವೆ. ಆದರೆ ಅವುಗಳ ಉದ್ದೇಶವು ಆಧುನಿಕ ವಿದ್ಯೆಗಳನ್ನು ಕಲಿಯುವವರಿಗಷ್ಟೇ ಸೀಮಿತವಾಗಬಾರದು. ಸಮಾಜದ ಸರ್ವತೋಮುಖ ಅಭಿವೃದ್ಧಿಯೇ ಗುರಿಯಾಗಬೇಕು. ವೇದವಿದ್ಯಾರ್ಥಿಗಳಿಗೂ ಅಲ್ಲಿ ಸೌಕರ್ಯಗಳನ್ನು ಕಲ್ಪಿಸಬೇಕು. ವಿದ್ಯಾರ್ಥಿನಿಲಯಗಳಲ್ಲಿ ನಿತ್ಯಕರ್ಮಗಳನ್ನು ಮಾಡುವಂತೆ ನಿಯಮಗಳನ್ನು ಮಾಡಬೇಕು. ಸಂಧ್ಯಾದಿಗಳನ್ನು ಕಲಿಸಿಕೊಡಲು ವ್ಯವಸ್ಥೆ ಮಾಡಬೇಕು. ಹಾಗೆಯೇ ಅವರಿಗೆ ವಿದ್ಯಾರ್ಥಿವೇತನವನ್ನು ನೀಡಬೇಕು. ಹಿಂದೆ ಆಂಗ್ಲವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕಾದ ಆವಶ್ಯಕತೆ ಇತ್ತು. ಇಂದು ನಮ್ಮ ಸಂಸ್ಕೃತಿ ಧರ್ಮಗಳನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ವೇದಾಭ್ಯಾಸಕ್ಕೆ ಬೆಂಬಲವು ಆವಶ್ಯಕವಾಗಿದೆ. ವೇದವಿದ್ವಾಂಸರಿಗೂ ವೇತನ ಸಿಗುವಂತೆ ಸಮಾಜವು ವ್ಯವಸ್ಥೆ ಮಾಡಬೇಕು. ಅದರಿಂದ 'ಅನುಷ್ಠಾನ' ಮಾಡುವ ಪೂರ್ಣಪಂಡಿತರಿಗೆ ನೆಲೆದೊರೆತು ಸಮಾಜದ ಆದರ್ಶಸ್ಥಾನಗಳ ನಿರ್ಮಾಣವಾಗುತ್ತದೆ.

ನಮ್ಮಲ್ಲಿ ಅನೇಕರು ದುರಭ್ಯಾಸಗಳಿಗೆ ಬಲಿಯಾಗುತ್ತಿದ್ದೇವೆ. ಅವುಗಳಲ್ಲಿ ಆಲಸ್ಯವೂ ಒಂದು. **'ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾರಿಪುಃ'** ಎಂಬ ಮಾತನ್ನು ಗಮನಿಸಬೇಕು. ನಮ್ಮ ಕೆಲಸಗಳನ್ನು ನಾವೇ ಮಾಡಿಕೊಂಡ ಪರಂಪರೆ ನಮ್ಮದು. ಇತ್ತೀಚೆಗೆ ನಮ್ಮ ವೈದಿಕರಲ್ಲಿ ಹಲವರು ತಕ್ಕಷ್ಟು ಜ್ಞಾನವನ್ನು ಪಡೆಯುತ್ತಿಲ್ಲ. ಹೇಗೋ ಕರ್ಮವನ್ನು ಮಾಡಿಸಿ ಆದಷ್ಟು ಹೆಚ್ಚಾಗಿ ಹಣವನ್ನು ಗಳಿಸಬೇಕು ಎಂಬ ಪ್ರವೃತ್ತಿ ಒಳ್ಳೆಯದಲ್ಲ. ಅಂಥವರಿಗೆ ಇಹವೂ ಇಲ್ಲ , ಪರವೂ ಇಲ್ಲ.

ಶ್ರೀಮಂತರೂ ವಿದ್ಯಾವಂತರೂ ಪಾಠಶಾಲೆಗಳನ್ನು ಸ್ಥಾಪಿಸಲಿ, ಕೈಗಾರಿಕೆಗಳನ್ನು ನಡೆಸಲಿ. ಕಾಂಚಿಯ ಶ್ರೀ ಶ್ರೀ ಜಗದ್ಗುರುಗಳ ದೂರದೃಷ್ಟಿಯನ್ನೂ, ಕಾರ್ಯಕ್ಷಮತೆಯನ್ನೂ ನೋಡಿ ನಾವೆಲ್ಲ ಸ್ಫೂರ್ತಿ ಹೊಂದಬೇಕು. ಅವರು ತಮಿಳುನಾಡಿನಲ್ಲಿ ಹಾಗೆ ಸಾಧಿಸಿರುವದರಿಂದಲೇ ಸಮಾಜವು ಎಡರು ತೊಡರುಗಳ ನಡುವೆಯೂ ಮುಂದೆ ಬರಲು ಸಾಧ್ಯವಾಗಿದೆ ಎಂಬುದನ್ನು ಕಾಣಬೇಕು.

ನಮ್ಮ ಹಳ್ಳಿಗಳು ನಮ್ಮ ಸಂಸ್ಕೃತಿಯ ಬೇರುಗಳಿದ್ದಂತೆ. ಅಲ್ಲಿ ಜೀವನವು ಕಷ್ಟ ಎನ್ನುವುದರಲ್ಲಿ ಅರ್ಥವಿಲ್ಲ. ಹಳ್ಳಿಗಳಲ್ಲಿರುವ ನಮ್ಮವರು ಮೈಮುರಿದು ದುಡಿಯುತ್ತಾರೆ, ಆರೋಗ್ಯದಿಂದಲೂ ಇರುತ್ತಾರೆ. ಅತಿ ಶ್ರೀಮಂತಿಕೆಯಿಂದ ಅನಾಹುತಗಳಾಗುತ್ತವೆ. ರೈತನಾಗಿ ಒಂದು ಮಿತಿಯಲ್ಲಿ ಬದುಕುವಾಗಿನ ಆನಂದ ಬೇರೆಡೆ ದೊರೆಯದು. ಮನುಷ್ಯನಿಗೆ ಹೊಟ್ಟೆಪಾಡಿನ ಕನಿಷ್ಠ ಆವಶ್ಯಕತೆ ಪೂರೈಸಬೇಕು, ಅನಂತರ ಅವನು ಆಚಾರಗಳ ಮೂಲಕ ಆತ್ಮೋನ್ನತಿಯ ಕಡೆಗೆ ಗಮನ ಕೊಡಬೇಕು. ಅದು ಹಳ್ಳಿಯಲ್ಲಿ ಸಾಧ್ಯ. ಹಳ್ಳಿ ಮತ್ತು ಪಟ್ಟಣ ಎರಡರ ಅನುಭವವೂ ಇರುವುದರ ಹಿನ್ನಲೆಯಲ್ಲಿ ಈ ಮಾತು ಹೇಳುತ್ತಿದ್ದೇನೆ. ಕಾಳಿದಾಸನ ಈ ಮಾತು ನೆನಪಿರಲಿ.

ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ
ಮೂಢಃ ಪರಪ್ರತ್ಯಯನೇಯಬುದ್ಧಿಃ ॥

(ಹಳೆಯದು ಎಂದ ಮಾತ್ರಕ್ಕೇ ಎಲ್ಲವೂ ಒಳ್ಳೆಯದಲ್ಲ, ಹೊಸತು ಎಂದ ಮಾತ್ರಕ್ಕೆ ತಿರಸ್ಕರಣೀಯವೂ ಅಲ್ಲ. ವಿವೇಕಿಗಳು ಗುಣಗ್ರಾಹಿಗಳಾಗಿ ವರ್ತಿಸುತ್ತಾರೆ ; ಮೂಢರಾದರೋ ಕುರುಡಾಗಿ ಜೋತು ಬೀಳುತ್ತಾರೆ.)

ಬ್ರಾಹ್ಮಣನಿಗೆ ಸಂಧ್ಯಾಧಿ ನಿತ್ಯಕರ್ಮಗಳು ಅತ್ಯವಶ್ಯಕವಾದವುಗಳು. **'ಸಂಧ್ಯಾಹೀನೋಽ- ಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು'** ಎಂದು ಶಾಸ್ತ್ರವು ಹೇಳುತ್ತದೆ. **'ಶುಚಿರ್ವಾಪ್ಯಶುಚಿರ್ವಾಪಿ ಕಾಲೇ ಸಂಧ್ಯಾಮುಪಾಸೀತ'** ಎಂದು ಕಾಲಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ. **'ನ ಗಾಯತ್ರ್ಯಾಃ ಪರೋ ಮಂತ್ರಃ'** ಎಂದು ಆರ್ಯೋಕ್ತಿಯು ಹೇಳುತ್ತದೆ. ಸಂಧ್ಯಾದಿಗಳು ಬ್ರಾಹ್ಮಣರೆಲ್ಲರಿಗೂ ಸಮಾನವಾಗಿವೆ. ಇವುಗಳ ಅರ್ಥವನ್ನು ತಿಳಿದು ಅನುಷ್ಠಾನ ಮಾಡಬೇಕು. ಇದರಂತೆ ದೇವಪೂಜಾದಿಗಳನ್ನೂ ಮಾಡಬೇಕು. ಹೊರಗಡೆ ಯಾವ ಉದ್ಯೋಗವನ್ನಾದರೂ ಮಾಡಲಿ, ಮನೆಯಲ್ಲಿ ನಮ್ಮ ಕ್ರಮಗಳನ್ನೇ ಅನುಸರಿಸಬೇಕು.

ತೇನ ವಿನಾ ತೃಣಮಪಿ ನ ಚಲತಿ

'ದೇವರ ಇಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲ' ಎಂಬುದು ಹಿರಿಯರ ಮಾತು. ನನ್ನ ಬಾಳೂ ಅದಕ್ಕೆ ಹೊರತಾದುದಲ್ಲ. ನಾನು ನಮ್ಮ ಹಳ್ಳಿಯಲ್ಲಿಯೇ ಇರಬೇಕೆಂದು ಬಯಸಿದವನು. ಆದರೆ ಅದು ಕಾರಣಾಂತರಗಳಿಂದ ಫಲಿಸದೆ ಹೋಯಿತು. ಅದು ದೇವರ ಇಚ್ಛೆ. ಆ ವಿಷಯದಲ್ಲಿ ನನ್ನ ಇಚ್ಛೆಯು ಫಲಿಸದಿದ್ದರೂ, ವಿದ್ವಾಂಸನಾಗಬೇಕೆಂಬ ಇಚ್ಛೆಯು ಫಲಿಸಿತು. ಶಿಷ್ಯವಾತ್ಸಲ್ಯವುಳ್ಳ ಗುರುಗಳು ಲಭಿಸಿದರು. ಅವರೆಲ್ಲರಿಗೂ ಅನಂತವಾದ ನಮಸ್ಕಾರಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಗುರುಗಳಿಗೆ ಯಾವ ವಿಧವಾದ ದಕ್ಷಿಣೆಯನ್ನೂ ಕೊಡಲಿಲ್ಲ , ಅದಕ್ಕಾಗಿ ವಿಷಾದಿಸುತ್ತೇನೆ.

ನನ್ನ ಸ್ನೇಹಿತರೂ ನನ್ನನ್ನು ಪ್ರೀತಿಯಿಂದ ನೋಡಿಕೊಂಡರು, ಸಹಾಯ ಮಾಡಿದರು. ಕೆಲವರ ಹೆಸರುಗಳನ್ನು ನಾನು ಲೇಖನದಲ್ಲಿ ಪ್ರಸ್ತಾಪಿಸದೆ ಇರಬಹುದು. ನಾನು ಓದುವುದಕ್ಕೆ ವ್ಯವಸ್ಥೆ ಮಾಡಿ, 'ವಾರ'ಗಳನ್ನು ಕೊಡಿಸಿ, ಮನೆಯಲ್ಲೇ ಇಟ್ಟುಕೊಂಡು ಕಣ್ಣಾಗಿದ್ದ ನನ್ನ ಭಾವನವರಾದ ವೆಂಕಟಕೃಷ್ಣಾವಧಾನಿಗಳಿಗೆ ಎಷ್ಟು ವಂದನೆ ಸಲ್ಲಿಸಿದರೂ ಸಾಲದು.

ಪೌರೋಹಿತ್ಯದಲ್ಲಿ ನನಗೆ ಆಸಕ್ತಿ ಇರಲಿಲ್ಲ. ಆಗ ಕೆಲವು ಲೌಕಿಕರಿಗೆ ಪುರೋಹಿತರ ಮೇಲೆ ಆದರ ಇಲ್ಲದಿದ್ದುದೇ ಕಾರಣ. ಆದರೂ ಗೃಹಸ್ಥರ ಒತ್ತಾಯಕ್ಕೆ ಮಣಿದು ಪೌರೋಹಿತ್ಯದಲ್ಲಿಯೂ ತೊಡಗಿಕೊಳ್ಳಬೇಕಾಯಿತು. ಇದರಿಂದ ಅನುಭವದ ಜತೆಗೆ ಆರ್ಥಿಕವಾಗಿ ಅನುಕೂಲವೂ ಆಯಿತು.

ಶ್ರೀ ವಿದ್ಯಾರಣ್ಯ ಪಾಠಶಾಲೆಗೆ ನನ್ನನ್ನು ಕರೆಸಿಕೊಂಡು ವೇದ ಅಧ್ಯಾಪನಕ್ಕೆ ಅವಕಾಶ ಮಾಡಿಕೊಟ್ಟವರು ಕಾಂಚಿಯ ಶ್ರೀ ಶ್ರೀ ಜಗದ್ಗುರುಗಳು. ಅದರಿಂದ ನನ್ನ ಜ್ಞಾನವೂ ವಿಸ್ತಾರವಾಯಿತು. ಅಲ್ಲಿಯ ಅಧಿಕಾರಿಗಳೂ ಗೌರವದಿಂದ ನೋಡಿಕೊಂಡರು. ಗುರುಗಳಿಗೆ ಶಿರಸಾ ವಂದಿಸುತ್ತೇನೆ.

ಉಪಸಂಹಾರ

ಮಾನವನು ಅಪೇಕ್ಷಿಸುವ ಪುರುಷಾರ್ಥಗಳು ನಾಲ್ಕು : ಧರ್ಮ, ಅರ್ಥ, ಕಾಮ, ಮೋಕ್ಷ. ಮೋಕ್ಷವು ವೈಯಕ್ತಿಕವಾದುದು. ಅದಕ್ಕೆ ವೇದಾಂತದ ತತ್ತ್ವಗಳನ್ನು ತಿಳಿಸುವ ಪ್ರವಚನಾದಿಗಳನ್ನು ಏರ್ಪಡಿಸುವುದು ಆಸ್ತಿಕರ ಕರ್ತವ್ಯವಾಗಿದೆ.

ಸಮಾಜವು ಧರ್ಮವನ್ನು ಅನುಸರಿಸುವುದು ಅತ್ಯವಶ್ಯಕವಾದುದು. **ಧರ್ಮಾದರ್ಥಶ್ಚ ಕಾಮಶ್ಚ.** ಧರ್ಮವನ್ನು ಅನುಸರಿಸಿಯೇ, ಸಮಾಜವು ಮುನ್ನಡೆಯಬೇಕು. **ಧರ್ಮೋ ರಕ್ಷತಿ ರಕ್ಷಿತಃ** ಎಲ್ಲ ಕಾಲಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಇದು ಸತ್ಯವಾದುದು. ಧರ್ಮಕ್ಕೆ ವಿರುದ್ಧವಾಗಿ ಹಣವನ್ನು ಗಳಿಸುವುದನ್ನು ಯಾವ ನಾಗರಿಕ ಸಮಾಜವೂ ಒಪ್ಪುವುದಿಲ್ಲ.

ಈಗ ಕಾಲಾನುಗುಣವಾಗಿ ಹಲವು ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ಅದರಲ್ಲಿ ಪಾಶ್ಚಾತ್ಯ ಸಮಾಜದ ಅಂಧಾನುಕರಣೆಯೂ ಒಂದು. **ಯುಕ್ತಿಯುಕ್ತಂ ವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ.** ಯುಕ್ತವಾದುದನ್ನು ಎಲ್ಲಿಂದಲಾದರೂ ಗ್ರಹಿಸಬಹುದು. ಆದರೆ ಅಂಧಾನುಕರಣ ಕೂಡದು. **ಸ್ವಧರ್ಮೇ ನಿಧನಂ ಶ್ರೇಯಃ, ಪರಧರ್ಮೋ ಭಯಾವಹಃ** ಎಂಬ ಕೃಷ್ಣಪರಮಾತ್ಮನ ಮಾತನ್ನು ಮರೆಯಬಾರದು. ಈಗ ಮದ್ಯಪಾನಾದಿಗಳನ್ನು ನಾಗರಿಕ ಸಮಾಜದ ಕುರುಹುಗಳೆಂದು ಪ್ರಸಾರಮಾಧ್ಯಮಗಳಲ್ಲಿ ತೋರಿಸಲಾಗುತ್ತಿದೆ. ಇವುಗಳನ್ನು ನಿಲ್ಲಿಸಬೇಕು. ನಮ್ಮ ವಿದ್ಯಾರ್ಥಿಗಳು ಅಂಥ ದುರ್ವ್ಯಸನಗಳಿಗೆ ಅಂಟಿಕೊಳ್ಳದಂತೆ ಹಿರಿಯರು ನೋಡಿಕೊಳ್ಳಬೇಕು.

ಈಗ, ವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ, ಇಚ್ಛೆಬಂದಂತೆ ನಡೆಯುವುದನ್ನೇ ಸ್ವಾತಂತ್ರ್ಯವೆಂದು ಭಾವಿಸಲಾಗುತ್ತಿದೆ. ಅದು ಸ್ವಾಚ್ಛಂದ್ಯ. ಅದು ವಿವಾಹದ ವಿಷಯವಿರಬಹುದು, ಉಡುಗೆತೊಡುಗೆ, ಆಹಾರಪಾನೀಯ, ಮಾನವ ಸಂಬಂಧಗಳ ವಿಷಯವಾಗಿರಬಹುದು. ಅವರು ತಮ್ಮ ತತ್ಕಾಲದ ಸುಖ ಒಂದನ್ನೇ ಮುಖ್ಯವೆಂದು ಗಣಿಸುವಂಥವರು. ಮತ್ತೊಂದು, ಹಣದ ಆಸೆಯಿಂದ ವಿದೇಶಕ್ಕೆ ಹೋಗುವುದು. ಅವರು ನಮ್ಮ ಧರ್ಮ ಸಂಸ್ಕೃತಿಗಳನ್ನು ಮರೆಯದಂತೆ ಅನುಕೂಲಪಡಿಸುವುದು ಸಮಾಜದ ಹಿರಿಯರ ಕರ್ತವ್ಯವಾಗಿದೆ. ವೈಯಕ್ತಿಕ ಸ್ವಾತಂತ್ರ್ಯದ ಹೆಸರಿನಲ್ಲಿ ವೃದ್ಧರನ್ನು ಉಪೇಕ್ಷಿಸಲಾಗುತ್ತಿದೆ. **ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿ ದೇವೋ ಭವ,** ಎಂಬ ಉಪನಿಷತ್ತಿನ ಉಪದೇಶಗಳನ್ನು ಮರೆಯಬಾರದು. ಸ್ವದೇಶವನ್ನೂ ಮರೆಯಬಾರದು. **ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ** ಎಂಬ ಮಾತನ್ನು ಅನುಸರಿಸಬೇಕು.

ಮಾನವನು ಉತ್ತಮ ಮಾನವನಾಗಬೇಕು, ಮಹಾಮಾನವನೂ ಆಗಬೇಕು.

ಸರ್ವೇ ಚ ಸುಖಿನಸ್ಸಂತು
ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಗ್ಭವೇತ್ ॥

ಓಂ ತತ್ಸತ್
ಶ್ರೀಕೃಷ್ಣಾರ್ಪಣಮಸ್ತು

ಗಮಕ ಕಲಾರಾಧನೆ

ಹೊಸಹಳ್ಳಿ ಕೇಶವಮೂರ್ತಿ
ನಿರೂಪಣೆ : ಸುಮನಾ ವಿಶ್ವನಾಥ್

ಗಮಕ ಕಲಾರಾಧನೆ*

ಗಮಕಕಲಾಕ್ಷೇತ್ರದಲ್ಲಿ ಶ್ರೀ ಎಚ್. ಆರ್.ಕೇಶವಮೂರ್ತಿಯವರದು ಒಂದು ದೊಡ್ಡ ಹೆಸರು, ಒಂದು ವಿಶೇಷ ಸ್ಥಾನ. ಉದಯ ಟಿ.ವಿ.ಯಲ್ಲಿ ಸಾಮಾನ್ಯವಾಗಿ ಅವರ ಕಾರ್ಯಕ್ರಮವನ್ನು ನೋಡುತ್ತಿದ್ದ ನಾನು, ಮಾನ್ಯ ಮತ್ತೂರ್‌ಜೀಯವರ ಪರಿಚಯವಾದ ನಂತರ, ಮತ್ತೂರ್‌ಜೀಯವರಿಂದಲೇ ಮಾನ್ಯ ಕೇಶವಮೂರ್ತಿಯವರಿಗೂ ಪರಿಚಿತಳಾದೆ. ಗಮಕಕಲೆಯನ್ನು ಪ್ರೀತಿಸಿ - ಆದರಿಸುವ, ಸ್ವತಃ ತಕ್ಕ ಮಟ್ಟಿಗೆ ಅಭ್ಯಾಸವನ್ನೂ ಮಾಡಿರುವ ನಮ್ಮ ತಂದೆ ಶ್ರೀ ಕೆ. ಸುಂದರರಾಜು ಅವರಿಂದ ಹಾಗೂ ಮನೆಯಲ್ಲೇ ದೇವರ ಮುಂದೆ ಕುಳಿತು, ತಮಗೆ ತಿಳಿದಿದ್ದ ನಾಲ್ಕಾರು ರಾಗಗಳಲ್ಲೇ ಇಡೀ ಕುಮಾರವ್ಯಾಸ ಭಾರತದ ಪದ್ಯಗಳನ್ನು ಎರಡು ಸಾರಿ ವಾಚನ ಮಾಡಿದ್ದ ನಮ್ಮ ತಾಯಿ ಶ್ರೀಮತಿ ವಿಜಯಲಕ್ಷ್ಮಿ ಅವರಿಂದ ಪ್ರೇರಿತಳಾಗಿ ಸ್ವಾಭಾವಿಕವಾಗಿಯೇ ಗಮಕಕಲೆಯ ಬಗ್ಗೆ ಪ್ರೀತಿ ಬೆಳೆಸಿಕೊಂಡ ನಾನು ಮಾನ್ಯ ಎಚ್.ಆರ್. ಕೇಶವಮೂರ್ತಿಯವರ ಜೀವನಕಥೆಯನ್ನು ಬರೆಯುವಂತಾಗಿರುವುದು ಸುಯೋಗವೇ ಸರಿ. ಇಂಥ ಅವಕಾಶವನ್ನು ನನಗೆ ಬಹಳ ವಿಶ್ವಾಸದಿಂದ ಒದಗಿಸಿಕೊಟ್ಟ ಶ್ರೀ ಕೇಶವಮೂರ್ತಿಯವರಿಗೆ ನಾನು ಸದೈವ ಕೃತಜ್ಞಳು. ಇಂತಹ ಮಹಾನ್ ಕಲಾವಿದರಿಗೆ ನನ್ನನ್ನು ಪರಿಚಯಿಸಿದ ಮಾನ್ಯ ಮತ್ತೂರ್‌ಜೀಯವರಿಗೆ ನಾನು ಎಂದಿಗೂ ಆಭಾರಿ.

ಶ್ರೀ ಕೇಶವಮೂರ್ತಿಯವರು ನನಗೆ ಗುರುಸದೃಶರು. ಅವರ ವಾಚನದ ಬಗ್ಗೆ ಏನು ಹೇಳುವುದು? ''ಹೊಗಳುವೊಡೆ ಬರಿ ಮಾತುಗಳಳವಲ್ಲ'' ಎಂದಷ್ಟೇ ವಿನಯದಿಂದ ಹೇಳಬಹುದು. ಅದಕ್ಕಿಂತ ಹೆಚ್ಚಿಗೆ ಹೇಳುವ ಶಕ್ತಿ ನನಗಿಲ್ಲ.

೨೦೦೫ರ ಫೆಬ್ರುವರಿ **೨೨**ಕ್ಕೆ ಎಪ್ಪತ್ತೆರಡು ವಸಂತಗಳನ್ನು ಕಂಡಿರುವ ಶ್ರೀ ಕೇಶವಮೂರ್ತಿಯವರ ಭೀಮರಥ ಶಾಂತಿ ಮಹೋತ್ಸವದ ಸಂದರ್ಭದಲ್ಲಿ ಈ ಕಥಾನಕವು ಬರಬೇಕೆನ್ನುವ ಸಲುವಾಗಿ, ಅವರನ್ನು ಮಾತನಾಡಿಸಿ, ಅವರ ಅನುಭವಗಳನ್ನು ಕೇಳಿ ದಾಖಲಿಸುತ್ತಿದ್ದೇನೆ.

ಕುಟುಂಬ

ಓದುಗ ಮಹಾಶಯರೆಲ್ಲರಿಗೂ ಮೊದಲು ನನ್ನ ನಮಸ್ಕಾರ..... ನಿಜ... ಇಂದಿಗೆ ಎಪ್ಪತ್ತೆರಡು ವರ್ಷಗಳನ್ನು ಪೂರೈಸಿದ ನಾನು ನನ್ನ ಬಗೆಗೆ ಹೇಳುವಂತಹದ್ದು ಏನೂ ಇಲ್ಲವೆಂದೇ ನನ್ನ ಭಾವನೆ. ಆದರೆ ನನ್ನ ಆರಾಧ್ಯದೈವವಾದ 'ಗಮಕಕಲಾ' ಸೇವೆಯನ್ನು ನನ್ನ ಕೈಲಾದಷ್ಟು ಮಾಡಿರುವ ಕಾರಣದಿಂದಾಗಿ ಈಗ ನನ್ನ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾದ ಸಂದರ್ಭ ಬಂದಿದೆ.....

ನಾನು ಹುಟ್ಟಿದ್ದು **೧೯೩೪ರ** ಫೆಬ್ರುವರಿ ಇಪ್ಪತ್ತೆರಡರಂದು, ಶಿವಮೊಗ್ಗ ಜಿಲ್ಲೆ, ಅದೇ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ. ತುಂಗಾನದಿಯ ಇಕ್ಕೆಲಗಳಲ್ಲಿರುವ ಜೋಡಿಗ್ರಾಮಗಳು ಮತ್ತೂರು - ಹೊಸಹಳ್ಳಿ, ಸುಂದರ ಪ್ರಕೃತಿಯ ರಮಣೀಯತೆಯ ಮಡಿಲಲ್ಲಿರುವಂಥವು. ಹೊಸಹಳ್ಳಿಯ ಶ್ರೀ ರಾಮಾವಧಾನಿ, ಹಾಗೂ ಶ್ರೀಮತಿ ಲಕ್ಷ್ಮೀದೇವಮ್ಮ ಅವರ ಐದು ಜನ ಗಂಡು ಮಕ್ಕಳಲ್ಲಿ ನಾನು ಒಬ್ಬ. ನಮ್ಮ ಜತೆಗೆ ಇಬ್ಬರು ಹೆಣ್ಣುಮಕ್ಕಳು. ನಮ್ಮ ಅಣ್ಣಂದಿರು ಸುಬ್ರಾಯಶಾಸ್ತ್ರಿ, ರಾಮಾಶಾಸ್ತ್ರಿ, ನಂತರ ನಾನು, ಆಮೇಲೆ ನನಗೆ ಇಬ್ಬರು ತಮ್ಮಂದಿರು ಕೃಷ್ಣಮೂರ್ತಿ ಹಾಗೂ ಚಿಂತಾಮಣಿ. ನನಗೆ ಒಬ್ಬರು ಅಕ್ಕ ಭವಾನಿ, ಒಬ್ಬಳು ತಂಗಿ ಸೀತೆ. ನಮ್ಮದು ಮಧ್ಯಮ ವರ್ಗದ ಕುಟುಂಬ. ಬಹಳ ಸಿರಿವಂತಿಕೆ ಇಲ್ಲದಿದ್ದರೂ ಜೀವನರಥ ಸಾಗಿಸಲು ಎಂದೂ ಕಷ್ಟವಾದದ್ದಿಲ್ಲ. ನಮ್ಮ ತಂದೆ - ತಾತನವರ ಕಾಲದಿಂದಲೂ ನಮಗೆ ಭೂಮಿಯೇ ಆಧಾರ. ವ್ಯವಸಾಯವೇ ನಮ್ಮ ಪ್ರಧಾನ

* ಗಮಕಗಂಧರ್ವ (ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ಸಪ್ತತಿ ಶಾಂತಿಯಲ್ಲಿ ಸಮರ್ಪಿಸಿದ ಸಂಭಾವನಾ ಗ್ರಂಥ); ಎಚ್.ಆರ್.ಕೆ. ಅವರ ಜೀವನ ಚರಿತ್ರೆಯ ನಿರೂಪಣೆ: ಶ್ರೀಮತಿ ಸುಮನಾ ವಿಶ್ವನಾಥ್; ಪ್ರಧಾನ ಸಂಪಾದಕ : ಶ್ರೀ ರಾಜಾರಾಮಮೂರ್ತಿ ; ಪ್ರ.ಮು. **೨೦೦೬**, ಪು. 112+xvi 1/8 ಕ್ರೌನ್ ; ಪ್ರಕಾಶನ : ಶ್ರೀ ಸ. ನಾಗರಾಜ, ಸಂಕೇತ ಪ್ರಕಾಶನ, ಸಂಕೇತಿ ಸಂಗಮ ಮಾಸಪತ್ರಿಕೆ, ವೈಖರೀ, ಹೊಸಹಳ್ಳಿ, ಶಿವಮೊಗ್ಗ ತಾಲೂಕು.

ವೃತ್ತಿ. ನಮ್ಮ ತಂದೆಯವರು ವೇದವನ್ನು ಪೂರ್ತಿಯಾಗಿ ಅಭ್ಯಾಸ ಮಾಡಿದ್ದರು. ಸಂಸ್ಕೃತ ವಿದ್ವಾಂಸರಾಗಿದ್ದರು. ಅವರು ತಮ್ಮ ವಿದ್ಯಾಭ್ಯಾಸಕ್ಕೆಂದೇ ಬೆಂಗಳೂರಿಗೆ ಹೋಗಿದ್ದವರು. ಆಗ ನಮ್ಮೂರ್ರೇ ಸಂಸ್ಕೃತ-ವೇದ ಕಲಿಕೆಗೆ ಹೆಸರುವಾಸಿಯಾಗಿದ್ದರೂ ಅದು 'ಹಳ್ಳಿ ಪಾಠ'ವೆನಿಸಿದ್ದಿತಂತೆ, ಹಾಗೆನ್ನುತ್ತಿದ್ದರು ನಮ್ಮ ಹಿರಿಯರು. ಆದ್ದರಿಂದ ಕ್ರಮವಾಗಿ ಪಾಠ ಕಲಿಯಲು ಬೆಂಗಳೂರಿನ ಮಹಾರಾಜ ಸಂಸ್ಕೃತ ಕಾಲೇಜಿಗೆ ಸೇರಿದರು. ಬೆಂಗಳೂರಿನಲ್ಲಿ ಇದ್ದುಕೊಂಡು ವಾರಾನ್ನ ಮಾಡಿಕೊಂಡು ಸಂಸ್ಕೃತದ ಪರೀಕ್ಷೆಗಳನ್ನು ಪಾಸುಮಾಡಿಕೊಂಡು, ಪ್ರಶಸ್ತಿಪತ್ರವನ್ನು ಪಡೆದು ನಂತರ ಊರಿಗೆ ಹಿಂದಿರುಗಿದರು. ಊರಿನಲ್ಲಿ ಕೃಷಿ ಕೆಲಸ ಮುಂದುವರೆಸಿದರು. ಕೃಷಿ ಮಾಡುವವರಿಗೆ ಸಾಮಾನ್ಯವಾಗಿ ವರ್ಷಪೂರ್ತಿ ಕೆಲಸವಿರುವುದಿಲ್ಲ. ಮಳೆಗಾಲವಾಯಿತೆಂದರೆ ಕೆಲಸ ಇಲ್ಲವೇ ಇಲ್ಲ ಎನ್ನುವಷ್ಟು ಬಿಡುವು. ಆದರೆ ಆಗಲೂ ಸುಮ್ಮನೆ ಕುಳಿತುಕೊಳ್ಳುವುದು ತಂದೆಯವರ ಸ್ವಭಾವವಾಗಿರಲಿಲ್ಲ. ಆಗ ಅವರು ಪುರಾಣ ಹೇಳುತ್ತಿದ್ದರು. ಆ ಸಮಯದಲ್ಲಿ ಗಮಕ ಅಷ್ಟು ಬಳಕೆಯಲ್ಲಿರಲಿಲ್ಲ. ಆದ್ದರಿಂದ ಊರಿನಲ್ಲಿ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ತಿಂಗಳು ಪುರಾಣ ಹೇಳುವುದು, ಊರಿನ ಮಿಕ್ಕವರೆಲ್ಲರೂ ಆ ಮನೆಗೆ ಬಂದು ಕುಳಿತು ಪುರಾಣಶ್ರವಣ ಮಾಡುವುದು ನಡೆಯುತ್ತಿತ್ತು. ಜತೆಗೆ ಊರಿನಲ್ಲಿ ಶುಭಸಮಾರಂಭಗಳಾದಾಗ, ಯಾರಾದರೂ ವಿಧಿವಶರಾದಾಗ ಪುರಾಣ ಹೇಳುವುದು ರೂಢಿಯಲ್ಲಿತ್ತು. ಹೀಗೆ ನಮ್ಮ ತಂದೆ ಸರಿಸುಮಾರು ಹದಿನೆಂಟು ಪುರಾಣಗಳನ್ನೂ ಹೇಳಿದ್ದಾರೆ. ಅವರಿಗೆ ಸಂಗೀತದ ಮೇಲೆ ವಿಶೇಷ ಪ್ರೀತಿ - ಅಭಿಮಾನ. ನಮ್ಮ ತಂದೆಯ ಒಬ್ಬರೇ ಅಣ್ಣ (ನಮ್ಮ ದೊಡ್ಡಪ್ಪ) ಸುಬ್ರಾಯಶಾಸ್ತ್ರಿಗಳು, ಅವರ ಪತ್ನಿ ಲಕ್ಷ್ಮೀದೇವಮ್ಮ. ನಮ್ಮ ತಂದೆ ಹಾಗೂ ದೊಡ್ಡಪ್ಪನವರು ಒಂದೇ ಜೀವ, ಎರಡು ದೇಹಗಳಂತೆ ಇದ್ದುದು. ಅಷ್ಟು ಅನ್ಯೋನ್ಯತೆ ಅವರಿಬ್ಬರಲ್ಲಿ. ನಮ್ಮ ದೊಡ್ಡಪ್ಪನವರಿಗೆ ಮೂವರು ಹೆಂಡಿರು. ಇಬ್ಬರು ಹೆಂಡಿರು ಮಕ್ಕಳಿಲ್ಲದೇ ಇಹಲೋಕ ತ್ಯಜಿಸಿದರು. ದೊಡ್ಡಪ್ಪನವರ ಮೂರನೆಯ ಹೆಂಡತಿಯಲ್ಲಿ ಮೂರು ಜನ ಮಕ್ಕಳಾದರು. ಹೀಗೆ ದೊಡ್ಡಪ್ಪನವರ ಕುಟುಂಬ, ನಮ್ಮ ತಂದೆಯ ಕುಟುಂಬ ಸೇರಿ - ಎರಡೂ ಕುಟುಂಬಗಳೂ ಒಂದೇ ಮನೆಯಲ್ಲಿ ಬಹಳ ವರ್ಷಗಳವರೆಗೆ ಒಂದೇ ಕುಟುಂಬದವರಂತೆ ಅನ್ಯೋನ್ಯವಾಗಿ ಇದ್ದೆವು. ಈಗ್ಗೆ ಮೂವತ್ತು ವರ್ಷಗಳ ಹಿಂದಿನವರೆಗೂ ಒಟ್ಟಿಗೇ ಇದ್ದುದು. ದೊಡ್ಡಪ್ಪನವರ ಮಕ್ಕಳಿಗೆಲ್ಲ ವ್ಯವಸಾಯವೇ ಮುಖ್ಯ ವೃತ್ತಿಯಾಗಿದ್ದರೂ, ವೇದ ಸಂಸ್ಕೃತವನ್ನು ಚೆನ್ನಾಗಿಯೇ ತಿಳಿದಿದ್ದಾರೆ. ದೈವಕೃಪೆಯಿಂದ ಎಲ್ಲರೂ ಅನುಕೂಲವಾಗಿದ್ದಾರೆ..... ನಮ್ಮ ಮನೆಯಲ್ಲೂ ನಮ್ಮಣ್ಣ ತಮ್ಮಂದಿರು, ಅಕ್ಕ-ತಂಗಿಯರು ಯಾವುದೇ ಕೊರತೆ ಇಲ್ಲದ ಜೀವನ ನಡೆಸುತ್ತಿದ್ದೇವೆ.

ಇಷ್ಟು ದೊಡ್ಡದಾದ ಕುಟುಂಬವನ್ನು ಹೀಗೆ ಒಂದಾಗಿ ಅಷ್ಟು ವರ್ಷಗಳ ಕಾಲ ಒಟ್ಟಿಗೆ ಇಟ್ಟದ್ದು ಯಾವುದು ಎಂದು ನೆನೆದರೇ ಆಶ್ಚರ್ಯವಾಗುತ್ತದೆ.... ಅವಿಭಕ್ತ ಕುಟುಂಬಗಳು ನಮ್ಮಲ್ಲಿ ಹೊಸದೇನಲ್ಲ. ಆದರೆ ಪರಸ್ಪರ ಪ್ರೀತಿ-ವಿಶ್ವಾಸವು ಇಡೀ ಕುಟುಂಬವನ್ನು ಒಂದಾಗಿ ಇಡುವ ಶಕ್ತಿಯಾಗಿರುತ್ತದೆ ಎನ್ನುವುದಂತೂ ಖಚಿತ. ನಮ್ಮ ದೊಡ್ಡಪ್ಪ ಹಾಗೂ ತಂದೆಯವರದು ಆದರ್ಶ ಭ್ರಾತೃಪ್ರೇಮ. ಅದೇ ನಮಗೂ ಆದರ್ಶವಾಗಿದ್ದುದು, ಎಂದಿಗೂ ಇರುವಂಥದು. ನಮ್ಮ ತಂದೆಗೆ ಹದಿನಾಲ್ಕರ ವಯಸ್ಸಿನಲ್ಲಿಯೇ ಮದುವೆಯಾಗಿ ನಮ್ಮಮ್ಮ ಮನೆಗೆ ಬಂದುದು, ದೊಡ್ಡಪ್ಪ ಅಣ್ಣನಾಗಿ - ತಂದೆಯಂತೆ ತಮ್ಮನ್ನು ಪ್ರೀತಿಯಿಂದ ನೋಡಿಕೊಂಡದ್ದು ಎಲ್ಲವನ್ನೂ ನಮ್ಮ ತಂದೆ ಹಿಂದೆ ಹೇಳುವುದಿತ್ತು. ಅದನ್ನು ನಾವೂ ಕೆಲವಾರು ವರ್ಷಗಳು ಕಣ್ಣಾರೆ ಕಂಡೂ ಇದ್ದೇವೆ. ನಮ್ಮ ತಂದೆಯ ಅರುವತ್ತೈದನೇ ವಯಸ್ಸಿನವರೆಗೂ ನಾವೆಲ್ಲರೂ ಒಟ್ಟಾಗಿ ಇದ್ದೆವು. ನಂತರ ಕುಟುಂಬವೂ ಸಾಕಷ್ಟು ದೊಡ್ಡದಾಗಿ, ಮಕ್ಕಳೂ ಎಲ್ಲರೂ ಬೆಳೆದು ದೊಡ್ಡವರಾಗಿ ನಿಂತಮೇಲೆ ಸರಿಸುಮಾರು ದೊಡ್ಡದಾಗಿಯೇ ಇದ್ದ ಒಟ್ಟು ಆಸ್ತಿಯನ್ನು ಬೇರೆ ಬೇರೆ ಮಾಡಿ, ನಾವುಗಳು ನಮ್ಮ ನಮ್ಮ ಕುಟುಂಬಗಳ ಜತೆಗೆ ನೆಲೆಯಾಗುವಂತಾಯಿತು.... ಬೇರೆಯಾದ ಉದ್ದೇಶವೂ ಒಳ್ಳೆಯದೇ ಆಗಿತ್ತು. ಒಟ್ಟಾಸ್ತಿಯನ್ನು ಒಬ್ಬರೇ ನೋಡಿಕೊಳ್ಳುವಾಗ ಮಿಕ್ಕವರಿಗೆ ಅವರವರ ಜವಾಬುದಾರಿ ಏನು - ಎಷ್ಟು ಎಂದು ಸರಿಯಾಗಿ ಅಂದಾಜಾಗಿರುವುದಿಲ್ಲ. ಹಾಗಾಗಿ ಒಬ್ಬರಿಗೇ ಕಾರ್ಯಭಾರದ ಹೊರೆ ಹೆಚ್ಚಾಗುವ ಬದಲು, ಅವರವರಿಗೆ ಸೇರಿದ ಆಸ್ತಿ, ಭೂಮಿ ಕಾಣಿಯನ್ನು ಅವರವರೇ ನೋಡಿಕೊಳ್ಳುವ ಹಾಗಾದರೆ ಕಾರ್ಯವ್ಯಾಪ್ತಿ ತಿಳಿದು, ಜವಾಬುದಾರಿಯೂ ತಾನಾಗಿಯೇ ಹೆಚ್ಚಿ ಎಲ್ಲರೂ ಸಮಾಧಾನದಿಂದ ಇರುವಂತಾಗುತ್ತದೆ. ಇದು ಲೋಕರೂಢಿಯೂ ಹೌದಷ್ಟೆ? ನಾನಾದರೂ ನನ್ನ ನಲ್ವತ್ತನೆಯ ವಯಸ್ಸಿನವರೆಗೂ ಒಟ್ಟು ಕುಟುಂಬದಲ್ಲೇ ಇದ್ದುದು.

❁ ❁ ❁

ವಿದ್ಯಾಭ್ಯಾಸ

ಮನೆಯಲ್ಲಿ ಆಗ ತಂದೆ ಸಂಸ್ಕೃತ - ವೇದವನ್ನು ಸ್ವಲ್ಪ ಸ್ವಲ್ಪ ಹೇಳಿಕೊಡುತ್ತಿದ್ದರೂ ನನ್ನನ್ನು ಹೊಸಹಳ್ಳಿಯ ಪ್ರೈಮರಿಶಾಲೆಗೆ (ಪ್ರಾಥಮಿಕ) ಇಂಗ್ಲಿಷ್ ಶಿಕ್ಷಣಕ್ಕಾಗಿ ಸೇರಿಸಿದರು. ನಾಲ್ಕನೆಯ ಇಯತ್ತೆಯವರೆಗೆ ಅಲ್ಲಿ ಓದಿ ನಂತರ ಮಾಧ್ಯಮಿಕ ಶಾಲೆಗೆ ಮತ್ತೂರಿಗೆ ಹೋಗುತ್ತಿದ್ದೆ. ಮತ್ತೂರು ಶಾಲೆಯಲ್ಲಿ ಎಲ್.ಎಸ್.

(ಲೋಯರ್ ಸೆಕೆಂಡರಿ, ೮ನೇ ತರಗತಿ) ಪಾಸು ಮಾಡಿ ನಂತರ ತರೀಕೆರೆಯ ಶಾಲೆಗೆ ೯ನೆಯ ತರಗತಿಗೆ ಸೇರಿದೆ. ಶಿಕ್ಷಣವನ್ನು ಮತ್ತೂರಿನಲ್ಲೇ ಮುಂದುವರೆಸಬಹುದಿತ್ತು. ಆದರೆ ತರೀಕೆರೆಗೆ ಹೊರಡಲು ಕಾರಣ ನಮ್ಮ ದೊಡ್ಡಪ್ಪನವರಾದ ತರೀಕೆರೆ ಕೃಷ್ಣಶಾಸ್ತ್ರಿಗಳು (ನಮ್ಮ ತಾಯಿಯ ಅಕ್ಕನ ಗಂಡ).

ನಮ್ಮ ದೊಡ್ಡಪ್ಪ ಕೃಷ್ಣಶಾಸ್ತ್ರಿಗಳು ಆಗ ಕೋಡಿಹಳ್ಳಿಯಲ್ಲಿದ್ದರು. ಅದೊಂದು ಇನಾಮು ಗ್ರಾಮ. ಅಲ್ಲೇ ಅವರು ಜೀವನ ನಡೆಸುತ್ತಿದ್ದರು. ಅವರ ಮಗನೂ ನನ್ನ ಜತೆಗೇ ಮತ್ತೂರಿನಲ್ಲೇ ಓದುತ್ತಿದ್ದ. ನಮ್ಮಿಬ್ಬರದೂ ಲೋಯರ್ ಸೆಕೆಂಡರಿ ಪರೀಕ್ಷೆ ಮುಗಿದು ರಜೆಯಲ್ಲಿ ಮನೆಯಲ್ಲಿದ್ದಾಗ ದೊಡ್ಡಪ್ಪನವರು ಬಂದರು. ತಂದೆಯ ಹತ್ತಿರ ಮಾತನಾಡುವಾಗ ತರೀಕೆರೆಯ ಪ್ರೌಢಶಾಲೆಗೆ ತಂದೆಯು ಓದುತ್ತಿದ್ದ ಬೆಂಗಳೂರಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದವರ ಮಗ ಶ್ರೀ ಶಂಕರನಾರಾಯಣರಾವ್ ಮುಖ್ಯೋಪಾಧ್ಯಾಯರಾಗಿ ಬಂದಿದ್ದಾರೆ ಎಂದು ತಿಳಿಸಿದರು. ದೊಡ್ಡಪ್ಪ ಅವರ ಪರಿಚಯವನ್ನು ಚೆನ್ನಾಗಿಯೇ ಮಾಡಿಕೊಂಡಿದ್ದರು. ಹಾಗಾಗಿ 'ತರೀಕೆರೆಯಲ್ಲೇ ತಮ್ಮ ಮಗ ಸುಂದರನೂ, ನಾನೂ ಓದುವುದು ಚೆನ್ನಾದೀತು' ಎಂದು ಹೇಳಿ ನಮ್ಮಿಬ್ಬರನ್ನೂ ಕರೆದೊಯ್ದು ತರೀಕೆರೆಯ ಶಾಲೆಗೆ ಸೇರಿಸಿದರು.

ತರೀಕೆರೆಗೆ ನಾಲ್ಕು ಮೈಲುಗಳ ದೂರ ಕೋಡಿಹಳ್ಳಿ. ಕೋಡಿಹಳ್ಳಿಯಿಂದ ನಾನೂ - ಸುಂದರನೂ ಬೆಳಗಿನ ಏಳೂವರೆಗೆ ಹೊರಟರೆ ಎರಡು ಮೈಲು ಗದ್ದೆಯ ಒಳಗೆ ನಡೆದು, ನಂತರ ಎರಡು ಮೈಲುಗಳ ದೂರ ಚೆನ್ನಾದ ಮುಖ್ಯ ರಸ್ತೆಯಲ್ಲಿ ನಡೆದು ಶಾಲೆ ಸೇರುತ್ತಿದ್ದೆವು. ಗದ್ದೆಗಳ ಒಳಗೆ ನಡೆಯುವಾಗ ಬೆಳಗಿನ, ಹಿಮದ ಹನಿಗಳು ಭತ್ತದ ತೆನೆಗಳಲ್ಲಿ ಸೇರಿಹೋಗಿರುತ್ತಿದ್ದವು. ಆ ಹನಿಗಳು ನಮ್ಮ ಅಂಗಿಗಳಿಗೆಲ್ಲ ತಾಕಿ ಅಂಗಿಗಳು ಒದ್ದೆಯಾಗುತ್ತಿದ್ದವು. ಮತ್ತೆ ಚೆನ್ನಾದ ಬಸ್ ರಸ್ತೆಯಲ್ಲಿ ಹೋಗುವಾಗ ಒದ್ದೆ ಅಂಗಿಗಳು ಗಾಳಿಗೆ ಒಣಗುತ್ತಿದ್ದವು. ಒಟ್ಟಾರೆ ಒಂಬತ್ತರ ವೇಳೆಗೆ ಶಾಲೆಗೆ ನಾವು ಠೀಕಾಗಿ ಹಾಜರಾಗುತ್ತಿದ್ದೆವು... ನಿಜಕ್ಕೂ ಅದೊಂದು ಸುಂದರವಾದ ಅನುಭವವೇ ಆಗಿತ್ತು ನಮಗೆ! ಶನಿವಾರಗಳಂತೂ ಬೆಳಗಿನ ತರಗತಿಗಳಿದ್ದಾಗ ಅದು ಮತ್ತೂ ಹೆಚ್ಚಿ, ಮನಸ್ಸಿಗೆ ಮುದ ಕೊಡುತ್ತಿದ್ದುದೂ ನಿಜವೇ! ಹೀಗೆ ನಾವು ಒಂದು ವರ್ಷ ಕಳೆದೆವು. ನಮ್ಮ ಪರಿಚಯವಾಗಿದ್ದ ನಮ್ಮ ಮುಖ್ಯೋಪಾಧ್ಯಾಯರು ಶ್ರೀ ಶಂಕರನಾರಾಯಣರಾಯರು, ನಮ್ಮಿಬ್ಬರಿಗೂ ಅವರಲ್ಲಿಯೇ ಉಳಿದುಕೊಂಡು ಶಾಲೆಗೆ ಹೋಗುವಂತೆ ಹೇಳಿದರು. ದೊಡ್ಡಪ್ಪನವರಿಗೂ ಇದರಿಂದ ಸಂತೋಷವಾಯಿತು, ಮಕ್ಕಳಿಗೆ ದಿನವೂ ಎಂಟು ಮೈಲುಗಳು ಓಡಾಟ ತಪ್ಪಿತಲ್ಲಾ ಎಂದು! ಅವರೂ ಈ ಸೂಚನೆಗೆ ಒಪ್ಪಿ ನನ್ನನ್ನೂ ನನ್ನ ಸೋದರಸಂಬಂಧಿ ಸುಂದರನನ್ನೂ ಅವರಲ್ಲೇ ಇರಲು ಹೇಳಿದರು. ಮತ್ತೊಂದು ವರ್ಷ ಹೀಗೆ ಕಳೆಯಿತು.

ನಮ್ಮ ಮಾಸ್ತರು ಶ್ರೀ ಶಂಕರನಾರಾಯಣರಾಯರು ನಮ್ಮನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನಮ್ಮ ದೊಡ್ಡಪ್ಪನೂ ಸುಮ್ಮನಿರುವವರಾಗಿರಲಿಲ್ಲ. ತರಕಾರಿಗಳು, ಧಾನ್ಯಗಳನ್ನು ಆಗೀಗ ತಂದು ಮಾಸ್ತರರ ಮನೆಗೆ ಕೊಡುತ್ತಿದ್ದರು. ಆದರೆ ಮರುವರ್ಷ ಆ ಏರ್ಪಾಡು ಬದಲಾಗಬೇಕಾಯಿತು.

ನಮ್ಮ ಮಾಸ್ತರರು ಮಾರನೆಯ ವರ್ಷ ಬಿ.ಟಿ. ಶಿಕ್ಷಣ ತರಬೇತಿಗಾಗಿ ಮೈಸೂರಿಗೆ ಹೊರಟು ಹೋದರು. (ಆಗೆಲ್ಲ ಬಿ.ಎಡ್. ಎನ್ನುವುದು ಇರಲಿಲ್ಲ. ಬಿ.ಎ., ಬಿ.ಟಿ., ಎಂ.ಎ., ಬಿ.ಟಿ. ಎನ್ನುವ ಪದವಿಗಳಿದ್ದವು.) ಯಥಾಪ್ರಕಾರ ನಾವು ಕೋಡಿಹಳ್ಳಿಗೆ ವಾಪಸಾಗಿ, ಅಲ್ಲಿಂದಲೇ ತರೀಕೆರೆಗೆ ಹೋಗಿ ಬರುತ್ತ ಎಂಟುಮೈಲುಗಳ ದೂರವನ್ನು ನಡೆದು ಪ್ರೌಢಶಾಲೆಯ ಶಿಕ್ಷಣ ಮುಗಿಸಿದೆವು.

ವಿವಾಹ

ರಜೆಯಲ್ಲಿ ಮನೆಗೆ ಬಂದಾಗ ಹೊಸ ಬದಲಾವಣೆ... ತಂದೆ - ತಾಯಿಯರು ನಮ್ಮೂರಿನ, ನಮ್ಮ ಪಕ್ಕದ ಮನೆಯವರೇ ಆಗಿದ್ದ ಶ್ರೀ ನಂಜುಂಡಾವಧಾನಿಗಳ ಮಗಳು ರಾಜೇಶ್ವರಿಯ ಜತೆ ನನ್ನ ಮದುವೆ ನಿಶ್ಚಯ ಮಾಡಿದ್ದರು. ಶ್ರೀ ನಂಜುಂಡಾವಧಾನಿಗಳು ನಮ್ಮೂರ ಹಿರಿಯರು, ಸಿರಿವಂತರು, ಪರೋಪಕಾರಿಗಳು. ನಾನೂ ಅವರಿಗೆ ಹೊಸಬನಲ್ಲ, ಅವರೂ ನನಗೆ ಹೊಸಬರಲ್ಲ. ಪಕ್ಕದಮನೆಯಲ್ಲೇ ಇದ್ದ ರಾಜೇಶ್ವರಿಯನ್ನು ನಾನೂ, ನನ್ನನ್ನು ಅವಳೂ ನೋಡುತ್ತಲೇ ಬೆಳೆದಿದ್ದೆವು.... ತಂದೆ-ತಾಯಿ ಹೇಳಿದ ಮೇಲೆ ಮುಂದೆ ಮಾತಿಲ್ಲ, ಅವರಿಷ್ಟವೇ ನನ್ನಿಷ್ಟವೂ ಆಗಿತ್ತು. **೨೭.೦೫.೧೯೫೦** ರಂದು ಎಲ್ಲ ಹಿರಿಯರ ಸಮಕ್ಷಮದಲ್ಲಿ ನನ್ನ - ರಾಜೇಶ್ವರಿಯ ವಿವಾಹ ನಡೆಯಿತು. ಆಗ ನನಗೆ ಹದಿನಾರು ವರ್ಷ, ಅವಳಿಗೆ ಹದಿನಾಲ್ಕು ವರ್ಷ. ಹೊಸದೊಂದು ವ್ಯಕ್ತಿಯ ಪ್ರವೇಶ ನನ್ನ ಜೀವನದಲ್ಲಿ ಆಯಿತು. ದೊಡ್ಡ ಕುಟುಂಬದ ದೊಡ್ಡಮನೆಯಲ್ಲಿದ್ದ ನನಗೆ ವಿಶೇಷವಾಗಿ ಅದೊಂದು ಜವಾಬ್ದಾರಿ ಎಂದೇನೂ ಅನ್ನಿಸಲಿಲ್ಲ..... ರಾಜೇಶ್ವರಿ ನನ್ನ ಬದುಕು-ಮನ ತುಂಬಿದಳು. ಮೊದಲೇ ನಾನು ತಿಳಿಸಿರುವಂತೆ ನಮ್ಮ ಮಾವನವರಾದ ಶ್ರೀ ನಂಜುಂಡಾವಧಾನಿಗಳು ಸಿರಿವಂತ ಹಿರಿಯರು, ಉದಾರಿಗಳಷ್ಟೆ? ಎಸ್.ಎಸ್. ಎಲ್.ಸಿ. ಪರೀಕ್ಷೆ ಬರೆದು ಬಂದಿದ್ದ ನನಗೆ ವಿಶೇಷವಾದ ಉಡುಗೊರೆಯನ್ನೂ ಕೊಟ್ಟರು...! ನನ್ನ ಮದುವೆಯಾದ ಎರಡೇ ದಿನಕ್ಕೆ ಪರೀಕ್ಷೆಯ ಫಲಿತಾಂಶ ಬಂದು ನಾನು ಪಾಸಾಗಿದ್ದೆ. ನಮ್ಮ ಮನೆಯಲ್ಲಿ,

ರಾಜೇಶ್ವರಿಯ ಮನೆಯಲ್ಲಿ ಎಲ್ಲರಿಗೂ ಖುಷಿಯೋ ಖುಷಿ. ಕಷ್ಟಪಟ್ಟು ಕೋಡಿಹಳ್ಳಿಯಿಂದ ತರೀಕೆರೆಗೆ ನಡೆದುಹೋಗಿ, ಓದಿ-ಬರೆದು ಪರೀಕ್ಷೆ ಬರೆದಿದ್ದ ನಾನು ಪಾಸ್ ಆದಾಗ, ಸುಲಭವಾಗಿ ಆ ಜಯದ ಶ್ರೇಯವೆಲ್ಲ ರಾಜೇಶ್ವರಿಯ ಪಾಲಾಯಿತು! 'ನಮ್ಮ ಹುಡುಗಿಯನ್ನು ಮದುವೆಯಾದದ್ದೇ ನೋಡಿ, ಅವಳ ಕಾಲುಗುಣ, ನಮ್ಮ ಅಳಿಯ ಎಸ್.ಎಸ್.ಎಲ್.ಸಿ. ಪಾಸಾದ' ಎಂದು ನನ್ನ ಮಾವನವರು ಬೀಗಿದರು. ಕೆಲವೇ ದಿವಸಗಳಲ್ಲಿ ನಾನು ಶಿವಮೊಗ್ಗೆಯ ಇಂಟರ್ ಮೀಡಿಯೆಟ್ ಕಾಲೇಜು ಸೇರಿದಾಗ, ಬಲು ಹೆಮ್ಮೆಯಿಂದ ನನಗೆ ಓಡಾಡಲು ನನ್ನ ಮಾವನವರು ಒಂದು ಹೊಸ ಸೈಕಲನ್ನು ಉಡುಗೊರೆಯಾಗಿ ನೀಡಿದರು! ಆಗಿನ ಸೈಕಲ್ಲು ಈಗಿನ ಬೈಕುಗಳಿಗೆ ಸಮ ಎನ್ನಬಹುದು.... ನಾನು ಹೊಸ ಸೈಕಲಿನಲ್ಲಿ ಕಾಲೇಜಿಗೆ ಹೋಗಲು ಪ್ರಾರಂಭಿಸಿದೆ... ಹೀಗೆ ವರ್ಷಗಳೆರಡು ಕಳೆದವು.

ನಾನು ಇಂಟರ್‌ಮೀಡಿಯೆಟ್ ಮುಗಿಸಿದಾಗ ಮನೆಯಲ್ಲಿ ಹೊಸದೊಂದು ಸಮಸ್ಯೆ ಎದುರಾಗಿತ್ತು. ನನ್ನ ಅಣ್ಣ ಸುಬ್ರಾಯಶಾಸ್ತ್ರಿಯವರ ಹೆಣ್ಣು ಕೊಟ್ಟ ಮಾವನವರಿಗೆ ಇಬ್ಬರು ಗಂಡುಮಕ್ಕಳು. ಅವರಿಬ್ಬರೂ ಇನ್ನೂ ಚಿಕ್ಕವರು. ಆದ್ದರಿಂದಾಗಿ ಅವರ ಜಮೀನನ್ನು ಅಣ್ಣನೇ ನೋಡಿಕೊಳ್ಳುವುದು ಅನಿವಾರ್ಯವಾಯಿತು. ನಮ್ಮ ಜಮೀನು, ದೊಡ್ಡಪ್ಪನದು, ಅಣ್ಣನ ಮಾವನವರದು ಇಪ್ಪತ್ತು ಎಕರೆ, ಎಲ್ಲವೂ ಸೇರಿ ಜವಾಬ್ದಾರಿ ಹೆಚ್ಚಿ ಅಣ್ಣನವರೊಬ್ಬರೇ ಎಲ್ಲವನ್ನೂ ನಿರ್ವಹಿಸುವುದು ಕಷ್ಟವೆಂದು, ನನ್ನ ಓದು ಇಂಟರ್‌ಮೀಡಿಯೆಟ್‌ಗೇ ನಿಂತಿತು. ಅಣ್ಣನಿಗೆ ವ್ಯವಸಾಯದಲ್ಲಿ ಸಹಾಯ ಮಾಡಲು ನಾನು ಊರಿನಲ್ಲಿ ನೆಲೆನಿಂತೆ.

ಗಮಕಕ್ಕೆ ಪ್ರೇರಣೆ

ಇಲ್ಲಿಯವರೆಗೆ ಗಮಕದ ಬಗ್ಗೆ ಅಷ್ಟು ಸರಿಯಾಗಿ ಗಮನ ಕೊಟ್ಟಿರಲಿಲ್ಲ. ಆದರೆ ನಮ್ಮೂರಿನಲ್ಲಿ ಹಿರಿಯರಾದ ರಾಮಾಶಾಸ್ತ್ರಿಗಳು, ರಾಮಸ್ವಾಮಿಶಾಸ್ತ್ರಿಗಳು ಕಾವ್ಯವಾಚನ ಮಾಡುವುದು, ಲಕ್ಷ್ಮೀಕೇಶವಶಾಸ್ತ್ರಿಗಳು ವ್ಯಾಖ್ಯಾನ ಮಾಡುವುದು ಅದಾಗಲೇ ರೂಢಿಯಲ್ಲಿತ್ತು. ನಾನು ಅವರ ವಾಚನ-ವ್ಯಾಖ್ಯಾನವನ್ನು ತಪ್ಪದೇ ಕೇಳುತ್ತಿದ್ದೆ. ನನಗೆ ಅಲ್ಪ ಸ್ವಲ್ಪ ಹಾಡುವುದೂ ಬರುತ್ತಿತ್ತು. ನಮ್ಮ ತಾಯಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿ, ಅವರೂ ಹಾಡುತ್ತಿದ್ದರು. ಬಹುಶಃ ಅವರಿಂದಲೇ ಸಂಗೀತ ನನಗೆ ಬಂದದ್ದು. ನಾನು ಎಳವೆಯಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಮತ್ತೂರಿನಲ್ಲಿ ಓದುತ್ತಿದ್ದಾಗ (ಎಲ್.ಎಸ್.) ನಮಗೆ ಶಂಕರನಾಯಕ್ ಎನ್ನುವ ಮಾಸ್ತರರೊಬ್ಬರಿದ್ದರು. ಅವರಿಗೆ ಸಂಗೀತವೂ ಬರುತ್ತಿತ್ತು. ನಾನೂ ಆಗ ದೇವರನಾಮಗಳನ್ನು ಹೇಳುತ್ತಿದ್ದೆ. ಒಂದು ದಿನ ತರಗತಿಯಲ್ಲಿ ಕುಳಿತಿದ್ದಾಗ ಮಾಸ್ತರು ಇನ್ನೂ ಬಂದಿರಲಿಲ್ಲ. ಮಿಕ್ಕವರು ಮಾತು, ಗಲಾಟೆಯಲ್ಲಿ ಮುಳುಗಿದ್ದರು. ನಾನು ಒಂದು ಹಾಡನ್ನು ಮೆಲ್ಲಗೆ ಗುನುಗುತ್ತಿದ್ದೆ. ಮಾಸ್ತರು ಬಂದು ಅದನ್ನು ಕೇಳಿ ಹತ್ತಿರಕ್ಕೆ ಬಂದದ್ದು ನನ್ನ ಗಮನಕ್ಕೆ ಬರಲಿಲ್ಲ. ಹತ್ತಿರ ಬಂದವರೇ ಬಗ್ಗಿ ನನ್ನ ಮುಖ ನೋಡಿ, ''ಏನೋ.... ಏನು ರಾಗಾನೋ ಇದು? ಸಂಗೀತವೂ ಬರುತ್ತೋ ನಿನಗೇ?'' ಎಂದರು. ನಾನು ಸಂಕೋಚದಿಂದ ಸುಮ್ಮನೆ ತಲೆಯಾಡಿಸಿದೆ. ಆಗ ನಮ್ಮ ಪಠ್ಯಪುಸ್ತಕದಲ್ಲಿ ಕುಮಾರವ್ಯಾಸ ಭಾರತದ 'ಜಯದ್ರಥ ವಧೆ' ಪ್ರಸಂಗದಲ್ಲಿ ಅರ್ಜುನನು ಪ್ರತಿಜ್ಞೆ ಮಾಡಿದ **೮-೧೦** ಪದ್ಯಗಳು ಇದ್ದವು. ಅದನ್ನು ತೋರಿಸಿ ಮಾಸ್ತರು, ''ಶಾಲಾ ವಾರ್ಷಿಕೋತ್ಸವದಲ್ಲಿ ಇದನ್ನು ಹಾಡುತ್ತೀಯಾ?'' ಎಂದರು. ನಾನು 'ಹ್ಞೂ' ಎಂದೆ.

ನಿರೀಕ್ಷಿಸುತ್ತಿದ್ದ ಆ ದಿವಸ ಬಂದಿದ್ದಿತು. ಶಿವಮೊಗ್ಗದಿಂದ ಹಿರಿಯ ಅಧಿಕಾರಿಗಳು ಬಂದಿದ್ದರು..... ಸಮಾರಂಭ ಬಲು ಜೋರಿನಿಂದ ನಡೆಯಿತು. ಆ ದಿನ ನಾನು ನಮ್ಮ ತರಗತಿಯ ಪಠ್ಯದಲ್ಲಿದ್ದ ಏಳೆಂಟು ಪದ್ಯಗಳನ್ನು ರಾಗವಾಗಿ, ಚೆನ್ನಾಗಿ ಹೇಳಿದೆ. ಅಲ್ಲಿ ಸೇರಿದ್ದವರು, ಸಮಾರಂಭಕ್ಕೆ ಆಗಮಿಸಿದ್ದ ಅತಿಥಿಗಳು ಎಲ್ಲರೂ ನನ್ನನ್ನು ಪ್ರಶಂಸಿಸಿದರು. ಕಾರ್ಯಕ್ರಮ ಮುಗಿದು ಅತಿಥಿಗಳು ವಾಪಸು ಹೊರಟಾಗ, ಅವರುಗಳು ಕುಳಿತ ಹರಿಗೋಲಲ್ಲೇ ನಾನೂ ಕುಳಿತಿದ್ದೆ (ಆಗ ಮತ್ತೂರಿಗೆ ರಸ್ತೆ ಇರಲಿಲ್ಲ. ಯಾರು ಎಲ್ಲಿಂದ ಬಂದರೂ ಮೊದಲು ಹೊಸಹಳ್ಳಿಗೆ ಬಂದು, ತುಂಗಾನದಿಯನ್ನು ಹರಿಗೋಲಲ್ಲಿ ದಾಟಿ ಮತ್ತೂರಿಗೆ ಹೋಗಿ, ನಂತರ ಹಾಗೆಯೇ ವಾಪಸ್ಸೂ ಹೋಗಬೇಕಿತ್ತು). ಆ ಹಿರಿಯ ಅಧಿಕಾರಿ, ಅತಿಥಿಯಾಗಿ ನಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಬಂದಿದ್ದವರು, ನನ್ನನ್ನು ಗುರ್ತಿಸಿ ''ಏ........ ಹುಡುಗಾ.... ನೀನೇ ಅಲ್ಲವೇ ಈ ದಿನ ಪದ್ಯಗಳನ್ನು ಓದಿದವನು. ಬಹಳ ಚೆನ್ನಾಗಿ ಓದುತ್ತೀ ಕಣೋ ನೀನು.... ಚೆನ್ನಾಗಿ ಅಭ್ಯಾಸ ಮಾಡು, ಬಿಟ್ಟು ಬಿಡಬೇಡಾ'' ಎಂದು ಹುರಿದುಂಬಿಸಿ, ಮೆಚ್ಚುಗೆಯ ಮಾತು ಹೇಳಿ ಬೆನ್ನು ತಟ್ಟಿದರು... ಅಂದಿನಿಂದ ಮೊದಲಾದದ್ದು ನಾನು ಪದ್ಯಗಳನ್ನು ಹೀಗೆ ಹೇಳುವುದು. ನಮ್ಮ ಬೀರೂರು ಚಿದಂಬರ ಜೋಯಿಸರು ಒಳ್ಳೆಯ ವಿದ್ವಾಂಸರು, ಆಶುಕವಿಗಳು. ಅವರು ಸಮಯ ಸಂದರ್ಭಗಳಿಗೆ ತಕ್ಕಂತೆ ಒಳ್ಳೆಯ, ಅರ್ಥಪೂರ್ಣ ಸ್ವಾಗತ ಪದ್ಯಗಳನ್ನು ಬರೆಯುತ್ತಿದ್ದರು. ತಾವು ಬರೆದಿದ್ದನ್ನು ನನಗೆ ಕೊಟ್ಟು ''ಏ... ಮೂರ್ತಿ... ನೀನು ಓದೋ ಇದನ್ನು'' ಎಂದು ಹೇಳಿ ನನ್ನಿಂದಲೇ ಓದಿಸುತ್ತಿದ್ದರು! ಹೆಚ್ಚಾಗಿ ಇದು ಹೀಗೆಯೇ ಮುಂದುವರೆಯಬಹುದಿತ್ತು; ಆದರೆ ದೈವಲೀಲೆ, ನಮ್ಮೂರಿಗೆ ಶ್ರೀ ವೆಂಕಟೇಶಯ್ಯನವರು ಬಂದು ನೆಲಸಿದ್ದು!

ಗುರು ವೆಂಕಟೇಶಯ್ಯನವರು

ಶ್ರೀ ವೆಂಕಟೇಶಯ್ಯನವರು ಮೂಲತಃ ಕುಪ್ಪಳ್ಳಿಯವರು. ಅವರೂ ಸಂಕೇತಿಗಳೇ. ಅವರಿಗೆ ನಾಟಕದ ಗೀಳು ಬಹಳವಾಗಿತ್ತು. ಅದರಿಂದ ಪ್ರೇರಿತರಾಗಿಯೇ ಒಂದು ನಾಟಕದ ಕಂಪನಿಗೂ ಸೇರಿಕೊಂಡರು. ಅದರ ವ್ಯವಹಾರಕ್ಕಾಗಿಯೇ ತಮಗೆ ಇದ್ದ ಆಸ್ತಿ ಪಾಸ್ತಿಯನ್ನೆಲ್ಲಾ ಮಾರಿದರು, ಜಮೀನನ್ನೂ ಮಾರಿಕೊಂಡು, ಕಡೆಗೆ ಮತ್ತೂರಿಗೆ ಬಂದು ನೆಲೆಸಿದರು. ಅವರಿಗೆ ನಾಟಕದ ಹಾಡುಗಳು ಚೆನ್ನಾಗಿ ಬರುತ್ತಿದ್ದವು. ಜತೆಗೇ ಅವರು ತಕ್ಕಮಟ್ಟಿಗೆ ಗಮಕವನ್ನೂ ಅಭ್ಯಾಸ ಮಾಡಿದ್ದರು. ಜೀವನೋಪಾಯಕ್ಕೆ ಈಗ ಅವರಿಗೆ ಗಮಕಕಲೆಯೇ ಆಧಾರವಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಆಗಲೂ ಕೆಲವು ಗಮಕ ಪರೀಕ್ಷೆಗಳನ್ನು ನಡೆಸುತ್ತಿತ್ತು, ಪ್ರವೇಶ - ಪ್ರೌಢ ಎಂಬ ಎರಡು ಪರೀಕ್ಷೆಗಳು ಅವು. ಆರು ತಿಂಗಳಿಗೊಂದು ಪರೀಕ್ಷೆ. ಅವರ ಜೀವನವೂ ಸಾಗಬೇಕು, ಊರಿನ ಮಕ್ಕಳಿಗೆ ಗಮಕ ಪಾಠವೂ ಆಗಬೇಕು. ಹಾಗೆ ಯೋಚಿಸಿ ನಮಗೆಲ್ಲ, ''ನೀವೆಲ್ಲ ಪರೀಕ್ಷೆಗೆ ಸಿದ್ಧರಾಗಿ, ಪರೀಕ್ಷೆ ತೆಗೆದುಕೊಳ್ಳಿ. ನಾನು ಪಾಠ ಹೇಳುತ್ತೇನೆ. ಅದರಿಂದ ನನಗೂ ಅನುಕೂಲವಾಗುತ್ತದೆ'' ಎಂದು ನೇರವಾಗಿ ಹೇಳುತ್ತಿದ್ದರು. ನಾವು, ಸುಮಾರಾಗಿ ಹಾಡಲು ಬರುವವರು ಆಗಿನಿಂದ ಅವರಲ್ಲಿಗೆ ಗಮಕ ತರಗತಿಗಳಿಗೆ ಹೋಗಲು ಪ್ರಾರಂಭಿಸಿದೆವು. 'ಪಾಪ, ಮಾಸ್ತರರಿಗೆ ಸಹಾಯವಾಗಲಿ' ಎನ್ನುವುದು ನಮ್ಮ ಮೊದಲ ಉದ್ದೇಶವಾಗಿತ್ತು. ಕಲಿಕೆ ಪ್ರಾರಂಭವಾಗಿ ನನ್ನ ಜತೆಗೆ ನನ್ನ ಗೆಳೆಯರಾದ ದತ್ತಾತ್ರಿ, ಸೂರ್ಯನಾರಾಯಣ ಇವರೂ ಬಂದರು. ನಾವೆಲ್ಲ ಹೀಗೆ ಶ್ರೀ ವೆಂಕಟೇಶಯ್ಯನವರ ಬಳಿ ಸುಮಾರು ಎರಡು ವರ್ಷಗಳವರೆಗೆ ಗಮಕದ ಅಭ್ಯಾಸ ಮಾಡಿದೆವು. ಪರೀಕ್ಷೆಗಳನ್ನೂ ಪಾಸು ಮಾಡಿದೆವು.

ಅಲ್ಲಿಯುವರೆಗೆ ನಮ್ಮೂರ ಹಿರಿಯರು ವಾಚನ ಮಾಡುವುದನ್ನು ಕೇಳುತ್ತಿದ್ದ ನನಗೆ ಶ್ರೀ ವೆಂಕಟೇಶಯ್ಯನವರಲ್ಲಿ ಕಲಿತ ಪಾಠವು ವಾಚನ-ಕಲೆಯನ್ನು ಮತ್ತೂ ಅಭ್ಯಾಸ ಮಾಡಿ ಚೆನ್ನಾಗಿ ರೂಢಿಸಿ ಕೊಳ್ಳಬೇಕೆನ್ನುವ ಉತ್ಸಾಹ ತಂದಿತು. ಶ್ರೀ ವೆಂಕಟೇಶಯ್ಯನವರದು ಬಹಳ ಒಳ್ಳೆಯ ಶಾರೀರ. ಪಾಠವನ್ನು ಚೆನ್ನಾಗಿ ಹೇಳಿಕೊಡುವುದರಲ್ಲೂ ಅವರು ನಿಷ್ಣಾತರು. ಆದರೆ ಅವರಿಗೂ ಬಹಳಷ್ಟು ರಾಗಗಳ ಪರಿಚಯ - ಪ್ರಯೋಗ ತಿಳಿದಿರಲಿಲ್ಲ. ಕೆಲವೇ ಜನಜನಿತ ರಾಗಗಳನ್ನೇ ಅವರೂ ಹೇಳುತ್ತಿದ್ದುದು, ಹೇಳಿಕೊಡುತ್ತಿದ್ದುದು ಸಹ. ಆದರೂ ನನ್ನ ಮಟ್ಟಿಗೆ ನನ್ನ ಗಮಕದ ಗುರುಗಳೆಂದರೆ ಇಂದಿಗೂ ಶ್ರೀ ವೆಂಕಟೇಶಯ್ಯನವರೇ.

ಆಮೇಲೆ ನಾನೇ ಸ್ವಂತವಾಗಿ ರಾಗಗಳ ಛಾಯೆಗಳನ್ನು ಮನಸ್ಸಿನಲ್ಲಿಯೇ ಮನನ ಮಾಡಿಕೊಳ್ಳುತ್ತಾ, ಅಭ್ಯಾಸ ಮಾಡಿಕೊಂಡು, ಪದ್ಯಗಳಲ್ಲಿ ಪ್ರಯೋಗಿಸುವುದನ್ನು ರೂಢಿಸಿಕೊಂಡೆ. ನಮ್ಮೂರಿನಲ್ಲಿಯೂ ಮನರಂಜನಾ ಕಾರ್ಯಕ್ರಮಗಳೆಂದರೆ ಕಾವ್ಯವಾಚನ-ವ್ಯಾಖ್ಯಾನ ಬಿಟ್ಟರೆ ಬೇರೇನೂ ಇರಲಿಲ್ಲ. ಸುತ್ತಮುತ್ತಲೂ ಅದೇ ಕಾರ್ಯಕ್ರಮ. ಸಂಗೀತ ಕಚೇರಿಗಳು ಗಣಪತಿ ಹಬ್ಬ, ರಾಮನವಮಿಯ ಸಂದರ್ಭದಲ್ಲಿ ನಡೆಯುತ್ತಿದ್ದವು. ನಾನು ನನ್ನ ಮೂವತ್ತನೆಯ ವಯಸ್ಸಿನಿಂದ ಶಿವಮೊಗ್ಗದಲ್ಲಿ ನಡೆಯುತ್ತಿದ್ದ ಸಂಗೀತ ಕಚೇರಿಗಳಿಗೆ ತಪ್ಪದೇ ಹೋಗುತ್ತಿದ್ದೆ. ಒಮ್ಮೆಯಂತೂ ವಿದ್ಯಾಗಣಪತಿ ಸಂಘದ ಇಪ್ಪತ್ತೈದನೇ ವರ್ಷದ ವರ್ಧಂತಿಯಾದಾಗ ಇಪ್ಪತ್ತೈದು ದಿನಗಳೂ ಸಂಗೀತ ಕಚೇರಿಗಳು ನಡೆದವು. ಆಗ ನಾನು ಎಲ್ಲ ಕಚೇರಿಗಳಿಗೂ ಹೋಗಿ ಸಂಗೀತ ಕೇಳಿಬಂದೆ. ಎಲ್ಲ ಕಚೇರಿಗಳಲ್ಲೂ ಹಾಡುವ ರಾಗಗಳ ವಿಶೇಷ ಛಾಯೆಗಳನ್ನು ಹಿಡಿದು, ಮನಸ್ಸಿನಲ್ಲೇ ಹೇಳಿಕೊಳ್ಳುತ್ತಿದ್ದೆ. ಹೀಗೆಯೇ ಸುಮಾರು ರಾಗಗಳನ್ನು ನಾನು ಕಲಿತದ್ದು... ದೇವರ ಕೃಪೆ.... ಸಂಗೀತಾಭ್ಯಾಸ ಮಾಡದೆ, ಸಂಗೀತ ಪಾಠಕ್ಕೆಂದು ಯಾರಲ್ಲಿಗೂ ಹೋಗದೆ, ಇಷ್ಟು ರಾಗಗಳ ಪರಿಚಯ ಆದದ್ದು ಹೇಗೆ ಎಂದು ಬಹಳ ಜನ ನನ್ನನ್ನು ಪ್ರಶ್ನೆ ಮಾಡುತ್ತಾರೆ. ಅದೇ ನನಗೂ ಆಶ್ಚರ್ಯ. ನಾನು ಶಾಸ್ತ್ರೀಯ ಸಂಗೀತ ಕಲಿತಿಲ್ಲ. ಪಾಠಹೇಳಿಸಿಕೊಂಡವನೂ ಅಲ್ಲ. ಆದರೆ ಎಲ್ಲಿಗೆ ಹೋದರೂ, ಬಂದರೂ ಒಬ್ಬನೇ ಇದ್ದಾಗ ಮಾತ್ರ ಸದಾ ನನ್ನ ತಲೆಯಲ್ಲಿ ಯಾವುದಾದರೂ ಒಂದು ರಾಗ ಇರುತ್ತಿತ್ತು. ಅದು ಮನಸ್ಸಿನಲ್ಲಿ ಸರಿಯಾದ ಛಾಯೆಯ ರೂಪತಾಳಿ ನನಗೆ ತಿಳಿಯದಂತೆಯೇ ನಾನೇ ಸದಾ ಗುನುಗಿಕೊಳ್ಳುವ ಹಾಗೆ ಮಾಡಿತ್ತು. ರಾಗಗಳ ಬಗ್ಗೆ ಪ್ರೀತಿ ಹುಟ್ಟುವ ಹಾಗೆ ಮಾಡಿತ್ತು. ಅಂತೂ ತಾಯಿ ಸರಸ್ವತಿಯ ಕೃಪಾಕಟಾಕ್ಷ ನನ್ನ ಮೇಲಾಯಿತೋ ಏನೋ, ಈವರೆಗೆ ನಾನು ಸುಮಾರು ಎಂಬತ್ತು ರಾಗಗಳನ್ನು ಹಾಡಿದ್ದೇನೆ. ಪದ್ಯಗಳಲ್ಲಿ ಪ್ರಯೋಗ ಮಾಡಿದ್ದೇನೆ. ಅದು ಕೇಳುವ ಸಹೃದಯರಿಗೆ ಬಹಳ ಇಷ್ಟವೂ ಆಗಿದೆ.

❁ ❁ ❁

ನನ್ನ ಮದುವೆ ಆದಾಗ ನನಗೆ ಹದಿನಾರು ವರ್ಷ. ನನ್ನ ಇಪ್ಪತ್ತನೇ ವಯಸ್ಸಿಗೆ ನನ್ನ ಮಗಳು ಉಷಾ ಹುಟ್ಟಿದುದು. ಆವರೆಗೆ ನಾನು ಸ್ವಲ್ಪ ಆತ್ಮವಿಶ್ವಾಸದಿಂದಲೇ, ಕಾವ್ಯವಾಚನ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದೆ. ರಾಮಾಶಾಸ್ತ್ರಿಗಳಾಗಲಿ, ಲಕ್ಷ್ಮೀ ಕೇಶವಶಾಸ್ತ್ರಿಗಳಾಗಲಿ ವಾಚನ-ವ್ಯಾಖ್ಯಾನ ಕಾರ್ಯಕ್ರಮಕ್ಕಾಗಿ ಮಲೆನಾಡು, ಕೊಪ್ಪ, ನರಸಿಂಹರಾಜಪುರ ಇತ್ಯಾದಿ ಊರುಗಳಿಗೆ ಹೋಗುತ್ತಿದ್ದರು. ಆಗ ''ಮೂರ್ತಿ, ನೀನೇ ಬಾರೋ, ವಾಚನ ಮಾಡುವೆಯಂತೆ'' ಎಂದು ನನ್ನನ್ನು ಜತೆಗೊಯ್ಯುತ್ತಿದ್ದರು. ತಾವು ಹಿರಿಯರಾಗಿದ್ದರೂ 'ಚಿಕ್ಕವನಾದ ಇವನನ್ನೇನು

ಕರೆದುಕೊಂಡು ಹೋಗುವುದು' ಎನ್ನುವ ಭಾವನೆ ಇಲ್ಲದೆ, ಪ್ರೀತಿಯಿಂದ ಕರೆಯುತ್ತಿದ್ದರು. ಹೀಗೆ ಬೇರೆ ಬೇರೆ ಊರುಗಳ ಬೇರೆ ಬೇರೆ ಅಭಿರುಚಿಯ ಜನರ ಎದುರು ನಾನು ಕಾರ್ಯಕ್ರಮಗಳನ್ನು ಕೊಡುವ ಹಾಗೆ ಮಾಡಿದರು. ಅದರಿಂದ ನನ್ನ ಧೈರ್ಯವೂ, ಆತ್ಮವಿಶ್ವಾಸವೂ ಹೆಚ್ಚಿತು. ಕಾರಣ ನಾನು ವಾಚನ ಮಾಡಿದ್ದು ಶ್ರೋತೃಗಳಿಗೂ ಇಷ್ಟವಾಯಿತು ಎಂದು ನನಗೂ ತಿಳಿಯುತ್ತಿತ್ತು. ಹೀಗೆ ನಾನು ನನ್ನ ಇಪ್ಪತ್ತನೆಯ ವಯಸ್ಸಿನಿಂದ ಕಾರ್ಯಕ್ರಮಗಳನ್ನು ಕೊಡಲಾರಂಭಿಸಿದೆ.

ನಂತರ ಟೇಪ್‌ರೆಕಾರ್ಡರ್ ಬಂದ ಮೇಲೆ ಸಂಗೀತದ ಕ್ಯಾಸೆಟ್ಟುಗಳನ್ನು ತಂದು, ಹಾಕಿಕೊಳ್ಳುವ ಅಭ್ಯಾಸವಾಯಿತು. ಸಾಕಷ್ಟು ಸಂಗೀತದ ಟೇಪುಗಳನ್ನು ಕೇಳಿದೆ. ಶ್ರೀ ವೆಂಕಟೇಶಯ್ಯ ನವರಲ್ಲಿ ಕಲಿತಿದ್ದ ಅಠಾಣ, ಮೋಹನ, ಬಿಲಹರಿ, ತೋಡಿ, ಕಾಂಬೋಧಿ, ಕಲ್ಯಾಣಿ, ಶಂಕರಾಭರಣ, ಕೇದಾರಗೌಳ ಈ ರಾಗಗಳ ಜತೆ, ಹೊಸ ಹೊಸ ರಾಗಗಳು ಪರಿಚಯವಾಗಿ ಅಭ್ಯಾಸ ಮಾಡುವ ಹಾಗಾಯಿತು. ಹಿರಿಯರಾದ ಲಕ್ಷ್ಮೀಕೇಶವಶಾಸ್ತ್ರಿಗಳಲ್ಲದೆ ಮಾರ್ಕಂಡೇಯ ಅವಧಾನಿಗಳು, ಮತ್ತೂರು ಕೃಷ್ಣಮೂರ್ತಿ, ಚನ್ನಕೇಶವಶಾಸ್ತ್ರಿ, ರಘುಪತಿಶಾಸ್ತ್ರಿ, ರಾಜಾರಾಮ,ಗೋಪಾಲ - ಹೀಗೆ ನಾನು ಬಹಳ ಪ್ರತಿಭಾವಂತರ ಜತೆಗೆ ಕಾವ್ಯವಾಚನ ಮಾಡಿದ್ದೇನೆ.

ಅಧ್ಯಾಪನ

ಆದರೆ ನಾನು ಪಾಠಹೇಳಲು ಪ್ರಾರಂಭಿಸಿದ್ದು ತಡವೇ ಆಯಿತು ಎನ್ನಬೇಕು. ನನ್ನ ಮಗಳು ಉಷಾ ಹದಿನೈದು ವರ್ಷದವಳಾದಾಗ ಅವಳಿಗೆ ಗಮಕವನ್ನು ಹೇಳಿಕೊಡಬೇಕು ಎಂದು ಆಶಿಸಿ ಪಾಠ ಹೇಳಲು ಮೊದಲು ಮಾಡಿದ್ದು. ಆದರೆ ಸುಮಾರು ಜನ ಗಮಕ ಕಲಿಯಲು ಬಂದರು. ಅದು ಒಂದು ವಿಶೇಷವೆಂದೇ ಹೇಳಬೇಕು. ಏಕೆಂದರೆ ಶಾರೀರ ಚೆನ್ನಾಗಿರುವವರು ಸಂಗೀತದ ಕಲಿಕೆಯತ್ತ ಹೋಗುತ್ತಾರೆ. ಗಮಕವಾಚನ ಎಂದರೆ ಇರುವ ಆಕರ್ಷಣೆ ಕಡಮೆಯೇ. ಅದೊಂದು ಹಳೆಯಕಲೆ. ಕಲಿಯಲು ಯುವಜನಾಂಗಕ್ಕೆ ಅಷ್ಟು ಆಸಕ್ತಿ ಇಲ್ಲ. ಆದರೂ ನಮ್ಮೂರಿನ ಸಾಕಷ್ಟು ಮಕ್ಕಳು ಕಲಿಕೆ ಪ್ರಾರಂಭಿಸಿದರು. ಇಂದಿಗೂ ನಾನು ಈ ತರಗತಿಗಳನ್ನು ನಡೆಸುತ್ತಿದ್ದೇನೆ. ಊರಿನಲ್ಲಿರುವಾಗ ಪ್ರತಿದಿನವೂ ಇರುತ್ತದೆ. ಇಂದಿಗೂ ಮಕ್ಕಳು ಗಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಾರೆ. ಹೀಗೆಯೇ ನಾನು ತರೀಕೆರೆಯಲ್ಲೂ ವಾರದ ಕೊನೆಯ ಎರಡು ದಿವಸಗಳು ಶನಿವಾರ-ಭಾನುವಾರಗಳಂದು ತರಗತಿ ನಡೆಸುತ್ತಿದ್ದೆ. ಈ ಪರಿಪಾಠ ಅನೇಕ ವರ್ಷಗಳು ನಡೆಯಿತು. ತರೀಕೆರೆಯ ನನ್ನ ಅನೇಕ ವಿದ್ಯಾರ್ಥಿಗಳು ಒಳ್ಳೆಯ ಕಾವ್ಯವಾಚನಕಾರರೆಂದು ಜನಮೆಚ್ಚುಗೆಯನ್ನೂ ಪಡೆದಿದ್ದಾರೆ. ಹಾಗೆಯೇ ನಾನು ಭದ್ರಾವತಿಯಲ್ಲೂ ವಾರಕ್ಕೆ ಮೂರು ದಿನಗಳ ಪಾಠದಂತೆ ಅನೇಕ ವರ್ಷಗಳ ಕಾಲ ತರಗತಿಗಳನ್ನು ನಡೆಸಿದ್ದೇನೆ. ಆಗ ನಾನು ಸುವೇಗ ವಾಹನ ಇಟ್ಟುಕೊಂಡಿದ್ದು, ಅದರಲ್ಲಿ ಬಸ್‌ಸ್ಟಾಂಡಿಗೆ ಹೋಗಿ ಅಲ್ಲಿ ವಾಹನವನ್ನಿಟ್ಟು, ಭದ್ರಾವತಿಗೆ ಬಸ್ಸಿನಲ್ಲಿ ಹೋಗಿ ಪಾಠ ಮಾಡಿ ಮತ್ತೆ ಶಿವಮೊಗ್ಗಕ್ಕೆ ವಾಪಸಾಗಿ, ಸುವೇಗದಲ್ಲಿ ಹೊಸಹಳ್ಳಿಗೆ ಹಿಂದಿರುಗುತ್ತಿದ್ದೆ. ಇದೂ ಅನೇಕ ವರ್ಷಗಳು ನಡೆದಿದೆ.... ಅಂತೂ ಸುಮಾರು ಕಳೆದ ೩೦-೩೫ ವರ್ಷಗಳಿಂದಲೂ ಗಮಕ ಪಾಠ ಮಾಡುತ್ತಲೇ ಬಂದಿದ್ದೇನೆ. ನನ್ನ ಅನೇಕ ಶಿಷ್ಯರೂ ಸ್ವತಂತ್ರವಾಗಿ ವಾಚನ ಮಾಡಲು ಪ್ರಾರಂಭಿಸಿದ್ದಾರೆ. ಗಮಕವೂ ಕಲೆ. ಎಲ್ಲ ಕಲೆಗಳೂ ದೈವೀ ಕಲೆಗಳೇ. ಹಾಗೇ ಗಮಕವೂ. ಅಲ್ಲಿಯೂ ಸಾಧನೆ ಮಾಡಲೇಬೇಕು. ಓದುವ ಕಾವ್ಯಗಳನ್ನು ಮೊದಲೇ ನೋಡಿಕೊಂಡು, ಕಾವ್ಯದ ಶೈಲಿ-ಧಾಟಿ ತಿಳಿಯುವುದು, ರಾಗಗಳ ಮನನ, ಛಾಯೆಗಳ ಬಗೆಗೆ ಧ್ಯಾನ, ನಂತರ ಗಾನ, ಆಮೇಲೆ ಪದಗಳ ಮೇಲೆ ಪ್ರಯೋಗ ಹೀಗೆ ಅನವರತ ಅಭ್ಯಾಸ ಮಾಡಬೇಕು. ಅನೇಕ ಸಾರಿ ಮನೆಯಲ್ಲಿ ಹಾಡಿಕೊಂಡು ಅಭ್ಯಾಸ ಮಾಡಿದ ನಂತರ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಹೇಳುವುದು, ರಾಗಕ್ಕೆ ತಕ್ಕಂತೆ ಅರ್ಥಭಂಗವಾಗದ ಹಾಗೆ ಪದಗಳ ಅನ್ವಯ ಮಾಡಿ ಹೇಳುವುದು, ಪದ್ಯದ ಭಾವಕ್ಕೆ ತಕ್ಕಂತೆ ರಾಗಗಳನ್ನು ಹಾಕಿ, ಛಂದಸ್ಸಿಗೆ ತಕ್ಕಂತೆ ಅದನ್ನು ಅಳವಡಿಸಿ ಅರ್ಥ - ರಸಭಂಗವಾಗದ ಹಾಗೆ ಹಾಡುವುದು - ಇವು ಯಾವುವೂ ನಿರಂತರ ಅಭ್ಯಾಸ ಮಾಡದೆ ಸುಮ್ಮನೆ ಬರುವಂಥವಲ್ಲ. ನಿರಂತರ ಅಭ್ಯಾಸಕ್ಕೆ ಅದರ ಬಗ್ಗೆ ಪ್ರೀತಿ - ಆಸೆ ಇರಬೇಕು. ಹಾಗಿದ್ದರೆ ಮಾತ್ರ ಅಭ್ಯಾಸ ಸಾಧ್ಯ. ಇಲ್ಲವಾದರೆ ಯಾರದೇ, ಯಾವುದೇ ಒತ್ತಾಯ, ಬಲವಂತಕ್ಕೆ ಅಭ್ಯಾಸ, ಅದರ ಮೂಲಕ ಸಾಧನೆ ಸಾಧ್ಯವಿಲ್ಲ.

ಮೂವರು ಹಿರಿಯ ವ್ಯಾಖ್ಯಾನಕಾರರು

ನಾನು ಈವರೆಗೆ ಕರ್ನಾಟಕದ ಅನೇಕ ಭಾಗಗಳಲ್ಲಿ ಅಂದರೆ ಶಿವಮೊಗ್ಗ, ಭದ್ರಾವತಿ, ಬೆಂಗಳೂರು, ಮೈಸೂರು, ಮಂಗಳೂರು ಮಾತ್ರವಲ್ಲದೆ ಬಾಂಬೆ, ಅಲಹಾಬಾದ್ ಇತ್ಯಾದಿ ಕಡೆಗಳಲ್ಲೆಲ್ಲಾ ಕಾರ್ಯಕ್ರಮ ಕೊಟ್ಟಿದ್ದೇನೆ. ಅನೇಕ ಹಿರಿಯರ ಜತೆ ಅಲ್ಲದೆ ಕಿರಿಯರ ವ್ಯಾಖ್ಯಾನಕ್ಕೆ ವಾಚನ ಮಾಡಿದ್ದೇನೆ.

ವ್ಯಾಖ್ಯಾನಕಾರರು ಯಾರೇ ಆದರೂ ಕಾವ್ಯ - ಸಂಗೀತ ಸೇರಿಕೊಂಡ ಗಮಕಕಲೆಗೆ ನ್ಯಾಯ ಸಲ್ಲಿಸುವುದು ನನ್ನ ಧರ್ಮ-ಕರ್ತವ್ಯ.

ಆದರೆ ನಾನು ನನ್ನ ಕಲಾಜೀವನದಲ್ಲಿ ಈವರೆಗೆ ಮೂವರು ಹಿರಿಯ ವ್ಯಾಖ್ಯಾನಕಾರರ ಜತೆ ಹೆಚ್ಚು ವಾಚನ

ಮಾಡಿದ್ದೇನೆ. ಆ ದಿಗ್ಗಜಗಳ ವಿಷಯವನ್ನು ವಿಶೇಷವಾಗಿ ಇಲ್ಲಿ ಹೇಳಬಯಸುತ್ತೇನೆ. ಕಾರಣ ಅವರ ವ್ಯಾಖ್ಯಾನಗಳಲ್ಲಿ ನಾನು ಭಾವನಾತೀವ್ರತೆಯನ್ನೂ, ತಲ್ಲೀನತೆಯನ್ನೂ ಕಂಡಿದ್ದೇನೆ. ಅದನ್ನು ನಾನೂ ಅನುಭವಿಸಿದ್ದೇನೆ.

ಲಕ್ಷ್ಮೀಕೇಶವಶಾಸ್ತ್ರಿಗಳು ಮಾಡುವ ವ್ಯಾಖ್ಯಾನ ಆ ಕಾಲಕ್ಕೆ ಪ್ರಸಿದ್ಧಿ. ಅವರು ಪುರಾಣ ಹಾಗೂ ಇತರ ಕಾವ್ಯಗಳಲ್ಲಿನ ನೀತಿ ಕಥೆಗಳನ್ನು ಹೇಳುತ್ತಿದ್ದರು. ನಾಟಕದ ಪಾತ್ರಗಳಂತೆ ಸಂಭಾಷಣೆಗಳನ್ನು ಹೇಳುವುದು, ವೀರ, ಶೋಕ, ರೌದ್ರ ರಸಗಳಿಗೆ ಸರಿಯಾಗಿ ಧ್ವನಿಯನ್ನು ಬದಲಾಯಿಸುವುದು, ಪಾತ್ರಗಳ ಸಂಭಾಷಣೆಯನ್ನು ವ್ಯಂಜನೀಯವಾಗಿ ಮಾಡಿ ರಂಜನೀಯವನ್ನಾಗಿಸುವುದು ಇವು ಅವರಿಗೆ ಸಿದ್ಧಿಸಿದ್ದವು. ಏನೇ ಆದರೂ ಅವರು ಹಿರಿಯರು. ಅವರನ್ನು ಅನುಸರಿಸಿಕೊಂಡು ವಾಚನ ಮಾಡುವುದನ್ನು ನಾನು ರೂಢಿಮಾಡಿಕೊಂಡಿದ್ದೆ. ಆದರೂ ಕಾವ್ಯವನ್ನೂ ಆಸ್ವಾದಿಸುತ್ತಲೇ ಓದುತ್ತಿದ್ದೆ.

ಶ್ರೀ ಮಾರ್ಕಂಡೇಯ ಅವಧಾನಿಯವರು ನಮ್ಮ ಮತ್ತೂರಿನವರೇ ಆದರೂ ಬಾಲ್ಯದಿಂದಲೂ ಅಂಥ ಪರಿಚಯ-ಸ್ನೇಹ ಇರಲಿಲ್ಲ. ನಾನು ಮತ್ತೂರು ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಅವರು ನನಗಿಂತ ಒಂದು ವರ್ಷ ಮುಂದಿನ ತರಗತಿಯಲ್ಲಿದ್ದರು. ನಂತರ ಅವರು ವೇದಾಧ್ಯಯನಕ್ಕೆ ನಂಜನಗೂಡಿಗೆ ಹೋದರು. ನಾನು ಇಂಗ್ಲಿಷ್ ವಿದ್ಯಾಭ್ಯಾಸ ಮುಂದುವರೆಸಿದೆ. ನಂತರ ಅವರು ಊರಿಗೆ ವಾಪಸಾಗಿ ಅನೇಕ ವರ್ಷಗಳಾದ ಮೇಲೆ ನಾವು ವಾಚನ-ವ್ಯಾಖ್ಯಾನ ಕಾರ್ಯಕ್ರಮ ಕೊಡಲು ಪ್ರಾರಂಭಿಸಿದೆವು. ಈ ಜತೆಗೂಡಿದ ಕಾರ್ಯಕ್ರಮ ಗಳಿಂದಾಗಿ ಅವರ ನನ್ನ ಸ್ನೇಹ ಗಾಢವಾಯಿತು. ಅವರು ನನಗೆ ಗುರುಗಳಂತೆ; ನಮ್ಮೂರ ಪುರೋಹಿತರು, ವೇದ, ಸಂಸ್ಕೃತ ತಿಳಿದವರು, ವಿದ್ಯೆಯಲ್ಲಿ ನನಗಿಂತಲೂ ಬಹಳ ಮೇಲೆ; ಎಲ್ಲರನ್ನೂ ಪ್ರೀತಿಯಿಂದ ಕಾಣುವ ಸ್ವಭಾವ. ಯಾವ ವಿಷಯದ ಮೇಲೆ ಬೇಕಾದರೂ ಮಾತನಾಡುವ ಕಲೆ ಅವರಿಗೆ ಇದೆ. ಎಲ್ಲರಿಗೂ ಬೇಕಾದವರಾಗಿದ್ದಾರೆ. ಅಂಥವರ ಸ್ನೇಹಕ್ಕಿಂತ ಹೆಚ್ಚಿನದು ನನಗಾದರೂ ಏನು ಬೇಕು? ಅವರ ವ್ಯಾಖ್ಯಾನ ಸ್ವಲ್ಪ ಸಾಂಪ್ರದಾಯಿಕ ಶೈಲಿಯದು: ವೈದಿಕ ಸಂಪ್ರದಾಯ, ತತ್ವಬೋಧನೆಯ ಮಾರ್ಗ. ಯಾವುದರ ಬಗೆಗೂ ಯಾವ ಟೀಕೆಯನ್ನೂ, ವಿಮರ್ಶೆಯನ್ನೂ ಮುಕ್ತವಾಗಿ ಹೇಳಲಾರರು. ಅವರಿಗೆ ಅದು ಅರ್ಥವಾಗಿದ್ದರೂ ಹಾಗೆ ಹೇಳುವುದು ಅವರ ರೀತಿಯಲ್ಲ. ಅದು ಅವರ ಸಜ್ಜನಿಕೆ. ಆದರೆ ಪ್ರತಿಭೆ ಅಗಾಧವಾದದ್ದು. ಭಾಗವತ, ರಾಮಾಯಣ, ಮಹಾಭಾರತ, ಪುರಾಣದ ಕಥೆಗಳು - ನಾವು ಯಾವ ಕಾವ್ಯದ ಭಾಗವನ್ನು ಮಾಡುತ್ತಿದ್ದರೂ ಓತಪ್ರೋತವಾಗಿ ಅವರ ವ್ಯಾಖ್ಯಾನದಲ್ಲಿ ಬರುತ್ತವೆ. ಕಥೆಗಳನ್ನು ಹೇಳುತ್ತಾ ಕಾವ್ಯದ ಸಂದರ್ಭವನ್ನು ಜನರಿಗೆ ಮನಸಿಗೆ ಮುಟ್ಟುವ ಹಾಗೆ ಹೇಳುತ್ತಾರೆ. ಅವರ ವ್ಯಕ್ತಿತ್ವಕ್ಕೆ ತಕ್ಕನಾಗಿದೆ ಅವರ ವ್ಯಾಖ್ಯಾನ ಶೈಲಿ. ಅವರ ಜತೆ ವಾಚನ ಮಾಡುವುದೂ ನನಗೆ ಒದಗಿರುವ ಸುಯೋಗವೇ ಸರಿ.

ಇನ್ನು ಮತ್ತೂರು ಕೃಷ್ಣಮೂರ್ತಿಯವರ ಬಗ್ಗೆ.... ಏನು ಹೇಳಲಿ? ಕೃಷ್ಣಮೂರ್ತಿಯವರು ಮತ್ತೂರಿನಲ್ಲೇ ಹುಟ್ಟಿದರೂ, ವಿದ್ಯಾಭ್ಯಾಸ - ಕೆಲಸ ಎಂದು ಊರಿಂದ ಸಾಕಷ್ಟು ವರ್ಷಗಳು ಹೊರಗಿದ್ದವರು. ಪರಿಚಯ ಇತ್ತಾದರೂ ಅಷ್ಟು ಸ್ನೇಹವೆಂಬುದಿರಲಿಲ್ಲ... ಬಹಳ ಹಿಂದೆ ಅವರೇ ರಚಿಸಿದ ರೂಪಕ 'ಕರ್ಣರಸಾಯನ' ಎನ್ನುವುದರಲ್ಲಿ ನಾನು ಪದ್ಯವಾಚನ ಮಾಡಿದ್ದೆ. ಆ ಕಾರ್ಯಕ್ರಮ ಸಾಕಷ್ಟು ಜನಮೆಚ್ಚುಗೆ ಗಳಿಸಿತ್ತು. ಆ ನಂತರ ನಾವು ಕಾರ್ಯಕ್ರಮಗಳನ್ನು ಹೆಚ್ಚಾಗಿ ಕೊಟ್ಟಿದ್ದಿಲ್ಲ. ಆಮೇಲೆ ಅವರೂ ವಿದ್ಯಾಭವನವನ್ನು ಸೇರಿ ಕಾರ್ಯನಿಮಿತ್ತ ಲಂಡನ್‌ಗೆ ಹೋದವರು ಸುಮಾರು ೨೫ ವರ್ಷಗಳ ನಂತರ ಹಿಂದಿರುಗಿ ಬಂದರು. ಅಲ್ಲಿಯವರೆಗೆ ಅವರು ರಜೆಯ ಮೇಲೆ ಆಗೀಗ ಬಂದಾಗ ಅಲ್ಲೊಂದು - ಇಲ್ಲೊಂದು ಕಾರ್ಯಕ್ರಮ ನಡೆಯುವುದೂ ಇತ್ತು. ಅವರ ವ್ಯಾಖ್ಯಾನಕ್ಕೆ ನಮ್ಮಣ್ಣ ರಾಮಾಶಾಸ್ತ್ರಿಗಳೂ ಬಹಳ ಸಾರಿ ವಾಚನ ಮಾಡಿದ್ದರು. ಗಾಂಧೀ ಶತಮಾನೋತ್ಸವ ವರ್ಷದಲ್ಲಿ ನಮ್ಮ ಬೀರೂರು ಚಿದಂಬರ ಜೋಯಿಸರು ಗಾಂಧೀಜಿಯ ಜೀವನ ಚರಿತ್ರೆಯನ್ನು ಆಧರಿಸಿ ಬರೆದ ಕಾವ್ಯ ''ಮೋಹನ ತರಂಗಿಣಿ''ಯನ್ನು ರಾಜ್ಯಾದ್ಯಂತ ಅನೇಕ ಊರುಗಳಲ್ಲಿ ಮತ್ತೂರರು ವ್ಯಾಖ್ಯಾನಿಸಿ ನಮ್ಮ ಅಣ್ಣ ಕಾವ್ಯವಾಚನ ಮಾಡಿ ಭಾರೀ ಜನಮೆಚ್ಚುಗೆ ಗಳಿಸಿದ್ದರು.

ಮತ್ತೂರರಿಗೆ ಸಹಜವಾಗಿ ನಮ್ಮೂರಿನಲ್ಲಿರುವ ವಾತಾವರಣಕ್ಕೆ ತಕ್ಕಂತೆ ರಾಮಾಯಣ - ಮಹಾಭಾರತದ ವಾಚನ - ವ್ಯಾಖ್ಯಾನಗಳ ಬಗ್ಗೆ ವಿಶೇಷ ಒಲವು. ಇದು ಮೊದಲಿನಿಂದಲೂ ಇದ್ದದ್ದೇ. ಲಂಡನ್ನಿಗೆ ಹೋಗಿ ಬಂದ (ಕಾಲು ಶತಮಾನದ) ನಂತರವೂ ಈ ಪ್ರೀತಿ ಕಡಮೆಯೇನೂ ಆಗಿರಲಿಲ್ಲ, ಬದಲಾಗಿ ಎರಡರಷ್ಟು ಹೆಚ್ಚಾಗಿಯೇ ಇತ್ತು ಎನ್ನಬಹುದು! ಆದ್ದರಿಂದ ಅವರು ಇಲ್ಲಿಗೆ ಬಂದನಂತರ ಒಂದಾದ ಮೇಲೆ ಒಂದರಂತೆ ಕಾರ್ಯಕ್ರಮಗಳು ನಡೆದವು. ಬಹಳ ಸಲ ಅವರ ವ್ಯಾಖ್ಯಾನವಿದ್ದೆಡೆ ನನ್ನದು ವಾಚನ. ನಮ್ಮಿಬ್ಬರ ನಡುವಿನ ಪ್ರೀತಿ, ವಿಶ್ವಾಸ, ಸ್ನೇಹ ಹೆಚ್ಚಿ, ಪರಸ್ಪರ ಸಾಮರಸ್ಯ, ಅದರಲ್ಲೂ ವೇದಿಕೆಯ ಮೇಲೆ ಕಾರ್ಯಕ್ರಮ ಕೊಡುವಾಗಲಂತೂ ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ವಾಚನ - ವ್ಯಾಖ್ಯಾನ ಮಾಡುವುದು - ಇವೆಲ್ಲವೂ ಹಿಂದೆಂದಿಗಿಂತಲೂ ತುಂಬಾ ಹೆಚ್ಚಾಗಿದೆ. ನನ್ನ ವಾಚನವನ್ನು ವಿಶೇಷವಾಗಿ ಹೇಳಿ, ಹೊಗಳಿ ಜನರು ತದೇಕಚಿತ್ತದಿಂದ ಅದನ್ನು ಕೇಳುವ

ಹಾಗೆ ಮಾಡುತ್ತಾರೆ ಮತ್ತೂರರು. ತಾವು ಕಾರ್ಯಕ್ರಮ ಮಾಡುವೆಡೆಗೆಲ್ಲ ನನ್ನನ್ನೇ ವಾಚನಕ್ಕೆ ಕರೆದೊಯ್ಯುತ್ತಾರೆ. ಹೀಗೆ ಗಮಕ ಕಲೆಯ ಸೇವೆಯನ್ನು ಬಿಡದೆ ನನ್ನಿಂದ ಬಲು ಹೆಚ್ಚಾಗಿ ಮಾಡಿಸುತ್ತಿದ್ದಾರೆ. ಅವರ ಮಾತಿನ ಕಲೆಗಾರಿಕೆ ಅಂಥದು. ಅವರ ವ್ಯಾಖ್ಯಾನದಲ್ಲಿ ನಾನು ನಮ್ಮ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಶೈಲಿಯ ಅಲ್ಪ ಸ್ವಲ್ಪ ಪ್ರಭಾವವನ್ನು ಕಾಣುತ್ತೇನಾದರೂ, ಆಧುನಿಕ ಯುಗಕ್ಕೆ ತಕ್ಕ ಹಾಗೆ ಉಪಕಥೆಗಳನ್ನು ಹೇಳಿ, ಎಲ್ಲ ಕ್ಷೇತ್ರಗಳ ದೈನಂದಿನ ವಿಷಯಗಳ ಉದಾಹರಣೆ ಕೊಟ್ಟು, ಸಮಕಾಲೀನ ಪ್ರಜ್ಞೆಯನ್ನು ಬಹಳ ಚೆನ್ನಾಗಿ ತಿಳಿದು ಅದಕ್ಕೆ ತಕ್ಕ ಹಾಗೆ, ಯಾರೂ ತಲೆದೂಗಿ ಒಪ್ಪಲೇಬೇಕು, ಹಾಗೆ ವ್ಯಾಖ್ಯಾನ ಮಾಡುತ್ತಾರೆ. ಅವರ ಸಿದ್ಧತೆ, ಸಮಯಪ್ರಜ್ಞೆ ಆದರ್ಶಪ್ರಾಯ. ತರುಣ ಜನಾಂಗ ನಮ್ಮ ಮಹಾಕಾವ್ಯಗಳ ಹೆಸರುಗಳನ್ನೇ ಮರೆಯುತ್ತಿರುವ ಇಂಥ ಕಾಲದಲ್ಲಿ, 'ನಮ್ಮ ಸನಾತನ ಧರ್ಮ, ಸಂಸ್ಕೃತಿಯಲ್ಲಿ ಇಲ್ಲದ್ದು ಯಾವುದೂ ಇಲ್ಲ' ಎಂದು ಘಂಟಾಘೋಷವಾಗಿ ಹೇಳುತ್ತ, ನಮ್ಮ ಸಂಸ್ಕೃತಿಯ ಪ್ರಸಾರವನ್ನು ಯಥೇಚ್ಛವಾಗಿ, ಅನ್ಯೂನವಾಗಿ ಅನನ್ಯವಾಗಿ ಮಾಡುತ್ತಿದ್ದಾರೆ. ನಿಜಕ್ಕೂ 'ಸಾಂಸ್ಕೃತಿಕ ರಾಯಭಾರಿ' ಎಂದು ಜನರು ಅವರನ್ನು ಮೆಚ್ಚಿ ನೀಡಿರುವ ಬಿರುದನ್ನು ಸಾರ್ಥಕಪಡಿಸುತ್ತಿದ್ದಾರೆ!

ನಿಜಕ್ಕೂ ಮತ್ತೂರರ ಜತೆ ಕುಳಿತು ವಾಚನ ಮಾಡುವ ಅನುಭವವೇ ಬೇರೆ. ಸಾಮಾನ್ಯರಿಂದ ಅದು ಸಾಧ್ಯವಿಲ್ಲ. ಅದಕ್ಕಾಗಿ ವಿಶೇಷ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕಾವ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಅದಕ್ಕೆ ತಕ್ಕಂತೆ ರಾಗಗಳನ್ನು ಹಾಕಿಕೊಳ್ಳದೆ ಅವರ ಜತೆ ವಾಚನ ಸಾಧ್ಯವಿಲ್ಲ. ಒಮ್ಮೊಮ್ಮೆ ಷಟ್ಪದಿಯ ಒಂದೊಂದು ಸಾಲನ್ನೂ ಒಂದೊಂದು ರಾಗದಲ್ಲಿ ಹೇಳಲು ಹೇಳುತ್ತಾರೆ. ಓದುತ್ತಿದ್ದ ಪದ್ಯವನ್ನು ಅರ್ಧಕ್ಕೆ ನಿಲ್ಲಿಸಿ ವಿವರಣೆ ಹೇಳುತ್ತಾರೆ. ಮತ್ತೆ ಆ ಪದ್ಯವನ್ನು ಮುಂದುವರೆಸಲು ಅದೇ ಭಾವ, ರಾಗದ ಮುಂದುವರಿಕೆ ಸರಿಯಾಗಿರಬೇಕೆಂದು ನಿರೀಕ್ಷಿಸುತ್ತಾರೆ. ಒಮ್ಮೊಮ್ಮೆ ಒಂದೇ ಪದ್ಯವನ್ನು ಎರಡು ಮೂರು ಸಾರಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಹೇಳುತ್ತಾರೆ. ಕಥೆಯ ಪದ್ಯಗಳನ್ನು ಓದುತ್ತಿರುವಾಗಲೇ ಮಧ್ಯೆ ಪ್ರಾರಂಭದ ತೋರಣನಾಂದಿ ಪದ್ಯವನ್ನು ಓದಲು ಹೇಳುತ್ತಾರೆ. ಹೀಗೆ ಮೊದಲೇ ಅವರ ಮನೋಧರ್ಮವನ್ನು ಸರಿಯಾಗಿ ಗ್ರಹಿಸಿದ, ಅನುಸರಿಸಿದ ಹೊರತು ಈ ರೀತಿಯ ಸರ್ಕಸ್ಸುಗಳು ವಾಚನ ಮಾಡುವವರಿಗೆ ಸಾಧ್ಯವಿಲ್ಲ. ಎಷ್ಟೋ ಸಾರಿ ಯಾವುದೋ ಪದ್ಯಕ್ಕೆ ನಾವು ಯಾವುದೋ ರಾಗವನ್ನು ಹಾಕಿ ಸಿದ್ಧರಾಗಿರುತ್ತೇವೆ. ಅವರು ವ್ಯಾಖ್ಯಾನಿಸುವಾಗ ಆ ಪದ್ಯದ ಧ್ವನಿಯೇ ಬದಲಾಗಿ, ಆಗ ನಾವು ಆ ರಾಗವನ್ನೇ ಬದಲಿಸಿ ಆ ಧ್ವನಿಗೆ ತಕ್ಕ ರಾಗವನ್ನು ಹಾಕಬೇಕಾಗುತ್ತದೆ. ಅದೆಷ್ಟೇ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದರೂ, ಅವರು ಹೇಳುವ ಸವಾಲುಗಳಿಗೆ ಮಾನಸಿಕವಾಗಿ ಸಿದ್ಧರಾಗಿದ್ದರೂ, ಹಾಗೆ ಮಾಡಲು ಎದೆಗಾರಿಕೆಯೂ, ಅಖಂಡ ಆತ್ಮವಿಶ್ವಾಸವೂ ಅತ್ಯಗತ್ಯ. ಕಲೆಯ ಬಗ್ಗೆ ಸಾಧನೆ ಇಲ್ಲದೆ ಅದು ಅಸಾಧ್ಯ. ತಮಗೆ ಸಂಗೀತವು ಸ್ವಲ್ಪವೂ ತಿಳಿಯದೆಂದು ಅವರು ಹೇಳಿದರೂ ಗುನುಗುನಿಸಿದ ಕೂಡಲೆ ಅದು ಇಂಥದೇ ರಾಗವೆಂದು ಕರಾರುವಾಕ್ಕಾಗಿ ಹೇಳುತ್ತಾರೆ. ನಾನು ಇದೆಲ್ಲವನ್ನೂ ಜಂಭಕ್ಕಾಗಿ ಹೇಳುತ್ತಿಲ್ಲ. ಇವೆಲ್ಲವೂ ಮತ್ತೂರರು ವಾಚನ ಮಾಡುವವರಿಗೆ ಇಡುವ ಪರೀಕ್ಷೆಗಳು! ಸುದೈವದಿಂದ ಅವರ ಈ ಯಾವುದೇ ಪರೀಕ್ಷೆಯಲ್ಲೂ ಇಂದಿನವರೆಗೆ ನಾನು ಎಂದೂ ಫೇಲಾದದ್ದಿಲ್ಲ! ಅದರಿಂದಲೇ ಅವರು ನನ್ನನ್ನು ಬಿಟ್ಟು, ಇತರರ ವಾಚನಕ್ಕೆ ವ್ಯಾಖ್ಯಾನ ಮಾಡಲಾಗದು ಎಂದು ಸಾರ್ವಜನಿಕವಾಗಿಯೇ ಹೇಳಿಬಿಟ್ಟಿದ್ದಾರೆ... ನನ್ನ ಅನಾನುಕೂಲ ಪರಿಸ್ಥಿತಿಗಳಿಂದಾಗಿ ಕೆಲವೊಮ್ಮೆ ನಿಗದಿತ ಕಾರ್ಯಕ್ರಮಗಳಿಗೆ ಬೇರೆ ವಾಚನದವರನ್ನು ಹಾಕಿಕೊಳ್ಳಿ ಎಂದರೂ, ಇತರರಿಗೂ ಅವಕಾಶ ಸಿಗಲಿ ಎಂದರೂ, ಗಮಕ ಕಲೆಗೆ ಮಿಕ್ಕವರಿಂದಲೂ ಸೇವೆ ಸಲ್ಲಲಿ ಎಂದರೂ, ಅವರು ಯಾವುದಕ್ಕೂ ಒಪ್ಪರು. ''ನಿನ್ನ ಹಾಗೆ ಸಾಧನೆ ಮಾಡಿ, ನಿನ್ನಂತೆಯೇ ವಾಚನ ಮಾಡುವುದಾದರೆ ಆದೀತು. ಇಲ್ಲವಾದರೆ ಬೇಡವೇ ಬೇಡ'' ಎಂದು ಬಿಡುತ್ತಾರೆ. ಇದು ನನ್ನ ಬಗೆಗೆ ಅವರ ಅಭಿಮಾನವನ್ನು ತೋರಿಸುವುದಾದರೂ, ಯಾವುದೇ ಕಲೆಗೆ ನಿಷ್ಠೆಯಿಂದ ಸಾಧನೆ ಮಾಡಿ ನ್ಯಾಯ ಸಲ್ಲಿಸದಿದ್ದರೆ ಅಂತಹ ಸೇವೆಗೆ ತಾವು ಅವಕಾಶ ಮಾಡಿಕೊಡಲು ಸಾಧ್ಯವಿಲ್ಲ ಎನ್ನುವ ಖಚಿತತೆಯನ್ನೂ ಹೇಳುತ್ತದೆ!

ಅವರ ಈ ವಿಶೇಷ ರೀತಿಯ ವ್ಯಾಖ್ಯಾನ ಶೈಲಿಯಿಂದಲೇ ಅವರು ಬಹಳ ಪ್ರಸಿದ್ಧರಾಗಿದ್ದಾರೆ. ನೂರಾರು ಜನರನ್ನು ಮಾತ್ರವೇ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳಲ್ಲಿ ಕಾಣುತ್ತಿದ್ದ ನಾನು, ಅವರ ಜತೆಗಿನ ಕಾರ್ಯಕ್ರಮಗಳಲ್ಲಿ ನಾಲ್ಕಾರು ಸಾವಿರ ಜನರು ಕಮಕಿಮ ಎನ್ನದೆ, ಸದ್ದಿಲ್ಲದೇ ಕಾರ್ಯಕ್ರಮಗಳಲ್ಲಿ ಕುಳಿತು ಶ್ರದ್ಧೆಯಿಂದ ಕೇಳುವುದನ್ನು ನೋಡಿದ್ದೇನೆ. ಇದೊಂದು ಅಪೂರ್ವ ಅನುಭವ ನನಗೆ. ಅವರ ಮಾತಿನ ಮೋಡಿ ಅಂಥದು, ಜತೆಗೆ ಅವರು ಪ್ರೇಕ್ಷಕರನ್ನು ಹೇಗೂ, ಯಾವಾಗಲೂ ಸುಮ್ಮನೆ ಕೂರಲು ಬಿಡುವುದಿಲ್ಲ. ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುತ್ತಾರೆ. ಪ್ರಶ್ನೆಗಳನ್ನು ಕೇಳಿ, ಅಭಿಪ್ರಾಯ ಹೇಳಲು ಕೈ ಎತ್ತುವಂತೆ ಹೇಳಿ, ಚೆನ್ನಾಗಿ ಓದಿದ ಪದ್ಯಕ್ಕೆ ಚಪ್ಪಾಳೆ ತಟ್ಟಲು ಪ್ರೋತ್ಸಾಹಿಸಿ, ನಗಿಸಿ - ಅಳಿಸಿ ತಮ್ಮ ಜತೆಗೇ ಕಾರ್ಯಕ್ರಮದುದ್ದಕ್ಕೂ ಪ್ರೇಕ್ಷಕರೂ ಸಾಗುವಂತೆ ಮಾಡುತ್ತಾರೆ. ನಿಜ ಹೇಳಬೇಕೆಂದರೆ ನನ್ನ ವಾಚನಕ್ಕೆ ಬಂದಿರುವ

ವಿಶೇಷಕೀರ್ತಿ ಅವರಿಂದಲೇ ಹೆಚ್ಚು. ಪ್ರೇಕ್ಷಕರ ಎದುರಿಗೇ ನನಗೂ ನನ್ನ ವಾಚನ ಪ್ರತಿಭೆಗೂ ಪರೀಕ್ಷೆಗಳನ್ನಿಟ್ಟು, ನಾನು ಯಶಸ್ವಿಯಾಗಿ ಅವುಗಳನ್ನು ನಿಭಾಯಿಸುವಾಗ ನನಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿ, ಮೆಚ್ಚಿ, ಪ್ರೇಕ್ಷಕರ ವಿಶೇಷ ಪ್ರೀತಿ-ಪ್ರೇಮ ನನಗೆ ಲಭಿಸುವಂತೆ ಮಾಡಿದ್ದಾರೆ. ಅವರ ಈ ಋಣ ಭಾರಿ ದೊಡ್ಡದು. ನಾನು ಅವರಿಗೆ ಎಂದೆಂದಿಗೂ ಕೃತಜ್ಞ.

ಈ ಮೂವರು ದಿಗ್ಗಜರ ಪ್ರತಿಭೆಯನ್ನು ಕಂಡ ನಾನು ಮೂಕನಾಗಿದ್ದೇನೆ. ಒಬ್ಬೊಬ್ಬರದು ಒಂದೊಂದು ರೀತಿಯ ಪ್ರತಿಭೆ. ಜತೆಗೆ ನಾನು ಮೊದಲೇ ಹೇಳಿರುವಂತೆ ಎ.ಎಸ್. ವೇಣುಗೋಪಾಲರಾವ್‌ರಂಥ ವಿದ್ವಾಂಸರು ಮಂಕುತಿಮ್ಮನ ಕಗ್ಗ ಹೇಳುವಾಗ, ಅವರ ಜತೆ ವಾಚನ ಮಾಡಿದ್ದೇನೆ. ಕಿರಿಯ ವ್ಯಾಖ್ಯಾನಕಾರರಿಗೂ ಓದಿದ್ದೇನೆ.... ಎಲ್ಲರ ವ್ಯಾಖ್ಯಾನವೂ ನನಗೆ ಇಷ್ಟವೇ. ಅವರ ಮನೋಧರ್ಮವನ್ನು ಅರಿತೇ ಓದಬೇಕಾಗುವುದರಿಂದ ಯಾವ ಕಾರ್ಯಕ್ರಮದಲ್ಲೂ ಹಾಗೆ ಮಾಡದೆ ಇಲ್ಲ. ಅದು ನನ್ನ ಧರ್ಮ... ಅದನ್ನು ನಾನು ನಿಷ್ಠೆಯಿಂದ ಮಾಡಿದ್ದೇನೆ. ಇಲ್ಲವಾದರೆ ನಾನು ಕಲೆಗೆ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ಎಲ್ಲ ಕಾರ್ಯಕ್ರಮಕ್ಕೆ ಅದರದೇ ಆದ ವೈಶಿಷ್ಟ್ಯವೊಂದಿರುತ್ತದೆ. ಕಲಾವಿದರು ನಿಷ್ಠೆಯಿಂದ, ಪ್ರೀತಿಯಿಂದ ಕಾರ್ಯಕ್ರಮ ಕೊಟ್ಟಾಗ ಅದು ತೃಪ್ತಿ ಕೊಟ್ಟೇ ಕೊಡುತ್ತದೆ. ಆ ತೃಪ್ತಿಯ ಅನುಭವವನ್ನು ನಾನು ಈವರೆಗೆ ಅನೇಕ ಕಾರ್ಯಕ್ರಮಗಳಲ್ಲಿ ಪಡೆದಿದ್ದೇನೆ ಎಂದು ಖಚಿತವಾಗಿ ಹೇಳಬಲ್ಲೆ.

ನೆನಪಿನಲ್ಲಿ ಉಳಿದಂಥವು

ಎಷ್ಟೋ ಕಾರ್ಯಕ್ರಮಗಳು ಚೆನ್ನಾಗಿ ಆಗಿವೆ. ಅವೆಲ್ಲವೂ ಸ್ಮರಣೆಯಲ್ಲಿರುತ್ತವೆ ಎನ್ನಲಾಗದು. ಇದೊಂದು ರೀತಿಯಲ್ಲಿ ವಿಚಿತ್ರ. ಕೆಲವು ಕಾರ್ಯಕ್ರಮಗಳು ಚೆನ್ನಾಗಿ ಆಗಿಲ್ಲದಿದ್ದಾಗಲೂ ಅವು ವಿಶೇಷವಾಗಿ ಸ್ಮರಣೆಯಲ್ಲಿರುತ್ತವೆ. ಕೆಲವೊಮ್ಮೆ ಕಾರ್ಯಕ್ರಮ ನಿಗದಿಯಾಗಿದ್ದರೂ ನಡೆಯದೆ ಹೋದಾಗ ಅಂಥ ಸನ್ನಿವೇಶಗಳೂ ನೆನಪಿನಲ್ಲಿರುತ್ತವೆ. ಅದಕ್ಕೆ ಉದಾಹರಣೆ ನನ್ನ ನೆನಪಿನಲ್ಲಿರುವ ಈ ಕೆಲವು ಕಾರ್ಯಕ್ರಮಗಳು! ಓದುಗರಿಗೆ ಇದನ್ನು ಓದಿ ವಿಚಿತ್ರ ಎನ್ನಿಸಬಹುದು... ಆದರೆ ಅವು ವಿಚಿತ್ರವಾದರೂ ಇಂದಿಗೂ ನನ್ನ ನೆನಪಿನಲ್ಲಿವೆ ಎನ್ನುವುದಂತೂ ಸತ್ಯವೇ ತಾನೆ?

ಒಮ್ಮೆ ತೀರ್ಥಹಳ್ಳಿಯ ಹತ್ತಿರದ ಊರು. ಅಲ್ಲಿ ಒಂದು ಕಾರ್ಯಕ್ರಮ. ನಾನೂ ಹಿರಿಯರಾದ ಚೆನ್ನಕೇಶವಶಾಸ್ತ್ರಿಗಳೂ ಕಾರ್ಯಕ್ರಮಕ್ಕೆ ಒಂದೆರಡು ಗಂಟೆ ಮುಂಚೆ ಹೋದೆವು. ಬಸ್ಸಿನಿಂದಿಳಿದ ನಮ್ಮ ವೇಷವನ್ನು ನೋಡಿಯಾದರೂ ವ್ಯವಸ್ಥಾಪಕರು ಸ್ವಲ್ಪ ಯೋಚಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಅವರು ನಮ್ಮನ್ನು ಬರಮಾಡಿಕೊಂಡು ಸೀದಾ ಒಂದು ಹೋಟೆಲಿಗೆ ಕರೆದೊಯ್ದರು. ಕಾಫಿ ಕೊಡಿಸಿದರು. 'ತಿಂಡಿ ತಿನ್ನುವಿರಾ?' ಎಂದರು. ನಾವು 'ಬೇಡ' ಎಂದೆವು. ನಾನಂತೂ ಕಾಫಿಯನ್ನೂ ಕುಡಿಯಲಿಲ್ಲ. ಅಷ್ಟರಲ್ಲೇ ಮಳೆ ಪ್ರಾರಂಭವಾಯಿತು. ಮಳೆ ಒಂದು ಗಂಟೆ ಬಿಡಲಿಲ್ಲ.. ಹೋಟೆಲಿನಿಂದ ಎದ್ದು (ಎದುರಿಗೇ ಇದ್ದ ಪ್ರೌಢಶಾಲೆಯೊಂದರಲ್ಲಿ ನಮ್ಮ ಕಾರ್ಯಕ್ರಮ.) ಕಾರ್ಯಕ್ರಮದ ಸ್ಥಳಕ್ಕೆ ಹೋದೆವು. ಇಬ್ಬರಿಗೂ ಮನದಲ್ಲಿ ಏನೋ ಕಸಿವಿಸಿ. ಕಾಫಿ ಕೊಡಿಸಲೇ ಹೋಟೆಲಿಗೆ ಕರೆದೊಯ್ದರೆ ಇನ್ನು ನಾವಿಲ್ಲಿ ಉಳಿದರೆ ಊಟದ ಗತಿ? ಹಾಗಾಗಿ ನಾವು ಆಗಲೇ ಆ ಊರಿನಿಂದ ಹೊರಟು ಊರಿಗೆ ವಾಪಸಾಗುವುದು ಎಂದುಕೊಂಡೆವು. ಅದರಂತೆ ''ಈ ಊರಿಗೆ ಕೊನೆಯ ಬಸ್ಸು ಎಷ್ಟು ಹೊತ್ತಿಗೆ, ಸರಿಯಾಗಿ ಹೇಳಿಬಿಡಿ. ನಾವು ಈ ದಿನವೇ ಊರಿಗೆ ವಾಪಸಾಗಬೇಕು'' ಎಂದೆವು. ಅವರೂ ಮರುಮಾತಾಡದೆ 'ಆಗಲಿ' ಎಂದರು. ಕಾರ್ಯಕ್ರಮ ಪ್ರಾರಂಭವಾಯಿತು. ಅದಾಗಲೇ ಒಂದೂಕಾಲು ಗಂಟೆ ತಡವಾಗಿತ್ತು. ನಾನು ಕೂಡಲೇ ತೋರಣನಾಂದಿ ಪದ್ಯಗಳನ್ನು ಹೇಳಿ, ಕಥಾಪ್ರಸಂಗದ ಪದ್ಯವನ್ನು ಹೇಳಿದೆ. ಶಾಸ್ತ್ರಿಗಳು ವ್ಯಾಖ್ಯಾನ ಪ್ರಾರಂಭಿಸಿದರು. ಅಷ್ಟರಲ್ಲೇ ಆ ಊರಿನ ಆರುಗಂಟೆಯ ಕೊನೆಯ ಬಸ್ಸು ಬಂದೇಬಿಟ್ಟಿತು. ವ್ಯವಸ್ಥಾಪಕರು, ''ಸ್ವಾಮೀ, ಬಸ್ ಬಂತು, ಇದೇ ಕಡೇ ಬಸ್ಸು ನಿಮ್ಮೂರಿಗೆ'' ಎಂದರು. ಶಾಸ್ತ್ರಿಗಳು ಕಕ್ಕಾಬಿಕ್ಕಿಯಾಗಿದ್ದ ನನ್ನನ್ನು ನೋಡಿ ''ಕಡೇ ಪದ್ಯ ಓದಪ್ಪ....'' ಎಂದರು. ಸಾವರಿಸಿಕೊಂಡ ನಾನು ಓದಿದೆ. ಇಬ್ಬರೂ ತಾಂಬೂಲ ತೆಗೆದುಕೊಂಡು, ಇಬ್ಬರಿಂದ ಹದಿನೈದು ರೂಗಳ ಕಾಣಿಕೆಯನ್ನು ತೆಗೆದುಕೊಂಡು ಹೊರಟು ಬಸ್ ಹತ್ತಿ ವಾಪಸು ಬಂದೆವು.... ಆಗಿದ್ದ ಖರ್ಚು ಹದಿಮೂರು ರೂಪಾಯಿ. ಇಬ್ಬರಿಗೂ ಮೇಲೆ ಒಂದೊಂದು ರೂಪಾಯಿ ಕಾಣಿಕೆ ಬಂದಿತ್ತು. ನಕ್ಕು, ಕಾಣಿಕೆ ಹಂಚಿಕೊಂಡೆವು... ಅವರು ಹೀಗೆ ಇಂಥ ಕಾರ್ಯಕ್ರಮವನ್ನು ಏಕೆ ಮಾಡಿಸುತ್ತಾರೆ ಎಂದು ತಿಳಿಯದೆ, ಗೊಂದಲ ಹಾಗೇ ಉಳಿಯಿತು...

ಒಮ್ಮೆ ಚಿಕ್ಕಮಗಳೂರಿನಲ್ಲಿ ಒಂದು ಮದುವೆ. ಮಾರ್ಕಂಡೇಯ ಅವಧಾನಿಯವರು ಮದುವೆಗೆ ಹೋಗಿದ್ದರು. ಬಹುಶಃ ಅವರು ನಮ್ಮ ಕಾರ್ಯಕ್ರಮಗಳ ಬಗ್ಗೆ ಮದುವೆ ಮನೆಯವರಿಗೆ ಹೇಳಿದ್ದಾರೆ, ಅವರುಗಳು ನನ್ನನ್ನು ಕರೆಸಿ, ಮದುವೆ ಮನೆಯಲ್ಲಿ ಒಂದು ಕಾರ್ಯಕ್ರಮ ಕೊಡುವಂತೆ ಕೇಳಿದ್ದಾರೆ. ನಾನು ಎಂದಿನಂತೆ ಊರಿನಲ್ಲಿದ್ದೆ. ಮಾರ್ಕಂಡೇಯ ಅವಧಾನಿಯವರು ಕೂಡಲೇ ಫೋನು ಮಾಡಿ ನನ್ನನ್ನು ಬರಹೇಳಿದರು. ನಾನೂ ನಮ್ಮ ಗೆಳೆಯ ರಾಜು ಇಬ್ಬರೂ

ಹೊರಟೆವು. ಚಿಕ್ಕಮಗಳೂರಿನ ಮದುವೆ ಮನೆ ತಲುಪಿದೆವು. ಒಂದೆಡೆ ಮಾತನಾಡುತ್ತಾ, ಕಾರ್ಯಕ್ರಮಕ್ಕೆ ಕರೆಯುತ್ತಾರೆ ಎಂದು ಕಾಯುತ್ತಾ ಕುಳಿತೆವು. ಸಂಜೆ ನಾಲ್ಕು ಗಂಟೆಯಿಂದ ಏಳೂವರೆಯವರೆಗೂ ಅದೂ ಇದೂ ಮಾತಾಡಿಕೊಳ್ಳುತ್ತಾ ಕುಳಿತಿದ್ದರೂ ಯಾರೂ ಬಂದು ಕರೆಯಲಿಲ್ಲ... ಕಡೆಗೆ ಎಂಟುಗಂಟೆಯ ಹೊತ್ತಿಗೆ ಯಾರೋ ಬಂದು ''ಬನ್ನಿ, ಬನ್ನಿ, ಕಾರ್ಯಕ್ರಮ ಪ್ರಾರಂಭ ಮಾಡಿ'' ಎಂದರು. ನಾನೂ ಮಾರ್ಕಂಡೇಯ ಅವಧಾನಿಯವರೂ ಹೋಗಿ ಸಿದ್ಧರಾಗಿ ಕುಳಿತೆವು. ಮಂಗಳ ಪದ್ಯಗಳನ್ನು ನಾನು ಓದಿದೆ. ಇನ್ನೇನು ಕಥೆ ಪ್ರಾರಂಭ ಮಾಡಬೇಕು, ಆಗ ಅವರಲ್ಲೊಬ್ಬರು ನನ್ನ ಬಳಿ ಬಂದು ಕಿವಿಯಲ್ಲಿ ''ಇನ್ನೂ ಬಹಳ ಕೆಲಸ ಇದೆ. ಹತ್ತು ನಿಮಿಷದಲ್ಲಿ ನಿಮ್ಮ ಕಾರ್ಯಕ್ರಮ ಮುಗಿಸಿಬಿಡಿ'' ಎಂದರು. ನಾನು ಏನು ಹೇಳಲೂ ತಿಳಿಯದೆ ಪಕ್ಕದಲ್ಲಿದ್ದ ಅವಧಾನಿಯವರಿಗೆ ಹೇಳಿದೆ. ಅವರು ''ಕಥೆ ಪ್ರಾರಂಭವಾಗಲಿ, ನೋಡೋಣ'' ಎಂದರು. ಸುಮಾರು ಹದಿನೈದು ನಿಮಿಷಗಳವರೆಗೆ ಮುಂದುವರೆಸಿದೆವು. ನಮ್ಮ ಗೆಳೆಯ ರಾಜು ಶ್ರುತಿ ಹಾಕುತ್ತಿದ್ದ. ಹಾಸ್ಯಪ್ರವೃತ್ತಿಯ ಅವನಿಗಂತೂ ಇದು ಒಳ್ಳೆಯ ಮೋಜಾಗಿತ್ತು. ಮತ್ತೆ ಅದೇ ವ್ಯಕ್ತಿ ಬಂದು ನನ್ನ ಕಿವಿಯಲ್ಲಿ ''ನೋಡಿ, ಜನರೆಲ್ಲ ಹೊರಟುಹೋಗುತ್ತಾರೆ. ಇನ್ನೂ ಊಟ ಆಗಿಲ್ಲ. ಆಗಲೇ ತಡವಾಗಿದೆ. ದಯವಿಟ್ಟು ಬೇಗ ಮಂಗಳ ಮಾಡಿ'' ಎನ್ನುವುದೇ? ಕಾರ್ಯಕ್ರಮಕ್ಕೆಂದು ಊರಿನಿಂದ ನಮ್ಮನ್ನು ಕರೆಸಿ, ನಡೆಸಲು ಹೇಳಿದವರೇ ಹೀಗೆಂದರೆ, ನಾವು ಅಲ್ಲಿ ಕಥೆ ಹೇಳುವುದಾದರೂ ಯಾರಿಗೆ? ನನಗೆ ಆಶ್ಚರ್ಯದ ಜತೆಗೆ, ಬೇಸರ ದುಃಖ ಎರಡೂ ಆಯಿತು. ಕಾರ್ಯಕ್ರಮ ಮುಗಿಸಿದೆವು. ಮೂವರಿಗೂ ಫಲತಾಂಬೂಲ ಕೊಟ್ಟರು. ಕಲಾವಿದರ ಪರಿಚಯ ಮಾಡಲಿಲ್ಲ, ಸ್ವಾಗತ ಹೇಳಲಿಲ್ಲ, ಕೊನೆಗೆ ವಂದನಾರ್ಪಣೆಯೂ ಇಲ್ಲ! ಮೂವರೂ ನಮ್ಮ ಬಿಡಾರಕ್ಕೆ ಬಂದೆವು. ಫಲತಾಂಬೂಲದಲ್ಲಿ ಇರಬಹುದಾದ ಕಾಣಿಕೆಯ ಬಗ್ಗೆ ಕುತೂಹಲ ತಾಳಿದ್ದ ನಮ್ಮ ಗೆಳೆಯ ರಾಜು ಚೀಲಗಳನ್ನು ಹುಡುಕಿದಾಗ ಸಿಕ್ಕಿದುದು ಕೇವಲ ಐದು ರೂಪಾಯಿ. ಮೂರು ಜನರಿಂದ ಐದು ರೂಪಾಯಿ ಕಾಣಿಕೆ ಸಿಕ್ಕಿತ್ತು. ಆ ಬೇಸರದಲ್ಲೂ ನಮಗೆ ನಗು ಬಂದಿತು. ಬಂದ ಕಾಣಿಕೆಗಿಂತ, ಖರ್ಚು ನಾಲ್ಕು ಪಟ್ಟು ಹೆಚ್ಚೇ ಆಗಿತ್ತು! ಮಾಡುವುದೇನು? ಅದೇ ದಿನ ರಾತ್ರಿ ನಾವು ಊರಿಗೆ ವಾಪಸಾದೆವು..... ಹೀಗೂ ಆಗಿದೆ. ಅದರಿಂದಲೇ ಅದು ಇಂದಿಗೂ ನೆನಪಿನಲ್ಲಿದೆ ಬಹುಶಃ!

ಕಾರ್ಯಕ್ರಮಕ್ಕೆ ಯಾರೇ ಕರೆದರೂ ಬರಲಾಗುವುದಿಲ್ಲ ಎಂದು ಹೇಳುವಷ್ಟು ಉದ್ಧಟರಲ್ಲ ಕಲಾವಿದರು. ಆದರೆ ಕಾರ್ಯಕ್ರಮಗಳ ವ್ಯವಸ್ಥೆ ಮಾಡುವವರು ಆ ಬಗ್ಗೆ ಪ್ರೋತ್ಸಾಹಕೊಡುವ ಮನೋಭಾವದವರೂ, ಉತ್ಸಾಹ ತುಂಬಿದವರೂ ಆಗಿರಬೇಕು. ಇಲ್ಲವಾದರೆ ಕಾರ್ಯಕ್ರಮಗಳ ವ್ಯವಸ್ಥೆಯನ್ನಾದರೂ ಮಾಡಬೇಕು ಏಕೆ? ಆಸಕ್ತಿ ಇಲ್ಲದಿದ್ದ ಮೇಲೆ ಅದರ ಅಗತ್ಯವೇನು?

ಕೆಲವೊಮ್ಮೆ ನಾನು ನೋಡಿದಂತೆ ಉತ್ಸಾಹ, ಒಳ್ಳೆಯ ಮನೋಭಾವ ಎಲ್ಲವೂ ಇರುತ್ತದೆ, ಆದರೆ ವ್ಯವಸ್ಥೆಯನ್ನು ಸರಿಯಾಗಿ ಮಾಡಲು ಆಗುವುದಿಲ್ಲ. ಆಗ ಕಲಾವಿದರೇ ತಾಳ್ಮೆವಹಿಸಿ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಉದಾಹರಣೆ ತಾಳೀಕೋಟೆಯಲ್ಲಿ ನಡೆದ ಒಂದು ಕಾರ್ಯಕ್ರಮ.

ಅದು ಮೂರು ದಿನಗಳ ಕಾರ್ಯಕ್ರಮ. ನಾನು ಮತ್ತು ಮಾರ್ಕಂಡೇಯ ಅವಧಾನಿಗಳು ಅಲ್ಲಿಗೆ ಹೋದೆವು. ನಮ್ಮನ್ನು ಬರಮಾಡಿಕೊಂಡ ವ್ಯವಸ್ಥಾಪಕರು ನಮ್ಮ ಬಿಡಾರಕ್ಕೆಂದು ಒಂದು ಮನೆಗೆ ಕರೆದುಕೊಂಡು ಹೋದರು. ಅದೊಂದು ಹೆಂಚಿನ ಮನೆ, ಮನೆಯ ಮೇಲ್ಭಾಗಕ್ಕೆ ಮಾಡು. ಮಾಡಿಗೆ ಹತ್ತಲು ಕಿರಿದಾದ ಮೆಟ್ಟಿಲುಗಳ ಒಟ್ಟು. ಮೇಲೊಂದು ತೂಗುಬಿದ್ದ ಹಗ್ಗ. ಅದನ್ನು ಹಿಡಿದುಕೊಂಡು ಹತ್ತಬೇಕು. ನನ್ನ ಶರೀರ ಸ್ವಲ್ಪ ಸಣ್ಣದಾದ್ದರಿಂದ ನಾನು ನೇರವಾಗಿ ಹತ್ತಬಹುದಾಗಿದ್ದರೂ, ಮಾರ್ಕಂಡೇಯರದ್ದು ಆಜಾನುಬಾಹು ದೇಹವಾದ್ದರಿಂದ ಅವರು ಅಡ್ಡಡ್ಡ ತಿರುಗಿ ಹತ್ತಬೇಕಾಗಿತ್ತು. ಒಮ್ಮೆ ಹತ್ತಿದರೆ ಇಳಿಯಲೇ ಭಯ. ಹತ್ತಿ ಮೇಲೆ ಕುಳಿತಾಗ ಉರಿಬಿಸಿಲಿನ ಸೆಕೆಯ ತಾಪ ಅಲ್ಲಿ ಎಷ್ಟೆಂದು ತಿಳಿಯಿತು. ನಾವಿಬ್ಬರೂ ಬೆವರಿನಲ್ಲಿ ತೊಯ್ದು ಹೋದೆವು. ಇಲ್ಲಿ ಮೂರು ದಿನ ಇರುವುದಾದರೂ ಹೇಗೆ ಎನ್ನಿಸಿ ಭಯವೇ ಆಯಿತು. ಇದು ಸಾಲದೆಂಬಂತೆ ಕಾಲಪ್ರವೃತ್ತಿಗೋ, ಪ್ರಕೃತಿಕರೆಗೋ ಹೋಗಬೇಕೆಂದರೆ ಅಲ್ಲಿ ಅವರ ಮನೆಯಲ್ಲಿ ಶೌಚಾಲಯ ಇರಲಿಲ್ಲ. ನಾವು ಕೈಕಾಲು ತೊಳೆಯಬೇಕೆಂದಾಗ ನಮ್ಮ ಮುಂದೆ ಬಕೆಟೊಂದರಲ್ಲಿ ನೀರನ್ನು ಹಿಡಿದು ಹೊರಟ ಆ ಮನೆಯ ಯಜಮಾನರು ಬೀದಿಯಲ್ಲಿ ಮುಂದೆ ಮುಂದೆ ಸಾಗಿ, ನಮ್ಮನ್ನು ''ಬನ್ನಿ ಬನ್ನಿ'' ಎಂದು ಹಿಂದೆ ಬರಲು ಹೇಳಿ, ತಾವು ಮುಂದೆ ನಡೆದು ''ನಿಮ್ಮ ಮನೆಯಲ್ಲಿ ಖಾಲಿ ಇದೆಯೇ?'' ಎಂದು ಕೇಳುತ್ತ ಎರಡು ಮೂರು ಮನೆಗಳ ಮುಂದೆ ನಿಂತರು. ಅಲ್ಲಿನ ನಾಲ್ಕೈದೇ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದ್ದುದು. ನಾನೂ - ಅವಧಾನಿಯವರೂ ಈ ಫಜೀತಿ ನೋಡಿ ಕಂಗಾಲಾದೆವು... ಆದರೆ ನಮ್ಮ ಸುದೈವವೋ ಏನೋ, ಅಲ್ಲಿನ ವಿದ್ಯಾರ್ಥಿನಿಲಯವೊಂದು ಖಾಲಿ ಇತ್ತು. ಪರೀಕ್ಷೆ ಮುಗಿದು ರಜೆ ಇದ್ದುದರಿಂದ ಶಾಲೆಯು ಮುಚ್ಚಿದ್ದು, ಮಕ್ಕಳು ಊರಿಗೆ ಹೋಗಿದ್ದರು. ವ್ಯವಸ್ಥಾಪಕರು ನಮ್ಮ ತಳಮಳ ನೋಡಿ, ಗ್ರಹಿಸಿ

ನಮ್ಮಿಬ್ಬರಿಗೂ ಆ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. 'ಈ ಅವ್ಯವಸ್ಥೆಯಲ್ಲಿ ಮೂರು ದಿನಗಳನ್ನು ಕಳೆಯುವುದು ಹೇಗಪ್ಪಾ ದೇವರೇ?' ಎಂದಿದ್ದ ನಮಗೆ ಹಾಸ್ಟೆಲಿಗೆ ಹೋದಮೇಲೆ ನಿರಾಳವಾಯಿತು. ಕಾರ್ಯಕ್ರಮವು ಮೂರು ದಿನವೂ ಯಶಸ್ವಿಯಾಗಿ ನಡೆಯಿತು. ಅಲ್ಲಿನ ಜನರಿಗೆ ವಾಚನ-ವ್ಯಾಖ್ಯಾನದ ಬಗ್ಗೆ ಪ್ರೀತಿ-ಆಸಕ್ತಿ. ಸಾಕಷ್ಟು ಜನರು ಮೂರು ದಿನಗಳೂ ಬಂದು ಸೇರಿದ್ದರು, ನಮಗೆ ಪ್ರೋತ್ಸಾಹವನ್ನೂ ಕೊಟ್ಟರು. ನಾವೂ ಉತ್ಸಾಹದಿಂದಲೇ ಕಾರ್ಯಕ್ರಮ ನೀಡಿ ವಾಪಸಾದೆವು... ಹೀಗೆ ಇದೂ ಒಂದು ಅನುಭವ!

ಇದರ ಹಿಂದೆಯೇ ನೆನಪಿಗೆ ಬರುವುದು ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿನಲ್ಲಿ ನಾವು ನೀಡಿದ ಕಾರ್ಯಕ್ರಮ. ಎಮ್ಮಿಗನೂರು ಒಂದು ಸಾವಿರ ಮನೆಗಳಿರುವ ಒಂದು ಹಳ್ಳಿ. ಗಣ್ಯರೊಬ್ಬರು ಅಲ್ಲಿ ಜಿಲ್ಲಾ ತಹಸೀಲ್ದಾರರು. ಅವರ ಅಣ್ಣತಮ್ಮಂದಿರುಗಳಲ್ಲಿ ಅನನ್ಯ ಪ್ರೀತಿ ವಿಶ್ವಾಸ, ಅನ್ಯೋನ್ಯತೆ. ಪ್ರತಿವರ್ಷವೂ ಅವರ ಮುಂದಾಳತ್ವದಲ್ಲಿಯೇ ಅಲ್ಲಿ ಹನುಮಜ್ಜಯಂತಿ ನಡೆಯುತ್ತಿದ್ದುದು. ಏಳು ದಿನದ ಕಾರ್ಯಕ್ರಮಗಳು. ಪ್ರತಿವರ್ಷವೂ ನಮಗೆ ಆಹ್ವಾನ ಬರುತ್ತಿತ್ತು. ನಾವೂ ನಿಯತವಾಗಿ ಹದಿನಾರು ವರ್ಷಗಳ ಕಾಲ ಒಂದು ವರ್ಷವೂ ತಪ್ಪದಂತೆ ಅಲ್ಲಿಗೆ ಹೋಗಿ ಕಾರ್ಯಕ್ರಮ ಕೊಟ್ಟೆವು. ಅಲ್ಲಿನ ಜನರಿಗೆ ಕಾವ್ಯವಾಚನವೆಂದರೆ ಬಹಳ ಆಸಕ್ತಿ, ಪ್ರೀತಿ. 'ತೊರವೆ ರಾಮಾಯಣ' ಅವರಿಗೆ ಪ್ರಿಯವಾದ ಕಾವ್ಯ. ಚೆನ್ನಾಗಿ ಕೇಳುವ ಜನ ಅವರು. ಒಂದು ವರ್ಷ ಮತ್ತೂರರೂ ಹೋಗಿದ್ದರು.

ಆದರೆ ವರ್ಷಗಳು ಕಳೆದಂತೆ ಆ ಗಣ್ಯರ ಮನೆಯಲ್ಲಿ ಮೊದಲಿನ ವಿಶ್ವಾಸ ಕಡಿಮೆಯಾಗಿ ಅವರ ಸಹೋದರರ ಮನಸ್ಸಿನಲ್ಲಿ ಒಡಕು ಮೂಡಿ ಒಬ್ಬರ ಮೇಲೆ ಒಬ್ಬರು ಕತ್ತಿ ಮಸೆಯುವಂತಾದರು. ಕಂಡಲ್ಲಿ ತಲೆ ಕಡಿಯಬೇಕು ಎನ್ನುವ ಮಟ್ಟಕ್ಕೆ ಬಂದರು. ನಾವು ಕಾರ್ಯಕ್ರಮ ಕೊಡಲು ಹೋದಾಗ ಅವರಲ್ಲೇ ಉಳಿದುಕೊಳ್ಳುತ್ತಿದ್ದುದು. ನಮಗೇಕೋ ಈ ಬದಲಾವಣೆ ಇರುಸು-ಮುರುಸು ತಂದಿತು. ಕೊನೆಗೆ ನಾನು ಒಮ್ಮೆ ತಹಸೀಲ್ದಾರರಿಗೇ ಹೇಳಿದೆ, ''ನೀವು ಇಷ್ಟೆಲ್ಲ ಕಾರ್ಯಕ್ರಮಗಳನ್ನು ಮಾಡಿಸುತ್ತೀರಿ. ನಮ್ಮ ಆತಿಥೇಯರಾಗಿದ್ದೀರಿ. ಇಷ್ಟು ವರ್ಷಗಳೂ ನಮ್ಮನ್ನೂ ಚೆನ್ನಾಗಿ ನೋಡಿಕೊಂಡು, ನಮ್ಮಿಂದ ಸಾಕಷ್ಟು ಕಥೆಗಳನ್ನೂ ಕೇಳಿದ್ದೀರಿ. ರಾಮಾಯಣ, ಮಹಾಭಾರತವನ್ನು ಕೇಳುತ್ತಿದ್ದೀರಿ, ಎಷ್ಟೋ ಮಂದಿಗೆ ಕೇಳಿಸುತ್ತಿದ್ದೀರಿ. ನೀವೇ ಈಗ ಈ ರೀತಿಯಾದರೆ, ಹೀಗೆ ಬಡಿದಾಡಿದರೆ ಬೇರೆಯವರದೇನು? ನಾವಾದರೂ ಇಲ್ಲಿಗೆ ಹಣಕ್ಕಾಗಿ ಬರುವುದಿಲ್ಲ. ನಿಮ್ಮ ನಿಷ್ಠೆ, ಪ್ರೀತಿಗೆ ಬರುತ್ತೇವೆ. ಹಿರಿಯರಾಗಿ ಬುದ್ಧಿ ಹೇಳಬೇಕಾದ ನೀವೇ ಹೀಗೆ ಮಾಡುವುದು ಸರಿಯಲ್ಲ. ಆಸೆ - ಆಸಕ್ತಿ ಇದ್ದರೆ ಸಾಲದು, ಆದರ್ಶ-ತತ್ವಗಳ ಅನುಷ್ಠಾನವೂ ಬೇಕಲ್ಲವೇ? ನೀವು ಸರಿಯಾಗಿದ್ದರೆ, ನಿಮ್ಮ ಕುಟುಂಬ ಒಂದಾಗಿದ್ದರೆ ನಾವೂ ಬರುತ್ತೇವೆ, ಇಲ್ಲವಾದರೆ ನಾವು ಬರುವುದಿಲ್ಲ'' ಎಂದೆ. ನಾನು ಹೇಳಿದುದು ಅವರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಮಾರನೆ ವರ್ಷವೂ ನಾನು ಹೋದಾಗ ಪರಿಸ್ಥಿತಿ ಹಾಗೇ ಇದ್ದುದನ್ನು ಕಂಡು, ನಾನು ಅಲ್ಲಿಗೆ ಹೋಗುವುದನ್ನೇ ಬಿಟ್ಟುಬಿಟ್ಟೆ. ವಿಚಾರ-ಆಚಾರಗಳು ಒಂದಾಗಿರದಿದ್ದರೆ ಸಂಭಾಳಿಸುವುದು ಕಷ್ಟ ಎನಿಸುತ್ತದೆ. ಅದರಿಂದಲೇ ನಾನು ಹಾಗೆ ಮಾಡಿದೆ. ಆ ಬಗ್ಗೆ ನನಗೆ ಪಶ್ಚಾತ್ತಾಪವಿಲ್ಲ..... ಹೀಗೆಯೂ ಆಗಿರುವುದೇ ಒಂದು ಸ್ವಾರಸ್ಯ ಅಷ್ಟೆ!

ಮತ್ತೊಮ್ಮೆ...... ಇದು ಬಹಳ ಹಿಂದೆ ನಡೆದದ್ದು. ಆಗ ಮತ್ತೂರರು ಇನ್ನೂ ಲಂಡನ್ನಿಗೆ ಹೋಗಿರಲಿಲ್ಲ. ಅವರು 'ಕರ್ಣ ರಸಾಯನ' ಎನ್ನುವ ಶ್ರೀ ಹು.ಮ. ರಾಮಾರಾಧ್ಯರ ಒಂದು ಗಮಕರೂಪಕವನ್ನು ವೇದಿಕೆಯ ಮೇಲೆ ತರಲು ಸಿದ್ಧ ಮಾಡಿದರು. ನಾವು ಹೆಚ್ಚು ಕಡಮೆ ಒಂದೇ ವಯಸ್ಸಿನವರು, ಸುಮಾರು ಹದಿಮೂರು ಜನ ನಮ್ಮ ನಮ್ಮ ಪಾತ್ರಗಳನ್ನು ಹಂಚಿಕೊಂಡು ತಯಾರಿ ಮಾಡಿಕೊಂಡೆವು. ಮತ್ತೂರರದು ಕರ್ಣನ ಪಾತ್ರ, ಬಹಳ ಭಾವಪೂರ್ಣವಾಗಿ ಅಭ್ಯಾಸ ಮಾಡಿದ್ದರು ಅವರು. ನಮ್ಮ ಈ ರೂಪಕ ಕಾರ್ಯಕ್ರಮ ಮೊದಲು ಶಿವಮೊಗ್ಗದ ಕನ್ನಡಸಂಘದಲ್ಲಿ ನಡೆಯಿತು. ಬಹಳ ಯಶಸ್ವಿಯಾಯಿತು, ಜನರೂ ಬಹಳ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹಿಸಿದರು, ತುಂಬಾ ಮೆಚ್ಚಿಕೊಂಡರು. ನಮ್ಮ ಉತ್ಸಾಹ ಇದರಿಂದಾಗಿ ಇಮ್ಮಡಿಸಿತು. ನಂತರ ಶಿವಮೊಗ್ಗದ ಆಂಜನೇಯನ ದೇವಸ್ಥಾನದಲ್ಲೂ ನಾವು ಮತ್ತೂರರ ನೇತೃತ್ವದಲ್ಲಿಯೇ ಇದೇ ಕಾರ್ಯಕ್ರಮವನ್ನು ಕೊಟ್ಟೆವು. ಅಲ್ಲಿ ಕಂಬಗಳನ್ನು ನೆಟ್ಟು ಛಾವಣಿ ಹಾಕಿ ಪಕ್ಕಕ್ಕೆ ವೇದಿಕೆ ಮಾಡಿದ್ದ ಕಾರಣ, ವೀಕ್ಷಕರು ನಮ್ಮ ಎದುರಿಗೆ ಇರದೆ ನಾವು ಪಕ್ಕದಲ್ಲಿ ಕುಳಿತು ನಮ್ಮಷ್ಟಕ್ಕೆ ನಾವೇ ಹೇಳಿಕೊಳ್ಳುವ ಹಾಗೆ ಆಯಿತು. ಆ ದಿನ ಕಾರ್ಯಕ್ರಮ ಮೊದಲಿನದರಷ್ಟು ಕಳೆಕಟ್ಟಲಿಲ್ಲ.

ನಂತರ ಕೆಲವು ವಾರಗಳ ಮೇಲೆ ತರೀಕೆರೆಯಲ್ಲಿ ಒಂದು ಕಾರ್ಯಕ್ರಮ ನೀಡಲು ಆಹ್ವಾನ ಬಂದಿತು. ನಾವೆಲ್ಲರೂ ಉತ್ಸಾಹದಿಂದ ತರೀಕೆರೆಗೆ ಹೋದೆವು. ಆತಿಥೇಯರು ನಮಗೆಲ್ಲ ಭರ್ಜರಿ ಊಟ ಹಾಕಿ, ಮೈಸೂರ್‌ಪಾಕಿನ ಸಿಹಿ ಮಾಡಿದ್ದರು. ನಮ್ಮ ಗೆಳೆಯ ಸೂರ್ಯನಾರಾಯಣನದ್ದು ಶಲ್ಯನ ಪಾತ್ರ. ಅವನಿಗೆ ಮೈಸೂರ್‌ಪಾಕು ಎಂದರೆ ಪ್ರಾಣ. ಆದರೆ ಸಂಜೆ ಕಾರ್ಯಕ್ರಮವಿದೆ. ಚೆನ್ನಾಗಿ ಸಿಹಿತಿಂದು

ಗಂಟಲು ಕೆಟ್ಟರೆ ಪದ್ಯ ಓದುವವರು ಯಾರು? ಕಾರ್ಯಕ್ರಮ ಕೆಡುವುದಿಲ್ಲವೇ? ಮತ್ತೂರರು ನಮ್ಮನ್ನೆಲ್ಲ ಆ ಬಗ್ಗೆ ಎಚ್ಚರಿಸಿದರು. ಹೆದರಿದ ಸೂರ್ಯನಾರಾಯಣನಂತೂ ಮೈಸೂರು ಪಾಕನ್ನೇ ತಿನ್ನಲಿಲ್ಲ....... ಸಂಜೆ ಕಾರ್ಯಕ್ರಮ ನಡೆಯಬೇಕಿದ್ದ ಜಾಗಕ್ಕೆ ಹೋದೆವು. ಅದೊಂದು ಬಯಲುರಂಗಮಂದಿರ. ವೇದಿಕೆಯ ಮೇಲೆ ಕುಳಿತೆವು. ಜನರು ಮಾತ್ರ, ಮುಂದಿನ ಸಾಲಿನಲ್ಲಿದ್ದ ಐದಾರು ಮಂದಿಯನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ರಂಗಮಂಟಪಕ್ಕೆ ಮಾತ್ರ ಛಾವಣಿ. ಕೇಳಲು ಕುಳಿತವರಿಗೆ ಅದೂ ಇಲ್ಲ! ಖಾಲಿ ಕುರ್ಚಿಗಳು ಮಾತ್ರ. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮವನ್ನಂತೂ ಪ್ರಾರಂಭ ಮಾಡಬೇಕಷ್ಟೆ? ನಾವು ಪ್ರಾರಂಭಿಸಿಯೇ ಬಿಟ್ಟೆವು. ಹತ್ತು ನಿಮಿಷಗಳೂ ಕಳೆದಿಲ್ಲ, ಮುಂದೆ ಕುಳಿತಿದ್ದ ಐದಾರು ಮಂದಿಯಲ್ಲಿ ನಾಲ್ಕು ಜನ ಎದ್ದು ಹೋದರು! ನಮಗೆ ಪೆಚ್ಚಾದರೂ ಹಠಬಿಡದೆ ಮುಂದುವರೆಸಿದೆವು. ಆತಿಥೇಯರು ಒಬ್ಬಿಬ್ಬರು ಮುಂದೆ.... ಅಷ್ಟರಲ್ಲೇ ದೂರದಲ್ಲಿದ್ದ, ಎದುರು ಕಾಂಪೌಂಡ್ ಮೇಲೆ ಏಳೆಂಟು ಜನ ಕುಳಿತಿದ್ದುದು ನಮ್ಮ ದೃಷ್ಟಿಗೆ ಬಿತ್ತು. ಮತ್ತೂರರು ಉತ್ಸಾಹದಿಂದ ''ನೋಡಿ, ನೀವು ಅಲ್ಲಿ ಕಾಂಪೌಂಡ್ ಮೇಲೆ ಕುಳಿತಿರುವವರು ಹತ್ತಿರ ಬನ್ನಿ. ನಮ್ಮ ಎದುರಿಗೆ ಕುಳಿತರೆ ನಿಮಗೂ ಸರಿಯಾಗಿ ಕೇಳಿಸುತ್ತದೆ. ದೂರವಾದರೆ ನಮಗೂ ನಿಮ್ಮ ಮುಖ ಕಾಣುವುದಿಲ್ಲ. ನಮಗೆ ಇಷ್ಟು ಜನರೇ ಸಾಕು. ನಾವು ನಿಲ್ಲಿಸುವುದಿಲ್ಲ. ಹೇಳುತ್ತೇವೆ'' ಎಂದರು. ಹೇಗಾದರೂ ಅವರನ್ನು ಮುಂದಕ್ಕೆ ಕರೆದು ಕೂರಿಸಬೇಕೆಂದು ಅವರು ಹೀಗೆ ಉಪಾಯದ ಮಾತನ್ನಾಡಿದ್ದರು! ಆದರೆ.... ನಮ್ಮ ದುರ್ದೈವ. ನಮ್ಮ ನಿರೀಕ್ಷೆಗೂ ಮೀರಿ ಹಾಗೆ ಕಾಂಪೌಂಡ್ ಮೇಲೆ ಕುಳಿತಿದ್ದವರೆಲ್ಲ ಮತ್ತೂರರು ಹಾಗೆಂದ ಕೂಡಲೆ ಒಬ್ಬೊಬ್ಬರಾಗಿ ಇಳಿದು ಮುಂದಕ್ಕೆ ಬರದೆ ಪಕ್ಕಕ್ಕೆ ತಿರುಗಿ ಆಚೆಗೆ ಹೊರಟೇ ಹೋಗುವುದೇ? ನಾವುಗಳು ಅವಾಕ್ಕಾದೆವು! ವೇದಿಕೆಯ ಮೇಲೆ ೧೩ಜನ, ಕೆಳಗೆ ಶ್ರೋತೃಗಳು ಇಬ್ಬರು ಮಾತ್ರ...! ಅಂತೂ ಇಂತೂ ಅರ್ಧ ಗಂಟೆಯನ್ನು ಕಳೆದು ಕಾರ್ಯಕ್ರಮ ನಿಲ್ಲಿಸಿ, ಅಲ್ಲಿಂದ ಹೊರಟುಬಂದೆವು. ನಮ್ಮ ಗೆಳೆಯ ಸೂರ್ಯನಾರಾಯಣನಂತೂ ಮಧ್ಯಾಹ್ನದ ಊಟದಲ್ಲಿ ತನ್ನ ಪ್ರಿಯವಾದ ಸಿಹಿ ಮೈಸೂರುಪಾಕನ್ನೂ ಇದಕ್ಕಾಗಿ ತ್ಯಾಗಮಾಡಿದ್ದ. ಅವನಿಗೆ ಹೊಟ್ಟೆ ಉರಿದುಹೋಯಿತು. ''ಶಲ್ಯನ ಪಾತ್ರ ನನ್ನದು. ಅರ್ಧಗಂಟೆ ಕಾರ್ಯಕ್ರಮ ಕೊಟ್ಟರೂ ನನ್ನ ಪಾತ್ರ ಬರಲಿಲ್ಲ. ನಾನು ಮೈಸೂರುಪಾಕನ್ನೂ ತಿನ್ನಲಿಲ್ಲ... ಎಂಥ ಅನ್ಯಾಯ ಛೇ!'' ಎಂದು ಹಪಹಪಿಸಿದ. ಅವನು ಹಾಗೆಂದುಕೊಂಡಾಗ ನಮಗೆಲ್ಲ ನಗುವೋ ನಗು.... ಇದೂ ಒಂದು ರೀತಿಯ ಸ್ವಾರಸ್ಯಕರ ಅನುಭವ ಎಂದೇ ಹೇಳಬೇಕು...

ಒಂದು ಸಾರಿ ನಾನೂ, ಮಾರ್ಕಂಡೇಯ ಅವಧಾನಿಯವರೂ ಮಲೆನಾಡಿನ ಕಡೆಗೆ ಒಂದು ಕಾರ್ಯಕ್ರಮಕ್ಕೆಂದು ಹೋಗಿದ್ದೆವು. ಎರಡು ದಿನದ ಕಾರ್ಯಕ್ರಮ ಅದು. ಮೊದಲ ದಿನದ ವಾಚನ-ವ್ಯಾಖ್ಯಾನ ಮುಗಿದು ನಾವೆಲ್ಲ ನಮ್ಮ ಬಿಡಾರಕ್ಕೆ ವಾಪಸಾಗುತ್ತಿದ್ದಾಗ, ನಮ್ಮ ಜತೆಯಲ್ಲೇ ಬರುತ್ತಿದ್ದ ನಾಲ್ಕೈದು ಜನರನ್ನು ಅವಧಾನಿಯವರು, ''ಹೇಗಿತ್ತು ಈ ದಿನದ ಕಾರ್ಯಕ್ರಮ? ನಿಮಗೆಲ್ಲ ಹಿಡಿಸಿತೇ? ಇಷ್ಟವಾಯಿತೇ?'' ಎಂದು ಕೇಳಿದರು. ನಮಗೆ ಸ್ವಲ್ಪ ಆತಂಕವಿದ್ದುದಕ್ಕೂ ಕಾರಣವಿತ್ತು. ಮೊದಲೇ ಮಲೆನಾಡಕಡೆಯ ಜನ. ಅವರಿಗೆ ಯಕ್ಷಗಾನವೇ ಪ್ರಥಮ ಪ್ರೇಮ, ಅದುವೇ ಕಡೆಯದು. ನಮ್ಮ ಈ ರೀತಿಯ ಕಾರ್ಯಕ್ರಮ, ಯಾವುದೇ ಆರ್ಭಟವಿಲ್ಲದ್ದು ಅವರಿಗೆ ಹಿಡಿಸೀತೋ ಇಲ್ಲವೋ ಎಂದು ಸಂದೇಹವಿತ್ತು. ಅದರಿಂದಲೇ ಅವಧಾನಿಯವರು ಅವರಿಗೆ ಈ ಪ್ರಶ್ನೆ ಹಾಕಿದ್ದರು. ಆದರೆ ಬಂದ ಉತ್ತರ ಮಾತ್ರ ನಮ್ಮನ್ನು ತಬ್ಬಿಬ್ಬು ಮಾಡಿತ್ತು! ''ನಿನ್ನೆ ಒಂದು ಯಕ್ಷಗಾನ ಇತ್ತು ಸ್ವಾಮಿ. ಅಬ್ಬ! ಹೇಗಿತ್ತು ಅಂತೀರಿ? ಆ ಪದ್ಯಗಳೂ! ಆ ಆಟ! ನಿಜಕ್ಕೂ ಭರ್ಜರಿ ಇತ್ತು ಸ್ವಾಮಿ'' ಎಂದರು ಅವರು! ಅವರ ಮಾತು ಕೇಳಿ ಅವಧಾನಿಗಳೂ ಸೋಲದೆ ''ನಮಗೆ, ರಸಿಕರು ಬಂದು ಮುಂದೆ ಕುಳಿತುಕೊಂಡರೆ ಕಥೆ ಹೇಳಲು ಉತ್ಸಾಹ ಸ್ಫೂರ್ತಿ ಬರುತ್ತದೆ. ಅವರ ಇಷ್ಟ ಹೇಗೆ ಇದೆಯೋ ಹಾಗೆ ಕಥೆ ಹೇಳಲು ಸಾಧ್ಯವಾಗುತ್ತದೆ'' ಎಂದರು. ಅದಕ್ಕೆ ಅವರ ಪಕ್ಕದಲ್ಲಿದ್ದವರು ''ನಾಳೆ ನಾನು ಬಂದು ತಮ್ಮ ಮುಂದೆಯೇ ಕೂರುತ್ತೀನಿ ಸ್ವಾಮಿ'' ಎಂದರು. ಮರುದಿನ ಕಾರ್ಯಕ್ರಮದಲ್ಲಿ ಹಿಂದಿನ ದಿನ ಹೇಳಿದ್ದಂತೆ ಆತ ಮುಂದೆಯೇ ಬಂದು ಕುಳಿತ. ಮಾತು ಮಾತಿಗೂ ನಗಲು ಪ್ರಾರಂಭಿಸಿದ. ಅವಧಾನಿಗಳು ಯಾವುದೋ ಶೋಕ ಸಂದರ್ಭದಲ್ಲಿ ಸನ್ನಿವೇಶದ ಬಗ್ಗೆ ಹೇಳಿ ಗದ್ಗದಿತರಾಗಿ ವ್ಯಾಖ್ಯಾನ ಮಾಡುತ್ತಿದ್ದರೆ ಎದುರಿಗಿದ್ದ ಮಹಾನುಭಾವ ಆಗಲೂ ನಕ್ಕನು! ಇದನ್ನೆಲ್ಲ ಗಮನಿಸುತ್ತಿದ್ದ ನನಗೂ ನಗು ಬರದೆ ಇರಲಿಲ್ಲ.

ಅರಸಿಕೇಷು ಕವಿತ್ವನಿವೇದನಂ
ಶಿರಸಿ ಮಾ ಲಿಖ ಮಾ ಲಿಖ ಮಾ ಲಿಖ ॥

''ಹೇ ಬ್ರಹ್ಮ, ಜನ್ಮ ಜನ್ಮಾಂತರದಲ್ಲೂ ಅರಸಿಕರಿಗೆ ಕಾವ್ಯವನ್ನು ಹೇಳುವುದನ್ನು ಮಾತ್ರ ಹಣೆಯಲ್ಲಿ ಬರೆಯಬೇಡಪ್ಪ. ತಲೆನೋವು ತರಬೇಡ'' ಎನ್ನುತ್ತಾನೆ ಒಬ್ಬ ಮಹಾನುಭಾವ. ಹಾಗೆ ಇದು ಸಹ. ಆಗಲೇ ನಾವು 'ಇಂತಹ ಊರುಗಳಲ್ಲಿ ಕಾರ್ಯಕ್ರಮ ಮಾಡುವುದು ಇನ್ನು ಸಾಕು' ಎಂದುಕೊಂಡೆವು.

ಆದರೆ ಇದಕ್ಕೆ ನೇರ ವಿರುದ್ಧ, ಬಾಂಬೆಯಲ್ಲಿ ನಡೆದ ಕಾರ್ಯಕ್ರಮ. ಬಾಂಬೆಯ ಕನ್ನಡ ಸಂಘದಲ್ಲಿ ಶ್ರೀ ಕೃಷ್ಣಸಾರಥ್ಯ

ಹೇಳಲು ನಾನು ಮತ್ತೂರರ ಜತೆ ಹೋದೆ. ಅಲ್ಲಿಯೂ ಮಲೆನಾಡಿನ, ಕರಾವಳಿಯ ಕಡೆಯವರೇ ಹೆಚ್ಚಾಗಿದ್ದರು. ನಮ್ಮ ಕಾರ್ಯಕ್ರಮದ ಹಿಂದಿನ ದಿನ ಅಲ್ಲಿ ಯಕ್ಷಗಾನ ನಡೆದಿತ್ತು. ಬಾಂಬೆಯಲ್ಲಿಯೇ ಸುಮಾರು ಹತ್ತಕ್ಕೂ ಹೆಚ್ಚು ಯಕ್ಷಗಾನ ಮಂಡಳಿಗಳಿವೆಯಂತೆ. ಆದರೂ ನಮ್ಮ ಕಾರ್ಯಕ್ರಮವೂ ಅದ್ಭುತವಾಗಿಯೇ ಆಯಿತು. ಪ್ರೇಕ್ಷಕರು ಬಲುಚೆನ್ನಾಗಿ ಬಹಳವಾಗಿ ಸ್ಪಂದಿಸಿದರು. ನಾವು ಯಾವುದೇ ಕಾರ್ಯಕ್ರಮ ಕೊಡುವಾಗಲೂ ಪ್ರೇಕ್ಷಕರ ಅಭಿರುಚಿ, ನಾಡಿ ಏನು ಎಂದು ಅಂದಾಜಾಗಿರಬೇಕು. ಏಕೆಂದರೆ ಕಾರ್ಯಕ್ರಮ ಕೇವಲ ನಮ್ಮಿಂದಷ್ಟೇ ಯಶಸ್ವಿಯಾಗುವುದಿಲ್ಲ. ಅಭಿರುಚಿಯುಳ್ಳ ಸಹೃದಯರು, ಕಥಾ ಸನ್ನಿವೇಶಕ್ಕೆ ನಾವು ಹೇಳುವ ರೀತಿಗೆ ಅವರ ಸ್ಪಂದನ, ಕಾರ್ಯಕ್ರಮ ಮಾಡುವ ಸ್ಥಳ ಎಲ್ಲವೂ ಮುಖ್ಯವಾಗುತ್ತದೆ..... ಹಾಗೆ ನನಗೆ ಬಾಂಬೆಯಲ್ಲಿ ಗಮಕವನ್ನು ಅಷ್ಟು ಪ್ರೀತಿಯಿಂದ ಕೇಳುತ್ತಾರೆ ಎಂದು ನಿರೀಕ್ಷೆ ಇರಲಿಲ್ಲ. ಆದರೆ ನಮ್ಮ ನಿರೀಕ್ಷೆಗೂ ಮೀರಿ ಕಾರ್ಯಕ್ರಮ ಬಹಳ ಚೆನ್ನಾಗಿಯೇ ಆಯಿತು. ನಮಗೂ ತುಂಬಾ ಸಂತೋಷವಾಯಿತು.

ಕಲಾಸೇವೆಯ ತೃಪ್ತಿ

ಈವರೆಗೆ ನಾನು ಕುಮಾರವ್ಯಾಸಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ನಳಚರಿತ್ರೆ, ಹರಿಶ್ಚಂದ್ರ ಕಾವ್ಯ, ರಾಮಾಯಣದರ್ಶನಂ- ಈ ಕನ್ನಡ ಕಾವ್ಯಗಳನ್ನೆಲ್ಲ ಬಹಳ ಸಾರಿ ವಾಚನ ಮಾಡಿದ್ದೇನೆ. ರನ್ನನ ಗದಾಯುದ್ಧವನ್ನೂ, ಪಂಪಭಾರತವನ್ನೂ ಅಪರೂಪವಾಗಿ ವಾಚನ ಮಾಡಿದ್ದೇನೆ. ಇವೇ ಅಲ್ಲದೆ ಸಂಸ್ಕೃತದ ವಾಲ್ಮೀಕಿರಾಮಾಯಣ, ವ್ಯಾಸಭಾರತವನ್ನು ಪೂರ್ಣವಾಗಿ ಅನೇಕ ಸಾರಿ ಓದಿದ್ದೇನೆ. ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಹರಿಹರನ ರಗಳೆ, ಕುಂಬಾರಗುಂಡಯ್ಯನ ರಗಳೆಗಳನ್ನು ಓದಿದ್ದೇನೆ.

ಇವೆಲ್ಲವನ್ನೂ ಓದಿದ್ದರೂ ನನಗೆ ಓದುವಾಗ ಬಹಳವೇ ಆನಂದ ಕೊಟ್ಟಿರುವುದು ಕುಮಾರವ್ಯಾಸಭಾರತ. ಸಂಸ್ಕೃತ ಕಾವ್ಯಗಳನ್ನು ನಾನು ಓದಿದರೂ ನನಗೂ ಅದು ಸಂಪೂರ್ಣವಾಗಿ ಅರ್ಥವಾಗಿದೆ ಎಂದಲ್ಲ. ಕೆಲವು ಸಾರಿಯಂತೂ ಒಂದು ಶ್ಲೋಕದಲ್ಲಿ ಒಂದೇ ಪದ ಅರ್ಥವಾಗಿರುತ್ತದೆ. ಮಿಕ್ಕವು ಅರ್ಥವಾಗಿರುವುದಿಲ್ಲ. ಓದುವವರಿಗೆ ಪೂರ್ತಿ ಅರ್ಥವಾಗಿದ್ದಾಗ ಓದಲು ತುಂಬಾ ಸಂತೋಷ - ಉತ್ಸಾಹ ಇರುತ್ತದೆ. ಅಲ್ಲದೆ ಸಂಸ್ಕೃತದಲ್ಲಿ ಭಾವಾರ್ಥ, ಅನ್ವಯಾರ್ಥ ಮಾಡಿ ಓದುವುದು ಕಷ್ಟ, ಸುಲಭವಲ್ಲ. ಅಲ್ಲದೆ, ಸಂಸ್ಕೃತದ ಪದ್ಯಗಳು ನಾಲ್ಕು ಸಾಲು, ಮೂವತ್ತೆರಡು ಅಕ್ಷರ, ಅನುಷ್ಟುಪ್ ಛಂದಸ್ಸಲ್ಲಿ ಇರುತ್ತವೆ. ರಾಗ ಹಾಕಿ ಪ್ರಾರಂಭ ಮಾಡುವುದರಲ್ಲಿ ಪದ್ಯವೇ ಮುಗಿದು ಹೋಗಿರುತ್ತದೆ. ಪೂರ್ತಿ ರಾಗದ ಭಾವ ತರಲು ಸಾಧ್ಯವಿಲ್ಲ. ಸಾಹಿತ್ಯದ ವ್ಯಾಪ್ತಿಗೆ ಅಲ್ಲಿ ಮಿತಿ ಇರುತ್ತದೆ.... ಆದರೆ ಮಂದಾಕ್ರಾಂತವೃತ್ತ, ಶಾರ್ದೂಲ ವಿಕ್ರೀಡಿತ ವೃತ್ತ, ವಸಂತತಿಲಕವಾದರೆ ಓದಲು ಚೆನ್ನು. ಅವು ದೀರ್ಘವಾಗಿರುತ್ತವೆ. ಅದಕ್ಕೇ 'ತಾರಾ ನಾಯಕಶೇಖರಾ' ಆಗಲೀ, 'ಮೌಳೌ ಗಂಗಾ ಶಶಾಂಕೌ' ಆಗಲೀ, ಓದುವುದು ಒಳ್ಳೆಯ, ತೃಪ್ತಿಯ ಅನುಭವವನ್ನು ಕೊಡುತ್ತದೆ. ಆದರೆ ಅವುಗಳನ್ನೇ ಆದರೂ ಪ್ರೇಕ್ಷಕರಿಗೆ ಅರ್ಥವಾಗುವ ಹಾಗೆ ಓದಲು ಸಾಧ್ಯವಿಲ್ಲ. ಪ್ರೇಕ್ಷಕರಲ್ಲಿ ನೂರಕ್ಕೆ ಒಬ್ಬರಿಗೆ ಸಂಸ್ಕೃತ ಅರ್ಥವಾದೀತು, ಎಲ್ಲರಿಗೂ ಅಲ್ಲ. ಅವರಿಗೆ ಅರ್ಥವಾಗದೇ ಹೋದಾಗ ಅವರಿಂದ ಬರುವ ಪ್ರತಿಕ್ರಿಯೆ ಸಪ್ಪೆಯಾಗಿರುತ್ತದೆ. ಅದರಲ್ಲಿ ಉತ್ಸಾಹ ಇರುವುದಿಲ್ಲ... ಆದರೆ ಕನ್ನಡ ಕಾವ್ಯದ ರೀತಿ ಹಾಗಲ್ಲ. ನಮಗೂ ಕನ್ನಡ ಕಾವ್ಯವು ಪೂರ್ಣ ಅರ್ಥವಾಗಿರುತ್ತದೆ. ವಾಚನ ಮಾಡಿದಾಗ ಭಾವಾರ್ಥಕ್ಕೆ ತಕ್ಕ ಹಾಗೆ, ಪದಗಳನ್ನು ಅನ್ವಯಿಸಬಹುದು. ಅದು ಪ್ರೇಕ್ಷಕರಿಗೆ ಸುಲಭವಾಗಿ ಕಾವ್ಯ ಅರ್ಥವಾಗುವ ಹಾಗೆ ಮಾಡುತ್ತದೆ. ಹಾಗೆ ಪದ್ಯ ಅರ್ಥವಾದಾಗಲೇ ನಾವು ಬಳಸಿದ ರಾಗ, ಅದರ ಭಾವ, ಆ ಸಾಹಿತ್ಯ ಎಲ್ಲವೂ ಕೇಳುಗರ ಮೇಲೆ ಚೆನ್ನಾಗಿ ಪರಿಣಾಮ ಬೀರಲು ಸಾಧ್ಯ. ಆಗ ಪ್ರತಿಕ್ರಿಯೆಯೂ ಚೆನ್ನಾಗಿರುತ್ತದೆ. ಕಾವ್ಯ - ಕಥಾಪ್ರಸಂಗ - ಅದರ ವಿಚಾರ - ತತ್ವ ಅವರ ಹೃದಯಕ್ಕೆ ತಟ್ಟುತ್ತದೆ. ಅವರಿಂದ ಪ್ರೋತ್ಸಾಹಕರ ಪ್ರತಿಕ್ರಿಯೆ ಬರುವುದು ಅವರಿಗೆ ಅರ್ಥವಾದಾಗ ಮಾತ್ರ. ಅರ್ಥವಾದರೆ ಖಂಡಿತವಾಗಿಯೂ ಸಹೃದಯ ರಸಿಕರು ಸ್ಪಂದಿಸುತ್ತಾರೆ, ಕಾವ್ಯವನ್ನು ಚೆನ್ನಾಗಿ ಅನುಭವಿಸಿ ಆನಂದಪಡುತ್ತಾರೆ. ಅರ್ಥವಾಗದಿದ್ದಾಗ ಅದನ್ನು ಅನುಭವಿಸಲೂ ಸಾಧ್ಯವಿಲ್ಲ. ಅದರಿಂದಲೇ ನನಗೆ ಕನ್ನಡ ಕಾವ್ಯದ ಬಗೆಗೇ ಪ್ರೀತಿ - ಅವುಗಳೇ ಇಷ್ಟ. ಅವುಗಳಲ್ಲಿ ಕುಮಾರವ್ಯಾಸಭಾರತ ನನ್ನ ಪರಮಪ್ರಿಯ ಕಾವ್ಯ! ಅದನ್ನು ಓದುವಾಗ ನಾನು ಅನುಭವಿಸಿರುವ ಆನಂದ ಅಷ್ಟಿಷ್ಟಲ್ಲ.

ಪ್ರಶಂಸೆಗಳು

ನಿಜ. ನಾನು ಗುರುಮುಖೇನ ಸಂಗೀತ ಕಲಿತಿಲ್ಲ. ಆದರೆ ಕನಸು ಮನಸಿನಲ್ಲೂ ರಾಗಗಳನ್ನು ಹಾಡಿಕೊಳ್ಳುವುದು ನನ್ನ ಅಭ್ಯಾಸ. ಈ ಅಭ್ಯಾಸದಿಂದಲೇ ಅದು ಹೃದ್ಗತವಾಗುವುದು. ನನ್ನ ನಿಷ್ಠೆಯ ಅಭ್ಯಾಸವನ್ನು ದೈವಕೃಪೆಯು ಸಾಧನೆಯನ್ನಾಗಿ ಮಾಡಿದೆ. ಕಲೆಯನ್ನು ನನಗೆ ಕರಗತ ಮಾಡಿಕೊಟ್ಟಿರುವುದೂ ದೇವರಕೃಪೆಯೇ. ಇಷ್ಟು ರಾಗಗಳನ್ನು ನಾನು ಹೇಗೆ ಪ್ರಯೋಗ ಮಾಡಲು ಕಲಿತೆ ಎನ್ನುವ ಪ್ರಶ್ನೆಗೆ ಉತ್ತರ ನನ್ನಲ್ಲಿಲ್ಲ. ಆದರೆ

ಅದರ ಬಗೆಗಿನ ಧ್ಯಾನ, ಮನನ ಆ ಸಾಧನೆಯನ್ನು ಸಾಧ್ಯ ಮಾಡುತ್ತದೆ, ಎಂದು ಮಾತ್ರ ಹೇಳಬಲ್ಲೆ.

ಸಂಗೀತವನ್ನಾದರೂ ಅಷ್ಟೇ.... ನಾನು ಬಹಳ ಮಂದಿ ವಿದ್ವನ್ಮಣಿಗಳ ಸಂಗೀತ ಕೇಳಿದ್ದೇನೆ. ಆದರೆ ಹಾಡುವ ಶೈಲಿಯನ್ನು ನಾನು ಅಳವಡಿಸಿಕೊಂಡಿಲ್ಲ, ಈವರೆಗೆ ಅನುಕರಿಸಿಯೂ ಇಲ್ಲ. ಆದರೆ ಒಂದು ರಾಗದ ಒಂದು ಛಾಯೆ ಗಮಕದ ಚೌಕಟ್ಟಿಗೆ ಹೊಂದಿಕೊಳ್ಳಬಹುದಾದರೆ ಅವನ್ನು ಬಳಸಿದರೆ ತಪ್ಪಿಲ್ಲ ಎಂದು ನನ್ನ ಭಾವನೆ. ನಾನು ಬಾಲಮುರಳಿಯವರು ಹೇಳಿದ ಜನಸಮ್ಮೋಹಿನಿ ರಾಗ, ಲಾಲ್‌ಗುಡಿ ಜಯರಾಮನ್ ನುಡಿಸುವ ಸಿಂಧುಭೈರವಿಯನ್ನು ಸ್ವಲ್ಪ ಮಾರ್ಪಾಡು ಮಾಡಿ, ಮೊದಲು ಚೆನ್ನಾಗಿ ಅಭ್ಯಾಸ ಮಾಡಿ, ಅದರ ಪರಿಣಾಮ ನೋಡಿ ನನಗೆ ಸಾಧ್ಯವಾದಷ್ಟನ್ನು ಪದ್ಯಗಳಲ್ಲಿ ಪ್ರಯೋಗಿಸಿದ್ದೇನೆ. 'ವೀರಾವಂತಿ' ರಾಗ ಕಷ್ಟದ್ದು. ಆದರೆ ಪದ್ಯದಲ್ಲಿ ಹೇಗೆ ಉಪಯೋಗಿಸಿದರೆ ಚೆನ್ನಾಗುತ್ತದೆ ಎಂದು ನೋಡಿ ಬಳಸಿದರೆ ಚೆನ್ನಾಗಿಯೇ ಬಂದಿತು. ಹಾಗೆ ಅಭ್ಯಾಸ ಮಾಡಿದಾಗಲೇ ಆತ್ಮವಿಶ್ವಾಸ ಹೆಚ್ಚುವುದು. ನಾನಾದರೂ ಈವರೆಗೆ ಬಹಳಮಂದಿ ಸಂಗೀತ ಕ್ಷೇತ್ರದ ದಿಗ್ಗಜಗಳ, ವಿದ್ವನ್ಮಣಿಗಳ ಮುಂದೆ ಅನೇಕ ಸಾರಿ ಕಾರ್ಯಕ್ರಮ ಕೊಟ್ಟಿದ್ದೇನೆ. ನಮ್ಮೂರವರೇ, ನಮ್ಮವರೇ ಇದ್ದಾಗ ಭಯವಿರದು. ಆದರೆ ಸಂಗೀತದಲ್ಲಿ ಬಹಳ ಮೇಲ್ಮಟ್ಟದಲ್ಲಿರುವವರು ಎದುರಿಗಿದ್ದಾಗ ಸ್ವಲ್ಪ ಸಭಾಕಂಪನವಾಗಿದೆ. ಆದರೆ ಹೆದರಿಕೆ ಆಗಿಲ್ಲ. ನಾನು ನನಗೆ ಖಚಿತವಾಗಿ ತಿಳಿದಷ್ಟನ್ನು ಧೈರ್ಯವಾಗಿ ಹೇಳುತ್ತೇನೆ. ನನ್ನ ವಾಚನದಲ್ಲಿ ತಪ್ಪಾದೀತು ಎಂಬ ಅಳುಕಿಲ್ಲ. ಸರಿಯಾಗಿಯೇ ಹೇಳುತ್ತಿದ್ದೇನೆ ಎನ್ನುವ ಪೂರ್ಣ ವಿಶ್ವಾಸ ನನ್ನಲ್ಲಿರುತ್ತದೆ. ಒಮ್ಮೆ ಲಾಲ್‌ಗುಡಿ ಜಯರಾಮನ್‌ರು ಬಹಳ ಆತ್ಮೀಯತೆಯಿಂದ ''ಸಂಗೀತದ ಅಭ್ಯಾಸವನ್ನೇ ಮಾಡದೆ, ಇಷ್ಟು ರಾಗಗಳನ್ನು ಪರಿಶುದ್ಧವಾಗಿ ಗಮಕದಲ್ಲಿ ಪ್ರಯೋಗ ಮಾಡುವುದು ಬಹಳ ಕಷ್ಟದ ದೊಡ್ಡ ಕೆಲಸ. ನಿಜಕ್ಕೂ ನಿಮ್ಮದು ಯಾರೂ ಮೆಚ್ಚುವಂಥಾ ಪ್ರತಿಭೆ'' ಎಂದು ಹೇಳಿದರು. ಅವರ ಹೊಗಳಿಕೆಯನ್ನು ಅಥವಾ ಅಂಥ ಯಾವುದೇ ಪ್ರಶಂಸೆಯನ್ನು ನಾನು ಇಷ್ಟನ್ನೆಲ್ಲ ಸಾಧ್ಯಮಾಡಿದ ದೇವರಿಗೆ ವಿನಯದಿಂದ ಅರ್ಪಿಸುತ್ತೇನೆ.

❁ ❁ ❁

ಒಮ್ಮೆ ಬೆಂಗಳೂರಿನಲ್ಲಿ ಗಮಕ ಸಮ್ಮೇಳನ ನಡೆಯುತ್ತಿತ್ತು. ಭಾರತದ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಶ್ರೀ ಇ.ಎಸ್. ವೆಂಕಟರಾಮಯ್ಯನವರು ಮಾತಾಡುತ್ತಿದ್ದರು (ಅವರಿಗೆ ಗಮಕ ಎಂದರೆ ಬಹಳ ಪ್ರೀತಿ. ಎಷ್ಟೋ ಸಾರಿ ಅವರು ನಮ್ಮ ಮನೆಗೇ ಬಂದು ನನ್ನಿಂದ ವಾಚನ ಮಾಡಿಸಿ, ಕೇಳಿ ಆನಂದಪಟ್ಟಿದ್ದಾರೆ. ಅವರನ್ನು ಕಂಡರೆ ನನಗೂ ತುಂಬಾ ಪ್ರೀತಿ-ಅಭಿಮಾನ.) ನಾನು ಸಮ್ಮೇಳನದ ಆ ದಿನ ಕಾರ್ಯಕ್ರಮಕ್ಕೆ ಹೋಗುವುದಿತ್ತು. ನಾನು ಆ ಸಭಾಂಗಣವನ್ನು ಪ್ರವೇಶಿಸಿದಾಗ ಅವರು ''ಗಮಕ ಎಂದರೆ ಕೇಶವಮೂರ್ತಿಯವರ ಬಾಯಲ್ಲಿ ಕೇಳಬೇಕು. ಅದು ನಿಜವಾದ ಗಮಕ...'' ಎನ್ನುತ್ತಿದ್ದವರೇ, ಆಗತಾನೆ ನಾನು ಒಳಗೆ ಪ್ರವೇಶಿಸಿದ್ದನ್ನು ಥಟ್ಟನೆ ಗಮನಿಸಿ ವೇದಿಕೆಯಿಂದಲೇ ''ನೋಡಿ, ನಾನು ಈಗ ತಾನೆ ನಿಮಗೆ ಹೇಳುತ್ತಿದ್ದೆ. ಮೂರ್ತಿ ಅಂತ. ನೋಡಿ... ಬಂದೇಬಿಟ್ಟರಲ್ಲಾ ನಮ್ಮ ಕೇಶವಮೂರ್ತಿ...'' ಎಂದರು. ಸಭೆಯಲ್ಲಿ ಚಪ್ಪಾಳೆಯ ಶಬ್ದ. ಅದಕ್ಕಿಂತ ನನಗೆ ಇನ್ನೇನು ಪ್ರಶಸ್ತಿ ಬೇಕು.... ನಿಜಕ್ಕೂ ಅದೊಂದು ಮರೆಯಲಾಗದ ದಿನ!

ಇತ್ತೀಚೆಗೆ ನಾನು ಮತ್ತೂರರ ಜತೆ ಬೆಂಗಳೂರಿನ ಗಿರಿನಗರದಲ್ಲಿರುವ ಶ್ರೀ ಗೋಪಾಲಕೃಷ್ಣ ಬಾಬಾರವರ ಆಶ್ರಮಕ್ಕೆ ಹೋಗಿ, ಅವರ ದರ್ಶನ ಮಾಡಿ ಬರಲು ಹೊರಟೆ. ಅಲ್ಲಿ ನನ್ನ ಹಾಗೂ ಮಾರ್ಕಂಡೇಯ ಅವಧಾನಿಗಳ ಮೂರು ದಿನದ ಕಾರ್ಯಕ್ರಮವಿತ್ತು. ಅದರ ಹಿಂದಿನ ಸಪ್ತಾಹದಲ್ಲಿ ಮತ್ತೂರರು ಅದೇ ಜಾಗದಲ್ಲಿ ಯಕ್ಷಪ್ರಶ್ನೆ ಪ್ರವಚನ ಮಾಡಿದ್ದರು. ನಾನು ಬಾಬಾರವರನ್ನು ನೋಡಿರಲಿಲ್ಲ. ಆದರೆ ಅವರ ಬಗ್ಗೆ ತುಂಬಾ ಕೇಳಿದ್ದೆ. ನಾನೂ, ಅವಧಾನಿಯವರೂ ಮತ್ತೂರರ ಜತೆ ಆಶ್ರಮದ ಒಳಗೆ ಪ್ರವೇಶಿಸಿದ ತಕ್ಷಣ ನಾವು ಮೂವರನ್ನೂ ಕಂಡ ಗೋಪಾಲಬಾಬಾ ಮುಗುಳ್ನಗುತ್ತ ಮತ್ತೂರರಿಗೆ, ''ಓಹೋ... ಬನ್ನಿ.... ಬನ್ನಿ.....'ಗಾನಕೋಕಿಲ' ಅವರನ್ನೂ ಕರೆತಂದಿದ್ದೀರಿ ಈದಿನ, ತುಂಬಾ ಸಂತೋಷ'' ಎನ್ನುವುದೇ? ನನಗಂತೂ ಆಶ್ಚರ್ಯದಿಂದ ಮಾತೇ ಹೊರಡಲಿಲ್ಲ. ನನ್ನ ಹಾಗೂ ಬಾಬಾರದ್ದು ಅದೇ ಪ್ರಥಮ ಭೇಟಿ. ಆದರೂ ಅವರು ನನ್ನನ್ನು ತಿಳಿದುಕೊಂಡಿದ್ದುದು ನನಗೆ ಸಂತೋಷ-ಆಶ್ಚರ್ಯ ತಂದಿತ್ತು. ಮತ್ತೂರರು ನನ್ನ ಬಗ್ಗೆ ಸಾಕಷ್ಟು ಹೇಳದೆ ಇರುವುದಿಲ್ಲ ಎಂದು ತಿಳಿದಿದ್ದರೂ, ಸ್ವತಃ ಬಾಬಾರೇ ನನ್ನನ್ನು ಹಾಗೆ ಗುರ್ತಿಸಿ ಮಾತನಾಡಿಸಿದಾಗ ನನಗೆ ಯಾವುದೇ ಪ್ರತಿಷ್ಠಿತ ಪ್ರಶಸ್ತಿ ಪಡೆದಷ್ಟೇ ಹೆಮ್ಮೆ, ಸಂತೋಷವಾಯಿತು.

ಇತ್ತೀಚೆಗೆ, ಒಂದು ತಿಂಗಳ ಹಿಂದೆಯಷ್ಟೇ ಕಾಂಚಿ ಪರಮಾಚಾರ್ಯರಾದ ಶ್ರೀ ಜಯೇಂದ್ರ ಸರಸ್ವತೀ ಸ್ವಾಮೀಜಿಯವರು ನಮ್ಮ ಮತ್ತೂರಿಗೆ ಬಂದಿದ್ದರು. ನಾನೂ ಅವರ ದರ್ಶನಕ್ಕೆ ಹೋಗಿದ್ದೆ. ಸದಾ ಹಸನ್ಮುಖಿ... ಅವರನ್ನು ನೋಡಿನೋಡಿಯೇ ನನಗೆ ಬಹಳ ಸಂತೋಷ. ಆದಿನ ಅವರು ಮಧ್ಯಾಹ್ನ ಊಟಮಾಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಶ್ರೀ ಕೇಶವ ಅವಧಾನಿಯವರು ನನ್ನನ್ನು ಅವರ ಹತ್ತಿರ ಕರೆದೊಯ್ದು, ಪರಿಚಯ ಮಾಡಿಸಿದರು. ಸ್ವಾಮೀಜಿಗೆ ಗಮಕ ಎಂದರೇನು ಎಂದೆಲ್ಲ ಹೇಳಿ, ಕಾವ್ಯವಾಚನ - ವ್ಯಾಖ್ಯಾನದ

ಬಗ್ಗೆ ತಿಳಿಸಿ ಆ ಕಲೆಯಲ್ಲಿ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ಸ್ವಾಮೀಜಿಗೆ ಖುಷಿಯಾಯಿತು. ನಮಸ್ಕಾರ ಮಾಡಿದ ನನಗೆ ಫಲಮಂತ್ರಾಕ್ಷತೆ ಕೊಟ್ಟು ಹರಸಿದರು... ''ಒಂದೆರಡು ಪದ್ಯ ಹೇಳಿ, ನೋಡೋಣ'' ಎಂದರು. ನನಗೋ ಕೈಯಲ್ಲಿ ಸಾಹಿತ್ಯವಿಲ್ಲದೆ ಯಾವುದೂ ಬಾಯಿಗೆ ಬರುವುದಿಲ್ಲ ಎನ್ನುವ ಭಾವನೆ. ಆದರೂ ''ಗಜಮುಖನೆ ಮೆರೆವೇಕದಂತನೆ'' ಎಂಬ ಕುಮಾರವ್ಯಾಸನ ಪದ್ಯವನ್ನು ಹೇಳಿದೆ. ತಲೆದೂಗುತ್ತ ಪ್ರೀತಿಯಿಂದ ಕೇಳಿದರು. ನಂತರ ಕೇಶವ ಅವಧಾನಿಯವರು ಇನ್ನೊಂದೆರಡು ಪದ್ಯ ಹೇಳಲು ಹೇಳಿದರು. ನಾನು ''ಮೌಳೌಗಂಗಾ'' ಹೇಳಿದೆ. ಸುಮಾರು ೨೦ ನಿಮಿಷಗಳೇ ಆದವು. ಸ್ವಾಮೀಜಿ ಸ್ವಲ್ಪವೂ ಅವಸರ ತೋರದೆ, ಶಾಂತರಾಗಿ ಪ್ರೀತಿಯಿಂದ ಎಲ್ಲವನ್ನೂ ಕೇಳಿ ಸಂತೋಷಪಟ್ಟರು. ನಂತರ ವಿಶ್ರಾಂತಿಗೆಂದು ಹೊರಟರು. ಮಾರನೆಯ ದಿನ ಊಟವಾದ ನಂತರ ಸಂಜೆ ನಾಲ್ಕು ಗಂಟೆಯ ಮೇಲೆ ಅರ್ಧಗಂಟೆ ಭಜನೆ ಮಾಡುವ ಕಾರ್ಯಕ್ರಮವಿತ್ತು. ಸ್ವಾಮೀಜಿಯೂ ಅಲ್ಲೇ ನಮ್ಮೂರಿನ ದೇವಸ್ಥಾನದಲ್ಲೇ ಇದ್ದರು. ಭಜನೆಯನ್ನು ಎಂದಿನಂತೆ ನಾನೇ ಎಲ್ಲರಿಗೂ ಹೇಳಿಕೊಟ್ಟೆ. ನಾನೂ ಹೇಳಿದೆ. ಸ್ವಾಮೀಜಿ ಭಕ್ತಿ ಪರವಶರಾಗಿ ತನ್ಮಯತೆಯಿಂದ ಕೇಳಿದರು. ಅದೇ ದಿನ ಸಂಜೆ ಆರುಗಂಟೆಗೆ ನಮ್ಮೂರ ಹತ್ತಿರದಲ್ಲಿ ನಿರ್ಮಿಸಲಾಗಿದ್ದ 'ನೇತ್ರಾಲಯ'ದ ಉದ್ಘಾಟನೆಗಾಗಿ ಸ್ವಾಮೀಜಿ ಹೋಗಬೇಕಿತ್ತು. ಭಜನೆ ಕೇಳಿದ ನಂತರ ಅಲ್ಲಿಂದ ಹೊರಟು ನೇತ್ರಾಲಯ ತಲುಪಿದರು. ಅಲ್ಲಿ ಆ ಸಮಾರಂಭದಲ್ಲಿ ಒಂದೆರಡು ಮಾತಾಡಿದ ಮಿತ್ರ ಮತ್ತೂರರು ನನ್ನ ಬಗ್ಗೆ ತಮ್ಮ ಮಾತಿನಲ್ಲಿ ಪ್ರಸ್ತಾಪಿಸಿ ಒಂದು ಶ್ಲೋಕ ಹೇಳಲು ಹೇಳಿದರು. ನಾನು ಮತ್ತೂರರಿಗೆ ಮೊದಲೇ ಹೇಳಿದ್ದೆ. ''ಈಗಾಗಲೇ ನಾನು ಎರಡು ಮೂರು ಸಾರಿ ಸ್ವಾಮೀಜಿಯವರ ಸಮಕ್ಷಮದಲ್ಲಿ ಹಾಡಿಯಾಗಿದೆ. ನಮ್ಮೂರಿನಲ್ಲಿ ನಾನೊಬ್ಬನೇ ಹಾಡುವುದು ಎನ್ನಿಸುವುದಿಲ್ಲವೇ? ಬೇರೆಯವರು ಯಾರಾದರೂ ಹಾಡಲಿ. ನಾನು ಬೇಡ'' ಎಂದು. ನನ್ನ ಸಂಕೋಚವನ್ನು ಮತ್ತೂರರು ಲಕ್ಷ್ಯಮಾಡದೆ ''ಯಾರು ಎಷ್ಟು ಸಾರಿ ಹಾಡಿದರು ಎನ್ನುವುದು ಮುಖ್ಯವಲ್ಲ. ಈ ದಿನದ ಕಾರ್ಯಕ್ರಮದಲ್ಲಿ ದೈವಪ್ರಾರ್ಥನೆ ಎಂದು ಯಾವುದಾದರೂ ಶ್ಲೋಕಹೇಳಿ'' ಎಂದು ನನ್ನ ಹೆಸರನ್ನು ಹೇಳಿದರು. ನನಗೆ ನಮ್ಮ ಚಿದಂಬರ ಜೋಯಿಸರು ಬರೆದಿರುವ ಚನ್ನಕೇಶವ ದಂಡಕದ ನೆನಪಾಗಿ, ನಮ್ಮೂರ ದೇವರ ಸ್ತುತಿಯನ್ನೇ ಹೇಳೋಣ ಎನ್ನಿಸಿ, ದಂಡಕವನ್ನು ಹೇಳಿದೆ. ಸ್ವಾಮೀಜಿ ಬಹಳ ಸಂತೋಷಪಟ್ಟರು. ನಂತರ ಅವರು ಆಶೀರ್ವಚನ ಹೇಳಿ, ಅನುಗ್ರಹ ಭಾಷಣ ಮಾಡುವಾಗ ''ನಿನ್ನೆ ಮತ್ತೂರಿನಲ್ಲಿ, ಈಗ ಹೊಸಹಳ್ಳಿಯಲ್ಲಿ ಭಜನೆ ಹೇಳಿದಿರಿ. ಈಗ ದಂಡಕವನ್ನು ಹೇಳಿದಿರಿ. ಕೇಶವಮೂರ್ತಿಯವರ ಭಜನೆ, ಗಾಯನ ಕೇಳಿ ನಮಗಂತೂ ತುಂಬಾ ಆನಂದವಾಯಿತು. ನಿಜಕ್ಕೂ ಎಂತಹಾ ರಾಗಜ್ಞಾನ, ಎಂತಹಾ ಅದ್ಭುತ ಗಾನಪ್ರತಿಭೆ! ನಾವು ಈದಿನ ಈ ಶುಭ ಸಂದರ್ಭದಲ್ಲಿ ಅವರಿಗೆ 'ಸಂಗೀತ ರಾಗಭಾವ ಚಕ್ರವರ್ತಿ' ಎನ್ನುವ ಬಿರುದನ್ನು ಪ್ರದಾನ ಮಾಡುತ್ತೇವೆ'' ಎಂದರು. ಪರಮಾಚಾರ್ಯರ ಪ್ರಶಂಸೆ ಕೇಳಿ ನಾನು ಮೊದಲೇ ಸಂಕೋಚಗೊಂಡಿದ್ದೆ. ಈಗಂತೂ ಅವರು ಬಿರುದನ್ನು ಕೊಟ್ಟಾಗ ಅನಿರೀಕ್ಷಿತವಾಗಿ ಬಂದ ಈ ಪ್ರಶಸ್ತಿ ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿತ್ತು. ಆದರೆ ಪ್ರೀತಿಯಿಂದ, ಸಂತೋಷದಿಂದ ನೆರೆದಿದ್ದ ಜನರ ಚಪ್ಪಾಳೆ ಸದ್ದಿನಿಂದ ಇಡೀ ಸಭಾಂಗಣ ತುಂಬಿಹೋಗಿ ಕೃತಜ್ಞತೆಯ ಭಾರದಿಂದ ನಾನು ಕುಸಿಯುವಾಂತಾಗಿತ್ತು.

ಗುರುಗಳು ಕೊಟ್ಟ ಬಿರುದಿಗೆ ತಕ್ಕ ಯೋಗ್ಯತೆ ನನಗಿದೆಯೋ ಇಲ್ಲವೋ ಆದರೆ ಆ ಮಾತು ಅವರಿಂದ ಬಂದಿದೆ. ಅದೊಂದು ಮಹದಾಶೀರ್ವಾದ ಎಂದೇ ನನ್ನ ನಂಬಿಕೆ, ಭಾವನೆ. ಅದು ನನ್ನ ಜೀವನದ ಅತ್ಯಂತ ಸಂತೋಷದ ಗಳಿಗೆ.... ನಮ್ಮ ಎರಡೂ ಹಳ್ಳಿಗಳ ಜನರು, ನೇತ್ರಾಲಯಕ್ಕೆ ಹೊರಗಿನಿಂದ ಬಂದಿದ್ದ ಅತಿಥಿಗಳು, ಪ್ರತಿಷ್ಠಿತ ವ್ಯಕ್ತಿಗಳು, ದಾನಿಗಳು, ಹಿರಿಯರು-ಕಿರಿಯರು ಎಲ್ಲರ ಸಮಕ್ಷಮದಲ್ಲಿ ಗುರುಗಳು ನನಗೆ ಆ ಬಿರುದನ್ನು ಕೊಟ್ಟರು. ಇದು ನನ್ನ ಜೀವನದಲ್ಲೇ ಅತ್ಯಂತ ಶ್ರೇಷ್ಠವಾದ ಪ್ರಶಸ್ತಿ.....

ನಿಜಕ್ಕೂ ಆ ಸಮಯದಲ್ಲಿ ನನಗೆ ನಮ್ಮ ತಂದೆಯವರ ನೆನಪಾಯಿತು. ತಂದೆಯವರು ಹೆಚ್ಚು ಮಾತಿನವರಲ್ಲ. ಆದರೆ ಸಾಹಿತ್ಯದಲ್ಲಿ ಆಸಕ್ತಿ, ಸಂಗೀತದಲ್ಲಿ ಪ್ರೀತಿ. ಅವರೂ ಬೆಂಗಳೂರಿಗೆ ಹೋಗಿ ಕಲಿತು ಬಂದವರಷ್ಟೆ? ಆದ್ದರಿಂದ ಸಾಹಿತ್ಯ-ಸಂಗೀತದ ಬಗ್ಗೆ ಒಲವು ಹೆಚ್ಚು. ಅಲ್ಲದೆ ಯಾವ ಕೆಲಸ ಮಾಡಿದರೂ ಅಚ್ಚುಕಟ್ಟಾಗಿ ಮಾಡಬೇಕು ಎನ್ನುವುದು ಅವರ ಅಭಿಮತ. ಕಲೆಯನ್ನು ಅಭ್ಯಾಸ ಮಾಡಿದರೂ ಅಷ್ಟೆ. ಹಠಬಿಡದೆ ಸಾಧನೆ ಮಾಡಿ, ಅದನ್ನು ಕರಗತ ಮಾಡಿಕೊಳ್ಳಬೇಕು ಎನ್ನುತ್ತಿದ್ದರು. ಹೇಗೋ ಮಾಡಿದರಾಯಿತು, ಸಮಯದಲ್ಲಿ ಸಂಭಾಳಿಸಿದರಾಯಿತು ಎನ್ನುವ ರೀತಿಯನ್ನು ಅವರೆಂದೂ ಒಪ್ಪುತ್ತಿರಲಿಲ್ಲ. ಅದಕ್ಕೇ ಅವರ ಬಾಯಿಂದ ಅಷ್ಟು ಸುಲಭವಾಗಿ ಯಾರ ಬಗೆಗೂ ಹೊಗಳಿಕೆ ಬರುತ್ತಿರಲಿಲ್ಲ. ಒಂದೇ ಸಾರಿಗೆ ಅಳೆದುಬಿಡುವ ಸ್ವಭಾವ. ಹೊಗಳಿದರೆ ಅಹಂಕಾರ ಬರುತ್ತದೆ ಎನ್ನುವ ಹಳೆಯ ಸಂಪ್ರದಾಯದವರು ಅವರು. ಊರಿನಲ್ಲಿ ನಡೆಯುವ ನನ್ನ ಎಲ್ಲ ಕಾರ್ಯಕ್ರಮಗಳಿಗೂ ಅವರು ಬರುತ್ತಿದ್ದರು. ತಮಗೆ ಅನಿಸಿದ್ದನ್ನು ಹೇಳುತ್ತಲೂ ಇದ್ದರು. ಒಮ್ಮೆ ರಾಮಮಂದಿರದಲ್ಲಿ ಕಾರ್ಯಕ್ರಮವಾದಾಗ ನಾನು

ಕಲ್ಯಾಣವಸಂತ ರಾಗದಲ್ಲಿ ಒಂದು ಪದ್ಯ ಓದಿದೆ. ಅದನ್ನು ಅವರು ಕೇಳಿದ್ದರು. ಮನೆಗೆ ಬಂದಮೇಲೆ ''ಏ ಮೂರ್ತಿ, ನೀನು ಯಾವುದೋ ಹೊಸರಾಗ ಹೇಳಿದೆ ಅಲ್ವಾ ಈವತ್ತು? ಯಾವರಾಗ ಅದು? ಬಹಳ ಚೆನ್ನಾಗಿತ್ತು ಕಣೋ ಅದು... ಹೊಸ ಹೊಸರಾಗವನ್ನು ಹಾಗೆ ಅಭ್ಯಾಸ ಮಾಡಿಕೊಳ್ಳಬೇಕು!'' ಎಂದರು ತಂದೆ. ನನಗೆ ಆಶ್ಚರ್ಯವಾಯಿತು. ಹೆಚ್ಚು ಮಾತೇ ಆಡದ ತಂದೆ, ನನ್ನನ್ನು ಹೊಗಳುತ್ತಿದ್ದಾರೆ ಎಂದು, ಅವರಿಂದ ಬೆನ್ನು ತಟ್ಟಿಸಿಕೊಂಡೆ ಎಂದು ಹೆಮ್ಮೆಯೂ ಆಯಿತು.... ಮತ್ತೊಮ್ಮೆ ತಂದೆಯವರು ಒಳಗೆ ಸಂಧ್ಯಾವಂದನೆ ಮಾಡುತ್ತಿದ್ದರು. ನಾನು ಹೊರಗಿನ ಹಜಾರದಲ್ಲಿ ಖರಹರಪ್ರಿಯ ರಾಗವನ್ನು ನನ್ನಷ್ಟಕ್ಕೆ ನಾನೇ ಹೇಳಿಕೊಂಡು, ಆಲಾಪನೆ ಮಾಡುತ್ತಿದ್ದೆ. ಸಂಧ್ಯಾವಂದನೆ ಮುಗಿಸಿ ಅವರು ಹೊರಗೆ ಬಂದರು. ನಾನು ಅವರು ಹಾಗೆ ಬಂದಾಗ ಹಾಡುವುದನ್ನು ನಿಲ್ಲಿಸಿದೆ. ಬಂದವರೇ ಸುತ್ತಲೂ ನೋಡಿ ''ರೇಡಿಯೋ ಹಾಕಿದ್ದೆಯಾ ಮೂರ್ತಿ?'' ಎಂದು ಕೇಳಿದರು. ''ಇಲ್ಲ'' ಎಂದೆ. ''ಯಾರೋ ಆಲಾಪನೆ ಮಾಡುತ್ತಿದ್ದರು? ನೀನು ರೇಡಿಯೋ ಹಾಕಿರಲಿಲ್ಲವಾ?'' ಎಂದರು. ನಾನು ''ಇಲ್ಲ.... ನಾನೇ ಸುಮ್ಮನೆ ಹಾಗೇ ಹೇಳಿಕೊಳ್ಳುತ್ತಿದ್ದೆ....'' ಎಂದೆ. ''ಓ... ನೀನೇ ಹೇಳುತ್ತಿದ್ದೆಯಾ? ನಾನು ರೇಡಿಯೋದಲ್ಲಿ ಹೇಳುತ್ತಿದ್ದಾರೆ ಅಂತ ಅಂದುಕೊಂಡೆ... ನೀನೇ ಹೇಳಿಕೊಳ್ಳುತ್ತಿದ್ದೆಯಾ? ಓಹೋ....'' ಎಂದು ಹೊರಗೆ ಹೋದರು. ''ಚೆನ್ನಾಗಿತ್ತು'' ಎಂದು ಬಾಯಿಬಿಟ್ಟು ಹೇಳದೇ ಹೋದರೂ ಅವರ ಆ ಮಾತಿನ ಅಭಿಪ್ರಾಯ 'ಬಹಳ ಚೆನ್ನಾಗಿತ್ತು' ಎಂದೇ ಆಗಿತ್ತು. ಅದೇ ಅವರ ಆಶೀರ್ವಾದ. ''ಏನೇ ಆದರೂ ಶ್ರುತಿ ಇಲ್ಲದೆ ಯಾವುದನ್ನೂ ಅಭ್ಯಾಸ ಮಾಡಬಾರದು. ಎಷ್ಟು ಬಂದರೆ ಅಷ್ಟೇ ಸಾಕು ಎನ್ನುವ ಮನೋಭಾವ ಇರಬಾರದು. ಸರಿಯಾಗಿ ಯಾವುದನ್ನೂ ಅಭ್ಯಾಸ ಮಾಡಿ ಹೇಳಬೇಕು'' ಎನ್ನುತ್ತಿದ್ದ ಅವರ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಕುಳಿತಿರುವಂತಿದೆ.... ಅಂಥವರು ನಮ್ಮ ತಂದೆ..... ಇಂದು ಪರಮಾಚಾರ್ಯರು ನನಗೆ ಕೊಟ್ಟ ಬಿರುದನ್ನು ತಿಳಿದು ಅವರ ಆತ್ಮಕ್ಕೂ ಖಂಡಿತವಾಗಿಯೂ ಸಂತೋಷ, ತೃಪ್ತಿ ಆಗಿರುತ್ತದೆ ಎನ್ನಿಸಿ ದೇವರಿಗೆ ಮನಸ್ಸಿನಲ್ಲೇ ವಂದಿಸಿದೆ.

ಸಹಾಯ, ಸಹಕಾರ

ಎಲ್ಲ ರೀತಿಯಲ್ಲೂ ಖಂಡಿತವಾಗಿಯೂ ನಾನು ತೃಪ್ತ. ಮನೆಯಲ್ಲಿ ನನಗೆ ನಮ್ಮಣ್ಣನವರಾದ ಶ್ರೀ ಸುಬ್ರಾಯಶಾಸ್ತ್ರಿಗಳ ಬೆಂಬಲ ಯಾವಾಗಲೂ. ಯಾವ ಕಾರ್ಯಕ್ರಮವನ್ನು ತಪ್ಪಿಸಿಕೊಳ್ಳಲೂ ಅವರು ಅವಕಾಶ ಕೊಡುತ್ತಿರಲಿಲ್ಲ. ಜಮೀನಿನ ಯಾವುದೇ ಕೆಲಸವಿರಲಿ, ''ನಾನು ನೋಡಿಕೊಳ್ಳುತ್ತೇನೆ. ನೀನು ಹೊರಡು'' ಎನ್ನುತ್ತಿದ್ದರು. ಎರಡನೆಯ ಅಣ್ಣನವರು ಸ್ವತಃ ಬಹಳ ದೊಡ್ಡ ಸಂಗೀತ ವಿದ್ವಾಂಸರು. ಅವರೇ ರಾಮಾಶಾಸ್ತ್ರಿಗಳು. ಗಮಕವೆಂದರೆ ಅವರಿಗೆ ಅಸಡ್ಡೆ ಇರಲಿಲ್ಲ. ಬದಲಾಗಿ ತುಂಬಾ ಗೌರವವಿತ್ತು. ಅದೇ ವೃತ್ತಿಯಲ್ಲದಿದ್ದರೂ ಅವರೂ ಆಗೀಗ ವಾಚನ ಮಾಡುವುದಿತ್ತು. ಆದರೆ ಅವರಿಗೆ ಇದ್ದ ಅಪಾರ ಸಂಗೀತ ಜ್ಞಾನ, ಹಾಡುವ ಶಕ್ತಿ, ಆ ಶಾರೀರ ಕೊನೆಗೂ ಪ್ರಚಾರಕ್ಕೆ ಬರಲಿಲ್ಲ. ಅವರಿಗೆ ಇದ್ದ ಅರ್ಹತೆಗೆ ತಕ್ಕಂತೆ ಅವರಿಗೆ ಅವಕಾಶಗಳು ಸಿಗಲಿಲ್ಲ. ಅದೊಂದು ನಮ್ಮೆಲ್ಲರ ದೊಡ್ಡ ದುರದೃಷ್ಟವೇ ಸರಿ. ಅದೇಕೆ ಹಾಗಾಯಿತೋ ಇಂದಿಗೂ ತಿಳಿಯದು. ನನ್ನಂತೆ ಅವರು ಕಡಿಮೆ ಮಾತಿನವರೂ ಅಲ್ಲ. ಸರಸಿ, ಮಾತುಗಾರರು. ಆದರೆ ಅವರಿಗೆ ಹೇಗೊ, ಯಾವ ಅವಕಾಶವೂ ಸಿಗದೆ, ಅವರ ಪ್ರತಿಭೆ ಅವರ ಜತೆಯಲ್ಲೇ ಹೊರಟುಹೋಗುವಂತಾಯಿತು. ಅದೊಂದು ಕೊರತೆ ಇನ್ನೂ ನನ್ನ ಮನಸ್ಸಿನ ಒಂದು ಮೂಲೆಯಲ್ಲಿದೆ. ಆದರೆ ಅಣ್ಣ ನನ್ನನ್ನು ಮಾತ್ರ ತುಂಬ ಪ್ರೋತ್ಸಾಹಿಸುತ್ತಿದ್ದರು. ಅಂತೆಯೇ ನಾನಿಲ್ಲದಿದ್ದಾಗ ಮನೆಯನ್ನು ನಿಭಾಯಿಸುತ್ತಲೂ ಇದ್ದರು. ನನ್ನ ಪತ್ನಿ ರಾಜೇಶ್ವರಿಯೂ ಅಷ್ಟೆ..... ಒಮ್ಮೆ ಆಕಾಶವಾಣಿಯವರು ನನ್ನನ್ನು ಸಂದರ್ಶನ ಮಾಡುತ್ತ ಒಂದು ಪ್ರಶ್ನೆ ಕೇಳಿದರು, ''ಮನೆಯವರ ಸಹಕಾರ ನಿಮಗೆ ಇದೆಯೇ? ನೀವು ಹೀಗೆ ಮನೆಬಿಟ್ಟು ಕಾರ್ಯಕ್ರಮಗಳಿಗಾಗಿ ಹೊರಗೆ ಹೋಗಿ ಬರುವುದಕ್ಕೆ ಅವರ ಆಕ್ಷೇಪವಿಲ್ಲವೇ?'' ಎಂದು. ಅದೇ ಉತ್ತರ ಇಲ್ಲೂ! ಆಗ ನಾನೆಂದೆ ''ಈವರೆಗೆ ಅವರು ನೀವು ಹೋಗಬೇಡಿ ಎಂದೇನೂ ಹೇಳಿಲ್ಲ. ಹಾಗಾದರೆ ಹೋಗುವುದಕ್ಕೆ ಆಕ್ಷೇಪವಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಹಾಗೆಯೇ ಹೋಗಿಬರುತ್ತೇನೆ ಅಷ್ಟೆ'' ಎಂದು! ನನ್ನ ಪತ್ನಿಯ ಸಹಕಾರವೂ ಸಾಕಷ್ಟಿದೆ. ಹೀಗೆ ನನ್ನ ಒಬ್ಬಳೇ ಮಗಳು ಉಷಾಳನ್ನು ನಮ್ಮೂರಿನ ಜಮೀನ್ದಾರರ ಪುತ್ರ ಶ್ರೀ ವೆಂಕಟರಮಣರಿಗೆ ಮದುವೆ ಮಾಡಿಕೊಟ್ಟಿದ್ದೇವೆ. ಅವರು ಮದ್ರಾಸಿನ ಶ್ರೀ ಲಾಲ್ಗುಡಿ ಜಯರಾಮನ್‌ರಿಂದ ಪಿಟೀಲುವಾದನವನ್ನು ಕಲಿತು ಬಂದವರು. ಅವರ ಪ್ರಿಯಶಿಷ್ಯರು. ಹಾಗಾಗಿ ಅಳಿಯನಿಗೆ ಸಂಗೀತ ಕಂಡರೆ ಪ್ರೀತಿ, ಆಸಕ್ತಿ. ಮೊಮ್ಮಕ್ಕಳು ಇಬ್ಬರು ಜಯರಾಮ, ರಘುರಾಮ. ಜಯರಾಮ ಊರಿನಲ್ಲೇ ಇದ್ದು ನನ್ನ ಕಾರ್ಯಕ್ರಮಗಳನ್ನು ಸರಿಯಾಗಿ ಯೋಜಿಸಿ, ಮನೆಯ ವ್ಯವಹಾರಗಳನ್ನು ನೋಡಿಕೊಳ್ಳಲು ಸಹಾಯ ಮಾಡುತ್ತಾನೆ. ರಘುರಾಮ ಕಂಪ್ಯೂಟರ್ ಎಂಜಿನಿಯರಾದರೂ ಶ್ರೀ ಲಾಲ್ಗುಡಿಯವರಲ್ಲೇ ಶಿಷ್ಯವೃತ್ತಿ ಮಾಡುತ್ತಿದ್ದಾನೆ...... ಗಮಕ ಎನ್ನುವುದು ನಮ್ಮ ಮನೆಯಲ್ಲಿ ಮುಂದುವರೆಯದಿದ್ದರೂ

ಸಂಗೀತ ಮುಂದುವರೆಯುತ್ತಿದೆ. ಕಲೆಗಳು ಎಲ್ಲವೂ ಒಂದೇ. ಯಾವುದಾದರೇನು ಎನ್ನುವ ಸಮಾಧಾನವಿದೆ. ಯಾರೂ ಗಮಕವನ್ನು ಮುಂದುವರೆಸದಿದ್ದರೂ ನನ್ನ ಬಗ್ಗೆ ಅವರಿಗೆಲ್ಲ ಬಹಳ ಕಾಳಜಿ ಇದೆ, ಪ್ರೀತಿ ಇದೆ. ನನ್ನನ್ನು ಎಲ್ಲರೂ ಪ್ರೋತ್ಸಾಹಿಸುತ್ತಾರೆ. ಈಗಂತೂ ನನ್ನ ಅಣ್ಣ ತಮ್ಮಂದಿರು ಎಲ್ಲರೂ ನಾವು ನಮ್ಮೂರಿನಲ್ಲೇ ಇದ್ದೇವೆ. ನಾವೆಲ್ಲರೂ ಅನ್ಯೋನ್ಯವಾಗಿದ್ದೇವೆ. ನಮ್ಮಕ್ಕನ ಮಕ್ಕಳೂ ಊರಿನಲ್ಲೇ ಇದ್ದಾರೆ. ನನ್ನನ್ನು ಕಂಡರೆ ಎಲ್ಲರಿಗೂ ಪ್ರೀತಿ-ವಿಶ್ವಾಸ. ತೋಟ-ಮನೆಯ ಜವಾಬ್ದಾರಿಯನ್ನು ಎಲ್ಲರೂ ನಿರ್ವಹಿಸುತ್ತಾರೆ. ನಾನು ನಿರಾಳವಾಗಿ ಎಲ್ಲಿಗಾದರೂ ಕಾರ್ಯಕ್ರಮಕ್ಕೆ ಹೋಗಿಬರಲು ಸಹಕರಿಸುತ್ತಾರೆ. ಊರಿನವರಿಗೂ ನನ್ನ ಮೇಲೆ ವಿಶೇಷ ಅಭಿಮಾನ. 'ಮೂರ್ತಿ ಮಾಯಾ' ಎಂದರೆ ಎಲ್ಲರಿಗೂ ಪ್ರೀತಿ. ನಾಲ್ಕು ಸಾರಿ ನನ್ನನ್ನೇ ಗ್ರಾಮದ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಕಳೆದ ೨೫ ವರ್ಷಗಳಿಂದ ನಮ್ಮೂರಿನ ಗಮಕ ಕಲಾ ಪರಿಷತ್‌ಗೆ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡಿ ಬಹಳ ಗೌರವ ತೋರಿಸುತ್ತಿದ್ದಾರೆ. ಈ ಪ್ರೀತಿವಿಶ್ವಾಸಗಳು ಎಂದೂ ಹೀಗೆಯೇ ಇರಲಿ ಎಂದು ನಾನು ಸದೈವ ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಓರ್ವ ಗಮಕಿಯಾಗಿ ನನ್ನ ಸಾಧನೆಯ ಬಗ್ಗೆ ತೃಪ್ತಿ ಇದೆಯೇ ಎಂದರೆ, ಬಂದ ಅವಕಾಶಗಳನ್ನು ಬಿಡದೆ ಉಪಯೋಗಿಸಿಕೊಂಡು ಕಾರ್ಯಕ್ರಮಗಳನ್ನು ನೀಡಿ ಗಮಕ ಸರಸ್ವತಿಯ ಸೇವೆ ಮಾಡಿದ್ದೇನೆ ಎನ್ನುವ ತೃಪ್ತಿ ಇದೆ.

ಧ್ವನಿಮುದ್ರಣದ ಸಾಧನೆ

ಸಾಧನೆ ಎಂದರೆ ಸಂಪೂರ್ಣ ಕುಮಾರವ್ಯಾಸಭಾರತದ ಧ್ವನಿಮುದ್ರಿತ ಕ್ಯಾಸೆಟ್ಟುಗಳು ಬಂದಿರುವುದು..... ಇದೊಂದು ಬೃಹತ್ ಯೋಜನೆ....

ಒಮ್ಮೊಮ್ಮೆ ಸುಮ್ಮನೆ ಕುಳಿತು ಯೋಚಿಸಿದಾಗ ನನಗೇ ಆಶ್ಚರ್ಯವಾಗುತ್ತದೆ. ನನ್ನ ಜೀವನದಲ್ಲಿ 'ಕುಮಾರವ್ಯಾಸ ಭಾರತ' ವೈಯಕ್ತಿಕವಾಗಿ ನನಗೆ ಎಷ್ಟು ಪ್ರಿಯವಾದ ಕಾವ್ಯವೋ, ಆ ಪ್ರೀತಿಗೆ ತಕ್ಕ ಹಾಗೆ ಆ ಕಾವ್ಯವನ್ನು ದಾಖಲೆಯಾಗಿರುವ ರೀತಿಯಲ್ಲಿ ನಾನು ನಾಲ್ಕು ಸಾರಿ ವಾಚನ ಮಾಡಿ ಆಡಿಯೋ-ವೀಡಿಯೋ ಕ್ಯಾಸೆಟ್ಟುಗಳ ರೂಪದಲ್ಲಿ ಬರುವಂತಾಗಿದೆ. ಇದಕ್ಕೆ ಏನು ಹೇಳುವುದು? ಇದೂ ಸಹ ದೈವಕೃಪೆಯಲ್ಲದೆ ಮತ್ತೇನು?

ಮೊದಲನೆಯ ಸಾರಿಗೆ ನಮ್ಮೂರಿನಲ್ಲೇ ರೆಕಾರ್ಡ್ ಮಾಡಿದುದು. ಅದಕ್ಕಾಗಿ ನಾನು ನಮ್ಮೂರಿನ ಗಮಕ ಕಲಾಪರಿಷತ್‌ಗೆ ಸದೈವ ಕೃತಜ್ಞ. ನಮ್ಮೂರಿನ ಹಿರಿಯರಾದ ವ್ಯಾಖ್ಯಾನಪಂಡಿತ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನವನ್ನು ಎಂದಿಗೂ ಇರುವಂತೆ ಮಾಡಬೇಕು ಎನ್ನುವ ಯೋಚನೆ ಊರಿನವರಿಗೆ ಬಂದಾಗ ಅವರ ಜತೆ ಓದುವುದು ಯಾರು ಎನ್ನುವ ಪ್ರಶ್ನೆಗೆ ಎಲ್ಲರೂ ನನ್ನನ್ನೇ ಉತ್ತರವಾಗಿ ಹೇಳಿದರು. ಈ ಅಭಿಮಾನಕ್ಕೆ ನಾನೇನು ತಾನೆ ಹೇಳಲು ಸಾಧ್ಯ? ಯೋಜನೆ ಕಾರ್ಯಗತವಾಯಿತು. ಅದಕ್ಕಾಗಿ ಒಂದು ಕಮಿಟಿ ನೇಮಕವಾಯಿತು. ಅಂದಾಜು ಖರ್ಚು ಎಷ್ಟು ಎನ್ನುವ ಮಾತುಕತೆ ಆಯಿತು. ರೆಕಾರ್ಡಿಂಗ್ ಪ್ರಾರಂಭವಾಯಿತು. ಅದು ಹಳ್ಳಿ. ಡೆಕ್‌ನಲ್ಲಿ ರೆಕಾರ್ಡ್ ಮಾಡುತ್ತಿದ್ದುದು. ಮಧ್ಯದಲ್ಲಿ ಕರೆಂಟು ಹೋದರೆ ನಿಲ್ಲಿಸಬೇಕಿತ್ತು. ಶಾಸ್ತ್ರಿಗಳು ಒಮ್ಮೊಮ್ಮೆ ಬೆಂಗಳೂರಿಗೆ ಮಕ್ಕಳ ಮನೆಗೆ ಹೋದರೆ, ಬರುವುದು ೧೫ ದಿನ - ತಿಂಗಳು ಕಳೆಯುತ್ತಿತ್ತು. ನಂತರ ಅವರು ಬಂದಾಗ ಪುನಃ ರೆಕಾರ್ಡಿಂಗ್ .... ಅಂತೂ ಸಂಪೂರ್ಣ ಕುಮಾರವ್ಯಾಸ ಭಾರತ - ನನ್ನ ವಾಚನ - ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನದ ನೂರಮೂವತ್ತೈದು ಕ್ಯಾಸೆಟ್ಟುಗಳು ರೆಕಾರ್ಡ್ ಆದವು. ಅವು ಇಂದಿಗೂ ಇವೆ. ಊರಿನವರಿಗೆಲ್ಲಾ ಶಾಸ್ತ್ರಿಗಳ ವ್ಯಾಖ್ಯಾನವನ್ನು ಇಂದಿಗೂ ಕೇಳುವ ಅವಕಾಶವಿದೆ. ಕಲಿಕೆಯವರು ಆ ಕ್ಯಾಸೆಟ್ಟುಗಳನ್ನು ಪಡೆದು ಕೇಳಿ ತಿಳಿದುಕೊಳ್ಳಬಹುದು. ಆ ಕಾಲಕ್ಕೆ ನಿಜಕ್ಕೂ ಇದೊಂದು ದೊಡ್ಡ ಸಾಹಸವೇ ಸರಿ.

ಅದಾದ ನಂತರ ಅಲ್ಲಲ್ಲಿ ಒಂದೆರಡು ದಿನ, ಸಪ್ತಾಹ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮಿತ್ರ ಮತ್ತೂರರು ಲಂಡನ್ನಿನಿಂದ ವಾಪಸಾಗಿ ಬೆಂಗಳೂರಿಗೆ ಬಂದು ನೆಲೆಸಿದ ಒಂದೆರಡು ತಿಂಗಳಲ್ಲೇ ವಿದ್ಯಾಭವನದಲ್ಲಿ ನನ್ನ ವಾಚನ ತಮ್ಮ ವ್ಯಾಖ್ಯಾನದ ಕಾರ್ಯಕ್ರಮ ನಡೆಸಿದರು. ಆಗ ಅಲ್ಲಿಗೆ ಬಂದಿದ್ದ ಎಚ್.ಎಂ.ಟಿ. ಯ ಛೇರ್‌ಮನ್ನರ ಆಪ್ತ ಕಾರ್ಯದರ್ಶಿ, ತಮ್ಮ ಛೇರ್‌ಮನ್ನರಿಗೆ ಇಂಥ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ಇರುವುದಾಗಿ ತಿಳಿಸಿ, ಕಾರ್ಯಕ್ರಮವನ್ನು ರೆಕಾರ್ಡ್ ಮಾಡಿದ್ದ ಕ್ಯಾಸೆಟ್ಟನ್ನು ತೆಗೆದುಕೊಂಡು ಹೋಗಿ ತಮ್ಮ ಯಜಮಾನರಿಗೆ ಕೊಟ್ಟರು. ಕ್ಯಾಸೆಟ್ಟನ್ನು ಕೇಳಿ ಮರುದಿನ ತಾವೇ ಕಾರ್ಯಕ್ರಮಕ್ಕೆ ಆಗಮಿಸಿದ ಸಾಹೇಬರು ಶ್ರೀ ರಾಮಾನುಜ ಎಂದು ತಮ್ಮ ಪರಿಚಯ ಮಾಡಿಕೊಂಡು, ನಮ್ಮ ಕಾರ್ಯಕ್ರಮವನ್ನು ಬಹಳವಾಗಿ ಪ್ರಶಂಸಿಸಿದರು. ಕೆಲವೇ ದಿನಗಳಲ್ಲಿ ಮತ್ತೂರರಿಗೆ ಇಡೀ ಕುಮಾರವ್ಯಾಸ ಭಾರತವನ್ನು ಕ್ಯಾಸೆಟ್ಟುಗಳಲ್ಲಿ ರೆಕಾರ್ಡ್ ಮಾಡಿಸುವ ಯೋಜನೆ ತಮ್ಮದೆಂದೂ, ಅದಕ್ಕೆ ಆಗುವ ವೆಚ್ಚವನ್ನು ಎಚ್.ಎಂ.ಟಿ. ಕಂಪೆನಿಯೇ ಕೊಡುವುದೆಂದೂ ಹೇಳಿ, ಅದಕ್ಕಾಗಿ ನಾವಿಬ್ಬರೂ ಸಿದ್ಧತೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ನಮಗೆ ಸಂತೋಷ, ಆಶ್ಚರ್ಯ, ಸಂಭ್ರಮ ಎಲ್ಲವೂ ಒಟ್ಟಿಗೇ ಆಯಿತು. ಇದು ನನ್ನ ಜೀವನದಲ್ಲಿ ನನಗೆ ಬಂದ ಎರಡನೆಯ ದೊಡ್ಡ ಅವಕಾಶ.

ನಾನೂ ಮತ್ತೂರರೂ ಸಿದ್ಧರಾದೆವು. ಅರವಿಂದರ 'ಅರವಿಂದ

ಸ್ಟುಡಿಯೋ'ದಲ್ಲಿ ರೆಕಾರ್ಡಿಂಗ್ ಪ್ರಾರಂಭವಾಯಿತು. ದಿನಾ ಬೆಳಗಾಗಿ ಏಳುವುದು, ಸ್ನಾನ-ಸಂಧ್ಯಾವಂದನೆ-ತಿಂಡಿ ಮುಗಿಸಿ ನಾವಿಬ್ಬರೂ ಒಂಬತ್ತರ ವೇಳೆಗೆ ಸ್ಟುಡಿಯೋಗೆ ಹೋಗುವುದು, ಮಧ್ಯಾಹ್ನ ಒಂದು - ಒಂದೂವರೆ ಗಂಟೆಯವರೆಗೆ ರೆಕಾರ್ಡ್ ಮಾಡುವುದು. ಊಟದ ನಂತರ ಕೆಲಸವಿದ್ದರೆ ಮತ್ತೂರರು ಆಫೀಸಿಗೆ ಹೋಗುತ್ತಿದ್ದರು. ನಾನು ಸಂಜೆಯವರೆಗೆ ಅಲ್ಲಿಯೇ ಇದ್ದು ಸ್ಟುಡಿಯೋದವರು ಸಂಕಲನ (ಎಡಿಟ್) ಮಾಡುವಾಗ ಅದನ್ನು ಗಮನಿಸಿಕೊಳ್ಳಬೇಕಾಗುತ್ತಿತ್ತು. ನಂತರ ಆರುಗಂಟೆಯ ಮೇಲೆ ಮನೆಗೆ ಬರುವುದು.... ಆಫೀಸಿನ ಕೆಲಸಕ್ಕೆ ಹೋಗುವವರ ರೀತಿಯಲ್ಲಿ ಸುಮಾರು ಮೂರು ವರ್ಷ ಹೀಗೇ ಕೆಲಸ ಮಾಡಿದ್ದೇನೆ. ಮತ್ತೂರರಿಗಂತೂ ಈ ರೀತಿಯ ಧಾವಂತದ ಓಡಾಟಗಳು ಅಭ್ಯಾಸವಾಗಿದ್ದುದೇ. ಆದರೆ ಊರಿನಲ್ಲಿ ಬಹಳ ತಡವಾಗಿ ಪ್ರಾರಂಭವಾಗುವ ದಿನ, ದಿನದ ಚಟುವಟಿಕೆಗಳು, ನಿಧಾನಗತಿಯ ಕೆಲಸಗಳು ಇವುಗಳಿಗೆ ಹೊಂದಿಕೊಂಡಿದ್ದ ನಾನು ಹೀಗೆ ಮೂರು ವರ್ಷಗಳು ಅವಿರತವಾಗಿ ಕೆಲಸ ಮಾಡುವ ರೀತಿಗೆ ಹೊಸಬನಾಗಿದ್ದೆ. ಆದರೂ ನನ್ನ ನಾದಿನಿ ವಾಣಿ, ಅವಳ ಪತಿ ಪ್ರೊ. ಎಂ.ಎನ್. ಚಂದ್ರಶೇಖರ್ (ಮಿತ್ರ ಮಾರ್ಕಂಡೇಯ ಅವಧಾನಿಯವರ ತಮ್ಮ) ಅವರ ಪ್ರೀತಿ - ವಿಶ್ವಾಸದ ಆರೈಕೆಗಳಲ್ಲಿ ಈ ಚಟುವಟಿಕೆಗೆ ಬೇಗ ಹೊಂದಿಕೊಳ್ಳುವುದು ಸಾಧ್ಯವಾಯಿತು. ಮಧ್ಯೆ ಆಗೀಗ ನಾನು ಊರಿಗೆ ಹೋದಾಗ-ಬಂದಾಗ ಕಳುಹಿಸಿ ಕರೆತಂದು, ನನ್ನ ಊಟ-ತಿಂಡಿಗಳ ಬಗ್ಗೆ ಕಾಳಜಿ ವಹಿಸಿ ಸಹಕರಿಸಿದ ಅವರಿಬ್ಬರ ಸಹಾಯ ನಾನೆಂದೂ ಮರೆಯುವಂತಿಲ್ಲ.

ಆಗೊಮ್ಮೆ ನನ್ನ ಗಂಟಲು ಕಟ್ಟಿತ್ತು. ಧ್ವನಿಯೇ ಹೊರಬರದಂತಾಯಿತು. ರೆಕಾರ್ಡಿಂಗ್ ಇನ್ನೂ ಮುಗಿದಿರಲಿಲ್ಲ. ಸುಮ್ಮನೆ ಕುಳಿತು, ದಿನಗಳು ಸರಿದು ಹೋಗುವಂತೆಯೂ ಇರಲಿಲ್ಲ. ಆಗ ಡಾ. ಬಲ್ಲಾಳರಲ್ಲಿಗೆ ಹೋದೆ. ಡಾ. ಬಲ್ಲಾಳರು ನನ್ನನ್ನು ಬಲು ಆದರದಿಂದ ಕಂಡು, ಚೆನ್ನಾಗಿ ಪರೀಕ್ಷೆ ಮಾಡಿ ಸರಿಯಾದ ಷಧಿ ಕೊಟ್ಟರು. ಅವರ ಚಿಕಿತ್ಸೆ ಫಲಿಸಿ ಗಂಟಲು ಸರಿಯಾಗಿ, ನಾನು ಮತ್ತೆ ಚೆನ್ನಾಗಿ ಮೊದಲಿನಂತೆಯೇ ವಾಚನ ಮಾಡುವಂತಾಯಿತು. ಡಾ. ಬಲ್ಲಾಳರ ಈ ಉಪಕಾರವನ್ನು ನಾನೆಂದೂ ಸ್ಮರಿಸಬೇಕಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಮಿತ್ರ ಮತ್ತೂರರ ನಿರಂತರ ಪ್ರೋತ್ಸಾಹ ನನ್ನ ಶಕ್ತಿಯೇ ಆಗಿತ್ತು. ಅವರ ಉತ್ಸಾಹ ನನ್ನಲ್ಲಿ ಪಡಿ ಮೂಡುವ ಹಾಗೆ ಅವರು ಮಾಡುತ್ತಿದ್ದರು. ಅದೊಂದು ಮರೆಯಲಾಗದ ಅನುಭವ.

ಅರವಿಂದ ಸ್ಟುಡಿಯೋದ ಮಾಲಿಕ ಅರವಿಂದರು ಬಹಳ ಒಳ್ಳೆಯ ವ್ಯಕ್ತಿ; ಸಜ್ಜನರು, ಸಂಭಾವಿತರು. ಒಂದು ದಿನವೂ ಬೇಸರದ ಮುಖ ಮಾಡಿದವರಲ್ಲ. ಕೆಲವೊಮ್ಮೆ ತಮ್ಮ ಮನೆಯಲ್ಲೇ ತಿಂಡಿ - ಕಾಫಿಯನ್ನೂ ಮಾಡಿಸಿಕೊಟ್ಟು ನಮ್ಮ ರೆಕಾರ್ಡಿಂಗ್ ಸುಗಮವಾಗಿ ಸಾಗಲು ಸಹಾಯ ಮಾಡುತ್ತಿದ್ದರು. ಅವರ ಸಹೃದಯತೆಯ ಸಹಕಾರ ಎಂದೂ ಮರೆಯುವಂಥದಲ್ಲ.

ಇದರ ಸ್ಫೂರ್ತಿಯಿಂದ, ಇದಾದನಂತರವೂ, ನಾನು ಮಾತ್ರ ವಾಚನ ಮಾಡಿರುವ ಕೆಲವು ಕ್ಯಾಸೆಟ್‌ಗಳನ್ನೂ, ಕಲಿಕೆಗಾಗಿ ಭಜನೆಯ ಕೆಲವು ಕ್ಯಾಸೆಟ್‌ಗಳನ್ನೂ ನಾನು ಅವರಲ್ಲಿಯೇ ರೆಕಾರ್ಡ್ ಮಾಡಿದೆ. ಅವರು ಆಗಲೂ ತಮ್ಮ ಎಂದಿನ ಪ್ರೀತಿಯ ಪ್ರೋತ್ಸಾಹ, ಸಹಕಾರವನ್ನು ನೀಡಿ ಸಹಾಯ ಮಾಡಿದ್ದಾರೆ. ಎಂದೂ ಹಣದ ವಿಷಯ ಪ್ರಸ್ತಾಪ ಮಾಡುತ್ತಿರಲಿಲ್ಲ. 'ಮೊದಲು ನಿಮ್ಮ ಕೆಲಸ ಚೆನ್ನಾಗಿ ಆಗಬೇಕು' ಎನ್ನುತ್ತಿದ್ದ ಸಜ್ಜನ ಅವರು.

ಅಂತೂ ಸತತವಾಗಿ ಮೂರು ವರ್ಷಗಳ ಪ್ರಯತ್ನದ ಫಲವಾಗಿ ಎಚ್.ಎಂ.ಟಿ.ಯವರ ಕೃಪೆಯಿಂದ ಸಂಪೂರ್ಣ ಕುಮಾರವ್ಯಾಸ ಭಾರತದ, ನನ್ನ ಹಾಗೂ ಮತ್ತೂರರ ವಾಚನ-ವ್ಯಾಖ್ಯಾನದ ೨೦೦ ಕ್ಯಾಸೆಟ್ಟುಗಳು ಹೊರಬಂದವು. ಹೀಗೆ ಬಿಡುಗಡೆಯಾದ ಕ್ಯಾಸೆಟ್ಟುಗಳ ಮುಖಬೆಲೆ ೫೦೦೦ರೂ. ಇದ್ದರೂ ಭಾರತೀಯ ವಿದ್ಯಾ ಭವನದವರು ಅವುಗಳನ್ನು ೩,೫೦೦ರೂ.ಗಳ ಪ್ರೋತ್ಸಾಹಕ ಬೆಲೆಗೆ ಕೊಡಲು ಮುಂದಾದರು. ಆಗ ಬೆಂಗಳೂರಿನ ಸಾಫ್ಟ್‌ವೇರ್ ಕಂಪೆನಿ ಇನ್‌ಫೋಸಿಸ್‌ನ ಮಾಲೀಕರಾದ ಶ್ರೀಮತಿ ಸುಧಾ ನಾರಾಯಣಮೂರ್ತಿಯವರು ತಮ್ಮ ಸಮಾಜ ಸೇವಾರ್ಥವಾಗಿ, ಗಮಕಕಲಾ ಪ್ರಚಾರಾರ್ಥವಾಗಿ, ಕನ್ನಡ ಮಹಾಕಾವ್ಯದ ಪ್ರಸರಣಕ್ಕಾಗಿ ಸುಮಾರು ನೂರು ಸೆಟ್‌ಗಳನ್ನು ಖರೀದಿಸಿ, ಕರ್ನಾಟಕದಲ್ಲಿ ಆಯ್ದ ಹಳ್ಳಿಗಳ ದೇವಸ್ಥಾನಗಳಿಗೆ ಟೇಪ್‌ರೆಕಾರ್ಡರ್ ಸಹಿತ ಉಚಿತವಾಗಿ ಕೊಡಿಸಿದರು. ಅವರ ಈ ದಾರ್ಯವನ್ನು ನಾನೆಂದೂ ಮರೆಯುವಂತಿಲ್ಲ. ಹಳ್ಳಿ ಹಳ್ಳಿಯಲ್ಲೂ ಗಮಕ, ಕಾವ್ಯವು ಪ್ರಚಾರವಾಗುವಂತೆ ಮಾಡಿರುವ ಅವರಿಗೆ ನಾನು ಸದೈವ ಕೃತಜ್ಞ.

ತನ್ಮಧ್ಯೆ ನಾನೂ ಮತ್ತೂರರೂ ಒಮ್ಮೆ ಶ್ರೀರಾಮಕೃಷ್ಣಾಶ್ರಮದಲ್ಲಿ ರಾಜಸೂಯಯಾಗದ ವಾಚನ - ವ್ಯಾಖ್ಯಾನ ನಡೆಸಿದೆವು. ಆಗ ಅಲ್ಲಿ ಕಾರ್ಯಕ್ರಮ ೬.೩೦ಕ್ಕೆ ಪ್ರಾರಂಭವಾಗುವುದಿದ್ದರೆ ನಾಲ್ಕು ಗಂಟೆಗೇ ಜನ ಬಂದು ಕೂರುತ್ತಿದ್ದುದನ್ನು ನಾನು ಕಂಡದ್ದು ಅದೇ ಮೊದಲಬಾರಿ. ಅಲ್ಲಿ ಮುಖ್ಯವಾದ ಆಕರ್ಷಣೆ ಮತ್ತೂರರ ವ್ಯಾಖ್ಯಾನಶೈಲಿ ಎನ್ನುವುದನ್ನೂ ಮರೆಯುವಂತಿಲ್ಲ.

ಸುಮಾರು ಈಗ್ಗೆ ಎಂಟು ವರ್ಷಗಳ ಕೆಳಗೆ ಬೆಂಗಳೂರಿನ ಶಂಕರಮಠದಲ್ಲಿ ಎರಡುತಿಂಗಳ ಕಾಲ ಮತ್ತೂರರು ಹಾಗೂ

ನಾನು ಕಿರಾತಾರ್ಜುನೀಯ ಕಥಾಭಾಗವನ್ನು ಮಾಡಿದೆವು. ಆಗ ನೋಡಬೇಕಿತ್ತು ಆ ಜನರನ್ನು! ಓಹ್! ಗಮಕವಾಚನದಲ್ಲಿ ನಾನೆಂದೂ ಅಷ್ಟು ಜನ ಸೇರುವುದನ್ನು ಕಂಡಿರಲಿಲ್ಲ.....! ಸುಮಾರು ಮೂರು ಸಾವಿರಕ್ಕೂ ಹೆಚ್ಚು ಮಂದಿ ಸಹೃದಯರು ಪ್ರತಿದಿನವೂ ಸೇರುತ್ತಿದ್ದುದನ್ನು ಕಂಡು ಮೂಕವಿಸ್ಮಿತನಾಗಿದ್ದೆ. ಇಲ್ಲೆಲ್ಲ ಮತ್ತೂರರ ವ್ಯಾಖ್ಯಾನದ ವೈಶಿಷ್ಟ್ಯ ಗಮಕ ವಾಚನಕ್ಕೆ ಒಂದು ವಿಶೇಷ ಮೆರುಗನ್ನು ನೀಡುತ್ತಿತ್ತು ಎನ್ನುವುದೂ ನನ್ನ ಗಮನಕ್ಕೆ ಬಂದಿದೆ....

ಅದೇ ರೀತಿ ರಾಮಕೃಷ್ಣಾಶ್ರಮದಲ್ಲೂ ಜನರು ಸೇರುತ್ತಿದ್ದುದು. ಹಾಗೆ ಸೇರಿದವರಲ್ಲಿ ಒಬ್ಬರು ಶ್ರೀ ನಾರಾಯಣಸ್ವಾಮಿಯವರು. ಅವರು ಪ್ರತಿದಿನವೂ ತಪ್ಪದೆ ಕಾರ್ಯಕ್ರಮಕ್ಕೆ ಬಂದು, ಕೇಳಿ, ನಮ್ಮ ನ್ನೂ ಪರಿಚಯ ಮಾಡಿಕೊಂಡರು. ತಮಗೆ ಖ್ಯಾತ ಸಿನಿಮಾ ನಟ ಶ್ರೀನಾಥ್‌ರ ನಿಕಟ ಪರಿಚಯ ಇರುವುದಾಗಿಯೂ, ನಮ್ಮ ಕಾರ್ಯಕ್ರಮವು ಉದಯ ಟಿ.ವಿ.ಯಲ್ಲಿ ಬರುವಂತೆ ಮಾಡಲು ಸಾಧ್ಯವಾಗುವುದೇ ಎಂದು ಶ್ರೀನಾಥರನ್ನು ಕೇಳಿ ನೋಡುತ್ತೇನೆ ಎಂದೂ ಹೇಳಿದರು. ಹೇಳಿದ ಮಾತನ್ನು ಅವರು ಮರೆಯಲಿಲ್ಲ. ಸನ್ಮಾನ್ಯ ಶ್ರೀನಾಥರಿಗೆ ಮತ್ತೂರರು ಹಾಗೂ ನನ್ನ ಪರಿಚಯ ಮಾಡಿಸಿ, ಬೆಳಗಿನ ಶುಭೋದಯದ ಕಾಲುಗಂಟೆಯ ಕಾರ್ಯಕ್ರಮವಾಗಿ ಕುಮಾರವ್ಯಾಸ ಭಾರತದ ವಾಚನ - ವ್ಯಾಖ್ಯಾನವನ್ನು ನಡೆಸಿಕೊಡುವ ಅವಕಾಶವನ್ನು ಮಾಡಿಕೊಟ್ಟರು. ನಾರಾಯಣಸ್ವಾಮಿಯವರಿಗೆ ನಾನು ಎಷ್ಟು ವಂದನೆಗಳನ್ನು ಹೇಳಿದರೂ ಕಡಮೆಯೇ. ಹೀಗೆ ಗಮಕ - ಕಾವ್ಯವಾಚನ ಕರ್ನಾಟಕದ ಕೋಟ್ಯಂತರ ಕಾವ್ಯಪ್ರಿಯರ ಮನೆ ಮನೆಗೆ ತಲುಪುವಂತಾಯಿತು. ಸುಮಾರು ನಾಲ್ಕು ವರ್ಷಗಳ ಕಾಲ ಸತತವಾಗಿ ನಡೆದ ಈ ಕಾರ್ಯಕ್ರಮ ಅಪಾರ ಜನಮೆಚ್ಚುಗೆ ಗಳಿಸಿತು. ವಿದ್ಯಾಭವನವು ಉದಯ ಟಿ.ವಿ.ಯಲ್ಲಿ ಕಾರ್ಯಕ್ರಮದ ಸಾವಿರ ಕಂತುಗಳು ಪ್ರಸಾರವಾದ ದಾಖಲೆಯನ್ನು ಹೇಳಿ, ವೀಕ್ಷಕರಿಗೆ ವಂದಿಸಲು ಬಹಳ ವಿಜೃಂಭಣೆಯ ಸಮಾರಂಭವನ್ನು ಹಮ್ಮಿಕೊಂಡು ನಡೆಸಿತು. ಕಾರಣಾಂತರಗಳಿಂದ ಆ ಕಾರ್ಯಕ್ರಮ ಭಗವದ್ಗೀತೆಯ ಹಂತಕ್ಕೆ ಬಂದು ನಿಂತಿತು. ಅದನ್ನು ಮುಂದುವರೆಸಿ ಮಹಾಭಾರತವನ್ನು ಅಲ್ಲಿಯೂ ಪೂರ್ತಿ ಮಾಡುವ ಅವಕಾಶವನ್ನು ಭಗವಂತನು ನಮಗೆ ಕರುಣಿಸಬೇಕೆಂದು ನಾನು ಸದೈವ ಪ್ರಾರ್ಥಿಸುತ್ತಿದ್ದೆ.

ಈಗ ಆ ಪ್ರಾರ್ಥನೆಯನ್ನೂ ದೇವರು ನೆರವೇರಿಸಿದ್ದಾನೆ. ಮೂರು ತಿಂಗಳ ಹಿಂದೆಯಷ್ಟೆ 'ವ್ಯಾಸ-ಕುಮಾರವ್ಯಾಸ ಭಾರತ' ಎನ್ನುವ ಶೀರ್ಷಿಕೆಯಲ್ಲಿ ಬೆಳಗ್ಗೆ ೬.೪೦ರಿಂದ ೭ ಗಂಟೆಯ ತನಕ, ಇಪ್ಪತ್ತು ನಿಮಿಷಗಳ ಕುಮಾರವ್ಯಾಸಭಾರತ ವಾಚನ-ವ್ಯಾಖ್ಯಾನ, ನನ್ನ ಹಾಗೂ ಮಿತ್ರ ಮತ್ತೂರರ ಕಾರ್ಯಕ್ರಮ ಪ್ರಾರಂಭವಾಗಿದೆ. ಈಗ ಈ ಕಾರ್ಯಕ್ರಮ ಉದಯ ಟಿವಿ ಪ್ರಸಾರವಾಗುವ ಸುಮಾರು ಪ್ರಪಂಚದ ೬೦ ದೇಶಗಳ ಕನ್ನಡಿಗರ ಮನೆ-ಮನಗಳಿಗೆ ತಲುಪುತ್ತಿದೆ. ನಾವು ಹಿಂದೆ ನಿಲ್ಲಿಸಿದ್ದ 'ಗೀತೆ'ಯಿಂದ ಮುಂದಕ್ಕೆ ಮಾಡುವುದಾಗಿ ಹೇಳಿದಾಗ ಉದಯ ಟಿವಿಯ ಮುಖ್ಯಸ್ಥರೇ ಮೊದಲಿನಿಂದಲೂ ಪ್ರಾರಂಭ ಮಾಡುವಂತೆ ಹೇಳಿದರು. ಅದರಿಂದ ಈಗ ಮೊದಲಿನಿಂದ ಪುನಃ ಕಾರ್ಯಕ್ರಮದ ಶುಭಾರಂಭವಾಗಿದೆ. ಇದು ಮಂಗಳವಾಗಲು ಬಹುಶಃ ಇನ್ನು ನಾಲ್ಕೈದು ವರ್ಷಗಳಾದರೂ ಬೇಕು. ಅಷ್ಟರ ತನಕ ಆ ಭಗವಂತನು ನಮ್ಮಿಬ್ಬರಿಗೂ ಆರೋಗ್ಯ-ಆಯುಸ್ಸನ್ನು ಕೊಟ್ಟು ತನ್ನದೇ ಸ್ತುತಿಯ ಸೇವೆಯನ್ನು ನಮ್ಮಿಂದ ಮಾಡಿಸಿಕೊಳ್ಳಲಿ ಎಂದು ದೇವರಲ್ಲಿ ನನ್ನ ನಮ್ರ ಪ್ರಾರ್ಥನೆ!

ಈಗ ನಮ್ಮ ಮತ್ತೂರಿನ ತರುಣರೆಲ್ಲರೂ ಸೇರಿ ಮಾರ್ಕಂಡೇಯ ಅವಧಾನಿಯವರ ಪುತ್ರ ಧ್ರುವಕುಮಾರನ ನೇತೃತ್ವದಲ್ಲಿ ಮತ್ತೆ ಕುಮಾರವ್ಯಾಸ ಭಾರತದ ವಾಚನವನ್ನು ಮಾತ್ರವೇ ವಿಡಿಯೋ ರೆಕಾರ್ಡಿಂಗ್ ಮಾಡಿಸುತ್ತಿದ್ದಾರೆ. ಅದು ಇನ್ನೂ ಪೂರ್ಣವಾಗಿಲ್ಲ. ನಾನು ಪ್ರತಿನಿತ್ಯ ಈಗಲೂ ಮತ್ತೂರಿಗೆ ಹೋಗಿ ರೆಕಾರ್ಡಿಂಗ್ ಮಾಡಿ ಬರುತ್ತಿದ್ದೇನೆ....

ಇನ್ನೇನು ಹೇಳಲಿ...? ಇವು ನನ್ನ ದೃಷ್ಟಿಯಲ್ಲಿ ನನ್ನ ಜೀವನದಲ್ಲಿ ನಾನು ಮಾಡಿರುವ ಕಿರುಸಾಧನೆಗಳು. ಇದಲ್ಲದೆ ನನಗೆ ನಮ್ಮೂರಿನಲ್ಲಿ ನೆಲೆಸಿರುವ ಸ್ವಾಮಿ ಜ್ಞಾನ ಪ್ರಸೂನೇಂದ್ರ ಸರಸ್ವತೀರಿಂದ (ಇವರು ಕಾಂಚಿ ಪರಮಾಚಾರ್ಯರಿಂದ ಸಂನ್ಯಾಸ ದೀಕ್ಷೆ ತೆಗೆದುಕೊಂಡು ಬಂದು ಇಲ್ಲಿ ನೆಲೆಸಿದ್ದಾರೆ) ಭಜನೆಗೂ ಸಾಕಷ್ಟು ಪ್ರೋತ್ಸಾಹ, ಸ್ಫೂರ್ತಿ ಸಿಕ್ಕಿರುವ ಕಾರಣ ಕೆಲವು ಭಜನೆಗಳ ಕ್ಯಾಸೆಟ್ಟನ್ನೂ ತರುವಂತಾಯಿತು. ಹಿಂದೆ ಕೇವಲ ಹಾಡಲು ಬರುವ ಕೆಲವಾರು ಮಂದಿ ಮಾತ್ರ ಭಜನೆ ಮಾಡುವುದಿತ್ತು. ಆದರೆ ಈಗ ಹಾಡಲು ಬರಲಿ, ಬರದಿರಲಿ, ಭಕ್ತಿಯಿಂದ ಭಗವಂತನನ್ನು ಸ್ತುತಿಸುವುದು ಎಲ್ಲರಿಗೂ ಇರುವ ಸ್ವಾತಂತ್ರ್ಯ ಎನ್ನುವ ಭಾವನೆಯಿಂದಾಗಿ, ಎಲ್ಲರಿಗೂ ಭಜನೆಯಲ್ಲಿ ಪಾಲ್ಗೊಳ್ಳಬೇಕೆನ್ನುವ ಆಸೆ ಇರುತ್ತದೆ. ಅದಕ್ಕೆ ನಮ್ಮೂರಿನ ಸ್ವಾಮೀಜಿ ತುಂಬಾ ಪ್ರೋತ್ಸಾಹ ಕೊಡುತ್ತಾರೆ. ಹಗಲೂ-ರಾತ್ರಿ ಭಜನೆ ಮಾಡಿದರೂ ಅವರಿಗೆ ಬೇಸರವಿಲ್ಲ. ಬದಲಾಗಿ ತಾವು ಮೈಮರೆತು ಭಕ್ತಿರಸದಲ್ಲಿ ತಲ್ಲೀನರಾಗಿ ಹೋಗುತ್ತಾರೆ. ಅವರಿಂದಾಗಿ ನಮ್ಮೂರಿನಲ್ಲಿ ಭಜನೆಯ ಗಾಯನ ಎಲ್ಲರಿಗೂ ಪ್ರಿಯವಾಗಿ, ಭಕ್ತಿಸಂಗೀತದ ಒಂದು ಅಂಗವಾದ ಭಜನೆಯ ಸಾಮೂಹಿಕ ಗಾಯನದಲ್ಲಿ ನಾನೇ ಮುಖ್ಯ ಭಜನಕಾರನೂ ಆಗಿರುವುದು ಸಂಗೀತ ಸರಸ್ವತಿಗೆ ನನ್ನ ಸೇವೆಯನ್ನು ಹೀಗೆಯೂ ಸಲ್ಲಿಸುವಂತಾಗಿದೆ. ಅದೂ ನನ್ನ ಅದೃಷ್ಟವೇ ಸರಿ!

ವಿದೇಶಕ್ಕೆ ?

ಉದಯ ಟಿ.ವಿ.ಯ ಕಾರ್ಯಕ್ರಮವು ವಿದೇಶವನ್ನು ತಲುಪಿದರೂ, ವಿದೇಶಕ್ಕೆ ನಾನು ಈವರೆಗೆ ಹೋಗಿಲ್ಲ. ಆ ಬಗ್ಗೆ ಮೊದಲಿನಿಂದಲೂ ಅಷ್ಟಾಗಿ ಆಸಕ್ತಿ ಇಲ್ಲ. ನಮ್ಮ ಮಕ್ಕಳೇ ಎಲ್ಲರೂ ವಿದೇಶದಲ್ಲಿದ್ದಾರೆ. ನಮ್ಮಣ್ಣನ ಮಗಳು, ತಮ್ಮಂದಿರ ಮಕ್ಕಳು, ಡಾಕ್ಟರು- ಎಂಜಿನಿಯರುಗಳಾಗಿ ಕೆನಡಾ, ಅಮೆರಿಕಾ, ಲಂಡನ್‌ಗಳಲ್ಲಿದ್ದಾರೆ. ಆ ಮಕ್ಕಳು ಮೊದಲಿನಿಂದಲೂ ನನ್ನನ್ನು ಬಹಳ ಸಾರಿ ಆಹ್ವಾನಿಸಿದ್ದಾರೆ. ಅಲ್ಲೆಲ್ಲಾ ಅನೇಕ ಕನ್ನಡ ಬಳಗಗಳಿವೆಯಂತೆ, ಅಲ್ಲಿ ಕಾರ್ಯಕ್ರಮ ಕೊಡಬಹುದು ಎಂದೂ ಹೇಳಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಅಂಥ ಸ್ಥಳಗಳಲ್ಲಿ ಕೇವಲ ನಮ್ಮ ಕಾವ್ಯವಾಚನವನ್ನು ಮಾತ್ರವೇ ಮಾಡಿದರೆ ಸಾಲದು. ಮಿತ್ರ ಮತ್ತೂರರೂ ಜತೆಗಿದ್ದು ವ್ಯಾಖ್ಯಾನವನ್ನು ಇಂಗ್ಲಿಷಿನಲ್ಲಿಯೂ ಹೇಳುತ್ತ, ಅಲ್ಲಿನ ಜನ - ಪರಿಸರ- ಮನೋಭಾವಕ್ಕೆ ತಕ್ಕಂತೆ ಉಪಾಖ್ಯಾನಗಳ ಸಮೇತ ಕಾವ್ಯದ ಸೊಬಗನ್ನು ಅಲ್ಲಿನವರಿಗೆ ತಿಳಿಸಿದರೆ ಅದೊಂದು ಅರ್ಥಪೂರ್ಣ ಕಾರ್ಯಕ್ರಮವಾದೀತು, ಜನಮೆಚ್ಚುಗೆ ಗಳಿಸೀತು. ಹಾಗಿಲ್ಲದೆ ನಾನೊಬ್ಬನೇ ವಿದೇಶದಲ್ಲಿ ಕಾವ್ಯವಾಚನ ಮಾಡಿದರೆ, ಅದು ಅಷ್ಟು ಸ್ವಾರಸ್ಯಕರವಾಗಿರುತ್ತದೆ ಎನ್ನುವ ಭರವಸೆ ಇಲ್ಲ. ನಮ್ಮ ಕನ್ನಡದ ಜನರೇ ಅಲ್ಲಿದ್ದರೂ, ಅವರಿಗೆಲ್ಲ ಕನ್ನಡ ಬರುತ್ತಿದ್ದರೂ, ವಿದೇಶದ ನೆಲದಲ್ಲಿರುವವರ ಮನೋಧರ್ಮದ ನೆಲೆ ಮಿತ್ರ ಮತ್ತೂರರಿಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ನಾನು ವಿದೇಶದಲ್ಲಿ ಕಾರ್ಯಕ್ರಮ ಕೊಡುವುದೇ ಆದರೆ ಅದು ಮತ್ತೂರರ ಜತೆಯಲ್ಲಿ ಮಾತ್ರ ಸಾಧ್ಯ. ಏಕೆಂದರೆ ನಮ್ಮಿಬ್ಬರ ಉದ್ದೇಶವೂ ಕಾರ್ಯಕ್ರಮ ಸರ್ವರೀತಿಯಲ್ಲೂ ಚೆನ್ನಾಗಬೇಕು ಎನ್ನುವುದು. ಸ್ಥಳೀಯವಾಗಿ ನಾವು ಒಬ್ಬೊಬ್ಬರೇ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ. ಆದರೆ ವಿದೇಶದಲ್ಲಿ ನಾವಿಬ್ಬರೂ ಇದ್ದರೆ ಅದೊಂದು ಪರಿಪೂರ್ಣ ಕಾರ್ಯಕ್ರಮವಾದೀತು. ನೋಡೋಣ, ಆ ಯೋಗ ಎಂದು ಬರುವುದೋ ಎಂದು ! ಅಥವಾ ಬರದಿದ್ದರೂ ದುಃಖವಿಲ್ಲ. ನಮ್ಮ ಊರು, ನಾಡು, ನುಡಿಗಳನ್ನು ನಮ್ಮ ಜನ ಪ್ರೀತಿಸಿದರೆ ಈಗಲ್ಲದಿದ್ದರೂ ಮುಂದಿನ ವರ್ಷಗಳಲ್ಲಿ ಅದು ವಿದೇಶವನ್ನು ತಲುಪೀತು. ಆ ಭರವಸೆ ನನಗೆ ಇದೆ. ಒಟ್ಟಾರೆ ಗಮಕವು ಪ್ರಪಂಚದ ಯಾವ ಭಾಗದಲ್ಲಾದರೂ ತನ್ನದೇ ಆದ ವೈಶಿಷ್ಟ್ಯಕ್ಕೆಂದೇ ಒಂದು ಸ್ಥಾನವನ್ನು ಗಳಿಸಿದರೆ ಸರಿ.

ಭಗವಂತನ ಕೃಪೆ

ಇಷ್ಟರವರೆಗೂ ನನ್ನ ಜೀವನಕಥೆಯನ್ನು ಸಹನೆಯಿಂದ ಓದಿದ ತಮಗೆಲ್ಲ ವಂದನೆಗಳು. ಐವತ್ತು ವರ್ಷಗಳಿಂದ ನಾನು ಈ ಗಮಕ ಕಲೆಯನ್ನು ಪ್ರಸಾರ ಮಾಡುವುದಕ್ಕಾಗಿ ನನ್ನ ಕೈಲಾದ ಪ್ರಯತ್ನವನ್ನು ಮಾಡುತ್ತಿದ್ದೇನೆ. ಎಲ್ಲ ಕಲೆಗಳೂ ದೈವಿಕವೇ ಸರಿ. ಶಿಲ್ಪ, ನಾಟ್ಯ, ಚಿತ್ರ, ಸಂಗೀತ ಎಲ್ಲ ಕಲೆಗಳೂ ಒಂದೇ. ಒಂದೊಂದು ಕಲೆಯ ವೈಶಿಷ್ಟ್ಯ ಒಂದೊಂದು ರೀತಿ ಇರುತ್ತದೆ. ಯಾವುದೂ ಕಡಮೆಯಲ್ಲ. ನಾನು ಆರಾಧಿಸಿ, ಪೂಜಿಸುತ್ತಿರುವ ಗಮಕಕಲೆಯ ಪ್ರಚಾರಕ್ಕಾಗಿ ಇಡೀ ಕರ್ನಾಟಕದಲ್ಲಿ ಎಲ್ಲಿ ಕರೆದರೂ ಹೋಗಿ ಕಾವ್ಯವಾಚನ ಮಾಡಿದ್ದೇನೆ. ಈ ಸೇವೆಯನ್ನು ನನ್ನ ಕೈಲಾಗುವವರೆಗೂ ಮುಂದುವರೆಸಲು ಆ ಪರಮಾತ್ಮನು ನನಗೆ ಶಕ್ತಿಯನ್ನೂ ಅವಕಾಶವನ್ನೂ ಕೊಡಲಿ ಎಂದು ಮನಸಾ ಪ್ರಾರ್ಥಿಸುತ್ತೇನೆ.

ನನ್ನ ಎಪ್ಪತ್ತನೆಯ ವರ್ಷದ ಭೀಮರಥ ಶಾಂತಿಯನ್ನು ಈಗ್ಗೆ ಎರಡು ವರ್ಷಗಳ ಹಿಂದೆಯೇ ಮಾಡಿಕೊಳ್ಳಬೇಕಿತ್ತು. ಕಾರಣಾಂತರಗಳಿಂದ ಅದು ಮುಂದೆ ಹೋಯಿತು. ಆದರೆ ನನ್ನ ಬಗೆಗೆ ಪ್ರೀತಿ, ಅಭಿಮಾನ, ಹೆಮ್ಮೆ ಇರುವ ನನ್ನ ಮನೆಯವರು, ಬಂಧು-ಬಾಂಧವರು, ತುಂಗಾನದೀ ತಟದ ಮೇಲಿರುವ ಜೋಡಿಗ್ರಾಮಗಳಾದ ನಮ್ಮ ಮತ್ತೂರು-ಹೊಸಹಳ್ಳಿಯ ಹಿರಿಯರು-ಕಿರಿಯರು ನನ್ನ ಎಲ್ಲ ಅಭಿಮಾನಿಗಳೂ **೨೦೦೬ರ** ಮೇ ತಿಂಗಳಿನಂದು ನನ್ನ ಭೀಮರಥ ಶಾಂತಿಯನ್ನು ಉತ್ಸಾಹ, ಪ್ರೀತಿ, ಅಭಿಮಾನದಿಂದ ನಡೆಸಿದರು. ಅವರೆಲ್ಲರಿಗೂ ನನ್ನ ತುಂಬುಹೃದಯದ ಕೃತಜ್ಞತೆಗಳು. ಆ ಸಂದರ್ಭದಲ್ಲಿ ನನ್ನ ಜೀವನ ಕಥೆಯನ್ನು ಹೊರತರಬೇಕೆಂದು ಒಂದು ಸಂಕಲ್ಪವಾದಾಗ ನನ್ನ ಅಭಿಮಾನಿಯಾಗಿರುವ, ಮೈಸೂರಿನ ಕುವೆಂಪು ವಿದ್ಯಾವರ್ಧಕ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿರುವ ಶ್ರೀಮತಿ ಸುಮನಾ ವಿಶ್ವನಾಥ್ ನನ್ನನ್ನು ಮಾತನಾಡಿಸಿ, ಕೆಲವಾರು ಪ್ರಶ್ನೆಗಳನ್ನು ಕೇಳಿ, ನಾನು ಹೇಳಿರುವ ನನ್ನ ಜೀವನದ ಬಹುತೇಕ ಅಂಶಗಳನ್ನು ಬರೆದುಕೊಟ್ಟಿದ್ದು, ಅದನ್ನು ಶಿವಮೊಗ್ಗದ ಮಾನ್ಯ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು. ಸುಮನಾ ಹಾಗೂ ಅವರ ಮನೆಯವರಿಗೆಲ್ಲ ನನ್ನ ಶುಭ ಆಶೀರ್ವಾದಗಳು ಹಾಗೂ ಕೃತಜ್ಞತೆಗಳು.

ನನ್ನ ಗಮಕಕಲಾ ಸೇವೆಗೆ ಮನೆಯವರ ಸಹಕಾರ- ಪ್ರೋತ್ಸಾಹ, ಸಹೃದಯ ರಸಿಕರ ಮೆಚ್ಚುಗೆ, ಸಂಘ-ಸಂಸ್ಥೆಗಳ ಸನ್ಮಾನ ಬಿರುದುಗಳು ಎಲ್ಲವೂ ನನ್ನ ನಿರೀಕ್ಷೆಗಿಂತಲೂ ಹೆಚ್ಚಾಗಿಯೇ ಸಿಕ್ಕಿವೆ. ಇವೆಲ್ಲಕ್ಕೂ ಆ ಭಗವಂತನ ಕೃಪೆಯೇ ಕಾರಣ. ಯಾವ ರೀತಿಯಲ್ಲೂ ಪ್ರಚಾರಕ್ಕಾಗಲೀ, ಕೀರ್ತಿಗಾಗಲೀ ಸ್ವಾಭಾವಿಕವಾಗಿಯೇ ಆಸೆಪಡದ, ಅದಕ್ಕಾಗಿ ಕೆಲಸ ಮಾಡುವ ಮನೋಭಾವ ಇಲ್ಲದ ನನ್ನನ್ನು ನಾನಿರುವಂತೆಯೇ ಗುರ್ತಿಸಿ ಪ್ರೋತ್ಸಾಹಿಸಿ, ಮೆಚ್ಚಿ, ಪ್ರಶಂಸಿಸಿ ನನ್ನನ್ನು ಗೌರವಿಸಿದ ಸಮಸ್ತ ಗಮಕ ಕಲಾಭಿಮಾನಿಗಳಿಗೆ ನನ್ನ ಅನಂತಾನಂತ ವಂದನೆಗಳು.

ಶುಭಂ

ತುಂಗೆಯ ಮಡಿಲಲ್ಲಿ

ವೇ॥ ಬ್ರ॥ ಶ್ರೀ ಮಾರ್ಕಂಡೇಯ ಅವಧಾನಿ

ನಿರೂಪಣೆ : ಸುಮನಾ ವಿಶ್ವನಾಥ್

ತುಂಗೆಯ ಮಡಿಲಲ್ಲಿ*

ನಾನು ಹಾಗೂ ನನ್ನ ಪ್ರಿಯಮಿತ್ರ ಶ್ರೀ ಮತ್ತೂರು ಕೃಷ್ಣಮೂರ್ತಿಯವರು ಅನೇಕ ಸಾರಿ ನಮ್ಮ ಅನುಭವಗಳನ್ನು ಮಾತನಾಡಿಕೊಳ್ಳುವಾಗ ಶ್ರೀ ಮತ್ತೂರರು ಅವುಗಳಲ್ಲಿ ಸ್ವಾರಸ್ಯವಾದವುಗಳನ್ನು ಬರೆದಿಡಲು ಹೇಳುತ್ತಿದ್ದರಾದರೂ, ನನ್ನ ಕಾರ್ಯಬಾಹುಳ್ಯದಿಂದ ನನಗೆ ಸಾಧ್ಯವಾಗುತ್ತಿರಲಿಲ್ಲ. ಆಗ ಶ್ರೀ ಮತ್ತೂರರು ಸೋದರಿ ಶ್ರೀಮತಿ ಸುಮನಾವಿಶ್ವನಾಥ್‌ರನ್ನು ಪರಿಚಯಿಸಿ, ನನ್ನ ಎಲ್ಲ ಅನುಭವಗಳನ್ನೂ ಬರೆದು ದಾಖಲಿಸುವ ಕೆಲಸವನ್ನು ಅವರಿಗೆ ಒಪ್ಪಿಸಿದರು. ಅವರ ಮಾತಿನಂತೆ ಶ್ರೀಮತಿ ಸುಮನಾ ನನ್ನ ಅನುಭವಗಳನ್ನು ಕೇಳಿ, ತಮ್ಮ ಧ್ವನಿಮುದ್ರಿಕೆಯಲ್ಲಿ ಮುದ್ರಿಸಿಕೊಂಡು ಬರಹಕ್ಕೆ ತಂದಿದ್ದಾರೆ.

ಮತ್ತೂರು ಮಾರ್ಕಂಡೇಯ ಅವಧಾನಿ

ಮಾನ್ಯ ಶ್ರೀ ಮಾರ್ಕಂಡೇಯ ಅವಧಾನಿಯವರ ಪರಿಚಯ ನನಗೆ ಆದದ್ದು ಶ್ರೀಯುತ ಮತ್ತೂರು ಕೃಷ್ಣಮೂರ್ತಿಯವರ ಮೂಲಕವೇ. ಮತ್ತೂರ್‌ಜೀಯವರ ಬಗ್ಗೆ ತುಂಬ ಗೌರವ ಹೊಂದಿದ್ದ ನಾನು ಒಮ್ಮೆ ಅವರಿಗೆ ಪತ್ರ ಬರೆದಾಗ, 'ಶ್ರೀಕೃಷ್ಣ ಪವಾಡ ಪುರುಷನಲ್ಲ' ಎನ್ನುವ ಅವರ ವಾದವನ್ನು ಪ್ರಶ್ನಿಸಿ,'ಅದಕ್ಕೆ ಸಾಕ್ಷಿ ಎನ್ನುವಂತೆ ಈಗಲೂ ನಮ್ಮ ಕಣ್ಣ ಮುಂದೆಯೇ ಉಡುಪಿಯಲ್ಲಿನ ಕೃಷ್ಣನು ಮಹಾದ್ವಾರಕ್ಕೆ ಬೆನ್ನು ಮಾಡಿ ನಿಂತಿಲ್ಲವೇ? ಅದಕ್ಕೇನು ಹೇಳುತ್ತೀರಿ ನೀವು' ಎಂದು ಕೇಳಿದ್ದೆ. ಆಗ ಅವರು ಪತ್ರ ತಲುಪಿದ ಕೂಡಲೆ ಫೋನಿಸಿ, ''ಇಲ್ಲಿ ನನ್ನ ಹತ್ತಿರದಲ್ಲೇ ನನ್ನ ಗುರುಗಳು ಕುಳಿತಿದ್ದಾರೆ. ಅವರು ಶ್ರೀ ಮಾರ್ಕಂಡೇಯ ಅವಧಾನಿಯವರು. 'ನನಗೂ ಕಾಡುತ್ತಿದ್ದ ಒಂದು ಪ್ರಶ್ನೆಯನ್ನು ಈಕೆ ಕೇಳಿದ್ದಾರೆ' ಎಂದು ಹೇಳುತ್ತಿದ್ದಾರೆ, ಸುಮನಾ'' ಎಂದರು.

ಅದೇ ಮೊದಲು ನಾನು ಶ್ರೀ ಮಾರ್ಕಂಡೇಯ ಅವಧಾನಿಯವರಲ್ಲಿ ಮಾತನಾಡಿದುದು. ಅದಾದನಂತರ ಮೂರು-ನಾಲ್ಕು ತಿಂಗಳು ಕಳೆದ ಮೇಲೆ ಅವರನ್ನು ಮೊದಲಸಾರಿಗೆ ನೋಡಿದೆ. ಅವರೂ ನಾನೂ ಆಗಾಗ ಮಾನ್ಯ ಮತ್ತೂರ್‌ಜೀ ಮನೆಯಲ್ಲಿ ಭೇಟಿಯಾಗುತ್ತಿದ್ದೆವು. ನನಗೆ ಅವರ ವ್ಯಕ್ತಿತ್ವ, ಪಾಂಡಿತ್ಯ ಎಲ್ಲವೂ ಎಷ್ಟು ಹಿರಿದಾಗಿದೆ ಎನ್ನಿಸತೊಡಗಿತು. ಅಷ್ಟೆಲ್ಲದರ ಜತೆಗೆ ಅಷ್ಟೇ ವಿನಯ, ಯಾವ ವಿಚಾರವನ್ನೂ ಕುತೂಹಲದಿಂದ ಕೇಳಿದವರಿಗೆ ಪ್ರೀತಿಯಿಂದ ತಿಳಿಸಿ ಕೊಡುವ ರೀತಿ, ಮೂಢನಂಬಿಕೆಗಳು ಇಲ್ಲದಿರುವಿಕೆ, ಆಧುನಿಕ ಆಚಾರ-ವಿಚಾರಗಳ ಬಗ್ಗೆ ಸ್ಥೈರಣೆ, ಯಾವ ವಿಷಯವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನ, ಅದಕ್ಕೆ ವೇದ-ಉಪನಿಷತ್ತುಗಳಲ್ಲಿನ ಹೇಳಿಕೆಯನ್ನು ತಾಳೆ ಹಾಕಿನೋಡುವ ಸಾಮರ್ಥ್ಯ, ಮಾತು-ಕತೆಗಳಲ್ಲಿ ಯಾವ ಕ್ಷಣದಲ್ಲೂ ಅನುಪಯುಕ್ತ ಎನ್ನುವಂಥ ವಿಷಯವನ್ನು ಹೇಳದಷ್ಟು ನಡೆ-ನುಡಿಗಳ ಗಾಂಭೀರ್ಯ, ಅಷ್ಟು ಪಾಂಡಿತ್ಯವಿದ್ದರೂ ಆಡಂಬರ ಮಾಡದಂಥ ಹಿರಿತನ.... ಹೇಳುತ್ತ ಹೋದರೆ ತುಂಬಾ ಬೆಳೆಯುತ್ತದೆ ಹೀಗೆ! ಇಂಥ ಶ್ರೀ ಮಾರ್ಕಂಡೇಯ ಅವಧಾನಿಯವರ ಜೀವನಚರಿತ್ರೆಯನ್ನು ಬರೆಯಬೇಕು ಎಂದು ಮತ್ತೂರ್‌ಜೀ ಹೇಳಿದಾಗ ನಾನು ಕೂಡಲೇ 'ಆಗಲಿ' ಎಂದೆ. ಅದು ನಾನು ನಿರೀಕ್ಷಿಸದೆ ನನ್ನ ಪಾಲಿಗೆ ಬಂದ ಒಂದು ಸದವಕಾಶ ಆಗಿದ್ದಿತು. ಅವರ ಅನುಭವಗಳನ್ನು ಮೊದಲು ಧ್ವನಿಮುದ್ರಿಸಿಕೊಳ್ಳಲು ಹೋದಾಗ, ಕೆಲವು ದಿನಗಳ ಹಿಂದೆಯಷ್ಟೇ ಅವರು 'ಬೈಪಾಸ್' ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದರು. ಅವರ ಜೀವನದ ಬಗ್ಗೆ ಆಸಕ್ತಿ ಇದ್ದ ನನಗೆ, ಪರಂಪರಾನುಗತವಾಗಿ ಬಂದ 'ಗ್ರಾಮ ಪುರೋಹಿತರು' ಎನ್ನುವಂಥ ವೃತ್ತಿಯೂ, ಮತ್ತೂರಿನ ವೇದಮಯ ವಾತಾವರಣವೂ, ಅವರ ವಿಚಾರಧಾರೆಯನ್ನು ಆಧುನಿಕ ಜೀವನದ ಸದಾಚಾರಗಳಿಗೆ ಹೇಗೆ ಹೊಂದಿಸಿವೆ ಎನ್ನುವುದರ ಬಗೆಗೆ ಬಹಳ ಕುತೂಹಲ ಕೆರಳಿಸಿತ್ತು. ನಾನು ಧ್ವನಿಮುದ್ರಣದ ಕೆಲಸ ಪ್ರಾರಂಭಿಸಿದಾಗ, ನನ್ನ ನಿರೀಕ್ಷೆಯಂತೆ ಅವರು ತಮ್ಮ ತಂದೆ-ತಾಯಿ, ಹುಟ್ಟು-ಬಾಲ್ಯಗಳ ಬಗೆಗೆ ಹೇಳಲು ಪ್ರಾರಂಭಿಸದೆ, ತಮಗೆ ಆದ ಶಸ್ತ್ರಚಿಕಿತ್ಸೆ ಹೇಗೆ ತಮಗೆ ಪುನರ್ಜನ್ಮ ನೀಡಿದೆ, ಎಂಬಲ್ಲಿಂದ ಪ್ರಾರಂಭಿಸಿದರು...

---

* ತುಂಗೆಯ ಮಡಿಲಲ್ಲಿ.... ಮತ್ತೂರು ಮಾರ್ಕಂಡೇಯ ಅವಧಾನಿ ; ನಿರೂಪಣೆ : ಎಸ್. ಸುಮನಾ ವಿಶ್ವನಾಥ್; ಪ್ರ.ಮು : 2005, ಪು : 220+60, 1/8 ಡೆಮ್ಮಿ ; ಪ್ರ : ಎಂ.ಪಿ. ಬಿರ್ಲಾ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

೧. ಸಂಕೇತಿಗಳು ಕರ್ನಾಟಕಕ್ಕೆ ಬಂದರು

ಸುಮಾರು ಆರುನೂರು ವರ್ಷಗಳ ಹಿಂದೆ ಮೈಸೂರು ಮಹಾರಾಜರು ಒಂದು ಯಾಗ ನಡೆಸಬೇಕೆಂದು ಯೋಚಿಸಿದರು. ಅದಕ್ಕಾಗಿ ಕೇರಳ ಮತ್ತು ತಮಿಳುನಾಡಿನ ಕಡೆಯಿಂದ ಅನೇಕ ಪಂಡಿತರು ಹಾಗೂ ವೇದವಿದರನ್ನು ಬರಮಾಡಬೇಕು ಎಂದುಕೊಂಡು, ಅಂದಿನ ತಿರುವಾಂಕೂರು ಮಹಾರಾಜರಿಗೆ ಮತ್ತು ತಮಿಳುರಾಜರಿಗೆ, ''ನಿಮ್ಮ ನಾಡಿನಿಂದ ಸುಮಾರು ಸಾವಿರ ಮಂದಿ ವೇದಾಧ್ಯಯನ ಮಾಡಿದ ಪುರೋಹಿತರನ್ನು ಕಳುಹಿಸಿ ಕೊಡಿ'' ಎಂದು ನಿರೂಪ ಕಳುಹಿಸಿದರು. ಆಗ ತಿರುವಾಂಕೂರಿನ ಹಾಗೂ ತಮಿಳುನಾಡಿನ ಆ ಮಹಾರಾಜರು, ''ಇಲ್ಲಿಯೂ ಯಾಗಗಳು ನಡೆಯುತ್ತಿರುವ ಕಾರಣ ಸಾವಿರ ಜನರು ಸಿಗುವುದು ಕಷ್ಟ. ಆದರೂ ವೇದವಿದ ಜನರನ್ನು ಕಳುಹಿಸಿಕೊಡುತ್ತೇವೆ. ಆದರೆ ಅವರೆಲ್ಲರೂ ವಲಸೆ ಬಂದು ತಮ್ಮಲ್ಲೇ ನೆಲೆಸುವವರು. ತಾವು ಅವರಿಗೆ ಬದುಕಿನ ಮಾರ್ಗಕ್ಕೆ ಒಂದು ವೃತ್ತಿಯನ್ನು ಕಲ್ಪಿಸಿಕೊಡುವ ವ್ಯವಸ್ಥೆ ಮಾಡಬೇಕು'' ಎಂದು ಉತ್ತರ ಕಳುಹಿಸಿದರು. ಮೈಸೂರು ಮಹಾರಾಜರು ಈ ಪ್ರಸ್ತಾಪಕ್ಕೆ ಸಮ್ಮತಿಸಿದರು. ಆಗ ಅಲ್ಲಿಂದ ಇಲ್ಲಿಗೆ ವಲಸೆ ಹೊರಟುಬಂದ ಕುಟುಂಬಗಳೇ ಆರುನೂರು ಸಂಕೇತಿ ಕುಟುಂಬಗಳು ಎಂದು ಕೇಳಿದ್ದೇವೆ. ಇದಕ್ಕೆ ನಮ್ಮ ಹತ್ತಿರ ಯಾವ ನಿಶ್ಚಿತ ದಾಖಲೆಯೂ ಇಲ್ಲ. ಇದು ನಾವು ಕೇಳಿರುವ ಒಂದು ವಿಚಾರ ಅಷ್ಟೆ. ಆಗ ಅಲ್ಲಿಂದ ಬಂದ ವೇದವಿದರು, ವಿಶ್ವಾಮಿತ್ರರು ತಪಸ್ಸು ಮಾಡುತ್ತಿದ್ದ ಮತ್ತು ಪ್ರತಿಷ್ಠಾಪಿಸಿದ್ದ 'ಶ್ರೀ ಲಕ್ಷ್ಮೀಕೇಶವ'ನ ದೇವಸ್ಥಾನ ಇರುವ ಊರು 'ಕೌಶಿಕ' ಎನ್ನುವಲ್ಲಿಗೆ ಹೋಗಿ ನೆಲೆಸಿದರು. ಕೆಲವರು ಬೆಟ್ಟದಪುರದಲ್ಲಿ ಶಿವನ ದೇವಸ್ಥಾನ ಇರುವಲ್ಲಿಗೆ ಹೋಗಿ ನೆಲೆಸಿದರು. ಉಳಿದ ಕೆಲ ಗುರುಭಕ್ತರು ತುಂಗಾನದಿಯ ತೀರದ ಶೃಂಗೇರಿ ಕಡೆಗೆ ಹೋದರು. ಮತ್ತೆ ಹಲವರು ದೇವರಾಯ ಸಮುದ್ರ, ಹಿರಿಯಂಗಳ, ಬೀರೂರು, ತೀರ್ಥಹಳ್ಳಿ, ಲಿಂಗದಹಳ್ಳಿ, ತರೀಕೆರೆಗಳಲ್ಲಿ ನೆಲೆಸಿದರು. ಅವರೆಲ್ಲ 'ಮಲೆನಾಡು ಸಂಕೇತಿಗಳು' ಎನಿಸಿಕೊಂಡರು. ನಮ್ಮವರಲ್ಲಿ ಕೆಲವರು ಮತ್ತೂರು, ಹೊಸಹಳ್ಳಿಗೆ ಬಂದು ನೆಲೆಸಿದರು. ನಾವೂ ಕೌಶಿಕ ಸಂಕೇತಿ ಪಂಗಡಕ್ಕೆ ಸೇರಿದವರು..... ಈ ಎಲ್ಲ ವಿವರಗಳೂ ಅವರಿವರ ಬಾಯಲ್ಲಿ ಕೇಳಿ ತಿಳಿದುಕೊಂಡಂಥವು*.

ಹೀಗೆ ಸಂಕೇತಿಗಳು ತುಂಗಾನದೀ ತೀರದಲ್ಲಿ ನೆಲೆಸಿದ್ದ ಸಮಯದಲ್ಲಿ, ವಿಜಯನಗರದ ಅರಸು ಕೃಷ್ಣದೇವರಾಯರು ಅಲ್ಲಿಗೆ ಬಂದರು. ನದೀತೀರದ ಎರಡೂ ಸೋಪಾನಗಳಲ್ಲಿ ಕುಳಿತು ವೈದಿಕರು ವೇದಘೋಷ ಮಾಡುತ್ತಿದ್ದುದು ಅಲ್ಲಿ ಬಿಡಾರ ಮಾಡಿದ್ದ ಮಹಾರಾಜರ ಕಿವಿಗೆ ಬಿದ್ದಿತು. ತಾವೇ ಬಂದು ಎರಡೂ ಕಡೆಯ ವೇದವಿದರಿಗೂ ನಮಿಸಿ, ತಾವು ಅವರ ವೇದನಾದ ಮತ್ತು ನಿಷ್ಠೆಯಿಂದ ರೋಮಾಂಚಿತರಾದುದಾಗಿ ಹೇಳಿದರು. ''ಈ ಆನಂದ ಸಂದರ್ಭದಲ್ಲಿ ನೀವೆಲ್ಲರೂ ನೆಲೆಸಿರುವ ಈ ಗ್ರಾಮವನ್ನೇ ನಿಮಗೆ ನಾವು ಪಾರಿತೋಷಿಕವಾಗಿ ಕೊಡುತ್ತೇವೆ'' ಎಂದರು. ''ನಾವು ರಾಜಪ್ರತಿಗ್ರಹ ಮಾಡುವವರಲ್ಲ'' ಎಂದರು ಆ ವೇದವಿದರು. ಮಹಾರಾಜರಿಗೆ ಪೆಚ್ಚಾಯಿತು. ಸಂಕಟವೂ ಆಯಿತು. ಆ ರಾತ್ರಿ ನಿದ್ರೆಯೂ ಬರಲಿಲ್ಲ. ಮಹಾರಾಜರ ದುಃಖಕ್ಕೆ ಕಾರಣ ತಿಳಿದುಕೊಂಡ ಚತುರ ಮಂತ್ರಿ ತ್ರ್ಯಂಬಕರಾಯ ಆ ಬ್ರಾಹ್ಮಣರ ಅಪರಿಗ್ರಹಕ್ಕೆ ಕಾರಣವನ್ನು ಹೇಳಿದ... ಅದುವರೆವಿಗೂ ತೋಟಗಾರಿಕೆಯಿಂದ ಜೀವಿಸುತ್ತಿದ್ದ ಆ ಬ್ರಾಹ್ಮಣರು ರಾಜಸರ್ಕಾರಕ್ಕೆ ಕಂದಾಯ ಕಟ್ಟುತ್ತಿದ್ದರು. ಆರನೇ ಒಂದು ಭಾಗವನ್ನು ಕಂದಾಯ ಕಟ್ಟಿ ಉಳಿದ ಐದು ಭಾಗವನ್ನು ತಾವು ಬಳಸಿಕೊಳ್ಳುತ್ತಿದ್ದರು. ಅದೇ ಸರಿಯಾದದ್ದು ಎಂದೇ ಅವರು ಭಾವಿಸಿದ್ದುದರಿಂದ ಮಹಾರಾಜರಿಗೆ ಅವರು ಆ ರೀತಿ ಉತ್ತರವನ್ನು ಹೇಳಿದ್ದರು. ಆದರೆ ಮಹಾರಾಜರಿಗೆ ಆ ಒಂದು ಭಾಗವನ್ನು ಅವರು ಸರ್ಕಾರಕ್ಕೆ ಕಟ್ಟುವುದು ಬೇಕಿರಲಿಲ್ಲ; ಇಡೀ ಪ್ರದೇಶವನ್ನು ಉಂಬಳಿಯಾಗಿ ಕೊಡಲು ಬಯಸಿದ್ದರು. ಆಗ ಚತುರಮಂತ್ರಿಯು 'ಕರ್ನಾಟಕದ ವರಾಹಲಾಂಛನ ಸಿಂಹಾಸನಕ್ಕೆ ಇದರಿಂದಾಗಿ ಅವಮಾನವಾಯಿತು' ಎಂದು ಕೊರಗಿದ್ದ ರಾಜರ ದುಃಖವನ್ನು ದೂರಮಾಡಿದ. ಅದರ ಪರಿ ಹೀಗೆ:

* ಈ ಬಗೆಗಿನ ಇತ್ತೀಚಿನ ಸಂಶೋಧನೆಗೆ ನೋಡಿ : ಸಂಕೇತಿ: ಒಂದು ಅಧ್ಯಯನ, ಡಾ. ಬಿ.ಎಸ್. ಪ್ರಣತಾರ್ತಿಹರನ್, ಪುಟ xx + 374, ಮೊ.ಮು. 2003, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು.

ಶೃಂಗೇರಿಯಲ್ಲಿ ಜಗದ್ಗುರುಗಳ ದರ್ಶನ ಮಾಡಿಕೊಂಡು ಹೊರಟ ಮಹಾರಾಜರು ಬರುವ ದಾರಿಯಲ್ಲಿ ಇದ್ದಂತಹ ಅನೇಕ ಅಗ್ರಹಾರಗಳನ್ನು ಅಲ್ಲಿನ ಜನಗಳಿಗೇ ದಾನ ಮಾಡಿದ್ದರು. ಈಗ ಮತ್ತೂರಿನ ಬ್ರಾಹ್ಮಣರಿಗೆ ಮಾಡುವ ದಾನ ಅದಕ್ಕೆಲ್ಲ ಕಳಶಪ್ರಾಯವಾದೀತು ಎಂದು ಯೋಚಿಸಿದ್ದರು. ಮಹಾರಾಜರ ದಾನಬುದ್ಧಿಯ ಬಗ್ಗೆ ಅಭಿಮಾನ ಹೊಂದಿದ್ದ ಮಹಾಮಂತ್ರಿ 'ದಾನ ತೆಗೆದುಕೊಳ್ಳುವುದಿಲ್ಲ' ಎಂದವರಿಗೆ ದಾನ ಕೊಡಿಸಿಯೇ ತೀರಬೇಕು ಎಂದು ನಿಶ್ಚಯಿಸಿದ. ಮಹಾರಾಜರಲ್ಲಿ, ''ತಾವು ಅವರಿಗೆ ಕೊಡಬೇಕೆಂದಿರುವುದನ್ನು ನನ್ನ ಹೆಸರಿಗೆ ಮಾಡಿ ಕೊಡಿ. ನಾನು ಬ್ರಾಹ್ಮಣ. ಅದನ್ನು ನಾನು ಅವರಿಗೆ ದಾನವಾಗಿ ಕೊಡುತ್ತೇನೆ. ಅವರು ರಾಜಪ್ರತಿಗ್ರಹ ಮಾಡುವುದಿಲ್ಲವೇ ವಿನಹ ಬ್ರಾಹ್ಮಣನಾದ ನಾನು ಕೊಟ್ಟರೆ ತೆಗೆದುಕೊಳ್ಳದೆ ವಿಧಿ ಇಲ್ಲವಾಗುತ್ತದೆ'' ಎಂದು ಉಪಾಯ ಹೇಳಿದ. ಮಹಾರಾಜರ ಮನಸ್ಸು ಉಲ್ಲಾಸಗೊಂಡಿತು. ಆ ರಾತ್ರಿಯೇ ಆ ಇಡೀ ಪ್ರದೇಶವನ್ನು ಮಹಾರಾಜರು ಮಂತ್ರಿ ತ್ರ್ಯಂಬಕರಾಯನ ಹೆಸರಿಗೆ ಬರೆಸಿ ರಾಜಮೊಹರು ಹಾಕಿಸಿಕೊಟ್ಟರು.

ಮಾರನೆಯದಿನ ಮಂತ್ರಿ ತ್ರ್ಯಂಬಕರಾಯ ತಾನು ಅಲ್ಲಿಗೆ ಬಂದು ಬ್ರಾಹ್ಮಣರಿಗೆ ದಾನ ಕೊಡುವುದಾಗಿ ಹೇಳಿದ. ಆಗಲೂ ಅವರು ತಕರಾರು ತೆಗೆದಾಗ ಜಾಣ ಮಂತ್ರಿ, ''ಬ್ರಾಹ್ಮಣರಾದವರು ಎಂದೂ ಷಟ್ಕರ್ಮಿಗಳಾಗಿರಬೇಕು. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎನ್ನುವ ಆರು ಕರ್ಮಗಳನ್ನು ಅನುಸರಿಸಬೇಕು. ನೀವು ಬ್ರಾಹ್ಮಣರಾಗಿ ಪ್ರತಿಗ್ರಹ ಮಾಡುವುದಿಲ್ಲ ಎಂದರೆ ಒಂದು ಕರ್ಮದ ಲೋಪ ನಿಮ್ಮಲ್ಲಿದೆ ಎನ್ನುತ್ತೇನೆ ನಾನು. 'ಮತ್ತೂರಿನ ಬ್ರಾಹ್ಮಣರು ಪಂಚಕರ್ಮಿಗಳು ಎಂದು ನಾವು ಇತರರಲ್ಲಿಯೂ ಹೇಳಬೇಕಾಗುತ್ತದೆ'' ಎಂದ. ಮಂತ್ರಿಯ ಕಡೆಯಿಂದ ಇದು ಒಂದು ರೀತಿಯ ಚಾತುರ್ಯದ ಬೆದರಿಕೆಯೇ ಆಗಿತ್ತು. 'ನಮ್ಮನ್ನು ಹಾಗೆ ಪಂಚಕರ್ಮಿಗಳೆಂದು ಕರೆಯಬೇಡಿ. ಖಂಡಿತ ಷಟ್ಕರ್ಮಿಗಳು ನಾವು. ನಿಮ್ಮಿಂದ ದಾನ ತೆಗೆದುಕೊಳ್ಳುತ್ತೇವೆ' ಎಂದು ಆ ಬ್ರಾಹ್ಮಣರು ಮಂತ್ರಿಯಲ್ಲಿ ವಿನಂತಿಸಿಕೊಂಡು, ಮಂತ್ರಿಗಳ ಮೂಲಕ ಮಹಾರಾಜರು ಕೊಟ್ಟ ಉಂಬಳಿಯನ್ನು ತೆಗೆದುಕೊಂಡರು. ಇದನ್ನು ಆತ ಅರ್ಧೋದಯ ಪುಣ್ಯಕಾಲದಲ್ಲಿ ಕೃಷ್ಣಾನದೀತೀರದಲ್ಲಿ ಪಯೋಧಾರಾ ಪೂರ್ವಕ ದಾನಮಾಡಿದ. ಆ ಸಂಬಂಧದ ದಾನ ಶಾಸನದಲ್ಲಿ ಹೀಗಿದೆ:

ಸ್ವಭಾನುವತ್ಸರೇ ಪುಷ್ಯ । ಮಾಸೇ ಮಕರಸಂಕ್ರಮೇ ॥
ಹಸ್ತರ್ಕ್ಷೇ ಭೌಮವಾರೇ ಚ । ಕೃಷ್ಣಾತೀರೇತಿಪಾವನೇ ॥೧॥
ವಿಭವೇ ತ್ರಿಯಂಬಕಾಖ್ಯಾಯ । ವಿರೋಧಿಪುರಭೇದಿನೇ ॥
ಸರ್ವದಾ ಸರ್ವಸಸ್ಯಾಢ್ಯಂ । ಮತ್ತೂರು ಗ್ರಾಮಮುತ್ತಮಂ ॥೨॥
ಕೃಷ್ಣದೇವ ಮಹಾರಾಯೋ । ಮಾನನೀಯೋ ಮನಸ್ವಿನಾಮ್॥
ಸಹಿರಣ್ಯಪಯೋಧಾರಾ । ಪೂರ್ವಕಂ ದತ್ತವಾನ್ ಮುದಾ॥೩॥

ಇದು ನಡೆದದ್ದು ಶಾಲಿವಾಹನ ಶಕ **೧೪೪೪**, ಕ್ರಿಸ್ತಶಕ **೧೫೨೩***ರಲ್ಲಿ; ಇಂದಿಗೆ **೪೮೨** ವರ್ಷವಾಗಿದೆ.

ಅದು ಎಂತಹಾ ದಾನ? ಒಬ್ಬೊಬ್ಬರಿಗೆ ಒಂದೊಂದು ವೃತ್ತಿ. ಒಂದು 'ವೃತ್ತಿ' ಎಂದರೆ ಎಂಟು ಎಕರೆ ಕೆರೆನೀರಿನ ಭೂಮಿ (ಎರಡು ಬೆಳೆ ತೆಗೆಯಬಹುದಾದಂಥದು), ಎಂಟು ಎಕರೆ ಖುಷ್ಕಿ ಭೂಮಿ (ನೆಲಗಡಲೆ, ಹುರುಳಿ, ರಾಗಿ ಬೆಳೆಯುವಂಥದು), ಎಂಟು ಎಕರೆ ಕಾಡು ಪ್ರದೇಶ (ಗಂಧ, ತೇಗ, ಬೀಟೆ ಇತ್ಯಾದಿ ಮರಗಳಿರುವಂಥದು), ಆರು ಎಕರೆ ಗೋಮಾಳ (ಎರಡು ಹುಣಿಸೆಮರ ಇರುವಂಥದು), ಜತೆಗೆ ಎರಡು ಮಂದಳ. ವೇದಾಧ್ಯಯನ ಮಾಡುವ ನಲವತ್ತು ಕುಟುಂಬಗಳಿಗೆ ಒಂದು ವೃತ್ತಿ, ಅಗ್ನಿಹೋತ್ರ ಮಾಡುವ ಕುಟುಂಬಕ್ಕೆ ಎರಡು ವೃತ್ತಿಗಳು - ಹೀಗೆ ದಾನಕೊಟ್ಟರು. ಒಟ್ಟಾರೆ ಆಗ ಎಲ್ಲ ಕುಟುಂಬಗಳಿಗೂ ಮೂವತ್ತು ಎಕರೆಗೆ ಸಮನಾಗಿ ಭೂಮಿ ಸಿಕ್ಕಿತು. ಹೀಗೆ ಎಂಬತ್ತು ಜನಕ್ಕೆ ಮಹಾರಾಜರು ನೂರಿಪ್ಪತ್ತು ವೃತ್ತಿಗಳನ್ನು ಕೊಟ್ಟಿದ್ದರು. ಇಷ್ಟೆಲ್ಲ ಸುಖಾಂತಕ್ಕೆ ಉಪಾಯ ಮಾಡಿದ ಚತುರ ಮಹಾಮಂತ್ರಿಯ ಹೆಸರಿನಲ್ಲಿ ಮತ್ತೂರಿನಲ್ಲಿ ತ್ರ್ಯಂಬಕೇಶ್ವರ ಎನ್ನುವ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅಲ್ಲಿ ಊರಜನ ಗುಡಿ ಕಟ್ಟಿಸಿದ್ದಾರೆ. ಲಕ್ಷ್ಮೀನಾರಾಯಣ, ಆಂಜನೇಯ, ತ್ರ್ಯಂಬಕೇಶ್ವರ ದೇವಸ್ಥಾನಗಳಿಗೆಂದು ಮಹಾರಾಜರು ಒಟ್ಟಾಗಿ ಹಲವು ಎಕರೆಗಳನ್ನು ದತ್ತಿಯಾಗಿ ಕೊಟ್ಟರು. ಹೀಗೆ ದಾನಪಡೆದು ಮತ್ತೂರಿನಲ್ಲಿ ನೆಲೆಸಿದ ಕುಟುಂಬಗಳಲ್ಲಿ ನಮ್ಮದೂ ಒಂದು.

* ಎಪಿಗ್ರಾಫಿಯ ಕರ್ನಾಟಿಕ, ಸಂ. 13, ಶಿವಮೊಗ್ಗ, 81 ಪು. 119-120

೨. 'ಕಡೇ ಮನೆ' ಎಂಬ ನಮ್ಮ ವಂಶ

ನಮ್ಮ ತಾತ ವೇದಪಂಡಿತ, ಕಡೇಮನೇ ರಾಮಾವಧಾನಿ. ನಮ್ಮ ಅಜ್ಜಿ ಸೀತಾಲಕ್ಷ್ಮಮ್ಮ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣುಮಕ್ಕಳು. ನಮ್ಮ ತಂದೆ ನಾರಾಯಣ ಉಪಾಧ್ಯಾಯರೇ ಹಿರಿಯರು. ಚಿಕ್ಕಪ್ಪ, ಕೇಶವ ಉಪಾಧ್ಯಾಯರು. ಸೋದರತ್ತೆಯರು ಲಕ್ಷ್ಮಮ್ಮ, ನಾಗಮ್ಮ, ಸಾವಿತ್ರಮ್ಮನವರು. ಎಲ್ಲಾ ಮತ್ತೂರಿನವರೇ. ಇವರ ಮಕ್ಕಳು ಮೊಮ್ಮಕ್ಕಳು ಮತ್ತೂರಿನಲ್ಲಿ ಸುಖವಾಗಿದ್ದಾರೆ. ನಮ್ಮದು ಪುರೋಹಿತ ಕುಟುಂಬ. ಗುರುಪರಂಪರೆ ನಡೆಸಿಕೊಂಡು ಬಂದವರು ನಮ್ಮ ಹಿರಿಯರು. ವೇದಾಧ್ಯಯನ ಮಾಡಿಸುತ್ತಿದ್ದ ನಮ್ಮ ತಂದೆಯ ಮಾತಾಮಹ (ತಾಯಿಯ ತಂದೆ) ಮತ್ತು ಮಾವನವರುಗಳಾದ ವಿಶ್ವೇಶ್ವರ ಉಪಾಧ್ಯಾಯ, ಕೇಶವ ಉಪಾಧ್ಯಾಯರಿಂದ ಪುರೋಹಿತವೃತ್ತಿ ನಮಗೆ ಬಂದಿತು. ಅದನ್ನು ನಾವು ಮುಂದುವರೆಸಿಕೊಂಡು ಬಂದೆವು. ಇದರಿಂದ ನಮ್ಮ ತಂದೆಯವರೂ ಎರಡು ಊರಿನ ಪುರೋಹಿತರಾಗಿದ್ದರು. ಆಗ ಅವರಿಗೆ ನಾನು ಅವರ ಪದಹತಿಯಲ್ಲೇ ನಡೆದು ಬರಬೇಕು ಎನ್ನುವ ಆಸೆ ಇದ್ದಿತು. ನಮ್ಮ ತಂದೆಗೆ ಇಬ್ಬರು ಪತ್ನಿಯರು. ಮೊದಲನೆಯ ಪತ್ನಿ ನಮ್ಮ ದೊಡ್ಡಮ್ಮ ಲಕ್ಷ್ಮಮ್ಮ. ಅವರಿಗೆ ಒಂದೆರಡು ಮಕ್ಕಳು ಹುಟ್ಟಿದರೂ, ಹುಟ್ಟಿದ ಒಂದೆರಡು ತಿಂಗಳಲ್ಲೇ ಕಣ್ಮುಚ್ಚಿದವು. ಮತ್ತೆ ಎರಡು ಮೂರು ಸಾರಿ ಅವರಿಗೆ ಗರ್ಭಸ್ರಾವ ಆಗಿ ವಂಶ ಮುಂದುವರೆಯುವ ಸಾಧ್ಯತೆಗಳು ಕಡಮೆಯಾದವು. ಆಗ ಊರಿನ ಜನ ನಮ್ಮ ತಂದೆಗೆ ಮತ್ತೊಂದು ಮದುವೆಯಾಗುವಂತೆ ಸೂಚಿಸಿದರು. ವಂಶ ಬೆಳೆಯಲು ಅದು ಅವಶ್ಯವೂ ಆಗಿತ್ತು. ಆದರೂ ತಂದೆಯವರು 'ಬೇಡ' ಎಂದುಬಿಟ್ಟರು. ಆಗ ಊರಹಿರಿಯರು ನಮ್ಮ ದೊಡ್ಡಮ್ಮ ಲಕ್ಷ್ಮಮ್ಮನವರಿಗೇ ಹೇಳಿ, ''ನಿಮ್ಮವರನ್ನು ನೀವೇ ಒಪ್ಪಿಸಿ ಮದುವೆ ಮಾಡಿ'' ಎಂದು ಹೇಳಿದಾಗ, ದೊಡ್ಡಮ್ಮ ಸಂತೋಷದಿಂದಲೇ ಒಪ್ಪಿಕೊಂಡು, ಎರಡನೆಯ ಮದುವೆಗೆ ನಮ್ಮ ತಂದೆಯ ಮನ ಒಲಿಸಿದರು. ಶ್ರೀ ಕೃಷ್ಣಶಾಸ್ತ್ರಿಗಳು ನಮ್ಮ ತಂದೆಯ ಅತ್ತೆಯ ಮಕ್ಕಳು. ಅವರು ನಮ್ಮ ತಂದೆಯವರಿಗೆ, ಶ್ರೀಮತಿ ಸಾವಿತ್ರಮ್ಮ- ಕೇಶವಾವಧಾನಿ ದಂಪತಿಗಳ ಮಗಳಾದ ಶ್ರೀಲಕ್ಷ್ಮೀದೇವಿ ಎನ್ನುವ ಹುಡುಗಿಯನ್ನು ಗೊತ್ತುಮಾಡಿದರು. ದೊಡ್ಡಮ್ಮನ ತಾಯಿಗೆ ಈ ಮದುವೆ ಇಷ್ಟವಿರಲಿಲ್ಲ. ಮಗಳಿಗೆ ಸವತಿ ಬರುತ್ತಾಳೆ ಎನ್ನುವ ಸಂಗತಿ ಯಾವ ತಾಯಿಗೆ ತಾನೆ ಸಂತೋಷ ತಂದೀತು? ಆದರೂ ಒಪ್ಪಿ ಎಲ್ಲರೂ ನಿಂತು ಮದುವೆ ಮಾಡಿಸಿದರು. ನಮ್ಮ ತಾಯಿ ನಮ್ಮ ದೊಡ್ಡಮ್ಮನ ಮನೆಗೇ ಬಂದರು.

ನಾನು ಹುಟ್ಟುವ ಮೊದಲು ನಮ್ಮ ತಂದೆಯವರು ಸುಮಾರು ನಾಲ್ಕು ತಿಂಗಳ ಕಾಲ 'ಮಾರ್ಕಂಡೇಯ ಪುರಾಣ'ವನ್ನು ವಾಚನ ವ್ಯಾಖ್ಯಾನ ಮಾಡಿದ್ದರು. ನಲವತ್ತೆಂಟು ದಿನಗಳ ಕಾಲ ಅಶ್ವತ್ಥವೃಕ್ಷದ ಪ್ರದಕ್ಷಿಣೆ - ನಮಸ್ಕಾರ ಸಲ್ಲಿಸಿದ್ದರು. **೧೮.೧೧.೧೯೩೩**ರ ಶ್ರೀಮುಖ ಸಂವತ್ಸರ, ಮಾರ್ಗಶೀರ್ಷ ಶುದ್ಧ ಪ್ರತಿಪದೆಯಲ್ಲಿ, ಅನುರಾಧಾ ನಕ್ಷತ್ರದಲ್ಲಿ ನಮ್ಮ ತಾಯಿ ನನಗೆ ಜನ್ಮಕೊಟ್ಟರು. ನಮ್ಮ ತಂದೆಯವರು ತಾವು ಮಾಡಿದ ದೇವತಾಸೇವೆಯ ಫಲದಿಂದ ಗಂಡುಮಗುವಿನ ಜನನವಾಗಿದೆ ಎಂದು ನಂಬಿ, ತಮ್ಮ ಹಿರಿಯಮಗನಾದ ನನಗೆ 'ಮಾರ್ಕಂಡೇಯ' ಎಂದು ಕರೆದು 'ಅಶ್ವತ್ಥ' ಎಂದೂ ನಾಮಕರಣ ಮಾಡಿದರು.

ಅಪರೂಪಕ್ಕೆ ತಮ್ಮ ಮನೆಯಲ್ಲಿ ಹುಟ್ಟಿದ 'ಮಗು' ಎಂದು ನನ್ನ ತಂದೆ ಬಹಳ ವಿಜೃಂಭಣೆಯಿಂದ ನನ್ನ ನಾಮಕರಣ ಮಾಡಿದರು. ಎರಡು ಸಂಬಂಧದವರೂ ಸೇರಿ ಈಗ ನಮ್ಮ ಮನೆಯ ಬಳಗ ದೊಡ್ಡದಾಗಿತ್ತು. ನಮ್ಮ ತಂದೆ-ತಾಯಿಯ ಮದುವೆಗೆ ಕಾರಣರಾದ ಹಿರಿಯರೆಲ್ಲರೂ ಸೇರಿದ್ದುದು ತಂದೆಯ ಉತ್ಸಾಹವನ್ನು ಹೆಚ್ಚಿಸಿತ್ತು. ಅವರು ಆ ದಿನ ಪ್ರೀತಿಯಿಂದ ಎಲ್ಲರಿಗೂ ರಸಬಾಳೆ-ಕಲ್ಲುಸಕ್ಕರೆಯ ಜತೆಗೆ ಸೂಕ್ತ ದಕ್ಷಿಣೆ ಕೊಟ್ಟು ಅನ್ನ ಸಂತರ್ಪಣೆ ನಡೆಸಿದ್ದರು. ತಮಗೆ ಪೌರೋಹಿತ್ಯದಲ್ಲಿ ದಕ್ಷಿಣೆಯಾಗಿ ಬಂದ ಎಲ್ಲವನ್ನೂ ಸೇರಿಸಿಟ್ಟಿದ್ದು, ಆದಿನ ಅವರು ಎಲ್ಲವನ್ನೂ ಹಂಚಿದ್ದರಂತೆ.

ಆಗ ನಮ್ಮ ಊರಿನಲ್ಲಿ ಪ್ರಾಥಮಿಕ ಶಾಲೆ ಇತ್ತು. ನಾನು ಓದುತ್ತಿದ್ದಾಗಲೇ ಆಂಗ್ಲಭಾಷೆ ಕಲಿಸುವ ಮಾಧ್ಯಮಿಕ ಶಾಲೆಯೂ ಪ್ರಾರಂಭವಾಯಿತು. ಸಂಸ್ಕೃತ ವಿದ್ಯಾಭ್ಯಾಸವನ್ನು ನಮ್ಮ ತಂದೆಯೇ ನನಗೆ ಗುರುವಾಗಿ ಮಾಡಿಸಿದರು.

ನಾನು ಬೆಳೆಯುತ್ತಿರುವಂತೆಯೇ ಮನೆಯಲ್ಲಿ ನಮ್ಮ ತಾಯಿಗೂ, ದೊಡ್ಡಮ್ಮನಿಗೂ ಸಾಕಷ್ಟು ಸೌಹಾರ್ದತೆ, ಪ್ರೀತಿಯೂ ಬೆಳೆಯಿತು. ನಾನು ಹುಟ್ಟಿದ ಅನಂತರವೂ

ಒಂದು ಮಗುವಿಗೆ ನಮ್ಮ ದೊಡ್ಡಮ್ಮ ಜನ್ಮಕೊಟ್ಟರು. ಆದರೆ ಮಗುವಿಗೆ ತಾಯಿಯ ಹಾಲು ಇರದ ಕಾರಣ, ನಮ್ಮ ಮನೆಯ ಸಮೀಪದಲ್ಲಿದ್ದ ರಾಮಕೃಷ್ಣಯ್ಯನವರ ಧರ್ಮಪತ್ನಿ ಶ್ರೀಮತಿ ನಂಜಮ್ಮನವರು ಮಗುವನ್ನು, ಹಾಲಿಗಾಗಿ ತಾವು ಎತ್ತಿಕೊಳ್ಳುವುದಾಗಿ ಹೇಳಿ, ನಾಲ್ಕೈದು ತಿಂಗಳು ಎದೆಹಾಲು ಕುಡಿಸಿದರು. ಆಗ ನಂಜಮ್ಮನವರಿಗೂ ಒಂದು ವರ್ಷದ ಕೂಸೊಂದು ಇತ್ತು. ದೊಡ್ಡಮ್ಮನ ಮಗುವನ್ನು ಅವರು ಎತ್ತಿಕೊಂಡಾಗ ನಂಜಮ್ಮನವರ ಮಗು* ಗಲಾಟೆ ಮಾಡಿ, ಮಗುವನ್ನು ದಬ್ಬುತ್ತಿತ್ತು. ಇದರಿಂದ ದೊಡ್ಡಮ್ಮನ ಅಮ್ಮ ತಿಪ್ಪಜ್ಜಿಗೆ ಕೋಪವೂ ಬೇಸರವೂ ಆಗುತ್ತಿತ್ತು. ತಿಪ್ಪಜ್ಜಿಯವರು ಮಕ್ಕಳಿಗೆ ಅವಲಕ್ಕಿ ಬೆಲ್ಲ ಹಂಚುತ್ತಿದ್ದಾಗ, ಅದನ್ನು ನೋಡಿ ಆ ನಂಜಮ್ಮನ ಮಗು ಕೈಚಾಚಿಕೊಂಡು ಬಂದರೆ, ''ನಮ್ಮ ಮಗುವನ್ನು ನೀನು ಹಾಲು ಕುಡಿಯುವಾಗ ದಬ್ಬುತ್ತೀಯಾ? ನಿನಗೆ ನಾನು ಅವಲಕ್ಕಿ ಕೊಡುವುದಿಲ್ಲ, ಹೋಗು!'' ಎಂದು ಗದರಿಸುತ್ತಿದ್ದರು.... ಮತ್ತೆ ಮಗುವಿನ ಪೆಚ್ಚು ಮುಖ ನೋಡಿ, 'ಅಯ್ಯೋ ಪಾಪ' ಎಂದು ಮರುಗಿ ಕೊಡುತ್ತಿದ್ದರಂತೆ. ಆದರೆ ಯಾರ ಪ್ರಯತ್ನವೂ ಸಫಲವಾಗದೆ ದೊಡ್ಡಮ್ಮನ ಮಗುವಂತೂ ಅವರ ಕೈತಪ್ಪಿತು.

ಅದಾದನಂತರ ದೊಡ್ಡಮ್ಮ ತಾಯಿಯಾಗುವ ಬಗ್ಗೆ ವಿರಕ್ತಿ ಹೊಂದಿ ನನ್ನನ್ನೇ ಮಗನೆಂದು ಭಾವಿಸಿ ಹೆಚ್ಚು ಪ್ರೀತಿಯಿಂದ ಕಾಣತೊಡಗಿದರು.

ಮೊದಲಿಗೆ ದೊಡ್ಡಮ್ಮನ ತಾಯಿ ತಿಪ್ಪಜ್ಜಿಗೆ ನಮ್ಮ ತಾಯಿಯನ್ನು ಕಂಡರೆ ಅಷ್ಟಕ್ಕಷ್ಟೇ ಇತ್ತು. ಕಾಲಕ್ರಮೇಣ ಅವರೂ ತಮ್ಮ ಮಗಳ ಸವತಿಯನ್ನೂ ಪ್ರೀತಿಸಿದರು. ತಮ್ಮ ಮಗಳಂತೆಯೇ ಕಂಡರು. ಅವಳ ಮಕ್ಕಳನ್ನು ತಮ್ಮ ಮೊಮ್ಮಕ್ಕಳಂತೆಯೇ ಕಂಡು ಆದರಿಸಿದರು. ಈಗಲೂ ನಾವು ವಾಸಮಾಡುತ್ತಿರುವ ಮನೆ ಅವರು ತಮ್ಮ ಮಗಳು-ಅಳಿಯನಿಗೆಂದು ಬಳುವಳಿಯಾಗಿ ಕೊಟ್ಟದ್ದು; ಅದು ನಮ್ಮ ದೊಡ್ಡಮ್ಮನ ಮನೆ. ಅಷ್ಟಲ್ಲದೆ ಜತೆಗೆ ಕಾಲು ಎಕರೆ ತೋಟವನ್ನೂ ತಿಪ್ಪಜ್ಜಿಯೇ ತಮ್ಮ ಮಗಳಿಗಾಗಿ ಕೊಟ್ಟದ್ದು. ಆ ತೋಟದಿಂದಲೇ ನಾವು ಬೆಳೆದು, ಇಂದಿಗೂ ಅವರ ಆಶೀರ್ವಾದದಲ್ಲೇ ಉಂಡು ಬದುಕುತ್ತಿದ್ದೇವೆ. ಅವರ ವಾತ್ಸಲ್ಯದ ಮಾತೃಛಾಯೆ ಎಂದೆಂದಿಗೂ ನಮ್ಮನ್ನು ಕಾಯಲಿ ಎಂದೇ ಆ ದೇವರಲ್ಲಿ ನಮ್ಮ ಪ್ರಾರ್ಥನೆ.

ನಾನು ಬೆಳೆದ ಪರಿಸರದಲ್ಲಿ ನನಗೆ ಆರೇಳು ವರ್ಷಕ್ಕೆ ಉಪನಯನ ಆಗಬೇಕಿತ್ತು. ಆದರೆ ಆ ಸಮಯದಲ್ಲಿ ನನ್ನ ಅನಾರೋಗ್ಯದಿಂದಾಗಿ ಅದು ಸಾಧ್ಯವಾಗಲಿಲ್ಲ. ನನಗೆ ನಿಯತವಾಗಿ ವೇದಪಾಠಗಳು ಮನೆಯಲ್ಲಿ ನಡೆಯುತ್ತಿದ್ದವು. ಶಾಲೆಗೂ ಸೇರಿದೆ. ಇಂಗ್ಲಿಷ್ ಭಾಷಾಭ್ಯಾಸವೂ ಆಯಿತು. ಆ ಶಿಕ್ಷಣದ ಕಡೆಗೆ ಮೊದಲು ನನ್ನ ಮನಸ್ಸು ವಾಲಿತಾದರೂ ತಂದೆಯವರು ಮಾತ್ರ, ''ಮೊದಲು ವೇದಾಧ್ಯಯನ, ಅನಂತರ ಮಿಕ್ಕ ವಿಷಯಗಳ ಅಭ್ಯಾಸ'' ಎಂದರು. ಅವರ ಮಾತನ್ನು ಮೀರುವ ಯೋಚನೆಯನ್ನು ನಾನು ಕನಸಿನಲ್ಲಿಯೂ ಮಾಡುತ್ತಿರಲಿಲ್ಲ.

ನಾಲ್ಕನೆಯ ತರಗತಿಗೆ ಬಂದಾಗ, ಒಂಬತ್ತನೆಯ ವಯಸ್ಸಿನಲ್ಲಿ ಶಾಸ್ತ್ರೋಕ್ತವಾಗಿ ನನಗೆ ಉಪನಯನವಾಯಿತು. ಪೂಜ್ಯರಾದ ನನ್ನ ತಂದೆ ನನಗೆ ಸಂಧ್ಯಾವಂದನೆಯನ್ನೂ, ಅಗ್ನಿಕಾರ್ಯವನ್ನೂ ಮಾಡಿಸುತ್ತಿದ್ದರು. ಗಾಯತ್ರೀ ಮಂತ್ರದ ಅರ್ಥವನ್ನೂ ಸ್ವರೂಪವನ್ನೂ ಹೇಳಿಕೊಡುತ್ತಿದ್ದರು. ''ತದೇಕಚಿತ್ತನಾಗಿ ಜಪ ಮಾಡು'' ಎನ್ನುತ್ತಿದ್ದರು. ಧ್ಯಾನ ಜಪ ಮಾಡುತ್ತಿದ್ದೆ. ''ಅಶ್ವತ್ಥ ಏನು ಕಾಣುತ್ತೇ?'' ''ಗಾಯತ್ರೀ!'' ''ಎಷ್ಟು ಮುಖ?'' ''ಐದು.'' ''ಯಾವ ಬಣ್ಣ?'' ''ಮುಕ್ತಾ, ವಿದ್ರುಮ....'' ಆಗ ನಾವೆಲ್ಲ ಮುಗ್ಧ ಹುಡುಗರು. ಆ ಮುಗ್ಧತೆಯಲ್ಲಿ ನಮ್ಮದೇ ಆದ ಕಲ್ಪನಾ ಪ್ರಪಂಚದಲ್ಲಿರುತ್ತಿದ್ದುದರಿಂದ ನಿಜವಾಗಿಯೂ ಕಾಣುತ್ತಿತ್ತು. ಈಗ ಕಾಣುವುದಿಲ್ಲ. ಮನಸ್ಸು ಏಕಾಗ್ರವಲ್ಲ. ಆಗ ಉದ್ದವಾದ ಸೊಂಪಾದ ಕೂದಲಿನ ಶಿಖೆ (ತಲೆಗೂದಲು) ನನ್ನದಾಗಿತ್ತು. ನಾನು ಅದನ್ನು ಹೆಮ್ಮೆಯಿಂದ ಕಟ್ಟಿಕೊಳ್ಳುತ್ತಿದ್ದೆ. ಉಪನಯನದ ಅನಂತರ ಶಾಲೆಯಲ್ಲಿ ಎಂದಿನಂತೆ ವಿದ್ಯಾಭ್ಯಾಸ ಮುಂದುವರೆಯಿತು.

ಮನೆಯಲ್ಲಿನ ವೇದಪಾಠ, ಸಂಸ್ಕೃತ ಕಲಿಕೆ ಒಂದು ಹಂತಕ್ಕೆ ಬಂದಾಗ, ನನಗೆ ಸುಮಾರು ಹನ್ನೊಂದನೇ ವರ್ಷ (ನಾನು ಆರನೆಯ ತರಗತಿಯಲ್ಲಿದ್ದೆ). ಆಗ ಮೊದಲ ಬಾರಿಗೆ ಸಂಸ್ಕೃತಪರೀಕ್ಷೆಗೆ ಕಟ್ಟಿದೆ. ಆ ಪರೀಕ್ಷೆ ಬರೆಯಲು ಶಿವಮೊಗ್ಗೆಗೆ ಹೋಗಬೇಕಿದ್ದಿತು. ಬೀರೂರು ರಾಮಕೃಷ್ಣ ಜೋಯಿಸರು ನಮ್ಮ ತಂದೆಯ ಸ್ನೇಹಿತರು. ಅವರ ಮಗ ಚಿದಂಬರ ಜೋಯಿಸರು ನಮ್ಮ ಸಂಸ್ಕೃತದ ಗುರುಗಳು. ನಾವು ಅವರನ್ನು 'ಚಿಕ್ಕಪ್ಪ' ಎಂದು ಕರೆಯುತ್ತಿದ್ದೆವು. ಅವರು ನನ್ನನ್ನೂ ನನ್ನ ಗೆಳೆಯ ನಾರಾಯಣನನ್ನೂ ಪರೀಕ್ಷೆ ಬರೆಯಲೆಂದು ಶಿವಮೊಗ್ಗಕ್ಕೆ

* ನಂಜಮ್ಮನವರ ಆ ಮಗುವೇ ಇಂದಿನ ನಮ್ಮ ಮತ್ತೂರು ಕೃಷ್ಣಮೂರ್ತಿ. ತನ್ನ ಪಾಲಿನ ಹಾಲನ್ನು ನನ್ನ ತಮ್ಮನಿಗೆ ದಾನ ಮಾಡಿದ್ದರಿಂದ ನನಗೂ ಕೃಷ್ಣಮೂರ್ತಿಗೂ ಈ ಪರಿಯ ಸ್ನೇಹವಾಗಿರಬಹುದೇ ಎಂಬುದು ನನ್ನ ಅನಿಸಿಕೆ!

ಕರೆದೊಯ್ಯಲು ಬಂದರು. ನಾವು ಶಿವಮೊಗ್ಗೆಗೆ ಹೊರಟಾಗ, ''ಹೋಟೆಲಿಗೆ ಹೋಗಬೇಡಿ. ಹೊರಗಡೆ ಏನೂ ತಿನ್ನಬೇಡಿ. ನೊಣಗಳು ಮುತ್ತಿರುತ್ತವೆ ಆ ಪದಾರ್ಥಗಳಿಗೆ. ಶುಚಿ-ಮಡಿ ಯಾವುದೂ ಇರುವುದಿಲ್ಲ. ಹಣ್ಣು ತೆಗೆದುಕೊಳ್ಳಿ'' ಎಂದಷ್ಟೇ ಹೇಳಿ ನಮ್ಮ ತಂದೆ ನಮ್ಮ ಕೈಗೆ ಒಂದು ರೂಪಾಯಿ ಕೊಟ್ಟು ಕಳುಹಿಸಿದರು.

ನನಗೆ ಆಗ ಇಬ್ಬರು ತಮ್ಮಂದಿರು ಇದ್ದರು. ಮತ್ತೊಂದು ಮಗುವಿಗೆ ಅಮ್ಮ ತಾಯಿಯಾಗಲಿದ್ದರು. ಅಮ್ಮನನ್ನು ಶಿವಮೊಗ್ಗದ ಆಸ್ಪತ್ರೆಗೆ ತಪಾಸಣೆಗಾಗಿ ಕರೆದುಕೊಂಡು ಹೋಗಬೇಕಿದ್ದಿತು. ಅಲ್ಲಿನ ಮೆಗಾನ್ ಆಸ್ಪತ್ರೆಯಲ್ಲಿ ಮಾತ್ರ ಲೇಡಿ ಡಾಕ್ಟರು ಇದ್ದರು. ಸಾಮಾನ್ಯವಾಗಿ ಹೆಂಗಸರೆಲ್ಲ, ಆ ಡಾಕ್ಟರ ಹತ್ತಿರವೇ ಹೋಗುತ್ತಿದ್ದುದು. ಅಮ್ಮ ಹೊರಟರು, ತಾವು ಅನಂತರ ಸೈಕಲಿನಲ್ಲಿ ಬರುವುದಾಗಿ ಹೇಳಿದ ಅಪ್ಪ, ಅಮ್ಮನ ಜತೆ ಹೊರಡಲು ನನಗೆ ಹೇಳಿದರು. ನಾನು-ಅಮ್ಮ ಇಬ್ಬರೂ ಶಿವಮೊಗ್ಗಕ್ಕೆ ಹೊರಟು ನದಿದಾಟಿ ಹೊಸಹಳ್ಳಿಗೆ ಬಂದು ಅಲ್ಲಿ ಬಸ್ಸು ಹತ್ತಿ ಹೋದೆವು.

ಅಂತೂ ಅಮ್ಮ ಪೂರ್ಣ ಗುಣವಾಗಿ ಮನೆಗೆ ಬಂದರು. ಮನೆಯಲ್ಲಿ ಆತಂಕದಿಂದ ದಿನಕಳೆದ ದೊಡ್ಡಮ್ಮನಿಗೂ, ನನ್ನ ತಮ್ಮಂದಿರಾದ ಸೀತಾರಾಮ, ಗೋಪಾಲ ಎಲ್ಲರಿಗೂ ಸಂತೋಷವಾಗಿತ್ತು. ಈ ಘಟನೆಯ ಅನಂತರ ಹುಟ್ಟಿದವರು ಚಂದ್ರೂ, ನಂದರು. ಮುಂದೆ ನಮ್ಮ ಸಂಸಾರದಲ್ಲಿ ಅಂತಹ ಏರಿಳಿತಗಳೇನೂ ಇಲ್ಲದೆ ಒಂದೆರಡು ವರ್ಷ ಉರುಳಿತು.

೩. ವಿದ್ಯೆಗಾಗಿ ಯಾತ್ರೆ

ನಾನು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ಆಗ ಹದಿಮೂರು ವರ್ಷಗಳು ನನಗೆ. ಇಂಗ್ಲಿಷ್ ಭಾಷಾ ಪರಿಚಯ ಚೆನ್ನಾಗಿಯೇ ಆಯಿತು. ಓದು ಮುಂದುವರೆಸಬೇಕೆನ್ನುವ ಮನಸ್ಸು ಇದ್ದಿತು. ಆದರೆ ತಂದೆಯವರು, ''ಆ ಓದನ್ನು ನೀನು ಮತ್ತೆ ಮುಂದುವರೆಸಬಹುದು. ಈಗ ಸಂಸ್ಕೃತ, ವೇದಪಾಠಗಳ ಕಡೆಗೆ ಗಮನ ಕೊಡು'' ಎಂದರು. ನನ್ನ ಮಾವ ಶ್ರೀ ಶ್ರೀನಿವಾಸ ಅವಧಾನಿಯವರು ನಮಗೆ ವೇದದ ಗುರುಗಳು. ಅವರು ಮೈಸೂರು ಸಂಸ್ಕೃತಪಾಠಶಾಲೆಯಲ್ಲಿ ಕಲಿತು ಬಂದಿದ್ದರು. ನಮ್ಮ ತಂದೆಗೆ ನಾನೂ ಅಲ್ಲಿಗೇ ಹೋಗಿ ವೇದಪಾಠವನ್ನು ಕ್ರಮವಾಗಿ ಕಲಿತು ಬರಬೇಕು ಎನ್ನುವ ಆಸೆ. ನನ್ನ ಶಾಲಾ ವಿದ್ಯಾಭ್ಯಾಸ ಎಲ್. ಎಸ್. ಗೆ ನಿಂತಿತು. ವೇದವನ್ನು ಕಲಿಯಲು ಮೈಸೂರಿಗೆ ಹೊರಟೆ. ನನ್ನ ಜತೆ ನನ್ನ ಗೆಳೆಯರು ಅನಂತ, ನಾರಾಯಣ ಮತ್ತು ಸೂರ್ಯನಾರಾಯಣ ಅವರೂ ಹೊರಟರು. ಅನಂತನ ತಂದೆ ಕೃಷ್ಣಶಾಸ್ತ್ರಿಗಳಿಗೆ ನಮ್ಮ ತಂದೆಯವರು ಸೋದರಮಾವನ ಮಗ. ಅವರು ನಮ್ಮನ್ನೆಲ್ಲ ಕರೆದೊಯ್ದು ಮೈಸೂರಿನಲ್ಲಿ ಬಿಟ್ಟು ಬರುವುದಾಗಿ ಹೇಳಿ ಜತೆಗೆ ಹೊರಟರು.

ಮನೆಯಲ್ಲಿ ಅಪ್ಪ, ಅಮ್ಮ, ದೊಡ್ಡಮ್ಮ, ತಮ್ಮಂದಿರು, ಸೋದರತ್ತೆಯರು ಎಲ್ಲರನ್ನೂ ಬಿಟ್ಟುಹೋಗಲು ನನಗೂ ಸ್ವಲ್ಪ ಬೇಜಾರೇ ಆಯಿತು. ಹೊಸಜಾಗ, ಹೊಸಜನ ಹೇಗಿದ್ದಾರೋ ಎನ್ನುವ ಆತಂಕ ಬೇರೆ. ಇಲ್ಲೇ ನಾವು ಕಲಿಕೆ ಮುಂದುವರೆಸ ಬಹುದಿತ್ತಾದರೂ ನಮ್ಮ ತಂದೆ, ''ಇಲ್ಲಿ ಕ್ರಮವಾಗಿ ಕಲಿಯಲು ಸಾಧ್ಯವಾಗದು. ಇದು ಏನೆಂದರೂ 'ಹಳ್ಳಿಯ ಪಾಠ' ಎನಿಸಿಕೊಳ್ಳುತ್ತದೆ. ಅಲ್ಲಿ ಕ್ರಮವಾಗಿ ಪಾಠ ಹೇಳುತ್ತಾರೆ. ಗುರುಮುಖೇನ ಕಲಿತ ಪಾಠವೇ ನಿಜವಾದ ಪಾಠ. ಇಲ್ಲಿ ನಾನೇ ಹೇಳಿಕೊಡುವುದರಿಂದ ಕಲಿಕೆಯಲ್ಲಿ ಬಿಗಿ ಇರದು. ಸಲಿಗೆ ಹೆಚ್ಚಾಗಿ ನೀನು ಸರಿಯಾಗಿ ಕಲಿಯದೇ ಹೋಗಬಹುದು. ಆದ್ದರಿಂದ ಅಲ್ಲಿಗೇ ಹೋಗಿ ಕಲಿತುಬರುವುದು ಸೂಕ್ತ'' ಎಂದುಬಿಟ್ಟರು. ಮೇಲ್ನೋಟಕ್ಕೆ ಹೀಗೆಂದರೂ ಒಳಗೊಳಗೇ ಅವರ ಮನಸ್ಸಿನಲ್ಲಿ ನಮ್ಮನ್ನು ಅಷ್ಟು ದೂರ ಕಳಿಸುವುದು ತುಂಬಾ ಕಷ್ಟವಾಗಿತ್ತು. ಅವರ ಕಣ್ಣು ತೇವವಾಗಿತ್ತು ಎಂದು ಅಮ್ಮನೂ ಹೇಳಿದರು. ವಿಧಿ ಇಲ್ಲದೆ ಕೃಷ್ಣಶಾಸ್ತ್ರಿಗಳ ಜತೆಗೆ ನಾವು ಹೊರಟುನಿಂತೆವು.

ಮೈಸೂರು ತಲುಪಿದೆವು. ನನಗೂ ಮೊದಲಿನಿಂದಲೂ ಮೈಸೂರು ನಗರ, ಚಾಮುಂಡೀ ಬೆಟ್ಟ, ಅರಮನೆ, ಎಲ್ಲವನ್ನೂ ನೋಡಿ ಸುತ್ತಿ ಬರಬೇಕು ಎನ್ನುವ ಆಸೆ. ಅದೇ ಮೊದಲ ಬಾರಿಗೆ ನಾವು ಶಿವಮೊಗ್ಗ ಬಿಟ್ಟು ದೊಡ್ಡದಾದ ನಗರವೊಂದಕ್ಕೆ ಬಂದಿದ್ದುದು, ನೋಡುತ್ತಿದ್ದುದು. ಏನೋ ಕುತೂಹಲ. ಆದರೂ ನಮಗೆ ಊರು ಸುತ್ತುವಷ್ಟು ಸಮಯವಿರಲಿಲ್ಲ. ಸಂಸ್ಕೃತ ಪಾಠಶಾಲೆಯಲ್ಲಿ ವಿಚಾರಿಸಿದಾಗ ಆರು ತಿಂಗಳವರೆಗೆ ಅಲ್ಲಿ ಊಟದ ಸೌಲಭ್ಯ ಕಲ್ಪಿಸುವುದು ಸಾಧ್ಯವಿಲ್ಲ ಎಂದು ತಿಳಿಯಿತು. ಹಾಗೂ ನಾವು ಓದಬೇಕೆಂದರೆ ವಾರಾನ್ನ ಮಾಡಿಕೊಂಡು ಓದಬಹುದು ಎಂದೂ ಹೇಳಿದರು. ಆದರೆ

ನಂಜನಗೂಡಿನಲ್ಲಿ ಊಟದ ಸೌಕರ್ಯವಿದೆ, ಉಳಿದುಕೊಳ್ಳಲೂ ಸೌಕರ್ಯವಿದೆ ಎಂದು ತಿಳಿಯಿತು. ಅಲ್ಲದೆ ಮೈಸೂರಿನ ಸಂಸ್ಕೃತ ಕಾಲೇಜಿನಲ್ಲಿ ಸುಮಾರು ಆರುನೂರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳಿದ್ದರು. ಅಲ್ಲಿ ಸಂಸ್ಕೃತ, ವೇದ, ಹಿಂದಿ ಇತ್ಯಾದಿಗಳನ್ನೆಲ್ಲ ಬೇರೆ ಬೇರೆಯಾಗಿ ಐಚ್ಛಿಕ ವಿಷಯಗಳಾಗಿ ಆರಿಸಿಕೊಂಡವರಿಗೆ ಹೇಳಿಕೊಡಲಾಗುತ್ತಿತ್ತು. ಅದು ನಗರಪ್ರದೇಶದಲ್ಲಿರುವಂಥದು. ಸ್ವಲ್ಪ ಸ್ವೇಚ್ಛಾವ್ಯವಹಾರ. ಹೋಟಲು, ಸಿನಿಮಾ ಎಲ್ಲಾ ಆಕರ್ಷಣೆ ಇರುವ ಸನ್ನಿವೇಶ. ನಮ್ಮನ್ನಷ್ಟೇ ಬಿಟ್ಟುಹೋದರೆ ಸಹವಾಸ, ಓದು, ಕಲಿಕೆ ಇತ್ಯಾದಿಗಳು ಹೇಗಿರುವುವೋ ? ಹಾದಿತಪ್ಪುವ ಸಾಧ್ಯತೆಯೂ ಹೆಚ್ಚು. ಯಾವುದರ ಮೇಲೂ ಹತೋಟಿ ಇರದಾಗುತ್ತದೆ. ಆದರೆ ನಂಜನಗೂಡಿನಲ್ಲಿ ಈ ಚಿಂತೆಗಳಿಗೆಲ್ಲ ಅವಕಾಶವಿಲ್ಲ. ಬರೀ ವೇದಪಾಠ ಮಾತ್ರ. ಸಣ್ಣಜಾಗ ಅದು. ಸಹವಾಸದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ. ಅಲ್ಲದೆ ಅಲ್ಲಿ ಪಾಠ ಬಹಳ ಬಿಗಿಯೂ ಆಗಿದ್ದು, ಭದ್ರತೆಯೂ ಹೆಚ್ಚು. ನಾವು ಇಳಿದುಕೊಳ್ಳಲಿಕ್ಕೆ ರೂಮು, ಊಟದ ವ್ಯವಸ್ಥೆ ಎಲ್ಲವೂ ಚೆನ್ನಾಗಿತ್ತು. ಆದ್ದರಿಂದ ಕೃಷ್ಣಶಾಸ್ತ್ರಿಗಳ ಆಲೋಚನೆಯಂತೆ ಅಲ್ಲಿಗೇ ಹೋಗುವುದು ಸೂಕ್ತ ಎಂದಾಯಿತು.

ನಮಗೆಲ್ಲ ಸುಂದರವಾದ ಮೈಸೂರು ನಗರ ಬಿಟ್ಟು ಹಳ್ಳಿಯ ಹಾಗಿರುವ ನಂಜನಗೂಡಿಗೆ ಹೋಗಬೇಕಲ್ಲಾ ಎನ್ನುವ ಬೇಜಾರು. ಬೇರೆ ದಾರಿ ಇರಲಿಲ್ಲ. ಕೃಷ್ಣಶಾಸ್ತ್ರಿಗಳ ಜತೆ ನಂಜನಗೂಡಿಗೆ ಹೋಗಿ ಅಲ್ಲಿನ ಶಂಕರಮಠಕ್ಕೆ ಸೇರಿದೆವು. ಅಂದು ನಂಜನಗೂಡಿನಲ್ಲಿ ಚಿಕ್ಕಜಾತ್ರೆಯ ಸಂದರ್ಭ. ನಾವು ಅಲ್ಲಿಗೆ ತಲುಪಿದ ದಿನ ದೇವಸ್ಥಾನದಲ್ಲಿ ಗಿರಿಜಾಕಲ್ಯಾಣ ನಡೆಯುತ್ತಿದ್ದಿತು. ಹೋದ ದಿನ ರಾತ್ರಿಯೇ ಪಾಠಶಾಲೆಯ ವಿದ್ಯಾರ್ಥಿಗಳು ಎನಿಸಿಕೊಂಡ ನಾವು ಉತ್ಸವಮೂರ್ತಿಯ ಹಿಂದೆ ಸ್ವಸ್ತಿ ಹೇಳುತ್ತಾ ಹೋಗಬೇಕಿತ್ತು. ಆ ದಿನ ಮಧ್ಯಾಹ್ನ ನಮಗೆ ಕಲಿಸುವ ಗುರುಗಳ ಪರಿಚಯವಾಗಿತ್ತು. ಅವರ ಹೆಸರು ಕೃಷ್ಣಸೋಮಯಾಜಿಗಳು. ಅವರು ಆ ರಾತ್ರಿ ದೇವಸ್ಥಾನದಲ್ಲಿ ನನ್ನನ್ನು, ''ನಿನಗೆ ರುದ್ರ ಆಗಿದೆಯೇ?'' ಎಂದರು. ಇದ್ದಕ್ಕಿದ್ದಂತೆ ಅವರು ಕೇಳಿದ ಪ್ರಶ್ನೆಗೆ ತಡವರಿಸಿದೆ. ನನಗೆ ಗುರುಮುಖೇನ ರುದ್ರಮಂತ್ರದ ಪಾಠ ಆಗಿರಲಿಲ್ಲ. ಮೂರು ದಿನಗಳು ಮಾತ್ರ ನಮ್ಮೂರಿನ ಕೇಶವಮೂರ್ತಿ ಅವಧಾನಿಗಳ ಬಳಿ ಹೇಳಿಸಿಕೊಂಡಿದ್ದೆ. 'ಚಮೆ'ಯ ಪಾಠವೂ ಆಗಿರಲಿಲ್ಲ. ನಮ್ಮ ಊರು ವೈದಿಕರ ಅಗ್ರಹಾರವೇ ಆಗಿತ್ತಾದ್ದರಿಂದ ಅನೇಕ ಸಾರಿ 'ರುದ್ರ' 'ಚಮೆ' ಗಳನ್ನು ಕೇಳಿದ್ದೆ, ಅಷ್ಟೇ... ''ಗುರುಮುಖೇನ ಮೂರು ದಿನ ಮಾತ್ರ ಪಾಠ ಆಗಿರುವುದು. ಇನ್ನೂ ಹದಿನೈದು ದಿನಗಳ ಪಾಠ ಆಗಬೇಕಾಗಿದೆ'' ಎಂದೆ, ಗುರುಗಳನ್ನು ನೋಡುತ್ತ. ''ಈಗ ರುದ್ರದ ಸ್ವಸ್ತಿ ಹೇಳುತ್ತಾರೆ. ನೀನು ಜತೆಗೆ ಹೇಳುತ್ತೀಯಾ?'' ಎಂದರು. ''ಒಮ್ಮೆ ಪ್ರಯತ್ನ ಮಾಡುತ್ತೇನೆ'' ಎಂದೆ. ಒಟ್ಟಾರೆ ಸುಮಾರು ಇಪ್ಪತ್ತು ಜನ ವಿದ್ಯಾರ್ಥಿಗಳು ಸೇರಿದ್ದರು. ಹತ್ತು-ಹತ್ತು ಮಂದಿ ಒಂದೊಂದು ಕಡೆ. ಅವರು ಸ್ವಸ್ತಿ ಹೇಳಲು ಪ್ರಾರಂಭಿಸಿದ್ದೇ ತಡ ನಾನೂ ಅವರ ಜತೆಜತೆಗೇ ಹೇಳುತ್ತಾ ನಡೆದೆ. ಗುರುಗಳು ನನ್ನನ್ನೇ ಗಮನಿಸುತ್ತಿದ್ದರು. ಅದಾದನಂತರ 'ಚಮೆ' ಯನ್ನು ಹೇಳಿದರು. ನಾನೂ ಚಮೆಯನ್ನು ಅವರ ಜತೆ ಹೇಳಿದೆ. ಚಮೆಯಲ್ಲಿ ಸಂಧಿ, ಸ್ವರಗಳು, ಪದಗಳು ಅರ್ಥಗರ್ಭಿತ; ಹಾಗೆಯೇ ಕಷ್ಟವೂ ಹೌದು. ಆದರೂ ತಪ್ಪಿಲ್ಲದೇ ಆ ರಾತ್ರಿ ಚಮೆಯನ್ನು ಹೇಳಿದೆ. ಗುರುಗಳಿಗೆ ಆಶ್ಚರ್ಯ! ಆ ವಿದ್ಯಾರ್ಥಿಗಳಿಗೆ ಅವರು ಚಮೆ-ಪದ-ಕ್ರಮ ಎಲ್ಲವನ್ನೂ ಅಭ್ಯಾಸ ಮಾಡಿಸಿದ್ದರು. ಆದರೂ ಅವರುಗಳು ಹೇಳುವಾಗ ಅಲ್ಲಲ್ಲಿ ತಪ್ಪುತ್ತಿದ್ದರು. ನಾನು 'ಗುರುಮುಖೇನ ಪಾಠವೇ ಆಗಿಲ್ಲ' ಎಂದವನು ತಪ್ಪಿಲ್ಲದೇ ಹೇಳುತ್ತಾ ಬರುತ್ತಿದ್ದೆ. ಅಂತೂ ಆ ದಿನ ರಾತ್ರಿಯೇ ಗುರುಗಳಿಗೆ ನಾನು ಪ್ರೀತಿಯ ಶಿಷ್ಯನಾಗಿ ಹೋದೆ. ಅವರ ಕೃಪಾಕಟಾಕ್ಷ ಪಡೆದಿದ್ದೆ.

ನಂಜನಗೂಡಿನಲ್ಲಿ ನಮ್ಮ ವೇದಪಾಠ ಪ್ರಾರಂಭವಾಯಿತು. ನಮ್ಮೂರಿನಿಂದ ಹೋಗಿದ್ದ ನಾವು ನಾಲ್ಕು ಜನ ಹುಡುಗರಿಗೆ ಒಂದು ರೂಮನ್ನು ಕೊಟ್ಟರು. ಅಲ್ಲಿ ನಮ್ಮನ್ನು ಸರಿಯಾಗಿ ನೆಲೆಗೊಳಿಸುವ ಜವಾಬ್ದಾರಿ ಕೃಷ್ಣಶಾಸ್ತ್ರಿಗಳಿಗೆ ಸೇರಿತ್ತು. ಮಲೆನಾಡ ಕಡೆಯ ಜನ ನಾವು. ಕಾಫಿ-ತಿಂಡಿ ಇಲ್ಲದೆ ದಿನ ಕಳೆಯುವವರಲ್ಲ. ಜತೆಗೆ ವಯಸ್ಸಿಗೆ ತಕ್ಕಂತೆ ಹಸಿವೂ ಬೇರೆ. ಅಲ್ಲಿ ಪಾಠಶಾಲೆಯ ನಿಯಮದಂತೆ ಮಧ್ಯಾಹ್ನ ಹಾಗೂ ರಾತ್ರಿಯ ಎರಡು ಹೊತ್ತಿನ ಊಟ ಮಾತ್ರ.

ಕೃಷ್ಣಶಾಸ್ತ್ರಿಗಳು ನಮ್ಮ ಬೆಳಗಿನ ಹಸಿವಿಗೆ ಏನಾದರೂ ಒಂದು ದಾರಿ ಮಾಡಲೇಬೇಕಿದ್ದಿತು. ಒಂದು ಸ್ಟೌ ಖರೀದಿಸಿ ಕೆಲವು ಪಾತ್ರೆಗಳನ್ನು ತೆಗೆದುಕೊಟ್ಟರು. ಸೀಮೆಎಣ್ಣೆಯನ್ನು ಖರೀದಿಸಿ ಸಾಮಾನುಗಳನ್ನು ತಂದುಕೊಳ್ಳಲೆಂದು ಹತ್ತಿರದ ಅಂಗಡಿಯೊಂದನ್ನು ಗೊತ್ತು ಮಾಡಿಕೊಟ್ಟರು. ಮಾರನೆಯ ಬೆಳಗ್ಗೆ ಇಷ್ಟು ಕೆಲಸಗಳಾದ ಮೇಲೆ ನಮ್ಮನ್ನು ದೇವಸ್ಥಾನಕ್ಕೆ ಕರೆದೊಯ್ದರು. ನಂಜನಗೂಡಿನ ದೊಡ್ಡ ದೇವಸ್ಥಾನವನ್ನು ಪೂರ್ತಿಯಾಗಿ ನಾವೆಲ್ಲರೂ ನೋಡಿದುದು ಆ ದಿನವೇ. ದೊಡ್ಡದಾದ ಪ್ರಾಕಾರ, ನಂದಿ, ಪ್ರಾಕಾರದಲ್ಲೆಲ್ಲ ಶಿವನ ಅನೇಕ ಅವತಾರದ ಮೂರ್ತಿಗಳ ಪುಟ್ಟ ಪುಟ್ಟ ಗುಡಿಗಳು. ನಂಜುಂಡೇಶ್ವರನಿಗೆ ನಮಿಸಿ ನಾವು ಈಚೆ ಬರುತ್ತಿದ್ದಾಗ ಒಂದು ದೊಡ್ಡ ತಟ್ಟೆಯಲ್ಲಿ ಅನ್ನದ ಉಂಡೆಗಳನ್ನು ತಂದರು ಪುರೋಹಿತರು. ಆ ಅನ್ನದ ಉಂಡೆಗಳನ್ನು ಪ್ರತಿಯೊಂದು ಪುಟ್ಟ ಗುಡಿಯ ಮೂರ್ತಿಯ ಮುಂದೆಯೂ ಇಟ್ಟು, ನೀರು ಚುಮುಕಿಸಿ ತುಳಸಿ ಹಾಕಿ ನೈವೇದ್ಯ ಮಾಡಿದರು. ಒಂದೊಂದು

ಅನ್ನದ ಉಂಡೆಯೂ ಚಕ್ಕೋತದ ಕಾಯಿನಷ್ಟು ದೊಡ್ಡದು. ಇದನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದ ಕೃಷ್ಣಶಾಸ್ತ್ರಿಗಳು ಆ ಅನ್ನದ ಉಂಡೆಗಳ ತಟ್ಟೆಯನ್ನು ಹೊತ್ತು ತರುತ್ತಿದ್ದವರನ್ನು ನಿಲ್ಲಿಸಿ, ''ಈ ಉಂಡೆಗಳನ್ನೆಲ್ಲ ನೈವೇದ್ಯ ಮಾಡಿ ಆಮೇಲೆ ಏನು ಮಾಡುತ್ತೀರಿ?'' ಎಂದು ಕೇಳಿದರು. ಅದಕ್ಕೆ ಅವರು, ''ಇವುಗಳನ್ನು, ಇಲ್ಲಿ ಪಾರಾಯಣ ಮಾಡುವವರಿಗೆ ಹತ್ತು, ಸಹಸ್ರನಾಮದವರಿಗೆ ಹತ್ತು, ಮುಖ್ಯ ಪುರೋಹಿತರಿಗೆ ಇಪ್ಪತ್ತು, ದೇವೀ ಪೂಜಾರಿಗೆ ಹದಿನೈದು ಹೀಗೆ ಹಂಚಿಬಿಡುತ್ತೇವೆ'' ಎಂದರು. ''ಮಿಕ್ಕರೆ ಬಡಬಗ್ಗರಿಗೆ ಮಾರಿಬಿಡುತ್ತೇವೆ. ಶಿವಕೂಟದಲ್ಲಿ ಊಟಹಾಕುತ್ತಾರೆ. ಅಲ್ಲಿ ಒಂದು ಆಣೆಗೆ ಒಂದು ಉಂಡೆಯಂತೆ ಕೊಟ್ಟು ಬಿಡುತ್ತೇವೆ'' ಎಂದೂ ಸೇರಿಸಿದರು. ಒಂದೊಂದು ಅನ್ನದ ಉಂಡೆಯಲ್ಲಿ ನಾವು ನಾಲ್ವರೂ ಮಧ್ಯಾಹ್ನ-ರಾತ್ರಿ ಎರಡೂ ಹೊತ್ತು ಊಟ ಮಾಡಬಹುದಿತ್ತು. ಅಷ್ಟು ದೊಡ್ಡದಿತ್ತು ಅದು! ನಾವು ಆಶ್ಚರ್ಯದಿಂದ ಅವರು ಹೇಳುವುದನ್ನೆಲ್ಲ ಕೇಳಿಕೊಂಡು ನಮ್ಮ ರೂಮಿಗೆ ವಾಪಸಾದೆವು. ಕೃಷ್ಣಶಾಸ್ತ್ರಿಗಳು ಆ ಮಧ್ಯಾಹ್ನ ಅಕ್ಕಿತರಿ, ಅಕ್ಕಿಹಿಟ್ಟು, ಅವಲಕ್ಕಿ, ಕಾಫಿಪುಡಿ, ಸಕ್ಕರೆ ಇತ್ಯಾದಿ ಸಾಮಾನುಗಳನ್ನು ತಂದಿಟ್ಟು, ''ಅನಂತು....'' ಎಂದರು. 'ಅನಂತು' ಅವರ ಮಗ. ನಾವು ನಾಲ್ಕೂ ಜನ 'ಏನು' ಎನ್ನುವಂತೆ ಅವರತ್ತ ನೋಡಿದೆವು. ''ಊರಿನಿಂದ ಗಟ್ಟಿ ಚಟ್ನಿ, ಚಟ್ನಿಪುಡಿ ತಂದಿದ್ದು ಇದೆ. ತುಂಬ ಹಸಿವಾದರೆ ದೇವಸ್ಥಾನದಲ್ಲಿ ಕೊಡುತ್ತಾರಲ್ಲ ಆ ಪಿಂಡ.... ಅದನ್ನೇ ಒಂದಾಣೆ ಕೊಟ್ಟು ತೆಗೆದುಕೊಳ್ಳಿ, ಒಂದರಲ್ಲೇ ನಿಮ್ಮ ನಾಲ್ಕೂ ಜನರ ಊಟವಾಗುತ್ತದೆ'' ಎಂದರು! ಅವರ ಬಾಯಲ್ಲಿ 'ಪಿಂಡ' ಎನ್ನುವ ಮಾತು ಕೇಳಿ ನಮಗೆಲ್ಲ ಆಶ್ಚರ್ಯ; ಜತೆಗೆ ನಗುವೂ ಬಂದಿತು. 'ಸರಿ' ಎನ್ನುವಂತೆ ತಲೆಯಾಡಿಸಿದೆವು.

ಆ ಕಾಲದಲ್ಲಿ ರೇಷನ್ನಿಗೆ ತುಟ್ಟಿ. ಸೀಮೆಎಣ್ಣೆ ಖರೀದಿಸಬೇಕಿದ್ದರೆ ಅದಕ್ಕೆ ಸರ್ಕಾರದ ಅಪ್ಪಣೆ ಬೇಕಿದ್ದಿತು. ಅಕ್ಕಿ ಸುಲಭವಾಗಿ ಸಿಗುತ್ತಿರಲಿಲ್ಲ. ಸಿಕ್ಕಿದರೂ ಕೆಂಪಾದ ಅಕ್ಕಿ ಅದು. ದಪ್ಪ; ತಿನ್ನಲು ರುಚಿ ಇಲ್ಲದ್ದು. ಅದರಿಂದ ಹೆಚ್ಚಾಗಿ ಅಕ್ಕಿಯನ್ನೂ ತೆಗೆದುಕೊಟ್ಟು, ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟು ವಾಪಸು ಹೊರಟು ನಿಂತ ಕೃಷ್ಣಶಾಸ್ತ್ರಿಗಳು ನನ್ನನ್ನು ಕರೆದು, ''ಅಶ್ವತ್ಥ, ಎಲ್ಲರಿಗಿಂತ ನಿನ್ನ ಜವಾಬ್ದಾರಿ ಹೆಚ್ಚು ನನಗೆ. ಇಲ್ಲಿ ಹೊಳೆಯನ್ನು ನಂಬುವಂತಿಲ್ಲ. ಭಾರೀ ಪ್ರವಾಹದ ಹೊಳೆ ಕಪಿಲಾ. ನಿನಗೆ ಚೆನ್ನಾಗಿ ಈಜು ಬರುತ್ತದೆ, ನನಗೆ ಗೊತ್ತು. ಆದರೂ ನೀನು ಮಾತ್ರ ಹೊಳೆಯಲ್ಲಿ ಈಜಲು ಹೋಗಕೂಡದು. 'ಹೋಗುವುದಿಲ್ಲ' ಎಂದು ನನಗೆ ಮಾತು ಕೊಡು'' ಎಂದರು. ತಮ್ಮ ಮಗನೇ ಅಲ್ಲಿದ್ದರೂ ಅವನಿಗೆ ಏನೂ ಹೇಳದೆ ನನ್ನ ಬಗ್ಗೆ ಕಾಳಜಿ ವಹಿಸಿದ ಅವರ ಬಗ್ಗೆ ನನ್ನ ಗೌರವ ಹೆಚ್ಚಿತು. ನಮ್ಮ ತಂದೆಗೆ ಅವರು ಮಾತುಕೊಟ್ಟು ಬಂದಿದ್ದರು, 'ನಿನ್ನ ಮಗನಿಗೆ ವಿದ್ಯೆ ಹೇಳಿಸಿ ವಿದ್ಯಾವಂತನನ್ನಾಗಿ ಮಾಡಿ ಕಳುಹಿಸುತ್ತೇನೆ' ಎಂದು. ಅದನ್ನು ಅವರೂ ಉಳಿಸಿಕೊಳ್ಳಬೇಕಿತ್ತು. ಅಲ್ಲದೆ ನನ್ನ ಬಗೆಗಿನ ಚಿಂತೆ ಅವರಿಗೆ ಹೆಚ್ಚು ಸಹಜವೇ. ಕಾರಣ ಅವರೇ ನಿಂತು ನಮ್ಮ ಅಮ್ಮನಿಗೆ ಮದುವೆ ಮಾಡಿಸಿದ್ದರು. ಅನಂತನಿಗೆ ಈಜು ಬರುತ್ತಿರಲಿಲ್ಲ. ಆದ್ದರಿಂದ ಅವನು ನೀರಿಗೆ ಇಳಿಯಲಾರ. ನಾನೋ ಘಟಿಂಗ. ಒಳ್ಳೆಯ ಈಜುಗಾರ. ಮೇಲಾಗಿ ಸ್ವಲ್ಪ ಸಾಹಸ ಮತ್ತು ಚೇಷ್ಟೆಯ ಪ್ರವೃತ್ತಿಯವನು. ಅದಕ್ಕೇ ಅವರು ನನಗೆ ಹಾಗೆ ಕೇಳಿದ್ದರು. ನಾನು ತುಟಿಪಿಟಕ್ಕನ್ನದೆ ಅವರಿಗೆ ಮಾತುಕೊಟ್ಟೆ! ನೂರೈವತ್ತು ಮೈಲುಗಳ ದೂರದಿಂದ ಬಂದಿದ್ದೇವೆ. ಜನ-ಮನ ತಿಳಿದಿಲ್ಲ. ಈಗ ಜತೆಗಿದ್ದ ದೊಡ್ಡವರೂ ಊರಿಗೆ ಹೊರಟುನಿಂತಿದ್ದಾರೆ. ನಮಗೆಲ್ಲ ಅಳು ಬಂದಂತಾಗಿತ್ತು.

ಅವರನ್ನು ರೈಲು ಹತ್ತಿಸಿ ಬರಲು ನಾವೆಲ್ಲರೂ ರೈಲ್ವೆ ಸ್ಟೇಷನ್ನಿಗೆ ಹೋದೆವು. ಅವರ ಜತೆಗೇ ರೈಲುಹತ್ತಿ ಕುಳಿತ ನಮ್ಮನ್ನು, ಅವರು ಸ್ವಲ್ಪ ಹೊತ್ತಾದ ಮೇಲೆ ಸ್ವಲ್ಪ ಕಟುವಾಗಿ, ''ನೀವಿನ್ನು ಹೊರಡಿ. ನಾನು ಹೋಗುತ್ತೇನೆ'' ಎಂದರು. ಅವರ ಕಟುವಾದ ಧ್ವನಿಗೆ ಬೆದರಿ ನಾವು ಇಳಿದೆವು. ರೈಲ್ವೆ ಸ್ಟೇಷನ್ನಿನಲ್ಲಿದ್ದ ದಪ್ಪದಪ್ಪನಾದ ಕಂಬಗಳ ಮರೆಯಲ್ಲಿ ಅಡಗಿ ಕುಳಿತ ನಾನು ಹಾಗೂ ಅನಂತು ರೈಲಿನೊಳಗೆ ಕುಳಿತಿದ್ದ ಅವರನ್ನೇ ಬಗ್ಗಿ ಬಗ್ಗಿ ನೋಡುತ್ತಿದ್ದೆವು. ಏತಕ್ಕೆಂದೋ ಇತ್ತ ಹೊರಳಿದ ಅವರ ಕಣ್ಣಿಗೆ, ಅನಂತು ಬೀಳದೆ, ನಾನು ಸಿಕ್ಕಿಕೊಂಡೆ. ಇದ್ದಕ್ಕಿದ್ದಂತೆ ಎದ್ದು ದಡದಡನೆ ರೈಲು ಇಳಿದು ಬಂದ ಅವರನ್ನು ಕಂಡು, ಅನಂತು ಓಡಿ ಬಂದು 'ಅಪ್ಪಾ' ಎಂದು ಅಪ್ಪಿಕೊಂಡ. ಅವರಾದರೋ ನನ್ನ ಹತ್ತಿರ ಬಂದವರೇ ''ಮಾರ್ಕಂಡೂ''... ಎಂದು ಬಿಗಿಯಾಗಿ ನನ್ನನ್ನು ಅಪ್ಪಿಕೊಂಡು ಕಣ್ಣೀರು ಹಾಕಿದರು. ಕೃಷ್ಣಶಾಸ್ತ್ರಿಗಳ ಆ ವಾತ್ಸಲ್ಯ, ಪ್ರೇಮ ನಾನು ಜೀವನದಲ್ಲಿ ಎಂದೂ ಮರೆಯುವಂತಿಲ್ಲ.... ಆ ಘಟನೆ ಇನ್ನೂ ನಿನ್ನೆ ನಡೆದಂತೆ, ನನ್ನ ಮನಸ್ಸಿನಲ್ಲಿ ಹಸಿರಾಗಿ ನಿಂತಿದೆ! ''ಹೆತ್ತಮಕ್ಕಳು ನಿಲಲಿ, ಭಕ್ತರನಿತ್ತ ಕರೆ'' ಎಂಬ ಕುಮಾರವ್ಯಾಸನ ಕೃಷ್ಣೋಕ್ತಿ ನೆನಪಾಯಿತು.

ಊರು ತಲುಪಿದ ಕೃಷ್ಣಶಾಸ್ತ್ರಿಗಳು ನಮ್ಮ ತಂದೆ-ತಾಯಿಯರಿಗೆ ಎಲ್ಲವನ್ನೂ ವಿಶದವಾಗಿ ಹೇಳಿ, ಅಲ್ಲಿ ಸುಮಾರು ಇಪ್ಪತ್ತು ಜನ ಅಡಿಕೆ ಸುಲಿಯುತ್ತಾ ಕುಳಿತಿದ್ದವರ ಎದುರಿಗೇ, ''ಮಾರ್ಕಂಡು ಸ್ವಲ್ಪ ಪುಂಡ. ಆ ಹೊಳೆಯಲ್ಲಿ ಎಲ್ಲಿ ಈಜಲು ಹೋಗುತ್ತಾನೋ ಎಂದು ಹೆದರಿ, ಅವನ ಕೈಲಿ ಭಾಷೆ ತೆಗೆದುಕೊಂಡು ಬಂದೆ, 'ಈಜಲು ಹೋಗಕೂಡದು' ಅಂತ'' ಎಂದರಂತೆ. ತಂದೆಗೆ ಅವರ ಮಾತು ಕೇಳಿ ತುಂಬ ತೃಪ್ತಿಯಾಗಿತ್ತು.

೪. ಅಧ್ಯಯನ

ಹೀಗೆ ನಾವು ನಾಲ್ವರು ಹುಡುಗರ ಜೀವನ ನಂಜನಗೂಡಿನಲ್ಲಿ ಪ್ರಾರಂಭವಾಯಿತು. ನಮ್ಮ ರೂಮಿಗೆ 'ಸಂಕೇತಿ ರೂಮು' ಎಂದೇ ಹೆಸರಿಟ್ಟಿದ್ದರು. ನಾವು ಎಲ್ಲರೂ ಸೇರಿ ಸುಮಾರು ಹದಿನಾರು ಮಂದಿ ಹುಡುಗರಿದ್ದೆವು. ಸಾಗರ, ಮೈಸೂರು, ನಂಜನಗೂಡಿನ ಕಡೆಯಿಂದ ಬಂದ ಹುಡುಗರೂ ಇದ್ದರು. ನಾಲ್ಕು ಜನ ವಿದ್ಯಾರ್ಥಿಗಳಿಗೆ ಒಂದು ರೂಮು. ಎಲ್ಲರಿಗೂ ಒಂದೇ ಹೊತ್ತಿಗೆ ಒಂದೇ ಅಡುಗೆ ಮನೆಯಲ್ಲಿ ಒಟ್ಟಿಗೆ ಊಟ. ತಿಂಡಿ-ಕಾಫಿ ಇರಲಿಲ್ಲ. ಬೆಳಗ್ಗೆ ಐದು ಗಂಟೆಗೇ ಎದ್ದು ಹೊಳೆಗೆ ಹೋಗಿ ಸ್ನಾನಮಾಡಿ, ಆಹ್ನಿಕಗಳನ್ನು ಮುಗಿಸಿ ಪಾಠಶಾಲೆಗೆ ಹೋಗುತ್ತಿದ್ದೆವು. ಕೃಷ್ಣ ಸೋಮಯಾಜಿಗಳು ವೇದದ ಬ್ರಾಹ್ಮಣಭಾಗದ ಗುರುಗಳು. ನಾರಾಯಣಶಾಸ್ತ್ರಿಗಳು ಸಂಸ್ಕೃತದ ಗುರುಗಳು, ಶ್ರೀಕಂಠ ಘನಪಾಠಿಗಳು ಸಂಹಿತೆಯ ಗುರುಗಳು. ಕೃಷ್ಣ ಸೋಮಯಾಜಿಗಳಿಗೆ ದೇವಸ್ಥಾನದಲ್ಲಿ ಮೊದಲು ನಾನು ರುದ್ರ-ಚಮೆ ಹೇಳಿದಂದಿನಿಂದಲೂ ನನ್ನಲ್ಲಿ ಏನೋ ಅಭಿಮಾನ, ತುಂಬಾ ಪ್ರೀತಿ. ಯಜುರ್ವೇದ ಕಲಿಕೆಯಲ್ಲಿ ಎಂಬತ್ತೆರಡು ಪ್ರಶ್ನೆಗಳಿವೆ. ಒಂದು ಪ್ರಶ್ನೆ ಕಲಿಯಲು ಸುಮಾರು ದಿನಂಪ್ರತಿ ಎರಡು ಗಂಟೆಗಳ ಕಾಲಬೇಕು. ಹದಿನೈದು ದಿನ ಗುರುಗಳೂ ಜತೆಯಲ್ಲಿ ಹೇಳುತ್ತಿದ್ದರು. ವಿದ್ಯಾರ್ಥಿಗಳ ಕಲಿಕೆ ಹಿಡಿತಕ್ಕೆ ಬಂದಿದೆ ಎನಿಸಿದ ಅನಂತರ, ಸುಮಾರು ಮುಂದಿನ ಹದಿನೈದು ದಿನಗಳವರೆಗೆ ನಾವು ಅದನ್ನು ಹತ್ತು ಆವರ್ತಿ ಹೇಳಿಕೊಂಡು ಹೇಳಿಕೊಂಡು ಅಭ್ಯಾಸ ಮಾಡಬೇಕು. ಇದು ಹೇಳಿಕೊಡುವ ಕ್ರಮ. ಇಲ್ಲಿಗೆ ಒಂದು ಪ್ರಶ್ನೆ ಬಂದಂತೆ ಆಯಿತು. ಹೀಗೆ ಎಂಬತ್ತೆರಡು ಮುಗಿಯಬೇಕು. ಇಲ್ಲಿಗೆ ಮೂಲ ಅಧ್ಯಯನ ಆಯಿತು. ಅನಂತರ ಪದಪಾಠ. ಆಮೇಲೆ ಕ್ರಮ, ಘನ, ಭಾಷ್ಯಪಾಠ ಇತ್ಯಾದಿ.

ನಮ್ಮ ಗುರುಗಳಿಗೆ ಬಂಧುಗಳು ತುಂಬಾ ಇದ್ದುದರಿಂದ ಅವರಿಗೆ ಆಗಾಗ ವೃದ್ಧಿ, ಆಶೌಚ ಬರುವುದಿತ್ತು. ಹತ್ತಿರದ ಬಂಧುಗಳು ಯಾರಿಗಾದರೂ ಮಗುವಾದರೆ, ಅಥವಾ ಸಾವು ಸಂಭವಿಸಿದರೆ ಅವರು ಆಗ ಪಾಠ ಹೇಳುವ ಹಾಗಿರಲಿಲ್ಲ. ನಮ್ಮ ತರಗತಿಯಲ್ಲಿ ನಾವು ಎಂಟು ಜನ ಇದ್ದೆವು. ಆಗ ಅವರು, ''ಮಾರ್ಕಂಡೇಯ, ನಾನು ಇಲ್ಲೇ ಕುಳಿತಿರುತ್ತೇನೆ. ನೀನು ಎಲ್ಲರಿಗೂ ಹೇಳಿಕೊಡು. ತಪ್ಪಾದರೆ ತಿದ್ದುತ್ತೇನೆ'' ಎನ್ನುತ್ತಿದ್ದರು. ಸಂಸ್ಕೃತದಲ್ಲಿ ದಪ್ಪ ಅಕ್ಷರಗಳಲ್ಲಿದ್ದ ಪಠ್ಯಪುಸ್ತಕವನ್ನು ನನಗೆ ಕೊಡುತ್ತಿದ್ದರು. ನನಗೆ ಸಂಸ್ಕೃತ ಅಷ್ಟು ಚೆನ್ನಾಗಿ ಬರದಿದ್ದರೂ, ಅವರು ಪ್ರೋತ್ಸಾಹಿಸು ವುದನ್ನು ಕೇಳಿ ಹೇಳಿಕೊಡುತ್ತಿದ್ದೆ. ಸುಮಾರು ಎರಡು ಗಂಟೆ ಹೇಳಿಕೊಟ್ಟರೆ ಎರಡು-ಮೂರು ತಪ್ಪುಗಳು ಮಾತ್ರ ಅಲ್ಲಿರುತ್ತಿದ್ದವು. ತಪ್ಪಾದಾಗ ಅವರು ''ಹ್ಞೂಂ...'' ಎಂದು ರಾಗ ಎಳೆದು ಅದರ ಸ್ವರವನ್ನು ಹಾಗೆಯೇ (ಸಾಹಿತ್ಯವನ್ನು ಹೇಳದೆ) ಹೇಳಿಕೊಡುತ್ತಿದ್ದರು. ಇದು ಅನೇಕ ಸಾರಿ ಆಗಿತ್ತು. ಒಮ್ಮೆ ನನ್ನ ಗೆಳೆಯ, ಸಹಪಾಠಿ, ''ಯಾವಾಗಲೂ ಗುರುಗಳು ಅಶ್ವತ್ಥನಿಗೇ ಹೇಳುತ್ತಾರೆ. ನಮಗೂ ಹೇಳಿದರೆ ನಾವೂ ಹೇಳಿಕೊಡಬಹುದು'' ಎಂದು ಇತರ ಹುಡುಗರ ಜತೆ ಹೇಳಿದನೆಂದು ನನಗೆ ತಿಳಿಯಿತು. ಅವನೇನೋ ಪಾಠವನ್ನು ಗಟ್ಟಿಮಾಡುವುದರಲ್ಲಿ ಅಗ್ರಗಣ್ಯ. ಯಾವುದೇ ಎಷ್ಟೇ ದೊಡ್ಡ ಪಾಠವಿದ್ದರೂ ಬಾಯಿಪಾಠ ಮಾಡಿಕೊಂಡಿರುತ್ತಿದ್ದ. ನಾನು ಹಾಗೆ ಕುಳಿತು ಗಟ್ಟಿಮಾಡದಿದ್ದರೂ, ಒಮ್ಮೆ ಮನನವಾದ ಪಾಠವನ್ನು ಎಂದೂ ಮರೆಯುತ್ತಿರಲಿಲ್ಲ. ''ನಿಜ, ಅವನೂ ನನ್ನ ಹಾಗೆಯೇ ತಾನೆ? ಈ ಸಾರಿ ಅವನಿಗೇ ಹೇಳಿದರಾಯಿತು'' ಎಂದುಕೊಂಡು ಸುಮ್ಮನಾದೆ. ನಿರೀಕ್ಷಿಸಿದಂತೆ ಗುರುಗಳಿಗೆ ತಿಂಗಳ ಒಳಗಾಗಿಯೇ 'ವೃದ್ಧಿ' ಬಂದಿತು. ಗುರುಗಳು ನನಗೆ ಪಾಠ ಹೇಳಿಕೊಡಲು ಹೇಳಿದಾಗ ನಾನು ಧೈರ್ಯವಹಿಸಿ, ''ಗುರುಗಳೇ, ಪ್ರತಿಸಾರಿಯೂ ನಾನೇ ಏಕೆ? ಈ ಸಾರಿ ಗೆಳೆಯನೇ ಹೇಳಿಕೊಡುತ್ತಾನಂತೆ. ಅವನೇ ಹೇಳಿಕೊಡಲಿ'' ಎಂದೆ. ಮಿತ್ರನಿಗೆ ನಾನು ಹೇಳಿದ ಮಾತು ಅನಿರೀಕ್ಷಿತವಾದರೂ, ಒಳಗೇ ಸಮಾಧಾನವಂತೂ ಆಗಿದ್ದಿತು. ಗುರುಗಳು ನನ್ನ ಮುಖ ನೋಡಿ, ''ಮಾರ್ಕಂಡೇಯ, ಇದು ಎಲ್ಲರಿಂದ ಆಗುವ ಕೆಲಸವಲ್ಲ, ನೋಡೋಣ. ಅವನೂ ಗಟ್ಟಿಗ. ಅವನು ಹೇಳಿಕೊಟ್ಟರೂ ಸರಿ.... ಆಗಬಹುದು'' ಎಂದರು. ಆತ ಆ ದಿನ ಉತ್ಸಾಹದಿಂದ ತಾನು ಪುಸ್ತಕ ತೆಗೆದುಕೊಂಡು ಹೇಳಿಕೊಡಲು ಪ್ರಾರಂಭಿಸಿದ. ಹೇಳಿಕೊಡುತ್ತಿದ್ದಂತೆ ಐದೇ ನಿಮಿಷಗಳಲ್ಲಿ ಗಾಬರಿಯಿಂದಾಗಿ ನಾಲ್ಕಾರು ತಪ್ಪುಗಳಾದವು. ಆ ದಿನ ಪಾಠ ಮುಗಿಯುವಷ್ಟರಲ್ಲಿ ಅನೇಕ ಸಾರಿ ತಪ್ಪಿದ್ದ. ಆತನ ಕಣ್ಣುಗಳಲ್ಲಿ ನೀರು ಧಾರೆಯಾಗಿ ಇಳಿದಿತ್ತು. ಗುರುಗಳು ಅವನನ್ನು ಸಮಾಧಾನ ಪಡಿಸಿ, ''ನಾನು ಆಗಲೇ ಹೇಳಲಿಲ್ಲವೇ? ಹೇಳಲು ಮಾತ್ರ ಬರುತ್ತದೆ. ಆದರೆ ಹೇಳಿಕೊಡುವುದು ಸುಲಭವಲ್ಲ ಎಂದು?'' ಎಂದರು. ನನ್ನ ನೆನಪಿನ ಶಕ್ತಿ ಆಗ ಸಾಕಷ್ಟು ಚುರುಕಾಗಿಯೇ ಇದ್ದಿತು. ಒಮ್ಮೆ ಪಾಠದ ಮಧ್ಯೆ ರಜೆಯಲ್ಲಿ ಊರಿಗೆ ಹೋಗಿಬಂದರೆ ಅಲ್ಲಿಯವರೆಗೆ ಆದಷ್ಟು ಪಾಠವೂ ಮಿತ್ರನಿಗೆ

ಕಂಠಪಾಠವಾಗಿದ್ದರೂ ರಜೆಯಲ್ಲಿ ಎಲ್ಲವೂ ಮರೆಯುತ್ತಿದ್ದಿತು. ನನಗೆ ಮಾತ್ರ ಕಲಿತಷ್ಟು ಹೇಗೂ ಮರೆಯುತ್ತಿರಲಿಲ್ಲ. ಇದೂ ಹಿರಿಯರ ಮತ್ತು ಗುರುಗಳ ಆಶೀರ್ವಾದದ ಫಲವೇ ಇದ್ದೀತು!

ನಾನು ನಂಜನಗೂಡಿನಲ್ಲಿ ವೇದಾಧ್ಯಯನ ಮಾಡುತ್ತಿದ್ದಾಗ ಮೈಸೂರಿನ ಪರಕಾಲಮಠದ ಸ್ವಾಮೀಜಿ ನಂಜನಗೂಡಿನ ವಿದ್ಯಾರ್ಥಿಗಳಾದ ನಮ್ಮನ್ನು ಆಗಾಗ ಕರೆಸಿ ಪರೀಕ್ಷೆ ಮಾಡುತ್ತಿದ್ದರು. ನಮ್ಮ ಗುಂಪಿನವರು ಹೋದಾಗ ಅವರು ನನ್ನನ್ನು ಕೇಳಿದ ಪ್ರಶ್ನೆಗಳಿಗೆ ಎಲ್ಲಕ್ಕೂ ಸಮರ್ಪಕವಾಗಿ ಉತ್ತರವನ್ನು ಹೇಳಿದೆ, ಅವರು ಕೇಳಿದ ವೇದದ ಭಾಗವನ್ನು ಹೇಳಿದೆ. ಅವರು ಸುಲಭವಾಗಿ ನನಗೆ ಗೊತ್ತಿದ್ದುದನ್ನೇ ಕೇಳಿದ್ದರೋ, ಅಥವಾ ಅವರು ಕೇಳಿದ್ದು ಸುಲಭದ ಪ್ರಶ್ನೆಯಾಗಿತ್ತೋ, ಒಟ್ಟಾರೆ ನಾನು ಹೇಳಿದ್ದನ್ನು ಕೇಳಿ ಅವರು ತುಂಬ ಸಂತೋಷಪಟ್ಟರು. ಆಶೀರ್ವಾದ ಮಾಡಿ ಪ್ರಶಂಸೆ ಮಾಡಿದರು. ಅದು ನನ್ನ ಜೀವನದಲ್ಲೇ ಒಂದು ಅವಿಸ್ಮರಣೀಯ ದಿನ!

ನಿಜಕ್ಕೂ ನಂಜನಗೂಡಿನಲ್ಲಿ ಇದ್ದು ಅಭ್ಯಾಸ ಮಾಡಿದ ಸುಮಾರು ಮೂರೂವರೆ ವರ್ಷಗಳು ಮರೆಯಲಾಗದ ದಿನಗಳು. ಪುರೋಹಿತರ ಮನೆಗೆ ಸೇರಿದ ನಾನು, ಜತೆಯವರೆಲ್ಲರೂ ಶಿವಮೊಗ್ಗಕ್ಕೆ ಓದು ಮುಂದುವರೆಸಲು ಹೋದರೂ, ವಿಚಲಿತನಾಗದೆ ಮೊದಲ ಪ್ರಾಶಸ್ತ್ಯ ವೇದಾಧ್ಯಯನಕ್ಕೇ ನೀಡಿ ನಂಜನಗೂಡಿಗೆ ಬರುವಂತಾಗಿತ್ತು. ಅದೆಂತಹ ಉತ್ತಮ ನಿರ್ಧಾರವಾಗಿತ್ತು ಎನ್ನುವುದು ನನಗೆ ಈಗ ಗೊತ್ತಾಗಿದೆ. ನಂಜನಗೂಡಿನಲ್ಲಿ ಅಧ್ಯಯನ ಮಾಡಿದ ನನಗೆ ಶೃಂಗೇರೀ ಪೀಠದ ಮೇಲೆ ಅಮಿತವಾದ ಭಕ್ತಿ, ನಂಬಿಕೆ ಬರುವ ಹಾಗಿತ್ತು, ಅಲ್ಲಿಯ ವಾತಾವರಣ. ಅಲ್ಲಿನ ಜನ, ನಮ್ಮ ವೇದಾಧ್ಯಯನದ ಗುರುಗಳು ಎಲ್ಲರೂ ಆ ಭಕ್ತಿಯನ್ನು ಚೆನ್ನಾಗಿ ಬೆಳೆಸಿದರು. ಗುರುಪರಂಪರೆಯಲ್ಲಿ ನಂಬಿಕೆ, ವಿಶ್ವಾಸ ಮೂಡುವಂತೆ ಮಾಡಿದರು. ಇದರಿಂದ ನನ್ನ ಜ್ಞಾನ ವೃದ್ಧಿಸಿತು ಎಂದೇ ಹೇಳಬೇಕು. ಒಬ್ಬ ವ್ಯಕ್ತಿ ಕಠಿಣವಾದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಅನಂತರ ನಿಷ್ಠೆಯಿಂದ ಮಾಡುವ ಜಪ-ತಪ-ಸಂಕಲ್ಪಗಳ ಪ್ರಭಾವ ಹೇಗಿರುತ್ತದೆ, ಅದರಿಂದ ಎಂತಹ ಪರಿಣಾಮವಾಗುತ್ತದೆ, ಅದರ ಪ್ರತಿಫಲ ಹೇಗಿರುತ್ತದೆ ಎನ್ನುವುದನ್ನು ನಾನು ಅರಿಯುವಂತಾಯಿತು. ಅಂತಹ ಜಪ-ತಪಗಳ ಸಂಕಲ್ಪ ಶಕ್ತಿಯನ್ನು ಗುರುಗಳಾದವರು ಜಗತ್ಕಲ್ಯಾಣಕ್ಕಾಗಿ ಹೇಗೆ ಉಪಯೋಗಿಸಬಹುದು ಎನ್ನುವುದನ್ನು ತಿಳಿದುಕೊಂಡ ಹಾಗಾಯಿತು. ಏಕೆಂದರೆ ಅಲ್ಲಿದ್ದಾಗ ನಾನು ಆ ಬಗ್ಗೆ ಅಂತಹ ಅನೇಕ ದೃಷ್ಟಾಂತಗಳನ್ನು ಕೇಳಿದೆ. ಅವು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ.

ನಾನು ಅಲ್ಲಿಗೆ ಹೋಗಿ ವೇದಾಧ್ಯಯನ ಮಾಡಿದೆ ಎಂದಾಗ ಎಲ್ಲರೂ ಸಾಮಾನ್ಯವಾಗಿ ನನ್ನನ್ನು ಕೇಳುವ ಒಂದು ಪ್ರಶ್ನೆ ಎಂದರೆ, ನಾವು ಇದ್ದುದು ವೈದಿಕ ಸಂಪ್ರದಾಯದ ಗೂಡಾದ ಮತ್ತೂರಿನಲ್ಲಿ. ವೇದಾಧ್ಯಯನವೇ ಊರಿನ ವೈದಿಕರ ಕಸುಬು. ಮೇಲಾಗಿ ಪುರೋಹಿತ ಮನೆತನ. ಇಷ್ಟಾಗಿಯೂ ನಂಜನಗೂಡಿಗೆ ಕಲಿಯಲು ಹೋಗಬೇಕಿತ್ತೇ? ಎನ್ನುವುದು. ಆಗ ನಾನು ಚಿಕ್ಕವನಾಗಿದ್ದ ಸಮಯದಲ್ಲಿ ಈ ವೇದಾಧ್ಯಯನ ಕೇವಲ ಮನೆಪಾಠವಾಗಿಯಷ್ಟೇ ಇದ್ದುದು. ಅದರಲ್ಲಿ ಕ್ರಮ ಇರಲಿಲ್ಲ. ಈಗಿನಂತೆ ಊರಿನಲ್ಲಿ ಪಾಠಶಾಲೆ ಎನ್ನುವುದಿರಲಿಲ್ಲ. ಗುರುಕುಲ ಇದ್ದರೂ ಅಲ್ಲಿಯೂ ಕ್ರಮವಾಗಿ ಅಭ್ಯಾಸ ನಡೆದುದಿಲ್ಲ. ಕಾರಣ 'ಶ್ರುತಿ' ಎಂದರೆ ವೇದ, ಅದು ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಬಂದ ಪಾಠ. ಅದರಲ್ಲಿ ಉಚ್ಚಾರಣೆ, ಸ್ವರ ಹಾಗೇ ಇದ್ದರೂ ಹೇಳುವ ಧಾಟಿ, ಉಪಯೋಗಿಸುವ ಸಣ್ಣ ರಾಗ ಬೇರೆಯದಾಗಿರುತ್ತದೆ. ಆ ಶೈಲಿ ಮತ್ತು ಧಾಟಿಯನ್ನು ಬಲು ಅಚ್ಚುಕಟ್ಟಾಗಿ, ಶುದ್ಧವಾಗಿ ನಾವು ಪಾಠಶಾಲೆಯಲ್ಲಿ ಮಾತ್ರ ಕಲಿಯಲು ಸಾಧ್ಯ. ಆ ಶೈಲಿ ಆಯಾ ಪ್ರಾಂತ್ಯಗಳ ಶೈಲಿಗೆ ಅನುಗುಣವಾಗಿರುತ್ತದೆ- ಮದ್ರಾಸಿನ ಶೈಲಿ, ಮೈಸೂರಿನ ಶೈಲಿ..... ಇತ್ಯಾದಿ. ನಂಜನಗೂಡಿನದು ಸಂಪೂರ್ಣ ಮೈಸೂರು ಶೈಲಿ. ನಾನು ಇಲ್ಲಿಂದ ಅಲ್ಲಿಗೆ ಹೋಗಿ ವೇದ ಹೇಳಿದಾಗ ಅಲ್ಲಿಯವರು 'ಹಳ್ಳಿಯಪಾಠ' ಇದು ಎಂದೇ ಹೇಳಿದರು. ಹಳ್ಳಿಯಪಾಠವನ್ನು ಅಲ್ಲಿನ ಗುರುಗಳು ಶುದ್ಧಪಾಠವಾಗಿ ಕಲಿಸುತ್ತಿದ್ದರು. ಆ ಶುದ್ಧಪಾಠದಲ್ಲಿ ಅದರದೇ ಆದ ಕ್ರಮ, ಸೌಂದರ್ಯ ಇದೆ. ಆ ಕಲಿಕೆಗೆ ಒಂದು ರೀತಿ ಇದೆ. ನಮ್ಮಲ್ಲಿ ಕಾಶಿಮಾಯ, ಕೇಶವ ಅವಧಾನಿಗಳು, ಶ್ರೀನಿವಾಸ ಅವಧಾನಿಗಳು ಮಾತ್ರ ಶುದ್ಧ ಪಾಠ ಕಲಿತಿದ್ದವರು. ನನಗೆ ನಿಜಕ್ಕೂ ಮೈಸೂರಿನ ವೇದಪಾಠವೇ ಬಹಳ ಚೆನ್ನು ಎನಿಸುತ್ತದೆ. ನಾನು ಅಲ್ಲಿ ಕಲಿತು ಬಂದದ್ದು ನನಗೆ ತುಂಬ ಸಂತೋಷ, ಹೆಮ್ಮೆ ಎನಿಸುತ್ತದೆ!

ಅಲ್ಲಿನ ನನ್ನ ಗುರುಗಳು ಶ್ರೀಕೃಷ್ಣಸೋಮಯಾಜಿಯವರು ನನ್ನ ಮೇಲೆ ಬಹಳವಾಗಿ ಪ್ರಭಾವ ಬೀರಿದಂತಹವರು. ಎಲ್ಲವೂ ಅವರಿಗೆ ಕಂಠಸ್ಥ. ಮರೆತುಹೋಗಿದೆ ಎನ್ನುವ ಮಾತೇ ಅವರಲ್ಲಿ ಇರಲಿಲ್ಲ. ಅಷ್ಟು ಪಾಂಡಿತ್ಯ, ಅಷ್ಟು ಪ್ರಭುತ್ವ ಅವರಿಗೆ!

ನನ್ನ ಇನ್ನೊಬ್ಬ ಗುರುಗಳು ಶ್ರೀಕಂಠ ಘನಪಾಠಿಗಳು. ಅವರದೂ ಉದ್ದಾಮಪಾಂಡಿತ್ಯವೇ. ನಿಜಕ್ಕೂ ಶ್ರೀಕಂಠ ಘನಪಾಠಿಗಳದೂ ಸೊಗಸಾದ ಪಾಠವೇ ಆಗಿರುತ್ತಿತ್ತು. ಅವರು ಹೇಳಿಕೊಡುತ್ತಿದ್ದುದು ನಮಗೆ ಹೆಚ್ಚು ಕಷ್ಟವಿಲ್ಲದೆ ಮನನವಾಗುವ ರೀತಿಯಲ್ಲಿಯೇ ಇರುತ್ತಿತ್ತು.

ಆ ಗುರುಗಳ ವಿಚಾರ ಬಂದಾಗ ಅವರು ನಮ್ಮೂರಿಗೆ

ಭೇಟಿಕೊಟ್ಟ ದಿನಗಳ ಬಗೆಗೂ ಹೇಳಲೇ ಬೇಕಾಗುತ್ತದೆ. ನಾನು ಅಲ್ಲಿ ಕಲಿತು ಊರಿಗೆ ವಾಪಸಾದ ಮೂವತ್ತು ವರ್ಷಗಳ ಅನಂತರ ನನ್ನ ಗುರುಗಳು ನಮ್ಮೂರಿಗೆ ಬಂದರು. ನನ್ನ ಮನೆಯಲ್ಲಿ ನನ್ನ ಎರಡನೆಯ ಮಗ, ಹಾಗೂ, ನನ್ನ ತಮ್ಮ ಶ್ರೀ ಸೀತಾರಾಮ ಅವಧಾನಿಯ ಮಗ ಮಾಡುವ ಹವನ-ಹೋಮ ವಿಧಿಗಳನ್ನೆಲ್ಲ ನೋಡಿ ತುಂಬ ಸಂತೋಷಪಟ್ಟರು. ''ನಿಮ್ಮ ಮಕ್ಕಳು ಋಷಿಗಳ ಹಾಗಿದ್ದಾರೆ. ನಿಮ್ಮನ್ನು ನೋಡಿಯೇ ಸಂತೋಷವಾಗಿತ್ತು, ನನ್ನ ಶಿಷ್ಯರು ಅನುಷ್ಠಾನದಲ್ಲಿ ಎಷ್ಟು ನಿಷ್ಠರಾಗಿದ್ದಾರೆ ಎಂದು, ಈಗ ನಿಮ್ಮ ಮಕ್ಕಳನ್ನು ನೋಡಿ ಮತ್ತೂ ಹೆಮ್ಮೆ ಅನ್ನಿಸುತ್ತದೆ. ನಮ್ಮ ನಂಜನಗೂಡಿನಲ್ಲಿ ಒಂದು ಅತಿರುದ್ರ ಯಾಗ ಮಾಡುತ್ತಿದ್ದೇವೆ. ನೀವೆಲ್ಲ ಅಲ್ಲಿಗೆ ಬಂದು ನಮ್ಮ ಜತೆ ಸೇರಿಕೊಂಡು ನಡೆಸಿಕೊಡಬೇಕು'' ಎಂದು ಆಹ್ವಾನ ಕೊಟ್ಟೇಬಿಟ್ಟರು! ನಾನು ಅವರ ಅಭಿಮಾನಕ್ಕೆ ಮೂಕನಾಗಿ, ಅವರಿಗೆ ವಂದಿಸಿದೆ. ಆದರೆ ಕಾರಣಾಂತರಗಳಿಂದ ಆ ಯಾಗಕ್ಕೆ ಹೋಗುವುದು ಸಾಧ್ಯವಾಗದೆ, ನಮ್ಮ ಊರಿನಿಂದ ಋತ್ವಿಜರು ನಲವತ್ತು ಜನರನ್ನು ಕಳುಹಿಸಿಕೊಟ್ಟೆ. ಅಲ್ಲಿಗೆ ಹೋಗಿದ್ದ ನಮ್ಮವರನ್ನು ನೋಡಿ ಗುರುಗಳು ಸಂತೋಷದಿಂದ, ''ನೋಡಿ, ಮತ್ತೂರಿನಿಂದ ಋಷಿಗಳೆಲ್ಲ ಬಂದಿದ್ದಾರೆ'' ಎಂದರಂತೆ! ನಿಜಕ್ಕೂ ಅಂತಹ ಗುರುಗಳ ಅಭಿಮಾನವೇ ದೊಡ್ಡದು. ನಮ್ಮ ಮನೆಯ ಮಕ್ಕಳನ್ನು ಇತರರಿಗೆ ಪರಿಚಯಿಸಿ, ''ಇವರೆಲ್ಲ ನಮ್ಮ ಶಿಷ್ಯರಾದ, ಶ್ರೀ ಮಾರ್ಕಂಡೇಯ ಅವಧಾನಿಯವರ ಮಕ್ಕಳು. ಇವರೆಲ್ಲ ಶ್ರೌತಾಧ್ಯಯನ ಮಾಡಿದ್ದಾರೆ. ಋಷಿಗಳ ಕಾಲದ್ದನ್ನು ಇಂದಿಗೂ ಉಳಿಸಿದ್ದಾರೆ. ಅದೇ ಹೆಮ್ಮೆ ನಮಗೆ'' ಎಂದೂ ಹೇಳಿದರಂತೆ. ಆ ಮೆಚ್ಚುಗೆಯ ಪ್ರಶಸ್ತಿಗಿಂತ ಇನ್ನೇನು ಬೇಕು ನಮಗೆ?

ಈಗ ಇತ್ತೀಚೆಗೆ, ನಾಲ್ಕು ವರ್ಷಗಳ ಕೆಳಗಷ್ಟೇ ಶ್ರೀಕಂಠ ಘನಪಾಠಿಯವರನ್ನು ದೆಹಲಿಯಲ್ಲಿ 'ರಾಷ್ಟ್ರೀಯ ವೇದ ರಕ್ಷಣಾ ಸಂಸ್ಥೆ' ಯವರು ಸನ್ಮಾನಿಸಿ ಪುರಸ್ಕರಿಸಿದರು. ಅವರ ಪಾಂಡಿತ್ಯಕ್ಕೆ ತಕ್ಕ ಗೌರವ ಅದು. ಆಗ ವ್ಯವಸ್ಥಾಪಕರು ಆ ಸನ್ಮಾನದ ಬಗ್ಗೆ ಅವರನ್ನು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಕೇಳಿದಾಗ ಕೆಲವು ಮಾತುಗಳನ್ನಾಡಿದ ನಮ್ಮ ಗುರುಗಳು ಕೊನೆಯಲ್ಲಿ, ''ನೀವು ಮುಂದೆ ಹೀಗೇ ಯಾರಾದರೂ ವೇದವಿದರಿಗೆ ಸನ್ಮಾನ ಮಾಡುವುದಿದ್ದರೆ ನನ್ನ ಶಿಷ್ಯ ಶ್ರೀ ಮಾರ್ಕಂಡೇಯ ಅವಧಾನಿಯವರಿಗೆ ಮಾಡಬೇಕು. ನಿಜಕ್ಕೂ ಅವರು ಈ ಪ್ರಶಸ್ತಿಗೆ ಅರ್ಹರು!'' ಎಂದರಂತೆ. ಅವರು ಅದನ್ನು ನನಗೆ ಕಾಗದ ಬರೆದು ತಿಳಿಸಿದರು. ಪ್ರಶಸ್ತಿ ಬರಲಿ ಬಿಡಲಿ, ಆದರೆ ಅಂತಹ ಗುರುಗಳ ಅಭಿಮಾನದ ಆ ಮಾತೇ ನನಗೆ ಎಲ್ಲಕ್ಕಿಂತ ಹೆಚ್ಚಿನ ಪ್ರಶಸ್ತಿಪತ್ರ! ಅಷ್ಟು ವಿಶ್ವಾಸವನ್ನು ನನ್ನ ಬಗೆಗೆ ಇಟ್ಟುಕೊಂಡಿದ್ದ ಗುರುಗಳು ಈಗ ಒಂದು ವರ್ಷದ ಕೆಳಗಷ್ಟೇ ದೈವಾಧೀನರಾದರು. ಅವರನ್ನು ಕಳೆದುಕೊಂಡದ್ದು ನನಗೆ ಒಂದು ತುಂಬಲಾಗದ ನೋವು.

ನನ್ನ ಗುರುಗಳು ಅಷ್ಟು ಸಂತೋಷ ಪಡುವುದಕ್ಕೆ ಕಾರಣ ಏನು ಎಂದು ಓದುಗರಿಗೆ ಕುತೂಹಲ ಆಗಿರಲು ಸಾಕು. ಅದಕ್ಕೆ ಸರಿಯಾದ ಸಮಾಧಾನ ಹೇಳುವುದೂ ಸಮಯೋಚಿತವಾಗಿದೆ ಎಂದು ನನ್ನ ಅಭಿಪ್ರಾಯ.

ಅಗ್ನಿಹೋತ್ರಕ್ಕಾಗಿ ಹಾಲುಬೇಕು. ಹಸುಗಳನ್ನು ಅದಕ್ಕಾಗಿಯೇ ಸಾಕಬೇಕು. ಆ ಹಸುಗಳನ್ನು ಮೇಯಿಸಲು ಹೋಗುವಾಗ ಸೊಪ್ಪು ಇಲ್ಲದಿರುವ ಕಡ್ಡಿಯಲ್ಲಿ ಹೊಡೆಯಬಾರದು. ಹಾಗೆ ಹೊಡೆದರೆ ನೋವಾಗುತ್ತದೆ. ಅಪಶುರೇವ ಭವತಿ. ನಾಲ್ಕಾರು ಎಲೆ ಇರುವ ಕಡ್ಡಿಯಲ್ಲಿ ಹೊಡೆದರೂ ಅದಕ್ಕೆ ಸವರಿದ ಅನುಭವವಾಗುತ್ತದೆ. ಪಶುಮಾನ್ ಭವತಿ ಪೆಟ್ಟಾಗುವುದಿಲ್ಲ. ನಮ್ಮಲ್ಲಿ ಹವಿಸ್ಸನ್ನು ಒಂದು ಸೌಟಿನಿಂದ ಮತ್ತೊಂದು ಸೌಟಿಗೆ ಹಾಕಲೂ, ಬಟ್ಟೆ ಹಿಂಡಲೂ, ಅಕ್ಕಿ ಕುಟ್ಟಲೂ, ಹೆಜ್ಜೆ ಇಡಲೂ ಮಂತ್ರಗಳಿವೆ. ಅದರ ಉದ್ದೇಶ ಯಾವುದನ್ನೂ ನಾವು ಹಗುರವಾಗಿ ಕಾಣಬಾರದೆಂಬುದು. ನಾವು ಉಪಯೋಗಿಸುವಂತಹ ಅಕ್ಕಿ, ಹವಿಸ್ಸು, ನೀರು ಇತ್ಯಾದಿಗಳ ಪ್ರತಿಯೊಂದು ಕಣಕ್ಕೂ ಒಂದೊಂದು ವಿನಿಯೋಗವಿದೆ. ಅಕ್ಕಿ ಕುಟ್ಟುವಾಗ ಅತ್ತಿತ್ತ ಹರಡಿದ ಕಣಗಳಲ್ಲೂ, ರಾಕ್ಷಸರು, ಅಗ್ನಿ, ವಿಷ್ಣು, ರುದ್ರ ಇವರಿಗೆಲ್ಲ ಇಷ್ಟು ಅಂಶ ಎಂದು ಹೇಳಿದೆ. ಬಟ್ಟೆ ಹಿಂಡಿದಾಗ ಹಾಗೆ ಹಿಂಡಿದವರ ವಂಶದಲ್ಲಿ ಯಾರಾದರೂ ಸಣ್ಣ ಶಿಶುವಾಗಿ, ಗರ್ಭಸ್ರಾವವಾಗಿ ಹೋಗಿದ್ದರೆ ಅವರಿಗೆ ಆ ನೀರು ಪಿತೃಅರ್ಪಣೆಯಾಗಿ ಹೋಗಲಿ, ಆತ್ಮಕ್ಕೆ ವಿನಿಯೋಗವಾಗಲಿ ಎಂದೂ ವೇದದಲ್ಲಿ ಹೇಳಿದೆ. ಇಂಥ ಪ್ರತಿಯೊಂದನ್ನೂ ಸಾಂಗವಾಗಿ ತಿಳಿದು ಅವುಗಳ ಅಂತರಾರ್ಥವನ್ನೂ ಮನನ ಮಾಡಿಕೊಂಡು ಅಭ್ಯಾಸ ಮಾಡುವುದೇ ವೇದಾಧ್ಯಯನ. ಹಾಗೆ ಮಾಡಿದವರು ಶ್ರೌತವನ್ನೂ ಪೂರ್ಣವಾಗಿ ಕಲಿತರೆ ಅದು ವೇದಾಧ್ಯಯನದಲ್ಲಿ 'ಮಾಸ್ಟರ್' ಆದಂತೆ. ಆದರೆ ವೇದಾಧ್ಯಯನ ಮಾಡಿದ ಎಲ್ಲರೂ ಹಾಗೆ ಕಲಿತಿರುವುದಿಲ್ಲ. ಒಂದಂತೂ ನಿಜ - ವೇದದಲ್ಲಿ ಯಾವುದನ್ನು ಕಲಿತರೂ ಎಲ್ಲವೂ ಉಪಯೋಗಕ್ಕೆ ಬರುವಂಥವೇ ಹೌದು. ಇಂತಹ ವೇದವನ್ನು ನಿಷ್ಠೆಯಿಂದ ಹೆಮ್ಮೆಯಿಂದ ಅಭ್ಯಾಸ ಮಾಡಿರುವ ನಮ್ಮ ಮಕ್ಕಳು ಆಧುನಿಕ ಯುಗದ ಆಕರ್ಷಣೆಯನ್ನು ಮೆಟ್ಟಿ, ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಂಡಿರುವುದು ಅವರ ಬಗ್ಗೆ ಗುರುಗಳ ಪ್ರೀತಿಯನ್ನು ಹೆಚ್ಚಿಸಿತ್ತು.

ವೇದಗಳ ಅಧ್ಯಯನವಾದರೂ ಸುಲಭವಾದುದಲ್ಲ, ಸಾಗರದ ಹಾಗೆ. ಋಗ್ವೇದ, ಯಜುರ್ವೇದ, ಸಾಮವೇದ,

ಅಥರ್ವಣ ವೇದಗಳು ಒಂದೊಂದರಲ್ಲೂ ನೂರಾರು ಪ್ರಭೇದಗಳಿವೆ, ಆವೃತ್ತಿಗಳಿವೆ. ನಾವು ಪೂರ್ಣವಾಗಿ ಅಭ್ಯಾಸ ಮಾಡಿರುವುದು ಯಜುರ್ವೇದ. ಯಜುರ್ವೇದದಲ್ಲಿ ಶುಕ್ಲಯಜುರ್ವೇದ, ಕೃಷ್ಣ ಯಜುರ್ವೇದ ಎಂದು ಎರಡು ರೀತಿ ಇದೆ. ಶುಕ್ಲ ಯಜುರ್ವೇದದಲ್ಲಿ ಮಂತ್ರ ಬೇರೆ, ಪ್ರಯೋಗ ಬೇರೆ. ಕೃಷ್ಣಯಜುರ್ವೇದದಲ್ಲಿ ಮಂತ್ರ, ಪ್ರಯೋಗ ಎರಡೂ ಮಿಶ್ರವಾಗಿವೆ:

ನಾವು ಕಲಿತ ವಿದ್ಯೆ ಅಲ್ಪ ಎನ್ನುವುದಕ್ಕೆ ಇಂದ್ರ - ಭರದ್ವಾಜರ ಉಪಾಖ್ಯಾನ ವೇದದಲ್ಲಿ ಹೀಗೆ ಬಂದಿದೆ:

ಇಂದ್ರನನ್ನು ಕುರಿತು ಭರದ್ವಾಜ ತಪಸ್ಸು ಮಾಡಿದ. ಪ್ರತ್ಯಕ್ಷನಾದ ಇಂದ್ರ ''ಏನು ಬೇಕು?'' ಎಂದ. ''ವಿದ್ಯೆಗಾಗಿ ಆಯುಷ್ಯಬೇಕು'' ಎಂದ ಭರದ್ವಾಜ; ಇಂದ್ರ ಕೊಟ್ಟ. ಮತ್ತೆ ತಪಸ್ಸು. ಇಂದ್ರ ಬಂದ, ''ಏನು ಬೇಕು?'' ಎಂದ. ಮತ್ತೆ ''ಆಯುಷ್ಯ'' ಎಂದು, ಹೀಗೆ ಮೂರು ಬಾರಿ ಇಂದ್ರನನ್ನು ಪ್ರಸನ್ನನನ್ನಾಗಿ ಮಾಡಿದನು ಭರದ್ವಾಜ. ಕೊನೆಗೆ ಈವರೆಗೆ ತಾನು ಕಲಿತದ್ದು ಎಷ್ಟು ಎಂದು ತೋರಿಸಲು ಇಂದ್ರನನ್ನು ಪ್ರಾರ್ಥಿಸಿದ. ಇಂದ್ರ ಅವನಿಗೆ ಮೂರು ಗಿರಿಗಳನ್ನು ತೋರಿಸಿದ. ಅನಂತರ ಅವುಗಳಿಂದ ಒಂದೊಂದು ಮುಷ್ಟಿ ಮಣ್ಣು ತೆಗೆದುಕೊಂಡ ಇಂದ್ರನು, ''ಭರದ್ವಾಜ! ಈ ಮೂರೂ ವಿದ್ಯಾಪರ್ವತಗಳು. ನೀನು ಮೂರು ಸಲ ತಪಸ್ಸು ಮಾಡಿ ಆಯುಷ್ಯ ಪಡೆದು ಅಭ್ಯಾಸ ಮಾಡಿದ ವಿದ್ಯೆ ಹೆಚ್ಚೆಂದರೆ ಇದರಲ್ಲಿ ಮೂರು ಮುಷ್ಟಿಯಷ್ಟು ಆದೀತು. ಪರಿಪೂರ್ಣ ವಿದ್ಯೆಯ ಅಧ್ಯಯನಕ್ಕೆ ಎಷ್ಟು ಆಯುಷ್ಯ ಬೇಕು.... ಇದು ಸಾಧ್ಯವೇ? ಸ್ವಸ್ವರೂಪ ಜ್ಞಾನ ಪಡೆದರೆ, ಎಲ್ಲಾ ತಿಳಿದಂತೆ. ವಿದ್ಯಾಭ್ಯಾಸ ಸಾಕು'' ಎಂದ. ಕಲಿಕೆ ಎನ್ನುವುದಕ್ಕೆ ಕೊನೆ ಇಲ್ಲ ಎನ್ನುವುದಕ್ಕೆ ಈ ದೃಷ್ಟಾಂತವೇ ಸಾಕ್ಷಿ. ಒಟ್ಟಾರೆ ಏನನ್ನು ಮಾಡಿದರೂ ಲೋಕಕಲ್ಯಾಣಕ್ಕಾಗಿ ಮಾಡಬಹುದು ಎಂದು ವೇದ ಹೇಳುತ್ತದೆ. ಒಂದು ಕ್ರಿಮಿ-ಕೀಟಕ್ಕೂ ನೋವಾಗದಂತೆ ಮಾಡಬಹುದಾದ ಕ್ರಮವನ್ನೂ ಹೇಳಿದೆ. ಏನಾದರೂ ಲೋಪವಾದರೆ ಅದಕ್ಕೆ ಪರಿಹಾರವನ್ನೂ ಸೂಚಿಸಿದೆ. ಅದನ್ನು ನಾವು ಸರಿಯಾಗಿ ಗ್ರಹಿಸಿದರೆ ಪ್ರತಿಯೊಂದನ್ನೂ ಇಂದಿನ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು. ಇದು ನಮ್ಮ ಸನಾತನಪರಂಪರೆ. ಇದನ್ನು ಮುಂದುವರೆಸಲು ತರುಣ ಜನಾಂಗವು ಮುಂದಾದರೆ ನಮ್ಮ ಈ ವೈದಿಕ ಪರಂಪರೆಗೆ ಉಳಿವು. ಅಂತಹ ತರುಣರನ್ನು ಕಂಡಾಗ ನಮ್ಮ ಗುರುಗಳಂತಹ ಹಿರಿಯರಿಗೆ ಪ್ರೀತಿ, ಅಭಿಮಾನವು ಸಹಜ!

ಅಂತೂ ನಂಜನಗೂಡಿನಲ್ಲಿನ ನಮ್ಮ ವಿದ್ಯಾಭ್ಯಾಸದ ಮೂರೂವರೆ ವರ್ಷಗಳನ್ನು ಕಳೆದು ನಾವೆಲ್ಲರೂ ಮತ್ತೆ ಊರಿಗೆ ವಾಪಸಾದೆವು.

೫. ಗೃಹಸ್ಥನಾದೆ

ವಿದ್ಯೆ ಮತ್ತು ಕಲಿಕೆ ಎಂದಾಗ ವಿದ್ಯಾಧಿದೇವತೆ ಗಣಪತಿಯ ನೆನಪಾಗುತ್ತದೆ. ಒಮ್ಮೆ ಇದ್ದಕ್ಕಿದ್ದಂತೆ ನನಗೆ ಸ್ಫೂರ್ತಿ ಬಂದು ತೋಟದಿಂದ ಜೇಡಿಮಣ್ಣು ತಂದು 'ಗಣಪತಿ ಮಾಡುತ್ತೇನೆ' ಎಂದು ಕುಳಿತೆ. ಚಿತ್ರದಲ್ಲಿರುವ ಹಾಗೆಯೇ ಒಂದು ಗಣಪನನ್ನು ಮಾಡಿದೆ. ಆ ಗಣಪತಿ ನಿಂತಿರುವ ಮೂರ್ತಿ. ತಂದೆ ಆ ಮೂರ್ತಿಯನ್ನು ನೋಡಿ, ''ಓ........ ನಿಂತಿರುವ ಗಣಪತಿ ಮಾಡಿದ್ದೀಯಾ?'' ಎಂದರು. ''ಹೌದು... ಹೀಗಿದ್ದರೆ ಚನ್ನಾಗಿರುತ್ತೆ ಎಂದು ಮಾಡಿದೆ'' ಎಂದೆ ನಾನು. ''ಗಣಪತಿ ನಿಂತಿರುವುದು, ನಾವು ಕುಳಿತುಕೊಂಡು ಪೂಜೆ ಮಾಡುವುದೇ?'' ಎಂದರು. ''ಆದರೆ, ದೇವಸ್ಥಾನದಲ್ಲಿ ನಾನು ನೋಡಿದ್ದೇನಲ್ಲ? ಅಲ್ಲಿ ಗಣಪತಿ ನಿಂತಿದೆಯಲ್ಲ?'' ಎಂದೆ. ''ಇರಬಹುದು, ನಾನು ಗಣಪತಿ ನಿಲ್ಲುವುದಿಲ್ಲ, ಓಡಾಡುವುದಿಲ್ಲ ಎಂದು ಹೇಳಲಿಲ್ಲವಲ್ಲ. ನಾವು ಮನೆಯಲ್ಲಿ ಪೂಜೆ ಮಾಡುವುದಾದರೆ ಕುಳಿತಿರುವ ಮೂರ್ತಿಯನ್ನೇ ಪೂಜೆ ಮಾಡಬೇಕು'' ಎಂದರು.

ಬಹಳ ಹಿಂದೆ ನಮ್ಮ ತಂದೆ ಗಣಪತಿಯನ್ನು ಮಾಡುತ್ತಿದ್ದರಂತೆ. ನನಗೆ ಅದು ತಿಳಿಯದು, ಬಹುಶಃ ಅವರ ಕಲೆ ನನಗೂ ಚೂರು ಪಾರು ಬಂದಿತ್ತೆಂದು ಕಾಣುತ್ತದೆ! ಅವರೆಂದರು, ''ನಾನು ಗಣಪತಿ ಮಾಡುತ್ತಿದ್ದ ಕಾಲ. ಒಂದನೇ ವರ್ಷ - ನಾಲ್ಕು, ಎರಡನೇ ವರ್ಷ - ಇಪ್ಪತ್ತು, ಮೂರನೆಯ ವರ್ಷ ಅದಕ್ಕೂ ಹೆಚ್ಚು.... ಹೀಗೆ... ಕೊನೆಗೊಮ್ಮೆ ಒಂದು ವರ್ಷ ಅರುವತ್ನಾಲ್ಕು ಗಣಪತಿ ಮೂರ್ತಿಗಳನ್ನು ಮಾಡಿದೆ. ಗಣಪತಿ ತುಂಬಾ ಚೆನ್ನಾಗಿ ಬರುತ್ತಿದ್ದವು. ನಾನು ಮಾಡಿದ ಗಣಪತಿಗಳನ್ನು ನಮ್ಮ ಸಂಬಂಧದವರು ಪೂಜೆ ಮಾಡಲು ಒಯ್ಯುತ್ತಿದ್ದರು. ಒಮ್ಮೆ ಹೊಸಹಳ್ಳಿಯ ತಂಗಿ ಮನೆಗೆ ಗಣಪತಿ ಮೂರ್ತಿ ಕೊಡಲು ಉಳಿಯಲಿಲ್ಲ. ತಂಗಿ ಬಂದು, 'ಅಣ್ಣಯ್ಯಾ! ನಮಗೇ ಗಣಪತಿ ಸಿಗಲಿಲ್ಲ - ಮಡಿಯಿಂದ ಮಾಡಿದ್ದು - ವೇದಮಂತ್ರ ಹೇಳುತ್ತಾ

ಮಾಡಿದ್ದು - ನಮ್ಮ ಅಣ್ಣ ಮಾಡಿದ್ದು' ಎಂದು ಬೇಸರ ಪಟ್ಟಾಗ ನನಗೂ ತುಂಬಾ ಬೇಸರವಾಯಿತು. ಮುಂದಿನ ವರ್ಷ, ಒಂದೇ ಗಣಪತಿ ಮಾಡಿ ತಂಗೀ ಮನೆಗೆ ಕೊಟ್ಟೆ. ಅದಾದನಂತರ ಒಮ್ಮೆ ಗಣಪನನ್ನು ಮಾಡುವಾಗ ಚೆನ್ನಾಗಿ ಅಂಟಿಸಿದ್ದ ಕೈ ಕಳಚಿ ಬಿದ್ದುಹೋಯಿತು. ಮತ್ತೆ ಅದನ್ನು ಸರಿ ಮಾಡಿ ಅಂಟಿಸಿ, ನೀರು ಮಣ್ಣು ಹಾಕಿ ಚೆನ್ನಾಗಿ ಮಾಡಿದರೂ ಏಕೋ ಹಾಗಾದುದು ಮನಸ್ಸಿಗೆ ತುಂಬಾ ಬೇಸರವಾಯಿತು. 'ಗಣಪತಿ ಸುಂದರನಾದವನು. ನಾವು ಮಾಡುವಾಗ ಅವನ ಮೂರ್ತಿಗೆ ಲೋಪದೋಷಗಳು ಆದಾವು' ಎನ್ನಿಸಿ ಅಂದಿನಿಂದ ಗಣಪತಿ ಮೂರ್ತಿಯನ್ನು ಮಾಡುವುದನ್ನೇ ಬಿಟ್ಟುಬಿಟ್ಟೆ! ಅಕ್ಕ ತಂಗಿಯರು ಬೇಸರ ಮಾಡಿಕೊಂಡರು. ಆದರೂ ಏಕೋ ಮುಂದೆ ಮತ್ತೆ ಮಾಡುವ ಮನಸ್ಸಾಗಲಿಲ್ಲ. ಆಗಿನಿಂದ ಗಣಪತಿ ಹಬ್ಬದಲ್ಲಿ ಶಿವಮೊಗ್ಗದಿಂದ ಮೂರ್ತಿ ತರಲು ಪ್ರಾರಂಭಿಸಿದೆವು'' ಎಂದರು. ಇದರರ್ಥ, 'ನೀನು ಗಣಪತಿ ಮಾಡುವುದು ಬೇಡ. ಶಿಲ್ಪಿಗಳು ಮಾಡಿದ್ದನ್ನು ತಂದರಾಯಿತು,' ಎಂದಿರಬೇಕು. ನಾನೂ ಮತ್ತೆ ಗಣಪತಿಯನ್ನು ಮಾಡಲಿಲ್ಲ.

ಒಂದು ವರ್ಷ ನಮ್ಮ ದೂರದ ಸಂಬಂಧಿಯೊಬ್ಬರು ಗಣಪತಿ ಮಾಡಿ ನಮ್ಮ ಮನೆಗೂ ಕಳುಹಿಸಿದರು. ತಂದೆಯವರು ಅದನ್ನು ನೋಡಿ, ''ಅಶ್ವತ್ಥ! ಬೆಳಗ್ಗೆ ಬೇಗ ಎದ್ದು ಹೂವು, ದೂರ್ವೆ ಎಲ್ಲವನ್ನೂ ಹಾಕಿ ಪೂಜೆ ಮಾಡಿ ಗಣಪನನ್ನು ಹೂವಿನಲ್ಲಿ ಮುಚ್ಚಿರಿ. ಬಂದವರಿಗೆ ಅದು ಕಾಣಬಾರದು'' ಎಂದರು. ಕಾರಣ, ಆ ಗಣಪತಿ - ಮೂರ್ತಿ ಎಷ್ಟು ಸುಂದರವಾಗಿದ್ದಿರಬೇಕು ಊಹಿಸಿಕೊಳ್ಳಿ. ''ಮುಂದಿನ ವರ್ಷದಿಂದ ಮೊದಲೇ ಚೆನ್ನಾಗಿರುವುದನ್ನು ಶಿವಮೊಗ್ಗದಿಂದ ಕೊಂಡು ತಂದುಬಿಡಿ'' ಎಂದರು! 'ನಿಮ್ಮ ಗಣಪತಿ ಚೆನ್ನಲ್ಲ ಎಂದು ಹೇಳಿ, ಅವರಿಗೆ ಏಕೆ ನೋವಾಗಬೇಕು' ಎಂದು ತಂದೆಯ ಅಭಿಪ್ರಾಯ ಆಗಿತ್ತು! ಗಣಪತಿ ಹಬ್ಬ ಬಂದರೆ ಅದೇ ಒಂದು ಸಂಭ್ರಮ ಇರುತ್ತಿತ್ತು ನಮ್ಮ ಮನೆಯಲ್ಲಿ. ತಂದೆ ಬಹಳ ಆಸಕ್ತಿ ವಹಿಸಿ ಗಣಪತಿಗೆ ಮಂಟಪ ಮಾಡುತ್ತಿದ್ದರು. ಒಂದರ ಒಳಗೊಂದು, ಅದರ ಒಳಗೊಂದು ಆಸ್ಥಾನ. ಗಣಪತಿಯು ಮಂಟಪದ ಮಹಲಿನ ಒಳಗೆ ಕುಳಿತಂತೆ ಕಾಣಬೇಕು - ಹಾಗೆ ಸುಂದರವಾಗಿ ಮಾಡುತ್ತಿದ್ದರು. ಅವರು ಆರೋಗ್ಯ ತಪ್ಪಿ ಮಲಗಿದ ಮೇಲೆ, ಅದೂ ನಿಂತು ಹೋಯಿತು.

❁ ❁ ❁

ಬಾಲ್ಯದಲ್ಲಿ ನನಗೆ ಪಾಠ ಹೇಳಿಕೊಟ್ಟ ಕೆಲವು ಮಂದಿ ಗುರುಗಳಲ್ಲಿ ಶಂಕರನಾಯಕ ಮೇಷ್ಟ್ರು ನಮಗೆಲ್ಲ ಬಹಳ ಪ್ರೀತಿಪಾತ್ರರು. ಆಗ ಅವರು ಬ್ರಹ್ಮಚಾರಿ. ನಮಗೆ ಲೋಯರ್ ಸೆಕೆಂಡರಿ ತರಗತಿಗೆ ಪಾಠ ಹೇಳುತ್ತಿದ್ದ ಆ ಮೇಷ್ಟ್ರು ತಮ್ಮ ಶಾಲಾಕೆಲಸ ಮುಗಿದ ಅನಂತರ ಶಾಲೆಯಲ್ಲೇ ರಾತ್ರಿಯನ್ನು ಕಳೆಯುತ್ತಿದ್ದರು. ಬಹಳ ಪ್ರೀತಿಯಿಂದ ನಮ್ಮನ್ನು ಕಾಣುತ್ತಿದ್ದ ಶಂಕರನಾಯಕ ಮೇಷ್ಟ್ರು ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಪರಮಭಕ್ತರು. ಶ್ರೀ ಶೃಂಗೇರಿ ಪೀಠದ ಬಗ್ಗೆ ಅವರಿಗೆ ಬಹಳ ಗೌರವ, ಶ್ರದ್ಧೆ. ಹಿಂದಿನ ಜಗದ್ಗುರುಗಳಾಗಿದ್ದ ಶ್ರೀಶ್ರೀ ನೃಸಿಂಹಭಾರತೀ ಸ್ವಾಮಿಗಳ ಕೃಪೆಯ ಕಥೆಗಳನ್ನೆಲ್ಲ ನಮಗೆ ಹೇಳುತ್ತಿದ್ದರು. ಅವರು ಹಾಗೆ ಸ್ವಾಮೀಜಿಗಳ ವಿಷಯ ಮಾತನಾಡುವಾಗ, ಗುರುಪರಂಪರೆಯ ಶಕ್ತಿಯ ಬಗ್ಗೆ ಹೇಳುವಾಗ, ನನಗೂ 'ಶೃಂಗೇರಿಗೆ ಹೋಗಬೇಕು, ಗುರುಗಳ ದರ್ಶನ ಮಾಡಬೇಕು, ವಿರಾಗಿಯಾಗಿ ಸಂನ್ಯಾಸ ತೆಗೆದುಕೊಳ್ಳಬೇಕು' ಎನ್ನುವ ಭಾವನೆ ತೀವ್ರವಾಗುತ್ತಿತ್ತು. ಆ ಭಾವಾವೇಶದಲ್ಲಿಯೇ, 'ನಾನೆಂದೂ ಮದುವೆಯಾಗಬಾರದು' ಎಂದು ನನಗೇ ತಿಳಿಯದ ಹಾಗೆ ನಾನೇ ನಿರ್ಧರಿಸಿಕೊಂಡಿದ್ದೆ.

ಒಮ್ಮೆ ಶಂಕರನಾಯಕ ಮೇಷ್ಟ್ರು ರಾತ್ರಿಯ ಸಮಯದಲ್ಲಿ ಏಕಾಂಗಿಯಾಗಿ ಎಲ್ಲೋ ಹೋಗುತ್ತಿದ್ದ ನನಗೆ ಎದುರಾದರು. ಕತ್ತಲೆಯಲ್ಲಿ ಅವರು ಯಾರೆಂದು ತಿಳಿಯಲಿಲ್ಲ. ಸಹಜವಾಗಿಯೇ ಸ್ವಲ್ಪ ವಯಸ್ಸೂ ಆಗಿದ್ದ ಅವರಿಗೂ ನಾನು ಯಾರೆಂದು ತಿಳಿಯಲಿಲ್ಲ. ನಾವಿಬ್ಬರೂ ಒಬ್ಬರನ್ನೊಬ್ಬರು ಹಾದು ಹೋದಾಗ ಅವರು ಹಿಂದಿರುಗಿ, ''ಯಾರಪ್ಪಾ ನೀನು?'' ಎಂದರು. ತಿರುಗಿ ನಿಂತ ನಾನು, ''ನಾನು ಒಬ್ಬ ಮನುಷ್ಯ'' ಎಂದೆ. ಅವರಿಗೆ ನಾನು ಯಾರೆಂದು ತಿಳಿಯಿತು. ನನ್ನ ಧ್ವನಿಯಲ್ಲಿದ್ದ ರೂಕ್ಷತೆಯನ್ನು ಗಮನಿಸಿದ ಅವರು ಹತ್ತಿರ ಬಂದು, ''ಹೌದಪ್ಪ, ನೀನು ಮನುಷ್ಯನೇ ಆಗು, ಮೃಗ ಆಗಬೇಡ'' ಎಂದರು! ನನಗೆ ಆಶ್ಚರ್ಯ, ಜತೆಗೆ ಸಂಕೋಚವೂ ಆಯಿತು. ನಾನು ಹೇಳಿದುದು, 'ನಿಮಗೆ ಕಣ್ಣು ಕಾಣಿಸುವುದಿಲ್ಲವೇ? ನಾನು ಒಬ್ಬ ಮನುಷ್ಯ ಎಂದು ತಿಳಿಯಲಿಲ್ಲವೇ?' ಎನ್ನುವ ಅರ್ಥದಲ್ಲಿ. ಆದರೆ ಅವರು ಅಷ್ಟೇ ಪ್ರೀತಿಯಿಂದ ನನಗೆ ಹಾಗೆ ಹೇಳಿದುದು ನನ್ನಲ್ಲಿ ನಾಚಿಕೆ ಉಂಟು ಮಾಡಿತು. ಕೂಡಲೆ ಅವರ ಕಾಲಿಗೆ ನಮಸ್ಕರಿಸಿದೆ. ಅವರು ನನ್ನನ್ನು ಹರಸಿ, ಹಿಡಿದೆತ್ತಿ ತಲೆಸವರಿ ಹೊರಟರು. ಆ ದಿನ ಅವರು ನನಗೆ ಹಾಗೆ ಹೇಳಿದ ಮಾತು ಇನ್ನೂ ನನ್ನ ಕಿವಿಯಲ್ಲಿ ಗುಂಯ್‌ಗುಡುವ ಹಾಗೆ ಇದೆ. ನಿಜ! ನಾವು ಮನುಷ್ಯರಾಗಿ ಹುಟ್ಟಿ ಮನುಷ್ಯರಾಗಿ ಬದುಕಬೇಕೇ ವಿನಾ ಮೃಗವಾಗಿ ಬದುಕಬಾರದು ಎನ್ನುವ ಸರಳ ಸತ್ಯವನ್ನು ಅವರು ಒಂದೇ ಮಾತಿನಲ್ಲಿ ನನಗೆ ಕಲಿಸಿದ್ದರು! ಅವರನ್ನು ನಾನು ಹೇಗೂ ಮರೆಯುವಂತಿಲ್ಲ. ನನ್ನ ಎಪ್ಪತ್ತರ ಶಾಂತಿಯಲ್ಲಿ ಗುರುದಂಪತಿಗಳಿಗೆ ಗುರುಪೂಜೆ ಮಾಡಿದೆ. ಅವರೂ ವಸ್ತ್ರಾದಿಗಳನ್ನಿತ್ತು ಹರಸಿದರು.

❁ ❁ ❁

ನಾನು ನಂಜನಗೂಡಿನಲ್ಲಿ ಅಧ್ಯಯನ ಮುಗಿಸಿ ಬಂದನಂತರ ಮತ್ತೆ ಶಾಲೆಗೆ ಸೇರಲು ಸಾಧ್ಯವಾಗಲಿಲ್ಲ. ಈಗ ಮಾಡಿದ ಅಧ್ಯಯನಕ್ಕೆ ಪೂರಕವಾಗಿಯೇ ಏನನ್ನಾದರೂ ಅಭ್ಯಾಸ ಮಾಡಬೇಕಿತ್ತು. ಹಾಗಾಗಿ ಒಂದೆರಡು ವರ್ಷಗಳ ಕಾಲ ಶ್ರೀ ಮತ್ತೂರು ಕೃಷ್ಣಮೂರ್ತಿಗಳ ಅಣ್ಣ ಶ್ರೀ ಕೇಶವಮೂರ್ತಿ ಅವಧಾನಿಯವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದೆ. ಅದಕ್ಕೂ ಮೊದಲು ನಮ್ಮ ತಂದೆ ಸಪ್ರಯೋಗ ಧರ್ಮಶಾಸ್ತ್ರವನ್ನೂ, ಜ್ಯೌತಿಷವನ್ನೂ ಹೇಳಿಕೊಟ್ಟಿದ್ದರು. ನಮ್ಮ ತಂದೆ ಶ್ರೀ ನಾರಾಯಣ ಅವಧಾನಿಯವರು ಹದಿನೆಂಟು ಪುರಾಣಗಳನ್ನೂ ಹೇಳುತ್ತಿದ್ದರು. ಅವರ ಕಂಠ ಕಂಚಿನ ಕಂಠದ ಹಾಗಿದ್ದಿತು. ಯಕ್ಷಗಾನದ ಹಾಡುಗಳ ಮಟ್ಟನ್ನು ಅನುಸರಿಸಿದ ಶೈಲಿಯಲ್ಲಿ ರಾಗವಾಗಿ ಹಾಡುವುದು ಅವರ ವೈಶಿಷ್ಟ್ಯವಾಗಿತ್ತು. ಅಲ್ಲದೆ ಸಂಸ್ಕೃತ ಪುರಾಣಗಳನ್ನು ತಂದೆಯವರು ಲೀಲಾಜಾಲವಾಗಿ ಹೇಳಿ ಕಥೆ ಮಾಡುತ್ತಿದ್ದರು. ಅವರು ಹಾಗೆ ಕಥೆ ಮಾಡುವುದನ್ನು ನೋಡಿ ಕೇಳಿಯೇ ನನಗೂ 'ಕಾವ್ಯವಾಚನ-ವ್ಯಾಖ್ಯಾನ ಎನ್ನುವುದು ಬಹಳ ಸೊಗಸಾಗಿ ಇರುತ್ತದೆ' ಎನಿಸಿತ್ತು. ಅವರು ಹೇಳುತ್ತಿದ್ದ ಹರಿಶ್ಚಂದ್ರೋಪಾಖ್ಯಾನ, ಗಜೇಂದ್ರಮೋಕ್ಷ, ಚಂದ್ರಹಾಸ, ಅಂಬರೀಷನ ಭಕ್ತಿ, ಧ್ರುವಚರಿತೆ ಇತ್ಯಾದಿಗಳು ಬಹಳ ಸ್ವಾರಸ್ಯಪೂರ್ಣವಾಗಿರುತ್ತಿದ್ದುವು; ಭಕ್ತಿರಸ ಕರುಣರಸ ತುಂಬಿ ಅವರು ಕಥೆ ಹೇಳುತ್ತಿದ್ದ ರೀತಿ ಕೇಳುತ್ತಿದ್ದವರ ಕಣ್ಣುಗಳಲ್ಲಿ ನೀರು ತರಿಸದೆ ಇರುತ್ತಿರಲಿಲ್ಲ! ಅಷ್ಟು ಭಾವಪೂರ್ಣವಾಗಿ, ಭಕ್ತಿರಸ ಒಸರಿ ಭಕ್ತರ ಹೃದಯ-ಮನಸುಗಳನ್ನು ತೋಯಿಸುವ ಹಾಗೆ ಹೇಳುತ್ತಿದ್ದ ಅವರ ಶೈಲಿ ಈಗಲೂ ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಅಚ್ಚಳಿಯದೆ ಉಳಿದಿದೆ..... ನಾನು ಎಷ್ಟೋ ಬಾರಿ ಕಥೆ ಮಾಡಿದ್ದರೂ ಆ ಭಕ್ತಿಯಾವೇಶವನ್ನು ಕಥೆಯಲ್ಲಿ ತರಲು ನನ್ನಿಂದಾಗದು ಎನಿಸುತ್ತದೆ! ಸಂಸ್ಕೃತದ ಶ್ಲೋಕವನ್ನು ರಾಗ ಹಾಕಿ ತಾವೇ ಹಾಡಿ, ತಾವೇ ಕನ್ನಡದಲ್ಲಿ ವ್ಯಾಖ್ಯಾನ ಮಾಡುತ್ತಿದ್ದ ಆಜಾನುಬಾಹು ರೂಪವಂತ ತಂದೆಯ ಬಗ್ಗೆ, ಅವರ ಅಧ್ಯಯನ, ಆಚರಣೆ, ಜ್ಞಾನದ ಬಗ್ಗೆ ಊರಿನವರಿಗೆಲ್ಲ ಅಮಿತಗೌರವ, ಭಕ್ತಿಭಾವ ಇತ್ತು. ಅಂತೆಯೇ ಊರಿನವರು, ಅವರ ಮಗನಾಗಿದ್ದ ನಾನೂ, ಅದೇ ಮಟ್ಟಕ್ಕೆ ಬೆಳೆಯಲಿ ಎಂದು ಆಶಿಸಿದ್ದರೆ ಅದರಲ್ಲಿ ಆಶ್ಚರ್ಯವೂ ಇರಲಿಲ್ಲ!

ನಮ್ಮ ಊರಿನಲ್ಲಿ ಒಮ್ಮೆ ಸತ್ಯನಾರಾಯಣ ಪೂಜೆ ಮಾಡಿಸುವುದಕ್ಕಾಗಿ ನನ್ನನ್ನು ಕರೆದರು. ಆ ಸಮಯದಲ್ಲಿ ತಂದೆಯವರ ಆರೋಗ್ಯ ಅಷ್ಟು ಸರಿ ಇಲ್ಲದಿದ್ದ ಕಾರಣ ನಾನೇ ಪೂಜೆ ಮಾಡಿಸಲು ಹೋದೆ. ಪೂಜಾವಿಧಿಗಳನ್ನೆಲ್ಲ ಸಾಂಗವಾಗಿ ಮಾಡಿಸಿಯಾದ ಮೇಲೆ, ಕೊನೆಯಲ್ಲಿ ಸತ್ಯನಾರಾಯಣ ಪೂಜಾಫಲದ ಕಥಾಭಾಗವನ್ನು ಹೇಳುವುದು ವಾಡಿಕೆ. ಮನೆಯ ಯಜಮಾನರು, ''ಈಗ ಸತ್ಯನಾರಾಯಣನ ಕಥೆ ಹೇಳು'' ಎಂದರು ನನಗೆ. ಅಲ್ಲಿಯವರೆಗೂ ಚಾಚೂ ತಪ್ಪದೆ ಪೂಜೆ ಮಾಡಿಸಿದ್ದ ನಾನು ಅವರಿಗೆ ಮೆಚ್ಚುಗೆಯಾಗಿದ್ದೆ. ಚಿಕ್ಕವನು ಎನ್ನುವ ಸಲಿಗೆ ಮತ್ತು ಪ್ರೀತಿಯಿಂದ ಅವರು ಇಟ್ಟ ಬೇಡಿಕೆಗೆ ನನ್ನಲ್ಲಿ ಉತ್ತರ, 'ಇಲ್ಲ' ಎನ್ನುವುದಾಗಿತ್ತು. ''ನನಗೆ ಕಥೆ ಬರುವುದಿಲ್ಲ; ಪುಸ್ತಕ ಇದೆ; ಕನ್ನಡದಲ್ಲಿ ಕಥಾಪ್ರಸಂಗವನ್ನು ಓದಿ ಹೇಳುತ್ತೇನೆ'' ಎಂದೆ. ''ಓ.... ಕನ್ನಡದಲ್ಲಿರುವುದನ್ನು ನೀನಾದರೂ ಓದಿ ನಮಗೆ ಹೇಳಬೇಕೆ? ನಾವೇ ಓದಿಕೊಳ್ಳುತ್ತೇವೆ. ಕಥೆ ಹೇಳುವುದು ಎಂದರೆ ನಿಮ್ಮ ತಂದೆಯ ಹಾಗೆ ಸಂಸ್ಕೃತ ಶ್ಲೋಕಗಳನ್ನು ರಾಗವಾಗಿ ಓದಿ ಕನ್ನಡದಲ್ಲಿ ಹೇಳುವುದು.... ಅದನ್ನು ನೀನು ಕಲಿತಿಲ್ಲವೇ?'' ಎಂದರು. ಅವರು ಹಾಗೆ ಹೇಳಿದ್ದು ನನಗೆ ತುಂಬ ಪೆಚ್ಚಾಯಿತು; ನಾನು ಆ ದಿನವೇ ಒಂದು ಸಂಕಲ್ಪ ಮಾಡುವ ಹಾಗಾಯಿತು. ಹೇಗಾದರೂ ಮಾಡಿ ಕಥೆ ಹೇಳುವುದನ್ನು ಕಲಿಯಲೇಬೇಕು ಎಂದು ನಿರ್ಧರಿಸಿದೆ.

ಅಂದಿನಿಂದಲೇ ಪ್ರಾರಂಭವಾದದ್ದು ನನ್ನ 'ವಾಲ್ಮೀಕಿ ರಾಮಾಯಣ' ಅಧ್ಯಯನ! ರಾಮಾಯಣ ಮಹಾಕಾವ್ಯದಲ್ಲಿ, 'ರಾಮಾಯಣವನ್ನು ಓದುತ್ತಲೇ ಇರುವವನು ವಾಕ್ಕಿನಲ್ಲಿ ಬಹಳ ಗಟ್ಟಿಗನಾಗುತ್ತಾನೆ' ಎನ್ನುವ ಮಾತೊಂದಿದೆ.

ಅದ್ಭುತವಾದ ಮಹಾಕಾವ್ಯ ರಾಮಾಯಣ. ಮಹಾಕಾವ್ಯಗಳ ಓದು ವ್ಯಕ್ತಿಯನ್ನೂ ವ್ಯಕ್ತಿತ್ವವನ್ನೂ ಬೆಳೆಸುತ್ತದೆ. ವಾಕ್‌ಶಕ್ತಿ ಬೆಳೆಯುತ್ತದೆ.

ರಾಮಾಯಣವನ್ನು ಓದುತ್ತಾ ಹೋದಂತೆ ನನ್ನ ಮನಸ್ಸಿನಲ್ಲಿಯೂ ಶ್ರೀರಾಮನ ಜೀವನದ ಸುತ್ತಲೂ ಆದಿಕವಿಯು ಹೆಣೆದಿರುವ ಲೋಕವ್ಯವಹಾರ ನಡವಳಿಕೆಯ ನಿಯಮಾವಳಿಗಳ ಬಗೆಗೆ ಹೆಚ್ಚು ಹೆಚ್ಚಾಗಿ ಅರಿವು ಮೂಡತೊಡಗಿತು. ರಾಮಾಯಣದ ಪ್ರತಿಯೊಂದು ಪ್ರಸಂಗವೂ ನಮಗೆ ಏನನ್ನೋ ತಿಳಿಸಿಹೇಳುತ್ತದೆ ಎಂಬುದು ದೃಢವಾಯಿತು. ಸಂಪ್ರದಾಯದ ಬೇಲಿಯನ್ನು ಸುತ್ತಲೂ ಹಾಕಿಕೊಂಡು ಕೇವಲ ಧಾರ್ಮಿಕ ವಿಧಿಗಳ ಪರಿಧಿಯಲ್ಲೇ ಬಾಳುವುದರಿಂದ ಮಾತ್ರವೇ ವ್ಯಕ್ತಿ ಏನನ್ನೂ ಸಾಧಿಸಲಾರ ಎಂದು ಬಲವಾಗಿ ಅನ್ನಿಸತೊಡಗಿತು. ರಾಮಾಯಣದಲ್ಲಿ ವಿಶ್ವಾಮಿತ್ರರ ಪಾತ್ರ, ಅವರು ರಾಮಲಕ್ಷ್ಮಣರನ್ನು ಕೊಂಡೊಯ್ದು ರಣನೀತಿಗಳನ್ನು ಕಲಿಸಿ ಲೋಕಕಂಟಕರನ್ನು ಸಂಹಾರ ಮಾಡಿಸಿದ್ದು, ಯಜ್ಞರಕ್ಷಣೆ ಮಾಡಿಸಿದ್ದು, ರಾಮನನ್ನು ಸೀತೆಯು ವರಿಸುವ ಹಾಗೆ ಮಾಡಿದ್ದು, ಇವೆಲ್ಲ ನನಗೆ ಬಹಳ ಹಿಡಿಸಿದವು. ಹಾಗೆ ಮೆಚ್ಚಿಕೊಂಡಂತೆಯೇ ಈ ಪ್ರಸಂಗದ ಕಥೆಯನ್ನೇ ಏಕೆ ಮಾಡಬಾರದು ಎಂದೆನ್ನಿಸಿತು. ಆದರೆ ಸಾರ್ವಜನಿಕರ ಮುಂದೆ ಕಥೆ ಮಾಡುವಷ್ಟು ಆತ್ಮವಿಶ್ವಾಸ, ಕಾವ್ಯ ಪರಿಚಯ ನನ್ನಲ್ಲಿರಲಿಲ್ಲ. ಆದರೂ ಕಥೆ

ಮಾಡಬೇಕು ಎನ್ನುವ ಕಾತರ ಮಾತ್ರ ಇತ್ತು. ಆದಿನ..... ನನ್ನ ಜೀವನದಲ್ಲಿ ಮೊದಲನೆಯ ಸಾರಿ, 'ಸೀತಾಪರಿಣಯ' ದ ಸುಂದರ ಭಾಗವನ್ನು ಸಂಸ್ಕೃತ ಶ್ಲೋಕಗಳನ್ನು ಓದಿಕೊಂಡು ಕಥೆ ಮಾಡಿಯೇಬಿಟ್ಟೆ! ಆದರೆ ಎಲ್ಲಿ? ಮನೆಯಲ್ಲಿ...! ಅಮ್ಮನ ಮುಂದೆ! ನನ್ನ ಅಮ್ಮನೇ ನನ್ನ ಮೊಟ್ಟ ಮೊದಲ ಶ್ರೋತೃ! ಸುಮಾರು ಮುಕ್ಕಾಲುಗಂಟೆ ನಾನು ಹೇಳಿದ ಕಥೆಯನ್ನು ಕೇಳಿದ ಅಮ್ಮನಿಗೆ ನಾನು ಮಾಡುವ ಕಥೆಯ ಶೈಲಿ ಇಷ್ಟವಾಯಿತು. ಆದರೂ ಒಮ್ಮೆಗೇ ತುಂಬ ಹೊಗಳದೆ, ''ಪರವಾಗಿಲ್ಲ. ನೀನೂ ಚೆನ್ನಾಗಿಯೇ ಕಥೆ ಮಾಡಬಲ್ಲೆ. ಆದರೆ ನಿಮ್ಮ ತಂದೆ ಮಾಡುವ ರೀತಿ ಹೇಗಿರುತ್ತದೆ? ನೀನೇ ಕೇಳಿದ್ದೀಯಲ್ಲ? ಹಾಗೆ ರೂಢಿಮಾಡಿಕೋ. ಕೇಳುಗರಿಗೆ ಅದು ತುಂಬ ಚೆನ್ನಾಗಿ ಹಿಡಿಸುತ್ತದೆ, ಮನಮುಟ್ಟುತ್ತದೆ'' ಎಂದು ತಂದೆ ಮಾಡುವ ರೀತಿಗೂ, ನಾನು ಮಾಡಿದ ರೀತಿಗೂ ಇದ್ದ ಕೆಲವು ವ್ಯತ್ಯಾಸಗಳನ್ನು ಹೇಳಿ ತೋರಿಸಿಕೊಟ್ಟರು. ಆ ದಿನ ಅಮ್ಮ ಹೇಳಿದ್ದು ಕೇಳಿ ನನಗೇ ಆಶ್ಚರ್ಯ! ಅವರು ಎಷ್ಟು ಚೆನ್ನಾಗಿ ಎಲ್ಲವನ್ನೂ ಗಮನಿಸುತ್ತಾರೆ, ಅದೆಷ್ಟು ತಿಳಿದಿದ್ದಾರೆ ಎಂದು ಹೆಮ್ಮೆ ಎನಿಸಿತು!

ಹೀಗೆ ಅಮ್ಮನೇ ನನ್ನ ಮೊದಲ ಗುರುವಾದರು. ಕಥೆ ಹೇಳುವ ವಿಧಾನವನ್ನು ತಿದ್ದಿಕೊಳ್ಳಲು ಹೇಳಿಕೊಟ್ಟರು. ನಂಜನಗೂಡಿನಲ್ಲಿ ಸುಮಾರು ಮೂರೂವರೆ ವರ್ಷಗಳ ಅಧ್ಯಯನ ಮುಗಿಸಿ ಬಂದಿದ್ದುದು ನನ್ನ ಆತ್ಮವಿಶ್ವಾಸವನ್ನೂ ಸ್ವಲ್ಪ ಹೆಚ್ಚಿಸಿದ್ದಿತು. ಸಂಸ್ಕೃತ ಕಾವ್ಯವನ್ನು ಓದಬಲ್ಲೆ, ಅರ್ಥ ಹೇಳಬಲ್ಲೆ ಎಂದು ನನ್ನ ಮೇಲೆ ನನಗೇ ನಂಬಿಕೆ ಮೂಡಿತ್ತು. ನಮ್ಮೂರಿನ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಮಗ ನನ್ನ ಹಿರಿಯ ಮಿತ್ರ ಪ್ರಸನ್ನ ಚನ್ನಕೇಶವ ಶಾಸ್ತ್ರೀ. ಆತ ಎಂ.ಎಸ್‌ಸಿ., ನಾನೋ ಲೋಯರ್ ಸೆಕೆಂಡರಿ ಪಾಸು ಮಾಡಿದ್ದವನು. ಅವನಿಗೆ ಸಂಸ್ಕೃತದ ಜ್ಞಾನ ಚೆನ್ನಾಗಿ ಇದ್ದಿತು. ನಾನೂ ಅಧ್ಯಯನಕ್ಕೆ ಹೋಗಿಬಂದ ಮೇಲೆ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ಹೇಳಬಲ್ಲವನಾಗಿದ್ದೆ. ನಾವಿಬ್ಬರೂ ಸೇರಿ ಒಂದು ನಿರ್ಧಾರಕ್ಕೆ ಬಂದೆವು. 'ನಮ್ಮೂರಿನ ದೇವಸ್ಥಾನದಲ್ಲಿ ಕಥೆ ಮಾಡಲು ಪ್ರಾರಂಭ ಮಾಡೋಣ' ಎಂದು ಮಾತಾಡಿ ಕೊಂಡೆವು. ಪ್ರತಿದಿನವೂ ದೇವಸ್ಥಾನದಲ್ಲಿ ಜಾಗಟೆ ಹೊಡೆಯುತ್ತಿದ್ದೆವು. ಬಿಡುವಾಗಿದ್ದ ಐವತ್ತು - ಅರುವತ್ತು ಜನರು ಬರುತ್ತಿದ್ದರು. ಹೀಗೆ ನಾವು ಕಥೆ ಮಾಡಲು ಪ್ರಾರಂಭಿಸಿಯೇ ಬಿಟ್ಟೆವು! ಶ್ರೀ ಕೇಶವಮೂರ್ತಿ (ಹೊಸಹಳ್ಳಿ) ಅಥವಾ ಶ್ರೀ ತಿರುಮಲಾವಧಾನಿ ಕಾವ್ಯವಾಚನ ಮಾಡುತ್ತಿದ್ದರು. ಪ್ರಸನ್ನ ಚನ್ನಕೇಶವಶಾಸ್ತ್ರಿ ಮತ್ತು ನಾನು ವ್ಯಾಖ್ಯಾನ ಮಾಡುತ್ತಿದ್ದೆವು. ಹೀಗೆಯೇ ಪ್ರತಿದಿನವೂ ಬಿಡದೆ ಕುಮಾರವ್ಯಾಸಭಾರತವನ್ನು ಪೂರ್ತಿ ಹೇಳಿದೆವು. ಅಲ್ಲಿಯವರೆಗೆ ನಾನು ನಮ್ಮೂರಿನ ಪೂಜ್ಯ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಯವರು ಹೇಳುತ್ತಿದ್ದ ಕುಮಾರವ್ಯಾಸ ಭಾರತ, ಜೈಮಿನಿಭಾರತ, ಹರಿಶ್ಚಂದ್ರ ಕಾವ್ಯ ಇವುಗಳನ್ನು ಕೇಳಿದ್ದೆ. ನಾನೂ ಅವರ ಹಾಗೆಯೇ ಕಥೆ ಮಾಡಬೇಕು ಎಂದು ಮನಸಾ ಬಯಸಿದ್ದೆ. ಈಗ ಹೀಗೆ ಕಥೆ ಮಾಡಲು ಶುರು ಮಾಡಿದಾಗ ಆ ಕಲೆ ನಮಗೂ ಒಲಿದು ಬರುತ್ತದೆ ಎನ್ನುವ ನಂಬಿಕೆ, ವಿಶ್ವಾಸ ಮೂಡಿತು. ಹಾಗೆಯೇ ನಾವು ವಾಲ್ಮೀಕಿ ರಾಮಾಯಣವನ್ನೂ ಪೂರ್ತಿ ಮಾಡಿದೆವು. ರಾಮಾಯಣ ವಾಚನವನ್ನು ಮಾಡಿದ ಮಂಗಳದ ದಿನ ಕೇಶವಶ್ರೌತಿಗಳೆಂಬ ಹಿರಿಯರು ರವೇಉಂಡೆ ಮಾಡಿಸಿದ್ದರು.

❁ ❁ ❁

ಹೀಗೆ ಕಾವ್ಯವನ್ನು ಹೇಳಹೇಳುತ್ತ ಕವಿಯು ಕಾವ್ಯಗಳಲ್ಲಿ ತರುವ ನವರಸಗಳ ಪರಿಚಯ ಚೆನ್ನಾಗಿಯೇ ಆಯಿತು. ಕಾವ್ಯದ ಮೇಲೆ ಒಂದು ರೀತಿಯ ಹಿಡಿತ ಸಿಕ್ಕಿದಂತಾಯಿತು. ಆದರೆ ಶ್ರೀ ಶಂಕರನಾಯಕ ಮೇಷ್ಟ್ರು ಹೇಳುತ್ತಿದ್ದ ಗುರುಗಳ ಸೇವೆ, ಭಕ್ತಿ, ಮಹಾತ್ಮೆ, ಉಪಾಸನೆ, ತತ್ತ್ವ ವಿಚಾರ, ನೀತಿ, ಧರ್ಮ, ಅಧ್ಯಾತ್ಮ ವಿಚಾರಗಳಿಂದ ನನ್ನ ಮನಸ್ಸು, ವೈರಾಗ್ಯಗೊಂಡು ಸಂನ್ಯಾಸದ ಕಡೆ ವಾಲಿತ್ತು. ಒಮ್ಮೆ ಗಮಕ ಕಲಾನಿಧಿ ರಾಮಶಾಸ್ತ್ರಿಗಳ ಮತ್ತು ವ್ಯಾಖ್ಯಾನ ಚಕ್ರವರ್ತಿ ಲಕ್ಷ್ಮೀಕೇಶವಶಾಸ್ತ್ರಿಗಳ 'ಸುಭದ್ರಾ ಪರಿಣಯ' ಕೇಳಿದ ಮೇಲೆ ನನ್ನ ಸಂನ್ಯಾಸ, ವೈರಾಗ್ಯ - ಇವು ಮನಸ್ಸಿನಲ್ಲಿ ಮಂಜಿನ ಹಾಗೆ ಕರಗತೊಡಗಿದ್ದವು. ಒಮ್ಮೆಯಂತೂ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳು 'ದ್ರೌಪದೀ ಸ್ವಯಂವರ' ಕಥಾಭಾಗವನ್ನು ರಸಪೂರ್ಣವಾಗಿ ಮಾಡಿದುದು, ಅದಕ್ಕೆ ಪೂರಕವಾಗಿ ಶ್ರೀ ರಾಮಶಾಸ್ತ್ರಿಗಳು ವಾಚನ ಮಾಡಿದುದು ನನ್ನಲ್ಲಿ ಅಚ್ಚಳಿಯದೆ ನಿಂತಿತು. ''ದ್ರೌಪದಿಯನ್ನು ಸೃಷ್ಟಿಸುವಾಗ ಬ್ರಹ್ಮನು ಜಗತ್ತಿನ ಅತ್ಯಂತ ಸುಂದರ ವಸ್ತುಗಳೆಲ್ಲದರ ಒಂದೊಂದು ಅಂಶವನ್ನು ತೆಗೆದುಕೊಂಡು ಮಾಡಿದನಂತೆ. ಹಂಸದ ನಡಿಗೆ, ಕೋಗಿಲೆಯ ಧ್ವನಿ, ಗಿಣಿಯ ಮಾತು, ರತಿಯ ರೂಪ, ಕಮಲದ ಮನೋಹರತೆ, ಚಂದ್ರನ ತಂಪು...... ಹೀಗೆ ತೆಗೆದುಕೊಂಡು ಅವಳನ್ನು ರೂಪಿಸಲು ಹೋದಾಗ ಏಕೋ ಮನಸ್ಸಾಗದೆ 'ವೃದ್ಧನಾದ ನಾನು ಈ ವಯಸ್ಸಿನಲ್ಲಿ ಜಗದೇಕ ರೂಪಸಿಯೊಬ್ಬಳನ್ನು ಸೃಷ್ಟಿಸಲಾರೆ' ಎನ್ನಿಸಿ, ಆ ರೂಪಸಿಯ ಸೃಷ್ಟಿಯ ಶಕ್ತಿಯನ್ನು ಯುವಕನಾದ ಮನ್ಮಥನಿಗೆ ಕೊಟ್ಟು ಅವನಿಂದ ದ್ರೌಪದಿಯನ್ನು ಸೃಷ್ಟಿ ಮಾಡಿಸಿದ'' ಎಂದಿದೆ ಕಾವ್ಯದಲ್ಲಿ. ಇರಬಹುದು. ಅದು ಕವಿಸಮಯ, ಕವಿಕಲ್ಪನೆಯೇ ಆಗಿರಬಹುದು. ಆದರೆ ಅದನ್ನು ನಮ್ಮೂರಿನ ಆ ಹಿರಿಯರಿಬ್ಬರೂ ಹೇಳಿದ ರೀತಿ ಸುಮಾರು ಹದಿನೆಂಟರ ಹರೆಯದ ತರುಣನಾಗಿದ್ದ ನನ್ನ ಮನಸ್ಸನ್ನು ಪೂರ್ಣವಾಗಿ ಕಲಕಿಬಿಟ್ಟಿತು. ''ವಾತ್ಸ್ಯಾಯನನ ಕಾಮಸೂತ್ರದಲ್ಲಿ ತರುಣಿ ಒಬ್ಬಳಿಗೆ ತರುಣನೊಬ್ಬನ ಮೇಲೆ ಪ್ರೇಮ ಅಂಕುರಿಸಿದರೆ ಅವಳ ಲಕ್ಷಣಗಳು ಹೇಗಿದ್ದಾವು

ಎಂದು ಹನ್ನೆರಡು ಸೂಚನೆಗಳನ್ನು ಕೊಟ್ಟಿದೆ. ಆ ಹನ್ನೆರಡು ಸೂಚನೆಗಳೂ ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನನ್ನು ಕಂಡ ದ್ರೌಪದಿಯಲ್ಲಿ ಕಾಣಸಿಗುತ್ತವೆ. ಹಾಗಾಗಿ ದ್ರೌಪದಿಯ ಸಖಿಯರಿಗೂ ಇತರರಿಗೂ 'ನಿಜ.... ಇವನು ಮಟ್ಟಿಯ ಮದನ, ಕೃಷ್ಣಾಜಿನದ ಕಂದರ್ಪ, ದರ್ಭೆಯ ಕಾಮ....' ಎನಿಸುತ್ತದೆ ಎನ್ನುತ್ತಾನೆ ಕುಮಾರವ್ಯಾಸ'' ಎಂದು ಬಣ್ಣಿಸಿದರು. ಇದೇ ಹಿರಿಯಜೋಡಿ, ಮತ್ತೊಮ್ಮೆ 'ಉರ್ವಶೀಪ್ರಕರಣ' ಕಥಾಭಾಗವನ್ನು ನಡೆಸಿದರು. ಅದರಲ್ಲಿನ ಪ್ರೇಮ-ಪ್ರಣಯದ ವರ್ಣನೆಗಳು ನನ್ನ ಮನಸ್ಸಿನಲ್ಲಿ ಸಾಕಷ್ಟು ಕಲಕಲಮಾಡಿಬಿಟ್ಟವು. ನಾನು ಈ ಸಾರಿ ನನ್ನ ತೀರ್ಮಾನಗಳನ್ನೆಲ್ಲ ಬದಲಿಸಿ 'ಮನುಷ್ಯಮಾತ್ರದವನಿಗೆ ಎಲ್ಲ ಆಶ್ರಮಗಳ ಅನುಭವವೂ ಇರಬೇಕು.... ಆದ್ದರಿಂದ ಗೃಹಸ್ಥಾಶ್ರಮದ ಅನುಭವ ಪಡೆದೇ ಸಂನ್ಯಾಸಾಶ್ರಮದ ಅನುಭವ ಪಡೆದರಾಯಿತು' ಎಂದು ನಿರ್ಧರಿಸಿಯೇಬಿಟ್ಟೆ. ಮನೆಯಲ್ಲಿ ನಡೆಯುತ್ತಿದ್ದ ನನ್ನ ಮದುವೆಯ ಪ್ರಯತ್ನಗಳ ಬಗ್ಗೆ ತಿಳಿದು ಒಳಗೇ ಸಂತಸಪಟ್ಟೆ.

ನಮ್ಮೂರಿನ ಶ್ರೀನಿವಾಸ ಅವಧಾನಿಗಳು (ನನ್ನ ಗುರುಗಳು ಹಾಗೂ ಸೋದರಮಾವ) ಹುಡುಗಿಯೊಬ್ಬಳನ್ನು ನೋಡಿ, ನಮ್ಮ ಮನೆಯಲ್ಲಿ ತಿಳಿಸಿದರು. ಹುಡುಗಿ ಒಪ್ಪುವ ಹಾಗಿದ್ದಳು. ಆದ್ದರಿಂದ ನನ್ನಿಂದ ಯಾವ ಅಭ್ಯಂತರವೂ ಇರಲಿಲ್ಲ.

ನಾಗವೇಣಿ ನನ್ನ ತಾಯಿಯ ಸೋದರಮಾವನ ಮಗಳು. ತಾಯಿ ಇರಲಿಲ್ಲ. ಸಂಸ್ಕೃತವಿದ್ವಾಂಸರಾದ ತಂದೆಯೇ ಸಾಕಿ ಸಲಹಿ ಬೆಳೆಸಿದ್ದರು. ತಂದೆ ಶಾಮಾವಧಾನಿಗಳು ಹೊಸಹಳ್ಳಿಯವರು. ತಾಯಿ ಲಕ್ಷ್ಮಮ್ಮನವರು. ಬಹಳ ಒಳ್ಳೆಯ ಸ್ವಭಾವ. ಬಹಳ ಉದಾರಿ. ಅಂತೂ ನಾಗವೇಣಿ **೧೯೫೪ರ** ಚೈತ್ರ ಶುದ್ಧ ತ್ರಯೋದಶಿಯಂದು ಮದುವೆಯಾಗಿ ನಮ್ಮ ಮನೆ, ನನ್ನ ಮನಸು ತುಂಬಿ ಬಂದಳು. ತುಂಬಿದ ಮನೆಯೊಂದರ ಹಿರಿಮಗನ ಕೈ ಹಿಡಿದು ಋಷಿಸದೃಶ ಮಾವ, ಇಬ್ಬರು ಅತ್ತೆಯರು ಇದ್ದ ಮನೆಗೆ ಸೇವೆ ಮಾಡಲು ಬಂದಂತಾಗಿತ್ತು. ಪ್ರೀತಿಯ ನಾಲ್ವರು ಮೈದುನರೂ 'ಅತ್ತಿಗೇ ಅತ್ತಿಗೇ' ಎಂದು ಊಟ, ಆಟ, ಪಾಠಗಳಲ್ಲಿ ಮುದಗೊಳಿಸುತ್ತಿದ್ದರು. ನಾನು ನನ್ನ ಕೆಲಸ ಆಗಬೇಕಾದರೆ ಅವರ ತಾಯಿಯನ್ನು ಹೊಗಳಿದರೆ ಆಯಿತು, ನನ್ನ ಇಷ್ಟಾರ್ಥ ನೆರವೇರಿದಂತೆಯೇ! ಇದು ನಮ್ಮ ದಾಂಪತ್ಯದ ಕಿವಿಮಾತು. ಕಾರ್ಯ ವಿಳಂಬವಾದರೆ, ''ಇಂತಹ ಮಕ್ಕಳ ತಾಯಿ ನೀನು, ಅನ್ನಪೂರ್ಣೆ'' ಅಂದರೆ ಕಾರ್ಯಸಿದ್ಧಿ ಖಂಡಿತ! ವಿಷಯ ಗುಟ್ಟಾಗಿರಲಿ!

❁ ❁ ❁

ತಂದೆಯ ತಮ್ಮ ಕೇಶವ ಅವಧಾನಿ ನಮ್ಮ ಚಿಕ್ಕಪ್ಪ. ತಂದೆಯನ್ನು ಕಂಡರೆ ಬಹಳ ಪ್ರೀತಿ ಅವರಿಗೆ. ನಮ್ಮ ಚಿಕ್ಕಪ್ಪನಿಗೆ ಬಹಳ ಚುರುಕು ಬುದ್ಧಿ, ಮುನ್ನುಗ್ಗುವ ಸ್ವಭಾವ. ಹೊಸ ಆವಿಷ್ಕಾರಗಳು ಏನೇ ಬರಲಿ ಅದು ಮೊದಲು ನಮ್ಮೂರಿನ ನಮ್ಮ ಮನೆಗೆ ಬರುವುದಿತ್ತು, ಚಿಕ್ಕಪ್ಪನ ಹಠದಿಂದ. ತಂದೆಗೆ ಅವುಗಳಲ್ಲೆಲ್ಲ ಅಷ್ಟು ಆಸಕ್ತಿ ಇಲ್ಲದಿದ್ದರೂ, ''ಅವೆಲ್ಲ ಅನವಶ್ಯ, ವೃಥಾ ಹಣ ಖರ್ಚು, ನಮಗೇಕೆ ಅವು?'' ಎಂದರೂ, ಚಿಕ್ಕಪ್ಪ ಬಿಡುತ್ತಿರಲಿಲ್ಲ. ಪಿಯಾನೋ, ಗ್ರಾಮಾಫೋನು, ಗ್ಯಾಸ್‌ಲೈಟು, ಗ್ಯಾಸ್ ಸ್ಟೌ, ಮೋಟಾರ್ ಬೈಸಿಕಲ್ ಇತ್ಯಾದಿಗಳು ನಮ್ಮ ಊರಿನಲ್ಲಿ ನಮ್ಮ ಮನೆಗೇ ಮೊದಲು ಬಂದಂಥವುಗಳಲ್ಲಿ ಕೆಲವು. ಒಮ್ಮೆ ಚಿಕ್ಕಪ್ಪ ಒಂದು ಮೋಟರ್ ಬೈಕನ್ನು ಖರೀದಿಸಿ ಮನೆಗೆ ತಂದರು. ಅದನ್ನು ಅಲ್ಲಿ - ಇಲ್ಲಿ ಓಡಿಸಿ, ನೀರಿನಲ್ಲಿ ಹೇಗೆ ಓಡುತ್ತದೆ ಇದು ಎಂದು ಪರೀಕ್ಷಿಸಲು ನೀರಿನೊಳಗೆ ಬೈಕು ಬಿಟ್ಟು, ಸೈಲೆನ್ಸರ ಪೈಪಿಗೆ ನೀರು ನುಗ್ಗಿ ಬೈಕು ಕೆಟ್ಟು ಕುಳಿತಿತಂತೆ. ಹೀಗೆ ಚಿಕ್ಕಪ್ಪನ ಸಾಹಸಗಳು. ನಮ್ಮ ಚಿಕ್ಕಮ್ಮನಾದರೋ... ! ಆಕೆಯೂ ಮಹಾನ್ ಸಾಹಸಿಯೇ. ನೋಡಲು ತುಂಬ ಚಂದ. ಸಂಸ್ಕೃತದಲ್ಲಿ ಮಾತಾಡುತ್ತಿದ್ದರು. ಆ ಕಾಲಕ್ಕೆ ಸೊಗಸಾಗಿ ಹರಿಕಥೆ ಮಾಡುತ್ತಿದ್ದರು. ಆಜಾನುಬಾಹು ಚಿಕ್ಕಪ್ಪನಿಗೆ ಸರಿಯಾದ ಜೋಡಿ ಆಕೆ. ಆದರೆ ನಮ್ಮ ದುರದೃಷ್ಟ.... ನಮ್ಮ ಚಿಕ್ಕಪ್ಪ ಚಿಕ್ಕ ವಯಸ್ಸಿನಲ್ಲೇ ಕಾಲವಾದರು. ಅವರು ತೀರಿಕೊಂಡಾಗ ಅವರಿಗೆ ಕೇವಲ ಇಪ್ಪತ್ತೈದು ವರ್ಷ. ಚಿಕ್ಕಪ್ಪ ತೀರಿಕೊಂಡ ಅನಂತರವೂ ಚಿಕ್ಕಮ್ಮ ಕೆಲವು ವರ್ಷಗಳ ಕಾಲ ಊರಿನಲ್ಲೇ ಇದ್ದರು.

ನನಗೆ ಆಗ ನಾಲ್ಕು ವರ್ಷ. ಏಕೋ ಏನೋ ಚಿಕ್ಕಮ್ಮ ಇದ್ದಕ್ಕಿದ್ದ ಹಾಗೆ ಕಾಶಿಗೆ ಹೊರಟುಬಿಟ್ಟರು. ಹಾಗೆ ಹೊರಟ ಅವರನ್ನು ಉದ್ದೇಶಿಸಿ ಯಾರೋ, ''ನಿನ್ನ ಉಪನಯನಕ್ಕೆ ಅವರು ಬರುವುದಿಲ್ಲವೇ ಕೇಳು'' ಎಂದರು. ನಾನು ಚಿಕ್ಕಹುಡುಗ, ಹಾಗೆಯೇ ಚಿಕ್ಕಮ್ಮನನ್ನು ಕೇಳಿದಾಗ ಚಿಕ್ಕಮ್ಮ ನನ್ನ ತಲೆಸವರಿ, ''ಖಂಡಿತ ಬರುತ್ತೀನಪ್ಪ.... ಖಂಡಿತ ಬರುತ್ತೀನಿ'' ಎಂದರು. ಅದು ಕೇವಲ ಬಾಯಿಮಾತಿನ ಭರವಸೆಯಾಗಿತ್ತು ಎಂದು ಆಗ ನನಗೆ ಅರ್ಥವಾಗಲಿಲ್ಲ.

ಕಾಶಿಗೆ ಹೋದ ಚಿಕ್ಕಮ್ಮ ಅಲ್ಲಿನ 'ಪೂರ್ಣಾನಂದ ಸ್ವಾಮೀಜಿಯ ಮಠ'ದಲ್ಲಿ ತಾವು ಉಳಿದುಕೊಳ್ಳಲು ಒಂದು ಸಣ್ಣ ಕೋಣೆಯನ್ನು ಕೇಳಿದರು. ಅಲ್ಲಿನ ಮೇಲ್ವಿಚಾರಕರು ಬಹಳ ಶ್ರೀಮಂತರು, ಆದರೆ ಅವರು ಪರಸ್ಥಳದಲ್ಲಿದ್ದರು. ಅದಾಗಲೇ ಶಿಥಿಲವಾಗಿದ್ದ ಆ ಮಠವನ್ನು ಚಿಕ್ಕಮ್ಮನಿಗೇ ಒಪ್ಪಿಸಿ, ''ನೀವು ಇಲ್ಲಿಯೇ ಉಳಿದುಕೊಳ್ಳಿ. ಬೇರೆ ಕೋಣೆಗಳನ್ನು ಕೇಳಿಕೊಂಡು ಬಂದವರಿಗೆ ಬಾಡಿಗೆಗೆ ಕೊಡಿ. ಆ ಹಣದಿಂದ ಸಾಧ್ಯವಾದರೆ ಈ ಮಠವನ್ನು ಚೆನ್ನಾಗಿ ಮಾಡಿ'' ಎಂದರು. ಹಾಗೆ ಅಲ್ಲಿಗೆ ಹೋಗಿ ನೆಲೆಸಿದ ಚಿಕ್ಕಮ್ಮ ಛಲದಿಂದ, ತಾನು ವಿಧವೆಯಾಗಿದ್ದರೂ ಪರಸ್ಥಳದಿಂದ ಬಂದಿದ್ದರೂ ಅದು ಅಪರಿಚಿತ ಸ್ಥಳವಾದರೂ ಹಿಂಜರಿಯದೆ, ಮಠದ ಮೇಲ್ವಿಚಾರಣೆಯನ್ನು ವಹಿಸಿಕೊಂಡು

ಸಮರ್ಥವಾಗಿ ನಿರ್ವಹಿಸಿದರು. ಬಿದ್ದುಹೋಗಿದ್ದ ಮಠದ ಕೋಣೆಗಳನ್ನು ಮತ್ತೆ ಕಟ್ಟಿಸಿದರು. ಶಿಥಿಲವಾಗಿದ್ದ ಭಾಗಗಳ ರಿಪೇರಿ ಮಾಡಿಸಿದರು. ನೂರಾರು ಮಂದಿ ಮಠದಲ್ಲಿ ನೆಮ್ಮದಿಯಾಗಿ ಉಳಿದುಕೊಳ್ಳುವ ಹಾಗೆ ಮಾಡಿದರು. ಕಾಶಿಯ ಜನರಲ್ಲಿ ಒಂದಾಗಿ ಬೆರೆತರು.

'ಮತ್ತೂರ ಗೌರಮ್ಮ' ಎಂದೇ ಹೆಸರುವಾಸಿಯಾದ ಚಿಕ್ಕಮ್ಮನನ್ನು ಸರಿಸುಮಾರು ಕಾಶಿಯ ಮಂದಿಯೆಲ್ಲ ತಿಳಿದುಕೊಂಡಿದ್ದರು. ಹೊಳೆಯನ್ನು ದಾಟಿಸುವ ಅಂಬಿಗರು ದಕ್ಷಿಣದ ಕಡೆಯಿಂದ ಯಾರಾದರೂ ಹೋಗಿದ್ದು ಕೈಯಲ್ಲಿ ಹಣವಿಲ್ಲದೆ 'ಮತ್ತೂರು ಗೌರಮ್ಮನವರ ಮಠಕ್ಕೆ ಹೋಗುತ್ತಿದ್ದೇವೆ' ಎಂದರೆ, ದೋಣಿಯಲ್ಲಿ ಹೊಳೆ ದಾಟಿಸಿದ್ದಕ್ಕೆ ಹಣ ಕೊಡಬೇಕು ಎಂದೂ ಕೇಳುತ್ತಿರಲಿಲ್ಲ. ಅಷ್ಟು ನಂಬಿಕೆಯಿಂದ, 'ಗೌರಮ್ಮನ ಕಡೆಯ ಜನ ಮೋಸಮಾಡುವುದಿಲ್ಲ' ಎನ್ನುವ ವಿಶ್ವಾಸದಿಂದ, ನದಿ ದಾಟಿಸುತ್ತಿದ್ದರು. ಹಾಗೆ ತಮ್ಮ ವರ್ಚಸ್ಸು ಬೆಳೆಸಿಕೊಂಡರು ನಮ್ಮ ಚಿಕ್ಕಮ್ಮ.

ಆದರೆ ನಮ್ಮ ಚಿಕ್ಕಮ್ಮನ ಈ ಸಾಹಸಗಾಥೆ ನಮಗೆ ಅಷ್ಟು ವಿವರವಾಗಿ ಬಹಳ ವರ್ಷಗಳ ತನಕವೂ ತಿಳಿದಿರಲಿಲ್ಲ. ಕಾಶಿಗೆ ಹೋಗಿ ಬಂದ ಎಷ್ಟೋ ಜನ ನಮ್ಮವರ ಬಾಯಲ್ಲಿ ಕೇಳಿದ್ದುದಷ್ಟೇ ಆಗಿತ್ತು. ಒಟ್ಟಾರೆ ಅಲ್ಲಿ ಅವರು ಬದುಕಿದ್ದಾರೆ, ನೆಲೆಯಾಗಿದ್ದಾರೆ ಎಂಬುದಷ್ಟೇ ಸಮಾಧಾನದ ಅಂಶವಾಗಿತ್ತು. ಆದರೂ ನಮಗೆ ಚಿಕ್ಕಮ್ಮನನ್ನು ಒಮ್ಮೆ ನೋಡಿ ಬರಬೇಕು ಎನ್ನಿಸಿತ್ತು.

ನನ್ನ ತಮ್ಮ ಗೋಪಾಲನು ಇಂಜಿನಿಯರಿಂಗ್ ಪದವಿ ಮುಗಿದ ಸಂದರ್ಭದಲ್ಲಿ ಕಾಲೇಜ್ ಟೂರಿನಲ್ಲಿ ಕಾಶಿಗೆ ಹೋಗಿದ್ದ. ಆಗ ಅವನು ಚಿಕ್ಕಮ್ಮನನ್ನು ನೋಡಿದ್ದ. ನಾವು ಮೊದಲಬಾರಿಗೆ ನಮ್ಮ ಚಿಕ್ಕಮ್ಮನನ್ನು ನೋಡಿದ್ದೂ ಕಾಶೀಯಾತ್ರೆಯ ಸಂದರ್ಭದಲ್ಲಿ. ಆ ಸಮಯದಲ್ಲಿ ಪಂಚತೀರ್ಥಯಾತ್ರೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶ. ದೋಣಿಯಲ್ಲೇ ನದಿಯನ್ನು ಸುತ್ತಾಡಿ ಐದು ಕಡೆ ತರ್ಪಣ ಕೊಟ್ಟು ಶ್ರಾದ್ಧ ಮಾಡಿಬರುವುದು ಆ ಪದ್ಧತಿ. ಗಂಗೆಗೆ 'ವರುಣ'ನದಿಯು ಬಂದು ಸಂಗಮಿಸುವ ಸ್ಥಳದಲ್ಲಿ ಐದನೇ ಶ್ರಾದ್ಧ ಮಾಡಬೇಕು. ಅಲ್ಲೇ ಊರಿನ ಚರಂಡಿ ನೀರೂ ಬಂದು ಸೇರುವುದನ್ನು ನೋಡಿ ನನಗೆ ಏಕೋ ತುಂಬ ತಳಮಳವಾಯಿತು. ಅಲ್ಲಿ ಸ್ನಾನ ಮಾಡಿದರೂ ಮೈ ಶುಚಿಯಾಗಿದೆ ಎನ್ನಿಸಲಿಲ್ಲ. ಕೊನೆಗೆ ದೋಣಿಯವನಿಗೆ ದೋಣಿಯನ್ನು ಮುಂದಕ್ಕೆ ಒಯ್ದು ನದೀಮಧ್ಯೆ ನಿಲ್ಲಿಸಿಕೊಳ್ಳಲು ಹೇಳಿದೆ. ಸ್ನಾನಕ್ಕೆಂದು ಇಳಿದು ನದಿಯಲ್ಲಿ ಮುಳುಗುಹಾಕಿದೆ. ನಾನು ಮತ್ತು ತಮ್ಮ ಸೀತಾರಾಮ ಇಬ್ಬರೂ ಸ್ನಾನ ಮಾಡಿ ಮೇಲೆ ಬಂದೆವು. ದೋಣಿಹತ್ತಿ ತೀರಕ್ಕೆ ಬಂದೆವು. ಅಲ್ಲಿನ ಅರಳಿಕಟ್ಟೆಯ ಬಳಿ ಶ್ರಾದ್ಧ ಮಾಡಲು ಕುಳಿತಾಗ 'ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಳ್ಳಿ' (ಪ್ರಾಚೀನಾವೀತೀ) ಎಂದರು ಅಲ್ಲಿನ ಪುರೋಹಿತರು.

ಯಜ್ಞೋಪವೀತಕ್ಕೆ ಕೈ ಹಾಕಿದೆ, ಯಜ್ಞೋಪವೀತ ಇಲ್ಲ! ನಾನು ಮುಳುಗು ಹಾಕಿದಾಗ ಅದು ನೀರಿನಲ್ಲಿ ತೇಲಿಹೋಗಿತ್ತು. ಆ ಪುರೋಹಿತರ ಸೂಚನೆಯಂತೆ ಅಲ್ಲೇ ಒಂದು ಯಜ್ಞೋಪವೀತವನ್ನು ಹಾಕಿಕೊಂಡು ಶ್ರಾದ್ಧದ ಕೆಲಸಗಳನ್ನು ಮುಗಿಸಿದೆ.

ಮನೆಗೆ ಬಂದು, ''ಚಿಕ್ಕಮ್ಮಾ....'' ಎಂದು ಕೂಗಿದೆ. ಚಿಕ್ಕಮ್ಮ ಒಳಗಿನಿಂದ ಬಂದರು. ''ನನ್ನ ಉಪನಯನ ಆಗಬೇಕಿದ್ದ ಸಮಯದಲ್ಲಿ ನೀವು ಊರಿನಲ್ಲಿ ಇರದೆ ಕಾಶಿಗೆ ಹೊರಟುಬಂದಿರಿ. ನನ್ನ ಉಪನಯನಕ್ಕೆ ನೀವು ಬರಲಿಲ್ಲ. ಆದ್ದರಿಂದ ನಿಮ್ಮ ಮುಂದೆ ಉಪನಯನ ನಡೆಯುತ್ತದೆ'' ಎಂದು, ''ಈಗ ನಾನೇ ಹೋಮವನ್ನು ಮಾಡಿ ನಿಮ್ಮೆದುರಿಗೇ ಯಜ್ಞೋಪವೀತವನ್ನು ಹಾಕಿಕೊಳ್ಳುವೆ! ನಿಮ್ಮೆದುರು ಈಗ ಮತ್ತೊಮ್ಮೆ ಉಪನಯನ ಮಾಡಿಕೊಳ್ಳುವೆ'' ಎಂದೆ. ಚಿಕ್ಕಮ್ಮ ನಕ್ಕರು. ಅಲ್ಲಿಯೇ ಚಿಕ್ಕದಾದ ಹೋಮವನ್ನು ಮಾಡಿ, ಶಾಸ್ತ್ರವಿಧಿಯಂತೆ ಯಜ್ಞೋಪವೀತವನ್ನು ಹಾಕಿಕೊಂಡೆ. ಚಿಕ್ಕಮ್ಮನಿಗೂ, ಅವರೆದುರಿಗೇ ನಾನು ಉಪನಯನ ಸಂಸ್ಕಾರ ಮಾಡಿಕೊಂಡಷ್ಟೇ ಸಂತೋಷವಾಗಿತ್ತು.

ಅರಳೀ ಕಟ್ಟೆಯ ಬಳಿ ನನ್ನ ಮೈಮೇಲೆ ಯಜ್ಞೋಪವೀತ ಇಲ್ಲದ್ದು ಕಂಡು ನನ್ನ ಪತ್ನಿ ನಾಗವೇಣಿಗೆ ಪೆಚ್ಚಾಗಿದ್ದಿತು. ಸಂನ್ಯಾಸಿಗಳಿಗೆ ಯಜ್ಞೋಪವೀತ ಇರುವುದಿಲ್ಲ. ನನ್ನನ್ನು ನೋಡಿ ಅವಳಿಗೆ ಸಂನ್ಯಾಸಿಯನ್ನು ನೋಡಿದ ಹಾಗೇ ಭಾಸವಾಗಿ ಮನಸ್ಸು ಕೊರಗಿತ್ತು. ಅವಳ ಕಂದಿದ ಮುಖ ನೋಡಿ ನನಗೆ ಅವಳ ದಿಗಿಲು ಅರ್ಥವಾಗಿತ್ತು. ''ಅದಕ್ಕೇಕೆ ಅಷ್ಟು ಯೋಚನೆ? ನಾನಾಗಿ ಯಜ್ಞೋಪವೀತ ತೆಗೆಯಲಿಲ್ಲ. ಈಗಲೇ ಸಂನ್ಯಾಸಿಯೂ ಆಗೋಲ್ಲ. ಹೇಗಿದ್ದರೂ ನನಗೇ ಎಲ್ಲ ಮಂತ್ರಗಳೂ ಗೊತ್ತಿವೆ. ನಾನೇ ಹಾಕಿಕೊಳ್ಳುತ್ತೇನೆ'' ಎಂದೆ. ಅರೆಕ್ಷಣ ತನ್ನ ಪತಿ ಎಲ್ಲಿ ಸಂನ್ಯಾಸದ ಹಾದಿ ಹಿಡಿದಾನೋ ಎನ್ನುವ ಯೋಚನೆ ಅವಳನ್ನು ಗಲಿಬಿಲಿಗೊಳಿಸಿದ್ದೀತು! ಅವಳ ಆತಂಕ ನನಗೆ ವಿನೋದವಾಗಿ ಕಂಡಿತ್ತು. ಅನಂತರ ಸಮಾಧಾನವಾಗಿ ಮುಂದಿನ ಕಾರ್ಯದಲ್ಲಿ ಸಹಭಾಗಿನಿ ಆದಳು ಅನ್ನಿ.

೬. ತಂದೆಯ ಸಾವು

ನಿಜ. ನನ್ನ ಸ್ವಭಾವ ಮೊದಲಿನಿಂದಲೂ ಸ್ವಲ್ಪ ವಿನೋದಪ್ರಿಯವಾಗಿತ್ತು. ಅದಕ್ಕೇ ನನಗೆ ನಾಟಕಗಳಲ್ಲಿ ತುಂಬ ಆಸಕ್ತಿ. ಕಾವ್ಯಗಳನ್ನು ಓದುವಾಗ, 'ಅಂಥವನ್ನು ಸೇರಿಸಿ ರಂಗದ ಮೇಲೆ ತಂದರೆ ಅದೆಷ್ಟು ಪರಿಣಾಮಕಾರಿಯಾಗಿ ಇರುತ್ತದೆ' ಎನ್ನಿಸುತ್ತಿತ್ತು. ಅದಕ್ಕಿದ್ದ ಮತ್ತೂ ಒಂದು ಕಾರಣ, ನಮ್ಮ ತಂದೆ ಯಕ್ಷಗಾನದಲ್ಲಿ ಅಭಿನಯಿಸುತ್ತಿದ್ದುದು. ಅವರ ಕಲಾಭಿರುಚಿಯ ಅಂಶವೇ ಬಹುಶಃ ನನಗೂ ಬಂದಿತ್ತು.

ಒಮ್ಮೆ, ನಾವು ಗೆಳೆಯರೆಲ್ಲ ಸೇರಿ 'ಭೂಕೈಲಾಸ' ನಾಟಕವನ್ನಾಡೋಣ ಎಂದು ತೀರ್ಮಾನಿಸಿದೆವು. ಆ ನಾಟಕದಲ್ಲಿ ನನ್ನದು ವಿಭೀಷಣನ ಪಾತ್ರ ಎಂದಾಯಿತು. ತಂದೆಯನ್ನು ಹೇಗಾದರೂ ಈ ವಿಷಯಕ್ಕೆ ಒಪ್ಪಿಸಬೇಕಿತ್ತು. ಅವರನ್ನು ಕೇಳಿದಾಗ ಅವರು, ''ಅಶ್ವತ್ಥ, ಈವರೆಗೆ ನಿನ್ನ ತೂಕದ ಬಣ್ಣ ಮೆತ್ತಿಕೊಂಡು ನಾನು ಪಾತ್ರ ವಹಿಸಿಯಾಗಿದೆ. ನಿನಗೆ ಈ ಹವ್ಯಾಸ ಬೇಡ. ನೀನು ಸುಮ್ಮನೆ ಅಧ್ಯಯನ ಮಾಡು ಸಾಕು'' ಎಂದರು. ನಾನು ಸುಮ್ಮನಿರುವ ಹಾಗಿರಲಿಲ್ಲ. ಏಕೆಂದರೆ ನಾವು ಅದಾಗಲೇ ಐದಾರು ಸಾರಿ ಸಂಭಾಷಣೆ, ಸನ್ನಿವೇಶ ಎಲ್ಲವನ್ನೂ ಚೆನ್ನಾಗಿ ಅಭ್ಯಾಸ ಮಾಡಿಯಾಗಿತ್ತು. ಆಗ ನಾನೇ ಧೈರ್ಯ ವಹಿಸಿ, ''ನೀವು ಈಗ ಇಲ್ಲ ಎನ್ನಬೇಡಿ.... ಇದೊಂದೇ ಸಾರಿ. ನಾವು ಅದಾಗಲೇ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದೇವೆ. ಈಗ ನಾನು ಬರುವುದಿಲ್ಲ ಎನ್ನುವುದು ಕಷ್ಟ. ಇನ್ನು ಯಾವಾಗಲೂ ನಾನು ಬೇರೆ ನಾಟಕಗಳಲ್ಲಿ ಮಾಡುವುದಿಲ್ಲ. ದಯವಿಟ್ಟು ಒಪ್ಪಿಗೆ ಕೊಡಿ'' ಎಂದೆ. ನನ್ನ ಗೆಳೆಯರೂ, ''ಇದೊಂದು ಸಾರಿ 'ಆಗಲಿ' ಎನ್ನಿ'' ಎಂದು ಬೇಡಿದಾಗ ತಂದೆ ಒಪ್ಪಿಗೆ ಕೊಟ್ಟರು.

ನಾಟಕದ ದಿನ ಮತ್ತೂರು-ಹೊಸಹಳ್ಳಿ ಗ್ರಾಮದವರೆಲ್ಲರೂ ಸೇರಿದ್ದರು. ನಾಟಕವೂ ಪ್ರಾರಂಭವಾಯಿತು. ನನ್ನ ಗೆಳೆಯ ಮಹಾಬಲನದು ರಾವಣನ ಪಾತ್ರ. ರಾವಣನು ದಿಗ್ವಿಜಯಕ್ಕೆ ಹೊರಟ. ವಿಭೀಷಣನಿಗೆ ಇದು ಅಕಾರ್ಯ ಎಂದು ತಿಳಿದಿತ್ತು. ಸಭೆಯಲ್ಲಿ ವಿಭೀಷಣನಾದ ನಾನು ''ಬೇಡ, ಹಾಗೆ ಮಾಡಬೇಡ'' ಎಂದು ತಡೆದೆ. ಆದರೂ ಅವನು ಹೊರಟ. ಆಗ ಅನಿರೀಕ್ಷಿತವಾಗಿ ಅವನ ಕಿರೀಟ ತಲೆಯಿಂದ ಕಳಚಿ ಬಿದ್ದುಹೋಯಿತು. ಜನರೆಲ್ಲ ನೋಡುತ್ತಿದ್ದರು. ಏನಾದರೂ ನಾವು ಮಾಡಲೇಬೇಕಿತ್ತು. ನಾನು ಇದ್ದಕ್ಕಿದ್ದಂತೆ, ''ಅಣ್ಣ, ನಿನ್ನೆಯಿಂದಲೂ ಹೇಳುತ್ತಿದ್ದೇನೆ 'ಬೇಡ' ಎಂದು. ನೀವು ಕೇಳಲಿಲ್ಲ. ಈಗ ನೋಡಿ ಹೇಗಾಯಿತು? ನಿಮ್ಮ ಕಿರೀಟವೇ ಕೆಳಗೆ ಬಿದ್ದಿತು. ಏನೋ ಅಪಶಕುನ ಇದು ಎನ್ನಿಸುವುದಿಲ್ಲವೇ?'' ಎಂದು ಮಹಾಬಲನಿಗೆ ಕಣ್ಣುಸನ್ನೆ ಮಾಡುತ್ತ, ತೆಗೆದುಹಾಕಿಕೊಳ್ಳಲು ಹೇಳಿದೆ. ನನ್ನ ಸಮಯಸ್ಫೂರ್ತಿ ಎಲ್ಲರ ಮೆಚ್ಚುಗೆ ಗಳಿಸಿದ್ದಿತು! ಇದು ತಿಳಿದ ಪೂಜ್ಯ ಲಕ್ಷ್ಮೀಕೇಶವಶಾಸ್ತ್ರಿಗಳು ''ಶಹಬ್ಬಾಸ್, ಸಮಯಸ್ಫೂರ್ತಿ ಅಂದ್ರೆ ಇದು, ಅಭಿನಯ ಅಂದ್ರೆ ಇದು'' ಎಂದು ಪ್ರಶಂಸಿಸಿದರು.

❁ ❁ ❁

ನಮ್ಮೂರಿಗೆ ನಾಲ್ಕು ಮೈಲಿ ದೂರದ ಹಳ್ಳಿಯಲ್ಲಿ ವೆಂಕಟಪ್ಪ ಎಂಬ ರೈತನಿದ್ದ. ಒಮ್ಮೆ ಅವನು ನಮ್ಮ ತಂದೆಯ ಹತ್ತಿರ ಐನೂರು ರೂ. ತೆಗೆದುಕೊಂಡಿದ್ದ. ತಂದೆಯವರು ಕಾಲವಾದರೂ ಅವನು ಸಾಲ ತೀರಿಸಿರಲಿಲ್ಲ. ನಮ್ಮ ಸೋದರಮಾವನಿಗೆ ಈ ವಿಷಯ ತಿಳಿದಿತ್ತು. ಮಾವ ನನ್ನನ್ನೂ ಕರೆದುಕೊಂಡು ಅವನ ಹಳ್ಳಿಗೆ ಹೋದರು. ನಮ್ಮ ಜತೆ ನನ್ನ ಗೆಳೆಯ ರಾಜನೂ ಬಂದಿದ್ದ. ನಾವು ಅಲ್ಲಿ ತಲುಪಿ ಅವನ ಮನೆಗೆ ಹೋದಾಗ ಅವನು ಯಥಾಪ್ರಕಾರ 'ಹಣವಿಲ್ಲ' ಎಂದ, ತಣ್ಣಗೆ. ''ನನ್ನ ಹತ್ತಿರ ದುಡ್ಡಿಲ್ಲ ಅಯ್ಯಾರೆ! ನಿನ್ನೆ ಹಾಸನದಿಂದ ಒಂದು ಜೊತೆ ಎತ್ತು ತಂದಿದ್ದೀನಿ. ಅದನ್ನು ಹೊಡೆದುಕೊಂಡು ಹೋಗಿ, ಹಣ ವಜಾ ಮಾಡಿ'' ಎಂದ. ಆ ಸಮಯದಲ್ಲಿ ನಮಗೂ ಒಂದು ಜೊತೆ ಎತ್ತು ಬೇಕಿದ್ದಿತು. ನಾವು ಆಗೀಗ ನೋಡುತ್ತಿದ್ದರೂ ನಮ್ಮ ಮನಸ್ಸಿಗೆ ಹಿಡಿಸಿದ ಎತ್ತುಗಳು ಆವರೆಗೆ ಸಿಕ್ಕಿರಲಿಲ್ಲ. ಮಾವ ಅವನು ತೋರಿಸಿದ ಎತ್ತುಗಳನ್ನು ನೋಡಿದರು. ಎತ್ತರವಾಗಿದ್ದು ದೊಡ್ಡ ಕೊಂಬುಗಳಿದ್ದ ಆ

ಎತ್ತುಗಳು ತುಂಬಾ ಬಡಕಲಾಗಿದ್ದು ಮುದಿಯಾಗಿದ್ದವು. ಅದನ್ನು ನೋಡಿ ಮಿತ್ರ ರಾಜು, ''ಅಶ್ವತ್ಥಾ, ಈ ಎತ್ತುಗಳನ್ನು ನಾವು ತೆಗೆದುಕೊಂಡು ಊರಿಗೆ ಹೋದರೆ, 'ಮುದಿ ಎತ್ತು ತಂದಿದಾರೆ' ಅಂತಾರೆ ಕಣೋ ಎಲ್ಲರೂ! ಬೇಡ'' ಎಂದ.

ನಾನೂ ಅದನ್ನೇ ಮಾವನಿಗೆ ಹೇಳಿ, ನಾವೆಲ್ಲ ಬರಿಗೈಲಿ ಊರಿಗೆ ಹಿಂದಿರುಗಿದೆವು. ಆದರೆ ಮಾವ ರಾತ್ರಿಯೆಲ್ಲ ಯೋಚನೆ ಮಾಡಿ, ಬೆಳಗಾಗಿ ಎದ್ದು ಅವನಲ್ಲಿಗೆ ಹೋಗಿ, ಎತ್ತುಗಳನ್ನು ಮತ್ತೆ ಸರಿಯಾಗಿ ಸುಳಿ ಎಲ್ಲಾ ನೋಡಿ ನಿರ್ಧರಿಸಿದರು. ವ್ಯವಹಾರಕುಶಲಿಯಾದ ಮಾವ ಅವನಿಗೆ ಹೇಳಿ ಮೇಲೆ ಒಂದು ನೂರು ರೂ. ಕೊಟ್ಟು ಊರಿಗೆ ಎತ್ತುಗಳನ್ನು ಹೊಡೆದುಕೊಂಡು ಬಂದರು.

ಬೆಳಗಾಗಿ ಎದ್ದಾಗ ಮಾವ ಎತ್ತು ತಂದಿದ್ದುದು ನಮಗೂ ಗೊತ್ತಾಯಿತು. ''ಮಾವ, ಯಾಕೆ ತಂದಿರಿ, ಬೇಡ ಎಂದುಕೊಂಡಿದ್ದೆವಲ್ಲಾ?'' ಎಂದು ನಾನು ಮೆಲ್ಲಗೆ ಪ್ರಶ್ನೆ ಮಾಡಿದೆ. ಅದಕ್ಕೆ ಅವರು, ''ಈಗ ಭಾವನೂ ಇಲ್ಲ (ನಮ್ಮ ತಂದೆ), ಅವನು ತೆಗೆದುಕೊಂಡ ದುಡ್ಡನ್ನು ಇನ್ನು ವಾಪಸು ಕೊಡಲಾರ. ನಾನೂ ನೋಡಿದೆ. ಎತ್ತುಗಳ ಸುಳಿ ಚೆನ್ನಾಗಿದೆ. ನಮಗೆ ಒಂದು ವರ್ಷ ಬಂದರೂ ಸಾಕು. ಅದಕ್ಕೇ ತಂದೆ, ಅವನ ಸಾಲವನ್ನು ವಜಾ ಮಾಡಿದೆ'', ಎಂದರು. ನಾವು ಪರಸ್ಪರ ಮುಖ ನೋಡಿಕೊಂಡು ಸುಮ್ಮನಾದೆವು.

ಎತ್ತು ಬಂದಾಗ ರಾಜು ಹೊಸಹಳ್ಳಿಗೆ ಹೋಗಿದ್ದ. ನಮ್ಮಲ್ಲಿಗೆ ಎತ್ತುಗಳು ಬಂದಿವೆ ಎಂದು ತಿಳಿದು ಉತ್ಸಾಹದಿಂದ ಬಂದು, ಎತ್ತುಗಳನ್ನು ಸುತ್ತು ಸುತ್ತೂ ತಿರುಗಿ ನೋಡಿದ.... ''ಮಾವ....'' ಎಂದ. ''ಏನೋ?'' ಎಂದರು. ''ಮಾವ.... ಎತ್ತೇನೋ ತಂದಿರಿ. ಇನ್ನೊಂದು ತರಲಿಲ್ಲ ನೀವು..... ಗೋಮಯ ಹಾಕುವಂಥ ಮೆಷೀನು ಒಂದು ತರಬೇಕಿತ್ತು....'' ಎಂದ (ಅಂದರೆ ಎತ್ತು ಸಗಣಿ ಹಾಕಲೂ ಶಕ್ತಿ ಇಲ್ಲದಷ್ಟು ಬಡಕಲಾಗಿದ್ದು, ಮುದಿಯಾಗಿದೆ ಎಂದು ಅವನ ಅರ್ಥ!) ಅವನ ಮಾತು ಕೇಳಿ ನಮಗೂ ನಗು ತಡೆಯಲಾಗಲಿಲ್ಲ.

ಅಂತೂ ವಾರವೆರಡು ಕಳೆದ ಮೇಲೆ ನಾವು ಹುಲ್ಲು-ಮೇವು ಚೆನ್ನಾಗಿ ಕೊಟ್ಟನಂತರ ಎತ್ತುಗಳು ಪುಷ್ಟಿಗೊಂಡವು. ಸುಮಾರು ಕೆಲಸ ಮಾಡುತ್ತಿದ್ದವು. ಎತ್ತುಗಳ ಗತಿ ನಿಧಾನವಾಗಿದ್ದಿತೇ ವಿನಾ ಸಾಕಷ್ಟು ಬಲವಾಗಿಯೇ ಇದ್ದುವು. ಎಷ್ಟೋ ಸಾರಿ ಬೇರೆಯವರ ಗಾಡಿಯ ಭಾರ ಹೆಚ್ಚಾಗಿದ್ದು ಚಕ್ರ ಹೂತರೆ ಅಥವಾ ಸಿಕ್ಕಿಕೊಂಡರೆ ಅವರ ಎತ್ತುಗಳನ್ನು ಬಿಚ್ಚಿ ನಮ್ಮ ಎತ್ತುಗಳನ್ನು ಕಟ್ಟಿ ಗಾಡಿ ಎಳೆಸುತ್ತಿದ್ದೆವು.

❁ ❁ ❁

ಇದು ನನ್ನ ಬಾಲ್ಯದಲ್ಲಿ ನಡೆದ ಇನ್ನೊಂದು ಘಟನೆ: ನಾವೆಲ್ಲ ಚಿಕ್ಕವರಾಗಿದ್ದಾಗ, ದೊಡ್ಡಮ್ಮ ನಮ್ಮನ್ನೆಲ್ಲ ತುಂಬ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಅವರದೇ ಎಲ್ಲ ಜವಾಬ್ದಾರಿಯೂ. ಹಾಗಾಗಿ ನಮ್ಮ ತಾಯಿಯವರು ಮಕ್ಕಳ ಹಾಗೆ ಆರಾಮವಾಗೇ ಇದ್ದರು. ಮನೆಯಲ್ಲಿ ಮಡಿ-ಮೈಲಿಗೆ ಎಂದು ಸಾಕಷ್ಟು ನಿಯಮಪಾಲನೆ ಇತ್ತು. ತಾಯಿ ಬೆಳಗಿನ ತಿಂಡಿ ಮಾಡಿ ಮಕ್ಕಳಿಗೆ ಕೊಟ್ಟರೆ ಅಲ್ಲಿಗೆ ಅವರ ಆ ದಿನದ ಕೆಲಸ ಮುಗಿಯುತ್ತಿತ್ತು. ಸ್ನಾನವಾದನಂತರ ಮಿಕ್ಕ ಅಡುಗೆ ಇತ್ಯಾದಿ ಕೆಲಸಕ್ಕೆ ದೊಡ್ಡಮ್ಮನೇ! ನಮ್ಮಲ್ಲಿ 'ಪಚ್ಚರಿ ಪುಳಿ' ಅಂತ ಒಂದು ರೀತಿಯ ಖಾರದ ಚಟ್ನಿ ಮಾಡುತ್ತಾರೆ. ಅದು ನನಗೆ ಬಹಳ ಇಷ್ಟ. ಅದು, ಮಾಡಿದ ಅನಂತರ ಎರಡು-ಮೂರು ವಾರಗಳು ಕಲ್ಲುಗಡಿಗೆಯಲ್ಲಿಟ್ಟರೂ ಕೆಡದೆ ಇರುವಂಥದು. ಆ ದಿನ ಬೆಳಗ್ಗೆ ಊಟ ಎಂದಾಗಿತ್ತು. ನಾನು ಊಟಕ್ಕೆ ಕುಳಿತಾಗ ದೊಡ್ಡಮ್ಮ ಚಟ್ನಿ ಬಡಿಸಿದರು. ಕೆಂಪಗಿದ್ದ ಚಟ್ನಿ ನನ್ನ ಹಸಿವನ್ನು ಇನ್ನೂ ಕೆರಳಿಸಿತು. ಮೊದಲೇ ಖಾರಪ್ರಿಯನಾದ ನಾನು, ''ದೊಡ್ಡಮ್ಮ, ನೀವು ಇಷ್ಟೇ ಇಷ್ಟು ಹಾಕಿದರೆ ನನಗೆ ಸಾಲದು. ಇನ್ನೂ ಸ್ವಲ್ಪ ಹಾಕಿ'' ಎಂದೆ. ತಂದೆಯವರು ಹೊರಗೆ ಮಂಚದ ಮೇಲೆ ಮಲಗಿದ್ದರು. ಯಾವುದೋ ಪುಸ್ತಕ ಓದುತ್ತಿದ್ದಿರಬೇಕು. ದೊಡ್ಡಮ್ಮ ಇನ್ನೂ ಸ್ವಲ್ಪ ಹಾಕಿದರು. ''ಇಲ್ಲ ಇಲ್ಲ... ಇದೂ ಸಾಕಾಗುವುದಿಲ್ಲ ನನಗೆ, ಇನ್ನೂ ತುಂಬಾ ಬೇಕು'' ಎಂದೆ. ಗೋಲಿಗಾತ್ರದಷ್ಟು ಹಾಕಿದರು. ''ನೀವು ಗೋಲಿಗಾತ್ರದ ಚಟ್ನಿ ಹಾಕಬೇಡಿ. ಮೋಸಂಬಿ ಗಾತ್ರಕ್ಕೆ ಹಾಕಿ'' ಎಂದೆ. ಅವರಿಗೆ ಅದೇಕೋ ಸಿಟ್ಟು ಬಂದಿತು. ಕಲ್ಲುಗಡಿಗೆಯಲ್ಲಿದ್ದ ಚಕೋತದಷ್ಟು ಚಟ್ನಿಯನ್ನೂ ಬಗ್ಗಿಸಿದರು. ಅಷ್ಟೂ ಚಟ್ನಿ ನನ್ನ ಎಲೆಗೆ ಬಿದ್ದಿತು. ನಾನೂ ಏನೂ ಆಗದವನಂತೆ ಸಂತೋಷವಾಗಿ ಚಟ್ನಿಯಲ್ಲಿ ಅನ್ನ ಕಲಸಿ ತಿನ್ನತೊಡಗಿದೆ. ದೊಡ್ಡಮ್ಮ ಕಣ್ಣು ಅರಳಿಸಿ, ''ಏನೋ! ಅಷ್ಟೂ ತಿನ್ನುತ್ತೀಯಾ?'' ಎಂದರು. ''ಹೌದು. ನೀವು ಹಾಕಿದ ಮೇಲೆ ಬಿಡುತ್ತೇನಾ ನಾನು....'' ಎಂದು ಚಟ್ನಿ ಸವಿಯತೊಡಗಿದೆ. ''ಅಯ್ಯೋ... ಇವನು ಅಷ್ಟೂ ಚಟ್ನಿಯನ್ನು ತಿನ್ನುತ್ತಿದ್ದಾನೇ'' ಎಂದು ಕೂಗಿ ತಂದೆಗೆ ಹೇಳಿದರು. ತಂದೆ ಬಹುಶಃ ನಮ್ಮ ಸಂಭಾಷಣೆಯನ್ನು ಕೇಳಿ ನಡೆದಿರುವುದನ್ನು ಗ್ರಹಿಸಿದ್ದರು. ''ನೀನೇ ಏನೋ ಮಾಡಿದ್ದೀಯೆ. ಈಗ ನೀನೇ ಒಂದು ಪರಿಹಾರವನ್ನು ಮಾಡಬೇಕು'' ಎಂದು ಹೇಳಿ ಸುಮ್ಮನೆ ಮಲಗಿದರು. ದೊಡ್ಡಮ್ಮ ಒಂದೇ ಸಮನೆ ಚಡಪಡಿಸ ತೊಡಗಿದರು.... ''ಓಹೋ ಈ ಭೂತ ಇವತ್ತು ಉಳಿಯುವುದಿಲ್ಲ. ನನಗೆ ಸಿಟ್ಟು ಬಂತು, ಅಷ್ಟು ಚಟ್ನಿಯನ್ನೂ ಬಗ್ಗಿಸಿದೆ; ಹಾಗಂತ ಇವನು ತಿನ್ನಬೇಕೆ? ಖಂಡಿತ ಉಳಿಯೋದಿಲ್ಲ ಇವನು'' ಎಂದರು. ದೊಡ್ಡಮ್ಮನ ಪರದಾಟ ಕೇಳಿ ಅಪ್ಪ ಮಲಗಿದಲ್ಲೇ, ''ಅಶ್ವತ್ಥ! ಏನೋ

ಅದು? ಏನಾಯಿತು?'' ಎಂದರು. ''ಅಪ್ಪ, ಮುಕ್ಕಾಲು ತಿಂದುಮುಗಿಸಿದ್ದೇನೆ. ಇನ್ನು ಸ್ವಲ್ಪವೇ ಇರುವುದು, ಅದನ್ನೂ ತಿಂದುಬಿಡುತ್ತೇನೆ'' ಎಂದೆ. ''ಬೇಡ ಕಣೋ..... ಹೊಟ್ಟೆ ಉರಿಯುತ್ತದೆ'' ಎಂದರು ಅಪ್ಪ. ನಾನಾದರೂ ಕೇಳಲಿಲ್ಲ. ಪೂರ್ತಿ ಎಲ್ಲವನ್ನೂ ಖಾಲಿ ಮಾಡಿಯೇ ಎದ್ದೆ.....

ಹಾಲು ಕುಡಿಯುವುದು ನನಗೆ ಅಭ್ಯಾಸವೇ ಇರಲಿಲ್ಲ. ಖಾರದ ಪದಾರ್ಥಗಳು ಇಷ್ಟವಾಗಿದ್ದುವೇ ವಿನಾ ಹಾಲು, ತುಪ್ಪ, ಮೊಸರು ಇವುಗಳಲ್ಲಿ ನನಗೆ ಪ್ರೀತಿ ಕಡಮೆಯೇ! ಆದರೆ ಆದಿನ ಮಾತ್ರ ದೊಡ್ಡಮ್ಮ ತುಂಬಾ ತಳಮಳಿಸಿ, ''ಅಶ್ವತ್ಥಾ.... ಈವತ್ತಿನಿಂದ ಹಾಲು ಕುಡಿಯೋದಕ್ಕೆ ಶುರು ಮಾಡೋ. ಬೆಳಗ್ಗೆ ಬೆಂಕಿಯಂಥ ಚಟ್ನಿ ಕೊಟ್ಟಿದ್ದೇನೆ. ಈಗ ದಯಮಾಡಿ ಹಾಲು ಕುಡಿ ಮರೀ. ನನಗೆ ಎಷ್ಟೋ ಸಮಾಧಾನ'' ಎಂದು ರಾತ್ರಿ ಒತ್ತಾಯ ಮಾಡಿದರು. ದೊಡ್ಡಮ್ಮನ ಮಾತು ಮೀರಲಾಗದೆ ಅಂದಿನಿಂದ ಹಾಲು ಕುಡಿಯಲು ಪ್ರಾರಂಭಿಸಿದೆ. ನಮ್ಮ ಮನೆಯ ರಾಧೆ ಹಸುವಿನ ಹಾಲು ಎಂದಿಗಿಂತ ಆ ದಿನ ಬಲು ರುಚಿಯಾಗಿದ್ದಿತು. ಆದರೆ ನನ್ನ ಮೊಂಡಾಟದಿಂದಾಗಿ ಪಾಪ...... ದೊಡ್ಡಮ್ಮ, ''ನಾನು ಮಾಡಿದ್ದೇ ತಪ್ಪು. ದಮ್ಮಯ್ಯ! ಈ ಅಶ್ವತ್ಥನಿಗೆ ಏನಾದರೂ ಷಧಿ ಕೊಡಿಸಿ. ಕೋಪದಲ್ಲಿ ನಾ ಮಾಡಿದ ತಪ್ಪಿಗೆ ಅವನು ಅನುಭವಿಸಬೇಕೆ?'' ಎಂದು ತಂದೆಯಲ್ಲಿ ಹೇಳಿ ಸಂಕಟಪಟ್ಟು, ಆ ದಿನವೆಲ್ಲ ಊಟವನ್ನೇ ಮಾಡಲಿಲ್ಲ... ಅಂತೂ ದೊಡ್ಡಮ್ಮನಿಗಾಗಿ ಹಾಲು ಕುಡಿಯುವ ಅಭ್ಯಾಸ ಆ ದಿನದಿಂದಲೇ ಪ್ರಾರಂಭವಾದದ್ದು ಇಂದಿಗೂ ಮುಂದುವರೆದಿದೆ!

❁ ❁ ❁

ಆಜಾನುಬಾಹುವಾಗಿದ್ದ ನಮ್ಮ ತಂದೆ ಹಾಸಿಗೆ ಹಿಡಿದಿದ್ದಾದರೂ ಬಹಳ ಆಕಸ್ಮಿಕವಾಗಿಯೇ. ಆಗ ನನ್ನ ವಯಸ್ಸು ಸುಮಾರು ಹತ್ತೊಂಬತ್ತು. ಮನೆಯ ಮುಂದಿದ್ದ, ದೊಡ್ಡದಾಗಿದ್ದ ಕಲ್ಲೊಂದನ್ನು ತೆಗೆಯಲು ಉದ್ದದ ಹಾರೆ ತೆಗೆದುಕೊಂಡು ನೆಲಕ್ಕೆ ಹಾಕಿದರು. ಆ ಹಾರೆ ಸ್ವಲ್ಪವೇ ಆಳಕ್ಕೆ ಹೋಗಿ ನಿಂತಿತು. ಅಲ್ಲಿ ಭೂಮಿ ಗಟ್ಟಿಯಾಗಿದ್ದೀತು ಎಂದು ಭಾವಿಸಿದರು. ನೆಲಕ್ಕೆ ನೆಟ್ಟ ಹಾರೆಯನ್ನು ತೆಗೆದು ತಮ್ಮ ಬಲವನ್ನೆಲ್ಲ ಬಿಟ್ಟು, ಜೋರಾಗಿ ನೆಲಕ್ಕೆ ಒಗೆದರು. ಆ ಹಾರೆ ತಂದೆಯ ಕೈಯಲ್ಲಿರುವಂತೆಯೇ ವೇಗವಾಗಿ ಭೂಮಿಯೊಳಗೆ ಇಳಿದು ಹಾಗೆಯೇ ಕಾಣೆಯಾಗಿ ಹೋಯಿತು. ಆ ಜಾಗದಲ್ಲಿದ್ದ ಬಿಲದಂತಹ ಜಾಗದೊಳಗೆ ಹಾರೆ ಇಳಿದದ್ದು ಆಕಸ್ಮಿಕವಾಗಿದ್ದು ತಂದೆಗೆ ಅದರ ನಿರೀಕ್ಷೆ ಇರಲಿಲ್ಲವಾಗಿ ಹಾರೆ ಕೈಯಿಂದ ಕಳಚಿಕೊಳ್ಳದೆ ಅವರೂ ಕೈ ಬಗ್ಗಿಸುತ್ತ ಹಾರೆಯ ಉದ್ದಕ್ಕೂ ನೆಲಕ್ಕೆ ಬಾಗಿಬಿಟ್ಟರು. ಹಾಗೆ ಬಾಗಿದುದು ಅವರ ಬೆನ್ನು ಮೂಳೆ ಜಖಂ ಆಗಲು ಕಾರಣವಾಯಿತು. ಅದೊಂದು ನಿಜಕ್ಕೂ ದುರದೃಷ್ಟಕರ ಗಳಿಗೆ ನಮ್ಮ ಜೀವನದಲ್ಲಿ. ಅಷ್ಟು ಆರೋಗ್ಯದಿಂದಿದ್ದು ಆರಾಮವಾಗಿ ಓಡಾಡಿಕೊಂಡಿದ್ದ ತಂದೆ ಈ ಆಕಸ್ಮಿಕ ಅಪಘಾತದಲ್ಲಿ ಪೂರ್ತಿಯಾಗಿ ಸದಾ ಹಾಸಿಗೆಯ ಮೇಲೇ ಮಲಗಿರುವಂತಾಗಿಬಿಟ್ಟರು (ಅಂತಿಮ ಕಾಲದವರೆಗೂ). ಹಾಗೆ ಅವರು ಹಾಸಿಗೆಯಲ್ಲಿ ಮಲಗಿಯೇ ಮೂರ್ನಾಲ್ಕು ವರ್ಷ ಕಳೆದರು. ಅಷ್ಟಾದರೂ ನಮ್ಮ ತಾಯಿಯರು ಅವರ ಸೇವೆ ಮಾಡುವಲ್ಲಿಯಾಗಲಿ, ನಾವು ನಮ್ಮ ಕೈಲಾದ ಸೇವೆಯನ್ನು ಮಾಡುವಲ್ಲಿಯಾಗಲಿ, ಒಂದು ದಿನಕ್ಕೂ ಬೇಸರಗೊಂಡವರಲ್ಲ. ಅವರು ಹಾಗೆ ಮಲಗಿದ್ದರೂ ನಮ್ಮೆಲ್ಲರ ಜತೆಗಿರುವುದೇ ನಮಗೆ ದೊಡ್ಡದೊಂದು ಸಮಾಧಾನವಾಗಿದ್ದಿತು. ತಂದೆಯೂ ಬಹಳವಾಗಿ ನಮ್ಮನ್ನೆಲ್ಲ ಪ್ರೀತಿಸುತ್ತಿದ್ದ ಕಾರಣ, ತಾನು ಹೀಗೆ ಮಲಗಬೇಕಾಯಿತಲ್ಲ ಎಂದು ಎಂದಿಗೂ ಬೇಸರ ಮಾಡಿಕೊಳ್ಳದೆ, ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳದೆ ಸಮಾಧಾನದಿಂದ ಇದ್ದರು. ಅದೂ ನಮ್ಮ ಪುಣ್ಯವೇ ಎಂದುಕೊಳ್ಳಬೇಕು. ಹೀಗಿದ್ದಾಗ ಶಿವಮೊಗ್ಗೆಯ ಶ್ರೀಕೇಶವಮೂರ್ತಿ ಘನಪಾಠಿಗಳು, ತಮ್ಮ ಪುತ್ರಿ ರಾಜಮಣಿಯನ್ನು ನನ್ನ ತಮ್ಮ ಸೀತಾರಾಮನಿಗೆ ವಿವಾಹ ಮಾಡಿಕೊಳ್ಳಲು ಕೇಳಿದಾಗ 'ಒಳ್ಳೆ ಬಾಂಧವ್ಯ. ಸಂತೋಷ. ಆಗಲಿ! ಶುಭಸ್ಯ ಶೀಘ್ರಮ್' ಎಂದರು. ಅನಂತರ ಸೀತಾರಾಮನ ಮದುವೆ ಆಯಿತು.

ತಂದೆಯ ಅವಸಾನಕಾಲ ಬಂದಾಗ, ಆ ಕೊನೆಯ ದಿನಗಳಲ್ಲಿ ಬಹಳವಾಗಿ ನೋವು ತಿಂದರು. ಸದಾ ಹೊಟ್ಟೆಯಲ್ಲಿ ಏನೋ ಸಂಕಟ ಎಂದು ಒದ್ದಾಡುತ್ತಿದ್ದರು. ಇನ್ನೇನು ಅವರ ಅಂತ್ಯ ಸಮೀಪಿಸುತ್ತಿದೆ ಎಂದು ನಮಗೂ ಅನ್ನಿಸತೊಡಗಿತ್ತು. ಅವರು ಶಾಂತರಾಗಿ ಮಲಗಿದ್ದ ಒಂದು ದಿನ, ನಮ್ಮ ತಾಯಿಯೂ ದೊಡ್ಡಮ್ಮನೂ ಬಂದು ಅವರೆದುರು ಕಣ್ಣಲ್ಲಿ ನೀರು ಹಾಕುತ್ತ ನಿಂತರು. ದೊಡ್ಡಮ್ಮ ಗದ್ಗದಿತರಾಗಿ 'ನೀವು ಹೀಗೆ ಮಲಗಿದಿರಿ.... ಮುಂದಕ್ಕೆ ನಮ್ಮ ಗತಿ ಏನು?' ಎಂದರು. ದೊಡ್ಡಮ್ಮನಿಗೆ ತನ್ನದು ಎಂದು ಸಂತಾನವಿಲ್ಲದಿದ್ದಾಗ ಸವತಿಯ ಮಕ್ಕಳನ್ನು ಎಷ್ಟೇ ಆರೈಕೆ ಮಾಡಿ ಅಕ್ಕರೆಯಿಂದ ಬೆಳೆಸಿದರೂ ಪತಿ ಇರುವ ತನಕ ತನ್ನನ್ನು ಆದರಿಸಿಯಾರು, ಆಮೇಲೆ.... ಆಮೇಲೆ.... ತನ್ನನ್ನು ಕಡೆಗಣಿಸಿದರೆ? ತನ್ನ ಗತಿಯೇನು ಎನ್ನುವ ದುಗುಡ ಇದ್ದುದು ಸಹಜವಾಗಿಯೇ ಇದ್ದಿತು. ತಂದೆಗೆ ದೊಡ್ಡಮ್ಮನ ಆತಂಕ ಅರ್ಥವಾಯಿತು...... (ನಮ್ಮ ಇಬ್ಬರು ತಾಯಂದಿರ ಹೆಸರೂ ಲಕ್ಷ್ಮೀದೇವಮ್ಮ ಎಂದೇ ಇದ್ದುದು. ಅದಕ್ಕೆ ತಂದೆ ದೊಡ್ಡಮ್ಮನನ್ನು ಲಕ್ಷ್ಮಿ ಎಂದೂ, ನಮ್ಮಮ್ಮನನ್ನು ದೇವಿ ಎಂದೂ ಕರೆಯುತ್ತಿದ್ದರು.)

''ಲಕ್ಷ್ಮಿ ... ನೀನೇನೂ ಯೋಚಿಸಬೇಡ. ಮಕ್ಕಳೆಲ್ಲ ಒಳ್ಳೆಯವರು. ನೀನೇ ನೋಡುತ್ತಿದ್ದೀಯಲ್ಲ. ನಿನ್ನನ್ನು ತಾಯಿ ಎಂದೇ ನೋಡಿಕೊಳ್ಳುತ್ತಾರೆ. ಆ ಭರವಸೆ ನನಗಿದೆ. ನೀನು ಅವರನ್ನು ತಾಯಿಯ ಹಾಗೆಯೇ ರಕ್ಷಣೆ ಮಾಡಿದ್ದೀಯೆ; ಆರೈಕೆ ಮಾಡಿ, ಪ್ರೀತಿಯಿಂದ ಸಾಕಿದ್ದೀಯೆ.... ನಾನೇನೂ ಅವರಿಗೆ ಹೇಳಬೇಕಿಲ್ಲ.... ನಿಜ. ಮಕ್ಕಳು ದುಷ್ಟರಾಗಿದ್ದರೆ 'ನಿಮ್ಮ ದೊಡ್ಡಮ್ಮನಿಗೆ ಇಷ್ಟು ಅಂಶ ಇಟ್ಟುಬಿಡಿ' ಎಂದೇ ಹೇಳಬೇಕಾಗುತ್ತಿತ್ತು. ಆದರೆ ಅವರು ಹಾಗಿಲ್ಲ. ಒಳ್ಳೆಯ ಮಕ್ಕಳು. ನನ್ನ ಮನಸ್ಸಿಗೆ ಸಮಾಧಾನವಾಗುವಷ್ಟು ಇನ್ನೂ ದೊಡ್ಡವರಾಗಿ ವಿದ್ಯಾವಂತರಾಗಿಲ್ಲ. ಮುಂದೆ ದೇವರು ಅವರನ್ನೆಲ್ಲ ಒಳ್ಳೆಯ ವಿದ್ಯಾವಂತರನ್ನಾಗಿ ಮಾಡಲಿ....'' ಎಂದು ಹೇಳಿ, ಅಷ್ಟು ಮಾತಾಡಿದುದೇ ಆಯಾಸವಾಯಿತೋ, ಅಥವಾ ಭಾವೋದ್ವೇಗ ದಿಂದ ಹೃದಯ ನೊಂದಿತೋ, ತಿಳಿಯದು, ಕಣ್ಣುಮುಚ್ಚಿ ಮಲಗಿದರು.

ತಂದೆ ಹಾಗೆ ಮಲಗಿದ್ದಾಗ ಅವರನ್ನು ನೋಡಿಹೋಗಲು ಬಂದ ಕೆಲವರು, ''ಊರ ಪುರೋಹಿತರಾಗಿ 'ಗುರುಗಳು' ಎನಿಸಿದಿರಿ. ಈಗಲಾದರೂ ಸಂನ್ಯಾಸ ಸ್ವೀಕರಿಸಿ 'ಜಗದ್ಗುರುಗಳು' ಎನಿಸಿಕೊಳ್ಳಿ'' ಎಂದು ಸಲಹೆ ಮಾಡಿದರು. ತಂದೆಯವರು ದ್ವಾರಕಾಪೀಠದ ಸ್ವಾಮೀಜಿಗೂ ತಾವೇ ಪುರೋಹಿತರಾಗಿ ನಿಂತು ಸಂನ್ಯಾಸ ಕೊಡಿಸಿದವರು. ಹಾಗೆ ಅವರು ಅನೇಕರಿಗೆ ಸಂನ್ಯಾಸ ಕೊಡಿಸಿದ್ದರು. ಮನುಷ್ಯ ಜೀವನದಲ್ಲಿ ಬಾಲ್ಯವೂ ಯೌವನವೂ, ಕಳೆದು ಗೃಹಸ್ಥಾಶ್ರಮವೂ ಆದನಂತರ 'ಸಂನ್ಯಾಸ' ತೆಗೆದುಕೊಂಡರೆ, ತಮ್ಮ ಮುಂದಿನ ಪೀಳಿಗೆಗೆ ಇಪ್ಪತ್ತೊಂದು ತಲೆಮಾರಿನವರೆಗೆ ಮಂಗಳವಾಗುತ್ತದೆ ಎನ್ನುವುದು ಮೊದಲಿನಿಂದಲೂ ನಮ್ಮಲ್ಲಿ ಬೆಳೆದು ಬಂದಿರುವ ನಂಬಿಕೆ. ''ನಿಮ್ಮ ಮಕ್ಕಳಿಗೂ ಆ ಖರ್ಚಿನ ಹೊರೆ ಬೇಡ. ನಾವೇ ನಡೆಸಿಕೊಡುತ್ತೇವೆ'' ಎಂದೂ ಊರಿನ ಜನ ಪ್ರಸ್ತಾಪವಿಟ್ಟರು. ಆದರೆ ತಂದೆಗೆ ಈ ಸೂಚನೆ ಅಷ್ಟು ಸರಿ ಎನಿಸಲಿಲ್ಲ. ಅವರು ನೇರವಾಗಿ, ''ಎಲ್ಲವೂ ಚೆನ್ನಾಗಿದ್ದು, ನಾನೂ ಹುಷಾರಾಗಿ ಓಡಾಡಿಕೊಂಡಿರುವ ಹಾಗಿದ್ದರೆ ಖಂಡಿತವಾಗಿಯೂ ಸಂನ್ಯಾಸ ಮಾಡಬಹುದಿತ್ತು. ಆದರೆ ನಾನೇ ಈಗ ಇನ್ನೊಬ್ಬರನ್ನು ಅವಲಂಬಿಸಿಕೊಂಡು ಬದುಕಿದ್ದೇನೆ. ನನ್ನ ಸೇವೆಗೇ ಈಗ ಒಬ್ಬರು ಯಾವಾಗಲೂ ಇರಬೇಕಿದೆ. ಅಂಥದರಲ್ಲಿ ಸಂನ್ಯಾಸವನ್ನು ತೆಗೆದುಕೊಂಡರೆ ಅದರ ಆಚರಣೆ ಕಷ್ಟ! ವ್ಯಾಮೋಹ ಎನ್ನುವುದು ಬಿಟ್ಟರೆ ಸಂನ್ಯಾಸ ಎನ್ನುವುದು ತಾನೇ ತಾನಾಗಿಯೇ ಆದೀತು. ಕಾವೀ ಬಟ್ಟೆಯನ್ನು ಹಾಕಿಕೊಂಡೇ ಸಂನ್ಯಾಸ ಮಾಡಬೇಕೆಂದೇನಿಲ್ಲ. ಅಲ್ಲವೇ? ಹಾಗೆ ಸಂನ್ಯಾಸ ಮಾಡಲೇ ಬೇಕೆನಿಸಿದರೆ ನನಗೇ ಮಂತ್ರ ಬರುತ್ತದೆ. ನಾನೇ ಮಾಡಿಕೊಳ್ಳುತ್ತೇನೆ'' ಎಂದರು. ಆಗ ನನ್ನ ತಮ್ಮ ಗೋಪಾಲನಿಗೆ ಇನ್ನೂ ಹದಿಮೂರು-ಹದಿನಾಲ್ಕರ ವಯಸ್ಸು. ಚಂದ್ರುವಿಗೆ ಉಪನಯನವೇ ಆಗಿರಲಿಲ್ಲ. ಚಿಕ್ಕ ತಮ್ಮ ನಂದನಿಗೆ ಮೂರೂವರೆ ವರ್ಷ ವಯಸ್ಸು. ಜತೆಗೆ ಕಂಗಾಲಾದ ಇಬ್ಬರು ತಾಯಿಯರು... ನಿಜಕ್ಕೂ ನನ್ನ ತಂದೆಯ ಚಿಂತನಾಧಾಟಿಯ ಬಗೆಗೆ ನನಗೇ ಆಶ್ಚರ್ಯ ಎನಿಸಿತು. ಅವರ ದೃಷ್ಟಿಯಲ್ಲಿ ಅದೆಷ್ಟು ಸಮಯಪ್ರಜ್ಞೆ ಇತ್ತು! ಆ ಯೋಚನೆ ಅದೆಷ್ಟು ಸಮಯೋಚಿತ ವಾಗಿತ್ತು! ಸಂಪ್ರದಾಯಬದ್ಧ ವಾತಾವರಣದ ಊರಿನಲ್ಲಿ ಹುಟ್ಟಿ, ಬೆಳೆದು, ಊರ ಪುರೋಹಿತರಾಗಿ ಜೀವನ ನಡೆಸಿದ ಅವರು, ''ಮನುಷ್ಯ ಜೀವನದಲ್ಲಿ ಎಲ್ಲ ಆಶ್ರಮಗಳೂ ಆಗಬೇಕು, ನಾನು ಸಂನ್ಯಾಸ ಮಾಡುತ್ತೇನೆ'' ಎಂದಿದ್ದರೆ ನಾವು ಬೇಡ ಎನ್ನುತ್ತಲೂ ಇರಲಿಲ್ಲ. ಅಥವಾ ಅದನ್ನು ನಡೆಸುವುದು ಹೇಗೆ, ಮುಂದೇನು ಎನ್ನುವ ಇತ್ಯಾದಿ ಯೋಚನೆಗಳು ನಮ್ಮಲ್ಲಿ ಸುಳಿಯುತ್ತಲೂ ಇರಲಿಲ್ಲ. ಆದರೆ ಅವರು ಆ ಬಗ್ಗೆ ಅದೆಷ್ಟು ಚೆನ್ನಾಗಿ ಯೋಚನೆ ಮಾಡಿ ನಿರ್ಧಾರಕ್ಕೆ ಬಂದಿದ್ದರು ?! ನಿಜಕ್ಕೂ ನನ್ನ ತಂದೆಯ ಬಗ್ಗೆ ಇಂದಿಗೂ ಬಹಳ ಹೆಮ್ಮೆ ಎನಿಸುತ್ತದೆ ನನಗೆ !

ಇದಾದನಂತರ ಅಪ್ಪ ಹೆಚ್ಚು ದಿನ ಉಳಿಯಲಿಲ್ಲ. ಒಮ್ಮೆ ಅವರಿಗೆ ಸಹಿಸಲಾರದ ಹೊಟ್ಟೆಯ ನೋವು ಬಂತು. ''ನನ್ನ ಹೊಟ್ಟೆ ಕೊಯ್ದು ಬಿಡು'' ಎಂದು ಹೊಸಹಳ್ಳಿಯಿಂದ ತಮ್ಮನ್ನು ನೋಡಲು ಬಂದಿದ್ದ ತಮ್ಮ ತಮ್ಮನಿಗೆ ಹೇಳಿದರು. ಇದಾದ ಎರಡು ದಿನಗಳಲ್ಲೇ ಅವರಿಗೆ ಎಚ್ಚರ ತಪ್ಪಿತು. ಇನ್ನೇನು ಅವರ ಬದುಕು ಕೊನೆಗೆ ಬಂದಿತು ಎಂದು ತಿಳಿದು ನಮಗೆ ಬಹಳ ದುಃಖವಾದರೂ ವಿಧಿಯಿಲ್ಲದೆ ಮಂಚದ ಮೇಲೆ ಮಲಗಿದ್ದವರನ್ನು ಕೆಳಗೆ ದರ್ಭೆ ಹಾಸಿ, ಅದರ ಮೇಲೆ ಮಲಗಿಸಿದೆವು. ಆ ದಿನವೇ ಸ್ವಲ್ಪ ಹೊತ್ತಿನ ಅನಂತರ ತಂದೆ ಮಗ್ಗುಲಾದರು. ಎಚ್ಚರವೂ ಆಯಿತು. ''ಎಲ್ಲಿ ಮಲಗಿದ್ದೀನಿ ನಾನು?'' ಎಂದು ನೋಡಿದವರೇ, ''ಓಹೋ.... ನನ್ನನ್ನು ದರ್ಭೆಯ ಮೇಲೇ ಮಲಗಿಸಿಬಿಟ್ಟಿದ್ದೀರಾ?'' ಎಂದು ಕೇಳಿದರು. ಆ ಧ್ವನಿಯಲ್ಲಿ ಯಾವ ಏರಿಳಿತಗಳೂ ಇಲ್ಲದಿದ್ದರೂ ನನ್ನ ಮನಸ್ಸು ಮುದುಡಿ ಮುಖ ಚಿಕ್ಕದಾಯಿತು. ''ಛೇ... ನಾವೇಕೆ ಹೀಗೆ ಮಾಡಿದೆವು? ಹೀಗೆ ಮಾಡಬಾರದಿತ್ತು'' ಎನಿಸಿ ಬಹಳವೇ ಕೆಡುಕೆನಿಸಿತು. ''ಆಯ್ತು ಬಿಡು'' ಎಂದರು. ನನಗೆ ಇನ್ನು ತಡೆಯಲಾಗಲಿಲ್ಲ. ನಾವೆಲ್ಲ ಸೇರಿ ಮತ್ತೆ ಅವರನ್ನೆತ್ತಿ ಮಂಚದ ಹಾಸಿಗೆಯ ಮೇಲೆ ಮಲಗಿಸಿದೆವು. ಅನಂತರವೂ ತಂದೆ ಮೂರು ದಿನಗಳು ಇದ್ದರು. ಅವರನ್ನು ನೋಡಿಕೊಳ್ಳುತ್ತಿದ್ದ ನಾನು ದಿನವೂ ಅವರ ಕಾಲಿನ ಮೇಲೆಯೇ ನಿದ್ದೆ ಮಾಡುತ್ತಿದ್ದೆ. ಆ ದಿನ ಅವರು, ''ಅಶ್ವತ್ಥ, ಏಳು'' ಎಂದರು. ನನಗೆ ಅರೆಎಚ್ಚರ. ನಾನು ಏಳಲಿಲ್ಲ.... ಅವರ ಆ ಕೂಗು ನನ್ನ

ಕಿವಿಯಲ್ಲಿ ಇನ್ನೂ ಹಾಗೆಯೇ ಇದೆ. ನಮ್ಮ ಸೋದರ ಸಂಬಂಧಿ ಚಿಕ್ಕಪ್ಪ, ''ಶ್ರಾವಣಶುದ್ಧ ಪಂಚಮಿ ಈದಿನ. ಅಶ್ವತ್ಥ.... ಏಳು.... ನೀರು ಬಿಡು'' ಎಂದರು. ತಂದೆಯ ಕಣ್ಣುಗಳ ದೃಷ್ಟಿ ಮೇಲಕ್ಕೆ ನೆಟ್ಟುಕೊಂಡಿದ್ದವು. ನಾನು ನಿಧಾನವಾಗಿ ನೀರು ಕುಡಿಸಲು ಪ್ರಯತ್ನಿಸಿದೆ.... ತಂದೆಯನ್ನು ದರ್ಭೆಯ ಮೇಲೆ ಮಲಗಿಸಿದೆವು. ಅನಂತರ ಅವರು ಮತ್ತೆ ಏಳಲೇ ಇಲ್ಲ!

ಅವರು ತೀರಿಕೊಂಡಾಗ ನನಗೆ ಇಪ್ಪತ್ತೆರಡು ವರ್ಷ. ನನ್ನ ಕಿರಿಯ ತಮ್ಮ ನಂದ ಮೂರು ವರ್ಷದ ಪುಟ್ಟಕಂದ. ಅವನಿಗೆ ಅದೆಲ್ಲವೂ ಒಂದು ರೀತಿಯ ಆಟವಾಗಿತ್ತು. ಅವನನ್ನು ನೋಡಿದ ಊರಿನವರು, ''ಅಪ್ಪನಿಗೆ ಸಂಸ್ಕಾರ ಮಾಡುವುದಕ್ಕೆಂದೇ ಹುಟ್ಟಿದೆಯಾಪ್ಪಾ ನೀನು !'' ಎಂದು ಮರುಕಪಟ್ಟರು. ಅಪ್ಪನವರ ಸಂಸ್ಕಾರವು ಬಂಧುಗಳೆಲ್ಲರ ಸಹಾಯದಿಂದ ವಿಧಿವತ್ತಾಗಿ ಮತ್ತೂರು ತುಂಗಾತೀರದಲ್ಲಿ ನಡೆಯಿತು.

ತಂದೆ ಕಾಲವಾದದ್ದು ನಮ್ಮ ಪಾಲಿಗೆ ಒಂದು ಯುಗದ ಕೊನೆಯಾದ ಹಾಗೆ ಆಗಿತ್ತು. ಮನೆಯ ಹಿರಿಯರಾಗಿ ದೊಡ್ಡಮ್ಮನೂ ಅಮ್ಮನೂ ಇದ್ದರೂ, ಕುಟುಂಬದ ಜವಾಬ್ದಾರಿ ಹೊರಲು ಹಿರಿಯ ಮಗನಾಗಿ ನಾನೇ ಇದ್ದುದು. ಚಿಕ್ಕಪ್ಪನೂ ಹಿಂದೆಯೇ ತೀರಿಕೊಂಡಿದ್ದರು. ಸೋದರತ್ತೆಯರಿದ್ದರೂ ಅವರವರ ಮನೆಯ ಜವಾಬ್ದಾರಿ ಅವರವರಿಗೆ. ನಮ್ಮ ಮನೆಯ ಜೀವನ ನಿರ್ವಹಣೆ, ಆಗುಹೋಗುಗಳು, ಅಮ್ಮಂದಿರಿಗೂ ತಮ್ಮಂದಿರಿಗೂ ಸಂಬಂಧಪಟ್ಟುದೆಲ್ಲವನ್ನೂ ನಾನೇ ನೋಡಿಕೊಳ್ಳಬೇಕಿದ್ದಿತು. ಅದು ಸಂದರ್ಭದ ಅನಿವಾರ್ಯತೆ. ದಿನಗಳು, ವಾರ, ತಿಂಗಳುಗಳು ಹೆಚ್ಚು ವ್ಯತ್ಯಾಸವಿಲ್ಲದೆ ಸಾಗಿದವು.

ತೋಟದ ಕೆಲಸ, ಊರ ಪೌರೋಹಿತ್ಯ ಇವು ನನ್ನ ದಿನಚರಿಯ ಅವಿಭಾಜ್ಯ ಅಂಗವಾದುವು. ಜತೆಗೆ ಸಂದರ್ಭ ಸಿಕ್ಕಾಗಲೆಲ್ಲ ಬೇರೆ ಯಾವುದೇ ಗುರುತರ ಕೆಲಸಗಳೂ ಇಲ್ಲದಿದ್ದಾಗ ಕಾವ್ಯವಾಚನದ ಜತೆಗೆ ವ್ಯಾಖ್ಯಾನ ಮಾಡಲು ಆಗಾಗ ಬೇರೆ ಊರುಗಳಿಗೂ ಹೋಗಿಬರುವುದಿತ್ತು.

೭. ಅದು ಅಗೋಚರ ಶಕ್ತಿ

ನಾವು ಅಧ್ಯಯನ ಮಾಡಿಬಂದ ಹದಿನೈದು ವರ್ಷಗಳ ಅನಂತರ ಒಮ್ಮೆ ನಂಜನಗೂಡಿಗೆ ನಾನು ಮತ್ತು ಗಮಕಿ ಹೊಸಹಳ್ಳಿ ಶ್ರೀ ಕೇಶವಮೂರ್ತಿಯವರು ಹೋದೆವು. ಆಗ ನನಗೆ ಕಲಿಸಿದ ಇಬ್ಬರು ಗುರುಗಳೂ ಇದ್ದರು. ನಾವು ನೇರವಾಗಿ ಅವರ ಮನೆಗೇ ಹೋದೆವು. ಬಹಳ ವರ್ಷಗಳನಂತರ ಗುರುಗಳನ್ನು ಭೇಟಿಯಾದದ್ದು ಸಂತೋಷವಾಗಿತ್ತು. ಅವರ ಸಮ್ಮುಖದಲ್ಲಿ ಭಾರತ ವಾಚನ - ವ್ಯಾಖ್ಯಾನ ನಡೆಸಬೇಕು ಎನ್ನುವ ಹಂಬಲದಿಂದಲೇ ಅಲ್ಲಿಗೆ ಹೋಗಿದ್ದುದು. ಅಲ್ಲಿನ ಶಂಕರಮಠದಲ್ಲಿ ಆ ದಿನ ವಾಚನ ವ್ಯಾಖ್ಯಾನ ಮಾಡಿದೆವು. ಅವರೆಲ್ಲರಿಗೂ ನಮಗೆ ಕೇವಲ 'ಅಧ್ಯಯನ' ಮಾತ್ರ ಬರುವುದು ಎನ್ನುವ ಭಾವನೆ ಇತ್ತು. ಆದರೆ ಆ ರಾತ್ರಿ ಶ್ರೀ ಕೇಶವಮೂರ್ತಿಯವರ ವಾಚನವನ್ನೂ ನನ್ನ ವ್ಯಾಖ್ಯಾನವನ್ನೂ ಕೇಳಿ ಅವರಿಗೆಲ್ಲ ತುಂಬ ಸಂತೋಷವಾಯಿತು. ಹೆಮ್ಮೆ ಎನಿಸಿತು. ನಾನೂ ಕೇಶವಮೂರ್ತಿಯೂ ಒಂದೇ ವಯಸ್ಸಿನವರು. ಇಬ್ಬರಿಗೂ ಆಗ ಮೂವತ್ತು ವರ್ಷ.

ನಾವು ಅಧ್ಯಯನ ಮಾಡುತ್ತಿದ್ದ ಕಾಲದಲ್ಲಿ ನಮ್ಮ ಪಾಠಶಾಲೆ ನಡೆಸುತ್ತಿದ್ದವರು ಶ್ರೀ ಬಿ.ವಿ. ಪಂಡಿತರು- ನಂಜನಗೂಡಿನ ಸುಪ್ರಸಿದ್ಧ ಆಯುರ್ವೇದ ವೈದ್ಯಕುಟುಂಬದ ಯಜಮಾನರು. ನಮಗೆ ಅವರ ಮನೆಯಲ್ಲೂ ಒಂದು ಕಾರ್ಯಕ್ರಮ ನಡೆಸಿ ಅವರಿಗೂ ಭಾರತವಾಚನವನ್ನು ಕೇಳಿಸಿ ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸಬೇಕು ಎನ್ನುವ ಅಭಿಲಾಷೆ ಇದ್ದಿತು. ನಮ್ಮ ಗುರುಗಳು ನನ್ನನ್ನು ಕರೆದುಕೊಂಡು ಪಂಡಿತರ ಮನೆಗೆ ಹೋದರು. ನಾವು ಹೋದಾಗ ಪಂಡಿತರು ಏಕೋ ಗೆಲುವಾಗಿರಲಿಲ್ಲ. ಅವರ ಮುಖ ಬಾಡಿತ್ತು. ಬೇಸರದಲ್ಲಿದ್ದ ಹಾಗೆ ಕಂಡಿತು. ನಮ್ಮ ಗುರುಗಳು ನನ್ನ ಪರಿಚಯ ಮಾಡಿಕೊಟ್ಟರು. ಅವರ ಮುಖ ಅರಳಿತು, ''ಓಹೋ... ನಮ್ಮ ಮಠದ ವಿದ್ಯಾರ್ಥಿಯೇ? ಹೇಗಿದ್ದವನು ಹೇಗಾಗಿದ್ದಾನೆ?! ಗುರುತೇ ಸಿಗಲಿಲ್ಲ'' ಎಂದರು. ನಾನು ವಿದ್ಯಾರ್ಥಿಯಾಗಿದ್ದಾಗ ಸಣ್ಣಗಿದ್ದೆ, ಕಡಮೆ ಎತ್ತರದವನಾಗಿದ್ದೆ. ಆದರೆ ಈಗ ಸಾಕಷ್ಟು ಬೆಳೆದು ಪ್ರೌಢನಾಗಿದ್ದೆ, ಎತ್ತರಕ್ಕೆ ದಪ್ಪಗಾಗಿದ್ದೆ. ನನ್ನ ಗುರುತು ಸಹಜವಾಗಿಯೇ ಅವರಿಗೆ ಸಿಗಲಿಲ್ಲ. ''ತುಂಬ ಸಂತೋಷ....'' ಎಂದರು. ಆಗ ನಮ್ಮ ಗುರುಗಳು, ''ಇವರು ಸೊಗಸಾಗಿ ಭಾರತವಾಚನ ಮಾಡುತ್ತಾರೆ. ತಮ್ಮ ಮುಂದೆ ಒಂದು

ಕಾರ್ಯಕ್ರಮ ಮಾಡಬೇಕು ಎಂದು ಇವರ ಆಸೆ. ಅದಕ್ಕೇ ನಾನು ಇವರನ್ನು ತಮ್ಮ ಮನೆಗೆ ಕರೆದು ತಂದೆ'' ಎಂದರು. ''ಇಲ್ಲೇ ರಾಮಮಂದಿರದಲ್ಲಿ (ಅದು ಶ್ರೀ ಬಿ.ವಿ. ಪಂಡಿತರು ನಿರ್ಮಿಸಿದ ರಾಮಮಂದಿರ) ಒಂದು ಗಂಟೆ ಕಾರ್ಯಕ್ರಮ ನಡೆಸಲಿದ್ದಾರೆ. ತಾವು ಬರಬೇಕು'' ಎಂದರು ಸೋಮಯಾಜಿ ಗುರುಗಳು. ''ಬರಬಹುದಿತ್ತು, ಆದರೆ ಬೆಂಗಳೂರಿನಲ್ಲಿ ನಮ್ಮ ಬೀಗರೊಬ್ಬರು ನಿಧನರಾಗಿದ್ದಾರೆ. ಸನ್ನಿವೇಶ ಸರಿ ಇಲ್ಲ. ಆಶೌಚವೇನೂ ಇಲ್ಲ. ಆದರೆ ಯಾರಿಗೂ ಹೇಳಿ ಕಳಿಸಲಾಗದು. ಕೇವಲ ನಾವಷ್ಟೇ ಆಗುತ್ತೇವೆ ಕಾರ್ಯಕ್ರಮಕ್ಕೆ. ಹೇಗಾದರೂ ಅವರು ನಮ್ಮ ಹುಡುಗರು. ಈ ಸಾರಿ ರಾಮೋತ್ಸವಕ್ಕೆ ನಾವೇ ಹೇಳಿ ಕಳಿಸಿ, ಕರೆಸಿ ಕಾರ್ಯಕ್ರಮ ಮಾಡಿಸೋಣ'' ಎಂದರು ಪಂಡಿತರು. ''ಹಾಗಲ್ಲ.... ಅವರಿಗೆ ಬೇರೆ ಯಾರಿಗಿಂತಲೂ ನೀವು ಒಬ್ಬರು ಕಾರ್ಯಕ್ರಮಕ್ಕೆ ಬಂದು ಕೇಳಿದರೆ ಸಾಕು ಎಂದು ಆಸೆ. ವಿದ್ಯೆ ಹೇಳಿಕೊಟ್ಟ ಗುರುಗಳು ನಾವಾದರೂ, ಆ ಮಕ್ಕಳಿಗೆ ಅನ್ನ ಕೊಟ್ಟ ಅನ್ನದಾತರು ತಾವು. ಯಾರು ವಿದ್ಯೆ ಮತ್ತು ಅನ್ನ ಕೊಟ್ಟರೋ ಅವರಿಗೆ ತಮ್ಮ ಭಾರತವಾಚನವನ್ನು ಕೇಳಿಸಬೇಕೆಂದು ಅವರ ಆಸೆ ಅಷ್ಟೆ. ಅವರಿಗೆ ದುಡ್ಡಿನ ಆಸೆಯೂ ಇಲ್ಲ. ಜನದಾಸೆಯೂ ಇಲ್ಲ'' ಎಂದರು ನಮ್ಮ ಗುರುಗಳು. ಅವರ ದನಿಯಲ್ಲಿ ಸ್ವಲ್ಪ ಒತ್ತಾಯವೇ ಇದ್ದಿತು. ಒಂದೆರಡು ನಿಮಿಷ ಸುಮ್ಮನಿದ್ದ ಪಂಡಿತರು ಕೊನೆಗೆ, ''ಸರಿ ಹಾಗಾದರೆ, ಭಗವಂತನ ಇಚ್ಛೆ ಹಾಗಿದ್ದರೆ ಆಗಲಿ, ನೀವು ನಮ್ಮ ರಾಮಮಂದಿರಕ್ಕೆ ಆ ಹುಡುಗರನ್ನು ಕರೆತನ್ನಿ. ನಾನು ಸಂಧ್ಯಾವಂದನೆ ಮಾಡಿ ಸಿದ್ಧವಾಗಿ ಬರುತ್ತೇನೆ'' ಎಂದವರೇ ಮುಂದಿನ ರೂಮಿನಲ್ಲಿ ವೇದಾಂತ ಪಾಠ ಹೇಳಿಸಿಕೊಳ್ಳುತ್ತಿದ್ದ ತಮ್ಮ ಮಗ ಶ್ರೀ ನಂಜುಂಡಸ್ವಾಮಿಯವರಿಗೆ ''ನಂಜುಂಡಸ್ವಾಮಿ, ನಮ್ಮ ಶಂಕರಮಠದಲ್ಲಿ ವಿದ್ಯಾಭ್ಯಾಸ ಮಾಡಿದ ಮಾರ್ಕಂಡೇಯ ಅವಧಾನಿ ಬಂದಿದ್ದಾರೆ. ರಾಮಮಂದಿರದಲ್ಲಿ ಭಾರತವಾಚನ ನಡೆಯುತ್ತದೆ'' ಎಂದು ಹೇಳಿದರು. ನಂಜುಂಡಸ್ವಾಮಿಯವರು ಮೈಸೂರಿನಲ್ಲಿ ಇದ್ದವರು. ಸಂಸ್ಕೃತ ಎಂ.ಎ., ಮಾಡಿದ್ದವರು. ಆಯುರ್ವೇದವನ್ನು ಬಹಳ ಚೆನ್ನಾಗಿ ತಿಳಿದಿದ್ದವರು. ಆ ತಂದೆ - ಮಕ್ಕಳ ನಡುವೆ ಹೆಚ್ಚು ಮಾತಿಲ್ಲ. ಒಂದೊಂದೇ ಮಾತು. ಅದರಲ್ಲೇ ಪರಸ್ಪರ ಪ್ರೀತಿ-ವಿಶ್ವಾಸ ವ್ಯಕ್ತವಾಗುತ್ತಿದ್ದಿತು! ನಂಜುಂಡಸ್ವಾಮಿ ಎಂದೂ ಹರಿಕಥೆ, ಉಪನ್ಯಾಸ ಎಂದು ಹೋದವರಲ್ಲ. ಈ ದಿನ ತಂದೆಯವರು ಹಾಗೆ ಹೇಳಿದುದು ಬಹುಶಃ ತನಗೂ ಅಲ್ಲಿಗೆ ಬರಲಿ ಎನ್ನುವ ಉದ್ದೇಶದಿಂದಲೇ ಇರಬೇಕು ಎನ್ನಿಸಿ, ಅವರೂ, ತಮಗೆ ವೇದಾಂತ ಪಾಠಹೇಳುತ್ತಿದ್ದ ಕೇರಳದ ಕಡೆಯ ಗುರುಗಳ ಜತೆಯಲ್ಲಿ ರಾಮಮಂದಿರಕ್ಕೆ ಹೊರಟುಬಂದರು.

ಆ ಸಂಜೆ ಅಲ್ಲಿದ್ದ ವಿದ್ಯಾದಾತರ ಹಾಗೂ ಅನ್ನದಾತರ ಮುಂದೆ ನಾವು ಭೀಷ್ಮ ಪ್ರಸಂಗದ ಕಥೆ ಹೇಳಿದೆವು. ಶ್ರೀ ಕೇಶವಮೂರ್ತಿ ಅಮೋಘವಾಗಿ ವಾಚನ ಮಾಡಿದರು. ಅದರಿಂದ ಸ್ಫೂರ್ತಿ ಹೊಂದಿ ನಾನೂ ಮೈಮರೆತು ಕಥೆ ಹೇಳಿದೆ. ಕಾರ್ಯಕ್ರಮದಲ್ಲಿ ಸಮಯ ಕಳೆದುದೇ ತಿಳಿಯಲಿಲ್ಲ. ಕಥೆ ನಡೆಯುವಾಗ ಶ್ರೀ ಬಿ.ವಿ. ಪಂಡಿತರು ಸಂತಸದಿಂದ ಕಣ್ಣೀರು ಹಾಕುತ್ತಲೇ ಇದ್ದರು. ಕಥೆ ಮುಗಿದ ಅನಂತರ ಅವರೇ ಎದ್ದು ವಂದನಾರ್ಪಣೆ ಮಾಡಿದರು. ನನ್ನನ್ನು ಅಭಿಮಾನದಿಂದಲೂ ಪ್ರೀತಿಯಿಂದಲೂ ಬಿಗಿದಪ್ಪಿ, ''ರಾಮೋತ್ಸವಕ್ಕೆ ಹೇಳಿಕಳುಹಿಸುತ್ತೇನೆ. ಖಂಡಿತ ಬರಬೇಕು. ನಮ್ಮ ವಿದ್ಯಾರ್ಥಿಗಳು ಇಷ್ಟರ ಮಟ್ಟಕ್ಕೆ ತಯಾರಾಗಿದ್ದಾರೆ ಎಂದು ನಮಗೆ ಗೊತ್ತೇ ಇರಲಿಲ್ಲ. ನಿಜಕ್ಕೂ ನಿಮ್ಮ ಬಗ್ಗೆ ನಮಗೆಲ್ಲ ತುಂಬ ಹೆಮ್ಮೆ ಎನಿಸಿದೆ'' ಎಂದರು ಭಾವುಕರಾಗಿ. ನನ್ನ ಕಣ್ಣೂ ತುಂಬಿ ಬಂದು ಅವರಿಗೂ, ನನ್ನ ಗುರುದ್ವಯರಿಗೂ ಬಾಗಿ ನಮಿಸಿದೆ. ಕೃತಾರ್ಥಭಾವ ತುಂಬಿತ್ತು ನನ್ನಲ್ಲಿ..... ಆದರೆ ದುರದೃಷ್ಟ. ಶ್ರೀ ಬಿ.ವಿ. ಪಂಡಿತರು ಇರುವ ತನಕವೂ ಅವರ ಮಗ ನಂಜಂಡಸ್ವಾಮಿ ಇರುವ ತನಕವೂ ನಮಗೆ ಮತ್ತೆ ಅಲ್ಲಿಗೆ ಹೋಗಲು ಸಾಧ್ಯವಾಗಲೇ ಇಲ್ಲ. ಅವರ ಕಾಲಾನಂತರ ಅವರ ಮಗ 'ರಾಮ ತಾರಕ' ಹೋಮ ಮಾಡಿ ನಮಗೆ ಕರೆ ಕಳುಹಿಸಿದ್ದರು. ಆಗ ನಾನು ಮತ್ತು ನಮ್ಮ ಅಳಿಯ ಕುಮಾರಸ್ವಾಮಿ (ಸಂಸ್ಕೃತ ಉಪಾಧ್ಯಾಯ, ರಾಮಕೃಷ್ಣ ಕಾಲೇಜು, ಮೈಸೂರು) ಇಬ್ಬರೂ ಹೋಗಿ ಎರಡು ದಿನಗಳ ಕಾಲ ರಾಮಾಯಣ ವಾಚನ ವ್ಯಾಖ್ಯಾನ ಕಾರ್ಯಕ್ರಮ ಮಾಡಿಬಂದೆವು. ಆಗಲೂ ಶ್ರೀ ಬಿ.ವಿ. ಪಂಡಿತರ ನೆನಪು ನನ್ನನ್ನು ಬಹಳವಾಗಿ ಕಾಡಿತು!

❁ ❁ ❁

ದ್ವಾರಕಾಮಠದ ಸ್ವಾಮೀಜಿ ತೀರ್ಥಹಳ್ಳಿ ಸಮೀಪ ಶಾಖಾಮಠ ಇರುವ ಮುಳುಬಾಗಿಲು ಮಠಕ್ಕೆ ವರ್ಷಕ್ಕೊಮ್ಮೆ ಬರುವುದಿತ್ತು. ಅವರು, ವಿದ್ವಾಂಸರೂ ಪುರೋಹಿತರೂ ಆಗಿದ್ದ ನಮ್ಮ ತಂದೆಗೆ ಪೇಟ ಮತ್ತು ಕೆಂಪು ಬಣ್ಣದ ಜರೀ ಶಾಲೊಂದನ್ನು ಉಡುಗೊರೆಯಾಗಿ ಕೊಟ್ಟಿದ್ದರು. ನಮ್ಮ ತಂದೆ ಆ ಪೇಟವನ್ನು ಹಾಕಿಕೊಂಡು, ಶಾಲನ್ನು ಹೊದ್ದುಕೊಂಡು ಕುಳಿತಿರುವ ಭಾವಚಿತ್ರವೇ ಇಂದಿಗೂ ನಮ್ಮ ಮನೆಯಲ್ಲಿರುವುದು. ತಂದೆಯವರಿಗೆ ದ್ವಾರಕಾಪೀಠದ ಸ್ವಾಮೀಜಿಯನ್ನು ಕಂಡರೆ ಬಹಳ ಭಕ್ತಿ, ಗೌರವ. ಸ್ವಾಮೀಜಿ ಅವರಿಗೂ ತಂದೆಯವರಲ್ಲಿ ಪ್ರೇಮ, ಗೌರವ. ತಂದೆಯವರ ಕಾಲಾನಂತರ, ಹಲವು ವರ್ಷಗಳ ಮೇಲೆ ಸ್ವಾಮೀಜಿ ತಂದೆಯವರನ್ನು ನೆನೆದು, ''ಈ ಸಾರಿಯ ಭಾರತವಾಚನ ನಡೆಸುವಾಗ ವ್ಯಾಖ್ಯಾನ

ಮಾಡಲು ನಾರಾಯಣ ಅವಧಾನಿಯವರ ಮಕ್ಕಳನ್ನು ಕರೆತನ್ನಿ'' ಎಂದು ಹೇಳಿ ಕಳುಹಿಸಿದರು. ಸಂದೇಶ ನಮಗೆ ತಲುಪಿತು. ಸ್ವಾಮೀಜಿಯ ಅಪ್ಪಣೆಯನ್ನು ಮೀರಲಾದೀತೆ? ನಾನು ಹೊರಟೆ. ಆದರೂ ಆಗ ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ಯಾವುದೋ ಸಮಾರಂಭದಲ್ಲಿ ಪಾಲ್ಗೊಳ್ಳಬೇಕಾಗಿ ಬಂದ ಕಾರಣ, ನಾನು ರಾಮಾಶಾಸ್ತ್ರಿಗಳ ಜತೆಯಲ್ಲಿ ಕಾವ್ಯವಾಚನ ಮಾಡಲು ಹೊರಟೆ. ಆಗ ನನಗೆ ಇಪ್ಪತ್ತೈದು ವರ್ಷ. ರಾಮಾಶಾಸ್ತ್ರಿಗಳು ನನಗಿಂತ ವಯಸ್ಸಿನಲ್ಲಿ ತುಂಬಾ ಹಿರಿಯರು. ಅವರೀಗ ಜೀವಿಸಿದ್ದರೆ ಶತಾಯುಷಿಗಳಾಗಿರುತ್ತಿದ್ದರು. ಅವರ ಜತೆಗೆ ಕುಳಿತು ವ್ಯಾಖ್ಯಾನ ಮಾಡುವುದು ಸುಲಭವೂ ಆಗಿರಲಿಲ್ಲ. ಕಾವ್ಯವನ್ನು ಅಷ್ಟು ಕರಾರುವಾಕ್ಕಾಗಿ ವಾಚನ ಮಾಡುತ್ತಿದ್ದರು ಅವರು. ಅಂದು ವಾಚನ ಮಾಡಲು ನಾವು ಆರಿಸಿಕೊಂಡಿದ್ದ ಭಾಗವಾದರೂ ಯಾವುದು? ಸುಭದ್ರಾಪರಿಣಯ! ಕಾವ್ಯವನ್ನು ವಾಚಿಸಿ, ವ್ಯಾಖ್ಯಾನಿಸಿ ಅನುಭವವಿದ್ದ ನಾವು ಅಲ್ಲಿನ ಕಥಾಭಾಗ, ಅಲ್ಲಿ ಬರುವ ಸನ್ನಿವೇಶಗಳ ಬಗ್ಗೆ ಮುಂಚಿತವಾಗಿ ಸ್ವಲ್ಪ ಚೆನ್ನಾಗಿಯೇ ಯೋಚಿಸಿ ಆರಿಸಿಕೊಳ್ಳಬೇಕಾಗಿದ್ದಿತು. ಆದರೆ ಅದು ಯಾವುದನ್ನೂ ಮಾಡದೆ, ಸ್ವಾರಸ್ಯವಾದ ಕಥಾಭಾಗ ಎಂದಷ್ಟೇ ಯೋಚಿಸಿ ಆರಿಸಿಕೊಂಡದ್ದು ಆದಿನ ಸ್ವಲ್ಪ ಮುಜುಗರವನ್ನು ತಂದಿತು!

ಸುಭದ್ರಾಪರಿಣಯವನ್ನು ಅದಾಗಲೇ ನಾವು ಹಲವು ಕಡೆ ಹೇಳಿದ್ದರೂ ಅಲ್ಲಿ ಸ್ವಾಮೀಜಿಯ ಮುಂದೆ ಹೇಳುವುದರ ಅನುಭವ ಬೇರೆಯೇ ಆಗಿದ್ದಿತು. ಕಥೆ ಪ್ರಾರಂಭವಾಯಿತು... ಅರ್ಜುನನು ಸಂನ್ಯಾಸಿಯ ವೇಷದಲ್ಲಿದ್ದು ಸುಭದ್ರೆಯನ್ನು ಅಪಹರಿಸಿಕೊಂಡು ಹೋದನಂತರ ಬಲರಾಮನಿಗೆ ವಿಷಯ ಗೊತ್ತಾಗಿ ಅವನು ಸಿಟ್ಟಿನಿಂದ ''ಎಲವೋ ಕಳ್ಳ ಸಂನ್ಯಾಸಿ'' ಎಂದು ಬೈದುಕೊಂಡು ಬರುವ ಸನ್ನಿವೇಶ. ಕುಮಾರವ್ಯಾಸನ ಪದ್ಯ ಅಮೋಘವಾಗಿತ್ತು. ಅದನ್ನು ಅನುಭವಿಸುತ್ತ ನಾನು ಸಹ ಅರ್ಥ ಹೇಳುವಾಗ, ''ಬಲರಾಮ ಅಂದ.... ಎಲವೋ ಕಳ್ಳ ಸಂನ್ಯಾಸಿ....'' ಎಂದು ಹೇಳಿಬಿಟ್ಟೆ. ಹಾಗೆ ಹೇಳುತ್ತಿರುವಾಗಲೇ ಅಲ್ಲಿಯೇ ಕುಳಿತು ಮಂದಸ್ಮಿತರಾಗಿದ್ದ ಸ್ವಾಮೀಜಿಯ ಮುಖವನ್ನೂ ನೋಡಿಬಿಟ್ಟೆ. ಅವರ ದೃಷ್ಟಿ ಸಂಧಿಸಿದ ಕೂಡಲೆ, ನಾ ಹೇಳಿದ ಮಾತು ಸರಿ ಇರಲಿಲ್ಲವೋ ಎನಿಸಿ, ಅರೆಗಳಿಗೆ ಭಯವಾಗಿ ಸುಮ್ಮನೇ ಮಾತು ನಿಲ್ಲಿಸಿಯೇ ಬಿಟ್ಟೆ. ಅಷ್ಟರಲ್ಲಿ ನನ್ನ ಮನಸ್ಸಿನ ಗೊಂದಲ, ಭಯದ ಅರಿವಾದವರಂತೆ ಸ್ವಾಮೀಜಿ ಪ್ರೀತಿಯಿಂದ ನನ್ನ ಕಡೆಗೆ ನೋಡಿ ನಕ್ಕು, ''ನಿಮ್ಮ ಇಕ್ಕಟ್ಟು ನಮಗೆ ಅರ್ಥವಾಯಿತು. ಹೇಳಿ... ಹೇಳಿ... ಅಲ್ಲಿರುವುದನ್ನು ತಾನೆ ನೀವು ಹೇಳುತ್ತಿರುವುದು? ಹೇಳಿ.... ಧೈರ್ಯವಾಗಿ ಹೇಳಿ..... ಅಲ್ಲಿ ಅರ್ಜುನ ಕಳ್ಳ ಸಂನ್ಯಾಸಿಯಾಗಿದ್ದವನು ತಾನೆ? ನೀವು ಮುಂದುವರೆಸಿ....'' ಎಂದು ಪ್ರೋತ್ಸಾಹಿಸಿದರು.... ಸ್ವಾಮೀಜಿಯವರ ದಾರ್ಯ, ನಿಷ್ಕಲ್ಮಶ ಸರಳ ಮನಸ್ಸು ನಮಗೆಲ್ಲ ಅರಿವಾಗಿ, ಅವರ ಮೇಲಿನ ಗೌರವಭಾವ ಇಮ್ಮಡಿಸಿತು. ನೆರೆದಿದ್ದವರೂ ಸ್ವಾಮೀಜಿಗೆ ಕೈಮುಗಿದು ವಂದಿಸಿದಂತೆ ನಾನೂ ವಂದಿಸಿ ಕಥೆ ಮುಂದುವರೆಸಿದೆ. ಅದೇನೇ ಆದರೂ ಮುಂದೆ ಕಥೆ ಸಾಗಿದಂತೆ 'ಛೇ.. ಈ ಭಾಗವನ್ನು ಇಲ್ಲಿ ಕಥೆ ಹೇಳಲು ಆರಿಸಿಕೊಳ್ಳಬಾರದಿತ್ತು' ಎಂದೇ ನನಗೆ ಬಹಳವಾಗಿ ಅನ್ನಿಸಿತು. ಆದರೆ ಸಮಯ ಮಿಂಚಿ ಹೋಗಿತ್ತಾಗಿ, ಆ ಕಥೆಗೆ ಆ ದಿನ ಮಂಗಳ ಹೇಳಿ ಬರುವುದೂ ಮುಖ್ಯವೇ ಆಗಿತ್ತು.

ದ್ವಾರಕೆಯ ಪೀಠಾಧಿಪತಿಗಳು ಸಾಮಾನ್ಯರಲ್ಲ. ಸಾಕಷ್ಟು ಪ್ರಸಿದ್ಧರು. ಸಿದ್ಧಪುರುಷರು. ಜಪ-ತಪನಿಷ್ಠರು. ಉತ್ತರ ಭಾರತದಲ್ಲಿ ಯಂತೂ ಅವರ ಕೀರ್ತಿ ಮತ್ತೂ ಹೆಚ್ಚು. ಅಂತಹ ಸ್ವಾಮಿಗಳ ಸಮ್ಮುಖದಲ್ಲಿ ಈ ಭಾಗ ಆರಿಸಿಕೊಂಡೆನಲ್ಲ ಎಂದು ನನಗಂತೂ ತುಂಬಾ ಪರಿತಾಪವಾಯಿತು.....

ಆ ದಿನದ ಕಾರ್ಯಕ್ರಮ ಮುಗಿದಾಗ ಸ್ವಾಮೀಜಿಯವರು ನನ್ನನ್ನು ಗೌರವಿಸಿ, ಹರಸುವಾಗ, ''ನೀವು ಬರೀ ವೈದಿಕರು, ಹವನ ಹೋಮಗಳಲ್ಲಿ ಭಾಗವಹಿಸುವವರು ಎಂದು ಭಾವಿಸಿದ್ದೆ. ಆದರೆ ಕಾವ್ಯಕ್ಕೆ ವ್ಯಾಖ್ಯಾನ ಮಾಡುವುದನ್ನೂ ಬಹಳ ಚೆನ್ನಾಗಿ ಅಭ್ಯಾಸ ಮಾಡಿಕೊಂಡಿದ್ದೀರಿ ನಿಮ್ಮ ತಂದೆಯ ಹಾಗೆಯೇ! ಅವರು ಪುರಾಣವನ್ನು ಹೇಳುತ್ತಿದ್ದರು. ನೀವೂ ಹೇಳುತ್ತೀರಾ?'' ಎಂದು ಪ್ರಶ್ನೆ ಮಾಡಿದರು. ''ಹೌದು ಸ್ವಾಮೀಜಿ... ಪುರಾಣವನ್ನೂ ಹೇಳುತ್ತೇನೆ. ಕಾವ್ಯವಾಚನಕ್ಕೆ ವ್ಯಾಖ್ಯಾನವನ್ನೂ ಅಭ್ಯಾಸ ಮಾಡಿಕೊಂಡಿದ್ದೇನೆ'' ಎಂದೆ ವಿನಯದಿಂದ. ''ಸಂತೋಷ... ನಾವು ಪ್ರತಿವರ್ಷ ಮುಳುಬಾಗಿಲಿಗೆ ಬಂದಾಗ ನೀವೂ ಬಂದು ಹೋಗಿ'' ಎಂದರು.

ಅವರ ಹರಕೆಯಿಂದಾಗಿ ನಾವು ಮುಂದಿನೆರಡು ಮೂರು ವರ್ಷಗಳೂ ಅಲ್ಲಿಗೆ ಹೋದೆವು. ಅವರು ವರ್ಷಕ್ಕೊಮ್ಮೆ ಮುಳುಬಾಗಿಲಿನ ಮಠಕ್ಕೆ ಬರುವುದಿತ್ತು. ಒಮ್ಮೆ ನಾವು ಹೋದಾಗ ಶಂಕರಜಯಂತಿಯ ಸಮಯ. 'ಶಂಕರವಿಜಯ' ವನ್ನು ಹೇಳಿ ಎಂದರು ಸ್ವಾಮೀಜಿ. ನಾವು ಸಮ್ಮತಿಸಿದೆವು. ಸ್ವಾಮೀಜಿ ಸಾಕಷ್ಟು ಗ್ರಂಥಗಳನ್ನು ಅಭ್ಯಾಸ ಮಾಡಿದ್ದರು. ಅವರ ಪಾಂಡಿತ್ಯ ದೊಡ್ಡದು. ಅವರ ಮಾತು ಮತ್ತು ಪ್ರವಚನಗಳಲ್ಲಿ ಅವರ ಅಧ್ಯಯನದ ಆಳ ತಿಳಿಯುತ್ತಿತ್ತು. ಆದ್ದರಿಂದಲೇ ಸ್ವಾಮೀಜಿಯ ಎದುರು ವಾಚನ-ವ್ಯಾಖ್ಯಾನ ಮಾಡಬೇಕಾದಾಗ ನಾವು ಸಾಕಷ್ಟು ಸಿದ್ಧರಾಗಿಯೇ ಹೋಗಬೇಕಿತ್ತು.

ನಾವು ಆ ದಿನ 'ಶಂಕರವಿಜಯ' ಹೇಳುವ ಮುನ್ನ ಸ್ವಾಮೀಜಿ, ''ನನಗೆ 'ಕೂಷ್ಮಾಂಡ ಶಂಕರವಿಜಯ' ಎಂದು

ಯಾರೋ ಹೇಳಿದ ನೆನಪು. ಆ ಹೆಸರಿನ ಕೃತಿ ಇದೆಯೇ? ಏನು ಹಾಗೆಂದರೆ? ನೀವು ಆ ಕೃತಿಯನ್ನು ನೋಡಿದ್ದೀರಾ?'' ಎಂದು ಕೇಳಿದರು. ಸ್ವಾಮೀಜಿಯ ಈ ಪ್ರಶ್ನೆ ನನಗೆ ಅನಿರೀಕ್ಷಿತವಾದರೂ, ನಾನೂ ಆ ಬಗ್ಗೆ ಅಲ್ಪ ಸ್ವಲ್ಪ ಕೇಳಿದ್ದೆ. ''ಇಲ್ಲ ಸ್ವಾಮೀಜಿ, 'ಕೂಷ್ಮಾಂಡ ಶಂಕರವಿಜಯ' ಎನ್ನುವ ಕೃತಿ ಇದೆಯೋ ಇಲ್ಲವೋ ಅರಿಯೆ. ಆದರೆ ನಾವು ಈ 'ಶಂಕರವಿಜಯ'ದಲ್ಲಿ ಆಚಾರ್ಯರ ಬಾಲಲೀಲೆಗಳನ್ನು ನೋಡಿದಾಗ, ಅಲ್ಲಿ ಬರುವ ಒಂದು ಪ್ರಸಂಗದಲ್ಲಿ, ಪುಟ್ಟ ಮಗು ಶಂಕರರು ದೈವಕೃಪೆಯಿಂದ ಜನ್ಮ ತಳೆದಿರುವುದು... ತೊಟ್ಟಿಲಲ್ಲಿ ಮಲಗಿರುವುದು ವರ್ಣಿತವಾಗಿದೆ. ಆದರೆ ಹಾಗೆ ತೊಟ್ಟಿಲಲ್ಲಿದ್ದ ಮಗು ಒಮ್ಮೆ ಕಾಣದಾಗುತ್ತದೆ. ಎಲ್ಲೆಲ್ಲಿ ಹುಡುಕಿದರೂ ಮಗು ಸಿಗುವುದಿಲ್ಲ. ಆಗ ಸಾಧುವೊಬ್ಬರು ಬರುತ್ತಾರೆ. ಅವರಲ್ಲಿ ಎಲ್ಲರೂ ಮಗು ಕಾಣೆಯಾದ ಬಗ್ಗೆ ಹೇಳುತ್ತಾರೆ. ಆ ಸಾಧು, 'ಎಲ್ಲ ಕಡೆಯೂ ಹುಡುಕಿದಿರಾ?' ಎಂದು ಕೇಳುತ್ತಾರೆ. 'ಹೌದು... ಹುಡುಕಿದೆವು' ಎಂದು ತಂದೆ-ತಾಯಿ ಹಾಗೂ ಮಿಕ್ಕವರು ಹೇಳುತ್ತಾರೆ. ಆಗ ಆ ಸಾಧು ಅಲ್ಲಿದ್ದ ಅಟ್ಟವನ್ನು ತೋರಿಸಿ 'ಈ ಅಟ್ಟದ ಮೇಲೆ ನೋಡಿದಿರಾ?' ಎಂದು ಕೇಳುತ್ತಾರೆ. ಮಗು ಅಟ್ಟದ ಮೇಲೆ ಹೋಗಲು ಹೇಗೆ ಸಾಧ್ಯ? ಎಂದು ಅಲ್ಲಿ ನೆರೆದವರಿಗೆ ಅನ್ನಿಸಿದರೂ, ಸಾಧು ಹೇಳಿದರು ಎಂದು ನೋಡಿದಾಗ, ಅಲ್ಲೊಂದು ಕುಂಬಳಕಾಯಿ ಕಂಡುಬರುತ್ತದೆ, ಸಾಧು ಅದರೊಳಗೂ ನೋಡಲು ಹೇಳಿದಾಗ 'ಎಂಥಾ ಹುಚ್ಚ ಸಾಧು ಇವನು? ಕುಂಬಳಕಾಯಿಯ ಒಳಗೆ ಮಗು ಇರಲು ಸಾಧ್ಯವೇ?' ಎಂದು ಅನುಮಾನಿಸುತ್ತಾರೆ. ಸಾಧು ಬಿಡದೆ 'ನೋಡಿ, ತೆಗೆದು ನೋಡಿ' ಎನ್ನುತ್ತಾರೆ. ಕೆಳಗೆ ಇರಿಸಿದ ಕುಂಬಳಕಾಯಿಯು ಸಾಧು ಮುಟ್ಟಿದಾಗ ಹೋಳಾಗುತ್ತದೆ. ತೊಟ್ಟಿಲಲ್ಲಿ ಮಲಗಿರುವಂತೆಯೇ ಮಗು ಅಲ್ಲಿ ನಗುತ್ತ ಮಲಗಿರುತ್ತದೆ! ಇದು ಅಲ್ಲಿ ಹೇಳಿರುವುದು ಸ್ವಾಮೀಜಿ! ಇದು ಕವಿಕಲ್ಪನೆಯೇ ಆದರೂ ಇದರ ತತ್ತ್ವ ಬಹುಶಃ ಹೀಗಿರಬಹುದು. ಕುಂಬಳಕಾಯಿ ಎಂದರೆ ಇಡೀ ಬ್ರಹ್ಮಾಂಡ ಸ್ವರೂಪ. ಅದರಲ್ಲಿ ಹಲವಾರು ಜೀವಿಗಳು ಹಲವಾರು ಬೀಜಸ್ವರೂಪ. ಅದರಲ್ಲಿ ಪರಮಾತ್ಮ ಒಬ್ಬನೇ; ಅವನು ಪುಟ್ಟ ಬಾಲಶಂಕರ ಮಾತ್ರ ಎಂದು ಇದ್ದೀತು. ಈ ತಥ್ಯವನ್ನು ದೃಷ್ಟಾಂತದಲ್ಲಿ ತೋರಿಸಲು ಭಕ್ತಾದಿಗಳು ಈ ಸನ್ನಿವೇಶವನ್ನು ಸೃಷ್ಟಿ ಮಾಡಿರಬೇಕು ಎಂದು ನನ್ನ ಭಾವನೆ'' ಎಂದೆ ನಾನು.

ನಾನು ಹೇಳಿದ ಅಂದಿನ ವ್ಯಾಖ್ಯಾನ ಸ್ವಾಮೀಜಿಗೆ ತೃಪ್ತಿ, ಸಂತೋಷ ತಂದಿದ್ದೀತು. ''ಇರಬಹುದು... ಇರಬಹುದು! ನೀವಾದರೂ ಅದನ್ನು ಸ್ವಾರಸ್ಯವಾಗಿ ಅರ್ಥೈಸಿದ್ದೀರಿ'' ಎಂದರು ಮೆಚ್ಚುಗೆಯಿಂದ. ಆ ಮೆಚ್ಚುಗೆಯ ಮಾತು ನನಗೆ ಪಾರಿತೋಷಿಕವನ್ನೇ ಕೊಟ್ಟಷ್ಟು ಸಂತೋಷ ತಂದಿತು. 'ಶಂಕರ ವಿಜಯ' ದ ಹಲವಾರು ಪ್ರಕಟಣೆಗಳಿವೆ. ಸಾಮಾನ್ಯವಾಗಿ ಶೃಂಗೇರಿಯ 'ಶಂಕರ ವಿಜಯ' ವನ್ನೇ ನಾವೆಲ್ಲರೂ ಓದುವುದು, ಹೇಳುವುದು. ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು ಭಾಮಿನೀಷಟ್ಪದಿಯಲ್ಲಿ ಬಹಳ ಸುಂದರವಾಗಿ 'ಶಂಕರವಿಜಯ' ಕಾವ್ಯ ರಚನೆ ಮಾಡಿದ್ದಾರೆ. ಅದನ್ನು ನಾವು ಓದಿದ್ದೇವೆ..... ಏನೇ ಆದರೂ ಸನಾತನ ಹಿಂದೂ ಧರ್ಮದ ಉದ್ಧಾರಕ್ಕಾಗಿ ಅವತರಿಸಿದ ಶ್ರೀ ಆದಿಶಂಕರಾಚಾರ್ಯರ ಚರಿತ್ರೆಯನ್ನು ಪಾರಾಯಣ ಮಾಡುವುದರಲ್ಲೇ ಒಂದು ಪ್ರತ್ಯೇಕ ಸೊಗಸಿದೆ ಎಂದರೆ ಅತ್ಯುಕ್ತಿಯಲ್ಲ. ಆಚಾರ್ಯರ ಪಾಂಡಿತ್ಯ, ನೇರ್ಮೆ, ಭಕ್ತಿ, ಸಾಧನೆಯ ಬಗ್ಗೆ ಓದುತ್ತ ಹೋದಂತೆ ಮೈ ರೋಮಾಂಚನವಾಗುತ್ತದೆ..... ಒಮ್ಮೆ ಆದದ್ದು ಹೀಗೆಯೇ....! :

ಆಗ ನನಗೆ ನಲವತ್ತೆರಡು ವಯಸ್ಸು. ನಮ್ಮ ಶಿವಮೊಗ್ಗದಲ್ಲಿ ಹೊಸ ಶಂಕರಮಠದ ನಿರ್ಮಾಣಕಾರ್ಯ ಸಾಗುತ್ತಿತ್ತು. ಅಲ್ಲಿಯೇ ಸಾಮಾನ್ಯವಾಗಿ ನಾವು 'ಶಂಕರ ವಿಜಯ' ಹೇಳುತ್ತಿದ್ದೆವು. ಒಮ್ಮೊಮ್ಮೆ ಐದಾರು ದಿನಗಳು, ಒಮ್ಮೊಮ್ಮೆ ಏಳೆಂಟು ದಿನಗಳ ಕಾಲ - ನಾನು ವ್ಯಾಖ್ಯಾನ ಮಾಡಿದರೆ, ಹೊಸಹಳ್ಳಿ ಕೇಶವಮೂರ್ತಿಯವರು ವಾಚನ ಮಾಡುತ್ತಿದ್ದರು. ಮೊದಲನೆಯ ವರ್ಷ ಅಲ್ಲಿ ಕೇವಲ ಗರ್ಭಗುಡಿ ಇತ್ತು. ಹೊರಗೆ ಪೆಂಡಾಲು ಹಾಕಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿತ್ತು. ಹೀಗೇ ನಾಲ್ಕೈದು ವರ್ಷಗಳು ಕಳೆದು ನಿಧಾನವಾಗಿ ಶಂಕರಮಠದ ದೊಡ್ಡ ಸಭಾಂಗಣದ ನಿರ್ಮಾಣಕಾರ್ಯವೂ ಪ್ರಾರಂಭವಾಯಿತು. ದೊಡ್ಡದಾದ ಎಂಟು ಕಾಂಕ್ರೀಟಿನ ಕಂಬಗಳು ಎದ್ದುವು. ಇನ್ನೂ ಅದಕ್ಕೆ ಗಾರೆ ಮೆತ್ತಿ ಕಲ್ನಾರು ಛಾವಣಿ ಹೊದಿಸಿರಲಿಲ್ಲ. ಆ ವರ್ಷ ಆ ಕಂಭದ ಹತ್ತಿರವೇ ವೇದಿಕೆಯನ್ನು ನಿರ್ಮಿಸಿದ್ದರು. ವಾಚನ-ವ್ಯಾಖ್ಯಾನ ಪ್ರಾರಂಭವಾಯಿತು.... ನಾನು ವ್ಯಾಖ್ಯಾನ ಪ್ರಾರಂಭಿಸಿ 'ದೈವಾಂಶಸಂಭೂತ ಮಗು ಶಂಕರರು ಹುಟ್ಟಿದ್ದು, ನಾಮಕರಣವಾದದ್ದು, ಅದೇ ಸಮಯದಲ್ಲಿ ವೇದವಿದರು ಕುಳಿತು ಆಶೀರ್ವಚನ ಹೇಳುತ್ತಿದ್ದಾಗ ಸುಂಟರಗಾಳಿಯೂ ಧೂಳೂ ಬಂದು ಎಲ್ಲರ ಕಣ್ಣು ಮುಚ್ಚಿ, ಮಲಗಿದ್ದ ಮಗುವನ್ನು ಹಾರಿಸಿಕೊಂಡು ಹೋದದ್ದು...... ಇಷ್ಟೆಲ್ಲ ಆಗುವಾಗ ಆ ಗಾಳಿಯ ರಭಸಕ್ಕೆ ಭೂಮಿಯೇ ನಡುಗಿತು' ಎಂದು ಕತೆಯಲ್ಲಿರುವಂತೆ ಹೇಳಿದೆ..... ನಾನು ಹಾಗೆ ಹೇಳಿದ ಕ್ಷಣದಲ್ಲೇ ನಾವು ಕುಳಿತಿದ್ದ ವೇದಿಕೆ ನಡುಗಲು ಶುರುವಾಯಿತು. ನನಗೂ ಕೇಶವಮೂರ್ತಿಯವರಿಗೂ ಯಾರೋ ಹುಡುಗರು ವೇದಿಕೆಯನ್ನು ಅಲ್ಲಾಡಿಸುತ್ತಿದ್ದಾರೆಯೋ ಎನಿಸಿತು. ಆದರೆ ಅಲ್ಲಿ ಯಾರೂ ಹತ್ತಿರದಲ್ಲಿರಲಿಲ್ಲ... 'ನಿಜ... ನಿಜ.... ಭೂಮಿಯೇ ನಡುಗುತ್ತಿದೆ' ಎಂದು ಎದ್ದೇ ಬಿಟ್ಟರು

ಹೆದರಿದ ಜನ! ಆ ಕಾಂಕ್ರೀಟು ಕಂಬಗಳೂ ಅಲ್ಲಾಡುತ್ತಿರುವಂತೆ ಭಾಸವಾಗತೊಡಗಿತು. ಕಾಂಕ್ರೀಟು ಕಂಬಗಳ ಪಕ್ಕದಲ್ಲಿ ನಿಧಾನವಾಗಿ ಬಿರುಕುಗಳಾಗತೊಡಗಿದವು! ಆಶ್ಚರ್ಯ ನಿಜಕ್ಕೂ! ಆ ಗಳಿಗೆಯಲ್ಲಿ ನಿಜವಾಗಿಯೂ ಲಘು ಭೂಕಂಪವಾಗಿಯೇ ಹೋಗಿತ್ತು ಶಿವಮೊಗ್ಗೆಯಲ್ಲಿ, ಕರ್ನಾಟಕದಲ್ಲಿ ಅಲ್ಲದೆ, ಆಂಧ್ರ, ತಮಿಳುನಾಡುಗಳಲ್ಲಿ. ಆಗ ನಾನು ನನ್ನ ಮಾತು ನಿಲ್ಲಿಸಿ, ''ಮಗುವು ಗಾಳಿಯಲ್ಲಿ ಹಾರಿಹೋಯಿತು ಎಂದು ಪದ್ಯವಾಚನ ಮಾಡಿದ್ದೀರಿ! ಈಗ ಆ ಮಗು ಸಿಕ್ಕಿತು ಎನ್ನುವ ಪದ್ಯಭಾಗವನ್ನು ವಾಚನ ಮಾಡಿಬಿಡಿ ಬೇಗ. ಆಗಲಾದರೂ ಈ ಆರ್ಭಟ ಕಡಮೆಯಾದೀತೋ ನೋಡೋಣ'' ಎಂದೆ ಶ್ರೀ ಕೇಶವಮೂರ್ತಿಯವರಿಗೆ! ಆಗ ತಕ್ಷಣವೇ ಕೇಶವಮೂರ್ತಿಯವರು ಸುಂದರವಾದ ಬಿಲಹರಿ ರಾಗದಲ್ಲಿ ಆ ಪದ್ಯಭಾಗವನ್ನು ಓದಿದರು. ಅಷ್ಟರಲ್ಲಿ ಹೊರಗಿನ ಆರ್ಭಟ ತಹಬಂದಿಗೆ ಬಂದಿತು. ಅಂತೂ ನನ್ನ ಜೀವನದಲ್ಲಿ ಇದೊಂದು ಅತ್ಯಪೂರ್ವ ರೋಚಕ ಘಟನೆ. ನಾವು ಶಂಕರರ ಜನನದ ಬಗ್ಗೆ ಹೇಳುತ್ತ ಅದೆಷ್ಟು ತಾದಾತ್ಮ್ಯ ಹೊಂದಿದ್ದೆವೋ ತಿಳಿಯೆ. ಅಂತೂ ಕಾವ್ಯದಲ್ಲಿ ಬಂದಿರುವಂತೆ ಆ ದಿನ ನಿಜಜೀವನದಲ್ಲಿಯೂ ಆಗಿತ್ತು ಅಲ್ಲಿ! ಆಮೇಲೆ.... ಯಾರಿಗೂ ಯಾವ ಅಪಾಯವೂ ಆಗದೆ, ಎಲ್ಲರಲ್ಲೂ ಆಶ್ಚರ್ಯ ತುಂಬಿ, ನಿಂತುಹೋದ ಗಾಳಿಯ ಬಗ್ಗೆಯೂ ಲಘು ಭೂಕಂಪದ ಬಗ್ಗೆಯೂ ಮಾತುಕತೆ ನಡೆದು, ಅನಂತರ ಕಥೆ ಮುಂದೆ ಸಾಗಿತು!

❁ ❁ ❁

ಇದೊಂದು ಕಾಕತಾಳೀಯವಾಗಿ ನಡೆದ ಘಟನೆಯಾದರೂ, ಹೇಗೋ ಈ ವಿಷಯ ಶೃಂಗೇರಿಯ ಶ್ರೀ ಶ್ರೀ ವಿದ್ಯಾತೀರ್ಥ ಗುರುಗಳವರೆಗೂ ಮುಟ್ಟಿತ್ತು. ಈ ಘಟನೆಯಾದ ಒಂದು ತಿಂಗಳ ಅನಂತರ ನಾನು ಅಕಸ್ಮಾತ್ತಾಗಿ ಶೃಂಗೇರಿಗೆ ಹೋದಾಗ, ಗುರುಗಳ ದರ್ಶನ ಮಾಡಿದೆ. ನನ್ನನ್ನು ಆಶೀರ್ವದಿಸಿ ಹರಸುತ್ತ ಗುರುಗಳು, ''ಏನು ಅವಧಾನಿಗಳೇ, ನೀವು ಕಥೆಯಲ್ಲಿ ಭೂಮಿ ನಡುಗಿತು ಎಂದು ಹೇಳಿದ ಸಮಯದಲ್ಲೇ ಭೂಮಿ ನಡುಗಿತಂತೆ?'' ಎಂದರು. ನಾನು ಅವಾಕ್ಕಾದೆ. ಸ್ವಾಮಿಗಳು ಕೇಳುತ್ತಿದ್ದಾರೆ ಈ ವಿಷಯವನ್ನು ಎಂದು ನಂಬುವುದಕ್ಕೆ ಅರೆಗಳಿಗೆ ಬೇಕಾಯಿತು. ಸಾವರಿಸಿಕೊಂಡು ''ಕಾಕತಾಳೀಯವಾಗಿ ಆಯಿತು, ಹೇಗಾಯಿತೋ ನಮಗೂ ತಿಳಿಯಲಿಲ್ಲ'' ಎಂದೆ ನಮ್ರವಾಗಿ. ''ಕೆಲವು ಸಮಯದಲ್ಲಿ ಹೇಳುವ ಕಾವ್ಯದ ಶಕ್ತಿ ಹೇಳುವವರ ಮಾತಿನಲ್ಲೂ ಪ್ರವೇಶಿಸುತ್ತದೆ. ಕೆಲವು ಸಂದರ್ಭ ಹಾಗೆ ಆಗುವುದುಂಟು!'' ಎಂದರು ಗುರುಗಳು. ಶ್ರೀರಾಮ ಶ್ರೀಕೃಷ್ಣರ ಬಾಲ್ಯದಂತೆ ಶಂಕರರ ಬಾಲ್ಯವನ್ನು ರಂಜನೀಯವಾಗಿ ಪವಾಡಪೂರಿತವಾಗಿ ಮಾಡಬೇಕೆಂದೇ ಬಹುಶಃ ಭಕ್ತಾದಿಗಳು ಹೀಗೆ ಸೇರಿಸಿದ್ದಾರೆ ಎಂದು ನನ್ನ ಭಾವನೆಯಾದರೂ, ಆ ದಿನ ನಡೆದದ್ದು ಮಾತ್ರ ನನ್ನ ಜೀವನದಲ್ಲೇ ಒಂದು ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ. ಅದಕ್ಕೆ ಶ್ರೀ ಗುರುವರ್ಯರ ಆಶೀರ್ವಾದವೂ ಲಭ್ಯವಾಯಿತು.

ಪರಮಪೂಜ್ಯರಾದ ಶೃಂಗೇರಿ ಗುರುಗಳು ಹೇಳಿದಂತೆ ನಮ್ಮ ವೇದ, ಉಪನಿಷತ್ತು, ಮಹಾಕಾವ್ಯಗಳಲ್ಲಿ ನಿಜಕ್ಕೂ ಆ ಶಕ್ತಿ ಇದೆ. ಅದು ಅಷ್ಟು ಸುಲಭವಾಗಿ ಗೋಚರವಾಗುವಂಥದಲ್ಲ. ಆಚಾರನಿಷ್ಠರು ಹೇಳುವ ಮಂತ್ರಕ್ಕೂ, ಮಾಡುವ ಧಾರ್ಮಿಕ ಕರ್ಮಾಚರಣೆಗಳಿಗೂ, ಹಾಗೆ ಏನೂ ಶಕ್ತಿ ಇಲ್ಲದೆ ಸಾವಿರಾರು ವರ್ಷಗಳಿಂದಲೂ ಅದು ನಡೆದುಬಂದಿರಲಾರದು. ಇಂದಿನ ವಿಜ್ಞಾನದ ಯುಗದಲ್ಲಿ ನಮ್ಮ ಹಿಂದಿನವರ ಮಂತ್ರ, ಆಚರಣೆಗಳೆಲ್ಲ ಕಂದಾಚಾರ, ಗೊಡ್ಡು, ಅರ್ಥವಿಲ್ಲದ್ದು ಎಂದು ಹೇಳಿದರೆ ಅದು ಸುತರಾಂ ವಿಷಯದ ಆಳವನ್ನು ಸರಿಯಾಗಿ ತಿಳಿದುಕೊಳ್ಳದವರು ಹೇಳುವ ಮಾತಾಗುತ್ತದೆ. ಹಿಂದಿನ ಕಾಲದ, ತಿಳಿದವರ ಮಾತುಗಳನ್ನು, ಅನುಭವಗಳನ್ನು, ಅಷ್ಟು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಅರ್ಥಪೂರ್ಣ ಮಂತ್ರಗಳಿಗೂ, ಅವಕ್ಕೆ ಸಂಬಂಧಿಸಿದ ಕರ್ಮಾಚರಣೆಗಳಿಗೂ ಅವಕ್ಕೇ ಆದ ನಿರ್ದಿಷ್ಟ ಪ್ರತಿಫಲವಿದ್ದೇ ಇದೆ. ಅದು ಅದನ್ನು ಹೇಳುವವರ, ಮಾಡುವವರ, ನಿಷ್ಠೆಯನ್ನೂ, ನಂಬಿಕೆಯನ್ನೂ, ಕರ್ಮಾಚರಣೆಯನ್ನೂ, ಅವಲಂಬಿಸಿರುತ್ತದೆ ಅಷ್ಟೆ.

ನಮ್ಮ ತಂದೆ ಊರಿನಲ್ಲಿ ಪೂಜೆ-ಹೋಮಗಳನ್ನು ಮಾಡಿಸುವಲ್ಲಿ ಅದೆಷ್ಟು ನಿಷ್ಠೆ ತೋರುತ್ತಿದ್ದರೋ, ಅಪರಕರ್ಮಗಳನ್ನು ಮಾಡಿಸುವಲ್ಲಿ ಅದಕ್ಕಿಂತ ಒಂದು ಕೈ ಮೇಲೆನಿಸುವ ನಿಷ್ಠೆಯನ್ನು ತೋರುತ್ತಿದ್ದರು. 'ತೀರಿಕೊಂಡವರಿಗೆ ಕರ್ಮಾಂತರ ಮಾಡಿಸುವಾಗ ಮೊದಲ ಹತ್ತು ದಿನಗಳಲ್ಲಿ ಒಂದು ದಿನವಾದರೂ ಪಿತೃಗಳಿಗೆ ಇಟ್ಟ ಆಹಾರವನ್ನು ಕಾಗೆ ಮುಟ್ಟಬೇಕು, ಇಲ್ಲವಾದರೆ ಅವರಿಗೆ ಸರಿಯಾಗಿ ಗತಿಯಾಗಿರುವುದಿಲ್ಲ' ಎನ್ನುವುದು ತಂದೆಯವರ ನಂಬಿಕೆ. ನಮ್ಮ ಗರುಡ ಪುರಾಣದಲ್ಲಿ ಹಾಗೆ ಹೇಳಿದೆ. ಆದರೆ ನಮ್ಮೂರಿನ ನಮ್ಮ ಬಂಧು ನಂಜುಂಡಾವಧಾನಿಯವರಿಗೆ ಇದರಲ್ಲಿ ತಾತ್ಪರ್ಯ ಕಡಮೆ. ಇವರ ತಂದೆ ತೀರಿಕೊಂಡ ಸಂದರ್ಭದಲ್ಲಿ ಅಪರ ಕರ್ಮಗಳನ್ನು ಮಾಡುವಾಗ ನಮ್ಮ ತಂದೆಯವರೇ ಅದನ್ನೆಲ್ಲ ಮಾಡಿಸಿದ್ದರು. ಆಗ ಈ ಕಾಗೆ ಬಂದು ಪಿತೃಗಳಿಗೆ ಇಟ್ಟಿದ್ದನ್ನು ಮುಟ್ಟುವ ಮಾತನ್ನು ತಂದೆ ಹೇಳಿದಾಗ ಅವಧಾನಿಯವರು, ''ನನಗೆ ಇದರಲ್ಲೆಲ್ಲ ನಂಬಿಕೆ

ಇಲ್ಲ. ನೀವೇನೋ ಹೇಳುತ್ತೀರಿ. ಕಾಗೆಗೆ ಹಸಿವಾದರೆ ತಿನ್ನುತ್ತದೆ. ಇಲ್ಲದಿದ್ದರೆ ಇಲ್ಲ. ಅದರಿಂದಲೇ 'ಗತಿಯಾಗುತ್ತದೆ', 'ಇಲ್ಲ' ಎಂದು ನೀವು ತಾನೆ ಹೇಗೆ ಹೇಳುತ್ತೀರಿ? ಪುರಾಣದಲ್ಲಿದ್ದ ಮಾತ್ರಕ್ಕೆ ಈ ವಿಷಯಗಳನ್ನೆಲ್ಲ ನಂಬಲಾದೀತೆ? ಒಂದಂತೂ ನಿಜ. ನೀವು ಚೆನ್ನಾಗಿ ಮಂತ್ರ ಹೇಳಿದ್ದೀರಿ. ಅದರ ಫಲವಾಗಿ ಸದ್ಗತಿಯಾಗುತ್ತದೆ ಎನ್ನಬಹುದು!'' ಎಂದರು. ಸದಾ ವೇದ-ಪುರಾಣಗಳನ್ನು ಹೇಳುತ್ತ, ಕೇಳುತ್ತ ಇದ್ದ ಪರಿಸರದಲ್ಲೇ ಹುಟ್ಟಿ ಬೆಳೆದ ಹಿರಿಯರಲ್ಲೂ ಈ ರೀತಿಯ ತರ್ಕಭಾವನೆ ಇರಲು ಸಾಧ್ಯವಿಲ್ಲ ಎಂದುಕೊಳ್ಳುವಂತಿಲ್ಲ! ಅದಕ್ಕೆ ಸಾಕ್ಷಿ ಅವಧಾನಿಯವರ ಮಾತು! ಅದೇ ರೀತಿ ಇನ್ನೂ ಅನೇಕರು ತರ್ಕ ಮಾಡುತ್ತಿದ್ದುದುಂಟು. ಆದರೆ ತಂದೆಯವರು ಸಹನೆ ಕಳೆದುಕೊಳ್ಳದೆ, ''ಇಲ್ಲ ನಂಜುಂಡು, ಹಾಗೆ ಹೇಳಬೇಡ. ಶಾಸ್ತ್ರವೇ ಹಾಗೆ ಹೇಳುತ್ತದೆ. ನಾನೂ ಅನೇಕರಿಗೆ ಹೀಗೇ ನಿಷ್ಠೆಯಿಂದಲೇ ಮಾಡಿಸಿದ್ದೇನೆ. ಅದರ ಫಲವೂ ನನಗೆ ಗೋಚರವಾಗಿದೆ. ಆತ್ಮವು ದೇಹವನ್ನು ಬಿಟ್ಟಾದ ಮೇಲೆ, ತಕ್ಕ ಸಂಸ್ಕಾರ ಮಾಡದೆ ಹೋದರೆ ಸದ್ಗತಿ ಕಷ್ಟ. ಇದು ನಮ್ಮಲ್ಲಿ ಮಾತ್ರ ಎಂದುಕೊಳ್ಳಬೇಡ. ಎಲ್ಲ ಜನರಲ್ಲೂ ಅದಕ್ಕೆ ಸಂಬಂಧಪಟ್ಟ ಪ್ರತ್ಯೇಕ ಕರ್ಮಗಳು ಇದ್ದೇ ಇರುತ್ತವೆ. ಎಲ್ಲರೂ ಅದನ್ನು ನಿಷ್ಠೆಯಿಂದಲೇ ಮಾಡಿಸುತ್ತಾರೆ. ನಮ್ಮಲ್ಲಿ ಮಡಿ, ಆಚಾರ, ಕ್ರಮ ಹೆಚ್ಚು ಅಷ್ಟೆ.

''ಅಷ್ಟೇಕೆ... ಮನುಷ್ಯ ಜನ್ಮವೆತ್ತುವಾಗಲೂ ಅಷ್ಟೆ. ತಾಯಿಯಾಗ ಬಯಸುವವಳು ಯಾವ ಋತುವಿನಲ್ಲಿ ವೇದಬಾಹಿರವಾದ ಕೆಲಸವನ್ನು ಮಾಡುತ್ತಾಳೆಯೋ, ಕಾಕತಾಳೀಯವಾದರೂ ಸರಿ, ಆ ಸಮಯದಲ್ಲಿ ಮಾಡಿದ ಕೆಲಸಕ್ಕನುಗುಣವಾಗಿಯೇ ಮಕ್ಕಳನ್ನು ಪಡೆಯುವುದುಂಟು. ಇದೆಲ್ಲ ಸುಮ್ಮನೆ ಹೆದರಿಕೆ ಹುಟ್ಟಿಸಲು ಮಾಡಿರುವುದಲ್ಲ. ಆ ರೀತಿಯ ಚಟುವಟಿಕೆಗಳನ್ನು ಮಾಡದಿರಲಿ ಎಂದಷ್ಟೇ ಇವುಗಳನ್ನು ಹೇಳುವ ಉದ್ದೇಶ. ನಂಬುವುದು, ಬಿಡುವುದು ಅವರವರ ತಿಳಿವಳಿಕೆಗೆ ಸೇರಿದ್ದು'' ಎಂದು ಹೇಳುತ್ತಿದ್ದರು.

❁ ❁ ❁

ನನ್ನ ಇಷ್ಟು ವರ್ಷಗಳ ಅನುಭವದಲ್ಲಿ ನಮ್ಮ ಧಾರ್ಮಿಕ ಕರ್ಮಾಚರಣೆಗಳು ಕೇವಲ ಗೊಡ್ಡು ಸಂಪ್ರದಾಯವಲ್ಲ, ಅರ್ಥಪೂರ್ಣವಾಗಿ ಇರುವಂಥವು ಎಂದು ಖಚಿತವಾಗಿದೆ. ನಮಗೆ, ಕಂದಾಚಾರವನ್ನು ಬಿಟ್ಟು ಶುದ್ಧವಾದ ಮಂತ್ರಹೇಳಿ ಸರಿಯಾಗಿ ವಿಧಿ - ವಿಧಾನಗಳನ್ನು ಮಾಡಿಸುವುದು ತಿಳಿದಿರಬೇಕಷ್ಟೆ! ಅದಕ್ಕೆ ಉದಾಹರಣೆ, ನಮ್ಮ ತಂದೆಯವರ ಕಾಲದಲ್ಲಿ ಕೆ.ಆರ್. ನಗರದ ಎಡತೊರೆ ಎನ್ನುವ ಗ್ರಾಮದಲ್ಲಿ ನದೀತೀರದಲ್ಲಿದ್ದ ಕುಣಿಗಲ್ ರಾಮಾಶಾಸ್ತ್ರಿಗಳು. ವೇದಶಾಸ್ತ್ರ ಪಂಡಿತರೂ, ಕರ್ಮನಿಷ್ಠರೂ, ಮೇಧಾವಿಯೂ ಆದ ಅವರು ತಮ್ಮ ಪತ್ನಿ ಗರ್ಭಿಣಿಯಾದ ಸಂದರ್ಭದಲ್ಲಿ 'ಪುಂಸವನ' ಎಂಬ ವಿಧಿಯನ್ನು ಮಾಡಿದರು. ಅದಾದ ಸ್ವಲ್ಪ ದಿನಗಳಲ್ಲೇ ಅವರ ಮನೆಗೆ ಭೇಟಿಕೊಟ್ಟ ಒಬ್ಬ ಮಿತ್ರರು ಶಾಸ್ತ್ರಿಗಳ ಜತೆ ಮಾತನಾಡುತ್ತ ''ಹುಟ್ಟುವ ಮಗುವಿಗೆ ಏನು ಹೆಸರಿಡಬೇಕೆಂದು ತಮ್ಮ ಅಭಿಲಾಷೆ?'' ಎಂದು ಕೇಳಿದರು ವಿನೋದವಾಗಿ. ಅವರ ಮಾತಿನ ಅರ್ಥ ಹುಡುಗಿಯಾದರೆ ಯಾವ ಹೆಸರು, ಹುಡುಗನಾದರೆ ಯಾವುದು ಎನ್ನುವುದಾಗಿತ್ತು. ಶಾಸ್ತ್ರಿಗಳು ಇನ್ನಿಲ್ಲದ ಆತ್ಮವಿಶ್ವಾಸದಿಂದ, ''ನಾನು ನನ್ನ ಪತ್ನಿಗೆ 'ಪುಂಸವನ' ವಿಧಿಯನ್ನು ಮಾಡಿದ್ದೇನೆ. ಗಂಡುಮಗುವೇ ಹುಟ್ಟುತ್ತದೆ. ಅದಕ್ಕೆ ನರಸಿಂಹ ಎಂದೇ ಹೆಸರಿಡುತ್ತೇನೆ'' ಎಂದರು. ಮಿತ್ರರಿಗೆ ಆಶ್ಚರ್ಯ, ಜತೆಗೆ ಅಪನಂಬಿಕೆ. 'ಕೂಸು ಹುಟ್ಟುವುದಕ್ಕೆ ಮುನ್ನ ಕುಲಾವಿಯೇ? ಅದೂ ಇಷ್ಟು ವಿಶ್ವಾಸ, ನಂಬಿಕೆ!' ಎಂದುಕೊಂಡರು ಅವರು. ಆದರೆ ರಾಮಾಶಾಸ್ತ್ರಿಗಳ ನಿರೀಕ್ಷೆ, ನಂಬಿಕೆ ಸುಳ್ಳಾಗಲಿಲ್ಲ. ಅವರ ಪತ್ನಿಗೆ ಗಂಡುಮಗುವೇ ಆಯಿತು. ಆ ಮಗುವಿಗೆ ನರಸಿಂಹ ಎಂದೇ ಹೆಸರಿಟ್ಟರು. ಆ ಮಗು ಬೇರೆ ಯಾರೂ ಅಲ್ಲ, ಅಂತಹ ಶಾಸ್ತ್ರನಿಷ್ಠ ವೈದಿಕರ ಮನೆಯಲ್ಲಿ ಹುಟ್ಟಿ ಬಂದು ಶೃಂಗೇರಿ ಶ್ರೀಶಂಕರಾಚಾರ್ಯ ಪೀಠವನ್ನಲಂಕರಿಸಿದ ಅಭಿನವ ನರಸಿಂಹಭಾರತೀ ತೀರ್ಥ ಸ್ವಾಮೀಜಿ!

ನಮ್ಮ ತಂದೆ ಸಹ ಅಂಧಾನುಕರಣೆ ಮಾಡುವುದನ್ನು ವಿರೋಧಿಸುತ್ತಿದ್ದರು. ತಮ್ಮ ಅನುಭವಕ್ಕೆ ಬಂದುದರ ಬಗ್ಗೆ ನಿಸ್ಸಂಕೋಚವಾಗಿ ಹೇಳಿ ನಿಷ್ಪಕ್ಷ ಅಭಿಪ್ರಾಯಕ್ಕೆ ಬರುವುದು ಅವರ ಅಭ್ಯಾಸವಾಗಿದ್ದಿತು. ಕೆಲವೊಮ್ಮೆ ತಂದೆಯವರದು ಹತ್ತೂ ಜನರ ಸಭೆಯಲ್ಲಿ ಅವರದೊಂದೇ ಅಭಿಪ್ರಾಯ ಬೇರೆಯದಾಗಿರುತ್ತಿತ್ತು....! ಒಮ್ಮೆ ನಮ್ಮ ಶಿವಮೊಗ್ಗೆಯ ವಕೀಲರಾದ ಶ್ರೀ ಗರುಡಾಚಾರ್ ಅವರು ಒಂದು ದೊಡ್ಡ ಸಭೆ ಕರೆದಿದ್ದರು. ಆ ಸಭೆಯಲ್ಲಿ ಊರಿನ ಪ್ರಮುಖರು, ಗಣ್ಯರು, ಸಾಮಾನ್ಯರು ಎಲ್ಲರೂ ಹಾಜರಿದ್ದರು. ಆ ಸಭೆಯ ಮುಖ್ಯ ಉದ್ದೇಶ- ಬಾಲ್ಯವಿವಾಹದ ವಿರೋಧ, ಪ್ರೌಢವಿವಾಹವನ್ನು ಜಾರಿಗೆ ತರಲು ಎಲ್ಲರ ಸಹಕಾರ- ಈ ಬಗ್ಗೆ ಒಂದು ನಿಲುವಿಗೆ ಬರುವುದಾಗಿತ್ತು. ಸುತ್ತಲ ಹಳ್ಳಿಗಳಿಂದಲೂ ಜನರು ಬಂದು ಸೇರಿದ್ದರು. ನಮ್ಮೂರಿನ ವೈದಿಕರೂ ಬಂದಿದ್ದರು. ಎಲ್ಲರೂ ಬಾಲ್ಯವಿವಾಹ ಸರಿಯಾದದ್ದಲ್ಲ, ಹಾನಿಕರ, ಚಿಕ್ಕವಯಸ್ಸಿನಲ್ಲಿ ದುಷ್ಪರಿಣಾಮವಾಗುವಂಥದು, ತಾಯಿ ಮಗುವಿಗೆ ಅಪಾಯ ಸಂಭವ, ಅಪ್ರಾಪ್ತ ವಯಸ್ಸಿಗೇ ತಾಯ್ತನ ಅನಗತ್ಯ, ಅನ್ಯಾಯ ಎನ್ನುವ ಅಭಿಪ್ರಾಯವನ್ನು ತಮಗೆ ಸರಿತೋರಿದ ರೀತಿಯಲ್ಲಿ ಮಂಡಿಸಿದರು. ಎಲ್ಲರ ಅಭಿಪ್ರಾಯವನ್ನೂ ಕೇಳಿದ

ತಂದೆಯವರು ಅನಂತರ ತಾವು ಎದ್ದು, ''ತಾವೆಲ್ಲರೂ ಹಿರಿಯರು. ತಮ್ಮ ಅಭಿಪ್ರಾಯಗಳನ್ನು ಹೇಳಿದಿರೇ ವಿನಾ ನಿಮ್ಮ ವೈಯಕ್ತಿಕ ಅನುಭವವನ್ನು ಹೇಳಲಿಲ್ಲ. ಇಲ್ಲಿ ನನ್ನ ಸಮವಯಸ್ಕರೂ ಹಲವರಿದ್ದೀರಿ... ನಿಮಗೂ ಇದು ಅನುಭವಕ್ಕೆ ಬಂದಿದ್ದೀತು. ನನಗೂ ನಮ್ಮ ತಾಯಿಗೂ ಕೇವಲ ಹದಿನಾಲ್ಕು ವರ್ಷ ಅಂತರ. ನಾನು ನನ್ನ ತಾಯಿಯ ಹದಿನಾಲ್ಕನೇ ಎಳೆವಯಸ್ಸಿನಲ್ಲಿ ಹುಟ್ಟಿದವನು. ಈಗ ನನಗೆ ನಲವತ್ತೇಳು ವರ್ಷ. ನಾನು ಬೆಳಗಿನಿಂದ ಸಂಜೆಯತನಕವೂ ದೈಹಿಕ ಶ್ರಮದ ಕೆಲಸ ಮಾಡಬಲ್ಲೆ.... ಒಂದು ಗಾಡಿ ಸೌದೆಯನ್ನು ಒಂದು ನಿಮಿಷವೂ ವಿಶ್ರಾಂತಿ ತೆಗೆದುಕೊಳ್ಳದೆ ಒಡೆದು ಕಡಿದು, ಕೊಡಲಿ ಕೆಳಗಿಡುತ್ತೇನೆ. ಅಷ್ಟು ಶಕ್ತಿ ಇದೆ ನನಗೆ... ಇದು ದುಷ್ಪರಿಣಾಮ ಹೇಗಾದೀತು? ನಮ್ಮ ತಾಯಿ ಇಂದಿಗೂ ಆರೋಗ್ಯವಾಗಿ ಚೆನ್ನಾಗಿದ್ದಾರೆ. ಚೆನ್ನಾಗಿ ಕೆಲಸ ಮಾಡುತ್ತಾರೆ. ಅವರಿಗೂ ಯಾವುದೇ ಹಾನಿಯಾಗಿಲ್ಲ'' ಎಂದರಂತೆ. ಅದೇ ಧೈರ್ಯವೂ, ಅನುಭವಕ್ಕೆ ಬಂದುದನ್ನು ನೇರವಾಗಿ ಹೇಳುವುದೂ, ಪಕ್ಷಪಾತವಿಲ್ಲದೆ ಎಲ್ಲವನ್ನೂ ನೋಡುವುದೂ ತಂದೆಯವರಂತೆ ನನಗೂ ಬರಲಿ ಎಂದು ಹಿರಿಯರು ಆಶೀರ್ವದಿಸಲಿ ಎಂದು ನಾನು ವಿನೀತಭಾವದಿಂದ ಪ್ರಾರ್ಥಿಸುತ್ತಿದ್ದೆ. ಪುಣ್ಯವಶಾತ್ ಸಾಧ್ಯವಾದಷ್ಟೂ ಮೈಗೂಡಿಸಿಕೊಂಡಿರುವ ಈ ಗುಣದಿಂದ ನನಗೆ ಮೆಚ್ಚುಗೆ ಸಿಕ್ಕಿದೆ.

೮. ಶ್ರೀ ಸತ್ಯಸಾಯಿಬಾಬಾ

ನನ್ನ ತಂದೆಯೇ ನಾನು ತುಂಬ ಮೆಚ್ಚಿಕೊಂಡ ಆದರ್ಶವ್ಯಕ್ತಿ. ಊರಿಗೆ ಯಾರು ಬಂದರೂ ನಮ್ಮ ಮನೆಯ ಬಾಗಿಲು ಮಾತ್ರ ಎಂದಿಗೂ ಅವರಿಗೆ ತೆರೆದಿಟ್ಟದ್ದು. ಚಿಕ್ಕಂದಿನಿಂದಲೂ ಇದು ನಾನು ಕಂಡಿರುವ, ಅದನ್ನೇ ಅನುಸರಿಸಿಕೊಂಡು ಬರಲು ಯತ್ನಿಸಿರುವ ಸತ್ಸಂಪ್ರದಾಯ. ಅಪರಿಚಿತರಾಗಲಿ, ಅತಿಥಿ-ಅಭ್ಯಾಗತರಾಗಲಿ, ಅವರಿಗೆ ನಮ್ಮ ಮನೆಯ ಸತ್ಕಾರ ಎಂದೂ ಇರುವಂತಾಗಲಿ, ಇದು ನಮ್ಮ ವಂಶದ ಹಿರಿಯರು ಹಾಕಿಕೊಟ್ಟ ನಡೆ, ಸಂಸ್ಕಾರ! ಅತಿಥಿದೇವೋ ಭವ ಎನ್ನುವುದು ನಮ್ಮ ಭಾರತೀಯ ಸಂಸ್ಕೃತಿ. ನಾವು ಇದನ್ನು ಎಂದೂ ಕೈಬಿಡದಿರುವಂತಾಗಲಿ.

ಭಾಗವತದಲ್ಲಿ ಒಂದು ಕಥೆ ಇದೆ. ಕೃಷ್ಣನು ಗೋಕುಲದಲ್ಲಿದ್ದ ಸಂದರ್ಭ. ಎಲ್ಲ ಹೆಂಗೆಳೆಯರೂ ಅವನನ್ನು ಮೋಹಿಸಿ ಪ್ರೀತಿಸುತ್ತಿದ್ದುದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು. ಒಮ್ಮೆ ಕೃಷ್ಣ ಗೆಳೆಯರ ಜತೆ ಹಸುಗಳನ್ನು ಕಾಯಲು ಹೊರಟ. ಮಧ್ಯಾಹ್ನದ ಹೊತ್ತಿಗೆ ಎಲ್ಲರ ಹೊಟ್ಟೆಯೂ ಚುರುಗುಟ್ಟ ತೊಡಗಿತು. ತನ್ನ ಗೆಳೆಯರ ಹಸಿವನ್ನು ಕಂಡ ಕೃಷ್ಣ ಸುತ್ತಲೂ ಕಣ್ಣುಹಾಯಿಸಿದ. ಆ ದಿನ ದೊಡ್ಡದೊಂದು ಯಾಗ ನಡೆಯುತ್ತಿತ್ತು. ಹೋಮಧೂಮ ಏಳುವುದನ್ನು ಕಂಡ ಅವನು, ''ಊರಿನ ಹೆಂಗಸರೆಲ್ಲ ಅಲ್ಲಿ ಸೇರಿರುತ್ತಾರೆ. ನೀವುಗಳು ಹೋಗಿ 'ಕೃಷ್ಣನಿಗೆ ಹಸಿವಾಗಿದೆಯಂತೆ. ತಿನ್ನಲು ಏನಾದರೂ ಕೊಡಬೇಕಂತೆ' ಎನ್ನಿ, ಕೊಡುತ್ತಾರೆ ಆ ಹೆಂಗಸರು'' ಎಂದ. ಅವನ ಮಾತಿಗೆ ತಲೆಯಾಡಿಸಿದ ಗೆಳೆಯರು ಹೋಮ ನಡೆಯುತ್ತಿದ್ದ ಜಾಗಕ್ಕೆ ಹೋದರು. ಅವರೆಲ್ಲ ಹಿಂದಿನಿಂದ ಹೆಂಗಸರು ಅಡುಗೆ ಮಾಡುತ್ತಿದ್ದ ಜಾಗಕ್ಕೆ ಬಂದು ತಮಗಾಗಿರುವ ಹಸಿವಿನ ಬಗ್ಗೆ ಹೇಳಿ, ಕೃಷ್ಣ ತಮ್ಮನ್ನು ಕಳುಹಿಸಿದನೆಂದು ಹೇಳಿದರು. ಮಾತೃಹೃದಯಗಳು ಜಾಗೃತವಾದುವು. ಹೋಮದಲ್ಲಿ ನೈವೇದ್ಯಕ್ಕೆ ಇಟ್ಟಿದ್ದ ಭಕ್ಷ್ಯ-ಭೋಜ್ಯ ವಸ್ತುಗಳು ಗೋವಳರ ಕೈಗೆ ರವಾನೆಯಾದವು. ವಿಷಯ ತಿಳಿದ, ಹೋಮ ಮಾಡುತ್ತಿದ್ದ ಹೆಂಗಸರ ಪತಿಗಳು ಸಿಟ್ಟಿನಿಂದ ಹೆಂಗಸರನ್ನು ಹೊಡೆಯಲು ಅಟ್ಟಿಸಿಕೊಂಡು ಬಂದರು. ಓಡಿಬಂದ ಹೆಂಗಸರು ಕೃಷ್ಣನಿದ್ದ ಜಾಗಕ್ಕೆ ಬಂದು ಆಶ್ರಯ ಪಡೆದರು. ಕೈ ಎತ್ತಿದ್ದ ಪತಿಗಳನ್ನುದ್ದೇಶಿಸಿ ಕೃಷ್ಣ, ''ನೀವುಗಳು, ಆ ಹೆಂಗಸರು ಯಜ್ಞಕ್ಕಿಂತಲೂ ನನ್ನನ್ನು ಹೆಚ್ಚು ಪ್ರೀತಿಸುತ್ತಾರೆಂದು ಥಳಿಸಲು ಬಂದಿದ್ದೀರಿ. ಅವರು ನನ್ನನ್ನು ಪ್ರೀತಿಸುವುದು ಅವರಲ್ಲಿ ನಾನಿದ್ದೇನೆಂದು. ನೀವು ಅವರನ್ನು ಪ್ರೀತಿಸುವುದೂ ನಾನು ಅವರಲ್ಲಿದ್ದೇನೆಂದು. ಪತಿಗಳೆಂದು ಅವರು ನಿಮ್ಮನ್ನು ಪ್ರೀತಿಸುವುದೂ ನಾನು ನಿಮ್ಮಲ್ಲಿರುವುದರಿಂದ. ಒಂದು ವೇಳೆ ನಾನು ನಿಮ್ಮಲ್ಲಿ ಇಲ್ಲದೆ ಹೋದರೆ ನಿಮಗೂ ಒಂದು ಕಟ್ಟಿಗೆ ತುಂಡಿಗೂ ವ್ಯತ್ಯಾಸವಿರದು'' ಎಂದನಂತೆ. ಆಗ ಪತ್ನಿಯರೂ - ಪತಿಗಳೂ ಎಲ್ಲರೂ ಅವನಿಗೆ ಶರಣಾದರಂತೆ.... ನಿಜ... ಅವನು, ಆ ಪರಮಾತ್ಮ ಆತ್ಮಸ್ವರೂಪಿಯಾಗಿ ನಮ್ಮಲ್ಲಿ ಇಲ್ಲದಿದ್ದರೆ ನಮ್ಮ ದೇಹವು ಕಟ್ಟಿಗೆಯಾಗುವುದು ತಾನೆ? ಇದು ಕೃಷ್ಣನ ಲೀಲೆಯ ಒಂದು ಕಥೆಯೇ ಆದರೂ, ಇದರ ತಾತ್ಪರ್ಯ ಎಲ್ಲರಲ್ಲೂ ಭಗವಂತನಿದ್ದಾನೆ ಎನ್ನುವುದೇ ತಾನೇ? ನಮ್ಮ ಸನಾತನ ಸಂಸ್ಕೃತಿಯಲ್ಲಿ 'ಅತಿಥಿದೇವೋ ಭವ' ಎಂದೇ ಹೇಳಿದ್ದಾರೆ. ಬಹುಶಃ ಸುಸಂಸ್ಕೃತರೆಲ್ಲರೂ ನಡೆಸಿಕೊಂಡು ಬರುವ ರೀತಿ ಇದೇನೆ.

ಹೌದು.... ಪ್ರತಿಯೊಬ್ಬರಲ್ಲೂ ದೇವರ ಅಂಶವಿದೆ ಎಂದು ನಂಬುವವರು ನಾವು. ಕೆಲವರಲ್ಲಿ ಆ ಅಂಶ ತುಸು ಹೆಚ್ಚಾಗಿಯೇ ಇರುತ್ತದೆ. ಅಂಥವರಲ್ಲಿ ಅವನ ವಿಭೂತಿಯ ಅಂಶ ಹೆಚ್ಚಿದೆ ಎಂದು ನಾವು ಅಂದುಕೊಳ್ಳುತ್ತೇವೆ.

'ಯದ್ಯದ್ವಿಭೂತಿಮತ್ಸತ್ತ್ವಂ
ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ
ಮಮ ತೇಜೋಽಂಶಸಂಭವಮ್ ॥'-ಎನ್ನುತ್ತಾನೆ
ಶ್ರೀಕೃಷ್ಣ!

'ಎಲ್ಲೆಲ್ಲಿ ವಿಭೂತಿ, ಶಕ್ತಿ ಜ್ಞಾನಗಳ ಮಹಿಮೆ ಇದೆಯೋ, ಅವೆಲ್ಲ ನನ್ನ ತೇಜಸ್ಸಿನ ಅಂಶವೇ. ಅಲ್ಲೆಲ್ಲಾ ನಾನು ಪ್ರಕಾಶಿಸುತ್ತೇನೆ' ಎಂದಿದ್ದಾನೆ ಕೃಷ್ಣ. ಹಾಗೆ ದೇವರ ಅಂಶ ಇರುವುದನ್ನು ಕಾಣಲು ನಮಗೆ ಸರಿಯಾದ ಒಳಗಣ್ಣು ಬೇಕಷ್ಟೆ. ಈ ಮಾತಿನಲ್ಲಿ ಪೂರ್ಣ ನಂಬಿಕೆ ಇರುವ ನಾನು ಶ್ರೀ ಸತ್ಯಸಾಯಿಬಾಬಾರ ಬಗೆಗೆ ಪೂಜ್ಯ, ಗೌರವಭಾವನೆ ಬೆಳೆಸಿಕೊಂಡಿರುವುದು ಸಹ ಪರಮಾತ್ಮನ ವಿಭೂತಿ ಅಂಶ ಅವರಲ್ಲಿ ಹೆಚ್ಚಾಗಿ ಇದೆ ಎಂದೇ! ಇಲ್ಲವಾದರೆ ಎಷ್ಟೆಲ್ಲ ಸಾಧನೆಗಳು ಬಾಬಾರಿಂದ ಆಗುವುದಿತ್ತೆ? ಸಮಾಜಸೇವೆಯಲ್ಲಿ ಬಾಬಾ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು. ಜನರ ಸಲುವಾಗಿ ಶಾಲೆ, ಕಾಲೇಜು, ಆಸ್ಪತ್ರೆ ಇತ್ಯಾದಿ ಅನೇಕ ಸಂಸ್ಥೆಗಳನ್ನು ಕಟ್ಟಿ ನಡೆಸುತ್ತ ಜನಾನುರಾಗಿಯಾಗಿರುವವರು. ನಾನು ಒಮ್ಮೆ ಅವರನ್ನು ನೋಡಬೇಕು ಎಂದು ಬಹಳ ಆಸೆಪಟ್ಟೆ....

ನಾನು ಸಾಯಿಬಾಬಾ ಅವರನ್ನು ಹತ್ತಿರದಿಂದ ಮೊದಲನೆ ಸಾರಿ ನೋಡಿದ ಸಂದರ್ಭ ಚೆನ್ನಾಗಿ ನೆನಪಿದೆ..... ಆಗ ನನ್ನ ತಮ್ಮ ಚಂದ್ರಶೇಖರನಿಗೆ ಇನ್ನೂ ಸಂತಾನವಾಗಿರಲಿಲ್ಲ. ದೈವಪ್ರೇರಣೆಯೋ ಎನ್ನುವಂತೆ ಆ ವಾರದಲ್ಲಿ ಬಾಬಾರವರು ವೈಟ್‌ಫೀಲ್ಡ್‌ಗೆ ಬಂದಿದ್ದಾರೆಂದು ತಿಳಿಯಿತು. ನಮ್ಮ ಚಂದ್ರು ಅಲ್ಲಿನ ಕಾಲೇಜಿನಲ್ಲೇ ಆಗ ಕೆಲಸ ಮಾಡುತ್ತಿದ್ದ. ಒಮ್ಮೆ ಅವರ ದರ್ಶನ ಮಾಡಿಕೊಂಡು ಬರೋಣವೆನ್ನಿಸಿ ಚಂದ್ರು ಮತ್ತು ಅವನ ಶ್ರೀಮತಿ ವಾಣಿಯನ್ನು ಕರೆದೊಯ್ದೆ. ಬಾಬಾರ ದರ್ಶನವಾಯಿತು. ಜನಜಂಗುಳಿ ಕಡಮೆ ಇತ್ತಾಗಿ, ಹತ್ತಿರ ಹೋದ ನಾವು ಅವರ ಕಾಲಿಗೆ ನಮಸ್ಕಾರ ಮಾಡಿದೆವು. ಚಂದ್ರು - ವಾಣಿಯರೂ ಅವರ ಕಾಲಿಗೆರಗಿದರು. ನಾನು ಅಳುಕುತ್ತಲೇ, ''ಬಾಬಾ, ಇವರಿಗೆ ಮದುವೆಯಾಗಿ ಎಂಟು ವರ್ಷಗಳ ಮೇಲಾಯಿತು. ಇನ್ನೂ ಸಂತಾನ ಭಾಗ್ಯವಿಲ್ಲ. ನೀವು ಕೃಪೆ ಮಾಡಿ ಆಶೀರ್ವಾದ ಮಾಡಿ ಹೇಳಬೇಕು'' ಎಂದೆ. ಬಾಬಾ ನಸುನಕ್ಕು, ''ಬಂಗಾರು, ಖಂಡಿತ ಸಂತಾನವಾಗುತ್ತದೆ. ನೀವು ಯೋಚಿಸಬೇಡಿ. ನಾನೇ ಆ ಮಗುವಿಗೆ ನಾಮಕರಣ ಮಾಡುತ್ತೇನೆ...'' ಎಂದರು ವಿನೋದದಿಂದ, ಚಂದ್ರುವಿನ ಬೆನ್ನ ಮೇಲೆ ಕೈಯಾಡಿಸಿ! ನಮ್ಮ ಮನಸ್ಸಿಗೆ ಎಂಥದೋ ಸಮಾಧಾನ, ಬಾಬಾರ ಆಶ್ವಾಸನೆ ಸಿಕ್ಕಿತಲ್ಲ ಎನ್ನುವ ತೃಪ್ತಿ.

ದೈವದ ಕೃಪೆ, ಸತ್ಯಸಾಯಿಬಾಬಾರ ಆಶೀರ್ವಾದ, ಜತೆಗೆ ಡಾ. ಕಾಮಿನೀರಾವ್ ಅವರ ವೈಜ್ಞಾನಿಕ, ವೈದ್ಯಕೀಯ ಸಹಾಯದಿಂದಾಗಿ ವಾಣಿ ಸುಂದರವಾದ ಹೆಣ್ಣುಮಗುವಿನ ತಾಯಿಯಾದಳು. ಬಾಬಾರ ಕೃಪಾಶೀರ್ವಾದವನ್ನು ಹೇಗೂ ಮರೆಯದಂತಾಯಿತು. ಆ ಮಗುವಿಗೆ ಶ್ರೀವಿದ್ಯಾ ಎಂದು ಹೆಸರಿಟ್ಟೆವು.

ಆಗ ನಾನು ಬೆಂಗಳೂರಿಗೆ ಏನೋ ಕೆಲಸದ ಮೇಲೆ ಬಂದಿದ್ದೆ. ಮಲ್ಲೇಶ್ವರಂನಲ್ಲಿ ಒಂದು ಭಾರೀ ಸಭೆ ನಡೆಯಿತು. ಅಲ್ಲಿಗೆ ಬಾಬಾ ಬಂದಿದ್ದರು. ಅವರನ್ನು ಹೇಗಾದರೂ ಮತ್ತೊಮ್ಮೆ ಮಾತನಾಡಿಸಬೇಕು ಎನ್ನುವ ಹಂಬಲ. ಆ ಸಭೆಯಲ್ಲಿ ಬಾಬಾ ಮಾತನಾಡಿದರು. ಅವರು ಮಾತನಾಡಿದ್ದು ಏನು ಎಂದು ಅಷ್ಟು ಸ್ಪಷ್ಟವಾಗಿ ನೆನಪಿಲ್ಲದಿದ್ದರೂ ನನಗೆ, ನನ್ನಂತೆ ಅಲ್ಲಿ ನೆರೆದಿದ್ದ ಸಾವಿರಾರು ಮಂದಿಗೆ ಅವರ ಮಾತು ಇಷ್ಟವಾಗಿದ್ದಿತು. ಅದೇ ವಾರದಲ್ಲಿ ನಾನು, ನಮ್ಮ ಊರಿನ ಕಾಶಿಮಾಯ (ಮಾಯ - ಎಂದರೆ ಮಾವ) ನಮ್ಮ ಶ್ರೀನಿವಾಸಾವಧಾನಿಗಳು ವೈಟ್‌ಫೀಲ್ಡ್‌ಗೆ ಬಾಬಾರ ದರ್ಶನಕ್ಕೆಂದೇ ಹೋದೆವು. ನಾವು ಹೋದ ದಿವಸ ಬಾಬಾರ ದರ್ಶನವಾಗಲಿಲ್ಲ. ಮರುದಿನ ಅವರ ದರ್ಶನ ಸಾಧ್ಯ ಎಂದಾಗಿತ್ತು. ಕಾಶಿಮಾಯ ಊರಿನಲ್ಲಿ ಬಹಳ ಕೆಲಸವಿತ್ತೆಂದು ಅದಕ್ಕಾಗಿ ನಿಲ್ಲದೆ ಊರಿಗೆ ಹೊರಟರು. ನಾನೂ ಶ್ರೀನಿವಾಸಾವಧಾನಿಗಳೂ ದರ್ಶನ ಮಾಡಿಯೇ ಹೋದರಾಯಿತು ಎಂದು ಉಳಿದುಕೊಂಡೆವು. ಮಾರನೆಯ ಬೆಳಗ್ಗೆ ಬಾಬಾರ ದರ್ಶನವೂ ಆಯಿತು. ದೂರದಲ್ಲಿದ್ದ ಬಾಬಾ ನಮ್ಮ ಹತ್ತಿರಕ್ಕೇ ಬಂದರು. ಎಲ್ಲರ ಕಡೆಗೂ ಮಂದಸ್ಮಿತರಾಗಿ ನೋಡುತ್ತ ನಡೆದಿದ್ದರು. ನಮ್ಮ ಬಳಿಗೆ ಬಂದಕೂಡಲೇ ನಾನೂ, ಶ್ರೀನಿವಾಸಾವಧಾನಿಗಳೂ ನಮಸ್ಕಾರ ಮಾಡಿದೆವು. ನಾನು ಆದಿನ ನಮ್ಮ ತಂದೆಯ ಶಾಲು ಹೊದೆದಿದ್ದೆ. ಆ ಶಾಲು ಬಹಳ ಹಳತಾಗಿತ್ತು. ಅಲ್ಲಲ್ಲಿ ಸಣ್ಣಗೆ ಹರಿದಿತ್ತು, ಬಣ್ಣವೂ ಕುಂದಿತ್ತು. ನಾನು ನಮಸ್ಕರಿಸಿ ಮೇಲೇಳುವಾಗ ಬಾಬಾ ನನ್ನ ಬೆನ್ನ ಮೇಲೆ ಕೈಯಿಟ್ಟು, ''ಬಂಗಾರು, ಇಪ್ಪತ್ತನೇ ತಾರೀಖಿಗೆ ಬನ್ನಿ. ನಮ್ಮ ಕಾಲೇಜು ಹಾಸ್ಟೆಲ್‌ನ ಹೊಸಕಟ್ಟಡದ ಉದ್ಘಾಟನೆ ಇದೆ. ಆ ದಿನ ಬನ್ನಿ'' ಎಂದರು. ನನಗೆ ಆಶ್ಚರ್ಯ, ಅವರು ಹಾಗೇಕೆ ಹೇಳಿದರು

ಎಂದು! ಇಪ್ಪತ್ತನೇ ತಾರೀಖಿಗೆ ಕೇವಲ ನಾಲ್ಕು ದಿನಗಳು ಉಳಿದಿದ್ದವು. ನಾವು ಮತ್ತೂ ನಾಲ್ಕು ದಿನ ಬೆಂಗಳೂರಿನಲ್ಲಿ ಉಳಿದು ಆದಿನ ಅಲ್ಲಿಗೆ ಹೋದೆವು. ಆದಿನ ಭಿಕ್ಷುಕರಿಗೆಲ್ಲ ಬಾಬಾ ಹೊದ್ದಿಕೆಗಳನ್ನೂ, ರಗ್ಗುಗಳನ್ನೂ ಕೊಡುತ್ತಿದ್ದರು. ಎರಡೆರಡು ಸಾಲಿನಲ್ಲಿ ನಿಂತ ಭಿಕ್ಷುಕರಿಗೆ ಯಾರಿಗೂ ತಪ್ಪದಂತೆ ಹೊದ್ದಿಕೆಗಳ ವಿತರಣೆಯಾಯಿತು. ಬಾಗಿಲಲ್ಲಿ ಹೀಗೆ ನಡೆದಿದ್ದಾಗಲೇ ನಮ್ಮನ್ನು ಕಂಡ ಬಾಬಾ, ''ಉಪನಿಷತ್ತು ಹೇಳುತ್ತ ನಮ್ಮ ಜತೆಯಲ್ಲಿ ಬನ್ನಿ'' ಎಂದು ಹೇಳಿ ಹೊರಟರು. ಸುಮಾರು ಒಂದು ಫರ್ಲಾಂಗ್ ದೂರ ಬಾಬಾರನ್ನು ಹಿಂಬಾಲಿಸಿ ನಾವು ಉಪನಿಷತ್ತು ಹೇಳುತ್ತ ಹೋದೆವು. ದೊಡ್ಡ ಸಭಾಭವನವನ್ನು ತಲುಪಿದೆವು. ಅಲ್ಲಿ ಅನೇಕ ಕಾರ್ಯಕ್ರಮಗಳು ನಡೆಯಲು ಪ್ರಾರಂಭವಾದವು. ಬಾಬಾ ವೇದಿಕೆಯ ಮೇಲೆ ಹೋದರು. ನಾವು ಅಲ್ಲೇ ನಾಲ್ಕನೆಯ ಸಾಲಿನಲ್ಲಿ ಕುಳಿತೆವು. ಸಮಾರಂಭದ ಕಾರ್ಯಕ್ರಮಗಳು ಮುಗಿದರೂ ನಮ್ಮನ್ನೇನೂ ಬಾಬಾ ಕರೆಯಲಿಲ್ಲ. ಜನರೆಲ್ಲ ಎದ್ದು ಹೊರಟರು. ಕೂಡಲೆ ಬಾಬಾ, ''ಬಂಗಾರು ಇಲ್ಲಿ ಬಾ...'' ಎಂದರು ತೆಲುಗಿನಲ್ಲಿ. ಅವರ ಧ್ವನಿ ನವಿರಾಗಿತ್ತು. ನಾವು ವೇದಿಕೆಗೆ ಹೋದೆವು. ಅಲ್ಲಿಯೇ ತೆಲುಗು ಪ್ರಾಂತ್ಯದ ಕಾಮಾವಧಾನಿ ಎನ್ನುವವರೂ ಇದ್ದರು. ಅವರಿಗೂ ನಮ್ಮಿಬ್ಬರಿಗೂ ಬಾಬಾ ಶಾಲು ಹೊದಿಸಿ ಆಶೀರ್ವದಿಸಿದರು. ಅದೊಂದು ಅಪೂರ್ವ ಅನುಭವ. ಬಾಬಾ ಅವರ ಪರಿಚಯವೇನೂ ಇರಲಿಲ್ಲ ನನಗೆ; ಮಲ್ಲೇಶ್ವರದಲ್ಲಿ ನೋಡಿದ್ದುದು, ಅದೂ ದೂರದಿಂದ. ಬಹುಶಃ ಲೌಕಿಕರಂತೆ ಆಧುನಿಕ ಉಡುಪು ಧರಿಸದೆ, ಪುರೋಹಿತರಾದ ನಮ್ಮ ವೃತ್ತಿಗೆ ತಕ್ಕಂತೆ ಕಚ್ಚೆಪಂಚೆ ಹಾಕಿದ್ದು, ಮೇಲುದ ಹೊದ್ದು ಶಾಲು ಹೊದೆದಿದ್ದುದು ಅದರಿಂದ ಅವರಿಗೆ ಇವರು ವೇದಾಧ್ಯಯನ ಮಾಡಿದವರು ಎಂದು ತಿಳಿಯಿತೇನೋ! ಇಪ್ಪತ್ತನೇ ತಾರೀಖಿನಂದು ನಮ್ಮನ್ನು ಗುರ್ತಿಸಿ ಹತ್ತಿರ ಕರೆದು ಶಾಲು ಹೊದಿಸಿದುದು... ಎಲ್ಲವೂ ನಿಜಕ್ಕೂ ಅತ್ಯಾಶ್ಚರ್ಯಕರವಾಗಿ ಕಂಡಿತು ನನಗೆ. ಸಾಯಿಬಾಬಾ ಮಾಡಿರುವ ಸಮಾಜಸೇವೆ ಕೇವಲ ಭಗವದಂಶ ಇರುವಂಥವರಿಂದ ಮಾತ್ರ ಸಾಧ್ಯ. ಅಂಥ ಬಾಬಾರ ಕೃಪಾದೃಷ್ಟಿ ನನ್ನ ಮೇಲೂ ಬಿದ್ದು, ಅವರ ಪ್ರೀತಿಯ ಸಿಂಚನವಾದುದು ಸಹ ದೇವರೇ ನನಗೆ ಕರುಣಿಸಿದ್ದು ಎಂದು ನನ್ನ ನಂಬಿಕೆ!

ಆಗೊಮ್ಮೆ ನಾನು ಒಂದು ಮದುವೆಗಾಗಿ ಹಾಸನಕ್ಕೆ ಹೋಗಿದ್ದೆ. ಆ ಮದುವೆ ನಡೆದದ್ದು ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ. ಅಲ್ಲಿನ ಮದುವೆ ಸಭಾಂಗಣದಲ್ಲಿ ದೊಡ್ಡದಾದ ಆಳೆತ್ತರದ ಶ್ರೀ ರಾಘವೇಂದ್ರ ಸ್ವಾಮಿಯವರ ಫೋಟೋ ಇದ್ದು, ಅದರ ಕೆಳಗೆ ಅವರೇ ರಚಿಸಿರುವ 'ಇಂದು ಎನಗೆ ಗೋವಿಂದ, ನಿನ್ನಯ ಪಾದಾರವಿಂದವ ತೋರೋ ಮುಕುಂದನೇ' ಎನ್ನುವ ಕೃತಿಯ ಎರಡು ಸಾಲುಗಳನ್ನೂ ಬರೆಯಲಾಗಿತ್ತು. ಆ ಎರಡು ಸಾಲುಗಳನ್ನು ಓದಿದ ಮೇಲೆ ಅದೇಕೋ ನನಗೆ ಅದೇ ಸಾಲುಗಳು ಮತ್ತೆ ಮತ್ತೆ ನೆನಪಾಗುತ್ತಿದ್ದವು. ಆಗ ನನ್ನ ಜತೆಗಿದ್ದವರು ಶ್ರೀನಿವಾಸ ಅವಧಾನಿಯವರು. ಮದುವೆಯ ಕಾರ್ಯ ಮುಗಿದ ಮೇಲೆ ನಾವಿಬ್ಬರೂ ಬೆಂಗಳೂರಿಗೆ ವಾಪಸಾದೆವು. ರೈಲಿನಲ್ಲಿ ವಾಪಸು ಬರುವಾಗಲೂ 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದವ ತೋರೋ ಮುಕುಂದನೇ' ಎನ್ನುವ ಎರಡು ಸಾಲುಗಳೇ ಮನಸ್ಸಿನಲ್ಲಿ ರಿಂಗಣಿಸುತ್ತಿದ್ದವು. ಆ ದಿನ ಬಾಬಾ ಕೊಟ್ಟಿದ್ದ ಶಾಲನ್ನೇ ಹೊದ್ದಿದ್ದ ನಮಗೆ ಏಕೋ ಬಾಬಾರವರು ಚಂದ್ರುವಿನ ಜತೆಯಲ್ಲಿ ಹೋಗಿದ್ದಾಗ ದರ್ಶನ ಕೊಟ್ಟದ್ದು, ಶಾಲು ಕೊಡುತ್ತೇನೆ ಎಂದದ್ದು, ಶಾಲು ಕೊಟ್ಟದ್ದು ನೆನಪಾಯಿತು.

ಬೆಂಗಳೂರಿಗೆ ಬಂದಾಗ ನನ್ನ ತಮ್ಮ ಚಂದ್ರುವಿನಿಂದ ಬಾಬಾರು ವೈಟ್‌ಫೀಲ್ಡ್‌ನಲ್ಲೇ ಇರುವುದಾಗಿ ತಿಳಿಯಿತು. ಮರುದಿನ ಅವನು ಅವರನ್ನು ನೋಡಿಬರಲು ಹೊರಟಿದ್ದ. ನಾವೂ ಏಕೆ ಹೋಗಿ ಬರಬಾರದು ಎನ್ನಿಸಿ ಹೊರಟೆ; ಶ್ರೀನಿವಾಸ ಅವಧಾನಿಯವರೂ ಬಂದರು. ನಾವಿಬ್ಬರೂ ಮೊದಲ ಸಾರಿ ಬಾಬಾರು ಕೊಟ್ಟ ಶಾಲನ್ನೇ ಹೊದ್ದು ಹೊರಟೆವು.

ನಾವು ವೈಟ್‌ಫೀಲ್ಡ್ ತಲುಪಿದೆವು. ದರ್ಶನಕ್ಕಾಗಿ ಕಾದೆವು. ಬಹಳ ಜನ. ಸಭಾಂಗಣದಲ್ಲಿನ ಜನರನ್ನು ನೋಡಿ ಹೊರಬಂದ ನಾವು ಅಲ್ಲಿನ ದೊಡ್ಡ ಗೇಟ್‌ನ ಆಚೆಗೆ ಬಂದು ನಿಂತೆವು. ಪಕ್ಕದಲ್ಲೇ ಸೆಕ್ಯುರಿಟಿ ಗಾರ್ಡ್‌ನ ಕೋಣೆ.... ನಿಂತು ಸಾಕಾಗಿ ಆ ಗಾರ್ಡ್‌ನ ಕೋಣೆಯ ಕುರ್ಚಿಯಲ್ಲಿ ಕುಳಿತೆವು. ಗಂಟೆಗಳು ಕಳೆದರೂ ಬಾಬಾ ಹೊರಗೆ ಬರಲಿಲ್ಲ. ಸಭಾಂಗಣದಿಂದ ಹಾಗೆಯೇ ಒಳಗೆ ಹೋಗಿರಬಹುದೋ ಎನ್ನಿಸಿ ಅನುಮಾನವಾಯಿತು. ಆದರೆ ಹೊರಗೆ ಇನ್ನೂ ಬಹಳ ಜನ. ಕೆಲವರು ಭಜನೆ ಮಾಡುತ್ತಿದ್ದರು. ನನ್ನ ಮನಸ್ಸು ನಿನ್ನೆ ಕಂಡ ಶ್ರೀರಾಘವೇಂದ್ರ ಸ್ವಾಮಿಯವರ ರಚನೆ, 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದವ ತೋರೋ ಮುಕುಂದನೇ' ಎಂದು ಗುಣಗುಣಿಸುತ್ತಿತ್ತು. ನಮ್ಮ ಚಂದ್ರು, ''ಈ ದಿನ ಬಾಬಾದರ್ಶನವಾಗುವ ಹಾಗೆ ಕಾಣಿಸುವುದಿಲ್ಲ'' ಎಂದವನೇ, ''ಒಂದು ನಿಮಿಷ ಒಳಗೆ ಹೋಗಿ ವಿಷಯ ಏನಾದರೂ ತಿಳಿಯುತ್ತದೆಯೇ, ನೋಡಿಬರುತ್ತೇನೆ'' ಎಂದು ಸಭಾಂಗಣದ ಒಳಗೆ ಹೋದ. ಅಷ್ಟರಲ್ಲಿ ಅಲ್ಲಿನ ಜನರೂ ಕಡಮೆಯಾಗಿದ್ದರು. ಚಂದ್ರು ಇನ್ನೂ ಈಚೆಗೆ ಬಂದಿರಲಿಲ್ಲ....

''ಓಹೋ... ಬಾಬಾ... ಬಾಬಾ'' ಎಂದು ಅಲ್ಲಿದ್ದ ಕೆಲವಾರು ಮಂದಿ ಕೂಗಿದರು. ಗಾರ್ಡ್ ಕೋಣೆಯಲ್ಲಿ ಕುಳಿತಿದ್ದ ನಾವೂ ಈಚೆಗೆ ಬಂದು ಗೇಟಿನಿಂದ ಈಚೆಯೇ ನಿಂತುಕೊಂಡೆವು. ''ಸದ್ಯ ಬಾಬಾ ಬಂದರಲ್ಲ'' ಎನ್ನಿಸಿ ಅಲ್ಲೇ ನಿಂತು ನೋಡುತ್ತಿದ್ದೆವು. ಬಾಬಾ ನಿಧಾನವಾಗಿ ಎಲ್ಲರತ್ತಲೂ ನೋಡಿ ನಸುನಕ್ಕು ಮಾತಾಡಿಕೊಂಡು ಬರುತ್ತಿದ್ದರು. ಅವರ ಮುಖ ಉಲ್ಲಸಿತವಾಗಿತ್ತು. ಹಾಗೆ ಮಾತನಾಡುತ್ತಿರುವಾಗಲೇ ಗೇಟಿನಿಂದ ಆಚೆಗೆ ನಿಂತಿದ್ದ ನಮ್ಮನ್ನೂ ನೋಡಿದರು. ಇನ್ನೂ ಮೂವತ್ತಕ್ಕೂ ಹೆಚ್ಚು ಜನರನ್ನು ನೋಡಿ ಬರುವುದಿತ್ತು. ಆದರೆ ನಮ್ಮನ್ನು ನೋಡಿದವರೇ ನಮ್ಮತ್ತ ಧಾವಿಸಿ ಬರತೊಡಗಿದರು. ಬಾಬಾ ಬರುತ್ತಿದ್ದ ವೇಗವನ್ನು ನೋಡಿ ಸೆಕ್ಯುರಿಟಿ ಗಾರ್ಡು ನಾವು ಆಚೆಗೆ ನಿಂತಿದ್ದ ಗೇಟನ್ನು ಒಳಕ್ಕೆ ತೆಗೆದ. ಬರಬರುತ್ತ ಇದ್ದಂತೆಯೇ ಬಾಬಾ ತಮ್ಮ ಉದ್ದನೆಯ ಕಾವಿ ಬಣ್ಣದ ನಿಲುವಂಗಿಯನ್ನು ಮೊಳಕಾಲವರೆಗೂ ಮೇಲೆತ್ತಿಕೊಂಡು ನಮ್ಮ ಹತ್ತಿರ ಬಂದು ನಿಂತರು! ನನಗೆ ಆಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ.... ಓಹ್! ನನ್ನ ಮನಸ್ಸಿನಲ್ಲಿ ಗುರುರಾಯರ 'ಇಂದು ಎನಗೆ ಗೋವಿಂದ, ನಿನ್ನಯ ಪಾದಾರವಿಂದವ ತೋರೋ ಮುಕುಂದನೇ' ಎಂದು ಮತ್ತೆ ಮತ್ತೆ ಮರುಕಳಿಸುತ್ತಿದ್ದ ಎರಡು ಸಾಲುಗಳು, ಈಗ ಬಾಬಾ 'ಇದೋ... ನೋಡಿಲ್ಲಿ ನನ್ನ ಪಾದಾರವಿಂದವ ತೋರಿದ್ದೇನೆ' ಎನ್ನುವಂತೆ ನಿಲುವಂಗಿಯನ್ನು ಮೊಣಕಾಲವರೆಗೆ ಎತ್ತಿ ಹಿಡಿದುಕೊಂಡು ನಮ್ಮ ಮುಂದೆ ಬಂದು ನಿಂತದ್ದು, ಇದೆಂಥ ಸುಯೋಗ, ಸಂಯೋಗ ಎನ್ನಿಸಿ ಸಂತೋಷದಿಂದ ಕಣ್ಣಲ್ಲಿ ತಾನೇ ಉಕ್ಕಿದ ನೀರನ್ನು ಒರೆಸಿಕೊಳ್ಳದೆ ಬಾಬಾರ ಪಾದಾರವಿಂದಗಳಿಗೆ ನಮಿಸಿದೆ. ಅವರ ಪಾದಗಳ ದರ್ಶನವನ್ನೂ ಮಾಡಿದೆ. ಬಾಬಾರ ಬಹಳ ಭಕ್ತರಾದ ನಮ್ಮ ಮಿತ್ರ ಕರ್ನಲ್ ಕೃಷ್ಣಮೂರ್ತಿಯವರು ಯಾವಾಗಲೂ, ''ಬಾಬಾರು ಯಾರಿಂದಲೂ ಕಾಲಿಗೆ ನಮಸ್ಕಾರ ಮಾಡಿಸಿಕೊಳ್ಳುವುದಿಲ್ಲ. ಅವರ ಪಾದದರ್ಶನ, ಸ್ಪರ್ಶ ಸಾವಿರದಲ್ಲಿ ಒಬ್ಬರಿಗೆ ಮಾತ್ರ ಸಾಧ್ಯವೋ ಏನೋ'' ಎನ್ನುವುದನ್ನು ಕೇಳಿದ್ದೆ. ಇಂದು ಬಾಬಾ ನಾವು ಬಯಸದೇ, ನನ್ನ ಮನದಲ್ಲಿದ್ದ ಸಾಲುಗಳು ತಿಳಿದವರಂತೆ ಪಾದಾರವಿಂದದ ದರ್ಶನ ಮಾಡಿಸಿದ್ದು ನಮ್ಮ ಪುಣ್ಯ ಎಂದೇ ಹೇಳಬೇಕು! ನಾನೂ, ಶ್ರೀನಿವಾಸ ಅವಧಾನಿಯವರೂ ಕಾಲಿಗೆರಗಿದಾಗ ಪ್ರೀತಿಯಿಂದ ನನ್ನ ಬೆನ್ನ ಮೇಲೆ ಕೈಯ್ಯಾಡಿಸಿದ ಬಾಬಾ, ''ಬಂಗಾರು ಹೇಗಿದ್ದೀರಿ? ವೇದಾಧ್ಯಯನವೆಲ್ಲ ಹೇಗೆ ನಡೆಯುತ್ತಿದೆ?'' ಎಂದೆಲ್ಲ ತೆಲುಗಿನಲ್ಲಿ ಪ್ರಶ್ನೆ ಮಾಡಿ, ನಾಲ್ಕಾರು ಪ್ರೀತಿಯ ಮಾತುಗಳನ್ನು ಹೇಳಿ ಆಶೀರ್ವದಿಸಿದರು. ನಿಜಕ್ಕೂ, ನನ್ನ ಜೀವನದಲ್ಲಿ ಅವಿಸ್ಮರಣೀಯವಾದ, ಮೈ ರೋಮಾಂಚನವಾದ ಘಟನೆ ಇದು ಎಂದರೆ ಸುಳ್ಳಲ್ಲ!

ಮಿತ್ರ ಕರ್ನಲ್ ಕೃಷ್ಣಮೂರ್ತಿಯವರು ನಮ್ಮ ಕುಟುಂಬದ ಮಿತ್ರರು. ಅವರ ಬೆಂಗಳೂರಿನ ಮನೆಯ ಗೃಹಪ್ರವೇಶವನ್ನು ನಾನೇ ಮಾಡಿಸಿದ್ದೆ. ಕೃಷ್ಣಮೂರ್ತಿ ದಂಪತಿಗಳು ಒಮ್ಮೆ ವೈಟ್‌ಫೀಲ್ಡ್‌ಗೆ ಬಾಬಾರ ದರ್ಶನಕ್ಕೆ ಹೋಗಿದ್ದ ಸಮಯದಲ್ಲಿ ಅವರ ಮಗಳು ಮತ್ತು ಮೊಮ್ಮಗು ಅವರ ಮನೆಯಲ್ಲಿದ್ದರು. ಆ ಸಮಯದಲ್ಲಿ ಅವರ ಮನೆಯ ಗ್ಯಾಸ್ ಸಿಲಿಂಡರ್ ಸಿಡಿದು ಮನೆಯ ಮುಕ್ಕಾಲು ಭಾಗವೆಲ್ಲ ಬೆಂಕಿಯ ಅನಾಹುತದಿಂದಾಗಿ ಸುಟ್ಟು ಹೋಗಿತ್ತು. ಆದರೆ ಅನಾಹುತ ನಡೆದ ಅದೇ ಸಮಯದಲ್ಲಿ ನಾಲ್ಕಾರು ನಿಮಿಷಗಳವರೆಗೆ ಅವರ ಮಗಳು ರಮಾ ಮಗುವಿನೊಂದಿಗೆ ಮನೆಯಿಂದ ಹೊರಗೆ ಹೋಗಿದ್ದು, ಅತ್ಯಾಶ್ಚರ್ಯಕರ ರೀತಿಯಲ್ಲಿ ಈ ಅಪಘಾತದಿಂದ ಪಾರಾಗಿದ್ದರು. ನಾನು ಆಗ ಬೆಂಗಳೂರಿನಲ್ಲಿದ್ದು ಅವರ ಮನೆಗೂ ಹೋಗಿ ನೋಡಿ ಬಂದೆ. ಕೃಷ್ಣಮೂರ್ತಿಯವರ ಕುಟುಂಬಕ್ಕೆ ಸಮಾಧಾನವನ್ನೂ ಹೇಳಿದೆ. ನಮ್ಮ ನಮ್ಮ ನಂಬಿಕೆ ದೃಢವಾಗಿದ್ದಲ್ಲಿ ಆ ರೀತಿ ಕಾಣದ ಕೈಯೊಂದು ಕಾಪಾಡುವುದು ಸುಳ್ಳಲ್ಲ ಎನ್ನುವುದು ನನ್ನದೂ ನಂಬಿಕೆ. ಇದಕ್ಕೆ ಅವರು ತಾನೆ ಹೇಗೆ ಹೊರತಾದಾರು! ಒಂದು ವಿಶೇಷ ಅಂದರೆ ಹಾಸಿಗೆ, ಬಟ್ಟೆ, ಕಿಟಕಿ, ಟೇಬಲ್, ಕುರ್ಚಿ, ಸೋಫಾ, ಮಂಚ, ಬಾಗಿಲು ಎಲ್ಲಾ ಸುಟ್ಟುಹೋಯಿತು. ಬಾಬಾ ಫೋಟೋ ಮಾತ್ರ ಸುಟ್ಟಿರಲಿಲ್ಲ!

❁ ❁ ❁

ಇದಾದ ಎರಡು ವರ್ಷಗಳ ಅನಂತರ, ನಾನು ಒಮ್ಮೆ ಬೆಂಗಳೂರಿಗೆ ಬಂದಿದ್ದೆ. ನಮ್ಮೂರಿನ ನನ್ನ ಪರಮಾಪ್ತಮಿತ್ರ ಮತ್ತೂರುಕೃಷ್ಣಮೂರ್ತಿಯ ಅಣ್ಣ ಸಂಗೀತ ವಿದ್ವಾನ್ ಶ್ರೀ ಶಂಕರಮೂರ್ತಿಯೂ ಬೆಂಗಳೂರಿನಲ್ಲಿದ್ದರು. ನಾನು ಬೆಂಗಳೂರಿಗೆ ಬಂದಾಗಲೆಲ್ಲ ಅವರನ್ನು ತಪ್ಪದೇ ಭೇಟಿಯಾಗುವುದೂ, ಅವರಲ್ಲಿ ಉಳಿಯುವುದೂ ಇತ್ತು. ಅದು ಇಂದಿಗೂ ನಡೆದಿದೆ. ಜತೆಗೆ ಶ್ರೀ ಶಂಕರಮೂರ್ತಿಯ ಪತ್ನಿ ಶ್ರೀಮತಿ ಸೀತಾಲಕ್ಷ್ಮಿ ನನ್ನ ಸೋದರತ್ತೆಯ ಮಗಳು. ಅವರಿಗಿಂತ ನಾನು ವಯಸ್ಸಿನಲ್ಲಿ ಸುಮಾರು ಎಂಟು ವರ್ಷಗಳಷ್ಟು ಕಿರಿಯನಾದರೂ ಅವರಿಗೆ ನನ್ನ ಮೇಲೆ ತುಂಬು ಪ್ರೀತಿ, ಮಮತೆ. ಆ ಸಮಯದಲ್ಲಿ ವೈಟ್‌ಫೀಲ್ಡ್‌ನಲ್ಲಿ ಸಾಯಿಬಾಬಾ ಬರೆದಿರುವ ಶ್ರೀ ಶಂಕರಾಚಾರ್ಯ ವಿರಚಿತ, 'ಭಜಗೋವಿಂದಂ' ನಾಟಕದ ಪ್ರದರ್ಶನ ಇದೆ ಎಂದು ತಿಳಿಯಿತು. ''ನಾವಿಬ್ಬರೂ ಅಲ್ಲಿಗೆ ಹೋಗಿ ಬರೋಣ ಅಶ್ವತ್ಥ'' ಎಂದರು

ಶಂಕರಮೂರ್ತಿ. ಬಾಬಾರ ದರ್ಶನದ ಸುಯೋಗ ಮತ್ತೆ! ನಾನೂ ಕೂಡಲೆ ಒಪ್ಪಿದೆ. ಮಾರನೆಯ ದಿನ ನಾವಿಬ್ಬರೂ ವೈಟ್‌ಫೀಲ್ಡ್‌ಗೆ ಹೋದೆವು. ಸಮಯ ಸಂಜೆಯ ನಾಲ್ಕು ಗಂಟೆ. ನಾವು ಹಿಂದೆ ಬಂದಿದ್ದ ಅದೇ ಸಭಾಭವನ. ವೇದಿಕೆಯ ಎದುರು ಕೇವಲ ಮೊದಲ ಐದಾರು ಸಾಲುಗಳ ಹಿಂದೆ ಕುಳಿತೆವು ನಾವು. ಹತ್ತಾರು ನಿಮಿಷಗಳಲ್ಲಿಯೇ ಸಭಾಭವನ ತುಂಬಿ ಹೋಯಿತು. ಅದೆಲ್ಲಿದ್ದರೋ ಜನ, ಅಬ್ಬ! ಸಾವಿರಾರು ಸೀಟುಗಳ ಆ ಭವನ ತುಂಬಿದ್ದುದು ನಮಗೆ ಅರಿವಾಗಲೇ ಇಲ್ಲ, ಅಷ್ಟು ಬೇಗ!

ಕೆಲವೇ ನಿಮಿಷಗಳಲ್ಲಿ ಬಾಬಾ ಬಂದು ನಮ್ಮ ಸಾಲಿನಲ್ಲೇ ತುದಿಯಲ್ಲಿ ಕುಳಿತರು. ಹತ್ತಿರದಿಂದ ಬಾಬಾರನ್ನು ನೋಡುವ ಸಾಹಸ ಮಾಡಿರಲಿಲ್ಲ ನಾವು. ಆದಿನ ಶಾಲು ಹೊದಿಸಿದಾಗಲೂ ಅವರ ಮುಖದತ್ತ ಕಣ್ಣು ಹಾಯಿಸದೇ, ಕೇವಲ ಬಗ್ಗಿ ನಮಸ್ಕಾರ ಮಾಡಿ ಬಂದಿದ್ದುದಷ್ಟೆ! ಈಗ ಹತ್ತಿರದಲ್ಲೇ ಕುಳಿತ ಬಾಬಾರ ಕಡೆ ಅಯಾಚಿತವಾಗಿ ನಮ್ಮ ದೃಷ್ಟಿ ಹರಿಯಿತು, ಅಷ್ಟೇ! ಬಾಬಾ ಥಟ್ಟನೆ ಎದ್ದು ವೇದಿಕೆಗೆ ಹೊರಟೇಹೋದರು. ಆ ಕ್ಷಣದಲ್ಲಿ ನಮ್ಮಿಬ್ಬರ ಮನಸ್ಸಿನಲ್ಲಿಯೂ ಒಂದೇ ಪ್ರಶ್ನೆ- ಬಾಬಾರದ್ದು ನಿಜವಾದ ತಲೆಗೂದಲೋ, ಕೃತಕವೋ ಎಂದು. ಇದು ಸಾಮಾನ್ಯವಾಗಿ ಬಾಬಾರನ್ನು ಕಾಣಲು ಬರುವ ಅನೇಕರ ಮನಸ್ಸಿನಲ್ಲಿ ಸಹಜವಾಗಿಯೇ ಮೂಡುವ ಸಂದೇಹ. ಹಾಗೆಯೇ ನಮಗೂ ಆದುದು. ಅದರಂತೆಯೇ ನಾವಿಬ್ಬರೂ ಮಾತನ್ನು ಆಡಿಕೊಂಡೆವು. ಯಾರಲ್ಲಿ ಯಾವ ಮಹಿಮೆ ಇದ್ದರೂ ಅವರೆಂಥ ಮಹಾ ಪುರುಷರೇ ಆಗಿದ್ದರೂ ನಾವು ಪೂರ್ತಿಯಾಗಿ ಅವರನ್ನು ಮನಸಾ ನಂಬಿಕೊಂಡು ಹೋಗಿರುವುದಿಲ್ಲ. ಮಾನವಸಹಜವಾದ ಸಂಶಯ ನಮ್ಮನ್ನು ಕಾಡುವುದು ಹೊಸತಲ್ಲ. ''ಅವರ ಕೂದಲು ನಿಜವಾದದ್ದೇ? ಅಥವಾ ಕೃತಕವಾದ ಟೋಫನ್ನೋ? ನಿಜವಾದ ಕೂದಲೇ ಆಗಿದ್ದರೆ ಹೀಗೆ ಇರಲು ಸಾಧ್ಯವೇ? ಅಬ್ಬ!'' ಎಂದೆ ನಾನು ಶಂಕರಮೂರ್ತಿಯವರಲ್ಲಿ. ಅದಕ್ಕೆ ಅವರು, ''ನನಗೂ ಅದೇ ಅನುಮಾನ ಕಣೋ! ಹತ್ತಿರದಿಂದ ನೋಡಲು ಅವಕಾಶ ಸಿಕ್ಕರೆ ಏನಾದರೂ ನಿಜ ತಿಳಿದೀತೋ ಏನೋ!'' ಎಂದರು ಪಿಸುದನಿಯಲ್ಲಿ. ಮತ್ತೆ ನಾವು ಮಾತು ಮುಂದುವರೆಸದೆ ಸುಮ್ಮನಾದೆವು. ನಾಟಕ ಇನ್ನೂ ಪ್ರಾರಂಭವಾಗಿರಲಿಲ್ಲ. ನಾವು ಕುಳಿತಿದ್ದ ಕಡೆಗೆ ಸಭಾಭವನದಲ್ಲಿದ್ದ ಬೆಳಕಿನ ಕಿಟಕಿಗಳು ತೆರೆದುಕೊಂಡಿದ್ದು, ಪಶ್ಚಿಮದಲ್ಲಿ ಇಳಿಯತೊಡಗಿದ್ದ ಸೂರ್ಯನ ಪ್ರಖರ ಕಿರಣಗಳು ನಮ್ಮನ್ನು ಮುಟ್ಟಿ ಬಿಸಿಮಾಡಿದ್ದವು. ಒಳಗೆ ತುಂಬ ಸೆಕೆಯಾಗತೊಡಗಿತ್ತು. ಹಿಂದಿನ ರಾತ್ರಿ ನಾನೂ ಶಂಕರಮೂರ್ತಿಯೂ ರಾತ್ರಿ ಬಹಳ ಹೊತ್ತು ಮಾತನಾಡುತ್ತ ತಡವಾಗಿ ಮಲಗಿದ್ದು ಆ ಹೊತ್ತಿನಲ್ಲಿ ನಮ್ಮಿಬ್ಬರಿಗೂ ನಿದ್ದೆಯ ಜೊಂಪು ಹಿಡಿಯಿತು... ಸ್ವಲ್ಪ ಹೊತ್ತು ಕಳೆದಿರಬಹುದು. ನನ್ನ ಕೈಯನ್ನು ಎದುರು ಸೀಟಿನ ಮೇಲಿಟ್ಟು ತೂಕಡಿಸುತ್ತಿದ್ದೆ. ಯಾರೋ ಒಂದು ಬ್ರಷ್ಷಿನಲ್ಲಿ ನನ್ನ ಕೈಯನ್ನು ಉಜ್ಜಿದ ಹಾಗೆ ಅನುಭವವಾಯಿತು. ನಾನು ಕನಸಿನಲ್ಲಿರಬಹುದು ಎಂದು ಅಷ್ಟಾಗಿ ಎಚ್ಚರವಾಗಲು ಪ್ರಯತ್ನಿಸಲಿಲ್ಲ. ಮತ್ತೊಮ್ಮೆ ಅದೇರೀತಿ ಉಜ್ಜಿದ ಅನುಭವ. ಹೀಗೆ ಮತ್ತೆರಡು ಸಾರಿ ಆದ ಅನಂತರ ಕಣ್ಣು ಬಿಟ್ಟು ನೋಡಿದೆ.

ಆಶ್ಚರ್ಯ! ನಮ್ಮ ಎದುರು ಸೀಟಿನಲ್ಲೇ ಬಾಬಾ ಬಂದು ಕುಳಿತಿದ್ದಾರೆ. ಅವರು ತಲೆಯನ್ನು ಹಿಂದಕ್ಕೆ ಆನಿಸಿಕೊಂಡು ಕುಳಿತಿದ್ದ ಕಾರಣ ತಲೆ ಅಲುಗಿಸಿದಾಗ ಅವರ ತಲೆಗೂದಲು ನನ್ನ ಕೈಯನ್ನು ಉಜ್ಜುತ್ತಿವೆ! ಕೂಡಲೆ ಶಂಕರಮೂರ್ತಿಯನ್ನು ಮೆಲ್ಲನೆ ತಟ್ಟಿ ಎಬ್ಬಿಸಿದೆ. ಕಣ್ಣು ಬಿಟ್ಟ ಅವರು ನನ್ನತ್ತ ಕಣ್ಣುಸನ್ನೆ ಮಾಡಿ ಪ್ರಶ್ನಾರ್ಥಕವಾಗಿ ನೋಡಿದಾಗ, 'ನೋಡಿ ಅಲ್ಲಿ' ಎನ್ನುವಂತೆ ಬಾಬಾ ಕಡೆಗೆ ಕೈ ತೋರಿಸಿದೆ. ಬಾಬಾ ಹಾಗೆಯೇ ಹತ್ತಾರು ನಿಮಿಷಗಳು ಅಲ್ಲಿಯೇ ಕುಳಿತಿದ್ದರು. ನಾವು ಅವರ ತಲೆ ಎಡಭಾಗದ ಕೆನ್ನೆಯನ್ನು ಸೂಕ್ಷ್ಮವಾಗಿ ಗಮನಿಸಿದೆವು. ಆಗ ತಾನೆ ಕ್ಷೌರಮಾಡಿಕೊಂಡಂತಿದ್ದ ಮುಖ ಸ್ಪಷ್ಟವಾಗಿ ಗೋಚರಿಸಿತು. ಒಂದೊಂದು ರೋಮಕೂಪದಲ್ಲಿ ಒಂದೊಂದು ರೋಮ ಇರಬೇಕಾದ ಕಡೆ ಹತ್ತಾರು ರೋಮಗಳು! ಪುಂಜಪುಂಜದ ಹಾಗೆ! ಹಾಗೆ ಕೂದಲು ಹುಟ್ಟಿ ಬಂದರೆ ಅಷ್ಟು ದಟ್ಟವಾಗಿ ತಲೆಕೂದಲಿರದೆ ಮತ್ತೆ ಹೇಗಿದ್ದೀತು? ನಾವು ಬೆರಗು ಬಡಿದು ಹೋದೆವು. 'ನೋಡಿ ಇಲ್ಲಿ, ನೀವು ಅನುಮಾನ ಪಡುತ್ತಿದ್ದೀರಲ್ಲಾ? ನೋಡಿ, ನನ್ನ ತಲೆಗೂದಲನ್ನು!' ಎಂದು ಬಾಬಾ ಏನೂ ಹೇಳದೆ ತಾವೇ ಬಂದು ಮೌನವಾಗಿ ಅವರ ಕೂದಲ ರಹಸ್ಯವನ್ನು ನಮಗೆ ತೋರಿಸಿದಂತಾಗಿದ್ದಿತು. ನಾವಿಬ್ಬರೂ ದಂಗಾಗಿ ನೋಡುತ್ತಿದ್ದಂತೆಯೇ ಬಾಬಾ ನಿಧಾನವಾಗಿ ಎದ್ದು ಮುಂದೆ ನಡೆದರು. ಅಂತೂ ಅದೂ ಒಂದು ರೀತಿಯ ಸತ್ಯದರ್ಶನದ ಅನುಭವ ನಮಗೆ!

೯. ಅಯ್ಯಭಟ್ಟರ ಸ್ನೇಹ

ಶ್ರೀ ಶಂಕರಮೂರ್ತಿಯವರ ಸಹವಾಸ, ಮಾತು, ನಗೆ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಶಂಕರಮೂರ್ತಿಯವರು ಇಂದು ನಮ್ಮ ಜತೆಯಲ್ಲಿಲ್ಲ. ಅವರಂಥ ಸಂಸ್ಕಾರವಂತ ಕುಟುಂಬವೊಂದು ನಮ್ಮ ಊರಿಗೆ ಬಂದು ನೆಲೆಸಿದುದೂ ಒಂದು ಸುಯೋಗ, ದೈವಪ್ರೇರಣೆಯೇ ಸರಿ. ಮನಸ್ಸು ಬಹಳ ಹಿಂದೆ, ನಮ್ಮ ತಂದೆಯವರು ಹೇಳುತ್ತಿದ್ದ ಅದೊಂದು ದಿನದ ಘಟನೆಯನ್ನು ಮೆಲುಕು ಹಾಕುತ್ತಿದೆ....

ನಮ್ಮೂರಿನವರಿಬ್ಬರು ಯಾವುದೋ ಕೆಲಸದ ಮೇಲೆ ಶಿವಮೊಗ್ಗೆಗೆ ಹೋಗಿದ್ದರು. ಅಲ್ಲಿ ಕೋರ್ಪಳಯ್ಯನ ಛತ್ರದಲ್ಲಿ ನಮ್ಮ ಜನಾಂಗದ ಕುಟುಂಬವೊಂದು ಎರಡು ಗಂಡು, ಒಂದು ಹೆಣ್ಣುಮಗು, ಮತ್ತೊಂದು ಕೈಕೂಸನ್ನೆತ್ತಿಕೊಂಡು, ಹಾಸನದ ಹತ್ತಿರದ ಮುದಲಾಪುರದಿಂದ ಹೊರಟುಬಂದು ತಂಗಿದೆ ಎಂದು ಅವರಿಗೆ ತಿಳಿಯಿತು. ಆ ಕುಟುಂಬವನ್ನು ನೋಡಿಬಂದ ಅವರು ನೇರವಾಗಿ ನಮ್ಮ ತಂದೆಯಲ್ಲಿಗೆ ಬಂದು, ''ನಿಮ್ಮವರ ಕುಟುಂಬವೊಂದು ಬಂದು ಕೋರ್ಪಳಯ್ಯನ ಛತ್ರದಲ್ಲಿ ತಂಗಿದೆ. ಅವರ ಸ್ಥಿತಿ-ಗತಿ ಅಷ್ಟು ಚೆನ್ನಾಗಿದ್ದ ಹಾಗೆ ಕಾಣಿಸುವುದಿಲ್ಲ. ನೀವು ಹೋಗಿ ನೋಡಿಬನ್ನಿ ಒಮ್ಮೆ!'' ಎಂದರು. ಊರಿನ ಪುರೋಹಿತರಾದ ನಮ್ಮ ತಂದೆ ಹಾಗೂ ಅವರ ಮಿತ್ರ ಲಕ್ಷ್ಮೀಕೇಶವಶಾಸ್ತ್ರಿಗಳು ಇಬ್ಬರೂ ಆ ದಿನವೇ ಶಿವಮೊಗ್ಗೆಗೆ ಹೊರಟು ಛತ್ರಕ್ಕೆ ಹೋಗಿ ಆ ಕುಟುಂಬವನ್ನು ಭೇಟಿ ಮಾಡಿದರು. ಆ ಕುಟುಂಬದ ಯಜಮಾನ ರಾಮಕೃಷ್ಣಯ್ಯ. 'ಅಯ್ಯಭಟ್ಟ' ಎಂದೂ ಹೆಸರು ಅವರಿಗೆ. ಅವರ ಪತ್ನಿ ನಂಜಮ್ಮ; ದೊಡ್ಡ ಮಗ ಅನಂತ, ಎರಡನೆಯ ಮಗ ಕೇಶವಮೂರ್ತಿ, ಮೂರನೇ ಮಗು ಹೆಣ್ಣು, ಕೈಕೂಸು ಶಂಕರಮೂರ್ತಿ. ಸ್ವಂತ ಸ್ಥಳ ಮುದಲಾಪುರ. ದಾಯಾದರಲ್ಲಿ ಉಂಟಾದ ಭಿನ್ನಾಭಿಪ್ರಾಯವು ಊರನ್ನೇ ಬಿಟ್ಟು ಬರುವಂತೆ ಮಾಡಿತ್ತು. ಮುಂದೆ ಎಲ್ಲಿಗೆ ಹೋಗುವುದೋ ದಾರಿಕಾಣದೆ ಶಿವಮೊಗ್ಗೆಯ ಕೋರ್ಪಳಯ್ಯನವರ ಛತ್ರದಲ್ಲಿ ತಂಗಿದ್ದ ಕುಟುಂಬಕ್ಕೆ ನಮ್ಮ ತಂದೆಯವರು ಹಾಗೂ ಅವರ ಮಿತ್ರ ಲಕ್ಷ್ಮೀಕೇಶವಶಾಸ್ತ್ರಿಗಳು ಸಾಂತ್ವನ ಹೇಳಿ, ಧೈರ್ಯ ತುಂಬಿ, ನಮ್ಮ ಊರಾದ ಮತ್ತೂರಲ್ಲಿ ಬಂದು ನೆಲೆಸಲು ಆಹ್ವಾನಿಸಿದರು. ತಾವು ತಮ್ಮಿಂದಾದ ಸಹಾಯವನ್ನೆಲ್ಲ ಮಾಡುವುದಾಗಿ ಭರವಸೆ ಕೊಟ್ಟು ಆ ಬಡ ಕುಟುಂಬವನ್ನು ಕರೆದುತಂದೇಬಿಟ್ಟರು, ನಮ್ಮ ತಂದೆ! ನಮ್ಮ ಊರಿನಲ್ಲಿ ಅಂಥ ಶ್ರೀಮಂತರೇನೂ ಬಹಳ ಮಂದಿ ಇರಲಿಲ್ಲ. ವೈದಿಕ ಕುಟುಂಬಗಳನ್ನು ಬಡತನ ಹಾಸು ಹೊಕ್ಕಿದ್ದಿತು. ಆದರೂ ನಮ್ಮ ತಂದೆಯ ಅಂದಿನ ಧೈರ್ಯವನ್ನು ನೆನೆದರೆ ಇಂದಿಗೂ ನನ್ನ ಮೈ ರೋಮಾಂಚನಗೊಳ್ಳುತ್ತದೆ. ಒಂದು ಕುಟುಂಬಕ್ಕೆ ಜೀವನಾಧಾರ ನೀಡಿ ಆಶ್ರಯವಿತ್ತು, ಪೋಷಿಸುವುದು ಅಷ್ಟು ಸುಲಭವಾದ ಕೆಲಸವಲ್ಲ. ಆದರೆ ಯಾವ ಜನ್ಮದ ಋಣಾನುಬಂಧವೋ -ನಮಗೂ - ಆ ಕುಟುಂಬಕ್ಕೂ ತಿಳಿಯದು. ಹೀಗೆ ಆ ಕುಟುಂಬದ ಯಜಮಾನ ರಾಮಕೃಷ್ಣಯ್ಯ, ತಂದೆಯವರ ಸಲಹೆಗೆ ಒಪ್ಪಿ ಮತ್ತೂರಲ್ಲಿ ಬಂದು ನೆಲೆಸುವಂತಾಯಿತು. ನಮ್ಮ ಮನೆಯ ಮುಂದೆ ಒಂದು ಗುಡಿಸಲು ತಲೆಎತ್ತಿತು. ಅಲ್ಲಿ ರಾಮಕೃಷ್ಣಯ್ಯನವರ ಸಂಸಾರ ನೆಲೆಸಿತು.

ವರ್ಷಗಳು ಉರುಳಿದವು. ನಮ್ಮ ತಂದೆ ಮತ್ತು ರಾಮಕೃಷ್ಣಯ್ಯ ಆಪ್ತಮಿತ್ರರಾದರು. ನಂಜಮ್ಮ ನಮಗೂ ಅಮ್ಮನೇ ಆದರು. ಆ ಕೈಕೂಸು ಬೆಳೆದಂತೆ, ರಾಮಣ್ಣ ಎನ್ನುವ ಮತ್ತೊಬ್ಬ ಮಗನಾದ. ಅನಂತರ, ರಾಮಕೃಷ್ಣಯ್ಯ - ನಂಜಮ್ಮನವರ ಎಂಟನೆಯ ಹಾಗೂ ಕೊನೆಯ ಮಗುವಾಗಿ ಶ್ರೀಕೃಷ್ಣಜನ್ಮಾಷ್ಟಮಿಯಂದು ರೋಹಿಣಿ ನಕ್ಷತ್ರದಲ್ಲಿ ನನ್ನ ಪ್ರಿಯಮಿತ್ರ, ನಾಡಿನ ಇಂದಿನ ಸುಪ್ರಸಿದ್ಧರಲ್ಲಿ ಒಬ್ಬರಾದ ಶ್ರೀ ಮತ್ತೂರು ಕೃಷ್ಣಮೂರ್ತಿ ಹುಟ್ಟಿದರು. 'ಕೃಷ್ಣಮೂರ್ತಿ' ಅವರಿಗೆ ಇಟ್ಟ ಹೆಸರಾದರೂ, ಮತ್ತೂರನ್ನು ಅವರು ಪ್ರೀತಿಯಿಂದ ತಮ್ಮ ಹೆಸರಿನ ಜತೆಗೆ ಮುಂದಾಗಿ ಸೇರಿಸಿಕೊಂಡಿದ್ದು ಅವರ ಸಾಧನೆಗಳಿಂದಾಗಿ ಇಂದು ಮತ್ತೂರಿನ ಮಂದಾರದ ಘಮ ದೇಶ ವಿದೇಶದಲ್ಲೆಲ್ಲಾ ವ್ಯಾಪಿಸಿ ಮೋಡಿ ಮಾಡುವಂತಾಗಿರುವುದು ನಮಗೆಲ್ಲ ಬಹಳ ಹೆಮ್ಮೆ ತಂದಿರುವ ವಿಷಯ ಎನ್ನುವುದು ಶತಾಂಶ ಸತ್ಯ!

ರಾಮಕೃಷ್ಣಯ್ಯ ನಮ್ಮೂರಿಗೆ ಹೊರಗಿನಿಂದ ಬಂದು ನೆಲೆಸಿದ ಕುಟುಂಬವಾಗಿದ್ದ ಕಾರಣ ನಮ್ಮಷ್ಟು ಮಡಿ ಆಚಾರವನ್ನು ಅವರು ಎಂದೂ ಆಚರಿಸಿದವರಲ್ಲ. ದೈವಭಕ್ತಿ, ನಿತ್ಯಪೂಜೆ ಇದ್ದಿತಾದರೂ ಕರ್ಮಯೋಗಿಗಳಾಗಿದ್ದ ಅವರು ಕೆಲಸಕ್ಕೇ ಎಂದೂ ಮೊದಲ ಪ್ರಾಶಸ್ತ್ಯ ಕೊಡುತ್ತಿದ್ದರು. ಅವರ ಸ್ನೇಹ ಊರಿನ ಹಲವರಿಗೆ ಮೋಡಿ ಮಾಡಿತ್ತು. ಅವರು ಅವರ ಗೆಳೆಯರನ್ನೆಲ್ಲ ಆಗಾಗ ತಮ್ಮ ಮನೆಯಲ್ಲಿ ಕಲೆಹಾಕಿ ಶುಚಿ ರುಚಿಯಾಗಿ ನಂಜಮ್ಮನವರಿಂದ ಅಡುಗೆ ತಿಂಡಿ ಮಾಡಿಸಿ, ಮಿತ್ರರಿಗೆಲ್ಲ ಹಂಚಿ, ತಿನ್ನುವುದಿತ್ತು. ನಮ್ಮ ನಮ್ಮ ಮನೆಗಳಲ್ಲಿ ಅಷ್ಟು ಮುಕ್ತವಾಗಿ ಇರಲು ಅಸಾಧ್ಯವಾಗಿದ್ದುದೂ ನಿಜವೇ. ಊರಿಗೆ ಬಂದ ಮೊದಲಿಗೆ

ತಮ್ಮ ಜೀವನಾಧಾರಕ್ಕಾಗಿ ಮರಗೆಲಸ ಕಲಿತು ಬಂದು, ಊರಿನಲ್ಲಿ ಮನೆಕಟ್ಟುವವರಿಗೆ ಕಿಟಕಿ-ಬಾಗಿಲುಗಳನ್ನು ಮಾಡಿಕೊಡುತ್ತಿದ್ದ ರಾಮಕೃಷ್ಣಯ್ಯನವರಿಗೆ ಮರಗೆಲಸ ಬಲ್ಲ ನಮ್ಮ ತಂದೆ ಹಾಗೂ ಇತರ ಮಿತ್ರರು ಆ ಕೆಲಸದಲ್ಲಿ ತಮ್ಮ ಕೈಲಾದ ಸಹಾಯ ಮಾಡುವುದೂ ಇತ್ತು. ಮುಖ್ಯವಾಗಿ ನಮ್ಮ ತಂದೆಯ ವಿಶ್ವಾಸ ಮತ್ತು ಬೆಂಬಲವು ರಾಮಕೃಷ್ಣಯ್ಯನವರಲ್ಲಿ ಆತ್ಮವಿಶ್ವಾಸ ಮೂಡಿಸಿ ಬಡತನದಲ್ಲಿಯೂ ಸಂತೋಷದಿಂದಲೇ ಇರುವಂತೆ ಮಾಡಿತ್ತು ಎಂದರೆ ಅತಿಶಯೋಕ್ತಿ ಅಲ್ಲ. ಅಂತೂ ಆ ಕುಟುಂಬ ನಮ್ಮ ಕುಟುಂಬದ ಜತೆಜತೆಗೇ ಸೇರಿ ಒಂದಾಯಿತು. ಇವರೂ, ಬೀರೂರು ರಾಮಕೃಷ್ಣ ಜೋಯಿಸರೂ, ನಮ್ಮ ತಂದೆಯವರೂ ತ್ರಿಮೂರ್ತಿ ಗಳಂತೆಯೇ ಇದ್ದರು.

ರಾಮಕೃಷ್ಣಯ್ಯನವರು ನಿಧನರಾದದ್ದೂ ಅನಿರೀಕ್ಷಿತವಾಗಿಯೇ. ಆಗಿನ್ನೂ ಕೃಷ್ಣಮೂರ್ತಿಗೆ ಎಂಟುವರ್ಷ. ನಾನು ಅವರಿಗಿಂತ ಐದು ವರ್ಷಗಳಷ್ಟು ಕಿರಿಯ, ನನಗೆ ಮೂರುವರ್ಷ. ನಮ್ಮ ತಂದೆಗೆ ರಾಮಕೃಷ್ಣಯ್ಯನವರ ನಿಧನದ ವಾರ್ತೆ ತಿಳಿದು ಆಘಾತವಾಗಿತ್ತು. ಹರಕೆರೆಯ ತುಂಗಾತೀರದಲ್ಲಿ ಅವರ ಅಂತ್ಯಕ್ರಿಯೆಗೆ ಏರ್ಪಾಡಾಗಿದ್ದಾಗ ನಮ್ಮ ತಂದೆ, ''ರಾಮಕೃಷ್ಣಯ್ಯಾ.. ಮಿತ್ರಾ! ಅಯ್ಯಭಟ್ಟಾ! ಹೋಗಿಬಿಟ್ಟೆಯಾ? ನಾವಿಬ್ಬರೂ ಎಲ್ಲದರಲ್ಲೂ ಜತೆಜತೆಗೇ ಇದ್ದವರು.... ಈಗ ನೀನು ಮುಂದಾಗಿ ಹೊರಟುಹೋದೆಯಾ?'' ಎಂದು ಅತ್ತು ಬಹಳ ಸಂಕಟಪಟ್ಟರಂತೆ! ನಿಜಕ್ಕೂ ರಾಮಕೃಷ್ಣಯ್ಯನವರ ವ್ಯಕ್ತಿತ್ವವೇ ಅಂಥದಾಗಿತ್ತು.

ಒಮ್ಮೆ ಊರಿನವರೊಬ್ಬರು, ರಾಮಕೃಷ್ಣಯ್ಯನವರ ಎರಡನೆ ಮಗ ಕೇಶವಮೂರ್ತಿಯು ತಮ್ಮ ಗದ್ದೆಯ ಕಬ್ಬು ಕದ್ದಿದ್ದಾನೆಂದು ಆರೋಪಿಸಿದಾಗ, 'ಬಡತನದಿಂದ ಪ್ರಾಣಹೋದರೂ ಸರಿ, ಮಗ ಕದಿಯುವ ಕೆಲಸಕ್ಕೆ ಹೋದನೇ?' ಎಂದು ನೊಂದ ರಾಮಕೃಷ್ಣಯ್ಯ, ಮತ್ತೆಂದೂ ಹೀಗೆ ಮಾಡಬಾರದು ಎಂದು ಮಗನ ಕೈಗೆ ಹುಲ್ಲುಸುತ್ತಿ ಬೆಂಕಿ ಹಚ್ಚಿಯೇ ಬಿಟ್ಟರಂತೆ. ಆಗ ಗಾಬರಿಗೊಂಡ ನಂಜಮ್ಮ ನಮ್ಮ ತಂದೆಗೆ ಕೇಳುವಂತೆ ಜೋರಾಗಿ, ''ಮಗನ ಕೈಗೆ ಬೆಂಕಿ ಹಾಕಿದ್ದಾರೆ, ಕೈ ಸುಟ್ಟೇ ಹೋಗುವುದೋ ಏನೋ....'' ಎಂದು ಆತಂಕದಿಂದ ಗದ್ಗದಿತರಾಗಿ ಕೂಗಿದರಂತೆ. ನಮ್ಮ ತಂದೆ ಕೂಡಲೆ ಬಂದು ಕೇಶವಮೂರ್ತಿಯ ಕೈಯ ಬೆಂಕಿ ಆರಿಸಿ, ಸುಟ್ಟ ಜಾಗಕ್ಕೆ ಮೊಸರು ಸವರಿದರು. ಹಾಗೆ ವಿಚಾರಿಸದೇ ಮಗನ ಕೈ ಸುಟ್ಟ ರಾಮಕೃಷ್ಣಯ್ಯನವರನ್ನು ಗದರಿಸಿದರು, ''ಜಮದಗ್ನಿ ನೀನು'' ಎಂದು! - ಅಷ್ಟು ಸಲಿಗೆ, ಆತ್ಮೀಯತೆಯ ಸ್ನೇಹ ಅವರದಾಗಿತ್ತು. ಈಗ ನಿಜಕ್ಕೂ ರಾಮಕೃಷ್ಣಯ್ಯನವರನ್ನು ಕಳೆದುಕೊಂಡ ನಮ್ಮ ತಂದೆ, ಒಮ್ಮೆಲೇ ಏಕಾಂಗಿಯಾದವರಂತೆ ಪರಿತಪಿಸಿದರು.

ರಾಮಕೃಷ್ಣಯ್ಯನವರು ಹೋದರೂ ತಂದೆ ಮಾತ್ರ ಆ ಕುಟುಂಬವನ್ನು ಬಹಳ ಕಾಳಜಿಯಿಂದ ಗಮನಿಸಿಕೊಳ್ಳುತ್ತಿದ್ದರು. ರಾಮಕೃಷ್ಣಯ್ಯನವರ ಮೊದಲ ಮಗ 'ಅನಂತ' ಪ್ರಕೃತಿ ಚಿಕಿತ್ಸೆಯ ಡಾಕ್ಟರಾದರು, ಮದ್ರಾಸಿನಲ್ಲಿ ನೆಲೆಯಾದರು. ಎರಡನೆಯ ಮಗ ಕೇಶವಮೂರ್ತಿಯವರು ನಮ್ಮೂರಿನಲ್ಲಿ ವೇದಾಧ್ಯಯನ ಮಾಡಿ, ಮಾಯಾವರದಲ್ಲಿ ಶಿಕ್ಷಣ ಪಡೆದು ಮತ್ತೂರಿನಲ್ಲೇ ನೆಲೆಸಿದರು. ಅವರ ಪತ್ನಿ ಲಕ್ಷ್ಮೀದೇವಿಯವರು ನನ್ನ ತಾಯಿಗೆ ತಂಗಿ ಆಗಬೇಕು. ದೇವರ ಲೀಲೆಯೋ ಎನ್ನುವಂತೆ, ಅವರು ನನಗೆ ವೇದದ ಮೊದಲ ಗುರುವಾದರು. ಇಂದಿಗೂ ಅವರು ಹೇಳಿಕೊಟ್ಟ ಭಾಗ ಮರೆತಿಲ್ಲ. ಹೀಗೆ ಅವರ ಬದುಕೂ ನೆಲೆಯಾಯಿತು. ರಾಮಕೃಷ್ಣಯ್ಯನವರ ಹೆಣ್ಣುಮಗಳನ್ನು ಶಿವಮೊಗ್ಗೆಯ ದೊರೆಸ್ವಾಮಿ ಎಂಬ ವರನಿಗೆ ಕೊಟ್ಟು ಮದುವೆ ಮಾಡಿದರು. ಶಂಕರಮೂರ್ತಿಯವರು ಮಾಯಾವರ ಮತ್ತು ಚಂಬೈಗೆ ಹೋಗಿ ಕರ್ನಾಟಕ ಸಂಗೀತ ಕಲಿತು ಬಂದರು. ರಾಮಣ್ಣ ಮಾತ್ರ ಮೆದುಳಿನ ರಕ್ತಸ್ರಾವಕ್ಕೆ ಬಲಿಯಾಗಿ ಹದಿನಾಲ್ಕನೇ ವರ್ಷದಲ್ಲೇ ತೀರಿಕೊಂಡರು. ಕೊನೆಯವರಾದ ಕೃಷ್ಣಮೂರ್ತಿ, ನಮ್ಮೂರಿನಲ್ಲಿ ಎಂಟನೆಯ ತರಗತಿಯನ್ನು ಮುಗಿಸಿ ಮದ್ರಾಸಿಗೆ ಹೋಗಿ ಎಸ್.ಎಸ್.ಎಲ್.ಸಿ. ಯನ್ನು ಪಾಸು ಮಾಡಿಕೊಂಡು ಊರಿಗೆ ವಾಪಸಾದರು. ಊರಿಗೆ ವಾಪಸಾಗಿದ್ದ ಶಂಕರಮೂರ್ತಿ ನನ್ನ ಸೋದರತ್ತೆಯ ಮಗಳು ಸೀತಾಲಕ್ಷ್ಮಿಯನ್ನು ಮದುವೆಯಾದರು. ಅನಂತರ ಶಂಕರಮೂರ್ತಿ, ಸೀತಾಲಕ್ಷ್ಮಿ, ಕೃಷ್ಣಮೂರ್ತಿ ಅವರುಗಳು, ತಾಯಿ ನಂಜಮ್ಮನವರೊಟ್ಟಿಗೆ ಊರುಬಿಟ್ಟು ಬೆಂಗಳೂರಿಗೆ ಹೋಗಿ ನೆಲೆಸುವಂತಾಯಿತು. ಅನಂತರ ಕೃಷ್ಣಮೂರ್ತಿ ಮದುವೆಯಾದುದೂ ನನ್ನ ತಾಯಿಯ ತಂಗಿಯನ್ನೇ. ಆಕೆಯೇ ನಮ್ಮ ಚಿಕ್ಕಮ್ಮ ರಾಜಲಕ್ಷ್ಮಿಯವರು (ರಾಜಮ್ಮ). ಹೀಗೆ ಆ ಕುಟುಂಬ ನಮ್ಮ ಕುಟುಂಬದ ಜತೆಗೆ ಸೇರಿಕೊಂಡಿತು.

ಆ ಸ್ನೇಹ-ಪ್ರೇಮ-ಪ್ರೀತಿಗಳ ಬೆಸುಗೆ ಶಾಶ್ವತವಾಗಿ ಇರಲೆಂದೇ ಬಹುಶಃ ಕೃಷ್ಣಮೂರ್ತಿ-ರಾಜಲಕ್ಷ್ಮಿಯರ ಸಾಕು ಮಗಳು ಜಾನಕಿ ನನ್ನ ತಮ್ಮ ನಂದಕುಮಾರನನ್ನು ಮದುವೆಯಾಗುವಂತಾದುದು.

ನನ್ನ ತಮ್ಮ ನಂದಕುಮಾರನು, ತನ್ನ ಪತ್ನಿ ಜಾನಕಿ ಹಾಗೂ ಮಕ್ಕಳಾದ ರಘು-ಸೀತಾರ ಜತೆ ಈಗ ಲಂಡನ್ನಿನಲ್ಲಿ ನೆಲೆಸಿರುವಂತಾಗಿರುವುದಕ್ಕೆ ನನ್ನ ಪ್ರಿಯಗೆಳೆಯ ಮತ್ತೂರು ಕೃಷ್ಣಮೂರ್ತಿಯೇ ಮೂಲಕಾರಣ. ಒಟ್ಟಾರೆ ಭಾರತದೇಶದ ಸಂಸ್ಕೃತಿ ಹಾಗೂ ಕಲೆಯ ಪ್ರಚಾರವನ್ನೇ ಧ್ಯೇಯವನ್ನಾಗಿ

ಹೊಂದಿರುವ ಭಾರತೀಯವಿದ್ಯಾಭವನದ ಸೇವೆಯಲ್ಲಿ ನಂದಕುಮಾರ ತೊಡಗಿಕೊಂಡಿರುವುದಕ್ಕೂ, ವಿದೇಶದಲ್ಲಿ ಭವನದ ಕೀರ್ತಿ-ಪ್ರತಿಷ್ಠೆ ಹೆಚ್ಚುವಂತೆ ಮಾಡಲು ಶ್ರಮಿಸುತ್ತಿರುವುದಕ್ಕೂ ಮಿತ್ರ ಕೃಷ್ಣಮೂರ್ತಿಯವರ ಶಿಕ್ಷಣ, ಮಾರ್ಗದರ್ಶನ, ದಾರ್ಯವೇ ಕಾರಣ. ಅವರಿಂದಾಗಿ ನಾವೆಲ್ಲರೂ ನಮ್ಮತಮ್ಮನ ಬಗ್ಗೆ ಈ ದಿನ ಹೆಮ್ಮೆಪಡುವಂತಾಗಿದೆ. ಅದಕ್ಕೆ ನಾನು ಮಿತ್ರ ಕೃಷ್ಣಮೂರ್ತಿಯವರಿಗೆ ಚಿರಋಣಿ. ಹೆಚ್ಚಿಗೆ ಹೇಳಲು ಶಬ್ದಗಳು ಸಾಲವು.

❁ ❁ ❁

ನನ್ನ ಈ ಸನ್ಮಿತ್ರ ಕೃಷ್ಣಮೂರ್ತಿ ಹಾಗೂ ಇವರಣ್ಣ ಪುಣ್ಯಾತ್ಮ ಶಂಕರಮೂರ್ತಿ ಇವರೇ ಬೆಂಗಳೂರಿನಲ್ಲಿ ನಮಗೆ ಸ್ವಂತ ಮನೆಯಾಗಲೂ ಕಾರಣಕರ್ತರು. ಉದ್ಯೋಗಾರ್ಥವಾಗಿ ಊರುಬಿಟ್ಟು ನಗರಕ್ಕೆ ಬಂದ ನನ್ನ ಸೋದರರಿಗೂ, ಮಕ್ಕಳಿಗೂ ಸರಿಯಾದ ನೆಲೆಯಾಗಬೇಕಾಗಿತ್ತು. ಕೃಷ್ಣಮೂರ್ತಿಯವರು, ಭಾರತೀಯವಿದ್ಯಾಭವನದ ನಿರ್ವಾಹಕ-ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಲಂಡನ್ನಿಗೆ ಹೋದರು. ಅಲ್ಲಿರುವಾಗಲೇ ಬೆಂಗಳೂರಿನಲ್ಲಿದ್ದ ತಮ್ಮ ಅಣ್ಣ ಶಂಕರಮೂರ್ತಿಗಳಿಗಾಗಿ ಒಂದು ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಕೊಂಡರು. ನಾನೇ ಆ ಮನೆಯ ಗೃಹಪ್ರವೇಶವನ್ನು ಶಾಸ್ತ್ರೋಕ್ತವಾಗಿ ಮಾಡಿಸಿದೆ. ಆದರೆ ಸಂಗೀತಪಾಠವನ್ನು ನಿಯತವಾಗಿ ನಡೆಸುತ್ತಿದ್ದ ಶಂಕರಮೂರ್ತಿ ಅವರಿಗೆ ಆ ಮನೆಯ ಮುಂದಿನ ರಸ್ತೆಯಲ್ಲಿ ಇರುತ್ತಿದ್ದ ಬಹಳ ವಾಹನಗಳ ಸಂಚಾರ ತುಂಬ ಕಿರಿಕಿರಿ ಉಂಟು ಮಾಡಿತ್ತು. ಅಲ್ಲಿ ಗಲಾಟೆ ಹೆಚ್ಚು ಎಂದು ಅವರು ಬೀದಿಯಾಚೆ ಇನ್ನೊಂದು ಮನೆ ನೋಡಿದರು. ಅದು ಪ್ರಶಾಂತವಾದ ಜಾಗದಲ್ಲಿದ್ದು ಆ ಮನೆ ಅವರಿಗೆ ಪ್ರಿಯವಾಯಿತು. ಈ ಮನೆಯನ್ನು ಖಾಲಿ ಮಾಡಿ ಅಲ್ಲಿಗೆ ಹೋಗುವಾಗ, ''ಅಶ್ವತ್ಥ, ಮನೆಯ ಆವಶ್ಯಕತೆ ಈಗ ನಿನಗೆ ಬಹಳವಾಗಿದೆ. ಈಗ ನಾನು ಹೊಸಮನೆಗೆ ಹೋಗುತ್ತಿದ್ದೇನೆ. ನೀನೇ ಹೇಗಿದ್ದರೂ ಗೃಹಪ್ರವೇಶ ಮಾಡಿಸಿದ್ದೀ. ಈ ಮನೆಯನ್ನು ಬೇರೆಯವರಿಗೆ ಮಾರಿದರೆ ಆರೇಳು ಲಕ್ಷ ಬಂದೀತು. ಆದರೆ ನಿನಗಾಗಿ ನಾನು ಐದು ಲಕ್ಷಕ್ಕೆ ಕೊಡುತ್ತೇನೆ. ಆ ಹಣವನ್ನು ಹೊಸಮನೆ ಕೊಳ್ಳಲು ಹಾಕುತ್ತೇನೆ.... ಯೋಚನೆ ಮಾಡು'' ಎಂದರು, ಶಂಕರಮೂರ್ತಿ. ಬಹುಶಃ ಆಗ ಶಂಕರಮೂರ್ತಿ ಒತ್ತಾಯ ಮಾಡದಿದ್ದರೆ ನಾವು ಅಷ್ಟು ಬೇಗ ಬೆಂಗಳೂರಿನಲ್ಲಿ ಮನೆಮಾಡುವ ಸಾಹಸ ಮಾಡುತ್ತಿದ್ದೆವೋ ಇಲ್ಲವೋ.... ಆ ಮನೆ ತೆಗೆದುಕೊಂಡ ಶುಭಗಳಿಗೆಯಿಂದಾಗಿ ನಮ್ಮ ಮಕ್ಕಳು ಕಾಲಕ್ರಮೇಣ ಎರಡು ಮನೆಗಳನ್ನು ತೆಗೆದುಕೊಂಡರು. ಇದು ನಮ್ಮ ತಂದೆಯ ಪ್ರಿಯಮಿತ್ರರ ಮಕ್ಕಳು ಹಾಗೂ ನಮ್ಮ ಹಿತೈಷಿಗಳು ಮಾಡಿದ ದೊಡ್ಡ ಉಪಕಾರ ಎಂದೇ ನನ್ನ ಭಾವನೆ! ಅಂದು ನಮ್ಮ ತಂದೆ ಇವರ ತಂದೆಗೆ, ಹುಲ್ಲಿನ ಜೋಪಡಿ ಕಟ್ಟಿಸಿಕೊಟ್ಟಿದ್ದರು. ಇಂದು ಇವರು ನಮಗೆ ದಿವ್ಯಭವನ ಕೊಡಿಸಿದರು. ಕೃಷ್ಣನ ಕೈಲಿ ಅಲ್ಪವೂ ಅನಂತವಾಗುತ್ತದೆ.

ಪ್ರಥಮವಯಸಿ ಪೀತಂ ತೋಯಮಲ್ಪಂ ಸ್ಮರಂತಃ
ಶಿರಸಿ ನಿಹಿತಭಾರಾ ನಾರಿಕೇಲಾ ನರಾಣಾಮ್
ದದತಿ ಜಲಮನಲ್ಪಾಸ್ವಾದಮಾಜೀವಿತಾಂತಂ
ನ ಹಿ ಕೃತಮುಪಕಾರಂ ಸಾಧವೋ ವಿಸ್ಮರಂತಿ ॥

ಹೀಗೆಂದರೆ ತೆಂಗಿನ ಗಿಡಗಳು ಎಳೆಯವಾಗಿದ್ದಾಗ ನಾವು ಕೊಟ್ಟ ಅಲ್ಪಸ್ವಲ್ಪ ನೀರನ್ನು ಕುಡಿದು ಅನಂತರ ತಾವು ಜೀವಿಸಿ ಇರುವವರೆಗೂ ನಮಗೆ ರುಚಿಯಾದ ಆರೋಗ್ಯಕರವಾದ ಸಿಹಿನೀರನ್ನು ಕೊಡುವಂತೆ, ಉಪಕಾರಿಗಳು ತಮಗೆ ಆದ ಅಲ್ಪ ಉಪಕಾರವನ್ನೂ ಎಂದಿಗೂ ಮರೆಯುವುದಿಲ್ಲ.

ಸುಮಾರು ಇಪ್ಪತ್ನಾಲ್ಕು ವರ್ಷಗಳ ಕಾಲ ವಿದೇಶದಲ್ಲಿದ್ದು ಈಗ ಹತ್ತು ವರ್ಷಗಳ ಕೆಳಗೆ ಸ್ವದೇಶಕ್ಕೆ ಹಿಂದಿರುಗಿ ಬೆಂಗಳೂರಿನಲ್ಲಿ ನೆಲೆಸಿರುವ ಮಿತ್ರ ಮತ್ತೂರು ಕೃಷ್ಣಮೂರ್ತಿಯವರಿಗೆ, ನಮ್ಮ ಊರಾದ ಮತ್ತೂರಿನಲ್ಲಿ ಒಂದು ಮನೆ ಇರಬೇಕು ಎನ್ನುವುದು ನನ್ನ ಆಶಯವಾಗಿದ್ದಿತು. ಅವರು ನಮಗೆ ಬೆಂಗಳೂರಿನಲ್ಲಿ ನೆಲೆಯಾಗಲು ಅವಕಾಶ ಕೊಟ್ಟಿದ್ದನ್ನು ಸದಾ ಸ್ಮರಿಸುವ ನಾನು, ಇದೊಂದು ಸದವಕಾಶವನ್ನು ನನ್ನ ಕೈತಪ್ಪಿ ಹೋಗಲು ಬಿಡಲಿಲ್ಲ. ನಮ್ಮಮನೆಯ ಹತ್ತಿರದಲ್ಲೇ ಆರೇಳು ಮನೆಯಾಚೆಗೆ ನಮ್ಮದೊಂದು ನಿವೇಶನವಿತ್ತು. ಅದನ್ನು ಕೃಷ್ಣಮೂರ್ತಿಯವರಿಗೆ ಕೊಟ್ಟು, ಅಲ್ಲಿ ಅವರು ಮನೆಕಟ್ಟಿ ಗೃಹಪ್ರವೇಶವನ್ನೂ ಮಾಡುವ ಹಾಗಾಯಿತು. ಇದೆಲ್ಲವೂ ದೈವಸಂಕಲ್ಪವೇ ಸರಿ. ಕೆಳಗೆ ದೊಡ್ಡ ಹಜಾರವಿರುವ ಆ ಮನೆಯ ಕೆಳಭಾಗ ನಮ್ಮ ತೋಟದ ಸಾಮಾನು, ಇತರ ಸಾಮಾನುಗಳಿರುವ ಉಗ್ರಾಣವಾಗಿದೆ. ಮೇಲೆ ಕೃಷ್ಣಮೂರ್ತಿ ಸೊಗಸಾದ ಮನೆಕಟ್ಟಿಸಿದ್ದಾರೆ. ಅವರು ಊರಿಗೆ ಬಂದಾಗ ಅವರ ಮನೆಯಲ್ಲೇ ನಾವೂ ಅವರೂ ಒಟ್ಟಿಗೇ ಕಾಲಕಳೆಯುವುದು ಇಂದಿಗೂ ನಡೆದಿದೆ.

ನಮ್ಮ ಮನೆ-ಮನಸ್ಸುಗಳಿಗೆ ಇಷ್ಟು ಹತ್ತಿರವಾಗಿರುವ ನಮ್ಮೆಲ್ಲರ ಪ್ರೀತಿಯ ಮತ್ತೂರು ಕೃಷ್ಣಮೂರ್ತಿ ಒಮ್ಮೆ ಅನಿರೀಕ್ಷಿತವಾಗಿ ಅಸ್ವಸ್ಥರಾದಾಗ ಅವರ ಜತೆಯಲ್ಲೇ ಇದ್ದು ಅವರ ಸೇವೆ ಮಾಡುವ ಅವಕಾಶವೂ ನನಗೆ ಸಿಕ್ಕಿದ್ದುದು ನನ್ನ ಸೌಭಾಗ್ಯ!

ಆಗ ಅವರು ಲಂಡನ್‌ನಲ್ಲೇ ಇದ್ದರು. ವರ್ಷಕ್ಕೊಮ್ಮೆ ಊರಿಗೆ ಬರುವ ಪದ್ಧತಿ ಇದ್ದ ಅವರು ಆ ವರ್ಷ ಬಂದಾಗ ನಮ್ಮೂರು ಹೊಸಹಳ್ಳಿಯ ಚೆನ್ನಕೇಶವನ ದೇವಸ್ಥಾನಕ್ಕೆ ಏನೋ

ಕಾಣಿಕೆ ಕೊಡುವುದಾಗಿ ಸಂಕಲ್ಪ ಮಾಡಿಕೊಂಡಿದ್ದರು. ಆ ದಿನ ಅವರ ಉಪನ್ಯಾಸಕ್ಕೂ ಏರ್ಪಾಡಾಗಿತ್ತು. ಅವರ ಪತ್ನಿ ಶ್ರೀಮತಿ ರಾಜಮ್ಮನೂ ಜತೆಯಲ್ಲಿ ಬಂದಿದ್ದರು. ಅಲ್ಲಿ ಉಪನ್ಯಾಸ ಮುಗಿಸಿ ಮುಂದೆ ಆ ದಿನವೇ ಮಂಗಳೂರಿಗೆ ಹೋಗಿ ಅಲ್ಲಿ ಉಪನ್ಯಾಸ ಮಾಡುವ ಕಾರ್ಯಕ್ರಮ ಮೊದಲೇ ಯೋಜಿಸಿಕೊಂಡದ್ದಾಗಿತ್ತು. ಸಂಜೆಯ ಐದು ಗಂಟೆಯ ಸಮಯ. ಇನ್ನೇನು ಉಪನ್ಯಾಸಕ್ಕೆ ನಾವೆಲ್ಲರೂ ಹೊರಡಬೇಕು. ಕೃಷ್ಣಮೂರ್ತಿಯೂ ಸಿದ್ಧರಾಗಿದ್ದು, ಕೈಕಾಲು ತೊಳೆಯಲು ಬಚ್ಚಲು ಮನೆಗೆ ಹೋದರು. ಹೊರಬಂದಾಗ ಅವರ ಮುಖ ಕಂಗೆಟ್ಟಿತ್ತು. ಸ್ವಲ್ಪ ಗಾಬರಿ ಇತ್ತು. ''ಅಶ್ವತ್ಥ, ಮೂತ್ರ ವಿಸರ್ಜನೆ ಮಾಡಿದಾಗ ತುಂಬಾ ರಕ್ತ ಹೊರಬಂದಿದೆ ನೋಡು'' ಎಂದರು. ನನಗೆ ನಂಬಲಾಗಲಿಲ್ಲ. ಓಡಾಟದ ಪರಿಣಾಮವಾಗಿ ಉಷ್ಣವಾಗಿರಬೇಕು. ಸ್ವಲ್ಪ ರಕ್ತ ಬಂದದ್ದಕ್ಕೇ 'ತುಂಬಾ' ಎಂದುಕೊಂಡು ಗಾಬರಿಯಾಗಿದ್ದಾರೆ ಎನಿಸಿತು. ''ಸ್ವಲ್ಪ ಉಷ್ಣವಾಗಿದ್ದೀತು. ಅದಕ್ಕೇ ಹಾಗೆ. ಸರಿಯಾಗುತ್ತದೆ ನಡಿ ನೀನು'' ಎಂದೆ. ''ನೀನು ಬಚ್ಚಲಲ್ಲಿ ಹೋಗಿ ನೋಡು'' ಎಂದರು ಮತ್ತೆ. ನಾನು ಅವರ ಮಾತಿನಂತೆ ಒಳಗೆ ಕಾಲಿಟ್ಟೆ. ನನಗೇ ತಲೆಸುತ್ತಿ ಬಂದಂತಾಯಿತು. ಇಡೀ ಬಚ್ಚಲು ಮನೆ ರಕ್ತಮಯ! ಏನು ಮಾಡುವುದು ತಿಳಿಯಲಿಲ್ಲ. ಅವರ ಪಂಚೆಗೂ ರಕ್ತವಾಗಿತ್ತು.

ರಾಜಮ್ಮನಿಗೆ ಹೇಳಿ ಕಳುಹಿಸಿ ಬೇರೆ ಪಂಚೆ ತರಿಸಿದೆ. ಕೃಷ್ಣಮೂರ್ತಿಗೆ ಪಂಚೆ ಬದಲಿಸಲು ಹೇಳಿದೆ. ಅಷ್ಟಾದರೂ ಅವರ ಮುಖದಲ್ಲಿ ಸುಸ್ಥಿರಲಿಲ್ಲ. ಆರೋಗ್ಯ ಮಿಕ್ಕಂತೆ ಏನೂ ವ್ಯತ್ಯಾಸವಾಗಿರಲಿಲ್ಲ. ನಾವು ಈ ವಿಷಯವನ್ನು ಯಾರಿಗೂ ಹೇಳದೆ ಸೀದಾ ಹೊಸಹಳ್ಳಿಯ ಕೇಶವ ದೇವಸ್ಥಾನಕ್ಕೆ ಹೋದೆವು. ನನಗೋ ಒಳಗೊಳಗೇ ಭಯ. ಚನ್ನಕೇಶವ ನಮ್ಮ ಮನೆಯ ದೇವರು. ನಾನು ಅವನಲ್ಲಿ ಮನಸಾ ಬೇಡಿಕೊಂಡೆ, ಮಿತ್ರ ಕೃಷ್ಣಮೂರ್ತಿಗೆ ಏನೂ ಆಗದಿರಲಿ ಎಂದು! 'ಕೂಡಲೆ ಡಾಕ್ಟರ್ ವೆಂಕಟರಾಯರಿಗೆ ಹೇಳಿಕಳುಹಿಸುವುದು, ಶಿವಮೊಗ್ಗದಿಂದ ಅವರು ಕಾರಿನಲ್ಲಿ ಬರುತ್ತಾರೆ. ಅಲ್ಲಿಯವರೆಗೆ ಭಾಷಣ ಮಾಡುತ್ತಿರುವುದು. ಅವರು ಬಂದ ತಕ್ಷಣವೇ ಅವರ ಜತೆಯಲ್ಲೇ ಚಿಕಿತ್ಸೆ ತೆಗೆದುಕೊಳ್ಳಲು ಹೋದರಾಯಿತು' ಎಂದು ತೀರ್ಮಾನಿಸಿದೆವು. ಕೃಷ್ಣಮೂರ್ತಿ ಬೇರೆಪಂಚೆ ಉಟ್ಟರು. ಸಭೆಯಲ್ಲಿ ಮಾತನ್ನೂ ಆಡಿದರು. ಎಂದಿನಂತೆ ತಮ್ಮ ಮನಮೋಹಕ ರೀತಿಯ ವಾಗ್ಝರಿಯಿಂದ ಎಲ್ಲರನ್ನೂ ನಲಿಸಿದರು. ಹಿತಮಿತವಾಗಿ ಇವರ ಮಾತು ಮುಗಿಯಿತು. ಶಿವಮೊಗ್ಗದಿಂದ ಡಾಕ್ಟರೂ ಸಮಯಕ್ಕೆ ಸರಿಯಾಗಿ ಬಂದರು. ಮುಂದಿನ ಕಾರ್ಯಕ್ರಮ ನಡೆಯುತ್ತಿದ್ದಂತೆ, ನಾವೆಲ್ಲ ಕೃಷ್ಣಮೂರ್ತಿಯನ್ನು ಕಾರಿನಲ್ಲಿ ಶಿವಮೊಗ್ಗೆಯ ಉಷಾ ನರ್ಸಿಂಗ್ ಹೋಂಗೆ ಕರೆದೊಯ್ದೆವು. ಅಲ್ಲಿ ಡಾಕ್ಟರ್ ಧನ್ಯಕುಮಾರ್ ಚಿಕಿತ್ಸೆ ಮಾಡಿದರು. ಆದರೆ ಕೃಷ್ಣಮೂರ್ತಿಯ ಮಂಗಳೂರಿನ ಕಾರ್ಯಕ್ರಮ ರದ್ದಾಯಿತು. ಆ ದಿನ ಡಾಕ್ಟರ್ ವೆಂಕಟರಾಯರು ಹಾಗೂ ಅವರ ಪತ್ನಿ ಡಾ. ಅರುಂಧತಿಯವರು ಕೃಷ್ಣಮೂರ್ತಿಯನ್ನು ಆಸ್ಪತ್ರೆಯ ವಾರ್ಡಿನಲ್ಲಿಡದೆ, ಆಪ್ತ ಅತಿಥಿಯಂತೆ ತಮ್ಮ ಮನೆಗೇ ಕರೆತಂದು ಶುಶ್ರೂಷೆ ಮಾಡಿದರು. ನಾನು ಹಾಗೂ ಕೃಷ್ಣಮೂರ್ತಿಯ ಭಾವಮೈದುನ ನಾರಾಯಣ ಇಬ್ಬರೂ ಜತೆಗಿದ್ದೆವು. ನಮ್ಮೆಲ್ಲರಿಗೂ ಅವರ ಮನೆಯಲ್ಲೇ ಅತಿಥಿ ಸತ್ಕಾರವಾಯಿತು.

ಮೂರ್ನಾಲ್ಕು ದಿನಗಳಲ್ಲಿ ಕೃಷ್ಣಮೂರ್ತಿ ಪೂರ್ಣ ಹುಷಾರಾದರು; ಪ್ರಾಣಾಪಾಯದಿಂದ ಪಾರಾದರು. ಅವರ ಸುದೈವ ಅವರನ್ನು ಬದುಕಿಸಿತ್ತು. ಆ ಕೃತಜ್ಞತೆಯಿಂದಲೇ ನಮ್ಮೂರ ದೈವ ಚನ್ನಕೇಶವನಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಸಮರ್ಪಿಸಿದರು. 'ಭಯಕೃತ್ ಭಯನಾಶನಃ' ಯಾವನು ಭಯ ಉಂಟು ಮಾಡಿದನೋ, ಅವನೇ ಭಯವನ್ನು ನಾಶಮಾಡಿಯೂ ಇದ್ದ! ತಮ್ಮ ಚಿಕಿತ್ಸೆ ಎಲ್ಲ ಮುಗಿದನಂತರ ಕೃಷ್ಣಮೂರ್ತಿ ಶಿವಮೊಗ್ಗೆಯಲ್ಲಿನ ಉಷಾ ನರ್ಸಿಂಗ್ ಹೋಂ - ಆಸ್ಪತ್ರೆಯನ್ನೆಲ್ಲ ಒಮ್ಮೆ ಸುತ್ತಿಬಂದು, ''ಡಾಕ್ಟ್ರೇ, ಈಗ ಎಲ್ಲ ಆಸ್ಪತ್ರೆಯಲ್ಲೂ ದೇವಸ್ಥಾನವಿರುತ್ತದೆ. ನೀವೇಕೆ ಇಲ್ಲಿ ಒಂದು ಪುಟ್ಟ ದೇವಸ್ಥಾನ ಮಾಡಿಸಲಿಲ್ಲ?'' ಎಂದು ಕೇಳಿದರು. ಅದಕ್ಕೆ ಡಾಕ್ಟರು, ''ನಮಗೆ ಅಷ್ಟು ಜಾಗ ಎಲ್ಲಿದೆ? ನಾವು ಎಲ್ಲಿ ಮಾಡುವುದು ದೇವಸ್ಥಾನವನ್ನು?'' ಎಂದು ಮರುಪ್ರಶ್ನೆ ಮಾಡಿದರು. ''ಇರುವ ಸ್ವಲ್ಪ ಜಾಗದಲ್ಲೇ ಕಟ್ಟಿಸಿದರಾಯಿತು. ಮನಸ್ಸು ಮಾಡಿದರೆ ಮಾರ್ಗ ತಾನಾಗಿಯೇ ಆದೀತು'' ಎಂದರು ಕೃಷ್ಣಮೂರ್ತಿ. ''ನೀವು ಯೋಚನೆ ಮಾಡಿ ನಿರ್ಧಾರಕ್ಕೆ ಬನ್ನಿ. ದೇವರ ವಿಗ್ರಹವನ್ನು ಮಾಡಿಸಿ. ನಾನು ಮಿಕ್ಕಿದುದನ್ನೆಲ್ಲ ನೋಡಿಕೊಳ್ಳುತ್ತೇನೆ'' ಎಂದೂ ಸೇರಿಸಿದರು. ಅವರು ಅದಾಗಲೇ ಏನೋ ನಿರ್ಧಾರ ಮಾಡಿದಂತಿತ್ತು. ಹಾಗೆಂದು ಹೇಳಿದ ಅವರು ಸ್ವಲ್ಪ ದಿನಗಳಲ್ಲೇ ವಾಪಸು ಲಂಡನ್‌ಗೂ ಹೊರಟುಹೋದರು. ಅನಂತರ ಡಾಕ್ಟರು ಹಾಗೂ ಅವರ ಮಧ್ಯೆ ಏನು ಮಾತುಕತೆ ನಡೆಯಿತೋ ತಿಳಿಯದು. ಡಾಕ್ಟರು ಶಿವಮೊಗ್ಗದ ಜ್ಞಾನೇಶ್ವರ ಎನ್ನುವ ಶಿಲ್ಪಿಗೆ ಹೇಳಿ ನಾಲ್ಕು ಅಡಿ ಎತ್ತರದ ಲಕ್ಷ್ಮೀನಾರಾಯಣ ವಿಗ್ರಹವನ್ನು ಕೆತ್ತಿಸಿದರು. ಮೂರು ತಿಂಗಳಲ್ಲೇ ದೇವಸ್ಥಾನವೂ ಸಿದ್ಧವಾಗಿಯೇ ಬಿಟ್ಟಿತು. ಉದ್ಘಾಟನೆಯ ದಿನವೂ ತೀರ್ಮಾನವಾಯಿತು. ನಾನೇ ನಮ್ಮೂರಿನಿಂದ ವೈದಿಕರನ್ನು ಕರೆದೊಯ್ದು ಪೂಜೆಮಾಡಿ, ವಿಗ್ರಹ ಪ್ರತಿಷ್ಠಾಪನೆಯನ್ನು ಮಾಡಿಸಿದೆ. ಎಲ್ಲ ಕಾರ್ಯಕಲಾಪವೂ ವಿಜೃಂಭಣೆಯಿಂದ ವೇ.ಬ್ರ.ಶ್ರೀ ನಂಜುಂಡ ಅವಧಾನಿಗಳ

ನೇತೃತ್ವದಲ್ಲಿ ಬಲು ಚೆನ್ನಾಗಿ ನಡೆಯಿತು. ಆ ಸಮಯದಲ್ಲೂ ಕೃಷ್ಣಮೂರ್ತಿ ಲಂಡನ್ನಿನಿಂದ ಬರಲಾಗಲಿಲ್ಲ. ಆದರೆ ಅದೃಷ್ಟವಶಾತ್ ಶೃಂಗೇರಿ ಶ್ರೀಗಳು ಆ ದಿನ ಯಾವುದೋ ಕಾರ್ಯಕ್ರಮಕ್ಕಾಗಿ ಶಿವಮೊಗ್ಗೆಗೆ ಬಂದಿದ್ದರು. ನಾವುಗಳು ಹೋಗಿ ಅವರನ್ನು ಆಮಂತ್ರಿಸಿದೆವು. ''ಬಹಳ ಸಂತೋಷ, ಖಂಡಿತ ಬರುತ್ತೇವೆ. ಎಲ್ಲವನ್ನೂ ಶಾಸ್ತ್ರೋಕ್ತವಾಗಿ ಮಾಡಿರಿ. ನಮ್ಮನ್ನು ಯಾವುದಕ್ಕೂ ಕಾಯಬೇಡಿ. ನಾವು ಒಮ್ಮೆಯಂತೂ ಬಂದು ಹೋಗುತ್ತೇವೆ. ಆಗ ದೇವರಿಗೆ ಮಂಗಳಾರತಿ ಮಾಡಿದರೆ ಸಾಕು. ಒಟ್ಟಾರೆ ಆಸ್ಪತ್ರೆಯಲ್ಲೂ ದೇವರ ಮೇಲಿನ ಭಕ್ತಿ ಜನರಲ್ಲಿ ಹರಡುವ ಹಾಗೆ ಮಾಡುತ್ತಿದ್ದೀರಲ್ಲ, ಸಂತೋಷ. ಇಂದಿನಿಂದ ಈ ವಿಗ್ರಹ ಧನ್ವಂತರೀ - ಲಕ್ಷ್ಮೀನಾರಾಯಣ ಎಂದೇ ಆಗಲಿ'' ಎಂದರು.

ನಾವೆಲ್ಲರೂ ಅಲ್ಲಿಂದ ವಾಪಸಾದೆವು. ಮಾರನೆಯ ದಿನ ಸ್ವಾಮೀಜಿ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಮಾಡಿ, ನಮಗೆಲ್ಲ ಆಶೀರ್ವಾದ ಮಾಡಿ ಹೊರಟರು. ಕೃಷ್ಣಮೂರ್ತಿ ಆ ದೇವಸ್ಥಾನದ ಆವರಣದಲ್ಲಿ ಒಂದು ನಾಮಫಲಕವನ್ನು ಹಾಕಲು ಡಾಕ್ಟರಿಗೆ ಸೂಚನೆ ಕೊಟ್ಟಿದ್ದರು. ಅದರ ಅನಾವರಣವನ್ನು ನನ್ನಿಂದಲೇ ಮಾಡಿಸಬೇಕೆಂದೂ ಹೇಳಿದ್ದರು. ಆದಿನ ಸಂಜೆ ನಾಮಫಲಕದ ಅನಾವರಣ ಮಾಡಬೇಕಿತ್ತು. ಫಲಕ ಉದ್ದವಾಗಿತ್ತು. ಅದಕ್ಕೆ ಕಾಗದವನ್ನು ಅಂಟಿಸಿ ಪರದೆ ಹಾಕಿಬಿಟ್ಟಿದ್ದರು. ಡಾಕ್ಟರು ನನಗೆ ಬಲದಿಂದ ಎಡಕ್ಕೆ ಆ ಪರದೆಯನ್ನು ಬಿಡಿಸುತ್ತ ಬರಲು ಹೇಳಿದರು. ನಾನು ಹಾಗೆ ಬಿಡಿಸಿದಾಗ ಮೊದಲ ಅಕ್ಷರ ನಿ.... ಅನಂತರ ಧಾ.... ವ..... ಅ... ಹೀಗೆ ಕಂಡಿತು. 'ಓಹೋ.... ನಮ್ಮೂರಿನ ಹಿರಿಯರು ನಂಜುಂಡಾವಧಾನಿಗಳಿಗೆ ಸಮರ್ಪಣೆಯೋ, ಅಥವಾ ಅವರೇ ಮಾಡಿಸಿರುವುದೋ ಇರಬೇಕು' ಎಂದುಕೊಂಡೆ. ಅಷ್ಟು ಯೋಚನೆ ನನ್ನಲ್ಲಿ ಬರುತ್ತಿರುವಾಗಲೇ ಯ..... ಡೇ.... ರ್ಕಂ... ಮಾ.... ಅಕ್ಷರಗಳು ಬಂದೇಬಿಟ್ಟವು! ಅದು ನನ್ನ ಹೆಸರೇ ಆಗಿತ್ತು. ದಪ್ಪ ಅಕ್ಷರಗಳಲ್ಲಿ 'ಮಿತ್ರ ಮಾರ್ಕಂಡೇಯ ಅವಧಾನಿ ಅವರ ಅರುವತ್ತನೇ ವರ್ಷದ ಸವಿನೆನಪಿಗಾಗಿ ಈ ಮಂದಿರವನ್ನು ಭಗವಂತನಿಗೆ ಸಮರ್ಪಣೆ ಮಾಡಿದ್ದೇವೆ...' ಎಂದಿರುವ ಎರಡು ಸಾಲುಗಳು ಇದ್ದವು. ನನಗೆ ರೋಮಾಂಚನವಾಗಿ ಹೋಯಿತು! ಸನ್ಮಿತ್ರ ಮತ್ತೂರು ಕೃಷ್ಣಮೂರ್ತಿಯವರ ಪ್ರೀತಿ-ವಿಶ್ವಾಸದ ಕೊಡುಗೆ ಅದಾಗಿತ್ತು! ಇಂದಿಗೂ, ಅದಕ್ಕಾಗಿ ಅದೆಷ್ಟು ಖರ್ಚಾಯಿತೋ ತಿಳಿಯದು. ಆದರೆ ಅವರ ಸ್ನೇಹ-ಪ್ರೇಮಗಳ ಆಳದ ಅರಿವು ಮಾಡಿಕೊಡುವಂತಿತ್ತು ಅವರು ನನಗಾಗಿ ಮಾಡಿದ ಆ ಕೆಲಸ! ಅದಕ್ಕೆ ಪ್ರತಿಯಾಗಿ ನಾನೆಂದೂ ಏನನ್ನೂ ಬಹುಶಃ ಮಾಡಲಾರೆ! ಹೀಗೆ ಕೃಷ್ಣಮೂರ್ತಿಯವರ ಪ್ರೀತಿಯ ರೀತಿ! ಇದಕ್ಕೆ ನಾನು, 'ನಮ್ಮ ದೇವಸ್ಥಾನ ಕೃಷ್ಣಾರ್ಪಣ' ಎಂದರಾದೀತೆ?

೧೦. ಮುಕ್ತ ಶಿವಾಲಯ

ಪರಮಾನಂದಭಾರತೀ ಸ್ವಾಮಿಗಳು ಶೃಂಗೇರಿ ಸಂಪ್ರದಾಯಕ್ಕೆ ಸೇರಿದವರು. ಅವರದು ತುಂಬ ಮುಕ್ತ ವಿಚಾರವಂತಿಕೆ. ಪರಿಶುದ್ಧ ಮಡಿವಂತಿಕೆಯೂ ಇದೆ. ಮೂಢನಂಬಿಕೆ ಇಲ್ಲ. ತುಂಬ ನಿಃಸ್ಪೃಹತೆ. ನಾಲ್ಕೂ ವರ್ಣಗಳಲ್ಲಿ ಸಮತಾಭಾವ. ಶಾಸ್ತ್ರದ ಬಗ್ಗೆ ನಂಬಿಕೆ. ಆದಿಗುರು ಶ್ರೀಶಂಕರಾಚಾರ್ಯರು ಏನು ಹೇಳಿದ್ದಾರೋ ಅದನ್ನೇ ಪರಮಾನಂದಭಾರತೀ ಸ್ವಾಮಿಗಳು ಅನುಸರಿಸಿ, ಆಚರಿಸುತ್ತಾರೆ. ಈ ಸ್ವಾಮಿಗಳ ಪದ್ಧತಿ ಏನೆಂದರೆ ಭಕ್ತಾದಿಗಳು ಕಾಣಿಕೆ ಎಂದು ಕೊಟ್ಟ ದುಡ್ಡು ಸಂಗ್ರಹವಾದಾಗ ಯಾವುದಾದರೂ ಲೋಕಹಿತಯಾಗ ಮಾಡುವುದು. ಅವರು ಶತಕೋಟಿಗಾಯತ್ರೀ ಯಾಗ ಮಾಡಿದರು. ಆಗ ಹಳ್ಳಿಹಳ್ಳಿಗಳಲ್ಲೂ ವೈದಿಕರಿಂದ, ಲೌಕಿಕರಿಂದ, ಉದ್ಯೋಗಿಗಳಿಂದ, ವಿದ್ಯಾರ್ಥಿಗಳಿಂದ ಗಾಯತ್ರೀ ಜಪ ಮಾಡಿಸಿದರು. ಯಾವುದೇ ಮಂತ್ರದ ಪುನರಾವೃತ್ತಿಯಿಂದ ಆ ಮಂತ್ರದ ಶಕ್ತಿ ಹೆಚ್ಚುತ್ತದೆ (ಬ್ಯಾಟರಿ ಛಾರ್ಜ್ ಮಾಡಿದಂತೆ) ಅದರಿಂದ ಉದ್ದಿಶ್ಯಕಾರ್ಯ ನೆರವೇರುತ್ತದೆ ಎಂದೂ ಸ್ವಾಮೀಜಿ ಹೇಳುವುದಿತ್ತು.

ಈ ಸಹಸ್ರಮಾನದ ಪ್ರಾರಂಭದಲ್ಲಿ ಪರಮಾನಂದಭಾರತೀ ಸ್ವಾಮೀಜಿ ಬೆಂಗಳೂರಿನಲ್ಲಿ, ಶಂಕರ ಮಠದ ಹತ್ತಿರ ಒಂದು ಯಾಗ ಮಾಡಿಸಿದರು. ಆಗ ನನ್ನನ್ನೇ ಪ್ರಧಾನ ಪುರೋಹಿತನನ್ನಾಗಿ ಮಾಡಿದರು. ಮುನ್ನೂರೈವತ್ತು ಹೋಮಕುಂಡಗಳ ನಿರ್ಮಾಣವಾಗಿತ್ತು. ಎರಡು ಅಡಿ ಆಳ, ಒಂದು ಗಜ ಅಗಲ - ಉದ್ದದ ಹೋಮಕುಂಡಗಳಾಗಿದ್ದುವು ಅವು. ನನ್ನ ಜೀವಮಾನದಲ್ಲೇ ಆ ರೀತಿಯ ಯಾಗವೊಂದನ್ನು ನಾನು ನೋಡಿಲ್ಲ, ಒಂದೊಂದು ಕುಂಡದಲ್ಲೂ ಹನ್ನೆರಡು ಜನರು ಹನ್ನೆರಡು ದ್ರವ್ಯದಿಂದ ಹೋಮ ಮಾಡಿದರು. ಅದು ನಿಜಕ್ಕೂ ಅವಿಸ್ಮರಣೀಯ! ಸ್ವಾಮೀಜಿ ಈ ಯಾಗಕ್ಕಾಗಿ ಬೆಂಗಳೂರು ಶಂಕರಮಠದ ಮೂರು ಎಕರೆಯ ವಿಶಾಲವಾದ ಜಾಗವನ್ನು, (ಅದೊಂದು ತೆಂಗಿನತೋಟವೂ ಆಗಿತ್ತು) ಆರಿಸಿಕೊಂಡಿದ್ದರು. ಅಲ್ಲಿಗೆ ಶಾಮಿಯಾನಾವನ್ನು ಹಾಕಲೂ ಸಾಧ್ಯವಾಗಲಿಲ್ಲ. ಗಂಗಾ-ಯಮುನಾ ನದಿಗಳ ಹಾಗೆ ತುಂಬಿ ಬಂದು ಅಲ್ಲಿ ಸೇರುತ್ತಿದ್ದ ಜನಸಮೂಹವನ್ನು ಬರಿಯಮಾತುಗಳಿಂದ ವರ್ಣಿಸಲು

ಸಾಧ್ಯವಿಲ್ಲ! ಬಂದವರಿಗೆಲ್ಲ ಅಡಿಕೆ ಹಾಳೆಯ ತಟ್ಟೆಯಲ್ಲಿ ಪ್ರಸಾದ ವಿನಿಯೋಗವಾಗುತ್ತಿದ್ದಿತು. ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ಎಲ್ಲರೂ ಪ್ರಸಾದದ ಊಟ ಮಾಡುತ್ತಿದ್ದರೆ 'ಸಹಸ್ರ ಶೀರ್ಷಾ ಪುರುಷಃ, ಸಹಸ್ರಾಕ್ಷಸ್ಸಹಸ್ರಪಾತ್' ಸಾವಿರ ಕೈಗಳಿಂದ ಆ ಭಗವಂತನೇ ಊಟ ಮಾಡುತ್ತಿದ್ದಾನೆಯೋ ಅನ್ನಿಸುವ ಹಾಗೆ ಕಾಣುತ್ತಿತ್ತು! ನಿಜಕ್ಕೂ ಆ ಯಾಗ ನಡೆದ ದಿನಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ... ಆ ಸ್ವಾಮೀಜಿಯವರ ಸಂಘಟನಾಶಕ್ತಿಗೆ ಬೆರಗಾಗಿ ಹೋಗಿದ್ದೆ.....

ಆ ಯಾಗದ ನೆನಪು ಇನ್ನೂ ಹಸಿರಾಗಿರುವಾಗಲೇ ಪರಮಾನಂದಭಾರತೀ ಸ್ವಾಮೀಜಿ ಮಾರನೆಯ ವರ್ಷ ಬನ್ನೇರು ಘಟ್ಟ ರೋಡಿನಲ್ಲಿರುವ ಮಾರ್ಜರಿಯಾ ಕಂಪನಿಯ ಪಕ್ಕದ ಬಯಲಿನಲ್ಲಿ ಅತಿರುದ್ರಯಾಗವನ್ನು ಮಾಡಿಸಿದರು. ಮತ್ತದೇ ಜನಸಾಗರ. ಈ ಸಾರಿಯೂ ನಾನೇ ಪ್ರಧಾನ ಆಚಾರ್ಯನಾಗಿದ್ದುದು ಪೂರ್ವಿಕರ ಪುಣ್ಯದಿಂದಲೇ ಇರಬೇಕು. ಸ್ವಾಮೀಜಿ ಈ ಸಾರಿ ನರ್ಮದಾನದಿಯಿಂದ ಮೂರು ಸಾವಿರ ಶಿವಲಿಂಗಗಳನ್ನು ತರಿಸಿದ್ದರು. ಸಾವಿರದೈನೂರು ಮಂದಿ ಋತ್ವಿಜರನ್ನು ಕರೆಸಿದ್ದರು. ಒಂದೇ ದಿನದಲ್ಲಿ, ಹನ್ನೆರಡು ದಿನಗಳವರೆಗೆ ಆಗುವ ರುದ್ರಪಾರಾಯಣವನ್ನು ಸ್ವಾಮೀಜಿ ಮಾಡಿಸಿದರು. ಭಕ್ತಾದಿಗಳಿಂದ ಯಾವುದೇ ಜಾತಿ ಜನಾಂಗದ ಭೇದವಿಲ್ಲದೆ ಶಿವಲಿಂಗಗಳನ್ನು ಒಂದು ತಟ್ಟೆಯಲ್ಲಿಟ್ಟು ಒಟ್ಟಿಗೇ ಪೂಜೆ ಮಾಡಿಸಿ, ಕೋಟಿ ಶಿವಾರ್ಚನೆಯನ್ನೂ ಮಾಡಿಸಿದರು. ಹನ್ನೆರಡು ಬೆಳ್ಳಿಯ ಕಳಶಗಳನ್ನು ತರಿಸಿದ್ದರು. ಹನ್ನೆರಡು ರೇಷ್ಮೆ ವಸ್ತ್ರ, ಸೀರೆ, ಕಣ, ಪ್ರತಿಮೆ ಬಂದಿತ್ತು. ಶ್ರೀಮಂತ-ಬಡವ ಎನ್ನುವ ಭೇದವಿಲ್ಲದೆ, ಮೇಲು-ಕೀಳು ಎನ್ನುವ ಅಂತರವಿಲ್ಲದೆ ಇಡೀ ಮಾನವ ಕೋಟಿಯ ಲೋಕಹಿತಕ್ಕಾಗಿ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆಸಿದ ಯಾಗಗಳಾಗಿದ್ದವು ಅವು! ಅಲ್ಲಿರುವಷ್ಟು ದಿನಗಳೂ ನಮ್ಮಲ್ಲಿ ಬೇರೆ ಯಾವ ಯೋಚನೆಗಳೂ ಬರದೆ, ಕೇವಲ 'ಈ ಭೂಮಿ ಎಲ್ಲವೂ ಒಂದೇ,' 'ವಸುಧೈವ ಕುಟುಂಬಕಮ್', 'ನಾವೆಲ್ಲರೂ ಒಂದೇ' ಎನ್ನುವುದಷ್ಟೇ ಮನಸ್ಸಿನಲ್ಲಿದ್ದುದು. ಎಲ್ಲರ ಹಿತಕ್ಕಾಗಿಯೂ ಮಾಡಿದ ಆ ಯಾಗಗಳು ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಬೀರಿದವು.

ನಾನು ಒಮ್ಮೆ ಸ್ವಾಮೀಜಿಯವರನ್ನು ಈ ಯಾಗಗಳ ಉದ್ದೇಶದ ಬಗ್ಗೆ ಕೇಳಿದಾಗ ಅವರು ವಿಷಾದದ ನಗೆ ನಕ್ಕು, ''ಭಾರೀ ವಿಪತ್ತುಗಳು ನಮಗರಿವಿಲ್ಲದೇ ಕಾದಿರುತ್ತವೆ. ಪ್ರಜಾನಾಶವಾಗಬಹುದು. ಆದರೆ ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಈ ರೀತಿಯಲ್ಲಿ ಸಾಮೂಹಿಕ ಪ್ರಾರ್ಥನೆ ನಡೆದರೆ ಅದರ ದುಷ್ಪರಿಣಾಮವಾಗದಂತೆ ಖಂಡಿತವಾಗಿಯೂ ತಪ್ಪಿಸಬಹುದು. ಆ ವಿಪತ್ತು ಸಂಭವಿಸದೆ ಇರಲಿ ಎಂದು ಭಕ್ತಿಯಿಂದ ಪ್ರಾರ್ಥಿಸುವುದು; ಇದರಿಂದ ಮನಸ್ಸಿಗೆ ಸಮಾಧಾನವಾಗುತ್ತದೆ'' ಎಂದರು. ನನಗೂ ಅವರ ಮಾತು ನಿಜವೆನ್ನಿಸಿತು. ನನ್ನ ತಲೆಯಲ್ಲಿಯೂ ಯೋಜನೆಯೊಂದು ತಾನೇ ತಾನಾಗಿ ರೂಪುಗೊಳ್ಳತೊಡಗಿತು. 'ಸರ್ವೇ ಜನಾಃ ಸುಖಿನೋ ಭವಂತು' ಎನ್ನುವುದು ಮೊದಲು। 'ಅಭಯಂ ಸರ್ವಭೂತೇಭ್ಯಃ' ಆಮೇಲೆ.

❁ ❁ ❁

ಚಿಕ್ಕಂದಿನಿಂದಲೂ ವೇದಮಯ, ಸಂಸ್ಕೃತಮಯ ವಾತಾವರಣದಲ್ಲಿ ಬೆಳೆದ ನಾನು ಊರ ಪುರೋಹಿತನಾದರೂ, ಸರ್ವರೂ ತಾವೇ ತಮ್ಮ ಕೈಯಿಂದಲೇ ಪೂಜೆ ಮಾಡುವಂಥ ದೇವರು, ಮತ್ತು ದೇವಸ್ಥಾನ ರೂಪಿಸಬೇಕೆಂದು ನನಗೆ ಅನ್ನಿಸುತ್ತಿತ್ತು. ನಾವು ಉತ್ತರದ ಕಡೆಗೆ ಹೋದರೆ ಅಲ್ಲಿಯ ವಾರಾಣಸಿಯ ವಿಶ್ವನಾಥನನ್ನು ಸಹ ನಾವೇ, ಭಕ್ತಾದಿಗಳೇ ಗಂಗೆ ಹಾಕಿ ಹಾಲುಹಾಕಿ ಪೂಜಿಸಬಹುದು. 'ದೇವರು' ಎಂದಾಗ, ಎಲ್ಲರ ಮನಸ್ಸಿನಲ್ಲಿಯೂ, ತಾವೇ ತಮ್ಮ ಅಭೀಷ್ಟವನ್ನು ಹೇಳಿಕೊಳ್ಳುತ್ತಾ ದೇವರನ್ನು ಸ್ಪರ್ಶಿಸುತ್ತಾ ಪೂಜಿಸಬೇಕು ಎನ್ನುವ ಆಸೆ ಇದ್ದೇ ಇರುತ್ತದೆ. ನಮ್ಮ ದಕ್ಷಿಣದ ದೇವಸ್ಥಾನಗಳಲ್ಲಿ, ಗೋಕರ್ಣ ವಿನಹ ಬೇರೆ ಕಡೆಗಳಲ್ಲಿ ಅದಕ್ಕೆ ಅವಕಾಶವಿಲ್ಲ. ಅದಕ್ಕೆ ಕಾರಣಗಳು ಹಲವಾರು ಇರಬಹುದು. ಆದರೆ ನನ್ನ ಮನಸ್ಸಿನಲ್ಲಿದ್ದ ಯೋಜನೆ 'ಮುಕ್ತ ಶಿವಾಲಯ'. ಅದು ಸರ್ವರಿಗೂ ತಾವು ತಾವೇ ಪೂಜೆ ಮಾಡುವ ಅವಕಾಶ ಇರುವಂಥದಾಗಿರಬೇಕು ಎನ್ನುವುದು. ಆ ಬಗ್ಗೆ ಕೆಲವು ವಿಧಿನಿಯಮಗಳನ್ನು ತಿಳಿದಿರುವ ನನಗೆ, ನಾನೋ ಅಥವಾ ಮತ್ತಾರೋ ವೈದಿಕರು ಒಂದು ಮೂರ್ತಿಯನ್ನು ವಿಧಿವತ್ತಾಗಿ ಪ್ರತಿಷ್ಠಾಪನೆ ಮಾಡಿದರೆ ಅದಕ್ಕೇ ಆದ ನಿಯಮಗಳನ್ನು ಪಾಲನೆ ಮಾಡಲೂ ಬೇಕಾಗುತ್ತದೆ ಎಂದು ತಿಳಿದಿತ್ತು. ಆದ್ದರಿಂದ ಆ ದೇವರು ತಾನೇ ತಾನಾಗಿ ಭೂಮಿಯಿಂದ ಉದ್ಭವಿಸಿದ, ಒಡೆದುಮೂಡಿದ ಮೂರ್ತಿಯೇ ಆದರೆ ಅದಕ್ಕೆ ದೈವೀಶಕ್ತಿ ತಾನಾಗಿಯೇ ಇರುತ್ತದೆಯಷ್ಟೆ. ಸ್ವಯಮುದ್ಭವದ ಮೂರ್ತಿ ಶಿವಲಿಂಗಾಕಾರವಾದರೆ ಅದೆಷ್ಟು ಚೆನ್ನಾಗಿರುತ್ತದೆ! 'ಮಹಿಮೆ ಮನಸೋತೆಡೆ' ಎಂದು ಪೂಜ್ಯ ಡಿವಿಜಿಯವರು ಹೇಳಿರುವಂತೆ ಭಕ್ತರು ಬಂದು ಪ್ರಾರ್ಥಿಸಿ ಹೋದಷ್ಟೂ ಆ ಸ್ಥಳದ ಪಾವಿತ್ರ್ಯ ಹೆಚ್ಚಾಗುತ್ತದೆ. ಭಕ್ತಿಯಿಂದ ಮನಸಾ ಪ್ರಾರ್ಥಿಸಿ ಎಷ್ಟು ಪೂಜೆ ಮಾಡುತ್ತೇವೆಯೋ ಅಷ್ಟು ಅಧಿಕವಾಗುತ್ತದೆ, ಆ ಶಿವಲಿಂಗದ ಶಕ್ತಿ. ಹಾಗಿಲ್ಲದೆ, ''ಅವರವರ ಭಾವಕ್ಕೆ ಅವರವರ ಭಕುತಿಗೆ,

ಅವರವರ ತೆರನಾಗಿ ಇರುತಿಹನೆ ಶಿವಯೋಗಿ - ಹರಿಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ, ನರರೇನು ಭಾವಿಸುವರದರಂತೆ ತೋರುವನು'' ಎಂದಿದ್ದಾರೆಯೇ ಕವಿಗಳು? ಹೀಗೆ ಶಿವಲಿಂಗದ ಪರಿಕಲ್ಪನೆ ಮನಸ್ಸಿಗೆ ಬಂದಿತು.

ಯಾವ ಕೆಲಸಕ್ಕೆ ಕೈ ಹಾಕಬೇಕಾದರೂ ಲಕ್ಷ್ಮೀಕಟಾಕ್ಷವೂ ಬೇಕಲ್ಲ? ದೊಡ್ಡ ಅವಿಭಕ್ತ ಕುಟುಂಬ ನಮ್ಮದು. ನಮ್ಮ ವ್ಯಾಪ್ತಿಯನ್ನೂ ಕಳೆದು, ಮಿಕ್ಕದ್ದನ್ನು ಈ ಕೆಲಸಕ್ಕೆ ತೊಡಗಿಸಬೇಕಷ್ಟೆ? ಆದರೆ ಅಷ್ಟನ್ನೂ ನಮ್ಮಿಂದಲೇ ನಿರ್ವಹಿಸಲಾಗದು. ಊರಿನ ಹತ್ತು ಜನರಿಗಾಗಿ ನಿರ್ಮಿಸಬೇಕೆಂದಿರುವ ಈ ಬಯಲು ಶಿವಾಲಯಕ್ಕೆ ಎಲ್ಲರ ಸಹಾಯ - ಸಹಕಾರ ಅಗತ್ಯ, ಖಂಡಿತವಾಗಿಯೂ ಅಗತ್ಯ ಎನ್ನಿಸಿತು. ಆಗ ನೆನಪಿಗೆ ಬಂದುದು ಶೃಂಗೇರಿ ಶ್ರೀಗಳ ಆಶೀರ್ವಾದ!

ನನ್ನ ಜೀವನದಲ್ಲಿ ಉದ್ದಕ್ಕೂ ಶೃಂಗೇರಿ ಗುರುಗಳ ಆಶೀರ್ವಾದದ ಸ್ಪಂದನವನ್ನು ಸ್ವತಃ ಅನುಭವಿಸುತ್ತಲೇ ಬಂದಿದ್ದೇನೆ. ಈ ಸಾರಿಯೂ ಹಾಗೆಯೇ ಆದುದು. ಒಮ್ಮೆ ಶೃಂಗೇರಿ ಶ್ರೀ ಭಾರತೀತೀರ್ಥ ಶ್ರೀಗಳ ವರ್ಧಂತಿ ಸಮಯದಲ್ಲಿ ಬೆಂಗಳೂರು ಶಂಕರಮಠಕ್ಕೆ ಹೋಗಿದ್ದ ಸಂದರ್ಭದಲ್ಲಿ ಶ್ರೀಗುರುಗಳು ನನಗೆ ಶಾಲುಹೊದಿಸಿ, 'ಧರ್ಮ ಪ್ರವರ್ತಕನಾಗು' ಎಂದು ಹರಸಿ ಐದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಆಗ ನಾನು ಅಲ್ಲಿ ಶ್ರೀ ವಾಲ್ಮೀಕಿ ರಾಮಾಯಣ ಪ್ರವಚನ ಮಾಡಿದ್ದೆ.

ಶ್ರೀಗುರುಗಳು ಸುವರ್ಣ ಮಂತ್ರಾಕ್ಷತೆಯ ರೂಪದಲ್ಲಿ ಕೊಟ್ಟ ಆ ಐದು ಸಾವಿರ ರೂಪಾಯಿಯನ್ನು ಬೇರೆಯದಕ್ಕೆ ಯಾಕೆ ಖರ್ಚು ಮಾಡಬೇಕು ಎನ್ನಿಸಿ ಬ್ಯಾಂಕಿನಲ್ಲಿಟ್ಟಿದ್ದೆ. ಇಪ್ಪತ್ತು ವರ್ಷಗಳ ಅನಂತರ ಈ ದಿನ ಆ ಹಣ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚಾಗಿ ಆಗಿದೆ. 'ಅದನ್ನು ತೊಡಗಿಸಿಕೊಂಡು ಶ್ರೀ ಬೆನಕ ಗಣಪತಿ ಮಂದಿರದ ಕೆಲಸ ಪ್ರಾರಂಭಿಸಿದರಾಯಿತು' ಎನ್ನಿಸಿತು.

❁ ❁ ❁

ನಮ್ಮೂರಿನಲ್ಲಿ, ನಮಗೆ ಸೇರಿದ ತೋಟದ ಜಾಗದಲ್ಲಿ ಪ್ರಕೃತಿನಿರ್ಮಿತವಾಗಿ ಎತ್ತೆತ್ತರದ ವಿಚಿತ್ರಾಕಾರಕ್ಕೆ ಎದ್ದು ನಿಂತಿರುವ ಬಂಡೆಗಳು, ಅದರ ಸುತ್ತಲೂ ಕಂದರದ ಹಾಗೆ ಇಳಿಜಾರು ಪ್ರದೇಶ, ಅಲ್ಲೇ ಬೆಳೆದ ನಾಲ್ಕಾರು ಮರಗಳು, ಪಕ್ಕದಲ್ಲೇ ಊರನ್ನು ಬಳಸಿ ಹರಿದುಬರುವ ತುಂಗಭದ್ರಾನದಿಯ ನೀರಿನ ಕಾಲುವೆ.... ನನ್ನ ಮನಸ್ಸಿಗೆ 'ಅಲ್ಲೇ, ನಮ್ಮ ಜಾಗದಲ್ಲೇ ಶಿವಮಂದಿರ ಏಕಾಗಬಾರದು? ಈ ಬಂಡೆಗಳಲ್ಲಿ ಎತ್ತರವಾದದ್ದಕ್ಕೆ ಸ್ವಲ್ಪ ಆಕಾರ ಕೊಟ್ಟು ಶಿವಲಿಂಗವನ್ನು ರೂಪಿಸಬಹುದು, ಅದಕ್ಕೆ ಪಾಣಿಪೀಠವನ್ನೂ ಅಲ್ಲೇ ಕಲ್ಲಿನಲ್ಲಿ ಕೆತ್ತಿಸಬಹುದು, ಅದರ ಎಡಪಕ್ಕಕ್ಕೆ ಇರುವ ಬಂಡೆಯಲ್ಲೊಂದು ಗಣಪತಿಯನ್ನು ಮೂಡಿಸಿದರೆ ಶಿವಾಲಯವಾದ ಹಾಗೆಯೇ! ಸುತ್ತಲೂ ಪುಟ್ಟ ಕಣಿವೆಯ ಹಾಗಿರುವ ಕಂದರದಲ್ಲಿ ಬೇರೆ ಬೇರೆ ಗಿಡಗಳು ಬೆಳೆಯುವುದಕ್ಕಿಂತ ನಾವೇ ವ್ಯವಸ್ಥಿತವಾಗಿ, ಮಳೆಯಿಂದ ತಾನಾಗಿಯೇ ಬೆಳೆದು ಹೂ ಕೊಡುವ ಕರ್ಣಕುಂಡಲ, ತುಂಬೆ.... ಇತ್ಯಾದಿ ಗಿಡಗಳನ್ನು ಹಾಕಿದರಾಯಿತು. ಆ ಶಿವಲಿಂಗಕ್ಕೆ ಎತ್ತರಕ್ಕೆ ಕಂಬಗಳನ್ನು ನಿಲ್ಲಿಸಿ ಮಂಟಪ ಕಟ್ಟುವುದು. ಆಗ ಅದಕ್ಕೆ ಮಳೆಯಿಂದ ರಕ್ಷಣೆ ಸಿಗುತ್ತದೆ. ನಮ್ಮ ತೋಟದಲ್ಲೇ ಇರುವ ಒಂದು ಪುಟ್ಟ ಗಣಪತಿಯ ಮೂರ್ತಿ, ಅದಕ್ಕೆ ಪುಟ್ಟದೊಂದು ಗುಡಿಕಟ್ಟಿ, ಕಟ್ಟೆಯ ಮೇಲಿಡಬೇಕು. ಪಕ್ಕದಲ್ಲೇ ಹರಿಯುತ್ತಿರುವ ಹಳ್ಳಕ್ಕೆ ಒಂದು ಪುಟ್ಟ ಸೇತುವೆ ಕಟ್ಟಿ ಕೆಳಗೆ ಹರಿಯುವ ನೀರಿಗೆ ಒಂದು ಅಡ್ಡಗಟ್ಟೆ ಕಟ್ಟಿ ನೀರು ಸ್ವಲ್ಪ ಎತ್ತರದಿಂದ ಕೆಳಗೆ ಧುಮುಕುವ 'ಜಲಪಾತ'ದ ಹಾಗೆ ಮಾಡಬಹುದು... ಜಲಪಾತದಂತೆ ಮಾಡಬೇಕೆನ್ನುವ ಯೋಚನೆ ನನ್ನ ತಂದೆಯ ಆಪ್ತಮಿತ್ರ ಶ್ರೀಕಂಠಯ್ಯನವರದು. ಅವರಿಗೆ ನಮ್ಮಲ್ಲಿ ಪುತ್ರಪ್ರೇಮ. ನಲವತ್ತು ವರ್ಷಗಳಿಂದಲೂ ಅವರು ಹೇಳುತ್ತಿದ್ದರು. ಈಗ ಅವರಿಲ್ಲ..... ಆದರೂ ಅವರ ಇಷ್ಟ ನೆರವೇರಿಸಿದಂತೆ ಆಗುತ್ತದೆ, ಎನ್ನಿಸಿತು. 'ಹಾಗೆ ಆ ಹಳ್ಳದ ನೀರು ಸುಂದರವಾದ ಸೇತುವೆಯ ಕೆಳಗಿನ ಅಡ್ಡಗಟ್ಟೆಯಿಂದ ಧುಮುಕಿ ಕೆಳಗೆ ಬೀಳುವ ಜಾಗವನ್ನು ಚೌಕಾಕಾರವಾಗಿ ತೊಟ್ಟಿಯ ಹಾಗೆ ಮೂರು-ನಾಲ್ಕು ಅಡಿ ಆಳ ಮಾಡಿದರೆ ಸ್ನಾನಕ್ಕೆಂದು ಅಲ್ಲಿ ಇಳಿಯುವವರಿಗೂ ಯಾವುದೇ ಅಪಾಯವಿರದು.... ಆ ತೊಟ್ಟಿಯಲ್ಲಿ ಧುಮುಕಿ ತುಂಬಿದ ನೀರು ಮತ್ತೆ ಕೆಳಗೆ ಹರಿದು ಹಳ್ಳದ ಕಾಲುವೆಯಲ್ಲಿ ಮುಂದುವರೆಯುತ್ತದೆ.... ಆಗ ಎಷ್ಟು ಚೆನ್ನಾಗಿರುತ್ತದೆ...?! ಆ ಪುಟ್ಟ ಜಲಪಾತದಲ್ಲಿ ಸ್ನಾನಮಾಡಿ, ಮೇಲೆ ಬಂದು ಅಲ್ಲಿಯೇ ಗಿಡಗಳಲ್ಲಿ ಬಿಟ್ಟಿರುವ ಸುಂದರ ಹೂಗಳನ್ನು ಕಿತ್ತು, ಅಲ್ಲಿಯೇ ಸ್ವಲ್ಪ ಮೇಲಿರುವ ಬಯಲು - ಶಿವಾಲಯದಲ್ಲಿ ಶಿವಲಿಂಗಕ್ಕೆ ಪೂಜೆ ಮಾಡಿ, ನಮಸ್ಕರಿಸಿ ಹೋಗಬಹುದು. ಯಾರೂ ಹಾಗೆ ಮಾಡಬಹುದು. ಅಲ್ಲಿ ಮಡಿವಂತಿಕೆ ಇಲ್ಲ. ಎಲ್ಲರಿಗೂ ಇರುವ ದೇವರು, ಎಲ್ಲರೂ ಪ್ರೀತಿಯಿಂದ ಮುಟ್ಟಿ ಪೂಜೆ ಮಾಡುವ ದೇವರು ಅವನಾಗುವನು.....!' ಎನ್ನಿಸಿ ನನಗಂತೂ ರೋಮಾಂಚನವೇ ಆಯಿತು. ಆದೀತೆ? ಈ ನನ್ನ ಕಲ್ಪನೆಯ ಕೂಸು ಮೈತಳೆದೀತೆ ಎಂದು ಸಂಶಯ ಆಸೆಗಳ ಮಧ್ಯೆ ಮನಸ್ಸು ತೂಗುಯ್ಯಾಲೆಯಾಡಿತು. ಈ ವಿಷಯ ಮಾತನಾಡಿ ನಾನೂ ಪೂಜ್ಯ ಶ್ರೀಕಂಠಯ್ಯನವರೂ ಅನೇಕ ಸಾರಿ ಗಾಳಿಗೋಪುರ ಕಟ್ಟಿ ಸಂತೋಷಪಟ್ಟಿದ್ದೇವೆ. ಅವರು ಆ ಕನಸಿನಲ್ಲೇ ಕಣ್ಣು ಮುಚ್ಚಿದರು.

ಆ ದೇವರಿಗೆ ನನ್ನ ಮೊರೆ ಕೇಳಿಸಿದ್ದಿತು. ದೈವಪ್ರೇರಣೆಯೋ ಎನ್ನುವಂತೆ ನಾನು ನಮ್ಮ ಮಗ ಶಿವನ ನಾದಿನಿಯ ಮದುವೆ ಮುಗಿಸಿಕೊಂಡು ಆ ದಿನ ಶೃಂಗೇರಿಗೆ ಹೊರಟೆ. ಮಠಕ್ಕೆ ಹೋಗಿ ಶ್ರೀ ಭಾರತೀತೀರ್ಥಸ್ವಾಮೀಜಿಯವರ ದರ್ಶನವನ್ನು ಮಾಡಿದೆ. ಅವರಿಗೆ ನಮಸ್ಕರಿಸುವಾಗ ನನಗರಿವಿಲ್ಲದಂತೆಯೇ ಆ ಕ್ಷಣದಲ್ಲಿ ನನ್ನ ಮನಸ್ಸಿನಲ್ಲಿ ಮೂಡಿದ ಭಾವನೆಯನ್ನು ಬಾಯಿ ಹೇಳಿಯೇ ಬಿಟ್ಟಿತು! ''ಗುರುಗಳೇ, ತಾವು ಇಪ್ಪತ್ತು ವರ್ಷಗಳ ಹಿಂದೆ ಆಶೀರ್ವದಿಸಿ ಕೊಟ್ಟ ಐದು ಸಾವಿರ ರೂಪಾಯಿಗಳನ್ನು ಈವರೆಗೆ ಇಟ್ಟಿದ್ದೆ. ಈಗ ನಮ್ಮೂರಿನಲ್ಲೇ ಸಣ್ಣಗುಡ್ಡದ ಮೇಲೆ ಗಣಪನ ದೇವಸ್ಥಾನ ಮಾಡಿಸುತ್ತಿದ್ದೇನೆ. ಅದರ ತಳಪಾಯಕ್ಕಾಗಿ ಈ ದುಡ್ಡನ್ನು ಉಪಯೋಗಿಸಿಕೊಳ್ಳಬೇಕೆಂದಿದ್ದೇನೆ. ತಾವು ಆಶೀರ್ವದಿಸಿ ಹರಸಿರಿ'' ಎಂದೆ. ಗುರುಗಳೂ ನಕ್ಕು, ''ಮಾಡಿಯಪ್ಪ, ಖಂಡಿತ ಮಾಡಿ. ಅದು ಚೆನ್ನಾಗಿ ಆಗುತ್ತದೆ. ಚೆನ್ನಾಗಿ ಬೆಳೆಯುತ್ತದೆ.... ನಿಮಗೆ ಅದಕ್ಕೇ ಕೊಟ್ಟಿರುವುದು'' ಎಂದರು. ಅವರ ಬಾಯಿಂದ ಬಂದ ಆಶೀರ್ವಾದ ನಿಜವಾಗುವುದರಲ್ಲಿ ತಡವಿಲ್ಲ ಎನಿಸಿತು. ಮನಸ್ಸಿಗೆ ಎಂಥದೋ ಅನಿರ್ವಚನೀಯ ಸಮಾಧಾನವಾಯಿತು. ಆ ದಿನ ಸಂಜೆ ಊರಿಗೆ ವಾಪಸಾದೆ.

❁ ❁ ❁

ಊರಿಗೆ ಬಂದವನೇ ಮನೆಯೊಳಗೆ ಮಾತನಾಡುತ್ತ ಕುಳಿತಿದ್ದೆ. ಎಂದಿನಂತೆ ನಮ್ಮ ಮನೆಯ ಬಾಗಿಲು ತೆರೆದಿದ್ದಿತು. ಆ ದಿನ ನಮ್ಮೂರಿನಲ್ಲಿ ಗರುಡೋತ್ಸವ ಆಗಬೇಕಿತ್ತು. ಮನೆಯ ಮುಂದೆ ಓಡಾಡುವವರು ನನಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದರು. ಆಗ.... ಯಾವುದೋ ಅಪರಿಚಿತ ವ್ಯಕ್ತಿ, ತೆರೆದ ನಮ್ಮ ಮನೆಯ ಬಾಗಿಲತ್ತಲೇ ನೋಡಿಕೊಂಡು ಎಡದಿಂದ ಬಲಕ್ಕೆ ಹೋದರು. ಸೂಟು ಧರಿಸಿದ್ದ ಲೌಕಿಕರು ಅವರು. ಯಾವುದೋ ದೊಡ್ಡ ಕೆಲಸದವರಿರಬೇಕು ಎಂದುಕೊಂಡೆ ನಾನು. ಮತ್ತೆ ಬಲದಿಂದ ಎಡಕ್ಕೆ ಹಾಗೆಯೇ ನಿಧಾನಕ್ಕೆ ಹೋದರು. ಮತ್ತೊಂದು ಸಾರಿ ಅವರು ಹಾಗೆಯೇ ಓಡಾಡಿದ ಮೇಲೆ ಎದ್ದು ಹೊರಬಂದ ನಾನು, ''ಯಾರು ತಾವು? ಬನ್ನಿ ಒಳಗೆ!'' ಎಂದು ಕರೆದೆ. ಸಂಜೆ ಏಳುಗಂಟೆಯ ಸಮಯ. ಕರೆದ ಕೂಡಲೇ ನಕ್ಕು ಒಳಬಂದು ಕುಳಿತ ಅವರು, ''ನಿಮ್ಮನ್ನು ನಾನು ಚೆನ್ನಾಗಿಯೇ ನೋಡಿದ್ದೇನೆ'' ಎಂದರು. ನಾನು, ''ಹೌದೇ?'' ಎಂದೆ... ''ನಾನು ಇಲ್ಲೇ ಗಾಜನೂರು ಅಣೆಕಟ್ಟಿನ ಮುಖ್ಯ ಇಂಜಿನಿಯರು. ಶಿವಮೊಗ್ಗದಲ್ಲೇ ಇದ್ದೇನೆ. ನನ್ನ ನಿವೃತ್ತಿಗೆ ಇನ್ನು ಮೂರು ತಿಂಗಳು ಬಾಕಿ ಇದೆ. ಅಷ್ಟರಲ್ಲಿ ನಿಮ್ಮೂರಿಗೆ ಏನನ್ನಾದರೂ ಉಪಕಾರವಾಗುವಂಥದನ್ನು ಮಾಡಿಕೊಡೋಣ ಎಂದುಕೊಂಡಿದ್ದೇನೆ.... ನಿಮ್ಮ ಭಾರತ ವ್ಯಾಖ್ಯಾನವನ್ನು ನಾನೂ ಕೇಳಿದ್ದೇನೆ. ತುಂಬ ಸಂತೋಷಪಟ್ಟಿದ್ದೇನೆ....'' ಎಂದು ಅರೆಕ್ಷಣ ತಮ್ಮ ಮಾತು ನಿಲ್ಲಿಸಿದರು. ನನಗೆ ಆಶ್ಚರ್ಯ! 'ಅರೆ, ಈಗ ತಾನೆ ನಮ್ಮೂರಿನ ಹಳ್ಳದ ನೀರಿಗೆ ಏನಾದರೂ ಯೋಜನೆ ಹಾಕಿ ಮಾಡಿಸಬೇಕು ಎಂದುಕೊಂಡೇ ಬಂದೆ. ದೇವರೇ (ಗುರುಗಳೇ) ನಮ್ಮ ಮನೆ ಬಾಗಿಲಿಗೆ ಇವರನ್ನು ಕಳುಹಿಸಿದರೇ? ನನ್ನ ಕಲ್ಪನೆಯನ್ನು ಸಾಕಾರ ಮಾಡಲು ಇವರು ತಾವಾಗಿಯೇ ಬಂದಿದ್ದಾರಲ್ಲ....! ಅಬ್ಬ!!' ಎನಿಸಿ ಕೆಲವು ನಿಮಿಷಗಳ ಕಾಲ ನನ್ನಿಂದ ಮಾತೇ ಹೊರಡಲಿಲ್ಲ. ನಿಧಾನವಾಗಿ, ''ಹಾಗಾದರೆ ತಾವು ಅವಶ್ಯವಾಗಿ ನಮಗೆ ಒಂದು ಉಪಕಾರ ಮಾಡಿಕೊಡಿ. ನಮ್ಮೂರನ್ನು ಬಳಸಿ ಒಂದು ಹಳ್ಳದಕಾಲುವೆಯ ನೀರು ಹರಿಯುತ್ತಿದೆ. ಅದಕ್ಕೆ ಒಂದು ಪುಟ್ಟ ಅಣೆಕಟ್ಟು ಹಾಕಿ, ಕೆಳಗೆ ಪುಷ್ಕರಿಣಿಯ ಹಾಗೆ ಸ್ನಾನಕ್ಕೆಂದು ಒಂದು ತೊಟ್ಟಿನಿರ್ಮಿಸಿ ಜಲಪಾತದ ಹಾಗೆ ಅಲ್ಲಿ ನೀರು ಬೀಳುವ ಹಾಗೆ ಮಾಡಿ, ಹಾಗೆಯೇ ಅದರ ಮೇಲೊಂದು ಪುಟ್ಟ ದಾಟುಸೇತುವೆ ಕಟ್ಟಿಸಿದರೆ, ಅದರ ಸೌಂದರ್ಯವೂ ಹೆಚ್ಚುತ್ತದೆ. ನೀರೇನೂ ಅದರಿಂದ ವ್ಯರ್ಥವಾಗುವುದೂ ಇಲ್ಲ. ಅದಕ್ಕೊಂದು ರೂಪಕೊಟ್ಟ ಹಾಗೆಯೂ ಆಗುತ್ತದೆ'' ಎಂದೆ ನಾನು. ''ಅದಕ್ಕೆ ಸರ್ಕಾರದಿಂದ ಪರವಾನಗಿ ಕೊಡಿಸಲು ಸಾಧ್ಯವೇ?'' ಎಂದು ಮಾತು ನಿಲ್ಲಿಸಿದೆ. ''ನೋಡೋಣ. ನಾಳೆ ಆ ಸ್ಥಳ ಪರಿಶೀಲನೆ ಮಾಡಿಸಿ, ಸಾಧ್ಯವಾದರೆ ಪರವಾನಗಿ ಕೊಡಿಸಿಯೇ ಬಿಡುತ್ತೇನೆ'' ಎಂದರು. ಆನಂತರ ಸ್ವಲ್ಪ ಹೊತ್ತು ಅದು-ಇದು ಮಾತನಾಡಿ ಹೊರಟರು.

ತಾವು ಕೊಟ್ಟ ಮಾತಿನಂತೆ ಮಾರನೆಯ ದಿನ ಸಹಾಯಕ ಇಂಜಿನಿಯರನ್ನು ಕರೆದುಕೊಂಡು ಸ್ಥಳಪರಿಶೀಲನೆಗೆ ಬಂದೇಬಿಟ್ಟರು. ಎಲ್ಲವನ್ನೂ ಪರಿಶೀಲಿಸಿದ ಅನಂತರ, ''ಏನ್ರೀ, ಇಲ್ಲಿ ಹಾಗೆ ಅಣೆಕಟ್ಟೆ ಹಾಕಿ, ಸೇತುವೆ ಹಾಕಲು ಸಾಧ್ಯವೇ? ಹೇಗೂ ನೀರು ವ್ಯರ್ಥವೇನೂ ಆಗದು. ಮುಂದೆ ಹರಿದು, ಅದೇ ಹಳ್ಳಕ್ಕೆ ಕೆಳಗೆ ಹೋಗಿ ಸೇರುತ್ತದೆ'' ಎಂದರು. ''ಖಂಡಿತ ಮಾಡಬಹುದು. ಏನೂ ಅಡ್ಡಿ ಇಲ್ಲ ಸರ್'' ಎಂದರು ಸಹಾಯಕ ಇಂಜಿನಿಯರು; ''ಯಾರು? ಇವರು ಮಾಡಿಸುತ್ತಾರೆಯೇ?'' ಎಂದೂ ಸೇರಿಸಿದರು. ''ಯಾಕ್ರೀ? ಈ ಕೆಲಸದಿಂದ ಎಲ್ಲರಿಗೂ ಉಪಯೋಗವೇ ತಾನೆ? ಅದಕ್ಕೊಂದು ರೂಪ ಕೊಟ್ಟ ಹಾಗಾಗುತ್ತದೆ ತಾನೆ? ಸರ್ಕಾರದ ಕಡೆಯಿಂದಲೇ ಮಾಡಿಸಿ'' ಎಂದು ಸಹಾಯಕ ಇಂಜಿನಿಯರ್‌ಗೆ ಹೇಳಿ, ''ನೀವು ಈ ಬಗ್ಗೆ ಒಂದು ಅರ್ಜಿ ಕೊಡಿ. ನಾನು ಮೇಲಿನ ಅಧಿಕಾರಿಗಳಿಂದ ಒಪ್ಪಿಗೆ ತರಿಸುತ್ತೇನೆ'' ಎಂದರು, ನನ್ನ ಕಡೆಗೆ ತಿರುಗಿ. ಹೇಳಿದಂತೆ ನಾನು

ಅರ್ಜಿ ಬರೆದುಕೊಟ್ಟೆ. ಕೆಲಸ ಪ್ರಾರಂಭವಾಯಿತು, ಭರದಿಂದ ಸಾಗಿತು. ಒಂದು ತಿಂಗಳಲ್ಲಿ ಸರ್ಕಾರದ ಕಡೆಯಿಂದ ಲಕ್ಷಕ್ಕೂ ಹೆಚ್ಚು ರೂಪಾಯಿ ಖರ್ಚು ಮಾಡಿ ನಮ್ಮೂರಿನ ಹಳ್ಳದ ನೀರಿಗೆ ಅಣೆಕಟ್ಟೆ, ಸ್ನಾನದ ತೊಟ್ಟಿ, ಪುಟ್ಟ ಸೇತುವೆ ಎಲ್ಲವನ್ನೂ ಮಾಡಿಸಿಯೇ ಬಿಟ್ಟರು ಆ ಮಹನೀಯರು. ಅವರೇ ಶ್ರೀ ನಾರಾಯಣ, ಮುಖ್ಯ ಇಂಜನೀಯರ್ (ತುಂಗಾ ಅಣೆಕಟ್ಟು). ತಾವು ನಿವೃತ್ತಿ ಹೊಂದುವ ಮುನ್ನ ನಮ್ಮೂರಿನ ಸೌಂದರ್ಯ ವರ್ಧಿಸಲು ಪ್ರೀತಿಯಿಂದ ಸಹಕರಿಸಿ, ನಾವಂದುಕೊಂಡಂತೆ ಅಷ್ಟು ಕೆಲಸವನ್ನೂ ಮಾಡಿಕೊಟ್ಟ ಆ ಮಹನೀಯರನ್ನು ನಾವೆಂದೂ ಮರೆಯುವಂತಿಲ್ಲ. ಅವರಿಗೆ ನಾವು ಸದೈವ ಕೃತಜ್ಞರು. ಅವರು ಮಾಡಿಸಿದ ಆ ಕೆಲಸವೇ ಮಿಕ್ಕೆಲ್ಲ ಕೆಲಸಕ್ಕೆ ಹೆಚ್ಚಿನ ಸ್ಫೂರ್ತಿ ನೀಡಿ, ಕೆಲಸಗಳು ತ್ವರಿತಗತಿಯಲ್ಲಿ ಸಾಗುವಂತೆ ಆಯಿತು. ಅಲ್ಲದೆ, ಅದೇ ಶಿವಾಲಯದ ಹತ್ತಿರ ಕಲ್ಲಿನಲ್ಲಿ ಕೆತ್ತಿಸಿದ ವಿಶ್ವಾಮಿತ್ರಋಷಿಗಾಗಿ ಐದು ಸಹಸ್ರ ರೂಪಾಯಿ ಕೊಟ್ಟಿದ್ದಾರೆ ಪುಣ್ಯಾತ್ಮ.

ಈಗ ಎಂಟು ಕಂಬಗಳ ಮಂಟಪದ ಒಳಗೆ ಸುಂದರನಾದ ಶಿವ, ಎಡಪಕ್ಕದ ಬಂಡೆಯಲ್ಲಿ ಶಿಲ್ಪಿ ಮೂಡಿಸಿರುವ ನಾಟ್ಯಗಣಪ, ಅದರ ಕೆಳಗೆ ಈಶ್ವರ, ಅಲ್ಲಿಂದ ಕೆಳಗೆ ಗುಡಿಇಲ್ಲದಿದ್ದ ಪುಟ್ಟ ಗಣಪನ ಮೂರ್ತಿಗೆ ಒಂದು ಕಟ್ಟೆ, ಗುಡಿ, ಕೆಳಗೆ ಹಾದು ಹೋಗುವಾಗ ಅನೇಕ ವಿಧದ ಬಣ್ಣಗಳ ಹೂವಿನ ಗಿಡಗಳು, ಅದು ದಾಟಿದ ಕೂಡಲೆ ಸಣ್ಣ ಪುಷ್ಕರಿಣಿಯ ಮೆಟ್ಟಿಲುಗಳು, ಅಲ್ಲಿ ಅಗಲವಾಗಿ ಚಿಕ್ಕ ಜಲಪಾತದಂತೆ ಬೀಳುವ ನೀರು, ಅದರ ಮೇಲಿನ ಸಣ್ಣ ಸೇತುವೆ, ಸುತ್ತಲೂ ಸಸ್ಯರಾಶಿ ಎಲ್ಲವೂ ಆಹ್ಲಾದಕರವಾಗಿವೆ, ಚೇತೋಹಾರಿಯಾಗಿವೆ.

ಈ ಬಯಲು ಆಲಯಕ್ಕೆ ಇರುವ ಪ್ರವೇಶ ಜಾಗದಲ್ಲಿ ಷಣ್ಮುಖನ ಮೂರ್ತಿ ಇರುವ ದೊಡ್ಡ ಕಮಾನುದ್ವಾರ ಕಟ್ಟಲಾಗಿದೆ. ಅಲ್ಲಿಂದ ಪ್ರವೇಶಿಸಿದರೆ ಸಿಮೆಂಟಿನಲ್ಲಿ ನಿರ್ಮಿಸಿರುವ ಮಾರ್ಕಂಡೇಯ-ಭಗೀರಥರ ಮೂರ್ತಿಗಳು, ಆಲದೆಲೆಯ ಮೇಲೆ ಮಲಗಿರುವ ಕೃಷ್ಣ, ಬಸವನ ಬಂಡೆ, ಸಿಗುತ್ತವೆ. ಇವುಗಳನ್ನು ದಾಟಿಬಂದ ಮೇಲೆಯೇ ಶಿವಲಿಂಗ. ಮೇಲೆ ಅಷ್ಟಋಷಿಗಳ ದರ್ಶನ.... ನಿಜಕ್ಕೂ ನನ್ನ ಕನಸು ಈಗ ಸಾಕಾರವಾಗಿದೆ. ಅಲ್ಲಿರುವ ಈಶ್ವರನಿಗೆ ಊರಿನ ಎಲ್ಲ ಜನರೂ ಪೂಜೆ ಸಲ್ಲಿಸಬಹುದು. ಅವನನ್ನು ಸ್ಪರ್ಶಿಸಿ ಅಭಿಷೇಕ ಮಾಡಬಹುದು. ಅವನು ಎಲ್ಲರಿಗೂ ಸುಲಭಲಭ್ಯನು. ಯಾರೂ ಬಂದು ಅವನಿಗೆ ನಮಿಸಿ ಪೂಜಿಸಬಹುದು. ಅಲ್ಲಿ ಯಾವ ಭೇದಭಾವ ಇಲ್ಲ. ಊರ ಪುರೋಹಿತನಾದ ನನಗೆ ಈ ಬಯಲು ಶಿವಾಲಯ ನನ್ನ ಜೀವನದಲ್ಲೇ ದೊಡ್ಡ ತೃಪ್ತಿಯನ್ನು ತಂದುಕೊಟ್ಟಂಥ ಕೆಲಸ... ಹೀಗೆ ಶ್ರೀ ಪರಮಾನಂದ ಭಾರತೀ ಸ್ವಾಮೀಜಿಯವರು ಮಾಡಿಸಿದ ಮಹಾಯಾಗದಲ್ಲಿ ನಾನು ಕಂಡ ಸರ್ವಸಮಾನತೆಯ ಪರಮತತ್ತ್ವ ಈಗ ನನ್ನೂರು, ನನ್ನ ಜನರ ಮಧ್ಯೆಯೇ ಸಾಕಾರಗೊಂಡಿರುವುದು ನನ್ನಲ್ಲಿ ನಿಜಕ್ಕೂ ಒಂದು ಅನನ್ಯ ಧನ್ಯತಾಭಾವವನ್ನು ಮೂಡಿಸಿದೆ.

೧೧. ಆಯುಶ್ಶಾಂತಿ

ನನಗೆ ಅರುವತ್ತನೇ ವರ್ಷದ ಶಾಂತಿಯಾದಾಗ ರಾಮಕೃಷ್ಣ ಆಶ್ರಮದ ಸ್ವಾಮಿ ಪುರುಷೋತ್ತಮಾನಂದಜಿಯವರೂ ಬಂದದ್ದು ನನ್ನ ಪುಣ್ಯವೇ ಸರಿ. ಆ ಸಮಯದಲ್ಲಿ ಸ್ವಾಮೀಜಿ ಯಾವುದೋ ಬೇರೆ ಕಾರ್ಯಕ್ರಮದ ಸಲುವಾಗಿ ಶಿವಮೊಗ್ಗಕ್ಕೆ ಬಂದಿದ್ದರು. ಆ ಕಾರ್ಯಕ್ರಮದಲ್ಲಿ ಪ್ರಾರಂಭದಲ್ಲಿ ಆಗಬೇಕಿದ್ದ ವೇದಘೋಷಕ್ಕೆ ನಾನು ಆಮಂತ್ರಿತನಾಗಿದ್ದೆ. ನನಗೆ ಅವರ ಪರಿಚಯ ಇದ್ದಿತಾದ್ದರಿಂದ, ನಾನೇ ಆತ್ಮೀಯವಾಗಿ ನಾಲ್ಕು ಮಾತನಾಡಿ ಅವರನ್ನು ಸ್ವಾಗತಿಸಿದೆ. ನನ್ನ ಸ್ವಾಗತ ಭಾಷಣದಲ್ಲಿ, 'ನನಗೆ ಸ್ವಾಮೀಜಿಯ ಭಕ್ತಿಸಂಗೀತದ ಬಗ್ಗೆ ಸಾಕಷ್ಟು ಗೌರವ ಇರುವುದಾಗಿಯೂ, ಇತರ ಸ್ವಾಮಿಗಳು ದೇವರ ಪೂಜೆ, ಧ್ಯಾನ ಇಷ್ಟಕ್ಕೇ ತಮ್ಮನ್ನು ಸೀಮಿತಗೊಳಿಸಿಕೊಂಡರೂ ಸ್ವಾಮೀಜಿ ಮಾತ್ರ ಒಂದು ಹೆಜ್ಜೆ ಮುಂದೆ ಹೋಗಿ ದೇವರನ್ನು ಮನಸಾ ಭಜಿಸುವ ಭಜನೆಯ ದಾರಿಯನ್ನೂ ಹಿಡಿದಿದ್ದಾರೆ. ಇಲ್ಲಿ ಸಂಕೋಚ, ಲಜ್ಜೆ, ಭಯಗಳಿಲ್ಲ. ದೇವರನ್ನು ಬೇಡುವ, ಸುಪ್ರೀತನನ್ನಾಗಿಸುವ ಒಂದೇ ಸವಿಮಂತ್ರ-ತಂತ್ರ ಇದು' ಎಂದು ಹೇಳಿದೆ. ಅನಂತರ ಸ್ವಾಮೀಜಿಯ ಪಕ್ಕ ಕುಳಿತಾಗ ಇನ್ನು ನಾಲ್ಕು ದಿವಸಗಳಿಗೆ ನನಗೆ ಅರುವತ್ತು ವರ್ಷ ತುಂಬುತ್ತಿರುವುದಾಗಿಯೂ, ಆ ಶಾಂತಿಯ ಸಂದರ್ಭಕ್ಕೆ ಸ್ವಾಮೀಜಿ ನಮ್ಮೂರಿಗೆ ಬಂದು ನನ್ನನ್ನು ಹರಸಬೇಕೆಂದೂ ಕೇಳಿಕೊಂಡೆ. ಅದಕ್ಕೆ ಸ್ವಾಮೀಜಿ, ''ಇಲ್ಲಪ್ಪ, ಬಹುಶಃ ಈಗ ಸಾಧ್ಯವಾಗಲಾರದು. ನೋಡೋಣ, ಮುಂದೆ ಯಾವಾಗಲಾದರೂ ಆದೀತೆ ಎಂದು'' ಎಂದರು. ಅನಂತರ ನಾನು ಸ್ವಾಮೀಜಿಯ ಉಪನ್ಯಾಸ ಕೇಳುವುದರಲ್ಲಿ ತಲ್ಲೀನನಾದೆ.

ಕಾರ್ಯಕ್ರಮವೆಲ್ಲ ಮುಗಿದು ಹೊರಡುವಾಗ, ಅವರಿಗೆ ಏನನ್ನಿಸಿತೋ ತಿಳಿಯದು, ''ಬನ್ನಿ ಇಲ್ಲಿ....'' ಎಂದು ಕರೆದರು.

ನಾನು ಅವರ ಹತ್ತಿರ ಹೋದಾಗ, ''ಇನ್ನು ನಾಲ್ಕು ದಿವಸಕ್ಕೆ ಅರುವತ್ತನೇ ವರ್ಷದ ಶಾಂತಿ ಎಂದಿರಾ? ಸರಿ ಹಾಗಾದರೆ... ಬರ್‍ತೀನಿ ನಾನು ನಿಮ್ಮೂರಿಗೆ'' ಎಂದರು. ನನಗೋ ತುಂಬ ಸಂತೋಷವಾಯಿತು. ''ಖಂಡಿತ ಬನ್ನಿ ಸ್ವಾಮೀಜಿ. ತಮ್ಮ ಭಜನೆಯನ್ನೂ ನಮ್ಮೂರಿನ ಜನ ಕೇಳಬೇಕು. ತಾವು ಒಮ್ಮೆ ಅಲ್ಲಿ ಉಪನ್ಯಾಸವನ್ನೂ ಮಾಡಬೇಕು'' ಎಂದೆ. ''ಅದಕ್ಕಲ್ಲ ನಾನೀಗ ಬರುವುದು. ನಿಮಗೆ ಅರುವತ್ತನೇ ವರ್ಷದ ಶಾಂತಿಯ ಅಭಿಷೇಕ ಮಾಡಬೇಕು. ಅದಕ್ಕೆ ಬರುವುದು'' ಎಂದರು. ನನಗೆ ಅವರ ಮಾತು ಸ್ಪಷ್ಟವಾಗಲಿಲ್ಲ. ಆದರೂ ''ಖಂಡಿತ ಬನ್ನಿ ಸ್ವಾಮೀಜಿ'' ಎಂದೆ. ಮೂರ್‍ನಾಲ್ಕು ದಿನಗಳು ಕಳೆದವು. ನನಗೆ ಶಾಂತಿ ಮಾಡುವ ಕಾರ್ಯಕ್ರಮವೂ ಮುಗಿಯಿತು. ಮಾರನೆಯ ಬೆಳಗ್ಗೆ ಸ್ವಾಮಿ ಪುರುಷೋತ್ತಮಾನಂದಜಿ ಬಂದೇಬಂದರು! ಕೂಡಲೆ ನಾವು ಊರಜನರೆಲ್ಲ ಸೇರಿ ಒಂದು ಸಣ್ಣ ಕಾರ್ಯಕ್ರಮವನ್ನು ಏರ್ಪಡಿಸಿದೆವು. ನಾನು ಅವರನ್ನು ಸ್ವಾಗತಿಸಿ, ''ಮೊದಲು ನಾವೆಲ್ಲರೂ ನಿಮ್ಮ ಮಾತು ಮತ್ತು ಭಕ್ತಿಸಂಗೀತ ಕೇಳಬೇಕು ಸ್ವಾಮೀಜಿ'' ಎಂದೆ. ಅದಕ್ಕೆ ಅವರು ಮಧ್ಯದಲ್ಲೇ ನನ್ನನ್ನು ತಡೆದು, ''ಅದಿರಲಿ, ನೀವು ಹೀಗೆ ನನ್ನ ಹತ್ತಿರಕ್ಕೆ ಬನ್ನಿ'' ಎಂದರು. ಅವರ ಶಿಷ್ಯರು ನಾಲ್ಕಾರು ತಟ್ಟೆಗಳಲ್ಲಿ ಒಂದು ತಟ್ಟೆ ಒಣದ್ರಾಕ್ಷಿ, ಒಂದು ತಟ್ಟೆ ಗೋಡಂಬಿ, ಒಂದು ತಟ್ಟೆ ಬಾದಾಮಿ, ಒಂದೊಂದು ತಟ್ಟೆ ಹೂವು, ತುಳಸಿ, ಹಾರಗಳು, ವಿಧವಿಧದ ಹಣ್ಣುಗಳು ಎಲ್ಲವನ್ನೂ ತುಂಬಿ ತಂದಿದ್ದರು. ಸ್ವಾಮೀಜಿಯ ಹತ್ತಿರ ಹೋದ ನನ್ನ ತಲೆಯ ಮೇಲೆ ಒಂದೊಂದಾಗಿ ಅವುಗಳನ್ನು ಸುರಿದು ಅಭಿಷೇಕ ಮಾಡಿದ ಸ್ವಾಮೀಜಿ, ತಟ್ಟೆಯಲ್ಲಿದ್ದ ಹಣ್ಣುಗಳನ್ನೂ ಹಾಕಿದನಂತರ, ''ಹಣ್ಣುಗಳು ಬೇರೆ ಬೇರೆ ಗಾತ್ರದವು. ನಿಮಗೆ ನೋವು ಮಾಡಿದ್ದೀನಿ ನಾನು ಅವುಗಳನ್ನು ಹಾಕಿ. ಈಗ ಹೂವಿನಲ್ಲಿ ಅಭಿಷೇಕ ಮಾಡಿ ಆ ನೋವನ್ನು ಹೋಗಿಸುತ್ತೇನೆ'' ಎಂದವರೇ ಹರಿವಾಣದಲ್ಲಿದ್ದ ಹೂಗಳನ್ನೆಲ್ಲ ನನ್ನ ತಲೆಮೇಲೆ ಸುರಿದು ಆಶೀರ್ವಾದ ಮಾಡಿದರು. ನನಗಂತೂ ಅದೊಂದು ರೋಮಾಂಚಕ ಅನುಭವ! ಸ್ವಾಮೀಜಿ ಈ ರೀತಿ ಬಂದು, ಹೀಗೆ ಶಾಂತಿ ಅಭಿಷೇಕ ಮಾಡಿ ನನ್ನನ್ನು ಆಶೀರ್ವದಿಸಬಹುದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ಅನಿರೀಕ್ಷಿತವಾಗಿ ಬಂದ ಸಂತೋಷ, ರೋಮಾಂಚನದ ಅನುಭವ ಎಂದಿಗೂ ಅವಿಸ್ಮರಣೀಯ! ನನ್ನ ಕಣ್ಣುಗಳು ತುಂಬಿ ಬಂದವು. ಅದೇ ಭಕ್ತಿಭಾವದಿಂದ ಬಗ್ಗಿ ಸ್ವಾಮೀಜಿಯವರ ಕಾಲಿಗೆರಗಿ ನಮಸ್ಕರಿಸಿದೆ.

ಅನಂತರ ಸ್ವಾಮೀಜಿ ಧ್ಯಾನ ಮತ್ತು ಭಾವಸಮಾಧಿಯ ಬಗ್ಗೆ ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಅರ್ಧಗಂಟೆಯ ಕಾಲ ಭಜನೆಯನ್ನೂ ಮಾಡಿ ನಮ್ಮೂರಿನ ಜನರನ್ನು ಭಕ್ತಿರಸದಲ್ಲಿ ಮೀಯಿಸಿದರು..... ಹೀಗೆ ನನ್ನ ಅರುವತ್ತನೇ ವರ್ಷದ ಶಾಂತಿಯ ಸಂದರ್ಭ ಎಂದೂ ಮರೆಯಲಾಗದ ಹಾಗೆ ಮಾಡಿದರು ಸ್ವಾಮಿ ಪುರುಷೋತ್ತಮಾನಂದರು!

❁ ❁ ❁

ನನ್ನ ಮೂವತ್ತನೆಯ ವಯಸ್ಸಿನಲ್ಲಿಯೂ ನನಗೆ ಹೀಗೆ ಶ್ರೀಗಳಿಂದಲೇ ಆಶೀರ್ವಾದ ಸಿಕ್ಕಿತ್ತು. ಆ ಸಮಯದಲ್ಲಿ ನಾನು ಮತ್ತು ನನ್ನ ಗೆಳೆಯ ಸೂರ್ಯನಾರಾಯಣ ಅವಧಾನಿ ಇಬ್ಬರೂ ಉಡುಪಿಗೆ ಹೋಗಿದ್ದೆವು. ದೇವರ ದರ್ಶನವಾಯಿತು, ಪೇಜಾವರ ಮಠದ ಸ್ವಾಮಿ ಶ್ರೀ ವಿಶ್ವೇಶ್ವರತೀರ್ಥರ ದರ್ಶನವೂ ಆಯಿತು. ಆಗ ಅವರ ಮಠದ ಪರ್ಯಾಯ ಸೇವೆಯೇ ನಡೆಯುತ್ತಿದ್ದುದು. ಶ್ರೀ ವಿಶ್ವೇಶ್ವರತೀರ್ಥ ಸ್ವಾಮೀಜಿ ಬಹಳ ವಿಶಾಲದೃಷ್ಟಿಯುಳ್ಳವರು. ಸಮಾಜಸೇವೆಯಲ್ಲಿ ಅವರಿಗೆ ತುಂಬ ಆಸಕ್ತಿ. ಎಲ್ಲರಲ್ಲೂ ಸಮಾನ ಪ್ರೇಮ ಅವರದು. ನಾವು ಸ್ವಾಮೀಜಿಯವರಿಗೆ ನಮಸ್ಕರಿಸಿದೆವು. ನಾನು ನಮ್ಮ ಪರಿಚಯ ಮಾಡಿಕೊಂಡು, ''ಸ್ವಾಮೀಜಿ, ನಾವು ಭಾರತ ಅಭ್ಯಾಸ ಮಾಡಿದ್ದೇವೆ. ತಾವು ಅವಕಾಶ ಕೊಟ್ಟರೆ ತಮ್ಮ ಮುಂದೆ ಕಾರ್ಯಕ್ರಮ ಕೊಡಬೇಕೆಂದು ಆಸೆ. ಆದೀತೆ?'' ಎಂದು ಕೇಳಿದೆ. ನಾವು ಬೇರೆ ಯಾರಲ್ಲೂ ಹಾಗೆ ಮುಂದಾಗಿ ಹೇಳಿಕೊಂಡು ಕೇಳಲಾಗದು. ಆದರೆ ಏಕೋ ಸ್ವಾಮೀಜಿ ಎಂದಾಗ ಮುಂದಾಗಿಯೇ ಹೇಳಿ ಕೇಳುತ್ತಿದ್ದೆ. ಗುರುಪರಂಪರೆಯಲ್ಲಿ ಬಹಳ ಶ್ರದ್ಧೆ, ಅನನ್ಯ ನಿಷ್ಠೆ, ಭಕ್ತಿ ಹೊಂದಿರುವ ನನ್ನಂಥವರಿಗೆ ನಮಗೆ ಬರುವ ಒಳ್ಳೆಯ ಕಲೆಯನ್ನು ದೇವರ ಮುಂದೆ ಪ್ರದರ್ಶಿಸಲು ಹೇಗೆ ಸಂಕೋಚ ಪಡಬೇಕಿಲ್ಲವೋ, ಹಾಗೆಯೇ ದೇವರ ಪ್ರತಿನಿಧಿಗಳಾದ ಗುರುಪೀಠದ ಗುರುಗಳಲ್ಲೂ ಸಂಕೋಚ ಬೇಕಿಲ್ಲ ಎನ್ನುವುದು ನನ್ನ ನಿಲುವು, ನಂಬಿಕೆ. ಕೂಡಲೆ ಅವರು ತಮ್ಮ ಹತ್ತಿರದಲ್ಲಿದ್ದ ಮಠದ ಹುಡುಗನೊಬ್ಬನಿಗೆ, ''ಈ ದಿನ ಏನು ಕಾರ್ಯಕ್ರಮ? ನೋಡಪ್ಪ'' ಎಂದರು. ಅವನು, ''ಕಳೆದ ಎಂಟು ದಿನಗಳಿಂದ ಭಗವದ್ಗೀತೆಯ ಮೇಲೆ ಪ್ರವಚನ ನಡೆಯುತ್ತಿದೆ. ಈ ದಿನ ಒಂಬತ್ತನೆಯ ದಿನ'' ಎಂದ. ಅದಕ್ಕೆ ಗುರುಗಳು, ''ಹೌದೇ? ಆಯಿತು. ಹೇಗೂ ಎಂಟುದಿನದ ಕಾರ್ಯಕ್ರಮ ನಡೆದಿದೆ. ಇವರು ಅಪರೂಪಕ್ಕೆ ಬಂದಿದ್ದಾರೆ. ಈ ದಿನ ಅವರಿಗೆ 'ಬೇಡ' ಎಂದು ಹೇಳಿ, ಇವರಿಗೆ ಒಂದು ಅವಕಾಶ ಕೊಡೋಣ...'' ಎಂದರು. ''ನಿಮಗೆ ಅರ್ಧಗಂಟೆ ಸಮಯ ಸಾಕೆ?'' ಎಂದು ನಮ್ಮತ್ತ ತಿರುಗಿ ಕೇಳಿದರು. ''ಸಮಯ ಎಷ್ಟಾದರೂ ಸರಿ'' ಎಂದೆ. ಒಂದು ಅವಕಾಶ ಸಿಕ್ಕಿತಲ್ಲ ಎಂದು ಸಂತೋಷವಾಯಿತು ನಮಗೆ!

''ಸರಿ, ನೀವಿನ್ನು ಹೊರಡಿ. ಕಾರ್ಯಕ್ರಮ ಪ್ರಾರಂಭಿಸಿ''

ಎಂದರು ಸ್ವಾಮೀಜಿ. ''ಸನ್ನಿಧಾನವೂ ಬರಬೇಕು. ಬಂದರೆ ಸಂತೋಷ'' ಎಂದೆ ನಾನು ಮೆಲ್ಲಗೆ. ಅದಕ್ಕೆ ನಕ್ಕ ಅವರು, ''ಬರುತ್ತೇನೆ, ಹೋಗಿ ಬನ್ನಿ. ನೀವು ಪ್ರಾರಂಭಿಸಿ. ನಾನು ಬರುತ್ತೇನೆ'' ಎಂದರು. ನಾವು ವೇದಿಕೆಗೆ ಹೋದೆವು. ಕಾರ್ಯಕ್ರಮ ಪ್ರಾರಂಭಿಸಿದೆವು; ಮಂಗಳ ಪದ್ಯಗಳನ್ನು ಹೇಳುವುದರಲ್ಲಿ ಸ್ವಾಮೀಜಿ ಬಂದರು. ಬಂದವರೇ ನಮ್ಮ ಹಿಂದೆ ಇದ್ದ ಕುರ್ಚಿಯಲ್ಲಿ ಕುಳಿತರು. ಮುಂಚೆಯೇ, ''ನಾವು ಅನುಷ್ಠಾನಕ್ಕೆ ಹೋಗಬೇಕು. ಅರ್ಧಗಂಟೆಗೆ ಮಂಗಳ ಹೇಳಿಬಿಡಿ'' ಎಂದಿದ್ದರು. ನಾವು ಅರ್ಧಗಂಟೆಗೆ ಸರಿಯಾಗಿ ಕಾರ್ಯಕ್ರಮ ನಿಲ್ಲಿಸಿದೆವು. ಸ್ವಾಮೀಜಿಯ ಕಡೆಗೆ ನೋಡುವುದರಲ್ಲಿ, ''ಬೇಡಿ, ಬೇಡಿ. ನೋಡಿ, ಎಷ್ಟು ಜನ ಆಸಕ್ತಿಯಿಂದ ಕೇಳುತ್ತಿದ್ದಾರೆ? ನಿಲ್ಲಿಸಬೇಡಿ. ನಾವು ನಿಧಾನಕ್ಕೆ ಆಹ್ನಿಕ ಮಾಡಲು ಹೋಗುತ್ತೇವೆ. ನೀವು ಇನ್ನರ್ಧಗಂಟೆ ಮುಂದುವರೆಸಿ'' ಎಂದರು. ಭೀಷ್ಮಪರ್ವದ ''ಹರಿಯ ಚಕ್ರವ, ತುಡುಕಿಸುವೆ'' ಎಂಬ ಭಾಗವನ್ನು ಇನ್ನೂ ಅರ್ಧಗಂಟೆ ಮುಂದುವರೆಸಿ ನಿಲ್ಲಿಸಿದೆವು. ಮತ್ತೊಮ್ಮೆ ಸ್ವಾಮೀಜಿ, ''ಹರಿಯು ಚಕ್ರವ ಮುಟ್ಟಿದನು ಅಲ್ಲಿಯವರೆಗೆ ಹೇಳಿ, ಇನ್ನೊಂದರ್ಧ ಗಂಟೆ ಹೇಳಿಬಿಡಿ'' ಎಂದರು. ನಮಗೂ ತುಂಬ ಸಂತೋಷವಾಯಿತು. ಕಥಾಭಾಗವನ್ನು ಅರ್ಥಪೂರ್ಣವಾಗಿ ಪ್ರಾರಂಭಿಸಿ ಮುಕ್ತಾಯ ಮಾಡಲು ಸಾಕಷ್ಟು ಸಮಯ ಸಿಕ್ಕಿತಲ್ಲ ಎಂದು ಸಮಾಧಾನವೂ ಆಯಿತು. ಕಥೆಯನ್ನು ನಿಲ್ಲಿಸಿ ಮಂಗಳ ಹೇಳಿದಾಗ, ನಮ್ಮನ್ನು ಸನ್ಮಾನಿಸಿ, ಫಲ ಮಂತ್ರಾಕ್ಷತೆ ಕೊಟ್ಟ ಸ್ವಾಮಿ ವಿಶ್ವೇಶ್ವರತೀರ್ಥರು, ''ನಿಮಗೆ ಇಷ್ಟು ಸಮಯ ಏನೂ ಸಾಲದು. ನಾನು ನಿಧಾನವಾಗಿ ನಿಮಗೆ ಆಹ್ವಾನ ಕಳುಹಿಸುತ್ತೇನೆ. ಇಲ್ಲಿಗೆ ಬಂದು ಒಂದು ವಾರ ಕಥೆ ಹೇಳಿ. ಎಲ್ಲರಿಗೂ ನಿಮ್ಮ ಕಾರ್ಯಕ್ರಮ ತುಂಬ ಇಷ್ಟವಾಗಿದೆ'' ಎಂದು ಹೇಳಿ ಆಶೀರ್ವದಿಸಿದರು. ಅವರ ಮೆಚ್ಚುಗೆಯ ಆಶೀರ್ವಾದವೇ ನಮಗೆ ಶ್ರೀರಕ್ಷೆಯಾಗಿತ್ತು!

ತಾವು ಕೊಟ್ಟ ಮಾತನ್ನು ಸ್ವಾಮೀಜಿ ಮರೆಯಲಿಲ್ಲ. ಹೇಳಿದ ಮಾತಿನಂತೇ ಒಂದು ವಾರದ ಕಾರ್ಯಕ್ರಮ ಕೊಡಲು ಆಹ್ವಾನ ಕಳುಹಿಸಿದರು. ಆಗ ನಮ್ಮ ಮನೆಯಲ್ಲಿ ನಮ್ಮ ಮಕ್ಕಳ ಮದುವೆಯ ಸಂದರ್ಭವಾಗಿ, ನಾನು ಅಸಹಾಯಕತೆಯನ್ನು ತಿಳಿಸಿ ಹೇಳಿ ಕಳುಹಿಸಿದೆ. ಅನಂತರವೂ ಒಮ್ಮೆ ಮೂರು ದಿನಗಳ ಕಾರ್ಯಕ್ರಮ ಕೊಡಲು ಆಹ್ವಾನಿಸಿದರು. ಆಗ ಮತ್ತೆ ನಾನೂ ಸೂರ್ಯನಾರಾಯಣ ಅವಧಾನಿಯವರೂ, ಇಬ್ಬರೂ ಹೋಗಿ ಕಾರ್ಯಕ್ರಮ ಕೊಟ್ಟು ಬಂದೆವು. ಪೇಜಾವರದ ಶ್ರೀಗಳು ಶುಕಬ್ರಹ್ಮನ ಹಾಗೆ ಹೃದಯಶುದ್ಧವಾಗಿ ಮಾತನಾಡುತ್ತಾರೆ. ಆತ್ಮೀಯವಾಗಿ ಹರಸಿ ಶಾಲು ಹೊದಿಸಿ ಕಳಿಸಿಕೊಟ್ಟರು.

ಅವರು ಒಮ್ಮೆ ನಮ್ಮ ಮತ್ತೂರಿಗೆ ಬಂದಿದ್ದರು. ''ಇಲ್ಲಿನ ಜನರು ಸಂಸ್ಕೃತಭಾಷೆಯನ್ನು ಆಡುಭಾಷೆಯನ್ನಾಗಿ ಮಾಡಿಕೊಂಡಿರುವುದು ನಿಜಕ್ಕೂ ಹೆಮ್ಮೆ, ಸಂತೋಷದ ವಿಷಯ. ಇಂಥವುಗಳೇ ನಮ್ಮ ವೈದಿಕ ಪರಂಪರೆಯನ್ನು ಉಳಿಸುವುದು'' ಎಂದು ಹೇಳಿ, ''ಈ ಊರಿಗೆ ನಾವು 'ಸಂಸ್ಕೃತ ಗ್ರಾಮ' ಎಂದು ನಾಮಕರಣ ಮಾಡುತ್ತೇವೆ'' ಎಂದು ಪ್ರೀತಿಯಿಂದ ಹರಸಿದರು. ಒಂದು ದಿನ ನಮ್ಮಲ್ಲಿದ್ದು ಉಪನ್ಯಾಸವನ್ನೂ ಮಾಡಿದರು. ನಿಜಕ್ಕೂ ಪೇಜಾವರ ಶ್ರೀಗಳ ಭೇಟಿ ಮರೆಯಲಾಗದಂಥದ್ದು.

❁ ❁ ❁

ನನಗೆ ಆಗ ಮೂವತ್ತೆಂಟು ವರ್ಷ. ನಮ್ಮೂರಿನಿಂದ ನಾವು ಸುಮಾರು ಇಪ್ಪತ್ತು ಜನ ಕಾಶೀಯಾತ್ರೆಗೆ ಹೋಗಿದ್ದು, ಆಗ ಅಲ್ಲಿದ್ದ ಕರಪಾತ್ರೆ ಸ್ವಾಮೀಜಿಯನ್ನು ನೋಡಬೇಕೆಂದು ಬಹಳ ಆಸೆಪಟ್ಟು ಅವರ ದರ್ಶನಕ್ಕೆ ಹೋದೆವು. ಈ ಕರಪಾತ್ರೆ ಸ್ವಾಮೀಜಿ ಬಹಳ ವಿದ್ಯಾವಂತರು. 'ಕರಪಾತ್ರೆ' ಎಂದರೆ ಅವರಿಗೆ ಕೈ ಬೊಗಸೆಯೇ ಪಾತ್ರೆಯಂತೆ. ಅವರು ಬೇರೆ ಯಾವ ಪಾತ್ರೆಯನ್ನಾಗಲಿ ತಟ್ಟೆಯನ್ನಾಗಲಿ ಊಟಕ್ಕೆ ಉಪಯೋಗಿಸುವುದಿಲ್ಲ. ಅದೊಂದು ಪಂಥ. ಕೈ ಬೊಗಸೆಯೊಡ್ಡಿ ಭಿಕ್ಷೆ ಮಾಡಿ ಅದನ್ನೇ ಅವರು ಸೇವಿಸುತ್ತಾರೆ. ಅದೊಂದು ಕಠಿಣವಾದ ವ್ರತ. ಕೆಲವರಂತೂ ಆ ವ್ರತದ ಆಚರಣೆಯನ್ನು ಕಠಿಣತಮವಾಗಿಸುತ್ತಾರೆ. ಬೊಗಸೆ ತುಂಬ ತಂದ ಭಿಕ್ಷೆಯನ್ನು ನೀರಿನಲ್ಲಿ ತೊಳೆದು ಅದರಲ್ಲಿ ನಾಲಗೆಗೆ ರುಚಿ ತರಿಸುವ ಎಲ್ಲ ಅಂಶಗಳನ್ನೂ ಹೋಗಿಸಿ, ಸೇವಿಸುತ್ತಾರೆ. ಇದು ನಾಲಗೆಯನ್ನು ಹತೋಟಿಗೆ ತರುವ ಒಂದು ವ್ರತ! ಈ ವ್ರತ ಹಿಡಿದಿದ್ದವರು ಆ ಸ್ವಾಮೀಜಿ. ನಂಜನಗೂಡಿನಲ್ಲಿ ಅಧ್ಯಯನ ಮಾಡುತ್ತಿದ್ದ ಕಾಲದಿಂದಲೂ ಸ್ವಾಮೀಜಿಯವರನ್ನು ಬಲ್ಲವನಾಗಿದ್ದೆ. ಆಗ ನಾವು ಚಿಕ್ಕ ವಯಸ್ಸಿನ ಹುಡುಗರಾದರೂ, ಸ್ವಾತಂತ್ರ್ಯಪೂರ್ವದ ಕಾಲ. ದೇಶದ ಆಡಳಿತ ಬ್ರಿಟಿಷರ ಕೈಯಲ್ಲಿದ್ದಿತು. ಆಗ ಈ ಸ್ವಾಮೀಜಿ, ''ಮಹಾರಾಷ್ಟ್ರದ ಶಿವಾಜಿಮಹಾರಾಜರಿಗೆ ಸಮರ್ಥರಾಮದಾಸರು ಇದ್ದರು. ಹಂಪೆಯ ಹಕ್ಕಬುಕ್ಕರಿಗೆ ವಿದ್ಯಾರಣ್ಯರು ಇದ್ದರು. ವಿಜಯನಗರದ ಕೃಷ್ಣದೇವರಾಯನಿಗೆ ವ್ಯಾಸರಾಜರು ಇದ್ದರು. ಯಾವುದೇ ಒಂದು ರಾಜ್ಯಸ್ಥಾಪನೆಗೆ ಆಧ್ಯಾತ್ಮಿಕ ನೆಲೆಯೂ ಅಗತ್ಯ, ಅವಶ್ಯ ಎನ್ನುವುದನ್ನು ನಾವು ನಮ್ಮ ಪರಂಪರೆಯಲ್ಲಿ ಕಾಣುತ್ತೇವೆ. ಹಿಂದೆ ದಶರಥನ ಕಾಲದಿಂದಲೂ ಬಂದ ವಸಿಷ್ಠರು ರಾಮನನ್ನು ನೋಡಿಕೊಂಡ ಕಾರಣ ಸುಖೀರಾಜ್ಯಕ್ಕೆ ನಾವು 'ರಾಮರಾಜ್ಯ' ಎಂದು ಹೇಳಿ ನೆನೆಯುವಂತಾಗಿದೆ'' ಎಂದು ತಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಅದೇ ಅಭಿಪ್ರಾಯದಿಂದಲೇ ಅವರು ರಾಷ್ಟ್ರ

ಮಟ್ಟದಲ್ಲಿ 'ರಾಮರಾಜ್ಯಪರಿಷತ್ತು' ಎನ್ನುವ ಒಂದು ಪಕ್ಷವನ್ನು ಕಟ್ಟಿದ್ದರು. ಅದರ ಸ್ಥಿತಿ-ಗತಿ ಏನಾಯಿತೋ ಅದರ ವಿವರ ನನಗೆ ಅಷ್ಟಾಗಿ ತಿಳಿಯದು. ಆದರೆ ಸ್ವಾಮೀಜಿ ಪಕ್ಷ ಕಟ್ಟಿದ್ದುದಂತೂ ನನಗೆ ತಿಳಿದಿತ್ತು. ಹಾಗಾಗಿ ಸ್ವಾಮೀಜಿಯ ಆಧ್ಯಾತ್ಮಿಕ, ಲೌಕಿಕ ಜ್ಞಾನದ ಬಗ್ಗೆ ನನಗೆ ಅಪಾರ ಗೌರವವೂ ಇದ್ದಿತು. ಅವರು ಕಾಶಿಯಲ್ಲಿ ಇದ್ದಾರೆಂದು ತಿಳಿದ ಮೇಲಂತೂ ಅವರನ್ನು ಕಂಡು ದರ್ಶನ ಮಾಡುವ ಅಭಿಲಾಷೆ ಇನ್ನೂ ಹೆಚ್ಚಿತು.

ಅದೇ ಆಸಕ್ತಿ, ಕುತೂಹಲ, ಉತ್ಸಾಹದಿಂದ ಹೊರಟ ನಾನೂ, ನನ್ನ ಜತೆಯವರೂ ಅವರು ಇದ್ದ ಜಾಗಕ್ಕೆ ಹೋದಾಗ ಅವರು ಒಳಗೆ ಪೂಜೆ ಮಾಡುತ್ತಿರುವುದಾಗಿ ಹೇಳಿದ ಅವರ ಶಿಷ್ಯರು, ''ಅವರು ಸದ್ಯಕ್ಕೆ ಬಾಗಿಲು ತೆಗೆಯುವುದಿಲ್ಲ'' ಎಂದರು. ''ನೀವೆಲ್ಲರೂ ಇಲ್ಲೇ ಕುಳಿತುಕೊಳ್ಳಿ'' ಎಂದು ಹೇಳಿ ''ಬೇಕಾದರೆ ಮಂತ್ರ ಹೇಳಿಕೊಳ್ಳುತ್ತಿರಿ'' ಎಂದರು. ನಾವೆಲ್ಲರೂ ಅಲ್ಲಿಯೇ ಕುಳಿತೆವು. ಮೆಲ್ಲಗೆ ಮಂತ್ರ ಹೇಳಿಕೊಳ್ಳಲೂ ಪ್ರಾರಂಭಿಸಿದೆವು. ಹೇಳ ಹೇಳುತ್ತ ನಮ್ಮ ಧ್ವನಿ ಜೋರಾಯಿತು. ಮುಚ್ಚಿದ್ದ ಬಾಗಿಲು ತೆರೆಯಿತು. ಅಲ್ಲೇ ಮುಂದೆ ಮಂಟಪ. ಅಲ್ಲಿ ಶಿವಲಿಂಗ. ಪಕ್ಕದಲ್ಲೇ ಸ್ವಾಮೀಜಿ ಗೋಶೃಂಗದ ಗೋಮುಖದಿಂದ ಶಿವಲಿಂಗಕ್ಕೆ ಧಾರೆಯಾಗಿ ಅಭಿಷೇಕ ಮಾಡುತ್ತಿದ್ದಾರೆ. ತೆರೆದ ಬಾಗಿಲಿನಿಂದ ಸ್ವಾಮೀಜಿಯ ದರ್ಶನ ಮಾಡಿ ನಾನು ಅವಾಕ್ಕಾದೆ! ಅಷ್ಟು ತೇಜಸ್ಸು ಅವರ ಮುಖದಲ್ಲಿ. ಆ ತೇಜಸ್ಸನ್ನು ನಾನು ಮತ್ತೆಲ್ಲೂ ಅಲ್ಲಿಯವರೆಗೆ ಕಂಡಿರಲಿಲ್ಲ, ಇಂದಿಗೂ ಕಂಡಿಲ್ಲ! ಮಿಂಚನ್ನೇ ಸೆರೆ ಹಿಡಿದಿಟ್ಟುಕೊಂಡಂಥಾ ವರ್ಚಸ್ಸು ಅದು. ಅಬ್ಬ! ಅದೇನು ದಿವ್ಯತೇಜ ಅದು! ಇಂದಿಗೂ ಆ ಮುಖ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಮಂತ್ರ ಹೇಳುತ್ತಿದ್ದ ನಾವು ಬಾಗಿಲು ತೆರೆದಾಗ ನಿಂತುಕೊಂಡದ್ದನ್ನು ನೋಡಿದ ಸ್ವಾಮೀಜಿ, ಬಾಗಿಲ ಒಳಗೆ ಬಂದು ಕುಳಿತುಕೊಳ್ಳಲು ಸಂಜ್ಞೆ ಮಾಡಿದರು. ನಾವು ಮಂತ್ರ ಹೇಳುತ್ತಲೇ ಒಳಗೆ ಹೋದೆವು. ಸ್ವಾಮೀಜಿ ಮೌನವ್ರತದಲ್ಲಿದ್ದರು. 'ನೀವು ಹೇಳುತ್ತಿರುವ ಮಂತ್ರ ಚೆನ್ನಾಗಿದೆ' ಎಂದು ಕಣ್ಣು, ಕಿರುನಗು, ಮುಖಭಾವದಲ್ಲೇ ಮೆಚ್ಚುಗೆ ಸೂಚಿಸಿದರು. ಆಗ ವೇದದಲ್ಲಿ ಬರುವ ಅಗ್ನಿಯನ್ನು ಕುರಿತಾದ ಮಂತ್ರವೊಂದನ್ನು ಹೇಳಿದೆ:

ಯನ್ಮಯಾ ಮನಸಾ ವಾಚಾ ಕೃತಮೇನಃ ಕದಾಚನ ।
ಸರ್ವಸ್ಮಾತ್ ತಸ್ಮಾತ್ ಮೇಳಿತೋ ಮೋಗ್ಧಿ
ತ್ವಗ್ಂ ಹಿ ವೇತ್ಥ ಯಥಾತಥಮ್ ॥

ಈ ಮಂತ್ರದ ಭಾವಾರ್ಥ, 'ನಾನು ಕಾಯಾ ವಾಚಾ ಮನಸಾ, ಅರಿವಿಲ್ಲದೆ ಏನಾದರೂ ತಪ್ಪು ಮಾಡಿದ್ದರೆ, ನನ್ನಿಂದ ತಪ್ಪು ನಡೆದಿದ್ದರೆ ಅದನ್ನು ಕ್ಷಮಿಸಿ, ನನ್ನನ್ನು ಪಾಪದಿಂದ ಬಿಡಿಸು' ಎಂದು. ನಾವು ಅಗ್ನಿಯನ್ನು ಪ್ರಾರ್ಥಿಸುವ ಮಂತ್ರವದು. 'ನಾವು ಜೋರಾಗಿ ಮಂತ್ರ ಹೇಳಿ ಬಾಗಿಲು ತೆಗೆಯುವಂತೆ ಮಾಡಿದುದು ತಪ್ಪಾಯಿತೋ ಏನೋ, ತಾವು ಕ್ಷಮಿಸಿ' ಎಂದೂ ಅರ್ಥಬರುವ ಹಾಗೆ ನಾವು ಹೇಳಿದ್ದು ಸ್ವಾಮೀಜಿಗೆ ಚೆನ್ನಾಗಿ ಅರ್ಥವಾಗಿತ್ತು. ಅವರು ಕಣ್ಣಿನಲ್ಲೇ ಪ್ರೀತಿಯಿಂದ 'ತಪ್ಪೇನೂ ಆಗಿಲ್ಲ' ಎನ್ನುವಂತೆ ಜೋರಾಗಿ ತಲೆ ಅಲ್ಲಾಡಿಸಿದರು. ನಮ್ಮನ್ನೆಲ್ಲ ಒಳಕ್ಕೇ ಕರೆದರು. ನಾವೆಲ್ಲ ಒಳಗೆ ಕುಳಿತು ಅವರು ಮಾಡುವ ಪೂಜೆಯನ್ನು ನೋಡಿದೆವು. ನಮ್ಮಲ್ಲೂ ಧನ್ಯತಾಭಾವ ಮೂಡಿತ್ತು, ಸ್ವಾಮೀಜಿಯ ದರ್ಶನ ಮಾಡಿ. ಅನಂತರ ಸಂಜ್ಞೆಯ ಮೂಲಕವೇ ನಮ್ಮ ಊರು, ಪರಿಚಯವನ್ನೆಲ್ಲ ಮಾಡಿಕೊಂಡು, ಪ್ರೀತಿಯಿಂದ ಪ್ರಸಾದ ಕೊಟ್ಟರು. ನಾವೆಲ್ಲರೂ ಅವರಿಗೆ ನಮಿಸಿ ಅಲ್ಲಿಂದ ಹೊರಟೆವು. ಅವರು ಅನಂತರ ಬಹಳ ಬೇಗನೇ ಸಮಾಧಿ ಹೊಂದಿದರು ಎಂದು ಕೇಳಿದೆ. ಅದನ್ನು ತಿಳಿದು ದಿವ್ಯಾತ್ಮಗಳು ಬಹುಶಃ ನಮ್ಮ ನಡುವೆ ಹೆಚ್ಚು ವರ್ಷಗಳು ಇರಲಾರವೇನೋ ಎನ್ನಿಸಿತು ನನಗೆ! ಅಂತೂ ಕರಪಾತ್ರೆ ಸ್ವಾಮೀಜಿಯ ದರ್ಶನ ನನ್ನ ಜೀವನದ ಸೌಭಾಗ್ಯಗಳಲ್ಲಿ ಒಂದು ಎಂದರೆ ತಪ್ಪಿಲ್ಲ.

❁ ❁ ❁

ಚಿಕ್ಕಂದಿನಿಂದಲೂ ತಂದೆಯಲ್ಲಿ ಅಭ್ಯಾಸ ಮಾಡುತ್ತಿದ್ದ ನನಗೆ ಅವರೇ ವೇದದ ಮೂರನೇ ಕಾಂಡ, ನಾಲ್ಕನೇ ಕಾಂಡದ ಎರಡು ಪ್ರಶ್ನೆ, ಬ್ರಹ್ಮ ಸಂದತ್ತ ಪೂರ್ವಪ್ರಯೋಗ ಎಲ್ಲವನ್ನೂ ಹೇಳಿಕೊಟ್ಟಿದ್ದರು. ಆದರೆ ತಂದೆಯೂ ಹೇಳಿಕೊಟ್ಟಿರದ, ನಂಜನಗೂಡಿನಲ್ಲಿಯೂ ಕಲಿಯಲಾಗದಿದ್ದ ಕೆಲವು ಮಂತ್ರಗಳನ್ನು ನನಗೆ ಕಲಿಯಬೇಕೆಂದು ಬಹಳ ಆಸೆ ಇತ್ತು. ಆಗ ನನ್ನ ನಲ್ವತ್ತೆಂಟನೆಯ ವರ್ಷ. ನಮ್ಮೂರಿನ ಕಡೆಗಳಲ್ಲಿ ಟೇಪ್‌ರೆಕಾರ್ಡರ್ ತಂದು ಕ್ಯಾಸೆಟ್ ಹಾಕಿ, ಸಂಗೀತ, ಹರಿಕಥೆ ಇತ್ಯಾದಿಗಳನ್ನು ಕೇಳುವ ಹೊಸ ಪರಿಪಾಠ ಪ್ರಾರಂಭವಾಗಿತ್ತು. ನಮ್ಮ ಮನೆಯಲ್ಲಿ ಟೇಪ್ ರೆಕಾರ್ಡರ್ ಇರಲಿಲ್ಲ. ನನಗೇಕೋ ಇದನ್ನು ಉಪಯೋಗಿಸಿಕೊಂಡು ನಾನೇಕೆ ಆ ಮಂತ್ರಗಳನ್ನು ಕಲಿಯಬಾರದು ಎನ್ನಿಸತೊಡಗಿತು. ಆದರೆ ಯಾರಲ್ಲಿ ಕಲಿಯುವುದು? ಪ್ರಶ್ನೆಗೆ ಉತ್ತರವೂ ಸುಲಭವಾಗಿದ್ದಿತು: ಇನ್ನ್ಯಾರಲ್ಲಿ? ನಮ್ಮ ಶಿವಮೊಗ್ಗೆಯ ಘನಪಾಠಿಯವರಲ್ಲಿ ಎಂದು!

ಘನಪಾಠಿಯವರು ಬಹಳ ದೊಡ್ಡ ವೈದಿಕರು, ಪಂಡಿತರು. ಮಧುರವಾದ ಕಂಠ, ಸ್ಪಷ್ಟ ಮಂತ್ರೋಚ್ಚಾರಣೆ, ಸೌಮ್ಯರೂಪ, ಅಸಾಧಾರಣ ವಿದ್ವತ್ತು. ಅವರು ಶಿವಮೊಗ್ಗೆಗೆ ಬಂದು ನೆಲೆಸಿದ

ಹೊಸತರಲ್ಲಿ ಶ್ರೀಮಂತರೊಬ್ಬರು ತಮ್ಮ ಮನೆಯಲ್ಲಾದ ಶಾಂತಿಮಹೋತ್ಸವದಲ್ಲಿ ಘನಪಾಠಿಯವರಿಂದ 'ಘನಕಥೇರಿ' ಯನ್ನು ಏರ್ಪಡಿಸಿದ್ದರಂತೆ... ಹಾಗೆಂದರೆ ವೇದದ ಮುಂದಿನ ಪದವನ್ನು ಹಿಂದಿನ ಪದದೊಂದಿಗೆ ಸಂಧಿ ಮಾಡಿದಾಗ ಆಗುವ ಸ್ವರ ವ್ಯತ್ಯಾಸವನ್ನು ಶುದ್ಧವಾಗಿ ಹೇಳುವುದು. ಇದನ್ನು ಹೇಳುವಾಗ ಸಂಗೀತದ ಸ್ವರಪ್ರಸ್ತಾವನೆ ಕೇಳಿದಂತೆ ಆನಂದವಾಗುತ್ತದೆ.

ಎಲ್ಲದರ ಶ್ರೀಮಂತಿಕೆ ಇದ್ದ ಘನಪಾಠಿಗಳಿಗೆ ಲಕ್ಷ್ಮೀಕೃಪೆ ಸ್ವಲ್ಪ ಕಡಮೆಯೇ ಇತ್ತು. ಆದರೂ ಅವರು ಅದನ್ನೆಂದಿಗೂ ಮನಸ್ಸಿಗೆ ತಂದುಕೊಂಡವರಲ್ಲ (ಅವರು ನನ್ನ ತಮ್ಮ ಸೀತಾರಾಮನಿಗೆ ಹೆಣ್ಣು ಕೊಟ್ಟ ಮಾವನೂ ಆಗಬೇಕು.) ಅವರು ಕುಟೀರದಂತಹ ಮನೆಯಲ್ಲಿದ್ದರೂ ದಾನ-ಧರ್ಮಗಳಲ್ಲಿ ಧರ್ಮರಾಜ ಯುಧಿಷ್ಠಿರನೇ ಸರಿ. ತಮ್ಮ ಹತ್ತಿರ ಇದ್ದುದನ್ನು ಮತ್ತೊಮ್ಮೆಯೋಚಿಸದೆ ನೆಮ್ಮದಿಯಿಂದ ದಾನ ಮಾಡುತ್ತಿದ್ದರು. ಅವರ ಶ್ರೀಮತಿಯವರೂ ಅವರಿಗೆ ನಿಜಕ್ಕೂ ತಕ್ಕವರಾಗಿದ್ದರು. ನಾನೇ ಕಂಡಂತೆ ಒಂದು ಪ್ರಸಂಗ.... ಅಗ್ನಿ ಪಾಸನವನ್ನು ಐವತ್ತು ವರ್ಷಗಳಿಂದಲೂ ನಡೆಸಿಕೊಂಡು ಬಂದಿದ್ದ ಅವರು ಒಮ್ಮೆ ತಮ್ಮ ಮನೆಯಲ್ಲೇ ಒಂದು ಲಲಿತಾ ಹೋಮ ಮಾಡಿದರು. ಆ ಹೋಮಕ್ಕೆ ನಾನೂ ಆಹ್ವಾನಿತನಾಗಿ ಹೋಗಿದ್ದೆ. ಹೋಮವೆಲ್ಲ ಮುಗಿದು ಪೂರ್ಣಾಹುತಿಯ ಸಮಯ ಬಂದಾಗ ಪತ್ನಿಗೆ ''ಎಲ್ಲವೂ ಸಿದ್ಧವೇ?'' ಎಂದರು. 'ಹ್ಞೂಂ' ಎಂದರು ಆ ಸಾಧ್ವಿ. ಆ ದಿನ ಪೂರ್ಣಾಹುತಿಗೆ ಅರ್ಪಿಸಲು ಅವರಲ್ಲಿ ಬಹುಶಃ ಯಾವುದೇ ರೇಷ್ಮೆ ಬಟ್ಟೆಯ ಕಣ ಇಲ್ಲದೆ ಹೋಗಿದ್ದು, ಅವರು ಮಿಕ್ಕೆಲ್ಲ ಸಾಮಾನುಗಳನ್ನು ತಂದಿಟ್ಟರು. ''ಪೂರ್ಣಾಹುತೀ ವಸ್ತ್ರ-ಬಟ್ಟೆಯ ಕಣ? ಅದೆಲ್ಲಿ?'' ಎಂದರು ಘನಪಾಠಿಗಳು. ಅವರ ಪತ್ನಿ ಮರು ಮಾತಾಡದೆ ಪೆಟ್ಟಿಗೆಯಲ್ಲಿಟ್ಟಿದ್ದ ಹೊಚ್ಚ ಹೊಸದಾದ ರೇಷ್ಮೆ ಸೀರೆಯೊಂದನ್ನು ಮೌನವಾಗಿ ತಂದಿರಿಸಿದರು. ಘನಪಾಠಿಗಳು, ''ಏನು? ಇದನ್ನೇ ಕೊಡುತ್ತಿದ್ದೀಯಾ?'' ಎಂದು ಕೇಳಿದರು ಪತ್ನಿಗೆ. ''ಹ್ಞೂಂ, ಯಜ್ಞೇಶ್ವರನೇ ಎಲ್ಲವನ್ನೂ ಕೊಡಿಸುವವನು. ಅವನೇ ತೆಗೆದುಕೊಳ್ಳಲಿ'' ಎನ್ನುವುದೇ ಆಕೆ?! ನಾನು ಬೆರಗು ಬಡಿದು ಹೋದೆ. ಘನಪಾಠಿಗಳು ನಿರ್ಯೋಚನೆಯಿಂದ ''ಅದೂ ನಿಜ... ಸರಿ ಹಾಗಾದರೆ'' ಎಂದು ನಿರ್ಮಲವಾಗಿ ಮಂತ್ರವನ್ನು ಹೇಳುತ್ತ ಅಗ್ನಿಗೆ ಆ ಸೀರೆಯನ್ನು ಅರ್ಪಿಸಿಯೇ ಬಿಟ್ಟರು!

ಆ ಘನಪಾಠಿಗಳಲ್ಲಿ ನನಗೆ ಪಾಠವಾಗಿಲ್ಲದಿದ್ದ ಮಂತ್ರಗಳನ್ನು ಹೇಳಿಸಿಕೊಳ್ಳಬೇಕೆಂದು, ನನ್ನ ಮಿತ್ರರೊಬ್ಬರ ಮನೆಯಲ್ಲಿದ್ದ ಟೇಪ್‌ರೆಕಾರ್ಡರನ್ನೂ - ಕ್ಯಾಸೆಟ್ಟನ್ನೂ ತೆಗೆದುಕೊಂಡು ಅವರಲ್ಲಿಗೆ ಹೋಗಿ ಕೇಳಿಕೊಂಡೆ. ಅವರು ಸಂತೋಷದಿಂದಲೇ ಒಪ್ಪಿ ಹೇಳಿಕೊಡಲು ಪ್ರಾರಂಭಿಸಿದರು. ಅವರ ಪಾಠವನ್ನು ರೆಕಾರ್ಡು ಮಾಡಿಕೊಂಡು ಬಂದು ಮನೆಯಲ್ಲಿ ಅಭ್ಯಾಸಮಾಡಿ, ಮತ್ತೆ ಮುಂದಿನವಾರ ಅಲ್ಲಿಗೆ ಹೋಗಿ ಪಾಠ ಒಪ್ಪಿಸಿ ಹೊಸದನ್ನು ಹೇಳಿಸಿ ರೆಕಾರ್ಡು ಮಾಡಿಕೊಂಡು ಬರುವ ಪರಿಪಾಠವೂ ಪ್ರಾರಂಭವಾಯಿತು. ಆ ದಿವಸಗಳಲ್ಲಿ ಒಮ್ಮೆ ಶೃಂಗೇರಿಪೀಠದ ವಿದ್ಯಾತೀರ್ಥ ಮಹಾಸ್ವಾಮಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಘನಪಾಠಿಗಳು ತಮ್ಮ ಮನೆಗೂ ಸ್ವಾಮೀಜಿಯನ್ನು ಬರಮಾಡಿಕೊಂಡರು.

ಸ್ವಾಮೀಜಿ ಬಂದಾಗ ನಾನು ನನ್ನ ಪಾಠವನ್ನು ರೆಕಾರ್ಡು ಮಾಡಿಕೊಳ್ಳುತ್ತಿದ್ದೆ. ಸ್ವಾಮೀಜಿಗೆ ಆಶ್ಚರ್ಯವೋ ಆಶ್ಚರ್ಯ. ಅವರು ವಿಚಾರಿಸಿದಾಗ ಘನಪಾಠಿಗಳು, ''ಇವರು ಪಾಠವನ್ನು ರೆಕಾರ್ಡ್ ಮಾಡಿಕೊಂಡು ಹೋಗಿ, ಮನೆಯಲ್ಲಿ ಅಭ್ಯಾಸ ಮಾಡುತ್ತಾರೆ'' ಎಂದರು. ಸ್ವಾಮೀಜಿ ಬಹಳ ಮೆಚ್ಚುಗೆಯಿಂದ, ''ಓಹೋ, ನಿಮ್ಮ ಆಸಕ್ತಿಯನ್ನು ನಿಜಕ್ಕೂ ಮೆಚ್ಚಬೇಕು. ನೀವು ಹೀಗೆ ಕಲಿಯುತ್ತಿದ್ದೀರಾ!'' ಎಂದು ಕೇಳಿದರು. ನಾನು ಅವರು ಹಾಗೆ ಪ್ರೀತಿಯಿಂದ ಹೇಳಿದ್ದನ್ನು ಕೇಳಿ ಪುಳಕಿತನಾದೆ. ಭಕ್ತಿಯಿಂದ ಅವರ ಕಾಲಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆದೆ. ಇದು ನನ್ನ ಮನಸ್ಸಿನಲ್ಲಿ ಹೇಗೆ ಅವಿಸ್ಮರಣೀಯವಾಗಿ ಉಳಿಯಿತೋ, ಹಾಗೆಯೇ ಸ್ವಾಮೀಜಿಯ ನೆನಪಿನಿಂದಲೂ ಅಳಿಸಿ ಹೋಗಿರದ ಒಂದು ಸಂಗತಿಯಾಗಿದ್ದಿತು!

ಅದು ಶಂಕರಜಯಂತಿಯ ಸಮಯವಾಗಿತ್ತು. ನಾನು ಮತ್ತು ಶ್ರೀ ಹೊಸಹಳ್ಳಿ ಕೇಶವಮೂರ್ತಿಯವರು ಶೃಂಗೇರಿಗೆ ಹೋಗಿದ್ದೆವು. ದೇವರದರ್ಶನದ ಅನಂತರ ಸ್ವಾಮೀಜಿಯ ದರ್ಶನವನ್ನು ಮಾಡಿದೆವು. ಅವರಿಗೆ ನಮಸ್ಕರಿಸುವಾಗ ಸ್ವಾಮೀಜಿ ನನ್ನನ್ನು ಗುರುತಿಸಿ, ತಮ್ಮ ಪಕ್ಕದಲ್ಲಿದ್ದ ಚಿಕ್ಕ ಸ್ವಾಮೀಜಿಯವರಿಗೆ, ''ಇವರು ಟೇಪ್ ರೆಕಾರ್ಡರನ್ನು ಹಾಕಿಕೊಂಡು ಅಧ್ಯಯನ ಮಾಡುತ್ತಿದ್ದಾರೆ ಗೊತ್ತೇ?'' ಎಂದು ಅದೇ ಮೆಚ್ಚುಗೆಯಿಂದ ಹೇಳಿ ಆಶೀರ್ವದಿಸಿದರು. ಅವರ ಮಾತಿನಿಂದ ಉತ್ತೇಜಿತನಾದ ನಾನು ಸ್ವಲ್ಪ ಧೈರ್ಯ ಮಾಡಿ, ''ನಾವು ಮಹಾಭಾರತ ಕಥೆ ಅಭ್ಯಾಸ ಮಾಡಿದ್ದೇವೆ. ಸನ್ನಿಧಾನ ಅಪ್ಪಣೆ ಕೊಟ್ಟರೆ ಹೇಳೋಣ ಎಂದು ಆಸೆ'' ಎಂದೆ. ಕೂಡಲೆ ಅವರು, ''ನೋಡಿ, ಈ ಕಾರ್ಯಕ್ರಮದ ಮೇಲ್ವಿಚಾರಣೆಯೆಲ್ಲವೂ ಚಿಕ್ಕ ಸ್ವಾಮೀಜಿಯವರದು; ಅವರನ್ನು ಕೇಳಿ. ಅವರು ಆಗಬಹುದು ಎಂದರೆ ಆಗಬಹುದು'' ಎಂದರು. ನಾವು ಚಿಕ್ಕ ಸ್ವಾಮೀಜಿಯವರ ಹತ್ತಿರ ಬಂದಾಗ ಅವರು, ''ನೋಡಿ, ಈಗ ಶಂಕರಜಯಂತಿಯ ಸಮಯ. ಸಭೆ-

ಗೋಷ್ಠಿಗಳು ನಡೆಯುತ್ತಿವೆ. ಕೇರಳ-ತಮಿಳುನಾಡಿನ ಕಡೆಯಿಂದ ವಿದ್ವಾಂಸರನ್ನೆಲ್ಲ ಬರಮಾಡಿದ್ದೇವೆ. ಅವರೆಲ್ಲರೂ ಬೆಳಗಿನಿಂದ ಸಂಜೆಯವರೆಗೂ ಚರ್ಚೆ, ಉಪನ್ಯಾಸ ಮಾಡುತ್ತಿರುತ್ತಾರೆ. ಈಗ ಸಮಯ ಎಲ್ಲಿದೆ? ಮತ್ತೆ ನೀವು ಬಿಡುವಾಗಿ ಬಂದಾಗ ನಾವೂ ಬಿಡುವಾಗಿ ಕಾರ್ಯಕ್ರಮ ಮಾಡಬಹುದು'' ಎಂದರು. ನಮ್ಮ ಮುಖದಲ್ಲಿ ಕಂಡೂ ಕಾಣದ ನಿರಾಸೆಯಿಂದ ಸ್ವಾಮೀಜಿಗೆ ಏನೆನ್ನಿಸಿತೋ... ''ಹೋಗಲಿ. ಮೂರುಗಂಟೆಗೆ ಸಭೆಯ ಪ್ರಾರಂಭ. ನೀವು ಹತ್ತು ನಿಮಿಷ ಮುಂಚಿತವಾಗಿ ಬನ್ನಿರಿ. ಅಷ್ಟು ಹೊತ್ತು ಮಾತ್ರ ನಿಮಗೆ ಅವಕಾಶ'' ಎಂದರು. ಅವಕಾಶವೇ ಇಲ್ಲ ಎಂದಿದ್ದಾಗ ಹತ್ತು ನಿಮಿಷಗಳಾದರೂ ಆಯಿತಲ್ಲ ಎನ್ನುವ ಸಮಾಧಾನ ನಮಗೆ. ಹತ್ತು ನಿಮಿಷದಲ್ಲಿ ಏನು ಹೇಳಲಾದೀತು! ಏನಾದರೂ ಸರಿ, ಹತ್ತು ನಿಮಿಷವನ್ನು ಉಪಯೋಗಿಸಿಕೊಳ್ಳುವುದು ಎಂದು ತೀರ್ಮಾನಿಸಿ **೨-೫೦ರ** ಸಮಯಕ್ಕೆ ಸರಿಯಾಗಿ ಆ ಸಭೆಗೆ ಹೋದೆವು. ಸುಮಾರು ಹತ್ತಿಪ್ಪತ್ತು ಮಂದಿ ವಿದ್ವಾಂಸರು ಅದಾಗಲೇ ಬಂದು ಕುಳಿತಿದ್ದರು. ಮತ್ತಿತರ ಶ್ರೋತೃಗಳಿದ್ದರು. ಚಿಕ್ಕ ಸ್ವಾಮೀಜಿ ಬಂದರು. ದೊಡ್ಡವರ ಪೀಠ ಖಾಲಿ. ಅದನ್ನು ಕಂಡೇ ನಮಗೆ ಬಹಳ ನಿರಾಸೆಯಾಗಿತ್ತು. ''ಸನ್ನಿಧಾನ...?'' ಎಂದೆವು - ಬರುತ್ತಾರೋ, ಇಲ್ಲವೋ ಎನ್ನುವಂತೆ.

''ಇಲ್ಲ. ಅವರಿಗೆ ಜ್ವರ. ಅವರು ಬರುತ್ತಾರೆಯೋ ಇಲ್ಲವೋ ತಿಳಿಯದು. ನೀವು ಪ್ರಾರಂಭ ಮಾಡಿ'' ಎಂದರು ಚಿಕ್ಕ ಸ್ವಾಮೀಜಿ. ಅವರು ಆಂಧ್ರ ಪ್ರದೇಶದವರು. ಅವರಿಗೆ ಕನ್ನಡದ ಕುಮಾರವ್ಯಾಸ ಭಾರತ ಕಾವ್ಯ ಇಷ್ಟವಾದೀತೋ ಇಲ್ಲವೋ ಎಂದು ನಮಗೂ ಒಳಗೇ ತಳಮಳ. ಆದರೂ ಶ್ರೀ ಕೇಶವಮೂರ್ತಿ ಮೊದಲಿಗೆ ಎರಡು ಮಂಗಳ ಪದ್ಯಗಳನ್ನು ಸುಶ್ರಾವ್ಯವಾಗಿ ಸುಂದರ ರಾಗಗಳಲ್ಲಿ ಹಾಡಿಯೇ ಬಿಟ್ಟರು. ಅಷ್ಟರಲ್ಲೇ ಸಭೆಯಲ್ಲಿ ಗುಜು ಗುಜು... ನಾವು 'ಏನಿದು' ಎಂದು ನೋಡುವಷ್ಟರಲ್ಲಿ ತಮ್ಮ ಕಾವೀವಸ್ತ್ರದ ಮೇಲೆ ಕಾವಿಬಣ್ಣದ ಎರಡು ಶಾಲುಗಳನ್ನು ಹೊದ್ದುಕೊಂಡು ಹಿರಿಯ ಸ್ವಾಮೀಜಿ ಬಂದೇ ಬರುತ್ತಿದ್ದಾರೆ....ಆ ಜ್ವರದಲ್ಲೂ ಅವರು ಬರುವ ಹಾಗೆ ಮಾಡಿದುದು ಯಾವುದು? ಆ ಪರಮಾತ್ಮನ ಕೃಪೆ ಎನ್ನದೆ ಬೇರೇನೂ ಹೇಳಲಾರೆ! ನಮ್ಮ ಕೇಶವಮೂರ್ತಿಯ ವಾಚನ ಅಷ್ಟು ಮೋಡಿಮಾಡುವಂಥದೂ ಹೌದು.... ಅಂತೂ ಹಿರಿಯ ಸ್ವಾಮೀಜಿ ಬಂದು ಪೀಠದಲ್ಲಿ ಕುಳಿತುಕೊಳ್ಳುವವರೆಗೆ ನಮಗೆ ಕೊಟ್ಟಿದ್ದ ಹತ್ತು ನಿಮಿಷಗಳು ಮುಗಿದೇ ಹೋದವು. ಅವರು ಬಂದು ಕುಳಿತು, ''ಈಗ ಪ್ರಾರಂಭ ಮಾಡಿ'' ಎಂದರು. ನಾವು ಶ್ರೀಕೃಷ್ಣ ಸಾರಥ್ಯ ಕಥಾಭಾಗವನ್ನು ಆರಿಸಿಕೊಂಡಿದ್ದೆವು. ಒಂದು ಪದ್ಯ ಶ್ರೀ ಕೇಶವಮೂರ್ತಿ ಓದಿದರು. ನಾನು ಅರ್ಥಹೇಳಿ ನಿಲ್ಲಿಸಿದೆ. ಹತ್ತು ನಿಮಿಷಗಳಾದುವು ಎನ್ನುವಂತೆ. ''ನಿಲ್ಲಿಸಬೇಡಿ. ಇನ್ನೂ ಸ್ವಲ್ಪ ಹೇಳಿ... ಹೇಳಿ... '' ಎಂದರು ಹಿರಿಯ ಸ್ವಾಮೀಜಿ. ಕಾರ್ಯಕ್ರಮ ನಾಲ್ಕೂವರೆಗಂಟೆಯ ತನಕ ಮುಂದುವರೆಯಿತು. ನಾವು ಒಂದೂವರೆ ಗಂಟೆ ಕಥೆ ಹೇಳಿದ್ದೆವು. ನಮಗೂ ಪರಿವೆ ಇರಲಿಲ್ಲ. ಕೊನೆಯಲ್ಲಿ, ''ಅರ್ಜುನನು 'ಕೃಷ್ಣಾ... ನೀನೇ ಸಾಕು ನಮಗೆ' ಎಂದ.... ಹಾಗೆಂದರೆ... ಕೃಷ್ಣ! ನೀನು... ನೀನೊಬ್ಬನೇ ಸಾಕು ನಮಗೆ, ನಿನ್ನ ಯಾದವ ಸೇನೆ ಬೇಕಿಲ್ಲ ಎಂದೂ ಅರ್ಥ, ಕೃಷ್ಣ! ನೀನೇ 'ಸಾಕು', ಪೊರೆ, ಕಾಪಾಡು, ರಕ್ಷಿಸು, ಹೀಗೆ ನಾಲ್ಕಾರು ಅರ್ಥ. ನೀನು ತಾನೆ ನಮ್ಮನ್ನೆಲ್ಲ ಸಾಕಿ ಸಲಹಬೇಕಾದವನು? ಎನ್ನುವ ಇನ್ನೊಂದು ಅರ್ಥವೂ ಇದೆ. ಈ 'ಸಾಕು' ಎನ್ನುವ ಪದದಲ್ಲಿ'' ಎಂದು ನಾನು ಅರ್ಥೈಸಿದಾಗ ಹಿರಿಯ ಸ್ವಾಮೀಜಿಯವರ ಕಂಗಳಿಂದ ನೀರು ತೊಟ್ಟಿಕ್ಕಿತು. ಅರೆಕ್ಷಣ ಅವರು ಪರವಶರಾಗಿದ್ದರು... ಕಾರ್ಯಕ್ರಮ ಮುಗಿದು ಮಂಗಳಪದ್ಯ ಹಾಡಿದ ಅನಂತರ ಶಾಲು ಹೊದಿಸಿ, ಸಂಭಾವನೆಯನ್ನೂ ಕೊಟ್ಟು ಆಶೀರ್ವದಿಸಿದರು ಗುರುಗಳು. ಆಗಲೂ ನನ್ನನ್ನು ಆ ಸಭೆಗೆ ಪರಿಚಯಿಸಿ, ''ಇವರು ಟೇಪ್‌ರೆಕಾರ್ಡರಿನಲ್ಲಿ ಅಧ್ಯಯನ ಮಾಡುತ್ತಾರೆ'' ಎಂದರು! ಸ್ವಾಮೀಜಿಯ ಆ ಪ್ರೀತಿಗೆ ಏನು ತಾನೇ ಹೇಳಲಾದೀತು? ಅಂತೂ ನಾನು ಕಲಿತ 'ವ್ಯಾಖ್ಯಾನಿಸುವ ಕಲೆ'ಗೆ ಸ್ವಾಮೀಜಿಯವರ ಕಂಗಳಿಂದಿಳಿದ ಆನಂದಬಾಷ್ಪವೇ ದೊಡ್ಡ ಪಾರಿತೋಷಿಕವಾಗಿದ್ದಿತು ಆ ದಿನ!

ಇದೇ ಅಭಿನವ ವಿದ್ಯಾತೀರ್ಥ ಸ್ವಾಮೀಜಿ ಒಮ್ಮೆ ನಮ್ಮೂರಿಗೆ ಬಂದಾಗಲೂ ಅವರಿಗೆ ಜ್ವರ ಬಂದು ಮೈಯಲ್ಲಿ ಆರಾಮ ಇರಲಿಲ್ಲ. ಊರ ಹೊರಬಾಗಿಲಲ್ಲೇ ನಾವು ಅವರಿಗೆ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡೆವು. ಪಲ್ಲಕ್ಕಿಯಲ್ಲಿ ಸ್ವಾಮೀಜಿಯ ಉತ್ಸವ ಮಾಡಿಸಬೇಕೆಂದಿದ್ದರೂ ಅದು ಸಾಧ್ಯವಾಗಲಿಲ್ಲ. ಸ್ವಾಮೀಜಿಯ ಮೈಯಲ್ಲಿ ಆರಾಮವಿಲ್ಲ ಎಂದು ತಿಳಿದ ನಾನು ಸ್ವಾಮೀಜಿಗೆ, ''ತಾವು ಕಾರಿನಲ್ಲಿ ಕುಳಿತು ನಿಧಾನವಾಗಿಯೇ ಬನ್ನಿ. ನಾವೂ ನಿಮ್ಮ ಜತೆ ಸ್ವಸ್ತಿ ಹೇಳುತ್ತ ನಡೆದು ಬರುತ್ತೇವೆ. ತಾವು ನಡೆದು ಬರುವ ಶ್ರಮ ತೆಗೆದುಕೊಳ್ಳಬೇಡಿ'' ಎಂದೆ ವಿನಯವಾಗಿ. ಅದಕ್ಕೆ ಅವರು ನಗುತ್ತಲೇ, ''ನಮ್ಮ ಗುರುಗಳೂ, ಪರಮ ಗುರುಗಳೂ ಈ ಗ್ರಾಮದಲ್ಲಿ ನಡೆದೇ ಸಂಚಾರ ಮಾಡಿದರು ಎಂದು ಕೇಳಿದ್ದೇವೆ. ಋತ್ವಿಜರು ಮುಂದೆ ಮಂತ್ರ ಹೇಳುತ್ತಾ ಹೋದಂತೆ ನಮ್ಮ ಗುರುಗಳು ಅವರ ಹಿಂದೆಯೇ ನಡೆದು ಬಂದರೆಂದು ನಮಗೆ ತಿಳಿದಿದೆ. ನಮ್ಮ ಗುರುಗಳು ನಡೆದಾಡಿದ ಸ್ಥಳದಲ್ಲಿ

ನಾವೂ ನಡೆದೇ ಬರುತ್ತೇವೆ'' ಎಂದು ಹೇಳಿ, ಶಾಲು ಹೊದೆದು ನಮ್ಮೆಲ್ಲರನ್ನೂ ಮುಂದಿಟ್ಟುಕೊಂಡು ತಾವು ಜ್ವರದ ತಾಪದಲ್ಲಿದ್ದರೂ ನಡೆದೇ ಬಂದರು. ಅವರ ಆ ದಾರ್ಢ್ಯವನ್ನು ನಾವು ಎಂದೂ ಮರೆಯುವಂತಿಲ್ಲ. ಅನಂತರ ನಮ್ಮ ಊರಿನಲ್ಲೇ ಒಂದು ದಿನ ಇದ್ದು ಉಪನ್ಯಾಸ ನೀಡಿ ನಮ್ಮ ಊರಿನ ವೇದಾಧ್ಯಯನದ ವಿದ್ಯಾರ್ಥಿಗಳನ್ನು ಆಶೀರ್ವದಿಸಿ ಹೊರಟ ಗುರುಗಳ ನೆನಪು ಎಂದಿಗೂ ಹಸಿರಾಗಿರುವಂಥದು!

❁ ❁ ❁

ಒಬ್ಬ ವ್ಯಕ್ತಿಯು ನಮ್ಮ ಮನಸ್ಸಿನಲ್ಲಿ ಸದಾಕಾಲವೂ ನೆಲೆಸಬೇಕಾದರೆ, ಅವರ ನೆನಪು ಹೇಗೂ ಮಾಸದೆ ಇರಬೇಕಾದರೆ, ಅವರ ವರ್ಚಸ್ಸು ಅಂಥದಾಗಿರಬೇಕು. ವ್ಯಕ್ತಿವೈಶಿಷ್ಟ್ಯ ಪ್ರಭಾವಶಾಲಿಯಾಗಿರಬೇಕು. ಅಂಥ ವ್ಯಕ್ತಿಗಳಲ್ಲಿ ಒಬ್ಬರು ನಮ್ಮ ಯಜ್ಞನಾರಾಯಣ ಸೋಮಯಾಜಿಯವರು. ಇವರು ನಮ್ಮೂರಿನವರಲ್ಲ; ಉಡುಪಿಯ ಕಡೆಯ ಒಂದು ಹಳ್ಳಿಯವರು. ಇಂದಿನ ಹೆಬ್ಬೂರು ಮಠದ ಸ್ವಾಮೀಜಿಯ ಹಿರಿಯ ಸಹೋದರರು ಇವರು (ಉಡುಪಿ ಸಾಲಿಗ್ರಾಮ ಸಮೀಪ ಚಿತ್ರಪಾಡಿ ಗ್ರಾಮದವರು). ನಮ್ಮ ಊರಿನಲ್ಲಿ ಆಗೀಗ ಯಾಗ-ಯಜ್ಞಗಳು ನಡೆದಾಗ ಅವರು ನಮ್ಮ ಮನೆಯಲ್ಲೇ ವಾಸ್ತವ್ಯ ಮಾಡುತ್ತಿದ್ದರು. ಯಜ್ಞೇಶ್ವರನಂತೆಯೇ ದಿವ್ಯವಾದ ತೇಜಸ್ಸು ಅವರ ಮುಖದಲ್ಲಿ. ಯಾರನ್ನಾದರೂ ಸೆರೆಹಿಡಿಯುವಂತಹ ಮಾತಿನ ಗಾಂಭೀರ್ಯ. ವೇದ-ಉಪನಿಷತ್ತುಗಳ ಆಳವಾದ ಅಧ್ಯಯನ ಅವರಲ್ಲಿ ಎಂಥದೋ ಶಕ್ತಿಯನ್ನು ತಂದಿತ್ತು. ಯಾವ ವಿಷಯದ ಬಗೆಗೂ ಅವರ ಅಭಿಪ್ರಾಯದ ನಿಷ್ಕೃಷ್ಟತೆಯನ್ನು ಮತ್ತೊಬ್ಬರು ಪ್ರಶ್ನೆ ಮಾಡುವಂತೆ ಇರುತ್ತಿರಲಿಲ್ಲ. ಅಷ್ಟೇ ಸಾತ್ತ್ವಿಕ, ಸೌಮ್ಯ ಸ್ವಭಾವ. ನಮ್ಮೂರಿನ ಯಾಗಗಳಲ್ಲಿ ಭಾಗವಹಿಸಲು ಬಂದರೆ ಮನೆಮನೆಗೂ ತಾವೇ ಹೋಗಿ ಆ ಮನೆಯವರನ್ನು ಆಶೀರ್ವದಿಸಿ ಅವರು ಕೊಟ್ಟ ಕಾಣಿಕೆಯನ್ನು ತರುತ್ತಿದ್ದರು. ಆ ಕಾಣಿಕೆ ಒಂದು ರೂಪಾಯಿಯಾದರೂ ಸಂತೃಪ್ತಿ, ನೂರು ರೂಪಾಯಿಗಳಾದರೂ ಅದೇ ಸಂತೃಪ್ತಿ ಅವರ ಮುಖದಲ್ಲಿ. ಎಲ್ಲರಿಗೂ ಮನಃಪೂರ್ವಕವಾಗಿ, ''ಯಜ್ಞೇಶ್ವರ ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ'' ಎನ್ನುವ ಆಶೀರ್ವಾದ. ನನಗೆ ಕೆಲವೊಮ್ಮೆ ಅವರ ತಾಳ್ಮೆಗೆ ಆಶ್ಚರ್ಯ ಪಡುವಂತಾಗುತ್ತಿತ್ತು.... ನಾವಾದರೂ ನಮ್ಮ ಮನೆಗೆ ಅವರು ಬಂದರೆ ಸುಮ್ಮನೆ ಇರದೆ, ಅವರಲ್ಲಿ ಮನೆಯ ಆರ್ಥಿಕ ಪರಿಸ್ಥಿತಿ, ಕಷ್ಟನಷ್ಟಗಳು, ಮನೆಯ ಹೆಣ್ಣುಮಕ್ಕಳಿಗೆ ಆಗುತ್ತಿದ್ದ ವಿವಾಹಗಳ ತೊಡಕು ಇವುಗಳನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುತ್ತಿದ್ದೆವು. ಅವರು ಎಲ್ಲವನ್ನೂ ಕೇಳಿ ಸಾವಧಾನದಿಂದ, ''ಯಜ್ಞೇಶ್ವರನ ಕೃಪೆ ಇದ್ದರೆ ಎಲ್ಲವೂ ಸರಿಯಾಗುತ್ತದೆ. ಯೋಚನೆ ಮಾಡಬೇಡಿ'' ಎನ್ನುತ್ತಿದ್ದರು. ಅಂತೂ ಕಷ್ಟಗಳು ಬಂದಹಾಗೆ ಹೋಗುತ್ತಲೂ ಇದ್ದುವು. ಆದರೂ ಅವರ ಆಶೀರ್ವಾದ ಇರಬೇಕು ಎನಿಸುತ್ತಿತ್ತು.

ವರ್ಷಗಳು ಕಳೆದಂತೆ ಅವರ ಪತ್ನಿಗೆ ಆರೋಗ್ಯ ಕೆಟ್ಟಿತು. ಸಂಸಾರದಲ್ಲಿ ನಿರಾಸಕ್ತಿಯಾಯಿತು. ತಮ್ಮ ತಮ್ಮನ ಜತೆ ಕಾಶಿಗೆ ಹೋಗಬೇಕು ಎನ್ನುವ ಮನಸ್ಸಾಯಿತು. ಒಂದು ದಿನ ಅವರು ನನಗೆ ಒಂದು ಕಾಗದವನ್ನು ಬರೆದರು. ''ಅವಧಾನಿಯವರೇ, ನನ್ನ ಹತ್ತಿರ ಒಂದು ಶಿವಲಿಂಗವಿದೆ. ಅದನ್ನು ನಿಮಗೇ ಕೊಡಬೇಕೆಂದಿದ್ದೇನೆ. ಇನ್ನು ನನ್ನಿಂದ ಅಗ್ನಿಹೋತ್ರ - ಯಜ್ಞ - ಯಾಗ ನಡೆಸಲು ಸಾಧ್ಯವಿಲ್ಲ. ನನ್ನ ಪತ್ನಿಗೆ ಆರೋಗ್ಯವಿಲ್ಲ, ಕಾಶಿಗೆ ಹೊರಟಿದ್ದೇನೆ. ತಾವೇ ನಮ್ಮಲ್ಲಿಗೆ ಬಂದರೂ ಸರಿ. ಇಲ್ಲವೇ ನಾನೇ ಅಲ್ಲಿಗೆ ಬಂದಾಗ ಶಿವಲಿಂಗವನ್ನು ತರುತ್ತೇನೆ, ನೀವು ಅದನ್ನು ಪೂಜಿಸಬೇಕು'' ಎಂದಿತ್ತು ವಿಷಯ.

ನಾನಂತೂ ಅವರಲ್ಲಿಗೆ ಹೋಗಲಾಗಲಿಲ್ಲ. ಆರು ತಿಂಗಳು ಕಳೆಯಿತು. ಒಂದು ದಿನ ಅನಿರೀಕ್ಷಿತವಾಗಿ ಅವರೇ ಶಿವಮೊಗ್ಗಕ್ಕೆ ಬಂದು ಘನಪಾಠಿಗಳ ಮನೆಯಲ್ಲಿ ಉಳಿದು, ನಮ್ಮೂರಿಗೆ ನನಗಾಗಿ ಹೇಳಿ ಕಳುಹಿಸಿದರು. ನಾನು ಘನಪಾಠಿಗಳ ಮನೆಗೆ ಹೋದೆ. ದೇವರ ಮನೆಯ ಬಾಗಿಲಲ್ಲಿ ಕುಳಿತು ಅನುಷ್ಠಾನ ಮಾಡುತ್ತಿದ್ದವರು, ಕಿರುನಗೆ ನಕ್ಕು ನನ್ನನ್ನು ಸ್ವಾಗತಿಸಿದರು. ನಾನು ಘನಪಾಠಿಗಳ ಜತೆ ಮಾತನಾಡುತ್ತ ಕುಳಿತಿದ್ದಂತೆ ಒಳಗಿನಿಂದ ಶಿವಲಿಂಗವನ್ನು ತಂದು ವೀಳೆಯದೆಲೆ - ಅಡಿಕೆಯ ಮೇಲಿಟ್ಟು ಇಪ್ಪತ್ತೈದು ಪೈಸೆಯ ಬೆಳ್ಳಿ ಪಾವಲಿಯ ಜತೆಗೆ ತುಳಸೀದಳವನ್ನಿಟ್ಟು ನನ್ನ ಕೈಗಿಟ್ಟರು. ನಮ್ಮ ಮನೆಯಲ್ಲಿ ಅದಾಗಲೇ ಅನೇಕ ಶಿವಲಿಂಗಗಳಿದ್ದರೂ ಅವರೇಕೆ ಅದನ್ನು ನನಗೇ ಕೊಡಬೇಕೆಂದು ಬಯಸಿದರೋ ತಿಳಿಯದ ನಾನು ನನ್ನ ಕೈಗೆ ಬಂದಿದ್ದ ಶಿವಲಿಂಗವನ್ನು ನೋಡುತ್ತಿದ್ದೆ. ದಪ್ಪದಾದ ದ್ರಾಕ್ಷಿಬಣ್ಣದ ಮುಕ್ಕಾಲು ಅಂಗುಲ ಗಾತ್ರವಿದ್ದ ಆ ಶಿವಲಿಂಗ ನಮ್ಮ ಮನೆಗೆ ಬರುವುದಿತ್ತು. ವೀಳೆಯದೆಲೆಯ ಅಡಿಯಲ್ಲಿ ಒಂದು ಕವರೂ ಇದ್ದ ಹಾಗೆ ಭಾಸವಾಯಿತು. ನನ್ನ ಕೈಗೆ ಇಷ್ಟನ್ನು ಇಟ್ಟು ''ಹೇಳಿ ಮಂತ್ರವನ್ನು'' ಎಂದರು. ''ಯಾವ ಮಂತ್ರ?'' ಎಂದೆ ನಾನು.... ''ದೇವಸ್ಯತ್ವಾ..... ಅಗ್ನಯೇ ಹಿರಣ್ಯಂ''

ಪ್ರತಿಗೃಹ್ಣಾಮಿ.... । ಉತ್ತಾನಸ್ತ್ವಾಂಗಿರಸಃ ಪ್ರತಿಗೃಹ್ಣಾತು ॥

ಯಾವ ದಾನವನ್ನು ತೆಗೆದುಕೊಂಡರೂ ಉತ್ತಾನಾಂಗೀರಸ ಋಷಿಯ ಹೆಸರು ಹೇಳಿದರೆ ದೋಷವಿರುವುದಿಲ್ಲ ಎಂದು ಹೇಳುವ ಮಂತ್ರವದು. ಆದರೆ ಸಾವಿರಾರು ರೂಪಾಯಿ, ಹಸು, ಸುವರ್ಣ, ಮನೆ, ಭೂಮಿ, ಹೀಗೆ ದಾನ ಕೊಟ್ಟರೆ ಆ

ಮಂತ್ರ ಹೇಳುವುದು ವಾಡಿಕೆ. ''ಅವಧಾನಿಗಳೇ, ಆ ಕವರಿನ ಒಳಗೆ ಸಾವಿರ ರೂಪಾಯಿಗಳಿವೆ'' ಎಂದರು. ಈಗ ನಾನು ಅವಾಕ್ಕಾದೆ. ''ಅರೆ! ಸಾವಿರ ರೂಪಾಯಿಯೇ? ಅದೇಕೆ ಸೋಮಯಾಜಿಯವರೇ? ನೀವು ಶಿವಲಿಂಗ ಕೊಡುತ್ತೇನೆ ಎಂದಿರಿ. ನಾನು ಬಂದೆ ಅಷ್ಟೆ. ದುಡ್ಡೇಕೆ ಜತೆಗೆ?'' ಎಂದೆ. ''ಇದನ್ನು ಬೇರೆ ಯಾರಿಗಾದರೂ ಕೊಡಿ'' ಎಂದೂ ಹೇಳಿದೆ. ನನ್ನ ಉದ್ದೇಶ ಆ ಹಣವನ್ನು ಘನಪಾಠಿಗಳಿಗೆ ಕೊಡಲಿ ಎಂದಿತ್ತು. ಅದನ್ನೂ ಸೂಚಿಸಿದೆ. ಅದಕ್ಕೆ ಅವರು ಶಾಂತರಾಗಿ ''ಅವರಿಗೂ ಕೊಡುತ್ತೇನೆ. ಇದನ್ನು ನಿಮಗೇ ಕೊಡಬೇಕು ಎಂದು ನಾನು ಸಂಕಲ್ಪ ಮಾಡಿದ್ದೇನೆ. ಶಿವಲಿಂಗದ ಜತೆ ಇದೂ ನಿಮಗೇ!'' ಎಂದು ಹೇಳಿದರು, ಅದು ತೀರ್ಮಾನ ಎನ್ನುವಂತೆ. ನಾನು ಕಣ್ಣಿಗೆ ಒತ್ತಿಕೊಂಡು ಸ್ವೀಕರಿಸಿ ಅವರಿಗೆ ನಮಸ್ಕಾರ ಮಾಡಿದೆ. ಒಂದು ರೂಪಾಯಿ, ಐದು ರೂಪಾಯಿಯನ್ನು ಮನೆಮನೆಗೂ ಹೋಗಿ ಆಶೀರ್ವದಿಸಿ ತಂದವರು ಅದೆಷ್ಟು ನಿರ್ಯೋಚನೆಯಿಂದ, ಯಾವುದೇ ಕಸಿವಿಸಿ ಇಲ್ಲದೆ ಸಾವಿರ ರೂಪಾಯಿಯನ್ನು ಶಿವಲಿಂಗದ ಜತೆ ನನಗೆ ಕೊಟ್ಟರು ಸೋಮಯಾಜಿಗಳು! ನಿಜಕ್ಕೂ ಅವರ ಈ ಉದಾರತೆಗೆ ನಾನು ಸೋಜಿಗಪಟ್ಟೆ! ಹಾಗೆಯೇ ಹೊರಡುವಾಗ ಘನಪಾಠಿಗಳಿಗೂ 'ವೇದನಿಧಿ' ಎಂದು ಸ್ವಲ್ಪ ಹಣ ಕೊಟ್ಟರು. ''ಹುತಂ ಚ ದತ್ತಂ ಚ ತಥೈವ ತಿಷ್ಠತಿ'' ಎಂಬುದೇ ಅವರ ಆಶಯ.

ಶರಣರ ಸಾವನ್ನು ಮರಣದಲ್ಲಿ ಕಾಣಬಹುದು ಎನ್ನುವ ಮಾತಿನಂತೆ, ಸೋಮಯಾಜಿಗಳು ಅನಂತರ ತಮ್ಮ ತಮ್ಮನ ಜತೆ ಕಾಶಿಯಾತ್ರೆ ಮಾಡಿಕೊಂಡು ಬದರಿಗೆ ಹೋದರು. ಬದರಿ ದೇವಸ್ಥಾನದಲ್ಲಿ ಬದರಿನಾರಾಯಣನ ದರ್ಶನ ಮಾಡುತ್ತಲೇ ಹಿಂದ ಹಿಂದಕ್ಕೆ ಬಂದು ದೇವಸ್ಥಾನದ ಹೊಸಿಲು ದಾಟಿ ಹೊರಬಂದ ಕೂಡಲೇ ಪರಮಾತ್ಮನ ಪಾದ ಸೇರಿದರು. ಹೀಗೆ ಸೋಮಯಾಜಿಗಳ ದಿವ್ಯತೇಜಸ್ಸು ಭಗವಂತನಲ್ಲಿ ಲೀನವಾಗಿ ಹೋಯಿತು! ದೇವಸ್ಥಾನ ಅಶುಚಿ ಆಗಬಾರದು. ತಾವು ದೇವರನ್ನು ನೋಡುತ್ತಾ ಅವನಲ್ಲಿ ಲೀನವಾಗಬೇಕು ಎಂದಿರಬಹುದೇ? ಇದು ಅವರ ಅಗ್ನಿಸೇವೆಯ ಫಲವೇ?

❁ ❁ ❁

ಸೋಮಯಾಜಿಯವರ ಧೀಮಂತ ವ್ಯಕ್ತಿತ್ವದ ಬಗ್ಗೆ ಹೇಳುತ್ತಿದ್ದಂತೆ ನನಗೆ ನಮ್ಮ ಶ್ರೀನಿವಾಸ ಅವಧಾನಿಯವರ ಪರಮಪ್ರಿಯ ವ್ಯಕ್ತಿತ್ವ ಈಗ ನೆನಪಿಗೆ ಬರುತ್ತಿದೆ.... ನಮ್ಮೂರಿನ ಶ್ರೀನಿವಾಸ ಅವಧಾನಿಗಳ ಮತ್ತು ವೆಂಕಟೇಶಾವಧಾನಿಗಳ ಪ್ರಿಯಮಿತ್ರ ಶ್ರೀರಾಜಾರಾಮರಾವ್ ಅವರು ವೈದ್ಯಕೀಯ ವಿಜ್ಞಾನ ವಿಷಯದ ಡಾಕ್ಟರು. ಅದರಲ್ಲಿಯೇ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದಿದ್ದರು. ಮೈಸೂರಿನಲ್ಲಿ ಒಂದು ಚಿಕಿತ್ಸಾಲಯವನ್ನೂ ತೆರೆದಿದ್ದರು. ಆದರೆ ಏಕೋ ಅಷ್ಟಾಗಿ ಅದು ಕೂಡಿಬರಲಿಲ್ಲ. ಜೀವನ ನಿರ್ವಹಣೆಗೆ ಕಷ್ಟವಾಗಿ, ಉದ್ಯೋಗದ ಅವಕಾಶವನ್ನರಸಿ ಮುಂಬಯಿಗೆ ಹೊರಟುಹೋದರು. ಅಲ್ಲಿಯೇ ಅವರೂ - ಅವರ ಕುಟುಂಬವೂ ನೆಲೆಸಿದರು. ಅಲ್ಲಿ ಅವರ ವಿದ್ಯಾರ್ಹತೆಗೆ ತಕ್ಕಂತೆ ಕೆಲಸವೂ ಸಿಕ್ಕಿ ಸಾಕಷ್ಟು ಚೆನ್ನಾಗಿ ಹೆಸರೂ ಸಂಪಾದಿಸಿ ಸಂತೃಪ್ತ ಜೀವನ ನಡೆಸಿದ್ದರು. ಅಷ್ಟಾದರೂ ನಮ್ಮ ಊರನ್ನು ಮರೆಯಲಿಲ್ಲ. ಆಗಾಗ ಬಂದು ಹೋಗುತ್ತಿದ್ದ ಅವರನ್ನು ಕಾಣಲು ಶ್ರೀನಿವಾಸ ಅವಧಾನಿಗಳೂ ಹೋಗುವುದಿತ್ತು.

ಹಿಂದೆ ರಾಜಾರಾಮರು ಹೊಸಹಳ್ಳಿಯಲ್ಲಿದ್ದವರು. ಒಮ್ಮೆ ಅವರು ತಮ್ಮ ಮಿತ್ರ ವೆಂಕಟೇಶಾವಧಾನಿಯವರ ಮನೆಗೆ ಬರುವವರಿದ್ದರು. ಎಂದಿನಂತೆ ಮಿತ್ರ ಬರುವ ಸುದ್ದಿ ತಿಳಿದ ಶ್ರೀನಿವಾಸ ಅವಧಾನಿಯವರು ಅವರನ್ನು ನೋಡಲು ಹೊಸಹಳ್ಳಿಯ ವೆಂಕಟೇಶ ಅವಧಾನಿಗಳ ಮನೆಗೆ ಹೋದರು. ಅವರು ವೆಂಕಟೇಶರ ಮನೆಯನ್ನು ಇನ್ನೇನು ಪ್ರವೇಶಿಸಬೇಕು ಎನ್ನುವಾಗ ಅವರ ಮನೆಯ ಮುಂದಿನ ಬಲಭಾಗದ ಗೋಡೆ ಅನಿರೀಕ್ಷಿತವಾಗಿ ಬಿದ್ದುಹೋಯಿತು. ಅದು ಆಗ ತಾನೇ ಅಲ್ಲಿಗೆ ಕಾಲಿಟ್ಟಿದ್ದ ಶ್ರೀನಿವಾಸ ಅವಧಾನಿಯವರ ತಲೆಯ ಮೇಲೇ ಬಿದ್ದಿತು. ಇದು ಎಲ್ಲರಿಗೂ ಅನಿರೀಕ್ಷಿತ. ಏಕೆ ಹಾಗಾಯಿತು ಯಾರಿಗೂ ತಿಳಿಯದು. ವೆಂಕಟೇಶ ಅವಧಾನಿ ಒಳಗೇ ಇದ್ದರು. ರಾಜಾರಾಮರು ಇನ್ನೂ ಅವರ ಮನೆಗೆ ಬಂದಿರಲಿಲ್ಲ. ಅಷ್ಟರಲ್ಲಿ ಈ ಅನಾಹುತ ಆಗಿಹೋಗಿತ್ತು. ಶ್ರೀನಿವಾಸ ಅವಧಾನಿಯವರ ಬಲಗೈ ಪೂರ್ತಿ ಜಖಂ ಆಗಿ, ಮೂಳೆ ಪುಡಿಯಾಗಿ ಉದ್ದದ ಕೈ ಸೇದಿಕೊಂಡಿತ್ತು. ದೊಡ್ಡದಾಗಿ ಪೆಟ್ಟು ತಲೆಗೂ ಬಿದ್ದಿತ್ತು. ಅವರು ಗೋಡೆಯ ಅಡಿಯಲ್ಲಿ ನಿಶ್ಚೇಷ್ಟಿತರಾಗಿ ಬಿದ್ದಿದ್ದರು. ಆಗ ಸಂಜೆಯ ಆರುಗಂಟೆ ಸಮಯ. ಶಿವಮೊಗ್ಗೆಗೆ ಹೋಗಲು ಯಾವುದಾದರೂ ಜಟಕಾ ತರಬೇಕಿತ್ತು. ಯಾರೂ ಕಾರನ್ನು ಕೊಂಡಿರಲಿಲ್ಲ ಆಗ (ಈಗ ನಮ್ಮ ಮತ್ತೂರಿನಲ್ಲೇ ಮೂವತ್ತು ಕಾರುಗಳೂ, ಹೊಸಹಳ್ಳಿಯಲ್ಲಿ ಹದಿನೆಂಟು ಕಾರುಗಳೂ ಇವೆ!) ಶ್ರೀನಿವಾಸ ಅವಧಾನಿಯವರ ಸ್ಥಿತಿ ಚಿಂತಾಜನಕವಾಗಿತ್ತು. ಕಲ್ಲು, ಮಣ್ಣು, ಇಟ್ಟಿಗೆಯನ್ನೆಲ್ಲ ಸರಿಸಿ ಅವರನ್ನು ಮೇಲಕ್ಕೆ ಎತ್ತಿ ಮಲಗಿಸುತ್ತಿರುವಾಗ ರಾಜಾರಾಮರು ಬಂದೇ ಬಂದರು. ಅವರು ಬರುವಾಗ ಬೆಂಗಳೂರಿನಿಂದಲೇ ಟ್ಯಾಕ್ಸಿ ಬಾಡಿಗೆಗೆ ಮಾಡಿಕೊಂಡು ಬಂದಿದ್ದರು. ಆ ದಿನವೇ ಅವರು ವಾಪಸ್ಸು ಬೆಂಗಳೂರಿಗೆ ಹೋಗಿ, ಮುಂದಕ್ಕೆ ಮುಂಬಯಿಗೂ ಹೋಗುವ ಕಾರ್ಯಕ್ರಮವಿತ್ತು. ಆದರೆ ಅವರು ಬಂದು ಕಾರಿನಿಂದಿಳಿದವರೇ ಶ್ರೀನಿವಾಸ ಅವಧಾನಿಯವರ ಸ್ಥಿತಿ ನೋಡಿ

ಗರಬಡಿದವರಂತಾದರು. ತಡಮಾಡಲಿಲ್ಲ, ಪ್ರಜ್ಞಾಹೀನರಾಗಿದ್ದ ತಮ್ಮ ಮಿತ್ರನನ್ನು ಅದೇ ಟ್ಯಾಕ್ಸಿಯಲಿ ಹಾಕಿಕೊಂಡು ಶಿವಮೊಗ್ಗೆಗೆ ಹೊರಟರು. ತಮ್ಮ ಪತ್ನಿಗೆ ತಮ್ಮ ಬೆಂಗಳೂರು ಪ್ರಯಾಣ ಸದ್ಯಕ್ಕೆ ಇಲ್ಲ ಎಂದು ಹೇಳಿಯೇ ಹೋದರು....

ಆ ದಿನ ಭಾನುವಾರ. ಶಿವಮೊಗ್ಗದ ಆಸ್ಪತ್ರೆಯಲ್ಲಿ ಡಾಕ್ಟರು ಇರಲಿಲ್ಲ. ಇದ್ದ ರೋಗಿಗಳನ್ನು ನೋಡಿಕೊಳ್ಳಲು ಡ್ಯೂಟಿ ಡಾಕ್ಟರು ಮಾತ್ರ ಇದ್ದರು. ರಾಜಾರಾಮರು ಶ್ರೀನಿವಾಸ ಅವಧಾನಿಗಳನ್ನು ಆಸ್ಪತ್ರೆಗೆ ಸೇರಿಸಿದರು. ಹಿರಿಯ ಡಾಕ್ಟರು ಇಲ್ಲದ್ದು ಕಂಡು ತಾವೇ ಇಂಜಕ್ಷನ್, ಷಧಿ ಬರೆದು ''ಅದನ್ನು ಅವಧಾನಿಯವರಿಗೆ ಕೊಡಿ'' ಎಂದು ಹೇಳಿದರು. ಡ್ಯೂಟಿ ಡಾಕ್ಟರು ಅದಕ್ಕೆ ತಗಾದೆ ಮಾಡಿದಾಗ ತಮ್ಮ ವಿಸಿಟಿಂಗ್ ಕಾರ್ಡನ್ನು ತೋರಿಸಿದ ಅವರು, ''ನನಗೆ ಗೊತ್ತಿದೆ ಏನು ಮಾಡಬೇಕು ಎಂದು. ನಾನೂ ಡಾಕ್ಟರೇ. ಈಗ ನೀವು ಈ ಇಂಜಕ್ಷನ್ ಇವರಿಗೆ ಕೊಡದಿದ್ದರೆ ಇವರ ಪ್ರಾಣ ಉಳಿಯುವುದಿಲ್ಲ. ನಾಳೆ ನಿಮ್ಮ ಡಾಕ್ಟರು ಬರುವವರೆಗೆ ಇವರು ಜೀವದಿಂದ ಇರಬೇಕೋ ಬೇಡವೋ? ಇವರು ಇದ್ದರೆ ತಾನೆ ನಿಮ್ಮ ಡಾಕ್ಟರು ಬಂದು ಷಧಿ ಕೊಡುವುದು?'' ಎಂದು ಸ್ವಲ್ಪ ಗಡುಸಾಗಿಯೇ ಹೇಳಿದರು. ಅವರ ವಿಸಿಟಿಂಗ್ ಕಾರ್ಡು ನೋಡಿ, ಮರುಮಾತಾಡದೇ ಆ ಇಂಜಕ್ಷನ್ ಕೊಟ್ಟರು ಡ್ಯೂಟಿ ಡಾಕ್ಟರು. ಶ್ರೀನಿವಾಸ ಅವಧಾನಿಯವರದು ಆಜಾನುಬಾಹು ದೇಹ. ಆ ದಿನ ಗೋಡೆಯ ಅಡಿಗೆ ಸಿಕ್ಕಿ ನಲುಗಿ ಹೋಗಿದ್ದ ಅವರು ಮಲಗಿದ್ದುದನ್ನು ನೋಡಿದಾಗ ಯಾರಿಗಾದರೂ ಕರುಳು ಕತ್ತರಿಸಿದಂತಾಗುತ್ತಿತ್ತು.....

ಅಂತೂ ಅವರ ಅದೃಷ್ಟ, ದೈವಕೃಪೆ, ರಾಜಾರಾಮರು ಶಿವಮೊಗ್ಗದಲ್ಲೇ ಉಳಿದು ಮಿತ್ರನ ಪಕ್ಕದಲ್ಲೇ ಇದ್ದು ಅವರ ಆರೈಕೆ, ಉಪಚಾರ ಮಾಡಿದರು.

ಮಾರನೆಯ ದಿನದವರೆಗೆ ಸುಮಾರಾಗಿ ಚೇತರಿಸಿಕೊಂಡ ಶ್ರೀ ಅವಧಾನಿಯವರು ಪ್ರಜ್ಞೆ ಮರಳಿ ಮಾತಾಡಿದರು. ಪಕ್ಕದಲ್ಲಿದ್ದ ಮಿತ್ರ ರಾಜಾರಾಮರಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ''ಈ ಸಾರಿ ನಿನ್ನನ್ನು ನೋಡುವುದಕ್ಕೆ ನಾನು ಆತುರದಿಂದ ಬಂದದ್ದು ಹೌದಾದರೂ, ಒಂದು ರೀತಿಯಲ್ಲಿ ನಿನಗೆ ಚಿಕಿತ್ಸೆ ಮಾಡಿಸಲೆಂದೇ ಬಂದ ಹಾಗಾಯಿತು'' ಎಂದರು ರಾಜಾರಾಮರು ನಗುತ್ತ. ಅದಕ್ಕೆ ಶ್ರೀ ಅವಧಾನಿಯವರು ಕೃತಜ್ಞತೆ ತುಂಬಿದ ಧ್ವನಿಯಲ್ಲಿ, ''ಸದ್ಯ, ನೀನು ಸಮಯಕ್ಕೆ ಸರಿಯಾಗಿ ಬಂದು ಮಾಡಿದೆಯಲ್ಲ. ನೀನು ಬರದಿದ್ದರೆ ಬಹುಶಃ ನಾನು ಉಳಿಯುತ್ತಿದ್ದೆನೋ ಇಲ್ಲವೋ. ನಾನು ಉಳಿಯಲಿ ಎಂದೇ ದೇವರು ನಿನ್ನನ್ನು ಕಳುಹಿಸಿದನೋ ಏನೋ...'' ಎಂದರು... ನಿಜ... ಹಳ್ಳಿಯಲ್ಲಿ ಎಲ್ಲ ರೀತಿಯ ಅನುಕೂಲಗಳೂ ಇರುವುದಿಲ್ಲ. ಯಾವ ಅನುಕೂಲ ಕಲ್ಪಿಸಿಕೊಳ್ಳಬೇಕಾದರೂ ಸಾಕಷ್ಟು ಸಮಯ ಹಿಡಿಯುತ್ತದೆ. ಆ ದಿನ ಜಟಕಾ ಸಿಗದಿರಬಹುದಿತ್ತು. ಪ್ರಜ್ಞಾಶೂನ್ಯರಾಗಿದ್ದ ಶ್ರೀನಿವಾಸ ಅವಧಾನಿಯವರು ಇನ್ನು ಉಳಿಯುವ ಸಾಧ್ಯತೆ ಇಲ್ಲ ಎಂದು ಹಳ್ಳಿಯವರಾದ ನಾವೇ ತೀರ್ಮಾನಿಸಿ ಸುಮ್ಮನಾಗಿ ಬಿಡಬಹುದಿತ್ತು. ಆದಿನ ರಾಜಾರಾಮರು ಮಿತ್ರನ ನಾಡಿ ಹಿಡಿದು ನೋಡಿ, ಜೀವವಿದೆ ಎಂದು ದೃಢಪಡಿಸಿಕೊಂಡು ಹೊರಟದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ! ಅಥವಾ ಶಿವಮೊಗ್ಗೆಗೆ ಅವಧಾನಿಯವರನ್ನು ಸಾಗಿಸಿದರೂ ಡಾಕ್ಟರಿಲ್ಲ ಎಂದು ಹೇಳಿ, ಡ್ಯೂಟಿ ಡಾಕ್ಟರೂ ಸರಿಯಾದ ಚಿಕಿತ್ಸೆ ಮಾಡದೆ ಹೋಗಿದ್ದರೆ ನಾವೇನೂ ಮಾಡಲಾಗುತ್ತಿರಲಿಲ್ಲ. ಅಂದು ರಾಜಾರಾಮರು ಗಡುಸಾಗಿ ಆತ್ಮವಿಶ್ವಾಸದಿಂದ 'ನನಗೆ ಗೊತ್ತಿದೆ ಏನು ಚಿಕಿತ್ಸೆ ಎಂದು' ಎಂದು ಹೇಳಿದಂತೆ ನಮಗೆ ಯಾರಿಗೂ ಹೇಳುವುದು ಆಗುತ್ತಿರಲಿಲ್ಲ. ಇದನ್ನೆಲ್ಲ ಅವಲೋಕಿಸಿದಾಗ ಶ್ರೀ ಅವಧಾನಿಯವರ ಅದೃಷ್ಟದೈವ ರಾಜಾರಾಮರ ರೂಪದಲ್ಲಿ ಬಂದು ಅವರ ಪ್ರಾಣವನ್ನು ಕಾಪಾಡಿದ್ದಿತು ಎಂದೇ ಹೇಳಬೇಕಾಗುತ್ತದೆ. ದೈವದ ಸಹಾಯದ ಮೇಲಿನ ನಮ್ಮ ನಂಬಿಕೆಯನ್ನು ಇಂತಹ ಪ್ರಸಂಗಗಳು ನಿಜಕ್ಕೂ ಬಲಪಡಿಸುತ್ತವೆ!

ಅಂತೂ ಶ್ರೀ ಅವಧಾನಿಯವರು ಗುಣಮುಖರಾಗಿ ಊರಿಗೆ ಹಿಂದಿರುಗಿದರು. ಎಂದಿನಂತೆ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡರು... ತೆಪ್ಪದ ಮೇಲೆ ನಿಂತು 'ಗಳು' ಹಿಡಿದು ನೀರನ್ನು ತಳ್ಳಿ ತೆಪ್ಪ ನಡೆಸುವಷ್ಟು ಶಕ್ತಿಯನ್ನು ಅವರ ಬಲಗೈ ಕಾಲಕ್ರಮೇಣ ಪಡೆಯಿತು!

❁ ❁ ❁

ಶ್ರೀನಿವಾಸ ಅವಧಾನಿಯವರು ನಮ್ಮ ಊರಿನ ಬಹಳ ಸಂಭಾವಿತರಲ್ಲಿ ಒಬ್ಬರು; ಬುದ್ಧಿವಂತರು, ತಾಳ್ಮೆ ಉಳ್ಳವರು, ಉದಾರಿಗಳು. ಅವರು ಒಮ್ಮೆ ತಮ್ಮ ಸೋದರಮಾವ (ತಾಯಿಯ ತಮ್ಮ) ಕಾಶಿಮಾಯರನ್ನೂ, ಅವರ ತಾಯಿಯನ್ನೂ, ಕಾಶಿಯಾತ್ರೆಗೆ ಕಳುಹಿಸಿ ಕೊಡಲೆಂದು ಸ್ವಲ್ಪ ಹಣ ಸಂಗ್ರಹಿಸಿದರು. 'ಕಾಶಿಮಾಯ ತುಂಬ ಬಡವರು. ಆದ್ದರಿಂದ ಅವರ ಹೆಂಡತಿ ಬೇಡ. ಛಾರ್ಜಿಗೂ ಕಷ್ಟವಾಗುತ್ತದೆ, ತಾಯಿ ಮತ್ತು ಮಗ ಮಾತ್ರಾ ಕಾಶಿಗೆ ಹೋಗಿಬರಲಿ' ಎಂದು ಶ್ರೀನಿವಾಸ ಅವಧಾನಿಗಳು; 'ಅಷ್ಟು ಬಡತನದಲ್ಲಿ ಕಾಶಿಯಾತ್ರೆ ಮಾಡುವ ಅಗತ್ಯವೇನು?' ಎನ್ನುವ ನಿಲುವು ಶ್ರೀ ಅವಧಾನಿಯವರ ತಂದೆ ತಿಮ್ಮಪ್ಪ ಅವಧಾನಿಯವರದು. ಅವರು ಅದನ್ನು ಆಡಿಯೂ ತೋರಿಸಿದರು. ಕಾಶಿಮಾಯನ ಪತ್ನಿಗೆ ಆಗಾಗ ಆರೋಗ್ಯ

ಕೆಡುತ್ತಿತ್ತು. ಅವರು ಹೊರಡುವ ಸ್ಥಿತಿಯಲ್ಲಿ ಇರಲಿಲ್ಲ. 'ಅವರನ್ನು ಕರೆದುಕೊಂಡು ಹೋಗಲೇಬೇಕೇ?' ಎಂದು ಶ್ರೀನಿವಾಸ ಅವಧಾನಿಗಳು ಕೇಳಿದರು. 'ಹೌದು. ಒಬ್ಬರೇ ಯಾತ್ರೆ ಮಾಡುವುದು ಶಾಸ್ತ್ರ ದೃಷ್ಟಿಯಿಂದ ಸರಿಯಲ್ಲ' ಎಂದು ಕಾರಣವನ್ನೂ ಕೊಟ್ಟರು ತಂದೆ ತಿಮ್ಮಪ್ಪಾವಧಾನಿಗಳು. ಆದರೆ ಸೋದರಮಾವನ ಮೇಲಿನ ಕಕ್ಕುಲತೆ ಶ್ರೀ ಅವಧಾನಿಯವರಿಗೆ. ಹಣವೂ ಸಂಗ್ರಹವಾಗಿದೆ, ಮತ್ತೇಕೆ ತಡೆಹಾಕುವುದು ಎಂದು ಅವರ ಯೋಚನೆ. ಬುದ್ಧಿಶಾಲಿಗಳಾಗಿದ್ದ ಶ್ರೀ ಅವಧಾನಿಯವರು ತಮ್ಮ ತಂದೆ ತಿಮ್ಮಪ್ಪ ಅವಧಾನಿಯವರು ಅವರ ತಂದೆಯ ಜತೆ ಅಂದರೆ ತಮ್ಮಜ್ಜನ ಜತೆ ಕಾಶಿಯಾತ್ರೆ ಮಾಡಿದ ಸಂದರ್ಭದಲ್ಲಿ ತನ್ನ ತಾಯಿಯನ್ನು ಕರೆದುಕೊಂಡು ಹೋಗಿರಲಿಲ್ಲ ಎನ್ನುವುದನ್ನು ತಿಳಿದುಕೊಂಡಿದ್ದರು. ಈಗ ಹೀಗೆ ಮಾವನನ್ನು ಕಾಶಿಗೆ ಒಬ್ಬನೇ ಹೋಗಕೂಡದು ಎಂದು ಅಡ್ಡಿ ಮಾಡುವ ಅಪ್ಪ, ಹಿಂದೆ ಅಮ್ಮನನ್ನು ಬಿಟ್ಟು ತಾವೂ ಒಬ್ಬರೇ ಹೋಗಿರಲಿಲ್ಲವೇ ಎನ್ನುವ ತರ್ಕ ಮಾಡಿದ ಶ್ರೀ ಅವಧಾನಿಯವರು, ಆ ದಿನ ಮಧ್ಯಾಹ್ನ ತಮ್ಮ ಅತ್ತೆಯ (ತಿಮ್ಮಪ್ಪ ಅವಧಾನಿಯವರ ತಂಗಿ. ಅವರು ಬಾಲವಿಧವೆ. ಅವರ ಗಂಡ ಪ್ಲೇಗು ಮಾರಿಗೆ ತುತ್ತಾಗಿ ಹೋಗಿದ್ದರು. ಹೆಸರು ತಾಚಮ್ಮ ಎಂದು. ಮನೆಯಲ್ಲಿ ಸಾಕಷ್ಟು ಜವಾಬ್ದಾರಿಯಿಂದ ಕೆಲಸಗಳನ್ನು ನಿರ್ವಹಿಸುತ್ತಿದ್ದವರು) ಹತ್ತಿರ, ಅಲ್ಲೇ ಹೊರಗೆ ಕುಳಿತಿದ್ದ ತಂದೆಗೆ ಕೇಳುವಂತೆ ''ಅತ್ತೆ, ಅಪ್ಪನೂ ಕಾಶಿಯಾತ್ರೆ ಮಾಡಿದಾಗ ಅಮ್ಮನನ್ನು ಕರೆದುಕೊಂಡು ಹೋಗಿರಲಿಲ್ಲ ಅನ್ನಿಸುತ್ತದೆ... ಅಲ್ಲವೇ?'' ಎಂದರು ಮೆಲ್ಲಗೆ.... ಆಗೆಲ್ಲ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳಲ್ಲಿ ತಂದೆ-ಮಕ್ಕಳ ಸಂಬಂಧವಿದ್ದುದೇ ಹಾಗೆ. ಒಳಗೆ ಅದೆಷ್ಟೇ ಪ್ರೀತಿ ಇದ್ದರೂ ಹೊರಗೆ ತೋರಗೊಡುತ್ತಿರಲಿಲ್ಲ ದೊಡ್ಡವರು. ಮಕ್ಕಳು ಸಹ, ಅದೆಷ್ಟೇ ಪ್ರೀತಿ ಇದ್ದರೂ ತಂದೆಯ ಜತೆ ಸಲಿಗೆಯಿಂದ ಮಾತು-ಕತೆಯಾಡುವುದೂ ಇರುತ್ತಿರಲಿಲ್ಲ. ತಾಯಿಯ ಬಳಿ ಮಾತ್ರ ಇದ್ದುದರಲ್ಲಿ ಸ್ವಲ್ಪ ಸಲಿಗೆಯೇ ವಿನಾ ತಂದೆ ಎಂದರೆ ಗೌರವ, ಭಯ, ಭಕ್ತಿ. ನೇರವಾಗಿ ಮಾತನಾಡುವುದಿರಲಿ, ಜತೆಯಲ್ಲಿ ಊಟಕ್ಕೆ ಸಹ ಕುಳಿತುಕೊಳ್ಳುವುದಿರಲಿಲ್ಲ. ಮೊದಲು ತಂದೆಯದು ಅನಂತರ ಮಕ್ಕಳದು, ಹಾಗೇ ನಡೆಯುತ್ತಿದ್ದುದು. ಅಷ್ಟು ಸಾಧುಸ್ವಭಾವದ ತರುಣ ಶ್ರೀನಿವಾಸ ಅವಧಾನಿಯವರು ತಂದೆಯನ್ನು ಆಕ್ಷೇಪಣೆ ಮಾಡಲು ಆ ಮಾತು ಹೇಳಿರಲಿಲ್ಲ. ಹೇಗಾದರೂ ಸೋದರಮಾವ ಕಾಶಿಗೆ ಹೋಗುವಂತಾಗಲಿ ಎನ್ನುವ ಕಾಳಜಿಯಿಂದ ಹೇಳಿದುದು ಅಷ್ಟೆ. ಆದರೆ ಹಾಗೆ ಹೇಳಿದ ಮಾತಿನಲ್ಲಿ, 'ನೀವು ನಿಮ್ಮ ಹೆಂಡತಿಯನ್ನು ಬಿಟ್ಟು ಹೋಗಿರಲಿಲ್ಲವೇ? ಈಗ ಅವರಿಗೇಕೆ ಅಡ್ಡಿ ಮಾಡುತ್ತೀರಿ?' ಎನ್ನುವ ಭಾವ ಅನೈಚ್ಛಿಕವಾಗಿಯಾದರೂ ಇಣುಕು ಹಾಕಿತ್ತು. ಹೊರಗೆ ಕುಳಿತು ಮಗನು ಆಡಿದ ಮೆಲುದನಿಯ ಮಾತನ್ನು ಕೇಳಿಸಿಕೊಂಡ ತಿಮ್ಮಪ್ಪ ಅವಧಾನಿ ಕೆಂಡಮಂಡಲರಾದರು. ಮಗನಿಗೆ ಕೇಳುವಂತೆ ದೊಡ್ಡ ಧ್ವನಿಯಲ್ಲಿ, ''ಹೌದು.... ನಾನು ಒಬ್ಬನೇ ಹೋಗಿದ್ದೆ. ಅದೂ ನಮ್ಮಪ್ಪನ ಜತೆಗೆ ಕಾವಲಾಗಿ ಹೋಗಿದ್ದುದು, ಕಾಶಿಯಾತ್ರೆ ಮಾಡಬೇಕೆಂದು ಹೋದದ್ದಲ್ಲ. ಅಲ್ಲದೆ ಆಗ ನಿಮ್ಮಮ್ಮ ಇನ್ನೂ ನಮ್ಮ ಮನೆಗೇ ಬಂದಿರಲಿಲ್ಲ. ಆಗ ಅವಳಿಗಿನ್ನೂ ಎಂಟುವರ್ಷ. ನಾನಲ್ಲ ಯಾತ್ರೆ ಮಾಡಿದ್ದು, ನಮ್ಮಪ್ಪ...'' ಎಂದರು, 'ನನ್ನನ್ನೇ ಪ್ರಶ್ನೆ ಮಾಡುತ್ತೀಯಾ?' ಎನ್ನುವವರಂತೆ. ಪೆಚ್ಚಾದ ಶ್ರೀನಿವಾಸ ಅವಧಾನಿಯವರು ಸುಮ್ಮನಾದರು. ಆಚೆ ನಡೆದರು. ಅನಂತರ ಊಟಕ್ಕೆ ಕುಳಿತ ತಿಮ್ಮಪ್ಪ ಅವಧಾನಿಯವರು ಸರಿಯಾಗಿ ಊಟ ಮಾಡದಿದ್ದುದನ್ನು ಗಮನಿಸಿದ ತಾಚಮ್ಮನವರು ಅವರಿಗೆ ಊಟ ಬಡಿಸುತ್ತಿದ್ದಂತೆ, ''ಯಾಕೆ ಅಣ್ಣಯ್ಯ, ಊಟವನ್ನೇ ಮಾಡುತ್ತಿಲ್ಲ ನೀನು?'' ಎಂದು ಪ್ರೀತಿಯಿಂದ ಪ್ರಶ್ನೆ ಮಾಡಿದಾಗ, ತಿಮ್ಮಪ್ಪ ಅವಧಾನಿಯವರ ಕಣ್ಣಿನಿಂದ ನೀರು ತೊಟ್ಟಿಕ್ಕಿತು. ''ಇನ್ನು ನಾವು ಇರಬಾರದು.... ಹುಡುಗರೆಲ್ಲ ಬುದ್ಧಿವಂತರಾದರು. ಯಾತಕ್ಕೆ ಇರಬೇಕು?'' ಎಂದರು. ತಾಚಮ್ಮನಿಗೆ, ಅಣ್ಣನಿಗೆ ಏನೋ ನೋವಾಗಿದೆ ಎಂದು ದೃಢವಾಯಿತು. ''ಯಾಕಪ್ಪ, ಏನಾಯಿತೋ'' ಎಂದಾಗ, ''ಇಲ್ಲ... ಇಲ್ಲ.... ಇನ್ನು ನಾವು ಇರಬಾರದು, ಹುಡುಗರು ದೊಡ್ಡವರಾದರು'' ಎಂದರು ಮತ್ತೆ ತಿಮ್ಮಪ್ಪ ಅವಧಾನಿಗಳು, 'ಹುಡುಗರು ನಮಗೇ ಎದುರು ಉತ್ತರ ಕೊಡುವ ಮಟ್ಟದಲ್ಲಿದ್ದಾರೆ' ಎನ್ನುವಂತೆ. ಅಂತೂ ಊಟ ಮಾಡದೆ ಕನಲಿದ ಮನಸ್ಸಿನಿಂದ ಹೊರಟ ತಿಮ್ಮಪ್ಪ ಅವಧಾನಿಗಳು ಲಕ್ಷ್ಮೀನಾರಾಯಣ ದೇವಸ್ಥಾನದ ಜಗುಲಿಯ ಮೇಲೆ ಇಟ್ಟಿಗೆಯೊಂದನ್ನು ತಲೆಗಿರಿಸಿಕೊಂಡು, ತಮ್ಮ ತೆಳುವಾದ ಅಂಗವಸ್ತ್ರವನ್ನು ಮೈತುಂಬ ಹೊದ್ದು ಮಲಗಿದರು. ಇತ್ತ ಮನೆಗೆ ಬಂದ ಶ್ರೀನಿವಾಸ ಅವಧಾನಿಯವರು ಊಟಕ್ಕೆ ಕುಳಿತಾಗ ಅತ್ತೆ ತಾಚಮ್ಮ ,''ಅಣ್ಣಯ್ಯ, ಯಾಕಪ್ಪ, ಏನು ಹೇಳಿದೆಯೋ ನೀನು? ಅಪ್ಪ ಈ ದಿನ ಸರಿಯಾಗಿ ಊಟವನ್ನೇ ಮಾಡಲಿಲ್ಲವಲ್ಲ? ಸುಮ್ಮನೆ ಕಣ್ಣೀರಿಟ್ಟರಲ್ಲ.... ಯಾಕೆ? ಏನಾದರೂ ಹೇಳಿದ್ದರೆ 'ತಪ್ಪಾಯ್ತು' ಅನ್ನು. ಅವರಿಗೆ ಸಮಾಧಾನವಾಗುತ್ತದೆ'' ಎಂದರು. ತಾವು ಹೇಳಿದ ಮಾತು ತಂದೆಯ ಮನಸ್ಸಿನ ಮೇಲೆ ಇಷ್ಟು ಪರಿಣಾಮ ಮಾಡುತ್ತದೆ ಎಂದು ಶ್ರೀನಿವಾಸ ಅವಧಾನಿಯವರಿಗೂ ತಿಳಿದಿರಲಿಲ್ಲ. ಅವರಿಗೂ ತುಂಬ ನೋವಾಯಿತು. ತಾವೂ ಊಟ ಮಾಡದೇ ನೇರವಾಗಿ ದೇವಸ್ಥಾನಕ್ಕೆ ಹೋಗಿ ವಸ್ತ್ರಮುಚ್ಚಿದ್ದ ತಂದೆಯ ಕಾಲುಗಳನ್ನು ಮೆಲ್ಲಗೆ ಒತ್ತಿ ಹಿಡಿದುಕೊಂಡರು. ಅವರ ಕಣ್ಣಿನಲ್ಲೂ ನೀರಿಳಿದು, ಆ ತೆಳುವಸ್ತ್ರ ಒದ್ದೆಯಾಯಿತು. ಯಾರೋ

ಬಂದು ತಮ್ಮ ಕಾಲು ಮುಟ್ಟಿದ್ದು ತಿಳಿದು ಎದ್ದ ತಿಮ್ಮಪ್ಪ ಅವಧಾನಿಯವರು ಎದುರಿಗಿದ್ದ ತಮ್ಮ ಮಗನನ್ನು ಕಂಡರು. ಕಣ್ಣಿಂದ ನೀರು ಇನ್ನೂ ಇಳಿಯುತ್ತಿದೆ. ಕಾಲುಗಳನ್ನು ಹಿಡಿದಿದ್ದ ಕೈ ಅಲುಗಲಿಲ್ಲ. ತಲೆತಗ್ಗಿಸಿ ಗದ್ಗದ ಕಂಠದಿಂದ ''ತಪ್ಪಾಯಿತು...'' ಎಂದಷ್ಟೇ ಹೇಳಿದರು ಶ್ರೀನಿವಾಸ ಅವಧಾನಿಯವರು. ಮಗನ ಮನಸ್ಸಿನ ನೋವೂ ತಂದೆಗೆ ಅರ್ಥವಾಗಿತ್ತು. ಜತೆಗೆ ಮಗನಿಗೂ ತನ್ನ ನೋವು ಅರ್ಥವಾಯಿತಲ್ಲ ಎನ್ನುವ ಸಂತೋಷ ಸಹ. ''ಆಯ್ತಲ್ಲ...... ಬಿಡು.... ಆಯ್ತಲ್ಲ....ವಿಚಾರ ತಿಳಿಯದೇ ಮಾತನಾಡಬಾರದು'' ಎಂದರು, 'ಕ್ಷಮಿಸಿದ್ದೇನೆ, ಹೋಗು' ಎನ್ನುವಂತೆ! ಆದರೂ 'ಕ್ಷಮಿಸಿದ್ದೇನೆ' ಎಂದು ಬಾಯಿಬಿಟ್ಟು ಹೇಳದ ಬಿಗುಮಾನ ಆ ಕಾಲದಲ್ಲಿ ! ತಂದೆ-ಮಕ್ಕಳ ಮಧ್ಯೆ ವಿಶ್ವಾಸ ಹೆಚ್ಚಿದ್ದಿತು.

ಹಳ್ಳಿಯಲ್ಲಿನ ವೈದಿಕ ಮನೆತನದ ತಂದೆ ಮಕ್ಕಳ ಸಂಬಂಧದ ರೀತಿಯೇ ಅದು. ಅದು ಸಾಮಾನ್ಯವಾಗಿ ಹಳೆ ತಲೆಗಳಲ್ಲಿ ಇನ್ನೂ ಬದಲಾಗಿರಲಿಲ್ಲ ಎನ್ನುವುದಕ್ಕೆ ನಂಜನಗೂಡಿನ ಬಿ.ವಿ. ಪಂಡಿತರು ಹಾಗೂ ಅವರ ಮಗನ ನಡುವೆ ನಡೆದ ಮಿತವಾದ ಆದರೆ ಭಾವಾರ್ಥಪೂರ್ಣ ಮಾತುಕತೆ ಮತ್ತೊಂದು ನಿದರ್ಶನ! ಅದನ್ನು ಈಗಾಗಲೇ ತಿಳಿಸಿದ್ದೇನೆ.

ಅಂತೂ ಇಂತೂ ಶ್ರೀನಿವಾಸ ಅವಧಾನಿಯವರು ತಮ್ಮ ಸೋದರಮಾವ ಕಾಶಿಮಾಯನನ್ನು ಅವರ ತಾಯಿಯ ಜತೆಗೆ (ಅಂದರೆ ತಮ್ಮ ಅಜ್ಜಿಯ ಜತೆಗೆ) ಕಾಶಿಗೆ ಕಳುಹಿಸಿದರು. ಕಾಶಿಮಾಯ ಕಾಶಿಯಲ್ಲಿ ಸಣ್ಣ ಬಾಡಿಗೆ ಮನೆಯನ್ನು ಹಿಡಿದು ತಾಯಿಯ ಜತೆ ಸುಮಾರು ಎರಡು ವರ್ಷಗಳ ಕಾಲ ಇದ್ದರು. ಅಲ್ಲಿ ವೇದದ ಪದ, ಕ್ರಮ ಎಲ್ಲವನ್ನೂ ಕಲಿತರು. ಬಹಳ ಮೇಧಾಶಕ್ತಿ ಇದ್ದ ತಮಿಳಿನ ಜನರೂ ಕಾಶಿಯಲ್ಲಿ ಇದ್ದರು. ಕಾಶಿಮಾಯ ಅವರಲ್ಲಿ ಬಹಳ ಜನರನ್ನು ಪರಿಚಯ ಮಾಡಿಕೊಂಡರು. ಜೀವನ ಹೆಚ್ಚಿನ ಬದಲಾವಣೆ ಇಲ್ಲದೆ ಸಾಗುತ್ತಿದ್ದಿತು. ಏನೇ ಆದರೂ ಹಿಂದಿನ ಕಾಲದವರ ಯೋಚನಾ ಧಾಟಿಯೇ ಒಂದು ರೀತಿ. ಅಲ್ಲಿ ಗಂಡ - ಹೆಂಡತಿ - ಮಕ್ಕಳು - ಯಾರೇ ಆದರೂ ಆತ್ಮಾಭಿಮಾನ ಎನ್ನುವುದೂ ಕೊಂಚ ಮುಂದಾಗಿಯೇ ಇರುತ್ತಿದ್ದುದು. ಅಂಥದೇ ಸ್ವಭಾವದ ವ್ಯಕ್ತಿಗಳಲ್ಲಿ ಕಾಶೀಮಾಯನ ತಾಯಿಯೂ ಒಬ್ಬರು.

ಒಮ್ಮೆ ಮನೆಯಲ್ಲಿ ಅಕ್ಕಿ ಮುಗಿದಿದ್ದುದನ್ನು ಅಮ್ಮ ಕಾಶಿಮಾಯನಿಗೆ ಹೇಳಿದರು. ''ಅಣ್ಣಯ್ಯಾ, ಅಕ್ಕಿ ಮುಗಿದಿದೆ. ನೀನು ಬರುವಾಗ ತರುತ್ತೀಯಾ?'' ಎಂದು ಕೇಳಿದರು. ''ಹ್ಞೂಂ ಸರಿ'' ಎಂದು ಮನೆಯಿಂದಾಚೆ ಹೊರಟ ಕಾಶಿಮಾಯ ಉದಕ ಶಾಂತಿಗೆಂದು ಕರೆದಿದ್ದ ಒಬ್ಬರ ಮನೆಗೆ ಹೋದರು. ಅಲ್ಲಿನ ಕಾರ್ಯಕ್ರಮದಲ್ಲಿ ತೊಡಗಿಕೊಂಡ ಅವರಿಗೆ ತಾಯಿ ಹೇಳಿದ ಅಕ್ಕಿಯ ವಿಷಯ ಸಂಪೂರ್ಣವಾಗಿ ಮರೆಯಿತು. ಮಧ್ಯಾಹ್ನ ಅಲ್ಲೇ ಊಟವೂ ಆಯಿತು. ದಕ್ಷಿಣೆಯೂ ಸಿಕ್ಕಿತು. ಮಧ್ಯಾಹ್ನ ಮೂರಕ್ಕೆ ಕಾಶಿಮಾಯ ಮನೆಗೆ ವಾಪಸಾದರು. ಅಮ್ಮ ಅಲ್ಲೇ ಚಾಪೆ ಹಾಸಿಕೊಂಡು ಮಲಗಿದ್ದರು. ''ಅಮ್ಮ, ಊಟ ಆಯ್ತೆ?'' ಎಂದರು. ತಾಯಿ ''ಹ್ಞೂಂ'' ಎಂದರು. ಮಾಯ ಪಕ್ಕದ ಕೋಣೆಗೆ ಹೋಗಿ ಅಧ್ಯಯನಕ್ಕೆ ಕುಳಿತರು. ಸ್ವಲ್ಪ ಹೊತ್ತಾದ ಅನಂತರ ಪಕ್ಕದ ಮನೆಯಲ್ಲೇ ಇದ್ದ ಅಜ್ಜಿ ಬಂದು, ''ಲಕ್ಷ್ಮೀರಮಣ (ಕಾಶಿಮಾಯನ ಹೆಸರು ಅದು) ಅಕ್ಕಿ ತಂದೆಯಾ!'' ಎಂದರು. ಕಾಶಿಮಾಯನಿಗೆ ಪೆಚ್ಚಾಯಿತು. ''ಓ... ಮರೆತೇಬಿಟ್ಟೆ... ಇಲ್ಲ'' ಎಂದರು. ''ನೋಡು, ಅಮ್ಮ ಪೆಚ್ಚಾಗಿದ್ದಾರೆ. ಊಟ ಮಾಡಿದಂತೆ ಕಾಣಿಸುತ್ತಿಲ್ಲ. ಸ್ವಲ್ಪ ವಿಚಾರಿಸು'' ಎಂದವರೇ ತಮ್ಮ ಮನೆಗೆ ವಾಪಸಾದರು, ಸೂಕ್ಷ್ಮವಾಗಿ ಗಮನಿಸಿದ್ದ ಅಜ್ಜಿ. ಕಾಶೀಮಾಯನಿಗೆ ತಮ್ಮ ಮರೆವಿನಿಂದಾಗಿ ಅಮ್ಮ ಹಾಗೆ ಉಪವಾಸ ಮಾಡಿದುದು ನೋವಾಗಿದ್ದಿತು! ''ಅಮ್ಮ, ಯಾಕೆ ಊಟ ಆಗಿಲ್ಲ ಅಂತ ಹೇಳಲಿಲ್ಲ?'' ಎಂದರು, ಸ್ವಲ್ಪ ಆಕ್ಷೇಪಿಸುವ ಧ್ವನಿಯಲ್ಲಿ. ಅಮ್ಮ ಮೆಲ್ಲನೆ, ''ಅಲ್ಲವೋ.... ಗಂಗಾತೀರಕ್ಕೆ ಬಂದ ಮೇಲೆ ಯಾರಾದರೂ ಉಪವಾಸ ಇರುತ್ತಾರೆಯೇ? ಗಂಗೆಯನ್ನೇ ಕುಡಿದೆ, ಹೊಟ್ಟೆ ತುಂಬಿತು!.... ನಾನು ಯಾವುದನ್ನೂ ಎರಡು ಸಾರಿ ಹೇಳುವವಳಲ್ಲ ಎಂದು ನಿನಗೆ ಗೊತ್ತು. ನಿನ್ನಲ್ಲಿ ದುಡ್ಡಿಲ್ಲ ಎಂದು ತಂದಿಲ್ಲ ಎಂದುಕೊಂಡೆ. ಅದಕ್ಕೇ ಸುಮ್ಮನಾದೆ'' ಎಂದರು. ಕಾಶಿಮಾಯನಿಗೆ 'ಅಮ್ಮನಿಗೆ ಅದೆಷ್ಟು ನೋವಾಗಿರಬೇಕು' ಎಂದು ತಿಳಿದು ತಮ್ಮ ಮೇಲೇ ತುಂಬ ಬೇಸರವೂ, ನೋವೂ ಆಯಿತು, ''ಅಮ್ಮ, ಕ್ಷಮಿಸು. ಇನ್ನು ನೀನು ಕರೆದಾಗ ನಾನೆಂದೂ ದೂರದಿಂದಲೇ ಕೂಗಿ ಉತ್ತರಿಸುವುದಿಲ್ಲ. 'ಅಮ್ಮ ಕರೆದೆಯಾ' ಎಂದು ನಿನ್ನ ಹತ್ತಿರಕ್ಕೇ ಬಂದು ಕೇಳುತ್ತೇನೆ. ಇನ್ನು ಮೇಲೆ ನಿನ್ನನ್ನು ಹೀಗೆ ನೋಯಿಸುವುದಿಲ್ಲ. ಜೀವವನ್ನಾದರೂ ಒತ್ತೆ ಇಟ್ಟು ನೀ ಹೇಳಿದ ಕೆಲಸವನ್ನು ಮಾಡುತ್ತೇನೆ... ನೀನು ಮಾತ್ರ ಈ ದಿನ ಮಾಡಿದ ಹಾಗೆ ಎಂದೂ ಮಾಡಬೇಡ. ನಾನು ನಿನ್ನನ್ನು ಎಂದೂ ನೋಯಿಸುವುದಿಲ್ಲ....'' ಎಂದು ಕಣ್ಣು ತುಂಬಿ ಅಮ್ಮನಿಗೆ ಹೇಳಿದರು. ನಮಸ್ಕಾರ ಮಾಡಿದರು...... ''ಈಗ ಸಂಜೆ ಆಯಿತು. ಅರಳು, ಹುರಿಹಿಟ್ಟು, ಹಣ್ಣು ತಂದುಕೊಡುತ್ತೇನೆ. ಉಪಹಾರ ಮಾಡಿಕೋ ಅಮ್ಮಾ'' ಎಂದರು.

ಈ ಪ್ರಸಂಗವಾದ ಅನಂತರವೂ ಕಾಶಿಮಾಯನ ಅಮ್ಮ ಸುಮಾರು ಮೂವತ್ತು ವರ್ಷಗಳವರೆಗೆ ಬದುಕಿದ್ದರು. ಕಾಶಿಮಾಯನೂ ಕೊಟ್ಟ ಮಾತಿನಂತೆಯೇ ತಾಯಿಯನ್ನು ಪ್ರೀತಿ-ಗೌರವದಿಂದ ಕೊನೆಯ ತನಕವೂ ನೋಡಿಕೊಂಡರು.... ಇದು

ಹಿಂದಿನವರ ಯೋಚನೆಯ ಧಾಟಿ, 'ನೀನು ನನ್ನ ಮಗ, ನನಗೆ ಮಾಡುವುದು ನಿನ್ನ ಕರ್ತವ್ಯ' ಎಂದು ತಮ್ಮ ಮಗನೇ ಆದರೂ ಹಾಗೆಂದೂ ಸಲಿಗೆ ವಹಿಸಿ ಹೇಳಿ - ಕೇಳದ ಮನೋಭಾವ ಅವರದು.

ನನಗೆ ಬಹಳ ತಿಳಿದವರೂ, ನಮ್ಮ ಕುಟುಂಬದ ಹತ್ತಿರದ ಸನ್ಮಿತ್ರರೂ ಆದ ಒಬ್ಬರ ಮನೆಯಲ್ಲಿಯೇ ಒಮ್ಮೆ ಮಕ್ಕಳು ತಾಯಿಯ ಎದುರೇ ಗತಿಸಿಹೋಗಿದ್ದ ತಂದೆಯ ಬಗ್ಗೆ, ''ಅಪ್ಪನಾದರೂ ಅಷ್ಟೆ, ಅವರೇ ಸಂಪಾದಿಸಿದ ಸ್ವಲ್ಪವನ್ನೂ ಕಳೆದರು....'' ಎಂದು ಲಘುವಾಗಿ ಮಾತನಾಡಿದಾಗ ಆ ತಾಯಿ, ''ನೀವು ಅವರನ್ನು ಆಸ್ತಿ ಕಳೆದರು ಎನ್ನುವುದು ಬೇಕಿಲ್ಲ. ಒಂದು ಭಿಕ್ಷಾಪಾತ್ರೆಯಂತೂ ಮನೆಯಲ್ಲಿದೆ. ನನಗೆ ವಯಸ್ಸಾಗಿದ್ದರೂ, ಈಗಲೂ ಭಿಕ್ಷೆ ಎತ್ತಿ ನಾನು ನಿಮ್ಮನ್ನು ಸಾಕುತ್ತೇನೆ. ನೀವುಗಳು ಬೆಳೆದಿದ್ದರೂ ಪರವಾಗಿಲ್ಲ. ನನಗೇನೂ ಆ ಬಗ್ಗೆ ನಾಚಿಕೆ ಇಲ್ಲ. ಆದರೆ ನೀವು ಅವರನ್ನು ಅನ್ನಬೇಡಿ.... '' ಎಂದು ಕೆರಳಿ ಹೇಳಿದುದು ಚೆನ್ನಾಗಿ ನೆನಪಿದೆ. ಆ ರೀತಿಯ ಪತಿ-ಪತ್ನಿಯರ ಪ್ರೇಮ, ಆತ್ಮಾಭಿಮಾನ ಅದು! ಅವರ ಆತ್ಮಸ್ಥೈರ್ಯವೂ ಅಷ್ಟೇ, ಬಹಳ ಹೆಚ್ಚು.

❁ ❁ ❁

ಪತಿಯನ್ನು ಕಳೆದುಕೊಂಡ ಹೆಂಗಸರು ಉಕ್ಕಿನ ಮನಸ್ಥೈರ್ಯದವರಾಗಿ ಬಿಡುತ್ತಾರೆ. ಅದಕ್ಕೆ ನಮ್ಮ ಸಮಾಜದ ರೀತಿ-ನೀತಿಗಳು ಕಾರಣವೋ, ಅಥವಾ ಕೈಹಿಡಿದ ಪತಿಯು ದೂರವಾದರು, ಇನ್ನು ನನಗೆ ಭಗವಂತನೇ ಗತಿ ಎಂಬ ಭಾವ ಕಾರಣವೋ ತಿಳಿಯದು. ಈ ಮಾತು ಅದೆಷ್ಟು ನಿಜ ಎನ್ನುವುದಕ್ಕೆ ನಮ್ಮಜ್ಜಿ ಹುಲಿಯ ಬಾಯಿಗೆ ಸಿಕ್ಕಿಕೊಂಡಿದ್ದ ಪ್ರಸಂಗವೇ ಸಾಕ್ಷಿ.

ನಮ್ಮಜ್ಜಿಯ (ನಮ್ಮ ತಾಯಿಯ ತಾಯಿ) ಮನೆ ನಮ್ಮ ಮನೆಯ ಸಾಲಿನಲ್ಲೇ ಇದೆ. ಲಕ್ಷ್ಮೀನಾರಾಯಣನ ದೇವಸ್ಥಾನದ ಪಕ್ಕದಲ್ಲೇ ಅವರ ಮನೆ. ಆಗ ನಮ್ಮ ತಾಯಿಗೆ ನನ್ನ ಎರಡನೆಯ ತಮ್ಮ ಗೋಪಾಲ ಹುಟ್ಟಿದ್ದ, ಹಾಗಾಗಿ ಬಾಣಂತಿಯಾಗಿದ್ದ ಅಮ್ಮ ಅಲ್ಲಿದ್ದರು. ಆ ಮನೆಯ ಹಿಂದೆ ಪೂರಾ ಪೊದೆಗಳು. ಕಾಡು ಅಷ್ಟು ಒತ್ತಿಗಿದ್ದ ಕಾರಣ ಆಗಾಗ ಹುಲಿಯ ಸಂಚಾರವೂ ಅಲ್ಲಿತ್ತು. ಅಜ್ಜಿಯ ಮನೆಯಲ್ಲಿ ಬಚ್ಚಲು ಮನೆ, ಮನೆಯ ಹಿಂಭಾಗಕ್ಕೆ ಇದ್ದುದು. ನಾಲ್ಕು ಗೋಡೆಗಳು, ಅದಕ್ಕೆ ಬಾಗಿಲು ಇಲ್ಲ. ಬಿದಿರಿನ ತಟ್ಟಿಗೆಯೊಂದೇ ಬಾಗಿಲು. ಸ್ನಾನಕ್ಕೆ ಹೆಂಗಸರು ಹೋದಾಗ ಅದನ್ನು ಬಾಗಿಲಿಗೆ ಅಡ್ಡ ಇಡುವುದಿತ್ತು. ಗಂಡಸರು ಅಂಗವಸ್ತ್ರ, ಸ್ನಾನದ ಪಂಚೆ, ಅಥವಾ ತುಂಡು ಟವಲುಟ್ಟೇ ಸ್ನಾನ ಮಾಡುತ್ತಿದ್ದ ಕಾರಣ ಅವರಿಗೆ ಬಾಗಿಲಿನ ಆವಶ್ಯಕತೆಯೂ ಇರಲಿಲ್ಲ. ಆ ಬಚ್ಚಲು ಮನೆಯಲ್ಲಿ ನೀರು ಕಾಯಿಸಲು ಇದ್ದ ಹಂಡೆಗೆ ಅಲ್ಲಿಯೇ ಸ್ವಲ್ಪ ಹಿಂದಕ್ಕಿದ್ದ ಬಾವಿಯಿಂದ ನೀರು ಸೇದಿ ಹಂಡೆ ತುಂಬಬೇಕಿತ್ತು. ಅಜ್ಜಿ ಎಂದಿನಂತೆ ನೀರು ಸೇದಿ ಹಂಡೆ ತುಂಬಿದರು. ಕೊನೆಯ ಬಿಂದಿಗೆ ನೀರು ಸುರಿದು ತಿರುಗಿದಾಗ ಹಂಡೆಯ ಪಕ್ಕದಲ್ಲೊಂದು ಪ್ರಾಣಿ ಕುಳಿತ ಹಾಗೆ ಕಂಡಿತು. ಖಾಲಿ ಬಿಂದಿಗೆ ಕೈಯಲ್ಲಿ ಹಿಡಿದು, ''ಅಯ್ಯೋ... ನಾಯಿ ಬಂದು ಕುಳಿತಿದೆ'' ಎಂದರು. ಅವರು ಆ ಮಾತು ಪೂರೈಸುವಷ್ಟರಲ್ಲಿ ಆ ಪ್ರಾಣಿ ಹಾರಿ ಅವರನ್ನು ಹಿಡಿದಿತ್ತು. ಅದು ಹುಲಿ!!

ಆ ಕಾಲದಲ್ಲಿನ ನಮ್ಮ ವಿಧವೆಯರು ಬಿಳಿಯ ಸೀರೆಯೊಂದನ್ನು ಸುತ್ತಿಕೊಂಡು ಉಡುವುದಿತ್ತು. ನೆರಿಗೆ ಇಲ್ಲದ ಕಾರಣ ಆ ಸೀರೆ ಉಡುವ ರೀತಿಯಿಂದಾಗಿ ಅವರು ಬೇಗ ಬೇಗ ಓಡಾಡಲು ಸಾಧ್ಯವಿರುತ್ತಿರಲಿಲ್ಲ. ದೊಡ್ಡ ಹೆಜ್ಜೆಗಳನ್ನು ಹಾಕುವುದು ಅಸಾಧ್ಯವಾಗಿತ್ತು. ಹುಲಿ ಅವರ ಸೀರೆಯನ್ನು ಹಿಡಿದೆಳೆದು ಅವರನ್ನೂ ಜತೆಗೆ ಎಳೆದುಕೊಳ್ಳುತ್ತಿತ್ತು. ಸುಮಾರು ಅರ್ಧ ಫರ್ಲಾಂಗ್ ಹಾಗೆ ಎಳೆದುಕೊಂಡು ಹೋಗಿತ್ತು. ಅವರ ತೊಡೆಯ ಭಾಗದಲ್ಲಿ ಒಂದು ಸಣ್ಣ ಚಮಚದಷ್ಟು ಮಾಂಸವನ್ನು ಕಿತ್ತು ತಿಂದಿತ್ತು. ಅವರು ಮಾತ್ರ ''ಯಾರೂ ಇಲ್ಲಿಗೆ ಬರಬೇಡಿ. ಅನ್ನಪೂರ್ಣಾ (ಅಜ್ಜಿಯ ತಂಗಿ ಆಕೆ. ಅವರ ಮನೆಯ ಪಕ್ಕದಲ್ಲೇ ಇದ್ದುದು) ನನ್ನನ್ನು ಹುಲಿ ಎಳಕೊಂಡು ಹೋಗುತ್ತಿದೆ. ನಾನಿನ್ನು ಉಳಿಯುವುದಿಲ್ಲ. ಮಕ್ಕಳೆಲ್ಲರೂ ಜೋಪಾನವಾಗಿರಿ. ಹಿಂದಿನ ಬಾಗಿಲು ತೆಗೆಯಬೇಡಿ... ಯಾರೂ ಬರಬೇಡಿ'' ಎಂದು ಕೂಗಿಕೊಂಡರು. ಅಲ್ಲಿಯವರೆಗೆ ಹುಲಿ ಅವರನ್ನು ಅವರ ತಂಗಿ ಮನೆಯ ಹಿತ್ತಿಲವರೆಗೆ ಎಳೆದೊಯ್ದಿತ್ತು. ಅವರು ಗಟ್ಟಿಯಾಗಿ ಹಾಗೆ ಕೂಗುತ್ತಿದ್ದುದು ಹುಲಿಗೆ ಭಯ ಹುಟ್ಟಿಸಿತು. ಅದು ಅವರನ್ನು ಬಿಟ್ಟು ಹೋಯಿತು. ಅದು ಹೋದ ದಿಕ್ಕನ್ನೇ ನೋಡುತ್ತ ಮೆಲ್ಲ ಮೆಲ್ಲಗೆ ಹಿಂದಕ್ಕೆ ಸರಿಯುತ್ತ ತಮ್ಮ ಮನೆಯ ಹಿಂಭಾಗಕ್ಕೆ ಬಂದರು ಅಜ್ಜಿ. ಮೈಯೆಲ್ಲ ರಕ್ತಸಿಕ್ತ, ಭುಜದ ಹತ್ತಿರ ಬಾಯಿ ಹಾಕಿದುದು ಭಾರೀ ನೋವಾಗಿತ್ತು. ಕುತ್ತಿಗೆಯ ಎರಡು ಪಕ್ಕ ಪಿಚಕಾರಿಯಂತೆ ರಕ್ತ ಹಾರುತ್ತಿತ್ತು. ಆದರೂ ನಮ್ಮಜ್ಜಿಯದು ಗಟ್ಟಿಜೀವ. ನೆಲದ ಮೇಲೆ ತೆವಳಿಕೊಂಡೇ ಬಂದು ಸುಸ್ತಾಗಿ ಅದೇ ಬಚ್ಚಲು ಮನೆಯ ಬಾಗಿಲಲ್ಲಿ ಕುಳಿತರು.

ಆ ದಿನ ಊರಿನಲ್ಲಿ ಏನೋ ವಿಶೇಷ ಸಮಾರಂಭ. ಬಹಳ ಜನ ಹೊಸಹಳ್ಳಿಯಿಂದ ಮತ್ತೂರಿಗೆ ಊಟಕ್ಕೆ ಬಂದಿದ್ದರು. ಅವರಲ್ಲಿ ಅಜ್ಜಿಯ ಅಣ್ಣಂದಿರೂ ಇದ್ದರು. ಅಜ್ಜಿಯ ಕೂಗು ಕೇಳಿ ಅದಾಗಲೇ ಅವರ ಮನೆಯಲ್ಲಿ ಜನ ಜಮಾಯಿಸಿದ್ದರು. ಅವರಲ್ಲಿ ಅಜ್ಜಿಯ ಅಣ್ಣನೂ ಇದ್ದರು. ಅವರು ಬಂದವರೇ ಮನೆಯ

ಹಿಂದೆ ಬಂದು, ''ತಂಗೀ, ಹುಲಿಬಂದು ಕಚ್ಚಿತೇ ನಿನ್ನನ್ನು?'' ಎಂದು ಸಂಶಯದಿಂದ ಪ್ರಶ್ನೆ ಮಾಡಿದರು. ಭಯ ಮತ್ತು ಸುಸ್ತಿನಿಂದ ಕಂಗೆಟ್ಟ ಅಜ್ಜಿ ತನ್ನ ಅಣ್ಣನಿಗೆ, ''ಹೌದು, ಅಣ್ಣಯ್ಯಾ - ಹುಲಿಕಚ್ಚಿತು...'' ಎಂದರು. ''ಏ.... ಎಲ್ಲಿದೆ ಹುಲಿ ಇಲ್ಲಿ? ನಾಯಿ ಇರಬೇಕು....'' ಎಂದರು ಅವರು. ''ಇಲ್ಲೇ ಇಲ್ಲೇ'' ಎಂದು ಅಜ್ಜಿ ಅವರಿಗೆ ಆ ಹುಲಿ ಕುಳಿತಿದ್ದ ಜಾಗ ತೋರಿಸಿದರು. ದುರದೃಷ್ಟವಶಾತ್ ಆ ಹುಲಿ ಮತ್ತೆ ಬಂದು ಅದೇ ಜಾಗದಲ್ಲೇ ಕುಳಿತಿತ್ತು! ಅಜ್ಜಿಯ ಮೈ ಇನ್ನೂ ರಕ್ತಸಿಕ್ತವಾಗಿದ್ದುದನ್ನು ಕಂಡು ಮತ್ತೊಮ್ಮೆ ಅದು ಅಜ್ಜಿಯ ಮೇಲೇ ಎಗರಿತು, ಹಿಡಿಯಿತು. ಅಜ್ಜಿಯ ಅಣ್ಣ ಥರಥರ ನಡುಗಿಹೋದರು. ಒಳಕ್ಕೆ ಹಾರಿ ಬಾಗಿಲು ಹಾಕಿಕೊಂಡರು.''ತಂಗೀ, ಅದು ನಾಯಿ ಎಂದೆ ನಾನು. ನನ್ನದು ತಪ್ಪಾಯಿತು. ನಿನ್ನನ್ನು ನಾನೇ ಬಲಿಕೊಟ್ಟ ಹಾಗಾಯಿತು..... ತಂಗೀ ಹೇಗಾದರೂ ನೀನು ಒಳಗೆ ಬಾ, ವಾಪಸು ಬಾ... ಬಾಗಿಲ ಹತ್ತಿರ ಬಾ, ಕೈಬೀಸಿ ಎಳೆದುಕೊಳ್ಳುವೆ'' ಎಂದು ಗೋಳಿಟ್ಟರು. ಅನಂತರ ಹುಲಿ ಇವರ ಆರ್ಭಟ ನೋಡಿಯೋ ಏನೋ, ಅಜ್ಜಿಯನ್ನು ಬಿಟ್ಟು, ಸದ್ದಿಲ್ಲದೆ ಸುಮ್ಮನೆ ಸ್ವಲ್ಪ ದೂರದಲ್ಲಿ ಕುಳಿತು ನೋಡತೊಡಗಿತು. ಹೇಗಾದರೂ ಅಜ್ಜಿಯನ್ನು ಮನೆಯೊಳಕ್ಕೆ ಎಳೆದುಕೊಳ್ಳಬೇಕಿತ್ತು. ಅಷ್ಟರಲ್ಲಿ ಅಜ್ಜಿಯ ತಂಗಿಯ ಮಗ ಸುಬ್ಬಣ್ಣ ಬಂದು, ''ದೊಡ್ಡಮ್ಮ, ನಾ ನಿನಗೆ ಕೈ ಕೊಡುತ್ತೇನೆ. ನೀನು ಅದನ್ನು ಹಿಡಿದುಕೊಂಡು ಮೆಲ್ಲಗೆ ಒಳಗೆ ಬಾ. ಬಾಗಿಲು ಸ್ವಲ್ಪ ತೆಗೆದಿದೆ. ಅಲ್ಲೇ ಬಾ...'' ಎಂದ. ಅದಕ್ಕೆ ಅಜ್ಜಿ ಆಚೆಯಿಂದ, ''ಕಂದಾ, ನಿನಗೆ ಈಗ ತಾನೆ ಮದುವೆಯಾಗಿದೆ (ಎಂಟು ದಿನಗಳ ಹಿಂದೆ ಸುಬ್ಬಣ್ಣನ ಮದುವೆಯಾಗಿತ್ತು) ನಾನಾದರೂ ಮುದುಕಿ. ನನ್ನನ್ನು ನೀ ಕಾಪಾಡಲು ಹೋಗಿ, ಅದು ನಿನ್ನ ಮೇಲೇ ಹಾರಿ ಬಿದ್ದರೆ? ಆಗ ಏನು ಮಾಡುವುದು? ಬೇಡ.... ಬೇಡ ನೀನಂತೂ ಹತ್ತಿರಕ್ಕೂ ಬರಬೇಡ....'' ಎಂದರು. ಅಷ್ಟರಲ್ಲಿ ಜನರ ಜಮಾವಣೆ ಹೆಚ್ಚಿತು. ಆದರೆ ಯಾರೂ ಹಿತ್ತಿಲ ಬಾಗಿಲಕಡೆಗೆ ಹೋಗಲಿಲ್ಲ. ಊರಿನಲ್ಲೇ ಯಾರಲ್ಲಾದರೂ ಬಂದೂಕಿದೆಯೇ ಎಂದು ಹುಡುಕಿದರು. ನಮ್ಮೂರಿನ ನಮ್ಮ ಗುರುಗಳಾದ ಚಿಂತಾಮಣಿ ಮೇಷ್ಟರ ಮನೆಯಲ್ಲಿ, ತೋಟಕ್ಕೆ ಬರುವ ಕಪಿಗಳನ್ನು ಹೆದರಿಸಲು ಗುಂಡು ಹಾರಿಸುತ್ತಿದ್ದ ಒಂದು ಬಂದೂಕು ಇತ್ತು. ಅದು ಅಷ್ಟು ಬಲವಾದದ್ದಾಗಿರಲಿಲ್ಲ. ಹಳೆಯ, ತುಕ್ಕುಹಿಡಿದ ತುಪಾಕಿ. ಆದರೂ ಏನೂ ಇಲ್ಲದೆ ಇರುವುದಕ್ಕಿಂತ ಆ ಬಂದೂಕು ಇರಲಿ ಜತೆಯಲ್ಲಿ ಎಂದು ತಂದದ್ದಾಯಿತು. ಆಗ ಒಬ್ಬ ಮುಸಲ್ಮಾನ ಅಜ್ಜ, ಎಂಬತ್ತೈದು ವರ್ಷದವನು, ಗುಂಪಿನಲ್ಲಿದ್ದವನು ಆ ಬಂದೂಕನ್ನು ತೆಗೆದುಕೊಂಡು ಹುಲಿಯನ್ನು ಹೊಡೆಯುತ್ತೇನೆಂದು ಎದ್ದು ಹೊರಟ.

ಮನೆಯ ಹಿಂಭಾಗವು, ಕಂಬಗಳನ್ನು ನೆಟ್ಟು ಜಿಂಕ್ ಷೀಟುಗಳನ್ನು ಹೊದ್ದಿಸಿದ್ದುದಾಗಿತ್ತು. ಮೆಲ್ಲನೆ ಮೇಲಿನ ಒಂದು ಷೀಟನ್ನು ತೆರೆಯಲಾಯಿತು. ಸಾಬಣ್ಣ ಮೇಲೆ ಹತ್ತಿದ. ಅಷ್ಟರಲ್ಲೇ ಸರಿಸರಿದು ಬಾಗಿಲ ಹತ್ತಿರಕ್ಕೆ ಬಂದಿದ್ದ ಅಜ್ಜಿಯನ್ನು ನೋಡಿ ಸುಬ್ಬಣ್ಣ, ''ಸಾಬಣ್ಣ, ತಾಳು. ನಿನಗೆ ವಯಸ್ಸಾಗಿದೆ. ನಿನ್ನ ಗುರಿ ಹುಲಿಗೆ ತಪ್ಪಿ ಅಮ್ಮಾವ್ರಿಗೇ ಬಿದ್ದರೆ? ನೀನು ಗುರಿ ಇಡುವುದು ಹೆಚ್ಚು ಕಡಮೆಯಾದರೆ? ಅದಕ್ಕೇ ಮೊದಲು ಅಮ್ಮಾವ್ರನ್ನು ಒಳಗೆ ಎಳೆದುಕೊಂಡು ಬಿಡೋಣ'' ಎಂದು, ಮೆಲ್ಲಗೆ ಬಾಗಿಲು ಸರಿಸಿ, ಕೈಕೊಟ್ಟು ಅಜ್ಜಿಯನ್ನು ಒಳಗೆ ಎಳೆದುಕೊಂಡೇಬಿಟ್ಟ. ಆಗಲೂ ಸುಮ್ಮನೆ ಕುಳಿತಿದ್ದ ಹುಲಿಗೆ ಸಾಬಣ್ಣ ಗುರಿಯಿಟ್ಟು ಎರಡು ಗುಂಡನ್ನೂ ಹೊಡೆದ. ಹಾರಿಬಿದ್ದು ಅಂತೂ ಹುಲಿ ಸತ್ತಿತು.

ಒಳಗೆ ಬಂದ ತಂಗಿಯನ್ನು ನೋಡಿ ಅಣ್ಣ (ಅಜ್ಜಿಯ ಅಣ್ಣ) ವೀರಾವೇಶದಿಂದ ಆರ್ಭಟಿಸಿ, ''ಏ ಹುಲಿ.... ನನ್ನ ತಂಗಿಯನ್ನು ತಿಂದು ಹಾಕಲು ನೋಡಿದೆಯಾ? ಪಾಪಿಹುಲಿ....'' ಎಂದು ಸತ್ತ ಹುಲಿಯನ್ನು ತುಳಿ ತುಳಿದು ತಮ್ಮ ಅಸಹಾಯಕತೆ, ಕೋಪ ತೀರಿಸಿಕೊಂಡದ್ದು ನೋಡುವವರಿಗೆ ಮೋಜಾಗಿದ್ದಿತು. ಹುಲಿ ಅಲ್ಲಿ ಕುಳಿತಿದ್ದಾಗ ಕಮಕಿಮ ಎನ್ನದ ಅವರ ಪರಾಕ್ರಮ ಅದು ಸತ್ತ ಮೇಲೆ ವಿಜೃಂಭಿಸಿತ್ತು.

ಆ ಹುಲಿಯನ್ನು ಊರಲ್ಲೆಲ್ಲ ಮೆರವಣಿಗೆ ಮಾಡಲಾಯಿತು. ಆಗ ನನಗಿನ್ನೂ ಏಳು ವರ್ಷಗಳಾದರೂ, ಅದು ಚೆನ್ನಾಗಿಯೇ ನನ್ನ ನೆನಪಿನಲ್ಲಿದೆ, ಮೆರವಣಿಗೆಯಲ್ಲಿ ಸತ್ತ ಹುಲಿಯನ್ನು ತಂದದ್ದು!

ಇತ್ತ ಅಜ್ಜಿಯ ಸ್ಥಿತಿ ಚಿಂತಾಜನಕವಾಗಿತ್ತು. ಆಗ ನಮ್ಮ ತಂದೆ ಅವರನ್ನು ಹೇಗಾದರೂ ಹೊತ್ತೊಯ್ಯಲು ಸ್ಟ್ರೆಚರ್ ತರಹದ್ದು ಮಾಡಬೇಕೆಂದು ಯೋಚಿಸಿ, ಒಂದು ಗೋಣಿಚೀಲಕ್ಕೆ ಎರಡೂ ಕಡೆಗೆ ಬಲವಾದ ಗಳುಗಳನ್ನು ಹಾಕಿ ಅಲ್ಲಲ್ಲಿ ದಾರಹಾಕಿ ಕಟ್ಟಿ ಅದನ್ನು ಸಿದ್ಧ ಪಡಿಸಿದರು. ನಾಲ್ಕು ಜನ ದೃಢವಾದ ಮೈಕಟ್ಟಿನವರು ಅಜ್ಜಿಯನ್ನು ಅದರ ಮೇಲೆ ಮಲಗಿಸಿಕೊಂಡು ನದಿ ದಾಟಿಕೊಂಡು ಹೊಸಹಳ್ಳಿಗೆ ಹೋಗಿ, ಅಲ್ಲಿಂದ ಶಿವಮೊಗ್ಗೆಗೆ ಹೋಗಿ ಆಸ್ಪತ್ರೆಗೆ ಸೇರಿಸಿದರು.

ಅಂತೂ ಅಜ್ಜಿಗೆ ಸಕಾಲದಲ್ಲಿ ಚಿಕಿತ್ಸೆ ಮಾಡಿಸಿ, ಅಜ್ಜಿ ಉಳಿಯುವಂತಾಯಿತು. ಒಂದೆರಡು ದಿನ ಅವರು ಯಾವ ಹೊತ್ತಿನಲ್ಲೂ ನಿದ್ರೆ ಮಾಡದ ಹಾಗೆ ನೋಡಿಕೊಂಡು, ಅವರಿಗೆ ಮತ್ತೊಮ್ಮೆ ಹುಲಿ ಬಂದಂತೆ ಅನ್ನಿಸಿ ಆಘಾತವಾಗದ ಹಾಗೆ ಕಾಯ್ದುಕೊಂಡು ಅವರ ಜೀವ ಉಳಿಸಿಕೊಂಡಾಯಿತು. ಅಜ್ಜಿ ಹುಷಾರಾಗಿ ಮನೆಗೆ ಬಂದರು.... ನಿಧಾನವಾಗಿ ಚೇತರಿಸಿಕೊಂಡ

ಅಜ್ಜಿ ಈ ಘಟನೆಯ ಅನಂತರವೂ ಸುಮಾರು ನಲವತ್ತು ವರ್ಷಗಳ ಕಾಲ ಆರೋಗ್ಯದಿಂದ ಬದುಕಿದ್ದರು.

❁ ❁ ❁

ಹುಲಿಯ ಮತ್ತೊಂದು ಅವಾಂತರ ನೆನಪಾಗುತ್ತದೆ.

ನಮ್ಮ ಊರ ಹತ್ತಿರದಲ್ಲಿ ಒಂದು ಗುಡ್ಡ; ಗುಡ್ಡದ ಮಧ್ಯದಲ್ಲಿ ಬೆಳ್ಳಿಕಲ್ಲು ರಂಗನಾಥನ ದೇವಸ್ಥಾನ ಇದೆ. ಅಲ್ಲಿಂದಲೂ ಮೇಲಕ್ಕೆ, ತುದಿಗೆ ಒಂದು ಶಿವಲಿಂಗದ ಗುಡಿ. ಆ ಶಿವಲಿಂಗಕ್ಕೆ ಅಭಿಷೇಕ ಮಾಡಿದರೆ ಮಳೆ ಬರುತ್ತದೆ ಎನ್ನುವ ನಂಬಿಕೆ ನಮ್ಮಲ್ಲಿ. ಒಮ್ಮೆ ನಾವು ಹುಡುಗರು ಎಪ್ಪತ್ತು ಜನ, ಹೆಣ್ಣು ಮಕ್ಕಳು ಏಳೆಂಟು ಮಂದಿ, ನಮ್ಮ ಸೋದರಮಾವ (ಹುಲಿ ಕಡಿದ ಅಜ್ಜಿಯ ಮಗ) ಕೃಷ್ಣಸ್ವಾಮಿಯ ಮುಂದಾಳತ್ವದಲ್ಲಿ ಆ ಗುಡ್ಡಕ್ಕೆ ಪ್ರವಾಸ ಹೋದೆವು. ಆ ಬೆಟ್ಟ ಸಾಕಷ್ಟು ಸಮೃದ್ಧ ಹಸಿರಿನಿಂದ ತುಂಬಿದ್ದು, ಅಲ್ಲಿಂದ ಬಂದ ಝರಿಯೊಂದು ಹರಿದು ಬಂದರೆ ನಮ್ಮ ಊರಿನ ದೊಡ್ಡಕೆರೆ ತುಂಬುತ್ತಿತ್ತು. ಪ್ರತಿವರ್ಷವೂ ಅಲ್ಲಿಗೆ ಪೂಜೆ ಸಲ್ಲಿಸಿ ಬರುವುದು ರೂಢಿ. ನೀರು ಕೊಡುವ ಆ ಈಶ್ವರ-ರಂಗನಾಥರು ನಮ್ಮ ಆರಾಧ್ಯ ದೈವ. ಆ ವರ್ಷವೂ ಹಾಗೆಯೇ ನಾವೆಲ್ಲ ಹೋಗಿದ್ದೆವು. ಅಡುಗೆಯ ಪರಿಕರಗಳು ಜತೆಯಲ್ಲಿದ್ದುವು. ಅಲ್ಲೇ ಅಡುಗೆ ಮಾಡಿ ಊಟ ಮಾಡಿ ಸಂಜೆಯವರೆಗೆ ಇದ್ದು, ಅನಂತರ ಬೆಟ್ಟ ಇಳಿದು ಬರುವುದು ನಮ್ಮ ಯೋಜನೆಯಾಗಿತ್ತು! ಹೆಣ್ಣುಮಕ್ಕಳು ಅಡುಗೆ ಸಿದ್ಧಪಡಿಸುವಾಗ ನಾವುಗಳು ಮಾವನ ಜತೆಗೆ ಗುಡ್ಡದ ಮೇಲಕ್ಕೆ ಏರಿಹೋದೆವು. ಅಲ್ಲೊಂದು ಆನೆಯ ಗಾತ್ರದ ಭಾರೀ ಬಂಡೆ ಇತ್ತು. ಅದರ ಮೇಲೆ ಹತ್ತಲು ಸುಲಭವಾಗಿತ್ತು. ನಾವೆಲ್ಲರೂ ಹತ್ತಿ ನಿಂತೆವು. ಆ ಬಂಡೆಯ ಕೆಳಗೆ ಪುಟ್ಟ ಬೋಗುಣಿಯಷ್ಟು ಜಾಗ. ಅಲ್ಲಿ ನೀರು ತುಂಬಿತ್ತು. ''ಇದು ರಂಗನಾಥ ತೀರ್ಥ'' ಎಂದು ಮಾವ ನಮಗೆಲ್ಲ ಪ್ರೋಕ್ಷಣೆ ಮಾಡಿದರು! ಬಂಡೆಯ ಆ ಪಕ್ಕವನ್ನು ನಾವು ಗಮನಿಸಲೇ ಇಲ್ಲ. ಅಲ್ಲಿ ಒಂದು ಗುಹೆ. ಅಲ್ಲಿ ಒಂದು ಹುಲಿ ಕುಳಿತಿತ್ತು! ಅದಕ್ಕೂ ತೀರ್ಥ ಹಾರಿತ್ತು.

ನಮ್ಮ ಮಾತು, ಜೋರಾಗಿ ನಗುವುದು ಇತ್ಯಾದಿ ಹುಲಿಗೆ ಕಸಿವಿಸಿ ತಂದಿರಬೇಕು. ಅದು ಈಚೆ ಬಂದು ಅಬ್ಬರಿಸಿ, ನಾವು ಹತ್ತಿನಿಂತಿದ್ದ ಬಂಡೆಯ ಮೇಲೆ ತನ್ನ ಮುಂದಿನ ಎರಡು ಕಾಲುಗಳನ್ನೂ ಇಟ್ಟು ನಿಂತಿತು. ನಾವು ಹುಲಿಯಿಂದ ಸುಮಾರು ಹತ್ತು ಅಡಿ ಮೇಲಕ್ಕೆ ನಿಂತಿದ್ದೆವು. ಸುಲಭವಾಗಿ ಹುಲಿ ಬಂಡೆಹತ್ತಿ ಬರಬಹುದು. ನಾವೆಲ್ಲ ಆಗ ಬಂಡೆಯ ಮೇಲಿಟ್ಟ ತಿಂಡಿಗಳಂತೆ ಆಗುತ್ತೇವೆ ಅದಕ್ಕೆ! ನಾವೆಲ್ಲ ಥರಥರ ನಡುಗಿಹೋದೆವು. ಇದ್ದಕ್ಕಿದ್ದಂತೆ ಮಾವನಿಗೆ ಏನೋ ಯೋಚನೆ ಹೊಳೆಯಿತು. ಅವರು ಮಹಾಧೈರ್ಯಶಾಲಿ ಅಮ್ಮನ ಮಗ. ಮೆಲ್ಲನೆ, ''ನೋಡಿ, ಯಾರೂ ಏನೂ ಮಾತಾಡಬೇಡಿ, ಹೆದರಬೇಡಿ. ಈಗ ನಾವು ಗಟ್ಟಿಯಾಗಿ ಒಟ್ಟಿಗೇ ಕೂಗೋಣ. ನಾನು ಒಮ್ಮೆ ಕೇಕೆ ಹಾಕುತ್ತೇನೆ. ನೀವೆಲ್ಲರೂ ಜೋರಾಗಿ ಕೂಗಿರಿ, ಹೊಯಿಸಳನಂತೆ ನಿಮ್ಮ ನಿಮ್ಮ ಅಂಗವಸ್ತ್ರಗಳನ್ನು ಕೈಗೆ ಸುತ್ತಿಕೊಳ್ಳಿ, ಅನಂತರ ಕೂಗಿ'' ಎಂದರು, ''ಕೈಗೆ ಬಟ್ಟೆ ಯಾಕೆ ಗೊತ್ತಾ? ಹುಲಿಬಂದ್ರೆ ಬಾಯಿಗೆ ತುರಕಲು'' ಎಂದ ಮಾವ. ಕೂಡಲೆ ನಾವುಗಳು ನಮ್ಮನಮ್ಮ ಅಂಗವಸ್ತ್ರಗಳನ್ನು ಕೈಗೆ ಸುತ್ತಿಕೊಂಡು ಗಟ್ಟಿಯಾಗಿ ಎಲ್ಲರೂ ಒಟ್ಟಿಗೆ ಕೂಗಿದೆವು. ಮಾವ ಮಧ್ಯೆ ಮಧ್ಯೆ ಕೇಕೆ ಹಾಕಿದರು. ನಮ್ಮ ಕೂಗಾಟ ಹುಲಿಗೇ ಭಯ ಹುಟ್ಟಿಸಿರಬೇಕು! ಸದ್ದಿಲ್ಲದೆ ಹಿಂದೆ ಸರಿದ ಹುಲಿ ಬೆಟ್ಟದಿಂದ ಕೆಳಗೆ ಓಡಿಹೋಗಿ ಕಾಡಲ್ಲಿ ಮರೆಯಾಯಿತು. ನಮಗೆ ಈಗ ಎಲ್ಲಿಲ್ಲದ ಧೈರ್ಯಬಂದು, ಬಂಡೆಯಿಂದ ಕೆಳಗಿಳಿದು ಅದನ್ನು ಅಟ್ಟಿಸಿಕೊಂಡು ಸುಮಾರು ಐದಾರು ಮಾರು ದೂರ ಓಡಿಯೂ ಹೋದೆವು.... ಅಂತೂ ನಮ್ಮೆದುರಿಗೆ ಬಂದಿದ್ದ ಗಂಡಾಂತರ ನಮ್ಮ ಮಾವನ ಸಮಯ ಪ್ರಜ್ಞೆ, ಸ್ಫೂರ್ತಿಯಿಂದಾಗಿ ತಪ್ಪಿತು....

೧೨. ತಾಯಿ ತುಂಗೆ

ಹುಲಿ ಬಂದ ಈ ಪ್ರಸಂಗಗಳು ನಮ್ಮೂರಿನ ಸುತ್ತಲಿನ ಕಾಡುಪ್ರದೇಶದಿಂದಾದರೆ, ನಮ್ಮೂರಿನ ತುಂಗಾ ಹೊಳೆಯಿಂದಾದ ಕೆಲವು ಅವಾಂತರಗಳೂ ಉಲ್ಲೇಖಾರ್ಹವಾದಂಥ‌ವೇ ಸರಿ. ನಮ್ಮೂರಿನ ಜೀವನದಿ ತುಂಗಾನದಿ. ಈವರೆಗೆ ನನಗೆ ನೆನಪಿರುವಂತೆ ನಮ್ಮೂರಿನ ಹಾಗೂ ಹೊಸಹಳ್ಳಿಯ ಯಾರನ್ನೂ ಅದು ತನ್ನೊಳಗೆ ಸೇರಿಸಿಕೊಂಡಿಲ್ಲ. ನಮ್ಮ ಈ ಎರಡು ಹಳ್ಳಿಗಳ ಮಧ್ಯೆ ಹರಿಯುವ ತುಂಗಾಮಾತೆ ನಮ್ಮ ಹಳ್ಳಿಗಳನ್ನು ತನ್ನೆರಡು ಮಕ್ಕಳಂತೆಯೇ ಕಾಯ್ದುಕೊಂಡು ಬಂದಿದ್ದಾಳೆ. ಮಕ್ಕಳೂ ಹಿರಿಯರೂ ನೀರಿಗೆ ಬಿದ್ದ ಪ್ರಸಂಗಗಳಿದ್ದರೂ ಜೀವಹಾನಿ ಆಗಿಯೇ ಇಲ್ಲ ಎನ್ನಬೇಕು, ಹಾಗೆ ಅವಳ ರಕ್ಷಣೆ ನಮಗೆ. ಇಂದಿಗೂ ಅವಳ ಈ ಹಿರಿತನಕ್ಕೆ ಕೃತಜ್ಞತೆ ಸಲ್ಲಿಸಲು ದೀಪವನ್ನು ನದಿಯಲ್ಲಿ ತೇಲಿಬಿಡುವ ಸಂಪ್ರದಾಯವನ್ನು ನಡೆಸಿಕೊಂಡು ಬಂದಿದ್ದಾರೆ. ಅಂಥ ಕೆಲವು ಸನ್ನಿವೇಶಗಳನ್ನು ಹೇಳಿ ತುಂಗಾಮಾತೆಯ ದಯೆಯನ್ನು ಸ್ಮರಿಸಿಕೊಳ್ಳುವುದು ಇಲ್ಲಿ ನನ್ನ ಉದ್ದೇಶ.

❁ ❁ ❁

ನಮ್ಮೂರಿನಲ್ಲಿ ಒಮ್ಮೆ ಲಲಿತಾಹೋಮ ನಡೆದಿತ್ತು. ಸುಮಂಗಲಿಯರೆಲ್ಲರೂ ಸೇರಿ ಲಲಿತಾಪೂಜೆ ಮಾಡಿದ ಆ ದಿನ ಸಂಜೆ ಮತ್ತೂರಲ್ಲಿ ಯಾವುದೋ ನಾಟಕದ ಪ್ರದರ್ಶನ ಇತ್ತು. ನಾಟಕದ ಕೆಲವು ಪಾತ್ರಧಾರಿಗಳು ಹೊಸಹಳ್ಳಿಯಿಂದ ಬರಬೇಕಿತ್ತು. ಆ ಹುಡುಗರೆಲ್ಲರೂ ಹರಿಗೋಲಲ್ಲಿ ಹೊರಟುಬಂದರು. ಹೊಳೆಯೂ ಸಾಕಷ್ಟು ತುಂಬಿತ್ತು. ಮತ್ತೂರಿನ ದಡದ ಜಪದ ಕಟ್ಟೆ ಸೇರಲು ನಾಲ್ಕು ಮಾರುಗಳಿವೆ ಎಂದಾಗ ಇದ್ದಕ್ಕಿದ್ದಂತೆ ಹರಿಗೋಲಿನಲ್ಲಿ ನೀರು ತುಂಬಿಕೊಂಡಿತು. ಆ ಹರಿಗೋಲಿನಲ್ಲಿ ಕುಳಿತಿದ್ದ ಸುಮಾರು ಇಪ್ಪತ್ತು ಜನರೂ ಕೆಳಗೆ ಇಳಿದರು. ಕೂಡಲೆ ಹರಿಗೋಲೂ ಮುಳುಗಿತು. ಪುಣ್ಯವಶಾತ್ ಸುಮಾರು ಮಂದಿಗೆ ಈಜು ಬರುತ್ತಿತ್ತು. ಅವರ ಜತೆಗಿದ್ದ ನಾಲ್ಕೈದು ಮಂದಿ ಹೆಂಗಸರನ್ನೂ ಉಳಿದ ಆರೇಳು ಮಂದಿ ಈಜುಬರದಗಂಡಸರನ್ನೂ ಇತ್ತ ದಡದಲ್ಲಿ ನೋಡುತ್ತಿದ್ದ ಮತ್ತೂರಿನ ಮಂದಿ ನದಿಗೆ ಈಜು ಬಿದ್ದು, ಹೋಗಿ ಎಳೆದು ತಂದರು. ಯಾರಿಗೂ ಯಾವುದೇ ಅಪಾಯ ಆಗಲಿಲ್ಲ. ಆದರೆ ಅವರುಗಳು ಜತೆಯಲ್ಲಿ ತಂದಿದ್ದ ಅವರ ಕೈಚೀಲಗಳು, ಬಣ್ಣ ಬಣ್ಣದ ವೇಷಭೂಷಣಗಳು, ಸೀರೆಗಳು ಮಾತ್ರ ನೀರಿನಲ್ಲಿ ತೇಲಿಹೋದವು. ಆ ದಿನ ನಾಟಕ ಒಂದು ಗಂಟೆ ತಡವಾಗಿ ಪ್ರಾರಂಭವಾಗಿ ಚೆನ್ನಾಗಿಯೇ ನಡೆಯಿತು. ನಾಟಕಕ್ಕೆ ನಮ್ಮೂರಿನವರ ಸೀರೆ ಆಭರಣಗಳನ್ನೇ ಬಳಸಿಕೊಂಡರು. ದೇವಿಯ ಅನುಗ್ರಹದಿಂದ ಎಲ್ಲರೂ ಅವಘಡದಿಂದ ಪಾರಾದರು.

ಒಂದು ಮಗು ಹರಿಗೋಲಿನಲ್ಲಿ ತುಂಬಿದ ನೀರಿನಲ್ಲಿ ತೇಲುತ್ತಿತ್ತು. ಈಜು ಬಿದ್ದವರು ಹರಿಗೋಲು ಎತ್ತಿ ಮಗುವನ್ನು ರಕ್ಷಿಸಿದರು.

❁ ❁ ❁

ನನ್ನ ಸೋದರಮಾವನ ಮಗ ಕಿಟ್ಟಣ್ಣ.... ಕಿಟ್ಟಣ್ಣನಿಗೆ ನಾಲ್ಕು ವರ್ಷ. ನಮ್ಮೂರಿನ ಶ್ರೀನಿವಾಸ ಅವಧಾನಿಯವರ ಮನೆಯಲ್ಲಿ ಪುರಾಣ ನಡೆಯುತ್ತಿತ್ತು. ಆಗ ನದಿಯ ಪ್ರವಾಹವೂ ಭರ್ಜರಿಯಾಗಿಯೇ ಇತ್ತು. ದಡದಲ್ಲಿದ್ದ ಮರಗಳು ಪೂರ್ತಿಯಾಗಿ ಮುಳುಗಿ ನೀರು ಬಹಳ ಮೇಲಕ್ಕೆ ಬಂದಿತ್ತು. ಪುರಾಣ ನಡೆಯುತ್ತಿದ್ದಾಗ ಊರ ಹಿರಿಯರೆಲ್ಲರೂ ಶ್ರೀನಿವಾಸ ಅವಧಾನಿಯವರ ಮನೆಯಲ್ಲಿ ಸೇರಿದ್ದರು. ಅಲ್ಲಿಯೇ ಆಡುತ್ತಿದ್ದ ಮಕ್ಕಳು ನದಿಯ ಕಡೆಗೆ ಹೋದದ್ದು ಯಾರ ಗಮನಕ್ಕೂ ಬರಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಅಳುತ್ತ ಓಡಿಬಂದ ಮೂವರು ಮಕ್ಕಳು, ''ಕಿಟ್ಟಣ್ಣ ನೀರಿನಲ್ಲಿ ಬಿದ್ದ.... ತೇಲಿ ಹೋದ'' ಎಂದು ಕೂಗಿದರು. ಎಲ್ಲರೂ ಅಲ್ಲಿಂದ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿದ್ದ ನದಿಯ ಕಡೆಗೆ ಓಡಿದರು. ಶ್ರೀನಿವಾಸ ಅವಧಾನಿಯವರು ಪುರಾಣದ ಪುಸ್ತಕ ಮುಚ್ಚಿಟ್ಟು ಓಡಿದರು. ನದಿಯ ಸೋಪಾನದ ಮೆಟ್ಟಿಲುಗಳನ್ನು ತಲುಪಿದವರೇ, ಎಲ್ಲರಿಗಿಂತ ಮೊದಲು ಈಜು ಬಿದ್ದರು. ಈಜಿ ಮುಂದೆ ಮುಂದೆ ಹೋದರು. ದೂರದಲ್ಲಿ ಮುಳುಗಿ ಹೋಗಿದ್ದ ಮರದ ಕೊಂಬೆಯೊಂದಕ್ಕೆ ಅಂಗಿ ಸಿಕ್ಕಿಹಾಕಿಕೊಂಡಿದ್ದ ಕಿಟ್ಟಣ್ಣ ಅಲ್ಲಿಯೇ ತೇಲುತ್ತ ಇದ್ದ. ಕಣ್ಣುಗಳೆರಡೂ ಪಿಳಿಪಿಳಿ ಎಂದು ಕಾಣುತ್ತಿದ್ದವು. ಶ್ರೀನಿವಾಸ ಅವಧಾನಿಯವರು ಕೂಡಲೆ ಗುರ್ತಿಸಿ ಕಿಟ್ಟಣ್ಣನನ್ನು ಎಳೆದು ತಂದು ದಡ ತಲುಪಿಸಿದರು. ಹೀಗೆ ಕಿಟ್ಟಣ್ಣ ತನಗೆ ಬಂದ ಆಪತ್ತಿನಿಂದ ಪಾರಾದ. ಅವನು ನೀರೂ ಕುಡಿದಿರಲಿಲ್ಲ, ಕತ್ತಲಿನಲ್ಲಿ ಯಾರಿಗೂ ಕಾಣುತ್ತಲೂ ಇರಲಿಲ್ಲ. ಮುಖ ಮಾತ್ರ ಮೇಲೆ. ಮೈಯೆಲ್ಲಾ ಮುಳುಗಿತ್ತು. ಆದರೂ ಈಜುಬಿದ್ದ ಅವಧಾನಿಗಳಿಗೆ ಮಾತ್ರ ಅವನು ಕಂಡಿದ್ದೂ ಆಶ್ಚರ್ಯವೇ !

❁ ❁ ❁

ಇದೇ ರೀತಿ ಇನ್ನೊಬ್ಬ ಹುಡುಗ ನೀರಿನಲ್ಲಿ ತೇಲಿ ಹೋದಾಗಲೂ ಊರ ಜನ ನದಿಯ ಹತ್ತಿರ ಸೇರಿದರು. ನೀರಿಗೆ ಈಜು ಬಿದ್ದ ಯಾರೋ ಮೆಟ್ಟಿಲ ತುದಿಯಲ್ಲೇ ತೇಲುತ್ತಿದ್ದ ಅವನನ್ನು ಎಳೆದುತಂದು, ''ಉಸಿರೇ ಆಡುತ್ತಿಲ್ಲ'' ಎಂದರು ಗಾಬರಿಯಿಂದ. ಅಷ್ಟರಲ್ಲಿ ದಡದಲ್ಲಿದ್ದವರು, ''ಎಳೆದು ತನ್ನಿ ನೋಡೋಣ, ದೇವರಿದ್ದಾನೆ'' ಎಂದು ಕೂಗಿದರು. ಎಳೆದು ದಡಕ್ಕೆ ತಂದಾಗ, ಉಸಿರು ನಿಂತೇ ಹೋಗಿತ್ತು. ನಮ್ಮೂರ ಹಿರಿಯರಾದ ಸುಬ್ರಾಯ ಅವಧಾನಿಗಳು ಆ ಸಮಯ ಮತ್ತೂರು ಕಡೆಯ ದಡದಲ್ಲಿದ್ದರು. ಅವರು, ''ಹೆದರಬೇಡಿ, ಮಗುವನ್ನು ಕಾಲುಹಿಡಿದು ಮೇಲೆತ್ತಿ ಮೃದುವಾಗಿ ಬೆನ್ನು ತಟ್ಟಿ, ನೀರಿಳಿದನಂತರ ಕೆಳಗೆ ಮಲಗಿಸಿ ಮೃದುವಾಗಿ ಹೊಟ್ಟೆ ಅಮುಕಿ, ನೀರು ತಾನೇ ಈಚೆಗೆ ಬರುತ್ತದೆ. ಆಯುಸ್ಸು ಗಟ್ಟಿ ಇದ್ದರೆ ಉಳಿಯುತ್ತಾನೆ'' ಎಂದರು. ಅವರ ಅನುಭವದ ಮಾತುಗಳು ಸುಳ್ಳಾಗಲಿಲ್ಲ. ಅವನ ಆಯುಸ್ಸೂ ಗಟ್ಟಿ ಇತ್ತು. ಅವರು ಹೇಳಿದುದನ್ನೆಲ್ಲ ಮಾಡಿದ ಅನಂತರ ಬಾಲಕ ಕಣ್ಣುಬಿಟ್ಟ, ಉಸಿರಾಡಿದ. ಅವನನ್ನು ಶಿವಮೊಗ್ಗಕ್ಕೆ ಕರೆದೊಯ್ದು ಒಂದು ದಿನ ಚಿಕಿತ್ಸೆ ಕೊಡಿಸಿ ವಾಪಸು ಕರೆತಂದರು. ಅವನೇ ನಮ್ಮ ನೆಚ್ಚಿನ ಮತ್ತೂರು ಸುಬ್ಬಣ್ಣ; ಬೆಳೆದು ಈಗ ದೊಡ್ಡ ಶಾಲೆಯೊಂದರ ಪ್ರಾಂಶುಪಾಲನಾಗಿದ್ದಾನೆ!

❁ ❁ ❁

ನನ್ನ ಪ್ರಿಯುಗೆಳೆಯರಲ್ಲೊಬ್ಬ ರಾಜು. ಅವನು ಹೊಸಹಳ್ಳಿಯಲ್ಲಿದ್ದವನು. ಸಾಮಾನ್ಯವಾಗಿ ದಿನವೂ ನಾವು ಭೇಟಿಯಾಗುತ್ತಿದ್ದೆವು. ನದಿ ಆಗ ತುಂಬಿ ಹರಿಯುತ್ತಿತ್ತು.

ನನಗೂ ಹದಿನಾಲ್ಕು ಹದಿನೈದರ ಪ್ರಾಯ, ಅವನೂ ನನ್ನ ಓರಗೆಯವನೇ. ನಾವಿಬ್ಬರೂ ಮಾತನಾಡುತ್ತಾ, ''ನದಿಯ ಮೇಲಕ್ಕೆ ಹೋಗಿ ಅಲ್ಲಿಂದ ಈಜಿಕೊಂಡು ಕೆಳಗೆ ಬರೋಣ'' ಎಂದು ದಡದಲ್ಲಿ ಮೇಲಕ್ಕೆ ಹೋಗಿ ಅಲ್ಲಿಂದ ಈಜು ಬಿದ್ದು ಕೆಳಗೆ ಬರತೊಡಗಿದೆವು.

ಇದು ನಮ್ಮೂರಿನಲ್ಲಿ ಸರ್ವೇಸಾಮಾನ್ಯ. ತುಂಬುಹೊಳೆ ಕಂಡರೆ ಈಜುಗಾರನಿಗೆ ಈಜುವ ಬಯಕೆಯಾಗುತ್ತದೆ. ತುಂಬಿದ ನೀರೂ 'ಬಾ... ನನ್ನನ್ನು ಈಸಿ ಗೆಲ್ಲು' ಎಂದ ಹಾಗಾಗುತ್ತದೆ ಎನ್ನುತ್ತಾರೆ ಹಿರಿಯರು. ಹಾಗೆಯೇ ನಾವೂ ಆ ದಿನ ಈಜು ಬಿದ್ದುದು. ಈಜಿಕೊಂಡು ಕೆಳಬರುತ್ತಿದ್ದಂತೆಯೇ ರಾಜು ಇದ್ದಕ್ಕಿದ್ದಂತೆ, ''ಅಶ್ವತ್ಥ, ಈಗ ನಾನು ಮುಳುಗಿಹೋದೆ ಅಂದುಕೋ.... ಏನು ಮಾಡುತ್ತೀಯೆ ನೀನು ಆಗ?'' ಎಂದ. ನನಗೆ ಅದು ಸಮಂಜಸ ಪ್ರಶ್ನೆ ಎನಿಸಲಿಲ್ಲ... ''ನೀನು ಮುಳುಗುವುದೂ ಇಲ್ಲ, ನಿನಗೆ ಚೆನ್ನಾಗಿ ಈಜು ಬರುತ್ತದೆ. ಅಲ್ಲದೆ ಅದೇಕೆ ಅಂಥ ಅಪಶಬ್ದಗಳು ಈಗ? ಈಗ ನಾವು ಮುಂದೆ ಹೋಗಿ ದಡ ಸೇರೋಣ ಅಷ್ಟೆ... ನಡಿ...'' ಎಂದೆ ನಾನು. ''ಹಾಗಲ್ಲ. ಒಂದು ವೇಳೆ ನಾನು ಮುಳುಗಿ ಹೋದ್ರೆ ಅಂತ ಕೇಳಿದೆ! ಹೋಗಲಿ. ಈಗ, ನೀನೇ ಮುಳುಗಿ ಹೋದರೆ ನಾನು ಏನು ಮಾಡ್ತೀನಿ ಗೊತ್ತಾ?'' ಎಂದ. ''ಏನು ಮಾಡುತ್ತೀ? ನನಗಂತೂ ಗೊತ್ತಿಲ್ಲಪ್ಪ'' ಎಂದೆ ನಾನು. ''ಒಂದು ವೇಳೆ ನೀನು ಮುಳುಗಿ ಹೋದರೆ ನಾನಂತೂ ದಡ ಸೇರುವುದಿಲ್ಲ, ನಾನು ನಿನ್ನ ಜತೆಗೇ ಮುಳುಗಿಹೋಗುತ್ತೇನೆ. ಒಬ್ಬನೇ ಹೋಗಿ ನಿಮ್ಮ ತಾಯಿಗೆ, 'ಅಶ್ವತ್ಥ ನನ್ನ ಕಣ್ಣೆದುರು ಮುಳುಗಿದ' ಎಂದಂತೂ ಹೇಳಲಾರೆ.... ಹೋದ್ರೆ ಇಬ್ಬರೂ ಒಟ್ಟಿಗೇ ಹೋಗುವಾ, ಮೇಲೆ ಬಂದರೆ ಒಟ್ಟಾಗಿಯೇ ಮೇಲೆ ಬರುವಾ'' ಎಂದ! ಅವನ ಮಾತು ನನಗೆ ಆಶ್ಚರ್ಯ ತರಿಸಿತು! ನಿಜಕ್ಕೂ ಅಂತಹ ಸ್ನೇಹವೇ ಅವನದು! ಅಂತೂ ಆ ದಿನ ನಾವಿಬ್ಬರೂ ಸುರಕ್ಷಿತವಾಗಿ ಈಜಿಕೊಂಡು ದಡ ಸೇರಿದೆವು. ಆದರೆ ಅವನ ಮಾತುಗಳು ಮಾತ್ರ ಕಿವಿಯಲ್ಲಿ ಇಂದಿಗೂ ರಿಂಗಣಿಸುತ್ತಿವೆ!

❁ ❁ ❁

ನಿಜಕ್ಕೂ ನದಿಯಲ್ಲಿ ಬಿದ್ದವರನ್ನು ಹಿಡಿದು ಎಳೆದು ತರುವುದು ಸಾಮಾನ್ಯದ ಕೆಲಸವಲ್ಲ. ಎಂಟೆದೆ ಬೇಕು ಅದಕ್ಕೆ. ಆದರೆ ಒಮ್ಮೆ ನಾನೇ ಮಾಡಿದ ಅಚಾತುರ್ಯವನ್ನು ನಾನೆಂದೂ ಮರೆಯುವಂತಿಲ್ಲ. ಅದೊಂದು ದಿನ ಅಮಾವಾಸ್ಯೆಯಲ್ಲಿ ನದಿಯಲ್ಲಿ ಸ್ನಾನ ಮಾಡಿ ತರ್ಪಣ ಕೊಡಲು ಹೋದೆ. ಸೀನಣ್ಣ ಎನ್ನುವ ನಮ್ಮ ಬಂಧುಗಳ ಹುಡುಗ ಸ್ವಲ್ಪ ದೂರದಲ್ಲಿ ಕೊಡ ಹಿಡಿದು ನದಿಯಲ್ಲಿ ಈಜುತ್ತಿದ್ದ. ಕೊಡವನ್ನು ಬೋರಲು ಮಾಡಿದರೆ ಅದು ನೀರಿನಲ್ಲಿ ಮುಳುಗುವುದಿಲ್ಲ. ಅದರ ತಳದ ಕುತ್ತಿಗೆಯನ್ನು ಹಿಡಿದು ನಿಧಾನವಾಗಿ ಈಜು ಕಲಿಯಬಹುದು. ಕೊಡ ಮಾತ್ರ ಪಕ್ಕಕ್ಕೆ ವಾಲಿ ಮುಳುಗದಂತೆ ನೋಡಿಕೊಂಡಿರಬೇಕಷ್ಟೆ. ನಾನು ಅಲ್ಲೇ ತರ್ಪಣ ಕೊಡುತ್ತ ಕುಳಿತಿದ್ದೆ. ಸೀನಣ್ಣನನ್ನು ನೋಡಿದಾಗ ಅವರ ಮನೆಯ ಕಡುಬಡತನದ ಚಿತ್ರ ಕಣ್ಮುಂದೆ ತೇಲಿಬಂದಿತ್ತು (ಈಗ ಅವರ ಮನೆಯವರು ನಮ್ಮೂರಿನಲ್ಲಿ ಚೆನ್ನಾಗಿದ್ದಾರೆ!) ನಾನು ನನ್ನ ಕೆಲಸ ಮುಂದುವರೆಸಿದ್ದಾಗಲೇ ಸೀನಣ್ಣನ ಕೈಹಿಡಿದ ಕೊಡ ವಾಲಿ ಪಕ್ಕಕ್ಕೆ ಸರಿದು ಹರಿಯುವ ನೀರಿನಲ್ಲಿ ತೇಲಿ ದೂರವಾಯಿತು. ಸೀನಣ್ಣ ಮುಳುಗತೊಡಗಿದ. ನಾನು ಮುಳುಗುವಷ್ಟು ಎತ್ತರದ ನೀರೂ ಅಲ್ಲಿರಲಿಲ್ಲ. ಸೀನಣ್ಣ ಬಾಲಕ, ಅವನು ಮುಳುಗಬಹುದಿತ್ತು. ಅಲ್ಲದೆ ನದಿಗೆ ಈಜು ಬಿದ್ದು ಅವನನ್ನು ಹಿಡಿದು ದಡಕ್ಕೆ ಎಳೆದು ತರುವಷ್ಟರ ಮಟ್ಟಿನ ಈಜೂ ನನಗೆ ಬರುತ್ತಿತ್ತು. ಆದರೂ ತರ್ಪಣ ಕೊಡುತ್ತಿದ್ದ ನಾನು ಮಧ್ಯೆ ಏಳುವುದು ಹೇಗೆ ಎನ್ನಿಸಿ, ''ನೋಡಿ, ಅಲ್ಲಿ ಸೀನಣ್ಣ ಮುಳುಗುತ್ತಿದ್ದಾನೆ...'' ಎಂದು ನಾನೇ ಕೂಗಿದೆ. ನಾನೇ ಅವನನ್ನು ಕಾಪಾಡಬಹುದು ಎನ್ನುವ ವಿಷಯ ನನಗೆ ಹೊಳೆಯಲೇ ಇಲ್ಲ. ದಡದಲ್ಲಿದ್ದ ಹೆಣ್ಣುಮಕ್ಕಳು ಕೂಡಲೆ ನೀರಿಗೆ ಬಿದ್ದು, ಸಾಹಸ ಮಾಡಿ ಮುಳುಗುತ್ತಿದ್ದ ಸೀನಣ್ಣನನ್ನೂ ತೇಲಿ ಹೋಗುತ್ತಿದ್ದ ಕೊಡವನ್ನೂ ಹಿಡಿದುತಂದರು.... ನೀರಿನಲ್ಲಿ ಮುಳುಗಿದವನಿಗೆ, ಜೀವದಾನ ಮಾಡಿದ ಪುಣ್ಯ ನನಗೆ ಲಭಿಸಲಿಲ್ಲ. ಆ ಹೆಣ್ಣುಮಕ್ಕಳಿಗೆ ದಕ್ಕಿತು. (ಈ ಸೀನಣ್ಣನೇ ದಿನಾಂಕ ೨.೧೧.೦೫ರಂದು ಮತ್ತೂರಿನಲ್ಲಿ ನಡೆದ ಶ್ರೀರಾಮ ಮಹಾಸಾಮ್ರಾಜ್ಯ ಪಟ್ಟಾಭಿಷೇಕದ ಸಂತರ್ಪಣೆಯಲ್ಲಿ ಎಂಬತ್ತು ಸಾವಿರ ಜನರಿಗೆ ಅಡುಗೆ ಮುಖ್ಯಸ್ಥನಾಗಿದ್ದ 'ನಳಮಹಾರಾಜ!')

ಕೆಲವು ಕ್ಷಣಗಳಲ್ಲೇ ನನಗೆ ತುಂಬ ನಾಚಿಕೆಯಾಯಿತು. ನಾನು ಗಂಡಸಾಗಿದ್ದು, ಈಜು ಬರುವವನಾಗಿದ್ದು, ಆ ಹುಡುಗನನ್ನು ರಕ್ಷಣೆ ಮಾಡದೆ ಹೋದೆನಲ್ಲ ಎನಿಸಿ ಲಜ್ಜೆಪಟ್ಟೆ. ದಡ ಸೇರಿದ ಹುಡುಗನನ್ನು ಕಂಡು ಅವನನ್ನು ರಕ್ಷಿಸಿದ ಪುಣ್ಯ ನನಗಿಲ್ಲದೇ ಹೋಯಿತಲ್ಲ ಎಂದು ವ್ಯಥೆಯೂ ಆಯಿತು... ನಿಜಕ್ಕೂ ಹಿಂದೆ ಒಮ್ಮೆ, ಒಂದು ಮಗು ಜಗುಲಿಯಿಂದ ಬಿದ್ದುಬಿಟ್ಟಾಗ, ''ತಲೆ ಒಡೆದಿದೆ. ರಕ್ತ ಸುರಿಯುತ್ತಿದೆ. ಮಗೂನ ಎಬ್ಬಿಸುವವರು ಯಾರೂ ಇಲ್ಲವೇ? ನಾನು ಮಡಿ, ಏನು ಮಾಡಲೀ? ಏನು ಮಾಡಲೀ?'' ಎಂದು ಯಾರೋ ಅನ್ನುತ್ತಿದ್ದರಂತೆ. ಅವರ ಗುರು ನಾನಾದೆ. ನಮ್ಮ ಮಡಿ ಸಂಪ್ರದಾಯದ ಕಟ್ಟು ನಮಗರಿವಿಲ್ಲದಂತೆಯೇ ಅದೆಷ್ಟು ನಮ್ಮನ್ನು ಬಿಗಿದುಕಟ್ಟಿದೆ ಎನಿಸಿತು. 'ಛೇ, ಹೀಗಾಗಬಾರದಿತ್ತು' ಎನಿಸಿದರೂ ಅವಕಾಶ ಕೈತಪ್ಪಿ ಹೋಗಿತ್ತು. ಮಗುವಿನ ಪ್ರಾಣಕ್ಕಿಂತ ನನಗೆ ನನ್ನ

ತರ್ಪಣದ ಕೆಲಸವೇ ಹೆಚ್ಚಾಯಿತು ಎನ್ನುವುದಿಲ್ಲ ನಾನು. ಆದರೆ ತರ್ಪಣದ ಕೆಲಸದಿಂದ ಮಧ್ಯೆ ಏಳುವುದು ಸರಿಯೇ ಎನ್ನುವ ಜಿಜ್ಞಾಸೆ, ಆ ಬಗೆಗಿನ ಭ್ರಮೆ ನನ್ನನ್ನು ಆವರಿಸಿ ನನ್ನ ಒಳಗಿನ ಮನಸ್ಸೂ, ಬುದ್ಧಿಯೂ ಕೆಲಸ ಮಾಡುವುದನ್ನು ನಿಲ್ಲಿಸಿದ್ದವು. ಹಾಗಾಗಿ ನಾನು ಆ ದಿನ ತಲೆ ತಗ್ಗಿಸುವಂತಾಯಿತು.

ಅದೇಕೆ ನನಗೆ ಹಾಗಾಯಿತು? ಪ್ರಶ್ನೆ ನನ್ನನ್ನು ಕಾಡಿತು.... ನಾನು ನಾರಾಯಣ ಉಪಾಧ್ಯಾಯರ ಮಗ. ಅವರ ಮಗನಾಗಿ ಹಾಗೆ ಆಗಬಹುದಿತ್ತೆ ನನಗೆ? ಅವರಾದರೂ ಎಂಥವರಾಗಿದ್ದರು....? ಮನಸ್ಸು ಮತ್ತೆ ತಂದೆಯವರು ಮಾಡಿದ ಸಾಹಸವನ್ನೂ, ಊರಿನವರೂ, ಮನೆಯವರೂ ಹೇಳುತ್ತಿದ್ದುದನ್ನೂ ಮೆಲುಕು ಹಾಕಿತು.

೧೯೨೪ರಲ್ಲಿ ನಾನಿನ್ನೂ ಹುಟ್ಟಿರಲಿಲ್ಲ. ನಮ್ಮ ತಂದೆಗೆ ಇನ್ನೂ ಎರಡನೆಯ ಮದುವೆ ಆಗಿರಲಿಲ್ಲ. ತಂದೆ ಮತ್ತು ದೊಡ್ಡಮ್ಮ ಇದ್ದರು. ಆ ವರ್ಷ ಅತಿವೃಷ್ಟಿಯಾಗಿ ಎಲ್ಲೆಡೆ ನದಿಗಳು ತುಂಬಿ ಹರಿದವು. ನಮ್ಮೂರ್ರ ತುಂಗೆಯೂ ಅದಕ್ಕೆ ಹೊರತಾಗಿರಲಿಲ್ಲ. ಮಳೆ ಧಾರಾಕಾರವಾಗಿ ಸುರಿಯುತ್ತಿದ್ದ ಆ ರಾತ್ರಿ ನದಿಯಲ್ಲಿ ಪ್ರವಾಹ ಬಂದು ನಮ್ಮ ಮನೆಗೂ ನೀರು ನುಗ್ಗಿತು. ನಮ್ಮ ತಂದೆ ಅದು ಮಳೆ ನೀರು ಎಂದು ಭಾವಿಸಿದ್ದರು. ಆದರೆ ಏಕೋ ಅನುಮಾನ ಬಂದು ಹೊರಬಂದು ನೋಡಿದರೆ ಮನೆಯೊಳಗೆ ನೀರು ಮೊಣಕಾಲು ಮುಳುಗುವಷ್ಟು ಬಂದಿತ್ತು. ರಸ್ತೆಯಲ್ಲಿ ಮಂಡಿ ಉದ್ದದ ನೀರು! ತಂದೆಯಂತೆಯೇ ಅನುಭವವಾದ ಅಕ್ಕಪಕ್ಕದ ಮನೆಯವರೂ ಎದ್ದು ಹೊರಬಂದು ಕೂಗಿ ಕೂಗಿ ಊರಿನವರನ್ನೆಲ್ಲ ಎಬ್ಬಿಸಿದರು. ಎಲ್ಲರೂ ಪ್ರವಾಹದ ನೀರನ್ನು ಎದುರಿಸುವುದಕ್ಕೆ ಸಜ್ಜಾದರು. ಮಧ್ಯರಾತ್ರಿಯ ಆ ಗಲಾಟೆಯಲ್ಲೂ ಎಲ್ಲೋ ದೂರದಲ್ಲಿ ಯಾರೋ ಅಳುತ್ತಿದ್ದ ಶಬ್ದ ಕೇಳಿಸಿತು ತಂದೆಯವರಿಗೆ. ಎಲ್ಲರೂ ಗಮನವಿಟ್ಟು ಅಳು ಕೇಳಿ ಬರುತ್ತಿದ್ದ ದಿಕ್ಕಿನೆಡೆಗೆ ನೋಡಿದರು. ಫಕ್ಕನೆ ಹೊಳೆಯಿತು. ಆ ಅಳು ಹರಿಜನ ಕೇರಿಯಿಂದ ಬರುತ್ತಿದ್ದುದು. ಅವರ ಕೇರಿ ತಗ್ಗು ಪ್ರದೇಶದಲ್ಲಿದ್ದ ಕಾರಣ ಅಲ್ಲಿಗೆ ನೀರು ನುಗ್ಗಿ ಅವರು ಅಪಾಯದಲ್ಲಿದ್ದಾರೆಂದು ಕ್ಷಣಮಾತ್ರದಲ್ಲಿ ತಂದೆಗೆ ಹೊಳೆಯಿತು. ಅವರೂ ಅವರ ಗೆಳೆಯರೂ ತಡ ಮಾಡಲಿಲ್ಲ. ತಂದೆಯೂ ಅವರ ಗೆಳೆಯರೂ ಈಜಿಕೊಂಡು ಆ ಕೇರಿಯತ್ತ ಹೋದರು. ಮರಹತ್ತಿ ಕುಳಿತಿದ್ದ ಅವರಿಗೆ, ''ಹೆದರಬೇಡಿರೋ, ಈಗ ಮತ್ತೆ ಬರುತ್ತೇವೆ'' ಎಂದು ಹೇಳಿ ಮತ್ತೆ ಈಜಿಕೊಂಡು ವಾಪಸು ಬಂದರು. ಅವರಿವರ ಮನೆಯಲ್ಲಿದ್ದ ದೊಡ್ಡ ದೊಡ್ಡ ಬಿದಿರು ಬಂಬುಗಳನ್ನು ಕಲೆಹಾಕಿದರು. ಬಾವಿಯ ಹಗ್ಗಗಳನ್ನು ಸೇರಿಸಿ ಕಟ್ಟಿದರು. ಅಗಲವಾದ ತೆಪ್ಪವೊಂದನ್ನು ಸರಸರನೆ ಸಿದ್ಧಮಾಡಿ ದೊಡ್ಡದಾದ ಉದ್ದವಾದ ಗಳುವೊಂದನ್ನು ಹಿಡಿದು, ತಂದೆ ಹಾಗೂ ಅವರ ಮಿತ್ರರಾದ ಅಯ್ಯಭಟ್ಟರು, ಶ್ರೀನಿವಾಸ ಅವಧಾನಿಗಳ ತಂದೆ ಸೂರ್ಯನಾರಾಯಣ ಅವಧಾನಿ, ವೆಂಕಟೇಶ ಅವಧಾನಿ, ಇವರುಗಳೆಲ್ಲ ನೀರನ್ನು ತಳ್ಳುತ್ತ ತೆಪ್ಪ ನಡೆಸಿಕೊಂಡು ಅಳು ಕೇಳಿ ಬರುತ್ತಿದ್ದ ದಿಕ್ಕಿನೆಡೆಗೆ ಹೋದರು. ಕತ್ತಲಲ್ಲಿ ಕರಗಿ ಹೋದ ಅವರನ್ನು ನೋಡಿದ ಇತರರ ಎದೆ ಡವಗುಟ್ಟುತ್ತಿತ್ತು, ಏನಾದೀತೋ ಎನ್ನುವ ಆತಂಕದಿಂದ. ಸುಮಾರು ಮೂರು ಫರ್ಲಾಂಗ್ ದೂರದಲ್ಲಿದ್ದ ಹರಿಜನ ಕೇರಿಗೆ ಹೋದರೆ ಅಲ್ಲಿ ಮಿಣ ಮಿಣ ದೀಪ ಹಿಡಿದು ಮರ ಏರಿ ಕುಳಿತ ಸುಮಾರು ಹದಿನೇಳು ಮಂದಿ ಇವರುಗಳು ಬರುವುದನ್ನೇ ನೋಡುತ್ತ ''ಅಯ್ಯಾರೆ... ಅಯ್ಯಾರೆ'' ಎಂದು ಕೂಗಿದರು. ಅದಕ್ಕೆ ಉತ್ತರವಾಗಿ ತಂದೆಯವರು, ''ಹೆದರಬೇಡಿರೋ, ಇದೋ ನಾವು ಬಂದೆವಲ್ಲ... ಒಬ್ಬೊಬ್ಬರಾಗಿ ಇಳಿದು ತೆಪ್ಪದ ಮೇಲಕ್ಕೆ ಬನ್ನಿ, ಆರು ಜನರನ್ನು ಮಾತ್ರ ತಡೆಯುತ್ತದೆ ಇದು. ನಾವು ನಾಲ್ಕು ಜನ ಇದ್ದೇವೆ; ನೀವು ಇಬ್ಬಿಬ್ಬರು ಬನ್ನಿ. ಈಜು ಬರುವವರು ನಮ್ಮ ತೆಪ್ಪದ ಹಿಂದೆ ಈಜಿಕೊಂಡು ಬನ್ನಿ. ಈಜು ಬರದವರು ಅಲ್ಲೇ ಕುಳಿತಿರಿ. ನಾವು ಬಂದು ಕರೆದುಕೊಂಡು ಹೋಗುತ್ತೇವೆ'' ಎಂದವರೇ ಮರದ ಮೇಲೆ ಕುಳಿತಿದ್ದವನನ್ನು ಕೆಳಗಿಳಿಯಲು ಹೇಳಿ, ಅವನ ಕೈ ಹಿಡಿಯಲು ತಮ್ಮ ಕೈಚಾಚಿದರು. ಅವನು ಆ ಗಳಿಗೆಯಲ್ಲೂ ಅನುಮಾನಿಸುತ್ತ ಸುಮ್ಮನಿದ್ದ.

ಹರಿಜನರಿಗೆ ಊರೊಳಗೆ ಅಷ್ಟು ಸುಲಭವಾಗಿ ಪ್ರವೇಶ ಇಲ್ಲದಿದ್ದ ಕಾಲವದು. ಅವರು ಬರುವ ಮುನ್ನ ಯಾರಾದರೂ ಬಾಗಿಲಲ್ಲಿದ್ದರೆ, ''ಅಯ್ಯಾರೆ... ನಾನು ಮಾಚ ಬರ್ತಿದೀನಿ... ಒಳಕ್ಕೋಗಿ.... ಕೊನೇ ಮನೇಲಿ ಕೆಲಸ ಮಾಡಿದ್ದು ದುಡ್ಡು ಈಸ್ಕೋಬೇಕು. ಅದಕ್ಕೆ'' ಎಂದು ಮುಂಚಿತವಾಗಿಯೇ ಹೇಳಿಕೊಂಡು ಬರಬೇಕಿತ್ತು. ಹೊರಗಿದ್ದವರು ಒಳಸರಿದ ಅನಂತರ ಅವನು ಅಲ್ಲಿಂದ ಹಾದುಹೋಗಬೇಕಿತ್ತು. ಅಂಥದರಲ್ಲಿ, 'ಈಗ ಅಯ್ಯಾರೇ ಕೈ ನೀಡಿ ''ಇಳಿದು ಕೆಳಗೆ ಬಾ'' ಎನ್ನುತ್ತಿದ್ದಾರಲ್ಲ? ಅವರನ್ನು ಮುಟ್ಟಿದರೆ ನನಗೆ ಪಾಪ ತಟ್ಟುವುದಿಲ್ಲವೋ? ಅವರು ಮಡಿ. ನಾನು ಹೇಗೆ ಕೈ ಕೊಡುವುದು!' ಎಂದು ಅವನೂ ಯೋಚಿಸಿದ್ದಾನು. ಅವನು ಅನುಮಾನಿಸಿದ್ದುದನ್ನು ಕಂಡು ತಂದೆಯವರು, ''ನೀನು ಯೋಚನೆ ಮಾಡುತ್ತ ಕೂರಲು ಸಮಯವಿಲ್ಲ. ಹೊಳೆ ಏರುತ್ತಿದೆ. ಎಲ್ಲರೂ ಮೊದಲು ಜೀವ ಉಳಿಸಿಕೊಳ್ಳೋಣ. ನಾನೇ ಕೈ ನೀಡಿದ್ದೇನೆ, ಕೈಕೊಡು. ತೆಪ್ಪಕ್ಕೆ ಹತ್ತು ಬಾ, ಮಡಿ-ಮೈಲಿಗೆ ಎಲ್ಲವೂ ಆಮೇಲೆ. ಮೊದಲು ಎಲ್ಲರೂ ಬದುಕೋಣ... ಬಾ... ಬಾ... ಬೇಗ'' ಎಂದರು. ಇನ್ನು ಅವನು ತಡಮಾಡಲಿಲ್ಲ. ಅವರ

ಸುಭದ್ರವಾದ ಕೈಯಲ್ಲಿ ತನ್ನ ಕೈ ಇಟ್ಟು ಕೆಳಗಿಳಿದು ತೆಪ್ಪ ಏರಿದ.....

ಹೀಗೇ ಹೆಂಗಸರು-ಮಕ್ಕಳನ್ನೆಲ್ಲ ತೆಪ್ಪಕ್ಕೇರಿಸಿ ಊರ ಒಳಗಿನ ಲಕ್ಷ್ಮೀನಾರಾಯಣ ದೇವಸ್ಥಾನದ ಬಳಿ ಇಳಿಸಿದ್ದಾಯಿತು. ಅಲ್ಲಿಯವರೆಗೆ ನಮ್ಮವರೂ ಅಲ್ಲಿಯೇ ಸೇರಿಯಾಗಿತ್ತು. ಅದು ಸ್ವಲ್ಪ ಎತ್ತರದ ಜಾಗ. ಅಲ್ಲಿಗೆ ನೀರು ಬರುವ ಸಂಭವವಿರಲಿಲ್ಲ. ಅಂತೂ ಹೀಗೆಯೇ ಎಲ್ಲರೂ ಕಲೆತು ಸುಮಾರು ಎರಡು ದಿನಗಳ ಕಾಲ ಒಟ್ಟಿಗೇ ಅಡುಗೆ ಮಾಡಿ ಊಟ ಮಾಡಿಕೊಂಡು ಪ್ರವಾಹ ಇಳಿದು ಎಂದಿನಂತೆ ಆದಾಗ ಎಲ್ಲರೂ ಅವರವರ ಮನೆಯ ಯೋಗಕ್ಷೇಮ ನೋಡಲು ಹೊರಟರು. ಹರಿಜನರೂ ಹೊರಟಾಗ ತಂದೆಯವರು, ''ಹೋಗಿ ನೋಡ್ರೋ ಏನಾಗಿದೆ ಅಂತ. ಭಯಪಡಬೇಡಿ. ಸಾಧ್ಯವಾದರೆ ಮತ್ತೆ ಮನೆ ಕಟ್ಟಿ ನಿಲ್ಲಿಸಿ. ಇಲ್ಲವಾದರೆ ಹೊಸ ಗುಡಿಸಿಲು ಹಾಕಿಕೊಂಡರಾಯಿತು. ಅದಕ್ಕೆ ಬೇಕಾಗುವ ಅಡಕೆ ಮರ, ಸೋಗೆ, ಏನಾದರೂ ಬೇಕಿದ್ದರೆ ಬಂದು ಕೇಳಿ, ತೆಗೆದುಕೊಳ್ಳಿ, ನಮ್ಮ ತೋಟದಿಂದ'' ಎಂದು ಧೈರ್ಯ ಹೇಳಿ ಕಳುಹಿಸಿಕೊಟ್ಟರು. ಅಂದಿನ ಪ್ರವಾಹದಲ್ಲಿ ನಮ್ಮ ಮನೆಯೂ ಬಿದ್ದುಹೋಯಿತಂತೆ. ಅದೇ ಜಾಗದಲ್ಲೇ ಈಗ ಮತ್ತೂರು ಕೃಷ್ಣಮೂರ್ತಿಯವರ ಮನೆ ಕಟ್ಟಿರುವುದು.

ಇದು ನಮ್ಮ ತಂದೆಯವರ ಸಾಹಸಗಾಥೆ! ಯಾವ ಹರಿಜನರನ್ನು ನೋಡಿದರೇ ಮೈಲಿಗೆ ಎನ್ನುವ ಹೀನ ಭಾವ ಇತ್ತೋ, 'ಅವರು ನಮ್ಮನ್ನು ನೋಡಿ- ಮುಟ್ಟಿದರೆ ಅದು ನಮಗೇ ಪಾಪ' ಎನ್ನುವ ಭಾವ ಹರಿಜನರಲ್ಲಿತ್ತೋ ಅಂತಹ ಸಮಯದಲ್ಲಿ ಅವರನ್ನು ಧೈರ್ಯವಾಗಿ ರಕ್ಷಿಸಿ, ಕರೆತಂದು, ಆಶ್ರಯ ಕೊಟ್ಟು ಜೋಪಾನದಿಂದ ಕಳುಹಿಸಿಕೊಟ್ಟ ತಂದೆಯ ಮಗನಾಗಿ, ಈ ದಿನ ನಾನು ನೀರಿಗೆ ಬಿದ್ದ ಸೀನಣ್ಣನನ್ನು ರಕ್ಷಿಸುವುದನ್ನು ಬಿಟ್ಟು ತರ್ಪಣದ ಮಧ್ಯದಲ್ಲಿ ಏಳುವುದು ಹೇಗೆ ಎಂದು ಸುಮ್ಮನಾದೆನಲ್ಲ, ಇದೆಂಥ ವಿಸ್ಮೃತಿ ಎನ್ನಿಸಿಯೇ ನನಗೆ ಬಹಳ ಲಜ್ಜೆಯಾದುದು. ಆದರೆ ಸಮಯ ಮಿಂಚಿಹೋಗಿತ್ತು. ಒಂದಂತೂ ನಿಜ. ಒಂದು ವೇಳೆ ಆ ದಿನ ನೀರಿಗೆ ಬಿದ್ದ ಸೀನಣ್ಣನಿಗೇನಾದರೂ ಅಪಾಯವೇ ಆಗಿ ಹೋಗಿದ್ದರೆ ಬಹುಶಃ ನಾನು ಬದುಕಿರುವ ತನಕವೂ ನನ್ನನ್ನು ನಾನು ಕ್ಷಮಿಸಿಕೊಳ್ಳಲು ಆಗುತ್ತಿರಲಿಲ್ಲ. ದೇವರು ಆ ಅಪಾಯದಿಂದ ಅವನನ್ನು ಪಾರುಮಾಡಿ, ನನ್ನ ಮಾನವನ್ನೂ ಉಳಿಸಿದ ಎನ್ನಬೇಕು ಅಷ್ಟೆ!

೧೩. ಮತ್ತೆ ಮತ್ತೆ ತಂದೆಯ ನೆನಪು

ತಂದೆಯ ನೆನಪಾದಾಗ ನನಗೆ ಹಿಂದು-ಮುಂದಿನದೆಲ್ಲವೂ ಮರೆತುಹೋದ ಅನುಭವವಾಗುತ್ತದೆ. ಕೇವಲ ಅವರ ನೆನಪು ಮಾತ್ರ ತಾನೇ ತಾನಾಗಿ ನನ್ನಲ್ಲಿ ಉಳಿದಿರುತ್ತದೆ ಅಷ್ಟೆ.... ನಮ್ಮ ತಂದೆ ಸಿಟ್ಟೇ ಇಲ್ಲದ ಶಾಂತಮೂರ್ತಿ. ಇಂದಿಗೂ ಊರ ಪುರೋಹಿತರ ವರ್ಚಸ್ಸನ್ನು ಉಳಿಸಿಹೋಗಿರುವ ನನ್ನ ತಂದೆಯನ್ನೇ ನಾನು ಸದಾ ಸ್ಮರಿಸುವುದು; ಅವರ ಕೃಪೆ, ಅವರು ಗಳಿಸಿದ ಗೌರವ, ಮರ್ಯಾದೆ, ಘನತೆಯನ್ನು ಪುರೋಹಿತನಾಗಿ ನಾನೂ ಉಳಿಸಿಕೊಂಡು ಬರಲು ಯತ್ನಿಸುತ್ತಿರುವುದು. ಅವರ ಸೌಮ್ಯ ಮಾತಿನ ರೀತಿಗೆ, ಎಷ್ಟು ತಗಾದೆ ಮಾಡುವವರೂ ತಣ್ಣಗೆ ಒಪ್ಪುವುದು ಸರ್ವೇಸಾಮಾನ್ಯವಾಗಿತ್ತು.

ಒಮ್ಮೆ ನಮ್ಮೂರಿನಲ್ಲಿ ಏನೋ ಸಮಾರಂಭ. ಹೊಸಹಳ್ಳಿ-ಮತ್ತೂರಿನ ಜನರೆಲ್ಲರೂ ಸೇರಿದ್ದರು. ಹಾಗೆ ಸಮಾರಂಭಗಳಾದಾಗ ನಮ್ಮಲ್ಲಿ ಹಿರಿಯರ ಊಟದ ಪಂಕ್ತಿ ಬೇರೆ, ಮಕ್ಕಳು ಹೆಂಗಸರ ಪಂಕ್ತಿ ಬೇರೆ, ಉಪನಯನ ಆದವರ, ತರುಣರ ಮಧ್ಯವಯಸ್ಕರ ಪಂಕ್ತಿ ಬೇರೆ. ಹೆಂಗಸರು ಎಲ್ಲರೂ ಸೇರಿ ಅಡುಗೆ ಮಾಡುವುದು, ನಾಲ್ಕೈದು ಮನೆಗಳಲ್ಲಿ ಊಟ ಬಡಿಸುವುದು ಪದ್ಧತಿ. ಹಿರಿಯರೆಲ್ಲರೂ ಊಟಕ್ಕೆ ಕುಳಿತ ಪಂಕ್ತಿಯಲ್ಲಿ ಶ್ರೀ ಸುಬ್ಬಾವಧಾನಿಗಳೂ ಕುಳಿತಿದ್ದರು. ಅವರಿಗೆ ಮೂಗಿನ ತುದಿಯಲ್ಲೇ ಸಿಟ್ಟು. ಊಟ ನಡೆಯುವಾಗ ಸಿಹಿಭಕ್ಷ್ಯ ಹೋಳಿಗೆಯನ್ನು ಬಡಿಸಲು ತಂದವರು ಸುಬ್ಬಾವಧಾನಿಗಳ ಪತ್ನಿಯೇ. ಪತಿಗೆ ಹೋಳಿಗೆ ಎಂದರೆ ಬಲುಪ್ರೀತಿ ಎಂದು ಅರಿತಿದ್ದ ಆಕೆ ಮೊರದಲ್ಲಿ ಸೇರಿಸಿಕೊಂಡು ಬಂದಿದ್ದ ಹೋಳಿಗೆಗಳನ್ನು ಅವರ ಎಲೆಯ ಮೇಲೆ ತಳ್ಳಿದರು. ಆರೇಳು ಹೋಳಿಗೆಗಳು ಒಟ್ಟಿಗೇ ಬಿದ್ದುವು. ಅದೇನು ಅನ್ನಿಸಿತೋ ಅವರಿಗೆ, ಹೆಂಡತಿಯನ್ನು ದುರುದುರನೆ ನೋಡಿ, ''ಏನಿದು? ಹೀಗೇ ಮಾಡುವುದು ನೀನು? ಭೂತಕ್ಕೆ ಬಡಿಸಿದಂತೆ ಬಡಿಸಿದ್ದೀಯಲ್ಲ? ನಾನು ತಿನ್ನುವುದಿಲ್ಲ. ಆಪೋಷಣ ತೆಗೆದುಕೊಂಡೆ'' ಎಂದವರೇ ಕೈಗೆ ನೀರು ಸುರಿದುಕೊಂಡು ಆಪೋಷಣ ತೆಗೆದುಕೊಂಡೇ ಬಿಟ್ಟರು! ಅವರ ಪತ್ನಿಗೆ ದಿಕ್ಕೇ ತೋಚದಂತಾಯಿತು. ಒಂದೆಡೆ ಎಲ್ಲರೆದುರೂ ರೇಗಿಸಿಕೊಂಡ ಅವಮಾನ. ಮತ್ತೊಂದೆಡೆ ಹಿರಿಯರ ಪಂಕ್ತಿಯಲ್ಲಿ ಎಲ್ಲರ ಊಟ ಆಗುವ ತನಕ ಎಲ್ಲರೂ ಕಾಯಬೇಕು. ಮಧ್ಯದಲ್ಲಿ ಹೀಗೆ

ಆಪೋಷಣ ತೆಗೆದುಕೊಂಡರೆ ಮಿಕ್ಕವರು ಯಾರೂ ಮುಂದಕ್ಕೆ ಊಟ ಮಾಡುವಂತಿಲ್ಲ. ಅವಾಕ್ಕಾದ ಎಲ್ಲರೂ ಊಟ ನಿಲ್ಲಿಸಿ ಬಿಟ್ಟಿದ್ದಾರೆ. ಊಟದಲ್ಲಿ ಇನ್ನೂ ಹೋಳಿಗೆ, ಆಂಬೊಡೆ, ಚಿತ್ರಾನ್ನ, ಅನ್ನ-ಮಜ್ಜಿಗೆ, ಪಲ್ಯ ಬಡಿಸಬೇಕಿದೆ. ಅರ್ಧ ಊಟ ಆಗಿರುವಾಗ ಹೀಗಾಗಿ ಹೋಗುವುದೇ, ಅದೂ ತನ್ನಿಂದ? ಜತೆಯವರೆಲ್ಲ 'ಸುಬ್ಬು, ಏನಿದು?' ಎಂದು ಉದ್ಗರಿಸಿದರು. ಕೂಡಲೇ ಊಟ ನಿಲ್ಲಿಸಿದ್ದು ಸುಬ್ಬಾವಧಾನಿಗಳಿಗೂ ತಬ್ಬಿಬ್ಬಾಯಿತು. ಅವರ ಪತ್ನಿ ಕೂಡಲೇ ಅಲ್ಲಿಂದ ಈಚೆಗೆ ಬಂದರು. ಪುಣ್ಯವಶಾತ್ ಆ ದಿನ ಆ ಪಂಕ್ತಿಯಲ್ಲಿ ನಮ್ಮ ತಂದೆ ಊಟಕ್ಕೆ ಕುಳಿತಿರಲಿಲ್ಲ. ಆಚೆ ಏನೋ ಕೆಲಸ ಮಾಡುತ್ತಿದ್ದ ಅವರಲ್ಲಿಗೆ ಓಡಿ ಹೋಗಿ, ''ಶಾಮಣ್ಣ........'' ಎಂದರು. ನಮ್ಮ ತಂದೆಯನ್ನು 'ಶಾಮಣ್ಣ' ಎಂದೂ ಕರೆಯುತ್ತಿದ್ದರು. ತಂದೆ ''ಏನತ್ತೇ?'' ಎಂದಾಗ, ''ಶಾಮಣ್ಣ, ಅಚಾತುರ್ಯ ಆಗಿಹೋಗಿದೆ. ಹೋಳಿಗೆ ಬಡಿಸುತ್ತಿದ್ದೆ. ಸ್ವಲ್ಪ ಕೈಜಾರಿ ಅವರ ಎಲೆಗೆ ಒಂದೆರಡು ಹೋಳಿಗೆ ಹೆಚ್ಚಿಗೆ ಬಿದ್ದಿತು. ಕೋಪಿಸಿಕೊಂಡು ಸಭೆಯ ಮಧ್ಯದಲ್ಲೇ ಆಪೋಷಣ ತೆಗೆದುಕೊಂಡು ಕುಳಿತಿದ್ದಾರೆ. ಎಲ್ಲರೂ ಊಟ ನಿಲ್ಲಿಸಿಬಿಟ್ಟಿದ್ದಾರೆ. ಏನು ಮಾಡುವುದು ಈಗ?'' ಎಂದರು - ಭಯ, ಆತಂಕ, ಉದ್ವೇಗದಿಂದ - 'ನೀವೇ ಏನಾದರೂ ಮಾಡಬೇಕು ಈಗ' ಎಂದು ಅಂಗಲಾಚುವವರಂತೆ! ತಂದೆ ಅರೆಕ್ಷಣ ಯೋಚಿಸಿದರು. ''ಓಹೋ.... ಹಾಗೋ... ಸರಿ. ಅತ್ತೇ.... ನೀವು ಒಳಗೆ ನಡೆಯಿರಿ. ಅಲ್ಲೇ ಇರಿ. ನಾನು ಈಗ ಒಳಗೆ ಬರುತ್ತೇನೆ. ಅಲ್ಲಿ ನಾನು ನಿಮ್ಮನ್ನೇ ಆಕ್ಷೇಪಣೆ ಮಾಡಿ ಜೋರು ಮಾಡುತ್ತೇನೆ. ನೀವು ಸುಮ್ಮನಿದ್ದು ಬಿಡಿ. ನೋಡೋಣ ಏನಾಗುತ್ತದೆ ಎಂದು'' ಎಂದವರೇ ತಾವು ಮಾಡುತ್ತಿದ್ದ ಕೆಲಸ ಬಿಟ್ಟು ಅತ್ತೆಯವರ ಹಿಂದೆಯೇ ಊಟದ ಹಜಾರಕ್ಕೆ ಬಂದರು. ಪೆಚ್ಚಾಗಿ ನಿಂತ ಅತ್ತೆಯವರನ್ನು ನೋಡಿ, ''ಯಾರು.... ಯಾರದು? ಮಾವನಿಗೆ ಇನ್ನೂ ಹೋಳಿಗೆಗೆ ತುಪ್ಪ ಬಡಿಸಿಲ್ಲ... ಯಾಕೆ?'' ಎಂದರು, ತಮಗೆ ಏನೂ ತಿಳಿದಿಲ್ಲ ಎನ್ನುವವರ ಹಾಗೆ. ಅತ್ತೆಯವರು ಮೆಲ್ಲಗೆ, ''ಶಾಮಣ್ಣ! ನಾನೇ ಬಡಿಸಿದೆ ಹೋಳಿಗೆಯನ್ನು. ಜಾರಿ ಒಂದೆರಡು ಹೋಳಿಗೆ ಹೆಚ್ಚಿಗೆ ಎಲೆಗೆ ಬಿದ್ದಿತು. ಅಷ್ಟಕ್ಕೇ ಆಪೋಷಣ ತೆಗೆದುಕೊಂಡಿದ್ದಾರೆ'' ಎಂದರು. ''ಓಹೋ.... ಅತ್ತೇ ನೀವೇ ಈ ಕೆಲಸ ಮಾಡಿದಿರಾ? ಚೆನ್ನಾಗಿದೆ.... ನೀವು ಹಿ ೕಗೆ ಹೋಳಿಗೆ ಬಡಿಸಿದ್ದೀರಿ. ಈ ಮನೆಯ ಯಜಮಾನರಿಗೆ ಅಷ್ಟು ಹೋಳಿಗೆಗೆ ಆಗುವಷ್ಟು ತುಪ್ಪ ಹಾಕುವ ಶಕ್ತಿ ಇದೆಯೋ ಇಲ್ಲವೋ ತಿಳಿಯಬಾರದೆ ನಿಮಗೆ? ಕಂಚಿನ ಚೊಂಬಿಗೆ ಸುಮ್ಮನೆ ಹೂವು ಸುತ್ತಿ ತಂದರೆ ಆಗುವುದಿಲ್ಲ. ಜತೆಗೆ ಅದರ ತುಂಬ ತುಪ್ಪವೂ ಇರಬೇಕು. ಎಲ್ಲಿ ಕೊಡಿ ಇಲ್ಲಿ ತುಪ್ಪದ ಚೊಂಬನ್ನು. ನಾನು ತುಪ್ಪ ಹಾಕುತ್ತೇನೆ....! ಸದ್ಯ ಮಾವ ಆಪೋಷಣ ತೆಗೆದುಕೊಂಡರೂ ಮಂತ್ರವನ್ನು ಹೇಳಿಲ್ಲ....! ಮಂತ್ರ ಹೇಳಿಬಿಟ್ಟಿದ್ದರೆ ಏನು ಗತಿ? ಎಲ್ಲರೂ ಅರ್ಧ ಊಟದಲ್ಲೇ ಏಳಬೇಕಾಗುತ್ತಿತ್ತು. ಮಾಡಿದ ಅಡುಗೆ ಹಾಗೆಯೇ ಉಳಿಯುತ್ತಿತ್ತು....'' ಎಂದವರೇ ತುಪ್ಪದ ಚೊಂಬನ್ನು ತೆಗೆದುಕೊಂಡು ಸುಬ್ಬಾವಧಾನಿಯವರ ಎಲೆಗೆ ತುಂಬಿದ ಹೋಳಿಗೆಗಳ ಮೇಲೆ ತುಪ್ಪ ಸುರಿಯುತ್ತ, ''ಮಾವ... ದಯವಿಟ್ಟು ಕ್ಷಮಿಸಿ. ಈ ಸಾರಿ ನನಗಾಗಿ ಅತ್ತೆಯವರನ್ನು ಕ್ಷಮಿಸಿಬಿಡಿ. ಇನ್ನೊಂದು ಸಾರಿ ಹೀಗಾಗುವುದಿಲ್ಲ.... ನಿಧಾನವಾಗಿ, ಸಾವಕಾಶವಾಗಿ ಊಟಮಾಡಿ....'' ಎಂದರು ಒಲಿಸುವ ಧ್ವನಿಯಲ್ಲಿ. ತಂದೆಯವರು ಹೇಳಿದ ಸಿಹಿಮಾತು ಸುಬ್ಬಾವಧಾನಿಗಳ ಮನಸ್ಸನ್ನು ಕರಗಿಸಿತ್ತು. ಅಲ್ಲಿಯವರೆಗೆ ತಾನು ಕೋಪಿಸಿಕೊಂಡು ಸಹಪಂಕ್ತಿಯಲ್ಲಿ ಮಾಡಿದ ಅವಿವೇಕದ ಕೆಲಸದ ಬಗೆಗೂ ನಾಚಿಕೆಯಾಗಿ, ಇರುಸು ಮುರುಸಾಗಿದ್ದಿತು. ಆದರೆ ಮತ್ತೆ ಊಟ ಪ್ರಾರಂಭಿಸುವುದು ಹೇಗೆ? ಅದು ತಿಳಿಯದೆ, ಊಟ ನಿಲ್ಲಿಸಿದವರನ್ನು ತಬ್ಬಿಬ್ಬಾಗಿ ನೋಡುತ್ತ ಕುಳಿತಿದ್ದ ಅವರಿಗೆ ತಂದೆ ಹೇಳಿದ ಮಾತು ಸರಾಗವಾಗಿ ಉಸಿರಾಡುವಂತೆ ನಿರಾಳ ಮಾಡಿತು. ಪೆಚ್ಚಾದರೂ ನಗುತ್ತ, ತಾವೂ ಸೋಲದವರಂತೆ, ''ಹೌದು.... ಹೌದು... ನೋಡು, ಹೀಗೆಯೇ ಬಡಿಸುವುದು? ಅದಕ್ಕೇ ನಾನು ಹೆದರಿಸೋಣ ಎಂದು ಹೀಗೆ ಮಾಡಿದೆ ಅಷ್ಟೆ. ಮಂತ್ರ ಹೇಳಿಯೇ ಇರಲಿಲ್ಲ!'' ಎಂದು ಹೋಳಿಗೆಯನ್ನು ತುಪ್ಪದಲ್ಲಿ ಅದ್ದಿ ಬಾಯಿಗಿಟ್ಟರು. ಎಲ್ಲರಿಗೂ ನಿರಾಳವಾಗಿ ಮತ್ತೆ ಊಟ ಮುಂದುವರೆಯಿತು. ನಮ್ಮ ತಂದೆಯವರ ಸಮಯಪ್ರಜ್ಞೆಯಿಂದಾಗಿ ಆ ದಿನ ಸುಬ್ಬಾವಧಾನಿಗಳ ಕೋಪದ ಅತಿರೇಕದಿಂದಾಗುತ್ತಿದ್ದ ಅಚಾತುರ್ಯ ತಪ್ಪಿದ್ದಿತು. ಅವಧಾನಿಯವರ ಪತ್ನಿ ತುಂಬ ಕೃತಜ್ಞತೆಯಿಂದ, 'ಶಾಮಣ್ಣ! ಇಂದು ನನ್ನನ್ನು ಬದುಕಿಸಿದೆ' ಎಂದು ತಂದೆಯತ್ತ ನೋಡಿದರು. ಹೀಗೆ ತಂದೆಯವರ ಜಾಣ್ಮೆ, ಪ್ರಸಂಗಾವಧಾನತೆ ಅಂದಿನ ಅನ್ನದಾನವೇ ವ್ಯರ್ಥವಾಗುತ್ತಿದ್ದ ಸನ್ನಿವೇಶವನ್ನು ಸುಧಾರಿಸಿತು.

❁ ❁ ❁

ಅಷ್ಟು ಶಾಂತಮೂರ್ತಿಯಾಗಿದ್ದ ತಂದೆಯವರಿಗೂ ಒಮ್ಮೆ ಅತೀವ ಸಿಟ್ಟು ಬರುವ ಹಾಗೆ ಆದ ಒಂದು ಪ್ರಸಂಗವನ್ನು ಇಲ್ಲಿ ಹೇಳಬೇಕು. ನಮ್ಮೂರ ಹತ್ತಿರದಲ್ಲಿರುವ ಲಂಬಾಣಿ ಜನಾಂಗದವರು ಆಗಾಗ ನಮ್ಮಲ್ಲಿಗೆ ಬಂದು ಗದ್ದೆ, ತೋಟದಲ್ಲಿ ಕೆಲಸ ಮಾಡಿಕೊಟ್ಟು ದುಡ್ಡು ಅಥವಾ ಧಾನ್ಯ ತೆಗೆದುಕೊಳ್ಳುವುದಿದೆ. ಅವರ ಹೆಸರುಗಳೂ ಸ್ವಲ್ಪ ವಿಚಿತ್ರ - ಪೂರ್ಯ, ನಾನ್ಯ, ಕಾಳ್ಯ, ಲಚ್ಯ, ರಾಮ್ಯ ಹೀಗೆ! ಒಮ್ಮೆ ನಮ್ಮ

ತಂದೆಯಿಂದ ಸುಮಾರು ಆರು ನೂರು ರೂಪಾಯಿಗಳನ್ನು ಪಡೆದುಕೊಂಡ ಪೂರ್ಯ ಎನ್ನುವವನು, ''ನಮ್ಮ ಜನರನ್ನು ಕರೆತಂದು ನಿಮ್ಮ ತೋಟದ ಕೆಲಸ ಮಾಡಿಕೊಡ್ತೀನಿ ಅಯ್ಯಾರೆ'' ಎಂದು ಹೇಳಿ ಹೋದವನು ಮೂರು ತಿಂಗಳುಗಳು ಕಳೆದರೂ ನಮ್ಮ ಮನೆಯತ್ತ ಸುಳಿಯಲೂ ಇಲ್ಲ. ಅಷ್ಟರಲ್ಲೇ ಅಡಿಕೆಯ ಕಾಲವಾದ್ದರಿಂದ ಬಹಳಷ್ಟು ಕೆಲಸಗಳಾಗಬೇಕಿತ್ತು. ಅವರಿವರ ಕೈಲಿ ಅವನಿಗೆ ಹೇಳಿ ಕಳುಹಿಸಿದರೂ ಅವನು ಮಾತ್ರ ಬರಲಿಲ್ಲ. ತಂದೆ ಬೇರೆಯವರಿಗೆ ಹೇಳಿ ಆ ಕೆಲಸಗಳನ್ನು ಮಾಡಿಸಿ, ಅದಕ್ಕೆ ಪ್ರತ್ಯೇಕವಾಗಿ ಹಣ ಕೊಟ್ಟರು. ಯಾರನ್ನೂ ಕಾಯುತ್ತ ಕುಳಿತು ಕೆಲಸವನ್ನು ನಿಲ್ಲಿಸಲಾಗದಷ್ಟೆ? ಅದರ ಪಾಡಿಗೆ ಅದು ನಡೆಯಲೇಬೇಕು.

ಮೂರ್‍ನಾಲ್ಕು ತಿಂಗಳುಗಳ ಅನಂತರ ಒಂದು ದಿನ ಮಧ್ಯಾಹ್ನ ನಮ್ಮ ತಂದೆಯವರು ಸಣ್ಣದಾದ ಬಾಳೆಯ ಗೊನೆಯೊಂದನ್ನು ಹಿಡಿದುಕೊಂಡು ತೋಟದಿಂದ ಬರುತ್ತಿದ್ದರು. ಮನೆಗೆ ಬರಲು ಮಧ್ಯೆ ಭತ್ತದ ಗದ್ದೆಯನ್ನು ಹಾಯ್ದು ಬರಬೇಕಿತ್ತು. ಎತ್ತೆತ್ತರಕ್ಕೆ ಬೆಳೆದ ಭತ್ತದ ಫಸಲಿನ ಕೊಯಿಲು ನಡೆಯುತ್ತಿತ್ತು. ಸುಮಾರು ಇಪ್ಪತ್ತು ಜನ ಭತ್ತ ಕೊಯ್ಯುತ್ತಿದ್ದರು. ಇನ್ನೂ ಒಂದೆರಡು ಗುಂಟೆಗಳ ಭತ್ತದ ಕೊಯಿಲು ಬಾಕಿ ಇರಬೇಕಾದರೆ, ತಂದೆಯ ಕಣ್ಣಿಗೆ ರಾಮ್ಯ ಬಿದ್ದ. ಅವನನ್ನು ಕಂಡವರೇ ತಂದೆ, ''ಏ ರಾಮ್ಯಾ..... ಅಲ್ಲಿ ಪೂರ್ಯ ಇದಾನೆಯೇನೋ?'' ಎಂದು ಕೇಳಿದರು. ತಂದೆಯ ಈ ಪ್ರಶ್ನೆ ರಾಮ್ಯನಿಗೆ ಅನಿರೀಕ್ಷಿತವಾಗಿತ್ತು. ಅವನು ಅತ್ತಿತ್ತ ನೋಡಿ, ''ಪೂರ್ಯಾರೀ, ಪೂರ್ಯ.... ನಮ್ಮ ಮಾವಾ.... ರೀ....'' ಎಂದ. ಅವನು ಆ ಮಾತುಗಳನ್ನು ಆಡಿದ ಭಾವವೇ ಅಲ್ಲಿ ಪೂರ್ಯ ಇದ್ದಾನೆಂದು ಹೇಳಿತ್ತು. ತಂದೆಗೆ, 'ಓಹೋ... ಪೂರ್ಯ ಇಲ್ಲೇ ಇರಬೇಕು. ಅದಕ್ಕೇ ಇವನು ಹೀಗೆ ತಬ್ಬಿಬ್ಬಾಗಿದ್ದಾನೆ' ಎನಿಸಿತು. ತಂದೆ ಕೊಯಿಲು ಮಾಡುತ್ತಿದ್ದ ಗದ್ದೆಯ ಬದಿಗೆ ಇಳಿದರು. ಪೂರ್ಯ ಅಲ್ಲಿ ಅಡಗಿ ಕುಳಿತುಕೊಂಡ. ಅವನನ್ನು ಕಂಡವರಿಗೆ ಅದೆಲ್ಲಿದ್ದಿತೋ ಅಷ್ಟು ಸಿಟ್ಟು.... ''ಏನೋ ಪಾಪಿ... ಆರು ನೂರು ರೂಪಾಯಿ ತೆಗೆದುಕೊಂಡು ಬಂದು ನಾಲ್ಕು ತಿಂಗಳಾದರೂ ಒಂದು ಸಾರಿಯೂ ಬಂದು ಮುಖ ತೋರಿಸಲಿಲ್ಲ. ಈಗ ಇಲ್ಲಿ ಬಂದು ಯಾರಿಗೋ ಕೆಲಸ ಮಾಡುತ್ತಿದ್ದೀಯಾ?'' ಎಂದವರೇ ಕೈಯಲ್ಲಿದ್ದ ಸಣ್ಣ ಬಾಳೆಗೊನೆಯನ್ನೇ ಎತ್ತಿ ಅವನ ಮುಖಕ್ಕೆ ರಾಚಿದರು. ಏಟು ಬಲವಾಗಿಯೇ ಇತ್ತಾದ್ದರಿಂದ ಅವನ ಮುಂದುಗಡೆಯ ಮೂರ್‍ನಾಲ್ಕು ಹಲ್ಲುಗಳು ಮುರಿದು ಹೋದವು. ಬಾಯಿಂದ ರಕ್ತ ಬಳಬಳನೆ ಹರಿಯಿತು. ಆ ರಕ್ತವನ್ನು ಕಂಡಕೂಡಲೆ, ''ಛೇ... ನಾನು ಇದೆಂಥ ಕೆಲಸ ಮಾಡಿದೆ? ಕೋಪದ ಕೈಗೆ ಬುದ್ಧಿ ಕೊಟ್ಟು ಹೀಗೆ ಮಾಡಿದೆನೆ?'' ಎನ್ನಿಸಿ ಬಹಳ ಪಶ್ಚಾತ್ತಾಪವಾಯಿತು. ಪೆಚ್ಚಾಗಿ ಅಳುತ್ತಿದ್ದ ಪೂರ್ಯನನ್ನು ಒಮ್ಮೆ ನೋಡಿ ಸರಸರನೆ ಮನೆಗೆ ಬಂದ ತಂದೆ ಯಾರ ಜತೆಗೂ ಮಾತನಾಡದೆ ಸದ್ದಿಲ್ಲದೆ ಸ್ನಾನ ಮಾಡಿ ದುರ್ಗಾದೇವಸ್ಥಾನಕ್ಕೆ ಹೋಗಿ ಕುಳಿತು ಜಪಮಾಡುತ್ತ ಇಡೀ ದಿವಸ ಉಪವಾಸ ಮಾಡಿದರು. ತಾವು ಮಾಡಿದ ಕೆಲಸಕ್ಕೆ ತಮಗೆ ತಾವೇ ಶಿಕ್ಷೆಯನ್ನು ವಿಧಿಸಿಕೊಂಡಿದ್ದರು. ಆಗ ಅವರಿಗೆ 'ನಾನು ಹೀಗೆ ಮಾಡಿದೆನಲ್ಲ' ಎಂದು ಸಾಕಷ್ಟು ಪಶ್ಚಾತ್ತಾಪವಾಗಿತ್ತು. ತಂದೆ ಹಾಗೆಂದೂ ಕೋಪಿಸಿಕೊಂಡದ್ದನ್ನು ಮನೆಯವರು ಸಹ ನೋಡಿರಲಿಲ್ಲ. ಅವರ ಆ ರೂಪ ಮನೆಯವರಿಗೆ ಹೊಸತು.

ಅದು ಹೊಸಹಳ್ಳಿಯ ರಥೋತ್ಸವದ ಸಮಯ. ಆಗ ನನ್ನ ಎರಡನೆಯ ತಮ್ಮ ಗೋಪಾಲ ಇನ್ನೂ ಚಿಕ್ಕವನು. ಬಹಳ ತುಂಟ. ನೋಡಲು ದುಂಡುದುಂಡಾಗಿ ಬಲು ಮುದ್ದಾಗಿದ್ದ. ಅವನು ತಂದೆಗೆ ಸಿಟ್ಟು ಬರುವ ಹಾಗೆ ಏನೋ ಚೇಷ್ಟೆ ಮಾಡಿದ. ಅವರು ಬೇಡ ಎಂದು ಹೇಳಿದರೂ ಹಠ ಹಿಡಿದ. ಅವನ ದುಂಡನೆಯ ಕೆನ್ನೆಗೆ ಮೆಲ್ಲಗೆ ಒಂದೇಟು ಕೊಟ್ಟರು. ಬೆಳ್ಳಗಿದ್ದ ಅವನ ಕೆನ್ನೆ ಕೆಂಪಾಗಿ ಅವರ ನೀಳವಾದ ನಾಲ್ಕು ಬೆರಳುಗಳೂ ಕೆನ್ನೆಯ ಮೇಲೆ ಮೂಡಿದವು. ಬಿಕ್ಕಳಿಸುತ್ತ ಅವನು ತಂದೆಯ ಪ್ರೀತಿಯ ತಂಗಿ (ಚಿಕ್ಕಮ್ಮನ ಮಗಳು) ನಮ್ಮತ್ತೆಯ ಬಳಿ ಹೋಗಿ ಅಳುತ್ತಾ ಕುಳಿತುಕೊಂಡ. ಅತ್ತೆಗೂ ಹೇಳಿದ. ಅತ್ತೆ ಬಂದವಳೇ ತಂದೆಯ ಬಳಿ, ''ಅಣ್ಣಯ್ಯಾ!... ನಮ್ಮ ಅಣ್ಣ ಕಾರುಣ್ಯನಿಧಿ ಎಂದು ತಿಳಿದಿದ್ದೆ. ಸರಿಯಾಯಿತು ಬಿಡು! ಇದೇ ಏನು ನೀನು ಶಾಂತಿ ಮಾಡಿಸುವುದು? ಊರಿನವರಿಗೆಲ್ಲ ಶಾಂತಿ ಮಾಡಿಸುತ್ತೀಯ... ನೀನೇ ಹೀಗೆ ಮಾಡುವುದೇ?'' ಎಂದು ಆಕ್ಷೇಪಿಸಿಯೂ ಬಿಟ್ಟಳು. ಮಗನ ಕಣ್ಣಲ್ಲಿ ಇಳಿಯುತ್ತಿದ್ದ ನೀರು, 'ನಿನಗೇ ಶಾಂತಿ ಇಲ್ಲದೆ ನೀ ಮಾಡಿಸುವುದು ಎಂತಹ ಶಾಂತಿಯಾದೀತು!' ಎನ್ನುವಂತೆ ಅತ್ತೆ ಪ್ರಶ್ನಿಸಿದ್ದು ತಂದೆಗೆ ತುಂಬ ನೋವು ಕೊಟ್ಟಿತು. ಅವರ ಕಣ್ಣಿನಲ್ಲೂ ನೀರಿಳಿಯಿತು. ಆ ಕಣ್ಣೀರು ಅವರ ತಪ್ಪೊಪ್ಪಿಗೆ, ಪಶ್ಚಾತ್ತಾಪವನ್ನು ಹೇಳಿತು. ಮಗನನ್ನು ತೊಡೆಯ ಮೇಲೆತ್ತಿಕೊಂಡು ಮುದ್ದಿಸುವುದರಲ್ಲಿ ಪ್ರಸಂಗ ಮುಕ್ತಾಯವಾಯಿತು.

ಹೀಗೆ ಒಂದೆರಡು ಸಾರಿಯಾದರೂ ತನ್ನನ್ನು ತನ್ನ ನಿಯಂತ್ರಣವನ್ನು ತಪ್ಪಿಸಿ ಬಾಧಿಸಿದ ಸಿಟ್ಟು ಎಂಥದು ಎಂದು, ತಂದೆಯೇ ಒಮ್ಮೊಮ್ಮೆ ಕೇಳಿಕೊಳ್ಳುವುದಿತ್ತು.

❁ ❁ ❁

ನಮ್ಮಜ್ಜನಿಗೆ ಬಹಳ ಸಿಟ್ಟಂತೆ! (ತಂದೆಯ ತಂದೆ) ಅವರ ಹೆಸರು ರಾಮಾವಧಾನಿ, ಅಜ್ಜಿ ಸೀತಮ್ಮ. ಅಜ್ಜನಿಗೆ ಎರಗಿನ ಹಾಳು ಬಯಲುಪ್ರದೇಶದಲ್ಲಿ ಸುಮಾರು ಐದಾರು ಎಕರೆ

ತೋಟವಿತ್ತು. ಆ ಪ್ರದೇಶಕ್ಕೆ ಅವರು ಪಟೇಲರೂ ಆಗಿದ್ದರು. ಆದ್ದರಿಂದಲೇ ಬಹಳ ಜೋರಾಗಿಯೂ ಇದ್ದರು. ಅವರ ಸಿಟ್ಟನ್ನು ನೋಡಿ ಅವರನ್ನು 'ಬೆಂಕಿ ನವಾಬ' ಎಂದೂ ಸ್ನೇಹಿತರು ಕರೆಯುತ್ತಿದ್ದರಂತೆ! ಮನೆಯಲ್ಲಿ ಎಂದಿನಂತೆ ಮಡಿ, ಆಚಾರ. ವಾರಕ್ಕೊಮ್ಮೆ ಅಥವಾ ಎರಡು ಸಾರಿ ಕೋರ್ಟುಕೆಲಸ ಎಂದು ಶಿವಮೊಗ್ಗಕ್ಕೆ ಹೋಗುವುದೂ ಇತ್ತು. ಶಿವಮೊಗ್ಗೆಗೆ ಹೊರಡುವಾಗ, ಅಜ್ಜಿ ನಿಧಾನವಾಗಿ ಕೆಲಸ ಮಾಡುವುದರಿಂದ ತಮ್ಮ ಕೆಲಸಕ್ಕೆ ತಡವಾಗುತ್ತದೆ ಎಂದು, ತಾವೇ ಒಲೆಹೊತ್ತಿಸಿ ಅನ್ನ ಮಾಡಿಕೊಳ್ಳುತ್ತಿದ್ದ ಶಿಸ್ತಿನ ಸಿಪಾಯಿ ಅವರು. ಹಾಗೆ ಮಾಡುವಾಗ ಒಂದು ಸಾರಿ ಅಲ್ಲೇ ಬಾಗಿಲಲ್ಲಿ ಕುಳಿತು ನಮ್ಮ ತಂದೆ - ಹದಿನಾರು ಹದಿನೇಳರ ಹುಡುಗ ವೇದಭಾಗದ ಕಂಠಪಾಠ ಮಾಡುತ್ತಿದ್ದರು. ಒಂದೆರಡು ಸಾರಿ ಅವರು ತಪ್ಪಿದಾಗ ಅಜ್ಜ ಅವರಿಗೆ ತಿದ್ದಿ ಹೇಳಿಕೊಟ್ಟಿದ್ದರು. ಮಗನು ತಪ್ಪು ತಿದ್ದಿಕೊಂಡ ಎಂದುಕೊಂಡರು. ಆದರೆ ದುರದೃಷ್ಟವಶಾತ್ ಅದೇ ತಪ್ಪು ಇನ್ನೂ ಎರಡು ದಿನಗಳು ಅದೇ ಜಾಗದಲ್ಲಿ ಆಯಿತು. ಅಜ್ಜನ ಸಿಟ್ಟು ನೆತ್ತಿಗೇರಿತು. ಒಲೆಯಲ್ಲಿ ಉರಿಯುತ್ತಿದ್ದ ಕೆಂಡವಿದ್ದ ಚಕ್ಕೆಯೊಂದನ್ನು ತಂದು, ''ಎರಡು ಮೂರು ದಿನ ತಿದ್ದಿ ಹೇಳಿಕೊಟ್ಟಿದ್ದೇನೆ. ಈಗಲೂ ತಪ್ಪನ್ನೇ ಹೇಳುತ್ತಿದ್ದೀಯಾ?'' ಎಂದವರೇ ಮರುಮಾತಿಗೆ ಅವಕಾಶವಿಲ್ಲದಂತೆ, ಮುಖದತ್ತ ಬೀಸಿದರು. ಉರಿಯುವ ಕೆಂಡವಿದ್ದ ಚಕ್ಕೆ ತಂದೆಯ ಎಡಹುಬ್ಬಿನ ಮೇಲ್ಭಾಗಕ್ಕೆ ಬಡಿದು ಸಾಕಷ್ಟು ನೋವಾಯಿತು. ತಂದೆಗೆ ಅದು ಎಂದೂ ಹೋಗದ ಸುಟ್ಟಗಾಯದ ಕಲೆಯಾಗಿ ಕೊನೆಯವರೆಗೂ ಇದ್ದಿತು. ಆದರೆ ತಂದೆ ಈ ಪ್ರಸಂಗವನ್ನೆಂದೂ ನಮಗೆ ಹೇಳಿದವರಲ್ಲ. ಹಾಗೆ ಹೇಳಿದರೆ ತಮ್ಮ ತಂದೆಗೆ ಅಪಚಾರ ಎನ್ನುವ ಭಾವ!

ಇದು ಅಷ್ಟಕ್ಕೇ ನಿಲ್ಲಲಿಲ್ಲ. ಅಜ್ಜ ತಂದೆಗೆ ಹೀಗೆ ಮಾಡಿದ ಸುದ್ದಿ ತಂದೆಯ ಗುರುಗಳಾದ ಗಂಗಾಧರ ಜೋಯಿಸರಿಗೂ ಹೋಯಿತು. ಅವರೂ ಅಜ್ಜನ ಸಮವಯಸ್ಕರು. ಅಜ್ಜನಲ್ಲಿ ಅವರಿಗೆ ಸಲಿಗೆ ಸಹ. ಅವರು ತಮ್ಮ ಶಿಷ್ಯನನ್ನು ನೋಡಲು ಬಂದು, ''ಅಯ್ಯಯ್ಯೋ ಕಣ್ಣೇ ಹೋಗುತ್ತಿತ್ತಲ್ಲ! ರಾಮಾ... ನೀನು ಬಹಳ ಕಷ್ಟ ಪಟ್ಟಿದ್ದೀಯೆ ನೋಡು, ನಾರಾಯಣನಿಗೆ ವೇದ ಹೇಳಿ ಕೊಡೋದಕ್ಕೆ? ನೀನು ಅವನಿಗೆ ವಿದ್ಯಾಭ್ಯಾಸ ಮಾಡಿಸಿದ್ದೀಯೆ ಅಲ್ಲವಾ? ನಾವಲ್ಲ ಅವನಿಗೆ ಗುರು, ನೀನು ಅಲ್ಲವೇ? ಅವನನ್ನ ನಮ್ಮ ಗುರುಕುಲಕ್ಕೆ ಯಾಕೆ ಕಳಿಸಬೇಕಿತ್ತು? ಕಳಿಸಿದ ಮೇಲೆ ಪಾಠದಲ್ಲಿ ಅವನು ತಪ್ಪು ಮಾಡಿದರೆ ತಿದ್ದಲು ನಾನಿದ್ದೇನೆ. ನನ್ನ ಶಿಷ್ಯನನ್ನು ಹೊಡೆಯುವುದಕ್ಕೆ ನೀನು ಯಾರು? ಅದಕ್ಕೂ ಮೀರಿ ತಪ್ಪಿದರೆ ತಿದ್ದಿದರಾಯಿತು. ಹೊಡೆಯಲು ಏನು ಕಾರಣ? ಮತ್ತೆಂದಾದರೂ ಮುಟ್ಟಿದರೆ ಮನೆಗೇ ಕಳಿಸೋಲ್ಲ'' ಎಂದೆಲ್ಲ ಗದರಿಸಿ ಅಜ್ಜನಲ್ಲಿ ಜಗಳ ಮಾಡಿದರಂತೆ. ಅನಂತರ ಅಜ್ಜನೇ, ''ಗಂಗಾಧರ! ಕೈಮೀರಿಬಿಟ್ಟಿತಪ್ಪ. ಮತ್ತೆ ಹೀಗಾಗೋಲ್ಲ ಬಿಡು'' ಎಂದು ಅವರಿಗೆ ಸಮಾಧಾನ ಹೇಳಿ ಕಳುಹಿಸಿಕೊಟ್ಟರು.... ಇಂಥದಾಗಿತ್ತು ಆ ಕಾಲದ ಗುರು-ಶಿಷ್ಯರ ಪ್ರೀತಿ, ಅಭಿಮಾನ.

❁ ❁ ❁

ಚಿಕ್ಕಂದಿನಿಂದಲೂ ತಂದೆಯ ಸರಳ ಸೌಮ್ಯ ಸ್ವಭಾವ ಎಲ್ಲರಲ್ಲೂ ಪ್ರೀತಿ ಮೂಡಿಸುವ ಹಾಗೆ ಇತ್ತು. ಆದ್ದರಿಂದಲೇ ಅವರ ಮಿತ್ರ ಬಳಗವೂ ದೊಡ್ಡದಿತ್ತು. ಅವರ ಮಿತ್ರರಲ್ಲಿ ಅನೇಕ ಮುಸಲ್ಮಾನರೂ ಇದ್ದರು.

ನಮ್ಮ ಅಜ್ಜ ತೀರಿಕೊಂಡಾಗ ತಂದೆಗೆ ವಯಸ್ಸು ಚಿಕ್ಕದಾಗಿದ್ದ ಕಾರಣ, ತಂದೆಗಿಂತ ಸಾಕಷ್ಟು ದೊಡ್ಡವನಾಗಿದ್ದ ನಮ್ಮೂರಿನ ಮದಾರ್ ಸಾಬ್ ಎನ್ನುವವನು ಅಜ್ಜನ ತೋಟ-ಗದ್ದೆಯನ್ನು ತಾನೇ ನೋಡಿಕೊಂಡು ನಿಭಾಯಿಸಿ, ಅಜ್ಜಿಯ ಮುಂದೆಯೇ ತಂದೆಗೆ ಎಲ್ಲ ವ್ಯವಹಾರವನ್ನೂ ಹೇಳಿಕೊಟ್ಟು ಕಲಿಸಿದ.

ಶಿವಮೊಗ್ಗದಲ್ಲಿನ ಬಟ್ಟೆಯಂಗಡಿ ಮತ್ತು ದಿನಸಿ ಅಂಗಡಿಯಲ್ಲಿ ತಂದೆ ನಿಯತವಾಗಿ ಲೆಕ್ಕ ಇಟ್ಟು ಅಲ್ಲಿಂದಲೇ ಬೇಕಾದುದನ್ನು ತರುತ್ತಿದ್ದರು. ಬಟ್ಟೆಯಂಗಡಿಯ ಮಾಲೀಕ ಮುಸಲ್ಮಾನ. ಅವನಿಗೆ ತಂದೆಯನ್ನು ಕಂಡರೆ ಬಹಳ ಗೌರವ, ಪ್ರೀತಿ.

ಹೀಗೆ ತಂದೆಗೆ ಊರಿನಲ್ಲಿ ಇದ್ದ ಮುಸಲ್ಮಾನ ಮಿತ್ರ ಮದಾರ್ ಸಾಬ್‌ನಿಂದಾಗಿ ಬಲು ಚೆನ್ನಾಗಿ ಹಿಂದಿ ಮತ್ತು ಉರ್ದು ಮಾತನಾಡಲು ಬಂದಿತು. ಅವರಿಗೆ ಆ ಭಾಷೆ ಸುಂದರವಾಗಿದೆ ಎನ್ನುವ ಪ್ರೀತಿಯೂ ಇತ್ತು. ಅವರು ಹಾಗೆ ನಿರರ್ಗಳವಾಗಿ ಹಿಂದಿ ಮತ್ತು ಉರ್ದು ಮಾತನಾಡುವುದು ಜವಳಿ ಅಂಗಡಿ ಮಾಲೀಕನಿಗೂ ಪ್ರೀತಿ. ಒಮ್ಮೆ ಹಬ್ಬದ ಸಮಯದಲ್ಲಿ ತಂದೆಯವರು ತಮ್ಮ ತಂಗಿಯರಿಗೆ ಬಟ್ಟೆ ತರಲು ಅವನ ಅಂಗಡಿಗೆ ಹೋದರು. ಅವನ ಅಂಗಡಿಗೆ ಹೋದರೆ, ಧರ್ಮದ ಬಗ್ಗೆ, ಆಚಾರ ವಿಚಾರಗಳ ಬಗ್ಗೆ ನಿಷ್ಪಕ್ಷಪಾತವಾಗಿ, ನಿಷ್ಕೃಷ್ಟ ಅಭಿಪ್ರಾಯ ಹೊಂದಿದ್ದ ಅವರ ಜತೆ ಅವನು ಮನಬಿಚ್ಚಿ ಮಾತನಾಡುತ್ತಿದ್ದ. ಜರಿಯ ಶಾಲು ಹೊದ್ದು ಬರುತ್ತಿದ್ದ ಆಜಾನುಬಾಹು ತಂದೆ ಆ ದಿನ ಬೆಳಗಾಗಿ ಬಂದದ್ದು ಅವನಿಗೆ ಶುಭಸೂಚನೆಯಾಗಿ ಕಂಡದ್ದಿರಬೇಕು. ಆ ದಿನ ಶುಕ್ರವಾರ. ಆದರೆ ತಂದೆಗೆ ಆ ಬಗ್ಗೆ ಗಮನವಿಲ್ಲ. ''ಓ.... ಏನು ನಾರಣಪ್ಪ... ಬಂದೆ...? ಏ... ನೋಡೋ... ನಾರಣಪ್ಪನಿಗೆ ಬಟ್ಟೆಗಳನ್ನು ತೋರಿಸು... ತಗೋ ನಾರಣಪ್ಪ'' ಎಂದ, ಮಾಲೀಕ. ರೇಷ್ಮೆಯ ಬಟ್ಟೆಯನ್ನು ನಾಲ್ಕು ಬಣ್ಣಗಳಲ್ಲಿ ಆರಿಸಿಕೊಂಡು,

ತಂಗಿಯರ ಲಂಗ-ರವಿಕೆಗಳಿಗೆ ಆಗುವಷ್ಟು ಬಟ್ಟೆಯನ್ನು ಹರಿಯಲು ಹೇಳಿದರು ತಂದೆ. ಎಲ್ಲವನ್ನೂ ಕಟ್ಟಿಟ್ಟ ಮೇಲೆ ಎಂದಿನಂತೆ ಗುಮಾಸ್ತ ತಂದೆಯವರ ಲೆಕ್ಕಕ್ಕೆ ಸೇರಿಸಿ ಬರೆಯಲು ಹೋದಾಗ ಮಾಲೀಕ, ''ಏ... ನೋಡು.... ಈ ದಿನ ನಾರಣಪ್ಪ ತೆಗೆದುಕೊಂಡ ಬಟ್ಟೆ ದುಡ್ಡನ್ನು ಲೆಕ್ಕದಲ್ಲಿ ಸೇರಿಸಬೇಡ..'' ಎಂದ. ತಂದೆಗೆ ಆಶ್ಚರ್ಯವಾಗಿ ''ಯಾಕೆ?'' ಎಂದರು. ''ನೋಡು ನಾರಣಪ್ಪ! ಈವತ್ತು ಶುಕ್ರವಾರ. ನೀನು ಬಂದಿದ್ದೀಯೆ. ನಾನೂ ಈಗ ನಮಾಜಿಗೆ ಹೊರಟಿದ್ದೇನೆ. ನೀನು ಒಂದೊಂದು ಥಾನನ್ನು ಕೇಳಿದ್ದರೂ ನಾನು ನಿನಗೆ ಒಂದು ಪೈಸೆಯನ್ನೂ ತೆಗೆದುಕೊಳ್ಳದೆ ಬಟ್ಟೆ ಕೊಡುತ್ತಿದ್ದೆ. ಆದ್ದರಿಂದ ನೀನು ಈ ದಿನ ತೆಗೆದುಕೊಂಡ ಬಟ್ಟೆಗೆ ದುಡ್ಡು ಕೊಡಬೇಕಿಲ್ಲ. ಸುಮ್ಮನೆ ತೆಗೆದುಕೊಂಡು ಹೋಗು, ತಕರಾರು ಮಾಡಬೇಡ.....'' ಎಂದ, ಆಜ್ಞೆ ಮಾಡುವವನಂತೆ. ತಬ್ಬಿಬ್ಬಾದ ತಂದೆಯವರು, ''ಅದು ಹೇಗೆ ಸಾಧ್ಯ? ಹ್ಞೂಂ..... ಹೋಗಲಿ ಬಿಡು. ಈ ಬಟ್ಟೆ ಇಲ್ಲೇ ಇರಲಿ. ನಾನು ನಾಳೆ ಬಂದು ತೆಗೆದುಕೊಂಡು ಹೋಗುತ್ತೇನೆ. ಆಗ ಲೆಕ್ಕ ಬರೆಯಲಿ'' ಎಂದರು. ''ಇಲ್ಲ ನಾರಣಪ್ಪ. ನೀನು ನಾ ಹೇಳಿದ ಹಾಗೆ ಕೇಳು. ನೀನು ಬಂದಿದ್ದೀ. ಅದೇ ಶುಭ. ಈ ದಿನ ನೀನು ಕೊಂಡದ್ದಕ್ಕೆ ನಾನಂತೂ ಎಂದೂ ದುಡ್ಡು ತೆಗೆದುಕೊಳ್ಳುವುದಿಲ್ಲ. ನೀ ನಾಳೆ ಮತ್ತೆ ಬರುವುದೇಕೆ? ಹಾಗೆಲ್ಲ ಆಡಬೇಡ. ತಗೋ, ಬಟ್ಟೆಯನ್ನು ತೆಗೆದುಕೊಂಡು ಹೊರಡು'' ಎಂದ. ಆತನ ಸ್ನೇಹಪರತೆ ತಂದೆಯ ಬಾಯಿಕಟ್ಟಿಸಿತು.

ಅವನು ಹಾಗೆ ಅಭಿಮಾನಪಡಲೂ, ಗೌರವ ಕೊಡಲೂ ತಂದೆಯ ವ್ಯಕ್ತಿತ್ವವೂ ಕಾರಣವಾಗಿತ್ತು. ಅವರು 'ಮಾತಿಗೆ ತಪ್ಪದವರು, ನಿಷ್ಕಲ್ಮಷ ಮನಸ್ಸಿನವರು, ನೇರ ಸರಳ ಸ್ವಭಾವದವರು' ಎಂದು ಅವನಿಗೆ ಖಾತರಿಯಾಗಿದ್ದ ಕಾರಣ ಅವನು ಅವರಲ್ಲಿ ಅಷ್ಟು ಪ್ರೀತಿ, ಆದರ ತೋರಿಸುತ್ತಿದ್ದ. ಒಮ್ಮೆ ಯಾವುದೋ ಹೆಚ್ಚಿನ ಖರ್ಚಿಗೆ ತಂದೆಯವರಿಗೆ ಸ್ವಲ್ಪ ದುಡ್ಡು ಬೇಕಾಯಿತು. ಆಗ ಅವರು ಎಂದಿನಂತೆ ಬಟ್ಟೆಯಂಗಡಿಗೆ ಹೋಗಿ ಸಾಹೇಬನನ್ನು ಕೇಳಿದರು. ಅದಕ್ಕೆ ಅವನು, ''ನಾರಣಪ್ಪ, ನಿನಗೆ ಗೊತ್ತಿದೆ. ನಾನು ಬಡ್ಡಿ ವ್ಯಾಪಾರ ಮಾಡುವವನಲ್ಲ. ಆದರೂ ನಿನಗೆ ಕಷ್ಟವಿದೆ. ನಾನು ದುಡ್ಡು ಕೊಡುತ್ತೇನೆ; ಇಲ್ಲ ಎನ್ನುವುದಿಲ್ಲ. ಆದರೆ ನೀನು ನನಗೆ ಬಡ್ಡಿ ಕೊಡುವುದು ಬೇಡ. ಆರು ತಿಂಗಳಲ್ಲಿ ಅಸಲು ಹಣವನ್ನು ವಾಪಸು ಮಾಡು. ಅಷ್ಟು ಸಾಕು'' ಎಂದ. ಹೇಳಿದಂತೆ ಹಣವನ್ನು ಕೊಟ್ಟ. ಆದರೆ ತಿಂಗಳಾರು ಕಳೆದರೂ ಪರಿಸ್ಥಿತಿ ಅಂಥದೇನೂ ಸುಧಾರಿಸದ ಕಾರಣ ತಂದೆಗೆ ಅವನ ದುಡ್ಡನ್ನು ಹೇಳಿದ ವಾಯಿದೆಗೆ ವಾಪಸು ಕೊಡುವುದಾಗಲಿಲ್ಲ. ಆದರೂ ಸಕಾಲಕ್ಕೆ ಸರಿಯಾಗಿ ಅವನಲ್ಲಿಗೆ ಹೋಗಿ ತಮ್ಮ ಅಸಹಾಯಕತೆಯನ್ನು ತಿಳಿಸಿದರು. ಅಡಿಕೆಯ ಬೆಲೆ ಬಿದ್ದು ಹೋಗಿದ್ದುದು ಅವರ ತೊಂದರೆಗೆ ಕಾರಣ ಎಂದು ಅವನೂ ಅರಿತಿದ್ದ. ಪರವಾಗಿಲ್ಲ ಎಂದ, ಅವನು. ತಂದೆ ಅದಕ್ಕೆ ಒಪ್ಪದೆ, ''ಹಾಗಲ್ಲ.... ನೀನು ಬಡ್ಡಿ ತೆಗೆದುಕೊಳ್ಳುವುದಿಲ್ಲ. ನಾನು ಹಾಗೆ ನಿನ್ನ ಹಣವನ್ನು ಬಾಕಿ ಇಡುವುದು ಸರಿಯಲ್ಲ. ಒಂದು ಕೆಲಸ ಮಾಡೋಣ. ಎದುರು ಅಂಗಡಿಯ ಶೆಟ್ಟರಿಗೆ ಹೇಳಿ ನೀನು ಅವರಿಂದ ನನಗೆ ಆರುನೂರು ರೂಪಾಯಿ ಕೊಡಿಸು. ಅದನ್ನು ನಾನು ನಿನಗೆ ಕೊಟ್ಟು ಬಿಡುತ್ತೇನೆ. ಅವನಿಗೆ ಬಡ್ಡಿ ಕಟ್ಟುತ್ತೇನೆ. ಆದಾಗ ಅವನಿಗೆ ಅಸಲು ಕೊಟ್ಟು ತೀರಿಸಿಕೊಳ್ಳುತ್ತೇನೆ'' ಎಂದರು. ಅವನಿಗೂ ತಂದೆಯ ಈ ಸಲಹೆ ಸರಿ ಎನ್ನಿಸಿತು. ''ಸರಿ.... ಹಾಗಾದರೆ'' ಎಂದವನೇ, ''ನೀನು ಹೋಗಿ ಕೇಳು ಅವನನ್ನು, ನಾನು ಅವನಿಗೆ ಹೇಳುತ್ತೇನೆ'' ಎಂದು ತಂದೆಯನ್ನು ಎದುರು ಅಂಗಡಿಗೆ ಕಳುಹಿಸಿ, ''ಶೆಟ್ಟರೇ, ನಮ್ಮ ನಾರಣಪ್ಪನಿಗೆ ಆರುನೂರು ರೂಪಾಯಿ ಕೊಟ್ಟಿರಿ. ಆಮೇಲೆ ಕೊಡುತ್ತಾರೆ'' ಎಂದು ಕೂಗಿ ಹೇಳಿದ. ಅಲ್ಲಿ ಕುಳಿತಿದ್ದ ಹಿರಿಯ ಶೆಟ್ಟಿ, ''ಆಯಿತು, ಕೊಡೋಣ; ಕುಳಿತುಕೊಳ್ಳಿ'' ಎಂದ. ಅಷ್ಟರಲ್ಲೇ ಅಲ್ಲಿಗೆ ಬಂದ ಅವನ ಮಗ ತೆಲುಗಿನಲ್ಲಿ ವಿಷಯ ಏನು ಎಂದು ಕೇಳಿ ತಿಳಿದುಕೊಂಡು, ''ಸಾಹೇಬರೇಕೆ ಅವರಿಗೆ ದುಡ್ಡು ಕೊಡಲಿಲ್ಲ? ಅವರೇ ಹಣ ಕೊಡಬಹುದಿತ್ತಲ್ಲ. ನಮ್ಮ ಹತ್ತಿರಕ್ಕೆ ಕಳುಹಿಸುವ ಆವಶ್ಯಕತೆ ಏನಿತ್ತು? ಏನೋ ಅನುಮಾನ ನನಗೆ.... ನಾವು ಹಾಗೆ ಹಣ ಕೊಡುವುದು ಬೇಡ ಇವರಿಗೆ'' ಎಂದು ಅಪ್ಪನಿಗೆ ತಾಕೀತು ಮಾಡಿದ. ಆ ಹಿರಿಯ ಶೆಟ್ಟಿ ಮಗನ ಮಾತನ್ನು ಅನುಮೋದಿಸಿ, ''ಹಣ ಇತ್ತು - ಆದರೆ ಬೇರೆ ಯಾವುದೋ ಸಾಮಾನು ಬಿಡಿಸಿಕೊಳ್ಳುವುದಕ್ಕೆ ಬೇಕು ಎಂದು ಹೇಳುತ್ತಿದ್ದಾನೆ ನನ್ನ ಮಗ. ಆದ್ದರಿಂದ ಅಷ್ಟು ಹಣ ಈಗ ಇಲ್ಲ'' ಎಂದು ತಂದೆಗೆ ಹೇಳಿ ವಾಪಸು ಕಳುಹಿಸಿದ. ತಂದೆ ಬರಿಗೈಲಿ ಸಾಹೇಬನ ಅಂಗಡಿಗೆ ಬಂದು ಕುಳಿತರು. ಅವನಿಗೆ ಅಲ್ಲಿ ನಡೆದುದನ್ನು ಹೇಳಿದರು. ಸಾಹೇಬನಿಗೆ ಕೆಡುಕೆನ್ನಿಸಿತು. ಜೋರಾಗಿ ಶೆಟ್ಟಿಯನ್ನು ಕೂಗಿ ಕರೆದು, ''ಏನು ಶೆಟ್ಟರೇ? ನಿಮ್ಮ ಹತ್ತಿರ ಆರುನೂರು ರೂಪಾಯಿ ಇಲ್ಲವಾ? ಆರು ಲಕ್ಷ ರೂಪಾಯಿ ಇದೆ ನಿಮ್ಮಲ್ಲಿ, ನನಗೆ ಗೊತ್ತು. ಆದರೆ ನೀವು ಈ ದಿನ ಕೊಡಲಿಲ್ಲ. ಇವರ ಮೇಲೆ ಅನುಮಾನ ಅಲ್ಲವಾ?'' ಎಂದವನೇ, ''ಶೆಟ್ಟರೇ, ನೀವು ನಮ್ಮ ನಾರಣಪ್ಪನ್ನ ಅನುಮಾನ ಮಾಡಿದಿರಾ? ನೀವು ನಿಮ್ಮ ಹಣವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟಿದ್ದರೆ, ನಾರಣಪ್ಪನಿಗೆ ಕೊಟ್ಟ ಹಣ ಕಬ್ಬಿಣದ ಪೆಟ್ಟಿಗೆ, ಅದರೊಳಗೆ ಚಿನ್ನದ ಪೆಟ್ಟಿಗೆ, ಅದರ ಒಳಗೊಂದು ವಜ್ರದ ಪೆಟ್ಟಿಗೆಯಲ್ಲಿ ಇಟ್ಟಷ್ಟು ಜೋಪಾನವಾಗಿರುತ್ತದೆ ಗೊತ್ತಾ? ಇಂತಹವರಿಗೆ ಸಹಾಯ ಮಾಡಲು ಪುಣ್ಯಬೇಕು'' ಎಂದು ಹೇಳಿ, ತಂದೆಯ ಕಡೆ ತಿರುಗಿ, ''ನಾರಣಪ್ಪ, ನೀನು ಬೇಜಾರು

ಮಾಡಿಕೊಳ್ಳಬೇಡ. ನನ್ನ ದುಡ್ಡು ನಿನ್ನ ಹತ್ತಿರವೇ ಇರಲಿ. ನಿನಗೆ ಸಾಧ್ಯವಾದಾಗ ಬಂದು ವಾಪಸು ಕೊಡು. ನನಗೇನೂ ಅದರ ಅಗತ್ಯವಿಲ್ಲ ಈಗ.....'' ಎಂದು ಹೇಳಿ ಕಳುಹಿಸಿದ. ಅಂತೂ ಮುಂದಿನ ಆರು ತಿಂಗಳ ಒಳಗಾಗಿಯೇ ತಂದೆ ಅವನು ಕೊಟ್ಟ ಹಣವನ್ನು ವಾಪಸು ಮಾಡಿದರಾದರೂ, ಆ ಸಾಹೇಬನ ದಾರ್ಯ ಮಾತ್ರ ಅವರೆಂದಿಗೂ ಮರೆಯುವಂತಿರಲಿಲ್ಲ.

❁ ❁ ❁

ಮಿತ್ರರ ಬಳಗದಲ್ಲಿ ಹೀಗಾದರೆ, ಅತ್ತ ಸಂಬಂಧದ ಬಳಗದಲ್ಲಿಯೂ ತಂದೆಯವರದು ವಿಶೇಷವಾದ ವರ್ಚಸ್ಸು. ತಂದೆಯ ಸೋದರತ್ತೆಯ ಮಗ ತರೀಕೆರೆ ಕೃಷ್ಣಶಾಸ್ತ್ರಿಗಳು (ಅವರೇ ನಮ್ಮನ್ನು ಅಧ್ಯಯನಕ್ಕೆಂದು ನಂಜನಗೂಡಿಗೆ ಬಿಟ್ಟು ಬಂದವರು) ಅವರಿಗೂ - ತಂದೆಗೂ ಬಹಳ ಪ್ರೀತಿ, ಸ್ನೇಹ. ಇಬ್ಬರದೂ ಒಂದೇ ವಯಸ್ಸು. ಒಟ್ಟಿಗೆ ಅಧ್ಯಯನ ಮಾಡಿದವರು. ನಮ್ಮ ಊರಿನ ಬಳಿ ಇದ್ದ ಕೋಡೀಹಳ್ಳಿಯಲ್ಲಿ ಕೃಷ್ಣಶಾಸ್ತ್ರಿಗಳಿಗೆ ಜಮೀನು ಇದ್ದಿತು. ಅವರು ಅಲ್ಲಿ ಜಮೀನು ಮಾಡಿಸಿಕೊಂಡಿದ್ದರು. ಇತ್ತ ಊರಿನಲ್ಲಿದ್ದ ಅವರ ಜಮೀನನ್ನು ತಂದೆಯೇ ನೋಡಿಕೊಳ್ಳುತ್ತಿದ್ದರು. ಅವರ ತೋಟವನ್ನೂ ನಮ್ಮ ತಂದೆ ತಮ್ಮ ತೋಟದಂತೆಯೇ ಕಂಡು ಕೆಲಸ ಮಾಡಿಸುತ್ತಿದ್ದು, ಅವರಿಬ್ಬರ ನಡುವೆ ದುಡ್ಡು ಕೊಟ್ಟು, ತೆಗೆದುಕೊಳ್ಳುವುದು ಆಗಾಗ ನಡೆಯುತ್ತಲೇ ಇತ್ತು. ಒಟ್ಟಾರೆ ಸೇರಿಸಿದ ಹಣದಲ್ಲಿ ತೆಗೆದುಕೊಂಡ ದುಡ್ಡಿನ ಖರ್ಚಿನ ಲೆಕ್ಕವನ್ನು ಇಬ್ಬರೂ ಬರೆದಿಡುತ್ತಿದ್ದ ಕಾರಣ ಆ ಬಗ್ಗೆ ಎಂದೂ ಮನಸ್ತಾಪ ಬಂದದ್ದಿರಲಿಲ್ಲ. ಕೃಷ್ಣಶಾಸ್ತ್ರಿಗಳ ಮನೆವಾರ್ತೆಯ ಖರ್ಚಿನ ಲೆಕ್ಕವನ್ನು ತಂದೆಯೇ ಇಡುತ್ತಿದ್ದರು. ಆದರೆ ಎಲ್ಲವೂ ಬೇರೆಬೇರೆ.... ತಮ್ಮ ಸಂಸಾರ, ತೋಟ, ಗದ್ದೆಯ ಖರ್ಚು ಪ್ರತ್ಯೇಕ; ಕೃಷ್ಣಶಾಸ್ತ್ರಿಗಳ ಸಂಸಾರ, ತೋಟದ ಖರ್ಚು ಪ್ರತ್ಯೇಕ. ಬಂದ ಆದಾಯ, ಆಗುತ್ತಿದ್ದ ಖರ್ಚುಗಳು ಇಬ್ಬರಿಗೂ ಚೆನ್ನಾಗಿ ತಿಳಿದಿರುತ್ತಿದ್ದವು. ಒಮ್ಮೆ ಕಾಗದ ಬರೆದಾಗ ಕೃಷ್ಣಶಾಸ್ತ್ರಿಗಳು ತಂದೆಗೆ, ''ಈ ಸಾರಿ ಹೆಚ್ಚು ಖರ್ಚು ಮಾಡಬೇಡ. ಅಡಿಕೆಯ ಬೆಲೆ ಇಳಿಬಿದ್ದಿದೆ. ನಾವು ಏನು ಮಾಡಿದರೂ ಕೈಹತ್ತುವುದಿಲ್ಲ'' ಎಂದು ಎಚ್ಚರಿಕೆ ಕೊಟ್ಟಿದ್ದರು. ತಂದೆ ಅದನ್ನು ಕೇಳುವವರಾಗಿರಲಿಲ್ಲ. ''ಹಾಗೆಂದರೆ ಹೇಗೆ? ನಮಗೆ ಇರುವುದೇ ಅದೊಂದು ಆಧಾರ. ಅದಕ್ಕಾಗಿ ಖರ್ಚು ಬೇಡ ಎಂದರೆ ಹೇಗೆ? ಅಷ್ಟಾಗಿ ಮಾಡದಿದ್ದರೂ ಇರುವುದನ್ನಂತೂ ರೂಢಿಸಿಕೊಂಡು ಹೋಗಬೇಕಷ್ಟೇ'' ಎಂದುಕೊಂಡು ಎಂದಿನಂತೆ ತಮ್ಮ ವ್ಯವಹಾರ ನಿರ್ವಹಿಸಿದರು. ನಿರೀಕ್ಷಿಸಿದಂತೆ ಹೆಚ್ಚಿನ ಹಣದ ಅಗತ್ಯವೂ ಬಿದ್ದಿತು. ಬೇರೆ ದಾರಿಕಾಣದೆ ತಂದೆ ಕೃಷ್ಣಶಾಸ್ತ್ರಿಗಳಿಗೆ ಪತ್ರ ಬರೆದರು. ಕೃಷ್ಣಶಾಸ್ತ್ರಿಗಳಿಗೆ ಆ ವೇಳೆಗಾಗಲೇ ಜಂಗ್ಲೀ ಮರಮುಟ್ಟುಗಳನ್ನು ಮಾರಿ ಸುಮಾರು ಸಾವಿರಾರು ರೂಪಾಯಿಗಳು ಕೈಗೆ ಬಂದಿದ್ದುದು ತಂದೆಗೆ ತಿಳಿದಿತ್ತಾದ್ದರಿಂದ ಅವರು ಅವರನ್ನೇ ಹಣ ಕೇಳಿದರು. ಅದಕ್ಕೆ ಕೃಷ್ಣಶಾಸ್ತ್ರಿಗಳು, ''ಈಗಂತೂ ಆ ಹಣವನ್ನು ಕೊಡಲು ಸಾಧ್ಯವಿಲ್ಲ. ನನಗೇ ಯಾವುದೋ ಖರ್ಚಿಗೆ ಅದು ಬೇಕಾಗಿದೆ. ಮೊದಲೇ ಈ ಬಗ್ಗೆ ನಾನು ನಿನಗೆ ಎಚ್ಚರಿಕೆ ಕೊಟ್ಟಿದ್ದರೂ ನೀನು ನನ್ನ ಮಾತು ಕೇಳದೆ ಹೆಚ್ಚಿಗೆ ಖರ್ಚು ಮಾಡಿದ್ದೀಯೆ. ಈಗ ನನ್ನ ಕೈಗೆ ದುಡ್ಡು ಬಂದಿದೆ ಎಂದು ತಿಳಿದೇ ಕೇಳುತ್ತಲೂ ಇದ್ದೀಯೆ. ನಿನ್ನ ಕೈಲಿರುವ ದುಡ್ಡಿನಲ್ಲೇ ಹೇಗಾದರೂ ನಿರ್ವಹಿಸು'' ಎಂದು ಉತ್ತರ ಬರೆದರು. ತಂದೆಯ ಬಳಿ ನಿಜಕ್ಕೂ ಹಣವಿರಲಿಲ್ಲ. ಕೃಷ್ಣಶಾಸ್ತ್ರಿಯವರೂ ಇಲ್ಲವೆಂದರೆ ಯಾರಲ್ಲಿಗೆ ಹೋಗುವುದು? ಕೊನೆಯ ಪ್ರಯತ್ನವಾಗಿ ಅವರು ಪ್ರಿಯಮಿತ್ರ ಮತ್ತು ಬಂಧುವಾಗಿದ್ದ ಕೃಷ್ಣಶಾಸ್ತ್ರಿಗಳಿಗೆ, ತಾವೇ ಮತ್ತೆ ಒಂದು ಕಾಗದ ಬರೆದರು. ಅದರಲ್ಲಿ ಒಂದು ಶ್ಲೋಕವನ್ನು ಬರೆದರು.

'ವನಾನಿ ದಹತೋ ವಹ್ನೇಃ ಸಖಾ ಭವತಿ ಮಾರುತಃ ।
ಸ ಏವ ದೀಪನಾಶಾಯ ಕೃಶೇ ಕಸ್ಯಾಸ್ತಿ ಸೌಹೃದಮ್ ॥

ಅದರ ಅರ್ಥ, 'ಬೆಂಕಿಯು ದೊಡ್ಡ ಕಾಡನ್ನು ಸುಡುವಾಗ ಗಾಳಿಯು ಅದಕ್ಕೆ ಬಹಳವಾಗಿ ಸಹಾಯ ಮಾಡುತ್ತದೆ. ಆಗ ಸ್ನೇಹಿತನಂತೆ ಉರಿಯನ್ನು ಹೆಚ್ಚಿಸುತ್ತದೆ. ಆದರೆ ಪುಟ್ಟ ದೀಪ ಉರಿಯುತ್ತಿದ್ದಾಗ ಅದೇ ಗಾಳಿ ಶತ್ರುವಿನಂತೆ ಬೀಸಿ ಬಂದು ಅದನ್ನು ಆರಿಸಿಬಿಡುತ್ತದೆ.' ಹಾಗೆಂದರೆ, 'ಈ ಲೋಕದ ನೀತಿಯೇ ಹಾಗೆ. ತುಂಬ ಸಿರಿವಂತರಿಗೆ ಸಹಾಯ ಮಾಡುವವರು ನೂರಾರು ಜನ. ಅದೇ ಬಡವರಾದರೆ ಅವರನ್ನು ಅದುಮಿಡುವವರೇ ಹೆಚ್ಚು, ತಲೆ ಎತ್ತಲು ಅವಕಾಶ ಕೊಡರು' ಇದು ಇದರ ಅಂತರಾರ್ಥ. ತಂದೆಯವರ ಈ ಪತ್ರ ಓದಿ ನಕ್ಕ ಕೃಷ್ಣಶಾಸ್ತ್ರಿಗಳು, ''ಪುಣ್ಯಾತ್ಮ, ನೀನು ಹೀಗೆ ಬರೆದೆಯಾ ನನಗೆ? ಇದೋ ಕಳುಹಿಸುತ್ತಿದ್ದೇನೆ. ಈ ಹಣವನ್ನು ನೀನು ಉಪಯೋಗಿಸಿಕೊಳ್ಳಬಹುದು''ಎಂದು ಉತ್ತರ ಬರೆದು ಹಣ ಕಳುಹಿಸಿದರು. ಇದೇ ತಂದೆಯವರು ಸಂಪಾದಿಸಿದ್ದ ಆಸ್ತಿ - ಎಲ್ಲರ ಪ್ರೀತಿ, ವಿಶ್ವಾಸ, ಗೌರವ. ಅದೇ ನಮಗೆ ತುಂಬ ಹೆಮ್ಮೆಯ ವಿಷಯ ಇಂದಿಗೂ!.

೧೪. ಸಿರಿವಂತರು

'ಸಿರಿವಂತರು' ಎಂದಾಗ ನೆನಪಾಗುವುದು ನಮ್ಮ ಹೊಸಹಳ್ಳಿಯ ನಂಜುಂಡಾವಧಾನಿಯವರು. ಅವರು ಬಹಳ ಸಿರಿವಂತರು. ನಮ್ಮ ತಂದೆಯನ್ನು ಕಂಡರೆ ಬಹಳ ಗೌರವ. ನಮ್ಮ ಮೇಲೂ ಅವರು ಅದೇ ಪ್ರೀತಿಯನ್ನು ಇಟ್ಟಿದ್ದುದೇ ನಮ್ಮ ಪುಣ್ಯ. ಅವರಲ್ಲಿ ಎಂಥದೋ ಒಂದು ರೀತಿಯ ವರ್ಚಸ್ಸು. ಅವರ ಗಂಭೀರವಾದ, ತೂಕತಪ್ಪದ ಮಾತಿನಿಂದಾಗಿ ಅವರಿಗೆ ಎಲ್ಲರೂ ವಶರಾಗುತ್ತಿದ್ದರು. ಜ್ಯೋತಿಶ್ಶಾಸ್ತ್ರದಲ್ಲಿಯೂ ಅವರು ಬಹಳ ಪರಿಣತಿ ಪಡೆದಿದ್ದರು. ನಮ್ಮೂರಿನ ಎಲ್ಲರ ಮನೆಗಳಂತೆ ಅವರ ಮನೆಯಲ್ಲಿಯೂ ಬಹಳ ಮಡಿ, ಆಚಾರ. ಆದರೆ ಬೆಳಗ್ಗೆ ಹನ್ನೆರಡರ ವೇಳೆಗೆ ಅವರ ಪೂಜೆ ಇತ್ಯಾದಿಗಳು ಮುಗಿದು, ಅನಂತರ, ಲೌಕಿಕ ವ್ಯವಹಾರದಲ್ಲಿ ಪೂರ್ತಿಯಾಗಿ ತೊಡಗುತ್ತಿದ್ದರು. ಶಿವಮೊಗ್ಗದ ಆಫೀಸಿಗೆ ಯಾರೇ ಹೊಸ ಅಧಿಕಾರಿಗಳು ಬರಲಿ, ಅವರುಗಳು ಒಮ್ಮೆ ನಂಜುಂಡಾವಧಾನಿಯವರನ್ನು ನೋಡಲು ಬರುವುದಿತ್ತು. ಒಮ್ಮೆ ಭೇಟಿಯಾದ ಅನಂತರ ಆಗಾಗ ಭೇಟಿಯಾಗುವುದು ಮುಂದುವರೆಯುವುದೂ ಇತ್ತು. ಅಂಥ ಸ್ನೇಹದ ಹಿಡಿತ. ಅವರ ಶ್ರೀಮಂತಿಕೆಯಲ್ಲಿ ಒಂದು ವಿಶೇಷ ರೀತಿಯ ಗಾಂಭೀರ್ಯವೂ ಬೆರೆತಿದ್ದುದೇ ಅವರ ವರ್ಚಸ್ಸು ಹೆಚ್ಚಲು ಕಾರಣ.

ನಂಜುಂಡಾವಧಾನಿಯವರ ತಂದೆ ಲಕ್ಷ್ಮೀಕಾಂತ ಅವಧಾನಿಯವರು. ಅವರ ಮಾವನಿಗೆ, ಅಂದರೆ, ಸೂರಪ್ಪ ದೀಕ್ಷಿತರಿಗೆ ಗಂಡು ಸಂತಾನವಿಲ್ಲದಿದ್ದ ಕಾರಣ ಮಾವನವರ ಆಸ್ತಿಯೂ ಲಕ್ಷ್ಮೀಕಾಂತ ಅವಧಾನಿಯವರಿಗೇ ಸೇರಿತು. ಅವರು ಅದನ್ನು ಬಹಳ ಮುತುವರ್ಜಿಯಿಂದ ರೂಢಿಸಿಕೊಂಡೂ ಬಂದರು. ಆದರೆ ಅಷ್ಟು ಆಸ್ತಿ ಇದ್ದರೂ ಅವರೆಂದೂ ಲೆಕ್ಕವಿಲ್ಲದೆ ವೆಚ್ಚ ಮಾಡಿದವರಲ್ಲ. ಧಾರಾಳತನವೂ ಸಾಕಷ್ಟಿತ್ತಾಗಿ ಜನಪ್ರಿಯರೂ ಆಗಿದ್ದರು.

ಆದರೆ ಕೆಲವೊಂದು ವಿಚಾರಗಳನ್ನು ಅವರು ನಿಯಮದಂತೆ ಪಾಲಿಸುತ್ತಿದ್ದರು. ಅಂಥ ಸನ್ನಿವೇಶಗಳಲ್ಲಿ ಸಂಬಂಧವೋ, ಸ್ನೇಹವೋ ಯಾವುದೂ ಗಣನೆಗೆ ಬರುತ್ತಿರಲಿಲ್ಲ. ಒಮ್ಮೆ ಅಡಿಕೆ ಬಂದಾಗ ಚಪ್ಪರ ಹಾಕಿ ಒಣಗಿಸುತ್ತಿದ್ದರು. ಆ ಸಮಯದಲ್ಲಿ ನಮ್ಮೂರ ಎಲ್ಲರ ಮನೆಯ ಮುಂದೆಯೂ ಚಪ್ಪರ ಇರುತ್ತದೆ. ಅವಧಾನಿಗಳ ಮನೆಯ ಮೇಲಿನ ಚಪ್ಪರದಲ್ಲಿ ಒಂದೆಡೆ ಅವರ ಮಾವನವರು ಕೊಟ್ಟ ತೋಟದಿಂದ ಬಂದ ಅಡಿಕೆ, ಮತ್ತೊಂದೆಡೆ ಅವರದೇ ಪಿತ್ರಾರ್ಜಿತ ತೋಟದಿಂದ ಬಂದ ಅಡಿಕೆ ಒಣಗಲು ಹಾಕಿತ್ತು. ಆಗ ನಂಜುಂಡಾವಧಾನಿಗಳು ಇನ್ನೂ ಮೂವತ್ತರ ಪ್ರಾಯದ ತರುಣರು. ಅವರಿಗೆ ಇಸ್ಪಿಟ್ ಆಟದ ಅಭ್ಯಾಸವಿದ್ದಿತಾಗಿ, ಆ ಹಿಂದಿನ ದಿನದ ರಾತ್ರಿ ಅವರು ಮತ್ತೂರಿನಲ್ಲಿ ಗೆಳೆಯರ ಜತೆ ಇಸ್ಪಿಟ್ ಆಡಿ ನಿದ್ದೆಗೆಟ್ಟು ಬಂದು, ಮಧ್ಯಾಹ್ನದ ಊಟ ಮಾಡಿ ಮಲಗಿದ್ದರು. ಅಷ್ಟರಲ್ಲೇ ಮಳೆಹನಿ ಪ್ರಾರಂಭವಾಯಿತು. ಲಕ್ಷ್ಮೀಕಾಂತ ಅವಧಾನಿಗಳು ತಮ್ಮ ಮಾವನವರ ತೋಟದ ಅಡಿಕೆಯನ್ನೆಲ್ಲ ಒಟ್ಟು ಸೇರಿಸಿ ರಾಶಿಮಾಡಿ, ಮಳೆಯ ಹನಿ ಬೀಳದಂತೆ ಅಡಿಕೆಯ ಮೇಲೆ ಮುಚ್ಚಿ ರಕ್ಷಿಸಿಟ್ಟರು. ಈ ಪಕ್ಕದಲ್ಲಿ ಹರವಿದ್ದ ಅಡಿಕೆಯತ್ತ ತಿರುಗಿಯೂ ನೋಡದೆ ವಾಪಸಾಗಿ ಕುಳಿತರು. ಅವರನ್ನೇ ನೋಡುತ್ತಿದ್ದ ಪಕ್ಕದ ಮನೆಯವರು, ''ಇದೇನು ಅವಧಾನಿಗಳೇ, ನೀವು ಆ ಸಾಲನ್ನು ಮುಚ್ಚಿದಿರಿ. ಈ ಸಾಲು ನೆನೆಯುವುದಿಲ್ಲವೇ? ಅದನ್ನೂ ಮುಚ್ಚಬಾರದೆ? ಅದನ್ನು ಏಕೆ ಮುಚ್ಚಲಿಲ್ಲ ನೀವು?'' ಎಂದು ಕೇಳಿದರು. ಅದಕ್ಕೆ ಲಕ್ಷ್ಮೀಕಾಂತ ಅವಧಾನಿಯವರು, ''ನಾನೇಕೆ ಆ ಸಾಲನ್ನು ಮುಚ್ಚಬೇಕು? ಇದು, ಈ ಸಾಲು ನಮ್ಮ ಮಾವನವರದ್ದು. ಅದು ನನ್ನ ಜವಾಬ್ದಾರಿ ಎಂದು ನಾನು ಅವರಿಗೆ ಮಾತು ಕೊಟ್ಟಿದ್ದೇನೆ, ಅದರಿಂದ ಅದರ ರಕ್ಷಣೆಯನ್ನು ನಾನೇ ಮಾಡಬೇಕು. ಈ ಅಡಿಕೆ ಸಾಲಿನ ರಕ್ಷಣೆಯ ಜವಾಬ್ದಾರಿ ಯಾರದು? ಕುಮಾರ ಕಂಠೀರವನದು. ಮೂವತ್ತು ವರ್ಷದ ಯುವಕ, ಅವನು ಊಟ ಮಾಡಿ ಮಲಗಿದ್ದಾನೆ. ಅವನು ಮಲಗಿರಬೇಕು, ನಾನು, ಅರುವತ್ತೈದು ವರ್ಷದ ಮುದುಕ, ಅವನ ಕೆಲಸವನ್ನು ಮಾಡಬೇಕೋ? ಆ ಸಾಲನ್ನು ಮುಚ್ಚುವುದು ಅವನ ಕೆಲಸ. ಅವನ ಅನ್ನ ಹಾಳಾಗುತ್ತದೆ ಎನ್ನುವ ದಿಗಿಲು ಅವನಿಗೇ ಇಲ್ಲ.... ಪಾಲುಮಾರಿಕೆಯಿಂದ ಮಲಗಿದ್ದಾನೆ. ನೆನೆಯಲಿ ಬಿಡಿ. ಅದಕ್ಕೆ ನಾನೇನೂ ಮಾಡಲು ಸಾಧ್ಯವಿಲ್ಲ!'' ಎಂದರು. ಅವರ ಮಾತು ಕೇಳಿ ಅವಾಕ್ಕಾದ ಪಕ್ಕದ ಮನೆಯವರು, ''ಛೇ, ಹಾಗೆಂದರೆ ಹೇಗೆ ಅವಧಾನಿಯವರೇ....'' ಎಂದು ತಾವೇ ಚಪ್ಪರ ಹತ್ತಿಬಂದು ಮತ್ತೊಂದು ಸಾಲಿನ ಅಡಿಕೆಯನ್ನು ಮಳೆ ಬೀಳದಂತೆ ಮುಚ್ಚಿ ರಕ್ಷಿಸಿದರು. ಹಾಗೆ... ಅಂತಹಾ ಕರಾರುವಾಕ್ಕು ಅವಧಾನಿಗಳ ತಂದೆಯವರದು.

ಇಂತಹ ತಂದೆಯ ಮಗನಲ್ಲವೇ, ನಮ್ಮ ನಂಜುಂಡಾವಧಾನಿಯವರು? ಅವರದೂ ಅದೇ ನಿಯಮ. ನಂಜುಂಡಾವಧಾನಿಯವರಿಗೆ ಮದುವೆಯಾಯಿತು. ಅವರ

ಪತ್ನಿ ಸ್ವಲ್ಪ ಸೂಕ್ಷ್ಮ ಆರೋಗ್ಯ ಪ್ರವೃತ್ತಿಯವರು. ಬಹಳ ವರ್ಷಗಳವರೆಗೆ ಅವರಿಗೆ ಮಕ್ಕಳೂ ಆಗಲಿಲ್ಲ. ಮನೆಯವರಿಗೆಲ್ಲ ಅದೇ ಕೊರಗಾಗಿತ್ತು. ಪದೇ ಪದೇ ಕಾಯಿಲೆ ಬೀಳುತ್ತಿದ್ದ ಸೊಸೆಯ ಮೇಲೆ ಅತ್ತೆ ಮಾವಂದಿರ ಜುಗುಪ್ಸೆಯೂ ಹೆಚ್ಚಿತು. ''ಇವಳಿಗೆ ಏನು ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಿಲ್ಲ. ಸುಮ್ಮನೇ ಹಣದಂಡ. ಆದ್ದರಿಂದ ನಮ್ಮ ನಂಜುಂಡನಿಗೆ ಬೇರೆ ಮದುವೆ ಮಾಡಿಬಿಡೋಣ'' ಎಂದು ತಂದೆ, ಸೋದರತ್ತೆಯರು ಸೇರಿ ನಿರ್ಧರಿಸಿದರು. ಕನ್ಯೆಯನ್ನೂ ನೋಡಿದರು. ಮನೆಯಲ್ಲಿ ಮದುವೆಯ ತಯಾರಿ ಪ್ರಾರಂಭಿಸಿದರು. ಅಷ್ಟಾದರೂ ನಂಜುಂಡಾವ ಧಾನಿಯವರಿಗೆ ಮಾತ್ರ ಈ ವಿಷಯ ಹೇಳಲಿಲ್ಲ. ಮನೆಯಲ್ಲಿ ಮಾತುಕತೆ, ಒಂದು ರೀತಿಯ ಸಡಗರ, ಎಲ್ಲ ರೀತಿಯ ಸಿದ್ಧತೆಗಳೂ ನಡೆಯುತ್ತಿದ್ದರೂ ನಂಜುಂಡಾವಧಾನಿಯವರು ಮಾತ್ರ ತನಗೆ ಯಾರೂ ಏನನ್ನೂ ನೇರವಾಗಿ ಹೇಳದಿದ್ದ ಕಾರಣ ತಾವೂ ಯಾರನ್ನೂ ಯಾವ ಬಗೆಗೂ ಏನನ್ನೂ ಕೇಳಬಾರದೆಂದು ನಿರ್ಧರಿಸಿ ಮೌನದಿಂದಲೇ ಇದ್ದರು. ಅದೂ ಒಂದು ರೀತಿಯ ನಿಯಮ. ಅಂತೂ ಅವರಿಗೆ ಹೇಳುವ ದಿನವೂ ಬಂದಿತು. ನಂಜುಂಡಾವಧಾನಿಯವರ ತಂದೆ ಲಕ್ಷ್ಮೀಕಾಂತ ಅವಧಾನಿಯವರು ಮಗನನ್ನು ಕರೆದು, ''ನೋಡು, ನಮ್ಮ ವಂಶ ಮುಂದುವರೆಯಬೇಕಾದರೆ ನಿನಗೆ ಬೇರೆ ಮದುವೆ ಮಾಡಲೇ ಬೇಕಿದೆ. ನಮ್ಮ ರಾಮಾವಧಾನಿಯ ಮಗಳು ಲಕ್ಷಣವಾಗಿದ್ದಾಳೆ. ಮದುವೆಯ ದಿನವನ್ನೂ ನಿಶ್ಚಯಿಸಿದ್ದೇವೆ..... ಮುಹೂರ್ತವೂ ನಿಶ್ಚಯವಾಗಿದೆ'' ಎಂದರು. ಅದಕ್ಕೆ ವಿನಯದಿಂದಲೇ ನಂಜುಂಡಾವಧಾನಿಯವರು, ''ಅಪ್ಪ, ನೀವು ದೊಡ್ಡವರು. ತಂದೆಯ ಹತ್ತಿರ ಮಗ ಉದ್ಧಟತನದಿಂದ ಮಾತನಾಡುತ್ತಿದ್ದಾನೆ ಎಂದು ನೊಂದುಕೊಳ್ಳಬೇಡಿ. ನನಗೆ ತಿಳಿಸದೆ ನೀವು ಮುಂದುವರೆ ದದ್ದಾದರೂ ಏಕೆ, ಹೇಗೆ? ನಿಜ.... ಮೊದಲ ಸಾರಿ ಮದುವೆಯಲ್ಲಿ ನಮ್ಮನ್ನು ಕೇಳಬೇಕಿಲ್ಲ. ನಿಮ್ಮ ಇಷ್ಟದ ಕನ್ಯೆ ಮನೆಗೆ ಸೊಸೆಯಾಗಿ ಬಂದಿದ್ದಾಳೆ. ಈಗ ಎರಡನೆಯ ಮದುವೆಯನ್ನು ಮಾಡಲು ಹೊರಟಿದ್ದೀರಿ, ಅವಳನ್ನೂ ಮತ್ತು ನನ್ನನ್ನೂ ಒಂದು ಮಾತು ಕೇಳಿದ್ದರೆ ಚೆನ್ನಾಗಿತ್ತು'' ಎಂದರು. ''ಈಗ ಕೇಳುತ್ತಿಲ್ಲವೇ? ಹೇಳು'' ಎಂದರು. ''ಹಾಗಾದರೆ ಕೇಳಿ.... ಇಲ್ಲ.... ನಾನು ಮತ್ತೆ ಮದುವೆಯಾಗುವ ಯೋಚನೆ ಮಾಡುವುದಿಲ್ಲ. ನಾನು ಅವಳಿಗೆ 'ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಾಮಿ' ಎಂದು ಹೇಳಿ ಪ್ರಮಾಣ ಮಾಡಿದ್ದೇನೆ. ನಮ್ಮ ಉಪಾಧ್ಯಾಯರೇ ಮಂತ್ರ ಹೇಳಿಸಿದ್ದಾರೆ. ಅದನ್ನು ಅತಿಕ್ರಮಿಸುವುದಿಲ್ಲ. ಅವಳೂ ಹಾಗೆಯೇ ಇದ್ದಾಳೆ. ನಾನು ಹಾಗೆ ಮತ್ತೆ ಮದುವೆಯಾದರೆ ಅದು ಅನ್ಯಾಯ. ಸರಿಯಲ್ಲ.... ನೀವೇ ಹೇಳಿ. ಈಗ ಈ ಮದುವೆಗೆ ಮಾಡುವ ಖರ್ಚು, ವೆಚ್ಚದಲ್ಲೇ ಮನೆಯಲ್ಲಿ ಜಪ, ಶಾಂತಿ ಮಾಡಿಸಿ, ಮಿಕ್ಕ ಹಣದಲ್ಲಿ ಅವಳಿಗೆ ಸರಿಯಾದ ಚಿಕಿತ್ಸೆ ಮಾಡಿಸಿದರೆ ಸರಿಯಾದೀತು. ಅಂಥದರಲ್ಲೂ ಅವಳು ಬದುಕದಿದ್ದರೆ ಆಗ ಮುಂದಿನ ಯೋಚನೆ. ಈಗಂತೂ ನಾನು ಬೇರೆ ಮದುವೆಯಾಗುವುದಿಲ್ಲ...'' ಎಂದುಬಿಟ್ಟರು ಖಡಾಖಂಡಿತವಾಗಿ. ಆ ತಾರುಣ್ಯದಲ್ಲಿ ಹೀಗೆ ಆಲೋಚಿಸಿ, ನಿರ್ಧಾರಕ್ಕೆ ಬರುವುದು ಎಲ್ಲರಿಂದ ಸಾಧ್ಯವಾಗದು. ಮಗನ ಮಾತು ತಂದೆಯ ಬಾಯಿ ಕಟ್ಟಿಸಿತು. ಮದುವೆ ನಡೆಯಲಿಲ್ಲ. ಕ್ರಮೇಣ ನಂಜುಂಡಾವಧಾನಿಯವರ ಪತ್ನಿಗೆ ಆರೋಗ್ಯವೂ ಚೆನ್ನಾಗಿ ಸುಧಾರಿಸಿತು. ಮುಂದೆ ಮಕ್ಕಳೂ ಆದರು. ಇಂತಹ ವ್ಯಕ್ತಿತ್ವ ನಂಜುಂಡಾವಧಾನಿಯವರದು.

ನಂಜುಂಡಾವಧಾನಿಯವರ ತಂದೆ ಲಕ್ಷ್ಮೀಕಾಂತ ಅವಧಾನಿಯವರದೂ ಬಲು ಉದಾರ ಮನೋಭಾವ. ಯಾವಾಗಲೂ ಎಲೆ, ಅಡಿಕೆ, ತಂಬಾಕು ಇಟ್ಟುಕೊಂಡಿರುತ್ತಿದ್ದರು. ಯಾರಿಗಾದರೂ ಉದಾರವಾಗಿ ಅದನ್ನು ಅವರು ಕೊಡುತ್ತಲೂ ಇದ್ದರು. ಎಂದೂ ತಮಗಾಗಿ ಯಾರನ್ನೂ ಏನನ್ನೂ ಕೇಳಿದವರಲ್ಲ. ಈ ಸ್ವಭಾವ ಇದ್ದುದರಿಂದಲೇ ದೇವರು ಅವರ ಕುಟುಂಬದವರ ಮೇಲೆ ವಿಶೇಷವಾದ ಪ್ರೀತಿ ತೋರಿಸಿ, ಒಲಿದನೋ ಎನಿಸುತ್ತದೆ.

ನಂಜುಂಡಾವಧಾನಿಯವರ ಮುತ್ತಜ್ಜನಿಗೆ ಒಮ್ಮೆ ಕನಸಿನಲ್ಲಿ ಹಾವು ಕಂಡಿತಂತೆ. 'ಹಾವು... ಹಾವು' ಎಂದು ಕೂಗಿ ಎಚ್ಚರವಾದರು, ಅಲ್ಲಿ ಹಾವು ಇರಲಿಲ್ಲ. ''ಓಹೋ.... ಕನಸಾಗಿದೆ.....'' ಎಂದು ಸುಮ್ಮನಾದರು. ಮತ್ತೆ ಮಲಗಿದಾಗ ಮತ್ತೊಮ್ಮೆ ಹಾವು ಕಾಣಿಸಿಕೊಂಡಿತು.... ಅದು ತನ್ನ ಹೆಡೆಯನ್ನು ಇವರ ಹತ್ತಿರ ತಂದಿತು.... ಅದರ ಮುಖದಲ್ಲಿ ಏನೋ ನೋವು, ಸಂಕಟ.... ಇವರಿಗೆ ಅದು ಸ್ಪಷ್ಟವಾಗಿ ಕಂಡಿತು. ಅದರ ಹೆಡೆಯಲ್ಲಿ ಕಣ್ಣಿನ ಪಕ್ಕಕ್ಕೆ ಒಂದು ಮುಳ್ಳು ನಾಟಿತ್ತು. 'ನೋವಿನ ಬಾಧೆಯಿಂದ ಅದು ನರಳಿ ತನ್ನ ಬಳಿ ಬಂದಿದೆ' ಎಂದು ಅವರಿಗೆ ಅರ್ಥವಾಯಿತು. ಮತ್ತೆ ಎಚ್ಚರ! ಇದೇ ಸ್ವಪ್ನ ಎರಡು ಮೂರು ದಿನಗಳು ಬಂದಿತು. ಸ್ವಪ್ನದಲ್ಲಿ, 'ನಿನಗೆ ನಾನೇನೂ ಅಪಾಯ ಮಾಡುವುದಿಲ್ಲ...ನನಗೆ ಮುಳ್ಳು ತೆಗೆದು ಸಹಾಯ ಮಾಡು' ಎಂದಂತೆ ಅವರಿಗೆ ಅನ್ನಿಸಿತು. ಮೂರನೆಯ ದಿನ ಅವರಿಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಅಕ್ಕಸಾಲಿಗನ ಬಳಿಗೆ ಹೋಗಿ ತಾಮ್ರದ ಚಿಮುಟವೊಂದನ್ನು ಕೊಂಡುತಂದರು. ಶುಭ್ರವಾಗಿ ತೊಳೆದಿಟ್ಟುಕೊಂಡರು. ತಾವೂ ಮಿಂದು ಮಡಿಬಟ್ಟೆ ಉಟ್ಟರು. ಪತ್ನಿಗೆ, ''ನೋಡು, ಒಂದು ಲೋಟ ಹಾಲನ್ನಿಡು ಇಲ್ಲಿ. ಆ ಸುಬ್ರಹ್ಮಣ್ಯನ ಅನುಗ್ರಹವಿದ್ದರೆ ಇನ್ನೊಮ್ಮೆ ನಿನ್ನನ್ನು

ನೋಡಿಯೇನು. ಇಲ್ಲವಾದರೆ ಇಲ್ಲ'' ಎಂದರು. ಪತ್ನಿ ಹೌಹಾರಿ, ''ಹಾಗೆಂದರೇನು? ಇದೇನು ನೀವು ಹೇಳುತ್ತಿರುವುದು?'' ಎಂದಾಗ, ಕನಸಿನಲ್ಲಿ ಕಂಡದ್ದೆಲ್ಲವನ್ನೂ ವಿವರಿಸಿ, ''ಸುಬ್ರಹ್ಮಣ್ಯನ ಜಪ ಮಾಡುತ್ತ ಇಲ್ಲಿ ಕೂರುತ್ತೇನೆ. ನಿಜಕ್ಕೂ ಅದಕ್ಕೆ ಮುಳ್ಳು ನಾಟಿದ್ದು, ಅದು ಬಂದರೆ ಧೈರ್ಯಮಾಡಿ ತೆಗೆಯುತ್ತೇನೆ. ಅದು ಕಚ್ಚಿದರೆ ಸಾಯುಜ್ಯ, ಇಲ್ಲವಾದರೆ ಬದುಕು, ಅದರ ನೋವನ್ನು ನಿವಾರಿಸಿದ ಸಮಾಧಾನ....'' ಎಂದರು ನಿರ್ಲಿಪ್ತರಾಗಿ. ಅದಕ್ಕೆ ಅವರೂ ಕೂಡಲೆ ಪ್ರತಿಕ್ರಿಯಿಸಿ, ''ಬೇಕಿಲ್ಲ... ಈ ಸಾಹಸವೆಲ್ಲ ಏನೂ ಬೇಕಿಲ್ಲ'' ಎಂದರು. ''ನೋಡು, ಬೇಕಿಲ್ಲ ಎನ್ನಬೇಡ. ಹುಟ್ಟಿದ ಮನುಷ್ಯ ಒಂದಲ್ಲ ಒಂದು ದಿನ ಸಾಯಲೇಬೇಕಿದೆ. ಎಂದೋ ಸಾಯುವ ಬದಲು, ಅದರ ಕಷ್ಟ ನಿವಾರಿಸಿ ಇವತ್ತೇ ಸತ್ತರಾಯಿತು. ನಾನು ಅದಕ್ಕೆ ಮಾತು ಕೊಟ್ಟಿದ್ದೇನೆ. ಅದು ಕಾಣಿಸಿಕೊಂಡು ಹತ್ತಿರ ಬಂದರೆ ತೆಗೆಯುವುದೇ ಖಂಡಿತ. ನೀವೆಲ್ಲ ಒಳಗೆ ಹೋಗಿ'' ಎಂದು ತೀರ್ಮಾನಿಸಿ ಹೇಳಿದರು.

ತಾವು ಗಾಯತ್ರೀ ಜಪ ಮಾಡುತ್ತ ಮನೆಯಂಗಳದ ತುಳಸಿ ಕಟ್ಟೆಯ ಹತ್ತಿರ ಹಾಲನ್ನೂ ಚಿಮಟವನ್ನೂ ಇಟ್ಟುಕೊಂಡು ಕುಳಿತರು. ಅವರಿಗರಿವಿಲ್ಲದಂತೆ ಅವರು ಮಾಡುತ್ತಿದ್ದ ಗಾಯತ್ರೀ ಜಪವು ಬದಲಾಗಿ ಸುಬ್ರಹ್ಮಣ್ಯ ಜಪವಾಯಿತು. ಅವರು ತಾನಿನ್ನೂ ವಿಸ್ಮೃತಿಯಲ್ಲಿದ್ದೇನೆ ಎಂದುಕೊಳ್ಳುವಷ್ಟರಲ್ಲೇ ನಾಗರಹಾವು ಬಂದಿತು. ''ಸುಬ್ರಹ್ಮಣ್ಯ, ನೀನೇ ಕಾಪಾಡಬೇಕು'' ಎಂದವರೇ ಕಣ್ಣುಬಿಟ್ಟರು. ಎದುರಿಗೇ ಹಾವು! ಕೈ ನಡುಗುತ್ತಿದ್ದರೂ ಚಿಮಟ ಹಿಡಿದು ಎದ್ದರು. ''ನೀನೇ ಸುಬ್ರಹ್ಮಣ್ಯ. ನೀನು ನನ್ನನ್ನು ಏನಾದರೂ ಮಾಡು. ನಿನ್ನದೇ ಹೊಣೆ'' ಎಂದವರೇ ಹತ್ತಿರ ಹೋಗಿ ಹೆಡೆಯಲ್ಲಿ ನಾಟಿದ್ದ ಮುಳ್ಳನ್ನು ತೆಗೆದೇ ಬಿಟ್ಟರು. ಮುಳ್ಳು ನೆಟ್ಟ ಜಾಗದಲ್ಲಿ ಕೀವೂ ತುಂಬಿತ್ತಾಗಿ, ಇವರು ಮುಳ್ಳನ್ನು ಹಿಡಿದ ಕೂಡಲೇ ಸುಲಭವಾಗಿ ಅದು ಈಚೆ ಬಂದಿತು.... ಅವರು ಮತ್ತೆ ತಿರುಗಿ ನೋಡುವಷ್ಟರಲ್ಲಿ ಹಾವು ಹಿಂದೆ ಸರಿದು ಮಾಯವಾಗಿತ್ತು. ಅಂತೂ ಅವರು ಹಾವಿನ ನೋವನ್ನು ನಿವಾರಿಸಿದ್ದರು. ಅವರು ನಂಬಿದ ದೈವ ಅವರನ್ನು ಕಾಪಾಡಿದ್ದಿತು.

ಅದೇ ರಾತ್ರಿ ಸ್ವಪ್ನದಲ್ಲಿ, ''ನಿನ್ನ ಮುಂದಿನ ಏಳು ತಲೆಮಾರನ್ನು ನಾನು ಕಾಪಾಡುತ್ತೇನೆ'' ಎಂದ ಹಾಗಾಯಿತು. ಅಂತೂ ಅದು ಅವರ ನಂಬಿಕೆಯೋ, ನಿಷ್ಠೆಯೋ.... ಇಂದಿಗೂ ಅವರ ತಲೆಮಾರಿನ ಮಕ್ಕಳು ಅದೇ ಸಿರಿವಂತಿಕೆಯಿಂದ, ದಾರ್ಯದಿಂದ, ಹಿಂದಿನಂತೆಯೇ, ಚೆನ್ನಾಗಿದ್ದಾರೆ. ಆ ದಿನ ಅವರ ಪೂರ್ವಿಕರು ಉಪಯೋಗಿಸಿದ ತಾಮ್ರದ ಚಿಮಟವನ್ನು ನಂಜುಂಡ ಅವಧಾನಿಗಳು ದೇವರ ಕೋಣೆಯಲ್ಲಿಟ್ಟು ಪೂಜಿಸುತ್ತ ಬಂದಿದ್ದಾರೆ. ಅದನ್ನು ಇಂದೂ ನೋಡಬಹುದು.

❁ ❁ ❁

'ದೇವರು' ಎಂದಾಗ ನಾನು ಇಲ್ಲಿ ಹೇಳಲೇಬೇಕಾದುದು ನಮ್ಮೂರಿನ ಚನ್ನಕೇಶವ ದೇವಸ್ಥಾನದ ಬಗೆಗೆ! ಹೊಸಹಳ್ಳಿಯಲ್ಲಿ ನಮ್ಮ ತಾಯಿಯ ತಾಯಿಯ ತಂದೆ (ನಮ್ಮಜ್ಜಿಯ ತಂದೆ) ಚೆನ್ನಪ್ಪ ಶಾಸ್ತ್ರಿಗಳು ಇದ್ದ ಸಮಯ ಅದು. ಬೇಲೂರಿನ ಚನ್ನಕೇಶವನೇ ನಮ್ಮಲ್ಲಿ ಬಹಳಮಂದಿಗೆ ಮನೆದೇವರು. ಚೆನ್ನಪ್ಪಶಾಸ್ತ್ರಿಗಳಿಗೆ ಆ ಕೇಶವನನ್ನು ತಂದು ನಮ್ಮೂರಿನಲ್ಲೇ ಪ್ರತಿಷ್ಠಾಪಿಸಬೇಕು ಎನ್ನುವ ಆಸೆಯಾಯಿತು. ಅದನ್ನು ಕಾರ್ಯರೂಪಕ್ಕೆ ತರಲು ಅವರು ಪ್ರಯತ್ನವನ್ನೂ ಪ್ರಾರಂಭಿಸಿದರು. ಅವರು ಭಾಗವತ, ಪುರಾಣ, ಕಥೆ ಹೇಳುವುದರಲ್ಲಿ ನಿಪುಣರು. ಅಲ್ಲಿ ಇಲ್ಲಿ ಹೇಳಿದ ಕಥೆಯಿಂದಾಗಿ ಬಂದ ಪುಡಿಗಾಸಿನಲ್ಲಿ ಒಂದು ಪುಟ್ಟ ಗುಡಿಯನ್ನು ಕಟ್ಟಿಸಿ, ಅದರೊಳಗೆ ಶುದ್ಧ ಸಾಲಿಗ್ರಾಮಶಿಲೆಯಲ್ಲಿ ಎರಡು ಅಡಿಗಳಷ್ಟು ಎತ್ತರವಿದ್ದ ಚೆನ್ನಕೇಶವನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರು. ಒಂದೆರಡು ವರ್ಷಗಳು ಪೂಜೆ ಮಾಡಿದ ಮೇಲೆ ಊರ ದೇವರಿಗೆ ರಥೋತ್ಸವವನ್ನು ಮಾಡಬಾರದೇಕೆ? ಎನ್ನುವ ಯೋಚನೆ ಅವರಲ್ಲಿ ಬಂದಿತು. ತಮ್ಮ ಅಭೀಷ್ಟವನ್ನು ಇಷ್ಟದೇವರ ಮುಂದೆ ಹೇಳಿಕೊಂಡು, ''ಕೇಶವ, ನೀನು ನನಗೆ ಪ್ರಸಾದ ಕೊಡು'' ಎಂದು ಕುಳಿತರು. ಕಾಕತಾಳೀಯವಾಗಿ ದೇವರ ಎಡಭಾಗದ ಹೂವು ಕೆಳಗೆ ಬಿದ್ದಿತು. ಅವರಿಗೆ ಪೆಚ್ಚಾದರೂ ಹಠ ಬಿಡಲಿಲ್ಲ. ಮತ್ತೆ ಧ್ಯಾನಕ್ಕೆ ಕುಳಿತರು.... ಅಂತೂ ಬಲಭಾಗದಿಂದ ಹೂ ಕೆಳಗೆ ಉರುಳುವವರೆಗೆ ಜಪ ಮುಂದುವರೆಯಿತು.ಹೀಗೆ ಸಂಕಲ್ಪ ಮಾಡಿದ ಚೆನ್ನಪ್ಪಶಾಸ್ತ್ರಿಗಳು ಪುರಾಣದ ಪುಸ್ತಕವನ್ನು ಚೀಲದಲ್ಲಿ ಹಾಕಿಕೊಂಡು ಸಾಗರ, ಶಿರಸಿ, ಹೊನ್ನಾವರ, ಕುಮಟಾ, ಗೋಕರ್ಣಗಳ ಕಡೆಗೆ ಹೊರಟರು. ಅಲ್ಲಿ ಹಳ್ಳಿಹಳ್ಳಿಯಲ್ಲೂ ಭಾಗವತಪುರಾಣ ಸಪ್ತಾಹ ಮಾಡಿ ಸುಮಾರು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ತಂದರು. ಆಗಿನ ಸಾವಿರ ರೂಪಾಯಿಗೆ ಇಂದಿನ ಲಕ್ಷಾಂತರ ರೂಪಾಯಿಗಳ ಬೆಲೆ! ಅಲ್ಲದೆ ಹಾಗೆ ಪುರಾಣ ಹೇಳುವವರ ಬಗೆಗೂ ಜನರಲ್ಲಿ ಬಲು ಆದರ, ಗೌರವ. ಪುರಾಣವನ್ನು ಕೇಳಿ ತಮ್ಮ ಕೈಲಾದಷ್ಟು ಸಂಭಾವನೆ ಕೊಡುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಚೆನ್ನಪ್ಪ ಶಾಸ್ತ್ರಿಗಳಲ್ಲಿ ಇದ್ದ ಕಥನಕಲೆ ಈ ಸಂದರ್ಭಕ್ಕೆ ಹಣವನ್ನು ಒದಗಿಸಿತ್ತು. ತಮ್ಮ ಮನೆಯಲ್ಲೇ ಕಡುಬಡತನ. ಒಂದು ಹೊತ್ತಿಗಾದರೆ ಮತ್ತೊಂದು ಹೊತ್ತಿಗೆ ದೇವರೇ ದಾರಿ ತೋರಿಸಬೇಕಾದ ಪರಿಸ್ಥಿತಿ. ಆದರೆ ಅವೆಲ್ಲ ಅವರ ಗಮನಕ್ಕೆ ಬರುವಂತಿರಲಿಲ್ಲ. ಶಿವಮೊಗ್ಗಕ್ಕೆ ಹೋಗಿ ಮರದಲ್ಲಿ

ಕೆತ್ತಿದ ಆನೆ, ಕುದುರೆ, ಪಲ್ಲಕ್ಕಿಗೆ ಹೇಳಿಬಂದರು. ರಥಕಟ್ಟುವ ಏರ್ಪಾಡು ಮಾಡಿದರು. ಮೂರು ದಿನವೂ ಅನ್ನಸಂತರ್ಪಣೆಗೆ ಸಿದ್ಧತೆ ನಡೆಸಿದರು. ಅವರ ಸಂಭ್ರಮ ಬರಿಮಾತಿನಲ್ಲಿ ಹೇಳುವಂತಿರಲಿಲ್ಲ.

ಆದರೆ ವಿಧಿಗೆ ಅವರ ಈ ಸಂಭ್ರಮ ಹಿಡಿಸಲಿಲ್ಲವೋ ಎನ್ನುವಂತೆ ಪ್ಲೇಗುಮಾರಿ ಸದ್ದಿಲ್ಲದೆ ಕಾಲಿಟ್ಟಿತು; ಶಿವಮೊಗ್ಗದ ಸುತ್ತಮುತ್ತಲೂ ಕಾಣಿಸಿಕೊಂಡಿತು. ನಮ್ಮೂರಿನ ಸುತ್ತಮುತ್ತಲೂ ಸುಮಾರು ಐವತ್ತಕ್ಕೂ ಹೆಚ್ಚು ಜನರು ಪ್ಲೇಗಿಗೆ ಬಲಿಯಾದರು. ಯಾರ ಮನೆಯಲ್ಲಿ ಇಲಿ ಬಿದ್ದಿತೋ, ಅವರ ಮನೆಯಲ್ಲಿ ಕಾಯಿಲೆ ಖಾತರಿ. ಮೊದಲ ದಿನ ಮೈಕೈ ನೋವು, ಮಾರನೆಯ ದಿನ ಕಂಕುಳು ತೊಡೆ ಸಂದಿಯಲ್ಲಿ ಗಡ್ಡೆ, ಅನಂತರ ಬಿಡದೆ ಹಿಡಿವ ಜ್ವರ... ಮೂರೇ ದಿನದಲ್ಲಿ ಅರೆ ಪ್ರಜ್ಞಾವಸ್ಥೆ, ಅನಂತರ ಸಾವು. ಆದರೆ ಒಂದು ನಿಯಮವನ್ನು ಮಾತ್ರ ಎಲ್ಲರೂ ಪಾಲಿಸುತ್ತಿದ್ದರು. ಕಾಯಿಲೆಗೆ ಬಲಿಯಾದವರ ಸೇವೆಗೆ ಚಿಕ್ಕವಯಸ್ಸಿನವರು ಹೋಗುತ್ತಿರಲಿಲ್ಲ. ಆ ಸೇವೆಯನ್ನು ಎಷ್ಟು ಕಷ್ಟವಾದರೂ ವಯಸ್ಸಾದವರೇ ಮಾಡುತ್ತಿದ್ದರು..... ವಯಸ್ಸಾದವರು ಹೇಗಾದರೂ ಒಂದು ಕಾಲು ಆಚೆ ಇಟ್ಟವರು. ನಾಲ್ಕಾರು ದಿನಗಳಲ್ಲಿ ಹೋಗುವವರು. ಕಾಯಿಲೆ ಬಿದ್ದವರ ಸೇವೆ ಮಾಡಿಯೇ ಹೋದರಾಯಿತು ಎನ್ನುವ ಮನೋಭಾವ. ಪರಿಸ್ಥಿತಿ ಹೀಗಾಗಿ ಎಲ್ಲರ ಮನಸ್ಸಿನಲ್ಲಿಯೂ ನಿರಾಸೆ ಮಡುಗಟ್ಟಿತ್ತು. ಷಧಿ ಎನ್ನುವುದು ಇಲ್ಲದೆ ಪರಿತಪಿಸುತ್ತಿದ್ದ ಜೀವಗಳು ಕಾಯಿಲೆ ಬಿದ್ದವರನ್ನು ನೋಡಿ ನೋಡಿ ವೈರಾಗ್ಯ ಭಾವನೆ ತಳೆದವು.

ಇತ್ತ ರಥೋತ್ಸವಕ್ಕಾಗಿ ಏರ್ಪಾಡು ಮಾಡಿದ ಚೆನ್ನಪ್ಪ ಶಾಸ್ತ್ರಿಗಳೂ ಪ್ಲೇಗಿಗೆ ಗುರಿಯಾದರು. ಜ್ವರದ ತಾಪ ಹೆಚ್ಚಿತು. ಮನೆಯವರೆಲ್ಲ ಕಣ್ಣೀರು ಹಾಕುತ್ತಿದ್ದರು. ಮನೆಯ ಆಚೆ ದರ್ಭೆಯನ್ನು ಹಾಸಿ ಅವರನ್ನು ಮಲಗಿಸಲಾಯಿತು. ಮುಂದಿನ ಸಿದ್ಧತೆಗಳೂ ನಡೆದವು. ಆ ಸಮಯದಲ್ಲೇ ಶಿವಮೊಗ್ಗದಿಂದ ಮರಗೆಲಸದವನು ಬಂದ. ಚೆನ್ನಪ್ಪಶಾಸ್ತ್ರಿಗಳ ಮನೆಯ ಮುಂದೆ ಗುಂಪು ಗುಂಪಾಗಿ ನಿಂತಿದ್ದ ಜನರನ್ನು ಕಂಡು, ''ಶಾಸ್ತ್ರಿಗಳು ಪಲ್ಲಕ್ಕಿಗೆ ಹೇಳಿದ್ದರು. ಅದು ಸಿದ್ಧವಾಗಿದೆ. ತೆಗೆದುಕೊಂಡು ಬರಲು ಬನ್ನಿ.... ಶಾಸ್ತ್ರಿಗಳು ಎಲ್ಲಿದ್ದಾರೆ? ಅವರಿಗೆ ಹೇಳಬೇಕಲ್ಲ...'' ಎಂದ. ಅವನ ಮಾತನ್ನು ಕೇಳಿದ ಒಬ್ಬ ಹಿರಿಯರು, ''ಅಯ್ಯೋ, ಇನ್ಯಾವ ಪಲ್ಲಕ್ಕಿಯಪ್ಪಾ? ಶಾಸ್ತ್ರಿಗಳೇ ಬೊಂಬಿನ ಪಲ್ಲಕ್ಕಿಯಲ್ಲಿ ಹೊರಟಿದ್ದಾರೆ. ಕ್ಷಣಗಣನೆಯಲ್ಲಿದೆ ಅವರ ಜೀವ... ಅಲ್ಲಿ ನೋಡು, ದರ್ಭೆಯ ಮೇಲೆ ಮಲಗಿಸಿ ಆಗಿದೆ. ಅವರ ಕಥೆ ಮುಗಿಯಿತು'' ಎಂದರು. ಅವನು ಅಳುವುದಕ್ಕೆ ಮೊದಲು ಮಾಡಿದ. ಆದರೂ ಸುಮ್ಮನಿರದೆ, ಪಟ್ಟುಬಿಡದವನಂತೆ, ''ಸ್ವಾಮೀ, ಶಾಸ್ತ್ರಿಗಳ ಕಿವಿಯಲ್ಲಿ ಹೇಳಿ, ನಾನು ಬಂದಿದ್ದೀನಿ, ಪಲ್ಲಕ್ಕಿ ಸಿದ್ಧ ಮಾಡಿಟ್ಟಿದ್ದೀನಿ ಅಂತ'' ಎಂದು ಬೇಡಿದ. ಅದು ಅವರ ಜೀವನದ ಮಹದಾಸೆಯಾಗಿತ್ತಷ್ಟೆ! ಚನ್ನಕೇಶವನ ರಥೋತ್ಸವವಂತೂ ಆಗದು. ಅವರ ಪಲ್ಲಕ್ಕಿ ಮಾಡಿಸುವ ಬಯಕೆಯಾದರೂ ಪೂರೈಸಿದೆ ಎಂದು ಅವರಿಗೆ ತಿಳಿಯಲಿ ಎಂದು ಆ ಹಿರಿಯರು ಒಂದು ಊದುಗೊಳವೆ ತೆಗೆದುಕೊಂಡು, ಅರೆಪ್ರಜ್ಞೆಯಲ್ಲಿ ನಿಡಿದಾದ ಉಸಿರು ಬಿಡುತ್ತಾ ಮಲಗಿದ್ದ ಶಾಸ್ತ್ರಿಗಳ ಕಿವಿಯಲ್ಲಿ ಜೋರಾಗಿ, ''ಶಾಸ್ತ್ರಿಗಳೇ, ರಥೋತ್ಸವಕ್ಕೆ ಗರುಡ, ಪಲ್ಲಕ್ಕಿ ಎಲ್ಲವೂ ಸಿದ್ಧವಾಗಿದೆ. ಮರಗೆಲಸದವನು ಬಂದಿದ್ದಾನೆ ನೋಡಿ'' ಎಂದರು. ಅಲ್ಲಿದ್ದವರೆಲ್ಲರೂ ಆಶ್ಚರ್ಯಪಡುವಂತೆ ಶಾಸ್ತ್ರಿಗಳು ''ಹ್ಞಾಂ....'' ಎಂದವರೇ ಎದ್ದುಕುಳಿತರು. ಅಲ್ಲಿಯವರೆಗೆ ಹೊಟ್ಟೆಗೆ ಏನೂ ಇಲ್ಲ. ಗಂಜಿಯನ್ನೂ ಕುಡಿದಿರಲಿಲ್ಲ. ಮಾತಿಲ್ಲದೆ ಮಲಗಿದ್ದ ಚೆನ್ನಪ್ಪ ಶಾಸ್ತ್ರಿಗಳು ಗಡಬಡಿಸಿ ಎದ್ದು ಕುಳಿತದ್ದು ಎಲ್ಲರಲ್ಲೂ ಒಂದು ರೀತಿಯ ಭಯವನ್ನೇ ಹುಟ್ಟಿಸಿತು. ಹೌಹಾರಿದ ಆ ಹಿರಿಯರು ಸುಧಾರಿಸಿಕೊಂಡು, ''ಯಾರೋ ನೀನು?'' ಎಂದರು, ಭೂತವೇನಾದರೂ ಮೈಮೇಲೆ ಬಂದಿತೋ ಎಂದು ಹೆದರಿ. ಅದಕ್ಕೆ ಚೆನ್ನಪ್ಪ ಶಾಸ್ತ್ರಿಗಳು, ''ನಾನೇ ಚೆನ್ನಪ್ಪ. ಊರಿನಲ್ಲಿ ರಥೋತ್ಸವ ನಡೆಸಲೆಂದೇ ಬದುಕಿ ಬಂದಿದ್ದೇನೆ.... ಪಂಚಾಂಗ ತನ್ನಿ, ದಿನ ನೋಡೋಣ...'' ಎಂದರು! ಅಲ್ಲಿದ್ದ ಹಿರಿಯರು ಮುಹೂರ್ತ ನೋಡಿಯೇ ಬಿಟ್ಟರು. ಶಾಸ್ತ್ರಿಗಳ ಮಾತಿನಂತೆ ಬಡಗಿಗೆ, ಗರುಡ ಮತ್ತು ಪಲ್ಲಕ್ಕಿಗೆ ತಗಲಿದ ಹಣವನ್ನೂ ಸಂಗ್ರಹಿಸಿ ಕೊಟ್ಟರು.

ಎಂಟು ದಿವಸಗಳಲ್ಲಿ ಚೆನ್ನಪ್ಪಶಾಸ್ತ್ರಿಗಳು ಪೂರ್ತಿಯಾಗಿ ಸುಧಾರಿಸಿಕೊಂಡರು. ಮುಂದಿನ ಮೂರು ತಿಂಗಳಲ್ಲಿ, ಅಂದರೆ ಚೈತ್ರ ಶುದ್ಧ ದ್ವಾದಶಿಯ ಪುಬ್ಬಾ ನಕ್ಷತ್ರದಲ್ಲಿ ರಥೋತ್ಸವ ನಡೆಸುವುದೆಂದು ತೀರ್ಮಾನವಾಯಿತು. ಕಾದುಕೊಂಡಿದ್ದ ಆ ದಿನವೂ ಬಂದಿತು. ಊರು ಪುಟ್ಟದು. ರಥವೂ ಪುಟ್ಟದು. ಕೇಶವನ ಮೂರ್ತಿಯೂ ಪುಟ್ಟದು! ಮೂರು ದಿನದ ಉತ್ಸವ. ಎಲ್ಲರಲ್ಲೂ ಉತ್ಸಾಹವೋ ಉತ್ಸಾಹ. ಕಾಯಿಲೆ ಮತ್ತು ಸಾವಿನ ಭೀತಿಯಿಂದ ಹೊರಬಂದ ಜನ ಉಲ್ಲಸಿತರಾಗಿದ್ದರು. ಎಂಟುಕಂಬದ ಮಂಟಪದ ರಥದಲ್ಲಿ ಅಭಿಜಿನ್ ಮುಹೂರ್ತದಲ್ಲಿ ದೇವರನ್ನು ಕೂರಿಸಿದ್ದೂ ಆಯಿತು. ಒಂದೊಂದು ಮಾರು ದೂರಕ್ಕೂ ರಥವನ್ನು ನಿಲ್ಲಿಸಿ, ಸರದಿಯಂತೆ ಗುಂಪುಗುಂಪಾಗಿ ಜನರು ರಥ ಎಳೆಯುತ್ತಿದ್ದುದನ್ನು ನೋಡಲೇ ಒಂದು ಚಂದ. ನಾಲ್ಕಾರು ಮಾರು ರಥ ಸಾಗಿತು. ಚೆನ್ನಪ್ಪಶಾಸ್ತ್ರಿಗಳು ರಥದಲ್ಲಿ ಕುಳಿತಿದ್ದರು.

ಪ್ರತಿಯೊಬ್ಬರ ಮನೆಬಾಗಿಲಲ್ಲೂ ನಿಂತ ಚೆನ್ನಕೇಶವನ ರಥ ಪೂಜೆ ಕೈಗೊಂಡು ಮುಂದೆ ಸಾಗುತ್ತಿತ್ತು. ಅಷ್ಟರಲ್ಲೇ ಚೆನ್ನಪ್ಪಶಾಸ್ತ್ರಿಗಳ ಮಗ ನಾಲ್ಕು ವರ್ಷದ ಪೋರ ತಾನೂ ರಥ ಏರುವುದಾಗಿ ಹೇಳಿದ. ಶಾಸ್ತ್ರಿಗಳು ''ಬೇಡವೋ, ಇಲ್ಲಿ ಜಾಗವಿಲ್ಲ'' ಎಂದರೂ ಸುತ್ತಲಿನವರು ಬಿಡದೆ, ಅಷ್ಟು ಕಷ್ಟಪಟ್ಟು ರಥೋತ್ಸವವನ್ನು ಹಮ್ಮಿಕ್ಕೊಂಡು ನಡೆಸುತ್ತಿರುವ ಶಾಸ್ತ್ರಿಗಳ ಮಗನೂ ರಥದಲ್ಲಿ ಹತ್ತಿದರೆ ಏನು ನಷ್ಟ ಎನ್ನುವ ಭಾವದಿಂದ ''ಯಾಕೆ ಶಾಸ್ತ್ರಿಗಳೆ? ಹತ್ತಿಸಿಕೊಳ್ಳಿ'' ಎಂದು ಶಿಫಾರಸು ಮಾಡಿ ಅವನನ್ನು ರಥಕ್ಕೆ ಹತ್ತಿಸಿದರು. ಹತ್ತಿದ ಹುಡುಗ ರಥದ ಕಂಬಹಿಡಿದು ಹಿಂದೆ ಸರಿದು ನಿಧಾನವಾಗಿ ಸುತ್ತುತ್ತಿದ್ದ. ಮುಂದೆ ಹೋದಂತೆ ದಾರಿಯಲ್ಲಿ ಹುದುಗಿದ್ದ ಕಲ್ಲೊಂದರ ಮೇಲೇರಿ ರಥದ ಗಾಲಿ ಸಾಗಿದಾಗ, ರಥವು ನೆಗೆಯಿತು. ಅವನು ಆಯತಪ್ಪಿ ಕೆಳಗೆ ಬಿದ್ದ. ನೋಡುತ್ತಿದ್ದವರೆಲ್ಲ, ''ಓ.... ಶಾಸ್ತ್ರಿಗಳೇ, ಆಯಿತು!'' ಎಂದು ಕೂಗಿದರು. ಎಲ್ಲರ ಮುಖವೂ ಕಪ್ಪಿಟ್ಟಿತು. ಆತಂಕ ಮಡುಗಟ್ಟಿತು. ಶಾಸ್ತ್ರಿಗಳು ಹಿಂದಿರುಗಿ ನೋಡಿದರು, ಮಗ ಕಾಣಿಸಲಿಲ್ಲ. ಏನಾಗಿರಬಹುದು ಎಂದು ಅಂದಾಜಾಯಿತು. ಕೈಯಲ್ಲಿ ತುಂಬ ಹೂವು ತೆಗೆದುಕೊಂಡು ಮಂತ್ರಪುಷ್ಪವನ್ನು ಹೇಳಿ ಕೇಶವನಿಗೆ ಅರ್ಪಿಸಿ, ಅಲ್ಲಿಂದ ಪ್ರಸಾದ ತೆಗೆದು ಮೇಲಿನಿಂದಲೇ ಎಲ್ಲರ ಕೈಗೆ ಪ್ರಸಾದ ಕೊಟ್ಟು ಕೈಮುಗಿದರು. ಆಮೇಲೆ ಕೆಳಗಡೆ ಬಗ್ಗಿ, ''ಉಸಿರಿದೆಯೇ.....'' ಎಂದು ಕೇಳಿದರು. ಅವರ ದೃಢಮನಸ್ಸು ಎಲ್ಲರಿಗೂ ಆಶ್ಚರ್ಯ ತಂದಿತ್ತು. ಅಷ್ಟರಲ್ಲಿ ಕೆಳಗೆ ಬಿದ್ದ ಹುಡುಗನನ್ನು ಕೂಡಲೇ ಎತ್ತಿಕೊಂಡವರು ನೋಡಿದರು. ಅವನಿಗೆ ಅಂಥದೇನೂ ಪೆಟ್ಟಾಗಿರಲಿಲ್ಲ. ಆದರೆ ಬಿದ್ದೆನೆಂದು ಹೆದರಿಹೋಗಿದ್ದನಷ್ಟೆ. ಅವನಿಗೆ ಏನೂ ಅಪಾಯವಾಗದಿದ್ದುದನ್ನು ಕಂಡು ಎಲ್ಲರಿಗೂ ಸಂತೋಷವಾಗಿತ್ತು, ನಿರಾಳವಾಗಿತ್ತು. ''ಶಾಸ್ತ್ರಿಗಳೇ..... ಏನೂ ಯೋಚಿಸಬೇಡಿ. ನಿಮ್ಮ ಮಗನಿಗೆ ಏನೂ ಆಗಿಲ್ಲ. ಗಾಬರಿಯಾಗಿದ್ದಾನೆ ಅಷ್ಟೆ. ಅವನಿಗೆ ದ್ರಾಕ್ಷಿಹಣ್ಣು ಕೊಟ್ಟಿದ್ದೀವಿ. ತಿನ್ನುತ್ತಿದ್ದಾನೆ ನೋಡಿ. ಸರಿಯಾಗಿದ್ದಾನೆ....'' ಎಂದರು. ಹುಡುಗನನ್ನು ಎತ್ತಿಕೊಂಡು ಸಂತೈಸಿದರು. ನಿಜಕ್ಕೂ ಅದೊಂದು ಪವಾಡವೇ ಆಗಿತ್ತು. ಅಷ್ಟು ಜನರು ರಥವನ್ನು ಎಳೆಯುತ್ತಿದ್ದರೂ, ಹಾಗೆ ಹುಡುಗ ಕೆಳಗೆ ಬಿದ್ದನಂತರವೂ ಮಾರು ದೂರ ಎಳೆಯಲ್ಪಟ್ಟ ರಥದಿಂದಾಗಿ ಹುಡುಗನಿಗೆ ಯಾವ ಪೆಟ್ಟೂ ಆಗದೆ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದುದು ನಂಬಲಸಾಧ್ಯವಾಗಿದ್ದ ಸತ್ಯವಾಗಿತ್ತು. 'ಕಾಣದ ಕೈ ರಕ್ಷಿಸುತ್ತದೆ' ಎನ್ನುವ ಮಾತನ್ನು ಯಾರೂ ಹೇಗೆ ತಾನೆ ಅಲ್ಲಗಳೆಯಲು ಸಾಧ್ಯ? ಮಗನು ಪಾರಾಗಿದ್ದಾನೆ ಎಂದು ತಿಳಿದನಂತರ ಚನ್ನಕೇಶವನಿಗೆ ಚೆನ್ನಪ್ಪಶಾಸ್ತ್ರಿಗಳು ಕೈಮುಗಿದು, ''ಕೇಶವ, ನಿನ್ನ ಭಕ್ತನನ್ನು ನೀ ಪರೀಕ್ಷೆ ಮಾಡುತ್ತೀಯಾ? ಭಕ್ತಪರಾಧೀನ ನೀನು. ನೀನು ಕಾಯಿಲೆ ಮಲಗಿಸಿ, ನನ್ನನ್ನೂ ನನ್ನ ಹೆಂಡತಿಯನ್ನೂ, ಈಗ ನನ್ನ ಮಗನನ್ನೂ ತೆಗೆದುಕೊಳ್ಳಲು ನೋಡಿದೆ. ಆದರೆ ಅದು ನಿನಗೆ ಸಾಧ್ಯವಾಯಿತೆ? ನಿನಗೆ ರಥೋತ್ಸವ ಮಾಡಿಯೇ ತೀರುತ್ತೇನೆ ಎಂದು ಹಠಹಿಡಿದ ನಿನ್ನ ಭಕ್ತನ ಮಾನ-ಪ್ರಾಣ ಎಲ್ಲವನ್ನೂ ನೀನೇ ಉಳಿಸಲೂ ಬೇಕಾಯಿತು ಈಗ'' ಎಂದರು. ಅವರ ದೈವಭಕ್ತಿ, ನಿಷ್ಠೆ ಅವರನ್ನೂ ಅವರ ಕುಟುಂಬವನ್ನೂ ಕಾಪಾಡಿದ್ದಿತು. ಇಂದಿಗೂ ಚನ್ನಕೇಶವನ ರಥ ದೇವಸ್ಥಾನದಿಂದ ಮಧ್ಯಾಹ್ನ ಹನ್ನೆರಡಕ್ಕೆ ಹೊರಟರೆ ಒಂದೂವರೆ ಗಂಟೆಗೆ ಅವರ ಮನೆಬಾಗಿಲ ಬಳಿಗೆ ತಲುಪಿ ರಾತ್ರಿ ಎಂಟರವರೆಗೂ ಅಲ್ಲಿಯೇ ಇರುತ್ತದೆ. ರಾತ್ರಿ ಎಂಟರ ಮೇಲೆ ಊರ ಬೀದಿಗಳಲ್ಲಿ ರಥ ಸಾಗುವ ಪದ್ಧತಿ ಉಳಿದುಬಂದಿದೆ. ಹೀಗೆ ಅವರನ್ನು ತಲೆಕಾಯ್ದ ಸ್ವಾಮಿ ಚನ್ನಕೇಶವ ಅವರ ಮನೆಯ ಮುಂದೆ ರಥೋತ್ಸವದಂದು ಸಾಕಷ್ಟು ಹೊತ್ತು ಕಳೆಯುತ್ತಾನೆ!

❁ ❁ ❁

ಮತ್ತೂರಿನ ಚನ್ನಪ್ಪ ಅವಧಾನಿಗಳು ಮತ್ತು ನಂಜಪ್ಪ ಅವಧಾನಿಗಳು ಕೃಷ್ಣ-ಸುಧಾಮರಂತಹ ಮಿತ್ರರು. ಚನ್ನಪ್ಪ ಅವಧಾನಿಗಳು ಕೃಷ್ಣನಂತೆ ಶ್ರೀಮಂತರೂ, ದಾನಶೀಲರೂ ಉದಾರಿಗಳೂ ಆದರೆ ನಂಜಪ್ಪ ಅವಧಾನಿಗಳು ಕುಚೇಲನಂತೆ ರಿಕ್ತರೂ, ಭಕ್ತಿಯೇ ಐಶ್ವರ್ಯವಾಗಿ ಉಳ್ಳವರೂ ಆಗಿದ್ದರು. ತುದಿಯಲ್ಲಿ ಇಬ್ಬರೂ ಸಂನ್ಯಾಸ ಸ್ವೀಕರಿಸಿದರು.

ಪ್ರತಿವರ್ಷದಂತೆ ಆ ಸಾರಿಯೂ ಈ ಇಬ್ಬರು ಮಹನೀಯರೂ, ಚೈತ್ರ ಶುದ್ಧ ದ್ವಾದಶಿಯಂದು ತುಂಗೆಯ ಆ ಪಕ್ಕದಲ್ಲಿ ಇರುವ ಹೊಸಹಳ್ಳಿಯಲ್ಲಿ ನಡೆಯುವ ರಥೋತ್ಸವದಲ್ಲಿ ಭಾಗವಹಿಸಿದ್ದರು. ಶ್ರೀ ವೇಲಾಪುರೀ ಕೇಶವನನ್ನು ಕಣ್ಣು ತುಂಬಾ ನೋಡಿ ಸಂತಸಪಟ್ಟಿದ್ದರು. ಮತ್ತೂರಿನವರ ಸಂತರ್ಪಣೆಯೂ ಆಯಿತು. ರಾತ್ರಿ ಮಂಗಳಾರತಿ, ಅಷ್ಟಾವಧಾನ ಮುಗಿಸಿ ಮತ್ತೂರಿಗೆ ಬರುವಾಗ ಚನ್ನಪ್ಪ ಅವಧಾನಿಗಳು ''ನಂಜಪ್ಪ! ಈ ಸಾರಿ ನಮ್ಮ ಕುಲಸ್ವಾಮಿ ಶ್ರೀ ಲಕ್ಷ್ಮೀಕೇಶವನ ರಥೋತ್ಸವಕ್ಕೆ ಕೌಶಿಕಕ್ಕೆ ಹೋಗಿ ಬರೋಣ, ಬಹಳ ವರ್ಷಗಳಾಯಿತು ಸ್ವಾಮಿಯನ್ನು ನೋಡದೆ'' ಎಂದರು. ಅದಕ್ಕೆ ನಂಜಪ್ಪ ಅವಧಾನಿಗಳು, ''ಚನ್ನಪ್ಪಾ! ನೀನೇನೋ ಗಾಡಿ ಕಟ್ಟಿಸಿಕೊಂಡು ಹೊರಡುತ್ತೀ. ನಾನೇನು ಮಾಡಲಿ? ನನ್ನ ಹತ್ತಿರ ಎತ್ತು-ಕುದುರೆ ಇದೆಯೇ?'' ಎಂದರು.

''ಯಾಕೆ? ನೀನೂ ನನ್ನ ಜತೆ ಬಾ. ಬೇಡ ಎನ್ನುತ್ತೇನೆಯೇ? ಬಾ ಒಟ್ಟಿಗೆ ಹೋಗೋಣ.''

''ಬೇಡಪ್ಪ! ನಿಮ್ಮ ಮನೆಯವರಿಗೆಲ್ಲ ಆಸೆಯಿರುತ್ತದೆ.

ಅವರಿಗೇ ಜಾಗ ಇಲ್ಲವಾಗುತ್ತೆ. ನಾನೋ, ಒಬ್ಬನಲ್ಲ. ಇವಳನ್ನು ಬಿಟ್ಟು ಹೋಗುವುದು ಹೇಗೆ? ಆದ್ದರಿಂದ ನೀವೇ ಹೋಗಿ ಬನ್ನಿ. ಈ ಕಿರುಕಾಣಿಕೆಯನ್ನು ಸಮರ್ಪಿಸಿರಿ. ಈ ಫಲವನ್ನೂ ನಿವೇದಿಸಿ'' ಎಂದು ಹೇಳಿ ಫಲಕಾಣಿಕೆ ಕೊಟ್ಟರು.

ಚೈತ್ರ ಶುದ್ಧ ಪೂರ್ಣಿಮೆಯಂದು ಕೌಶಿಕದಲ್ಲಿ ಲಕ್ಷ್ಮೀಕೇಶವ ರಥೋತ್ಸವ. ಬೆಳಗಿನ ಝಾವ ನಾಲ್ಕು ಗಂಟೆಗೆ ನಂಜಪ್ಪಾವಧಾನಿಗಳಿಗೆ ಒಂದು ಕನಸು. 'ನನಗೆ ಕೇಶವನ ದರ್ಶನವಾಗಲಿಲ್ಲ. ನಾನು ಕೇಶವನನ್ನು ನೋಡಲಿಲ್ಲವಲ್ಲ' ಎಂದು ಕಣ್ಣಲ್ಲಿ ನೀರು ಹಾಕುತ್ತಿದ್ದಂತೆಯೇ ತೊಡೆಯ ಮೇಲೆ ಭಾರವಾದಂತೆ ಆಯಿತು. ನೋಡಿದರೆ ತೊಡೆಯ ಮೇಲೆ ಪುಟ್ಟಕೇಶವ! ಚತುರ್ಭುಜ, ಪೀತಾಂಬರ ವನಮಾಲಾಧರ, ತರುಣ, ತುಳಸೀ ಭೂಷಿತನಾಗಿದ್ದಾನೆ! ಮಾತಾಡುತ್ತ, ''ನೋಡಲಿಲ್ಲ - ನೋಡಲಿಲ್ಲಾಂತ ಹಲುಬಿದೆಯಲ್ಲ! ಇಲ್ಲೇ ಇದ್ದೇನೆ. ಎಲ್ಲೆಲ್ಲೂ ಇದ್ದೇನೆ. ಕಂಡೇ ಕಾಣಬೇಕು ಎನ್ನುವ ಉತ್ಕಟವಾದ ಆಸೆ ಇದ್ದರೆ ಆಯಿತು. ಕಂಡೆಯಾ. ನೋಡು. ನೋಡು. ಚೆನ್ನಾಗಿ ನೋಡು'' ಎಂದು ಹೇಳಿದಂತಾಯಿತು. ಎಚ್ಚರವಾಯಿತು. ಎದ್ದು ತಮ್ಮ ಧರ್ಮಪತ್ನಿಗೆ ಎಲ್ಲವನ್ನೂ ಹೇಳಿದರು. ಕೇಶವನನ್ನು ಕಂಡಾಗಿನ ಆ ರೋಮಾಂಚನ ಹಾಗೇ ಇತ್ತು. ಮಿತ್ರರೆಲ್ಲರಿಗೂ ಕೇಶವನ ದರ್ಶನದ ವಿಚಾರವನ್ನು ತಿಳಿಸಿದರು. ಎಲ್ಲ ಸೇರಿ ಆಲೋಚಿಸಿದರು.

'ಪ್ರತಿವರ್ಷ ಕೌಶಿಕಕ್ಕೆ ಎಲ್ಲರಿಗೂ ಹೋಗಲಾಗುವುದಿಲ್ಲ. ಮತ್ತೂರಿನಲ್ಲೇ ಸ್ಥಾಪಿಸೋಣ' ಎಂದು, ಮನಸ್ಸಿಗೆ ಬರುವುದೇ ತಡ. ತೀರ್ಮಾನವಾಗಿಯೇ ಬಿಟ್ಟಿತು. 'ಕಾಶಿಯಲ್ಲಿ ನಮ್ಮೂರಿನ ರಾಮಾವಧಾನಿಗಳು ಇದ್ದಾರೆ. ಅವರಿಗೆ ಬರೆಯೋಣ. ಸಾಲಿಗ್ರಾಮ ಶಿಲೆಯಲ್ಲಿ ಪುಟ್ಟ ಲಕ್ಷ್ಮೀಕೇಶವನನ್ನು ಮಾಡಿಸಿಕೊಂಡು ಬರಲಿ' ಎಂದು ತೀರ್ಮಾನಿಸಿ ಆಯಿತು.

ಕಾಶಿಯಿಂದ ಸುಂದರವಾದ ವಿಗ್ರಹ ಬಂದೇ ಬಂತು. ದೇವಸ್ಥಾನವನ್ನು ಕಟ್ಟಲು ಜಾಗವನ್ನೇ ನೋಡಿರಲಿಲ್ಲ. ಮಳೆಗಾಲ ಸಮೀಪಿಸುತ್ತಿದೆ. ಸಾಲಿಗ್ರಾಮ-ವಿಗ್ರಹವನ್ನು ಪ್ರತಿಷ್ಠೆ ಮಾಡದೆ, ಪೂಜೆ ಮಾಡದೇ ಇಡಲು ಇಷ್ಟವಿಲ್ಲ. ಏನು ಮಾಡುವುದು?

ಆಂಜನೇಯನ ಸಮೀಪದಲ್ಲಿ ದೊಡ್ಡ ನಿವೇಶನ ನೋಡಿದ್ದಾಯಿತು. ಭಾರೀ ಜಾಗ. ಭಾರೀ ದೇವಸ್ಥಾನ ಬರಬೇಕು. ಭಾರೀ ದ್ರವ್ಯವೂ ಬೇಕು. ಇದು ಆತುರದಲ್ಲಿ ಸಾಧ್ಯವಿಲ್ಲ. ಇದು ಪಂಚವಾರ್ಷಿಕ, ದಶವಾರ್ಷಿಕ ಯೋಜನೆ. ಅಲ್ಲಿಯವರೆವಿಗೆ ಸುಮ್ಮನೆ ಪ್ರತಿಷ್ಠಾಪನೆ ಇಲ್ಲದೆ ವಿಗ್ರಹವನ್ನು ಇಡುವುದು ಸರಿಯಲ್ಲ. ಆದ್ದರಿಂದ ನದಿಗೆ ಹೋಗುವ ಮಾರ್ಗದಲ್ಲಿ, ಸೋಮೇಶ್ವರನ ಬಲಗಡೆ ಒಂದು ಪುಟ್ಟ ಅಂಕಣ ಇದೆಯಲ್ಲ, ಅಲ್ಲೇ ತಾತ್ಕಾಲಿಕ ಪ್ರತಿಷ್ಠೆ ಆಗಲಿ ಎಂದು ಯೋಚಿಸಿದರು. ಯಾವ ಮುಹೂರ್ತದಲ್ಲಿ ವೇದಪುರುಷರು ಇಟ್ಟರೋ, ಅದು ಅಲ್ಲೇ ಬೇರು ಬಿಟ್ಟಿತು -ಗಣಪತಿಯು ಮಹಾಬಲೇಶ್ವರನನ್ನು ಸ್ಥಾಪಿಸಿದಂತೆ! ಅಂದು ಆರಂಭವಾದ ರಥೋತ್ಸವ ಇಂದೂ ನಡೆಯುತ್ತಿದೆ. ಮುಂದೂ ನಡೆಯುತ್ತದೆ. ಕೌಶಿಕದಲ್ಲಾದರೂ ಒಂದೆರಡು ಬಾರಿ ಕೆರೆಯಲ್ಲಿ ನೀರಿಲ್ಲದೆ ಬರೀ ಪಲ್ಲಕ್ಕಿ, ಗರುಡೋತ್ಸವಾದಿಗಳಿಂದಲೇ ಆಗಿರಬಹುದು. ಇಲ್ಲಿ ಮಾತ್ರ ಒಮ್ಮೆಯೂ ನಿಂತಿಲ್ಲ. ಎಲ್ಲವೂ ಅವನ ಅನುಗ್ರಹ.

ಮಲಬಾರಿನ ಕುಂಜಣ್ಣಿ ಎನ್ನುವ ಬಡಗಿಯು ಅವನ ಅಳಿಯ ಶಂಕರನೊಂದಿಗೆ ಬಂದು ಕೇಶವನಿಗೆ ಒಪ್ಪುವ, ದಿವ್ಯರಥವನ್ನು ಮಾಡಿಕೊಟ್ಟ. ಬಹಳ ಉತ್ಸಾಹದಿಂದ ರಥೋತ್ಸವವು ನಡೆಯಿತು. ಈ ಖರ್ಚುಗಳನ್ನು ನಿಭಾಯಿಸಿಕೊಂಡು ನಾಲ್ಕು ವರ್ಷಗಳ ಅನಂತರ ಸಭೆ ಸೇರಿ ವಿಶಾಲ ದೇವಸ್ಥಾನ ಕಟ್ಟುವ ವಿಚಾರವನ್ನು ಚರ್ಚಿಸಿದರು. 'ದೇವಸ್ಥಾನ ಬೇಕಾದರೆ ಕಟ್ಟೋಣ. ರಾಮಮಂದಿರದಂತೆ ವಿಶಾಲವಾಗಿರಲಿ. ಆದರೆ ಲಕ್ಷ್ಮೀಕೇಶವನನ್ನು ಇಲ್ಲಿಂದ ಕದಲಿಸುವ ವಿಚಾರ ಮಾತ್ರ ಬೇಡ. ಬೇಕಾದರೆ ಗಣಪತಿಯನ್ನೋ, ಸತ್ಯನಾರಾಯಣನನ್ನೋ ಪ್ರತಿಷ್ಠಾಪಿಸಿರಿ. ಪುಟ್ಟ ಕೇಶವನಿಗೆ ಈ ಪುಟ್ಟ ಮಂದಿರವೇ ಸಾಕು. ಸಾಲಿಗ್ರಾಮ ಪುಟ್ಟದಾದರೆ, ಅನುಗ್ರಹ ಪುಟ್ಟದೆ!' ಎಂದರು ಎಲ್ಲರೂ. ಕೇಶವನನ್ನು ಅಲ್ಲಿಂದ ಸ್ಥಳಾಂತರ ಮಾಡಲು ಆಗಿನ ಜನ ಒಪ್ಪಲಿಲ್ಲ.

ಇನ್ನು ನಮ್ಮ ಕಾಲಕ್ಕೆ ಬರೋಣ. ೧೯೮೦ರಲ್ಲಿ ಶ್ರೀದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದೆವು. ಕೇಶವನ ಮೇಲೆ ಒಂದು ದೊಡ್ಡ ಕೊಳಗ ಮುಚ್ಚಿ ಪೂರ್ತಿ ತಳಪಾಯ ಕಿತ್ತು ಕಾಂಕ್ರೀಟು ಹಾಕಲಾಯಿತು. ಮೇಲೆ ಪುಟ್ಟ ಗೋಪುರ ಕಟ್ಟುವ ಉದ್ದೇಶದಿಂದ, ಹಾಗೂ ತುಂಗೆಯ ಪ್ರವಾಹವು ತೀರ ಸಮೀಪ ಬರುವುದರಿಂದ ತುಂಬ ಆಳವಾಗಿ ತಳಪಾಯ ಹಾಕಿಸಿದೆವು. ಹಳೆ ಗೋಡೆ ಎರಡು ಅಡಿ ದಪ್ಪ ಇತ್ತು. ಈಗ ಪಿಲ್ಲರ್ ಹಾಕಿ ಒಂಬತ್ತು ಅಂಗುಲ ಮಾತ್ರ ಗೋಡೆ ಹಾಕಿಸಿದೆವು. ಪ್ರವಾಹದ ದೃಷ್ಟಿಯಿಂದ ನೆಲವನ್ನು ಹಿಂದಿಗಿಂತಲೂ ಎರಡು ಅಡಿ ಎತ್ತರಿಸಿದೆವು. ಪಾಣಿಪೀಠ ಎರಡು ಅಡಿ ಇತ್ತು. ಅದು ಪೂರ್ತಿ ನೆಲದಲ್ಲಿ ಹೋಯಿತು. ಗೋಡೆ ವ್ಯತ್ಯಾಸ ಮಾಡಿದ್ದರಿಂದ ಗರ್ಭಗುಡಿಯ ಮಧ್ಯವೂ ಆಗಲಿಲ್ಲ. ಕೇಶವನ ಬಲಗಡೆ ನಾಲ್ಕು ಅಡಿ ಇದೆ. ಎಡಗಡೆ ಮೂರು ಅಡಿ ಇದೆ. ಮುಂದೆ ಆರು ಅಡಿ, ಹಿಂದೆ ಐದು ಅಡಿ - ಹೀಗಾಗಿದೆ. ದೇವಸ್ಥಾನ ಸಮಿತಿಯವರು, ಎರಡು ಅಡಿ ಅತ್ತ ಸರಿಸಿ

ಕೇಶವನನ್ನು ಸರಿಯಾಗಿ ಮಧ್ಯಭಾಗಕ್ಕೆ ಬರುವಂತೆ ಪುನಃ ಪ್ರತಿಷ್ಠಾಪನೆ ಮಾಡೋಣ ಎಂದು ತೀರ್ಮಾನಿಸಿಕೊಂಡರು. ಇನ್ನೇನು ಕಲಾಪಕರ್ಷಣೆ ಮಾಡಬೇಕು, ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಾಗ ಊರ ಹೆಂಗಸರೆಲ್ಲ, 'ಕೇಶವನನ್ನು ಅಲ್ಲಾಡಿಸಬೇಡಿ. ಮಹನೀಯರು ಒಳ್ಳೆಯ ಮುಹೂರ್ತದಲ್ಲಿ ಸ್ಥಾಪಿಸಿದ್ದಾರೆ. ಊರಿಗೆಲ್ಲ ಒಳ್ಳೆಯದಾಗಿದೆ. ರಥೋತ್ಸವವು ಒಮ್ಮೆಯೂ ನಿಂತಿಲ್ಲ. ವರ್ಷದಿಂದ ವರ್ಷಕ್ಕೆ ವೈಭವವಾಗಿ ನಡೆಯುತ್ತಿದೆ. ಕೇಶವನನ್ನು ಕದಲಿಸುವ ಪ್ರಶ್ನೆಯೇ ಬೇಡ. ಕಲಾ-ಸಂಕೋಚವನ್ನು ಮಾಡುವ ಧೈರ್ಯ ಯಾರಿಗಿದೆ? ಖಂಡಿತ ಬೇಡ' ಎಂದು ತಡೆದೇ ಬಿಟ್ಟರು.

ನಂಜಪ್ಪಾವಧಾನಿಗಳಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ಪತ್ನಿಯು ಆಗ್ರಹ ಮಾಡಿದ್ದರಿಂದಾಗಿ ರಾಮಸ್ವಾಮಿ ಎನ್ನುವವರನ್ನು ದತ್ತು ಸ್ವೀಕಾರ ಮಾಡಿದರು. ಅನಂತರ ಅವರ ಪತ್ನಿ ಮುತ್ತೈದೆಯಾಗಿ ಸ್ವರ್ಗ ಸೇರಿದರು. ಅವಧಾನಿಗಳಿಗೆ ಪತ್ನೀವಿಯೋಗದಿಂದ ಪಾಸನ, ವೈಶ್ವದೇವಾದಿ ಎಲ್ಲ ಕರ್ಮಗಳೂ ನಿಂತುಹೋದವು. ಕೆಲವರ ಸೂಚನೆಯಂತೆ ಗೌರಮ್ಮನನ್ನು ಮದುವೆ ಆದರು. ದತ್ತುಪುತ್ರನ ಬಂಧುಗಳು ಕೇಳಿದರು, ''ಇದು ಧರ್ಮವೇ? ನಿಮ್ಮ ಸಮಸ್ತ ಆಸ್ತಿಯೆಲ್ಲ ದತ್ತುಪುತ್ರನಿಗೆ ಸೇರಿದ್ದಲ್ಲವೆ? ಈಗ ಈ ಧರ್ಮಪತ್ನಿಯಲ್ಲಿ ಸಂತಾನವಾದರೆ ಏನು ಮಾಡುತ್ತೀರಿ?'' ತತ್‌ಕ್ಷಣ ಅವಧಾನಿಗಳು, ''ನಿಮ್ಮ ಬಾಯಲ್ಲಿ ಕೇಶವನೇ ಹೇಳಿಸಿದ್ದು ಎಂದು ತಿಳಿಯುತ್ತೇನೆ. ಸಂತಾನವಾಗಲಿ, ಸರ್ವಸ್ವವನ್ನೂ ದತ್ತಪುತ್ರನಿಗೇ ಕೊಡುತ್ತೇನೆ. ಮುಂದಿನ ಮಕ್ಕಳಿಗೆ ಕೇಶವನೇ ಕೊಡುತ್ತಾನೆ'' ಎಂದರು. ಅನಂತರ ಅವರಿಗೆ ನಾಲ್ಕು ಮಕ್ಕಳೂ ಆದರು. ಅವಧಾನಿಗಳು ತಮ್ಮ ಮಾತಿನಂತೆ ಸಮಸ್ತ ಆಸ್ತಿಯನ್ನೂ ದತ್ತುಪುತ್ರ ರಾಮಸ್ವಾಮಿಗೆ ಕೊಟ್ಟರು. ಉಳಿದ ಮಕ್ಕಳಿಗೆ, ''ಹುಟ್ಟಿಸಿದ ದೇವರು ಹುಲ್ಲನ್ನು ಕರುಣಿಸದೇ ಇರುವನೇ'' ಎಂದು ಕೇಶವನನ್ನೇ ನಂಬಿದರು.

ಮನೆಯಲ್ಲಿ ನಾಲ್ಕು ಮಕ್ಕಳು. ಆಸ್ತಿ ಏನೂ ಇಲ್ಲ - ಎಂದು ಅವರಿಗೆ ಲಕ್ಷ್ಮೀಕೇಶವನ ಪೂಜೆ ಮಾಡಲು ತಿಂಗಳಿಗೆ ಇಪ್ಪತ್ತು ರೂ. ಸಂಬಳ ಗೊತ್ತು ಮಾಡಿದರು ಗ್ರಾಮಸ್ಥರು. ಸಂಬಳ ಕೊಡಲು ಹೋದಾಗ ಅದನ್ನು ಮುಟ್ಟಲಿಲ್ಲ. ಕಣ್ಣೀರಿಡಲು ಪ್ರಾರಂಭಿಸಿದರು. 'ಸಂಬಳ ಪಡೆದರೆ ನಾನು ಸಂಬಳಕ್ಕಾಗಿ ಪೂಜೆ ಮಾಡುತ್ತೇನೆ ಎಂದು ಆಗುತ್ತದೆ. ಅದನ್ನು ಮುಟ್ಟಲಾರೆ' ಎಂದು ಸ್ವೀಕರಿಸಲೇ ಇಲ್ಲ.

ಗಂಡು ಮಕ್ಕಳಿಗೆ ಸುಮಾರು ಚಿಕ್ಕ ವಯಸ್ಸಿನಲ್ಲೇ ಉಪನಯನ ಮಾಡಿದರು. ಅವರು ವೇದಾಧ್ಯಯನ ಮಾಡುತ್ತ ಭಿಕ್ಷಾನ್ನ ಮಾಡುತ್ತಿದ್ದರು. ದೊಡ್ಡ ಊರಾದ್ದರಿಂದ ಮಕ್ಕಳ ಊಟ ಕಳೆಯುತ್ತಿತ್ತು. ಆದರೆ ಅವಧಾನೀ ದಂಪತಿಗಳದ್ದು ಕಷ್ಟವಾಗಿತ್ತು. ಅದಕ್ಕಾಗಿ ಗ್ರಾಮಸ್ಥರು ಒಂದು ಉಪಾಯ ಮಾಡಿದರು. ಮುಖ್ಯವಾಗಿ ಶ್ರೀಮಂತರೂ ಉದಾರಿಗಳೂ ಆದ ಚನ್ನಪ್ಪ ಅವಧಾನಿಗಳು ಸ್ವಲ್ಪ ಜಮೀನನ್ನು ನಂಜಪ್ಪ ಅವಧಾನಿಗಳಿಗೆ ದಾನವಾಗಿ ಬರೆದು, ''ನಂಜಪ್ಪ! ಈ ಜಮೀನಿನಲ್ಲಿ ಭತ್ತ, ಕಬ್ಬು ಹಾಕಿಕೋ. ಅರ್ಧಭಾಗದಲ್ಲಿ ತೋಟ ಎಬ್ಬಿಸಿಕೋ. ಉಳಿದ ಅರ್ಧಕ್ಕೆ ನಾವು ಅಡಿಕೆ, ತೆಂಗಿನ ಸಸಿ ಕೊಡುತ್ತೇವೆ. ಇದು ನಿನ್ನ ಸಂಸಾರಕ್ಕೆ ಸಾಕಾದೀತು'' ಎಂದು ಹೇಳಿ, ಪುನಃ ಸ್ವಲ್ಪ ಧನಸಂಗ್ರಹ ಮಾಡಿ ಜಮೀನನ್ನು ಖರೀದಿಸಿ ಅವರ ಹೆಸರಿಗೇ ಬರಸುತ್ತೇವೆ ಎಂದಾಗ ಅದನ್ನೂ ಅವರು ಒಪ್ಪಲಿಲ್ಲ. ''ಕೇಶವನ ಹೆಸರಿಗೇ ಬರಿಯಿರಿ. ನನ್ನ ಮಕ್ಕಳು ಭಕ್ತಿಯಿಂದ ಪೂಜೆ ಮಾಡಿ, ಕೇಶವನಿಗೆ ನೈವೇದ್ಯ ಮಾಡಿ ಈ ಭೂಮಿಯ ಫಲವನ್ನು ಕೇಶವನ ಪ್ರಸಾದವೆಂದು ಪಡೆಯುವಂತೆ ಆಗಲಿ. ಇವರಿಗೆ ಶ್ರದ್ಧೆ ಇಲ್ಲದಿದ್ದರೆ ಗ್ರಾಮಸ್ಥರು ಬೇರೆಯವರನ್ನು ನೇಮಿಸಲಿ'' ಎಂದು ತಮಗೆ ದಾನವಾಗಿ ಬಂದದ್ದನ್ನೂ ಕೇಶವನಿಗೇ ಅರ್ಪಿಸಿದಂಥವರು ಇವರು.

ಇವರು ಕೇಶವನನ್ನು ಹೇಗೆ ಕಾಣುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಇದೊಂದು ಪ್ರಸಂಗ. ಒಮ್ಮೆ ತಮ್ಮ ಮಗಳ ಮದುವೆಗೆಂದು ಆಹ್ವಾನಿಸಲು ಬಂದಿದ್ದ ದಂಪತಿಗಳಿಗೆ ಅವಧಾನಿಗಳು, ''ಅಪ್ಪ! ಮುಹೂರ್ತಕ್ಕೆ ಬರುತ್ತೇನೆ, ಭೋಜನಕ್ಕೆ ಬರಲಾರೆ'' ಎಂದರು. ''ನಮ್ಮ ಕೇಶವನಿಗೆ ಬರೀ ಒಂದು ಕದನ್ನವನ್ನು (ಸಾಧಾರಣ ಅನ್ನವನ್ನು) ನಿವೇದಿಸಿ ನಿಮ್ಮ ಮನೆಯಲ್ಲಿ ನಾನು ಹೋಳಿಗೆ, ಮೈಸೂರುಪಾಕು ಊಟಮಾಡಲೆ? ನನ್ನಿಂದಾಗದಪ್ಪ! ಬಲಾತ್ಕಾರ ಮಾಡಬೇಡಿ. ನಾನು ಬಂದು ಹರಸುತ್ತೇನೆ. ಮುಹೂರ್ತ ಚೆನ್ನಾಗಿ ನಡೆಯಲಿ'' ಎನ್ನುವುದೇ? ಆಗ ಅವರು, ''ನಾವು ಕೇಶವನಿಗೂ ನೈವೇದ್ಯಕ್ಕೆ ತರುತ್ತೇವೆ'' ಎಂದಾಗ, ''ನಿಮ್ಮದು ಮದುವೆ ಮನೆ. ಎಲ್ಲ ಗಡಿಬಿಡಿಯಲ್ಲಿ ಇರುತ್ತೀರಿ. ನಿಮಗೆ ಶ್ರಮ ಆಗುವುದಿಲ್ಲವೇ?'' ಎಂದು ಕೇಳಿದರು. ''ಇಲ್ಲ. ಶ್ರಮವಿಲ್ಲ. ನಾವು ಏರ್ಪಾಟು ಮಾಡುತ್ತೇವೆ'' ಎಂದಾಗ ''ಸಂತೋಷ. ಕೇಶವನಿಗೆ ಮೃಷ್ಟಾನ್ನ ತರುವುದಾದರೆ ನಾನೇಕೆ ಬೇಡ ಎನ್ನಲಿ? ಸಂತೋಷ. ತನ್ನಿ. ನಾನೂ ಊಟಕ್ಕೆ ಬರುತ್ತೇನೆ'' ಎಂದರು. ಹೀಗೆ ಕೇಶವನಿಗೆ ನಿವೇದಿತವಲ್ಲದ್ದು ತಮಗೂ ಬೇಡ. ''ಯದ್ಯದಶ್ನಾಸಿ ತತ್ಕುರುಷ್ವ ಮದರ್ಪಣಮ್'' ಎಂಬ ಈ ಭಾವನೆ ಎಷ್ಟು ಜನರಿಗಿರುತ್ತೆ!

ಹೀಗೆ ಕೇಶವ ಬೇರೆ, ತಾನು ಬೇರೆ ಎಂದು ತಿಳಿಯದೆ ಇರುವ ಈ ಮಹಾನುಭಾವರಿಂದ ಪ್ರತಿಷ್ಠಿತನಾದ ಇಂತಹ ಕೇಶವನು ಎಲ್ಲರಿಗೂ ಮಂಗಳವನ್ನುಂಟು ಮಾಡಲಿ ಎಂದೇ

ನಮ್ಮ ಪ್ರಾರ್ಥನೆ.

ಮಂತ್ರದಲ್ಲಿ, ಹಾಗೂ ದೇವರಲ್ಲಿ ನಂಬಿಕೆ ಮತ್ತು ನಿಷ್ಠೆ ಎನ್ನುವ ಮಾತು ಬಂದಾಗ ಶೃಂಗೇರಿ ಜಗದ್ಗುರುಗಳು ಒಮ್ಮೆ ಪ್ರವಚನ ಮಾಡಿದ ಸಂದರ್ಭದಲ್ಲಿ ಹೇಳಿದ ಪ್ರಸಂಗವೊಂದರ ನೆನಪಾಗುತ್ತಿದೆ. ಅಂದೊಂದು ದಿನ ಜಗದ್ಗುರುಗಳಾದ ಶ್ರೀಶ್ರೀಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಶ್ರೀಚಂದ್ರಮೌಳೀಶ್ವರನ ಪೂಜೆ ಮುಗಿಸಿ ಭಕ್ತಾದಿಗಳನ್ನು ನೋಡುವ ಕಾರ್ಯಕ್ರಮದಲ್ಲಿದ್ದರು. ಆ ಸಮಯದಲ್ಲಿ ಮಿಕ್ಕವರೆಲ್ಲರೂ ಹೊರಟುಹೋದ ಮೇಲೆ ಬಹಳ ಹೊತ್ತು ಕಾದಿದ್ದ ದಂಪತಿಗಳು ಸ್ವಾಮೀಜಿಯ ಬಳಿಗೆ ಬಂದು ನಮಸ್ಕರಿಸಿದರು. ತಮ್ಮ ಹೆಸರು ಹೇಳಿದರು. ''ಬೆಂಗಳೂರಿನಿಂದ ಬಂದಿದ್ದೇವೆ. ದೇವರ ದರ್ಶನವಾಯಿತು. ಗುರುಗಳಿಂದ ಮಂತ್ರೋಪದೇಶ ತೆಗೆದುಕೊಳ್ಳೋಣ ಎಂದು ಬಂದೆವು'' ಎಂದರು. ಮುಂದುವರೆದು, ''ಸ್ವಾಮೀಜಿ, ಬಹಳ ದಿವಸಗಳಿಂದ ಇವಳಿಗೆ ಮೈಯಲ್ಲಿ ಆರೋಗ್ಯವಿಲ್ಲ. ಎಲ್ಲರೀತಿಯ ಚಿಕಿತ್ಸೆಯೂ ಆಯಿತು. ಅಲೋಪಥಿ, ಹೋಮಿಯೋಪಥಿ, ಆಯುರ್ವೇದದ ಷಧಿಗಳೆಲ್ಲದರ ಪ್ರಯೋಗವೂ ಆಯಿತು. ಯಾವುದೂ ಕೆಲಸ ಮಾಡಿಲ್ಲ. 'ಅನ್ಯಥಾ ಶರಣಂ ನಾಸ್ತಿ' ಎಂದು, ಕೊನೆಯ ಪ್ರಯತ್ನ ಎಂದು ಗುರುಗಳಿಂದ ಮಂತ್ರೋಪದೇಶ ತೆಗೆದುಕೊಂಡು ಉಪಶಮನ ಮಾಡಿಕೊಳ್ಳೋಣ ಎಂದು ಬಂದೆವು. ತಾವು ಕೃಪೆ ಮಾಡಬೇಕು'' ಎಂದರು. ಎಲ್ಲ ಸಮಯದಲ್ಲೂ, ಎಲ್ಲರಿಗೂ ಹಾಗೆ ಮಂತ್ರೋಪದೇಶ ಸಿಕ್ಕದು. ಹೀಗೆ ಕೊನೆಯ ಪ್ರಯತ್ನ ಎಂದುಕೊಂಡು ಬಂದವರಿಗೆ ಯೋಗವೂ ಇದ್ದು ಅದೃಷ್ಟವೂ ಇದ್ದರೆ ತಾವು ಅನುಷ್ಠಾನ ಮಾಡಿದ ಮಂತ್ರೋಪದೇಶವನ್ನು ಗುರುಗಳು ಕೊಡುತ್ತಾರೆ. ಮುಖ್ಯವಾಗಿ ನಂಬಿಕೆ ಇರಬೇಕು. ಆ ಮಂತ್ರದ ಬಲದಲ್ಲಿ ನಿಷ್ಠೆ ಇರಬೇಕು. 'ನಿಷ್ಠೆ ಎನ್ನುವುದು ಪವಾಡಗಳನ್ನು ಮಾಡಿಸುತ್ತದೆ' ಎನ್ನುವ ಮಾತೇ ಇದೆಯಲ್ಲ!

ಗುರುಗಳಿಗೆ ಆ ದಂಪತಿಗಳ ನೋವು ಸಂಕಟದ ಅರಿವೂ ಆಯಿತು. ''ನೀವು ಮಂತ್ರವನ್ನೇ ನಂಬಿ ಬಂದಿದ್ದೀರಿ ಅಲ್ಲವೇ?'' ''ಹೌದು'' ''ಆಯಿತು, ನಾಳೆ ಸ್ನಾನಮಾಡಿ ಎಂಟುಗಂಟೆಗೆ ಬನ್ನಿ. ಒಂದು ಮಂತ್ರ ಉಪದೇಶ ಮಾಡೋಣ'' ಎಂದರು. ಹೇಳಿದಂತೆ ಮರುದಿನ ಎಂಟುಗಂಟೆಗೆ ದಂಪತಿಗಳು ಶುಚಿರ್ಭೂತರಾಗಿ ಬಂದರು. ಗುರುಗಳು ಮಂತ್ರೋಪದೇಶವನ್ನೂ ಮಾಡಿದರು. ಗಣಪತಿ ಪೂಜೆಯನ್ನೂ ತಾವೇ ಮಾಡಿಸಿದರು. ''ಸಾಧ್ಯವಾದರೆ ಒಂದೆರಡು ದಿನಗಳಿದ್ದು ಅನುಷ್ಠಾನ ಮಾಡಿಕೊಂಡು ಹೊರಡಿ, ಇಲ್ಲವಾದರೆ ನೀವಿರುವ ಜಾಗದಲ್ಲೇ ಮಾಡಿದರೂ ಆದೀತು'' ಎಂದರು ಗುರುಗಳು. ತಲೆಯಾಡಿಸಿ ಹೊರಟ ದಂಪತಿಗಳು ಆ ಸಂಜೆಯೇ ಅಲ್ಲಿಂದ ಹೊರಡುತ್ತಿರುವುದಾಗಿ ಹೇಳಿ ಅಪ್ಪಣೆ ಪಡೆದರು.

ಸಂಜೆ ಗುರುಗಳು ಪೂಜೆ ಮುಗಿಸಿ ಬಂದಾಗ ಯಥಾ ಪ್ರಕಾರ ದಂಪತಿಗಳು ಹಾಜರಾಗಿದ್ದರು. ನಮಸ್ಕಾರ ಮಾಡಿದರು. ''ಇದೇನು? ಹೊರಡಲಿಲ್ಲವೇ? ಬಸ್ಸು ಸಿಕ್ಕಲಿಲ್ಲವೇ? ಅಮ್ಮನವರ ಸೇವೆಗೆ ನಿಂತಿರಾ?'' ಎಂದರು ಗುರುಗಳು. ಅದಕ್ಕೆ ಪ್ರತಿಯಾಗಿ, ಅನುಮಾನಿಸುತ್ತ ಆ ದಂಪತಿಗಳು ''ಒಂದು ಸಂದೇಹವಿತ್ತು. ತಮ್ಮನ್ನು ಸಮಾಧಾನ ಕೇಳಿ ಹೋಗೋಣ ಎಂದು ನಿಂತೆವು'' ಎಂದರು. ''ಏನು?'' ಎಂದರು ಗುರುಗಳು. ''ನಾವು ಬಹಳ ಹಿಂದೆ ಝಂಡು ಕಂಪನಿಗೆ ಷಧಿಗಾಗಿ ಬರೆದುಕೊಂಡಿದ್ದೆವು. ಆ ಷಧಿ ಈ ದಿನ ಮಧ್ಯಾಹ್ನ ಮನೆಗೆ ಬಂದಿದೆಯಂತೆ. ಮಗನು ಫೋನು ಮಾಡಿದ್ದ. ಈಗ ಅದನ್ನು ತೆಗೆದುಕೊಳ್ಳುವುದೋ ಬೇಡವೋ ಎಂದು ಕೇಳಬೇಕಿತ್ತು ತಮ್ಮನ್ನು...'' ಎಂದರು ಆ ಪತಿ. ಗುರುಗಳು ನಸುನಕ್ಕು, ''ಈಗ ಹೇಳಿಕೊಟ್ಟಿರುವ ಮಂತ್ರಕ್ಕೆ ಆ ಶಕ್ತಿ ಇಲ್ಲ ಅನ್ನಿಸಿದರೆ ಆ ಷಧಿಯನ್ನು ತೆಗೆದುಕೊಳ್ಳಿ. ಅದು ನಿಮ್ಮ ನಂಬಿಕೆಗೆ ಸಂಬಂಧಿಸಿದ್ದು. ನಾವು ಅದರಲ್ಲಿ ಹೇಳುವುದೇನೂ ಇಲ್ಲ'' ಎಂದರು. ''ಅಷ್ಟು ನೋವು ತಿಂದು 'ಕೊನೆಯ ಪ್ರಯತ್ನ ಗುರುಮಾತ್ರ' ಎಂದು ಗುರುಗಳ ಬಳಿ ಬಂದದ್ದೂ ಆಯಿತು, ಈಗ ಝಂಡು ಕಂಪನಿಯ ಷಧಿ ಬಾಕಿ ಇದೆ ಎಂದು ಕೇಳಲು ನಿಂತದ್ದೂ ಆಯಿತು! ಇದು ಮನುಷ್ಯನ ಸ್ವಭಾವ. ಮನಸ್ಸಿನ ಅನುಮಾನದ ಮೇಲೆ ಯಾವುದೂ ಕೆಲಸ ಮಾಡುವುದಿಲ್ಲ. ನಂಬಿಕೆ ಮತ್ತು ನಿಷ್ಠೆಯೊಂದು ಮಾತ್ರವೇ ಮದ್ದು ಅದಕ್ಕೆ'' ಎಂದು ಗುರುಗಳು ತಮ್ಮ ಅನುಭವವನ್ನು ಹೇಳಿ ಮುಗಿಸಿದರು.

ಯಾವುದನ್ನೂ ಹೇಗೆ ನಂಬುವುದು? ಸುಲಭವಾಗಿ ಏನನ್ನು ನಂಬಲೂ ಸಾಧ್ಯವಿಲ್ಲವಲ್ಲ. ಮನಸ್ಸು ಸಂಶಯಪಟ್ಟಾಗ ಬುದ್ಧಿ ತರ್ಕಕ್ಕೆ ಇಳಿಯುತ್ತದೆ. ಆದರೆ ಆ ತರ್ಕವನ್ನು ಮೀರಿದ ಒಂದು ಶಕ್ತಿ ಪರಿಸ್ಥಿತಿಯ ಅರಿವನ್ನು ಮಾಡಿಸಿಕೊಟ್ಟು ನಂಬುವಂತೆ ಮಾಡುತ್ತದೆ. ಅದಕ್ಕೆ ಒಂದು ಉದಾಹರಣೆ ನಾನು ನಂಜನಗೂಡಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ನಡೆದ ಸಂಗತಿ.

ಸಾಗರದಿಂದ ಬಂದಿದ್ದ ವರದಭಟ್ಟ ಎನ್ನುವ ಹುಡುಗ ನನ್ನ ಸಹಪಾಠಿಯಾಗಿದ್ದ. ನಾವೆಲ್ಲ ಅಧ್ಯಯನ, ಊಟ-ತಿಂಡಿ, ಮಾತು-ಕತೆ ಎಲ್ಲವನ್ನೂ ಮಾಡಿಕೊಂಡು ಆರಾಮವಾಗಿಯೇ ಇದ್ದೆವು. ಇದ್ದಕ್ಕಿದ್ದಂತೆ ಒಮ್ಮೆ ಅವನಿಗೆ ಜ್ವರ ಬಂದಿತು. ಜ್ವರ ಏರಿದಂತೆ ತಪ್ಪುತಪ್ಪಾಗಿ ಮಾತನಾಡತೊಡಗಿದ. ಏನೇನೋ ಮಾತು....... ನಮಗೆ ಅರ್ಥವಾಗದ ವಿಷಯಗಳು ಅವು. ಅವನು ಹಾಗೆ ಮಾತನಾಡಿದಾಗ ನಮ್ಮ 'ಮೇಲಿನ' ತರಗತಿಯಲ್ಲಿ

ಓದುತ್ತಿದ್ದ ದೊಡ್ಡ ಹುಡುಗರು ತಮಗೆ ತೋಚಿದ ರೀತಿಯಲ್ಲಿ ಅವನನ್ನು ಮಂತ್ರಮುಗ್ಧನನ್ನಾಗಿಸಿ, ''ಯಾರು ನೀನು? ಇವನ ಮೇಲೇಕೆ ಬಂದಿದ್ದೀ?'' ಎಂದು ಜೋರು ಮಾಡಿದರು. ಅದಕ್ಕೆ ವರದನು ಕೆಟ್ಟ ಧ್ವನಿಯಲ್ಲಿ ''ನಾನು ಯಾರು ಗೊತ್ತೇ? ರಕ್ತಮೂಲ. ನಾನು ಇವರ ತೋಟವನ್ನು ಕಾಯುವ ಭೂತ. ಪ್ರತಿವರ್ಷವೂ ಇವರು ನನಗೆ ಇನ್ನೂರು ಸೀಯಾಳ ಕೊಡುತ್ತಾರೆ, ವಸ್ತ್ರ ಕೊಡುತ್ತಾರೆ. ಆದರೆ ಈಗ ನಾಲ್ಕೈದು ವರ್ಷಗಳಿಂದ ನನಗೆ ಏನನ್ನೂ ಕೊಟ್ಟಿಲ್ಲ. ಅದಕ್ಕೇ ಮೊನ್ನೆ ಇವರ ಮನೆಯ ಹಸು 'ಸೀತಾ'ಳನ್ನು ತೆಗೆದುಕೊಂಡೆ. ಈಗ ಇವನನ್ನೂ ತೆಗೆದುಕೊಳ್ಳಲು ಬಂದಿದ್ದೇನೆ'' ಎಂದ. ನಮ್ಮ ಕಣ್ಣೆದುರೇ ನಡೆದದ್ದು ಇದು. ನಾವು ಥರಥರ ನಡುಗಿ ಹೋದೆವು. ಅವರ ತಂದೆಗೆ ಆ ಕೂಡಲೇ ಟೆಲಿಗ್ರಾಮನ್ನು ಕಳುಹಿಸಿದೆವು. ಆದರೆ ಆ ದಿನ ಸಂಜೆಯೇ ಅವರ ಮನೆಯಿಂದ ಪತ್ರವೊಂದು ಬಂದಿತು. ವರದನ ತಂದೆ, ''ಮೊನ್ನೆ ನಮ್ಮ ಮನೆಯ ಹಸು ಸೀತಾ ರಕ್ತಕಾರಿ ತೀರಿಕೊಂಡಿತು. ಎಲ್ಲರಿಗೂ ತುಂಬ ಬೇಜಾರು ಆಗಿದೆ'' ಎಂದು ಬರೆದಿದ್ದರು. ನಮಗೆಲ್ಲ ಎದೆ ಹೊಡೆದುಕೊಳ್ಳತೊಡಗಿತು....'ಓಹೋ... ಹಾಗಿದ್ದರೆ ವರದನ ಮೈಮೇಲೆ ಬಂದದ್ದು ನಿಜಕ್ಕೂ ರಕ್ತಮೂಲ ಎಂಬ ಭೂತವೇ?' ಮನಸ್ಸು ಮುಂದೆ ಯೋಚಿಸಲಾಗದೆ ಹೆದರಿ ನಡುಗಿತ್ತು. ಅವನಿಗೆ ಹಾಗೇ ಎಚ್ಚರ ತಪ್ಪುವುದು, ಅವನು ಬಡಬಡಿಸುವುದು ನಡೆದಿತ್ತು. ಜ್ವರವೂ ಬಿಟ್ಟು ಬಿಟ್ಟು ಬರುತ್ತಿತ್ತು. ಟೆಲಿಗ್ರಾಂ ಕಂಡ ಕೂಡಲೆ ವರದನ ತಂದೆ ಹೊರಟಿದ್ದರು. ಅಲ್ಲಿಯವರೆಗೆ ವರದನ ಸ್ಥಿತಿಯಲ್ಲಿ ಅಂತಹ ಬದಲಾವಣೆ ಇಲ್ಲದಿದ್ದರೂ, ನಮಗೆ ಮಾತ್ರ ಜೀವದಲ್ಲಿ ಜೀವ ಇಲ್ಲದಂತಾಗಿತ್ತು. ಮಾರನೆಯ ದಿನ ಅವನ ತಂದೆಯೂ ಚಿಕ್ಕಪ್ಪನೂ ನಂಜನಗೂಡಿಗೆ ಬಂದಿಳಿದರು. ವರದನನ್ನು ನೋಡಿದರು. ಅವರಿಗೆ ನಾವು ನಡೆದ ವಿಷಯ ತಿಳಿಸಿದೆವು. ಕೂಡಲೇ ತಾವು ವಾಪಸಾಗಿ ಶಾಂತಿ ಮಾಡುವುದಾಗಿ ಹೇಳಿ ವರದನನ್ನೂ ಕರೆದುಕೊಂಡು ಹೊರಟ ಅವರು ಇದ್ದಕ್ಕಿದ್ದಂತೆ, ''ವರದನ ಕುತ್ತಿಗೆಯಲ್ಲಿ ಒಂದು ತಾಯಿತ ಇತ್ತು ಬೆಳ್ಳಿಯದು, ಎಲ್ಲಿ ಅದು?'' ಎಂದರು. ನಾವು ಅಲ್ಲೆಲ್ಲ ಹುಡುಕಿದೆವು. ಕೊನೆಗೆ ವರದನೇ ತಾನು ಅದು ಕೊಳೆಯಾಗಿತ್ತೆಂದು ತೊಳೆಯಲು ತೆಗೆದುದಾಗಿಯೂ, ತೊಳೆದು ಅದನ್ನು ನಲ್ಲಿಕಟ್ಟೆಯ ಮೇಲಿಟ್ಟು ಬಂದುದಾಗಿಯೂ, ಮತ್ತೆ ಅದನ್ನು ಹಾಕಿಕೊಳ್ಳಲು ಮರೆತುದಾಗಿಯೂ ಹೇಳಿದ. ನಾವು ನಲ್ಲಿ ಕಟ್ಟೆಯ ಹತ್ತಿರ ಹೋಗಿ ನೋಡಿದಾಗ ಅದು ಅಲ್ಲೇ ಇದ್ದಿತು. ಅದನ್ನು ತಂದು ವರದನ ಕೈಗೆ ಕೊಟ್ಟೆವು. ಅವರು ಅದನ್ನು ವರದನ ಕತ್ತಿಗೆ ಕಟ್ಟಿದರು. ಅದು ಇದ್ದರೆ ಭೂತ ಬರುತ್ತಿರಲಿಲ್ಲವಂತೆ. ಅಂತೂ ಆ ದಿನವೇ ಮಗನನ್ನು ಜತೆಗೆ ಕರೆದುಕೊಂಡು ಹೊರಟರು ಅವನ ತಂದೆ. ಅನಂತರ ಊರಿನ ತೋಟದಲ್ಲಿ ಶಾಂತಿ ಮಾಡಿಸಿದರು. ಸೀಯಾಳವನ್ನೂ ವಸ್ತ್ರವನ್ನೂ ಕೊಟ್ಟರು. ವರದನೂ ಹುಷಾರಾಗಿ ತಿಂಗಳೊಂದು ಕಳೆದು ಮತ್ತೆ ಪಾಠಶಾಲೆಗೆ ಬಂದ. ಇದು ಆದ ಒಂದು ವರ್ಷದಲ್ಲಿ ನಾನೂ ಅವನೂ ಇಬ್ಬರೂ ಒಂದೇ ದಿನದಲ್ಲಿ ಸೈಕಲ್ ಕಲಿತೆವು. ಸೈಕಲ್ ಕಲಿತ ದಿನವೇ ಹೊಟ್ಟೆ ನೋವೆಂದು ಹೇಳಿ ಮಲಗಿದ ವರದನಿಗೆ ವಾಂತಿ ಭೇದಿಯಾಗಿ ಕಾಲರಾಗೆ ತಿರುಗಿ ಅವನು ಕಣ್ಮುಚ್ಚಿದ. ನಮ್ಮ ಜತೆಯಲ್ಲೇ ಇದ್ದು, ಓದಿ, ಆಟ-ಪಾಠ ಮಾಡುತ್ತಿದ್ದ ಒಳ್ಳೆಯ ಗೆಳೆಯನ ಸಾವು ನಮಗೆಲ್ಲ ಅತೀವ ದುಃಖ, ಗಾಬರಿ, ದಿಗ್ಭ್ರಾಂತಿ ತಂದಿತ್ತು. ಕಣ್ಣೆದುರೇ ನಡೆದ ಈ ಪ್ರಸಂಗವನ್ನೂ, ಅದರ ಕಾರಣವನ್ನೂ ನಂಬದೆ ಇರಲು ಹೇಗೆ ಸಾಧ್ಯ? ಅದು ನನ್ನ ಮಿತ್ರ ವರದನ ದುರ್ದೈವ ಎನ್ನಬೇಕಷ್ಟೆ!

ದೇವರ ವಿಷಯದಲ್ಲಿ ಪ್ರಾರಂಭಿಸಿದ ಮಾತು ನನ್ನ ಸಹಪಾಠಿ ಮಿತ್ರ ವರದಭಟ್ಟನ ಸಾವಿನಲ್ಲಿ ನಿಂತಿತಾದರೂ, ಹುಟ್ಟು-ಸಾವು ನಮ್ಮ ಕೈಲಿರುವಂಥದಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಅದಕ್ಕೆ ದೇವರ ಸಂಕಲ್ಪವೇ ಕಾರಣವೇ? 'ಹೌದು' ಎನ್ನದೆ ಬೇರೇನೂ ಹೇಳಲಾಗದು. ಸಂಕಲ್ಪ ಅದೊಂದು ವಿಷಯದಲ್ಲಿಯೇ ಅಲ್ಲ. 'ತೇನ ವಿನಾ ತೃಣಮಪಿ ನ ಚಲತಿ' ಎನ್ನುತ್ತೇವೆ. ಅವನ ಸಂಕಲ್ಪವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡುವುದಿಲ್ಲ. ಅದೇ ನಮ್ಮ ಭಾರತೀಯ ಸಂಸ್ಕೃತಿಯ, ಸನಾತನ ಹಿಂದೂ ಧರ್ಮದ ನಂಬಿಕೆ. ಅವನಿಗಾದರೂ ಹಾಗೆ ಎಲ್ಲವನ್ನೂ ನಡೆಸುವ, ನಿಯಂತ್ರಣದಲ್ಲಿಡುವ ಶಕ್ತಿ ಬಂದಿತಾದರೂ ಹೇಗೆ ಎಂದರೆ, ನಮ್ಮ ನಂಬಿಕೆಯಿಂದಲೇ ಎನ್ನಬೇಕು! ಅವನನ್ನು ಪವಿತ್ರವಾದ ಶುದ್ಧವಾದ ಒಂದೆಡೆ ಪ್ರತಿಷ್ಠಾಪಿಸಿ, ಪೂಜಿಸಿ ನಮಗೆ ಅವನ ಶಕ್ತಿಯ ಅರಿವಾಗುವಂತೆ ಮಾಡುವುದು ನಮ್ಮ ನಂಬಿಕೆ, ವ್ರತನಿಯಮ, ನಿಷ್ಠೆಗಳೇ. ಹಾಗೆಯೇ ಸಂಕಲ್ಪಸಿದ್ಧರಾದ ನಂಜಪ್ಪ ಅವಧಾನಿಗಳು ನಮ್ಮ ಮತ್ತೂರಿನಲ್ಲಿ ಕೇಶವನನ್ನು ಪ್ರತಿಷ್ಠಾಪನೆ ಮಾಡಿದುದು. ಹೀಗೆ ಹೊಸಹಳ್ಳಿಯಲ್ಲಿ ಒಬ್ಬ ಚನ್ನಕೇಶವ, ಮತ್ತೂರಿನಲ್ಲಿ ಒಬ್ಬ ಲಕ್ಷ್ಮೀಕೇಶವ.

ಈ ಇಬ್ಬರು ದೇವರಲ್ಲೂ ನಮ್ಮ ನಂಬಿಕೆ. ''ಭಾರತದಲ್ಲಿ ಹೆಜ್ಜೆಗೊಂದು ದೇವಸ್ಥಾನವಾದರೂ ನನಗೆ ಸಂತೋಷ. ಏಕೆಂದರೆ ದೇವಸ್ಥಾನ ಕಂಡ ಕಡೆ ನಾವುಗಳು ಅರೆಗಳಿಗೆ ನಿಂತು ಕೈಮುಗಿದು ಹೋಗದೆ ಇರುವುದಿಲ್ಲ. ಆ ಅರೆಗಳಿಗೆ ನಮ್ಮ ಮನಸ್ಸು ಎಲ್ಲರೀತಿಯ ಕೆಟ್ಟ, ದುಷ್ಟ, ಆಲೋಚನೆಗಳಿಂದ ಮುಕ್ತವಾಗಿರುತ್ತದೆ. ಅಷ್ಟೇ ಸಾಕಲ್ಲವೇ? ಇನ್ನೂ ಹೀಗೆ ಹೆಚ್ಚು

ಹೆಚ್ಚು ದೇವಸ್ಥಾನಗಳಾದರೆ ನಮಗೆ ಕೆಟ್ಟ ಯೋಚನೆ ಮಾಡಲು ಅವಕಾಶವೇ ಇರದು. ಮನಸ್ಸು ಕೆಟ್ಟ ಯೋಚನೆಗಳಿಂದ ಮುಕ್ತವಾದಾಗ ಕ್ರಿಯಾಶೀಲವಾಗುತ್ತದೆ. ಅದೇ ನಮಗೆ ಬೇಕಾಗಿರುವುದು ಈಗ!'' ಎಂದಿದ್ದಾರೆ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು. ಇನ್ನು ತುಂಗಾದಂಡೆಯ ಎಡ-ಬಲದಲ್ಲಿರುವ ಎರಡೂ ಹಳ್ಳಿಗಳಲ್ಲಿ ಕೇಶವನು ನೆಲೆಸಿದರೆ ಅದರಿಂದ ನಮಗೆ ಮತ್ತೂ ಒಳ್ಳೆಯದೇ ತಾನೆ?

❁ ❁ ❁

ಚೆನ್ನಪ್ಪ ಶಾಸ್ತ್ರಿಗಳು ತೆಳ್ಳಗಿದ್ದರು. ಆದರೂ ಬಹಳ ಧೈರ್ಯಶಾಲಿ, ಎದೆಗಾರಿಕೆಯ ವ್ಯಕ್ತಿ. ಯಾರಿಗೂ, ಯಾವುದಕ್ಕೂ ಹೆದರದ ಗಂಡೆದೆಯವರು. ನಮ್ಮ ಊರಿನ ಹತ್ತಿರದಲ್ಲೇ ನೆಲೆಸಿರುವ ಒಂದು ಜನಾಂಗವು ಆಗಾಗ ನಮ್ಮಲ್ಲಿಗೆ ಬಂದು ಅನವಶ್ಯಕವಾಗಿ ತೊಂದರೆ ಕೊಡುವುದಿತ್ತು. ನಮ್ಮ ತುಂಗಾನದಿಯಲ್ಲಿ ಭಾರೀ ಮೀನುಗಳಿದ್ದವು. ಅಲ್ಲಿ ಮೀನು ಹಿಡಿಯುವುದು ನಿಷಿದ್ಧ ಎಂದು ಬಹಳ ಹಿಂದಿನ ಕಾಲದಿಂದಲೂ ಜಾರಿಯಾಗಿದೆ. ಆ ಜನಾಂಗದವರು ಮಾತ್ರ ಆಗಾಗ ಬಂದು ಮೀನು ಹಿಡಿಯುವುದು, ಗಲಾಟೆ ಮಾಡುವುದು ಮಾಡುತ್ತಿದ್ದರು.

ಒಮ್ಮೆ ನಮ್ಮ ತಂದೆಯವರು ನದಿಗೆ ಬಂದಾಗ, ನಮ್ಮ ಹಳ್ಳಿಯ ಕಡೆಗೆ ಬಂದಿದ್ದ ಮಿಲಿಟರಿಯ ತುಕಡಿ ಮತ್ತು ಮೂರ್ನಾಲ್ಕು ಮಂದಿ ಕ್ಯಾಪ್ಟನ್‌ಗಳು ನೀರೊಳಗೆ ಡೈನಮೈಟು ಹಾಕಿ ಸ್ಫೋಟಿಸಿ ಮೀನುಗಳು ಸತ್ತು ಮೇಲೆ ತೇಲುವ ಹಾಗೆ ಮಾಡಿ ಸಾಕಷ್ಟು ಮೀನುಗಳನ್ನು ಸಂಗ್ರಹಿಸಿಕೊಂಡು ಲಾರಿಯಲ್ಲಿ ಸಾಗಿಸುತ್ತ ಮೇಲಕ್ಕೆ ಬರುತ್ತಿದ್ದರು. ಆಗ ನಮ್ಮ ತಂದೆ ಅವರ ಹತ್ತಿರಕ್ಕೆ ಬಂದು ನಿಂತು, ಧೈರ್ಯದಿಂದಲೇ, ''ನೀವು ಮಿಲಿಟರಿಯವರು. ದೇಶದ, ನಮ್ಮಗ್ರಾಮ, ರಕ್ಷಣೆ ಮಾಡುವವರು. ಇಲ್ಲಿ ಮೀನು ಹಿಡಿಯಬಾರದೆಂದು ಫಲಕವನ್ನು ಹಾಕಿದೆ. ಆದರೂ ನೀವು ಇಷ್ಟು ಮೀನುಗಳನ್ನು ಹಿಡಿದುಕೊಂಡು ಹೊರಟಿದ್ದೀರಿ. ಬೇಲಿಯೇ ಎದ್ದು ಹೊಲ ಮೇಯ್ದಂತೆ ಅಲ್ಲವೇ ಇದು? ನಾವು ಎಷ್ಟೋ ವರ್ಷಗಳಿಂದ ಇಲ್ಲಿನ ಮೀನುಗಳನ್ನು ಕಾಪಾಡಿಕೊಂಡು ಬಂದಿದ್ದೇವೆ. ಅಲ್ಲದೆ ನಾವು ನಮ್ಮ ದೇವರ ಅವತಾರಗಳಲ್ಲಿ 'ಮತ್ಸ್ಯಾವತಾರ' ಎಂದೂ ಪೂಜಿಸುತ್ತೇವೆ. ಅವುಗಳನ್ನು ಕೆಲವೇ ನಿಮಿಷಗಳಲ್ಲಿ ನೀವುಗಳು ಮುಗಿಸಿಬಿಟ್ಟಿರಿ. ಮೀನು ಇರುವುದರಿಂದ ತಾನೇ ನೀರೂ ಶುದ್ಧವಾಗಿರುವುದು? ನಾವು ಉಪಯೋಗಿಸುವುದು ಆ ನೀರನ್ನೇ ಗೊತ್ತೇ?'' ಎಂದು ಹಿಂದಿಯಲ್ಲಿ ಮೆಲುಧ್ವನಿಯಲ್ಲಿ ಆದರೆ ಸಾಕಷ್ಟು ಗಂಭೀರವಾಗಿ ಪ್ರಶ್ನಿಸಿದಾಗ ಆ ಮೂರ್ನಾಲ್ಕು ಮಂದಿ ಕ್ಯಾಪ್ಟನ್‌ಗಳೂ ತಲೆತಗ್ಗಿಸಿದರು. ''ಸಾರಿ... ಇನ್ನು ಮೇಲೆ ಹಾಗೆ ಮಾಡುವುದಿಲ್ಲ'' ಎಂದು ಹೇಳಿ ಹೊರಟರು ಅವರು. ಆಗಿರುವುದಕ್ಕೆ ಏನೂ ಮಾಡಲು ಅವರಿಂದಲೂ ಸಾಧ್ಯವಿರಲಿಲ್ಲವಲ್ಲ! ''ಮತ್ತೆಂದಾದರೂ ನಮ್ಮ ಕಡೆಯವರು ಈ ಕೆಲಸ ಮಾಡಿದರೆ ನಾವು ಅವರನ್ನು ವಿಚಾರಿಸಿಕೊಳ್ಳುತ್ತೇವೆ. ಶಿಕ್ಷಿಸುತ್ತೇವೆ'' ಅಂದರು. ಹೀಗಾದನಂತರ ಸಾಮಾನ್ಯವಾಗಿ ಮೀನುಗಳ್ಳರು ಅತ್ತ ಬರುತ್ತಿರಲಿಲ್ಲ!

ಒಮ್ಮೆ ಮದಾರಿಪಾಳ್ಯದ ಜನಾಂಗದವರು ನದಿಯ ಬಳಿ ಯಾರೂ ಇಲ್ಲದ ಸಮಯದಲ್ಲಿ ಬಂದು ಮೀನು ಹಿಡಿದು ಎರಡು-ಮೂರು ಚೀಲ ತುಂಬಿಸಿಕೊಂಡರು. ಅಷ್ಟೇ ಸಾಲದು ಎನ್ನುವಂತೆ ಅಲ್ಲೇ ಹತ್ತಿರದಲ್ಲಿದ್ದ ಕಬ್ಬಿನ ಗದ್ದೆಯೊಂದಕ್ಕೆ ನುಗ್ಗಿ ಕಬ್ಬನ್ನು ಮುರಿದು ತಮ್ಮ ಗಾಡಿಯ ತುಂಬ ತುಂಬಿಕೊಂಡು ಮೀನಿನ ಮೂಟೆಗಳನ್ನೂ ಅದರಲ್ಲಿ ಹೇರಿಕೊಂಡು ಹೊರಟರು. ಆ ಕಬ್ಬಿನ ಗದ್ದೆಯು ಕಾಲು ಎಕರೆಯ ವಿಸ್ತೀರ್ಣದ್ದು. ಅದು ನಮ್ಮೂರಿನ ಬಡಕುಟುಂಬವೊಂದಕ್ಕೆ ಸೇರಿತ್ತು. ತಿಪ್ಪಾವಧಾನಿ ಅನ್ನುವ ಅವರು ಕಷ್ಟಪಟ್ಟು ಹುಲುಸಾಗಿ ಎತ್ತರವಾಗಿ ಕಬ್ಬು ಬೆಳೆಸಿದ್ದರು. ಮನೆಯ ಉಪಯೋಗಕ್ಕೆ ಬೆಲ್ಲ ಮಾಡುವುದು ಅವರ ಉದ್ದೇಶವಾಗಿತ್ತು. ಈ ಪುಂಡರ ಗಲಾಟೆಯಿಂದಾಗಿ ಸುಮಾರು ಅರ್ಧದಷ್ಟು ಕಬ್ಬು ನಾಶವಾಗಿತ್ತು.......

ಪುಂಡು ಹುಡುಗರು ಗಾಡಿಯ ಮೇಲೆ ಕುಳಿತುಕೊಂಡರು. ಗಾಡಿಯನ್ನು ನಡೆಸುವವನ ಪಕ್ಕದಲ್ಲಿ ಕೈಲಿ ಕುಡುಗೋಲು ಹಿಡಿದ ಮತ್ತೊಬ್ಬ ಕುಳಿತಿದ್ದ. ಗಾಡಿ ಊರ ಬೀದಿಯನ್ನು ತಲುಪಿದಾಗ ದೇವಸ್ಥಾನದ ಒಳಗೆ ಪೂಜೆ ಮಾಡಲು ಕುಳಿತಿದ್ದ ಚೆನ್ನಪ್ಪ ಶಾಸ್ತ್ರಿಗಳು ಪುಂಡರ ಗಲಾಟೆಯನ್ನು ಕೇಳಿ ಪೂಜೆಯನ್ನು ಅರ್ಧಕ್ಕೇ ನಿಲ್ಲಿಸಿ ದೇವಸ್ಥಾನದಿಂದ ಹೊರಬಂದರು; ಮೈತುಂಬ ವಿಭೂತಿ, ಬಡಕಲು ಶರೀರ, ಮೈಮೇಲಿದ್ದ ತುಂಡುವಸ್ತ್ರ. ಪುಂಡರನ್ನು ನೋಡಿ ಹೆದರಿದ ಇತರರು ಸುಮ್ಮನೇ ನಿಂತಿದ್ದರು. ಶಾಸ್ತ್ರಿಗಳು ಯಾವ ಹೆದರಿಕೆಯೂ ಇಲ್ಲದೆ, ''ಹುಟ್ಟಿದ ಮನುಷ್ಯ ಒಂದು ದಿನ ಸಾಯಲೇಬೇಕು. ಈಗ ಆಗುತ್ತಿರುವ ಅನ್ಯಾಯವನ್ನಂತೂ ತಡೆಯಬೇಕು'' ಎಂದು ಅಬ್ಬರಿಸಿದವರೇ ಬರುತ್ತಿದ್ದ ಗಾಡಿಯಿಂದ ಹೊರೆಕಬ್ಬಿನಲ್ಲಿ ಒಂದು ಜಲ್ಲೆ ಕಬ್ಬನ್ನು ಹಿರಿದುಕೊಂಡವರೇ ಗಾಡಿಯ ಮುಂದಕ್ಕೇ ಹೋಗಿ ನಿಂತರು. ಕುಡುಗೋಲು ತೋರಿಸಿದವನಿಗೆ ಸರಿಯಾಗಿ ಒಂದೇಟು ಬಾರಿಸಿದರು. ಅವನ ಕೈಯಿಂದ ಕುಡುಗೋಲು ಬಿದ್ದಿತು. ಶಾಸ್ತ್ರಿಗಳು ಹಾಗೆ ಮಾಡಿದುದು ಮಿಕ್ಕವರಿಗೂ ಸಾಕಷ್ಟು ಧೈರ್ಯ ಕೊಟ್ಟಿತು. ನಮ್ಮ ಹುಡುಗರೂ ಸೇರಿ ಗಾಡಿಯಲ್ಲಿ ತುಂಬಿದ್ದ ಕಬ್ಬನ್ನು ಹಿರಿದು ಎಳೆದುಕೊಂಡು ಗಾಡಿಯ ಮೇಲಿದ್ದ ಪುಂಡರಿಗೆ ಸರಿಯಾಗಿ ಬಾರಿಸಿದರು. ಗಾಡಿಯನ್ನು ನಿಲ್ಲಿಸಿ ಎತ್ತುಗಳನ್ನು ಬಿಚ್ಚಿ

ಕಂಬಕ್ಕೆ ಕಟ್ಟಿದರು. ಗಾಡಿಯನ್ನು ದೇವಸ್ಥಾನದ ಪಕ್ಕಕ್ಕೆ ತಂದು ನಿಲ್ಲಿಸಿದರು. ಇಷ್ಟೆಲ್ಲವನ್ನೂ ಚೆನ್ನಪ್ಪ ಶಾಸ್ತ್ರಿಗಳ ಮುಂದಾಳತ್ವದಲ್ಲೇ ಮಾಡಲಾಯಿತು! ಅವರ ಗುಂಪಿನ ಇಬ್ಬರ ಜತೆ ನಮ್ಮೂರಿನ ಇಬ್ಬರು ಹುಡುಗರನ್ನು ಶಿವಮೊಗ್ಗೆಗೆ ಕಳುಹಿಸಲಾಯಿತು. ಅಲ್ಲಿ ನಮ್ಮ ಹುಡುಗರು, ''ನೀವು ಗಲಾಟೆಗೆ ಬರುವವರಾದರೆ ಬನ್ನಿ ಅದಕ್ಕೂ ನಾವು ಸಿದ್ಧ. ನಮಗೇನೂ ಭಯವಿಲ್ಲ. ನಿಮ್ಮವರು ಹೀಗೆ ಮಾಡಿದ್ದಾರೆ. ಪೊಲೀಸರಿಗೆ ದೂರು ಕೊಡುವುದಾದರೆ, ಹಾಗೂ ಆಗಬಹುದು. ಬೇಕಾದರೆ ನಾವೇ ಪೊಲೀಸರನ್ನು ಕರೆದುಕೊಂಡು ಬರುತ್ತೇವೆ'' ಎಂದು ಹಿರಿಯರು ಹೇಳಿ ಕಳುಹಿಸಿದ ಸಂದೇಶ ಮುಟ್ಟಿಸಿದರು. ಆ ಜನಾಂಗದ ಹಿರಿಯರೂ ನಮ್ಮೂರಿಗೆ ಬಂದರು. ಆ ದಿನ ಸಂಜೆ ದೊಡ್ಡ ಪಂಚಾಯತಿ ಸೇರಿತು. ಊರಿನಲ್ಲಿ ವಿಚಾರಣೆಯೂ ಆಯಿತು. ಅವರ ಕಡೆಯವರೇ ಕಬ್ಬಿನ ಗದ್ದೆಗೆ ಹೋಗಿ ಬಂದು, ''ನಿಜ, ನಮ್ಮ ಹುಡುಗರು ಸಾಕಷ್ಟು ಧ್ವಂಸ ಮಾಡಿ ಕಬ್ಬು ನಾಶ ಮಾಡಿದ್ದಾರೆ'' ಎಂದು ಸಾಕ್ಷಿಯನ್ನು ಹೇಳಿದರು. ಪಂಚಾಯತಿಯಲ್ಲಿ ಅವರಿಗೆ ಹಾಕಿದ ನೂರು ರೂಪಾಯಿ ಜುಲ್ಮಾನೆಯನ್ನು ಭರಿಸಿ ತಮ್ಮ ಹುಡುಗರನ್ನೂ ಎತ್ತುಗಾಡಿಯನ್ನೂ ಕರೆದುಕೊಂಡು ಹೊರಟರು ಅವರ ಹಿರಿಯರು!

ಅದಾದ ಕೆಲವು ವರ್ಷಗಳನಂತರ ಒಂದು ದಿನ ಮತ್ತೂರಿನ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಬಾವಿಕಟ್ಟೆ ಸುಬ್ರಾಯ ಅವಧಾನಿಗಳು ನಮಗೆಲ್ಲ ವೇದಪಾಠ ಹೇಳುತ್ತಿದ್ದಾಗ ದೇವಸ್ಥಾನದ ಗಂಟೆಯನ್ನು ಯಾರೋ ಬಾರಿಸಿದರು. 'ಯಾರು?' ಎಂದು ಕೂಗಿದಾಗ ಉತ್ತರ ಬರದೇ ಇರಲು, ಅವಧಾನಿಗಳು ಎದ್ದು ಬಂದರು. ಮದಾರಿಪಾಳ್ಯದ ಇಬ್ಬರು ತರುಣರು ಎರಡು ಕೈಚೀಲದಲ್ಲಿ ಏನನ್ನೋ ತುಂಬಿಕೊಂಡು ತಂದು ಅಲ್ಲಿ ನಿಂತಿದ್ದರು. ಆ ಚೀಲದಿಂದ ನೀರು ಇಳಿಯುತ್ತಿತ್ತು; ಒಂದು ರೀತಿಯ ಗಬ್ಬು ವಾಸನೆ ಬರುತ್ತಿತ್ತು. ಆ ಹುಡುಗರ ಹತ್ತಿರ ಬಂದ ಅವಧಾನಿಗಳು, ''ಯಾರ್‍ರೋ ನೀವು? ಏನ್ರೋ ಅದು ನಿಮ್ಮ ಚೀಲದಲ್ಲಿ?'' ಎಂದು ಕೇಳಿದಾಗ, ಪುಂಡನಗೆ ನಕ್ಕ ಆ ಯುವಕರು, ''ತುಪ್ಪ..... ಮತ್ತೂರು ತುಪ್ಪ ತಂದಿದೀವಿ ನಾವು'' ಎಂದರು. ಅವಧಾನಿಗಳಿಗೆ ಆ ಚೀಲದಲ್ಲಿರುವುದು ಅವರು ನದಿಯಲ್ಲಿ ಹಿಡಿದು ತಂದಿರುವ ಮೀನುಗಳು ಎಂದು ತಿಳಿಯಿತು. ಅವರ ಕುಹಕದ ನಗು ಅವಧಾನಿಗಳ ಕೋಪವನ್ನು ನೆತ್ತಿಗೇರಿಸಿತು. ''ಓ..... ತುಪ್ಪವನ್ನು ತಂದಿದ್ದೀರಾ? ಸರಿ'' ಎಂದವರೇ ಏನನ್ನೋ ಹುಡುಕುತ್ತ ದೇವಸ್ಥಾನದ ಕಟ್ಟೆಯಿಂದಿಳಿದು ಬಂದರು. ಅಲ್ಲಿ ಹಸು ಸ್ವಲ್ಪ ತೆಳ್ಳಗೆ ಸಗಣಿ ಹಾಕಿದ್ದುದು ದೃಷ್ಟಿಗೆ ಬಿದ್ದಿತು. ಅದನ್ನು ಕೈಯಲ್ಲಿ ಹಿಡಿಯಾಗಿ ತೆಗೆದುಕೊಂಡು, ''ನಿಮಗೆ ತುಪ್ಪ ಬೇಕೇನ್ರೋ? ಕೊಡಲೇನು?'' ಎಂದವರೇ ನಗುತ್ತಿದ್ದ ಆ ಹುಡುಗರ ಮುಖಕ್ಕೆ ರಾಚಿದರು. ಆ ಹುಡುಗರ ನಗೆ ಮಾಯವಾಯಿತು. ಬಾಯಿ ತುಂಬಾ ಮುಖಕ್ಕೆಲ್ಲ ಸಗಣಿ ಮೆತ್ತಿಕೊಂಡಿತು. ಅವಧಾನಿಗಳ ವೀರಾವೇಶದ ಜತೆಗೆ ಮತ್ತಷ್ಟು ಹುರುಪುಗೊಂಡ ನಾವು ಹುಡುಗರೂ ಸೇರಿಕೊಂಡದ್ದು ಕಂಡ ಆ ಪುಂಡರು, 'ಇನ್ನು ತಮ್ಮ ಆಟ ಇಲ್ಲಿ ಸಾಗದು' ಎಂದು ಕಾಲಿಗೆ ಬುದ್ಧಿ ಹೇಳಿದರು.

ಅನವಶ್ಯಕವಾಗಿ ಕಿರುಕುಳ ಕೊಡಲು ದುರುದ್ದೇಶದಿಂದ ಬರುವವರನ್ನು ಎದುರಿಸಿ ನಿಲ್ಲಲು ನಮ್ಮ ಹಿರಿಯರು ನಮಗೆ ಧೈರ್ಯ ತುಂಬಿದುದು ಹೀಗೆ!

ಚಿಂತಾಮಣಿ ಮೇಷ್ಟ್ರ ಬುದ್ಧಿವಂತಿಕೆಗೆ ಬಲುಹೆಚ್ಚು ಮರ್ಯಾದೆಯೂ ಇತ್ತು. ಅಲ್ಲದೆ ಅವರು ನಮ್ಮೂರ ಶಾಲೆಯನ್ನು ಸ್ವಂತ ಖರ್ಚಿನಲ್ಲಿ ಕಟ್ಟಿ ವಿದ್ಯಾದಾನ ಮಾಡುತ್ತಿದ್ದರು. ಮೇಷ್ಟ್ರಾಗಿದ್ದ ಅವರನ್ನು ಕಂಡರೆ ನಮಗೂ ಸಾಕಷ್ಟು ಭಯ, ಭಕ್ತಿ. ಯಾವ ವಿಷಯವನ್ನೂ ಬಹಳ ಚೆನ್ನಾಗಿ ಹೇಳಿಕೊಟ್ಟು ಕಲಿಸುತ್ತಿದ್ದು, ನಾವು ಕಲಿಯದಿದ್ದಾಗ ಬಲವಾಗಿ ಚಿವುಟಿ ಹೇಳಿಕೊಡುತ್ತಿದುದನ್ನಂತೂ ಮರೆಯುವಂತಿಲ್ಲ. ನನ್ನ ಮಿತ್ರರೊಬ್ಬರಿಗೆ ಚಿಂತಾಮಣಿ ಮೇಷ್ಟ್ರು ಬಲವಾಗಿ ತೊಡೆಯ ಮೇಲೆ ಚಿವುಟಿದ್ದರಿಂದಾದ ಕಂದು ಬಣ್ಣದ ಕಲೆ ಇಂದಿಗೂ ಇದೆ. ಅದು ಕಲಿಸಿದ ಪಾಠಕ್ಕೆ ಸಾಕ್ಷಿ!

ಒಮ್ಮೆ ನಾವು ಹುಡುಗರೆಲ್ಲರೂ ಸೇರಿ ಚೆಂಡಾಟ ಆಡುತ್ತಿದ್ದೆವು. ಚಿಂತಾಮಣಿ ಮೇಷ್ಟ್ರು ಉರಿಬಿಸಿಲಿನಲ್ಲಿ ನಡೆದುಕೊಂಡು ತೋಟದ ಕಡೆಯಿಂದ ಬರುತ್ತಿದ್ದರು. ನಾವು ಎಚ್ಚರ ವಹಿಸುವಷ್ಟರಲ್ಲಿ ನಮ್ಮಲ್ಲಿ ಒಬ್ಬನು ಎಸೆದ ಚಂಡು ನೇರವಾಗಿ ಅವರ ಎದೆಗೇ ಬಡಿದು ಬಿದ್ದಿತು. ''ಗುಲಾಮ, ಬಿಸಿಲಲ್ಲಿ ಆಡಬೇಡಿರೋ ಅಂತ ಹೇಳಿದರೂ ಕೇಳದೆ ನನ್ನೆದೆಗೇ ಚೆಂಡನ್ನು ಹೊಡೆಯುತ್ತೀರಾ'' ಎಂದು ರೇಗಿದವರೇ ಚೆಂಡನ್ನು ತೆಗೆದುಕೊಂಡು ಮನೆಯೊಳಗೆ ನಡೆದರು. ನಾವೆಲ್ಲರೂ ಭಯದಿಂದ ಪೆಚ್ಚಾದೆವು. ಒಳಗೆ ನಡೆದವರೇ ತಮ್ಮ ಪತ್ನಿಗೆ, ''ಹುಡುಗರು ಚೆಂಡು ಆಡುತ್ತಿದ್ದರು, ಬಿಸಿಲು. ಅದಕ್ಕೇ ಚೆಂಡನ್ನು ನಾನೇ ತಂದುಬಿಟ್ಟಿದ್ದೇನೆ. ಕೇಳುವುದಕ್ಕೆ ಬರುತ್ತಾರೆ ಈಗ. ನೀನು ಅವರಿಗೆಲ್ಲ ಕೋಡುಬಳೆ, ಉಂಡೆಯನ್ನು ಕೊಡು'' ಎಂದು ಹೇಳಿ ತಾವು ತುಳಸೀಕಟ್ಟೆಯ ಬಳಿ ಕುಳಿತು ಮಾಧ್ಯಾಹ್ನಿಕ ಮಾಡುತ್ತಿದ್ದರು. ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ನಾವೆಲ್ಲರೂ ಮೆಲ್ಲಗೆ ಅವರ ಮನೆಯೊಳಗೆ ಹೋದೆವು. ಅವರ ಪತ್ನಿ ಎಂದಿನಂತೆ ಪ್ರೀತಿಯಿಂದ ''ಬನ್ನಿ ಬನ್ನಿ....'' ಎಂದು ನಮಗೆಲ್ಲ ಅರಳುಂಡೆ, ಕೋಡುಬಳೆಯನ್ನು ಕೊಟ್ಟರು. ನಾವು ಯಾರೂ ತಿನ್ನದೆ ಸುಮ್ಮನಿದ್ದೆವು. ಚೆಂಡನ್ನು ಕಳೆದುಕೊಂಡು, ತಿನ್ನುವ

ಮನಸ್ಸಿರಲಿಲ್ಲ. ''ನಮಗೆ ಉಂಡೆ ಬೇಕಿಲ್ಲ, ನಮ್ಮ ಚೆಂಡು ಬೇಕಿತ್ತು'' ಎಂದ, ನಮ್ಮಲ್ಲಿ ಒಬ್ಬ ಧೈರ್ಯ ಮಾಡಿ. ಅಷ್ಟರಲ್ಲಿ ಒಳ ಬಂದ ಮೇಷ್ಟ್ರು, ''ತಗೊಳ್ಳಿ ಚೆಂಡನ್ನು. ಇನ್ನು ಮೇಲೆ ಹೀಗೆಲ್ಲ ಬಿಸಿಲಲ್ಲಿ ಆಡಬಾರದು'' ಎಂದು ಹೇಳಿ ಚೆಂಡು ಕೊಟ್ಟರು. ನಿಜಕ್ಕೂ ನಮ್ಮ ಚೆಂಡು ನಮ್ಮ ಕೈ ಸೇರಿದ್ದು ನಮಗೆ ಅದೆಷ್ಟು ಖುಷಿ ತಂದಿದ್ದಿತೋ, ಕೂಡಲೆ ಹಸಿವು ಎಂದೆನಿಸಿತು. ಅಮ್ಮ ಕೊಟ್ಟ ಅರಳುಂಡೆ, ಕೋಡುಬಳೆ ಎಂದಿಗಿಂತಲೂ ಬಹಳ ರುಚಿಯಾಗಿರುವಂತೆ ಕಂಡಿತು. ಹೀಗೆ ಚಿಂತಾಮಣಿ ಮೇಷ್ಟ್ರು ಅಷ್ಟೇ ಪ್ರೀತಿ ತುಂಬಿದ ಹೃದಯವಿದ್ದವರೂ ಆಗಿದ್ದರು!

ನಿಜಕ್ಕೂ ಮಕ್ಕಳಾಗಿದ್ದ ನಮಗೆ ಆ ದಿನ ಆದ ಸಂತೋಷ ಅಷ್ಟಿಷ್ಟಲ್ಲ. ಬಾಲ್ಯ ಎನ್ನುವುದೇ ಹಾಗೆ. ಅದೆಷ್ಟು ಮುಗ್ಧತೆ, ಪ್ರೀತಿ, ಉತ್ಸಾಹ ತುಂಬಿರುತ್ತದೆ ಬಾಲ್ಯದಲ್ಲಿ? ಆಗ ಸುಳ್ಳು, ಕಪಟ, ಮರೆ, ಮೋಸ ಎನ್ನುವುದು ಯಾವುದರ ಅರಿವೂ ಇರುವುದಿಲ್ಲ. ಮನುಷ್ಯನ ಜೀವನದಲ್ಲಿ ಅದೊಂದು ರೀತಿಯ ದೈವಿಕಾವಸ್ಥೆ ಎನ್ನಬಹುದು. ನನಗೆ ನನ್ನ ಬಾಲ್ಯಕ್ಕಿಂತಲೂ, ನಾನು ನೋಡಿದ ಮಕ್ಕಳ ಬಾಲ್ಯವನ್ನು ಗಮನಿಸಿ ಸಂತೋಷಪಡುವುದರಲ್ಲಿ ಸುಖವಿದೆ ಎನ್ನಿಸಿದೆ. ನಾನು ಹತ್ತಿರದಿಂದ ಕಂಡಂತೆ ನನ್ನ ಮಗಳು ಅನ್ನಪೂರ್ಣೆಯು ಚಿಕ್ಕವಳಾಗಿದ್ದಾಗ ನಡೆದ ಒಂದೆರಡು ಪ್ರಸಂಗಗಳು ಇಂದಿಗೂ ನೆನೆದುಕೊಳ್ಳುವಂಥವು, ನಗೆ ತರಿಸುವಂಥವು!

ನಾನು ಒಮ್ಮೆ ಬೆಂಗಳೂರಿಗೆ ಹೊರಟಿದ್ದೆ. ಅನ್ನಪೂರ್ಣೆಗೂ ನನ್ನ ಜತೆ ಬೆಂಗಳೂರಿಗೆ ಬರಬೇಕೆಂದು ಆಸೆ. ಆದರೆ ಅದು ಸಾಧ್ಯವಿರಲಿಲ್ಲ. ಯಾವುದೋ ಕೆಲಸದ ಮೇಲೆ ಹೊರಟಿದ್ದೆ. ಹಿಂದಿನ ರಾತ್ರಿಯಿಂದಲೂ ನಾಲ್ಕಾರು ಸಾರಿ ಕೇಳಿದ್ದ ಅವಳು, ಮರುದಿನ ನಾನು ಹೊರಡುತ್ತಿದ್ದಾಗ ಮತ್ತೆ ನನ್ನೆದುರು ಪ್ರತ್ಯಕ್ಷಳಾದಳು. ನನ್ನನ್ನೇ ನೋಡುತ್ತಿದ್ದಳು. ಸ್ವಲ್ಪ ದುಡ್ಡನ್ನು ನಾನು ಕಾಗದವೊಂದರಲ್ಲಿ ಸುತ್ತಿ ನನ್ನ ಸೊಂಟಕ್ಕೆ ಸಿಕ್ಕಿಸಿಕೊಂಡೆ. ''ಅಪ್ಪ, ಏನು ಮಾಡುತ್ತಿದ್ದೀಯೆ?'' ಎಂದಳು ಅವಳು. ''ನೋಟುಗಳು ಬೆವರಿನಲ್ಲಿ ಒದ್ದೆಯಾಗದಿರಲಿ ಎಂದು ಕಾಗದದಲ್ಲಿ ಸುತ್ತಿ ಇಲ್ಲಿ ಇಟ್ಟುಕೊಂಡೆ. ಅಷ್ಟೆ. ಯಾಕೆ?'' ಎಂದೆ ನಾನು. ''ಅಪ್ಪ, ನಾನು ಒಂದು ಮಾತು ಹೇಳಲಾ? ನಾನೂ ಆ ಕಾಗದವಾಗಿ ಹುಟ್ಟಿದ್ರೆ ಈಗ ನಾನೂ ನಿನ್ನ ಜತೆ ಬೆಂಗಳೂರಿಗೆ ಬರುತ್ತಿದ್ದೆ, ಅಲ್ವಾ?'' ಎಂದಳು. ಅವಳ ಮುಗ್ಧ ಮಾತಿಗೆ ನಾನು ಅವಾಕ್ಕಾದೆ! ನಿಜಕ್ಕೂ ಅದೆಷ್ಟು ಗಂಭೀರಳಾಗಿ ಕೇಳುತ್ತಿದ್ದಾಳೆ ಅವಳು ಎನ್ನಿಸಿತು. 'ನಾನು ಬರಬೇಕೆಂದು ಆಸೆಪಟ್ಟು ಅಷ್ಟು ಸಾರಿ ಕೇಳಿದರೂ ನಿನ್ನ ಜತೆಗೆ ಬರಲಾಗುತ್ತಿಲ್ಲ. ಆ ಕಾಗದವನ್ನು ನೀನಾಗಿಯೇ ತೆಗೆದುಕೊಂಡು ಹೊರಟಿದ್ದೀಯೆ, ಅದು ಕೇಳದೇ ಇದ್ದರು ಸಹ' ಎನ್ನುವಂತಿದ್ದ ಮಾತಿನ ಆ ಭಾವವನ್ನು ನಾನು ಇಂದಿಗೂ ಮರೆತಿಲ್ಲ. ಅಷ್ಟು ಚಿಕ್ಕ ವಯಸ್ಸಿನ ನಾಲ್ಕೈದು ವರ್ಷಗಳ ಹುಡುಗಿ ಆ ಮಾತನ್ನು ನನಗೆ ಹೇಳಿದ್ದಳು! ಒಬ್ಬ ಗೋಪಿ, ''ಮುಂದಿನ ಜನ್ಮದಲ್ಲಿ ಮುರುಳಿಯಾಗಿ, ಕೊಳಲಾಗಿ, ಹುಟ್ಟುವೆ. ಯಾಕೆಂದರೆ ಕೃಷ್ಣನ ತುಟಿಯ ಸವಿ ಸಿಕ್ಕುತ್ತದೆ!'' ಎಂದಳಂತೆ. ಹಾಗಾಯಿತು, ನಮ್ಮ ಅನ್ನಪೂರ್ಣೆಯ ಮಾತು.

೧೫. ಮಹಾನುಭಾವರು

ಕೆಲವು ವ್ಯಕ್ತಿಗಳು, ಅವರ ಒಡನಾಟ ನಮ್ಮ ಜೀವನದ ಮೇಲೂ, ನಮ್ಮ ಮೇಲೂ ಅದೆಷ್ಟು ಪರಿಣಾಮ ಉಂಟುಮಾಡುತ್ತದೆ ಎಂದರೆ, ನಮಗೆ ಅರಿವಿಲ್ಲದಂತೆಯೇ ನಾವು ಅವರ ಪ್ರಭಾವಕ್ಕೆ ಒಳಗಾಗಿರುತ್ತೇವೆ. ಅವರನ್ನು ಮೆಚ್ಚಿ, ಆದರ್ಶ ವ್ಯಕ್ತಿ ಎಂದು ಮನಸ್ಸಿನಲ್ಲಿಯೇ ಸ್ವೀಕರಿಸುತ್ತೇವೆ. ನಾನು ಕಂಡ ಹಿರಿಯರಲ್ಲಿ ಬಸವಾನಿರಾಮಶರ್ಮರು ಅಂಥವರು. ಬಸವಾನಿರಾಮಶರ್ಮರು ತಮಿಳುನಾಡಿನ ಮಾಯಾವರಂಗೆ ಹೋಗಿ ವೇದಾಧ್ಯಯನ ಮಾಡಿ ಬಂದವರು. ಆಗ ಸ್ವಾತಂತ್ರ್ಯ ಪೂರ್ವದ ಸಮಯದಲ್ಲಿ ಗಾಂಧೀಜಿಯ ಅನುಯಾಯಿಗಳ ಜತೆ ಸೇರಿಕೊಂಡು ಹೋರಾಟದಲ್ಲಿಯೂ ತೊಡಗಿಕೊಂಡವರು. ಅಪ್ಪಟ ಗಾಂಧೀವಾದಿಗಳಾಗಿದ್ದವರು. ಅವರ ಮಾತೂ ನಿಲುವೂ ಬಹಳ ಆಕರ್ಷಣೀಯ. ಬಹಳ ತಿಳಿವಳಿಕೆ ಇದ್ದ ಸಂಭಾವಿತರು. ಸಮಾಜ ಸೇವಾಕಾರ್ಯಗಳನ್ನು ಹಿಂಜರಿಯದೆ ಮುನ್ನುಗ್ಗಿ ಮಾಡಿದವರು. ಅವರಿಗೆ ತಕ್ಕಂತೆ, ಅವರ ಪತ್ನಿ ಸಾವಿತ್ರಮ್ಮ ಅವರನ್ನೇ ಅನುಸರಿಸುತ್ತಿದ್ದರು; ಸಮಾಜಸೇವಕಿ. ಒಂದೆರಡು ಶಾಲೆಗಳನ್ನು ನಡೆಸುತ್ತಿದ್ದರು. ತೀರ್ಥಹಳ್ಳಿಗೆ ಮೂವತ್ತು ಮೈಲು ದೂರದ ಬಸವಾನಿಯಲ್ಲಿದ್ದ ಅವರು 'ಕಸ್ತೂರಬಾ ಕೇಂದ್ರ' ಎನ್ನುವ ಹೆಸರಿನಲ್ಲಿ ಒಂದು ಆಸ್ಪತ್ರೆ ತೆರೆದು ನಡೆಸುತ್ತಿದ್ದರು. ಬಡವರಿಗೆ ಉಚಿತವಾಗಿ ಸೇವೆ ಒದಗಿಸುತ್ತಿದ್ದರು. ಹೆರಿಗೆಗೆ ಬಂದ ಬಡ ಹೆಣ್ಣುಮಕ್ಕಳಿಗೆ ತಮ್ಮ ಕ್ಷೇಮಾಲಯದಲ್ಲಿ ಇಟ್ಟುಕೊಂಡೇ ಬಾಣಂತನ ಮಾಡಿಸಿ, ಎರಡು-ಮೂರು ತಿಂಗಳ ಅನಂತರ ಕಳುಹಿಸಿ ಕೊಡುತ್ತಿದ್ದರು. ಈಗ ಅವರು ಒಂದು ವೃದ್ಧಾಶ್ರಮವನ್ನೂ ನಡೆಸುತ್ತಿದ್ದಾರೆ; ರಾಷ್ಟ್ರೀಯ ಪುರಸ್ಕಾರವೂ ಸಂದಿದೆ. ರಾಮಶರ್ಮರಿಗೂ ರಾಷ್ಟ್ರಪುರಸ್ಕಾರದ ಸಮ್ಮಾನ

ಸಂದಿದೆ.

ರಾಮಶರ್ಮರ ಮಾತಿನ ಶೈಲಿ ಸೂಜಿಗಲ್ಲಿನಂತೆ ಎಂಥವರನ್ನೂ ಆಕರ್ಷಿಸುವಂಥದು. ಅವರ ಆಚಾರ-ವಿಚಾರಗಳೂ ಎಲ್ಲರಿಗೂ ಒಪ್ಪಿಗೆಯಾಗುವಂಥವಾಗಿದ್ದವು. ಅವರ ಪತ್ನಿ ಸಾವಿತ್ರಮ್ಮನವರು ಮನೆಯಲ್ಲಿ ಪೂಜೆ, ಅನುಷ್ಠಾನ, ಮಡಿ-ಆಚಾರಗಳನ್ನೂ ಮಾಡುವರು. ರಾಮಶರ್ಮರೋ, ಯಜ್ಞ-ಯಾಗಗಳನ್ನೂ ಮಾಡಿಸುವ ಶಕ್ತಿ ಇದ್ದಂಥವರು! ಹೊರಗೆ ಹೊರಟರೆ ಗಾಂಧೀ ತತ್ತ್ವಪಾಲಕರಾದ ಅವರು ಹರಿಜನ ಸೇವೆಯನ್ನೂ ಮಾಡುತ್ತಿದ್ದರು. ಕೊಳೆಗೇರಿಗೆ ಹೋಗಿ ಶುದ್ಧಿಕಾರ್ಯದಲ್ಲಿ ಇತರರ ಜತೆ ಸೇರುತ್ತಿದ್ದರು. ಪಾಂಡಿತ್ಯದಲ್ಲಿಯೂ ಯಾವ ರೀತಿಯಲ್ಲೂ ಕಡಮೆ ಇಲ್ಲದಿದ್ದ ಅವರು 'ರುದ್ರಕ್ಕೆ ಭಾಷ್ಯ' ವನ್ನು ಬರೆದಿದ್ದಾರೆ. ಆ ಭಾಷ್ಯದ ಪುಸ್ತಕಕ್ಕೆ ಮೈಸೂರು ಅರಸರಿಂದ ಮುನ್ನುಡಿಯನ್ನೂ ಬರೆಸಿಕೊಂಡು ಬಂದವರು ಅವರು. ಶೃಂಗೇರಿ ಜಗದ್ಗುರುಗಳಿಗೂ ರಾಮಶರ್ಮರೆಂದರೆ ಬಲು ಗೌರವ, ಪ್ರೀತಿ, ಅಭಿಮಾನ.

ಒಮ್ಮೆ ಶೃಂಗೇರಿಯ ಗುರುಗಳಾದ ಶ್ರೀವಿದ್ಯಾತೀರ್ಥರು ರುದ್ರಪಟ್ಟಣಕ್ಕೆ ಅತಿರುದ್ರ ಮಹಾಯಾಗದಲ್ಲಿ ಭಾಗವಹಿಸಲು ಬಂದು ಅನುಗ್ರಹ ಭಾಷಣ ಮಾಡುತ್ತಿದ್ದ ಸಮಯಕ್ಕೆ ಸರಿಯಾಗಿ ರಾಮಶರ್ಮರು ಪುಸ್ತಕಗಳಿದ್ದ ಒಂದು ಚೀಲವನ್ನು ಹೆಗಲಿಗೇರಿಸಿಕೊಂಡುಬಂದರು. ದೂರದಲ್ಲಿ ಕೈ ಬೀಸಿಕೊಂಡು ಬರುತ್ತಿದ್ದ ಆಜಾನುಬಾಹು ರಾಮಶರ್ಮರನ್ನು ಕಂಡ ಸ್ವಾಮೀಜಿ, ವೈದಿಕಲೌಕಿಕಯೋಃ ನಿಷ್ಣಾತಃ ಕಶ್ಚನ ಸಮಾಗತಃ ಎಂದರು. ಹಾಗೆಂದರೆ 'ವೈದಿಕ, ಲೌಕಿಕ ವ್ಯವಹಾರದಲ್ಲಿ ನಿಷ್ಣಾತರಾದವರು ಬರುತ್ತಿದ್ದಾರೆ' ಎಂದು ಅರ್ಥ. ರಾಮಶರ್ಮರಿಗೆ ಗುರುಗಳು ತಮ್ಮ ಬಗ್ಗೆ ಹಾಗೆ ಹೇಳಿದುದು ಕೇಳಿ ಬಹಳ ಖುಷಿಯಾಯಿತು. ಬಂದು ಕಾಲಿಗೆರಗಿದರು. ಕೂಡಲೇ ಗುರುಗಳು, ''ಶರ್ಮರೇ, ಇನ್ನು ನಮಗೆ ವಿಶ್ರಾಂತಿ ಸಿಕ್ಕಿತು. ಮಹಾಜನರೇ, ಶರ್ಮರು ಈಗ ನಿಮ್ಮನ್ನು ಉದ್ದೇಶಿಸಿ ಮಾತನಾಡುತ್ತಾರೆ'' ಎಂದು ಹೇಳಿ ತಮ್ಮ ಮುಂದಿದ್ದ ಮೈಕನ್ನು ಶರ್ಮರ ಕಡೆಗೆ ತಿರುಗಿಸಿಕೊಟ್ಟರು. ಶರ್ಮರಿಗೆ ಗುರುಗಳು ಹಾಗೆಂದದ್ದು ಸಂಕೋಚ ತಂದರೂ, ಅವರ ನಿರೀಕ್ಷೆಯನ್ನು ಸುಳ್ಳು ಮಾಡುವಂತಿರಲಿಲ್ಲ. ಸುಮಾರು ಅರ್ಧ ಗಂಟೆಯ ಕಾಲ ನಿರರ್ಗಳವಾಗಿ ಶರ್ಮರು ಮಾತನಾಡಿದರು. ಪ್ರೇಕ್ಷಕರಿಗೆ ಮೋಡಿ ಹಾಕಿದರು. ಸ್ವಾಮೀಜಿಯವರಿಗೆ ಹೆಮ್ಮೆ, ಅಭಿಮಾನ. ಒಮ್ಮೆಲೇ ಉಂಟಾದ ಆನಂದದ ಆ ಮುಖಭಾವವನ್ನು ನಾನೆಂದೂ ಮರೆಯುವಂತಿಲ್ಲ.

ಹಿರಿಯರೂ, ಸಂಸ್ಕೃತ ವಿದ್ವಾಂಸರೂ, ಕವಿಗಳೂ ಆಗಿದ್ದ ಬೀರೂರು ಚಿದಂಬರ ಜೋಯಿಸರು ಒಮ್ಮೆ ಒಂದು ಗೋಷ್ಠಿಯಲ್ಲಿ ಆಶುಭಾಷಣದ ವಿಷಯ ಹೇಳಿ, ''ಯಾವ ವಿಷಯವನ್ನೂ ಬಹಳ ರಸವತ್ತಾಗಿ ಮಾತನಾಡುವ ಬಸವಾನಿ ರಾಮಶರ್ಮರು ಈಗ ಈ ಭಗವದ್ಗೀತೆಯ ರಟ್ಟಿನ ಮೇಲೆ ಮಾತನಾಡುತ್ತಾರೆ'' ಎಂದುಬಿಟ್ಟರು. ಅದು ಭಗವದ್ಗೀತೆಯ ರಕ್ಷಾಪುಟ. ಅದರಲ್ಲಿ ಗೀತೆಯ ಪುಸ್ತಕವೂ ಇರಲಿಲ್ಲ. ಆದರೂ ರಾಮಶರ್ಮರೇನೂ ಹಿಂಜರಿಯಲಿಲ್ಲ. ನಗುನಗುತ್ತಲೇ ಬಂದು ಗೀತೆಯ ಆ ರಕ್ಷಾಪುಟವನ್ನು ಕೈಯಲ್ಲಿ ಹಿಡಿದು ಮಾತಿಗೆ ಪ್ರಾರಂಭಿಸಿಯೇ ಬಿಟ್ಟರು. ಈವರೆಗೂ ರಾಮಶರ್ಮರ ಹಾಗೆ ಕುತೂಹಲಕಾರಿಯಾಗಿ, ಪರಿಣಾಮಕಾರಿಯಾಗಿ, ಅನೇಕ ವಿಷಯಗಳನ್ನು ಹೇಳುತ್ತ ಅಚ್ಚುಕಟ್ಟಾಗಿ, ಪೂರ್ವತಯಾರಿ ಇಲ್ಲದೇ ಯಾವ ವಿಷಯವನ್ನಾದರೂ ಆಕರ್ಷಕವಾಗಿ ಮಾತನಾಡುವ ಇನ್ನೊಬ್ಬರನ್ನು ನಾನು ಕಂಡಿಲ್ಲ! ಅಂಥವರು ನಮ್ಮ ರಾಮಶರ್ಮರು. ಭಾರತದ ಸ್ತ್ರೀಯರ ಸ್ಥಾನಮಾನದ ಬಗ್ಗೆ ಒಮ್ಮೆ ಅವರು ನೀಡಿದ ಭಾಷಣವು ನಿಜಕ್ಕೂ ಆ ವಿಷಯದ ಮೇಲೆ ಪಿಎಚ್.ಡಿ. ಪ್ರಬಂಧವನ್ನು ಬರೆಯಬಹುದಾದಷ್ಟು ವಿಷಯಗಳನ್ನು ಹೊಂದಿದ್ದಿತು. ಎಷ್ಟೋ ಹೊಸ ವಿಷಯಗಳು ಹೊಸರೀತಿಯಲ್ಲಿ, ಹೊಸದೃಷ್ಟಿಕೋನದಲ್ಲಿ ಮಂಡಿಸಿದವುಗಳಾಗಿದ್ದು ಅತ್ಯಂತ ವಿದ್ವತ್ಪೂರ್ಣವಾಗಿತ್ತು ಅವರ ವಿಚಾರಧಾರೆ.

ಅಷ್ಟೆಲ್ಲ ವಿದ್ಯಾ, ಬುದ್ಧಿ, ಜ್ಞಾನ, ಗುಣಸಂಪತ್ತಿನ ಜತೆಗೇ ಬಸವಾನಿರಾಮಶರ್ಮರಿಗಿದ್ದ ವಿನಯಸಂಪತ್ತು ಅವರನ್ನು ಬಹಳ ಜನ ಇಷ್ಟಪಡುವಂತೆ ಮಾಡಿತ್ತು. ಶಿವಮೊಗ್ಗದಲ್ಲಿ ವೆಂಕಟಶಾಸ್ತ್ರಿ ಎನ್ನುವವರು ದೊಡ್ಡ ಅಡಿಕೆ ವ್ಯಾಪಾರಿಗಳು. ಬಹಳ ಉದಾರಿಗಳು. ಅಡಿಕೆಯನ್ನು ಅವರಲ್ಲಿಗೆ ಹಾಕಲು ಬಂದವರಿಗೆ ಅವರ ಮನೆಯಲ್ಲೇ ಊಟ. ದಿನಕ್ಕೆ ಸುಮಾರು ಇಪ್ಪತ್ತೈದು ಜನರ ಊಟ ನಡೆಯುತ್ತಿದ್ದ ಅವರ ಮನೆಯಲ್ಲಿ ನಿತ್ಯ ಅತಿಥಿಗಳು, ನಿತ್ಯಸಂತರ್ಪಣೆ. ಅವರಲ್ಲಿ ತಾವು ಬೆಳೆದ ಅಡಿಕೆ ಹಾಕುವವರ ಪರಿವಾರದಲ್ಲಿ ರಾಮಶರ್ಮರೂ ಒಬ್ಬರಾಗಿದ್ದರು. ರಾಮಶರ್ಮರು ತಾವು ಬೆಳೆದ ಅಡಿಕೆಯನ್ನು ವೆಂಕಟಶಾಸ್ತ್ರಿಗಳಿಗೇ ಕೊಡುತ್ತಿದ್ದರು. ಒಂದು ಮಣ ಅಡಿಕೆಗೆ ಮೂರು ರೂಪಾಯಿಯಂತೆ ಬೆಲೆ ಇದ್ದ ಕಾಲ. ಅದೇ ಎಲ್ಲರಿಗೂ ಅನ್ವಯಿಸುತ್ತಿದ್ದುದು.

ಒಮ್ಮೆ ರಾಮಶರ್ಮರಿಗೆ ಅಡಿಕೆ ವ್ಯಾಪಾರಕ್ಕೆ ಹಾಕಿದ ಸಂದರ್ಭದಲ್ಲಿ ಅಡಿಕೆಯ ದುಡ್ಡಿನ ಜತೆಗೆ ಇನ್ನೂರು ರೂಪಾಯಿ ಹೆಚ್ಚಿಗೆ ಬೇಕಾಯಿತು. ಆಗ ಅವರು ವೆಂಕಟಶಾಸ್ತ್ರಿಗಳನ್ನೇ ಕೇಳಿ ಆ ಹಣವನ್ನು ಸಾಲವಾಗಿ ತೆಗೆದುಕೊಂಡರು. ಶಾಸ್ತ್ರಿಯವರಿಗೂ

ಶರ್ಮರಲ್ಲಿ ಬಹಳ ಸಲಿಗೆ. ಹಾಗಾಗಿ ಹಣವನ್ನು 'ಮುಂದಿನ ವರ್ಷ ತೀರಿಸಿಬಿಡು' ಎಂದು ಹೇಳಿ ಕೊಟ್ಟಿದ್ದರು. ಒಂದು ವರ್ಷ ಕಳೆದರೂ ಇನ್ನೂರು ರೂ.ಗಳನ್ನು ಮಾತ್ರ ತೀರಿಸುವುದಾಗಲಿಲ್ಲ ಶರ್ಮರಿಗೆ. ಎಪ್ಪತ್ತು ವಯಸ್ಸಿನ ಹಿರಿಯ ಶಾಸ್ತ್ರಿಗಳು, ''ಏನೋ ಶರ್ಮ, ವರ್ಷದಲ್ಲಿ ಕೊಡುತ್ತೀನಿ ಎಂದೆ. ನೀನು ದುಡ್ಡು ತಂದೇ ಕೊಡಲಿಲ್ಲ'' ಎಂದರು. ''ಇಲ್ಲ ಶಾಸ್ತ್ರಿಗಳೇ, ಇನ್ನೊಂದು ತಿಂಗಳಲ್ಲಿ ಕೊಡುತ್ತೇನೆ'' ಎಂದು ಉತ್ತರಿಸಿದರು ಶರ್ಮರು. ಆರು ತಿಂಗಳು ಕಳೆದರೂ ದುಡ್ಡು ಸೇರಲಿಲ್ಲ; ಶರ್ಮರು ಕೊಡಲಿಲ್ಲ. ಶಾಸ್ತ್ರಿಗಳು ಮತ್ತೆ ಕೇಳಿದರು. ''ನೀನು ಹೀಗೆಯೇ 'ಕೊಡಬೇಕು ಕೊಡಬೇಕು' ಎನ್ನುತ್ತಲೇ ಇದ್ದರೆ ಹೇಗೋ? ಈ ಸಾರಿ ನೀನು ದುಡ್ಡು ಕೊಡದಿದ್ದರೆ ನಿನ್ನ ಮೇಲೆ ದಾವಾ ಹಾಕುತ್ತೇನೆ''ಎಂದರು. ''ಹಾಕಿ. ನಾನು ನಿಮಗೆ ಹಣ ಕೊಡುವುದಿಲ್ಲ ಎಂದೇನೂ ಹೇಳಲಿಲ್ಲವಲ್ಲ. ನೀವು ಕೋರ್ಟಿಗೆ ಹೋದರೂ ಅಲ್ಲೂ 'ನಾನು ಕೊಡುತ್ತೇನೆ' ಎಂದೇ ಹೇಳುವುದು. ನೀವು ಶ್ರೀಮಂತರು, ನಾನು ಬಡವ. ನಾನು ಸೇರಿಸಿ ಕೊಡುವವರೆಗೆ ಸ್ವಲ್ಪ ತಡೆಯಿರಿ'' ಎಂದರು ಶರ್ಮರು. ''ಹಾಗೆಲ್ಲ ಸಾಧ್ಯವಿಲ್ಲ. ಇನ್ನು ಆರು ತಿಂಗಳಲ್ಲಿ ನೀನು ತಂದು ಕೊಡದೆ ಇದ್ದರೆ ನಿನ್ನ ಮನೆಗೆ ಕೋರ್ಟಿನಿಂದ ನೋಟೀಸು ಬರುತ್ತದೆ ಅಷ್ಟೆ'' ಎಂದರು ಬೆದರಿಸುವವರಂತೆ ಶಾಸ್ತ್ರಿಗಳು. ಆರು ತಿಂಗಳು ಕಳೆಯಿತು. ಹಣ ಬರಲಿಲ್ಲ. ಮಧ್ಯೆ ಒಮ್ಮೆ ಶಿವಮೊಗ್ಗೆಗೆ ರಾಮಶರ್ಮರು ಬಂದರೂ ತುರ್ತು ಕೆಲಸದಿಂದಾಗಿ ವೆಂಕಟಶಾಸ್ತ್ರಿಗಳನ್ನು ಕಾಣಲಾಗದೆ ಹಾಗೆಯೇ ಹೊರಟು ಹೋಗಿದ್ದರು. ವಿಷಯ ತಿಳಿದ ಶಾಸ್ತ್ರಿಗಳಿಗೆ ಕೊಂಚ ಸಿಟ್ಟು ಬಂದಿತು. ಅವರು ತಾವು ಹೇಳಿದ ಮಾತಿನಂತೆಯೇ ರಾಮಶರ್ಮರ ಮೇಲೆ ದಾವಾ ಹಾಕಿಯೇ ಬಿಟ್ಟರು. ನೋಟೀಸು ರಾಮಶರ್ಮರಿಗೆ ಹೋಯಿತು. ರಾಮಶರ್ಮರು ಬಸವಾನಿಯಿಂದ ಬಸ್ಸಲ್ಲಿ ಬಂದರು. ಶಿವಮೊಗ್ಗೆಯಲ್ಲಿಳಿದು ನೇರವಾಗಿ ವೆಂಕಟಶಾಸ್ತ್ರಿಗಳ ಮನೆಗೆ ಹೋದರು. ಬೆಳಗಿನ ಹತ್ತುಗಂಟೆಯ ಸಮಯ. ಶಾಸ್ತ್ರಿಗಳು ಊಟ ಮಾಡುವ ಹೊತ್ತು ಅದು. ಶರ್ಮರು ಬಾಗಿಲಲ್ಲಿ ಕಾಣಿಸಿಕೊಂಡರು. ''ಏನೋ, ಬಂದೆಯೇನೋ? ಬಾ.... ಊಟಮಾಡೋಣ'' ಎಂದ ಶಾಸ್ತ್ರಿಗಳು ಶರ್ಮರನ್ನು ಒಳಗೆ ಬರಹೇಳಿ ಜತೆಯಲ್ಲೇ ಕುಳಿತು ಊಟ ಮಾಡಿದರು. ಊಟವಾದ ಮೇಲೆ ಐದು ರೂಪಾಯಿ ದಕ್ಷಿಣೆಯನ್ನೂ ಕೊಟ್ಟರು. ಕೋಟು, ಪೇಟವನ್ನು ಧರಿಸಿದ ಶಾಸ್ತ್ರಿಗಳು ಕಾರು ಹತ್ತಲು ಸಿದ್ಧರಾದರು. ಆ ದಿನ ರಾಮಶರ್ಮರ ಮೇಲಿನ ದಾವಾ ವಿಚಾರಣೆ ಇತ್ತು. ಶಿವಮೊಗ್ಗದಲ್ಲಿ ಆಗ ವೆಂಕಟಶಾಸ್ತ್ರಿಗಳೊಬ್ಬರದೇ ಕಾರು ಇದ್ದುದು, ಅದೂ ಫೋರ್ಡ್ ಕಾರು. ಶಾಸ್ತ್ರಿಗಳು ಕಾರು ಹತ್ತಿದರು. ಶರ್ಮರು ಕಾರಿನ ಬಾಗಿಲ ಬಳಿ ಬಂದರು. ''ಏನೋ ಬಂದೆ?'' ಎಂದರು ಶಾಸ್ತ್ರಿಗಳು. ಅವರಿಗೆ ಶರ್ಮರು ಬಂದ ಉದ್ದೇಶ ತಿಳಿದಿದ್ದರೂ ಪ್ರೀತಿಯ ಬಿಗುಮಾನ ತೋರಿದ್ದರು. ಜತೆಗೆ ಜೋರು ಮಾಡುವವರಂತೆಯೂ ಕಂಡರು. ಶರ್ಮರು ನಿಧಾನವಾಗಿ, ''ಅದೇ, ತಾವು 'ಶ್ರೀಮುಖ' ಕಳುಹಿಸಿದ್ದೀರಲ್ಲ (ಕೋರ್ಟ್ ನೋಟೀಸನ್ನು ಶರ್ಮರು 'ಶ್ರೀಮುಖ' ಎಂದದ್ದು ಶಾಸ್ತ್ರಿಗಳಿಗೆ ನಗು ತಂದಿತಾದರೂ, ತಡೆಹಿಡಿದರು. 'ಶ್ರೀಮುಖ' ಎಂದರೆ ಜಗದ್ಗುರುಗಳು ವಿದ್ವಾಂಸರಿಗೆ ಕಳುಹಿಸುವ ಆಹ್ವಾನ) ಅದಕ್ಕೆ ನಾನೂ ಕೋರ್ಟಿಗೆ ಬರಬೇಕಲ್ಲ...'' ಎಂದರು ವಿನೀತರಾಗಿ. ''ಸರಿ, ಹತ್ತು'' ಎಂದು ತಮ್ಮ ಕಾರಿನಲ್ಲೇ ಹತ್ತಿಸಿ ಕರೆದುಕೊಂಡು ಕೋರ್ಟಿಗೆ ಬಂದರು. ಇವರ ಕೇಸು ಕೂಗುವ ತನಕ ಮಧ್ಯಾಹ್ನ ಮೀರಿತ್ತು. ''ಏನು, ರಾಮಶರ್ಮ, ವೆಂಕಟಶಾಸ್ತ್ರಿಗಳಿಂದ ಇನ್ನೂರು ರೂಪಾಯಿ ತೆಗೆದುಕೊಂಡಿದ್ದೀರಾ? ನಿಜವೇ?'' ''ಹೌದು ಮಹಾಸ್ವಾಮಿ, ನಿಜ'' ಎಂದರು ಶರ್ಮರು ನ್ಯಾಯಾಧೀಶರ ಪ್ರಶ್ನೆಗೆ ಉತ್ತರವಾಗಿ. ''ಹಾಗಾದರೆ ಯಾಕೆ ಕೊಟ್ಟಿಲ್ಲ?'' ''ಬಡವ ಸ್ವಾಮಿ, ಕೊಡಲು ಆಗಲಿಲ್ಲ...'' ''ಈಗೇನು ಮಾಡುತ್ತೀರಿ?'' ''ಕೊಡುತ್ತೇನೆ ಸ್ವಾಮಿ. ಬಡ್ಡಿಯನ್ನೂ ಸೇರಿಸಿ ಕೊಡುತ್ತೇನೆ. ಈಗ ನನ್ನ ಹತ್ತಿರ ಹಣವಿಲ್ಲ. ಕಂತು ಮಾಡಿಸಿಕೊಟ್ಟರೆ ಕೊಡುತ್ತೇನೆ. ಉಪಕಾರವಾಗುತ್ತದೆ.'' ''ಎಷ್ಟು ಕಂತು? ನಾಲ್ಕು ಸಾಕೆ?'' ''ಸಾಕು ಸ್ವಾಮಿ...'' ''ಶಾಸ್ತ್ರಿಗಳೇ, ಆ ಹಣವನ್ನು ನಾಲ್ಕು ಕಂತುಗಳಲ್ಲಿ ಕಟ್ಟಿಸಿಕೊಳ್ಳಿ. ಶರ್ಮರೇ, ಈಗ ಮೊದಲ ಕಂತು ಕಟ್ಟಿಬಿಡಿ'' ಎಂದರು ನ್ಯಾಯಾಧೀಶರು. ಶರ್ಮರು ಮೆಲ್ಲಗೆ ಶಾಸ್ತ್ರಿಗಳ ಬಳಿಗೆ ಹೋಗಿ, ''ನನ್ನ ಹತ್ತಿರ ದುಡ್ಡಿಲ್ಲ. ನಿಮಗೇ ಗೊತ್ತು. ಬಡವನ ಮರ್ಯಾದೆ ಹೋಗುತ್ತದೆ. ನೀವು ಕಳುಹಿಸಿರುವ ಶ್ರೀಮುಖಕ್ಕೂ ಈಗ ನೀವೇ ಐವತ್ತು ರೂಪಾಯಿ ಕೊಡಬೇಕು. ಮುಂದಿನ ವರ್ಷ ಅದನ್ನೂ ಸೇರಿಸಿಯೇ ಕೊಡುತ್ತೇನೆ'' ಎಂದರು. ಶಾಸ್ತ್ರಿಗಳಿಗೆ ನಗು ಬಂದರೂ, ''ಏನೋ? ಅದನ್ನೂ ನಾನೇ ಕೊಡಬೇಕೇನೋ?'' ಎಂದು ಗದರಿಸುತ್ತಲೇ ಜೇಬಿನಿಂದ ಐವತ್ತು ರೂಪಾಯಿ ತೆಗೆದುಕೊಟ್ಟರು. ''ನೀವು ಶ್ರೀಮುಖ ಕಳುಹಿಸದಿದ್ದರೂ ನಿಮ್ಮನ್ನೇ ನಾಲ್ಕು ಕಂತುಗಳನ್ನು ಮಾಡಿಕೊಡಿ ಎಂದು ಕೇಳುತ್ತಿದ್ದೆ. ಬಡವನ ಮರ್ಯಾದೆ ಉಳಿಸಿದಿರಿ. ನಿಮ್ಮನ್ನೇ ನೆಚ್ಚಿಕೊಂಡಿರುವವನನ್ನು ಕೈಬಿಡಲಿಲ್ಲ. ನೀವು ಲಾಯರಿಗೆ ಕೊಟ್ಟ ಹಣವನ್ನು ನನಗೇ ಕೊಟ್ಟಿದ್ದರೂ ಬದುಕಿಕೊಳ್ಳುತ್ತಿದ್ದೆ'' ಎಂದವರೇ ಶಾಸ್ತ್ರಿಗಳು ಕೊಟ್ಟ ಐವತ್ತು ರೂ. ಕಂತು, ಹತ್ತು ರೂ. ಬಡ್ಡಿ, ಒಟ್ಟಿಗೇ ಅರುವತ್ತು ರೂ.ಗಳನ್ನು ಕೋರ್ಟಿಗೆ ಕಟ್ಟಿ ಬಂದ ರಾಮಶರ್ಮರು ಮತ್ತೆ ಶಾಸ್ತ್ರಿಗಳ ಮುಂದೆ ನಿಂತರು. ಶಾಸ್ತ್ರಿಗಳು, ''ಹ್ಞೂಂ... ಈಗೇನು?'' ಎಂದರು ಜೋರಾಗಿಯೇ. ''ಸಾಯಂಕಾಲವಾಯಿತು. ತಾವು

ನಿಮ್ಮಲ್ಲೇ ಇಳಿದುಕೊಳ್ಳೋದಕ್ಕೆ ಅಪ್ಪಣೆ ಕೊಟ್ಟರೆ, ಇಲ್ಲೇ ಇದ್ದು ಬೆಳಗ್ಗೆ ಹೋಗುತ್ತೇನೆ'' ಎಂದರು ವಿನಯದಿಂದಲೇ ರಾಮಶರ್ಮರು. ವೆಂಕಟಶಾಸ್ತ್ರಿಗಳಿಗೆ ನಗುವೋ ನಗು. ''ಸರಿ, ನಡಿ....'' ಎಂದವರೇ ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಮನೆಗೆ ಕರೆತಂದರು. ರಾತ್ರಿ ಊಟ ಮಾಡಿ ಅಲ್ಲೇ ಮಲಗಿದ ರಾಮಶರ್ಮರು ಬೆಳಗಾಗೆದ್ದು ಶಾಸ್ತ್ರಿಗಳಿಗೆ ನಮಸ್ಕರಿಸಿ ತಮ್ಮ ಊರದಾರಿ ಹಿಡಿದರು. ಅನಂತರದ ದಿನಗಳಲ್ಲಿ ಶಾಸ್ತ್ರಿಗಳು* ಶಿವಮೊಗ್ಗೆಯಲ್ಲಿ ಕರ್ನಾಟಕ ಸಂಘದ ಕಟ್ಟಡ ಕಟ್ಟಿಸಿಕೊಟ್ಟರು. ಅದರಲ್ಲಿ ರಾಮಶರ್ಮರದೇ ಮೊದಲ ಉಪನ್ಯಾಸ!

ಇಬ್ಬರು ಹಿರಿಯರೂ ಸದ್ಗುಣ ಸಂಪನ್ನರು, ಇಬ್ಬರಿಗೂ ಪರಸ್ಪರರ ಬಗ್ಗೆ ಬಲು ಮೆಚ್ಚುಗೆ. ಇಬ್ಬರಿಗೂ ಒಳಗೊಳಗೇ ಸಂತೋಷವೂ ಸಹ ಆದುದು ಈ ಪ್ರಸಂಗದಲ್ಲೇ. ಅನಂತರದ ವರ್ಷದಲ್ಲಿ ರಾಮಶರ್ಮರು ವೆಂಕಟಶಾಸ್ತ್ರಿಗಳ ಸಾಲ ತೀರಿಸಲು ಬಂದಾಗ ತೆಗೆದುಕೊಂಡಂತೆ ಮಾಡಿ, ಅದನ್ನು ಪಾರಿತೋಷಿಕವಾಗಿ ಕೊಟ್ಟರಂತೆ ವೆಂಕಟಶಾಸ್ತ್ರಿಗಳು.

ವೆಂಕಟಶಾಸ್ತ್ರಿಗಳ ಇನ್ನೂರು ರೂಪಾಯಿಯ ಸಾಲತೀರಿಸಲು ಪರದಾಡಿದ ಬಸವಾನಿರಾಮಶರ್ಮರು ನಾವು ಯಾರೂ ನಿರೀಕ್ಷಿಸದಿದ್ದ ದೊಡ್ಡ ದಾನವನ್ನು ಮಾಡಿದ ಸನ್ನಿವೇಶವನ್ನೂ ಇಲ್ಲಿ ಅವಶ್ಯವಾಗಿ ಹೇಳಬೇಕು.

ವೇದಾಧ್ಯಯನ ಮಾಡಿ, ನಮ್ಮ ತಂದೆಯಿಂದ ಪೂರ್ವಾಪರ ಪ್ರಯೋಗವನ್ನೆಲ್ಲ ಕಲಿತಿದ್ದ ಬಸವಾನಿ ರಾಮಶರ್ಮರಿಗೆ ನನ್ನನ್ನು ಕಂಡರೆ ಬಹಳ ಪ್ರೀತಿ. ಗಾಂಧೀವಾದಿಗಳಾಗಿ ಸೇವಾಶ್ರಮದಲ್ಲಿದ್ದು, ಸಮಾಜಸೇವೆಯನ್ನೂ ಮಾಡಿ, ಯಜ್ಞ ಯಾಗಗಳನ್ನು ನಡೆಸುವ ಶಕ್ತಿಯೂ ವಿಶೇಷ ವಾಕ್ಚಾತುರ್ಯವೂ ಇದ್ದ ರಾಮಶರ್ಮರನ್ನು ಕಂಡರೆ ನನಗೂ ಬಹಳ ಪ್ರೀತಿ, ಗೌರವ, ಅಭಿಮಾನ.

ರಾಮಶರ್ಮರು ತಮ್ಮ ಜೀವನದ ಏಳು ದಶಕಗಳನ್ನು ದಾಟಿದ ಅನಂತರ ಸಂನ್ಯಾಸ ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದರು. ವೈದಿಕ ಧರ್ಮದಲ್ಲಿ ನಂಬಿಕೆ ಇದ್ದ ಅವರಿಗೆ ಬ್ರಹ್ಮಚಾರಿ - ಸ್ನಾತಕ - ಗೃಹಸ್ಥ - ಸಂನ್ಯಾಸ, ಹೀಗೆ ಕ್ರಮವಾಗಿ ಎಲ್ಲ ಆಶ್ರಮಗಳನ್ನೂ ಪಾಲಿಸಬೇಕು ಎನ್ನುವ ಭಾವನೆ ಬಂದಿತ್ತು. ಅದಕ್ಕೆಂದೇ ನನಗೆ ಹೇಳಿ ಕಳುಹಿಸಿದರು. ''ನಾನು ಅನೇಕರಿಗೆ ಸಂನ್ಯಾಸ ಕೊಡಿಸಿದ್ದೇನೆ. ನಿಮಗೂ ಮಾಡಿಸುತ್ತೇನೆ. ಇನ್ನೂ ನಾಲ್ಕಾರು ವರ್ಷಗಳು ಕಳೆಯಲಿ ಬಿಡಿ'' ಎಂದೆ ನಾನು. ''ಸರಿಯಪ್ಪ'' ಎಂದರು.

ಅದೇ ಸಮಯದಲ್ಲಿ ಶಿವಮೊಗ್ಗದಲ್ಲಿ ಒಂದು ಸಂಕೇತಿ ಹಾಸ್ಟೆಲು ಪ್ರಾರಂಭವಾಗಿದ್ದಿತು. ದುಡ್ಡಿನ ಆವಶ್ಯಕತೆ ಬಹಳವಿತ್ತು. ರೂಮುಗಳು ಸಾಕಷ್ಟಿರಲಿಲ್ಲ. ಬಹಳ ಜನ ಸುತ್ತಮುತ್ತಲ ಬಡ ವಿದ್ಯಾರ್ಥಿಗಳು ಅನೇಕ ಪದವಿಗಳಿಗಾಗಿ ಶಿವಮೊಗ್ಗಕ್ಕೆ ಓದಲು ಬಂದರೆ ಉಳಿದುಕೊಳ್ಳುವ ವ್ಯವಸ್ಥೆ ಇರಲಿಲ್ಲವಾಗಿ, ಅವರಿಗೆಂದೇ ಈ ಹಾಸ್ಟೆಲನ್ನು ಕಟ್ಟಿಸುತ್ತಿರುವುದಾಗಿತ್ತು. ಒಂದೊಂದು ರೂಮಿಗೆ ನಲವತ್ತು ಸಾವಿರದಂತೆ ಖರ್ಚನ್ನು ವಹಿಸಿಕೊಂಡ ಅನೇಕ ದಾನಿಗಳಿದ್ದರು. ನಮ್ಮ ಮನೆಯಿಂದಲೂ ಒಂದು ರೂಮಿಗೆ ನಲವತ್ತು ಸಾವಿರವನ್ನು ನಾವೂ ಕೊಟ್ಟಿದ್ದೆವು. ಅಲ್ಲಿಯವರೆಗೆ ರಾಮಶರ್ಮರಿಗೂ ರಾಷ್ಟ್ರೀಯ ಪುರಸ್ಕಾರದ ಹಣ ಮೊತ್ತವಾಗಿ ಬಂದಿದ್ದಿತು. ಸಂಕೇತಿ ಹಾಸ್ಟೆಲಿನ ಕಾರ್ಯದರ್ಶಿಗಳು ನನ್ನನ್ನು ಸಂಪರ್ಕಿಸಿ, ''ರಾಮಶರ್ಮರನ್ನೂ ಕೇಳಬಹುದೇ?'' ಎಂದರು. ನಾನು ''ಖಂಡಿತವಾಗಿ ಕೇಳಿ'' ಎಂದೆ. ರಾಮಶರ್ಮರೂ, ''ಬರಲಿ, ನನ್ನ ಕೈಲಾದಷ್ಟು ಕೊಡುತ್ತೇನೆ. ಜತೆಗೆ ಅಶ್ವತ್ಥನೂ ಬರಲಿ'' ಎಂದು ಹೇಳಿ ಕಳುಹಿಸಿದರು. ನಮ್ಮ ಮನೆಯಲ್ಲಿ ಏನೋ ಅನಿವಾರ್ಯ ಸಂದರ್ಭದ ಕಾರಣ ನಾನು ಹೋಗಲಾಗಲಿಲ್ಲ. ಹಾಸ್ಟೆಲಿನ ಕಮಿಟಿಯವರೇ ನಾಲ್ಕಾರು ಜನ ಒಂದು ಕಾರನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ಬಸವಾನಿಗೆ ಹೋದರು. ಆಗ ರಾಮಶರ್ಮರು ಅವರಿಗೆಲ್ಲ ತಮ್ಮ ಮನೆಯಲ್ಲಿ ಊಟೋಪಚಾರ ಮಾಡಿ, ಎಲೆ ಅಡಿಕೆಯ ಜತೆಗೆ ಸಾವಿರ ರೂಪಾಯಿಯನ್ನು ಕೊಟ್ಟು ಕಳುಹಿಸಿದರು. ಹೋಗಿದ್ದ ಉತ್ಸಾಹಶಾಲಿಗಳಿಗೆ ಬಹಳ ನಿರಾಸೆಯಾಯಿತು. ಅವರು ಬಂದು ನನ್ನಲ್ಲಿ ಹೇಳಿದರು. ನನಗೂ ಇದು ಅನಿರೀಕ್ಷಿತವೇ ಆಗಿದ್ದಿತು. 'ರಾಮಶರ್ಮರಿಗೆ ಒಂದು ರೂಮಿಗೆ ಕೊಡುವಷ್ಟು ಹಣವಿದೆ ಈಗ. ಕಡೆಪಕ್ಷ ಐದು ಸಾವಿರಗಳನ್ನಾದರೂ ಕೊಡಬಾರದಿತ್ತೆ? ಕಾರು ಬಾಡಿಗೆಗೂ ಸಾಲದಷ್ಟು ಕಡಮೆ ಹಣ ಕೊಟ್ಟರೇಕೆ?' ಎಂದು ನನಗೇ ಅನ್ನಿಸಿತು. ಆಗ ನಾನು ಸಾಕಷ್ಟು ಯೋಚನೆ ಮಾಡಿ ಒಂದು ಸುದೀರ್ಘ ಪತ್ರವನ್ನೇ ಬರೆದೆ.

''ತಾವು ಹಿರಿಯರು. ಈ ಮೊದಲೇ ಸಂನ್ಯಾಸ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ ನನಗೆ ಹೇಳಿ ಕಳುಹಿಸಿದ್ದೀರಿ. ನಾನು ತಮಗೆ ಮೊದಲೇ ಮಾತುಕೊಟ್ಟಿದ್ದಂತೆ ನೀವು ಯಾವಾಗ ಕರೆದರೂ ಬಂದು ನಿಮಗೆ ಸಂನ್ಯಾಸಕ್ರಮ, ಪೂರ್ವನಿಯಮ, ಎಲ್ಲದರ ವಿವರವನ್ನೂ ಹೇಳುತ್ತೇನೆ. ನಿಮಗೆ ಎಲ್ಲವನ್ನೂ ಮಂತ್ರಪೂರ್ವಕವಾಗಿ ವಿಧಿವಿಧಾನದಂತೆ ಮಾಡಿಸಿದರೆ ಪರಿಕರಗಳು, ಋತ್ವಿಜರಿಗೆ ಹತ್ತುಸಾವಿರ, ಮಿಕ್ಕದಾನಗಳಿಗೆ ಮತ್ತು ಹೋಮಕ್ಕೆ ಹತ್ತುಸಾವಿರ, ಒಂದು ಪ್ರತ್ಯಕ್ಷ ಗೋದಾನಕ್ಕೆ,

* ಹಸೂಡಿ ವೆಂಕಟಶಾಸ್ತ್ರಿ

ಊಟೋಪಚಾರಕ್ಕೆ ಹತ್ತುಸಾವಿರ, ಜತೆಗೆ ನನ್ನ ಸಂಭಾವನೆ! ಹೀಗೆ ಖರ್ಚು ಆಗುತ್ತದೆ. ಈಗಾಗಲೇ ನೀವು ಹರಿಜನ ಮಕ್ಕಳನ್ನು ಕಾಪಾಡಿ, ಪೋಷಿಸಿ ನಿಮ್ಮದೇ ಎರಡು-ಮೂರು ಶಾಲೆಗಳಲ್ಲಿ ವಿದ್ಯಾದಾನವನ್ನೂ ಮಾಡುತ್ತಿದ್ದೀರಿ. ನಿಮಗೇ ಗೊತ್ತಿದೆ ವಿದ್ಯಾದಾನದ ಮಹತ್ವ ಏನೆಂದು. ನೀವು ದಂಪತಿಗಳು ಹೆರಿಗೆ ಆಸ್ಪತ್ರೆ ಮಾಡಿ ಬಡಸ್ತ್ರೀಯರಿಗೆ ಉಪಕರಿಸಿದ್ದೀರಿ. ನಮ್ಮ ಮಕ್ಕಳೇ ಎಷ್ಟೋ ಜನ ಪ್ರತಿಭೆ ಇದ್ದರೂ ಓದಲು ಬಡತನವು ಅವಕಾಶ ಕೊಡುತ್ತಿಲ್ಲ. ಲಿಂಗದಹಳ್ಳಿಯ ಅನೇಕ ಹುಡುಗರು ನಮ್ಮ ಶಿವಮೊಗ್ಗೆಯ ಸಂಕೇತಿ ಹಾಸ್ಟೆಲಿಗೆ ಸೇರಿದ್ದಾರೆ. ಲಿಂಗದಹಳ್ಳಿಯ ಬಹಳ ಮಂದಿ ಬಡವರಾದರೂ ಹಾಸ್ಟೆಲಿಗೆಂದು ಏಳೆಂಟು ರೂಮುಗಳಿಗೆ ಧಾರಾಳವಾಗಿ ದಾನ ಮಾಡಿದ್ದಾರೆ. ಒಂದು ರೂಮಿಗೆ ನಲವತ್ತು ಸಾವಿರದಂತೆ ಖರ್ಚು ಕೊಟ್ಟಿದ್ದಾರೆ. ಇಂಥ ಬಡ ವಿದ್ಯಾರ್ಥಿಗಳಿಗೆ ನೀವೂ ನಿಮ್ಮ ಸಹಾಯಹಸ್ತ ನೀಡಬೇಕೆಂದು ನನ್ನ ಪ್ರಾರ್ಥನೆ. ನೀವು ಸಂನ್ಯಾಸ ತೆಗೆದುಕೊಳ್ಳುವುದಕ್ಕಾಗಿ ಮಾಡುವ ಖರ್ಚನ್ನೇ ಕೊಟ್ಟರೂ ಒಂದು ರೂಮಿಗೆ ಕೊಟ್ಟಂತಾಗುತ್ತದೆ. ನೀವು ಅನೇಕ ಮಕ್ಕಳಿಗೆ ಮಾಡಿದ್ದೀರಿ. ನಮ್ಮ ಮಕ್ಕಳು ಅನ್ಯರಾದರೆ ನಿಮಗೆ? ನಾನೇ ಬಂದು ನಿಮಗೆ ಸಂತೋಷದಿಂದ ಸಂನ್ಯಾಸ ಕೊಡಿಸುತ್ತೇನೆ. ಆದರೆ ತಾವು ಮಾತ್ರ ತಮ್ಮ ಕೈಲಾದಷ್ಟು ಸಹಾಯ ಮಾಡಿ....'' ಎಂದು ಕಾಗದ ಬರೆದ ನನಗೆ ಅವರಿಂದ ಕೆಲವು ದಿನಗಳ ತನಕ ಉತ್ತರ ಬರಲಿಲ್ಲ. ಆದರೆ ಸಂಕೇತಿ ಹಾಸ್ಟೆಲಿನ ಕಾರ್ಯದರ್ಶಿಗಳಿಗೆ ಪತ್ರ ಬಂದಿತ್ತು. ''ಆ ದಿನ ನೀವುಗಳು ನಮ್ಮಲ್ಲಿಗೆ ಬಂದಾಗ ನನ್ನಲ್ಲಿ ಅಷ್ಟು ಹಣ ಇರಲಿಲ್ಲ. ಅಶ್ವತ್ಥನೂ ಬಂದಿರಲಿಲ್ಲ. ಈ ಸಾರಿ ನಮ್ಮ ಅಶ್ವತ್ಥನನ್ನು ಕರೆತನ್ನಿ. ಅವನ ಪತ್ರ ನನಗೆ ನಾಟಿದೆ. ನಿಮ್ಮ ಇಷ್ಟ ನೆರವೇರುತ್ತದೆ'' ಎಂದು ಆಹ್ವಾನ ಕೊಟ್ಟಿದ್ದರು ರಾಮಶರ್ಮರು.

ಅದರಂತೆ ನಾವೆಲ್ಲರೂ ರಾಮಶರ್ಮರ ಮನೆಗೆ ಹೋದೆವು. ಎಂದಿನಂತೆ ಆದರೋಪಚಾರವು ನಡೆದು ರಾಮಶರ್ಮ ದಂಪತಿಗಳು ನಲವತ್ತು ಸಾವಿರ ರೂಪಾಯಿಗಳ ಕಟ್ಟನ್ನು ತಟ್ಟೆಯಲ್ಲಿಟ್ಟು ನಮ್ಮ ಕೈಗಿತ್ತು, ನನ್ನ ಮುಖನೋಡಿ ನಕ್ಕರು. ''ಅಶ್ವತ್ಥ, ನಾನು ನಿನ್ನನ್ನು ಎತ್ತಿ ಆಡಿಸಿದ್ದೇನೆ. ನಿನ್ನ ಪತ್ರಕ್ಕೆ ವೇದದಷ್ಟು ಮಹತ್ತ್ವವಿದೆ. ಅದರಿಂದ ನನ್ನ ಮನಸ್ಸು ಪರಿವರ್ತನೆಯಾಯಿತು. ನಿನ್ನ ಕಾಗದದಲ್ಲಿ ಏನು ಮೋಡಿ ಇದ್ದಿತೋ, ನಾನು ಸಂನ್ಯಾಸಕ್ಕೇ ಸಂನ್ಯಾಸ ಕೊಡುವಂತೆ ಮಾಡಿದೆ ಅದು! ನಾನಿನ್ನು ಸಂನ್ಯಾಸ ಮಾಡಿದರೂ ಸರಿ, ಇಲ್ಲವೇ ಹಾಗೇ ನೆಗೆದುಬಿದ್ದರೂ ಸರಿ.... ಈ ದುಡ್ಡನ್ನು ನಿಮಗೇ ಕೊಡುವುದು ಎಂದು ತೀರ್ಮಾನಿಸಿದೆ. ಇನ್ನು ನನಗೆ ನೆಮ್ಮದಿ'' ಎಂದರು. ಹಾಗೆ ಹೇಳುವಾಗ ಅವರು ಗದ್ಗದಿತರಾಗಿದ್ದರು. ನಿಜಕ್ಕೂ ಬಸವಾನಿ ರಾಮಶರ್ಮರಂಥ ಹಿರಿಯ ವಿದ್ವಾಂಸರಿಗೆ, ಸಾತ್ತ್ವಿಕರಿಗೆ ನಾನು ಹೇಳಿ ಅವರು ತಿಳಿದುಕೊಳ್ಳುವಂಥದೇನೂ ಇರಲಿಲ್ಲ. ಅದು ಅವರಿಗಾದರೂ ನಿಧಾನವಾಗಿ ಯೋಚಿಸಿದ್ದರೆ ತಿಳಿಯುತ್ತಿದ್ದಿತು. ಆದರೆ ಆ ಸಮಯದಲ್ಲಿ ನನ್ನ ಮನಸ್ಸಿಗೆ ಬಂದ ನಾಲ್ಕು ಮಾತುಗಳನ್ನು ನಾನು ಚಿಕ್ಕವನಾಗಿ ದೊಡ್ಡವರಾದ ಅವರಲ್ಲಿ ಸಲಿಗೆ ವಹಿಸಿ ಬರೆದುದಕ್ಕೆ ಅಷ್ಟು ಮಹತ್ವ ನೀಡಿ, ಆ ಮಾತನ್ನು ನಡೆಸಿಕೊಟ್ಟದ್ದು ನಿಜಕ್ಕೂ ಅವರ ಹಿರಿಯ ಗುಣ ಎಂದೇ ನನ್ನ ಭಾವನೆ. ಬಸವಾನಿರಾಮಶರ್ಮರು ಈಗ ನಮ್ಮೊಡನಿಲ್ಲ. ಅವರು ತೀರಿಕೊಂಡು ಐದಾರು ವರ್ಷಗಳಾದವು. ಆದರೂ ರಾಮಶರ್ಮರಂಥ ವ್ಯಕ್ತಿಯನ್ನು ನಾನು ನೋಡಿದ್ದೆ, ಮಾತನಾಡಿಸಿದ್ದೆ, ಅವರ ಜತೆ ಕಾಲಕಳೆದಿದ್ದೆ ಎಂದು ಹೇಳಿಕೊಳ್ಳುವುದಕ್ಕೇ ನನಗೆ ತುಂಬ ಹೆಮ್ಮೆ ಎನ್ನಿಸುತ್ತದೆ! ಸಂನ್ಯಾಸಕ್ಕೆ ಬದಲು ಅವರ ಅಂತ್ಯಸಂಸ್ಕಾರ ನಾನೇ ಮಾಡಿಸಿದೆ.

❁ ❁ ❁

ಒಂದೆಡೆ ಬಸವಾನಿ ರಾಮಶರ್ಮರಂಥವರು 'ವೈದಿಕ-ಲೌಕಿಕ ವ್ಯವಹಾರ'ದಲ್ಲಿ ನಿಷ್ಣಾತರಾದವರು ಇದ್ದರೆ, ಮತ್ತೊಂದೆಡೆ ವೈದಿಕ ಪರಂಪರೆಯಲ್ಲೇ ತಮ್ಮ ನಿಷ್ಠೆಯನ್ನಿರಿಸಿ, ತಮ್ಮ ಮಕ್ಕಳು ಮೊಮ್ಮಕ್ಕಳನ್ನೆಲ್ಲ ವೇದಾಧ್ಯಯನದಲ್ಲಿ ತೊಡಗಿಸಿ, ವೈದಿಕ ವೃತ್ತಿಯನ್ನು ನಡೆಸುವಂತೆ ಸುಸಂಸ್ಕೃತರನ್ನಾಗಿ ಮಾಡಿ ಆಚಾರ ಮತ್ತು ಸಂಪ್ರದಾಯದ ಬಗೆಗೆ ಕಾಳಜಿ ವಹಿಸಿ ಸದಾಕಾಲವೂ ಶ್ರಮಿಸಿದಂಥವರು ಸುಬ್ರಾಯಾವಧಾನಿಯವರು. ನಮ್ಮೂರಿನ ಹಿರಿಯರಾದ ಸುಬ್ರಾಯ ಅವಧಾನಿಗಳು ತಮ್ಮ ಮನೆಯಲ್ಲಿ ಮೂರು ಅಗ್ನಿಯನ್ನು (ತ್ರೇತಾಗ್ನಿ) ಇಡಿಸಿದವರು (ಅಂದರೆ ಆಹವನೀಯ, ದಾಕ್ಷಿಣಾಗ್ನಿ, ಗಾರ್ಹಪತ್ಯ ಹೀಗೆ ಮೂರು). ಸರ್ವದಾ ಅಗ್ನಿಯನ್ನು ಕಾಪಾಡಿಕೊಂಡು ಬಂದವರು ಅವರು. ಮೂರ್ನಾಲ್ಕು ಸಾರಿ ಕಾಶಿಯಾತ್ರೆಯನ್ನು ಮಾಡಿದವರು. ತಮ್ಮ ಎಪ್ಪತ್ತೈದನೆಯ ವಯಸ್ಸಿನಲ್ಲಿ ಸಂನ್ಯಾಸ ಸ್ವೀಕಾರ ಮಾಡಿ ಬದರಿ, ಕೇದಾರದ ಯಾತ್ರೆ ಮಾಡಲು ಹೊರಟರು. ಜತೆಯಲ್ಲಿ ಮೊಮ್ಮಕ್ಕಳು. ಹಾಗೆ ಹೋಗುವಾಗ ದಾರಿಯಲ್ಲಿ ಅವಧಾನಿಗಳಿಗೆ ಅತೀವ ಜ್ವರ ಕಾಣಿಸಿಕೊಂಡಿತು. ಕೈಕಾಲುಗಳ ಶಕ್ತಿ ಕುಂದಿತು. ಆಗ ಅವರು ತಮ್ಮ ಮೊಮ್ಮಕ್ಕಳನ್ನು ದಾರಿಯ ಒಂದೆಡೆಯಲ್ಲಿ ನಿಲ್ಲಿಸಿ ತಾವು ಕುಳಿತರು. ''ಕೇಶವ, ಈ ಗುಂಡಿ ನೋಡಿಕೋ'' ಎಂದರು. ಅವರ ಮೊಮ್ಮಗ ಕೇಶವ ಅವಧಾನಿ ''ಯಾಕೆ ಅಜ್ಜ?'' ಎಂದಾಗ, ''ನಾನು ನಿನ್ನ ಅಜ್ಜ ಅಲ್ಲವೋ ಈಗ! ಗುರುಗಳೇ ಅನ್ನು'' ಎಂದರು ಜ್ವರದಲ್ಲಿ ನರಳುತ್ತಲೇ! ಏಕೆಂದರೆ ಅವರು ಸಂನ್ಯಾಸ ಮಾಡಿದ್ದರಲ್ಲ

ಅದಕ್ಕೆ! ''ಸರಿ, ಏನು ವಿಷಯ ಗುರುಗಳೇ, ಈ ಗುಂಡಿಯನ್ನೇಕೆ ನೋಡಬೇಕು'' ಎಂದ ಮೊಮ್ಮಗ. ಪರ್ವತದ ತುಸು ಇಳಿಜಾರು ಪ್ರದೇಶದಲ್ಲಿದ್ದ ಒಂದು ಹಳ್ಳವನ್ನು ತೋರಿಸಿದ ಅವರು, ''ಈ ಜ್ವರದಲ್ಲಿ ನಾನಿನ್ನು ಉಳಿಯುವ ಭರವಸೆ ಇಲ್ಲ. ಒಂದು ವೇಳೆ ನನಗೇನಾದರೂ ವ್ಯತ್ಯಾಸವಾಗಿ ಪ್ರಾಣ ಹೋದರೆ ಈ ದೇಹವನ್ನು ಈ ಗುಂಡಿಯಲ್ಲಿ ಹಾಕಿ ನಾಲ್ಕು ಮಣ್ಣು ಹೆಂಟೆ ಹಾಕಿ ಮುಚ್ಚಿಬಿಡಿ ನೀವು. ಈ ಪರಸ್ಥಳದಲ್ಲಿ ನನಗಾಗಿ ನೀವು ಏನನ್ನು ಮಾಡುವುದೂ ಬೇಡ. ಸುಮ್ಮನೆ ಕೆಳಗೆ ಹರಿಯುತ್ತಿರುವ ಗಂಗಾನದಿಯಲ್ಲಿ ಸ್ನಾನಮಾಡಿ ಊರಿಗೆ ಹೋಗಿ. ನಾನು ಸಂನ್ಯಾಸಿ. ನನಗೆ ಏನನ್ನೂ ಮಾಡಬೇಕಾದ್ದಿಲ್ಲ. ಮನೆಗೆ ಹೋಗಿ ನಿಮ್ಮಪ್ಪನಿಗೆ ಹೇಳಿದರೆ, ಅವನಿಗೆ ಮಾಡಬೇಕೆನ್ನಿಸಿದರೆ ಅನಂತರದ ಕ್ರಿಯೆಗಳನ್ನು ಮಾಡಲಿ.... ಸಮಾಧಿ, ಪೂಜೆ ಇತ್ಯಾದಿಯನ್ನು. ಇಲ್ಲದಿದ್ದರೆ ಅದೂ ಬೇಕಿಲ್ಲ... ಇಷ್ಟನ್ನು ನಾನು ಹೇಳಿದೆ ಎಂದು ನಿಮ್ಮಪ್ಪನಿಗೆ ಹೇಳು'' ಎಂದರು. ಅಂತೂ ಹಾಗೇ ಸುಧಾರಿಸಿಕೊಂಡು ಮುಂದೆ ನಡೆದರು. ಬದರಿಯನ್ನು ಸೇರಿದರು. ಅನಂತರ ಕೇದಾರೇಶ್ವರನ ದರ್ಶನವನ್ನೂ ಮಾಡಿಕೊಂಡು ಆರೋಗ್ಯದಿಂದ ಸುಖವಾಗಿ ವಾಪಸು ಊರನ್ನು ತಲುಪಿದರು! ವಿಷಯ ತಿಳಿದ ನನಗೆ ನಿಜಕ್ಕೂ ಬಹಳ ಅಚ್ಚರಿಯಾಯಿತು. ಅಷ್ಟು ವ್ರತ ನೇಮನಿಷ್ಠರಾದ ಸುಬ್ರಾಯ ಅವಧಾನಿಗಳು ಅದೆಷ್ಟು ಪ್ರಸಂಗಾವಧಾನತೆಯನ್ನು ತೋರಿದ್ದರು! ಮೊಮಕ್ಕಳಿಗೆ ಪರಸ್ಥಳದಲ್ಲಿ ಏನು ತಿಳಿದೀತು? ಅಲ್ಲಿ ಯಾವ ರೀತಿ-ನೀತಿಯನ್ನೂ ಹೇಗೆ ಅನುಸರಿಸಲಾದೀತು? ಅದನ್ನೆಲ್ಲ ಯೋಚಿಸಿ ಅಷ್ಟು ಸುಲಭದಲ್ಲಿ ತಮ್ಮ ಶರೀರವನ್ನು ಸಮಾಧಿ ಮಾಡುವ ಬಗ್ಗೆ ಸರಳವಾಗಿ ಹೇಳಿಕೊಟ್ಟ ಅವರ ಸಮಯಪ್ರಜ್ಞೆಯನ್ನು ಯಾರೂ ಮೆಚ್ಚದೆ ಇರುವಂತಿಲ್ಲ!

೧೬. ಸ್ವಭಾವ, ಮನೋಭಾವ

ಕಳೆದುಹೋದ ಕಾಲ ಮತ್ತು ಜೀವಿಯ ಜೀವ ಈ ಎರಡನ್ನುಳಿದು ಏನನ್ನಾದರೂ ಬಹುಶಃ ವಾಪಸು ತರಬಹುದು. ಅಂಥದರಲ್ಲಿ ನೀರಿನಲ್ಲಿ ಮುಳುಗಿದ ನೋಟುಗಳನ್ನು ತರಲಾಗದೆ? ಖಂಡಿತ ತರಬಹುದು, ತಂದಿದ್ದಾರೆ ನಮ್ಮ ಶ್ರೀನಿವಾಸ ಅವಧಾನಿಯವರು! ಒಮ್ಮೆ ನಮ್ಮೂರ ವೇ.ಬ್ರ. ಶ್ರೀ ಚೆನ್ನಕೇಶವ ಶಾಸ್ತ್ರಿಗಳು ಶಿವಮೊಗ್ಗದಲ್ಲಿ ಅಡಿಕೆಯನ್ನು ಮಂಡಿಗೆ ಹಾಕಿ ಸುಮಾರು ಐನೂರು ರೂಪಾಯಿಗಳನ್ನು ತರುತ್ತಿದ್ದರು. ಹೊಸಹಳ್ಳಿಗೆ ಬಂದು, ತೆಪ್ಪದಲ್ಲಿ ನದಿದಾಟಿ ಮತ್ತೂರಿಗೆ ಬರಬೇಕು. ಅವರು ಹೊಸಹಳ್ಳಿಗೆ ಬಂದ ವೇಳೆಯಲ್ಲಿ ತೆಪ್ಪವು ಮತ್ತೂರ ಕಡೆಗೆ ಬಂದಿತ್ತು. ತೆಪ್ಪ ಬಿಡುವವನು ಎಲ್ಲೋ ಹೊರಟುಹೋಗಿದ್ದ. ಆ ದಿನ ನದಿಯಲ್ಲಿ ಸ್ವಲ್ಪ ನೀರು ಏರಿದ್ದಿತು. ಆದರೂ ಅಂಥದೇನೂ ಸೆಳವಿಲ್ಲದ್ದರಿಂದ ಸುಲಭವಾಗಿ ಈಜಿ ಬರಬಹುದಿತ್ತಾದರೂ, ಶಾಸ್ತ್ರಿಗಳ ವಯಸ್ಸು ಎಪ್ಪತ್ತನ್ನು ಮೀರಿದ್ದ ಕಾರಣ ಅವರು ಆ ಸಾಹಸ ಮಾಡದೆ ನೀರಿನಲ್ಲಿ ನಡೆದು ಬರಲು ಸಿದ್ಧರಾದರು. ತಮ್ಮ ಅಂಗಿಯನ್ನು ಬಿಚ್ಚಿ ತಲೆಯ ಮೇಲೆ ಸಿಂಬಿಯಂತೆ ಸುತ್ತಿಟ್ಟುಕೊಂಡರು. ಆಳವಿಲ್ಲದ ಕಡೆ ನಡೆದು, ಆಳವಿದ್ದ ಕಡೆ ಮೇಲೆ ಮೇಲೆಯೇ ಈಜುತ್ತ ಬರುತ್ತಿದ್ದರು. ದಡದಲ್ಲಿ ಕುಳಿತು ಆಚಮನ ಮಾಡುತ್ತಿದ್ದ ಶ್ರೀನಿವಾಸ ಅವಧಾನಿಯವರು ಈ ಹಿರಿಯರು ಬರುತ್ತಿದ್ದುದನ್ನು ಆಗಾಗ ನೋಡುತ್ತಿದ್ದರು. ಮೆಟ್ಟಿಲು ಸೇರಲು ಇನ್ನೊಂದೆರಡು ಮಾರು ದೂರವಿದೆ, ತುಂಬಾ ಆಳ, ಈಜಬೇಕು; ಅಷ್ಟರಲ್ಲಿ ಅವರ ಕೈ ಸೋತಿತು. ''ಶ್ರೀನಿವಾಸ... ಆಗ್ತಿಲ್ಲ.... ಆಗ್ತಿಲ್ಲ'' ಎಂದರು. ಶ್ರೀನಿವಾಸ ಅವಧಾನಿಗಳು ಕೂಡಲೇ ನೀರಿಗೆ ಬಿದ್ದು ಗುರುಗಳನ್ನು ಎತ್ತಿಕೊಂಡು ಬರಲು ಹೋದರು. ಹತ್ತಿರ ಹೋದಾಗ ಚೆನ್ನಕೇಶವಶಾಸ್ತ್ರಿಗಳು ತಮ್ಮ ತಲೆಯ ಮೇಲಿದ್ದ ಗಂಟನ್ನು ತೋರಿಸಿದರು. ಶ್ರೀನಿವಾಸ ಅವಧಾನಿಗಳು ಆ ಗಂಟನ್ನು ತಮ್ಮ ಎರಡೂ ಕಾಲುಗಳ ಮಧ್ಯೆ ಸಿಕ್ಕಿಸಿಕೊಂಡು, ತಾವು ನೀರಿನ ಮೇಲೆ ಬೋರಲಾಗಿ ಮಲಗಿ ಶಾಸ್ತ್ರಿಗಳನ್ನು ತಮ್ಮ ಬೆನ್ನ ಮೇಲೆ ಹಾಕಿಕೊಂಡು ಈಜುತ್ತ ಬಂದು ದಡ ಸೇರಿದರು. ಶಾಸ್ತ್ರಿಗಳು ದಡಸೇರಿದ ಕೂಡಲೆ ''ಶ್ರೀನಿವಾಸ, ನನ್ನ ಅಂಗಿ.... ಅಂಗಿ.... ಎಲ್ಲಿ?'' ಎಂದರು. ಶ್ರೀನಿವಾಸ ಅವಧಾನಿಯವರು ಇನ್ನೂ ನೀರಿನಲ್ಲೇ ಇದ್ದರು, ಹತ್ತಿರ ಬಂದು ತಾವು ಕಾಲಮಧ್ಯೆ ಸಿಕ್ಕಿಸಿಕೊಂಡಿದ್ದ ಅಂಗಿಯನ್ನು ತೆಗೆದುಕೊಟ್ಟರು. ಒದ್ದೆಯಾಗಿದ್ದ ಅಂಗಿಯನ್ನು ನೋಡಿ ತಲೆಯ ಮೇಲೆ ಕೈಹೊತ್ತು ಧಸ್ಸನೆ ಕುಳಿತ ಚೆನ್ನಕೇಶವಶಾಸ್ತ್ರಿಗಳು, ''ಅಯ್ಯೋ, ನಾನು ಆಗ ಮುಳುಗಿಹೋಗಲಿಲ್ಲ. ಈಗ ನಿಜಕ್ಕೂ ಮುಳುಗಿಹೋದೆ!'' ಎಂದು ಉದ್ಗರಿಸಿದರು. ಶ್ರೀನಿವಾಸ ಅವಧಾನಿಗಳಿಗೆ ಅವರ ಮಾತು ಅರ್ಥವಾಗಲಿಲ್ಲ. ಕಕ್ಕಾಬಿಕ್ಕಿಯಾದ ಅವರು, ''ಯಾಕೆ ಗುರುಗಳೇ? ಏನಾಯ್ತು?'' ಎಂದರು. ''ನೋಡು, ಈ ಅಂಗಿಯಲ್ಲಿ ಅಡಿಕೆಯ ದುಡ್ಡು ಐನೂರು ರೂಪಾಯಿ ಇದೆ.

ನೀನು ನನ್ನನ್ನು ಮುಳುಗುತ್ತಿದ್ದಾನೆ ಎಂದುಕೊಂಡೆಯಾ? ನಾನು ಹೇಳಿದ್ದು ನನ್ನ ತಲೆಯ ಮೇಲಿದ್ದ ಅಂಗಿಯನ್ನು ತೆಗೆದು ಅದರ ರಕ್ಷಣೆ ಮಾಡು ಎಂದು. ನಾನು ಹೇಗೋ ಈಜಿಕೊಂಡು ಬರುತ್ತಿದ್ದೆ. ನೋಡೀಗ, ನೀನು ಅಂಗಿಯನ್ನು ಒದ್ದೆ ಮಾಡಿದೆ. ಅದರಲ್ಲಿದ್ದ ದುಡ್ಡಿನ ಗತಿ ಏನಾಗಬೇಕು?'' ಎಂದರು. ಅವರ ಧ್ವನಿಯಲ್ಲಿ ತಮ್ಮನ್ನು ನೀರಿನಿಂದ ಎಳೆತಂದು ದಡ ಮುಟ್ಟಿಸಿದ ಸಂತೋಷಕ್ಕಿಂತ, ಒದ್ದೆಯಾದ ನೋಟುಗಳ ಬಗೆಗಿನ ದುಃಖವೇ ಹೆಚ್ಚಾಗಿತ್ತು. ಶ್ರೀನಿವಾಸ ಅವಧಾನಿಗಳು, ''ಅಷ್ಟೇ ತಾನೆ? ಅವುಗಳನ್ನು ಒಣಗಿಸಿದರೆ ಆಯಿತು! ಏನೂ ತೊಂದರೆ ಇಲ್ಲ'' ಎಂದವರೇ, ಅಂಗಿಯ ಜೇಬಿನಲ್ಲಿದ್ದ ನೂರರ ಐದು ನೋಟುಗಳನ್ನು ಅಲ್ಲೇ ಕಲ್ಲುಗಳ ಮೇಲಿಟ್ಟು, ಬಿಸಿಲಿನಲ್ಲಿ ಒಣಗಿಸಿ ಕೊಟ್ಟರು.

❁ ❁ ❁

ಚೆನ್ನಕೇಶವಶಾಸ್ತ್ರಿಗಳು ದೊಡ್ಡ ಸಂಸ್ಕೃತ ವಿದ್ವಾಂಸರು. ನಮ್ಮ ತಂದೆಗೂ ಗುರುಗಳಾಗಿದ್ದವರು. ಪಾಂಡಿತ್ಯ, ವೇದಾಧ್ಯಯನ ಎಲ್ಲದರ ಜತೆಗೆ ವ್ಯವಹಾರ ಚತುರರೂ ಹೌದು.

ಒಮ್ಮೆ ಅವರು ತಮ್ಮ ಪತ್ನಿಯ ಜತೆ ವಾಯುವಿಹಾರಕ್ಕೆ ಹೋಗಿದ್ದಾಗ ವಾಪಸು ಮನೆಗೆ ಬರುವ ವೇಳೆಗೆ ಕತ್ತಲಾಯಿತು. (ಆಗ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದರು.) ರಿಕ್ಷಾ ಕರೆದು ಪತ್ನಿಯನ್ನು ಕುಳಿತುಕೊಳ್ಳಲು ಹೇಳಿದರು. ಪತಿಯೊಂದಿಗೆ ಏಕ-ಆಸನದಲ್ಲಿ ಕುಳಿತುಕೊಳ್ಳಬಾರದು ಎನ್ನುವುದು ಶಾಸ್ತ್ರ, ಸಂಪ್ರದಾಯ. ಹಳ್ಳಿಯಿಂದ ನಗರಕ್ಕೆ ಹೋದ ಮಾತ್ರಕ್ಕೆ ಆ ಸ್ವಭಾವ ಬಿಟ್ಟುಹೋದೀತೆ? ವಾಯುವಿಹಾರದಲ್ಲಿಯೂ ಪತಿ ಒಂದು ಮಾರು ಮುಂದೆ, ಪತ್ನಿ ಹಿಂದೆ ಹೋಗುತ್ತಿದ್ದವರು ಅವರು. ರಿಕ್ಷಾದಲ್ಲಿ ಈಗ ಪತಿಯ ಜತೆ ಕುಳಿತುಕೊಳ್ಳುವುದು ಹೇಗೆ? ಪತ್ನಿ ನಾಚಿ, ''ಇದೇನಿದು? ನಾನು ನಿಮ್ಮ ಜತೆಯಲ್ಲಿ ಕುಳಿತುಕೊಳ್ಳುವುದಿಲ್ಲಪ್ಪ!'' ಎಂದರು. ಅದಕ್ಕೆ ಶಾಸ್ತ್ರಿಗಳು, ''ನೋಡು, ನಿನಗೆ ಎಪ್ಪತ್ತೈದು ವರ್ಷ, ನನಗೆ ತೊಂಬತ್ತು. ನೀನು ಬಾಡಿಹೋಗುತ್ತೀ ಎಂದೋ, ನಡೆದರೆ ನಿನ್ನ ಕಾಲು ಸವೆಯುತ್ತದೆ ಎಂದೋ ನಾನು ರಿಕ್ಷಾ ಕರೆಯಲಿಲ್ಲ. ನಿನ್ನ ಮೈಮೇಲೆ ಇದೆಯಲ್ಲ ಮಣ ಬಂಗಾರ. ಅದಕ್ಕಾಗಿ ರಿಕ್ಷಾ ಕರೆದದ್ದು. ಯಾರಾದರೂ ಕಳ್ಳರು ಬಂದರೆ ನಾನು ಮುದುಕ, ನಿನ್ನ ರಕ್ಷಣೆ ಮಾಡಲಾದೀತೇ? ನಡಿ... ರಿಕ್ಷಾ ಹತ್ತು'' ಎಂದರು, ಅಧಿಕಾರವಾಣಿಯಿಂದ. ಧರ್ಮಪತ್ನಿಯವರು ಪತಿಯ ಅಕ್ಕರೆಯ ಅಪ್ಪಣೆ ಮೀರಲಾದೀತೇ? ಆಟೋದಲ್ಲೇ ಮನೆಗೆ ಬಂದರು.

❁ ❁ ❁

ಸಿರಿವಂತರಾದರೂ ಹೊಳೆಗೆ ಸುರಿಯುವಾಗ ಅಳೆದು ಸುರಿ ಎಂದೂ ಹೇಳಿದ್ದಾರೆ ಹಿರಿಯರು. ನಮ್ಮ ಕಾಲದಲ್ಲಂತೂ ಒಂದೊಂದು ಪೈಸೆಗೂ ಬಹಳ ಬೆಲೆ, ಮನುಷ್ಯಸಂಬಂಧಕ್ಕೆ ಅದಕ್ಕಿಂತ ಹೆಚ್ಚಿನ ಬೆಲೆ, ಮರ್ಯಾದೆಗಂತೂ ಬೆಲೆಕಟ್ಟಲಾಗದಷ್ಟು ಬೆಲೆ! ನಿಜಕ್ಕೂ ನಮ್ಮ ಊರಿನ ಹಿರಿಯರಲ್ಲಿದ್ದ ಕಲೆಯಾದ ಕಾವ್ಯವಾಚನ - ವ್ಯಾಖ್ಯಾನಕ್ಕೆ ಸಿಗುತ್ತಿದ್ದ ಸಂಭಾವನೆಯನ್ನು ನೆನೆದರೆ, ಅದು ಈಗಿನ ಕಾಲಕ್ಕೆ ಏನೇನೂ ಅಲ್ಲದ ಮೊತ್ತ. ಆದರೆ ಆಗ ಅದಕ್ಕೆ ಅದರದ್ದೇ ಆದ ಬೆಲೆ ಇದ್ದಿತು. ಅದರ ಬಗೆಗೆ ಉಲ್ಲೇಖಿಸಬಹುದಾದ ಒಂದೆರಡು ಪ್ರಸಂಗಗಳು ನನಗೆ ಚೆನ್ನಾಗಿ ನೆನಪಿರುವಂಥವು!

ನಮ್ಮೂರಿನ ರಾಮಾಶಾಸ್ತ್ರಿಗಳು ಮತ್ತು ಲಕ್ಷ್ಮೀಕೇಶವಶಾಸ್ತ್ರಿಗಳು - ವಾಚನ-ವ್ಯಾಖ್ಯಾನದಲ್ಲಿ 'ಭಲೇಜೋಡಿ'. ರಾಮಾಶಾಸ್ತ್ರಿಗಳು ನನ್ನ ಸೋದರತ್ತೆಯ ಪತಿ. ಲಕ್ಷ್ಮೀಕೇಶವಶಾಸ್ತ್ರಿಗಳು ನನ್ನ ಗುರುಗಳು; ಸಂಸ್ಕೃತ ಕಲಿಸಿ, ವ್ಯಾಖ್ಯಾನದಲ್ಲಿ ನನಗೆ ಮಾರ್ಗದರ್ಶನ ಮಾಡಿದ ಹಿರಿಯರು. ಇಬ್ಬರಿಗೂ ನನ್ನ ಮೇಲೆ ಪ್ರೀತಿ, ಅಭಿಮಾನ. ನನಗೂ ಆ ಹಿರಿಯರ ಬಗ್ಗೆ ಗೌರವ, ಆದರ.

ಒಮ್ಮೆ ಶಿವಮೊಗ್ಗದಲ್ಲಿ ಒಂದು ತಿಂಗಳ ಕಾರ್ಯಕ್ರಮ ನಡೆಯಿತು. ಆ ಸಮಯದಲ್ಲಿ ಲಕ್ಷ್ಮೀಕೇಶವಶಾಸ್ತ್ರಿಗಳೂ, ರಾಮಾಶಾಸ್ತ್ರಿಗಳೂ ಒಂದು ಬಾಡಿಗೆ ಎತ್ತಿನಗಾಡಿ ಗೊತ್ತುಮಾಡಿಕೊಂಡು ದಿನವೂ ಹೋಗಿಬರಲು ಮೂರು ರೂಪಾಯಿ ಬಾಡಿಗೆಯಂತೆ ಮಾತಾಡಿದರು. ಸಂಜೆ ಐದಕ್ಕೆ ಊರಿನಿಂದ ಹೊರಟರೆ ಅಲ್ಲಿಗೆ ೬.೧೫ಕ್ಕೆ ತಲುಪಿ ೬.೩೦ರಿಂದ ೮.೩೦ರವರೆಗೆ ಕಥೆ ಮಾಡಿ ರಾತ್ರಿ ಒಂಬತ್ತು, ಒಂಬತ್ತೂವರೆಗೆಲ್ಲ ಊರಿಗೆ ವಾಪಸಾಗುತ್ತಿದ್ದರು. ಕಥೆ ನಡೆಯುತ್ತಿದ್ದ ಆಂಜನೇಯನ ದೇವಸ್ಥಾನಕ್ಕೆ ಪ್ರತಿದಿನವೂ ಒಬ್ಬ ಶ್ರೀಮಂತರು ಕಾರಿನಲ್ಲಿ ಬರುವುದಿತ್ತು... ಠಾಕು-ಠೀಕಾಗಿದ್ದ ಆ ವ್ಯಕ್ತಿ ಕಥೆಯ ಮಂಗಳದ ದಿನ ಇವರಿಬ್ಬರನ್ನೂ ಮನೆಗೆ ಆಹ್ವಾನಿಸಿದರು. ರಾಮಾಶಾಸ್ತ್ರಿಗಳಿಗೆ ಹೋಗಲು ಅಷ್ಟು ಮನಸ್ಸಿಲ್ಲ. ''ಅವರೇನು ಕೊಡುತ್ತಾರೋ ಬಿಡುತ್ತಾರೋ, ಸುಮ್ಮನೆ ವ್ಯರ್ಥ. ಊರಿಗೆ ಹೋಗುವುದು ತಡವಾಗುತ್ತದೆ. ಅಲ್ಲದೆ ಈಗ ಮಾವಿನ ಸುಗ್ಗಿಯಕಾಲ. ಅವರು ಒಂದು ತೆಂಗಿನಕಾಯನ್ನೂ ಕೊಡುವುದಿಲ್ಲ ನೋಡಿ. ಯಾವುದೋ ಹಸುರಾದ ಇಲ್ಲವೇ ಕೊಳೆಯುತ್ತ ಬಂದಿರುವ ಒಂದು ಮಾವಿನಹಣ್ಣು ಕೊಟ್ಟು ಒಂದು ರೂಪಾಯಿ ದಕ್ಷಿಣೆ ಕೊಡುತ್ತಾರಷ್ಟೆ! ಸುಮ್ಮನೆ ಸಮಯ ಹಾಳು. ಅಲ್ಲಿಗೆ ಹೋಗುವುದು ಬೇಡ'' ಎಂದರು. ರಾಮಾಶಾಸ್ತ್ರಿಗಳಿಗೆ ಈ ಬಗ್ಗೆ ಹೆಚ್ಚು ಅನುಭವವೂ ಇತ್ತು. ಲಕ್ಷ್ಮೀಕೇಶವಶಾಸ್ತ್ರಿಗಳದು ಮೃದು ಹೃದಯ. ''ಛೇ, ಹಾಗೇಕೆ ಹೇಳುತ್ತೀ? ಏನಿಲ್ಲ... ಶ್ರೀಮಂತರು. ಕರೆದಿದ್ದಾರೆ. ಕಾರಲ್ಲಿ ಕರೀತಿದಾರೆ, ಹೋಗಿಬರೋಣ''

ಎಂದರು. 'ನಿಜ.... ಅಷ್ಟು ದಿನ ಕಥೆ ಮಾಡಿದ್ದೇವೆ. ದಿನವೂ ಬರುತ್ತಿದ್ದ ಶ್ರೀಮಂತರು ಏನಾದರೂ ಸಂಭಾವನೆ ಕೊಟ್ಟರೂ ಕೊಡಬಹುದು' ಎಂಬ ನಿರೀಕ್ಷೆ ಅವರಿಗೆ. ಅದು ತಪ್ಪೇನೂ ಅಲ್ಲವಲ್ಲ. ಅವರ ಕಾರು ಹತ್ತಿಯೇ ಬಿಟ್ಟರು.

ಅಂತೂ ಅವರ ಮನೆಗೆ ಹೋದಾಗ ರಾಮಾಶಾಸ್ತ್ರಿಗಳು ಹೇಳಿದಂತೆ ಒಂದೊಂದು ಮಾವಿನ ಹಣ್ಣು, ಒಂದು ರೂಪಾಯಿ ದಕ್ಷಿಣೆ ಕೊಟ್ಟ ಆ ಶ್ರೀಮಂತ ಇಷ್ಟೇ ಅಲ್ಲದೇ, ''ದೇವಸ್ಥಾನದಲ್ಲಿ ಮಂಗಳಾರತಿಗೂ ಕಾಸು ಹಾಕುತ್ತಿದ್ದೆ ಶಾಸ್ತ್ರಿಗಳೇ'' ಎಂದು ಹೇಳಿ ನಮಸ್ಕರಿಸಿದಾಗ ರಾಮಾಶಾಸ್ತ್ರಿಗಳಿಗೆ ನಗು. ಕಾರಣ ಒಂದು ತಿಂಗಳು ಕಾರ್ಯಕ್ರಮದಲ್ಲಿ ಶ್ರೀಮಂತರ ಕಾಣಿಕೆ ಸೇರಿ ತೊಂಬತ್ತಾರು ರೂ. ಬಂದಿತ್ತು (ಅವರು ಗೊತ್ತು ಮಾಡಿದ್ದ ಗಾಡಿ ಬಾಡಿಗೆ ತೊಂಬತ್ತು ರೂ. ಗಳು ಆಗಿತ್ತು!). ಲಕ್ಷ್ಮೀಕೇಶವಶಾಸ್ತ್ರಿಗಳಿಗೆ ಬೇಸ್ತು. ಇಂಥವುಗಳೇ ಹೆಚ್ಚು ಕಾರ್ಯಕ್ರಮಗಳು ಆಗ. ಎಂದಾದರೂ ನೂರು ರೂಪಾಯಿ ಸಂಭಾವನೆ ಬಂದಾಗ, ''ಓಹೋ... ನೂರು ರೂಪಾಯಿ'' ಎಂದೂ ಸಂತೋಷಪಟ್ಟಿದ್ದಾರೆ ಆ ಹಿರಿಯರು!

❁ ❁ ❁

ನಮ್ಮ ಮಾವ ರಾಮಾಶಾಸ್ತ್ರಿಗಳಿಗೆ ಯಾವುದೇ ಸಂದರ್ಭದಲ್ಲೂ ಸತ್ಯವೆಂದು ತಿಳಿದದ್ದನ್ನು ನೇರವಾಗಿ ಹೇಳುವ ಸ್ವಭಾವ. ಅವರ ಈ ಸ್ವಭಾವ ಅವರಿಗೆ ಒಮ್ಮೆ ಸಿರಿವಂತರ ಮನೆಯ ವಾರಾನ್ನವನ್ನು ದೊರಕಿಸಿಕೊಟ್ಟಿತು. ಒಮ್ಮೆ ಹೀಗಾಯಿತು.... ನಮ್ಮ ಸೋದರತ್ತೆಯ ಗಂಡ ರಾಮಾಶಾಸ್ತ್ರಿ, ಲಕ್ಷ್ಮೀಕೇಶವಶಾಸ್ತ್ರಿ ಹಾಗೂ ಅನಂತಶಾಸ್ತ್ರಿ ಮೂವರೂ ಓದುತ್ತಿದ್ದ ಕಾಲದಲ್ಲಿ ಬೆಂಗಳೂರಿನಲ್ಲಿದ್ದರು. ಅಲ್ಲೇ ಅಧ್ಯಯನ. ವಾರದ ಸಮಯದಲ್ಲಿ ಯಾರ ಮನೆಗಾದರೂ ಹೋದರೆ ತಿಂಡಿ, ಕಾಫಿ, ಊಟ ಕೊಡುತ್ತಿದ್ದರು. ಪಾಠಶಾಲೆಯಲ್ಲಿ ಊಟದ ಅನುಕೂಲ ಆಗಲಿಲ್ಲ ಇವರಿಗೆ. ಆದ್ದರಿಂದಲೇ ವಾರಾನ್ನ ಮಾಡುವ ಯೋಚನೆಮಾಡಿ, ಶ್ರೀಮಂತರಾಗಿದ್ದ ಕರ್ಪೂರಂ ಶ್ರೀನಿವಾಸರಾವ್ ಎನ್ನುವವರ ಮನೆಗೆ ಒಂದು 'ವಾರ' (ಅಂದರೆ ವಾರದಲ್ಲಿ ಒಂದು ದಿನದ ಊಟ) ಕೇಳಲು ಹೋದರು. ಅವರ ಮನೆ ತಲುಪುವ ಮುನ್ನ ಸ್ವಲ್ಪ ಚತುರರೂ, ಬುದ್ಧಿವಂತರೂ ಆಗಿದ್ದ ಅನಂತಶಾಸ್ತ್ರಿಗಳು, ''ಅವರು ಕೇಳಿದಾಗ ನಾವು ಸರಿಯಾಗಿ ಮಾಹಿತಿಯನ್ನು ಕೊಡಬೇಕು. ಸರಿಯಾಗಿ ನಮ್ಮ ಪರಿಸ್ಥಿತಿ ಹೇಳಬೇಕು...... ಹಾಗೆಂದರೆ ನಾವು ಈರುಳ್ಳಿ - ಮೂಲಂಗಿ ತಿನ್ನುವುದಿಲ್ಲ, ಹಾಗೆ - ಹೀಗೆ ಎಂದು ಹೇಳಕೂಡದು. ಎಲ್ಲಕ್ಕೂ ನಾವು ನಮ್ಮನ್ನು ಸರಿತೂಗಿಸಿಕೊಳ್ಳಬಲ್ಲೆವು ಎಂದು ಹೇಳಬೇಕು. ಇಲ್ಲವಾದರೆ 'ಕಣಿ-ಕೊಕ್ಕೆ ಮಾಡುತ್ತಾರೆ, ಈ ಹುಡುಗರು' ಎಂದು ಬೇಸರಪಟ್ಟುಕೊಂಡು 'ವಾರ' ಕೊಡದೇ ಹೋದಾರು'' ಎಂದರು. ರಾಮಾಶಾಸ್ತ್ರಿಯವರು ಇಷ್ಟು ಯೋಚಿಸುವವರಲ್ಲ. ಆದರೂ ಅನಂತಶಾಸ್ತ್ರಿ ಹೇಳಿದಾಗ 'ಹ್ಞೂಂ'ಗುಟ್ಟಿದರು, ಎಲ್ಲರೂ ಅಲ್ಲಿಗೆ ತಲುಪಿದರು.

ಕರ್ಪೂರಂ ಶ್ರೀನಿವಾಸರಾಯರು ಆ ಸಮಯದಲ್ಲಿ ಮನೆಯಲ್ಲೇ ಇದ್ದರು. ಈ ಮೂವರನ್ನೂ ನೋಡಿ ಒಳಗೆ ಬರಹೇಳಿದರು. ಅವರುಗಳ ಬಗೆಗೆ ಎಲ್ಲವನ್ನೂ ವಿಚಾರಿಸಿಕೊಳ್ಳುತ್ತಾ, ''ನೀನು? ನಿನಗೆ ಏನು ಸೇರುತ್ತದೆ - ಏನು ಸೇರುವುದಿಲ್ಲ?'' ಎಂದರು ರಾಮಾಶಾಸ್ತ್ರಿಗೆ. ರಾಮಾಶಾಸ್ತ್ರಿಗೆ ಸುಳ್ಳು ಹೇಳಲು ಸಾಧ್ಯವಾಗಲಿಲ್ಲ. ''ನನಗೆ ಈರುಳ್ಳಿ - ಮೂಲಂಗಿ ಎರಡೂ ಸೇರುವುದಿಲ್ಲ'' ಎಂದರು ಸ್ಪಷ್ಟವಾಗಿ ವಿನಯವಾಗಿಯೇ. ಅನಂತರ ಅನಂತಶಾಸ್ತ್ರಿಯನ್ನು ಕೇಳಿದರು. ಆಗ ಅವರು ''ನನಗೆ ಎಲ್ಲವೂ ಸೇರುತ್ತದೆ ಸ್ವಾಮಿ'' ಎಂದರು, ತಮ್ಮದೇನೂ ಅಭ್ಯಂತರ ಇಲ್ಲ ಎನ್ನುವಂತೆ. ''ಓಹೋ... ಹಾಗೋ....'' ಎಂದ ಶ್ರೀನಿವಾಸರಾಯರು, ''ಹಾಗಾದರೆ ನೀನು ಹೋಟೆಲ್‌ಗೆ ಹೋಗು. ಏಕೆಂದರೆ ನಿನಗೆ ಎಲ್ಲವೂ ಸೇರುತ್ತದೆಯಲ್ಲ. ಆದ್ದರಿಂದ ನಿನಗೆ ಯಾವ ತೊಂದರೆಯೂ ಇಲ್ಲ....'' ಎಂದರು ಅನಂತಶಾಸ್ತ್ರಿಗೆ. ಅನಂತರ ರಾಮಾಶಾಸ್ತ್ರಿಯ ಕಡೆಗೆ ನೋಡಿ, ''ನೀನು ಬಾರಪ್ಪ, ನಮ್ಮ ಮನೆಯಲ್ಲಿ ಊಟ ಮಾಡಿಹೋಗು. ನಿನಗೆ ಈರುಳ್ಳಿ, ಮೂಲಂಗಿ ಸೇರದು, ಪಾಪ. ನಿನಗೆ ಹೋಟೆಲು ಊಟ ಆಗುವುದಿಲ್ಲ. ಪ್ರತಿ ಗುರುವಾರ ಬಾ ನಮ್ಮ ಮನೆಗೆ'' ಎನ್ನುವುದೇ? ಪಾಪ. ಅನಂತಶಾಸ್ತ್ರಿಯ ಮುಖ ಪೆಚ್ಚಾಗಿ ಹೋಯಿತು, ಆ ಮಾತನ್ನು ಕೇಳಿ!

❁ ❁ ❁

ಒಮ್ಮೆ ನಾನೂ, ನನ್ನ ಮಿತ್ರರಾದ ಕೇಶವಮೂರ್ತಿಯೂ, ಚಿಕ್ಕಮಗಳೂರಿಗೆ ಒಂದು ಕಾರ್ಯಕ್ರಮಕ್ಕೆ ಹೊರಟೆವು. ನಮ್ಮ ಜತೆ ಗೆಳೆಯ ರಾಜುವೂ ಬಂದ. ನಾವಿಬ್ಬರೂ ಎಲ್ಲಿಗೆ ಕಾರ್ಯಕ್ರಮವೆಂದು ಹೊರಟರೂ ಅವನು ತಪ್ಪದೇ ನಮ್ಮ ಜತೆ ಬರುತ್ತಿದ್ದ. ಅವನಿಗೆ ಭಾರತ, ರಾಮಾಯಣಗಳನ್ನು ಕೇಳಿ ಕೇಳಿ ಬಹಳಷ್ಟು ಸಾಲುಗಳು ಬಾಯಿಪಾಠವಾಗಿದ್ದುವು. ಕುಮಾರವ್ಯಾಸಭಾರತವಂತೂ ಅವನಿಗೆ ಪ್ರತಿಪದ್ಯ ಕಂಠಪಾಠ ಎನ್ನಬೇಕು. ಅಷ್ಟು ನೆನಪಿನ ಶಕ್ತಿ. ಅಲ್ಲದೆ ಆ ಮಾತುಗಳನ್ನು ದಿನನಿತ್ಯದ ಸಂಭಾಷಣೆಯಲ್ಲಿ ಸರಾಗವಾಗಿ, ಸರಳವಾಗಿ ಬಹಳ ಸುಲಭ ಎನ್ನುವಂತೆ ಉಪಯೋಗಿಸುತ್ತಲೂ ಇದ್ದಂಥ ಪ್ರತಿಭಾವಂತ. ಒಂದೊಮ್ಮೆ ನಾನೂ - ಕೇಶವಮೂರ್ತಿಯೂ ಅವನಿಗೆ ಹೇಳದೆ ಹೊರಟರೆ, ಹೇಗಾದರೂ ತಿಳಿದು ಆ ಸಮಯಕ್ಕೆ ಸರಿಯಾಗಿ ಹಾಜರಾಗಿ, ''ಬಡ ವಿರಾಟನನಾರು

ಕೇಳ್ವರು ದ್ರೋಣ ಸಮರದಲಿ'' ಎನ್ನುತ್ತಲೇ ಬಂದು ನಮ್ಮ ಜತೆ ಸೇರಿಕೊಳ್ಳುತ್ತಿದ್ದ, ನಮಗೆ ಪರಿತಾಪವಾಗಬೇಕು ಹಾಗೆ!

ಚಿಕ್ಕಮಗಳೂರಿನಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ನಾವು ಹೊರಟಾಗ ತಾಂಬೂಲ ಕೊಟ್ಟರು. ಮೂರು ಜನರಿಗೂ ಪುಟ್ಟ ಚೀಲ, ಬಾಳೆಹಣ್ಣು, ತೆಂಗಿನಕಾಯಿ, ದಕ್ಷಿಣೆ ಇತ್ಯಾದಿ. ರಾಜು ಶ್ರುತಿ ಹಾಕಿದ್ದಕ್ಕೆ ಅವನಿಗೂ ಕೊಟ್ಟಿದ್ದಾರೆ ಎಂದು ಭಾವಿಸಿ ನಾವು ವಾಪಸಾದೆವು. ರಾಜು ಕುತೂಹಲ ತಡೆಯಲಾರದೆ ಒಂದು ಚೀಲ ಬಿಚ್ಚಿದ. ಅದರಲ್ಲಿ ಐದು ರೂಪಾಯಿ ಇದ್ದಿತು. ''ಓಹೋ... ಅಶ್ವತ್ಥ! ಶ್ರುತಿ ಮೀಟಿದವರಿಗೂ ಐದು ರೂಪಾಯಿ ಸಂಭಾವನೆ ಕಣೋ'' ಎಂದ, ಖುಷಿಯಾಗಿ. ಅನಂತರ ಇನ್ನೊಂದು ಚೀಲ ಬಿಚ್ಚಿದ, ಅಲ್ಲಿ ಏನೂ ಇರಲಿಲ್ಲ! ಹಾಗಾದರೆ, ''ಇದೇ ನನ್ನದು'' ಎಂದ. ಮತ್ತೊಂದು ಚೀಲದಲ್ಲೂ ತೆಂಗಿನ ಕಾಯಿಯ ವಿನಾ ಬೇರೇನೂ ಇರಲಿಲ್ಲ! ಅಲ್ಲಿನ ಜನ ನಮ್ಮ ಮೂವರಿಗೂ ಸೇರಿಸಿ ಐದು ರೂಪಾಯಿ ದಕ್ಷಿಣೆ ಕೊಟ್ಟಿದ್ದಾರೆ. ನಮ್ಮ ಪ್ರಯಾಣದ ಬಸ್ ದರವೇ ಇಪ್ಪತ್ತು ರೂ. ಆಗಿತ್ತು. ಸಂಭಾವನೆ ಬಂದದ್ದು ಹೀಗೆ!

❁ ❁ ❁

ಕೊಡಲು ಶಕ್ತಿ ಇರುವ, ಸಾಧ್ಯವಿರುವ ಶ್ರೀಮಂತರ ವಿಷಯ ಹೀಗಾದರೆ ಏನೂ ಇಲ್ಲದ ಬಡವರ ಸ್ಥಿತಿ ಹೇಗಿದ್ದೀತು ಎಂದು ಕೇಳಿದರೆ ಸ್ಥಿತಿಗತಿಗಳು ಹೇಗೇ ಇರಲಿ ಕೊಡುವ ಮನಸ್ಸೊಂದು ಇದ್ದರೆ ಹೇಗಾದರೂ ಏನನ್ನಾದರೂ ಕೊಡಲು ಸಾಧ್ಯವಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ ನನ್ನ ಅನುಭವಕ್ಕೆ ಬಂದಿರುವ ಒಂದು ಪ್ರಸಂಗ ಆ ಮಾತು ನಿಜ ಎಂದು ಸಾಬೀತು ಮಾಡುತ್ತದೆ:

ಲಿಂಗದಹಳ್ಳಿಯ ಜನರು ಅಷ್ಟು ಶ್ರೀಮಂತರಾಗಿರಲಿಲ್ಲ. ಆ ಕಾಲದಲ್ಲಿ ಅಷ್ಟು ನಾಜೂಕು ಕಪಟ ಅರಿಯದವರು, ತೃಪ್ತರು, ಸತ್ಯಪ್ರಿಯರು. ಒಂದು ಮನೆಯಲ್ಲಿ ತಂದೆ-ತಾಯಿ-ಮಗಳು. ಅವರ ಪಕ್ಕದ ಮನೆಯಲ್ಲೇ ತಂದೆಯ ದೂರದ ಸಂಬಂಧಿ, ತಂಗಿಯ ವಾಸ. ಆಕೆ ಬಾಲವಿಧವೆ. ತಂದೆಯು ಮಗಳಿಗೆ ಕಷ್ಟಪಟ್ಟು ಮದುವೆ ಮಾಡಿದರು. ಕಿತ್ತು ತಿನ್ನುವ ಬಡತನದಲ್ಲಿ ಯಾವ ಸುಧಾರಣೆಯೂ ಆಗಲಿಲ್ಲ. ಮಗಳು ಗರ್ಭಿಣಿಯಾಗಿ ತಂದೆಯ ಮನೆಗೆ ಬಂದಳು. ಒಂದೊಂದು ಹೊತ್ತಿಗೂ ಊಟಕ್ಕೆ ಕಷ್ಟ. ಆಗಲೇ ಹುಡುಗಿಯ ಸೋದರತ್ತೆ ಕಾಶಿಗೆ ಹೊರಟಿದ್ದರು. ಅವರು ಅನೇಕ ವರ್ಷಗಳಿಂದ ಕಷ್ಟಪಟ್ಟು ಐನೂರು ರೂಪಾಯಿ ಸೇರಿಸಿಟ್ಟುಕೊಂಡಿದ್ದರು. ತಮ್ಮೂರ ಜನ ಹೊರಟಾಗ, ಅವರ ಜತೆ ತಾನೂ ಸೇರಿಕೊಂಡು ಯಾತ್ರೆಗೆ ಬರುವುದಾಗಿ ಹೇಳಿದ್ದರು. ತಾನು ಕಾಶಿಗೆ ಹೋಗುತ್ತೇನೆಂದು ನಾಲ್ಕಾರು ಮನೆಗೆ ಹೇಳಿ ತಾಂಬೂಲವನ್ನೂ ತೆಗೆದುಕೊಂಡು ಬಂದರು. ಆಗ ಅದೊಂದು ಸಂಪ್ರದಾಯ. ಕಾಶಿಗೆ ಹೊರಟವರು ನಾಲ್ಕು ಮಂದಿಗೆ ಹೇಳಿ ಅವರು ಹಾರೈಸಿಕೊಟ್ಟ ಫಲತಾಂಬೂಲ, ದಕ್ಷಿಣೆ ಇತ್ಯಾದಿಗಳನ್ನು ಕಾಶಿಗೆ ಹೋಗುವಾಗ ಬಳಸಿಕೊಳ್ಳಬೇಕು. ಹಾಗೆಯೇ ಮಾಡಿದ ಆ ಹೆಂಗಸು ಹೇಳಿ ಹೊರಡಲು ಪಕ್ಕದಲ್ಲಿದ್ದ ತಮ್ಮನ ಮನೆಗೂ ಬಂದರು. ಅತ್ತೆ ಹೊರಟಿದ್ದುದನ್ನು ನೋಡಿದ ಆ ಗರ್ಭಿಣಿ ಹುಡುಗಿ, ''ಅತ್ತೆ! ನೀವು ಹೋಗಿಬನ್ನಿ. ನೀವು ವಾಪಸಾಗುವ ತನಕ ನಾನು ಇರುತ್ತೇನೆಯೋ ಇಲ್ಲವೋ. ಈಗಲೇ ಒಂದು ಹೊತ್ತು ಊಟವಿದ್ದರೆ ಮತ್ತೊಂದು ಹೊತ್ತಿಗೆ ಇಲ್ಲ. ಇನ್ನು ನನ್ನ ಬಾಣಂತನ ಹೇಗಾಗುವುದೋ. ಮಗು ನನ್ನ ಕೈ ಸೇರುವುದೋ ಇಲ್ಲವೋ ಯಾರಿಗೆ ತಿಳಿದಿದೆ? ಅಪ್ಪ-ಅಮ್ಮನ ಸ್ಥಿತಿ ನನಗೆ ಬಾಣಂತನ ಮಾಡುವಂತಿಲ್ಲ....'' ಎಂದು ಕಣ್ಣೀರು ಮಿಡಿದಳು. ತನ್ನ ಮನೆಗೆ ವಾಪಸಾದ ಅತ್ತೆ ಯೋಚಿಸಿದರು, 'ಕಾಶಿಯಾತ್ರೆಗೆ ಹೋದರೆ ನನ್ನ ಆಸೆಯೇನೋ ತೀರೀತು..... ಅದೇ ದುಡ್ಡನ್ನು ಇಲ್ಲಿ, ಈ ಹುಡುಗಿಯ ಬಾಣಂತನಕ್ಕೆ ಉಪಯೋಗಿಸಿ ಅವಳಿಗೆ ಸಹಾಯ ಮಾಡಿದರೆ ನನ್ನ ಜತೆಗೆ ಇನ್ನೂ ನಾಲ್ಕು ಜೀವಗಳನ್ನು ಉಳಿಸಿದ ಪುಣ್ಯ ನನಗೆ ಬರುತ್ತದೆ.... ಹೌದು.... ಇದೇ ನನ್ನ ಜೀವನದ ಕಾಶಿಯಾತ್ರೆ. ನೋಡೋಣ, ಮುಂದೆ ಸಾಧ್ಯವಾದರೆ....' ಅವರ ಯೋಚನೆ ನಿಧಾನವಾಗಿ ರೂಪುಗೊಂಡಿತು. ಕ್ಷೇಮತಾಂಬೂಲ ಕೊಟ್ಟವರ ಮನೆಗಳಿಗೆ ಹೋಗಿ ತಾವು ಕಾಶಿಗೆ ಹೋಗುವುದಿಲ್ಲವೆಂದೂ, ಅವರು ಕೊಟ್ಟ ಕಾಣಿಕೆಯನ್ನು ವಾಪಸು ತೆಗೆದುಕೊಳ್ಳಬೇಕೆಂದೂ ವಿನಂತಿಸಿಕೊಂಡರು. ಆ ಹೆಂಗಸಿನ ಹಿರಿತನ ಅವರ ಬಾಯಿ ಕಟ್ಟಿತು! ಅವರುಗಳು ಮತ್ತೆ ಸ್ವಲ್ಪ ಸೇರಿಸಿ ಹಣಕೊಟ್ಟು, ''ಬಾಣಂತನ ಚೆನ್ನಾಗಿ ನಡೆಸಿ. ಮಗೂಗೆ ಉಡುಗೆ ತೊಡಿಗೆಗೆ ಉಪಯೋಗಿಸಿ'' ಎಂದರು!

ಮನೆಗೆ ಬಂದು ಆ ಹುಡುಗಿಯನ್ನು ಕಂಡು, ''ನೋಡಿಲ್ಲಿ, ನನ್ನ ಹತ್ತಿರ ಐನೂರು ರೂ.ಗಳಿವೆ. ನೀನೇನೂ ಯೋಚಿಸಬೇಡ. ನಿಮ್ಮಪ್ಪನ ಸ್ಥಿತಿಯೂ ಒಂದಲ್ಲ ಒಂದು ದಿನ ಸುಧಾರಿಸುತ್ತದೆ. ಈ ಸಾರಿ ನಾನು ನಿನ್ನ ಯೋಗಕ್ಷೇಮ ನೋಡಿಕೊಳ್ಳುತ್ತೇನೆ.... ನೀನು ಯೋಚಿಸಬೇಡ'' ಎಂದರು. ಕಣ್ಣೀರಿಟ್ಟ ಅವಳು, ''ಅತ್ತೆ... ನಿಮ್ಮ ಕಾಶಿಯಾತ್ರೆ?'' ಎಂದಾಗ ''ಇದೇ ನನ್ನ ಕಾಶಿಯಾತ್ರೆ. ಇಲ್ಲೇ ನನಗೆ ವಿಶ್ವನಾಥನ ದರ್ಶನ'' ಎಂದರು ಅತ್ತೆ ದೃಢವಾಗಿ. ಇಂಥ ಪ್ರಸಂಗಗಳು ಅದೆಷ್ಟು ಮನೆಗಳಲ್ಲಿ ಆಗಿವೆಯೋ! ನನಗೆ ತಿಳಿದುದನ್ನು, ಅನುಭವಕ್ಕೆ ಬಂದುದನ್ನು ಹೇಳಿದ್ದೇನಷ್ಟೆ. ಯಾರಿಗೇ ಆದರೂ, ತಮ್ಮ ಸ್ಥಿತಿ ಏನೇ ಇದ್ದರೂ ಕೊಡಬೇಕೆನ್ನುವ ಭಾವವೇ ಮುಖ್ಯ. ಅದನ್ನು ಆ ಹೆಣ್ಣುಮಗಳು ತೋರಿಸಿಕೊಟ್ಟು ಆದರ್ಶ ಎನಿಸಿದರಷ್ಟೆ!

❁ ❁ ❁

ನಿಜ, ಆರ್ಥಿಕವಾಗಿ ಬಡವರಾದರೂ ದಾರ್ಯಕ್ಕೆ ಬಡತನ ಎನ್ನುವುದಿಲ್ಲದ ಜನ ಬಹಳ ಇದ್ದರು, ಈಗಲೂ ಇದ್ದಾರೆ. ನಮಗೆ ತಿಳಿದವರ ಬಗ್ಗೆ ನಾವು ಹೇಳಬಹುದಷ್ಟೆ.

ನನ್ನ ಪತ್ನಿಯ ತಂದೆ, ನನ್ನ ಮಾವನವರೂ ಬಡತನವನ್ನೇ ಉಂಡು ಉಟ್ಟು ಆಯುಸ್ಸನ್ನು ಸವೆಸಿದವರು. ನನ್ನ ಪತ್ನಿಯ ಆರನೆಯ ವಯಸ್ಸಿನಲ್ಲೇ ಅವಳ ತಾಯಿ, ಅಂದರೆ ನಮ್ಮ ಅತ್ತೆ ಕಾಲವಾದರು. ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಲು ನಮ್ಮ ಮಾವನವರಾದ ಶಾಮಾವಧಾನಿಗಳು ಬಹಳ ಕಷ್ಟಪಟ್ಟರು. ಆದರೆ ಅದೆಷ್ಟೇ ಆದಾಯ ಬಂದರೂ ಅರ್ಧ ಉಳಿತಾಯ, ಅರ್ಧ ಮನೆಖರ್ಚಿಗೆ ಎಂಬುದು ಅವರ ನಿಯಮ. ಮುಖ್ಯವಾಗಿ ದೊನ್ನೆಗಳನ್ನು ಮಾಡಿ ಮಾರುತ್ತಿದ್ದ ಅವರಿಗೆ ನೂರು ದೊನ್ನೆಗಳಿಗೆ ಇಪ್ಪತ್ತೈದು ಪೈಸೆ ಸಿಗುತ್ತಿದ್ದಿತು! ಅಂಥ ಕಾಲವದು! ಹಾಗೆಯೇ ಸಂಪಾದಿಸಿ ನನ್ನ ಮದುವೆಯ ಸಮಯಕ್ಕೆ (ಅಂದರೆ ತಮ್ಮ ಮಗಳು ನಾಗವೇಣಿಯನ್ನು ನನಗೆ ಕೊಟ್ಟು ಮದುವೆ ಮಾಡುವವರೆಗೆ) ಸುಮಾರು ನಾಲ್ಕು ಸಾವಿರ ರೂ.ಗಳನ್ನು ಸೇರಿಸಿದ್ದರು. ನಮ್ಮ ತಂದೆ ಎಷ್ಟು ಹೇಳಿದರೂ ಕೇಳದೆ, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟು ನಾಲ್ಕು ಸಾವಿರವನ್ನು ಖರ್ಚು ಮಾಡಿ ಚೆನ್ನಾಗಿ ಮದುವೆ ಮಾಡಿಕೊಟ್ಟರು. ನನಗೂ ಆ ಕಾಲಕ್ಕೆ ವಾಚು, ಚಿನ್ನದ ತೋಡ ಕೊಟ್ಟಿದ್ದರು ಅವರು.

ಅವರಿಗೆ ಅರುವತ್ತು ವರ್ಷಗಳು ತುಂಬುವಾಗ ಊರಿನವರೆಲ್ಲರೂ ಅವರಿಗೆ ಶಾಂತಿ ಮಾಡಿಕೊಳ್ಳಿ ಎಂದು ಒತ್ತಾಯಿಸಿದರು. ಅವರು ''ಹೆಂಡತಿ ಇಲ್ಲದ ವಿಧುರ ನಾನು. 'ಶಾಂತಿ' ಯಾಕೆ ನನಗೆ?'' ಎಂದು ಹೇಳಿದರು. ಅದಕ್ಕೆ ಊರವರು, ''ಹಾಗೆಂದರೇನು? ಅದು ನಿಮಗಾಗಿ ಮಾಡಿಕೊಳ್ಳುವಂಥದಲ್ಲ. ನಿಮ್ಮ ಮಕ್ಕಳ ಶ್ರೇಯಸ್ಸಿಗೆ ಮಾಡಿಕೊಳ್ಳುವಂಥದು. ಏಕೆ? ಖರ್ಚು ಹೆಚ್ಚಾಗುತ್ತದೆ ಎಂದು ಯೋಚನೆಯೇ? ನಾವೇ ಖರ್ಚು ಹಾಕಿ ಮಾಡುತ್ತೇವೆ.... ಅಲ್ಲದೆ ನಿಮ್ಮ ಅಳಿಯನೇ ಊರ ಪುರೋಹಿತ. ಅವನೇ ಮಾಡಿಸುತ್ತಾನೆ'' ಎಂದರು. ನನ್ನ ಮಾವನವರು ತಮ್ಮ ಶಾಂತಿಗಾಗಿ ಎಂದಲ್ಲದಿದ್ದರೂ ಆವರೆಗೆ ಎರಡು ಸಾವಿರ ರೂ.ಗಳನ್ನು ಸೇರಿಸಿಟ್ಟಿದ್ದರು. ''ಅಷ್ಟರಲ್ಲೇ ಸಾಧ್ಯವಾದರೆ ಆಗಲಿ'' ಎಂದು ಹಸಿರು ನಿಶಾನೆ ತೋರಿಸಿದರು. ಇತರ ಹಿರಿಯರು ಈ ವಿಷಯವನ್ನು ನನಗೆ ಹೇಳಿದಾಗ ನಾನು, ''ಎರಡು ಸಾವಿರ ರೂಪಾಯಿ ಬೇಕಾದಷ್ಟಾಯಿತು. ಹಾಗೂ ಹೆಚ್ಚಿಗೆ ಖರ್ಚು ಬಿದ್ದರೆ ನಾವು ನೋಡಿಕೊಂಡರಾಯಿತು'' ಎಂದೆ. ಎಲ್ಲ ಏರ್ಪಾಡುಗಳೂ ಆದವು. ಅವರು ನನ್ನ ಕೈಗೆ ಹಣ ಕೊಟ್ಟಾಗ ೧೫೦೦ ರೂ.ಗಳನ್ನು-ನೋಟುಗಳ ರೂಪದಲ್ಲೂ, ೫೦೦ ರೂ.ಗಳನ್ನು-ಒಂದು ರೂಪಾಯಿನ ನಾಣ್ಯಗಳ ರೂಪದಲ್ಲೂ ಕೊಟ್ಟರು.

ಶಾಂತಿಯೂ ಎಲ್ಲ ರೀತಿಯಲ್ಲೂ ಚೆನ್ನಾಗಿ ನಡೆಯಿತು. ದಾನಧರ್ಮಗಳು ವೇದೋಕ್ತವಾಗಿ ನಡೆದವು. ಎಂದಿನಂತೆ ಎಲ್ಲರೂ ಊಟಕ್ಕೆ ಕುಳಿತಾಗ ಸಭಾ ತಾಂಬೂಲ, ದಕ್ಷಿಣೆ ಕೊಡುವ ಕೆಲಸ ಮಾತ್ರ ಉಳಿದಿತ್ತು. ಸಾಮಾನ್ಯವಾಗಿ ಈ ದಕ್ಷಿಣೆಯನ್ನು ಅವರವರ ಶಕ್ತ್ಯನುಸಾರ ಕೊಡುವುದು ರೂಢಿ. ಹಿರಿಯರಿಗೆ ಹೆಚ್ಚು. ಉಪನಯನ ಆದ ಹುಡುಗರು ಹಾಗೂ ಹೆಣ್ಣುಮಕ್ಕಳಿಗೆ ಅದಕ್ಕಿಂತ ಸ್ವಲ್ಪ ಕಡಮೆ. ಮಕ್ಕಳಿಗೆ ಇನ್ನೂ ಕಡಮೆ ಕೊಡುವುದು. ಅಂದರೆ ಹಿರಿಯರಿಗೆ ಎಂಟಾಣೆಯಾದರೆ, ಹೆಣ್ಣುಮಕ್ಕಳಿಗೆ ನಾಲ್ಕಾಣೆ, ಮಕ್ಕಳಿಗೆ ಒಂದಾಣೆ.... ಹೀಗೆ. ಆ ದಿನ ದಕ್ಷಿಣೆ ಕೊಡಲು ಹೋದಾಗ ಒಂದು ರೂಪಾಯಿಯ ಐದು ನೂರು ಬಿಲ್ಲೆಗಳು ಮಾತ್ರ ಉಳಿದಿದ್ದವು. ನಮಗೆ ಬೇಕಿರುವುದು ಐವತ್ತು ಪೈಸೆ - ಇಪ್ಪತ್ತೈದು ಪೈಸೆ - ಹತ್ತು ಪೈಸೆ ನಾಣ್ಯಗಳು. ಇದನ್ನು ಶಿವಮೊಗ್ಗೆ ಬ್ಯಾಂಕಿನಿಂದ ತರಬೇಕು. ಈಗ ಏನು ಮಾಡೋಣ ಎಂದು ಮಾವನವರಲ್ಲಿ ಕೇಳಿದೆ. ಅದಕ್ಕೆ ಅವರು ನಿರಾತಂಕವಾಗಿ, ''ಮತ್ತೇಕೆ ಯೋಚನೆ ಹಾಗಾದರೆ? ಹಿರಿಯರು, ಕಿರಿಯರು, ಮಕ್ಕಳು ಎಲ್ಲರಿಗೂ ಒಂದೇ ಸಮನಾಗಿ ಒಂದು ರೂಪಾಯಿ ದಕ್ಷಿಣೆಯನ್ನು ಕೊಟ್ಟುಬಿಡಿ. ಹೇಗಿದ್ದರೂ ಅದು ಶಾಂತಿಯ ಖರ್ಚಿಗೆಂದು ಕೊಟ್ಟ ಹಣ. ಅದರಲ್ಲಿ ಮಿಗಿಸುವುದೇನೂ ಬೇಕಿಲ್ಲ'' ಎಂದರು. ನನಗೆ ಆಶ್ಚರ್ಯವಾಯಿತು. ಅಷ್ಟು ಬಡತನ ಕಂಡವರು, ಉಂಡವರು. ಸಿರಿವಂತರ ಮನೆಯಲ್ಲೇ ಈವರೆಗೆ ಯಾವ ಸಮಾರಂಭಕ್ಕೂ ಒಂದು ರೂಪಾಯಿನ ದಕ್ಷಿಣೆ ಕೊಟ್ಟಿರಲಿಲ್ಲ. ಇವರು ಇಷ್ಟು ನಿರಾಳವಾಗಿ ಹೇಳುತ್ತಿದ್ದಾರಲ್ಲ ಎನಿಸಿತು. ಅವರೇ ಅಲ್ಲ, ಆ ರೀತಿಯ ಮನಸ್ಸಿನ ಹಿರಿಯರೇ ಹಾಗೆ ನಮ್ಮೂರಿನಲ್ಲಿ. ತಮ್ಮ ಆದಾಯದ ಒಂದು ಭಾಗವನ್ನು ದಾನಕ್ಕೆ ಅಥವಾ ಮತ್ತೊಂದು ಕೆಲಸಕ್ಕೆ ಎಂದು ಮೀಸಲಾಗಿಟ್ಟರೆ ಅದರಲ್ಲಿ ಜಿಪುಣತನ ಮಾಡುವಂತಿಲ್ಲ. ಎಷ್ಟಿದ್ದರೆ ಅಷ್ಟೂ ಖರ್ಚಾದರೆ ಅದೇ ಸಂತೋಷ! ಇದೂ ಒಂದು ರೀತಿಯ ಹಿರಿತನವಷ್ಟೇ? ನನಗೇ ನಮ್ಮ ಮಾವನವರ ಬಗ್ಗೆ ಆ ಕ್ಷಣ ನಿಜಕ್ಕೂ ಹೆಮ್ಮೆ ಎನಿಸಿತು! ಇನ್ನೇನು? ಎಲ್ಲರಿಗೂ ಒಂದು ರೂಪಾಯಿಯ ದಕ್ಷಿಣೆ! ಎಲ್ಲರೂ ಸಂತೋಷ ಪಡುವಂತಾಯಿತು. ಸಂತೋಷ ಪಟ್ಟವರ ಹಾರೈಕೆ ಇಂದಿಗೂ ನಮ್ಮ ಮಾವನವರ ಮನೆಯ ಮಕ್ಕಳನ್ನು ಕಾಪಾಡಿದೆ! ಅಂತಹವರನ್ನು ಕಂಡೇ ಭಾಸ ''ಹುತಂ ಚ ದತ್ತಂ ಚ ತಥೈವ ತಿಷ್ಠತಿ'' ಎಂದು ಹೇಳಿರುವುದು,

❁ ❁ ❁

ನಿಜಕ್ಕೂ ನಮ್ಮ ಕಾಲದ ಹಿರಿಯರ ಮನೋಭಾವ ಅದೆಷ್ಟು ಸರಳವಾಗಿತ್ತು! ಜತೆಗೆ ಕೆಲವೊಮ್ಮೆ ಹೀಗೇ ಎಂದು ಹೇಳಲಾಗದ ಅವರ ನಡವಳಿಕೆಯೂ ಅಚ್ಚರಿ ಪಡುವಂತೆ ಇರುತ್ತಿತ್ತು. ನಮ್ಮ

ಗಮಕದ ತರೀಕೆರೆ ರಾಮಾಶಾಸ್ತ್ರಿಗಳಿಗೆ ಕಣ್ಣಿನ ಪೊರೆ ತೆಗೆಸುವ ಆಪರೇಷನ್ ಮಾಡಿಸಬೇಕಾಯಿತು. ದೃಷ್ಟಿ ಕ್ಷೀಣವೂ ಆಗಿತ್ತು. ಅದರಿಂದಾಗಿ, ನಾನು ನಮ್ಮ ಸೋದರತ್ತೆಯನ್ನೂ, ಮಾವ ರಾಮಾಶಾಸ್ತ್ರಿಗಳನ್ನೂ ಬೆಂಗಳೂರಿಗೆ ಆಪರೇಷನ್ ಮಾಡಿಸುವ ಸಲುವಾಗಿ ಕರೆತಂದೆ. ಪ್ರಭಾ ಕಣ್ಣಿನ ಆಸ್ಪತ್ರೆಗೆ ದಾಖಲಿಸಿದೆವು. ನಮಗೆ ತಿಳಿದವರಾಗಿದ್ದ ವೆಂಕಟಕೃಷ್ಣ ಅವಧಾನಿಗಳು ಕರಣಿಕರ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದು, ಪ್ರಭಾ ಆಸ್ಪತ್ರೆ ಇದ್ದ ಬಸವನಗುಡಿಯಲ್ಲೇ ಮನೆಯೂ ಇದ್ದವರಾಗಿದ್ದರು. ಅಂಥ ಸ್ಥಿತಿವಂತರಲ್ಲದಿದ್ದರೂ ಉದಾರಿಗಳಾಗಿದ್ದ ಅವರು, ''ಅಶ್ವತ್ಥಾ, ನೀನು ಇಲ್ಲೇ ಬಂದು ಸ್ನಾನ - ತಿಂಡಿ - ಊಟಮಾಡಿ ಆಸ್ಪತ್ರೆಯಲ್ಲಿರು. ನಿನ್ನ ಅತ್ತೆ - ಮಾವನಿಗೂ ಇಲ್ಲಿಂದಲೇ ಊಟ ತೆಗೆದುಕೊಂಡು ಹೋಗು. ಆದರೆ ಆಸ್ಪತ್ರೆ ಓಡಾಟಕ್ಕೆ, ಇತರ ಖರ್ಚಿಗೆ, ನಾನು ಸಹಾಯ ಮಾಡಲಾರೆ'' ಎಂದರು. ನನಗೆ ಅಷ್ಟೇ ಸಾಕಾಗಿದ್ದಿತು. ಯಾಕೆಂದರೆ ನಾವು ಹೋಟೆಲಿಗೆ ಹೋಗುವ ಅಭ್ಯಾಸವಿಲ್ಲದವರು, ಅದಕ್ಕೆ. ದಾಖಲಾದ ಮರುದಿನ ಮಾವನಿಗೆ ಕಣ್ಣಿಗೆ ಷಧಿ ಹಾಕಿ ಮಲಗಿಸಿದರು. ನಾನು ಅವರಿಗೆ ಮಲಗಿರಲು ಹೇಳಿ, ಅತ್ತೆಯನ್ನು ಕರೆದುಕೊಂಡು ಸ್ನಾನ ತಿಂಡಿಗಳನ್ನು ಮುಗಿಸಿಬರಲು ವೆಂಕಟಕೃಷ್ಣ ಅವಧಾನಿಗಳ ಮನೆಗೆ ಹೊರಟೆ. ಅಷ್ಟರಲ್ಲೇ ಮಾವನಿಗೆ ಛಳಿ-ಜ್ವರ ಬಂದೇಬಿಟ್ಟಿತು. ಥರಥರ ನಡುಗಿಹೋದ ಅವರು, ''ಅಶ್ವತ್ಥಾ, ನೀನು ಅತ್ತೆಯನ್ನು ಕರೆದುಕೊಂಡು ಎಲ್ಲೂ ಹೋಗಬೇಡ. ನನ್ನ ಕಥೆ ಮುಗಿಯಿತು. ನೋಡಲ್ಲಿ, ಕೈಚೀಲದಲ್ಲಿ ಭಗವದ್ಗೀತೆ ಪುಸ್ತಕವಿದೆ. ಅದರಲ್ಲಿನ ಹನ್ನೊಂದನೇ ಅಧ್ಯಾಯವನ್ನು ಕೇಳುವ ಹಾಗೆ ಓದು'' ಎಂದರು! ನನಗೆ ಆಶ್ಚರ್ಯ. ''ಮಾವ, ನಿಮಗೆ ಏನೂ ಆಗಿಲ್ಲ. ಕಣ್ಣಿಗೆ ಷಧಿ ಹಾಕಿದ್ದಾರಷ್ಟೆ. ಅಲ್ಲದೆ ಗೀತೆಯ ಉಪದೇಶ ನನಗೆ ಆಗಿಲ್ಲ, ಹೇಗೆ ಓದಲಿ?'' ಎಂದೆ, ಏನಾದರೂ ಕಾರಣ ಕೊಡಬೇಕಲ್ಲ ಎಂದು. ''ನೋಡು, ನಾನು ಹೇಳುತ್ತಿದ್ದೀನಲ್ಲ. ಇದೇ ಉಪದೇಶ, ನಾನೇ ನಿನಗೆ ಗುರು. ಸಂಸ್ಕೃತ ನಿನಗೆ ಬರುತ್ತದೆ ತಾನೆ? ಓದು'' ಎಂದು ಆದೇಶಿಸಿದರು. ಹನ್ನೊಂದನೇ ಅಧ್ಯಾಯ ಓದಿದೆ. ಅಷ್ಟರಲ್ಲೇ ಅದೃಷ್ಟವಶಾತ್ ಡಾಕ್ಟರೂ ಬಂದರು. ''ಏನೂ ಹೆದರಬೇಡಿ. ಸರಿಯಾಗುತ್ತದೆ'' ಎಂದು ಷಧಿ ಕೊಟ್ಟು ಹೋದರು. ರಾತ್ರಿಯೆಲ್ಲ ಅತ್ತೆಗೂ - ನನಗೂ ನಿದ್ರೆ ಇಲ್ಲ.

ಬೆಳಗಾಗಿ ಎದ್ದಾಗ ''ಅಶ್ವತ್ಥಾ, ಅಶ್ವತ್ಥಾ'' ಎಂದಂತೆ ನನಗೆ! ಎದ್ದು ನೋಡಿದರೆ ಮಾವ, ''ಅಶ್ವತ್ಥಾ!... ನೋಡು, ನನಗೆ ಕಣ್ಣಿನ ಆಪರೇಷನ್ ಆಯಿತು. ನಾನೀಗ ಹುಷಾರಾಗಿದ್ದೇನೆ'' ಎನ್ನುವುದೇ? ಬೆಳಗಿನ ಜಾವವೇ ಅವರನ್ನು ಒಯ್ದು ಆಪರೇಷನ್ ಮಾಡಿದ್ದರು. ಅಂತೂ ಮಾವ ಗುಣಮುಖರಾದರು. ನಾವು ಊರಿಗೆ ವಾಪಸಾದೆವು.

ಕೆಲವು ವರ್ಷಗಳು ಕಳೆದ ಮೇಲೆ ಮಾವನಿಗೆ (ರಾಮಾಶಾಸ್ತ್ರಿಗಳಿಗೆ) ಬೆನ್ನಿನ ಮೇಲೆ ಒಂದು ಗಂಟಾಯಿತು. ಅದು ಅಂಗಿ ಹಾಕಿಕೊಂಡಾಗ ಉಬ್ಬಿದಂತೆ ಕಾಣತೊಡಗಿತು. ಮಾವನಿಗೆ ಏಕೋ ಇರುಸು ಮುರುಸಾಗಿ, ನಾವು ಶಿವಮೊಗ್ಗದ ನರಹರಿ ಡಾಕ್ಟರ ಹತ್ತಿರಕ್ಕೆ ಹೋದೆವು. ಅವರು, ''ನೋಡೋಣ. ಇಲ್ಲಿ ಏನೂ ಹೇಳಲಾಗದು. ನೀವು ಒಮ್ಮೆ ಬೆಂಗಳೂರಿಗೆ ಕರೆದೊಯ್ದು ತೋರಿಸಿಬಿಡಿ. ಆಗ ನೆಮ್ಮದಿ. ಖಂಡಿತಾ ಬೇರೆಲ್ಲೂ ಹೋಗಬೇಡಿ'' ಎಂದು ಸಲಹೆ ಮಾಡಿದರು. ಕ್ಯಾನ್ಸರ್ ಆಗಿರಬಹುದೋ ಎಂದು ನನಗೂ ಚಿಂತೆಯುಂಟಾಯಿತು. ನಮ್ಮೂರಿನ ಹತ್ತಿರದ ಹೊಸಬಾಳೆಯಲ್ಲಿ ವೈದ್ಯರೊಬ್ಬರು ಬೇರಿನ ಷಧಿ ಕೊಡುತ್ತಾರೆಂದು ತಿಳಿಯಿತು. ಮಾವನವರು, ''ಅಶ್ವತ್ಥಾ! ಅಲ್ಲಿಗೊಮ್ಮೆ ಹೋಗಿ ತೋರಿಸಿಕೊಂಡು ಬರೋಣವಾ?'' ಎಂದರು. ಕಣ್ಣಿನ ಆಪರೇಷನ್ ದಿವಸ ಹೆದರಿ ನಡುಗಿದ್ದ ಮಾವನವರನ್ನು ನಾನು ಮೊದಲೇ ಕಂಡಿದ್ದೆನಲ್ಲ! ಅವರ ಆತಂಕ ಸಹಜವಾಗಿ ಕಂಡಿತು. ಮರುದಿನ ಅವರನ್ನು ಕರೆದುಕೊಂಡು ಹೊಸಬಾಳೆಗೆ ಹೋದೆ.

ನಾವು ವೈದ್ಯರನ್ನು ಕಾಣಲು ಹೋಗುತ್ತಿದ್ದಾಗ ಹೊಸಬಾಳೆಯ ಸಮೀಪ, ನಮ್ಮೆದುರಿಗೇ ನರಹರಿ ಡಾಕ್ಟರು ಬರಬೇಕೆ? ಮಾವನೇ ಮೊದಲು ಅವರನ್ನು ನೋಡಿದವರು. ''ಅಶ್ವತ್ಥಾ, ಅಲ್ಲಿ ನೋಡು, ನರಹರಿ ಡಾಕ್ಟರು... ಇದು ಅವರ ಊರೇ ಕಣೋ'' ಎಂದವರೇ ತಮ್ಮ ಕೈಲಿದ್ದ ಛತ್ರಿಯನ್ನು ಬಿಡಿಸಿ ಮುಖ ಮರೆಮಾಡಿ ಹಿಡಿದುಕೊಳ್ಳುವುದೇ? ನನಗೋ ನಗು.... ಮಳೆ ಇಲ್ಲ, ಬಿಸಿಲಿಲ್ಲ. ಇವರು ಛತ್ರಿ ಬಿಡಿಸಿ ಮುಖದ ಮುಂದಕ್ಕೆ ಬಾಗಿಸಿ ಹಿಡಿದುಕೊಂಡಿದ್ದಾರೆ! ಅಷ್ಟರಲ್ಲಿ ಡಾಕ್ಟರು ನಮ್ಮನ್ನು ನೋಡಿಯಾಗಿತ್ತು. ಅವರೇ ನೇರವಾಗಿ ನಮ್ಮ ಬಳಿ ಬಂದರು. ಛತ್ರಿ ಹಿಡಿದಿದ್ದ ಮಾವನನ್ನು ಕಂಡು ನಗುತ್ತಲೇ, ''ಓ.... ಏನು ಶಾಸ್ತ್ರಿಗಳೇ? ಇಲ್ಲಿನ ವೈದ್ಯರನ್ನು ನೋಡಿಹೋಗಲು ಬಂದಿರಾ?'' ಎಂದು ಕೇಳಿಯೇಬಿಟ್ಟರು! ನಾವು ಅವಾಕ್ಕಾದೆವು. ನಾನು, ''ಹೌದು ಡಾಕ್ಟರೆ'' ಎಂದೆ ಚುಟುಕಾಗಿ. ''ನೋಡಿ.... ನೋಡಿಕೊಂಡೇ ಬೆಂಗಳೂರಿಗೂ ಒಮ್ಮೆಹೋಗಿ ತೋರಿಸಿಬನ್ನಿ'' ಎಂದು ಮುಂದೆ ಸಾಗಿದರು.

ಅಲ್ಲಿನ ವೈದ್ಯರೂ ಬೆಂಗಳೂರಿಗೊಮ್ಮೆ ತೋರಿಸಿ ಬರಲು ಹೇಳಿದ ಕಾರಣ ನಾನು ಮಾವನನ್ನು ಕರೆದುಕೊಂಡು ಬೆಂಗಳೂರಿಗೆ ಹೋದೆ. ನಾವು ನಮಗೆ ತಿಳಿದಿದ್ದ ಸುಪ್ರಸಿದ್ಧ ವೈದ್ಯರಾಗಿದ್ದ ಡಾ. ವೆಂಕಟಸುಬ್ಬರಾವ್‌ರಲ್ಲಿಗೇ ಹೋದೆವು. ಅವರು ಮಾವನ ಭುಜದ ಮೇಲಿನ ಗಂಟನ್ನು ಪರೀಕ್ಷಿಸಿ, ''ಶಾಸ್ತ್ರಿಗಳೇ, ನಿಮಗೆ

ಈಗ ಎಪ್ಪತ್ತು ವರ್ಷ. ಆಪರೇಷನ್ ಏಕೆ ಮಾಡಬೇಕು? ಅದು ಬಹುಶಃ ಕ್ಯಾನ್ಸರ್ ಅಲ್ಲ. ನನಗೆ ತಿಳಿದಿದೆ. ಅದು ಹಾಗೆಯೇ ಇರಲಿ ಬಿಡಿ. ಆಪರೇಷನ್ ಮಾಡಿದರೆ ನೋವು, ಜತೆಗೆ ಕುತ್ತಿಗೆ ಬೆನ್ನು ಸೇರಿಸಿ ಹೊಲೆದಾಗ ನಿಮ್ಮ ರೂಪ ಕೆಡುತ್ತದೆ. ಈಗ ಅದೇನೂ ನಿಮಗೆ ಹಾನಿ ಮಾಡುತ್ತಿಲ್ಲ. ಕಥೆ ಮಾಡಲು ಹೋದಾಗ ಸಡಿಲವಾದ ಅಂಗಿ ಹಾಕಿಕೊಳ್ಳಿ, ಶಾಲು ಹೊದ್ದರೆ ಅದೇನೂ ಕಾಣದು. ವೃಥಾ ಆಪರೇಷನ್ ಬೇಡ'' ಎಂದರು. ಮಾವ ಹಣವನ್ನು ಹೊಂದಿಸಿಕೊಂಡು, ಆಪರೇಷನ್‌ಗೆ ಮಾನಸಿಕವಾಗಿ ಸಿದ್ಧರಾಗಿಯೂ ಬಂದಿದ್ದರು. ಆದರೆ ಡಾಕ್ಟರು ಆಪರೇಷನ್ ಬೇಡ ಎಂದ ಮೇಲೆ ಸಮಾಧಾನದಿಂದ ಊರಿಗೆ ಹಿಂದಿರುಗಿದೆವು. ಕಣ್ಣಿನ ಆಪರೇಷನ್‌ನಲ್ಲಿ ನೋವಿಲ್ಲ, ಶರೀರದ ಅಂಗವನ್ನು ಕತ್ತರಿಸುವುದೂ ಇರಲಿಲ್ಲ. ಶರೀರಕ್ಕೆ ಸೇರದ ಬೇಳೆಯಗಲದ ಪೊರೆಯನ್ನು ತೆಗೆಸಿಕೊಳ್ಳುವಾಗ ಅಷ್ಟು ಗಲಾಟೆ ಮಾಡಿದ ಮಾವ, ದೇಹವನ್ನು ಕೊಯ್ದು ಆಪರೇಷನ್ ಮಾಡಿಸಿಕೊಳ್ಳಲು ದೃಢಮನಸ್ಕರಾಗಿ, ದುಡ್ಡನ್ನು ಹೊಂದಿಸಿಕೊಂಡು ಬಂದದ್ದು ನನಗೆ ನಿಜಕ್ಕೂ ಇಂದಿಗೂ ಅಚ್ಚರಿಯ ನಡವಳಿಕೆಯೇ ಸರಿ! ಆದರೆ ಡಾಕ್ಟರು ಒಳ್ಳೆಯವರಾದ ಕಾರಣ ಅನವಶ್ಯಕವಾದ ನೋವನ್ನೂ, ಖರ್ಚನ್ನೂ ಮಾಡಿಸದೆ ಧೈರ್ಯ ಹೇಳಿ ಕಳುಹಿಸಿದರು.

❁ ❁ ❁

ನಾವು ಡಾಕ್ಟರನ್ನು ಅದೆಷ್ಟು ನಂಬಿರುತ್ತೇವೆ! ಅವರು ನಿಜಕ್ಕೂ ನಡೆದಾಡುವ, ಕಣ್ಣಿಗೆ ಕಾಣುವ ದೇವರುಗಳಂತೆ. ಅನಾರೋಗ್ಯದ ಸಮಯದಲ್ಲಿ ನಮ್ಮ ಶರೀರವನ್ನು ಕಾಪಾಡುವ ದೇವತೆಗಳು ಅವರು. ಡಾಕ್ಟರ ವಿಷಯ ಬಂದಾಗ ನಮ್ಮೂರಿನ ಕೃಷ್ಣಮೂರ್ತಿ ಡಾಕ್ಟರ ವಿಷಯವನ್ನು ಹೇಳಲೇಬೇಕು.

ಕೃಷ್ಣಮೂರ್ತಿ ಡಾಕ್ಟರು ವಿಶೇಷವಾದ ಚಿಕಿತ್ಸಕರು. ಮಿಲಿಟರಿಯಲ್ಲಿದ್ದು ನಿವೃತ್ತರಾಗಿ ಬಂದು ಶಿವಮೊಗ್ಗೆಯಲ್ಲಿ 'ಮಲೆನಾಡು ಆಸ್ಪತ್ರೆ' ಎಂಬ ಕ್ಲಿನಿಕ್ ಇಟ್ಟಿದ್ದವರು. ಅವರ ಮಾತು ಕಠಿಣ. ನೋಟವೂ ಅಷ್ಟೆ. ಬೆಕ್ಕಿನ ಕಣ್ಣಿನ ಅವರು ನೋಡಲು ಅಂಥ ರೂಪವಂತರಲ್ಲ. ಆದರೆ ಬಹಳ ಒಳ್ಳೆಯ ಹೃದಯದ ಡಾಕ್ಟರು. ಸಿದ್ಧಹಸ್ತರು. ಆದರೆ ಸಿಡುಕಿನ ವಿಚಿತ್ರ ಸ್ವಭಾವ. ಒಮ್ಮೆ ನಮ್ಮ ತೋಟದ ಆಳಿಗೆ ಕೊಳಕಮಂಡಲದ ಹಾವು ಕಚ್ಚಿತು. ನಾರುಬೇರಿನ ಷಧಿ ಮಾಡಿದರು ಅವನ ಜನ. ಆದರೆ ಕಾಲು ಕೊಳೆತಂತೆ ಆಗಿ ಬಾತುಕೊಂಡಿತು. ಕೃಷ್ಣಮೂರ್ತಿ ಡಾಕ್ಟರ ಹತ್ತಿರ ಹೋಗಲು ಅವನಿಗೆ ಹೇಳಿದ, ನನ್ನ ತಮ್ಮ ಸೀತಾರಾಮ. ಒಂದು ಚೀಟಿಯನ್ನು ಡಾಕ್ಟರಿಗೆ ಬರೆದು ಅವನ ಕೈಲಿ ಕೊಟ್ಟೆವು.

ಅವನು ಹೋಗಿ ತೋರಿಸಿಕೊಂಡಾಗ ಡಾಕ್ಟರು ಸಿಡುಕಿ ''ಏನಾಯ್ತು?'' ಎಂದರು. ''ಹಾವು ಕಡಿದಿದೆ'' ಎಂದ. ''ಏನು ಹಾಕಿದೆ?'' ''ಸೊಪ್ಪು, ಮೈಲುತುತ್ತ'' ಎಂದ ಇವನು. ''ಸರಿ.... ಆಯಿತು. ಯಮನ ಹತ್ತಿರ ಹೊರಡು ಇನ್ನು. ಸರ್ಕಾರಿ ಆಸ್ಪತ್ರೆಗೆ ಹೋಗು. ಅಲ್ಲಿಂದ ಬೇಗನೇ ಹೋಗಬಹುದು'' ಎಂದು ರೇಗಿದರು. ಅದನ್ನು ನಿಜವೆಂದೇ ನಂಬಿದ ಅವನು ಬಾತುಕೊಂಡ ಕಾಲೆಳೆಯುತ್ತ ಹೊರಟ. ''ಏಯ್.... ಹೋಗು ಎಂದರೆ ಹೊರಟೇಬಿಟ್ಟೆಯಾ? ನಡಿ ಒಳಗೆ'' ಎಂದು ಕರೆದು ತಮ್ಮ ಚಿಕಿತ್ಸಾ ರೂಮಿಗೆ ಕರೆದೊಯ್ದರು.

ಒಳ್ಳೆಯ ಚಿಕಿತ್ಸೆ ಮಾಡಿದರು. ''ಎಂಟುದಿನ ಇಲ್ಲೇ ಇರಬೇಕು ನೀನು. ಇಲ್ಲೇ ಹಾಲು-ಬ್ರೆಡ್ಡು ಕೊಡುತ್ತಾರೆ. ನಿನ್ನ ಹೆಂಡತಿ ಹೊರಗೆಲ್ಲಾದರೂ ಊಟ ಮಾಡಲಿ.... ತಿಳಿಯಿತೇ'' ಎಂದರು. ಬಡವರಿಗೆ ಉಚಿತ ಸೇವೆ ಅವರದು! ಜತೆಗೆ ಊಟ, ಹಣ್ಣು, ಹಾಲು ಸಹ ಉಚಿತ. ಅಂತೂ ನಮ್ಮ ಆಳಿನ ಕಾಲು ಗುಣವಾಗಿ ಅವನು ನಡೆಯುವಂತಾದ. ಕೃತಜ್ಞತೆಯಿಂದ ''ಏನು ಕೊಡಲಿ?'' ಎಂದಾಗ ''ಏನೂ ಬೇಡ... ಹೋಗು'' ಎಂದು ಹೇಳಿ ಕಳುಹಿಸಿದರು. ಅದು ಅವರ ದಾರ್ಯ.

ಕೆಲವು ವರ್ಷಗಳ ಅನಂತರ ಅವರು ಶಿವಮೊಗ್ಗದಿಂದಾಚೆ ನಾಲ್ಕು ಮೈಲಿ ದೂರದಲ್ಲಿನ ತಮ್ಮ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಇರತೊಡಗಿದಾಗಲೂ ಅವರ ಬಳಿಗೆ ಬರುವ ರೋಗಿಗಳಿಗೇನೂ ಕಡಿಮೆ ಇರಲಿಲ್ಲ. ಅಷ್ಟು ಸುಪ್ರಸಿದ್ಧರಾಗಿದ್ದರು ಅವರು. ಜತೆಗೆ ಅವರ ಉದಾರ ಮನೋಭಾವ ಅವರಿಗೆ ಜನಪ್ರಿಯತೆಯನ್ನೂ ತಂದುಕೊಟ್ಟಿತ್ತು. ಒಮ್ಮೆ ಚಿಕ್ಕಮಗಳೂರಿನವರೊಬ್ಬರು ತಮ್ಮ ಒಬ್ಬಳೇ ಮಗಳನ್ನು ಕೃಷ್ಣಮೂರ್ತಿ ಡಾಕ್ಟರಲ್ಲಿಗೆ ಕರೆತಂದರು. ಆ ಹುಡುಗಿಗೆ ಮದುವೆಯಾದ ದಿನದಿಂದಲೂ ಬಿಡದ ತಲೆನೋವು. ಮದುವೆಯಾಗಿ ಒಂದು ವರ್ಷವಾದರೂ ಬವಣೆ ಪಡುತ್ತಿದ್ದಳು ಆಕೆ. ಅವಳ ತಲೆನೋವು ಆವರೆಗೆ ವಾಸಿಯಾಗಿರಲಿಲ್ಲ. ಬೆಂಗಳೂರು, ಹಾಸನದ ಡಾಕ್ಟರುಗಳಿಗೆ ತೋರಿಸಿಯಾಗಿತ್ತು. ಚಿಕಿತ್ಸೆಯೂ ಸಾಕಷ್ಟು ನಡೆದಿತ್ತು. ಕಾರಣ ಮಾತ್ರ ಗೊತ್ತಾಗಲಿಲ್ಲ. ತಲೆನೋವೂ ನಿಲ್ಲಲಿಲ್ಲ. ಮದುವೆಯಾದ ಹುಡುಗನ ತಂದೆ ತಾಯಿಗೆ ಬೇಸರ, ಅನುಮಾನ; 'ಕಾಯಿಲೆ ಹುಡುಗಿಯನ್ನು ನಮ್ಮ ಮಗನಿಗೆ ಗಂಟುಹಾಕಿದ್ದಾರೋ' ಎನ್ನುವ ಆತಂಕ. ಅವರು ಬೇರೆ ಹುಡುಗಿಯನ್ನು ನೋಡುವ ಪ್ರಯತ್ನದಲ್ಲಿ ತೊಡಗಿದಾಗ, ತಂದೆ-ತಾಯಿ ಈ ಡಾಕ್ಟರ ವಿಷಯ ತಿಳಿದು ಹುಡುಗಿಯನ್ನು ಕರೆದು ತಂದಿದ್ದರು. ಡಾಕ್ಟರು ಆ ಹುಡುಗಿಯನ್ನು ಹತ್ತಿರ ಕರೆದು ನೋಡಿದರು. ಹೊರಗೆ ಆಚೆಗೆ ಕರೆದೊಯ್ದರು. 'ಜೋರಾಗಿ ನಡಿ' ಎಂದರು. 'ಇಲ್ಲಿ ಕುಳಿತುಕೋ' ಎಂದರು.

ಬಿಸಿಲಿನಲ್ಲಿ ನಿಲ್ಲಿಸಿ ನೋಡಿದರು. ಅವರಿಗೆ ಏನನ್ನಿಸಿತೋ, ''ನೋಡು, ಇದು ಯಾವ ಮೂಗುತಿ?'' ಎಂದು ಕೇಳಿದರು. ''ಇದು ವಜ್ರದ್ದು.'' ''ಯಾವಾಗ ಹಾಕಿಕೊಂಡದ್ದು?'' ''ಮದುವೆಯ ದಿನ. ನಮ್ಮ ತಂದೆ ಮಾಡಿಸಿಕೊಟ್ಟದ್ದು.'' ''ಅಂದಿನಿಂದ ತೆಗೆದೇ ಇಲ್ಲವೇ?'' ''ಇಲ್ಲ'' ಎಂದಳು. ''ಸರಿ.... ಹಾಗಾದರೆ ಈಗ ಅದನ್ನು ತೆಗೆದಿಡು'' ಎಂದರು. ತಂದೆ-ತಾಯಿ ಮಗಳ ಮೂಗುತಿ ತೆಗೆಸಿಟ್ಟುಕೊಂಡರು. ''ಈಗ ಅರ್ಧ ಗಂಟೆ ಮಲಗು'' ಎಂದರು ಡಾಕ್ಟರು. ಹುಡುಗಿ ಹಾಗೆಯೇ ಮಾಡಿದಳು. ಹೊತ್ತು ಕಳೆದಂತೆ ಅವಳ ತಲೆನೋವು ಮಾಯವಾಗಿತ್ತು! ''ಇನ್ನು ಈ ಮೂಗುತಿಯನ್ನು ನೀನು ಧರಿಸಬಾರದು. ಬೇಕಾದರೆ ಮಬ್ಬಾಗಿರುವುದು ಹಾಕಿಕೋ. ಕೆಲವು ವಜ್ರಾಭರಣಗಳು ಹಾಗೆಯೇ. ಮೂಗುತಿ ಫಳಫಳನೆ ಹೊಳೆಯುತ್ತಿದ್ದರೆ ಕಣ್ಣು ತನಗರಿವಿಲ್ಲದೇ ಅದನ್ನೇ ನೋಡುತ್ತಿರುತ್ತದೆ. ಹಾಗೆ ಕೇಂದ್ರೀಕರಿಸಿದ ದೃಷ್ಟಿಯಿಂದ ನರಗಳಿಗೆ ಆಯಾಸವಾಗಿ ತಲೆನೋವು ಬರುತ್ತದೆ'' ಎಂದು ನಮ್ಮ ಕೃಷ್ಣಮೂರ್ತಿ ಡಾಕ್ಟರು ಹುಡುಗಿಯ ತಲೆನೋವಿಗೆ ಕಾರಣವನ್ನು ಹೇಳಿ, ಪರಿಹಾರವನ್ನು ಮಾಡಿ ಕಳುಹಿಸಿಕೊಟ್ಟರು. ಅನಂತರ ಆ ಹುಡುಗಿಯ ಬದುಕು ಸರಿಯಾಯಿತೆಂದು ಹೇಳಬೇಕಿಲ್ಲವಲ್ಲ?!

ನಮ್ಮೂರಿನ ನಮ್ಮ ಕೇಶವಮೂರ್ತಿಯ ಅಣ್ಣ ಸುಬ್ರಾಯಶಾಸ್ತ್ರಿಗಳು ಒಮ್ಮೆ ಗದ್ದೆಗೆ ಹೋದಾಗ ತಿಳಿಯದೆ ಆಗ ತಾನೆ ಕೆಳಗೆ ಬಿದ್ದಿದ್ದ ಭಾರೀ ಜೇನು ತಟ್ಟೆಯನ್ನು ತುಳಿದುಬಿಟ್ಟರು. ಮೈಯೆಲ್ಲ ಜೇನು ಹುಳುಗಳು ತುಂಬಿಕೊಂಡವು. ಅವರು ಎಚ್ಚರ ತಪ್ಪಿದರು. ಅಲ್ಲಿಯೇ ಕಬ್ಬು ಕಡಿಯುತ್ತಿದ್ದವನೊಬ್ಬ ದೂರದಿಂದ ಇವರು ಬಿದ್ದದ್ದು ನೋಡಿದ. ಪಂಜು ಹಚ್ಚಿ ಜೇನನ್ನು ಬೆದರಿಸಿದ, ಮಿಕ್ಕವರು ಅವರನ್ನು ಹೇಗೋ ಊರಿಗೆ ಸಾಗಿಸಿಕೊಂಡು ಬಂದರು. ಮೈತುಂಬ ಕಂಬಳಿಹೊದ್ದಂತೆ ಮುಳ್ಳುಗಳು ನೆಟ್ಟಿದ್ದವು. ನಾವು 'ಇನ್ನು ಶಾಸ್ತ್ರಿಗಳು ಉಳಿಯುವುದಿಲ್ಲ, ಮುಗಿಯಿತು ಅವರ ಕಥೆ' ಎಂದೇ ಭಾವಿಸಿದೆವು. ಅವರ ತಂದೆ-ತಾಯಿ ಹೀಗಿದ್ದ ಮಗನನ್ನು ಕಂಡು ಮೂರ್ಛೆ ಹೋದರು. ನಮ್ಮೂರ ಕೃಷ್ಣರಾಯರ ಕಾರಿನಲ್ಲಿ ಅವರನ್ನು ಶಿವಮೊಗ್ಗೆಗೆ ಕರೆತಂದು ನರಹರಿ ಡಾಕ್ಟರಲ್ಲಿಗೆ ಒಯ್ದೆವು. ಜೀವ ಇದ್ದುದನ್ನು ಖಚಿತಪಡಿಸಿಕೊಂಡ ಡಾಕ್ಟರು ಅವರನ್ನು ಒಳಗೆ ಕರೆದೊಯ್ದರು. ಹತ್ತಾರು ಚಿಮಟಗಳನ್ನು ತರಿಸಿದರು. ಅವರ ಆಸ್ಪತ್ರೆಯಲ್ಲಿದ್ದ ರೋಗಿಗಳ ಕೈಲೆಲ್ಲಾ ಒಂದೊಂದು ಚಿಮಟವನ್ನು ಕೊಟ್ಟು ಮುಳ್ಳು ತೆಗೆಸಿದರು. ನಂಜಾಗದಂತೆ ಇಂಜೆಕ್ಷನ್ ಮಾತ್ರೆಗಳನ್ನು ಕೊಟ್ಟರು. ಮಾರನೆಯ ದಿನ ಮುಖ ಊದಿಕೊಂಡಿತ್ತಾದರೂ ಕ್ರಮೇಣ ಸುಬ್ರಾಯಶಾಸ್ತ್ರಿಗಳು ಗುಣಮುಖರಾದರು. ಈಗಲೂ ಚೆನ್ನಾಗಿದ್ದಾರೆ. ಆ ಸಮಯಕ್ಕೆ ಬೆಂಕಿಯ ಪಂಜಿನಿಂದ ಹುಳ ಓಡಿಸಿದ್ದೂ, ಕೃಷ್ಣರಾಯರ ಕಾರು ದೊರಕಿದ್ದೂ ಎಲ್ಲಾ ದೈವೀಕೃಪೆ ಎನ್ನಬೇಕು.

❁ ❁ ❁

ಬಾವಿಕಟ್ಟೆ ಸುಬ್ರಾಯ ಅವಧಾನಿಗಳು ಮಿಕ್ಕ ಹಿರಿಯರಂತೆ ವ್ರತ, ನೇಮ-ನಿಷ್ಠೆ ಇದ್ದ ವೈದಿಕರು. ಒಮ್ಮೆ ಹೀಗಾಯಿತು. ಆಗ ನಮ್ಮೂರಿಗೆ ಬರುವ ದಾರಿಯಲ್ಲಿ ಒಂದು ಚಿಕ್ಕ ಬೆಟ್ಟದ ಕಿರುದಾರಿ ಇದ್ದು, ಅಲ್ಲಿ ನಮ್ಮ ತಂದೆ ಒಂದೆರಡು ಸಾರಿ ಹುಲಿಯನ್ನು ನೋಡಿದ್ದರು. ರಾತ್ರಿಯ ವೇಳೆ ಊರಿಗೆ ಬರುವವರು ಜೋರಾಗಿ ಹಾಡುತ್ತಲೋ, ಮಂತ್ರಹೇಳುತ್ತಲೋ ಬರುವುದು ರೂಢಿ. ಕಿರುದಾರಿಯ ಅಕ್ಕಪಕ್ಕದಲ್ಲಿ ಕಾಡು ಇದ್ದ ಕಾರಣ ನಮಗೆ ಆಗೀಗ ತೊಂದರೆ ಕೊಡುತ್ತಿದ್ದ ಜನಾಂಗದವರು ಅಲ್ಲಿ ಅವಿತುಕೊಂಡು ಹೆದರಿಸುವುದಿತ್ತು. ಒಮ್ಮೆ ಸುಬ್ರಾಯ ಅವಧಾನಿಗಳು ಮಂಡಿಗೆ ಅಡಿಕೆ ಹಾಕಿ ಸಿಕ್ಕ ಮುನ್ನೂರು ರೂಪಾಯಿಗಳನ್ನು ಕೈಚೀಲದಲ್ಲಿಟ್ಟು ಕೊಂಡು ಬರುತ್ತಿದ್ದರು. ರಾತ್ರಿ ಎಂಟು ಗಂಟೆ. ಅವರನ್ನು ಒಂದಿಬ್ಬರು ಅನುಸರಿಸುತ್ತಾ ಹಿಂದೆಯೇ ಬಂದರು. ಅವಧಾನಿಗಳಿಗೆ ಅನುಮಾನವಾಗಿ ಮುಂದಿನ ತಿರುವಿನ ಹತ್ತಿರದ ಮರದ ಕೆಳಗಿದ್ದ ಗಿಡಗಳ ಪೊದರಿನ ಒಳಗೆ ತಮ್ಮ ಕೈಚೀಲವನ್ನೆಸೆದು ಮುಂದೆ ನಡೆದರು. ಅವರಿಗೆ ಅವಧಾನಿಗಳು ಹಾಗೆ ಮಾಡಿದುದು ತಿಳಿಯಲಿಲ್ಲ. ಮಾರು ದೂರ ಹೋಗುವಷ್ಟರಲ್ಲೇ ಆ ಇಬ್ಬರು ಯುವಕರೂ ಇವರನ್ನು ಬಲವಾಗಿ ಹಿಡಿದುಕೊಂಡು ಎಲ್ಲವನ್ನೂ ಶೋಧಿಸಿದರು. ಕೈ, ಕಿವಿಗಳಲ್ಲೂ ಏನೂ ಇರಲಿಲ್ಲ. ಕೈಚೀಲವೂ ಇರಲಿಲ್ಲ. ನಿರಾಸೆಯಾಗಿ ಬಿಟ್ಟು ಓಡುತ್ತಿದ್ದ ಅವರನ್ನು ಕಂಡು ಅವಧಾನಿಗಳಿಗೆ ಕೋಪ ನೆತ್ತಿಗೇರಿತು, ''ಅನವಶ್ಯಕವಾಗಿ ಬಂದು ನನ್ನನ್ನು ಮುಟ್ಟಿಕೊಂಡಿರಿ. ಶೋಧಿಸಿದಿರಿ. ಏನು ಸಿಕ್ಕಿತೋ ನಿಮಗೆ? ಉರಿದು ಹೋಗುವಿರಿ. ಹೀಗೆ ಅನ್ಯಾಯ ಮಾಡುವ ನಿಮ್ಮಂಥವರ ಊರು - ಕೇರಿ ಸುಟ್ಟು ಬೂದಿಯಾಗಿ ಹೋಗುವುದು'' ಎಂದು ಕೂಗಿಹೇಳಿ ಊರಿಗೆ ಬಂದು ಸ್ನಾನಮಾಡಿ ಊಟ ಮಾಡಿ ಮಲಗಿದರು. ಅದೇನು ಕಾರಣವೋ, ಆ ರಾತ್ರಿ ಬೆಂಕಿ ಅನಾಹುತವಾಗಿ ಆ ಹಳ್ಳಿಯೂ, ಅಲ್ಲಿನ ಕೆಲವಾರು ಮನೆಗಳೂ ಸುಟ್ಟು ಭಸ್ಮವಾದವು. ಅವರು ನೋವಿನಿಂದ ಬೈದದ್ದು, ಅಲ್ಲಿ ನಡೆದದ್ದು ಎರಡೂ ಕಾಕತಾಳೀಯವೆನಿಸಿದರೂ ಸಜ್ಜನರನ್ನು ನೋಯಿಸಿದರೆ ಒಂದಲ್ಲ ಒಂದು ಗ್ರಹಚಾರವೇ ಕಾದಿರುತ್ತದೆ ಎನ್ನುವ ನಮ್ಮ ನಂಬಿಕೆಯೂ ಸುಳ್ಳಲ್ಲ. ಸುಭಾಷಿತವೊಂದು ಹಾಗೆಯೇ ಹೇಳುತ್ತದೆ -

ಸತಾಂ ಸಂತೋಷಮುತ್ಪಾದ್ಯ । ಆಶಿಷೋ ನೈವ ಯಾಚಯೇತ್॥

ಸತಾಂ ಸಂತಾಪಮುತ್ಪಾದ್ಯ । ಶಾಪಂ ದೇಹೀತಿ ನೋ ವದೇತ್॥

❁ ❁ ❁

ಅಶ್ವತ್ಥಪುರ ಎನ್ನುವ ಊರಿನಲ್ಲಿ ಒಮ್ಮೆ ಸಿರಿವಂತರ ಸಂಸ್ಥೆಯಲ್ಲಿ ಒಂದು ಶಾಂತಿಕಾರ್ಯ ನಡೆಯುವುದಿತ್ತು. ಆ ಮನೆಯವರು ತಾವು ಗೊತ್ತು ಮಾಡಿದ ಆಚಾರ್ಯ ವೇ. ಬ್ರಂ.ಶ್ರೀ ಕೇಶವಮೂರ್ತಿ ಘನಪಾಠಿಗಳಿಗೆ ಶಾಂತಿಕಾರ್ಯಕ್ಕೆ ಋತ್ವಿಜರನ್ನೂ ತಾವೇ ಕರೆತರಬೇಕೆಂದು ಹೇಳಿದ್ದರು. ಆ ಘನಪಾಠಿಗಳು ನಮ್ಮೂರಿನ ವೇ.ಬ್ರಂ.ಶ್ರೀ ಶ್ರೀನಿವಾಸಾವಧಾನಿಗಳು, ಲಕ್ಷ್ಮೀರಮಣ ಅವಧಾನಿಗಳು, ಮತ್ತು ಕೇಶವ ಅವಧಾನಿಗಳನ್ನು ಆಹ್ವಾನಿಸಿ ತಮ್ಮ ಜತೆಯಲ್ಲಿ ಕರೆದೊಯ್ದರು. ನಮ್ಮ ತಾಯಿಯ ಸೋದರಮಾವ ಲಕ್ಷ್ಮೀರಮಣಅವಧಾನಿಯವರು ಸೂರ್ಯನಮಸ್ಕಾರಕ್ಕಾಗಿ ಹೋಗಿದ್ದರು. ಅಲ್ಲಿ ಶಾಂತಿಕಾರ್ಯ ನಡೆಯುವುದಕ್ಕೆ ಮುಂಚೆ ಆ ಮನೆಯ ಆಹ್ವಾನಿತರಲ್ಲೊಬ್ಬರು ಋತ್ವಿಜರನ್ನು ಪ್ರಶ್ನೆ ಮಾಡಲು ಪ್ರಾರಂಭಿಸಿದರು, ''ನೀವು ಯಾವುದನ್ನು ಮಾಡಲು ಬಂದಿದ್ದೀರಿ?'' ''ನಿಮಗೆ ಪೂರ್ತಿಪಾಠವಾಗಿದೆಯೇ?'' ''ಎಷ್ಟರವರೆಗೆ? ಏನು?'' ಎಂದೆಲ್ಲ ಪರೀಕ್ಷಕರಂತೆ ಪ್ರಶ್ನೆ ಮಾಡುತ್ತಿದ್ದ ಅವರ ಪ್ರಶ್ನೆಗಳಿಗೆ ಅವರಿಗಿಂತಲೂ ಬಹಳ ಹಿರಿಯರಾದ ಋತ್ವಿಜರು ಕಸಿವಿಸಿ ಎನ್ನಿಸಿದರೂ ಉತ್ತರಿಸುತ್ತಿದ್ದರು. ಎಲ್ಲರಿಗೂ ಒಂದು ರೀತಿಯ ಅವಮಾನವಾದ ಅನುಭವ. ಆದರೂ ಮಾತನಾಡಲಿಲ್ಲ. ಲಕ್ಷ್ಮೀರಮಣ ಅವಧಾನಿಯವರ ಸರದಿ ಬಂದಾಗ ಅವರು, ''ಸೂರ್ಯನಮಸ್ಕಾರ ಮಾಡಲು ಬಂದಿದ್ದೀರಾ?'' ಎಂದರು. ''ನೀವು ಯಾವುದಕ್ಕೆಂದು ಕರೆದಿದ್ದೀರೋ ಅದಕ್ಕೇ ನಾನು ಬಂದಿರುವುದು'' ಎಂದರು ಇವರು. ಏಕೆಂದರೆ ಇವರಿಗೆ ಅದಾಗಲೇ ಈ ವ್ಯಕ್ತಿಯ ವರ್ತನೆ ಬೇಸರ ಮೂಡಿಸಿತ್ತು. ''ಯಾವ ಕ್ರಮದಲ್ಲಿ ಮಾಡುತ್ತೀರಿ?'' ''ನಿಮಗೆ ಯಾವ ಕ್ರಮಬೇಕು?'' ಸ್ವಲ್ಪ ಗಡುಸಾಗಿಯೇ ಕೇಳಿದರು ಅವಧಾನಿಗಳು. ''ತ್ರಿಚಕಲ್ಪವೋ, ಅರುಣಪೂರ್ವಕವೋ, ಮಹಾಸೌರವೋ?'' ಎಂದರು ಅವರು. ''ಓಹೋ, ನಿಮಗೆ ಈ ಮೂರೇ ಕ್ರಮಗಳು ಮಾತ್ರ ಗೊತ್ತಿರುವುದೋ? ನೀವು ಯಾವ ಕ್ರಮದಲ್ಲಿ ಹೇಳಿದರೆ ಆ ಕ್ರಮದಲ್ಲಿ ಮಾಡಲು ಸಿದ್ಧ. ಸೂರ್ಯನಮಸ್ಕಾರ ಎಂದರೆ ಏನೆಂದು ತಿಳಿದಿರಿ? ಹನ್ನೆರಡು ಕ್ರಮವಿದೆ ಅದರಲ್ಲಿ. ನಿಮಗೆ ಅವೆಲ್ಲ ಗೊತ್ತೇ? ನೀವು ನಮ್ಮನ್ನೆಲ್ಲ ಪರೀಕ್ಷೆ ಮಾಡಲು ಕರೆಸಿದಿರೇನು? ನಮ್ಮನ್ನು ಪರೀಕ್ಷಿಸುವ ಯೋಗ್ಯತೆ, ಅರ್ಹತೆ ಮೊದಲು ನಿಮಗೆ ಇದೆಯೋ ಹೇಳಿ? ಅಲ್ಲದೆ ನೀವು ಘನಪಾಠಿಗಳಿಗೆ ಬರೆದು ಕರೆಸಿದ್ದೀರಲ್ಲವೇ? ಘನಪಾಠಿಗಳು, ಅರ್ಹರು ಎಂದು ನಮ್ಮನ್ನು ಕರೆತಂದಿದ್ದಾರೆ. ಜವಾಬ್ದಾರಿ ಕೊಟ್ಟವರ ಮಾತನ್ನು ನಂಬುವುದನ್ನು ಮೊದಲು ಕಲಿಯಿರಿ. ಅನುಷ್ಠಾನವನ್ನು ಮಾಡದೆ ಯಾರೂ ಋತ್ವಿಜರಾಗಿ ಬರುವುದಿಲ್ಲ, ತಿಳಿದಿರಲಿ ನಿಮಗೆ ಈ ವಿಷಯ! ಅಷ್ಟಾದರೂ ನೀವು ಏನಾದರೂ ಕೇಳಬೇಕಿದ್ದರೆ ಘನಪಾಠಿಗಳನ್ನು ಕೇಳಿ. ನಮ್ಮನ್ನು ಪ್ರಶ್ನೆ ಮಾಡುವುದಲ್ಲ. ನೀವು ಕೊಡುವ ಹಣಕ್ಕಾಗಿ ಋತ್ವಿಜರು ಬರುತ್ತಾರೆಂದು, ಹಗುರವಾಗಿ ತಿಳಿಯಬೇಡಿ. ನಾವು ಇಲ್ಲಿಗೆ ಬಂದಮೇಲೆ ನಮ್ಮ ಅರ್ಹತೆಯಲ್ಲಿ ಅನುಮಾನ ಪಡಬಾರದು. ನಮ್ಮನ್ನು ಕರೆತಂದ ನಿಮ್ಮ ಘನಪಾಠಿಗಳಲ್ಲಿ ನೀವು ನಂಬಿಕೆ ಇಡಬೇಕು ಮತ್ತು ನಿಷ್ಠೆ ಇಟ್ಟು ಮಾಡಿಸಿಕೊಳ್ಳಬೇಕಷ್ಟೆ!'' ಎಂದು ಅಬ್ಬರಿಸಿದರು. ಪ್ರಶ್ನೆ ಕೇಳುತ್ತಿದ್ದ ವ್ಯಕ್ತಿ ಗರಬಡಿದವರಂತಾದರು. ''ತಪ್ಪಾಯಿತು. ಎಲ್ಲರಿಗೂ ನೋವು ಮಾಡಿದೆ, ಕ್ಷಮಿಸಬೇಕು'' ಎಂದು ನಮಸ್ಕರಿಸಿದರು. ಅವರೂ ಬುದ್ಧಿ ಕಲಿತಂತೆ ಆಗಿತ್ತು. ಆ ಕ್ಷಣದಿಂದಲೇ ಅವರು ತಮ್ಮ ನಡವಳಿಕೆಯನ್ನು ತಿದ್ದಿಕೊಂಡರು. ಶಾಂತಿಕಾರ್ಯ ಮುಗಿಯುವ ತನಕ ಎಲ್ಲ ಋತ್ವಿಜರನ್ನೂ ಬಹಳ ಗೌರವವಾಗಿ ಕಂಡು, ಸತ್ಕರಿಸಿ ಕಳುಹಿಸಿದರು.

೧೭. ನನ್ನ ಪೌರೋಹಿತ್ಯ

ಮರ್ಯಾದೆ ಎನ್ನುವುದು ತನಗೆ ತಾನೇ ಬರುವಂಥದಲ್ಲ. ನಾವು ಕಷ್ಟಪಟ್ಟು ಗಳಿಸಬೇಕು. ನಮ್ಮ ನಡವಳಿಕೆ ಸರ್ವಸಮ್ಮತವಾಗಿರಬೇಕು, ನಂಬಿಕೆಗಳು ಇನ್ನೊಬ್ಬರಿಗೆ ಹಾನಿ ಮಾಡುವಂಥವಾಗಿರಬಾರದು. ಕಾಲಕ್ಕೆ ತಕ್ಕಂತೆ, ಸನ್ನಿವೇಶಕ್ಕೆ ತಕ್ಕಂತೆ, ನಮ್ಮನ್ನು ನಾವು ಸರಿದೂಗಿಸಿಕೊಂಡು ಹೋಗುವಂಥವರಾಗಿರಬೇಕು. ಇದನ್ನೆಲ್ಲ ನಾನು ಏಕೆ ಹೇಳುತ್ತಿದ್ದೇನೆಂದರೆ ಊರ ಪುರೋಹಿತನಾಗಿ ನಾನು ನಿರ್ವಹಿಸುವ ಅನೇಕ ಜವಾಬ್ದಾರಿಗಳು ನನಗೆ ಪಾಠವನ್ನು ಕಲಿಸಿವೆ. ತಂದೆಯವರು ತೀರಿಕೊಂಡ ಅನಂತರ 'ಇವನಿನ್ನೂ ಹುಡುಗ, ಏನು ತಾನೇ ಮಾಡಿಯಾನು?' ಎಂದು ನಮ್ಮೂರ ಹಿರಿಯರು ನನ್ನನ್ನು ಹಗುರವಾಗಿ ಕಾಣಲಿಲ್ಲ. ತಂದೆಯವರು ನನಗೆ ಪ್ರಶಿಕ್ಷಣವನ್ನೇನೂ ಕೊಟ್ಟಿರಲಿಲ್ಲ. ಅವರ ಸಾವೂ ಬಹಳ ಬೇಗನೇ ಆದುದು. ಅವರು ಹಾಸಿಗೆ ಹಿಡಿದು

ಮಲಗಿದ ಅನಂತರ ಅವರು ಹೇಳಿದಂತೆ ನಾನು ಅಲ್ಲಿ, ಇಲ್ಲಿ, ಪೂಜೆ ಪುನಸ್ಕಾರಗಳನ್ನು ಮಾಡಿಸುವುದು, ಸಣ್ಣಪುಟ್ಟ ನಾಮಕರಣ, ಜಾತಕರ್ಮ ಇತ್ಯಾದಿಗಳನ್ನು ಮಾಡಿಸುವುದು ಮಾಡುತ್ತಿದ್ದೆ. ಆದರೆ ಅವರು ಕಾಲವಾದ ಅನಂತರ ನಮ್ಮೂರ ಹಿರಿಯರು ನನಗೆ ಊರ ಪುರೋಹಿತನ ಮರ್ಯಾದೆಯನ್ನೇ ಕೊಟ್ಟು, ನಾನು ಹಾಗೆ ಜವಾಬ್ದಾರಿ ತೆಗೆದುಕೊಂಡಾಗ ತಮಗೆ ತಿಳಿದುದನ್ನೆಲ್ಲ ನನಗೆ ಹೇಳಿಕೊಟ್ಟು ಕಲಿಸಿದರು. ಹಾಗಾಗಿ ನಾನು ಆಮೇಲೆ ಕಲಿತದ್ದೇ ಬಹಳ. ಅನಂತರ ನಾನು ನನ್ನದೇ ಆದ ರೀತಿಯಲ್ಲಿ ನನ್ನ ವೃತ್ತಿಯನ್ನು ರೂಢಿಸಿಕೊಂಡೆ. ನನ್ನ ಅನುಭವಗಳು ನನ್ನನ್ನು ರೂಪಿಸಿದವು, ನನ್ನ ವ್ಯಕ್ತಿತ್ವವನ್ನು ರೂಪಿಸಿದವು. ಆ ಸಂದರ್ಭದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ನನ್ನ ಗುರುಗಳೂ, ಗುರುಸದೃಶರೂ ಆದ, ಚನ್ನಗಿರಿ ಅವಧಾನಿಗಳು, ರಾಮಸ್ವಾಮಿಶಾಸ್ತ್ರಿಗಳು, ಸಣ್ಣಾವಧಾನಿಗಳು, ತಿಪ್ಪಯ್ಯಾವಧಾನಿಗಳು, ವೆಂಕಟಸುಬ್ಬಶಾಸ್ತ್ರಿಗಳು, ನಾರಾಯಣ ಅವಧಾನಿಗಳು, ಕೇಶವಾವಧಾನಿಗಳು ಮುಂತಾದವರನ್ನು ಎಂದೂ ಮರೆಯಲಾರೆ.

ಆಗ ಮಾನ್ಯಮಿತ್ರ ಮತ್ತೂರುಕೃಷ್ಣಮೂರ್ತಿಯವರ ಮದುವೆ. ವೇದಾಧ್ಯಯನ ಮಾಡಿದ್ದ ಅಣ್ಣ ಕೇಶವಮೂರ್ತಿ ಅವಧಾನಿಯವರಿಗೆ, ಸಂತಸದ ಕ್ಷಣ. ಆದರೆ ಪೂಜ್ಯ ನಾರಾಯಣ ಉಪಾಧ್ಯಾಯರು ಹಾಸಿಗೆ ಹಿಡಿದಿದ್ದರು. 'ಮದುವೆಯನ್ನು ಯಾರು ಮಾಡಿಸುವುದು? ಹೇಗೆ?' ಎಂದು ಆತಂಕವೇ ಆಗಿತ್ತು. ಆಗ ನಮ್ಮೂರಿನ ಹಿರಿಯರು, ''ಯಾಕೆ ಅವಧಾನಿಗಳೇ, ಅವರ ಮಗನೇ ಇಲ್ಲವೇ? ಅಶ್ವತ್ಥ ಚೆನ್ನಾಗಿಯೇ ಮಾಡಿಸುತ್ತಾನಲ್ಲ? ಅವನೇ ಮಾಡಿಸುತ್ತಾನೆ'' ಎಂದರು. ಅದಕ್ಕೆ ಅವರು, ''ಅವನಿನ್ನೂ ಚಿಕ್ಕಹುಡುಗ. ನಾನೇ ಅವನಿಗೆ ಹೇಳಿಕೊಟ್ಟಿಲ್ಲವೇ? ಅಷ್ಟು ನಿಭಾಯಿಸಬಲ್ಲನೇ ಎನ್ನುವುದೇ ಸಂದೇಹ ನನಗೆ'' ಎಂದರು. ಆದರೂ ಏನು ಮನಸ್ಸಾಯಿತೋ, ನನಗೇ ಕೃಷ್ಣಮೂರ್ತಿಯ ಮದುವೆ ಮಾಡಿಸಲು ಹೇಳಿದರು. ನಾನೇ ಪೂಜ್ಯ ತಂದೆಯವರಿಗೂ ಅವರಿಗೂ ನಮಿಸಿ ಪುರೋಹಿತ ಪೀಠದಲ್ಲಿ ಕುಳಿತೆ. ಯಾವ ಮಂತ್ರವನ್ನೂ, ಧಾರ್ಮಿಕ ವಿಧಿಯನ್ನೂ ಬಿಡದೆ ಎಲ್ಲವನ್ನೂ ಸಮರ್ಪಕವಾಗಿ ಮಾಡಿಸಿದೆ. ನಾನು ಯುವಕಂಠದಲ್ಲಿ ಹೇಳಿದ ವಿವಾಹ ಮಂತ್ರಗಳು, ಜಯಾದಿ ಮಂತ್ರಗಳಿಂದ ನನ್ನನ್ನೇ ಗಮನಿಸಿಕೊಳ್ಳುತ್ತಿದ್ದ ಶ್ರೀನಿವಾಸ ಅವಧಾನಿಯವರು ನನ್ನಲ್ಲಿ ನಂಜನಗೂಡಿನ ಅಧ್ಯಯನ, ತಂದೆಯಲ್ಲಿ ಕಲಿತ ಪ್ರಯೋಗದ ಸಾರ್ಥಕತೆಯನ್ನು ಕಂಡು ಸಂತುಷ್ಟರಾದರು. ಮದುವೆಗೆ ಬಂದಿದ್ದ ಕೂಡಲಿ ಅವಧಾನಿಗಳು ಕೇಶವ ಅವಧಾನಿಯವರಿಗೆ, ''ನೋಡಿದಿರಾ ಕೇಶವ ಅವಧಾನಿಗಳೇ, ನೀವು ಹೆದರಿದ್ದಿರಲ್ಲಾ? ನೋಡಿ. ಇಷ್ಟು ಸಣ್ಣ ವಯಸ್ಸಿನಲ್ಲಿ ಎಷ್ಟು ಚೆನ್ನಾಗಿ ಮಾಡಿಸಿದರು!'' ಎಂದು ಮೆಚ್ಚುಗೆಯಿಂದ ಹೇಳಿದರು. ಕೇಶವಮೂರ್ತಿಗಳಿಗೂ ತಮ್ಮ ಶಿಷ್ಯ ಎಂದು ಹೆಮ್ಮೆಯಾಯಿತು.

ನಮ್ಮ ಹಿರಿಯರು ರೂಪಿಸಿದ ನನ್ನ ಮೇಲಿನ ನಂಬಿಕೆ ಹಾಗೆಯೇ ಉಳಿದು ಬಂದಿದೆ ಎನ್ನಲು: ಹದಿನೈದು ವರ್ಷಗಳ ಹಿಂದೆ ಕಾರ್ತಿಕ ಮಾಸದಲ್ಲಿ ಒಂದು ಸಂಜೆ ಕಲ್ಪಾಂತ ಮಳೆ ಪ್ರಾರಂಭವಾಯಿತು. ನಮ್ಮೂರಿನಲ್ಲಿ ಸುಮಾರು ಎರಡು ಫರ್ಲಾಂಗ್ ಉದ್ದ ಅಗಲದ ಬಯಲಿದೆ. ಅಲ್ಲಿ ಊರಿನ ನೂರಾರು ಅಡಿಕೆ ಬೆಳೆಗಾರರೆಲ್ಲ ತಮ್ಮ ಅಡಿಕೆಯನ್ನು ಒಣಗಿಸುತ್ತಾರೆ. ಹಾಗೆ ಒಣ ಹಾಕಿದಾಗ ಒಮ್ಮೆ ಅಬ್ಬರಿಸಿ ಬಂದ ಮಳೆ ಅಡಿಕೆಯನ್ನೆಲ್ಲ ತೇಲಿಸಿಕೊಂಡು ಹೋಗಿ ಹಾಳು ಮಾಡಿತು. ಆ ಸಮಯದಲ್ಲಿ ಸುಮಾರು ಹತ್ತರಿಂದ ಹದಿನೈದು ಲಾರಿ ಅಡಿಕೆ ನೀರಿನಲ್ಲಿ ತೇಲಿ ಹೋಯಿತು. ನಮ್ಮೂರ ಹತ್ತಿರದ ಚಾನೆಲ್‌ನಲ್ಲಿ ಅಡಿಕೆ ಪೂರ್ತಿ ಒಂದು ಪೊದೆಯಲ್ಲಿ ಸಿಕ್ಕಿಕೊಂಡಿತು. ಮಳೆಯು ನಿಂತಮೇಲೆ ಮರುದಿನ ಅಲ್ಲಿ ಕಟ್ಟಿಕೊಂಡು ನಿಂತ ಅಡಿಕೆಯನ್ನು ಲಾರಿಯಲ್ಲಿ ತುಂಬಿ ತಂದು ಹಾಕಿಕೊಳ್ಳಬೇಕಾಯಿತು. ಎಲ್ಲರ ಅಡಿಕೆಯೂ ಬೆರೆತು ಹೋಗಿದ್ದವು. ಎಲ್ಲರೂ ತಮ್ಮ ತಮ್ಮದು ಎಂದು ಅಡಿಕೆ ತುಂಬಿಕೊಳ್ಳಲು ಪ್ರಾರಂಭಿಸಿದಾಗ ಮಾತುಕತೆಯ ಬಿಸಿ ಹೆಚ್ಚಿತು. ಆಗ ಅಲ್ಲಿನವರೊಬ್ಬರು, ''ಅವಧಾನಿಗಳೇ ಹೇಳಲಿ. ಯಾರ್‍ಯಾರು ಎಷ್ಟೆಷ್ಟು ಅಡಿಕೆ ತುಂಬಿಕೊಳ್ಳಬೇಕು ಎಂದು. ಅದನ್ನು ಪಾಲಿಸುತ್ತೇವೆ. ಅವರು ಹೇಳಿದಷ್ಟು ಹಾಕಿಕೊಳ್ಳುತ್ತೇವೆ'' ಎಂದರು. ನನಗೆ ಈ ಮಾತು ಅನಿರೀಕ್ಷಿತವಾಗಿತ್ತು. ಇದೆಂಥ ಜವಾಬ್ದಾರಿ ಎನಿಸಿತು. ಆದರೂ ವರ್ಷವರ್ಷವೂ ನಾನು ನೋಡುತ್ತ ಬಂದಂತೆ ಯಾರ್‍ಯಾರ ತೋಟದ ಫಸಲು ಎಷ್ಟೆಷ್ಟು, ಎಷ್ಟು ಜಾಗದಲ್ಲಿ ಹರವಿದ್ದರು, ಎನ್ನುವ ಅಂದಾಜಿನ ಮೇಲೆ ಇಂತಿಂಥವರಿಗೆ ಇಷ್ಟಿಷ್ಟು ಎಂದು ಅಡಿಕೆಯನ್ನು ಅಳೆಸಿ ಅವರ ಜಾಗಕ್ಕೆ ತುಂಬಿಸಿದೆ. ಯಾರೊಬ್ಬರೂ ಒಂದೂ ಮಾತಾಡಲಿಲ್ಲ. ಅಳೆದು ಹಾಕುವವರು ನಾನು ಹೇಳಿದಷ್ಟಷ್ಟನ್ನು ಹಾಕಿದರು. ಎಲ್ಲರೂ ನನ್ನ ಅಳತೆ ತಮಗೆ ಒಪ್ಪಿಗೆ ಎನ್ನುವಂತೆ ಸುಮ್ಮನಿದ್ದರು. ತಮಗೆ ಅನ್ಯಾಯವಾಯಿತೆಂದು ಯಾರಿಗೂ ಅನ್ನಿಸಲಿಲ್ಲ. ಬದಲಾಗಿ ನನ್ನ ತೀರ್ಮಾನದಂತೆ ಹಾಕಿಸಿದ ಅಡಿಕೆ ಅವರೆಲ್ಲರ ಮನಸ್ಸಿಗೂ ಸ್ವಲ್ಪ ಹೆಚ್ಚೇ ಇದೆ ಅನ್ನುವ ಸಮಾಧಾನ, ತೃಪ್ತಿ ತಂದಿತ್ತು. ಆಗಿದ್ದಿಷ್ಟು. ಅಡಿಕೆ ಒಣಗಿ ಸಣ್ಣಗಾಗಿತ್ತು. ಇಡೀ ರಾತ್ರೆ ನೀರಲ್ಲಿ ನೆಂದು ಎರಡು ಪಟ್ಟು ದಪ್ಪ ಆಯಿತು. ಹತ್ತು ಬುಟ್ಟಿ ಆಗಬೇಕಿದ್ದ ಅಡಿಕೆ ಹದಿನೈದು ಬುಟ್ಟಿ ಆಗಿತ್ತು, ದೈವಲೀಲೆ!

ನಿಜಕ್ಕೂ ನಮ್ಮೂರಿನಲ್ಲಿ ಊರ ಪುರೋಹಿತರಿಗೆ ಇರುವ

ಗೌರವವನ್ನು ನಾನು ಮತ್ತೆಲ್ಲೂ ನೋಡಿಲ್ಲ ಎನ್ನಬೇಕು. ನಾನು ಎಲ್ಲರ ಮನೆಗೂ ಪೂಜೆ, ಹವನ, ಹೋಮಗಳನ್ನು ಮಾಡಿಸಲು ಹೋದರೂ, ಯಾವ ಪದಾರ್ಥವನ್ನೂ ಅವರ ಮನೆಯಿಂದ ತರುವುದಿಲ್ಲ. ಆದರೆ ಆ ವಿಶೇಷ ಸ್ಥಾನಕ್ಕೆ ಸಲ್ಲಬೇಕಾದದ್ದನ್ನೆಲ್ಲ ಅವರೇ ಮನೆಗೆ ತಂದು ಇಡುತ್ತಾರೆ. ಗೌರಿಗಣೇಶ ಹಬ್ಬಗಳಲ್ಲಿ ನಮ್ಮಮನೆಯಲ್ಲಿ ಕಾಲಿಡಲು ಜಾಗವಿರದು. ಅಷ್ಟು ಬಾಗಿನಗಳು, ಅಷ್ಟು ದವಸ-ಧಾನ್ಯ, ತರಕಾರಿಗಳು. ಅವರವರ ಶಕ್ತ್ಯನುಸಾರ ಕಳುಹಿಸುತ್ತಾರೆ. ನಾವೂ ಇಷ್ಟೇ ಇಡಬೇಕೆಂದು ಎಂದೂ ಕೇಳಿದವರಲ್ಲ. ಆದರೆ ಅವರೂ ಎಂದೂ ನಮಗೆ ಕಡಮೆ ಮಾಡಿದವರಲ್ಲ. ಯಾವ ಮಂಗಳ ಕಾರ್ಯವನ್ನು ಮಾಡಿಸಿದರೂ ಪೂರ್ತಿ ಹಣವನ್ನು ಪುರೋಹಿತರ ಕೈಗೇ ತಂದುಕೊಡುತ್ತಾರೆ. ಅವರವರ ಶಕ್ತಿ, ಆರ್ಥಿಕ ಮಿತಿಯ ಪರಿಚಯ ನನಗೆ ಸಾಕಷ್ಟಿರುವುದರಿಂದ ಯಾವ ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಬೇಕೋ, ದಕ್ಷಿಣೆ ಕೊಡಬೇಕೋ ಅಷ್ಟನ್ನು ನಾನೇ ತೆಗೆದುಕೊಡುತ್ತೇನೆ. ಊರವರಿಗೆ ನನ್ನಲ್ಲಿ ಅಷ್ಟು ನಂಬಿಕೆ ಎನ್ನುವುದಕ್ಕಿಂತ, ತಮ್ಮ ಊರ ಪುರೋಹಿತರಲ್ಲಿ ಅವರಿಗೆ ಅಷ್ಟು ನಂಬಿಕೆ ಎನ್ನುವುದು ಇನ್ನೂ ಸಮಂಜಸ. ಹೀಗೆ ನಮ್ಮೂರು ನಮ್ಮನ್ನು ಸಲಹಿರುವುದು, ಪ್ರೋತ್ಸಾಹಿಸಿರುವುದು!

18. ಜಗದ ಚಿತ್ತಾರ

ನಮ್ಮೂರಿನ ಹಿರಿಯರಲ್ಲಿ ಅನೇಕರು ಪ್ರತಿಭಾವಂತರು, ಪಾಂಡಿತ್ಯವುಳ್ಳವರು, ಹಾಗೆಯೇ ವಿನೋದಪ್ರಿಯರು ಮತ್ತು ಕಿರಿಯರನ್ನು ಕಂಡರೆ ಅಭಿಮಾನ ಪಡುತ್ತಿದ್ದವರು.

ಶ್ರೀ ರಾಮಸ್ವಾಮಯ್ಯನವರು ನಮ್ಮ ತಾಯಿಯ ಚಿಕ್ಕಪ್ಪ, ಪ್ರೈಮರೀ ಶಾಲೆಯಲ್ಲಿ ನಮ್ಮ ಗುರು; ಅವರು ನನಗೆ ತೊರವೆ ರಾಮಾಯಣದ ಪರಶುರಾಮ ಪ್ರಸಂಗ, ಜೈಮಿನೀ ಭಾರತದ ಕೆಲವು ಭಾಗ, ಕನಕದಾಸರ 'ರಕ್ಷಿಸು ನಮ್ಮನನವರತ' ಈ ಭಾಗವನ್ನು ಹೇಳಿಕೊಟ್ಟಿದ್ದರು. ಒಮ್ಮೆ ನನ್ನ ಮಗ ಚಿ. ಲಕ್ಷ್ಮೀ ಕೇಶವನಿಗೆ ಪಾಠ ಹೇಳಿಕೊಡುತ್ತಿದ್ದರು. ಆ ಪಾಠ ನನಗಾಗಿಲ್ಲ ಎಂದ. 'ನಿನ್ನೆಯೇ ಹೇಳಿಕೊಟ್ಟಿದ್ದೇನೆ, ಆಗಿಲ್ಲವಂತೇ ಆಗಿಲ್ಲ' ಎಂದು ಕಡ್ಡಿಯಿಂದ ನಾಲ್ಕು ಬಾರಿಸಿದರು. ಆಮೇಲೆ ಜ್ಞಾಪಕ ಆಯಿತು. ಅದು ಮುಂದಿನ ತರಗತಿಯವರಿಗೆ ಸೇರಿದ ಪ್ರಶ್ನೆ ಆಗಿತ್ತು. 'ಮರಿಯಣ್ಣ! (ಪ್ರೀತಿಗಾಗಿ ಕರೆಯುತ್ತಿದ್ದ ಹೆಸರು) ನಿನ್ನನ್ನು ಸುಮ್ಮನೆ ಹೊಡೆದೆ, ನಿನ್ನ ಪ್ರಶ್ನೆ ಅಲ್ಲ ಅದು' ಎಂದರು. 'ಈಗೇನು ಮಾಡುವುದು' ಎಂದ ಮರಿಯಣ್ಣ. 'ನನಗೂ ಹೊಡಿ' ಎಂದರು ಸಲಿಗೆಯಿಂದ. ನೋವು ತಿಂದಿದ್ದ ಅವನು ಕೂಡಲೇ ಛಡಿಯಿಂದ ನಾಲ್ಕು ಬಾರಿಸಿಯೇ ಬಿಟ್ಟ. ಇವರು ನಗುತ್ತಾ ಅವನನ್ನು ತಬ್ಬಿಕೊಂಡರು.

ನೀಲಕಂಠ ಮಾಯ ಆಜಾನುಬಾಹು; ಎಣ್ಣೆಗೆಂಪು ಬಣ್ಣ, ಇಂಜಿನಿಯರ್ ತಲೆ. ಫ್ಯಾನ್‌ನಿಂದ ಟೆಲಿವಿಷನ್‌ವರೆಗೆ, ಗ್ಯಾಸ್ ಸ್ಟೌವ್‌ನಿಂದ ಹಿಡಿದು ಕಾರ್ ಎಂಜಿನ್‌ವರೆಗೆ ಎಲ್ಲಾ ಭಾಗಗಳನ್ನೂ ಬಿಚ್ಚಿ ಜೋಡಿಸುವಷ್ಟು ಪ್ರತಿಭೆ ಓದದೆ ಬಂದಿತ್ತು.

ಮರಗೆಲಸ, ಜೇಡಿಮಣ್ಣಿನಲ್ಲಿ ಗಣಪತಿ ಮಾಡುವುದು, ಬಣ್ಣ ಹಚ್ಚುವುದು ಇತ್ಯಾದಿ ಅವರ ತಾಯಿಯ ತಂದೆಯಿಂದ ಅವರಿಗೆ ಬಂದ ಬಳುವಳಿ ಆಗಿದ್ದಿತು.

ಪ್ರತಿ ವರ್ಷ ಹತ್ತಾರು ಗಣಪತಿಗಳನ್ನು ಮಾಡುತ್ತಿದ್ದರು. ಅವರೊಂದಿಗೆ ನಾನೂ ಕಲಿತು 'ನಿಂತಿರುವ ಗಣಪತಿ' ಮಾಡಿದ್ದೆ.

ನೀಲಕಂಠಯ್ಯನವರು ಬಡವರು, ಆದರೂ ಬಹಳ ಉದಾರಿ. ಬೆಂಗಳೂರಿನ ಶ್ರೀರಾಮಪುರದಲ್ಲಿ ಒಂದು ಸಣ್ಣ ಮನೆ. ಹೊಸಹಳ್ಳಿ ಮತ್ತು ಮತ್ತೂರಿನ ಜನಕ್ಕೆ ಅವರೊಬ್ಬರೇ ಪರಿಚಯ. ಏನಾದರೂ ಜಡ ಜಾಪತ್ತು ಬಂದರೆ, ಕಣ್ಣು ಪೊರೆ ಆಪರೇಷನ್‌ಗೆ ಅವರಲ್ಲಿಗೇ ಬರಬೇಕು. ಯಾರು ಬಂದರೂ ಸುಸ್ವಾಗತ. ಮನೆಯವರಂತೆಯೇ ಅವರಿಗೆ ಸ್ನಾನ, ಕಾಫಿ, ತಿಂಡಿ, ಊಟ. ರೋಗಿ ಒಬ್ಬರೇ ಬಂದರೆ ಇವರೇ ಆಸ್ಪತ್ರೆಗೆ ಸೇರಿಸಿ ಎಂಟು ದಿನ ಆಹಾರ ಕೊಟ್ಟು ಗುಣ ಮಾಡಿ ಕಳಿಸಿದ್ದಾರೆ. ಯಾರಿಗೂ ನೋವಾಗದಂತೆ, ಅವರಿಂದ ಏನೂ ಬಯಸದೆ ಕಳಿಸಿದ್ದಾರೆ.

ಅವರು ಊರಿಗೆ ಬಂದಾಗ ಒಂದು ದಿನ ನಮ್ಮ ಮನೆಗೆ ಊಟಕ್ಕೆ ಕರೆದೆ. ಆಲೂಗೆಡ್ಡೆ ಪಲ್ಯ, ನಿಂಬೇ ಚಿತ್ರಾನ್ನ, ಹಪ್ಪಳ, ಮೈಸೂರ್ ಪಾಕ್ ಮಾಡಿದ್ದರು. ತುಂಬಾ ರುಚಿಯಾಗಿತ್ತು. ಮೈಸೂರು ಪಾಕನ್ನು ಬಾಯಿಗೆ ಹಾಕಿಕೊಂಡು ಜಗಿದರು. 'ಓ.. ಹೊ..' ಎಂದರು. ಅವರ 'ಕಣ್ಣೆಲ್ಲಾ ಕೆಂಪಾಯಿತು', ಮಾತೇ

ಇಲ್ಲ, ಸಂಜ್ಞೆ ಮಾಡಿ ಪೆನ್ನು ಪೇಪರ್ ತಾ ಎಂದು ಸೂಚಿಸಿದರು. ಹುಡುಗರು ತಂದಾಗ ಒಂದು ಸ್ಕ್ರೂಡ್ರೈವರ್ ಬೇಕು ಎಂದು ಬರೆದರು. ಯಾಕೆ ಎಂದು ಗೊತ್ತಾಗಲಿಲ್ಲ, ಆದರೂ ತರಿಸಿದೆ. ಅದನ್ನು ಬಾಯಲ್ಲಿ ಹಾಕಿ ಮೀಟಿದರು, ತಿರುಗಿಸಿದರು, 'ಸದ್ಯ ಬಿಟ್ಟಿತು' ಎಂದರು. ಮೈಸೂರು ಪಾಕ್ ಸ್ವಲ್ಪ ಹದ ಮೀರಿ ತುಂಬಾ ಜಿಗುಟು ಆಗಿತ್ತು. ಕೃತಕ ಹಲ್ಲು, ಕಚ್ಚಿದ ಕೂಡಲೇ ಅಂಟಿತು. ಬಿಡಿಸಲು ಬರಲಿಲ್ಲ, ಮಾತಾಡಲಾಗಲಿಲ್ಲ. ಅದಕ್ಕೇ, ಅವರು ಸ್ಕ್ರೂಡ್ರೈವರ್ ಬಳಸಿ ಮೀಟಿ, ಮೈಸೂರು ಪಾಕನ್ನೂ ಹಲ್ಲನ್ನೂ ಬೇರ್ಪಡಿಸಿದ್ದರು!

❁ ❁ ❁

ನನ್ನ ಸೋದರಮಾವಂದಿರಲ್ಲಿ ನಾಲ್ಕನೆಯವರಾದ ಶ್ರೀ ಕೃಷ್ಣ ಸ್ವಾಮಿಯವರು ಕೃಷಿ ಸಂಬಂಧವಾಗಿ ಮಾಡದ ಪ್ರಯೋಗಗಳಿಲ್ಲ. ಭೂಮಿಗೆ ತಕ್ಕಂಥ ಹೊಸ ಬೆಳೆ, ಅದಕ್ಕಾಗುವ ಖರ್ಚು, ಅದರಿಂದ ಬರುವ ಆದಾಯ, ಕಷ್ಟನಷ್ಟಗಳು, ಇವೆಲ್ಲವೂ ಅವರಿಗೆ ಸುಪರಿಚಿತವಾಗಿದ್ದವು. ನನಗೆ ಈ ಮಾವನಲ್ಲಿ ಇತರರಿಗಿಂತ ಹೆಚ್ಚು ಸಲಿಗೆ.

❁ ❁ ❁

ನಮ್ಮ ತಾಯಿಯ ಕಡೆಯ ಬಂಧುಗಳಲ್ಲಿ ನಮ್ಮಮ್ಮನ ಚಿಕ್ಕಪ್ಪ ಹೊಸಹಳ್ಳಿ ಪುಟ್ಟಶಾಮಶಾಸ್ತ್ರಿಗಳು ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಭಾರತೀ ತೀರ್ಥ ಸ್ವಾಮೀಜಿಯವರ ಜೊತೆಯಲ್ಲಿಯೇ ವಿದ್ಯಾಭ್ಯಾಸ ಮಾಡಿದವರು. ಊರಿನಲ್ಲಿ ಎಲ್ಲರೂ ಅವರನ್ನು ಮಹರ್ಷಿ ವಸಿಷ್ಠರಂತೆ ಕಾಣುವುದಿತ್ತು. ಇವರಂತೆಯೇ ನಮ್ಮ ಲಕ್ಷ್ಮೀಕಾಂತ ಉಪಾಧ್ಯಾಯರು. ಉಪಾಧ್ಯಾಯರು ಬೀದಿಯಲ್ಲಿ ಬಂದರೆ ಎದ್ದು ನಿಂತು ಅವರಿಗೆ ಗೌರವ ತೋರಿಸುವುದಿತ್ತು.

❁ ❁ ❁

ಆ ಕಾಲದಲ್ಲಿ ಅಪೂರ್ವ ಸೋದರರು ಎನಿಸಿಕೊಂಡಿದ್ದ ಚನ್ನಿಗರಾಯ ಅವಧಾನಿಗಳು ಹಾಗೂ ರಾಮಸ್ವಾಮಿ ಶಾಸ್ತ್ರಿಗಳು ಒಬ್ಬರನ್ನೊಬ್ಬರು ಎಂದೂ ಅಗಲದ ಸೋದರರಾಗಿದ್ದರು. ಒಟ್ಟಿಗೆ ವೇದಾಭ್ಯಾಸ ಮಾಡಿದವರು. ಬಹಳ ಗಂಭೀರ ಸ್ವಭಾವದವರು. ಅಪರೂಪವಾಗಿ ಯಾವುದರ ಬಗೆಗಾದರೂ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದವರು. ಕಿರಿಯರಾದ ರಾಮಸ್ವಾಮಿಶಾಸ್ತ್ರಿಗಳ ಪುತ್ರನೇ ನಮ್ಮ ಗಮಕ ವಿದ್ವಾನ್ ಕೇಶವಮೂರ್ತಿ. ಶಾಸ್ತ್ರೀ ದಂಪತಿಗಳ ಸಂಗೀತ ಪ್ರೇಮವೇ ಮಗ ಕೇಶವಮೂರ್ತಿಯಲ್ಲಿ ಸಾಕಾರವಾಗಿ ಇರುವುದು. ಒಮ್ಮೆ ಇವರ ಮನೆಯಲ್ಲಿ ಜೈಮಿನಿ ಭಾರತದ ಲವ-ಕುಶ ಪ್ರಸಂಗದ ವಾಚನ ವ್ಯಾಖ್ಯಾನವನ್ನು ಕೇಶವಮೂರ್ತಿಯೂ ನಾನೂ ನಡೆಸಿದೆವು. ಶಾಸ್ತ್ರಿಯವರು, ''ಮಾರ್ಕಂಡೇಯಾ, ತುಂಬಾ ಚೆನ್ನಾಗಿ ಹೇಳಿದಿರಪ್ಪಾ. ಅನುವಾದ ಎಂದರೆ ಹೀಗಿರಬೇಕು. ಇಷ್ಟು ಚೆನ್ನಾಗಿ ಹೇಳಿದ್ದನ್ನು ನಾನೆಂದೂ ಕೇಳಿರಲಿಲ್ಲ. ನಮ್ಮ ಮೂರ್ತಿಯೂ ಚೆನ್ನಾಗಿಯೇ ಓದಿದ. ಯಾವ ಯಾವ ರಾಗ ಹಾಕಿ ಹೇಳಿದನೋ ನನಗೆ ತಿಳಿಯದಿದ್ದರೂ ಬಹಳ ಇಂಪಾಗಿ ಮಧುರವಾಗಿ ಇತ್ತು. ಈ ದಿನ ನನಗೆ ಧೈರ್ಯ ಬಂತು, ನೀವುಗಳು ನಮ್ಮೂರಿನ ಕೀರ್ತಿಯನ್ನು ಉಳಿಸುತ್ತೀರಿ ಎನ್ನುವ ನಂಬಿಕೆಯಾಯಿತು'' ಎಂದರು. ನಾನು ಆಶ್ಚರ್ಯದಿಂದ ಮಾತೇ ಹೊರಡದವನಾಗಿದ್ದೆ. ಅವರ ಬಾಯಿಂದ ಬಂದ ಮಾತುಗಳು ಯಾವ ಪ್ರಶಸ್ತಿಗೂ ಕಡಮೆ ಇರಲಿಲ್ಲ!

❁ ❁ ❁

ಸಂಸ್ಕೃತ ಕವಿಗಳಾದ ಬೀರೂರು ಚಿದಂಬರಜೋಯಿಸರು ನಮ್ಮ ಸೋದರತ್ತೆಯ ಪತಿ. ಕನ್ನಡ ಮತ್ತು ಸಂಸ್ಕೃತದಲ್ಲಿ ಉದ್ದಾಮ ಪಾಂಡಿತ್ಯವಿದ್ದ ಅವರು ಸ್ವಭಾವತಃ ಶಾಂತಮೂರ್ತಿ.

ಗಾಂಧೀ ಜನ್ಮ ಶತಮಾನೋತ್ಸವದ ಸಮಯದಲ್ಲಿ 'ಮೋಹನ ತರಂಗಿಣಿ' ಎನ್ನುವ ಸುಂದರ ಕಾವ್ಯವನ್ನು ರಚಿಸಿದರು. ಮಹಾತ್ಮರ ಜೀವನವನ್ನು ಚಿತ್ರಿಸಿ ಬರೆದ ಈ ಕಾವ್ಯಕ್ಕಾಗಿ ಅವರಿಗೆ ಸರ್ಕಾರವು ಸನ್ಮಾನ ಮಾಡಿತು.

ಚಿದಂಬರ ಜೋಯಿಸರ ತಂಗಿ ಅನಸೂಯ ತನ್ನ ಪತಿ ಹಾಗೂ ಮಗಳೊಂದಿಗೆ ಸುಖದಿಂದ ಇದ್ದ ದಿನಗಳು ಅವು. ಅನಸೂಯಳ ಮಗಳಿಗೆ ಪಾಠ ಹೇಳಲು ಮನೆಗೆ ಬರುತ್ತಿದ್ದ ಉಪಾಧ್ಯಾಯನು ದಿನವೂ ತನಗೆ ಕಾಫಿ ಕೊಡುತ್ತಿದ್ದ ಅನಸೂಯಳನ್ನು ತಪ್ಪಾಗಿ ಭಾವಿಸಿ ಒಮ್ಮೆ ಅವಳ ಕೈಹಿಡಿದ. ಹೀಗೆಲ್ಲ ಮಾಡಬಾರದು ಎಂದು ಕೊಸರಿಕೊಂಡಳು. ಅವಮಾನ ಎಂಬ ಭಾವನೆಯಿಂದ ಗಂಡನಿಗೆ ತಿಳಿಸಲಿಲ್ಲ. ತನ್ನಲ್ಲೇ ಅನುಭವಿಸಿದಳು. ಪಾಠ ನಡೆದೇ ಇತ್ತು; ಕಾಫಿ ಸಮಾರಾಧನೆ ಕೂಡ. ಕೆಲವು ದಿನಗಳು ಕಳೆದ ಮೇಲೆ, ಪಾಠಮುಗಿಸಿ ಹೊರಡುವಾಗ ಆ ಗುರು ಅವಳ ಕೈಗೆ ಒಂದು ಪತ್ರ ಕೊಟ್ಟು ಹೋದ. ಪತ್ರದಲ್ಲಿ ''ಇದೋ, ಗೂಡಿನಲ್ಲಿ ಏನೋ ಉಡುಗೊರೆ ಇಟ್ಟಿದ್ದೇನೆ. ಅದನ್ನು ನೀನು ತೆಗೆದು ಉಪಯೋಗಿಸಿದರೆ ನಿನ್ನ ಅನುಮೋದನೆ ಎಂದು ತಿಳಿಯುತ್ತೇನೆ'' ಎಂದು ಬರೆದಿದ್ದ. ಅನಸೂಯೆಗೆ ಭಾರಿ ಗಾಬರಿಯಾಯಿತು. ಭಯವಾಯಿತು.

ಈಗ ವಿಧಿಯಿಲ್ಲದೆ ಚಿದಂಬರ ಜೋಯಿಸರಿಗೆ ತಿಳಿಸಿ ಪತ್ರ ಕೊಟ್ಟಳು. ನೋಡಿದರು. ಅದರಲ್ಲಿ ನಾಜೂಕಿನ ಉಂಗುರ, ಹೂವು ಇತ್ತು. ತೆಗೆದು ಬಿಸಾಕಿದರು. ಇನ್ನೊಂದು

ಕಾಗದದಲ್ಲಿ 'ನಾಳೆ ಸಂಜೆ ನಾಲ್ಕು ಗಂಟೆಗೆ' ಎಂದು ಬರೆಸಿ ಅಲ್ಲಿಡಿಸಿದರು. ಪತ್ರವನ್ನು ನೋಡಿ, ''ಮಾರಿಯ ಬೇಟದಾಟನು ಉಬ್ಬಿಹೋದ''.

ಅನಸೂಯಾ ಇನ್ನೂ ಹೆದರಿದಳು. ''ನೀನು ಹೆದರಬೇಡ. ನಾಳೆ ನಾನು ಊಟಮಾಡಿ ಎರಡು ಗಂಟೆಗೆ ಬಂದು ರೂಮಿನಲ್ಲಿ ಮಲಗಿರುತ್ತೇನೆ. ಎಂದಿನಂತಿರು'' ಎಂದು ಸೂಚನೆ ಕೊಟ್ಟರು.

ಆತನು ಕೀಚಕ ದ್ರೌಪದಿಯನ್ನರಸಿ ಬಂದಂತೆ ಶಾಲೆಯ ಕಡೆ ಗಂಟೆಯ ಪಾಠಕ್ಕೆ ರಜಾ ಹಾಕಿಯೋ ತಪ್ಪಿಸಿಕೊಂಡೋ ಬಂದ. ಕಾತರ. ಬಂದವನೇ ಹೂ ಹಣ್ಣಿನ ಪೊಟ್ಟಣ ಕೊಟ್ಟ. ''ಬೇಡಾ'' ಎಂದಳು. ನಾನೇ ಮುಡಿಸುವೆ ಎಂದು ಮುಂದಾದ. ಆಕೆ ''ಅಣ್ಣ! ಕೆಟ್ಟೆ ಅಣ್ಣ! ನೀನೇ ಗತಿ'' ಎಂದಳು. ಅಷ್ಟರಲ್ಲಿ ಅವಳ ಎಡಗೈ ಹಿಡಿದಿದ್ದ. ಜೋಯಿಸರು ಒಳಗಿಂದ ಬಂದವರೇ ಅವನ ಕೈಯನ್ನು ತಮ್ಮ ಭೀಮಬಾಹುವಿನಿಂದ ಹಿಡಿದು ಹಿಂಡಿದರು. ವಿಲಿ ವಿಲಿ ಒದ್ದಾಡಿದ. ಹೂ ಕೈಯಿಂದ ಬಿತ್ತು. ಒಂದು ನಿಮಿಷ ಕೋಪದಿಂದ ನೋಡುತ್ತ, ''ಹೂ ತೊಗೋ, ನಿನಗೆ ಅಕ್ಕ ತಂಗಿಯರು ಇಲ್ಲವೇನೋ? ಇದನ್ನೇ ಅಲ್ಲವೇ ನೀನು ಶಾಲೆಯಲ್ಲಿ ಪಾಠ ಮಾಡುವುದು? ಭ್ರಷ್ಟ. ನಿನ್ನ ಮುಖ್ಯೋಪಾಧ್ಯಾಯರಿಗೆ ಹೇಳಿದರೆ ಮುಗಿಯಿತು ನಿನ್ನ ಕೆಲಸ! ನಿನ್ನ ಹೆಂಡತಿ ಮಕ್ಕಳೂ ಬೀದಿಪಾಲು. ಎರಡು ಮಕ್ಕಳ ತಂದೆಯಾಗಿ, ಎರಡು ಮಕ್ಕಳ ತಾಯಿಯನ್ನು ಕೆಟ್ಟದಾಗಿ ನೋಡ್ತೀಯಾ. ಕಾಲಿಗೆ ಬೀಳು'' ಎಂದು ಹೇಳಿ ಕಾಲಿಗೆ ಬೀಳಿಸಿದರು. ''ಆ ಹೂವನ್ನು ನೀನು ನಿನ್ನ ಹೆಂಡತಿ ಕಾಲಿಗೆ ಬಿದ್ದು, ಅವಳಿಗೆ ಮುಡಿಸಬೇಕು. ನೀ ಮಾಡಿದ್ದನ್ನು ಅವಳಿಗೆ ಹೇಳಬೇಕು. ನನಗೆ ಅವಳೇನೂ ಬೇರೆ ಅಲ್ಲ, ನನ್ನ ತಂಗಿಯಂತೆಯೇ. ಈ ವಿಷಯ ಅವಳಿಗೆ ಹೇಳದೆ ಇದ್ದರೆ ಶಾಲೆಯಲ್ಲಿ, ಊರಲ್ಲಿ ಹೇಳ್ತೇನೆ. ನೀ ಗಡೀಪಾರು ಆಗ್ತೀಯೆ'' ಎಂದು ಹೇಳಿ ಕಳಿಸಿದರು. ಟ್ಯೂಷನ್ ನಿಂತು ಹೋಯಿತು. ದಂಪತಿಗಳಿಗೆ ವಿರಸವಾಗದಂತೆ ಅವಳ ಗಂಡನಿಗೆ ಜೋಯಿಸರೇ ಎಲ್ಲವನ್ನೂ ಹೇಳಿದರು. ಹೀಗೆ ಶಾಂತಸ್ವಭಾವದ ಜೋಯಿಸರ ಜೋರು ಅನಸೂಯೆಯ ಬದುಕನ್ನು ಸರಿಮಾಡಿತು.

❁ ❁ ❁

ಪ್ರವಚನ ಚಕ್ರವರ್ತಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಸೋದರರಾದ ಶ್ರೀ ರಾಮಭದ್ರಶಾಸ್ತ್ರಿಗಳು ವಿನೋದಪ್ರಿಯರು. ಒಮ್ಮೆ ನನ್ನ ತಮ್ಮ ಗೋಪಾಲ ಬೆಂಗಳೂರಿನಲ್ಲಿ ಒಬ್ಬರ ಮನೆಗೆ ಹೋಗಬೇಕಿತ್ತು. ಜೊತೆಯಲ್ಲಿದ್ದ ಶಾಸ್ತ್ರಿಗಳನ್ನು ಆ ಮನೆಯ ಗುರುತು ಕೇಳಿದಾಗ ಅವರು ನಡೆದೇ ಹೋಗಬಹುದು ಎಂದರು. ಆದರೂ ಗೋಪಾಲ ಹಿರಿಯರಿಗೆ ತೊಂದರೆಯಾಗದಿರಲೆಂದು ಆಟೋ ಮಾಡಿದ. ಆಟೋ ಹತ್ತಿ ಕುಳಿತು ದಾರಿಯ ಗುರುತು ಹೇಳಹೇಳುತ್ತಾ ಆಟೋ ಹತ್ತಿದ ಜಾಗಕ್ಕೇ ವಾಪಸ್ಸು ಕರೆತಂದರು. ಆಶ್ಚರ್ಯಪಟ್ಟ ಗೋಪಾಲ ಈ ಬಗ್ಗೆ ಕೇಳಿದಾಗ, ''ನಾನು ನಡೆದೇ ಹೋಗೋಣ ಎಂದೆ. ನೀನು ಕೇಳಲಿಲ್ಲ. ದುಡ್ಡು ಖರ್ಚು ಮಾಡಿ ರಿಕ್ಷಾ ಮಾಡಿದೆ. ನಿನಗೂ ತೃಪ್ತಿ ಆಯಿತು. ಈಗ ನಾವು ಇಲ್ಲಿಂದ ನಡೆದೇ ಅವರ ಮನೆಗೆ ಹೋಗೋಣ. ವಾಯುವಿಹಾರವಾಗುತ್ತದೆ. ನಿನಗೂ ವ್ಯಾಯಾಮ, ನನಗೂ ವ್ಯಾಯಾಮ'' ಎನ್ನುವುದೇ ಅವರು!

❁ ❁ ❁

ನಮ್ಮ ಸೋದರಮಾವ ರಾಮಾವಧಾನಿಗಳು ವ್ರತನಿಷ್ಠರು, ಬಹಳ ಮಡಿ, ಆಚಾರ. ಒಮ್ಮೆ ಅವರು ಬೆಂಗಳೂರಿಗೆ ಹೊರಟಿದ್ದರು. ದಾರಿಯಲ್ಲಿ ಹೊಟೆಲ್ ಒಂದರ ಬಳಿ ಬಸ್ಸು ಉಪಾಹಾರ ವಿರಾಮಕ್ಕಾಗಿ ನಿಂತಿತ್ತು. ಜತೆಯಲ್ಲಿ ನಾನೂ ಇದ್ದೆ. ಮಾವ ಬಸ್ಸಿನಿಂದ ಇಳಿದು ಎರಡು ಎಳನೀರು ಕೊಂಡರು. ಅವರು ಎಂದೂ ಮಧ್ಯದಲ್ಲಿ ನೀರು ಕುಡಿಯುವವರಲ್ಲ. ಅವರು ಎಳನೀರು ಕೊಂಡದ್ದು ಕಂಡ ನಾನು, ಅವರಿಗೆ ಬಹಳ ಬಾಯಾರಿಕೆಯಾಗಿರಬೇಕು ಎಂದುಕೊಂಡೆ. ಆದರೆ ನನ್ನ ಯೋಚನೆ ತಿರುವು ಮುರುವು ಮಾಡುವಂತೆ ಎಳನೀರುಗಳನ್ನು ಕೈಲಿ ಹಿಡಿದು ರಸ್ತೆಯ ಪಕ್ಕಕ್ಕೆ ಹೋಗಿ, ಜಲಬಾಧೆ ತೀರಿಸಿಕೊಂಡು ಎಳನೀರಿನಲ್ಲಿ ಕೈಕಾಲು ತೊಳೆದು ಬಂದರು! ಎಂಥ ಪರಿಸ್ಥಿತಿಯಲ್ಲೂ ಕೈಬಿಡದ ಮಡಿ ಎಂದರೆ ಇದು!

❁ ❁ ❁

ಇಂಥದೇ ಮತ್ತೊಂದು ವಿನೋದ ಪ್ರಸಂಗ: ಹಿರಿಯರಾದ ಕೇಶವ ಶ್ರೌತಿಗಳು ಮತ್ತು ಸುಬ್ರಾಯಶಾಸ್ತ್ರಿಗಳು ಇಬ್ಬರೂ ಬಹಳ ಒಳ್ಳೆಯ ಗೆಳೆಯರು. ಬಹಳ ಸ್ನೇಹ, ಸಲಿಗೆ ಅವರಿಬ್ಬರಲ್ಲಿ. ಕೇಶವ ಶ್ರೌತಿಗಳದು ಭಾರೀ ಶರೀರ; ಎತ್ತರವಾದ ದೊಡ್ಡದೇಹ. ಅದಕ್ಕೆ ನೇರ ವಿರುದ್ಧವಾಗಿತ್ತು ಸುಬ್ರಾಯಶಾಸ್ತ್ರಿಗಳ ಶರೀರ! ಬಡಕಲು ದೇಹ, ಸಾಮಾನ್ಯ ಎತ್ತರ.

ಸುಬ್ರಾಯಶಾಸ್ತ್ರಿಗಳಿಗೆ ವಿಶೇಷವಾಗಿ ಜ್ಯೋತಿಶ್ಶಾಸ್ತ್ರದ ಪರಿಚಯವಿತ್ತು. ಸಾಮಾನ್ಯವಾಗಿ ಅವರು ಜ್ಯೌತಿಷವನ್ನು ಚೆನ್ನಾಗಿಯೂ ಹೇಳುತ್ತಿದ್ದರು. ಒಮ್ಮೆ ಕೇಶವ ಶ್ರೌತಿಗಳು ಬೆಳಗಾಗೆದ್ದು ಸುಬ್ರಾಯಶಾಸ್ತ್ರಿಗಳ ಮನೆಗೆ ಬಂದರು. ಅವರು ಎಲ್ಲೋ ಹೊರಡಲು ಸಿದ್ಧರಾಗಿಯೂ ಇದ್ದರು. ಸುಬ್ರಾಯಶಾಸ್ತ್ರಿಗಳು ಪಂಚಾಂಗ ಹಿಡಿದು ಕುಳಿತಿದ್ದರು. ಕೇಶವ ಶ್ರೌತಿಗಳು ಬಂದವರೇ, ''ಸುಬ್ರಾಯ, ಈ ಕ್ಷಣ ಹೊರಡು.... ಶಿವಮೊಗ್ಗಕ್ಕೆ ಹೋಗಬೇಕು,

ಅಡಿಕೆಯ ದುಡ್ಡು ತರಬೇಕು; ಇಬ್ಬರೂ ಹೋಗಿಬರೋಣ'' ಎಂದರು. ಅವರು ಹಾಗೆಂದ ಕೂಡಲೆ ಸುಬ್ರಾಯ ಶಾಸ್ತ್ರಿಗಳು ಪಂಚಾಂಗ ನೋಡುತ್ತಾ ''ಕಾರಾಗೃಹದರ್ಶನಂ'' ಎಂದು ಓದಿದರು. ಕೇಶವ ಶಾಸ್ತ್ರಿಗಳಿಗೆ ಕಸಿವಿಸಿಯಾಯಿತು. ''ಸುಬ್ರಾಯ, ನೀನು ಏನೇನೋ ಹೇಳಬೇಡ. ಮನೆಯಲ್ಲಿ ಶುಭಕಾರ್ಯ ನಡೆಯಬೇಕಿದೆ. ಅದಕ್ಕೆ ದುಡ್ಡು ತರಬೇಕು. ಸುಮ್ಮನೆ ಹೊರಡು'' ಎಂದರು. ''ನಾನೇನು ಹೇಳಿದೆನಪ್ಪ, ಈ ದಿನ ಹೇಗಿದೆ ಎಂದು ನೋಡುತ್ತಿದ್ದೆ. ಅದರಲ್ಲಿ ಬರೆದಿದ್ದುದನ್ನು ಹೇಳಿದೆ ಅಷ್ಟೆ. ಬೇಜಾರು ಯಾಕೆ ನಿನಗೆ?'' ಎಂದರು. ತಾವೂ ಎದ್ದು ಬೇರೆ ಅಂಗಿ ಹಾಕಿಕೊಂಡರು. ಇಬ್ಬರೂ ತಮ್ಮ ತಮ್ಮ ಛತ್ರಿ ಹಿಡಿದು ಹೊರಟರು.

ಶಿವಮೊಗ್ಗ ತಲುಪಿ ಅಡಿಕೆ ಮಂಡಿಗೆ ಹೋದಾಗ, ಅಡಿಕೆ ಮಂಡಿ ಯಜಮಾನ, ''ನೋಡಿ ಸ್ವಾಮಿ, ಈಗ ಬ್ಯಾಂಕು ತೆಗೆದಿಲ್ಲ. ಊಟದ ಸಮಯ. ಎರಡು ಗಂಟೆಗೆ ಬ್ಯಾಂಕು ತೆಗೆಯುತ್ತದೆ. ಅಲ್ಲಿಂದ ದುಡ್ಡು ತಂದು ಕೊಡಬೇಕು. ನೀವು ಇಲ್ಲೇ ಕುಳಿತಿರಿ. ಹಾಲು-ಹಣ್ಣು ತೆಗೆದುಕೊಳ್ಳಿ. ದುಡ್ಡು ಬಂದ ಕೂಡಲೆ ತಮಗೆ ಕೊಡುತ್ತೇನೆ'' ಎಂದ. ಇಬ್ಬರೂ ಅಲ್ಲೇ ಆಸೀನರಾದರು. ಆಗ, ಈಗ ಎಂದು ಹೇಳಿ ಹೇಳಿ ಬಹಳಷ್ಟು ಹೊತ್ತು ಕಾಯಿಸಿದ ಅನಂತರ ದುಡ್ಡು ಬಂದಿತು. ಇವರ ಕೈ ಸೇರುವಷ್ಟರಲ್ಲಿ ಸಂಜೆಯ ಆರು ಗಂಟೆಯ ಸಮಯವಾಗಿದ್ದಿತು. ದುಡ್ಡು ತೆಗೆದುಕೊಂಡ ಇಬ್ಬರೂ ಊರಕಡೆಗೆ ಹೊರಟರು.

ಹೊಸಹಳ್ಳಿಗೆ ಬಂದು, ನದಿ ದಾಟಿ ಮತ್ತೂರಿಗೆ ಹೋದರಾಯಿತು ಎಂದು ಯೋಚಿಸಿದರು. ನಡೆಯುತ್ತ ಮಾತಾಡುತ್ತ ಹೊಸಹಳ್ಳಿಯ ಕಡೆ ಹೆಜ್ಜೆ ಹಾಕಿದರು ಮಿತ್ರರಿಬ್ಬರೂ. ಅಷ್ಟರಲ್ಲೇ ಜೀಪೊಂದು ಹಿಂದಿನಿಂದ ಬಂದಿತು. ಸುಬ್ರಾಯಶಾಸ್ತ್ರಿಗಳು ಕೈ ತೋರಿಸಿದರು. ಜೀಪು ನಿಂತಿತು. ''ನಾವು ಹೊಸಹಳ್ಳೀಲಿ ಇಳಿಯಬೇಕು'' ಎಂದರು. ಜೀಪಿನ ಡ್ರೈವರು ''ಅಚ್ಛಾ'' ಎಂದ. ಅವನ ಜತೆ ಒಬ್ಬ ಪೊಲೀಸಿನವನು ಕುಳಿತಿದ್ದ. ಇವರು ಹಿಂದುಗಡೆ ಹತ್ತಿ ಕುಳಿತದ್ದರಿಂದ ಅವರನ್ನು ಅಷ್ಟಾಗಿ ಗಮನಿಸಲಿಲ್ಲ. ಕೇಶವ ಶ್ರೌತಿಗಳು, ''ನೋಡಿದ್ಯಾ ನಮ್ಮ ಯೋಗವನ್ನ? ಹೊರಟದ್ದು ತಡವಾದರೂ ಜೀಪು ಬಂದಿತು, ಕೈ ತೋರಿಸಿದ ಕೂಡಲೆ ನಿಂತಿತು. ಈಗ ಕಾರಲ್ಲೇ ಹೋಗಿ ಊರು ತಲುಪಿದಷ್ಟೇ ಸುಖ'' ಎಂದರು ಹೆಮ್ಮೆಯಿಂದ. ಆ ಡ್ರೈವರು ಹೊಸಹಳ್ಳಿಯ ಟೋಲ್‌ಗೇಟಿನ ಹತ್ತಿರ ಹೋದವನೇ ಜೀಪನ್ನು ವಾಪಸು ತಿರುಗಿಸಿದ. ತಾವು ಹೊಸಹಳ್ಳಿಯಲ್ಲಿ ಇಳಿಯಬೇಕು ಎಂದು ಹೇಳಿದ್ದರೂ ತಿರುಗಿಸುತ್ತಿದ್ದಾನೆ ಏಕೆ ಎಂದು ಗಲಿಬಿಲಿಯಾಗಿ, ''ತಾಳಯ್ಯ, ನಾವು ಇಲ್ಲಿ ಇಳಿದುಬಿಡುತ್ತೇವೆ'' ಎಂದರು, ಸ್ವಲ್ಪ ಗಲಾಟೆ ಮಾಡಿದರು. ಆ ಪೊಲೀಸಿನವನು ಕೊನೆಗೆ ರೇಗಿ, ''ಚುಪ್ ಬೈಠೊ'' ಎಂದ. ಸುಮ್ಮನೆ ಕುಳಿತರು. ಈಗ ಮಾತನಾಡುವ ಮನಸ್ಸೂ ಇರಲಿಲ್ಲ. ಡ್ರೈವರನಿಗೆ ಕನ್ನಡ ಬರುವುದಿಲ್ಲ ಎಂದಂತೂ ಅರ್ಥವಾಗಿತ್ತು. ಜೀಪು ತಿರುಗಿ ಬಂದು ಮತ್ತೂರ ಕಡೆಗೆ ಹೊರಟಾಗ ಇಬ್ಬರೂ ನಿರಾಳ ಉಸಿರು ಬಿಟ್ಟರು. ಆಗ ಸುಬ್ರಾಯ ಶಾಸ್ತ್ರಿಗಳು, ''ಓಹೋ.... ಶ್ರೌತಿ, ಇದು ಮತ್ತೂರಿಗೇ ಹೋಗುತ್ತೇ ಅಂತ ಕಾಣುತ್ತೆ. ನೋಡಿಲ್ಲಿ ನಮ್ಮ ಕಡೆ ಟೋಲ್‌ಗೇಟ್ ಬಂತು. ನಮ್ಮ ಅದೃಷ್ಟ ನೋಡು! ಹೊಸಹಳ್ಳಿಗೆ ಹೋಗಿ ತೆಪ್ಪದಲ್ಲಿ ನದಿ ದಾಟಿ ಕತ್ತಲೆಯಲ್ಲಿ ಹೋಗುವ ಬದಲು, ಈಗ ನೇರವಾಗಿ ನಮ್ಮೂರಿಗೇ ಹೋಗಬಹುದು'' ಎಂದರು. ಅಲ್ಲಿಗೆ ಹೋದ ಡ್ರೈವರು ಮತ್ತೆ ಜೀಪನ್ನು ತಿರುಗಿಸಿದ. ಹಿಂದೆ ಕುಳಿತಿದ್ದ ಇವರು, ''ಇಲ್ಲೇ ಮುಂದಕ್ಕೆ ನಡಿ. ನಾವು ಅಲ್ಲಿಗೇ ಹೋಗಬೇಕು'' ಎಂದರು, ತಮಗೆ ಬರುತ್ತಿದ್ದ ಚೂರು-ಪಾರು ಹಿಂದಿಯಲ್ಲಿ. ಆಗ ಅವನು ಸ್ವಲ್ಪ ಜೋರಾಗಿಯೇ, ''ತುಮ್ ಚುಪ್ ಬೈಠೊ'' ಎಂದ. ಇವನೇಕೆ ಹೀಗೆ ಗದರುತ್ತಾನೆ ಎಂದು, ಆಗ ಪಕ್ಕದಲ್ಲಿದ್ದವನ ಮುಖ, ಉಡುಪು ನೋಡಿದಾಗ ತಿಳಿಯಿತು - ಪಕ್ಕದಲ್ಲಿ ಕುಳಿತಿದ್ದವ ಪೊಲೀಸ್ ಇನ್ಸ್‌ಪೆಕ್ಟರ್ ಎಂದು! ಈಗ ಭಾರಿ ಹೆದರಿದ ಮಿತ್ರರಿಬ್ಬರೂ ಬೇರೆ ಮಾತಾಡದೆ ಸುಮ್ಮನೆ ಕುಳಿತರು. ಜೀಪು ಹರಿಹರದ ಟೋಲ್‌ಗೇಟ್ ಹತ್ತಿರವೂ ಹೋಗಿ ತಿರುಗಿತು, ಸವಳಂಗದ ಟೋಲ್‌ಗೇಟಿನವರೆಗೂ ಹೋಗಿ, ತಿರುಗಿ ಬಂದು ರಾತ್ರಿ ಹನ್ನೆರಡು ಗಂಟೆಯ ವೇಳೆಗೆ ಶಿವಮೊಗ್ಗದ ಬಜಾರ್ ಪೊಲೀಸ್ ಸ್ಟೇಷನ್‌ಗೆ ಬಂದು ತಲುಪಿತು! ಡ್ರೈವರು, ''ತುಮ್ ಲೋಗ್ ಉತರೋ'' ಎಂದ. ಇಬ್ಬರು ಮಿತ್ರರೂ ಪೆಚ್ಚಾಗಿ ಜೀಪಿನಿಂದ ಇಳಿದು ಸ್ಟೇಷನ್ನಿನ ಒಳಗೆ ಬಂದರು. ಒಳಗಿದ್ದ ಹಿರಿಯ ಇನ್ಸ್‌ಪೆಕ್ಟರು, ಇವರು ಹಾಗೂ ಇವರ ಉಡುಪನ್ನು ನೋಡಿ, ''ಯಾರು ನೀವು?'' ಎಂದರು. ಕನ್ನಡದ ಮಾತು ಕೇಳಿ ಹರ್ಷವಾಗಿ ತಮ್ಮ ಪರಿಚಯ ಮಾಡಿಕೊಂಡರು ಮಿತ್ರರು. ಸಂಭಾಷಣೆ ಮುಂದುವರೆಯಿತು. ''ಎಲ್ಲಿಗೆ ಹೋಗಿದ್ದಿರಿ?'' ''ಕೆಲಸವಿತ್ತು, ಬಂದಿದ್ದೆವು. ಹೊಸಹಳ್ಳಿಗೆ ಹೋಗಬೇಕಿತ್ತು'' ''ಅದಿರಲಿ. ಪೊಲೀಸ್ ಜೀಪನ್ನೇಕೆ ನೀವು ಕೈತೋರಿಸಿ ನಿಲ್ಲಿಸಿದ್ದು?'' ''ಗೊತ್ತಿರಲಿಲ್ಲ ಸ್ವಾಮಿ ಅದು ಪೊಲೀಸು ಜೀಪು ಎಂದು. ಗಮನಿಸಲಿಲ್ಲ ನಾವು.'' ''ನಿಮಗೆ ಗೊತ್ತಿಲ್ಲವೇ? ಈ ದಿನ ಗಲಾಟೆಯಾಗಿದೆ, ಶಿವಮೊಗ್ಗದಲ್ಲಿ ಕರ್ಫ್ಯೂ ಇದೆ, ಆರುಗಂಟೆಯ ಮೇಲೆ ಯಾರೂ ಬೀದಿಯಲ್ಲಿ ಓಡಾಡಬಾರದು ಎಂದು? ಅದಕ್ಕೇ ನಿಮ್ಮನ್ನು ದಸ್ತಗಿರಿ ಮಾಡಿ ಕರೆತಂದಿದ್ದಾರೆ ಗೊತ್ತೇ?'' ಎಂದರು ಹಿರಿಯ ಇನ್ಸ್‌ಪೆಕ್ಟರು. ಇವರ ಎದೆ ಧಸಕ್ಕೆಂದಿತು. ಜಂಘಾಬಲ ಉಡುಗಿದಂತಾಯಿತು. ''ಸ್ವಾಮಿ, ನಿಜಕ್ಕೂ ನಮಗೆ

ಏನೂ ಗೊತ್ತಿಲ್ಲ. ದುಡ್ಡು ತೆಗೆದುಕೊಂಡು ಬರಲು ಅಡಿಕೆ ಮಂಡಿಗೆ ಬಂದೆವು. ದುಡ್ಡು ತೆಗೆದುಕೊಂಡು ಹೋಗುತ್ತಿದ್ದೆವು. ಜೀಪು ಬಂದಿತು. ನಮ್ಮೂರ ಕಡೆಗೇ ಹೋಗುತ್ತಿದೆ ಎಂದು ಕೈ ತೋರಿಸಿದೆವು. ಬೇಗ ಊರು ಸೇರೋಣ ಎನ್ನುವ ಆತುರದಲ್ಲಿ ಏನನ್ನೂ ಗಮನಿಸದೆ ಕುಳಿತೆವು'' ಎಂದರು, ಅದಾಗಲೇ ಪೆಚ್ಚಾಗಿದ್ದ ಶಾಸ್ತ್ರಿಗಳು. ''ಆದದ್ದಾಯಿತು.... ಈಗ ಇಲ್ಲೇ ಮಲಗಿ. ಬೆಳಗ್ಗೆ ಕಳುಹಿಸಿಕೊಡುತ್ತೇನೆ'' ಎಂದ ಇನ್ಸ್‌ಪೆಕ್ಟರು, ತಮ್ಮ ಕೈಕೆಳಗಿನವನಿಗೆ, ''ಲೋ... ಇವರಿಗೊಂದು ಗೋಣೀಚೀಲ, ದಿಂಬು ಕೊಡೋ... ಮಲಗಲಿ'' ಎಂದರು.

ಗೋಣೀಚೀಲ ಹಾಸಿ ಮಲಗಿದ ಮಿತ್ರರು ಸದ್ದಿಲ್ಲದೆ ಇದ್ದರು. ಮೆಲ್ಲನೆ ಸುಬ್ರಾಯ ಶಾಸ್ತ್ರಿಗಳು, ''ಶ್ರೌತೀ!... ಬೆಳಗ್ಗೆ ನಾನೇನು ಹೇಳಿದೆ? ಕಾರಾಗೃಹವಾಸಃ ಎಂದೆ; ನೀನು ನನ್ನ ಮಾತು ಕೇಳಲಿಲ್ಲ'' ಎಂದರು! ''ನಮ್ಮನ್ನೂ ಕಾಪಾಡಿ ನಮ್ಮ ದುಡ್ಡನ್ನೂ ಕಾದರಲ್ಲ! ರಾತ್ರೆ ಹೊತ್ತಿನಲ್ಲಿ!'' ಎಂದರು, ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಶ್ರೌತಿಗಳು.

ಬೆಳಗ್ಗೆ ಎದ್ದು ಊರಿಗೆ ಹೊರಟರು ಮಿತ್ರರು. ಕೇಶವ ಶ್ರೌತಿಗಳು, ''ನೋಡು, ಸುಬ್ರಾಯ, ಊರಿನಲ್ಲಿ ನಮ್ಮವರಿಗೆ ಇದನ್ನೆಲ್ಲ ಹೇಳಬೇಡ.... ಸುಮ್ಮನೆ ಇದ್ದುಬಿಡು'' ಎಂದರು ತಾಕೀತು ಮಾಡುವವರಂತೆ. ಆದರೆ ಸುಬ್ರಾಯಶಾಸ್ತ್ರಿಗಳು ಕೇಳುವಂಥವರೇ? ತಮ್ಮ ಜ್ಯೌತಿಷ ನಿಜವಾದ ಬಗ್ಗೆ ಅವರಿಗೆ ಸಂತೋಷವಾಗಿತ್ತು! ಕಷ್ಟ ಏನೇ ಪಟ್ಟಿದ್ದರೂ ತಮ್ಮ ಜ್ಯೌತಿಷ ನಿಜವಾದ ಬಗ್ಗೆ ಎಲ್ಲರಲ್ಲೂ ಖುಷಿಯಿಂದ ಹೇಳಿಕೊಂಡರು ! ಸಣ್ಣಗೆ ಇಬ್ಬರಿಗೂ ಕಾರಾಗೃಹವಾಸದ ಪ್ರಾಯಶ್ಚಿತ್ತ ಆಗಿತ್ತು.

❁ ❁ ❁

ನಮ್ಮನಮ್ಮಲ್ಲಿನ ನಂಬಿಕೆಗಳನ್ನು ಹೀಗೆ ಎಂದು ಹೇಳಲಾಗದು. ಪುರಾಣ, ಪುಣ್ಯಕಥೆಗಳನ್ನು ಯಾವಾಗಲೂ ಹೇಳಿ-ಕೇಳುತ್ತಲೇ ಇರುವ ನಮ್ಮೂರಿನಲ್ಲಿಯೂ ಕೆಲವು ನಂಬಿಕೆಗಳು ಹಿಂದೆಯೂ ಇದ್ದುವು, ಈಗಲೂ ಇವೆ.

ಒಮ್ಮೆ ಉಪಾಕರ್ಮದ ದಿನ, ಊರಿನಲ್ಲಿ ಬೆಳಗ್ಗೆ ಹೊಸ ಜನಿವಾರ ಹಾಕಿಕೊಳ್ಳುವ ಸಂಭ್ರಮ. ಹೋಮ ಹವನ ಮುಗಿದು, ಸಿಹಿ ತಿಂದು ಊಟ ಮಾಡಿದ ಅನಂತರ ರಾತ್ರಿ ಏನಾದರೂ ಕಾರ್ಯಕ್ರಮ ಮಾಡೋಣವೇ ಎಂದು ಯೋಚಿಸಿದೆವು. ಗುಂಪಿನಲ್ಲಿದ್ದವರು, ''ಅಭಿಮನ್ಯು ರಣಪ್ರಸಂಗ ಹೇಳಿ'' ಎಂದರು. ಅಲ್ಲಿದ್ದ ಕೇಶವ ಶ್ರೌತಿಗಳು, ''ಅಭಿಮನ್ಯು ಬೇಡ. ಈ ದಿನ ಉಪಾಕರ್ಮ. ನಾನಂತೂ ಕಾವ್ಯ ಓದುವುದಿಲ್ಲ. ಶುಭವಾಗಿರುವ ದಿನ ದ್ರೋಣಪರ್ವ ಯಾಕೆ? ಬರೀ ಯುದ್ಧ, ಮರಣ. ಬೇರೆ ಯಾವುದಾದರೂ ಕಲ್ಯಾಣದ ಪ್ರಸಂಗ ಹೇಳಿ'' ಎಂದರು. ಆದರೂ ಅವರ ಮಾತಿಗೆ ಅಷ್ಟು ಪ್ರಾಮುಖ್ಯ ಕೊಡದೆ, ಅವರ ಆತಂಕ ತಕ್ಕುದಲ್ಲ ಎಂದ ಇತರರು, ''ಅದು ಚೆನ್ನಾಗಿದೆ. ಅದೇ ಆಗಲಿ... ಅದಕ್ಕೇನಂತೆ?'' ಎಂದರು. ತಿರುಮಲಾವಧಾನಿ, ''ನಾನು ಓದುತ್ತೇನೆ'' ಎಂದು ತಾವು ಕಾವ್ಯವನ್ನು ಓದುವುದಾಗಿ ಹೇಳಿದರು. ಮನಸ್ಸಿಲ್ಲದೇ ಇದ್ದರೂ ನಾನು ವ್ಯಾಖ್ಯಾನ ಮಾಡುವುದೆಂದಾಯಿತು. ಅಂತೂ ಕಾರ್ಯಕ್ರಮ ಚೆನ್ನಾಗಿ ನಡೆಯಿತು. ಎಲ್ಲರಿಗೂ ಕಥೆ ಮೆಚ್ಚುಗೆಯಾಯಿತು. ಎಲ್ಲರೂ ತೃಪ್ತಿಯಿಂದ ತಮ್ಮತಮ್ಮ ಮನೆಗಳಿಗೆ ತೆರಳಿ ಮಲಗಿದರು.

ಬೆಳಗ್ಗೆ ಆರು ಗಂಟೆಯ ವೇಳೆಗೆ ಆಘಾತಕರ ಸುದ್ದಿಯೊಂದು ಊರನ್ನು ತಲುಪಿತು. ಪಾಳೆಗಾರನಂತಿದ್ದ ಒಬ್ಬ ರೈತನು ಸುಮಾರು ಇಪ್ಪತ್ತು ಮಂದಿ ದೊಣ್ಣೆ ಹಿಡಿದ ಪೈಲ್ವಾನರನ್ನು ಶಿವಮೊಗ್ಗದಿಂದ ಕರೆತಂದು, ಸೈಕಲಿನಲ್ಲಿ ನಮ್ಮೂರಿನಿಂದ ಹೋಗುತ್ತಿದ್ದ ನಮ್ಮ ಹುಡುಗರನ್ನು ಹಿಡಿದುಕೊಂಡು ಹೋಗಿ ಬಂಧಿಸಿಟ್ಟಿದ್ದ. ಪ್ರತಿಯೊಬ್ಬರ ಜಮೀನಿನ ಮೇಲುಭಾಗ ಐವತ್ತು ಅಡಿ ತನಗೆ ಸೇರಬೇಕೆಂದೂ, ಅದು ತನ್ನದೇ ಎಂದೂ ಅವನ ವಾದ. ಅಲ್ಲದೆ ಅವನು ನಮ್ಮೂರಿನಿಂದ ಒಂದು ಮೈಲಿ ದೂರದಲ್ಲಿದ್ದ ಜಮೀನನ್ನು ಖರೀದಿಸಿದ್ದವನು. ನಮ್ಮೂರ ರಸ್ತೆಯನ್ನು ಸೇರಿಸಿ ಸುಮಾರು ಒಂದು ಫರ್ಲಾಂಗ್ ದೂರದವರೆಗೆ ಆಕ್ರಮಿಸಿಕೊಂಡಿದ್ದವನು. ಕೆಲವರು ಅದನ್ನು ಆಕ್ಷೇಪಿಸಿದ್ದರು.

ವಿಷಯ ತಿಳಿದು ಎಲ್ಲರೂ ಹೊರಟೆವು. ಬಾವಿಕಟ್ಟೆ ಸುಬ್ರಾಯಶಾಸ್ತ್ರಿಗಳು ಮುಂದಾಳು. ಜೆ.ಎಮ್. ಕೃಷ್ಣಭಟ್ಟರೂ ಸೇರಿಕೊಂಡರು. ಸುಬ್ರಾಯಶಾಸ್ತ್ರಿಗಳಂತೂ, ''ಅವರು ದೊಣ್ಣೆ ಹಿಡಿದು ಬಂದರೆ ನಾವು ಗುದ್ದಲಿ, ಹಾರೆ, ಪಿಕಾಸಿ, ಒನಕೆ ತೆಗೆದುಕೊಂಡು ಹೋಗೋಣ... ನೋಡೋಣ. ನಮ್ಮ ಹುಡುಗರ ಕೂದಲೂ ಕೊಂಕದ ಹಾಗೆ ಬಿಡಿಸಿಕೊಂಡು ಬರೋಣ. ಹೊಡೆದಾಡಿದರೂ ಸರಿ!''ಎಂದರು. ಆದರೆ ಕೃಷ್ಣಭಟ್ಟರು ಹಾಗೆ ಆಯುಧಗಳನ್ನು ಹಿಡಿದುಹೋಗುವುದು ಬೇಡವೆಂದರು. ಅಂತೂ ಹೆಂಗಸರೂ ಮಕ್ಕಳೂ ಸೇರಿದಂತೆ ನಾವು ಸುಮಾರು ಇನ್ನೂರು ಜನರು ಹೋದೆವು. ಅವರಲ್ಲಿಗೆ ಹೋಗಿ ತಲುಪಿದಾಗ ಅವನ ಕಡೆಯ ಇಪ್ಪತ್ತು ಜನ ದೊಣ್ಣೆಗಳನ್ನು ತಿರುಗಿಸುತ್ತಾ ಮುಂದೆಬಂದರು. ಅವಧಾನಿಗಳು, ''ಹುಟ್ಟಿದ ಮನುಷ್ಯ ಒಂದಲ್ಲ ಒಂದು ದಿನ ಸಾಯಲೇಬೇಕು. ನಾವು ನಮ್ಮ ಮಕ್ಕಳನ್ನು ಬಿಡಿಸಲು ಹೋರಾಡಿ ಸತ್ತರೇನಂತೆ! ಏನು ನೋಡುತ್ತಿದ್ದೀರಿ? ನಾನು ಹೇಳಿದರೆ ನನ್ನ ಮಾತು ಕೇಳದೆ ಬರಿಗೈಲಿ ಬಂದಿರಿ. ಈಗ..... ಈಗ ಕೈಗೆ ಸಿಕ್ಕಿದ

ಕಲ್ಲು, ಮಣ್ಣು, ಹೆಂಟೆಗಳನ್ನೆತ್ತಿಕೊಂಡು ಅವರಿಗೆ ಬಡಿಯಿರಿ. ಆಗ ನೋಡೋಣ, ಏನು ಮಾಡುತ್ತಾರೆ ಅಂತ?'' ಎಂದು ಕೂಗಿದರು. ಸರ್ಕಾರದವರು ದೈವಾನುಗ್ರಹವೋ ಎಂಬಂತೆ ರಸ್ತೆ ಮಾಡಲು ಜಲ್ಲಿಕಲ್ಲು ರಾಶಿ ಬಿಡಿಸಿದ್ದರು. ಅವರ ಆವೇಶಭರಿತ ಕೂಗಿನಿಂದ ಸ್ಫೂರ್ತಿಗೊಂಡ ನಾವು ಅವರು ಹೇಳಿದಂತೆಯೇ ಆಳಿಗೆ ಒಂದೊಂದು ಕಲ್ಲು ಬೀಸಿದೆವು. ನನಗಂತೂ ನಾನು ನನ್ನ ಚರಿತ್ರೆಯ ಪಾಠದಲ್ಲಿ ಬಹಳ ಹಿಂದೆ ಓದಿದ್ದ ತಾಳೀಕೋಟೆಯ ಯುದ್ಧದ ನೆನಪೇ ಆಯಿತು...... ಅಂತೂ ಹೋರಾಟ ನಡೆದು ನಮ್ಮ ಕೈ ಮೈಲಾಯಿತು. ತೂರಿ ಬರುತ್ತಿದ್ದ ಕಲ್ಲುಗಳನ್ನು ಎದುರಿಸಲಾರದೆ ಹೋದರು ಅವರು. ರಾಮಾಯಣದ ಕಪಿಗಳೆದುರು, ರಕ್ಕಸರು ನಿಲ್ಲಲಾರದೆ ಓಡಿಹೋದಂತೆ ಕೊನೆಗೆ ಅವರೆಲ್ಲ ಓಡಿಹೋದರು. ಅವರು ನಮ್ಮ ಹುಡುಗರನ್ನು ಒಂದು ಹಳ್ಳಿಯ ಮನೆಯಲ್ಲಿ ಕೂಡಿಹಾಕಿದ್ದರು. ಆ ಮನೆಯ ಬಾಗಿಲು ಒಡೆದು ನಮ್ಮ ಊರ ಮಕ್ಕಳನ್ನು ಕರೆದುತಂದೆವು! ಪೊಲೀಸ್ ಪಡೆ ಬಂದು ನಮ್ಮಂತೆಯೇ ತೀರ್ಮಾನ ಮಾಡಿದರು.

ನನ್ನ ಮದುವೆಯಲ್ಲಿ ನಮ್ಮ ಮಾವನವರು ಕೊಟ್ಟಿದ್ದ ವಾಚು ಕಳೆದುಹೋಯಿತು. ಗಲಾಟೆ ನಡೆದ ಮಾರನೆಯ ದಿನ ಸಿಕ್ಕಿತು. ಅಂತೂ ಅದೊಂದು ಮರೆಯಲಾರದ ದಿನ. ಅಂದು ನನ್ನ ಮಾವ ರಾಮಸ್ವಾಮಿಗಳ ಕೈ ಮುರಿದಿತ್ತು. ಅನಂತರ ಸರಿಯಾಯಿತು. ಹಿಂದಿನ ದಿನ ರಾತ್ರಿ ಶ್ರೀ ಕೇಶವಶ್ರೌತಿಗಳು, ''ದ್ರೋಣಪರ್ವ ಓದುವುದು ಬೇಡ, ಅಲ್ಲಿ ಯುದ್ಧ, ನೋವು, ಸಾವು'' ಎಂದದ್ದೂ, ಮರುದಿನವೇ ಈ ಘಟನೆ ನಡೆದದ್ದೂ ಅಬ್ಬ, ಎಂತಹ ಕಾಕತಾಳೀಯ! ಆ ದಿನವೆಲ್ಲಾ ಊರಿನವರೆಲ್ಲರೂ ಒಂದು ರೀತಿ ಸ್ತಬ್ಧರಾದಂತೆ ಇದ್ದರು! ಇದಾದ ಕೆಲವು ದಿನಗಳ ಅನಂತರ ಜಗಳಕ್ಕೆ ಬಂದ ಆ ರೈತನೂ ನಮ್ಮೂರಿಗೆ ಸ್ನೇಹಿತನೇ ಆದ.

❁ ❁ ❁

ಮತ-ಧರ್ಮಗಳು ಯಾವುದಾದರೇನು? ನಾವೆಲ್ಲರೂ ಮನುಷ್ಯರೇ ತಾನೆ? ನಾವೆಲ್ಲರೂ ನಂಬುವುದು ಒಂದೇ ಒಂದು ಶಕ್ತಿಯನ್ನೇ ತಾನೆ? ಹೆಸರು ಬೇರೆ ಬೇರೆ ಅಷ್ಟೇ...... ಹಾಗೊಂದು ಅಪಾಯದಿಂದ ನಮ್ಮನ್ನು ಕಾಪಾಡಿದ್ದು ಆ ದೇವರೇ!!

ಒಮ್ಮೆ ನಾವೆಲ್ಲರೂ ನಮ್ಮೂರಿನಿಂದ ಸುಮಾರು ಹತ್ತು ಜನ ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಸೇರಿ ಇಪ್ಪತ್ತು ಜನ ಎರಡು ತಿಂಗಳ ತನಕ ಉತ್ತರಭಾರತ ಪ್ರವಾಸ ಹೋಗಿದ್ದೆವು. ಕಾಶೀಯಾತ್ರೆ ನಮ್ಮ ಉದ್ದೇಶವಾಗಿತ್ತು. ನಮ್ಮ ಹೊಸ ಮಿನಿಬಸ್ ಡ್ರೈವರು, ಒಬ್ಬ ಮುಸಲ್ಮಾನ. ಬಸ್ಸಿನಲ್ಲಿ ಟ್ರಂಕುಗಳು, ತೆಂಗಿನ ಮೂಟೆ, ಅಡುಗೆ ಸಾಮಾನುಗಳು, ಸ್ಟೌವುಗಳು, ಹಾಸಿಗೆ ಬಟ್ಟೆಗಳು, ಉಡುವ ಬಟ್ಟೆಗಳೆಲ್ಲವನ್ನೂ ಕಟ್ಟಿ ಹಾಕಿಕೊಂಡು ವಿಜಯದಶಮಿಯ ದಿನ ಹೊರಟೆವು.

ಸಂಭ್ರಮದಿಂದ ಹೊರಟ ನಾವು ಕೊಲ್ಹಾಪುರದ ಹತ್ತಿರ ಹೋಗುತ್ತಿದ್ದಂತೆ ಮಳೆ ಪ್ರಾರಂಭವಾಗಿ ರಾತ್ರಿಯೂ ಆಯಿತು. ಜೋರಾಗಿ ಮಳೆಯೂ ಇದ್ದು ಪರ್ವತ ಪ್ರದೇಶದಲ್ಲಿನ ರಸ್ತೆಯಲ್ಲಿ ಬಸ್ಸು ನಿಧಾನವಾಗಿ ಸಾಗುತ್ತಿದ್ದಿತು. ಇದ್ದಕ್ಕಿದ್ದಂತೆ ಒಂದು ಗೋಡೆ ಎದುರಾದಂತೆ ಆಯಿತು! ಕತ್ತಲು.... ಮಳೆ..... ಪರ್ವತವೊಂದು ಮುಂದೆ, ಕಿರುರಸ್ತೆ, ತಿರುವು, ಕಾಡು ಪ್ರದೇಶ; ಪಕ್ಕದಲ್ಲೇ ಸುಮಾರು ನೂರು ಅಡಿಯ ಹಳ್ಳ, ಪ್ರಪಾತ ಎನ್ನಬಹುದು. ಅಷ್ಟರಲ್ಲೇ ಬಸ್‌ನ ದೀಪಗಳು ಪೂರ್ತಿ ಆರಿಹೋದವು. ನಮ್ಮ ಡ್ರೈವರು ತನ್ನ ಪೂರ್ತಿ ಶಕ್ತಿಯನ್ನು ಉಪಯೋಗಿಸಿ ಬಸ್ಸನ್ನು ತಿರುಗಿಸಿ ಬ್ರೇಕು ಒತ್ತಿದ. ಬಸ್ಸು ಪೂರ್ತಿಯಾಗಿ ತಿರುಗಿ ಅಡ್ಡವಾಗಿ ನಿಂತುಬಿಟ್ಟಿತು. ನಾವೆಲ್ಲರೂ 'ಹೋ' ಎನ್ನುವಷ್ಟರಲ್ಲಿ ಬಸ್ಸಿನಿಂದ ಅವನು ಕೆಳಗೆ ಜಿಗಿದು ತಲೆಯ ಮೇಲೆ ಕೈಹೊತ್ತು, ''ಅರೆ ಅಲ್ಲಾ! ಎಲ್ಲಾ ಬದುಕಿದೆವು ಸಲಾಂ'' ಎಂದು ಕುಣಿತ. ನಮಗೆ ಬಸ್ಸು ಕೆಳಗೆ ಉರುಳದೆ ಇದ್ದುದು ಅದೆಷ್ಟು ಪವಾಡ ಸದೃಶವಾಗಿತ್ತೆಂದರೆ, ಅದಕ್ಕಾಗಿ ತಾನು ದೇವರಿಗೆ ವಂದನೆಗಳನ್ನು ತಿಳಿಸುತ್ತ, ಕೆಲವು ನಿಮಿಷಗಳು ಹಾಗೆಯೇ ಕುಣಿತನಂತರ ಸುಧಾರಿಸಿಕೊಂಡು ಆ ಡ್ರೈವರು, ''ನಿಮ್ಮ ಹತ್ತಿರ ಇರುವ ಟಾರ್ಚುಗಳನ್ನು ಕೊಡ್ರಿ'' ಎಂದ. ಗಾಬರಿಯಲ್ಲಿ ಬೆಚ್ಚಿದ್ದ ನಮಗೆ ಕೈಚೀಲಗಳ ಒಳಗೆ ಇಟ್ಟಿದ್ದ ಟಾರ್ಚುಗಳನ್ನು ಹೊರತೆಗೆಯಲಾಗುತ್ತಿರಲಿಲ್ಲ. ಅಂತೂ ಒಟ್ಟಾರೆ ಎಂಟು ಟಾರ್ಚುಗಳು ಇದ್ದವು. ಎಲ್ಲವನ್ನೂ ಒಟ್ಟಿಗೆ ಹತ್ತಿಸಿ ಇಟ್ಟಾಗ ಮಾತ್ರ ಎಲ್ಲರ ಎದೆ ಧಸಕ್ಕೆಂದಿತು! ಬಸ್ಸು ಇನ್ನೊಂದಡಿ ಮುಂದೆ ಹೋಗಿದ್ದರೆ ನಾವು ಬಸ್ಸಿನ ಜತೆಗೇ ಪ್ರಪಾತಕ್ಕೆ ಬೀಳುತ್ತಿದ್ದೆವು. ಸಮತೋಲನ ತಪ್ಪಿ ಮುಂದೆ ನುಗ್ಗಿದ್ದರೆ ಬೆಟ್ಟದ ಪಾರ್ಶ್ವಕ್ಕೆ ಬಸ್ಸು ಡಿಕ್ಕಿ ಹೊಡೆಯುತ್ತಿತ್ತು... ಎಂತಹ ಅಪಾಯವು ಕೂದಲೆಳೆಯಲ್ಲಿ ತಪ್ಪಿದ್ದಿತು! ನಾವೆಲ್ಲರೂ ಸುಧಾರಿಸಿಕೊಳ್ಳುತ್ತಿರುವಂತೆಯೇ ಹಿಂದಿನಿಂದ ಬಂದ ಲಾರಿಯೊಂದನ್ನು ನಮ್ಮ ಡ್ರೈವರು ನಿಲ್ಲಿಸಿ ಸಹಾಯ ಕೇಳಿದ. ಲಾರಿಯವನು ನಾವು ಪಾರಾದುದಕ್ಕೆ ಆಶ್ಚರ್ಯವನ್ನು ವ್ಯಕ್ತಪಡಿಸಿದ. ''ನಾನು ದೀಪ ಹಾಕಿಕೊಂಡಿದ್ದೇನೆ. ನಾನು ಮುಂದೆ ಹೋಗುತ್ತೇನೆ, ನೀನು ನನ್ನನ್ನು ಹಿಂಬಾಲಿಸು. ಹತ್ತಿರದಲ್ಲೇ ಒಂದು ಊರು ಇದೆ. ನಿನ್ನ ಬಸ್ಸಿನ ದೀಪಗಳನ್ನು ರಿಪೇರಿ ಮಾಡಿಸಿಕೊಂಡು ಮುಂದೆ ಹೊರಡು'' ಎಂದು ಹೇಳಿದ ನಮ್ಮ ಡ್ರೈವರ್‌ಗೆ. ಹೇಳಿದಂತೆಯೇ ಅವನು ಮುಂದೆ ಹೋದ. ನಾವು ಹಿಂಬಾಲಿಸಿದೆವು. ಊರೊಂದು ಕಂಡತಕ್ಷಣ ಅಲ್ಲಿ ನಮ್ಮ ಬಸ್ಸಿನ ದೀಪಗಳನ್ನು ರಿಪೇರಿ ಮಾಡಿಸಿಕೊಂಡು

ಅನಂತರ ಮುಂದೆ ಸಾಗಿದೆವು. ಹೀಗೆ, ಆಗುತ್ತಿದ್ದ ಅನಾಹುತ, ದೈವಕೃಪೆಯಿಂದ ಸ್ವಲ್ಪದರಲ್ಲಿ ತಪ್ಪಿತು!

ಅಲ್ಲಿಂದ ನಮ್ಮ ಪ್ರಯಾಣ ಮುಂದುವರೆದು ಮುಂಬಯಿಯತ್ತ ಸಾಗಿತು. ಮುಂಬಯಿಯಲ್ಲಿ ಇದ್ದ ಪರಿಚಯಸ್ಥರು ಒತ್ತಾಯ ಮಾಡಿದ ಕಾರಣ ಒಂದು ದಿನ ಅಲ್ಲಿದ್ದು ಮುಂಬಯಿಯನ್ನು ನೋಡಿಕೊಂಡು ಹೋಗೋಣ ಎನ್ನುವುದು ನಮ್ಮ ಯೋಜನೆಯಾಗಿತ್ತು.... ನಾವು ಬೆಳಗಾಗಿ ಅಲ್ಲಿಗೆ ತಲುಪಿದೆವು. ಆ ದಿನ ಪೂರ್ಣಿಮೆ. ಸಮುದ್ರದ ಸ್ನಾನಕ್ಕೆ ಹೋಗೋಣ ಎಂದು ಹೊರಟೆವು. ನಾವು ಬಸ್ಸಿನಲ್ಲಿ ಕುಳಿತು ಜುಹೂ ಬೀಚ್‌ಗೆ ಬಂದಾಗ, ಒಳಗೆ ಕುಳಿತಿದ್ದ ನಮಗೆ ಡ್ರೈವರು ಮರಳಿನಲ್ಲಿ ಬಸ್ಸಿನ ಚಕ್ರ ಉರುಳುವುದಿಲ್ಲವೆಂದು ಹೇಳಿ ರಸ್ತೆಯ ಬದಿಯಲ್ಲಿಯೇ ಇಳಿಸಿದ. ಅಲ್ಲಿ ಇಳಿದ ನಾವೆಲ್ಲ ಸಮುದ್ರದತ್ತ ನಡೆದು ಹೋಗುತ್ತಿರುವಾಗ, ಖಾಲಿ ಬಸ್ಸು ಹೋದೀತು ಎನಿಸಿ ಬಸ್ಸನ್ನು ನಮ್ಮ ಹಿಂದೆಯೇ ಬಿಟ್ಟುಕೊಂಡು ಬಂದು ಮುಖ್ಯರಸ್ತೆಯ ಕಡೆಗೆ ತಿರುಗಿಸಿ ನಿಲ್ಲಿಸಿದ. ಅವನು ಹಾಗೆ ನಿಲ್ಲಿಸಿದಾಗ ಅವನ ಗಮನಕ್ಕೂ ಬೀಳದಂತೆ ಹಿಂದಿನ ಚಕ್ರ ನೇರವಾಗಿದ್ದು, ಮುಂದಿನ ಎರಡು ಚಕ್ರಗಳು ಪೂರ್ತಿ ಓರೆಯಾಗಿ ತಿರುಗಿಕೊಂಡಿದ್ದವು. ಬಸ್ಸಿನಿಂದಿಳಿದ ಅವನು, ''ನಿಮಗೆ ಸಾಮಾನು ಬೇಕಿದ್ದರೆ ತೆಗೆದುಕೊಳ್ಳಿ. ನಾನು ರಸ್ತೆಯಲ್ಲಿ ಬಸ್ಸು ನಿಲ್ಲಿಸಿರುತ್ತೇನೆ. ಸ್ನಾನ ಮುಗಿಸಿ ಅಲ್ಲಿಗೇ ಬನ್ನಿ'' ಎಂದ. ನಾವು ನಮಗೆ ಬೇಕಾಗಿದ್ದ ಬಟ್ಟೆ ಇತ್ಯಾದಿಗಳನ್ನು ತೆಗೆದುಕೊಂಡೆವು. ಅವನು ಬಸ್ಸು ಹತ್ತಿ ಸ್ಟಾರ್ಟು ಮಾಡಲು ಪ್ರಯತ್ನಿಸಿದ. ಆದರೆ ಸ್ಟಾರ್ಟ್ ಆದ ಬಸ್ಸಿನ ಮುಂದಿನ ಚಕ್ರಗಳು ಉರುಳುತ್ತಲೇ ಇರಲಿಲ್ಲ. ಅವನು ಕೀಯನ್ನು ಹೆಚ್ಚು ಹೆಚ್ಚು ಒತ್ತಿದಂತೆ ಚಕ್ರಗಳು ನಿಂತಲ್ಲೇ ತಿರುತಿರುಗಿ ಹಿಂದಿನ ಚಕ್ರಗಳು ಪೂರ್ತಿ ಮರಳಿನಲ್ಲಿ ಹೂತುಹೋದವು. ಹಿಂದೆ ಮರಳಿನ ರಾಶಿಯಾಯಿತು. ಹಿಂದಿನ ಚಕ್ರ ಆಳಕ್ಕಿಳಿಯಿತು. ಅಲ್ಲಿಯೇ ದಡದಲ್ಲಿದ್ದು ಇದನ್ನೆಲ್ಲ ಗಮನಿಸುತ್ತಿದ್ದ ಮೀನು ಹಿಡಿಯುವವರು ಹತ್ತಿರಬಂದು, ತಾವು ಬಸ್ಸನ್ನು ತಳ್ಳಿ ಸಹಾಯ ಮಾಡುವುದಾಗಿ ಹೇಳಿ ಅರುವತ್ತೈದು ರೂಪಾಯಿ ಕೊಡಬೇಕೆಂದು ಕೇಳಿದರು. ಸದ್ಯ ಬಸ್ಸು ಅಲ್ಲಿಂದ ಹೊರಟರೆ ಸಾಕೆಂದು ನಾವು ಅರುವತ್ತೈದು ರೂಪಾಯಿ ಕೊಡಲು ಒಪ್ಪಿದೆವು. ಅವರು ತಳ್ಳಿದರೂ ಬಸ್ಸನ್ನು ಒಂದಿಂಚೂ ಕದಲಿಸಲು ಸಾಧ್ಯವಾಗಲಿಲ್ಲ. ಹೊತ್ತೇರುತ್ತಿತ್ತು. ಎಂಟೂವರೆಗೆ ಅಲ್ಲಿಗೆ ಬಂದಿದ್ದ ನಾವು ಬಸ್ಸಿಗಾದ ತೊಂದರೆಯಿಂದಾಗಿ ಸ್ನಾನವನ್ನೂ ಮಾಡದೆ ಹನ್ನೆರಡೂವರೆಯ ತನಕವೂ ಹಾಗೆಯೇ ನಿಂತಿದ್ದೆವು. ಎಲ್ಲರಿಗೂ ಹಸಿವು ಬೇರೆ. ಅವರು ತಳ್ಳುವ ಭರಕ್ಕೆ ಬಸ್ಸಿನ ಚಕ್ರಗಳು ಇನ್ನೂ ಹೂತುಹೋದವು. ಕಡೆಗೆ ''ಹಗ್ಗ ತಂದು ಕಟ್ಟಿ ಎಳೆಯುತ್ತೇವೆ'' ಎಂದರು. ನಾವು ಹಗ್ಗ ತರಲು ಹತ್ತಿರದಲ್ಲಿದ್ದ ಅಂಗಡಿಗೆ ಹೋದಾಗ ಅಂಗಡಿಯವನು ''ಬೇಗ ಬಸ್ಸು ತೆಗೆಸಿ. ಈವತ್ತು ಹುಣ್ಣಿಮೆ. ಸಮುದ್ರ ಉಕ್ಕೇರುತ್ತದೆ. ಹದಿನೈದು ದಿನಗಳ ಹಿಂದೆ ಇಲ್ಲೇ ಒಂದು ಬಸ್ಸು ಸಿಕ್ಕಿಕೊಂಡಿತ್ತು, ಸಮುದ್ರ ಒತ್ತಿ ಬಂದಿತ್ತು'' ಎಂದ. ಸಮುದ್ರ ಇನ್ನೂ ಎರಡು ಫರ್ಲಾಂಗು ದೂರವಿದೆ. ಅಷ್ಟೇನೂ ಉಕ್ಕೇರಿ ಹತ್ತಿರ ಬರದು ಎಂದುಕೊಂಡು ನಾವು ಸ್ವಲ್ಪ ಉಡಾಫೆ ಮಾಡಿದರೂ ಹಗ್ಗ ತೆಗೆದುಕೊಂಡು ಬಂದೆವು.... ಹೊಸ ಜಾಗ.... ಹೊಸ ಜನ...... ಅಷ್ಟರಲ್ಲಿ ಕಾಲೇಜು ಹುಡುಗರ ಬಸ್ಸೊಂದು ಬಂದಿತು. ನಾನು ಹೋಗಿ ಆ ಹುಡುಗರನ್ನೂ, ಅವರ ಡ್ರೈವರನ್ನೂ ನಮಗೆ ಸಹಾಯ ಮಾಡಿರೆಂದು ಕೋರಿದೆ. ಅವರೆಲ್ಲ ನಮ್ಮನ್ನು ಉದಾಸೀನದ ದೃಷ್ಟಿಯಿಂದ ನೋಡಿ ಏನನ್ನೂ ಹೇಳದೆ ಹೊರಟುಹೋದರು. ಅಷ್ಟರಲ್ಲೇ ಮಕ್ಕಳನ್ನು ಕರೆತಂದಿದ್ದ ಒಂದು ಬಸ್ಸು ಬಂತು. ಆ ಡ್ರೈವರನಿಗೆ ಹೇಳಿದಾಗ ಅವನು ಹಗ್ಗವನ್ನು ನಮ್ಮ ಬಸ್ಸಿಗೆ ಕಟ್ಟಿ ಇನ್ನೊಂದು ತುದಿಯನ್ನು ತನ್ನ ಬಸ್ಸಿಗೆ ಕಟ್ಟಿ ತನ್ನ ಬಸ್ಸನ್ನು ನಡೆಸಿದ. ಆಗ ನಮ್ಮ ಬಸ್ಸು ಅದರ ಬಲಕ್ಕೆ ಸ್ವಲ್ಪ ದೂರ ಬಂದಿತಾದರೂ ಆಮೇಲೆ ಆ ಬಸ್ಸಿನ ಚಕ್ರವೂ ಮರಳಲ್ಲಿ ತಿರುಗಲು ಪ್ರಾರಂಭವಾಯಿತು. ಆಗ ಅವನು ಈ ಸಾಹಸ ಸಾಧ್ಯವಿಲ್ಲವೆಂದು, ''ಸ್ವಾಮಿ, ನಿಮ್ಮ ಬಸ್ಸಿನಂತೆ ನನ್ನ ಬಸ್ಸೂ ಸಿಕ್ಕಿಕೊಂಡರೆ ಈ ಮಕ್ಕಳ ಗತಿ ಏನು?'' ಎಂದು ಹಗ್ಗವನ್ನು ಬಿಚ್ಚಿ ನಮ್ಮಿಂದ ಬೀಳ್ಕೊಂಡು ತನ್ನ ಬಸ್ ಓಡಿಸಿಕೊಂಡು ಹೊರಟುಹೋದ. ಹೋಗುವ ಮುನ್ನ, ''ಬಸ್ ಹೀಗಾದರೆ ಕ್ರೇನ್ ತರಿಸಿ ತೆಗೆಸಬೇಕು ಸ್ವಾಮಿ'' ಎಂದು ಒಂದು ಉಪಯುಕ್ತ ಸಲಹೆಯನ್ನೂ ಕೊಟ್ಟು ಹೋದ. ನಮ್ಮ ಗುಂಪಿನಲ್ಲಿನ ಇಬ್ಬರು ಅದಾಗಲೇ ಬಾಂಬೆ ಹೊರವಲಯಕ್ಕೆ ಪ್ರವೇಶಿಸಿ ಕ್ರೇನನ್ನು ವಿಚಾರಿಸಲು ಹೋಗಿದ್ದರು. ಕ್ರೇನು ಸಿಕ್ಕಿತಾದರೂ, ಕ್ರೇನು ನಡೆಸುವವನು, ''ನಮ್ಮದು ಕಾರು, ಜೀಪು, ಇತ್ಯಾದಿ ಚಿಕ್ಕ ವಾಹನಗಳನ್ನು ಎತ್ತುವ ಕ್ರೇನು. ಅದರ ಬಾಡಿಗೆ ಮೂವತ್ನಾಲ್ಕು ರೂಪಾಯಿ. ಬಸ್ಸು ಆದೀತೋ ಇಲ್ಲವೋ. ಆದರೂ ಮಿನಿಬಸ್ ಎನ್ನುತ್ತೀರಿ. ನಡೆಯಿರಿ ನೋಡೋಣ'' ಎಂದು ಹೊರಟುಬಂದ.

ಅಷ್ಟರಲ್ಲೇ, ಬಸ್ಸು ತಳ್ಳುತ್ತೇವೆ ಎಂದು ಬಂದಿದ್ದ ಅಲ್ಲಿನ ಮೀನುಗಾರ ಘಟಿಂಗರು ತಮಗೆ ನಾವಿನ್ನೂ ದುಡ್ಡು ಕೊಡದೆ ಇದ್ದುದಕ್ಕೆ ಗಲಾಟೆ ಮಾಡತೊಡಗಿದರು. ತಾವೇ ಬಸ್ಸನ್ನು ಎತ್ತುವುದಾಗಿಯೂ, ಕ್ರೇನನ್ನು ಬಳಸಲು ಬಿಡುವುದಿಲ್ಲವೆಂದೂ ಹೇಳಿ ಹಠ ಹಿಡಿದರು. ಅಷ್ಟರವರೆಗೆ ಮಧ್ಯಾಹ್ನ ಆಗಲೇ ಮೂರೂವರೆಯ ಸಮಯ! ಸಮುದ್ರ ಉಕ್ಕೇರಿ ಬಂದು ಬಸ್ಸಿಗೆ ಮಾರುದೂರ ಉಳಿದಿತ್ತು. ಆ ಘಟಿಂಗರಿಗೆ ಅರುವತ್ತೈದು

ರೂಪಾಯಿ ಕೊಟ್ಟುಕಳುಹಿಸಿ, ಹಿಂದಿನ ಚಕ್ರಗಳ ಬಳಿ ಹಲಗೆಯನ್ನೂ ಅಲ್ಲೇ ಸಿಕ್ಕ ಎಳನೀರು ಬುರುಡೆಗಳನ್ನೂ, ತೆಂಗಿನಕಾಯಿಯ ಚಿಪ್ಪುಗಳನ್ನೂ ಇಟ್ಟು ಸಿದ್ಧಮಾಡಿದೆವು. ಅಷ್ಟರಲ್ಲಿ ಹತ್ತಿರಕ್ಕೆ ಬಂದ ಸಮುದ್ರದ ನೀರು ಬಸ್ಸಿನ ಒಳಗೆಲ್ಲಾ ಸೇರಿಕೊಳ್ಳಲು ಪ್ರಾರಂಭವಾಯಿತು. ಮುಂದಿನ ಎರಡು ಚಕ್ರಗಳು ಮತ್ತು ಹಿಂದಿನ ಒಂದು ಚಕ್ರ ಮುಳುಗಿಯೇ ಹೋದವು. ಅಷ್ಟರಲ್ಲೇ ಕ್ರೇನನ್ನು ಚಾಲನೆ ಮಾಡಿ, ನಮ್ಮ ಬಸ್ಸಿನ ಹಿಂಭಾಗಕ್ಕೆ ಅದರ ಹಿಂಭಾಗದ ಕೊಂಡಿ ಸಿಕ್ಕಿಸಿ ಮರಳಲ್ಲಿ ಹೂತಿದ್ದ ಬಸ್ಸನ್ನು ಮೇಲೆತ್ತಲು ಪ್ರಯತ್ನಿಸಲಾಯಿತು. ಈಗ ಮರಳೂ - ನೀರೂ ಎರಡೂ ತುಂಬಿಹೋಗಿದ್ದರಿಂದ ಕ್ರೇನನ್ನು ಅಳವಡಿಸಿದ್ದ ಅವರ ಜೀಪು ಎಂಜಿನ್ ಸಮೇತ ಕುದುರೆಯಂತೆ ಮೇಲಕ್ಕೆ ಹಾರಿತು! ಆಗ ಅಲ್ಲಿಯೇ ನಿಂತು ಇದನ್ನೆಲ್ಲ ನೋಡುತ್ತಿದ್ದ, ಏನೂ ಮಾಡದೆ ನಮ್ಮಿಂದ ಅರುವತ್ತೈದು ರೂ. ಕಸಿದುಕೊಂಡ ಘಟಿಂಗರ ಗುಂಪಿಗೆ ಕ್ರೇನ್‌ನ ಚಾಲಕ ಎಲ್ಲರೂ ಬಂದು ಜೀಪಿನಲ್ಲಿ ಎಂಜಿನ್ ಮೇಲೆ ಕೂರುವಂತೆ ಹೇಳಿದ. ಅವರು ಪ್ರಾಣಭಯ ಬಿಟ್ಟು ಅವನು ಹೇಳಿದಂತೆಯೇ ಮಾಡಿದರು. ಈಗ ಭಾರದ ಸಮತೋಲನವಾಗಿ ಕ್ರೇನ್ ಚಾಲನೆ ಮಾಡಿದ ಎರಡು ನಿಮಿಷಗಳಲ್ಲೇ ಬಸ್ಸು ಮರಳಿನಿಂದ ಮೇಲೆ ಪೂರ್ತಿಯಾಗಿ ಹೊರಬಂದಿತು. ಅನಂತರ ನಮ್ಮ ಡ್ರೈವರು ಬಸ್ಸು ಹತ್ತಿ ಎರಡೇ ನಿಮಿಷದಲ್ಲಿ ಬಸ್ಸನ್ನು ತಂದು ರಸ್ತೆಯ ಬದಿಗೆ ನಿಲ್ಲಿಸಿದ. ಆಗ ಸಂಜೆಯ ನಾಲ್ಕೂವರೆ! ಬೆಳಗಿನಿಂದ ಯಾರೂ ಸ್ನಾನ, ತಿಂಡಿ ಮಾಡದೆ ಹಸಿವಿನಿಂದ ಕಂಗೆಟ್ಟಿದ್ದರೂ ಬಸ್ಸಿನ ಯೋಚನೆಯಲ್ಲಿ ಅದು ಯಾವುದೂ ಗಮನಕ್ಕೇ ಬಂದಿರಲಿಲ್ಲ. ಅನಂತರ ಸ್ನಾನ ಮುಗಿಸಿ ತಿಂಡಿ ತಿಂದೆವು.

ಇಲ್ಲಿ ಅದೃಷ್ಟ ಎಂದರೆ, ದೊಡ್ಡ ಕ್ರೇನು ಮಾಡುವ ಕೆಲಸವನ್ನು ಚಿಕ್ಕ ಕ್ರೇನೇ ಮಾಡಿತು. ಖುಷಿಯಲ್ಲಿ ನಾವು ಆ ಕ್ರೇನ್ ಚಾಲಕನಿಗೆ ಮುನ್ನೂರು ರೂಗಳನ್ನು ಕೊಟ್ಟರೂ ಅವನು ಮೂವತ್ನಾಲ್ಕು ರೂಗಳಿಗಿಂತ ಒಂದು ಪೈಸೆಯನ್ನೂ ಹೆಚ್ಚಿಗೆ ತೆಗೆದುಕೊಳ್ಳಲಿಲ್ಲ! ಅವನ ಸಹಾಯಕ್ಕೆ ನಾವು ಬರಿದೆ ಕೃತಜ್ಞತೆ ಸಲ್ಲಿಸಿದೆವು. ಆ ಮೀನುಗಾರರಿಂದಲೂ ನಮಗೆ ಸಹಾಯವೇ ಆಯಿತು.

❁ ❁ ❁

ನಮ್ಮ ಈ ಪ್ರವಾಸ ನನ್ನ ಇತರ ಒಂದೆರಡು ಚಿಕ್ಕ ಪ್ರವಾಸಗಳ ನೆನಪು ತರಿಸಿದೆ. ಒಮ್ಮೆ ನಮ್ಮ ಕಾರ್ಯಕ್ರಮದ ಸಪ್ತಾಹ ಗದುಗಿನಲ್ಲಿ ಏರ್ಪಡಿಸಿದ್ದರು. ನಾನು ಮತ್ತು ತಿರುಮಲಾವಧಾನಿ ಇಬ್ಬರೂ ಕಾರ್ಯಕ್ರಮ ಕೊಡಲು ಹೋದೆವು. ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯಿತು. ಅಲ್ಲಿ ನಾವು ಶಂಕರರಾವ್ ಕುಲಕರ್ಣಿ ಎನ್ನುವ ಲಾಯರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದೆವು. ಮೂರ್ನಾಲ್ಕು ದಿವಸಗಳು ಪರಿಚಯ ಚೆನ್ನಾಗಿ ಆದನಂತರ ಅವರ ಮನೆಯಲ್ಲಿನ ವೈಶಿಷ್ಟ್ಯವು ತಿಳಿಯಿತು. ಶಂಕರರಾಯರು ಪ್ರಖ್ಯಾತ ವಕೀಲರಾಗಿದ್ದು ಒಮ್ಮೆ ಅವರು ಒಂದು ಕೇಸು ತೆಗೆದುಕೊಂಡಾಗ ಅದರಲ್ಲಿ ವಾದ ಮಾಡಿ ಗೆದ್ದರು. ಆದರೆ ಸೋತ ಮಹಿಳೆ ಅವರ ಮನೆಗೆ ಬಂದು ಅವರು ಎದುರಾಳಿಗಳ ಸುಳ್ಳನ್ನು ನಂಬಿ ಅವರ ಪರವಾಗಿ ಹೋರಾಡಿದ್ದಾರೆಂದು ಹೇಳಿ, ಅವರಿಂದಾಗಿ ತನ್ನ ಏಳು ಎಕರೆ ಜಮೀನು ಅನ್ಯಾಯವಾಗಿ ಕೈಬಿಟ್ಟು ಹೋಯಿತು ಎಂದು ಕಣ್ಣೀರು ಮಿಡಿದಳು. ಚೆನ್ನಾಗಿ ವಿಚಾರ ಮಾಡಿದಾಗ ಅವಳು ಹೇಳಿದ್ದು ಸತ್ಯವಾಗಿತ್ತು. ಆಗ ಅವರಿಗೆ ಆ ಕೆಲಸದ ಮೇಲೇ ಬೇಸರ ಬಂದು, ಮೇಲಿನ ಕೋರ್ಟಿಗೆ ಹೋಗಲು ಆಕೆಗೆ ಶಕ್ತಿ ಇರಲಿಲ್ಲ ಎಂದು ತಾವೇ ಸ್ವಲ್ಪ ಪರಿಹಾರ ಕೊಟ್ಟರಂತೆ. ತಮ್ಮ ಪೆನ್ನನ್ನು ಕುಕ್ಕಿ ಅಂದಿನಿಂದ ವಕೀಲವೃತ್ತಿಯನ್ನೇ ಬಿಟ್ಟರಂತೆ. ನಾವು ಹೋದಾಗ ಶಂಕರರಾಯರು ಗತಿಸಿ ಸುಮಾರು ನಾಲ್ಕೈದು ವರ್ಷಗಳು ಕಳೆದಿದ್ದವು. ಆದರೆ ತಮ್ಮ ಪತಿ ಗತಿಸಿದ ದಿನದಿಂದ ಅವರ ಪತ್ನಿ ಊಟ ಮಾಡುತ್ತಿರಲಿಲ್ಲ. ಬೆಳಗ್ಗೆ ಎರಡು ಬಾಳೆಹಣ್ಣು, ಒಂದು ಹಿಡಿ ತೆಂಗಿನ ತುರಿ, ರಾತ್ರಿ ಒಂದು ಲೋಟ ಹಾಲು ಕುಡಿದು ನಾಲ್ಕು ವರ್ಷ ಆದಾಗಲೇ ಕಳೆದಿದ್ದರು. ಅವರು ತಮ್ಮ ಪತಿಯ ವಾರ್ಷಿಕ ತಿಥಿಯ ದಿನ ಮಾತ್ರ ಊಟ ಮಾಡುವ ನಿಯಮವನ್ನು ಹಾಕಿಕೊಂಡು ಅದನ್ನೇ ನಡೆಸಿಕೊಂಡು ಬಂದಿದ್ದರು. ನಿಜಕ್ಕೂ ಆ ತಾಯಿಯ ಮನಃಸ್ಥೈರ್ಯ ಕಂಡು ನಾವು ಬೆರಗಾಗಿ ಹೋದೆವು!

ಕಾರ್ಯಕ್ರಮ ಸಂಜೆಯ ವೇಳೆ ಇರುತ್ತಿದ್ದುದರಿಂದ ಬೆಳಗಿನ ವೇಳೆ ವಿರಾಮವಿರುತ್ತಿತ್ತು. ಒಂದು ದಿನ ನಾವು ಗದುಗಿನ ಹತ್ತಿರ ಇರುವ ವೆಂಕಟಾಪುರಕ್ಕೆ ಹೋದೆವು. ವೆಂಕಟಾಪುರದಲ್ಲಿ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನವಿದೆ ಎಂದು ಕೇಳಿದ್ದೆವು. ಆದ್ದರಿಂದ ಅಲ್ಲಿಗೆ ಹೋಗಿಬರುವ ಎನ್ನಿಸಿ ಹೋದೆವು. ಅಲ್ಲದೆ ಹಿಂದಿನ ದಿನ ನಾನು ಅಲ್ಲಿಯೇ ಇದ್ದ ಸ್ವಾಮೀಜಿ ಬ್ರಹ್ಮಾನಂದರ ಬಗೆಗೆ ಇದ್ದ ಪುಸ್ತಕವೊಂದರಲ್ಲಿ ನಾಲ್ಕಾರು ಪುಟಗಳನ್ನು ಓದಿದಾಗ ಆ ಸ್ವಾಮೀಜಿಯು ಜಲಸಮಾಧಿಯಾದರು ಎಂದು ತಿಳಿದೆ. ನಿಜಕ್ಕೂ ನಮಗೆ ಸಾಧು, ಸಂತರು, ಸ್ವಾಮೀಜಿಯರಲ್ಲಿ ಒಂದು ಬಗೆಯ ಆಸಕ್ತಿ. ಸರ್ವಲೋಕಹಿತಾಸಕ್ತಿ, ಪ್ರಜಾಹಿತಾಸಕ್ತಿ ಇರುವ ಸಾಧು, ಸಂತರು ಅವರದೇ ಆದ ರೀತಿಯಲ್ಲಿ ತಪಸ್ಸನ್ನು ಮಾಡಿರುತ್ತಾರೆ. ಯಾವುದೇ ಒಂದು ಮಂತ್ರವನ್ನು ಪುನರಾವೃತ್ತಿ ಮಾಡಿ ಮಾಡಿ ಶಕ್ತಿ ಗಳಿಸಿರುತ್ತಾರೆ. ಜಪದ ಶಕ್ತಿ ಅದರಿಂದಾಗಿ

ಹೆಚ್ಚುತ್ತದೆ. ಸಿದ್ಧಿಯೂ ಆಗುತ್ತದೆ.

'ಅಧೀತಾನಾಂ, ಛಂದಸಾಂ ಸವೀರ್ಯತ್ವಾಯು ಅಯಾ ತಯಾಮತ್ವಾಯ' ಅಧ್ಯಯನ ಮಾಡಿರುವ ವೇದ ಹಳಸಬಾರದು ಎಂದೇ ನಾವೆಲ್ಲರೂ ಉಪಾಕರ್ಮವನ್ನು ಮಾಡುವುದು ಸಹ. ಸಿದ್ಧಿಸಿಕೊಳ್ಳುವ ಮಂತ್ರಗಳನ್ನು ನವೀಕರಣ ಮಾಡಿಕೊಳ್ಳುತ್ತಿರಬೇಕು. ಹಾಗೆ ಪುನರಾವೃತ್ತಿ ಇಲ್ಲದೆ ಈಗ ಮಂತ್ರಗಳು ತಮ್ಮ ಶಕ್ತಿಯನ್ನು ಕಳೆದುಕೊಂಡಿವೆಯೇನೊ! ಮಂತ್ರದ ಬಲ ಕಡಮೆಯಾಗುತ್ತಿದೆಯೇನೋ!

ಹಿಂದೆ ಬಹಳ ವರ್ಷಗಳ ಹಿಂದೆ ಕಾಶಿಯಲ್ಲಿದ್ದ ಒಬ್ಬ ಘನಪಾಠಿಗಳು ಹಲವರು ವಿದ್ಯಾರ್ಥಿಗಳಿಗೆ ವೇದಾಧ್ಯಯನ ಮಾಡಿಸುತ್ತಿದ್ದರು. ಒಮ್ಮೆ ದಕ್ಷಿಣಭಾರತದ ಷಟ್‌ಶಾಸ್ತ್ರ ಪಂಡಿತರೂ, ಚತುರ್ವೇದ ವಿಶಾರದರೂ ಅವರಲ್ಲಿಗೆ ಹೋದರು. ಆಗ ಈ ಪಂಡಿತರನ್ನು ಆದರೋಪಚಾರ ಮಾಡಿ ಸತ್ಕರಿಸಿದರು ಘನಪಾಠಿಗಳು. ಎಲ್ಲರಿಗೂ ಸಾತ್ತ್ವಿಕ ಆಹಾರವನ್ನು ಕೊಟ್ಟರು. ಆಹಾರ ಸೇವಿಸಿದ ಅನಂತರ ಕೈ ತೊಳೆಯಬೇಕಾದಾಗ ಪಂಡಿತರಲ್ಲೊಬ್ಬರು ''ನೀರು ಬೇಕು'' ಎಂದು ಕೇಳಿದರು. ''ಬಾವಿಯಲ್ಲಿದೆಯಲ್ಲ? ತೆಗೆದುಕೊಳ್ಳಿ'' ಎಂದರು ಘನಪಾಠಿಗಳು, ದಕ್ಷಿಣದ ಪಂಡಿತರು ಕಣ್ಣು ಕಣ್ಣು ಬಿಟ್ಟರು. ಪೆಚ್ಚಾದರು. ಸೂಕ್ಷ್ಮವನ್ನರಿತ ಘನಪಾಠಿಗಳು, ''ತಾಳಿ, ನನ್ನ ಮಗ ಕೊಡುತ್ತಾನೆ'' ಎಂದವರೇ 'ಸುಬ್ರಹ್ಮಣ್ಯ' ಎಂದು ಮಗನನ್ನು ಕೂಗಿ, ''ನೋಡು, ಪಂಡಿತರಿಗೆ ನೀರು ಬೇಕು. ಬಾವಿಯಿಂದ ತೆಗೆದುಕೊಡು'' ಎಂದರು. ಆಗ ಸುಬ್ರಹ್ಮಣ್ಯ ಪರ್ಜನ್ಯ ಮಂತ್ರವನ್ನು ಹೇಳಿದ. ಅವನು ಹೇಳುಹೇಳುತ್ತಿದ್ದಂತೆಯೇ ಬಾವಿಯ ನೀರು ಮೇಲು ಮೇಲಕ್ಕೆ ಬಂದು ಉಕ್ಕಿ ಸುರಿಯಿತು! ಇದನ್ನು ನೋಡಿ ಷಟ್ ಶಾಸ್ತ್ರ ಪಂಡಿತರು ಅವಾಕ್ಕಾದರು. ''ಏನು ಕಲಿತಿದ್ದಾನೋ ತಮ್ಮ ಮಗ?'' ಎಂದಾಗ ಘನಪಾಠಿಗಳು, ''ಇನ್ನೂ ಪ್ರಥಮ ಕಾಂಡದ ಕಲಿಕೆ. ಅದನ್ನೇ ಜೀರ್ಣಿಸಿಕೊಳ್ಳಲು ಆಗಿಲ್ಲ. ಯಾವುದಕ್ಕೂ ತಪಸ್ಸಿದ್ಧಿ ಬೇಕಲ್ಲ? ಇನ್ನೂ ಜಪಮಾಡಬೇಕು. ಪುನಶ್ಚರಣೆ ಮಾಡಬೇಕು'' ಎಂದರು.

ಅಂಥದರಲ್ಲಿ ಲೌಕಿಕ ವ್ಯವಹಾರವನ್ನು ಬಿಟ್ಟ ಸಾಧು ಸಂತರಿಗೆ ಮತ್ತು ಸ್ವಾಮೀಜಿಗಳಿಗೆ ತಪದ ವಿನಾ ಬೇರೇನು ತಾನೆ ಇದ್ದೀತು? ಅದರಿಂದ ಸಹಜವಾಗಿಯೇ ನನಗೆ ಸ್ವಾಮಿ ಬ್ರಹ್ಮಾನಂದರ ವಿಷಯದಲ್ಲಿ ಆಸಕ್ತಿ ಹೆಚ್ಚಿತು. ವೆಂಕಟಾಪುರದ ದೇವಸ್ಥಾನದ ಸುತ್ತಲೂ ಕೋಟೆ ಇದೆ. ದೊರಗಾಗಿ ಇರುವ ಒಂದು ದೊಡ್ಡ, ಮತ್ತೊಂದು ಚಿಕ್ಕ ಕಲ್ಲನ್ನೇ ವೆಂಕಟೇಶ - ಲಕ್ಷ್ಮಿ ಎನ್ನುತ್ತಾರೆ. ಅದಕ್ಕೇ ಶಲ್ಯವಸ್ತ್ರ, ರವಿಕೆಕಣ, ಅರಿಶಿನ, ಕುಂಕುಮ ಇಟ್ಟು ಅಲಂಕಾರ ಮಾಡಿ ಪೂಜಿಸುತ್ತಾರೆ. ಆ ಅಲಂಕಾರವೇ ಅದಕ್ಕೊಂದು ಆಕಾರವನ್ನೂ ಕೊಟ್ಟಿದೆ. ಅದಕ್ಕೊಂದು ಗುಡಿಯೂ ಇದೆ. ಅಲ್ಲಿ ಏನೋ ಒಂದು ಅವರ್ಣನೀಯ ಆನಂದ ಆಗುತ್ತದೆ. ತಂಜಾವೂರು ಶೈಲಿಯಲ್ಲಿ ಕಟ್ಟಿರುವ ದೇವಸ್ಥಾನ ಅದು. ಬ್ರಹ್ಮಾನಂದರು ತಪಸ್ಸು ಮಾಡುವಾಗ, ಈ ಎರಡೂ ಕಲ್ಲ ಮೇಲೆ ಹಸು ಹಾಲು ಸುರಿಸಿತಂತೆ. ಇಲ್ಲಿ ಲಕ್ಷ್ಮೀವೆಂಕಟೇಶ್ವರ ಸಾನ್ನಿಧ್ಯವಿದೆ ಎಂದು ಅಲ್ಲಿ ದೇವಾಲಯ ಮಾಡಿದ್ದಾರೆ.

ಅಲ್ಲಿ ಪೂಜೆ ಮುಗಿಸಿ, ಗುಡಿಯಿಂದಾಚೆ ಬಂದು ಬಯಲಿನಲ್ಲಿ ನಡೆದರೆ, ಐವತ್ತು ಅಡಿ ದೂರದಲ್ಲಿ ಬಲಪಕ್ಕಕ್ಕೆ ಒಂದು ಗೋಡೆ ಇದ್ದು, ಅಲ್ಲಿ 'ಬ್ರಹ್ಮಾನಂದರ ಸಮಾಧಿ' ಎಂದು ಬೋರ್ಡನ್ನೂ ಹಾಕಿತ್ತು. ನನಗೆ ಆಶ್ಚರ್ಯ! ನಿನ್ನೆ ರಾತ್ರಿಯಷ್ಟೆ ಬ್ರಹ್ಮಾನಂದರ ಚರಿತ್ರೆಯಲ್ಲಿ ಅವರು ಜಲಸಮಾಧಿಯಾದರು ಎಂದು ಓದಿದ್ದ ನನಗೆ ಇಲ್ಲಿ ಅವರ ಸಮಾಧಿ ಬಂದದ್ದು ಹೇಗೆ? ಎನ್ನಿಸಿ, ಅದೇ ಪ್ರಶ್ನೆಯನ್ನು ತಿರುಮಲಾವಧಾನಿಗೆ ಪಿಸುಮಾತಿನಲ್ಲಿ ಕೇಳಿದೆ. ತಕ್ಷಣ ಗೋಡೆಯಲ್ಲಿದ್ದ ಚಿಕ್ಕ ಬಾಗಿಲ ಒಳಗಿಂದ, ''ಹೌದು... ಇದು ಬ್ರಹ್ಮಾನಂದರ ಸಮಾಧಿಯೇ!'' ಎಂದು ಯಾರೋ ಹೇಳಿದಂತೆ ಕೇಳಿಸಿತು. ನಾವು ಬಾಗಿಲ ಬಳಿಗೆ ಹೋದಾಗ ಅದೊಂದು ಗುಹೆಯ ರೀತಿ ಇದ್ದು ಒಳಗೆ ಒಂದು ದೀಪ ಉರಿಯುತ್ತಿತ್ತು. ಒಳಗೆ ಎರಡು ಮೂರು ಮೆಟ್ಟಿಲುಗಳು. ನಾವು ಇಳಿದುಹೋದಾಗ ಪಕ್ಕದಲ್ಲಿ ಜಪ ಮಾಡುತ್ತ ಕುಳಿತಿದ್ದವರೇ ಆ ಮಾತು ಹೇಳಿದ್ದುದು.

''ಬ್ರಹ್ಮಾನಂದ ಸ್ವಾಮೀಜಿ ಎಂಬತ್ತರ ಮುದುಕರು. ಒಮ್ಮೆ ಅವರು ಹುಡುಗರಿಗೆ ವೇದಾಂತ ಪಾಠ ಹೇಳಿಕೊಡುತ್ತಿದ್ದಾಗ ಅವರ ಒಂದು ಹಲ್ಲು ಬಿದ್ದು ಹೋಯಿತು. ಆಗ ಅದನ್ನು ಎಸೆದುಬರಲು ವಿದ್ಯಾರ್ಥಿಯೊಬ್ಬನು ಎದ್ದು ಹೊರಟಾಗ ಸ್ವಾಮೀಜಿ 'ಅದನ್ನು ಏನು ಮಾಡುವೆ?' ಎಂದು ಕೇಳಿದರು. 'ಎಸೆಯುವೆ' ಎಂದ. 'ಮುಂದೆ ಬೇಕಾದೀತು. ಎಸೆಯದೆ, ಒಂದು ಗೋಡೆಯ ಸಂದಿಯಲ್ಲಿಡು, ಎಂದು ಹೇಳಿದರು. ತಾವು ಜಲಸಮಾಧಿಯಾಗುವ ಸಮಯದಲ್ಲಿ ಶಿಷ್ಯರು 'ನಾವು ನಿಮ್ಮ ಸಮಾಧಿ ಮಾಡಲು, ಪೂಜಿಸಲು, ತಪೋಮಯವಾದ ನಿಮ್ಮ ಶರೀರ ಬೇಕಲ್ಲ' ಎಂದು ಕೇಳಿದರು. ಆಗ ಸ್ವಾಮೀಜಿ, 'ಆ ದಿನ ಅಧ್ಯಯನ ಮಾಡುತ್ತಿದ್ದಾಗ ತೆಗೆದಿಟ್ಟಿದ್ದ ಹಲ್ಲು ಇದೆಯಲ್ಲ? ಅದನ್ನೇ ಇಟ್ಟು ಸಮಾಧಿ ಮಾಡಿ. ಅದು ನನ್ನ ಶರೀರದ ಅಂಶ ತಾನೆ? ಇಡೀ ಶರೀರವನ್ನಿಟ್ಟರೂ ಅದು ಮಣ್ಣಾಗಿ ಮೂಳೆ ತಾನೇ ಉಳಿಯಬಹುದು? ಇದೂ ಮೂಳೆಯೇ' ಎಂದರು. ಆ ಹಲ್ಲನ್ನೇ ಇಟ್ಟು ಇಲ್ಲಿ ಸಮಾಧಿ ಮಾಡಿರುವುದು ಗೊತ್ತಾಯಿತೆ?''

ಎಂದರು ಆ ಹಿರಿಯರು. ನನ್ನ ಅನುಮಾನ ಪರಿಹಾರವಾಗಿತ್ತು. ಅಲ್ಲೊಂದು ಬೃಂದಾವನ, ತುಳಸಿ, ಬ್ರಹ್ಮಾನಂದರ ಫೋಟೋ ಇದೆ. ನಾವು ನಮಸ್ಕರಿಸಿ ಹೊರಬಂದೆವು. ಅಲ್ಲಿ ಒಂದು ಕಲ್ಲಿನ ಕೊಳವಿದೆ. ನಾವು ನೋಡಿದ ಕೊಳಗಳಲ್ಲೇ ಅತ್ಯಂತ ವಿಶೇಷವಾಗಿ ಕಲ್ಲಿನಿಂದಲೇ ನಿರ್ಮಿತವಾದ ಕೊಳವದು! 'ಬ್ರಹ್ಮಾನಂದರು ದೂರ್ವಾರಸವನ್ನು (ಗರಿಕೆ ಹುಲ್ಲಿನರಸ) ಕುಡಿದು ತಪಸ್ಸು ಮಾಡಿದ ಜಾಗ. ಇಲ್ಲಿ ತೋಡಿದರೆ ಜಲ ಬರುತ್ತದೆ' ಎನ್ನುವ ನಂಬಿಕೆಯಿಂದ ತೋಡಿದಾಗ ಅಲ್ಲಿ ಸಮೃದ್ಧವಾಗಿ ನೀರು ಬಂದಿದೆ. ಅದಕ್ಕೇ ಕಲ್ಲಿನ ಕೊಳದಲ್ಲಿ ಸದಾ ನೀರು ಇರುತ್ತದೆ ಎನ್ನುತ್ತಾರೆ. ಅಂತೂ ನಮ್ಮ ವೆಂಕಟಾಪುರದ ಭೇಟಿ ಅವಿಸ್ಮರಣೀಯ!

❁ ❁ ❁

ಒಮ್ಮೆ ಸ್ನೇಹಿತ ನರಸಿಂಹ ಜೋಯಿಸರೊಂದಿಗೆ ನಾವೆಲ್ಲ ಹಂಪೆ ನೋಡಲು ಹೊರಟೆವು. ನಮ್ಮ ಜತೆಗೆ ನಮ್ಮ ತಂಗಿಯ ಭಾವನ ಸಂಸಾರವೂ ಇತ್ತು (ಅವರ ತಮ್ಮನಿಗೆ ನನ್ನ ತಂಗಿಯನ್ನು ಮದುವೆ ಮಾಡಿಕೊಟ್ಟು ಬಾಂಧವ್ಯ ಬೆಳೆಸಿದ್ದೆವು). ಬೆಳಗಿನ ಉಪಾಹಾರ ಮುಗಿಸಿ ಹೊರಟ ನಾವು ಹೊರಗೆ ಎಲ್ಲೂ ಸಾಮಾನ್ಯವಾಗಿ ಏನನ್ನೂ ತಿನ್ನದ ಕಾರಣ ಜತೆಯಲ್ಲಿ ಅವಲಕ್ಕಿ, ಮೊಸರು ತೆಗೆದುಕೊಂಡಿದ್ದೆವು. ಎಲ್ಲ ಕಡೆ ಸುತ್ತಾಡಿ ಬಂದು ನದಿಯ ಮಧ್ಯದಲ್ಲೊಂದು ಸ್ವಲ್ಪ ವಿಶಾಲವಾದ ಜಾಗಕ್ಕೆ ಪತ್ನಿ-ಮಕ್ಕಳನ್ನು ಕರೆದೊಯ್ದೆವು. ಆಗ ಸಮಯ ಮಧ್ಯಾಹ್ನ ಹನ್ನೆರಡು ಗಂಟೆ ದಾಟಿದ್ದರಿಂದ, ಅಲ್ಲೇ ಮೊದಲು ಮಾಧ್ಯಾಹ್ನಿಕ ಮುಗಿಸಿಬಿಡೋಣ ಎಂದು ನಾನು, ನರಸಿಂಹ ಜೋಯಿಸರು, ಅಂದರೆ, ತಂಗಿಯ ಭಾವ, ನನ್ನ ಹಿರಿಯ ಮಿತ್ರರು ನದಿಯಲ್ಲಿ ಇಳಿದು ಸ್ವಲ್ಪ ಮುಂದೆ ಹೋದೆವು. ಅವರ ಹೆಗಲ ಮೇಲಿದ್ದ ಟವಲಿನಲ್ಲಿ ಅವಲಕ್ಕಿಯನ್ನು ಕಟ್ಟಿ ನದಿನೀರಲ್ಲಿ ನೆನೆಸಿ ಇಡೋಣ ಎಂದು ಅವಲಕ್ಕಿ ನೆನೆಸಿ ಕಟ್ಟಿಇಟ್ಟೆವು. ತುಂಗಭದ್ರಾನದಿಯ ಮಧ್ಯೆ ಒಂದು ದ್ವೀಪ. ಅಲ್ಲಿಂದ ಮುಂದೆ ಹೋದಂತೆ ನನಗೇಕೋ ಅನುಮಾನವಾಯಿತು. ಅಲ್ಲೊಂದು ಮರದ ಹತ್ತಿರ ಹೋದಾಗ ನಾನು, ''ಜೋಯಿಸರೆ, ಯಾಕೋ ಈ ಜಾಗ ಅಷ್ಟು ಚೆನ್ನಾಗಿಲ್ಲ'' ಎಂದೆ. ''ಯಾಕೆ? ಏನಾಯ್ತು?'' ಎಂದರು. ''ನೋಡಿ, ಅಲ್ಲಿ ಬೂದಿ, ಇದ್ದಿಲು ಎಲ್ಲ ಬಿದ್ದಿವೆ'' ಎಂದೆ ಅನುಮಾನದಿಂದ. ಅದಕ್ಕೆ ಅವರು, ''ಯಾರೋ ಬಂದು ಅಲ್ಲಿ ಅಡುಗೆ ಮಾಡಿಕೊಂಡು ಹೋಗಿರಬಹುದು. ಅದನ್ನೆಲ್ಲ ಯಾಕೆ ನೋಡುತ್ತೀ?'' ಎಂದರು. ''ನೋಡಿ, ಇಲ್ಲಿ ಮಡಿಕೆಚೂರು'' ಎಂದೆ. ''ಮಡಿಕೆಯಲ್ಲಿ ಬೇಯಿಸಿಕೊಂಡು ತಿಂದಿದ್ದಾರೆ ಅಷ್ಟೆ.....'' ಎಂದರು. ಅವರು ಹಾಗೆಂದು ಮುಗಿಸಲೇ ಇಲ್ಲ, ನಾನು ''ಜೋಯಿಸರೆ, ಇಲ್ಲಿ ನೋಡಿ ಬಂಬು - ಗಳು...'' ಎಂದೆ. ನನ್ನ ಮನಸ್ಸಿನ ಸಂಶಯ ಹೆಚ್ಚಿತು. ''ಆಮೇಲೆ... ಇಲ್ಲಿ ನೋಡಿ ಎಲುಬು, ತಲೆಬುರುಡೆ.....'' ಎಂದೆ. ''ಕೋತೀದು ಇರಬೇಕು. ಪರಸ್ಥಳದಲ್ಲಿ ಅದೆಲ್ಲ ನೋಡಬಾರದು'' ಎಂದು ಅವರು ಎಲ್ಲಕ್ಕೂ ಸಮಾಧಾನ ಹೇಳುತ್ತ ಬರುತ್ತಿದ್ದಂತೆ ಇನ್ನು ಸಾಕ್ಷಾತ್ ಅಸ್ಥಿಪಂಜರವೇ ಕಂಡಿತು. ಅದನ್ನು ನೋಡಿ ಪೆಚ್ಚಾದರು. ಆದರೂ ಅವರ ದೃಷ್ಟಿಯಲ್ಲಿ 'ಅತ್ರ ಶತಂ ಭೀಷ್ಮಾಃ' ''ಜಗತ್ತಿನಲ್ಲಿ ಯಾವುದೂ ಪ್ರಾಣಿ ಹೋಗದ ಸ್ಥಳವಿಲ್ಲ. ನಿಂತ ಜಾಗದಲ್ಲಿ ಅದೆಷ್ಟು ಭೀಷ್ಮರು ಹೋಗಿದ್ದಾರೋ... ಇಡೀ ಜಗತ್ತೇ ಒಂದು ಶ್ಮಶಾನ'' ಎಂದು ಹೇಳಿದರು. ಅದೇನೇ ಇರಲಿ, ನಮ್ಮಲ್ಲಿ ಹೆಂಗಸರು - ಮಕ್ಕಳು ಹೋಗಬಾರದ ಜಾಗ ಎಂದಿರುವ ಜಾಗಕ್ಕೆ ನಾವು ಹೆಂಗಸರು - ಮಕ್ಕಳನ್ನು ನಮಗೆ ಗೊತ್ತಿಲ್ಲದೆ ಕರೆದುತಂದಿದ್ದೆವು. ಅರಿಯದೆ ಮಾಡಿದ ತಪ್ಪಾಗಿತ್ತು ಅದು. ಕೂಡಲೆ ಅಲ್ಲಿಂದ ಹೊರಡೋಣ ಎಂದೆ. ''ಸರಿ. ತುಂಬಾ ಹಸಿವಾಗಿದೆ. ತಂದಿರುವ ಅವಲಕ್ಕಿ ತಿಂದು ಹೊರಡೋಣ'' ಎಂದರು. ತಂದಿದ್ದ ಅವಲಕ್ಕಿ ನೆನೆದಿದ್ದರೂ ಇದನ್ನು ತಿನ್ನುವುದೇ ಎಂದು ಅಲ್ಲೇ ನದಿಗೆ ಹಾಕಿ, ಆ ಜಾಗ ತುಳಿದದ್ದಕ್ಕೆ ಸ್ನಾನ ಮಾಡಿಕೊಂಡು ಅವರುಗಳನ್ನು ಕರೆದುಕೊಂಡು ಅಲ್ಲಿಂದ ವಾಪಸಾದೆವು!

❁ ❁ ❁

ಅವಲಕ್ಕಿ ಎಂದು ನೆನೆದಾಗ, ಚಿಕ್ಕಂದಿನಿಂದಲೂ ಖಾರದ ಖಾದ್ಯಗಳ ಪ್ರಿಯನಾದ ನನಗೆ ನಾನೇ ಸ್ವತಃ ತಯಾರಿಸಿದ ತಿಂಡಿಗಳ ಬಗ್ಗೆ ನಿಮಗೆ ಹೇಳಬೇಕೆನ್ನಿಸುತ್ತಿದೆ.

ನನ್ನ ಮದುವೆಯಾಗಿ ಹತ್ತು ವರ್ಷಗಳ ಅನಂತರ ಉಡುಪಿಯ ಸಮೀಪದಲ್ಲಿರುವ ಶಂಕರನಾರಾಯಣ ಎನ್ನುವ ಊರಿಗೆ ನಾವು ನಮ್ಮೂರಿನಿಂದ ಸುಮಾರು ಹದಿನೈದು ಜನ ಹೋದೆವು. ಆ ದೇವಸ್ಥಾನದ ವಿಶೇಷ ಎಂದರೆ, ಗರ್ಭಗುಡಿಯಲ್ಲಿ ನೀರು ಇರುವುದು. ನೀರಿನಲ್ಲಿ ಶಂಕರ ನಾರಾಯಣ ಸ್ವರೂಪದ ಎರಡು ಲಿಂಗಗಳು. ಅಲ್ಲಿಯೇ ಗೋವಿನ ಪಾದ. ದೇವಸ್ಥಾನ ನೋಡಲು ಪುರಾತನವಾಗಿತ್ತು, ಸುಂದರವಾಗಿತ್ತು. ದೇವಸ್ಥಾನದ ಮುಂದೆ ಒಂದು ದೊಡ್ಡ ಕೊಳ. ದೇವಸ್ಥಾನವನ್ನು ನೋಡಿ ಪೂಜೆ ಮುಗಿಸಿ ಹೊರಬರುವ ವೇಳೆಗೆ ರಾತ್ರಿಯಾಗಿತ್ತು. ಎಲ್ಲೂ ಮಲಗಲು ಜಾಗ ಸಿಗದೆ, ಅಲ್ಲಿನ ಒಂದು ಮಠದ ಜಗುಲಿಯ ಮೇಲೆ ಮಲಗುವುದು ಎಂದು ನಿರ್ಧರಿಸಿದೆವು. ಆದರೆ ಹೊಟ್ಟೆ ಮಾತ್ರ ಚುರುಗುಟ್ಟುತ್ತಿತ್ತು. ಹತ್ತಿರದಲ್ಲಿದ್ದ ಅಂಗಡಿಯಲ್ಲಿ ಮೆಣಸಿನಕಾಯಿ, ಕೊಬ್ಬರಿಎಣ್ಣೆ, ಉಪ್ಪು, ಅವಲಕ್ಕಿ ಖರೀದಿಸಿದೆವು. ಅವಲಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಕೊಳದ

ನೀರಲ್ಲಿ ನೆನೆಸಿದೆವು. ನಾನು ದೇವರಿಗೆ ನೈವೇದ್ಯಕ್ಕೆ ಒಡೆಸಿದ ತೆಂಗಿನಕಾಯನ್ನು ಒಡೆದು ಕಲ್ಲಿಂದ ಚಚ್ಚಿ ಮೆಣಸಿನಕಾಯಿ, ಉಪ್ಪಿನ ಜತೆ ಸೇರಿಸಿ ಅವಲಕ್ಕಿಗೆ ಹಾಕಿ, ಎಣ್ಣೆಯ ಜತೆಗೆ ಚೆನ್ನಾಗಿ ಕಲಸಿದೆ. ಖಾರಖಾರವಾಗಿದ್ದ ಆ ಖಾದ್ಯ ತಿನ್ನಲು ದಿವ್ಯವಾದ ರುಚಿ ಇದ್ದ ಹಾಗಿತ್ತು. ಬಾಲ್ಯದಲ್ಲಿ ನಂಜನಗೂಡಿನಲ್ಲಿ ಕಲಿತಿದ್ದ ಪಾಕತಯಾರಿಕೆಯ ಕಲೆ ಆ ದಿನ ಅಲ್ಲಿ ಉಪಯೋಗಕ್ಕೆ ಬಂದಿತ್ತು. ಎಲ್ಲರೂ ನಾನು ತಯಾರಿಸಿದ ಅವಲಕ್ಕಿಯನ್ನು ಮೆದ್ದು ಹೊಗಳಿದ್ದೇ ಹೊಗಳಿದ್ದು! ಸ್ವಲ್ಪ ಖಾರ ಜಾಸ್ತಿ ಇದ್ದುದ್ದರಿಂದ ಸಿಂಹಪಾಲು ನನ್ನದಾಯಿತು!

❁ ❁ ❁

ನಂಜನಗೂಡಿನಲ್ಲಿ ನಾವು ಓದುತ್ತಿದ್ದಾಗ ಒಮ್ಮೆ ನಾವೆಲ್ಲ ಮೈಸೂರಿಗೆ ಹೋದೆವು. ನಮ್ಮ ಊರಿನ ಶ್ರೀ ಕೇಶವ ಮೂರ್ತಿಯವರ ಅಣ್ಣ ಸಂಗೀತ ವಿದ್ವಾನ್ ರಾಮಾಶಾಸ್ತ್ರಿ ಒಂದು ರೂಮಿನಲ್ಲಿ ಬಾಡಿಗೆಗೆ ಇದ್ದರು. ನನ್ನ ಇಬ್ಬರು ಸೋದರಮಾವಂದಿರು ಮೈಸೂರು ಪಾಠಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದರು. ಅವರೆಲ್ಲರೂ ಒಂದೇ ರೂಮಿನಲ್ಲಿದ್ದರು. ನಾವು ಆ ದಿನದ ಸಂಜೆಯ ಪಾಠ ಮುಗಿಸಿಕೊಂಡು ಮೈಸೂರಿಗೆ ಹೋದೆವಾದ್ದರಿಂದ ನಮ್ಮದು ಊಟವೂ ಆಗಿರಲಿಲ್ಲ. ಅಲ್ಲದೆ ನಾವು ಅವರ ರೂಮು ಸೇರುವಷ್ಟರಲ್ಲಿ ರಾತ್ರಿಯೂ ಆಗಿತ್ತು. ಆದಿನ ರೈಲು ಬಂದದ್ದು ಎಂದಿಗಿಂತ ತಡವೇ ಆಗಿತ್ತು. ನಾವು ರಾತ್ರಿ ಒಂಬತ್ತಕ್ಕೆ ಅಲ್ಲಿಗೆ ಹೋದಾಗ ಅವರದೆಲ್ಲ ಊಟ ಆಗಿತ್ತು. ಅಷ್ಟು ಹೊತ್ತಿನಲ್ಲಿ ಏನಾದರೂ ವ್ಯವಸ್ಥೆ ಆಗಲೇಬೇಕಿತ್ತು. ಇಲ್ಲದಿದ್ದರೆ ಹಸಿದ ಹೊಟ್ಟೆ ಕೇಳಬೇಕಲ್ಲ? ಅವರೆಲ್ಲ ಆ ದಿನ ಮಧ್ಯಾಹ್ನ ಒಂದು ನವಗ್ರಹ ಹೋಮಕ್ಕೆ ಹೋಗಿಬಂದಿದ್ದರು. ಮೂರು ದೊನ್ನೆಗಳಲ್ಲಿ ಅಕ್ಕಿ ದಾನವಾಗಿ ಬಂದಿತ್ತು. ಅಕ್ಕಿಯಲ್ಲಿ ಅನ್ನ ಮಾಡಿದರೆ ಜತೆಗೆ ಸಾರು ಇಲ್ಲ. ಎಣ್ಣೆ, ಮೆಣಸಿನಕಾಯಿ ಇತ್ತು. ಏನಾದರೂ ದಾರಿ ಹುಡುಕಬೇಕಿತ್ತಲ್ಲ? ನಾನು ಅಕ್ಕಿಯನ್ನು ಕಲ್ಲಿನ ಮೇಲೆ ಸುರಿದು ತೆಂಗಿನ ಕಾಯಲ್ಲಿ ಚೆನ್ನಾಗಿ ಕುಟ್ಟಿದೆ. ನುಚ್ಚು ರವೆ ಆಯಿತು. ತೆಂಗಿನಕಾಯಿ ಒಡೆದು ಕಲ್ಲಿನಲ್ಲಿ ಚೆನ್ನಾಗಿ ಜಜ್ಜಿದೆ. ಕಾಯಿ ರಸಬಿಟ್ಟಿತು. ಎಣ್ಣೆ, ಮೆಣಸಿನಕಾಯಿ, ತೆಂಗಿನಕಾಯಿಗೆ ನೀರು ಹಾಕಿ ಕುದಿಸಿ ಅಕ್ಕಿ ನುಚ್ಚನ್ನು ಅದಕ್ಕೆ ಸುರಿದು ಉಪ್ಪು ಹಾಕಿ ಉಪ್ಪಿಟ್ಟು ಮಾಡಿದೆ. ಎಲ್ಲ ಹೊಡೆದು ಮುಗಿಸಿದೆವು. ಅದು ತುಂಬ ರುಚಿಯಾಗಿಯೇ ಇದ್ದಿತು! ಹೇಗಾದರೂ ಇರಲಿ ಹಸಿವಿಗೆ ಉಪ್ಪು - ಖಾರ ಇರುವ ಯಾವುದೂ ರುಚಿ.

ಅಂತೂ ನಾನು ಹೀಗೆಲ್ಲ ಆಹಾರ ತಯಾರಿಕೆಯಲ್ಲಿ ಪ್ರಯೋಗ ಮಾಡಿದ ಕಾರಣವೋ, ಅದರಲ್ಲಿ ನನಗಿದ್ದ ಆಸಕ್ತಿಯ ಕಾರಣವೋ ತಿಳಿಯದು. ನನ್ನ ಮೊದಲನೆಯ ಮಗ ನಾರಾಯಣಮೂರ್ತಿ ಬಿ.ಇ. ಪದವೀಧರನಾಗಿ, ಬ್ಯಾಂಕಿನಲ್ಲಿ ಆಫೀಸರನಾಗಿ ದೊಡ್ಡ ಹುದ್ದೆಯಲ್ಲಿದ್ದರೂ ಪಾಕಶಾಸ್ತ್ರ ಪ್ರವೀಣನಾಗಿದ್ದಾನೆ. ಮನೆಯಲ್ಲಿ ದೊಡ್ಡ ಅಡುಗೆಗಳಾದಾಗ ಮನೆಯ ಹೆಂಗಸರಿಗೆ ಅಳತೆ, ವಿಧಾನ ತಿಳಿಸಿಕೊಡುತ್ತಾನೆ. ಇಂದಿಗೂ ಅವನು ಜತೆಗಿದ್ದರೆ ನಮ್ಮ ಮನೆಯ ಹೆಣ್ಣುಮಕ್ಕಳಿಗೂ 'ದೊರೆಯಣ್ಣ ಇದ್ದಾನೆ, ಅಡುಗೆ ಸುಲಭ!' ಎನ್ನುವ ಧೈರ್ಯ ಮೂಡಿಸುತ್ತಾನೆ! ಅಡುಗೆಯವರಿಗೂ ಇಷ್ಟು ಜನರ ಊಟ-ತಿಂಡಿಗೆ ಇಷ್ಟು ಅಕ್ಕಿ ಸಾಕು ಎನ್ನುತ್ತಾನೆ; ಇಷ್ಟು ಮೈಸೂರು ಪಾಕ್, ಇಷ್ಟು ಲಾಡು, ಇಷ್ಟು ಚಂಪಾಕಲೀ, ಇಷ್ಟು ಆಂಬೊಡೆ ಎಂದು ಹೇಳಿ, ಅದಕ್ಕೆ ಬೇಕಾಗುವ ಪರಿಕರಗಳ ಅಳತೆ ಸಹಿತ ಹೇಳುತ್ತಾನೆ.

❁ ❁ ❁

ಬೆಂಗಳೂರಿನಲ್ಲಿ ಒಂದು ಸಾರಿ ಬೆಳಗ್ಗೆಯೇ ನಾನು ಮಿತ್ರರೊಬ್ಬರ ಮನೆಗೆ ಹೋಗಿದ್ದೆ. ನನ್ನನ್ನು ಕಂಡರೆ ಆ ದಂಪತಿಗಳಿಗೆ ಬಲುಪ್ರೀತಿ, ಅಭಿಮಾನ. ನಾನು ಆದಿನ ಅವರ ಮನೆಗೆ ಹೋದುದು ಆ ದಂಪತಿಗಳಿಗೆ ಬಹಳ ಸಂತೋಷವಾಗಿತ್ತು. ನನ್ನ ಮಿತ್ರರು ಪತ್ನಿಯ ಕಡೆ ತಿರುಗಿ, ''ಏನಾದರೂ ಮಾಡುತ್ತೀಯಲ್ಲ?'' ಎಂದರು. ಆಕೆ ''ಖಂಡಿತ'' ಎಂದರು. ಡಬ್ಬದಿಂದ ಅಕ್ಕಿ ತೆಗೆದು ನೆನೆಸಿಟ್ಟು ತಾವು ಸ್ನಾನಕ್ಕೆ ಹೋದರು. ನಾವು ಮಾತಿನಲ್ಲಿ ಮೈ ಮರೆತಿದ್ದಂತೆಯೇ ಘಮ ಘಮ ಎಂದು ಹೊಗೆಯಾಡುತ್ತಿದ್ದ ರೊಟ್ಟಿಯನ್ನು ಇಬ್ಬರಿಗೂ ತಂದಿತ್ತರು. ನನಗೆ ಅಚ್ಚರಿ! ನಾ ಬಂದಾಗಿನಿಂದಲೂ ಅಂಥದೇನೂ ತಯಾರಿ ಮಾಡದೆ ರೊಟ್ಟಿ ಬಂದದ್ದು ಹೇಗೆ ಎಂದು. ನನ್ನ ಮಿತ್ರರ ಪತ್ನಿ ನೆನೆದ ಅಕ್ಕಿಯನ್ನು ಒರಳಲ್ಲಿ ಹಾಕಿ ಹಾರೆಯಲ್ಲಿ ಚೆನ್ನಾಗಿ ಕುಟ್ಟಿ ಜತೆಗೆ ಹಸಿಮೆಣಸು, ಉಪ್ಪು, ತೆಂಗಿನಕಾಯಿಯ ಚೂರು ಸೇರಿಸಿ ಹೊಂದಿಸಿ ರೊಟ್ಟಿ ಮಾಡಿ ತಂದಿದ್ದರು! ಅಬ್ಬಾ ಏನು ರುಚಿ! ಎಷ್ಟು ಮೃದು! ನಾನೆಂದೂ ಮರೆಯಲಾರೆ. ಆಗ ಚಿಕ್ಕವನಿದ್ದಾಗ ನಾನು ಅಕ್ಕಿ ಕುಟ್ಟಿ ಉಪ್ಪಿಟ್ಟು ತಯಾರಿಸಿದ್ದು ನೆನಪಾಯಿತು! ದಕ್ಷಿಣ ಭಾರತದಲ್ಲಿ, ಅದರಲ್ಲಿಯೂ ನಮ್ಮ ಸೀಮೆಯಲ್ಲಿ ಬಲು ಮುಖ್ಯ ಆಹಾರ ಎನಿಸಿದ ಅಕ್ಕಿ, ಅದರ ವಿವಿಧಾವತಾರದ ಖಾದ್ಯ ಪದಾರ್ಥಗಳು, ನಾವು ಅದನ್ನು ಪ್ರೀತಿಯಿಂದ ತಿನ್ನುವ ಪರಿ.... ಎಲ್ಲವೂ ಎಷ್ಟು ಆಶ್ಚರ್ಯಕರ ಎನಿಸಿತು. ಅಷ್ಟಲ್ಲದೆ 'ಅನ್ನಬ್ರಹ್ಮ' ಎಂದು ಸುಮ್ಮನೆ ಹೇಳುತ್ತಾರೆಯೇ? ದಿಢೀರ್ ರೊಟ್ಟಿ ಮಾಡಿದ ಇವರೇ ನಮ್ಮ ಮಿತ್ರ ಮತ್ತೂರರ ಪ್ರಿಯ ಅರ್ಧಾಂಗಿ ರಾಜಲಕ್ಷ್ಮಿ (ರಾಜಮ್ಮ) ನಮ್ಮ ಸಲುಗೆಯ ಚಿಕ್ಕಮ್ಮ.

೧೯. ಪುನರ್ಜನ್ಮದ ಕಥೆ

ದಿನಾಂಕ **೨೬.೫.೨೦೦೩**, ನನಗೆ ಬೈಪಾಸ್ ಶಸ್ತ್ರಚಿಕಿತ್ಸೆ ಆದ ದಿನ. ನನಗೆ ಮರುಜನ್ಮವಾದ ದಿನ ಅದು! ಇದು, ಕೆಲವು ಹೃದಯನಾಳಗಳು ಕಟ್ಟಿಕೊಂಡಾಗ ಮಾಡುವ ಒಂದು ಶಸ್ತ್ರಚಿಕಿತ್ಸೆ. ಮೊದಲು ನನಗೆ ಸ್ವಲ್ಪ ಉಸಿರಾಟದ ತೊಂದರೆ ಕಾಣಿಸಿಕೊಂಡಾಗ ಮಂಗಳೂರಿನ ಡಾಕ್ಟರು ಪ್ರೊ.ಬಿ.ಎಂ. ಹೆಗ್ಡೆಯವರು 'ಶಸ್ತ್ರಚಿಕಿತ್ಸೆಯ ಅಗತ್ಯ ಸದ್ಯಕ್ಕಿಲ್ಲ' ಎಂದು ಹೇಳಿ ಕಳುಹಿಸಿದರು. ಅವರ ನಿರೀಕ್ಷೆಯಂತೆ ಮೂರು ವರ್ಷಗಳ ತನಕ ಶಸ್ತ್ರಚಿಕಿತ್ಸೆ ಬೇಕಾಗಲೂ ಇಲ್ಲ. ಆರೋಗ್ಯವಾಗಿಯೇ ಇದ್ದೆ.

ಬೈಪಾಸ್ ಆಪರೇಷನ್ ಆಗಬೇಕು ಎಂದು ತಿಳಿದಾಗ ನನಗೆ ಗಾಬರಿಯೇನೂ ಆಗಲಿಲ್ಲ. ಆದರೆ ಅಮ್ಮನಿಗೆ ಮೊದಲೇ ಮೈ ಸರಿ ಇರಲಿಲ್ಲ. ಅವರಿಗೆ ತಿಳಿಸಿ ಹೋಗುವುದೂ ಕಷ್ಟ. ತಿಳಿಸದೇ ಹೋಗಿ..... ಒಂದು ವೇಳೆ ಏನಾದರೂ ಹೆಚ್ಚು ಕಡಮೆಯಾದರೆ ಆಗ... ಆಗ... ಅಮ್ಮ ಏನೆಂದಾರು? ಎನ್ನುವ ಆತಂಕ ಹೆಚ್ಚಾಗಿದ್ದಿತು. ಆದರೂ ಒಮ್ಮೆ ಊರಿಗೆ ಹೋಗಿ ಅಮ್ಮನನ್ನು ನೋಡಿಕೊಂಡು ಬರೋಣವೆಂದು ಬೆಂಗಳೂರಿನಿಂದ ಹೊರಟುಬಂದೆ. ಎದೆಯಲ್ಲಿ ಏಕೋ ನಡುಕ. ಊರು ತಲುಪಿದ ಬೆಳಗ್ಗೆಯೇ ಹುಷಾರು ತಪ್ಪಿದಂತಾಯಿತು. ನನ್ನ ತಮ್ಮ ಗೋಪಾಲನ ಜತೆ ಹೊರಟು ಡಾಕ್ಟರನ್ನು ಕಾಣಲು ಶಿವಮೊಗ್ಗೆಗೆ ಹೋದರೆ, ನಮ್ಮ ಡಾಕ್ಟರು ಬೆಂಗಳೂರಿಗೆ ಹೊರಟುಹೋಗಿದ್ದರು. ಮನೆಗೆ ಹೋದವನೇ ಅಮ್ಮನಿಗೆ ಏನೂ ಹೇಳದೆ ಬರಿನೆಲದ ಮೇಲೆ ಮಲಗಿದೆ. ಅಷ್ಟರಲ್ಲಿ ನಮ್ಮ ಮನೆಗೆ ಬಂದ ಅಶ್ವತ್ಥನಾರಾಯಣ ಅವಧಾನಿ ''ಯಾಕೆ ಹೀಗೆ ಮಲಗಿದ್ದೀರಿ?'' ಎಂದರು. ''ಯಾಕೋ.... ಈ ದಿನ ನಾನು ಬದುಕುವುದಿಲ್ಲ ಎನ್ನಿಸಿದೆ'' ಎಂದೆ. ''ಓ... ಹೆದರುವಂಥದೇನೂ ಇಲ್ಲ. ನೀವು ಶಾಂತವಾಗಿ ಮಲಗಿ. ರಾತ್ರಿಯೆಲ್ಲ ಪ್ರಯಾಣ ಮಾಡಿ ರೈಲಿನಲ್ಲಿ ಬಂದಿದ್ದೀರಿ. ಅದಕ್ಕೇ ಹೀಗಾಗಿದೆ! ಈಗ ನಾವು ಉದಕಶಾಂತಿ ಮಾಡುತ್ತೇವೆ. ನೀವು ಮಲಗಿ'' ಎಂದರು.

ನಾನು ಕಣ್ಮುಚ್ಚಿ ಮಲಗಿದೆ. ಅವರು ಉದಕಶಾಂತಿ ಮಂತ್ರ ಹೇಳಲು ಪ್ರಾರಂಭಿಸಿದರು. ಕಳಶದಲ್ಲಿ ನೀರು, ಎಲೆ-ಅಡಿಕೆ, ಬಾಳೆಹಣ್ಣು, ಅರಿಶಿನ-ಕುಂಕುಮ ಎಲ್ಲವನ್ನೂ ಒಳಗಿನಿಂದ ತಂದಿಡಲಾಯಿತು. ಸುಮಾರು ಅರ್ಧಗಂಟೆ ಕಳೆದಿದ್ದೀತು. ಅವರು ಮಂತ್ರ ಹೇಳುತ್ತಲೇ ಇದ್ದರು. ಅಷ್ಟರಲ್ಲಿ ಫೋನು ಬಂದಿತು. ನಮ್ಮ ಡಾಕ್ಟರ ಶ್ರೀಮತಿಯವರು ನಾವು ಡಾಕ್ಟರನ್ನು ಕಾಣಲು ಹೋಗಿದ್ದ ವಿಷಯವನ್ನು ತಮ್ಮ ಪತಿಗೆ ಫೋನಿಸಿ ತಿಳಿಸಿದ್ದ ಕಾರಣ, ನಮ್ಮ ಡಾಕ್ಟರು ಕೂಡಲೇ ತಾವೇ ಬಸ್ಸಿನಿಂದ ಫೋನಿಸಿದ್ದರು. ನಾನೇ ಎದ್ದು ಫೋನು ತೆಗೆದು ಡಾಕ್ಟರಲ್ಲಿ ಮಾತಾಡಿದೆ. ಎದೆನಡುಕದ ಬಗ್ಗೆ ಹೇಳಿದೆ. ಡಾಕ್ಟರು ಅನಂತರ ಗೋಪಾಲನ ಬಳಿ ಮಾತನಾಡಿ ಒಂದು ಮಾತ್ರೆಯ ಹೆಸರು ಹೇಳಿದರು. ಕೂಡಲೆ ಗೋಪಾಲ ಹೋಗಿ ಮಾತ್ರೆ ತಂದುಕೊಟ್ಟ. ಆ ಮಾತ್ರೆ ತಿಂದನಂತರ ನನಗೆ ಚೆನ್ನಾಗಿ ನಿದ್ದೆಯೂ ಬಂದಿತು. ಉದಕಶಾಂತಿಯೂ ಅಲ್ಲಿಯತನಕ ಮುಗಿಯಿತು!

ಕೆಲವೊಮ್ಮೆ ನನಗೆ ಆಶ್ಚರ್ಯ. ನಾವು ಮಾಡುವ ಧಾರ್ಮಿಕ ಆಚರಣೆಗಳು ಅದೆಷ್ಟು ಅರ್ಥಪೂರ್ಣವಾಗಿರುತ್ತವೆ, ಅದರಲ್ಲಿ ತಥ್ಯವಿಲ್ಲದೆ ನಮ್ಮ ಹಿಂದಿನವರು ಅದನ್ನು ಬಳಕೆಗೆ ತಂದಿಲ್ಲ ಎನಿಸುತ್ತದೆ. ನಮ್ಮ ನಂಬಿಕೆಯ ಪ್ರಕಾರ ಅಗ್ನಿ ಹಾಗೂ ಜಲ - ಇವೆರಡೂ ಪವಿತ್ರ. ಅದಕ್ಕೇ ಹೋಮ ಮಾಡಿ ದೈವದ ಶಕ್ತಿಯನ್ನು ಆಹ್ವಾನಿಸಿ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದು. ಆ ನಿಯಮದಂತೆಯೇ ಆ ದಿನ ಉದಕಶಾಂತಿ ನಡೆದಿತ್ತು. ಅದು ನಡೆಯುವಾಗಲೇ ಡಾಕ್ಟರು ಫೋನಿಸಿ, ನನಗೆ ಮಾತ್ರೆ ಸಿಕ್ಕಿ, ನನ್ನ ಎದೆನಡುಕದ ತೊಂದರೆ ಪರಿಹಾರವೂ ಆದದ್ದು! ಇದಕ್ಕೇನು ಹೇಳುವುದು? ಇದು ಕೇವಲ ಕಾಕತಾಳೀಯವೇ? ಇಲ್ಲ, ನಾನು ಹಾಗೆನ್ನುವುದಿಲ್ಲ. ನನ್ನ ಜೀವನದಲ್ಲಿ ಈ ರೀತಿ ಒಂದಕ್ಕೊಂದು ತಾಳೆಯಾಗುವ ಘಟನೆಗಳು ಒಂದಲ್ಲ, ಅನೇಕವು ನಡೆದಿವೆ! ಆದ್ದರಿಂದ ನಾನು ವಿನೀತಭಾವದಿಂದ ಅದು ನಾವು ಆಗ ಪ್ರಾರ್ಥಿಸಿದ ದೈವಕೃಪೆ ಎನ್ನುತ್ತೇನೆ!

ಇದಾದ ಸುಮಾರು ಮೂರು ತಿಂಗಳವರೆಗೂ ನಾನು ಆರಾಮವಾಗಿಯೇ ಇದ್ದೆ. ಅಮ್ಮನೂ ತಕ್ಕಷ್ಟು ಆರೋಗ್ಯ ಸುಧಾರಿಸಿ ಮೆಲ್ಲಮೆಲ್ಲನೆ ಓಡಾಡಿಕೊಂಡಿದ್ದರು. ಆದರೆ ಒಮ್ಮೆ ಅವರು ಬಚ್ಚಲುಮನೆಗೆ ಹೋದಾಗ ದುರದೃಷ್ಟವಶಾತ್ ಬಿದ್ದು, ಮೊದಲೇ ಮುರಿದಿದ್ದ ಸೊಂಟದ ಮೂಳೆಗೆ ಬಲವಾದ ಪೆಟ್ಟಾಯಿತು. ಆ ನೋವಿಗೆ ಜ್ವರವೂ ಬಂದಿತು. ಮೂರು ದಿನಗಳ ಕಾಲ ತಾವೇ ಏನೇನೋ ಬಡಬಡಿಸುತ್ತಿದ್ದರು. ಬಾಲ್ಯದಿಂದಲೂ ನಡೆದವುಗಳನ್ನು ಹೇಳುತ್ತಿದ್ದರು. ಈ ಬಡಬಡಿಕೆ ಹೆಚ್ಚಾಗಿ ನಾಲ್ಕನೇ ದಿನಕ್ಕೆ ಅವರ ಗಂಟಲು ಪೂರಾ ಕಟ್ಟಿತು. ತುಂಬಾ ಸೂಕ್ಷ್ಮಗ್ರಾಹಿಯಾದ ನಮ್ಮ ಗೋಪಾಲ

ಬೆಂಗಳೂರಿನಲ್ಲಿದ್ದ ಚಂದ್ರುವಿಗೆ ಅಮ್ಮನ ಸ್ಥಿತಿಯನ್ನು ವಿವರಿಸಿ, ಬಂದು ಹೋಗಲು ತಿಳಿಸಿದ್ದ. ''ಅಮ್ಮ ಹುಷಾರಾಗಿದ್ದಾರೆ. ನೀ ಬಂದದ್ದೇಕೆ'' ಎಂದೆ ನಾನು, ಚಂದ್ರುವನ್ನು ಕಂಡು ಸ್ವಲ್ಪ ಆಶ್ಚರ್ಯದಿಂದ. ಅದೇ ದಿನ ರಾತ್ರಿ ಮಾತು ನಿಂತುಹೋಗಿದ್ದ ಅಮ್ಮ, ನಾವು ಅವರ ಹತ್ತಿರ ಹೋದಾಗ ಏನೋ ಸನ್ನೆ ಮಾಡಿದರು. ಅವರ ಸನ್ನೆ ಬಹುಶಃ 'ತನಗೆ ಗಂಗೆಯನ್ನು ಬಿಡು' ಎಂದಿರಬಹುದೆಂದು ಊಹಿಸಿ ನಾವು ಗಂಗೆಯನ್ನು ಬಾಯಿಗೆ ಬಿಟ್ಟೆವು. ಅವರನ್ನು ಎತ್ತಿ ಹೊರತಂದು ದರ್ಭೆಯ ಮೇಲೆ ಮಲಗಿಸಿದೆವು. ಸ್ವಲ್ಪ ಹೊತ್ತಿನಲ್ಲೇ ಅಮ್ಮ ನಮ್ಮನ್ನೆಲ್ಲ ಬಿಟ್ಟು ದೂರ ಹೋದರು! ಎಂಬತ್ತೈದು ವರ್ಷದ ಅಮ್ಮನ ಪ್ರಾಣಪಕ್ಷಿ ಹಾರಿಹೋಗಿತ್ತು.... ತಾವು ಬೀಳುವ ಹಿಂದಿನ ದಿನವಷ್ಟೇ, ''ಅಣ್ಣಯ್ಯಾ... ನಿನಗೆ ಆಗಾಗ ಕೈ ನೋವು ಬರುತ್ತದೆ, ಸರಿಯಾಗಿ ಚಿಕಿತ್ಸೆ ಮಾಡಿಸಿಕೊಳ್ಳಬಾರದೆ?'' ಎಂದು ತಾವೇ ನನ್ನ ಕೈಗೆ ವಿಕ್ಸ್ ಹಚ್ಚಿ ತೀಡಿದ್ದರು. ಆಗ ನನಗೆ ದೊಡ್ಡಮ್ಮನ ನೆನಪಾಗಿತ್ತು. ದೊಡ್ಡಮ್ಮನೂ ಕೇವಲ ಮೂರೇ ದಿನ ಮಲಗಿದ್ದುದು. ನಾಲ್ಕನೆಯ ದಿನ ಇರಲಿಲ್ಲ.... ಈಗ ಅಮ್ಮನೂ ಹಾಗೆಯೇ ಹೊರಟುಹೋದರು...... ಸದ್ಯ.... ಅಮ್ಮನ ಕಣ್ಮುಂದೆ ನನಗೇನೂ ಆಗಲಿಲ್ಲವಲ್ಲ ಎಂದು ನನಗೆ ಸಮಾಧಾನವಾಗಿತ್ತು. ಕಾರಣ ನನಗೆ ತಿಳಿದಿತ್ತು, ನನಗೇನಾಗಿದ್ದರೂ ಅಮ್ಮನಿಗೆ ಅದನ್ನು ತಡೆದುಕೊಳ್ಳುವ ಶಕ್ತಿ ಇರಲಿಲ್ಲ ಎಂದು.... ಹೀಗೆ ಅಮ್ಮ ತನ್ನ ಇಹಲೋಕಯಾತ್ರೆ ಮುಗಿಸಿ ಹೊರಟ ಅನಂತರ ನಾನು ಬೈಪಾಸ್ ಚಿಕಿತ್ಸೆಗೆಂದು ಬೆಂಗಳೂರಿಗೆ ಬಂದದ್ದು.

ನಮ್ಮ ತಾಯಿಯವರು ದೈವಾಧೀನರಾದ ಅನಂತರ, ಆ ವರ್ಷದ ಚೈತ್ರ ಬಹುಳ ದಶಮಿಯಂದು 'ವಸಂತೋತ್ಸವ' ಆಚರಿಸಿದೆವು. ಕಾರ್ಯಕ್ರಮಗಳು ಮುಗಿದು ಮಲಗಿದಾಗ ರಾತ್ರಿ ಎದೆ ಉರಿ ಕಾಣಿಸಿಕೊಂಡಿತು. ಆ ದಿನದ ಊಟ ತಡವಾಯಿತು. ಉಪವಾಸ ಇದ್ದ ಕಾರಣ ವಾತದ ಪ್ರಭಾವ ಇದ್ದೀತು ಎಂದು ಭಾವಿಸಿದೆ. ಆದರೂ ಅದು ಸುಲಭಕ್ಕೆ ನಿಲ್ಲುವ ಹಾಗೆ ಕಾಣಲಿಲ್ಲ. ಆಗ 'ಇದು ಹೃದಯಕ್ಕೆ ಸಂಬಂಧಿಸಿದ್ದೇ ಇರಬೇಕು' ಎನಿಸಿ, ಶಿವಮೊಗ್ಗೆಗೆ ತಪಾಸಣೆಗೆ ಎಂದು ಹೋದೆ. ನಂಜಪ್ಪ ಆಸ್ಪತ್ರೆಯ ಡಾ. ನರೇಂದ್ರ ಅವರು ಅಲ್ಲಿ 'ಡ್ರಿಪ್ಸ್' ಹಾಕಿ, ಇತರ ಚಿಕಿತ್ಸೆ ಮಾಡಿದರು. ಸದ್ಯದ ತೊಂದರೆ ನಿವಾರಣೆಯಾಗಿದ್ದಿತು. ''ಹದಿನೈದು ದಿನಗಳ ಅನಂತರ ಬೆಂಗಳೂರಿನಲ್ಲಿ ಪರೀಕ್ಷಿಸಿಕೊಳ್ಳಿ'' ಎಂದರು. ಅನಂತರ ನಾವು ಬೆಂಗಳೂರಿಗೆ ಬಂದೆವು. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲೇಬೇಕು ಎನ್ನುವುದು ನಿರ್ಧಾರವಾಯಿತು. ಹಿಂದೆ ಮಕ್ಕಳು ಒತ್ತಾಯ ಮಾಡಿದಾಗ ನಾನೇ 'ಬೇಡ' ಎಂದಿದ್ದೆ. ಆದರೆ ಈಗ...... ನನಗೆ ಎಪ್ಪತ್ತು ವರ್ಷ ವಯಸ್ಸೂ ಆಗಿದ್ದಿತು. 'ಜಾತಸ್ಯ ಹಿ ಧ್ರುವೋ ಮೃತ್ಯುಃ' ಎನ್ನುವುದೂ ಹೌದು. ಈ ಶಸ್ತ್ರ ಚಿಕಿತ್ಸೆ ಯಶಸ್ವಿಯಾದರೆ ಮಕ್ಕಳಿಗೆ-ಬಂಧು-ಹಿತೈಷಿಗಳಿಗೆ, ನನಗೆ ಎಲ್ಲರಿಗೂ ಸಂತೋಷ. ಹಾಗಿಲ್ಲವಾದರೆ..... ಕೊನೆಗಾಲದಲ್ಲಿ ತಂದೆಗೆ ಬಹಳ ನೋವು ಮಾಡಿಸಿದ ದುಃಖ ಮಕ್ಕಳಿಗೆ! ಈ ಎರಡೂ ಸಾಧ್ಯತೆಗಳಲ್ಲಿ ನನಗಾದರೂ ಮರಣದ ಬಗ್ಗೆ ಭಯವಿರಲಿಲ್ಲವಾದರೂ ಬದುಕಬೇಕು ಎನ್ನುವ ಆಸೆಯೇನೂ ಹೊರಟುಹೋಗಿರಲಿಲ್ಲ. ಅದಕ್ಕೇ ಈ ಸಾರಿಯ ನಿರ್ಧಾರವನ್ನು ಮಕ್ಕಳ ಪಾಲಿಗೇ ಬಿಟ್ಟೆ. ಈ ಸಮಯದಲ್ಲಿ ನನ್ನ ಹೃದಯ ಶಸ್ತ್ರಚಿಕಿತ್ಸೆಯ ಬಗ್ಗೆ ಸೂಕ್ತಸಲಹೆ ಕೊಟ್ಟು, 'ನಿಮ್ಮ ಆರೋಗ್ಯ ಇನ್ನೂ ಉತ್ತಮವಾಗುತ್ತದೆ' ಎಂದು ಧೈರ್ಯ ತುಂಬಿದವರು ಡಾ|| ರಮೇಶ್ ಅವರು.

ಶಸ್ತ್ರಚಿಕಿತ್ಸೆಗೆ ನಿಗದಿಯಾದ ದಿನ ಬಂದಿತು. ಎಲ್ಲರಿಗೂ ಆತಂಕ, ಕಳವಳ. ನನ್ನ ಜೀವನದಲ್ಲಿ ಈ ರೀತಿಯ ಅನುಭವ ಇದೇ ಮೊದಲು. ಆಪರೇಷನ್ ಥಿಯೇಟರ್‌ಗೆ ಹೋಗಬೇಕಾದರೆ, ರುದ್ರಮಂತ್ರಗಳಲ್ಲಿನ ಒಂದು ಮಂತ್ರ ನೆನಪಾಯಿತು.

'ಯಾತೇ ಹೇತಿರ್ಮೀಢುಷ್ಟಮ ಹಸ್ತೇ ಬಭೂವ ತೇ ಧನುಃ।
ತಯಾಸ್ಮಾನ್ ವಿಶ್ವತಸ್ತ್ವಂ ಅಯಕ್ಷ್ಮಯಾ ಪರಿಬ್ಭುಜ ॥

ರುದ್ರಮಂತ್ರಗಳು ೧೬೯ ಇವೆ. ಅದರಲ್ಲಿನ ನಾಲ್ಕೈದು ಮಂತ್ರಗಳು ನನಗೆ ಸಾಕಷ್ಟು ಚೆನ್ನಾಗಿಯೇ ಮನನವಾಗಿವೆ. ಆದರೂ ಅದೇಕೋ ಇದೊಂದು ಮಂತ್ರ ಮಾತ್ರ ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಸುಳಿಯತೊಡಗಿದ್ದಿತು. ಈ ಮಂತ್ರದ ಅರ್ಥ 'ಹೇ ಪರಮೇಶ್ವರನೆ! ಸಕಲ ಸ್ತೋತ್ರಗಳಿಗೂ ಅರ್ಹನಾದ ಮೀಢುಷ್ಟಮನೇ! (ಭಕ್ತರ ಇಷ್ಟವನ್ನು ನೆರವೇರಿಸುವವನೆ) ನಿನ್ನ ಕೈಯಲ್ಲಿ ಯಾವ ಆಯುಧ-ಶಸ್ತ್ರ ಇದೆಯೋ ಅದರಿಂದ ನೀನು ನನ್ನ ರೋಗವನ್ನು ಹೋಗಲಾಡಿಸಿ, ನನ್ನನ್ನು ರೋಗರಹಿತನನ್ನಾಗಿ ಮಾಡು.......' ''ನನಗೆ ಈ ದಿನ ಶಸ್ತ್ರಚಿಕಿತ್ಸೆ ಮಾಡಲು ಬರುವವರು ಡಾ|| ಗಣೇಶ ನಾಯಕ. ನಿನ್ನ ಆಯುಧವನ್ನು ಅವರ ಕೈಲಿಡು. ಅದರೊಳಗೆ ನೀನು ಸೇರಿಕೊಂಡು, ಅವರ ಕೈಗೆ, ಮನಸ್ಸಿಗೆ ಬಲವನ್ನು ಕೊಟ್ಟು ಶಸ್ತ್ರಚಿಕಿತ್ಸೆ ಮಾಡಿಸು'' ಎಂದೇ ನನ್ನ ಮನಸ್ಸಿನಲ್ಲಿದ್ದ ಬೇಡಿಕೆ ಇದ್ದೀತು. ನಾನು ಎಚ್ಚರತಪ್ಪುವವರೆಗೆ ಇದೊಂದೇ ಮಂತ್ರ, ಇದೇ ಕೋರಿಕೆ ಮತ್ತೆ ಮತ್ತೆ ನೆನಪಿಗೆ ಬರುತ್ತಿತ್ತು.

ಕೈಕಾಲುಗಳು ಕಟ್ಟಿದ ಅನುಭವ, ಮೈಭಾರ...... 'ನಾನು ಇನ್ನೂ ಬದುಕಿದ್ದೇನೆಯೇ' ಎನ್ನುವ ಅಚ್ಚರಿ. ಪ್ರಜ್ಞಾಹೀನ ಸ್ಥಿತಿಯಲ್ಲಿ ಕಳೆದ ಸಮಯ ಎಷ್ಟೋ ತಿಳಿದಿರಲಿಲ್ಲ. ಎಚ್ಚರಿಕೆ ಬಂದ ಮೇಲೆ ಪ್ರತಿನಿಮಿಷವೂ ದೀರ್ಘ ಎನ್ನುವ ಅನುಭವ. ನನ್ನ ಜತೆಯಲ್ಲಿದ್ದವರು ಎರಡು ದಿನಗಳೊಳಗೆ ಇಂಟೆನ್ಸಿವ್

ಕೇರ್ ಯೂನಿಟ್‌ನಿಂದ ಹೋದರೂ ನನಗೆ ಮಾತ್ರ ಬಿಡುಗಡೆಯಾಗಿರಲಿಲ್ಲ. ಏನೋ ಸಂಶಯ. ನಾನು ಕ್ಷೀಣವಾದ ಧ್ವನಿಯಲ್ಲಿಯೇ ನನ್ನ ಶುಶ್ರೂಷಕಿಯರಿಗೆ (ನರ್ಸುಗಳು) ''ನನಗೆ ಏನಾಗಿದೆ ಎಂದು ಹೇಳಿ. ನಿಜಹೇಳಿ.... ಏನೂ ಮರೆಮಾಚಬೇಡಿ. ಇನ್ನು ಹತ್ತುದಿವಸ ಇಲ್ಲಿದ್ದರೂ ಪರವಾಗಿಲ್ಲ. ಆದರೆ ನನ್ನ ಪರಿಸ್ಥಿತಿಯ ಬಗ್ಗೆ ನನಗೆ ಸ್ಪಷ್ಟವಾಗಿ ತಿಳಿಸಿ'' ಎಂದು ಕೇಳಿದೆ. ಅದಕ್ಕೆ ಅವರು, ''ನಿಮಗೆ ಸ್ಪೆಷಲ್ ವಾರ್ಡ್ ಸಿಗುವ ತನಕ ನೀವು ಇಲ್ಲಿ ಇರಬೇಕಿದೆ. ಅಷ್ಟೆ. ನಿಮ್ಮ ಆರೋಗ್ಯ ಚೆನ್ನಾಗಿಯೇ ಇದೆ. ಶಸ್ತ್ರಚಿಕಿತ್ಸೆಯೂ ಯಶಸ್ವಿಯಾಗಿದೆ. ನೀವು ಆದಷ್ಟು ಬೇಗ ಹುಷಾರಾಗುತ್ತೀರಿ'' ಎಂದರು. ನಿಜ.... ನಾನು ಗಂಡಾಂತರದಿಂದ ಪಾರಾಗಿದ್ದೆ. ನನಗೆ ಮರುಹುಟ್ಟು ಸಿಕ್ಕಿತ್ತು!

ಆ ರಾತ್ರಿ ನನಗೆ ಮರುಜನ್ಮ ಕೊಟ್ಟ ಆ ಡಾಕ್ಟರ ಬಗೆಗೇ ಯೋಚಿಸುತ್ತಿದ್ದ ಕಾರಣವೋ, ಏನೋ, ಒಂದು ಶ್ಲೋಕ ಕನಸಿನಲ್ಲಿ ಬಂದ ಹಾಗಾಯಿತು. ಅದರಲ್ಲಿ

ಗಣೇಶನಾಯಕೋ ನಾಮ ವೈದ್ಯೋ ಧನ್ವಂತರಿಃ ಸ್ವಯಂ ।
ಶಸ್ತ್ರಶಾಸ್ತ್ರೇ ಸಿದ್ಧಹಸ್ತಃ ಚಿರಂ ಜೀಯಾತ್ ಪ್ರಸನ್ನಧೀಃ ॥
ರಮೇಶೋ ನಾಮ ಧರ್ಮಾತ್ಮಾ ದೇವಾನಾಮಶ್ವಿನಾವಿವ ।
ಹೃದಯಜ್ಞೋ ದಯಾಳುಶ್ಚ ಚಿರಂ ಜೀಯಾತ್ ಸ್ವವಿದ್ಯಯಾ ॥

ಶಸ್ತ್ರಚಿಕಿತ್ಸೆ ನಡೆಯುವಲ್ಲಿಗೆ (ಓ.ಟಿ.) ಹೋಗುವಾಗ ರುದ್ರಮಂತ್ರದಲ್ಲಿ ನೆನಪಾದ ಮಂತ್ರದ ಮೂಲಕ ದೇವರನ್ನು ಸ್ಮರಿಸಿದ್ದೆ, ಶಸ್ತ್ರಚಿಕಿತ್ಸೆಯ ಅನಂತರ ಗಂಡಾಂತರದಿಂದ ಪಾರುಮಾಡಿದ ಬಗ್ಗೆ ದೇವರಿಗೆ ವಂದನೆಗಳನ್ನು ಹೇಳಬೇಕೆನ್ನುವ ಸಲುವಾಗಿಯೇ ಎನ್ನುವಂತೆ ಈ ಶ್ಲೋಕಗಳು ನನಗೆ ಕನಸಿನಲ್ಲಿ ಬಂದವೋ ಎನಿಸಿತು! ಬೆಳಗ್ಗೆ ಎದ್ದು ನನ್ನ ತಮ್ಮ ಚಂದ್ರುವಿಗೆ ಅದನ್ನು ಬರೆದುಕೊಳ್ಳಲು ಹೇಳಿದೆ. ಅವನು ಅಂದಿನ ಸುದ್ದಿಪತ್ರಿಕೆಯ ತುದಿಯಲ್ಲಿ ಅದನ್ನು ಬರೆದಿದ್ದ. ಡಾಕ್ಟರು ಆ ದಿನ ನನ್ನನ್ನು ನೋಡಲು ಬಂದಾಗ, ಅವರಿಗೆ ಈ ಶ್ಲೋಕದ ವಿಷಯ ಹೇಳಿದಾಗ ಅವರು ಅಲ್ಲಿ ಪೇಪರಿನಲ್ಲಿ ಬರೆದ ತುಂಡನ್ನೇ ಹರಿದು ಕಣ್ಣಿಗೊತ್ತಿಕೊಂಡು ತಮ್ಮ ಜೇಬಿನಲ್ಲಿ ಇಟ್ಟುಕೊಂಡರು, 'ನಿಮ್ಮ ವಂದನೆ ದೇವರಿಗೆ ಸೇರಿತು' ಎನ್ನುವಂತೆ! ಇದು ನನ್ನ ಪುನರ್ಜನ್ಮದ ಕಥೆ..... ನಿಜ, ಯಜುರ್ವೇದದಲ್ಲಿ ಬರುವ ನಚಿಕೇತನ ಕಥೆಯ ಹಾಗೆ.

ನಚಿಕೇತ ಹೇಗೆ ಯಮನ ಹತ್ತಿರ ಹೋಗಿ ವಾಪಸು ಬಂದನೋ, ಹಾಗೆಯೇ ನಾನೂ ಯಮನ ಹತ್ತಿರ ಹೋಗಿ ಬದುಕಿಗೆ ವಾಪಸಾಗಿದ್ದೆ :

ವಾಜಶ್ರವಸ ಎನ್ನುವ ಒಬ್ಬ ಋಷಿ ಇದ್ದ. ಎಲ್ಲ ವೇದಗಳ ಅಧ್ಯಯನ ಮಾಡಿದ. ಅವನು ಕೊನೆಯಲ್ಲಿ 'ಸರ್ವಸ್ವದಕ್ಷಿಣಾ' ಎನ್ನುವ ಯಾಗ ಮಾಡಿದ. ತನ್ನದು ಎನ್ನುವ ಎಲ್ಲವನ್ನೂ ದಕ್ಷಿಣೆಯ ಜತೆಗೆ ದಾನ ಕೊಡುವುದೇ ಯಾಗದ ನಿಯಮ. ನಚಿಕೇತ ಈ ವಾಜಶ್ರವಸನ ಮಗ. ತನ್ನ ತಂದೆ ದಾನವಾಗಿ ಕೊಡುತ್ತಿದ್ದ ಬಡಕಲು ಮುದಿಹಸುಗಳು, ಸವಕಲು ನಾಣ್ಯಗಳನ್ನು ಕಂಡ ನಚಿಕೇತನಿಗೆ ದುಃಖವಾಗಿ, ಈ ನ್ಯೂನತೆಗಳನ್ನೆಲ್ಲ ಸರಿದೂಗಿಸುವ ಹಾಗೆ ತಂದೆಯು ತನ್ನನ್ನು ದಾನವಾಗಿ ಕೊಟ್ಟರೆ ಸಮನಾದೀತು ಎಂದು ಯೋಚಿಸಿ, ''ತನ್ನನ್ನ ಯಾರಿಗೆ ದಾನ ಕೊಡುತ್ತೀಯ?'' ಎಂದು ತಂದೆಯನ್ನು ಮತ್ತೆ ಮತ್ತೆ ಪೀಡಿಸಿದ. ಅವನ ಮಾತಿನಿಂದ ಕ್ರುದ್ಧನಾದ ತಂದೆ ''ನಿನ್ನನ್ನು ಯಮನಿಗೆ ದಾನ ಮಾಡಿದ್ದೇನೆ ಹೋಗು'' ಎಂದುಬಿಟ್ಟ. ಬಾಲಕ ನಚಿಕೇತ ತನ್ನ ದಣಿ ಯಮನ ಹತ್ತಿರಕ್ಕೆ ಹೊರಟ. ಯಮನ ಲೋಕಕ್ಕೆ ಬರುವಾಗ ತಾಯಿ ವಾಗ್ದೇವಿಯೇ ಬಾಲಕ ನಚಿಕೇತನಿಗೆ ಯಮನು ಬಂದಾಗ ಏನೇನು ಮಾಡಬೇಕು ಎಂದು ಹೇಳಿಕೊಟ್ಟಳಂತೆ! ಬಾಲಕನು ಯಮನ ಮನೆಯ ಬಾಗಿಲಿಗೆ ಹೋದಾಗ ಯಮ ಅಲ್ಲಿರಲಿಲ್ಲ. ಅವನು ಬರುವುದಕ್ಕೆ ಮೂರು ದಿನಗಳಾದವು. ಬಾಲಕ ನಚಿಕೇತ ಅವನಿಗಾಗಿ ಕಾದುಕುಳಿತ. ಮೂರು ದಿನಗಳೂ ಉಪವಾಸವಿದ್ದ. ಮನೆ ಬಾಗಿಲಿಗೆ ಬಂದ ಅತಿಥಿಯನ್ನು ಮೂರುದಿನಗಳು ಕಾಯಿಸಿ, ಉಪವಾಸ ಇರಿಸಿದ ತಪ್ಪಿಗೆ ತನ್ನ ಪ್ರಜಾಸಂಪತ್ತು, ಗೋಸಂಪತ್ತು, ಪುಣ್ಯಸಂಪತ್ತುಗಳ ನಷ್ಟ ಮಾಡಿಕೊಂಡಿದ್ದ ಯಮ ನಡುಗಿ ಹೋದ. ಆ ನಷ್ಟವನ್ನು ಸರಿದೂಗಿಸಿಕೊಳ್ಳುವುದಕ್ಕಾಗಿ ಬಾಲಕನಿಗೆ ''ಮೂರು ವರಗಳನ್ನು ಕೊಡುತ್ತೇನೆ'' ಎಂದು ಹೇಳಿದ. ಬುದ್ಧಿವಂತ ಹುಡುಗ ನಚಿಕೇತ ''ಜೀವನ್ನೇವ ಪಿತರನ್ನಯಾನೀತಿ'' ಎಂದು ಕೇಳಿದ - ''ನಾನು ಜೀವಂತವಾಗಿ ನನ್ನ ತಂದೆಯ ಬಳಿಗೆ ಹೋಗಬೇಕು'', ಮತ್ತೆ ''ಪಿತರಂ ಜೀವಂತಂ ನಯಾನಿ'' ನನ್ನನ್ನು ಬರಮಾಡಿಕೊಳ್ಳಲು ನನ್ನ ತಂದೆಯೂ ಬದುಕಿರಬೇಕು. ಎರಡನೆಯದು ''ಇಷ್ಟಾಪೂರ್ತಯೋರ್ಮೇsಕ್ಷಿತಿಂ ಬ್ರೂಹಿ'' ಮುದಿ ಹಸು ದಾನ ಮಾಡಿದ, ಆದರೂ ಆ ಯಾಗದಲ್ಲಿ ಕಾಮಧೇನುವಿನ ದಾನದಂತೆ ಆಗಿ ಅಕ್ಷಯವಾಗಲಿ. ಮೂರನೆಯದಾಗಿ ''ಪುನರ್ಮೃತ್ಯೋಃ ಪಚಿತಿಂ ಬ್ರೂಹೀತಿ ಹೋವಾಚ'' - ''ನನಗೆ ಮತ್ತೆ ಮರಣ ಬರದ ಹಾಗೆ, ಅಂದರೆ ಹುಟ್ಟಿದರೆ ಸಾವು ಬರುತ್ತದೆ ಅದಕ್ಕೆ ಮತ್ತೆ ಹುಟ್ಟಿ ಬರದ ಹಾಗೆ ಮಾಡಿ ಮೋಕ್ಷವನ್ನು ಕೊಡು'' ಎಂದು ಮೂರು ವರಗಳನ್ನು ಕೇಳಿದ ನಚಿಕೇತ ಯಮನಿಂದ ವರ ಪಡೆದು ತಂದೆಯ ಬಳಿಗೆ ವಾಪಸಾದ. ಅಂತಹ ಧೀರೋದಾತ್ತ ಬಾಲಕ ಅವನು. ಯಾವುದು ಅಸಾಧ್ಯವಾಗಿದ್ದಿತೋ ಅದನ್ನು ಸಾಧ್ಯಮಾಡಿ ತೋರಿಸಿದಂಥವನು. ಆದರೆ ಇಲ್ಲಿ ನನ್ನ ಸಾಧನೆ ಎನ್ನುವುದು ಏನೂ ಇಲ್ಲದಿದ್ದರೂ, ಸಾವಿನ ಬಾಗಿಲಿಗೆ ಹೋಗಿ ಬಂದವನು ನಾನು ಎನ್ನುವುದಂತೂ ನಿಜ.

೨೦. ಬಾ, ಶುಭವೇ

ಅಂತೂ ನನ್ನ ಜೀವನದಲ್ಲಿ ನನ್ನದು ಎನ್ನುವ ಸಾಧನೆ ಪ್ರತ್ಯೇಕವಾಗಿಲ್ಲದಿದ್ದರೂ, ಎಲ್ಲರಂತೆ ನಾನೂ ಒಬ್ಬ ಗೃಹಸ್ಥನಾಗಿ ಒಂದು ದೊಡ್ಡ ಕುಟುಂಬದ ಒಬ್ಬ ಜವಾಬ್ದಾರಿಯುತ ವ್ಯಕ್ತಿಯಾಗಿ ನನ್ನ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿರುವುದರಲ್ಲಿ ಯಾವುದೇ ವಿಶೇಷವಿಲ್ಲದಿದ್ದರೂ, ಊರ ಪುರೋಹಿತನಾಗಿ ನಾನು ನಿರ್ವಹಿಸುತ್ತಿದ್ದ ಪಾತ್ರ, ಕೆಲಸಕಾರ್ಯಗಳ ವೈವಿಧ್ಯವು ನನಗೆ ಅನೇಕರ ಸಂಪರ್ಕವನ್ನು ಒದಗಿಸಿದೆ. ನಮ್ಮ ತಂದೆಯ ಕಾಲದ, ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದ ಹಿರಿಯರಿಂದ ಮೊದಲಾಗಿ, ಇಂದಿನ ಯುವಪೀಳಿಗೆಯ ನನ್ನೂರಿನ ಮಕ್ಕಳ ಸಾಧನೆಗಳನ್ನು ನಾನು ಕಣ್ಣಾರೆ ಕಂಡವನಾಗಿದ್ದೇನೆ. ನಾನು ಭಾಗವಹಿಸಿ ನಿರ್ವಹಿಸಿದ ಹವನ, ಹೋಮಗಳು, ಯಾಗ-ಯಜ್ಞಗಳು ಅನೇಕ. ನಮ್ಮೂರಿನ ಎಲ್ಲ ಋತ್ವಿಕರೂ ಮಾಡುವ ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಊರ ಪುರೋಹಿತನಾಗಿ ನನ್ನ ಪಾತ್ರ ಪ್ರಮುಖ. ಸುಮಾರು ಐವತ್ತು-ಅರುವತ್ತು ವರ್ಷಗಳಿಂದಲೂ ಈ ದಿಸೆಯಲ್ಲಿನ ನನ್ನ ಅನುಭವಗಳು ನಮ್ಮ ಸನಾತನ ಧರ್ಮದ ಬಗೆಗೂ ಅದರ ಅನೇಕ ಆಚರಣೆಗಳ ಬಗೆಗೂ ನನ್ನ ನಂಬಿಕೆಯನ್ನು ಬಲಪಡಿಸಿವೆ, ದೃಢಗೊಳಿಸಿವೆ. ನಮ್ಮವು ಸರಿಸುಮಾರು ಎಲ್ಲವೂ ಅರ್ಥಪೂರ್ಣ ಧಾರ್ಮಿಕ ಆಚರಣೆಗಳೇ ಎಂದು ನನಗೆ ಖಚಿತವಾಗಿದೆ. ಆದರೆ ಅವುಗಳನ್ನು ಸರಿಯಾಗಿ, ಶ್ರುತಿಬದ್ಧವಾಗಿ ಮಾಡುವ ವಿಧಾನ ತಿಳಿದಿರಬೇಕಷ್ಟೆ. ಆಗ ಅವು ಮೂಢ ಆಚರಣೆಗಳು ಎನಿಸವು. ನನ್ನ ಈ ನಂಬಿಕೆ ಮತ್ತಷ್ಟು ಹರಳುಗೊಂಡದ್ದು ನನ್ನ ಎರಡೂ ಊರಿನ ಜನರು ಬಲುಪ್ರೀತಿ-ಅಭಿಮಾನ-ಆದರಗಳಿಂದ ಇತ್ತೀಚೆಗೆ ನನ್ನ ಎಪ್ಪತ್ತನೇ ವರ್ಷದ ವರ್ಧಂತಿಯನ್ನು ಬಹಳ ಸಂಭ್ರಮದಿಂದ ಆಚರಿಸಿದಾಗ! ಬೈಪಾಸ್ ಚಿಕಿತ್ಸೆ ಆಗಿ ಊರಿಗೆ ಮರಳಿದ ನನ್ನ ಶ್ರೇಯಸ್ಸಿಗೆ, ನನಗೂ ಶುಭಹಾರೈಸುವ ಸಲುವಾಗಿ ಮತ್ತೂರು ಹೊಸಹಳ್ಳಿಯ ಎಲ್ಲ ನನ್ನ ಬಾಂಧವರೂ ಸಾಕಷ್ಟು ವಿಜೃಂಭಣೆಯಿಂದ ವೇದವಿಧಿಯಂತೆ ಶಾಸ್ತ್ರೋಕ್ತವಾಗಿ ನನ್ನ ಭೀಮರಥ ಶಾಂತಿಯನ್ನು ನೆರವೇರಿಸಿ ನನಗೂ ನಮ್ಮ ಕುಟುಂಬಕ್ಕೂ ತಮ್ಮೆಲ್ಲರ ಮನಃಪೂರ್ವಕ ಆಶೀರ್ವಾದವನ್ನು ನೀಡಿದರು. ಗುರುಕಾಣಿಕೆಯನ್ನು ಅಕ್ಕರೆ, ಅಭಿಮಾನದಿಂದ ಅರ್ಪಿಸಿದರು. ಅವರೆಲ್ಲರ ಹರಕೆ-ಹಾರೈಕೆಯನ್ನು ಕಂಡು ನನ್ನ ಹೃದಯತುಂಬಿ ಬಂದಿತು. ಇದಕ್ಕಿಂತ ಜೀವನದಲ್ಲಿ ನನಗೆ ಇನ್ನೇನು ಬೇಕು? ಇದೇ ನನ್ನ ಸಾಧನೆ! ಇಷ್ಟು ಜನರ ಪ್ರೀತ್ಯಭಿಮಾನವನ್ನು ಗಳಿಸಲು, ಗೌರವವನ್ನು ಪಡೆಯಲು ದೇವರು ನನಗೆ ಮಾಡಿಕೊಟ್ಟ ಅವಕಾಶಕ್ಕೆ ನಾನು ಸದೈವ ಕೃತಜ್ಞ. ಇದು ನನ್ನ ಸುದೈವ.

ಹೀಗೆಯೇ ಈ ಪರಂಪರೆ ಮುಂದುವರೆಯುತ್ತದೆ ಎನಿಸಿತು, ನಾನು ನನ್ನೂರ ಮಕ್ಕಳ ಸದಭಿರುಚಿಯ, ಧಾರ್ಮಿಕ ನಂಬಿಕೆಯ, ಶ್ರದ್ಧೆಯ ಬಗೆಗೆ ಇತ್ತೀಚೆಗೆ ನೋಡಿದಾಗ. ಅದು ನಮ್ಮೂರಿನಲ್ಲಿ ನಡೆದ ಶ್ರೀ ಸೀತಾರಾಮ ಮಹಾಸಾಮ್ರಾಜ್ಯ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭ. ದಿನಾಂಕ **೨೪.೧೨.೦೪** ರಿಂದ **೨.೦೧.೦೫**ರ ತನಕ, ಸುಮಾರು ಹತ್ತು ದಿವಸಗಳವರೆಗೆ, ಇಡೀ ದಿವಸದ ಇಪ್ಪತ್ನಾಲ್ಕು ಗಂಟೆಗಳೂ ಅನವರತ ನಡೆದ ಅನುಷ್ಠಾನಗಳು, ವಿಶೇಷ ಹವನ ಹೋಮಗಳು, ಪೂಜೆ-ಪುನಸ್ಕಾರಗಳಲ್ಲಿ ನಮ್ಮೆರಡೂ ಊರಿನ ಆಬಾಲವೃದ್ಧರಾದಿಯಾಗಿ ಎಲ್ಲರೂ, ಅದರಲ್ಲೂ ಯುವಪೀಳಿಗೆಯ ಹೆಣ್ಣು-ಗಂಡು ಮಕ್ಕಳು ತೋರಿದ ಆಸಕ್ತಿ, ಆಸ್ಥೆ, ಉತ್ಸಾಹ, ಕಾಳಜಿ ಎಂದಿಗೂ

ಸ್ಮರಣೀಯ. ಆ ಸಮಯದಲ್ಲಿ ನಮ್ಮೂರಿಗೆ ಭೇಟಿನೀಡಿದ ಅನೇಕ ಗಣ್ಯರು ನಮ್ಮ ಮಕ್ಕಳ ಬಗ್ಗೆ ತೋರಿದ ಮೆಚ್ಚುಗೆ ನಮ್ಮೆಲ್ಲರಿಗೆ ಪಾರಿತೋಷಿಕವಾಗಿದೆ. ಸನಾತನ ಪರಂಪರೆಯ ಬಗೆಗೆ ನಮ್ಮ ಈಗಿನ ಮಕ್ಕಳಿಗೆ ಇರುವ ಶ್ರದ್ಧೆ, ವಿಶ್ವಾಸ ಕಂಡು ನಾನೂ, ನಮ್ಮೂರಿನ ಹಿರಿಯರೆಲ್ಲರೂ ಹೆಮ್ಮೆಯಿಂದ ಬೀಗಿದೆವು. ಆ ಪರಂಪರೆಯು ಹೀಗೆಯೇ ಅನೂಚಾನವಾಗಿ ಮುಂದುವರೆಯುವ ಎಲ್ಲ ಶುಭ ಸೂಚನೆಗಳನ್ನೂ ಕಂಡು ನೆಮ್ಮದಿಗೊಂಡೆವು. ನನ್ನ ಜೀವನದಲ್ಲಿ, ನನ್ನ ಪೌರೋಹಿತ್ಯದ ಯಾಜಮಾನಿಕೆಯಲ್ಲಿ ನನ್ನೂರಿನಲ್ಲೇ ನಡೆದ ಅತ್ಯಂತ ವಿಜೃಂಭಣೆಯ, ಅತಿದೊಡ್ಡದಾದ, ಅರ್ಥಪೂರ್ಣ ಮಹೋತ್ಸವ ಇದು!

ಹಾಗೆಯೇ ನನ್ನ ಜೀವನದ ನೆನಪುಗಳ ಉತ್ಸವವೂ ಈಗ ಒಂದು ಹಂತಕ್ಕೆ ಬಂದಂತಾಗಿದೆ. ನನ್ನ ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡ ಕೃತಾರ್ಥಭಾವ ನನ್ನಲ್ಲಿ ನೆಲೆಸಿದೆ. ಇಂತಹ ಸುಂದರವಾದ ಪ್ರಪಂಚವನ್ನು ಕಾಣಲೂ, ಸಣ್ಣದಾದರೂ ನಮ್ಮದೇ ಆದ ಒಂದು ಪ್ರಪಂಚದಲ್ಲಿ ಹಲವು ಹತ್ತಾರು ಮಹನೀಯರನ್ನು ಕಂಡು ಧನ್ಯನಾಗಲೂ, ಆ ದೇವರು ಕೊಟ್ಟಿರುವ ಈ ಅವಕಾಶಕ್ಕೆ ನಾನು ಸದೈವ ಋಣಿಯಾಗಿದ್ದೇನೆ. ಹಾಗೆಯೇ ನನ್ನ ಈ ನೆನಪುಗಳನ್ನು ಹೆಣೆದಿರುವ ಈ ಸಣ್ಣ ಕಥಾನಕ ಓದುಗರಿಗೆ ರುಚಿಸುತ್ತದೆ ಎಂದು ನಂಬಿದ್ದೇನೆ. ಓದುಗ ಮಹಾಶಯರೆಲ್ಲರ ಹರಕೆ-ಹಾರೈಕೆಗಳು ನನ್ನ ಮತ್ತು ನನ್ನೂರ ಜನರೆಲ್ಲರ ಮೇಲೆ ಎಂದಿಗೂ ಇರಲಿ ಎಂದು ಆಶಿಸುತ್ತೇನೆ.

ಶುಭಂ

ಜೀವನೋಲ್ಲಾಸ

ಪ್ರೊ॥ ಕೆ.ಎಸ್. ಕೃಷ್ಣಮೂರ್ತಿ

ಜೀವನೋಲ್ಲಾಸ*

ಸಂಕೇತಿ ಸಮುದಾಯವು ಹಿಂದಿನ ಮೈಸೂರು ಸಂಸ್ಥಾನದ ಹಾಸನ, ಮಂಡ್ಯ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ಕೆಲವು ಹಳ್ಳಿಗಳಿಗೆ ನೆರೆಯ ತಮಿಳುನಾಡಿನಿಂದ ಬಂದು ನೆಲೆಸಿದ ಒಂದು ವಿಶಿಷ್ಟ ಬ್ರಾಹ್ಮಣ ಪಂಗಡ. ವೇದಪಾರಂಗತರೂ ಅನೇಕ ಶಾಸ್ತ್ರಗಳಲ್ಲಿ ವಿದ್ವತ್ತನ್ನು ಪಡೆದವರೂ ಆದ ಸ್ಮಾರ್ತ ಬ್ರಾಹ್ಮಣರು ಇವರು. ತಮಿಳುನಾಡಿನಿಂದ ವಲಸೆ ಬಂದ ಇವರು ಮನೆಮಾತಾಗಿ ಬಳಸುತ್ತಿರುವುದು ಸಂಕೇತಿ ಭಾಷೆಯನ್ನು. ಮೈಸೂರು ಸಂಸ್ಥಾನಕ್ಕೆ ತಮಿಳು, ತೆಲುಗು, ಮಲೆಯಾಳಂ ಭಾಷೆಯ ಜನರು ಬೇರೆ ಬೇರೆ ಕಾಲಗಳಲ್ಲಿ ಬಂದು ನೆಲಸಿದ್ದಾರೆ. ಇವರೆಲ್ಲರೂ ತಮ್ಮ ಭಾಷೆಯನ್ನೇ ತಮ್ಮ ವ್ಯವಹಾರಗಳಿಗೆ ಬಳಸುತ್ತಾರೆ. ಅಲ್ಲದೆ ಇವರು ತಮ್ಮ ತಮ್ಮ ಆಚಾರ ಸಂಪ್ರದಾಯಗಳನ್ನು ಉಳಿಸಿಕೊಂಡು ಪಾಲಿಸಿಕೊಂಡು ಬರುತ್ತಿರುವುದು ಸಾಧಾರಣ ವಿಷಯವಾಗಿದೆ. ಆದರೆ ಈ ವಿಷಯದಲ್ಲಿ ಸಂಕೇತಿಗಳು ಸ್ವಲ್ಪಮಟ್ಟಿಗೆ ಭಿನ್ನರು. ಸಂಕೇತಿಗಳು ತಮಿಳುನಾಡಿನಿಂದ ಮೈಸೂರು ಸಂಸ್ಥಾನಕ್ಕೆ ವಲಸೆ ಬಂದ ಬ್ರಾಹ್ಮಣ ಪಂಗಡಗಳಲ್ಲಿ ಮೊದಲಿಗರು ಎನ್ನಬಹುದು. ಎರಡನೆಯದಾಗಿ, ಸಂಕೇತಿಗಳು ಉದ್ಯೋಗ, ವ್ಯಾಪಾರ, ವಾಣಿಜ್ಯ ಮೊದಲಾದವುಗಳನ್ನು ಆರಸಿ ಬಂದವರಲ್ಲ. ಧರ್ಮದ ಕಾರಣದಿಂದಲೋ, ತಮ್ಮ ಜೀವಿಕೆಗೆ ತೊಂದರೆ ಬಂದುದರಿಂದಲೋ, ಯಾವುದೋ ಒಂದು ಸಾಮಾಜಿಕ ಕೋಟಲೆಯಿಂದ ತಪ್ಪಿಸಿಕೊಳ್ಳಲೋಸುಗವೋ ಇವರು ವಲಸೆ ಬಂದಿರಬಹುದು. ಇತರರಿಗಿಂತ ಒಂದು ವಿಷಯದಲ್ಲಿ ಇವರು ಭಿನ್ನರು. ಏತಕ್ಕೆಂದರೆ ಇವರು ಸಾಮೂಹಿಕವಾಗಿ ಒಂದು ತಂಡದಲ್ಲೋ, ಎರಡು ಮೂರು ಪಂಗಡಗಳಾಗಿಯೋ ಬಂದು ಆಗಿನ ಮೈಸೂರು ಸಂಸ್ಥಾನದಲ್ಲಿ ನೆಲಸಿದರು. ಕನ್ನಡ ನಾಡಿನಲ್ಲಿ ನೆಲಸಿದವರಾಗಿ ಇಲ್ಲಿನ ಜನರೊಡನೆ ವ್ಯವಹಾರವನ್ನು ಬೆಳೆಸಿಕೊಂಡರು. ಇಲ್ಲಿಯ ಹಲವು ಸಂಪ್ರದಾಯಗಳನ್ನು ಸ್ವೀಕರಿಸಿದರು, ಹಿಂದಿನ ಕೆಲವನ್ನು ಕೈಬಿಟ್ಟರು. ಭಾಷೆ ಮೂಲ ತಮಿಳಿನಂತೆ ಕಂಡುಬಂದರೂ, ಆದರ ಮೇಲೆ ಕನ್ನಡದ ಪ್ರಭಾವ ವಿಶೇಷವಾಗಿ ಉಂಟಾಯಿತು. ಅಲ್ಲದೆ ಇವರ ವಿಶಿಷ್ಟವಾದ ಉಚ್ಚಾರಣೆಗೂ, ಭಾಷೆಗೂ, ಇವರ ಜೀವನ-ರೀತಿ ಮತ್ತು ಭೌಗೋಳಿಕ ಪರಿಸರ ಕಾರಣವಾದುವು ಎಂದು ಬೇರೆ ಹೇಳಬೇಕಾಗಿಲ್ಲ.

ಸಂಕೇತಿಗಳು ದೃಢಕಾಯರೂ, ದಯಾಧರ್ಮಪರರೂ, ಪರಸ್ಪರ ಸಹಕಾರ ಮನೋಭಾವವುಳ್ಳವರೂ, ಸ್ವಾತಂತ್ರ್ಯಪ್ರಿಯರೂ ಆಗಿದ್ದರು. ಆದುದರಿಂದ ಇವರು ತಮ್ಮ ಜೀವಿಕೆಗಾಗಿ ಯಾರನ್ನೂ ಆಶ್ರಯಿಸಲಿಲ್ಲ, ಯಾರ ಎದುರಿಗೂ ಕೈ ನೀಡಲಿಲ್ಲ. ನೀರಿನ ವಸತಿ ಇರುವ, ಸ್ನಾನ ಜಪತಪಾದಿಗಳಿಗೆ ಅನುಕೂಲವಾಗಿ ನದಿ, ಕೆರೆ ಮೊದಲಾದವುಗಳು ಇರುವ ಊರು ಅಥವಾ ಹಳ್ಳಿಗಳಲ್ಲಿ ನೆಲಸಿದರು. ಅಡಕೆ ಸಸಿಗಳನ್ನು ನೆಟ್ಟು ವೀಳೆಯದೆಲೆ ಹಂಬುಗಳನ್ನು ಹಬ್ಬಿಸಿ, ಅಭಿವೃದ್ಧಿಪಡಿಸಿ ಆ ತೋಟಗಳ ಉತ್ಪನ್ನದಿಂದ ಜೀವಿಸಿದರು. ಇದೇ ಕಾರಣ ಇರಬೇಕು- ಇವರಲ್ಲಿ ಸ್ವತಂತ್ರ ಪ್ರವೃತ್ತಿ ಬೆಳೆದು ಬಂದುದಕ್ಕೆ. ಸಂಕೇತಿಗಳ ಈ ಗುಣಗಳು ಆಧುನಿಕರಲ್ಲಿಯೂ ಉಳಿದುಕೊಂಡು ಬಂದಿವೆ. ತಮ್ಮ ವ್ಯಕ್ತಿತ್ವಕ್ಕೆ ಭಂಗ ಬರುವ ಸಂದರ್ಭ ಬಂದಾಗ, ಸ್ವತಂತ್ರ ಆಲೋಚನೆಗೆ ಧಕ್ಕೆ ಬರುವ ಸಂದರ್ಭ ಬಂದಾಗ, ತಾವು ಅನುಭವಿಸುತ್ತಿರುವ ಉನ್ನತ ಹುದ್ದೆಯನ್ನಾದರೂ ನಿರಾಯಾಸವಾಗಿ ತೊರೆದು ಬಂದಿದ್ದಾರೆ ; ಇತರರೆದುರಿಗೆ ತಮ್ಮತನವನ್ನು ಮೆರೆದಿದ್ದಾರೆ. ಕಷ್ಟಪಟ್ಟು ದುಡಿಯುವ ಹಿಂದಿನವರ ಗುಣವೇ ಇಂದಿನ ಸಂಕೇತಿ ಯುವಕರಲ್ಲಿಯೂ ಕಂಡುಬರುವ ಶ್ಲಾಘ್ಯ ಗುಣ. ಇಂದಿನ ಯುವಕರು ಕಠಿಣವಾದ ವ್ಯಾಸಂಗ ಮಾಡಿ ಉನ್ನತ ಸ್ಥಾನಗಳನ್ನೂ ಕೀರ್ತಿಯನ್ನೂ ಗಳಿಸಿದ್ದಾರೆ. ಭಾರತ ದೇಶದಲ್ಲೇ ಅಲ್ಲದೆ ಇವರು ಅಮೆರಿಕ, ಇಂಗ್ಲೆಂಡ್, ಮೊದಲಾದ ದೇಶಗಳಿಗೆ ಹೋಗಿ ಅಲ್ಲಿ ತಮ್ಮ ಪ್ರಾಮಾಣಿಕ ದುಡಿಮೆ, ಅಪಾರ ಬುದ್ಧಿಶಕ್ತಿಗಳನ್ನು ಪ್ರದರ್ಶಿಸಿ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದಾರೆ. ಸಂಕೇತಿಗಳಲ್ಲಿ ಬಹಳ ದೊಡ್ಡ ವಿದ್ವಾಂಸರೂ, ಪ್ರಖ್ಯಾತ ಇಂಜಿನಿಯರರೂ, ವೈದ್ಯರೂ, ವಿಜ್ಞಾನಿಗಳೂ, ಮನ್ನಣೆಯನ್ನು ಗಳಿಸಿ ಪ್ರಸಿದ್ಧಿ ಪಡೆದಿದ್ದಾರೆ. ಇಂದಿನ ತಲೆಮಾರಿನಲ್ಲಿ ಕಾಣುವ ಹಲವು ಗುಣಗಳು ಹಿಂದಿನ ಸಂಕೇತಿಗಳಲ್ಲೇ ಇದ್ದುದಾಗಿತ್ತು ಎಂಬುದನ್ನು ಮರೆಯುವ ಹಾಗಿಲ್ಲ.

---

* ೧. **ಸಂಕೇತಿ ಸಂಪದ,** ಪ್ರೊ|| ಕೆ.ಎಸ್. ಕೃಷ್ಣಮೂರ್ತಿ, ಪ್ರ.ಮು : ೧೯೯೪, ಪು : viii + 206, 1/8 ಕ್ರೌನ್, ಪ್ರ : ಸುಕೃತ ನಂ. ೩೧, ೪ನೇ ಮುಖ್ಯರಸ್ತೆ, ಪರಮಹಂಸ ರಸ್ತೆ, ಯಾದವಗಿರಿ, ಮೈಸೂರು - ೫೭೦ ೦೨೦

ಇಪ್ಪತ್ತನೆಯ ಶತಮಾನದಲ್ಲಿ ಆಧುನಿಕ ವಿದ್ಯಾಭ್ಯಾಸವು ಪ್ರಚಾರಕ್ಕೆ ಬಂದ ಮೇಲೆ ಸಂಕೇತಿಗಳು ಗುರುಕುಲ ಪದ್ಧತಿಗೆ ಸಮಾನವಾಗಿದ್ದ ಸಾಂಪ್ರದಾಯಿಕ ವಿದ್ಯಾಭ್ಯಾಸವಾದ ವೇದಶಾಸ್ತ್ರ ಮೊದಲಾದ ಅಧ್ಯಯನಗಳನ್ನು ಬಹುಮಟ್ಟಿಗೆ ಬಿಟ್ಟು, ಆಧುನಿಕ ವಿದ್ಯಾಭ್ಯಾಸವಾದ ಇಂಜಿನಿಯರಿಂಗ್, ವೈದ್ಯ ವಿಜ್ಞಾನ ಮೊದಲಾದವುಗಳ ಕಡೆಗೆ ಗಮನ ಹರಿಸಿದರು. ಆಧುನಿಕ ವಿದ್ಯಾಭ್ಯಾಸವನ್ನು ಪಡೆದುಕೊಂಡವರು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ ಕಾರಣ ಪಟ್ಟಣಗಳನ್ನು ಸೇರಿದರು. ಕೆಲವರು ಸಾಗರದಾಚೆಗೂ ಅಡಿಯಿಟ್ಟು ಇಂಗ್ಲೆಂಡ್, ಅಮೆರಿಕಾ ದೇಶಗಳಲ್ಲಿ ನೆಲಸಿದ್ದಾರೆ. ಈ ಕಾರಣದಿಂದ ಸಂಕೇತಿ ಸಮಾಜದಲ್ಲಿ ಒಂದು ತಿರುವು ಉಂಟಾಯಿತು. ರಾಜಕೀಯ, ಸಾಮಾಜಿಕ, ಸ್ಥಿತಿಗತಿಗಳಿಗೆ ಹೊಂದಿಕೊಳ್ಳತೊಡಗಿದ ಇವರ ಜೀವನದಲ್ಲಿ ಹಲವು ಬದಲಾವಣೆಗಳಾಗಿವೆ. ಹಿಂದಿನ ಹಲವು ಆಚರಣೆಗಳು ಇಂದು ಬದಲಾಗಿವೆ. ತ್ರಿಕಾಲ ಸ್ನಾನ, ಜಪತಪ, ಔಪಾಸನೆ, ಅಗ್ನಿಹೋತ್ರ ಇವುಗಳನ್ನು ಇಂದಿಗೆ ಆಚರಿಸಲು ಸಾಧ್ಯವಾಗುತ್ತಿಲ್ಲ. ಯಜ್ಞ-ಯಾಗಾದಿಗಳನ್ನು ನಡೆಸಲು ಇಂದಿನ ಪರಿಸ್ಥಿತಿ ಅನುಕೂಲವಾಗಿಲ್ಲ. ಅದಕ್ಕೆ ಬೇಕಾದ ಧಾರ್ಮಿಕ ಆವರಣ ನಷ್ಟವಾಗುತ್ತಿದೆ, ಆರ್ಥಿಕ ಅನುಕೂಲಗಳೂ ಇಲ್ಲ. ಹೀಗೆ ಆಧುನಿಕತೆಯ ಬಿರುಗಾಳಿಗೆ ಸಿಕ್ಕಿ ನವಸಂಕೇತಿ ಸಮಾಜದ ಮೌಲ್ಯಗಳು ಬದಲಾಗುತ್ತಿವೆಯಾದರೂ ಹಳ್ಳಿಗಳಲ್ಲಿ ಸಂಪ್ರದಾಯವನ್ನು ಇನ್ನೂ ಪೂರ್ಣವಾಗಿ ಕೈಬಿಡದೆ ಸಾಧ್ಯವಾದಷ್ಟು ಮಟ್ಟಿಗೆ ನಡೆಸಿಕೊಂಡು ಬರಲಾಗುತ್ತಿದೆ. ಹಿಂದಿನ ಸಂಕೇತಿಗಳ ಜೀವನ ಕ್ರಮದ ಹಲವು ಅಂಶಗಳು ಇನ್ನೂ ಹಳ್ಳಿಗಳಲ್ಲಿ ಸ್ವಲ್ಪ ಮಟ್ಟಿಗೆ ಉಳಿದುಕೊಂಡು ಬಂದಿವೆಯಾದರೂ ಅವರು ಸಾಮಾಜಿಕವಾಗಿ, ರಾಜಕೀಯವಾಗಿ ಇಂದಿನ ಯುಗಕ್ಕೆ ಹೊಂದಿಕೊಂಡು ಹೋಗುತ್ತಿದ್ದಾರೆ.

ತಮ್ಮ ಹುಟ್ಟೂರಾದ ಹಳ್ಳಿಗಳನ್ನು ಬಿಟ್ಟು ಜೀವನ ನಿರ್ವಹಣೆಗೆ ಬೇರೆ ಬೇರೆ ಉದ್ಯೋಗಗಳನ್ನರಸಿ ಹೋದ ಈಚಿನವರಿಗೆ, ನಮ್ಮ ಹಿಂದಿನವರು ಹೇಗೆ ಬಾಳುತ್ತಿದ್ದರು ಎಂಬುದರ ಕಲ್ಪನೆ ಅಷ್ಟಾಗಿ ಇರುವ ಸಂದರ್ಭವಿರುವುದಿಲ್ಲ. ಆದರೂ ಸಂಕೇತಿಗಳಿಗೆ ತಮ್ಮ ಕುಲ-ನೆಲಗಳ ಬಗ್ಗೆ ಅಭಿಮಾನವು ಪೂರ್ಣವಾಗಿದೆ. ಅವರ ಹಿಂದಿನವರ ಜೀವನ ರೀತಿ-ನೀತಿಗಳನ್ನೂ, ಅವರ ಹಿರಿಯರ ಕಥೆಗಳನ್ನೂ ಯಾರಾದರೂ ಹೇಳಿದರೆ ಸಂತೋಷಾಶ್ಚರ್ಯ ಗೌರವಗಳಿಂದ ಆಲಿಸುತ್ತಾರೆ. ಈ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಅಂದಿನ ಸಂಕೇತಿ ಸಮಾಜ ಬಾಳುತ್ತಿದ್ದ ರೀತಿಯ ಕೆಲವು ಮುಖಗಳನ್ನು ನಾನು ಕಂಡುಂಡ ಹಾಗೂ ಕೇಳಿದ ಬಗೆಯಲ್ಲಿ ನಿರೂಪಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಇಲ್ಲಿ ಆನಂದವಿದೆ, ಉತ್ಸಾಹವಿದೆ, ಗೆಲುವಿದೆ, ಋಜುತ್ವವಿದೆ, ವಿನೋದವಿದೆ. ಮಾನವಸಹಜವಾದ ಕಷ್ಟ ಸಂಕಟಗಳು, ರೋಗರುಜಿನಗಳು, ಬಡತನ ಮೊದಲಾದವುಗಳ ಕಡೆಗೆ ನನ್ನ ಗಮನವನ್ನು ಅಷ್ಟಾಗಿ ಹರಿಸಿಲ್ಲ. ಇಂಥ ಚಿತ್ರಣವು ಕಾದಂಬರಿಯ ಮೂಲಕ ಸಮರ್ಥವಾಗಿ ಆಗಬಹುದೆಂಬ ನನ್ನ ಅಭಿಪ್ರಾಯವೇ ಇದಕ್ಕೆ ಕಾರಣ. ಇಲ್ಲಿಯ ಚಿತ್ರಗಳು ಸಂಕೇತಿಗಳ ಬದುಕಿನ ಹಲವು ಬಣ್ಣದ ಬಣ್ಣನೆಗಳ ಚಿತ್ರವಾಗಿದೆ. ಜೀವನದ ಉಲ್ಲಾಸ, ಹರ್ಷ, ಉತ್ಸಾಹಗಳನ್ನು ಈ ಸಂಕೇತಿ ಬದುಕು ಪ್ರತಿಬಿಂಬಿಸುತ್ತದೆ.

೧. ಗಾಡಿಯ ಪ್ರಯಾಣ

ಈಗಿನ ಕಾಲದಲ್ಲಿ ಊರಿನಿಂದ ಊರಿಗೆ ಒಳ್ಳೆಯ ರಸ್ತೆಗಳಿವೆ. ಮುಖ್ಯವಾದ ರಸ್ತೆಗಳಿಗೆ ಡಾಮರು ಹಾಕಿಸಿರುವುದರಿಂದ ಚಕ್ರಗಳು ಈ ರಸ್ತೆಗಳ ಮೇಲೆ ಸರಾಗವಾಗಿ ಉರುಳುತ್ತವೆ ಮತ್ತು ವಾಹನಗಳು ಸುಗಮವಾಗಿಯೂ ವೇಗವಾಗಿಯೂ ಚಲಿಸುತ್ತವೆ. ರಸ್ತೆಯಲ್ಲಿ ಅಲ್ಲಲ್ಲಿ ಆಗಿರುವ ಗುಳಿಗಳಲ್ಲಿ ಚಕ್ರ ಬಿದ್ದು - ಎದ್ದು ಜನರ ಮೈ ಕುಲುಕಿಸುವುದನ್ನು ಇಲ್ಲಿ ಯೋಚಿಸಬೇಡಿ. ಹಾಗೆ ಮೈ ಕುಲುಕದಿದ್ದರೆ ಹೊಟ್ಟೆಯೊಳಗೆ ತುಂಬಿದ ಆಹಾರ ಕೆಳಕ್ಕಿಳಿಯುವುದಾದರೂ ಹೇಗೆ ! ಕೆಲವರಂತೂ ತಮ್ಮ ಮೈಕೈಗಳ ನೋವನ್ನು ನಿವಾರಿಸಿಕೊಳ್ಳಲು ಬಸ್ಸುಗಳಲ್ಲಿ ಪ್ರಯಾಣಿಸುವುದೂ ಉಂಟೆಂದು ನಮ್ಮ ಮೂರ್ತಿ ತಮಾಷೆ ಮಾಡುತ್ತಾನೆ. ಈಗಿನ ಸ್ವತಂತ್ರ ಭಾರತದಲ್ಲಿ ಘನಸರಕಾರದವರು ಅನೇಕ ಹಳ್ಳಿಗಳಿಗೆ ರಸ್ತೆಗಳನ್ನು ಮಾಡಿಸಿರುತ್ತಾರೆ. ಹಿಂದಿನ ಕಾಲದಲ್ಲಿನ ಸ್ಥಿತಿಯು ಬೇರೆಯೇ ಆಗಿತ್ತು. ದೊಡ್ಡ ದೊಡ್ಡ ಊರುಗಳನ್ನೂ ಪಟ್ಟಣಗಳನ್ನೂ ಸಂಪರ್ಕಿಸುವ ರಸ್ತೆಗಳನ್ನು ಬಿಟ್ಟರೆ ನಮ್ಮ ಬಡ ಬೋರೇಗೌಡನಿಗೆ ಹಳ್ಳಿಗಳಿಗೆ ಪ್ರಯಾಣಿಸಲು ಗಾಡಿದಾರಿಗಳೇ ಗತಿ. ಗಾಡಿದಾರಿಯೆಂದರೆ ಗಾಡಿಯ ಚಕ್ರಗಳು ಉರುಳಿ ಮಣ್ಣಿನ ಎರಡು ಪಟ್ಟೆಗಳು ರೈಲು ಕಂಬಿಯಂತೆ ಹಸಿರು ಮೈದಾನವನ್ನು ಸೀಳಿಕೊಂಡು ಹರಿದು ಹೋಗುತ್ತಿದ್ದ ಜಾಡುಗಳು. ಅವು ಡೊಂಕುಡೊಂಕಾಗಿ ಬೋರೆಯ ಮೇಲೆ, ಹಳ್ಳಗಳಲ್ಲಿ, ಕೆರೆ ಏರಿಗಳ ಪಕ್ಕದಲ್ಲಿ, ತೋಟಗಳ ಹಾಗೂ ಹೊಲಗದ್ದೆಗಳ ನಡುವೆ ಸಾಗುತ್ತಿದ್ದವು. ನೀರಿನ ಹರಿವಿನಿಂದಾಗಲಿ, ಮಳೆಯಿಂದಾಗಲಿ ಅವುಗಳಲ್ಲಿ ಕೊರಕಲುಗಳಾಗಿರುತ್ತಿದ್ದವು. ಇಂಥ ಗಾಡಿದಾರಿಗಳಲ್ಲಿ ಗಾಡಿಯನ್ನು ನಡೆಸುವ ಸಾರಥಿಯ ಕೌಶಲ್ಯ ರಣರಂಗದಲ್ಲಿ ಅರ್ಜುನನ ರಥವನ್ನು ನಡೆಸಿದ ಶ್ರೀಕೃಷ್ಣನ ಸಾರಥ್ಯವನ್ನೂ ಮೀರಿಸಿತ್ತು ಎಂದು ಹೇಳಿದರೆ ನೀವು ಒಪ್ಪುವಿರಾ!

ಸಂಕೇತಿಗಳು ವಾಸಿಸುತ್ತಿದ್ದುದು ಹಳ್ಳಿಗಳಲ್ಲಿ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಪ್ರಯಾಣ ಮಾಡಬೇಕಾದರೆ ಎತ್ತಿನ ಗಾಡಿಗಳನ್ನು ಅವಲಂಬಿಸಬೇಕಾಗುತ್ತಿತ್ತು. ಎತ್ತಿನ ಗಾಡಿಗಳಿಗೆ ಈ ಗಾಡಿದಾರಿಗಳೇ ಭಾಟಾ ಮಾರ್ಗಗಳು. ನಡೆದೇ ಹೋಗುವ ಶಕ್ತರಿಗೆ ಗಾಡಿಗಳ ತೊಂದರೆ ಇರಲಿಲ್ಲ. ಕಾಲುದಾರಿಗಳಲ್ಲೇ ದಾಪುಗಾಲು ಹಾಕಿಕೊಂಡು ಆರಾಮವಾಗಿ ಹಳ್ಳಿಯಿಂದ ಹಳ್ಳಿಗೆ ಹೋಗುವ

ಸ್ವತಂತ್ರರು ಅವರು. ಹೆಂಗಸರು, ಮಕ್ಕಳು, ವಯಸ್ಸಾದವರು ಪ್ರಯಾಣ ಮಾಡಬೇಕಾದರೆ ಗಾಡಿಗಳೇ ಅಂದಿನ ಸುಖಕರ ವಾಹನಗಳು.

ಒಟ್ಟೊಟ್ಟಿಗೆ ಪ್ರಯಾಣ ಮಾಡಬೇಕಾದ ಸಂದರ್ಭಗಳು ಹಲವು ಇರುತ್ತಿದ್ದುವು. ಮದುವೆ, ಮುಂಜಿ ಮೊದಲಾದ ಸಮಾರಂಭಗಳಿಗೆ ಬಂಧುಬಾಂಧವರೆಲ್ಲ ಹೋಗಲೇಬೇಕಲ್ಲ. ಇಂದು ಅವರ ಮನೆಯ ಸಮಾರಂಭಕ್ಕೆ ನಾವು ಹೋಗದೆ ಇದ್ದರೆ ಅವರು ನಮ್ಮ ಮನೆಯ ಸಂದರ್ಭಗಳಿಗೆ ಬರುವರೇ ! ಸಂಕೇತಿಗಳಲ್ಲಿ ನಂಟಸ್ತನಕ್ಕೆ ಬೆಲೆ ಹೆಚ್ಚು. ಬಾಂಧವ್ಯವು ಬಳಕೆಯಾದರೆ ತಾನೇ ಬೆಳೆಯುವುದು ! ಅಂಥ ಸಮಯಗಳಲ್ಲಿ ಎತ್ತಿನ ಗಾಡಿಗಳನ್ನು ಹೂಡಿಸಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ನಂಟರಿಷ್ಟರು ಕೂಡಿ ಪ್ರಯಾಣ ಮಾಡುತ್ತಿದ್ದರು. ಬಂಧುಬಾಂಧವರು, ಇಷ್ಟರು, ಮಿತ್ರರು ಇಂಥ ಸಂದರ್ಭಗಳಲ್ಲಿ ಕಲೆತು ನಾಲ್ಕು ದಿವಸಗಳ ಮಟ್ಟಿಗೆ ತಮ್ಮ ಕಷ್ಟಕೋಟಲೆಗಳನ್ನು ಮರೆತು ಸಂತೋಷದಿಂದ ನಕ್ಕುನಲಿಯುತ್ತಿದ್ದರು. ಹಳ್ಳಿಯವರ ಜೀವನದಲ್ಲಿ ಇವು ಸಾಮಾಜಿಕ ಸಂತೋಷಕೂಟಗಳಾಗಿರುತ್ತಿದ್ದವು ಎಂದು ಧಾರಾಳವಾಗಿ ಹೇಳಬಹುದಾಗಿತ್ತು. ಈ ಕಾರಣದಿಂದಲೋ ಏನೋ ಆಗಿನ ಕಾಲದಲ್ಲಿ ಮದುವೆಗಳು ಎಂಟು ದಿನಗಳ ಮದುವೆಗಳೆಂದೇ ಪ್ರಸಿದ್ಧವಾಗಿದ್ದುವು. ಹೆಣ್ಣಿನ ಮನೆಯಲ್ಲಿ ಮದುವೆ ನಡೆಯುವುದು ಸಾಮಾನ್ಯ. ಧಾರೆಯ ದಿನದ ಹಿಂದಿನ ದಿನದ ಸಂಜೆ ವರಪೂಜೆ. ಅಂದು ಸಾಯಂಕಾಲಕ್ಕೆ ವರನನ್ನು ಕರೆದುಕೊಂಡು ಗಂಡಿನ ಕುಟುಂಬ ಹಾಗೂ ಊರಿನ ನಂಟರಿಷ್ಟರು ತಮ್ಮ ಹಳ್ಳಿಯಿಂದ ಗಾಡಿಗಳಲ್ಲಿ ಪ್ರಯಾಣಿಸಿ, ವಧುವಿನ ಮನೆ ಇರುವ ಹಳ್ಳಿಗೆ ಬಂದು ಸೇರಬೇಕು.

ವರನನ್ನು ಕರೆದುಕೊಂಡು ವರಪೂಜೆಗೆ ಹೆಣ್ಣಿನ ಊರಿಗೆ ಹೊರಡುವ ದಿವಸವೋ... ಬಹಳ ಗಡಿಬಿಡಿ. ಪ್ರಯಾಣದ ದಿನಕ್ಕೆ ಮೊದಲೇ, ಒಳ್ಳೆಯ ಎತ್ತುಗಳು ಇರುವ ಗಾಡಿಗಳನ್ನು ರೈತರಿಗೆ ಹೇಳಿ ಏರ್ಪಾಡು ಮಾಡಿಸಬೇಕು. ರೈತರು ಗಾಡಿಗಳನ್ನು ಕಮಾನು ಕಟ್ಟಿ ಸರಿಪಡಿಸಿಕೊಂಡು ತಂದಿದ್ದಾರೆಯೇ ಎಂಬುದರ ಮೇಲೆ ಗಮನವಿಟ್ಟಿರಬೇಕು. ಅಕಸ್ಮಾತ್ತು ಯಾವನಾದರೂ ಗಾಡಿಯವನು ಅನಿವಾರ್ಯ ಕಾರಣಗಳಿಂದ ಗಾಡಿಯನ್ನು ತರಲಾರದೇ ಹೋದರೆ ಅದಕ್ಕೆ ಬದಲಿ ಏರ್ಪಾಡನ್ನು ಮಾಡಬೇಕು. ನಾಲ್ಕಾರು ಗಾಡಿಗಳಾದರೂ ಬೇಕು. ಸಾಮಾನ್ಯವಾಗಿ ವರಪೂಜೆಯ ದಿನವೇ ವರನ ಮನೆಯಲ್ಲಿ ನಾಂದಿ-ನವಗ್ರಹಗಳನ್ನು ನೆರವೇರಿಸಿ, ದೇವರ ಸಮಾರಾಧನೆಯನ್ನು ಮುಗಿಸಿಕೊಂಡು ಹೊರಡಬೇಕು. ಇದೆಲ್ಲ ಒಬ್ಬರು ಇಬ್ಬರಿಂದ ಆಗುವ ಕೆಲಸವೇ ! ಗಂಡಸರೆಲ್ಲ ಸೇರಿ ಶ್ರಮವಹಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಗಂಡಿನ ಮನೆಯಿಂದ ಮದುವೆಗೆ ತೆಗೆದುಕೊಂಡು ಹೋಗಬೇಕಾದ ತೆಂಗಿನಕಾಯಿಗಳನ್ನು ಚೀಲದಲ್ಲಿ ತುಂಬಿ ಕಟ್ಟಬೇಕು. ಬೆಲ್ಲದಚ್ಚಿನ ಪಿಂಡಿಗಳನ್ನು ಸರಿಯಾಗಿ ಕಟ್ಟಿಡಬೇಕು. ಬಾಳೆಹಣ್ಣಿನ ಚಿಪ್ಪುಗಳನ್ನೂ, ಚಕ್ಕುಲಿ ಮೊದಲಾದ ಬಾಗಿನಗಳನ್ನೂ, ಜಾಯಿಕಾಯಿ ಪೆಟ್ಟಿಗೆಗಳಲ್ಲಿ ಹುಲ್ಲನ್ನು ಹರವಿ ತುಂಬಿಟ್ಟು ಸಿದ್ಧಪಡಿಸಬೇಕು. ಜಾಯಿಕಾಯಿ ಪೆಟ್ಟಿಗೆಗಳನ್ನೂ, ತೆಂಗಿನಕಾಯಿ ಚೀಲಗಳನ್ನೂ, ವೀಳೆಯದೆಲೆ ಪಿಂಡಿಗಳನ್ನೂ, ಗಾಡಿಯಲ್ಲಿ ಮಟ್ಟಸವಾಗಿ ಜೋಡಿಸಿ ಅದರ ಮೇಲೆ ನೆಲ್ಲುಹುಲ್ಲು ಹರವಿ ಅದರ ಮೇಲೆ ಗುಡಾರ (ಜಮುಖಾನೆ) ಹಾಸುತ್ತಿದ್ದರು. ವಯಸ್ಸಾದವರು, ಹೆಂಗಸರು, ಮಕ್ಕಳು ಗಾಡಿಯಲ್ಲಿ ಕೂರುತ್ತಿದ್ದರು. ಯುವಕರು, ದೊಡ್ಡವರು ಗಾಡಿಯ ಜತೆಯಲ್ಲಿ ನಡೆದು ಬರುತ್ತಿದ್ದರು. ವರನ ಊರಿಗೂ ಹೆಣ್ಣಿನ ಊರಿಗೂ ದೂರವು ಎಂಟು ಹತ್ತು ಮೈಲಿಗಳೊಳಗೇ ಇದ್ದರೆ ಮಧ್ಯಾಹ್ನದ ಮೇಲೆ ಹೊರಟರೂ ಸಂಜೆ ಹೊತ್ತಿಗೆ ಮದುವೆ ಮನೆಗೆ ತಲುಪಬಹುದು. ಹಾಗಿಲ್ಲದೆ ಹತ್ತು-ಹದಿನೈದು ಮೈಲಿಗಳೋ ಅದಕ್ಕೂ ಹೆಚ್ಚೋ ದೂರವಿದ್ದರೆ, ಮಧ್ಯಾಹ್ನಕ್ಕೆ ಹೊರಟರೂ ಸಂಜೆ ಹೊತ್ತಿಗೆ ತಲುಪಲು ತುಂಬ ಪ್ರಯಾಸವಾಗುತ್ತಿತ್ತು.

ದೇವರ ಸಮಾರಾಧನೆ ಕೆಲಸ ನಡೆದು, ಭೋಜನವೆಲ್ಲ ಮುಗಿದು ಸಾಮಾನುಗಳನ್ನೆಲ್ಲ ಗಾಡಿಗಳಿಗಿಟ್ಟು ಸಿದ್ಧಪಡಿಸಿದರೆ ಆಯಿತೇ? ಎಲ್ಲರನ್ನೂ ಸೇರಿಸಿ ಗಾಡಿಗಳನ್ನು ಹೊರಡಿಸುವುದೇ ಒಂದು ದೊಡ್ಡ ಪ್ರಯಾಸವಾಗುತ್ತಿತ್ತು. ಅದು ಮರೆತೆ, ಇದು ಮರೆತೆ, ಎಂದು ಗಡಿಬಿಡಿಯಲ್ಲಿ ಹೆಂಗಸರು ಓಡಾಡುವುದೂ, "ಪುಟ್ಟಮ್ಮ, ನೀನು ಯಾಕೇ ಬರುವುದಿಲ್ಲ? ತಾಯಮ್ಮ, ನೀವು ಬಂದು ಆಶೀರ್ವದಿಸದೆ ಈ ಮದುವೆ ನಡೆಯುವುದು ಸಾಧ್ಯವೇ ಇಲ್ಲ. ಹೊರಡಿ ಹೊರಡಿ" ಎಂದು ಕೋಲಾಹಲ ಎಬ್ಬಿಸುವುದೂ, "ತಡೆಯೇ ಕಾವೇರಿ, ಈ ಮಗು ರಂಪ ಮಾಡುತ್ತಿದೆ, ಸಮಾಧಾನ ಮಾಡಿ ಬರುತ್ತೇನೆ" ಎಂದು ನರಸು ಹೇಳುವುದೂ- ಎಲ್ಲಾ ಸೇರಿ ಎತ್ತುಗಳ ಕೊರಳಿಗೆ ನೊಗವನ್ನು ಹೂಡಿ, ಗಾಡಿ ಊರಬಾಗಿಲನ್ನು ಮುಟ್ಟಿತೆಂದರೆ ಆಗ ಪ್ರಯಾಣ ಆರಂಭವಾದಂತೆ ಲೆಕ್ಕ. ಎತ್ತುಗಳು ಗಾಡಿಯಲ್ಲಿನ ಜನರನ್ನೂ ಸಾಮಾನುಗಳ ಭಾರವನ್ನೂ ಎಳೆಯುತ್ತ ದಾರಿ ಸವೆಸಬೇಕಾದರೆ ಸರಾಸರಿ ಗಂಟೆಗೆ ಮೂರು ಮೈಲಿಗಳಿಗಿಂತ ಹೆಚ್ಚು ವೇಗವಾಗಿ ಹೋಗಲಾಗುತ್ತಿರಲಿಲ್ಲ. ಕಣ್ಬೆಳಕಿನಲ್ಲಿಯೇ ಮದುವೆಯ ಮನೆಯ ಊರನ್ನು ತಲುಪಬೇಕೆಂದು ಎಷ್ಟು ಮುತುವರ್ಜಿ ವಹಿಸಿದರೂ ದಾರಿಯಲ್ಲಿ ಕತ್ತಲಾಗಿಯೇ ಬಿಡುತ್ತಿತ್ತು.

ಒಂದು ಹಳ್ಳಿಯ ಗಾಡಿಯವರಿಗೆ ದೂರದ ಹಳ್ಳಿಗಳ ದಾರಿಗಳ ಪರಿಚಯ ಇರುತ್ತಿದ್ದುದು ಅಷ್ಟಕ್ಕಷ್ಟೇ. ಇಂಥ ಸಂದರ್ಭಗಳಲ್ಲಿ

ಯಾವ ಯಾವ ಹಳ್ಳಿಗಳ ಮೂಲಕ ದಾರಿ ಸಾಗುತ್ತದೆ ಎಂಬುದನ್ನು ತಿಳಿದವರು ಯಾರಾದರೂ ಜತೆಯಲ್ಲಿ ಇದ್ದರೆ, ಪ್ರಯಾಣ ಅರ್ಧ ಸಲೀಸು. ಇಲ್ಲದಿದ್ದರೆ ಅಲ್ಲಲ್ಲಿ ಜನಗಳನ್ನು ಕೇಳಿ ತಿಳಿದುಕೊಂಡು ಪ್ರಯಾಣ ಮುಂದುವರೆಸಬೇಕಾಗುತ್ತದೆ. ಸಂಜೆಯಾಗಿ ಕತ್ತಲಾದ ಮೇಲೆ ಹಳ್ಳಿಗರು ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡು ಬಿಡುತ್ತಾರೆ. ದಾರಿಯಲ್ಲಿ ವಿಚಾರಿಸಲು ಯಾರೂ ಸಿಕ್ಕುವುದಿಲ್ಲ. ಹಗಲಾದರೆ ಹೊಲಗದ್ದೆಗಳಲ್ಲಿ ರೈತರು ಕೆಲಸ ಮಾಡುತ್ತಿರುತ್ತಾರೆ, ಆಗ ದಾರಿ ವಿಚಾರಿಸಲು ಕಷ್ಟವಿಲ್ಲ. ಬೋರೆಗಳ ಮೇಲೆ ಪ್ರಯಾಣಿಸುವಾಗ ತುಂಬ ನಿಗಾ ಇರಬೇಕಾಗುತ್ತದೆ. ಬೇರೆ ಬೇರೆ ಹಳ್ಳಿಗಳಿಗೆ ನಡುನಡುವೆ ದಾರಿಗಳು ಒಡೆಯುತ್ತವೆ. ಎಡಗಡೆ ದಾರಿಯಲ್ಲಿ ಹೋಗುವ ಬದಲು ಬಲಕ್ಕೆ ತಿರುಗಿಬಿಟ್ಟರೆ ಯಾವುದೋ ಹಳ್ಳಿಯ ಹತ್ತಿರಕ್ಕೆ ಹೋಗಿಬಿಡುತ್ತದೆ. ಅಲ್ಲಿಯ ಜನಗಳನ್ನು ಕೇಳಿದಾಗ, "ಯಾಕೆ ಸ್ವಾಮಿ, ಈ ದಾರಿಯಲ್ಲಿ ಬಂದು ಬಿಟ್ಟಿರಾ! ಎಡಗಡೆ ದಾರಿ ಮುರೀತದಲ್ಲ ಅಲ್ಲೇ ತಿರುಕ್ಕೋಬೇಕಾಗಿತ್ತು" ಎನ್ನುತ್ತಾರೆ. ಹೋಗಬೇಕಾದ ಹಳ್ಳಿಗೆ ಮತ್ತೆ ಸರಿಯಾದ ದಾರಿಯನ್ನು ಹಿಡಿದು ಹೋಗಬೇಕಾದರೆ ನಾಲ್ಕೈದು ಮೈಲಿಗಳಾದರೂ ಬಳಸಾಗಬಹುದು. ಆಯಿತಲ್ಲ , ವರಪೂಜೆಗೆ ಸರಿಯಾದ ಸಮಯಕ್ಕೆ ಹೋದದ್ದು!

ಸಂಜೆಯಾಗುತ್ತಿದ್ದಂತೆ, ದಾರಿಯಲ್ಲಿ ಸಿಕ್ಕುವ ನದಿ ಅಥವಾ ಕೆರೆಯ ಬಳಿಯಲ್ಲಿ ಗಾಡಿಗಳನ್ನು ನಿಲ್ಲಿಸುತ್ತಾರೆ. ಎತ್ತುಗಳಿಗೆ ನೀರು ಕುಡಿಸಿ ದಣಿವಾರಿಸಿಕೊಳ್ಳಲು ಬಿಡುತ್ತಾರೆ. ಇತ್ತ ದೇವರ ಸಮಾರಾಧನೆಗೆ ಮಾಡಿದ್ದ ಹುಳಿಯಲ್ಲಿ ಅನ್ನವನ್ನು ಕಲಸಿಕೊಂಡು, ಜತೆಗೆ, ಕಲಸಿದ ಮೊಸರನ್ನವನ್ನೂ ತಂದಿರುತ್ತಿದ್ದರು. ಆ ಅನ್ನವನ್ನು ಮಕ್ಕಳಿಗೆ, ಹುಡುಗರಿಗೆ, ಕೈತುತ್ತು ಕೊಡುತ್ತಿದ್ದರು- ಹಿರಿಯ ಹೆಂಗಸರು. ಹುಳಿಯ ಅನ್ನ ಹಾಗೂ ಮೊಸರನ್ನಗಳ ಘಮದಿಂದ ಆಕರ್ಷಿತರಾದ ಕೆಲವು ಯುವಕರು ಕೂಡ ಕೈನೀಡುತ್ತಿದ್ದರು. ಆಗ ಹೆಂಗಸರು ಆ ಯುವಕರನ್ನು ತಮಾಷೆ ಮಾಡಿ, ಆ ಯುವಕರ ತರುಣಪತ್ನಿಯರನ್ನು ನಾಚಿಸುತ್ತಿದ್ದುದು ಆಹ್ಲಾದಕರವಾಗಿರುತ್ತಿತ್ತು. ಸಂಧ್ಯಾಸಮಯವಾದ್ದರಿಂದ ಗೃಹಸ್ಥರು, ಹಿರಿಯರು, ಕಿರಿಯರು, ಬ್ರಹ್ಮಚಾರಿಗಳು ಅಲ್ಲಿಯೇ ಸಂಧ್ಯಾವಂದನೆಯನ್ನು ಮುಗಿಸಿ ಕೊಳ್ಳುತ್ತಿದ್ದರು.

ಗಾಡಿಯೊಳಗೆ ಒಂದು ಮುಗ್ಧ ಪ್ರಪಂಚವೇ ನೆರೆದಿರುತ್ತದೆ. ಅತ್ತೆ, ಸೊಸೆ, ನಾದಿನಿ, ಸೋದರತ್ತೆ, ದೊಡ್ಡಮ್ಮ, ಚಿಕ್ಕಮ್ಮ ಇತ್ಯಾದಿ ಸಂಬಂಧಗಳೆಲ್ಲ ಅಲ್ಲಿ ಒಂದುಗೂಡಿರುತ್ತವೆ. ಹೊಸದಾಗಿ ಮದುವೆಯಾದ ಸೊಸೆಯರನ್ನು ಬಂಧುಗಳು ಕೀಟಲೆ ಮಾಡಿದಾಗ, 'ಹೋಗಿ ಅಮ್ಮಾಮಿ !' ಎಂದೋ, 'ಹೋಗಿ ಚಿಕ್ಕಮ್ಮ!' ಎಂದೋ ನಾಚಿ ತಲೆ ತಗ್ಗಿಸುವ ತರುಣಿಯರ ಆ ಸೌಂದರ್ಯವೇ ಬೇರೆ. "ಅಯ್ಯೋ, ಬಿಡೆ, ಅವಳನ್ನು ಯಾಕೆ ಗೋಳು ಹುಯ್ದುಕೋತೀಯ" ಎಂದು ಕರುಳು ಚುರುಕ್ಕೆಂದ ಹುಡುಗಿಯ ತಾಯಿಯೋ, ಅತ್ತೆಯೋ ಹೇಳುವುದು ಒಂದು ಚಂದ. "ನಾನು ಕಾಣದ ಇವಳ ಗಂಡನೇ! ಮಗುವಿನಲ್ಲಿ ನಾನು ಎತ್ತಿಕೊಂಡು ಎಷ್ಟು ಆಟವಾಡಿಸಿದ್ದೇನೋ, ಮುದ್ದಿಸಿದ್ದೇನೋ, ಈ ಚೋಟುದ್ದದ ಹುಡುಗಿಗೇನು ಗೊತ್ತು. ಈಗ ಮೀಸೆ ಬಂದ ಗಂಡಸಾಗಿಬಿಟ್ಟಿದ್ದಾನೆ. ಲೋ ನಾರಾಯಣ, ಬಾರೋ, ಇಲ್ಲಿ ನೋಡು, ನಿನ್ನ ಹೆಂಡತೀನ" ಎಂದು ಗಾಡಿಯ ಹಿಂದೆ ನಡೆದುಕೊಂಡು ಬರುತ್ತ, ಆಗಾಗ್ಗೆ ಹೆಂಡತಿಯನ್ನು ಕಡೆಗಣ್ಣಿನಿಂದಲೇ ನೋಡುತ್ತ ಬರುತ್ತಿದ್ದವನನ್ನು ಕೂಗಲು, ನಾರಾಯಣ ಗಾಡಿ ಒಳಕ್ಕೆ ಇಣಿಕಿ ನೋಡಿ, ನಾಚಿ ನೀರಾದ ಹೆಂಡತಿಯ ಬೆಡಗನ್ನು ಕಣ್ಣುಗಳಿಂದಲೇ ಹೀರಿಕೊಳ್ಳುವಂತೆ ನೋಡುತ್ತ ಮುಸಿ ಮುಸಿ ನಗುತ್ತ ಹೋಗುವವನು. ಇದೆಂಥ ಸರಸ ಆವರಣ! ತಮಾಷೆ, ವಿನೋದ, ನಡುನಡುವೆ ಛೇಡಿಸುವುದು, ಆಹಾ! ಅದರ ಸೊಬಗೇ ಸೊಬಗು. ಗಾಡಿಯ ಚಕ್ರಗಳು ಉರುಳುತ್ತ ಒಂದೇ ಶ್ರುತಿಯಲ್ಲಿ ಶಬ್ದ ಮಾಡುತ್ತ ಸಾಗುತ್ತಿರುತ್ತವೆ. ಹೆಂಗಸರ ಮಾತುಗಳು ಈಗ ಬೇರೆಯ ದಿಕ್ಕನ್ನು ಹಿಡಿಯುತ್ತವೆ. ಆ ಹಳ್ಳಿ ಈ ಹಳ್ಳಿಯ ಸಮಾಚಾರಗಳು, ಅತ್ತೆ ಸೊಸೆಯರ ಜಗಳಗಳು, ಕೆಲಸದಾಳು ನಂಜ ಪರ ಊರಿನಿಂದ ಲಕ್ಕಿಯನ್ನು ಕದ್ದು ತಂದು ಮದುವೆಯಾದದ್ದು, ಈರಯ್ಯನ ಮಗಳಿಗೆ ದೆವ್ವ ಹಿಡಿದು ರಂಪವಾದದ್ದು , ತಮ್ಮ ಮನೆಯ ಹಾಲು ಕೊಡುವ ಗಂಗೆ ಎಲ್ಲೋ ತಪ್ಪಿಸಿಕೊಂಡು ಹೋದದ್ದು , ಆ ಹಸುವಿನ ತಾಯಿಯ ಅಜ್ಜಿಯ ಗುಣಕಥನ, ಒಂದೇ ಎರಡೇ? ಈ ನಡುವೆ ಎಳೆಯ ಮಕ್ಕಳನ್ನು ಮುದ್ದಿಸುವ, ಅತ್ತರೆ ರಮಿಸುವ, ಕೇಕೆ ಹಾಕುವ ಕಂದಮ್ಮಗಳನ್ನು ನೋಡಿ ನಲಿಯುವ, ಹೆಂಗಳೆಯರ ಸುಂದರ ವ್ಯವಹಾರ ನಡೆದಿರುತ್ತದೆ. ಗಾಡಿಯ ಹಿಂದುಗಡೆಯಲ್ಲಿ ಕಾಲು ಇಳಿಬಿಟ್ಟು ಕೊಂಡು ಕುಳಿತ ಪಡ್ಡೆ ಹುಡುಗರು ಪಕ್ಕದ ಮನೆಯ ಹಿತ್ತಲಿನಿಂದ ಸೀಬೆಹಣ್ಣು ಕದ್ದುದು, ರಂಗಮಾವಯ್ಯನ ತೋಟದ ತೆಂಗಿನಮರದಿಂದ ಎಳನೀರು ಕೆಡುವುತ್ತಿದ್ದಾಗ ಸಿಕ್ಕಿಹಾಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಬೇಲಿ ನೆಗೆದು ಓಡಿ ಹೋಗಿ ಹುಲ್ಲಿನ ಮೆದೆಯೊಳಗೆ ಮುಚ್ಚಿಟ್ಟುಕೊಂಡದ್ದು, ಕಲ್ಲು ಹೊಡೆದು ಮಾವಿನ ಕಾಯಿ ಬೀಳಿಸಿದ್ದು ಮೊದಲಾದ ಸಾಹಸದ ಕಥೆಗಳನ್ನು ತಮ್ಮ ತಮ್ಮಲ್ಲಿ ಹೇಳಿಕೊಂಡು ಖುಷಿಪಡುತ್ತಿರುತ್ತಾರೆ. ಹೀಗೆ ಗಾಡಿಯೊಳಗಿನ ಇದೊಂದು ವಿಶಿಷ್ಟ ಪ್ರಪಂಚವೇ ಸರಿ.

ಎತ್ತಿನ ಗಾಡಿಯಲ್ಲಿನ ಪ್ರಯಾಣದ ದೃಶ್ಯವು ಮನಮೋಹಕ ವಾದುದು. ರೈಲುಕಂಬಿಯಂತೆ ಅಂಕುಡೊಂಕಾಗಿರುವ ಗಾಡಿಯ

ಜಾಡಿನಲ್ಲಿ ಸಾಲಾಗಿ ಸಾಗುವ ಗಾಡಿಗಳ ನೋಟ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತದೆ. ಚಕ್ರಗಳ ಉರುಳುವಿಕೆಯಿಂದ ಉಂಟಾಗುವ ಶಬ್ದ , ಎತ್ತಿನ ಕೊರಳಿಗೆ ಕಟ್ಟಿದ ಗಂಟೆಗಳ ಕಿಣಿಕಿಣಿ ನಾದ, ಗಾಡಿಯ ಒಳಗೆ ಕುಳಿತ ಹೆಂಗಸರು ಮಕ್ಕಳ ಕಲರವ, ಹಿರಿಯ ಹೆಂಗಸರು ಹೇಳುತ್ತಿರುವ ಹಾಡಿನ ಇಂಪು- ಹೀಗೆ ಒಂದು ನಾದಜಗತ್ತಿನ ವಿಸ್ತಾರವಿರುತ್ತದೆ ಅಲ್ಲಿ. ನಡುನಡುವೆ ಈ ವ್ಯಾಪಾರಕ್ಕೆ ಧಕ್ಕೆಯುಂಟಾಗುವುದುಂಟು. ಎದುರುಗಡೆಯಿಂದ ಗಾಡಿಗಳು ಬಂದರೆ ಅವುಗಳಿಗೆ ದಾರಿ ಬಿಟ್ಟುಕೊಟ್ಟು ಮುಂದಕ್ಕೆ ಪ್ರಯಾಣ ಮಾಡಬೇಕಾಗುತ್ತದೆ. ಜಾಡನ್ನು ಬಿಟ್ಟು ಯಾರು ಗಾಡಿಯನ್ನು ಪಕ್ಕಕ್ಕೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ವಿವಾದವು ಉಂಟಾಗಬಹುದು. ಅನೇಕ ವೇಳೆ ಚಕ್ರವನ್ನು ಎತ್ತಿ ತಳ್ಳಿ ಪಕ್ಕಕ್ಕೆ ಗಾಡಿಯನ್ನು ತೆಗೆದುಕೊಳ್ಳಬೇಕಾಗುವುದು. ಗೊಬ್ಬರ, ಗೋಡು ಮೊದಲಾದುವನ್ನು ತುಂಬಿಕೊಂಡು ಬಂದ ಗಾಡಿಗಳ ಚಕ್ರ ಹೂತುಕೊಂಡು ಎತ್ತುಗಳು ಗಾಡಿಯನ್ನು ಮೇಲಕ್ಕೆ ಎಳೆಯಲಾರದೆ ನಿಂತುಬಿಟ್ಟಿರುವ ಸಂದರ್ಭಗಳೂ ಇರುತ್ತವೆ. ಆಗ ಅಲ್ಲಿಗೆ ಬಂದ ಬೇರೆ ಗಾಡಿಗಳವರು ಚಕ್ರವನ್ನು ಎತ್ತಿ ಮೇಲಕ್ಕೆ ತಳ್ಳಿಕೊಡಬೇಕಾಗಿ ಬರಬಹುದು. ಬೋರೆಯ ಮೇಲೆ ನಿಧಾನವಾಗಿ ಸಾಗುತ್ತಿರುವ ಗಾಡಿಗಳ ಚಕ್ರಗಳ ಪಟ್ಟಿಗಳು ಉರುಳುವಾಗ ಉಂಟಾಗುವ ನಾದವನ್ನೇ ಶ್ರುತಿಯಾಗಿ ಮಾಡಿಕೊಂಡು, ಗಾಡಿ ಹೊಡೆಯುವವರು ಪದಗಳನ್ನು ಕುರುಕುತ್ತ ಮೂಕಿಯ ಮೇಲೆ ಕುಳಿತುಕೊಂಡು ಆರಾಮವಾಗಿ ಆನಂದದಲ್ಲಿ ಮುಳುಗಿರುತ್ತಾರೆ. ಇದೊಂದು ಅಪೂರ್ವ ಅನುಭವ.

ಗಾಡಿಯ ಜಾಡಿನಲ್ಲಿ ಕೊರಕಲುಗಳು ಸಿಕ್ಕಿದಾಗ ಗಾಡಿಯನ್ನು ಎಚ್ಚರಿಕೆಯಿಂದ ನಡೆಸಬೇಕಾಗುತ್ತದೆ. ಎಡಗೋಲನ್ನೋ ಬಲಗೋಲನ್ನೋ ಹಿಡಿದೆಳೆದು, ಎತ್ತುಗಳ ಬೆನ್ನನ್ನು ಚಪ್ಪರಿಸುತ್ತ ನಿಧಾನವಾಗಿ ಒಂದೊಂದು ಚಕ್ರವನ್ನಾಗಿ ಇಳಿಸಬೇಕು. ಸ್ವಲ್ಪ ಬೇಹುಷಾರಿಯಾದರೆ ಒಂದು ಚಕ್ರ ದಡಕ್ಕನೆ ಕೊರಕಲಿಗೆ ಇಳಿದು ಇನ್ನೊಂದು ಚಕ್ರ ಮೇಲೆದ್ದು ಗಾಡಿ ವಾರೆಯಾಗಿ ಸಮತೂಕ ತಪ್ಪಿ ಗಾಡಿ ಮಗುಚಿಕೊಳ್ಳುವ ಸಂದರ್ಭಗಳುಂಟು. ಎಷ್ಟೋ ಮದುವೆಗಾಡಿಗಳು ಹೀಗೆ ಮಗುಚಿಕೊಂಡಾಗ ಹೆಂಗಸರಿಗೆ, ಮಕ್ಕಳಿಗೆ ಸಣ್ಣ ಪುಟ್ಟ ಗಾಯಗಳಾಗಿರುವುದುಂಟು. ಗಾಡಿಗಳು ಮಗುಚಿಕೊಂಡಾಗ, ಗಾಡಿಯ ಅಡಿಯಲ್ಲಿ ಜೋಡಿಸಿದ ಸಾಮಾನಿನ ಪೆಟ್ಟಿಗೆಗಳು ಒಳಗೆ ಕುಳಿತಿರುವವರ ಮೇಲೆ ಅಗಿತು ಕೊಳ್ಳುವುದುಂಟು. ಅದನ್ನು ತಪ್ಪಿಸಬೇಕಾದರೆ ಸಾಮಾನುಗಳು ಬೀಳದಂತೆ ಎರಡು ಕಡೆಯ ತಡಿಕೆಯ ಗೂಟಗಳಿಗೆ ಸೇರಿಸಿ ಹಗ್ಗವನ್ನು ಬಿಗಿದಿರಬೇಕಾಗುತ್ತದೆ. ಈ ಎಚ್ಚರಿಕೆಯನ್ನು ತೆಗೆದುಕೊಳ್ಳದೆ ಇದ್ದರೆ ಗಾಡಿ ಮಗುಚಿಕೊಂಡಾಗ ಆಗುವ ಅನಾಹುತ ಹೆಚ್ಚಿನದಾಗಿರುತ್ತದೆ. ಗಾಡಿಗಳು ಬಿದ್ದಾಗ ಒಳಗೆ ಕುಳಿತ ಹೆಂಗಸರ ಆಕ್ರಂದನ, ತಮ್ಮ ಮಕ್ಕಳನ್ನ ಕೂಗುವ ದನಿ, ಎಳೆ ಮಕ್ಕಳನ್ನು ರಕ್ಷಿಸಲೆಂದು ಎದೆಗೆ ಅವಚಿಕೊಂಡಾಗಿನ ಆ ಮಕ್ಕಳ ಅಳು ಇವೆಲ್ಲ ಒಟ್ಟುಗೂಡಿ ಅಳಲಿನ ಸಂತೆಯಂತೆ ಕಿವಿಯಲ್ಲಿ ಮೊರೆಯುತ್ತದೆ. ಗಾಡಿ ಮಗುಚಿಕೊಂಡದ್ದನ್ನು ನೋಡಿದ ಒಡನೆ ಗಂಡಸರು ಓಡಿ ಬಂದು ಒಳಗೆ ಸಿಕ್ಕಿಹಾಕಿಕೊಂಡ ಹೆಂಗಸರು ಮಕ್ಕಳನ್ನು ನಿಧಾನವಾಗಿ ಹೊರಕ್ಕೆ ಕರೆದುಕೊಳ್ಳುವ ಕೆಲಸ ಬಹಳ ಎಚ್ಚರಿಕೆಯಿಂದ ಮಾಡಬೇಕಾದುದು. ಸ್ವಲ್ಪ ಜೋರಾಗಿಯೋ ಒರಟಾಗಿಯೋ ಹೊರಕ್ಕೆ ಎಳೆದರೆ ಕೈಕಾಲುಗಳು ಉಳುಕುವ, ಮೂಳೆ ಮುರಿಯುವ, ವಾಲೆಗಳನ್ನು ಅಲಂಕರಿಸಿದ ಕಿವಿಯ ಹಾಲೆ ಹರಿಯುವ ಸಂದರ್ಭಗಳುಂಟು. ಹೆಂಗಸರನ್ನೂ ಮಕ್ಕಳನ್ನೂ ಗಾಡಿಯ ಒಳಗಿನಿಂದ ಹೊರಕ್ಕೆ ಕರೆದುಕೊಂಡು ಪಕ್ಕದಲ್ಲಿ ಹುಲ್ಲು ಹಸಲೆಯ ಮೇಲೆ ಅವರನ್ನು ಕುಳ್ಳಿರಿಸಿ ಅವರಿಗೆ ಬೇಕಾದ ಉಪಚಾರಗಳನ್ನು ಮಾಡುವವರು ಕೆಲವರು. ಗಾಡಿ ಒಳಗಡೆ ಇನ್ನಾರಾದರೂ ಹುಡುಗರು ಪಡಗರು ಸಿಕ್ಕಿಹಾಕಿಕೊಂಡಿದ್ದಾರೆಯೆ ಎಂಬುದನ್ನು ನೋಡುವವರು ಕೆಲವರು. ಇನ್ನು ಕೆಲವರು ಎತ್ತುಗಳ ಕೊಳ್ಳನ್ನು ಬಿಚ್ಚಿ ಅವುಗಳನ್ನು ಯಾವುದಾದರೂ ಗಿಡಕ್ಕೋ ಮರಕ್ಕೋ ಕಟ್ಟಿ ಬಂದು, ಗಾಡಿಯನ್ನು ನೆಟ್ಟಗೆ ನಿಲ್ಲಿಸಿ ಗಾಡಿಯ ಒಳಗಿನ ಸಾಮಾನುಗಳನ್ನು ಸರಿಪಡಿಸಿ ಗಾಡಿಯನ್ನು ಪ್ರಯಾಣಕ್ಕೆ ಸಿದ್ಧಗೊಳಿಸುವರು. ಅನಂತರ ಎತ್ತುಗಳನ್ನು ಸುಧಾರಿಸಿ ಪುನಃ ಗಾಡಿ ಕಟ್ಟುವ ಕೆಲಸ. ಈ ನಡುವೆ ಗಾಡಿಯ ಸಾರಥಿಗೆ ಬೈಗುಳಗಳ ಸುರಿಮಳೆ ಆಗುತ್ತದೆ. ಗಾಡಿಗಳನ್ನು ನಡೆಸುವ ಕೌಶಲ ಹಾಗೂ ವಿಧಾನಗಳ ಬಗ್ಗೆ ಉಪದೇಶ ನಡೆಯುತ್ತದೆ. ಅನಂತರ ಪ್ರಯಾಣ ಮುಂದುವರಿಯುವುದು. ರಾತ್ರಿಯ ಹೊತ್ತಿನಲ್ಲಿ ಸವಾರಿಯ ಗಾಡಿ ಬಿದ್ದರಂತೂ ಅವರ ಪಾಡು ಹೇಳತೀರದು. ಲಾಂದ್ರವನ್ನು ಗಾಡಿಯ ಅಡಿಗೆ ಕಟ್ಟಿದ್ದರೆ, ಅದರ ಬೆಳಕಿನಿಂದ ತುಂಬ ಪ್ರಯೋಜನ ವಾಗುತ್ತದೆ. ಲಾಂದ್ರವು ಇಲ್ಲದಾಗ ನಕ್ಷತ್ರಗಳ ಕಣ್ಬೆಳಕಿನಲ್ಲೇ ಗಾಡಿಯೊಳಗಿನಿಂದ ಜನರನ್ನು ಹೊರಕ್ಕೆ ಕರೆದುಕೊಳ್ಳಬೇಕಾಗುತ್ತದೆ. ಆಗಿನ ಕಾಲದಲ್ಲಿ ಈಗಿನ ಕಾಲದಂತೆ ಟಾರ್ಚ್‌ಲೈಟುಗಳು ಇರುತ್ತಿದ್ದುವೇ ? ಹೆಚ್ಚೆಂದರೆ ಬೀಡಿ ಸೇದುವ ಅಭ್ಯಾಸವುಳ್ಳ ಗಾಡಿ ಹೊಡೆಯುವವರ ಬಳಿ ಇರುವ ಬೆಂಕಿಪೆಟ್ಟಿಗೆಯನ್ನು ಇಸುಕೊಂಡು ಕಡ್ಡಿಗೀರಿ ಅದರ ಬೆಳಕಿನಲ್ಲಿ ಪರಿಸ್ಥಿತಿಯ ಅರಿವನ್ನು ಉಂಟು ಮಾಡಿಕೊಳ್ಳಬೇಕಾಗುತ್ತಿತ್ತು.

ಇದಲ್ಲದೆ ಹಿಂದಿನ ದಿನ ಮಳೆ ಜೋರಾಗಿ ಬಿದ್ದಿದ್ದರೆ ಕೆರೆಕಟ್ಟೆಗಳು ತುಂಬಿ ದಾರಿಯಲ್ಲಿ ಕೋಡಿಯ ನೀರು ಹರಿಯುತ್ತಿರುತ್ತದೆ. ಇವುಗಳನ್ನು ದಾಟುವಾಗ ತುಂಬ ಎಚ್ಚರಿಕೆ ವಹಿಸಬೇಕಾಗುತ್ತದೆ.

ತಾವು ಪ್ರಯಾಣ ಮಾಡುವ ದಾರಿಯಲ್ಲಿ ಕಳ್ಳಕಾಕರ ಕಾಟವಿದೆ ಎಂದು ಜನಜನಿತವಾಗಿದ್ದರೆ, ಒಂಟಿಗಾಡಿಗಳು ಆ ದಾರಿಯಲ್ಲಿ ಹೋಗುತ್ತಿರಲಿಲ್ಲ. ನಾಲ್ಕಾರು ಗಾಡಿಗಳವರು ಜತೆಯಾಗಿ ಮಚ್ಚು, ಕುಡುಗೋಲು, ದೊಣ್ಣೆಗಳನ್ನು ಸಿದ್ಧಪಡಿಸಿಟ್ಟುಕೊಂಡು ಪ್ರಯಾಣ ಮಾಡುತ್ತಿದ್ದರು. ಒಂದು ಸಲ ನಮ್ಮ ತಂದೆಯವರು ಬೇರೆ ಊರಿನ ಸ್ಕೂಲಿಗೆ ವರ್ಗವಾಗಿದ್ದರಿಂದ, ಗಾಡಿಯಲ್ಲಿ ಸಾಮಾನುಗಳನ್ನು ತುಂಬಿಕೊಂಡು ಹೆಂಗಸರು-ಮಕ್ಕಳನ್ನು ಗಾಡಿಯಲ್ಲಿ ಕೂರಿಸಿಕೊಂಡು ಪ್ರಯಾಣ ಹೊರಟರು. ಹೊಳೆನರಸೀಪುರದಿಂದ ಚನ್ನರಾಯ ಪಟ್ಟಣಕ್ಕೆ ಪ್ರಯಾಣಿಸಬೇಕಾಗಿತ್ತು. ಕೇರಳಾಪುರದಿಂದ ಬೆಳಗ್ಗೆ ಹೊರಟು ಒಳದಾರಿಯಲ್ಲಿ ಬಂದರೂ ಹೊಳೆನರಸೀಪುರಕ್ಕೆ ಬರುವ ಹೊತ್ತಿಗೆ ರಾತ್ರಿಯಾಗಿತ್ತು. ಅಲ್ಲಿ ಬಂಧುಗಳ ಮನೆಯಲ್ಲಿ ರಾತ್ರಿಯ ಊಟವನ್ನು ತೀರಿಸಿಕೊಂಡು ಗಾಡಿ ಕಟ್ಟುವ ಹೊತ್ತಿಗೆ ರಾತ್ರಿ ಹತ್ತು ಗಂಟೆಯಾಗಿತ್ತು. ಹೊಳೆನರಸೀಪುರದಿಂದ ಚನ್ನರಾಯಪಟ್ಟಣಕ್ಕೆ ಸರ್ಕಾರದವರು ಹೊಸದಾಗಿ ರಸ್ತೆಯನ್ನು ಮಾಡಿಸಿದ್ದರು. ರಸ್ತೆಯ ಪ್ರಯಾಣವಾದುದರಿಂದ ಎತ್ತುಗಳಿಗೆ ಹೆಚ್ಚು ಶ್ರಮವಾಗುವುದಿಲ್ಲ, ಬೆಳಕು ಹರಿಯುವ ಹೊತ್ತಿಗೆ ಚನ್ನರಾಯಪಟ್ಟಣ ಸೇರಿಕೊಳ್ಳಬಹುದು ಎಂಬುದು ನಮ್ಮ ತಂದೆಯವರ ಉದ್ದೇಶವಾಗಿತ್ತು. ಹೊಳೆನರಸೀಪುರದಿಂದ ಚನ್ನರಾಯಪಟ್ಟಣಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಬೆಟ್ಟಗುಡ್ಡಗಳು ಇದ್ದು ಆಚೀಚೆ ಕೆಲವು ಮೈಲಿಗಳವರೆಗೆ ಹಳ್ಳಿಗಳು ಇರಲಿಲ್ಲ. ಆ ಸ್ಥಳದಲ್ಲಿ ಕಳ್ಳರು ಅಡಗಿ ಕುಳಿತಿದ್ದು ಬರುವ ಗಾಡಿಗಳ ಮೇಲೆ ದಾಳಿ ಮಾಡಿ ಗಾಡಿಯಲ್ಲಿರುವ ಸಾಮಾನು ಸರಂಜಾಮುಗಳನ್ನೂ, ಪ್ರಯಾಣಿಕರ ಬಳಿ ಇರುವ ಹಣ ಹಾಗೂ ಒಡವೆ ವಸ್ತ್ರಗಳನ್ನೂ, ದೋಚುತ್ತಿದ್ದರೆಂಬ ಪ್ರತೀತಿಯಿದ್ದಿತು. ಆದುದರಿಂದ ಒಂಟಿಗಾಡಿಗಳು ರಾತ್ರಿ ಹೊತ್ತು ಆ ದಾರಿಯಲ್ಲಿ ಪ್ರಯಾಣಿಸುತ್ತಿರಲಿಲ್ಲ. ಹೊಳೆನರಸೀಪುರದ ಊರಿನಿಂದ ಹಾಸನದ ರಸ್ತೆಯಲ್ಲಿ ಸ್ವಲ್ಪ ದೂರ ಸಾಗಿದ ಮೇಲೆ ಚನ್ನರಾಯಪಟ್ಟಣಕ್ಕೆ ರಸ್ತೆ ಕವಲೊಡೆಯುತ್ತದೆ. ಅಲ್ಲಿಗೆ ನಮ್ಮ ಗಾಡಿಯವನು ಗಾಡಿಯನ್ನು ತೆಗೆದುಕೊಂಡು ಹೋದನು. ಅಲ್ಲಿ ಕೆಲವು ಗಾಡಿಗಳು ಪ್ರಯಾಣಕ್ಕೆ ಸಿದ್ಧವಾಗಿ ನಿಂತಿದ್ದುವು. ಆ ಗಾಡಿಗಳ ಜತೆಯಲ್ಲಿ ನಮ್ಮ ಗಾಡಿಯೂ ಪ್ರಯಾಣ ಹೊರಟಿತು. ಅಪಾಯದ ದಾರಿ ಕಳೆಯುವವರೆಗೂ ಯಾರೂ ಸದ್ದು ಮಾಡದೆ ತುಂಬ ಜಾಗರೂಕರಾಗಿದ್ದರು. ಎತ್ತುಗಳ ಕೊರಳ ಗಂಟೆಗಳನ್ನು ಬಿಚ್ಚಿಕೊಂಡುಬಿಟ್ಟಿದ್ದರು. ಅಪಾಯದ ದಾರಿ ಕಳೆದ ಮೇಲೆ ಸಮಾಧಾನದ ನಿಟ್ಟುಸಿರುಬಿಟ್ಟು ಗಾಡಿಯವರು ಆರಾಮವಾಗಿ ಪ್ರಯಾಣವನ್ನು ಮುಂದುವರೆಸಿದರು. ಕಳ್ಳಕಾಕರ ವಿಚಾರವನ್ನು ಕೇಳಿ ಹುಡುಗನಾದ ನನಗೆ ಭಯವೋ ಭಯ. 'ಕಳ್ಳರು ದಾರಿಯ ಮಗ್ಗುಲಲ್ಲಿ ಪೊದೆಗಳಲ್ಲಿ ಅವಿತಿಟ್ಟುಕೊಂಡಿದ್ದು ಗಾಡಿಗಳ ಮೇಲೆ ಕಲ್ಲುಗಳನ್ನು ಬೀರುತ್ತಾರೆ. ಆ ಮೇಲೆ ಗಾಡಿಗಳ ಎದುರಿಗೆ ಬಂದು ಎತ್ತುಗಳನ್ನು ಹಿಡಿದು ಗಾಡಿಗಳನ್ನು ನಿಲ್ಲಿಸುತ್ತಾರೆ. ಕೆಲವರು ಗಾಡಿಯಲ್ಲಿನ ಪ್ರಯಾಣಿಕರನ್ನು ಇಳಿಸಿ ಒಳಗಿನ ಸಾಮಾನುಗಳನ್ನೂ ಜನರ ಬಳಿ ಇರುವ ಒಡವೆ, ಹಣ ಮೊದಲಾದುವನ್ನೂ ದೋಚುತ್ತಾರೆ' ಎಂದು ಯೋಚಿಸಿದಂತೆಲ್ಲ ನನ್ನ ಎದೆ ಡವಡವ ಎಂದು ಹೊಡೆದುಕೊಳ್ಳಲಾರಂಭಿಸಿತು. "ಕಳ್ಳರನ್ನು ಬಡಿದು ಓಡಿಸಿಬಿಡುತ್ತೇನೆ" ಎಂದು ಒಂದು ಚಾವಟಿ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ಸುತ್ತಲಿನ ಅಂಧಕಾರದ ಕಡೆಗೆ ದೃಷ್ಟಿಯನ್ನು ಬೀರುತ್ತ ಕುಳಿತಿದ್ದೆ. ಗಾಡಿಯು ತೂಗಾಡುತ್ತ ಮುಂದೆ ಸಾಗಿದಂತೆ ನನಗೆ ಯಾವಾಗ ನಿದ್ದೆ ಬಂದಿತೋ ಗೊತ್ತಿಲ್ಲ. ಎಚ್ಚರವಾಗಿ ನೋಡುವಾಗ ಬೆಳಕಾಗುತ್ತಿತ್ತು. ಆಗ ಗಾಬರಿಯಿಂದ, "ಕಳ್ಳರು ಬಂದಿದ್ದರೆ? ಅವರನ್ನು ಗಾಡಿಯವರೆಲ್ಲ ಸೇರಿಕೊಂಡು ಹೊಡೆದೋಡಿಸಿದರೆ?" ಎಂದು ವಿಚಾರಿಸಿದೆ. ಕಳ್ಳರು ಬರಲಿಲ್ಲ ಎಂಬುದು ತಿಳಿದಾಗ ಸಾಹಸವನ್ನು ಪ್ರದರ್ಶಿಸುವ ಒಂದು ಒಳ್ಳೆಯ ಅವಕಾಶ ತಪ್ಪಿಹೋಯಿತಲ್ಲ ಎಂದು ಪರಿತಪಿಸಿದೆ.

ರಾತ್ರಿ ವೇಳೆಯಲ್ಲಿ ಗಾಡಿಯಲ್ಲಿ ಪ್ರಯಾಣ ಮಾಡುವಾಗ ಬಾಲಕರಿಗೆ ಸಹಜವಾಗಿಯೇ ಒಂದು ರೀತಿಯ ಭಯವಾಗುವುದು. ರಸ್ತೆಯ ಎರಡೂ ಬದಿಗಳಲ್ಲಿ ಸಾಲಾಗಿ ನಿಂತ ಮರಗಳು ನಕ್ಷತ್ರಗಳ ಬೆಳಕಿನಲ್ಲಿ ಭೂತಗಳಂತೆ ಕಾಣಿಸಿಕೊಂಡು ಗಾಡಿಯು ಮುಂದು ಮುಂದಕ್ಕೆ ಹೋಗುತ್ತಿರುವಾಗ, ಅವು ಹತ್ತಿರ ಹತ್ತಿರ ಬರುತ್ತಿರುವಂತೆ ಭಾಸವಾಗಿ ಎದೆಯು ಡವಡವ ಎಂದು ಹೊಡೆದುಕೊಳ್ಳುತ್ತದೆ. ಬಾಲ್ಯದಲ್ಲಿ ಭೂತಗಳು, ದೆವ್ವಗಳ ಕಥೆಯನ್ನು ಬಾಯಿ ಚಪ್ಪರಿಸಿಕೊಂಡು ಕೇಳಿದ್ದ ಬಾಲಕರಿಗೆ ಈಗ ಆ ಕಥೆಯ ಭೂತಗಳು ಥಟ್ಟನೆ ನೆನಪಿಗೆ ಬಂದು, ಅದೇ ಭೂತಗಳು ಬಂದು ಈ ಮರಗಳಲ್ಲಿ ಅಡಗಿ ಕುಳಿತಿರಬಹುದೆಂಬ ಕಲ್ಪನೆ ಮೂಡಿ ಬಂದು, ಎದೆ ತಲ್ಲಣಿಸುವಂತಾಗುತ್ತದೆ. ಬೆಳುದಿಂಗಳಿನ ದಿವಸವಾಗಿದೆ ಎನ್ನಿ. ಬೆಳುದಿಂಗಳಿನ ಬೆಳಕಿನಲ್ಲಿ ದೂರದ ಮರಗಳನ್ನು ನೋಡುತ್ತಿದ್ದರೆ ಅವು ನಾನಾ ಆಕಾರವನ್ನು ಹೊಂದಿ ನಿಮ್ಮನ್ನು ಸಮೀಪಿಸುತ್ತಿರುವಂತೆ ಕಂಡುಬಂದು ಮೈಛಳಿ ಹುಟ್ಟಿಸುವುದುಂಟು. ಮರಗಳು ಜಡೆಮುನಿಗಳಾಗಿಯೋ, ಕೂದಲು ಕೆದರಿಕೊಂಡ ಬ್ರಹ್ಮರಾಕ್ಷಸ ಅಥವಾ ಪಿಶಾಚಿಗಳಂತೆಯೋ, ಬಿಳಿ ಸೀರೆಯುಟ್ಟ ಮೋಹಿನಿಯಂತೆಯೋ, ಕಲ್ಪನೆಯನ್ನು ಕುದುರಿಸಿ ಭೀತಿಯನ್ನು ಹುಟ್ಟಿಸುತ್ತಿದ್ದುವು. ಮರಗಳು ಸಮೀಪಿಸಿ ಅವುಗಳ ಸ್ಪಷ್ಟವಾದ ಆಕಾರವು ಗೋಚರಿಸಿದ ಮೇಲೆ 'ಅಯ್ಯೋ, ಇದು ಬೋಳು ಮರ, ಇದು ಎಲೆಗಳಿಂದ ತುಂಬಿದ ಕೊಂಬೆಗಳನ್ನು ಹರಹಿಕೊಂಡ

ಹಚ್ಚಹಸುರಿನ ಮರ, ಇದು ಎತ್ತರವಾದ ಬಂಡೆ, ಇದು ಹುತ್ತ' ಎಂಬುದು ಸ್ಪಷ್ಟಪಟ್ಟು, ಹೆದರಿದ ಮನಸ್ಸಿಗೆ ಧೈರ್ಯ ಮೂಡುತ್ತಿತ್ತು. ನಾನು ಬಾಲಕನಾಗಿದ್ದಾಗ, ರಾತ್ರಿ ಗಾಡಿಪ್ರಯಾಣ ಮಾಡುವ ಸಂದರ್ಭಗಳಲ್ಲಿ ಇದೇ ರೀತಿ ಒಂದು ಕ್ಷಣ ತಲ್ಲಣ, ಒಂದು ಕ್ಷಣ ಸಾಂತ್ವನಗಳ ತೂಗುಯ್ಯಾಲೆಯಲ್ಲಿ ತೂಗಿದ್ದು ಇಂದಿಗೂ ನನ್ನ ಮನಸ್ಸಿನಲ್ಲಿ ನಿಚ್ಚಳವಾಗಿ ಮೂಡಿದೆ.

ಗಾಡಿಯ ಒಳಗೆ ಹೆಂಗಸರು-ಮಕ್ಕಳು, ದೊಡ್ಡವರು, ಚಿಕ್ಕವರು ಆದಿಯಾಗಿ ತೂಕಡಿಸುತ್ತ ಇಹಲೋಕದ ಪರಿವೆಯಿಲ್ಲದೆ ಇರುತ್ತಿದ್ದರು. ಆ ನಿಶಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಮೌನ, ಈ ಮೌನವನ್ನು ಭೇದಿಸಿಕೊಂಡು ಗಾಡಿಯ ಚಕ್ರಗಳು ಉರುಳುವ ಶಬ್ದ, ಎತ್ತುಗಳ ಕೊರಳ ಗಂಟೆಯ ನಾದ, ನಡುನಡುವೆ "ನಡಿ ಬಸವ, ಹೂಂ ಭಪ್ಪರೆ !" ಎಂದೆಲ್ಲ ಎತ್ತುಗಳಿಗೆ ಹುರುಪು ಕೊಡುವ ಸಾರಥಿಗಳ ಧ್ವನಿ ! ಕೆಲವು ಜನ ಗಾಡಿಯ ಹಿಂದುಗಡೆಯ ಗೂಟವನ್ನು ಹಿಡಿದುಕೊಂಡು ನಡೆದು ಬರುತ್ತಲೇ ತೂಕಡಿಸುತ್ತಿರುವ ಸೋಜಿಗದ ದೃಶ್ಯವಂತೂ ಅಪೂರ್ವವಾದುದಾಗಿರುತ್ತಿತ್ತು. ನಡೆ ನಡೆಯುತ್ತಲೇ ತೂಕಡಿಸುವ ಶಕ್ತಿಯನ್ನು ನೀಡಿದ ಭಗವಂತನಿಗೆ ನಮೋ ನಮೋ !

ಗಾಡಿಗಳು ತಮ್ಮ ಮಾರ್ಗದಲ್ಲಿ ಅಡ್ಡಬರುವ ನದಿಗಳನ್ನು ದಾಟಬೇಕಾಗಿ ಬರುತ್ತಿತ್ತು. ನಿಧಾನವಾಗಿ ನದಿಯ ನೀರಿನಲ್ಲಿ ಗಾಡಿಗಳನ್ನು ಎತ್ತುಗಳು ಎಳೆದುಕೊಂಡು ಹೋಗುವಾಗ ನೀರಿನ ತಳದ ಮರಳಿನ ಮೇಲೆ ಅಥವಾ ನುರುಜು ಕಲ್ಲಿನ ಮೇಲೆ ಚಕ್ರಗಳು ಜರ್ರೆಂದೋ, ಜೊಯ್ಯೆಂದೋ ಶಬ್ದ ಮಾಡಿಕೊಂಡು ಹೋಗುವುದನ್ನು ಕೇಳುವುದೇ ಒಂದು ಆನಂದ. ಆ ಅಲೌಕಿಕ ನಾದವನ್ನು ಆಲಿಸುತ್ತ, ಜುಳಜುಳನೆ ನೀರು ಹರಿಯುವ ಅಮಾಯಕತೆಯನ್ನು ಈಕ್ಷಿಸುತ್ತ, ಗಾಡಿಯ ಹಿಂದುಗಡೆಯಲ್ಲಿ ಕುಳಿತು ಕಾಲುಗಳನ್ನು ಇಳಿಬಿಟ್ಟುಕೊಂಡು ನೀರಿನಲ್ಲಿ ಕಾಲುಗಳನ್ನು ಆಡಿಸುವ ಚಪಲ - ಬಾಲಕರಾದ ನಮಗೆ. ಆ ಹಳೆಯ ಅನುಭವಗಳನ್ನು ಮೆಲುಕು ಹಾಕುತ್ತ ಹಗಲುಗನಸು ಕಾಣುವ ಇಂದಿನ ನನಗೆ ಸಮಯದ ಪರಿವೆಯೇ ಇರುವುದಿಲ್ಲ.

ಒಳ್ಳೆಯ ಕಸುವಿನ ಎತ್ತುಗಳನ್ನು ಹೂಡಿ ಅವು ಲವಲವಿಕೆಯಿಂದ ಗಾಡಿಯನ್ನು ಎಳೆದುಕೊಂಡು ಹೋಗುತ್ತಿದ್ದರೆ ಗಾಡಿಯ ಪ್ರಯಾಣವು ಹಿತಕರವಾಗಿಯೇ ಇರುತ್ತದೆ. ಅಪರೂಪವಾಗಿ ಅಲ್ಲೊಬ್ಬರು ಇಲ್ಲೊಬ್ಬರು ಶ್ರೀಮಂತರು ಸವಾರಿಗೆಂದೇ ಒಂದು ಗಾಡಿಯನ್ನು ಮೀಸಲಾಗಿಟ್ಟಿರುತ್ತಿದ್ದರು. ಒಳ್ಳೆಯ ಕಮಾನು ಹಾಕಿ ಒರಗಿಕೊಂಡು ಕುಳಿತುಕೊಳ್ಳಲು ಅನುವಾಗಿರುವಂತೆ ಗಾಡಿಯ ತಡಿಕೆಗಳಿಗೆ ಮೆತ್ತೆಯನ್ನು ಹಾಕಿಸಿ ಹೊಲಿಸಿರುತ್ತಿದ್ದರು. ಕುಳಿತುಕೊಳ್ಳಲು ನೆಲಕ್ಕೆ ಮೆತ್ತನೆಯ ಹಾಸಿಗೆಯನ್ನು ಹಾಸಿರುತ್ತಿದ್ದರು. ಕಮಾನಿನ ಒಳಗಡೆ ಸುಂದರವಾದ ಬಟ್ಟೆಯನ್ನು ಹೊಲಿಸಿ ಅಲಂಕರಿಸಿರುತ್ತಿದ್ದರು. ಇಂಥ ಗಾಡಿಯಲ್ಲಿ ಕುಳಿತು ಪರಿಮಿತ ಗೆಳೆಯರೊಡನೆ ಹರಟೆ ಹೊಡೆಯುತ್ತ ಪ್ರಯಾಣ ಮಾಡುವ ಆ ವೈಭವ ಇಂದಿಗೆ ಕನಸಿನ ಮಾತೇ ಸರಿ.

ರೈತರು ಬೇಸಾಯ ಕಾಲದಲ್ಲಿ ಎತ್ತುಗಳನ್ನು ಗಾಡಿಗೆ ಹೂಡಿ ಪ್ರಯಾಣಕ್ಕೆ ಕಳುಹಿಸುವುದಿಲ್ಲ. ಏತಕ್ಕೆಂದರೆ ಎತ್ತುಗಳು ಹೊಲಗದ್ದೆಗಳಿಗೆ ಗೊಬ್ಬರಗೋಡು ತುಂಬಿದ ಗಾಡಿಗಳನ್ನು ಎಳೆದು ಆಯಾಸಗೊಂಡಿರುತ್ತವೆ ಮತ್ತು ಉಳುಮೆಯ ಕಠಿಣ ಶ್ರಮದಿಂದ ಬಳಲಿರುತ್ತವೆ. ಆದರೆ ಯಾವಾಗಲಾದರೂ ದಾಕ್ಷಿಣ್ಯಕ್ಕೋ ಒತ್ತಾಯಕ್ಕೋ ಮಣಿಯಬೇಕಾಗಿ ಬಂದು ಗಾಡಿಯನ್ನು ಪ್ರಯಾಣಕ್ಕೆ ಕಳುಹಿಸಬೇಕಾದಂಥ ಸಂದರ್ಭಗಳೂ ಬರುತ್ತವೆ. ಬೇಸಾಯದ ಕೆಲಸದಲ್ಲಿ ದುಡಿದು ದಣಿದ ಎತ್ತುಗಳನ್ನು ಹೂಡಿದ ಗಾಡಿಗಳಲ್ಲಿ ಪ್ರಯಾಣ ಮಾಡುವಂಥ ಶಿಕ್ಷೆ ಬೇರೊಂದಿಲ್ಲ. ಅಂಥ ಗಾಡಿಯಲ್ಲಿ ಒಮ್ಮೆ ಪ್ರಯಾಣ ಮಾಡಿ ಆ ಸುಖವನ್ನು ಅನುಭವಿಸಿದವರು "ಇನ್ನೊಂದು ಸಲ ಗಾಡಿಯನ್ನು ಏರುವುದಿಲ್ಲ" ಎಂದು ಶಪಥ ಮಾಡುವಂಥ ಸ್ಥಿತಿಗೆ ಬಂದಿರುತ್ತಾರೆ. ಬಳಲಿದ ಎತ್ತುಗಳು ಮೊದಲ ನಾಲ್ಕಾರು ಮೈಲಿಗಳು ಗಾಡಿಯನ್ನು ಹೇಗೋ ಎಳೆದುಕೊಂಡು ಹೋಗಿಬಿಡುತ್ತವೆ. ಆ ಮೇಲೆ ತೆಗೆದುಕೊಳ್ಳಿ-ಸ್ವಲ್ಪ ಥಡಾವು ಬಂದರೆ ತೇಕುತ್ತ ನಿಂತುಬಿಡುತ್ತವೆ, ಉತಾರಿನಲ್ಲಿ ಮುಗ್ಗರಿಸುವುದೂ ಉಂಟು. ಆಗ ಗಾಡಿಯನ್ನು ನಿಲ್ಲಿಸಿ ಕೊಳ್ಳನ್ನು ಇಳಿಸಿ ಎತ್ತುಗಳಿಗೆ ನೀರು ಕುಡಿಸಿ ದಣಿವಾರಿಸಿ ಪುನಃ ಗಾಡಿಗೆ ಎತ್ತುಗಳನ್ನು ಹೂಡಿ ಮುಂದಕ್ಕೆ ಹೊರಟರೆ ಒಂದೆರಡು ಮೈಲಿ ಹೋಗುತ್ತಲೇ ಎತ್ತುಗಳು ಗಾಡಿಯನ್ನು ಎಳೆಯಲಾರದೆ ಹೇಗೋ ಎಳೆಯುತ್ತವೆ. ಅವು ಗಂಟೆಗೆ ಎರಡು ಮೈಲಿ ವೇಗದಲ್ಲಿ ಹೋಗುವುದಿರಲಿ, ಕೊನೆಕೊನೆಗೆ ಗಂಟೆಗೆ ಒಂದು ಮೈಲಿ ವೇಗಕ್ಕೂ ಇಳಿದುಬಿಡುತ್ತವೆ. ಹೆಚ್ಚು ದೂರವಲ್ಲದ ಪ್ರಯಾಣವಾದರೆ ಹೇಗೋ ಬಚಾವಾಗಬಹುದು. ಸ್ವಲ್ಪ ಹೆಚ್ಚಿನ ದೂರದ ಪ್ರಯಾಣವಾಗಿ ಬಿಟ್ಟರೆ ದೇವರೇ ಗತಿ. ಗಂಡಿನ ಕಡೆಯವರು ವರಪೂಜೆಗೆ ಎಂದು ಇಂಥ ಗಾಡಿಗಳಲ್ಲಿ ಹೊರಟರೆ ವರಪೂಜೆಗೆ ಇರಲಿ, ಧಾರೆಯ ಮುಹೂರ್ತಕ್ಕೆ ತಲುಪಿದರೆ ಅದೃಷ್ಟ. ಗಂಡಿನ ಕಡೆಯವರು ಬರಲಿಲ್ಲವಲ್ಲ ಎಂದು ಹೆಣ್ಣಿನ ಕಡೆಯವರು ರಾತ್ರಿಯೆಲ್ಲ ಪರದಾಡುತ್ತಿರಬೇಕಾಗುತ್ತದೆ. ಲಾಂದ್ರವನ್ನು ಕೊಟ್ಟು ಊರ ದಾರಿಯಲ್ಲಿ ಹುಡುಕಿಕೊಂಡು ಹೋಗುವಂತೆ ಜನರನ್ನು ಕಳುಹಿಸಬೇಕಾಗುತ್ತದೆ.

ಒಂದು ಸಲ ಇಂಥದೇ ಒಂದು ಅನುಭವ ನನಗೆ ಉಂಟಾಯಿತು. ನನ್ನ ತಮ್ಮನ ಮದುವೆಗೆ ಕುಪ್ಪಹಳ್ಳಿಯಿಂದ ಹಳ್ಳಿಮೈಸೂರಿಗೆ ಪ್ರಯಾಣ ಮಾಡಬೇಕಾಯಿತು. ಕುಪ್ಪಹಳ್ಳಿಯಿಂದ ರಸ್ತೆಯನ್ನೇ ಹಿಡಿದು ಹಳ್ಳಿಮೈಸೂರಿಗೆ ಹೋಗಬೇಕಾದರೆ ದಾರಿ ತುಂಬ ಬಳಸು. ಅಕ್ಕಿಹೆಬ್ಬಾಳು ಸೇತುವೆಯ ಮೇಲೆ ಹೇಮಾವತಿ ನದಿಯನ್ನು ದಾಟಿ, ಭೇರ‍್ಯಕ್ಕೆ ಹೋಗಿ ಅಲ್ಲಿಂದ ಹೊಳೆನರಸೀಪುರಕ್ಕೆ ಹೋಗುವ ರಸ್ತೆಯನ್ನು ಹಿಡಿದು, ಬೋರೆಸಂತೆಗೆ ಹೋಗಿ ಅಲ್ಲಿಂದ ಒಳ ರಸ್ತೆಯಲ್ಲಿ ಹಳ್ಳಿಮೈಸೂರನ್ನು ಮುಟ್ಟಬೇಕು. ಇಲ್ಲದಿದ್ದರೆ ಹೊಳೆನರಸೀಪುರಕ್ಕೆ ಹೋಗಿ ಅಲ್ಲಿಂದ ಹಳ್ಳಿಮೈಸೂರಿನ ರಸ್ತೆ ಹಿಡಿಯಬೇಕು. ಪುನಃ ಸುತ್ತುಬಳಸು ಎಂದರೆ ಸುಮಾರು ೨೦-೨೫ ಮೈಲಿ ಅಥವಾ ಅದಕ್ಕೂ ಹೆಚ್ಚು. ಆ ಕಾಲದಲ್ಲಿ ಹಳ್ಳಿಮೈಸೂರಿಗೆ ಈಗಿನಂತೆ ಬಸ್ ಸೌಕರ್ಯ ಇರಲಿಲ್ಲ. ಬಸ್ಸನ್ನು ಹಿಡಿದು ಹೋಗಬೇಕೆಂದರೆ ಕುಪ್ಪಹಳ್ಳಿಯಿಂದ ಕೃಷ್ಣರಾಜಪೇಟೆಗೆ ಗಾಡಿಯಲ್ಲಿ ಹೋಗಿ, ಅಲ್ಲಿಂದ ಚನ್ನರಾಯಪಟ್ಟಣ, ಅಲ್ಲಿಂದ ಇನ್ನೊಂದು ಬಸ್ಸನ್ನು ಹಿಡಿದು ಹೊಳೆನರಸೀಪುರಕ್ಕೆ ಹೋಗಬೇಕು. ಪುನಃ ಹತ್ತು-ಹನ್ನೆರಡು ಮೈಲಿ ದೂರಕ್ಕೆ ಗಾಡಿ ಮಾಡಬೇಕು. ಇದೆಲ್ಲ ಕೊಂಕಣ ಸುತ್ತಿ ಮೈಲಾರಕ್ಕೆ ಹೋದಂತೆ. ಬಾಡಿಗೆ ಗಾಡಿಯನ್ನು ಗೊತ್ತುಮಾಡಿಕೊಂಡು, ಬಂಡಿ ಹೊಳೆಯ ಕಡವಿನಲ್ಲಿ ಹೇಮಾವತಿ ನದಿಯನ್ನು ದಾಟಿ, ಗಾಡಿ ದಾರಿಯನ್ನು ಹಿಡಿದು ನೇರವಾಗಿ ಬೋರೆಸಂತೆಯನ್ನು ಸೇರಬಹುದು. ಅಲ್ಲಿಂದ ಹಳ್ಳಿಮೈಸೂರಿಗೆ ದಾರಿ ಸಲೀಸು, ಬೆಳಗ್ಗೆ ಹೊರಟರೆ ಸಂಜೆಯೊಳಗೆ ಹೇಗೋ ಹಳ್ಳಿ ಮೈಸೂರನ್ನು ತಲುಪಬಹುದು ಎಂದು ನನ್ನ ಮಾವನವರು ಆಲೋಚಿಸಿ, ರೈತನೊಬ್ಬನಿಗೆ ಹೇಳಿ ಎತ್ತಿನ ಗಾಡಿಯೊಂದನ್ನು ಏರ್ಪಾಡು ಮಾಡಿದರು. ಬೆಳಗ್ಗೆ ಎಂಟು ಗಂಟೆಗೆಲ್ಲ ಗಾಡಿ ಕಟ್ಟಿಸಿದರು. ಹೊಳೆಕಡವನ್ನು ದಾಟುವವರೆಗೆ, ಕಷ್ಟವಾಗಬಾರದೆಂದು ಒಂದಿಬ್ಬರು ರೈತರನ್ನು ಜತೆಗೆ ಕಳುಹಿಸಿದರು ಹೊಳೆ ದಾಟಿಸಲು. ಏಕೆಂದರೆ ಗಾಡಿಯು ದಡದ ಮೇಲಿನಿಂದ ಕಡಿದಾದ ದಾರಿಯಲ್ಲಿ ನದಿಯ ಪಾತ್ರಕ್ಕೆ ಇಳಿಯಬೇಕು, ಮರಳು ಮತ್ತು ಬಂಡೆಗಲ್ಲುಗಳ ಮೇಲೆ ನದಿಪಾತ್ರವನ್ನು ದಾಟಬೇಕು, ಅನಂತರ ಆಚೆಯ ದಡದಲ್ಲಿ ಹೊಳೆಯ ಪಾತ್ರದಿಂದ ದಡದ ಮೇಲಕ್ಕೆ ಏರಬೇಕು. ರೈತರು ನದಿಯನ್ನು ದಾಟಿಸಿ, ದಡ ಹತ್ತಿಸಿ, ಗಾಡಿ ಮುಂದಕ್ಕೆ ಪ್ರಯಾಣಿಸಿದುದನ್ನು ನೋಡಿ ಹೊರಟುಹೋದರು. ಆನಂತರ ಗಾಡಿಯು ನಾಲೆಯ ಮಗ್ಗುಲಲ್ಲೇ ನಿಧಾನವಾಗಿ ಸಾಗುತ್ತ ಬೀರವಳ್ಳಿಯನ್ನು ಮುಟ್ಟಿತು. ಇಲ್ಲಿ ಹೊಳೆನರಸೀಪುರ ಮತ್ತು ಕೆ.ಆರ್. ನಗರ ನಡುವಿನ ರೈಲು ಮಾರ್ಗ ಅಡ್ಡ ಬರುತ್ತದೆ. ರೈಲುಕಂಬಿಗಳನ್ನು ದಾಟಿ ಗಾಡಿ ಮುಂದೆ ಹೊರಟಿತು. ಹೇಗೋ ಇಲ್ಲಿಯವರೆಗೆ ಎತ್ತುಗಳು ಗಾಡಿಯನ್ನು ಎಳೆದುಕೊಂಡು ಬಂದಿದ್ದುವು. ಇಷ್ಟು ಹೊತ್ತಿಗೆ ದಣಿದ ಎತ್ತುಗಳು ಗಾಡಿಯನ್ನು ಎಳೆಯಲಾರದೆ ತನ್ನ ಯಜಮಾನ - ಗಾಡಿ ಹೊಡೆಯುವವನ ಅಪ್ಪಣೆಯನ್ನು ಮೀರಲಾರದೆ ಒಂದೊಂದಾಗಿ ಹೆಜ್ಜೆಯನ್ನು ಎತ್ತಿ ಎತ್ತಿ ಇಡುತ್ತ ಹೋಗಲಾರಂಭಿಸಿದವು. ದಾರಿ ಸಾಗುತ್ತಲೇ ಇಲ್ಲ. ಸ್ವಲ್ಪ ದೂರ ಹೋದ ಎತ್ತುಗಳು ಬಳಲಿ ನಿಂತುಬಿಡುತ್ತಿದ್ದುವು. ಇದೇಕೆ ಹೀಗಾಯಿತು ಎಂಬುದಾಗಿ ನಮಗೆ ಯೋಚನೆ ಹತ್ತಿತು. ರೈತನನ್ನು ಬಿಡದೆ ಪ್ರಶ್ನೆ ಮಾಡಲು ಆಗ ಗುಟ್ಟು ಹೊರಬಿದ್ದಿತು. ಮೂರು ನಾಲ್ಕು ದಿವಸಗಳಿಂದ ಅಟ್ಟುಗದ್ದೆಯಲ್ಲಿ ಉಳುಮೆ ಮಾಡಿ ಎತ್ತುಗಳು ಸೋತಿದ್ದವು. ಅವುಗಳನ್ನೇ ಅನಿವಾರ್ಯವೆಂದು ಗಾಡಿಗೆ ಕಟ್ಟಿಕೊಂಡು ಬಂದಿದ್ದ. ಮೇಲೆ ಬಿಸಿಲು, ಮುಂದೆ ನಿರ್ಜನವಾದ ಬೋರೆ. ಮಂದಗತಿಯಲ್ಲಿ ಆಮೆಯ ನಡಿಗೆಯಲ್ಲಿ ಹೆಜ್ಜೆ ಇಡುತ್ತಿದ್ದವು ಎತ್ತುಗಳು. ನೋಡುತ್ತಿದ್ದರೆ ದಾರಿಯೂ ಅನಂತ, ಕಾಲವೂ ಅನಂತ ಎನ್ನಿಸುತ್ತಿತ್ತು. ಎಲ್ಲಿಯಾದರೂ ದಾರಿ ತಪ್ಪಿಬಿಟ್ಟರೆ ಎಂಬ ಭಯ ಬೇರೆ ನಮಗೆ. ಯಾರನ್ನಾದರೂ ಕೇಳೋಣ ಎಂದರೆ ದೂರದೂರದಲ್ಲಿ ಎಲ್ಲಿಯೋ ಒಂದೊಂದು ಗುಡಿಸಲು ಕಾಣುತ್ತಿತ್ತು. ಬಹಳ ಕಷ್ಟಪಟ್ಟು ಯಾರನ್ನಾದರೂ ದೂರದಲ್ಲಿ ಕಂಡಾಗ ಗಾಡಿ ನಿಲ್ಲಿಸಿ ಓಡಿಹೋಗಿ ದಾರಿ ಕೇಳಿಕೊಂಡು ಸಂಜೆಯ ಹೊತ್ತಿಗೆ ಹಾಗೂ ಹೀಗೂ ಬೋರೆಸಂತೆಯನ್ನು ತಲುಪಿದೆವು. ಅಂದು ಸಂತೆಯ ದಿನವಾಗಿತ್ತು. ಸಂತೆ ಮುಗಿದು ಎಲ್ಲರೂ ಹೊರಟುಹೋಗಿದ್ದರು. ಕೆಲವು ಜನ ಮಾತ್ರ ಉಳಿದಿದ್ದರು. ಒಂದೆರಡು ಗಾಡಿಗಳು ಹೊರಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದುವು. ಅದರಿಂದ ಮುಂದಿನ ದಾರಿಯೇನೋ ತಿಳಿಯಿತು. ಹೇಗೂ ಇನ್ನೊಂದೆರಡು ಗಂಟೆಗಳಲ್ಲಿ ಊರನ್ನು ತಲಪಬಹುದು ಎಂದು ಭಾವಿಸಿದೆವು. ಚೆನ್ನಾದ ದಾರಿಯಲ್ಲಿ ನಮ್ಮ ಗಾಡಿ ಮುಂದುವರಿಯಿತು. ರಸ್ತೆಯಾದರೇನು? ಎತ್ತುಗಳ ತೊಡೆಗಳು ಸತ್ತು ಹೋಗಿದ್ದುವು. ಮೊದಲೇ ಬಳಲಿದ ಎತ್ತುಗಳು ಬೆಳಗಿನಿಂದ ಬಿಸಿಲಿನಲ್ಲಿ ಪ್ರಯಾಣ ಮಾಡಿ ಬಂದಿವೆ. ಅವುಗಳ ನಡಿಗೆಗೆ ತಡೆಯೇ ಒಡ್ಡಿತು ಎನ್ನಬಹುದು. ಎಷ್ಟು ಅದ್ದಲಿಸಿದರೇನು, ಹುರುಪು ಕೊಟ್ಟರೇನು, ಬೆನ್ನು ಚಪ್ಪರಿಸಿದರೇನು ! ಬಾಹ್ಯಪರಿವೆಯೇ ಇಲ್ಲದಂತೆ ಎತ್ತುಗಳು ಕುಂಟುತ್ತ ಹೆಜ್ಜೆ ಹಾಕುತ್ತಿದ್ದುವು. ಸಂತೆಯ ಗಾಡಿಗಳು ಹಿಂದಿನಿಂದ ಬಂದು ನಮ್ಮ ಗಾಡಿಗಳನ್ನು ಹಿಂದೆ ಹಾಕಿ ಮುಂದೆ ಹೊರಟುಹೋದವು. ಅಷ್ಟು ಹೊತ್ತಿಗೆ ಕತ್ತಲೆಯಾಗಲಾರಂಭಿಸಿತು. ನಡುವೆ ಒಂದು ಸಣ್ಣ ಹಳ್ಳಿ ಸಿಕ್ಕಿತು. ಅಲ್ಲಿಯ ಜನರನ್ನು ಕಂಡು, ಬಾಡಿಗೆ ಕೊಡುವುದಾಗಿಯೂ, ಎರಡು ಎತ್ತುಗಳನ್ನು ಎರವಲು ಕೊಡಬೇಕೆಂದೂ ಕೇಳಿಕೊಂಡೆವು. ನಮ್ಮ

ಅಸಹಾಯಕ ಸ್ಥಿತಿಯನ್ನು ಅರಿತು ಕೂಡ ಅವರು ಎತ್ತುಗಳನ್ನು ಕೊಡಲು ಒಪ್ಪಲಿಲ್ಲ . ಇನ್ನೊಂದು ಮೂರು ಮೈಲಿ ಹೋಗಬೇಕಾದ ದಾರಿಯಿದ್ದಿತು. ಈಗ ಏನು ಮಾಡುವುದು ಎಂದು ಯೋಚಿಸುತ್ತಿದ್ದಂತೆ ನನಗೆ ಒಂದು ಉಪಾಯ ಹೊಳೆಯಿತು. ಗಾಡಿಯನ್ನು ಆ ಹಳ್ಳಿಯಲ್ಲೇ ಇರಹೇಳಿ ನಾನು ಚುರುಕಾಗಿ ನಡೆದುಕೊಂಡು ಹಳ್ಳಿಮೈಸೂರಿಗೆ ಹೋದರೆ ಅಲ್ಲಿಂದ ಎತ್ತುಗಳನ್ನೋ ಅಥವಾ ಗಾಡಿಯನ್ನೋ ಕಳುಹಿಸಬಹುದು ಎನ್ನಿಸಿತು. ಈ ವಿಷಯವನ್ನು ನನ್ನ ಷಡ್ಡಕ, ನಮ್ಮ ಅತ್ತೆ ಮೊದಲಾದವರಲ್ಲಿ ಪ್ರಸ್ತಾಪಿಸಿದೆ. ಗಾಡಿಯವನು, "ನೀವು ಮುಂದೆ ಹೋಗಿ, ಎತ್ತಿನ ಜತೆಯನ್ನು ಕಳಿಸಿ. ನಮ್ಮ ಎತ್ತುಗಳು ಹೆಜ್ಜೆ ಹಾಕುತ್ತಿರುತ್ತವೆ" ಎಂದ. ಅದೇ ಸರಿಯೆಂದು ನಾನು ಹೊರಟುಬಿಟ್ಟೆ. ಕತ್ತಲೆಯಲ್ಲಿ ಅಪರಿಚಿತ ಪ್ರದೇಶದಲ್ಲಿ ಹೆಂಗಸರು ಮೊದಲಾದವರು ಇರುವ ಗಾಡಿಯನ್ನು ಬಿಟ್ಟು ಹೋಗಬೇಕಲ್ಲ ಎಂಬ ಅಳುಕು ನನಗೆ ಉಂಟಾಗಲಿಲ್ಲ. ಏಕೆಂದರೆ ಆಗಿನ ಕಾಲದಲ್ಲಿ ಅಂಥ ಭಯವೇನೂ ಇರಲಿಲ್ಲ.

ನಾನು ಯಾವತ್ತೂ ಆ ದಾರಿಯಲ್ಲಿ ಪ್ರಯಾಣಿಸಿದವನಲ್ಲ. ಈ ರಸ್ತೆ ಹೇಗಿದ್ದರೂ ನಾವು ಹೋಗಬೇಕಾದ ಊರಿಗೆ ಹೋಗುತ್ತದೆ ಎಂಬ ಧೈರ್ಯದಿಂದ ಮುಂದೆ ಹೊರಟುಬಿಟ್ಟೆ. ಆದರೆ ನನ್ನ ಅನಿಸಿಕೆ ಸ್ವಲ್ಪ ಹೊತ್ತಿನಲ್ಲಿಯೇ ಹುಸಿಯಾಯಿತು. ನಾನು ಹೋಗುತ್ತಿದ್ದ ರಸ್ತೆ ಒಂದು ಕೆರೆಯ ಬಳಿ ನಿಂತುಬಿಟ್ಟಿತು. ಮುಂದಕ್ಕೆ ರಸ್ತೆ ಇರಲಿಲ್ಲ. ಎರಡು ಗಾಡಿ-ದಾರಿಗಳಿದ್ದವು. ಈಗ ಯಾವ ದಾರಿಯಲ್ಲಿ ಹೋಗಬೇಕು ಎಂಬುದು ತಿಳಿಯದೆ ಪೇಚಿನಲ್ಲಿ ಸಿಕ್ಕಿಹಾಕಿಕೊಂಡೆ. ದೂರದ ಯಾವುದೋ ಹಳ್ಳಿಯಿಂದ ಮದುವೆಯ ವಾದ್ಯಮೇಳದ ಶಬ್ದ , ಕೊಂಬಿನ ಶಬ್ದ ಕೇಳಿಬರುತ್ತಿತ್ತು. ನಾನು ಹೋಗಬೇಕಾದ ಹಳ್ಳಿ ಆ ದಿಕ್ಕಿನಲ್ಲಿ ಇಲ್ಲ ಎಂದು ಒಳದನಿ ನುಡಿಯಿತು. ನನ್ನ ಬಲಗಡೆಯಿಂದ ಗಾಡಿಗಳು ಹೋಗುತ್ತಿರುವ ಸದ್ದು ಕೇಳಿಸಿತು. ಸಂತೆಯ ಗಾಡಿಗಳೇ ಇರಬೇಕೆಂದು ನಿರ್ಧರಿಸಿದೆ. ಆ ಗಾಡಿಗಳು ಹಳ್ಳಿಮೈಸೂರಿಗೇ ಹೋಗುತ್ತಿರಬೇಕು ಎಂದ ಮೇಲೆ ನಾನು ನನ್ನ ಬಲಗಡೆಗೆ ಸಿಕ್ಕುವ ದಾರಿಯನ್ನು ಹಿಡಿಯಬೇಕು ಎಂದು ಊಹಿಸಿದೆ. ಬಲಗಡೆಗೆ ಒಂದು ಕೆರೆ ಇದ್ದಿತು. ಕೆರೆಯ ಏರಿಯ ಮೇಲಿನಿಂದ ಒಂದು ದಾರಿ ಇದ್ದಿತು. ಅದು ಗಾಡಿದಾರಿಯಾಗಿರಲಿಲ್ಲ. ಆದರೂ ಅಲ್ಲಿ ಕೆರೆ ಇದೆ ಎಂದ ಮೇಲೆ ಅದರ ಬಳಿ ಒಂದು ಹಳ್ಳಿ ಇರಬೇಕು ಎಂದು ನನ್ನ ಹಳ್ಳಿಯ ಜ್ಞಾನ ನುಡಿಯಿತು. ಕೆರೆಯ ಏರಿಯ ಮೇಲೆ ಮುಂದುವರಿದೆ. ಒಬ್ಬನೇ ಒಬ್ಬ. ಜನರ ಸುಳಿವಿಲ್ಲ. ಕೆರೆಯ ಕೆಳಗಡೆ ತೋಟ. ಪ್ರಕೃತಿಯ ಜೀರುಂಡೆ ಶಬ್ದವಲ್ಲದೆ ಬೇರೊಂದು ಶಬ್ದವಿಲ್ಲ. ಮನಸ್ಸಿಗೆ ಭಯವಾಯಿತು. ಆದರೆ ಬೇರೆ ಮಾರ್ಗವಿಲ್ಲ. **ಧೈರ್ಯಂ ಸರ್ವತ್ರ ಸಾಧನಮ್** ಎಂಬುದನ್ನು ಜ್ಞಾಪಿಸಿಕೊಂಡೆ. ಮನಸ್ಸು ಗಟ್ಟಿಮಾಡಿ ಮುಂದುವರಿದೆ. ಕೆರೆಯ ಕೊನೆಯಲ್ಲಿ ಮೇಲುಗಡೆ ಮೂರು-ನಾಲ್ಕು ಗುಡಿಸಲುಗಳು ಕಾಣಿಸಿದುವು. ಕೆರೆಯ ಕೋಡಿಯನ್ನು ದಾಟಿಕೊಂಡು ಹಳ್ಳಿಯ ಬಳಿಗೆ ಹೋದೆ. ಅಲ್ಲಿ ಗುಡಿಸಿಲ ಬಳಿ ನಾಲ್ಕಾರು ಜನರು ಕುಳಿತು ಮಾತನಾಡುತ್ತಿರುವುದು ಕಂಡಿತು. ದೂರದಿಂದಲೇ ಅವರನ್ನು ಹಳ್ಳಿಮೈಸೂರಿಗೆ ದಾರಿ ಕೇಳಿದೆ. "ಇದ್ಯಾಕೆ ಸ್ವಾಮಿ, ಈ ದಾರಿಯಲ್ಲಿ ಬಂದಿರಿ ? ಕೆರೆ ಅಂಗಳದಿಂದ ಹಳ್ಳಿಮೈಸೂರಿಗೆ ನೇರವಾದ ದಾರಿ ಹೋಗುತ್ತಿತ್ತಲ್ಲ. ಸ್ವಲ್ಪ ಬಳಸಿದಿರಿ. ಪರವಾಯಿಲ್ಲ. ಸ್ವಲ್ಪ ಮುಂದೆ ಹೋದರೆ ಒಂದು ಓಣಿ ಕಾಣಿಸುತ್ತದೆ. ಅದರಲ್ಲಿ ನಿಮಗೆ ಗಾಡಿದಾರಿ ಕಾಣಿಸುತ್ತದೆ. ಆ ದಾರಿಯಲ್ಲಿ ಹೋದರೆ ನೇರವಾಗಿ ಹಳ್ಳಿ ಮೈಸೂರನ್ನು ಸೇರುತ್ತೀರಿ" ಎಂದು ಒಬ್ಬ ಹೇಳಿದ. ಸದ್ಯ! ಬದುಕಿದೆ ಎಂದುಕೊಂಡು ದಾರಿಯನ್ನು ಹಿಡಿದು ಮುಂದೆ ಹೋಗುತ್ತಿದ್ದಂತೆ, ಲಾಂದ್ರವನ್ನೂ ಒಂದು ಜತೆ ಎತ್ತುಗಳನ್ನೂ ಹಿಡಿದುಕೊಂಡು ಇಬ್ಬರು ಸರಸರನೆ ಬರುತ್ತಿದ್ದರು. ನನ್ನನ್ನು ಕಂಡೊಡನೆ ನಿಂತು "ಗಾಡಿ ಎಲ್ಲಿ ಬರುತ್ತಿದೆ?" ಎಂಬುದನ್ನು ತಿಳಿದುಕೊಂಡರು. ನನ್ನನ್ನು ಊರಿಗೆ ಹೋಗಲು ಹೇಳಿ ಅವರು ಗಾಡಿಯ ಬಳಿಗೆ ನಡೆದರು. ಸಂತೆಯ ಗಾಡಿಯವರು, "ಯಾವುದೋ ಒಂದು ಗಾಡಿ, ಎತ್ತು ಎಳೆಯಲಾರದೆ ನಿಧಾನವಾಗಿ ಬರುತ್ತಿದೆ. ಅದರಲ್ಲಿ ನಿಮ್ಮ ಮದುವೆ ಮನೆಗೆ ಬರುವ ಜನರಿರಬಹುದು" ಎಂದು ಹೇಳಿದ್ದರಿಂದ ಅವರು ಎತ್ತುಗಳನ್ನು ಕರೆದುಕೊಂಡು ಹೊರಟಿದ್ದರು. ನಾನು ಊರನ್ನು ಸೇರಿದೊಡನೆ ಪ್ರಶ್ನೆಗಳ ಸುರಿಮಳೆಯನ್ನೇ ಎದುರಿಸಬೇಕಾಯಿತು. "ಎಷ್ಟು ಹೊತ್ತಿಗೆ ಹೊರಟಿರಿ, ಯಾರ ಗಾಡಿ, ಯಾವ ಎತ್ತುಗಳು" ಎಂದೆಲ್ಲ ಕೇಳಿದರು ವರಪೂಜೆಗಾಗಿ ಕಾಯುತ್ತಿದ್ದವರು. ವರನ ಅಣ್ಣನನ್ನು ಬಿಟ್ಟು ವರಪೂಜೆ ಮಾಡಲು ಸಾಧ್ಯವೇ, ಅದೂ ಅವರು ಬರುವುದು ಖಾತ್ರಿ ಇರುವಾಗ! ಮೊದಲು ಬಿಸಿ ಬಿಸಿ ಕಾಫಿ ಕೇಳಿ ಗಂಟಲಿಗೆ ಹುಯ್ದುಕೊಂಡು ಸಮಾಧಾನ ಮಾಡಿಕೊಂಡೆ. ಒಂದರ್ಧ-ಮುಕ್ಕಾಲು ಗಂಟೆಯಲ್ಲಿ ಗಾಡಿ ಬಂದು ಸೇರಿತು. ನಮ್ಮವರು ಸುರಕ್ಷಿತವಾಗಿ ಊರು ಸೇರಿದ್ದು ಎಲ್ಲರಿಗೂ ಸಮಾಧಾನ ತಂದಿತ್ತು. ಮುಂದೆ ವರಪೂಜೆ, ಬಿಸಿಲಡಿಗೆ ಊಟ, ನಂಟರೊಡನೆ ಸ್ನೇಹಿತರೊಡನೆ ಕುಶಲ ಪ್ರಶ್ನೆ, ಸ್ವಾರಸ್ಯವಾದ ಮಾತುಗಳು ನಡೆದವು. ಸಂತೋಷದ ವಾತಾವರಣದಲ್ಲಿ ಅಂದಿನ ಕಷ್ಟ, ಆಯಾಸ, ಆತಂಕಗಳೆಲ್ಲವೂ ಮರೆಯಾದವು. ಗಾಡಿಯ ಪ್ರಯಾಣ ಎಂದ ಕೂಡಲೇ ನನ್ನ ಈ ಅನುಭವ ಈಗಲೂ ಮರುಕಳಿಸಿ ಆನಂದ ನೀಡುವುದು.

೨. ಉರುಟಣೆ

ಹಿಂದಿನ ಕಾಲದಲ್ಲಿ ಸಂಕೇತಿಗಳಲ್ಲಿ ಮದುವೆ ಎಂದರೆ ಎಂಟು ದಿನಗಳ ಮದುವೆ ಎಂದೇ ಪ್ರಸಿದ್ಧವಾಗಿತ್ತು. ವರಪೂಜೆ, ಧಾರೆ, ನಾಗೋಲಿ ದಿನಗಳಂದು ಕಲಾಪಗಳು ಹೆಚ್ಚಾಗಿರುತ್ತವೆ. ಜನರಿಗೆ ಕೆಲಸದ ಗಡಿಬಿಡಿ. ಮನೋರಂಜನೆಗೆ ಆ ದಿನಗಳಲ್ಲಿ ಪುರಸತ್ತು ಕಡಮೆ. ಆದರೆ ಉಳಿದ ದಿನಗಳಲ್ಲಿ ಮನೋರಂಜನೆ ಬೇಕಲ್ಲ, ಅದಕ್ಕೆ ಕೆಲವೊಂದು ಪದ್ಧತಿಗಳನ್ನು ಇಟ್ಟುಕೊಂಡಿದ್ದರು. ಇವುಗಳಲ್ಲಿ ಒಂದು ಅರಿಶಿನೆಣ್ಣೆ ಅಥವಾ ಉರುಟಣೆ ಎಂಬುದು. ಇದು ಕೇವಲ ಹೆಂಗಸರು ಆಚರಿಸುವ ಶಾಸ್ತ್ರ ಎಂದು ಮೇಲುನೋಟಕ್ಕೆ ಅನ್ನಿಸಿದರೂ ಇದರಲ್ಲಿ ಸ್ತ್ರೀಯರು, ಪುರುಷರು, ವಿದ್ವಾಂಸರು, ಪಾಮರರು ಎಲ್ಲರೂ ಪಾಲ್ಗೊಂಡು ಉಲ್ಲಾಸಗೊಳ್ಳುತ್ತಿದ್ದುದು ಸಂಕೇತಿಗಳ ಒಂದು ವೈಶಿಷ್ಟ್ಯವಾಗಿತ್ತು. ಇಂಥ ಹಲವು ಉರುಟಣೆಗಳನ್ನು ನೋಡಿ ಭಾಗವಹಿಸಿ ಅದರ ಆನಂದವನ್ನು ಹಂಚಿಕೊಂಡ ನೆನಪು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಒಂದು ಸಂಪ್ರದಾಯ ಅಥವಾ ಆಚರಣೆ ಎನ್ನಬಹುದಾದುದನ್ನು ಒಂದು ಸಾಮೂಹಿಕ ಮನೋರಂಜನೆಯ ಸಾಧನವನ್ನಾಗಿ ಮಾಡಿಕೊಂಡಿದ್ದುದು ಗಮನಾರ್ಹ.

ಈ ಅರಿಶಿನೆಣ್ಣೆ ಕಾರ್ಯಕ್ರಮವು ಧಾರೆಯಾದ ಅನಂತರ ಪ್ರತಿದಿನವೂ ಕೊನೆಯ ದಿವಸದವರೆಗೆ ನಡೆಯುತ್ತದೆ. ಬೆಳಗ್ಗೆ ಮತ್ತು ಸಂಜೆ ಔಪಾಸನೆ ಎಂಬ ಗೃಹಸ್ಥಧರ್ಮದ ನಿತ್ಯಕರ್ಮವಾದ ಹೋಮದ ಅನಂತರ ಹಸೆಮಣೆಯ ಬಳಿ ಹುಡುಗಿಯರು ಸೇರುತ್ತಾರೆ. ಅರಿಶಿನೆಣ್ಣೆ ಮಾಡಿಸುವ ಜನವನ್ನು ಹುಡುಕಿ ಕರೆ ತಂದಾಗಿರುತ್ತದೆ. ಅರಿಶಿನೆಣ್ಣೆಯ ಕಾರ್ಯಕ್ರಮದ ಬಗ್ಗೆ ಜನರಿಗೆ ತಿಳುವಳಿಕೆ ಕೊಡಲಾಗುತ್ತದೆ. ಒಬ್ಬೊಬ್ಬರಾಗಿ ಗಂಡಸರು, ಹೆಂಗಸರು ಎಲ್ಲರೂ ಸೇರುತ್ತಾರೆ. ಬೆಳಗಿನ ಉಪಾಹಾರ ಗಡದ್ದಾಗಿ ಆಗಿರುತ್ತದೆಯಾದುದರಿಂದ ಮಧ್ಯಾಹ್ನದ ಭೋಜನದವರೆಗೆ ವಿರಾಮ. ಹಾಗೆಯೇ ಸಂಜೆ ಕೂಡ ರಾತ್ರಿಯ ಊಟದವರೆಗೆ ಸಮಯವಿರುತ್ತದೆ. ಈ ಕಾಲವನ್ನು ನಗುನಗುತ್ತ ಕಳೆಯಲು ಇದೊಂದು ಉತ್ತಮ ಸಾಧನ. ಇಲ್ಲಿ ಸಾಮಾನ್ಯರಿಗೂ ವಿದ್ವಾಂಸರಿಗೂ ಅವರವರ ತಿಳುವಳಿಕೆಗೆ ಅನುಸಾರವಾಗಿ ಮನೋರಂಜನೆ ದೊರೆಯುತ್ತದೆ.

ಹಸೆಮಣೆಗೆ ಗಂಡನ್ನು ಕರೆಯಲಾಗುತ್ತದೆ. ಹುಡುಗಿಯರು ಈ ಸಂದರ್ಭದಲ್ಲಿ ಒಂದು ತಮಾಷೆ ಮಾಡುತ್ತಾರೆ. ಮದುವೆಯ ಹೆಣ್ಣನ್ನು ಕೋಣೆಯಲ್ಲೋ, ಅಡುಗೆಮನೆಯಲ್ಲೋ ಎಲ್ಲೋ ಒಂದು ಕಡೆ ಮುಚ್ಚಿಟ್ಟಿರುತ್ತಾರೆ. ಗಂಡು ಹೋಗಿ ಹುಡುಕಿ ಅವಳನ್ನು ಎತ್ತಿಕೊಂಡು ಬರಬೇಕು. ಹಿಂದಿನ ಕಾಲದಲ್ಲಿ ಇದು ಸಾಧ್ಯವಾಗಿತ್ತು. ಕಾರಣವೆಂದರೆ ಆಗಿನ ಕಾಲದಲ್ಲಿ ಚಿಕ್ಕ ವಯಸ್ಸಿನಲ್ಲಿ ಗಂಡು ಹೆಣ್ಣುಗಳಿಗೆ ಮದುವೆ ಮಾಡುತ್ತಿದ್ದರು. ಗಂಡಿಗೆ ಸುಮಾರು ಹದಿನಾರು ವರ್ಷವಿದ್ದರೆ ಹೆಣ್ಣಿಗೆ ಎಂಟು-ಹತ್ತು ವರ್ಷ ವಯಸ್ಸಾಗಿರುತ್ತಿತ್ತು. ಆದುದರಿಂದ ಹೆಣ್ಣನ್ನು ಎತ್ತಿಕೊಂಡು ಗಂಡು ಬರುವುದು ಸಾಧ್ಯವಾಗಿತ್ತು. ಹಸೆಯ ಮಣೆಯ ಮೇಲೆ ಗಂಡು-ಹೆಣ್ಣು ಕುಳಿತ ಮೇಲೆ ಕಲಾಪ ಆರಂಭವಾಗುತ್ತದೆ. ಅರಿಶಿನೆಣ್ಣೆ ಮಾಡಿಸುವವರು ಪುರೋಹಿತರಾಗಿರಬಹುದು, ಸಂಸ್ಕೃತ ತಿಳಿದ ರಸಿಕರಾಗಿರಬಹುದು. ಗಂಡು ಹೆಣ್ಣಿನ ಕೈಯಲ್ಲಿ ಪರಸ್ಪರ ಪ್ರಶಂಸೆಯನ್ನು ಹೇಳಿಸುವುದರ ಮೂಲಕ ಅದು ಮೊದಲಾಗುತ್ತದೆ. ಹೆಣ್ಣನ್ನು ಕುರಿತು, 'ಹೇಳಮ್ಮ' ಎನ್ನುತ್ತಾರೆ. "ಎನ್ನರಸ, ಚೆನ್ನರಸ, ಚೆಲುವರಸ, ಪ್ರಾಣದರಸ, ಪಟ್ಟದರಸ, ಪ್ರೇಮದರಸ... ಮಾವನ ಮಗನೆ, ಮಲ್ಲಿಗೆಯರಳೆ, ಮುತ್ತಿನ ಚೆಂಡೆ... ಎನ್ನಾಜಿ ರನ್ನ, ಎನ್ನ ಮನದನ್ನ..." ಎಂಬುದಾಗಿ ಹೇಳಿಸುತ್ತ, "ಕನ್ಯಾದಾನಕ್ಕಾಗಿ ಇಷ್ಟು ಹೆಣ್ಣುಗಳನ್ನೂ, ಕನ್ಯಾ ಪ್ರತಿಗ್ರಹಕ್ಕಾಗಿ ಇಷ್ಟು ಗಂಡುಗಳನ್ನೂ ನಾನು ಹೆತ್ತುಕೊಂಡು ನೀವು ಎತ್ತಿಕೊಂಡು ಸುಖ ಸಂಸಾರವಗೈಯೋಣ" ಎಂದು ಹೇಳಿಸಿದ ಅನಂತರ ಹೆಣ್ಣು, "ನಿಮ್ಮ ಪಾದಕಮಲವ ತೋರಿಸಿ, ಅರಿಶಿನ ಹಚ್ಚೇನು" ಎಂದು ಹೇಳಿ ಗಂಡನ ಪಾದಗಳಿಗೆ ಅರಿಶಿನ ಹಚ್ಚಬೇಕು. ಇದೇ ರೀತಿ "ಗಂಧ ಹಚ್ಚೇನು" ಎನ್ನಬೇಕು. ಈ ಕ್ರಮದಲ್ಲಿಯೇ ಗಂಡಿನ ಕೈಯಲ್ಲಿ "ಎನ್ನರಸಿ, ಚೆನ್ನರಸಿ..." ಎಂದು ಕ್ರಮವಾಗಿ ಹೇಳಿಸಿ, "ನಿನ್ನ ಪಾದವ ತೋರು ಅರಿಶಿನ ಹಚ್ಚೇನು, ಗಂಧ ಹಚ್ಚೇನು" ಎಂದು ಹೇಳಿಸಿ ಆ ಕೆಲಸ ಮಾಡಿಸುತ್ತಿದ್ದರು. ಅರಿಶಿನ, ಗಂಧಗಳ ಕಾರ್ಯಕ್ರಮವಾದ ಮೇಲೆ ಚೆಂಡಾಟವನ್ನು ಆಡಿಸುತ್ತಾರೆ. ಗಂಡು ಹೆಣ್ಣನ್ನು ಎದುರು ಬದರಿಗೆ ಕೂರಿಸಿ, ಹೂವನ್ನು ಚೆಂಡಿನಂತೆ ಸುತ್ತಿ ಕೊಡುತ್ತಾರೆ. ಆ ಹೂವಿನ ಚೆಂಡನ್ನು ಗಂಡು ಹೆಣ್ಣು ಒಬ್ಬರು ಇನ್ನೊಬ್ಬರ ಬಳಿಗೆ ಎಸೆಯುತ್ತಾರೆ. ಅರಿಶಿನ ಹಚ್ಚುವ, ಗಂಧ ಹಚ್ಚುವ, ಚೆಂಡಾಟವಾಡುವ ಸಂದರ್ಭಗಳಿಗೆ ತಕ್ಕ ಹಾಡುಗಳನ್ನು ಹುಡುಗಿ ಹಾಡುತ್ತಾಳೆ. ಮದುವೆಗೆ ಮುಂಚೆ ಹೆಣ್ಣಿಗೆ ಇಂಥ ಹಾಡುಗಳನ್ನೆಲ್ಲ ಕಲಿಸಿರುತ್ತಾರೆ. ಈ ಹಾಡುಗಳೆಲ್ಲ ಕನ್ನಡದಲ್ಲಿ ಪ್ರಚಲಿತವಿರುವವುಗಳೇ ಆಗಿರುತ್ತವೆ.

ಈ ಮೇಲಿನ ವಿವರಣೆಯನ್ನು ನೋಡಿದಾಗ ಇದರಲ್ಲಿ ವಿನೋದವೇನಿದೆ, ಎಲ್ಲರೂ ಸಂತೋಷಪಡತಕ್ಕಂಥ ವಿಷಯ

ಗಳೇನಿವೆ ಎಂದು ಪ್ರಶ್ನೆ ಮೂಡುವುದು ಸಹಜ. ಅರಿಶಿನೆಣ್ಣೆ ಮಾಡಿಸುವವರ ಬುದ್ಧಿವಂತಿಕೆಯೇ ಇಲ್ಲಿಯ ಪ್ರಮುಖ ಅಂಶ. ಒಳ್ಳೆಯ ರಸಿಕರೂ ವಿನೋದಪರರೂ ಆದವರೇ ಅರಿಶಿನೆಣ್ಣೆ ಮಾಡಿಸಬೇಕು. ಶಾಸ್ತ್ರಕ್ಕೆ ಮೇಲೆ ಹೇಳಿದಂತೆ ಗಂಡುಹೆಣ್ಣಿನ ಕೈಯಲ್ಲಿ ಹೇಳಿಸುವುದರಿಂದ ಯಾವ ಸೊಗಸೂ ಇರುವುದಿಲ್ಲ. ಚಿಲಕುಂದ ಗ್ರಾಮದ ನಾಗಪ್ಪಶಾಸ್ತ್ರಿಗಳು ಎಂಬುವರು ಸಂಸ್ಕೃತ ವಿದ್ವಾಂಸ ರಾಗಿದ್ದರು. ಹಾಸ್ಯ, ವಿಡಂಬನೆ ಮಾಡುವುದರಲ್ಲಿ ಚತುರರು. ಇವರು ಮಾಡಿಸಿದ ಕೆಲವು ಅರಿಶಿನೆಣ್ಣೆಗಳನ್ನು ನಾನು ನೋಡಿದ್ದೇನೆ. ಅವರು ಗಂಡುಹೆಣ್ಣುಗಳ ಕೈಯಲ್ಲಿ ಹೇಳಿಸುವಾಗ ಕೊಂಕಿನ ನುಡಿಗಳನ್ನೋ, ವಿಪರೀತಾರ್ಥದ ಮಾತುಗಳನ್ನೋ ಹೇಳಿಕೊಡುತ್ತಾರೆ. ಹೆಣ್ಣೇನೋ ಹೇಳಿಕೊಟ್ಟಿದ್ದನ್ನು ಹೇಳಿಬಿಡುತ್ತಾಳೆ. ಅವಳ ಕೈಲಿ ತನ್ನ ಬಗ್ಗೆ ಕೊಂಕುನುಡಿಗಳನ್ನೋ, ವ್ಯಂಗ್ಯವನ್ನೋ ನುಡಿಸಿದಾಗ ಗಂಡು "ಹಾಗಲ್ಲ ಶಾಸ್ತ್ರಿಗಳೇ" ಎಂದು ತಡೆಹಿಡಿಯುತ್ತಾನೆ. "ಯಾತಕ್ಕೆ? ಅದರಲ್ಲಿ ಏನು ತಪ್ಪು ಇದೆ ?" ಎಂದು ಶಾಸ್ತ್ರಿಗಳು ಪ್ರಶ್ನಿಸುತ್ತಾರೆ. ಅವನು ಆ ಪದದ ಅರ್ಥ ಹೇಳಿ, "ನನ್ನ ಹೆಂಡತಿ ಹಾಗಿದ್ದಾಳೆಯೆ ?" ಎಂದು ಶಾಸ್ತ್ರಿಗಳಿಗೆ ಸವಾಲು ಹಾಕುತ್ತಾನೆ. "ಹಾಗಾದರೆ ಸರಿಯಾದ ಪದವನ್ನು ನೀನೇ ಹೇಳಪ್ಪ" ಎನ್ನುತ್ತಾರೆ ಶಾಸ್ತ್ರಿಗಳು. ಅವನು ಅಲ್ಲಿಗೆ ಸರಿಯಾದ ಪದವನ್ನು ಹುಡುಕಿ ಹೇಳಬೇಕು. ಅದನ್ನು ಶಾಸ್ತ್ರಿಗಳು ಸುಲಭವಾಗಿ ಒಪ್ಪುತ್ತಾರೆಯೆ ? ಆ ಪದದಲ್ಲಿರುವ ದೋಷವನ್ನೇ ಎತ್ತಿ ತರ್ಕ ಮಾಡುತ್ತಾರೆ. ಮದುವೆಯ ಗಂಡೂ ತರ್ಕ ಮಾಡುತ್ತಾನೆ. ಆಗ ಜನರೆಲ್ಲ ಗಂಡನ್ನು ಹೊಗಳುತ್ತಾರೆ. ಅವನ ತಿಳುವಳಿಕೆಗೆ ತಲೆದೂಗುತ್ತಾರೆ. ತಮಾಷೆ ಮಾಡಿದಾಗ ಗೊಳ್ಳೆಂದು ನಗುತ್ತಾರೆ.

ಗಂಡಿನ ಕೈಯಲ್ಲಿ ಹೆಣ್ಣಿನ ವರ್ಣನೆಯನ್ನು ಕಾವ್ಯಗಳಲ್ಲಿರುವಂತೆ ಶಾಸ್ತ್ರಿಗಳು ಮಾಡಿಸುತ್ತ ಹೋಗುತ್ತಾರೆ. ಚಂದ್ರವದನೆ, ಭೃಂಗಕುಂತಳೆ ಎಂದು ಹೇಳಿಕೊಟ್ಟು ಹೇಳಿಸುತ್ತ 'ಮಯೂರಕಂಠೇ' ಎನ್ನುತ್ತಾರೆ ಶಾಸ್ತ್ರಿಗಳು; ಗಂಡು 'ಮಯೂರಕಂಠೇ' ಎಂದು ಹೇಳಿಬಿಡುತ್ತಾನೆ. ಆಗ ಅದರ ಒಳ ಅರ್ಥವನ್ನು ತಿಳಿದವರು ಗೊಳ್ಳೆಂದು ನಗುತ್ತಾರೆ. ಗಂಡು ಪೆಚ್ಚಾಗುತ್ತಾನೆ. ನವಿಲಿನ ಕತ್ತು ಎಂದರೆ ಚೆನ್ನಾಗಿಯೇ ಇದೆಯಲ್ಲ ಎಂದು ಮೇಲುನೋಟಕ್ಕೆ ಎನಿಸುತ್ತದೆ. ಏತಕ್ಕೆಂದರೆ ನವಿಲು ಸುಂದರವಾದ ಪಕ್ಷಿ. ಯಾರಾದರೂ ಒಬ್ಬರು, "ಏನಯ್ಯ, ನಿನ್ನ ಹೆಂಡತಿಯ ಕತ್ತು ನವಿಲಿನ ಕತ್ತಿನಂತಿದೆಯೆ ?" ಎಂದು ಕೇಳುತ್ತಾರೆ. ಆಗಲೂ ಗಂಡಿಗೆ ಅರ್ಥವಾಗದಿದ್ದರೆ, "ನವಿಲಿನ ಕತ್ತಿನಂತೆ ಉದ್ದವಾದ ಕತ್ತೇನೋ ನಿನ್ನ ಹೆಂಡತಿಯದು ?" ಎಂದು ಶಾಸ್ತ್ರಿಗಳು ಪ್ರಶ್ನಿಸುತ್ತಾರೆ. ಆಗ ಗಂಡಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಇನ್ನೊಬ್ಬರು ಯಾರೋ, "ಕೊಕ್ಕರೆ ಕತ್ತು ಶಾಸ್ತ್ರಿಗಳೇ" ಎನ್ನುತ್ತಾರೆ. ಗಂಡು ಪೆಚ್ಚಾಗಿ ನಗುತ್ತಾನೆ. ಜನರೆಲ್ಲ ಗೊಳ್ಳೆಂದು ನಗುತ್ತಾರೆ. ಶಾಸ್ತ್ರಿಗಳು ಅಲ್ಲಿಗೆ ಬಿಡುವುದಿಲ್ಲ. "ಹಾಗಿದ್ದರೆ ಇನ್ನೇನು ಹೇಳಬೇಕು ?" ಎಂದು ಗಂಡನ್ನು ಪ್ರಶ್ನಿಸುತ್ತಾರೆ. ಗಂಡು ಕಾವ್ಯಗಳನ್ನು ಓದಿದ್ದರೆ ಅವನಿಗೆ ಜ್ಞಾಪಕ ಬರುವುದು. ಕಾವ್ಯದಲ್ಲಿ ಬಂದಿದೆ ಎಂದು ನೆನಪಿಸಿಕೊಂಡು "ಕಂಬುಕಂಠೇ" ಎಂದು ತಿದ್ದುತ್ತಾನೆ. "ಕೊಂಬುಕಂಠವೇ ?" ಎಂದು ಒಬ್ಬರು ಹಾಸ್ಯ ಮಾಡುತ್ತಾರೆ. "ಕೊಂಬಿನಂತೆ ಡೊಂಕಾಗಿರುವ ಕತ್ತು" ಎಂದು ಇನ್ನೊಬ್ಬರು ಕುಚೋದ್ಯವಾಡುತ್ತಾರೆ. ಆಗ ಗಂಡು ಧೈರ್ಯವಾಗಿ ಸ್ತ್ರೀವರ್ಣನೆ ಬರುವ ಕಾವ್ಯಭಾಗವನ್ನು ಉದಾಹರಿಸುತ್ತಾನೆ. ಅಲ್ಲಿಗೂ ಅವನನ್ನು ಬಿಡುವುದಿಲ್ಲ. ಗಂಡು ಆಗ ಹೇಳುತ್ತಾನೆ... "ಕಂಬು ಎಂದರೆ ಶಂಖ. ಕಂಬುಗ್ರೀವಾ ಅಥವಾ ಕಂಬುಕಂಠೇ ಎಂದರೆ ಶಂಖದ ಮೇಲೆ ಮೂರು ಗೆರೆಗಳು ಇರುತ್ತವಲ್ಲ ಹಾಗೆ ಮೂರು ಗೆರೆಯುಳ್ಳ ದುಂಡನೆಯ ಕತ್ತು" ಎಂದು ಅರ್ಥವನ್ನು ವಿವರಿಸುತ್ತಾನೆ. ಶಾಸ್ತ್ರಿಗಳು ಪುನಃ ಪ್ರಶ್ನಿಸುತ್ತಾರೆ, "'ಕಂಬು' ಎಂಬ ಪದದಲ್ಲಿ ಉಕಾರವು ಹ್ರಸ್ವವೋ ದೀರ್ಘವೋ ?" ಸಭೆಯಲ್ಲಿದ್ದ ಸಂಸ್ಕೃತ ವಿದ್ವಾಂಸರಿಗೆ ಶಾಸ್ತ್ರಿಗಳ ಕುಹಕ ಅರ್ಥವಾಗುತ್ತದೆ. ಅವರು ಮುಸಿಮುಸಿ ನಗುತ್ತಾರೆ. ಗಂಡು ಇದೇನಪ್ಪ ಹೊಸದು ಬಂತು ಎಂದು ಪೇಚಿಗೆ ಸಿಲುಕುತ್ತಾನೆ. ಆಗ ಶಾಸ್ತ್ರಿಗಳು "ಕಂಬೂ ಎಂದು ಉಕಾರವು ದೀರ್ಘವಾದರೆ ಕಳ್ಳ ಅಥವಾ ಚೋರ ಎಂದು ಅರ್ಥವಲ್ಲವೇ" ಎಂದು ಯಾವುದೋ ಒಂದು ಕಾವ್ಯಭಾಗವನ್ನು ಉದಹರಿಸುತ್ತಾರೆ. ಶಾಸ್ತ್ರಿಗಳ ಜ್ಞಾನವನ್ನು ನೋಡಿ ಎಲ್ಲರೂ ಆಶ್ಚರ್ಯಪಡುತ್ತಾರೆ. ಮದುವೆಹೆಣ್ಣು -ತೆಳ್ಳಗಿನ ಚುರುಕು ಹುಡುಗಿಯಾಗಿದ್ದರೆ 'ಗಜಗಮನೆ' ಎಂದು ಹೇಳಿಸುತ್ತಾರೆ. ಆಗ ಗಂಡು "ಆನೆಯಂತಿಲ್ಲ ಅವಳ ನಡಿಗೆ ಶಾಸ್ತ್ರಿಗಳೇ" ಎನ್ನುತ್ತಾನೆ. "ಹೌದಪ್ಪ, ನೀನು ಹೇಳುವುದು ಸರಿ. ಆದರೆ ಮಂದವಾದ ನಡಿಗೆಗೆ ಇಲ್ಲಿ ಪ್ರಾಧಾನ್ಯವೇ ಹೊರತು, ಆನೆಯ ಉಳಿದ ಹೋಲಿಕೆಗಳು ಇಲ್ಲಿ ಸಲ್ಲವು. ಕಾವ್ಯಗಳಲ್ಲಿ ಸ್ತ್ರೀಯರನ್ನು ಹೀಗೆಯೇ ತಾನೆ ವರ್ಣಿಸಿರುವುದು !" ಎಂದು ಶಾಸ್ತ್ರಿಗಳು ವಾದ ಹೂಡುತ್ತಾರೆ. ಮದುವೆಯ ಗಂಡು ಅದಕ್ಕೆ ಒಪ್ಪುವುದಿಲ್ಲ. "ಹಾಗಿದ್ದರೆ ನೀನೇ ಹೇಳು ಏನು ಹೇಳಬೇಕು ?" ಎಂದು ಕೇಳುತ್ತಾರೆ ಶಾಸ್ತ್ರಿಗಳು. ಆಗ ಗಂಡು ಯೋಚಿಸುತ್ತಾನೆ. 'ಏಣಗಮನೆ' ಎನ್ನೋಣವೆ ಎಂದರೆ 'ಓಡುಗಾಲು' ಎಂದು ಕುಚೋದ್ಯ ಮಾಡಿದರೆ ಎಂದುಕೊಂಡು, 'ಮರಾಳಗಮನೆ' ಎಂದು ಹೇಳುತ್ತಾನೆ. ಗಂಡನ್ನು ಅಲ್ಲಿಗೂ ಬಿಡುವುದಿಲ್ಲ ಶಾಸ್ತ್ರಿಗಳು. "ಹಂಸಪಕ್ಷಿಯ ಕಾಲು ಹೇಗಿರುತ್ತದೆ ನೋಡಿದ್ದೀಯಾ ? ಕದರುಗಡ್ಡಿಯ ಹಾಗೆ ನಿನ್ನ ಹೆಂಡತಿಯ ಕಾಲು ಇದೆಯೇ ?" ಎಂದು ಅಡ್ಡ ಹಾಕುತ್ತಾರೆ. ಆಗ ಗಂಡು, "ಕವಿಗಳು ಹಾಗೆ

ಹೇಳುತ್ತಾರಲ್ಲ" ಎಂದು ಜಾರಿಕೊಳ್ಳಲು ನೋಡುತ್ತಾನೆ. ಆಗ ಶಾಸ್ತ್ರಿಗಳು, "ನಾನು ಮೊದಲು ಹೇಳಿದ್ದೂ ಕವಿಗಳ ಉಪಮೆಯನ್ನೇ ತಾನೆ ? ಅದನ್ನು ಯಾಕೆ ಒಪ್ಪಿಕೊಳ್ಳಲಿಲ್ಲ?" ಎಂದು ಸವಾಲು ಹಾಕುತ್ತಾರೆ. "ಶಾಸ್ತ್ರಿಗಳೇ, ನಿಮ್ಮ ಎದುರಿಗೆ ನಾನೇ? ಆನೆಯ ಮುಂದೆ ಅಜವಿದ್ದಂತೆ" ಎಂದು ಶಾಸ್ತ್ರಿಗಳನ್ನು ಹೊಗಳಿಬಿಡುತ್ತಾನೆ. "ಹೋಗಲಿ ಬಿಡಿ ಶಾಸ್ತ್ರಿಗಳೇ, ಮುಂದುವರಿಸಿ. ನಿಮ್ಮಷ್ಟು ಅನುಭವಿಗಳೇ ಈ ಕಾಲದ ಹುಡುಗರು? ನಿಮ್ಮಂತೆ ಆಗಲು ಇನ್ನೂ ಎಷ್ಟು ಹೊಳೆಯ ನೀರನ್ನು ಕುಡಿಯಬೇಕೋ ಇವರು" ಎಂದು ಸಭೆಯಲ್ಲಿರುವವರೊಬ್ಬರು ಸಮಜಾಯಿಷಿ ಮಾಡುತ್ತಾರೆ. ಸರಿ, ಅರಿಶಿನೆಣ್ಣೆಯ ಈ ಕಾರ್ಯಕ್ರಮ ಮುಂದುವರಿಯತ್ತದೆ.

ಒಂದು ಸಲ ಶಾಸ್ತ್ರಿಗಳು ಹೆಣ್ಣಿನ ಕೈಯಲ್ಲಿ ಗಂಡಿನ ವರ್ಣನೆ ಮಾಡಿಸುತ್ತಿರುವಾಗ "ಮಹಿಷದಂತೆ ಬಲವಂತನು" ಎಂದು ಹೇಳಿಸಿದರು. ಆಗ ಗಂಡು ಅದಕ್ಕೆ ತಡೆಯೊಡ್ಡಿದ. "ಏನು ಶಾಸ್ತ್ರಿಗಳೇ, ನನ್ನನ್ನು ಎಮ್ಮೆ ಕೋಣ ಎನ್ನುತ್ತೀರಾ?" ಎಂದು ಕೇಳಿದ. ಆಗ ಶಾಸ್ತ್ರಿಗಳು, "ಅಯ್ಯಾ! ಎಮ್ಮೆ ಅದೆಷ್ಟು ಶಕ್ತಿಶಾಲಿ ಪ್ರಾಣಿ ಗೊತ್ತೆ? ನಾನೇನೋ ಬೇಕಾದರೆ ಗಜದಂತೆ ಬಲವಂತ ಎಂದು ಹೇಳಿಸಬಹುದಾಗಿತ್ತು. ಆಗ ನೀನು ಆನೆಯ ಗಾತ್ರದ ಮೈಯುಳ್ಳವನು ಎಂದು ಅರ್ಥ ಮಾಡಬಾರದು ಎಂದು ಸುಮ್ಮನಾದೆ" ಎಂದರು. ಗಂಡು,"ಬೇಡ ಶಾಸ್ತ್ರಿಗಳೇ, ನಾನೇನು ಅಷ್ಟೊಂದು ಕಪ್ಪಗಿರುವೆನೆ? ಭೀಮನಂತೆ ಬಲವಂತನು ಎಂದು ಹೇಳಿಸಿ" ಎಂದ. "ನನಗೇನಪ್ಪ! ನೀನು ಹೇಳಿದ್ದನ್ನು ಹೇಳಿಸಿಬಿಡುತ್ತೇನೆ. ಈ ಸಭೆಯಲ್ಲಿರುವವರು ಯಾರಾದರೂ ಕುಚೋದ್ಯ ಮಾಡಬಹುದೇನೋ, ಯೋಚಿಸಿ ನೋಡು" ಎಂದರು. ಆಗ ಸಭೆಯಲ್ಲಿದ್ದವರು, "ಹೌದು ಹೌದು! ಒಂದು ಗಾಡಿ ಅನ್ನ ತಿನ್ನುವವನು, ವೃಕೋದರ, ಭಯಂಕರ- ಎಂದು ವರ್ಣಿಸಬೇಕಿತ್ತೆ ನಿನ್ನನ್ನು !" ಎಂದರು. ಅಲ್ಲಿಗೆ ಗಂಡಿನ ಬಾಯಿ ಕಟ್ಟಿತು. ಏನು ಹೇಳಬೇಕು ಎಂದು ತಿಳಿಯಲಿಲ್ಲ . ದೇಹದ ವರ್ಣನೆ ಮಾಡುತ್ತ ಮಧ್ಯೆ ಶಾಸ್ತ್ರಿಗಳು, "ನಾರಿಕೇಳ ಪರ್ಣದಂಡದಂತೆ ಬಾಹುಬಲವುಳ್ಳವನೇ" ಎಂದು ಹೆಣ್ಣಿನ ಕೈಯಲ್ಲಿ ಹೇಳಿಸಿದರು. ಶಾಸ್ತ್ರಿಗಳು ನನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದಾರೆ ಎಂದು ಗಂಡಿಗೆ ಗೊತ್ತಾಗಿಹೋಯಿತು. "ಏನು ಶಾಸ್ತ್ರಿಗಳೇ, ನನ್ನನ್ನು ಗೊದಮಟ್ಟೆ ಎಂದು ವರ್ಣಿಸಿ ಪರಿಹಾಸ್ಯ ಮಾಡುತ್ತೀರಾ?" ಎಂದ. ಆಗ ಎಲ್ಲರೂ ಗೊಳ್ಳೆಂದು ನಕ್ಕರು, ಗಂಡು ಕೂಡ ಎಲ್ಲರೊಡನೆ ನಕ್ಕುಬಿಟ್ಟ. ಇನ್ನೊಂದು ಸಂದರ್ಭದಲ್ಲಿ "ನಾನಿನ್ನರಸಿ..." ಎಂದು ಹೇಳಲಾರಂಭಿಸಿದರು. ತಕ್ಷಣ ಗಂಡು ಅವರ ಮಾತನ್ನು ಪೂರೈಸುವುದಕ್ಕೆ ಅವಕಾಶ ಕೊಡದೆ, "ಏನು ಶಾಸ್ತ್ರಿಗಳೇ? ನಾನು ನನ್ನ ಹೆಂಡತಿಯ ರಾಣಿಯೇ?" ಎಂದು ಪ್ರಶ್ನಿಸಿದ. "ಅಲ್ಲವಯ್ಯಾ, ನಿನಗೆ ಬಹಳ ಆತುರ. ಸರಿಯಾಗಿ ಅರ್ಥ ಮಾಡಿಕೊಳ್ಳದೆ ಮಾತನಾಡುತ್ತೀಯೆ. ಪುರುಷನಾದ ನಿನ್ನನ್ನು ಅರಸಿ ಎಂಬ ಸ್ತ್ರೀಲಿಂಗವಾಚಕ ಶಬ್ದದಿಂದ ವರ್ಣಿಸುತ್ತೇನೆಯೇ? ಇಷ್ಟೂ ವ್ಯಾಕರಣ ಜ್ಞಾನವಿಲ್ಲವೆ ನನಗೆ ?" ಎಂದರು ಶಾಸ್ತ್ರಿಗಳು. "ಅಲ್ಲವೋ ಗುಗ್ಗು , ಅರಸಿ ಎಂದರೆ ಹುಡುಕಿ ಎಂಬ ಕನ್ನಡ ಅರ್ಥವನ್ನು ಮರೆತೇಬಿಟ್ಟೆಯಾ" ಎಂದು ಸಭೆಯಲ್ಲಿದ್ದ ಗಂಡಿನ ಗೆಳೆಯ ಕೂಗಿದ. "ಅಯ್ಯೋ! ನಾನು, ನನ್ನ ಹೆಂಡತಿಯ ಗುಲಾಮನೇ ಎಂದು ಅರ್ಥ ಮಾಡಿಕೊಂಡುಬಿಟ್ಟೆ. 'ನಾ ನಿನ್ನ ಅರಸಿ' ಎಂದು ಹೇಳಿದರೆ ವಾಕ್ಯ ಪೂರ್ತಿಯಾಗುವುದಿಲ್ಲವಲ್ಲ" ಎಂದ ಗಂಡು. ಆಗ ಶಾಸ್ತ್ರಿಗಳು, "ಆತುರಗಾರನಿಗೆ ಬುದ್ಧಿ ಮಟ್ಟ ಎಂದು ಹೇಳುವುದು ಇದಕ್ಕೇ. ನಾನಿನ್ನೂ ವಾಕ್ಯವನ್ನು ಪೂರೈಸಿಯೇ ಇರಲಿಲ್ಲ. ಮಟಮಟ ಮಧ್ಯಾಹ್ನ ತೋಟದಿಂದ ದೊಡ್ಡ ಹೊರೆಯನ್ನು ಹೊತ್ತುಕೊಂಡು ಬಂದಿದ್ದೀಯೆ. ನೀರು ಕುಡಿಯಬೇಕು. ನೀನೇ ಹೋಗಿ ನೀರನ್ನು ತೆಗೆದುಕೊಂಡು ಕುಡಿಯವಷ್ಟು ತಾಳ್ಮೆ ಇಲ್ಲ ನಿನಗೆ. ಆಗ ನೀನು ಏನು ಮಾಡುತ್ತೀಯೆ? 'ಲೇ ಒಂದು ಲೋಟ ನೀರು ಕೊಡೆ' ಎಂದು ಕೂಗುಹಾಕುತ್ತೀಯೆ. ಎರಡು ಮೂರು ಸಲ 'ಲೇ' ಮಾಡಿದರೂ ನಿನ್ನ ಹೆಂಡತಿ ಬರುವುದಿಲ್ಲ. ಅವಳು ಮನೆಯಲ್ಲಿರುವುದಿಲ್ಲ ಎಂದುಕೋ. ಆದರೆ ಆ ಕಡೆ ಮಗು ಬೇರೆ ಅಳುತ್ತಾ ಇದೆ. ನಿನಗೆ ಕೋಪ ಬರುತ್ತದೆ. ಆದರೆ ಇನ್ನೂ ತಾರುಣ್ಯದ ಸಂಸಾರ. ಆಗ ನೀನು ಹೆಂಡತಿಯನ್ನು ಹುಡುಕಿಕೊಂಡು ಹೋಗಿ 'ಸಮಾಧಾನ ಮಾಡು' ಎಂದು ಮಗುವನ್ನು ಅವಳ ಕೈಗೆ ಕೊಡುತ್ತೀಯೆ. ಮಗುವಿನ ಮೇಲಿನ ಗಮನದಿಂದ ನಿನಗೆ ನೀರು ಕುಡಿಯಬೇಕೆಂಬುದೂ ಮರೆತುಹೋಗಿರುತ್ತದೆ. ಆಗ ನೀನು ಹೆಂಡತಿಯನ್ನು ಕುರಿತು 'ನಾ ನಿನ್ನ ಅರಸಿ ಬಂದೆ, ಮಗುವನ್ನು ಸಂತೈಸು' ಎಂದು ಹೇಳುತ್ತೀಯಲ್ಲವೆ?" ಶಾಸ್ತ್ರಿಗಳ ಕಲ್ಪನೆಯನ್ನು ಕಂಡ ಜನ 'ಭೇಷ್' ಎಂದರು. ಗಂಡು ಕೂಡ ಮೆಚ್ಚಿಕೆಯ ತಲೆದೂಗಿದ. ಕೊನೆಯಲ್ಲಿ ಹೆಣ್ಣಿನಿಂದ ಮಕ್ಕಳ ಸಂಖ್ಯೆಯನ್ನು ಹೇಳಿಸುವಾಗ, "ಕನ್ಯಾದಾನಕ್ಕೆ ಆರುಹೆಣ್ಣುಗಳನ್ನೂ, ಕನ್ಯಾ ಪ್ರತಿಗ್ರಹಕ್ಕೆ ಆರು ಗಂಡುಗಳನ್ನೂ ನಾನು ಹೆತ್ತುಕೊಂಡು ನೀನು ಎತ್ತಿಕೊಂಡು" ಎಂದು ಹೇಳಿದಾಗ ಗಂಡು, "ಅದ್ಯಾಕೆ ಶಾಸ್ತ್ರಿಗಳೇ, ನಾನೇ ಎತ್ತಿಕೊಳ್ಳಬೇಕು?" ಎಂದು ಸವಾಲು ಹಾಕುತ್ತಾನೆ. "ಅಯ್ಯಾ, ನಿನಗೆ ಇದು ಈಗ ಅರ್ಥವಾಗುವುದಿಲ್ಲ , ಮುಂದೆ ತಿಳಿಯುತ್ತೆ" ಎಂದು ಹೇಳುತ್ತಾರೆ. "ಅದು ಸರಿ ಶಾಸ್ತ್ರಿಗಳೇ, ನನಗೆ ಆರು ಗಂಡು, ಆರು ಹೆಣ್ಣು ಬೇಡ. ನಾನು 'ಒಬ್ಬ' ಸಂಪಾದಿಸಿ ಅಷ್ಟು ಜನಕ್ಕೂ ಅನ್ನ ಹಾಕಲಾರೆ.

ನಾಲ್ಕು ಗಂಡು ಎರಡು ಹೆಣ್ಣು ಸಾಕು" ಎನ್ನುತ್ತಾನೆ ಗಂಡು. ಆಗ ಹೆಣ್ಣು ತುಟಿಯ ಸಂದಿಯಿಂದ, "ಅದೇಕೋ, ಹೆಣ್ಣು ಬೇಡ ಎನ್ನುವುದು. ನಾಲ್ಕು ಹೆಣ್ಣು, ಎರಡು ಗಂಡು ಇರಲಿ" ಎಂದು ಮೃದುವಾಗಿ ನುಡಿಯುತ್ತಾಳೆ. ಆಗ ಶಾಸ್ತ್ರಿಗಳು, "ನೋಡಿದೆಯೇನೋ ನಿನ್ನ ಹೆಂಡತೀನ, ಈಗಲೇ ಎಷ್ಟು ಧೈರ್ಯ" ಎಂದು ಛೇಡಿಸುತ್ತಾರೆ. ಎಷ್ಟು ಗಂಡು, ಎಷ್ಟು ಹೆಣ್ಣು ಎಂಬ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಇಷ್ಟು ಹೊತ್ತಿಗೆ ಎರಡು ಗಂಟೆಗಳ ಕಾಲ ಕಳೆದಿರುತ್ತದೆ. ಯಜಮಾನರು ಬಂದು ದಪ್ಪದನಿಯಲ್ಲಿ, "ಹೀಗೆ ಅರಿಶಿನೆಣ್ಣೆ ಎಂದು ಗಂಟೆಗಟ್ಟಲೆ ಕೂತುಬಿಟ್ಟರೆ ಹೇಗೆ? ...ಬೇರೆ ಕೆಲಸಗಳಿವೆ ಏಳಿ" ಎಂದು ಕೂಗುಹಾಕುತ್ತಾರೆ. ಅಲ್ಲಿಗೆ ಅರಿಶಿನೆಣ್ಣೆ ಶಾಸ್ತ್ರದ ಮುಕ್ತಾಯ. ಹೀಗೆ ಇದು ಎಲ್ಲರಿಗೂ ಉತ್ತಮ ಮನೋರಂಜನೆಯನ್ನು ಒದಗಿಸುತ್ತದೆ.

೩. ಮಾಯಿಪಳದ ಸಭೆ

ಸಂಕೇತಿಗಳ ಐದು ದಿನದ ಅಥವ ಎಂಟು ದಿನದ್ದು ಎಂದು ಹೇಳುವ ಮದುವೆ ಸಮಾರಂಭದಲ್ಲಿ ಒಂದು ವಿಶಿಷ್ಟವಾದ ಆಚರಣೆ ಬಳಕೆಯಲ್ಲಿ ಬಂದಿದೆ. ಧಾರೆಯಾದ ಮೂರನೆಯ ದಿನವನ್ನು 'ಮಾಮನೆ' ಎಂದು ಕರೆಯುವರು. ಬೆಳಗ್ಗೆ ಔಪಾಸನೆ, ಅರಿಶಿನೆಣ್ಣೆ ಮೊದಲಾದುವು ನಡೆಯುವುವು. ಅಂದು ಸಂಜೆ ಒಂದು ವಿಶಿಷ್ಟವಾದ ಸಭೆ ನಡೆಯುವುದು. ಇದಕ್ಕೆ 'ಮಾಯಿಪಳದ ಸಭೆ' ಎಂದು ಹೆಸರು. ಈ ಪದದ ಬಳಕೆ ಹೇಗೆ ಬಂದಿತು ಎಂಬುದು ಇತ್ಯರ್ಥವಾಗಿಲ್ಲ. ಇದನ್ನು **ಕೋಡಂಗಿ ಸಭೆ** ಎಂದೂ ಕೆಲವರು ಕರೆಯುವುದುಂಟು. ಸಂಸ್ಕೃತ ನಾಟಕಗಳಲ್ಲಿ ಬರುವ ವಿದೂಷಕನ ಹಾಸ್ಯದಂತೆ ಈ ಸಭೆ ತೋರುತ್ತದೆ.

ಅಂದಿನ ಸಭೆಗೆ ಹಿರಿಯರು, ಯುವಕರು, ಹೆಂಗಸರು, ಗಂಡಸರು ಎಲ್ಲರೂ ತಪ್ಪದೆ ಹಾಜರಾಗುತ್ತಾರೆ. ಹುಡುಗನ ಸೋದರಮಾವನಿಗೆ ಅಂದು ಅಗ್ರಸ್ಥಾನ. ಹಸೆಮಣೆಯ ಮೇಲೆ ವರನ ಸೋದರಮಾವ ಮತ್ತು ವಿವಾಹಿತ ವರ ಇಬ್ಬರೂ ಕುಳಿತುಕೊಳ್ಳುತ್ತಾರೆ. ಸೋದರಮಾವ ಕಣಿವೆ ಕೆಳಗಿನಿಂದ ಬಂದ ಶ್ರೀವೈಷ್ಣವ ವಿದ್ಯಾವಂತ, ಗುರು ಎಂಬಂತೆ ಪಾತ್ರ ವಹಿಸುತ್ತಾನೆ. ದ್ವಾದಶನಾಮಗಳನ್ನು ಧರಿಸಿರುತ್ತಾನೆ. ಸುಲಿದ ಅಡಕೆಪಟ್ಟೆಯನ್ನು ಶಂಕುವಿನ ಆಕಾರದಲ್ಲಿ ರೂಪಿಸಿ ಅದನ್ನು ಟೋಪಿಯಂತೆ ಮಾಡಿರುತ್ತಾರೆ. ಟೋಪಿಯ ತುದಿಗೆ ಛತ್ರಿಯಂತೆ ಒಂದೆರಡು ಹಪ್ಪಳಗಳನ್ನು ಸಿಕ್ಕಿಸಿರುತ್ತಾರೆ. ಟೋಪಿಯ ಮೇಲೆಲ್ಲ ಕುಂಕುಮ ಅರಿಶಿನಗಳಿಂದ ಕೆಂಪು, ಹಳದಿ ಬಣ್ಣದ ಬೊಟ್ಟುಗಳನ್ನು ಹಾಕಿ ಅಲಂಕರಿಸಿರುತ್ತಾರೆ. ಸೋದರಮಾವ ಇದನ್ನು ಕಿರೀಟದಂತೆ ಧರಿಸಿರುತ್ತಾನೆ. ಕಿವಿಗೆ ಆಂಬೊಡೆ ಸರವನ್ನು ನೇತು ಹಾಕಿರುತ್ತಾರೆ. ಬಾಳೆಕಾಯಿಯನ್ನು ಬಿಲ್ಲೆ ಬಿಲ್ಲೆಯಾಗಿ ಕತ್ತರಿಸಿ, ಅಡಕೆ ಪಟ್ಟೆ ನಾರಿನಲ್ಲಿ ಕೋದು ಸರಗಳನ್ನು ಮಾಡಿರುತ್ತಾರೆ. ಈ ಸರವೇ ಜಪಮಾಲೆ. ಅಡಕೆ ಪಟ್ಟೆಯನ್ನು ಚೌಕವಾಗಿ ಕತ್ತರಿಸಿ ಹೊಲಿದು ಪುಟ್ಟ ಪುಸ್ತಕದಂತೆ ಮಾಡಿ ಅದನ್ನು ಕೈಗೆ ಕೊಟ್ಟಿರುತ್ತಾರೆ. ಇದು ಶಾಸ್ತ್ರಗ್ರಂಥ ಎಂದರೆ ಪ್ರಬಂಧಗ್ರಂಥ. ಇದು ತಮಿಳಿನ ಪವಿತ್ರಗ್ರಂಥ. ಅಡಕೆ ಪಟ್ಟೆಯನ್ನು ಬೀಸಣಿಗೆಯಂತೆ ಮಾಡಿರುವರು. ಒಂದು ಕೈಯಲ್ಲಿ ಶಾಸ್ತ್ರಗ್ರಂಥ, ಇನ್ನೊಂದು ಕೈಯಲ್ಲಿ ಜಪಮಾಲೆ. ಬೀಸಣಿಗೆಯನ್ನು ತೆಗೆದುಕೊಂಡು ಆಗಾಗ್ಗೆ ಬೀಸಿಕೊಳ್ಳುವನು. ಈ ರೀತಿಯಲ್ಲಿ ಅಲಂಕೃತನಾಗಿ ಹಸೆಮಣೆಯ ಮೇಲೆ ಕುಳಿತಿರುತ್ತಾನೆ ಸೋದರಮಾವ. ಮದುವೆಯ ಗಂಡು ಕಚ್ಚೆಪಂಚೆ ಧರಿಸಿ, ಹೆಗಲಿನ ಮೇಲೆ ಶಲ್ಯ, ತಲೆಗೆ ಪಾಗು ಧರಿಸಿ ಸೋದರಮಾವನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾನೆ. ಇವನು ಕೂಡ ನಾಮಗಳನ್ನು ಧರಿಸಿರುತ್ತಾನೆ. ಸೋದರಮಾವ ಮಹಾಪಂಡಿತ, ಗುರು ; 'ವರ'ನು ಅವನ ಶಿಷ್ಯ. ಈಗ ಸಭೆ ಆರಂಭವಾಗುತ್ತದೆ. ಹಿರಿಯ ಹೆಂಗಸರು ಒಬ್ಬರು ಈ ಸಂದರ್ಭದ ಹಾಡನ್ನು ಹಾಡುತ್ತಾರೆ.

ಈಗ ಸಭೆಯಲ್ಲಿ ಮುಂದುಗಡೆ ಕುಳಿತ ಗಂಡಸರು ತಮಾಷೆ ಮಾಡಲು ಶುರುಮಾಡುತ್ತಾರೆ. ಈ ಕೆಳಗಿನ ಸಂವಾದ ಕೇವಲ ಒಂದು ಉದಾಹರಣೆ. ಒಂದು ಮದುವೆಯಲ್ಲಿ ನಡೆದಂತೆ ಸಂವಾದವು ಇನ್ನೊಂದು ಮದುವೆಯಲ್ಲಿ ಇರಲಾರದು. ಪ್ರಶ್ನೆ ಮಾಡುವವರ, ಉತ್ತರ ಕೊಡುವವರ ವಿದ್ಯೆ ಹಾಗೂ ಬುದ್ಧಿಯ ಮಟ್ಟದ ಮೇಲೆ ಸಂವಾದದ ಸ್ವಾರಸ್ಯವು ನಿಂತಿರುತ್ತದೆ. ಶ್ರೀವೈಷ್ಣವ ಗುರು ಎಂಬುದಾಗಿ ನಟಿಸುವುದರಿಂದ ಸಂವಾದವು ಒಂದು ರೀತಿಯ ತಮಿಳಿನಲ್ಲಿ ನಡೆಯುತ್ತದೆ. ಶ್ರೀವೈಷ್ಣವರ ಮನೆ ಮಾತಾದ ತಮಿಳು ಎಂಬಂತೆ ಭಾಷೆಯನ್ನು ಬಳಸುವಾಗ ಸಂಕೇತಿ ಭಾಷೆಯ ರೂಪವು ಕೂಡ ಆ ಭಾಷೆಯಲ್ಲಿ ನುಸುಳುವುದು ಸ್ವಾಭಾವಿಕ.

ಎನ್ನ ಮಹಾಗುರು, ಎಂಗಿರಂದು ವಂದೀರ್‌ಗಳ್?
(ಮಹಾಗುರುಗಳೇ, ನೀವು ಎಲ್ಲಿಂದ ಬಂದಿರಿ?)

ನಂಗಳ್ ಶ್ರೀರಂಗತ್ತಿನ್ ವಂದಿರುಕ್ಕಿರೋಂ.
(ನಾವು ಶ್ರೀರಂಗದಿಂದ ಬಂದಿದ್ದೇವೆ)

ಉಂಗಳ ಪಕ್ಕತ್ತಿಲೇ ಇರಕ್ಕರವ್ವಂ ಯಾರ್?
(ನಿಮ್ಮ ಪಕ್ಕದಲ್ಲಿರುವವನು ಯಾರು?)
ಇವನ್ ಎಮ್ಮುಡೈ ಶಿಷ್ಯನ್
(ಇವನು ನಮ್ಮ ಶಿಷ್ಯ.)

ಶ್ರೀರಂಗತ್ತಿಲೆ ಎನ್ನ ವೇಲೆ ಉಂಗಳದು?
(ಶ್ರೀರಂಗದಲ್ಲಿ ನಿಮ್ಮ ಕೆಲಸವೇನು ?)
ಶ್ರೀರಂಗನಾಥನುಡೈಯ ಸೇವೆ.
(ಶ್ರೀರಂಗನಾಥನ ಸೇವೆ)
ಅಂದ ಸೇವೆ ಎನ್ರಾಲ್ ಪೊಂಗಲ್ ಪ್ರಸಾದಮಾ?
(ಆ ಸೇವೆ ಎಂಬುದು ಪೊಂಗಲ್ ಪ್ರಸಾದವನ್ನು ಹೊಡೆಯುವುದೋ ?)
ಎನ್ನ ಪೇಶು ಪೇಶರಾಯ್, ಆಂಡವನೇ.
(ಏನು ಮಾತನಾಡುತ್ತೀರಿ, ದೇವರೇ)

ಎಂದು ಹೇಳಿ ಗುರು ಒಂದು ಸಲ ತಲೆಯನ್ನಲ್ಲಾಡಿಸಿ ಒಂದು ಆಂಬೊಡೆಯನ್ನು ಬಾಯಲ್ಲಿ ಕಚ್ಚಿಕೊಂಡು ತಿನ್ನುತ್ತಾನೆ. ಆಗ ಎಲ್ಲರೂ ಜೋರಾಗಿ ನಗುತ್ತಾರೆ.

ಆಮ, ಅಂದ ಸೇವೆಯಲಿರಿಂದು ಎನ್ನ ಲಾಭಂ?
(ಹೌದು, ಆ ಸೇವೆಯಿಂದ ಏನು ಲಾಭ ?)
ಎನ್ನ ಲಾಭಮಾ, ಪಾರ್
(ಏನು ಲಾಭವೇ, ನೋಡು,)

ಎಂದು ಹೇಳಿ ಇನ್ನೊಂದು ಸಲ ತಲೆಯಲ್ಲಾಡಿಸಿ, ಆಂಬೊಡೆ ಕಚ್ಚಿಕೊಳ್ಳುವನು. ಆಗ ಪುನಃ ಎಲ್ಲರೂ ನಗುವರು.

ಇವನಕ್ಕು ಪೊಂಗಲ್ ಪೋರಾದು, ಆಂಬೊಡೆ ವೇಣುಂ
(ಇವನಿಗೆ ಪೊಂಗಲು ಸಾಲದು, ಆಂಬೊಡೆ ಬೇಕು)
ಎಂದು ಒಬ್ಬರು ಟೀಕೆ ಮಾಡುವರು. ಆಗ ಪುನಃ ಎಲ್ಲರೂ ಗೊಳ್ಳೆನ್ನುವರು.

ಇನ್ನೊಬ್ಬರು ಮುಂದೆ ಬಂದು ಕೈಯಲ್ಲಿರುವ ಅಡಕೆಪಟ್ಟೆ ಪುಸ್ತಕಕ್ಕೆ ಕೈ ಹಾಕಿ **ಇದು ಎನ್ನ ?** ಎಂದು ಕಿತ್ತುಕೊಳ್ಳಲು ಹೋಗುವರು. ಆಗ ಗುರು, **ಏಯ್, ತೊಡಾದೆ. ಮಹಾಪವಿತ್ರ ಗ್ರಂಥಂ** (ಏಯ್ ಮುಟ್ಟಬೇಡ, ಇದು ಮಹಾಪವಿತ್ರ ಗ್ರಂಥ) ಎನ್ನುತ್ತಾನೆ.

ಪಾಕಶಾಸ್ತ್ರಮಾ, ನಾಟ್ಯಶಾಸ್ತ್ರಮಾ?
(ಪಾಕಶಾಸ್ತ್ರವೋ, ನಾಟ್ಯಶಾಸ್ತ್ರವೋ ?)

ಎಂದು ಕಿತ್ತುಕೊಳ್ಳಲು ಹೋಗುವರು.

ಉಡಯ್ಯ, ಎಂದು ಪುಸ್ತಕವನ್ನು ಬಿಗಿಯಾಗಿ ಹಿಡಿದುಕೊಂಡಿರುತ್ತಾರೆ ಗುರು. **ಇದ್ ತಮಿಳ್ ಗ್ರಂಥಂ.** (ಇದು ತಮಿಳು ಗ್ರಂಥ).

ಅಪ್ಪಡಿಯನ್ನ ಎನ್ನ?
(ಹಾಗೆಂದರೆ ಏನು?)

ಉನ್ನ ತಲೆಕಾಯಿ ಎಂದು ಹೇಳಿ ಇನ್ನೊಂದು ಸಲ ತಲೆಯನ್ನು ಅಲ್ಲಾಡಿಸಿ ಆಂಬೊಡೆಯನ್ನು ಕಚ್ಚಿಕೊಳ್ಳುವನು.

ಅಂದೆ ಗ್ರಂಥತ್ ಪೇರ್ ಎನ್ನ?
(ಆ ಗ್ರಂಥದ ಹೆಸರು ಏನು ?)
ಮಹಾಪ್ರಬಂಧಂ. ಉನಕೆನ್ನ ತೆರಿಯರದು ಮಡೆಯಾ!
(ಮಹಾಪ್ರಬಂಧ, ನಿನಗೇನು ತಿಳಿಯುವುದು ಮೂಢ.)

ಆಮ, ಕಣಿವೆ ಕೀಳಿಲಿರಂದು ಇಂಗೆ ಏಂ ವಂದೀರ್‌ಗಳ್?
(ಹೌದು, ಕಣಿವೆ ಕೆಳಗಿನಿಂದ ಇಲ್ಲಿಗೆ ಏಕೆ ಬಂದಿರಿ?)
ಶಿಷ್ಯನೈ ಸಂಪಾದಿಕ್ಕವೇಣುಂ ಎನ್ರು.
(ಶಿಷ್ಯನನ್ನು ಸಂಪಾದಿಸಬೇಕು ಎಂದು)

ಶಿಷ್ಯನ್, ಕಡೆಚ್ಚಾನಾ ?
(ಶಿಷ್ಯನು ದೊರಕಿದನೇ ?)
ಇಂಗೇ, ಎನ್ನ ಪಕ್ಕತುಳ್ಳೇ ಇರಿಕ್ಕಿರಾನೇ.
(ಇಲ್ಲೇ, ನನ್ನ ಪಕ್ಕದಲ್ಲೇ ಇದ್ದಾನಲ್ಲ)

ಎನ್ನ ಮಹಾಗುರು. ಅವನಕ್ಕು ಕಲ್ಯಾಣಂ ಇಪ್ಪೊ ತಾನೆ ಆಚೆ.
ಅವನ್ ಮನ್ನೈವಿ ಕೋಪಿಚ್ಚಿಕ್ಕಿರದು ಇಲ್ಲೆಯಾ, ನೀಂಗಳ್ ಶಿಷ್ಯನಾಯ್ ಸ್ವೀಕರಿಚ್ಚಾಲ್ ?
(ಏನು ಮಹಾಗುರು, ಅವನಿಗೆ ಈಗ ತಾನೆ ಮದುವೆ ಆಗಿದೆಯಲ್ಲ? ಅವನ ಹೆಂಡತಿ ಕೋಪಿಸಿಕೊಳ್ಳುವುದಿಲ್ಲವೆ, ನೀವು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರೆ?)
ಪೋಯ್ಯ, ಪೋಯ್ಯ. ಎನಕು ಶಿಷ್ಯನ್ ಆಪಟ್ಟಾನ್. ಅವಳ ಕವಲೈಕ್ಕು ನಾ ಎನ್ನ ಶೈವೆ. ಅವಳೂಂ ಶಿಷ್ಯೆಯಾಯ್ ವರಟ್ಟುಂ.
ಹೋಗಯ್ಯ, ಹೋಗಯ್ಯ. ನನಗೆ ಶಿಷ್ಯ ಸಿಕ್ಕಿದ. ಅವಳ ಚಿಂತೆಗೆ ನಾನೇನು ಮಾಡಲಿ. ಬೇಕಾದರೆ ಅವಳೂ ಶಿಷ್ಯೆಯಾಗಿ ಬರಲಿ.

ಜನರು : "ಆಹಾ, ಮಹಾಗುರು. ಉಂಗಳಕ್ಕು ವೆಕ್ಕಮಿಲ್ಲಿಯಾ? ಶಿಷ್ಯನೈ ಮರಂದು ಶ್ರೀರಂಗತಕ್ಕು ಪೋಯಿವಾರಂಗಳ್"
(ಆಹಾ, ಮಹಾಗುರು, ನಿಮಗೆ ನಾಚಿಕೆಯಾಗುವುದಿಲ್ಲವೇ? ಶಿಷ್ಯನನ್ನು ಮರೆತು ಶ್ರೀರಂಗಕ್ಕೆ ಹೋಗಿ ಬನ್ನಿ).

ಈ ರೀತಿಯಲ್ಲಿ ಸಮಯಕ್ಕೆ ತೋಚಿದಂತೆ ಪ್ರಶ್ನೆ, ಉತ್ತರ, ಹಾಸ್ಯ, ಪರಿಹಾಸ್ಯ, ನಗು ಇದರಲ್ಲಿ ಸಭೆ ಮುಳುಗುತ್ತದೆ. ಕಿವಿಗೆ ಕಟ್ಟಿದ ಆಂಬೊಡೆಗಳು, ಟೋಪಿಗೆ ಸಿಕ್ಕಿಸಿದ ಹಪ್ಪಳಗಳು ಹೊಟ್ಟೆಯನ್ನು ಸೇರಿರುತ್ತವೆ. ಅನಂತರ ಆರತಿ ಮತ್ತು ಸೋದರಮಾವನಿಗೆ ಉಡುಗೊರೆ ಇತ್ಯಾದಿಗಳೊಡನೆ ಸಭೆಯು ಮುಗಿಯುತ್ತದೆ.

ಮದುವೆ ಸಮಾರಂಭಗಳ ನಡುವೆ ಇದೊಂದು ಉತ್ತಮ ವಿನೋದ ಮತ್ತು ಮನೋರಂಜನೆ. ಆದರೆ ಈ ವಿನೋದಕ್ಕೆ ಶ್ರೀವೈಷ್ಣವರನ್ನೇ ಏತಕ್ಕೆ ಆರಿಸಿಕೊಂಡರೆಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಶ್ರೀವೈಷ್ಣವ ಧರ್ಮಪ್ರಚಾರಕರು ಕರ್ನಾಟಕಕ್ಕೆ ಬಂದಾಗ ಕೆಲವು ಜನ ಸಂಕೇತಿಗಳನ್ನು ಶ್ರೀವೈಷ್ಣವ ಧರ್ಮಕ್ಕೆ ತಿರುಗಿಸಲು ಪ್ರಯತ್ನಪಟ್ಟಿರಬಹುದೇ, ಆ ಸಂಗತಿಯನ್ನೇ ಕಾರಣವಾಗಿಟ್ಟುಕೊಂಡು ಈ ರೀತಿಯ ಒಂದು ವಿನೋದವನ್ನು ಏರ್ಪಡಿಸಿದರೇ ಎಂಬ ಸಂದೇಹವುಂಟಾಗುತ್ತದೆ. ನಾಚಾರಮ್ಮನೂ ಆಕೆಯ ಅನುಯಾಯಿಗಳೂ ತಮಿಳುದೇಶದಿಂದ ಕರ್ನಾಟಕಕ್ಕೆ ವಲಸೆ ಬರುವಾಗ ಶಿವನಸಮುದ್ರಕ್ಕೆ ಬಂದು, ಅಲ್ಲಿಂದ ಕಾವೇರಿ ನದಿಯ ದಡವನ್ನೇ ಅನುಸರಿಸಿ ಪ್ರಯಾಣ ಮಾಡುತ್ತ ಹೆಮ್ಮಿಗೆ ಎಂಬ ಸಣ್ಣ ಅಗ್ರಹಾರಕ್ಕೆ ಬಂದರೆಂದೂ, ಅಲ್ಲಿ ಕೆಲವೇ ಜನ ನಿಂತರೆಂದೂ ಎಂ. ಕೇಶವಯ್ಯನವರು 'ಶ್ರೀ ನಾಚಾರಮ್ಮನ ಜೀವನಚರಿತ್ರೆ' ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. "ಹೆಮ್ಮಿಗೆಯಲ್ಲಿ ನೆಲಸಿದ್ದ ಸಂಕೇತಿಗಳೆಲ್ಲ ರಾಮಾನುಜೀಯ ಮತಾನುಯಾಯಿ ಗಳಾಗಿ ಶ್ರೀವೈಷ್ಣವರಾದರೆಂದೂ, ಇದಕ್ಕೆ ಸಂಕೇತಿಗಳಲ್ಲಿ ಮದುವೆ ಕಾಲದಲ್ಲಿ ನಡೆಸುವ ಒಂದು ಪ್ರಹಸನರೂಪವಾದ ಪದ್ಧತಿಯೇ ಆಧಾರವೆಂದೂ ಅನೇಕರು ನಂಬಿರುವರು" ಎಂದು ಅವರು ಹೇಳಿದ್ದಾರೆ.

ಇಂಥ ವಿನೋದವು ವಿರಸಕ್ಕೆ ಎಡೆಮಾಡಿಕೊಟ್ಟಿಲ್ಲದೇ ಇರುವುದು ಸಮಾಧಾನಕರ ವಿಷಯ. ಹಿಂದಿನ ಕಾಲದಲ್ಲಿ ಇಂಥ ತಮಾಷೆಗಳನ್ನು ಗಂಭೀರವಾಗಿ ಪರಿಗಣಿಸದೇ ಇದ್ದುದೇ ನಮ್ಮ ಸಂಸ್ಕೃತಿಯ ವಿಶೇಷ ಲಕ್ಷಣ ಎಂದು ಹೇಳಬಹುದು. ಈಗಿನ ಕಾಲದಲ್ಲಿ ಮತಾಚರಣೆಯ ಅಥವಾ ಒಂದು ಜಾತಿಯ ಸಂಪ್ರದಾಯದ ಮೂಲೋದ್ದೇಶವನ್ನು ಪರಿಗಣಿಸದೆ ಬೇರೆ ಮತದವರು ಅಥವಾ ಅನ್ಯಜಾತಿಯವರು ಅಸಹನೆಯನ್ನು ವ್ಯಕ್ತಪಡಿಸುವುದರಿಂದ ಮತವೈಷಮ್ಯಗಳೂ, ಗುಂಪು ಘರ್ಷಣೆಗಳೂ ನಡೆಯುತ್ತವೆ. ಭಾರತೀಯ ಸಂಸ್ಕೃತಿಯ ಪ್ರಮುಖ ಲಕ್ಷಣವೇ ಅನ್ಯಮತ ಸಹಿಷ್ಣುತೆಯಲ್ಲವೇ?

೪. ಇಸ್ಪೀಟು

ಇಸ್ಪೀಟು ಎಂದರೆ ಅದೊಂದು ಮಾಯಕ ಆಟ. ಅದರ ಆಕರ್ಷಣೆ ಮತ್ತುಬರಿಸುವಂಥದು. ಇಸ್ಪೀಟು ಆಟದ ಮೋಹಕ್ಕೆ ಅನೇಕ ಜನ ಬಲಿಯಾಗಿದ್ದರೆ, ಆಟದ ಸೊಗಸಿಗೆ ಮತ್ತು ಮನೋರಂಜನೆಗೆ ಆಡುವವರು ಹೆಚ್ಚು ಜನ. ಆದರೆ ಕೆಲವರಿಗೆ ಇದು ಒಂದು ಅಮಲು. ಅದು ಉಂಟಾಗುವುದು ಹಣವನ್ನು ತೊಡಗಿಸಿ ಆಟ ಆಡಿದಾಗ. ಆಡುತ್ತ ಆಡುತ್ತ ಹೋದಂತೆ ಅಮಲು ಏರುತ್ತ ಹೋಗುತ್ತದೆ. ಗೆದ್ದು ಪಟ್ಟೆಯಲ್ಲಿನ ಹಣವನ್ನು ಬಾಚಿಕೊಂಡಾಗ ಆಗುವ ಸಂತೋಷ, ಸೋತಾಗಿನ ಸಂಕಟ, ಪುನಃ ಗೆಲ್ಲಲೇಬೇಕೆಂಬ ಛಲ- ಇವು ಆಟಗಾರರನ್ನು ಆಟಕ್ಕೆ ಬಂಧಿಸಿಬಿಡುತ್ತವೆ.

ಇಸ್ಪೀಟಾಟವು ಇಂಗ್ಲಿಷಿನವರ ಮೂಲಕ ನಮ್ಮ ದೇಶದಲ್ಲಿ ಪ್ರಚಾರಕ್ಕೆ ಬಂದಿತು. ಯೂರೋಪಿನಲ್ಲಿ ಇದಕ್ಕೆ ಆರುನೂರು ವರ್ಷಗಳಿಗಿಂತ ಕಡಮೆಯಿಲ್ಲದ ಇತಿಹಾಸವಿದೆ ಎಂದು ಹೇಳಲಾಗುತ್ತದೆ. ಇಸ್ಪೀಟಿನ ಪ್ರಾಚೀನತೆಯನ್ನು ನಿಷ್ಕರ್ಷಿಸಿ ಇದು ಹೀಗೆ ಎಂದು ಹೇಳುವುದು ಕಷ್ಟಕರವಾದ ಕೆಲಸ. ಚೀನಾದೇಶದಲ್ಲಿ ಕ್ರಿ.ಶ. ೯೬೯ರಷ್ಟು ಹಿಂದೆಯೇ ಈ ಆಟದ ಪರಿಚಯವಿತ್ತೆಂದು ತಿಳಿದುಬರುತ್ತದೆ. ಆದರೆ ಅದು ಇಂದಿನ ಇಸ್ಪೀಟು ಆಟದಂತೆ ಇರಲಿಲ್ಲ. ಇಸ್ಪೀಟು ಆಟವು ಇಂದಿನ ರೂಪವನ್ನು ತಳೆದದ್ದು ಈಚೆಗೆ. ಇಟಲಿಯಲ್ಲಿ ತಯಾರಾದ ಇಸ್ಪೀಟು ಎಲೆಗಳು ಆಧುನಿಕ ಇಸ್ಪೀಟಿನ ಪ್ರಾಚೀನ ರೂಪವೆಂಬುದು ಸತ್ಯ. ಪೂರ್ವದೇಶಗಳಿಂದ ಬಂದ ಇಸ್ಪೀಟಿನ ಎಲೆಗಳಿಗಿಂತ ಇಟಲಿಯ ಎಲೆಗಳು ಭಿನ್ನವಾಗಿದ್ದವು. ಇಟಲಿಯಲ್ಲಿ ರೂಪುಗೊಂಡ ಇಸ್ಪೀಟು ಆಟದಲ್ಲಿ ಇಪ್ಪತ್ತೆರಡು ಎಲೆಗಳಿದ್ದವೆಂದು ತಿಳಿದುಬರುತ್ತದೆ. ಅನಂತರ ಯೂರೋಪಿನ ಹಲವು ದೇಶಗಳಲ್ಲಿ ಪ್ರಚಲಿತವಾದ ಆಟದಲ್ಲಿ ೩೬, ೩೨, ೪೦, ೩೨ ಎಲೆಗಳ ವಿವಿಧ ರೂಪದ ಇಸ್ಪೀಟು ಆಟಗಳು ಪ್ರಚಾರಕ್ಕೆ ಬಂದುವು. **ಇಂಗ್ಲಿಷರು ಬಳಸುತ್ತಿದ್ದ ಐವತ್ತೆರಡು ಎಲೆಗಳ ಇಸ್ಪೀಟಿನ ಕಟ್ಟುಗಳೇ ಭಾರತದಲ್ಲಿ ಬಳಕೆಗೆ ಬಂದುವು.**

ಭಾರತದಲ್ಲಿ ಹಿಂದಿನಿಂದ **ಗಂಜೀಫು** ಎಂಬ ಎಲೆಗಳ ಆಟವು ಪ್ರಚಾರದಲ್ಲಿದ್ದಿತು. ದಶಾವತಾರಗಳ, ದೇವದೇವಿಯರ ಚಿತ್ರಗಳಿದ್ದ

ದುಂಡನೆಯ ಎಲೆಗಳನ್ನು ಗಂಜೀಫ಼ು ಆಟದಲ್ಲಿ ಬಳಸುತ್ತಿದ್ದರು. ಗಂಜೀಫಿನ ಆಟದಲ್ಲಿ ಎಲೆಗಳು ಹೆಚ್ಚು. ಸಾಮ್ರಾಜ್ಯಪೇಟಿಕಾ ಎಂಬ ಗಂಜೀಫಿನ ಆಟದಲ್ಲಿ ಮೂವತ್ತಾರು ಎಲೆಗಳು ಇರುತ್ತಿದ್ದವು. ಹೆಚ್ಚು ಬಳಕೆಯಲ್ಲಿದ್ದ ದಶಾವತಾರೀ ಗಂಜೀಫ಼ು ಆಟದಲ್ಲಿ ೧೨೦ ಎಲೆಗಳನ್ನು ಉಪಯೋಗಿಸುತ್ತಿದ್ದರು. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಈ ಹತ್ತು ಅವತಾರಗಳಿಗೆ ಪ್ರತಿಯೊಂದಕ್ಕೂ ರಾಜಾ, ವಜೀರ್ ಮತ್ತು ಎಕ್ಕಾದಿಂದ ಹತ್ತು- ಈ ಪ್ರಕಾರ ಹನ್ನೆರಡು ಎಲೆಗಳನ್ನು ಸೇರಿಸಿ ಇಟ್ಟುಕೊಂಡು, ಮೂರು ಜನ ಸರದಿಯಂತೆ ಎಲೆಗಳನ್ನು ಹಂಚಿಕೊಂಡು ಆಡುತ್ತಿದ್ದರು. ಈ ಗಂಜೀಫಿನ ಆಟವು ಪ್ರಾಯಃ ಶ್ರೀಮಂತರು, ರಾಜರಾಣಿಯರು, ಆಸ್ಥಾನಿಕರು, ರಸಿಕರು- ಮೊದಲಾದ ಮೇಲ್ವರ್ಗದ ಜನರಲ್ಲಿ ಹೆಚ್ಚಾಗಿ ಪ್ರಚಾರದಲ್ಲಿದ್ದಿತೆಂದು ಊಹಿಸಬಹುದು. ಗಂಜೀಫಿನ ಎಲೆಗಳನ್ನು ಚಿತ್ರಕಾರರು ತಯಾರಿಸುತ್ತಿದ್ದರು. ಚಿತ್ರಕಾರರು ಇದನ್ನು ಒಂದು ಕಲೆಯನ್ನಾಗಿ ರೂಢಿಸಿಕೊಂಡಿದ್ದರು. ಆದುದರಿಂದ ಗಂಜೀಫಿನ ಎಲೆಗಳಿಗೆ ಬೆಲೆಯೂ ಹೆಚ್ಚಾಗಿದ್ದಿರಬಹುದು. ಗಂಜೀಫ಼ು ಆಟವನ್ನು ಆಡುವ ಮನೋಭಾವವೂ, ಪುರಸತ್ತೂ, ಅನುಕೂಲವೂ ಇರುವವರಿಗೇ ಇದು ಸಾಧ್ಯವಾಗಿತ್ತೆಂದು ತೋರುತ್ತದೆ. ಆದುದರಿಂದ ಸಾಮಾನ್ಯರೂ, ಗ್ರಾಮೀಣರೂ ಬೇರೆ ಆಟಗಳಿಗೇ ಹೆಚ್ಚು ಶರಣುಹೋಗಿದ್ದಿರಬಹುದು. ಇದಕ್ಕೆ ವ್ಯತಿರಿಕ್ತವಾಗಿ ಇಸ್ಪೀಟಿನ ಆಟವು ಎಲ್ಲರಿಗೂ ಸುಲಭಸಾಧ್ಯವಾದ ಆಟವಾಯಿತು. ಇಸ್ಪೀಟು ಎಲೆಗಳು ಸುಲಭವಾಗಿ ಅಂಗಡಿಗಳಲ್ಲಿ ದೊರೆಯುತ್ತವೆ. ಗಂಜೀಫಿನ ಆಟ ಅರಮನೆಗಳಲ್ಲೋ, ಉಪ್ಪರಿಗೆ ಮನೆಗಳಲ್ಲೋ, ತೊಟ್ಟಿಯ ಮನೆಗಳ ಹಜಾರಗಳಲ್ಲೋ ನಡೆಯುತ್ತಿದ್ದುವೆಂಬ ಚಿತ್ರವನ್ನು ಕಲ್ಪಿಸಿಕೊಳ್ಳುವುದಾದರೆ, ಇಸ್ಪೀಟಿನ ಆಟ ಶ್ರೀಮಂತರ, ಬಡವರ, ಬಂಗಲೆಗಳ, ಹಳ್ಳಿಯ ಮನೆಗಳ, ಯಾವ ಎಡೆಯೆಂದರೆ ಆ ಎಡೆಯಲ್ಲಿ ನಡೆಯುತ್ತಿರುವ ಆಧುನಿಕ ದೃಶ್ಯವನ್ನು ನಾವು ನೋಡಿ ಆನಂದಿಸಬಹುದಾಗಿದೆ. ಅಷ್ಟು ಜನಪ್ರಿಯವಾದ ಆಟವಾಗಿದೆ ಇಸ್ಪೀಟು. ಅದಕ್ಕೇನು, ಒಂದು ಹಳೆಯ ಮಂಟಪವಾದರೂ ಆಯಿತು, ಮನೆಯ ಜಗಲಿಯಾದರೂ ಆಯಿತು, ಹವಾ ಚೆನ್ನಾಗಿದ್ದರೆ ಮರದಡಿಯಾದರೂ ಆಯಿತು- ಎಲ್ಲಾದರೂ ಸಾಗೀತು ಇಸ್ಪೀಟು ಆಟ. ಬಯಲಿನಲ್ಲಿ ಆಡುತ್ತ ಆಡುತ್ತ ಕತ್ತಲೆಯಾಗಿ ಬೆಳಕಿಲ್ಲದಿದ್ದರೆ, ಬೀಡಿ ಹಚ್ಚಿಕೊಳ್ಳಲು ಇಟ್ಟುಕೊಂಡಿರುವ ಬೆಂಕಿಕಡ್ಡಿಯನ್ನಾದರೂ ಗೀರಿ ಹಚ್ಚಿಕೊಂಡು ಅದರ ಬೆಳಕಿನಲ್ಲಿ ಅರ್ಧಂಬರ್ಧವಾದ ಆಟವನ್ನು ಪೂರೈಸಿದರೂ ಅದರಲ್ಲಿ ಆಶ್ಚರ್ಯವೇನಿಲ್ಲ. ಥಾಮಸ್ ಹಾರ್ಡಿಯ ಇಂಗ್ಲಿಷ್ ಕಾದಂಬರಿಯಲ್ಲಿ, ಮಿಣುಕುಹುಳುಗಳ ಬೆಳಕಿನಲ್ಲಿ ಆಟವಾಡಿದ ವರ್ಣನೆ ಬರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಂಥ ಆಕರ್ಷಣೆ ಇಸ್ಪೀಟು ಆಟದ್ದು. ಹಣ ಇಟ್ಟು ಆಡುವವರಿಗಂತೂ ಅದೊಂದು ಹುಮ್ಮಸ್ಸಿನ ಆಟ.

ಇಸ್ಪೀಟಿನ ಆಟವು ಜನಪ್ರಿಯವಾಗುವುದಕ್ಕೆ ಇಸ್ಪೀಟಿನ ಎಲೆಗಳ ವಿನ್ಯಾಸವೂ, ಆಡುವ ವಿಧಾನವೂ ಕಾರಣ ಎನ್ನಬಹುದು. ಇಸ್ಪೀಟಿನ ಪ್ರತಿ ಪ್ಯಾಕಿನಲ್ಲಿಯೂ ಐವತ್ತೆರಡು ಎಲೆಗಳು ಹಾಗೂ ಒಂದು ಅಥವಾ ಎರಡು ಜೋಕರುಗಳು ಇರುತ್ತವೆ. ಈ ಎಲೆಗಳಲ್ಲಿ ಇಸ್ಪೀಟು, ಆಠೀನು, ಡೈಮಂಡು, ಕಳಾವರು ಎಂಬ ನಾಲ್ಕು ರಂಗುಗಳಿರುತ್ತವೆ. ಪ್ರತಿಯೊಂದು ರಂಗಿನಲ್ಲೂ ರಾಜ, ರಾಣಿ, ಗುಲಾಮ, ಹಾಸು ಅಥವಾ ಎಕ್ಕ ಮತ್ತು ಒಂದರಿಂದ ಹತ್ತರವರೆಗಿನ ಸಂಖ್ಯೆಗಳ ಎಲೆಗಳು ಇರುತ್ತವೆ. ಆಟಗಳಲ್ಲಿಯೂ ಹಲವು ರೀತಿಯ ಆಟಗಳಿವೆ. ಇಪ್ಪತ್ತೆಂಟರ ಆಟ ಅಥವಾ ಗುಲಾಮನಾಟ, ರಮ್ಮಿ, ಪೋಕರ್ ಎಂಬ ಆಟಗಳು ಹೆಚ್ಚು ಪ್ರಚಲಿತವಾಗಿವೆ. ದ್ಯೂತಪ್ರಿಯರಿಗೆ ಮೂರೆಲೆ ಆಟವು ಜನಪ್ರಿಯವಾಗಿದೆ. ಇಸ್ಪೀಟು ಆಟವು ಕನ್ನಡಿಗರಲ್ಲಿ ಎಷ್ಟು ಪ್ರಚಾರವಾಗಿದೆ ಎಂದರೆ ಇಂಗ್ಲಿಷಿನ ಅನೇಕ ಪದಗಳನ್ನು ಕನ್ನಡಕ್ಕೆ ಒಗ್ಗಿಸಿಕೊಂಡುಬಿಟ್ಟಿದ್ದಾರೆ ಅಥವಾ ತಮ್ಮದೇ ಪದಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಕಿಂಗ್, ಕ್ವೀನ್, ಜಾಕಿ ಎಂಬ ಪದಗಳಿಗೆ ರಾಜ, ರಾಣಿ, ಗುಲಾಮ ಎಂಬುವು ಸಮಾನ ಪದಗಳಾಗಿವೆ. ಏಸ್ (A) ಎಂಬುದಕ್ಕೆ ಎಕ್ಕ ಅಥವಾ ಹಾಸು ಎಂಬ ಪದಗಳು ಚಲಾವಣೆಯಲ್ಲಿವೆ. ಸ್ಪೇಡ್, ಹಾರ್ಟ್ಸ್, ಡೈಮಂಡ್, ಕ್ಲಬ್ಸ್ ಎಂಬ ಪದಗಳಿಗೆ ಬದಲಾಗಿ ಇಸ್ಪೀಟು, ಆಠೀನು, ಡೈಮಂಡು, ಕಳಾವರು ಎಂಬ ಪದಗಳನ್ನು ಬಳಸುತ್ತಾರೆ. ಒಂಬತ್ತು, ಹತ್ತು ಎಂಬುದಕ್ಕೆ ನಹಿಲ, ದಹಿಲ ಎಂಬ ಪದಗಳು ಪ್ರಚಾರದಲ್ಲಿವೆ. ಟ್ರಂಪ್ ಎಂಬುದು ತುರುಫು ಎಂಬುದಾಗಿ ರೂಪಗೊಂಡಿದೆ.

ಇಸ್ಪೀಟು ಆಟದ ಆಕರ್ಷಣೆಗೆ ಸಂಕೇತಿಗಳೇನೂ ಹೊರತಲ್ಲ. ಸಂಕೇತಿಗಳಲ್ಲಿ ಬಹುಜನಕ್ಕೆ ಅದೊಂದು ಕಾಲಕಳೆಯುವ ಹವ್ಯಾಸ, ಕೆಲವರಿಗೆ ಅದು ಒಂದು ಮೋಜು, ಮತ್ತೆ ಕೆಲವರಿಗೆ ಸಂಪಾದನೆಯ ಮಾರ್ಗ, ಕೆಲವರಿಗೆ ಅದೊಂದು ಹುಚ್ಚು. ಒಬ್ಬೊಬ್ಬರೂ ತಮ್ಮ ಬಿಡುವಿನ ಸಂಜೆ ಅಥವಾ ರಾತ್ರಿ ವೇಳೆ ಒಂದು ಕಡೆ ಸೇರಿ ಆನಂದದಿಂದ ಪರಸ್ಪರ ಕುಶಲ ಪ್ರಶ್ನೆ ಮಾಡುತ್ತ ವಿನೋದವಾಗಿ ಮಾತನಾಡುತ್ತ, ನಗುತ್ತ-ನಗಿಸುತ್ತ, ಆಟದಲ್ಲಿ ತೊಡಗಿ ತಮ್ಮ ಕಷ್ಟ-ಕೋಟಲೆಗಳನ್ನು ಮರೆಯಲು ಇಸ್ಪೀಟು ಆಟವನ್ನು ಒಂದು ಸಾಧನವನ್ನಾಗಿ ಮಾಡಿಕೊಂಡಿದ್ದರು ಸಂಕೇತಿಗಳು. ಊರಿನ ರಾಮಮಂದಿರದಲ್ಲೋ ಅಥವಾ ಯಾರದಾದರೂ ಮನೆಯ ಜಗಲಿಯ ಮೇಲೋ ಇಸ್ಪೀಟು ಆಟಕ್ಕೆ

ಸೇರುವುದು ವಾಡಿಕೆ. ಬಹುಜನರು ಇಸ್ಪೀಟು ಆಟದಲ್ಲಿ ಹೂಡುವ ಹಣ ಅಷ್ಟು ದೊಡ್ಡ ಮೊತ್ತವೇನಲ್ಲ. ದುಡ್ಡು ಇಡದೆ ಆಡಿದರೆ ಆಟದಲ್ಲಿ ಬಿಗಿ ಇರುವುದಿಲ್ಲ , ಹುಮ್ಮಸ್ಸು ಇರುವುದಿಲ್ಲ. ಇವರಿಗೆ ಸೋಲು ಗೆಲುವುಗಳು ಅಷ್ಟು ಮುಖ್ಯವಲ್ಲ. 'ಬಂದರೆ ಒಂದು ಅಡಕೆ ಮರ. ಸೋತರೆ ಒಂದು ಅಡಕೆ ಕಾಯಿ' ಎಂದು ಸ್ವಾಭಾವಿಕವಾಗಿ ಭಾವಿಸುವರು. ಜೂಜಿನ ಮನೋಭಾವದಿಂದ ಆಟ ಆಡುವವರು ಕೆಲವೇ ಜನ, ಎಲ್ಲೋ ಒಬ್ಬಿಬ್ಬರು. ಇಂಥವರಿಗೆ ಕೇವಲ ಸಂಕೇತಿ ಬಾಂಧವರೊಡನೆ, ತಮ್ಮ ತಮ್ಮ ಊರುಗಳಲ್ಲಿ ಆಟ ಆಡುವುದರಲ್ಲಿ ತೃಪ್ತಿ ಉಂಟಾಗುವುದಿಲ್ಲ. ಹಾಸನ, ಹೊಳೆನರಸೀಪುರ, ಅರಕಲಗೂಡು, ಕೊಣನೂರು ಮೊದಲಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಕುಳಗಳು ಆಡುವ, ಸಾವಿರಾರು ರೂಪಾಯಿಗಳು ಪಟ್ಟೆಯಲ್ಲಿ ಝಣ ಝಣ ಎಂದು ಶಬ್ದ ಮಾಡುವ ಸ್ಥಳಗಳಲ್ಲಿ ಆಡುವುದೆಂದರೆ ಅದೊಂದು ಉಮೇದು. ಕೆಲವು ಜನ ಹೀಗೆ ಆಡಿ ಹಣ ಕಳೆದುಕೊಂಡು, ಹುಚ್ಚರಂತೆ ಮನೆ-ಮಠ ಮಾರಿ ಎಲ್ಲವನ್ನೂ ಪಣ ಒಡ್ಡಿ ಆಡಿ, ಸಂಕಟಕ್ಕೆ ತಮ್ಮನ್ನು ಈಡುಮಾಡಿಕೊಂಡ ಉದಾಹರಣೆಗಳೂ ಇಲ್ಲದೇ ಇಲ್ಲ.

ಸಂಕೇತಿಗಳ ಹಳ್ಳಿಗಳಾದ ಕುಪ್ಪಹಳ್ಳಿ, ಅಗ್ರಹಾರ, ಬಸವಾಪಟ್ಟಣ, ಮರಿತಮ್ಮನಹಳ್ಳಿ ಮೊದಲಾದ ಕಡೆಗಳಲ್ಲಿ ಇಸ್ಪೀಟಾಟವು ಒಂದು ಹವ್ಯಾಸವಾಗಿ, ಬಿಡುವಿನ ವೇಳೆಯ ಒಂದು ಮನೋರಂಜನೆಯಾಗಿ ಬೆಳೆದುಕೊಂಡು ಬಂದಿದೆ. ಭಜನೆ, ಪೂಜೆ ಮತ್ತು ಊರೊಟ್ಟಿನ ಸಮಾರಾಧನೆ ಮೊದಲಾದವುಗಳಿಗಾಗಿ ಸಂಕೇತಿಗಳು ತಮ್ಮ ಊರುಗಳಲ್ಲಿ ರಾಮಮಂದಿರಗಳನ್ನು ಕಟ್ಟಿದ್ದಾರೆ. ಇಂಥ ಸ್ಥಳಗಳಲ್ಲಿ ಸಾಮಾನ್ಯವಾಗಿ ಸಂಜೆಯ ಹೊತ್ತು ಇಸ್ಪೀಟಾಟವನ್ನು ಆಡಬಹುದಾಗಿತ್ತು. ಅದಿಲ್ಲದೆ ಇದ್ದರೆ ಯಾರದಾದರೂ ಮನೆಯ ಜಗಲಿಯೋ ಅಥವಾ ಮನೆಯ ಹಜಾರವೋ ಆದರೂ ಆಯಿತು. ಸಂಕೇತಿಗಳ ಎಲ್ಲ ಊರುಗಳಲ್ಲಿಯೂ ಎಲ್ಲ ಸಂಕೇತಿಗಳೂ ಇಸ್ಪೀಟಾಟ ಆಡುತ್ತಿರಲಿಲ್ಲ. ಕೆಲವರಿಗೆ ಇಸ್ಪೀಟಾಟವು ನಿಷಿದ್ಧವಾಗಿತ್ತು. ಮತ್ತೆ ಕೆಲವರು ಬಿಡುವಾಗಿ ಬೇರೆ ಊರಿಗೆ ಬಂದಾಗ ಮಾತ್ರ ಆಡುತ್ತಿದ್ದರು. ಒಂದು ಸಂಕೇತಿಗಳ ಹಳ್ಳಿಯಲ್ಲಿ ಅಥವಾ ಊರಿನಲ್ಲಿ ಒಂದು ಮದುವೆಯೋ, ಒಂದು ಮುಂಜಿಯೋ ಅಥವಾ ಬೇರೊಂದು ಸಮಾರಂಭವೋ ಆದರೆ ಅಲ್ಲಿಗೆ ಸುತ್ತಮುತ್ತಲ ಹಳ್ಳಿಯ ಊರಿನವರನ್ನೂ, ಸ್ನೇಹಿತರನ್ನೂ, ಬಂಧುಬಾಂಧವರನ್ನೂ ಕರೆಯುವುದು ಸಂಕೇತಿ ಸಮಾಜದ ವೈಶಿಷ್ಟ್ಯ. ಅಂಥ ಸ್ಥಳಗಳಿಗೆ ಇಸ್ಪೀಟಿನ ಹವ್ಯಾಸಿಗಳು ಬಂದು ಸೇರುತ್ತಿದ್ದರು- ಒಂದೇ ಜಾತಿಯ ಹಕ್ಕಿಗಳು ಒಂದೆಡೆ ಸೇರುವಂತೆ ಎಂದು ಹೇಳಬಹುದು. ಊರಿನ ನಾಲ್ಕಾರು ಮನೆಗಳಲ್ಲಿಯಾದರೂ ಇಸ್ಪೀಟಿನ ಕಛೇರಿ ಜಮಾಯಿಸದೇ ಇದ್ದರೆ ಆ ಊರಿನ ಸಮಾರಂಭಕ್ಕೆ ಶೋಭೆಯೇ ಇರುತ್ತಿರಲಿಲ್ಲ. ಹಿರಿಯರ, ನುರಿತ ನಿಪುಣರ, ಪಡ್ಡೆ ಹುಡುಗರ, ಕಿರಿಯರ ದರ್ಜಾವಾರು ಗುಂಪುಗಳು ಬೇರೆ ಬೇರೆ ಕಡೆ ಸೇರುವುದು ವಾಡಿಕೆ. ನನಗಂತೂ ಈ ವಿವಿಧ ಇಸ್ಪೀಟಿನ ಕಛೇರಿಗಳು ಮನೋರಂಜನೆಯ ತಾಣವಾಗಿರುತ್ತಿದ್ದುವು. ನಾನು ಹುಡುಗನಾಗಿದ್ದಾಗ ಅಗ್ರಹಾರ, ಬಸವಾಪಟ್ಟಣ, ಕುಪ್ಪಹಳ್ಳಿ ಮೊದಲಾದ ಕಡೆಗಳಲ್ಲಿ ನಡೆದ ಹಲವಾರು ಮದುವೆ ಸಮಾರಂಭಗಳಲ್ಲಿ ಭಾಗವಹಿಸಿದ್ದೆ. ಬೆಳಗ್ಗೆ ಎದ್ದು ಸ್ನಾನ-ಸಂಧ್ಯಾವಂದನೆಗಳನ್ನು ಮುಗಿಸಿ, ಪುಷ್ಕಳವಾಗಿ ಇಡ್ಲಿ ಹೊಡೆದು ಕಾಫಿ ಕುಡಿದ ಮೇಲೆ ಮಧ್ಯಾಹ್ನದವರೆಗೂ ನನಗೆ ಬೇರೆ ಕೆಲಸವೇನು ! ಎಲ್ಲಿ ಇಸ್ಪೀಟಿನ ಕಛೇರಿಗಳು ನಡೆಯುತ್ತಿವೆಯೋ ಅಲ್ಲಿಗೆ ಹೋಗಿ ಪ್ರೇಕ್ಷಕನಾಗಿ ಸ್ವಲ್ಪ ಹೊತ್ತು ಕುಳಿತಿರುತ್ತಿದ್ದೆ. ಅಲ್ಲಿಯ ಆಟಗಾರರ ಹಾವಭಾವಗಳು, ಮಾತುಗಳು, ವಿವಾದಗಳು, ಗತ್ತುಗಳು ನನ್ನನ್ನು ರಂಜಿಸುತ್ತಿದ್ದುವು. ನನಗಂತೂ ಆಗ ಆ ಬಣ್ಣಬಣ್ಣದ ಎಲೆಗಳಲ್ಲಿನ ಚಿತ್ರಗಳು ಮಾಯಾಲೋಕದಿಂದ ಇಳಿದು ಬಂದಂತೆ ಭಾಸವಾಗುತ್ತಿದ್ದವು. ಸಣ್ಣ ವಯಸ್ಸಿನ ನನಗೆ ಆಗ ಈ ಎಲೆಗಳ ಬೆಲೆಯೇನು ಎಂಬುದು ಗೊತ್ತಿರಲಿಲ್ಲ. ಯಾವುದು ಆಠೀನು, ಯಾವುದು ಕಳಾವರು ಅಥವಾ ಡೈಮಂಡು ಇತ್ಯಾದಿ ವ್ಯತ್ಯಾಸಗಳು ಆಯಾ ಚಿತ್ರ ಮತ್ತು ಬಣ್ಣಗಳಿಂದ ಗೊತ್ತಾದರೂ, ಇಸ್ಪೀಟಾಟದ ರಹಸ್ಯಗಳೆಲ್ಲ ನನಗೆ ಕರಗತವಾಗಿರಲಿಲ್ಲ. ಗುಲಾಮನಿಗೂ, ರಾಜನಿಗೂ, ರಾಣಿಗೂ ಆಟದಲ್ಲಿ ಏನು ಬೆಲೆ ಎಂಬುದು ಅಷ್ಟು ಚೆನ್ನಾಗಿ ಅರ್ಥವಾಗುತ್ತಿರಲಿಲ್ಲ. ಜಾಕಿ ಆಟ ಅಥವಾ ಇಪ್ಪತ್ತೆಂಟರ ಆಟವೇ ಅಂದು ಸಂಕೇತಿಗಳಲ್ಲಿ ಹೆಚ್ಚು ಪ್ರಚಲಿತವಿದ್ದ ಆಟ. ತುರುಫಿನ ಗೈರತ್ತು ಏನು, ನಹಿಲಾ-ದಹಿಲಾ ಎಂಬ ಪದಗಳು ಹೇಗೆ ರೂಪುಗೊಂಡವು, ಎಕ್ಕ ಎಂಬ ಪದದ ಸೃಷ್ಟಿ ಹೇಗಾಯಿತು ಇವೆಲ್ಲ ಅರ್ಥವಾಗಿರಲಿಲ್ಲ. ಆದರೆ ಆಟದ ಆ ವಾತಾವರಣದಲ್ಲಿ ಈ ಪದಗಳ ಪ್ರಯೋಗಗಳು ನನ್ನ ಕಿವಿಗಳ ಮೇಲೆ ಬೀಳುತ್ತಿದ್ದರೆ ಏನೋ ಒಂದು ಬಗೆಯ ಖುಷಿ. ಈ ಖುಷಿಗಾಗಿಯೇ ನಾನು ಇಸ್ಪೀಟಿನ ಕಛೇರಿಗಳಿಗೆ ಹೋಗಿ ಪ್ರೇಕ್ಷಕನಾಗಿ ಕೂರುತ್ತಿದ್ದುದು.

ರಾಮಯ್ಯನ ಮನೆಯಲ್ಲಿ ಒಂದು ಭರ್ಜರಿ ಇಸ್ಪೀಟು ಕೂಟ ಸೇರಿದೆ. ಶಾಮಣ್ಣ , ತಿಪ್ಪಣ್ಣ , ಅಗ್ರಹಾರದ ಚಿನ್ನ, ಗುಂಡಪ್ಪ, ವೆಂಕಟಸುಬ್ಬಯ್ಯ, ಅನಂತಯ್ಯ - ಇವರು ಆರು ಜನರೂ ಭರ್ಜರಿ ನುರಿತ ಆಟಗಾರರು. ವೃತ್ತಾಕಾರವಾಗಿ ಕುಳಿತಿದ್ದಾರೆ. ಮಧ್ಯೆ ಶಾಲು ಹಾಸಿದೆ. ಒಬ್ಬೊಬ್ಬರ ಮುಂದೂ ಎಂಟಾಣೆ, ನಾಲ್ಕಾಣೆ, ರೂಪಾಯಿ ನಾಣ್ಯಗಳ ಒಂದೊಂದು ಗುಡ್ಡೆ ಇದೆ. ಇಸ್ಪೀಟಿನ ಕಟ್ಟನ್ನು ಪಟ್ಟೆಯಲ್ಲಿ ಮಧ್ಯದಲ್ಲಿ ಇಟ್ಟು ಯಾರಾದರೂ ಒಬ್ಬರು

ಒಂದು ಎಲೆಯನ್ನು ಎತ್ತುತ್ತಾರೆ. ಆ ಎಲೆಯ ಸಂಖ್ಯೆಯ ಮೂಲಕ ಯಾರು ಮೊದಲು ಎಲೆಗಳನ್ನು ಕಲಸಬೇಕು ಎಂದು ನಿರ್ಧರಿಸುತ್ತಾರೆ. ಎಲೆಗಳನ್ನು ಎತ್ತುವುದರ ಮೂಲಕ ಯಾರು ಯಾರಿಗೆ ಯಾವ ಸ್ಥಳ ಬರಬೇಕು ಎಂದು ನಿರ್ಧರಿಸುವುದೂ ಉಂಟು. ಇಸ್ಪೀಟಿನ ಎಲೆಗಳನ್ನು ಕೈಗೆತ್ತಿಕೊಂಡು ಆ ಎಲೆಗಳನ್ನು ಕಲೆಸುವಾಗಿನ ಕೈಚಳಕ ನೋಡಿಯೇ ತಿಳಿಯಬೇಕು. ಬೆರಳುಗಳು ಹೇಗೆ ಎಲೆಗಳನ್ನು ಎಳೆದು ಮೇಲೆ ಕೆಳಗೆ ಮಾಡುತ್ತವೆ, ನಾಲ್ಕಾರು ಎಲೆಗಳನ್ನು ಬೇರೆ ಬೇರೆಯಾಗಿ ಎಳೆದು ಪುನಃ ಅವುಗಳನ್ನು ಮೇಲೆ ಕೆಳಗೆ ಮಾಡಿ ಸೇರಿಸುತ್ತವೆ ಎಂಬುದು ಕೌತುಕವೇ ಸರಿ. ಹಾಗೆ ಎಲೆಗಳನ್ನು ಎಳೆದು ಸೇರಿಸುವಾಗ ಎಲೆಗೆ ಎಲೆ ತಗುಲಿ ಉಂಟಾಗುವ ಮರ್ಮರ ಶಬ್ದ ಆಡುವವರ ಕಿವಿಗಳಿಗೆ ಶ್ರುತಿಬದ್ಧ ಹಾಗೂ ಲಯಬದ್ಧ ಸಂಗೀತವಾಗಿರುತ್ತದೆ. ಎಲ್ಲರ ಕಣ್ಣುಗಳೂ ಆ ಕಡೆಗೇ, ಏಕೆಂದರೆ ಬೇಕಾದ ಎಲೆಗಳು ಒಂದೇ ಜಾಗದಲ್ಲಿ ಸೇರುವಂತೆ ಕಲಸುವ ಸಿದ್ಧಹಸ್ತರಿರುತ್ತಾರೆ. ಕಲಸಿದವರು ಟಪ್ಪನೆ ಎಲೆಗಳನ್ನು ತಟ್ಟಿ ಶಬ್ದ ಮಾಡಿ ಅದನ್ನು ನೆಲದ ಮೇಲೆ ಇಡುತ್ತಾರೆ. ಆಗ ಇನ್ನೊಬ್ಬರು ಆ ಎಲೆಗಳನ್ನು ಎರಡು ಭಾಗ ಮಾಡಿ ಇಡುತ್ತಾರೆ. ಅನಂತರ ಮೊದಲಿನ ಅಥವಾ ಮೇಲಿನ ಭಾಗದ ಇಸ್ಪೀಟಿನ ಎಲೆಗಳನ್ನು ತೆಗೆದುಕೊಂಡು ಮೂರು ಮೂರು ಎಲೆಗಳನ್ನಾಗಿ ಎಲ್ಲರೆದುರಿಗೂ ಹಂಚಿ ಹಾಕುತ್ತಾರೆ. ಎಲೆಗಳು ಮುಂದೆ ಬಿದ್ದ ಒಡನೆ ಕೈಗೆತ್ತಿಕೊಂಡು ನೋಡಿಬಿಡುವ ಚಪಲ ಕೆಲವರಿಗೆ. ಕೆಲವು ನಿಷ್ಣಾತರು ಎಲ್ಲ ಎಲೆಗಳನ್ನೂ ಹಾಕಿದ ಮೇಲೆಯೇ ತೆಗೆದುಕೊಂಡು ಬೆರಳುಗಳಲ್ಲಿ ಜೋಡಿಸಿಟ್ಟುಕೊಳ್ಳುತ್ತಾರೆ. ಎಲೆಗಳನ್ನು ಜೋಡಿಸಿಕೊಂಡು, ಒಂದೇ ಬಣ್ಣದ ಹೆಚ್ಚು ಎಲೆಗಳು ಯಾವುವು ಇವೆಯೋ ಅವೆಲ್ಲವನ್ನೂ ಒಂದು ಕಡೆಗೆ ಜೋಡಿಸಿಕೊಂಡು ಬೇರೆ ರಂಗಿನವುಗಳನ್ನು ಕ್ರಮ ಪ್ರಕಾರವಾಗಿ ಜೋಡಿಸಿ ಹಿಡಿದುಕೊಳ್ಳುತ್ತಾರೆ. ಆಟಗಾರರು ತಮ್ಮ ಕೈಯಲ್ಲಿನ ಎಲೆಗಳನ್ನು ನೋಡಿ ಲೆಕ್ಕಾಚಾರ ಮಾಡಿ ಆಟದ ಬಲಾಬಲವನ್ನು ನಿರ್ಧರಿಸಿಕೊಳ್ಳುತ್ತಾರೆ. ತಮ್ಮ ಕೈಯಲ್ಲಿರುವ ಎಲೆಗಳಿಂದ ಎಷ್ಟು ಅಂಕಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ಯೋಚಿಸಿ ನಿಶ್ಚಯಿಸುತ್ತಾರೆ. ಎಲೆ ಕಲಸಿದವರ ಪಕ್ಕದವರಿಗೆ ಮೊದಲು ಆಟ ಹೇಳಲು ಅವಕಾಶ. ಅವರಲ್ಲಿ ಆಟ ಇಲ್ಲದಿದ್ದರೆ ಮುಂದಿನವರಿಗೆ ಛಾನ್ಸ್. ಇಷ್ಟು ಎಂದು ಅಂಕಗಳನ್ನು ಒಬ್ಬರು ಹೇಳುತ್ತಾರೆ. ಅವರಿಗಿಂತ ಆಟ ಹೆಚ್ಚು ಬಿಗಿಯಾಗಿರುವವರು ಅದಕ್ಕೆ ಸವಾಲು ಹಾಕುತ್ತಾರೆ. ಯಾರು ಹೆಚ್ಚು ಬಿಡ್ ಮಾಡುತ್ತಾರೋ ಅವರಿಗೆ ಆಟ ನಿಲ್ಲುತ್ತದೆ. ಎಲೆ ಕಲೆಸಿದ ಪಕ್ಕದವರು ಮೊದಲು ಒಂದು ಎಲೆಯನ್ನು ಪಟ್ಟೆಯ ಮಧ್ಯಕ್ಕೆ ಹಾಕುತ್ತಾರೆ. ಇದಕ್ಕೆ 'ಇಳಿಯುವುದು' ಎಂದು ಹೇಳಲಾಗುತ್ತದೆ. ಅನಂತರ ಎಲ್ಲರೂ ಒಂದೊಂದು ಎಲೆ ಹಾಕುತ್ತಾರೆ. ಒಂದು ಸುತ್ತು ಎಲೆಗಳು ಬಿದ್ದೊಡನೆ ಬಿದ್ದ ಎಲೆಗಳಲ್ಲಿ ಯಾರ ಕೈಯಿಂದ ಹೆಚ್ಚಿನ ಬೆಲೆಯ ಎಲೆ ಬಿದ್ದಿರುತ್ತದೋ ಅವರು ಎಲೆಗಳನ್ನು ಜೋಡಿಸಿ ಅದರ ಒಟ್ಟು ಅಂಕಗಳನ್ನು ಎಣಿಸಿ ಎದುರಿಗೆ ಇಟ್ಟುಕೊಳ್ಳುತ್ತಾರೆ. ಆಟ ಹೇಳಿದವನು ಗೆಲ್ಲಲು ತನ್ನ ಬುದ್ಧಿಯನ್ನು ಉಪಯೋಗಿಸುತ್ತಾನೆ. ಉಳಿದವರೆಲ್ಲ ಅವನನ್ನು ಸೋಲಿಸಲು ಪ್ರಯತ್ನಿಸುತ್ತಾರೆ. ಯಾವ ಬಣ್ಣದ ಎಲೆಯನ್ನು ಇಳಿಯುತ್ತಾರೋ ಅದೇ ಬಣ್ಣದ ಎಲೆಗಳನ್ನು ಆಟಗಾರರು ಹಾಕಬೇಕು. ಹಾಗಿಲ್ಲದೆ ಬೇರೆ ಬಣ್ಣದ ಎಲೆಯನ್ನು ಹಾಕಿದರೆ ಆಗ 'ರಾಂಗ್‌ಚೋರ್' ಆಗುತ್ತದೆ. ಅದು ಆಟಗಾರರ ತಪ್ಪಾಗುತ್ತದೆ. ಅದೇ ಬಣ್ಣದ ಎಲೆ ತನ್ನ ಕೈಯಲ್ಲಿ ಇಲ್ಲದೆ ಇರುವವನು ಬೇರೆ ಬಣ್ಣದ ಎಲೆಯನ್ನು ಹಾಕುತ್ತಾನೆ. ತಮ್ಮ ಕಡೆಗೆ ಅನುಕೂಲವಾಗುವಂತಿದ್ದರೆ ಹೆಚ್ಚಿನ ಅಂಕ ಬರುವ ಎಲೆ ಹಾಕುತ್ತಾನೆ. ಇಲ್ಲದಿದ್ದರೆ 'ಖರ್ಚಿ' ಕಳೆದುಕೊಳ್ಳುತ್ತಾನೆ. ಹಾಗೂ ಇಲ್ಲದೆ ತುರುಫಿನಿಂದ 'ಕಟ್' ಮಾಡುತ್ತಾನೆ. ಒಂದು ಸುತ್ತು ಅಥವಾ ಎರಡು ಸುತ್ತು ಎಲೆಗಳು ಬಿದ್ದ ಕೂಡಲೇ ಆಟಗಾರರು ಯಾರ್‍ಯಾರ ಕೈಲಿ ತುರುಫುಗಳು ಎಷ್ಟಿರಬಹುದು, ಖರ್ಚಿಗಳು ಎಷ್ಟಿರಬಹುದು ಎಂದು ಲೆಕ್ಕಾ ಹಾಕಿಬಿಡುತ್ತಾರೆ. ಈಗ ಆಟಕ್ಕೆ ಕಾವೇರುತ್ತದೆ.

"ಏನು ಅಂತ ಎಲೆ ಹಾಕ್ತೀಯೋ, ಆಟೀನ್ ದಹಿಲ ಕೈಯಲ್ಲಿ ಇಲ್ಲವೇ? ಅದನ್ನು ಹಾಕಬೇಕಾಗಿತ್ತು. ಆಟ ಹೇಳಿರುವವನು ಮುಂದಿನ ಆಟದಲ್ಲಿ ತುರುಫಿನಿಂದ ಕಟ್ ಮಾಡಿ ನಿನ್ನ ದಹಿಲವನ್ನು ನುಂಗಿಬಿಡುತ್ತಾನೆ."

"ಒಂದು ಖರ್ಚಿ ಬಿಸಾಕಿ ಕಳಕೊಳ್ಳೋದು ಬಿಟ್ಟು, ಜಾಕಿ ಯಾಕೆ ಹಾಕಿ ಕಳಕೊಂಡೆ. ಕೊನೇ ಸುತ್ತಿಗೆ ಇಟ್ಟುಕೋಬೇಕಾಗಿತ್ತು. ಆಟಗಾರ ತುರುಫಿನಿಂದ ಅದನ್ನು ಗೆದ್ದುಕೊಳ್ಳುತ್ತಾನೆ ಎನ್ನುವುದು ಗೊತ್ತಾಗಲಿಲ್ಲವಲ್ಲ ನಿನಗೆ."

"ಆಟ ಆಡೋಕೆ ಬರದೇ ಇರೋರೆಲ್ಲ ಬಂದು ಕೆಡಿಸಿಬಿಡುತ್ತಾರೆ. ಆಟ ಸರಿಯಾಗಿ ಗೊತ್ತಿಲ್ಲದೆ ಇದ್ದರೆ ಸುಮ್ಮನೆ ಯಾತಕ್ಕೆ ಬಂದು ಕೂತುಕೊಳ್ಳಬೇಕು?"

ಚಿನ್ನ ಗತ್ತಿನಿಂದ ಎಲೆಯನ್ನು ಪಟ್ಟೆಗೆ ಬಿಸಾಡಿದರೆ, ಅನಂತಯ್ಯ "ಕೊಡೋ ಇದಕ್ಕೆ ಉತ್ತರಾನ" ಎಂದು ಎಲೆಯನ್ನು ಪಟ್ಟೆಗೆ ಬಡಿಯುತ್ತಾನೆ. ಆಗ ವೆಂಕಟಸುಬ್ಬಯ್ಯ, "ಎಲೆ ನೆಲಕ್ಕೆ ಬಡಿದರೆ ಆಯಿತೆ. ಕೊಡು ಇದಕ್ಕೆ ಉತ್ತರ" ಎಂದು ಖರ್ಚಿ ತುರುಫಿನಿಂದ ಕಟ್ ಮಾಡಿದುದಕ್ಕೆ ತಿಪ್ಪಣ್ಣನನ್ನು ಬಿಟ್ಟು ಎಲ್ಲರೂ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಆಗ ತಿಪ್ಪಣ್ಣ, "ಏನು ಗರ ಬಡಿದವರಂತೆ ನೋಡುತ್ತೀರೋ ? ವೆಂಕಟಸುಬ್ಬಯ್ಯ ಮೊದಲೇ ಕಳಪೇ ರಂಗುಗಳನ್ನು ಕಳಕೊಂಡಿದ್ದನ್ನ ನೋಡದೆ ಬೆಪ್ಪುಗಳಂತೆ ಆಡುತ್ತೀರಿ.

ಯಾವ ಯಾವ ಎಲೆಗಳು ಬಿದ್ದುವು, ಯಾರ ಯಾರ ಕೈಯಲ್ಲಿ ಏನು ಎಲೆಗಳಿರಬಹುದು ಎಂಬುದನ್ನು ಊಹಿಸಲಾಗದ ಬುದ್ಧಿವಂತರು ಇಪ್ಪತ್ತೆಂಟರ ಆಟಕ್ಕೆ ಏತಕ್ಕೆ ಕೂರಬೇಕೋ !" ಎಂದು ಉಳಿದವರ ಬಾಯಿ ಕಟ್ಟಿಸಿದರು.

"ಎಂಥ ಊಬಿನ ಎಲೆ ಹಾಕ್ತಿಯೋ ! ಸರಿಯಾದ ಎಲೆ ಹಾಕದೆ" ಎಂದರು ಒಬ್ಬರು. ಎಲ್ಲ ಕಳಪೆ ಎಲೆಗಳಿಗೂ 'ಊಬು' ಎಂಬ ಪದವನ್ನು ಈ ಮಹನೀಯರು ಉಪಯೋಗಿಸುವುದು ವಾಡಿಕೆಯಾಗಿತ್ತು. ಇದು ಎಲ್ಲರಿಗೂ ಗೊತ್ತಿದ್ದರಿಂದ ಆ ಮಾತು ಬಂದಾಗ ಅದನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. 'ಊಬು' ಹಂಚಿಕಡ್ಡಿಯ ತುದಿಯಲ್ಲಿರುತ್ತದೆ. ಇದು ತುಂಬ ಹಗುರ ಹಾಗೂ ಗಾಳಿಗೆ ಹಾರಿಹೋಗುವಂತಿರುತ್ತದೆ. ಆದುದರಿಂದ ಊಬಿನ ಎಲೆ ಎಂದರೆ ಬೆಲೆಯಿಲ್ಲದ, ತೂಕವಿಲ್ಲದ ಎಲೆ ಎಂದರ್ಥ.

"ಏನು ಅಂತ ಎಲೆ ಹಾಕ್ತೀಯೋ, ಎದ್ದು ಹೋಗೋ ಆಟ ಬಿಟ್ಟು. ಲೆಕ್ಕ ಮಾಡೋದಕ್ಕೆ ಬರದೆ ಇದ್ದ ಮೇಲೆ ಆಟ ಯಾಕೆ ಆಡಬೇಕು? ಕೊನೆ ವರಸೆಯಲ್ಲಿ ಆ ಕೈಯಲ್ಲಿ ಖರ್ಚಿ ತುರುಫಿದೆ ಅಂತ ಗೊತ್ತು. ಮೊದಲೇ ಹಾಕಿಕೊಳ್ಳದೆ ಆಟಗಾರನಿಗೆ ಜಾಕಿ ಬಲಿಕೊಟ್ಟು ಗೆಲ್ಲಿಸುತ್ತಿದ್ದಾನೆ" ಎಂದು ಮುಟ್ಟಿಕೊಂಡರು ಗುಂಡಪ್ಪ. ಅದಕ್ಕೆ ಶಾಮಣ್ಣ, "ಮೊದಲೇ ನೀವು ತುರುಪು ದಹಿಲ ಕಳಕೊಳ್ತೀರಿ ಅಂತ ನನಗೇನು ಕನಸೇ? ಅದನ್ನು ಕೊನೆವರಸೆಗೆ ಇಟ್ಟುಕೊಂಡು ಖರ್ಚಿ ಹಾಕಬೇಕಾಗಿತ್ತು ಆಗ. ಅದನ್ನು ಈಗ ಇಳಿಸಿದ್ದರೆ ನನ್ನ ಜಾಕಿ ನಿಮಗೇ ದಕ್ಕುತ್ತಾ ಇತ್ತು" ಎಂದು ಸವಾಲು ಹಾಕಿದರು.

"ಹೋಗೋ, ಹೋಗೋ. ಅಡಕೆ ಕೆಡವೋದು ಒಂದೇ ನಿನಗೆ ಗೊತ್ತಿರುವುದು. ಜಾಕಿ ಆಟದ ತಲೆ ಅಲ್ಲ ನಿಂದು" ಎಂದು ಟೀಕಿಸಿದರು ಗುಂಡಪ್ಪ. "ಹೌದು, ಹೌದು. ನಾನೇನೂ ನಿಮ್ಮ ಹಾಗೆ ಎಲ್ಲರ ಮನೆ ತುಪ್ಪದ ದೊನ್ನೆಗೆ ಕೈಯೊಡ್ಡೋನಲ್ಲ" ಎಂದು ಚುಡಾಯಿಸಿದ ಶಾಮಣ್ಣ.

ಆಗ ಅನಂತಯ್ಯನಿಗೆ ಸಿಟ್ಟು ನೆತ್ತಿಗೇರಿತು, "ಗೊದಮೊಟ್ಟೆ ತಗೊಂಡು ಹೇರ್ತೀನಿ ನೋಡಿ ಇನ್ನೊಂದು ಮಾತನಾಡಿದರೆ. ಜಗಳ ಆಡ್ತೀರೋ ಆಟ ಆಡೋಕೆ ಬಂದಿದೀರೋ" ಎಂದರು.

"ಗೊದಮೊಟ್ಟೆ ಕೈಗೆ ಬರೋವರೆಗೂ ಬಾಳೆಹಣ್ಣು ತಿನ್ನುತ್ತಾ ಇರೋದಿಲ್ಲ ಈ ಕೈ. ನೋಡು ಹೇಗಿದೆ ! ಕಬ್ಬಿಣ, ಕಬ್ಬಿಣ?" ಎಂದು ಕೈಯೆತ್ತಿ ತೋಳಿನ ಮಾಂಸಖಂಡ ತೋರಿಸಿದರು ಶಾಮಣ್ಣ. ಆಗ ಅಲ್ಲಿದ್ದ ಚಿನ್ನ, ತಿಪ್ಪಣ್ಣ, "ಯಾಕ್ರೋ ಜಗಳವಾಡ್ತೀರಿ. ಆಟ ಆಡಿ, ಇಲ್ಲ ಎದ್ಹೋಗಿ", ಎಂದು ಗುಡುಗಿದಾಗ ಪುನಃ ಆಟ ಮುಂದುವರಿಯುತ್ತದೆ.

ಅಷ್ಟು ಹೊತ್ತಿಗೆ ಹಿರಿಯರೊಬ್ಬರು ಬಂದು, "ಏಳಿ ಏಳಿ, ಆಟ ನಿಲ್ಲಿಸಿ. ಅಲ್ಲಿ ಸಭಾಪೂಜೆ ಆಗಬೇಕು, ಬನ್ನಿ" ಎನ್ನುತ್ತಾರೆ. "ಆಗ್ಹೋಯಿತು, ಇದೇ ಕೊನೆ ಆಟ" ಎಂದು ಹೇಳಿಕೊಂಡು ಆಟಗಾರರು ಆಟವನ್ನು ಮುಂದುವರೆಸುತ್ತಾರೆ.

ಈ ಸಂದರ್ಭದಲ್ಲಿ ಒಂದು ಸ್ವಾರಸ್ಯವಾದ ಸಂಗತಿ ನನ್ನ ನೆನಪಿಗೆ ಬರುತ್ತಿದೆ. ನಾನು ಇನ್ನೂ ಆಗ ಹೈಸ್ಕೂಲಿನಲ್ಲಿ ಮೈಸೂರಿನಲ್ಲಿ ಓದುತ್ತಿದ್ದೆ. ಬೇಸಿಗೆ ರಜ ಬಂದಿದ್ದರಿಂದ ಊರಿಗೆ ಬಂದಿದ್ದೆ. ಹಳ್ಳಿ ಮೈಸೂರಿನ ಹತ್ತಿರ ಇರುವ ಎಲೆಚಾಗಳ್ಳಿಯಲ್ಲಿ ನಮ್ಮ ಹತ್ತಿರದ ನಂಟರ ಮನೆಯ ಸಮಾರಂಭಕ್ಕಾಗಿ ನಾನು, ನಮ್ಮ ತಂದೆ, ನಮ್ಮ ದೊಡ್ಡಪ್ಪ ಎಲ್ಲರೂ ಹೋಗಿದ್ದೆವು. ಆ ಸಮಯದಲ್ಲಿ ಚಾಗಳ್ಳಿ ಸುಬ್ಬು ಅವರ ಮನೆಯಲ್ಲಿ ಇಸ್ಪೀಟ್ ಕಛೇರಿ ಸೇರಿತ್ತು. ಸರಿ, ನಾನು ಪ್ರೇಕ್ಷಕನಾಗಿ ಅಲ್ಲಿ ಹಾಜರಿದ್ದೆ. ಅಲ್ಲಿಯ ಆಟಗಾರರಲ್ಲಿ ನಮ್ಮ ದೊಡ್ಡಪ್ಪನವರೂ, ಶೀಗುವಾಳು ಅವಧಾನಿಗಳೂ ಸೇರಿದ್ದರು. ಆಟ ಸ್ವಲ್ಪ ಹೊತ್ತು ಒಳ್ಳೆಯ ರಭಸದಿಂದ ನಡೆಯುತ್ತಿತ್ತು. ಆಟಕ್ಕೆ ಒಳ್ಳೇ ರಂಗೇರಿತ್ತು. ನಮ್ಮ ದೊಡ್ಡಪ್ಪನವರು ಸ್ವಲ್ಪ ಜೋರಿನ ಸ್ವಭಾವದವರು. ಮಾತೂ ಅಷ್ಟೇ ಖೈಡು. ಹಲವು ವರ್ಷಗಳ ಮೈಸೂರಿನ ವಾಸ ಅವರನ್ನು ಧೈರ್ಯಶಾಲಿಗಳನ್ನಾಗಿ ಮಾಡಿತ್ತು. ಹಳ್ಳಿಯವರು ಎಂದರೆ ಅವರಿಗೆ ಅನುಭವ ಕಡಮೆ ಎಂಬ ಭಾವನೆ. ಇಸ್ಪೀಟನ್ನು ತಮ್ಮಂತೆ ಆಡುವವರಿಲ್ಲ ಎಂದೇ ಅವರ ಆತ್ಮವಿಶ್ವಾಸ. ಒಂದು ಸಲ ನಮ್ಮ ದೊಡ್ಡಪ್ಪನವರು, "ಹಾಕೋ, ಈ ಎಲೆಗೆ ಏನು ಹಾಕ್ತೀಯ" ಎಂದು ಸವಾಲೆಸೆದರು. ಆಟದಲ್ಲಿ ಗೆಲ್ಲುತ್ತಿದ್ದರೆ ಬಹಳ ಖುಷಿಖುಷಿಯಾಗಿ ಮೋಜಿನಿಂದ ಎಲೆಗಳನ್ನು ಹಾಕುತ್ತಿದ್ದರು. "ನೋಡೋ, ನಮ್ಮಪ್ಪನ ಮನೆ ಎಲೆ ಕಣೋ ಇದು. ಹಾಕೂ ಆ ಜಾಕೀನ, ಆಪೋಶನ ತಗೋತೀನಿ" ಎಂದೆಲ್ಲ ಹೇಳುತ್ತ ಮನೋರಂಜಕವಾಗಿ ಮಾತನಾಡುತ್ತ ಆಡುತ್ತಿದ್ದರು. ಸೋಲುಗೈ ಆಗಲು ಆರಂಭವಾದರೆ ಊರಾಬರಿಯಿಂದ ನೆಲಕ್ಕೆ ಎಲೆಗಳನ್ನು ಬಡಿಯುತ್ತ, "ತೊಗೋ ಊಟ ಮಾಡು" ಎಂದು ಹೇಳುತ್ತಿದ್ದರು. ಹೀಗೆಯೇ ಒಂದು ಆಟದಲ್ಲಿ ಟಪ್ ಟಪ್ ಎಂದು ಪಟ್ಟಿಗೆ ಎಲೆಗಳನ್ನು ಬಡಿಯುತ್ತಿರುವುದನ್ನು ನೋಡಿ ಅವಧಾನಿಗಳು ಸಹಿಸಲಾರದೆ, "ಅದೇನು ಕರಾಚುರಿ ನಂಜರಾಜಯ್ಯನಂತೆ ಆಡ್ತಾ ಇದ್ದೀರಿ. ಸರಿಯಾಗಿ ಎಲ್ಲರಂತೆ ಆಡಿ" ಎಂದರು. ಮೊದಲೇ ಸೋಲುಗೈ. ನಮ್ಮ ದೊಡ್ಡಪ್ಪನವರ ನೆತ್ತಿಗೆ ಸಿಟ್ಟು ಏರಿಬಿಟ್ಟಿತು. "ಯಾರನ್ನು ಹೇಳ್ತೀರಿ ಕರಾಚುರಿ ನಂಜರಾಜಯ್ಯ ಅಂತ. ನಿಮಗೇನ್ರಿ ಗೊತ್ತು ಅವನ ಪೊಗರು? ಅವನ ಮನೆ ಕಸ ಬಳಿಯೋ ತಾಕತ್ತಿಲ್ಲ ನಿಮಗೆ. ಬರೀ ಮಾತಾಡಿದರೆ ಬಂತೇ? ನಿಮ್ಮ ಮುಖ ನೋಡಿಕೊಳ್ಳಿ, ಹೇಗೆ ಬೆವರ್ತಾ ಇದ್ದೀರಿ" ಎಂದು ಶುರು ಮಾಡಿಬಿಟ್ಟರು. ಅವಧಾನಿಗಳು ಸಾತ್ವಿಕರು; ಅವರು

ಮರುಮಾತನಾಡದೆ, ಇವರ ವಾಗ್ವೈಖರಿಯನ್ನು ನೋಡುತ್ತ ಕುಳಿತುಬಿಟ್ಟರು. ಎದುರಾಳಿ ಮೌನವಾದುದನ್ನು ನೋಡಿ ನಮ್ಮ ದೊಡ್ಡಪ್ಪನವರ ಬಾಯಿ ಕಟ್ಟಿತು. ಅವಧಾನಿಗಳು ಎದುರು-ಜವಾಬು ಕೊಟ್ಟಿದ್ದರೆ ವಾತಾವರಣ ಇನ್ನಷ್ಟು ಕಾವೇರುತ್ತಿತ್ತು, ಆದರೆ ಹಾಗಾಗಲಿಲ್ಲ. ಅಲ್ಲದೆ ಅಲ್ಲಿದ್ದ ಉಳಿದವರು ಕೂಡ ಇವರಿಬ್ಬರನ್ನೂ ಸುಮ್ಮನೆ ನೋಡುತ್ತ ಕುಳಿತುಬಿಟ್ಟರು. ಆಗ ನಮ್ಮ ದೊಡ್ಡಪ್ಪನವರ ಸಿಟ್ಟು ಸರ್ರನೆ ಇಳಿಯಿತು. "ನೋಡಿ! ಆಟದಲ್ಲಿ ಮಾತು ಬರುತ್ತದೆ, ಮಾತು ಹೋಗುತ್ತದೆ. ಬನ್ನಿ, ಆಟ ಮುಂದುವರಿಸೋಣ", ಎಂದುಬಿಟ್ಟರು. ವಾತಾವರಣ ತಿಳಿಯಾಯಿತು. ಇಂಥ ಎಷ್ಟೋ ಪ್ರಸಂಗಗಳು ಇಸ್ಪೀಟಾಟದಲ್ಲಿ ನಡೆಯುತ್ತವೆ.

ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಮೈಸೂರು ಅರಸರ ಕಾಲದಲ್ಲಿ ದಳವಾಯಿಗಳ ಪ್ರಾಬಲ್ಯ ಹೆಚ್ಚಿತ್ತು. ಅವರಲ್ಲಿ ಕರಾಚುರಿ ನಂಜರಾಜಯ್ಯ ಒಬ್ಬ. ಇವನು ಬಹಳ ದಿಟ್ಟ ದಳವಾಯಿಯಾಗಿದ್ದ. ಅಲ್ಲಿ ಆಟ ಆಡುತ್ತಿದ್ದವರಿಗೆ ಈ ದಳವಾಯಿಯ ಚರಿತ್ರೆ ಗೊತ್ತಿತ್ತೋ ಇಲ್ಲವೋ. ಅಂತೂ ಆ ಮಾತು ನೋಟಕರಿಗೆ ಒಂದು ವಿನೋದಪ್ರಸಂಗವಾಗಿ ಪರಿಣಮಿಸಿತು.

೫. ಸಮಾರಾಧನೆ

ಮದುವೆಯಾಗಲಿ, ಒಂದು ಮುಂಜಿಯಾಗಲಿ, ಕೊನೆಗೆ ಒಂದು ಚೌಲೋಪನಯನವಾಗಲಿ, ಯಾವ ಸಮಾರಂಭವಾದರೂ ಎಲ್ಲರನ್ನೂ ಭೋಜನಕ್ಕೆ ಕರೆಯುವುದು ಸಂಕೇತಿಗಳ ಸಂಪ್ರದಾಯ. ಊರಿನಲ್ಲಿ ಯಾವ ಸಮಾರಂಭವೇ ನಡೆಯಲಿ ಸಮಾರಾಧನೆಗೆ ಊರಿನವರನ್ನೆಲ್ಲ ಕರೆದೇ ಕರೆಯುತ್ತಾರೆ. ಜತೆಗೆ ಬೇರೆ ಬೇರೆ ಊರುಗಳಿಂದ ಬಂಧು ಬಾಂಧವರಿದ್ದೇ ಇರುತ್ತಾರೆ. ಅಲ್ಲದೆ ಹತ್ತಿರದ ಹಳ್ಳಿಯವರನ್ನು ಕೂಡ ಆಹ್ವಾನಿಸುವುದು ವಾಡಿಕೆ. ಯಾವ ಸಮಾರಂಭವೇ ಆಗಲಿ ಕಲಾಪಗಳು ಆದಮೇಲೆ ಮಧ್ಯಾಹ್ನ ನಡೆಯುವ ಭೋಜನ ಬಹಳ ಮುಖ್ಯವಾದುದು. 'ಸಮಾರಾಧನೆ' ಎಂದೇ ಇದನ್ನು ಕರೆಯುವರು. ಒಳ್ಳೆಯ ಆರಾಧನೆ ಎಂದು ಈ ಪದಕ್ಕೆ ಅರ್ಥ. ಸೇವೆ, ಉಪಚಾರ, ಸಂತೋಷಪಡಿಸುವ ಉಪಾಯ, ತೃಪ್ತಿಪಡಿಸುವ ಸಾಧನ ಎಂದು ಸಮಾರಾಧನೆ ಎಂಬುದರ ತಾತ್ಪರ್ಯ. ಅನ್ನಬ್ರಹ್ಮಕ್ಕಿಂತ ಹೆಚ್ಚಿನ ದೇವರಿಲ್ಲ. ಆದುದರಿಂದ ಅನ್ನಬ್ರಹ್ಮವನ್ನು ತೃಪ್ತಿಪಡಿಸಿದರೆ ಉದರವು ತುಂಬಿ ಮಾನವ ಸಂತೃಪ್ತನಾಗುತ್ತಾನೆ. ಆದುದರಿಂದ ಸಮಾರಾಧನೆಗೆ ಹೆಚ್ಚಿನ ಪ್ರಾಶಸ್ತ್ಯ. ಸಂಕೇತಿಗಳು ಭೋಜನಪ್ರಿಯರು, ಚೆನ್ನಾಗಿ ಊಟ ಮಾಡುವವರು. ಆದುದರಿಂದ ಅವರನ್ನು ಒಳ್ಳೆಯ ಭೋಜನದಿಂದ ಸಂತೃಪ್ತಿಪಡಿಸಲು ಸಂಕೇತಿಗಳು ತುಂಬ ಶ್ರಮಿಸುತ್ತಾರೆ. ಕ್ರಮಬದ್ಧವಾಗಿ, ಶಿಸ್ತಿನಿಂದ ನಡೆಸುವ ಚೊಕ್ಕವಾದ ಸಮೃದ್ಧ ಭೋಜನವೇ ಸಮಾರಾಧನೆ.

ಈಗ ಒಂದು ಮದುವೆ ನಡೆಯುತ್ತಿದೆ ಎನ್ನಿ. ಮಧ್ಯಾಹ್ನದವರೆಗಿನ ಕಲಾಪಗಳು ಎಂದರೆ ಮುಖ್ಯವಾಗಿ ಕಾಶೀಯಾತ್ರೆ, ಧಾರೆ, ಮಾಂಗಲ್ಯಧಾರಣೆ ಇತ್ಯಾದಿ ನಡೆದ ಮೇಲೆ ಸಭಾಪೂಜೆಯ ಸಮಯ. ಸಭಾಪೂಜೆ ಮುಗಿದು ಎಲ್ಲರಿಗೂ ತೆಂಗಿನಕಾಯಿ ಅಥವಾ ಎಳನೀರನ್ನು ಫಲತಾಂಬೂಲವಾಗಿ ಕೊಟ್ಟಾಯಿತು. ಇನ್ನು ಮುಂದೆ ಭೋಜನದ ಏರ್ಪಾಡಿನ ಸಡಗರವೋ ಸಡಗರ. "ಸ್ಥಳ ಪರಸ್ಥಳದವರು ಎಲ್ಲರೂ ಚೊಂಬು, ಪಂಚಪಾತ್ರೆ ತೆಗೆದುಕೊಂಡು ಭೋಜನಕ್ಕೆ ದಯಮಾಡಿಸಬೇಕು" ಎಂದು ಎತ್ತರದ ದನಿಯಲ್ಲಿ ಒಬ್ಬರು ಕೂಗಿ ಹೇಳಿಯಾಯಿತು. ಎಲ್ಲರೂ ಸಭೆಯಿಂದ ಚದುರುತ್ತಿದ್ದಾರೆ. ಸಭೆಯಲ್ಲಿ ಕೊಟ್ಟ 'ಫಲ' ಎಳನೀರನ್ನು ಮಚ್ಚು ಇದ್ದವರ ಕೈಯಲ್ಲಿ ಕೆತ್ತಿಸಿಕೊಂಡು ಕುಡಿಯುವ ಭರಾಟೆ ಹೊರಗೆ ನಡೆದಿರುತ್ತದೆ. ಮಚ್ಚು ಹಿಡಿದವರು ಎಳನೀರು ಕೆತ್ತುವ ಕೆಲಸವನ್ನು ಸಂತೋಷದಿಂದ ಮಾಡುತ್ತಾರೆ. "ಸೀನು, ನನ್ನ ಎಳನೀರು ಕೆತ್ತಿಕೊಡೋ" ಎಂದು ಪರಸ್ಥಳದವರಾದ ರಾಮಯ್ಯ ಪರಿಚಿತನಾದ ಸೀನಪ್ಪನನ್ನು ಕೇಳುತ್ತಾರೆ. "ಅದಕ್ಕೇನು, ಕೊಡಿ ಮಾವಯ್ಯ" ಎಂದು ಸೀನಪ್ಪ ಕೆತ್ತಿಕೊಡುತ್ತಾನೆ. ಅಷ್ಟರಲ್ಲಿ ಮೂರು ನಾಲ್ಕು ಜನರು "ನನ್ನ ಎಳನೀರನ್ನೂ ಕೆತ್ತಿಕೊಡು, ನನ್ನ ಎಳನೀರನ್ನೂ ಕೆತ್ತಿಕೊಡು" ಎಂದು ಸೀನಪ್ಪನ ಮುಂದೆ ಚಾಚುತ್ತಾರೆ. "ತಡೀರಪ್ಪ, ಒಂದೊಂದಾಗಿ ಕೆತ್ತಿಕೊಡುತ್ತೇನೆ. ನನಗೇನು ನಾಲ್ಕು ಕೈಗಳಿವೆಯೆ? ಎಲ್ಲರಿಗೂ ಕೆತ್ತಿಕೊಡುತ್ತೇನೆ, ನಿಲ್ಲಿ" ಎಂದು ಹೇಳುತ್ತ ಸೀನಪ್ಪ ಕೆತ್ತಿಕೊಡುತ್ತಿರುತ್ತಾನೆ. ಎಳನೀರನ್ನು ಕೆತ್ತಿಸಿಕೊಂಡವರು ಕುಡಿಯುತ್ತ, "ಎಳನೀರು ಸಿಹಿಯಾಗಿದೆ, ತೃಪ್ತಿಯಾಯಿತು" ಎನ್ನುತ್ತ, ಯಾರ ತೋಟದ್ದು ಈ ಎಳನೀರು ಎಂದು ಕೇಳುತ್ತಾರೆ. ಅದಕ್ಕೆ ಸೀನಪ್ಪ "ನೀವು ಕುಡಿದಿದ್ದು ನಮ್ಮ ತೋಟದ್ದೇ. ಎಳನೀರಿಗೆಂದೇ ನಾಲ್ಕು ಮರಗಳನ್ನು ಬಿಟ್ಟಿದ್ದೇನೆ" ಎಂದು ಜವಾಬು ಕೊಡುತ್ತಾನೆ. "ಒಳ್ಳೆ ಹದವಾಗಿದೆ. ನೀನು ತೆಂಗಿನಮರ ಬೆಳೆಸಿದ್ದಕ್ಕೂ ಸಾರ್ಥಕವಾಯಿತು" ಎನ್ನುತ್ತಾರೆ ರಾಮಯ್ಯ.

ಇತ್ತ , ಯಾರು ಯಾರು ಬಡಿಸುವುದಕ್ಕೆ ಬರುವವರು ಎಂಬ ಚರ್ಚೆ ನಡೆಯುತ್ತಿದೆ. "ನೀನು ಹೋಗೋ ಪುಟ್ಟಣ್ಣ , ಮಗುಟ ಉಟ್ಟುಕೊಂಡು ಬಾ, ನೀನು ಬಾ ಮರಿಯಪ್ಪ" ಎಂದು ಬಡಿಸತಕ್ಕಂಥವರನ್ನು ಕರೆಯುತ್ತಿದ್ದಾರೆ. ಕೆಲಸದ ಹಂಚಿಕೆ ನಡೆಯುತ್ತಿದೆ. "ಮೊನ್ನೆ ತೆಂಗಿನ ಮರಕ್ಕೆ ಹತ್ತಿ ಕಾಯಿ ಕೆಡುವುತ್ತಿದ್ದಾಗ ಸೊಂಟ ಉಳುಕಿದಂತೆ ಆಗಿದೆ. ನನಗೆ ಬಗ್ಗುವುದಕ್ಕೆ ಆಗುವುದಿಲ್ಲ. ಇನ್ನಾರನ್ನಾದರೂ ಕರೆದುಕೋ ರಾಜಣ್ಣ" ಎಂದು ಮರಿಯಪ್ಪ ಹೇಳುತ್ತಾನೆ. "ನೀನೇ ಹೀಗೆ ಹೇಳಿದರೆ ಹೇಗೆ ? ಅದೆಲ್ಲ ನೆಪ ಬೇಡ. ಬಾ, ಸುಲಭವಾದದ್ದನ್ನೇ ಬಡಿಸುವೆಯಂತೆ" ಎಂದು ಪುಸಲಾಯಿಸಿದ ರಾಜಣ್ಣ. ಬಡಿಸಲು ಜನ ಸಿದ್ಧವಾದರು. ಕೆಲವರು ಬಾಳೆಎಲೆಗಳನ್ನು ತೆಗೆದುಕೊಂಡು ಬಂದು, "ಯಾರ ಯಾರ ಮನೆಯಲ್ಲಿ ಎಲೆ ಹಾಕಬೇಕು ?" ಎಂದು ರಾಜಣ್ಣನನ್ನು ಕೇಳಿದರು. ರಾಜಣ್ಣನು, ಮದುವೆ, ಮುಂಜಿ ಮೊದಲಾದ ಸಮಾರಂಭಗಳಲ್ಲಿ ಊಟದ ವ್ಯವಸ್ಥೆ ನೋಡಿಕೊಳ್ಳುವುದರಲ್ಲಿ ನಿಪುಣ. ಮದುವೆಯ ಚಪ್ಪರದಲ್ಲಿ ಸೇರಿದ ಜನರನ್ನು ನೋಡಿಯೇ ಎಷ್ಟು ಜನ ಆಗಬಹುದು ಎಂಬುದನ್ನು ಲೆಕ್ಕಾಚಾರ ಹಾಕುವುದರಲ್ಲಿ ತುಂಬ ಪಳಗಿದವ. ಇಲ್ಲಿ ಜನರನ್ನು ನೋಡಿ ಅತ್ತ ಅಡುಗೆಶಾಲೆಗೆ ಹೋಗಿ ಏನು ಅಡುಗೆ ಆಗಿದೆ, ಅನ್ನ, ಸಾರು, ಹುಳಿಯನ್ನ ಇವುಗಳ ಪ್ರಮಾಣ ಏನು ಎಂಬುದನ್ನು ಗಮನಿಸಿ, ಅಡುಗೆ ಮಾಡುವುದರಲ್ಲಿ ನಿರತರಾಗಿರುವವರಿಗೆ ಸೂಕ್ತ ಸಲಹೆ ಕೊಡುತ್ತಾನೆ. ಜನ ಜಾಸ್ತಿ ಇದ್ದರೆ, "ಜನ ಜಾಸ್ತಿ ಇದ್ದಾರೆ. ಸಾರು, ಹುಳಿ ಸಾಕಾಗುವುದಿಲ್ಲ. ಸ್ವಲ್ಪ ಹೆಚ್ಚಿಸಿ. ಪಲ್ಯ, ಕೋಸಂಬರಿಗಳನ್ನು ಮಿತವಾಗಿ ಬಡಿಸಬೇಕು. ಒಲೆಯ ಮೇಲೆ ಎರಡು ತಪ್ಪಲೆಗಳಲ್ಲಿ ನೀರು ಮರಳುತ್ತಿರಲಿ, ಅಕ್ಕಿ ತೊಳೆದು ಸಿದ್ಧವಾಗಿಟ್ಟಿರಿ. ಜನರು ಸಾರನ್ನ ಊಟ ಮಾಡಿದ ಮೇಲೆ ಪರಿಸ್ಥಿತಿ ನೋಡಿಕೊಂಡು ಬಂದು ಹೇಳುತ್ತೇನೆ. ಆಗ ಅಕ್ಕಿ ಹಾಕಿಬಿಟ್ಟರೆ ಮಜ್ಜಿಗೆ ಅನ್ನದ ಹೊತ್ತಿಗೆ ಅನ್ನ ಸಿದ್ಧವಾಗುತ್ತದೆ" ಎಂದು ಹೇಳುತ್ತಾನೆ.

ಎಲೆ ಹಾಕಬೇಕಾದ ಮನೆಗಳ ಬಗ್ಗೆ ರಾಜಣ್ಣ ವಿವರ ಕೊಡುತ್ತಾನೆ, "ಕೆಳಗಿನ ಮನೆ ಮತ್ತು ಚಿನ್ನಪ್ಪನ ಮನೆಯಲ್ಲಿ ಹೆಂಗಸರಿಗೆ ಎಲೆ ಹಾಕಿ. ಸಾಲದೆ ಹೋದರೆ ಸುಬ್ರಾಯನ ಮನೆ ಇದೆ. ಲಕ್ಷ್ಮೀಕಾಂತನ ಮನೆ, ಘನಪಾಠಿಗಳ ಮನೆ, ದೀಕ್ಷಿತರ ಮನೆಗಳಲ್ಲಿ ಗಂಡಸರಿಗೆ ಎಲೆ ಹಾಕಿ. ಜನ ಕುಳಿತುಕೊಳ್ಳಲಿ, ಮುಂದಕ್ಕೆ ಸಾಲದೆ ಹೋದರೆ ನೋಡೋಣ" ಎಂದು. ಬಾಳೆಎಲೆಗಳನ್ನು ತೆಗೆದುಕೊಂಡು ಆ ಮನೆಯಿಂದ ಈ ಮನೆಗೆ ಓಡಾಡುತ್ತ ಎಲೆ ಹಾಕುವವರ ಕೆಲಸ ಸಾಗಿತು. ಜನಗಳು ಚೊಂಬು, ಪಂಚಪಾತ್ರೆ, ಲೋಟಾಗಳಲ್ಲಿ ನೀರನ್ನು ತೆಗೆದುಕೊಂಡು ಬಂದು ಕುಳಿತುಕೊಳ್ಳತೊಡಗಿದರು.

ಇತ್ತ ಬಡಿಸುವುದಕ್ಕೆ ಸಿದ್ಧರಾದವರನ್ನೆಲ್ಲ ಕವಂಗ, ಬಕೀಟು, ಪರಾತ, ಸೌಟು ಮೊದಲಾದವುಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಹೇಳಿಯಾಯಿತು. ಉಪ್ಪಿನಕಾಯಿ, ಕೋಸಂಬರಿ, ಪಲ್ಯಗಳನ್ನು ತೆಗೆದುಕೊಂಡವರು ಬಡಿಸಲು ಹೊರಟರು. "ತಡೆಯಿರಿ, ಪಾತ್ರಾಭಿಘಾರವಾಗಲಿ" ಎಂದ ರಾಜಣ್ಣ. ಮನೆಯ ಯಜಮಾನಿತಿಯ ತಂಗಿಯು, ಕಾಲಲ್ಲಿ ಬೆಳ್ಳಿಯ ಚೈನಿನ ಝಣ ಝಣ, 'ಗಂಡಿಗೆ' ಸೀರೆಯಲ್ಲಿ ಪಟಪಟ ಎಂದು ಶಬ್ದ ಮಾಡುತ್ತಾ ಎಡಗೈಯಲ್ಲಿ ಗಿಂಡಿಯನ್ನು ಹಿಡಿದು, ಬಲಗೈಯಲ್ಲಿ ಹೂವಿನಿಂದ ಕ್ಷೀರವನ್ನು ಎಲ್ಲರ ಎಲೆಯ ಮೇಲೂ ಚಿಮುಕಿಸುತ್ತ ಹೋದರು. ಹಿಂದಿನಿಂದ ಉಪ್ಪಿನಕಾಯಿ ತಂದವನು ಬಾಳೆಎಲೆಯ ಬಲಗಡೆ ತುದಿಯಲ್ಲಿ , ಎಂದರೆ ಊಟಕ್ಕೆ ಕುಳಿತವರ ಬಲಗಡೆ ತುದಿಯಲ್ಲಿ , ಮರದ ಚಮಚದಿಂದ ಬಡಿಸುತ್ತ ಹೋದ. ಅವನ ಹಿಂದೆ ಕಡಲೇಬೇಳೆ ಕೋಸಂಬರಿ, ಹೆಸರುಬೇಳೆ ಕೋಸಂಬರಿ, ಅನಂತರ ಎರಡು ಪಲ್ಯಗಳು- ಎಂದರೆ ಹಲಸಿನಕಾಯಿ, ಹುರುಳಿಕಾಯಿ ಪಲ್ಯಗಳು ಎಂದು ಇಟ್ಟುಕೊಳ್ಳೋಣ; ಅನಂತರ ಹಪ್ಪಳ, ಸಂಡಿಗೆ, ಫೇಣಿ ಇವುಗಳನ್ನು ನಾಲ್ಕಾರು ಜನರು ಸಾಲಾಗಿ ಒಂದು ಕಡೆಯಿಂದ ಬಡಿಸುತ್ತ ಹೋದರು. ಒಂದು ಮನೆ ಆದ ಮೇಲೆ ಮುಂದೆ ಯಾವ ಮನೆಗೆ ಹೋಗಬೇಕು ಎಂದು ರಾಜಣ್ಣನಾಗಲೀ, ಅವನ ಜತೆಗೆ ಓಡಾಡುತ್ತಿದ್ದ ತಿಪ್ಪಣ್ಣನಾಗಲೀ ಹೇಳುತ್ತಿದ್ದರು. ಇದಾದ ಮೇಲೆ ಜರೀಸೀರೆ ಉಟ್ಟ ಸುಮಂಗಲಿಯೊಬ್ಬರು ಶಾವಿಗೆ ಪಾಯಸವನ್ನು ಬಾಳೆ ಎಲೆಯ ಕೆಳಭಾಗದ ಬಲಗಡೆ ತುದಿಯಲ್ಲಿ ಬಡಿಸಿದರು. "ನೈವೇದ್ಯ ತೆಗೆದುಕೊಳ್ಳಿ" ಎಂದು ರಾಜಣ್ಣ ಕೂಗಿ ಹೇಳಿದ. ಪರಾತಗಳಲ್ಲಿ ಅನ್ನವನ್ನು ತೆಗೆದುಕೊಂಡವರಲ್ಲಿ, ಒಬ್ಬೊಬ್ಬರನ್ನು ಒಂದೊಂದು ಮನೆಗೆ ಕಳಿಸಿ, ಅವರು ಸರಿಯಾಗಿ ಬಡಿಸುವಂತೆ ನೋಡಿಕೊಂಡರು ರಾಜಣ್ಣ ಮತ್ತು ತಿಪ್ಪಣ್ಣ. ವೇದಪಾರಂಗತರು ದೀಕ್ಷಿತರ ಮನೆಯ ಮೇಲ್ಜಗಲಿಯಲ್ಲಿ ಸಾಲಾಗಿ ಕುಳಿತಿದ್ದರು. ಅವರು "ಗಂಧಾಕ್ಷತೆ ಕೊಡಿ" ಎಂದು ಹೇಳಿ ವೇದಮಂತ್ರವನ್ನು ಪಠಿಸತೊಡಗಿದರು. ಒಂದು ತಂಡ ಒಂದು ವಾಕ್ಯವನ್ನು ಹೇಳಿದರೆ ಇನ್ನೊಂದು ತಂಡ ಮುಂದಿನ ವಾಕ್ಯವನ್ನು ಹೇಳುವುದು. ಸಂಹಿತೆಯೋ, ಪದವೋ, ಕ್ರಮವೋ ಯಾವುದಾದರೂ ಆಗುತ್ತಿದ್ದಿತು. ಅನ್ನದ ಹಿಂದೆ ಸಾರನ್ನು ದೊನ್ನೆಗಳಿಗೆ ಬಡಿಸಿಯಾಯಿತು. ತೊವ್ವೆಯನ್ನು ತಂದವರು ಅನ್ನದ ಗುಡ್ಡೆಯ ಎಡಗಡೆಗೆ ತೊವ್ವೆ ಬಡಿಸಿದರು. ಇನ್ನೊಂದಿಬ್ಬರು ಊಟಕ್ಕೆ ಕುಳಿತವರಿಗೆಲ್ಲ ಗಂಧ-ಅಕ್ಷತೆಯನ್ನು ಕೊಡುತ್ತ ಹೋದರು. ಬಲಗೈ ತೋರುಬೆರಳಿನಿಂದ, ಗಂಧದ ಬಟ್ಟಲಿನಿಂದ ಅಥವಾ ತಟ್ಟೆಯಿಂದ ಗಂಧವನ್ನು ತೆಗೆದುಕೊಂಡು ಎಡಗೈ ಹಸ್ತಕ್ಕೆ ವರ್ಗಾಯಿಸಿ, ಮಧ್ಯದ

ಬೆಟ್ಟಿನ ಉಗುರಿನಿಂದ ಗಂಧವನ್ನು ತೆಗೆದುಕೊಂಡು ಕನ್ನಡಿಯ ಸಹಾಯವಿಲ್ಲದೆ, ಮೂರು ಗೆರೆಗಳು ಬರುವಂತೆ ಗಂಧವನ್ನು ಹಣೆಗೆ ಹಚ್ಚಿಕೊಳ್ಳುವ ಕಲೆಯು ಅಭ್ಯಾಸದಿಂದ ಬರತಕ್ಕದ್ದು. ಅಭ್ಯಾಸವಿಲ್ಲದವರು ಹೇಗೆ ಹೇಗೋ ಹಣೆಯ ಮಧ್ಯಕ್ಕೆ ಬಳಿದುಕೊಳ್ಳುತ್ತಾರೆ. ಆನಂತರ ಇನ್ನೊಬ್ಬರು ಅಕ್ಷತೆಯ ಬಟ್ಟಲನ್ನು ಎಲ್ಲರ ಎದುರಿಗೂ ಹಿಡಿಯುತ್ತಾರೆ. ತೋರುಬೆರಳಿನಲ್ಲಿ ಅಕ್ಷತೆಯನ್ನು ತೆಗೆದುಕೊಂಡು, ಮಧ್ಯದ ಬೆರಳಿನಿಂದ ಹಣೆಯ ಮೇಲಿನ ಗಂಧದ ಮಧ್ಯಭಾಗವನ್ನು ಮುಟ್ಟಿ ಗುರುತು ಮಾಡಿಕೊಂಡು, ತೋರುಬೆರಳಿನಿಂದ ಅಕ್ಷತೆಯನ್ನು ದುಂಡಗೆ ಹಚ್ಚಿಕೊಳ್ಳುತ್ತಾರೆ. ಮೂರು ಎಳೆಗಳ ಉದ್ದದ ಗಂಧದ ಮಧ್ಯ ಭಾಗದಲ್ಲಿ, ದುಂಡಾಗಿ ಚಂದ್ರನಂತೆ ಶೋಭಿಸುವ ಅಕ್ಷತೆಯು ಮುಖಕ್ಕೆ ಒಂದು ಅಂದವನ್ನು ಕೊಡುತ್ತದೆ. ಹಿರಿಯರು, ಅವಧಾನಿಗಳು, ದೀಕ್ಷಿತರು, ಒಂದು ರೂಪಾಯಿ ಅಗಲದ ಅಕ್ಷತೆಯನ್ನು ಧರಿಸಿದರೆ ಮಧ್ಯವಯಸ್ಸಿನವರು ಎಂಟಾಣೆ ಅಗಲದ ಅಕ್ಷತೆ ಧರಿಸುತ್ತಾರೆ. ಹೊಸದಾಗಿ ಮದುವೆಯಾದ ಯುವಗೃಹಸ್ಥರು ನಾಲ್ಕಾಣೆ ಅಗಲದ ಅಥವಾ ಅದಕ್ಕೂ ಸಣ್ಣ ಚುಕ್ಕಿಯಷ್ಟಗಲದ ಅಕ್ಷತೆಯನ್ನು ಹಾಕಿಕೊಳ್ಳುತ್ತಾರೆ.

ಇತ್ತ ಪುರೋಹಿತರು ಮಂತ್ರವನ್ನು ಹೇಳುತ್ತ ಬ್ರಾಹ್ಮಣರನ್ನು ಮಂತ್ರಾಕ್ಷತೆಯಿಂದ ಪೂಜಿಸುತ್ತಾರೆ. ನೆಲದ ಮೇಲೆ ಮಂತ್ರಾಕ್ಷತೆಯನ್ನು ನಾಲ್ಕು ಮೂಲೆಗೂ, ನಡುವಿನಲ್ಲೂ, ಇಟ್ಟು ಪೂಜಿಸಿ ಯಜಮಾನ-ಯಜಮಾನಿತಿಯನ್ನೂ, ವಧೂ-ವರರನ್ನೂ ಕರೆದು ಪ್ರಸಾದವನ್ನು ಕೊಡುತ್ತಾರೆ. ಇಷ್ಟು ಹೊತ್ತಿಗೆ ವಧುವಿನ ತಾಯಿಯೋ ಅಥವಾ ಅವರ ಅಕ್ಕನೋ, ತಂಗಿಯೋ ಜರೀಸೀರೆಯನ್ನುಟ್ಟು, ಗಿಂಡಿಯಲ್ಲಿ ತುಪ್ಪವನ್ನು ತಂದು ಮಿಳ್ಳಿಯಿಂದ ಅನ್ನದ ಮೇಲೆ ಬಡಿಸುತ್ತಾ ಹೋಗುತ್ತಾರೆ. ಆಗ ಸಾಲಿನಲ್ಲಿ ಊಟಕ್ಕೆ ಕುಳಿತ ಪರಿಚಿತರನ್ನು ಕಂಡು, "ನೀವು ಚೆನ್ನಾಗಿದ್ದೀರಾ ಅತ್ಯಮ್ಮ, ನೀವೊಬ್ಬರೇ ಬಂದಿರಾ, ಕಲ್ಯಾಣಿ ಬರಲಿಲ್ಲವೆ?" ಎಂದೆಲ್ಲಾ ಪ್ರಶ್ನಿಸುತ್ತಾ ಮುಂದೆ ಹೆಜ್ಜೆ ಹಾಕಿ, "ನೀನು ಬರ್ತೀಯೋ ಇಲ್ಲವೋ ಎಂದು ಮಾಡಿದ್ದೆ ಪದ್ಮ. ಬಂದೆಯಲ್ಲ, ಸಂತೋಷ" ಎಂದಾಗ ಪದ್ಮ, "ಬರದೆ ಉಂಟೆ? ನಾವು ಇಂದು ಬರದಿದ್ದರೆ ನಾಳೆ ನಮ್ಮ ಮನೆಯಲ್ಲಿ ಶುಭಕಾರ್ಯ ಆದಾಗ ಬರುತ್ತೀರಾ ನೀವು? ಅನಿವಾರ್ಯವಾದ ವಿನಹ ಬರದೇ ಉಂಟೆ?" ಎಂದು ಸಂತೋಷಪಡಿಸುತ್ತಾಳೆ. ಯಜಮಾನರು ಬಂದು, "ಎಲ್ಲ ಕಡೆಯಲ್ಲೂ ಅಭಿಘಾರವಾಯಿತು. ಇನ್ನು ಪರಿಷಿಂಚನ ಮಾಡಲು ಅಪ್ಪಣೆಯೇ?" ಎಂದು ಪುರೋಹಿತರನ್ನು ಕೇಳುತ್ತಾರೆ. "ಎಲ್ಲರೂ ಬಂದಿದ್ದಾರೋ ನೋಡಿಬಿಡು. ಬೀಗರು ಮತ್ತು ಅವರ ಕಡೆಯವರೆಲ್ಲ ಬಂದಿದ್ದಾರೆಯೇ" ಎಂದು ಪುರೋಹಿತರು ಕೇಳುತ್ತಾರೆ. "ಎಲ್ಲರೂ ಬಂದಿದ್ದಾರೆ, ನಾನೇ ವಿಚಾರಿಸಿಕೊಂಡು ಬಂದೆ" ಎಂದು ಉತ್ತರ ಬರಲು, "ಎಲ್ಲರಿಗೂ ಪರಿಷಿಂಚನ ಮಾಡಲು ಹೇಳು, ಹಸ್ತೋದಕ ಹಾಕಲು ಎಲ್ಲರ ಮನೆಗೂ ಜನರನ್ನು ಕಳಿಸು. ವೈದಿಕರ ಪಂಕ್ತಿಗೆ ನೀನೇ ಹಸ್ತೋದಕ ಹಾಕು" ಎಂದು ಪುರೋಹಿತರು ಅಪ್ಪಣೆ ಮಾಡುತ್ತಾರೆ. ಎಲ್ಲ ಮನೆಯಲ್ಲೂ ಹಸ್ತೋದಕ ಹಾಕಿ 'ಎಲ್ಲ ಕಡೆಯೂ ಹಸ್ತೋದಕ ಹಾಕಿಯಾಯಿತು' ಎಂಬ ಸಮಾಚಾರ ಬರಲು ಯಜಮಾನರು **"ಲಕ್ಷ್ಮೀಕೇಶವಸ್ಸ್ಪೃತು"** ಎಂದೋ, **"ವೇಂಕಟಾಚಲಪತಿಸ್ಪೃತು"** ಎಂದೋ ಮನೆದೇವರ ಹೆಸರು ಹೇಳಿ ಊಟಕ್ಕೆ ಕುಳಿತಿರುವವರ ಎರಡು ಸಾಲಿನ ನಡುವೆ ಉದ್ಧರಣೆಯಿಂದ ನೀರನ್ನು ಬಿಟ್ಟು "ಧರಿಸೋಣವಾಗಲಿ" ಎನ್ನುತ್ತಾರೆ. ಎಲ್ಲರೂ ಹಸ್ತೋದಕವನ್ನು ತೆಗೆದುಕೊಂಡು **"ಅಮೃತೋಪಸ್ತರಣಮಸಿ"** ಎಂದು ನೀರನ್ನು ಕುಡಿದು ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನವೆಂಬ ಪಂಚವಾಯುಗಳ ಹೆಸರನ್ನು ಹೇಳಿ ಸ್ವಾಹಾ ಎನ್ನುತ್ತ ಅನ್ನದ ಸಣ್ಣ ತುತ್ತುಗಳನ್ನು ಬಾಯಿಗೆ ಹಾಕಿಕೊಳ್ಳುತ್ತ, **"ಬ್ರಹ್ಮಣೇ ಸ್ವಾಹಾ"** ಎಂದು ಹೇಳಿ ಮುಕ್ತಾಯ ಮಾಡುತ್ತಾರೆ. ಎಡಗೈನ ತೋರು ಬೆರಳಿನಲ್ಲಿ ಎಲೆಯ ಎಡಗಡೆ ತುದಿಯನ್ನು ಹಿಡಿದುಕೊಂಡು ಪರಿಷಿಂಚನ ಮಾಡುವುದರಿಂದ ಆ ಎಡಹಸ್ತಕ್ಕೆ ಯಜಮಾನರು ಉದ್ಧರಣೆಯಲ್ಲಿ ನೀರನ್ನು ಬಿಡುತ್ತಾರೆ.

ಈಗ ಭೋಜನ ಪ್ರಾರಂಭವಾಗುತ್ತದೆ. ಬಾಗಿಲ ಬಳಿ ಸಾರಿನ ಕವಂಗಗಳನ್ನು ಹಿಡಿದು ನಿಂತಿದ್ದವರು, ಸಾರನ್ನು ಸೌಟಿನಲ್ಲಿ ಬಡಿಸಲು ಆರಂಭಿಸುತ್ತಾರೆ. ಜನರು ಸಾರಿನಲ್ಲಿ ಅನ್ನವನ್ನು ಕಲಸಿಕೊಂಡು ಊಟ ಮಾಡಲಾರಂಭಿಸುತ್ತಾರೆ; ಸಾರನ್ನು ಬಡಿಸುವವರು ತಮ್ಮ ಬಳಿಗೆ ಬರುವವರೆಗೆ, ದೊನ್ನೆಯಲ್ಲಿನ ಸಾರನ್ನು ಹಾಕಿಕೊಂಡು ಕಲಸಿಕೊಳ್ಳಲಾರಂಭಿಸುತ್ತಾರೆ. ಸಾರನ್ನು ಒಂದು ಸಲವಲ್ಲದಿದ್ದರೆ ಎರಡೆರಡು ಸಲ ಬಡಿಸುತ್ತಾರೆ. "ನಿಧಾನವಾಗಿ ಕಲಸಿಕೊಳ್ಳಿ" ಎಂದು ಉಪಚಾರ ಹೇಳುತ್ತಾರೆ. ಹಪ್ಪಳ, ಸಂಡಿಗೆ, ಪಲ್ಯ, ಕೋಸಂಬರಿಗಳನ್ನು ನಂಚಿಕೊಳ್ಳುತ್ತ ಜನರ ಊಟ ಸಾಗುತ್ತದೆ. ಮೊದಲ ಸುತ್ತಿನ ಸಾರನ್ನವು ಹೊಟ್ಟೆಗೆ ಬೀಳುತ್ತಲೇ ಹೊಟ್ಟೆಯ ಆತುರ ಸ್ವಲ್ಪ ಕಡಮೆಯಾಗುತ್ತದೆ. ಅನಂತರ ತೊವ್ವೆಯಲ್ಲಿ ಕಲಸಿಕೊಳ್ಳಲು ಅನುಕೂಲವಾಗುವಂತೆ, ಎರಡನೆಯ ಸಾರಿ ಅನ್ನವನ್ನು ಬಡಿಸತೊಡಗುತ್ತಾರೆ. ಅನ್ನದ ಹಿಂದೆಯೇ ಮಜ್ಜಿಗೆ ಹುಳಿ ಬರುತ್ತದೆ. ಜತೆಗೆ ಕುಕ್ಕಿಯಲ್ಲಿ ಆಂಬೊಡೆ ಬರುತ್ತದೆ. ಒಬ್ಬರು ಕುಕ್ಕಿಯನ್ನು ಹಿಡಿದುಕೊಂಡಿರುತ್ತಾರೆ. ಇನ್ನೊಬ್ಬರು ಬೊಗಸೆಯಲ್ಲಿ ಆಂಬೊಡೆಯನ್ನು ಬಡಿಸುತ್ತ ಹೋಗುತ್ತಾರೆ. ಒಂದು ಬೊಗಸೆ

ಎಂದರೆ ಎಂಟು-ಹತ್ತು ಆಂಬೊಡೆಗಳಿಗೆ ಕಡಮೆಯಿರುವುದಿಲ್ಲ. ಕೆಲವರು ಆಂಬೊಡೆಯನ್ನು ಮಜ್ಜಿಗೆಹುಳಿಯಲ್ಲಿ ನೆನೆಸಿಕೊಂಡು ತಿನ್ನುತ್ತಾರೆ. ಹಲ್ಲು ಇಲ್ಲದವರಿಗೆ ಅಥವಾ ಅಗಿಯಲು ಆಗದವರಿಗೆ ಎಂದು ಮಜ್ಜಿಗೆಹುಳಿಯಲ್ಲಿ ಮೊದಲೇ ನೆನೆಸಿಟ್ಟ ಆಂಬೊಡೆಗಳನ್ನು ತಂದು, ನೋಡಿನೋಡಿ ಬೇಕಾದವರಿಗೆ ಬಡಿಸುತ್ತಾರೆ. ಒಂದು ಆಂಬೊಡೆಯನ್ನು ಎರಡು ಚೂರು ಮಾಡಿ ಬಾಯಿಗೆ ಹಾಕಿಕೊಂಡರೆ ಒಂದು ಗುಕ್ಕು. ಹೀಗಿರುವಾಗ ಹುಳಿಯನ್ನ ಬರುತ್ತದೆ. ಹುಳಿಯನ್ನದ ಗುಡ್ಡೆಗಳು ಊಟದ ಎಲೆಯನ್ನು ಅಲಂಕರಿಸುತ್ತವೆ.

ಈಗ ಸಿಹಿ ಬರುತ್ತದೆ. ಹಿಂದಿನ ಕಾಲದಲ್ಲಿ ಮದುವೆ, ಮುಂಜಿ ಮೊದಲಾದ ಸಮಾರಾಧನೆಗಳಿಗೆ ಸಿಹಿ ಎಂದರೆ ಕಾಯೊಬ್ಬಟ್ಟೇ. ವೀಳೆಯದೆಲೆ ಕವಳಿಗೆ ಜೋಡಿಸಿದಂತೆ, ಮೊರದಲ್ಲಿ ಒಬ್ಬಟ್ಟನ್ನು ಜೋಡಿಸಿ ಇಟ್ಟಿರುತ್ತಾರೆ. ಪ್ರತಿಯೊಬ್ಬರ ಎಲೆಗೂ ಐದು-ಆರು ಒಬ್ಬಟ್ಟು ಬೀಳುವಂತೆ ಮೊರದಿಂದ ತಳ್ಳುತ್ತಾರೆ. ಒಬ್ಬಟ್ಟಿನ ಮೇಲಕ್ಕೆ ಒಬ್ಬರು ತುಪ್ಪ ಬಡಿಸುತ್ತ ಹೋಗುತ್ತಾರೆ. ಅನಂತರ ಎರಡನೆಯ ಸಲ ಒಬ್ಬಟ್ಟು ಬಡಿಸುವಾಗ ಅದಕ್ಕೆ ಹಾಲನ್ನು ಬಡಿಸುತ್ತಾರೆ. ಹಾಲಿನಲ್ಲಿ ಅವನ್ನು ಕಲಸಿಕೊಂಡು ಚಪ್ಪರಿಸುತ್ತಾ ತಿನ್ನುತ್ತಾರೆ ಜನ. ಜತೆಗೆ ಎರಡನೆಯ ಬಾರಿಗೆ ಹುಳಿಯನ್ನ ಬರುತ್ತದೆ. ಬೇಕಾದವರಿಗೆ ಹುಳಿಯನ್ನಕ್ಕೆ ಸಾರನ್ನು ಕೇಳಿ ಕೇಳಿ ಬಡಿಸುತ್ತಾರೆ.

ಒಬ್ಬಟ್ಟು ಹಿಂದಿನ ಕಾಲದ ಸಿಹಿಯಾಯಿತು. ಸಿಹಿಭಕ್ಷ್ಯಗಳಲ್ಲಿ ಒಬ್ಬಟ್ಟಿಗೇ ಪ್ರಮುಖ ಪಟ್ಟವಿತ್ತೆಂದು ತೋರುತ್ತದೆ. ಇದಕ್ಕೆ ಬೇಕಾದ ಪದಾರ್ಥಗಳು ಸ್ಥಳದಲ್ಲಿ ಸುಲಭವಾಗಿ ಸಿಕ್ಕುತ್ತಿದ್ದುದರಿಂದಲೋ ಅಥವಾ ಇದನ್ನು ತಯಾರಿಸುವ ಕಲೆ ಅಂದಿನ ಸ್ತ್ರೀಯರಿಗೆಲ್ಲ ಗೊತ್ತಿದ್ದು ಅವರು ಅದರ ಪಾಕವಿಧಾನದಲ್ಲಿ ನಿಪುಣರಾಗಿದ್ದುದರಿಂದಲೋ ಒಬ್ಬಟ್ಟು ಪ್ರಾಶಸ್ತ್ಯ ಗಳಿಸಿತ್ತೆಂದು ತೋರುತ್ತದೆ. ನಮ್ಮ ಪ್ರಾಚೀನ ಪಾಕಶಾಸ್ತ್ರಕಲೆಯ ಗ್ರಂಥಗಳಲ್ಲಿ ಹಲವು ಬಗೆಯ ಭಕ್ಷ್ಯಗಳ ತಯಾರಿಕಾ ವಿಧಾನವು ವರ್ಣಿಸಲ್ಪಟ್ಟಿದೆ, ಹಲವಾರು ಸಿಹಿಭಕ್ಷ್ಯಗಳ ವರ್ಣನೆಗಳೂ ಇವೆ. ಹಲವು ಉಂಡಲಿಗೆ ಅಥವಾ ಉಂಡೆಗಳು, ಕಜ್ಜಾಯ, ಗಾರಿಗೆ ಮೊದಲಾದ ಭಕ್ಷ್ಯಗಳು ವರ್ಣಿತವಾಗಿವೆ. ಇವೆಲ್ಲ ಬೇರೆ ಬೇರೆಯ ಸಂದರ್ಭಗಳಿಗೆ ಮೀಸಲಾಗಿರುತ್ತಿದ್ದುದರಿಂದ ಶುಭ ಸಮಾರಂಭಗಳಲ್ಲಿ ಹಾಗೂ ಗೌರಿ ಹಬ್ಬದಂಥ ದೊಡ್ಡ ಹಬ್ಬಗಳಲ್ಲಿ ಒಬ್ಬಟ್ಟನ್ನು ಮಾಡುವ ಪದ್ಧತಿ ರೂಢಿಗೆ ಬಂದಿರಬಹುದು. ಒಬ್ಬಟ್ಟು, ಹುಳಿಯನ್ನ, ಆಂಬೊಡೆ ಮಾಡಿಬಿಟ್ಟರೆ ಆಗಿನ ಕಾಲಕ್ಕೆ ಅದು ದೊಡ್ಡ ಸಮಾರಾಧನೆ. "ಒಬ್ಬಟ್ಟಾಯಿತು, ಆಂಬೊಡೆಯಾಯಿತು, ಇನ್ನೇನಯ್ಯಾ ಕೊರಗಾಟ" ಎಂಬ ಒಂದು ಗಾದೆಯು ಸಂಕೇತಿ ಭಾಷೆಯಲ್ಲಿ ಪ್ರಚುರವಾಗಿರುವುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು.

ಆಧುನಿಕತೆ ಕಾಲಿರಿಸಿದಂತೆ ಲಾಡುವಿಗೆ ಸಮಾರಾಧನೆಗಳಲ್ಲಿ ಪ್ರಾಶಸ್ತ್ಯ ದೊರಕಿತು. ಲಾಡು ಸಮಾರಾಧನೆ ಎಂದುಬಿಟ್ಟರೆ ಅದು ಶ್ರೀಮಂತಿಕೆಯ ಕುರುಹು ಎಂದು ನಂಬಲಾಯಿತು. ಸಂಕೇತಿಗಳ ಸಮಾರಾಧನೆಗಳಿಗೆ ಒದಗುತ್ತಿದ್ದುದು ಹೋಟಲಿನಲ್ಲಿ ಅಥವಾ ಮಿಠಾಯಿ ಅಂಗಡಿಗಳಲ್ಲಿ ಮಾರುವಂಥ ಸಣ್ಣ ಉಂಡೆಗಳಲ್ಲ. ಟೆನ್ನಿಸ್ ಚೆಂಡು ಅಥವಾ ಹೆರಳೆ ಹಣ್ಣಿನ ಗಾತ್ರದ ಲಾಡುಗಳೇ ಸಂಕೇತಿಗಳಿಗೆ ಪ್ರಿಯವಾಗಿದ್ದುದು. ಇಂಥ ಐದು ಅಥವಾ ಆರು ಲಾಡುಗಳನ್ನು ತಿನ್ನುವವರು ಸಾಮಾನ್ಯ. ಈಚೆಗೆ ಚಿರೋಟಿ ಮತ್ತು ಫೇಣಿಗಳು ಲಾಡುವಿನ ಸ್ಥಾನವನ್ನು ಆಕ್ರಮಿಸಿವೆ. ಶ್ರೀಮಂತರಾದವರು ವರಪೂಜೆಗೆ ಎರಡು ಸಿಹಿ, ಧಾರೆಯ ಭೋಜನಕ್ಕೆ ಎರಡು ಸಿಹಿ, ಬೀಗರೌತಣಕ್ಕೆ ಎರಡು ಸಿಹಿ, ಹೀಗೆ ವ್ಯವಸ್ಥೆ ಮಾಡಿ ಮೈಸೂರುಪಾಕು, ಜಾಮೂನು, ಜಿಲೇಬಿ, ಜಹಾಂಗೀರು, ಬಾದೂಷಾ ಮೊದಲಾದ ಆಧುನಿಕ ಸಿಹಿ ಭಕ್ಷ್ಯಗಳನ್ನು ಮಾಡಿಸುತ್ತಾರೆ.

ಸಿಹಿ ಬಡಿಸುವಾಗ, "ಬೇಡ, ಸಾಕು, ಸಿಹಿ ನನಗೆ ಆಗೋಲ್ಲ ," "ಇಗೋ ನೋಡಿ, ಇನ್ನೂ ಎಲೆಯಲ್ಲೇ ಇದೆ", "ಇಲ್ಲಪ್ಪ, ನನ್ನ ಹಲ್ಲುಗಳಿಗೆ ಆಗೋಲ್ಲ , ಬಡಿಸಬೇಡಿ" ಈ ರೀತಿ ಅನೇಕ ವಿಧವಾಗಿ ಸಬೂಬು ಹೇಳುತ್ತ, ಊಟದ ಎಲೆಯ ಮೇಲಕ್ಕೆ ಕೈಯನ್ನು ಅಡ್ಡವಾಗಿ ಹಿಡಿಯುವಾಗಿನ ಆ ಮಾತುಗಳ ಭರಾಟೆ ನಡೆದೇ ಇರುತ್ತದೆ. ಸಿಹಿಯನ್ನು ತಿನ್ನುವ ಆಸೆಯುಳ್ಳವರು ಇಲ್ಲದೇ ಇರುವುದಿಲ್ಲ. ಅಂಥವರನ್ನು ನೋಡಿ ನೋಡಿ ಅವರಿಗೆ ಬಡಿಸಬೇಕು. "ನನಗೆ ಗೊತ್ತಿಲ್ಲವೇ! ಇವರಿಗೆ ಸಿಹಿ ತುಂಬ ಇಷ್ಟ ಎಂದು. ಸಕ್ಕರೆ ಸಣ್ಣಪ್ಪ ಎಂದು ಇವರಿಗೆ ಊರಿನವರು ಹೆಸರು ಕಟ್ಟಿರುವುದು ಸುಮ್ಮನೆ ಆಯಿತೇ? ಬಡಿಸಿ ಮಾವಯ್ಯ" ಎಂದು ಪಕ್ಕದಲ್ಲಿ ಕುಳಿತ ಸ್ನೇಹಿತರು ಬಡಿಸುವವರಿಗೆ ಹೇಳುತ್ತಾರೆ.

"ಬೇಡ ಕಣೋ ಶಂಕರಪ್ಪ, ನನಗೆ ಮೊದಲಿನ ಹಾಗೆ ತಿನ್ನುವುದಕ್ಕೆ ಆಗುವುದಿಲ್ಲವಪ್ಪ. ಹಿಂದೆ ತಿನ್ನುತ್ತಾ ಇದ್ದೆ. ಅದರಲ್ಲೇನು ಮುಚ್ಚುಮರೆ. ಆದರೆ ಈಗ ಆಗೋದಿಲ್ಲ, ಬಲವಂತ ಮಾಡಬೇಡ" ಎಂದು ಸಣ್ಣಪ್ಪ ಕೇಳಿಕೊಳ್ಳುತ್ತಾರೆ. ಆದರೂ ಶಂಕರಪ್ಪ ಒಂದೆರಡು ಲಾಡುಗಳನ್ನು ಎಲೆಗೆ ಬಡಿಸಿಯೇ ಮುಂದೆ ಹೋಗುತ್ತಾರೆ. "ಗ್ರಹಚಾರ, ಈ ಹುಡುಗರು ನನ್ನ ಮಾತು ಕೇಳುವುದಿಲ್ಲ" ಎನ್ನುತ್ತ ಸಣ್ಣಪ್ಪ ಲಾಡುವನ್ನು ಪುಡಿ ಮಾಡಿ

ಬಾಯಿಗೆ ಹಾಕಿಕೊಳ್ಳ ತೊಡಗುತ್ತಾರೆ. ಎರಡನೆಯ ಸಲ ಸಿಹಿ ಬಡಿಸಲು ಬಂದಾಗ ಆ ಮೊದಲಿನ ಲಾಡುಗಳಾಗಲಿ, ಚಿರೋಟಿಗಳಾಗಲಿ ಎಲೆಯಿಂದ ಮಾಯವಾಗಿ ಬಿಟ್ಟಿರುತ್ತವೆ. ಎರಡನೆಯ ಸಲ ಸಿಹಿ ಬಡಿಸುವಾಗ ಯಜಮಾನನೇ ಬಂದು ಬಲವಂತ ಮಾಡಿ ಬಡಿಸುವುದು ವಾಡಿಕೆ. ಇಂಥ ಸಮಯದಲ್ಲಿ ಆನಂದದ, ಉಲ್ಲಾಸದ ಮಾತುಗಳು ನಡೆಯುತ್ತವೆ. ಆದರೆ ಒಂದೊಂದು ಸಲ ಬೇಕು ಎಂತಲೇ ಕೀಟಲೆ ಮಾಡಲು ಕೆಲವು ಸ್ನೇಹಿತರು ಕೆಲವರಿಗೆ ಅತಿಯಾಗಿ ಬಲವಂತ ಮಾಡಿ ಬಡಿಸುವಂತೆ ಮಾಡುವುದುಂಟು. ಇಂಥ ಸಂದರ್ಭಗಳಲ್ಲಿ ಸ್ವಲ್ಪ ಬಿರುಸಿನ ನುಡಿಗಳು ಬರುವುದು ಅಸಹಜವೇನಲ್ಲ. "ಏನು ಬಲವಂತ ಮಾಡ್ತೀರಿ. ನನಗೆ ಸಿಹಿ ಆಗೋಲ್ಲ ಅಂತ ಗೊತ್ತು. ಎಲೆಯಲ್ಲಿ ಪೋಲು ಮಾಡೋದಕ್ಕೆ ಯಾತಕ್ಕೆ ಎರಡು ಚಿರೋಟಿ ಹಾಕಿಸಿದಿರಿ. ಎಲೆಯಲ್ಲೇ ಇರುತ್ತದೆ" ಎಂದು ಸರ್ರನೆ ಎಲೆಯ ತುದಿಗೆ ತಳ್ಳುವುದುಂಟು. ಆಗ ಕೀಟಲೆ ಮಾಡಿದವರು, "ಸಿಹಿಯನ್ನು ಎಲೆಯಲ್ಲಿ ಬಿಡಬಾರದು ಎಂದು ಗೊತ್ತಿಲ್ಲವೇ, ಅದು ಅಶ್ರೇಯಸ್ಸು. ಹೇಗಾದರೂ ತಿಂದುಬಿಡಿ ಮಾವಯ್ಯ" ಎನ್ನುತ್ತಾರೆ. "ತಿನ್ನುತ್ತೀನಿ ನಿನ್ನ ಪಿಂಡ. ನಿನ್ನ ತಲೆಗೆ ಮೆತ್ತುತ್ತೀನಿ" ಎಂದು ಪ್ರತಿ ಉತ್ತರ ಬರುತ್ತದೆ. "ಹೋಗಲಿ ಬಿಡಿ ಮಾವಯ್ಯ, ನಿಮಗೆ ಅಪಥ್ಯವಾದರೆ ಬಿಟ್ಟುಬಿಡಿ. ಅಪಶಬ್ದ ಏತಕ್ಕೆ ನುಡಿಯುತ್ತೀರಿ" ಎಂದು ಒಬ್ಬಿಬ್ಬರು ಸಮಾಧಾನ ಮಾಡುತ್ತಾರೆ. ಸಿಹಿ ಆದ ಮೇಲೆ ಪುನಃ ಖಾರ, ಅನಂತರ ಅನ್ನ-ಮಜ್ಜಿಗೆ, ಹೀಗೆ ಭೋಜನ ಮುಕ್ತಾಯವಾಗುತ್ತದೆ. ನಡುವೆ ಹುಡುಗರು ಉತ್ಸಾಹದಿಂದ, "ಪಚ್ಚೆ ಪರಿಮಳ ಪಾತಾಳ ಗಂಗೋದಕ !" ಎಂದು ಕೂಗುತ್ತ ನೀರನ್ನು ಬಡಿಸುತ್ತಾರೆ.

ಸಂಕೇತಿಗಳ ಮದುವೆ-ಮುಂಜಿ ಮೊದಲಾದ ಸಮಾರಂಭ ಗಳಲ್ಲಿ ಬಲವಂತವಾಗಿ ನೋಡಿನೋಡಿ ಬಡಿಸದೆ ಹೋದರೆ, "ಆ ಲಗ್ನದಲ್ಲಿ ಸರಿಯಾಗಿ ವಿಚಾರಿಸಿಕೊಳ್ಳಲಿಲ್ಲ. ಆಹಾ, ಅದೇನು ಬಡಿಸಾಟ. ನಾವೇನು ಹೊಟ್ಟೆಗಿಲ್ಲದೆ ಭೋಜನಕ್ಕೆ ಬರುತ್ತೇವೆಯೆ!" ಎಂದು ಅನಂತರ ಹಂಗಿಸುತ್ತಾರೆ. ಹೊಟ್ಟೆ ತುಂಬ ಊಟ ಮಾಡದೆ ದಾಕ್ಷಿಣ್ಯದಿಂದ ಇದ್ದುಬಿಡುವವರೂ ಉಂಟು. ಸಂಕೇತಿಗಳು ಚೆನ್ನಾಗಿ ಊಟ ಮಾಡುವವರು. ಊಟದಲ್ಲಿ ಕೊರತೆಯಾದರೆ ಅದನ್ನು ಅಷ್ಟಾಗಿ ಸಹಿಸಲಾರರು. ಪಾಂಕ್ತವಾಗಿ ಪ್ರತಿಯೊಂದು ಖಾದ್ಯ ಭಕ್ಷ್ಯಗಳನ್ನೂ ಎರಡೆರಡು ಸಾರಿ ನೋಡಿ ಬಡಿಸಬೇಕು. ಹಾಗೆ ಬಡಿಸದೆ ಇದ್ದರೆ ಅಪಚಾರವೇ ಸರಿ, ಲಗ್ನಕರ್ತನ ಕರ್ತವ್ಯಲೋಪ ಅದು ಎಂದಾಗುತ್ತದೆ. ಒಂದು ಸಲ ಏನಾಯಿತು ಎನ್ನಿ. ಬೆಂಗಳೂರಿನಲ್ಲಿ ಬಂಧುಗಳ ಒಂದು ಮದುವೆಗೆ ಹೋಗಿದ್ದೆ. ಇದು ತುಂಬ ಹಿಂದಿನ ಮಾತು. ಕನ್ಯಾಪಿತೃ ದೊಡ್ಡ ಇಂಜಿನಿಯರಾಗಿದ್ದರು. ಭವ್ಯವಾದ ಬಂಗಲೆಯನ್ನು ಕಟ್ಟಿಕೊಂಡು ಸುಖಜೀವಿಯಾಗಿದ್ದರು. ಮಗಳ ಮದುವೆಗೆ ಅದ್ದೂರಿಯಾಗೇ ಏರ್ಪಾಡು ಮಾಡಿದ್ದರು. ಸಾಮಾನು, ಸರಂಜಾಮು, ತರಕಾರಿ ಮೊದಲಾದುವುಗಳನ್ನು ದಂಡಿಯಾಗೇ ತರಿಸಿದ್ದರು. ಒಳ್ಳೆಯ ಅಡುಗೆಯವರ ಏರ್ಪಾಡನ್ನೂ ಮಾಡಿದ್ದರು. ಹಳ್ಳಿಯಲ್ಲೇ ಹುಟ್ಟಿ ಮುಂದೆ ಪಟ್ಟಣ ಸೇರಿ ವಿದ್ಯಾಭ್ಯಾಸ ಮಾಡಿ ದೊಡ್ಡ ಹುದ್ದೆಗೇರಿದ್ದರು. ಹಳ್ಳಿಯ ಎಲ್ಲ ಬಂಧು-ಬಾಂಧವರು ಹಾಗೂ ಪಟ್ಟಣದ ನೆಂಟರಿಷ್ಟರು, ಸ್ನೇಹಿತರು ಎಲ್ಲರನ್ನೂ ಮರ್ಯಾದೆಯಿಂದ ಮದುವೆಗೆ ಆಹ್ವಾನಿಸಿದ್ದರು. ಅತ್ಯಂತ ಪ್ರೀತಿಯಿಂದ ಎಲ್ಲರೂ ಬಂದಿದ್ದರು. ಬೀಗರಿಗೆ, ನಂಟರಿಗೆ ಮರ್ಯಾದೆಯಲ್ಲಿ ಕೊರತೆಯನ್ನೇನೂ ಮಾಡಲಿಲ್ಲ. ಎಲ್ಲವೂ ವೈಭವಯುತವಾಗಿಯೇ ನಡೆಯುತ್ತಿತ್ತು.

ಧಾರೆಯಾದ ಮೇಲೆ ಭೋಜನಕ್ಕೆ ಏರ್ಪಾಡಾಯಿತು; ಶ್ರೋತ್ರಿಯರಿಗೆ ಮನೆಯ ಒಳಗಡೆ ಹಜಾರದಲ್ಲಿ ಏರ್ಪಾಡು ಮಾಡಿದ್ದರು. ಹಳ್ಳಿಯಿಂದ ಬಂದ ಬಂಧುಗಳಿಗೆ ಹಾಗೂ ಬೀಗರಿಗೆ ಹಾಲಿನಲ್ಲಿ ಏರ್ಪಾಡಾಗಿತ್ತು. ಹಳ್ಳಿಯ ಕೆಲ ಹತ್ತಿರದ ಬಂಧುಗಳು ಭೋಜನದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ತಮ್ಮ ಜನಕ್ಕೆ, ಅಡುಗೆಯವರು ಬಡಿಸುವುದು ಸರಿಯಾಗುವುದಿಲ್ಲ ಎಂದು ನಂಟರುಗಳೇ ಬಡಿಸಲು ಸಿದ್ಧವಾದರು. ಕ್ರಮವಾಗಿ ಎಲ್ಲರಿಗೂ ಬಡಿಸುತ್ತಿದ್ದರು. ಹಸ್ತೋದಕ ಆಗಿ ಮಹಾಜನಗಳ ಊಟ ನಿಧಾನವಾಗಿ ಸಾಗಿತ್ತು. ಸಿಹಿಯನ್ನು ಬಡಿಸುವ ಸಮಯ ಬಂದಿತು. ಯಜಮಾನರಿಗೆ, ತಾವೇ ಎಲ್ಲರಿಗೂ ಸಿಹಿಯನ್ನು ಬಡಿಸಿ ಮಹಾಜನರನ್ನು ಸಂತೃಪ್ತಿಪಡಿಸಬೇಕೆಂಬ ಆಸೆಯಾಯಿತು. "ಪುಟ್ಟಣ್ಣಯ್ಯ, ಲಾಡು ಕುಕ್ಕಿ ತೆಗೆದುಕೋ, ನಾನು ಬಡಿಸುತ್ತೇನೆ" ಎಂದರು ಯಜಮಾನರು. ಪುಟ್ಟಣ್ಣಯ್ಯ ಲಾಡು ಕುಕ್ಕಿಯನ್ನು ಹಿಡಿದುಕೊಂಡ. ಯಜಮಾನರು ಲಾಡುವನ್ನು ಊಟಕ್ಕೆ ಕುಳಿತವರ ದೃಷ್ಟಿಗೆ ಬೀಳುವಂತೆ ಕೈಯಲ್ಲಿ ಮೇಲು ಮುಖವಾಗಿ ಹಿಡಿದುಕೊಂಡು, "ಮಹಾಸ್ವಾಮಿಯವರಿಗೆ ಲಾಡು. ಒಂದು ಲಾಡು, ಮಾವಯ್ಯ ನಿಮಗೆ ? ಅವಧಾನಿಗಳೇ, ಒಂದು ಲಾಡು" ಎಂದು ತೋರಿಸುತ್ತ ಪಂಕ್ತಿಯ ಮುಂದೆ ಹೋಗಲಾರಂಭಿಸಿದರು. ಊಟಕ್ಕೆ ಕುಳಿತವರು ಒಬ್ಬರ ಮುಖ ಒಬ್ಬರು ನೋಡುತ್ತ, ಬೇಡ ಎನ್ನುವಂತೆ ಕೈಯನ್ನು ಅಡ್ಡಲಾಗಿ ಹಿಡಿದರು. ಯಜಮಾನರ ಕೈಯಲ್ಲಿನ ಲಾಡು ಹಾಗೆಯೇ ಇತ್ತು. ಯಜಮಾನರು ಬಡಿಸುವ ರೀತಿಯನ್ನೂ, ಬಂಧುಗಳು ಅದಕ್ಕೆ ತೋರಿದ ಪ್ರತಿಕ್ರಿಯೆಯನ್ನೂ ಕಂಡ ಆತ್ಮೀಯರೊಬ್ಬರು ಯಜಮಾನರ ಬಳಿ ಬಂದು, "ನಾನು ಬಡಿಸುತ್ತೇನೆ, ಇಲ್ಲಿ ಕೊಡಿ. ನೀವು ಆಯಾಸ ಮಾಡಿಕೊಳ್ಳಬೇಡಿ"

ಎಂದು ನಮ್ರವಾಗಿ ನುಡಿದು ತಾವು ಲಾಡುವನ್ನು ಮೊದಲಿನಿಂದ ಬಡಿಸಲಾರಂಭಿಸಿದರು. ತಾವು ಬಡಿಸಲು ಬಂದಾಗ ಬೇಡ ಎಂದವರು ಒಂದು-ಎರಡು ಲಾಡುಗಳನ್ನು ಹಾಕಿಸಿಕೊಂಡು ಊಟ ಮಾಡುತ್ತಿರುವುದನ್ನು ಕಂಡು ಯಜಮಾನರಿಗೆ ಆಶ್ಚರ್ಯವಾಯಿತು. ನನ್ನ ಕೈಲಿ ಏತಕ್ಕೆ ಲಾಡುವನ್ನು ಜನರು ಬಡಿಸಿಕೊಳ್ಳಲಿಲ್ಲವೋ ಎಂದು ಯೋಚಿಸುತ್ತ, 'ಇದರಲ್ಲೇನೋ ರಹಸ್ಯವಿರಬೇಕು' ಎಂದು ಸುಮ್ಮನಾದರು. ಎಲ್ಲರ ಭೋಜನವೂ ಆದ ಮೇಲೆ ತಮ್ಮ ಆತ್ಮೀಯರನ್ನು ಕರೆದು ಕಾರಣವನ್ನು ತಿಳಿಯಬಯಸಿದರು. ಆಗ ಅವರು, "ನೋಡಪ್ಪ, ನೀನು ಹಳ್ಳಿ ಬಿಟ್ಟು ಮೂವತ್ತು ನಲವತ್ತು ವರ್ಷಗಳಾಗಿ ಹೋದವು. ಪಟ್ಟಣದ ರೀತಿ-ನೀತಿ ನಿನಗೆ ಗೊತ್ತು. ಹಳ್ಳಿಯವರ ರೀತಿಯನ್ನು ನೀನು ಮರೆತು ಬಿಟ್ಟಿದೀಯ. ಪಟ್ಟಣದ ಜನ ನೀವು, ನಾಜೋಕಿನವರು. ಊಟದಲ್ಲಿ ಮಿತಿಯರಿತವರು. ಸಿಹಿಯನ್ನು ಹೆಚ್ಚಾಗಿ ತಿನ್ನುವುದಿಲ್ಲ, ದಾಕ್ಷಿಣ್ಯವಿಲ್ಲದೆ ಕೇಳಿ ಹಾಕಿಸಿಕೊಳ್ಳುತ್ತೀರಿ. ಆದರೆ ನಮ್ಮ ಹಳ್ಳಿಯ ಜನ ಮೈಮುರಿದು ದುಡಿಯುತ್ತಾರೆ, ಹಾಗೆಯೇ ಊಟವನ್ನೂ ಮಾಡುತ್ತಾರೆ. ಅವರಿಗೆ ತೃಪ್ತಿಯಾಗುವಂತೆ ನೋಡಿನೋಡಿ ಬಲವಂತ ಮಾಡಿ ಬಡಿಸಬೇಕು. ಎಲೆಯಲ್ಲಿ ಸ್ವಲ್ಪವೂ ಪೋಲು ಮಾಡಬಾರದು ಎಂದು ನೀವು ಸ್ವಲ್ಪಸ್ವಲ್ಪವೇ ಬಡಿಸಿಸಿಕೊಳ್ಳುತ್ತೀರಿ. ಆದರೆ ನಮ್ಮ ಸಂಕೇತಿಗಳು ಅದರಲ್ಲೂ ಹಳ್ಳಿಯಲ್ಲಿ ವಾಸಿಸುವವರಿಗೆ ಉಪಚಾರ ಬಲವಂತಗಳು ಬೇಕು. ಆಗಲೇ ಅವರು ಸರಿಯಾಗಿ ಭೋಜನ ಮಾಡುವುದು. ಈ ಸೂಕ್ಷ್ಮ ನಿನಗೆ ತಿಳಿಯದು. ಎಂತಲೇ ನಾನು ಲಾಡು ಬಡಿಸಲು ಬಂದದ್ದು. ತಪ್ಪು ತಿಳಿದುಕೊಳ್ಳಬೇಡ" ಎಂದರು. "ನನಗೆ ಈ ಸೂಕ್ಷ್ಮ ಗೊತ್ತಾಗಲಿಲ್ಲ. ನಿಮ್ಮ ಸಮಯಪ್ರಜ್ಞೆಗೆ ನಾನು ಕೃತಜ್ಞ" ಎಂದು ಸಮಾಧಾನಗೊಂಡರು ಯಜಮಾನರು.

□ □ □

ಊಟ ಮಾಡುವಾಗ ಜನ ಹರ್ಷದಿಂದ, ಆನಂದದಿಂದ, ಮಾತುಗಳನ್ನಾಡುತ್ತ ಒಂದೊಂದು ತುತ್ತನ್ನೂ ಬಾಯಿಗೆ ಹಾಕಿಕೊಂಡು ಅಗಿಯುತ್ತ, ಸವಿಯುತ್ತ, ಭೋಜನದ ಸುಖವನ್ನು ಅನುಭವಿಸುತ್ತಾರೆ. ಆಗ ಕುಶಲವಾರ್ತೆಗಳೂ ವ್ಯವಹಾರದ ಮಾತುಗಳೂ ನಡೆಯುತ್ತವೆ.

"ಆ ತಿಮ್ಮಯ್ಯ ಹಾಕಿದ ಬಾಳೆಸಸಿಯ ಎಲೆಗಳೆಲ್ಲ ಮುರುಟಿಕೊಂಡು ಹೋಗಿವೆಯಲ್ಲ, ಯಾಕೆ?" ಎಂದು ಸತ್ಯನಾರಾಯಣ ಮಾತೆತ್ತಿದ. "ಅವನೆಲ್ಲೋ ಒಬ್ಬ ಗುಗ್ಗು. ಆ ನೆಲದಲ್ಲಿ ಬಾಳೆ ಬೆಳೆಯುತ್ತದೆಯೇ? ನಮ್ಮನ್ನು ಯಾರನ್ನಾದರೂ ಕೇಳಿದ್ದರೆ ಹೇಳ್ತಾ ಇದ್ದೆವು- ಆ ನೆಲ ಬಾಳೆ ವ್ಯವಸಾಯಕ್ಕೆ ಸರಿಯಿಲ್ಲ ಎಂದು. ಬೃಹಸ್ಪತಿ, ನಮ್ಮನ್ನು ಕೇಳೋದೇನು ಅಂತ ಬೀಗಿಕೊಂಡು ಹೋದ, ತಾನೇನೋ ಮಹಾಘನಾಂದಾರಿ ವ್ಯವಸಾಯಗಾರ ಅಂತ" ಕಾಲುವೆ ನಾರಣಪ್ಪ ಹೇಳಿದ. "ಅಲ್ಲ, ಅದೊಂದು ತರ ಖಾಯಿಲೆ ಬಾಳೆಗಿಡಕ್ಕೆ ಬರೋದು ಅಂತಾರಲ್ಲ. ವ್ಯವಸಾಯದ ಇಲಾಖೆಯವರು ಅದಕ್ಕೆ ಯಾವುದೋ ಔಷಧಿ ಸಿಂಪಡಿಸುತ್ತಾರಂತಲ್ಲ" ಎಂದ ಸತ್ಯನಾರಾಯಣ. "ಔಷಧಿ ಸಿಂಪಡಿಸಿ ಬೆಳೆಯನ್ನು ಬದುಕಿಸುವ ಈ ವ್ಯವಸಾಯ ವಿಜ್ಞಾನ ನೋಡಿದರೆ ಎಲ್ಲರೂ ಉದ್ಧಾರವಾದ ಹಾಗೇ. ನಮ್ಮ ಹಿಂದಿನವರಿಗೆ ಏನೂ ಗೊತ್ತೇ ಇರಲಿಲ್ಲ ಅನ್ನು ! ಅವರೆಲ್ಲ ಕ್ರಿಮಿನಾಶಕಾನೇ ನಂಬಿಕೊಂಡಿದ್ದರಾ ! ನಮ್ಮ ಕೃಷ್ಣಾಪುರದ ಸುಬ್ರಹ್ಮಣ್ಯ ಎಷ್ಟು ಸೊಗಸಾಗಿ ಬಾಳೆ ವ್ಯವಸಾಯ ಮಾಡಿದ್ದಾನೆ. ನೋಡುವುದಕ್ಕೇ ಒಂದು ಆನಂದ. ಚೆನ್ನಾಗಿ ಸಂಪಾದನೆಯಾಗಿ ಆದಾಯವೂ ಬಂತು" ತಮ್ಮಯ್ಯ ಉತ್ತರಿಸಿದ.

□ □ □

ಇನ್ನೊಂದು ಪಂಕ್ತಿಯಲ್ಲಿ,

"ಜೋಯಿಸರ ಮನೆ ತಿಪ್ಪಣ್ಣನಿಗೆ ಏನು ಬಂದಿತ್ತು? ಮನೆ ಬಿಟ್ಟು ಓಡಿಹೋದ. ಇನ್ನೂ ಹದಿನೇಳು ಹದಿನೆಂಟು ವರ್ಷ" ಕೆಳಗಿನ ಮನೆ ರಾಜಣ್ಣ ಮಾತೆತ್ತಿದ. "ತೋಟದಲ್ಲಿ ಮೈ ಮುರಿದು ಗೇಯೋದಕ್ಕೆ ಆಗದ ಸೋಮಾರಿ ಇನ್ನೇನು ಮಾಡ್ತಾನೆ? ಮೈಸೂರಿನಲ್ಲೋ, ಕೊಳ್ಳೇಗಾಲದಲ್ಲೋ ಹೋಟಲಿಗೆ ಸೇರಿಕೊಂಡಿದ್ದಾನೆ ಅಂತ ಸುದ್ದಿ. ಸಿಕ್ಕುತ್ತಲ್ಲ ಎಂಜಲು ಕಾಫಿ-ತಿಂಡಿ" ಸೋಮನಹಳ್ಳಿ ಸುಬ್ರಾಯ ಉತ್ತರಿಸಿದ.

"ಒಳಗೆ ಯಾರು ಯಾರು ಅಡುಗೆ ಬೇಯಿಸ್ತಾರೋ. ಹೊರಗಡೆ ಬಿಳಿ ಶರಟು ಹಾಕಿಕೊಂಡು ಟೇಬಲ್ಲ ಹತ್ತಿರಕ್ಕೆ ತಂದುಕೊಟ್ಟುಬಿಟ್ಟರೆ ಆಯಿತು. ಹೋಗಿ ಬಾಯಿ ಚಪ್ಪರಿಸಿಕೊಂಡು ತಿಂದದ್ದೂ ತಿಂದದ್ದೆ" ವೆಂಕಟೇಶ ಅವಧಾನಿಗಳು ತಮ್ಮ ಟಿಪ್ಪಣಿ ಸೇರಿಸಿದರು.

"ಇನ್ನೂ ನೋಡ್ತಾ ಇರಿ. ಇಷ್ಟಕ್ಕೇ ನಿಲ್ಲುತ್ತೈ? ಕಾಲ ಕೆಡ್ತ ಇದೆ. ಅದಕ್ಕೇ ಹಿಂದಿನ ಹಾಗೆ ಮಳೆ-ಬೆಳೆ ಆಗದೆ ಜನ ಕಷ್ಟ ಪಡುತ್ತೀರೋದು" ಸುಬ್ರಾಯ ಮಾತು ಸೇರಿಸಿದ.

"ಹೋಟಲು ಅಂದ್ರೆ ಹಿಂದೆ ಹೀಗಿರಲಿಲ್ಲವಂತೆ, ನಮ್ಮ ಶಾನುಭೋಗ ಶೀನಣ್ಣನೋರು ಹಿಂದೆ ಅಂದರೆ ಮೂವತ್ತು ನಲವತ್ತು ವರ್ಷದ ಹಿಂದೆ ಮೈಸೂರಿಗೆ ಹೋಗಿದ್ದರಂತಲ್ಲ. ಅವರು ಆ ಹೋಟಲುಗಳ ಮಡಿಯನ್ನು ಹೊಗಳುತ್ತ ಇದ್ದರು. ಶಾಸ್ತ್ರಿಗಳೂ, ಶ್ರೋತ್ರಿಯರೂ, ಹೋಟಲಲ್ಲಿ ತಿನ್ನಬಹುದಾಗಿತ್ತಂತೆ" ತಮ್ಮಯ್ಯ ಹೇಳಿದ.

“ಹೌದು, ನಮ್ಮ ತಂದೆ ಹೇಳ್ತಾ ಇದ್ದರು. ಒಳಗೆ ಬ್ರಾಹ್ಮಣರೇ ಕಾಫಿ-ತಿಂಡಿ ಎಲ್ಲ ಮಾಡೋರು. ಬಾಳೆಎಲೇಲಿ ತಿಂಡಿ ತಂದುಕೊಡೋರು. ತಿಂದ ಎಲೇನ, ತಿಂಡಿ ತಿಂದವರೇ ಕಸದ ಡಬ್ಬಕ್ಕೆ ಹಾಕಿ ಕೈತೊಳಕೊಂಡು ಬಂದು, ಎಲೆ ಹಾಕಿದ್ದ ನೆಲವನ್ನು ಶುದ್ಧಿ ಮಾಡಬೇಕಾಗಿತ್ತಂತೆ. ಕಾಫಿ ಕುಡಿದ ಬಟ್ಟಲನ್ನು ತಾವೇ ಹುಣಿಸೇಹಣ್ಣು ಹಾಕಿ ತೊಳೆದು ಇಡ್ತಾ ಇದ್ದರಂತೆ” ಮರಿಶಾನುಭೋಗ ಮರಿಶಾಮಿ ಹೇಳಿದ.

“ಆ ಕಾಲ ಇನ್ನೆಲ್ಲಿ !” ಎಂಬ ಉದ್ಗಾರ ಹಲವರಿಂದ.

□ □ □

ಮತ್ತೊಂದು ಕಡೆಯಲ್ಲಿ,

“ಏನು ವೆಂಕಟೇಶ, ಈ ಸಲ ಶನಿವಾರಸಂತೇಲಿ ವೀಳೆಯದೆಲೆ ಹೇಗೆ ಹೋಯಿತು ? ಏನೋ ತುಂಬ ನಷ್ಟವಾಯಿತು ಅಂತ ಕೇಳಿದೆನಲ್ಲ !” ತೋಟದ ಮನೆ ಅಪ್ಪಯ್ಯ ಪ್ರಶ್ನಿಸಿದ.

“ಏನೂ ತಿಳೀದ ಹಾಗೆ ಕೇಳ್ತೀಯಲ್ಲ, ಕತ್ತು ಮುರಿಯೋಹಾಗೆ ಎಲೆಪಿಂಡಿ ಹೊತ್ತುಕೊಂಡು ನಾವು ಹೋಗೋದು. ಅಲ್ಲಿ ನೋಡಿದರೆ ಮೂರುಕಾಸಿಗೆ ಕಟ್ಟು ಕೊಡ್ತೀಯಾ ಸ್ವಾಮೀ ಅಂತ ಆ ಬಸವನಹಳ್ಳಿ ಬಸವೇಗೌಡ ಕೇಳ್ತಾನೆ ನೋಡು. ಮೈಮುರಿದು ವ್ಯವಸಾಯ ಮಾಡಿ ಹಂಬಿಗೆ ನೀರು ಹಾಕಿ ಬೆಳೆಸೋದು, ಇಲ್ಲಿ ನೋಡಿದರೆ ಕಾಸಿಗೊಂದು ಕೊಸರಿಗೆರಡು ಅಂತ ಕೇಳೋದು” ವೆಂಕಟೇಶ ಕತ್ತನ್ನು ಮುಟ್ಟಿ ನೋಡಿಕೊಳ್ಳುತ್ತ ಹೊಟ್ಟೆ ಉರಿಯುತ್ತ ಹೇಳಿದ.

“ಕಳೆದ ಮಂಗಳವಾರದ ಸಂತೇಲಿ ಚಿನ್ನಸೋಮಿ ಎಲೆ ವ್ಯಾಪಾರವಾಗದೆ, ವಾಪಸ್ಸು ತಂದು ಏನು ಮಾಡೋದು ಅಂತ ಎಲೆ ಸರ ಮಾಡಿ ನಾಯಿಗಳ ಕತ್ತಿಗೆ ಹಾಕಿ ಬರಲಿಲ್ಲವೇ? ಮುಖ್ಯವಾಗಿ ಬೆವರು ಸುರಿಸಿ ದುಡಿಯೋದೇ ತಪ್ಪು ಅನ್ನಿಸಿಬಿಟ್ಟಿದೆ” ಫಾಲಚಂದ್ರ ಹೇಳಿದ.

□ □ □

ಇನ್ನೊಂದು ಕಡೆಯಲ್ಲಿ,

“ಏನಪ್ಪ, ಮಹಾಯುದ್ಧದಲ್ಲಿ ಜರ್ಮನಿಯೋರು ಡೆನ್‌ಮಾರ್ಕೋ ಅದೆಲ್ಲೋ ಇಂಗ್ಲೆಂಡಿನವರನ್ನು ಸೋಲಿಸಿಬಿಟ್ಟರಂತಲ್ಲ” ಮರಿಯಣ್ಣ ಹೇಳಿದ.

“ಏನು ಕೇಳ್ತಿ ಜರ್ಮನಿಯೋರ ಸಾಹಸಾನ. ಮೊದಲು ಪ್ಯಾರಾಚೂಟ್‌ನಲ್ಲಿ ಸೈನಿಕರ ಹಾಗೆ ಇರೋ ಬೊಂಬೆಗಳನ್ನು ಇಳಿಸಿದರಂತೆ. ಜರ್ಮನಿ ಸೈನಿಕರೇ ಪ್ಯಾರಾಚೂಟಿನಿಂದ ಇಳಿಯುತ್ತಿದ್ದಾರೆ ಅಂತ ಇಂಗ್ಲಿಷ್ ಸೈನಿಕರು ಬಂದೂಕು ಹಾರಿಸಿದ್ದೂ ಹಾರಿಸಿದ್ದೆ. ನೋಡ್ತಾರೆ, ಎಲ್ಲ ಬೊಂಬೆಗಳು. ಅನ್ಯಾಯವಾಗಿ ಮದ್ದು ಗುಂಡೆಲ್ಲ ನಷ್ಟವಾಯಿತಲ್ಲ ಅಂತ ಕೊರಗ್ತಾ ಇರೋ ಹೊತ್ತಿಗೆ ನಿಜವಾದ ಜರ್ಮನಿ ಸೈನಿಕರು ಪ್ಯಾರಾಚೂಟ್‌ನಿಂದ ಇಳಿದು ಇಂಗ್ಲಿಷ್ ಸೈನಿಕರನ್ನೆಲ್ಲ ಢಂ ಢಂ ಅನ್ನಿಸಿಬಿಟ್ಟರಂತೆ. ಇದನ್ನು ಕೇಳಿ ಚರ್ಚಿಲ್‌ಗೆ ಸುಸ್ತೋಸುಸ್ತು.”

“ಜರ್ಮನಿಯವರು ಮಹಾ ಪ್ರತಿಭಾಶಾಲಿಗಳು ಮತ್ತು ಸಾಹಸಿಗಳು. ಹೊಸ ಹೊಸ ಆವಿಷ್ಕಾರಗಳನ್ನು ಮಾಡಿ ವಿ-೧, ವಿ-೨ ಎಂಬ ಮಾರಕಾಸ್ತ್ರಗಳನ್ನೂ, ಪೈಲಟ್ಟಿಲ್ಲದೆ ಬಾಂಬ್ ಹಾಕುವ ವಿಮಾನವನ್ನೂ ಕಂಡು ಹಿಡಿದು ಜಗತ್ತನ್ನೇ ದಂಗುಗೊಳಿಸಿದ್ದಾರೆ.”

“ಅಲ್ಲವೋ ಮರಿಯಣ್ಣ, ಜರ್ಮನಿಯವರು ಯಾರು ಎಂದುಕೊಂಡೆ? ಅವರು ಪರಿಶುದ್ಧ ಆರ್ಯರು ಕಣಯ್ಯ. ನಮ್ಮ ಬುಡವೇ ಅವರೂ. ಅದಕ್ಕೇ ಆ ಪ್ರತಿಭೆ ಅವರಿಗೆ.”

“ನಿಜವಾಗಿ ಅವರು ನಮ್ಮ ದೇಶದ ಪ್ರಾಚೀನಶಾಸ್ತ್ರ ಹಾಗೂ ವಿಜ್ಞಾನ ಗ್ರಂಥಗಳನ್ನು ತೆಗೆದುಕೊಂಡು ಹೊರಟುಹೋದರಂತೆ. ಆ ಗ್ರಂಥಗಳಲ್ಲಿ ಏನಿದೆ ಎಂಬುದನ್ನು ತಿಳಿಯದೆ ಸುಮ್ಮನೆ ಪೂಜೆ ಮಾಡಿಕೊಂಡು ಇಟ್ಟುಕೊಂಡಿದ್ದರು ನಮ್ಮವರು. ಅವರು ನೋಡಪ್ಪ ನಿಜವಾದ ಬುದ್ಧಿವಂತರು. ಆಗ್ನೇಯಾಸ್ತ್ರ , ಬ್ರಹ್ಮಾಸ್ತ್ರ , ವಾರುಣಾಸ್ತ್ರ ಎಂದೆಲ್ಲ ನಮ್ಮ ರಾಮಾಯಣ, ಮಹಾಭಾರತಗಳಲ್ಲಿ ವರ್ಣಿತವಾಗಿದೆಯಲ್ಲ, ಅದೆಲ್ಲವನ್ನೂ ಅವರು ಪ್ರಯೋಗ ಮಾಡಿ ಉಪಯೋಗಿಸುತ್ತಿದ್ದಾರೆ. ಇನ್ನೂ ಏನೇನಿದೆಯೋ ಅವರ ಬತ್ತಳಿಕೆಯಲ್ಲಿ.”

“ಜನಿವಾರ ಒಂದಿಲ್ಲ ಅವರಿಗೆ. ಜನಿವಾರ ಹಾಕಿದವರು ನಾವೂ ಇದ್ದೇವೆ, ನೋಡಿ.”

□ □ □

ಮದುವೆ, ಮುಂಜಿ, ರಾಮಪಟ್ಟಾಭಿಷೇಕ ಮೊದಲಾದ ಸಂದರ್ಭಗಳಲ್ಲಿ ನಡೆಯುತ್ತಿದ್ದ ಸಮಾರಾಧನೆಗಳಲ್ಲಿ ಒಂದೊಂದು ಸಲ ಸಣ್ಣ ಅನರ್ಥಗಳು ಆಗುತ್ತಿದ್ದುದುಂಟು. ಎಂಜಲು ಮೈಲಿಗೆಯಾದಲ್ಲಿ ಅಥವಾ ಸರಸ ಹೋಗಿ ವಿರಸವಾದ ಸಂದರ್ಭಗಳಲ್ಲಿ ಸಣ್ಣ ಪುಟ್ಟ ಅಹಿತಕರ ಘಟನೆಗಳು ನಡೆಯುತ್ತಿದ್ದುವು.

ಒಮ್ಮೆ ಎರಡನೆಯ ಸರದಿ ಒಬ್ಬಟ್ಟನ್ನು ಬಡಿಸಲು ತಂದರು. ಬಲವಂತ ಮಾಡಿ ಬಡಿಸುತ್ತ ನಡೆದಿದ್ದ ಸಂದರ್ಭ. "ಬೇಡ, ಬಡಿಸಬೇಡ. ನನಗೆ ಸಿಹಿ ಆಗೋದಿಲ್ಲ. ಮೊದಲನೆಯ ಸಲವೇ ಬೇಡ ಅಂದರೂ ಬಡಿಸಿಹೋದ ಆ ಗುಂಡಪ್ಪ. ಅದು ಎಲೆಯಲ್ಲಿ ಹಾಗೇ ಇದೆ" ಎಂದ, ಮೇಲಿನ ವಠಾರದ ತಿಪ್ಪಯ್ಯ. "ಏನೋ? ಯಾರಿಗೋ ಹೇಳೋ ಹಾಗೆ ನನಗೆ ಹೇಳ್ತೀಯಲ್ಲ. ಅವತ್ತು ಅಗ್ರಹಾರದಲ್ಲಿ ಚಿನ್ನಪ್ಪನ ಕೈಲಿ ಸರಿಗಟ್ಟಿಕೊಂಡು ಇಪ್ಪತ್ತೈದು ಒಬ್ಬಟ್ಟನ್ನು ತಿಂದದ್ದನ್ನು ನಾನು ಕಾಣೆನೇ? ನಾನು ಅಲ್ಲೇ ಇದ್ದೆನಲ್ಲ" ಎಂದು ಕೋಣನೂರಿನ ಸುಂದರ ಹೇಳಿದ್ದೇ ತಡ, ಒಬ್ಬಟ್ಟು ಬಡಿಸುತ್ತಿದ್ದ ಸೀತಾರಾಮು ಮೊರದಿಂದ ತಿಪ್ಪಯ್ಯನ ಎಲೆಗೆ ಒಬ್ಬಟ್ಟನ್ನು ತಳ್ಳಿದ. ಒಂದು ಒಬ್ಬಟ್ಟು ತಿಪ್ಪಯ್ಯನ ಎಲೆಗೆ ಬಿದ್ದಿತು. ಇನ್ನೊಂದು ಒಬ್ಬಟ್ಟು ಪಕ್ಕದಲ್ಲಿ ಕುಳಿತಿದ್ದ ರಾಮನಾಥಪುರದ ರಾಮಸ್ವಾಮಿ ಎಲೆಗೆ ಹಾರಿಬಿದ್ದಿತು. "ತಡಿಯೋ ಸೀತಾರಾಮು, ಎಂಥ ಕೆಲಸ ಮಾಡಿಬಿಟ್ಟೆ? ಎಲೆಗೆ ಕೈಹಾಕಬೇಡ. ತಿಪ್ಪಯ್ಯ, ರಾಮಸ್ವಾಮಿ ನೀನೂ ಅಷ್ಟೆ. ಶಾಸ್ತ್ರಿಗಳನ್ನು ಕೇಳೋಣ- ಎಂಜಲು ಮೈಲಿಗೆ ಆಗಿದೆಯೇ, ಇದಕ್ಕೆ ಏನು ಪರಿಹಾರ ಎಂದು" ಎಂದಿದ್ದೇ ಒಬ್ಬಟ್ಟಿಗೆ ತುಪ್ಪ ಬಡಿಸಲು ಹಿಂದಿನಿಂದ ಬಂದ ಪುಟ್ಟಣ್ಣ ಕೂಗು ಹಾಕಿದ. ಒಬ್ಬಟ್ಟು ಬಡಿಸುತ್ತಿದ್ದ ಸೀತಾರಾಮು ಬೆಪ್ಪಾಗಿ ನಿಂತ. "ಅಲ್ಲವೋ ತಿಪ್ಪಯ್ಯ, ನೀನು ಕೈ ಅಡ್ಡ ಏಕೆ ತಂದೆ? ನಿನಗೆ ಒಬ್ಬಟ್ಟು ಬೇಡವಾಗಿದ್ದರೆ ಅದು ಎಲೆಯಲ್ಲಿ ಉಳಿಯುತ್ತಿತ್ತು. ನಾಯಿಗಳು ತಿಂದುಕೊಳ್ಳುತ್ತಿದ್ದುವು. ಈಗ ಇಬ್ಬರಿಗೂ ಊಟಕ್ಕೆ ಅಡ್ಡಿಯಾಯಿತಲ್ಲ!" ಎಂದ ಕೋಣನೂರಿನ ಸುಂದರ. ಅಷ್ಟರಲ್ಲಿ ಬಡಿಸುವುದರ ಉಸ್ತುವಾರಿ ನೋಡುತ್ತಿದ್ದ ಅಯ್ಯಪ್ಪ ಬಂದು, ಏನಾಯಿತು ಎಂದು ವಿಷಯವನ್ನು ಕೇಳಿ ತಿಳಿದು, "ತಡೆಯಿರಿ, ಅಪ್ಪಣ್ಣಶಾಸ್ತ್ರಿಗಳನ್ನು ಕೇಳಿಕೊಂಡು ಬರ್ತೀನಿ" ಎಂದು ಶಾಸ್ತ್ರಿಗಳ ಬಳಿಗೆ ಹೋದ. "ಶಾಸ್ತ್ರಿಗಳೇ, ಈ ಸಂದಿಗ್ಧಕ್ಕೆ ಸ್ವಲ್ಪ ಪರಿಹಾರ ಹೇಳಿ" ಎಂದ, ಅಯ್ಯಪ್ಪ. "ಏನಾಯಿತಪ್ಪ, ಎಂಜಲು ಹಾರಿತೇ, ಯಾರ ಎಲೆಗೆ, ಹೇಗೆ? ಎಲ್ಲ ವಿವರವಾಗಿ ಹೇಳು" ಎಂದರು ಅಪ್ಪಣ್ಣಶಾಸ್ತ್ರಿಗಳು. "ಸೀತಾರಾಮು ಒಬ್ಬಟ್ಟು ಬಡಿಸುತ್ತಿದ್ದ. ಬಡಿಸುವಾಗ ಒಂದು ಒಬ್ಬಟ್ಟು ತಿಪ್ಪಯ್ಯನ ಎಲೆಗೆ ಬಿತ್ತು. ಇನ್ನೊಂದು ಒಬ್ಬಟ್ಟು ತಿಪ್ಪಯ್ಯ ಅಡ್ಡವಾಗಿ ಹಿಡಿದಿದ್ದ ಎಡಗೈಗೆ ತಗುಲಿ ರಾಮಸ್ವಾಮಿ ಎಲೆಗೆ ಹಾರಿ ಬಿದ್ದಿತಂತೆ" ಎಂದ ಅಯ್ಯಪ್ಪ. "ಸರಿಯಾಗಿ ಹೇಳು. ತಿಪ್ಪಯ್ಯನ ಕೈಗೆ ತಗುಲಿ ಪಕ್ಕದ ರಾಮಸ್ವಾಮಿ ಎಲೆಗೆ ಬಿದ್ದಿತೋ? ಇಲ್ಲ , ತಿಪ್ಪಯ್ಯನ ಕೈಯಿಂದ ಅವನ ಎಲೆಗೆ ತಗುಲಿ ಅಲ್ಲಿಂದ ರಾಮಸ್ವಾಮಿ ಎಲೆಗೆ ಬಿದ್ದಿತೋ?" ಎಂದು ಪ್ರಶ್ನಿಸಿದರು ಶಾಸ್ತ್ರಿಗಳು. "ಏನೋಪ್ಪ, ನಾನು ನೋಡಲಿಲ್ಲ. ಬಡಿಸುತ್ತಿದ್ದ ಸೀತಾರಾಮು ಹಾಗೆ ಹೇಳಿದ" ಎಂದು ಉತ್ತರಿಸಿದ ಅಯ್ಯಪ್ಪ. "ಆ ಸಮಯದಲ್ಲಿ ರಾಮಸ್ವಾಮಿಯ ಬಲಗೈ ಎಲೆಯಲ್ಲಿ ಇತ್ತೋ ಅಥವಾ ಅವನ ಕೈ ಮೇಲೆ ಇತ್ತೋ ?" ಅಪ್ಪಣ್ಣಶಾಸ್ತ್ರಿಗಳು ಕೇಳಿದರು. "ಹೋಗಿ ರಾಮಸ್ವಾಮಿಯನ್ನು ಕೇಳಿಕೊಂಡು ಬರುತ್ತೇನೆ" ಎಂದು ಅಯ್ಯಪ್ಪ ರಾಮಸ್ವಾಮಿಯನ್ನು ಕೇಳಿಕೊಂಡುಬಂದು, "ರಾಮಸ್ವಾಮಿಯ ಕೈ ಎಲೆಯ ಮೇಲೆ ಇತ್ತಂತೆ" ಎಂದು ಶಾಸ್ತ್ರಿಗಳಿಗೆ ತಿಳಿಸಿದ. "ಸರಿಯೇ, ತಿಪ್ಪಯ್ಯನ ಎಡಗೈಗೆ ತಗುಲಿ ಎಲೆಗೆ ತಗುಲದೆ ರಾಮಸ್ವಾಮಿಯ ಎಲೆಗೆ ಒಬ್ಬಟ್ಟು ಹಾರಿತೋ ಇಲ್ಲವೋ ಎಂಬುದು ಸರಿಯಾಗಿ ಗೊತ್ತಿಲ್ಲದೇ ಇರುವುದರಿಂದ ತಿಪ್ಪಯ್ಯನ ಎಲೆಯನ್ನು ತೆಗೆದು, ಜಾಗ ಶುದ್ಧಿ ಮಾಡಿ, ಬೇರೆ ಎಲೆ ಹಾಕಿ ಬಡಿಸಿ. ಅವನು ಊಟ ಮಾಡಲಿ. ರಾಮಸ್ವಾಮಿ ಆಪೋಶನ ತೆಗೆದುಕೊಂಡು ಎದ್ದು ಸ್ನಾನ ಮಾಡಿಕೊಂಡು ಬಂದು ಊಟ ಮಾಡಿಕೊಳ್ಳಲಿ" ಎಂದು ಶಾಸ್ತ್ರಿಗಳು ಪರಿಹಾರ ಹೇಳಿದರು. 'ಸರಿ' ಎಂದು ಹೋದ ಅಯ್ಯಪ್ಪ ಅದೇ ರೀತಿ ಮಾಡಿಸಿದ. ಇಂಥ ಎಷ್ಟೋ ಸಂದಿಗ್ಧಗಳು ಸಮಾರಾಧನೆಯ ಕಾಲದಲ್ಲಿ ನಡೆಯುತ್ತಿದ್ದವು. ಕೂಲಂಕಷವಾಗಿ ವಿಚಾರ ಮಾಡಿ ಯಾರ ಎಲೆಯಿಂದ ಎಂಜಲು ಯಾರ ಎಲೆಗೆ ಹಾರಿತು, ಯಾರಿಗೆ ಮೈಲಿಗೆಯಾಯಿತು, ಯಾರಿಗೆ ಮೈಲಿಗೆ ಆಗಲಿಲ್ಲ ಎಂಬ ಸೂಕ್ಷ್ಮಗಳನ್ನು ಪರಿಶೀಲಿಸಿ ಶಾಸ್ತ್ರಿಗಳೋ, ಅವಧಾನಿಗಳೋ ತೀರ್ಪು ಕೊಡುತ್ತಿದ್ದರು. ಕೆಲವು ಇಂಥ ಸಂದರ್ಭಗಳಲ್ಲಿ ಅನುಮಾನ ಉಂಟಾಗಿ ಯಾವುದು ಸರಿ, ಯಾವುದು ತಪ್ಪು ಎಂಬ ಚರ್ಚೆ ಎದ್ದು ವಿವಾದವೂ ಉಂಟಾಗಬಹುದಿತ್ತು. ಕೊನೆಗೆ ಬಹುಮತದಿಂದ ಒಂದು ತೀರ್ಮಾನಕ್ಕೆ ಬರಲಾಗುತ್ತಿತ್ತು.

ಊಟ ಮಾಡುವ ಸಮಯದಲ್ಲಿ ಕ್ವಚಿತ್ತಾಗಿ ಅಹಿತಕರ ಸಂದರ್ಭಗಳು ಉಂಟಾಗುತ್ತಿದ್ದುದುಂಟು. ಒಂದು ಸಲ ಬಸವಾಪಟ್ಟಣದಲ್ಲಿ ನಡೆದ ಘಟನೆ ನನ್ನ ನೆನಪಿಗೆ ಬರುತ್ತಿದೆ. ಯಾವ ಸಂದರ್ಭ ಎಂಬುದು ಕೂಡ ನನಗೆ ಮರೆತುಹೋಗಿದೆ. ಅಲ್ಲದೆ ಆ ಘಟನೆಯಲ್ಲಿ ಒಳಗೊಂಡಿದ್ದ ವ್ಯಕ್ತಿಗಳ ಹೆಸರೂ ಸರಿಯಾಗಿ ಜ್ಞಾಪಕವಿಲ್ಲ. ಆದುದರಿಂದ ಕಲ್ಪನೆಯ ಹೆಸರುಗಳನ್ನೇ ಇಲ್ಲಿ ಕೊಡಲಾಗಿದೆ. ಆ ಊರಿನಲ್ಲಿ ಪೊಲೀಸು ಇಲಾಖೆಯಲ್ಲಿದ್ದು ವಿಶ್ರಾಂತರಾದವರೊಬ್ಬರಿದ್ದರು. ಅವರನ್ನು ದಫೇದಾರರು ಎಂದೇ ಕರೆಯುತ್ತಿದ್ದರು. ಒಳ್ಳೆ ಜಬರ್‌ದಸ್ತಿನ ಆಸಾಮಿ. ಪೊಲೀಸ್ ಮೀಸೆ ಅವರ ಮುಖವನ್ನು ಅಲಂಕರಿಸಿತ್ತು. ಸಾದಾ ಉಡುಪಿನಲ್ಲಿಯೇ, ಅವರು ನಡೆಸಿದ ಪೊಲೀಸ್ ಇಲಾಖೆಯಲ್ಲಿನ ಶಿಸ್ತು ಹಾಗೂ ಅಧಿಕಾರದ ಜರ್ಬು ಎದ್ದು ಕಾಣಿಸುತ್ತಿದ್ದಿತು. ಮಾತು ಕೂಡ ಜೋರೇ. ಕೆಲಸ ಕಾರ್ಯಗಳಲ್ಲಿಯೂ ಶಿಸ್ತು ಮತ್ತು ದಕ್ಷತೆಗಳಿಗೆ

ಕೊರತೆ ಇರಲಿಲ್ಲ. ಊರಿನ ಚರ್ಚೆಗಳಲ್ಲಿ, ಸಮಸ್ಯೆಗಳ ಇತ್ಯರ್ಥಗಳಲ್ಲಿ ಅಧಿಕಾರವಾಣಿಯಿಂದ ನುಡಿಯಬಲ್ಲವರಾಗಿದ್ದರು. ಆದರೆ ಮಾತು ಕಠಿಣ ಮತ್ತು ತಮ್ಮ ಅಭಿಪ್ರಾಯಕ್ಕೆ ವಿರೋಧವಾದರೆ ಉಗ್ರನರಸಿಂಹರಾಗಿಬಿಡುತ್ತಿದ್ದರು.

ದಫೇದಾರರು ಒಂದು ಸಮಾರಾಧನೆಯಲ್ಲಿ ಸಾರು ಬಡಿಸುತ್ತಾ ಬರುತ್ತಿದ್ದರು. ಅವರ ದೇಹಸೌಷ್ಠವಕ್ಕೆ ತಕ್ಕ ಕವಂಗವನ್ನು ಎಡಗೈಯಲ್ಲಿ ಹಿಡಿದು, ಬಲಗೈಯಲ್ಲಿ ದೊಡ್ಡ ಕಬ್ಬಿಣದ ಸೌಟಿನಿಂದ ಸಾರು ಬಡಿಸುತ್ತಿದ್ದರು. ಒಂದು ಸೌಟು ತುಂಬ ಸಾರು ಎಂದರೆ ಒಂದು ಲೀಟರ್ ಹತ್ತಿರ ಹತ್ತಿರ ಆಗುತ್ತಿತ್ತು ಎನ್ನಬಹುದು. ಬಡಿಸುತ್ತ ಬರುತ್ತಿರುವಾಗ, "ನೋಡಿದೆಯೇನೋ ರಾಮಚಂದ್ರ, ನಮ್ಮ ಹೊಳೆನರಸೀಪುರದ ದಫೇದಾರರು ಆ ಖದೀಮ ಕಳ್ಳ ಮಂಟೇಸಿದ್ಧನ್ನನ್ನು ಹಿಡಿದುಬಿಟ್ಟು ಕಂಬಿ ಎಣಿಸೋದಕ್ಕೆ ಹಾಕಿದರು" ಎಂದು ಪೊಲೀಸ್ ಇಲಾಖೆಯ ಸಾಹಸವನ್ನು ವರ್ಣಿಸಲು ಪೀಠಿಕೆ ಹಾಕಿಕೊಂಡರು ಕೆಲವರು. ಪಕ್ಕದಲ್ಲಿದ್ದ ಲಕ್ಷ್ಮಣಯ್ಯ, "ಆ ಬೂದನೂರು ಗ್ರಾಮದವರು ಹಿಡಿದುಕೊಟ್ಟರು. ಮಹಾ! ಈ ದಫೇದಾರ ಮಾಡಿದ್ದೇನು? ನಾಲ್ಕು ಜನ ಪೇದೆಗಳನ್ನು ಕರೆದುಕೊಂಡು ಹಳ್ಳಿಗೆ ಹೋಗಿ ಕೈಗೆ ಕೋಳ ತೊಡಿಸಿ ಕರೆದುಕೊಂಡುಬಂದರು" ಎಂದನೋ ಇಲ್ಲವೋ, ದಫೇದಾರರಿಗೆ ಮೂಗಿನ ಮೇಲೇ ಇದ್ದ ಸಿಟ್ಟು ಸರ್ರನೆ ಏರಿತು. ಎಡಗೈನಲ್ಲಿದ್ದ ಕವಂಗವನ್ನು ಕೆಳಕ್ಕೆ ಇಟ್ಟು ಮೀಸೆಯನ್ನು ಹುರಿಮಾಡುತ್ತ, "ಅವನೆಂಥ ಖದೀಮ ಗೊತ್ತೋ? ಆ ಹಳ್ಳಿಯವರಿಗೆಲ್ಲ ಚಳ್ಳೆಹಣ್ಣು ತಿನ್ನಿಸಿ ಮುಳ್ಳಿನ ಪೊದೆಯಲ್ಲಿ ಸೇರಿಕೊಂಡು ಬಿಟ್ಟಿದ್ದ. ಅವನ್ನ ಹೊರ ಹೊರಡಿಸುವುದಕ್ಕೆ ಯಾರ ಕೈಲೂ ಆಗಲಿಲ್ಲ. ದಫೇದಾರನೇ ಬರಬೇಕಾಯಿತು" ಎಂದು ಅಬ್ಬರಿಸಿದರು. ಅಲ್ಲೇ ಎದುರಿನಲ್ಲಿ ಕುಳಿತಿದ್ದ ಸುಬ್ಬರಾಯ, "ಅವನೇನು ಹುಲಿಯೇ, ಚಿರತೆಯೇ! ಬಲೆಹಾಕಿ ಹಿಡಿಯಬೇಕಾಯಿತೇನೋ? ಸುಮ್ಮನೇ ಬಡಾಯಿ ಕೊಚ್ಚಿಕೊಳ್ಳಬೇಡಿ. ನಿಮ್ಮ ಪೊಲೀಸ್ನೋರ ಜಬರ್ದಸ್ತೆಲ್ಲಾ ಪೊಲೀಸ್ ಠಾಣೇಲಿ ಅಷ್ಟೆ. ಅದು ಹೋಗಲಿ ಮಾವಯ್ಯ, ನಿಮ್ಮ ಸರ್ವಿಸಿನಲ್ಲಿ ಅದೆಷ್ಟು ಹುಲಿ ಚಿರತೆ ಬೇಟೆಯಾಡಿದಿರಿ? ನಿಮ್ಮ ಮೀಸೆ ನೋಡಿಯೇ ಹೆದರಿಕೊಂಡು ಓಡಿಹೋಗಿ ಬಿಡುತ್ತಿದ್ದವೇನೋ ಅವು ಪಾಪ!" ಎಂದು, ಕೊಂಕುನುಡಿದ. ಮೊದಲೇ ಸಿಟ್ಟಿಗೆದ್ದಿದ್ದ ದಫೇದಾರರಿಗೆ ಭಾರಿ ಕೋಪ ಬಂದುಬಿಟ್ಟಿತು. ಮೀಸೆ ಅದುರಿಸುತ್ತ, ಕೆಂಗಣ್ಣು ಮಾಡುತ್ತ, "ನೀನು ಬಂದಿದ್ದೆಯಲ್ಲ ನೋಡೋಕೆ, ಕದಿರುಗಡ್ಡಿಕಾಮಣ್ಣ" ಎಂದು ಕೈಲಿದ್ದ ಸೌಟಿನಿಂದ ಸುಬ್ರಾಯನ ತಲೆಯನ್ನು ಮಟುಕಿದರು. ದಫೇದಾರರು ಕೆರಳಿದ ಸಿಂಹವಾದರೆ ಸುಬ್ರಾಯನೂ ಕಡಮೆಯಲ್ಲ. ಕರಿಯ ಕಾಳಿಂಗಸರ್ಪ. ಸೌಟು ತಲೆಯ ಮೇಲೆ ಬರುತ್ತಿರುವುದನ್ನು ಗಮನಿಸಿದ ಸುಬ್ರಾಯ, ಏಟನ್ನು ತಪ್ಪಿಸಿಕೊಳ್ಳಲು ಸೌಟನ್ನು ಜೋರಾಗಿ ತಳ್ಳಿದ. ಸಾರು ಬಡಿಸಲೆಂದು ದಫೇದಾರರು ಆಗತಾನೆ ಎತ್ತಿಹಿಡಿದಿದ್ದ ಕವಂಗಕ್ಕೆ ಸೌಟು ಜೋರಾಗಿ ತಗುಲಿ ಕುದಿಯುವ ಸಾರು ಸುಬ್ರಾಯನ ಕೈಮೇಲೆ ಚೆಲ್ಲಿ ಕೈಸುಟ್ಟಿದ್ದಲ್ಲದೆ, ಅವನ ಎಲೆಗೂ ಚೆಲ್ಲಿ ಅಲ್ಲಿಂದ ಅಕ್ಕಪಕ್ಕದವರ ಎಲೆಗೂ ಹರಿಯಿತು. ಕೈ ಸುಟ್ಟ ನೋವಿಗೆ ಅಬ್ಬರಿಸುತ್ತ ಸುಬ್ರಾಯ ಸೌಟನ್ನು ದಫೇದಾರರ ಕೈಯಿಂದ ಕಿತ್ತುಕೊಂಡು ಅವರಿಗೆ ನಾಲ್ಕು ಬಾರಿಸಿದ. ಇಷ್ಟು ಹೊತ್ತಿಗೆ ಹಾಹಾಕಾರದ ಶಬ್ದವನ್ನು ಕೇಳಿದ ಯಜಮಾನರು ಓಡಿಬಂದರು. ಇಬ್ಬರನ್ನೂ ಸಮಾಧಾನಪಡಿಸಿ ಹೆಚ್ಚಿನ ಹಗರಣವಾಗದಂತೆ ಮಾಡಲು ತುಂಬ ಪ್ರಯಾಸಪಡಬೇಕಾಯಿತು. ಯಾರ ಯಾರ ಎಲೆಗಳಿಗೆ ಸಾರು ಹರಿಯಿತೋ ಅವರೆಲ್ಲರನ್ನೂ ಏಳಿಸಿ, ಅವರ ಕೈ ತೊಳೆಸಿ, ಆಚಮನ ಮಾಡಿಸಿ, ಬೇರೆ ಕಡೆ ಹೊಸದಾಗಿ ಎಲೆ ಹಾಕಿ ಕೂರಿಸಿ, ಊಟ ಮಾಡಿಸಿದರು. ಸುಬ್ರಾಯನಿಗೆ ಮಾತ್ರ ಸ್ನಾನ ಮಾಡಿಸಿ ಹೊಸ ಮಡಿಬಟ್ಟೆ ಉಡಿಸಿಯೇ ಅನಂತರ ಊಟ ಮಾಡಿಸಿದರು. ಅರ್ಧ ಊಟದಲ್ಲಿ ಎದ್ದು ತಣ್ಣೀರಿನಲ್ಲಿ ಸ್ನಾನ ಮಾಡಬೇಕಾಯಿತಲ್ಲ ಈ ಕಿರುಬ ದಫೇದಾರನಿಂದ ಎಂದು ಸುಬ್ರಾಯನಿಗೆ ಭಾರಿ ಕೋಪ. ಆದರೆ ಎಲ್ಲರೆದುರಿಗೆ ಏನೂ ಮಾಡಲಾಗದೆ ಸುಮ್ಮನಾದ. ಅತ್ತ ದಫೇದಾರರ ಕೈಯಲ್ಲಿದ್ದ ಕವಂಗವನ್ನು ಕಿತ್ತುಕೊಂಡು, "ನೀವು ಇನ್ನು ಮೇಲೆ ಯಾವ ಊರೊಟ್ಟಿನ ಸಮಾರಂಭದಲ್ಲೂ ಬಡಿಸಕೂಡದು" ಎಂದು ಕಟ್ಟಪ್ಪಣೆ ಮಾಡಿ ಕಳಿಸಿಬಿಟ್ಟರು. ಅಲ್ಲಿ ಊಟ ಮಾಡುತ್ತಿದ್ದವರಿಗೆಲ್ಲ ನಾಲಗೆ ಆಡಿಸಲು ಇದೊಳ್ಳೆ ಪ್ರಸಂಗವಾಯಿತು. ಒಬ್ಬೊಬ್ಬರೂ ತಾವೇ ಕಣ್ಣಾರೆ ಕಂಡವರಂತೆ ಸಂಗತಿಗಳನ್ನು ಹಿಗ್ಗಿಸಿ ವರ್ಣಿಸಿದರು. "ಸರಿಯಾಗಿ ಕೊಟ್ಟ ಕಣಯ್ಯ ಸುಬ್ರಾಯ. ದಫೇದಾರರಿಗೆ ತಕ್ಕ ಶಾಸ್ತಿಯಾಯಿತು. ಇನ್ನು ಮುಂದೆ ಅವರ ಕೋಪಕ್ಕೆ ಸ್ವಲ್ಪ ಹಿಡಿತ ಬರಬಹುದು" ಎಂದು ಒಬ್ಬರು ಎಂದರೆ, "ಹುಟ್ಟಿದಾಗಿನಿಂದ ಇರುವ ಹೀನಸುಳಿ ಬೋಳಿಸಿದರೆ ಹೋದೀತೇ? ಅವರ ಸ್ವಭಾವ ಎಲ್ಲಿ ಬದಲಾಯಿಸುತ್ತೆ? ಅಷ್ಟು ದಿವಸಗಳಿಂದ ನಾವು ನೋಡಿಲ್ಲವೇ?" ಎಂದರು ಊರಿನ ಇನ್ನೊಬ್ಬರು. "ಆ ದಫೇದಾರನ ಸ್ವಭಾವ ಎಲ್ಲರಿಗೂ ಗೊತ್ತಿದೆಯಪ್ಪ. ಈ ಸುಬ್ರಾಯ ನಾಗರಹಾವಿನ ಹಾಗೆ ಕೆರಳಿ ಬಿಡೋದೆ? ಬೇರೆ ಕಡೆ ಆಗಿದ್ದರೆ ಅದು ಬೇರೆ. ಊಟದ ಪಂಕ್ತಿಯಲ್ಲಿ ಹೀಗೆ ಮಾಡೋದೆ? ಎಷ್ಟು ಜನಕ್ಕೆ ಕಷ್ಟವಾಯಿತು" ಎಂದು ಹಿರಿಯರೊಬ್ಬರು ನೀತಿ ಹೇಳಿದರು. ಬಹುಕಾಲ ಸಂಕೇತಿಗಳ ಸಮೂಹದಲ್ಲಿ ಈ ಕಥೆ ಬಣ್ಣ ಕಟ್ಟಿಕೊಂಡು ವರ್ಣಿತವಾಗಿ ಎಲ್ಲರ ನಾಲಗೆ, ಕಿವಿಗಳಿಗೆ ಸವಿಯೂಟವನ್ನೊದಗಿಸಿತು.

ಇತ್ತ ಶ್ರೋತ್ರಿಯರ, ಶಾಸ್ತ್ರಿಗಳ, ಘನಪಾಠಿಗಳ, ಅವಧಾನಿಗಳ ಪಂಕ್ತಿಯಲ್ಲಿ ಊಟ ನಡೆಯುತ್ತ ಕೈಯಿನ ತುತ್ತುಗಳು ಬಾಯನ್ನು ಪ್ರವೇಶಿಸುತ್ತ ಇರುವಂತೆ ಒಬ್ಬರು ಪ್ರಶ್ನಿಸುತ್ತಾರೆ, "ಏನು ಶಾಸ್ತ್ರಿಗಳೇ, ಗಾಯತ್ರೀ ಮಂತ್ರದಲ್ಲಿ 'ಸವಿತೃ' ಎಂಬ ಪದವಿದೆಯಲ್ಲ , ಇದು ಯಾವ ದೇವನನ್ನು ಪ್ರತಿನಿಧಿಸುತ್ತದೆ? 'ಸವಿತೃ' ಎಂದರೆ ಸೂರ್ಯ ಎನ್ನುವ ಅರ್ಥವು ಪ್ರಸಿದ್ಧ. ಇದಕ್ಕೆ ಇನ್ನೂ ಬೇರೆ ಅರ್ಥಗಳಿವೆ ಎಂದು ಕೇಳಿದ್ದೇನಲ್ಲ." "ಅಯ್ಯಾ! ಗಾಯತ್ರೀ ಮಂತ್ರವು ಬಹಳ ಪವಿತ್ರವಾದುದು, ಗೂಢವಾದುದು. ಅದರ ಅರ್ಥವಿಸ್ತಾರವನ್ನೆಷ್ಟೇ ವರ್ಣಿಸಿದರೂ ಸಾಲದು. ಗಾಯತ್ರೀ ಮಂತ್ರ ಬ್ರಹ್ಮೋಪದೇಶದ ಮಂತ್ರ. ತನ್ನ ಉಪಾಸಕನನ್ನು ರಕ್ಷಿಸುವ ಬ್ರಹ್ಮನನ್ನು ಈ ಮಂತ್ರವು ಪ್ರತಿಪಾದಿಸುವುದು" ಎಂದು ಶಾಸ್ತ್ರಿಗಳು ಹೇಳಿದರು. "ಅದು ಸರಿ ಶಾಸ್ತ್ರಿಗಳೇ, ಗಾಯತ್ರಿಯು ಪರಬ್ರಹ್ಮ ಸ್ವರೂಪವು ಮತ್ತು ಸಕಲ ವೇದಗಳಿಗೂ ಸಾರಭೂತವಾದುದು ಎಂಬುದು ಗೊತ್ತು. ಆ ಮಂತ್ರದಲ್ಲಿ 'ಸವಿತೃ' ಎಂಬ ಶಬ್ದದ ಅರ್ಥವನ್ನು ಹೇಳಿ, ಅದು ತಾನೆ ಈಗಿನ ಪ್ರಶ್ನೆ" ಎಂದರು ಅವಧಾನಿಗಳು. "ಗಾಯತ್ರಿಯೇ ಪರಬ್ರಹ್ಮನು, ಶಿವನು, ವಿಷ್ಣುವು ಎಂದು ಹೇಳುತ್ತಾರೆ. ತನ್ನ ಉಪಾಸಕನಾದ ಪರಬ್ರಹ್ಮನನ್ನು ರಕ್ಷಿಸುವ ಮಂತ್ರ ಎಂದಿರಲ್ಲ, 'ಸವಿತೃಮಂಡಲ' ಎಂದರೆ ಸೂರ್ಯಮಂಡಲ ಎಂಬ ಪ್ರಸಿದ್ಧಾರ್ಥವಿದೆಯಲ್ಲ. ಇದಕ್ಕೆ ಸಮನ್ವಯ ಹೇಗೆ ?" ಎಂದು ಘನಪಾಠಿಗಳು ಕೇಳಿದರು. "ನಮ್ಮ ಬುದ್ಧಿಗಳನ್ನು ಯಾವ ಸವಿತೃದೇವನು ಪ್ರಚೋದಿಸುತ್ತಾನೋ ಎಂದರೆ ಧರ್ಮಾದಿ ವಿಷಯಗಳಲ್ಲಿ ನಮ್ಮ ಬುದ್ಧಿಗಳನ್ನು ಪ್ರಚೋದಿಸುತ್ತಾನೋ, ಅವನ ಪೂಜನೀಯವಾದ ತೇಜಸ್ಸನ್ನು ಧ್ಯಾನಿಸೋಣ ಎಂಬ ಗಾಯತ್ರೀಮಂತ್ರದ ಅರ್ಥವನ್ನು ಗಮನಿಸಿದರೆ ತೇಜಸ್ಸು, ಪ್ರಕಾಶ ಎಂಬ ಅರ್ಥವನ್ನಿಟ್ಟುಕೊಂಡಾಗ ಸೂರ್ಯನನ್ನೇ ದೇವನನ್ನಾಗಿ ಸ್ವೀಕರಿಸಬೇಕು. ಎಲ್ಲ ಕರ್ಮಗಳಿಗೂ ಫಲಭೂತವಾದದ್ದು ಸವಿತೃ ರೂಪ ಎಂದು ಉಪನಿಷತ್ತು ಹೇಳುತ್ತದೆ. ಸವಿತಾ ಎಂಬ ದೇವ ಎಂದು ಅರ್ಥ ಮಾಡಿಕೊಂಡರೆ 'ಧೀಃ' ಶಬ್ದದ ಬಹುವಚನದಿಂದ ಎಲ್ಲ ಬುದ್ಧಿಗಳಿಗೂ ಪ್ರೇರಕನಾದ ದೇವ ಎಂದು ವ್ಯಾಖ್ಯಾನಿಸಬಹುದು. ಪೂಜನೀಯನಾದ, ಆರಾಧ್ಯನಾದ ದೇವ ಎಂಬುದನ್ನು ಸ್ವೀಕರಿಸಿ ನಾರಾಯಣ, ಉಮಾಸಹಿತನಾದ ಪರಶಿವ, ಪರಬ್ರಹ್ಮ ಎಂಬ ಅರ್ಥಗಳನ್ನು ಉಪಾಸಕನು ಇಟ್ಟುಕೊಂಡು ಗಾಯತ್ರೀ ಮಂತ್ರಾನುಷ್ಠಾನದಿಂದ ವಾಂಛಿತಫಲಗಳನ್ನು ಪಡೆಯಬಹುದು. ಅಂತಿಮವಾಗಿ ಸಕಲ ಭೂತಗಳ ಹೃದಯದಲ್ಲಿ ವಾಸಿಸುತ್ತಿರುವ ಪರಮಾತ್ಮನೇ ಗಾಯತ್ರೀ ಮಂತ್ರದಿಂದ ಪ್ರತಿಪಾದಿತನಾಗಿದ್ದಾನೆ ಎಂದು ಮನಃಪೂರ್ವಕ ಭಾವಿಸಿ, ಗಾಯತ್ರೀಮಂತ್ರದ ಉಪಾಸನೆಯಿಂದ ಶುಭಫಲಗಳನ್ನು ಪಡೆಯಬಹುದು. ಇಲ್ಲಿಗೆ ಇಷ್ಟು ವಿವರಣೆ ಸಾಕು. ಗಾಯತ್ರೀ ಮಂತ್ರದ ಮಹಿಮೆಯನ್ನು ಎಷ್ಟು ಹೇಳಿದರೂ ಸಾಲದು" ಎಂದು ಶಾಸ್ತ್ರಿಗಳು ನಿಧಾನವಾಗಿ ವಿವರಿಸುತ್ತಿದ್ದರು. ಅಲ್ಲಿದ್ದವರು ಶಾಸ್ತ್ರಿಗಳ ವ್ಯಾಖ್ಯಾನವನ್ನು ಆಲಿಸುತ್ತ, ನಿಧಾನವಾಗಿ ಭೋಜನವನ್ನು ಮುಂದುವರೆಸುತ್ತಿದ್ದರು.

ಈ ಮಂತ್ರಾರ್ಥ ಹಿರಿಯರ ಸಾಲಿನಲ್ಲಿ ನಡೆಯುತ್ತಿರುವಾಗ ಹಿಂದಿನ ಅಂಕಣದಲ್ಲಿ ಕುಳಿತ ಹುಡುಗರು ಗಲಾಟೆ ಮಾಡುತ್ತಿದ್ದರು. "ಏಯ್ ಹುಡುಗರೇ ಕೇಳಿ. ಇದು ನಿಮ್ಮ ಸಂಧ್ಯಾವಂದನೆ ಮಂತ್ರಕ್ಕೆ ಅರ್ಥ" ಎಂದು ವಯಸ್ಸಾದವರೊಬ್ಬರು ಹೇಳಿದರು. ಆಗ ಒಬ್ಬ ಹುಡುಗ, "ನನಗಿನ್ನೂ ಮುಂಜಿಯೇ ಆಗಿಲ್ಲವಲ್ಲ. ನನಗೆ ಯಾಕೆ ಆ ಮಂತ್ರ !" ಎಂದ. "ಏಯ್, ಸುಮ್ಮನೆ ಬಾಲ ಮುದುರಿಕೊಂಡು ಕುಳಿತುಕೊಳ್ಳಿ. ಈಗ ಬ್ರಹ್ಮಚಾರಿ ಆಗಿರದಿದ್ದರೆ ಮುಂದೆ ಆಗುತ್ತೀರಿ. ನಿಮ್ಮ ಕಿವಿಗಳ ಮೇಲೆ ಈ ಪವಿತ್ರ ಮಾತುಗಳು ಬಿದ್ದರೆ ನಿಮ್ಮ ಕಿವಿ ಅಪವಿತ್ರವಾಗುವುದೋ? ಬ್ರಹ್ಮಚಾರಿಗಳು ಊಟ ಮಾಡುವಾಗ ಮಾತಾಡುವುದಿಲ್ಲ. ಅವರ ಕಿವಿಗಾದರೂ ಬೀಳಲಿ! ಗಲಾಟೆ ಮಾಡಬೇಡಿ" ಎಂದು ಮತ್ತೊಬ್ಬರು ಗದರಿದರು. ಆಗ ಒಬ್ಬ ಬ್ರಹ್ಮಚಾರಿಯು ಎದುರುತ್ತರ ಕೊಟ್ಟ ಹುಡುಗನನ್ನು ತುಂಟತನದ ಕಣ್ಣುಗಳಿಂದ "ನಿನಗೆ ಹಾಗೇ ಆಗಬೇಕು" ಎಂದು ಚೇಷ್ಟೆ ಮಾಡಿದ.

ಹೀಗೆಯೇ, ಯಾವುದಾದರೂ ಒಂದು ಮಂತ್ರದ ವಾಕ್ಯಾರ್ಥ ನಡೆಯುತ್ತ ಇರುತ್ತದೆ. ವಿದ್ವಜ್ಜನಗಳು, ವೇದವಿದರು ಇರುವ ಪಂಕ್ತಿಯಲ್ಲಿ ಜಿಜ್ಞಾಸೆ ನಡೆಯುತ್ತದೆ. ಒಬ್ಬೊಬ್ಬರೂ ತಮಗೆ ತಿಳಿದ ಶಾಸ್ತ್ರವಾಕ್ಯಗಳನ್ನು ಉದಾಹರಿಸುತ್ತಾರೆ. ಇವರ ವಾದವನ್ನು ನೋಡಿ ಬಡಿಸುವವರು ಶಬ್ದ ಮಾಡದೆ ಮೌನವಾಗಿ ಬಡಿಸುತ್ತ ಬರುತ್ತಾರೆ. ಮೆತ್ತನೆಯ ದನಿಯಲ್ಲಿ , "ಇನ್ನೊಂದು ಸಲ ಯಾಕೆ ಸಿಹಿ ತಂದೆ? ಇಲ್ಲಿ ಎಲ್ಲ ಆಗಿದೆ. ಆ ಸಾಲಿಗೆ ಹೋಗು" ಎಂದು ಒಬ್ಬರು ಹಿರಿಯರು ಹೇಳುತ್ತಾರೆ. "ಅಲ್ಲಿ ಚರ್ಚೆ ನಡೆಯುತ್ತಿರುವುದು ಕಾಣದೆ? ಸುಮ್ಮನೆ ಹೋಗು" ಎನ್ನುತ್ತಾರೆ, ಇನ್ನೊಬ್ಬರು.

ಹೀಗಿರುವಾಗ ಇನ್ನೊಂದು ಕಡೆ 'ಸದ್ದೂ-ಸದ್ದೂ' ಎಂದು ಕೇಳಿಬರುತ್ತದೆ. ಒಬ್ಬರು ಎತ್ತರದ ದನಿಯಲ್ಲಿ ಶ್ಲೋಕವನ್ನು ರಾಗವಾಗಿ ಹಾಡುತ್ತಿದ್ದಾರೆ. ಯಾರು ಶ್ಲೋಕ ಹೇಳುತ್ತಿರುವವರು ಎಂದು ಪಕ್ಕದವರು ಕೇಳುತ್ತಾರೆ. "ಅಯ್ಯೋ! ಧ್ವನಿಯಲ್ಲಿಯೇ ಗೊತ್ತಾಗುವುದಿಲ್ಲವೇ, ನಮ್ಮ ಅಗ್ರಹಾರದ ಚಿನ್ನ ಅಲ್ಲವೇ" ಎಂದು ಉತ್ತರ ಕೊಡುತ್ತಾರೆ ಅವರ ಹತ್ತಿರದವರು. "ಓ! ನಾಟಕದ

ಚಿನ್ನನೋ? ಸರಿ! ಗೊತ್ತಾಯ್ತು ಬಿಡು. ಆ ಕಂಠ ಇನ್ನಾರಿಗಿದೆ?" ಎಂದು ಮೆಚ್ಚಿಕೊಳ್ಳುತ್ತಾರೆ, ಪ್ರಶ್ನೆ ಮಾಡಿದವರು. ಅಗ್ರಹಾರದವರು ತಮಗೆ ಪ್ರಿಯವಾದ ಗೀತಗೋವಿಂದದ ಒಂದು ಅಷ್ಟಪದಿಯನ್ನು ಹಾಡುತ್ತಿದ್ದಾರೆ. **"ಯಾಹಿ ಮಾಧವ...ಯಾಹಿ ಕೇಶವ..."** ಎಂದು ಒಳ್ಳೆ ಸ್ಫೂರ್ತಿಯಿಂದ ಹೇಳುತ್ತಾರೆ. ಕೊನೆಯಲ್ಲಿ ಶ್ಲೋಕ ಮುಗಿದ ಮೇಲೆ **"ರಾಧಾರಮಣಗೋವಿಂದಸ್ಮರಣೆ"** ಎನ್ನುತ್ತಾರೆ ಒಬ್ಬರು. ಆಗ ಎಲ್ಲರೂ ಒಟ್ಟಿಗೆ "ಗೋವಿಂದಾ !" ಎನ್ನುತ್ತಾರೆ. ಈಶ್ವರನ ಸ್ತುತಿಯಾದರೆ **"ಹರನಮಃ ಪಾರ್ವತೀಪತಯೇ"** ಎನ್ನುತ್ತಾರೆ. ಆಗ ಎಲ್ಲರೂ "ಹರಹರ ಮಹಾದೇವ" ಎನ್ನುತ್ತಾರೆ. ಅಲ್ಲಿಯೇ ಇದ್ದ ಕೌಶಿಕರನ್ನು ನೋಡಿ, "ಏನಪ್ಪ, ನಿನ್ನನ್ನು ಮರೆತೇಬಿಟ್ಟಿದ್ದೇವಲ್ಲ. ಮೌನವಾಗಿ ಕುಳಿತಿದ್ದೀಯಾ. ಹೇಳು- ಒಂದು ಶ್ಲೋಕವೋ, ಷಟ್ಪದಿಯೋ ಯಾವುದಾದರೂ ಒಂದು. ನಿನ್ನ ಕಂಠವನ್ನು ಕೇಳಿ ಬಹಳ ದಿವಸವಾಯಿತು" ಎನ್ನುತ್ತಾರೆ ಪರಿಚಿತರೊಬ್ಬರು. ಆಗ ಕೌಶಿಕರು ರಾಗಮಾಲಿಕೆಯಲ್ಲಿ ಸೊಗಸಾಗಿ ಶ್ಲೋಕವೊಂದನ್ನು ಹಾಡುತ್ತಾರೆ. ಎಲ್ಲರೂ ಮೆಚ್ಚಿಕೊಂಡು ತಲೆದೂಗುತ್ತಾರೆ. ಕೌಶಿಕರ ಶ್ಲೋಕ ಮುಗಿಯುತ್ತಿದ್ದಂತೆಯೇ, ಮೇಲಿನ ಹಜಾರದಿಂದ **"ವೈದೇಹೀಸಹಿತಂ ಸುರದ್ರುಮತಲೇ..."** ಎಂಬ ಶ್ಲೋಕವನ್ನು ಉಚ್ಚಕಂಠದಿಂದ ಹಾಡುತ್ತಿರುವುದು ಕೇಳಿಸುತ್ತದೆ. "ನಮ್ಮ ಸರಗೂರು ಮಾವಯ್ಯ ಶುರು ಮಾಡಿಬಿಟ್ಟರಪ್ಪ. ಅವರು ಎಲ್ಲಿ ಬಂದರೂ ತಮ್ಮ ಗ್ರಾಮಾಫೋನ್ ರಿಕಾರ್ಡ್ ಹಾಕಿಯೇ ಬಿಡ್ತಾರೆ" ಎಂದು ಒಬ್ಬರು ಮುಸಿ ಮುಸಿ ನಕ್ಕರು. ಶ್ಲೋಕದ ಕೊನೆಯಲ್ಲಿ ಹುಡುಗರೆಲ್ಲ ಸೇರಿ ಜೋರಾಗಿ "ಗೋವಿಂದ!" ಎಂದು ಕೂಗು ಹಾಕಿದರು. ಹೀಗೆಯೇ ಒಂದು ಸಮಾರಾಧನೆಯಲ್ಲಿ ಯಾರೋ ಒಬ್ಬರು ಹಿರಿಯರನ್ನು 'ಶ್ಲೋಕ ಹೇಳಿ' ಎಂದು ಪೀಡಿಸಲಾರಂಭಿಸಿದರು ಅಕ್ಕಪಕ್ಕದವರು. ಆ ಹಿರಿಯರಿಗೆ ಹಾಡಲು ಬರುವುದಿಲ್ಲ ಎಂದು ಗೊತ್ತಿದ್ದರೂ ಚೇಷ್ಟೆ ಮಾಡಲು ಅವರು ದುಂಬಾಲು ಬಿದ್ದರು. "ನನಗೆ ಶ್ಲೋಕ ಹಾಡಲು ಬರುವುದಿಲ್ಲವಪ್ಪ. ಏತಕ್ಕೆ ಸುಮ್ಮನೆ ನನ್ನನ್ನು ಕಾಡುತ್ತೀರಿ" ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. "ಹೇಳಿ ಮಾವಯ್ಯ, ಒಂದೇ ಒಂದು ಪಾದ ಆದರೂ ಸಾಕು. ಇವತ್ತು ನಿಮ್ಮ ಬಾಯಿಂದ ಶ್ಲೋಕ ಕೇಳದೆ ಏಳುವುದಿಲ್ಲ" ಎಂದು ಹಟ ಹಿಡಿದರು. ಆ ಹಿರಿಯರಿಗೆ ಒಳ್ಳೆಯ ಕಷ್ಟಕ್ಕಿಟ್ಟುಕೊಂಡಿತು. ಏನು ಮಾಡುವುದು ಎಂದು ಯೋಚಿಸಿ, **"ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್। ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ॥"** ಎಂದು ತಮ್ಮ ಗರಸು ದನಿಯಲ್ಲಿ ಹೇಳಿದರೋ ಇಲ್ಲವೋ **"ಭೋಜನಮಧ್ಯೇ ಕೇಶವದೇವಸ್ಮರಣ"** ಎಂದು ಎಲ್ಲರೂ ಗಟ್ಟಿಯಾಗಿ ಕೂಗು ಹಾಕಿದರು. ಆಗ ಅಲ್ಲಿದ್ದ ಹುಡುಗನೊಬ್ಬ, "ಆಕಾಶಾತ್ ಪಡಿಕೆ ತೋಯಂ ಯಥಾಗಚ್ಛತಿ ಪಚ್ಚೋಡಂ, ಅಲ್ಲವೇ ಅಜ್ಜಯ್ಯಾ !" ಎಂದು ಹೇಳಿದ್ದೇ ಓಡಿಹೋದ. "ಭಡವಾ! ದೊಡ್ಡೋರನ್ನ ಕುಚೋದ್ಯ ಮಾಡ್ತೀಯೇನೋ" ಎಂದು ಒಬ್ಬರು ಗದರಿಸಿದರು. ಎಲ್ಲರೂ ಖುಷಿಯಾಗಿ ನಕ್ಕರು. ಕೊನೆಗೆ ಶ್ಲೋಕ ಹೇಳಿದ ಹಿರಿಯರೂ ನಕ್ಕುಬಿಟ್ಟರು.

ಹೀಗೆ ಊಟ ಮಾಡುವವರಿಗೆ ಹಲವು ರೀತಿಯಲ್ಲಿ ಮನೋರಂಜನೆಯಾಗುತ್ತದೆ. ಎರಡು ತುತ್ತು ತಿನ್ನುವವರು ಮತ್ತೂ ಎರಡು ತುತ್ತು ಹೆಚ್ಚಾಗಿ ತಿಂದಿರುತ್ತಾರೆ.

ಇಷ್ಟು ಹೊತ್ತಿಗೆ ಮಜ್ಜಿಗೆಅನ್ನ ಬರುತ್ತದೆ. ಹಿಂದಿನಿಂದ, ಕಲಾಯ ಮಾಡಿದ ಕವಂಗದಲ್ಲಿ ಮಜ್ಜಿಗೆಯು ಬರುತ್ತದೆ, ಮಜ್ಜಿಗೆ ಬಡಿಸುತ್ತಾ ಹೋಗುತ್ತಾರೆ.

ಕೊನೆಯಲ್ಲಿ ಯಾರಾದರೂ ಒಬ್ಬರು ಬಂದು, "ಪಂಕ್ತಿ ಒಪ್ಪಿದೆಯೇ? ಅಡುಗೆಯೆಲ್ಲ ಹೇಗಿದ್ದಿತೋ? ಎಲ್ಲವೂ ಸರಿಯಾಗಿ ಬಂತೇ?" ಎಂದು ಉಪಚಾರದ ಮಾತುಗಳನ್ನು ಆಡುತ್ತಿದ್ದಂತೆ ಆಪೋಶನ ತೆಗೆದುಕೊಂಡು, ತಮ್ಮ ತಮ್ಮ ಚಂಬು, ಪಂಚಪಾತ್ರೆ ತೆಗೆದುಕೊಂಡು, ಹೊರಗಡೆ ಕೈಬಾಯಿ ತೊಳೆದುಕೊಂಡು, ಕಾಲು ತೊಳೆದುಕೊಂಡು, ಬಂದು ಜಗಲಿಯ ಮೇಲೆ ಕುಳಿತು ಶುದ್ಧಾಚಮನ ಮಾಡಿ, ಪರಿಚಿತರನ್ನು ಮಾತನಾಡಿಸುತ್ತ, ಚಂಬು ಪಂಚಪಾತ್ರೆಗಳನ್ನು ಮನೆಗೆ ಇಟ್ಟು ಬರಲು ಹೋಗುತ್ತಾರೆ.

ಇನ್ನು ಮುಂದೆ ತಾಂಬೂಲ ಆಗಬೇಕು. ಬೇಗ ಬೇಗ ಶುದ್ಧೀಕರಿಸಿದ ಮನೆಯೊಂದರ ಹಜಾರದಲ್ಲೋ, ಅಥವಾ ಎಲೆ ಹಾಕದೆ ಇದ್ದ ರಾಮಮಂದಿರದಲ್ಲೋ, ಚಾಪೆ ಹಾಸಿ ತಾಂಬೂಲಕ್ಕೆ ವ್ಯವಸ್ಥೆ ಮಾಡುತ್ತಾರೆ. "ತಾಂಬೂಲಕ್ಕೆ ಬಂದುಬಿಡಿ" ಎಂದು ಎಲ್ಲರನ್ನೂ ಕರೆಯುತ್ತಾರೆ. ಅವಧಾನಿಗಳು, ಪುರೋಹಿತರು, ಶಾಸ್ತ್ರಿಗಳು, ಘನಪಾಠಿಗಳು ಮೊದಲಾದ ಶ್ರೋತ್ರಿಯರು ಮೇಲು ಹಜಾರದಲ್ಲಿ ಕುಳಿತುಕೊಳ್ಳುತ್ತಾರೆ. ಎಲ್ಲರೂ ಬಂದ ಮೇಲೆ ವೇದವಿದರು ಯಾವುದಾದರೂ ವೇದಭಾಗವನ್ನು ಪಠನ ಮಾಡುತ್ತಾರೆ. ಜತೆಗೆ ಸಭೆಯಲ್ಲಿ ಎಲ್ಲರಿಗೂ ತಾಂಬೂಲ ವಿತರಣೆಯಾಗುತ್ತದೆ. ಅನಂತರ ಯಜಮಾನ ಮತ್ತು ಅವರ

ಜತೆಗೆ ಒಬ್ಬರು ಅಥವಾ ಇಬ್ಬರು ಮಂತ್ರವಿದರು ಎದ್ದು ನಿಲ್ಲುತ್ತಾರೆ. ಸಾಮಾನ್ಯವಾಗಿ ಒಂದು ಘನ ಇಲ್ಲವೇ ಜಟೆಯನ್ನು ಹೇಳುವುದು ಸಂಪ್ರದಾಯ. ಸ್ವರಬದ್ಧವಾಗಿ ನಿಧಾನವಾಗಿ ಜಟೆ ಹೇಳುತ್ತಿದ್ದರೆ ಕೇಳುವವರ ಮನಸ್ಸಿನ ಮೇಲೆ ಸಮಾಧಾನದ, ಶಾಂತಿಯ ಪವಿತ್ರ ಪರಿಣಾಮವನ್ನುಂಟು ಮಾಡುತ್ತದೆ. ಕೊನೆಯಲ್ಲಿ ಯಜಮಾನ, ಅವನ ಹೆಂಡತಿ, ವಧು-ವರರು, ಇಲ್ಲವೇ ಮುಂಜಿಯಾದರೆ ವಟು ಮತ್ತು ಹತ್ತಿರದ ಸಂಬಂಧದವರು ಒಟ್ಟಿಗೆ ಬ್ರಾಹ್ಮಣ ಸಭೆಯನ್ನು ಮಂತ್ರಾಕ್ಷತೆಯಿಂದ ಪೂಜಿಸುತ್ತ, **"ಭಾಗಧೇಯೀ-ನೈವೈನಂ ಪ್ರಣಯತಿ।...ಬ್ರಾಹ್ಮಣ ಆರ್ಷೇಯ ಉದ್ಧರೇತ್। ಬ್ರಾಹ್ಮಣೋ ವೈ ಸರ್ವಾ ದೇವತಾಃ। ಸರ್ವಾಭಿರೇವೈನಂ ದೇವತಾಭಿರುದ್ಧರತಿ"** ಎಂಬ, ಬ್ರಾಹ್ಮಣ ನಮಸ್ಕಾರ ಮಂತ್ರವನ್ನು ಹೇಳಿ ಒಟ್ಟಿಗೇ ನಮಸ್ಕರಿಸುತ್ತಾರೆ. ಆಗ ಪುರೋಹಿತರು **"ಸಂತ್ವಾ ಸಿಂಚಾಮಿ ಯಜುಷಾ ಪ್ರಜಾಮಾಯುರ್ಧನಂ ಚ ॥ ದೀರ್ಘಮಾಯುರಸ್ತು"** ನಮಸ್ಕಾರಕ್ಕೆ ಪ್ರತಿವಚನ ಮಂತ್ರವನ್ನು ಹೇಳುತ್ತಾರೆ. ಕೊನೆಯಲ್ಲಿ ಯಜಮಾನನೂ, ಬಂಧುಗಳೂ **"ಸಂಪಶ್ಯಾಮಿ ಪ್ರಜಾ ಅಹಮಿಡ ಪ್ರಜಸೋ ಮಾನವೀಃ । ಸರ್ವಾ ಭವಂತು ನೋ ಗೃಹೇ।"** ಎಂಬ ಬ್ರಾಹ್ಮಣ ಪ್ರಾರ್ಥನಾ ಮಂತ್ರವನ್ನು ಉಚ್ಚಸ್ವರದಲ್ಲಿ ಹೇಳಿ ಪುನಃ ನಮಸ್ಕರಿಸುತ್ತಾರೆ.

ತಾಂಬೂಲದ ಈ ಕಾರ್ಯಕ್ರಮದಲ್ಲಿ ಪುರೋಹಿತರು ಸ್ವಸ್ತಿವಾಚನ ಹೇಳುವುದೂ ಒಂದು ಮುಖ್ಯವಾದ ಅಂಗ. ಪ್ರಸ್ತಕರ್ತನಿಗೆ, ಯಜಮಾನನಿಗೆ ಶ್ರೇಯಸ್ಸನ್ನು ಕೋರುವುದು ಇದರ ಮುಖ್ಯ ಉದ್ದೇಶ. ಈ ಶ್ರೇಯಸ್ಸಿನ ಕೋರಿಕೆಗೆ 'ತಥಾಸ್ತು' ಎಂದು ಹೇಳುವುದರ ಮೂಲಕ ಬ್ರಾಹ್ಮಣರು ಅನುಗ್ರಹಿಸುತ್ತಾರೆ. ಹಿಂದಿನ ಕಾಲದಲ್ಲಿ ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸ ಮಾಡಿರುತ್ತಿದ್ದರಾದುದರಿಂದ ಪುರೋಹಿತರು ಆಯಾ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಜೋಡಿಸಿ, ಪ್ರಾಸ-ಅನುಪ್ರಾಸಗಳಿಂದ ಸುಂದರವಾದ ಅರ್ಥವು ವಿಜೃಂಭಿಸುವಂತೆ ವಾಕ್ಯಗಳನ್ನು ರಚಿಸಿ ಹೇಳುತ್ತಿದ್ದರು. ಆ ವಾಕ್ಯಗಳ ಅರ್ಥವು ಕೂಡ ರಮಣೀಯವಾಗಿರುತ್ತಿತ್ತು. ಘನವಿದ್ವಾಂಸರಾಗಿದ್ದ ಎಂ.ಆರ್. ಜೋಸ್ಯರ್ ಅವರು ತಮ್ಮ **'ಉದಕಶಾಸ್ತ್ರಾದಿ'** ಎಂಬ ಉಪಯುಕ್ತ ಗ್ರಂಥದಲ್ಲಿ **'ಆಶೀರ್ವಾದವಚನಗದ್ಯಮ್'** ಎಂಬ ಭಾಗದಲ್ಲಿ ಸುಂದರವಾದ ಅರ್ಥಗರ್ಭಿತವಾದ ಆಶೀರ್ವಚನ ಗದ್ಯಗಳನ್ನು ಕೊಟ್ಟಿದ್ದಾರೆ. ಈ ಸ್ವಸ್ತಿವಾಕ್ಯಗಳು ಲಯಬದ್ಧವಾಗಿ ಇಂಪಾಗಿವೆ. ಅದರ ಒಂದೆರಡು ಉದಾಹರಣೆಯನ್ನು ಇಲ್ಲಿ ಕೊಡಬಹುದು.

"ಸ್ವಸ್ತಿ ಮಂತ್ರಾರ್ಥಾಸ್ಸತ್ಯಾಸ್ಸಫಲಾಸ್ಸನ್ತ್ವಿತಿ ಭವನ್ತೋ ಮಹಾಂತೋಽನುಗೃಹ್ಣಂತು" ಎಂದು ಪುರೋಹಿತರು ಹೇಳಿದಾಗ ಎಲ್ಲರೂ 'ತಥಾಸ್ತು' ಎನ್ನುತ್ತಾರೆ. "ಈ ಮುಂದಿನ ಆಶೀರ್ವಾದದ ಮಂತ್ರಗಳಿಂದ ಸ್ಫುರಿಸುವ ಅರ್ಥವು ಸತ್ಯವೂ, ಸಫಲವೂ ಆಗಲಿ" ಎಂದು ಕೋರುವುದೇ ಈ ಮೇಲಿನ ವಾಕ್ಯದ ಅರ್ಥ. **"ಅನೇನ ಯಜಮಾನೇನ ಕೃತಶುಭಮುಹೂರ್ತಃ ಸುಮುಹೂರ್ತೋ ಭೂಯಾದಿತಿ ಮಹಾಂತೋ ಅನುಗೃಹ್ಣಂತು"-"ತಥಾಸ್ತು"**. "ಈ ಯಜಮಾನನು ಆಚರಿಸಿದ ಮದುವೆಯೋ ಮುಂಜಿಯೋ ಒಳ್ಳೆಯ ಮುಹೂರ್ತದಲ್ಲಿ ನಡೆದಿದೆ", "ಹಾಗೇ ಆಗಲಿ ಎಂದು ಪ್ರಾರ್ಥಿಸಲಾಗಿದೆ". ಮುಂಜಿಯಾದರೆ ವಟುವಿಗೆ ಆಶೀರ್ವಾದ ಪೂರ್ವಕ ವೇದವಾಕ್ಯಗಳನ್ನು ಹೇಳಲಾಗುತ್ತದೆ. ಮದುವೆಯಾದರೆ ವಧು-ವರರಿಗೆ ಆಶೀರ್ವದಿಸಲಾಗುತ್ತದೆ. **"ಇಮೌ ದಂಪತೀ ರಾಧಾಕೃಷ್ಣಾವಿವ ಸರಸಸಲ್ಲಾಪೌ ಭೂಯಾಸ್ತಾಮಿತಿ ಮಹಾಂತೋ ಅನುಗೃಹ್ಣಂತು"** ಎಂದೋ ಈ ದಂಪತಿಗಳು ಅರುಂಧತಿ-ವಸಿಷ್ಠರಂತೆ ಸದಾಚಾರ ಸಂಪ್ರದಾಯವನ್ನು ಪಾಲಿಸತಕ್ಕವರಾಗಲಿ ಎಂದೋ, ಈ ದಂಪತಿಗಳು ಸತ್ಕಾರ್ಯ ಪ್ರವೃತ್ತರಾಗಿ, ದಾನಧರ್ಮಾದಿಗಳನ್ನು ಮಾಡಿ, ಪ್ರಜಾನುರಾಗಿಗಳಾಗಲಿ ಎಂದೋ ಹರಸಲಾಗುತ್ತದೆ. **"ಏನಯೋರ್ದಂಪತ್ಯೋರ್ಗೃಹೇ ಧನಕನಕವಸ್ತುವಾಹನ ಸಮೃದ್ಧಿರ್ಭೂಯಾದಿತಿ ಮಹಾಂತೋಽನುಗೃಹ್ಣಂತು"** ಎಂದೂ, **"ಏನಯೋರ್ದಂಪತ್ಯೋಃ ದೇವಪ್ರಸಾದರಾಜಪ್ರಸಾದೌ ನಿತ್ಯಂ ಪರಿಪೂರ್ಣೌಸ್ಥಿತೌ ಭೂಯಾಸ್ತಾಮಿತಿ ಭವಂತೋ ಮಹಾಂತೋ ಅನುಗೃಹ್ಣಂತು"** ಎಂದೂ, ಕೊನೆಯಲ್ಲಿ **"ಸರ್ವೇ ಜನಾಸ್ಸುಖಿನಸ್ಸಂತ್ವಿತಿ ಭವಂತೋ ಮಹಾಂತೋ ಅನುಗೃಹ್ಣಂತು" "ಸಮಸ್ತಸನ್ಮಂಗಳಾನಿ ಭವಂತ್ವಿತಿ ಭವಂತೋ ಮಹಾಂತೋ ಅನುಗೃಹ್ಣಂತು"** ಎಂದೂ ಹೇಳಿ **'ತಥಾಸ್ತು'** ಎಂಬ ಅಭಿವಚನವನ್ನು ಪಡೆದು **"ಸತ್ಯಾ ಏತಾ ಆಶಿಷಸ್ಸಂತ್ವಿತಿ ಚ ಭವಂತೋ ಮಹಾಂತೋ ಅನುಗೃಹ್ಣಂತು"** ಎಂದು ಸಭೆಯ ಅನುಮತಿ ಪಡೆಯುತ್ತಾರೆ. ಶುಭಕಾರ್ಯವನ್ನಾಚರಿಸಿದ ಯಜಮಾನನಿಗೆ ತುಂಬು ಹೃದಯದಿಂದ ಮಾಡಿದ ಆಶೀರ್ವಾದವು ಫಲಿಸುವುದೆಂಬ ನಂಬಿಕೆ. ಹೀಗೆ ಒಂದು ಸಮಾರಾಧನೆ ಮುಗಿದು ಪ್ರಸನ್ನಚಿತ್ತರಾಗಿ ಜನ ಸಂತೃಪ್ತಿಗೊಳ್ಳುವರು. ಕೊನೆಯಲ್ಲಿ ಬಡಿಸಿದವರು, ಇಷ್ಟರು, ಮೊದಲಾದವರೊಡನೆ ಯಜಮಾನನು ಭೋಜನ ಮಾಡುವನು. ಯಾರದಾದರೂ ಊಟ ಆಗಿಲ್ಲದೆ ಇದ್ದರೆ ಈ ಸಮಯದಲ್ಲಿ ವಿಚಾರಿಸಿ ಹುಡುಕಿ ಕರೆದುಕೊಂಡು ಬಂದು ಊಟಕ್ಕೆ ಕೂರಿಸುವರು.

೬. ಗುರುಶಿಷ್ಯ ಪರಂಪರೆ

ಬೆಳಗಿನ ಜಾವ ಮಂದಮಂದವಾಗಿ ಮಾರುತನು ಸುಳಿಯುತ್ತಿದ್ದಾನೆ; ತಂಪಾದ ವಾತಾವರಣ. ಮರಗಳ ಮೇಲಿನ ಹಕ್ಕಿಗಳು ರೆಕ್ಕೆ ಒದರುತ್ತ ಚಡಪಡ ಶಬ್ದ ಮಾಡುತ್ತಿವೆ. ಪ್ರಶಸ್ತವಾದ ಈ ಪ್ರಶಾಂತತೆಯ ನಡುವೆ ದೂರದಿಂದ ವೇದಮಂತ್ರಗಳ ಉಲಿ ಅಲೆ ಅಲೆಯಾಗಿ ಹರಿದು ಬರುತ್ತಿದೆ. "ಓ ಅದೇ ? ಅವಧಾನಿಗಳು ತೋಟಕ್ಕೆ ಹೋಗುತ್ತಿದ್ದಾರೆ. ಇಬ್ಬರು ಶಿಷ್ಯರು ಅವರನ್ನು ಹಿಂಬಾಲಿಸಿದ್ದಾರೆ." "ತೋಟಕ್ಕೆ ಹೋಗುವುದಕ್ಕೂ ಮಂತ್ರ ಹೇಳಬೇಕೇನು? ಇದಾವ ಶಾಸ್ತ್ರ !" "ಇದು ಶಾಸ್ತ್ರದ ವಿಚಾರವಲ್ಲ ಕಂಡ್ರೀ. ಸ್ವಲ್ಪ ಗಮನಿಸಿ ಕೇಳಿ ನೋಡಿ, ವಿಚಾರ ಗೊತ್ತಾಗುತ್ತದೆ." "ಹೌದು, ಶಿಷ್ಯರು ಮಾತ್ರ ಹೇಳುತ್ತಿದ್ದಾರೆ. ಇದು ವೇದಮಂತ್ರ ಎಂದಿರಲ್ಲವೇ? ನಿಜ, ಶಿಷ್ಯರು ವೇದಮಂತ್ರವನ್ನು ಉಚ್ಚರಿಸುತ್ತ ನಡೆಯುತ್ತಿದ್ದಾರೆ, ಗುರುಗಳು ಆಲಿಸುತ್ತ ಮುಂದೆ ಮುಂದೆ ಹೋಗುತ್ತಿದ್ದಾರೆ. ಶಿಷ್ಯರು ಏನಾದರೂ ತಪ್ಪು ಹೇಳಿದರೆ ಅಲ್ಲಿಯೇ ತಿದ್ದುತ್ತಾರೆ." "ಹೌದ್ರೀ, ಈ ಶಾಂತ ವಾತಾವರಣದಲ್ಲಿ ಮಂತ್ರಗಳ ನಾದ ಕಿವಿಗಳಿಗೆ ಎಷ್ಟು ಇಂಪಾಗಿದೆ ! ಕಿವಿಗಳಿಗೆ ಇಂಪು, ಮೆದುಳಿಗೆ ತಂಪು. ಪ್ರಕೃತಿಯ ಮಡಿಲಲ್ಲಿ ವೇದೋಪಾಸನೆ, ಇದುವೆ ನಾದೋಪಾಸನೆ. ತೋಟದಲ್ಲಿ ಗುರುಗಳೊಡನೆ ವೀಳೆಯದೆಲೆ ಹಂಬಿಗೆ ನೀರು ಹಾಕುವುದು, ಅಗೆಯುವುದು, ಅಡಕೆ ಸೋಗೆ ಆಯ್ದು ಗುಡ್ಡೆ ಹಾಕುವುದು ಮೊದಲಾದ ಬೆಳಗಿನ ತೋಟದ ಕೆಲಸಗಳನ್ನು ಗುರುಶಿಷ್ಯರು ಕೂಡಿಯೇ ಮಾಡಿ ಬಾಳೆಯಗೊನೆ, ಅಡಕೆಪಟ್ಟೆ, ಬಾಳೆಯದಿಂಡು, ಬಾಳೆಎಲೆ ಮೊದಲಾದುವುಗಳ ಜತೆಗೆ ತುಳಸಿ, ಪತ್ರೆ, ಹೂವು, ಸಮಿತ್ತುಗಳನ್ನು ಸೇರಿಸಿ ಹೊರೆ ಕಟ್ಟಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಮನೆಯ ಹಾದಿ ಹಿಡಿದಿದ್ದಾರೆ." "ಗುರುಗಳ ತಲೆಯ ಮೇಲೂ ಒಂದು ದೊಡ್ಡ ಹೊರೆಯಿದೆ ಹೌದೇ? ಗುರುಗಳೂ ದುಡಿಯುತ್ತಾರೆಯೇ? ತಲೆಯ ಮೇಲೆ ಹೊರೆ ಹೊರುತ್ತಾರೆಯೇ ? ಶಿಷ್ಯರಿಂದ ದುಡಿಸಿ ಕೊಳ್ಳಬಾರದೆ?" "ಛೇ, ಹಾಗೆ ಹೇಳಬೇಡಿ ; ದುಡಿಮೆಯಲ್ಲೂ ದೇಹಶ್ರಮದಲ್ಲೂ ಅವರದೇ ಮೇಲುಗೈ."

ಮನೆಗೆ ಬಂದು ಹೊರೆಗಳನ್ನು ಮನೆಯಲ್ಲಿಟ್ಟು, ಪಂಚಪಾತ್ರೆ ಚೊಂಬು ಕೊಡಗಳನ್ನು ತೆಗೆದುಕೊಂಡು ನದಿಗೆ ಸ್ನಾನಕ್ಕೆ ಹೋಗುತ್ತಾರೆ ಗುರುಗಳು. ನದಿಯಲ್ಲಿ ಮಿಂದು ಶುಚಿರ್ಭೂತರಾಗಿ ಬರುವಾಗ ನೋಡಬೇಕು ಅವರ ಕಳೆಯನ್ನು. ಹಣೆಯಲ್ಲಿ ವಿಭೂತಿ ರಾರಾಜಿಸುತ್ತದೆ. ಅಳ್ಳಕವಾಗಿ ಗಂಟು ಹಾಕಿ ಇಳಿ ಬಿಟ್ಟ ತಲೆಗೂದಲು, ಕೈಯ್ಯಲ್ಲಿ ಮಿರಮಿರನೆ ಹೊಳೆಯುವ ತಾಮ್ರದ ಚೊಂಬು ಮತ್ತು ಪಂಚಪಾತ್ರೆ, ತಲೆಯ ಮೇಲೆ ಮಿಂಚುವ ನೀರಿನ ಕೊಡ, ಉಟ್ಟ ಶುಭ್ರವಾದ ಧೋತ್ರ, ಹರವಾದ ಎದೆಯ ಮೇಲೆ ಹೊಳೆಯುವ ಬಿಳಿಯ ಜನಿವಾರ. ಏನು ದಿವ್ಯ ತೇಜಸ್ಸು! ಮುಖದಲ್ಲಿ ಮಿನುಗುವ ಆ ಶಾಂತಿ ತೃಪ್ತಿಗಳೇನು! ಪ್ರಸನ್ನತೆಯೇನು ! ಮನೆಗೆ ಬರುವ ವೇಳೆಗೆ ಪೂಜಾಸಾಮಗ್ರಿಗಳನ್ನೂ, ಪೂಜಾದ್ರವ್ಯಗಳನ್ನೂ ಸಿದ್ಧಪಡಿಸಿದ್ದಾರೆ ಗುರುಪತ್ನಿ. ಪೂಜೆ ಮಾಡಿ ಶಿಷ್ಯರೊಡನೆ, ಮನೆಯವರೊಡನೆ ಭೋಜನ ; ಸುಮಾರು ಹನ್ನೆರಡು ಗಂಟೆ ಅಥವಾ ಮಧ್ಯಾಹ್ನದ ಒಂದು ಗಂಟೆ ಇರಬಹುದಷ್ಟೇ. ಊಟವಾದ ಮೇಲೆ ಸ್ವಲ್ಪ ವಿಶ್ರಾಂತಿ.

ಮಧ್ಯಾಹ್ನ ಅಗತ್ಯ ಕೆಲಸವಿದ್ದರೆ ತೋಟಕ್ಕೆ ಹೋಗುವರು. ಇಲ್ಲದಿದ್ದರೆ ಮನೆಯಲ್ಲೇ ಕುಳಿತು ಯಾವುದಾದರೂ ಓಲೆಗರಿಯ ಪುಸ್ತಕವನ್ನು ಬಿಡಿಸಿಟ್ಟುಕೊಂಡು ನೋಡುತ್ತಾ , ಚಿಂತನೆಯಲ್ಲಿ ತೊಡಗುತ್ತಾರೆ. ಇಲ್ಲವೆ ಶಿಷ್ಯರ ಜತೆ ಯಾವುದಾದರೂ ಶಾಸ್ತ್ರದ ವಿಚಾರ, ಇಲ್ಲವೆ ಹಿಂದಿನ ಋಷಿಗಳ ಮಹತ್ತಿನ ವಿಚಾರ -ಇವುಗಳ ಬಗ್ಗೆ ಅವರಿಗೆ ತಿಳಿಯಹೇಳುತ್ತಾರೆ. ಶಿಷ್ಯರು ತಮಗೆ ಏನಾದರೂ ಅನುಮಾನ ಬಂದರೆ ಗುರುಗಳ ಎದುರಿಗೆ ಅದನ್ನು ಇಡುತ್ತಾರೆ. ಗುರುಗಳು ಅವರ ಅನುಮಾನ ಪರಿಚ್ಛೇದವಾಗುವಂತೆ ಹಲವು ವಿಷಯಗಳನ್ನು ಶಾಸ್ತ್ರಾಧಾರಗಳಿಂದ ಸ್ಪಷ್ಟಪಡಿಸುತ್ತಾರೆ. ಅನಂತರ ಶಿಷ್ಯರಿಗೆ ಅಧ್ಯಯನ-ಪಾಠ. ಸಂಜೆ ಸ್ನಾನ, ಸಂಧ್ಯಾವಂದನೆ. ಶಿಷ್ಯರು ಹಳೆಯ ಪಾಠವನ್ನು **ಪುನರಾವೃತ್ತಿ** ಮಾಡುತ್ತಿರುತ್ತಾರೆ. ಮಧ್ಯೆ ತಪ್ಪಿದರೆ ಗುರುಗಳು ತಿದ್ದುತ್ತಾರೆ. ಬಳಿಕ ಕೊಂಚ ವಿಶ್ರಾಂತಿ, ವಾರ್ತಾಲಾಪ, ಸಂಭಾಷಣೆ, ಮನೆಯ ಆಗು-ಹೋಗುಗಳ ಬಗ್ಗೆ ಮಕ್ಕಳೊಡನೆ ಸಮಾಲೋಚನೆ ; ಮುಂದಿನ ದಿನಗಳಲ್ಲಿ ನಡೆಯಬೇಕಾಗಿರುವ ದೇವತಾಕಾರ್ಯ, ಆಚರಣೆ ಮೊದಲಾದವುಗಳ ಬಗ್ಗೆ ಪ್ರಸ್ತಾಪ; ಅದರ ಏರ್ಪಾಡು. ಅನಂತರ ರಾತ್ರಿಯ ಊಟ.

ಇದು ಅಂದಿನ ಗುರುಗಳ ಶಾಂತ, ತೃಪ್ತ ದಿನಚರಿ; ಶಿಷ್ಯರ ವಿದ್ಯಾಭ್ಯಾಸ ಕ್ರಮ. ಈ ದಿನಚರಿಯ ನಡುವೆ ಬೇಸರ ಮುರಿಯುವ ದಿನಗಳು ಇದ್ದೇ ಇರುತ್ತವೆ: ಒಂದು ಮದುವೆ ಅಥವಾ ಮುಂಜಿಗೆ ಆಹ್ವಾನ, ಇಲ್ಲವೇ ಒಂದು ಉತ್ಸವ ಅಥವಾ ಹೋಮ, ಯಾಗ ಯಾವುದರಲ್ಲಾದರೂ ಭಾಗವಹಿಸಬೇಕಾದ ಪ್ರಮೇಯ. ನವರಾತ್ರಿಯ ಒಂಬತ್ತು ದಿನಗಳೂ ಬೆಳಗ್ಗೆ ಪೂಜೆ-ಪುನಸ್ಕಾರ,

ಪಾರಾಯಣಗಳು ಇರುತ್ತವೆ. ರಾಮನವಮಿಯಲ್ಲೂ ಅಷ್ಟೆ. ತಮ್ಮ ಊರಿನಲ್ಲಾಗಲೀ, ನೆರೆಯ ಊರಿನಲ್ಲಾಗಲೀ, ಇಂಥ ಸತ್ಕಾರ್ಯಗಳು ನಡೆಯುತ್ತ ಇರುತ್ತವೆ. ಅವುಗಳಿಗೆ ಗುರುಗಳು ಹೋಗಲೇಬೇಕಾಗುತ್ತದೆ. ಪರಊರಿಗೆ ಹೋಗುವಾಗಲೂ ಶಿಷ್ಯರನ್ನು ಜತೆಯಲ್ಲಿ ಕರೆದುಕೊಂಡೇ ಹೋಗುತ್ತಾರೆ ಗುರುಗಳು. ಇಂಥ ಸಮಾರಂಭಗಳಲ್ಲಿ ಬೇರೆ ಬೇರೆ ಊರಿನ ವೇದಾಧ್ಯಯನ ಸಂಪನ್ನರೂ, ಅವರ ಶಿಷ್ಯರುಗಳೂ ಬಂದಿರುತ್ತಾರೆ. ಅಲ್ಲಿ ಅವರುಗಳು ವೇದಪಠನ ಮಾಡುತ್ತಾರೆ. ಆಗ ಈ ಶಿಷ್ಯರು ಅವರ ನಡೆ-ನುಡಿ, ಅವರ ಅಧ್ಯಯನ ಕ್ರಮಗಳನ್ನು ತಿಳಿಯಲೂ, ಇತರ ಶಿಷ್ಯರೊಡನೆ ಬೆರೆಯಲೂ, ಅವಕಾಶವಾಗುತ್ತದೆ. ಇದೂ ಒಂದು ರೀತಿಯ ಕಲಿಕೆಯೇ ತಾನೇ.

ಸಮಾರಂಭಗಳಲ್ಲಿ ಬೆಳಗಿನ ಕಾರ್ಯಕ್ರಮಗಳು ಮುಗಿದ ಮೇಲೆ ಮಧ್ಯಾಹ್ನ ಸಮಾರಾಧನೆ ಇರುತ್ತದೆ. ಭೋಜನಾರಂಭಕ್ಕೆ ಮೊದಲು ಊಟಕ್ಕೆ ಎದುರು-ಬದುರು ಸಾಲಿನಲ್ಲಿ ಕುಳಿತ ಅವಧಾನಿಗಳು, ಘನಪಾಠಿಗಳು, ಜಟಾಪಾಠಿಗಳು, ವೇದಮಂತ್ರವನ್ನು ಹೇಳಲು ಆರಂಭಿಸುತ್ತಾರೆ. ಒಂದು ಪಂಗಡ ಒಂದು ವಾಕ್ಯವನ್ನು ಹೇಳಿದರೆ ಮುಂದಿನ ವಾಕ್ಯವನ್ನು ಇನ್ನೊಂದು ಪಂಗಡದವರು ಹೇಳುವರು. ವೇದಮಂತ್ರವನ್ನು ಹೇಳುವ ಈ ಹಿರಿಯರ ಜತೆಗೆ ಅಧ್ಯಯನದಲ್ಲಿ ಪ್ರೌಢಪಾಠವಾಗಿರುವ ಅವಧಾನಿಗಳ ಮತ್ತು ಘನಪಾಠಿಗಳ ಮಕ್ಕಳು ಹಾಗೂ ಶಿಷ್ಯರೂ ಸೇರಿಕೊಳ್ಳುತ್ತಾರೆ. ಈ ಕಿರಿಯರಿಗೆ ಇದೊಂದು ಒಳ್ಳೆಯ ತರಬೇತಿ.

ಭೋಜನದ ಮಧ್ಯೆ ವಿನೋದವಾಗಿ ಮಾತು ನಡೆಯುತ್ತಿರುತ್ತದೆ. ಇತ್ತ ಶಾಸ್ತ್ರಿಗಳ, ಘನಪಾಠಿಗಳ, ಅವಧಾನಿಗಳ ಸಾಲಿನಲ್ಲಿ, ಯಾವುದೋ ಒಂದು ಮಂತ್ರಾರ್ಥದ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಶಿಷ್ಯರು ಆಸಕ್ತಿಯಿಂದ ಈ ಚರ್ಚೆಯನ್ನು ಕೇಳುತ್ತಾರೆ. ಭೋಜನಕಾಲದಲ್ಲೂ ಜ್ಞಾನಾರ್ಜನೆ.

ಭೋಜನವಾದ ಮೇಲೆ ತಾಂಬೂಲ ಕಾರ್ಯಕ್ರಮ. ವಿಶಾಲವಾದ ತೊಟ್ಟಿಯಲ್ಲಿ ಚಾಪೆಗಳನ್ನು ಹಾಸಿದೆ. ತಾಂಬೂಲಕ್ಕೆ ಎಲ್ಲರನ್ನೂ ಕರೆದದ್ದಾಗಿದೆ. ಅವಧಾನಿಗಳು, ಶಾಸ್ತ್ರಿಗಳು, ಘನಪಾಠಿಗಳು, ಹಿರಿಯರು ಒಬ್ಬೊಬ್ಬರಾಗಿ ಬಂದು ಮೇಲುಹಜಾರದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಉಳಿದ ಗೃಹಸ್ಥರೆಲ್ಲರೂ ಬಂದು ಆಸೀನರಾಗುತ್ತಿದ್ದಾರೆ. ಹಜಾರದ ಬಾಗಿಲಿನ ಹತ್ತಿರ ಹೆಂಗಸರು ಗುಂಪುಗೂಡಿದ್ದಾರೆ. ''ಒಂದು ಪಂಚಾರಿ ಪ್ರಾರಂಭವಾಗಲಿ'' ಎನ್ನುತ್ತಾರೆ ಶಾಸ್ತ್ರಿಗಳು. ಸೋಮನಹಳ್ಳಿಯ ಘನಪಾಠಿಗಳು ತಮ್ಮ ಶಿಷ್ಯರಿಗೆ ಯಾವುದೋ ಒಂದು ಅನುವಾಕವನ್ನು ಎಂದರೆ ವೇದದ ಒಂದು ಭಾಗವನ್ನು ಹೇಳುವಂತೆ ಆಜ್ಞಾಪಿಸುತ್ತಾರೆ. ಶಿಷ್ಯರು ಎದ್ದುನಿಂತು ವೇದಪಠನ ಮಾಡುತ್ತಾರೆ. ಆಹಾ, ಇಬ್ಬರದೂ ಎಂಥ ಕಂಠ ! ಜೋಡಿಯಾಗಿ ಸುಶ್ರಾವ್ಯವಾಗಿ ಮಂತ್ರವನ್ನು ಹೇಳುತ್ತಾರೆ. ದೂರದಲ್ಲಿ ಸುಮಂಗಲಿಯರ ಪಿಸುಪಿಸು:

"ಯಾರೇ ಅವನು, ಯಾರ ಮಗ ?"

"ನಿನಗೆ ಯಾಕೇ ಆ ಯೋಚನೆ! ನಿನ್ನ ಮಗಳನ್ನು ಆ ಇಬ್ಬರಲ್ಲಿ ಒಬ್ಬರಿಗೆ ಕೊಡಬೇಕೆಂದು ಆಸೆ ಹುಟ್ಟಿತಾ? ನಿನಗೆ ಅವರಿಬ್ಬರಲ್ಲಿ ಯಾರೂ ದಕ್ಕಲಾರರು..."

"ಯಾಕೆ ದಕ್ಕಬಾರದು ! ನಮ್ಮದೂ ಘನಪಾಠಿಗಳ ವಂಶವೇ. ನಮ್ಮ ಮನೆ ಹುಡುಗಿಯನ್ನು ತಂದುಕೊಳ್ಳುವುದಕ್ಕೆ ಪುಣ್ಯ ಮಾಡಿರಬೇಕು!"

ಹೀಗೆ ಸಂಭಾಷಣೆ ನಡೆದಿರುತ್ತದೆ. ಆ ಇಬ್ಬರು ಯುವಕರ ವೇದಮಂತ್ರ ಪಠನ ಮುಗಿದ ಮೇಲೆ, ಇನ್ನೊಬ್ಬ ಗುರುಗಳ ಶಿಷ್ಯರ ವೇದಮಂತ್ರೋಚ್ಚಾರಣೆ ಸಾಗಿರುತ್ತದೆ. ಹಾಗೆಯೇ ಇನ್ನೊಂದು ಜತೆ ಸುಮಂಗಲಿಯರ ಮಾತುಕತೆ, "ಯಾವ ಗಂಡಿಗೆ ಯಾವ ಹೆಣ್ಣು!" ಇಂಥ ಸಮಾರಂಭಗಳಲ್ಲಿ ಬೇರೆ ಬೇರೆ ಗುರುಗಳ ಶಿಷ್ಯರುಗಳು ಪರಸ್ಪರ ಕಲೆಯುವರು, ಒಬ್ಬರು ಇನ್ನೊಬ್ಬರ ವೇದ ಮಂತ್ರೋಚ್ಚಾರಣೆಯನ್ನು ಆಲಿಸುವರು. ತಮಗೆ ಪಾಠವಾಗಿರುವ ಕ್ರಮಕ್ಕೂ ಅವರ ಪಾಠಕ್ರಮಕ್ಕೂ ಏನು ವ್ಯತ್ಯಾಸ ಎಂಬುದನ್ನು ಅರಿಯುವರು. ಇತರ ತಮ್ಮ ಸಮವಯಸ್ಕರ ಕಂಠಶ್ರೀಗೂ ತಮ್ಮದಕ್ಕೂ ಎಲ್ಲಿ ಭೇದವಿದೆ, ತಾವು ಯಾವ ರೀತಿಯಲ್ಲಿ ತಮ್ಮ ಮಂತ್ರೋಚ್ಚಾರಣೆಯನ್ನು ಉತ್ತಮಪಡಿಸಿಕೊಳ್ಳಬಹುದು, ಎಂಬುದನ್ನು ಕುರಿತು ಆಲೋಚಿಸುವರು. ಬೇರೆ ಬೇರೆ ಊರಿನ ಯುವಕರನ್ನು ಭೇಟಿಯಾಗಿ ಯಾರ ಯಾರ ಗುರುಗಳು ಹೇಗೆ ಪಾಠ ಹೇಳಿಕೊಡುತ್ತಾರೆಂಬುದನ್ನು ತಿಳಿಯುವರು. ಬೇರೆ ಊರಿಗೆ ಹೋದಾಗ ಮಧ್ಯೆ ಪುರಸತ್ತು ಸಿಕ್ಕಿದಾಗ ಆ ಊರಿನ ಯುವಕರೊಡನೆ ಅವರ ತೋಟಗಳಿಗೆ ಹೋಗಿ ಅಲ್ಲಿಯ ಫಸಲು ಹೇಗಿದೆ, ವ್ಯವಸಾಯ ಹೇಗೆ ನಡೆದಿದೆ ಎಂಬುದನ್ನು ಅರಿತುಕೊಳ್ಳುವರು. ತಮ್ಮ ಊರಿನ ತೋಟದ ನೆಲಗುಣ ಎಂಥದು, ನೀರಿನ ವಸತಿ ಹೇಗಿದೆ? ಅಡಕೆ, ಬಾಳೆ, ತೆಂಗು, ವೀಳೆಯದೆಲೆ ಬೆಳೆ ಹೇಗಿದೆ? ಈ ಊರಿನಲ್ಲಿ ಹೇಗಿದೆ? ಬೇಸಾಯದ ನೆಲದ ಕುಂದು ಕೊರತೆಗಳೇನು? ವ್ಯವಸಾಯವನ್ನು ಹೇಗೆ ಅಭಿವೃದ್ಧಿಪಡಿಸಿ ಕೊಳ್ಳಬಹುದು? ಎಂಬುದನ್ನೆಲ್ಲ ತಿಳಿಯಲು ಅತ್ಯುತ್ತಮವಾದ

ಅವಕಾಶ ಇಲ್ಲಿ ದೊರೆಯುತ್ತದೆ. ವಿದ್ಯಾಭ್ಯಾಸವೆಂದರೆ ಕೇವಲ ವೇದಾಧ್ಯಯನವೋ, ಶಾಸ್ತ್ರಾಧ್ಯಯನವೋ ಅಲ್ಲ, ಜೀವನೋಪಾಯಕ್ಕೆ ಅಗತ್ಯವಾದ ಜ್ಞಾನವೂ ಬೇಕು. ಅಧ್ಯಯನ, ಜೀವಿಕೆ, ಸಂಪ್ರದಾಯಾನುಸಾರವಾಗಿ ಬದುಕುವಿಕೆ, ಇವೆಲ್ಲವೂ ಒಬ್ಬನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡಿ ಜೀವನದಲ್ಲಿ ಸಾರ್ಥಕತೆಯನ್ನು ದೊರಕಿಸಿಕೊಡುತ್ತವೆ. ಇಂಥ ಸರ್ವಾಂಗೀಣ ಕಲಿಕೆಯೇ ನಿಜವಾದ ವಿದ್ಯಾಭ್ಯಾಸ.

ಏನಪ್ಪ, ಈ ವಿವರಗಳನ್ನು ನೋಡಿದರೆ ಹಿಂದಿನ ಕಾಲದ ಅಗ್ರಹಾರದ ವರ್ಣನೆಯಂತೆ ಕಾಣುತ್ತದಲ್ಲ! ನಮ್ಮ ಕಾವ್ಯಗಳಲ್ಲಿ ಬರುವ ಅಗ್ರಹಾರಗಳ ಬಣ್ಣನೆಯ ಸೊಗಸು ಇಲ್ಲಿ ಕಾಣುತ್ತದೆ. ವೇದಮಂತ್ರೋಚ್ಚಾರಣೆ, ಹೋಮಧೂಮದ ಸುವಾಸನೆ, ಪಕ್ಷಿಗಳ ಕಲರವ ಇತ್ಯಾದಿ ನೆನಪಿಗೆ ಬರುತ್ತದೆ. ಸಂಕೇತಿಗಳು ಗಾರ್ಹಪತ್ಯಾಗ್ನಿಯನ್ನು ಮನೆಯಲ್ಲಿ ಪೋಷಿಸಿಕೊಂಡು ಬರುತ್ತ, ಅಗ್ನಿಹೋತ್ರಾದಿ ಹವನ ಹೋಮಗಳನ್ನು ಆಚರಿಸುತ್ತಿದ್ದರು. ಹಲವು ಜನ ಸಂಕೇತಿಗಳು ಯಜ್ಞಯಾಗಾದಿಗಳನ್ನು ಮಾಡಿ ದೀಕ್ಷಿತ, ಸೋಮಯಾಜಿ ಎಂಬ ಹೆಸರುಗಳಿಂದ ಪ್ರಖ್ಯಾತರಾಗಿದ್ದರು. ಆದುದರಿಂದ ಹಿಂದೆ ಸಂಕೇತಿಗಳು ವಾಸಿಸುತ್ತಿದ್ದ ಊರುಗಳು ಅಥವಾ ಹಳ್ಳಿಗಳು ಪುರಾತನ ಕಾಲದ ಅಗ್ರಹಾರಗಳನ್ನು ನೆನಪಿಗೆ ತರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಸಂಕೇತಿಗಳು ತಮಿಳುನಾಡಿನಿಂದ ಕಾರಣಾಂತರದಿಂದ ಮೈಸೂರು ಸಂಸ್ಥಾನಕ್ಕೆ ವಲಸೆ ಬಂದರು. ಒಂದು ವೃತ್ತಾಂತದ ಪ್ರಕಾರ ಎಂದರೆ ಖ್ಯಾತ ಚರಿತ್ರಕಾರ ಹಾಗೂ ಪುರಾತತ್ವಶಾಸ್ತ್ರಜ್ಞ ಡಾ॥ ಎಂ.ಎಚ್. ಕೃಷ್ಣ ಅವರು ನನಗೆ ತಿಳಿಸಿದ್ದ ಪ್ರಕಾರ, ಹೊಯ್ಸಳ ರಾಜರ ಕಾಲದಲ್ಲಿ ವೇದ ಶಾಸ್ತ್ರ ಮೊದಲಾದವುಗಳಲ್ಲಿ ನಿಷ್ಣಾತರಾದ ಕೆಲವು ವಿದ್ವಾಂಸರನ್ನು ತಮಿಳುನಾಡಿನಿಂದ ಕರೆಸಿಕೊಂಡರಂತೆ. ಇದಕ್ಕೆ ಶಾಸನಾಧಾರವೂ ಇದೆಯೆಂದು ಡಾ॥ ಕೃಷ್ಣ ತಿಳಿಸಿದ್ದರು. ಅವರೇ ಸಂಕೇತಿಗಳು. ಹೀಗೆ ವಲಸೆ ಬಂದವರು ತಮ್ಮ ವಿದ್ಯೆಯನ್ನೂ, ಆಚಾರವನ್ನೂ ಕಾಪಾಡಿಕೊಂಡರು. ಅಂತೆಯೇ ತಮ್ಮ ಪೂರ್ವಜರ ಕಸುಬಾದ ಅಡಕೆ ತೋಟದ ವ್ಯವಸಾಯವನ್ನೂ ಉಳಿಸಿಕೊಂಡರು. ಸ್ವಂತ ದುಡಿಮೆಯಿಂದ ಬಾಳಲು ಕಲಿತರೇ ವಿನಹ ಇತರರ ಎದುರಿಗೆ ಕೈ ಒಡ್ಡಲಿಲ್ಲ. ಎತ್ತು, ನೇಗಿಲು ಮೊದಲಾದವುಗಳನ್ನು ಉಪಯೋಗಿಸುವುದರ ಮೂಲಕ ಪ್ರಾಣಿಗಳಿಗೆ ಹಿಂಸೆ ಕೊಡಬಾರದೆಂಬ ಉದ್ದೇಶದಿಂದ-ಸ್ವಂತ ದುಡಿಮೆಯಿಂದ, ಕೈಕೆಲಸದಿಂದ-ತೋಟದ ವ್ಯವಸಾಯವನ್ನು ಮಾಡುವ ಮೂಲಕ ಜೀವನೋಪಾಯವನ್ನು ಕಲ್ಪಿಸಿಕೊಂಡರು. **"ಪೆರರೀವುದೇಂ, ಪೆರರ ಮಾಡುವುದೇಂ, ಪೆರರಿಂದವಪ್ಪುದೇಂ"** ಎಂಬ ಆದಿಕವಿ ಪಂಪನ ವಾಕ್ಯಕ್ಕೆ ಮಾದರಿಯಾಗಿದ್ದರು. ಈ ರೀತಿಯ ಬಾಳಿಗೆ ಸಿದ್ಧರಾಗಬೇಕಾದ ತಮ್ಮ ಯುವಕರಿಗೆ ಎಂಥ ವಿದ್ಯೆಯನ್ನು ಕೊಡಬೇಕೋ ಅದಕ್ಕೆ ತಕ್ಕ ರೀತಿಯಲ್ಲಿ ಗುರುಕುಲ -ಮಾದರಿಯಲ್ಲಿ ತಮ್ಮ ತರುಣಜನಾಂಗಕ್ಕೆ ವಿದ್ಯಾಭ್ಯಾಸ ಕೊಡುತ್ತಿದ್ದರು.

ತಾವು ಬಾಳುವ ಜೀವನಕ್ಕೂ, ತಮ್ಮ ಸಮಾಜಕ್ಕೂ ಹೊಂದಿಕೆಯಾಗದ ವಿದ್ಯೆ ಪೂರ್ಣಫಲವನ್ನು ಕೊಡಲಾರದು. ಅದರಿಂದ ಜನಕ್ಕೂ ನಷ್ಟ, ದೇಶಕ್ಕೂ ನಷ್ಟ. ಅಂದು ತಮ್ಮ ಬದುಕಿಗೆ ಅನುಗುಣವಾದ ವಿದ್ಯೆಯನ್ನು ಜ್ಞಾನಸಂಪಾದನೆಗಾಗಿ, ಸಾರ್ಥಕ ಬಾಳುವೆಗಾಗಿ, ಹಾಗೂ ಆತ್ಮೋನ್ನತಿಗಾಗಿ, ಮೋಕ್ಷಸಾಧನೆಗಾಗಿ, ಕಲಿಯುತ್ತಿದ್ದರು. ಅಂದಿನ ಆ ಗುರುಗಳು ಶಿಷ್ಯನಿಂದ ಏನನ್ನೂ ನಿರೀಕ್ಷಿಸಿದವರಲ್ಲ. ಶಿಷ್ಯರನ್ನು ಜತೆಯಲ್ಲಿಟ್ಟುಕೊಂಡು, ಅವರನ್ನು ತಮ್ಮ ಮನೆಯವರಲ್ಲೊಬ್ಬರೆಂಬಂತೆ ನಡೆಸಿಕೊಂಡು, ವಿದ್ಯೆಯ ಅಮೃತಧಾರೆಯನ್ನೆರೆದರು. ಗುರುಶಿಷ್ಯ ಸಂಬಂಧವು ನಿಃಸ್ವಾರ್ಥತೆಯ ಹಾಗೂ ಪ್ರೇಮದ ಅಡಿಗಲ್ಲಿನ ಮೇಲೆ ನಿಂತರೆ, ಗುರುಶಿಷ್ಯರ ಶ್ರೇಯಸ್ಸಿನ ಶುಭಮಂದಿರವು ಭವ್ಯವಾದೀತು, ನಾಡು ಸುಖ ಶಾಂತಿಗಳ ಬೀಡಾದೀತು.

ಸಹನಾವವತು । ಸಹ ನೌ ಭುನಕ್ತು ।
ಸಹ ವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು।
ಮಾ ವಿದ್ವಿಷಾವಹೈ ॥ ಓಂ ಶಾಂತಿಃ, ಶಾಂತಿಃ, ಶಾಂತಿಃ॥

"ಗುರುಶಿಷ್ಯರಿಬ್ಬರೂ ಕೂಡಿಯೇ ಫಲಪ್ರದ ಕಾರ್ಯಗಳನ್ನೆಸಗಿ ವೀರ್ಯವಂತರಾಗಿ, ಜತೆಗೂಡಿಯೇ ಸುಖಸಂತೋಷಗಳನ್ನು ಭುಜಿಸಿ, ಎತ್ತರಕ್ಕೆ ಬೆಳೆದು, ತೇಜಸ್ವಿಗಳಾಗುವ ಹಾಗೂ ಎಂದಿಗೂ ದ್ವೇಷಿಸದ ವಿದ್ಯಾಭ್ಯಾಸದ ವಾತಾವರಣ ಸೃಷ್ಟಿಯಾಗಲಿ" ಎಂಬುದಾಗಿ ಗುರುಶಿಷ್ಯರಿಬ್ಬರೂ ಕೂಡಿಯೇ ಮಾಡುವ ಪ್ರಾರ್ಥನೆಯು ನಮ್ಮ ಗುರಿಯಾಗಿರಬೇಕು.

ಅಂದಿನ ಜೀವನ ಸಮ್ಯಕ್‌ಜೀವನ. ಬಂದಿದ್ದರಲ್ಲಿ ತೃಪ್ತಿ; ಉಂಡಿದ್ದು ಮೃಷ್ಟಾನ್ನ. ಇಂದಿನಂತೆ ಕಲಬೆರಕೆಯ ಆಹಾರವಿರಲಿಲ್ಲ, ಕಾಫೀ ಟೀಗಳ ಆಮಿಷವಿರಲಿಲ್ಲ. ಅಂದಿನದು ರಸವತ್ ಆಹಾರ, ಅದಕ್ಕೇ ಅದು ರಸಕವಳ. ಬುದ್ಧಿಗೂ ಅಷ್ಟೆ, ಹೊಟ್ಟೆಗೂ ಅಷ್ಟೆ. ತೃಪ್ತಿ, ಸುಖ, ಸಂತೋಷ, ಮಿತಾಹಾರ, ಶುಚಿ, ರುಚಿ, ಸದಭಿರುಚಿ, ಬ್ರಹ್ಮಚರ್ಯ ಈ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಸಂಕೇತಿ ಯುವಕರಿಗೆ, ತದನುರೂಪವಾದ ವಿದ್ಯೆಯನ್ನು ಪ್ರದಾನಮಾಡುತ್ತಿದ್ದರು ಅಂದಿನ ಸಂಕೇತಿ ಗೃಹಸ್ಥರು.

೭. ಸೋಪಾನ ಸಂವಾದ

ಒಂದು ಊರಿಗೆ ಆಶ್ರಯವಾದ ನದಿ ಅಥವಾ ಕೆರೆ ಆ ಊರಿನ ಜನರ ಜೀವನದ ಜೀವನಾಡಿ ಹಾಗೂ ಸಾಂಸ್ಕೃತಿಕ ಕೇಂದ್ರ. ನೀರಿಗೆ 'ಜೀವನ' ಎಂದು ಹೆಸರು. **"ಜೀವತ್ಯನೇನ ಜೀವಃ"** ಎಂಬ ವಾಕ್ಯಾನುಸಾರವಾಗಿ ಮನುಷ್ಯರಾದಿಯಾಗಿ ಸಮಸ್ತ ಪಶುಪಕ್ಷಿಗಳಿಗೆ ಜೀವನಾಧಾರವಾದುದು ನೀರು. ಕುಡಿಯಲು, ಸ್ನಾನ ಮಾಡಲು, ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ಎತ್ತುಗಳಿಗೆ ಹಸುಗಳಿಗೆ ಕುಡಿಸಲು ನೀರು ಬೇಕೇ ಬೇಕು. ಅಲ್ಲದೆ ಒಂದು ಹಳ್ಳಿಯ ಅಥವಾ ಊರಿನ ನದಿ ಅಥವಾ ಕೆರೆ ಸಾಂಸ್ಕೃತಿಕ ಸ್ಥಾನವಾಗಿಯೂ ಮೆರೆಯುತ್ತದೆ. ಪುರಾಣ ಕಾರ್ಯಕ್ರಮಗಳು ಮಾಘಮಾಸದಲ್ಲಿ ನಡೆಯುವುದು ಸ್ನಾನಘಟ್ಟದ ಮಂಟಪದಲ್ಲಿ. ಆಯುಧಪೂಜೆಯಂದು ಹಳ್ಳಿಯ ದೇವರುಗಳನ್ನು ಉತ್ಸವದಲ್ಲಿ ಬಿಜಯಮಾಡಿಸಿ, ದೇವರ ವಿಗ್ರಹಗಳನ್ನು ತೊಳೆದು ಅಲಂಕರಿಸಿಕೊಂಡು ಹಾಡುಗಳನ್ನು ಹೇಳುತ್ತ ಹೋಗುವುದಕ್ಕೆ ನದಿ ಬೇಕೇಬೇಕು. ಗಂಗಾಪೂಜೆಯನ್ನು ನೀರಿಗೆ ತಾನೇ ಸಲ್ಲಿಸುವುದು. ಐರಣೆಯನ್ನು ತಂದು, ಮದುವೆಯ ಶಾಸ್ತ್ರಕ್ಕೆ ಕಲಶದಲ್ಲಿ ಉದಕವನ್ನು ತುಂಬಿಕೊಂಡು ಹೋಗುವುದು ನದಿ ಅಥವಾ ಕೆರೆಯಿಂದಲೇ. ಹೀಗೆ ಹಳ್ಳಿಯ ಬದುಕಿಗೆ ಬಹು ಮುಖ್ಯವಾದ ನದಿ ಅಥವಾ ಕೆರೆಗಳು ಇನ್ನೂ ಒಂದು ವಿಷಯದಲ್ಲಿ ನಮ್ಮ ಗಮನವನ್ನು ಸೆಳೆಯುತ್ತವೆ. ಪಾತ್ರೆ ತೊಳೆದು, ಬಟ್ಟೆ ಒಗೆದು ಸ್ನಾನ ಮಾಡಿ ಕುಡಿಯಲು ನೀರನ್ನು ಕೊಡಗಳಲ್ಲಿ ತುಂಬಿಕೊಂಡು ಹೋಗುವುದು ಹೆಂಗಸರ ದಿನಚರಿ ಇಲ್ಲವೇ ಕರ್ತವ್ಯ ಎನ್ನಲೂಬಹುದು. ನದಿಯ ಅಥವಾ ಕೆರೆಯ ಸೋಪಾನಗಳಲ್ಲಿ ಪ್ರತಿನಿತ್ಯವೂ ಕೆಲವು ಸಮಯವನ್ನು ಕಳೆಯುವ ಹೆಂಗಸರ ಕೈಗಳು ಕೆಲಸದಲ್ಲಿ ನಿರತವಾಗಿರುವಾಗ, ಅವರ ನಾಲಗೆ ವಿರಾಮವಾಗಿ ತನ್ನ ಕೆಲಸವನ್ನು ಮಾಡುತ್ತದೆ. ಹಲಕೆಲವು ವಿಷಯಗಳು ಅವರ ಮಾತುಗಳಲ್ಲಿ ಬಂದು ವಿನೋದ, ಅನುಕಂಪ, ದುಃಖ, ಸರಸ ಮೊದಲಾದ ಹಲವು ರೀತಿಯಲ್ಲಿ ಮಾತು ಹರಿಯುತ್ತದೆ. ನದಿಯ ಅಥವಾ ಕೆರೆಯ ಸೋಪಾನಗಳಲ್ಲಿ ನಡೆಯುವ ಈ ಮಾತಿನ ಮೋಡಿಯ ಪ್ರಸಂಗವನ್ನು 'ಸೋಪಾನ ಸಂವಾದ' ಎಂದು ಕರೆಯಬಹುದಲ್ಲವೇ !

ಸಾಮಾನ್ಯವಾಗಿ ಸಂಕೇತಿ ಸ್ತ್ರೀಯರು ಬೆಳಗ್ಗೆ ಹಾಲು ಕರೆದು, ಕೊಟ್ಟಿಗೆಯನ್ನು ಗುಡಿಸಿ, ಮಕ್ಕಳನ್ನು ಸುಧಾರಿಸಿದ ಅನಂತರ ಕುಕ್ಕಿಗಳಲ್ಲಿ ಪಾತ್ರೆ-ಬಟ್ಟೆಗಳನ್ನು ತುಂಬಿಕೊಂಡು, ಒಂದೋ ಎರಡೋ ಕೊಡಗಳನ್ನು ಕಂಕುಳಲ್ಲಿ ಇರುಕಿಕೊಂಡು ಹೊಳೆಗೆ ಅಥವಾ ಕೆರೆಗೆ ಹೋಗುವುದು ದಿನಚರಿಯ ಮುಖ್ಯ ಭಾಗ. ಅಲ್ಲಿ ತಮ್ಮ ಕೆಲಸಗಳನ್ನು ಮಾಡುತ್ತ-ಮಾಡುತ್ತ ತಮ್ಮಂತೆ ಬಂದಿರುವ ಇತರರೊಡನೆ ಅದೂ ಇದೂ ಮಾತನಾಡುತ್ತ ಕೆಲಸ ಮುಗಿಸುವರು. ದಿನವೆಲ್ಲ ಮನೆಯ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಸ್ತ್ರೀಯರಿಗೆ ಇಲ್ಲಿ ತಮ್ಮ ಜತೆಯವರೊಡನೆ ಮನಬಿಚ್ಚಿ ಮಾತನಾಡುತ್ತ ಮನಸ್ಸನ್ನು ಹಗುರಮಾಡಿಕೊಳ್ಳುವ ತಾಣವಾಗಿ ಪರಿಣಮಿಸುತ್ತದೆ ನದಿಯ ಸೋಪಾನ. ಅವರ ಮಾತಿನಲ್ಲಿ ಹಳ್ಳಿಯ ಸಮಸ್ತ ವಿಷಯಗಳೂ ಸುಳಿದು ಹೋಗುತ್ತವೆ. ತಮ್ಮ ಕಷ್ಟ ಸುಖದ, ಸಂಸಾರದ, ಪತಿ, ಮಕ್ಕಳು-ಮೊಮ್ಮಕ್ಕಳ ವಿಷಯದ, ಊರಿನ ಹಾಗೂ ನೆರೆಯೂರುಗಳ ಆಗು ಹೋಗುಗಳ, ನೆಂಟರಿಷ್ಟರಿಗೆ ಸಂಬಂಧಿಸಿದ ಎಲ್ಲ ವಿಚಾರಗಳಿಗೂ ಇಲ್ಲಿ ಎಡೆಯುಂಟು. ನದಿ ಅಥವಾ ಕೆರೆಯ ಸೋಪಾನಗಳು ಸ್ತ್ರೀಯರ ವಾರ್ತಾಪತ್ರಿಕೆ ಮತ್ತು ವಿಶ್ವ ವಿಷಯಕೋಶ ಎಂದು ಗಂಡಸರು ತಮಾಷೆ ಮಾಡುವುದುಂಟು. ಇದನ್ನು ಗಂಡಸರ ಅಸಹಿಷ್ಣುತೆ ಎಂದೋ, ಈರ್ಷ್ಯೆ ಎಂದೋ ಹೆಂಗಸರು ಭಾವಿಸುವರು. ಸ್ತ್ರೀಯರ ದೃಷ್ಟಿಯಿಂದ ಇದನ್ನು ಗಮನಿಸಿದಾಗ ಜೀವನೋತ್ಸಾಹದಿಂದ ಪುಟಿಯುವ ಜೀವನ ಕಾರಂಜಿ ಎಂದು ಅರ್ಥೈಸಬಹುದು. ಈ ಸೋಪಾನ ಸಂವಾದದಲ್ಲಿ ಮನೋರಂಜನೆ ಉಂಟು, ವಿನೋದ ಉಂಟು, ಕುಹಕ ಉಂಟು, ಕಣ್ಣೀರು ಉಂಟು. ಒಂದೊಂದು ಸಲ ಇದು ಅಪರೂಪವಾಗಿ ವಾದವಿವಾದಕ್ಕೂ, ವಿರಸಕ್ಕೂ ಎಡೆಮಾಡಿಕೊಡಬಹುದು. ಈ ಸೋಪಾನ ಸಂವಾದದ ಸೊಗಸನ್ನೂ, ಸಂಕೇತಿ ಸಮುದಾಯವು ಒಂದೆಡೆ ಸೇರಿದಾಗಿನ ಆ ಅನ್ಯಾದೃಶ ನೋಟವನ್ನೂ, ನಾವು ಸ್ವಲ್ಪಮಟ್ಟಿಗೆ ಅವಲೋಕಿಸಬಹುದಲ್ಲವೇ !

□ □ □

"ಸಾಕಾಗಿ ಹೋಯಿತು; ಹಾಳಾದ್ದು ಈ ಗ್ರಹಣ ಬೇರೆ ಬಂದು ನಮ್ಮನ್ನು ಗೋಳು ಹೊಯ್ದುಕೊಳ್ಳುತ್ತದೆ !" ಹಿರಿಯ ಸ್ತ್ರೀ ಒಬ್ಬರು ಉದ್ಗಾರ ತೆಗೆಯುತ್ತಾರೆ.

"ಯಾಕೆ ಕಾವೇರಮ್ಮ, ಏನಾಯಿತು ?"

"ಇನ್ನೇನು, ಮನೇನೆಲ್ಲ ತೊಳೀಬೇಕು, ಸಾರಿಸಬೇಕು, ಇರೋ ಪಾತ್ರೆಗಳನ್ನೆಲ್ಲ ಬೆಳಗಬೇಕು, ಬಟ್ಟೇನೆಲ್ಲ ಒಗೆಯಬೇಕು; ಒಗೆಯದೇ ಹೋದರೂ ಒಂದು ಸಲ ನೆನೆಸಿ ಹಾಕಬೇಕಲ್ಲ ?"

"ಅದು ಎಲ್ಲರಿಗೂ ಇರೋದೆ, ನಿಮಗೊಬ್ಬರಿಗೇ ಏನು? ವಯಸ್ಸಾಯಿತು, ಒಬ್ಬರೇ ಮಾಡಿಕೊಳ್ಳಬೇಕು ಪಾಪ !"

"ಯಾಕೆ ? ಸೊಸೆ ಬಂದಿದ್ದಳಲ್ಲ, ನರಸಮ್ಮ. ಅವಳು ಹೊರಟುಹೋದಳೇ ?"

"ಅವಳು ಮೊನ್ನೇನೆ ಹೊರಟು ಹೋದಳಲ್ಲ. ಈಗಿನ ಕಾಲದ ಸೊಸೇರು ಏನು ಮಾಡ್ತಾರೆ ಬಿಡಿ. ಅವರಿಗೇನು ಹೋಗಬೇಕು ಹೇಳಿ, ಎಲ್ಲ ನಮ್ಮ ತಲೇಗೇ ಕಟ್ಟಿರೋದು. ಅವರು ಪಟ್ಟಣದಲ್ಲಿ ಇರೋರು ಕಸಮುಸುರೆ ಮಾಡಬೇಕೇ, ಪಾತ್ರೆ ಬೆಳಗಬೇಕೇ, ಬಟ್ಟೆ ಒಗೀಬೇಕೇ? ಕೆಲಸದವಳು ಎಲ್ಲಾನೂ ಮಾಡಿಕೊಂಡು ಹೋಗ್ತಾಳೆ. ಕೆಲಸದವಳು ಬೆಳಗಿದ ಪಾತ್ರೆಗಳನ್ನು ಹುಣಿಸೆಹಣ್ಣಿನ ನೀರಿನಲ್ಲಿ ತೊಳಕೊಂಡು ಅಡುಗೆ ಮನೆಗೆ ತಗೊಂಡು ಹೋಗ್ತಾರೋ, ಅದೂ ಇಲ್ಲವೋ. ಅಡುಗೆ ಒಂದು ಮಾಡಿದರೆ ಆಯಿತು. ಇಲ್ಲೀ ಹಾಗೆ ಅಲ್ಲೇನು ನೀರು ಸೇದಬೇಕೇ? ಹಂಡೆಗೆ ನೀರು ತುಂಬಬೇಕೇ? ಕೈಗೆ ಎಟುಕೋ ಹಾಗೆ ನಲ್ಲಿ ಇದೆ. ತಿರುಗಿಸಿದರೆ ಆಯಿತು, ಗಂಗಾಪ್ರವಾಹ ಪ್ರತ್ಯಕ್ಷವಾಗುತ್ತೆ. ಅವರಿಗೇನು ಒಂದು ಮಡೀನೇ, ಮಾರ್ಗಾನೇ ! ಗ್ರಹಣ ನೋಡಿದರೆ ತಾನೆ ಗ್ರಹಣಸ್ನಾನ, ಅದೂ ಇದೂ ಅನ್ನೋ ಕಷ್ಟ. ಬಾಗಿಲು ಕಿಟಕಿಗಳನ್ನೆಲ್ಲ ಬಡುಕೊಂಡು ಒಳಗೆ ಕೂತುಕೊಂಡುಬಿಟ್ಟು ಗ್ರಹಣದ ಬೆಳಕು ನಮ್ಮೇಲೆ ಬಿದ್ದೇ ಇಲ್ಲ ಅಂತ ನೆವ ಹೇಳಿ ತಪ್ಪಿಸಿಕೊಳ್ತಾರೆ. ಒಂದು ವೇಳೆ ಅವಳು ಇಲ್ಲಿ ಇದ್ದರೆ ತಾನೆ ಈ ಕೆಲಸವನ್ನೆಲ್ಲ ಮಾಡೋಕ್ಕಾಗುತ್ತೆ ? ಈಗಿನ ಕಾಲದವರಮ್ಮ ಅವರು!"

"ನಿಜ ಕಾವೇರಿ, ನೀನು ಹೇಳೋದು. ಅವರಿಗೆ ಮೈಲಿಗೆ-ಗಿಯಲಿಗೆ ಅಂತ ಏನೂ ಇಲ್ಲ, ನೋಡು. ಹೋದ ತಿಂಗಳು ಲಕ್ಷಮ್ಮನ ಯಜಮಾನರು, ಅಂಥ ಶ್ರೋತ್ರಿಯರು, ಏನೋ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದರು. ಮಗನ ಮನೇಗೆ ನೇರವಾಗಿ ಹೋದರು. ಮಗ ಆಫೀಸ್ ಕೆಲಸ ಅಂತ ಬೇರೆ ಊರಿಗೆ ಹೋಗಿದ್ದನಂತೆ. ಸೊಸೆ ಒಬ್ಬಳೇ ಮನೇಲಿ ಇದ್ದದ್ದು. ಇನ್ನು ಮಡೀಲಿ ಅಡುಗೆ ಮಾಡಬೇಕಾಗುತ್ತಲ್ಲ ಅಂತ 'ನಾನು ಒಳಗಿಲ್ಲ ಮಾವಯ್ಯ' ಅಂತ ಮುದ್ದು ಮುದ್ದಾಗಿ ಹೇಳಿಬಿಟ್ಟಳಂತೆ. ಆಮೇಲೆ ಅವರು ಆ ನರಸಿಂಹಶಾಸ್ತ್ರಿಗಳ ಮನೆಗೆ ಹೋದರಂತೆ. ನೋಡಿ, ಮಕ್ಕಳು ಸೊಸೆ ಅಂತೀವಲ್ಲ, ಯಾವ ಸುಖಕ್ಕೆ ?"

"ನೋಡಿ ಸಾವಿತ್ರು, ನಾನು ಸುಳ್ಳು ಹೇಳೋದಿಲ್ಲ. ನನ್ನ ಸೊಸೆ ಚಿನ್ನದಂಥವಳು. ಅವಳು ಈಗಲೂ ದಿನ ಬೆಳಗ್ಗೆ ಮಡಿ ಉಟ್ಟುಕೊಳ್ಳದೆ ಕಾಫೀನೂ ಕುಡಿಯೋಲ್ಲ. ಗಂಡನಿಗೂ ಅಷ್ಟೆ, ಸ್ನಾನ ಮಾಡದೆ ಕಾಫೀ ಕೊಡೋಲ್ಲ."

"ಇರ್ತಾರಮ್ಮ ಒಬ್ಬೊಬ್ರು ಪುಣ್ಯವಂತ್ರು. ಎಲ್ಲರ ಸೊಸೇರೂ ಹಾಗೇ ಇದ್ದುಬಿಟ್ರೆ, ಅತ್ತೆ ಅನ್ನಿಸಿಕೊಳ್ಳೋರಿಗೆ ಸ್ವರ್ಗಕ್ಕೆ ಎರಡೇ ಮೆಟ್ಲು ದೂರ."

□ □ □

ಹೀಗೆ ಹಿರಿಯರು ಸೊಸೆಯರ ವಿಷಯ ಮಾತಾಡು ತ್ತಿರಬೇಕಾದರೆ ಇದನ್ನು ಕೇಳಿಸಿಕೊಂಡ ಕಿರಿಯ ಸ್ತ್ರೀಯರು, "ಇವರಿಗೇನು ಹೋಗಬೇಕು? ಹಾಳಾದ ಮಡಿ ಮೈಲಿಗೆ ಅಂದುಕೊಂಡು ಸೊಸೆಯಂದಿರನ್ನು ಗೋಳು ಹುಯ್ದುಕೋತಾರೆ. ಎದ್ದರೆ ಮಡಿ, ನಿಂತರೆ ಮಡಿ. ಆ ರಂಗಮ್ಮ ಇದಾರಲ್ಲ, ಕಲಗಚ್ಚು ಕುಡಿದ ಹಸುವಿನ ಬಾಯನ್ನ ತೊಳೀತಾರಲ್ಲ ಮುಸುರೆ ಅಂತ ?"

"ಅದೇನ್ಹೇಳ್ತೀಯ ಸುಶೀಲಾ, ಅದು ಯಾರನ್ನೋ ಮುಟ್ಟುಕೊಂಡು ಬಂದುಬಿಟ್ಟ ಅಂತ ಆ ಮೂರು ವರ್ಷದ ಹಸುಗೂಸಿನ ತಲೇ ಮೇಲೆ ಅವತ್ತು ರಾತ್ರಿ ತಣ್ಣೀರು ಸುರೀಲಿಲ್ಲವೇ? ಇಂಥ ಮಡಿ ಇವರನ್ನೆಲ್ಲ ನೇರ ಮೋಕ್ಷಕ್ಕೆ ತಗೊಂಡು ಹೋಗುತ್ತೆ ನೋಡು !"

"ಎಲ್ಲರನ್ನೂ ಹೀಯಾಳಿಸಿ ಆಡಿಕೊಂಡು ಊರಿಗೆಲ್ಲ ಚಾಡಿ ಚುಚ್ಚೋರಿಗೆ ಮೋಕ್ಷ ಬೇರೆ ಕೇಡು. ನೀರಿನಲ್ಲಿ ಮೈ ನೆನಸಿಬಿಟ್ಟರೆ ಮನಸ್ಸು ಶುದ್ಧಿಯಾಗುತ್ತೆ ? ಮಡಿಕೇನ ಮೇಲೆ ತೊಳೆದರೆ ಒಳಗಡೆ ಅಂಟಿಕೊಂಡಿರೋ ಹಿಟ್ಟು ಹೋಗುತ್ತೆ !"

"ಅವತ್ತು ಆ ಸೀತಾ, ಬೀದೀಲಿ ಯಾರನ್ನೋ ಮುಟ್ಟಿಸಿಕೊಂಡು ಬಂದು ಮನೇಲಿ ಹೇಳದೆ ಮನೆಯಲ್ಲೆಲ್ಲ ಓಡಾಡಿಬಿಟ್ಟಳು ಅಂತ ಅವರ ಅತ್ತೆ ಕೈಲಿ ಚಾಡಿ ಹೇಳಿ ಅವಳನ್ನು ಚೆನ್ನಾಗಿ ಹೊಡಿಸಿದಳಲ್ಲ ....? ಈ ರಂಗಮ್ಮನ ಬಾಯಿಗೆ ಹುಳ ಬೀಳ !"

ಇದನ್ನು ಕೇಳಿಸಿಕೊಂಡ ರಂಗಮ್ಮ, "ಅದು ಯಾರನ್ನೇ ಬಾಯಿಗೆ ಹುಳ ಬೀಳ ಅಂತೀಯ. ಸುಮ್ಮನೆ ಬಿಡೋಲ್ಲ ನಿನ್ನ. ನಿಮ್ಮನೇಲಿ ಹೇಳಿ ರಂಪ ಮಾಡಿಸದೆ ಇದ್ದರೆ ನಾನು ರಂಗಮ್ಮನೇ ಅಲ್ಲ" ಎಂದು ಕೈ ಬೀಸಿದರು.

"ಅಯ್ಯೋ! ನಿಮ್ಮನ್ನ ಹೇಳ್ಲಿಲ್ಲ ರಂಗಮ್ಮನೋರೆ. ನಿಮ್ಮಂಥವರು ಇರೋದ್ರಿಂದ್ಲೇ ಮಡಿ-ಮೈಲಿಗೆ, ನೀತಿ-ಧರ್ಮ ಉಳಿದಿದೆ, ಮಳೆ-ಬೆಳೆ ಆಗ್ತಾ ಇದೆ. ನೀವು ಎಷ್ಟೊಂದು ಜನಕ್ಕೆ ಉಪಕಾರ ಮಾಡ್ತೀರಿ. ನಿಮ್ಮನ್ನ ಅಂದೋರುಂಟೇ ?"

"ಏನೇ ಗಯ್ಯಾಳಿ, ನನ್ನ ತಮಾಷೆ ಮಾಡ್ತೀಯಾ ?"

"ಹೋಗಲಿ ಬಿಡಿ ರಂಗಮ್ಮ. ಆ ಚಿಕ್ಕೋರ ಕೈಯಲ್ಲಿ ನಿಮಗೆ ಯಾಕೆ ಮಾತು. ನೀವು ದೊಡ್ಡೋರು" ಎಂದು ರಾಮಲಕ್ಷ್ಮಮ್ಮ ಸಮಾಧಾನ ಮಾಡಿದರು.

□ □ □

"ಏನು ತಿಮ್ಮಮ್ಮ, ಇವತ್ತು ಹೊಳೆಗೆ ತುಂಬ ತಡವಾಗಿ ಬಂದಿರಿ !" ಹಿರಿಯರೊಬ್ಬರು ಆಗ ತಾನೇ ಕುಕ್ಕಿ ಹೊತ್ತುಕೊಂಡು

ಕಂಕುಳಲ್ಲಿ ಕೊಡ ಇರುಕಿಕೊಂಡು ಬರುತ್ತಿದ್ದ ತಿಮ್ಮಮ್ಮನವರನ್ನು ಪ್ರಶ್ನಿಸಿದರು.

"ಏನು ಮಾಡೋದೆ ಅಮ್ಮಣ್ಣಿ. ನಮ್ಮ ರತ್ನಂಗೆ ನಿನ್ನೆ ಎಲ್ಲ ಜ್ವರ. ರಾತ್ರಿ ಚಿಟಿಕೆ ಹಾಕಿ, ಬಿಸಿ ಓಕುಳಿಯಲ್ಲಿ ಕಾಲು ತೊಳಸಿ ಮಲಗಿಸಿದೆ. ಬೆಳಗ್ಗೆ ಹೊತ್ತಿಗೆ ಜ್ವರ ಬಿಟ್ಟಿದೆ. ಆದರೆ ಏಳುತ್ತಲೂ ರಗಳೆ ಶುರು ಮಾಡಿಬಿಟ್ಟಳು. ಅವಳನ್ನ ಸಮಾಧಾನ ಮಾಡಿ ಬಾಕಿ ಮಕ್ಕಳಿಗೆಲ್ಲ ತಂಗಳನ್ನ ಹಾಕಿ ಬರೋ ಹೊತ್ತಿಗೆ ಇಷ್ಟು ಹೊತ್ತಾಯ್ತು."

□ □ □

ಇತ್ತ ಕಿರಿಯರ ಇನ್ನೊಂದು ಗುಂಪಿನಲ್ಲಿ-

"ಏನೇ! ಆ ಸೀತಾಲಕ್ಷ್ಮಿಯ ಗಂಡ ಪುನಃ ಕೋಪಿಸಿಕೊಂಡು ಉರಉರ ಅಂತ ಊರಿಗೆ ಹೊರಟುಹೋದನಂತಲ್ಲ ?"

"ಏನು ಮಾಡ್ತಾನೆ, ಗಂಡಸ್ತನದ ಸೊಕ್ಕು. ತಾಯಿಮನೆಗೆ ಬಂದು ಬಿಟ್ಟಿದ್ದಾಳಲ್ಲ ಹೆಂಡತಿ ; ಅಲ್ಲಿ ಅವನ ಸೇವೆಗೆ ಇಲ್ಲದೆ ಹೋದಳಲ್ಲ , ಊರಿಗೆ ಕರಕೊಂಡು ಹೋಗೋದಕ್ಕೆ ಅಂತ ಬಂದಿದ್ದ. ಅವಳನ್ನು ಕಳಿಸಿಕೊಡಲಿಲ್ಲ , ಅದಕ್ಕೇ !"

"ಚೊಚ್ಚಲು ಬಸಿರು! ಅದಕ್ಕೇ ತಾಯಿ ಕಳಿಸಲಿಲ್ಲ. ಒಂದು ಹೋಗಿ ಇನ್ನೊಂದಾದರೆ ಅಂತ ಭಯ."

"ಈ ಗಂಡಸರಿಗೆ ತಿಳುವಳಿಕೆ ಯಾವಾಗ ಬರುತ್ತೋ ಕಾಣೆ."

□ □ □

"ಅಲ್ಲವೇ ಸಾತು, ಆ ಪುಟ್ಟಮ್ಮನ ಮಗಳು ತಾಯಿಮನೆಗೆ ಓಡಿಬಂದುಬಿಟ್ಟಳಂತಲ್ಲ."

"ಓಡಿಬರದೆ ಇನ್ನೇನು ಮಾಡ್ತಾಳೆ? ಹನ್ನೆರಡು ವರ್ಷಕ್ಕೇ ಮೈ ನೆರೆದು ಕೂತಳು. ಸರಿ ನಿಷೇಕ ಮಾಡಿ ಕಳಿಸಿಕೊಟ್ಟರು ಗಂಡನ ಮನೆಗೆ. ಆ ಅರೀದ ಹುಡುಗಿ ಈ ಸಣ್ಣ ವಯಸ್ಸಿನಲ್ಲಿ ಕೊಟ್ರಗೂಳಿಗಳ ಹಾಗಿರೋ ಗಂಡಸ್ರ ಕೈಲಿ ಹೇಗೆ ನೀಸ್ತಾಳೆ? ಪಾಪ, ಹೆದರಿಕೊಂಡು ಓಡಿಬಂದಿದಾಳೆ. ಅದು ಹೋಗಲಿ. ನಿನ್ನ ಗಂಡ ಅಮೆರಿಕಾಗೋ ಎಲ್ಲೋ ಹೋಗಿದ್ದಾರಂತಲ್ಲ. ಇನ್ನೂ ಎಷ್ಟು ದಿನಾನೇ ಬರೋದು ?"

"ಡಾಕ್ಟ್ರಲ್ಲವೇ, ಅಲ್ಲಿ ದೊಡ್ಡ ಪರೀಕ್ಷೆಗೆ ಓದೋಕೆ ಹೋಗಿದಾರೆ."

"ಅಲ್ಲೇನು ಎಲ್ಲ ಸ್ವರ್ಗ ಇದ್ದ ಹಾಗೆ ಇದೆಯಂತಲ್ಲ ? ನೀನು ಯಾವಾಗ ಹೋಗ್ತೀಯಾ ಕುಸುಮ ?"

"ನಾನು ಹೋಗದೆ ಬಿಡ್ತೇನೆಯೆ ? ಆದರೆ ಅವರು ಅಲ್ಲಿ ಕಾಲೂರಿ ಸರಿಯಾಗಿ ನಿಂತ ಮೇಲೆ ತಾನೆ ಹೋಗಬೇಕು!"

"ಅಲ್ಲಿಗೆ ಹೋಗೋದಕ್ಕೆ ತುಂಬಾ ಛಾರ್ಜಂತೆ ? ಎಷ್ಟಾಗುತ್ತೆ ಕುಸುಮ ?"

"ಒಬ್ಬೊಬ್ಬರಿಗೆ ಐದು-ಹತ್ತು ಸಾವಿರ ಆಗುತ್ತೆ ಅಂತ ಹೇಳ್ತಾರಲ್ಲೆ!" ಸುಶೀಲ ಪ್ರಶ್ನಿಸಿದಳು.

"ಏನು ಸುಮ್ಮನೆ ಆಯಿತೆ ? ಇಲ್ಲಿದೆಯೇ ಆ ದೇಶ?"

"ವಿಮಾನದಲ್ಲಿ ಎರಡು ದಿವಸ ಹೋಗಬೇಕಂತಲ್ಲೆ ಕುಸುಮ, ನಿಜವೇ ?"

"ಅದು ಹೋಗಲಿ ಕುಸುಮ, ನೀನು ಅಲ್ಲಿಗೆ ಹೋಗೋವರೆಗೆ ಹ್ಯಾಗೆ ಇರ್ತೀಯ ಗಂಡನ್ನ ಬಿಟ್ಟು ?"

"ಲೇ! ಸುಮ್ನೆ ಇರೆ ಸಾತು. ಅವಳ್ನ ಯಾಕೆ ಗೋಳು ಹುಯ್ದುಕೊಳ್ತೀಯ ! ನಿನ್ನ ಹಾಗೇನೂ ಅಲ್ಲ ಅವಳು. ನೀನು ನಿನ್ನ ಗಂಡನ್ನ ಒಂದಿವಸ ಬಿಟ್ಟಿರೋಕಾಗೊಲ್ಲ ಅಂತಿದ್ದೆಯಲ್ಲ, ಹಾಗೆ ಎಲ್ಲರೂ ಇರ್ತಾರೆಯೇನೆ."

ಎಲ್ಲರೂ ನಗುತ್ತಾರೆ.

"ಅದಿರಲಿ ಸುಶೀಲ, ಅಮೇರಿಕದಲ್ಲಿ ಇರೋ ಹುಡುಗೀರೆಲ್ಲ ದಂತದ ಬೊಂಬೆ ಹಾಗಿರ್ತಾರಂತೆ. ಅದು ಹ್ಯಾಗೋ ಗಂಡಸರನ್ನು ಆಕರ್ಷಿಸಿ ಬಲೇಗೆ ಹಾಕಿಕೊಂಡು ಬಿಡ್ತಾರಂತೆ."

"ನಾವೇನು ನೋಡಿದೀವಾ. ಆ ಶಾನುಭೋಗ ರಂಗರಾಯರ ಮಗ ಅಲ್ಲಿ , ಮದುವೆಯಾದ ಹೆಂಡತೀನ ಬಿಟ್ಟು ಅದು ಯಾರೋ ಬಿಳೀ ತೊಗಲಿನೋಳನ್ನ ಕಟ್ಟಿಕೊಂಡು ವಾಪಸ್ಸು ಬಂದು ಬೆಂಗಳೂರಲ್ಲಿ ಮನೆ ಮಾಡಿಕೊಂಡು ಇದಾನಂತೆ."

"ಬಿಡೇ.... ಇದೆಂಥ ಹುಚ್ಚು ಇದು !"

"ನಿನಗೇ ಹಾಗೆ ಆಗಿದ್ರೆ ಏನು ಮಾಡ್ತಿದ್ದೆ ?"

"ಛೀ ನೋಡು, ಸುಮ್ಮನಿರದೆ ಇದ್ದರೆ ಈ ಬೋಸೀಲೇ ಕುಟ್ಟಿಬಿಡ್ತೀನಿ."

ಎಲ್ಲರೂ ನಗುವರು.

□ □ □

"ಅಲ್ಲ ನಂಜಮ್ಮತ್ತೆ, ಹಳ್ಳಿಮೈಸೂರಿನ ವೆಂಕಟರಾಮು ಹೋಗಿಬಿಟ್ಟನಂತಲ್ಲ , ಏನಾಗಿತ್ತು ಅವನಿಗೆ ?"

"ಅದೇನು ಕಾಯಿಲೇನೋ ಏನೋ ಗೊತ್ತಿಲ್ಲಮ್ಮ. ಎರಡು ದಿವಸ ಜ್ವರ ಬಂತಂತೆ. ಹೊಳೆನರಸೀಪುರದಿಂದ ಡಾಕ್ಟರನ್ನು ಕರೆದುಕೊಂಡು ಬರುವ ಹೊತ್ತಿಗೆ ಜೀವ ಹೋಗಿಯಾಗಿತ್ತಂತೆ."

"ಪಾಪ, ಆ ಹುಡುಗಿ ಜಲಜಾಕ್ಷಿ ಪಾಡು ಬೇಡ. ಅವಳ ಇಡೀ ಜೀವನದ ಸುಖ-ಸಂತೋಷ ಎಲ್ಲ ಸುಟ್ಟು ಬೂದಿಯಾಗ್ಹೋಯ್ತು. ಇನ್ನು ಸಾಯೋವರೆಗೂ ಮೂಗಿಗೆ ಕವಡೆ ಕಟ್ಟಿಕೊಂಡು ಇತರರಿಗೆ ದುಡೀತಾ ಇರೋದೇ. ಅವಳ ಹೊಟ್ಟೇದು ಅಂತ ಒಂದು ಕುಡೀನಾದರೂ ಇದ್ದಿದ್ರೆ, ಒಂದು ಸಮಾಧಾನ ಇರುತ್ತಿತ್ತು."

"ಇದೇ ನೋಡೀಮ್ಮ ನಮ್ಮ ಜಾತೀಲಿ ಒಂದು ಕಷ್ಟ. 'ಅಂಥವರ' ಪಾಡು ಹೇಳತೀರದು. ಯಾರು ಯಾರು ಏನೇನು ಹೇಳಿದರೆ ಅದನ್ನೆಲ್ಲ ಕೇಳಿಕೊಂಡು ಇರಬೇಕು. ಮನೆ ಜನ ಒಳ್ಳೆಯೋರಾದರೆ ಸರಿ. ಇಲ್ಲದೆ ಇದ್ದರೆ ನಿಮಿಷ ನಿಮಿಷಕ್ಕೂ ಮೂತಿ ತಿವಿಸ್ಕೊಂಡು ಹಂಗಿನ ಬಾಳು ಬಾಳಬೇಕು."

"ಅದ್ಯಾಕೆ ಹಂಗಿನ ಬಾಳು ಅಂತೀಯ? ನಮ್ಮ ಗೌರತ್ತೆ ಇಲ್ಲವ? ಪಾಪ ಊರಿಗೆಲ್ಲ ಸಹಾಯ ಮಾಡಿಕೊಂಡು ಎಲ್ಲರ ಕೈಯಲ್ಲೂ ಹೊಗಳಿಸಿಕೊಳ್ತಾ ಇಲ್ಲವ? ಒಬ್ಬರ ಕೈಲೂ, ಒಂದು ಕಾಸಿನ ಆಸೇನೂ, ತೋರಿಸಿದೋರಲ್ಲ."

"ಎಲ್ಲೋ ಒಬ್ಬೊಬ್ಬರು ಪುಣ್ಯವಂತರಿಗೆ ಇಂಥ ನಿಃಸ್ವಾರ್ಥ ಸೇವೆ ಸಲ್ಲಿಸೋ ಅವಕಾಶ ಸಿಗುತ್ತೆ. ಹಾಗೆ ಎಲ್ಲರಿಗೂ ಅವಕಾಶ ಸಿಕ್ಕುತ್ತೆಯೆ?"

□ □ □

"ಅರಳಿಕಟ್ಟೆ ರಾಮುಲಕ್ಷ್ಮಿ ಮಗಳಿಗೆ ಮದುವೆ ಗೊತ್ತಾಗಿದೆಯಂತಲ್ಲ. ಹುಡುಗ ಇಂಜಿನೀಯರಿಂಗ್ ಓದ್ತಾ ಇದಾನಂತೆ."

"ಓದ್ತಾ ಇರೋ ಹೊತ್ತಿಗೇ ತಾನೇ ವರದಕ್ಷಿಣೆ ಕೇಳಿರೋದು."

"ಎಷ್ಟಂತೆ ವರದಕ್ಷಿಣೆ ?"

"ಏನೋಮ್ಮ! ಮೂರು ಸಾವಿರವೋ, ನಾಲ್ಕು ಸಾವಿರವೋ ಇರಬಹುದು. ನನಗೆ ಸರಿಯಾಗಿ ಗೊತ್ತಿಲ್ಲ. ಇದರ ಜತೆಗೆ ಸೂಟು, ಬೂಟು, ಉಂಗುರ, ವಾಚು, ಸೈಕಲ್ಲು ಅಲ್ಲದೆ ಎರಡು ವರ್ಷ ಓದಿಸೋದಕ್ಕೆ ದುಡ್ಡು ಕೊಡಬೇಕಂತೆ. ಜತೆಗೆ ಬೆಳ್ಳಿ ತಟ್ಟೆ, ಚೊಂಬು ಎಲ್ಲಾ ಮಾಮೂಲು."

"ಅಯ್ಯೋ ಪಾಪ, ಅವರೆಲ್ಲಿಂದ ತಂದುಕೊಡ್ತಾರೆಯೆ ?"

"ಏನು ಮಾಡೋದು, ಮಗಳಿಗೆ ಮದುವೆ ಮಾಡಬೇಕು, ಓದಿದ ವರಕ್ಕೆ ಕೊಡಬೇಕು ಅಂದರೆ ಗದ್ದೆ-ತೋಟ ಮಾರಿಯಾದರೂ ಮದುವೆ ಮಾಡಬೇಕು."

"ಹಾಳಾದ್ದು , ವರದಕ್ಷಿಣೆ ಅದೆಲ್ಲಿಂದ ಬಂತೋ !"

"ಓದಿದ ಹುಡುಗರಿಗೆ- ಅದರಲ್ಲೂ ಇಂಜಿನಿಯರೂ, ಡಾಕ್ಟರೂ ಓದಿದವರಿಗೇ ಕೊಡಬೇಕು ಅಂತ ಪೈಪೋಟಿ ಮಾಡಿಕೊಂಡು ನಾನು ತಾನು ಅಂತ ಮುಗಿಬೀಳ್ತಾರಲ್ಲ ಹುಡುಗಿ ತಂದೆ ತಾಯಿಗಳು? ವರನ ತಂದೆ ತಾಯಿಗಳು ವರದಕ್ಷಿಣೆ ಕೇಳದೆ ಏನು ಮಾಡ್ತಾರೆ!"

"ಅದಿರಲಿ, ಈ ಹಳ್ಳೀ ವರಗಳಿಗೆ ವರದಕ್ಷಿಣೆ ಕೊಡೋರು ಯಾರೂ ಇಲ್ಲವಲ್ಲ."

"ಹೌದು. ಏನು ಓದಿದಾರೇಂತ ಕೊಡಬೇಕು? ತೋಟಕ್ಕೆ ಗೊಬ್ಬರ ಹೊರ್ತಾರೆ ಅಂತ ಕೊಡಬೇಕೋ, ಏಣಿ ಮೇಲೆ ನಿಂತು ವೀಳೆಯದೆಲೆ ಕುಯ್ತಾರೆ ಅಂತ ಕೊಡಬೇಕೋ, ತೋಟದಲ್ಲಿ ಗೊದಮಟ್ಟೆ ಹಾಗೆ ಅಗೀತಾರೆ ಅಂತ ಕೊಡಬೇಕೋ ! ಇಲ್ಲ ಒಂದು ಪಾವಕ್ಕಿ ಅನ್ನ ಹೊಡೀತಾರೇ ಅಂತ ಕೊಡಬೇಕೋ !"

ಎಲ್ಲರೂ ಗೊಳ್ಳೆಂದು ನಗುತ್ತಾರೆ.

"ನೀವು ಹಳ್ಳೀಲಿ ಕೂತ್ಕೊಂಡು ಮುಖಕ್ಕೆ ಪೌಡರ್ ಬಳುಕೊಳ್ಳುವುದಕ್ಕಾಗೋಲ್ಲವಲ್ಲ , ಅದಕ್ಕೇ ನಿಮ್ಮ ಗಂಡಂದಿರಿಗೆ ವರದಕ್ಷಿಣೆ ಕೊಡಲಿಲ್ಲ."

ಪುನಃ ನಗು.

□ □ □

"ಆ ಸೋಮನಹಳ್ಳಿ ನಾಗತ್ತೆ ಮಗಳ ಮದುವೇಲಿ ಗಂಡಿನೋರು ಅದೆಂಥ ಅವಮಾನ ಮಾಡಿದರು !"

"ಅದು ಯಾರಿಗೆ ಗೊತ್ತಿಲ್ಲ , ಬಿಡೆ ಸರಸು. ಪಾಪ ಆ ಹುಡುಗಿ ಅವತ್ತೆಲ್ಲ ಅತ್ತಿದ್ದೇ ಅತ್ತಿದ್ದು. ನಾನೂ ಆ ಮದುವೇಗೆ ಹೋಗಿದ್ದೆನಲ್ಲ."

"ಗಂಡಿನ ತಾಯಿ ನಾನು ಅನ್ನೋ ಜಂಬದಿಂದ, ಮದುವೆಗೆ ಮೊದಲೇ ಹಾಗೆ ನಡಕೋಬಾರದಮ್ಮ. ಯಾರೋ ಆಗದೋರು 'ಆ ಹುಡುಗಿಯ ಮೈಯಲ್ಲಿ ಬಿಳಿ ಮಚ್ಚೆ ಇದೆ' ಅಂತ ಹಬ್ಬಿಸಿಬಿಟ್ಟರಲ್ಲ. ಗಂಡಿನ ತಾಯಿ 'ಈ ಮದುವೆ ಬೇಡವೇ ಬೇಡ. ಇದಕ್ಕಿಂತ ಒಳ್ಳೆ ಹುಡುಗೀನ ನನ್ನ ಮಗನಿಗೆ ತರ್ತೀನಿ' ಅಂತ ಕೂತುಬಿಡೋದೆ! ಆಗ ದೊಡ್ಡೋರು ನಾಲ್ಕು ಜನ ಬಂದು ಸಮಜಾಯಿಷಿ ಮಾಡಿ 'ಅದ್ಯಾರು ಹೇಳ್ದೋರು, ಬನ್ನಿ, ಹುಡುಗೀನ ಪರೀಕ್ಷೆ ಮಾಡಿ' ಅಂತ ಪಟ್ಟು ಹಿಡಿದರು. ಹುಡುಗೀನ ರೂಮಿಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿ, ಚಾಡಿ ಚುಚ್ಚಿದೋರ ಬಾಯಿ ಮುಚ್ಚೋ ಹಾಗೆ ಮಾಡಿದರು."

"ಇದೆಲ್ಲಾ ಆ ಘಾಟಿ ನಂಜಮ್ಮತ್ತೆ ಕೌಶಲ್ಯ. ತನ್ನ ತಮ್ಮನ ಮಗಳನ್ನು ಕೊಡ್ತೀನಿ ಅಂತ ಇನ್ನಿಲ್ಲದ ಹಾಗೆ ಪ್ರಯತ್ನಪಟ್ಟಳು.

ಅವರು ಒಪ್ಪಲಿಲ್ಲವಲ್ಲ. ಈ ಮದುವೆ ಹ್ಯಾಗಾಗುತ್ತೆ ನೋಡ್ತೀನಿ ಅಂತ ಈ ತರಹ ಮಾಡಿದಳಂತೆ. ಆದರೆ ಅವಳದು ಏನೂ ನಡೀಲಿಲ್ಲ. ಇರ್‍ತಾರೆ ಇಂಥವರು ಒಬ್ಬೊಬ್ಬರು ನಮ್ಮ ಸಮಾಜದಲ್ಲಿ. ಆ ಮದುವೇನೂ ಆಯ್ತು. ಈಗ ಆ ಗಂಡ-ಹೆಂಡತೀರು ಸುಖವಾಗಿಲ್ವೆ"?

"ಹೀಗೇನೇ ನಮ್ಮ ಬಸವಾಪಟ್ಟಣದ ರಾಜಮ್ಮನ ಮಗಳ ಮದುವೇನಲ್ಲಿ ಅವರಿಗೆ ಡಬ್ಬಲ್ ಖರ್ಚು ಮಾಡಿಸಿಬಿಟ್ಟರಲ್ಲಮ್ಮ. ಮದುವೆಗೆ ನೆಂಟರೆಲ್ಲ ಬಂದಿದಾರೆ. ಬೆಳಗ್ಗೆ ಗೋಧಿನ ಕಲ್ಲೂ ಆಯಿತು. ಅಷ್ಟರಲ್ಲಿ ಹುಡುಗನ ತಂದೆಯ ಸಂಬಂಧಿಕರು ಹನ್ನೊಂದು ದಿವಸದ ದಾಯಾದಿಗಳು ಹೋದರು ಅಂತ ಬರಗೂರಿನಿಂದ ಸುದ್ದಿ ತಂದು ಹರಡಿಬಿಡೋದೆ? ಅವರಿಗೆ ಕಾಯಿಲೆ ಅಂತ ಗೊತ್ತಿದ್ರೂ ಇಷ್ಟು ಬೇಗ ಹೋಗ್ತಾರೆ ಅಂತ ಗೊತ್ತಿರಲಿಲ್ಲ. ಬರಗೂರಿನೋರು, 'ಯಾರೂ ಸಮಾಚಾರ ಹೇಳೋಕ್ಕೆ ಹೋಗಬೇಡಿ. ಧಾರೆ ಆಗಿಹೋಗಲಿ, ಆಮೇಲೆ ಮಾರನೆಯ ದಿವಸ ತಿಳಿಸಿದರೆ ಆಯಿತು' ಅಂತ ಕಟ್ಟು ಮಾಡಿದ್ದರು. ಆದರೂ ಕಿಡಿಗೇಡಿಗಳು, ಆಗದೆ ಇದ್ದೋರು ಈ ಕೆಲಸ ಮಾಡಿದರು."

"ಆಗ ಮದುವೆ ಏನಾಯಿತು ?"

"ಆಗೋದೇನು, ಸೂತಕದಲ್ಲಿ ಧಾರೆ ಎರೀತಾರೆಯೆ ? ನಂಟರೆಲ್ಲ ಹೊರಟುಹೋದರು. ಹದಿನೈದು ದಿವಸದ ಮೇಲೆ ಇನ್ನೊಂದು ಲಗ್ನ ಇಟ್ಟುಕೊಂಡು ಮದುವೆ ನೆರವೇರಿಸಿದರು ಅನ್ನಿ."

"ತುಂಬಾ ನಷ್ಟ ಆಗಲಿಲ್ಲವಾ?"

"ಆಗಲಿಲ್ಲವೇ! ನಾಮಾನಷ್ಟ. ಇನ್ನೊಂದು ಮದುವೆ ಮಾಡಬಹುದಾಗಿತ್ತು ಆ ಖರ್ಚಿನಲ್ಲಿ."

□ □ □

"ಹಾಸನದ ವಿಶಾಲಿ ಮಗಳಿಗೆ ದೆವ್ವ ಹಿಡಿದಿತ್ತಂತಲ್ಲ. ಅದು ಹೋಯಿತೇನೇ ಸುಬ್ಬಿ?"

"ಆ ದೆವ್ವಾನ ಓಡಿಸೋದಕ್ಕೆ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಪೂಜೆ ಪುನಸ್ಕಾರ, ಸೂರ್ಯನಮಸ್ಕಾರ ಎಲ್ಲಾ ಮಾಡಿಸಿದರೂ ಪ್ರಯೋಜನವಾಗಲಿಲ್ಲ. 'ನೀನು ಯಾರು? ಯಾಕೆ ಬಂದಿದೀಯಾ?' ಎಂದು ಕೇಳಿದರೆ ಬಾಯಿ ಬಿಡ್ತಾನೇ ಇರಲಿಲ್ಲ."

"ರಾಮನಾಥಪುರಕ್ಕೆ ಕರಕೊಂಡು ಹೋಗಲಿಲ್ವೆ ?"

"ಗೋವಿನಡೀಲಿ ನುಸಿಯೋಕೆ ಹೋದಾಗ ಬಿಟ್ಟುಹೋಗೋದು, ರಾಮನಾಥಪುರದಿಂದ ಕಾಲ್ತೆಗೆದ ತಕ್ಷಣ ಪುನಃ ಅಮರಿಕೊಳ್ಳೋದು."

"ಆಮೇಲೆ ಮೈಸೂರಿಗೆ ಹೋಗಿದ್ದರಂತಲ್ಲ ?"

"ಹೌದು, ಮೈಸೂರಿನಲ್ಲಿ ಒಬ್ಬ ಫಕೀರ ದೆವ್ವ ಬಿಡಿಸುತ್ತಾನೆ ಅಂತ ಗೊತ್ತಾಯ್ತು. ಸರಿ, ಮೈಸೂರಿಗೆ ಕರಕೊಂಡು ಹೋದರು. ಮಂಡಿಮೊಹಲ್ಲದಲ್ಲಿ ಆ ಫಕೀರ ಇರೋದಂತೆ. ಮೊದಲನೆ ದಿವಸ ಹುಡುಗೀನ ಮಣೆ ಮೇಲೆ ಕೂರಿಸಿ, ಫಕೀರ ಮಂತ್ರ ಹೇಳಿ ಧೂಪ ಹಾಕಿದನಂತೆ. ದೆವ್ವ ತಲೆ ಅಲ್ಲಾಡಿಸೋಕೆ ಶುರು ಮಾಡ್ತಂತೆ. ಅದೇನೋ ಮಂತ್ರ ಪಿಟಿಪಿಟಿ ಅನ್ತಾ, ನವಿಲುಗರಿ ಕಂತೇಲಿ ಹುಡುಗಿ ತಲೆಗೆ ಹೊಡೆದನಂತೆ. ಅವಳು ಕಿರಿಚಿಕೊಂಡಳಂತೆ, ಆದರೆ ಮಾತಾಡಲಿಲ್ಲ.'ಹುಡುಗೀಗೆ ತುಂಬ ಸುಸ್ತಾಗಿದೆ, ನಾಳೆ ಕರೆದುಕೊಂಡು ಬನ್ನಿ' ಅಂದನಂತೆ. ಮಾರನೇದಿವಸಾನೂ ಧೂಪಹಾಕಿ, ಮಂತ್ರ ಹೇಳ್ತಾ ನವಿಲುಗರೀಲಿ ಹೊಡೆದನಂತೆ. 'ನೀನು ಯಾರು, ಯಾಕೆ ಬಂದಿದೀಯಾ ಹೇಳು?' ಅಂತ ಗದರಿಸಿ ಕೇಳಿದನಂತೆ. ಆಗ ಹುಡುಗಿ ಬಾಯಿ ಬಿಟ್ಟಳಂತೆ, 'ನಾನು... ರಾಮಾವಧಾನಿ ಅತ್ತೆ' ಅಂತ. 'ಯಾಕೆ ಬಂದಿದ್ದೀಯಾ?' ಅಂತ ಕೇಳುತ್ತಲೂ 'ನನ್ನ ಹತ್ತಿರ ಇನ್ನೂರು ರೂಪಾಯಿನ ಸಾಲ ತಗೊಂಡ ಈ ವೆಂಕಟರಮಣ ನನಗೆ ಕೊಡಲಿಲ್ಲ. ಆಮೇಲೆ ನನಗೂ ಬೇಜಾರಾಗಿ ಧರ್ಮಸ್ಥಳಕ್ಕೆ ಕೊಟ್ಟುಬಿಡು ಅಂದೆ. ಅದೂ ಮಾಡಲಿಲ್ಲ. ನಾನು ಆ ದೇವರ ಸಾಲಕ್ಕೇ ಪ್ರೇತವಾದೆ. ಅದಕ್ಕೇ ಬಂದೆ, ದೇವರ ಹಣಾನ ಕೊಡಿಸಬೇಕು ಅಂತ' ಅಂತ ಆ ದೆವ್ವ ಹೇಳಿತಂತೆ.

"ಇದುವರೆಗೆ ಬಾಯಿಮುಚ್ಚಿಕೊಂಡು ಯಾಕೆ ಕಾಟ ಕೊಟ್ಟೆ?' ಅಂತ ಫಕೀರ ಕೇಳಿದ್ದಕ್ಕೆ 'ಕಾಟಕೊಡದೆ ಇದ್ರೆ ಬಿಸಿಮುಟ್ಟೋಲ್ಲ, ಇವರು ಹೆದರೋಲ್ಲ ಅಂತ ಹಾಗೆ ಮಾಡಿದೆ. ದುಡ್ಡು ದೇವರಿಗೆ ಮುಟ್ಟೋವರೀಗೂ ಇವರನ್ನು ಕಾಡ್ತೀನಿ, ಬಿಡೋಲ್ಲ' ಅಂತ ದೆವ್ವ ಕಟಕಟ ಅಂತ ಹಲ್ಲುಕಚ್ಚಿತಂತೆ. ಆಗ ಫಕೀರ, 'ನಿನ್ನ ದುಡ್ಡು ದೇವರಿಗೆ ತಲುಪೋ ಹಾಗೆ ಮಾಡಿದರೆ ಹೋಗ್ತೀಯೋ', ಅಂತ ಕೇಳಿದ್ದಕ್ಕೆ, 'ತಾವೇ ಖುದ್ದಾಗಿ ಹುಡುಗೀನೂ ಕರಕೊಂಡು ಹೋಗಿ ಕಾಣಿಕೆ ಒಪ್ಪಿಸಿ ಸೇವೆ ಮಾಡಿಕೊಂಡು ಬಂದರೆ ಹೋಗ್ತೀನಿ' ಅಂತ ದೆವ್ವ ಹೇಳಿತಂತೆ.

"ಆಗ ಫಕೀರ, ವೆಂಕಟರಮಣನ್ನ ಗದರಿಸಿ, 'ಇಂಥ ಕೆಲಸಾನಾ ಮಾಡೋದು ? ಮೊದಲು ತಪ್ಪು ಕಾಣಿಕೆ ಕಟ್ಟಿಡಿ' ಅಂದನಂತೆ. ಇದಕ್ಕೆ ವಿಶಾಲಿ ತಂದೆ, 'ನಾನು ಹೋಗಬೇಕು ಅಂತಲೇ ಇದ್ದೆ. ಹೋಗಬೇಕು ಅಂತ ಹೊರಟಾಗ ಆಶೌಚ ಬಂದುಬಿಟ್ಟಿತು. ಆಮೇಲೆ ದುಡ್ಡುಕೂಡಿಬರಲಿಲ್ಲ. ಈ ಸಲ ಹೋಗಿ ತೀರಿಸಿಬಿಡ್ತೀನಿ'

ಎಂದರಂತೆ. 'ಹಾಗೇ ಆಗಲಿ' ಅಂತ ಹೇಳಿದ ಫಕೀರ, ದೆವ್ವಕ್ಕೆ, 'ನೀನು ಹೇಳಿದಂತೆ ನಡೆದುಕೊಳ್ಳದೆ ಇದ್ದರೆ ನಿನ್ನ ಭೂಗತ ಮಾಡಿಬಿಡ್ತೀನಿ, ಹುಷಾರ್' ಎಂದು ಹೆದರಿಸಿದನಂತೆ. 'ಇಲ್ಲ, ನಾನು ಮಾತಿಗೆ ತಪ್ಪೋಲ್ಲ !' ಅಂತ ಮಾತುಕೊಟ್ಟಿತಂತೆ ದೆವ್ವ. ಆಮೇಲೆ ಅವರು ಧರ್ಮಸ್ಥಳಕ್ಕೆ ಹೋಗಿ ಕಾಣಿಕೆ ಒಪ್ಪಿಸಿ ಬಂದ ಮೇಲೆ ಈಗ ಏನೂ ಇಲ್ಲ. ವಿಶಾಲಿ ಮಗಳಿಗೆ ಗಂಡು ಹುಡುಕುತ್ತಾ ಇದ್ದಾರೆ."

"ಅಂತೂ ದೆವ್ವಗಳೂ ಕೊಟ್ಟಮಾತಿಗೆ ತಪ್ಪೋದಿಲ್ಲ ಅಂತಾಯಿತು. ಈ ನರಮನುಷ್ಯರ ಹಾಗಲ್ಲ. ಬರ್ತೀನಮ್ಮ ಹೊತ್ತಾಯ್ತು" ಎಂದು ಹೇಳಿ ಬಟ್ಟೆ ಪಾತ್ರೆಗಳ ಕುಕ್ಕೆಯನ್ನು ತಲೆಯ ಮೇಲಕ್ಕೆ ಹೊರಿಸಿಕೊಂಡು, ಕಂಕುಳಲ್ಲಿ ನೀರಿನ ಕೊಡವನ್ನು ಇರುಕಿಕೊಂಡು, ಮನೆಯ ಕಡೆಗೆ ಹೆಜ್ಜೆ ಇಟ್ಟಳು ಸುಂದರಮ್ಮ.

□ □ □

ಹೀಗೆ ತಮ್ಮ ಕೆಲಸಗಳು ಆಗುವವರೆಗೂ ಮಾತು ನಡೆಯುತ್ತಿರುತ್ತದೆ. ಕೆಲಸ ಮುಗಿದವರು ಮನೆಗೆ ಹೊರಟರೆ ಹೊಸದಾಗಿ ಬಂದವರು ಮಾತಿಗೆ ಸೇರಿಕೊಳ್ಳುತ್ತಾರೆ. ಬೆಳಗಿನ ಹೊತ್ತಿನ ಸ್ನಾನಘಟ್ಟದ ಮೆಟ್ಟಿಲುಗಳ ಮೇಲೆ ಇಂಥದೊಂದು ಸುಂದರ ಲೋಕ ಸೃಷ್ಟಿಯಾಗಿರುತ್ತದೆ. ಆ ದಿನದ ಕಲಾಪ ಮುಗಿಯಿತೆಂದರೆ ಸ್ನಾನಘಟ್ಟದ ಮೆಟ್ಟಿಲುಗಳು ಮಾರನೆಯ ಬೆಳಗಿನವರೆಗೂ ಈ ಮುಗ್ಧ ಸ್ತ್ರೀಯರ ಸಂವಾದವನ್ನು ಕೇಳಲು ಕಾದಿರುತ್ತವೆ.

೮. ಅಡಕೆ ರೇಖೆ

ಸಂಕೇತಿಗಳು ಸಾಮಾನ್ಯವಾಗಿ ಅಡಕೆ ತೋಟದ ವ್ಯವಸಾಯದಲ್ಲಿ ನಿರತರು. ತಮ್ಮ ಜೀವಿಕೆಗಾಗಿ ಅಡಕೆ ವ್ಯವಸಾಯವನ್ನೇ ಅವಲಂಬಿಸಿದರೂ, ತೋಟದಲ್ಲಿ ಹಿಂದುಗಡೆ ಅಥವಾ ಮುಂದುಗಡೆ ಮಕ್ಕಿಯಲ್ಲಿ ತೆಂಗಿನ ಮರಗಳನ್ನೂ ಬೆಳೆಸುತ್ತಿದ್ದರು. ಅಡಕೆ ಮರಗಳ ನಡುನಡುವೆ ಬಾಳೆಗಿಡಗಳನ್ನೂ ಹಾಕಿರುತ್ತಿದ್ದರು. ಅಡಕೆ ಮರಕ್ಕೆ ವೀಳೆಯದೆಲೆ ಹಂಬನ್ನೂ ಬೆಳೆಯಿಸಿ ವೀಳೆಯದೆಲೆಯ ವ್ಯವಸಾಯವನ್ನೂ ಮಾಡುತ್ತಿದ್ದರು. ವೀಳೆಯದೆಲೆ, ಬಾಳೆಗಳಿಂದ ತಮ್ಮ ಚಿಲ್ಲರೆ ಖರ್ಚುಗಳನ್ನು ನಿಭಾಯಿಸಿಕೊಳ್ಳುತ್ತಿದ್ದರು. ತೆಂಗಿನಕಾಯಿ ಮನೆಯ ಉಪಯೋಗಕ್ಕೆ ಆಗಿ ಮಿಕ್ಕಿದ್ದರೆ ಅವುಗಳನ್ನು ಮಾರುತ್ತಿದ್ದರು. ಅಡಕೆಯ ಫಸಲು ವರ್ಷಕ್ಕೊಂದು ಸಲ ಬರುವ ಫಸಲು. ಒಂದು ಮೊತ್ತವಾಗಿ ಅಡಕೆ ಫಸಲಿನಿಂದ ಬರುತ್ತಿದ್ದ ಹಣವನ್ನು ಸಾಲತೀರಿಸುವುದಕ್ಕಾಗಲಿ, ಇನ್ನಾವುದಾದರೂ ಹೆಚ್ಚಿನ ಖರ್ಚಿನ ಬಾಬ್ತುಗಳಿಗಾಗಲಿ, ಉಪಯೋಗಿಸಿಕೊಳ್ಳುತ್ತಿದ್ದರು. ಇಂದಿಗೂ ಹಳ್ಳಿಗಳಲ್ಲಿ ಬಾಳುತ್ತಿರುವ ಅವರು ಇದೇ ಜೀವನ ರೀತಿಯನ್ನು ಅನುಸರಿಸುತ್ತಿದ್ದಾರೆ.

ಸಂಕೇತಿಗಳು ಅಡಕೆ ವ್ಯವಸಾಯವನ್ನೇ ಮುಖ್ಯ ಕಸುಬಾಗಿ ಇಟ್ಟುಕೊಳ್ಳುವುದಕ್ಕೆ ಕಾರಣಗಳಿಲ್ಲದೆ ಇರಲಿಲ್ಲ. ಅವರ ಪೂರ್ವಜರು ಅಡಕೆ ಬೇಸಾಯಗಾರರೇ ಆಗಿದ್ದರು. ಆದ್ದರಿಂದ ಅವರು ತಮ್ಮ ಮೂಲ ನೆಲೆಯಿಂದ ಮೈಸೂರು ದೇಶಕ್ಕೆ ವಲಸೆ ಬಂದು, ಅಡಕೆ ತೋಟದ ವ್ಯವಸಾಯವನ್ನೇ ಅವಲಂಬಿಸಿದರು. ಆ ವ್ಯವಸಾಯದಲ್ಲಿ ನುರಿತವರಾಗಿದ್ದುದರಿಂದ ಅವರು ಬೇರೆ ವೃತ್ತಿಯನ್ನು ಆರಿಸಿಕೊಳ್ಳಲಿಲ್ಲ. ಮೈಸೂರು ದೇಶಕ್ಕೆ ವಲಸೆ ಬಂದವರು ಅಡಕೆ ತೋಟಗಳನ್ನು ಬೆಳೆಸಲು ತಕ್ಕ ಜಮೀನನ್ನು ಹುಡುಕಿ ಅಲ್ಲಿ ಅಡಕೆ ಸಸಿಗಳನ್ನು ನೆಟ್ಟು, ತೋಟಗಳನ್ನು ಏಳಿಸಿ, ಸಮೀಪದಲ್ಲೇ ನೆಲಸಬೇಕಾದರೆ ಅದು ಅವರ ಆನುವಂಶಿಕ ವೃತ್ತಿಯಾಗಿದ್ದಿರಲೇಬೇಕು.

ಕಾಲ ಕಳೆದಂತೆ ಸಂಕೇತಿಗಳು ಹೊಲಗದ್ದೆಗಳನ್ನೂ ಮಾಡಿಕೊಂಡರು. ಮನೆಗೆ ಬೇಕಾಗುವಷ್ಟು ಬತ್ತ, ರಾಗಿ, ಕಾಳುಗಳನ್ನು ಬೆಳೆದುಕೊಳ್ಳುವುದೇ ಇವರ ಉದ್ದೇಶವಾಗಿತ್ತು. ಗದ್ದೆ ಹೊಲಗಳ ವ್ಯವಸಾಯಕ್ಕೆ ಎತ್ತು ಮತ್ತು ನೇಗಿಲುಗಳು ಬೇಕು, ಗೋಡು-ಗೊಬ್ಬರ ಹೇರಲು ಗಾಡಿ ಬೇಕು. ಆದರೆ ಸಂಕೇತಿಗಳು ಪಶುಪಾಲನೆಯನ್ನು ಇಟ್ಟುಕೊಂಡಿದ್ದರೇ ಹೊರತು ಅವರಲ್ಲಿ ಎತ್ತು, ನೇಗಿಲು, ಗಾಡಿಗಳನ್ನು ಇಟ್ಟುಕೊಳ್ಳುವ ಸಂಪ್ರದಾಯವಿರಲಿಲ್ಲ. ಉಳಲು, ಗೊಬ್ಬರ-ಗೋಡು ಹೇರಲು, ಕೂಲಿಕೊಟ್ಟು ರೈತರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಪ್ರಾಣಿಗಳಿಗೆ ಹಿಂಸೆಯಾಗುವ ಕಾರ್ಯವು ನಿಷೇಧಿತವಾಗಿತ್ತೆನ್ನಬಹುದು. ತೋಟದಲ್ಲಿಯಾದರೋ ಕೈಯಿಂದ ಅಗೆಯುವುದು, ಕಳೆ ಕೀಳುವುದು, ವೀಳೆಯದೆಲೆ ಹಂಬನ್ನು ನೆಡುವುದು, ಅವುಗಳ ಪೋಷಣೆ, ಅಡಕೆ ಮರಕ್ಕೆ ಹಂಬನ್ನು ಹಬ್ಬಿಸುವುದು, ಬುಡದಲ್ಲಿ ಎಲೆಗಳು ಬಿದ್ದು ಬರಿದಾದಾಗ, ಎರಡು ಮೂರು ವರ್ಷಕ್ಕೊಮ್ಮೆ ಹಂಬುಗಳನ್ನು ತೆಕ್ಕೆ ಬಿಟ್ಟು ಹಂಬಿನ ಬುಡವನ್ನು ಪಾತಿಯಲ್ಲಿ ಸಿಂಬಿಯಂತೆ ಮಾಡಿ ನೆಟ್ಟು, ಗೊಬ್ಬರ ಹಾಕಿ ಹೊಸ ಬೇರು ಬಿಡುವಂತೆ ಮಾಡುವುದು, ಬಾವಿಯಿಂದ ಅವುಗಳಿಗೆ ನೀರೆರೆಯುವುದು ಇವೇ ಮೊದಲಾದ ಸ್ವಂತದೇಹ ಶ್ರಮದಿಂದ ಮಾಡುವ ಕೆಲಸಗಳನ್ನು ಇಟ್ಟುಕೊಂಡು,

ಅಡಕೆ ತೋಟದ ವ್ಯವಸಾಯುವನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ತೋಟಕ್ಕೆ ಬೇಕಾದ ಗೊಬ್ಬರ-ಗೋಡುಗಳನ್ನು ಮಂಕರಿಯಲ್ಲಿ ತುಂಬಿ ತಲೆಯ ಮೇಲೆ ಹೊತ್ತುಕೊಂಡು ಹೋಗಿ ಗಿಡಗಳಿಗೆ ಹಾಕುತ್ತಿದ್ದರು. ಕಾಲಕ್ರಮೇಣ ಸ್ವಂತ ಎತ್ತು ಗಾಡಿಗಳನ್ನು ಕೆಲವರು ಇಟ್ಟುಕೊಳ್ಳಲಾರಂಭಿಸಿದರು.

ಅಡಕೆ ಫಸಲು ವರ್ಷಕ್ಕೊಂದು ಸಲ ಬರುತ್ತದೆ. ಆಗಿನ ಕಾಲದಲ್ಲಿ ಒಂದೇ ಬಾರಿ ಅಡಕೆ ಕುಯಿಲು ಮಾಡುತ್ತಿದ್ದುದು ವಾಡಿಕೆಯಾಗಿತ್ತು. ಕೆಲವು ಬೇರೆ ಕಡೆಗಳಲ್ಲಿ ಇದ್ದಂತೆ ಹದವಾಗಿ ಬಲಿತ ಕಾಯಿಗಳನ್ನೇ ನೋಡಿ ನೋಡಿ ವರ್ಷದಲ್ಲಿ ಎರಡು ಮೂರು ಸಲ ಕೊಯ್ಲುಮಾಡುವ ಪರಿಪಾಠವನ್ನು ಸಂಕೇತಿಗಳು ಇಟ್ಟುಕೊಂಡಿರಲಿಲ್ಲ. ಬಲಿತ ಕಾಯಿಗಳು, ಸ್ವಲ್ಪ ಎಳೆಕಾಯಿಗಳು, ಹಣ್ಣಾದ ಅಡಕೆ, ಗೋಟುಗಳು ಎಲ್ಲವೂ ಸೇರಿಕೊಂಡಿರುತ್ತಿದ್ದುವು-ಸಂಕೇತಿಗಳು ಮಾಡುತ್ತಿದ್ದ ಅಡಕೆ ಕೊಯ್ಲಿನಲ್ಲಿ. ಗೋಟುಗಳನ್ನು ಬೇರೆಯಾಗಿ ವಿಂಗಡಿಸಿ ಅವುಗಳನ್ನು ಸುಲಿಸುತ್ತಿದ್ದರು. ಉಳಿದ ಹಸುರು ಕಾಯಿಗಳನ್ನು ಸುಲಿಸಿ ಅವುಗಳಲ್ಲಿ ಹದವಾಗಿ ಎಳಸಾಗಿರುವವನ್ನು ಕಳಿ ಅಡಕೆ ಮಾಡಲು ಉಪಯೋಗಿಸುತ್ತಿದ್ದರು. ಕಳಿ ಅಡಕೆಯನ್ನು ಎರಡು ಭಾಗವಾಗಿ ಕತ್ತರಿಸುತ್ತಿದ್ದರು. ಇದೇ 'ಬಟ್ಟಲು ಅಡಕೆ' ಎಂದು ಪ್ರಸಿದ್ಧವಾಗಿರುವುದು. ಉಳಿದ ಬಲಿತ ಅಡಕೆಗಳನ್ನು ನಾಲ್ಕು ಭಾಗವಾಗಿ ಕತ್ತರಿಸುತ್ತಿದ್ದರು. ಇದಕ್ಕೆ 'ಚಾತುರ' ಎಂದು ಹೆಸರು. ಅಡಕೆಯನ್ನು ಸಣ್ಣ ಚೂರು ಮಾಡುವ ಪರಿಪಾಠ ಇವರಲ್ಲಿರಲಿಲ್ಲ. ಗೋಟನ್ನು ಮಾತ್ರ ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸುತ್ತಿದ್ದರು. ಹೊಗೆಸೊಪ್ಪು ಹಾಕುವವರಿಗೆ ಗೋಟೇ ಬೇಕು. ಏಕೆಂದರೆ ಗೋಟು ಬಾಯಲ್ಲಿ ಬೇಗ ಕರಗುವುದಿಲ್ಲ. ಹೆಚ್ಚು ಹೊತ್ತು ಬಾಯಲ್ಲಿ ಇಟ್ಟುಕೊಂಡು ಜಗಿಯುತ್ತಿರಬಹುದು. ತಾಂಬೂಲ ಮೆಲ್ಲುವ ರಸಿಕರಿಗೆ ಬಟ್ಟಲಡಕೆ ಅಚ್ಚುಮೆಚ್ಚು. ಸಾಮಾನ್ಯರಿಗೆ ಚಾತುರ. ಅಡಕೆ ಕುಯಿಲು ಮುಗಿದ ಮೇಲೆ, ತೋಟದಿಂದ ಅಡಕೆ ಕಾಯಿಗಳನ್ನು ಸಾಗಿಸಿಕೊಂಡು ಬಂದು, ಮನೆ ಮುಂದಿನ ಮೈದಾನದಲ್ಲಿ ರಾಶಿಹಾಕುತ್ತಿದ್ದರು. ಅಡಕೆ ರೇಖೆಗೆಂದೇ ಸಂಕೇತಿಗಳು ಮಾಳವನ್ನು ಬಿಟ್ಟುಕೊಂಡಿರುತ್ತಿದ್ದರು. ಮುಂದಿನ ಕೆಲಸ ಅಡಕೆಯನ್ನು ಸುಲಿಯುವುದು.

ಅಡಕೆ ಸುಲಿಯುವ ಕೆಲಸ ಹೆಂಗಸರ ಪಾಲಿನದು. ಅವರು ತಮ್ಮ ತಮ್ಮ ಮೆಟ್ಟುಕತ್ತಿಗಳನ್ನು ಮಸೆದು ಹರಿತಮಾಡಿ ಅಡಕೆ ರೇಖೆಯ ಕಾಲಕ್ಕೆ ಸಿದ್ಧವಾಗಿಟ್ಟುಕೊಂಡಿರುತ್ತಿದ್ದರು. ಅಡಕೆಯನ್ನು ಸುಲಿದು ಕತ್ತರಿಸಿದರೆ ಆಗಿನ ಕಾಲದಲ್ಲಿ ಒಂದು ಕೊಳಗಕ್ಕೆ ನಾಲ್ಕು ಆಣೆ ಕೊಡುತ್ತಿದ್ದರು. ಆಗಿನ ನಾಲ್ಕು ಆಣೆ ಅಂದರೆ ಈಗಿನ ಹತ್ತು ರೂಪಾಯಿಗೂ ಹೆಚ್ಚುಬೆಲೆಯುಳ್ಳದ್ದು. ಹೆಂಗಸರಿಗೆ ನಾಲ್ಕು ಪುಡಿಗಾಸು ಮಾಡಿಕೊಳ್ಳಲು ಅಡಕೆ ಸುಲಿಯುವ, ಕತ್ತರಿಸುವ ಕೆಲಸ ಸಹಾಯ ಮಾಡುತ್ತಿತ್ತು. ಹಣಕ್ಕೆ ತುಂಬ ಬೆಲೆಯಿದ್ದ ಆ ಕಾಲದಲ್ಲಿ ಈ ಹಣ ತುಂಬ ಪ್ರಯೋಜನಕಾರಿಯಾಗಿದ್ದುದರಲ್ಲಿ ಸಂದೇಹವಿಲ್ಲ. ಅಡಕೆ ಸುಲಿಯುವ ಕಾಲದಲ್ಲಿ, ಹೆಂಗಸರು ಮನೆಯ ಕೆಲಸದ ಜತೆಗೆ ಅಡಕೆ ಸುಲಿಯುವ, ಕತ್ತರಿಸುವ ಕೆಲಸವನ್ನೂ ಹೇಗೆ ನಿಭಾಯಿಸಿಕೊಂಡು ಹೋಗುತ್ತಿದ್ದರೋ ಎಂದು ಆಶ್ಚರ್ಯವಾಗುತ್ತದೆ. ಮಕ್ಕಳು ಮರಿ ಇರುವ ಮನೆಯಾಗಿದ್ದು ಯಜಮಾನಿತಿಗೆ ಸಹಾಯಕರಾರೂ ಇಲ್ಲದೇ ಇದ್ದರಂತೂ ಆಕೆಯು ತುಂಬ ಶ್ರಮ ವಹಿಸಬೇಕಾಗುತ್ತಿತ್ತು. ಮಕ್ಕಳು ಸ್ವಲ್ಪ ಕೈಗೆಬಂದಿದ್ದರೆ ಸಣ್ಣ ಪುಟ್ಟ ಕೆಲಸಗಳನ್ನು ಅವರಿಗೆ ವಹಿಸಿ, ಪೂಸಿಮಾಡಿಯೋ, ಗದರಿಸಿಯೋ ಅವರ ಕೈಲಿ ಮಾಡಿಸಿಕೊಳ್ಳುವರು. ಚಿಕ್ಕ ಚಿಕ್ಕ ಮಕ್ಕಳಾದರೆ ಆಕೆಗೆ ಹೆಚ್ಚು ಕಷ್ಟವಾಗುತ್ತಿತ್ತು. ಮನೆಯಲ್ಲಿ ದನದ ಕೊಟ್ಟಿಗೆ ಶುದ್ಧ ಮಾಡಬೇಕು, ಹಾಲು ಕರೆಯಬೇಕು ಅಲ್ಲದೆ ನದಿಗೋ ಕೆರೆಗೋ ಹೋಗಿ ಬಟ್ಟೆಗಳನ್ನು ಒಗೆದು, ಪಾತ್ರೆಗಳನ್ನು ತೊಳೆದುಕೊಂಡು, ಸ್ನಾನ ಮಾಡಿಕೊಂಡು ಬರಬೇಕಾಗಿತ್ತು; ಮಕ್ಕಳನ್ನು ಸುಧಾರಿಸಬೇಕಾಗಿತ್ತು. ಇದರ ಮಧ್ಯೆ ಅಡುಗೆಯ ಕೆಲಸ ಇದ್ದೇ ಇದೆ. ಅಡಕೆ ರೇಖೆಯ ಕಾಲದಲ್ಲಿ ಅಡುಗೆಯನ್ನು ಬಹು ಹ್ರಸ್ವಮಾಡಿಕೊಳ್ಳದೆ ಬೇರೆ ದಾರಿ ಇರಲಿಲ್ಲ. ಅನ್ನದ ಜತೆಗೆ ಹುಣಿಸೆಗೊಜ್ಜೋ, ಚಟ್ನಿಯೋ ಆದರೆ ಆಯಿತು. ನಂಜಿಕೊಳ್ಳಲು, ಉಪ್ಪಿನಕಾಯಿ ಧಾರಾಳವಾಗಿರುತ್ತದೆ. ತುಪ್ಪ ಹಾಕಿಕೊಂಡು ಉಪ್ಪಿನಕಾಯಿರಸದಲ್ಲೋ, ಚಟ್ನಿ ಪುಡಿಯಲ್ಲೋ, ಅನ್ನ ಕಲಸಿಕೊಂಡು ಊಟಮಾಡಿದರೆ ಆಯಿತು. ಗಟ್ಟಿ ಮೊಸರಂತೂ ಉಂಟೇ ಉಂಟು. ಮನೆಯ ಕೆಲಸವನ್ನು ಮಾಡಿಕೊಂಡು, ಅಡಕೆ ಸುಲಿಯುವ ಕೆಲಸಕ್ಕೆ ವೇಳೆಯನ್ನು ಹೇಗೆ ಹೊಂದಿಸಿಕೊಳ್ಳುತ್ತಿದ್ದರು ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಅವರು ಪರಿಹಾರವನ್ನು ಕಂಡುಕೊಂಡಿದ್ದರು. ಬೆಳಗಿನ ಜಾವ ನಸುಕಿನಲ್ಲೇ ಎದ್ದು, ತಮ್ಮ ತಮ್ಮ ಮೆಟ್ಟುಕತ್ತಿಯನ್ನು ತೆಗೆದುಕೊಂಡು ಅಡಕೆಮಾಳಕ್ಕೆ ಹೋಗುತ್ತಿದ್ದರು. ಕೆಲವರು ಬೆಳಗಿನ ನಾಲ್ಕು ಐದು ಗಂಟೆಗೇ ಹೋಗುತ್ತಿದ್ದುದೂ ಉಂಟು. ಅಷ್ಟು ಹೊತ್ತಿನಲ್ಲಿ ಚಳಿಯಾಗುವುದು; ಮಂಜೂ ಬೀಳಬಹುದು. ಇದರಿಂದ ರಕ್ಷಣೆಗಾಗಿ ಹಳೆಯ ಸೀರೆಯ ತುಂಡನ್ನು, ಎರಡು ಪದರ ಮಡಿಸಿ ಕಿವಿಯನ್ನೂ ಸೇರಿಸಿ ತಲೆಗೆ ಕಟ್ಟಿಕೊಂಡುಬಿಡುವರು. ಹೊದ್ದುಕೊಳ್ಳಲು ಹಳೆಯ ಸೀರೆಯನ್ನು ಮಡಿಸಿ ಬೆನ್ನು ಮುಚ್ಚುವಂತೆ ಹೊದೆದುಕೊಂಡು, ಮುಂದುಗಡೆ ಕತ್ತಿನ ಕೆಳಕ್ಕೆ ಬರುವಂತೆ ಗಂಟು ಕಟ್ಟಿಕೊಂಡು ಕೈ ಆಡಿಸಲು ಸುಲಭವಾಗಿರುವಂತೆ ಮಾಡಿಕೊಂಡಿರುವರು. ಅಡಕೆ ರಾಶಿಯಿರುವ ಮಾಳಕ್ಕೆ ಬಂದು ಕತ್ತಿಯನ್ನು ಇಟ್ಟುಕೊಂಡು ಕುಳಿತುಕೊಳ್ಳುತ್ತಿದ್ದರು. ಅಡಕೆಯ ಮೇಲುಭಾಗವನ್ನು ಕತ್ತಿಗೆ ಕೊಟ್ಟು ಎಡಕ್ಕೆ ಸ್ವಲ್ಪ ಸೀಳಿ ಸಿಪ್ಪೆಯನ್ನು ಎಬ್ಬಿಸಿ ಸುಲಿದುಬಿಡುತ್ತಿದ್ದರು. ಬಲಗೈಯಲ್ಲಿ ಅಡಕೆಯನ್ನು ಹಿಡಿದುಕೊಳ್ಳುವರು. ಬೆರಳುಗಳಿಗೆ

ಏಟು ಬೀಳದಂತೆ ಹೆಬ್ಬೆರಳು ಮತ್ತು ತೋರುಬೆರಳುಗಳಿಗೆ ಬಟ್ಟೆಯನ್ನು ಸುತ್ತಿಕೊಳ್ಳುವರು. ಅಡಕೆಯನ್ನು ಬಲಗೈ ಬೆರಳುಗಳಲ್ಲಿ ಹಿಡಿದು, ಎಡಗೈ ಹಸ್ತಕ್ಕೆ ಚಾಚಿ, ಅಡಕೆ ಸಿಪ್ಪೆಯನ್ನು ಸೀಳುತ್ತಿದ್ದರು. ಹಸ್ತಕ್ಕೆ ಏಟು ಬೀಳದಂತೆ ಮಂದವಾಗಿ ಬಟ್ಟೆಯನ್ನು ಹೆಬ್ಬೆರಳು ಮತ್ತು ತೋರು ಬೆರಳಿನ ಮಧ್ಯದಿಂದ ಹಸ್ತದ ಒಳಭಾಗ ಮುಚ್ಚುವಂತೆ ಸುತ್ತಿ, ಅದು ಬಿಚ್ಚಿಕೊಳ್ಳದಂತೆ ಗಂಟು ಕಟ್ಟುವರು. ಅಡಕೆ ಸುಲಿಯುವ ಕಲೆ ಎಷ್ಟರ ಮಟ್ಟಿಗೆ ಕರಗತವಾಗಿತ್ತೆಂದರೆ ಪೂರ್ಣಬೆಳಕು ಇಲ್ಲದೆ ಹೋದರೂ ಕೈ ತನ್ನ ಪಾಡಿಗೆ ಅಡಕೆಯನ್ನು ಬೆರಳಿಗೆ ತೆಗೆದುಕೊಂಡು ಕತ್ತಿಯ ಬಾಯಿಗೆ ಚಾಚುತ್ತಿದ್ದಿತು. ಅಡಕೆ ಕಾಯಿಗಳನ್ನು ಸುಲಿದೂ ಸುಲಿದೂ ಎದುರಿಗಿನ ಬುಟ್ಟಿಗೆ ಹಾಕುವರು. ಬೆಳಗಿನ ಎಂಟು ಒಂಬತ್ತು ಗಂಟೆಯವರೆಗೂ ಹೀಗೆ ಅಡಕೆ ಸುಲಿಯುವ ಕಾರ್ಯ ನಡೆಯುವುದು. ಅನಂತರ ಸುಲಿದ ಅಡಕೆಯನ್ನು ಅಳತೆ ಮಾಡಿ ಲೆಕ್ಕಕೊಟ್ಟು ಮನೆಗೆ ಹೋಗುವರು. ಆಮೇಲೆ ಪಾತ್ರೆ ತೊಳೆಯುವ, ಬಟ್ಟೆ ಒಗೆದು ಸ್ನಾನಮಾಡಿ, ಮನೆಗೆ ಬಂದು ಅಡುಗೆ ಮಾಡುವ ಕೆಲಸದಲ್ಲಿ ತೊಡಗುವರು. ಮಧ್ಯಾಹ್ನದ ಊಟಮಾಡಿ ಮನೆಯ ಕೆಲಸವನ್ನೆಲ್ಲ ಮುಗಿಸಿ, ಅವಕಾಶವಾದರೆ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಬೇಯಿಸಿದ ಅಡಕೆಯನ್ನು ಕತ್ತರಿಸಲು ಹೋಗುವರು. ರಾತ್ರಿ ಏಳೆಂಟು ಗಂಟೆಯವರೆಗೆ ಸೀಮೆಎಣ್ಣೆ ಬುಡ್ಡಿಗಳ ಬೆಳಕಿನಲ್ಲಿ ಕೆಲಸ ಮುಗಿಸಿ, ಮನೆಗೆ ಬಂದು ಊಟ ಇತ್ಯಾದಿ ಮುಗಿಸಿ ಮಲಗುವರು. ಪುನಃ ಬೆಳಗಿನ ಜಾವ ಅಡಕೆಕಾಯಿ ಸುಲಿಯುವ ಕೆಲಸ ಶುರು. ಅಡಕೆ ಕತ್ತರಿಸುವ ಕೆಲಸವನ್ನು ಮಾಳದಲ್ಲಿ ಮಾಡುವುದರ ಬದಲು, ಮನೆಯ ಹಜಾರದಲ್ಲೋ, ಜಗುಲಿಯ ಮೇಲೋ ಕುಳಿತು ಮಾಡುವರು. ಸುಲಿದ ಉಂಡೆ ಅಡಕೆಯನ್ನು ಬೇಯಿಸಿದ ಮೇಲೆ ಅದನ್ನು ಕತ್ತರಿಸುವರು.

ಅಡಕೆಯನ್ನು ರೇಖೆ ಮಾಡುವ ಕೆಲಸವನ್ನು ಸಂಕೇತಿಗಳು ಚೆನ್ನಾಗಿ ಬಲ್ಲವರಾಗಿದ್ದರು. ಸಿಪ್ಪೆ ಸುಲಿದಾದ ಮೇಲೆ ಅಡಕೆಯನ್ನು ದೊಡ್ಡ ದೊಡ್ಡ ಹಂಡೆಗಳಲ್ಲಿ ನೀರು ಹಾಕಿ ಬೇಯಿಸುವರು. ಹದವಾಗಿ ಬೆಂದಮೇಲೆ, ಬೆಂದ ಅಡಕೆಯನ್ನು ಸೋರು ಹಾಕುವರು. ಅನಂತರ ಅಡಕೆಯನ್ನು ಕತ್ತರಿಸಲು ಕೊಡುವರು. ಕತ್ತರಿಸಿದ ಅಡಕೆಯನ್ನು ಮಾಳದಲ್ಲಿ ಈಚಲುಚಾಪೆಗಳ ಮೇಲೆ ಹರಡಿ, ಬಿಸಿಲಿನಲ್ಲಿ ಒಣಗಿಸುವರು. ರಾತ್ರಿ ಹೊತ್ತು ಅಡಕೆಯನ್ನು ಚಾಪೆಯ ಮಧ್ಯಕ್ಕೆ ಒಟ್ಟು ಮಾಡಿ ಈಚಲು ಚಾಪೆ ಹೊದಿಸುವರು. ಬೆಳಗ್ಗೆ ಪುನಃ ಚಾಪೆಗಳನ್ನು ಬಿಡಿಸಿ ಅಡಕೆಯನ್ನು ಹರವಿ ಒಣಗಲು ಬಿಡುವರು. ಹದವಾಗಿ ಮೂರು ನಾಲ್ಕು ದಿವಸಗಳು ಬಿಸಿಲಿನಲ್ಲಿ ಒಣಗಿದ ಮೇಲೆ ಅಡಕೆ ತೂರಿನಲ್ಲಿ ಅದ್ದಿ ತೆಗೆದು ಪುನಃ ಬಿಸಿಲಿನಲ್ಲಿ ಒಣಗಿಸುವರು. ಅಡಕೆಯನ್ನು ಬೇಯಿಸಿದ ನೀರು ಇರುತ್ತದಲ್ಲ ಅದಕ್ಕೆ 'ತೂರು' ಎಂದು ಹೆಸರು. ಅದು ಒಳ್ಳೆಯ ಕೆಂಪು ಬಣ್ಣಕ್ಕೆ ಇರುತ್ತದೆ. ತೂರಿನಲ್ಲಿ ಅದ್ದಿದ ಮೇಲೆ ಅಡಕೆಗೆ ಕೆಂಪು ಬಣ್ಣ ಬರುತ್ತದೆ. ಬೇರೆ ಬಣ್ಣವನ್ನು ಅಡಕೆಗೆ ಹಾಕುವ ಪದ್ಧತಿ ಸಂಕೇತಿಗಳಲ್ಲಿ ಇರಲಿಲ್ಲ. ಚೆನ್ನಾಗಿ ಒಣಪಡಿ ಆದಮೇಲೆ ಚೀಲಗಳಲ್ಲಿ ಕಟ್ಟಿಡುವರು. ಗಿರಾಕಿ ಬಂದಾಗ ಚೌಕಾಸಿ ಮಾಡಿ ಮಾರುವರು. ಅಡಕೆ ಮಾರುಕಟ್ಟೆಯಲ್ಲಿ ಏನು ಬೆಲೆ ಇದೆ ಎಂಬುದನ್ನು ಅವರು ತಿಳಿದುಕೊಳ್ಳದೆ ವ್ಯಾಪಾರಮಾಡಿದಲ್ಲಿ ಬೆಲೆಯಲ್ಲಿ ಮೋಸವಾಗುವ ಸಂದರ್ಭಗಳುಂಟಾಗುವುವು. ಕಷ್ಟಪಟ್ಟು ದುಡಿದವರಿಗೆ ಸ್ವಲ್ಪ ಹಣ ಕಡಮೆಯಾದರೂ ಬಹಳ ನಷ್ಟವಾದಂತೆ ಎನ್ನಿಸುವುದು ಅಸಹಜವೇನಲ್ಲ. ಆಗಿನ ಕಾಲದಲ್ಲಿ ಎಂದರೆ ಅರುವತ್ತು ವರ್ಷಗಳಷ್ಟಕ್ಕೂ ಹಿಂದೆ, ಪದಾರ್ಥಗಳಿಗೆ ಬಹಳ ಕಡಮೆ ಬೆಲೆ ಇದ್ದಿತು. ಒಂದು ಮಣ ಅಡಕೆಗೆ ಮೂರು - ಮೂರೂವರೆ ರೂಪಾಯಿಗಳ ದರ ಇದ್ದ ಕಾಲ ಅದು. ಕಷ್ಟಪಟ್ಟು ಕೆಲಸ ಮಾಡಿ, ದುಡಿದು, ಫಸಲನ್ನು ತೆಗೆದರೂ, ಬರುವ ಆದಾಯ ಕಡಮೆಯಾಗಿರುತ್ತಿತ್ತು.

ಹಣದ ಬೆಂಬಲವುಳ್ಳ ಕೆಲವರು ತೋಟದ ಮರಗಳಲ್ಲಿಯ ಫಸಲನ್ನು ನೋಡಿ ಬೆಲೆ ಅಂದಾಜು ಮಾಡಿ, ಒಟ್ಟು ಇಷ್ಟು ಹಣಕ್ಕೆ ಎಂದು ಗುತ್ತಿಗೆ ಮಾಡಿಕೊಂಡು, ಸ್ವಲ್ಪ ಮುಂಗಡ ಹಣ ಕೊಡುತ್ತಿದ್ದರು. ತಮ್ಮ ತೋಟದ ಅಡಕೆಯನ್ನು ಕುಯ್ಯಿಸಿ ರೇಖೆ ಮಾಡಲು ಶಕ್ತಿ ಇಲ್ಲದವರು, ಗುತ್ತಿಗೆಗೆ ಕೊಟ್ಟುಬಿಡುತ್ತಿದ್ದರು. ಗುತ್ತಿಗೆಗೆ ಮಾಡಿಕೊಂಡವರು, ಅಡಕೆಯನ್ನು ಕುಯ್ಯಿಸಿ, ರೇಖೆಮಾಡಿ, ಮಾರುಕಟ್ಟೆ ಬೆಲೆ ನೋಡಿಕೊಂಡು ಮಾರಾಟ ಮಾಡುವರು. ಬೆಲೆಗಳಲ್ಲಿ ಏರುಪೇರಾದರೆ ಲಾಭವನ್ನು ಮಾಡಿಕೊಳ್ಳುವ ಜಾಗದಲ್ಲಿ ನಷ್ಟವನ್ನು ಅನುಭವಿಸಬೇಕಾಗಿ ಬರುತ್ತಿದ್ದುದುಂಟು. ಲಾಭನಷ್ಟಗಳನ್ನು ತೂಗಿಸಿಕೊಂಡು ಹೋಗುವಲ್ಲಿ ಇವರು ಪಳಗಿದವರಾಗಿರುತ್ತಿದ್ದರು. ಒಂದು ವರ್ಷ ಲಾಭ ಬರದೆ ಇರಬಹುದು ಅಥವಾ ಸ್ವಲ್ಪ ನಷ್ಟವಾಗಬಹುದು, ಇನ್ನೊಂದು ವರ್ಷದ ಲಾಭದಲ್ಲಿ ಸರಿದೂಗಿಸಿಕೊಳ್ಳುವ ಆರ್ಥಿಕ ಸಾಮರ್ಥ್ಯ ಅವರಲ್ಲಿರುತ್ತಿದ್ದಿತು. ಅನುಭವವಿಲ್ಲದೆ, ಆಸೆಯಿಂದ 'ನಾನೂ ಅಡಕೆ ಗುತ್ತಿಗೆ ಮಾಡಿ ಹಣ ಸಂಪಾದಿಸುತ್ತೇನೆ' ಎಂದು ಹೋಗಿ, ನಷ್ಟವನ್ನು ಅನುಭವಿಸಿ ತೊಳಲಾಡಿದವರೂ ಉಂಟು.

ಅಡಕೆ ಮರಕ್ಕೆ ಹತ್ತಿ ಅಡಕೆಯನ್ನು ಕುಯ್ಯುವುದೂ ಒಂದು ಕಲೆ. ಮರಹತ್ತಿ ಅಡಕೆ ಕುಯ್ಯಲು ದೇಹದಲ್ಲಿ ತ್ರಾಣವೂ ಇರಬೇಕು, ಯುಕ್ತಿಯೂ ಇರಬೇಕು. ಹರಿತವಾದ ಕುಡುಗೋಲನ್ನು ಒಂದು ತುದಿಗೆ ಕಟ್ಟಿದ ಜಲ್ಲೆಯನ್ನು ತೆಗೆದುಕೊಂಡು, ಒಂದು ಮರಕ್ಕೆ ಹತ್ತಿ ಜಲ್ಲೆಯಿಂದ ಅಡಕೆ ಗೊನೆಗಳನ್ನು ಎಳೆದು ಕತ್ತರಿಸಿ, ಮಧ್ಯೆ ನೆಲದ ಮೇಲೆ ಒಂದೇ ಜಾಗಕ್ಕೆ ಬೀಳುವಂತೆ ಬೀಳಿಸಬೇಕು.

ಇಲ್ಲದೆ ಇದ್ದರೆ ವೀಳೆಯದೆಲೆ ಹಂಬುಗಳ ಮೇಲೆ ಅಡಕೆ ಗೊನೆಗಳು ಬಿದ್ದು , ವೀಳೆಯದೆಲೆಯು ನಷ್ಟವಾಗುವುದು. ಒಂದು ಮರವನ್ನು ಹತ್ತಿದ ಮೇಲೆ ಕೆಳಕ್ಕೆ ಇಳಿದು ಪುನಃ ಇನ್ನೊಂದು ಮರವನ್ನು ಹತ್ತುವುದು ಅತ್ಯಂತ ಶ್ರಮದ ಕೆಲಸ ಹಾಗೂ ಸಮಯ ಹಾಳು. ಅಡಕೆಮರಕ್ಕೆ ವೀಳೆಯದೆಲೆ ಹಂಬುಗಳನ್ನು ಬೆಳೆಸಿರುವುದರಿಂದ ಕೆಳಗಿನಿಂದ ಮರವನ್ನು ಹತ್ತುವುದಕ್ಕೂ ಆಗುವುದಿಲ್ಲ ಮತ್ತು ಮೇಲಿನಿಂದ ಕೆಳಕ್ಕೆ ಇಳಿಯಲೂ ಆಗುವುದಿಲ್ಲ. ಇಪ್ಪತ್ತು-ಮುವತ್ತು ಹಂತಗಳ ಎತ್ತರವಾದ ಕಾಲೇಣಿಗಳ ಮೇಲೆ ಏರಿ ಹೋಗಿ, ಅಡಕೆ ಮರದ ಮೇಲುಗಡೆಗೆ ಹತ್ತಬೇಕು. ಆದರೆ ಅಡಕೆ ಮರದ ತೊಂಡೆಯವರೆಗೆ ಮರವನ್ನು ಏರಲು ಆಗುವುದಿಲ್ಲ. ಅಲ್ಲದೆ ಎತ್ತರವಾದ ಅಡಕೆಮರಗಳು ತುಂಬಾ ತೂಗಾಡುತ್ತವೆ. ತೊಂಡೆಯ ಹತ್ತಿರ ಭಾರಹೆಚ್ಚಾದರೆ ಮರದ ತುದಿ ಮುರಿಯಲೂಬಹುದು. ಅಡಕೆ ಮರದಮೇಲೆ ಕುಳಿತುಕೊಳ್ಳುವ ಹಾಗೆ ಒಂದು ಕೂರುಮಣೆಯ ಸಾಧನವನ್ನು ಏರ್ಪಡಿಸಿಕೊಂಡಿರುತ್ತಾರೆ. ಹೆಚ್ಚು ಅಗಲವಿಲ್ಲದ, ಸುಮಾರು ಮೂರು ಅಡಿ ಉದ್ದವಾದ ಮರದ ದಪ್ಪಮಣೆಯೊಂದಕ್ಕೆ ಮಧ್ಯದಲ್ಲಿ ರಂಧ್ರಮಾಡಿ, ಅದಕ್ಕೆ ಎರಡು ಜೋಡಿಯ ಬಿಗಿಯಾದ ಹಗ್ಗವನ್ನು ಕಟ್ಟಿರುತ್ತಾರೆ. ಮಣೆಯ ಅಡಿಗೆ ಹಗ್ಗದ ದೊಡ್ಡ ಗಂಟನ್ನು ಬಿಗಿಯಾಗಿ ಹಾಕಿರುತ್ತಾರೆ. ಹಗ್ಗವನ್ನು ಅಡಕೆ ಮರಕ್ಕೆ ಸುತ್ತಿ ಹಗ್ಗದ ಮಧ್ಯದಲ್ಲಿ ಮಣೆಯನ್ನು ತೂರಿಸಿ ಕೆಳಕ್ಕೆ ಬಿಟ್ಟು, ಎಳೆದರೆ ಅದು ಕುಣಿಕೆಯಂತಾಗಿ ಮರದ ಗಿಣ್ಣಿನ ಮೇಲೆ ಜಾರದೆ ಬಿಗಿಯಾಗಿ ಮರಕ್ಕೆ ಸುತ್ತಿಕೊಂಡಿರುತ್ತದೆ. ಕಾಲನ್ನು ಹಗ್ಗದ ಎರಡೂಕಡೆ ಇಳಿಬಿಟ್ಟುಕೊಂಡು ಮಣೆಯ ಮೇಲೆ ಕುಳಿತರೆ ಮನುಷ್ಯನ ಭಾರಕ್ಕೆ ಹಗ್ಗ ಬಿಗಿಯಾಗಿ, ಕೂತಿರುತ್ತದೆ. ಕುಯ್ಯುವವನು ಮರದ ಕಾಂಡವನ್ನು ಎರಡು ಕಾಲುಗಳಿಂದಲೂ ಬಿಗಿಯಾಗಿ ಹಿಡಿದಿರುತ್ತಾನೆ. ಆಗ ಅಡಕೆ ಕುಯ್ಯುವವನಿಗೆ ಎರಡು ಕೈಗಳೂ ಬಿಡುವಾಗಿರುತ್ತವೆ. ಅಗತ್ಯವಾದರೆ ಮರವನ್ನು ಒಂದು ಕೈಯಲ್ಲಿ ಹಿಡಿದಿರುತ್ತಾನೆ. ಇನ್ನೊಂದು ಕೈಯಲ್ಲಿ ಜಲ್ಲೆಯನ್ನು ಹಿಡಿದುಕೊಂಡು ಗೊನೆಗಳನ್ನು ಕಿತ್ತು ಕಿತ್ತು ಒಂದು ಮಧ್ಯಭಾಗಕ್ಕೆ ಬೀಳುವಂತೆ ಕುಶಲತೆಯಿಂದ ಸೆಳೆದು ಬೀಳಿಸುತ್ತಾನೆ. ತಾನು ಹತ್ತಿರುವ ಮರ ಹಾಗೂ ಸುತ್ತಲಿನ ಮರಗಳ ಅಡಕೆ ಗೊನೆಗಳನ್ನು ಕುಯ್ದ ಬಳಿಕ ಜಲ್ಲೆಯ ಸಹಾಯದಿಂದ ಒಂದು ಹತ್ತಿರದ ಮರವನ್ನು ಎಳೆದುಕೊಂಡು ತನ್ನ ಮರದಿಂದ ಆ ಮರಕ್ಕೆ ಜಿಗಿಯುತ್ತಾನೆ. ಕೂರುಮಣೆಯನ್ನು ಮೊದಲೇ ಬಿಚ್ಚಿಕೊಂಡು ಹೆಗಲಿಗೆ ನೇತು ಹಾಕಿಕೊಂಡಿರುತ್ತಾನೆ. ಒಂದು ಮರದಿಂದ ಇನ್ನೊಂದು ಮರಕ್ಕೆ ಕೋತಿಯಂತೆ ಜಿಗಿಯುತ್ತ, ಅಡಕೆ ಕುಯ್ಯಬೇಕಾದ ಮರಕ್ಕೆ ಹೋಗುತ್ತಾನೆ. ಅಲ್ಲಿಂದ ಸುತ್ತಮುತ್ತಲಿನ ಮರಗಳ ಅಡಕೆಕಾಯಿಯ ಗೊನೆಗಳನ್ನು ಕಿತ್ತು ಬೀಳಿಸುತ್ತಾನೆ. ಕೂರುಮಣೆಯನ್ನು ಹೆಗಲಿಗೆ ಹಾಕಿಕೊಂಡು ಜಲ್ಲೆಯಿಂದ ಮರವನ್ನು ಹಿಡಿದೆಳೆದು, ಇನ್ನೊಂದು ಮರಕ್ಕೆ ಜಿಗಿದುಕೊಂಡು ಹೋಗುವ ದೃಶ್ಯವು ರೋಮಾಂಚನವನ್ನುಂಟುಮಾಡುತ್ತದೆ. ಬೆಳಗ್ಗೆ ಬೇಗ ಮರ ಹತ್ತಿದರೆ ಮಧ್ಯಾಹ್ನಕ್ಕೆಲ್ಲಾ ಕೆಳಗಿಳಿಯಬೇಕು. ಅಷ್ಟು ಹೊತ್ತು ಮರದ ಮೇಲೆ ಕಸರತ್ತು ಮಾಡುತ್ತ ಕೆಲಸ ಮಾಡುವುದು ಸಾಮಾನ್ಯವೇ! ಮರವನ್ನು ಹತ್ತುವುದಕ್ಕೆ ಮೊದಲು ಹೊಟ್ಟೆಗೆ ದಿಂಡಾಗುವಂತೆ ಆಹಾರವನ್ನು ತೆಗೆದುಕೊಂಡಿರಬೇಕು. ಇಲ್ಲದೆ ಇದ್ದರೆ ಅಷ್ಟು ಹೊತ್ತು ಮರದ ಮೇಲೆ ಉಳಿದು ಕೆಲಸ ಮಾಡಲು ತ್ರಾಣವಾದರೂ ಎಲ್ಲಿರುತ್ತದೆ? ನಮ್ಮ ಹಳ್ಳಿಯ ಕಡೆಯ ಅಗಲವಾದ ಇಡ್ಲಿಗಳು ಎಂಟು ಹತ್ತಾದರೂ ಬೇಕು. ಅದಕ್ಕೆ ಚೆನ್ನಾಗಿ ತುಪ್ಪ, ಮೊಸರು ಆಗಲೇಬೇಕು. ಉಪ್ಪಿಟ್ಟಾದರೆ ಅರ್ಧ ಸೇರಿನದಾದರೂ ಆಗಬೇಕು. ನನಗೆ ತಿಳಿದ ಒಬ್ಬರು ಒಂದು ಪಾವಿಗೂ ಹೆಚ್ಚಿನಷ್ಟು ರವೆಯನ್ನು ತುಪ್ಪದಲ್ಲಿ ಚೆನ್ನಾಗಿ ಕಲೆಸಿ, ಅದಕ್ಕೆ ರುಚಿಗೆ ತಕ್ಕಷ್ಟು ಸಕ್ಕರೆ ಹಾಕಿಕೊಂಡು ತಿಂದು, ಮರ ಹತ್ತುತ್ತಿದ್ದರು. ರವೆ, ತುಪ್ಪ, ಸಕ್ಕರೆ, ಮೂರೂ ಚೆನ್ನಾಗಿ ಶಕ್ತಿಯನ್ನು ಕೊಡುತ್ತವೆ ಎಂದು ಅವರ ಅನುಭವ. ನಾನು ಪೂನಾ, ಬೊಂಬಾಯಿನಂಥ ದೂರದ ಊರುಗಳಲ್ಲಿದ್ದಾಗ ಕೆಲಸಕ್ಕೆ ಹೋಗುವ ಮೊದಲು ಹೋಟಲಿಗೆ ಹೋಗಲು ಆಗದೆ ಇದ್ದರೆ ಸ್ವಲ್ಪ ರವೆಗೆ ತುಪ್ಪ, ಸಕ್ಕರೆ ಹಾಕಿ ಅದಕ್ಕೆ ಒಂದೆರಡು ಬಾಳೆಹಣ್ಣುಗಳನ್ನು ಕತ್ತರಿಸಿ ಹಾಕಿ ಕಲಸಿಕೊಂಡು ತಿನ್ನುತ್ತಿದ್ದೆ. ಅದು ಸಂಜೆಯವರೆಗೂ ಶಕ್ತಿಯನ್ನು ಕೊಡುತ್ತಿದ್ದಿತೆಂಬುದನ್ನು ಅನುಭವದಿಂದ ಬಲ್ಲೆ.

ಅಡಕೆಯನ್ನು ಮಾಳದಲ್ಲಿ ಈಚಲು ಚಾಪೆಗಳ ಮೇಲೆ ಹರವಿ ಒಣಗಿಸುವರು. ಒಣಗಿದಂತೆಲ್ಲ ಕೈ ಆಡಿಸಬೇಕು. ಏಕೆಂದರೆ ಎಲ್ಲ ಕಡೆಯೂ ಒಂದೇ ಸಮನಾಗಿ ಒಣಗಬೇಕು. ರಾತ್ರಿ ಹೊತ್ತು ಅಷ್ಟನ್ನೂ ಹೊತ್ತು ಒಳಕ್ಕೆ ಹಾಕಿ ಪುನಃ ಬೆಳಗ್ಗೆ ಹೊರಕ್ಕೆ ತಂದು ಒಣಗಲು ಹಾಕುವುದೆಂದರೆ ತುಂಬ ಶ್ರಮ ಹಾಗೂ ಸಮಯ ಹಿಡಿಯುತ್ತದೆ. ಆದುದರಿಂದ ಚಾಪೆಗಳನ್ನು, ಹರಡಿದ ಅಡಕೆ ಮೇಲೆಮುಚ್ಚಿ, ಗಾಳಿಗೆ ಹಾರದಂತೆ ಅಂಚಿಗೆ ಬೊಂಬುಗಳನ್ನೋ, ಕಲ್ಲುಗಳನ್ನೋ ಹೇರಿರುವರು. ರಾತ್ರಿ ಹೊತ್ತು ಯಾರಾದರೂ ಅಡಕೆ ಕದಿಯಬಹುದು ಇಲ್ಲವೇ ಯಾವುದಾದರೂ ಹಸು ಅಥವಾ ಪ್ರಾಣಿ, ಈಚಲು ಚಾಪೆಗಳನ್ನು ಕೆದರಬಹುದು ಅಥವಾ ಚಾಪೆಗಳ ಮೇಲೆ ಓಡಾಡಿ ತುಳಿಯಬಹುದು. ಆದುದರಿಂದ ಅಡಕೆ ಕಾಯಲು ರಾತ್ರಿ ಹೊತ್ತು ಮಾಳದಲ್ಲಿ ಯಾರಾದರೂ ಎರಡು - ಮೂರು ಜನ ಹತ್ತಿರದಲ್ಲಿಯೇ ಮಲಗಿರುತ್ತ ಜಾಗರೂಕತೆ ವಹಿಸಬೇಕಾಗಿತ್ತು. ಮಾಳದ ಎದುರಿಗೆ ಮನೆಯ ಜಗಲಿ ಇದ್ದರೆ ಅನುಕೂಲ ಅಥವಾ ಯಾವುದಾದರೂ ಮಂಟಪ ಇದ್ದರೂ ಆಯಿತು. ಒಂದು ಊರಿನ ಎಲ್ಲ ಮನೆಗಳವರಿಗೂ ಅವರದೇ ಮಾಳ ಇರುತ್ತಿರಲಿಲ್ಲ. ಊರಿನಲ್ಲಿ

ಅಥವಾ ಊರಿನ ಹೊರಗೆ ಇದ್ದ ಮೈದಾನದಲ್ಲಿ , ಊರಿನವರು ಅಡಕೆ ಒಣಗಿಸಬೇಕಾಗಿತ್ತು. ಆಗ ಎರಡು ಮೂರು ಜನ ಜತೆ ಸೇರಿ ಕಾವಲು ಕಾಯುವರು. ರಾತ್ರಿ ಆ ಚಳಿಯಲ್ಲಿ ಬಯಲಿನಲ್ಲಿ ಮಲಗುವುದು ಸಾಧ್ಯವೇ? ಬೆಳಗಿನ ಜಾವ ಮಂಜು ಬೀಳುವ ಸಾಧ್ಯತೆಯೂ ಇರುತ್ತದೆ. ಸಾಮಾನ್ಯವಾಗಿ ಅಡಕೆ ರೇಖೆಯ ಕಾಲವು ಚಳಿಗಾಲದ ಆರಂಭ ಅಥವಾ ಮಧ್ಯಕಾಲವಾಗಿರುತ್ತದೆ. ಏನಾದರೂ ಹೆಚ್ಚು ಕಡಮೆಯಾದರೆ ಜ್ವರ ಬರಬಹುದು ಅಥವಾ ಶೀತಜ್ವರ, ನ್ಯೂಮೋನಿಯಾ ಬರಬಹುದು. ಆದುದರಿಂದ ಬಟ್ಟ ಬಯಲಿನಲ್ಲಿ ಮಲಗುವುದು ಸಾಧ್ಯವಿಲ್ಲ. ಒಂದು ವೇಳೆ ಚಪ್ಪರ ಹಾಕಿದ್ದರೂ ಸುತ್ತಲಿನಿಂದ ಗಾಳಿ ಬೀಸಿ, ನಡುಗಿಸುವುದು. ಕಂಬಳಿ ಹೊದೆದು ಮಲಗಿದರೂ ಆ ಚಳಿಗೆ ಅದು ಸಾಕಾಗುವುದಿಲ್ಲ. ಇದಕ್ಕೆ ಸಂಕೇತಿಗಳು ಒಂದು ಉಪಾಯವನ್ನು ಕಂಡುಕೊಂಡಿದ್ದರು. ಬಯಲಿನಲ್ಲಿ ಅಡಕೆ ಚಾಪೆಗಳಿಗೆ ಸಮೀಪದಲ್ಲಿ ಒಂದೆರಡು ಈಚಲು ಚಾಪೆಯನ್ನು ಹಾಸಿ ಅದರ ಮೇಲೆ ಹಾಸಿಗೆ ಹಾಸಿಕೊಳ್ಳುವುದು. ಹೊದೆದುಕೊಳ್ಳಲು ಕಂಬಳಿಯೇ ಬೇಕು ಎಂದೇನಿಲ್ಲ. ದಪ್ಪವಾದ ಬೆಡ್‌ಷೀಟ್ ಇದ್ದರೂ ಆಯಿತು. ಚಳಿಗೆ ತಕ್ಕಂತೆ ಎರಡೋ - ಮೂರೋ ಈಚಲು ಚಾಪೆಗಳನ್ನು ನಯವಾದ ಭಾಗ ಒಳಗಡೆಗೆ ಬರುವಂತೆ ಮೇಲೆ ಕವಿಚಿಕೊಂಡರೆ ಆಯಿತು. ಈಗ ಯಾವ ಗಾಳಿಯೂ ಒಳಕ್ಕೆ ನುಸುಳಲು ಹೆದರಿಕೊಳ್ಳುತ್ತದೆ. ಮಂಜಂತೂ ಒಳಕ್ಕೆ ಇಳಿಯಲೇ ಆರದು. ಸ್ವಲ್ಪ ಹೊತ್ತಿನ ಮೇಲೆ ಚೆನ್ನಾಗಿ ಬೆಚ್ಚಗಾಗುವುದು. ಒಂದೊಂದು ವೇಳೆ ಸೆಕೆಯೂ ಆಗಬಹುದು. ಈಚಲು ಚಾಪೆ ತುಂಬ ಶಾಖ. ಅದು ಚಳಿಗಾಳಿಗೆ ಇನ್ಸುಲೇಷನ್ ಇದ್ದಂತೆ. ಒಳಗಡೆ ಮಲಗಿಬಿಟ್ಟರೆ ನಿದ್ದೆಯು ಆರಾಮವಾಗಿ ಆವರಿಸಿಬಿಡುವುದು. ನಿದ್ದೆ ಹೊಡೆಯುತ್ತಿದ್ದರೆ ಅಡಕೆಯನ್ನು ಚೆನ್ನಾಗಿ ಕಾಯ್ದಂತೆಯೇ. ಆದುದರಿಂದ ಸರದಿಯ ಪ್ರಕಾರ ಒಬ್ಬರು ಎಚ್ಚರವಾಗಿರುತ್ತಿದ್ದು ಜತೆಯವರು ನಿದ್ರಿಸುವರು. ಆಗಾಗ್ಗೆ ಎಚ್ಚರ ಮಾಡಿಕೊಂಡು ಚಾಪೆಯನ್ನು ಸರಿಸಿ ಸಂದಿಯಿಂದ ಮಾಳವನ್ನು ವೀಕ್ಷಿಸುವರು. ಉಸಿರಾಡಲಾದರೂ ಒಂದು ಸ್ವಲ್ಪ ಜಾಗ ಬಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಒಳಗೆ ಉಸಿರು ಕಟ್ಟುವ ಸಂಭವವುಂಟು. ನನ್ನ ಬಾಲ್ಯದಲ್ಲಿ ಹೀಗೆ ಈಚಲು ಚಾಪೆಯೊಳಗೆ ಬಯಲಿನಲ್ಲಿ ಮಲಗಿ ನಿದ್ದೆ ಹೊಡೆಯುವ ಸುಖವನ್ನು ಸ್ವಲ್ಪಮಟ್ಟಿಗೆ ಅನುಭವಿಸಿದ್ದೇನೆ. ಬದರಿ, ಕಾಶ್ಮೀರಗಳಿಗೆ ಹೋದಾಗ ಅಲ್ಲಿನ ಪ್ರವಾಸಿ ಇಲಾಖೆಯ ಅತಿಥಿಗೃಹದಲ್ಲಿ ರಾತ್ರಿಗೆ ಹೊದೆದುಕೊಳ್ಳಲು ಐದೈದು ರಗ್ಗುಗಳನ್ನು ಇಟ್ಟಿರುತ್ತಿದ್ದರು. ಅಷ್ಟು ರಗ್ಗುಗಳನ್ನು ಹೊದೆದುಕೊಂಡರೂ ಚಳಿ ಹೋಗುತ್ತಿರಲಿಲ್ಲ. ಅದಕ್ಕೆ ಬದಲು ಒಂದು ರಜಾಯಿಯನ್ನು ಹೊದ್ದುಕೊಂಡರೆ ಎಂಥ ಚಳಿಯಾದರೂ ಹೆದರಿ ಓಡಿ ಹೋಗುವುದು. ನಾವು ದೆಹಲಿಯಲ್ಲಿದ್ದಾಗ ಚಳಿಗಾಲದ ಆರಂಭದಲ್ಲಿ ರಗ್ಗನ್ನು ಹೊದ್ದುಕೊಂಡು ಮಲಗುತ್ತಿದ್ದಾಗ, ಚಳಿಯಿಂದ ರಾತ್ರಿ ಸರಿಯಾಗಿ ನಿದ್ರೆ ಬರದೆ ಪರದಾಡಬೇಕಾಗಿ ಬರುತ್ತಿತ್ತು. ಮೈಸೂರು ಬೆಂಗಳೂರುಗಳಂಥ ನಮ್ಮ ಸ್ಥಳಗಳಿಗೆ ಒಂದು ರಗ್ಗು ಅಥವಾ ಕಂಬಳಿ ಸಾಕು. ಅನಂತರ ಸ್ನೇಹಿತರ ಸಲಹೆಯಂತೆ ರಜಾಯಿಯನ್ನು ತಂದು ಹೊದ್ದುಕೊಂಡು ಮಲಗಲಾರಂಭಿಸಿದೆವೋ ಇಲ್ಲವೋ ಚಳಿಯೆಲ್ಲ ಎಲ್ಲೋ ಓಡಿಹೋಯಿತು. ಈಚಲು ಚಾಪೆ ಬಡವರ ರಜಾಯಿ ಎನ್ನೋಣವೇ! ಅಮೆರಿಕದ ಒಳ್ಳೆಯ ಹೋಟೆಲುಗಳಲ್ಲಿಯೂ, ಹೊದ್ದುಕೊಳ್ಳಲು ಸುಂದರವಾದ, ನಯವಾದ, ನಾಜೂಕಾದ ರಜಾಯಿಗಳನ್ನು ಇಟ್ಟಿರುವುದನ್ನು ಅಲ್ಲಿನ ಹೋಟಲುಗಳಲ್ಲಿ ಇಳಿದುಕೊಂಡಾಗ ನೋಡಿದೆವು. ಅವುಗಳನ್ನು ಅವರು ಕಮ್‌ಫರ್ಟರ್ (comforter) ಎಂಬ ಅನ್ವರ್ಥನಾಮದಿಂದ ಕರೆಯುವರು. ರಜಾಯಿಯ ಕಲ್ಪನೆ ನಮ್ಮ ಹಳ್ಳಿಯವರಿಗೆ ಇರಲಿಲ್ಲ ಎನ್ನಬೇಡಿ. ಹಿಂದೆ ಹಳೆಯ ಸೀರೆ, ಪಂಚೆಗಳನ್ನು ಸೇರಿಸಿ ಮಂದವಾಗಿ ಹೊಲಿದು ಮಕ್ಕಳಿಗೆ ಹಾಸಲು ಹೊದೆಯಲು ಮಾಡಿಕೊಡುತ್ತಿದ್ದರು. ಇದಕ್ಕೆ 'ದಟ್ಟ'ವೆಂದು ಕರೆಯುತ್ತಾರೆ.

ಅಡಕೆಯ ರಾಶಿಯ ಸುತ್ತ ಮೆಟ್ಟುಕತ್ತಿಗಳನ್ನು ಇಟ್ಟುಕೊಂಡು ಹೆಂಗಸರು ಅಡಕೆ ಕಾಯಿಗಳನ್ನು ಸುಲಿಯುವ ದೃಶ್ಯ ಈಗಿನ ಕಾಲದಲ್ಲಿ ನೋಡಲು ಹೆಚ್ಚು ಸಿಗಲಾರದು. ಅದೊಂದು ಅಪೂರ್ವ ನೋಟ. ಕೈಗಳು ಯಾಂತ್ರಿಕವಾಗಿ ಅಡಕೆ ಕಾಯಿಗಳನ್ನು ಕತ್ತಿಯ ಬಾಯಿಗೆ ದೂಡಿ ಸಿಪ್ಪೆಯನ್ನು ಸುಲಿದು ರಾಶಿ ಹಾಕುತ್ತಿರುವುವು. ಎದುರಿಗಿನ ಕುಕ್ಕೆಯಲ್ಲಿ ಮಿರಮಿರನೆ ಮಿಂಚುವ ಸುಲಿದ ಅಡಕೆಗಳು ಒಂದೊಂದಾಗಿ ಬಂದು ಬೀಳುತ್ತಿರುತ್ತವೆ. ಅಡಕೆಯನ್ನು ಎಡೆಯುವಾಗ ದೇಹವು ಸ್ವಲ್ಪವೇ ಮುಂದಕ್ಕೂ-ಹಿಂದಕ್ಕೂ ಲಯಬದ್ಧವಾಗಿ ಚಲಿಸುತ್ತಿರುತ್ತದೆ. ಅಡಕೆ ಸುಲಿಯುವ ಮೌನ ಸಂಗೀತ ಹೆಚ್ಚು ಹೊತ್ತು ಇರುವುದಿಲ್ಲ. ಕ್ರಮೇಣ ಮಾತುಗಳು ಒಂದೊಂದಾಗಿ ಹೊರ ಹೊರಡುತ್ತ ವಾತಾವರಣವನ್ನು ಆವರಿಸಿಬಿಡುತ್ತವೆ. ಒಬ್ಬರಿಂದ ಒಬ್ಬರಿಗೆ ಮಾತುಗಳು ಹರಡುವುವು. ಹರಟೆ, ತಮಾಷೆ, ಜೀವನದ ಕಷ್ಟಸುಖಗಳು, ಸುತ್ತಮುತ್ತಲಿನ ವಿಷಯಗಳು, ಮದುವೆ-ಮುಂಜಿ ಮೊದಲಾದ ಸಮಾರಂಭದ ವೈಭವಗಳು, ಕೊರತೆಗಳು, ಪಕ್ಕದ ಮನೆಯವರೋ ಇನ್ನೊಬ್ಬರೋ ಮಾಡಿಸಿಕೊಂಡ ಒಡವೆ - ಹೀಗೆ ಒಂದು ಪ್ರಪಂಚದ ವಿಸ್ತಾರವಿರುತ್ತದೆ ಅಲ್ಲಿ. ಅತ್ತ ಕಿವಿಗೊಟ್ಟು ನೋಡಿ, ಆ ವಾರ್ತಾಲಾಪದ ಒಂದೆರಡು ತುಣುಕುಗಳನ್ನು ಸವಿಯ ಬಹುದಲ್ಲವೇ?

□ □ □

"ಅಲ್ಲ ಕಣೆ, ಅಷ್ಟು ಚೆನ್ನಾಗಿದ್ದ ಗಂಗೆ ಹಸು ದಿನಕ್ಕೆ ಎರಡು ಸೇರು ಹಾಲು ಕೊಡ್ತಾ ಇತ್ತು. ಪಾಪ ಅದು ಓಡಿಹೋಯಿತಲ್ಲ.

ನಿನಗೆ ತುಂಬ ಬೇಜಾರಾಗಿರಬಹುದು" ಎಂದು ನಂಜಮ್ಮ, ಸೀತೆಯನ್ನು ಪ್ರಶ್ನಿಸುವರು.

"ಹೌದು ನಂಜಮ್ಮತ್ತೆ. ನೋಡಿ, ಅದರ ಹಾಲು ಎಂದರೆ ಅಮೃತ, ನಮ್ಮ ಮನೆಯವರಿಗೆಲ್ಲ. ಆ ಹಾಲು ಎಂದರೆ ನಮ್ಮ ಮಕ್ಕಳಿಗೆ ಪಂಚಪ್ರಾಣ. ಬೇರೆ ಹಾಲು ಬೇಡವೇ ಬೇಡ, ಗಂಗೆಯ ಹಾಲೇ ಬೇಕು ಎಂದು ಹಟ ಮಾಡುತ್ತವೆ. ಏನು ಮಾಡಲಿ ಹೇಳಿ. ಎಂಥ ಸಾಧುಪ್ರಾಣಿ ಅಂತ ನಮ್ಮ ಗಂಗೆ! ಯಾರು ಬಂದರೂ ತಂಟೆ ಮಾಡುತ್ತಿರಲಿಲ್ಲ. ಒಂದು ಹಾಯುತ್ತಿರಲಿಲ್ಲ, ಒಂದು ಒದೆಯುತ್ತಿರಲಿಲ್ಲ. ಹಾಲು ಕರೆಯುವಾಗ ಸುಮ್ಮನೆ ನಿಂತುಕೊಂಡು ಸ್ವರ ಬಿಡುತ್ತಿತ್ತು. ಅಂಥ ಹಸು ಇನ್ನೆಲ್ಲಿ ಹೇಳಿ ?"

"ಅಯ್ಯೋ ಪಾಪ, ಹಸು ಕಳಕೊಂಡ ಸಂಕಟ ನಿಮಗೆ ಹೇಳತೀರದು. ಅದನ್ನು ಹುಡುಕಿಸಲಿಲ್ವೆ ?"

"ಹುಡುಕದೇ ಉಂಟೇ. ನಮ್ಮ ಯಜಮಾನರೂ ಪಕ್ಕದ ಮನೆ ಶೀನಿಯೂ ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲಾ ಜಾಲಾಡಿಬಿಟ್ಟರು. ಎಲ್ಲಾ ಸಂತೆಗಳನ್ನೂ ಶೋಧಿಸಿಬಿಟ್ಟರು. ಶನಿವಾರಸಂತೆವರೆಗೂ ಹೋಗಿಬಂದರು; ಸಿಗಲಿಲ್ಲ ನೋಡಿ !"

"ಆ ಬೂದನೂರು ಕೆಂಪ ಸಿಕ್ಕಿದ ಹಸುಗಳನ್ನು ಹಿಂದುಗಡೆ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದು , ಗುಟ್ಟಾಗಿ ಸಂತೆಗೆ ಹೊಡೆದುಕೊಂಡು ಹೋಗಿ ಮಾರಿಬಿಡುತ್ತಾನಂತಲ್ಲ , ಅಲ್ಲಿ ನೋಡಲಿಲ್ಲವೇ!"

"ಅಲ್ಲಿಯೂ ನೋಡಿದರು, ಹರದನಹಳ್ಳಿ ರಂಗಯ್ಯನ ಕೊಟ್ಟಿಗೇನೂ ನೋಡಿಬಂದರು. ದೊಡ್ಡಕೊಪ್ಪಲು, ಕಾಳೇನಹಳ್ಳಿ, ಬಿದರಕ್ಕ, ಮಿರ್ಲೆ ಎಲ್ಲಾ ಕಡೆಗೂ ಹೋಗಿಬಂದರು. ನಮ್ಮ ದುರದೃಷ್ಟ, ಎಲ್ಲೂ ಸಿಗಲಿಲ್ಲ. ನಮ್ಮ ಪ್ರಾಪ್ತಿ, ಗಂಗೇದು ಅಷ್ಟೇನೇ ಅಂತ ವಿಧಿ ನಿಯಾಮಕವೇನೋ."

"ಕಳೆದ ಸಲ ನಮ್ಮ ಕಿಟ್ಟು ಮುಂಜಿಯಲ್ಲಿ ಕೊಟ್ಟಿದ್ದಿರಲ್ಲ ತುಪ್ಪ, ಅದು ಗಂಗೆಯದೇ ಎಂದು ಹೇಳಿದ್ದಿರಲ್ಲ ; ಅದರ ಘಮ ಏನು, ಅದೇನು ರುಚಿ ಇನ್ನೂ ಜ್ಞಾಪಿಸಿಕೊಳ್ಳುವ ಹಾಗಾಗ್ತಿದೆ."

"ತುಪ್ಪ ಏನು, ಅದರ ಹಾಲಿನ ಮೊಸರು ಕೂಡ ಗಟ್ಟಿಯಾಗಿ ಹೆಪ್ಪಾಗುತ್ತಿತ್ತು. ನಮ್ಮ ಹುಡುಗರು ಅದರ ಗರಣೆ ಮೊಸರನ್ನೇ ಕೇಳ್ತಾ ಇದ್ದರು."

□ □ □

"ಅಲ್ಲ ಸಣ್ಣಮ್ಮ, ಆ ಈರಯ್ಯನ ಸೊಸೆ ಎಲ್ಲೋ ಓಡಿಹೋದಳಂತಲ್ಲ."

"ಅಯ್ಯೋ ಬಿಡಿ. ಅದೊಂದು ಚಲ್ಲು ಹುಡುಗಿ. ನಾನು ನೋಡ್ತಾ ಇದ್ದೆನಲ್ಲ. ನಮ್ಮ ಮನೆಗೆ ಅಡಕೆ ಎಲೆ ಕೇಳುವುದಕ್ಕೆ ಆಗಾಗ್ಗೆ ಬರುತ್ತಾ ಇದ್ದಳು. ಅವಳ ಕಣ್ಣುಗಳೇ ಹೇಳ್ತಾ ಇದ್ದವು, ಅವಳು ಯಾವತ್ತಾದರೂ ಓಡಿಹೋಗೋಳು ಅಂತ."

"ದೊಂಬರಾಟದವರು ಬಂದಿದ್ದರಲ್ಲ, ಅವರ ಜತೆ ರಾತ್ರೋರಾತ್ರೆ ಕದ್ದು ಹೊರಟು ಹೋದಳಂತೆ."

"ದೊಂಬರಾಟಕ್ಕೆ ಅವರಿಗೆ ಒಂದು ಚಲ್ಲುಹುಡುಗಿ ಸಿಕ್ಕಿದ ಹಾಗಾಯಿತು. ಕಂತೆಗೆ ತಕ್ಕ ಬೊಂತೆ. ಅದು ಕಟ್ಟಿಕೊಂಡು ನಮಗೇನು ಹೇಳಿ !"

□ □ □

"ಮಾದಾಪುರದ ಪುಟ್ಟಲಕ್ಷ್ಮೀದು ಪಾಪ ಚೊಚ್ಚಲು ಮಗು ಹೋಗಿಬಿಟ್ಟಿತಂತಲ್ಲ."

"ಅಯ್ಯೋ, ಆ ಕತೆ ಕೇಳ್ತೀರಾ. ಪಾಪ, ಮಗು ಹೊಟ್ಟೆಯಲ್ಲೇ ಸತ್ತುಹೋಗಿತ್ತಂತೆ. ತಾಯಿ ಉಳಿಯುವುದೇ ಕಷ್ಟವಾಯಿತಂತೆ. ನಮ್ಮ ಅಕ್ಕಮ್ಮತ್ತೇನೇ ಹೆರಿಗೆ ಮಾಡಿಸೋದಕ್ಕೆ ಹೋಗಿದ್ದರು. ತುಂಬಾ ಕಷ್ಟವಾಯಿತಂತೆ. ಅರಕಲಗೂಡಿಗೋ, ಹೊಳೆನರಸೀಪುರಕ್ಕೋ ಆಸ್ಪತ್ರೆಗೆ ಕರೆದುಕೊಂಡು ಹೋಗೋದಕ್ಕೆ ಅಂತ ಸಣ್ಣೇರನ ಗಾಡಿಗೆ ಹೇಳಿದ್ದರಂತೆ. ಪಾಪ, ಅಷ್ಟರಲ್ಲೇ ಇಲ್ಲಿ ಮಗುವನ್ನು ಹೊರಕ್ಕೆ ತೆಗೆಯಬೇಕಾಯಿತಂತೆ. ಇಲ್ಲದೆ ಇದ್ದರೆ ತಾಯಿಯ ಪ್ರಾಣಕ್ಕೇ ಸಂಚಕಾರ ಬರೋದು ಅಂತ ನಮ್ಮ ಚಿಕ್ಕಪ್ಪನ ಮಗಳು ಲಕ್ಕೀನ ಆ ಊರಿಗೆ ಕೊಟ್ಟಿದೆಯಲ್ಲ , ಅವಳು ಮೊನ್ನೆ ಬಂದಿದ್ದಾಗ ಹೇಳಿದಳು. ಅಕ್ಕಮ್ಮತ್ತೆ ತುಂಬ ಮುತುವರ್ಜಿ ವಹಿಸಿದರಂತೆ."

"ಅಕ್ಕಮ್ಮತ್ತೆ ತುಂಬ ಒಳ್ಳೆಯೋರು. ಎಲ್ಲಿಗೆ ಕರೆದರೂ ಬರ್ತಾರೆ. ಇದುವರೆಗೆ ನೂರಾರು ಹೆರಿಗೆ ಮಾಡಿಸಿದಾರೆ. ಈಗ ಆ ಮಕ್ಕಳೆಲ್ಲ ಬೆಳೆದು ದೊಡ್ಡೋರಾಗಿಲ್ಲವೇ ? ಎಲ್ಲೋ ಒಂದೊಂದು ಹೀಗಾಗುತ್ತೆ. ಆಸ್ಪತ್ರೆ-ಗೀಸ್ಪತ್ರೆ ಅಂದ್ರೆ ಎಷ್ಟು ದೂರ ಹೋಗಬೇಕು. ಹಾಗೆ ಮೊದಲೇ ಎಚ್ಚರಿಕೆ ವಹಿಸಿಕೊಂಡು ಹೋದರೂ ಡಾಕ್ಟರು ಯಾವುದಾದರೂ ಹಳ್ಳಿ-ಗಿಳ್ಳೀಗೆ ಹೋಗಿಬಿಟ್ಟಿದ್ದರೆ ಮಿಡ್‌ವೈಫೇ ಹೆರಿಗೆ ಮಾಡಿಸಬೇಕು. ನಮ್ಮ ಅಕ್ಕಮ್ಮತ್ತೆ ನೂರು ಜನ ಮಿಡ್‌ವೈಫ್‌ಗಳಿಗಿಂತ ವಾಸಿ."

"ಅಷ್ಟಲ್ಲದೆ ಬೆಳ್ಳಬೆಳ್ಳಗೆ ಬಟ್ಟೆ ಹಾಕಿಕೊಂಡುಬಿಟ್ಟರೆ ಬಂತೇ? ಅವರ ಕೈಯಲ್ಲಿ ಧನ್ವಂತರಿ ರೇಖೆ ಇರುತ್ಯೇ, ಬಿಡಿ."

"ಅದೃಷ್ಟ ಇದ್ದರೆ ಎಲ್ಲೂ ಚೆನ್ನಾಗೇ ಆಗುತ್ತೆ. ಅದೃಷ್ಟ ಖೋಟಾ ಆದರೆ ಆ ಡಾಕ್ಟ್ರು ತಾನೇ ಏನು ಮಾಡುತ್ತಾನೆ."

"ಹಾಗನ್ನಬೇಡಿ ಕಾವೇರಮ್ಮ, ನಮ್ಮ ಹೊಳೆನರಸೀಪುರದ ಡಾಕ್ಟ್ರು ಇದಾರಲ್ಲ, ಅವರ ಹಸ್ತಗುಣಾನ ಎಲ್ಲರೂ ಹೊಗಳ್ತಾರೆ. ಎಂಥೆಂಥ ಕಷ್ಟದ ಕೇಸುಗಳನ್ನೆಲ್ಲ ನಿಭಾಯಿಸಿದಾರಂತೆ."

“ಅದು ಸರಿ ವೆಂಕಟತ್ತೆ. ಡಾಕ್ಟ್ರು ಅಂದ್ರೆ ಜ್ಞಾಪಕ ಬಂತು. ಹಾನಗಲ್ಲು ರಾಮಕ್ಕನ ಮಗಳನ್ನ, ನಾಗಮ್ಮನ ಮಗ ಡಾಕ್ಟ್ರು ಶ್ರೀನಿವಾಸನಿಗೆ ಕೊಟ್ಟು ಮದುವೆಯಾಗಿತ್ತಲ್ಲ. ಅವಳು ತವರು ಮನೆಗೆ ಓಡಿಬಂದುಬಿಟ್ಟಿದಾಳಂತೆ.”

‘‘ಏನು ಜನವೋ ಏನೋ, ಡಾಕ್ಟ್ರು ಸಿಕ್ಕಿದಾಂತ ವರದಕ್ಷಿಣೇನೂ ಕೊಟ್ಟು ವೈನಾಗಿ ಮದುವೆ ಮಾಡಿದರು. ಹಳ್ಳಿಮುಕ್ಕ ಪಟ್ಟಣದಲ್ಲಿ ಹ್ಯಾಗೆ ನಿಭಾಯಿಸ್ತಾಳೆ ಹೇಳಿ.”

“ನಮ್ಮ ಅಗ್ರಹಾರದ ಸುಬ್ಬಲಕ್ಷ್ಮಿ ಮಗಳನ್ನ ಸರಗೂರಿನ ಸುಬ್ರಾಯಶಾಸ್ತ್ರಿಗಳ ಮಗನಿಗೆ ಕೊಟ್ಟು ಮದುವೆ ಆಗಿಲ್ಲವೆ ? ಅವನು ಇಂಜಿನಿಯರು. ದೊಡ್ಡ ಕೆಲಸದಲ್ಲೇ ಇದಾನೆ. ಅವನು ಹೆಂಡ್ತೀನ ತುಂಬ ಚೆನ್ನಾಗಿ ಇಟ್ಕೊಂಡಿಲ್ಲವೆ? ಹಳ್ಳಿ ಹೆಣ್ಣುಮಕ್ಕಳನ್ನು ಸುಮ್ಮನೆ ದೂರಬಾರದು.”

“ಅಯ್ಯೋ! ನಿಮಗೆ ಗೊತ್ತಿಲ್ಲವಾ, ಅವಳ ಅತ್ತೆ ಆ ನಾಗಮ್ಮ ಇದಾಳಲ್ಲ ಅವಳು ಭಾರಿ ಗಯ್ಯಾಳಿ ಅಂತೆ. ಸೊಸೆಯನ್ನ ಗೋಳು ಹುಯ್ದು ಗೊಟರೆಗೆ ಸೇರಿಸಿಕೊಂಡು ಬಿಡ್ತಾಳಂತೆ. ಆ ಅರಿಯದ ಮುಕ್ಕ ಏನು ಮಾಡೀತು ಹೇಳಿ.”

“ಆ ಡಾಕ್ಟ್ರೇನೋ ಒಳ್ಳೆಯವನಂತೆ ಪಾಪ, ತಾಯಿಯ ಬಾಯಿಯ ಮುಂದೆ ಅವನದು ಏನೂ ನಡೆಯೋಲ್ಲ. ಹುಡುಗಿಯೇನೋ ದಂತದ ಬೊಂಬೆ ಹಾಗಿದ್ದಳು. ಈಗ ಅವಳನ್ನ ನೋಡೋಕೇ ಆಗೋಲ್ಲವಂತೆ.”

“ಈ ಅತ್ತೆ ಪಟ್ಟ ಬಂದುಬಿಡ್ತು ಅಂತ ಯಾಕೆ ಬೀಗ್ತಾರೋ. ನನಗಂತೂ ಇದೆಲ್ಲ ಸರಿಬೀಳೋಲ್ಲಮ್ಮ. ಸೊಸೆ ಅಂದರೆ ಬೀದಿಯೋಳೆ? ನಮ್ಮ ಮನೆಗೆ ಸೇರಿದೋಳು ತಾನೆ, ನಮ್ಮನೇಲಿ ನೋಡಿ.”

“ಸುಮ್ಮನೆ ಯಾಕೆ ಜಂಬ ಕೊಚ್ಚಿಕೋತೀರಿ, ಸುಮ್ಮನೆ ಇರಿ. ಬಾಯಿ ಬಿಟ್ಟರೆ ಬಣ್ಣಗೇಡೂ ಅಂತಾರಲ್ಲ ಹಾಗೆ.”

“ಏನ್ರೀ ನೀವು ನೋಡಿದ್ದು. ತಮ್ಮದನ್ನ ಮುಚ್ಚಿಕೊಂಡು ಇನ್ನೊಬ್ಬರದನ್ನ ಆಡಿಸಿಯಾಡೋಕೆ ಬರ್ತಾರೆ !”

“ಯಾತಕ್ರೀ ಹೀಗೆ ಜಗಳ ಆಡೋಕೆ ಹೊರಟ್ರಿ. ಸುಮ್ಮನೆ ನಿಮ್ಮ ಕೆಲಸ ನೋಡಿ” ಎಂದು ಹಿರಿಯರಾದ ಗೌರತ್ತೆ ಗದರಿಸಿ, ಅವರ ಬಾಯಿ ಮುಚ್ಚಿಸಿದರು.

□ □ □

“ಅವತ್ತು ಸೀತಕ್ಕನ ಮಗೂನ ಚೇಳು ಕಚ್ಚಿತಂತಲ್ಲ. ಪಂಡಿತರು ಊರಲ್ಲಿರೋ ಹೊತ್ತಿಗೆ ಅವರು ತಕ್ಷಣ ಬಂದು ಮದ್ದು ಕೊಟ್ಟರಂತಲ್ಲ. ಮಗು ಬದುಕಿಕೊಂಡಿತು. ಪಂಡಿತರಿಲ್ಲದೆ ಇದ್ದರೆ ಏನು ಗತಿ ಅಂತ ಸೀತಕ್ಕನೇ ಅವತ್ತು ಹೇಳಿದರು.”

“ಪಂಡಿತರ ಮದ್ದಿನಿಂದ ಅಲ್ಲ ಮಗು ಉಳಿದಿದ್ದು. ಕೇಶವ ಉಪಾಧ್ಯಾಯರು ಮಂತ್ರಿಸಿದ ವಿಭೂತಿ ಕೊಟ್ಟಿದ್ದರಿಂದ, ತಿಳಿಯಿತೋ.”

“ಕೇಶವ ಉಪಾಧ್ಯರು ಅಂದರೆ ಜ್ಞಾಪಕ ಬಂತು. ಇವತ್ತು ನನಗೆ ಅಡಕೆ ಸುಲಿಯೋದಕ್ಕೆ ಆಗ್ತಾ ಇತ್ತೆ? ಕೈನೋವು ಬಂದು ಅಡುಗೇನೂ ಮಾಡೋದಕ್ಕಾಗ್ದೆ ಕೂತುಬಿಟ್ಟಿದ್ದೆ. ಉಪಾಧ್ಯರು ಎಂಥ ಹೊತ್ತಿನಲ್ಲಿ ಎಣ್ಣೆ ಮಂತ್ರಿಸಿ ಕೊಟ್ಟರೋ, ಎರಡು ದಿವಸ ಹಚ್ತಾನೆ ನೋವು ಮಾಯ.”

“ನಿಮ್ಮ ಬೀಗಿತ್ತಿ ಮನೆ ಲಗ್ನದಲ್ಲಿ ಚೆನ್ನಾಗಿ ಓಡಾಡಿ ಕೆಲಸ ಮಾಡಿಬಿಟ್ರೆ. ಅದಕ್ಕೇ ಕೈ ನೋವು ಬಂತು. ಎರಡು ದಿವಸ ವಿಶ್ರಾಂತಿ ಕೊಟ್ಟಿದ್ದರೆ ತನಗೆ ತಾನೇ ನೋವು ನಿಲ್ತಾ ಇತ್ತು.”

‘‘ಅಲ್ವೇ, ಆ ಕೇಶವ ಉಪಾಧ್ಯರು ಇಂಜಿನಿಯರ್ ಕೇಶವಯ್ಯನವರ ಮನೆಗೆ ಲಗ್ನಕ್ಕೆ ಹೋಗಿದ್ದರಲ್ಲ. ಅವರ ಹೆಂಡತಿಗೆ ಬೆಂಗಳೂರಿಂದ ಒಂದು ಚಂದ್ರಹಾರ ಮಾಡಿಸಿಕೊಂಡು ತಂದಿದಾರೆ. ಎಷ್ಟು ಚೆನ್ನಾಗಿದೇಂತ! ನೋಡಿದರೆ ಕಣ್ಣು ಕೋರೈಸುತ್ತೆ!”

“ಅಂಥಾದ್ದನ್ನ ಮಾಡಿಸ್ಕೋಬೇಕು ಅಂತ ನನಗೆ ಶಾನೆ ಆಸೆ. ಆದರೆ ಅದರ ಬೆಲೆ ಕೇಳಿದರೆ ಮೈ ನಡುಗಿ ಹೋಯಿತು. ನಮ್ಮಂಥವರಿಗಲ್ಲ ಚಂದ್ರಹಾರ ಅಂತ ಸುಮ್ಮನಾದೆ. ನನಗೆ ಒಂದು ಜತೆ ಚಿನ್ನದ ಬಳೆ ಮಾಡಿಸಿಕೊಳ್ಳಬೇಕು ಅಂತ ತುಂಬ ದಿನದಿಂದ ಆಸೆ. ಅಡಕೆ ಸುಲಿದು ಬಂದ ದುಡ್ಡನ್ನೆಲ್ಲ ಕೂಡಿಹಾಕಿದೇನೆ. ಒಳ್ಳೆ ಪ್ಯಾಟ್ರನ್ ಆಗಬೇಕು.”

‘‘ನಮ್ಮ ಬಸವಾಪಟ್ಟಣದ ರತ್ನ ಮೈಸೂರಿನಿಂದ ಮಾಡಿಸಿಕೊಂಡು ಬಂದಿದಾಳಲ್ಲ. ಆ ಬಳೆ ಒಳ್ಳೆ ನಮೂನೆಯದಾಗಿದೆ.”

“ಅದನ್ನ ನಾನೂ ನೋಡಿದೆ. ಮೈಸೂರಲ್ಲಿ ಇನ್ನೂ ಒಳ್ಳೊಳ್ಳೆ ಡಿಜೈನು ಇದೆಯಂತೆ. ನಮ್ಮ ಲಕ್ಷ್ಮೀನಾರಾಯಣ ಮೈಸೂರ್ನಲ್ಲಿ ಇಂಜಿನೀಯರ್‌ಗೆ ಓದ್ತಿದಾನಲ್ಲ, ಅವನಿಗೆ ಹೇಳಿದೀನಿ. ಚಿನ್ನ ಮೂವತ್ತೈದು ರೂಪಾಯಿ ತೊಲಕ್ಕೆ ಇದ್ದಿದ್ದು ಈಗ ನಲವತ್ತೈದು ರೂಪಾಯಿ ಆಗಿಬಿಟ್ಟಿದೆ. ಸ್ವಲ್ಪ ತಡಿಯಮ್ಮ, ಮದುವೆ ಸೀಸನ್ ಮುಗಿದ ಮೇಲೆ ಚಿನ್ನದ ಬೆಲೆ ಇಳಿಯುತ್ತೆ. ಅದನ್ನ ನೋಡಿ ಮಾಡಿಸಿಕೊಡ್ತೀನಿ ಅಂದಿದಾನೆ.”

“ರೀ ! ಹಾಗಿದ್ರೆ ನಾನೂ ದುಡ್ಡು ಕೊಡ್ತೀನಿ, ನನಗೂ ಒಂದು ಜತೆ ಮಾಡಿಸಿ ತರಿಸಿಕೊಡಿ.”

“ನೋಡಬೇಕಮ್ಮ, ಕೇಳಿ ನೋಡ್ತೀನಿ. ಯಾರ್ಯಾರದ್ದಕ್ಕೋ ಯಾಕೆ ಕೈಹಾಕ್ತೀಯ, ಅವರಿಗೆ ನಾವು ಮಾಡಿಸಿದ್ದು ಸರಿಬರದೆ ಹೋದರೆ ತಾಪತ್ರಯ ಅಂತಾನೆ.”

"ಅಯ್ಯೋ ನಿಮ್ಮ ಜಂಬವೇ. ನನಗೆ ಬೇರೆ ಯಾರೂ ಇಲ್ಲ ಅಂತೀರಾ. ನಮ್ಮ ಸೋದರಮಾವನ ಮಗ ಬ್ಯಾಂಕಿನಲ್ಲಿ ಕೆಲಸದಲ್ಲಿದಾನೆ, ಮಂಗಳೂರಲ್ಲಿ. ಅಲ್ಲಿ ತರಹಾವಾರಿ ಡಿಸೈನು ಇದೆಯಂತೆ. ಅವನ ಕೈಲೇ ಹೇಳಿ ಮಾಡಿಸಿಕೊಳ್ಳುತ್ತೇನೆ."

□ □ □

"ಅಲ್ಲವೇ ವೆಂಕಟಲಕ್ಷ್ಮಿ, ನಿನ್ನ ತಮ್ಮನ ಮದುವೇನಲ್ಲಿ ಬೆಂಗಳೂರಿನಿಂದ ಬಂದಿದ್ದರಲ್ಲ ಬೀಗರ ಕಡೆಯವರು, ಆ ಬೀಗರ ಮೊದಲನೆ ಸೊಸೆ ಧಾರೆ ದಿವಸ ಉಟ್ಟುಕೊಂಡಿದ್ದರಲ್ಲ, ಆ ಸೀರೆ ಎಷ್ಟು ಚೆನ್ನಾಗಿತ್ತು. ಅದರ ಜರಿ, ಅದರ ಬಣ್ಣ, ಅದರ ಅಂಚಿನ ಮಾದರಿ ಎಲ್ಲ ತುಂಬ ಚೆನ್ನಾಗಿತ್ತು. ಅಂಥ ಸೀರೆ ನಮ್ಮ ಕಣ್ಣಿಗೇ ಬೀಳೋಲ್ಲವಲ್ಲ."

"ಬೆಂಗಳೂರು, ಮೈಸೂರಲ್ಲಿ ಕಣ್ಣಿಗೆ ಬೇಕಾದ ಸೀರೆಗಳಿರುತ್ತವೆಯಮ್ಮ. ಯಾರು ಛಾರ್ಜು ಕೊಟ್ಟುಕೊಂಡು ಮೈಸೂರು, ಬೆಂಗಳೂರಿಗೆ ಹೋಗಿ ಸೀರೆ ತರುವವರು? ನಮ್ಮ ಜನ್ಮ ಈ ಊರಿನಲ್ಲೇ. ಕೊಣನೂರಿನ ಪಾಪಯ್ಯಶೆಟ್ಟಿ ಅಂಗಡೀನೆ ಗತಿ ನಮಗೆ. ಅವನು ತರಿಸಿದ್ರಲ್ಲೇ ನಾವು ನೋಡಿ ಆರಿಸಿಕೊಳ್ಳಬೇಕು."

"ಅವ್ನು ಜಾಸ್ತಿ ಲಾಭ ಇಟ್ಟುಕೊಂಡಿರ್ತಾನೆ ಕಣೆ. ಒಳ್ಳೆ ಸೀರೆಗಳನ್ನು ಅವನು ಯಾಕೆ ತರಿಸ್ತಾನೆ ಹೇಳು?"

□ □ □

"ನೋಡು ಸರಸು, ನಿನ್ನ ಮಗು ಅದೇನೋ ಮಾಡಿಕೊಂಡು ಅಳ್ತಾ ಬಂದು ನಿಂತಿದೆ."

"ಅಯ್ಯೋ, ಅಯ್ಯೋ. ಮುಂಡೇದರ ಮೂಗ್ನಲ್ಲಿ ರಕ್ತ ಸೋರ್ತಾ ಇದೆ. ಅದೆಲ್ಲಿ ಹಾಳಾಗಿ ಹೋದಳು ಸಾವಿತ್ರು. ಮಗೂನ ಬಿಟ್ಟು ಎಲ್ಲೋ ಆಟ ಆಡ್ತಾ ಕುಕ್ಕರಬಡಕೊಂಡು ಇರಬೇಕು. ಮಾಡ್ತೀನಿ ಅವಳಿಗೆ. ಏನಾಯ್ತು ಕಂದ ! ಅಕ್ಕ ಎಲ್ಲಿ ಹೋದಳು? ಬರ್ತೀನಿ ತಾಳು" ಎಂದು ಹೇಳಿ ಅಡಕೆ ಸುಲಿಯುವುದನ್ನು ಬಿಟ್ಟು ಎದ್ದು ಹೋಗಿ ಮಗುವನ್ನು ಎತ್ತಿಕೊಂಡು ಮೂಗು, ಕೈ-ಬಾಯಿ ಎಲ್ಲ ಒರೆಸಿ ಸಮಾಧಾನ ಮಾಡಲಾರಂಭಿಸಿದಳು.

□ □ □

"ಅಲ್ಲಿ ನೋಡಿ, ನಿಮ್ಮ ಮಗಳು ಬಂದು ಕರೀತಾ ಇದಾಳೆ ಲಕ್ಷ್ಮತ್ತೆ."

"ಏನೇ ಅದೂ. ಇಲ್ಲಿ ಯಾಕೆ ಬಂದೆ ?"

"ಅದೇ ಅಮ್ಮ, ಅವರು ಬಂದಿದಾರೆ" ಎಂದು ನಾಚಿಕೊಳ್ಳುತ್ತ ಓಡಿಹೋದಳು.

"ಅಳಿಯಂದಿರು ಬಂದಿದಾರೇಂತ ಕಾಣುತ್ತೆ ಲಕ್ಷ್ಮತ್ತೆ. ಅಳಿಯಂದಿರಿಗೆ ಕೋಪ ಬಂದುಬಿಟ್ಟೀತು, ಬೇಗ ಹೋಗಿ" ಎಂದು ಹೇಳಲು ಲಗುಬಗೆಯಿಂದ ಲಕ್ಷ್ಮತ್ತೆ ಮನೆಯ ಕಡೆ ಧಾವಿಸಿದರು.

"ಮೊನ್ನೆ ತಾನೆ ಬಂದಿದ್ದನಲ್ಲೆ, ಪುನಃ ಬಂದಿದಾನೆ" ಮುಸಿನಗುತ್ತ ವೆಂಕಟಲಕ್ಷ್ಮಿ ನುಡಿದಳು.

"ಅಲ್ಲವೇ ವೆಂಕಟಲಕ್ಷ್ಮಿ, ನಿನ್ನದನ್ನೇ ಮರೆತುಬಿಟ್ಟೆಯಲ್ಲೇ. ನಿನ್ನ ಯಜಮಾನರು ಎರಡೆರಡು ದಿವಸಕ್ಕೂ ಓಡಿಬರ್ತಾ ಇರಲಿಲ್ಲವೆ? ಒಂದು ಸಲ ಬಂದಾಗ ನೀನು ಒಳಗಿರಲಿಲ್ಲ ಅಂತ ಕೋಪ ಮಾಡಿಕೊಂಡು ಓಡಿಹೋದ್ದು ಜ್ಞಾಪಕ ಇಲ್ಲವೇ?"

"ಹೋಗೇ ಸರಸು. ಏನೇನೋ ಹೇಳ್ತೀಯ !"

ಎಲ್ಲರೂ ಗೊಳ್ಳೆಂದು ನಕ್ಕು ಖುಷಿಪಟ್ಟರು.

ಹೀಗೆ ಮುಂದುವರಿದಿರುತ್ತದೆ ಸಂಭಾಷಣೆ. ವಿನೋದ, ಸರಸ, ಹಾಸ್ಯಗಳ ಸರಣಿ ಕಾಲಪ್ರವಾಹದೊಡನೆ ಹರಿದುಹೋಗುತ್ತಿರುತ್ತದೆ. ಜತೆಗೆ ಅಡಕೆ ಸುಲಿಯುವ ಕಾಯಕ ನಿರಂತರವಾಗಿ ಮುಂದೆ ಸಾಗಿರುತ್ತದೆ.

೯. ಅಭ್ಯಂಜನ

ಎಣ್ಣೆ ನೀರು ಎರೆದುಕೊಳ್ಳುವುದು ಅಥವಾ ಅಭ್ಯಂಜನವೆಂದರೆ ಅದು ಸಂಕೇತಿಗಳ ಜೀವನದ ಒಂದು ಮುಖ್ಯ ಅಂಗ. ಅಭ್ಯಂಗನ ಮತ್ತು ಅಭ್ಯಂಜನ ಎಂಬ ಎರಡು ಪದಗಳೂ ಒಂದೇ ಅರ್ಥವನ್ನು ಕೊಡುತ್ತವೆ. ಎರಡೂ ಪದಗಳ ವ್ಯುತ್ಪತ್ತಿ ಒಂದೇ. ಅಭಿ + ಅಜ್ ಎಂಬ ಎರಡೂ ಸೇರಿ ಅಭ್ಯಂಜನ ಅಥವ ಅಭ್ಯಂಗನ ಎಂಬ ರೂಪವನ್ನು ತಾಳುತ್ತವೆ. ಮೈಗೆ ತೈಲ ಮೊದಲಾದುವನ್ನು ಲೇಪನ ಮಾಡುವುದು ಎಂಬುದು ಈ ಪದದ ಅರ್ಥ. ಕೆಲವರು ತೈಲಾಭ್ಯಂಗ ಎಂಬ ಪದವನ್ನೂ ಪ್ರಯೋಗ ಮಾಡಿದ್ದಾರೆ. ಮೈ, ಕೈ, ಕಾಲು, ಮುಖಕ್ಕೂ, ತಲೆಗೂ ಚೆನ್ನಾಗಿ ಎಣ್ಣೆಯನ್ನು ತಿಕ್ಕಿಕೊಂಡು ಸ್ವಲ್ಪ ಹೊತ್ತು ನೆನೆದು ಅನಂತರ ಬಿಸಿನೀರಿನಲ್ಲಿ ಸ್ನಾನ ಮಾಡುವುದೇ

ಅಭ್ಯಂಜನ. ಇದನ್ನು ಸಾಮಾನ್ಯವಾಗಿ ಎಣ್ಣೆ-ನೀರು ಹಾಕಿಕೊಳ್ಳುವುದು, ಎರೆದುಕೊಳ್ಳುವುದು ಎಂದು ವ್ಯವಹಾರದಲ್ಲಿ ಹೇಳುವರು. 'ಅಭ್ಯಂಜನ ಎಂದರೆ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡಿ ಮೈಯ್ಯನ್ನು ಉಜ್ಜಿ ಶುದ್ಧಿ ಮಾಡುವಿಕೆ' ಎಂದು ಶಾಸ್ತ್ರದಲ್ಲಿ ಹೇಳಿದೆ. ಎಣ್ಣೆ ನೀರು ಮೈಯಿನ ಕೊಳೆಯನ್ನು ತೆಗೆದು ಚರ್ಮದ ರಂಧ್ರಗಳಲ್ಲಿರುವ ಕೊಳೆಯು ಹೊರಬರುವಂತೆ ಮಾಡಿ ಚರ್ಮವನ್ನು ಶುದ್ಧಿ ಮಾಡುವುದರಿಂದ ಚರ್ಮದ ಸ್ವಚ್ಛತೆಗೂ, ಆರೋಗ್ಯಕ್ಕೂ ಕಾರಣವಾಗುವುದು. ಆದರೆ ಅಷ್ಟೇ ಅಲ್ಲ ಅದರ ಗುಣ. ಅಭ್ಯಂಜನ ಕಣ್ಣನ್ನು ಸ್ವಚ್ಛಗೊಳಿಸುವುದು ಮತ್ತು ಮಿದುಳನ್ನು ತಂಪಾಗಿಡುವುದು ಎಂದು ಅಭ್ಯಂಜನದ ಮಹಿಮೆಯನ್ನು ಹೊಗಳುತ್ತಾರೆ. ಎಣ್ಣೆಯನ್ನು ತಲೆಗೆ ಚೆನ್ನಾಗಿ ತಿಕ್ಕಿ ಹಚ್ಚಿಕೊಳ್ಳುವುದಷ್ಟಕ್ಕೇ ಮುಗಿಸಬಾರದು. ಸ್ವಲ್ಪ ಎಣ್ಣೆಯನ್ನು ಕೈಯಲ್ಲಿ ತೆಗೆದುಕೊಂಡು ಕತ್ತಿನ ಹಿಂಭಾಗದ ನರಗಳ ಮೇಲೆ ಮಸಾಜು ಮಾಡಬೇಕು. ಹೀಗೆ ಮಾಡಿದರೆ ಮೆದುಳಿಗೆ ಹೋಗುವ ಮತ್ತು ಅಲ್ಲಿಂದ ಹೊರಹೊರಟು ಅಂಗಾಂಗಗಳಿಗೆ ಸಂದೇಶವನ್ನು ಒಯ್ಯುವ ನರಗಳು ಹಾಗೂ ರಕ್ತವಾಹಿನಿಗಳು ಪುಟಗೊಂಡು ಉತ್ತಮ ಆರೋಗ್ಯವನ್ನು ನೀಡುತ್ತವೆ ಎಂದು ಯಾವುದೋ ಒಂದು ಗ್ರಂಥದಲ್ಲಿ ಓದಿದ ನೆನಪು. ಹಾಗೆಯೇ, ಕಿವಿಗಳಿಗೆ ಒಂದು ತೊಟ್ಟು ಎಣ್ಣೆಯನ್ನು ಬಿಟ್ಟುಕೊಳ್ಳಬೇಕು. ಇದರಿಂದ ಕಿವಿ ಮತ್ತು ಕಣ್ಣುಗಳ ಆರೋಗ್ಯ ಚೆನ್ನಾಗುತ್ತದೆ ಎಂದು ಒಬ್ಬರು ಹಿರಿಯರು ಹೇಳುತ್ತಿದ್ದರು. ಅಲ್ಲದೆ ಕಷ್ಟಪಟ್ಟು ಮೈ ಮುರಿದು ದುಡಿಯುವ ಜನರ ಮೈ-ಕೈ ನೋವು ಹೋಗಿ ಹಾಯೆನಿಸುತ್ತದೆ. ಮಾಂಸಖಂಡಗಳು ದೃಢವಾಗುತ್ತವೆ. ಹೀಗೆ ಅಭ್ಯಂಜನವು ಆರೋಗ್ಯಭಾಗ್ಯಕ್ಕೆ ಬಾಗಿಲು ಎಂದು ಹೇಳಬಹುದು.

'ಬೆಟ್ಟದ ಜೀವ' ಕಾದಂಬರಿಯಲ್ಲಿ ಶಿವರಾಮ ಕಾರಂತರು, ಮೈಗೆಲ್ಲ ಎಣ್ಣೆ ಸವರಿಕೊಂಡು ಅಭ್ಯಂಜನಕ್ಕೆ ಸಿದ್ಧನಾದ ಗೋಪಾಲಯ್ಯನ ಮಹದ್ ವ್ಯಕ್ತಿತ್ವವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಒಲೆಯ ಉರಿಯ ಬೆಳಕಿನಲ್ಲಿ ತೈಲ-ಲೇಪನಗೊಂಡ ಗೋಪಾಲಯ್ಯನ ದೃಢ ಮೈಕಟ್ಟು ಹೇಗೆ ಹೊಳೆಯುತ್ತಿತ್ತು ಎನ್ನುವುದನ್ನು ಅಲ್ಲಿ ಕಾಣಬಹುದು. ಕುವೆಂಪುರವರು 'ಮಲೆನಾಡಿನ ಚಿತ್ರಗಳು' ಎಂಬ ತಮ್ಮ ಗ್ರಂಥದಲ್ಲಿ "ಅಜ್ಜಯ್ಯನ ಅಭ್ಯಂಜನ" ಎಂಬ ಲೇಖನದಲ್ಲಿ ಮಲೆನಾಡಿನ ಅಭ್ಯಂಜನದ ವೈಖರಿಯನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಸಂಕೇತಿಗಳಲ್ಲಿ ಗಂಡಸರಾಗಲಿ, ಹೆಂಗಸರಾಗಲಿ ಅಭ್ಯಂಜನಕ್ಕೆ ತಮ್ಮ ತಮ್ಮ ಜೀವನದಲ್ಲಿ ಬಹು ಮುಖ್ಯ ಸ್ಥಾನವನ್ನು ನೀಡಿದ್ದಾರೆ. ಹೆಂಗಸರಿಗೆ ಮತ್ತು ಮಕ್ಕಳಿಗೆ ಇದು ಬೇಕೇ ಬೇಕು. ವಾರಕ್ಕೊಮ್ಮೆ ಅಥವಾ ಎರಡು ಬಾರಿ ಇವರು ಎರೆದುಕೊಳ್ಳಲೇಬೇಕು. ಬಸುರಿ ಬಾಣಂತಿಯರ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡುವುದು ಎಣ್ಣೆನೀರು. ಅಂಗಾಂಗಗಳಿಗೆ ಎಣ್ಣೆಯನ್ನು ತಿಕ್ಕಿ, ಬಿಸಿನೀರಿನ ಸ್ನಾನ ಮಾಡುವುದರಿಂದ ಚರ್ಮದ ಕಾಂತಿ ಹೆಚ್ಚುವುದು, ಅಂಗಾಂಗಗಳ ನೋವು ನೀಗುವುದು, ಮೆದುಳಿಗೆ ತಂಪು ಉಂಟಾಗುವುದು. ಆರೋಗ್ಯಕ್ಕೋಸ್ಕರ ಮಾತ್ರವಲ್ಲದೆ ಮಂಗಳ ಕಾರ್ಯಗಳಲ್ಲೂ ಎಣ್ಣೆ ನೀರಿಗೆ ಪ್ರಥಮ ಸ್ಥಾನವಿದೆ. ಯಾವ ನೋಹೀ ವ್ರತಗಳನ್ನು ಮಾಡಬೇಕಾದರೂ, ಬೆಳಗ್ಗೆ ಎರೆದುಕೊಂಡು ಅನಂತರ ಮಡಿಯುಟ್ಟು ಪೂಜೆ ಮಾಡಬೇಕು. ಮದುವೆ ಸಮಾರಂಭದಲ್ಲಿ ಗಂಡು ಹೆಣ್ಣುಗಳಿಗೆ **ಎಣ್ಣೆ ಶಾಸ್ತ್ರ** ಇದ್ದೇ ಇರಬೇಕು.

ಎಳೆಯ ಮಕ್ಕಳಿಗೆ ಹಿಂದಿನ ಕಾಲದಲ್ಲಿ ಪರಿಷ್ಕಾರವಾಗಿ ಎಣ್ಣೆ ತಿಕ್ಕಿ ಸ್ನಾನ ಮಾಡಿಸುತ್ತಿದ್ದದ್ದು ವೈಶಿಷ್ಟ್ಯಪೂರ್ಣವಾಗಿರುತ್ತಿತ್ತು. ಹೆಂಗಸರು ಎಳೆಯ ಮಕ್ಕಳನ್ನು, ಜೋಡಿಸಿ ನೀಡಿದ ತಮ್ಮ ಕಾಲುಗಳ ಮೇಲೆ ಮಲಗಿಸಿಕೊಂಡು ಮೈ, ಕೈ-ಕಾಲು, ಎದೆ, ಹೊಟ್ಟೆ, ಬೆನ್ನು, ಮೊದಲಾದ ಎಲ್ಲ ಅಂಗಾಂಗಗಳಿಗೂ ಎಣ್ಣೆಯನ್ನು ಸವರಿ ಮೃದುವಾಗಿ ನೀವುತ್ತಾರೆ. ಮುಖಕ್ಕೆ ಎಣ್ಣೆ ಹಚ್ಚಿ ಮೂಗು, ಕೆನ್ನೆ ಮತ್ತು ಹುಬ್ಬುಗಳನ್ನು ನಯವಾಗಿ ಸವರುತ್ತಾರೆ. ತಲೆಗೆ ಎಣ್ಣೆ ಹಾಕಿ ಹಸ್ತದಿಂದ ತಟ್ಟುತ್ತ, ನೀವುತ್ತಾರೆ. ಪ್ರತಿ ಸಲ ಎಣ್ಣೆ ಹಾಕುವಾಗಲೂ ತಲೆಯನ್ನು ತಟ್ಟುತ್ತ ಕೂದಲನ್ನು ಸವರುತ್ತ ಇದ್ದು ಅನಂತರ ಹದವಾದ ಬಿಸಿನೀರನ್ನು ಹಾಕಿ ನೀರೆರೆಯುವುದರಿಂದ ಅಲ್ಪಸ್ವಲ್ಪ ಓರೆಕೋರೆಗಳಿರುವ ತಲೆಯು ಆರೆಂಟು ತಿಂಗಳಲ್ಲಿ ದುಂಡಗೆ ಆಗುವುದು. ಮೂಗನ್ನು ಮೇಲಿನಿಂದ ಕೆಳಕ್ಕೆ ಮೃದುವಾಗಿ ಸವರುವುದರಿಂದ ಮುಂದೆ ಮೂಗು ಗರಿಗರಿಯಾಗುವುದು. ಮಕ್ಕಳಿಗೆ ಕೈಕಾಲುಗಳನ್ನು ನೀವಿ ಮಸಾಜು ಮಾಡಬೇಕು ಎಂದು ಆಧುನಿಕ ಶಿಶುಚಿಕಿತ್ಸಾ ಪದ್ಧತಿಯಲ್ಲಿ ತಿಳಿಸಿರುವುದನ್ನು ಹಿಂದಿನ ಕಾಲದಲ್ಲಿ ಅನುಭವದಿಂದ ತಿಳಿದುಕೊಂಡು ಆಚರಣೆಯಲ್ಲಿ ತಂದಿದ್ದರು. ಈಗಿನ ಕಾಲದ ಆಧುನಿಕ ವಿದ್ಯಾಭ್ಯಾಸವನ್ನು ಗಳಿಸಿದ ಹಲವು ಜನ ಯುವತಿಯರು ಮಕ್ಕಳನ್ನು ಹೇಗೆ ಪಾಲಿಸಿ ಪೋಷಿಸಿ ಬೆಳೆಸಬೇಕು ಎಂಬುದನ್ನು ಪುಸ್ತಕಗಳಲ್ಲಿ ಓದಿ ತಿಳಿದುಕೊಂಡಿರುತ್ತಾರಾದರೂ ಮಕ್ಕಳಿಗೆ ನೀರು ಹಾಕುವ ವಿಷಯದಲ್ಲಿ ಅವರಿಗೆ ಸರಿಯಾದ ಮಾರ್ಗದರ್ಶನ ದೊರೆಯದೇ ಹೋಗುವುದು ಒಂದು ಕೊರತೆಯೇ ಸರಿ. ಎಳೆಯ ಮಕ್ಕಳಿಗೆ ಅವಕ್ಕೆ ಹಿತವಾಗುವಂತೆ ಎಣ್ಣೆ ನೀರು ಹಾಕಲು ಬರದೆ ಹೋದರೆ ಮಕ್ಕಳು ಮುಂದೆ ಎಣ್ಣೆ ನೀರು ಎಂದರೇ ಹೆದರಿಕೊಂಡು ಬಿಡುತ್ತವೆ.

ಆಯುರ್ವೇದದಲ್ಲಿ ಅಭ್ಯಂಜನಕ್ಕೆ ಅಚ್ಚೆಳ್ಳೆಣ್ಣೆಯನ್ನು ಹೇಳಿದ್ದಾರೆಂದು ಕೇಳಿದ್ದೇನೆ. ಹಳೆಯ ಮೈಸೂರಿನ ಜನ ಅದರಲ್ಲೂ ಹಳ್ಳಿಯವರು ಹರಳೆಣ್ಣೆಯನ್ನು ಉಪಯೋಗಿಸುವುದು ಹಿಂದಿನಿಂದ ಬಂದ ಪದ್ಧತಿ. ಸಂಕೇತಿಗಳು ಕೂಡ ಅಭ್ಯಂಜನಕ್ಕೆ ಹರಳೆಣ್ಣೆಯನ್ನೇ

ಬಳಸುತ್ತಿದ್ದರು. ಹರಳೆಣ್ಣೆ ತುಂಬ ತಂಪು ಎಂದು ಹಿರಿಯರು ಹೇಳುತ್ತಾರೆ. ಆದರೆ ಇದರಲ್ಲಿ ಜಿಡ್ಡು ಜಾಸ್ತಿ. ಆದುದರಿಂದ ಸೀಗೆಕಾಯಿಪುಡಿಯಿಂದ ಚೆನ್ನಾಗಿ ಉಜ್ಜಿ ಎಣ್ಣೆಯನ್ನು ತೊಳೆದುಕೊಳ್ಳಬೇಕಾಗುತ್ತದೆ. ಆಧುನಿಕರಿಗೆ ಇದು ಸ್ವಲ್ಪ ಶ್ರಮ ಎನ್ನಿಸುತ್ತದೆ. ಆದುದರಿಂದ ಇಂಥವರು ಭೃಂಗಾಮಲಕ ತೈಲ, ಬ್ರಾಹ್ಮಿಆಮ್ಲ ತೈಲ ಮೊದಲಾದವುಗಳನ್ನು ಉಪಯೋಗಿಸುತ್ತಾರೆ. ಇನ್ನೂ ಆಧುನಿಕರಂತೂ ವಿಧವಿಧವಾದ ಬಣ್ಣಬಣ್ಣಗಳ ಸುವಾಸನೆಯ ಶಾಂಪುವನ್ನು ಬಳಸುತ್ತಾರೆ. ಆದರೆ ಶಾಸ್ತ್ರೋಕ್ತವಾಗಿ ಎಣ್ಣೆ ತಿಕ್ಕಿಕೊಂಡು ಅಭ್ಯಂಜನ ಮಾಡುವುದರ ಸುಖ, ಸೊಗಸು, ಪ್ರಯೋಜನ ಈ ಆಧುನಿಕ ಸೌಂದರ್ಯವರ್ಧಕಗಳಿಂದ ದೊರೆಯಲಾರದೆಂದೇ ನನ್ನ ನಂಬಿಕೆ.

ಎಣ್ಣೆ ಹಾಕಿಕೊಳ್ಳುವುದೆಂದರೆ ಸುಮ್ಮನೆ ಅಂಗಾಂಗಗಳಿಗೆ ಎಣ್ಣೆಯನ್ನು ಸವರಿಕೊಳ್ಳುವುದು ಎಂದಲ್ಲ. ಮೈ, ಕೈ-ಕಾಲುಗಳಿಗೆ ಎಣ್ಣೆಯನ್ನು ಸವರಿಕೊಂಡು ಮಸಾಜ್ ಮಾಡಬೇಕು. ಆಯಾಯಾ ಅಂಗರಚನೆಗೆ ತಕ್ಕಂತೆ ಕೈಗಳಿಂದ ನೀವಬೇಕು. ತಾವೇ ಎಣ್ಣೆ ಹಾಕಿಕೊಳ್ಳುವುದಕ್ಕಿಂತ, ಇನ್ನೊಬ್ಬರು ಎಣ್ಣೆಯನ್ನು ತಿಕ್ಕಿ ಮಸಾಜ್ ಮಾಡಿದರೆ ಎಣ್ಣೆ ಹಾಕಿಸಿಕೊಳ್ಳುವವನಿಗೆ ಸುಖ. ಹಿಂದಿನ ಕಾಲದಲ್ಲಿ ಅರಮನೆಗಳಲ್ಲಿ, ಶ್ರೀಮಂತರ ಸೌಧಗಳಲ್ಲಿ ಎಣ್ಣೆ ಹಾಕುವ ಕಲೆಯನ್ನು ಕರಗತ ಮಾಡಿಕೊಂಡಂಥ ನಿಪುಣರು ಇದ್ದರು. ಈಗಲೂ ಬೊಂಬಾಯಿ ಪಟ್ಟಣದಂಥ ಕೆಲವು ಕಡೆ ಎಣ್ಣೆ ಹಾಕಿ ಮಸಾಜ್ ಮಾಡುವ ವೃತ್ತಿಪರರಿದ್ದಾರೆಂಬುದಾಗಿ ತಿಳಿದಿದ್ದೇನೆ. ಎಲ್ಲಕ್ಕಿಂತ ಮುಖ್ಯವಾಗಿ ತಲೆಗೆ ಎಣ್ಣೆ ಹಚ್ಚುವ ಕೆಲಸ ಹೆಚ್ಚು ಮಹತ್ತ್ವದ್ದು. ಮಾನವನ ಅಂಗಗಳಲ್ಲೆಲ್ಲ ತಲೆಯೇ ಪ್ರಧಾನವಾದುದು. ತಲೆ ಸರಿ ಇದ್ದರೆ ಎಲ್ಲವೂ ಸರಿಯಾಗಿರುವುದು. ದೇಹವನ್ನು ಆಳುವ ಪ್ರಧಾನ ಕಛೇರಿ ತಲೆಯಲ್ಲಿದೆ. ಆದುದರಿಂದ ಎಣ್ಣೆ ಹಾಕುವಲ್ಲಿ ತಲೆಗೆ ಹೆಚ್ಚು ಗಮನ ಕೊಡಬೇಕಾದುದು ಸಹಜ. ತಲೆಗೆ ಎಣ್ಣೆ ಹಾಕುವವರು ಸ್ವಲ್ಪ ಸ್ವಲ್ಪವಾಗಿ ಎಣ್ಣೆಯನ್ನು ಕೈಯಲ್ಲಿ ತೆಗೆದುಕೊಂಡು ತಲೆಗೆ ತಿಕ್ಕಬೇಕು. ತಲೆಯ ಎಲ್ಲ ಭಾಗಕ್ಕೂ ಎಣ್ಣೆಯನ್ನು ನೀವಿನೀವಿ ತಿಕ್ಕಿದ ಅನಂತರ ಎರಡೂ ಹಸ್ತಗಳಿಂದ ತಲೆಯನ್ನು ತಟ್ಟಬೇಕು. ಸಂಗೀತಗಾರರಾದರೆ ತಲೆಯನ್ನು ತಟ್ಟುವ ಶಬ್ದದಲ್ಲೇ ಹಲವು ತಾಳಗಳನ್ನು ಪ್ರದರ್ಶಿಸುತ್ತಾರೆ. ತಲೆಗೆ ಏಟು ಬೀಳುವಂತೆ ತಲೆಯನ್ನು ಗುದ್ದಬಾರದು. ಲಯಬದ್ಧವಾಗಿ ತಟ್ಟಬೇಕು. ಹೀಗೆ ಎಣ್ಣೆಯ ಮರ್ದನ ಆದ ಮೇಲೆ ಸುಮಾರು ಒಂದು ಗಂಟೆಯ ಕಾಲ ನೆನೆಯಬೇಕು. "ನೆನೆಯದೆ ನೀರು ಹಾಕಿಕೊಂಡರೆ ಅಭ್ಯಂಜನದ ಪೂರ್ಣ ಫಲ ದೊರಕುವುದಿಲ್ಲ; ಸುಮ್ಮನೆ ಎಣ್ಣೆ, ಸೀಗೆಕಾಯಿ ದಂಡ" ಎನ್ನುತ್ತಿದ್ದರು ಹಿಂದಿನವರು. "ತಲೆಗೆ ಎಣ್ಣೆಯನ್ನು ಹಾಕುವುದರಲ್ಲಿ ಒಂದು ಕ್ರಮವಿದೆ. ಮೊದಲು ತಲೆಗೆ ಎಣ್ಣೆಯನ್ನು ಕುಡಿಸಿ ಅನಂತರ ತಟ್ಟುವುದರ ಮೂಲಕ ಪುನಃ ಆ ಎಣ್ಣೆಯನ್ನು ಹೊರಕ್ಕೆ ಹೊರಡಿಸಬೇಕು. ಆಗ ನಿಜವಾಗಿ ಎಣ್ಣೆ ಹಾಕಿಕೊಂಡಂತೆ" ಎನ್ನುತ್ತಿದ್ದರು ನಮ್ಮ ದೊಡ್ಡಪ್ಪನವರು.

ಎಣ್ಣೆಯನ್ನು ತಿಕ್ಕಿಕೊಂಡು ನೆನೆದ ಅನಂತರ ಬಿಸಿನೀರಿನ ಸ್ನಾನ. ದೊಡ್ಡ ತಾಮ್ರದ ಹಂಡೆಯ ಭರ್ತಿ ನೀರನ್ನು ಕಾಯಿಸಿ ಹದ ಮಾಡಿಕೊಳ್ಳಬೇಕು. ತೋಟಗಳಲ್ಲಿ ದೊರಕುವ ಗೊದಮೊಟ್ಟೆ ಮತ್ತು ಸೋಗೆ ಮೊದಲಾದುವುಗಳೇ ನೀರು ಕಾಯಿಸಲು ಇಂಧನ. ನೀರು 'ಸ್ವಲ್ಪ' ಬಿಸಿಯಾದರೆ ಸಾಲದು. ಅದು ಸುಡುತ್ತಿರಬೇಕು. ನಾನು ಹಿಂದೆ ನೋಡಿದ ಅನೇಕ ಸಂದರ್ಭಗಳಲ್ಲಿ ಈ ನೀರಿಗೆ ನಾವುಗಳು ಕೈ ಹಾಕಲು ಆಗುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಸುಡುತ್ತಿತ್ತು. ನೀರನ್ನು ಕೊಳದಪ್ಪಲೆಯಲ್ಲಿ ತುಂಬಿಕೊಂಡು, ಬಚ್ಚಲಿನಲ್ಲಿ ಕುಳಿತವರ ಮೇಲೆ ಒಬ್ಬರು ಹಾಕುವರು. ಬಚ್ಚಲು ಎಂದರೆ ಈಗಿನ ಕಾಲದವರಿಗೆ ಆ ಕಲ್ಪನೆ ಬರಲಾರದು. ಏಕೆಂದರೆ ಈಗಿನ ಕಾಲದಲ್ಲಿ ಸ್ನಾನ ಮಾಡುವ ನೆಲಕ್ಕೆ ಚಪ್ಪಡಿಯನ್ನೋ ಇಲ್ಲವೇ ಸೊಗಸಾದ ಹೊಳೆಯುವ ಹೆಂಚುಗಳನ್ನೋ ಹಾಕಿರುತ್ತಾರೆ. ಇವು ಆಧುನಿಕ ಬಾತ್‌ರೂಮುಗಳು. ಹಳ್ಳಿಯ ಆ ಬಚ್ಚಲುಗಳೆಂದರೆ ಒಂದು ಸಣ್ಣ ಬಾವಿ ಎನ್ನೋಣವೇ? ಆ ಬಚ್ಚಲುಗಳ ಆಳ ನಾಲ್ಕೈದು ಅಡಿ. ನೆಲವನ್ನು ಅಗೆದು ಸುತ್ತ ನಾಲ್ಕೂ ಕಡೆಗೆ ಇಟ್ಟಿಗೆಯ ಕಟ್ಟೆಯನ್ನು ಕಟ್ಟಿ ನೆಲಕ್ಕೆ ಚಪ್ಪಡಿ ಹಾಸಿರುತ್ತಿತ್ತು. ಹತ್ತಲೂ-ಇಳಿಯಲೂ ಒಂದೋ ಎರಡೋ ಮೆಟ್ಟಲು ಇರುತ್ತಿತ್ತು. ಹೀಗೆ ಆಳದ ಬಚ್ಚಲಿನಲ್ಲಿ ಕುಳಿತವರ ಮೇಲೆ, ಒಬ್ಬರು ಮೇಲೆ ಹಂಡೆಯ ಬಳಿ ನಿಂತು, ಕೊಳದಪ್ಪಲೆಯಲ್ಲಿ ಹಂಡೆಯಿಂದ ನೀರನ್ನು ತುಂಬಿಕೊಂಡು ಹಾಕಬೇಕು. ಹೀಗೆ ನೀರು ಹಾಕುವುದೂ ಒಂದು ಕಲೆ. ಜೊಳ್ ಎಂದು ನೀರನ್ನು ಸುರಿಯುವುದು ಸರಿಯಾದ ಕ್ರಮವಲ್ಲ. ಹಾಗೆ ಹಾಕಿದರೆ ನೀರು ಹಾಕಿಸಿಕೊಳ್ಳುವವರು ತಮ್ಮ ಮೈಮೇಲೆ ಬಿದ್ದ ನೀರನ್ನು ತಡೆದುಕೊಳ್ಳಲು ಆಗುವುದಿಲ್ಲ. ಮೈಯೆಲ್ಲಾ ಸುಟ್ಟು ಎದ್ದೆದ್ದು ಕುಣಿಯುವಂತಾಗುತ್ತದೆ. ಮೇಲಿನಿಂದ ಹಾಕಿದ ಬಿಸಿನೀರು ಒಂದು ಮೊತ್ತವಾಗಿ ಟಪ್ ಎಂದು ಮೈ ಮೇಲಕ್ಕೋ ತಲೆಯ ಮೇಲಕ್ಕೋ ಬೀಳಬೇಕು; ಆಗ ನೀರು ಮೈಯನ್ನು ಸುಡುವುದಿಲ್ಲ. ತಲೆಯ ಮೇಲಕ್ಕೆ, ಭುಜಗಳ ಮೇಲಕ್ಕೆ, ಎದೆಗೆ, ತೊಡೆಗೆ ನೀರು ಬೀಳುವಂತೆ ನೀರು ಹಾಕಿಸಿಕೊಳ್ಳುವವರು, ದೇಹದ ಆಯಾ ಭಾಗವನ್ನು ತೋರಿಸುವರು. ದೇಹದ ಪ್ರತಿಯೊಂದು ಭಾಗಕ್ಕೂ ಉಪಶಮನ ಸಿಕ್ಕಿ ಹಿತವಾಗುವುದು. ಮಾಂಸಖಂಡಗಳ ಮರ್ದನವಾದಂತಾಗಿ ನೋವು ಹೋಗುವುದು. ಹೀಗೆ ಮೊದಲ ಸಲದ ನೀರು ಸುಮಾರು ಅರ್ಧ ಹಂಡೆ ಅಥವಾ ಹತ್ತು ಹನ್ನೆರಡು ಕೊಡದಷ್ಟು ಆಗಿರುತ್ತದೆ. ಅನಂತರ ಸೀಗೇಕಾಯಿ ಪುಡಿಯಿಂದ ಉಜ್ಜಿ ಎಣ್ಣೆಯನ್ನು ಹೋಗಲಾಡಿಸಿಕೊಳ್ಳಬೇಕು. ಅನಂತರ ಉಳಿದ

ನೀರನ್ನು ಹಾಕಿಸಿಕೊಂಡು ತಲೆ ಮೈ ಕೈ ಕಾಲುಗಳನ್ನು ತೊಳೆದುಕೊಂಡು 'ವೆಂಕಟರಮಣ, ಗೋವಿಂದ' ಎಂದುಕೊಂಡು ಮೇಲಕ್ಕೆ ಬರುವುದು.

ಸೀಗೆಕಾಯಿ ಉಜ್ಜಿಸಿಕೊಳ್ಳುವಾಗ ಮಕ್ಕಳಿಗೆ ಇದೊಂದು ಉಪದ್ರವ ಎನ್ನಿಸುವುದು ಸಹಜ. ಸೀಗೆಕಾಯಿ ಉಜ್ಜಿಸಿಕೊಳ್ಳುವಾಗ ಯಾವ ಮಗು ತಾನೆ ಅಳುವುದಿಲ್ಲ? ಆಟ ಆಡುವಾಗ ಬಿದ್ದು ಸಣ್ಣಪುಟ್ಟ ಗಾಯವಾಗಿದ್ದರಂತೂ ಸರಿಯೆ - ತಾಯಿ ಗಾಯದ ಮೇಲೆ ಸೀಗೆಕಾಯಿ ಉಜ್ಜಿಬಿಡುತ್ತಾಳೆಂದು ಎದ್ದೆದ್ದು ಕುಣಿದು, ರಂಪ ಮಾಡುವುದು ನಿರೀಕ್ಷಿತವೇ. ಕಣ್ಣಿಗೆ ಏನಾದರೂ ಸೀಗೆಕಾಯಿ ಹೋಗಿ ಉರಿಯಲಾರಂಭಿಸಿದರೂ ಸರಿಯೆ, ನೀರು ಹಾಕುವ ತಾಯಿಗೆ ಬಹು ಕಷ್ಟ. ಒಳ್ಳೆಯ ಮಾತಿನಲ್ಲಿ ಮುದ್ದಿಸಿ, "ಆಗಿ ಹೋಯಿತು ಕಂದ, ಅಳಬೇಡ. ಇಗೋ, ಕಣ್ಣಿಗೆ ನೀರು ಹಾಕಿ ತೊಳೆದಿದ್ದೇನೆ" ಎಂದೋ, "ಪುಟ್ಟ, ಸುಮ್ಮನೆ ಹಟ ಮಾಡುತ್ತೀಯೆ, ನಾನು ಕಣ್ಣಿಗೆ ಸೀಗೆಕಾಯಿ ಹಾಕಿಯೇ ಇಲ್ಲ. ನೋಡು, ಇನ್ನೊಂದು ಸಲ ನೀರಿನಿಂದ ತೊಳೆಯುತ್ತೇನೆ. ಆಗಿಹೋಯಿತು" ಎಂದೋ ಸಮಾಧಾನಮಾಡುವಳು. ಅದಕ್ಕೂ ಸುಮ್ಮನಾಗದೆ ಹೋದರೆ "ಕೊಬ್ಬರಿ ಬೆಲ್ಲ ಕೊಡುತ್ತೇನೆ" ಎಂದೋ "ಪೆಪ್ಪರ್‌ಮಿಂಟ್ ಕೊಡುತ್ತೇನೆ" ಎಂದೋ ಪೂಸಿ ಮಾಡುವಳು. ಹಾಗೂ ಕೇಳದೆ ರಂಪಾಟ ಮಾಡಿದರೆ ಬೈದೋ ಇಲ್ಲ ಬೆನ್ನಮೇಲೆ ಒಂದು ಗುದ್ದು ಹಾಕಿಯೋ ಮಕ್ಕಳನ್ನು ಹತೋಟಿಗೆ ತಂದುಕೊಂಡು ಸೀಗೆಕಾಯಿ ಉಜ್ಜಿ ಎಣ್ಣೆಯನ್ನು ಹೋಗಲಾಡಿಸಿ ನೀರನ್ನು ಹಾಕಿ ಮಕ್ಕಳನ್ನು ಬಚ್ಚಲಿನಿಂದ ಹೊರಕ್ಕೆ ಕರೆತಂದು, ಮೈ, ಕೈ-ಕಾಲು ತಲೆ ಚೆನ್ನಾಗಿ ಒರೆಸಿ, ಮಡಿ ಬಟ್ಟೆಯನ್ನು ಉಡಿಸುವಳು. ಸೀಗೆಕಾಯಿ ಹಾಕಿದ ಅನಂತರ ಕೊನೆಯ ಸಲ ನೀರನ್ನು ಹಾಕುವಾಗ "ಲಕ್ಷ್ಮೀಕೇಶವನ ಪಾದೋದಕ", "ವೆಂಕಟೇಶನ ಪಾದೋದಕ", "ಚೆನ್ನಕೇಶವನ ಪಾದೋದಕ", "ಶ್ರೀನಿವಾಸನ ಪಾದೋದಕ" ಎಂದು ದೇವರ ನಾಮವನ್ನು ಉಚ್ಚರಿಸುತ್ತ ತಾಯಿ ನೀರು ಹಾಕುವಳು. ಹಾಗೆ ದೇವರನಾಮವನ್ನು ಹೇಳಿದಾಗಲೆಲ್ಲ ಮಗುವು ಅಥವಾ ಬಾಲಕನು 'ಗೋವಿಂದ' ಎನ್ನಬೇಕು. ಎಳೆಯ ಮಗುವಾದರೆ ತಾಯಿಯೇ ಗೋವಿಂದನಾಮವನ್ನು ಉಚ್ಚರಿಸಿ ಮಗುವಿಗೆ ಶುಭವನ್ನು ಕೋರುವಳು.

ಎರಡನೆಯ ಸಲ ನೀರು ಹಾಕಿಕೊಂಡ ಅನಂತರ ದೊಡ್ಡವರು 'ಉಸ್ಸಪ್ಪ' ಎಂದು ಬಚ್ಚಲಿನಿಂದ ಮೇಲಕ್ಕೆ ಹತ್ತಿ ಬಂದು ತಲೆಗೆ ಟವಲನ್ನು ಸುತ್ತಿಕೊಂಡು, ಬಿಸಿ ಮೈಯಲ್ಲೇ ಕಂಬಳಿಯನ್ನು ಹೊದ್ದುಕೊಂಡು ಕುಳಿತುಬಿಡುವರು. ಎಲ್ಲಿಯೂ ಗಾಳಿ ಒಳಕ್ಕೆ ಹೋಗದ ಹಾಗೆ ಕಂಬಳಿಯನ್ನು ತಲೆಯಿಂದ ಕಾಲಿನವರೆಗೂ ಹೊದೆಯುವರು. ಈ ರೀತಿ ಕಂಬಳಿಯನ್ನು ಗವುಸಿಕೊಂಡು ಅರ್ಧ ಗಂಟೆ ಅಥವಾ ಒಂದು ಗಂಟೆ ಕೂರುವರು. ಸೀಗೆಕಾಯಿ ಉಜ್ಜಿ ಚರ್ಮದ ಮೇಲಿನ ಬೆವರೆಲ್ಲ ಹೋಗಿ, ಚರ್ಮದ ರಂಧ್ರಗಳು ಶುದ್ಧವಾಗಿರುವುದರಿಂದ ಕಂಬಳಿ ಹೊದೆದುಕೊಂಡು ಕುಳಿತಾಗ ಧಾರಾಕಾರವಾಗಿ ಬೆವರು ಸುರಿಯುವುದು. ಅನಂತರ ಮೇಲೆದ್ದು ದೇಹವನ್ನು ಒರೆಸಿಕೊಂಡು ಶುಭ್ರವಸ್ತ್ರಗಳನ್ನುಟ್ಟು ಮುಂದಿನ ಕೆಲಸದಲ್ಲಿ ತೊಡಗುವರು. ನಾನು ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸಕ್ಕೆಂದು ಪರ ಊರಿಗೆ ಹೋಗಿದ್ದಾಗ ಅಲ್ಲಿ ಒಬ್ಬರು ನೆಂಟರ ಮನೆಯಲ್ಲಿರುತ್ತಿದ್ದೆ. ಅಭ್ಯಂಜನವಾದ ಮೇಲೆ ಕಂಬಳಿಯನ್ನು ಹೊದೆದುಕೊಂಡು ಬಂಡೆಯ ಹಾಗೆ ಕುಳಿತುಕೊಳ್ಳುವುದನ್ನು ನಾನು ನಮ್ಮ ಊರಿನಲ್ಲಿ ಅದುವರೆಗೆ ಕಂಡಿರಲಿಲ್ಲ. ಕೆಲವರು ಅಭ್ಯಂಜನವಾದ ಮೇಲೆ ಕಂಬಳಿ ಹೊದೆದುಕೊಂಡು ಮಲಗುತ್ತಿದ್ದುದನ್ನು ನೋಡಿದ್ದೆ. ಮನೆಯ ಯಜಮಾನರು ಅಂದು ನೀರು ಹಾಕಿಕೊಂಡು ಕಂಬಳಿಯನ್ನು ತಲೆಯಿಂದ ಕೆಳಗಿನವರೆಗೂ ಗವುಸಿಕೊಂಡು ನಿಶ್ಚಲವಾಗಿ ಅಲ್ಲಾಡದೆ ಕುಳಿತಿರುವುದನ್ನು ಮೊದಲನೆಯ ಬಾರಿಗೆ ನೋಡಿದಾಗ ನನಗೆ ಇದೇನು ಎಂದು ಅರ್ಥವಾಗಲಿಲ್ಲ. ಮನುಷ್ಯರೊಬ್ಬರು ಬಂಡೆಯ ಹಾಗೆ ಕುಳಿತಿದ್ದಾರೆಂಬ ಊಹೆ ನನಗೆ ಬರಲಿಲ್ಲ. ದೆವ್ವಗಳ ಕಥೆಯನ್ನು ಜತೆಯ ಹುಡುಗರಿಂದ ಕೇಳಿದ್ದ ನನಗೆ ದೆವ್ವ ಈ ರೂಪದಲ್ಲಿ ಬರುತ್ತದೆಯೇ ಎಂಬ ಭಾವನೆ ಬರುತ್ತಲೇ, ಭಯದಿಂದ ಮೈಗೂದಲುಗಳು ನಿಮಿರಿದುವು. ಆದರೆ ತಕ್ಷಣ "ದೆವ್ವ ಹಗಲು ಹೊತ್ತಿನಲ್ಲಿ ಹೀಗೆ ಬಂದು ಹಜಾರದ ಮಧ್ಯದಲ್ಲಿ ಕೂರುವುದಿಲ್ಲ" ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಇದೇನಿರಬಹುದು ಎಂದು ಪರೀಕ್ಷಿಸಬೇಕೆಂಬ ಮನಸ್ಸಾಯಿತು. ಹಜಾರದಲ್ಲಿ ಯಾರೂ ಇಲ್ಲದ್ದನ್ನು ಕಂಡು ಮೆತ್ತಗೆ ಹತ್ತಿರ ಹೋಗಿ ಮೇಲುಗಡೆಯನ್ನು ಹಿಡಿದು ಅಲ್ಲಾಡಿಸಿದೆ. ಅದು ಕಂಬಳಿ ಗವುಸಿಕೊಂಡು ಕುಳಿತವರ ತಲೆಯಾಗಿತ್ತೆಂಬುದರ ಅರಿವು ಬರುತ್ತಿದ್ದಂತೆಯೇ, 'ಯಾರೋ ಅದು?' ಎಂದು ಕಂಬಳಿಯ ಒಳಗಿನಿಂದ ಗುಡುಗಿದ ಹಾಗಾಯಿತು. ಮನೆಯ ಯಜಮಾನರು ಎಂಬುದನ್ನು ಅವರ ಧ್ವನಿಯಿಂದ ತಿಳಿದ ನಾನು, ಉಸಿರು ಕೂಡ ಆಡಿಸದೆ, ಕಾಲಿನ ಸಪ್ಪಳವೂ ಆಗದಂತೆ ಅಲ್ಲಿಂದ ಹೊರಟುಹೋದೆ. ನಾನೇ ತಲೆ ಅಲ್ಲಾಡಿಸಿದ್ದು ಎಂದು ಗೊತ್ತಾಗಿ ಎಲ್ಲಿ ಶಿಕ್ಷೆಯನ್ನು ಅನುಭವಿಸಬೇಕಾಗುವುದೋ ಎಂದು ಹೆದರಿ ಮೂರು-ನಾಲ್ಕು ದಿವಸ ಅವರ ಕಣ್ಣಿಗೆ ಬೀಳದಂತೆ ತಪ್ಪಿಸಿಕೊಂಡು ಓಡಾಡಿದೆ. ಅವರ ಎದುರಿಗೆ ನಿಂತು ಮಾತಾಡಲು ಹುಡುಗರಿಗೆ ಧೈರ್ಯವು ಉಡುಗಿ ಹೋಗುತ್ತಿತ್ತು. ಅಂಥ ಜೋರತ್ತಿನ ಶಿಸ್ತಿನ ವ್ಯಕ್ತಿ ಅವರು. ಕೊನೆಗೆ ಅವರ ಎದುರಿಗೆ ಸಿಕ್ಕಿಬಿದ್ದ ನಾನು ಥರಥರ ನಡುಗುತ್ತ ನಿಂತೆ. ಅವರು ನಗುತ್ತ, "ಯಾಕೋ! ಹೆದರಿಬಿಟ್ಟೆಯಾ, ಪೆದ್ದುಮುಂಡೇದೆ" ಎಂದು ಹೇಳಿದ್ದೇ ಹೊರಟುಹೋದರು. ನನಗೆ ಹೋದ ಜೀವ ಬಂದಂತಾಯಿತು.

ಹಿಂದಿನ ಕಾಲದಲ್ಲಿ ಗಂಡಸರು ತಮ್ಮ ತೋಟಗಳಲ್ಲಿಯೇ ಅಭ್ಯಂಜನ ಮಾಡುತ್ತಿದ್ದರು. ಮನೆಯಲ್ಲಿ ನೀರು ಹಾಕಿಕೊಳ್ಳ ಬೇಕಾದರೆ ಬಾವಿಯಿಂದ ನೀರು ಸೇದಿ ಹಂಡೆಯನ್ನು ತುಂಬಿಸಬೇಕು. ಈ ಕಷ್ಟ ಯಾಕೆ ಎಂದು ತೋಟದಲ್ಲಿ ಒಂದು ಕಡೆ ಮೂರು ಕಲ್ಲನ್ನು ಇಟ್ಟು ಒಲೆಯಂತೆ ಮಾಡಿ ಒಂದು ದೊಡ್ಡ ಗುಡಾಣವನ್ನು ಒಲೆಯ ಮೇಲಿಟ್ಟಿರುತ್ತಿದ್ದರು. ಅದು ಅಲ್ಲಿ ಯಾವಾಗಲೂ ಇರುವುದೇ. ಒಲೆಗೆ ಉರುವಲಿಗೆ, ತೋಟದಲ್ಲಿಯೇ ಸಿಕ್ಕುವ ಅಡಕೆ ಸೋಗೆ, ತೆಂಗಿನ ಸೋಗೆ, ಗೊದಮಟ್ಟೆಗಳಿಗೆ ಅಲ್ಲಿ ಅಭಾವವಿರುತ್ತಿರಲಿಲ್ಲ. ತೋಟದ ಬಾವಿಯಲ್ಲಿ ನೀರು ಚೆನ್ನಾಗಿರುವುದು. ಹರವಿಯಲ್ಲಿ ವೀಳೆಯದೆಲೆ ಪಾತಿಗಳಿಗೆ ನೀರೆರೆಯುವಾಗ ಈ ಗುಡಾಣಕ್ಕೂ ನೀರು ತುಂಬಿಬಿಟ್ಟರಾಯಿತು. ಸೋಗೆಯನ್ನು ಒಲೆಗೆ ಹಾಕಿ ಹತ್ತಿಸಿ ನೀರು ಕಾಯಿಸುವುದು ಸುಲಭ. ಮನೆಯವರಿಗೆ ಯಾವ ಕಷ್ಟವೂ ಇಲ್ಲ. ಪಕ್ಕದಲ್ಲಿ ನಾಲ್ಕು ಐದು ಅಡಿ ಆಳವಾಗಿ ಚಚ್ಚೌಕವಾದ ಗುಂಡಿಯನ್ನು ತೋಡಿ, ಅಡಿಗೆ ನೆಲಕ್ಕೆ ಒಂದು ಚಪ್ಪಡಿ ಕಲ್ಲನ್ನು ಹಾಸಿಬಿಟ್ಟರೆ ಇದೇ ಬಚ್ಚಲು. ಮನೆಯ ಅಥವಾ ನೆರೆಹೊರೆಯ ಎರಡು ಮೂರು ಜನ ಸೇರಿಕೊಂಡು ಒಬ್ಬರಿಗೊಬ್ಬರು ಎಣ್ಣೆಯನ್ನು ಹಚ್ಚುವರು. ತೋಟದಲ್ಲೇ ಅದೂ ಇದೂ ಕೆಲಸ ಮಾಡುತ್ತಿದ್ದು ಅನಂತರ ಅಭ್ಯಂಜನ ಮಾಡುವರು. ಗುಡಾಣದ ನೀರು ಕುದಿಯುವ ಮಟ್ಟಕ್ಕೆ ಅಥವಾ ಅದರ ಹತ್ತಿರ ಹತ್ತಿರ ಬಂದಿರಬೇಕು. ಕೊಳದಪ್ಪಲೆಯಲ್ಲಿ ನೀರನ್ನು ತುಂಬಿಕೊಳ್ಳಲು ಹೋದರೆ ಕೈ ಸುಡುವುದು. ಆದುದರಿಂದ ಒಂದು ಸಣ್ಣ ಕವೆಯನ್ನು ಮಾಡಿಕೊಂಡು ಕೊಳಗಕ್ಕೆ ಕಟ್ಟಿಕೊಳ್ಳುವರು. ಕವೆಯ ಹಿಡಿಯನ್ನು ಹಿಡಿದುಕೊಂಡು ನೀರನ್ನು ಗುಡಾಣದಿಂದ ತುಂಬಿಕೊಂಡು ಬಚ್ಚಲಿಗಿಳಿದವರ ಮೇಲೆ ಹಾಕುವರು. ಈ ರೀತಿ ನೀರು ಹಾಕಿಸಿಕೊಂಡು ಹೊರಬರುವ ಹೊತ್ತಿಗೆ ಸುಸ್ತಾಗುವುದು. ಕೆಲವು ಸಲ ಕೈಹಿಡಿದು ಮೇಲಕ್ಕೆ ಕರೆದುಕೊಳ್ಳಬೇಕಾಗುವುದು. ಅತಿ ಸುಸ್ತಾದರೆ ಹುಣಿಸೆಹಣ್ಣಿನ ಗೊಜ್ಜನ್ನು ಮಾಡಿಕೊಟ್ಟು ಕುಡಿಸುವರು. ಅದಕ್ಕಿಂತಲೂ ಉತ್ತಮವಾದುದು ತೋಟದಲ್ಲಿ ದೊರೆಯುವ ಎಳನೀರು. ಎಳನೀರನ್ನು ಕುಡಿದುಬಿಟ್ಟರೆ ಆಯಾಸ ಪರಿಹಾರವಾಗುವುದು. ಸ್ವಲ್ಪ ಖುಷಿಗಾರರಾದರೆ ಬಾಳೆಕಾಯಿಯನ್ನೋ, ಗೆಣಸನ್ನೋ ಕೆಂಡದಲ್ಲಿ ಸುಟ್ಟು ಅದಕ್ಕೆ ಬೆಲ್ಲ ಮತ್ತು ತೆಂಗಿನಕಾಯಿಯನ್ನು ಜಜ್ಜಿ ಹಾಕಿ, ಕಲಸಿ ತಿನ್ನುವರು. ಇದೊಂದು ಮಜ. ಕೆಲವರಿಗೆ, ಈ ಮಜಕ್ಕಾಗಿಯಾದರೂ ತೋಟದಲ್ಲಿ ಎಣ್ಣೆನೀರು ಹಾಕಿಕೊಳ್ಳಬೇಕು!

ಅಭ್ಯಂಜನ ಸಂಕೇತಿಗಳಲ್ಲಿ ಒಂದು ಪದ್ಧತಿ, ಒಂದು ಚಿಕಿತ್ಸೆ, ಜೀವನದ ಜತೆ ಸೇರಿದ ಒಂದು ಕಾರ್ಯ, ಆರೋಗ್ಯಭಾಗ್ಯದ ಅಡಿಗಲ್ಲು.

೧೦. ಸಭೆ–ಸಹಕಾರ

ಸಂಕೇತಿಗಳು ಯಾವ ಊರಿನಲ್ಲೇ ನೆಲಸಿರಲಿ, ಆ ಊರಿನಲ್ಲಿ ಎಷ್ಟು ಮನೆಗಳೇ ಇರಲಿ, ತಮ್ಮ ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ಬಾಳಲು ಒಂದು ರೀತಿಯ ಸಮುದಾಯ ಜೀವನವನ್ನು ರೂಪಿಸಿಕೊಂಡಿದ್ದರು. ಒಂದು ಊರು ಅಥವಾ ಹಳ್ಳಿ ಒಂದು ಘಟಕ. ಅಲ್ಲಿಯ ಊರೊಟ್ಟಿನ ಕೆಲಸಗಳೆಲ್ಲ ಊರಿನ ಎಲ್ಲರ ಸಹಕಾರದೊಂದಿಗೆ ನಡೆಯುತ್ತಿದ್ದುವು. ಒಂದು ಮದುವೆ, ಮುಂಜಿ, ರಾಮನವಮಿ ಇತ್ಯಾದಿ ಯಾವುದೇ ಸಂದರ್ಭದಲ್ಲೂ ಎಲ್ಲರೂ ಸಹಕರಿಸಿ ಶುಭಕಾರ್ಯವನ್ನು ನೆರವೇರಿಸಿಕೊಡುತ್ತಿದ್ದರು.

ಯಾವುದೇ ಒಂದು ಊರೊಟ್ಟಿನ ಕಾರ್ಯವಾಗಲಿ ಅಥವಾ ಯಾವುದೇ ಮನೆಯಲ್ಲಿ ಒಂದು ಕಾರ್ಯ ನಡೆಯುವುದಿರಲಿ ಊರಿನವರೆಲ್ಲ ಸಹಕರಿಸಿ ಆ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದರು. ಯಾವುದೇ ಒಂದು ಕಾರ್ಯಕ್ಕೆ ಮೊದಲೇ ಮನೆಯ ಯಜಮಾನರು ಮುಂದಾಗಿ ವಿಷಯ ತಿಳಿಸಿ ಯಾರು ಯಾರಿಂದ ಏನೇನು ಸಹಾಯ ಬೇಕೋ ಅದನ್ನು ಹೇಳಿರುತ್ತಿದ್ದರು. ಅದೇ ರೀತಿ ಯಜಮಾನಿತಿ ಕೂಡ ಸ್ತ್ರೀಯರಿಗೆ ವಿಷಯ ತಿಳಿಸಿ ಅವರ ಸಹಕಾರವನ್ನು ಕೋರಿರುತ್ತಿದ್ದರು. ಊರಿನ ಒಂದು ಮನೆಯಲ್ಲಿ ಮದುವೆ ಅಥವಾ ಇನ್ನೊಂದು ಎಂದರೆ ಚಪ್ಪರ ಹಾಕುವುದಕ್ಕೆ ಸಹಾಯ ಮಾಡುವುದರಿಂದ ಹಿಡಿದು ಸಮಾರಾಧನೆಗೆ ಬೇಕಾದ ತರಕಾರಿಗೆ ಹಲಸಿನಕಾಯೋ, ಪರಂಗಿಕಾಯೋ ಎಲ್ಲಿದೆ? ಯಾವ ಮರದಲ್ಲಿದೆ? ಎಂದು ತಿಳಿದು ಅದನ್ನು ಒದಗಿಸುತ್ತಿದ್ದರು. ಯಾರ ತೋಟದಲ್ಲಾಗಲಿ, ಮನೆಯ ಹಿತ್ತಿಲಲ್ಲಾಗಲಿ ಬೂದುಗುಂಬಳಕಾಯಿ ಅಥವಾ ಸಕ್ಕರಗುಂಬಳಕಾಯಿ ಬೆಳೆದಿದ್ದರೆ, ಅದನ್ನು ತಾವೇ ತಂದುಕೊಡುತ್ತಿದ್ದರು. ತುಪ್ಪವನ್ನು ಸಂಗ್ರಹಿಸಿಟ್ಟಿದ್ದವರು ಅದನ್ನು ತಮ್ಮ ಕೈಲಾದಷ್ಟು ತಂದುಕೊಡುತ್ತಿದ್ದರು. ಇಂದು ತಾವು ಒಬ್ಬರ ಮನೆಗೆ ಕೊಟ್ಟರೆ ನಾಳೆ ತಮ್ಮ ಮನೆಯಲ್ಲಿ ನಡೆಯುವ ಕಾರ್ಯಕ್ಕೆ

ಊರಿನವರು ತಮಗೂ ಇವುಗಳನ್ನು ತಂದುಕೊಡುತ್ತಾರೆ ಎಂಬ ದೃಢ ವಿಶ್ವಾಸ ಊರಿನ ಗಂಡಸರಾದಿಯಾಗಿ ಹೆಂಗಸರು, ವಯಸ್ಸಾದವರು ಎಲ್ಲರಲ್ಲಿಯೂ ಇರುತ್ತಿದ್ದಿತು. ಏನೆಂದರೂ ಹಾಲು, ಮೊಸರನ್ನು ಊರಿನವರು ಒದಗಿಸುವುದಕ್ಕಾಗುತ್ತಿರಲಿಲ್ಲ. ಏಕೆಂದರೆ ತಮ್ಮ ಮನೆಯಲ್ಲಿ ಕರೆಯುವ ಹಾಲು ಮಕ್ಕಳಿಗೆ ಕೊಡಲು, ಊಟಕ್ಕೆ ಮೊಸರು ಮಾಡಲು ಸಾಕಾಗುತ್ತಿದ್ದಿತು. ಉಳಿದದ್ದರಲ್ಲಿ ತುಪ್ಪ ಮಾಡುತ್ತಿದ್ದರು. ತರಕಾರಿ ಬೇಳೆಗಳು ಊಟಕ್ಕೆ ಕಡಮೆಯಾದರೂ, ಸಂಕೇತಿಗಳಿಗೆ ಊಟಕ್ಕೆ, ತಿಂಡಿಗೆ, ಫಲಾಹಾರಕ್ಕೆ, ತುಪ್ಪ-ಮೊಸರುಗಳು ಇದ್ದೇ ತೀರಬೇಕು. ಆದುದರಿಂದ ಹಾಲು ಮೊಸರುಗಳನ್ನು ಪಕ್ಕದ ಹಳ್ಳಿಗಳ ರೈತರಿಂದ ಸಂಗ್ರಹಿಸಿಕೊಂಡು ತರಬೇಕಾಗಿತ್ತು. ಇದಕ್ಕಾಗಿ ಮೊದಲೇ ಆ ರೈತರಿಗೆ ಸೂಚನೆ ಕೊಟ್ಟಿದ್ದು ಶುಭಕಾರ್ಯದ ಬೆಳಗಿನ ಜಾವ ನಾಲ್ಕೈದು ಗಂಟೆಗೇ ಎದ್ದು ಹರವಿ ಅಡ್ಡೆಗಳನ್ನು ತೆಗೆದುಕೊಂಡು ಹಳ್ಳಿಗಳಿಗೆ ಹೋಗಿ ಬೆಳಗಾಗುವ ಹೊತ್ತಿಗೆ ಹಾಲು, ಮೊಸರನ್ನು ಕೊಂಡು ತರುತ್ತಿದ್ದರು. ಇದಕ್ಕೆ ಸಮರ್ಥರಾದವರಿಗೆ ಮೊದಲೇ ಹೇಳಿರಬೇಕು. ಯಾರಿಗೆ ಯಾವ ಕೆಲಸ ಹೇಳಿದರೂ ತಮ್ಮ ಕೈಲಾಗುವುದನ್ನು ಮಾಡುವುದಕ್ಕೆ ಯಾರೂ ಹಿಂಜರಿಯುತ್ತಿರಲಿಲ್ಲ. ಮದುವೆ ಮುಂಜಿ ಮೊದಲಾದ ಕಾರ್ಯದ ದಿನ ಬೆಳಗ್ಗೆ , ಪಾತ್ರೆ ತೊಳೆದು ಬಟ್ಟೆ ಒಗೆದುಕೊಂಡು ಸ್ನಾನ ಮಾಡಿ ಬರಲು ಕೆರೆಗೋ ನದಿಗೋ ಹೋದ ಮಹಿಳೆಯರು ಒಂದು ಕೊಡ ನೀರನ್ನು ತಂದು ಶುಭಪ್ರಸ್ತದ ಮನೆಗೆ ಹಾಕುವರು. ಅಷ್ಟು ನೀರು ಸಾಕಾಗುವುದಿಲ್ಲ ಎಂದರೆ, ಯಾರ ಮನೆಯಲ್ಲಿ ಗಾಡಿ, ಎತ್ತುಗಳಿವೆಯೋ ಅವುಗಳನ್ನು ಕಟ್ಟಿಕೊಂಡು ಪೀಪಾಯಿಗಳಲ್ಲೋ, ಹಂಡೆಗಳಲ್ಲೋ, ನೀರನ್ನು ಹೇರಿಕೊಂಡು ಬಂದು ಕೊಡುವರು. ಗಂಡಸರು ಊಟ-ತಿಂಡಿ ಮೊದಲಾದ ಏರ್ಪಾಡುಗಳಿಗೆ ಬೇಕಾದ ಸಹಕಾರವನ್ನು ಕೊಡುವರು. ಒಬ್ಬಟ್ಟಿನ ಕಣಕ ಕುಟ್ಟಿಕೊಡುವುದು, ಆಂಬೊಡೆ ಬೇಳೆಯನ್ನು ಕುಟ್ಟಿಕೊಡುವುದು ಮೊದಲಾದ ಶ್ರಮದ ಕೆಲಸಗಳನ್ನು ಮಾಡಿಕೊಡುವರು. ಮದುವೆ-ಮುಂಜಿ ಮೊದಲಾದ ಸಂದರ್ಭಗಳಲ್ಲಿ ಸ್ತ್ರೀಯರೂ ಎಲ್ಲ ಕಾರ್ಯಗಳಲ್ಲಿ ನೆರವಾಗುತ್ತಾರೆ. ಬೆಳಗಿನ ಜಾವ ಗೋಧಿನಕಲ್ಲು ಪೂಜೆಯಿಂದ ಆರಂಭಿಸಿ ಅಂದಿನ ಎಲ್ಲ ಕಲಾಪಗಳಲ್ಲಿ ಭಾಗವಹಿಸುತ್ತಾರೆ. ಹಿರಿಯ ಹೆಂಗಸರು ಆಚಾರ ಸಂಪ್ರದಾಯಗಳನ್ನು ಹೇಗೆ ಆಚರಿಸಬೇಕು ಎಂಬುದನ್ನು ಹೇಳಿಕೊಟ್ಟು, ಅದರ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಊರಿಗೆ ಒಬ್ಬರೋ ಇಬ್ಬರೋ ಅಡುಗೆಯಲ್ಲಿ ನಿಪುಣರಾದ ಸ್ತ್ರೀಯರು ಇರುತ್ತಿದ್ದರು. ಇವರು ಯಾರ ಮನೆಯಲ್ಲಿ ಸಮಾರಾಧನೆಯಾಗಲಿ ಹೋಗಿ ಅಡುಗೆಯ ಯಾಜಮಾನ್ಯವನ್ನು ವಹಿಸಿಕೊಳ್ಳುತ್ತಿದ್ದರು. ಎಷ್ಟು ಕೊಳಗ ಸಾರು ಆಗಬೇಕು? ಎಷ್ಟು ಸೇರು ಅಕ್ಕಿ ಹಾಕಬೇಕು? ಯಾವುಯಾವುದಕ್ಕೆ ಎಷ್ಟು ಉಪ್ಪು ಹುಳಿ ಕಾರ ಹಾಕಬೇಕು? ಎನ್ನುವ ಅನುಭವ ಇವರಿಗೆ ಚೆನ್ನಾಗಿರುತ್ತಿದ್ದಿತು. ಇವರು ಅಡುಗೆ ಮಾಡುತ್ತಿದ್ದರೆ ಇವರಿಗೆ ಎರಡು ಮೂರು ಜನ ಸಹಾಯಕ್ಕಾಗಿ ಇರುತ್ತಿದ್ದರು. ಬೆಳಗ್ಗೆ ಬೇಗ ಊರಿನ ಸ್ತ್ರೀಯರು ಬಂದು ತರಕಾರಿ ಹೆಚ್ಚಿಟ್ಟು ಹೋಗಿರುತ್ತಿದ್ದರು. ಅಡುಗೆಯ ಅನುಭವವುಳ್ಳವರು ಯಾವ ಯಾವ ಸಾಮಾನು ಎಷ್ಟು ಬೇಕು ಎಂದು ಮೊದಲೇ ಎಲ್ಲವನ್ನೂ ತರಿಸಿಟ್ಟಿರುತ್ತಿದ್ದರು. ತರಕಾರಿ ಹೆಚ್ಚಿಟ್ಟ ಮೇಲೆ ಗೃಹಿಣಿಯರು ತಮ್ಮ ಮನೆಯಲ್ಲಿ ಮಕ್ಕಳನ್ನು ಸುಧಾರಿಸುವುದೋ, ಹಾಲು ಕರೆಯುವುದೋ ಏನಿದ್ದರೆ ಅದನ್ನೆಲ್ಲ ಮಾಡಿ, ನದಿ ಅಥವಾ ಕೆರೆಗೆ ಹೋಗಿ ಸ್ನಾನ ಮಾಡಿಕೊಂಡು ಬಂದು, ಹಪ್ಪಳ ಸಂಡಿಗೆ ಕರಿಯುವುದು, ಆಂಬೊಡೆ ಕರಿಯುವುದು, ಒಬ್ಬಟ್ಟು ತಟ್ಟುವುದು ಮೊದಲಾದ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಭೋಜನದ ಸಮಯದಲ್ಲಿ ಯಜಮಾನರು ಪಂಕ್ತಿಯ ಮೇಲೆ ಊಟ ಮಾಡುತ್ತಿರುವವರಿಗೆ ಉಪಚಾರದ ಮಾತುಗಳನ್ನು ಹೇಳುತ್ತ "ಅಡುಗೆ ಹೇಗಿದೆ?" ಎಂದು ಕೇಳುವುದು ಸಂಪ್ರದಾಯ. ಆಗ ಊಟ ಮಾಡುತ್ತಿರುವವರು, "ಬಹಳ ಸೊಗಸಾಗಿದೆ. ತುಂಬ ರುಚಿಯಾಗಿದೆ. ಸಾರಂತೂ ಒಳ್ಳೆ ಚೆನ್ನಾಗಿದೆ" ಎಂದು ಹೊಗಳುತ್ತ "ಯಾರ ಅಡುಗೆ?" ಎಂದು ಪ್ರಶ್ನಿಸುವುದು ಸಹಜ. ಆಗ "ನಮ್ಮೂರಿನ ಅಮ್ಮಯಮ್ಮ. ಇನ್ಯಾರಿದ್ದಾರೆ ನಮಗೆ? ಪುಣ್ಯಾತ್‌ಗಿತ್ತಿ. ನಮಗೆಲ್ಲ ಕಾಮಧೇನು ಇದ್ದ ಹಾಗೆ ಇದ್ದಾಳೆ" ಎನ್ನುತ್ತಾರೆ ಯಜಮಾನರು. "ಅದೇ! ಸಾರಿನ ಬಣ್ಣ, ರುಚಿ ನೋಡಿಯೇ ಅಂದುಕೊಂಡೆ. ಅಮ್ಮಯಮ್ಮನ ಕೈಯ್ಯಿಂದೇ ಅಂತ" ಎಂದು ಊಟಕ್ಕೆ ಕುಳಿತವರೊಬ್ಬರು ಪ್ರಶಂಸೆ ಮಾಡುತ್ತಾರೆ. ಊರೊಟ್ಟಿನ ಸಮಾರಾಧನೆಯೇ ಆಗಲಿ, ಯಾರೊಬ್ಬರ ಮನೆಯ ಕಾರ್ಯವೇ ಆಗಲಿ, ಊರಿನವರೆಲ್ಲ ಸಹಕರಿಸುವುದು ಸಂಕೇತಿಗಳ ರಕ್ತದಲ್ಲಿಯೇ ಹರಿದು ಬಂದ ಗುಣ ಎನ್ನಬಹುದು. ಅವರ ಜೀವನದ ಗೆಲುವಿಗೆ, ಸಂತೋಷಕ್ಕೆ ಈ ಸಹಕಾರ ಗುಣ ಮುಖ್ಯ ಕಾರಣ.

ಸಂಕೇತಿಗಳ ಒಂದು ಹಳ್ಳಿಯ ಸಮಾಜ ಏಕಘಟಕವಾಗಿರುತ್ತಿತ್ತು. ಒಂದು ಊರಿನ ಸಮಸ್ಯೆಗಳನ್ನೆಲ್ಲ ತಮ್ಮತಮ್ಮಲ್ಲೇ ಪರಿಹರಿಸಿಕೊಳ್ಳುವುದು ಇವರಿಗೆ ಅನೂಚಾನವಾಗಿ ಬಂದ ಗುಣ. ಒಂದು ಊರಿನ ಸಂಕೇತಿ ಜನಗಳಿಗೆ 'ಹತ್ತು ಜನ'ಗಳೆಂದು ಹೆಸರು. ಊರಿನ ಹಿರಿಯ ಗೃಹಸ್ಥರೆಲ್ಲ ಇದರ ಸದಸ್ಯರೇ. ಹುಡುಗರಿಗೆ, ಮದುವೆಯಾಗದವರಿಗೆ ಇಲ್ಲಿ ಸ್ಥಾನವಿಲ್ಲ. ಒಂದು ಮನೆಯ ಹಿರಿಯನಿಗೆ ಅಥವ ಯಜಮಾನನಿಗೆ ಇಲ್ಲಿ ಗೌರವ ಹಾಗೂ ಪ್ರಾಶಸ್ತ್ಯ. ಹೀಗಾಗಿ ಹಿರಿಯರಿರುವ ಮನೆಯ ವಯಸ್ಕರಾದ ಮಕ್ಕಳು ಅವರ ಮಾತಿಗೇ ಬೆಲೆ ಕೊಡುತ್ತಿದ್ದರು. ಸಭೆಯಲ್ಲಿ

ಪಾಲ್ಗೊಳ್ಳುವ ಅರ್ಹತೆಯನ್ನು ಸಂಪಾದಿಸಿದ ಎರಡು ಮೂರು ಮಕ್ಕಳ ತಂದೆಯಾಗಲೀ, ದುಡಿದು ಮನೆಯ ಸಂಸಾರದ ಖರ್ಚನ್ನು ನಡೆಸುತ್ತಿರುವ ಮಗನೇ ಆಗಲೀ, ಹಿರಿಯರ ಅಥವಾ ತಂದೆಯ ಮಾತಿಗೆ ಸಭೆಯಲ್ಲಿ ಬೆಲೆ ಕೊಡುತ್ತಿದ್ದರು. ಒಂದು ಊರಿನ ಹತ್ತೂ ಜನರು ಆ ಊರಿನ ಹಿರಿಯರೊಬ್ಬರನ್ನು ಯಜಮಾನರೆಂದು ನಿಯಮಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಊರಿನಲ್ಲಿ ಯಾರು ಹಿರಿಯರೋ ಅವರು ಯಜಮಾನರಾಗಿರುತ್ತಿದ್ದರು. 'ಯಜಮಾನ' ಪಟ್ಟಕ್ಕೆ ಇಂಥಿಂಥ ಅರ್ಹತೆ ಇರಬೇಕು ಎಂಬುದಾಗಿ ನಿಯಮವಿರುತ್ತಿರಲಿಲ್ಲ. ಅವರು ವೇದಾಧ್ಯಯನ ಸಂಪನ್ನರಾಗಿರಬೇಕು, ಇಲ್ಲವೇ ಶಾಸ್ತ್ರವಿದರಾಗಿರಬೇಕು, ಜೈಮಿನಿ ಭಾರತ ಓದುವಷ್ಟಾದರೂ ಕನ್ನಡದಲ್ಲಿ ವಿದ್ಯೆ ಇರಬೇಕು ಎಂಬುದೇ ಮೊದಲಾದ ನಿಯಮವೇನೂ ಇರುತ್ತಿರಲಿಲ್ಲ. ಗಾಂಭೀರ್ಯ, ಹಿರಿತನ, ಅನುಭವ ಇವುಗಳೇ ಯಜಮಾನನಿಗೆ ಇರಬೇಕಾದ ಅರ್ಹತೆ. ಒಂದು ಸಲ 'ಯಜಮಾನ' ಪಟ್ಟವನ್ನು ವಹಿಸಿಕೊಂಡ ಮೇಲೆ ಸುಮಾರಾಗಿ ಅವರ ಜೀವಿತಕಾಲದಲ್ಲಿ ಯಜಮಾನರ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಅವರಾದರೋ ವೃದ್ಧಾಪ್ಯದಿಂದಲೋ, ರೋಗ-ರುಜಿನಗಳಿಂದಲೋ ತಾವು ಅಶಕ್ತರಾದಾಗ ಬೇರೆಯವರನ್ನು ಯಜಮಾನರನ್ನಾಗಿ ಮಾಡುವಂತೆ ಸಲಹೆ ಕೊಟ್ಟು, ತಮ್ಮ ಸ್ಥಾನದಿಂದ ನಿರ್ಗಮಿಸುತ್ತಿದ್ದರು. ಒಂದು ಊರಿನ ಯಜಮಾನರಿಗೆ ಸಂಕೇತಿ ಸಮಾಜದಲ್ಲಿ ತುಂಬ ಗೌರವ. ಬೇರೆ ಊರಿಗೆ ಹೋದರೆ ಅಲ್ಲಿಯು ಕೂಡ "ಯಜಮಾನರೇ, ದಯಮಾಡಿಸಿ" ಎಂದು ಗೌರವದಿಂದ ಆಹ್ವಾನಿಸುತ್ತಾರೆ.

ಊರಿನಲ್ಲಿ ಯಾವ ಮನೆಯ ಅಥವಾ ಯಾರೊಬ್ಬರ ಸಮಸ್ಯೆಯಾಗಲಿ ಊರೊಟ್ಟಿನ ಯಾವುದೇ ಸಮಸ್ಯೆಯಾಗಲಿ ಅದನ್ನು ಹತ್ತೂ ಜನಗಳ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವುದೇ ಹಿಂದಿನಿಂದ ಬಂದ ಪದ್ಧತಿ. ರಾತ್ರಿ ಊಟವಾದ ಮೇಲೆ ಯಾರದಾದರೂ ಒಬ್ಬರ ಮನೆಯಲ್ಲಿ ಸಭೆ ಸೇರುವಂತೆ ಯಜಮಾನರು ತೀರ್ಮಾನಿಸುತ್ತಾರೆ. ಪ್ರತಿ ಮನೆಯ ಹಿರಿಯರನ್ನೂ ಸಭೆಗೆ ಬರುವಂತೆ ಕರೆಸುತ್ತಾರೆ. 'ಇಂಥವರ ಮನೆಯಲ್ಲಿ' ಹತ್ತು ಜನರ ಸಭೆ ಸೇರುತ್ತದೆ ಎಂದು ಮನೆಮನೆಗೆ ಹೋಗಿ ಊರಿನ ಯಾರಾದರೂ ಕರೆದು ಬರುತ್ತಾರೆ. ಒಂದಿಬ್ಬರು ಹುಡುಗರನ್ನು ಅಥವಾ ಯುವಕರನ್ನು ಬರಮಾಡಿಕೊಂಡು, ಊರಿನ ಎಲ್ಲ ಮನೆಯವರನ್ನೂ ಸಭೆಗೆ ಬರುವಂತೆ ಕರೆಯಲು ಯಜಮಾನರು ಹೇಳಿ ಕಳುಹಿಸುವುದುಂಟು. ಸಭೆಯಲ್ಲಿ ಯಜಮಾನರ ಸಮ್ಮುಖದಲ್ಲಿ ವಿಚಾರವು ಚರ್ಚೆಗೆ ಬರುವುದು. ಅಧ್ಯಕ್ಷರನ್ನು ಆಹ್ವಾನಿಸಿ, ಅಧ್ಯಕ್ಷ ಪೀಠದಲ್ಲಿ ಕುಳ್ಳಿರಿಸಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿಸುವುದು ಈಗಿನ ಕಾಲದ ಸಭೆಗಳ ನಡವಳಿಕೆ. ಆದರೆ ಊರಿನ ಹತ್ತು ಜನರ ಸಭೆಗಳು ಆ ರೀತಿ ನಡೆಯುತ್ತಿರಲಿಲ್ಲ. ಯಜಮಾನರು ಮಧ್ಯೆ ಕುಳಿತಿರುತ್ತಿದ್ದರು. ಸುತ್ತ ಊರಿನ ಸಮಸ್ತರು ಚಾಪೆಗಳ ಮೇಲೆ ಕುಳಿತಿರುತ್ತಿದ್ದರು. ಯಜಮಾನರು ವಿಷಯವನ್ನು ಸಭೆಯ ಮುಂದಿಡಬಹುದಾಗಿತ್ತು; ಇಲ್ಲವೇ ಸಭೆಯಲ್ಲಿ ಯಾರಾದರೂ ವಿಷಯವನ್ನು ಪ್ರಸ್ತಾಪಿಸಬಹುದಿತ್ತು. "ಇನ್ನು ನಾಲ್ಕು ದಿವಸಕ್ಕೆ ವ್ಯಾಸಪೂರ್ಣಿಮೆ, ಕಾವೇರಿಯಲ್ಲಿ ಪುರಾಣ ಓದುವ ಕಾರ್ಯಕ್ರಮ ನಡೆಯಬೇಕು. ಪುರಾಣ ಓದುವ ಶ್ರೀನಿವಾಸಶಾಸ್ತ್ರಿಗಳಿಗೆ ಆಶೌಚ ಬಂದಿದೆ. ಅಂದಿಗೆ ಪುರಾಣವನ್ನು ಓದುವವರು ಯಾರು ಎಂಬ ಬಗ್ಗೆ ಸಲಹೆ ಕೊಡಿ" ಎಂದು ಯಜಮಾನರು ಕೇಳುತ್ತಿದ್ದರು ಎನ್ನೋಣ. ಅಥವಾ ಜಮೀನಿನ ಯಾವುದೋ ಒಂದು ಸಮಸ್ಯೆಯನ್ನು ಪ್ರಸ್ತಾಪಿಸಿದರು ಎನ್ನೋಣ. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಬಹುದು, ಇಲ್ಲವೇ ತಮಗೆ ತೋರಿದ ಅಥವಾ ಉಚಿತವೆನಿಸಿದ ಸಲಹೆಗಳನ್ನು ಕೊಡಬಹುದು. ಮಾತಾಡುವಾಗ ಕೆಲವೊಮ್ಮೆ ಕಾವೇರಬಹುದು. ಒಬ್ಬರು ಬಡವರು, ಇನ್ನೊಬ್ಬರು ಶ್ರೀಮಂತರು. ಶ್ರೀಮಂತರು ಎಷ್ಟಾದರೂ ಪ್ರಭಾವಶಾಲಿಗಳು. ಅವರ ಮಾತಿಗೇ ಹೆಚ್ಚು ಬೆಲೆ ಸಿಗುತ್ತಿದೆಯಲ್ಲ ಎಂದು ಬಡವರಿಗೆ ಅಸಮಾಧಾನವಾಗಬಹುದು. ಅವರು ಅದನ್ನು ವ್ಯಕ್ತಪಡಿಸಬಹುದು. ಆಗ ಶ್ರೀಮಂತರಿಗೆ ಕೋಪ ಬರಬಹುದು. ಆಗ ಉಳಿದ ಕೆಲವರು ಸಮಾಧಾನ ಹೇಳುವರು. ಹಿರಿಯರಾದವರು ಸಮತೋಲನದ ಮಾತನ್ನಾಡಿ ಇಬ್ಬರಿಗೂ ರಾಜಿ ಮಾಡಿಸುವರು. ಕೊನೆಯಲ್ಲಿ ಯಜಮಾನರು ಎಲ್ಲರ ಅಭಿಪ್ರಾಯಕ್ಕೆ ಅನುಗುಣವಾಗಿ ತೀರ್ಮಾನ ಹೇಳುವರು. ಆ ತೀರ್ಮಾನ ಒಪ್ಪಿತವಾಗದೆ ಹೋಗಿ ಯಾರಿಂದಲಾದರೂ ವಿರೋಧ ವ್ಯಕ್ತವಾದರೆ ಯಜಮಾನರು ಆ ಬಗ್ಗೆ ಸಭೆಯಲ್ಲಿರುವ ಗಣ್ಯ ವ್ಯಕ್ತಿಗಳನ್ನು ಕೇಳಿ ಒಮ್ಮತದ ಅಭಿಪ್ರಾಯ ಮೂಡಿಸಬಹುದು. ಅಂತೂ ಯಾವ ವಿಷಯವೇ ಆಗಲಿ ಸರ್ವಸಮ್ಮತವಾಗಿ, ಸಮಾಧಾನಕರವಾಗಿ ವಿಷಯ ತೀರ್ಮಾನವಾಗಿ ಸಮಸ್ಯೆ ಬಗೆಹರಿಯಬೇಕಾದುದೇ ಸಭೆಯ ಗುರಿ. ಹೀಗೆ ಊರಿನವರು ಸೌಹಾರ್ದ ಮನೋಭಾವದಿಂದ ಬಾಳಲು 'ಹತ್ತು ಜನರ ಸಭೆ'ಯು ಸಹಕಾರಿ.

ಊರಿನಲ್ಲಿ ಯಾವ ಮದುವೆ-ಮುಂಜಿ ಮೊದಲಾದವು ನಡೆದರೂ ಎಲ್ಲರಿಗೂ ದಕ್ಷಿಣೆಯನ್ನು ಕೊಡುವ ಪದ್ಧತಿ ಉಂಟು. ತಾಂಬೂಲದ ಜತೆ ದಕ್ಷಿಣೆ ಕೊಡದಿದ್ದರೆ ನಡೆಸಿದ ಸತ್ಕರ್ಮವು ಸಫಲವಾಗದು. ಈಗಿನ ಕಾಲದಲ್ಲಿ ಎಲ್ಲರಿಗೂ ಸರಿಯಾಗಿ ದಕ್ಷಿಣೆ ತಲುಪಬೇಕೆಂಬ ಉದ್ದೇಶದಿಂದ, ಊಟಕ್ಕೆ ಕುಳಿತಾಗ ಪಂಕ್ತಿಯ

ಮೇಲೆ ಬಂದು, ಒಬ್ಬೊಬ್ಬರಿಗೂ ದಕ್ಷಿಣೆಯನ್ನು ಕೊಡುತ್ತಾರೆ. ಹಿಂದಿನ ಕಾಲದಲ್ಲಿಯಾದರೋ, ಆಯಾ ಸಭೆಯಲ್ಲಿ ಸಭಾ ಪೂಜೆಯಾದ ಸಮಯದಲ್ಲಿ ತಾಂಬೂಲದೊಡನೆ ದಕ್ಷಿಣೆಯನ್ನೂ ಕೊಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಊಟವಾದ ಮೇಲೆ ದಕ್ಷಿಣೆಯನ್ನು ಕೊಟ್ಟುಬಿಡುತ್ತಿದ್ದರು. ತಮ್ಮ ಊರಿನವರ ದಕ್ಷಿಣೆಯನ್ನು ಲೆಕ್ಕ ಮಾಡಿ ಒಟ್ಟಿಗೆ ಯಜಮಾನರ ಕೈಗೆ ಕೊಡುತ್ತಿದ್ದರು. ಆಗಿನ ಕಾಲದಲ್ಲಿ ಮೂರು ಕಾಸು, ಆರು ಕಾಸು ಹೀಗೆ ದಕ್ಷಿಣೆ ಕೊಡುತ್ತಿದ್ದರು. ಒಂದಾಣೆ ದಕ್ಷಿಣೆ ಎಂದರೆ ಅದು ದೊಡ್ಡ ದಕ್ಷಿಣೆಯೆಂದೇ ತಿಳಿಯಬೇಕು. ಈಗಿನ ಒಂದು ರೂಪಾಯಿ ಕೂಡ ಆಗಿನ ಒಂದಾಣೆಗಿಂತ ಬೆಲೆಯಲ್ಲಿ ಕಡಮೆ. ಆ ಊರಿನಲ್ಲಿ ದಕ್ಷಿಣೆಗೆ ಅರ್ಹರಾದವರು ಎಷ್ಟು ಜನ ಎಂಬುದರ ಲೆಕ್ಕ ಇರುತ್ತದೆ. ಆ ಊರಿನಲ್ಲಿ ಮೂವತ್ತೆರಡು ತಲೆ ಎಂದು ಲೆಕ್ಕವಿದ್ದರೆ ಒಂದಾಣೆ ದಕ್ಷಿಣೆಯಾದರೆ ಮೂವತ್ತೆರಡು ಆಣೆ ಎಂದರೆ ಎರಡು ರೂಪಾಯಿಗಳನ್ನು ಯಜಮಾನರಿಗೆ ತಲುಪಿಸುವುದು ಪದ್ಧತಿ. ಹೀಗೆಯೇ ಊರೊಟ್ಟಿನ ತಾಂಬೂಲಗಳೂ ಇರುತ್ತಿದ್ದವು. ಅವುಗಳಿಂದ ಬಂದ ದಕ್ಷಿಣೆಯ ದುಡ್ಡು ಮತ್ತು ಮಾಮೂಲು ದಕ್ಷಿಣೆಯಿಂದ ಬಂದ ಹಣ ಇವುಗಳನ್ನು ಸೇರಿಸಿ ಒಂದು ಮೊತ್ತವಾದೊಡನೆ ನೂರು-ಇನ್ನೂರು ರೂಪಾಯಿ ಹೀಗೆ ಊರಿನಲ್ಲಿ ಆವಶ್ಯಕತೆ ಇದ್ದವರಿಗೆ ಸಾಲ ಕೊಡುತ್ತಿದ್ದರು. ಊರಿನ ಹತ್ತು ಜನದ ಈ ಹಣವನ್ನು ಸಾಲವಾಗಿ ಕೊಟ್ಟಾಗ ಅದಕ್ಕೆ ಒಂದು ನಿಗದಿಯಾದ ಬಡ್ಡಿದರ ಇರುತ್ತಿದ್ದಿತು. ಆದರೆ ಈ ಬಡ್ಡಿಯು 'ಲೇವಾದೇವಿ ಮಾಡುವವರು' ವಿಧಿಸುತ್ತಿದ್ದ ಬಡ್ಡಿಗಿಂತ ಕಡಮೆಯಾಗಿರುತ್ತಿದ್ದಿತು. ಅದನ್ನು 'ಧರ್ಮದ ಬಡ್ಡಿ' ಎಂದು ಹೇಳಬಹುದು. ಸಾಲ ಪಡೆದುಕೊಂಡ ಗೃಹಸ್ಥ ಬಡ್ಡಿಯನ್ನು ವರ್ಷಕ್ಕೊಮ್ಮೆ ಕೊಡಬೇಕಾಗುತ್ತಿತ್ತು. ಬಡ್ಡಿಯ ಹಣವನ್ನು ಊರೊಟ್ಟಿನ ಯಾವುದಾದರೂ ಒಂದು ಸಮಾರಾಧನೆ, ಪೂಜೆ, ವಸಂತ, ಪಾನಕಪೂಜೆ ಮೊದಲಾದ ಯಾವುದನ್ನಾದರೂ ನಡೆಸಲು ನಿಗದಿಗೊಳಿಸಲಾಗುತ್ತಿತ್ತು. ಈ ರೀತಿಯ ನಿಧಿಗೆ 'ಪುದುವಟ್ಟು' ಎಂದು ಹೆಸರು. ಇವಕ್ಕೆ ಪಾನಕಪೂಜೆ ಪುದುವಟ್ಟು, ನರಸಿಂಹ ಜಯಂತಿ ಪುದುವಟ್ಟು, ವ್ಯಾಸಪೂಜೆ ಪುದುವಟ್ಟು, ರಾಮನವಮಿ ಪುದುವಟ್ಟು ಎಂಬುದಾಗಿ ಹೆಸರು ಕೊಡುತ್ತಿದ್ದರು. ನಿಗದಿತ ಕೈಂಕರ್ಯವನ್ನು ಪುದುವಟ್ಟಿನ ಸಾಲ ತೆಗೆದುಕೊಂಡ ಗೃಹಸ್ಥ ಅದರ ಬಡ್ಡಿಯ ಹಣದಿಂದ ನಡೆಸುತ್ತಿದ್ದ. ಇದರಿಂದ ಒಂದು ಕೈಂಕರ್ಯವನ್ನು ನಡೆಸಲು ಹಣವೂ ಒದಗುತ್ತಿತ್ತು. ಅಲ್ಲದೆ ಅದನ್ನು ನಡೆಸುವ ಗೃಹಸ್ಥನೂ ನಿಗದಿಯಾಗಿರುತ್ತಿದ್ದ. ಇಂಥ ಕೈಂಕರ್ಯವನ್ನು ಬಹಳ ಭಕ್ತಿಯಿಂದ, ಆಸ್ಥೆಯಿಂದ ನಡೆಸಿಕೊಡುತ್ತಿದ್ದರು. ಹೀಗೆ ಊರಿನ ಹಣ ಊರಿಗೇ ಹಲವು ರೀತಿಯಲ್ಲಿ ಸಂದಾಯವಾಗುತ್ತಿತ್ತು. ಊರಿನವರು ಆ ಗೃಹಸ್ಥನಿಗೆ ಆ ಸೇವೆಯನ್ನು ನಡೆಸುವುದಕ್ಕೆ ಬೇಕಾದ ನೆರವನ್ನು ಕೊಡುತ್ತಿದ್ದರು.

ಹತ್ತು ಜನದ ಸಭೆಯ ಒಂದು ಮಾದರಿಯನ್ನು ನಾವು ಈಗ ಗಮನಿಸೋಣವೇ?

"ಇವತ್ತು ರಾತ್ರಿ ಸೋಮರಾಯರ ಮನೆಯಲ್ಲಿ ಹತ್ತು ಜನಗಳ ಸಭೆ ಸೇರುತ್ತದೆ, ಎಲ್ಲರೂ ಬರಬೇಕು ಎಂದು ಯಜಮಾನರು ಹೇಳಿದ್ದಾರೆ" ಎಂದು ಮನೆಮನೆಗೆ ಹೋಗಿ ಸೋಮಪ್ಪ, ರಾಮಪ್ಪ ಹೇಳಿಬರುತ್ತಿದ್ದಾರೆ. "ಏನು ವಿಷಯಾನೋ ಸಭೆ ಕರೆಯೋದಕ್ಕೆ" ಎಂದು ಚಿನ್ನಯ್ಯ ಕೇಳಿದ. "ಅದು ಏನೋಪ್ಪ, ನನಗೆ ಗೊತ್ತಿಲ್ಲ. ಯಜಮಾನರು ಹೇಳಿ ಬಾ ಅಂದರು. ಅದಕ್ಕೆ ಕರೆಯಲು ಬಂದೆ" ಎಂದ ಸೋಮಪ್ಪ. ಆಗ ವೆಂಕಟರಾಮು ಅವರ ಮನೆಯಲ್ಲಿ ಮಾತಾಡುತ್ತಿದ್ದವನು, "ಇನ್ನೇನು ಪಾನಕಪೂಜೆ ವಸಂತಗಳು ಬರುತ್ತಿವೆಯಲ್ಲ, ಆ ವಿಷಯ ಇರಬಹುದು. ಯಾರ ಯಾರ ಮನೆಯಲ್ಲಿ ಯಾವ ಯಾವಾಗ ಯಾವ ಸೇವೆ ನಡೆಯಬೇಕು ಎಂಬುದನ್ನು ತೀರ್ಮಾನಿಸುವುದು ಇರಬೇಕು" ಎಂದ. ಅಲ್ಲೇ ಇದ್ದ ತಿಮ್ಮಪ್ಪ, "ಅವತ್ತು ಚಿನ್ನಸ್ವಾಮಿಯ ತೋಟಕ್ಕೆ ಮರಿಯಣ್ಣನ ಮನೆ ದನ ನುಗ್ಗಿ ಲೂಟಿ ಮಾಡಿದವಲ್ಲ, ಆ ವಿಷಯವೂ ಇರಬಹುದು" ಎಂದ. "ಹೌದು ಹೌದು, ಮರೆತಿದ್ದೆ. ಇರಬಹುದು" ಎಂದ ವೆಂಕಟರಾಮು, "ಇದಲ್ಲದೆ ಇನ್ನೊಂದು ಮಾಮೂಲು ವಿಷಯ ಇದೆಯಲ್ಲ! ಕಾವೇರಿನದಿಗೆ ಸೋಪಾನ ಕಟ್ಟುತ್ತಿರುವ ವಿಷಯ" ಎಂದ. "ಅದು ಇದ್ದೇ ಇರುತ್ತದೆ" ಎಂದು ದನಿಗೂಡಿಸಿದ ಚಿನ್ನಯ್ಯ.

ರಾತ್ರಿ ಎಲ್ಲರೂ ಊಟವಾದ ಮೇಲೆ ಮನೆಯ ಅಳಿದುಳಿದ ಕೆಲಸಗಳನ್ನು ಚಿಕ್ಕವರಿಗೆ ಹೇಳುತ್ತ, ಎಲೆ ಅಡಕೆ ಜಗಿಯುತ್ತ, ಹೊಗೆಸೊಪ್ಪಿನ ಅಭ್ಯಾಸವಿರುವವರು ಹೊಗೆಸೊಪ್ಪನ್ನು ದವಡೆಯಲ್ಲಿಟ್ಟುಕೊಂಡು, ಒಬ್ಬೊಬ್ಬರಾಗಿ ಸೋಮರಾಯರ ಮನೆಗೆ ಬಂದು, ತೊಟ್ಟಿಯ ಮೇಲುಹಜಾರದಲ್ಲಿ ಕುಳಿತುಕೊಳ್ಳಲಾರಂಭಿಸಿದ್ದಾರೆ. "ಅಯ್ಯು, ಹಸುಗಳಿಗೆ ಹುಲ್ಲು ಹಾಕಿ ಅವುಗಳನ್ನು ಸರಿಯಾಗಿ ಕಟ್ಟಿಹಾಕಿದೆಯೋ ಇಲ್ಲವೋ ನೋಡು. ಮರೆತುಬಿಡಬೇಡ. ಅವುಗಳನ್ನು ಉಪವಾಸ ಕೆಡವಬೇಡ" ಎಂದು ಒಬ್ಬರು ಕೂಗಿ ಹೇಳಿಬರುತ್ತಿದ್ದಾರೆ. "ಪುಟ್ಟು, ಹೋಗಿ ಆ ಕರೀಗೌಡರ ಕೈಲಿ ಅಡಕೆ ಹಣ ವಸೂಲು ಮಾಡಿಕೊಂಡು ಬಾ ಹೋಗು. ನಾನು ಸಭೆಗೆ ಹೋಗ್ತಾ ಇದ್ದೀನಿ. ಅವರು ನಿನ್ನೆಯೇ 'ಬನ್ನಿ ಸ್ವಾಮಿ, ಹಣ ಕೊಡುತ್ತೇನೆ' ಎಂದಿದ್ದರು" ಎಂದು ಇನ್ನೊಬ್ಬರು ಹೇಳುತ್ತಿದ್ದಾರೆ. "ಲೋ, ಹೊರಗಡೆ ಒಣಗಿ ಹಾಕಿರುವ ಅಡಕೆ ಪಟ್ಟೆಯನ್ನು ಒಳಕ್ಕೆ ತೆಗೆದುಕೊಂಡು ಹೋಗಿರೋ. ಏನಪ್ಪ....

ಮರೆತೇ ಬಿಡ್ತೀರಿ" ಎಂದು ಮಗುದೊಬ್ಬರು. ಅಂತೂ ಎಲ್ಲರೂ ನಿಧಾನವಾಗಿ ಬಂದು ಸೋಮರಾಯರ ಮನೆಯಲ್ಲಿ ಸೇರಿದರು.

ಕುಳಿತುಕೊಂಡವರು ಲೋಕಾಭಿರಾಮವಾಗಿ ಮಾತನಾಡುತ್ತಿರುತ್ತಾರೆ. ಇನ್ನೂ ಸಭೆ ಆರಂಭವಾಗಿರುವುದಿಲ್ಲ. "ಅವತ್ತು ಶುಕ್ರವಾರ ಸಂತೇಲಿ ಏನಾಯ್ತು ಅಂತೀಯ. ಆ ನಿಂಗಣ್ಣ ತಲೆ ತಪ್ಪಿಸಿಕೊಂಡು ತಿರುಗುತ್ತ ಇದ್ದನಲ್ಲ. ಅವನನ್ನು ಹಿಡಿದುಬಿಟ್ಟು ನನ್ನ ದುಡ್ಡು ಕೊಡು ಅಂತ ನಿಂತುಬಿಟ್ಟೆ. ಅವನು ಪೆಚ್ಚಾಗಿ ಹೋದ. 'ನೀವೆಲ್ಲಿ ಬಂದಿರಿ ಅಯ್ನೋರೆ. ನೀವೇನೂ ಎಲೆಪಿಂಡಿ ಸಂತೆಗೆ ತಂದಿರನಿಲ್ಲ' ಎಂದ. 'ಅಲ್ಲವೋ ನಿಂಗಣ್ಣ, ನೀನು ಸಂತೇಗೆ ಬರೋದನ್ನ ಹೊಂಚು ಹಾಕಿ ನೋಡ್ತಾ ಇದ್ದೆ. ನೀನು ಸಂತೇಗೆ ಬಂದಿದ್ದನ್ನು ನೋಡಿ ನಾನು ಹಿಂದಿನಿಂದ ಗೊತ್ತಾಗದ ಹಾಗೆ ಬಂದೆ, ಇವತ್ತು ನಿನ್ನನ್ನ ಹಿಡಿದೇ ಹಿಡೀತೀನಿ ಅಂತ' ಎಂದು ಹೇಳಿ, ಏನೇನು ಸಬೂಬು ಹೇಳಿದರೂ ಬಿಡದೆ ಒಂದಿಷ್ಟು ಹಣ ವಸೂಲು ಮಾಡಿದೆ" ಅಯ್ಯಪ್ಪ ಹೇಳಿದ. "ಅಂದರೆ ಪೂರ್ತಿ ಹಣ ಕೊಡಲಿಲ್ಲ ಅನ್ನು" ಚೆನ್ನಯ್ಯ ಕೇಳಿದ. "ಅವನಾ ಕೊಡೋವನು, ನಾನು ಬಿಡಲಿಲ್ಲ. ಹೂವು ಮಾರಿದ ದುಡ್ಡು ಜೇಬಿನಲ್ಲಿತ್ತು. ಒಂದಷ್ಟು ಕಿತ್ತುಕೊಂಡೆ!" ಅಯ್ಯಪ್ಪ ಹೇಳಿದ. "ಅಂತೂ ಪರವಾ ಇಲ್ಲ. ನೀನೂ ಘಾಟೀನೇ" ಎಂದು ಚೆನ್ನಯ್ಯ ನುಡಿದ.

"ಅಲ್ಲ, ಜರ್ಮನಿ ಸೈನ್ಯ ಫ್ರಾನ್ಸ್‌ಗೆ ನುಗ್ಗಿಬಿಟ್ಟದೆಯಂತಲ್ಲ. ಇನ್ನೇನು ಫ್ರಾನ್ಸ್‌ಅನ್ನು ಹಿಡಿದ ಮೇಲೆ ಇಂಗ್ಲೆಂಡಿಗೆ ನುಗ್ಗಿಬಿಡುತ್ತೋ ಏನೋ" ವೆಂಕಟರಾಮು ಹೇಳಿದ. "ಇಂಗ್ಲೆಂಡಿಗೆ ನುಗ್ಗೋದು ಅಷ್ಟು ಸುಲಭಾನಾ! ಮಧ್ಯೆ ಇಂಗ್ಲಿಷ್ ಕಡಲ್ಗಾಲುವೆ ಇದೆ. ಅದನ್ನು ದಾಟೋದಕ್ಕೆ ಬಿಟ್ಟರೆ ತಾನೆ ಇಂಗ್ಲೆಂಡಿನವರು?" ಕೃಷ್ಣಮೂರ್ತಿ ಎಂದ. "ಆದರೂ ಯುದ್ಧದಲ್ಲಿ ಹಿಟ್ಲರನನ್ನು ಮೀರಿಸೋರು ಯಾರೂ ಇಲ್ಲ ಇವತ್ತಿಗೆ" ಎಂದ ವೆಂಕಟರಾಮು.

"ನಮ್ಮ ಅಯ್ಯಾಜೋಯಿಸರು ಮೈಸೂರಿಗೆ ಹೋಗಿದ್ದರಂತಲ್ಲ ಗುಟ್ಟಾಗಿ. ಏನು ಸಮಾಚಾರ ?" ಕೇಶವ ಉಪಾಧ್ಯಾಯರು ವೆಂಕಟೇಶಶಾಸ್ತ್ರಿಗಳನ್ನು ಕೇಳಿದರು. "ಮೈಸೂರಿಗೆ ಅಲ್ಲಪ್ಪ ಅವರು ಹೋಗಿದ್ದು, ಬೆಂಗಳೂರಿಗೆ ಹೋಗಿದ್ರು ಅಂತ ಸಮಾಚಾರ." "ಅದೇನು ಕಾರಣ ಇದ್ದೀತಪ್ಪ ಗುಟ್ಟಾಗಿ ಹೋಗಿಬರೋದಕ್ಕೆ?" ಕೇಶವ ಉಪಾಧ್ಯಾಯರು ಕೇಳಿದರು. ಅಲ್ಲಿಯೇ ಇದ್ದ ಗುಂಡಯ್ಯ, "ನಮ್ಮ ಜೋಯಿಸರ ರಹಸ್ಯ ಎಲ್ಲರಿಗೂ ಗೊತ್ತು. ಅದೇ ಲಂಡನ್ ಪಾರ್ಟಿಯೋರು ಇದ್ದಾರಲ್ಲ ! ಅದ್ಯಾರದೋ ಮನೆಗೆ ಶ್ರಾದ್ಧಕ್ಕೆ ಹೋಗಿದ್ರು ಅಂತ ತಿಳೀತು. ಯಾರೋ ಕೇಳಿದ್ರಂತೆ 'ಏನು ಜೋಯಿಸ್ರೆ ಲಂಡನ್ ಪಾರ್ಟಿಯೋರ ಮನೆಗೆ ಹೋಗಿದ್ದಿರಂತಲ್ಲ, ಊರಿನೋರ ವಿರೋಧ ಆಗೋಲ್ವೆ' ಅಂತ. ಅದಕ್ಕೆ ಜೋಯಿಸರು ಏನಂದರಂತೆ ಗೊತ್ತ ! 'ಅವರೂ ನಮ್ಮವರೇ ತಾನೆ. ಅವರಿಗೆ ಕರ್ಮಲೋಪವಾದರೆ ಬ್ರಾಹ್ಮಣ್ಯ ಉಳಿಯುತ್ತೈ ! ಬ್ರಾಹ್ಮಣಿಕೆ ಉಳಿಸೋಕೆ ಹೋಗಿದ್ದೆ. ಅದಕ್ಕೆ ನೀವು ನನ್ನ ಮೆಚ್ಚಿಕೋಬೇಕು. ಅಲ್ಲದೆ ಬರೋವಾಗ ಪಶ್ಚಿಮವಾಹಿನೀಲಿ ಇಳಿದುಬಿಟ್ಟು ಪ್ರಾಯಶ್ಚಿತ್ತ ಮಾಡಿಕೊಂಡು ಬಂದೆ' ಅಂದರಂತೆ" ಎಂದು ಹೇಳಿದ. "ಹೂಂ! ದೊಡ್ಡವರ ಮನೆ, ಹೋಗದೆ ಹೇಗೆ ಇದ್ದಾರು" ವೆಂಕಟೇಶಶಾಸ್ತ್ರಿಗಳು ಮುಗುಳ್ನಕ್ಕರು.

ಅಷ್ಟು ಹೊತ್ತಿಗೆ ಯಜಮಾನರು ಬಂದರು. "ಯಜಮಾನರಿಗೆ ದಾರಿ ಬಿಡಿರಪ್ಪ" ಎಂದು ಹೇಳುತ್ತಿದ್ದಂತೆ, ಯಜಮಾನರು ಬಂದು ಮಧ್ಯೆ ಕುಳಿತರು. "ಎಲ್ಲರೂ ಬಂದಿದ್ದಾರೆಯೆ ?" ಎಂದು ಯಜಮಾನರು ಕೇಳಿದರು. "ಎಲ್ಲರೂ ಬಂದಿದ್ದ ಹಾಗಿದೆ" ಎಂದು ಒಬ್ಬರು ಎನ್ನಲು, "ಅದೇ ಕೆಳಗಿನ ಮನೆ ಶಾಸ್ತ್ರಿಗಳು ಬಂದಿಲ್ಲ" ಎಂದು ಇನ್ನೊಬ್ಬರು ಹೇಳಿದರು. "ಅವರು ಊರಲ್ಲಿ ಇಲ್ಲ. ನಿನ್ನೆಯೇ ಚಿಲ್ಕುಂದಕ್ಕೆ ಹೋದರು" ಎಂದು ಕೃಷ್ಣಯ್ಯ ನುಡಿದ. "ಸರಿ, ಆ ಬಾವಿಕಟ್ಟೆ ಮನೆ ನಂಜುಂಡ ಎಲ್ಲಿ ?" ಎಂದು ಕೇಳಿದರು ಯಜಮಾನರು. "ಅವರು ಈಗಲೇ ಬರ್‍ತೇನೆ ಎಂದು ಹೇಳುತ್ತ ಹಸುಗಳಿಗೆ ಹುಲ್ಲನ್ನು ತರಲು ಹಿತ್ತಲಿಗೆ ಹೋಗಿದ್ದಾರೆ" ಎಂದು ರಾಮುಸ್ವಾಮಿ ಹೇಳಿದ. "ಸರಿ, ಹಾಗಿದ್ದರೆ ಶುರುಮಾಡೋಣ. ಮೊದಲ ವಿಷಯ ಏನು ?" ಎಂದು ಯಜಮಾನರು ಕೇಳಿದರು. "ಅದೇ ಚೈತ್ರಮಾಸ ಬರುತ್ತ ಇದೆಯಲ್ಲ. ಚೈತ್ರವೈಶಾಖದಲ್ಲಿ ಪಾನಕ ಪೂಜೆಗಳು ಬರುತ್ತವೆ. ಯಾರ ಯಾರದು ಯಾವ ಯಾವಾಗ ಎಂದು ತೀರ್ಮಾನವಾಗಬೇಕು" ಪುಟ್ಟಣ್ಣಯ್ಯ ವಿಷಯ ಎತ್ತಿದ. "ಅದು ಸರಿ, ಯಾರಯಾರದ್ದು, ಯಾವಯಾವಾಗ ಆಗಬೇಕು ಹೇಳಿ. ಆಚೆ ಮನೆ ರಾಮಣ್ಣನದು ಚೈತ್ರದಲ್ಲಿ ಆಗಬೇಕು. ಸುಬ್ರಾಯ ಸ್ವಾಮೀದು ಅದೇ ತಿಂಗಳಲ್ಲಿ ಆಗಬೇಕು, ಅಲ್ಲವೇ" ಎಂದರು ಯಜಮಾನರು. "ನಾನು ತದಿಗೆ ದಿನ ಇಟ್ಟುಕೋತೀನಿ" ಎಂದ ಆಚೆ ಮನೆ ರಾಮಣ್ಣ. "ನಂದು ಸಪ್ತಮಿ ದಿವಸ ಇರಲಿ" ಎಂದ ಸುಬ್ರಾಯಸ್ವಾಮಿ. ಹೀಗೆ ಎಲ್ಲ ಪುದುವಟ್ಟಿನ ಕಾರ್ಯಕ್ರಮಗಳೂ ಒಂದೊಂದಾಗಿ ತೀರ್ಮಾನವಾದುವು.

"ನಮ್ಮ ತೋಟಕ್ಕೆ ಮರಿಯಣ್ಣನ ಮನೆ ದನ ನುಗ್ಗಿ, ವೀಳೆಯದೆಲೆ ಹಂಬನ್ನೆಲ್ಲ ಹಾಳುಮಾಡಿದೆ. ಇದಕ್ಕೆ ಏನು ಪರಿಹಾರ ಯಜಮಾನರೇ? ನನಗೆ ನೂರು ರೂಪಾಯಿ ಮೇಲೆ ನಷ್ಟವಾಗಿದೆ" ಎಂದ ಚೆನ್ನಸ್ವಾಮಿ. ಅದಕ್ಕೆ ಮರಿಯಣ್ಣ, "ನಿನ್ನ ಯಾರು ಬೇಲಿ ಹಾಕಿ ನಿನ್ನ ಆಸ್ತೀನ ಬಂದೂಬಸ್ತು ಮಾಡಿಕೋಬೇಡ ಎಂದು ಹೇಳಿದರು? ಬೇಲಿಯಲ್ಲಿ ಜಾಗ ಸಿಕ್ಕಿದರೆ ದನಗಳು ನುಗ್ಗುತ್ತವೆ.

ಅದಕ್ಕೆ ಯಾರೇನು ಮಾಡೋದಕ್ಕೆ ಆಗುತ್ತದೆ? ನಿನ್ನ ತೋಟದ ಬೇಲಿ ಕಾಯೋದಕ್ಕೆ ಯಾರನ್ನಾದರೂ ಇಪ್ಪತ್ತು ನಾಲ್ಕು ಗಂಟೆ ಕುಕ್ಕರು ಹಾಕಿರು, ಸರಿಹೋಗುತ್ತೆ. ಅವತ್ತು ಹಳ್ಳಿ ದನ ನಮ್ಮ ತೋಟಕ್ಕೂ ನುಗ್ತಾ ಇತ್ತು. ನನ್ನ ಮಗ ನೋಡಿ ಓಡಿಸಿಬಿಟ್ಟು ಬಂದ. ಯಾರನ್ನ ಹೋಗಿ ಪರಿಹಾರ ಕೇಳಲಿ ನಾನು? ಹೇಳಿ" ಎಂದ ಮರಿಯಣ್ಣ. "ನೋಡಿ, ಅವನ ನಾಲಗೆ ಎಷ್ಟು ಉದ್ದವಾಯಿತು. ಅವನ ಹಸುಗಳನ್ನು ಕಾಯೋ ಭಾರ ಅವನದೋ ನನ್ನದೋ? ಕಂಡಕಂಡವರ ತೋಟಕ್ಕೆ ಹಸುಗಳನ್ನು ನುಗ್ಗಿಸಿಬಿಟ್ಟು ಕೂತ್ಕೊಂಡರೆ ಯಾರು ಕೇಳ್ತಾರೆ ?" ಎಂದ ಚಿನ್ನಸ್ವಾಮಿ. "ನನ್ನ ನಷ್ಟ ಕಟ್ಟಿಕೊಡಲಿ. ಇಲ್ಲದೆ ಇದ್ರೆ ನಾನು ನನ್ನ ಹಸುಗಳನ್ನು ಅವನ ತೋಟಕ್ಕೆ ನುಗ್ಗಿಸದೆ ಇದ್ದರೆ ಆಯ್ತಲ್ಲ" ಎಂದು ಚಿನ್ನಸ್ವಾಮಿ ಖಡಾಖಂಡಿತವೋ ಎನ್ನುವಂತೆ ಹೇಳಿದ. ಮಾತು ವಿರಸಕ್ಕೆ ತಿರುಗುತ್ತಿರುವುದನ್ನು ನೋಡಿದ ಯಜಮಾನರು, "ನೋಡಿ, ಮಾತು ಮನೆ ಕೆಡಿಸಿತು ಎನ್ನುವಂತೆ ಸುಮ್ಮನೆ ಜಗಳ ಆಡಬೇಡಿ. ಅಕ್ಕಪಕ್ಕದ ತೋಟದವರು ಸಾಮರಸ್ಯದಿಂದ ಇರಬೇಕು. ಇಂಥ ಸಣ್ಣ ವಿಷಯಾನೆಲ್ಲ ಹತ್ತು ಜನಗಳ ಮುಂದೆ ತರಲೇಬಾರದು. ನಾನೊಂದು ಮಾತು ಹೇಳ್ತೀನಿ ಕೇಳಿ. ಚಿನ್ನಸ್ವಾಮಿ ಬೇಲಿಯನ್ನು ಬಂದೊಬಸ್ತಾಗಿ ಕಟ್ಟಲು ಮರಿಯಣ್ಣ ಸಹಾಯ ಮಾಡಲಿ. ಇಬ್ಬರ ತೋಟದ ನಡುವಿನ ಬೇಲಿಯಾದ್ದರಿಂದ ಇಬ್ಬರೂ ಸಹಕರಿಸಬೇಕು. ಈ ಸಲಕ್ಕೆ ನಷ್ಟ ಕಟ್ಟಿಕೊಡುವ ಮಾತನ್ನಾಡಬೇಡ ಚಿನ್ನಸ್ವಾಮಿ. ಇನ್ನೊಂದು ಸಲ ಹೀಗಾದರೆ ನಾವು ನೋಡಿ ವಿಚಾರ ಮಾಡಿ ತೀರ್ಮಾನ ಕೊಡುತ್ತೇವೆ" ಎಂದರು ಯಜಮಾನರು. "ಯಜಮಾನರ ಮಾತಿಗೆ ಒಪ್ಪಿಕೊಂಡುಬಿಡೀಪ್ಪ" ಎಂದು ಇತರರು ದನಿಗೂಡಿಸಿದರು. ಅಲ್ಲಿಗೆ ಆ ಪ್ರಕರಣ ಮುಗಿಯಿತು.

"ನೋಡಿ, ನಮ್ಮ ಸೋಮನಹಳ್ಳಿ ದೀಕ್ಷಿತರ ಮನೆಯಲ್ಲಿ ನಾಡಿದ್ದು ಅವರು ಮಾಡುತ್ತಿದ್ದ ಹೋಮದ ಪೂರ್ಣಾಹುತಿ ಇದೆ. ನಾನು ಮೊನ್ನೆ ಅಲ್ಲಿಗೆ ಹೋಗಿದ್ದಾಗ ಊರಿನವರಿಗೆಲ್ಲ ಅಂದು ಬರುವಂತೆ ಆಹ್ವಾನ ಕೊಟ್ಟಿದ್ದಾರೆ. ಅಲ್ಲದೆ ಗಾಡಿ ಇರುವವರು ಎರಡು ಗಾಡಿ ಕಾವೇರಿ ನೀರನ್ನು ತರುವಂತೆ ಕೇಳಿಕೊಂಡಿದ್ದಾರೆ" ಎಂದು ಕೃಷ್ಣಮೂರ್ತಿ ಹೇಳಿದ. ಆಗ ಯಜಮಾನರು, "ಹೌದಪ್ಪ, ಕಳೆದ ವಾರ ನನಗೂ ಹೇಳಿದ್ದಾರೆ. ಮುತ್ತಣ್ಣ ಮತ್ತು ಸುಬ್ರಾಯಸ್ವಾಮಿ ಇಬ್ಬರೂ ಗಾಡಿ ತರುತ್ತಾರೆ. ಯಾರು ಯಾರಿಗೆ ಸಾಧ್ಯವೋ ಎಲ್ಲರೂ ಸೇರಿ ನದಿಯಿಂದ ನೀರು ತುಂಬಿ ತೆಗೆದುಕೊಂಡು ಹೋಗಲಿ. ಪುಣ್ಯದ ಕೆಲಸ" ಎಂದು ಹೇಳಿ "ಏನಪ್ಪ ಮುತ್ತಣ್ಣ, ಸುಬ್ರಾಯಸ್ವಾಮಿ, ಆಗುತ್ತೇನಪ್ಪ" ಎಂದು ಕೇಳಿದರು. "ಆಗಲಿ ಯಜಮಾನರೆ. ಇಂಥ ಒಳ್ಳೆಯ ಕೆಲಸವನ್ನು ಯಾರು ಬೇಡ ಎನ್ನುತ್ತಾರೆ" ಎಂದು ಅವರು ಒಪ್ಪಿಕೊಂಡರು.

"ಕಾವೇರಿ ನದಿಗೆ ನಮ್ಮ ಕಡವಿನಲ್ಲಿ ಸೋಪಾನ ಕಟ್ಟುತ್ತಿರುವುದು ಸರಿಯೆ. ದಿನ ಬೆಳಗ್ಗೆ ಕಾವೇರಿ ಸ್ನಾನಕ್ಕೆ ಮೊದಲು ಎರಡು ಗಂಟೆ ಕಾಲ ಕೆಲಸ ಮಾಡಬೇಕು ಎಂದು ನಿಗದಿಯಾಗಿರುವುದು ನಿಮಗೆಲ್ಲಾ ಗೊತ್ತೇ ಇದೆ. ಕೆಲವರು ಸರಿಯಾಗಿ ನಡೆಸಿಕೊಡುತ್ತಿಲ್ಲ ಎಂದು ಮಾತು ಕೇಳಿಬರುತ್ತಿದೆ. ಹೆಸರು ಹೇಳಬಾರದು. ಹೀಗಾದರೆ ಕೆಲಸ ನಿಧಾನವಾಗುತ್ತೆ. ಮುಂದೆ ಆಷಾಢಶ್ರಾವಣದಲ್ಲಿ ಮಳೆ ಬಂದು ನದಿಯಲ್ಲಿ ಪ್ರವಾಹ ಬಂದ ಮೇಲೆ ಕೆಲಸ ನಿಂತು ಹೋಗುತ್ತದೆ. ಅಷ್ಟರಲ್ಲಿ ಕೆಲಸ ಮುಗಿಯಬೇಕು. ಇಲ್ಲದಿದ್ದರೆ ಚಪ್ಪಡಿ ಕಲ್ಲುಗಳು ಹಾಳಾಗುತ್ತವೆ, ಇಲ್ಲವೇ ಕಳುವಾಗುತ್ತವೆ" ಎಂದು ಯಜಮಾನರು ಮನವಿ ಮಾಡಿದರು. "ಯಾರು ತಾನೇ ಹತ್ತೂ ಜನದ ಕೆಲಸಕ್ಕೆ ತಪ್ಪಿಸಿಕೊಳ್ಳುತ್ತಾರೆ? ಏನೋ ಒಂದೊಂದು ಸಲ ಬೇರೆ ಕೆಲಸ ಬೀಳುತ್ತೆ. ಕಡಮೆ ಬಿದ್ದದ್ದಕ್ಕೆ ಒಂದು ಗಂಟೆ ಹೆಚ್ಚಿಗೆ ಕೆಲಸ ಮಾಡಿದರೆ ಆಯಿತೋ ಇಲ್ಲವೋ," ಎಂದ ಕೃಷ್ಣಮೂರ್ತಿ. "ಅದು ಸರಿ. ನಿಮ್ಮ ಜವಾಬ್ದಾರಿ ನಿಮ್ಮ ಮೇಲಿರಲಿ" ಎಂದರು ಯಜಮಾನರು.

"ಇನ್ನೇನೂ ವಿಷಯ ಇಲ್ಲವಲ್ಲ" ಎಂದು ಹೇಳಿ ಯಜಮಾನರು ಎದ್ದರು. ಅನಂತರ ಎಲ್ಲರೂ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತ ತಮ್ಮ ತಮ್ಮ ಮನೆಗಳ ಕಡೆಗೆ ಹೊರಟರು. "ಬೆಳಗ್ಗೆ ಆ ರಂಗನಿಗೆ ಗೊಬ್ಬರ ಹೇರಲು ಗಾಡಿಗೆ ಹೇಳಿದ್ದೇನೆ. ಸ್ವಲ್ಪ ಬಂದು ನನಗೆ ಸಹಾಯ ಮಾಡಿ ಕೊಡಣ್ಣ ಮರಿಯಣ್ಣ" ಎಂದು ಸುಬ್ಬಣ್ಣ ಕೇಳಿದ. "ಆಗಲಿ, ಅಷ್ಟು ಹೊತ್ತಿಗೇ ಬರುತ್ತೇನೆ" ಎಂದು ಮರಿಯಣ್ಣ ಉತ್ತರ ಕೊಟ್ಟ. ಎಲ್ಲರೂ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು.

ಸಂಕೇತಿ ಜನರು ಸಮುದಾಯಜೀವಿಗಳು. ಒಬ್ಬರಿಗೆ ಒಬ್ಬರು ಸಹಾಯ ಮಾಡುವ ಸ್ವಭಾವ ಅವರದು. ಊರೊಟ್ಟಿನ ಕೆಲಸವೇ ಆಗಲಿ, ಪಕ್ಕದ ಊರಿನ ಒಂದು ಸಮಾರಂಭವೇ ಆಗಲಿ, ತಮ್ಮ ತಮ್ಮ ಕೈಲಾದ ಸಹಾಯ ಮಾಡುವರು. ಕೇರಳಾಪುರದಲ್ಲಿ ಹತ್ತೂ ಜನಗಳ ತನುಮನಧನಗಳ ಸಹಕಾರದಿಂದ ಕಾವೇರಿ ನದಿಗೆ ಸೋಪಾನ ಕಟ್ಟಿದುದು ಇಂಥ ಸಹಕಾರದ ಒಂದು ಜ್ವಲಂತ ನಿದರ್ಶನ. ಊರೊಟ್ಟಿನ ಹಣದಿಂದ ಚಪ್ಪಡಿ ಕಲ್ಲುಗಳನ್ನು ತರಿಸಿದರು. ಒಂದು ಕಾಸೂ ಕೂಲಿಗೆ ಖರ್ಚು ಮಾಡದೆ ಸ್ವಂತ ದುಡಿಮೆಯಿಂದ ಕಾರ್ಯವನ್ನು ನಿರ್ವಹಿಸಿದರು. ಪ್ರತಿಯೊಬ್ಬರೂ ಬೆಳಗ್ಗೆ ಕಾವೇರಿ ನದಿಗೆ ಸ್ನಾನಕ್ಕೆ ಹೋದಾಗ ಇಂತಿಷ್ಟು ಹೊತ್ತು ಸೋಪಾನದ ಕೆಲಸ ಮಾಡಬೇಕು ಎಂಬ ನಿಯಮವನ್ನು ಹಾಕಿಕೊಂಡಿದ್ದರು. ಅದರಂತೆ ಎಲ್ಲರ ದುಡಿಮೆಯಿಂದ ಸೋಪಾನ ಸಿದ್ಧವಾಯಿತು. "ಸೋಪಾನದ ಮೇಲುಗಡೆಯಲ್ಲಿದ್ದ ಜಮೀನನ್ನು

ಖರೀದಿಗೆ ಪಡೆದುಕೊಂಡು ಅಲ್ಲಿ ನರಸಿಂಹದೇವರ ಗುಡಿಯನ್ನು ಕಟ್ಟಿ, ಹೂದೋಟವನ್ನು ಮಾಡಬೇಕು. ಅಲ್ಲಿ ನಿತ್ಯ ಜಪತಪಾದಿಗಳಿಗೆ ಅನುಕೂಲವಾಗುವುದು" ಎಂದು ಯೋಜನೆ ಹಾಕಿಕೊಂಡಿದ್ದರು. ಆದರೆ ಕಾರಣಾಂತರದಿಂದ ಆ ಕಾರ್ಯವಾಗದೆ ನಿಂತುದು ದುರದೃಷ್ಟ. ಆ ಊರಿನ ಜನರ ಆ ಪ್ರಯತ್ನ ಕೈಗೂಡಿದ್ದಿದ್ದರೆ ಆ ಸ್ಥಳವು ರಮಣೀಯವಾದ ಜಾಗವಾಗಿ ಪರಿಣಮಿಸುತ್ತಿದ್ದುದರಲ್ಲಿ ಸಂಶಯವಿಲ್ಲ. ಬೆಳಗ್ಗೆ ಸ್ನಾನಕ್ಕೆ ಹೋದವರಾಗಲೀ, ಸಂಜೆ ವಿಹಾರಕ್ಕೆ ಹೋದವರಾಗಲೀ, ಹೂದೋಟದ ಸೌಂದರ್ಯವನ್ನು ಆಸ್ವಾದಿಸುತ್ತ ಕಾವೇರಿ ನದಿಯ ರಮಣೀಯತೆಯನ್ನು ಸವಿಯುತ್ತ ಸಂತೋಷಗೊಳ್ಳಬಹುದಿತ್ತು. ಆದರೂ ಹತ್ತು ಜನರ ಸಹಕಾರದ ಸಂಕೇತವಾಗಿ ಈಗಲೂ ಆ ಮೆಟ್ಟಿಲುಗಳು ಕಂಗೊಳಿಸುತ್ತಿವೆ.

ನಾನೂ ಮೇಲಿನ ಮೆಟ್ಟಿಲಿನ ಮೇಲೆ ಕುಳಿತು ಎಷ್ಟೋ ಸಲ ಕಾವೇರೀ ನದಿಯ ಪ್ರವಾಹದ ವಿವಿಧ ರೂಪಗಳನ್ನು ನೋಡಿ ಅನುಭವಿಸಿದ್ದೇನೆ. ಊರಿನ ಸಮಸ್ತ ಜನಗಳಿಗೂ, ಜಾನುವಾರುಗಳಿಗೂ ಜೀವನಾಡಿಯಾಗಿ ಕಾವೇರಿ ನದಿ ಕಂಗೊಳಿಸುತ್ತಿದೆ. ಪ್ರವಾಹದ ಭೀಕರತೆ, ತುಂಬು ಪ್ರವಾಹದಲ್ಲಿಯೂ ಬೇಟೆ ಹರಗಲಿನಲ್ಲಿ ಹೋಗಿ ಪ್ರವಾಹದಲ್ಲಿ ಕೊಚ್ಚಿ ಹೋಗುವ ಮರದ ದಿಮ್ಮಿಗಳನ್ನು ದಡಕ್ಕೆ ಎಳೆದು ತರುವ ಆ ಊರಿನ ಕೆಲ ಜನರ ಸಾಹಸ, ಬೇಸಿಗೆಯಲ್ಲಿ ಬಿಸಿಲಿಗೆ ಮಿರುಮಿರನೆ ಮಿಂಚುತ್ತ ಮೈ-ಮನಗಳಿಗೆ ತಂಪನ್ನು ಕೊಡುವ ಆ ಪ್ರಶಾಂತತೆ- ಇವುಗಳನ್ನು ನೋಡುತ್ತ ಮೈಮರೆತಿದ್ದೇನೆ.

೧೧. ಸಂಕೇತಿ ಹುಡುಗರು

"ಸಂಕೇತಿ ಹುಡುಗರು ಎಂದರೆ ವೈಶಿಷ್ಟ್ಯವೇನಾದರೂ ಅವರಲ್ಲಿದೆಯೇ, ಅವರನ್ನು ಕುರಿತು ಪ್ರಶಂಸೆ ಮಾಡುವುದೇನು?" ಎಂದು ಒಬ್ಬರು ಪ್ರಶ್ನಿಸಿದರು. "ಹುಡುಗರು ಹುಡುಗರೇ ಸ್ವಾಮಿ, ಸಂಕೇತಿಗಳಾದರೇನು, ಗೌಡರಾದರೇನು, ನಾಯಕರಾದರೇನು" ಎಂದು ನಾನು ಅವರ ಪ್ರಶ್ನೆಯನ್ನು ಸಮರ್ಥಿಸುವಂತೆ ನುಡಿದಾಗ ಮತ್ತೊಬ್ಬರು, "ಹಾಗಲ್ಲ ಬಿಡಿ, ಎಲ್ಲರನ್ನೂ ಒಂದೇ ಮಾಡಿಬಿಡುತ್ತೀರಾ? ಹಲಸಿನ ಹಣ್ಣು , ಮಾವಿನಹಣ್ಣು ಎರಡೂ ಒಂದೇನಾ !" ಎಂದು ಮುಗುಳುನಕ್ಕರು. "ಹುಡುಗರ ಹುಡುಗತನ ಒಂದೇ ಆಗಬಹುದಾದರೂ, ಆಯಾ ಜೀವನಕ್ಕೆ ಹೊಂದಿಕೊಂಡಂತೆ ನಡೆಯುವ ಅವರ ಚಟುವಟಿಕೆಗಳಲ್ಲಿ ವಿಭಿನ್ನತೆ ಅಥವಾ ವೈವಿಧ್ಯ ಇರುತ್ತದೆ" ಎಂದು ನಾನೆಂದಾಗ ಅವರು "ಅಷ್ಟಲ್ಲದೇ ಏನು, ನೀವು ಹೇಳೋದು ಸಮ" ಎಂದು ನನ್ನ ಮಾತನ್ನು ಪುಷ್ಟೀಕರಿಸಿದರು.

ಸಣ್ಣ ಮಕ್ಕಳಿಗೆ ಅಂಕೆ ಹೆಚ್ಚು. ಸಾಮಾನ್ಯವಾಗಿ ಇದು ಎಲ್ಲ ಕುಟುಂಬಗಳಲ್ಲೂ ಸಹಜ. ಅದನ್ನು ಮಾಡಬೇಡ, ಇದನ್ನು ಮಾಡಬೇಡ, ನದೀ ತೀರಕ್ಕೆ ಹೋಗಬೇಡ, ನೀರಿನಲ್ಲಿ ಆಡಬೇಡ - ಎಂಬ ಹಲವು ನಿಷೇಧಗಳನ್ನು ಎಲ್ಲ ತಂದೆತಾಯಂದಿರೂ ತಮ್ಮ ಮಕ್ಕಳಿಗೆ ವಿಧಿಸುತ್ತಾರೆ. ಸಂಕೇತಿಗಳಲ್ಲಿ ಮಡಿ-ಮೈಲಿಗೆಗಳನ್ನು ಪಾಲಿಸುವ ಅಂಕೆಗಳೇ ಹೆಚ್ಚು ಅಥವಾ ವಿಶೇಷ. ಮನೆಯ ಹಿರಿಯರು ಸ್ನಾನ ಮಾಡಿ, ಮಡಿ ಉಟ್ಟುಕೊಂಡು ಬಂದಾಗ ಅವರನ್ನು ಮಕ್ಕಳು ಮುಟ್ಟಬಾರದು. ಮಕ್ಕಳು ಅಳುತ್ತಿದ್ದರೂ ಅವರನ್ನು ತಾಯಂದಿರು ಎತ್ತಿಕೊಳ್ಳದೆ ದೂರದಿಂದಲೇ ಸಮಾಧಾನ ಮಾಡುವರು. ಅಷ್ಟಕ್ಕೆ ಮಕ್ಕಳು ಸುಮ್ಮನಾಗದೇ ಹೋದರೆ ಒಂದು ಚೂರು ಕಲ್ಲುಸಕ್ಕರೆಯನ್ನೋ, ಬೆಲ್ಲದ ಚೂರನ್ನೋ, ಅವಲಕ್ಕಿಯನ್ನೋ ಇಲ್ಲವೇ ಮನೆಯಲ್ಲಿ ಇದ್ದರೆ ಕೋಡುಬಳೆ, ಚಕ್ಕುಲಿಗಳನ್ನೋ ಲಂಚ ಕೊಟ್ಟು ಸುಮ್ಮನಾಗಿಸುವರು. ಈಗಿನ ಕಾಲದಲ್ಲಿ ಪುಸಲಾಯಿಸಬೇಕಾದರೆ ಐಸ್‌ಕ್ರೀಮೋ ಇಲ್ಲ ತರತರಹದ ಚಾಕಲೇಟೋ ಬೇಕಾಗುತ್ತದೆ. ಊರಿನಿಂದ ಯಾರಾದರೂ ನೆಂಟರು ಮನೆಗೆ ಬಂದರೆಂದರೆ ಮಕ್ಕಳು ಬಂದು ಸುತ್ತ ನಿಲ್ಲುತ್ತವೆ. ಆ ಮಕ್ಕಳ ಕೈಗೆ ಏನಾದರೂ ಕೊಡಬೇಕಲ್ಲ. ಅದಕ್ಕೆ ಮೂರು ಕಾಸಿನದೋ, ಆರು ಕಾಸಿನದೋ ಕಿತ್ತಲೆ ತೊಳೆ ಪೆಪ್ಪರಮಿಂಟನ್ನು ತಂದು ಕೊಡುವರು. ಒಂದೋ ಎರಡೋ ಪೆಪ್ಪರ್‌ಮಿಂಟಿನ ತೊಳೆಗಳನ್ನು ಕೈಯಲ್ಲಿ ಹಿಡಿದುಕೊಂಡು ಚೀಪುತ್ತಾ, ಹರ್ಷದಿಂದ ಕುಣಿಯುತ್ತಾ ಹೋಗುವ ಅಂದಿನ ಚಿತ್ರ ನನ್ನ ಕಣ್ಣೆದುರಿಗೆ ಈಗಲೂ ಇದೆ. ಅಷ್ಟು ಸುಲಭವಾಗಿ ತೃಪ್ತಿಗೊಳ್ಳುತ್ತಿದ್ದವು ಅಂದಿನ ಮಕ್ಕಳು. ಸೇಬು, ದ್ರಾಕ್ಷಿ ಮೊದಲಾದ ಹಣ್ಣುಗಳನ್ನಂತೂ ಕನಸಿನಲ್ಲಿಯೂ ಕಂಡಿರಲಿಲ್ಲವೇನೋ ಆಗಿನ ಹಳ್ಳಿಯ ಮಕ್ಕಳು. ಬಾಳೆಯಹಣ್ಣು- ಮಕ್ಕಳಿಗೆ, ಹುಡುಗರಿಗೆ, ದೊಡ್ಡವರಿಗೆ ಸುಲಭವಾಗಿ ಹೇರಳವಾಗಿ ಸಿಗುತ್ತಿದ್ದ ಹಣ್ಣು. ದೊಡ್ಡ ಹುಡುಗರು ಅಲ್ಲಿ ಇಲ್ಲಿ ಕಿತ್ತುತಂದ ನೇರಳೆ, ಅತ್ತಿ , ಸೀಬೆ, ದಾಳಿಂಬೆ, ಬೇಲದ ಹಣ್ಣುಗಳೆಂದರೆ ಆ ಮಕ್ಕಳಿಗೆ ಹಬ್ಬ. ಹಲಸಿನ ಹಣ್ಣಿನ

ಕಾಲದಲ್ಲಿ ಹಲಸಿನ ಹಣ್ಣು, ಮಾವಿನ ಹಣ್ಣಿನ ಕಾಲದಲ್ಲಿ ಕಾಡು ಮಾವಿನ ಹಣ್ಣು, ಇಲ್ಲವೇ ತೋಟದಲ್ಲಿ ಬೆಳದಿದ್ದರೆ ಕಸಿಮಾವಿನ ಹಣ್ಣು ಸಿಗುತ್ತಿತ್ತು. ಕಸಿಮಾವಿನ ಮರ ಅಥವಾ ಬಾದಾಮಿ ಮಾವಿನ ಮರ ಎಲ್ಲರ ತೋಟದಲ್ಲಿಯೂ ಬೆಳೆದಿರುತ್ತಿರಲಿಲ್ಲವಾದುದರಿಂದ ಅಂಥ ತೋಟವುಳ್ಳವರ ಮನೆಯ ಮಕ್ಕಳಿಗೆ ದೊರೆಯುತ್ತಿದ್ದಂತೆ ಉಳಿದ ಮಕ್ಕಳಿಗೆ ಇಂಥ ಒಳ್ಳೆಯ ಹಣ್ಣುಗಳು ದೊರೆಯುತ್ತಿರಲಿಲ್ಲ. ಯಾವ ಜಾತಿಯ ಹಣ್ಣಾದರೂ ಸರಿ ಮಾವಿನ ಹಣ್ಣನ್ನು ಚೀಪುತ್ತಾ ಅದರ ರಸವನ್ನು ಸೋರಿಸಿಕೊಂಡು ಆಸ್ವಾದಿಸುತ್ತ ಹಣ್ಣು ತಿನ್ನುವಾಗ ಅವಕ್ಕೆ ಸ್ವರ್ಗವೇ ದಕ್ಕಿದಂತೆ. ಒಳ್ಳೆಯ ಕೊಡಗಿನ ಕಿತ್ತಲೇಹಣ್ಣು ನಮ್ಮ ಹಳ್ಳಿಯ ಕಡೆ ತಲೆಹಾಕುತ್ತಲೇ ಇರಲಿಲ್ಲ. ಅವೆಲ್ಲ ಬೆಂಗಳೂರು, ಬೊಂಬಾಯಿ ಅಂಥ ಪಟ್ಟಣಗಳಿಗೆ ರವಾನೆ ಆಗುತ್ತಿದ್ದುವು. ಹಳ್ಳಿಯವರಿಗೆ ದೊರಕುತ್ತಿದ್ದುದು ಆಕಳಿ ಸಣ್ಣ ಸಣ್ಣ ಹಣ್ಣುಗಳು. ಅವು ಸಂತೆಯಲ್ಲಿ ಮಾರಲು ಬಂದಾಗ ಅಪರೂಪವಾಗಿ ಮಕ್ಕಳಿಗೆ ಎಂದು ದೊಡ್ಡವರು ದುಡ್ಡು ಕೊಟ್ಟು ತಂದುಕೊಡುತ್ತಿದ್ದರು. ಮಕ್ಕಳು ಹಸಿವಾದಾಗ ಅತ್ತರೂ, ಇಂಥದೇ ಊಟ ತಿಂಡಿ ಬೇಕು ಎಂದು ಹಟ ಮಾಡುವುದು ಅಪರೂಪ. ಚಕ್ಕುಲಿ, ಕೋಡುಬಳೆ ಇಂಥವುಗಳಿಗೆ ಹಟ ಮಾಡಬಹುದೇ ಹೊರತು, ಊಟದ ವಿಷಯದಲ್ಲಿ ಮನೆಯಲ್ಲಿ ಏನು ಹಾಕಿದರೆ ಅದು. ಏನೂ ಇಲ್ಲದೆ ಇದ್ದರೆ ಅನ್ನಕ್ಕೆ ತುಪ್ಪ, ಸ್ವಲ್ಪ ಉಪ್ಪು, ಕೊಂಚ ಮೆಣಸಿನಪುಡಿ ಸೇರಿಸಿ ಕಲೆಸಿ ಅದನ್ನು ಬಾಳೆಯಹಣ್ಣಿನ ಆಕಾರಕ್ಕೆ ತಂದು 'ಬಾಳಿ' ಊಟ ಮಾಡು ಎನ್ನುತ್ತಿದ್ದರು ತಾಯಂದಿರು. ಬಾಳಿ ಎಂದರೆ ಅದೇನೋ ಒಂದು ರಾಜಭಕ್ಷ್ಯ ಎನ್ನುವಂತೆ ಮಕ್ಕಳು ಖುಷಿಪಟ್ಟುಕೊಂಡು ತಿನ್ನುತ್ತಿದ್ದುವು.

ಹೊಟ್ಟೆ ತುಂಬಿದರೆ ಸಾಕು; ಮಕ್ಕಳಿಗೆ ಆಟ ಆಡುವಾಗ ಮೈಮೇಲೆ ಬಟ್ಟೆಯಿರಬೇಕೆಂದೇನೂ ಇಲ್ಲ. ಮನೆಯ ಜಗುಲಿಯ ಮೇಲೋ, ಹಿತ್ತಲಿನ ಹುಲ್ಲುಮೆದೆಯ ಬಳಿಯೋ ಎಲ್ಲಾದರಲ್ಲಿ ಆಡುವರು. ಬೀದಿಯ ಮಣ್ಣಿನಲ್ಲಿ ಆಡುವುದು ಮಕ್ಕಳಿಗೆ ಸ್ವರ್ಗ. ಆದರೆ ಬಟ್ಟೆಯನ್ನು ಕೊಳೆ ಮಾಡಿಕೊಂಡೋ, 'ಆ ರಂಗನು ತಲೆಗೆ ಮಣ್ಣು ಸುರಿದ' ಎಂದೋ, ಜೊಲ್ಲು ಸುರಿಸುತ್ತ ಮಕ್ಕಳು ಬಂದು ನಿಂತಾಗ ಅವಕ್ಕೆ ಮೈ ಬಿಸಿಯಾಗುವುದಂತೂ ತಪ್ಪಿದ್ದಲ್ಲ. ತಾಯಿಯು, ''ಅಯ್ಯೋ ಅಯ್ಯೋ, ನಿನ್ನ ಮೋರೆ ನೋಡೋಕಾಗೋಲ್ಲ. ಇನ್ನೂ ಬೆಳಿಗ್ಗೆ ತಾನೆ ಎಣ್ಣೆನೀರು ಹಾಕಿದೀನಿ. ಬಾ ನಿನಗೆ ಮಾಡ್ತೀನಿ'' ಎಂದು ಬಚ್ಚಲು ಮನೆಗೆ ಕರೆದುಕೊಂಡು ಹೋಗಿ ತಲೆಯ ಮೇಲೆ ನೀರು ಸುರಿದಾಗ ಆ ಮಗು ಚಳಿಗೆ ಗಡಗಡ ನಡುಗುತ್ತ, ಅಳುತ್ತ ಬರುತ್ತಿದ್ದರೆ ನೋಡಿದವರಿಗೆ 'ಅಯ್ಯೋ!' ಎನ್ನಿಸುತ್ತದೆ. ಯಾರಾದರೂ ಹಿರಿಯರು ನೋಡಿ, "ಅಯ್ಯೋ! ಯಾಕೆ ಆ ಅರಿಯದ ಮುಕ್ಕನ ತಲೇ ಮೇಲೆ ತಣ್ಣೀರು ಸುರಿದು ಚಳೀಲಿ ನಡುಗಿಸುತ್ತಾ ಇದೀಯ. ಮಣ್ಣನ್ನೆಲ್ಲ ಕೊಡವಿ ಬಟ್ಟೇಲಿ ಒರೆಸಿದ್ದರೆ ಆಗುತ್ತ ಇರಲಿಲ್ಲವೇ" ಎಂದು ಮರುಕದಿಂದ ನುಡಿಯುವರು.

ಆಟ ಆಡಲು ಬೆಲೆ ಬಾಳುವ ಆಟದ ಸಾಮಾನುಗಳನ್ನಂತೂ ಮಕ್ಕಳು ಕಂಡಿದ್ದೇ ಇಲ್ಲ. ಕಲ್ಲು, ಎಲೆ, ಮಡಕೆಚೂರು, ಕೋಲು ಏನಾದರೂ ಸರಿ, ಆಟ ನಡೆದೀತು. ಹೆಣ್ಣು ಮಕ್ಕಳಾದರೆ ಮಡಿಕೆ-ಕುಡಿಕೆಗಳನ್ನು ಇಟ್ಟುಕೊಂಡು ಆಡುವರು. ವಿಶೇಷವಾಗಿ ಮಕ್ಕಳಿಗೆ ಕೊಡಿಸುತ್ತಿದ್ದ ಆಟದ ಸಾಮಾನೆಂದರೆ ಗಂಡುಮಕ್ಕಳಿಗೆ ಗಾಲಿಬಸವ, ಹೆಣ್ಣುಮಕ್ಕಳಿಗೆ ಬೆಣ್ಣೆ ಕೃಷ್ಣ. ಆಚಾರಿಯ ಕೈಲಿ ಮರದಿಂದ ಮಾಡಿಸಿಯೋ, ಇಲ್ಲ ಸಂತೆಗೆ ಹೋಗಿಯೋ, ಗಾಲಿಬಸವನನ್ನು ತಂದುಕೊಟ್ಟರೆ ಅದಕ್ಕೆ ದಾರಕಟ್ಟಿಕೊಂಡು ಬೀದಿ ಬೀದಿಯಲ್ಲೂ ಎಳೆದದ್ದೇ ಎಳೆದದ್ದು. ಗಾಲಿ ಬಸವಣ್ಣನನ್ನು ತಂದುಕೊಡಲಾರದಷ್ಟು ಬಡವರ ಮನೆಯ ಮಗುವಾದರೆ ಆ ಬಸವಣ್ಣನ ಹಿಂದೆ ಚಪ್ಪಾಳೆ ತಟ್ಟಿಕೊಂಡು ಹಿಂಬಾಲಿಸಿ, ''ಒಂದು ಸಲ ನಾನೂ ಎಳೆಯುತ್ತೇನೆ, ನನ್ನ ಕೈಗೆ ಕೊಡು'' ಎಂದು ಬೇಡಿಕೊಂಡು ಒಂದಿಷ್ಟು ದೂರ ಎಳೆದುಬಿಟ್ಟು, ತೃಪ್ತಿಯಿಂದ ಬಾಯಿಗೆ ಬೆರಳಿಟ್ಟುಕೊಂಡು ಮನೆಗೆ ಹೋಗುವುದು. ಆ ಕಾಲದ ಬೆಣ್ಣೆ ಕೃಷ್ಣ ಎಂದರೆ ಸುಂದರವಾದ ಬೊಂಬೆ ಎಂದು ಭಾವಿಸಬೇಡಿ. ಬಟ್ಟೆಯ ಚೂರು ಮತ್ತು ಮಣ್ಣು ಸೇರಿಸಿ ಬೊಂಬೆಯಾಕಾರ ಮಾಡಿ, ಅದಕ್ಕೆ ಹೊಳೆಯುವ ಹಳದಿ ಬಣ್ಣವನ್ನು ಹಚ್ಚಿ, ಕೆಂಪು ರೇಖೆಗಳಿಂದ ಕಣ್ಣು, ಮೂಗು, ಬಾಯಿ, ಕಿವಿ, ಬೆರಳುಗಳನ್ನು ತಿದ್ದಿದ್ದ ಹೊಳೆಯುವ ಬೊಂಬೆ. ಎರಡು ಕಾಲುಗಳನ್ನೂ ಅಗಲಕ್ಕೆ ನೀಡಿ, ಎರಡು ಕೈಗಳನ್ನೂ ಕಾಲುಗಳ ಸಮಾನಾಂತರದಲ್ಲಿ ನೀಡಿ, ನೆಲದ ಮೇಲೆ ಕುಳಿತುಕೊಳ್ಳುವಂತಿರುವ ಆ ಬೊಂಬೆ ಇಂದು ಎಲ್ಲಾದರೂ ಕಾಣಸಿಗಬಹುದೇ !

ಹೆಣ್ಣುಮಕ್ಕಳು ಅಡುಗೆ ಮಾಡುವುದು, ಬಡಿಸುವುದು, ಹಾಲು ಕರೆಯುವುದು, ಮಗುವೆಂದು ಭಾವಿಸಿ ಆಟವಾಡುತ್ತಿರುವ ವಸ್ತುವಿಗೆ ಹಾಲು ಕುಡಿಸುವುದು, ಅಪ್ಪ-ಅಮ್ಮನ ಆಟ - ಹೀಗೆ ಮನೆಯ ವ್ಯವಹಾರಗಳೇ ಆ ಮಕ್ಕಳ ಆಟದ ವಿಷಯಗಳು. ಗಂಡು-ಹೆಣ್ಣು ಹುಡುಗರಿಬ್ಬರೂ ಸೇರಿದರೆ ನೀರು ಸೇದುವುದು, ಮದುವೆ, ಗಂಡ-ಹೆಂಡತಿ ಎಂದೆಲ್ಲಾ ಆಡುವರು. ಮಣ್ಣಿನಲ್ಲಿ ಕುಣಿಯುವುದು, ಮಣ್ಣನ್ನೇ ಆಟದ ವಸ್ತುವನ್ನಾಗಿ ಆರಿಸಿಕೊಳ್ಳುವುದು, ಮರಳು ಸಿಕ್ಕರೆ ಮರಳಿನಲ್ಲಿ ಕಪ್ಪೆಗೂಡು ಕಟ್ಟುವುದು, ಮನೆ ಕಟ್ಟುವುದು, ಹೀಗೆಲ್ಲ ಮಕ್ಕಳ ಆಟದ ಪ್ರಪಂಚ ಮುಂದುವರೆಯುತ್ತದೆ. ಸ್ವಲ್ಪ ದೊಡ್ಡ ಹುಡುಗರಾದರೆ ಕೈಯಲ್ಲಿ ಕೋಲೊಂದನ್ನು ಹಿಡಿದುಕೊಂಡು

ಊರೆಲ್ಲ ಸುತ್ತುವರು. ತೋಟಕ್ಕೆ ಹೋಗಿ ಅಲ್ಲಿ ಮರದ ಮೇಲೆ ನೇತಾಡುತ್ತಿರುವ ಹುಣಸೇಕಾಯಿಗಳನ್ನು ಕೋಲು ಎಸೆದು ಬೀಳಿಸಿ ತಿನ್ನುವರು. ಮನೆಯಲ್ಲಿ ದೊಡ್ಡವರು ಹೇಳುವ ಕೆಲಸಗಳನ್ನು ಮಾಡುವರು. ಹಸುಗಳಿಗೆ ತೋಟದಿಂದ ಹುಲ್ಲು ಕಿತ್ತು ತರುವರು, ರಾತ್ರಿ ಹಸುಗಳಿಗೆ ಹುಲ್ಲು ಹಾಕುವರು. ಹೇಳಿದ ಕೆಲಸ ಮಾಡದಿದ್ದರೆ ಕಾದಿರುತ್ತದೆ ಬೆನ್ನಿಗೆ ಗುದ್ದು.

ಸ್ವಲ್ಪ ದೊಡ್ಡ ಹುಡುಗರು ಚಿಕ್ಕ ಹುಡುಗರಿಗೆ ಎಲೆಯಲ್ಲಿ ಪೀಪಿ ಮಾಡಿಕೊಡುವರು. ಕಾಶಿಕಾಯಿಯನ್ನು ಕಿತ್ತು ತಂದು ಅದಕ್ಕೆ ತೆಂಗಿನ ಕಡ್ಡಿಗಳನ್ನು ಸಿಕ್ಕಿಸಿ ಮನೆ, ತೇರು, ದೇವಸ್ಥಾನ ಮೊದಲಾದುವನ್ನು ಮಾಡಿಕೊಡುವರು. ಬುಗುರಿಕಾಯಿಯನ್ನು ತಂದು ಬುಗುರಿಯಂತೆ ಆಡಿಸಲು ಹೇಳಿಕೊಡುವರು. ತೆಂಗಿನ ಗರಿಯಿಂದ ಗಿರಿಗಟ್ಟೆ ಮಾಡಿಕೊಡುವರು. ಹೀಗೆ ದೊಡ್ಡ ಹುಡುಗರು, ಚಿಕ್ಕ ಹುಡುಗರಿಗೆ ಮನೋರಂಜನೆಯನ್ನು ನೀಡುವರು.

ಇನ್ನೂ ಸ್ವಲ್ಪ ದೊಡ್ಡ ಹುಡುಗರು ತೋಟಕ್ಕೋ, ದನಗಳನ್ನು ನೋಡಿಕೊಳ್ಳುವುದಕ್ಕೋ ಹೋದಾಗ ಗೋಲಿಗಜ್ಜುಗ, ಕುಂಟೆಬಿಲ್ಲೆ ಮೊದಲಾದ ಆಟಗಳನ್ನು ಆಡುವರು. ಇಲ್ಲಿ ನಾವು ಗಮನಿಸತಕ್ಕ ಒಂದು ಅಂಶವೇನೆಂದರೆ ಹಳ್ಳಿಯ ಹುಡುಗರ ಮನೋರಂಜನೆಗೆ ಹಳ್ಳಿಯ ಪರಿಸರವೇ ವಸ್ತುಗಳನ್ನು ಒದಗಿಸುತ್ತದೆ. ಹಳ್ಳಿಗಳ ಬಡಜನರು ತಮ್ಮ ಮಕ್ಕಳಿಗೆ ಹಣ ಖರ್ಚು ಮಾಡಿ ಆಟದ ಸಾಮಾನುಗಳನ್ನು ತಂದುಕೊಡುವ ಸಾಮರ್ಥ್ಯ ಹೊಂದಿರಲಿಲ್ಲ. ಆಗಿನ ಕಾಲದ ಆಟದ ಸಾಮಾನುಗಳು ಹಿಂದಿನಿಂದ ಬಂದ ಸಂಪ್ರದಾಯದವುಗಳಾಗಿದ್ದವು. ಮೈಸೂರು -ಬೆಂಗಳೂರುಗಳಂಥ ಪಟ್ಟಣಗಳಿಗೆ ಬಂದರೆ ಚನ್ನಪಟ್ಟಣದ ಬಣ್ಣದ ಆಟದ ಸಾಮಾನನ್ನು ಅಪರೂಪವಾಗಿಯಾದರೂ ಕೊಂಡುಕೊಂಡು ಹೋಗಿ ತಮ್ಮ ಮಕ್ಕಳಿಗೆ ಕೊಟ್ಟು ಸಂತೋಷ ಪಡಿಸುತ್ತಿದ್ದರು. ಈಗಿನ ಕಾಲದಲ್ಲಿಯಾದರೋ ವಯಸ್ಸಿಗೆ ಅನುಗುಣವಾದ ವಿವಿಧ ರೀತಿಯ ಆಟದ ಸಾಮಾನುಗಳನ್ನು ದೊಡ್ಡ ದೊಡ್ಡ ಕಂಪೆನಿಗಳವರು ತಯಾರಿಸುತ್ತಿದ್ದಾರೆ. ಆಧುನಿಕವಾಗಿ ಮೊದಲು ಬಂದ ಆಟದ ಸಾಮಾನುಗಳು ಮರ ಅಥವಾ ತಗಡುಗಳಿಂದ ತಯಾರಾಗಿರುತ್ತಿದ್ದವು. ಗಾಳಿಗೆ ತಲೆ ಅಲ್ಲಾಡಿಸುವ, ಮೇಲೆ-ಕೆಳಗೆ ಆಡುವ ಚಲನೆಯುಳ್ಳ ಆಟದ ಸಾಮಾನುಗಳು ಮಾರುಕಟ್ಟೆಗೆ ಬಂದುವು. ಪ್ರಾಣಿಗಳ, ಪಕ್ಷಿಗಳ ಪ್ರತಿರೂಪಗಳು ಪ್ಲೈವುಡ್ಡಿನಿಂದ ತಯಾರಾಗಿ ಬಣ್ಣ ಬಣ್ಣದಿಂದ ಕಂಗೊಳಿಸುತ್ತಿದ್ದುವು. ಜಟಕಾಬಂಡಿ, ಬಸ್ಸು, ಕಾರು, ಏರೋಪ್ಲೇನು ಮೊದಲಾದ ಮಾದರಿಗಳು ಮಕ್ಕಳನ್ನು ಆಕರ್ಷಿಸಿದುವು. ಕೀ ಕೊಟ್ಟಾಗ ಹಲವು ರೀತಿಯಲ್ಲಿ ಚಲಿಸುವ, ಅಂಗಾಂಗಗಳನ್ನು ಆಡಿಸುವ ಬೊಂಬೆಗಳು ಮುಂದಿನ ದಿನಗಳಲ್ಲಿ ಬಂದುವು. ಇನ್ನೂ ಈಚೆಗೆ ಬ್ಯಾಟರಿ ಸೆಲ್‌ನ ಶಕ್ತಿಯಿಂದ ನಡೆಯುವ ಹಲವು ರೀತಿಯ ಸೋಜಿಗದ ಆಟದ ಸಾಮಾನುಗಳು ತಯಾರಾಗಿ ಮಕ್ಕಳ ಕಣ್ಮನಗಳನ್ನು ಸೆಳೆಯುತ್ತಿವೆ. ಆದರೆ ಇವೆಲ್ಲ ಶ್ರೀಮಂತರ-ಪಟ್ಟಣದ-ಮಕ್ಕಳಿಗೆ ಹೆಚ್ಚಾಗಿ ಎಟಕುತ್ತಿವೆ. ಬಡವರ ಮಕ್ಕಳು, ಹಳ್ಳಿಯ ಮಕ್ಕಳು ಪ್ಲಾಸ್ಟಿಕ್‌ನಿಂದ ತಯಾರಾದ ಹಾಗೂ ಮರದಿಂದ ಮಾಡಿದ ಅಗ್ಗದ ಆಟದ ಸಾಮಾನುಗಳಿಂದಲೇ ತೃಪ್ತಿಪಡಬೇಕಾಗಿದೆ.

ಹುಡುಗರು ದೊಡ್ಡವರಾಗುತ್ತ ಇದ್ದಂತೆ ಅವರ ತುಂಟತನದ ರೀತಿಗಳು, ಆಟಗಳು ವ್ಯತ್ಯಾಸವಾಗುತ್ತ ಹೋಗುತ್ತವೆ. ಈ ಕುಟುಂಬಗಳಲ್ಲಿನ ಹುಡುಗರ ಜೀವನದಲ್ಲಿ ಮುಂಜಿ ಅಥವಾ ಉಪನಯನ ಎಂಬ ಒಂದು ಘಟನೆ ನಡೆಯುತ್ತದೆ. ಉಪನಯನವಾಗಿ ಗಾಯತ್ರೀಮಂತ್ರದ ಉಪದೇಶವಿಲ್ಲದೇ, ಇವರು ವಿದ್ಯಾಭ್ಯಾಸವನ್ನು ಆರಂಭಿಸುವಂತಿರಲಿಲ್ಲ. ಉಪನಯನವಾದ ಮೇಲೆ 'ದ್ವಿಜ' ಎಂಬ ಪದ ಸಾರ್ಥಕವಾಗುತ್ತದೆ. ಎರಡನೆಯ ಜನ್ಮ ಪಡೆದಂತೆ ಇದು. ಸಂಸ್ಕೃತ ಮತ್ತು ವೇದಾಧ್ಯಯನಗಳೇ ವಿದ್ಯಾಭ್ಯಾಸವಾದುದರಿಂದ ಉಪನಯನಕ್ಕೆ ಹೆಚ್ಚು ಪ್ರಾಶಸ್ತ್ಯ. ಮುಂಜಿ ಎಂದರೆ ಹಿಂದಿನ ಕಾಲದ ಸಂಕೇತಿ ಹುಡುಗರಿಗೆ ಅದೊಂದು ಪ್ರಮುಖ ಘಟನೆ ಎಂಬ ಭಾವನೆಯಿತ್ತು. ನನ್ನ ಜತೆಯವನಿಗೆ ನನಗಿಂತ ಮೊದಲು ಮುಂಜಿಯಾದಾಗ, ನನಗೂ ಅವನಂತೆ ಆ ವರ್ಷವೇ ಮುಂಜಿಯಾಗಲಿಲ್ಲವಲ್ಲ ಎಂಬುದಾಗಿ ಭಾರಿ ವ್ಯಸನವುಂಟಾದದ್ದನ್ನು ನಾನಿನ್ನೂ ಮರೆತಿಲ್ಲ. ನನಗೂ ಮುಂಜಿ ಮಾಡಿರೆಂದು ನನ್ನ ತಂದೆಯನ್ನು ಕಾಡಿ ಬೇಡಿದೆ, ನನ್ನ ತಾಯಿಯವರಲ್ಲಿ ಮೊರೆಯಿಟ್ಟೆ. ಶಾಲಾ ಉಪಾಧ್ಯಾಯರಾದ ಅವರಿಗೆ ಮುಂಜಿ ಮಾಡುವುದರ ಕಷ್ಟ ಗೊತ್ತಿತ್ತೇ ವಿನಹ ಆಟದ ವಯಸ್ಸಿನ ನನಗೆ ಏನು ಗೊತ್ತಿತ್ತು? 'ಮುಂಜಿಗೆ ಎಷ್ಟು ಖರ್ಚಾಗುತ್ತದೆ? ಅದನ್ನು ಒಬ್ಬ ಮೇಷ್ಟ್ರು ಹೇಗೆ ನಿರ್ವಹಿಸುತ್ತಾನೆ?' ಎಂಬುದನ್ನು ಅರಿಯುವ ವಯಸ್ಸೇ ನನ್ನದು? ಅಂತೂ ಹೇಗೋ ಮಾರನೆಯ ವರ್ಷ ನನ್ನ ಮುಂಜಿಯ ಏರ್ಪಾಡಾಯಿತು. ಹಳ್ಳಿಯಲ್ಲಿ ಮುಂಜಿಯು ಕೂಡ ಮೂರು ದಿನಗಳ ಕಲಾಪಗಳಿಂದ ಕೂಡಿರುತ್ತಿತ್ತು. ನಂಟರಿಷ್ಟರು, ಬಂಧುಗಳು ಪರ ಊರಿನಿಂದ ಮುಂಜಿಯು ಹಿಂದಿನ ದಿನವೇ ಬಂದಿಳಿಯುತ್ತಿದ್ದರು. ಮುಂಜಿಯ ಹಿಂದಿನ ದಿನ ನಾಂದಿ, ಆ ಸಂಜೆ ಉದಕಶಾಂತಿ, ಪುಣ್ಯಾಹವಾಚನ, ಶಿವಕವಚ, ಮೊದಲಾದ ಕಲಾಪಗಳು ನಡಯುವುವು. ಮುಂಜಿಯಾಗುವ ಹುಡುಗನನ್ನು ಮಧ್ಯವಯಸ್ಸಿನ ಗೃಹಸ್ಥರು ಕೀಟಲೆ ಮಾಡುತ್ತಿದ್ದರು. "ಇಂದು ರಾತ್ರಿ ನೀನು ಮಲಗಿ ನಿದ್ದೆ ಮಾಡುವಾಗ, ನಿನ್ನ ತೊಡೆಯೊಳಕ್ಕೆ

ಪುರೋಹಿತರು ಒಂದು ಬೆಕ್ಕಿನ ಮರಿಯನ್ನು ಸೇರಿಸುತ್ತಾರೆ" ಎಂದು ಹೇಳಿದಾಗ, ನನಗೆ ಮೊದಲು ಆಶ್ಚರ್ಯ, ಆಮೇಲೆ ಹೆದರಿಕೆಯಾಗತೊಡಗಿತು. ಒಬ್ಬರಾದರೆ ತಮಾಷೆ ಮಾಡುತ್ತಿದ್ದಾರೆ ಎನ್ನಬಹುದು. ನಾಲ್ಕಾರು ಜನರು ಅದೇ ಮಾತನ್ನು ಹೇಳಿದರೆ ಮುಗ್ಧ ಬಾಲಕ ಅದನ್ನು ನಿಜವೆಂದೇ ನಂಬುತ್ತಾನೆ. ಜತೆಗೆ ಪುರೋಹಿತರು ಬಂದಾಗ ಅವರೂ ಅದೇ ವಿಷಯವನ್ನು ಸಮರ್ಥಿಸುವಂತೆ ಆಡಿದಾಗ ಯಾಕಪ್ಪ ಈ ಮುಂಜಿಗೆ ಒಪ್ಪಿದೆ ಎನ್ನಿಸಿತು. ಆದರೂ ಸುಮ್ಮನೆ ಒಪ್ಪಿಕೊಳ್ಳಲಿಲ್ಲ. "ತೊಡೆಯೊಳಕ್ಕೆ ಬೆಕ್ಕಿನ ಮರಿಯನ್ನು ಹೇಗೆ ಸೇರಿಸುತ್ತಾರೆ ?" ಎಂದು ಪ್ರಶ್ನಿಸಿದೆ. "ಅದಕ್ಕೆಲ್ಲ ಮಂತ್ರ ಇದೆಯಪ್ಪ. ಮಂತ್ರದ ಪ್ರಭಾವ ನಿನಗೇನು ಗೊತ್ತು? ಮಂತ್ರ ಹೇಳಿ ದರ್ಭೆಯಿಂದ ತೊಡೆಯ ಮೇಲೆ ಗೀರುತ್ತಾರೆ. ಆಗ ತೊಡೆ ಬಾಯಿ ಬಿಡುತ್ತದೆ, ಮಂತ್ರದ ಜಲದಿಂದ ಬೆಕ್ಕಿನ ಮರಿಯನ್ನು ಪ್ರೋಕ್ಷಿಸಿ, ಅದನ್ನು ದರ್ಭೆಯಿಂದ ತಳ್ಳುತ್ತಾರೆ, ಅದು ತೊಡೆಯೊಳಗೆ ಸೇರಿಕೊಳ್ಳುತ್ತದೆ. ಅನಂತರ ಮಂತ್ರದ ದರ್ಭೆಯಿಂದ ತೊಡೆಯನ್ನು ಸವರುತ್ತಾರೆ. ತೊಡೆ ಮೊದಲಿನಂತೆಯೇ ಆಗುತ್ತದೆ" ಎಂದು ಉತ್ತರ ಕೊಟ್ಟರೂ, ನಾನು ಬಿಡಲಿಲ್ಲ. "ಸಣ್ಣ ತೊಡೆಯೊಳಗೆ ಬೆಕ್ಕಿನ ಮರಿ ಹೇಗಿರುತ್ತದೆ ?" ಎಂದು ಕೇಳಿದೆ. ಅಲ್ಲದೆ, "ಅದು ನಿಮ್ಮ ತೊಡೆಯಲ್ಲಿಯೂ ಇದೆಯೆ ಈಗ ? ನಿಮಗೂ ಮುಂಜಿಯಾದಾಗ ಬೆಕ್ಕಿನ ಮರಿಯನ್ನು ಸೇರಿಸಿದ್ದರೇ?" ಎಂದು ಸವಾಲು ಹಾಕಿದೆ. "ಈಗಲೂ ಬೆಕ್ಕಿನ ಮರಿ ನಮ್ಮ ತೊಡೆಯಲ್ಲಿದೆ. ಇಲ್ಲಿ ನೋಡು" ಎಂದು ತಮ್ಮ ಬಲಿಷ್ಠವಾದ ತೊಡೆಯನ್ನು ತೋರಿಸಿ ತೊಡೆಯ ಮಾಂಸಖಂಡವನ್ನು ಮೇಲಕ್ಕೆ, ಕೆಳಕ್ಕೆ ಆಡಿಸಿದಾಗ ಅದು ಬೆಕ್ಕಿನ ಮರಿಯೇ ಇರಬೇಕು ಎಂದುಕೊಂಡೆ. ನನ್ನ ಹುಡುಗು-ಬುದ್ಧಿಗಾದರೂ 'ಇದು ಹೇಗೆ ಸಾಧ್ಯ?' ಎಂಬ ಬಲವಾದ ಅನುಮಾನವಿದ್ದರೂ, ಎಲ್ಲೋ ಮೂಲೆಯಲ್ಲಿ ಭಯ ಇಣಿಕಿಹಾಕುತ್ತಿತ್ತು. 'ಇವತ್ತು ರಾತ್ರಿ ನಿದ್ದೆ ಮಾಡದೆ ಎಚ್ಚರದಿಂದಿದ್ದು ನೋಡುತ್ತೇನೆ' ಎಂದು ಮಲಗಿದೆ. ಆದರೆ ಯಾವಾಗ ನಿದ್ದೆ ಹತ್ತಿತೋ ನನಗೇ ತಿಳಿಯದು. ಬೆಳಗ್ಗೆ ಎಚ್ಚರವಾಗುವ ಹೊತ್ತಿಗೆ ಮನೆಯಲ್ಲಿ ಓಡಾಟ, ಸಂಭ್ರಮ, ಓಲಗದ ಸದ್ದು ನನ್ನ ಮನಸ್ಸನ್ನು ಆವರಿಸಿತು. ಇದ್ದಕ್ಕಿದ್ದ ಹಾಗೆ ಬೆಕ್ಕಿನ ಮರಿಯ ವಿಷಯ ನೆನಪಿಗೆ ಬಂದು ತೊಡೆಯನ್ನು ಮುಟ್ಟಿ ನೋಡಿಕೊಂಡೆ. 'ಬೆಕ್ಕಿನ ಮರಿಯೂ ಇಲ್ಲ, ಏನೂ ಇಲ್ಲ ' ಎಂಬ ಧೈರ್ಯವಾಯಿತು.

ಮುಂಜಿಯಾದರೂ ಅಷ್ಟೆ, ಮದುವೆಯಾದರೂ ಅಷ್ಟೆ, ಬೆಳಗ್ಗೆ ಇಡ್ಲಿ ಸಮಾರಾಧನೆ ನಡೆದಿರುತ್ತದೆ. ಈ ಕಡೆ ಹಸೆಮಣೆಯ ಮೇಲೆ ವಟುವನ್ನು ಕೂರಿಸಿಕೊಂಡು, ತಂದೆತಾಯಿಗಳು ಪುರೋಹಿತರು ಹೇಳಿದಂತೆ ಮಾಡುತ್ತಿರುತ್ತಾರೆ. ಮುಂಜಿಯ ಹುಡುಗನ ಕೂದಲು ಕತ್ತರಿಸುವ ಶಾಸ್ತ್ರವಾದ ಮೇಲೆ ನಾಯಿಂದನಿಂದ ಮುಂದುಗಡೆ ತಲೆಯ ಕ್ಷೌರವಾಗುತ್ತದೆ. ಹಳ್ಳಿಯ ನಾಯಿಂದನ ಒರಟು ಕತ್ತಿ ತಲೆಯ ಮೇಲೆ ಕೆರೆಯಲು ಶುರು ಮಾಡಿದರೆ ಅದೊಂದು ಸಂಕಟಕರ ಅನುಭವವೇ ಆಗುತ್ತದೆ ಹುಡುಗನಿಗೆ. ಸಮವಯಸ್ಸಿನ ಹುಡುಗರ ಜತೆಯಲ್ಲಿ ಕೂರಿಸಿ ಬಾಳೆಎಲೆಯಲ್ಲಿ ಹಲವು ರೀತಿಯ ತಿಂಡಿ, ಭಕ್ಷ್ಯಗಳನ್ನು ಬಡಿಸಿ ಕುಮಾರ-ಭೋಜನ ಮಾಡಿಸುವುದು ವಟುವಿಗೆ ಸಂತೋಷವನ್ನು ತಂದುಕೊಡುತ್ತದೆ. ಅರಿಶಿನದ ಪಂಚೆಯನ್ನು ಉಟ್ಟು, ಸೊಂಟಕ್ಕೆ ಅದೇ ತರಹ ವಲ್ಲಿಯನ್ನು ಕಟ್ಟಿ, ಮೌಂಜಿ ಬಂಧನ ಮಾಡಿಸುತ್ತಾರೆ. ಯಜ್ಞೋಪವೀತ ಹಾಕಿಸಿ, ಗಂಟೆಯ ಓಂಕಾರನಾದದ ಹಿನ್ನೆಲೆಯಲ್ಲಿ, ರಹಸ್ಯವಾಗಿ ತನ್ನ ತಂದೆಯಿಂದ ವಟುವಿಗೆ ಗಾಯತ್ರೀಮಂತ್ರದ ಉಪದೇಶವಾಗುತ್ತದೆ. ಹಳದಿ ದಟ್ಟಿಯನ್ನುಟ್ಟು, ಗೋಪೀಚಂದನದ ಗೂಟನಾಮವನ್ನು ಹಣೆಯಲ್ಲೂ ತೋಳುಗಳ ಮೇಲೂ ಧರಿಸಿ, ಮುತ್ತುಗದ ಎಲೆಯ ದಂಡವನ್ನು (ದಂಡುಕೋಲನ್ನು) ಕೈಯಲ್ಲಿ ಹಿಡಿದು ನಿಲ್ಲುವ ವಟುವಿನ ಠೀವಿಯೇ ಬೇರೆ. ಉಪನಯನದಲ್ಲೆಲ್ಲ ನನಗಾದ ಸ್ವಾರಸ್ಯವಾದ ಅನುಭವವೆಂದರೆ ಭಿಕ್ಷೆ ಬೇಡುವುದು. ಆ ಅನುಭವ ಎಂದೂ ಮರೆಯದಂಥದು. ಕೈಯಲ್ಲಿ ಬೆಳ್ಳಿಪಾತ್ರೆಯನ್ನು ಹಿಡಿದು ನಿಂತುಕೊಳ್ಳಲು, **ಭವತಿ ಭಿಕ್ಷಾಂ ದೇಹಿ** ಎಂದು ವಟುವಿನ ಕೈಯಲ್ಲಿ ಪುರೋಹಿತರು ಹೇಳಿಸುವರು. ಆಗ ಜರೀ ಸೀರೆಯುಟ್ಟ ಮುತ್ತೈದೆಯರು ನಿರಿಯನ್ನು ಚಿಮ್ಮುತ್ತಾ ಬಂದು, ಪಾತ್ರೆಗೆ ಭಿಕ್ಷೆ ಹಾಕುವುದು ವೈಭವದ ದೃಶ್ಯವೇ ಸರಿ. ಅಕ್ಕಿಯೇ ಭಿಕ್ಷೆಯ ವಸ್ತುವಾದರೂ ಉಳ್ಳವರು ಬೆಳ್ಳಿ ರೂಪಾಯನ್ನು ಹಾಕಬಹುದು; ಶ್ರೀಮಂತರು ಚಿನ್ನದ ಕಾಸನ್ನೇ ಬೇಕಾದರೂ ಹಾಕಬಹುದು. ವೈಶ್ಯರು, ಕ್ಷತ್ರಿಯರು ಚಿನ್ನದ ಜನಿವಾರವನ್ನೇ ಹಾಕಿಸುತ್ತಾರೆ ಎಂದಮೇಲೆ ಇದೇನು ಮಹಾ !

ಮುಂಜಿಯಲ್ಲಿ ವಟುವಿಗೆ ಮೊದಲನೆಯ ಸಲ ಸಂಧ್ಯಾವಂದನೆಯ ಮಂತ್ರವನ್ನು ಹೇಳಿಕೊಡುವ ಕೆಲಸ ಸ್ವಲ್ಪ ಕಿರಿಕಿರಿಯದೇ. ವಟುವಿಗೆ ಸಂಸ್ಕೃತದ ಉಚ್ಚಾರಣೆಯ ಅನುಭವ ಇರುವುದಿಲ್ಲ. ಮಂತ್ರಗಳು ಎಂದರೆ ಬೇರೆ ಹೇಳಬೇಕಿಲ್ಲ , ಅದನ್ನು ಸರಿಯಾಗಿ ಬಾಯಲ್ಲಿ ಉಚ್ಚರಿಸಲು ಎಲ್ಲರಿಗೂ ಬರುವುದಿಲ್ಲ. ಹೇಳಿಕೊಡುವವರು ಸುಲಭವಾಗಿ ಹೇಳಿಕೊಡುತ್ತಾರೆ. ಮಂತ್ರವನ್ನು ಹೇಳುವ ವಟುವಿಗೆ ಮಂತ್ರವು ಅರ್ಥವೂ ಆಗುವುದಿಲ್ಲ , ಬಾಯಲ್ಲಿ ಅಕ್ಷರಗಳು ಸರಿಯಾಗಿ ಹೊರಡುವುದೂ ಇಲ್ಲ. ತಪ್ಪು ತಪ್ಪಾಗಿ ಮಂತ್ರವನ್ನು ಹೇಳಿದಾಗ ಅದನ್ನು ಹೇಳಿಕೊಡುವವರು ನಾಲ್ಕಾರು ಸಲ ತಿದ್ದಬೇಕಾಗುತ್ತದೆ. ವಟುವು ತಡವರಿಸಿದಾಗ,

ಹೇಳಿಕೊಡುವವರಿಗೆ ಬೇಜಾರಾದರೆ ತಮಾಷೆ ಮಾಡುವರು. ಸ್ವಲ್ಪ ಜೋರಿನವರಾದರೆ ಗದರಿಸುವುದೂ ಉಂಟು. ಹಿರಿಯರು ಮನೆಯಲ್ಲಿ ಮಕ್ಕಳಿಗೆ ಬಾಲ್ಯದಿಂದ ಸಂಸ್ಕೃತದ ಸ್ತೋತ್ರಗಳನ್ನು ಬಾಯಿಪಾಠ ಮಾಡಿಸಿದ್ದರೆ, ಮಂತ್ರ ಹೇಳಿಸಿಕೊಳ್ಳುವ ವಟುವಿಗೆ ಮಂತ್ರಗಳನ್ನು ಹೇಳುವುದು ಸುಲಭವಾಗುತ್ತದೆ. ಇಲ್ಲದೆ ಇದ್ದರೆ ದೇವರೇ ಗತಿ ! ಕೊನೆಗೆ ಹೇಳಿಕೊಡುವವರು ಹೇಳುವುದನ್ನು ಅನುಕರಿಸುವಂತೆ ಪದಗಳನ್ನು ನುಂಗಿಕೊಂಡು ಹೇಗೋ ನಿಭಾಯಿಸಿಕೊಂಡು ಹೋಗುವುದು ಸಾಮಾನ್ಯವಾಗಿತ್ತು. ಹೇಳಿಕೊಡುವವರು ಕೂಡ 'ಹೇಗಾದರೂ ಮಾಡಿಕೊಳ್ಳಲಿ' ಎಂದು ಸುಮ್ಮನಾಗಿಬಿಡುತ್ತಿದ್ದರು. ಕಟ್ಟುನಿಟ್ಟಾಗಿ ಹೇಳಿಕೊಡುವವರ ಕೈಯಲ್ಲಿ ವಟುಗಳಿಗೆ ಏಗುವುದೇ ಕಷ್ಟವಾಗಿ 'ಸಾಕಪ್ಪ ಈ ಮುಂಜಿ!' ಎನ್ನಿಸುತ್ತಿದ್ದರೆ ಆಶ್ಚರ್ಯವಿಲ್ಲ.

ಮುಂಜಿ ಎಂದರೆ ಏನೋ ಎಂದು ತಿಳಿದ ಬಾಲಕರಿಗೆ ಉಪನಯನವಾದ ಮೇಲಿನ ಕಟ್ಟುಪಾಡುಗಳಿಗೆ ಹೊಂದಿಕೊಳ್ಳುವುದು ಕಷ್ಟವಾಗಿ, ಸೋಮಾರಿಗಳಾದವರಿಗೆ 'ಇದೇನಪ್ಪ ರಗಳೆ' ಎನ್ನಿಸುತ್ತಿತ್ತು. ತ್ರಿಕಾಲ ಸಂಧ್ಯಾವಂದನೆ ಮಾಡಬೇಕು : ಎಂದರೆ ಬೆಳಗ್ಗೆ ಮತ್ತು ಸಂಜೆ ಸಂಧ್ಯಾವಂದನೆ, ಮಧ್ಯಾಹ್ನ ಮಾಧ್ಯಾಹ್ನಿಕ ಮಾಡಬೇಕು. ಬೆಳಗ್ಗೆ ಮತ್ತು ಸಂಜೆ ಸಮಿತ್ತು ಮಾಡಬೇಕು. ಎಂದರೆ ಇದೊಂದು ರೀತಿಯ ಹೋಮ. ಹೋಮಕ್ಕೆ ಪವಿತ್ರಾಗ್ನಿ ಬೇಕು. ಆದರೆ ಸಮಿತ್ತಿಗೆ ಯಾವ ಅಗ್ನಿಯಾದರೂ ಸರಿ. ಪ್ರತಿಸಲದ ಸಮಿತ್ತಿಗೆ ಇಪ್ಪತ್ತೊಂದು ಉತ್ತರಣೆ ಕಡ್ಡಿಯನ್ನೋ ಅರಳಿಕಡ್ಡಿಯನ್ನೋ ಜೋಡಿಸಿಟ್ಟುಕೊಳ್ಳಬೇಕು. ಮನೆಯಲ್ಲಿ ಒಲೆ ಹತ್ತಿಸಿರದೆ ಇದ್ದರೆ ಅಡುಗೆ ಒಲೆ ಅಥವಾ ಬಚ್ಚಲು ಮನೆ ಒಲೆ ಹತ್ತಿಸಿದ ಯಾರದಾದರೂ ಮನೆಯನ್ನು ಹುಡುಕಿಕೊಂಡು ಹೋಗಬೇಕು. ಈ ರೀತಿ ದಿನವೂ ಪಾಲಿಸುವುದಲ್ಲದೆ - ಕನ್ನಡಿಯಲ್ಲಿ ಮುಖ ನೋಡಿಕೊಳ್ಳಬಾರದು, ಅಡಕೆ ಅಥವಾ ತಾಂಬೂಲವನ್ನು ಅಗಿಯಬಾರದು, ಮೆತ್ತನೆ ಹಾಸಿಗೆಯ ಮೇಲೆ ಮಲಗಬಾರದು - ಇವೆಲ್ಲ ನಿಯಮಗಳು ಬೇರೆ.

ಹಿಂದಿನ ಕಾಲದಲ್ಲಿ ಮುಂಜಿಯಾದ ಮೇಲೆಯೇ ಸಂಕೇತಿ ಹುಡುಗರ ವಿದ್ಯಾಭ್ಯಾಸವು ಆರಂಭವಾಗುತ್ತಿದ್ದುದು. ಸಂಕೇತಿಗಳಲ್ಲಿ ವೇದಾಧ್ಯಯನಕ್ಕೆ ಪ್ರಾಶಸ್ತ್ಯ ಹೆಚ್ಚು. ಅದೇ ಊರಿನಲ್ಲಿ ವೇದವಿದರು ಇದ್ದರೆ ಅವರು ಪುರಸತ್ತು ಇದ್ದಾಗ ಊರಿನ ಬಾಲಕರಿಗೆ ವೇದಾಭ್ಯಾಸ ಮಾಡಿಸುತ್ತಿದ್ದರು. ಗುರುಗಳು ಏನಾದರೂ ಕೆಲಸ ಹೇಳಿದರೆ ಶಿಷ್ಯನು ಮಾಡಬೇಕಾಗಿತ್ತು. ಗುರುಗಳ ನಿಯಮಗಳಿಗೆ ಶಿಷ್ಯ ಬದ್ಧನಾಗಿರಬೇಕಾಗಿತ್ತು. ಊರಿನಲ್ಲಿ ವೇದವಿದ್ಯಾಸಂಪನ್ನರು ಇಲ್ಲದೆ ಹೋದರೆ ಯಾರನ್ನಾದರೂ ಹುಡುಕಿ ತಮ್ಮ ಊರಿಗೆ ಕರೆತಂದು ಇಟ್ಟುಕೊಂಡು, ಅವರಿಂದ ವೇದವನ್ನು ತಮ್ಮ ಹುಡುಗರಿಗೆ ಹೇಳಿಸುತ್ತಿದ್ದರು. ಜೀವನಕ್ಕೆ ಅನುಕೂಲವಿರುವವರು ಯಾರೂ ಹೇಳಿಕೊಡಲು ಬರುತ್ತಿರಲಿಲ್ಲ. ಜೀವನಕ್ಕೆ ತೊಂದರೆಯಾದವರು, ಆಸ್ತಿಪಾಸ್ತಿ ಇಲ್ಲದವರು, ಸಂತೋಷದಿಂದ ಬರಲು ಒಪ್ಪುತ್ತಿದ್ದರು. ಹಾಗೂ ಆಗದೆ ಇದ್ದರೆ ಬೇರೆ ಊರಿನಲ್ಲಿ ವೇದ ಹೇಳಿಕೊಡುವಂಥವರು ಇದ್ದರೆ ಅಲ್ಲಿಗೆ ವೇದಾಧ್ಯಯನಕ್ಕಾಗಿ ಮಕ್ಕಳನ್ನು ಕಳುಹಿಸುತ್ತಿದ್ದರು. ಅಂಥ ಶಿಷ್ಯರು, ಯಾರದಾದರೂ ಗೃಹಸ್ಥರಮನೆಯಲ್ಲಿ ಇದ್ದುಕೊಂಡು ವಾರಾನ್ನದಿಂದಲೋ ಭಿಕ್ಷಾನ್ನದಿಂದಲೋ ಜೀವಿಸುತ್ತಿದ್ದರು. ಇಲ್ಲವೇ ಸಂಬಂಧಿಕರೋ ನೆಂಟರೋ, ಆಪ್ತರೋ ಯಾರಾದರೂ ವೇದವಿದರಿದ್ದರೆ ಅವರ ಮನೆಗೆ ಅಧ್ಯಯನಕ್ಕಾಗಿ ಮಕ್ಕಳನ್ನು ಕಳುಹಿಸುತ್ತಿದ್ದರು. ಇಲ್ಲಿ ವಿದ್ಯಾಭ್ಯಾಸವು ಗುರುಕುಲದಂತೆಯೇ ನಡೆಯುತ್ತಿದ್ದಿತು. ಗುರುಗಳ ಮನೆಯಲ್ಲಿಯೇ ಊಟ ಮಾಡಿಕೊಂಡು ಇದ್ದುಕೊಂಡು, ಅವರ ಜತೆಯಲ್ಲಿ ತೋಟಕ್ಕೆ ಹೋಗುವುದು, ಜತೆಯಲ್ಲಿ ಕೆಲಸ ಮಾಡುವುದು, ಅವರು ಯಾವ ಯಾವಾಗ ವೇದ ಹೇಳಿಕೊಟ್ಟರೆ ಆಗ ಕಲಿಯುವುದು - ಇದೇ ಅವರ ಜೀವನ. ಶಿಷ್ಯರನ್ನು ಮನೆಯ ಮಕ್ಕಳಂತೆಯೇ ಗುರುಗಳ ಮನೆಯಲ್ಲಿ ನೋಡಿಕೊಳ್ಳುತ್ತಿದ್ದರು. ವಿದ್ಯಾಭ್ಯಾಸ ಮಾಡುವ ವಾರದ ಹುಡುಗರಿಗೆ ವಾರದಲ್ಲಿ ಒಂದು ದಿವಸ ಊಟವನ್ನು ಹಾಕುವುದು, ಭಿಕ್ಷಾನ್ನಕ್ಕೆ ಬಂದರೆ ಮನೆಯ ಊಟದ ಅನ್ನ-ಸಾರು ಮೊದಲಾದುವುಗಳನ್ನು ನೀಡುವುದು ತಮ್ಮ ಕರ್ತವ್ಯವೆಂದು ಗೃಹಸ್ಥರೂ ಗೃಹಿಣಿಯರೂ ಭಾವಿಸಿದ್ದರು. ಇಂಥ ಹುಡುಗರನ್ನು ಊರಿನವರು ತಮ್ಮ ಮಕ್ಕಳಂತೆಯೇ ನೋಡಿಕೊಳ್ಳುತ್ತಿದ್ದರು. ಅವರ ಕಷ್ಟಸುಖಗಳನ್ನು ವಿಚಾರಿಸುವುದು, ವಾರಕ್ಕೆ ಒಂದುದಿನ ಯಾರಾದರೂ ತಮ್ಮ ಮನೆಯಲ್ಲಿ ಅವರಿಗೆ ಎಣ್ಣೆ ನೀರು ಹಾಕುವುದು, ಅವರು ಹುಷಾರು ತಪ್ಪಿದರೆ ಆರೈಕೆ ಮಾಡುವುದು - ಇತ್ಯಾದಿ ತಮ್ಮ ಕರ್ತವ್ಯವೋ ಎನ್ನುವಂತೆ ಮಾಡುತ್ತಿದ್ದರು.

ಸಂಸ್ಕೃತ ಸಾಹಿತ್ಯ ಶಾಸ್ತ್ರಗಳನ್ನು ಕಲಿಯಲು ಕೂಡ ತಂದೆ ತಾಯಂದಿರು ಪ್ರೋತ್ಸಾಹ ನೀಡುತ್ತಿದ್ದರು. ಊರಿನಲ್ಲಿ ಯಾರಾದರೂ ಶಾಸ್ತ್ರಿಗಳು ಇದ್ದರೆ ಅವರ ಮನೆಗೆ ಸಂಸ್ಕೃತ ಪಾಠಕ್ಕೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದರು; ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರು ನಗರದಲ್ಲಿರುವ ಮಹಾರಾಜರ ಸಂಸ್ಕೃತ ಕಾಲೇಜಿಗೆ ಕಳುಹಿಸುತ್ತಿದ್ದರು. ಮಹಾರಾಜರ ಸಂಸ್ಕೃತ ಕಾಲೇಜು ಸಂಸ್ಕೃತ ಸಾಹಿತ್ಯ, ವೇದ, ತರ್ಕ, ವ್ಯಾಕರಣ ಮೊದಲಾದ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಪ್ರಸಿದ್ಧವಾಗಿತ್ತು. ಈ ವಿದ್ಯಾಪೀಠದಲ್ಲಿ ಹೆಸರಾಂತ ಮಹಾ ಮಹಾ ವಿದ್ವಾಂಸರು ಉಪಾಧ್ಯಾಯರುಗಳಾಗಿ ಬೋಧನೆ

ಮಾಡುತ್ತಿದ್ದರು. ಮಕ್ಕಳು ಮಹಾರಾಜರ ಛತ್ರದಲ್ಲಿ ಊಟ ಮಾಡಿಕೊಂಡು, ಇಲ್ಲ ಊರಿನಿಂದ ಅಕ್ಕಿ, ಬೇಳೆ, ಹುಣಸೇಹಣ್ಣು ಮೊದಲಾದವುಗಳನ್ನು ತಂದುಕೊಂಡು ಸಂಸ್ಕೃತ ಕಾಲೇಜಿನ ವಿದ್ಯಾರ್ಥಿನಿಲಯದ ಕೊಠಡಿಯಲ್ಲಿ ಅಡುಗೆ ಮಾಡಿ ಊಟ ಮಾಡಿಕೊಂಡು ಬಹಳ ಕಷ್ಟಪಟ್ಟು ವಿದ್ಯಾರ್ಜನೆ ಮಾಡಿ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅನಂತರ ತಮ್ಮ ಊರಿಗೆ ಹೋಗಿ ತಮ್ಮ ಕುಲಕಸುಬಾದ ತೋಟದ ವ್ಯವಸಾಯದಲ್ಲಿ ನಿರತರಾಗುತ್ತಿದ್ದರು. ಹಿಂದಿನ ಧರ್ಮಶಾಸ್ತ್ರಗಳಲ್ಲಿ ಹೇಳಿರುವಂತೆ ಉಪನಯನದ ಅನಂತರ ವಿದ್ಯಾಭ್ಯಾಸ, ವಿದ್ಯಾಭ್ಯಾಸ ಮುಗಿದ ಮೇಲೆ ಗೃಹಸ್ಥ ಧರ್ಮಾಚರಣೆಯ ಮೂಲಕ ಜೀವನ ನಿರ್ವಹಣೆ - ಸಂಕೇತಿಗಳು ಅನುಸರಿಸುತ್ತಿದ್ದ ಮಾರ್ಗವಾಗಿತ್ತು.

ಸರಕಾರದವರು ಹಳ್ಳಿ ಹಳ್ಳಿಗಳಲ್ಲೂ ಶಾಲೆಗಳನ್ನು ಸ್ಥಾಪಿಸಿದ ಮೇಲೆ ಸಂಕೇತಿಗಳು ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಕಳುಹಿಸ ಲಾರಂಭಿಸಿದರು. ಅಲ್ಲಿಯೂ ಸಂಕೇತಿ ಹುಡುಗರ ಮೇಲುಗೈಯೇ. ಹಳ್ಳಿಗಳಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ಕಲಿಕೆ ಮುಗಿಸಿ, ದೊಡ್ಡ ಊರುಗಳಲ್ಲಿದ್ದ ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಕ್ರಮೇಣ ಹೆಚ್ಚಾಯಿತು. "ಏನೋ? ನಿನ್ನ ಮಕ್ಕಳನ್ನು ಮ್ಲೇಚ್ಛವಿದ್ಯಾಭ್ಯಾಸಕ್ಕೆ ಕಳುಹಿಸುತ್ತೀಯಾ? ಮೂಢ, ಮೂಢ" ಎಂದು ಮೂಗು ಮುರಿದವರೇ, ಮುಂದೆ ತಮ್ಮ ಮಕ್ಕಳನ್ನು ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸಿದುದು ವೈಪರೀತ್ಯವೇ ಸರಿ. ಸಂಕೇತಿಗಳ ಜೀವನದಲ್ಲೂ, ಅವರ ಭಾವನೆಗಳಲ್ಲೂ ಆಧುನಿಕತೆಯ ಗಾಳಿ ಬೀಸಿದುದು ಕಾಲದ ಸಂಕೇತವೇ ಆಗಿತ್ತು. ಮುಂದೆ ಅನೇಕ ಜನ ಸಂಕೇತಿಗಳು ಇಂಜಿನಿಯರುಗಳೋ, ಡಾಕ್ಟರುಗಳೋ ಆಗಿ ಹೆಸರು ಗಳಿಸಿದುದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ಅಮೆರಿಕ ಮೊದಲಾದ ಪರದೇಶಗಳಲ್ಲಿಯು ಕೂಡ ಸಂಕೇತಿಗಳು ಹೋಗಿ ನೆಲಸಿ ಉತ್ತಮವಾದ ಹೆಸರನ್ನು ಗಳಿಸಿದ್ದಾರೆ. ಒಂದು ಕಾಲದಲ್ಲಿ ಕನ್ಯಾಪಿತೃಗಳು ತಮ್ಮ ಹೆಣ್ಣುಮಕ್ಕಳನ್ನು ಇಂಜಿನಿಯರ್ ಅಥವಾ ಡಾಕ್ಟರ್ ಆದವರಿಗೇ ಕೊಡಬೇಕೆಂಬ ಹಿರಿಯಾಸೆಯನ್ನು ಹೊಂದಿರುತ್ತಿದ್ದರು. ಇಂಜಿನಿಯರಿಂಗ್ ಅಥವಾ ಡಾಕ್ಟರ ಪರೀಕ್ಷೆಗೆ ಓದುತ್ತಿರುವಾಗಲೇ ವರದಕ್ಷಿಣೆಯನ್ನಾದರೂ ಕೊಟ್ಟು, ತಮ್ಮ ಹೆಣ್ಣುಮಕ್ಕಳ ಮದುವೆಯನ್ನು ಮಾಡಿ ಸಂತೃಪ್ತಿಗೊಳ್ಳುತ್ತಿದ್ದರು ಸಂಕೇತಿ ಗೃಹಸ್ಥರು. ಒಬ್ಬ ಕನ್ಯಾಪಿತೃಗಳು ತಮ್ಮ ಮಗಳನ್ನು ಇಂಜಿನಿಯರಿಗೇ ಕೊಡಬೇಕೆಂದು ಬಹಳ ಪ್ರಯತ್ನಪಟ್ಟರು. ಆದರೆ ಅವರಿಗೆ ತಾವು ಬಯಸಿದಂಥ ವರ ದೊರೆಯದೆ ಇರಲು, ಬುದ್ಧಿವಂತನಾದ ಇಂಜಿನಿಯರಿಂಗ್ ಡಿಪ್ಲೋಮಾ ಮಾಡಿದವನನ್ನು ಹುಡುಕಿ ಅವನಿಗೆ ತಮ್ಮ ಮಗಳನ್ನು ಧಾರೆಯೆರೆದು ಕೊಟ್ಟರು. ಡಿಪ್ಲೋಮಾದಾರನಾದರೂ ಆತನು ಮುಂದೆ ಜೂನಿಯರ್ ಇಂಜಿನಿಯರೋ, ಅಸಿಸ್ಟೆಂಟ್ ಇಂಜಿನಿಯರೋ ಆಗುತ್ತಾನೆ ಅಥವಾ ಪ್ರಮೋಷನ್ ಸಿಕ್ಕಿ ಇನ್ನೂ ಮೇಲಿನ ಹುದ್ದೆಗೂ ಏರಬಹುದು ಎಂಬ ದೃಢವಿಶ್ವಾಸ ಅವರಿಗಿದ್ದಿತು. ಇಂಜಿನಿಯರನ್ನು ಅಥವಾ ಡಾಕ್ಟರನ್ನು ಮದುವೆಯಾದ ಹೆಣ್ಣುಮಕ್ಕಳಿಗೆ, ಹಳ್ಳಿಯ ಹೆಂಗಸರ ದೃಷ್ಟಿಯಲ್ಲಿ ಗೌರವ ಸಿಕ್ಕುತ್ತಿದ್ದಿತು.

ಸಂಕೇತಿ ಹುಡುಗರು ತುಂಟತನ ಚೇಷ್ಟೆಗಳಲ್ಲಿ ಯಾರಿಗೂ ಏನೂ ಕಡಮೆಯಿರಲಿಲ್ಲ. ಅವರ ಒರಟುತನವನ್ನೂ, ಶಕ್ತಿಸಾಮರ್ಥ್ಯಗಳನ್ನೂ, ಧೈರ್ಯವನ್ನೂ ನೋಡಿದ ಇತರರು ಅಸೂಯೆಯಿಂದ ಅವರನ್ನು 'ಗೊಡವಮಟ್ಟೆ' ಎಂದು ಸಂಬೋಧಿಸುತ್ತಿದ್ದರು. ನಾನು ಬಸವಾಪಟ್ಟಣಕ್ಕೆ ಹೋಗಿ ಅಲ್ಲಿನ ಮಿಡಲ್ ಸ್ಕೂಲಿಗೆ ಸೇರಿಕೊಂಡು, ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗೆ ಓದುತ್ತಿದ್ದಾಗಿನ ನನ್ನ ಅನುಭವಗಳನ್ನು ನಾನು ಇಂದಿಗೂ ಮರೆತಿಲ್ಲ.

ಬಸವಾಪಟ್ಟಣದ ಆ ಶಾಲೆಯಲ್ಲಿ ಊರಿನ ಎಲ್ಲ ಮಕ್ಕಳೂ ಓದುತ್ತಿದ್ದರು. ಆದರೆ ಸಂಕೇತಿ ಹುಡುಗರು ಮಾತ್ರ ತಮ್ಮದೇ ಒಂದು ಗುಂಪನ್ನು ಮಾಡಿಕೊಂಡಿದ್ದರು. ಮಧ್ಯೆ ಒಂದು ಪೀರಿಯಡ್ ರಜ ಇದ್ದಿತು ಎನ್ನಿ. ಅವರೆಲ್ಲಾ ಗುಂಪಾಗಿ ಶಾಲೆಯ ಎದುರಿಗೆ ಇದ್ದ ನಾಲೆಯ ಬಳಿಗೆ ಹೋಗುತ್ತಿದ್ದರು. ಪುಸ್ತಕಗಳನ್ನೂ, ಬಟ್ಟೆಗಳನ್ನೂ ಕಳಚಿಟ್ಟು ನಾಲೆಯ ನೀರಿಗೆ ಬೀಳುತ್ತಿದ್ದರು. ಮುಂದಿನ ಪೀರಿಯಡ್‌ನ ಗಂಟೆ ಹೊಡೆಯುವವರೆಗೂ ಈಜಾಡುತ್ತ ಖುಷಿಪಡುತ್ತಿದ್ದರು. ನನ್ನ ಜತೆಯ ಕೆಲವರು ಬಹಳ ಚೆನ್ನಾಗಿ ಈಜುತ್ತಿದ್ದರು. ನನಗಿಂತ ವಯಸ್ಸಿನಲ್ಲಿ ದೊಡ್ಡವರಾದ ಕೆಲವು ಜನ ಹುಡುಗರು ಒಳ್ಳೆಯ ತುಂಡಾಂಡಿಗಳಾಗಿದ್ದರು. ಅವರಿಗೆ ಎಷ್ಟು ಈಜಿದರೂ ಆಯಾಸವೇ ಆಗುತ್ತಿರಲಿಲ್ಲ. ನಾನಂತೂ ಅವರ ಎದುರಿಗೆ ಸಣಕಲನೇ. ಆದರೂ ನನಗೂ ಈಜಬೇಕೆಂಬ ಆಸೆ. ಹಾಗೂ ಹೀಗೂ ಸ್ವಲ್ಪ ಸ್ವಲ್ಪ ಈಜಲು ಕಲಿತೆ ಎನ್ನಿ. ನಮ್ಮ ಜತೆಯವರೆಲ್ಲಾ ಶವಈಜು ಎಂದು ಉಸಿರು ಬಿಗಿ ಹಿಡಿದು ನೀರಿನ ಮೇಲೆ ಬಹು ಹೊತ್ತು ತೇಲುತ್ತ ಇರುತ್ತಿದ್ದರು. ಅಂಗಾತನಾಗಿ ಮಲಗಿ ಪದ್ಮಾಸನದ ರೀತಿಯಲ್ಲಿ ಕಾಲುಗಳನ್ನು ಮಡಚಿಕೊಂಡು, ಕೈಗಳನ್ನು ಎದೆಯ ಮೇಲಿಟ್ಟುಕೊಂಡು, ಉಸಿರನ್ನು ಹಿಡಿಯುತ್ತ, ನೀರಿನ ಮೇಲೆ ತೇಲುತ್ತಿದ್ದರೆ ಅದೇ ಒಂದು ಸುಖ. ಬೆನ್ನಿಗೆ ನೀರಿನ ತಂಪು, ಮೇಲಿನಿಂದ ಮೈಮೇಲಕ್ಕೆ ಬಿಸಿಲಿನ ಶಾಖ ಇವೆರಡರ ಸಂಯೋಗ ಒಂದು ವಿಶಿಷ್ಟ ರೀತಿಯ ಸುಖವನ್ನು ಕೊಡುತ್ತಿತ್ತು. ಹೀಗೆ ಆನಂದದಲ್ಲಿ ಮುಳುಗಿರುವಾಗಲೇ, ಶಾಲೆಯ ಗಂಟೆ ಕೇಳಿಸಿ

ಬಿಡುವುದೇ! ಗಡಬಡನೆ ಎದ್ದು ಹಾಗೆಯೇ ಬಟ್ಟೆಯನ್ನು ಧರಿಸಿ ಸ್ಕೂಲಿಗೆ ಓಡುತ್ತಿದ್ದೆವು. ನಮ್ಮ ಅವತಾರವನ್ನು ಕಂಡ ಉಪಾಧ್ಯಾಯರು, "ಏನ್ರೋ, ಈಜೋದಕ್ಕೆ ಹೋಗಿದ್ದಿರಾ? ಶಾಲೆಯಲ್ಲಿ ಕುಳಿತುಕೊಂಡು ಪಾಠ ಓದಿದ್ದರೆ ಏನಾಗುತ್ತಿತ್ತು? ಮುಂಡೇ ಮಕ್ಕಳಾ, ಓದೋದಕ್ಕೆ ಅಂತ ಬರೋದು, ಚಕ್ಕಂದ ಆಡೋದು. ಬನ್ನಿ ನಿಮ್ಮ ಮೈ ಮುರೀತೀನಿ" ಎಂದು ಗದರಿಸುತ್ತ ಬೆತ್ತದಿಂದ ಒಂದೊಂದು ಬಾರಿಸುತ್ತಿದ್ದರು. "ಇಲ್ಲ ಸಾರ್, ಇನ್ನು ಮಾಡೋದಿಲ್ಲ" ಎಂದು ಹೇಳಿ ಬೆನ್ನು-ತೋಳುಗಳನ್ನು ಮುಟ್ಟಿ ನೋಡಿಕೊಳ್ಳುತ್ತ ಹೋಗಿ ತರಗತಿಯಲ್ಲಿ ಕುಳಿತುಕೊಳ್ಳುತ್ತಿದ್ದೆವು. ಇಂಥದೆಲ್ಲ ಚೆನ್ನಾಗಿ ನಮಗೆ ಅಭ್ಯಾಸವಾಗಿಬಿಟ್ಟಿತ್ತು.

ಶಾಲೆ ಬಿಟ್ಟ ಮೇಲೆ ಹುಡುಗರ ದೃಷ್ಟಿ ಸಮೀಪದ ಕಾಡಿನಲ್ಲಿ ಅಥವಾ ರಸ್ತೆಯ ಮರಗಳಲ್ಲಿ ಸಿಕ್ಕುವ ಬೇಲದ ಹಣ್ಣು , ನೇರಳೆ ಹಣ್ಣು , ಅತ್ತಿ ಹಣ್ಣುಗಳ ಕಡೆಗೆ ಹರಿಯುತ್ತಿತ್ತು. ನೇರಳೆ ಹಣ್ಣಿನ ಕಾಲದಲ್ಲಿ ಹುಡುಗರು ಶಾಲೆ ಬಿಟ್ಟ ಮೇಲೆ ಹೋಗಿ ನೇರಳೆಹಣ್ಣುಗಳನ್ನು ಕಿತ್ತು ತಿನ್ನುವುದೇ ಒಂದು ಮೋಜು. ಮರ ಹತ್ತುವುದರಲ್ಲಿ ನಿಪುಣರಾದವರು ಮರ ಹತ್ತಿ , ನೇರಳೆ ಹಣ್ಣುಗಳನ್ನು ಕಿತ್ತು ಕೆಳಕ್ಕೆ ಹಾಕುವರು. ಹಳೆ ಪಂಚೆಯನ್ನೋ, ಗೋಣಿತಾಟನ್ನೋ ತಂದು ಅದನ್ನು ಇಬ್ಬರು-ಮೂವರು ಹಿಡಿದುಕೊಂಡು ಹಣ್ಣುಗಳನ್ನು ಆತುಕೊಳ್ಳುವರು. ಹಣ್ಣನ್ನೆಲ್ಲ ತೆಗೆದುಕೊಂಡು ಹೋಗಿ ನಾಲೆಯ ಬಳಿಗೆ ಬಂದು, ಹುಲ್ಲು ಹಸೆಯ ಮೇಲೆ ರಾಶಿ ಹಾಕಿ ಅದರ ಸುತ್ತ ಎಲ್ಲರೂ ಕುಳಿತುಕೊಳ್ಳುವರು. ಒಂದೊಂದಾಗಿ ನೇರಳೆ ಹಣ್ಣುಗಳನ್ನು ತೆಗೆದುಕೊಂಡು ಬಾಯಿಗೆ ಹಾಕಿಕೊಂಡು ಚಪ್ಪರಿಸುತ್ತ ಬೀಜವನ್ನು ಉಗುಳುವರು.

ಕಾಲ ಕಳೆಯಲು ತಮತಮಗೆ ಗೊತ್ತಿರುವ ದೆವ್ವ, ಪಿಶಾಚಿಗಳ ಕಥೆಯನ್ನು ಹೇಳುವರು. ಆ ಕಥೆಗಳನ್ನು ಕೇಳುತ್ತಿದ್ದರೆ ಯಾರಿಗೂ ಹೊರ ಜಗತ್ತಿನ ಪರಿವೆಯೇ ಇರುತ್ತಿರಲಿಲ್ಲ : ಮುತ್ತಣ್ಣನು ಗಾಡಿ ಹೊಡೆದುಕೊಂಡು ಹೋಗುತ್ತಿರುವಾಗ, ಕಾಳೇನಹಳ್ಳಿಯ ಬಳಿ ದಿಡ್ಡಮ್ಮನ ಗುಡಿಯ ಹತ್ತಿರಕ್ಕೆ ಬಂದಿದ್ದಾನೆ. ರಾತ್ರಿ ಹನ್ನೆರಡು ಗಂಟೆಯಾಗಿದೆ. ಇದ್ದಕ್ಕಿದ್ದ ಹಾಗೇ ಎತ್ತುಗಳು ನಿಂತುಬಿಟ್ಟುವು. ಎತ್ತುಗಳ ಕಣ್ಣುಗಳಿಗೆ ದೆವ್ವ, ಭೂತಗಳು ಕಾಣುತ್ತವೆಂದು ಪ್ರತೀತಿ. ಮುತ್ತಣ್ಣನಿಗೆ ಮೊದಲು ಗೊತ್ತಾಗಲಿಲ್ಲ. ಅನಂತರ ದಿಢೀರನೆ ಊಹೆ ಹತ್ತಿ, ಮೂಕಿಯಿಂದ ಕೆಳಕ್ಕೆ ಇಳಿದಿದ್ದೇ ಚಾವಟಿಯಿಂದ ಬಾರಿಸಿದನಂತೆ. ದೆವ್ವವು ದಾರಿ ಬಿಟ್ಟುಬಿಟ್ಟಿತಂತೆ. ಅನಂತರ ಎತ್ತುಗಳು ಮುಂದಕ್ಕೆ ಹೆಜ್ಜೆ ಹಾಕಲಾರಂಭಿಸಿದವು. ಮುತ್ತಣ್ಣ ಧೈರ್ಯಗೆಡದೆ ಹಾಡು ಹೇಳಿಕೊಳ್ಳುತ್ತ ಊರು ಸೇರಿದ. ಆದರೆ ಊರು ಸೇರಿದೊಡನೆ ಅವನು ಜ್ಞಾನ ತಪ್ಪಿ ಬಿದ್ದುಬಿಟ್ಟ. ಆಗ ಹಿರಿಯರು ನೋಡಿ ಭೂತಶಂಕೆಯೇ ಇರಬೇಕೆಂದು ಊಹಿಸಿ ನಿಂಗನ ಮೂಲಕ ಎರಡು ಕೋಳಿಗಳನ್ನು ಬಲಿ ಕೊಡಿಸಿ ನಿವಾಳಿಸಲು ಮುತ್ತಣ್ಣ ಎದ್ದು ಕುಳಿತ. ಅನಂತರ, ನಡೆದ ಕಥೆ ಹೇಳಿದ.

ಬಸವಾಪಟ್ಟಣದ ಊರ ಹೊರಗಡೆ ರಾಮನಾಥಪುರದ ರಸ್ತೆಯಲ್ಲಿ ತೋಟಗಳಿಂದ ಆಚೆ ಒಂದು ಬೇಲದ ಮರವಿದೆ. ಅದರ ಅಡಿಯಲ್ಲಿ ಮಟ ಮಟ ಮಧ್ಯಾಹ್ನ ಯಾರಾದರೂ ಬಂದರೆ ಆ ಮರದ ಮೇಲೆ ವಾಸವಾಗಿರುವ ದೆವ್ವ ಬೆನ್ನಮೇಲೆ ಹೊಡೆಯುತ್ತದಂತೆ. ರಾತ್ರಿ ಬಂದರಂತೂ ಕುರ್ತೇಟು. ನಮ್ಮೂರ 'ಕೂಗ' ಒಂದು ದಿನ ಹೀಗೆ ಹೆದರಿ ಬಂದನಂತೆ. ಅದೂ ಅಮಾವಾಸ್ಯೆ ರಾತ್ರಿ ಬೇರೆ. ಮನೆಯಲ್ಲಿ ನೋಡಿದರೆ ಬೆನ್ನಮೇಲೆ ಕೆಂಪಗೆ ಐದು ಬೆರಳುಗಳು ಅಚ್ಚೊತ್ತಿದಂತೆ ಮೂಡಿದ್ದುವು. ಕೂಡಲೆ ಕೋಳಿ ಬಲಿ ಕೊಟ್ಟರಂತೆ.

ನಮ್ಮೂರ ಸಣ್ಣತಮ್ಮ ಒಂದು ಸಲ ದನ ಮೇಯಿಸಲು ಹೋಗಿದ್ದನಂತೆ. ಗುಂಪಿನಲ್ಲಿದ್ದ ಹಸು ಎಲ್ಲೋ ತಪ್ಪಿಸಿಕೊಂಡು ಹೋಯಿತಂತೆ. ಆಗಲೇ ಸಂಜೆಯ ಸಮಯ. ಆಸುಪಾಸಿನಲ್ಲಿ ಎಲ್ಲಿಯೂ ಹಸು ಕಾಣಲಿಲ್ಲ. ದನಗಳನ್ನು ಊರಿಗೆ ಹೊಡೆದುಕೊಂಡು ಹೋಗುವಂತೆ ಜತೆಯವನಿಗೆ ಹೇಳಿ ಹಸು ಹುಡುಕಲು ಹೋದ. ಹುಡುಕುತ್ತ ಹುಡುಕುತ್ತ ಬೋರೆಯ ಮೇಲಿನ ಕುರುಚಲು ಕಾಡಿಗೆ ಬಂದ- ಹಸುವಿನ ಹೆಸರನ್ನು ಕರೆಯುತ್ತಾ. ಇದ್ದಕ್ಕಿದ್ದ ಹಾಗೆ ನೋಡುತ್ತಾನೆ, ಎದುರಿಗೆ ಭೂತಾಕಾರದ ಮನುಷ್ಯ ನಿಂತಿದ್ದಾನೆ. ಸಣ್ಣತಮ್ಮ ಧೈರ್ಯಶಾಲಿ. ಅವನು ಹೆದರಲಿಲ್ಲ. "ಏ, ನಡಿ ಆಚೆಗೆ !" ಎಂದು ಗದರಿಸಿದ. ಅವನು ಅಲ್ಲಾಡಲಿಲ್ಲ. "ಹೋಯ್ತಿಯೋ ಇಲ್ವೋ ದಾರಿ ಬುಟ್ಟು" ಎಂದು ಹೇಳಿದ್ದೇ ಕೋಲಿನಿಂದ ನಾಲ್ಕು ಬಾರಿಸಿದ. ಅದೇನೋ ಅತ್ತ ಸರಿದು ಹೋಯಿತು. ಹೋಗುವಾಗ ಅದರ ಕಾಲನ್ನು ಸಣ್ಣತಮ್ಮ ನೋಡುತ್ತಾನೆ, ಅದು ಹಿಂದು ಮುಂದಾಗಿದೆ ಮತ್ತು ನೆಲದ ಮೇಲೆ ನಿಂತಿಲ್ಲ. ಆಗ ಅವನಿಗೆ ಅದು ದೆವ್ವ ಎಂದು ಖಾತರಿಯಾಯಿತು. ಗಾಬರಿಯಿಂದ ಕಿರಿಚಿಕೊಂಡು ಒಂದೇ ಉಸುರಿಗೆ ಓಡಿಬಂದದ್ದೇ ಹಾಸಿಗೆಯಲ್ಲಿ ಬಿದ್ದುಕೊಂಡ. ಬೆಳಗಾಗುವ ಹೊತ್ತಿಗೆ ಕೆಂಡದಂತೆ ಜ್ವರ ಕಾಯುತ್ತಿತ್ತು. ಮೈ ಮೇಲೆ ಎಚ್ಚರವಿರಲಿಲ್ಲ. ಕೂಡಲೆ ಕೋಳಿ ಕೊಡಿಸಿ ಮಂತ್ರ ಹಾಕಿಸಿದರು. ಏನು ಮಾಡಿದರೂ ಪ್ರಯೋಜನವಾಗದೆ ಮೂರು ದಿವಸಕ್ಕೆ ಪ್ರಾಣ ಬಿಟ್ಟ. ಹೀಗೆ ರೋಮಾಂಚಕರವಾದ ಕಥೆಗಳನ್ನು ಹೇಳುತ್ತ-ಕೇಳುತ್ತ ಸಂಜೆ ಕಳೆದು ರಾತ್ರಿಯಾಗುತ್ತ ಬರುತ್ತದೆ. ಆಕಾಶದಲ್ಲಿ ಚಿಕ್ಕೆಗಳು ಬೆಳಗುತ್ತವೆ. ಮನೆಗೆ ಹೋಗಲು ಹೊತ್ತಾಗಿ ಹೋಯಿತು ಎಂದು ತಕ್ಷಣ

ನಾಲೆಯು ಬಳಿಗೆ ಬಂದು ನಾಲಗೆಯುನ್ನು ಕೆರೆದು ತೊಳೆದುಕೊಂಡರೂ ನಾಲಗೆಯ ಬಣ್ಣ ಹೋಗದು. ಕೆಲವರು ಮನೆಯಿಂದ ಉಪ್ಪು-ಕಾರವನ್ನು ಕಾಗದದಲ್ಲಿ ಕಟ್ಟಿಕೊಂಡು ಬಂದಿರುತ್ತಾರೆ. ಅದನ್ನು ನಾಲಗೆಗೆ ಸವರಿ ನೀಡಿಕೊಂಡು ಕುಳಿತರೆ ನಾಲಗೆಯ ಮೇಲಿನಿಂದ ನೀರು ಸುರಿಯುತ್ತದೆ. ನಾಲಗೆಯ ಬಣ್ಣ ಕಡಮೆಯಾಗುತ್ತದೆ. ಅಲ್ಲಿಂದ ಬೇಗ ಬೇಗ ಮನೆಗೆ ಬರುವುದು. ಯಾರಾದರೂ ಹಿರಿಯರು ಮಾತನಾಡಿಸಿದರೆ 'ಹೂಂ ಹಾಂ' ಎಂದಷ್ಟೇ ಉತ್ತರ ಕೊಡುತ್ತ ನಾಲಿಗೆ ಹೊರಗೆ ಕಾಣದಂತೆ ಪ್ರಯತ್ನಿಸಿ, ಪುಸ್ತಕ ತೆಗೆದುಕೊಂಡು ಓದುತ್ತ ಕುಳಿತುಬಿಡುವುದು. ಆದರೂ ಒಂದೆರಡು ಸಲ ನಮ್ಮ ನಾಲಗೆಯ ಬಣ್ಣ ಬಯಲಾಗಿ ಛಡಿ ಏಟಿನ ಬಿಸಿಯನ್ನು ಅನುಭವಿಸಬೇಕಾಗಿ ಬರುತ್ತಿತ್ತು.

ಹಲಸಿನ ಹಣ್ಣಿನ ಕಾಲದಲ್ಲಿ ನಮ್ಮ ಜತೆಗಾರರ ಬಾಯಿಯಲ್ಲಿ ನೀರೂರುತ್ತಿತ್ತು. ಯಾರ ಯಾರ ಹೊಲದ ಹಲಸಿನ ಹಣ್ಣು ರುಚಿ ಎಂಬ ಮಾಹಿತಿಯೆಲ್ಲ ಹುಡುಗರಿಗೆ ಗೊತ್ತಿರುತ್ತಿತ್ತು. ಮರದಲ್ಲಿ ಹಣ್ಣಾಗುತ್ತಿರುವುದನ್ನು ಗುರುತಿಟ್ಟುಕೊಂಡಿದ್ದು , ಮಟಮಟ ಮಧ್ಯಾಹ್ನ ಹೊಲಕಾಯುವ ರೈತ ಮನೆಗೆ ಊಟಕ್ಕೆ ಹೋದ ಸಮಯ ನೋಡಿ, ಹಣ್ಣನ್ನು ಕಿತ್ತುತಂದು, ತೊಟ್ಟಿನಿಂದ ಸೋರುವ ರಸವನ್ನು ಮಣ್ಣಿನಲ್ಲಿ ಉಜ್ಜಿ ಒರೆಸಿ ಹಣ್ಣನ್ನು ಕಿತ್ತ ಸುಳಿವು ಸಿಗದಂತೆ ಮಾಡಿ, ಅದು ಮಾಗಲು ತೋಟದಲ್ಲಿ ಹುಲ್ಲಿನ ಮೆದೆಯಲ್ಲೋ, ತರಗಿನ ಒಳಗೋ ಹುದುಗಿಸಿಟ್ಟು, ಹಣ್ಣಾದ ವಾಸನೆ ಬರುತ್ತದೆಯೋ ಎಂದು ಕಾದು ನೋಡುವುದು. ಹಣ್ಣಾದ ವಾಸನೆ ಬಂದ ಮೇಲೆ ಅಡಗಿಸಿದ ಜಾಗದಿಂದ ಗುಟ್ಟಾಗಿ ತೆಗೆದುಕೊಂಡು ಬಂದು ಅದನ್ನು ಎಲ್ಲರೂ ಸೇರಿ ಹೊಟ್ಟೆಗೆ ಸೇರಿಸಿಬಿಡುವುದು. ಇಷ್ಟೆಲ್ಲ ಬುದ್ಧಿವಂತಿಕೆಯಿಂದ ಹಲಸಿನಕಾಯಿ ಕಿತ್ತರೂ ರೈತನಿಗೆ ಗೊತ್ತಾಗಿಬಿಡುತ್ತದೆ. ಅವನು ಪ್ರತಿಯೊಂದು ಕಾಯಿಯ ಲೆಕ್ಕ ಇಟ್ಟುಕೊಂಡಿರುತ್ತಾನೆ. ಯಾರೋ ಹಲಸಿನ ಕಾಯನ್ನು ಕದ್ದಿದ್ದಾರೆ ಎಂದು ಅವನಿಗೆ ಗೊತ್ತಾಗಿ ಬಿಡುತ್ತದೆ. ಆದರೆ ಏನು ಮಾಡುತ್ತಾನೆ, ಕೈ ಕೈ ಹಿಸುಕಿಕೊಂಡು ಸುಮ್ಮನಿರುತ್ತಾನೆ. ಹೇಗಾದರೂ ಪತ್ತೆಯಾಗಿಬಿಟ್ಟರೆ ಪಟೇಲರಿಗೆ ಹೇಳಿ ಪಂಚಾಯಿತಿ ಮಾಡಿಸಿಬಿಡುತ್ತಾನೆ. ಕೇವಲ ಬೀಜದಿಂದಲೇ ಇದು ತಮ್ಮ ಮರದ ಹಣ್ಣು ಎಂದು ಪತ್ತೆ ಮಾಡಬಲ್ಲ ರೈತ. ಯಾರಿಗೂ ಹಣ್ಣಿನ ವಾಸನೆ ಪತ್ತೆಯಾಗದಂತೆ, ಹಲಸಿನ ತೊಳೆಗಳನ್ನು ಬಿಡಿಸಿ ತಿಂದು ಸಿಪ್ಪೆ, ಕುರೋಕು, ಬೀಜಗಳನ್ನು ನೆಲದಲ್ಲಿ ಹುಗಿದು ಮೇಲೆ ಮಣ್ಣು ಮುಚ್ಚಿ , ಮೇಲೆ ಹಸಿರು ಹುಲ್ಲನ್ನೋ ಎಲೆಯನ್ನೋ ಹರಡಿ ಮನೆಗೆ ಬರುತ್ತಿದ್ದರು ಹುಡುಗರು. ಮಧ್ಯಾಹ್ನದ ಊಟಕ್ಕೆ ಮೊದಲು ಹಲಸಿನ ಹಣ್ಣನ್ನು ತಿಂದರೇನೆ ಅದರ ರುಚಿ. ಹಾಗೆ ಹಲಸಿನ ಹಣ್ಣನ್ನು ತಿಂದು ಬಂದರೆ, ಬಾಯಿ ವಾಸನೆ ಇತರರಿಗೆ ಬರದಂತೆ ಇದ್ದು ಊಟ ಮಾಡಿಬಿಟ್ಟರೆ, ಆಮೇಲೆ ಬಾಯಿವಾಸನೆ ಇರುವುದಿಲ್ಲ. ಅಂದಿಗೆ ಬಚಾವು.

ಒಂದು ಸಲ ಏನಾಯಿತು ಕೇಳಿ. ಅಂದು ಎಲ್ಲ ಸೇರಿ ಅಡಗಿಸಿಟ್ಟ ಹಲಸಿನ ಹಣ್ಣನ್ನು ಹುಲಿಮೆಟ್ಟು ಎಂಬ ಬಂಡೆಯ ಮೇಲೆ ತಿನ್ನಬೇಕೆಂದು ನಿರ್ಧಾರವಾಗಿತ್ತು. ಗುಂಡ ಹಲಸಿನ ಹಣ್ಣನ್ನು ತರಬೇಕು. ಅವನಿಗೆ ಸ್ವಲ್ಪ ಮುಂದೆ ಶೀನು, ಸ್ವಲ್ಪ ಹಿಂದೆ ಸತ್ಯ ಕಾವಲಿರಬೇಕು ಎಂದು ತೀರ್ಮಾನವಾಗಿತ್ತು. ಆ ಹಣ್ಣು ದೊಡ್ಡಣ್ಣನ ಹೊಲದ ಮರದ ಹಣ್ಣಾಗಿತ್ತು. ದೊಡ್ಡಣ್ಣನು ಹಲಸಿನ ಹಣ್ಣು ಕಳುವಾಗಿದ್ದನ್ನು ಕಂಡು, ಕದ್ದ ಆಸಾಮಿಗಳನ್ನು ಪತ್ತೆಹಚ್ಚಬೇಕೆಂದು ಹೊಂಚು ಹಾಕುತ್ತಲೇ ಇದ್ದ. ಎಲ್ಲೋ ತೋಟದಲ್ಲಿ ಯಾರೋ ಹುದುಗಿಸಿಟ್ಟಿರಬೇಕೆಂದು ಅವನ ಊಹೆ. ಹೀಗೆ ಇರುವಾಗ ಸುಮಾರು ಹನ್ನೊಂದು ಗಂಟೆ ಮಧ್ಯಾಹ್ನದ ಸಮಯ ತೋಟದಲ್ಲಿ ಹಾಗೂ ಅದರ ಆಸುಪಾಸಿನಲ್ಲಿ ಯಾರೂ ಇಲ್ಲದ್ದನ್ನು ನೋಡಿದ ಗುಂಡ, ಹಲಸಿನಹಣ್ಣನ್ನು ಅಡಗಿಸಿಟ್ಟ ಜಾಗದಿಂದ ಹೊರತೆಗೆದು ಅದು ಹೊರಕ್ಕೆ ಕಾಣದಂತೆ ಹಸಿಬೆಚೀಲದಲ್ಲಿ ಸುತ್ತಿ, ಅದರ ಸುತ್ತ ಕತ್ತರಿಸಿದ ಅಡಕೆ ಸೋಗೆಯನ್ನು ಇಟ್ಟು ಹೊರೆ ಕಟ್ಟಿಕೊಂಡು ತೋಟದಿಂದ ಮನೆಯ ಕಡೆಗೆ ಹೊರಟ. ದೊಡ್ಡಣ್ಣ ಇದನ್ನು ನೋಡಿದ. ಅವನಿಗೆ ಆಗ ಏನೂ ಅನುಮಾನ ಬರಲಿಲ್ಲ. ಸ್ವಲ್ಪ ದೂರ ಮನೆಯ ದಾರಿಯಲ್ಲಿ ಸಾಗಿದ ಮೇಲೆ, ಶೀನ ದೂರದಲ್ಲಿ ಅಡಗಿ ಕುಳಿತಿದ್ದವನು ಶಿಳ್ಳೆ ಹೊಡೆದ. ಶೀನನಿಗೆ ದೊಡ್ಡಣ್ಣ ಅಲ್ಲಿರುವುದು ಗೊತ್ತಿರಲಿಲ್ಲ. ಶಿಳ್ಳೆಯ ಶಬ್ದ ದೊಡ್ಡಣ್ಣನ ಕಿವಿಗೆ ಬಿತ್ತು. ಅವನಿಗೆ ಅನುಮಾನವಾಯಿತು. ಮೆಳೆಗಳ ಹಿಂದೆ ಬಚ್ಚಿಟ್ಟುಕೊಂಡು ಕುಳಿತ! ನೋಡುತ್ತಾ ಇದ್ದಾನೆ. ಗುಂಡ ಊರದಾರಿಯನ್ನು ಬಿಟ್ಟು ಎಡಗಡೆಗೆ ತಿರುಗಿದ. ಸ್ವಲ್ಪ ದೂರ ಸಾಗಿದ ಮೇಲೆ ಪುನಃ ಸತ್ಯನ ಶಿಳ್ಳೆ ಕೇಳಿಸಿತು. ಯಾರೂ ನೋಡುತ್ತಿಲ್ಲವೆಂದು ಖಚಿತಪಡಿಸಿಕೊಂಡು ಅವನು ಗುಂಡನನ್ನು ಸ್ವಲ್ಪ ದೂರದಿಂದ ಹಿಂಬಾಲಿಸತೊಡಗಿದ. ಇದನ್ನು ನೋಡಿದ ದೊಡ್ಡಣ್ಣನಿಗೆ ಅನುಮಾನ ಬಲವಾಯಿತು. ಕೈಯಲ್ಲಿನ ದೊಣ್ಣೆಯನ್ನು ಬೀಸುತ್ತ ಅವರನ್ನು ಕೂಗಿ ಕರೆಯುತ್ತ ಅವರ ಹಿಂದೆ ಓಡಿದ. ಗಿಡದ ಮರೆಯಲ್ಲಿದ್ದ ಶೀನನಿಗೆ ದೊಡ್ಡಣ್ಣನು ಗುಂಡನನ್ನೂ ಸತ್ಯನನ್ನೂ ಹಿಂಬಾಲಿಸುತ್ತಿರುವುದು ಕಾಣಿಸಿತು. ಶೀನ ಆಗ ಎರಡು ಶಿಳ್ಳೆ ಹಾಕಿದ. ಸತ್ಯನಿಗೂ ಗುಂಡನಿಗೂ ಗೊತ್ತಾಗಿ ಹೋಯಿತು ಯಾರೋ ತಮ್ಮನ್ನು ಹಿಂಬಾಲಿಸುತ್ತಿದ್ದಾರೆಂದು. ಹಿಂದಿರುಗಿ ನೋಡಿದರೆ ದೊಡ್ಡಣ್ಣ ದಾಪುಗಾಲು ಹಾಕುತ್ತ ದೊಣ್ಣೆ ತಿರುಗಿಸುತ್ತ ಬರುತ್ತಿರುವುದು ಅವರಿಗೆ ಕಾಣಿಸಿತು. ಇವನಿಗೆ ನಮ್ಮ ಗುಟ್ಟು

ಗೊತ್ತಾಗಿ ಹೋಗಿದೆ ಎಂದು ಗುಂಡ ದಾರಿ ಬದಲಿಸಿದ್ದೇ ಓಟ ಕಿತ್ತ. ದೊಡ್ಡಣ್ಣನೂ ಹಿಂಬಾಲಿಸುತ್ತ ಓಡತೊಡಗಿದ. ಆಗ ಶೀನ ಗಿಡಗಳ ಸಂದಿನಿಂದ ಸರಸರ ಓಡಿ, ದೊಡ್ಡಣ್ಣ ಬರುವ ದಾರಿಗೆ ಉಗುಣಿ ಹಂಬನ್ನು ಹರವಿ ಪೊದೆಯಲ್ಲಿ ಅಡಗಿ ಕುಳಿತ. ದೊಡ್ಡಣ್ಣ ಓಡಿ ಬರುತ್ತಿದ್ದಂತೆ ಉಗುಣಿ ಹಂಬು ಅವನ ಕಾಲಿಗೆ ಸುತ್ತಿಕೊಂಡಿತು. ಪೊದೆಯಲ್ಲಿ ಅಡಗಿ ಕುಳಿತಿದ್ದ ಶೀನ ಉಗಣಿ ಹಂಬಿನ ಒಂದು ತುದಿಯನ್ನು ಕೈಯ್ಯಲ್ಲಿ ಹಿಡಿದಿದ್ದವನು ಹಂಬನ್ನು ಜೋರಾಗಿ ಎಳೆದ. ಏನಾಯಿತು ಎಂದು ಅರ್ಥವಾಗುವಷ್ಟರಲ್ಲಿ ದೊಡ್ಡಣ್ಣ ಕೆಳಕ್ಕೆ ಬಿದ್ದ. ಬೇಗ ಸಾವರಿಸಿಕೊಂಡು ಎದ್ದು ನೋಡಿದರೆ ಗುಂಡ ಎಲ್ಲೂ ಕಣ್ಣಿಗೆ ಬೀಳಲಿಲ್ಲ. ಸತ್ಯನು ಎಲ್ಲೋ ಮಾಯವಾಗಿದ್ದ. ಎಷ್ಟು ಹುಡುಕಿದರೂ ಗುಂಡ ಸಿಗಲಿಲ್ಲ. ಸತ್ಯ ದೂರದಲ್ಲಿ ಮರವನ್ನು ಏರಿ ಎಲೆಗಳ ಮರೆಯಲ್ಲಿ ಅಡಗಿ ಕುಳಿತು ನೋಡುತ್ತಿದ್ದ. ಗುಂಡ ತನ್ನ ಹೊರೆಯನ್ನು ಹೊತ್ತುಕೊಂಡು ಬಳಸುದಾರಿಯಿಂದ ತೋಟಕ್ಕೆ ಹೋಗಿ ಸೋಗೆ ಗುಡ್ಡೆಯ ಒಳಗೆ ಅಡಗಿಸಿಟ್ಟ. ಅಡ್ಡದಾರಿಯಿಂದ ಮನೆ ಸೇರಿಕೊಂಡ. ಇತ್ತ ದೊಡ್ಡಣ್ಣ ಹುಡುಕಿ ಹುಡುಕಿ ಸುಸ್ತಾಗಿ ಊರಿಗೆ ಬಂದು ಪಟೇಲರಿಗೆ ದೂರು ಕೊಟ್ಟ. ಪಟೇಲನು ಗುಂಡ, ಸತ್ಯ ಇಬ್ಬರನ್ನೂ ಕರೆಸಿ ಕೇಳಿದ. ಅದಕ್ಕೆ ಅವರು, "ನಮಗೆ ದೊಡ್ಡಣ್ಣನ ಹಲಸಿನ ಹಣ್ಣಿನ ವಿಚಾರವೇ ಗೊತ್ತಿಲ್ಲ" ಎಂದರು. ಗುಂಡ, "ನಾನು ಮನೆಯಲ್ಲೇ ಇದ್ದೆ , ಸತ್ಯ ತೋಟಕ್ಕೆ ಹೋಗಿದ್ದ " ಎಂದು ಹೇಳಿದ. ಹಲಸಿನ ಹಣ್ಣಿನ ಕಳವಿಗೆ ಇವರೇ ಕಾರಣರು ಎಂಬುದಕ್ಕೆ ಸಾಕ್ಷಿ ದೊರೆಯಲಿಲ್ಲ. ಆಗ ಪಟೇಲರು, "ಹಲಸಿನಹಣ್ಣಿನ ಗುರುತನ್ನು ನೀವು ಪತ್ತೆ ಹಚ್ಚಿಕೊಡಿ, ನಾನು ಕಳವು ಮಾಡಿದವನನ್ನು ಕಂಡುಹಿಡಿದು ತಕ್ಕ ಶಿಕ್ಷೆ ಕೊಡುತ್ತೇನೆ" ಎಂದು ದೊಡ್ಡಣ್ಣನಿಗೆ ಹೇಳಿಕಳುಹಿಸಿದರು. ಆದರೆ ಅವನಿಗೆ ಎಷ್ಟೇ ಪ್ರಯತ್ನಪಟ್ಟರೂ ಹಣ್ಣಿನ ಬೀಜ ಅಥವಾ ತೊಟ್ಟು ಇಲ್ಲವೇ ಕುರೋಕು ಯಾವುದರ ಸುಳಿವೂ ಸಿಕ್ಕಲಿಲ್ಲ. ಕೈ ಕೈ ಹಿಸುಕಿಕೊಂಡು ಸುಮ್ಮನಾದ. ಆ ಹುಡುಗರು ಯಾವ ಮಾಯದಲ್ಲಿ ಹಣ್ಣನ್ನು ತಿಂದು ಬೀಜ ಕುರೋಕು ತೊಟ್ಟು ಮೊದಲಾದುವನ್ನು ಅಡಗಿಸಿದರೋ ಯಾರಿಗೂ ಗೊತ್ತಾಗಲಿಲ್ಲ.

ಶಾಲೆ ಬಿಟ್ಟ ಮೇಲೆ ಹುಡುಗರು ಊರ ಹೊರಗಿನ ಮೈದಾನದಲ್ಲಿ ಆಟ ಆಡಲು ಸೇರುವುದು ದಿನಚರಿ. ಆಟಗಳಲ್ಲೆಲ್ಲ ಚಿನ್ನಿದಾಂಡು 'ಗಂಡು ಆಟ'ವೆಂದು ಲೆಕ್ಕ. ಶಾಲೆಯಲ್ಲಿ ಹೆಚ್ಚಿನ ಸೌಕರ್ಯ ಇಲ್ಲದೆ ಇದ್ದುದರಿಂದ ಆಟಪಾಟಗಳಿಗೆ ಅಷ್ಟು ಅವಕಾಶವಿರಲಿಲ್ಲ. ಫುಟ್‌ಬಾಲ್ ಆಟಕ್ಕೆ ಶಾಲೆಯಲ್ಲಿ ಚೆಂಡನ್ನು ಒದಗಿಸುತ್ತಿದ್ದರು. ಈ ಆಟದಲ್ಲಿ ಪಳಗಿದ ಕೆಲ ಖದೀಮ ಹುಡುಗರು ಬೇರೆಯವರಿಗೆ ಅವಕಾಶವೇ ಕೊಡುತ್ತಿರಲಿಲ್ಲ. ಕೊಣನೂರು, ಅರಕಲಗೂಡು, ಕೇರಳಾಪುರ ಮೊದಲಾದ ಕಡೆಗಳಲ್ಲಿ ಆಗುವ ಫುಟ್‌ಬಾಲ್ ಪಂದ್ಯಗಳಿಗೆಲ್ಲ ಅವರೇ ಹೋಗುತ್ತಿದ್ದರು. ಆದುದರಿಂದ ಹೆಚ್ಚಿನ ಹುಡುಗರು ಸಡುಗುಡು, ಭೂರಿಚಂಡು, ಕುಂಟಬಿಲ್ಲೆ, ಚಿನ್ನಿದಾಂಡು ಮೊದಲಾದ ಆಟಗಳಲ್ಲೇ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು. ಅದೇನೋ ಚಿನ್ನಿದಾಂಡು ಬಲಿಷ್ಠರ ಆಟ ಎಂದು ಆ ಹುಡುಗರು ಅದಕ್ಕೆ ಮನ್ನಣೆ ಕೊಟ್ಟಿದ್ದರು. ಚಿನ್ನಿಯನ್ನು ಬದುವಿನಲ್ಲಿ ಇಟ್ಟು ದಾಂಡಿನಿಂದ ಹೊಡೆದರೆ ಅದು ಬಹು ದೂರ ಹೋಗಬೇಕು. ಯಾರ ಚಿನ್ನಿ ಬದುವಿಗೆ ತುಂಬ ಸಮೀಪ ಬೀಳುತ್ತದೋ ಅವರು, ಇತರ ಆಟಗಾರರನ್ನು ಚಿನ್ನಿ ಹೊಡೆಯುವಷ್ಟರಲ್ಲಿ ಹಿಡಿಯಬೇಕು. ಹಿಡಿಯುವವನು ತಮ್ಮನ್ನು ಮುಟ್ಟದಂತೆ ಉಳಿದ ಆಟಗಾರರು ಚಿನ್ನಿಯನ್ನು ಹೊಡೆಯುತ್ತ ಹೋಗುತ್ತಾರೆ. ಇವನು ಅವರಲ್ಲಿ ಒಬ್ಬನನ್ನಾದರೂ ಹಿಡಿಯಲು ಓಡಾಡುತ್ತಿರುತ್ತಾನೆ. ಹಿಡಿಯಲು ಸುತ್ತಾಡಿ ಸುಸ್ತಾಗಬೇಕು ಅಷ್ಟೆ. ಹೀಗೆ ಬಲಿಷ್ಠರಾದವರು ದುರ್ಬಲರನ್ನು ಕಾಡಿಸುವುದು ವಾಡಿಕೆಯಾಗಿತ್ತು. ನಮ್ಮಲ್ಲಿ ಕಿಟ್ಟು ಎಂಬ ಹುಡುಗನಿದ್ದ. ಅವನು ಅಷ್ಟೇನೂ ಬಲಿಷ್ಠನಲ್ಲ. ಅವನನ್ನು ಆಟದಲ್ಲಿ ಸೇರಿಸಿಕೊಂಡು ಕಾಡುವುದೆಂದರೆ ಉಳಿದ ಹುಡುಗರಿಗೆ ಒಂದು ಸಂತೋಷ. ಅವನೇನಾದರೂ ಬೇಸತ್ತು ಆಟ ಆಡದೆ ಹೋದನೆಂದರೆ "ಆಟ ಕೊಡೋ ಬಡ್ಡೀಮಗನೆ" ಎಂದು ಅವನನ್ನು ಹಿಡಿದು ನೆಲದ ಮೇಲೆ ಮಲಗಿಸಿಕೊಂಡು ಎಲ್ಲರೂ ಸೇರಿ ಹೊಡೆಯುವರು. ಇದನ್ನು ನೋಡಿ ನನಗೆ ಅಯ್ಯೋ ಎನಿಸುತ್ತಿತ್ತು. ಒಂದು ಸ್ವಾರಸ್ಯವೆಂದರೆ ಎಷ್ಟು ಹೊಡೆದರೂ ಕಿಟ್ಟುವಿನ ಕಣ್ಣಿನಲ್ಲಿ ನೀರು ಬರುತ್ತಿರಲಿಲ್ಲ. ಅವನ ಕಣ್ಣಿನಲ್ಲಿ ನೀರು ಬರಿಸಿಯೇ ತೀರಬೇಕು ಎಂದು ಅವನನ್ನು ಹೊಡೆಯುತ್ತಿದ್ದರು. ಕೊನೆಗೊಂದು ಸಲ ತಾಳಲಾರದೆ ಅವನ ಕಣ್ಣಿನಲ್ಲಿ ಒಂದು ಹನಿ ನೀರನ್ನು ಕಂಡ ಮೇಲೆಯೇ ಅವರ ಹೊಡೆತ ನಿಲ್ಲುತ್ತಿತ್ತು. ಆಗ ಎಲ್ಲರಿಗೂ ತೃಪ್ತಿ. ಆದರೆ ಈ ಹೊಡೆತ ದ್ವೇಷದಿಂದ ಕೂಡಿರುತ್ತಿರಲಿಲ್ಲವೆಂಬುದೇ ಇದರ ವೈಶಿಷ್ಟ್ಯ. ಆಮೇಲೆ ಕಿಟ್ಟುವನ್ನು ಹೊಡೆದವರು ಅವನನ್ನು ಪುಸಲಾಯಿಸಿ ತಿಂಡಿ ಕೊಟ್ಟು ಸಮಾಧಾನ ಮಾಡುತ್ತಿದ್ದರು. 'ನಿನ್ನೆ ಹೊಡೆದರಲ್ಲ' ಎಂದು ಕಿಟ್ಟು ನೋವಿನಿಂದ ಮಾರನೆಯ ದಿನ ಆಟಕ್ಕೆ ಬರದೆ ಇರುತ್ತಿರಲಿಲ್ಲ. ಎಲ್ಲರಿಗಿಂತ ಮೊದಲು ಅವನು ಮೈದಾನದಲ್ಲಿ ಹಾಜರು. ಆಟದಲ್ಲಿ ಸೋತು, ಕಾಡಿ ಏಟು ಹೊಡಿಸಿಕೊಳ್ಳುವುದರಲ್ಲಿ ಅವನಿಗೆ ಏನು ಆನಂದವಿತ್ತೋ ಅದನ್ನು ನಾನು ಅರ್ಥಮಾಡಿಕೊಳ್ಳಲಾಗಲೇ ಇಲ್ಲ.

ಸಂಕೇತಿ ಹುಡುಗರ ಇನ್ನೊಂದು ಮುಖ್ಯ ಚಟುವಟಿಕೆ ಎಂದರೆ ಈಜು. ನಮ್ಮಲ್ಲಿ ಕೆಲವು ಜನ ತುಂಡಾಂಡಿ ಹುಡುಗರಿದ್ದರು.

ಒಳ್ಳೆಯ ಬಲಿಷ್ಠ ತೊಡೆ-ತೋಳುಗಳನ್ನು ಹೊಂದಿದ್ದ ಅವರು ಯಾವ ಸಾಹಸಕ್ಕಾದರೂ ಸಿದ್ಧವಾಗಿರುತ್ತಿದ್ದರು. ಅವರನ್ನು ಕಂಡರೆ ಇತರ ಹುಡುಗರಿಗೆ ಭಯ. ಬಲಿಷ್ಠರು ಏನು ಹೇಳಿದರೂ ತುಟಿಪಿಟಕ್ಕೆನ್ನದೆ ಇತರ ಹುಡುಗರು ಅವರು ಹೇಳಿದ ಕೆಲಸವನ್ನು ಮಾಡುತ್ತಿದ್ದರು. ಆ ಬಲಿಷ್ಠರೇ ಹುಡುಗರ ತಂಡದ ಲೀಡರ್. ಹುಡುಗರಿಗೆಲ್ಲ ಒಬ್ಬೊಬ್ಬರಿಗೆ ಒಂದೊಂದು ಹೆಸರನ್ನು ಇಟ್ಟಿರುತ್ತಿದ್ದರು. ಒಬ್ಬನಿಗೆ 'ಮಹಿಷಿ' ಎಂದಿದ್ದರೆ ಇನ್ನೊಬ್ಬನಿಗೆ 'ಮೊಸಳೆ' ಎಂಬ ಹೆಸರು. ಇನ್ನೊಬ್ಬನನ್ನು 'ಬಂಡೆ' ಎಂದು ಕರೆಯುತ್ತಿದ್ದರು. ಕೋಲ, ಸಿಳ್ಳೆಕ್ಯಾತ, ಹುಣಸೇಹಣ್ಣು, ಧಡಿಯ, ಅಡಕೆಮರ, ಗೊದಮಟ್ಟೆ ಎಂದೆಲ್ಲ ಹೆಸರುಗಳು ಇರುತ್ತಿದ್ದವು. ಆ ಹೆಸರುಗಳಿಂದಲೇ ಒಬ್ಬರನ್ನೊಬ್ಬರು ಕರೆಯುತ್ತಿದ್ದರು. ತುಂಡಾಂಡಿಗಳಾದ ಬಲಿಷ್ಠರ ಗುಂಪು ಈಜುವುದರಲ್ಲಿ ಎತ್ತಿದ ಕೈ. ಕೆರೆಯಲ್ಲಿ ಈಜುವುದು, ನಾಲೆಯಲ್ಲಿ ಈಜುವುದು ಸಣ್ಣ ಮರಿ ಮೀನುಗಳಿಗೆ ಮೀಸಲು. ಈ ತಿಮಿಂಗಿಲ, ಮೊಸಳೆಗಳಿಗೆ ಕಾವೇರಿ ನದಿಯೇ ಈಜಲು ತಕ್ಕ ಜಲಾಶಯ. ಕಾವೇರಿ ನದಿಯಲ್ಲಿ ಹಲವು ಕಡೆ ಆಳ ಇರುವುದಿಲ್ಲ. ಕೆಲವು ಕಡೆ ಬಹಳ ಆಳವಿರುತ್ತದೆ. ಕೆಲವು ಕಡೆ ಸುಳಿಗಳಿರುತ್ತವೆ; ಕೆಲವು ಕಡೆ ಜೋರಾದ ಸೆಳವು ಇರುತ್ತದೆ. ಈ ಅಪಾಯಕಾರಿ ಜಾಗಗಳನ್ನು ತಿಳಿದುಕೊಂಡು ಅಪಾಯವಿಲ್ಲದ ಕಡೆ ಈಜಬೇಕು. ಬಸವಾಪಟ್ಟಣದ ಕಾವೇರಿ ನದಿಯ ಸ್ನಾನಘಟ್ಟದ ಬಳಿ ಬಹಳ ಬಂಡೆಗಳು. ನದಿಯ ಮಧ್ಯೆ ಮರಳಿನ ಭಾರಿ ದಿಬ್ಬವೊಂದು ಇದೆ. ಅದರಲ್ಲಿ ಕುರುಚಲು ಗಿಡಗಳು, ಮುಳ್ಳು ಗಿಡಗಳು ಬೆಳೆದಿರುತ್ತವೆ. ಕಾವೇರಿ ನದಿಯ ಆ ಭಾಗದಲ್ಲಿ ಮೊಸಳೆಗಳು ವಾಸವಾಗಿದ್ದವು. ಅನೇಕ ಸಲ ಕಾವೇರಿ ನದಿಯ ನಡುವಿನ ಆ ಮರಳುದಿಬ್ಬದ ಮೇಲೆ ಮೊಸಳೆಗಳು ಮಲಗಿಕೊಂಡು ಬಿಸಿಲು ಕಾಯಿಸಿಕೊಳ್ಳುತ್ತಿದ್ದುದನ್ನು ಜನ ನೋಡಿದ್ದರು. ಅವು ಒಂದೊಂದು ಸಲ ಅಗಲವಾಗಿ ಬಾಯಿ ತೆರೆದಾಗ ಕಾಣುತ್ತಿದ್ದ ಗರಗಸದಂಥ ಹಲ್ಲುಗಳನ್ನು ನೋಡಿಯೇ ಜನ ಹೆದರಿಕೊಳ್ಳುತ್ತಿದ್ದರು. ಮೊಸಳೆಗಳ ಹೆದರಿಕೆಯಿಂದ ಯಾರೂ ಆ ಮರಳಿನ ದಿಬ್ಬದ ಕಡೆ ಈಜಲು ಹೋಗುತ್ತಿರಲಿಲ್ಲ. ಒಂದು ಸಲ 'ಮಹಿಷಿ', 'ಬಂಡೆ', 'ಮೊಸಳೆ' ಎಲ್ಲರೂ ಸೇರಿ ನಾವು ಆ ಮರಳುದಿಬ್ಬಕ್ಕೆ ಈಜಿಕೊಂಡು ಹೋಗಬೇಕೆಂದು ನಿರ್ಧರಿಸಿದರು. ಒಂದು ದಿನ ಮಟಮಟ ಮಧ್ಯಾಹ್ನ. ಬಿಸಿಲು ಉರಿಯುತ್ತಿತ್ತು. ಈಜು ಚೆನ್ನಾಗಿ ಬರುತ್ತಿದ್ದ ಎಂಟು ಹತ್ತು ಜನ ಮಾತಾಡಿಕೊಂಡು ನೀರಿಗೆ ಬಿದ್ದದ್ದೇ, ಗಲಾಟೆ ಮಾಡುತ್ತಾ, ಕೂಗು ಹಾಕಿಕೊಂಡು ಈಜುತ್ತ, ಮರಳುದಿಬ್ಬದ ಕಡೆಗೆ ಹೋದರು. ಅವರ ಆರ್ಭಟ, ಈಜಿನ ರಭಸ, ಕೂಗುಗಳಿಗೆ ಮೊಸಳೆಗಳು ಹೆದರಿಕೊಂಡು ಬಚ್ಚಿಟ್ಟುಕೊಂಡವೋ ಏನೋ, ಅವುಗಳ ಸುಳಿವೇ ಕಾಣಲಿಲ್ಲ. ಈಜಿಕೊಂಡು ಹೋದ ಹುಡುಗರು ಕೇಕೆ ಹಾಕುತ್ತ, ಗಲಾಟೆ ಮಾಡುತ್ತ ಮರಳಿನ ದಿಬ್ಬದ ಮೇಲೆಲ್ಲ ಓಡಾಡಿದರು. ಆ ದಿಬ್ಬವನ್ನೆಲ್ಲ ಶೋಧನೆ ಮಾಡಿ ತೃಪ್ತಿಯಾದ ಮೇಲೆ ಇನ್ನೇನು ನೀರಿಗೆ ಧುಮಕಬೇಕು ಎನ್ನುವಷ್ಟರಲ್ಲಿ ಯಾವ ಬಂಡೆಯ ಅಡಿಯಲ್ಲಿ ಮುಚ್ಚಿಟ್ಟುಕೊಂಡಿತ್ತೋ, ಒಂದು ಮೊಸಳೆ ನೀರಿಗೆ ಹಾರಿ ಹೊರಟುಹೋಯಿತು. ಅದೆತ್ತ ಹೋಯಿತೋ ಯಾರಿಗೂ ಗೊತ್ತಾಗಲಿಲ್ಲ. ಆ ಶಬ್ದ ಕೇಳುತ್ತಲೇ ಒಬ್ಬ, "ಏನೋ ಬಂಡೆ, ಅದು ಮೊಸಳೆಯೇನೋ ?" ಎಂದು ಪ್ರಶ್ನೆ ಮಾಡಿದ. ಆಗ ಮಹಿಷಿ, "ಗೊತ್ತಾಗಲಿಲ್ಲ ಕಣೋ, ಅದೆಂಥದೋ ಕಾಣೆ" ಎಂದ. ಆಗ ರಂಗ, "ಹೌದೋ ಮಹಿಷಿ, ಕರ್ರಗೆ ಉದ್ದಕ್ಕೆ ಇತ್ತು. ನೀರಿಗೆ ಅದು ಧುಮುಕಿದುದನ್ನು ಕಂಡೆ. ಅಬ್ಬ ಅದೆಷ್ಟು ಭಯವಾಯಿತು ಎನ್ನುತ್ತೀಯಾ !" ಎಂದ. ಕೂಡಲೇ ಎಲ್ಲರೂ ಅಬ್ಬರಿಸುತ್ತ ಆ ಕಡೆಗೆ ನುಗ್ಗಿದರು. ಈ ಧಾಂಡಿಗರ ಕಣ್ಣಿಗೆ ಆ ಮೊಸಳೆ ಕಾಣಿಸಿಕೊಳ್ಳುವಷ್ಟು ದಡ್ಡ ಪ್ರಾಣಿಯೇ? ಎಲ್ಲರೂ ಕಾಲು ಬಡಿದು, ಕೈ ಬಡಿದು, ನೀರನ್ನು ಎರಚಾಡಿ ಏನೂ ಪ್ರಯೋಜನವಾಗದೆ ಈಜಿಕೊಂಡು ಬಂದು ಘಟ್ಟವನ್ನು ಸೇರಿದರು. ಅಲ್ಲಿದ್ದ ಹಿರಿಯರೊಬ್ಬರು, "ಏನ್ರೋ, ನಿಮ್ಮಲ್ಲಿ ಯಾರಾದರೂ ಮೊಸಳೆ ಬಾಯಿಗೆ ಬಿದ್ದಿರೋ ಹೇಗೆ, ಎಷ್ಟು ಜನ ಹೋದಿರಿ, ಎಷ್ಟು ಜನ ವಾಪಸ್ಸು ಬಂದಿರಿ? ಲೆಕ್ಕ ಹಾಕಿಕೊಂಡಿರಾ ?" ಎಂದು ಕೇಳಿದರು. "ಸೋಮಪ್ಪ, ನೀನು ಬಂದಿದ್ದರೆ ನಿನ್ನನ್ನು ಮೊಸಳೆಗೆ ಆಹಾರವಾಗಿ ಕೊಡಬಹುದಾಗಿತ್ತು. ಅನ್ಯಾಯ, ಮೊಸಳೆ ಹೊಟ್ಟೆ ಹಸಿದುಕೊಂಡು ಹೋಯಿತು. ಏನು ಮಾಡುವುದು" ಎಂದು ಹಾಸ್ಯ ಮಾಡಿದರು, ಹುಡುಗರು.

ಸಂಕೇತಿ ಹುಡುಗರು ನಿರ್ಭೀತರು, ಸಾಹಸಿಗಳು, ಗಟ್ಟಿಗರು. ಅವರು ಇತರರಿಗೆ ಉಪಕಾರ ಮಾಡುವಲ್ಲಿ ಹಿಂದೆಗೆಯುವವರಲ್ಲ. ನಾಲ್ಕೂ ಜನರ ಸೇವೆ ಎಂದರಂತೂ ಅವರು ಎಲ್ಲರಿಗಿಂತ ಮುಂದು. ಸಮಾರಾಧನೆಗಳಲ್ಲಿ ಭೋಜನ ಮಾಡುವವರಿಗೆ 'ಪಚ್ಚ ಪರಿಮಳ ಪಾತಾಳ ಶೀತಳ ಗಂಗೋದಕ' ಎಂದು ಸಾರುತ್ತ ಕುಡಿಯುವ ನೀರನ್ನು ಉತ್ಸಾಹದಿಂದ ಹಾಕುವುದಾಗಲಿ, ತೋಟದಿಂದ ಹೂವು, ತುಳಸಿ, ಬಾಳೆಎಲೆ, ತೆಂಗಿನಕಾಯಿ ಮೊದಲಾದುವನ್ನು ತರುವುದಾಗಲಿ, ಹೊಳೆಯಿಂದ ಗಾಡಿಗಳಲ್ಲಿ ಸಿಹಿ ನೀರನ್ನು ತರುವುದಾಗಲಿ, ಮದುವೆ - ಮುಂಜಿ ಮೊದಲಾದ ಸಮಾರಂಭಗಳಲ್ಲಿ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಿಕೊಡುವುದಾಗಲಿ - ಸಂಕೇತಿ ಹುಡುಗರು ತುಂಬಾ ಚಟುವಟಿಕೆಯಿಂದ ಮಾಡಲು ಸ್ವಪ್ರೇರಣೆಯಿಂದ ಮುಂದೆ ಬರುತ್ತಾರೆ. ಪಕ್ಕದ ಮನೆಯವರಿಗೆ ಯಾರಿಗಾದರೂ ಹುಷಾರಿಲ್ಲ

ಎಂದರೆ ಔಷಧಿಯನ್ನು ತಂದುಕೊಡುವುದಲ್ಲದೆ, ಅಂಥವರು ಹೇಳುವ ಮತ್ತಾವುದೇ ಕೆಲಸವನ್ನಾಗಲಿ ಸ್ವಲ್ಪವೂ ಗೊಣಗುಟ್ಟದೆ ಪ್ರಸನ್ನವದನರಾಗಿ ಮಾಡಿಕೊಡುತ್ತಾರೆ. ಊರಿನಲ್ಲಿ ನಡೆಯುವ ರಥೋತ್ಸವಗಳಲ್ಲಿ ಅವರ ಓಡಾಟವೇ ಹೆಚ್ಚು. ಪಾನಕಪೂಜೆ ಆಗುವಾಗ ಎಲೆ ಹಾಸಿ, ದೊನ್ನೆ ಕೊಟ್ಟು, ಪಾನಕ, ನೀರು ಮಜ್ಜಿಗೆಯನ್ನು ಬಡಿಸುವುದರಿಂದ ಹಿಡಿದು ಪಾನಕಪೂಜೆಗೆ ಬರದೆ ಇರುವವರನ್ನು ಹೋಗಿ ಕರೆತರುವುದು ತಮ್ಮ ಕೆಲಸವೆಂದು ಅವರು ಭಾವಿಸುವರು. ಊರಿನವರಿಗೆಲ್ಲ ಏನಾದರೂ ವಿಷಯ ತಿಳಿಸುವಂಥಾದ್ದು ಇದ್ದರೆ ಮನೆಮನೆಗೆ ಹೋಗಿ ವಿಚಾರವನ್ನು ತಿಳಿಸುವರು. ಪ್ರತಿ ಶನಿವಾರ ರಾಮಮಂದಿರದಿಂದ ಹೊರಡುವ ರಾಮನ ಮೆರವಣಿಗೆಯಲ್ಲಿ , ಒಬ್ಬನು ರಾಮದೇವರ ಪಠವನ್ನು ಹಿಡಿದುಕೊಂಡರೆ ಇನ್ನೊಬ್ಬನು ಮನೆಮನೆಯ ಮುಂದೆ ಮಂಗಳಾರತಿ ಮಾಡಿ ಪ್ರಸಾದ ಕೊಡುತ್ತಾನೆ. ಒಬ್ಬ ಹುಡುಗ ಪಠದ ಮುಂದುಗಡೆ ದೀಪವನ್ನು ಹಿಡಿದುಕೊಂಡು ಬಂದರೆ ಇನ್ನೊಬ್ಬನು ಜಾಗಟೆಯನ್ನು ಬಾರಿಸುತ್ತಾನೆ. ರಾಮಮಂದಿರದಲ್ಲಿ ಮಾಡುವ ಭಜನೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡು ರಾಗ ರಾಗವಾಗಿ ಹಾಡನ್ನು ಹೇಳುವುದರಲ್ಲಿ ಹುಡುಗರಿಗೆ ಎಲ್ಲಿಲ್ಲದ ಆನಂದ. ಉತ್ಸವ ಆದ ಮೇಲೆ, ರಾಮಮಂದಿರದಲ್ಲಿ ಮಂಗಳಾರತಿ ಆದ ಮೇಲೆ, ಚರುಪನ್ನು ಚಪ್ಪರಿಸಿ ಆಸ್ವಾದಿಸುತ್ತ ಮನೆಗೆ ಬರುವರು.

ಈ ಹುಡುಗರು ಅದು ಎಷ್ಟೇ ಕಷ್ಟದ ಕೆಲಸವಾದರೂ ಸಹಾಯ ಮಾಡುತ್ತಾರೆ. ಒಮ್ಮೆ ಆಚೆ ಬೀದಿಯ ತಿಮ್ಮ ಪಟವಾಡಿಸುತ್ತಿದ್ದಾಗ ಅದು ಹೋಗಿ ಹುಣಸೇಮರದ ತುದಿಗೆ ಸಿಕ್ಕಿಹಾಕಿಕೊಂಡುಬಿಟ್ಟಿತು. ತಿಮ್ಮನು ಅಳುತ್ತ "ನನ್ನ ಪಟ ಹೋಯಿತು" ಎಂದು ಬಂದ. ಇದನ್ನು ನೋಡಿದ ರಂಗನಿಗೆ ಕರುಳು ಚುರುಕ್ ಎನ್ನಿಸಿತು. ಆ ಪಟ ಕಳೆದುಕೊಂಡ ಹುಡುಗ ಬೇರೆ ಜಾತಿಯವನಾದರೇನು? ಅವನೂ ಎಲ್ಲ ಹುಡುಗರಂತೆ ಆಸೆ-ಆಕಾಂಕ್ಷೆಗಳನ್ನು ಹೊಂದಿದವನೇ ಎಂದು ತಿಳಿದ ರಂಗ ಮರವನ್ನು ಹತ್ತಿ ಪಟವನ್ನು ತೆಗೆದುಕೊಡಲು ಹೋದ. ಅಲ್ಲಿದ್ದ ಕೆಲವರು, "ತುದಿಗೊಂಬೆಗೆ ಹೋಗಬೇಡ, ಅಪಾಯ" ಎಂದು ಎಚ್ಚರಿಸಿದರೂ ಎಚ್ಚರಿಕೆಯಿಂದ ಮರವನ್ನು ಹತ್ತಿ ಪಟವನ್ನು ದಾರದ ಸಮೇತ ತೆಗೆದುಕೊಟ್ಟ. ಆಗ ಆ ಹುಡುಗ ತಿಮ್ಮನಿಗೆ ಎಷ್ಟು ಸಂತೋಷವಾಯಿತೋ, ಬಾಯಲ್ಲಿ ಹೇಳಲು ಬರದೆ ಇದ್ದರೂ, ಅವನ ಕಣ್ಣುಗಳ ಹೊಳಪೇ ಅವನ ಕೃತಜ್ಞತೆಯನ್ನು ಸೂಚಿಸುತ್ತಿತ್ತು. ಕೃತಜ್ಞತೆಯನ್ನು ತೋರಿಸಲು ಬೇರೆ ಭಾಷೆ ಬೇಕೇ!

ಒಂದು ಸಲ ಬೇರೆ ಊರಿನಿಂದ ಮದುವೆಗೆಂದು ನೆಂಟರು ಬಂದಿದ್ದರು. ನೆಂಟರು ಎಂದರೆ ದೊಡ್ಡವರ ಜತೆ ಮಕ್ಕಳು, ಹುಡುಗರು ಎಲ್ಲರೂ ಇರಲೇಬೇಕಲ್ಲವೇ? ನಾಲ್ಕೈದು ಜನ ಹುಡುಗರು ಆಟವಾಡುತ್ತ ಹೊಳೆಯ ಕಡೆ ಬಂದರು. ಅವರು ತಮ್ಮ ಊರಿನ ಕೆರೆಯಲ್ಲಿ ಈಜು ಕಲಿತಿದ್ದರು. ತಮಗೆ ಚೆನ್ನಾಗಿ ಈಜು ಬರುತ್ತದೆಯೆಂದೇ ಅವರ ಭಾವನೆ. ಹೊಳೆಯಲ್ಲಿ ಈಜಬೇಕೆಂದು ಅವರಿಗೆ ಮನಸ್ಸಾಯಿತು. ಅಲ್ಲಿದ್ದ ಹಿರಿಯರು "ಹೊಳೆಯಲ್ಲಿ ಕೆಲವು ಕಡೆ ಸೆಳವಿದೆ! ನೋಡಿಕೊಂಡು ಈಜಿ, ದೂರ ಹೋಗಬೇಡಿ" ಎಂದು ಎಚ್ಚರಿಸಿದರು. ಕೆರೆಯಲ್ಲಿ ಈಜುವುದು ಸುಲಭ. ಆದರೆ ಹರಿಯುವ ನೀರಿನಲ್ಲಿ ಈಜುವುದು ಅಷ್ಟು ಸುಲಭವಲ್ಲ. ಆ ಹುಡುಗರು ದಡದ ಹತ್ತಿರದಲ್ಲೇ ಈಜಾಡುತ್ತಿದ್ದರು. ಹೀಗಿರುವಾಗ ಅಲ್ಲಿ ಬಟ್ಟೆ ಒಗೆಯುತ್ತಿದ್ದ ರಂಗಮ್ಮ ಜಾಲಾಡಲು ಸೀರೆಯನ್ನು ನೀರಿನ ಮೇಲೆ ಬಿಟ್ಟರು. ಸೀರೆಯು ಸೆಳವಿನ ಕಡೆಗೆ ಹರಡಿಕೊಂಡಿತು. ಸೀರೆಯನ್ನು ಅಲ್ಲಾಡಿಸುತ್ತ ಎಳೆದುಕೊಳ್ಳುತ್ತಿರುವಾಗ, ರಂಗಮ್ಮನವರು, ಲಕ್ಷಮ್ಮನ ಕೈಯಲ್ಲಿ ಮಾತಾಡುತ್ತ ಆಡುತ್ತ ಅಡ್ಡಜ್ಞಾನದಲ್ಲಿ ಸೀರೆಯ ಕೈಬಿಟ್ಟರು. ತಕ್ಷಣ ಅದು ಅವರಿಗೆ ಗೊತ್ತಾಯಿತು. ನೋಡುತ್ತಾರೆ, ಸೀರೆ ನೀರಿನ ಹರಿವಿನಲ್ಲಿ ಹೊರಟುಹೋಗುತ್ತಿದೆ. "ಅಯ್ಯೋ! ನನ್ನ ಸೀರೆ, ನನ್ನ ಸೀರೆ" ಎಂದು ಕೂಗಿಕೊಂಡರು. "ಸೀರೆ ಹೋದರೆ ನಮ್ಮತ್ತೆ ನನ್ನ ಪ್ರಾಣ ಹಿಂಡಿಬಿಡುತ್ತಾರೆ. ಯಾರಾದರೂ ತೆಗೆದುಕೊಡಿರಪ್ಪಾ" ಎಂದು ಹುಯ್ಲು ಹಾಕಿದರು. ಬೇರೆ ಊರಿನಿಂದ ಬಂದಿದ್ದ ಹುಡುಗರಲ್ಲೊಬ್ಬನಾದ ಕೃಷ್ಣಸ್ವಾಮಿ ಇದನ್ನು ನೋಡಿದ; ಧೈರ್ಯದಿಂದ, ಸೀರೆ ತೇಲುತ್ತಿದ್ದ ಕಡೆಗೆ ಈಜಿಕೊಂಡು ಹೋದ. ಸೀರೆಯನ್ನು ಒಂದು ಕೈಯಲ್ಲಿ ಹಿಡಿದು ಎಳೆದ. ಅದು ಹೇಗೋ ಸೀರೆಯ ಒಂದು ಭಾಗ ಅವನ ಮುಖಕ್ಕೆ ಸುತ್ತಿಕೊಂಡಿತು. ಅದರಿಂದ ಬಿಡಿಸಿಕೊಳ್ಳೋಣವೆಂದು ಇನ್ನೊಂದು ಕೈಯನ್ನು ಎತ್ತಿದ. ಎರಡೂ ಕೈಗಳನ್ನು ಬಿಟ್ಟಿದ್ದು ಆಗ ಅವನಿಗೆ ನೆನಪಾಗಲಿಲ್ಲ. ತಕ್ಷಣ ಅವನು ಮುಳುಗತೊಡಗಿದ. ದಡದಲ್ಲಿ ನಿಂತು ನೋಡುತ್ತಿದ್ದವರು, "ಅಯ್ಯೋ ಅಯ್ಯೋ ! ಆ ಹುಡುಗ ಮುಳುಗಿ ಹೋಗುತ್ತಿದ್ದಾನೆ" ಎಂದು ಕೂಗು ಹಾಕಿದರು. ಆಗತಾನೆ ಬಟ್ಟೆ ಒಗೆಯಲು ಬಂದಿದ್ದ ಮಹಿಷಿ ತಕ್ಷಣ ನೀರಿಗೆ ಧುಮುಕಿ ಈಜಿಕೊಂಡು ಹೋದ. ಅಷ್ಟು ಹೊತ್ತಿಗೆ ಕೃಷ್ಣಸ್ವಾಮಿ ಎರಡು ಸಲ ಮುಳುಗಿ ಮೇಲಕ್ಕೆದ್ದು, ಪ್ರವಾಹದ ಕಡೆಗೆ ತೇಲಿ ಹೋಗುತ್ತಿದ್ದ. ಮಹಿಷಿ ಜೋರು ಜೋರಾಗಿ ಕೈಯನ್ನು ಹಾಕುತ್ತ ರಭಸದಿಂದ ಈಜಿಕೊಂಡು ಹೋದವನೇ ಸೀರೆಯನ್ನು ಜೋರಾಗಿ ಎಳೆದು ಎಸೆದು, ಆಗ ತಾನೇ ಮೇಲಕ್ಕೆ ಕೈ ಎತ್ತಿದ್ದ ಕೃಷ್ಣಸ್ವಾಮಿಯ ಕೂದಲನ್ನು

ಹಿಡಿದು ಎಳೆದುಕೊಂಡು ದಡಕ್ಕೆ ತಂದ; ಚಪ್ಪಡಿಯ ಮೇಲೆ ಬೋರಲಾಗಿ ಮಲಗಿಸಿ ಅವನ ಬೆನ್ನನ್ನು ಅಮುಕಿ ಅಮುಕಿ ಅವನು ಕುಡಿದಿದ್ದ ನೀರನ್ನು ಬಾಯಿಂದ ಹೊರಕ್ಕೆ ಹೊರಡಿಸಿದ. ಸದ್ಯ! ಕೃಷ್ಣಸ್ವಾಮಿ ಬದುಕಿದ. ಆ ಹುಡುಗ ಮದುವೆ ಮನೆಯ ಗಂಡಿನ ಕಡೆಯ ಸೋದರಮಾವನ ಮಗ. ಅವನಿಗೆ ಏನಾದರೂ ಆಗಿದ್ದಿದ್ದರೆ ಮದುವೆಗೆ ವಿಘ್ನವುಂಟಾಗುತ್ತಿತ್ತು. ಆಗ ಹೆಣ್ಣಿನ ಕಡೆಯವರ ಕಷ್ಟ ಕೇಳಬೇಕೇ? ಅಂತೂ ಮಹಿಷಿಯನ್ನು ಎಲ್ಲರೂ ಕೊಂಡಾಡುವವರೇ.

ಒಂದು ಸಲ ಸೌದೆ ತರಲು ವೆಂಕಟೇಶನೂ ಬಂಡೆಯೂ ಪಕ್ಕದ ಕಾಡಿಗೆ ಹೋಗಿದ್ದಾರೆ. ಕಾಡಿನ ಪಕ್ಕದಲ್ಲಿ ಎಂಗಟಪ್ಪನ ಮಗ ಕರಿಯನು ಕುರಿ ಕಾಯುತ್ತಿದ್ದ. ಆ ಕಾಡಿನಲ್ಲಿ ಹುಲಿ, ಚಿರತೆ ಮೊದಲಾದ ದೊಡ್ಡ ಪ್ರಾಣಿಗಳಿಲ್ಲದೇ ಇದ್ದರೂ ಸೀಳುನಾಯಿ, ತೋಳ, ನರಿ ಮೊದಲಾದವು ಇದ್ದುವು. ಬಂಡೆಯೂ, ವೆಂಕಟೇಶನೂ ಸೌದೆಯನ್ನು ಕತ್ತರಿಸಿಕೊಳ್ಳುತ್ತಿದ್ದಂತೆ ದೂರದಿಂದ ಏನೋ ಸದ್ದು ಕೇಳಿಸಿತು. ತಲೆ ಎತ್ತಿ ನೋಡಿದರೆ ತೋಳ ಕುರಿಮಂದೆಯ ಕಡೆಗೆ ಓಡುತ್ತಿದ್ದುದು ಕಾಣಿಸಿತು. ಇದ್ದಕ್ಕಿದ್ದಂತೆ ಕುರಿಗಳು ಚಲ್ಲಾಪಿಲ್ಲಿಯಾಗಿ ಓಡುತ್ತಿರುವುದನ್ನು ಕರಿಯ ನೋಡಿದ. ತೋಳ ಹತ್ತಿರಕ್ಕೆ ಬರುತ್ತಲೂ ಒಂದು ಕುರಿ ಬ್ಯಾ ಬ್ಯಾ ಎಂದು ಅರಚಲಾರಂಭಿಸಿತು. ಆಗ ಕರಿಯ ನೋಡುತ್ತಾನೆ, ತೋಳ ಕುರಿಯನ್ನು ಹಿಡಿಯಲು ಹವಣಿಸುತ್ತಿದೆ. ಕರಿಯ "ತೋಳ ! ತೋಳ !" ಎಂದು ಕೂಗುತ್ತ ಕೋಲನ್ನು ಬೀಸುತ್ತ ಓಡಿದ. ಈ ಹೊತ್ತಿಗೆ ವೆಂಕಟೇಶ ಓಡಿಬಂದದ್ದೇ, ಕುರಿಯ ಕತ್ತಿಗೆ ಬಾಯಿ ಹಾಕಿದ್ದ ತೋಳದ ಕುತ್ತಿಗೆಗೆ ಕೈಗೊಡಲಿಯಿಂದ ಜೋರಾಗಿ ಹೊಡೆದ. ಆ ಏಟನ್ನು ತಿಂದ ತೋಳವು, ಕುರಿಯನ್ನು ಬಿಟ್ಟು ವೆಂಕಟೇಶನ ಕಡೆಗೆ ನುಗ್ಗಿತು. ಯಮಸ್ವರೂಪಿಯಾಗಿ ಕೊಡಲಿಯನ್ನು ಹಿಡಿದು ನಿಂತ ವೆಂಕಟೇಶನನ್ನು ನೋಡಿ ತೋಳ ಹೆದರಿಕೊಂಡು ಓಡಲು ಹವಣಿಸಿತು. ಆದರೆ ವೆಂಕಟೇಶ ಬಿಡಬೇಕಲ್ಲ. ನೆಗೆದದ್ದೇ ಶಕ್ತಿಯನ್ನೆಲ್ಲ ಬಿಟ್ಟು ಕೊಡಲಿಯಿಂದ ಅದರ ಕತ್ತಿಗೆ ಹೊಡೆದ. ತೋಳದ ಕತ್ತು ಕತ್ತರಿಸಿ ಹೋಗಿ ಚಿಲ್ಲನೆ ರಕ್ತ ಹಾರಿತು. ತೋಳ ಕೆಳಕ್ಕೆ ಬಿದ್ದು ವಿಲಿವಿಲಿ ಒದ್ದಾಡಿ ಸತ್ತಿತು. ಊರಿನ ಗೌಡರು ಬಂದು ತೋಳವನ್ನು ಹೊತ್ತುಕೊಂಡು ಹೋಗಿ ಮೆರವಣಿಗೆ ಮಾಡಿದರು. ಅದು ಆ ಕಾಲ. ವೆಂಕಟೇಶ ಅಂದು ಆ ಊರಿನ ಹೀರೋ ಆದ.

ಇಂಥ ಘಟನೆಗಳು ಎಷ್ಟು ನಡೆದಿವೆಯೋ ! ಧೈರ್ಯ, ಸಾಹಸ, ಸಮಯಪ್ರಜ್ಞೆಯಲ್ಲಿ ಸಂಕೇತಿ ಹುಡುಗರು ಯಾರಿಗೂ ಕಡಮೆ ಇಲ್ಲ , ಒಂದು ಕೈ ಮೇಲು ಎಂದರೂ ಸಲ್ಲುತ್ತದೆ.

೧೨. ಕಾವೇರಿ ನದಿಯ ದಡದಲ್ಲಿ

ನನ್ನ ಬಾಲ್ಯದ ಸುಂದರ ಕನಸುಗಳಿಗೆ ಇಂಬು ಕೊಟ್ಟಿದ್ದು ಕಾವೇರಿ ನದಿ. ಕಾವೇರಿ ನದಿಯನ್ನು ತಮಿಳರು ಮತ್ತು ಕರ್ನಾಟಕ ರಾಜ್ಯದ ಜನರು ಪವಿತ್ರನದಿ ಎಂದು ಪೂಜಿಸುವರು. ಸ್ನಾನಮಾತ್ರದಿಂದಲೇ ಸಕಲ ಪಾಪಗಳನ್ನೂ ಬಗೆಹರಿಸುವುದರಿಂದ ಇದು ಪವಿತ್ರವಾದ ನದಿ ಎನಿಸಿಕೊಂಡಿದೆ. ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟಿ, ಮೈಸೂರು ರಾಜ್ಯದಲ್ಲಿ ಹಾದುಹೋಗಿ, ತಮಿಳುನಾಡಿನಲ್ಲಿ ಹರಿದು, ಬಂಗಾಳಕೊಲ್ಲಿಯನ್ನು ಸೇರುವ ಕಾವೇರಿ ನದಿಯ ಉದ್ದ ೪೭೫ ಮೈಲಿಗಳು. ಇದರ ನಾಲೆಗಳ ಉದ್ದ ೧೧೯೦ ಮೈಲಿಗಳು ಎಂದು ಹೇಳಲಾಗುತ್ತದೆ. ಇದು ತಾನು ಹರಿಯುವ ನೆಲದ ಉದ್ದಕ್ಕೂ ಜನ ಜಾನುವಾರುಗಳಿಗೆ ನೀರನ್ನು ಕೊಟ್ಟು ತಣಿಸುವುದಲ್ಲದೆ ಸಾವಿರಾರು ಲಕ್ಷ ಹೆಕ್ಟೇರುಗಳ ಜಮೀನಿಗೆ ನೀರುಣಿಸಿ ಜೀವನದಾಯಕವಾಗಿದೆ. ನೀರಿಗೆ 'ಜೀವನ' ಎಂಬ ಹೆಸರಿದೆ. ಜನರ ಜೀವನಕ್ಕೆ ನೀರು ಎಷ್ಟು ಆವಶ್ಯಕ ಎಂಬುದನ್ನು ಅರಿತರೆ 'ಜೀವನ' ಎಂಬ ಹೆಸರನ್ನು ಕೊಟ್ಟಿರುವುದರ ಸಾರ್ಥಕತೆಯ ಅರಿವಾಗುತ್ತದೆ. ತನ್ನಲ್ಲಿ ಮೀಯುವ ಅಸಂಖ್ಯಾತ ಯಾತ್ರಿಕರಿಂದ ಬಂದ ಪಾಪದ ಪರಿಹಾರಾರ್ಥವಾಗಿ, ಗಂಗೆಯೇ ವರ್ಷಕ್ಕೊಮ್ಮೆ ತುಲಾಸಂಕ್ರಮಣದಲ್ಲಿ ಕಾವೇರಿಯ ಉಗಮಸ್ಥಾನದಲ್ಲಿ ಮೀಯುತ್ತಾಳೆಂಬುದು ಆ ಸುತ್ತಿನ ಜನರ ನಂಬಿಕೆ. ಇದರಿಂದಲೋ ಏನೋ ಕಾವೇರಿ ನದಿಗೆ 'ದಕ್ಷಿಣ ಗಂಗಾ' ಎಂಬ ಹೆಸರು ಕೂಡ ಬಂದಿರುವುದು. ಕಾವೇರಿ ನದಿಯ ನೀರಿನಲ್ಲಿ ಮಿಂದು ಪರಿಶುದ್ಧಾಗಿ ಅದರ ನೀರನ್ನು ಕುಡಿದು ಪಾವನರಾಗುವ ನಮ್ಮ ಜನರ ಭಕ್ತಿ ಕೃತಜ್ಞತೆಗಳೇ, ಕಾವೇರಿಯನ್ನು ಗಂಗೆಗೆ ಹೋಲಿಸಿ ಪೂಜಿಸಲು ಕಾರಣ ಎನ್ನುವುದರಲ್ಲಿ ಸಂದೇಹವಿಲ್ಲ. ಹೆಂಗಸರು ಕಾವೇರಿ ನದಿಗೆ ಹೋಗಿ ತುಂಬು ಭಕ್ತಿಶ್ರದ್ಧೆಗಳಿಂದ ಗಂಗಾಪೂಜೆ ಮಾಡುತ್ತಾರೆ, ದೀಪವನ್ನು ಹಚ್ಚಿ ತೇಲಿಬಿಡುತ್ತಾರೆ. ಅವರ ದೃಷ್ಟಿಯಲ್ಲಿ ಕಾವೇರಿ ಮಾತೆ ಒಬ್ಬ ದೇವತೆ.

ನಮ್ಮ ಊರಿನ ಪಕ್ಕದಲ್ಲಿಯೇ ಹರಿಯುವ ಕಾವೇರಿ ನದಿಯ ದಡದ ವೈಶಿಷ್ಟ್ಯವೇ ಬೇರೆ. ನದಿಯ ದಡದ ಉದ್ದಕ್ಕೂ ಊರು

ಬೆಳೆದಿದೆ. ನದಿಗೆ ಸಮಾನಾಂತರವಾಗಿ ಬೀದಿಗಳಿವೆ. ನದಿಯ ತೀರಕ್ಕೆ ಸಮೀಪವಾಗಿರುವ ಸಾಲುಮನೆಗಳ ಮುಂಭಾಗ ರಸ್ತೆಗೆ ಎದುರಾಗಿದ್ದು , ಮನೆಗಳ ಹಿಂಭಾಗವು ನದಿಯ ಕಡೆಗಿದೆ. ನದಿಯ ಕಡೆಗೆ ಮುಖ ಮಾಡಿ ಮನೆಗಳನ್ನು ಕಟ್ಟಿಕೊಂಡು ಮನೆಯ ಬಾಗಿಲಿನಿಂದ ನದಿಯ ಸೌಂದರ್ಯವನ್ನು ಕಾಣಬೇಕೆಂಬ ಪ್ರಕೃತಿ ಸೌಂದರ್ಯ ಪ್ರಜ್ಞೆ, ಹಳ್ಳಿಯ ಜನಗಳಿಗಿರುವುದಿಲ್ಲ. ಆದರೆ ನದಿಯು ಜನಜೀವನದ ಒಂದು ಭಾಗವಾಗಿಬಿಟ್ಟಿರುತ್ತದೆ. ನದಿಯೇ ಬೇರೆ ನಾವೇ ಬೇರೆ ಎಂಬ ಭಾವನೆ ಅವರಿಗಿರುವುದಿಲ್ಲ. ನದಿ ಅವರ ದಿನನಿತ್ಯದ ಆವಶ್ಯಕತೆಗಳಿಗೆ ಪೂರಕವಾದುದು. ಅವರ ನಿತ್ಯಜೀವನದ ಎಷ್ಟೋ ದಿನಚರಿಗಳಿಗೆ ನದಿಯೇ ಆಸರೆ. ನಮ್ಮ ಊರಿನ ಉದ್ದಕ್ಕೂ ಹರಿಯುವ ಕಾವೇರಿ ನದಿಯ ತೀರವು ಸುಮಾರು ಮುಕ್ಕಾಲು ಮೈಲಿ ಉದ್ದವಾಗಬಹುದು. ಜನಜೀವನದ ಹಲವು ಹನ್ನೊಂದು ವ್ಯಾಪಾರಗಳಿಗೆ ನದಿ ಆಗರವಾಗಿದೆ. ಊರಿನ ಮೇಲುಗಡೆಗೆ ನದಿಯ ತೀರಕ್ಕೆ ಹೋದರೆ ಮೊದಲು ದೊರೆಯುವುದು ಹರಿಗೋಲಿನ ಕಡವು. ಪ್ರವಾಹ ಬಂದಾಗ ನದಿದಾಟುವ ಸಮಯದಲ್ಲಿ ಮಾತ್ರ ನಮ್ಮ ಊರಿನ ಅಂಬಿಗರು ಹರಿಗೋಲನ್ನು ನಡೆಸುತ್ತಾರೆ. ಉಳಿದ ಸಮಯದಲ್ಲಿ ಅವರು ವ್ಯವಸಾಯವೇ ಮೊದಲಾದ ಕಸುಬಿನಲ್ಲಿ ತೊಡಗಿರುತ್ತಾರೆ. ನಮ್ಮ ಕಾಲದಲ್ಲಿ ಅಂಬಿಗರು ನದಿ ದಾಟಿಸುವುದಕ್ಕಾಗಿ ನದಿಯ ದಡದ ಹಳ್ಳಿಗಳ ಜನರಿಂದ ಯಾವ ರುಸುಮನ್ನೂ ವಸೂಲುಮಾಡುತ್ತಿರಲಿಲ್ಲ. ಬತ್ತ ಬಡಿಯುವ ಕಾಲದಲ್ಲಿ ಕಣಕಣಗಳಿಗೆ ಹೋಗಿ ಬತ್ತವನ್ನು ವಸೂಲು ಮಾಡುತ್ತಿದ್ದರು. ಗೌರಿಹಬ್ಬದ ಸಮಯದಲ್ಲಿ ಮನೆಮನೆಗೆ ಬಂದು ತೆಂಗಿನಕಾಯನ್ನು ವಸೂಲು ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಪರಸ್ಪರ ಸಹಕಾರದಿಂದ ಜೀವನ ನಿರ್ವಹಣೆಯಾಗುತ್ತಿತ್ತು. ಹರಿಗೋಲು ನಡೆಯುವ ಸಮಯದಲ್ಲಿ ಮಾತ್ರ ಜನ ಇತ್ತಕಡೆ ಹೆಚ್ಚಾಗಿ ಓಡಾಡುತ್ತಾರೆ. ಕೇವಲ ದನ ಕಾಯುವವರು ಮತ್ತು, ನದಿಯದಡದಲ್ಲಿ ಇರುವ ಹೊಲಗಳಿಗೆ ಹೋಗುವವರನ್ನು ಬಿಟ್ಟರೆ ವರ್ಷದ ಉಳಿದ ಸಮಯಗಳಲ್ಲಿ ಯಾರೂ ಹೆಚ್ಚಾಗಿ ಇತ್ತಕಡೆ ಸುಳಿಯುವುದಿಲ್ಲ. ಹರಿಗೋಲಿನ ಕಡವಿಗೆ ಇತ್ತಕಡೆ ಹೊಳಸಾಳಮ್ಮನ ಗುಡಿ ಇದೆ. ಈ ಅಮ್ಮ ನಮ್ಮ ಊರಿನ ರಕ್ಷಕ ದೇವತೆ. ಇದು ದೊಡ್ಡ ದೇವಾಲಯವೇನಲ್ಲ; ಒಂದು ಚಿಕ್ಕ ಗುಡಿ. ಚಚ್ಚೌಕದಾಕಾರದ ಈ ಗುಡಿಯ ಒಳಕ್ಕೆ ಪೂಜೆ ಮಾಡಲು ಪೂಜಾರಿ ಒಬ್ಬ ಮಾತ್ರ ನುಸುಳಿಕೊಂಡು ಹೋಗಬಹುದಾದಂಥ ಬಾಗಿಲು; ಗುಡಿಯ ಮೇಲುಗಡೆ ಸಣ್ಣ ಗೋಪುರ. ಯುಗಾದಿಯ ಸಮಯದಲ್ಲಿ ಇಲ್ಲಿ ದೊಡ್ಡ ಹಬ್ಬವಾಗುತ್ತದೆ. ಆಗ ಸುಮಾರು ಮೂರು ದಿನಗಳ ಕಾಲ ಹಗಲೂ ರಾತ್ರಿ ಕೊಂಬು, ಕಹಳೆ, ತಮಟೆಗಳ ಭೋರ್ಗರೆತ ಇರುತ್ತದೆ. ಆ ಸಮಯದಲ್ಲಿ ಅಮ್ಮನ ಶಾಂತಿಗಾಗಿ ಆಡುಗಳನ್ನು ಬಲಿ ಕೊಡಲಾಗುತ್ತಿತ್ತು.

ಮುಂದೆ ಬಂದರೆ ಬೇರೆ ಬೇರೆ ಜನಾಂಗದವರ ಕಡವುಗಳಿವೆ. ಮೊದಲು ಅಯ್ಯಂಗಾರ್ಯರ ಕಡವು. ಇಲ್ಲಿ ಅವರು ಸ್ನಾನ, ಸಂಧ್ಯಾವಂದನೆ, ಜಪ, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು ಮುಂತಾದ ದಿನಚರಿಗಳಲ್ಲಿ ತೊಡಗಿರುತ್ತಾರೆ. ಅಲ್ಲಿಂದ ಮುಂದೆ ಬಂದರೆ ಸಾಲೆಯವರ ಕಡವು. ದಾರದ ಲಡಿಗಳನ್ನು ನೀರಿನಲ್ಲಿ ಲಟ್ಟಿಸಿ ಸಮಮಾಡುವುದು, ಅವುಗಳಿಗೆ ಬಣ್ಣ ಹಾಕುವುದು ಮೊದಲಾದ ಕಾರ್ಯಗಳನ್ನು ಅಲ್ಲಿ ಕಾಣಬಹುದು. ನಮ್ಮ ಊರಿನಲ್ಲಿ ನೂರಾರು ಕೈಮಗ್ಗಗಳಿವೆ. ಸಾಲೆಯವರ ಕಸುಬು ಸೀರೆ-ಧೋತರ ಮೊದಲಾದವುಗಳನ್ನು ನೇಯುವುದು. ಕೆಲವರಿಗೆ ಜಮೀನೂ ಇದೆ. ಇಂಥವರು ಎರಡು ಕಸುಬನ್ನೂ ನಡೆಸಿಕೊಂಡು ಹೋಗುತ್ತಾರೆ. ಹೆಂಗಸರು ಮಿರುಮಿರುಗುವ ಹಿತ್ತಾಳೆ ಚೌರಿಗೆಗಳಲ್ಲಿ ನೀರನ್ನು ತುಂಬಿಕೊಂಡು ತಲೆಯಮೇಲೆ ಹೊತ್ತುಕೊಂಡು ಸಾಲಾಗಿ ಹೋಗುವ ದೃಶ್ಯವೇ ಒಂದು ಸೊಗಸು. ಮುಂದಿನ ಕಡವುಗಳು ಮುಸಲ್ಮಾನರವು, ಒಕ್ಕಲಿಗರವು, ಉಪ್ಪಾರರವು. ಇದರ ಅನಂತರವೇ ಸೋಪಾನಗಳಿರುವ ಬ್ರಾಹ್ಮಣರ ಕಡವು ಇರುವುದು. ಸಾಮಾನ್ಯವಾಗಿ ನದಿಯಲ್ಲಿ ಗಂಡಸರು ಸ್ನಾನಮಾಡುವುದು, ಬಟ್ಟೆ ಒಗೆಯುವುದು ಹಾಗೂ ಎತ್ತುಗಳನ್ನು ತೊಳೆಯುವುದು ಮೊದಲಾದ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಪಾತ್ರೆಗಳನ್ನು ತೊಳೆದುಕೊಂಡು, ಸೀರೆ ಸೆಣೆದು, ಚೌರಿಗೆಗಳಿಗೆ ನೀರನ್ನು ತುಂಬಿಕೊಂಡು ತಲೆಯ ಮೇಲೆ ಒಂದನ್ನು ಇಟ್ಟುಕೊಂಡು, ಕಂಕುಳಲ್ಲಿ ಇನ್ನೊಂದನ್ನು ಇರುಕಿಕೊಂಡು, ಹೆಗಲ ಮೇಲೆ ಸೆಣೆದ ಸಾಲೆಗಳನ್ನು ಹಾಕಿಕೊಂಡು ನಿಧಾನವಾಗಿ ನಡೆದು ಹೋಗುವ ಗಜಗಮನೆಯರ ಠೀವಿಯೇ ಬೇರೆ. ಹೇಗೆ ನೋಡಿದರೂ ನದಿಯ ದಡವು, ಊರಿನ ಜನರ ಜೀವನಾಡಿಯಾಗಿದೆ.

ಅಯ್ಯಂಗಾರ್ಯರ ಕಡವು ಎಲ್ಲ ಕಡವುಗಳಂತಿಲ್ಲದೆ ಅದರಲ್ಲಿ ಒಂದು ವೈಶಿಷ್ಟ್ಯವಿದೆ. ಅದು ನದಿಯೊಳಕ್ಕೆ ಚಾಚಿದ ಒಂದು ಪುಟ್ಟ ಗುಡ್ಡ, ಗುಡ್ಡದ ಮೇಲುಗಡೆ ಬಂಡೆಗಳು, ಬಂಡೆಗಳ ತುದಿಯಲ್ಲಿ ಒಂದು ಪುಟ್ಟ ಗುಡಿ. ಚೆನ್ನಾಗಿ ಸುಣ್ಣದ ಲೇಪನ ಮಾಡಿ ಅಚ್ಚುಕಟ್ಟಾಗಿ ಇಟ್ಟಿರುವುದರಿಂದ ಅದರ ಧವಳತೆಯೇ ದೂರದೂರಕ್ಕೆ ಎದ್ದು ಕಾಣಿಸುತ್ತದೆ. ಆ ಗುಡಿಗೆ ಛತ್ರಿ ಹಿಡಿದಂತೆ ಗುಡ್ಡದ ನೆತ್ತಿಯನ್ನು ಒಂದು ಮರ ಅಲಂಕರಿಸಿದೆ. ಗುಡ್ಡದ ಪಕ್ಕದಲ್ಲೇ ಹೋದರೆ ಮುಂದುಗಡೆ ನದಿಯ ಸ್ನಾನಘಟ್ಟ. ಈ ಸ್ನಾನಘಟ್ಟಕ್ಕೆ

ಸಮೀಪದಲ್ಲಿ ನೀರು ತುಂಬ ಆಳ. ಈ ನೀರಿನ ಆಳದಲ್ಲಿ ಒಂದು ಕಂಚಿನ ತೇರು ಮುಳುಗಿದೆಯಂತೆ. ಹಿಂದೆ ಈ ತೇರಿನಲ್ಲಿ ದೇವತೆಗಳು ಶ್ರೀನಿವಾಸ ದೇವರನ್ನು ಕೂರಿಸಿ ಎಳೆಯುತ್ತ ವೈಭವದಿಂದ ರಥೋತ್ಸವ ಮಾಡುತ್ತಿದ್ದರಂತೆ. ಊರ ಮುಂದುಗಡೆಯಲ್ಲಿ ಇರುವ ಶ್ರೀನಿವಾಸ ದೇವರ ಗುಡಿ ಇದಕ್ಕೆ ಸಾಕ್ಷಿ ಎನ್ನುತ್ತಾರೆ. ಕಲಿಯುಗದಲ್ಲಿ ಭಕ್ತರ ಉದ್ಧಾರವಾಗಲಿ ಎಂದು ದೇವತೆಗಳೇ ಅಲ್ಲಿ ಶ್ರೀನಿವಾಸ ದೇವರನ್ನು ಪ್ರತಿಷ್ಠಾಪಿಸಿದರು ಎಂದು ತೀವ್ರ ನಂಬಿಕೆಯುಳ್ಳ ಭಕ್ತರು ಹೇಳುತ್ತಾರೆಂದು ಕೇಳಿದ್ದೇನೆ. ಹೀಗೆ ಶ್ರೀನಿವಾಸನನ್ನು ಗುಡಿಯಲ್ಲಿ ಪ್ರತಿಷ್ಠಾಪಿಸಿದ ಮೇಲೆ ಕಂಚಿನ ತೇರನ್ನು ನದಿಯ ಆಳದಲ್ಲಿ ಮುಳುಗಿಸಿ ಮಾಯವಾಗಿಬಿಟ್ಟರಂತೆ. ಧೈರ್ಯಶಾಲಿಗಳು ಬೇಸಿಗೆಯ ಕಾಲದಲ್ಲಿ ಈಜುತ್ತಾಹೋದಾಗ ಸೂರ್ಯನ ಬಿಸಿಲಿಗೆ ತೇರು ಹೊಳೆಯುತ್ತಿರುವುದನ್ನು ಕಂಡದ್ದಾಗಿ ಹೇಳಿದ್ದಾರೆ. ಆದರೆ ಯಾರೂ ಮುಳುಗಿ ಅದನ್ನು ಪರೀಕ್ಷಿಸಿ ನೋಡಿಲ್ಲ.

ಈ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ರಂಗಾಚಾರ್ ಎಂಬ ಹಿರಿಯರು ತುಂಬ ಸಂತಾಪದಿಂದ ಈ ಕಥೆಯನ್ನು ಹೇಳಿದ್ದರಂತೆ. ಎಷ್ಟು ಹಿಂದೆ ನಡೆದ ಘಟನೆ ಇದು ಎಂಬುದು ಗೊತ್ತಿಲ್ಲ.

ಹಿಂದೆ ಆಳ್ವಾರ್ ಎಂಬ ಗಟ್ಟಿಮುಟ್ಟಾದ ಯುವಕನೊಬ್ಬನಿದ್ದನಂತೆ. ಒಂದು ಸಲ ನದಿಗೆ ಸ್ನಾನಕ್ಕೆ ಬಂದಿದ್ದಾಗ ಅವನಿಗೂ ಅವನ ಸ್ನೇಹಿತರಿಗೂ ಜಿದ್ದು ಬಂದಿತಂತೆ. "ಲೋ ಆಳ್ವಾರು, ಅದೇನು ಮಹಾಶೂರ ನಾನು ಎಂದು ಕೊಚ್ಚಿಕೊಳ್ಳುತ್ತೀಯೋ! ಪ್ರವಾಹ ಬಂದಾಗ ಕಾವೇರಿ ನದಿಯನ್ನು ಈಜಿಕೊಂಡು ದಾಟುತ್ತೇನೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತೀಯೆ. ಇಷ್ಟು ದಿವಸ ಆಯಿತು, ಹೊಳೆಯಲ್ಲಿ ಮುಳುಗಿರುವ ಕಂಚಿನ ತೇರನ್ನು ಮಾತ್ರ ನೀರಿನಲ್ಲಿ ಈಜಿಕೊಂಡು ಹೋಗಿ ನೋಡಿಕೊಂಡು ಬಂದಿಲ್ಲ. ನಿಂದೆಲ್ಲ ಬರೀ ಬಾಯಿ ಜಂಬ" ಎಂದು ಶಾಮು ಹಂಗಿಸಿದ. ಅದಕ್ಕೆ ಆಳ್ವಾರು, "ಲೋ ಶಾಮು, ನಮ್ಮ ಊರಿನ ಹಿರಿಯರಾದ ರಂಗಾಚಾರ್ರು ಇಲ್ಲವೇನೋ, ಅವರು ಹೇಳುತ್ತಾ ಇದ್ದರು, ದೇವತೆಗಳದು ಆ ಕಂಚಿನ ತೇರು. ಅದರ ರಹಸ್ಯವನ್ನು ಭೇದಿಸಲು ಹೋಗಬಾರದು. ಭಯಂಕರವಾದ ಸರ್ಪದ ಮುಖದ ದೇವತೆಗಳು, ಹುಲಿ ಮುಖದ ದೇವತೆಗಳು ಅದಕ್ಕೆ ಕಾವಲಿರುತ್ತಾರೆ. ಯಾರಾದರೂ ರಹಸ್ಯ ತಿಳಿಯಲು ಹೋದರೆ ಅವರು ಹಿಂದಿರುಗಿ ಬರುವುದಿಲ್ಲ" ಎಂದ. ರಂಗಾಚಾರ್ ಮಹಾ ಭಗವದ್ಭಕ್ತರು, ಒಳ್ಳೆಯ ಕೀರ್ತನಕಾರರು; ಒಂದೊಂದು ಸಲ ಶ್ರೀನಿವಾಸ ದೇವರೆದುರಿಗೆ ಧ್ಯಾನಮಾಡುತ್ತ ಕುಳಿತು ಸಮಾಧಿಸ್ಥರಾಗಿ ಬಿಡುತ್ತಿದ್ದರು. ಅವರು ಮಹಾಗಟ್ಟಿಗರು, ಒಳ್ಳೆಯ ಈಜುಗಾರರು. ಒಂದೊಂದು ಸಲ ಈಜುತ್ತ ಆಳದ ಜಾಗದ ಕಡೆಗೆ ಹೋಗಿ ಕೈಮುಗಿದು ಬರುತ್ತಿದ್ದರು. "ಅವರ ದೇವಗಣ್ಣಿಗೆ ಎಲ್ಲವೂ ಕಾಣುತ್ತಿದ್ದಿತಂತೆ. ತೇರಿನ ನಡುವೆ ಅತ್ಯಂತ ಸುಂದರವಾದ ದೇವರ ವಿಗ್ರಹವಿದೆಯಂತೆ. ದೇವತೆಗಳು, ಜಲದೇವತೆಗಳು, ಪಾತಾಳಲೋಕದವರು, ಚಾಮರ ಹಾಕುತ್ತ ದೇವರಿಗೆ ಸೇವೆ ಸಲ್ಲಿಸುತ್ತಿರುವರಂತೆ. ಆದುದರಿಂದ ಅವರು 'ಏನೇ ಆದರೂ ಆ ಕಡೆ ಯಾರೂ ಈಜಲು ಹೋಗಬೇಡಿ' ಎಂದು ಎಚ್ಚರಿಸಿದ್ದರು." "ಎಲ್ಲೋ ಹೆದರುಪುಕ್ಕಲು. ರಂಗಾಚಾರ್ರು ಹೇಳಿದರಂತೆ, ನೀನು ಕೇಳಿದೆಯಂತೆ. ಅಲ್ಲಿ ತೇರೂ ಇಲ್ಲ , ಏನೂ ಇಲ್ಲ. ಬಿಸಿಲಿನ ಪ್ರಕಾಶ ನೀರಿನಲ್ಲಿ ಕಂಚಿನ ಬಣ್ಣದಂತೆ ಫಳಫಳ ಹೊಳೆಯುತ್ತದೆ ಅಷ್ಟೆ. ನಾನು ಒಂದೊಂದು ಸಲ ಈಜುತ್ತ ಆ ಕಡೆ ಹೋಗಿ ನೋಡಿಲ್ಲವೇ. ಬುರ್ರೆ, ಹಿಂದಿನವರು ಏನೇನೋ ಕಥೆ ಕಟ್ಟಿದ್ದಾರೆ ಅಷ್ಟೆ" ಎಂದ ಶೆಲ್ವಪಿಳ್ಳೆ. "ಬಾರೋ ಬಾರೋ ನಾವೂ ಬರ್ತೀವಿ ಜತೇಗೆ" ಎಂದ ಸಂಪತ್ತು. ಮಧ್ಯಾಹ್ನದ ಹನ್ನೆರಡು ಗಂಟೆ, ಎಲ್ಲರೂ ಈಜು ಬಿದ್ದರು. ಗಲಾಟೆಮಾಡುತ್ತ, ಕೂಗುಹಾಕುತ್ತ ನದಿಯ ಆಳದ ಕಡೆಗೆ ಹೋದರು. ಬೇಸಗೆಯಾದ್ದರಿಂದ ನೀರಿನ ಸೆಳವು ಇರಲಿಲ್ಲ. ಮಡುವಿನ ಜಾಗದಲ್ಲಿ ನೀರು ನಿಂತಿರುವಂತೆ ತೋರುತ್ತಿತ್ತು. ಹಿರಿಯರೆಲ್ಲ ಬಂದು ಬೆಳಗ್ಗೆ ಸ್ನಾನಾದಿಗಳನ್ನು ಮಾಡಿಕೊಂಡು ಹೊರಟುಹೋಗಿದ್ದರಿಂದ ಸ್ನಾನಘಟ್ಟದಲ್ಲಿ ಬೇರೆ ಯಾರೂ ಇರಲಿಲ್ಲ. ಮಡುವಿನ ಬಳಿಗೆ ಬಂದಾಗ ನೀರಿನಲ್ಲಿ ಸೂರ್ಯರಶ್ಮಿ ಪ್ರತಿಫಲಿಸುತ್ತಿತ್ತು. ಎಲ್ಲರೂ ನೀರಿನೊಳಕ್ಕೆ ತಲೆ ಮುಳುಗಿಸಿ ನೋಡಿದರು. "ನಾನು ಹೇಳಿದಂತೆ ಸೂರ್ಯರಶ್ಮಿಯ ಪ್ರಕಾಶ ಅಷ್ಟೆ ಅಲ್ಲಿರುವುದು. ಸುಮ್ಮನೆ ಹೆದರಿಸುತ್ತೀರ" ಎಂದ ಶೆಲ್ವಪಿಳ್ಳೆ. "ಇಲ್ಲಾ ಕಣೋ, ಆಳದಲ್ಲಿ ಏನೋ ಹೊಳೆಯುವಂತೆ ಕಾಣುತ್ತದೆ ನೋಡೋ ಶೆಲ್ವಪಿಳ್ಳೆ" ಎಂದ ಆಳ್ವಾರು. ಇಷ್ಟು ಹೊತ್ತಿಗೆ ರಾಮಾನುಜ ಆಗಲೇ ಗಾಬರಿಯಾಗಿದ್ದ. "ಇದ್ಯಾಕಪ್ಪ ನಮಗೆ ಇದರ ಗೋಜು, ಬನ್ರೋ, ಬನ್ರೋ, ಹಿರಿಯರ ಮಾತನ್ನು ಮೀರಿದರೆ ಒಳ್ಳೆಯದಾಗುವುದಿಲ್ಲ" ಎಂದು ಎಚ್ಚರಿಸಿದ. "ಎಲ್ಲೋ ಹೆದರುಪುಕ್ಕ ನೀನು, ವಾಪಸ್ಸು ಹೋಗೋ!" ಎಂದ ಶಾಮು. ಉಳಿದವರೂ ದನಿಗೂಡಿಸಿದರು. ರಾಮಾನುಜ ವಾಪಸು ಬಂದುಬಿಟ್ಟ. "ಲೋ ಆಳ್ವಾರು, ನೀನು ಚೆನ್ನಾಗಿ ಮುಳುಗು ಹಾಕುತ್ತೀಯೆ. ಒಂದು ಮುಳುಗು ಹಾಕಿ ನೋಡೋ. ನಾವು ಇಲ್ಲೇ ಮೇಲೆ ಈಜುತ್ತ ನೋಡುತ್ತಿರುತ್ತೇವೆ" ಎಂದರು ಎಲ್ಲರೂ. "ಬೇಡಪ್ಪ, ನನಗೆ ಅಲ್ಲಿ ಏನೇನೋ ಕಂಡ ಹಾಗಾಯಿತು" ಎಂದ ಆಳ್ವಾರು. "ಸುಮ್ಮಸುಮ್ಮನೆ ಬುರುಡೆ ಬಿಡಬೇಡ. ಹೋಗಿ

ನೋಡೋ ಎಂದರೆ..... ನಾನು, ಸಂಪತ್ತು, ಪಾಚು ಇಲ್ಲಿರುವಾಗ ನಿನಗೇನೋ ಭಯ? ಪಾಚು ಈಜಿನಲ್ಲಿ ನಿಸ್ಸೀಮ. ನಿನಗೆ ಹೆದರಿಕೆಯಾದರೆ ಕೈ ಜೋರಾಗಿ ಅಲ್ಲಾಡಿಸಿ ಸಂಜ್ಞೆ ಮಾಡು. ಪಾಚು ನಿನ್ನನ್ನು ಎಳೆದುಕೊಂಡು ಬರುತ್ತಾನೆ. ನಾವು ಸಹಾಯ ಮಾಡುತ್ತೇವೆ'' ಎಂದ ಶಾಮು. ಎಲ್ಲರೂ ಆಳ್ವಾರುವಿಗೆ ಧೈರ್ಯಕೊಟ್ಟರು. ಆಳ್ವಾರುವಿಗೆ ಗೆಳೆಯರನ್ನು ಮೀರಲು ಧೈರ್ಯ ಬರಲಿಲ್ಲ. ಅವನು ನೀರಿನಲ್ಲಿ ಮುಳುಗು ಹಾಕಿ ಅಲ್ಲಲ್ಲಿ ನೋಡುತ್ತಿದ್ದುದ್ದು ಮೇಲಿನವರಿಗೆ ಕಾಣುತ್ತಿತ್ತು. ಇದ್ದಕ್ಕಿದ್ದ ಹಾಗೆ ಆಳ್ವಾರು ಇವರ ಕಣ್ಣಿಗೆ ಕಾಣಲಿಲ್ಲ. ಇತರರು ಅಲ್ಲಲ್ಲೇ ಮುಳುಗು ಹಾಕಿ ರೆಪ್ಪೆ ಅಗಲಿಸಿಕೊಂಡು ನೋಡಿದರು. ಆಳ್ವಾರು ಕಾಣಿಸಲಿಲ್ಲ. ''ಲೋ ಪಾಚೂ, ಮುಳುಗು ಹಾಕಿ ನೋಡೋ, ಆಳ್ವಾರು ಕಾಣಿಸುತ್ತಿಲ್ಲ'' ಎಂದ ಶೆಲ್ವಪಿಳ್ಳೆ. ಪಾಚು ಸ್ವಲ್ಪ ಆಳದಲ್ಲಿ ಮುಳುಗಿ ಅಲ್ಲಲ್ಲಿ ಹುಡುಕಾಡಿ ನಿರಾಶನಾಗಿ ಮೇಲಕ್ಕೆ ಬಂದು, ''ಆಳ್ವಾರು ಎಲ್ಲಿಯೂ ಕಾಣುವುದಿಲ್ಲ. ನನಗೆ ಭಯವಾಗುತ್ತಮ್ಮ. ಬನ್ನಿ ವಾಪಸು ಹೋಗೋಣ'' ಎಂದ. ''ಈಗ ಏನು ಮಾಡುವುದು, ಹಿರಿಯರಿಗೆ ಏನು ಹೇಳುವುದು'' ಎಂದು ಭಯಗೊಂಡ ಶೆಲ್ವಪಿಳ್ಳೆ. ''ಏನು ಮಾಡೋಣವೋ ಈಗ? ಹಿರಿಯರ ಮಾತು ಮೀರಿ ಆಳ್ವಾರೂನ ಕಳೆದುಕೊಂಡ ಹಾಗಾಯಿತು. ನಾವೇ ಅವನ ಸಾವಿಗೆ ಕಾರಣವಾದ ಹಾಗಾಯಿತಲ್ಲ. ಇನ್ನು ನಮಗೆ ಇನ್ನಾವ ವಿಪತ್ತು ಕಾದಿದಿಯೋ, ಬನ್ನಿ. ಹೋಗಿ ಹಿರಿಯರಿಗೆ ಹೇಳೋಣ'' ಎಂದ ಶಾಮು. ''ನಾನು ಮತ್ತು ಶೆಲ್ವಪಿಳ್ಳೆ ಇಲ್ಲಿ ದಡದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತೇವೆ. ನೀನು ಊರಿಗೆ ಓಡಿ ಹೋಗಿ ಹೇಳು'' ಎಂದ ಪಾಚು. ಶಾಮು ಊರಿಗೆ ಓಡಿದ. ಅಷ್ಟು ಹೊತ್ತಿಗೆ ರಾಮಾನುಜ ಊರಿಗೆ ಹೋಗಿ ಅವರ ತಂದೆಯನ್ನು ಕರೆದುಕೊಂಡು ಬಂದ. ಆಮೇಲೆ ಉಳಿದ ಹಿರಿಯರೂ, ಆಳ್ವಾರು ತಂದೆಯೂ ಎದೆಎದೆ ಬಡಿದುಕೊಂಡು ಧಾವಿಸಿ ಬಂದರು. ಎಷ್ಟು ಹೊತ್ತು ಕಾದರೂ ಆಳ್ವಾರು ಮೇಲೆ ಬರಲಿಲ್ಲ. ಆಳ್ವಾರುವಿನ ಗೆಳೆಯರೆಲ್ಲ, ''ಆಳ್ವಾರು ಇನ್ನಿಲ್ಲ, ಕಂಚಿನ ತೇರು'' ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದರು.

ಕ್ಷಮಿಸಿ, ನನ್ನ ಊರು ಯಾವುದು ಎಂದು ಹೇಳಲೇ ಇಲ್ಲವಲ್ಲ. ಹಾಸನಜಿಲ್ಲೆಯ ಅರಕಲಗೂಡು ತಾಲೂಕಿನ ಕಾವೇರಿ ನದಿಯ ದಡದಲ್ಲಿರುವ ಕೇರಳಾಪುರವೇ ನನ್ನ ಜನ್ಮಕ್ಕೂ ನನ್ನ ವಿಕಾಸಕ್ಕೂ ಕಾರಣವಾದ ಪ್ರೀತಿಯ ಊರು. ಈಗ ನಿಮಗೆ ಅರ್ಥವಾಗಿರಬೇಕು ನಾನು ವರ್ಣಿಸಿರುವ ಸ್ಥಳಗಳು.

□ □ □

ರಾತ್ರಿಯ ಕಾಲದಲ್ಲಿ ನಮ್ಮ ಹಳ್ಳಿಗಳ ಜನರು ನದಿಯೊಡನೆ ಹೆಚ್ಚಿನ ಸಂಬಂಧವನ್ನು ಹೊಂದಿರುವುದಿಲ್ಲ. ಆ ಸಂಪರ್ಕ ಹೆಚ್ಚಾಗಿ ಹಗಲಿನಲ್ಲಿಯೇ. ಆದರೆ ತುರ್ತಾಗಿಯೋ, ಅಗತ್ಯವಾಗಿಯೋ ಬೇರೆ ಊರಿಗೆ ಹೋಗಬೇಕಾದಾಗ ಮಾತ್ರ ನದಿಯನ್ನು ದಾಟುತ್ತಾರೆ. ಊರು ಮಲಗಿದ ನಿಸ್ತಬ್ಧ ವೇಳೆಯಲ್ಲಿ ನದಿಯೂ ಮೌನವಾಗಿ ಪ್ರವಹಿಸುತ್ತಿರುತ್ತದೆ. ಮರದ ಮೇಲಿನಿಂದ ಕೂಗುವ ಗೂಬೆಯ ದನಿ, ಮರದಮೇಲೆ ಮನೆ ಮಾಡಿಕೊಂಡಿರುವ ಹಕ್ಕಿಗಳು ಒಂದೊಂದು ಸಲ ರೆಕ್ಕೆ ಬಡಿಯುವ ಸಪ್ಪಳ ಮತ್ತು ನೀರಿನ ಮಂಜುಳ ಕಲರವ ಇಷ್ಟನ್ನು ಹೊರತಾಗಿ ರಾತ್ರಿಯ ನದಿಯ ದಡದ ವಾತಾವರಣ ಮೌನದಲ್ಲಿ ಮುಳುಗಿರುತ್ತದೆ. ಆದರೆ ನಮ್ಮ ಊರಿನ ದಂತಕಥೆಯ ಪ್ರಕಾರ ಕಾವೇರಿ ನದಿಯ ದಡದಲ್ಲಿ ಅಮಾವಾಸ್ಯೆಯ ರಾತ್ರಿಗಳಲ್ಲಿ ಬೇರೊಂದು ಜಗತ್ತಿನ ಜೀವಿಗಳ ವ್ಯಾಪಾರ ನಡೆದಿರುತ್ತದೆಂಬುದು ಜನಜನಿತವಾಗಿದೆ. ಊರ ಹಿರಿಯರು, ಅಜ್ಜಿಯರು ಈ ಕಥೆಯನ್ನು ತಮ್ಮ ಮೊಮ್ಮಕ್ಕಳಿಗೆ ಹೇಳುತ್ತಾರೆ. ಅನಂತರ ಮಕ್ಕಳು, ಹುಡುಗರು ಆಟವಾಡಿ ಸುಸ್ತಾದ ಮೇಲೆ ಸಂಜೆ ದೇವಸ್ಥಾನದ ಜಗುಲಿಯ ಮೇಲೋ, ಹಿತ್ತಲಿನ ಹುಲ್ಲಿನ ಮೆದೆಯಬಳಿಯೋ, ಗುಂಪಾಗಿ ಕುಳಿತು ಈ ಕಥೆಗಳಿಗೆ ಬಣ್ಣ ಕಟ್ಟಿ ಹೇಳಿ ರೋಮಾಂಚಗೊಂಡು, ಆನಂದಿಸುತ್ತಾರೆ. ಬೇರೆ ಲೋಕದ ಜೀವಿಗಳೆಂದರೆ ದೆವ್ವಗಳು, ಪಿಶಾಚಿಗಳು. ದೆವ್ವ, ಪಿಶಾಚಿಗಳಿಗೂ -ಮಾನವರಿಗೂ ಅಂಥ ಸೌಹಾರ್ದ ಸಂಬಂಧವೇನಿಲ್ಲ. ಇಂಥ ಕಥೆಗಳಲ್ಲಿ ಪ್ರತಿ ಹೆಜ್ಜೆಗೂ ಸಾಹಸ ಕುತೂಹಲ ಮುಂತಾದವು ತುಂಬಿರುವುದರಿಂದ, ಹುಡುಗರಿಗೆ ಇವು ಹೆಚ್ಚು ಪ್ರಿಯವಾಗುತ್ತವೆ. ಈ ಕಥೆಗಳನ್ನು ಬಾಲಕರ 'ಸದಸ್ಸು'ನಲ್ಲಿ ಕೇಳುತ್ತ ರೋಮಾಂಚನಗೊಳ್ಳುತ್ತಿದ್ದುದು ಈಗಲೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ನಮ್ಮ ಊರಿನ ಕಾವೇರಿ ನದಿಯ ದಡದ ಅಮಾವಾಸ್ಯೆಯ ರಾತ್ರಿಯ ಈ ದೃಶ್ಯವಂತೂ ನನ್ನನ್ನು ಬೆರಗುಗೊಳಿಸಿತ್ತು, ಮೈನವಿರೇಳಿಸಿತ್ತು, ಕುತೂಹಲವನ್ನುಂಟು ಮಾಡಿತ್ತು.

ಕಾವೇರಿ ನದಿಯ ದಡದಲ್ಲಿ ನಮ್ಮ ಊರಿನಿಂದ ಮೇಲುಗಡೆಗೆ ಒಂದೆರಡು ಮೈಲಿ ದೂರದಲ್ಲಿ ಎಲ್ಲ ಹಳ್ಳಿಗಳಿಗಿಂತಲೂ ದೂರವಾದ ನಿರ್ಜನಸ್ಥಳವೊಂದಿದೆ. ಅದು ದೆವ್ವಗಳ, ಭೂತಗಳ ನೆಲೆ ಎಂದು ಹೇಳುತ್ತಿದ್ದರು. ಅಮಾವಾಸ್ಯೆಯ ರಾತ್ರಿ ಹನ್ನೆರಡು ಗಂಟೆ ಹೊಡೆಯುತ್ತಲೇ ಈ ದೆವ್ವಗಳೆಲ್ಲ ತಮ್ಮ ದೇವರುಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಮೆರವಣಿಗೆ ಹೊರಡುತ್ತಿದ್ದವು. ನಮ್ಮ ಊರಿನಿಂದ ಒಂದೆರಡು ಮೈಲಿ ಕೆಳಕ್ಕೆ ಕಾವೇರಿ ನದಿಯ ತೀರದಲ್ಲಿ ಜಪದಕಟ್ಟೆ ಎಂಬ ಒಂದು ಸ್ಥಳವಿದೆ. ಇಲ್ಲಿ ಒಂದು ದೇವಾಲಯವೂ ಇದೆ. ಒಬ್ಬ ಪೂಜಾರಿ ಮಧ್ಯಾಹ್ನ ಇಲ್ಲಿಗೆ ಬಂದು ಪೂಜೆ ಮಾಡಿ ಹೋಗುತ್ತಿದ್ದ. ಜಪದಕಟ್ಟೆಯ ಬಳಿ ಯಾವ ಹಳ್ಳಿಯೂ ಇಲ್ಲ. ಹಿಂದೆ ತಪಸ್ವಿಗಳಾರೋ ಇಲ್ಲಿ ತಪಸ್ಸು ಮಾಡಿ ಸಿದ್ಧಿ ಪಡೆದಿದ್ದರೆಂದು ಪ್ರತೀತಿ. ಇಲ್ಲಿ ಒಂದು ಬಂಡೆಯನ್ನು ತೋರಿಸಿ, 'ಇದೇ ಋಷಿಗಳು

ತಪಸ್ಸು ಮಾಡಿದ ಸ್ಥಳ' ಎನ್ನುವರು. ಇಲ್ಲಿಗೆ ಸಮೀಪದಲ್ಲಿ ಗದ್ದೆಗಳಿವೆ. ಹಗಲುಹೊತ್ತು ಗದ್ದೆಯಲ್ಲಿ ರೈತರು ಕೆಲಸ ಮಾಡುತ್ತಿರುತ್ತಾರೆ; ರಾತ್ರಿ ಹೊತ್ತು ನರಪುಳುವಿನ ಸುಳಿವೂ ಇರುವುದಿಲ್ಲ. "ಜಪದಕಟ್ಟೆಯು ದೆವ್ವಗಳ ಮೆರವಣಿಗೆಯು ತಲುಪುವ ಸ್ಥಳ. ದೆವ್ವ ಭೂತಗಳು ತಮ್ಮ ದೇವೀ-ದೇವತೆಗಳನ್ನು ಪಲ್ಲಕ್ಕಿಗಳಲ್ಲಿ ಕೂರಿಸಿಕೊಂಡು, ಕಣ್ಣು ಕೋರೈಸುವ ದೀಪಗಳನ್ನು ಹಿಡಿದು ಅಲೌಕಿಕವಾದ ಬಾಜಾಬಜಂತ್ರಿಗಳೊಡನೆ ಜಪದಕಟ್ಟೆಗೆ ಬರುವುವು. ಇಲ್ಲಿ ತಮ್ಮ ದೇವತಾ ವಿಗ್ರಹಗಳನ್ನೆಲ್ಲ ಕಾವೇರಿಯಲ್ಲಿ ತೊಳೆದು, ಪೂಜೆ ಮಾಡಿ ಭಜನೆ, ಕೀರ್ತನೆಗಳನ್ನು ಮಾಡಿಕೊಂಡು ಬೆಳಗ್ಗೆ ನಾಲ್ಕು ಗಂಟೆಯ ಹೊತ್ತಿಗೆ ತಮ್ಮ ನೆಲೆ ಸೇರುವುವು. ಆ ಮೆರವಣಿಗೆಯು ಅತ್ಯಂತ ಭವ್ಯವಾದುದು. ಅಂಥದನ್ನು ನಾವು ಈ ಜಗತ್ತಿನಲ್ಲಿ ನೋಡಿಯೂ ಇಲ್ಲ, ನೋಡುವುದು ಸಾಧ್ಯವೂ ಇಲ್ಲ" ಎನ್ನುತ್ತಿದ್ದರು. ಈ ಕಥೆಯನ್ನು ನಮಗೆ ಹೇಳಿದ ತಾತ, "ಕಂಚಿನ, ಬೆಳ್ಳಿಯ, ಚಿನ್ನದ ಪಲ್ಲಕ್ಕಿ ಹಾಗೂ ಕಾಗಡಿಗಳೇನು! ಗ್ಯಾಸ್ ಲೈಟನ್ನೂ ಮೀರಿಸುವಂಥ ದೀಪಗಳ ಸಾಲುಗಳೇನು, ಹೊಳೆ ಹೊಳೆಯುವ ವಿವಿಧಾಕಾರದ ದೇವತೆಗಳ ವಿಗ್ರಹಗಳೇನು! ಆ ದೆವ್ವಗಳ ದೇಹದಿಂದ ಹೊರಡುತ್ತಿದ್ದ ಆ ಕಾಂತಿಯೇನು, ಅವುಗಳ ವೇಷಭೂಷಣಗಳೇನು! **ನ ಭೂತೋ ನ ಭವಿಷ್ಯತಿ** - ಹಿಂದೆ ಇರಲಿಲ್ಲ, ಮುಂದೆ ಇರುವುದಿಲ್ಲ" ಎನ್ನುತ್ತ ಬಾಯಿತುಂಬ ವರ್ಣಿಸುತ್ತಿದ್ದರು. "ದೀಪಗಳ ಬೆಳಕು ಎಲ್ಲಿಂದ, ಯಾವ ರೀತಿಯ ಪಂಜಿನಿಂದ ಬರುತ್ತಿದ್ದಿತು ಎಂಬುದು ತಿಳಿಯುತ್ತಿರಲಿಲ್ಲ. ದೇವತಾ ವಿಗ್ರಹಗಳನ್ನು ಅಲಂಕರಿಸಿದ್ದ ಪಚ್ಚೆ, ನೀಲಿ, ಕೆಂಪು, ವಜ್ರ, ವೈಡೂರ್ಯಗಳ ಒಡವೆಗಳನ್ನು ವರ್ಣಿಸಲು ಆದಿಶೇಷನಿಗೂ ಅಸಾಧ್ಯ. ದೆವ್ವಗಳು ಪಲ್ಲಕ್ಕಿ, ಕಾಗಡಿಗಳನ್ನು ಹೊತ್ತುಕೊಂಡು ಸಾಲಾಗಿ ನಡೆಯುತ್ತಿದ್ದರೆ ಅದೇನು ಸೊಗಸು, ಅದೇನು ಬೆಡಗು! ಪಲ್ಲಕ್ಕಿಗಳ ಎರಡೂ ಪಕ್ಕಗಳಲ್ಲಿ ಕಿರೀಟ ಧರಿಸಿದ ದೆವ್ವಗಳು ದೇವತೆಗಳಿಗೆ ಚಾಮರ ಬೀಸುತ್ತಿದ್ದವು. ಮುಂದುಗಡೆ ವಾದ್ಯಗಳ ಭೋರ್ಗರೆತ ಅವರ್ಣನೀಯ, ಅನೂಹ್ಯ. ಜಾಗಟೆ, ತಾಳ, ತಮ್ಮಟೆಗಳೊಡನೆ ತಂತಿಯ ಹಾಗೂ ಉಸುರಿನಿಂದ ಊದುವ ವಿಚಿತ್ರ ಆಕಾರದ ವೀಣೆ, ಕೊಳಲು, ಓಲಗ, ಕಹಳೆ ಮೊದಲಾದವು ನಾದತರಂಗಗಳನ್ನು ಎಬ್ಬಿಸುತ್ತಿದ್ದವು. ಜತೆಗೆ ದೆವ್ವಗಳು ಕೈಯಲ್ಲಿ ತಾಳಹಾಕುತ್ತ ಕುಣಿಯುತ್ತ ಹಾಡುತ್ತಿದ್ದವು. ಅದೊಂದು ರೀತಿಯ ದಿವ್ಯಗಾನ. ಅದನ್ನು ಕೇಳುತ್ತಿದ್ದರೆ ಇನ್ನೂ ಕೇಳುತ್ತಲೇ ಇರಬೇಕು, ಈ ಭೂಲೋಕದ ಸಹವಾಸವೇ ಬೇಡ, ಅವುಗಳ ಜತೆ ಹೊರಟುಹೋಗಿ ಆ ಮೆರವಣಿಗೆಯಲ್ಲಿ ಸೇರಿಕೊಳ್ಳಬೇಕು ಎನ್ನಿಸುತ್ತಿತ್ತು. ನಡುನಡುವೆ ಜಯಕಾರದಂಥ ಶಬ್ದ ಕೇಳಿಬರುತ್ತಿದ್ದಿತು. ಅವುಗಳ ಹಾಡಿನ, ಅವುಗಳ ಜಯಕಾರದ ಭಾಷೆ ಯಾವುದು ಎನ್ನುವುದು ಗೊತ್ತಾಗುತ್ತಿರಲಿಲ್ಲ; ಆದರೆ ಹೃದಯದಲ್ಲಿ ಭಕ್ತಿರಸ ಉಕ್ಕಿ ದಿವ್ಯಾನಂದವುಂಟಾಗುತ್ತಿತ್ತು. ಅಲ್ಲದೆ ಪಲ್ಲಕ್ಕಿಗಳ ಎರಡೂ ಬದಿಗಳಲ್ಲಿ ದೆವ್ವಗಳು ಏನೇನೋ ದಿವ್ಯಾಕಾರದ ಲಾಂಛನಗಳನ್ನು ಹಿಡಿದುಕೊಂಡು ಬರುತ್ತಿದ್ದವು. ಲಾಂಛನಗಳನ್ನು ಇದು ಹೀಗೇ ಎಂದು ವರ್ಣಿಸಲಾರೆ. ಮೆರವಣಿಗೆಯ ಉದ್ದ ಸುಮಾರು ಅರ್ಧ ಮೈಲಿ. ರಾತ್ರಿ ಹನ್ನೆರಡು ಗಂಟೆಗೆ ಹೊರಟ ಈ ಮೆರವಣಿಗೆ ಜಪದಕಟ್ಟೆಗೆ ಹೋಗಿ ಅಲ್ಲಿ ದೇವತಾ ಮೂರ್ತಿಗಳನ್ನು ತೊಳೆದು, ಪೂಜಿಸಿ ಹಿಂದಿರುಗಿ ಹೊರಟು ಬೆಳಗಿನ ನಾಲ್ಕು ಗಂಟೆ ಒಳಗೆ ತಮ್ಮ ಮೊದಲಿನ ಸ್ಥಾನವನ್ನು ಸೇರುತ್ತಿತ್ತು. ಅವು ಎಲ್ಲಿಂದ ಬಂದವು, ಎಲ್ಲಿಗೆ ಹೋದವು ಎಂಬುದು ಗೊತ್ತಾಗುತ್ತಿರಲಿಲ್ಲ. ಜಪದಕಟ್ಟೆಯಲ್ಲಿ ಏನಾಗುತ್ತಿತ್ತು ಎಂಬುದನ್ನು ಯಾರೂ ನೋಡಿದವರಿಲ್ಲ"- ಈ ವರ್ಣನೆಗಳನ್ನು ಬೆಕ್ಕಸಬೆರಗಾಗಿ ಕೇಳುತ್ತ ಕುಳಿತ ನಾವುಗಳು, "ತಾತ, ತಾತ, ನೀವು ಎಂದಾದರೂ ನೋಡಿದ್ದೀರಾ ಈ ಮೆರವಣಿಗೆಯನ್ನು" ಎಂದು ಕೇಳಿದೆವು. "ನಮ್ಮ ಮುತ್ತಾತ ನೋಡಿದ್ದರಂತೆ. ನಮ್ಮ ತಾತ ನನಗೆ ಹೇಳಿದ ಈ ವರ್ಣನೆ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಮ್ಮ ಊರ ಬಾಗಿಲಿನಲ್ಲಿರುವ ಶ್ರೀನಿವಾಸದೇವರ ದೇವಸ್ಥಾನದ ಮೇಲೆ ಹೋಗಿ ಕುಳಿತು ನೋಡಲು ಪ್ರಯತ್ನಿಸಿದ ಧೈರ್ಯಶಾಲಿಗಳೂ ಇದ್ದಾರೆ. ಅದೃಷ್ಟಶಾಲಿಗಳಿಗೆ ಮಾತ್ರ ಈ ಮೆರವಣಿಗೆ ಕಾಣಿಸುವುದಂತೆ" ಎಂದರು ಅವರು. "ಶ್ರೀನಿವಾಸ ದೇವರ ಗುಡಿಯ ಮೇಲೆ ಏಕೆ ತಾತ?" ಎಂದು ಪ್ರಶ್ನಿಸಿದೆವು. "ಶ್ರೀನಿವಾಸ ದೇವರ ಸನ್ನಿಧಿಯಾದುದರಿಂದ ಅಲ್ಲಿರುವವರಿಗೆ ದೆವ್ವಗಳು ಏನೂ ಮಾಡಲಾರವು. ಅಲ್ಲದೆ ಮೆರವಣಿಗೆಯ ದಾರಿಗೆ ಹತ್ತಿರದಲ್ಲಿ ಎಲ್ಲಾದರೂ ನಿಂತಿದ್ದರೆ ಅವರೂ ಮೆರವಣಿಗೆಯ ಪ್ರಭಾವಕ್ಕೆ ಒಳಗಾಗಿ ಅಲ್ಲಿಗೆ ಹೊರಟು ಹೋಗಿಬಿಡಬಹುದು ಎಂಬ ಹೆದರಿಕೆ ಬೇರೆ" ಎಂದು ವಿವರಣೆ ಕೊಟ್ಟರು ತಾತ.

ಜನವರಿ ತಿಂಗಳ ಸಮಯ. ನಮ್ಮ ಮಾವನವರ ತಂದೆಯವರು ಒಂದು ದಿನ ಸಂಜೆ ಕಾವೇರಿ ನದಿಯ ತೀರಕ್ಕೆ ಸ್ವಲ್ಪ ಸಮೀಪವಾಗಿದ್ದ ಗದ್ದೆಯಲ್ಲಿ ಕಣ ಕಾಯಲು ಹೋದರು. ಬತ್ತವನ್ನು ರೇಖೆ ಮಾಡಲು ಕಣ ಮಾಡಿರುತ್ತಾರೆ. ಹುಲ್ಲು, ನೆಲ್ಲು ಬೇರೆಬೇರೆ ಮಾಡಿ ಮನೆಗೆ ಸಾಗಿಸುತ್ತಾರೆ. ಕಣದಲ್ಲಿ ಬತ್ತದ ರಾಶಿ ಇರುವುದರಿಂದ ಅದನ್ನು ಕಾಯಲು ರಾತ್ರಿ ಅಲ್ಲಿ ಹೋಗಿ ಮಲಗುತ್ತಾರೆ. ಈಚಲುಚಾಪೆ ಹಾಸಿಕೊಂಡು, ಕಂಬಳಿ ಅಥವಾ ಈಚಲು ಚಾಪೆ ಹೊದೆದುಕೊಂಡು ಮಲಗುವುದು ರೂಢಿ. ಬೆಳಗಿನ ಜಾವದಲ್ಲಿ ಮಂಜು ಬೀಳುವುದರಿಂದ, ರಾತ್ರಿ ಚಳಿಯಾಗುವುದರಿಂದ, ಈಚಲು ಚಾಪೆ ಹೊದೆದುಕೊಂಡರೆ ಬೆಚ್ಚಗಿರುತ್ತದೆ. ಅಂದು ಅಮಾವಾಸ್ಯೆ ಎಂಬುದನ್ನು ಅವರು ಮರೆತುಬಿಟ್ಟಿದ್ದರು. ರಾತ್ರಿ ಒಂದು ಹೊತ್ತಿನಲ್ಲಿ, ಕಣದಲ್ಲಿ ಮಲಗಿದ್ದ ಇವರಿಗೆ ಜಾಗಟೆ, ಶಂಖ ಮೊದಲಾದ ವಾದ್ಯಗಳ ಶಬ್ದ ಕೇಳಿಸಿತು. ಶಬ್ದವೇನೆಂದು ನೋಡಲು ಈಚಲು

ಚಾಪೆಯನ್ನು ಸರಿಸಿ ನೋಡುತ್ತಾರೆ; ಏನು ವೈಭವ, ಏನು ಬೆಳಕು! ಅದೇನು ಪಲ್ಲಕ್ಕಿ, ಅದೇನು ದೇವರುಗಳು! "ನಾನು ಈ ಜಗತ್ತಿನಲ್ಲಿ ಇಂಥ ಮೆರವಣಿಗೆಯನ್ನು ಕಂಡವನೇ ಅಲ್ಲ. ಒಂದು ನಿಮಿಷ ದಿಗ್ಭ್ರಮೆಯಾಯಿತು. ನಾನು ಎಲ್ಲಿದ್ದೇನೆ ಎಂದು ಯೋಚಿಸಲಾರಂಭಿಸಿದೆ. ತಕ್ಷಣ ಇಂದು ಅಮಾವಾಸ್ಯೆ ಎಂಬುದು ಹೊಳೆಯಿತು. ಗಾಬರಿಯಿಂದ ಎದ್ದು ಹಿಂದು ಮುಂದು ನೋಡದೆ ಬೀಳುವುದನ್ನೂ ಕಾಣದೇ ಊರಿಗೆ ಓಡಿದೆ" ಎಂದು ಅವರು ಹೇಳಿದ್ದನ್ನು ನಾನು ಎಂದೂ ಮರೆತಿಲ್ಲ.

ದೆವ್ವಗಳಿಗೂ ದೇವರುಗಳಿವೆ, ಅವುಗಳೂ ದೇವತೆಗಳ ಪೂಜೆ ಮಾಡುತ್ತವೆ, ಮೆರವಣಿಗೆ ಮಾಡುತ್ತವೆ, ಭಕ್ತಿಯಿಂದ ನಡೆದುಕೊಳ್ಳುತ್ತವೆ ಎಂಬ ವಿಷಯವು ಅನೇಕರಿಗೆ ಆಶ್ಚರ್ಯವಾಗಬಹುದು; ಅನೇಕರು ಇದನ್ನು ನಂಬದೇ ಇರಬಹುದು. ಆದರೂ ಒಂದು ಮಾತು ಸತ್ಯ: ಮಾನವರಿಗಾಗಲಿ, ದೆವ್ವಗಳಿಗಾಗಲಿ ಎಲ್ಲರಿಗೂ ಮೇಲೆ ಒಬ್ಬ ಭಗವಂತನಿದ್ದಾನೆ ಎಂಬುದು ಇದರಿಂದ ಸ್ಪಷ್ಟವಾಗುವುದು.

□ □ □

ನಮ್ಮ ಜನಗಳಿಗೆ ಜೀವನವಾಗಿರುವ ಕಾವೇರಿ ನದಿಯ ದಡದಲ್ಲಿ ನೂರಾರು ಸಾವಿರಾರು ಹಳ್ಳಿಗಳಿವೆ. ಒಂದು ಹಳ್ಳಿಯ ಬಳಿಯಲ್ಲಿ ಒಂದು ನದಿ ಹರಿಯುತ್ತಿದೆ ಎಂದರೆ ಆ ನದಿ ಆ ಹಳ್ಳಿಯ ಜೀವನದ ಕೇಂದ್ರ ಎನ್ನಬಹುದು. ಬಂಧುಗಳು, ಆಪ್ತರು, ಗೆಳೆಯರು, ನೆರೆಹೊರೆಯವರು ಎಲ್ಲಿ ಭೇಟಿಯಾಗದೆ ಇದ್ದರೂ ನದಿಯ ಸೋಪಾನ ಘಟ್ಟದಲ್ಲಿ ಕಂಡೇ ಕಾಣುವರು. ನದಿಯಲ್ಲಿ ಬಟ್ಟೆ ಜಾಲಾಡುತ್ತಿರುವಾಗಲೋ, ಪಾತ್ರೆ ತೊಳೆಯುತ್ತಿರುವಾಗಲೋ ಇಲ್ಲವೇ ಸೊಂಟ ಮಟ್ಟದ ನೀರಿನಲ್ಲಿ ನಿಂತುಕೊಂಡು ಮೈಯುಜ್ಜಿಕೊಳ್ಳುತ್ತಿರುವಾಗಲೋ, ಎತ್ತಿಗೆ ನೀರಿನಲ್ಲಿ ಮೈತೊಳೆಯುತ್ತಿರುವಾಗಲೋ, ನಾಲಗೆ ಸರಾಗವಾಗಿ ಮಾತನ್ನು ಹರಿಸುತ್ತಿರುತ್ತದೆ. ಊರಿನ ಸಮಾಚಾರ, ನೆರೆ ಊರಿನಲ್ಲಿ ಗೌಡನ ಸೊಸೆ ಹೆತ್ತಿದ್ದು , ಕಾಳಯ್ಯನ ಮನೆಯ ಹಸು ಈದದ್ದು , ಹಂದಿ ನುಗ್ಗಿ ತೋಟಪ್ಪನ ಗದ್ದೆ ಹಾಳುಮಾಡಿದ್ದು , ಕೆಂಪಮ್ಮನ ಸೊಸೆ ಯಾರೋ ದೊಂಬರವನ ಜತೆ ಓಡಿಹೋದದ್ದು , ಸಂತೆಯಲ್ಲಿ ಮೆಣಸಿನಕಾಯಿಯ ಬೆಲೆ ಏರಿ, ಬೆಲ್ಲದ ಬೆಲೆ ತಗ್ಗಿದ್ದು - ಒಂದೇ ಎರಡೇ? ನೂರಾರು ವಿಚಾರಗಳು ಸುರುಳಿ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ನದಿಯ ಸೋಪಾನಘಟ್ಟ ಅಥವಾ ದಡ ಎಂದರೆ ಅದೊಂದು ಸಮಾಚಾರ ಭಂಡಾರ. ಅದೊಂದು ಟೆಲಿಪ್ರಿಂಟರ್ ಇದ್ದ ಹಾಗೆ. ನನಗೆ ನದಿಯೆಂದರೆ ಹಿಗ್ಗು. ಜನರ ಮಾತುಗಳನ್ನು ಆಲಿಸುತ್ತ ಮೈಮೇಲೆ ಬಿಸಿಲಿನ ಕಿರಣಗಳ ಶಾಖವನ್ನು ಅನುಭವಿಸುತ್ತ, ನದಿಯ ನೀರಿನಲ್ಲಿ ಈಜುಬರುವವನಂತೆ ಕುತ್ತಿಗೆಯನ್ನು ಮಾತ್ರ ಮೇಲಕ್ಕೆ ಬಿಟ್ಟುಕೊಂಡು, ದೇಹವನ್ನು ನೀರಿನಲ್ಲಿ ಮುಳುಗಿಸಿ ನೆಲದ ಮೇಲೆ ಕಾಲೂರಿಕೊಂಡು, ದಡದ ಹತ್ತಿರದಲ್ಲಿಯೇ ಸಂಚರಿಸುವುದೆಂದರೆ ನನಗೆ ಅಪಾರ ಹಿತ. ಸ್ಕೂಲು ಇಲ್ಲದೇ ಇದ್ದ ದಿವಸವಂತೂ ಗಂಟೆಗಟ್ಟಲೆ ಬೆಳಗಿನಿಂದ ಮಧ್ಯಾಹ್ನದವರೆಗೂ, ಹೊಟ್ಟೆ ಚುರ್ ಎನ್ನುವವರೆಗೂ ನೀರಿನಲ್ಲಿ ಆಡಿದರೇನೇ ಹಿತ. ಇದು ಬೇಸಿಗೆಯ ದಿನಗಳ ನನ್ನ ವಿನೋದ.

ಪ್ರವಾಹದ ಕಾಲದಲ್ಲಿ ಪಾತ್ರದಗಲಕ್ಕೂ ನೀರನ್ನು ತುಂಬಿಕೊಂಡು ಈ ದಡದಿಂದ ಆ ದಡದವರೆಗೂ ವಿಸ್ತಾರವಾಗಿ ಹರಿಯುವ ಪ್ರವಾಹದ ಗಂಭೀರತೆಯು ನನಗೆ ರೋಮಾಂಚನ ಉಂಟುಮಾಡುತ್ತಿತ್ತು. ಪೂರ್ಣಪ್ರವಾಹ ಕಾಲದಲ್ಲಿ ಕಾವೇರಿಯ ಆ ರಭಸ, ಆ ಭೋರ್ಗರೆತ ಹೃದಯದಲ್ಲಿ ನಡುಕವನ್ನುಂಟು ಮಾಡುತ್ತಿತ್ತು. ಇಂಥ ಅಪಾಯದ ನದಿಯ ಮೇಲೆ ನಮ್ಮ ಊರಿನ ಅಂಬಿಗರು, ಬೆಸ್ತರು ಬೇಟೆ-ಹರಿಗೋಲಿನಲ್ಲಿ ಕುಳಿತು ತೇಲುತ್ತ ಹೋಗಿ ನದಿಯ ಪ್ರವಾಹದ ಜತೆ ತೇಲಿಬರುವ ಮರದ ದಿಮ್ಮಿಗಳಿಗೆ ಹಗ್ಗದ ಉರುಳೆಹಾಕಿ ದಡಕ್ಕೆ ಎಳೆದುಕೊಂಡುಬರುವ ಆ ಸಾಹಸ, ಹುಡುಗರಾದ ನಮ್ಮ ಎದೆಯನ್ನು ಝಲ್ ಎನ್ನುವಂತೆ ಮಾಡುತ್ತಿತ್ತು. ಬೇಟೆ ಹರಿಗೋಲು ಎಂದರೆ ಚರ್ಮವನ್ನು ಹೊದಿಸಿದ ಒಂದು ದೊಡ್ಡ ಮಂಕರಿ ಎನ್ನಬಹುದು. ಒಬ್ಬ ವ್ಯಕ್ತಿ, ಅಥವಾ ಸ್ವಲ್ಪ ದೊಡ್ಡದಾದರೆ ಇಬ್ಬರು ಇದರಲ್ಲಿ ಕೂರಬಹುದು. ಹುಟ್ಟುಹಾಕುತ್ತ ಅಂಬಿಗ ಆ ಪುಟ್ಟ ಹರಿಗೋಲನ್ನು ಪ್ರವಾಹದ ಮೇಲೆ ಕೊಂಡೊಯ್ಯುತ್ತಿದ್ದರೆ, ನಮಗೆ ಭಯವಾಗುತ್ತಿತ್ತು; ರಭಸದಿಂದ ಹರಿಯುವ ನೀರಿನ ಮೇಲೆ ಏರುತ್ತ, ಇಳಿಯುತ್ತ ಹೋಗುತ್ತಿದ್ದರೆ ಎಲ್ಲಿ ಮಗುಚಿಕೊಂಡು ಬಿಡುವುದೋ ಎನಿಸುತ್ತಿತ್ತು. ನಾವು ಹೀಗೆ ಭಯಪಡುತ್ತಿದ್ದರೂ ಸ್ಥಿರಚಿತ್ತನಾಗಿ ಆ ಅಂಬಿಗ ದೋಣಿ ನಡೆಸುತ್ತಿರುತ್ತಾನೆ. ಪ್ರವಾಹದ ಮಧ್ಯಕ್ಕೆ ಹೋಗಿ ಅಲ್ಲಿ ತೇಲುತ್ತಿರುವ ಮರದ ದಿಮ್ಮಿಗೆ ಹಗ್ಗ ಹಾಕುವುದಂತೂ ಖೆಡ್ಡಾ ಆನೆಗೆ ಹಗ್ಗ ಹಾಕಿದಂತೆಯೇ ಸೈ.

ತುಂಬು ಪ್ರವಾಹ ಬಂದಿತೆಂದರೆ ಆ ಜಲರಾಶಿಯನ್ನು ನೋಡುವುದೇ ಒಂದು ಆನಂದ. ನಮ್ಮ ಊರಿನ ಬಳಿ ಕಾವೇರಿ ನದಿಯು ಕವಲೊಡೆದು ನಡುವೆ ಸಣ್ಣ ನಡುಗಡ್ಡೆಯನ್ನು ಮಾಡಿ ಹರಿದು ಮುಂದೆ ಪುನಃ ಒಂದಾಗಿ ಹರಿಯುತ್ತದೆ. ಪ್ರವಾಹಕಾಲದಲ್ಲಿ ಈ ಎರಡೂ ಕವಲುಗಳು ಒಂದಾಗಿ ಹರಿಯುವಾಗ, ನಡುಗಡ್ಡೆಯು ನೀರಿನಲ್ಲಿ ಮುಳುಗಿ ನೀರಿನ ಹರಹು ಸಮುದ್ರದಂತೆ ಕಾಣುತ್ತದೆ. ತುಂಬುಪ್ರವಾಹ ಬಂದಾಗ ನದಿಯ ನೀರು ದಡದ ಮನೆಗಳವರೆಗೂ ಬರುತ್ತದೆ. ಬಾಲ್ಯದಲ್ಲಿ ನಾವು ಹಾಯ್ಗಡುವಿನ ರಸ್ತೆಯಲ್ಲಿ ನಿಂತು

ನಮ್ಮ ಮುಂದೆ ಹರಿಯುವ ಜಲಸಮುದ್ರವನ್ನು ನೋಡುತ್ತ ಮೈಮರೆತು ನಿಲ್ಲುತ್ತಿದ್ದೆವು. ಆಗ ಕಾಲದ ಅರಿವೇ ಆಗುತ್ತಿರಲಿಲ್ಲ. ಒಂದೊಂದು ವರ್ಷ ವಿಪರೀತಪ್ರವಾಹ ಬಂದಾಗ, ನದಿಯ ದಡದ ಉದ್ದಕ್ಕೂ ಇರುವ ಮುಸಲ್ಮಾನರ ಹಾಗೂ ಸಾಲೆಯವರ ಬೀದಿಗೆ ಪ್ರವಾಹದ ನೀರು ನುಗ್ಗುತ್ತಿದ್ದಿತು. ಆಗ ಬಾಲಕರಾದ ನಾವು ತಂದೆತಾಯಿಗಳ ಕಣ್ಣುತಪ್ಪಿಸಿ, ಹೆಜ್ಜೆ ಮುಳುಗುವಷ್ಟು ನೀರಿರುವ ಕಡೆ ಬೀದಿಯಲ್ಲಿ ನಡೆದಾಡಿ, ಕುಣಿದು ಕುಪ್ಪಳಿಸುತ್ತಿದ್ದೆವು. ೧೯೨೪ರಲ್ಲಿ ಹುಚ್ಚುಹೊಳೆ ಬಂದಾಗ ನಮ್ಮ ಊರಿನ ಸುತ್ತ ನೀರು ನಿಂತುಬಿಟ್ಟಿದ್ದಿತು. ನಮ್ಮ ಊರಿನಿಂದ ಸ್ವಲ್ಪ ಮುಂದೆ ಒಂದು ಕೊಲ್ಲಿಯು ಕಾವೇರಿ ನದಿಯನ್ನು ಸೇರುತ್ತದೆ. ಆ ಕೊಲ್ಲಿಯ ನೀರು ಮೇಲಕ್ಕೆ ನುಗ್ಗಿ ನಮ್ಮ ಊರ ಮುಂದಿನ ಗದ್ದೆಗಳಲ್ಲೆಲ್ಲ ನೀರು ನಿಂತುಬಿಟ್ಟಿತ್ತು. ನಾವು ಹೋಗಿ ದಿಣ್ಣೆಯ ಮೇಲೆ ನಿಂತು ನೀರಿನ ಅಮಾಯಕತೆಯನ್ನು ಕಂಡು ಸೋಜಿಗಪಡುತ್ತಿದ್ದೆವು. ಈ ಹುಚ್ಚು ಪ್ರವಾಹದಲ್ಲಿ ನದಿಯ ದಡದ ಕೊನೆಯ ಬೀದಿಯ ಕೆಲವು ಮನೆಗಳು, ಬಡವರ ಗುಡಿಸಲುಗಳು ಕುಸಿದು ಬಿದ್ದದ್ದು ದಾರುಣ ದೃಶ್ಯವಾಗಿತ್ತು. ಬಾಕಿ ಸಮಯದಲ್ಲಿ ಪ್ರಶಾಂತಳಾಗಿ ಹರಿಯುವ ಬಹೂಪಯೋಗಿಯಾದ ಕಾವೇರಿಯು ಒಮ್ಮೊಮ್ಮೆ ರುದ್ರರಮಣೀಯಳಾಗಿ ವಿಜೃಂಭಿಸುವುದು ಪ್ರಕೃತಿಯ ಇನ್ನೊಂದು ಮುಖ.

ಪ್ರವಾಹದ ಕಾಲದಲ್ಲಿ ನಮ್ಮ ಊರಿನ ಸೋಪಾನಗಳು ನೀರಿನಲ್ಲಿ ಮುಳುಗಿರುತ್ತಿದ್ದವು. ಪ್ರವಾಹವಿಲ್ಲದ ಕಾಲದಲ್ಲಿ ಸೋಪಾನದ ಮೇಲೆ ಕುಳಿತು ಹಳ್ಳಿಯ ಜನರ ಜೀವನ ವ್ಯಾಪಾರವನ್ನು ಕಾಣುವುದು ನನಗೆ ತುಂಬ ಆಪ್ಯಾಯಮಾನವಾಗಿತ್ತು. ಸೋಪಾನ ಘಟ್ಟದ ಮೇಲುಗಡೆಯಲ್ಲಿ ನರಸಿಂಹ ದೇವರ ಗುಡಿ, ಗುಡಿಯ ಸುತ್ತ ಹೂವಿನ ತೋಟ, ದೇವಾಲಯದ ಮುಂದುಗಡೆ ಒಂದು ದೇವಗಣಗಿಲೆ ಮರ. ಆ ಮರದಡಿಯಲ್ಲಿ ಕುಳಿತು ನದಿಯ ಮೇಲಿನಿಂದ ಬರುವ ತಂಗಾಳಿಯನ್ನು ಸೇವಿಸುತ್ತಾ, ಎಷ್ಟು ಹೊತ್ತು ಕುಳಿತಿದ್ದರೂ ಬೇಸರವಾಗದು. ನನ್ನ ಎಡಗಡೆಯಲ್ಲಿ ಹಾಯ್ಗಡು. ಊರಿನ ನಡುವಿನಿಂದ ಹಾದು ಬಂದ ರಸ್ತೆಯು ನದಿಯ ಪಾತ್ರಕ್ಕಿಳಿಯುತ್ತದೆ. ಎತ್ತಿನ ಗಾಡಿಗಳು ಈ ರಸ್ತೆಯಿಂದ ಇಳಿದು ನದಿ ದಾಟಲು ನೀರಿಗೆ ಇಳಿಯುತ್ತವೆ; ನದಿಯನ್ನು ದಾಟಿಕೊಂಡು ಆಚೆ ದಡಕ್ಕೆ ಹೋಗುತ್ತವೆ; ಆಚೆ ದಡದಿಂದ ಈಚಿನ ದಡಕ್ಕೆ ಹಾಯ್ದುಕೊಂಡು ಬರುತ್ತವೆ. ನೀರಿನಲ್ಲಿ ಇಳಿದ ಎತ್ತುಗಳು ತಲೆಯಾಡಿಸುತ್ತ , ಕೊರಳಗಂಟೆಗಳ ನಿನಾದದೊಡನೆ ಗಾಡಿಯನ್ನು ಎಳೆಯುತ್ತಾ, ಮಂದಗಮನವಾಗಿ ಬರುವುದನ್ನು ನೋಡುತ್ತಿದ್ದರೆ ಸಮಯ ಹೋದುದರ ಅರಿವೇ ಆಗುತ್ತಿರಲಿಲ್ಲ. ನಮ್ಮ ಊರಿನ ಕಾವೇರಿ ನದಿಯ ಹಾಯ್ಗಡು ಬಹು ಸುರಕ್ಷಿತವಾದುದು. ನದಿಯು ತಳದಲ್ಲಿ ಜಲ್ಲಿ ಹರಡಿರುವುದರಿಂದ ನದಿ ಹಾಯುವವರ ಕಾಲು ಜಾರುವ ಸಂಭವವಿಲ್ಲ. ಗಾಡಿಯ ಚಕ್ರಗಳು ಜಲ್ಲಿಯ ಮೇಲೆ ಉರುಳುತ್ತ ಜರಜರ ಶಬ್ದ ಮಾಡುತ್ತ ಮುಂದೆ ಸಾಗುತ್ತವೆ. ನೀರಿನ ಜುಳುಜುಳು ಶಬ್ದ , ಕಲ್ಲುಗಳ ಮೇಲೆ ಗಾಡಿಯ ಚಕ್ರ ಉರುಳುವ ಸದ್ದು , ಎತ್ತುಗಳ ಕೊರಳ ಗಂಟೆಗಳ ನಿನಾದ - ಇವುಗಳ ಒಂದು ಅಪೂರ್ವ ನಾದತರಂಗವನ್ನು ಗಾಳಿ ಹೊತ್ತು ತರುವುದನ್ನು ಆಲಿಸಿಯೇ ಆನಂದಿಸಬೇಕು.

ನನ್ನ ಬಲಗಡೆಗೆ ನದಿಯೊಳಕ್ಕೆ ಚಾಚಿಕೊಂಡಿರುವ ಬಂಡೆಗಲ್ಲಿನ ಮೇಲೆ ಒಬ್ಬ ಬೆಸ್ತ ಕುಳಿತು ನೀರಿಗೆ ಗಾಳ ಹಾಕಿ, ಗಾಳದ ದಾರವನ್ನೇ ನೋಡುತ್ತ ಕುಳಿತಿರುತ್ತಾನೆ. ಮೀನು ಸಿಕ್ಕಿಹಾಕಿಕೊಂಡಿದೆಯೋ ಇಲ್ಲವೋ ಎಂಬುದನ್ನು ನೋಡಲು ಒಂದೊಂದು ಸಲ ಗಾಳವನ್ನು ತುಯ್ಯುತ್ತಿರುತ್ತಾನೆ. ಉಳಿದೆಲ್ಲ ಸಮಯ ಪ್ರತಿಮೆಯಂತೆ ಸ್ಥಿರವಾಗಿ ಕುಳಿತಿರುತ್ತಾನೆ. ಬಿಸಿಲಾಗಲಿ, ಛಳಿಯಾಗಲಿ ಇವನಿಗೆ ಅದರ ಪರಿವೆ ಇಲ್ಲ. ನಿರ್ವಿಕಾರ ಚಿತ್ತದಿಂದ ಕುಳಿತ ಇವನೇನು ಧ್ಯಾನಸ್ಥ ತಪಸ್ವಿಯೋ ಎಂಬ ಭಾವನೆ ಮನಸ್ಸಿನಲ್ಲಿ ಮೂಡುತ್ತದೆ.

ಬೇಸಿಗೆಯ ಕಾಲದಲ್ಲಿ ನದಿಯ ಸೌಂದರ್ಯವು ಸ್ನಿಗ್ಧ ಮನೋಹರ. ಬಿಸಿಲಿನಲ್ಲಿ ಸಣ್ಣ ಸಣ್ಣ ಅಲೆಗಳು ಹೊಳೆಯುತ್ತ ಒಂದರ ಹಿಂದೆ ಒಂದು ಬರುವುದನ್ನು ನೋಡುವುದೇ ಒಂದು ಚಂದ. ಒಂದೊಂದು ಅಲೆಯಲ್ಲಿಯೂ ಒಬ್ಬೊಬ್ಬ ಸೂರ್ಯನ ಬಿಂಬವು ಮೂಡಿ ಸಾವಿರಾರು ಸೂರ್ಯರು ಹೊಳೆಯುತ್ತ ಕಣ್ಣು ಕೋರೈಸುತ್ತದೆ. ಅಲೆ ಮೇಲಕ್ಕೆದ್ದಾಗ ಸೂರ್ಯನ ಪ್ರತಿಬಿಂಬದ ಹೊಳಪು ಕಣ್ಣನ್ನು ಚುಚ್ಚಿ ಮುಚ್ಚಿಕೊಳ್ಳುವಂತೆ ಮಾಡುತ್ತದೆ. ಮುಚ್ಚಿದ ರೆಪ್ಪೆಯ ಮೇಲೆ ರವಿಕಿರಣದ ಬಿಸುಪನ್ನು ಅನುಭವಿಸುತ್ತ ಕೂರುವುದು ಪರಮ ಸುಖ.

ನದಿಯ ನಡುವೆ ಅಲ್ಲಲ್ಲಿ ಎದ್ದ ಬಂಡೆಗಳು ನೀರಿನೊಳಗಿಂದ ಮೇಲಕ್ಕೆ ತಲೆಯೆತ್ತಿಕೊಂಡು ಆಕಾಶದ ಕಡೆಗೆ ನೆಟ್ಟ ನೋಟವನ್ನು ಬೀರುತ್ತಿರುವಂತೆ ಕಾಣುವುವು. ಆ ಬಂಡೆಗಳ ಮೇಲೆ ಕುಳಿತ ಬೆಳ್ಳಕ್ಕಿಗಳು ಸೂರ್ಯಪ್ರಕಾಶದ ಧವಳತೆ ಮತ್ತು ನೀರಿನ ಶುಭ್ರತೆಗೆ ಬಿಳಿಯ ಹಾಲು ಬಣ್ಣವನ್ನು ನೀಡುವಂತೆ ಹೊಳೆಯುತ್ತವೆ.

ನನ್ನ ಬಲಗಡೆಗೆ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿ ಹರಿಗೋಲು ನದಿಯ ಆಚೆ ದಡದಿಂದ ಈಚೆ ದಡಕ್ಕೆ, ನಿಧಾನವಾಗಿ ಸುತ್ತುತ್ತ ತೇಲುವ ದೃಶ್ಯವು ಗೋಚರವಾಗುತ್ತದೆ. ಪ್ರವಾಹ ಕಾಲದಲ್ಲಿ ಜನರನ್ನೂ, ಗಾಡಿಗಳನ್ನೂ ನದಿ ದಾಟಿಸಲು ನಮ್ಮ ಊರಿನಲ್ಲಿ ಹರಿಗೋಲೇ ಸಾಧನ. ಜನ, ಗಾಡಿ, ಆಡು, ಕುರಿ

ಮೊದಲಾದುವನ್ನು ಹರಿಗೋಲಿನಲ್ಲಿಯೇ ಸಾಗಿಸುತ್ತಾರೆ. ಗಾಡಿಯ ಚಕ್ರ ಕಳಚಿ ಗಾಡಿಯನ್ನು ಹರಿಗೋಲಿನ ಅಂಚಿನ ಮೇಲೆ ಅಡ್ಡಲಾಗಿ ಇರಿಸಿ, ಪಕ್ಕದಲ್ಲಿ ಹರಿಗೋಲಿನಲ್ಲಿ ಚಕ್ರಗಳನ್ನು ಇರಿಸುತ್ತಾರೆ. ಎತ್ತುಗಳನ್ನು ನದಿಯಲ್ಲಿ ಇಳಿಸಿ ತಾವು ದೋಣಿಯಲ್ಲಿ ದಾಟುತ್ತಾರೆ. ಎತ್ತುಗಳು ನೀರಿನಲ್ಲಿ ಈಜಿಕೊಂಡು ಬರುವುದೇ ಒಂದು ಸುಂದರ ದೃಶ್ಯ. ಅವು ಮುಖವನ್ನು ನೀರಿನ ಮೇಲೆ ಎತ್ತಿ ತಲೆಯನ್ನು ತುಯ್ಯುತ್ತ, ಜೋರಾಗಿ ಉಸಿರುಬಿಡುತ್ತ, ಈಜಿಕೊಂಡು ಹೋಗಿ ಆಚೆಯ ದಡವನ್ನು ಮುಟ್ಟುತ್ತವೆ. ಆಚೆಯ ದಡಕ್ಕೆ ಹೋದ ಮೇಲೆ ಹರಿಗೋಲಿನಿಂದ ಗಾಡಿಯನ್ನು ದಡಕ್ಕೆ ಇಳಿಸಿ ಹೋರಿ ಎತ್ತುಗಳನ್ನು ಹಿಡಿದುಕೊಂಡು ಬಂದು, ನೊಗಕ್ಕೆ ಹೂಡಿ, ಗಾಡಿಯನ್ನು ದಡದ ಮೇಲಕ್ಕೆ ಹೊಡೆದುಕೊಂಡು ಹೋಗುತ್ತಾರೆ. ಎತ್ತುಗಳು ಏದುತ್ತ, ತೇಕುತ್ತ ಶ್ರಮದಿಂದ ಗಾಡಿಯನ್ನು ಎಳೆದುಕೊಂಡು ದಡಏರುವುದನ್ನು ನೋಡಿದಾಗ ಆ ಮೂಕಪ್ರಾಣಿಗಳ ಮೇಲೆ ಅನುಕಂಪ ಮೂಡುತ್ತದೆ. ಜನರು ಚಕ್ರ ಹಿಡಿದು ಎತ್ತುಗಳನ್ನು ಅದ್ದಲಿಸುತ್ತಾ, ಬಾಲವನ್ನು ತಿರುಚುತ್ತಾ ದಡ ಹತ್ತಿಸುತ್ತಾರೆ. ಮಧ್ಯೆ ಮಧ್ಯೆ ಚಕ್ರಗಳಿಗೆ ಕಲ್ಲು ಕೊಟ್ಟು ನಿಲ್ಲಿಸಿ ಎತ್ತುಗಳ ದಣಿವಾರಿಸುತ್ತಾ, ತಾವೂ ವಿಶ್ರಮಿಸಿಕೊಳ್ಳುತ್ತಾ, ಪುನಃ ಪುನಃ "ಹೋಹೋ, ಹುರ್ರ, ಹೈಹೈ ಬಸವಣ್ಣ ನಡೆಯಣ್ಣ , ನುಗ್ಗೋ" ಎಂದು ಕೂಗು ಹಾಕುತ್ತಾರೆ.

ನದಿಯು ಜುಳಜುಳನೆ ಹರಿಯುತ್ತಿದೆ. ನದಿಯ ಆಚೆ ದಡದಲ್ಲಿ ಹಸಿರಾದ ತೋಪು ಇದೆ. ನದಿಯ ಅಂಚಿನಿಂದ ತೋಪಿನವರೆಗೆ ಇಳಿಜಾರು ಪ್ರದೇಶವು ಹಸಿರು ಹುಲ್ಲಿನ ಹೊದಿಕೆಯನ್ನು ಹೊಂದಿದೆ. ತೋಪಿನ ಮರಗಳ ನಡುವೆ ಒಂದು ಸಣ್ಣ ಗುಡಿ; ಅದರ ಕಳಸದ ಮೇಲೆ ಒಂದು ಕಾವಿ ಬಾವುಟ ಹಾರಾಡುತ್ತಿದೆ. ಇದನ್ನು 'ಪರದೇಸಿ ಮಠ' ಎನ್ನುತ್ತಾರೆ. ಇಲ್ಲಿ ನವಿಲುಗಳು ಜಾಗರವಾಡುತ್ತಾ, ಕೇಕೆ ಹಾಕುವ ಧ್ವನಿಯು ಪ್ರಶಾಂತವಾದ ನದಿಯ ಮೇಲಿನಿಂದ ಬಂದು ನಮ್ಮ ಶ್ರವಣೇಂದ್ರಿಯಕ್ಕೆ ಮುತ್ತಿಡುತ್ತದೆ. ಈ ಪರದೇಸಿ ಮಠದಲ್ಲಿ ಒಬ್ಬ ಸ್ವಾಮಿ ಇದ್ದಾನೆ. ಒಂದೊಂದು ಸಲ ಗುಡಿಯ ಮುಂದೆ ಕಾವಿ ಬಟ್ಟೆ ಧರಿಸಿದ ಆ ಸ್ವಾಮಿ ಸಂಚರಿಸುವುದು ಕಣ್ಣಿಗೆ ಬೀಳುತ್ತದೆ. ಈ ತೋಪಿನ ಬಗ್ಗೆ, ಈ ಸ್ವಾಮಿಯ ಬಗ್ಗೆ ಏನೋ ಒಂದು ರಹಸ್ಯವು ಅಡಗಿದೆ ಎಂದು ಬಾಲಕರಾದ ನಮ್ಮ ಅನಿಸಿಕೆ. ನಮ್ಮ ತಂದೆತಾಯಿಗಳು ನಮ್ಮನ್ನು ಒಂಟಿಯಾಗಿ ನದಿ ದಾಟಲು ಬಿಡುತ್ತಿರಲಿಲ್ಲ. ನದಿಯ ಆಚೆಯ ಹರಿವನ್ನು ದಾಟಬೇಕಾದರೆ ಹಾಯುವ ಜಾಗ ಚೆನ್ನಾಗಿ ಗೊತ್ತಿರಬೇಕು; ಇಲ್ಲದಿದ್ದರೆ ನೀರು-ಪಾಲಾಗುವ ಸಂಭವ. ಆದುದರಿಂದ ಯಾವಾಗ ನದಿಯ ಆಚೆಯ ಸೀಳನ್ನು ದಾಟಬೇಕಾದರೂ ಹಿರಿಯರ ಹೆಜ್ಜೆಯನ್ನೇ ಅನುಸರಿಸಬೇಕಾಗುತ್ತಿತ್ತು. ನದಿಯ ಆಚೆ ದಡದಲ್ಲಿರುವ ಕರತಾಳಿಗೋ, ಆನಂದೂರಿಗೋ ಹೋಗಬೇಕಾದಾಗ ಹಿರಿಯರ ಜತೆಯಲ್ಲಿಯೇ ಹೋಗಬೇಕಾಗಿದ್ದುದರಿಂದ ನಮಗೆ ಒಬ್ಬೊಬ್ಬರೇ ನದಿಯನ್ನು ದಾಟಿ ಹೋಗಿ, ಆಚೆ ದಡದ ತೋಪಿನ ಅನ್ವೇಷಣೆ ಮಾಡುವ ಸಂದರ್ಭವೇ ಒದಗಿ ಬರುತ್ತಿರಲಿಲ್ಲ. ಅಲ್ಲದೆ ಜನರು ಹೇಳುವ ಕಥೆಗಳಿಂದಾಗಿ ಅಲ್ಲಿಗೆ ಒಬ್ಬೊಬ್ಬರೇ ಹೋಗುವ ಧೈರ್ಯವೂ ಬರುತ್ತಿರಲಿಲ್ಲ. ಅಲ್ಲಿಯ ಸ್ವಾಮಿಯು ಭೈರವನ ಆರಾಧಕನೆಂದೂ, ಅವನು ಭೈರವನನ್ನು ಒಲಿಸಿಕೊಂಡಿದ್ದಾನೆಂದೂ ನಮ್ಮ ಹಿರಿಯರು ಹೇಳಿದ್ದುಂಟು. ಭೈರವನು ಹೇಗಿರುತ್ತಾನೆ? ಅವನನ್ನು ನೋಡಿದ್ದೀರಾ? ಎಂದು ಪ್ರಶ್ನಿಸಿದಾಗ, "ಅವನ ಆಕಾರ ಬಹು ಭಯಂಕರ, ಅದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ, ಜಟೆಯಿಂದ ಮುಖ ಮುಚ್ಚಿ ಹೋಗಿರುತ್ತದೆ. ಜಟೆಯ ಸಂದಿಯಲ್ಲಿ ಹಣೆಯ ವಿಭೂತಿ ಸ್ವಲ್ಪ ಹೊರಕ್ಕೆ ಇಣಕಿರುತ್ತದೆ. ಅವನ ಮುಖ ನೋಡಿದವರು ಉಳಿಯುವಂತಿಲ್ಲ. ಮಠದ ಸ್ವಾಮಿಯು ಏನು ಕೆಲಸವನ್ನು ಬೇಕಾದರೂ ಮಾಡುತ್ತಾನೆ. ಅವನಿಂದ ಸಾಧ್ಯವಾಗದ ಕೆಲಸವೇ ಇಲ್ಲ. ಬೆಟ್ಟವನ್ನು ತೆಗೆದು ಪಕ್ಕಕ್ಕಿಡು ಎಂದರೆ ತೆಗೆದು ಎತ್ತಿ ಇಟ್ಟುಬಿಡುತ್ತಾನೆ. ಇಷ್ಟಾದರೂ ಯಾರಿಗೂ ತೊಂದರೆ ಮಾಡುವುದಿಲ್ಲ. ನಾವು ಆತನನ್ನು ನೋಡಿಲ್ಲ. ಒಂದೊಂದು ಸಲ ರಾತ್ರಿ ಅಥವಾ ಬೆಳಗಿನ ಜಾವದಲ್ಲಿ ನದಿಯಲ್ಲಿ ಒಂದು ಕರಿಯ ಆಕಾರವು ಸ್ನಾನ ಮಾಡುತ್ತಿರುವುದನ್ನು ನಮ್ಮ ಹಿಂದಿನವರು ಕಂಡಿದ್ದರಂತೆ" ಎಂದು ಹಿರಿಯರು ಉತ್ತರ ಕೊಡುತ್ತಿದ್ದರು.

ಆ ಮರದಲ್ಲಿ, ಆ ತೋಪಿನಲ್ಲಿ ಏನೋ ರಹಸ್ಯವು ಅಡಗಿದೆಯಂತೆ, ಅಲ್ಲಿ ಏನೇನೋ ನಡೆಯುತ್ತದಂತೆ, ಭೂತಪಿಶಾಚಿಗಳು ಅಲ್ಲಿಗೆ ಬರುತ್ತವಂತೆ, ಎಂದು ಏನೇನೋ ಕಥೆ ಕಟ್ಟಿ ನಾವು ಮಾತನಾಡುತ್ತಿದ್ದೆವು. ರಾತ್ರಿಯ ಹೊತ್ತು ಆ ಕಡೆಯಿಂದ ಏನಾದರೂ ಸಪ್ಪಳ ಕೇಳಿ ಬಂದರೆ ಕುದುರೆಯ ಸವಾರರು ಅಲ್ಲಿಗೆ ಬಂದರೆಂದೇ ನಮ್ಮ ಭಾವನೆ. ನಮಗೆ ಕಿವಿಗೆ ಬಿದ್ದ ಒಂದು ಕಥೆಯೇ ಇದಕ್ಕೆ ಕಾರಣ. ಹಿಂದೆ ಒಬ್ಬಳು ಸುಂದರಿ ಮಠದಲ್ಲಿ ಸ್ವಾಮಿಗಳ ರಕ್ಷಣೆಯಲ್ಲಿದ್ದಳಂತೆ. ನೆರೆಯ ರಾಜ್ಯದ ರಾಜಕುಮಾರಿ ಅವಳು. ರಾಜಕುಮಾರಿ ಎಂದ ಮೇಲೆ ಕೇಳಬೇಕೆ? ಪರಮಸುಂದರಿ. ಕುಮಾರನಾಯಕನೆಂಬುದು ಈಕೆಯ ತಂದೆಯ ಹೆಸರು. ಇನ್ನೊಂದು ನೆರೆಯ ರಾಜ್ಯವನ್ನು ಆಳುತ್ತಿದ್ದವನು ಚಂದೂ ಎಂಬ ಅರಸ. ಚಂದೂ ಅರಸನ ಶತ್ರು ಕುಮಾರನಾಯಕ. ಚಂದೂ ಅರಸನ ಮಗ ಕುಮಾರನಾಯಕನ ಮಗಳನ್ನು ಪ್ರೀತಿಸಿ ಅವಳನ್ನು ಅಪಹರಿಸಿಕೊಂಡು ಹೋಗಲು ಸಂಚು ಹೂಡಿದ. ಇದನ್ನು ತಿಳಿದ ಚಂದೂ ಅರಸ, ಕುಮಾರನಾಯಕನ ರಾಜ್ಯದ ಮೇಲೆ ದಂಡೆತ್ತಿ ಬಂದ. ಆಗ ಕುಮಾರನಾಯಕನೂ ಸೈನ್ಯವನ್ನು ತೆಗೆದುಕೊಂಡು

ಬಂದ. ಆ ರಾಜಕುಮಾರಿ ತನಗಾಗಿ ದಂಡೆತ್ತಿ ಬಂದ ರಾಜರ ಯುದ್ಧವನ್ನು ತಪ್ಪಿಸುವ ಉದ್ದೇಶದಿಂದ ಈ ಪರದೇಸಿ ಮಠಕ್ಕೆ, ಎಲ್ಲರ ಕಣ್ಣು ತಪ್ಪಿಸಿ ಓಡಿಬಂದು, ಸ್ವಾಮಿಗಳ ರಕ್ಷಣೆಯನ್ನು ಕೋರಿದಳು. ಕರುಣಾಳುಗಳಾದ ಸ್ವಾಮಿಗಳು ಅವಳಿಗೆ ಅಭಯವನ್ನು ಕೊಟ್ಟು ರಹಸ್ಯವಾಗಿ ರಾಜಕುಮಾರನನ್ನು ಕರೆಸಿದರು. ಅವನಿಗೆ ಬುದ್ಧಿ ಹೇಳಿದರು. ಆದರೆ ಅವರಿಬ್ಬರ ಅಕಳಂಕಿತ ಗಾಢ ಪ್ರೇಮವನ್ನು ಕಂಡು ಸ್ವಾಮಿಗಳ ಮನಸ್ಸು ಕರಗಿತು.ರಾಜಕುಮಾರನು ಎಲ್ಲರ ಕಣ್ಣು ತಪ್ಪಿಸಿ ಆಗಾಗ್ಗೆ ಮಠಕ್ಕೆ ಹೋಗುತ್ತಿದ್ದಾನೆಂದೂ, ಅಲ್ಲಿ ರಾಜಕುಮಾರಿ ಇರುವಳೆಂದೂ ಆ ರಾಜರಿಗೆ ಹೇಗೋ ತಿಳಿಯಿತು. ಇದನ್ನು ತಿಳಿದ ಎರಡೂ ಕಡೆಯ ರಾಜರು ಸೈನ್ಯದೊಡನೆ ಮಠಕ್ಕೆ ದೂರದಲ್ಲಿ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹೊಂಚು ಹಾಕುತ್ತ ಇದ್ದರು. ರಾಜಕುಮಾರ ಎಲ್ಲರ ಕಣ್ಣು ತಪ್ಪಿಸಿ ಮಠಕ್ಕೆ ಹೇಗೆ ಹೋಗುತ್ತಿದ್ದಾನೆ ಎಂಬುದು ಆ ರಾಜರ ಅರಿವಿಗೆ ಬರಲಿಲ್ಲ. ಸ್ವಾಮಿಗಳ ಅಪ್ಪಣೆಯಂತೆ ಭೈರವನು ರಾಜಕುಮಾರನನ್ನು ಕರೆದುಕೊಂಡು ಹೋಗುವಾಗ ಈ ನರರ ಕಣ್ಣಿಗೆ ಅವನು ಬೀಳುವನೇ ಎಂದು ಸೈನಿಕರು ಆಡಿಕೊಳ್ಳುತ್ತಿದ್ದರು. ಆ ರಾಜರಿಗಾದರೋ ತೋಪಿನ ಪರಿಸರದಲ್ಲಿ ಕಾಲಿಡಲು ಹೆದರಿಕೆ. ಪರದೇಸಿ ಮಠದ ಹುಣಸೇಮರದ ನೆರಳು ಯಾರ ಮೇಲೆ ಬಿದ್ದರೂ ಅವರ ನಾಶ ಖಂಡಿತ ಎಂಬುದು ಜನಜನಿತವಾಗಿದ್ದುದೇ ಆ ಹೆದರಿಕೆಗೆ ಕಾರಣ. ಸ್ವಾಮಿಗಳು ಶಾಪ ಕೊಟ್ಟುಬಿಟ್ಟರೇನು ಗತಿ ಎಂಬ ಭಯ ಬೇರೆ. ಮರದ ನೆರಳು ರಾತ್ರಿಯ ಹೊತ್ತು ನೆಲದ ಮೇಲೆ ಬೀಳುವುದಿಲ್ಲವಲ್ಲ , ಏನಾಗುತ್ತದೋ ಪರೀಕ್ಷೆ ಮಾಡಿ ನೋಡೋಣ ಎಂದು ಒಂದಿಬ್ಬರನ್ನು ರಾತ್ರಿ ಕಳುಹಿಸಿದಾಗ ಮಾರನೆಯ ಬೆಳಗ್ಗೆ ಅವರು ಹುಣಸೇಮರದಡಿಯಲ್ಲಿ ರಕ್ತ ಕಾರಿಕೊಂಡು ಸತ್ತು ಬಿದ್ದಿದ್ದುದು ಪ್ರತ್ಯಕ್ಷವಾಯಿತು.

ಅ ಹುಣಸೇಮರದ ಮೇಲೆ ಒಂದು ಬ್ರಹ್ಮಪಿಶಾಚ ಜಟೆ ಬಿಟ್ಟುಕೊಂಡು ಕುಳಿತಿರುತ್ತದಂತೆ. ಇದು ಭೈರವನ ಸೇವಕನಂತೆ. ಸ್ವಾಮಿಗಳ ಕಣ್ಣಿಗೆ ಮಾತ್ರ ಈ ಪಿಶಾಚ ಕಾಣಿಸಿಕೊಳ್ಳುವುದು. ಸ್ವಾಮಿಗಳ ಅಪ್ಪಣೆಯಿಲ್ಲದೆ ಅವರ ಇಚ್ಛೆಯಿಲ್ಲದೆ, ಯಾರನ್ನೂ ಅದು ತೋಪಿನೊಳಕ್ಕೆ ಬಿಡುತ್ತಿರಲಿಲ್ಲ. ಚಂದೂ ಅರಸನಿಗೆ ಇದರಲ್ಲೆಲ್ಲ ನಂಬಿಕೆಯಿರಲಿಲ್ಲ. ನೋಡಿಯೇ ಬಿಡೋಣ ಎಂದು ಒಬ್ಬ ದಳಪತಿಯನ್ನು ಒಂದು ರಾತ್ರಿ ಕಳುಹಿಸಿದ. ಅವನು ಹುಣಸೇಮರಕ್ಕೆ ಸ್ವಲ್ಪ ದೂರದಲ್ಲಿರುವಾಗಲೇ ಗೂಗೆ ಕೂಗಿದಂತಾಯಿತು. ಆದರೂ ಅವನು ಮುಂದಕ್ಕೆ ಒಂದು ಹೆಜ್ಜೆ ಇಟ್ಟ. "ಅಲ್ಲೇ ನಿಲ್ಲು , ಮುಂದೆ ಹೆಜ್ಜೆ ಇಟ್ಟೀಯೆ, ಹುಷಾರ್" ಎಂದು ಕೂಗಿದಂತಾಯಿತು. ದಳಪತಿ ಇದೇನು ತನ್ನ ಮನಸ್ಸಿನ ಭ್ರಮೆಯೇ, ಎಂದು ಯೋಚಿಸುತ್ತಾ, ಒಂದು ಕ್ಷಣನಿಂತು ಹಿಂದೆ-ಮುಂದೆ ನೋಡಿ ಉದಾಸೀನ ಮಾಡಿ (ಉಚಾಯಿಸಿ) ಮುಂದಕ್ಕೆ ನಡೆದ. ಹುಣಸೇಮರದ ಕೊಂಬೆಯ ಅಡಿಗೆ ಬರುವ ಹೊತ್ತಿಗೆ ಅದೇನಾಯಿತೋ 'ಅಯ್ಯಯ್ಯಪ್ಪೋ!' ಎಂದು ಕೂಗಿಕೊಂಡು ಓಡಿದ ಶಬ್ದ ದೂರದಲ್ಲಿದ್ದ ಸೈನಿಕರ ಕಿವಿಗೆ ಬಿದ್ದಿತು. ಯಾವುದೋ ಒಂದು ಭೂತಾಕಾರ ಅವನ ಎದುರಿಗೆ ಕಾಣಿಸಿಕೊಂಡಿರಬೇಕೆಂದು ಜನರ ನಂಬಿಕೆ. ಕೊಂಚ ಹೊತ್ತಿನಲ್ಲೇ ದೂರದಲ್ಲಿ ಅವನಿಗಾಗಿ ಕಾಯುತ್ತಿದ್ದವರಿಗೆ, ನೆರಳು-ನೆರಳಾಗಿ ಮಾನವಾಕಾರವೊಂದು ನದಿಯ ಸಮೀಪಕ್ಕೆ ಹೋದಂತೆ ಭಾಸವಾಯಿತು. ಇದ್ದಕ್ಕಿದ್ದ ಹಾಗೇ ಧುಡುಂ ಎಂಬ ಶಬ್ದವಾಯಿತು. ಮಾರನೆಯ ದಿನ ಹುಡುಕಿಸಿ ನೋಡುವಾಗ ಹರಿವಿನ ಎರಡು ಮೈಲಿ ಕೆಳಗಡೆ ಜಪದ ಕಟ್ಟೆಯ ಸಮೀಪದಲ್ಲಿ ದಳಪತಿಯ ಹೆಣ ಸಿಕ್ಕಿತು. ಅಂದಿನಿಂದ ಸ್ವಾಮಿಗಳ ಅಪ್ಪಣೆಯಿಲ್ಲದೆ ನರಹುಳುವೂ ಮಠದ ಕಡೆಗೆ ಹೋಗುತ್ತಿರಲಿಲ್ಲ.

ಸ್ವಾಮಿಗಳ ಅನುಮತಿಯಿಂದ, ಮಠಕ್ಕೆ ಸೇರಿದ ಶಿವಾಲಯದಲ್ಲಿ ಪರಮೇಶ್ವರನ ಸನ್ನಿಧಿಯಲ್ಲಿ ರಾಜಕುಮಾರನಿಗೂ ರಾಜಕುಮಾರಿಗೂ ಮದುವೆಯಾಯಿತು. ರಾಜಕುಮಾರನು ಭೈರವನ ಸಹಾಯದಿಂದ ರಾಜಕುಮಾರಿಯನ್ನು ದೂರದ ರಾಜ್ಯಕ್ಕೆ ಕರೆದುಕೊಂಡು ಹೋದನು. ಸ್ವಾಮಿಗಳ ಇಂಗಿತದಂತೆ ಪಿಶಾಚವು ಅವರನ್ನು ಹೆಗಲಿನ ಮೇಲೆ ಕೂರಿಸಿಕೊಂಡು ಹೋಗಿ ಬಿಟ್ಟು ಬಂದಿತಂತೆ. ರಾಜಕುಮಾರ ತಾನು ಹೋದ ರಾಜ್ಯದಲ್ಲಿ ಕಾಡಿನ ಜನರನ್ನು ಕಟ್ಟಿ ಸೈನ್ಯವನ್ನು ಮಾಡಿಕೊಂಡು, ನೆರೆಯ ಪ್ರಾಂತ್ಯಗಳ ಮೇಲೆ ಯುದ್ಧ ಮಾಡಿ, ಆ ಪ್ರಾಂತ್ಯಗಳನ್ನು ಗೆಲ್ಲುತ್ತ ಬಂದ. ಇತ್ತ ರಾಜರಿಬ್ಬರಿಗೂ ತಮ್ಮ ಮಕ್ಕಳ ಮದುವೆಯಾಯಿತೆಂದು ತಿಳಿಯಿತು. ಅವರ ಸಹನೆ ಮೀರಿದುದರಿಂದ ಅವರಿಬ್ಬರೂ ಕೋಪಗೊಂಡು ಪರಸ್ಪರ ಯುದ್ಧಕ್ಕಿಳಿದರು. ಇಬ್ಬರ ಸೈನ್ಯದಲ್ಲಿಯೂ ಅಪಾರ ಜನ ಮಡಿದರು, ರಾಜರುಗಳಿಬ್ಬರೂ ಹೋರಾಡಿ ಸತ್ತರು. ಯುದ್ಧವಾದ ಸ್ಥಳದಲ್ಲಿ ಈಗಲೂ ಒಂದು ದಿಬ್ಬವಿದೆ. ರಾತ್ರಿಹೊತ್ತು ಯಾರಾದರೂ ಆ ಪ್ರಾಂತ್ಯಕ್ಕೆ ಬಂದರೆ ಆಯುಧಗಳ ಖಣಿಖಣಿಲು, ಕುದುರೆಗಳ ಹೇಷಾರವ, ಸೈನಿಕರ ಕೂಗಾಟ, ಚೀರಾಟ ಕೇಳಿಸುವುದು ಎಂದು ಹತ್ತಿರದ ಹಳ್ಳಿಯ ಜನ ಹೇಳುತ್ತಾರೆ. ಈ ದುರಂತವನ್ನು ತಿಳಿದ ರಾಜಕುಮಾರ ಮತ್ತು ರಾಜಕುಮಾರಿ ಇಬ್ಬರೂ ಬಂದು ತಮ್ಮ ಪಿತೃಗಳಿಗಾಗಿ ಕಣ್ಣೀರಿಟ್ಟರು. ಪ್ರಜೆಗಳ ಅಪೇಕ್ಷೆಯಂತೆ ರಾಜಕುಮಾರ ಎರಡೂ ರಾಜ್ಯಗಳ ಪ್ರಭುವಾಗಿ ಧರ್ಮದಿಂದ ಬಹುಕಾಲ ಪ್ರಜಾಪಾಲನೆ ಮಾಡಿದನು.

ಕಾವೇರಿ ನದಿಯು ಎರಡು ಕವಲಾಗಿರುವ ದೆಸೆಯಿಂದ ಮಧ್ಯದಲ್ಲಿ ಒಂದು ನಡುಗಡ್ಡೆಯಾಗಿದೆ. ನಡುಗಡ್ಡೆಯ ನಡುವೆ ಪಿರಮಿಡ್ಡಿನ ಆಕಾರದಲ್ಲಿ ಒಂದು ದಿಬ್ಬವಿದೆ. ದಿಬ್ಬದ ನೆತ್ತಿಯಲ್ಲಿ ಒಂದು ಮರ ಏಕಾಂಗಿಯಾಗಿ, ಹಗಲೂ ರಾತ್ರಿ ಯಾವ ದೇವನಿಗೋ ಛತ್ರಿ ಹಿಡಿದು ನಿಂತಿರುವಂತೆ ಭಾಸವಾಗುತ್ತದೆ. ಅಲ್ಲಿಯ ಮರಳಿನ ಮೇಲೆ ಬಿಸಿಲು ಕಾಯಿಸಿಕೊಳ್ಳಲು ಒಂದು ಮೊಸಳೆ ಬಂದು ಮಲಗುತ್ತಿದ್ದಿತು. ಒಂದೊಂದು ದಿನ ಮಧ್ಯಾಹ್ನದಲ್ಲಿ ನದಿಯ ದಡದ ಸೋಪಾನದ ಮೇಲೆ ನಾನೊಬ್ಬ, ನದಿಯ ನಡುವಿನ ದಿಬ್ಬದಲ್ಲಿ ಮೊಸಳೆ - ಹೀಗೆ ಇಬ್ಬರೇ ಇದ್ದ ಸನ್ನಿವೇಶಗಳುಂಟು. ಆಗ ನಾನು ಮೊಸಳೆಯನ್ನು ವೀಕ್ಷಿಸುತ್ತ ಮೈಮರೆತು ಕುಳಿತುಬಿಡುತ್ತಿದ್ದೆ. ಮೇಲೆ ಸೂರ್ಯನ ಶಾಖ, ಕೆಳಗಡೆ ಸೋಪಾನದ ಬಿಸುಪು, ನದಿಯ ಮೇಲಿನಿಂದ ಒಮ್ಮೊಮ್ಮೆ ಬೀಸುತ್ತಿದ್ದ ತಂಪುಗಾಳಿ, ಸುತ್ತಲಿನ ಮೌನದ ನಡುವೆ ನೀರಿನ ಜುಳ ಜುಳ ಶಬ್ದ - ಇಂಥ ಒಂದು ಅಪೂರ್ವ ಪ್ರಕೃತಿವ್ಯಾಪಾರದಲ್ಲಿ ಮೇಳವಿಸಿರುತ್ತಿದ್ದೆ. ಪ್ರತಿನಿತ್ಯವೂ ನಾನೂ ಮೊಸಳೆ ಒಬ್ಬರನ್ನೊಬ್ಬರು ನೋಡುತ್ತ ಎಷ್ಟೋ ಕಾಲ ಕಳೆದೆವು. ಪರಿಚಯ ಹೆಚ್ಚಾದಂತೆ ಮೊಸಳೆ ನನ್ನನ್ನು ಗುರುತಿಸಿದೆ ಎಂಬಂತೆ ತಲೆಯನ್ನು ಎತ್ತಿ ಆಡಿಸುತ್ತಿತ್ತು. ಒಂದೊಂದು ಸಲ ಬಾಲವನ್ನು ಆಡಿಸುತ್ತಿತ್ತು. ನಾನು ಕೂಡ ಅದನ್ನು ಗುರುತಿಸುವಂತೆ ಎದ್ದು ನಿಂತು ಕೈಬೀಸುತ್ತಿದ್ದೆ. ಒಂದೊಂದು ಸಲ ನನ್ನನ್ನು ಸಂತೋಷಗೊಳಿಸಲೋ ಎಂಬಂತೆ ಮೊಸಳೆ ನೀರಿಗೆ ದಬಕ್ಕನೆ ಬೀಳುತ್ತಿತ್ತು. ಅದು ನೀರಿಗೆ ಬಿದ್ದಾಗ ಆದ ಸಪ್ಪಳ ಕೇಳಿ, ಮೇಲಕ್ಕೆರಚುವ ನೀರನ್ನು ನೋಡಿ ನನಗೆ ಅತೀವ ಆನಂದವಾಗುತ್ತಿತ್ತು. ನಾನೂ ಸ್ಫೂರ್ತಿಗೊಂಡವನಾಗಿ ಮೆಟ್ಟಿಲ ಮೇಲಿನಿಂದ ನೀರಿಗೆ ಧುಮುಕುತ್ತಿದ್ದೆ. ಆದರೆ ಎಂದೂ ನದಿಯಲ್ಲಿ ನನ್ನ ಹಾಗೂ ಮೊಸಳೆಯ ನೇರ ಸಮಾಗಮವಾಗಲಿಲ್ಲ. ನಮ್ಮ ನಮ್ಮ ಮಿತಿಯನ್ನು ನಾವಿಬ್ಬರೂ ಅರಿತಿದ್ದಂತೆ ತೋರುತ್ತದೆ. ನನ್ನ ಮತ್ತು ಮೊಸಳೆಯ ನಂಟು ಹೀಗೆಯೇ ಎಷ್ಟೋ ಕಾಲ ನಡೆಯಿತು.

ಮುಂದಿನ ವಿದ್ಯಾಭ್ಯಾಸಕ್ಕೆಂದು ನನ್ನ ಹಳ್ಳಿಯನ್ನು ಬಿಟ್ಟು ಮೈಸೂರಿಗೆ ಬಂದುಬಿಟ್ಟೆ. ಎಷ್ಟೋದಿವಸ ಮಧ್ಯಾಹ್ನದ ತರಗತಿಯಲ್ಲಿ ಕುಳಿತಿದ್ದಾಗ ಆ ಮೊಸಳೆಯ ನೆನಪಾಗುತ್ತಿತ್ತು. ನೋಟ್ ಬುಕ್ಕಿನಲ್ಲಿ ಮೊಸಳೆಯ ಚಿತ್ರವನ್ನು ಎಷ್ಟೋ ಸಲ ಬಿಡಿಸಿದ್ದುಂಟು. ಆದರೆ ನನ್ನ ಹೃದಯಸ್ಥ ಮೊಸಳೆ-ಗೆಳೆಯನ ರೂಪ, ಆಕಾರ, ಭಾವಗಳು ಆ ಚಿತ್ರಗಳಲ್ಲಿ ಮೂಡಿಬರದೆ ಅತೃಪ್ತನಾಗಿ ಆ ಚಿತ್ರಗಳನ್ನು ಹರಿದುಹಾಕಿಬಿಡುತ್ತಿದ್ದೆ. ಒಂದು ದಿನ ಹೀಗೆಯೇ ತರಗತಿಯಲ್ಲಿ ಮೊಸಳೆಯ ಚಿತ್ರ ಬರೆಯುತ್ತಿದ್ದಾಗ ಚರಿತ್ರೆಯ ಉಪಾಧ್ಯಾಯರು ಬಂದು ನೋಡಿ ನನ್ನನ್ನು ತರಾಟೆಗೆ ತೆಗೆದುಕೊಂಡಿದ್ದರು. ವಿದ್ಯಾಭ್ಯಾಸ ಮುಗಿದ ಮೇಲೆ ಒಂದು ಸಲ ನಮ್ಮ ಹಳ್ಳಿಗೆ ಬಂದೆ. ಬಂದ ದಿನವೇ ನದಿಯ ದಡಕ್ಕೆ ಹೋಗಿ ನನ್ನ ಸುಪರಿಚಿತ ಸ್ಥಳದಲ್ಲಿ ಕುಳಿತುಕೊಳ್ಳಲು ಹೋದೆ. ನನಗೆ ನೆರಳಿನ ಆಶ್ರಯವನ್ನು ನೀಡಿದ್ದ ಆ ಮರವೂ ಈಗ ಇಲ್ಲ, ಆ ನರಸಿಂಹನ ಗುಡಿಯೂ ಇಲ್ಲ, ಆ ಹೂವಿನ ತೋಟವೂ ಇಲ್ಲ. ಸೋಪಾನಗಳೆಲ್ಲ ಅಲ್ಲಲ್ಲಿ ಕುಸಿದು, ಜರಿದು ಅಂದಗೆಟ್ಟಿವೆ. ಒಂದೆರಡು ಮೆಟ್ಟಿಲುಗಳು ಪ್ರವಾಹಕ್ಕೆ ಸಿಕ್ಕಿ ಸಡಿಲವಾಗಿ ಜಾರಿ ಕೆಳಕ್ಕೆ ಬಿದ್ದಿವೆ. ಇದನ್ನು ನೋಡಿ ನನ್ನ ಕಣ್ಣುಗಳಲ್ಲಿ ನೀರು ಬಂದಿತು. ನದಿಯ ಕಡೆಗೆ ದೃಷ್ಟಿಬೀರಿದೆ. ನದಿಯ ನಡುವೆ ಅದೇ ದಿಬ್ಬವಿದೆ. ಮರಳಿನ ರಾಶಿಯಿದೆ. ನೆತ್ತಿಯಲ್ಲಿ ಛತ್ರಿಯಂತೆ ಅದೇ ಮರವಿದೆ.ಮೂರು ನಾಲ್ಕು ದಿವಸಗಳು ಮೆಟ್ಟಿಲ ಮೇಲೆ ಕುಳಿತು ನಿರೀಕ್ಷಿಸಿದರೂ ಮೊಸಳೆರಾಯ ಕಾಣಿಸಲಿಲ್ಲ . ಮೊಸಳೆರಾಯನು ನನಗಾಗಿ ಕಾದು ಆ ಸ್ಥಳವನ್ನೇ ಬಿಟ್ಟು ಹೊರಟುಹೋಗಿರಬೇಕೆಂದು ಭಾವಿಸಿದೆ. ಊರಿನ ಕೆಲವರನ್ನು ವಿಚಾರಿಸಿದಾಗ ಅವರು ಆ ಮೊಸಳೆ ಒಂದೆರಡು ವರ್ಷ ದಿಬ್ಬದ ಮರಳಿನ ರಾಶಿಯ ಮೇಲೆ ಮಲಗಿಕೊಂಡು, ನರಸಿಂಹ ದೇವರ ಗುಡಿಯು ಕಡೆ ನೋಡುತ್ತಿದ್ದಿತೆಂದೂ, ಆದರೆ ಅನಂತರ ಅದು ಎಲ್ಲಿ ಹೋಯಿತೋ, ತಿಳಿಯದು ಎಂದೂ ಹೇಳಿದರು. ನನ್ನ ಮೂಕ ಗೆಳೆಯನಿಗಾಗಿ ನನ್ನ ಕಣ್ಣುಗಳಲ್ಲಿ ಕಣ್ಣೀರು ತೊಟ್ಟಿಕ್ಕಿತು. ಮೊಸಳೆಯು ಕೂಡಾ ನನ್ನ ಅಗಲಿಕೆಗಾಗಿ ಕಣ್ಣೀರು ಸುರಿಸಿರಬಹುದೆಂದು ಯೋಚಿಸುತ್ತ, ನದಿಗಿಳಿದು ನನ್ನ ಕಣ್ಣೀರನ್ನು ನೀರಿಗೆ ಬೀಳಿಸಿದೆ - ಮೊಸಳೆಯ ಕಣ್ಣೀರಿನ ಜತೆ ಸೇರಲಿ ಎಂದು. ನದಿಯ ನೀರು ಮಾತ್ರ ಎಂದಿನಂತೆ ಹರಿಯುತ್ತಿತ್ತು. ಮೊಸಳೆಯ ಕಣ್ಣೀರು ಬೆರೆತ ನೀರು ಅಲ್ಲಿ ನಿಂತಿತ್ತೇ! ಅದು ಹರಿದುಹೋಗಿ ಎಂದೋ ಸಾಗರವನ್ನು ಸೇರಿರಬಹುದು. ನನ್ನ ಕಣ್ಣೀರೂ ಕ್ರಮೇಣ ಸಾಗರವನ್ನು ಸೇರಿ, ಮೊಸಳೆಯ ಕಣ್ಣೀರನ್ನು ಹುಡುಕಿ ಅದರೊಡನೆ ಸೇರಿರಬಹುದೇ!

□ □ □

ಅನುಬಂಧ

೧. ಗ್ರಂಥದ ಬಗೆಗೆ

ಅ. ಸಂಕೇತಿ : ಇತಿವೃತ್ತಗಳು

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ|| ಕೆ. ಅನಂತರಾಮು
ನಿವೃತ್ತ ಕನ್ನಡ ಪ್ರಾಧ್ಯಾಪಕರು

'ಸಂಕೇತಿ : ಇತಿವೃತ್ತಗಳು' ಎಂಬೀ ಬೃಹತ್ ಸಂಪುಟವನ್ನು ಸಂಕೇತಿ ರಸವೃತ್ತಗಳು ಎಂದು ಕರೆದರೂ ಸರಿಯೆ. ಆತ್ಮಕಥೆಯ ಸಾರರೂಪವಾದ ಜೀವನಚಿತ್ರಗಳು ಅಲ್ಲಿವೆ. ನಮಗೆಲ್ಲ ಹುಟ್ಟಲು ಒಂದೇ ದಾರಿ, ಆದರೆ ಸಾಯಲು ಸಾವಿರ ದಾರಿಗಳು. ಹಾಗೆಯೇ ಸುಖವೆಂಬ ಕಲ್ಪನೆಗೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು. ಇಲ್ಲಿನ ರಸವೃತ್ತಗಳಲ್ಲಿ ನಾವು ಕಾಣುವುದು ದುಃಖದರ್ಶನದ ಅನಂತಮುಖಗಳು. ಅದೇ ಬದುಕಿನ ಸ್ಥಾಯಿಭಾವ; ಮಿಕ್ಕೆಲ್ಲವೂ ಸಂಚಾರಿಗಳು. ದುಃಖವೇ ಬದುಕನ್ನು ಪರಿಷ್ಕಾರಗೊಳಿಸುವ ತತ್ತ್ವ, ಪರಿಪಕ್ವಗೊಳಿಸುವ ತತ್ತ್ವ ಎಂಬುದು ಈ ಸಂಪುಟವನ್ನು ಆಸ್ವಾದಿಸುತ್ತಿದ್ದಂತೆಲ್ಲ ಮನವರಿಕೆಯಾಗುತ್ತದೆ.

ಈ ಆತ್ಮಕಥಾಗುಚ್ಛದ ನಾಯಕರತ್ನಗಳೆಲ್ಲ ಒಂದೊಂದೂ ಬಹುದೊಡ್ಡ ಜೀವಗಳು. ಬದುಕಿನ ಸುಖದುಃಖಗಳಿಂದ ಪರಿಪಕ್ವಗೊಂಡ ಜೀವಗಳು; ವಿವಿಧ ರಂಗಗಳಲ್ಲಿ ವಿದ್ವತ್ತನ್ನು ಸಂಪಾದಿಸಿಕೊಂಡು ಲೋಕಹಿತಕ್ಕಾಗಿ ಅದನ್ನು ಸಮರ್ಪಿಸಿದ ಜೀವಗಳು; ತಮ್ಮ ಸುಖ ಚಿಕ್ಕದು, ಪರರ ದುಃಖ ದೊಡ್ಡದು ಎಂದು ಭಾವಿಸಿಕೊಂಡು ಲೋಕೋಪಕಾರ ಮಾಡಿದ ಜೀವಗಳು; ಜೀವನದ ಜಂಜಡದ ಆವುಗೆಯಲ್ಲಿ ಬೆಂದು ಮನದ ಕಾಳಿಕೆಯನ್ನೆಲ್ಲ ಕಳೆದುಕೊಂಡ ಜೀವಗಳು; ತಮ್ಮ ಜೀವನವನ್ನು ಉಜ್ಜೀವನವನ್ನಾಗಿಸಿಕೊಂಡು ಬದುಕುತ್ತ ಲೋಕವು ಅನುಕರಿಸಬಹುದಾದಂತೆ ಮಾಡಿದ ಜೀವಗಳು. ಅಂತಹ ಪುಣ್ಯಜೀವಗಳ ಚರಿತೆಯನ್ನು ಒತ್ತಟ್ಟಿಗೆ ಜೋಡಿಸಿಕೊಟ್ಟು ಮುಂದಿನ ಪೀಳಿಗೆಗೆ ಪ್ರಣತಾರ್ತಿಹರನ್ ಅವರು ಬಹುದೊಡ್ಡ ಉಪಕಾರ ಮಾಡಿದ್ದಾರೆ.

ಈ ಮಹಾಸಂಪುಟದಲ್ಲಿ ಏನುಂಟು, ಏನಿಲ್ಲ ! ಅಲ್ಲಿ ಸಂಕೇತಿಗಳು ನೆಲೆಗೊಂಡಿದ್ದ ಗ್ರಾಮಗಳ ಸಿಂಹಾವಲೋಕನವಿದೆ. ಸಂಕೇತಿಗಳು ಆ ಗ್ರಾಮಗಳನ್ನು ಅನಿವಾರ್ಯವಾಗಿ ತೊರೆದು ನಗರ, ಮಹಾನಗರ, ದೇಶವಿದೇಶಗಳನ್ನು ಸೇರಿಕೊಂಡ ನೋವಿನಚಿತ್ರಗಳಿವೆ. ಮಾಗಿದ ಹೃದಯಗಳ ಸ್ವಾನುಭವಭರಿತ ಉದ್ಗಾರಗಳು ಮನಸ್ಸನ್ನು ಕಲಕುತ್ತವೆ; ಕಲಕಿ ಕಲಕಿ ಒಳಗಿನ ಕೊಳೆಯನ್ನೆಲ್ಲ ತೊಳೆದು ಹೊರಹಾಕಿ ನಿರ್ಮಲಗೊಳಿಸುತ್ತವೆ.

ಕೆ.ಎಸ್. ಕೃಷ್ಣಮೂರ್ತಿಯವರ 'ಆಡಿದ ಹೊಲ, ಕಂಡ ವಿಚಾರ' ಓದುತ್ತಿದ್ದರೆ ಅಲ್ಲಿನ ಸನ್ನಿವೇಶಗಳೆಲ್ಲ ಲೇಖಕರ ವ್ಯಕ್ತಿಗತ ಹಂತದಿಂದ ಮೇಲೆದ್ದು ಸಾಧಾರಣೀಕರಣಗೊಂಡು, ಗ್ರಾಮಜೀವನವನ್ನುಂಡ ಸರ್ವ ಸಂಕೇತಿಗಳ, ಸರ್ವ ಕನ್ನಡಿಗರ ಸ್ವಾನುಭವಗಳಾಗಿ ಮೈಮರೆಸಿಬಿಡುತ್ತವೆ. ಈಗ ಕೈತುಂಬ ಚಿನ್ನವೇ ಸಿಕ್ಕಿದರೂ ಏನಾಯ್ತು, ಮರೆಯಾದುವಲ್ಲಾ ಆ ಚಿನ್ನದಂತಹ ದಿನಗಳು ಎಂಬ ನೀರವತೆ ಮನವನ್ನು ಆಕ್ರಮಿಸುತ್ತದೆ. ದೆವ್ವಭೂತಗಳು ಇವೆಯೆ ಎಂದು ಪ್ರಶ್ನಿಸುವವರ ಕುತೂಹಲವನ್ನು ತಣಿಸುವ ಸಾಮಗ್ರಿ ಅಲ್ಲಿ ಹದವಾಗಿ ಸೇರಿಕೊಂಡಿದೆ. ಕೆ.ಎಸ್. ಕೃಷ್ಣಮೂರ್ತಿಯವರದೇ 'ಜೀವನೋಲ್ಲಾಸ'ವೂ ಅತ್ಯಂತ ಮನೋಜ್ಞವಾಗಿದೆ. ಸಂಕೇತಿಗಳ ಬದುಕಿನಾನಂದದ ರಹಸ್ಯವೇನಿತ್ತು, ಸರಳವೂ ನಿರಾಡಂಬರವೂ ನಿರುಪದ್ರವಿಯೂ ಆದ ಅವರ ಜೀವನಮಾರ್ಗ ಎಷ್ಟು ಸುವಿಶಾಲವಾಗಿತ್ತು, ಅವರು ತಮ್ಮ ಬದುಕು ಏಕತಾನವಾಗದಂತೆ ವಿವಿಧತೆಯ ಮೆರುಗನ್ನು ಹೇಗೆ ನೀಡಿದ್ದರು, ಅವರು ರೂಢಿಸಿಕೊಂಡಿದ್ದ ದಿನಚರಿಯ ವೈಶಿಷ್ಟ್ಯಗಳೇನು, ಅವರ ಊಟೋಪಚಾರಪ್ರಿಯತೆಯ ಮರ್ಮವೇನು, ಅವರ ಧೀಮಂತಿಕೆಯ ಎತ್ತರಬಿತ್ತರಗಳೇನು ಎಂಬೆಲ್ಲ ವಿಚಾರಗಳ ರಸದರ್ಶನ ಅಲ್ಲಿ ನಮಗಾಗುತ್ತದೆ. ಕಾವ್ಯಮಯವೂ ಪ್ರಾಂಜಲವೂ ಆದ ಆ ನಿರೂಪಣೆ ಮತ್ತೆ ಮತ್ತೆ ಓದಬೇಕೆಂಬ ಹಂಬಲವನ್ನು ಹುಟ್ಟಿಸುತ್ತದೆ. ಆ ಗತವೈಭವವೆಲ್ಲ ಕಾಲಗರ್ಭದಲ್ಲಿ ಕಳೆದು ಹೋದರೂ ಕೃಷ್ಣಮೂರ್ತಿಯವರ ಕೃತಿಕರ್ಮದಿಂದ ಮರುಹುಟ್ಟು ಪಡೆದು ಬಂತಲ್ಲ ಎಂಬ ಆನಂದ ಅಳಿಸಲಾಗದಂತೆ ನಿಲ್ಲುತ್ತದೆ.

ರಂಗಕಲಾವಿದನೊಬ್ಬನು ಜಗದ ಕಹಿಯನ್ನೆಲ್ಲ ನುಂಗಿಕೊಂಡು ನಂಜುಂಡನಾಗಿ, ಮೃತ್ಯುಂಜಯನಾಗಿ, ಲೋಕಪೂಜ್ಯನಾಗುವ ವೈಭವವನ್ನು ಸಾ.ನಾ. ಶ್ರೀಕಂಠಯ್ಯನವರ 'ಕಲೆಯ ಸನ್ನಿಧಿಯಲ್ಲಿ', ಸಹೃದಯರಿಗೆ ಕಟ್ಟಿಕೊಡುತ್ತದೆ. ಶ್ರೀಕಂಠಯ್ಯನವರು ನಾಟಕಕಾರ, ಅವರೇ ನಟ, ಅವರೇ ನಿರ್ದೇಶಕ, ಅವರೇ ಮಿಕ್ಕವರನ್ನು ಗುಡ್ಡೆಹಾಕಬೇಕು, ಅವರೇ ಎಲ್ಲರನ್ನೂ ತಯಾರೂ ಮಾಡಬೇಕು, ಇಷ್ಟೆಲ್ಲ ಆದ ಮೇಲೆ ಕಲಾಭಿಮಾನಿಗಳು ಭಲೇ, ಭೇಷ್ ಎನ್ನುವಂತೆ ಮುಗಿಸಬೇಕು. ಸುಮ್ಮನಾಯಿತೇ ಈ 'ದಶಾವತಾರ', ಬಡವನ ಪಾಲಿಗೆ ಬಿದ್ದೀತೇ ಆ 'ವಿಜಯಮಾಲೆ!' ಏನು ಬಹುಮುಖ ಪ್ರತಿಭಾವಂತರಪ್ಪಾ ಈ ಜನ ಎಂದು ಓದುತ್ತ ಓದುತ್ತ ನಾವು ಮೂಕವಿಸ್ಮಿತರಾಗುತ್ತೇವೆ. ಗಳಿಗೆಗೊಮ್ಮೆ

ಪಂಚೆಯನ್ನು ಮೇಲೆತ್ತಿ ಕಟ್ಟುವ, ಮತ್ತೆ ಆಗಲೇ ಇಳಿಬಿಡುವ 'ಅಭ್ಯಾಸ'ವಿರುವ ಪುರುಷನಿಂದ ದ್ರೌಪದಿಯ ಪಾತ್ರ ಮಾಡಿಸುವುದೆಂದರೆ ಭಗೀರಥನೂ ಸೋತುಸುಣ್ಣವಾಗಬೇಕು! ಆದರೆ ಶ್ರೀಕಂಠಯ್ಯನವರು ಅಂಥದರಲ್ಲೂ ಜಯಗಳಿಸಿರುವ ಕಲಾತಪಸ್ವಿ! ಹಾಸ್ಯರಸದ ಹೊನಲೇ ಅಲ್ಲಿ ಹರಿದಿದೆ!

ಕವಿಹೃದಯಸಂಪನ್ನರಾದ ಆರ್.ವಿ. ಶ್ರೀನಿವಾಸಯ್ಯನವರ 'ಮಾಗಿದ ಬದುಕು' ಓದುವಾಗ ಯಾವುದೋ ಅಪೂರ್ವವಾದ ಲೋಕದಲ್ಲಿ ವಿಹಾರಮಾಡಿದ ದಿವ್ಯಾನುಭವ ನಮಗೆ ಲಭ್ಯವಾಗುತ್ತದೆ; ಗಾನವಿಮಾನದಲ್ಲಿ ನಾವು ತೇಲಾಡುತ್ತೇವೆ; ನಾವೂ ಕವಿತೆ ಬರೆಯಬಾರದೇಕೆ, ಪ್ರಣತಾರ್ತಿಹರನ್ ಅವರ ಕೈಗೆ ಕೊಡಬಾರದೇಕೆ ಎಂದೆಲ್ಲ ಆಸೆಯ ಗರಿಗಳನ್ನಲ್ಲಿ ಚಿಗುರಿಸಿಕೊಳ್ಳುತ್ತೇವೆ. ಬದುಕಿನ ದುಃಖದುಮ್ಮಾನಗಳನ್ನು ಕಾವ್ಯರಚನಾಸಕ್ತಿ ಹೇಗೆ ತಿಳಿಗೊಳಿಸಿಕೊಡುತ್ತದೆ ಎಂಬುದನ್ನು ಶ್ರೀನಿವಾಸಯ್ಯನವರ ಮಾಗಿದ ಬದುಕಿನಿಂದ ಅರ್ಥಮಾಡಿಕೊಳ್ಳುತ್ತೇವೆ. ಮೃದುಮಧುರವಾದ ಹಾಸ್ಯ ಉದ್ದಕ್ಕೂ ಉಕ್ಕುತ್ತದೆ.

ಕೆ.ಎಸ್.ವೆಂಕಟರಾಮಯ್ಯನವರ 'ಜೀವನಗಾಥೆ' ಎಂಬುದು ಬದುಕಿನ ದಿವ್ಯತೆ, ಭರವಸೆ, ಪ್ರಸನ್ನತೆಗಳಿಗೆ ಇಂಬುಕೊಡುವ ಮನೋಜ್ಞ ಘಟನೆಗಳಿಂದ ತುಂಬಿತುಳುಕುತ್ತಿದೆ. ತಾಳ್ಮೆಯೆಂಬುದು ಕಹಿಯಾದರೂ ಅದು ಹೇಗೆ ಬದುಕಿನಲ್ಲಿ ಮುಂದುಮುಂದಕ್ಕೆ ಸತ್ಫಲಗಳನ್ನು ನೀಡುತ್ತದೆಯೆಂಬುದನ್ನು ವೆಂಕಟರಾಮಯ್ಯನವರ ಬದುಕಿನ ಘಟನಾವಳಿಗಳಿಂದ ಕಲಿಯಬೇಕು. ಅವ್ಯಾಜ ಮಾನವಪ್ರೇಮಿಯೊಬ್ಬನು ಹೇಗಿರುತ್ತಾನೆ, ಗಾಂಧೀವಾದದಿಂದ ಪ್ರಭಾವಿತನಾದ ರಚನಾತ್ಮಕ ಕಾರ್ಯಕರ್ತನೊಬ್ಬನು ಹೇಗಿರುತ್ತಾನೆ, ಪ್ರಾಮಾಣಿಕವಾದ ಉಪಾಧ್ಯಾಯನೊಬ್ಬನು ಹೇಗಿರುತ್ತಾನೆ ಎಂಬ ಪ್ರಶ್ನೆಗಳಿಗೆಲ್ಲ ವೆಂಕಟರಾಮಯ್ಯನವರ ಜೀವನಗಾಥೆಯೊಂದು ಮಾದರಿ ಉತ್ತರ, ಅದೊಂದು ಜೀವಂತ ಆದರ್ಶ.

ಹೊಸಹೊಸದನ್ನು ಕಾಣುವ, ಹೊಸಹೊಸದನ್ನು ಕಟ್ಟುವ, ಹೊಸ ಹೊಸದನ್ನು ಕಲಿಸುವ ಮಹಾಪುರುಷರು ಹೊರಜಗತ್ತನ್ನು ಕಾಣುವ ದೃಷ್ಟಿ ಹೇಗಿರುತ್ತದೆ, ಅವರು ಸತ್ಯಶಿವಸುಂದರಗಳನ್ನು ತಮ್ಮ ಬದುಕಿನಲ್ಲಿ ಹೇಗ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ, ಅವರ ಹಿತೋಪದೇಶಗಳು, ಎಷ್ಟು ಚೇತೋಹಾರಿಯಾಗಿರುತ್ತವೆ ಎಂಬುದಕ್ಕೆ ರಾಮೇಶ್ವರ ಅವಧಾನಿಗಳ 'ತೇನ ವಿನಾ' ಸಾಕ್ಷಿಯಾಗಿದೆ.

ಒಬ್ಬ ಕಲಾರಾಧಕನ ಚಿತ್ತವೃತ್ತಿಗಳು ಹೇಗೆ ಪ್ರವಹಿಸುತ್ತವೆ, ಲೋಕದ ಜನರಿಂದ ಅವನು ಏನನ್ನು ಬಯಸುತ್ತಾನೆ, ಬಯಸಿದ್ದು ದೊರೆತಾಗ ಹೇಗೆ ಸಂತೋಷದಲ್ಲಿ ಮೈಮರೆಯುತ್ತಾನೆ, ವಿಷಮ ಸನ್ನಿವೇಶಗಳಲ್ಲಿ ಎರಗಿದ ನೋವನ್ನು ನುಂಗುವಾಗ ಹೇಗೆ ತಳಮಳಗೊಳ್ಳುತ್ತಾನೆ ಎಂಬ ಮನೋವಿಜ್ಞಾನವನ್ನೆಲ್ಲ ಅರಿಯುವ ಆನಂದ ನಮಗೆ ಹೊಸಹಳ್ಳಿ ಕೇಶವಮೂರ್ತಿಯವರ 'ಗಮಕ ಕಲಾರಾಧನೆ'ಯಿಂದ ಲಭ್ಯವಾಗುತ್ತದೆ.

ಮಾರ್ಕಂಡೇಯ ಅವಧಾನಿಗಳ 'ತುಂಗೆಯ ಮಡಿಲಲ್ಲಿ' ಈ ಸಂಪುಟದ ಅತಿದೊಡ್ಡ ರಸಾಯನ. ಹಿರಿಯರನ್ನು ಗೌರವಿಸುವ ಮೌಲ್ಯಕ್ಕೆ, ಅವರ ಬೇಕು ಬೇಡಗಳಿಗೆ ಸ್ಪಂದಿಸುವ ಕಾರ್ಯಕ್ಕೆ, ಅವರ ಜೀವನಾದರ್ಶಗಳನ್ನು ಉಪಾದೇಯವೆಂದು ತಮ್ಮ ಬದುಕಿಗೆ ಹೊಂದಿಸಿಕೊಳ್ಳುವ ಹಾರೈಕೆಗೆ ಮಾರ್ಕಂಡೇಯರ ತುಂಗೆಯ ಮಡಿಲಿಗೆ ಶರಣಾಗದೆ ಅನ್ಯಮಾರ್ಗವಿಲ್ಲ. ಅದನ್ನೊಂದು ಆತ್ಮಕಥೆಯೆನ್ನುತ್ತೀರಾ, ಆತ್ಮಕಥೆಯ ವೇಷದಲ್ಲಿರುವ ಕಾದಂಬರಿಯೆನ್ನುತ್ತೀರಾ, ಜೀವನಚಿತ್ರಗಳ ಲಲಿತಪ್ರಬಂಧ ಸಂಕಲನವೆನ್ನುತ್ತೀರಾ - ಏನಾದರೂ ಹೇಳಿ, ಅವೆಲ್ಲವೂ ತುಂಗೆಯ ಮಡಿಲಲ್ಲಿ ಮೆರುಗುವಡೆಯುತ್ತವೆ. ದೈವಕೃಪೆಯೆನ್ನುವುದು ಕೇವಲ ಕಾಕತಾಳೀಯವಲ್ಲ, ಅದು ಚಿತ್ತಗೋಚರವಾಗುವಂತೆ ಕಣ್ಣೆದುರಿಗೇ ನಿಚ್ಚಳವಾಗಿ ಅನಾವರಣಗೊಳ್ಳುವಂಥದು ಎಂಬುದನ್ನು ಅವಧಾನಿಗಳ ಸ್ವಾನುಭವಭರಿತ ಘಟನಾವಳಿಗಳಿಂದ ಮನವರಿಕೆ ಮಾಡಿಕೊಳ್ಳಬೇಕು. ರಥದಿಂದ ಉರುಳಿಕೊಂಡರೂ ಬದುಕಿ ಮೇಲೆದ್ದ ಬಾಲಕನ ವೃತ್ತಾಂತವನ್ನು ಅರಿಯಬೇಕು. ಅಗೋಚರ ಶಕ್ತಿಯೊಂದು ಹೇಗೆ ಸದಾಕಾಲ ನಮ್ಮ ಬೆಂಗಾವಲಾಗಿರುತ್ತದೆಯೆಂಬುದಕ್ಕೆ ಮಾರ್ಕಂಡೇಯ ಅವಧಾನಿಗಳು ಕಠಿಣವಾದ ಶಸ್ತ್ರಚಿಕಿತ್ಸೆಗೆ ಒಳಗಾದ ಸನ್ನಿವೇಶದಲ್ಲಿ ಅವರ ಕನಸಿನಲ್ಲಿ ಮೂಡಿಬಂದಂತಾದ ಶ್ಲೋಕವೊಂದನ್ನು ಪರಿಭಾವಿಸಬೇಕು. ತಮ್ಮ ಸಂಪರ್ಕಕ್ಕೆ ಬಂದವರನ್ನೆಲ್ಲ ಹೇಗೆ ತಮ್ಮ ಸಂಪ್ರೀತಿಯ ತೆಕ್ಕೆಗೆ ಅವರು ಸೆಳೆದುಕೊಂಡಿದ್ದಾರೆಂಬುದರಿಂದ ಪಾಠಕಲಿಯಬೇಕು. ತುಂಗೆಯ ಮಡಿಲಿನ ಎರಡು ಗ್ರಾಮಗಳ ಮನಮೋಹಕವಾದ ಅದೆಷ್ಟೋ ಶಬ್ದಚಿತ್ರಗಳು ಈ ಕಥನದಲ್ಲಿ ಅಪ್ರಯತ್ನಪೂರ್ವಕವಾಗಿ ಜೋಡಣೆಗೊಂಡಿವೆ.

ಈ ಸಂಪುಟದಲ್ಲಿ ಬಿಡಿಬಿಡಿಯಾದ ಜೀವನಚಿತ್ರಗಳಿದ್ದರೂ ಅವೆಲ್ಲವುಗಳಲ್ಲಿ ಯಾವುದೋ ಅವ್ಯಕ್ತವಾದ, ಗುಪ್ತಗಾಮಿನಿಯಾದ, ಲೋಕಮಂಗಳಕಾರಿಯಾದ ಸದಾಶಯಗಳು ನಿರ್ಮಲ ಗಂಗಾಧಾರೆಯಂತೆ ಶಾಂತವಾಗಿ ಹರಿಯುತ್ತಿರುವುದನ್ನು ಸಹೃದಯರು ಗುರುತಿಸಬಹುದಾಗಿದೆ. ಜೀವನೋತ್ಸಾಹ, ಜೀವನಪ್ರೀತಿಗಳನ್ನು ನವೀಕರಣಗೊಳಿಸುವ ಜೀವನಮೌಲ್ಯಗಳಿಂದ ಅವು ತುಂಬಿತುಳುಕುತ್ತಿವೆ.

ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ
ಕರೋತಿ ಪ್ರೀತಿಂ ಕೀರ್ತಿಂ ಚ ಸಾಧುಕಾವ್ಯನಿಬಂಧನಮ್ ॥

ಎಂಬ ನಮ್ಮ ಕಾವ್ಯಮೀಮಾಂಸಕರು ಹೇಳುವ ಕಾವ್ಯಪ್ರಯೋಜನದ ಮಾತಿಗೆ ಕೊಂಚವೂ ಲೋಪವಿಲ್ಲದಂತೆ ಈ ಸಂಪುಟವು ಸಂಘಟಿತವಾಗಿದೆ.

ಕಥಾಕೋಶಗಳಲ್ಲಿ ಬರುವ ತ್ರಿವಿಕ್ರಮನೆಂಬುವವನು ತನ್ನ ಛಲಗಾರಿಕೆಗೆ ಪ್ರಸಿದ್ಧನಾಗಿದ್ದಾನೆ. ನಮ್ಮ ಪ್ರಣತಾರ್ತಿಹರನ್‌ರಾದರೋ ಆ ತ್ರಿವಿಕ್ರಮನನ್ನೂ ಹಿಂದೆಹಾಕಿರುವ ಛಲವಂತರೆಂದರೆ ಅತಿಶಯೋಕ್ತಿಯಲ್ಲ. ಇಷ್ಟೊಂದು ವೈವಿಧ್ಯಮಯವಾದ, ನವರಸಭಾವಗಳು ಉಕ್ಕಿಹರಿಯುವ, ಹೃದಯಸ್ಪರ್ಶಿಯಾದ, ಬೋಧಪ್ರದವಾದ ಕಥಾನಕಗಳನ್ನು ಸಂಪುಟವಾಗಿ ಒಗ್ಗೂಡಿಸಿ, ಕೆಲವನ್ನು ಈ ಸಂಪುಟಕ್ಕೆಂದೇ ಬರೆಯಿಸಿ ಮಾಡಿರುವ ಉಪಕಾರ ಎಷ್ಟು ಬಣ್ಣಿಸಿದರೂ ತೀರದು. ಯಾರೇ ಬಯಸಲಿ ಬಯಸದಿರಲಿ, ಯಾರೇ ಬೆನ್ನು ತಟ್ಟಲಿ ತಟ್ಟದಿರಲಿ, ಪ್ರಣತಾರ್ತಿಹರನ್ ಮಾತ್ರ ಇದೇ ನನ್ನ Life Mission ಎನ್ನುವ ಹಾಗೆ ಈ ಮಹತ್ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಎಲ್ಲ ಕನ್ನಡಿಗರೂ ಅವರ ಈ ಕರ್ಮಯೋಗಕ್ಕೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ.

ಈ ಸಂಪುಟದ ಸಂಪಾದಕರಾದ ಎನ್.ಎಸ್. ಶಾರದಾ ಪ್ರಸಾದ್ ಅವರಿಗೂ, ಕೆಲವು ಆತ್ಮಚರಿತ್ರೆಗಳನ್ನು ಮಾತಿನಿಂದ ಕೃತಿಗಿಳಿಸಿರುವ ಸೋದರಿ ಸುಮನಾವಿಶ್ವನಾಥ್ ಅವರಿಗೂ ಕೃತಜ್ಞತೆಗಳು ಸಲ್ಲಬೇಕಾಗಿದೆ.

ಈ ಸಂಪುಟದ ಎಲ್ಲ ಪುಟಗಳನ್ನೂ ತಪ್ಪದೆ ಓದಬೇಕು, ಓದುತ್ತಿರಬೇಕು, ಓದುತ್ತಲೇ ಇರಬೇಕು!

☆☆☆

ಆಕಾಶವಾಣಿ
ಮೈಸೂರು

ಡಾ॥ ಎಂ.ಎಸ್. ವಿಜಯಾ ಹರನ್
ನಿರ್ದೇಶಕರು

ಒಂದು ಜನ-ಸಮುದಾಯದ ಅಧ್ಯಯನದ ದೃಷ್ಟಿಯಿಂದ ಇದೊಂದು ಹೊಸ ಮಾದರಿ; ಅಧ್ಯಯನಶೀಲರ ಕುತೂಹಲದ ಕಣ್ಣಿಗೆ ತಾಜಾ ನಿದರ್ಶನ. ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಬಹುದಾದ ವಿಷಯರಾಶಿಯು ಇಲ್ಲಿ ಇತಿವೃತ್ತಗಳ ಮೂಲಕ ಬಂದೊದಗಿದೆ. ಅತಿ ಪುಟ್ಟ ಸಮುದಾಯವಿದು; ಇಲ್ಲಿ ಎಲ್ಲರ ವೃತ್ತಾಂತಗಳೂ ಎಲ್ಲರಿಗೂ ತಿಳಿದಂಥವೇ. ಹಾಗಾಗಿ ಈಗಲೂ ನಮ್ಮೊಡನಿರುವ ಲೇಖಕರ ಸಮಕಾಲೀನರ ಸಮಕ್ಷಮದಲ್ಲಿ ಇದಕ್ಕೊಂದು ಅಧಿಕೃತತೆಯ ಮುದ್ರೆ ಬಿದ್ದಿದೆ; ಸಂಕೇತಿ ಅಧ್ಯಯನವನ್ನು ಕಾಲು ಶತಮಾನದಿಂದ ಮುಂದುವರಿಸಿಕೊಂಡು ಬಂದಿರುವ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅವರು ತಮ್ಮ ಆಳವೂ ವ್ಯಾಪಕವೂ ಆದ ಅನುಭವದ ಹಿನ್ನೆಲೆಯಲ್ಲಿ ಅದನ್ನು ದೃಢಗೊಳಿಸಿದ್ದಾರೆ. ಶ್ರೀ ಎನ್.ಎಸ್. ಶಾರದಾ ಪ್ರಸಾದ್ ತಮ್ಮ ಕ್ಷ-ಕಿರಣದಂಥ ಅವಲೋಕನ ಸಾಮರ್ಥ್ಯದ ಮೂಲಕ ಅದನ್ನು ಸಾಕ್ಷಿಪ್ರಜ್ಞೆಯಿಂದ ಪರಿಷ್ಕರಿಸಿದ್ದಾರೆ. ಪುಟ್ಟಪುಟ್ಟ ವಿವರಗಳ ಕುಸುರಿ ಕೆಲಸಗಳ ಮಹಾರಾಶಿ ಇಲ್ಲಿದೆ; ಅವೆಲ್ಲ ಸೇರಿ ಅದ್ಭುತವಾದ ವಾಸ್ತುವೊಂದು ಇಲ್ಲಿ ನಿರ್ಮಾಣವಾಗಿದೆ. ಕತ್ತಲಲ್ಲಿ ಕರಗಿ ಹೋಗಬಹುದಾಗಿದ್ದ ವಿವರಗಳ ಮೇಲೆ ಬೆಳಕುಚೆಲ್ಲಿ ಒಂದು ಜೀವನವಿಧಾನವನ್ನೇ ಇಲ್ಲಿ ಕಟ್ಟಿಕೊಡಲಾಗಿದೆ. ಇದು ಒಂದು ಪುಟ್ಟ ಸಮುದಾಯದ ಸುಮಾರು ಎರಡು ಶತಮಾನಗಳ ದೀರ್ಘ ಕಾಲಾವಧಿಯ ಜೀವನ ಚಿತ್ರಣವಾಗಿದೆ; ಇದು ಹಲವು ಶತಮಾನಗಳ ವಿದ್ಯಮಾನದ ಮುಂದುವರಿಕೆಯಾದುದರಿಂದ ಇಲ್ಲಿ ಸಾಮಾಜಿಕ ಇತಿಹಾಸದ ಸುಳುಹೂ ಇದೆ; ಸುತ್ತಣ ಒಟ್ಟು ಸಮಾಜದ ಇರಸರಿಕೆಗಳ ಕಲ್ಪನೆಯನ್ನೂ ಇದು ಒಡಮೂಡಿಸುತ್ತದೆ. 'ಸಂಕೇತಿ ಅಧ್ಯಯನ'ದ ಹಲವು ಸಾರ್ಥಕ ಪ್ರಯೋಗಗಳಿಗೆ ಇದೊಂದು ಒಳ್ಳೆಯ ಸೇರ್ಪಡೆಯಾಗಿದೆ.

☆☆☆

ಭಾರತೀಯ ವಿದ್ಯಾಭವನ
ಬೆಂಗಳೂರು

ಡಾ॥ ಮತ್ತೂರು ಕೃಷ್ಣಮೂರ್ತಿ
ಕಾರ್ಯನಿರ್ವಾಹಕ ನಿರ್ದೇಶಕರು

ಮಾರ್ಕಂಡೇಯ ಅವಧಾನಿಗಳು ಹೊರತೆಗೆದಿರುವ ನೆನಪಿನ ಮಾಲೆಯಲ್ಲಿಯೂ ತಾವು ಕಂಡ ತಮ್ಮೂರಿನ ಹಿರಿಯರ ವ್ಯಕ್ತಿವಿಶೇಷಗಳು ಹೆಚ್ಚಾಗಿವೆ! ಹಾಗೆ ಹಿರಿಯರ ವಿಷಯಗಳನ್ನು ಹೇಳುವಾಗ ತಾವು ಯಾರಿಗೂ ಹೇಗೂ ನೋವುಂಟು ಮಾಡುತ್ತಿಲ್ಲವಷ್ಟೇ ಎನ್ನುವುದು ಇವರ ಅಮಿತ ಕಾಳಜಿ, ಧರ್ಮಭೀರುತನ! ಆದರೆ ಇಲ್ಲಿನ ವ್ಯಕ್ತಿಚಿತ್ರಗಳು ಯಾವುವೂ ಕಾಲ್ಪನಿಕವಲ್ಲ. ಎಲ್ಲರನ್ನೂ ಇವರು ಕಂಡುಕೇಳಿರುವಂಥದು. ವಾಸ್ತವವನ್ನು ಹೇಳಿರುವಂಥದು. ನಿಜಕ್ಕೂ.... ಬಹಳ ಪ್ರೀತಿಯಿಂದ ತಮ್ಮೂರಿನ ಹಿರಿಯರ ಬಗ್ಗೆ ಹೇಳಿರುವುದು 'ತುಂಗೆಯ ಮಡಿಲಲ್ಲಿ'ನ ಅವಳ ಎಲ್ಲ ಮಕ್ಕಳನ್ನೂ ನೆನೆದಂತೆ ಇದೆ! ನಮ್ಮೂರಿನ ಚಿತ್ರ ತೆಗೆದಿರಿಸಿದಂತಿದೆ! ಈ ಚಿತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತಿದೆ ಎಂದು ನನ್ನ ನಂಬಿಕೆ.

ಆ. ಸಂಕೇತಿ : ಶತಮಾನದ ಪತ್ರಗಳು

ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

ಡಾ|| ಬಿ.ವಿ. ಸುಧಾಮಣಿ
ಇತಿಹಾಸ ಪ್ರಾಧ್ಯಾಪಕರು

ಶತಮಾನದ ಪತ್ರಗಳಲ್ಲಿ ಸಂಕೇತಿ ಸಮಾಜ – ಒಂದು ಅವಲೋಕನ

ಪ್ರಸ್ತುತ ಲೇಖನವು ಕರ್ನಾಟಕದ ಸ್ಮಾರ್ತ ಬ್ರಾಹ್ಮಣ ಪಂಗಡಕ್ಕೆ ಸೇರಿರುವ ಸಂಕೇತಿ ಜನಾಂಗದವರ ೧೦೦ ವರ್ಷಗಳ ಕೌಟುಂಬಿಕ ವ್ಯವಹಾರ ಪತ್ರಗಳನ್ನು ಅವಲಂಬಿಸಿದೆ[೧]. ಕುತೂಹಲಕ್ಕಾಗಿ ಡಾ. ಪ್ರಣತಾರ್ತಿಹರನ್‌ರವರು ಸಂಪಾದಿಸಿರುವ ಸಂಕೇತಿ - ಶತಮಾನದ ಪತ್ರಗಳು ಎಂಬ ಸಂಪುಟವನ್ನು ಓದುವ ಸಂದರ್ಭದಲ್ಲಿ ನೂರು ವರ್ಷಗಳ ಕಾಲಾವಧಿಯ ಈ ಪತ್ರಗಳು ಸಂಕೇತಿ ಸಮುದಾಯದ ಸಾಮಾಜಿಕ ಪ್ರತಿಬಿಂಬಗಳಂತೆ ಕಂಡುಬಂದವು. ಕ್ರಿ.ಶ. ೧೮೯೧-೧೯೯೧ರವರೆಗಿನ ಪತ್ರಗಳಲ್ಲಿ ಅವರ ಸಾಮಾಜಿಕ ಸಂಸ್ಕಾರಗಳು, ಹವ್ಯಾಸಗಳು, ವಿಶೇಷ ತಿನಿಸುಗಳು, ವ್ಯವಸಾಯ, ಅವರು ಅನುಭವಿಸಿದ ಕ್ಷಾಮಡಾಮರಗಳು, ಪ್ಲೇಗು-ಸಿಡುಬು ಮುಂತಾದ ರೋಗಬಾಧೆಗಳು, ಬಡತನ, ನಿರುದ್ಯೋಗ, ಆಧುನಿಕ ವಿದ್ಯಾಭ್ಯಾಸ ಪಡೆಯಲು ಪಟ್ಟ ಕಷ್ಟ ಕಾರ್ಪಣ್ಯಗಳು, ತಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಕಾಪಾಡಿಕೊಳ್ಳಲು ಅವರು ಪಟ್ಟ ಶ್ರಮ, ಸಮಕಾಲೀನ ಆ ಪ್ರಾಂತ್ಯದ ಮಳೆ-ಬೆಳೆ ಹಾಗೂ ಧಾನ್ಯಗಳ ಬೆಲೆ ಇತ್ಯಾದಿ ಹತ್ತು ಹಲವು ವಿಚಾರಗಳ ಬಗೆಗೆ ಸ್ಥೂಲವಾಗಿ ತಿಳಿಯಬಹುದಾಗಿದೆ. ಪತ್ರ ಬರೆಯುವ ಸಂದರ್ಭದಲ್ಲಿ ಅವರಾರೂ ಮುಂದೊಂದು ದಿನ ತಮ್ಮ ಪತ್ರಗಳು ಒಂದು ಸಂಪುಟ ಅಥವಾ ಲೇಖನದ ರೂಪದಲ್ಲಿ ಪ್ರಕಟವಾಗುತ್ತದೆಂದು ತಿಳಿದಿದ್ದವರಲ್ಲ. ಹೀಗಾಗಿ ಪತ್ರಗಳ ಮಾಹಿತಿಗಳು ಅವರ ಸಮಾಜದ ನೈಜಚಿತ್ರಣವನ್ನು ನೀಡುವಲ್ಲಿ ಸಹಕಾರಿಯಾಗಿವೆ.

ಈ ಪತ್ರಗಳು ಸಂಸ್ಕೃತ, ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿವೆ. ಶೈಲಿ ಉತ್ತಮವಾಗಿದ್ದು ಹಾಸ್ಯ, ವ್ಯಂಗ್ಯ, ಸಂತೋಷ ದುಃಖ ಇತ್ಯಾದಿಗಳ ನೋಟ ನೀಡುತ್ತದೆ. ಮೂಲತಃ ಅಡಿಕೆ ತೋಟ ಮಾಡುವ ಕೃಷಿಕರಾಗಿದ್ದರೂ ಅವರ ಕನ್ನಡ ಭಾಷಾ ಶೈಲಿ ಉತ ಷ್ಟವಾಗಿತ್ತೆಂಬುದಕ್ಕೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ನೀಡಬಹುದಾಗಿದೆ. ನಗರದಲ್ಲಿ ನೌಕರಿಯಲ್ಲಿದ್ದ ಆಧುನಿಕವಿದ್ಯೆ ಗಳಿಸಿದ್ದ ಯುವಕನೊಬ್ಬ ತನ್ನ ಗ್ರಾಮದಲ್ಲಿದ್ದ ರೈತಮಿತ್ರನಿಗೆ ಪತ್ರ ಬರೆದು ವಿವಾಹವಾದ ನಂತರ ತನ್ನನ್ನು ಮರೆತಿದ್ದಾನೆಂದು ಆಕ್ಷೇಪ ಮಾಡಿದ್ದ ಸಂದರ್ಭದಲ್ಲಿ ಗ್ರಾಮದ ಯುವಕ ತನ್ನ ಸ್ನೇಹಿತನಿಗೆ 'ಮಿತ್ರಾ! ಮಗ್ಗುಲಲ್ಲಿರುವ ನವಮಣಿಯ ಮೇಲ್ಮೆಯ ಬೆಡಗಿನ ಬಿನ್ನಾಣದ ಮಧುರಾಧರದ ಹೊಳಪಿಗೆ ಸೋತು ಆಜನ್ಮ ಮಿತ್ರರತ್ನವನ್ನು ಮರೆಯುವಂಥಾ ಕುಲಹೇಡಿಯಾದ ಮಿತ್ರದ್ರೋಹಿ ಎಂದು ನನ್ನನ್ನು ಭಾವಿಸಿದೆಯಾ?'[೨] ಎಂದು ಉತ್ತರಿಸಿರುವ ರೀತಿ ಪ್ರಶಂಸಾರ್ಹ.

೨೦ನೇ ಶತಮಾನದ ಪೂರ್ವಭಾಗದ ಪತ್ರಗಳಲ್ಲಿ ಸಂಕೇತಿಗಳು ಪರಂಪರಾನುಗತವಾಗಿ ಬಂದಿದ್ದ ಸಂಸ್ಕಾರಗಳಿಗೆ ಹೆಚ್ಚು ಮಹತ್ವ ನೀಡಿದ್ದರೆಂಬುದು ಕಂಡುಬರುತ್ತದೆ. ವಿವಾಹ, ಸೀಮಂತ, ಚೌಲ, ನಾಮಕರಣ, ಇತ್ಯಾದಿ ಹಲವು ಹತ್ತು ಸಂಸ್ಕಾರಗಳನ್ನು ಹಾಗೂ ಹೋಮ ಹವನಾದಿಗಳನ್ನು ನಿಗದಿತ ಸಂದರ್ಭಗಳಲ್ಲಿ ತಪ್ಪದೇ ಆಚರಿಸುತ್ತಿದ್ದರು. ಆದರೆ ೧೯೪೦ರ ದಶಕದ ಹಾಗೂ ನಂತರದ ಪತ್ರಗಳಲ್ಲಿ ಅವರ ಅನೇಕ ಆಚರಣೆಗಳನ್ನು ಸಂದರ್ಭಕ್ಕನುಗುಣವಾಗಿ ಸಡಿಲಿಸಿರುವ ಮಾಹಿತಿಗಳು ದೊರಕುತ್ತವೆ. ಇಲ್ಲಿ ಅಂತಹ ಒಂದೆರಡು ದೃಷ್ಟಾಂತಗಳನ್ನು ನೀಡಬಹುದು. ವಿವಾಹ ಆಚರಣೆಗೆ ಸಂಬಂಧಿಸಿದಂತೆ ಬಾಲ್ಯವಿವಾಹವು ರೂಢಿಯಲ್ಲಿತ್ತು. ವಿದ್ಯಾರ್ಥಿಗಳೂ ಕೂಡ ವಿವಾಹಿತರಾಗಿದ್ದರೆಂಬುದಕ್ಕೆ ಹಲವಾರು ಪತ್ರಗಳಲ್ಲಿ ಮಾಹಿತಿ ಲಭ್ಯವಿದೆ.[೩] ಹಾಗೆಯೇ ವಿವಾಹದ ಲಗ್ನಪತ್ರಿಕೆಯನ್ನು ಪೋಸ್ಟ್ ಕಾರ್ಡ್ ಬಳಕೆಗೆ ಬಂದ ದಿನಗಳಲ್ಲಿ ಅದರಲ್ಲೇ ಬರೆದು ಪ್ರತಿಯೊಬ್ಬ ಬಂಧುವಿಗೂ ಕಳುಹಿಸುತ್ತಿದ್ದರು. ವರನ ತಂದೆ ತಾಯಿಗಳೆ ಕನ್ಯೆಯನ್ನು ನೋಡಿ ವಿವಾಹ ನಿಶ್ಚಯ ಮಾಡುತ್ತಿದ್ದರು. ಪತ್ರ ಒಂದರಲ್ಲಿ ತಂದೆಯು ವಿದ್ಯಾಭ್ಯಾಸ ಮಾಡುತ್ತಿದ್ದ ನಗರದಲ್ಲಿದ್ದ ಮಗನಿಗೆ 'ನಿನ್ನ ವಿವಾಹಕ್ಕೆ ತಪ್ಪದೇ ಬಾ' ಎಂದು ಬರಿದ್ದಾರೆ.[೪] ವಾಸ್ತವವೆಂದರೆ ಆ ವಿದ್ಯಾರ್ಥಿಗೆ ತನ್ನ ವಿವಾಹಕ್ಕೆ ಪ್ರಯತ್ನ ನಡೆದಿರುವ ವಿಚಾರವೇ ತಿಳಿದಿದ್ದಂತಿಲ್ಲ. ಹಾಗೇ ವರದಕ್ಷಿಣೆ ಪಡೆಯುವುದೂ ಸರ್ವೇ ಸಾಮಾನ್ಯವಾಗಿತ್ತು. ಕನ್ಯೆ ಒಳ್ಳೆ ಕುಲದವಳಾಗಿದ್ದು ಗೃಹಕೃತ್ಯಗಳಲ್ಲಿ ತೊಡಗಿದ್ದರೆ ಸಾಕೆಂಬ ಭಾವನೆ ಇತ್ತು. ವಿವಾಹಕ್ಕೆ ಸಂಬಂಧಿಸಿರುವ ಈ ಆಚರಣೆಗಳಲ್ಲಿ ೧೯೪೦ರ ದಶಕದಿಂದೀಚೆಗೆ ಹಲವಾರು ಬದಲಾವಣೆಗಳನ್ನು ಪತ್ರಗಳಲ್ಲಿ ಗುರ್ತಿಸಬಹುದು. ಬಾಲ್ಯವಿವಾಹದ ಸ್ಥಾನದಲ್ಲಿ ವರನು ವಿದ್ಯಾಭ್ಯಾಸ ಮುಗಿದ ನಂತರ ಅಥವಾ ಒಂದು ನೌಕರಿ ಹೊಂದಿದ ನಂತರ ವಿವಾಹ ಮಾಡಿಕೊಳ್ಳತೊಡಗಿದುದು ಗಮನಿಸಬೇಕಾದ ಅಂಶ. ಅದೇ ರೀತಿ ಮುದ್ರಣದ ಸೌಲಭ್ಯದ ಅರಿವಾದ ನಂತರ ಲಗ್ನಪತ್ರಿಕೆಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಗಳೆರಡರಲ್ಲೂ ಅಚ್ಚು ಹಾಕಿಸಲಾರಂಭಿಸಿದುದು[೫] ವಿವಾಹ ಆಗಬಯಸುವ ಹುಡುಗ ಹುಡುಗಿಯ ಆಯ್ಕೆಯ ಬಗೆಗೆ ತನ್ನ ನಿಲುವನ್ನೂ ವ್ಯಕ್ತಪಡಿಸಲಾರಂಭಿಸಿದುದು[೬], ಕೇವಲ ದ್ರವ್ಯಕನ್ಯೆ ತರುವುದರಿಂದ ಗೃಹಸೌಖ್ಯ ಸಾಧ್ಯವಿಲ್ಲವೆಂಬ ಅರಿವು[೭], ಕನ್ಯೆ ಸತ್ಕುಲದವಳಾಗಿರುವುದರ ಜೊತೆಗೆ ಎಸ್.ಎಸ್.ಎಲ್.ಸಿ. ವರೆಗೆ ಓದಿರಬೇಕೆಂಬ ಷರತ್ತು ಹಾಕಿರುವುದು[೮], ಜಾತಕ ವಿಷಯದಲ್ಲಿ ಸಡಿಲಿಕೆ ಇತ್ಯಾದಿ ಬೆಳವಣಿಗೆಗಳನ್ನು, ಬದಲಾವಣೆಗಳನ್ನು ಗುರ್ತಿಸಬಹುದಾಗಿದೆ.

ಕೆಲವು ಪತ್ರಗಳು ಅವರ ಹವ್ಯಾಸಗಳು, ವಿಶೇಷವಾದ ತಿನಿಸುಗಳು ಮತ್ತು ಕೆಲವು ಸಂಪ್ರದಾಯಗಳನ್ನು ಇಂದಿಗೂ ತಪ್ಪದೇ ಆಚರಿಸಿಕೊಂಡು ಬರುತ್ತಿರುವ ಬಗ್ಗೆ ಅರಿವು ಮೂಡಿಸುತ್ತವೆ. ಹವ್ಯಾಸಗಳಲ್ಲಿ ನಶ್ಯ ಸೇದುವುದು, ಇಸ್ಪೀಟ್ ಆಡುವುದು, ಎಲೆ ಅಡಿಕೆ ಹಾಗೂ ಹೊಗೆಸೊಪ್ಪು

ಜಗಿಯುವದು, ಸಂಗೀತಾಭ್ಯಾಸ ಇವುಗಳು ಇಂದಿಗೂ ಈ ಸಮುದಾಯದವರಲ್ಲಿ ಮುಂದುವರೆದುಕೊಂಡು ಬಂದಿವೆ. ತಿನಿಸುಗಳಲ್ಲಿ ಚೋಮಾಯ್ (ಒತ್ತು ಶಾವಿಗೆ), ಕೊಳಕಟ್ಟೆ (ಉದ್ದಿನ ಕಡುಬು), ಮೋರ್ಪುಳಿ (ಮಜ್ಜಿಗೆಹುಳಿ) ಇತ್ಯಾದಿ ಇಂದಿಗೂ ಅವರ ಅಚ್ಚುಮೆಚ್ಚಿನ ಅಡುಗೆಗಳು. ಸಂಪ್ರದಾಯಗಳಲ್ಲಿ ಹೆಣ್ಣುಮಕ್ಕಳಿಗೆ ಗೌರೀಹಬ್ಬಕ್ಕೆ ತಪ್ಪದೆ ದ್ರವ್ಯ ಕಳುಹಿಸುವುದು, ದೀಪಾವಳಿಯ ಮರುದಿನ ಸಹೋದರರು ಸಹೋದರಿಯರ ಮನೆಗಳಿಗೆ ಸೋದರಬಿದಿಗೆಗೆ ಹೋಗುವುದು, ಬಂಧುಗಳು ಸಾವಪ್ಪಿದ ವರ್ಷ ಅವರ ಮನೆಗೆ ಹಬ್ಬದ ದಿನಗಳಲ್ಲಿ ತಿಂಡಿ ಇಡುವುದು ಇತ್ಯಾದಿ ಆಚರಣೆಗಳು ಮುಂದುವರಿಯುತ್ತಿವೆ.

ಸಂಕೇತಿಗಳ ಕುಟುಂಬ ಪದ್ಧತಿಗೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬಗಳು ೧೯೪೦ರ ದಶಕಕ್ಕೆ ಮೊದಲು ಅಸ್ತಿತ್ವದಲ್ಲಿದ್ದುದು ಆಧುನಿಕ ಶಿಕ್ಷಣ ಹಾಗೂ ನೌಕರಿಯ ಸಲುವಾಗಿ ನಗರಗಳಿಗೆ ವಲಸೆ ಹೋಗಲಾರಂಭಿಸಿದ ನಂತರ ವಿಭಕ್ತ ಕುಟುಂಬಗಳು ಅಸ್ತಿತ್ವಕ್ಕೆ ಬಂದು ಸಹೋದರರು ಆಸ್ತಿ ಹಂಚಿಕೊಂಡಿರುವುದಕ್ಕೆ ಪತ್ರದಾಖಲೆಗಳಿವೆ.[೯]

ಆಧುನಿಕ ಶಿಕ್ಷಣದ ಸೌಲಭ್ಯ ಮೈಸೂರು ಸಂಸ್ಥಾನಕ್ಕೆ ಲಭ್ಯವಾದಾಗ ಸಂಸ್ಕೃತಾಭ್ಯಾಸವನ್ನೇ ಪರಂಪರೆಯನ್ನಾಗಿ ಮಾಡಿಕೊಂಡಿದ್ದ ಸಂಕೇತಿ ಜನಾಂಗದವರು ಆಧುನಿಕ ಶಿಕ್ಷಣಕ್ಕೂ ತೊಡಗಿಕೊಂಡರು. ಅಂದಮಾತ್ರಕ್ಕೆ ಸಂಸ್ಕೃತಾಭ್ಯಾಸವನ್ನು ದೂರ ಮಾಡಲಿಲ್ಲ. ಬದಲಾಗಿ ಸಂಸ್ಕೃತ ಹಾಗೂ ಆಂಗ್ಲ ವಿದ್ಯಾಭ್ಯಾಸ ಎರಡನ್ನೂ ಜೊತೆಜೊತೆಗೇ ಅಭ್ಯಸಿಸಿದರು. ಇಲ್ಲಿ ಸಂಕೇತಿಗಳು ಸಂಪ್ರದಾಯ ಹಾಗೂ ಆಧುನಿಕತೆ ಎರಡರ ಸಂಯೋಜನೆ ಮಾರ್ಗ ಅನುಸರಿಸಿದರೆನ್ನಬಹುದು. ಹೊಸದಾಗಿ ನಗರಗಳಿಗೆ ಶಿಕ್ಷಣ ಪಡೆಯುವ ಸಲುವಾಗಿ ಹೋದ ಹೋರಾಟದ ವಿವರಣೆ ನೂರಾರು ಪತ್ರಗಳಲ್ಲಿ ಲಭ್ಯವಿದೆ.[೧೦] ಎಂತಹ ಕಠಿಣ ಸಂದರ್ಭದಲ್ಲೂ ಎದೆಗುಂದದೆ ತಮ್ಮ ಗುರಿಮುಟ್ಟಲು ಪಟ್ಟ ಪಾಡು ತೊಟ್ಟ ಛಲದ ಪರಿಚಯ ಅವರ ಪತ್ರಗಳಿಂದಾಗುತ್ತದೆ. ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಮಡಿವಂತಿಕೆಯನ್ನು ಬಿಟ್ಟು ಹೋಟಲ್ಲುಗಳನ್ನು ಆಶ್ರಯಿಸಿದ್ದುದು ಗಮನಾರ್ಹ ಬದಲಾವಣೆಯಾಗಿದೆ. ಅದೇ ರೀತಿ ರೈಲು ಹಾಗೂ ಮೋಟಾರು ವಾಹನಗಳಲ್ಲಿ ಪ್ರಯಾಣ ಮಾಡಿದರೆ ತಮ್ಮ ಮಡಿ ಹಾಳಾಗುತ್ತದೆಂದು ನಂಬಿದ್ದ ಅವರು ತಮ್ಮ ಮಕ್ಕಳನ್ನು ನಗರಗಳಿಗೆ ಕಳುಹಿಸಲಾರಂಭಿಸಿದ ನಂತರದ ದಿನಗಳಲ್ಲಿ ಅನಿವಾರ್ಯವಾಗಿ ಪ್ರಯಾಣದ ನೂತನ ಸೌಲಭ್ಯಗಳನ್ನು ಬಳಸಿಕೊಳ್ಳಲಾರಂಭಿಸಿದುದು ಕಂಡುಬರುತ್ತದೆ.[೧೧]

ಔಷಧಿಯ ವಿಚಾರದಲ್ಲೂ ಸಂಕೇತಿ ಸಮುದಾಯದವರು ಸಂಯೋಜನಾ ಮಾರ್ಗವನ್ನು ಅನುಸರಿಸಿದ್ದುದು ಕಂಡುಬರುತ್ತದೆ. ಪರಂಪರಾನುಗತವಾಗಿ ಅನುಸರಿಸಿಕೊಂಡು ಬಂದಿದ್ದ ನಾಟಿ ಔಷಧಿಯ ಜೊತೆಗೆ ಐರೋಪ್ಯರ ಸಂಪರ್ಕದಿಂದ ಮೈಸೂರು ಸಂಸ್ಥಾನಕ್ಕೆ ಲಭ್ಯವಾಗಿದ್ದ ಆಂಗ್ಲ ವೈದ್ಯಕೀಯ ಸೌಲಭ್ಯವನ್ನೂ ಪಡೆದುಕೊಳ್ಳಲಾರಂಭಿಸಿದ್ದರು.[೧೨] ಪ್ರಸವವನ್ನು ಮನೆಯಲ್ಲೇ ಮಾಡಿಸುತ್ತಿದ್ದವರು ಮಿಷನ್ ಆಸ್ಪತ್ರೆಗೆ ಹೆಣ್ಣುಮಕ್ಕಳನ್ನು ಕರೆದೊಯ್ಯಲಾರಂಭಿಸಿದರು,[೧೩] ಪ್ಲೇಗ್ ರೋಗಕ್ಕೆ ಸರ್ಕಾರದ ಧನ್ವಂತರಿ ಇಲಾಖೆಯವರು ನೀಡುತ್ತಿದ್ದ ಇನ್ಯಾಕ್ಯುಲೇಷನ್ ಪಡೆಯಲಾರಂಭಿಸಿದರು.[೧೪]

ತೋಟಗಾರಿಕೆ ಹಾಗೂ ಸಂಸ್ಕೃತ ಅಧ್ಯಯನ ಸಂಕೇತಿಗಳಿಗೆ ಪರಂಪರಾನುಗತವಾಗಿ ಬಂದಿತ್ತು. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಆಂಗ್ಲ ಶಿಕ್ಷಣ ಇವರನ್ನು ಸೆಳೆದುದು ಅವರ ಪತ್ರಗಳಿಂದ ತಿಳಿದುಬರುವ ಸಂಗತಿ. ಆಧುನಿಕ ಶಿಕ್ಷಣ ಪಡೆಯುತ್ತಿದ್ದಂತೆಯೇ ಆಧುನಿಕ ನೌಕರಿಯನ್ನೂ ಗಳಿಸತೊಡಗಿದರು. ಆದರೂ ಈ ಸಮುದಾಯದವರು ಅಧ್ಯಯನ ಮತ್ತು ವೃತ್ತಿ ಎರಡೂ ವಿಷಯಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಎರಡರ ಸಂಯೋಜನೆಯ ಮಾರ್ಗವನ್ನು ಅನುಸರಿಸಿದರು.[೧೫] ಕೇವಲ ತೋಟದ ಕೃಷಿಗೆ ಮಹತ್ವ ಕೊಟ್ಟಿದ್ದ ಇವರು ಕ್ರಮೇಣ ಹೊಲ ಗದ್ದೆಗಳ ಬೇಸಾಯವನ್ನೂ ಮಾಡತೊಡಗಿದರು.[೧೬] ೧೯೩೦ರ ದಶಕದಲ್ಲಿ ಕೃಷಿಕ ತಂದೆಯೊಬ್ಬರು ಆಂಗ್ಲಶಿಕ್ಷಣ ಪಡೆದು ನಗರದಲ್ಲಿದ್ದ ಮಗ ಗ್ರಾಮಕ್ಕೆ ಹಿಂತಿರುಗಿ ಕುಲಕಸಬನ್ನು ಮುಂದುವರಿಸುವ ಆಸೆ ವ್ಯಕ್ತಪಡಿಸಿದ ಸಂದರ್ಭದಲ್ಲಿ ಆತನನ್ನು ಸರ್ಕಾರಿ ಕೆಲಸವನ್ನೇ ಪಡೆಯುವಂತೆ ಬಲವಂತಪಡಿಸಿರುವ ಉದಾಹರಣೆ ಇದೆ.[೧೭]

ಆಧುನೀಕರಣದ ಪ್ರಭಾವದಿಂದಾಗಿ ಸಂಕೇತಿ ಸಮಾಜದಲ್ಲಿ ಹೆಣ್ಣುಮಕ್ಕಳ ಪರಿಸ್ಥಿತಿಯೂ ಸುಧಾರಿಸಿತೆಂದು ತೋರುತ್ತದೆ. ೧೯೫೦ರ ದಶಕದವರೆವಿಗೂ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದು ಅಗೌರವದ ಸಂಗತಿಯಾಗಿತ್ತು. ಬಹಳ ಅಪರೂಪಕ್ಕೆ ೧೯೩೧ರ ಪತ್ರ ಒಂದರಲ್ಲಿ ಈ ಜನಾಂಗದ ಹೆಣ್ಣುಮಗಳೊಬ್ಬಳು ಎಮ್.ಎ.,ಬಿ.ಟಿ. ಮಾಡಿದ್ದಳು.[೧೮] ಆದರೆ ತಮ್ಮ ಹೆಣ್ಣುಮಕ್ಕಳಿಗೂ ಶಿಕ್ಷಣದ ಆವಶ್ಯಕತೆ ಇದೆ ಎಂದು ಅವರು ಕಂಡುಕೊಂಡಿದ್ದು ನಗರದಲ್ಲಿ ಶಿಕ್ಷಣ ಪಡೆಯುತ್ತಿದ್ದ ಅಥವಾ ನೌಕರಿಯಲ್ಲಿದ್ದ ವರಗಳು ಕನ್ಯೆಗೆ ಎಸ್.ಎಸ್.ಎಲ್.ಸಿ. ಆಗಿರಬೇಕೆಂಬ ಬೇಡಿಕೆಯನ್ನು ಮುಂದಿಡತೊಡಗಿದಾಗ.[೧೯] ೧೯೭೦ರದಶಕದಲ್ಲಿ ಪದವಿಯಾದ ಕನ್ಯೆಗೆ ಬೇಡಿಕೆ ಹೆಚ್ಚತೊಡಗಿದ್ದರಿಂದ ಕಾಲೇಜು ಶಿಕ್ಷಣವೂ ಅವರಿಗೆ ಲಭಿಸುವಂತಾಯಿತು. ೧೯೭೦ರ ದಶಕದಲ್ಲಿ ಈ ಜನಾಂಗದವರು ಬಡ ಗ್ರಾಮಾಂತರ ಹೆಣ್ಣುಮಕ್ಕಳು ಕಾಲೇಜು ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಉಚಿತವಿದ್ಯಾರ್ಥಿನಿನಿಲಯ ಒಂದನ್ನು ಹಾಸನ ನಗರದಲ್ಲಿ ತೆರೆದುದು ಪ್ರಶಂಸಾರ್ಹ. ೧೯೬೦ರ ದಶಕದ ವೇಳೆಗಾಗಲೆ ಎಸ್.ಎಸ್.ಎಲ್.ಸಿ. ಮಾಡಿದ ಅನೇಕ ಹೆಣ್ಣುಮಕ್ಕಳಿದ್ದುದರಿಂದ ಅವರು ಹೊಲಿಗೆ, ಎಂಬ್ರಾಯ್ಡರಿ ಮುಂತಾದ ನೂತನ ಕಸುಬುಗಳನ್ನು ಕಲಿಯಲಾರಂಭಿಸಿದ್ದರು.[೨೦] ತಮ್ಮ ಗ್ರಾಮದಲ್ಲಿದ್ದ ಸಮಾಜದಂತಹ ಸಂಘಟನೆಗೆ ಸದಸ್ಯತ್ವ ಪಡೆದು ಸಾಂಘಿಕ ಚಟುವಟಿಕೆಯಲ್ಲೂ ತೊಡಗಿಕೊಂಡರು. ಆಧುನೀಕರಣದ ಪರಿಣಾಮದಿಂದಾಗಿ ಇವರ ಗ್ರಾಮದ ಮನೆಗಳಲ್ಲಿ ಹಲವಾರು ಸೌಲಭ್ಯಗಳು ಒದಗಿದುವು. ನಗರದಲ್ಲಿ ಕಲಿತು ನೌಕರಿ ಹಿಡಿದ ಯುವಕರ ದೆಸೆಯಿಂದಾಗಿ ಮಣ್ಣಿನ ನೆಲಕ್ಕೆ ಬದಲಾಗಿ ಗಾರೆನೆಲ, ಇಟ್ಟಿಗೆಗೋಡೆ, ಫ್ಯಾನ್, ವಿದ್ಯುದ್ದೀಪ, ಶೌಚಾಲಯ ಇತ್ಯಾದಿ ಸೌಲಭ್ಯಗಳು ದೊರೆತವು.

ತಮಿಳುನಾಡಿನಿಂದ ೯೦೦ ವರ್ಷಗಳಷ್ಟು ಹಿಂದೆಯೇ ಕರ್ನಾಟಕಕ್ಕೆ ವಲಸೆ ಬಂದಿರುವ ಇವರು ತಮ್ಮ ಪೂರ್ವಜರ ಮೂಲಸ್ಥಳವನ್ನು ೧೯೮೦ರ ದಶಕದವರೆವಿಗೂ ನೋಡಿರಲಿಲ್ಲ. ಅದರ ಬಗ್ಗೆ ಆಸಕ್ತಿಯನ್ನೂ ತೋರಿರಲಿಲ್ಲ. ಆಧುನಿಕ ಶಿಕ್ಷಣದ ಪರಿಣಾಮವಾಗಿ ತಮಿಳುನಾಡಿನ ಸಂಕೇತಿಗಳೊಂದಿಗೆ ೮೦ರ ದಶಕದಿಂದೀಚೆಗೆ ಪತ್ರವ್ಯವಹಾರ ನಡೆಸಲಾಗುತ್ತಿದೆ. ಈರ್ವರ ನಡುವೆ ಸಂಬಂಧ ಬೆಳೆಸಲೂ ಪ್ರಯತ್ನ ನಡೆದಿತ್ತೆಂಬ ವಿಷಯ ಪತ್ರಗಳಿಂದ ತಿಳಿಯುತ್ತದೆ.[೨೧] ಈ ಪತ್ರಗಳಲ್ಲಿ ಸಮಕಾಲೀನ ಹಳೇಮೈಸೂರುಪ್ರಾಂತದ ಮಳೆ-ಬೆಳೆ, ಧಾನ್ಯಗಳ ಬೆಲೆ, ಮಳೆ ಇಲ್ಲದೆ ಕ್ಷಾಮದಿಂದ ಜನ ಅನುಭವಿಸಿದ ತೊಂದರೆ ಹಾಗೂ ಪ್ಲೇಗು ರೋಗದಿಂದ ಗ್ರಾಮಗಳೇ ಖಾಲಿಯಾದ ವಿಚಾರ, ಈ ರೋಗವನ್ನು ತಡೆಯಲು ಮೈಸೂರು ಸರ್ಕಾರ ಕೈಗೊಂಡ ಕ್ರಮ, ಸ್ವಾತಂತ್ರ್ಯ ಚಳುವಳಿಯ ವಿಷಯಗಳು, ಸ್ವಾತಂತ್ರ್ಯಾನಂತರ ಉಂಟಾದ ಕೋಮು ಗಲಭೆ ಮುಂತಾದ ವಿಷಯಗಳಿಗೂ ಕೂಡ ನಮ್ಮ ಗಮನ ಸೆಳೆಯುತ್ತವೆ. ಒಟ್ಟಿನಲ್ಲಿ ಸಂಕೇತಿ ಸಮುದಾಯದವರು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಆಧುನಿಕ ಶಿಕ್ಷಣ ಹಾಗೂ ನೌಕರಿ ಪಡೆದುಕೊಂಡರೂ, ಸಂಪ್ರದಾಯವನ್ನೂ ಪೂರ್ಣವಾಗಿ ಬಿಟ್ಟುಕೊಡದೆ ಆಧುನೀಕರಣ ಮತ್ತು ಸಂಪ್ರದಾಯ ಎರಡರ ಸಂಯೋಜನೆಯ ಬದುಕನ್ನು ನಡೆಸಿದ್ದುದು ಗಮನಾರ್ಹ. ಇಂತಹ ಪತ್ರಗಳ ಸಂಗ್ರಹದಿಂದ ಆಯಾ ಸಮುದಾಯದ ನೈಜ ಚಿತ್ರಣ ಪಡೆಯಲು ಸಾಧ್ಯವಾಗುತ್ತದೆ. ಸಂಕೇತಿ ಜನಾಂಗಕ್ಕೆ ಸಂಬಂಧಿಸಿದಂತೆ ಈ ಪತ್ರಗಳ ಸಂಗ್ರಹಕಾರ್ಯ ಕೈಗೊಂಡು ಒಂದು ಸಂಪುಟವನ್ನು ರಚಿಸಿ ಈ ಲೇಖನ ರಚಿಸಲು ಕಾರಣರಾದ ಡಾ.ಬಿ.ಎಸ್.ಪಿ. ಹರನ್‌ರವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಪ್ರಣತಾರ್ತಿಹರನ್ (ಸಂ), ಸಂಕೇತಿ ಶತಮಾನದ ಪತ್ರಗಳು, ೧೮೯೧-೨೦೦೩, ಸಂ. ೨ ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, ೨೦೦೪.

೨. ೧೯೩೫, ಪತ್ರಸಂಖ್ಯೆ : ೧೭೯, ಪು. ೮೯

೩. ಸುಮಾರು ಐವತ್ತಕ್ಕೂ ಹೆಚ್ಚು ಪತ್ರಗಳು ವಿವಾಹಿತ ವಿದ್ಯಾರ್ಥಿಗಳ ಬಗೆಗೆ ಮಾಹಿತಿ ನೀಡುತ್ತವೆ.

೪. ೧೯೩೪, ಸಂ. ೨೬೬, ಪು. ೧೩೦-೧೩೧

೫. ೧೯೩೪, ಸಂ. ೨೬೭, ಪು. ೧೩೧-೧೩೨

೬. ೧೯೩೩, ಸಂ. ೪೬, ಪು. ೨೫

೭. ೧೯೩೩, ಸಂ. ೨೬೩, ಪು. ೧೨೯

೮. ೧೯೬೧, ಸಂ. ೫೮, ಪು. ೩೧

೯. ೧೯೩೪, ಸಂ. ೧೭೮, ಪು. ೫೯: ೧೯೪೩, ಸಂ. ೧೬೬, ಪು. ೮೦

೧೦. ಹಲವಾರು ಪತ್ರಗಳಲ್ಲಿ ಮಾಹಿತಿ ಇದೆ. ೧೯೨೧, ಸಂ. ೧೧. ಪು. ೮: ೧೯೨೪, ಸಂ. ೧೩, ಪು. ೯: ೧೯೨೯, ಸಂ. ೧೬, ಪು. ೧೦.

೧೧. ೧೯೪೧, ಸಂ. ೧೪೮, ಪು. ೭೦: ೧೯೪೭, ಸಂ. ೧೮೭, ಪು. ೭೨.

೧೨. ೧೯೪೨, ಸಂ. ೧೩೦, ಪು. ೬೨: ೧೯೩೬, ಸಂ. ೧, ಪು. ೪.

೧೩. ೧೯೪೨, ಸಂ. ೧೩೦, ಪು. ೬೨

೧೪. ೧೯೩೬, ಸಂ. ೧, ಪು. ೪.

೧೫. ೧೯೪೬, ಸಂ. ೯೧, ಪು. ೪೮

೧೬. ೧೯೨೬, ಸಂ. ೮೨, ಪು. ೪೨

೧೭. ೧೯೩೫, ಸಂ. ೮೮, ಪು. ೪೫

೧೮. ೧೯೩೧, ಸಂ. ೮೩, ಪು. ೪೨-೪೩

೧೯. ೧೯೬೧, ಸಂ. ೫೮, ಪು. ೩೧

೨೦. ೧೯೮೧, ಸಂ. ೨೦೪, ಪು. ೯೯

೨೧. ೧೯೯೪, ಸಂ. ೪೨೬, ಪು. ೧೯೮, ೧೯೯೧ರವರೆಗಿನ ಪತ್ರಗಳನ್ನು ಲೇಖನಕ್ಕೆ ಬಳಸಲಾಗಿದೆ. ಆದರೆ ಈ ಪತ್ರದ ವಿಷಯ ಮುಖ್ಯವಾದುದೆಂಬ ಕಾರಣಕ್ಕೆ ೧೯೯೪ರ ಪತ್ರವನ್ನು ಉದಾಹರಿಸಲಾಗಿದೆ.

೯. ಸಂಕೇತಿ ಅಧ್ಯಯನ

ಕೋ. ಚನ್ನಬಸಪ್ಪ
ಬೆಂಗಳೂರು ಹಿರಿಯ ಸಾಹಿತಿ ಮತ್ತು ನಿವೃತ್ತ ನ್ಯಾಯಾಧೀಶರು

ತಮ್ಮೊಳಗಿನ ಪ್ರತಿಭೆಯನ್ನು ಚೆನ್ನಾಗಿ ದುಡಿಸಿಕೊಳ್ಳುವವರು ಸಂಕೇತಿಗಳು. ಅಪಾರ ಶ್ರಮವಹಿಸಿ ಸಾಧನೆಯ ಎತ್ತರಗಳನ್ನು ಅವರು ಕಂಡುಕೊಳ್ಳುತ್ತಾರೆ. ಸಂಗೀತ ವೇದಮಾತ್ರವಲ್ಲ ನ್ಯಾಯವೇತ್ತರಾಗಿ, ವಿಜ್ಞಾನಿಗಳಾಗಿ, ತಂತ್ರಜ್ಞರಾಗಿ... ಅವರು ಮುಟ್ಟಿರುವ ಎತ್ತರಗಳ ಹಿಂದಿನ ಗುಟ್ಟು ಅದು.

ಎಂ.ವಿ. ಶಂಕರ್
ಮೈಸೂರು ಲೆಕ್ಕ ಪರಿಶೋಧಕರು

ಹಿಂದಿನ ತಲೆಮಾರಿನವರು ಒಂದು ತಪಸ್ಸಿನಂತೆ ಮಾಡಿದ ಸಾಧನೆಗಳು ಅನೇಕವು ದಾಖಲಾಗಲೇ ಇಲ್ಲ. ಹಾಗೆ ದಾಖಲಿಸುವ ಸೌಲಭ್ಯಗಳೂ ಆಗ ಇರಲಿಲ್ಲ. ಈಗ ತಂತ್ರಜ್ಞಾನ ಬಹಳ ಮುಂದುವರಿದಿದೆ. Documentationಗೆ ಬಹಳ ಅವಕಾಶವಿದೆ.... ಪುಸ್ತಕರೂಪದಲ್ಲಿ ದಾಖಲಾದ ಈ ಮಾಹಿತಿ ಮುಂದಿನ ತಲೆಮಾರಿನವರಿಗೆ ಪ್ರಯೋಜನಕ್ಕೆ ಬರುತ್ತದೆ. ಕೇವಲ ಮಾಹಿತಿಗಲ್ಲ, ಸ್ಫೂರ್ತಿಗೂ ಇದು ಆಕರವಾಗುತ್ತದೆ.

ಹಿರೇಮಗಳೂರು ಕಣ್ಣನ್
ಹಿರೇಮಗಳೂರು ಖ್ಯಾತ ಚಿಂತಕರು ಮತ್ತು ಪ್ರವಚನಕಾರರು

ಈ ಪುಸ್ತಕಗಳ ಸಿದ್ಧತೆಗೆ ಅದೆಷ್ಟು ಶ್ರಮವಹಿಸಿದ್ದೀರಿ ! ನಿಮ್ಮ ಕೆಲಸವನ್ನು ಅದೆಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೀರಿ! ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವ ಅನೇಕ ಪ್ರಾಧ್ಯಾಪಕ ಮಿತ್ರರಿಗೆ ಈ 'ಮಾದರಿ'ಯ ಬಗೆಗೆ ಹೇಳಿ ಗಮನ ಸೆಳೆದಿದ್ದೇನೆ.

ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರೀ
ಮೈಸೂರು ಖ್ಯಾತ ಸಂಶೋಧಕರು

'ಸಂಕೇತಿ ಅಧ್ಯಯನ'ದ ನಿಮ್ಮ ಕೆಲಸ ಒಂದು ದಾಖಲೆಯಾಗಿದೆ, it is a record....

ದೇಜಗೌ
ಮೈಸೂರು ಖ್ಯಾತ ಸಾಹಿತಿಗಳು

ಹೀಗೆ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದದ್ದೇ,ಅದರಲ್ಲಿ ಅನುಮಾನವಿಲ್ಲ.

೨. ಸಾಮಾಜಿಕಪ್ರಜ್ಞೆಗೆ ನಮಸ್ಕಾರ

ವ್ಯಾಕರಣವಿದ್ವಾನ್ ವೇ।। ಬ್ರ ।। ಶ್ರೀ ಸುಬ್ಬರಾಯಶಾಸ್ತ್ರಿಗಳು

ಯೇನಾಕ್ಷರಸಮಾಮ್ನಾಯಮಧಿಗಮ್ಯ ಮಹೇಶ್ವರಾತ್ ।
ಕೃತ್ಸ್ನಂ ವ್ಯಾಕರಣಂ ಪ್ರೋಕ್ತಂ ತಸ್ಮೈ ಪಾಣಿನಯೇ ನಮಃ।।
ವಾಕ್ಯಕಾರಂ ವರರುಚಿಂ ಭಾಷ್ಯಕಾರಂ ಪತಂಜಲಿಮ್ ।
ಪಾಣಿನಿಂ ಸೂತ್ರಕಾರಂ ಚ ಪ್ರಣತೋಽಸ್ಮಿ ಮುನಿತ್ರಯಮ್ ।।

ಕ್ರಿ.ಶ. ೧೯೬೨ನೇ ವರ್ಷ. ಅಷ್ಟಗ್ರಹಕೂಟದ ಅನಿಷ್ಟಪರಿಹಾರಾರ್ಥ ರುದ್ರಪಟ್ಟಣದಲ್ಲಿ ಲೋಕಕಲ್ಯಾಣಕರವಾದ 'ಅತಿರುದ್ರ' ಎಂಬ ಮಹಾಯಾಗವನ್ನು ಆಯೋಜಿಸಲಾಗಿತ್ತು. ಆ ಸುತ್ತಮುತ್ತಲಿನ ಬ್ರಾಹ್ಮಣಗ್ರಾಮಗಳಲ್ಲೆಲ್ಲ ಸಂಭ್ರಮವೋ ಸಂಭ್ರಮ. ದಕ್ಷಿಣಭಾರತದ ನಾನಾ ಕಡೆಗಳಿಂದ ನೂರಾರು ಸಂಖ್ಯೆಯಲ್ಲಿ ವೇದ-ಶಾಸ್ತ್ರ ಪಾರಂಗತರು ಸಮಾವೇಶಗೊಂಡಿದ್ದರು. ಸಾಕ್ಷಾತ್ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ದಿವ್ಯಸಮ್ಮುಖದಲ್ಲಿ ಯಾಗವು ಸಾಂಗವಾಗಿ ನೆರವೇರುತ್ತಿತ್ತು. ಪ್ರತಿನಿತ್ಯ ಬೆಳಿಗ್ಗೆ ಅಗ್ನಿಕುಂಡಗಳಲ್ಲಿ ಹೋಮಹವನಗಳೂ ಸಂಜೆ ಕ್ರಮಾರ್ಚನೆ ಶಾಸ್ತ್ರಾರ್ಥಗಳೂ ನಡೆಯುತ್ತಿದ್ದವು. ಒಂದು ದಿನ ಇಂತಹ ಶಾಸ್ತ್ರಾರ್ಥದಲ್ಲಿ ಭಾಗವಹಿಸಿದ ಬಸವಾಪಟ್ಟಣದ ವ್ಯಾಕರಣವಿದ್ವಾನ್ ವೇ।। ಬ್ರ।। ಶ್ರೀ ಸುಬ್ಬರಾಯಶಾಸ್ತ್ರಿಗಳು ಪಾಣಿನಿಯ 'ಗತಿಬುದ್ಧಿಪ್ರತ್ಯವಸಾನಾರ್ಥಶಬ್ದಕರ್ಮಾಕರ್ಮಕಾಣಾಮಣಿಕರ್ತಾ ಸ ಣೌ' ಅಷ್ಟಾಧ್ಯಾಯೀ ೧-೪-೫೨ ಎಂಬ ಸೂತ್ರವನ್ನು ಎತ್ತಿಕೊಂಡು ಸುಮಾರು ಒಂದು ಗಂಟೆಯ ಕಾಲ ಪೂರ್ವಪಕ್ಷ ಸಮಾಧಾನಗಳೊಡನೆ ವಿವರಿಸಿ ಕೊನೆಗೆ ತಮ್ಮ ಸಿದ್ಧಾಂತವನ್ನು ಮಂಡಿಸಿದರು. ಅಲ್ಲಿ ಸೇರಿದ್ದ ವಿದ್ವಾಂಸರೆಲ್ಲ ಅವರ ವಿದ್ವತ್ತನ್ನು ಮೆಚ್ಚಿ ಪ್ರಶಂಸಿಸಿದರು.

'ಮುಖಂ ವ್ಯಾಕರಣಂ ತಸ್ಯ' ಎಂದು ವೇದಾಂಗಗಳಲ್ಲಿ ವ್ಯಾಕರಣಕ್ಕೆ ಪ್ರಾಧಾನ್ಯವನ್ನು ಕೊಡಲಾಗಿದೆ. ಶ್ರೀ ಶಾಸ್ತ್ರಿಗಳು ಇಂತಹ ವ್ಯಾಕರಣಶಾಸ್ತ್ರವನ್ನು ಮೈಸೂರಿನ ಶ್ರೀಮನ್ಮಹಾರಾಜಸಂಸ್ಕೃತಮಹಾಪಾಠಶಾಲೆಯಲ್ಲಿ ನಾಲ್ಕಾರು ವರ್ಷಗಳ ಕಾಲ ಪ್ರಕಾಂಡ ಪಂಡಿತರ ಬಳಿ ಅಧ್ಯಯನ ಮಾಡಿ ಅಗಾಧ ಪಾಂಡಿತ್ಯವನ್ನು ಸಂಪಾದಿಸಿದ್ದರು. ಇವರು ಪಾಠಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಕಾಲವನ್ನು (೧೯೩೦ನೇ ದಶಕದ ಅಂತ್ಯಭಾಗ) ಒಂದು ರೀತಿಯಲ್ಲಿ ಪಾಠಶಾಲೆಯ ಸುವರ್ಣಯುಗ ಎಂದೇ ಹೇಳಬಹುದು. ಆಗ ಪಾಠಶಾಲೆಯಲ್ಲಿ ಸುಮಾರು ೨೪ ಜನ ಸಂಕೇತಿಗಳು ವೇದಶಾಸ್ತ್ರಗಳ ವಿವಿಧ ಭಾಗಗಳಲ್ಲಿ ಪ್ರೌಢವ್ಯಾಸಂಗ ಮಾಡುತ್ತಿದ್ದರು. ವೇದಪುರುಷನ ಅವತಾರಸ್ವರೂಪರೆನಿಸಿದ್ದ ವೇ। ಬ್ರ। ಶ್ರೀ ತಿಪ್ಪಯ್ಯ ಅವಧಾನಿಗಳು ಯಜುರ್ವೇದ ವಿಭಾಗದಲ್ಲಿ ಮತ್ತು ಚಾಗಳ್ಳಿ ಶ್ರೀ ಕೇಶವಶಾಸ್ತ್ರಿಗಳು ಸಾಹಿತ್ಯ ವಿಭಾಗದಲ್ಲಿ ಆಗ ಪ್ರಾಧ್ಯಾಪಕರಾಗಿದ್ದು ಖ್ಯಾತನಾಮರಾಗಿದ್ದರು. ಇಂತಹ ವಾತಾವರಣದಲ್ಲಿ ಶ್ರೀ ಶಾಸ್ತ್ರಿಗಳು ವ್ಯಾಕರಣ ವಿದ್ವತ್ಪರೀಕ್ಷೆಯನ್ನು ಮುಗಿಸಿ ಬಸವಾಪಟ್ಟಣಕ್ಕೆ ಹಿಂದಿರುಗಿದರು. ಇವರು ಪಾಠಶಾಲೆಯಲ್ಲಿ ಪ್ರೌಢವಿದ್ಯಾರ್ಥಿಯಾಗಿದ್ದಾಗ ಅನೇಕ ಜನ ಕಿರಿಯ ಸಂಕೇತಿ ವಿದ್ಯಾರ್ಥಿಗಳಿಗೆ ಸಿದ್ಧಾಂತಕೌಮುದಿ ಮುಂತಾದ ಉದ್ಗ್ರಂಥಗಳನ್ನು ಬೋಧಿಸುತ್ತಿದ್ದರು. ಹೀಗೆ ಇವರ ಬಳಿ ಅಧ್ಯಯನ ಮಾಡಿದವರಲ್ಲಿ ಸೋಮನಹಳ್ಳಿ ವೇ। ಬ್ರ। ಶ್ರೀ ಸುಬ್ರಹ್ಮಣ್ಯ ಘನಪಾಠಿಗಳು ಮತ್ತು ವ್ಯಾಕರಣವಿದ್ವಾನ್ ಹೆಚ್.ಎನ್. ರಂಗಸ್ವಾಮಿಯವರು ಪ್ರಮುಖರು.

ಒಂದು ದಿನ ಸಂಜೆ ನಮ್ಮ ಪಕ್ಕದ ಮನೆಯ ಕನ್ನಡ ಪಂಡಿತರಾದ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳ ಬಳಿ ನಾವು ಕೆಲವರು ರಘುವಂಶವನ್ನು ಹೇಳಿಸಿಕೊಳ್ಳುತ್ತಿದ್ದೆವು. ನಾನು ಎರಡನೇ ಸರ್ಗದ 'ಕೈಲಾಸಗೌರಮ್' ಎಂದು ಪ್ರಾರಂಭವಾಗುವ ಶ್ಲೋಕ (ರಘು. ೨-೩೫)ವನ್ನು ಪಠಿಸುತ್ತಿದ್ದೆ. ಆ ಸಮಯಕ್ಕೆ ಅಲ್ಲಿಗೆ ದಯಮಾಡಿಸಿದ ಶಾಸ್ತ್ರಿಗಳು 'ಎಲ್ಲಿ, ಎರಡನೇ ಪಾದವನ್ನು ಮತ್ತೊಮ್ಮೆ ಓದು' ಎಂದರು. ನಾನು 'ಅವೈಹಿ ಮಾಂ ಕಿಂಕರಮಷ್ಟಮೂರ್ತೇಃ' ಎನ್ನುತ್ತಿದ್ದಹಾಗೆಯೇ ಶಾಸ್ತ್ರಿಗಳು 'ಅವೈಹಿ' ಅಪಶಬ್ದ; 'ಅವೇಹಿ' ಎಂದಾಗಬೇಕು ಎಂದು ತಿದ್ದಿದರು. ಅವ + ಏಹಿ = ಅವೈಹಿ ಎಂದು ವೃದ್ಧಿ ಸರಿಯಾಗಿದೆಯಲ್ಲ, ಇವರು ಏಕೆ ಅವೇಹಿ ಎಂದು ತಿದ್ದಿದರು ಎಂದು ನಮಗೆಲ್ಲ ಗೊಂದಲ. ಆಗ ಶಾಸ್ತ್ರಿಗಳು 'ಓಮಾಙೋಶ್ಚ' (ಪಾ. ೬-೧-೯೫) ಎಂಬ ಸೂತ್ರದಿಂದ ವೃದ್ಧಿಗೆ ಅಪವಾದವಾಗಿ ಪರರೂಪ ಏಕಾದೇಶವಾಗಿ ಬರುತ್ತದೆ, 'ತೇನಾವೈಹೀತಿ ವೃದ್ಧಿರಸಾಧುರೇವ' ಎಂದು ಇದನ್ನು ಶಾಸ್ತ್ರಕಾರರು ಸ್ಪಷ್ಟಪಡಿಸಿದ್ದಾರೆ ಎಂದು ವಿವರಿಸಿ ಸಮಾಧಾನ ಹೇಳಿದರು.

ಬಾಲಪಾಠದ ರೂಪದಲ್ಲಿ ಶಬ್ದಮಂಜರಿ, ಅಮರಕೋಶ, ನೀತಿಶತಕ, ರಘುವಂಶ, ಪಂಚತಂತ್ರ ಮತ್ತು ಲಘುಕೌಮುದಿಗಳನ್ನು ಅಷ್ಟೋ

ಇಷ್ಟೋ ಹೇಳಿಸಿಕೊಂಡಿದ್ದ ನಾವು ಕೆಲವರಿಗೆ ಒಂದು ಶುಭದಿನ ಶಾಸ್ತ್ರಿಗಳು ಸಿದ್ಧಾಂತಕೌಮುದಿಯನ್ನು ಪ್ರಾರಂಭಿಸಿದರು. ಓಮ್ ನಮಃ ಪಾಣಿನಿಕಾತ್ಯಾಯನಪತಂಜಲಿಭ್ಯಃ ಶಬ್ದವಿದ್ಯಾಸಂಪ್ರದಾಯಕರ್ತೃಭ್ಯಃ ಎಂದು ಪ್ರಾರಂಭಿಸಿ ೧೪ ಶಿವಸೂತ್ರಗಳನ್ನು ವಿವರಿಸಿ 'ಹಲನ್ತ್ಯಮ್' ಎಂಬ ಸೂತ್ರವನ್ನು ಎತ್ತಿಕೊಂಡು 'ಹಲನ್ತ್ಯಮಿತ್ಯೇಕಂ ಪದಂ ಸೂತ್ರಮ್, ಹಲಿ ಅನ್ತ್ಯಮಿತಿ ಸಪ್ತಮೀ ತತ್ಪುರುಷಸಮಾಸಃ, ಉಪದೇಶೇಽಜನುನಾಸಿಕ ಇತ್ ಇತಿ ಪೂರ್ವಸೂತ್ರಾತ್ ಇದಿತ್ಯನುವರ್ತತೇ, ತತಶ್ಚ ಹಲ್ ಇತಿ ಸೂತ್ರೇ ಅನ್ತ್ಯಮಿತ್ ಸ್ಯಾತ್' ಮುಂತಾಗಿ ಸೂತ್ರಗಳನ್ನು ಸಂಸ್ಕೃತದಲ್ಲಿಯೇ ನಿರರ್ಗಳವಾಗಿ ವಿವರಿಸುತ್ತಾ ಇದ್ದರೆ ನಾವು ನಿಬ್ಬೆರಗಾಗಿ ಕೇಳುತ್ತಾ ಕುಳಿತಿರುತ್ತಿದ್ದೆವು. ಪ್ರಾರಂಭದಲ್ಲಿ ನಮಗೆ ಶಾಸ್ತ್ರಿಗಳ ಈ ಪಾಠಶೈಲಿ ಕಷ್ಟವಾಗಿ ಕಂಡರೂ ಮುಂದೆ ಶಾಸ್ತ್ರಪಾಠಕ್ಕೆ ಈ ಶೈಲಿಯೇ ಸರಿಯಾದದ್ದೆಂದು ಮನದಟ್ಟಾಯಿತು. ಸಿದ್ಧಾಂತಕೌಮುದಿಯಲ್ಲದೆ ಸಂಪೂರ್ಣ ಮಹಾಭಾಷ್ಯವೇ ಶಾಸ್ತ್ರಿಗಳಿಗೆ ಕಂಠಸ್ಥವಾಗಿದ್ದಿತು. ಪಾಠಮಾಡುವಾಗ ಅವರು ಎಂದೂ ಮುಂದುಗಡೆ ಪುಸ್ತಕವನ್ನು ಬಿಡಿಸಿಟ್ಟುಕೊಂಡವರಲ್ಲ. ಹಿಂದಿನ ದಿನದ ಪಾಠವನ್ನು ಒಪ್ಪಿಸದೆ ಅವರು ಏನು ಮಾಡಿದರೂ ಮುಂದೆ ಹೋಗುತ್ತಿರಲಿಲ್ಲ. ಹೀಗಾಗಿ ನಾವು ಸದಾ ಅಧ್ಯಯನನಿರತರಾಗಿರಬೇಕಿತ್ತಲ್ಲದೆ ಕೌಮುದಿಯನ್ನು ಕಂಠಪಾಠ ಮಾಡಿಕೊಂಡು ಒಪ್ಪಿಸಬೇಕಿತ್ತು. ಪಾಠಮಾಡುತ್ತಿರುವಾಗ ಮಧ್ಯೆ ಕೆಲವೊಮ್ಮೆ ಇದ್ದಕ್ಕಿದ್ದಂತೆ ಪರೀಕ್ಷಿಸುವಂತಹ ಪ್ರಶ್ನೆಗಳನ್ನು (searching questions) ಕೇಳಿಬಿಡುತ್ತಿದ್ದರು. ಹಯವರಟ್ (ಮಾಹೇಶ್ವರ ಸೂತ್ರ ೫) ಮತ್ತು ಹಲ್ (ಮಾ.ಸೂ.೧೪) ಈ ಎರಡೂ ಕಡೆ ಹಕಾರ ಏಕಿದೆ ? ಕುಕ್ಕುಟಾಂಡಮ್, ಪತಿವ್ರತಾ, ಮಾತೃದೇವಃ, ಧರ್ಮಪತ್ನೀ ಇವುಗಳ ವಿಗ್ರಹವಾಕ್ಯವೇನು? 'ಅತೋ ರೋರಪ್ಲುತಾದಪ್ಲುತೇ' ಸೂತ್ರದಲ್ಲಿ ಅತಃ ಎಂದು ತಪರಕರಣವಿದ್ದಮೇಲೆ ಅಪ್ಲುತ ಎಂದು ಹೇಳಿರುವುದೇಕೆ? ಇಂತಹ ಅನೇಕ ಕಠಿಣ ಪ್ರಶ್ನೆಗಳಿಗೆ ಉತ್ತರ ಹೇಳಲು ಸಹಜವಾಗಿ ನಾವು ತಿಣುಕುತ್ತಿದ್ದೆವು. 'ಅಪ್ಪಾ, ವ್ಯಾಕರಣದಲ್ಲಿ ನಾವು ಕಲಿತಿರುವುದು ಏನೇನೂ ಅಲ್ಲ ಎಂದು ತಿಳಿಯುವಂತಾಗಲು ಕನಿಷ್ಠ ಹತ್ತುವರ್ಷವಾದರೂ ಅಧ್ಯಯನ ಮಾಡಬೇಕು' ಎಂದು ಶಾಸ್ತ್ರಿಗಳು ಪದೇಪದೇ ಹೇಳುತ್ತಿದ್ದುದನ್ನು ಎಂದಿಗೂ ಮರೆಯುವಂತಿಲ್ಲ. ಸಿದ್ಧಾಂತ ಕೌಮುದಿಯಲ್ಲದೆ ಕಿರಾತಾರ್ಜುನೀಯ, ಭಾರತಚಂಪೂ ಮತ್ತು ಮಾಲವಿಕಾಗ್ನಿಮಿತ್ರ ನಾಟಕಗಳನ್ನೂ ಶಾಸ್ತ್ರಿಗಳ ಬಳಿ ಅಧ್ಯಯನ ಮಾಡುವ ಸುಯೋಗ ನನ್ನದಾಗಿತ್ತು. ಆಶ್ಚರ್ಯವೆಂದರೆ ಅವರು ಇವುಗಳನ್ನು ಪಾಠಮಾಡುವಾಗಲೂ ಮುಂದೆ ಪುಸ್ತಕವನ್ನಿಟ್ಟುಕೊಳ್ಳುತ್ತಿರಲಿಲ್ಲ. ಗಂಭೀರ ಸ್ವಭಾವದ ಶಾಸ್ತ್ರಿಗಳಿಗೆ ಕಾವ್ಯ-ನಾಟಕಗಳ ಪಾಠಮಾಡುವಾಗ ಅಲ್ಲಲ್ಲಿ ಕಾಣಿಸಿಕೊಳ್ಳುವ ಶೃಂಗಾರವೆಂದರೆ ಒಂದು ರೀತಿ ಇರಸುಮುರಸು. ಚಂಪೂಭಾರತದ 'ಚಾಟುಪ್ರಯೋಗೇ ಚತುರಸ್ಸಪಾಂಡುಃ' (೧-೭೩) ಎಂಬ ಶ್ಲೋಕ. ನಾನು ಓದಿದ ಕೂಡಲೆ ಶಾಸ್ತ್ರಿಗಳು 'ನೀನು ಸಾಕಷ್ಟು ವ್ಯುತ್ಪನ್ನನಿದ್ದೀಯೆ. ವ್ಯಾಖ್ಯಾನ ನೋಡಿ ಅರ್ಥಮಾಡಿಕೋ' ಎಂದು ಹೇಳಿದ್ದು ನನಗೆ ಇಂದಿಗೂ ನೆನಪಿದೆ. ಒಬ್ಬ ಶ್ರೇಷ್ಠ ಅಧ್ಯಾಪಕರಾಗಿದ್ದ ಶಾಸ್ತ್ರಿಗಳನ್ನು 'ಪಾಠಹೇಳಲು ಸಾಕಷ್ಟು ಸಮಯ ಸಿಕ್ಕುವುದಿಲ್ಲವಲ್ಲ' ಎಂಬ ಚಿಂತೆ ಸದಾ ಕಾಡುತ್ತಿತ್ತು. ಹುಡುಗರಿಗೆ ಪಾಠ ಹೇಳಲು ಪುರುಸತ್ತಾಗುವುದಿಲ್ಲವಲ್ಲ ಎಂದು ಅವರು ನೊಂದು ನುಡಿಯುತ್ತಿದ್ದುದನ್ನು ನಾನು ಎಷ್ಟೋ ಸಲ ಕೇಳಿದ್ದೇನೆ. ಶನಿವಾರ ಭಾನುವಾರಗಳು ಬಂತೆಂದರೆ ಬಿಡದೆ ೩-೪ ಗಂಟೆಗಳ ಕಾಲ ಕೂರಿಸಿಕ್ಕೊಂಡು ಪಾಠಹೇಳುತ್ತಿದ್ದರು. ಹೀಗೆ ಅವರಿಂದ ಸಂಸ್ಕೃತ ಕಲಿತವರಲ್ಲಿ ಬಸವಾಪಟ್ಟಣದ ವೇ। ಬ್ರ। ಶ್ರೀ ದೀಕ್ಷಿತ್ ಸುಬ್ಬಕೃಷ್ಣ ಅವಧಾನಿಗಳು, ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿರುವ ಶ್ರೀ ಅನಂತಸುಬ್ರಹ್ಮಣ್ಯ (ಗುಂಡಣ್ಣ) ಅವರು ಮತ್ತು ಪ್ರಕೃತ ಲೇಖಕರಾದ ಚೆನ್ನಕೇಶವ ಇವರನ್ನು ಹೆಸರಿಸಬಹುದು.

ಮೈಸೂರಿನ ಪಾಠಶಾಲೆಯಲ್ಲಿ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ನಾನು ರಜಾದಲ್ಲಿ ಒಮ್ಮೆ ಊರಿಗೆ ಹೋಗಿದ್ದೆ. ಅಂದು ಊರಲ್ಲಿ ಯಾವುದೋ ಸಂತರ್ಪಣೆಯಿದ್ದು ರಾಮಮಂದಿರದಲ್ಲಿ ವೈದಿಕರು ಊಟಕ್ಕೆ ಕುಳಿತಿದ್ದರು. ಶಾಸ್ತ್ರಿಗಳೂ ಅಲ್ಲಿ ಉಪಸ್ಥಿತರಿದ್ದರು. ಅವರ ಪಾದಗಳಿಗೆ ವಂದಿಸಿ ನಿಂತ ನನ್ನನ್ನು ನೋಡಿ ಸಂತೋಷಗೊಂಡ ಶಾಸ್ತ್ರಿಗಳು 'ಅಪ್ಪೊ ವಂದ?' (ಯಾವಾಗ ಬಂದೆ) ಎಂದು ಕುಶಲ ಪ್ರಶ್ನೆ ಮಾಡಿ ಕೂಡಲೇ ನನ್ನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಲು ಪ್ರಾರಂಭಿಸಿ ಬಿಟ್ಟರು. ನನಗೋ ನಡುಕ. ಅಷ್ಟು ಜನ ವಿದ್ವಜ್ಜನರ ಸಮ್ಮುಖ ಶಾಸ್ತ್ರಿಗಳ ಪ್ರಶ್ನೆಗಳನ್ನು ಎದುರಿಸುವುದೆಂದರೆ ಸಾಮಾನ್ಯವೇ ? ನಾನು 'ಮುಕ್ತಾವಳಿ' ಯನ್ನು ಹೇಳಿಸಿಕೊಳ್ಳುತ್ತಿದ್ದೇನೆಂದು ತಿಳಿದಾಗ ಶಾಸ್ತ್ರಿಗಳು ಎಲ್ಲಿ ಜಾತಿಬಾಧಕಗಳನ್ನು ಹೇಳು ಎಂದರು. ಏನೋ ನನ್ನ ಪುಣ್ಯ, ನೆನಪಿತ್ತು - 'ವ್ಯಕ್ತೇರಭೇದಃ .... ಜಾತಿಬಾಧಕಸಂಗ್ರಹಃ' ನಾನು ಹೇಳಿದೆ. 'ರೂಪ'ದ ಲಕ್ಷಣವೇನು ? ಮತ್ತೊಂದು ಪ್ರಶ್ನೆ. 'ಚಕ್ಷುರ್ಮಾತ್ರಗ್ರಾಹ್ಯೋ ಗುಣೋ ರೂಪಮ್' ನನ್ನ ಉತ್ತರ. 'ಮಾತ್ರ ಇತಿ ಕಿಮ್ ? ಚಕ್ಷುರ್‌ಗ್ರಾಹ್ಯ ಇತ್ಯೇವಾಸ್ತು' ಎಂದರು ಶಾಸ್ತ್ರಿಗಳು. ನಾನು ತಬ್ಬಿಬ್ಬಾದೆ. ಕೊನೆಗೆ ಅವರೇ 'ಸಂಖ್ಯಾದಾವತಿವ್ಯಾಪ್ತಿವಾರಣಾಯ ಮಾತ್ರಶಬ್ದಃ' ಎಂದು ವಿವರಿಸಿ ಸಮಾಧಾನ ಹೇಳಿದರು. ಶಾಸ್ತ್ರಿಗಳಿಗೆ ಸಂಸ್ಕೃತ ಉಸಿರಾಗಿತ್ತು. ಸಂಸ್ಕೃತದ ವಿದ್ಯಾರ್ಥಿಗಳ ಜೊತೆ ಕಳೆಯುವ ಕ್ಷಣಗಳು ಅವರಿಗೆ ಅತ್ಯಂತ ಆನಂದದಾಯಕ ಕ್ಷಣಗಳಾಗಿದ್ದವು. ವಿದ್ಯಾರ್ಥಿಗಳಾದ ನಮಗೂ ಅಷ್ಟೆ, ಅವರ ಬಳಿ ಇರುತ್ತಿದ್ದ ಸಮಯ ಬಹಳ ಬೋಧಪ್ರದವಾಗಿರುತ್ತಿತ್ತು. ಒಬ್ಬ ದೊಡ್ಡ ವಿದ್ವಾಂಸರ ಸಮ್ಮುಖದಲ್ಲಿದ್ದೇವೆಂಬ ಭಾವನೆ ನಮ್ಮ ಮನಸ್ಸಿನಲ್ಲಿ ತುಂಬಿರುತ್ತಿತ್ತು.

ವಿದ್ಯಾಭ್ಯಾಸಮುಗಿಸಿ ಮೈಸೂರಿನಿಂದ ಬಸವಾಪಟ್ಟಣಕ್ಕೆ ಹಿಂದಿರುಗಿದ ಶಾಸ್ತ್ರಿಗಳು ಕೊಣನೂರಿನ ಪ್ರೌಢಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಬಸವಾಪಟ್ಟಣದಿಂದ ಸುಮಾರು ೧೦ ಕಿ.ಮೀ. ದೂರವಿರುವ ಕೊಣನೂರಿನ ಶಾಲೆಗೆ ಸರಿಯಾದ ಸಮಯಕ್ಕೆ ಹೋಗಲು ಬೆಳಿಗ್ಗೆ ೭.೩೦ರ ಬಸ್ಸಿನಲ್ಲಿ ಹೋಗಬೇಕಿತ್ತು. ಶಾಸ್ತ್ರಿಗಳು ಬೆಳಗಿನ ಜಾವ ೪.೩೦ಕ್ಕೆಲ್ಲ ಎದ್ದು ಸ್ನಾನಸಂಧ್ಯಾದಿಗಳನ್ನು ಮುಗಿಸಿ ದೇವತಾರ್ಚನೆಯನ್ನು ಮಾಡಿ ಊಟ ಮುಗಿಸಿ ೭.೩೦ರ ಹೊತ್ತಿಗೆ ಸಿದ್ಧರಾಗುತ್ತಿದ್ದರು. ಸಂಜೆ ೬ ಗಂಟೆಯ ಬಸ್ ಹಿಡಿದು ಊರಿಗೆ ಬಂದು ಸ್ನಾನಸಂಧ್ಯಾದಿಗಳನ್ನು ಮುಗಿಸುವ ಹೊತ್ತಿಗೆ ನಾವು ವಿದ್ಯಾರ್ಥಿಗಳು ಪಾಠಕ್ಕೆ ಹಾಜರಾಗುತ್ತಿದ್ದೆವು. ೭.೩೦ ರಿಂದ ಒಂದು ಗುಂಪು, ಮತ್ತೆ ೮.೩೦ ರಿಂದ ಇನ್ನೊಂದು ಗುಂಪು ಹೀಗೆ ಎರಡು ಗುಂಪುಗಳಿಗೆ ಪಾಠಹೇಳಿ ಆಮೇಲೆ ಊಟ ಮಾಡುತ್ತಿದ್ದರು. ಎರಡು ಊಟಗಳ ನಡುವೆ

ಶಾಸ್ತ್ರಿಗಳು ಏನನ್ನೂ ತಿನ್ನುತ್ತಿರಲಿಲ್ಲ. ಒಂದು ಊಟಕ್ಕೂ ಇನ್ನೊಂದು ಊಟಕ್ಕೂ ನಡುವೆ ೧೫ ಗಂಟೆಗಳ ಅಂತರ. ಉಪವಾಸವೆನ್ನುವುದು ಅವರ ಜೀವನದ ಅಂಗವೇ ಆಗಿ ಬಿಟ್ಟಿದ್ದಿತು. ಮಹಾಕರ್ಮಠರೂ ಮಡಿವಂತರೂ ಆಗಿದ್ದ ಶಾಸ್ತ್ರಿಗಳು ರಜಾದಿನಗಳಲ್ಲಿ ಬೆಳಿಗ್ಗೆ ೫ ಗಂಟೆಗೇ ಕಾವೇರಿಗೆ ಹೋಗಿ ಸ್ನಾನಮಾಡಿ ಜಪತಪಾದಿಗಳನ್ನು ಮುಗಿಸಿ ಸುಮಾರು ೮.೩೦ರ ಹೊತ್ತಿಗೆ ತಲೆಯ ಮೇಲೆ ನೀರಿನ ಬಿಂದಿಗೆಯನ್ನು ಹೊತ್ತುಕೊಂಡು ಬರುತ್ತಿದ್ದುದನ್ನು ನೋಡಬೇಕಿತ್ತು. ಅವರು ಪ್ರತಿನಿತ್ಯ ಶಾಸ್ತ್ರೋಕ್ತರೀತ್ಯಾ ದೇವತಾಪೂಜೆಯನ್ನು ಮಾಡುತ್ತಿದ್ದರು. ಅವರ ಮನೆಯಲ್ಲಿ ವರ್ಷಪೂರ್ತ ಒಂದಲ್ಲ ಒಂದು ಪೂಜೆ ಪುರಸ್ಕಾರ ನಡೆಯುತ್ತಲೇ ಇತ್ತು. ಶ್ರಾವಣ, ಕಾರ್ತಿಕ ಮತ್ತು ಧನುರ್ಮಾಸಗಳಲ್ಲಿ ಅವರು ವಿಶೇಷವಾಗಿ ವ್ರತಗಳನ್ನು ಆಚರಿಸುತ್ತಿದ್ದರು. ಶಾಸ್ತ್ರಿಗಳಿಗೆ ಕಾಲೋಚಿತ ಮಂತ್ರಭಾಗಗಳ ಅಧ್ಯಯನವೂ ಆಗಿದ್ದಿತು. ಅವರು ಕಾರ್ತಿಕ ಮಾಸದಲ್ಲಿ ಪ್ರತಿಸೋಮವಾರವೂ ಈಶ್ವರನ ದೇವಸ್ಥಾನದಲ್ಲಿ ರುದ್ರಾಭಿಷೇಕದಲ್ಲಿ ಪಾಲ್ಗೊಳ್ಳುತ್ತಿದ್ದರು. ಒಂದು ಸೋಮವಾರ ತಾವೇ ಅಭಿಷೇಕ ಮಾಡಿಸಿ ಊರಿನ ವೈದಿಕರನ್ನೆಲ್ಲ ಊಟಕ್ಕೆ ಕರೆದು ಯಥೇಚ್ಛ ದಕ್ಷಿಣೆಯನ್ನು ಕೊಟ್ಟು ಸತ್ಕರಿಸುತ್ತಿದ್ದರು. ರಥಸಪ್ತಮಿಯ ದಿನ ನಡೆಯುವ ಲಕ್ಷ್ಮೀಕಾನ್ತಸ್ವಾಮಿಯ ರಥೋತ್ಸವದಲ್ಲಿ ಮತ್ತು ರಾಮನವಮಿಯಲ್ಲಿ ಎಷ್ಟೇ ಕಷ್ಟವಿರಲಿ ಅವರು ತಪ್ಪದೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ರಾಮನವಮಿ ಸಮಯದಲ್ಲಿ ಅವರು ಅನೇಕ ವರ್ಷಗಳು ರಾಮಮಂದಿರದಲ್ಲಿ ರಾಮಾಯಣ ಪಾರಾಯಣವನ್ನು ಮಾಡುತ್ತಿದ್ದರು. ತಮ್ಮ ಕುಲದೈವವಾದ ಕೌಶಿಕದ ಲಕ್ಷ್ಮೀಕೇಶವನ ರಥೋತ್ಸವದಲ್ಲಿಯೂ ಅವರು ಪ್ರತಿವರ್ಷ ತಪ್ಪದೆ ಭಾಗವಹಿಸುತ್ತಿದ್ದರು.

ಶಾಸ್ತ್ರಿಗಳ ಗೃಹಸ್ಥಜೀವನ ಸುಖಶಾಂತಿಗಳಿಂದ ಕೂಡಿತ್ತು. ಆರ್ಥಿಕವಾಗಿ ಅಷ್ಟೇನೂ ಸ್ಥಿತಿವಂತರಲ್ಲದಿದ್ದರೂ ಇದ್ದುದರಲ್ಲೆ ತೃಪ್ತಿಪಡುತ್ತಿದ್ದ ಶಾಸ್ತ್ರಿಗಳ ಜೀವನ ನೆಮ್ಮದಿಯಿಂದ ಕೂಡಿತ್ತು. ಪರಮಸಾತ್ವಿಕರಾಗಿದ್ದ ಶಾಸ್ತ್ರಿಗಳು ಊರಿನ ಯಾವೊಂದು ವ್ಯಾಜ್ಯವ್ಯವಹಾರಗಳಿಗೂ ತಲೆ ಹಾಕುತ್ತಿರಲಿಲ್ಲ. ತಾವಾಯಿತು, ತಮ್ಮ ಅಧ್ಯಯನ - ಅಧ್ಯಾಪನಗಳಾಯಿತು ಎಂದು ಇದ್ದು ಬಿಡುತ್ತಿದ್ದರು. ಇನ್ನೊಬ್ಬರ ಗೊಡವೆಗೆ ಹೋಗದೆ ಸದಾ ಅಧ್ಯಯನ ನಿರತರಾಗಿರುತ್ತಿದ್ದ ಶಾಸ್ತ್ರಿಗಳನ್ನು ಕಂಡರೆ ಊರಿನವರಿಗೆಲ್ಲ ಗೌರವ. ನಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲೆಲ್ಲ ಶಾಸ್ತ್ರಿಗಳು ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು.

ಜಪತಪ, ಪೂಜೆಪುರಸ್ಕಾರಗಳಿಂದ ದೈವಋಣವನ್ನೂ, ಸತ್ಸಂತಾನದ ಮೂಲಕ ಪಿತೃಋಣವನ್ನೂ, ವಿದ್ಯಾದಾನದ ಮೂಲಕ ಋಷಿ ಋಣವನ್ನೂ ತೀರಿಸಿದ ಶಾಸ್ತ್ರಿಗಳ ಬಾಳು ನಿಜವಾಗಿಯೂ ಸಾರ್ಥಕವಾದ ಕೃತಕೃತ್ಯತೆಯ, ಧನ್ಯತೆಯ ಬಾಳಾಗಿತ್ತು. ಪರಮದೈವಭಕ್ತರೂ ಶ್ರೋತ್ರಿಯರೂ ಆಗಿದ್ದ ಶಾಸ್ತ್ರಿಗಳಂತಹ ಪುಣ್ಯಶ್ಲೋಕರ ಸ್ಮರಣೆಯೇ ನಮ್ಮ ಪಾಲಿಗೆ ಮಂಗಲಕರ, ಶ್ರೇಯಸ್ಕರ. ಅವರ ಆಶೀರ್ವಾದ ಸದಾ ನಮ್ಮ ಮೇಲಿರಲಿ.

ಜನ್ಮನಾ ಬ್ರಾಹ್ಮಣೋ ಜ್ಞೇಯಃ ಸಂಸ್ಕಾರೈರ್ದ್ವಿಜ ಉಚ್ಯತೇ।
ವಿದ್ಯಯಾ ಯಾತಿ ವಿಪ್ರತ್ವಂ ತ್ರಿಭಿಃ ಶ್ರೋತ್ರಿಯ ಉಚ್ಯತೇ ॥

ಡಾ॥ ಬಿ. ಚನ್ನಕೇಶವ

ವೇ॥ ಬ್ರ॥ ಶ್ರೀ ಸುಬ್ಬರಾಯಶಾಸ್ತ್ರಿಗಳ ವಂಶವೃಕ್ಷ

ಕೇಶವಾವಧಾನಿ ಜ. ೧೭೫೦ - (ಮರಿತಮ್ಮನ ಹಳ್ಳಿ) ವೇದ, ಶಾಸ್ತ್ರ ಪಂಡಿತರು, ಕೃಷಿ

ಶ್ರೀನಿವಾಸವಧಾನಿ ಜ. ೧೭೮೦ - (ಚೌಹಳ್ಳಿ) ವೇದ ಶಾಸ್ತ್ರಿ, ಪಂಡಿತರು, ಕೃಷಿ

ತಂಬೂರಿ ಶಾಮಣ್ಣ ಜ. ೧೮೧೦ (ತಮ್ಮಣ್ಣಭಟ್ಟ) (ಬಸವಾಪಟ್ಟಣಕ್ಕೆ) (ವೇದಾಧ್ಯಯನ ನಿಲ್ಲಿಸಿ ಸಂಗೀತಾಭ್ಯಾಸ)

ನಾರಾಯಣ (ನಾಣಿ)

ಕೇಶವಯ್ಯ + ಅಮ್ಮಯ್ಯಮ್ಮ
(ಬಸವಾಪಟ್ಟಣ) ಜ. ೧೮೪೦

ಶ್ರೀನೀವಾಸಯ್ಯ (ಸಣ್ಣಪ್ಪಮೇಷ್ಟರು) + ಲಕ್ಷ್ಮೀದೇವಮ್ಮ
ಜ. ೧೮೮೦ ಅಧ್ಯಾಪನ, ಕೃಷಿ, ಗಮಕ

— ಕಾತ್ಯಾಳ್ ಶ್ರೀನಿವಾಸಯ್ಯ +
ಸುಬ್ಬಲಕ್ಷ್ಮಮ್ಮ

ಬಿ.ಎಸ್. ನಾರಣಪ್ಪ
+
ಸರಸ್ವತಮ್ಮ

ವ್ಯಾಕರಣ ವಿದ್ವಾನ್ ಬಿ.ಎಸ್. ಸುಬ್ಬರಾಯಶಾಸ್ತ್ರಿ
ಅಧ್ಯಾಪಕ ಜ: ೧೯೧೦
+
ಪಾರ್ವತಮ್ಮ (ಮುದಲಾಪುರ : ಜೋಡಿದಾರ್
ಸೀತಾರಾಮಯ್ಯ + ಲಕ್ಷ್ಮೀದೇವಮ್ಮ (ಪುಟ್ಟಮ್ಮ) ಅವರ ಮಗಳು)

ಅಮ್ಮಯ್ಯಕ್ಕ +
ವೆಂಕಟರಾಮಯ್ಯ (ಸಣ್ಣಯ್ಯ)

ಶ್ರೀನಿವಾಸಮೂರ್ತಿ

ಸುಬ್ಬಲಕ್ಷ್ಮಮ್ಮ
+
ಲಕ್ಷ್ಮೀಕಾಂತಯ್ಯ

ಬಿ.ಎಸ್. ಶೇಷಕೃಷ್ಣ
ಅಧ್ಯಾಪಕ

ಡಾ.ಬಿ. ಎಸ್. ನರಹರಿ
ಅಧ್ಯಾಪಕ

ಡಾ.ಬಿ. ಎಸ್. ಪ್ರಣತಾರ್ತಿಹರನ್
ಅಧ್ಯಾಪಕ
+
ಡಾ.ಎಂ.ಎಸ್. ವಿಜಯ
ನಿರ್ದೇಶಕಿ, ಆಕಾಶವಾಣಿ, ಮೈಸೂರು

ಶರ್ವಾಣಿ ಹರನ್, ಬಿ.ಇ.
(ಇನ್ಫೋಸಿಸ್)ಯು.ಎಸ್.ಎ.
+
ಭಾನುಪ್ರಕಾಶ್, (ಜಂನಿಫರ್)ಯು.ಎಸ್.ಎ.

ಬಿ.ಎಸ್. ನಾಗರತ್ನ

ಬಿ.ಎಸ್. ಲಲಿತಮ್ಮ

ಶ್ರೀಮತಿ ಆರ್. ಶಾರದಮ್ಮ-ಶ್ರೀ ರು.ಗೋ. ರಾಮಸ್ವಾಮಿ

ರುದ್ರಪಟ್ಟಣ ಗೋಪಾಲಯ್ಯ (+ರಾಜಮ್ಮ) ರಾಮಸ್ವಾಮಿ ಜನಿಸಿದ್ದು (ಜ: ೧.೧೨.೧೯೧೯) ಕ್ಲೋಸ್‌ಪೇಟೆಯಲ್ಲಿ (ಈಗಿನ ರಾಮನಗರ). ತಂದೆ ತಾಲ್ಲೂಕು ಶಿರಸ್ತೇದಾರರಾಗಿದ್ದರು. ರು.ಗೋ. ಅವರು ತಮ್ಮ ತಾಂತ್ರಿಕ ವಿದ್ಯಾಭ್ಯಾಸ ಮುಗಿದ ಮೇಲೆ ಸರ್.ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನ ಪಡೆದರು. ಚಿಂತಾಮಣಿಯಿಂದ ತೊಡಗಿ ಅನೇಕ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದರು. ಕೊನೆಗೆ ತಾಂತ್ರಿಕ ವಿದ್ಯಾಭ್ಯಾಸದ ಜಂಟಿ ನಿರ್ದೇಶಕರಾಗಿ ೧೯೭೫ರಲ್ಲಿ ನಿವೃತ್ತರಾದರು. Graphic Statics ಕುರಿತು ಅವರು ರಚಿಸಿದ ಪುಸ್ತಕ ಬಲು ಮಾನ್ಯವಾಯಿತು. ನಿವೃತ್ತರಾದ ಮೇಲೆ ಮೈಸೂರಿನಲ್ಲಿ ೧೯೭೭ರಲ್ಲಿ ಒಂದು ಸಂಜೆ-ಪಾಲಿಟೆಕ್ನಿಕ್ ಕಾಲೇಜನ್ನು ಸ್ಥಾಪಿಸಿ ದುಡಿಮೆಗಾರರ ಶಿಕ್ಷಣಕ್ಕೆ ನೆರವಾದರು. ಬೆಟ್ಟದಪುರ ಸಂಕೇತಿ ಸಂಘದ ಅಧ್ಯಕ್ಷರಾಗಿ ಸಾಮೂಹಿಕ ಉಪನಯನ, ಸರಳ ವಿವಾಹಗಳಿಗೆ ಒತ್ತುಕೊಟ್ಟರು. 'ಸಂಕೇತಿ ವಾಣಿ' ಪತ್ರಿಕೆಯು ಸಾಮಾಜಿಕ ಪರಿವರ್ತನೆಗೆ ಒದಗುವ ವೇದಿಕೆ ಎನಿಸುವಂತೆ ಮಾಡಿದರು. ಕಲ್ಯಾಣ ಮಂಟಪವನ್ನು ಕಟ್ಟಿಸಿ ಬಡವಿದ್ಯಾರ್ಥಿಗಳಿಗೆ ಅದರ ವರಮಾನವನ್ನು ಬಳಸುವ ಚಿಂತನೆ ಮಾಡಿ ಅದಕ್ಕಾಗಿ ಶ್ರಮಿಸಿದರು. ನಿಖರ ಚಿಂತನೆ ಇದ್ದ ಅವರಿಗೆ ಸಾಹಿತ್ಯದಲ್ಲಿಯೂ ಆಸಕ್ತಿಯಿತ್ತು. ಆರ್. ಪ್ರಕಾಶ್ ಮೆಮೋರಿಯಲ್ ಟ್ರಸ್ಟ್ ಸ್ಥಾಪಿಸಿ ಆ ಮೂಲಕ ಬಡ ವಿದ್ಯಾರ್ಥಿಗಳಿಗೆ ನೆರವಾಗುವಲ್ಲಿ ಅವರದು ಮುಖ್ಯ ಪಾತ್ರವಾಗಿತ್ತು. ಕಷ್ಟದಲ್ಲಿರುವವರಿಗಾಗಿ ಸದಾ ತುಡಿಯುವುದು ಅವರ ಸಹಜ ಪ್ರವೃತ್ತಿಯೇ ಆಗಿತ್ತು. ಪತ್ನಿ : ಆರ್.ಶಾರದಮ್ಮ, ಪುತ್ರ : (ದಿ||) ಆರ್. ಪ್ರಕಾಶ್, ಪುತ್ರಿಯರು : ಆರ್. ಲಲಿತ, ಆರ್. ಗೀತಾ.

ಶ್ರೀಮತಿ ಶಾರದಾಬಾಯಿ, ಧರ್ಮಕಾರ್ಯರತ್ನ ಶ್ರೀ ಹರಿ ಆಚಾರ್ಯ

ಶ್ರೀಮನ್ಮಧ್ವರ ಜತೆಯಲ್ಲಿ ಅಹಿಚ್ಛತ್ರದಿಂದ ತೌಳವದೇಶಕ್ಕೆ ಮಯೂರವರ್ಮನ ಕಾಲದಲ್ಲಿ ವಲಸೆ ಬಂದ ಹತ್ತು ಕುಲಗಳಲ್ಲಿ ಮಂಜಿತ್ತಾಯರದೂ ಒಂದು. ಈ ಹತ್ತು ಕುಲಗಳೂ ಕರ್ಮಠ ವೈದಿಕರವು. ಹರಿ ಆಚಾರ್ಯರು ಮಂಜಿತ್ತಾಯರ ವಂಶಕ್ಕೆ ಸೇರಿದವರು. ಉಡುಪಿಯ ಹತ್ತಿರದ ಕಲ್ಮಂಜೆ ಎಂಬುದು ಅವರ ಊರು. ಈ ಕುಲದ ಆನಂದತೀರ್ಥಾಚಾರ್ಯರ ಮೊಮ್ಮಗ ಗೋಪಾಲಕೃಷ್ಣಾಚಾರ್ಯರು ಪುರಾಣ ಪ್ರವಚನ ಮಾಡುತ್ತಿದ್ದರು, ಮಧ್ವಶಾಸ್ತ್ರದಲ್ಲಿಯೂ ಋಗ್ವೇದದಲ್ಲಿಯೂ ಪಂಡಿತರಾಗಿದ್ದರು. ಅವರ ಮೂವರು ಮಕ್ಕಳಲ್ಲಿ ಹರಿ ಆಚಾರ್ಯರು ಎರಡನೆಯವರು; ಅವರು ಉದ್ಯಮಪತಿಯಾಗಿ ಬೆಳೆದರು, ಮಕ್ಕಳಿಗೆ ಆಧುನಿಕ ಶಿಕ್ಷಣವನ್ನು ಕೊಡಿಸಿದರು. ಪತ್ನಿ ಶಾರದಾಬಾಯಿಯವರು ವೇದಾಧ್ಯಯನ ಸಂಪನ್ನರಾದ ಕುಕ್ಕಿಕಟ್ಟೆ ಬೈಲೂರು ವೆಂಕಟಕೃಷ್ಣ ಬಲ್ಲಾಳರ ಮಗಳು. ಮಕ್ಕಳು: ಡಾ. ಕೆ. ಮುರಳೀಧರ, ರಮೇಶ, ಜಯಶ್ರೀ, ಕೃಷ್ಣ, ರವೀಂದ್ರನಾಥ, ಗಾಯತ್ರಿ, ಶ್ರೀನಿವಾಸ ಮತ್ತು ಸುರೇಂದ್ರ. ಮಂಡ್ಯ ನಗರದ ಗಾಯತ್ರಿ, ವಿಶ್ರಾಂತ್, ಹರಿಪ್ರಿಯ ಮತ್ತು ಚೆನ್ನೈ ಐಶ್ವರ್ಯ ಹೋಟೆಲುಗಳು, ಮಂಡ್ಯ ನಗರದ Hari Belts and Conveyars Pvt. Ltd., ಮೊದಲಾದುವೆಲ್ಲ ಅವರ ಸಾಧನೆಗಳು. ಕಾಯಕಕ್ಕೂ ಅಂತರಂಗಶುದ್ಧಿಗೂ ಒತ್ತುಕೊಟ್ಟ ವಂಶ.

ಶ್ರೀಮತಿ ಕೆ. ಶಾಂತಾ-ಶ್ರೀ ಕೇಶವ

ಹೊಸಹಳ್ಳಿಯ ಶ್ರೀ ಸುಬ್ಬರಾಯಶಾಸ್ತ್ರಿ ಮತ್ತು ಶ್ರೀಮತಿ ಚನ್ನಮ್ಮ ದಂಪತಿಗಳ ಮಗ ಕೇಶವ ಅವರು (ಜ: ೨೦-೦೫-೧೯೫೧) ಪ್ರೌಢಶಾಲಾ ಶಿಕ್ಷಣವನ್ನು ಪಡೆದದ್ದು ಸೊರಬದಲ್ಲಿ, ಬಿ.ಎಸ್‌ಸಿ. ಪದವಿ ಪಡೆದದ್ದು ಶಿವಮೊಗ್ಗದ ದೇಶೀಯ ವಿದ್ಯಾಶಾಲೆ ಕಾಲೇಜಿನಿಂದ. ಎಂ.ಎಸ್‌ಸಿ. (ಸ್ಟಾಟಿಸ್ಟಿಕ್ಸ್) ಪದವಿಗಾಗಿ ಓದಿದ್ದು ಮೈಸೂರಿನಲ್ಲಿ. ವಿಶೇಷವೆಂದರೆ, ಎಂ.ಎಸ್‌ಸಿ. ಪದವಿ ಪಡೆಯುತ್ತಲೇ ಅವರು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು ಉಪನ್ಯಾಸಕರಾಗಿ, ಅದೂ ತಾವು ಓದಿದ ದೇಶೀಯ ವಿದ್ಯಾ ಶಾಲೆ ಕಾಲೇಜಿನಲ್ಲಿಯೇ. ಒಂದು ವರ್ಷ ಅಧ್ಯಾಪನವನ್ನು ಮಾಡಿ ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ಆಗಿ ಬೆಂಗಳೂರು ಸೇರಿದರು. ಮಂಡ್ಯನಗರದಲ್ಲಿಯೂ ಕೊಂಚಕಾಲ ಸೇವೆ ಸಲ್ಲಿಸಿದ ಅವರು ಇದೀಗ ಪ್ಲಾನ್ ಮಾನಿಟರಿಂಗ್ ಅಂಡ್ ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತ ಬೆಂಗಳೂರಿನಲ್ಲಿ ನಲೆಸಿದ್ದಾರೆ. ಪತ್ನಿ: ಬ್ಯಾಗತವಳ್ಳಿಯ ಎನ್. ಕೃಷ್ಣಮೂರ್ತಿ ಮತ್ತು ಲಲಿತಮ್ಮ (ಸುಂಕ್ಲಾಪುರ) ದಂಪತಿಗಳ ಮಗಳು ಶಾಂತಾ. ಮಕ್ಕಳು : ಅಶ್ವಿನಿ, ಬಿ.ಇ., (ಡಾ. ವಿನೋದ್); ಎರಡನೆಯ ಮಗಳು ಅಖಿಲ ನಾಲ್ಕನೆಯ ವರ್ಷದ ಕಾನೂನು ವಿದ್ಯಾರ್ಥಿನಿ.

ಶ್ರೀಮತಿ ಎಚ್.ಕೆ. ನಾಗಲಕ್ಷ್ಮಿ

ಹಳ್ಳಿಮೈಸೂರಿನ ಶ್ರೀ ಕೇಶವಯ್ಯ ಮತ್ತು ಶ್ರೀಮತಿ ಗೌರಮ್ಮನವರ (ಗುಂಡಮ್ಮ) ಮೂರನೆಯ ಮಗಳು ಶ್ರೀಮತಿ ಎಚ್.ಕೆ. ನಾಗಲಕ್ಷ್ಮಿ ಅವರು. ಅವರು ಹಳ್ಳಿಮೈಸೂರಿನಲ್ಲಿಯೇ (ಜ: ೦೫.೦೬.೧೯೩೦) ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಮಾಡಿದರು. ಪ್ರೌಢಶಾಲೆಯಿಂದ ತೊಡಗಿ ಅವರ ಶಿಕ್ಷಣವು ಮೈಸೂರು ನಗರದಲ್ಲಿ ಮುಂದುವರೆಯಿತು; ಪಂಡಿತ ಪರೀಕ್ಷೆಯನ್ನೂ ಬಿ.ಇಡಿ.ಯನ್ನೂ ಮುಗಿಸಿಕೊಂಡರು. ಜತೆಗೆ ಸಂಸ್ಕೃತ ಮತ್ತು ಹಿಂದಿ ವ್ಯಾಸಂಗವನ್ನೂ ಮಾಡಿದರು, ಕನ್ನಡ-ಸಂಸ್ಕೃತ-ಹಿಂದಿ ಮೂರೂಭಾಷೆ ಮತ್ತು ಸಾಹಿತ್ಯದಲ್ಲಿ ವಿದ್ವಾಂಸರಾದರು. ೧೯೫೧ರಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿ ನೇಮಕಗೊಂಡು ಮೂರು ವರ್ಷಗಳ ಕಾಲ ಚಿತ್ರದುರ್ಗದ ಪ್ರೌಢಶಾಲೆಯಲ್ಲಿ ಸೇವೆಸಲ್ಲಿಸಿದರು. ಅಲ್ಲಿಂದ ಮುಂದೆ ಪಿರಿಯಾಪಟ್ಟಣ ಮತ್ತು ಹನಸೋಗೆಯಲ್ಲಿ ಸೇವೆಸಲ್ಲಿಸಿ ೩೫ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೮೬ರಲ್ಲಿ ನಿವೃತ್ತರಾದರು. ಈಗ ಮೈಸೂರು ನಗರದ ಸಿದ್ಧಾರ್ಥ ಬಡಾವಣೆಯಲ್ಲಿ ವಾಸವಾಗಿದ್ದಾರೆ.

ಶ್ರೀಮತಿ ಎನ್. ಜಯಲಕ್ಷ್ಮಿ-ಶ್ರೀ ಪಿ.ಎನ್. ನರಸಿಂಹಮೂರ್ತಿ

ಹಾಸನ ಜಿಲ್ಲೆಯ ಪೂಮಗಾಮೆ ಗ್ರಾಮವು ಗಾಢ ವೈದಿಕ ಪರಂಪರೆಯ ಪುಟ್ಟ ಗ್ರಾಮ. ಅಲ್ಲಿಯ ಶ್ರೀ ಪಿ.ಎಸ್. ನರಸಿಂಹಯ್ಯ-ಶ್ರೀಮತಿ ಸಾವಿತ್ರಮ್ಮ (ತೇಗನಹಳ್ಳಿ) ದಂಪತಿಗಳ ಮಗ ಶ್ರೀ ಪಿ.ಎನ್. ನರಸಿಂಹಮೂರ್ತಿ (ಜ: ೨.೨.೧೯೪೮) ಅವರು ಹಾಸನ ಜಿಲ್ಲೆಯ ಬಸವಾಪಟ್ಟಣದಲ್ಲಿ ಪ್ರೌಢ ಶಿಕ್ಷಣವನ್ನು ಪಡೆದರು. ಆನಂತರ ಮೈಸೂರಿನಲ್ಲಿ ಓದಿ ಬಿ.ಎಸ್‌ಸಿ., ಬಿ.ಇಡಿ. ಪದವೀಧರರಾಗಿ ಪ್ರೌಢಶಾಲಾ ಶಿಕ್ಷಕರಾದರು. ವಿಜ್ಞಾನ ಮತ್ತು ಗಣಿತಶಾಸ್ತ್ರವನ್ನು ಬೋಧಿಸುತ್ತಿದ್ದ ಅವರು ಇಂಗ್ಲಿಷ್ ಎಂ.ಎ. ಪರೀಕ್ಷೆ ಮಾಡಿಕೊಂಡು ಪದವಿಪೂರ್ವ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾದರು. ಒಬ್ಬ ಶಿಕ್ಷಕರ ಮಗನಾದ ಅವರೂ ೩೦ ವರ್ಷಗಳ ಕಾಲ ಅಧ್ಯಾಪನ ಮಾಡಿ ನಿವೃತ್ತರಾಗಿ ಈಗ ಹಾಸನದಲ್ಲಿದ್ದಾರೆ. ಸಂಗೀತಾಭಿರುಚಿಯೂ ಇದ್ದು ಸಂಗೀತ ಪರೀಕ್ಷೆಯನ್ನೂ ಮಾಡಿಕೊಂಡಿದ್ದಾರೆ. ಪತ್ನಿ ಎನ್. ಜಯಲಕ್ಷ್ಮಿ ಬಿ.ಎಸ್. ನಾರಣಪ್ಪ ಮತ್ತು ಲಕ್ಷ್ಮೀದೇವಿ ಅವರ ಮಗಳು; ಅವರು ಕೂಡ ಅಧ್ಯಾಪಕರು. ಮಗಳು ಪಿ.ಎನ್. ಲಲಿತ ಸಾಫ್ಟ್‌ವೇರ್ ಇಂಜಿನಿಯರ್ (ಮುರಳೀ ಕೃಷ್ಣ, ಸಾಫ್ಟ್‌ವೇರ್ ಇಂಜಿನಿಯರ್) ಮಗ ಹರೀಶ್ ಎಂ.ಬಿ.ಬಿ.ಎಸ್. ಮುಗಿಸಿಕೊಂಡು ಇದೀಗ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ, ಎಂ.ಸಿಎಚ್. ಮಾಡುತ್ತಿದ್ದಾರೆ. ನ್ಯೂರೋ ಸರ್ಜರಿಯಲ್ಲಿ ಸೂಪರ್ ಸ್ಪೆಷಾಲಿಟಿ ಕೋರ್ಸ್ ಐದು ವರ್ಷದ ಅವಧಿಯದು; ಇಡೀ ಭಾರತದಿಂದ ಮೂವರಿಗೆ ಮಾತ್ರ ಅಲ್ಲಿ ಪ್ರವೇಶ; ಅದನ್ನು ತಮ್ಮದಾಗಿಸಿಕೊಂಡಿರುವ ಪ್ರತಿಭಾವಂತ ಡಾ. ಪಿ.ಎನ್. ಹರೀಶ್.

ಶ್ರೀಮತಿ ಪಿ.ಕೆ. ವಸಂತಲಕ್ಷ್ಮಿ-ಶ್ರೀ ಬಿ.ಎನ್. ರಘುನಾಥ

ಬಸವಾಪಟ್ಟಣದ ಪ್ರಖ್ಯಾತ ಶ್ರೀ ತಿಪ್ಪಾಭಟ್ಟರಸುಬ್ಬರಾಯರ ಮಗ ಶ್ರೀ ಬಿ.ಎಸ್. ನಾರಣಪ್ಪನವರು ಕೂಡ ತಮ್ಮನ್ನು ತೀವ್ರವಾಗಿ ಕೃಷಿಯಲ್ಲಿ ತೊಡಗಿಸಿಕೊಂಡವರು, ವಿಶೇಷವಾಗಿ ಅಡಿಕೆ ತುಡಿಕೆ ಮಾಡಿ ನೂರಾರು ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟವರು. ಶ್ರೀ ಬಿ.ಎಸ್. ನಾರಣಪ್ಪ-ಶ್ರೀಮತಿ ಲಕ್ಷ್ಮೀದೇವಮ್ಮ (ಸರಗೂರು) ದಂಪತಿಗಳಮಗ ಬಿ.ಎನ್. ರಘುನಾಥ್ (ಜ: ೧೪.೮.೧೯೪೬) ಪ್ರಾರಂಭಿಕ ವಿದ್ಯಾಭ್ಯಾಸವನ್ನು ಬಸವಾಪಟ್ಟಣದಲ್ಲಿಯೇ ಮುಗಿಸಿಕೊಂಡು ಹಾಸನದಲ್ಲಿ ಡಿಪ್ಲೋಮಾ ಇನ್ ಸಿವಿಲ್ ಇಂಜಿನಿಯರಿಂಗ್ ಓದಿದರು; ಆನಂತರ ಬೆಂಗಳೂರಿನಲ್ಲಿ ಎ.ಎಂ.ಐ.ಇ. - ಸೆಕ್ಷನ್-ಎ ಎರಡು ವರ್ಷ, ಆಂಧ್ರದ ಮಚಲಿಪಟ್ಟಣಂನಲ್ಲಿ ಸೆಕ್ಷನ್-ಬಿ ಅಧ್ಯಯನ ಮಾಡಿದರು. ೧೯೭೦ರಲ್ಲಿ ಮಹಾರಾಷ್ಟ್ರದ ಎಂ.ಎಸ್.ಆರ್.ಟಿ.ಸಿ.ನಲ್ಲಿ ಜೂನಿಯರ್ ಇಂಜಿನಿಯರಾಗಿ ಸೇರಿ ಡಿವಿಜನಲ್ ಇಂಜಿನಿಯರ್ ಆಗುವವರೆಗೆ ಬಡ್ತಿ ಪಡೆದರು. ನಾಂದೇಡ್ ಮತ್ತು ಔರಂಗಾಬಾದ್‌ಗಳಲ್ಲಿ ೩೪ ವರ್ಷಗಳ ಸುದೀರ್ಘ ಸೇವೆಸಲ್ಲಿಸಿ ನಿವೃತ್ತರಾಗಿ ಈಗ ಹಾಸನದಲ್ಲಿ ನೆಲೆಸಿದ್ದಾರೆ. ಪತ್ನಿ ಪಿ.ಕೆ. ವಸಂತಲಕ್ಷ್ಮಿ (ಜ: ೨೭.೩.೧೯೫೫) ಪೂಮಗಾಮೆಯ ಕೃಷ್ಣಮೂರ್ತಿ-ಸುಂದರಮ್ಮ ದಂಪತಿಗಳ ಮಗಳು, ಬಿ.ಎಸ್‌ಸಿ, ಪದವೀಧರೆ. ಮಕ್ಕಳು : ಶೇಷಾದ್ರಿ ಸಂಕೇತಿ ಬಿ.ಇ. ಮುಗಿಸಿಕೊಂಡು ಭಾರತೀಯ ವಾಯುಪಡೆಯಲ್ಲಿ ಸ್ಕ್ವಾಡ್ರನ್ ಲೀಡರ್ ಆಗಿದ್ದಾರೆ; ಪನ್ನಗ ಸಂಕೇತಿ ಮದ್ರಾಸಿನ ಐ.ಐ.ಟಿಯಲ್ಲಿ ಬಿ.ಟೆಕ್. ಪದವಿ ಪಡೆದನಂತರ ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಎಸ್. ಪದವಿ ಪಡೆದು ಈಗ ಪಿ.ಎಚ್.ಡಿ. ಮಾಡುತ್ತಿದ್ದಾರೆ; ರಶ್ಮಿ ಸಂಕೇತಿ ಇದೀಗ ಹಾಸನದಲ್ಲಿ ಎಂ.ಸಿ.ಎ. ಮಾಡುತ್ತಿದ್ದಾರೆ. 'ಸಂಕೇತಿ' ಎಂಬ ಉಪನಾಮದಲ್ಲಿ ಅಭಿಮಾನಪಡುತ್ತಿರುವ ಅಪರೂಪದ ಸಂಕೇತಿ ಕುಟುಂಬ.

ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ-ಶ್ರೀ ಎಂ.ಎಸ್. ರಾಮರಾವ್

ಹಾಸನ ಜಿಲ್ಲೆ ಹಾಸನ ತಾಲ್ಲೂಕಿನ ಮುದಲಾಪುರ ಎಂಬ ಗ್ರಾಮವು ವಿಜಯನಗರದ ಅರಸರಿಂದ ಸಂಕೇತಿ ಕುಟುಂಬವೊಂದಕ್ಕೆ ಬಂದ ಇನಾಂ ಗ್ರಾಮ. ಅದೇ ಮುಂದೆ 'ಜೋಡಿ' ಮುದಲಾಪುರ ಎನಿಸಿತು. ಆ ವಿದ್ವಾಂಸರ ವಂಶದಲ್ಲಿ ಬಂದ ಸೀತಾರಾಮಯ್ಯ (+ಪುಟ್ಟಮ್ಮ)ನವರ ಮಗ ಎಂ.ಎಸ್. ರಾಮರಾವ್ (ಜ: ೧೧.೧೧.೧೯೩೨) ತಮ್ಮ ವಿದ್ಯಾಭ್ಯಾಸ ಮುಗಿಸಿದ್ದು ಸಮೀಪದ ಹಾಸನ ಮತ್ತು ಆನಂತರ ಮೈಸೂರಿನಲ್ಲಿ. ಪ್ರೌಢಶಾಲಾ ಅದ್ಯಾಪಕರಾಗಿ ವೃತ್ತಿಯನ್ನಾರಂಭಿಸಿದ ರಾಮರಾವ್ ೧೯೫೬ರಲ್ಲಿ ರೈಲ್ವೆ ಇಲಾಖೆಗೆ ಸೇರಿದರು, ೧೯೬೦ರಲ್ಲಿ ಭಾರತೀಯ ಜೀವವಿಮಾ ನಿಗಮಕ್ಕೆ ಸೇರಿ, ೧೯೯೦ರಲ್ಲಿ ನಿವೃತ್ತರಾಗುವ ವೇಳೆಗೆ ಸೀನಿಯರ್ ಬ್ರ್ಯಾಂಚ್ ಮ್ಯಾನೇಜರ್ ಹುದ್ದೆಯನ್ನಲಂಕರಿಸಿದ್ದರು. ಅವರುವರಿಸಿದ್ದು ಟಿ.ವಿ. ವೆಂಕಟಸುಬ್ಬರಾವ್ ಮತ್ತು ರಾಮಲಕ್ಷ್ಮಮ್ಮನವರ ಮಗಳು ಎಂ.ವಿ. ವೆಂಕಟಲಕ್ಷ್ಮಿ ಅವರನ್ನು. ಮಕ್ಕಳು ಎಂ.ಆರ್. ಶೈಲಜ, ಎಂ.ಎಸ್‌ಸಿ., ಕಂಪ್ಯೂಟರ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಡಿಪ್ಲೋಮಾ (+ಎಚ್.ಎಸ್. ಸೀತಾರಾಂ, ಛಾರ್ಟರ್ಡ್ ಅಕೌಂಟೆಂಟ್); ಎಂ.ಆರ್. ರವಿಕುಮಾರ್, ಬಿ.ಇ., ಎಂ.ಎಸ್., ಎಂ.ಬಿ.ಎ., ಯು.ಎಸ್.ಎ. (+ರಾಧಾ ವೆಂಕಟೇಶ್, ಬಿ.ಇ., ಎಂ.ಎಸ್.,) ಎಂ.ಆರ್. ಶ್ರೀನಿವಾಸ್, ಬಿ.ಇ., ಎಂ.ಎಸ್., ಎಂ.ಬಿ.ಎ., ಯು.ಎಸ್.ಎ.) (+ನಾಗಶ್ರೀ, ಬಿ.ಇ., ಎಂ.ಎಸ್), ಎಂ.ಆರ್. ಸುಬ್ರಹ್ಮಣ್ಯಂ, ಬಿ.ಇ., ಎಂ.ಬಿ.ಎ., (+ಎಸ್. ಪ್ರೀತಿ, ಬಿ.ಇ.)

ಶ್ರೀಮತಿ ಸುಮನಾವಿಶ್ವನಾಥ್

ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಹಾಗೂ, ಹಿಂದಿ ಭಾಷೆಯಲ್ಲಿ ರಾಷ್ಟ್ರಭಾಷಾ ನಿಷ್ಣಾತ್ ಪದವೀಧರೆ. 'ಕ್ಷೇತ್ರದರ್ಶನ' ಎಂಬ ಪ್ರವಾಸಕಥನದಿಂದ ಪ್ರಾರಂಭವಾಗಿರುವ ಇವರ ಸಾಹಿತ್ಯದ ಕೆಲಸ ಡಾ. ಮತ್ತೂರು ಕೃಷ್ಣಮೂರ್ತಿ, ಶ್ರೀ ಮಾರ್ಕಂಡೇಯ ಅವಧಾನಿ, ಶ್ರೀ ಚ್.ಆರ್. ಕೇಶವಮೂರ್ತಿ, ಡಾ. ದೇ. ಜವರೇಗೌಡ, ಪ್ರೊ. ಸುಜನಾ - ಈ ಎಲ್ಲಾ ಹಿರಿಯರು, ತಮ್ಮ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು

ಸೇರಿದಂತೆ ಮಾಡಲಾಗಿರುವ 'ಜೀವನ ಚಿತ್ರಣ'ದವರೆಗೆ ಮುಂದುವರದಿದೆ. 'ಗಮಕ ಕಲಾಭೂಷಣ' - ಗಮಕತಪಸ್ವಿ ಶ್ರೀ ಎಚ್.ಕೆ. ರಾಮಸ್ವಾಮಿಯವರ ಜೀವನಚಿತ್ರಣ. ಪ್ರಸ್ತುತ ಶ್ರೀಮತಿ ಸುಮನಾವಿಶ್ವನಾಥರು ಶ್ರೀ ವಿಶ್ವಕವಿ ಕುವೆಂಪು ಪ್ರಥಮದರ್ಜೆ ಕಾಲೇಜು, ಮೈಸೂರು, ಇಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಹಾತ್ಮಾಗಾಂಧೀ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ. ಪ್ರಕೃತ ಸಂಪುಟದಲ್ಲಿ ಅಳವಡಿಸಿಕೊಳ್ಳಲಾಗಿರುವ 'ಗಮಕಗಂಧರ್ವ' ಮತ್ತು 'ತುಂಗೆಯ ಮಡಿಲಲ್ಲಿ' ಕೃತಿಗಳನ್ನು ನಿರೂಪಿಸಿರುವವರು ಶ್ರೀಮತಿ ಸುಮನಾ ವಿಶ್ವನಾಥ್.

ಸಂಪಾದಕರು

ಎನ್.ಎಸ್. ಶಾರದಾ ಪ್ರಸಾದ್ (ನಂಜನಗೂಡು ಸತ್ಯನಾರಾಯಣ ಶಾರದಾ ಪ್ರಸಾದ್)

ಶ್ರೀ ಎನ್.ಆರ್. ಸತ್ಯನಾರಾಯಣ ಮತ್ತು ಶ್ರೀಮತಿ ಅನ್ನಪೂರ್ಣಮ್ಮ ಅವರ ಪುತ್ರ ; ಬಿ.ಎಸ್ಸಿ., ಎಂ.ಎ. (ಕನ್ನಡ), ಸ್ನಾತಕೋತ್ತರ ಭಾಷಾಂತರ ಡಿಪ್ಲೊಮ, ಸೀನಿಯರ್ ಡಿಪ್ಲೊಮ ಇನ್ ಜರ್ಮನ್, ಎಂ.ಫಿಲ್. (ಭಾಷಾಂತರ) ಪದವಿ; ೧೯೬೬ರಿಂದ ಮಾನಸ ಗಂಗೋತ್ರಿಯ ರಸಾಯನಶಾಸ್ತ್ರ ವಿಭಾಗದಲ್ಲಿ ಸೇವೆ; ೧೯೬೯ರಿಂದ ೨೦೦೪ರವರೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಿರಿಯ ಭಾಷಾಂತರಕಾರ, ಸಂಶೋಧನ ಸಹಾಯಕ, ಹಿರಿಯ ಭಾಷಾಂತರಕಾರರಾಗಿ ಸೇವೆ; ಸಂಪಾದನೆ, ಭಾಷಾಂತರ ಕಾರ್ಯಗಳಲ್ಲಿ ಪರಿಣತಿ : ೧೦೦ಕ್ಕೂ ಅಧಿಕ ಪಠ್ಯಪುಸ್ತಕಗಳ ಪರಿಷ್ಕರಣ, ಸಂಪಾದನೆ; ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನದ ತರಬೇತಿ ಕಾರ್ಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಶಿಬಿರ ನಿರ್ದೇಶಕರಾಗಿ ಕಾರ್ಯನಿರ್ವಹಣೆ; ಐ.ಪಿ.ಎಸ್. ಅಧಿಕಾರಿಗಳಿಗೆ ಕನ್ನಡ ಪರಿಚಯಿಸಲು ಕರ್ನಾಟಕ ಪೊಲೀಸ್ ಅಕಾಡೆಮಿಯ ಅತಿಥಿ ಉಪನ್ಯಾಸಕರು; ಭಾಷಾಂತರದ ಕನ್ನಡ ಪ್ರತಿನಿಧಿಯಾಗಿ ಆಂಧ್ರಪ್ರದೇಶ, ಕೇರಳ, ತಮಿಳುನಾಡಿನಲ್ಲಿ ಭಾಗವಹಿಸಿದ್ದಾರೆ; ಭಾರತದ ಪ್ರೌಢ ಇತಿಹಾಸ (An Advanced History of India: ಆರ್.ಸಿ. ಮಜುಂದಾರ್, ರಾಯ್‌ಚೌಧರಿ, ಕಾಳೀಕಿಂಕರದತ್ತ), ಧರ್ಮಶಾಸ್ತ್ರದ ಇತಿಹಾಸ ಸಂ. ೧, ಸಂ. ೨ (ಪಿ.ವಿ. ಕಾಣೆ ಅವರ History of Dharmashastra : ಪ್ರೊ. ಎಸ್.ಕೆ. ರಾಮಚಂದ್ರರಾವ್ ಜತೆ ಅನುವಾದ); ಭಾರತೀಯ ಕಥೆಗಳು (ಭಾರತದ ವಿವಿಧ ಭಾಷೆಗಳಿಂದ) ಪ್ರಮುಖ ಕೃತಿಗಳು. ನಿಯತ ಕಾಲಿಕಗಳಲ್ಲಿ ೫೦ಕ್ಕೂ ಹೆಚ್ಚು ಅನುವಾದಿತ ಕತೆಗಳು ಪ್ರಕಟವಾಗಿವೆ. ಇವು ಅವರ ಭಾಷಾಂತರ ಸಾಮರ್ಥ್ಯಕ್ಕೆ ನಿಚ್ಚಳ ನಿದರ್ಶನಗಳು.

'ಡಾ. ಹಾ.ಮಾ. ನಾಯಕ ಅವರನ್ನು ಕುರಿತು' ಎಂಬುದು ಸಂಪಾದಿತ ಕೃತಿ. ಮಕ್ಕಳ ಕೃತಿಗಳ ಭಾಷಾಂತರವನ್ನೂ ಮಾಡಿದ್ದಾರೆ. ಅಧ್ಯಾತ್ಮದಲ್ಲಿ ಹೆಚ್ಚು ಒಲವು; ಗೌತಮಗೋತ್ರ, ಯಜುರ್ವೇದ, ಆಪಸ್ತಂಬಸೂತ್ರ.

ಪತ್ನಿ ಶ್ರೀಮತಿ ಸವಿತಾಪ್ರಸಾದ್ ಬಿ.ಎ., ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಪರಿಶ್ರಮ ಉಳ್ಳವರು; ಕೆಲವು ಧಾರ್ಮಿಕ ಕೃತಿಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ; ಶ್ರೀಮತಿ ಲಕ್ಷ್ಮೀಪಾರ್ವತಿಯವರ ತೆಲುಗು ಕಾದಂಬರಿ 'ಶ್ರಮಣಕಂ' ಅನುವಾದ ಡಿಸೆಂಬರ್ ೨೦೦೪ರಲ್ಲಿ ಪ್ರಕಟವಾಗಿದೆ. ತಂದೆ : ವಿಜಯನಾರಸಿಂಹ ಕನ್ನಡ ಚಿತ್ರಗಳಿಗಾಗಿ ಸಹಸ್ರಾರು ಜನಪ್ರಿಯಗೀತೆಗಳನ್ನೂ ಭಕ್ತಿಗೀತೆಗಳನ್ನೂ ರಚಿಸಿದವರು; ಕಾದಂಬರಿಕಾರರು, ನಾಟಕಕಾರರು; ತಾಯಿ: ಸರಸ್ವತಿ ಕಥೆಗಾರ್ತಿ, ಆಕಾಶವಾಣಿ ನಾಟಕಕಾರ್ತಿ; ಧಾರ್ಮಿಕ ವಿಷಯಗಳನ್ನು ಕುರಿತು ಈಗಲೂ ಬರೆಯುತ್ತಿರುವ ಶಕ್ತ ಲೇಖಕಿ.

ಎನ್.ಎಸ್.ಎಸ್. ಅವರ ಮಕ್ಕಳು: ಎನ್.ಎಸ್. ಅರ್ಚನಾ ಪ್ರಸಾದ್ ಬಿ.ಇ., ಇನ್‌ಫೋಸಿಸ್‌ನ ಲಂಡನ್ ಕೇಂದ್ರದಲ್ಲಿ ಉದ್ಯೋಗಿ (ಪತಿ ಡಾ. ವಿ. ನರಸಿಂಹ ಪ್ರಸಾದ್, ಎಫ್.ಆರ್.ಸಿ.ಎ., ಇಂಗ್ಲೆಂಡ್‌ನಲ್ಲಿ ಅರಿವಳಿಕೆತಜ್ಞ); ಎನ್.ಎಸ್. ಸುದತ್ತ ಗೌತಮ್ ಎಂ.ಸಿ.ಎ., ಅಮೆರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಪತ್ನಿ ಪ್ರದೀಪ ಎ, ಎಂ.ಸಿ.ಎ., ಸಾಫ್ಟ್‌ವೇರ್ ಇಂಜಿನಿಯರ್); ಎನ್.ಎಸ್. ಸಂದೀಪ ಗೌತಮ್ ಎಂ.ಬಿ.ಎ., ಉದ್ಯಮಿ.

ಸಮುದಾಯ ಅಧ್ಯಯನ ಕೇಂದ್ರ
ಪೋಷಕರ ವಿವರ

ಸಂಪುಟಾಧ್ಯಕ್ಷರು

ಶ್ರೀಮತಿ ಕೆ.ಕೆ. ವಿಜಯಲಕ್ಷ್ಮಿ, ಡಾ. ಆರ್.ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.
ಶ್ರೀಮತಿ ರೋಸಿಲಿ, ಡಾ. ಆರ್.ಎಸ್.ಎಸ್. ಕೃಷ್ಣಮೂರ್ತಿ, ಯು.ಕೆ.
ಶ್ರೀಮತಿ ರಾಜಲಕ್ಷ್ಮಿ, ಡಾ|| ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು
ಶ್ರೀಮತಿ ನಾಗರತ್ನ (ಪಾಪು), ಶ್ರೀ ಆರ್.ವಿ. ಕೃಷ್ಣಮೂರ್ತಿ, ಮೈಸೂರು
ಡಾ|| ಎಂ.ಎಸ್. ವಿಜಯಾಹರನ್, ಡಾ|| ಬಿ.ಎಸ್. ಪ್ರಣತಾರ್ತಿಹರನ್, ಮೈಸೂರು
(ಇವರ ಪರವಾಗಿ : ಶ್ರೀಮತಿ ಪಾರ್ವತಮ್ಮ, ವ್ಯಾಕರಣ ವಿದ್ವಾನ್ ಬಿ.ಎಸ್. ಸುಬ್ಬರಾಯಶಾಸ್ತ್ರಿ, ಬಸವಾಪಟ್ಟಣ)

ಸಂಪುಟ ಉಪಾಧ್ಯಕ್ಷರು

ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್
ಶ್ರೀಮತಿ ಸುಂದರಮಣಿ, ಶ್ರೀ ನಟೇಶ್ ಮಗ್ಗೆ, ಯು.ಎಸ್.ಎ.
ಡಾ. ಸುಪ್ರಿಯಾ, ಡಾ. ಎಸ್. ಶ್ರೀಧರ್, ಯು.ಎಸ್.ಎ.
ಶ್ರೀಮತಿ ವಿನಯ, ಡಾ. ಜಯ್. ಕೆ. ರಂಗಪ್ಪ, ಯು.ಎಸ್.ಎ.

ಮಹಾದಾನಿಗಳು

ಶ್ರೀಮತಿ ಶಾರದಾಬಾಯಿ, ಶ್ರೀ ಹರಿ ಆಚಾರ್ಯ, ಮಂಡ್ಯ
ಶ್ರೀಮತಿ ಆರ್.ಎಸ್. ಸಾವಿತ್ರಿ, ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು

ಮಹಾಪೋಷಕರು

ಶ್ರೀಮತಿ ಕಮಲಮ್ಮ, ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮಿ, ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ, ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ, ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮಿ, ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಎಚ್.ಎನ್. ಅನಸೂಯಮ್ಮ, ಶ್ರೀ ವೈ.ಎನ್. ಸತ್ಯನಾರಾಯಣ, ಹಾಸನ
ಶ್ರೀಮತಿ ಎಂ.ಎಸ್. ರುಕ್ಮಿಣಿ, ಶ್ರೀ ಎಚ್.ಆರ್. ಸೂರ್ಯನಾರಾಯಣ, ಮೈಸೂರು
ಶ್ರೀಮತಿ ಪಂಕಜ, ಪ್ರೊ|| ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ನಿರಂಜಿನಿ, ಶ್ರೀ ಕೆ.ಎಸ್. ಬಾಲಚಂದ್ರ, ಮೈಸೂರು
ಶ್ರೀಮತಿ ಆರ್. ಶಾರದಮ್ಮ, ಶ್ರೀ ರು.ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಎಚ್.ಎಸ್. ಸೌದಾಮಿನಿ, ಶ್ರೀ ಆರ್.ವಿ. ಅಶ್ವತ್ಥನಾರಾಯಣ, ಮೈಸೂರು

ಪೋಷಕರು

ಶ್ರೀಮತಿ ಶಾಂತಾ, ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ, ಶ್ರೀ ಜಿ. ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ, ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ. ಗಾಯತ್ರಿ, ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಸಾವಿತ್ರಮ್ಮ, ಶ್ರೀ ಎಸ್. ಸತ್ಯನಾರಾಯಣರಾವ್, ಮಂಡ್ಯ
ಶ್ರೀಮತಿ ಲಲಿತಮ್ಮ, ಶ್ರೀ ಎಚ್.ಕೆ. ಸುಬ್ಬಣ್ಣ, ಹಾಸನ
ಶ್ರೀಮತಿ ಎಂ.ಎನ್. ರಾಜಲಕ್ಷ್ಮೀ, ಶ್ರೀ ಎನ್. ಕೃಷ್ಣಮೂರ್ತಿ, ಹಾಸನ
ಶ್ರೀಮತಿ ಸುಬ್ಬಲಕ್ಷ್ಮೀ, ಶ್ರೀ ಎಚ್. ರಾಮನಾಥನ್, ಹಾಸನ
ಡಾ. ಎಸ್.ಕೆ. ಸುಶೀಲಾಬಾಯಿ, ಶ್ರೀ ಎಸ್. ಕೃಷ್ಣಮೂರ್ತಿ, ಹಾಸನ
ಶ್ರೀ ಆರ್. ಪ್ರಕಾಶ್ ಇ/ಮ ರು. ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಪ್ರಫುಲ್ಲ, ಶ್ರೀ ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಜಯಶ್ರೀ, ಡಾ. ಬಿ. ಚನ್ನಕೇಶವ, ಮೈಸೂರು
ಶ್ರೀಮತಿ ಸರಸ್ವತಿರಾವ್, ಮೈಸೂರುಮನೆ ಶ್ರೀ ಎನ್. ಸುಬ್ಬರಾವ್, ಬೆಂಗಳೂರು
ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ॥ ಆರ್. ಇಂದಿರಾ, ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ, ಶ್ರೀ ಬಿ.ಕೆ. ರಾಮಚಂದ್ರ, ಬಸವಾಪಟ್ಟಣ
ಶ್ರೀಮತಿ ವಾಣಿ, ಪ್ರೊ॥ ಎಂ.ಎನ್. ಚಂದ್ರಶೇಖರ್, ಬೆಂಗಳೂರು
ಶ್ರೀಮತಿ ಎಸ್. ಮೀರಾ, ಶ್ರೀ ಶ್ರೀಧರ್, ಯು.ಎಸ್.ಎ.
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ಕೆ.ವಿ. ನಾಗರಾಜ್, ಮೈಸೂರು
ಶ್ರೀಮತಿ ಸಂಪತ್‌ಲಕ್ಷ್ಮೀ, ಶ್ರೀ ಸಿ.ಆರ್. ನಾಗರಾಜ್, ಮೈಸೂರು
ಶ್ರೀಮತಿ ವೀಣಾ ಎನ್, ಶ್ರೀ ನಾರಾಯಣ ಸುಬ್ಬರಾವ್, ಯು.ಎಸ್.ಎ.
ಶ್ರೀಮತಿ ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್, ಐಚನಹಳ್ಳಿ
ಶ್ರೀಮತಿ ಎಚ್.ಎಂ. ಜಯಶ್ರೀ ಶಾಸ್ತ್ರಿ, ಶ್ರೀ ಹನಸೋಗೆ ಎಸ್. ಶಾಸ್ತ್ರಿ, ಯು.ಎಸ್.ಎ.
ಶ್ರೀಮತಿ ವಾಸಂತಿ, ಶ್ರೀ ಜಿ. ಮಯೂರಸಿಂಹ, ಯು.ಎಸ್.ಎ.
ಶ್ರೀಮತಿ ಗೀತಾ, ಶ್ರೀ ಕೆ.ವಿ. ನಟೇಶ್, ಚನ್ನರಾಯಪಟ್ಟಣ
ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.), ಬಸವಾಪಟ್ಟಣ
ಶ್ರೀಮತಿ ಐ.ವಿ. ರಮಾಮಣಿ, ಶ್ರೀ ಕೆ.ಎಸ್. ನಾಗರಾಜ, ಪಿರಿಯಾಪಟ್ಟಣ
ಶ್ರೀಮತಿ ಕೆ. ಶಾಂತ, ಶ್ರೀ ಕೇಶವ, ಬೆಂಗಳೂರು
ಶ್ರೀಮತಿ ಎಂ.ಆರ್. ಪ್ರಭಾವತಿ, ಶ್ರೀ ಎಂ.ಕೆ. ಚೆನ್ನಕೇಶವ, ಮುದ್ದಾಪುರ
ಶ್ರೀಮತಿ ಎನ್. ಜಯಲಕ್ಷ್ಮೀ, ಶ್ರೀ ಪಿ.ಎನ್. ನರಸಿಂಹಮೂರ್ತಿ, ಹಾಸನ
ಶ್ರೀಮತಿ ಪಿ.ಕೆ. ವಸಂತಲಕ್ಷ್ಮೀ, ಶ್ರೀ ಬಿ.ಎನ್. ರಘುನಾಥ, ಹಾಸನ
ಶ್ರೀಮತಿ ಎಚ್.ಕೆ. ನಾಗಲಕ್ಷ್ಮೀ, ಮೈಸೂರು

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ, ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು
ಶ್ರೀಮತಿ ಸರೋಜ, ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು
ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ನಾಗೇಶ್, ಬೆಂಗಳೂರು
ಶ್ರೀಮತಿ ಕೆ.ಎಸ್. ಲೀಲಾವತಿ, ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು
ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು
ಶ್ರೀಮತಿ ಪಾರ್ವತಿ, ಶ್ರೀ ಪಿ.ಆರ್. ಹರಿಹರನ್, ಮೈಸೂರು
ಶ್ರೀಮತಿ ರಾಧಾ, ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು
ಶ್ರೀಮತಿ ಶಶಿಕಲಾ, ಶ್ರೀ ವೆಂಕಟೇಶಮೂರ್ತಿ, ಮೈಸೂರು
ಶ್ರೀಮತಿ ಲೀಲಾವತಿ, ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ
ಶ್ರೀಮತಿ ಸುಧಾ, ಶ್ರೀ ಎ.ಎಸ್. ಅರುಣಕುಮಾರ್, ಮಂಡ್ಯ
ಶ್ರೀಮತಿ ಪ್ರೇಮಲತಾ, ಶ್ರೀ ಎಂ.ಆರ್. ರಾಮಶೇಷ, ಮಾದಾಪುರ
ಶ್ರೀಮತಿ ಲಲಿತಮ್ಮ, ಶ್ರೀ ಕೇಶವಮೂರ್ತಿ, ಕೊಣನೂರು

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ.ಎನ್.ವಿ. ಸುಬ್ರಹ್ಮಣ್ಯ

ಅಧ್ಯಕ್ಷರು

ಆರ್.ವಿ. ಶ್ರೀನಿವಾಸಯ್ಯ

ಸಂಚಾಲಕರು

ನಾಗರತ್ನ (ಪಾಪು)
ಆರ್.ವಿ. ಕೃಷ್ಣಮೂರ್ತಿ

ಕಾರ್ಯದರ್ಶಿ

ಡಾ॥ ಬಿ.ಎಸ್. ಪ್ರಣತಾರ್ತಿಹರನ್

ಖಜಾಂಚಿ

ಎಚ್.ಎನ್. ರಘುನಾಥ್

ಪುಸ್ತಕ ಸಲಹಾ ಸಮಿತಿ

ಪ್ರೊ॥ ಎ.ವಿ. ನರಸಿಂಹಮೂರ್ತಿ
ಪ್ರೊ॥ ಜಿ. ಅಶ್ವತ್ಥನಾರಾಯಣ
ಡಾ. ಎಂ.ಎಲ್. ಲಲಿತಮ್ಮ
ಎನ್.ಎಸ್. ಶಾರದಾ ಪ್ರಸಾದ್
ವಿದ್ವಾನ್ ಡಾ॥ ಟಿ.ವಿ. ಸತ್ಯನಾರಾಯಣ
ವಿದ್ವಾನ್ ಎಚ್.ವಿ. ನಾಗರಾಜರಾವ್
ವಿದ್ವಾನ್ ಡಾ॥ ಆನಂದತೀರ್ಥ ನಾಗಸಂಪಿಗೆ
ಡಾ॥ ಮೀರಾಮೂರ್ತಿ
ಡಾ॥ ಕೆ. ಅನಂತರಾಮು
ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಬಿ.ವಿ. ವೆಂಕಟನಾರಾಯಣ
ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು)
ಡಾ. ಎ.ಎಸ್. ಚಂದ್ರಶೇಖರ್
ಎಂ.ಕೆ. ವಿಜಯಲಕ್ಷ್ಮೀ
ಡಾ॥ ಬಿ.ವಿ. ಸುಧಾಮಣಿ
ಡಾ॥ ವಿಜಯಾಹರನ್
ಎಸ್. ನಾಗೇಶ್ (ಪೂಮಗಾಮೆ ಗೋಪಿ)

‘ಸಂಕೇತಿ’ ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. ‘ಸಂಕೇತಿ ಅಧ್ಯಯನ’ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಈಗ ಓದುಗರ ಕೈಲಿರುವುದು ‘ಸಂಕೇತಿ ಅಧ್ಯಯನ’ ಮಾಲೆಯ ಐದನೆಯ ಸಂಪುಟ. ಇದನ್ನು ‘ಸಂಕೇತಿ : ಇತಿವೃತ್ತಗಳು’ ಎಂದು ಕರೆಯಲಾಗಿದೆ. ಇದು ನಾಲ್ಕು ವರ್ಷಗಳಷ್ಟು ದೀರ್ಘಾವಧಿಯಲ್ಲಿ ರೂಪುತಳೆದು, ಎಂಟು ಕೃತಿಗಳ ಸಂಕಲನವಾಗಿ ಹೊರಹೊಮ್ಮಿದೆ.

ಈ ಎಲ್ಲಾ ಇತಿವೃತ್ತಗಳಲ್ಲೂ ವ್ಯಕ್ತಿಜೀವನದ ಹಂದರಕ್ಕೆ ಸಮುದಾಯ ಜೀವನದ ವಿವರಗಳ ಬಳ್ಳಿಹಬ್ಬಿಕೊಂಡಿದೆ. ಪ್ರತಿಯೊಂದು ಸಣ್ಣವಿವರದಲ್ಲೂ ಅದು ಕಾಣುತ್ತದೆ. ಇಲ್ಲಿನ ಲೇಖಕರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರೇ ಆಗಿದ್ದಾರೆ. ಆದರೆ ಅವರ ಆತ್ಮವೃತ್ತಾಂತದ ಜತೆಗೆ ಬೆಸೆದಿರುವ ಸಮುದಾಯ ಜೀವನದ ವಿವರಬಾಹುಳ್ಯದ ಕಾರಣಕ್ಕಾಗಿಯೇ ಇವನ್ನೆಲ್ಲ ‘ಸಂಕೇತಿ: ಇತಿವೃತ್ತಗಳು’ ಎಂಬ ಶೀರ್ಷಿಕೆಯ ಅಡಿಯಲ್ಲಿ ಸೇರಿಸಲಾಗಿದೆ.

ಒಟ್ಟಿನಲ್ಲಿ, ಇಲ್ಲಿ ಸೇರಿರುವ ಎಂಟು ಕೃತಿಗಳು ಒಟ್ಟಾಗಿ ಕಟ್ಟಿಕೊಟ್ಟಿರುವ ಜೀವನಸ್ವರೂಪವೊಂದರ ಚಿತ್ರಣವು ಈ ಸಂಪುಟದ ಸಾಧನೆಯಾಗಿದೆ.

ಡಾ. ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು